ವೃತ್ತಾಂತ ಪತ್ರಿಕೆ.

ಕ್ರಯ ೧ ಕಾಸು ಕ್ರಯ ೧ ಕಾಸು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೬ | ಮೈಸೂರು ಸ್ ೧೮೯೨ ನೇ ಇಸವಿ ಜನವರಿ ತಾರೀಖು ೧೨ ನೇ ಗುರುವಾರ. | ಸಂಖ್ಯೆ ೩೦

HEALTH, WEALTH & PROSPERITY.

ಜಿ. ಬಿ. ನಾಯಿಕ ಕಂಪನಿಯು

ಮಿಂಚಿನ ಉಂಗುರ, ಪದಕ, ಬಳೆ, ಲೇಬಿಲ್,

ಕೊರಳ ಪಟ್ಟಿಗಳು.

೬೫,೦೦೦ ದ ಮೇಲೆ ಮಾರಿದವು. ನಿತ್ಯ ಬಹಳೇ ಮಾರಾಗುತ್ತಿರುತ್ತವೆ. ಗುಣ ಬಂದ ಬಗ್ಗೆ ಸಾವಿರಾರು ದಾಖಲೆಗಳು ದೊರೆತಿರುತ್ತವೆ. ಹಾಗೂ ದೊರೆಯುತ್ತಲಿವೆ.

ರಕ್ತವು ಮನುಷ್ಯನ ಜೀವನವಾಗಿದೆ, ಮತ್ತು ವಿದ್ಯುಚ್ಛಕ್ತಿಯು ರಕ್ತದ ಜೀವನವಾಗಿದೆ

ರಕ್ತವು ಕೆಟ್ಟದ್ದರಿಂದ ಆಗುವ ಎಲ್ಲ ರೋಗ, ಅಶಕ್ತತೆ, ಸಂಧಿವಾತ, ಪಿತ್ತಗತವಾತ, ಹೊಟ್ಟೆಯಲ್ಲಿ ವಾಯು ಬದ್ಧಗೋಷ್ಠ, ಮೂಲರೋಗ, ಕೈ ಕಾಲು ಸೆಳೆಯುವಿಕೆ, ಭ್ರಾಂತಿ ಬೇನೆ, ಕಳಿವ ಬೇನೆ, ಎಲ್ಲ ತರದ ಜ್ವರ, ಸಂತತ ಶೂಲಿ, ತಲೆಶೂಲಿ, ಮಲಬದ್ಧರೋಗ, ಎದೆಯಲ್ಲಿ ಉರಿಯೋಣ ಮತ್ತು ನೋಯೋಣ, ಕೊರಳ ಬಾವು, ಎಲ್ಲ ತರದ ಮೂಲವ್ಯಾಧಿ, ನಿದ್ರೆ ಬಾರದಿರೋಣ, ಮೂತ್ರೇಂದ್ರಿಯದ ಒಳಗಿನ ರೋಗ, ಕೆಮ್ಮು, ದಮ್ಮು, ಗಜಕರ್ಣ, ತ್ವಚಾರೋಗ, ಮೊದಲಾದ ಮತ್ತು ಇತರ ರೋಗಗಳು ಇವನ್ನು ಉಪಯೋಗಿಸುವದರಿಂದ ನೆಟ್ಟಗಾಗುತ್ತವೆಂಬುದು ಜಗಪ್ರಸಿದ್ಧವಿದೆ. ಕೊರಳ ಪಟ್ಟಿ—ಸಣ್ಣ ಹುಡುಗರಿಗೆ ಹಲ್ಲು ಬರುವಾಗ ವೇದನೆಯಾಗದ ಹಲ್ಲು ಬರುವವು. ಲೇಬಿಲ್—ಕೈ ನಡುಗುವಿಕೆ, ಸ್ಮರಣ ಶಕ್ತಿಯು ಬಗ್ಗೆ. ಇಂಥ ಉತ್ತಮ, ಗುಣಕರ, ಸರ್ವ ರೋಗ ನಾಶಕ, ಪ್ರತ್ಯಕ್ಷ ತೋರಿಸುವ ಔಷಧದ ಕಿಟಕಿಟಿಯನ್ನು ತಪ್ಪಿಸಿರಿ. ಈ ಬಿಡಲು ಸಂಗ್ರಹ ಮಾಡದೆ ಇರಬೇಡಿರಿ, ಪ್ರತಿ ಬಂದು ಬಿಡಿಕೆಯು ಮೇಲೆ G. B. N. ಗುರ್ತು ನೋಡಿ ತೆಗೆದುಕೊಳ್ಳಿರಿ. ಬಂಗಿ ಕಟ್ಟುವದು ಪ್ರಕಟ. ಪತ್ರ ವ್ಯವಹಾರ ಮರಾಠಿಯಲ್ಲಿ ಇಲ್ಲವೇ ಇಂಗ್ರೇಜಿಯಲ್ಲಿರ ಬೇಕು. ಪತ್ತೆ ಸ್ಪಷ್ಟ ಬರೆಯಬೇಕು.

ಕ್ರಯವು—ಹಿತ್ತಾಳೆಯ ಉಂಗುರಕ್ಕೆ ಒಂದುವರೆ ರೂ. ಬೆಳ್ಳಿಯ ಉಂಗುರಕ್ಕೆ ೩ ರೂ. ಭಂಗಾರದ ಉಂಗುರಕ್ಕೆ ೨೦ ರೂ. ಹಿತ್ತಾಳೆಯ ಪದಕಕ್ಕೆ ಒಂದುಕಾಲು ರೂ. ಬೆಳ್ಳಿಯ ಪ. ಕ್ಕೆ ೨ ರೂ. ಭಂಗಾರದ ಪ. ಕ್ಕೆ ೨೨ ರೂ. ದಾತುಗಳ ಬಳೆಗೆ ಒಂದುವರೆ ರೂ. ಲೇಬಿಲಿಗೆ ಒಂದುವರೆ ರೂ. ರೇಶ್ಮೆ ಕೊರಳ ಪಟ್ಟಿಗೆ ಒಂದುವರೆ ರೂ. ಒಮ್ಮೆಲೇ ೧೨ ನಗ ತೆಗೆದು ಕೊಂಡರೆ ೧ ಹೆಚ್ಚು ಸಿಗುವದು. ರೋಗದ ವರ್ಣನ ಬಂದರೆ ಆಥವಾ ವಿ. ಪೇ. ಬಿಲ್ ಬೇಕಾದರೆ ಕಳಿಸುವೆವು. ಉಂಗುರ ತರಿಸುವವರು ಬೆರಳಿನ ಸುತ್ತಳತೆ ಕಳುಹಿಸರಿ. ಅನೇಕ ದೇಶಗಳ ಮೇಲೆ ಗುಣ ಬಂದ ಬಗ್ಗೆ ಡಾಕ್ಟರ, ವೈದ್ಯ, ಪತ್ರಕರ್ತ ಮುಂತಾದವರ ಸರ್ಟಿಫಿಕೇಟಿನ ಮಾ ಪಿಂಟ ವ್ಯಾಪಾರಿ ವರದ ಪುಸ್ತಕ ೬ ಪೈ ಕಳುಹಿಸಿದರೆ ಕಳಿಸುವೆವು. ಪಾಸಲು ತೆಗೆದುಕೊಂಡರೆ ಪ್ರಕಟ ಕಳುಹಿಸುವೆವು. ೧ ರಿಂದ ೬ ವರೆಗೆ ಟಿ. ಪಿ. ೬ ಆಣೆ.

ಜಿ. ಬಿ. ನಾಯಿಕ ಮತ್ತು ಕಂಪನಿ, ಬ್ಯಾಕಳಾ, ಪಳೇವಾವಣ ಎದುರು, ಮುಂಬಯಿ.

ನೋಟೀಸ್.

		ಕ್ರಯ			ಹಾಸಲು ಸಹಿತವಾಗಿ		
Campbell's.	ಕನ್ನಡ ವ್ಯಾಕರಣ ಸಾರ	೦	೨	೦	೦	೨	೬
Object Lessons.	ವಸ್ತು ಪಾಠಗಳು	೦	೧	೦	೦	೧	೬
Picture do	ಚಿತ್ರಗಳು ಸಹಿತವಾಗಿ	೦	೨	೦	೦	೨	೬
ಈ ಮೂರು ಪುಸ್ತಕಗಳು ಪ್ರೈಮರಿ ಮಠಗಳಲ್ಲಿ ಓದತಕ್ಕ ಪುಸ್ತಕಗಳು.							
ಸ್ತ್ರೀಯರು ಓದತಕ್ಕ ಪುಸ್ತಕ		೦	೫	೦	೦	೫	೬
ಗಣಿತ ವಿದ್ಯೆ ..		೦	೪	೦	೦	೪	೬
ಗಣಿತ ಮಗ್ಗಿಗಳು ..		೦	೧	೦	೦	೧	೬
ಸಂಸ್ಕೃತ ಕರ್ನಾಟಕ ಭಾಷಾಮಂಜರಿ		೦	೨	೦	೦	೨	೬
ಭೂಗೋಳ ಶಾಸ್ತ್ರ ಪ್ರಶ್ನೋತ್ತರ		೦	೨	೦	೦	೨	೬
ಇಂಗ್ಲಿಷು ಕನ್ನಡವೂ ಶಬ್ದಾವಳಿ ೧ನೇ ೨ನೇ ಭಾಗಕ್ಕೆ		೦	೧	೦	೦	೧	೬
ಕಾವ್ಯಾವಳಿ (Minor Poetical Anthology)		೦	೭	೦	೦	೭	೬
ಬಾಲವ್ಯಾಕರಣ ..		೦	೫	೦	೦	೫	೬
ಹಳಗನ್ನಡ ವ್ಯಾಕರಣ ಸೂತ್ರಗಳು		೦	೬	೦	೦	೬	೬
ಇಂಗ್ಲಿಷು ಕನ್ನಡವೂ ಸಂಭಾಷಣ ವಾಕ್ಯಗಳು		೦	೧೦	೦	೦	೧೦	೬
ಶಬ್ದಮಣಿ ದರ್ಪಣ ..		೧	೦	೦	೧	೪	೬
Kan. Eng. Pocket Dictionary		೧	೪	೦	೧	೫	೬
Eng. Kan. School Dictionary		೨	೧೦	೦	೨	೧೨	೬
ಒಳ್ಳೇ ತಾಯಿ ..		೦	೪	೪	೦	೪	೬
ಆತ್ಮಿಕ ದಿವ್ಯ ಯುದ್ಧ (Bunyan)		೦	೧೨	೦	೦	೧೩	೬
ಕ್ರೈಸ್ತ ಸದ್ಗತಿ ೧ ನೇ ಭಾಗ ೨ ಅಥವಾ ೩ ನೇ ಭಾಗ		೦	೧	೬	೦	೨	೦
ಭಕ್ತಿಸಾರ ..		೦	೧	೦	೦	೧	೬
ಸತ್ಯ ವಾಗ್ದಾನಿ		೦	೧	೦	೦	೧	೬
ಕಾವ್ಯಪುಂಜ ..		೦	೩	೦	೦	೩	೬

A new Edition of the Geography suited for the Lower Secondary Examination is now ready.—Edited by Rev. H. Gulliford. ***Price 6 As.***

ಮೇಲೆ ನಮೂದಿಸಿರುವ ಪುಸ್ತಕಗಳನ್ನು ಬೆಂಗಳೂರು ದಂಡಿನ **ವೆಸ್ಲೇಯನ ಮಿಶನ** ಪುಸ್ತಕ ಶಾಲೆಯಲ್ಲಿ ಪಡೆಯ ಬಹುದು.

ವೃತ್ತಾಂತ ಪತ್ರಿಕೆ.

ಚಂದಾ ನಿರ್ಣಯ.

—೦—

	ರೂ ಆ. ಪೈ
ಸ್ಥಳದವರಿಗೆ ವರ್ಷ ೧ಕ್ಕೆ ..	೧—೦—೦
ಪರಸ್ಥಳದವರಿಗೆ ವರ್ಷ ೧ಕ್ಕೆ ..	೧—೧೪—೦
ಬಿಡಿ ಪತ್ರಿಕೆ ೧ಕ್ಕೆ ..	೦—೦—೪

ಈ ಪತ್ರಿಕೆಯು ಮೈಸೂರು ರಾಜಧಾನಿಯಲ್ಲಿ ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ, ಪ್ರಕಟಿಸಲ್ಪಡುವದು. ಜನರು ಬಹುಜನಗೊಂಡು ಸಮಸ್ತರಿಗೂ ಸುಲಭಸಾಧ್ಯವಾಗುವಂತೆ ಈ ಪತ್ರಿಕೆಗೆ ಇಷ್ಟು ಅಲ್ಪ ಮೌಲ್ಯವನ್ನು ನಿರ್ಣಯಿಸಿರುತ್ತೇವೆ. ಈ ಪತ್ರಿಕೆಯನ್ನು ಅಪೇಕ್ಷಿಸುವವರು **ಚಂದಾ**ಹಣವನ್ನು ಯಾವಾಗ್ಯೂ ಮುಂಗಡವಾಗಿ ಕೊಡಬೇಕು.

ಪ್ರಕಟನೆಯ ನಿರ್ಣಯ.

	ರೂ ಆ. ಪೈ
ಮೊದಲನೇ ಆವರ್ತಿ ಪಙ್ತಿ ೧ ಕ್ಕೆ ...	೦—೨—೦
ಎರಡನೇ ಆವರ್ತಿ ಪಙ್ತಿ ೧ ಕ್ಕೆ ...	೦—೧—೦

ಅನಂತರ ಪ್ರತಿಯೊಂದು ವಾರದಲ್ಲಿಯೂ ಪಙ್ತಿ ೧ ಕ್ಕೆ ೧ ಆಣೆಯಂತೆಯೇ ಲೆಕ್ಕ ಮಾಡಲ್ಪಡುವುದು. **ಕಂಟ್ರಾಕ್ಟಿಗೆ ಕೊಡಬೇಕೆಂದಿರುವವರು ಎಡಿಟರಿಗೆ ಬರೆದು** ದರವನ್ನು ತಿಳಿಯ ಬಹುದು.

ಎಡಿಟರ,

ವೃತ್ತಾಂತ ಪತ್ರಿಕೆ,

ಮೈಸೂರು

ನೋಟೀಸ್.

ಪುಸ್ತಕಗಳು	ಕ್ರಯ.
ಪ್ರಾರ್ಥನಾ ವ್ಯವಹಾರಿಕೆ	1—೮—0
ಕನ್ನಡ ಇಂಗ್ಲೀಷು ನಿಘಂಟು 1 ನೇ ದೊಡ್ಡ ತರಹ	3—0—0
" " 2 ನೇ ತರಹ	2—೮—0
ಬಾಲಕರು ಓದುವ ಎರಡನೆ ಜ್ಞಾನೋಪದೇಶ ಪ್ರಶ್ನೋತ್ತರಗಳು	0—1—0
ಸಭೆಯ ನಿಯಮಗಳನ್ನು ಕುರಿತದ್ದು	0—0—3
ಕಥಾಸಂಗ್ರಹ 1 ನೇ ಭಾಗದಿಂದ 5 ವರೆಗೆ	1—0—0
ಕಥಾಸಂಗ್ರಹ 1 ರಿಂದ 6 ನೇ ಭಾಗ ಹೊಸ ಛಾಪೆ	1—0—0
" " ದೊಡ್ಡ ತರಹ	1—೮—0
ಬೋಧನಾಸಕ್ತಿ ಮೊಟ್ಟಿನಿ	0—1—0
ಸತ್ಯವೇದವನ್ನು ಕುರಿತು 2 ನೇ ಭಾಗ	0—1—0
ಪ್ರಸಂಗಿಯ ದರ್ಪಣ	0—6—0
ಇಂಗ್ಲೀಷು ಭಾಷೆಯಲ್ಲಿಯೂ, ಕನ್ನಡ ಭಾಷೆಯಲ್ಲಿಯೂ, ಶಬ್ದಗಳ ವಿಭಾಗಗಳನ್ನು ವಿವರಿಸಿರುವ ನಿಘಂಟು	0—1—0
ಕನ್ನಡ ವ್ಯಾಕರಣ (ಇಂಗ್ಲೀಷಿನಲ್ಲಿ)	2—0—0
ಹಿಂದೂಸ್ಥಾನಿ ವ್ಯಾಕರಣ	1—0—0
ಬಾಲಬೋಧ ಸೋಪಾನವು	0—1—0
ದನಕರುಗಳ ಉಂಟುರೋಗವಿಚಾರ	0—0—6
ಕ್ರೈಸ್ತರ ಪೋಧನೆಗಳ ಸಾರಾಂಶವು	0—12—0

ಮೇಲೆ ನಮೂದಿಸಿರುವ ಪುಸ್ತಕಗಳನ್ನು ಅಪೇಕ್ಷಿಸುವವರು ಮೈಸೂರು ವೆಸ್ಲೇಯನ ಮಿಶನ ಪ್ರೆಸ್ಸಿಗೆ ಬರೆದು ತರಿಸಿಕೊಳ್ಳಬಹುದು. ಅಂಚೇ ಹಾಸಲು ಬೇರೆ ಕೊಡಬೇಕು.

ವೆಸ್ಲೇಯನ ಮಿಶನ ಪ್ರೆಸ,

ಮೈಸೂರು.

ಜಾಹೀರಾತು

THE KANARA & MYSORE TRADING AGENCY
BOMBAY.

ಕಣ್ಣಿಗೆ ತಂಪು ಕೊಡುವ

ಚಂದ್ರಕಾಂತ ಶಿಲೆಯ ಕನ್ನಡಕಗಳು.

೩ ½ ರೂಪಾಯಿ ಕೆಳಗಿನ ಕ್ರಯದವು ನಮ್ಮಲ್ಲಿಸಿಗಲಾರವು.

ಸಾಧಾರಣ	೩ ½ ರೂಪಾಯಿ	ಜರ್ಮನ ಕೇಸಿನಲ್ಲಿ
ಮಧ್ಯಮ	೫ "	ಜಪಾನದ ಕೇಸಿನಲ್ಲಿ
ಉತ್ತಮ	೬ ½ "	ರೇಶ್ಮೆ ಕೇಸಿನಲ್ಲಿ
ಭಂಗಾರದಲ್ಲಿ ಕಟ್ಟಿದ್ದು	೧೮ "	ಡಿಟ್ಟೋ

ಕಿಂಯುಧಿಯಾರವು.

ಕ್ರಯ ೬ ½ ರೂಪಾಯಿ.

ಈ ಘಡಿಯಾರವು ಕಡಿಮೆ ಕ್ರಯದ್ದಾದರೂ, ಕಡಿಮೆ ಕ್ರಯದ ಘಡಿಯಾರಗಳಲ್ಲಿರುವ **ಅನೇಕ ದೋಷಗಳು** ಇದರಲ್ಲಿಲ್ಲ. ಭದ್ರವಾದದ್ದು. ಬಾಳಿಕೆ ಬರುವಂಥಾದ್ದು.

ಕಿಂಜಿ ಮುತ್ತು.

ಪ್ರತಿ ಬಡಿ ೧ ಕ್ಕೆ ೨ ½ ರೂಪಾಯಿ ಕ್ರಯವು ಬಡಿಯಲ್ಲಿ ೧೦೦, ೧೨೦, ೧೪೪, ೧೫೦, **ಈ ರೀತಿ ಮುತ್ತುಗಳಿ**ರುವವು ಒಟ್ಟು ೧೨ ಬಡಿಗಳನ್ನು ತಗೊಂಡರೆ ೧ ರೂಪಾಯಿ ಕಡಿಮೆ ಬೀಳುವದು. **ಬೇಕಾದವರು ಕೆಳಗಿನ** ವಿಳಾಸಕ್ಕೆ ಬರೆದುಕೊಳ್ಳಬೇಕು.

ಮ್ಯಾನೇಜರ,

ಕೆನರಾ ಎಂಡ ಮೈಸೂರ ಟ್ರೇಡಿಂಗ ಏಜನ್ಸಿ ಆಫೀಸ, ಮುಂಬಯಿ

ನೋಟೀಸ್.

ಇದರಿಂದ ತಿಳಿಪಡಿಸುವದೇನೆಂದರೆ—ಮೈಸೂರು ಜೈಲಿನಲ್ಲಿ ಕೈದು ಹಾಕಲ್ಪಟ್ಟಿರುವ ವ್ಯಕ್ತಿಗಳ ಉಪಯೋಗದ ಬಗ್ಗೆ ೧೮೯೬ ನೇ ಯಿಸವಿ ಏಪ್ರೀಲ್ ೧ ಲಾಗಾಯಿತು ೧೮೯೭ ನೇ ಯಿಸವಿ ಮಾರ್ಚ್ ೩೧ ತಾರೀಖಿನವರೆಗೆ ಆ ಯೆರಡು ದಿನಗಳು ಸೇರಿ ಆಗುವ ೧೨ ತಿಂಗಳ ವರೆಗೂ ಬೇಕಾಗುವ ಆಹಾರವಗೈರೆ ಜಿನಸಿಗಳನ್ನು ಕಂಟ್ರಾಕ್ಟು ಮೂಲಕ ಸಂಬರಾಯಿ ಮಾಡುವ ಬಗ್ಗೆ ಮೊಹರು ಮಾಡಲ್ಪಟ್ಟ ದರಖಾಸ್ತುಗಳು ಮೈಸೂರು ಜೈಲ್ ಸೂಪರಿಂಟೆಂಡೆಂಟರವರಿಂದ ೧೮೯೬ ನೇ ಇಸವಿ ಜನವರಿ ೧೫ ನೇ ತಾರೀಖಿನ ವರೆಗೆ ಅಂಗೀಕರಿಸಲ್ಪಡುವವು. ಈ ವಿಷಯವಾಗಿ ಬೇಕಾಗುವ ಸಮಾಚಾರಗಳನ್ನು ಮೈಸೂರು ಜೈಲ್ ಆಫೀಸಿನಲ್ಲಿ ದಿನವೂ ಸಾಯಂಕಾಲ ೩ ಘಂಟೆ ಲಾಗಾಯಿತು ೬ ಘಂಟೆ ವರೆಗೆ ರೂಬರೂ ಕೇಳಿ ತಿಳಿದುಕೊಳ್ಳಬಹುದು. ಅಥವಾ ಮುಂದಿನ ವಾರಗಳಲ್ಲಿ ಮೈಸೂರು ಗೆಜೆಟ್ಟಿನಲ್ಲಿ ಛಾಪಿಸಲ್ಪಡುವ ಇಸ್ತಿಹಾರುಗಳಿಂದ ತಿಳಿಯಬಹುದು.

ಮೈಸೂರು ಜೈಲ್. ತಾ|| ೨೮ ನೇ ಡಿಸೆಂಬರ ೧೮೯೫ ನೇ ಇಸವಿ.	Percy H. Benson M. B. ಸರ್ಜನ್ ಮೇಜರ್ ಸೂಪರಿಂಟೆಂಡೆಂಟ್ ಮೈಸೂರ ಜೈಲ್.

ವೃತ್ತಾಂತ ಪತ್ರಿಕೆ.

—o—

೧೮೯೬ ನೇ ಇಸವಿ ಜನವರಿ ತಾ|| ೧೨ ನೇ ಗುರುವಾರ

ಹಿಂದೂ ಜನರಲ್ಲಿ ವಿವಾಹ.

(*Extract.*)

ನಮ್ಮ ದೇಶದಲ್ಲಿ ರೂಢಿಯಲ್ಲಿರುವ ಯಾವ ಸಂಪ್ರದಾಯವನ್ನಾಗಲಿ ಒಳ್ಳೇದಲ್ಲವೆಂದು ಹೇಳಿ ಖಂಡಿಸುವವನು, ಮೊದಲು ಜನರ ನಿಂದೆಗೆ ಗುರಿಯಾಗಬೇಕಾಗುತ್ತದೆ. ಬಹು ಕಾಲದಿಂದ ನಡೆದು ಬಂದಿರುವ ಸಂಪ್ರದಾಯವು ಎಷ್ಟು ಹಾನಿಕರವಾಗಿದ್ದರೂ, ಅದನ್ನು ಬಿಡುವದಕ್ಕೆ ಜನರು ಹಿಂತೆಗೆಯುವರು. ಇದು ಮನುಷ್ಯ ಸ್ವಭಾವವಾಗಿದೆ. ಜನರಿಗೆ, ಚಿರಕಾಲಾವಲಂಬನದಿಂದ ಆಯಾ ಸಂಪ್ರದಾಯಗಳಲ್ಲಿ ದೃಢವಾದ ಪ್ರೇಮವುಂಟಾಗಿರುವದರಿಂದ, ಅವುಗಳನ್ನು ಸುಲಭವಾಗಿ ಬಿಡುವದಕ್ಕೆ ಆಗುವದಿಲ್ಲ; ಬಲಾತ್ಕಾರದಿಂದ ಬಿಡಿಸುವದಕ್ಕೆ ಪ್ರಯತ್ನಿಸಿದರೆ, ಅನೇಕ ವಿಧವಾದ ತೊಂದರೆಗಳು ಸಂಭವಿಸುತ್ತವೆ. ನೂತನ ಸಂಪ್ರದಾಯಗಳಿಂದ ಉಂಟಾಗತಕ್ಕ ಪ್ರಯೋಜನಗಳು ಸಾಮಾನ್ಯವಾಗಿ ಜನಗಳಿಗೆ ಚನ್ನಾಗಿ ದೃಗ್ಗೋಚರವಾಗುವದಿಲ್ಲ. ಈ ಕಾರಣದಿಂದಲೆ, ಯಾವದಾದರೂ ಪೂರ್ವ ಸಂಪ್ರದಾಯಗಳನ್ನು ಬಿಟ್ಟು ನೂತನ ಪದ್ಧತಿಗಳನ್ನು ಅನುಸರಿಸಬೇಕೆಂದು, ಯಾರಾದರೂ ಬೋಧಿಸಲು ಉಪಕ್ರಮಿಸಿದರೆ, ಅವರು ಜನರ ನಿಂದೆಗೆ ಒಳಗಾಗಬೇಕಾಗುತ್ತದೆ. ನೂತನ ಪದ್ಧತಿಗಳನ್ನು ಅನುಸರಿಸಬೇಕೆಂದು ಹೇಳುವವರು ತೋರಿಸುವ ಸಾಧಕ ಬಾಧಕಗಳನ್ನು ಶಾಂತ ಚಿತ್ತರಾಗಿ ವಿಚಾರ ಮಾಡುವ ಪೂರ್ವ ಪದ್ಧತಿಯವರು ಹ್ಯಾಗೆ ವಿರಳವಾಗಿರುತ್ತಾರೋ, ಹಾಗೆಯೇ, ನೂತನ ಪದ್ಧತಿಯನ್ನು ಅವಲಂಬಿಸಬೇಕೆಂದು ಹೇಳುವವರಲ್ಲಿ ಹಳಬರ ಆಕ್ಷೇಪಣೆಗಳನ್ನು ಸಮಾಧಾನದಿಂದ ವಿಚಾರ ಮಾಡುವವರೂ ಅಪೂರ್ವ. ಆದ್ದರಿಂದ, ನಿಜವಾಗಿ ಈ ದೇಶಕ್ಕೆ ಹಿತವನ್ನು ಮಾಡಬೇಕೆಂಬುವರು, ತಾವು ಹೇಳುವದನ್ನು ಆಗ್ರಹವಿಲ್ಲದೆ ಸಮಾಧಾನದಿಂದ ಹೇಳಬೇಕಲ್ಲದೆ, ತಮ್ಮ ವಿಷಯದಲ್ಲಿ ಇತರರು ಮಾಡುವ ಆಕ್ಷೇಪಣೆಗಳನ್ನು ನಿಧಾನದಿಂದ ಪರೀಕ್ಷಿಸಬೇಕು.

ಈ ತತ್ವವನ್ನು ಜ್ಞಾಪಕದಲ್ಲಿಟ್ಟುಕೊಂಡು ಒಂದು ವಿಷಯವನ್ನು ಕುರಿತು ಈಗ ವಿಚಾರ ಮಾಡೋಣ. ಈಗ ಲಗ್ನಗಳು ನಡೆಯುವ ಮಾಸವು ಸಮೀಪವಾಗಿ, ಬೀಗಿತ್ತಿಯರು ಸಂಭ್ರಮದಿಂದ ಮದುವೆಗೆ ಸಿದ್ಧಮಾಡಿಕೊಳ್ಳುವ ಕಾಲವಾಗಿ ಇರುವದರಿಂದ, ನಾವು ಪ್ರತಿಪಾದನೆ ಮಾಡುವ ವಿಷಯವು ಅಪ್ರಸಂಗಿಕವಾಗಿ ಇರಲಾರದು. ಹಿಂದೂ ಜನರ ಲಗ್ನದ ವಿಷಯದಲ್ಲಿಯೂ, ವಿವಾಹಿತ ಸ್ತ್ರೀಯರ ವಿಷಯದಲ್ಲಿಯೂ ಮ|| ಮಲಬಾರಿಯವರು ಇದುವರಿಗೂ ವಿಶೇಷ ಚಳ್ವಳಿಯನ್ನು ನಡಿಸಿರುವದರಿಂದ, ಈ 'ವಿಷಯವನ್ನು ತಿರುಗಿ ಆರಂಭಿಸಿದ ಕೂಡಲೆ, ಜನರು ಸಾಧಾರಣವಾಗಿ ಇದು 'ಪಿಷ್ಟಪೇಷಣ' ನ್ಯಾಯವೆಂದು ಎಣಿಸಲು ಉಪಕ್ರಮಿಸುತ್ತಾರೆ. ಸಾಮಾಜಿಕರೂ, ಮಲಬಾರಿಯವರು ವಿಚಾರ ಮಾಡಿದ ಲಗ್ನಕ್ಕೆ ಉಚಿತವಾದ ವಯಸ್ಸು ಮುಂತಾದ ಬಾಲಗ್ರಸ್ತವಾದ ವಿಷಯಗಳ ಗೋಜಿಗೆ ಈಗ ಹೋಗುವದಿಲ್ಲ. ಈ ಲಗ್ನದಲ್ಲಿ ಅಂತರ್ಭೂತವಾದ ಕೆಲವು ನಡತೆಗಳ ವಿಷಯವನ್ನು ಕುರಿತು ತಿಳಿಸುತ್ತೇವೆ.

ನಮ್ಮ ಹಿಂದೂ ದೇಶದಲ್ಲಿ, ದಾರಿದ್ರ್ಯವು ಪ್ರವೇಶ ಮಾಡಿದ್ದು ಮೊದಲುಗೊಂಡು ಮಕ್ಕಳಾಗುವದೂ ಒಂದು ವಿಧವಾದ ವಿಪತ್ತೆಂದು ಭಾವಿಸಬೇಕಾಗಿದೆ, ಅದರಲ್ಲಿಯೂ ಹೆಣ್ಣು ಮಕ್ಕಳಾಗುವದು ವಿಶೇಷ ದೌರ್ಭಾಗ್ಯವೆಂದು ಎಣಿಸಬೇಕಾಗಿದೆ.

> ಜಾತೇತಿ ಕನ್ಯಾ ಮಹತೀಹಿ ಚಿಂತಾ ।
> ಕಸ್ಮೈ ಪ್ರದೇಯೇತಿ ಮಹಾನ್ ವಿತರ್ಕಃ ॥
> ದತ್ತಾ ಸುಖಂ ಪ್ರಾಪ್ಸ್ಯತಿವಾ ನವೇತಿ ।
> ಕನ್ಯಾಪಿತೃತ್ವಂ ಖಲು ಭೂರಿ ಕಷ್ಟಂ ॥

ಹೆಣ್ಣು ಮಕ್ಕಳಿಗೆ ೭—೮ ವರ್ಷ ವಯಸ್ಸಾದ ಕೂಡಲೆ, ಅವರಿಗೆ ತಕ್ಕ ವರರನ್ನು ಹುಡುಕುವದರಲ್ಲಿಯೇ ಕೆಲವು ಕಾಲ ಕಳೆದು ಹೋಗುತ್ತದೆ. ಅದೃಷ್ಟವಶಾತ್ ಯಾರಾದರೂ ದೊರಕಿದರೆ, ಆ ಹುಡುಗನ ತಾಯಿ ತಂದೆಗಳು ಆ ಕನ್ಯೆಯನ್ನು ಸ್ವೀಕರಿಸುವದಕ್ಕೆ ಒಪ್ಪುತ್ತಾರೋ ಇಲ್ಲವೋ ಎಂದು ವಿಚಾರ ಮಾಡಿ, ಈ ವಿಷಯದಲ್ಲಿ ಅವರ ಉಪಾಸನೆಗಳ ಮಾಡಿ, ಅವರು ಹೇಳಿದ್ದಕ್ಕೆಲ್ಲಾ ಒಪ್ಪಿಕೊಂಡು, ಹ್ಯಾಗಾದರೂ ಮಾಡಿ ಹುಡುಗಿಯನ್ನು ಅವರ ವಶಕ್ಕೆ ಕೊಡಬೇಕಾಗುತ್ತದೆ. ಈ ಮಧ್ಯದಲ್ಲಿ, ಗೋತ್ರ, ಪ್ರವರ, ರಾಶಿ, ನಕ್ಷತ್ರ ಮುಂತಾದವುಗಳು ಕೂಡಿ ಬರುವದು, ನಗನಾಣ್ಯ ಮೊದಲಾದವುಗಳನ್ನು ಇಡುವದು, ವರನಿಗೆ ಕೊಡಬೇಕಾದ ವರದಕ್ಷಿಣೆ ಮುಂತಾದ ಅನೇಕ ವಿಷಯಗಳು ಗೊತ್ತಾಗಬೇಕಾಗಿರುತ್ತವೆ. ವರಪೂಜೆಯ ದಿವಸವೇ ಅನೇಕ ವಿವಾದಗಳು ಹುಟ್ಟಿ, ಮುಂದೆ ಅವುಗಳಿಂದಲೇ ಎಷ್ಟೋ ಜನರಿಗೆ ಅನರ್ಥಗಳು ಸಂಭವಿಸುವದುಂಟು. ಹ್ಯಾಗಾದರೂ ಲಗ್ನ, ವಧೂವರರ ಪಾಣಿಗ್ರಹಣವಾದ ನಂತರ, ಬೀಗಿತ್ತಿಯರ ಮತ್ತು ಕಳಸಗಿತ್ತಿಯರ ಉಪಟಳಕ್ಕೆ ಆರಂಭವಾಗುತ್ತದೆ. ಕ್ರಮವಾಗಿ ಯೋಚಿಸಿ ನೋಡಿದರೆ, ಲಗ್ನದ ಸಂಭ್ರಮವು ಬೀಗಿತ್ತಿ ಕಳಸಗಿತ್ತಿಯರದಾಗಿ ಕಾಣುವದೇ ಹೊರತು, ವಧೂವರರದಾಗಿ ಕಾಣುವದಿಲ್ಲ. ಬೀಗ್ತ್ಯ ಹೊತ್ತಿಗೆ ಸರಿಯಾಗಿ ಅರಿಸಿನ, ಕುಂಕುಮ, ಪನ್ನೀರು ಮುಂತಾದ ಉಪಚಾರಗಳನ್ನು ಬೀಗಿತ್ತಿಯರಿಗೆ ಒಂದು ದಿವಸವಾದರೂ ಮಾಡದ ತಪ್ಪಿದ ಕ್ಷಣದಲ್ಲಿ, ಅವರಿಗೆ ಉಂಟಾಗುವ ಕೋಪವೆಂಬ ಆಗ್ನೇಯಾಸ್ತ್ರವು ವಿಕ್ಕೆ ವಿಕ್ಕೆಗೂ ವ್ಯಾಪಿಸಿಕೊಳ್ಳುವದು. ಪೂರ್ವದಲ್ಲಿ ಯುದ್ಧದಲ್ಲಿ ಪ್ರಯೋಗಿಸುತ್ತಿದ್ದ ಆಗ್ನೇಯಾಸ್ತ್ರಕ್ಕೆ ವಾರುಣಾಸ್ತ್ರವೆಂಬ ಪರಿಹಾರವಿತ್ತೆಂದು ಹೇಳುತ್ತಾರೆ. ಆದರೆ, ಈ ಬೀಗಿತ್ತಿಯ ಆಗ್ನೇಯಾಸ್ತ್ರಕ್ಕೆ ಪರಿಹಾರವೇ ಇಲ್ಲ. ಇನ್ನೂ ಅನೇಕ ಕ್ಷುಲ್ಲಕ ವಿಷಯಗಳಿಗೋಸ್ಕರವೂ ಈ ಜನರಿಗೆ ಚಂಚಲಕೋಪವು ಬರುವದುಂಟು. ಅನೇಕ ಕ್ರೂರ ದೇವತೆಗಳು ಕೂಡ ತಮ್ಮ ಭಕ್ತರಿಗೆ ಸ್ವಾಧೀನರಾಗುವರೂ, ಅನೇಕ ವಿಷಯದಲ್ಲಿ ಪ್ರಸನ್ನ ಚಿತ್ತರಾಗುವರೂ ಇರುತ್ತಾರೆ. ಈ ಬೀಗಿತ್ತಿ ದೇವತೆಗಳಿಗೆ ಆರಾಧನೆ ಮಾಡಿದಷ್ಟು ಕೋಪವು ಹೆಚ್ಚುತ್ತದೆ. ಎಲ್ಲಾ ದೇಶಗಳಲ್ಲಿಯೂ ಲಗ್ನಗಳು ಆಯಾ ದೇಶದ ನಡತೆಗಳಿಗೆ ಅನುಸಾರವಾಗಿ ನಡೆಯುತ್ತಿರಬಹುದು. ಆದರೆ, ಈ ದೇಶದಲ್ಲಿನ ಬೀಗಿತ್ತಿಯರಂತೆ ಉತ್ಪಾತ ಮಾಡಿಸಿಕೊಳ್ಳುವವರು ಅಲ್ಲಿ ಎಲ್ಲಿಯೂ ಇರುವದಿಲ್ಲವೆಂದು ನಾವು ನಂಬುತ್ತೇವೆ. ಸಿಟ್ಟಾಗಬಾರದು ಉಡುವದಕ್ಕೆ ಘಟ್ಟದ ಸೀರೆ ಇಲ್ಲದಿದ್ದರೂ, ಬೀಗಿತ್ತಿಯಾದ ಕೂಡಲೆ ಉಡುವದಕ್ಕೆ ಪಟ್ಟೇ ಸೀರೆಯೇ ಬೇಕು; ಅವರ ತಲೆಯ ಮೇಲೆ ಎರಡನೇದವರು ಛತ್ರವನ್ನು ಹಿಡಿಯಬೇಕು: ಎಂಜಲು ತೊಳೆಯುವದಕ್ಕೆ ಹಾಲು ಸಕ್ಕರೆಯೇ ಬೇಕು. ಇಷ್ಟು ಉಪಚಾರ ಮಾಡಿಸಿಕೊಂಡರೂ ಅವರ ಮನಸ್ಸಿಗೆ ಸಮಾಧಾನವಿರುವದಿಲ್ಲ: ಯಾವದಾದರೂ ಒಂದು ಕೊರತೆ ಬಾಧಿಸುತ್ತಲೇ ಇರುತ್ತದೆ. ಕಳಸಗಿತ್ತಿಯರಿಗೂ ಇದೇಪ್ರಕಾರ ಉಪಚಾರ ನಡೆಯಬೇಕು. ಇವರು ಬೇಕಾದ ಬೈಗಳನ್ನು ಬೈದರೂ ಯಾರೂ ಆಕ್ಷೇಪಿಸುವದಕ್ಕಿಲ್ಲ. ಈ ಪ್ರಕಾರ ಇವರನ್ನು ಉಪಚರಿಸಿ, ಉಪಸರ್ಗ ಮಾಡಿ, ಕಾಲಕ್ಷೇಪ ಮಾಡುವದಕ್ಕೆ, ಹೆಣ್ಣಿನ ತಾಯಿ ತಂದೆಗಳು ತಾವು ಪೂರ್ವಜನ್ಮದಲ್ಲಿ ಯಾವ ಪಾತಕವನ್ನು ಮಾಡಿದ್ದರಿಂದ, ಈ ಜನ್ಮದಲ್ಲಿ ತಮಗೆ ಹೆಣ್ಣು ಹುಟ್ಟಿ ಈ ದುಃಖವನ್ನು ಅನುಭವಿಸಬೇಕಾಗಿದೆಯೋ ಎಂದು ಯೋಚನೆ ಮಾಡಬೇಕಾಗುವದು. ಈಗಲೇ ಈ ಪ್ರಕಾರ ನಡೆಯುವಲ್ಲಿ ಮುಂದೆ ತಮ್ಮ ಮಗಳು ಸೊಸೆಯಾಗಿ ಹ್ಯಾಗೆ ಬಾಳಬೇಕೆಂಬ ಭೀತಿ ಹುಟ್ಟಿ, "ಜಾಮಾತಾ ದಶಮಗ್ರಹಃ" ಎಂಬದಾಗಿ ಹಿರಿಯರು ಹೇಳಿರುವದನ್ನು ಸತ್ಯವಲ್ಲವೆಂದು ತಿಳಿಯಲಾರಂಭಿಸುತ್ತಾರೆ.

ಲಗ್ನ ಮಾಡುವದಕ್ಕೆ ಉತ್ತಮವಾದ ವಯಸ್ಸು ಯಾವದು? ಈ ಕೆಲಸವನ್ನು ತಾಯಿ ತಂದೆಗಳು ಮಾಡಬೇಕೇ, ಇಲ್ಲವೇ ಆಯಾ ಸ್ತ್ರೀಪುರುಷರು ತಾವೇ ಮಾಡಿಕೊಳ್ಳಬಹುದೆ? ಈ ವಿಚಾರವು ಸುಲಭವಾಗಿ ವ್ಯವಸ್ಥೆಯಾಗತಕ್ಕದ್ದಲ್ಲ. ಈ ವಿಷಯದಲ್ಲಿ ಇಂಡಿಯಾ ದೇಶದಲ್ಲೆಲ್ಲಾ ಕೆಲವು ವರುಷಗಳಿಂದಲೂ ಚರ್ಚೆ ನಡೆಯುತ್ತಾ ಇದ್ದರೂ, ವಿಷಯವು ಪೂರ್ವಸ್ಥಿತಿಯಲ್ಲಿಯೇ ಇದೆ. ಇವರ ವ್ಯವಸ್ಥೆಯು ಸಾವಕಾಶವಾಗಿ ಆಗಬಹುದು. ಆದರೆ ಈಗ ಮೇಲೆ ವಿವರಿಸಿದ ಬೀಗಿತ್ತಿಯರ ದುರ್ನಾಟಕವನ್ನಾದರೂ ತಕ್ಷಣಕ್ಕೆ ಕಡಿಮೆ ಮಾಡುವದಕ್ಕೆ ಇದು ಕಾಲವಲ್ಲವೆಂದು ಯಾರೂ ಹೇಳಲಾರರು. ಸ್ತ್ರೀಯರು ವಿದ್ಯಾವತಿಯರಾದಾಗಲಲ್ಲ ಇಂಥಾ ದುರಾಚಾರಗಳು ಕಡಿಮೆಯಾಗುವದು. ಆದಾಗ್ಯೂ, ಈಗ ವಿದ್ಯಾಭ್ಯಾಸ ಮಾಡುವ ಬಾಲೆಯರು ಬೀಗಿತ್ತಿಯರಾಗುವ ವರೆಗೂ ನಿರೀಕ್ಷಿಸದೆ, ಈ ವಿಷಯದಲ್ಲಿ ಈಗಿನಿಂದಲೇ ಯಾರಾದರೂ ಪ್ರಯತ್ನ ಮಾಡುವದು ಒಳ್ಳೇದೆಂದು ಎಣಿಸುತ್ತೇವೆ.

ಮನ್ನಣೆಯು.

ಪೂರ್ವಕಾಲದಲ್ಲಿ ದೊಡ್ಡ ದೊಡ್ಡ ಪ್ರಭುಗಳು ಅಗ್ಗ್ಯ ಒಬ್ಬರೊಬ್ಬರು ದ್ವೇಷದಿಂದ ಯುದ್ಧ ಮಾಡುತ್ತಿದ್ದರು ಅಂಥವರಲ್ಲಿ ಒಬ್ಬ ಪ್ರಭುವು ಬೇರೆ ದೇಶದ ದೊರೆಯಿಂದ ಕ್ಷೇಮವನ್ನು ಅನುಭವಿಸಿದ್ದು, ಅದಕ್ಕೆ ಪ್ರತಿಫಲ ಕೊಡಬೇಕೆಂಬ ಯೋಚನೆಯಿಂದ ಇದ್ದನು.

ಹೀಗಿರುವಲ್ಲಿ ಒಂದು ದಿನ ಯಾರು ಈ ಪ್ರಭುವಿಗೆ ಹಾನಿಯನ್ನು ಮಾಡಿದನೋ ಆ ದೊರೆಯು ತನ್ನ ಚಿಕ್ಕದಾದ ಸೈನ್ಯದ ಕೂಡ ಅರಮನೆಯ ಬಳಿಯಲ್ಲಿ ಹೋಗುತ್ತಾ ಇದ್ದನು. ಆಗ ಈ ಪ್ರಭುವು ತನ್ನ ಹತ್ತಿರ ಇದ್ದ ಮಂತ್ರಿಯವರನ್ನು ನೋಡಿ—ಅಯ್ಯಾ ನನಗೆ ಬಹಳ ಕೇಡನ್ನು ಉಂಟುಮಾಡಿದ ದೊರೆಯು ಕೊಂಚ ದಂಡಿನೊಂದಿಗೆ ಹೋಗುತ್ತಾ ಇದ್ದಾನೆ. ನಾನು ಹೋಗಿ ಆತನನ್ನು ಕೊಂದುಬರುತ್ತೇನೆ ಎಂದು ಕೇಳಲು; ಮಂತ್ರಿಯವರು—ಅಯ್ಯಾ ನೀವು ಕ್ರಿಸ್ತ್ಯರು ಕ್ರಿಸ್ತನು ಕೇಡನ್ನು ಮಾಡಿದವರಿಗೆ ಒಳ್ಳೇದನ್ನು ಮಾಡಬೇಕು ಆದಕಾರಣ ನೀವು ಆ ದೊರೆಯು ಮಾಡಿದ ತಪ್ಪನ್ನು ಕ್ಷಮಿಸಬೇಕು. ಪ್ರತೀಕಾರವನ್ನು ಮಾಡುವದು ಯೋಗ್ಯವಲ್ಲ ಎಂದು ಹೇಳಲು; ಆ ಪ್ರಭುವು—ಇಲ್ಲಯ್ಯಾ ಹಗೆಯವನನ್ನು ಕೊಲ್ಲಲೇಬೇಕು ಎಂದು ಖಂಡಿತವಾಗಿ ಹೇಳಲು, ಮಂತ್ರಿಯು ಹಾ—ಹೀಗೆ ಅಂಥಾ ಯೋಚನೆಯನ್ನು ಬಿಡಬೇಕು ನಾನು ಅದಕ್ಕೆ ಒಡಂಬಡುವದಿಲ್ಲ. ಇದು ಮಹಾ ಪಾಪದ ಕಾರ್ಯವಾಗಿದೆ. ನಿಮ್ಮ ಮನಸ್ಸನ್ನು ಬೇರೆ ಮಾಡಿಕೊಳ್ಳಬೇಕು ಎಂದು ಹೇಳಲು ಅದಕ್ಕೂ ಒಡಂಬಡಲಿಲ್ಲ. ಆದಕ್ಕೆ ಮಂತ್ರಿಯವರು ನಾನು ಏನು ಹೇಳಿದರೂ ಇವನು ಕೇಳುವದಿಲ್ಲ; ಇವನನ್ನು ಸುಲಭವಾಗಿ ವಶ ಮಾಡಿಕೊಳ್ಳಬೇಕೆಂದು ಒಂದು ಉಪಾಯ ಮಾಡಿದರು, ಏನೆಂದರೆ—ಆ ಪ್ರಭುವು ಯುದ್ಧ ಮಾಡಹೋಗುವದಕ್ಕೆ ಮುಂಚೆ ತನ್ನೊಂದಿಗೆ ದೇವಾಲಯಕ್ಕೆ ಒಂದು ಪ್ರಾರ್ಥನೆ ಮಾಡಬೇಕೆಂದು ಕೇಳಿಕೊಂಡರು. ಅದಕ್ಕೆ ಆ ಪ್ರಭುವು ಒಪ್ಪಿಕೊಂಡು ದೇವಸ್ಥಾನಕ್ಕೆ ಹೋದನು.

ಆಗ ಮಂತ್ರಿಯವರು ಕ್ರಿಸ್ತನು ತನ್ನ ಶಿಷ್ಯರಿಗೆ ಕಲಿಸಿಕೊಟ್ಟ ಪರಲೋಕದ ಪ್ರಾರ್ಥನೆಯನ್ನು ಹೇಳಲು ಪ್ರಾರಂಭಿಸಿದರು. ಪ್ರಭುಗಳು ಸಹ ಅವರೊಂದಿಗೆ ಒಂದೊಂದು ಮಾತನ್ನು ಹೇಳುತ್ತಾ ಬಂದರು. ಕಡೆಯಲ್ಲಿ ಮಂತ್ರಿಯವರು "ನಾವು ನಮ್ಮ ಸಾಲಗಾರರಿಗೆ ಬಿಡುವ ಹಾಗೆ ನಮ್ಮ ಸಾಲಗಳನ್ನು ನಮಗೆ ಬಿಡು" ಎಂದು ಹೇಳಲು, ಆ ಪ್ರಭುಗಳು ಅದನ್ನು ಹೇಳಲಿಲ್ಲ. ಮಂತ್ರಿಯವರು ಪ್ರಭುವನ್ನು ನೋಡಿ—ಯಾಕೆ ನೀವು ಅದನ್ನು ಹೇಳುವದಿಲ್ಲ; ಆ ಮಾತುಗಳನ್ನು ಹೇಳುವದಕ್ಕೆ ನಿಮಗೆ ಧೈರ್ಯ ಇಲ್ಲವೋ ಎಂದು ಕೇಳಲು; ಇಲ್ಲಯ್ಯಾ—ನನ್ನ ವೈರಿಗೆ ಮನ್ನಣೆ ಕೊಡುವ ಆಸೆ ನನ್ನಲ್ಲಿಲ್ಲ, ಅದಕ್ಕಾಗಿ ಹೇಳುವದಿಲ್ಲ ಎಂದು ಉತ್ತರ ಕೊಟ್ಟರು.

ಆಗ ಮಂತ್ರಿಯವರು—ನೀವು ಆ ದೊರೆಯು ತಪ್ಪನ್ನು ಮನ್ನಿಸದೆ ಹೋದರೆ ನಿಮಗೂ ಸಹ ದೇವರು ಮನ್ನಣೆಯನ್ನು ಕೊಡುವದಿಲ್ಲ; ಯಾಕೆಂದರೆ ಮನ್ನಿಸಿರೆಂದು ಈ ಪ್ರಾರ್ಥನೆಯಲ್ಲಿ ಕಲಿಸಿಕೊಟ್ಟಿರುತ್ತಾನೆ. ನಿಮ್ಮ ಪಾಪಗಳು ಪರಿಹಾರವಾಗಬೇಕಾದರೆ ನೀವು ಈ ಮಾತುಗಳನ್ನು ಹೇಳಿ ನಿಮ್ಮ ವೈರಿಯ ತಪ್ಪನ್ನು ಕ್ಷಮಿಸು ಎಂದು ಹೇಳಲು;

ಆಗ ಆ ಪ್ರಭುವು ಸ್ವಲ್ಪ ಹೊತ್ತು ಯೋಚಿಸಿ ತನ್ನ ದೇವರ ಸನ್ನಿಧಿಯಲ್ಲಿ ಲೆಪ್ಪವಿಲ್ಲದ ದ್ರೋಹಗಳನ್ನು ಮಾಡಿರುತ್ತೇನೆಂದೂ ಆದ್ರೋಹಗಳು ಪರಿಹಾರವಾಗಬೇಕಾದರೆ ತಾನು ಇತರರಿಗೆ ಕ್ಷಮೆಯನ್ನು ಕೊಡಬೇಕೆಂದೂ, ತನ್ನ ಮನಸ್ಸನ್ನು ಬದಲು ಮಾಡಿಕೊಂಡು ತನ್ನ ವೈರಿಯನ್ನು ಕ್ಷಮಿಸುತ್ತೇನೆಂದೂ ಆ ಪ್ರಾರ್ಥನೆಯನ್ನು ಹೇಳಿ, ತನಗೆ ಕೇಡು ಮಾಡಿದ ದೊರೆಯನ್ನು ಎದುರುಗೊಂಡು ಆತನೊಂದಿಗೆ ಸ್ನೇಹ ಬೆಳಸಿದನು. ಇದಕ್ಕೆ ಮುಖ್ಯವಾಗಿ ಆ ಪ್ರಭುವು ಅನೇಕಸಲ ಆ ಪ್ರಾರ್ಥನೆಯನ್ನು ಹೇಳಿದ್ದಾಗ್ಯೂ ಅದರ ನಿಜ ಅಭಿಪ್ರಾಯ ತಿಳಿದಿರಲಿಲ್ಲ. ಆ ಮಂತ್ರಿ ಧೊರೆಗಳು ಕಲಿಸಿಕೊಟ್ಟ ಮೇಲೆ ತಿಳಿದುಕೊಂಡನು.

ಈಗ ಮೇಲಿನ ಚರಿತ್ರೆಯನ್ನು ಓದುವವರು ಕಲಿಯಬೇಕಾದ ಮುಖ್ಯ ಸಂಗತಿಯನ್ನು ಕುರಿತು ಯೋಚಿಸಬೇಕು. ಎಲ್ಲಾ ಜನರಲ್ಲಿ ಒಂದು ಆಸೆ ಉಂಟು; ಏನೆಂದರೆ—ದೇವರನ್ನು ನೋಡಬೇಕು, ಸ್ವರ್ಗಸೇರಬೇಕು, ಅಲ್ಲಿ ಹೆಚ್ಚಿನ ಭಾಗ್ಯವಿದೆ ಎಂಬುವದೇ ಅಂಥಾ ಯೋಚನೆ ಹುಟ್ಟುವದು. ಸ್ವರ್ಗ ಸೇರ ನಮ್ಮಲ್ಲಿ ಒಂದು ದೊಡ್ಡ ಅಡ್ಡಿ ಉಂಟು ಅದೇನೆಂದರೆ ಪಾಪವೇ. ಅನೇಕ ಪಾಪಗಳು ನಮ್ಮಲ್ಲಿವೆ. ಆದರೆ ಈಗ ಅವುಗಳನ್ನೆಲ್ಲಾ ಬಿಟ್ಟು ಇತರರನ್ನು ಕ್ಷಮಿಸುವ ಸಂಗತಿಯನ್ನು ಯೋಚಿಸೋಣ. ಕ್ರಿಸ್ತರಾಗಲಿ, ಹಿಂದೂಗಳಾಗಲಿ, ಮುಸಲ್ಮಾನರಾಗಲಿ, ಮನ್ನಣೆಯನ್ನು ಮಾಡುವ ಗುಣ ಇರಬೇಕು. ಏನೆಂದರೂ ಬಹಳ ಉದ್ಯೋಗಸ್ಥರೂ ಉದ್ಯೋಗವಿಲ್ಲದವರೂ ದೇವರ ಮುಂದೆ ಬಹಳ ತಪ್ಪನ್ನು ಮಾಡುತ್ತಾರೆ. ದೇವರು ಆ ತಪ್ಪನ್ನು ಕ್ಷಮಿಸಿ ತನಗೆ ಮುಕ್ತಿಯನ್ನು ಕೊಡಬೇಕು ಎಂದು ಕೇಳುತ್ತಾರೆ. ದೇವರು ನಮ್ಮ ತಪ್ಪನ್ನು ಕ್ಷಮಿಸಬೇಕೆಂದು ನಾವು ಕೇಳಿದರೆ, ನೆರೆಯವರು ಅಲ್ಪ ಸ್ವಲ್ಪ ತಪ್ಪನ್ನು ಮಾಡಿದರೆ ಮೊದಲು ಅವರಿಗೆ ನಾವು ಮನ್ನಣೆಯನ್ನು ಕೊಡಬೇಕು. ಇದು ಕ್ರಿಸ್ತಮತದಲ್ಲಿ ಒಂದು ಮುಖ್ಯ ಬೋಧನೆಯಾಗಿದೆ. ಕ್ರಿಸ್ತನು ಹೇಳಿಕೊಟ್ಟ ಪ್ರಾರ್ಥನೆ ಇದಾಗಿದೆ. ನಿಜಕ್ರಿಸ್ತರೆಲ್ಲರೂ, ಇತರರು ತಮಗೆ ಮಾಡಿದ ತಪ್ಪನ್ನು ಕ್ಷಮಿಸಿ, ಅವರಿಗೆ ಸಹಾಯವನ್ನು ಮಾಡುತ್ತಾರೆ ಯಾವರೂಬಡವರೂ ಮತ್ಸರ, ಹಗೆ, ತಪ್ಪುಗಳನ್ನು ಸಾಧಿಸುವದಿಲ್ಲ ದೇವರು ಅವರ ತಪ್ಪನ್ನು ಕ್ಷಮಿಸಬೇಕೆಂದು ಅವರು ನೆರೆಯವರಿಗೂ ಕ್ಷಮಿಸುತ್ತಾರೆ. ಅದರಲ್ಲದೆ ಮುಸಲ್ಮಾನರೂ ಹಿಂದೂಗಳೂ ಸಹ ಇತರರ ತಪ್ಪನ್ನು ಕ್ಷಮಿಸುತ್ತಾರೆ. ಅವರ ತಪ್ಪನ್ನು ತಕ್ಕ ಶಿಕ್ಷೆಗೆ ಗುರಿಪಡಿಸುತ್ತಾರೆ. ಆದರೆ ಕ್ರಿಸ್ತಮತದಲ್ಲಿ ಒಂದು ದೊಡ್ಡ ವಿಚಾರ ಉಂಟು. ಯೇಸುಕ್ರಿಸ್ತನು ತನ್ನನ್ನು ಹಿಂಸಿಸಿದವರಿಗೂ, ದ್ವೇಷಿಸಿದವರಿಗೂ, ಅವಮಾನ ಮಾಡಿದವರಿಗೂ ಪ್ರತಿಫಲ ಕೊಡದೆ ಕ್ಷಮೆಯನ್ನು ಮಾಡಿದನು. ತನ್ನನ್ನು ಕೊಂದವರಿಗೂ ದಯೆತೋರಿಸಿದನು.

ಹಾಗೆಯೇ ಎಲ್ಲರನ್ನೂ ನಾವು ಕ್ಷಮಿಸಬೇಕು ಕ್ರಿಸ್ತ್ಯರು ಮಾತ್ರವಾಗಿ ಮಾಡಬೇಕೆಂಬುದಿಲ್ಲ. ದೇವರ ರಾಜ್ಯವನ್ನು ಸೇರಬೇಕೆಂದು ಆಸೆಪಡುವರೆಲ್ಲರೂ ತಮ್ಮ ನೆರೆಯವರ ತಪ್ಪನ್ನು ಕ್ಷಮಿಸಿ ಅವರನ್ನು ಪ್ರೀತಿಸಬೇಕು. ಯಾಕೆಂದರೆ ನಾವೆಲ್ಲರೂ ಒಂದೇ ತಂದೆಯ ಮಕ್ಕಳು. ನಮ್ಮೆಲ್ಲರಿಗೂ ದೇವರು ಕೊಡುವ ಮೋಕ್ಷ ಒಂದೇ. ಆ ಒಂದೇ ಮೋಕ್ಷಕ್ಕೆ ಸೇರಬೇಕಾದವರು ಒಂದೇ ಗುಣಸ್ವಭಾವವುಳ್ಳವರಾಗಿರಬೇಕು.

ಕೆಲವರನ್ನು ಕುರಿತು ಯೋಚಿಸಿದರೆ ಯಾವಾಗಲೂ ದೇವರನ್ನು ಕೊಂಡಾಡುತ್ತಾ ತೋರಿಸುತ್ತಾರೆ ತಮ್ಮ ಪಾಪಗಳನ್ನು ಕ್ಷಮಿಸಿ ಮಾಡಿಕೊಂಡು ಸ್ತುತಿಸುತ್ತಾರೆ ನಾವು ಮನ್ನಿಸುವದಿಲ್ಲ, ಪ್ರತೀಕಾರ ಮಾಡುತ್ತೇವೆ. ನನಗೆ ಕೇಡು ಮಾಡಿದವನಿಗೆ ನಾನೂ ಕೇಡು ಮಾಡಬೇಕು ನನ್ನ ಕೂಡ ಅನ್ಯೋನ್ಯವಾಗಿಲ್ಲ, ನಾನು ಸಹ ಅನ್ಯೋನ್ಯವಾಗಿರುವದಿಲ್ಲ, ಎಂದು ಮತ್ಸರ ತೋರಿಸುತ್ತಾರೆ ಅವರು ಮೇಲೆ ತೋರಿಸಿರುವ ಪ್ರಭುವಿನ ಹಾಗೆ ಯೇಸು ಕ್ರಿಸ್ತನ ಪ್ರಾರ್ಥನೆಯನ್ನು ಚನ್ನಾಗಿ ತಿಳಿದುಕೊಂಡಿಲ್ಲ. ಕ್ರಿಸ್ತನ ಮಾತುಗಳು ಏನೆಂದರೆ "ನಾವು ನಮ್ಮ ಸಾಲಗಾರರಿಗೆ ಮನ್ನಿಸುವ ಪ್ರಕಾರ ನಮ್ಮ ಸಾಲಗಳನ್ನು ನಮಗೆ ಮನ್ನಿಸು" ಅರ್ಥ ನಾವು ಇತರರಿಗೆ ಅವರ ತಪ್ಪುಗಳನ್ನು ಮನ್ನಿಸುವ ಪ್ರಕಾರ ನಮ್ಮ ತಪ್ಪನ್ನು ಮನ್ನಿಸು ಈ ಮಾತುಗಳನ್ನು ಯಾರು ಮನಸ್ಸಿನಲ್ಲಿ ಗ್ರಹಿಸುತ್ತಾರೋ ಅವರು ಇತರರನ್ನು ಮನ್ನಿಸ ಸಿದ್ಧರಾಗಿದ್ದರೆ ದೇವರು ಇಂಥವರನ್ನು ಸ್ವೀಕರಿಸಿ ಅವರ ತಪ್ಪನ್ನು ಮನ್ನಿಸಿ ಅವರು ನಿರೀಕ್ಷಿಸಿರುವ ಪರಲೋಕಕ್ಕೆ ಅವರನ್ನು ನಡಿಸುತ್ತಾನೆ. ಕ್ರಿಸ್ತನ ಮಾತುಗಳನ್ನು ಯಾರು ಕೈಕೊಳ್ಳುತ್ತಾರೋ ಅವರು ದೇವರ ಮಕ್ಕಳೆಂದು ಅವರನ್ನು ಕರೆಯಬಹುದು ಅವರನ್ನು ಹಗೆ ಮಾಡಿದರೂ, ಬೈದರೂ, ಹಿಂಸಿಸಿದರೂ, ಅವರು ದೇವರ ಹೆಸರಿಗೋಸ್ಕರ ತಾಳಿಕೊಂಡು ಮನ್ನಿಸುತ್ತಾರೆ. ಹಾಗೆಯೇ ಈ ಲೋಕದ ನಾಲ್ಕು ಕಡೆಯಲ್ಲಿಯೂ ಕ್ರಿಸ್ತನ ಹೆಸರನ್ನು ಹೊಂದಿರುವ ಒಳ್ಳೇ ಕ್ರೈಸ್ತರು ಕ್ರಿಸ್ತನ ಮಾತನ್ನು ನಂಬಿಕೊಂಡು ಅದರ ಪ್ರಕಾರವಾಗಿಯೂ ಇರುತ್ತಾರೆ. ಚೀನಾ ಮತ್ತು ಆಫ್ರಿಕಾ ದೇಶಗಳಲ್ಲಿ ಅನೇಕ ಕ್ರೈಸ್ತರನ್ನು ಆ ದೇಶಗಳ ಜನರು ಕೊಂದು ಹಾಕಿದ್ದಾಗ್ಯೂ ಕ್ರೈಸ್ತರು ಯಾವ ಹಾನಿಯನ್ನೂ ಅವರಿಗೆ ಕೊಡಲಿಲ್ಲ ಅದರ ಬದಲಿಗೆ ಪ್ರತಿಯಾಗಿ ಉಪಕಾರ ಮಾಡುತ್ತಲೇ ಬಂದಿದ್ದಾರೆ. ಇಂಥಾ ಸ್ವಭಾವವನ್ನು ಯಾವ ಗ್ರಂಥದಿಂದ ಅವರು ಕಲಿತುಕೊಂಡರು? ಸತ್ಯವೇದದಿಂದಲೇ ಹೊರತು ಬೇರೆ ಯಾವದರಿಂದಲೂ ಅಲ್ಲ.

ಈ ದೇಶದ ಜನರಲ್ಲಿ ಅಂಥಾ ಕ್ಷಮೆಯನ್ನು ಕೊಡುವವರು ಯಾರಾಗಬಹುದು? ಅಂಥಾ ಮನ್ನಣೆಯನ್ನು ಕಲಿಯದೆ ಇರುವದರಿಂದಲೇ ಒಬ್ಬನು ಬುದ್ಧಿ ಹೀನತೆಯಿಂದ ವೈರಿಯೊಡನೆ, ಕೊಲೆ ಪಾತಕ, ಪ್ರತೀಕಾರ ಮಾಡಬೇಕೆಂದು ಯೋಚಿಸಿ, ಮನೆಗಳ ಬೆಂಕಿಗೆ ಹಾಕಿ, ಮಾರು ಕಟ್ಟಿ, ಬಂಧೀಖಾನೆಯನ್ನಾಗಲಿ ಹಾಳು ಮನೆಯನ್ನಾಗಲಿ ಮಾಡಿಕೊಳ್ಳುವದಕ್ಕೆ ಯತ್ನಿಸುತ್ತಾರೆ. ಇದರಿಂದಲೇ ಅನೇಕ ಬಡವರು ದರಿದ್ರರೂ ಆಗಿ ಧನಿಕರು ಸ್ಥಿತಿವಂತರಾದವರು ಬಂಧೀಖಾನೆಯಲ್ಲಿ ಪೈರಿಗಳು ಹೆಚ್ಚಿದರು, ವೈರಿಗಳಿಗೆ ಜವಾನರು ಹೆಚ್ಚಿದರು. ಅನೇಕ ಬಡಜನರು ತಪ್ಪು

ಲ್ಲಿನ ಬಂಧುಬಳಗಗಳಲ್ಲಿ ಸೇರಿದರು. ವಾಚಕರೇ! ಇದು ಮಹಾ ವ್ಯಸನಕರವಾದದ್ದಲ್ಲವೇ?

ಮೇಲೆ ಹೇಳಿರುವ ಕ್ಷಮೆಯನ್ನು ಕೊಡುವ ಉದಾರಗುಣವಾದನ್ನು ನಮ್ಮ ದೇಶಕ್ಕೂ ಸ್ವಭಾವಕ್ಕೂ ಹೊಸದಾಗಿ ಯಾಗಿದೆ. ಈ ಗುಣವನ್ನು ಮನುಷ್ಯಜೀವನದ ಉದ್ದಕ್ಕೂ ಎಲ್ಲರೂ ಕಲಿಯಬೇಕಾದುದು ಮತ್ತು ನಿಜ ಕ್ರಿಸ್ತಸ್ವಭಾವ ತೋರಿಸುವುದು. ಯಾರು ದೇವರು ನಮಗೆ ಸ್ವರ್ಗ ಕೊಡಬೇಕು ಎಂದು ಹೇಳುತ್ತಾರೋ ಅವರು ಮೊದಲು ತಮ್ಮ ನೆರೆಯವರ ಸಣ್ಣ ತಪ್ಪನ್ನೂ ಕ್ಷಮಿಸಬೇಕು ಎಂದು ಕ್ರಿಸ್ತನು ಹೇಳುತ್ತಾನೆ. ಆದರೆ ದೇವರಿಗೆ ವಿರೋಧವಾಗಿ ಮಾಡುವ ತಪ್ಪನ್ನು ಮನುಷ್ಯರು ಮನ್ನಿಸಲಾರರು. ಅವರು ದೇವರ ನಿಯಮವನ್ನು ಮೀರಿದರೆ ಮನ್ನಿಸುವದಕ್ಕೆ ನಮಗೆ ಅಧಿಕಾರವಿಲ್ಲ; ಅದನ್ನು ದೇವರೇ ಆತನಿಗೆ ಮನ್ನಿಸಬೇಕು. ಆದರೆ ಮನುಷ್ಯರಿಗೆ ವಿರೋಧವಾಗಿ ಮಾಡುವ ತಪ್ಪನ್ನು ಮಾತ್ರ ಮನುಷ್ಯರು ಮನ್ನಿಸಬಹುದು; ಪ್ರಿಯಮಿತ್ರರೇ! ನಮ್ಮೆಲ್ಲರಲ್ಲಿಯೂ ಇಂಥಾ ಒಳ್ಳೆಯ ಗುಣವನ್ನು ಹುಟ್ಟಿಸುವದಕ್ಕೆ ದೇವರನ್ನು ಪ್ರಾರ್ಥಿಸೋಣ.

ಒಳದೇಶ ವೃತ್ತಾಂತಗಳು.

ಈ ಪತ್ರಿಕೆಯ ಮುಖಪುಟದಲ್ಲಿ ೧೯ನೇ ಜನವರಿ ಎಂಬ ಪಕ್ಷ ಬದಲಾಗಿ ೧೨ನೇ ಜನವರಿ ಎಂದು ತಪ್ಪು ಬಿದ್ದಿದೆ. ಗಮನಿಸುವವರಾದ ನಮ್ಮ ವಾಚಕರು ದಯವಿಟ್ಟು ೧೯ನೇ ಜನವರಿ ಎಂದು ಓದಿಕೊಳ್ಳಬೇಕೆಂದು ಸೂಚಿಸುತ್ತೇವೆ.

ಇಲ್ಲಿನ ಪರಸ್ಪರ ಛತ್ರದ ಮೇಲೆ ಸ್ಥಾಪಿಸಲ್ಪಟ್ಟಿರುವ ಸಂಸ್ಕೃತ ಪಾಠಶಾಲೆಯಲ್ಲಿ ಜೊತೆಗೆ ಹುಡುಗರನ್ನು ಕನ್ನಡದಲ್ಲಿಯೂ ಪರೀಕ್ಷೆಗೆ ತಯಾರು ಮಾಡುವದು ಸಕಲ ಜನರ ಬೆಳವಣಿಗೆ ಅವಶ್ಯವೆಂದು ಈಗ ಕೆಲವು ದಿವಸಗಳಿಂದ ಸಾಯಂಕಾಲದ ಹೊತ್ತಿನಲ್ಲಿ ವಿದ್ಯಾರ್ಥಿಗಳಿಗೆ ಇಂಗ್ಲೀಷನ್ನು ಹೇಳಿಕೊಡುತ್ತಾರೆಂದು ಕೇಳಿದೆವು. ಆದರೆ ಯಾವುದು ಎಲ್ಲಿನ ವರೆಗೂ ನಡೆಯುತ್ತೆ ಎಂಬುದನ್ನು ನೋಡತಕ್ಕದ್ದಾಗಿದೆ.

ಇಲ್ಲಿನ ಮ್ಯುನಿಸಿಪಲ್ ಕೌನ್ಸಿಲಿನ ಮೆಂಬರುಗಳು ಪಟ್ಟಣದ ಕೆಲವು ರಸ್ತೆಗಳನ್ನು ಅಗಲ ಮಾಡುವುದು ಹೊಸದಾಗಿ ಡಿಸ್ಟ್ರಿಕ್ಟು ಬೋರ್ಡಿನ ಕೆಲಸದ ವಿಷಯವಾಗಿ ಗವರ್ನಮೆಂಟಿನವರ ತೀರ್ಮಾನಕ್ಕೆ ಬಂದದ್ದರಿಂದ ಆ ರಸ್ತೆಗಳನ್ನು ಅಗಲ ಮಾಡುವದಕ್ಕೆ ಸ್ಥಳದ ಅಭಾವವಿಲ್ಲವೆಂತಲೂ, ಅದರಿಂದ ಹೊಸದು ಮನೆಗಳ ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು ಸರ್ಕಾರಕ್ಕೆ ಗವರ್ನಮೆಂಟಿಗೆ ಬರೆದು ಕಳುಹಿಸಬೇಕೆಂದೂ ಕೂಡ ನಿಶ್ಚಯಿಸಿದ್ದಾರೆ.

ಶ್ರೀಮನ್ಮಹಾರಾಜರವರು ಜನವರಿ ಸಮೀಪದಲ್ಲಿ ಈ ಜಿಲ್ಲೆಯ ಪಟ್ಟಣಗಳಲ್ಲಿ ಸಂಚಾರ ಮಾಡುವರು. ಹಾಗೆ ೨೧ನೇ ತಾರೀಖಿನ ದಿವಸ ಇಲ್ಲಿಗೆ ಬರುವರು. ಆ ಕಾಲದಲ್ಲಿ ಪ್ರಖ್ಯಾತರಾದವರನ್ನು ಮಾತ್ರ ಇಲ್ಲಿ ಸ್ವಾಗತ ಮಾಡುವರು ಇವರ ಸಹಿತ ಸವಾರಿ ಮಾಡಿಸುವರು, ಅಲ್ಲದೆ ಬೆಂಗಳೂರಿಗೆ ಹೋಗುವ ರೈಲು ಹೊಳಲ್ಕೆರೆ ಮಾರ್ಗವಾಗಿ ೨೬ನೇ ತಾರೀಖಿನಲ್ಲಿ ಪ್ರಯಾಣಮಾಡುವದೆಂದು ಸರಕಾರದ ವರ್ತಮಾನದಿಂದ ತಿಳಿಯುತ್ತದೆ.

ಗೋಣಿಬೀಡಿನವರಲ್ಲಿ ಸ್ಥಾಪಿಸಿದ ಮಿಷ್ಯನುಗಳು ಆ ಸ್ಥಳದ ಜನರನ್ನು ಸ್ಥಿತಿಯಲ್ಲಿ ಉತ್ತಮ ಕೆಲಸಗಳನ್ನು ಮಾಡುತ್ತಾರೆ. ಅಲ್ಲಿನ ಆಸ್ಪತ್ರೆಯ ಅಸಿಸ್ಟೆಂಟ ಸರ್ಜನ್ ಆಫೀಸರರು ಗವರ್ನಮೆಂಟಿಗೆ ಬರೆದುಕೊಂಡದ್ದರ ಮೇಲೆ ಅಲ್ಲಿನ ಮ್ಯುನಿಸಿಪಾಲಿಟಿಗೆ ೧೯೧೨-೧೩ನೇ ಇಸವಿಯ ಬಜೆಟಿನಲ್ಲಿ ೫೦ ರೂಪಾಯಿಗಳವರೆಗೆ ಔಷಧಗಳ ಖರ್ಚನ್ನು ಮ್ಯುನಿಸಿಪಾಲಿಟಿಗೆ ಒಪ್ಪಿಸಿಕೊಂಡು ಪಟ್ಟಣದವರನ್ನು ಉಪಚರಿಸಬೇಕೆಂದು ಗವರ್ನಮೆಂಟಿನವರು ಅಪ್ಪಣೆ ಕೊಟ್ಟಿರುವದಾಗಿ ಮಾಡಿದ್ದಾರೆ.

ಅಲ್ಲಿನ ದೊಡ್ಡಕೆರೆಯ ಕೆಳಗಣ ಸಂತೆ ಕೆರೆಯಲ್ಲಿ ಬಾವಿಯಲ್ಲಿ ಸುಮಾರು ೧೪–೧೫ ವರುಷ ವಯಸ್ಸಿನ ಒಬ್ಬ ಹುಡುಗನು ಬಿದ್ದಿದ್ದನು. ಅವನನ್ನು ಕಳೆದ ಸೋಮವಾರ ಮೇಲಕ್ಕೆ ಎತ್ತಿ ಹಾಕಿರುತ್ತಾರೆ. ಅವನ ವಾರಸುದಾರರನ್ನು ಎಷ್ಟು ಹುಡುಕಿದಾಗ್ಯೂ ಸಿಕ್ಕಲಿಲ್ಲವೆಂದು ಕೇಳುತ್ತೇವೆ. ಆ ಹುಡುಗನು ಕೈಯಲ್ಲಿ ಬಳೆಗಳನ್ನೂ ಕಾಲಲ್ಲಿ ಕಡಗಗಳನ್ನೂ, ಕಿವಿಗಳಲ್ಲಿ ಒಂಟಿಗಳನ್ನೂ ಧರಿಸಿಕೊಂಡಿರುತ್ತಾನೆ. ಅವನು ಯಾವ ಕಾರಣದಿಂದ ಸತ್ತನೋ, ಆಕಸ್ಮಾತ್ತಾಗಿಯೋ ಬಿದ್ದನೋ ಅಥವಾ ಮತ್ತ್ಯಾವ ಕಾರಣದಿಂದಲಾದರೂ ಬಿದ್ದಿರಬಹುದೋ ಯಾವುದೂ ತಿಳಿದು ಬಂದಿಲ್ಲ.

ನಮ್ಮ ಮಿಸ್ಟರ್ ಕೆ. ಶೇಷಗಿರಿ ಅಯ್ಯಂಗಾರರಿಗೆ ಇಂಡಿಯಾ ಸರಕಾರದವರು ಅವರಲ್ಲಿರುವ ಚಾಣಾಕ್ಷತೆಯ ಸೇವಾ ಶಕ್ತಿಯನ್ನು ತಿಳಿದು ಹಿಂದೆಯೇ ಅವರಿಗೆ ಸಿ. ಐ. ಇ. ಎಂಬ ಬಿರುದನ್ನು ದಯಪಾಲಿಸಿದ್ದರಷ್ಟೆ. ಈ ವರುಷದ ಗುರ್ತಿನ ತಾರೀಖಿನಲ್ಲಿ ಅವರಿಗೆ ಅತ್ಯಂತ ಗೌರವದ ಪದವಿ ಉಳ್ಳದನ್ನು ದಯಪಾಲಿಸಿರುತ್ತಾರೆ. ಇಲ್ಲಿಂದ ಮುಂದೆ ನಮ್ಮ ಮಿಸ್ಟರವರನ್ನು ಸರ್ ಕೆ. ಶೇಷಗಿರಿ ಅಯ್ಯರ್ ಕೆ. ಸಿ. ಎಸ್. ಐ ಎಂಬದಾಗಿ ಕರೆಯುವ ಮರ್ಯಾದೆಯಾಗಿದೆ. ಇಂಡಿಯಾ ಗವರ್ನಮೆಂಟಿನವರು ನಮ್ಮ ಮಿಸ್ಟರ್‌ರವರನ್ನು ಎಷ್ಟು ಗೌರವದಿಂದ ಕಂಡುಕೊಂಡಿರುತ್ತಾರೆ ಎಂಬುದು ಇದರಿಂದಲೇ ವಾಚಕರು ಊಹಿಸಿಕೊಳ್ಳಬಹುದು.

ಚಾಮರಾಜನಗರದಲ್ಲಿರುವ ಚಾಮರಾಜೇಶ್ವರ ದೇವಸ್ಥಾನದಲ್ಲಿ ನೇಮಿಸಲ್ಪಟ್ಟಿರುವ ಒಬ್ಬ ಬ್ರಾಹ್ಮಣನು ಪ್ರತಿ ನಿತ್ಯ ಆ ದೇವಸ್ಥಾನವನ್ನು ಮತ್ತು ಅದರ ಪ್ರದಕ್ಷಿಣೆ ಮಾಡಿಕೊಂಡು ಬರುವದಕ್ಕಾಗಿ ಅವನಿಗೆ ಮಾಸೋಪಜೀವಿ ಕೊಡುವ ಸಂಬಳವೂ ಮತ್ತು ದಿನವೂ ಅನ್ನವೂ ದೊರೆ

ಯುವದೆಂತಲೂ, ಆ ದೇವರಿಗೆ ಪ್ರತಿನಿತ್ಯವೂ ಆಚಾರ ನಡೆಯತಕ್ಕ ಕಾಲದಲ್ಲಿ ಸ್ನಾನಮಾಡಿಕೊಂಡು ಸೇವಿಸುವದಕ್ಕಾಗಿ ಒಬ್ಬ ಬ್ರಾಹ್ಮಣನ ಮೇಲೆ ಆತನು ಈ ದಿನವೂ ಸಾಯಂಕಾಲ ಬಂದು ಅಲ್ಲ ಇದರಿಂದ ದೊರೆಯುವದಂತಲೂ ಕೇಳುತ್ತೇವೆ. ಇಂಥಾ ಕೆಲಸಗಳಿಗಾಗಿ ಹಣವನ್ನು ವಿನಿಯೋಗಿಸುವದಕ್ಕೆ ಸ್ವೀಕರಿಸುವ ಇಂತಹ ವಿದ್ಯಾರ್ಥಿಗಳನ್ನು ಕೇಳಿದರೆ ಅವರು ಅದನ್ನು ಒಪ್ಪುವದಿಲ್ಲ.

ಬೆಂಗಳೂರು ಪಟ್ಟಣವನ್ನು ಪಟ್ಟಣ ಮತ್ತು ಉತ್ತರ ಭಾಗಗಳಲ್ಲಿ ವೃದ್ಧಿಮಾಡಿ ಬಡವರು ವಾಸಮಾಡುವದಕ್ಕೆ ತಕ್ಕ ನಿವೇಶನಗಳನ್ನು ಮಾಡಬೇಕೆಂದು ಸ್ವತಃ ಆಲೋಚಿಸಿ ಮುಂದೆ ಬಂದಿರುತ್ತಾರೆ. ಮ|| ವಿ. ಪಿ. ಮಾಧವರಾಯರವರು ಮ|| ವಿಶ್ವೇಶ್ವರಯ್ಯನವರು, ಮ|| ರಾಜಾರಾಮ ಮಸ್ತರ್ ಎ. ಶ್ರೀನಿವಾಸಯ್ಯಂಗಾರರವರು, ಮ|| ಕೆ. ಶ್ರೀನಿವಾಸರಾಯರು, ಇವರುಗಳನ್ನು ಆ ಕಮಿಟಿಗೆ ಮೆಂಬರುಗಳನ್ನಾಗಿ ನೇಮಿಸಿರುತ್ತಾರೆ. ಅವಶ್ಯಕವಾದ ಸಂದರ್ಭದಲ್ಲೆಲ್ಲಾ ಮ|| ಸ್ಟ್ಯಾನ್ಲಿ ರೀ ಸಾಹೇಬರವರ ಸಹಾಯವೂ ದೊರೆಯುವದೆಂತ ಗೊತ್ತು ಮಾಡಿರುತ್ತಾರೆ. ಈ ಬಾಬಿಗಾಗಿ ಸದ್ಯಕ್ಕೆ ೨೦,೦೦೦ ರೂಪಾಯಿಗಳನ್ನು ಕಮಿಟಿಯ ವಶದಲ್ಲಿಟ್ಟಿರುತ್ತಾರೆ. ಕಮಿಟಿಯವರು ಈ ವಿಷಯಗಳ ತಮ್ಮ ಪೂರ್ತಿ ರಿಪೋರ್ಟನ್ನು ಬರುವ ಫೆಬ್ರವರಿ ೧೫ನೇ ತಾರೀಖಿನೊಳಗಾಗಿ ಗವರ್ನಮೆಂಟಿಗೆ ಕಳುಹಿಸಬೇಕೆಂದು ಮೈಸೂರು ಸರ್ಕಾರದವರು ಸ್ವೀಕಾರ ಮಾಡಿರುತ್ತಾರೆ.

ಚಿತ್ರದುರ್ಗ.

(ಒಬ್ಬ ಬಾತ್ಮೀದಾರರಿಂದ)

ಈ ನಮ್ಮ ಚಿತ್ರದುರ್ಗಕ್ಕೆ ಈಗ ೧ ತಿಂಗಳ ಹಿಂದೆ ಒಂದು ನಾಟಕ ಸಂಗೀತ ವಿನೋದಿನೀ ಸಭೆಯವರು ಬಂದು ನಾಟಕವಾಡುತ್ತಿದ್ದಾರೆ.

ಕಪಟವಿಲ್ಲದ ಬುದ್ಧಿಯುಳ್ಳ ಶ್ರೀ ಸಂಗೀತ ವಿದ್ವಾಂಸರಾದ, ಸಾತ್ವಿಕ ಸ್ವಭಾವದ ಯೋಗ್ಯರಾದ ಬೆಂಕಣ್ಣ ವಾಚಾರ್ಯರು, ಮತ್ತು ಒಳ್ಳೆಯ ಅಭಿನಯ ಪ್ರಖ್ಯಾತರಾಗಿರುವ ವೆಂಕಟಾಚಾರ್ ಮುಂತಾದ ಅನುಭವಿಗಳು—ಬೆಂಗಳೂರು ದಾವಣಗೆರೆ ಕಂಪನಿಯ ನಟ ವಿದ್ಯಾಜನ ಸಂಜೀವಿನಿ ಗಾನರತ್ನಾಕರ ನಾಟಕ ಕಂಪನಿಯವರು, ಪ್ರತಿ ದಿವಸದಲ್ಲಿಯೂ ಇಲ್ಲಿನ ನಿವಾಸಿಗಳಿಗೆ ಆನಂದವನ್ನು ಮತ್ತು ಸಂತೋಷವನ್ನು ಉಂಟುಮಾಡುತ್ತಿದ್ದಾರೆ. ಈ ಕಂಪೆನಿಯವರ ನಾಟಕಗಳು ಪ್ರತಿದಿನ ಪ್ರೇಕ್ಷಕರಿಗೆ ಸಂತೋಷವನ್ನುಂಟು ಮಾಡುವ ವಿಷಯವು, ಜನರು ಹೆಚ್ಚಾಗಿ ನೋಡುವದರಿಂದ ಸ್ಪಷ್ಟವಾಗುತ್ತದೆ. ಈ ವಿಷಯವಾಗಿ ನಮ್ಮ ಓದುಗರಿಗೆ ಪತ್ರಿಕೆಯಲ್ಲಿ ಪ್ರಕಟಿಸಿ ಸ್ಥಳವನ್ನು ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

“ವಿದ್ವಜ್ಜನಸಂಜೀವಿನಿ ಗಾನರತ್ನಾಕರ” ಎಂಬ ಹೆಸರು ಪಡೆದಿರುವ ಈ ನಾಟಕ ಸಭೆಯು, ನಮ್ಮ ಚಿತ್ರದುರ್ಗಕ್ಕೆ ಸೇರಿದ ದಾವಣಗೆರೆ ತಾಲೂಕಿನ ಪೇಟೆ ನಿವಾಸಿಗಳಾದ ಸಾಹುಕಾರರ ಮಕ್ಕಳುಗಳಿಂದ ಮಹಾಸಂತೋಷಕರವಾದ ನಾಟಕ ಸ್ಥಾಪಿಸಿ ಜನರಿಗೆ ಆನಂದವನ್ನು ತೋರಿಸಲು ಬಹು ಪ್ರಯತ್ನದಿಂದಲೂ, ಬಹಳ ಖರ್ಚಿನಿಂದಲೂ ಸ್ಥಾಪಿಸಲ್ಪಟ್ಟಿದ್ದಾಗಿದೆ. “ಹರಿಶ್ಚಂದ್ರ” ಮತ್ತು “ಚಂದ್ರಹಾಸ” ವೆಂಬ ಆಖ್ಯಾನಗಳನ್ನು ಆಡುತ್ತಾರೆ. ಮೈಸೂರು ದೇಶದ ಪದ್ಧತಿಯನ್ನನುಸರಿಸಿ, ಕಿಂವ, ವೃತ್ತ, ಮುಂತಾದ ನಿರ್ದಿಷ್ಟ ಜಾತಿಯ ಪದ್ಯಗಳ ಗಾನಸಂಗೀತದಿಂದಲೂ ಅನುಭವದ ವಿಲಾಸದಿಂದ ಸಭಿಕರನ್ನು ರಂಜಿಸುವರು. ಹೀಗೆಯೇ ಎಲ್ಲರಿಗೂ ಆನಂದದ ನೇತ್ರಾನಂದಗೊಳಿಸಿ, ಇಲ್ಲಿನ ಸಂಗೀತ ಮತ್ತು ಸಂಸ್ಕೃತ ಪಂಡಿತರಿಂದಲೂ, ಸ್ಟೇಟ್ ಮತ್ತು ಡಿಸ್ಟ್ರಿಕ್ಟ್ ಆಫೀಸರುಗಳು ಮತ್ತು ಮಹಾಜನರು ಸ್ವಯಂ ಸಮ್ಮತಿಯಿಂದ ಸರ್ಟಿಫಿಕೇಟು ಮತ್ತು ಪತ್ರಿಕೆಗಳನ್ನು ಹೊಂದಿರುತ್ತಾರೆ. ಈ ನಾಟಕದವರು ೯—೧೦ ನಾಟಕಗಳನ್ನು ಮಾಡಿದರು. ಒಂದಕ್ಕಿಂತಲೂ ಮತ್ತೊಂದು ನಾಟಕವು ಹೆಚ್ಚು ಹೆಚ್ಚು ಆನಂದಕರವಾಗಿ ಕಾಣುತ್ತಿದೆ. ಈ ಕಂಪೆನಿಯವರಿಗೆ ಒಂದು ಸಾವಿರ ರೂಪಾಯಿಗೆ ಮೇಲ್ಪಟ್ಟು ಉತ್ಪತ್ತಿಯಾಗಿರಬಹುದು. ನಾಲ್ಕನೇ ನಾಟಕದಲ್ಲಿ ಇಲ್ಲಿನ ಹೈಸ್ಕೂಲ್ ಹೆಡ್ ಮಾಸ್ಟರ್ ಮಿ|| ಜೆ. ಆರ್ಬತ್‌ನಾಟ್ ಸಾಹೇಬರವರು ಸಭೆಯಲ್ಲಿ ನಿಂತು:—“ಪ್ರಿಯ ಸಭಿಕರೇ, ಈ ದಾವಣಗೆರೆ ವಿದ್ವಜ್ಜನ ಸಂಜೀವಿನಿ ಗಾನರತ್ನಾಕರ ನಾಟಕ ಕಂಪೆನಿಯವರು, ಆಡಿ ತೋರಿಸಿದ ಹರಿಶ್ಚಂದ್ರ, ಚಂದ್ರಹಾಸವೆಂಬ ಆಖ್ಯಾನ ಘನ ನಾಟಕಗಳು ಸಭಿಕರ ಸಂತೋಷವನ್ನು ಸಂಪಾದಿಸಿವೆ, ಮತ್ತು ಇವರು ಅಭಿವೃದ್ಧಿಗೆ ಪ್ರೋತ್ಸಾಹ ಕೊಡತಕ್ಕವರಾಗಿದ್ದಾರೆ. ಇದರಂತೆ ಒಂದು ಸರ್ಟಿಫಿಕೇಟು ಮತ್ತು ಯೋಗ್ಯವಾದ ಪತ್ರಿಕೆಯನ್ನು ಕೊಟ್ಟಿರುತ್ತೇನೆ. ಇದನ್ನು ಕಂಪೆನಿಯವರು ಸಂತೋಷಪೂರ್ವಕವಾಗಿ ಸ್ವೀಕರಿಸುವರೆಂದು ನಂಬುತ್ತೇನೆ.” ಎಂದು ಉಪನ್ಯಾಸ ಮಾಡಿ ಈ ಸರ್ಟಿಫಿಕೇಟನ್ನು ಕೊಟ್ಟರು.

“ನಿನ್ನೆ ಮತ್ತು ಹಿಂದಿನ ರಾತ್ರಿಗಳಲ್ಲಿ ಈ ಕಂಪೆನಿಯವರಿಂದ ಆಡಲ್ಪಟ್ಟ ಹರಿಶ್ಚಂದ್ರ ಮತ್ತು ಚಂದ್ರಹಾಸ ನಾಟಕಗಳನ್ನು ನೋಡಿದೆನು. ಈ ನಾಟಕಗಳು ನೋಡಲು ಯೋಗ್ಯವಾಗಿವೆ ಎಂದು ಹೇಳಲು ಬಹಳ ಸಂತೋಷಪಡುತ್ತೇನೆ. ಈ ನಾಟಕದವರಲ್ಲಿ ಅಭಿನಯ ಪ್ರಯೋಗ ಚೆನ್ನಾಗಿಯೂ, ಹಿಂದಿನಂತೆ ಇರುವುದಿಲ್ಲ. ಆದ್ದರಿಂದ ಜನಗಳು ಈ ನಾಟಕಗಳನ್ನು ನೋಡಿ ಸಂತೋಷಿಸಬೇಕಾಗಿ ಈ ಮೂಲಕ ಶಿಫಾರಸು ಮಾಡುತ್ತೇನೆ. ಈ ನಾಟಕಗಳು ಸತ್ಯಬೋಧಕಗಳಾಗಿಯೂ, ನೀತಿಯುತವಾಗಿ ಮತ್ತು ಸ್ತ್ರೀ ಸಂಬಂಧವಿಲ್ಲದವುಗಳಾಗಿಯೂ, ಕಲಿಯಬೇಕಾಗಿರುವ ವಿಷಯಗಳಿಂದ ಭರಿತವಾಗಿವೆ.

ಎರಡು ನಾಟಕಗಳಲ್ಲಿಯೂ ಈ ಕೆಳಗೆ ಕಾಣಿಸುವ ಪಾತ್ರಧಾರಿಗಳು, ತಮ್ಮ ತಮ್ಮ ಪಾತ್ರಗಳನ್ನು ಬಹಳ ಚೆನ್ನಾಗಿ ಮಾಡಿದರು.

೧	ಮರುಳಪ್ಪ	(ರಾಜ)
೨	ರುದ್ರಪ್ಪ	(ರಾಣಿ)
೩	ಚನ್ನಬಸಪ್ಪ	(ರಾಜಕುಮಾರ)
೪	ಜಿ. ರಾಮರಾವ್ (ನಾರದ, ಮಂತ್ರಿ, ಜೋಯಿಸಸ್ಥಾನ, ವಸಿಷ್ಠ—ಸನ್ಯಾಸಿಯಲ್ಲಿ ವಿದೂಷಕರು)	
೫	ಮುರಿಗೆಪ್ಪ	(ವಿಶ್ವಾಮಿತ್ರಮಹರ್ಷಿ)

ಈ ನಾಟಕಕ್ಕೆ ಅನುರಾಗವೂ ಮತ್ತು ಬರೇ ಬರೇ ಅಭಿವೃದ್ಧಿಯನ್ನು ಹೊಂದಿ ಹೆಚ್ಚಾದ ಯಶಸ್ಸು ಬರಲೆಂದು ನಾನು ಮತ್ತು ಇಲ್ಲಿ ನೆರೆದಿರುವ ಸಭಿಕರು ಸದಾ ಶ್ರೀ ಜಗನ್ನಿಯಾಮಕನನ್ನು ಪ್ರಾರ್ಥಿಸುತ್ತೇವೆ.

ಡಿಸೆಂಬರ್ ೨೭ | ೧೯೧೨ನೇ ಇಸವಿ

"Signed"
J. Arbuthnott
Head Master,
High School.
Chitaldroog.

ನಂತರ ಇಲ್ಲಿನ ಸಂಗೀತ ವಿದ್ವಾಂಸರಾದ ಮ|| ರಾ|| ಬಿ. ವೆಂಕಟೇಶ ಶಾಸ್ತ್ರಿಗಳವರು ಎಷ್ಟೊ ಓದಿ ಒಪ್ಪಿಸಿದ ಸರ್ಟಿಫಿಕೇಟ್ ಏನೆಂದರೆ:—

ದಾವಣಗೆರೆ ವಿದ್ವಜ್ಜನಸಂಜೀವಿನಿ ಗಾನರತ್ನಾಕರವೆಂಬ ಸಂಗೀತ ನಾಟಕದ ಕಂಪೆನಿ ಮೆಂಬರುಗಳು ಮತ್ತು ಮ್ಯಾನೇಜರ್ ಸಹ ಚಿತ್ರದುರ್ಗಕ್ಕೆ ಬಂದು ಹರಿಶ್ಚಂದ್ರ ಮತ್ತು ಚಂದ್ರಹಾಸ ಈ ಎರಡು ನಾಟಕಗಳನ್ನು ಇಲ್ಲಿ ಆಡಿದ್ದರಲ್ಲಿ ಪಾತ್ರಧಾರಕರು ಸ್ವತಃ ಗಾನ ಮಾಡುವದಲ್ಲದೆ ಪ್ರಯೋಜನಗಳಾದ ನೀತಿಗಳಿಂದಲೂ, ಕಾಲೋಚಿತವಾದ ಹಾಸ್ಯಗರ್ಭಿತ ಭಾಷೆಗಳಿಂದಲೂ ಆಡಲ್ಪಟ್ಟ ಮೇಲ್ಕಂಡ ನಾಟಕಗಳನ್ನು ಅವಲೋಕನ ಮಾಡಿ ಈ ಟಿಕೆಟ್ ಕೊಂಡು ಬಂದ ಜನರು ಬಹಳ ಆನಂದವನ್ನು ಹೊಂದಿ ಇದ್ದಾರೆ. ಪ್ರಕೃತ ಕಂಪೆನಿಯವರು ಎರಡು ನಾಟಕಗಳನ್ನು ತಯಾರು ಮಾಡಿದ್ದರಲ್ಲಿ ಕಂಪೆನಿಯವರೆಲ್ಲರೂ ವಿಶೇಷ ಶ್ರಮವಹಿಸಿ ಪಾತ್ರಗಳನ್ನು ತೆಗೆದುಕೊಂಡು ತಯಾರಾಗಿರುವ ಈ ಎರಡು ನಾಟಕಗಳು ನೋಟಕರಿಗೆ ಅತಿ ರಮಣೀಯವಾಗಿಯೂ, ಮನಸ್ಸಿಗೆ ಆಹ್ಲಾದವನ್ನುಂಟುಮಾಡುವ ಕಾರಣದಿಂದ ಈ ಚಿತ್ರದುರ್ಗದಲ್ಲಿ ಎರಡು ನಾಟಕಗಳನ್ನು ಆಡಿದ ಜನಗಳು ಇನ್ನೂ ನಾಟಕಗಳನ್ನು ನೋಡಬೇಕೆಂಬ ಕಾತುರದಲ್ಲಿ ಇದ್ದಾರೆ. ವಿಶೇಷವಾಗಿ ಶ್ರಮವನ್ನು ಪಟ್ಟು ಈ ನಾಟಕಗಳನ್ನು ತಯಾರುಮಾಡಿ ಆಡುವ ಕಂಪೆನಿ ಮೆಂಬರುಗಳು ಮತ್ತು ಮ್ಯಾನೇಜರ್ ಸಹಾ ಇನ್ನೂ ಇಂಥ ಉದಾಸೀನ ಮಾಡದೆ ಈ ನಾಟಕಗಳಲ್ಲದೆ ಹೊಸ ನಾಟಕಗಳನ್ನು ತಯಾರುಮಾಡಿ ಜನಗಳಿಗೆ ಸಂತೋಷವನ್ನುಂಟು ಮಾಡುವರಲ್ಲಿ ಸಂದೇಹವಿಲ್ಲವಾಗಿ ನಂಬುತ್ತೇನೆ.

“ಸಂಗೀತದ ವೆಂಕಟೇಶಯ್ಯ”

ಆಮೇಲೆ ನಾಟಕದ ಅಂತ್ಯಭಾಗದಲ್ಲಿ ನಾಟಕದ ಮ್ಯಾನೇಜರ್ ರವರು ಹೇಳಿದ್ದೇನಂದರೆ:—

ಅಸ್ಟ್ರೇ ನಾಟಕಗಳಲ್ಲಿ ಸಂಗೀತಜ್ಞರಾಗಿರುವ ಪಂಡಿತಶ್ರೇಷ್ಠರುಗಳು—ನಮ್ಮ ಕಂಪೆನಿಯವರಿಗೆ ಪ್ರೋತ್ಸಾಹಕರವಾಗಿಟ್ಟು ಇಲ್ಲಿನ ಮಹಿಮೆಗೆ ಬಹುಮಾನಪೂರ್ವಕ ನಮ್ಮಿಂದ ಯಥೋಚಿತವಾಗಿ ಆಡಲ್ಪಟ್ಟ ನಾಟಕವನ್ನವಲೋಕಿಸಿ ನಮ್ಮಗಳಿಗೆ ಆನಂದವನ್ನುಂಟುಮಾಡಿದ್ದಕ್ಕಾಗಿ ಬಹಳ ಕೃತಜ್ಞತೆಯುಳ್ಳವರಾಗಿ ಇದ್ದೇವೆ. ನಮ್ಮ ನಾಟಕದ ಕ್ರಮದ ವ್ಯವಸ್ಥೆಯಲ್ಲಿರುವದರಿಂದ ದೋಷಗಳು ಅನೇಕವಾಗಿರಬಹುದು. ವಿಶೇಷ್ಯರಿಗೆ ಸಭಾಮಧ್ಯದಲ್ಲಿ ಮಸ್ತ್ಯದ ಲೆಕ್ಕವಿಲ್ಲದ್ದಾಗಲಿ ದೋಷಭಾಗಗಳ ವಿಷಯವನ್ನು ಕಂಡಿದ್ದಲ್ಲಿ, ಗುಣದೋಷ ಲಕ್ಷಣವನ್ನು ಎತ್ತಿ ಅದನ್ನು ಬಿಟ್ಟು ಪ್ರಯೋಜನ ಮಾಡಿದರೋ ಮತ್ತು ಹಂಸದಂತೆ ಮಾತ್ರದ ಸಾರ ತೆಗೆದು “ಅಜ್ಞಾನವಶಾತ್ ನಾವು ಅಪಶಬ್ದಗಳನ್ನು ಸುಶಬ್ದಗಳನ್ನಾಗಿ” ತಿದ್ದಿ ತೋರಿಸಿ ಕೊಡುವರೋ, ತತ್ಪ್ರತ್ಯೇಕ ನ್ಯೂನಾಧಿಕಗಳನ್ನು ತ್ಯಜಿಸಿ ನಮಗೆ ಉತ್ಸಾಹವನ್ನುಂಟುಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಮತ್ತು ಆದರಣೆಗೆ ಗುರುತಾಗಿ ಬಳ್ಳಿಗಳ ಪುಷ್ಪಗಳನ್ನು ಹೊಂದಿದಂತೆ, ನಾಟಕವು ಈ ಸಭೆಯಿಂದ ನೋಡಲ್ಪಟ್ಟು ಶ್ಲಾಘನೀಯವಾಗಿಯೂ, ಮುಂದೆಯೂ ಕಂಪೆನಿಯ ಉತ್ಸಾಹಕ್ಕಾಗಿಯೂ ಒಂದು ಪತ್ರಿಕೆಯನ್ನು ನೇರ ಸ್ವೀಕರಿಸಿ ನಿಶ್ಚಯವಾಗಿ ಹೆಡ್ಮಾಸ್ಟರ್ ಮ|| ರಾ|| ಜೆ. ಅರ್ಬತ್‌ನಾಟರವರು ಮಾನ್ಯಮಾಡಿದರು.

ಮಾರನೇ ದಿವಸ ಸರ್ಟಿಫಿಕೇಟು ಕೊಡುವದಕ್ಕೋಸ್ಕರವಾಗಿಯೇ ಮ|| ರಾ|| ವಕೀಲ್ ಗೋವಿಂದರಾಯರ ಮನೆಯಲ್ಲಿ ಸಭಾ ನಡೆಯಿತು.

ಮ|| ರಾ|| ಮುನ್ಸೀಫ್ ಸಿ. ಸುಬ್ಬರಾವ್, ಸ್ಕೂಲ್ ಮ್ಯಾನೇಜರ್ ಹನುಮಂತರಾವ್, ಪ್ಲೀಡರ್ ಪಿ. ಲಕ್ಷ್ಮೀನಾರಾಯಣಪ್ಪ, ಅಸಿಸ್ಟೆಂಟ್ ಪಿ, ಕೃಷ್ಣರಾವ್, ಪ್ಲೀಡರ್ ವೈ. ವೆಂಕಟರಮಣಯ್ಯ, ಬ್ಯಾಂಕ್ ಸೆಕ್ರೆಟರಿ ಚೆನ್ನಿಗರಾಯ, ಡೆಪ್ಯುಟಿ ಕಮಿಷನರ್ ಶ್ರೀನಿವಾಸರಾವ್, ಟ್ರಿಷರಿ ಮ್ಯಾನೇಜರ್ ಚೆನ್ನಕೇಶವಯ್ಯ, ಕ್ಲರ್ಕ್ ಅಚ್ಯುತಯ್ಯಂಗಾರ್, ಟ್ರೆಷರಿ ಹೆಡ್ ಅಕೌಂಟೆಂಟ್ ಸಿ. ಸುಬ್ಬಯ್ಯ, ಇಂಗ್ಲೀಷ್ ಡಿ. ಹೆಡ್‌ಮಾಸ್ಟರ್ ಟೈಟ್ ಅಯ್ಯಂಗಾರ್, ಡಿ. ಕೃಷ್ಣರಾವ್, ವಕೀಲ್ ಗೋವಿಂದರಾವ್, ಮುನ್ಸೀಫ್ ಕೋರ್ಟ್ ದಫ್ತರ್ ಅನಂತಶೆಟ್ಟಿ ಇನ್ನೂ ಮಹನೀಯರೆಲ್ಲರೂ ಬಂದಿದ್ದರು.

ಓಪನಿಂಗ್ ಪ್ರಾರಂಭದಲ್ಲಿ ಕಂಪೆನಿಯವರು ಸಂಗೀತ ವಾದ್ಯಗಳಿಂದಲೂ, ಮಂಜುಳಗಾನಗಳಿಂದಲೂ ಸಭಿಕರಿಗೆ ಆನಂದವನ್ನುಂಟುಮಾಡಿದರು. ಮ|| ರಾಮರಾವ್ ಎಂಬುವರು ಎಷ್ಟೊ ಉಪನ್ಯಾಸ ಮಾಡಿ—ಮುನ್ಸೀಫ್ ಮ|| ಸಿ. ಸು

ಬ್ಬರಾಯರವರಿಂದ ಬರೆಯಲ್ಪಟ್ಟ ಸರ್ಟಿಫಿಕೇಟನ್ನು ಕೊಟ್ಟರು. ನಂತರ ಸಭಿಕರೆಲ್ಲರೂ ಸಹ ಒಂದು ಸರ್ಟಿಫಿಕೇಟನ್ನು ಅಲ್ಲಿಯೇ ತಯಾರುಮಾಡಿಕೊಟ್ಟರು. ಇದನ್ನು ನಾಟಕದ ಮ್ಯಾನೇಜರ್ ಮಾಲ್ಯಶೆಟ್ಟಿಯವರು ಸ್ವೀಕರಿಸಿ ಎಲ್ಲರೂ ಆದರವನ್ನು ನಮಗೆ ಕೊಡಬೇಕೆಂದು ಹೇಳಿ ಹೊರಡಲು ಅಪ್ಪಣೆ ಕೇಳಿದರು.

ಈ ಕಂಪೆನಿಯವರು ಇಲ್ಲಿನ ಜನರಿಗೆ ನಾಟಕ ತೋರಿಸಿಕೊಂಡು ಬಂದು ನಮಗೆ ಸಂತೋಷ ಪಡಿಸಿದ್ದಕ್ಕೆ ಸಾವಿರ ರೂಪಾಯಿ ಭಾಗವಹಿಸಿಯೂ, ನಾಲ್ಕು ಉತ್ತಮವಾದ ಸರ್ಟಿಫಿಕೇಟುಗಳೂ, ಆಕರ್ಷಕವಾದ ಶ್ರೀಸ್ವಾಮಿಗಳವರಿಂದ ಒಂದು ಪತ್ರಿಕೆಯೂ, ಒಂದು ಅರ್ಥಗರ್ಭಿತವಾದ ಮಾನಪತ್ರವೂ ದೊರಕಿದ್ದಕ್ಕೆ ಬಹಳ ಸಂತೋಷಪಟ್ಟಿರುವರೆಂದು ಬರೆಯಲು ಸಂತೋಷಪಡುತ್ತೇನೆ.

ತಮ್ಮ ವಿಧೇಯ,
ಒಬ್ಬ ದೇಶಾಭಿಮಾನಿ

ಮೈಸೂರಿನ ಇಲಾಖೆ.

ಛತ್ರ ದೇವಾಲಯಗಳು.

ಸಂಸ್ಥಾನದ ಎಲ್ಲಾ ಡಿಸ್ಟ್ರಿಕ್ಟ್ ಕಮಿಷನರುಗಳಿಂದ ಕಳುಹಿಸಲ್ಪಟ್ಟ ರಿಪೋರ್ಟುಗಳಿಂದ ಸಣ್ಣ ದೇವಸ್ಥಾನಗಳು ರಿಪೇರಿ ಅಗತ್ಯವಾಗಿ ಆಗಬೇಕಾಗಿರುವದು. ೨೬೧ ಇರುತ್ತವೆ ಎಂತಲೂ ಇವುಗಳನ್ನು ರಿಪೇರಿ ಮಾಡುವದಕ್ಕೆ ೩,೯೧,೩೬೪—೧೯—೬ ಖರ್ಚುಗಳು ಸಣ್ಣದೇ ಆದಾಯ ಆಗಿರುತ್ತವೆ ಎಂತಲೂ, ಆದರೆ ದೇವಸ್ಥಾನಗಳಲ್ಲಿ ಜಾಸ್ತಿಯಾಗಿ ಆಗುವ ವರಮಾನದಲ್ಲೇ ಇಷ್ಟು ಹಣ ಮೊಬಲಗು ದೊರೆಯುವದು ಸಾಧ್ಯವೆಂತಲೂ ತಿಳಿದು ಬರುತ್ತೆ. ಪೂರ್ವದ ರಾಜರುಗಳಿಂದ ಅದೇಕವಾದ ದ್ರವ್ಯ ವ್ಯಯಗಳಿಂದ ಕಟ್ಟಿಸಲ್ಪಟ್ಟಿರುವ ಈ ದೇವಾಲಯಗಳು ರಿಪೇರಿ ಇಲ್ಲದೆ ಪಾಳಾಗಿ ಹೋಗುವದು ಅಪೇಕ್ಷಣೀಯವಾದ್ದಲ್ಲ. ಕ್ರಮಾಗತ ಶಿಲ್ಪ ಶಾಸನಗಳು ಪ್ರಾರಂಭ ಮಾಡುವ ಇದ್ದಲ್ಲಿ ಕೆಲವು ದೇವಸ್ಥಾನಗಳು ಸಂಪೂರ್ಣವಾಗಿ ಹಾಳಾಗಿ ಹೋಗುತ್ತವೆ. ಆದರಿಂದ ಗವರ್ನಮೆಂಟಿನವರು ಸಾಲಿಯಾನಾ ದೇವಸ್ಥಾನಗಳ ರಿಪೇರಿ ಖರ್ಚು ೧೫,೦೦೦ ರೂಪಾಯಿಗಳನ್ನು ಕೊಡುವದಕ್ಕೆ ಸ್ಯಾಂಕ್ಷನ್ ಮಾಡತಕ್ಕದ್ದಾಗಿದೆ. ಹೀಗೆ ೧೦ ವರುಷಗಳವರೆಗೂ ಕೊಡುತ್ತಾ ಬರುವ ಹಣದಿಂದ ದೇವಸ್ಥಾನದ ಕಟ್ಟಡಗಳನ್ನು ರಿಪೇರಿ ಮಾಡಿಸಿ ಅವುಗಳನ್ನು ಉತ್ತಮ ಸ್ಥಿತಿಗೆ ತರಬಹುದು. ಈ ಮೊಬಲಗು ಸ್ಯಾಂಕ್ಷನ್ ಆದಕೂಡಲೇ ಅತ್ಯಂತ ಅವಶ್ಯಕವಾಗಿ ಕಂಡು ಬರುವ ದೇವಸ್ಥಾನದ ಕೆಲಸಗಳನ್ನು ಪ್ರಾರಂಭಿಸಬಹುದಾಗಿರುತ್ತದೆ.

ಸರ್ಕಾರದ ಮುಜರಾಯಿ—ಸಂಸ್ಥಾನದಲ್ಲಿರುವ ವಿಶೇಷ ದೇವಾಲಯಗಳಲ್ಲಿ ಕೆಲವಕ್ಕೆ ರಿಪೇರಿ ಮಾಡಿಸುವದು ಅತ್ಯಂತ ಆವಶ್ಯಕವೆಂದು ಗವರ್ನಮೆಂಟಿನವರಿಗೆ ಕಂಡು ಬಂದಿರುವದರಿಂದ ೧೯೧೨–೧೩ನೇ ಸಾಲಿಗೆ ೫೦,೦೦೦ ರೂಪಾಯಿಗಳನ್ನು ಗ್ರಾಂಟು ಮಾಡಿರುತ್ತಾರೆ ಮತ್ತು ೧೯೧೩–೧೪ನೇ ಸಾಲಿಗೆ ಮುಜರಾಯಿ ಬಜೆಟ್ಟಿನಲ್ಲಿ ೧೫,೦೦೦ ರೂಪಾಯಿಗಳಿಗೆ ಮುಜರಾಯಿ ಸೂಪರಿಂಟೆಂಡೆಂಟ್ರವರು ಬಿಲ್ ತಯಾರಿಸಿ ಬಹುದು. ಈ ರೀತಿಯಾಗಿ ಸ್ಯಾಂಕ್ಷನ್ ಮಾಡಲ್ಪಟ್ಟಿರುವ ಗ್ರಾಂಟುಗಳಿಂದ ರಿಪೇರಿಯು ಜರೂರಾಗಿ ಆವಶ್ಯವಾಗಿ ಕಂಡು ಬರುವಂಥ ದೇವಸ್ಥಾನಗಳಲ್ಲಿ ಮುಜರಾಯಿ ಸೂಪರಿಂಟೆಂಡೆಂಟ್ರವರು ಕಾಮಗಾರಿಗಳನ್ನು ಪ್ರಾರಂಭಿಸ ತಕ್ಕದ್ದು. ಆದರೆ ಯಾವ ದೇವಸ್ಥಾನಗಳಲ್ಲಿ ಭಕ್ತಾದಿಗಳೇ ಕೊಡಲುಪಕ್ರಮಿಸಿದ ಅಧಿಕವಾದ ವರಮಾನದಿಂದ ಅಂಥವುಗಳ ರಿಪೇರಿಯು ಅವಶ್ಯವಾಗಿ ಕಂಡು ಬಂದಲ್ಲಿ ರಿಪೇರಿಯ ಒಟ್ಟು ಮೊಬಲಗನ್ನೆಲ್ಲಾ ಸರ್ಕಾರದಿಂದಲೇ ಕೊಡಲ್ಪಡುವದು. ಯಾವ ದೇವಸ್ಥಾನಗಳಲ್ಲಿ ಹಿಡುವಳಿಯ ಹಣವು ರಿಪೇರಿಗೆ ಸಾಕಾಗುವಷ್ಟು ದೊರೆಯುವದೋ, ಅವುಗಳ ಕಾಮಗಾರಿ ಖರ್ಚು ಸರ್ಕಾರದಿಂದ ಹಣ ಕೊಡಲ್ಪಡುವದಿಲ್ಲ ಮತ್ತು ಅಂಥಾ ಹಣವು ಕಾಮಗಾರಿಗೆ ಸಾಕಾಗದ ಪಕ್ಷದಲ್ಲಿ ಭಕ್ತಾದಿಗಳಿಂದಲೂ ಇತರ ಗ್ರಾಮಸ್ಥರಿಂದಲೂ ಹಣವನ್ನು ಎತ್ತಬೇಕು. ಹೀಗೆ ಸೇರಿಸಿದ ಹಣವು ಸಾಲದೆ ಹೋದರೆ, ಬಾಕಿ ಮೊಬಲಗನ್ನು ಸರ್ಕಾರದವರು ಕೊಡಲು ಒಪ್ಪಿಕೊಳ್ಳುವರು.

ಮಠಗಳು.

ಸಂಸ್ಥಾನದ ಎಲ್ಲಾ ಭಾಗಗಳಲ್ಲಿಯೂ ಮಠ ಸಂಬಂಧವಾದ ಮಠಗಳು ಇರುತ್ತವೆಯಷ್ಟೆ. ಈ ಮಠಗಳಲ್ಲಿ ಗುರುಗಳನ್ನು ನೇಮಿಸತಕ್ಕ ವಿಷಯದಲ್ಲಿ ಶತಪೂರ್ವದ ಶ್ರೀಮನ್ಮಹಾರಾಜರವರ ಅನುಮತಿಯನ್ನು ಪಡೆಯಬೇಕೆಂಬ ಸಂಪ್ರದಾಯವನ್ನು ೩–೬ ಮಠಗಳಲ್ಲಿನ ಗುರುಗಳು ಅನುಸರಿಸುತ್ತಿದ್ದಾರೆಂದು ಗವರ್ನಮೆಂಟಿನವರಿಗೆ ತಿಳಿದು ಬಂದಿರುತ್ತದೆ. ಈ ಸಂಪ್ರದಾಯವು ಇಂಗ್ಲೀಷಿನವರು ಸಂಸ್ಥಾನವನ್ನು ಆಳುತ್ತಿದ್ದಾಗಲೂ ಜಾರಿಯಲ್ಲಿದ್ದುದರಿಂದ ಬಹಳ ಅನಾದಿಯಾದದ್ದೇ ಸರಿ. ಈಗಿನ ಇಂಥಾ ಸಂಪ್ರದಾಯಕ್ಕೆ ವಿರೋಧವಾಗಿ ಆಯಾ ಮಹಾರಾಜರವರ ಅಪ್ಪಣೆ ಅಥವಾ ಅನುಮತಿಯನ್ನು ಪಡೆಯದೆ ಕೆಲವು ಗುರುಗಳು ನೇಮಿಸಲ್ಪಟ್ಟಿರುವದರಿಂದ ಅಂಥಾ ಗುರುಗಳು ಸಾಕಷ್ಟು ವಿದ್ಯಾವಂತರಲ್ಲದೆಯೂ, ಶಿಷ್ಯವರ್ಗದವರ ಗೌರವ ಸನ್ಮಾನಗಳಿಗೆ ಪಾತ್ರರಾಗಿಲ್ಲದೆಯೂ ಇರುತ್ತಾರೆಂಬ ವಿಷಯವು ತಿಳಿಯಬಂದಿರುತ್ತದೆ. ಆದದರಿಂದ ಗವರ್ನಮೆಂಟ್ ಗ್ರಾಂಟನ್ನು ಪಡೆಯುತ್ತಿರುವ ಮಠಗಳಲ್ಲಿನ ಗುರುಗಳನ್ನು ನೇಮಿಸುವಾಗ್ಯೆ ಮಹಾರಾಜರವರ ಅನುಮತಿಯನ್ನು ಪಡೆಯುವದರಿಂದ ಅವುಗಳಲ್ಲಿ ಕಾರ್ಯ ನಿರ್ವಾಹಕತೆಯನ್ನುಂಟುಮಾಡುತ್ತದೆಂದಾಗಿ ಅಭಿಪ್ರಾಯಪಟ್ಟಿರುತ್ತಾರೆ. ಈ ವಿಷಯದಲ್ಲಿ ಮುಂದೆ ನಡೆಯುವ ದಾ ಮಾಡಿರುವ ರೂಲುಗಳನ್ನು ಸಂಸ್ಥಾನದ ಎಲ್ಲಾ ಜನಗಳೂ ತಿಳಿಯುವಂತೆ ಪ್ರಕಟ ಮಾಡಲ್ಪಟ್ಟಿರುತ್ತದೆ:—

೧ ಮಠಾಧಿಪತಿಗಳು, ದ್ರವ್ಯ ಸಹಾಯ, ಯಾ ಮಾನ್ಯ

ಶ್ಯಾಲೆಗಳೇ ಮೊದಲಾದ ಗೌರ್ನಮೆಂಟ್ ಗ್ರ್ಯಾಂಟುಗಳನ್ನು ಇಲಾಖೆಗಳಿಂದ ಪಡೆಯುತ್ತಲಿರುವ ಪ್ರತಿ ಮಠದಲ್ಲಿಯೂ ಹೊಸದಾಗಿ ಗುರುಗಳು ನಿಯಮಿಸಲ್ಪಡತಕ್ಕದ್ದು. ಆ ವಿಷಯದಲ್ಲಿ ಪೂರ್ವಾಭಿಪ್ರಾಯಗಳೇ ಶ್ರೀಮನ್ಮಹಾರಾಜರವರ ಅನುಮತಿಯನ್ನು ಪಡೆಯಬೇಕು. ಇಂಥಾ ಅನುಮತಿಯನ್ನು ಪಡೆಯುವುದಕ್ಕಾಗಿ ಆಯಾ ಮಠದ ಅಧಿಕಾರಿಗಳಿಂದ ಬರತಕ್ಕ ಅರ್ಜಿಗಳು ಮುಜರಾಯಿ ಇಲಾಖೆಯ ಮುಖಾಂತರವಾಗಿ ಹೋಗಬೇಕು.

೨ ಒಬ್ಬ ಗುರುಗಳು ಅಶಕ್ತರಾಗಿ ವೃದ್ಧಾಪ್ಯದಲ್ಲಿದ್ದಾಗ ಉತ್ತರಾಧಿಕಾರಿ ಒಬ್ಬನನ್ನು ತಮ್ಮ ಶಿಷ್ಯನನ್ನಾಗಿ ನೇಮಿಸಿಕೊಂಡಿರಬಹುದು. ಅಂಥಾ ಶಿಷ್ಯನನ್ನು ನೇಮಿಸಿಕೊಳ್ಳುವದಕ್ಕೂ ಕೂಡ ಮಹಾರಾಜರವರ ಅನುಮತಿಯನ್ನು ಪಡೆಯಬೇಕು. ಅಂಥವರು ಅವರ ಕಾಲಾನಂತರ ಅವರ ಪೀಠವನ್ನು ಪಡೆಯುವರು.

೩ ಹಾಗಿಲ್ಲದೆ ಒಬ್ಬ ಗುರುವು ತನ್ನ ಮರಣ ಕಾಲದಲ್ಲಿ ಯಾರಿಗಾದರೂ ಒಬ್ಬನಿಗೆ ಆಶ್ರಮವನ್ನು ಕೊಟ್ಟು, ತಮ್ಮ ಸ್ಥಾನಕ್ಕೆ ಅವರು ಬರತಕ್ಕದ್ದೆಂದು ನೇಮಿಸಿದ್ದ ಪಕ್ಷದಲ್ಲಿ ಅವರ ಕಾಲಾನಂತರ ಅವರ ದಾನದತ್ತಿಗಳನ್ನೂ, ಸರ್ಕಾರೀ ಗ್ರಾಂಟುಗಳನ್ನೂ ಈ ಆಶ್ರಮವನ್ನು ಸ್ವೀಕರಿಸಿದವರು ಅನುಭವಿಸುವದರ ವಿಷಯದಲ್ಲಿ ಶ್ರೀಮನ್ಮಹಾರಾಜರವರು ಅವರ ಯೋಗ್ಯತಾಪತ್ರಗಳನ್ನೂ, ಜನಗಳ ಇಷ್ಟಾನಿಷ್ಟಗಳನ್ನೂ ತಿಳಿದು ಅವುಗಳನ್ನು ಮಂಜೂರು ಮಾಡಲು ಅಧಿಕಾರ ಉಳ್ಳವರಾಗಿರುತ್ತಾರೆ.

೪ ಒಬ್ಬ ಗುರುವು ಯಾರೊಬ್ಬರಿಗೂ ಇಂಥಾ ಅನುಮತಿ ಪೂರ್ವಕವಾದ ಆಶ್ರಮವನ್ನು ಕೊಡದೆ ಕಾಲಗತಿಯುಳ್ಳವರಾದಲ್ಲಿ ಅವರ ನಂತರ ಯಾರು ಆ ಪೀಠವನ್ನು ಅಲಂಕರಿಸಬೇಕೆಂಬ ವಿಷಯದಲ್ಲಿ ಆಯಾ ಪಂಗಡದವರು ತಾವು ಯಿಸುವಂಥವರು ಮಹಾರಾಜರವರ ಅನುಮತಿಯಮೇಲೆ ನೇಮಿಸಲ್ಪಡುವರು.

೫ ಹಾಗೆ ಶ್ರೀಮನ್ಮಹಾರಾಜರವರ ಅನುಮತಿ ಇಲ್ಲದೆ ಪೀಠವನ್ನಲಂಕರಿಸುವ ಎಲ್ಲಾ ಗುರುಗಳೂ ಅವರವರಿಗೆ ಸಲ್ಲಿಸಲ್ಪಡುತ್ತಲಿರುವ ಗ್ರ್ಯಾಂಟುಗಳನ್ನೂ, ದಾನದತ್ತಿಗಳನ್ನೂ, ಬಿರುದುಗಳನ್ನೂ ನಿಲ್ಲಿಸಲ್ಪಡುವವು. ಮತ್ತು ಜಹಗೀರುಗಳೂ ಸರ್ಕಾರಕ್ಕೆ ಸೇರಿ ಹೋಗುವವು.

ಎ. ಶ್ರೀನಿವಾಸಾಚಾರ್‍ಲು,
ಸೆಕ್ರೆಟರಿ.

ಸನ್ ೧೮೯೨ನೇ ಇಸವಿ ನವೆಂಬರು ತಿಂಗಳಲ್ಲಿ ಇಂಡಿಯಾ ದೇಶದ ವೈಸರಾಯಿ ಮತ್ತು ಗವರ್ನರ್ ಜನರಲ್ ಪದವಿಯನ್ನು ಹೊಂದಿದ ಲಾರ್ಡ್ ಲ್ಯಾನ್ಸ್‌ಡೌನ್ ಸಾಹೇಬರವರು ಶ್ರೀಮನ್ಮಹಾರಾಜರ ಸಂದರ್ಶನಾರ್ಥವಾಗಿ ಮೈಸೂರಿಗೆ ದಯಮಾಡಿಸಿದ್ದಾಗ ನಡೆದ ಸಂಗತಿಗಳ ವಿವರ.

ಇಂಡಿಯಾದೇಶದ ವೈಸರಾಯಿ ಮತ್ತು ಗವರ್ನರ್ ಜನರಲ್ ರವರಾದ ಘನವನ್ನು ಹೊಂದಿದ ಮಾರ್ಕ್ವೆಸ್ ಆಫ್ ಲ್ಯಾನ್ಸ್‌ಡೌನ್, ಜಿ.ಎಮ್.ಎಸ್.ಐ., ಜಿ.ಸಿ.ಎಮ್.ಜಿ., ಜಿ.ಎಮ್.ಐ.ಇ ಯವರು ತಮ್ಮ ಪತ್ನಿಯವರಾದ ಘನವನ್ನು ಹೊಂದಿದ ಮಾರ್ಷನೆಸ್ ಆಫ್ ಲ್ಯಾನ್ಸ್‌ಡೌನ್ ಯವರೊಡನೆಯೂ ಮತ್ತು ತಮ್ಮ ಪರಿವಾರದೊಡನೆಯೂ ಶ್ರೀಮನ್ಮಹಾರಾಜರವರ ಸಂದರ್ಶನಕ್ಕಾಗಿ ಸನ್ ೧೮೯೨ನೇ ಇಸವಿ ನವೆಂಬರ್ ೨೪ನೇ ತಾರೀಖು ಗುರುವಾರದ ದಿನ ಮೈಸೂರಿಗೆ ದಯಮಾಡಿಸಿದರು.

ಶ್ರೀಮನ್ಮಹಾರಾಜರವರು ಘನವನ್ನು ಹೊಂದಿದ ವೈಸರಾಯಿಯವರನ್ನು ಎದುರುಗೊಳ್ಳುವದಕ್ಕಾಗಿ, ತಮ್ಮ ಕಡೆ ದಿವಾನರುಗಳನ್ನು ಶ್ರೀರಂಗಪಟ್ಟಣಕ್ಕೆ ಕಳುಹಿಸಿದ್ದರಲ್ಲದೆ, ತಮ್ಮ ಸಂಸ್ಥಾನದ ಮುಖ್ಯಾಧಿಕಾರಿಗಳೊಡನೆಯೂ, ಸವಾರರ ದಳವೂ ಮತ್ತು ದಿವಾನರು ರಾಜಮರ್ಯಾದೆಗಳೊಡನೆಯೂ, ತಾವೇ ಮೈಸೂರಿನಲ್ಲಿ ಎದುರುಗೊಂಡರು.

ಸವಾರಿಯು ರೈಲ್ವೇಸ್ಟೇಷನ್ನಿಂದ ಹೊರಟು, ನಿರ್ಮಾಣಗೊಂಡಿದ್ದ ಸ್ಟೇಷನ್ ರಸ್ತೆಯ ಮಾರ್ಗವಾಗಿ, ಅಲ್ಲಿಂದ ಬಲಗಡೆ ಸಯ್ಯಾಜಿರಾವ್ ರಸ್ತೆಗೆ ತಿರುಗಿ, ಅನಂತರ ಎಡಗಡೆ ಆಲ್ಬರ್ಟ್ ವಿಕ್ಟರ್ ರಸ್ತೆ ಮಾರ್ಗವಾಗಿ ಕ್ಯಾಪಿಟಲ್ ದಾಟಿ, ದೊಡ್ಡಪೇಟೆ ಮಾರ್ಗವಾಗಿ ಹೊರಟು, ಚಾಮರಾಜೇಂದ್ರ ಸರ್ಕಲ್ ಮಾರ್ಗವಾಗಿ, ವೈಸರಾಯಿಯವರ ವಾಸಕ್ಕಾಗಿ ಸಿದ್ಧಪಡಿಸಲ್ಪಟ್ಟ ಗೌರ್ನಮೆಂಟ್ ಹೌಸೆಂಬ ಬಂಗಲೆಯನ್ನು ಸೇರಿತು. ಮಾರ್ಗದಲ್ಲಿ ಹಿಂದೂ ವಿದ್ಯಾಂಸರೂ ಮತ್ತು ಮಹಮ್ಮದೀಯ ಮೌಲ್ವಿಗಳೂ ಬಂದು ಮಂಟಪದಲ್ಲಿ ವೈಸರಾಯಿಯವರನ್ನು ಉಚಿತವಾದ ಮರ್ಯಾದೆಗಳಿಂದ ಸತ್ಕರಿಸಿದರು. ಅಲ್ಲಿಂದ ಮುಂದಕ್ಕೆ ಮಾರ್ಗದಲ್ಲಿ ಅನೇಕ ಚಪ್ಪರಗಳಲ್ಲಿಯೂ, ಮೈಸೂರು ಪಟ್ಟಣದಲ್ಲಿರುವ ಪಾಠಶಾಲೆಗಳಲ್ಲಿ ಓದುವ ವಿದ್ಯಾರ್ಥಿಗಳೂ, ಬಿಷಪ್ ಯಾರ್ ವಿಶರ್ ಮತ್ತು ಶ್ರೀಮತಿ ಮಹಾರಾಣಿಯವರ ಬಾಲಿಕಾಪಾಠಶಾಲೆಗಳ ವಿದ್ಯಾರ್ಥಿನಿಯರೂ ಸಹ, ಅವರವರ ಪಾಠಶಾಲೆಯ ಹೆಸರನ್ನು ತೋರಿಸುವ ಧ್ವಜಗಳ ಸಮೂಹದಲ್ಲಿ ಸಾಲು ಸಾಲಾಗಿ ಅಂತಸ್ತುಗಳಲ್ಲಿ ಕುಳಿತುಕೊಂಡಿದ್ದು, ಘನವನ್ನು ಹೊಂದಿದ ವೈಸರಾಯಿಯವರ ಸವಾರಿಯು ತಮ್ಮ ಬಳಿಗೆ ಬಂದಾಗ, ಜಯಘೋಷವನ್ನು ಮಾಡಿದರು.

ಕೋಟೆಗೆ ಉತ್ತರದಿಕ್ಕಿನಲ್ಲಿ ಹಾಕಿದ್ದ ಮಂಟಪದಲ್ಲಿ ಮೈಸೂರು ಸಿಟಿ ಮ್ಯುನಿಸಿಪಲ್ ಕಮಿಷನರ್‌ಗಳೂ ಸಂಸ್ಥಾನದ ದೊಡ್ಡ ಜಮೀನ್ದಾರರೂ ಮತ್ತು ಸಾಹುಕಾರರೂ ಸೇರಿದ್ದರು. ಈ ಕೆಳಗೆ ವಿವರಿಸಿರುವ ಸುಸ್ವಾಗತ ಸೂಚಕನಾದ ಪತ್ರಿಕೆಯನ್ನು ಮ್ಯುನಿಸಿಪಲ್ ಕಮಿಷನರರು, ಘನವನ್ನು ಹೊಂದಿದ ವೈಸರಾಯಿಯವರಿಗೆ ಒಪ್ಪಿಸಿದರು.

"ಇಂಡಿಯಾ ದೇಶದ ವೈಸರಾಯಿ ಮತ್ತು ಗವರ್ನರ್ ಜನರಲ್ ರವರಾದ ಅತ್ಯಂತ ಘನತೆಯನ್ನು ಹೊಂದಿದ ಸರ್ ಹೆನ್ರಿ ಚಾರ್ಲ್ಸ್ ಕೀತ್ ಫಿಟ್ಸ್—ಮಾರಿಸ್ ಮಾರ್ಕ್ವೆಸ್ ಆಫ್ ಲ್ಯಾನ್ಸ್‌ಡೌನ್, ಜಿ. ಎಮ್. ಎಸ್. ಐ., ಜಿ. ಸಿ. ಎಮ್. ಜಿ., ಜಿ. ಎಮ್. ಐ. ಇ. ಯವರ ಸನ್ನಿಧಾನದಲ್ಲಿ.

ಅತ್ಯಂತ ವಿಧೇಯರೂ ಸ್ವಾಮಿಭಕ್ತಿಯುಕ್ತರೂ ಆದ, ಮೈಸೂರು ಮ್ಯುನಿಸಿಪಾಲಿಟಿಯ ಪ್ರಸಿಡೆಂಟ್ ಮತ್ತು ಮೆಂಬರುಗಳು ವಿಜ್ಞಾಪಿಸಿಕೊಳ್ಳುವದೇನೆಂದರೆ:—ಘನವುಳ್ಳ ತಾವೂ, ಮಾರ್ಷಿಯನೆಸ್ ಆಫ್ ಲ್ಯಾನ್ಸ್‌ಡೌನ್‌ರವರೂ, ಈ ಪುರಾತನವಾದ ನೇಟಿವ್ ಸಂಸ್ಥಾನದ ರಾಜಧಾನಿಗೆ ದಯಮಾಡಿಸಿದ್ದರಿಂದ, ನಮಗೆ ಉಂಟಾದ ವಿಶೇಷವಾದ ಸಂತೋಷವನ್ನು ಅತ್ಯಂತ ಗೌರವದೊಡನೆಯೂ, ವಿಶ್ವಾಸಪೂರ್ವಕವಾಗಿಯೂ, ಅರಿಕೆ ಮಾಡಿಕೊಳ್ಳುತ್ತೇವೆ. ಈ ದೇಶದ ಅನೇಕ ಭಾಗಗಳಲ್ಲಿ, ಸ್ವಲ್ಪ ದಿವಸದ ಹಿಂದೆ, ಹಿಡಿಸುತ್ತಿದ್ದ ಕ್ಷಾಮದಿಂದುಂಟಾದ ವ್ಯಾಕುಲತೆಯು ಕಳೆದು, ಸುಭಿಕ್ಷವಾಗುತ್ತಿರುವ ಈ ಸಮಯದಲ್ಲಿ ತಮ್ಮ ಆಗಮನವನ್ನು, ಶುಭೋದಯಕ್ಕೆ ಸೂಚಕವಾಗಿದೆ.

ಪ್ರಜಾನುರಾಗಕ್ಕೆ ಪಾತ್ರರಾದ ನಮ್ಮ ಮಹಾರಾಜರವರ ಆಜ್ಞೆಯಿಂದ, ಕಳೆದ ಹತ್ತು ವರ್ಷಗಳೊಳಗೆ ಈ ಪಟ್ಟಣದಲ್ಲಿ ಜನೋಪಯುಕ್ತಗಳಾದ ಅನೇಕ ಕಾರ್ಯಗಳು ನಿರ್ಮಿಸಲ್ಪಟ್ಟವು. ಜಲಾನುಕೂಲತೆಯನ್ನು ಉಂಟುಮಾಡಿ ಮತ್ತು ಚರಂಡಿಗಳನ್ನು ಕಟ್ಟಿಸುತ್ತಿರುವದೂ, ಆರೋಗ್ಯವನ್ನು ಅಭಿವೃದ್ಧಿ ಪಡಿಸುವಂತೆ ಮಾಡುತ್ತಿರುವ ಇತರ ವಿಷಯಗಳೂ, ಈ ಪಟ್ಟಣದ ಪ್ರಾಂತ್ಯಗಳಲ್ಲಿ ಕಟ್ಟಿದೂ ಕಟ್ಟಲ್ಪಡುತ್ತಲೂ ಇರುವ ಮನೋಹರವಾದ ಅನೇಕ ದೊಡ್ಡ ದೊಡ್ಡ ಕಟ್ಟಡಗಳೂ, ಇವುಗಳೆಲ್ಲವೂ ಇದುವರೆಗೂ ಸ್ವಲ್ಪ ಉದಾಸೀನಸ್ಥಿತಿಯಲ್ಲಿದ್ದ ಈ ನಮ್ಮ ಪಟ್ಟಣವು, ದಕ್ಷಿಣ ಇಂಡಿಯಾದಲ್ಲಿ ಬಹಳ ವಿಸ್ತಾರವಾದ ಈ ನೇಟಿವ್ ಸಂಸ್ಥಾನದ ರಾಜಧಾನಿಯಾಗಿರುವದಕ್ಕೆ ತಕ್ಕ ಸ್ಥಿತಿಗೆ, ಕ್ರಮಕ್ರಮವಾಗಿ ಬರುತ್ತಿರುವುದಕ್ಕೆ ನಿದರ್ಶನಗಳಾಗಿರುತ್ತವೆ.

ಹಿಂದೂದೇಶದ ಹೆಂಗಸರಿಗೆ ಉತ್ತಮವಾದ ವೈದ್ಯಕ ಚಿಕಿತ್ಸೆಯನ್ನು ದೊರಕಿಸಿ ಕೊಡುವದಕ್ಕೋಸ್ಕರ ಲೇಡಿ ಡಫರಿನ್‌ರವರು ಮಾಡಿದ ಜನಾಭಿಮಾನಪುರಸ್ಸರವಾದ ಪ್ರಯತ್ನಗಳನ್ನು, ಘನವುಳ್ಳ ಲೇಡಿ ಲ್ಯಾನ್ಸ್‌ಡೌನ್‌ರವರು ವಿಶೇಷವಾದ ಆದರದೊಡನೆ ನಡೆಸಿಕೊಂಡು ಬರುವದರಿಂದ, ಈ ಪಟ್ಟಣದ ಹೆಂಗಸರಿಗೂ, ಮಕ್ಕಳಿಗೂ, ಸ್ತ್ರೀವೈದ್ಯರ ಮೂಲಕ ಸಹಾಯವನ್ನುಂಟುಮಾಡುತ್ತಿರುವ ಮಹಾರಾಣಿಯವರ ಹೆಂಗಸರ ಆಸ್ಪತ್ರೆಯನ್ನು, ಲೇಡಿ ಲ್ಯಾನ್ಸ್‌ಡೌನ್‌ರವರು, ತಮ್ಮ ಕೃಪಾವಲೋಕನಕ್ಕೆ ಪಾತ್ರವನ್ನಾಗಿ ಮಾಡಿಕೊಳ್ಳಬೇಕೆಂದು ಅರಿಕೆ ಮಾಡುತ್ತೇವೆ.

ನಮ್ಮ ಬಾಲಕರ ಮತ್ತು ಬಾಲಿಕೆಯರ ವಿದ್ಯಾಭ್ಯಾಸದ ವಿಷಯದಲ್ಲಿ ಮಾಡಲ್ಪಟ್ಟಿರುವ ಅಭಿವೃದ್ಧಿಗೆ ಕೆಲವು ನಿದರ್ಶನಗಳನ್ನು, ಘನವುಳ್ಳ ತಾವು ಈಗತಾನೆ ನೋಡಿದ್ದೀರಿ. ತಮ್ಮ ಕಿವಿಗಳಿಗೆ ಬೀಳುವ ಅನೇಕ ಮಧುರವಾದ ಜಯಘೋಷಗಳನ್ನು ಮಾಡುವ ಬಾಲಿಕಾ ಪಾಠಶಾಲೆಯು, ದಕ್ಷಿಣದೇಶದಲ್ಲಿರತಕ್ಕ ಬಾಲಿಕಾ ಪಾಠಶಾಲೆಗಳಲ್ಲೆಲ್ಲಾ ಬಹಳ ಅಭಿವೃದ್ಧಿಯನ್ನು ಹೊಂದಿದ್ದಾಗಿಯೂ, ಪೂರ್ವದೇಶದ ಮಾರ್ಗದಲ್ಲಿಯೇ ವಿಶೇಷವಾಗಿ ನಿಂತಿರುವ ನಮಗೆ ಆಗಾಗ ಕೊಡುವ ಸ್ತ್ರೀವಿದ್ಯಾಭ್ಯಾಸದಿಂದುಂಟಾಗುವ ಪ್ರಯೋಜನಗಳನ್ನು ತೋರಿಸುತ್ತಿರುವದಾಗಿಯೂ ಇದೆ.

ಪ್ರಜೆಗಳಿಗೆ ಸುಖಕರವಾದ ಸರ್ಕಾರದ ನಮ್ಮ ವೃದ್ಧಿಯೂ, ನಾಗರಿಕತೆಯ ಗುಣಗಳ ಅಭಿವೃದ್ಧಿಯೂ, ರಾಜಧಾನಿಯಲ್ಲಿ ಮಾತ್ರವೇ ಅಡಕವಾಗಿಲ್ಲ. ಈ ಸಂಸ್ಥಾನದಲ್ಲಿ ಅನೇಕ ವರ್ಷಗಳಿಂದಲೂ, ಅವಿಚ್ಛಿನ್ನವಾದ ಸುಭಿಕ್ಷತೆಯನ್ನು ಅನುಭವಿಸುತ್ತಾ ಬಂದದ್ದರಿಂದ, ಎಲ್ಲಾ ಭಾಗಗಳಲ್ಲಿಯೂ, ಉತ್ಪನ್ನವು ಹೆಚ್ಚಿ ಬಂದಿದೆ. ರಾಜ್ಯವನ್ನು ಕ್ರಮಕ್ರಮವಾಗಿ ಅಭಿವೃದ್ಧಿಗೆ ತರುತ್ತಿರುವ ಶ್ರೀಮನ್ಮಹಾರಾಜರವರ ರಾಜತಂತ್ರಜ್ಞತೆಗೆ ನಿದರ್ಶನಗಳಾಗಿ, ನೀರಾವರಿ ಕಾಲುವೆಗಳನ್ನು ಮಾಡುತ್ತಿರುವದನ್ನೂ, ಕ್ಷಾಮಪೀಡಿತ ವಿಶೇಷವಾಗಿ ಬರುವ ಪ್ರದೇಶಗಳಿಗೆ ರೈಲು ಮಾರ್ಗಗಳನ್ನು ಹಾಕಿಸುವದನ್ನೂ, ಸ್ವದೇಶದಲ್ಲಿ ಕೈಗಾರಿಕೆ ಕಸಬುಗಳ ಅಭಿವೃದ್ಧಿಗೂ, ಅನುಕೂಲ್ಯಗಳನ್ನು ಉಂಟುಮಾಡುವದನ್ನೂ, ಇವೆಲ್ಲಕ್ಕಿಂತಲೂ ವಿಶೇಷವಾಗಿ, ಪ್ರಜಾಪ್ರತಿನಿಧಿಸಭೆ ಎಂಬ ಅನನ್ಯಸಾಧಾರಣವಾದ ಸಂಘವನ್ನು ಕಲ್ಪಿಸಿರುವದನ್ನೂ, ಸೂಚಿಸಬಹುದಾಗಿದೆ. ಪ್ರಜಾಕ್ಷೇಮದಲ್ಲಿ ದೃಷ್ಟಿಯುಳ್ಳ ಈ ವ್ಯವಸ್ಥೆಗಳು, ಪ್ರಜೆಗಳು ಸುಖವಾಗಿಯೂ ಸಂತುಷ್ಟರಾಗಿಯೂ ಇದ್ದುಕೊಂಡು, ಎಲ್ಲಾ ವಿಧದಲ್ಲಿಯೂ ಅಭಿವೃದ್ಧಿಗೆ ಬರುತ್ತಿರುವದಕ್ಕೆ ನಿದರ್ಶನಗಳು, ಎಲ್ಲೆಲ್ಲಿಯೂ ಪ್ರತ್ಯಕ್ಷವಾಗಿ ತಿಳಿಯಬೇಕಾಗಿರುವುದು.

ಘನವುಳ್ಳ ತಮ್ಮ ಆಗಮನವು, ನಮಗೆ ಹ್ಯಾಗೆ ಆನಂದಕರವಾಗಿದೆಯೋ, ತಮಗೆ ಹಾಗೆ ಮನೋಹರವಾಗಿ ಇರುವದೆಂತಲೂ, ತಾವು ಇಲ್ಲಿಂದ ಹಿಂತಿರುಗುವಾಗ, ನಮ್ಮ ರಾಜ್ಯದ ಸ್ಥಿತಿಯೂ, ಪ್ರಜಾನುರಾಗಕ್ಕೆ ಪಾತ್ರರಾದ ನಮ್ಮ ಮಹಾರಾಜರವರ ಸಾಹಚರ್ಯವೂ, ತಮ್ಮ ಚಿತ್ತಕ್ಕೆ ಸಂತೋಷಕರವಾಗಿ ಸ್ಮರಣೀಯವಾಗಿರಬಹುದೆಂತಲೂ, ನಂಬುತ್ತೇವೆ.

ಶ್ರೀಮದಿಂಡಿಯಾ ಚಕ್ರವರ್ತಿನಿಯವರಲ್ಲಿ ಅತ್ಯಂತ ಭಕ್ತಿಯುಳ್ಳವರಾಗಿಯೂ, ಘನವುಳ್ಳ ತಮಗೂ, ತಮ್ಮ ಕುಟುಂಬಕ್ಕೂ, ತಮ್ಮ ಬಂಧುವರ್ಗಕ್ಕೂ ದೀರ್ಘಾಯುವನ್ನೂ ಸಕಲಸಂಪತ್ತನ್ನೂ ಭಗವಂತನು ಅನುಗ್ರಹಿಸಲೆಂದು ಪ್ರಾರ್ಥಿಸುತ್ತಲೂ, ಇರುತ್ತೇವೆ." (ಸಹಿ.)

ವಿವಿಧ ವರ್ತಮಾನಗಳು.

ನೇಪಾಳ ಸಂಸ್ಥಾನದ ಪ್ರಧಾನ ಮಂತ್ರಿಗಳಾದ ಮಹಾರಾಜ ಸರ್ ವೀರ ಷಂಷೇರ್ ಸಿಂಗ್‌ರವರು ಪ್ರಯಾಣ ಮಾಡಿಕೊಂಡು ಕಾಶೀ ಪಟ್ಟಣದಲ್ಲಿ ಇರುತ್ತಾರೆ

ಮೈಸೂರು ಮಹಾರಾಜರವರು ಕಲ್ಕತ್ತಾ ಪಟ್ಟಣದಲ್ಲಿ ಕಮ್ಯಾಂಡರ್ ಇನ್ ಛೀಫ್‌ರವರನ್ನು ಮತ್ತು ಲೆಫ್ಟಿನೆಂಟ್ ಗೌರ್ನರವರನ್ನು ಭೇಟಿ ಮಾಡಿಕೊಂಡು ಬಂದರು. ಮೈಸೂರು ದರ್ಬಾರ್‌ವರೂ ಬರುವರಿದ್ದರು.

ಕೆಲವು ದಿವಸಗಳ ಕೆಳಗೆ ಕಲ್ಕತ್ತಾ ಪಟ್ಟಣದಲ್ಲಿ ನಡೆದ ಬಿ. ಎ. ಪರೀಕ್ಷೆಯಲ್ಲಿ ಮಿಸ್ ಕಾದಂಬಿನೀ ಗಂಗೂಲಿ ಎಂಬಾಕೆಯೂ ಮಿಸ್ ಪ್ರಿಯಂವದಾ ಬ್ಯಾನರ್ಜಿ ಎಂಬಾಕೆಯೂ ತೇರ್ಗಡೆ ಹೊಂದಿರುತ್ತಾರೆ. ಮತ್ತು ಮಿಸ್ ಫ್ಲಾರೆನ್ಸ್ ಹಾಲೆಂಡ್ ಎಂಬಾಕೆಯು ಎಂ. ಎ. ಪರೀಕ್ಷೆಯಲ್ಲಿ ಪ್ಯಾಸಾಗಿರುತ್ತಾಳೆ.

ಆಸ್ಟ್ರಿಯಾ ದೇಶದ ರಾಜಪುತ್ರರಾದ ಫ್ರಾನ್ಸಿಸ್ ಫರ್ಡಿನ್ಯಾಂಡ್‌ರವರು ಈ ತಿಂಗಳು ೨೦ನೇ ತಾರೀಖಿಗೆ ಮೈಸೂರನ್ನು ತಲಪುವದಾಗಿಯೂ, ಅಲ್ಲಿನ ಬಾಷ್ಟರ್ ಬಂಗಲೆ ಎಂಬ ಮನೆಯಲ್ಲಿ ೫ ದಿವಸಗಳ ವರೆಗೂ ಮಹಾರಾಜರವರಿಗೆ ಅತಿಥಿಗಳಾಗಿರುವರಾಗಿಯೂ ತಿಳಿಯಬರುತ್ತದೆ.

ವಿಲಾಯತಿ ಪಾರ್ಲಿಮೆಂಟ್ ಮೆಂಬರಾಗಿದ್ದ ಮಿ॥ ದಬ್ಬಿಯು ಸರ್‌ವನ್ ಎಂಬವರು ಅಲಹಾಬಾದಿನಲ್ಲಿ ನಡೆದ ನ್ಯಾಷನಲ್ ಕಾಂಗ್ರೆಸ್ಸನ್ನು ಹೋಗಿ ನೋಡಬೇಕೆಂಬ ಕುತೂಹಲ ಭರಿತರಾಗಿ ಇಂಡಿಯಾ ದೇಶಕ್ಕೆ ಬಂದರು. ಆದರೆ ಆ ದಿವಸ ಅವರಿಗೆ ಜ್ವರ ಬಂದದ್ದರಿಂದ ಸಭೆಗೆ ಹೋಗಲಿಲ್ಲ ಮತ್ತು ಜ್ವರವು ಹೆಚ್ಚಿ ಕಡೆಗೆ ಅವರು ಮರಣವನ್ನು ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ.

ಪ್ರತಿ ವರುಷವೂ ಯಾವ ವಿಧವಾದ ಪ್ರತಿ ಫಲವನ್ನೂ ಹೊಂದದೆಯೂ, ನಿರೀಕ್ಷಣೆ ಇಲ್ಲದೆಯೂ, ಇಂಡಿಯಾ ಸಂಸ್ಥಾನದಿಂದ ವಿಲಾಯತಿಗೆ ಹೋಗುವ ಅಧಿಕಾರಿಗಳ ಸಂಬಳ ರೂಪವಾಗಿ ೧,೫೦,೦೦,೦೦೦ ರೂಪಾಯಿಗಳು ಸಾಗಿ ಹೋಗುತ್ತಲಿವೆ ಎಂಬದಾಗಿ ಮಿ॥ ದಾದಾಭಾಯಿ ನವರೋಜಿಯವರು ಬಂದೊಂದು ಇಂಗ್ಲೀಷ್ ಸಭೆಯಲ್ಲಿ ಉಪನ್ಯಾಸ ಮಾಡಿದರು. ಅವರನ್ನು ಕೇಳುತ್ತಿದ್ದ ಸಭಿಕರೆಲ್ಲರೂ ಆಶ್ಚರ್ಯಪಟ್ಟು ಬೆರಗಾದರು.

ನ್ಯೂಜಿಲೆಂಡಿನಲ್ಲಿರುವ ಒಬ್ಬಾನೊಬ್ಬ ಪಾದ್ರಿ ಯು ಮಾವರಿಗಳೆಲ್ಲಾ ಸೇರಿ ಒಂದು ಅರ್ಜಿಯನ್ನು ಮಹಾರಾಣಿಯವರಿಗೆ ಬರದು ಅದರಲ್ಲಿ ತಮಗೆ ವೇಟಗಳೂಡುವದರಲ್ಲಿಯೂ ಬೇಟೆಗಳೆಂತಲ್ಲಿಯೂ ಸ್ವಲ್ಪಸ್ವಲ್ಪ ಹಕ್ಕುಗಳನ್ನು ದಯಪಾಲಿಸಬೇಕೆಂತಲೂ, ಉಪಾಧ್ಯಾಯರು ವಿಶೇಷವಾಗಿ ತಮ್ಮನ್ನು ಹೊಡೆಯಕೂಡದೆಂತಲೂ ಕೇಳಿಕೊಂಡಿದ್ದರು. ಆದರೆ ಕಡೆಗೆ ಪಡಿಸನ್ನಿದ್ದರು ವಿಚಾರಣೆ ಮಾಡಿ ಮರುದಿನವೇ ಕೆಲವರನ್ನು ಶಿಕ್ಷಿಸಿದ್ದರಿಂದ ಪ್ರಯೋಜನವಾಗಲಿಲ್ಲವೆಂದು ತಿಳಿಯಬರುತ್ತದೆ.

ಲಕ್ನೋ ಪಟ್ಟಣದಲ್ಲಿದ್ದ ಒಬ್ಬ ಬ್ರಿಟಿಷ್ ಸೋಲ್ಜರನು ಕುಡಿದು ಮತ್ತನಾಗಿ ತಪ್ಪು ತನವಾದದ್ದಕ್ಕೋಸ್ಕರ ಒಬ್ಬ ಹಿಂದೂ ಜವಾನನನ್ನು ಬಂದು ಕಂಬಕ್ಕೆ ಕಟ್ಟಿಬಿಟ್ಟನು. ಅವನ ಜೊತೆಯವನು ಈ ಕುಡುಕನ ಮೇಲೆ ಬಿದ್ದು ಹೊಡೆಯುತ್ತಿರುವಾಗ್ಯೆ ಅವನ ಕಡೆಯವರು ಸೋಲ್ಜರುಗಳು ಬಂದು ಸಿಪಾಯಿಗಳ ಮೇಲೆ ಸಣ್ಣ ಯುದ್ಧ ಮಾಡಿದರು. ಅಧಿಕಾರಿಗಳು ಜಾಗ್ರತೆಯಲ್ಲಿ ಹೋಗಿ ಆ ಕಲಹವನ್ನು ಅಡಗಿಸದೆ ಇದ್ದಲ್ಲಿ ಮಹಾಗಲಭೆಯು ಹುಟ್ಟಿ ದೊಡ್ಡದಾಗುತ್ತಿತ್ತೆಂದು ಒಬ್ಬ ಪತ್ರಿಕೆಯವರು ಬರೆಯುತ್ತಾರೆ.

ವಿಲಾಯತಿಯಲ್ಲಿ ಮಿ॥ ದಾದಾಭಾಯಿ ನವರೋಜಿಯವರನ್ನು ಫಿನ್ಸ್‌ಬರಿ ಡಿಸ್ಟ್ರಿಕ್ಟ್‌ನವರು ತಮ್ಮ ತರಫಿನ ಪಾರ್ಲಿಮೆಂಟ್ ಮೆಂಬರಾಗಿ ಚುನಾಯಿಸಿದ್ದರೆಂದು ತಿಳಿಸಿದ್ದೆವಷ್ಟೆ. ಹಾಗೆ ಅವರನ್ನು ಚುನಾಯಿಸಿದ್ದರಲ್ಲಿ ಅನೇಕ ತಪ್ಪುಗಳು ಇವೆ ಎಂತಲೂ, ಅವರಿಗೆ ಬದಲಾಗಿ ತನಗೆ ಆ ಪದವಿಯು ಬರಬೇಕಾಗಿತ್ತೆಂತಲೂ, ಒಬ್ಬ ಕ್ಯಾಪ್ಟನ್ ಪೆನ್‌ರೋಸ್ ರವರು ನವರೋಜಿಯವರ ಮೇಲೆ ದಾವಾ ಹಾಕಿದ್ದ ಮೊಕದ್ದಮೆಯು ಕಳೆದ ತಿಂಗಳು ೨೭ ನೇ ತಾರೀಖಿನಲ್ಲಿ ವಜಾಮಾಡುವಾಗ, ಮಾಡಿದ ಕೃಪೆಯಿಂದ ಪೂರ್ಣ ಸಹಾಯ ಕೊಡುವೆನೆಂದರಿಂದಲೂ, ಬಿಟ್ಟುಬಿಡುವ ಸಮಯವಾಗಿ ಸಹವೃದ್ಧರಿಂದಲೂ ಮೊಕದ್ದಮೆಯನ್ನು ಡಿಸ್ಮಿಸ್ ಮಾಡಿಬಿಟ್ಟರು. ಆದದರಿಂದ ಈಗ ಮಿ॥ ದಾದಾಭಾಯಿ ನವರೋಜಿಯವರು ನಿಸ್ಸಂದೇಹವಾಗಿಯೂ ಪಾರ್ಲಿಮೆಂಟ್ ಮೆಂಬರಾಗಿರುತ್ತಾರೆಂದು ಸ್ಥಿರಪಟ್ಟಿತು. ಈ ಸಂತೋಷವನ್ನು ತೋರ್ಪಡಿಸುವದಕ್ಕಾಗಿ ಅಲ್ಲಿನ ಹಿಂದುಗಳು ನವರೋಜಿಯವರಿಗೆ ಬಂದು ಭಾರೀ ಸಭೆಯಲ್ಲಿ ಗೌರವವಾದ ಒಂದು ಬಲ್ಲೆಯು ಮಾಲೆಯನ್ನು ಹಾಕಿದರು. ಈ ವರ್ತಮಾನವು ನಮ್ಮ ಹಿಂದೂಸ್ಥಾನದಲ್ಲಿ ಸಕಲರಿಗೂ ಸಂತೋಷವನ್ನುಂಟುಮಾಡುವದರಲ್ಲಿ ಸಂದೇಹವಿರಲಾರದು.

ಬಳ್ಳಾರಿಯಲ್ಲಿ ಒಬ್ಬ ಬಡ ಬ್ರಾಹ್ಮಣನು ಹಣಕ್ಕಾಗಿ ಮತ್ತೊಬ್ಬ ತನ್ನ ೧೦ ವರುಷದ ಹೆಣ್ಣು ಮಗಳನ್ನು ಕೊಟ್ಟು ಒಬ್ಬ ಯವ್ವನಸ್ಥನಿಗೆ ಮದುವೆ ಮಾಡಿದ್ದನು. ಆದರೆ ಆ ಯುವನು ಮದುವೆಯಾದ ೩-೪ ವರುಷಗಳಲ್ಲಿ ಮೃತಿಹೊಂದಿದನು. ಅದಾಗ್ಯೂ ಕಷ್ಟಾಕ್ರಾಂತರ್ನು ತನ್ನ ಅತ್ತೆಯ ಮನೆಯಲ್ಲಿ ೮-೬ ವರುಷಗಳವರೆಗೂ ಇದ್ದು ಅಲ್ಲಿನ ಕಷ್ಟಗಳನ್ನು ಸಹಿಸಲಾರದೆ ಅಲ್ಲಿಂದ ತಂದೆ ಮನೆಯಗೆ ಬಂದಳು. ಅಷ್ಟರಲ್ಲಿ ತಾಯಿಯು ಕಾಲವಾಗಿದ್ದಳು. ತಂದೆಯು ಅತಿ ಬಡವನಾಗಿದ್ದದರಿಂದ ಭಿಕ್ಷಾಟನದಿಂದ ತನ್ನ ಮನಸ್ಸಿನ ದುಃಖವನ್ನು ನೀಗುತ್ತಿದ್ದನು. ಕೆಲವು ದಿವಸಗಳ ಒಳಗೆ ಹಸುಗೂಸಾದ ಕೃಷ್ಣಮ್ಮನೆಂಬ ಬಾಲವಿಧವೆಯು ಧೈರ್ಯವಾಗಿ ಪುನಃಸ್ಸಂಬಂಧವನ್ನು ಮಾಡಿಕೊಂಡದ್ದನ್ನು ನೋಡಿ ಸುಮಾರು ೨೦ ವರುಷದ ಕಾಮಾಕ್ಷಮ್ಮನೂ ಪುನರ್ವಿವಾಹ ಮಾಡಿಕೊಂಡು ಸಂಸಾರ ಮಾಡಬೇಕೆಂಬ ಕುತೂಹಲ ಭರಿತಳಾಗಿದ್ದಳು. ಅವಳ ನೆರೆಮನೆಯಲ್ಲಿ ಚಿತ್ತೂರು ಸುಬ್ಬರಾಮಯ್ಯನೆಂಬುವನಿದ್ದನು. ಆತನು ಬೆನಗೊಂಡೆಯ ಮುನ್ಸೀಫ್ ಕೋರ್ಟಿನಲ್ಲಿ ಒಬ್ಬ ನೌಕರನಾಗಿಯೂ, ೩೫ ವರುಷ ವಯಸ್ಸಿನವನಾಗಿಯೂ ಮೊದಲನೇ ಹೆಂಡತಿಯನ್ನು ಕಳೆದುಕೊಂಡವನಾಗಿಯೂ, ಈಗ ಪುನರ್ವಿವಾಹ ಮಾಡಿಕೊಳ್ಳಬೇಕೆಂಬ ಇಚ್ಛೆಯುಳ್ಳವನಾಗಿಯೂ ಇದ್ದನು. ಇವರಿಬ್ಬರಿಗೂ ಪರಸ್ಪರ ಮಾತುಗಳು ನಡೆದು ಕಡೆಗೆ ಅಲ್ಲಿನ ಕೆಲವು ಮಂದಿ ಹಿರಿಯ ದೊಡ್ಡ ಮನುಷ್ಯರುಗಳ ಮಧ್ಯಸ್ಥದಿಂದಲೂ, ಸಹಾಯ ಸಂಪತ್ತುಗಳಿಂದಲೂ ಇವರಿಬ್ಬರಿಗೂ ಮದುವೆಯು ನಿಷ್ಕರ್ಷೆಯಾಗಿ ಕಳೆದ ಭಾನುವಾರ ಅಂದರೆ ಜನವರಿ ಗುರುಸ್ತಾ ತಾರೀಖಿನ ದಿವಸ ಮದುವೆ ಜರುಗಿತು.

ಶಾಲೀವಾಹನಶಕ ೧೮೧೪ ನೇ ನಂದನನಾಮ ಸಂವತ್ಸರದ ಪುಷ್ಯ ಬಹುಳ ದಶಮಿ ಗುರುವಾರದಿಂದ ಮಾಘ ಶುದ್ಧ ಪಾಡ್ಯಮಿ ಬುಧವಾರದ ವರೆಗಿನ ವಾರದ ಪಂಚಾಂಗ

೧೮೯೩ ನೇ ಇಸವಿ ಜನವರಿ

ತಾ.	ವಾರ.	ತಿಥಿ.	ಘಳಿಗೆ.	ನಕ್ಷತ್ರ	ಘಳಿಗೆ.	ಮುಸಲ ಮಾಸ ತೇದಿ
12	ಗು.*	ದ.	35-51	ವಿ	39-5	1
13	ಶು.	ಏ	14-27	ಅನು.	39-44	2
14	ಶ.	ದ್ವಾ	19-41	ಜ್ಯೇ.	60-0	3
15	ರ.	ತ್ರ	54-13	ಜ್ಯೇ.	5-14	4
16	ಸೋ.	ಚ	57-18	ಮೂ	11-5	5
17	ಮಂ.	ಅ.	59-50	ಪೂ.	15-21	6
18	ಬು	ಪಾ	60-0	ಉ	15-35	7

* ಉತ್ತರಾಯಣ ಪುಣ್ಯಕಾಲ; ಸಂಕ್ರಾಂತಿ ಹಬ್ಬ

ಪೇಟೆ ಧಾರಣೆ.

ದವಸ	ಮೈಸೂರು	ಬೆಂಗಳೂರು
	ರೂ. ಅ. ಪೈ.	ರೂ ಅ ಪೈ.
ಕಡ್ಡೀ ಅಕ್ಕಿ ಪಲ್ಲ ೧ಕ್ಕೆ ..	೧೨-೬-೦	೧೨-೨-೨
ಕೆಂಪುಕಡ್ಡಿ ಅಕ್ಕಿ ಅಸ್ವಲ್ ..	೧೧-೨-೦	೧೧-೮-೦
ಜಿಡ್ಡೀ ಅಕ್ಕಿ ದುಮ್ಮು	೧೨-೮-೦	೧೧-೦-೦
ಜಾವಾಳಿ ಅಕ್ಕಿ	೧೨-೧೨-೦	೧೧-೬-೦
ಸಂಣಕ್ಕಿ ಅಸ್ವಲ್	೧೪-೮-೦	೧೪-೮-೦
ಜಿಡ್ಡೀ ಅಕ್ಕಿ ದುಮ್ಮು	೧೩-೦-೦	೧೧-೮-೦
ತೊಗರಿಬೇಳೆ ಪಲ್ಲ ೧ಕ್ಕೆ	೧೨-೮-೦	೧೨-೦-೦
ಜಿಡ್ಡೀ ದುಮ್ಮು ತರಹ ..	೧೦-೪-೦	೧೦-೦-೦
ಪೈರಾಗಿ ಪಲ್ಲ ೧ಕ್ಕೆ ..	೭-೮-೦	ಗು ೪-೬-೦
ಕಾರಾಗಿ	೪-೪-೦	ಔ ೨೯-೦-೦
ಹಲಸಂದೆ ಪಲ್ಲ ೧ಕ್ಕೆ ..	೯-೦-೦	೧೦-೦-೦
ಬಿಳೀ ಅವರೆ	೧೧-೮-೦	೯-೮-೦
ಹೆಸರು	೧೦-೨-೦	೧೧-೮-೦
ಉದ್ದು	೧೦-೮-೦	೯-೦-೦
ಕಡಲೆ	೧೧-೮-೦	೧೦-೮-೦
ಎಳ್ಳು	೧೫-೪-೦	೧೧-೮-೦
ಹುರಳಿ	೬-೪-೦	೬-೦-೦
ನೆಲಗಡಲೆಯ ಮಣ ೧ಕ್ಕೆ ..	೧-೮-೦	೧-೧೦-೦
ಮೆಣಸಿನಕಾಯಿ	೨-೧೨-೦	೨-೮-೦
ದುಮ್ಮು ತರಹ	೨-೮-೦	೨-೩-೦
ಹೆಚ್ಚು ದೊಡ್ಡ ಉಪ್ಪು ೧೦೦ ಸೇರ್ಗೆ	೪-೧೨-೦	ಮ ೧-೧೦-೦
ಸಣ್ಣುಪ್ಪು	೪-೪-೦	ಡ॥ ೧-೬-೦
ಬೆಳ್ಳುಳ್ಳಿ ಮಣ ೧ಕ್ಕೆ ..	೪-೨-೦	೪-೮-೦
ಹರಳೆಣ್ಣೆ	೪-೦-೦	೩-೧೨-೦
ಕೊತ್ತಂಬರಿ ಪಲ್ಲ ೧ಕ್ಕೆ	೯-೮-೦	೬-೧೨-೦
ಉಪ್ಪು	೯-೬-೦	೧೦-೬-೦
ಹರಳೆಣ್ಣೆ ಮಣ ೧ಕ್ಕೆ	೧-೪-೦	೧-೮-೦
ಹಳೇ ಹುಣಿಸೇಹಣ್ಣು	೧-೦-೦	೧-೩-೦
ತುಪ್ಪ	೧೪-೧೨-೦	೧೨-೮-೦
ಸೀಮೆ ಎಣ್ಣೆ ಡಬ್ಬಿ ೧ಕ್ಕೆ	೪-೫-೩	೪-೯-೦
ತೆಂಗಿನಕಾಯಿ ೧೦೦ಕ್ಕೆ ..	೪-೦-೦	೩-೮-೦
ಬೆಲ್ಲ (ಪೌ)		
ಕೆಂಪು	೧೬-೮-೦	೧೬-೮-೦
ಹಸಿರು	೧೬-೧೨-೦	೧೬-೧೫-೦
ಗಟ್ಟಿ	೨೬-೧೨-೦	೨೫-೦-೦

Mysore.—Printed and published for the Proprietor at the Wesleyan Mission Press.
12/1/93.

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು | ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೬ | ಮೈಸೂರು ಸನ್ ೧೮೯೩ ನೇ ಇಸವಿ ಜನವರಿ ತಾರೀಖು ೧೯ ನೇ ಗುರುವಾರ. | ಸಂಖ್ಯೆ ೩

HEALTH, WEALTH & PROSPERITY.

ಜೆ. ಬಿ. ನಾಯಿಕ ಕಂಪನಿಯ

ಮಿಂಚಿನ ಉಂಗುರ, ಪದಕ, ಬಳೆ, ಲೇಬಿನ್,

ಕೊರಳಪಟ್ಟಿಗಳು

೭೫,೦೦೦ ಕ್ಕೆ ಮೇಲೆ ಮಾರಿ ವವು. ನಿತ್ಯ ಹೊಸಹೊಸ ಬರ್ಜಾಗ ಹತ್ತಿರುತ್ತವೆ.

ಗುಣ ಬಂದ ಬಗ್ಗೆ ಸಾ ರು ಪಾಟಲಗಳು ದೊರೆದಿರು ತ್ತವೆ. ಹಾಗೂ ದೊರೆಯು ತ್ತವೆ.

ರಕ್ತವು ಮನುಷ್ಯನ ಜೀವನಮಾರ್ಗ ಮತ್ತು ವಿದ್ಯುಚ್ಛಕ್ತಿಯು ರಕ್ತದ ಜೀವನಾಧಾರ.

ರಕ್ತವು ಕೆಟ್ಟದ್ದರಿಂದ ಆಗುವ ಎಲ್ಲ ರೋಗ, ಅಶಕ್ತತೆ, ಸಂಧಿವಾತ, ಶಿರಾಗತವಾತ, ಹೊಟ್ಟೆಯಲ್ಲಿ ವಾಯು ಬದ್ಧಗೋಣ, ಮೂಲರೋಗ, ಕೈ ಕಾಲು ಹರಿಯೋಣ, ಭ್ರಾಂತಿ ಬೇನೆ, ಕಲಿಯದ ಬೇನೆ, ಎಲ್ಲ ತರದ ಜ್ವರ, ಉರಿತಳ ರೋಳಿ, ತಲೆಶೂಲಿ, ಮಲಾವರೋಧ, ಎದೆಯಲ್ಲಿ ಉರಿಯೋಣ ಮತ್ತು ನೋಯೋಣ, ಕೊರಳ ಬಾವು, ಎಲ್ಲ ತರದ ಮೂಲವ್ಯಾಧಿ, ನಿದ್ರೆ ಹತ್ತದಿರೋಣ, ಮೂತ್ರಾಶಯದೊಳಗಿನ ರೋಗ, ಕೆಮ್ಮು, ದಮ್ಮು, ಗಜಕರ್ಣ, ತ್ವಚವಿಕಾರ, ಮೇಹ ಮತ್ತು ಇತರ ರೋಗಗಳು, ಇದನ್ನು ಉಪಯೋಗಿಸುವದರಿಂದ ನೆಟ್ಟಗಾಗುತ್ತವೆಂಬದು ಜಗಪ್ರಸಿದ್ಧವದೆ. ಕೊರಳ ಪಟ್ಟಿ—ಸಣ್ಣ ಹುಡುಗರಿಗೆ ಹಲ್ಲು ಬರುವಾಗ ವೇದನೆಯಾಗದೆ ಹಲ್ಲು ಬರುವವು. ಲೇಬಿನ್—ಕೈ ನಡುಗುವಿಕೆ, ಸ್ಮರಣ ಶಕ್ತಿಯು ಬಗ್ಗೆ. ಔಷಧ ಉತ್ತಮ, ಗುಣಕಾರ, ಸರ್ವ ರೋಗ ಶಾಮಕ, ದೇಹಕ್ಕೆ ಶೋಭೆ ಕೊಡುವ ಔಷಧದ ಕಿಟಿಕಿಟಿಯನ್ನು ತಪ್ಪಿಸುವ, ಈ ಜಿನಸಿಯ ಸಂಗ್ರಹ ಮಾಡದೆ ಇರಬೇಡಿರಿ, ಪ್ರತಿ ಒಂದು ಜಿನಸಿಯ ಮೇಲೆ ೮. ೬. ೧ ಗುರ್ತು ನೋಡಿ ತೆಗೆದುಕೊಳ್ಳಿರಿ. ಒಂಗಿ ಕಟ್ಟುವದು ಪ್ರಕಟ. ಪತ್ರ ವ್ಯವಹಾರ ಮರಾಠಿಯಲ್ಲಿ ಇಲ್ಲವೇ ಇಂಗ್ರೇಜಿಯಲ್ಲಿರ ಬೇಕು. ಪತ್ತೆ ಸ್ಪಷ್ಟ ಬರೆಯಬೇಕು.

ಕ್ರಯವು—ಹಿತ್ತಾಳೆಯ ಉಂಗರಕ್ಕೆ ಒಂದುವರೆ ರೂ. ಬೆಳ್ಳಿಯ ಉಂಗರಕ್ಕೆ ೩ ರೂ. ಭಂಗಾರದ ಉಂಗರಕ್ಕೆ ೨೦ ರೂ. ಹಿತ್ತಾಳೆಯ ಪದಕಕ್ಕೆ ಒಂದುಕಾಲು ರೂ. ಬೆಳ್ಳಿಯ ಪ. ಕ್ಕೆ ೨ ರೂ. ಭಂಗಾರದ ಪ. ಕ್ಕೆ ೨೨ ರೂ ಮತುಗಳ ಬಳಗೆ ಒಂದುವರೆ ರೂ. ಲೇಬಿನಿಗೆ ಒಂದುವರೆ ರೂ. ರೇಷ್ಮೆ ಕೊರಳ ಪಟ್ಟಿಗೆ ಒಂದುವರೆ ರೂ ಒಮ್ಮೇಲೇ ೧೨ನಗ ತೆಗೆದು ಕೊಂಡರೆ ೧ ಹೆಚ್ಚು ಸಿಗುವದು. ರೋಬಹಣ ಬಂದರೆ ಅಥವಾ ವಿ ಪೇಬಲ ಬೇಡಿದರೆ ಕಳಿಸುವೆವು. ಉಂಗರ ತರಿಸುವವರು ಬೆರಳಿನ ಸುತ್ತಳತೆ ಕಳುಹಿಸರಿ. ಅನೇಕ ಬೇನೆಗಳ ಮೇಲೆ ಗುಣ ಬಂದ ಬಗ್ಗೆ ಡಾಕ್ಟರ, ವೈದ್ಯ, ಪತ್ರಕರ್ತ ಮುಂತಾದವರ ಸರ್ಟಿಫಿಕೇಟಿನ ವಾ ಏಜಂಟ ವ್ಯಾಪಾರಿ ದರದ ಪುಸ್ತಕ ೬ ಪೈ ಕಳುಹಿಸಿದರೆ ಕಳಿಸುವೆವು. ಮಾಲು ತೆಗೆದುಕೊಂಡರೆ ಪ್ರಕಟ ಕಳುಹಿಸುವೆವು. ೧ ರಿಂದ ೬ ವರೆಗೆ ಟಿ. ಪಿ. ೬ ಆಣೆ.

ಜೆ. ಬಿ. ನಾಯಿಕ ಮತ್ತು ಕಂಪನಿ, ಬ್ಯಾಕಳಾ, ಹಳೇದಾಮನ್ ಎದುರು, ಮುಂಬಯಿ.

ವೃತ್ತಾಂತ ಪತ್ರಿಕೆ.

ಚಂದಾ ನಿರ್ಣಯ.

—

	ರೂ ಆ ಪೈ.
ಸ್ಥಳದವರಿಗೆ ವರ್ಷ ೧ಕ್ಕೆ	೧—೦—೦
ಪರಸ್ಥಳದವರಿಗೆ ವರ್ಷ ೧ಕ್ಕೆ	೧—೧೨—೦
ಬಿಡಿ ಪತ್ರಿಕೆ ೧ಕ್ಕೆ	೦—೦—೩

ಈ ಪತ್ರಿಕೆಯು ಮೈಸೂರು ರಾಜಧಾನಿಯಲ್ಲಿ ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ, ಪ್ರಕಟಿಸಲ್ಪಡುವದು ಬಡವರು ಮೊದಲುಗೊಂಡು ಸಮಸ್ತರಿಗೂ ಸುಲಭಸಾಧ್ಯವಾಗುವಂತೆ ಈ ಪತ್ರಿಕೆಗೆ ಇಷ್ಟು ಅಲ್ಪ ಮೌಲ್ಯವನ್ನು ನಿರ್ಣಯಿಸಿರುತ್ತೇವೆ ಈ ಪತ್ರಿಕೆಯನ್ನು ಅಪೇಕ್ಷಿಸುವವರು ಚಂದಾ ಹಣವನ್ನು ಮುಂಗಡವಾಗಿ ಕೊಡಬೇಕು.

ಪ್ರಕಟನೆಯ ನಿರ್ಣಯ.

	ರೂ ಆ ಪೈ
ಮೊದಲನೇ ಆವರ್ತಿ ಪಙ್ತಿ ೧ಕ್ಕೆ	೦—೨—೦
ಎರಡನೇ ಆವರ್ತಿ ಪಙ್ತಿ ೧ಕ್ಕೆ	೦—೧—೦

ಅನಂತರ ಪ್ರತಿಯೊಂದು ವಾರದಲ್ಲಿಯೂ ಪಙ್ತಿ ೧ಕ್ಕೆ ೧ ಆಣೆಯಂತೆಯೇ ಲೆಕ್ಕ ಮಾಡಲ್ಪಡುವುದು ಕಂಟ್ರಾಕ್ಟಿಗೆ ಕೊಡಬೇಕೆಂದಿರುವವರು ಎಡಿಟರಿಗೆ ಬರೆದು ದರವನ್ನು ತಿಳಿದು ಬಹುದು

ಎಡಿಟರ್,

ವೃತ್ತಾಂತ ಪತ್ರಿಕೆ,

ಮೈಸೂರು

ನೋಟೀಸ್.

ಪುಸ್ತಕಗಳು	ಕ್ರಯ.
ಪ್ರಾತ್ಯಾಸ್ಯ ಮಾಲಿಕೆ	1—0—0
ಕನ್ನಡ ಇಂಗ್ಲೀಷು ನಿಘಂಟು ೧ ನೇ ದೊಡ್ಡ ತರಹ	3—0—0
„ „ ೨ ನೇ ತರಹ	2—8—0
ಬಾಲಕರು ಓದುವ ಎರಡನೆ ಜ್ಞಾನೋಪದೇಶದ ಪ್ರಶ್ನೋತ್ತರಗಳು	0—1—0
ಸಭೆಯ ನಿಯಮಗಳನ್ನು ಕುರಿತದ್ದು	0—0—6
ಕಥಾ ಸಂಗ್ರಹ 1 ನೇ ಭಾಗದಿಂದ ೩ ವರೆಗೆ	1—0—0
ಕಥಾ ಸಂಗ್ರಹ ೪ ರಿಂದ ೬ ನೇ ಭಾಗ ಹೊಸ ಛಾಪೆ	1—0—0
„ „ ದೊಡ್ಡ ತರಹ	1—8—0
ಮನೋರಂಜಕ ಬೋಧಿನಿ	0—1—0
ಸತ್ಯವೇದವನ್ನು ಕುರಿತು 2 ನೇ ಭಾಗ	0—1—0
ಪ್ರಸಂಗಿಯ ದರ್ಪಣ	0—6—0
ಇಂಗ್ಲೀಷು ಭಾಷೆಯಲ್ಲಿಯೂ, ಕನ್ನಡ ಭಾಷೆಯಲ್ಲಿಯೂ ಶಬ್ದಗಳ ವಿಭಾಗಗಳನ್ನು ವಿವರಿಸಿರುವ ನಿಘಂಟು	0—2—0
ಕನ್ನಡ ವ್ಯಾಕರಣ (ಇಂಗ್ಲೀಷಿನಲ್ಲಿ)	2—0—0
ಹಿಂದುಸ್ಥಾನಿ ವ್ಯಾಕರಣ	1—0—0
ಬಾಲಸಂಗೋಪನವು	0—1—0
ದಶ ಕರಣಗಳ ಉಂಟುಮಾಡೋಣ ಮುಂ.ದ	0—0—6
ಕ್ರೈಸ್ತರ ಜೋಳಿನೆಗಳ ಸಂಬಂ...	0—12—0

ಮೇಲೆ ನಮೂದಿಸಿರುವ ಪುಸ್ತಕಗಳನ್ನು ಅಪೇಕ್ಷಿಸುವವರು ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್ಸಿಗೆ ಬರೆದು ತರಿಸಿಕೊಳ್ಳಬಹುದು ಅಂಚೇ ಹಾಸಲು ಬೇರೆ ಕೊಡಬೇಕು.

ವೆಸ್ಲಿಯನ್ ಮಿಷನ್ ಪ್ರೆಸ

ಮೈಸೂರು

ನೋಟೀಸ್.

		ಕ್ರಯ			ಟಪಾಲು ಸಹಿತವಾಗಿ		
Campbell's	ಕನ್ನಡ ವ್ಯಾಕರಣ ಸಾರ	೦	೨	೦	೦	೨	೬
Object Lessons.	ವಸ್ತು ಪಾಠಗಳು	೦	೧	೦	೦	೧	೬
Picture do	ಚಿತ್ರಗಳು ಸಹಿತವಾಗಿ	೦	೨	೦	೦	೨	೬

ಈ ಮೂರು ಪುಸ್ತಕಗಳು ಪ್ರೈಮರಿ ಶಾಲೆಗಳಲ್ಲಿ ಓದತಕ್ಕ ಪುಸ್ತಕಗಳು.

ಸ್ತ್ರೀಯರು ಓದತಕ್ಕ ಪುಸ್ತಕ	೦	೪	೦	೦	೪	೬
ಗಣಿತ ವಿದ್ಯೆ ..	೦	೮	೦	೦	೮	೬
ಗಣಿತ ಮಗ್ಗಿಗಳು ..	೦	೧	೦	೦	೧	೬
ಸಂಸ್ಕೃತ ಕರ್ನಾಟಕ ಭಾಷಾಮಂಜರಿ	೦	೨	೦	೦	೨	೬
ಭೂಗೋಳ ಶಾಸ್ತ್ರ ಪ್ರಶ್ನೋತ್ತರ	೦	೨	೦	೦	೨	೬
ಇಂಗ್ಲಿಷೂ ಕನ್ನಡವೂ ಶಬ್ದಾವಳಿ ೧ನೇ ೨ನೇ ಭಾಗಗಳು	೦	೧	೦	೦	೧	೬
ಕಾವ್ಯಮಾಲೆ (Minor Poetical Anthology)	೦	೭	೦	೦	೭	೬
ಬಾಲವ್ಯಾಕರಣ ..	೦	೪	೦	೦	೪	೬
ಹಳಗನ್ನಡ ವ್ಯಾಕರಣ ಸೂತ್ರಗಳು	೦	೬	೦	೦	೬	೬
ಇಂಗ್ಲಿಷೂ ಕನ್ನಡವೂ ಸಂಭಾಷಣಾ ವಾಕ್ಯಗಳು	೦	೧೦	೦	೦	೧೦	೬
ಶಬ್ದಮಣಿ ದರ್ಪಣ ..	೧	೬	೦	೧	೮	೬
Kan Eng Pocket Dictionary	೧	೮	೦	೧	೪	೬
Eng Kan School Dictionary	೨	೧೦	೦	೨	೧೨	೬
ಬಿಸ್ಕೋ ಹಾದಿ ..	೦	೮	೮	೦	೮	೬
ಆತ್ಮಿಕ ವಿಷ್ಯ ಯುದ್ಧ (Bunyan)	೦	೧೨	೦	೦	೧೪	೬
ಕ್ರೈಸ್ತ ಪದ್ಧತಿ ೧ ನೇ ಭಾಗ ೨ ಆಣೆ ೩ ನೇ ಭಾಗ	೦	೧	೬	೦	೨	೦
ಭಕ್ತಿ ಸಾರ ..	೦	೧	೦	೦	೧	೬
ಸತ್ಯ ವಾಗ್ವಾದಿ	೦	೧	೦	೦	೧	೬
ಕಾವ್ಯಪುಂಜ ..	೦	೩	೦	೦	೩	೬

A new Edition of the Geography suited for the Lower Secondary Examination is now ready.—Edited by Rev. H. Gulliford. Price 6 As.

ಮೇಲೆ ನಮೂದಿಸಿರುವ ಪುಸ್ತಕಗಳನ್ನು ಬೆಂಗಳೂರು ದಂಡಿನ ಕೋಗಾಟನ ಹತ್ತಿರವಿರುವ ಪುಸ್ತಕ ಶಾಲೆಯಲ್ಲಿ ಪಡೆಯ ಬಹುದು.

ಜಾಹೀರಾತು

THE KANARA & MYSORE TRADING AGENCY
BOMBAY.

ಕೋಗಿ ಕಂಪು ಕೊಡುವ

ಚಂದ್ರಕಾಂತ ಶಿಲೆಯ ಕಂಠಹಾರಗಳು.

೩॥ ರೂಪಾಯಿ ಕೆಳಗಿನ ಕ್ರಯದವು ನಮ್ಮಲ್ಲಿಸಿಗಲಾರವು.

ಸಾಧಾರಣ	೩॥ ರೂಪಾಯಿ	ಪಚ್ಚ ಕೇಸಿನಲ್ಲಿ
ಮಧ್ಯಮ	೫ „	ಬಹಳ ಕೇಸಿನಲ್ಲಿ
ಉತ್ತಮ	೬॥ „	ರೇಷ್ಮೆ ಕೇಸಿನಲ್ಲಿ
ಭಂಗಾರದಲ್ಲಿ ಕಟ್ಟಿದ್ದು	೧೮ „	ಹಾಗೇ

ಪಿಲೆಯ ಘಡಿಯಾರವು.

ಕ್ರಯ ೭॥ ರೂಪಾಯಿ.

ಈ ಘಡಿಯಾರಕ್ಕೆ ಕಡಿಮೆ ಕ್ರಯವಾದರೂ, ಕಡಿಮೆ ಕ್ರಯದ ಘಡಿಯಾರಗಳಲ್ಲಿರುವ ಅಲ್ಪ ದೋಷಗಳು ಇರುವದಿಲ್ಲ. ವ್ಯಾಪಾರವನ್ನು ಬಳಿಕ ಬರುವಂಥದ್ದು

ಸಿಂಗಿ ಮುತ್ತು.

ಪ್ರತಿ ಒಡಿ ೧ ಕ್ಕೆ ೨॥ ರೂಪಾಯಿ ಕ್ರಯವು ಒಡಿಯಲ್ಲಿ ೧೦೦, ೧೨೦, ೧೫೦, ೧೭೦, ಈ ರೀತಿ ಮುತ್ತುಗಳಿರುವವು ಒಟ್ಟಿಗೆ ೫ ಒಡಿಗಳನ್ನು ತೆಗೆದುಕೊಂಡರೆ ೧ ರೂಪಾಯಿ ಕಡಿಮೆ ಮಾಡುವರು. ಕೊಳ್ಳುವವರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬೇಕು.

ಮ್ಯಾನೇಜರ,

ಕೆನರಾ ಎಂಡ್ ಮೈಸೂರ ಟ್ರೇಡಿಂಗ ಏಜನ್ಸಿ ಆಫೀಸ್, ಮುಂಬಯಿ.

ಸದರನ್ ಮಹರಾಷ್ಟ್ರ ರೈಲ್ವೆ.

(ಮೈಸೂರು ಮತ್ತು ಕೋಲಾರಪುರದ ಸ್ಟೇಟ್ ರೈಲ್ವೇಗಳು ಸಹ.)

ನೋಟೀಸ್.

ಟ್ರೇನುಗಳ ಬದಲಾವಣೆ.

ಸನ್ ೧೮೯೩ನೇ ಇಸವಿ ಜನವರಿ ತಾರೀಖು ೨೨ ರಲಾಗಾಯಿತು ಮೈಸೂರಿಂದ ಪೂನಯಾಕಣ್ಣ, ಮತ್ತು ಅಲ್ಲಿಂದ ಮೈಸೂರಿಗೂ ಹೋಗಿ ಬರುವ ಮೇಲ್ ಟ್ರೇನಿನ ಕಾಲನಿಯಮಾಕವನ್ನು ಕೆಳಗೆ ತಿಳಿಸುವ ಪ್ರಕಾರ ಗೊತ್ತು ಮಾಡಲ್ಪಟ್ಟಿರುತ್ತೆ.

		ಘಂ.	ನಿ.			ಘಂ.	ನಿ.
ಬೊಂಬಾಯಿ ಜಿ. ಐ. ಪಿ. ರೈಲ್ವೆ ಹೊರಡುವದು	..	೧೪	೪೦	ಮೈಸೂರು ..	ಬಿಡುವದು	೩	೪೫
ಪೂನಾ ಜಂಕ್ಷನ್ ಹೊರಡುವದು.	..	೨೧	೧೨	ಬೆಂಗಳೂರು ..	"	೧೪	೫೬
ವಾಠಾರ ಮಹಾಬಳೇಶ್ವರ ಹೊರಡುವದು.	..	೧	೩೬	ಹುಬ್ಬಳ್ಳಿ ಜಂಕ್ಷನ್ ..	"	೮	೨೦
ಬೆಳಗಾವ ಹೊರಡುವದು	..	೧೧	೩೪	ಧಾರವಾಡ ..	"	೯	೧೭
ಧಾರವಾಡ "	..	೧೬	೫೫	ಬೆಳಗಾವ ..	"	೧೪	೧೭
ಹುಬ್ಬಳ್ಳಿ ಜಂಕ್ಷನ್ "	..	೧೭	೫೯	ವಾಠಾರ ಮಹಾಬಳೇಶ್ವರ "	"	೦	೨೭
ಬಂಗಳೂರು "	..	೧೨	೨೭	ಪೂನಾ ಜಂಕ್ಷನ್ ..	ತಲಪುವದು	೫	೫
ಮೈಸೂರು "	..	೧೯	೪೫	ಬೊಂಬಾಯಿ ಜಿ. ಐ. ಪಿ. ರೈಲ್ವೆ ..	"	೧೧	೧೫

ಕೃಷ್ಣಾ ಕೆನಾಲ್ ಟರ್ಮಿನಸ್ಸಿನಿಂದ ಗುಂಟಕಲ್

ಜಂಕ್ಷನವರಿಗೆ ಹೋಗಿಬರುವ

ಟ್ರೇನುಗಳ ಕಾಲ.

		ಘಂ.	ನಿ.			ಘಂ.	ನಿ.
ಕೃಷ್ಣಾ ಕೆ. ಟಿ. ..	ಬಿಡುವದು	೯	೨೫	ಬಳ್ಳಾರಿ ..	ಬಿಡುವದು	೫	೪
ಗುಂಟೂರು ..	"	೨೧	೨೫	ಮದರಾಸ ಮ. ರೈಲ್ವೆ ..	"	೧೮	೦
ಕಂಭಂ ..	"	೬	೦	ಗುಂಟಕಲ್ ಜಂಕ್ಷನ್ ..	"	೮	೧೫
ಕರ್ನೂಲರೋಡ ..	"	೧೫	೧೨	ಕರ್ನೂಲರೋಡ ..	"	೧೩	೪೭
ಗುಂಟಕಲ್ ಜಂಕ್ಷನ್ ..	ತಲಪುವದು	೯	೦	ಕಂಭಂ ..	"	೨೧	೨೫
ಮದರಾಸ ಮ. ರೈಲ್ ..	"	೮	೦	ಗುಂಟೂರು ..	"	೭	೨೫
ಬಳ್ಳಾರಿ ..	"	೨೨	೧೭	ಕೃಷ್ಣಾ ಕೆ. ಟಿ ..	ಸೇರುವದು	೬	೧೦

ಅದಲ್ಲದೆ ಸದರ್ನ ಮಹರಾಷ್ಟ್ರ ರೈಲ್ವೆ ಲೈನಿನ ಲೋಕಲ್ ಮಿಕ್ಸಡ ಮತ್ತು ಅನೇಕ ಇತರ ಟ್ರೇನುಗಳ ಕಾಲಗಳನ್ನು ನಾನಾ ತರವಾಗಿ ಬದಲಾಯಿಸಲ್ಪಟ್ಟಿರುತ್ತೆ. ಈ ಬದಲಾವಣೆಗಳನ್ನು ಆಯಾ ಸ್ಟೇಷನ್ನುಗಳಲ್ಲಿ ಹಚಿಟಾಯಿಸಲ್ಪಟ್ಟಿರುವ ಕಾಲನಿಯಮಾಕ ಪಟ್ಟಿಗಳಿಂದ ತಿಳಿಯಬಹುದು.

Traffic Manager's office,
Dharwar, 14th January. 1893.

W. M. Steuart,
offg. Traffic. Manager.

ವಿಶೇಷ, ನೋಡಿನೋಡಿ! ನೋಡಿನೋಡಿ!! ನೋಡಿನೋಡಿ!!!

೧೮೯೩ ನೇ ವರುಷದ ಲೋವರ ಸೆಕಂಡರಿ ಪರೀಕ್ಷೆಯ ಟೆಕ್ಸ್ಟಿನ ನೋಟ್ಸು.

ಈ ಪರೀಕ್ಷೆಗಾಗಿ ನಿಯಮಿಸಲ್ಪಟ್ಟ ಸೋಮೇಶ್ವರಶತಕ, ಪದ್ಯಸಾರದ ೧೨೧—೨೦೩ ಗೂ ಇರುವ ಪದ್ಯಗಳೂ, ಕನ್ನಡ ಭಾರತ ಕಥಾಸಂಗ್ರಹ ಸಭಾಪರ್ವ: ಇವುಗಳಿಗೆ ಅನ್ವಯ, ಅರ್ಥ, ತಾತ್ಪರ್ಯ, ಅನುವಾದ, ವ್ಯಾಕರಣ ಸಂಗತಿಗಳು, ವಾಕ್ಯವಿಭಜನೆ, ಪ್ರಾರ್ಥನೆ, ಇವೇ ಮೊದಲಾದವುಗಳನ್ನು ವಿವರಿಸಿ ವ್ಯಾಖ್ಯಾನವು ಚಿಕ್ಕಮಗಳೂರು ಇಂಗ್ಲೀಷ್ ಹೈಸ್ಕೂಲ್ ಪಂಡಿತರಾದ ಎ. ರಾಘವೇಂದ್ರಾಚಾರ್ಯರಿಂದ ಬರೆಯಲ್ಪಟ್ಟು ಈ ಮುದ್ರಾಶಾಲೆಯಲ್ಲಿ ಪ್ರಿಂಟಾಗುತ್ತಲಿದೆ. ಈ ನೋಟ್ಸು ಗೌರ್ನಮೆಂಟ್ ಪ್ರತಿಗನುಸಾರವಾಗಿ ಇದೆ. ಕಾಪಿಗಳು ಸ್ವಲ್ಪವಾಗಿಯೇ ಪ್ರಿಂಟು ಮಾಡುವುದರಿಂದ ಅಪೇಕ್ಷೆಯುಳ್ಳವರು ಜಾಗ್ರತೆಯಾಗಿ ಜನವರೀ ತಿಂಗಳೊಳಗಾಗಿ ಈ ಕೆಳಗಿನ ವಿಳಾಸದಾರರಿಗೆ ಬರೆದು ತರಿಸಿಕೊಳ್ಳಬಹುದು. ಕ್ರಯ ೮ ಆಣೆ. ಪೋಸ್ಟೇಜು ೧ ಆಣೆ. ಮತ್ತು ಆದಿಪರ್ವ, ಸಭಾಪರ್ವ, ವಿರಾಟಪರ್ವ, ಭೀಷ್ಮಪರ್ವ, ದ್ರೋಣಪರ್ವ, ಶಲ್ಯಪರ್ವ, ಸುಪ್ತಿಕಪರ್ವ, ಸ್ತ್ರೀಪರ್ವ, ಶಾಂತಿಪರ್ವ— ರಾಜಧರ್ಮ, ಆಪದ್ಧರ್ಮ, ಮೋಕ್ಷಧರ್ಮ ಈ ಪರ್ವಗಳು ಪ್ರಿಂಟಾಗಿ ವಿಕಲ್ಪಕ್ಕೆ ಸಿದ್ಧವಾಗಿವೆ. ಈಗ ಅನುಶಾಸನೀಕಪರ್ವವು ಪ್ರಿಂಟಾಗುತಲಿದೆ. ಇಷ್ಟಪಟ್ಟವರು ತರಿಸಿಕೊಳ್ಳಬಹುದು.

ಎಂ. ರುದ್ರಪ್ಪ ಅಂಡಿಸನ್,
ಪ್ರೊಪ್ರೈಟರ್, ಶ್ರೀ ಮಹಾಲಿಂಗೇಶ್ವರ ಪ್ರೆಸ್,
ಅವೆನ್ಯೂ ರೋಡ್, ಬೆಂಗಳೂರು.

ವೃತ್ತಾಂತ ಪತ್ರಿಕೆ.

೧೮೯೩ ನೇ ಇಸವಿ ಜನವರಿ ತಾ|| ೧೯ ನೇ ಗುರುವಾರ

ಕಲ್ಕತ್ತೆಯ ಆರ್ಯಬಾಲಿಕಾ ಪಾಠಶಾಲೆ.

ನಮ್ಮ ಶ್ರೀಮನ್ಮಹಾರಾಜರವರು ಈಗ ಕಲ್ಕತ್ತೆಗೆ ದಯಮಾಡಿಸಿರುತ್ತಾರಷ್ಟೆ. ಈ ಭರತ ಖಂಡಕ್ಕೆ ರಾಜಧಾನಿಯಾದ ಕಲ್ಕತ್ತೆಯಲ್ಲಿರತಕ್ಕ ಆರ್ಯಬಾಲಿಕಾ ಪಾಠಶಾಲೆಯ ಮ್ಯಾನೇಜರುಗಳು, ಆ ಪಾಠಶಾಲೆಯ ಪರೀಕ್ಷೆಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿನಿಯರಿಗೆ ಬಹುಮಾನಗಳನ್ನು ಕೊಡುವದಕ್ಕೋಸ್ಕರ ಒಂದು ಸಭೆಯನ್ನು ಏರ್ಪಡಿಸಿ, ಮದರಾಸಿ ಬಿಷಪ್ಪರಾದ ಮ|| ರಾ|| ಎ. ನರಸಿಂಹಯ್ಯಂಗಾರ್ಯರವರನ್ನು ಅಗ್ರಾಸನವನ್ನು ವಹಿಸಬೇಕೆಂದು ಕೇಳಿಕೊಂಡರು. ಇವರು ಆ ಸಭೆಗೆ ಅಧ್ಯಕ್ಷರಾಗಿ ಆಯಾ ಕಾರ್ಯಗಳನ್ನು ನಡೆಸಿಕೊಟ್ಟಿದ್ದಲ್ಲದೆ, ಅಲ್ಲಿ ಒಂದು ಉಪನ್ಯಾಸವನ್ನು ಮಾಡಿದರು. ಆ ಉಪನ್ಯಾಸದಲ್ಲಿ ಅವರು ಹೇಳಿದ್ದೇನೆಂದರೆ:—

"ಈಗ ನಡೆಯುತಕ್ಕ ಬಾಲಕರ ವಿದ್ಯಾಭ್ಯಾಸ ಕ್ರಮವು ಸಮರ್ಪಕವಾಗಿ ಇಲ್ಲ. ಈ ವಿದ್ಯಾಭ್ಯಾಸವು ಅನ್ನವನ್ನು ಸಂಪಾದಿಸಿಕೊಳ್ಳುವದಕ್ಕೆ ಮಾತ್ರವೇ ಸಾಧಕವಾಗಿರುತ್ತದೆ. ಅದು ಒಳ್ಳೇ ಶೀಲಸ್ವಭಾವಗಳನ್ನು ಸಂಪೂರ್ಣವಾಗಿ ಸ್ಥಿರಪಡಿಸತಕ್ಕದ್ದಕ್ಕೆ ಸಾಧಕವಾಗಿಲ್ಲ. ಜರ್ಮನೀ ಮತ್ತು ವಿಲಾಯತೀ ದೇಶಗಳಲ್ಲಿ ವಿದ್ಯಾರ್ಥಿಗಳು ಹೊಂದುವಹಾಗೆ ಸಂಪೂರ್ಣವಾದ ವಿದ್ಯಾಭ್ಯಾಸವನ್ನು ಈ ದೇಶದ ವಿದ್ಯಾರ್ಥಿಗಳು ಹೊಂದುವದಿಲ್ಲ. ಬಾಲರ ವಿದ್ಯಾಭ್ಯಾಸವಾದರೋ, ಉದರ ಪೋಷಣಾರ್ಥವಾಗಿ ಆಗತಕ್ಕದ್ದಲ್ಲ. ಅವರ ವಿದ್ಯಾಭ್ಯಾಸವು ಸಂಪೂರ್ಣವಾದದ್ದಾಗಿಯೂ, ಶುದ್ಧವಾದದ್ದಾಗಿಯೂ ಇರಬೇಕು. ನಮ್ಮಲ್ಲಿ ಉತ್ತಮವರ್ಣಾಶ್ರಮಕ್ಕೆ ಸೇರಿದ ಜನಗಳ ನಡತೆಗಳು ಅತ್ಯಂತ ನಿರ್ಮಲವಾಗಿಯೂ, ಆರೋಗ್ಯಶಾಸ್ತ್ರಕ್ಕನುಗುಣವಾಗಿಯೂ ಇರುವದು ಪ್ರಸಿದ್ಧವಾಗಿಯೇ ಇದೆ. ಅಂಥಾ ಆಚರಣೆಗಳಲ್ಲಿ ನಮ್ಮ ಬಾಲೆಯರಿಗೆ ಆಸಕ್ತಿಯನ್ನು ಉಂಟುಮಾಡುವದಲ್ಲದೆ, ಆರೋಗ್ಯಶಾಸ್ತ್ರವನ್ನೂ, ಹಿರಿಯರಲ್ಲಿ ಮರ್ಯಾದೆಯನ್ನೂ, ಪಾತಿವ್ರತ್ಯವನ್ನೂ ಮೊದಲಾದ ಕುಟುಂಬಕ್ಕೆ ಸೇರಿದ ಸದ್ಗುಣಗಳನ್ನೂ, ಪಾಕವಿಚಾರದಲ್ಲಿ ನೈಪುಣ್ಯವನ್ನೂ, ಹಿರಿಯರಲ್ಲಿ ಗುರುತ್ವವನ್ನೂ, ಅವರಿಗೆ ನಾವು ಉಂಟುಮಾಡಬೇಕು. ಇವುಗಳನ್ನೆಲ್ಲಾ ಸಾಧ್ಯವಾದಷ್ಟು ಈಗಿನ ವಿದ್ಯಾಭ್ಯಾಸವು ಇಂಥಾ ಸಾಧ್ಯವನ್ನುಂಟುಮಾಡತಕ್ಕದ್ದಾಗಿ ಇದೆ. ಹಿರಿಯರಿಂದ ಶಾಸ್ತ್ರವನ್ನು ಕಲಿತುಕೊಂಡು, ಅವರಲ್ಲಿ ಭಕ್ತಿಯನ್ನು ಸ್ಥಿರವಾಗಿರುವದಕ್ಕೋಸ್ಕರ ಅವರಿಗೆ ಶಾಸ್ತ್ರವನ್ನು ಬಾಲ್ಯದಲ್ಲೇ ಕಲಿಸಬೇಕು. ರಾಮಾಯಣ, ಮಹಾಭಾರತ, ಇವೇ ಮೊದಲಾದ ಪುರಾಣ ಗ್ರಂಥಗಳಿಂದ ನೀತಿಬೋಧಕವಾದ ಭಾಗಗಳನ್ನು ತೆಗೆದು ಅವರಿಗೆ ಕಲಿಸಬೇಕು. ಅವುಗಳು ಬಾಲೆಯರ ಮನಸ್ಸಿಗೆ ಸುಲಭವಾಗಿ ಗೊತ್ತಾಗುವದಲ್ಲದೆ, ಮನೆಯಲ್ಲಿರತಕ್ಕ ಹಿರಿಯರ ವಿಷಯದಲ್ಲಿ ಗೌರವವನ್ನು ಉಂಟುಮಾಡುತ್ತದೆ. ದೇಶಾಂತರಗಳಲ್ಲಿ ಪ್ರಸಿದ್ಧರಾದ ಮಹಾತ್ಮರೂ ಮತ್ತು ಮಹಾ ಯೋಗಿನಿಯರೂ, ಇವರ ಚರಿತ್ರೆಗಳನ್ನು ನಮ್ಮ ಬಾಲೆಯರಿಗೆ ಉಪದೇಶಿಸುವದರಿಂದ ಪ್ರಯೋಜನವಿಲ್ಲ. ರಾಜನಾದ ಅರ್ಥರ ಎಂಬವನು ಥಾಮಸ್ ನ ಇವುಗಳ ವಿಸ್ತಾರವಾಗಿ ಹೇಳುವದಕ್ಕಿಂತ ರಾಮ, ಸೀತೆ, ಗಂಗಾ ಮೊದಲಾದವರ ವಿಷಯದಲ್ಲಿ ಹೇಳಲ್ಪಡತಕ್ಕ ಸಂಗತಿಗಳು ಬಾಲೆಯರಿಗೆ ಮನೋಹರವಾಗಿರುತ್ತವೆ. ಬಾಲೆಯರ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಪ್ರಯತ್ನಗಳು ಬಹಳ ಶ್ಲಾಘ್ಯವಾದವುಗಳು. ಈ ಪ್ರಯತ್ನಗಳಲ್ಲಿ ನಾವು ಉದಾಸೀನರಾಗಿರುವದರಿಂದ ನಮ್ಮ ದೇಶವು ಇಂಥಾ ಹೀನಸ್ಥಿತಿಯಲ್ಲಿದೆ. ಈ ಭಾಗದಲ್ಲಿ ನೀವು ಮಾಡತಕ್ಕ ಪ್ರಯತ್ನವು ಶ್ಲಾಘ್ಯವಾದದ್ದು. ಈ ಪ್ರಯತ್ನಗಳಿಗೆ ತಕ್ಕ ಫಲಗಳನ್ನು ನೀವು ಹೊಂದುವಿರಿ" ಎಂದು ಅಪ್ಪಣೆ ಕೊಡಿಸಿದರು.

ಈ ಸಂಸ್ಥಾನದಲ್ಲಿ ದಿವಾನರು ಒಪ್ಪಿರುವದನ್ನು ಸ್ತ್ರೀ ವಿದ್ಯಾಭ್ಯಾಸದ ವಿಷಯದಲ್ಲಿ ಅವರಿಗಿರತಕ್ಕ ಉತ್ಸಾಹವನ್ನು ತಿಳಿಯದವರು ಯಾರೂ ಇಲ್ಲ. ದೂರದೇಶದಲ್ಲಿ ಈ ಸಂಸ್ಥಾನದ ಬಾಲಿಕಾ ವಿದ್ಯಾಭ್ಯಾಸದ ವಿಷಯದಲ್ಲಿ ಗೌರವವುಂಟಾಗುವಂತೆ ಇವರು ಮಾಡಿದ ಉಪನ್ಯಾಸಕ್ಕಾಗಿ ನಾವು ಸಂತೋಷಿಸುವೆವು. ಆದರೆ ಬಾಲಿಕಾ ವಿದ್ಯಾಭ್ಯಾಸವನ್ನು ಸ್ಥಾಪಿಸುವದರಲ್ಲಿ ಬಾಲರ ವಿದ್ಯಾಭ್ಯಾಸದ ವಿಷಯದಲ್ಲಿ ನಿಕೃಷ್ಟವಾಗಿ ಇವರು ಆಡತಕ್ಕ ಮಾತುಗಳಿಗಾಗಿ ಶೋಚಿಸಬೇಕಾಗಿದೆ. ಬಾಲಕರ ವಿದ್ಯಾಭ್ಯಾಸವು ಹ್ಯಾಗೆ ಅಸಮರ್ಪಕವಾದ ಸ್ಥಿತಿಯಲ್ಲಿದೆಯೋ, ಉದರ ಪೋಷಣಾರ್ಥವಾಗಿ ವಿದ್ಯಾಭ್ಯಾಸ ಮಾಡತಕ್ಕದ್ದು ಹ್ಯಾಗೆ ಸಂಭವಿಸುವದೋ, ಅದು ಶ್ರೀಮನ್ಮಹಾರಾಜರು ಸುಮಾರು ಬಾಲಿಕಾ ಪಾಠಶಾಲೆಯ ಕಾರ್ಯದರ್ಶಿತ್ವದಿಂದ ನಿವೃತ್ತಿ ಮಾಡಲ್ಪಟ್ಟ ನಮ್ಮ ದಿವಾನರು ಒಪ್ಪಿರುವರ ಘನವಾದ ಚಿತ್ತಕ್ಕೇ ವೇದ್ಯವಾಗಿರಬಹುದು. ನಮಗಾದರೋ ಬಾಲರ ವಿದ್ಯಾಭ್ಯಾಸವು ಅಸಮರ್ಪಕವಾದದ್ದೆಂದೂ, ಅದನ ಅಪೂರ್ಣವಾದದ್ದೆಂದೂ, ಬಾಲೆಯರ ವಿದ್ಯಾಭ್ಯಾಸನೋಜನೆ ಮೇಲೆ ನಿಸೆಳಿಟಿನರೆ ತೋರುವದಿಲ್ಲ. ಸ್ತ್ರೀ ವಿದ್ಯಾಭ್ಯಾಸದ ವಿಷಯದಲ್ಲಿ ಅತ್ಯಂತ ಅಭಿಮಾನದಿಂದ ಪ್ರತಿನಿಧಿಗಳಾದವರಿಗೆ ಹೀಗೆ ತೋರುವದೇನು ಎಂಬುದೋ ನಮಗೆ ತಿಳಿಯದು. ಗುರು ಹಿರಿಯರಲ್ಲಿ ಭಕ್ತಿಯೂ, ಆರೋಗ್ಯಸೂತ್ರಗಳ ವಿಷಯದಲ್ಲಿ ಜ್ಞಾನವೂ, ಸಕಾಲದಲ್ಲಿ ಸ್ನಾನವೂ, ಗೃಹಕೃತ್ಯಕ್ಕೆ ಸಂಬಂಧಪಟ್ಟ ಧರ್ಮಗಳಲ್ಲಿ ಆಸಕ್ತತೆಯೂ, ಪಾಕಮಾಡುವದರಲ್ಲಿ ಶಕ್ತಿಯೂ ಇವುಗಳೆಲ್ಲಾ ಅವಶ್ಯವಾದವುಗಳೇ ಹೌದು. ಈ ಗುಣಾತಿಶಯಗಳನ್ನು ದಿವಾನರು ಒಪ್ಪಿರುವರ ಮೇಲುವಿಚಾರಣೆಗೆ ಶ್ರೀಮನ್ಮಹಾರಾಜ್ಞಿಯವರ ಬಾಲಿಕಾ ಪಾಠಶಾಲೆಯು ಅಧೀನವಾಗಿದ್ದಾಗ ಎಷ್ಟರ ಮಟ್ಟಿಗೆ ಬಾಲೆಯರು ಸಂಪಾದಿಸಿಕೊಂಡಿದ್ದರೋ, ಆ ವಿಷಯವು ಈ ಉಪನ್ಯಾಸವನ್ನು ಮಾಡುವಾಗ ಇವರ ಮನಸ್ಸಿಗೆ ಸ್ಫುರಿಸಲೋ ಇಲ್ಲವೋ ನಮಗೆ ತಿಳಿಯದು. ಸಕಲ ವಿದ್ಯೆಗಳೂ ಪ್ರಯೋಜನಕಾರಿಗಳಾಗಿಯೂ, ಉದರಭರಣಕ್ಕಾಗಿಯೂ ಅನಂತರ ಒಳ್ಳೇ ಶೀಲಸ್ವಭಾವಗಳ ಅರ್ಜನೆಗಾಗಿಯೂ ಇರುವವು. ಬಾಲರ ವಿದ್ಯಾಭ್ಯಾಸವನ್ನು ಅಪೂರ್ಣವಾದದ್ದೆಂದು ನಮ್ಮ ದಿವಾನರು ಒಪ್ಪಿರುವರು ಹೇಳುತ್ತಾರೆಯೋ, ಅದನ್ನು ಅಪೂರ್ಣವಾಗಿ ಯಾವರೂ ಅವರು ಸಂಪಾದಿಸದೆ ಇದ್ದರೆ, ಇಂಥಾ ಪ್ರತಿಷ್ಠೆಯು ಅವರಿಗೆ "ಉತ್ತಿತ್ತೋ" ಇಲ್ಲವೋ ಅವರೇ ಭಾವಿಸಿಕೊಳ್ಳಬಹುದು. ಈ ಉಪನ್ಯಾಸದ ವೇಳೆಯಲ್ಲಿ ಬಾಲರ ವಿದ್ಯಾಭ್ಯಾಸವು ಒಳ್ಳೇ ಶೀಲಸ್ವಭಾವಗಳನ್ನು ಸ್ಥಿರಪಡಿಸತಕ್ಕದ್ದಾಗಿ ಇಲ್ಲವೆಂದು ಇವರು ಹೇಳುವದಕ್ಕೆ ಏನೋ ಒಂದು ಕಾರಣವಿರಬಹುದು. ಆ ಕಾರಣವು ಬಹುಶಃ ಅಪೂರ್ಣವಾದ ವಿದ್ಯಾಭ್ಯಾಸವನ್ನು ಪಡೆದಿರತಕ್ಕ ಅವರಿಗೂ ವರ್ತಿಸಬಹುದೋ ಏನೋ ತಿಳಿಯದು. ಅದು ಹ್ಯಾಗಾದರೂ ಇರಲಿ. ಈ ಮಾತಿನಲ್ಲಿ ವಾಸ್ತವವು ಬಹಳ ದೂರದವರೆಗೂ ಇರುವದೆಂದು ನಾವು ನಂಬಿ ಇದ್ದೇವೆ. ಈ ವಾಸ್ತವಾಂಶದಿಂದಲೇ ಬಾಲೆಯರಿಗೆ ಈಗ ಕೊಡುತ್ತಲಿರುವ ವಿದ್ಯಾಭ್ಯಾಸಕ್ಕೆ ಸಂಪೂರ್ಣವಾದ ಫಲವು ಉಂಟಾಗುತ್ತಲಿಲ್ಲವೆಂದು ಅನೇಕರು ಭಾವಿಸುತ್ತಾರೆ. ಈ ತಾತ್ಪರ್ಯವನ್ನು ಪ್ರದರ್ಶನ ಮಾಡಿದ್ದಕ್ಕಾಗಿ ನಾವು ಒಪ್ಪಿರುವರಿಗೆ ಕೃತಜ್ಞರಾಗಿದ್ದೇವೆ.

ಚಾಕಚಾಣಿ ಮತ್ತು ನಾಲಿಗೆ.

ದೊಡ್ಡ ದೊಡ್ಡ ಹಡಗುಗಳನ್ನು ಸಣ್ಣ ಚಾಕಚಾಣಿಯಿಂದ ಜನರು ತಮ್ಮ ಮನಸ್ಸು ಬಂದ ದ್ವೀಪಕ್ಕೂ ದೇಶಕ್ಕೂ ನಡೆಸಿಕೊಂಡುಹೋಗುತ್ತಾರಷ್ಟೆ. ಸಣ್ಣ ಚಾಕಚಾಣಿಯನ್ನು ಅಲಕ್ಷ್ಯ ಮಾಡಿ ತಮ್ಮ ಇಷ್ಟಪ್ರಕಾರ ಬಿಟ್ಟರೆ ಅವರಿಂದ ಹಡಗಿಗೂ ಅದರಲ್ಲಿ ಇರುವ ಜನರಿಗೂ ಹಾನಿ ಸಂಭವಿಸುವದು.

ಅದೇರೀತಿಯಲ್ಲಿ ಪೂರ್ವಕಾಲದಲ್ಲಿ ಒಂದು ದೊಡ್ಡ ಹಡಗದಲ್ಲಿ ಸಾವಿರಾರು ಜನರು ಪ್ರಯಾಣ ಮಾಡುತ್ತಾ ಇದ್ದರು. ಜನರು ಬೇರೆಬೇರೆ ದ್ವೀಪಗಳಲ್ಲಿ ಇಳಿಯುವದೂ ಹತ್ತುವದೂ ಉಂಟಷ್ಟೆ. ಹಡಗು ನಡಿಸುವವನಿಗೆ ಸ್ವಲ್ಪ ನಿದ್ರೆಯುಂಟಾಗಲು ಯಾರೋ ಒಬ್ಬ ಮನುಷ್ಯನು ತನ್ನ ಆಟದಲ್ಲಿ ಚಾಕಚಾಣಿಯನ್ನು ಮೇಲೆ ಹಾಕಲು ಅದು ವಕ್ರವಾಗಿ ಹೋಗಿ ದೊಡ್ಡ ಬಂಡೆಗೆ ತಗಿ ಒಡೆದುಹೋಯಿತು. ಕೂಡಲೇ ನೀರು ಒಳಗೆ ನುಗ್ಗಿ ಜನರನ್ನೂ ಸಾಮಾನುಗಳನ್ನೂ ಮುಳುಗಮಾಡಿತು. ಚಾಕಚಾಣಿ ಚಿಕ್ಕದಾದರೂ ದೊಡ್ಡ ಹಡಗನ್ನು ನಷ್ಟಮಾಡಿತು. ಅದರ ಅದನ್ನು ಜೋಪಾನವಾಗಿ ನೋಡಿಕೊಂಡಿದ್ದರೆ ಜನರೂ ಹಡಗವೂ ನಷ್ಟ ಆಪತ್ತಿಗೆ ಗುರಿಯಾಗುತ್ತಿರಲಿಲ್ಲ.

ಅದೇರೀತಿಯಲ್ಲಿ ಒಬ್ಬ ಮುಖ್ಯ ಮನುಷ್ಯನಿಗೂ ಸಂಭವಿಸುತ್ತದೆ. ಮನುಷ್ಯರ ದೇಹವೆಂಬ ಹಡಗವನ್ನು ನಾಲಿಗೆಯು ನಡಿಸುತ್ತದೆ. ನಮ್ಮ ಶರೀರದಲ್ಲಿರುವ ಅವಯವಗಳಲ್ಲಿ ಈ ನಾಲಿಗೆಯು ಚಿಕ್ಕ ಅಂಗವಾಗಿದೆ. ಈ ನಾಲಿಗೆಯಿಂದಲೇ ತಕ್ಕಮಟ್ಟಿಗೆ ಜನರ ಗುಣದೋಷ ಗೊತ್ತಾಗುತ್ತದೆ. ಜನರು ಈ ನಾಲಿಗೆಯನ್ನು ಬಿಗಿಯಾಗಿ ಹಿಡಿಯದೆ ಸಡಲ ಬಿಟ್ಟರೆ ಅದು ಹೇಳಕೂಡದನ್ನು ನಷ್ಟವನ್ನು ಮಾಡುತ್ತದೆ. ಅನೇಕ ಮನುಷ್ಯರು ನಾಲಿಗೆ ಅಲ್ಪವಾದದ್ದು. ಅದನ್ನು ಬಿಗಿ ಹಿಡಿಯುವದು ಕಷ್ಟವಲ್ಲ ಎಂದು ಹೇಳಬಹುದು. ಆದರೆ ಯೋಚನಾಪರರು ಅದನ್ನು ಸಹಾ ಮಾಡುವದು ಕಷ್ಟವೆಂದು ತಿಳಿದುಕೊಳ್ಳುತ್ತಾರೆ. ಸತ್ಯವೇದವೂ ಸಹ ನಾಲಿಗೆಯನ್ನು ಸರಿಯಾಗಿ ನಡಿಸುವದು ಕಷ್ಟವೆಂದು ಹೇಳುತ್ತದೆ. ಚಾಕಚಾಣಿಯ ಸಹಾಯದಿಂದ ಹಡಗವನ್ನು ಎಲ್ಲರೂ ನಡೆಸಬಹುದು; ಆದರೆ ಸಿಂಹ, ವ್ಯಾಘ್ರ, ಮೊದಲಾದ ಇವುಗಳನ್ನೂ ತನ್ನ ಸ್ವಾಧೀನಕ್ಕೆ ತರಬಹುದು. ಆದರೆ ನಾಲಿಗೆಯನ್ನು ತಡೆಯುವದು ಕಷ್ಟ.

ಈ ನಾಲಿಗೆಯು ಅನರ್ಥವನ್ನು ಹುಟ್ಟಿಸುತ್ತದೆ. ಅನೇಕಸಾರಿ ಇತರರನ್ನು ಕುಂದು ದೂಷಿಸುತ್ತದೆ. ನಾನು ಶ್ರೀಮಂತನು, ಯೋಗ್ಯನು ನಂಬಿಕೆಯುಳ್ಳವನು. ಇತರರು ಹೀನರೂ, ಅಯೋಗ್ಯರೂ, ಕೆಲಸಕ್ಕೆ ಬಾರದವರೂ ಆಗಿದ್ದಾರೆಂದು ಹೇಳುತ್ತದೆ. ಪಿತ್ತಲಾಟವಾಡಿ ಜನರನ್ನು ಕೆಡಿಸುವದು, ಸುಳ್ಳು ನುಡಿಯುವದು, ಚಾಡಿ ಹೇಳುವದು, ಬಹುನಿಂದ್ಯವಾದ ಮಾತುಗಳನ್ನು ಆಡುವದು ಯಾವದರಿಂದ? ನಾಲಿಗೆಯಿಂದಲೇ ಅಲ್ಲವೇ? ಈ ನಾಲಿಗೆಯಿಂದ ಆಡುವ ಮಾತುಗಳಿಂದ ಅನೇಕ ಜನರು ಕೋಪವುಳ್ಳವರಾಗಿ ಜಗಳವಾಡುವರು. ಹೆಂಡತಿ ಮಕ್ಕಳನ್ನು ಹೊಡೆಯುವರು. ಅನೇಕರು ಕಣ್ಣೀರನ್ನು ಸುರಿಸಿ ದೇವರ ಮುಂದೆ ಮೊರೆಯಿಡುತ್ತಾರೆ. ಇದು ಸ್ನೇಹಿತರನ್ನು ಅಗಲಿಸುತ್ತದೆ. ಸಂಬಂಧವನ್ನು ಕೆಡಿಸುತ್ತದೆ. ದೇವರನ್ನೂ, ಮನುಷ್ಯರನ್ನೂ ದೂಷಿಸುತ್ತದೆ. ಈ ಪ್ರಕಾರ ಕೇಡನ್ನು ಮಾಡುವ ನಾಲಿಗೆಯು ಉರಿಯುವ ಬೆಂಕಿಯ ಹಾಗಿದೆ ಎಂದು ಸತ್ಯವೇದವು ಹೇಳುತ್ತದೆ. ಬೆಂಕಿಯ ಗುಣ ಎಲ್ಲರಿಗೂ ಗೊತ್ತಿದ್ದದ್ದೇ. ಅದು ಸಿಕ್ಕಿದ ಮರಗಳನ್ನೆಲ್ಲಾ ಸುಟ್ಟುಬಿಡುತ್ತದೆ. ಒಂದು ಕಾಡಿನಲ್ಲಿ ಬೆಂಕಿಯನ್ನು ಹತ್ತಿಸಿದರೆ ಆ ಕಾಡನ್ನೆಲ್ಲಾ ದಹಿಸಿಬಿಡುತ್ತದೆ. ಅದೇರೀತಿಯಲ್ಲಿ ನಾಲಿಗೆ ಸುತ್ತುಮುತ್ತಲು ಇರುವ ಜನರನ್ನೆಲ್ಲಾ ಕೆಟ್ಟತನದಿಂದ ನಾಶನಮಾಡುತ್ತದೆ. ಇಷ್ಟು ಚಿಕ್ಕ ನಾಲಿಗೆಯು ಎಷ್ಟು ದೊಡ್ಡ ಕೇಡನ್ನಾದರೂ ಮಾಡುತ್ತದೆ. ನಾಲಿಗೆಯನ್ನು ಸಡಲ ಬಿಡದೆ ಎಚ್ಚರಿಕೆಯಿಂದ ಆಳ್ವದರೆ ಅದು ಬಹು ಪ್ರಯೋಜನವನ್ನು ಮಾಡುತ್ತದೆ.

ಹ್ಯಾಗೆಂದರೆ ಚಾಕೂಕೆಯು ಚೆನ್ನಾಗಿದ್ದರೆ ಬಹು ಜನರನ್ನು ಸಂಪಾದನೆಗಳನ್ನೂ ಅದೇಯುವಿಲ್ಲದೆ ಕಾಪಾಡುತ್ತದೆ. ಅದರಿಂದ ಬಡವರಿಗೆ ನಾನಾ ಪ್ರಯೋಜನಗಳನ್ನು ಉಂಟುಮಾಡುತ್ತದೆ. ಹಾಗೆಯೇ ನಮ್ಮ ನಾಲಿಗೆ ಬಹಳ ಪ್ರಯೋಜನಕಾರಿಯಾಗಬೇಕಾದರೆ ಒಳ್ಳೇ ಮಾತುಗಳನ್ನು ಆಡಬೇಕು. ಜಗಳ ಹುಟ್ಟಿಸುವ ಮತ್ತು ಕೋಪವೆಬ್ಬಿಸುವ ಮಾತುಗಳನ್ನು ಆಡಬಾರದು. ಕೆಟ್ಟದಕ್ಕೆ ಬದಲು ಒಳ್ಳೇದಕ್ಕೆ ನಾಲಿಗೆಯನ್ನು ಉಪಯೋಗಿಸಬೇಕು. ಪ್ರೀತಿಹುಟ್ಟಿಸುವ, ಸ್ನೇಹ ಬೆಳಸುವ ಮಾತನ್ನು ಅಥವಾ ದೇವರ ಚಿತ್ತಕ್ಕೆ ಮೆಚ್ಚಿಕೆಯಾಗಿರುವ ಮಾತುಗಳನ್ನು ಆಡಬೇಕು. ಅಂಥಾ ವಿಷಯದಲ್ಲಿ ಯಾವ ತಪ್ಪಿದರೂ ಇರಬಾರದು. ಸೃಷ್ಟಿಕರ್ತನು ಈ ನಾಲಿಗೆಯನ್ನು ಯಾಕೆ ಕೊಟ್ಟಿರುತ್ತಾನೆ? ಆತನಿಗೆ ರಾತ್ರಿ ಹಗಲು ಸ್ತೋತ್ರಮಾಡಲೂ ನೆರೆಯವರೊಂದಿಗೆ ಒಳ್ಳೇ ಸಂಭಾಷಣೆ ಮಾಡಿ ಜನರ ಪ್ರೀತಿಗೆ ಆಧಾರವಾಗಲೂ ಉಂಟುಮಾಡಿರುತ್ತಾನಲ್ಲವೆ? ಈ ನಾಲಿಗೆಯಿಂದ ದೇವರ ಹೆಸರನ್ನು ಉಚ್ಚರಿಸಿ ದೇವರ ಸೃಷ್ಟಿಗಳನ್ನು ದೂಷಿಸಿ ಬಿಡುವರು ಸೃಷ್ಟಿಕರ್ತನಿಗೆ ಪ್ರಿಯರಾದಾರೆ? ಎಂದಿಗೂ ಇಲ್ಲವಲ್ಲ. ಈ ನಾಲಿಗೆಯಿಂದ ಒಳ್ಳೇದು ಹೊರಡಬೇಕೆಂಬುವದೇ ಆತನ ಅಭಿಪ್ರಾಯವಾಗಿದೆ. ಎರಡು ನಾಲಿಗೆಗಳನ್ನು ದೇವರು ಕೊಟ್ಟಿದ್ದರೆ ಒಂದರಿಂದ ಆತನನ್ನು ಹೊಗಳಿ ಮತ್ತೊಂದರಿಂದ ದೂಷಿಸಬಹುದು. ಆದರೆ ದೇವರು ಒಂದು ನಾಲಿಗೆಯನ್ನು ಮಾತ್ರ ನಮಗೆ ಕೊಟ್ಟಿರುವದರಿಂದ ಒಳ್ಳೇದಕ್ಕೆ ಮಾತ್ರ ಅದನ್ನು ಉಪಯೋಗಿಸಬೇಕು. ಈ ಲೋಕದಲ್ಲಿ ನಾವು ಯಾವ ಭಾವ ಮಾತುಗಳನ್ನು ಆಡಿ ಎಂತೆಂಥಾ ಕೇಡನ್ನು ಮಾಡುತ್ತೇವೋ ಅದನ್ನು ಭಗವಂತನು ನ್ಯಾಯವಿಚಾರಣೆಯ ಕಾಲದಲ್ಲಿ ವಿಚಾರಿಸಿ ತಕ್ಕ ಶಿಕ್ಷೆಯನ್ನು ನಮಗೆ ಕೊಡುವದರಲ್ಲಿ ಸಂಶಯವಿಲ್ಲ.

ದೇವರ ಚಿತ್ತದಿಂದಲೇ ನಮ್ಮ ನಾಲಿಗೆಯನ್ನು ಸ್ವಾಧೀನಕ್ಕೆ ತರಬಹುದು. ಆತನ ಭಯಭಕ್ತಿ ನಮ್ಮಲ್ಲಿರಬೇಕು. ಭಕ್ತಿಯಲ್ಲಿ ನಡೆಯ ಪ್ರಯತ್ನಿಸಬೇಕು. ಕುದುರೆಗೆ ಕಡಿವಾಣ ಹಾಕಿ ಬಿಗಿಯುವಂತೆ ದೇವರು ನಮ್ಮ ನಾಲಿಗೆಯನ್ನು ಬಿಗಿಯಬೇಕು. ಆದನ್ನು ಕುರಿತು ದೇವರನ್ನು ಪ್ರಾರ್ಥಿಸಬೇಕು. ವ್ಯರ್ಥ ಸಂಭಾಷಣೆಯು ಎಲ್ಲಿದೆಯೋ, ಸೋಮಾರಿಗಳು ಎಲ್ಲಿರುತ್ತಾರೋ ಅಲ್ಲಿರಬಾರದು. ಯೋಗ್ಯರೂ ಭಕ್ತರೂ ಇರುವಲ್ಲಿ ನಾವು ಹೋಗಿ ಅವರೊಂದಿಗೆ ಒಳ್ಳೇ ಮಾತುಗಳನ್ನು ಆಡುವದು ಒಳ್ಳೇದು.

ದೈವಜ್ಞಾನವನ್ನು ಸಂಪಾದಿಸಿ ಸಜ್ಜನರಾಗ ಯತ್ನಿಸಬೇಕು ಎಂದು ಹೇಳುವವರೆಲ್ಲರೂ ಅಲ್ಪವಾಗಿಯೂ, ಬಹಳ ಸಪ್ಪಕ್ಕೆ ಮುಖ್ಯ ಕಾರಣವಾಗಿಯೂ ಇರುವ ಈ ನಾಲಿಗೆಯನ್ನು ಸಾಧು ಮಾಡುವದಕ್ಕೆ ಪ್ರಯತ್ನಿಸುವದು ಎಷ್ಟೋ ಒಳ್ಳೇದು. ಈ ಪ್ರಕಾರ ನಾಲಿಗೆಯನ್ನು ಸ್ವಾಧೀನವಲ್ಲಿಟ್ಟುಕೊಂಡಿರುವವನು, ಸಿಂಹವನ್ನು ಸ್ವಾಧೀನಪಡಿಸಿಕೊಂಡವನಿಗಿಂತಲೂ ಅಧಿಕ ಶ್ರೇಷ್ಠನಾಗಿರುವನು. ಆದಕಾರಣ ಇಹಲೋಕದಕೀರ್ತಿಗೂ ಪರಲೋಕದ ಸಾಧನೆಗೂ ಮುಖ್ಯಕಾರಣವಾಗಿರುವ ನಾಲಿಗೆಯನ್ನು ನೆಟ್ಟಗೆ ಉಪಯೋಗಿಸುವ.

NOTICE.

೧೮೯೩ ನೇ ವರ್ಷದ ಜೂನರ್ ಸೆಕೆಂಡರಿ ಪರೀಕ್ಷಾ ಗ್ರಂಥಗಳಲ್ಲಿ ಒಂದಾದ "ಸಭಾಪರ್ವವು" ಕ್ರಯಕ್ಕೆ ಸಿದ್ಧವಾಗಿದೆ. ಬೇಕಾದವರು ಮೈಸೂರು ಹೊಸ ಅಗ್ರಹಾರದಲ್ಲಿ ಇರುವ ಮಂ. ಮ. ರಾಮಾನುಜಯ್ಯಂಗಾರ್ಯರಿಂದ ತರಿಸಿಕೊಳ್ಳಬಹುದು.

ಕ್ರಯ ಪ್ರತಿ ೧ ಕ್ಕೆ ೮ ಆಣೆ.

ಬಹುದೇಶ ವೃತ್ತಾಂತಗಳು.

ನಮ್ಮ ಸಂಸ್ಥಾನಕ್ಕೆ ಬ್ರಿಟಿಷ್ ಅಸಿಸ್ಟಂಟ್ ರೆಸಿಡೆಂಟರವರನ್ನು ನೇಮಿಸುವದಾಗಿಯೂ, ಈ ಅಧಿಕಾರವು ನಮ್ಮ ಅಸಿಸ್ಟೆಂಟ್ ಜನರಲರವರಾದ ಮೆ ॥ ಏ; ಪಿ; ಮಾಧವರಾಯರವರಿಗೆ ಕೊಡಲ್ಪಡುವದೆಂತಲೂ ಒಂದು ಪ್ರವಾದ ಹುಟ್ಟಿದೆ.

ಅಸ್ಟ್ರಿಯಾ ದೇಶದ ಆರ್ಚ್‌ಡ್ಯೂಕ್ ಫರ್ಡಿನ್ಯಾಂಡರವರು ಇಂಡಿಯಾ ದೇಶಕ್ಕೆ ಬಂದಿರುತ್ತಾರಷ್ಟೆ. ಅವರು ಬಹಳ ಮಟ್ಟಿಗೆ ಆನೆ ಆಟಗಳಿಗಾಗಿ ನಮ್ಮ ರಾಜಧಾನಿಗೆ ಬರಮಾಡುವರೆಂದು ತಿಳಿಯಲಾದವು.

ಈ ಊರಲ್ಲಿ ಬ್ರಾಹ್ಮಣವಿಧವೆಯೊಬ್ಬಳು ೧೩ ವರುಷದ ಪ್ರಾಯದ ತನ್ನ ಮಗನನ್ನು ಕೊಂಡು ಬಿಟ್ಟು ಉಪಕಾಂತನೊಡನೆ ಓಡಿಹೋದಂತೆ ತಿಳಿಯುತ್ತೇವೆ. ಇವೆಲ್ಲಾ ವಿಧವಾ ವಿವಾಹ ನಿರೋಧದಿಂದ ಉಂಟಾಗುವ ಕಟುಫಲಗಳೆಂದು ದೇಶಾಭಿಮಾನಿಗಳು ತಿಳಿಸುತ್ತಾರೆ.

ಅಮಲ್ದಾರ ಕಂಟ್ರಾಕ್ಟರುಗಳು ಅಂಗಡಿಗಳನ್ನು ಇಡಲು ಬಯಸುವವರಿಗಾಗಲಿ, ತಮ್ಮ ಹೆಸರನ್ನು ಬೇರೆ ಮಾಡುವವರಿಗಾಗಲಿ, ಅಥವ ಅನ್ಯೇತ ಇತರ ವಿಷಯಕ್ಕಾಗಲಿ ಗುದಾಯಿಸುವ ಪ್ರತಿ ಒಂದು ಅರ್ಜಿಗೂ ೧ ಆಣೆಯ ಕೋರ್ಟ್‌ ಫೀ ಸ್ಟಾಂಪನ್ನು ಹಚ್ಚಬೇಕೆಂದು ವಿಧಿಸಿರುತ್ತಾರೆ.

ಡೆಪ್ಯುಟಿ ಕಮಿಷನರುಗಳು ರೆವಿನ್ಯೂ ಬಾಬಿನಲ್ಲಿ ಹ್ಯಾಗೆ ೪೦ ರೂಪಾಯಿನವರಿಗೂ ನೌಕರರನ್ನು ನೇಮಿಸಬಹುದೆಂದು ಅಧಿಕಾರ ಕೊಡಲ್ಪಟ್ಟಿರುತ್ತಾರೋ, ಅದೇರೀತಿಯಲ್ಲಿ ಎಕ್ಸೈಸ್ ಇಲಾಖೆಯಲ್ಲಿಯೂ ಅಂಥಾ ಅಧಿಕಾರವನ್ನೇ ಪಡೆದಿರುತ್ತಾರೆಂದು ತೀರ್ಮಾನಿಸಿರುತ್ತಾರೆ.

ಇಲ್ಲಿನ ಟಿಮ್ಬರ್ ಆಫೀಸ್ ರೋಡಿನಲ್ಲಿ ಪಕ್ಕದ ಬಳಿಯ ಒಂದು ಬಾವಿಯಲ್ಲಿ ಒಬ್ಬ ಹೆಂಗಸು ನೆನ್ನೇ ಸೋಮವಾರ ಬಿದ್ದು ಸತ್ತು ಹೋದಳು. ಮುಂಗಳವಾರ ಅವಳನ್ನು ಮೇಲಕ್ಕೆ ಎತ್ತುವ ತರದುದನ್ನು ಮಾಡುತ್ತಿದ್ದರೆಂದು ಕೇಳುತ್ತೇವೆ. ಅವಳಿಗೆ ೨೫ ವರುಷ ಪ್ರಾಯವಿರುವದರಿಂದ ಇಂಥಾ ಯುವತಿಯು ಆತ್ಮಹತ್ಯ ಮಾಡಿಕೊಳ್ಳುವದಕ್ಕೆ ಏನು ಕಾರಣವಿರಬಹುದೋ ತಿಳಿಯಲಿಲ್ಲ.

ಹೈದರಾಬಾದ್ ಸಂಸ್ಥಾನದ ನೈಜಾಮರವರು ನಮ್ಮ ರಿ ವರ್ಕಶಾಪ್ ಲೆಪ್ಟಿನೆಂಟರನ್ನು ಅಲ್ಲಿ ತಮ್ಮ ದಿವಾನರನ್ನಾಗಿ ಮಾಡಿಕೊಳ್ಳಬೇಕೆಂದು ಇಷ್ಟಪಟ್ಟಿರುವರೆಂತಲೂ, ಅದಕ್ಕೆ ನಮ್ಮ ಮಹಾರಾಜರವರು ಒಪ್ಪಿದರೆ ದಿವಾನರವರಿಗೆ ಮಾಹೆಯಾನಾ ೩,೦೦೦ ರೂಪಾಯಿಗಳನ್ನು ಅಲೋವ ನ್ಸ್ ಮಾಡಿಕೊಡುವದಾಗಿ ಹೇಳಿರುವರೆಂತಲೂ ಬಹುದಿ ವರ್ತಮಾನ ಉಂಟಾಗಿದೆ.

ಫಾರೆಸ್ಟು ಇನ್ಸ್‌ಪೆಕ್ಟರ್ ಜನರಲ್‌ರವರ ಆಫೀಸಿನಲ್ಲಿರುವ ರಿ. ಲಕ್ಷ್ಮೀನಾರಾಯಣರಿಂದ ಬರೆಸಲ್ಪಟ್ಟಿರುವ "ಮೈಸೂರು ಫಾರೆಸ್ಟು ಮ್ಯಾನ್ಯುಯಲ್" ಎಂಬ ಪುಸ್ತಕಗಳ ಪೈಕಿ ೫೦ ಪ್ರತಿಗಳನ್ನು ಫಾರೆಸ್ಟು ಆಫೀಸುಗಳಿಗೂ, ೩೦ ಪ್ರತಿಗಳನ್ನು ಇತರ ಎಲ್ಲಾ ಆಫೀಸುಗಳಿಗೋಸ್ಕರವೂ ಪ್ರತಿ ಒಂದಕ್ಕೆ ೩ ರೂಪಾಯಿನ ಮೇರೆ ೧೦೦ ಕಾಪಿಗಳನ್ನು ಕೊಂಡುಕೊಳ್ಳತಕ್ಕದೆಂದು ಮಂಜೂರು ಮಾಡಿರುತ್ತಾರೆ.

ಪ್ರತಿ ಡೆಪ್ಯುಟಿಕಮಿಷನರೇ ಆಗಲಿ ಅಥವ ಅವರ ಅಸಿಸ್ಟೆಂಟುಗಳಾಗಲಿ ತಮ್ಮ ಡಿಸ್ಟ್ರಿಕ್ಟಿನೊಳಗಿದ್ದ ಎಲ್ಲಾ ಪಬ್ಲಿಕ್ ಟ್ರಿಜರಿಗಳನ್ನು ೬ ತಿಂಗಳಿಗೊಂದಾವರ್ತಿ ಹೋಗಿ ಪರೀಕ್ಷಿಸಿ ತಮ್ಮಡರವರೂ, ಕಂಟ್ರೋಲರವರು ಏನು ಕಾರಣಗಳಿಗೆ ಒಂದಾವರ್ತಿ ಡಿಸ್ಟ್ರಿಕ್ಟ ಟ್ರಿಜರಿಗಳನ್ನು ತನಿಖೆ ಮಾಡಬೇಕೆಂತಲೂ, ಆಯಾ ಕಾಲದಲ್ಲಿ ಅವರಿಗೆ ಕಂಡುಬರುವ ನ್ಯೂನತೆಗಳನ್ನು ಗೌರ್ನಮೆಂಟಿನವರಿಗೆ ತಿಳಿಯಪಡಿಸಬೇಕೆಂತಲೂ ಆರ್ಡರ್ ಮಾಡಿರುತ್ತಾರೆ.

ಕೆಲವು ಸಬ್ ಆಫೀಸುಗಳಿಂದಲೂ ಮತ್ತು ಡೆಪ್ಯುಟಿ ಕಮಿಷನರುಗಳ ಆಫೀಸುಗಳಿಂದಲೂ ಟ್ರಿಜರಿ ಕೋರ್ಟುಗಳಿಗೆ ಕಳುಹಿಸಿಕೊಡುವ ರಶೀದುಗಳು ಮತ್ತು ಪ್ಯಾಕೆಟ್ಟುಗಳು ಸರಿಯಾಗಿ ಕಟ್ಟಿ ಅಂಟಿಗೆ ಹಾಕದಿಲ್ಲವಾದ್ದರಿಂದ ಅವು ಬಿದ್ದು ಹೋಗುವದಕ್ಕೆ ಆಸ್ಪದವಾಗುತ್ತದೆಂದು ಪೋಸ್ಟ್‌ಮಾಸ್ಟರ್ ಜನರಲರವರು ಮೈಸೂರು ಸರ್ಕಾರಕ್ಕೆ ತಿಳಿಸಿದ್ದರಿಂದ ಅಂಥಾ ಎಲ್ಲಾ ಪ್ಯಾಕೆಟ್ಟುಗಳನ್ನು ಭದ್ರವಾಗಿ ಕಟ್ಟಿಯಲ್ಲಿ ಸುತ್ತಿ ಅದರ ಮೇಲೆ ಸೀಲ್ ಮಾಡಿ ರವಾನೆ ಮಾಡಬೇಕೆಂದು ಗೌರ್ನಮೆಂಟಿನವರು ಆರ್ಡರ್ ಮಾಡಿರುತ್ತಾರೆ.

ಶ್ರೀರಂಗಪಟ್ಟಣದಲ್ಲಿರುವ ಲಕ್ಷ್ಮೀನಾರಾಯಣಸ್ವಾಮಿ ದೇವಸ್ಥಾನದ ವಿಷಯದಲ್ಲಿ ಅಮಲ್ದಾರಿ ಲಕ್ಷ್ಮೀನಾರಣಪ್ಪನವರೂ ಮುಜರಾಯಿ ಗುಮಾಸ್ತೆ ಬಸವಯ್ಯ ಇವರಿಬ್ಬರೂ ಗೌರ್ನಮೆಂಟಿಗೆ ಮೋಸಕರವಾದ ಮತ್ತು ಅನ್ಯಾಯವಾದ ರೀತಿಯಲ್ಲಿ ನಡೆದುಕೊಂಡಿರುವವರ ಮೂಲಕ ಅವರಿಬ್ಬರಮೇಲೂ ಒಂದು ಕೇಸು ಏರ್ಪಾಟು ಆಗಿರುವದರಿಂದ ಅವರಿಬ್ಬರನ್ನೂ ಕೆಲಸದಿಂದ ಸಸ್ಪೆಂಡ್ ಮಾಡುವಂತೆ ಈ ತಿಂಗಳು ೧೦ ನೇ ತಾರೀಖಿನಲ್ಲಿ ಗೌರ್ನಮೆಂಟಿನವರು ಹುಕುಂ ಮಾಡಿರುತ್ತಾರೆ. ಈ ಸಂಬಂಧ ವಿಷಯದಲ್ಲಿ ಮುಖ್ಯಾಂಶಗಳನ್ನೆಲ್ಲಾ ಮುಂದಿನ ಸಂಚಿಕೆಯಲ್ಲಿ ನಮ್ಮ ವಾಚಕರಿಗೆ ತಿಳಿಯಪಡಿಸುತ್ತೇವೆ.

ಕಳೆದ ೧೩ ನೇ ತಾರೀಖಿನ ದಿನ ಶಿವಮೊಗ್ಗ ಡಿಸ್ಟ್ರಿಕ್ಟ್ ಸ್ಕೂಲ್ ಡಿಸ್ಟ್ರಿಕ್ಟ್ ಇನ್ಸ್‌ಪೆಕ್ಟರಾಗಿದ್ದ ಮ ॥ ಎ, ಸ್, ಸುಬ್ಬರಾವ್ ಬಿ, ಎ ಯವರು ಸ್ವರ್ಗಸ್ಥರಾದ ವಿಷಯವನ್ನು ವಾಚಕರಿಗೆ ತಿಳಿಸಲು ವಿಷಾದಿಸುತ್ತೇವೆ. ಇವರು ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಎಫ್; ಎ ಪರೀಕ್ಷೆಯವರಿಗೆ ಓದಿ ಮದರಾಸಿಗೆ ಹೋಗಿ ಕ್ರಿಶ್ಚಿಯನ್ ಕಾಲೇಜಿನಲ್ಲಿ ಓದಿ, ಅಲ್ಲಿ ೧೮೮೪ರಲ್ಲಿ ಬಿ, ಎ; ಪರೀಕ್ಷೆಯನ್ನು ಕೊಟ್ಟು, ಮೈಸೂರು ಮಹಾರಾಜಾ ಕಾಲೇಜಿನಲ್ಲಿಯೇ ಕೆಲವು ವರ್ಷ ಉಪಾಧ್ಯಾಯರಾಗಿದ್ದರು. ಹೋದವರ್ಷ ಇವರಿಗೆ ಡಿಸ್ಟ್ರಿಕ್ಟ್ ಇನ್ಸ್‌ಪೆಕ್ಟರ ಕೆಲಸವಾಯಿತು. ಇವರ ಅಕಾಲಮರಣದಿಂದ ದೊಡ್ಡದೊಂದು ಸಂಸಾರಕ್ಕೆ ಆಶ್ರಯವಿಲ್ಲದೆ ವಿದ್ಯಾಭ್ಯಾಸದ ಇಲಾಖೆಗೂ ಬಹಳ ನಷ್ಟವುಂಟಾಯಿತು.

ಈ ಸಂಸ್ಥಾನದ ನಾನಾ ಮ್ಯುನಿಸಿಪಾಲಿಟಿಯವರು ಸಾಲು ವರ್ಷಗಳಲ್ಲಿ ಗೌರ್ನಮೆಂಟಿಗೆ ಕಳುಹಿಸಿಕೊಡುವ ರಿಪೋರ್ಟಿನಲ್ಲಿ ಮುಂದೆ ನಮೂದಿಸುವ ವಿಷಯಗಳು ವಿವರವಾಗಿರಬೇಕೆಂದು ಗೌರ್ನಮೆಂಟಿನವರು ಹೊಸದಾಗಿ ಹುಕುಂ ಮಾಡಿರುತ್ತಾರೆ:—ಮ್ಯುನಿಸಿಪಲ್ ಮೆಂಬರುಗಳ ಮೀಟಿಂಗ್ ಮತ್ತು ಅವರ ಹಾಜರಾತಿಯ ಸ್ಟೇಟ್‌ಮೆಂಟ್; ಮ್ಯುನಿಸಿಪಲ್ ಸರಹದ್ದುಗಳಲ್ಲಿ ಉಂಟಾಗುವ ಜನನ ಮರಣಗಳ ಡಿಸ್ಪೆನ್ಸರಿ ಲೋಕಲ್‌ಫಂಡ್ ಆಸ್ಪತ್ರೆಗಳಲ್ಲಿ ಆಗುತಕ್ಕ ಖರ್ಚನ್ನೂ ಮತ್ತು ವಿಷಯಗಳನ್ನು ಪಡೆಯತಕ್ಕವರ ಸಂಖ್ಯೆಯನ್ನೂ ತಿಳಿಸುವ ಸ್ಟೇಟ್‌ಮೆಂಟು; ಮೇಲೆ ಹೇಳಿದ ವಿಷಯವನ್ನು ಸ್ಪಷ್ಟಗೊಳಿಸುವ ರಿಪೋರ್ಟು ಮತ್ತು ಪಾಠಶಾಲೆಗಳ ಅಭಿವೃದ್ಧಿಯ ರಿಪೋರ್ಟು; ಇವುಗಳಲ್ಲದೆ ಮ್ಯುನಿಸಿಪಲ್ ಹದ್ದಿನಲ್ಲೂ, ಡಿಸ್ಟ್ರಿಕ್ಟ್‌ಫಂಡ್ ವಿಷಯದಲ್ಲಿಯೂ ಇದೇ ರೀತಿಯಾದ ರಿಪೋರ್ಟು ಕಳುಹಿಸಿಕೊಡಬೇಕೆಂದು ವಿಧಿಸಿರುತ್ತಾರೆ.

ಮೈಸೂರು ಮತ್ತು ಕೋಲಾರ ಈ ಎರಡು ಡಿಸ್ಟ್ರಿಕ್ಟುಗಳು ವಿನಾ ಉಳಿದ ಅರುಡಿಸ್ಟ್ರಿಕ್ಟುಗಳಿಂದಲೂ ೧೮೯೩ನೇ ಜೂನ್ ೩೦ ಕ್ಕೆ ಮುಕ್ತಾಯವಾದ ತ್ರೈಮಾಸದಲ್ಲಿ ರೆವಿನ್ಯೂ ಡಿಪಾಜಿಟ್ಟು ಆದಾಯ ಪ್ರತಿಯಲ್ಲಿ ಇಡಲ್ಪಟ್ಟಿರುವನಾ ೩,೩೯,೭೩೧—೩—೦ ವೆಂದು ತಿಳಿಯಬರುತ್ತೆ. ಈ ರಿಪೋರ್ಟಿನಲ್ಲಿ ಪಟೇಲ್ ಶ್ಯಾನುಭೋಗರವರಿಗೆ ಸ್ವೀಕೃತವಾದ ಹೊಸಗಿ ಹಾಗು ಕೆಲವು ಸಂದರ್ಭಗಳಲ್ಲಿ ೧೮೮೮—೮೯ನೇ ಸಾಲಿನಿಂದಲೂ ಡಿಪಾಜಿಟ್ಟನಲ್ಲೆ ಉಳಿದಿರುತ್ತೆ. ಇದಕ್ಕೆ ಏನು ಕಾರಣ, ಇಂಥಾ ಮೊಬಲಗನ್ನು ಗೌರ್ನಮೆಂಟಿಗೆ ಸೇರಿಸಿಕೊಂಡು, ಅವರವರು ತಮ್ಮ ಪಕ್ಷವನ್ನು ಸ್ಥಿರಪಡಿಸಿಕೊಂಡು ಬಂದಾಗ ಅವರ ಹಣವನ್ನು ಹಿಂತಿರುಗಿ ಕೊಡತಕ್ಕದ್ದು. ಉಳಿದ ಎರಡು ಡಿಸ್ಟ್ರಿಕ್ಟುಗಳ ರಿಪೋರ್ಟುಗಳನ್ನು ತ್ವರೆಯಲ್ಲೇ ರವಾನಿಸಬೇಕಲ್ಲದೆ ಇಷ್ಟು ಸಂಚಯವಾಗುವದಕ್ಕೆ ಸರಿಯಾದ ಕಾರಣಗಳನ್ನು ತಿಳಿಸಬೇಕು ಎಂಬದಾಗಿ ಗೌರ್ನಮೆಂಟಿನವರು ಆರ್ಡರ್ ಮಾಡಿರುತ್ತಾರೆ.

ಕಳೆದ ೯೦ ನೇ ತಿಂಗಳು ಆದಿಭಾಗದಲ್ಲಿ ನಡೆದ ಲೋವರ್ ಸೆಕಂಡರಿ ಪರೀಕ್ಷೆಯ ಫಲಿತಾಂಶಗಳು ಇದುವರೆಗೂ ಕೆಲವು ಮಾತ್ರ ತಿಳಿಯಲಾದವು. ಮಧ್ಯಾಹ್ನ ಪ್ರಸದ ಇಂಗ್ಲಿಷ್ ಸ್ಕೂಲಿನಿಂದ ಹೋಗಿದ್ದ ೪೦ ಹುಡುಗರು ಪೈಕಿ ೧೮ ಜನ ಎಂಟನೇ ತರಗತಿಯಲ್ಲೂ, ೩ ಜನ ಮೊದಲನೇ ತರಗತಿಯಲ್ಲೂ ಪ್ಯಾಸಾಗಿರುತ್ತಾರೆ. ಕರ್ನಾಟಕ ಭಾಷೋಜ್ಞೇಪಿನಿ ಪಾಠಶಾಲೆಯಲ್ಲಿ ೩ ಜನಕ್ಕೆ ಒಬ್ಬನು ಮಾತ್ರವೇ ಪ್ಯಾಸಾಗಿರುತ್ತಾನೆ. ಆದರೆ ಉಪಾಧ್ಯಾಯರ ಪರೀಕ್ಷೆಯಲ್ಲಿ ೧೩ ಕ್ಕೆ ೧೦ ಜನರು ಪ್ಯಾಸಾಗಿರುತ್ತಾರೆ. ಶಿವರಾಂಪೇಟೆಯ ರಾಮಸ್ವಾಮಯ್ಯನವರ ಸ್ಕೂಲಿನಿಂದ ಹೋಗಿದ್ದ ೧೨ ಜನ ವಿದ್ಯಾರ್ಥಿಗಳ ಪೈಕಿ ೧೦ ಜನರು ಪ್ಯಾಸಾಗಿರುತ್ತಾರೆ. ಇದರ ಮಿಡಲ್‌ಸ್ಕೂಲಿನಲ್ಲಿ ೩ ಜನರಿಗೆ ಒಬ್ಬನು ಪ್ಯಾಸಾದನು. ಅಗ್ರಹಾರದ ಆಂಗ್ಲೋವರ್ನಾಕ್ಯುಲರ್ ಸ್ಕೂಲಿನಲ್ಲಿ ೧ ಬ್ಬರಿಗೆ ಒಬ್ಬನೂ, ಗೌರ್ನಮೆಂಟ್ ಕನ್ನಡಸ್ಕೂಲಿನಲ್ಲಿ ೩ ಕ್ಕೆ ೪ ಜನರಿಯೂ ಪ್ಯಾಸಾಗಿರುತ್ತಾರೆ. ಮುಂದಿನವಾರದಲ್ಲಿ ಇತರ ವೆಲ್ಲ ರಿಜಲ್ಟುಗಳನ್ನೆಲ್ಲಾ ತಿಳಿಸಲು ಸಂಭವವಾದೀತು.

ಸದರ್ನ್‌ಮರಾಟಾ ರೈಲ್ವೆ ಕಂಪೆನಿಯವರು ಇದೇ ಜನವರಿ ೩೦ ನೇ ತಾರೀಖು ಲಾಗಾಯ್ತು ಜಾರಿಯಲ್ಲಿ ಬರುವ ಟ್ರೈನ್ ಸರ್ವಿಸ್ಸಿನಲ್ಲಿ ಅನೇಕ ವಿಶೇಷವಾದ ಬದಲಾವಣೆಗಳನ್ನು ಮಾಡಿರುತ್ತಾರೆ. ಮುಖ್ಯವಾಗಿ ಹರಿಹರ, ಬೆಂಗಳೂರುಗಳ ಮೂಲಕ ಪೂನಾಗೂ ಮೈಸೂರಿಗೂ ಹೋಗಿ ಬರುವ ಪ್ಯಾಸೆಂಜರ್ ಟ್ರೈನುಗಳ ಕಾಲವು ಮತ್ತು ವೇಗವು ಬದಲಾಯಿಸಲ್ಪಟ್ಟಿದೆ. ಕೃಷ್ಣಾ ಡಿಸ್ಟ್ರಿಕ್ಟಿನ ಜನಗಳಿಗೆ ಉಪಯೋಗಕರವಾಗುವಂತೆ, ಬಂದರಿಗೆ ಪಟ್ಟಣಕ್ಕೆ ಹೋಗಿ ಬರುವ ಮದರಾಸ್ ರೈಲ್ವೆ ಟ್ರೈನುಗಳಿಗೂ, ಮತ್ತು ಬಳ್ಳಾರಿಗೆ ಹೋಗಿಬರುವ ಸದರ್ನ್‌ಮರಾಟಾ ರೈಲ್ವೆ ಟ್ರೈನುಗಳಿಗೂ ಜಂಕ್ಷನ್ ಆಗುವ ಹಾಗೆ, ಕೃಷ್ಣಾ ಕಂಟೋನ್‌ಮೆಂಟಿನ ಮತ್ತು ಗುಂಟೂರು ಜಂಕ್ಷನ್ನಿಗೂ ಮಧ್ಯೆ ಸರ್ವಿಸ್ ಟ್ರೈನುಗಳನ್ನು ಏರ್ಪಾಡು ಮಾಡಿರುತ್ತಾರೆ. ಇದಲ್ಲದೆ ಕೆಲವು ಲೋಕಲ್ ಟ್ರೈನುಗಳ ಕಾಲಗಳನ್ನೂ ಬದಲಾಯಿಸಿರುತ್ತಾರೆ. ಇವುಗಳನ್ನೆಲ್ಲಾ ಚೆನ್ನಾಗಿ ತಿಳಿಯಲು ಇವರ ಬೀರಕದ ಪ್ರಕಟಿಸಿರುವ ಈ ಕಂಪೆನಿಯವರ ಬದಲಾಯಿಸಲ್ಪಟ್ಟ ಟೈಮುಟೇಬಲ್ಲನ್ನು ನೋಡಿದಲ್ಲಿ ಎಲ್ಲಾ ಸ್ಪಷ್ಟವಾಗುವದು. ಮತ್ತು ಆ ಪಟ್ಟಿಯಿಂದ ಮೈಸೂರನ್ನು ಬೆಳಿಗ್ಗೆ ೩ ಘಂಟೆ ೪೫ ನಿಮಿಷಕ್ಕೆ ಬಿಡುವ ಟ್ರೈನುಗಳು ಬೆಂಗಳೂರಿಗೆ ಮಧ್ಯಾಹ್ನ ೨ ಘಂಟೆ ೫ ನಿಮಿಷಕ್ಕೆ ತಲುಪುವದೆಂತಲೂ, ಬೆಂಗಳೂರನ್ನು ಮಧ್ಯಾಹ್ನ ೧೨ ಘಂಟೆ ೨ ನಿಮಿಷಗಳಿಗೆ ಬಿಡುವ ಗಾಡಿಯು ಮೈಸೂರಿಗೆ ರಾತ್ರಿ ೬ ಘಂಟೆ ೪೫ ನಿಮಿಷಗಳಿಗೆ ಬಂದು ಸೇರುವದೆಂತಲೂ ವಾಚಕರಿಗೆ ತಿಳಿಯಲಾಗುವದು.

ಕಳೆದ ೧೦ ನೇ ತಾರೀಖು ಮಂಗಳವಾರ ಮಧ್ಯಾಹ್ನ ಸುಮಾರು ೩ ಘಂಟೆಯ ಹೊತ್ತಿನಲ್ಲಿ ಬೆಂಗಳೂರು ಚಿಕ್ಕಪೇಟೆಗೆ ಸೇರಿದ ಹೊಸಮನೆಗಳ ಸಾಲಿನಲ್ಲಿ ಒಂದು ಮನೆಯಲ್ಲಿ ಜಗಳವಾಡುತ್ತಿದ್ದ ಮುತ್ತಿಗೆರ ನರಸಯ್ಯ ಎಂಬ ಆ ಶಿವಭಕ್ತ ಬ್ರಾಹ್ಮಣನು ಆ ದಿನ ಬೆಳಿಗ್ಗೆ ತಾನು ತಂದಿಗೆ ಹೋಗಿ ಸಾಯಂಕಾಲಕ್ಕೆ ಬರುತ್ತೇನೆಂದು ತನ್ನ ಹೆಂಡತಿಯ ಸಂಗಡ ಹೇಳಿ ಹೊರಟುಹೋದನು. ಬೇರೆ ಉದ್ಯೋಗವಿಲ್ಲದೆ ಹೇಳಿಕೊಂಡು ಅವಳ ಚಿಕ್ಕಪ್ಪನಿಂದ ಅನ್ನ ಹಾಕಿಸಿಕೊಂಡಿದ್ದ ಒಬ್ಬ ಮಾಚಿಲೀಬಂದಿರಿ ಬ್ರಾಹ್ಮಣನು ತನ್ನ ಮಗಳನ್ನೇ ಸ್ವೀಕರಿಸಿಕೊಂಡಿದ್ದನು. ಆ ದಿನ ಇವನು ಮಧ್ಯಾಹ್ನವೇ ಅವಳ ಮನೆಗೆ ಬಂದು ಅವಳೂ ಅವನೂ ಇಬ್ಬರೂ ಒಂದೇ ಹಾಸಿಗೆಯಲ್ಲಿ ಮಲಗಿ ನಿದ್ರೆಮಾಡುತ್ತಿದ್ದರು. ಸುಮಾರು ೩ ಘಂಟೆಯಾದಹೊತ್ತಿಗೆ ಸಂತೆಗೆ ಹೋಗಿದ್ದ ಯಜಮಾನನು ಮನೆಗೆ ಬಂದು ಈ ಅವಸ್ಥೆಯನ್ನು ನೋಡಿ ಕೋಪೋದ್ರೇಕವುಳ್ಳವನಾಗಿ ಒಂದು ಚೂರಿಯಿಂದ ತನ್ನ ಹೆಂಡತಿಯ ಕತ್ತನ್ನು ಕತ್ತರಿಸಿದನು. ಆ ಕೂಡಲೆ ಅವಳ ಉಪಪತಿಯಾದವನು ಓಡಿಹೋದನು, ತಪ್ಪಿಸಿಕೊಳ್ಳಲು ಪ್ರಯತ್ನ ಮಾಡಿದಾಗ ಆ ಮನೆಯ ಯಜಮಾನನು ಇವನನ್ನು ಕೊಂದನು. ಅನಂತರ ತನ್ನ ಚಿಕ್ಕ ಮಗನನ್ನು ಹೊರಕ್ಕೆ ಕಳುಹಿಸಿ, ತಾನೂ ಅದೇ ಚೂರಿಯಿಂದ ತನ್ನ ಕತ್ತನ್ನು ಕೊಯಿದುಕೊಂಡು ಆತ್ಮಹತ್ಯ ಮಾಡಿಕೊಂಡನು. ಇಂಥಾ ಕೊಲೆ, ಆತ್ಮಹತ್ಯ ಮುಂತಾದ ಭಯಂಕರವಾದ ಕಾರ್ಯಗಳಿಗೆಲ್ಲಾ ಬಹಳ ಮಟ್ಟಿಗೂ ಸ್ತ್ರೀಯರೇ ಕಾರಣರಾಗಿರುತ್ತಾರೆ.

ಸರ್. ಕೆ. ಶೇಷಾದ್ರಿ ಅಯ್ಯರ್,

ಕೆ. ಸಿ. ಎಸ್. ಐ.

ಈ ಸಂಸ್ಥಾನದ ದಿವಾನರಾದ ಸರ್. ಕೆ. ಶೇಷಾದ್ರಿ ಅಯ್ಯರವರಿಗೆ ಈಚೆಗೆ ಮಹಾರಾಜ್ಞಿಯವರ ಸರ್ಕಾರದಿಂದ ಕೆ. ಸಿ. ಎಸ್ ಐ. ಎಂಬ ಘನತರವಾದ ಪ್ರಶಸ್ತಿ ಕೊಡಲ್ಪಟ್ಟ ವಿಷಯದಲ್ಲಿ ನಮ್ಮ ಅಭಿನಂದನೆಯನ್ನು ಅವರಿಗೆ ಅರ್ಪಿಸುತ್ತೇವೆ. ಈ ರಾಜ್ಯದ ಪ್ರತಿನಿಧಿಯವರಾದ ಲಾರ್ಡ್ ಲ್ಯಾನ್ಸ್‌ಡೌನ್ ಸಾಹೇಬರು ಕಡೆಗೆ ಈ ದೇಶಕ್ಕೆ ದಯಮಾಡಿ ಇಲ್ಲಿನ ರಾಜ್ಯಾಡಳಿತ ಪದ್ಧತಿಯನ್ನೂ, ಪ್ರಾಮಾಣಿಕವಾದ ದೇಶದ ಮತ್ತು ಪ್ರಜೆಗಳ ಪ್ರಕೃತ ಸ್ಥಿತಿಯನ್ನೂ ಸ್ವಯಂ ಅರಿತು, ಅವರಿಗೆ ಉಂಟಾದ ಭಾವನೆಯನ್ನು ಇಲ್ಲಿರುವ ಕಾಲದಲ್ಲೇ ಕೆಲವು ಸಂದರ್ಭಗಳೊಳಗೆ ವ್ಯಕ್ತಪಡಿಸಿದರಾಗಿ, ಆದು ಬೆಳೆದು, ಇಲ್ಲಿನ ದಿವಾನರವರು ಈ ಸಂಸ್ಥಾನದ ಪುರೋಭಿವೃದ್ಧಿ ವಿಷಯದಲ್ಲಿ ಅವಿಚ್ಛಿನ್ನವಾಗಿ ವ್ಯಕ್ತಗೊಳಿಸುತ ಬಂದ ಕಾರ್ಯಶೀಲತ್ವವನ್ನು ಇಂಡಿಯಾ ಗೌರ್ನಮೆಂಟಿನವರು ಪರಿಭಾವಿಸಿ, ಶೀಘ್ರದಲ್ಲಿ ಉಚಿತ ರೀತಿಯಿಂದ ಅವರನ್ನು ಗೌರವಿಸಿ ಪುರಸ್ಕರಿಸುವರೆಂದು ಸಾಮಾನ್ಯವಾಗಿ ಎಲ್ಲರೂ, ವಿಶೇಷತಃ ಈ ದೇಶದ ಪ್ರಜೆಗಳೂ ನಿರೀಕ್ಷಿಸುತಲಿದ್ದರು. ಸರ್. ಶೇಷಾದ್ರಿ ಅಯ್ಯರವರು ಇಲ್ಲಿನ ದಿವಾನಗಿರಿಯನ್ನು ವಹಿಸಿ ಹತ್ತು ವರ್ಷಗಳ ಕಾಲವಾಗುತ ಬಂತು. ಈ ಕಾಲದಲ್ಲಿ ಅವರು ಮಾಡಿದ ಬಹುವಿಧ ನೂತನ ಏರ್ಪಾಟುಗಳ ದೆಸೆಯಿಂದ ಸಂಸ್ಥಾನದ ಆದಾಯವು ದಿನೇ ದಿನೇ ಅಭಿವೃದ್ಧಿಯನ್ನೈದುತ ಬಂದು, ಸಾಹುಕಾರ ದಿವಾನ್ ಮ॥ ರಂಗಾಚಾರ್ಲು ಯವರ ಕಾಲದಲ್ಲೇ ಕ್ಷಯವಾದ ಈಗ ಸುಮಾರು ನಾಲ್ವತ್ತು ಲಕ್ಷ ರೂಪಾಯಿಗಳಿಗೆ ಜಾಸ್ತಿಯಾಗಿ ಹುಟ್ಟುವದಾಯಾಗುತ, ಸಂಸ್ಥಾನದ ಖರ್ಚು ಬಾಬು ಭಾರೀ ಕಲ್ಪನೆಯ ಉಳಿಯುತಲಿದೆ. ಸಂಸ್ಥಾನದ ಖಜಾನೆಯಲ್ಲೂ ಅನ್ಯತ್ರವೂ ನಾನಾ ರೂಪವಾಗಿ ಸುಮಾರು ಒಂದು ಕೋಟಿ ರೂಪಾಯಿಗಳವರೆಗೆ ಜಮಾವಿರುತ್ತದೆ. ಸಂಸ್ಥಾನಕ್ಕೆ ಉಂಟಾಗಿರುವ ಸಾಲಗಳ ನಿವೃತ್ತಿ ಮಾಡುವ ವಿಷಯದಲ್ಲಿ ತಕ್ಕ ಏರ್ಪಾಡುಗಳು ಆಗಿರುತ್ತಾರೆ. ಪ್ರಜೆ ಸಾಯೋಪಯೋಗಿಗಳಾದ ಬಹುವಿಧ ಏರ್ಪಾಡುಗಳು ಈ ವರೆವಿಗೆ ಮಾಡಲ್ಪಟ್ಟಿರುವದಲ್ಲದೆ ಮುಂದೆ ಇನ್ನೂ ಹಲವು ಮಾಡಬೇಕೆಂಬ ಸಂಕಲ್ಪವು ಉಂಟಾಗಿದೆ. ಪ್ರಜಾಪ್ರತಿನಿಧಿ ಸಭೆಯನ್ನು ಸ್ಥಾಪಿಸಿದ್ದು ಪೂರ್ವಾಪೇಕ್ಷೆಯಾದ ಒಳ್ಳೆಯ ಸ್ಥಿತಿಗೆ ಬಂದಿರುವದಲ್ಲದೆ ಅವರ ಪ್ರತಿನಿಧಿಗಳು ಆರಿಸಿ ಯೋಜಿಸುವ ಸ್ವಾತಂತ್ರ್ಯವೂ ಪ್ರಜೆಗಳಿಗೇನೇ ಉಂಟು ಮಾಡಲ್ಪಟ್ಟಿತು. ಪಟ್ಟಣ ಜಾಗಗಳಲ್ಲಿ ಮ್ಯುನಿಸಿಪಾಲಿಟಿಗಳು ಏರ್ಪಾಡಾಗಿ ಅವರ ಅಧಿಕಾರಗಳಿಗೆ ವಿಶೇಷ ಸ್ವಾತಂತ್ರ್ಯ ಕೊಡಲ್ಪಡುತ ಬರುತಲಿವೆ. ಬಹುಕಾಲದಿಂದ ಮೊದಲು ಕೇವಲ ಪೋಲೀಸಿನವರಿಗೆ ಇದ್ದ ಸತ್ರ ದೇವಾಲಯಗಳ ವಿಚಾರಣೆಯು ಲೋಕಲ್ ಫಂಡ್ ಕಮಿಟಿ ಮುಂತಾದ ಆಯಾ ಸರ್ಕಾರದವರಲ್ಲೂ ಅರ್ಪಣೆಯಾಗಿ ಇರುವ ಒಬ್ಬ ಅಧಿಕಾರಿಯು ನಿಯಮಿಸಲ್ಪಟ್ಟು ಆ ಕೆಲಸವು ಕ್ರಮಕ್ಕೆ ತರಲ್ಪಡುತಲಿದೆ. ವೃತ ರಸ್ತೆಗಳು ದಿನೇ ದಿನೇ ವೃದ್ಧಿಯಾಗುತ ಪ್ರಜೆಗಳಿಗೂ ವ್ಯಾಪಾರಕ್ಕೂ ಅನುಕೂಲಗಳು ಕಲ್ಪಿಸುತ್ತಲಿವೆ. ಪಟ್ಟಣಗಳಲ್ಲಿ ಪ್ರಜಾ ಸಂಖ್ಯೆಯು ದಿನೇ ದಿನೇ ವೃದ್ಧಿಯಾಗುತ ಬರುವದರಿಂದ ಅದಕ್ಕೆ ಅನುಗುಣವಾಗಿ ಪಟ್ಟಣವನ್ನು ವಿಸ್ತರಿಸಬೇಕಾದ್ದು ಅವಶ್ಯಕರ್ತವ್ಯವೆಂದು ಭಾವಿಸಿ, ಈ ಪಟ್ಟಣದ ಪಶ್ಚಿಮಭಾಗದಲ್ಲೂ ಉತ್ತರದಲ್ಲೂ ಖಾಲಿಯಾಗಿರುವ ವಿಸ್ತರವಾದ ಜಮೀನನ್ನು ಮನೆಗಳು ಕಟ್ಟಿಕೊಳ್ಳುವದಕ್ಕೆ ಅನುಕೂಲಿಸುವಂತೆ ನಿವೇಶನಗಳಾಗಿ ವಿಂಗಡಿಸಿ, ಅಲ್ಪಕ್ರಯಕ್ಕೆ ಕೊಡಲ್ಪಡುತ ಬರುತಲಿವೆ. ಸಂಸ್ಥಾನದ ಅಭಿವೃದ್ಧಿಯ ವಿಷಯದಲ್ಲೂ, ಪ್ರಜೆಗಳ ಸುಖಸ್ಥಿತಿಯ ವಿಷಯದಲ್ಲೂ ಬಹುವಿಧವಾದ ಏರ್ಪಾಟುಗಳು ಮಾಡಿ ಅವರ ಸುಖ ಸಂತೋಷಗಳೇ ಈಶ್ವರ ಕೃಪೆಯುಳ್ಳ ಮಹ ತಮ್ಮ ಅಧಿಕಾರಕ್ಕೆ ಮುಖ್ಯ ಲಕ್ಷಣವೆಂದು ಭಾವಿಸಿ ಅದನ್ನೇ ಸ್ರವಿಸುತ ಬರುವ ಈ ದೊಡ್ಡ ಮನುಷ್ಯರ ವಿಷಯದಲ್ಲಿ ಮಹಾರಾಜ್ಞೀ ಸರ್ಕಾರದವರು ವ್ಯಕ್ತಗೊಳಿಸಿದ ಗೌರವ ಪುರಸ್ಕಾರಗಳು ಅತ್ಯಂತ ಶ್ಲಾಘನೀಯವಾಗಿರುತ್ತವೆ. ಸರ್ ಶೇಷಾದ್ರಿ ಅಯ್ಯರವರು ಕಳೆದ ಸಂವತ್ಸರದೊಳು ಇಲ್ಲಿ ಪ್ರಸ್ತಾವದ ದರ್ಘಾಸ್ತ ನಿವಾರಣೆಯ ಬಗ್ಗೆ ಮಾಡಿದ ಪ್ಲ್ಯಾನ್ ಗಳಿಂದ ಕೆಲವು ಮಿತಿಗಳನ್ನು ಇಂಡಿಯಾ ಗೌರ್ನಮೆಂಟಿನವರು, ತಪ್ಪದೆ ಮುಂದೆ ಮತ್ತು ಮದರಾಸ್ ಪ್ರಸಿಡೆನ್ಸಿಗಳೊಳು ಮಾಡುವಂತೆ ಹುಕುಂ ಕೊಟ್ಟಿರೆಂದು ನಮ್ಮ ಕಿವಿಗೆ ಬಿದ್ದಿರುತ್ತದೆ. ಈ ದೊಡ್ಡ ಮನುಷ್ಯರು ಆರೋಗ್ಯ ದೃಢಗಾತ್ರರಾಗಿ ಈಗ ಉಂಟಾದ ಪ್ರಶಸ್ತಿಯನ್ನು ಅನುಭವಿಸುತ, ಇಲ್ಲಿನ ಪ್ರಜೆಗಳು ಬಹುಕಾಲ ಪಾಲಿಸುವಂತೆ ಪರಮಾತ್ಮ ಅವರಿಗೆ ದೀರ್ಘಾಯುಷ್ಯವನ್ನು ಕೃಪೆಗೆಯ್ಯಬೇಕೆಂದು ಪ್ರಾರ್ಥಿಸುತ್ತೇವೆ. ಕ. ಪ್ರ.

ಸನ್ ೧೮೯೦ ನೇ ಇಸವಿ

ನವಂಬರು ತಿಂಗಳಲ್ಲಿ ಇಂಡಿಯಾ ದೇಶದ ವೈಸರಾಯಿ ಮತ್ತು ಗವರ್ನರ ಜನರಲರವರಾದ ಘನವಾನ್ ಶ್ರೀ ಸಂಪನ್ನ ಲಾರ್ಡ್ ಲ್ಯಾನ್ಸ್‌ಡೌನ್ ಸಾಹೇಬ ಬಹದ್ದೂರ್‌ ಶ್ರೀಮನ್ಮಹಾರಾಜರ ಸಂದರ್ಶನಾರ್ಥವಾಗಿ ಮೈಸೂರಿಗೆ ದಯಮಾಡಿಸಿದ್ದಾಗ ನಡೆದ ಸಂಗತಿಗಳ ವಿವರ.

(ಕಳೆದ ವಾರದ ಶೇಷ.)

ಘನವನ್ನು ಹೊಂದಿದ ವೈಸರಾಯಿಯವರು ಆ ಬಳಿಕ ಅಪ್ಪಣೆಕೊಡಿಸಿದ ಪ್ರತ್ಯುತ್ತರವೇನೆಂದರೆ:—ನಿಮ್ಮ ವಿಜ್ಞಾಪನಾ ಪತ್ರಿಕೆಯಲ್ಲಿ ಸ್ನೇಹ ತಿಳಿಯಪಡಿಸಿರುವ ಕ್ರಮದಿಂದ ಯೂ ಚಕ್ರವರ್ತಿನಿಯವರ ವಿಷಯವಾದ ರಾಜಭಕ್ತಿ ಸೂಚಕವಾದ ಅಭಿಪ್ರಾಯಗಳು ನಮಗೆ ಸಮಾಧಾನವಾಗಿವೆ. ಈ ಸಂಸ್ಥಾನದ ರಾಜಧಾನಿಯಲ್ಲಿ ಅತ್ಯಾದರಪೂರ್ವಕವಾಗಿ ನಮ್ಮನ್ನು ಎದುರುಗೊಂಡು ಪುರಸ್ಕರಿಸಿದ್ದಕ್ಕಾಗಿ ನಾವೂ, ಲೇಡಿ ಲ್ಯಾನ್ಸ್‌ಡೌನರವರೂ, ವಂದಿಸುತ್ತೇವೆ. ನಾವು ಇಲ್ಲಿಗೆ ಬರುವ ಕಾಲಕ್ಕೆ ಸರಿಯಾಗಿ ಕಳೆದ, ವರ್ಷದಲ್ಲಿ ವಿಶೇಷ ಪ್ರ

ಪ್ಪವಾಗಿದ್ದ ತೊಂದರೆಗಳು ನಿಶ್ಶೇಷವಾಗಿ ನಿವಾರಣೆಯಾಯಿತೆಂದು ನೀವು ಹೇಳಿಕೊಳ್ಳುವಂತ ಅದೃಷ್ಟಕ್ಕೆ, ನಾವು ಬಹಳ ಸಂತೋಷಪಡುತ್ತೇವೆ. ಶ್ರೀಮನ್ಮಹಾರಾಜರವರ ರಾಜ್ಯಭಾರದ ಕಾಲದಲ್ಲಿ ನಡೆದಿರುವ ಅನೇಕ ವಿಧವಾದ ನಗರಾಭಿವೃದ್ಧಿಯ ಕಾರ್ಯಗಳನ್ನು, ನಾವು ಇಲ್ಲಿ ನಿಲ್ಲುವ ಕಾಲದಲ್ಲಿ, ಸ್ವಲ್ಪ ಮಟ್ಟಿಗೆ, ನೋಡುವದಕ್ಕೆ ಅನುಕೂಲವಾಗುವುದು. ಶ್ರೀಮನ್ಮಹಾರಾಜರವರ ವಿಷಯವಾಗಿ ನೀವು ಆಡುವ ಮಾತುಗಳಿಂದ ಪ್ರಜೆಗಳಿಗೆ ಅವರಲ್ಲಿರುವ ಪ್ರೀತಿಯೂ ಗೌರವವೂ, ನಿಸ್ಸಂಶಯವಾಗಿ ಗೊತ್ತಾಗುತ್ತವೆ. ಆಯಾ ದರ್ಬಾರಿನವರು ಜನೋಪಕಾರಾರ್ಥವಾಗಿ ಮಾಡಿದ ಕಾರ್ಯಗಳಲ್ಲಿ, ನೀವುಗಳು ಹೇಳಿದಂತೆಯೇ, ವಿಶೇಷವಾಗಿ ...

[illegible]

ಆಹಾರಗಳ ಬಿಡುಗಡೆಯಿಂದಲೂ, ಪ್ರಜೆಗಳ ನಾನಾ ರಾಜ್ಯಭಾರ ಮನುಷ್ಯರೆಲ್ಲರ ವಿಷಯದಲ್ಲಿ ದೃಷ್ಟಿಯಿಟ್ಟಿರುವ ...

[illegible]

ವಿವಿಧ ವರ್ತಮಾನಗಳು.

[illegible]

ಶಾಲಿವಾಹನಶಕ ೧೮೧೪ ನೇ ನಂದನನಾಮ ಸಂವತ್ಸರದ ಮಾಘ ಶುದ್ಧ ಬಿದಿಗೆ ಗುರುವಾರದಿಂದ ಮಾಘ ಶುದ್ಧ ಅಷ್ಟಮಿ ಬುಧವಾರದ ವರೆಗಿನ ವಾರದ ಪಂಚಾಂಗ.

೧೮೯೩ ನೇ ಇಸವಿ. ಜನವರಿ.

ತಾ.	ವಾರ.	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.	ಮಾಘ ಶುದ್ಧ ತಿಥಿ
19	ಗು	ಬಿ॥ ಉಪರಿ.	೧-23 59-36	ಶ್ರ	20-28	8
20	ಶು	ತ	59-2	ಧ.	21-10	9
21	ಶ	ಚ	56-2	ಶ.	19-33	10
22	ರ.	ಪಂ.	52-28	ಪೂ.	19-8	11
23	ಸೋ.	ಷ	47-37	ಉ.	16-35	12
24	ಮಂ.*	ಸ	42-20	ರೇ.	13-31	13
25	ಬು.	ಅ	36-16	ಅ	9-48	14

* ರಥಸಪ್ತಮಿ; ಸೂರ್ಯ ಚಂದ್ರ ರಥ

ಪೇಟೆ ಧಾರಣೆ.

ದಿನಸಿ	ಮೈಸೂರು.	ಬೆಂಗಳೂರು.
	ರೂ. ಆ. ಪೈ.	ರೂ. ಆ. ಪೈ.
ಕಪ್ಪು ಅಕ್ಕಿ ಪಲ್ಲ ೧ಕ್ಕೆ	೧೨–೬–೦	೧೭–೦–೦
ಕೆಂಬೂತಿ ಅಕ್ಕಿ ಅವ್ವಲ್	೧೨–೪–೦	೧೧–೮–೦
ಶಿರೋ ಅಕ್ಕಿ ದುಯಂ	೧೨–೮–೦	೧೧–೦–೦
ಜಾವಾಣೆ ಅಕ್ಕಿ	೧೨–೪–೦	೧೧–೦–೦
ಸಣ್ಣಕ್ಕಿ ಅವ್ವಲ್	೧೪–೮–೦	೧೪–೮–೦
ಶಿರೋ ಅಕ್ಕಿ ದುಯಂ	೧೪–೦–೦	೧೧–೮–೦
ತೊಗರಿಬೇಳೆ ಪಲ್ಲ ೧ಕ್ಕೆ	೧೨–೧೨–೦	೧೭–೬–೦
ಶಿರೋ ದುಯಂ ತರಹ	೧೦–೪–೦	೧೧–೦–೦
ಹೈದರಾಗಿ ಪಲ್ಲ ೧ಕ್ಕೆ	೮–೯–೦	[illegible]
ಕಾದ್ರಿಗಿ	೪–೪–೦	[illegible]
ಹುಲಸಂದೆ ಪಲ್ಲ ೧ಕ್ಕೆ	೯–೦–೦	೧೦–೦–೦
ಬೇಳೆ ಅವರೆ	೧೨–೦–೦	೯–೮–೦
ಹೆಸರು	೧೨–೬–೦	೧೧–೮–೦
ಉದ್ದು	೧೦–೮–೦	೯–೦–೦
ಕಡಲೆ	೧೧–೮–೦	೧೦–೮–೦
ಎಳ್ಳು	೧೫–೦–೦	೧೧–೮–೦
ಹುರಳಿ	೬–೬–೦	೬–೦–೦
ಸೀಗೇಕಾಯಿ ಮಣ ೧ಕ್ಕೆ	೧–೮–೦	೧–೧೦–೦
ಮೆಣಸಿನಕಾಯಿ	೭–೦–೦	೨–೮–೦
ದುಯಂ ತರಹ	೨–೮–೦	೨–೪–೦
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ	೮–೧೨–೦	ಮ ೧–೧೦–೦
ಸಣ್ಣಚ್ಚು	೪–೪–೦	ಮ॥ ೧–೬–೦
ಬಿಳಿ ಸಕ್ಕರೆ ಮಣ ೧ಕ್ಕೆ	೮–೨–೦	೪–೮–೦
ಹರಳೆಣ್ಣೆ	೮–೨–೦	೭–೧೨–೦
ಕೊತ್ತಂಬರಿ ಪಲ್ಲ ೧ಕ್ಕೆ	೯–೮–೦	೭–೧೨–೦
ಉಪ್ಪು	೯–೮–೦	೧೦–೦–೦
ಹುಣಸೇಹಣ್ಣು ಮಣ ೧ಕ್ಕೆ	೧–೪–೦	೧–೮–೦
ಹಳೇ ಹುಣಸೇಹಣ್ಣು	೧–೦–೦	೧–೪–೦
ತುಪ್ಪ	೧೪–೧೨–೦	೧೬–೮–೦
ಸೀಮೆ ಎಣ್ಣೆ ಟಿನ್ನು ೧ಕ್ಕೆ	೬–೧೦–೦	೭–೯–೦
ತೆಂಗಿನಕಾಯಿ ೧೦೦ಕ್ಕೆ	೬–೦–೦	೭–೪–೦
ಚಿನ್ನ (ಪವನ್)		
ಕೆಂಪು	೧೬–೮–೦	೧೬–೮–೦
ಪಸುಪು	೧೬–೮–೦	೧೬–೮–೦
ಗಟ್ಟಿ	೨೬–೮–೦	೨೬–೮–೦

Mysore.—Printed and published for the Proprietor at the Wesleyan Mission Press.

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು —— ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೬ | ಮೈಸೂರು ಸ ೧೮೯೩ನೇ ಇಸವಿ ಜನವರಿ ತಾರೀಖು ೨೬ ನೇ ಗುರುವಾರ. | ಸಂಖ್ಯೆ [illegible]

HEALTH, WEALTH & PROSPERITY.

ಜೆ. ಬಿ. ನಾಯಿಕ ಕಂಪನಿಯು

ಮಿಂಚಿನ ಉಂಗುರ, ಪದಕ, ಬಳೆ, ಲೇಖಿಣಿ,

ಕೊರಳ ಪಟ್ಟಿಗಳು.

೫೪,೦೦೦ ದ ಮೇಲೆ ಮಾರಿ ದವು. ನಿತ್ಯ ಬಹಳೇ ಖರ್ಚಾಗ ಹತ್ತಿರುತ್ತವೆ.

ಗುಣ ಬಂದ ಬಗ್ಗೆ ಸಾವಿರಾರು ದಾಖಲೆಗಳು ದೊರೆದಿರುತ್ತವೆ. ಹಾಗೂ ದೊರೆಯುತ್ತಲಿವೆ.

ರಕ್ತವು ಮನುಷ್ಯನ ಜೀವನವಾಗಿದೆ ಮತ್ತು ವಿದ್ಯುಲ್ಲತೆಯು ರಕ್ತದ ಜೀವನವಾಗಿದೆ

ರಕ್ತವು ಕೆಟ್ಟದ್ದರಿಂದ ಆಗುವ ಎಲ್ಲ ರೋಗ, ಅಶಕ್ತತೆ, ಸಂಧಿವಾತ, ಪಿರಂಗಿತವಾತ, ಹೊಟ್ಟೆಯಲ್ಲಿ ವಾಯುವು ಹೆಚ್ಚಾಗೋಣ, ಮೂಲರೋಗ, ಕೈ ಕಾಲು ಮರಗಟ್ಟೋಣ, ಭ್ರಾಂತಿ ಬೇನೆ, ಕಟಿವಾತ ಬೇನೆ, ಎಲ್ಲ ತರದ ಜ್ವರ, ಎದೆ ಬೇನೆ, ತಲೆಶೂಲಿ, ಮಲಾವರೋಧ, ಎದೆಯಲ್ಲಿ ಉರಿಯೋಣ ಮತ್ತು ನೋಯೋಣ, ಕೊರಳ ಬಾವು, ಎಲ್ಲ ತರದ ಸೂತಿಕಾವ್ಯಾಧಿ, ನಿದ್ರೆ ಹತ್ತದಿರೋಣ, ಮೂತ್ರಾಶಯದೊಳಗಿನ ರೋಗ, ಕೆಮ್ಮು, ದಮ್ಮು, ಗಂಡಮಾಲೆ, ಸ್ನಾಯುವಿಕಾರ, ಮೇಹ ಮತ್ತು ಇತರ ರೋಗಗಳು, ಇದನ್ನು ಉಪಯೋಗಿಸುವದರಿಂದ ನೆಟ್ಟಗಾಗುತ್ತವೆಂಬುದು ಜಗಪ್ರಸಿದ್ಧವದೆ. ಕೊರಳ ಪಟ್ಟಿ—ಸಣ್ಣ ಹುಡುಗರಿಗೆ ಹಲ್ಲು ಬರುವಾಗ ವೇದನೆಯಾಗದೆ ಹಲ್ಲು ಬರುವವು. ಲೇಖಿಣಿ—ಕೈ ನಡುಗುವಿಕೆ, ಸ್ಮರಣ ಶಕ್ತಿಯುಳ್ಳ್ಳೆ. ಇಂಥ ಉತ್ತಮ, ಗುಣಕಾರಿ, ಸರ್ವ ರೋಗ ನಾಶಕ, ದೇಹಕ್ಕೆ ಶೋಭೆ ಕೊಡುವ ದಿವ್ಯಧದ ಕಿತಿಕಿಯನ್ನು ಮಾರಿಗ, ಈ ಬಡವರು ಸಂಗ್ರಹ ಮಾಡದೆ ಇರಬೇಡಿರಿ, ಪ್ರತಿ ಒಂದು ಒಡವೆಯು ಜೊತೆ U. B. N. ಗಾರ್ಜ ನೋಡಿ ತೆಗೆದುಕೊಳ್ಳಿರಿ. ಎಂಗಿ ಕಟ್ಟುವದು ಪ್ರಕಟ. ಪತ್ರ ವ್ಯವಹಾರ ಮರಾಠಿಯಲ್ಲಿ ಇಲ್ಲವೆ ಇಂಗ್ರೇಜಿಯಲ್ಲಿರಬೇಕು. ಪತ್ರ ಸ್ಪಷ್ಟ ಬರಿಯಬೇಕು.

ಕ್ರಯವು—ಹಿತ್ತಾಳಿಯ ಉಂಗುರಕ್ಕೆ ಒಂದುವರೆ ರೂ. ಬೆಳ್ಳಿಯ ಉಂಗುರಕ್ಕೆ ೩ ರೂ. ಭಂಗಾರದ ಉಂಗುರಕ್ಕೆ ೨೦ ರೂ. ಹಿತ್ತಾಳಿಯ ಪದಕಕ್ಕೆ ಒಂದುಕಾಲು ರೂ. ಬೆಳ್ಳಿಯ ಪ. ಕ್ಕೆ ೨ ರೂ. ಭಂಗಾರದ ಪ. ಕ್ಕೆ ೨೨ ರೂ. ಹಾತಗಳ ಬಳೆಗೆ ಒಂದುವರೆ ರೂ. ಲೇಖಿಣಿಗೆ ಒಂದುವರೆ ರೂ. ರೇಷ್ಮೆ ಕೊರಳ ಪಟ್ಟಿಗೆ ಒಂದುವರೆ ರೂ. ಒಮ್ಮೇಲೆ ೧೨ನಗ ತೆಗೆದು ಕೊಂಡರೆ ೧ ಹೆಚ್ಚು ಸಿಗುವವು. ರೋಖ ಹಣ ಬಂದರೆ ಅಥವಾ ವಿ. ಪೇ. ಪಿ. ಜೋಖಿನದರೆ ಕಳಿಸುವೆವು. ಉಂಗುರ ಕಳಿಸುವದಾದರೆ ಬೆರಳಿನ ಸುತ್ತಳತೆ ಕಳುಹಿಸಿರಿ. ಅನೇಕ ಬೇನೆಗಳ ಮೇಲೆ ಗುಣ ಬಂದ ಬಗ್ಗೆ ಡಾಕ್ಟರ, ವೈದ್ಯ, ಪತ್ರಕರ್ತ ಮುಂತಾದವರ ಸರ್ಟಿಫಿಕೇಟಿನ ವಾ ಏಜಂಟ ವ್ಯಾಪಾರಿ ವರದ ಪುಸ್ತಕ ೬ ಪೈ ಕಳುಹಿಸಿದರೆ ಕಳಿಸುವೆವು. ದಾಬು ತೆಗೆದುಕೊಂಡರೆ ಪ್ರಕಟ ಕಳುಹಿಸುವೆವು. ೧ ರಿಂದ ೬ ವರೆಗೆ ಟಿ. ಪ. ೬ ಆಣೆ.

ಜೆ. ಬಿ. ನಾಯಿಕ ಮತ್ತು ಕಂಪನಿ, ಬ್ಯಾಕಳಾ, ಹಳೇದಾವಣೆ ಎದುರು, ಮುಂಬಯಿ.

ನೋಟೀಸ್.

		ಕ್ರಯ			ಹಾಸಲು ಸಹಿತವಾಗಿ		
Campbell's	ಕನ್ನಡ ವ್ಯಾಕರಣ ಸಾರ	೦	೨	೦	೦	೨	೬
Object Lessons.	ವಸ್ತು ಪಾಠಗಳು	೦	೧	೦	೦	೧	೬
Picture do	ಚಿತ್ರಗಳು ಸಹಿತವಾಗಿ	೦	೨	೦	೦	೨	೬

ಈ ಮೂರು ಪುಸ್ತಕಗಳು ಪ್ರೈಮರಿ ಶಾಲೆಗಳಲ್ಲಿ ಓದತಕ್ಕ ಪುಸ್ತಕಗಳು.

	ಕ್ರಯ			ಹಾಸಲು ಸಹಿತವಾಗಿ		
ಸ್ತ್ರೀಯರು ಓದತಕ್ಕ ಪುಸ್ತಕ	೦	೫	೦	೦	೫	೬
ಗಣಿತ ವಿದ್ಯವು ..	೦	೪	೦	೦	೪	೬
ಗಣಿತ ಮಗ್ಗಿಗಳು .	೦	೧	೦	೦	೧	೬
ಸಂಸ್ಕೃತ ಕರ್ನಾಟಕ ಭಾಷಾಮಂಜರಿ	೦	೨	೦	೦	೨	೬
ಭೂಗೋಳ ಶಾಸ್ತ್ರ ಪ್ರಶ್ನೋತ್ತರ	೦	೨	೦	೦	೨	೬
ಇಂಗ್ಲೀಷು ಕನ್ನಡವು ಶಬ್ದಾವಳಿ ೧ನೇ ೨ನೇ ಭಾಗಗಳು	೦	೧	೦	೦	೧	೬
ಕಾವ್ಯಮಾಲೆ (Minor Poetical Anthology)	೦	೭	೦	೦	೭	೬
ಬಾಲವ್ಯಾಕರಣ ..	೦	೫	೦	೦	೫	೬
ಪರಗಣ್ಣನ [illegible] ಸೂತ್ರಗಳು	೦	೬	೦	೦	೬	೬
ಇಂಗ್ಲೀಷು ಕನ್ನಡವು ಸಂಭಾಷಣ ವಾಕ್ಯಗಳು	೦	೧೦	೦	೦	೧೦	೬
ಶಬ್ದಮಣಿ ದರ್ಪಣ .	೧	೦	೦	೧	೪	೬
Kan Eng Pocket Dictionary	೧	೮	೦	೧	೫	೬
Eng Kan School Dictionary	೨	೧೦	೦	೨	೧೨	೬
ಬಸ್ಸೇ ಕಾಬು .	೦	೭	೪	೦	೪	೬
ಆತ್ಮಿಕ ವಿದ್ಯ ಮೊದ್ದ (Lang ...)	೦	೧೨	೦	೦	೧೫	೬
ಕ್ರೈಸ್ತ ಪದ್ಧತಿ ೧ ನೇ ಭಾಗ ೨ ಅಣ ೩ ನೇ ಭಾಗ	೦	೧	೬	೦	೨	೦
ಭಕ್ತಿಸಾರ ..	೦	೧	೦	೦	೧	೬
ಸ್ವಾಮಿ ವಾಗ್ದಾನಿ	೦	೧	೦	೦	೧	೬
ಕಾವ್ಯಪ್ರಂಜ .	೦	೩	೦	೦	೩	೬

A new Edition of the Geography suited for the Lower Secondary Examination is now ready.—Edited by Rev. H Gulliford Price 6 As.

ಮೇಲೆ ನಮೂದಿಸಿರುವ ಪುಸ್ತಕಗಳನ್ನು ಬೆಂಗಳೂರು ದಂಡಿನ ಜೋಗಾಟಿನ ಹತ್ತರವಿರುವ ಪುಸ್ತಕ ಶಾಲೆಯಲ್ಲಿ ಪಡೆಯ ಬಹುದು.

ಸದರನ್ ಮಹಾರಾಷ್ಟ್ರ ರೈಲ್ವೆ.

(ಮೈಸೂರು ಮತ್ತು ಕೋಲ್ಹಾಪುರದ ಸ್ಟೇಟ್ ರೈಲ್ವೆಗಳು ಸಹ.)

ನೋಟೀಸ್.

ಟ್ರೇನುಗಳ ಬದಲಾವಣೆ.

ಸ ೧೮೯೩ನೇ ಇಸವಿ ಜನವರಿ ತಾರೀಖು ೨೨ ರಿಂದ ಮೊದಲುಗೊಂಡು ಮೈಸೂರಿನಿಂದ ಪೂನಾವರೆಗೂ, ಮತ್ತು ಅಲ್ಲಿಂದ ಮೈಸೂರಿಗೂ ಹೋಗಿ ಬರುವ ಮೇಲ್ ಟ್ರೇನಿನ ಕಾಲನಿಯಮಗಳನ್ನು ಕೆಳಗೆ ತಿಳಿಸಿದ ಪ್ರಕಾರ ಗೊತ್ತು ಮಾಡಲ್ಪಟ್ಟಿರುತ್ತೆ.

		ಘಂ.	ನಿ.			ಘಂ.	ನಿ.
ಬೊಂಬಾಯಿ ಜಿ ಐ ಪಿ ರೈಲ್ವೆ ಹೊರಡುವದು	..	[illegible]	[illegible]	ಮೈಸೂರು ..	ಹೊರಡುವದು	೬	೪೫
ಪೂನಾ ಜಂಕ್ಷನ್ ಹೊರಡುವದು	..	೨೧	೧೨	ಬೆಂಗಳೂರು ..	„	೧೩	೫
ಸಾಂಗಲಿ ಮಹಾಬಲೇಶ್ವರ ತಲಪುವದು	..	೧	೫೬	ಹುಬ್ಬಳ್ಳಿ ಜಂಕ್ಷನ್ ..	„	೭	೨೦
ಬೆಳ್ಗಾವಿ ತಲಪುವದು	..	೧೧	೫೭	ಧಾರವಾಡ ..	„	೯	೧೬
ಧಾರವಾಡ „	..	೧೩	೫೫	ಬೆಳ್ಗಾವ ..	„	೧೫	೧೬
ಹುಬ್ಬಳ್ಳಿ ಜಂಕ್ಷನ್ „	..	೧೬	೫೭	ಸಾತಾರಿ ರೋಡ			
ಬೆಂಗಳೂರು „	..	೧೨	೨೦	ಜೇಜುರಿ ..	„	೦	೨೬
ಮೈಸೂರು „	.	೧೯	೩೫	ಪೂನಾ ಜಂಕ್ಷನ್ ..	ತಲಪುವದು	೫	೫
				ಬೊಂಬಾಯಿ ಜಿ. ಐ. ಪಿ. ರೈಲ್ವೆ ..	„	೧೧	೧೬

ಕೃಷ್ಣಾ ಕೆನಾಲ್ ಟರ್ಮಿನಸ್ಸಿನಿಂದ ಗುಂತಕಲ್ ಜಂಕ್ಷನ್‌ವರೆಗೆ ಹೋಗಿಬರುವ ಟ್ರೇನುಗಳ ಕಾಲ.

		ಘಂ.	ನಿ.			ಘಂ.	ನಿ.
ಕೃಷ್ಣಾ ಕೆ ಟಿ ..	ಹೊರಡುವದು	೮	೨೫	ಬಳ್ಳಾರಿ ..	ಹೊರಡುವದು	೫	೪
ಗುಂಟೂರು ..	„	೨೧	೨೫	ಮದರಾಸ್ ಮ ರೈಲ್ವೆ ..	„	೯	೦
ಕಂಭಂ .	„	೬	೦	ಗುಂತಕಲ್ ಜಂಕ್ಷನ್ ..	„	೭	೧೫
ಕರ್ನೂಲ್ ರೋಡ ..	„	೧೫	೧೨	ಕರ್ನೂಲ್ ರೋಡ ..	„	೧೧	೪೬
ಗುಂತಕಲ್ ಜಂಕ್ಷನ್ ..	ತಲಪುವದು	೯	೦	ಕಂಭಂ ..	„	೨೦	೨೫
ಮದರಾಸ ರಾ. ರೈಲ್ ..	„	೭	೦	ಗುಂಟೂರು ..	„	೪	೩೫
ಬಳ್ಳಾರಿ ..	„	೨೦	೧೬	ಕೃಷ್ಣಾ ಕೆ ಟಿ. ..	ತಲಪುವದು	೬	೧೦

ಇವಲ್ಲದೆ ಸದರ್ನ ಮಹಾರಾಷ್ಟ್ರ ರೈಲ್ವೆ ಲೈನಿನ ಲೋಕಲ್ ಮಿಕ್ಸೆಡ್ ಮತ್ತು ಅನೇಕ ಇತರ ಟ್ರೇನುಗಳ ಕಾಲಗಳನ್ನು ನಾನಾ ತರವಾಗಿ ಬದಲಾಯಿಸಲ್ಪಟ್ಟಿರುತ್ತೆ. ಈ ಬದಲಾವಣೆಗಳನ್ನು ಆಯಾ ಸ್ಟೇಷನ್ನುಗಳಲ್ಲಿ ಹಿಗಟಾಯಿಸಲ್ಪಟ್ಟಿರುವ ಕಾಲನಿಯಮಗಳ ಪಟ್ಟಿಗಳಿಂದ ತಿಳಿಯಬಹುದು.

Traffic Manager's office,
Dharwar, 14th January, 1893.

W. M. Stewart,
offg. Traffic. Manager.

ಜಾಹಿರಾತು

THE KANARA & MYSORE TRADING AGENCY
BOMBAY.

ಕಣ್ಣಿಗೆ ತಂಪು ಕೊಡುವ

ಚಂದ್ರಕಾಂತ ಶಿಲೆಯ ಕನ್ನಡಕಗಳು.

೩॥ ರೂಪಾಯಿ ಕೆಳಗಿನ ಕ್ರಯದವು ನಮ್ಮಲ್ಲಿ ಸಿಗಲಾರವು.

ಸಾಧಾರಣ	೩॥ ರೂಪಾಯಿ		ಜರ್ಮನ್ ಕೇಸಿನಲ್ಲಿ
ಮಧ್ಯಮ	೫	„	ಜಪಾನದ ಕೇಸಿನಲ್ಲಿ
ಉತ್ತಮ	೭॥	„	ರೇಷ್ಮೆ ಕೇಸಿನಲ್ಲಿ
ಭಂಗಾರದಲ್ಲಿ ಕಟ್ಟಿದ್ದು	೧೯	„	ಪಟ್ಟೋ

ಕಿಸೆಯ ಘಡಿಯಾರವು.

ಕ್ರಯ ೭॥ ರೂಪಾಯಿ.

ಈ ಘಡಿಯಾರವು ಕಡಿಮೆ ಕ್ರಯದ್ದಾದರೂ, ಕಡಿಮೆ ಕ್ರಯದ ಘಡಿಯಾರಗಳಲ್ಲಿರುವ ಜಳ್ಳತನವು ಇದರಲ್ಲಿ ಇರುವದಿಲ್ಲ ಭದ್ರವಾದದ್ದು. ಬಳಿಕ ಬರುವಂಥಾದ್ದು.

ರಿಂಗ ಮುತ್ತು.

ಪ್ರತಿ ಲಡಿ ೧ ಕ್ಕೆ ೨॥ ರೂಪಾಯಿ ಕ್ರಯವು. ಲಡಿಯಲ್ಲಿ ೧೦೦, ೧೨೫, ೧೫೦, ೧೭೫, ಈ ರೀತಿ ಮುತ್ತುಗಳಿರುತ್ತವೆ. ಒಟ್ಟು ೧೨ ಲಡಿಗಳನ್ನು ತೆಗೆದುಕೊಂಡರೆ ೧ ರೂಪಾಯಿ ಕಡಿಮೆ ಬೀಳುವದು. ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬೇಕು.

ಮ್ಯಾನೇಜರ,

ಕೆನರಾ ಎಂಡ ಮೈಸೂರ ಟ್ರೇಡಿಂಗ ಏಜನ್ಸಿ ಆಫೀಸ, ಮುಂಬಯಿ.

MUNICIPAL NOTICE.

The following business will be transacted at the Ordinary Meeting of the Municipal Commissioners for the City of Mysore, to be held **at the Town Hall, on Saturday, the 28th January, 1893 at 8 a. m.**

Subjects.

I. Accounts of Receipts and Disbursements for the month of December, *1892*.

II. Resignation of M. Shama Rao, Municipal Commissioner, Mundi Mohalla.

III. Proceedings of the Government.—
- (1) Regarding the submission of accounts.
- (2) Informing that Government cannot build houses for Europeans and Eurasians at its cost to be rented to private individuals.
- (3) Intimating sanction for Rs. 1,500 towards the contribution of the Reception and Entertainment of H. E. *the Viceroy and Governor-General of India out of the sum* of Rs. 6,000 resolved to contribute.
- (4) Post-ponement of the question of appointing a Vice-President who could devote his whole time to the business of the Board.
- (5) Sanctioning Budget Estimates for *1892—93*.

IV. Proposals of Municipal Commissioner Mr. Ambley Anniah Pandit.—
- (1) Regarding Grant of aid to Private Schools.
- (2) Imposition of the toll Tax *on carts coming from other places into the city*.
- (3) Selection of a site for Burial Ground to the residents of Chamaraj Mohalla.
- (4) Suggestion to appoint Messrs. Davood Khan and Rahimathulla Sait to Lushker Mohalla, Mr. Dooda Mlanna to Chamraj Mohalla and Mr. Banamiah to Devaraj Mohalla as Municipal Commissioners.

V. Proposals of Messrs. H. Krishna Rao and M. Venkata Krishnaiya.—
- (1) The Election by ballot to the vacant commissionership of Mundi Mohalla of one of the following Gentlemen:—Messrs. Raghavachar, Chekkanniah and Kandare Pathe Khan.
- (2) Nomination of Mr. Narasimhaswami as additional commissioner for the Fort Mohalla.
- (3) The assignment of a site to the east of Sawar Lines for cart stand.
- (4) The completion of half-opened conservancy lanes.
- (5) Better arrangements w. h regard to conservancy and lighting and other sanitary arrangements for Kanna Gowdan Kopal, Padvarhalli and Ventikopal.
- (6) Imposition of Municipal Mohaturfa taxes in suburban villages to carry out the objects referred to in No: 5.
- (7) The formation of rubbish depots at convenient places.
- (8) Steps to collect and dispose of the rubbish and night-soil of the city, so as to form a source of income to the Board.
- (9) Appointment of a midwife for each Mohalla.

VI. Proposals of Messrs N. Subba Rao and H. Krishna Rao,—
- (1) For the imposition of tax on leather and hides.
- (2) For the collection of license fees on such factories.

VII. Proposal of Mr. Venkata Krishnaiya, Municipal commissioner;—
To appoint Messrs. Sheik Ibrahim, Asharafmiya and Narana Iyengar for Nazarbad, Devaraj and Chamraj Mohallas respectively.

VIII. Proposal of Messsrs. N. Subba Rao and Venkata Krishnaiya to put down the dust of the important streets during 2 months of hot season by watering them from Doddakere tank water.

IX. Inspection report of the school committee in connection with,—
- (1) Sarada Villasa Patasala called for in Para 17 of the Resolution dated 31st Dec. 1892.
- (2) Report of Budget Estimates for 1893—94.

X. Correspondence relating to the cost of illuminating the Post-Office building on the occasion of the visit of H. E. the Viceroy.

Deferred Subjects.

XI. Civil Surgeon's Docket regarding the proposed increase to the servants of H. H. the Maharanee's Hospital.

XII. Mr. Venkata Krishnaiya's proposals.
- (3) The closing up of well and pit latrines.
- (6) The nomination of additional commissioners.
- (7) The settlement of boundaries of Mohallas and jurisdiction of commissioners for supervising purposes.
- (8) Preparation of sketch maps and their distribution among Municipal Commissioners for information and guidance.
- (9) Measures to be taken to prevent speculation in building sites.
- (10) Election of committees for,—
  - (1) The Town Hall.
  - (2) For the satisfactory disposal of petitions, applications for sites, licenses &c., consisting of the Municipal Commissioners of each Mohalla, the Sanitary Inspector and D. P. W. Overseers.
  - (3) To aid the Vice-President in cases of land acquisitions.
  - (4) To examine and report whether the question of Mohaturfa and Octroi collection cannot be improved.

Municipal Board's Office, Mysore; *23rd January, 1893.*

N. NARASIMIENGAR,
FOR PRESIDENT.

ವಿಶೇಷ, ಪ್ರೋದಿನೋಡಿ! ಪ್ರೋದಿನೋಡಿ!! ಪ್ರೋದಿನೋಡಿ!!!

೧೮೯೩ ನೇ ವರುಷದ ಜೂನಿಯರ್ ಸರ್ಕಾರಿ ಪರೀಕ್ಷೆಯ ಟೆಕ್ಸ್ಟಿನ ನೋಟ್ಸು.

ಈ ಪರೀಕ್ಷೆಗಾಗಿ ನಿಯಮಿಸಲ್ಪಟ್ಟ ಸೋಮೇಶ್ವರಶತಕ, ಪದ್ಯಸಾರ ೧೭೯—೨೦೩ ಗೂ ಇರುವ ಪದ್ಯಗಳೂ, ಕನ್ನಡ ಭಾರತ ಕಥಾಸಂಗ್ರಹ ಸಭಾಪರ್ವ: ಇವುಗಳಿಗೆ ಅನ್ವಯ, ಅರ್ಥ, ತಾತ್ಪರ್ಯ, ಅಪದಯುವಾರ್ಥ, ವ್ಯಾಕರಣ ಸಂಗತಿಗಳು, ವಾಕ್ಯವಿಭಜನೆ, ಪೂರ್ವಕಥೆ, ಇವೇ ಮೊದಲಾದವುಗಳನ್ನು ವಿವರಿಸಿ ವ್ಯಾಖ್ಯಾನವು ಚಿಕ್ಕಮಗಳೂರು ಇಂಗ್ಲೀಷ್ ಹೈಸ್ಕೂಲ್ ಪಂಡಿತರಾದ ಎಸ್. ರಾಘವೇಂದ್ರಾಚಾರ್ಯರಿಂದ ಬರೆಯಲ್ಪಟ್ಟು ಈ ಮುದ್ರಾಶಾಲೆಯಲ್ಲಿ ಪ್ರಿಂಟಾಗುತ್ತಲಿದೆ. ಈ ನೋಟ್ಸು ಗವರ್ನಮೆಂಟ್ ಪ್ರತಿಗನುಸಾರವಾಗಿ ಇದೆ. ಕಾಪಿಗಳು ಸ್ವಲ್ಪವಾಗಿಯೇ ಪ್ರಿಂಟು ಮಾಡುವುದರಿಂದ ಅಪೇಕ್ಷೆಯುಳ್ಳವರು ಜಾಗ್ರತೆಯಾಗಿ ಜನವರೀ ತಿಂಗಳೊಳಗಾಗಿ ಈ ಕೆಳಗಿನ ವಿಳಾಸದಾರರಿಗೆ ಬರೆದು ತರಿಸಿಕೊಳ್ಳಬಹುದು. ಕ್ರಯ ೮ ಆಣೆ. ಪೋಸ್ಟೇಜು ೧ ಆಣೆ. ಮತ್ತು ಆದಿಪರ್ವ, ಸಭಾಪರ್ವ, ವಿರಾಟಪರ್ವ, ಭೀಷ್ಮಪರ್ವ, ದ್ರೋಣಪರ್ವ, ಶಲ್ಯಪರ್ವ, ಸೌಪ್ತಿಕಪರ್ವ, ಸ್ತ್ರೀಪರ್ವ, ಶಾಂತಿಪರ್ವ—ರಾಜಧರ್ಮ, ಆಪದ್ಧರ್ಮ, ಮೋಕ್ಷಧರ್ಮ ಈ ಪರ್ವಗಳು ಪ್ರಿಂಟಾಗಿ ಬಿಕರಿಗೆ ಸಿದ್ಧವಾಗಿವೆ. ಈಗ ಅನುಶಾಸನೀಕಪರ್ವವು ಪ್ರಿಂಟಾಗುತ್ತಲಿದೆ. ಇಷ್ಟವುಳ್ಳವರು ತರಿಸಿಕೊಳ್ಳಬಹುದು.

ಎಂ. ರಾಮಸ್ವಾಮಿ ಅಂಡ್ ಸನ್,
ಪ್ರೊಪ್ರೈಟರ್ಸ್, ಶ್ರೀಮಾರುತಿ ಪ್ರಿಂಟಿಂಗ್ ಪ್ರೆಸ್,
ಬಳೇಪೇಟೆ ರೋಡ್, ಬೆಂಗಳೂರು.

ಮೈಸೂರು ಶ್ರೀಮನ್ಮಹಾರಾಜರವರ ತೃತೀಯ ಪುತ್ರರಾದ ದೇವರಾಜವಡೆಯರೆಂಬ ನಾಮಕರಣವಾಗಿದ್ದ ೭ ತಿಂಗಳಿನ ಶಿಶುವು, ಈಗ ೧—೨ ದಿವಸಗಳಿಂದಲೂ ಶರೀರ ಸೌಖ್ಯವಿಲ್ಲದೆ ಇದ್ದು ಕಳೆದ ಸೋಮವಾರದ ದಿವಸ ಸಂಜೆಗೆ ಮಧ್ಯಾಹ್ನ ಸುಮಾರು ೧-೨ ಘಂಟೆಯಲ್ಲಿ ಕಾಲಾಧೀನರಾದರು. ಈ ವ್ಯಸನಕರವಾದ ವೃತ್ತಾಂತವನ್ನು ಈ ಪತ್ರಿಕಾ ಮೂಲಕ ನಮ್ಮ ವಾಚಕರಿಗೆ ತಿಳಿಸ ಬೇಕಾದುದಕ್ಕಾಗಿ ತುಂಬಾ ವಿಷಾದಿಸುತ್ತೇವೆ.

ವೃತ್ತಾಂತ ಪತ್ರಿಕೆ.

—o—

೧೮೯೩ ನೇ ಇಸವಿ ಜನವರಿ ತಾ|| ೨೬ ನೇ ಗುರುವಾರ.

ಜಾರಿ ವಿಚಾರ.

ಅನೇಕ ನಿಷ್ಠುರ ಮೊಕದ್ದಮೆಗಳಲ್ಲಿ ಬಹು ದಿವಸಗಳಿಂದ ಉಚ್ಛ್ರಯವಾದ ಜಾತೆಯಲ್ಲಿ ಪಂಜಾಬಿನವರು ಇದ್ದುಕೊಂಡು ಮೊಕದ್ದಮೆಗಳನ್ನು ಫೈಸಲ್ ಮಾಡುತ್ತಿದ್ದರು. ಪಂಜಾಬಿನವರು ಮೊಕದ್ದಮೆಯ ಸಾರಾಂಶವನ್ನೆಲ್ಲಾ ಕೇಳಿ ತಪ್ಪು ಆಪಾದನೆ ಮಾಡಲ್ಪಟ್ಟವರು ಅಪರಾಧಿಗಳು ಅಥವಾ ನಿರಪರಾಧಿಗಳೆಂದು ಬಹುಮತಿಗೆ ಅನುಸಾರವಾಗಿ ಹೇಳುತ್ತಿದ್ದರು. ಇವರ ಹೇಳಿಕೆಗೆ ಅನುಸಾರವಾಗಿ ಜಡ್ಜಿಗಳು ತೀರ್ಪು ಮಾಡುತ್ತಿದ್ದರು. ಈಚೆಗೆ ಬಂಗಾಳದಲ್ಲಿ ಕೆಲವು ದೊಂಬಿಗಳು ನಡೆದವು. ಆ ದೊಂಬಿಯಲ್ಲಿ ಸೇರಿದ್ದವರಿಗೆ ಶಿಕ್ಷೆ ವಿಧಿಸಬೇಕೆಂದು ಬಂಗಾಳಾ ಸರಕಾರದವರು ಅವರ ಮೇಲೆ ಛಾರ್ಜ್ ಮಾಡಿಸಿದರು. ಈ ಛಾರ್ಜುಗಳು ಜಾರಿಗಳ ಸಹಾಯದಿಂದ ವಿಚಾರಣೆಯಾಗತಕ್ಕವುಗಳಾಗಿದ್ದುದರಿಂದ ಆ ರೀತಿಯಲ್ಲಿ ವಿಚಾರಣೆಯಾಯಿತು. ಆ ವಿಚಾರಣೆಯಲ್ಲಿ ಯಾರಿಗೆ ಶಿಕ್ಷೆಯಾಗಬೇಕೆಂದು ಸರಕಾರದವರು ಭಾವಿಸಿದ್ದರೋ ಅಂಥವರನ್ನು ನಿರಪರಾಧಿಗಳೆಂದು ಜಾರಿಯವರು ಅಭಿಪ್ರಾಯವನ್ನು ಕೊಟ್ಟರು. ಈ ಅಭಿಪ್ರಾಯಕ್ಕನುಸಾರವಾಗಿ ಜಡ್ಜಿಗಳೂ ಕೂಡ ಪ್ರತಿವಾದಿಗಳು ಏನೂ ತಪ್ಪು ಅಪರಾಧ ಮಾಡಲ್ಪಟ್ಟವರನ್ನು ನಿರಪರಾಧಿಗಳೆಂದು ಡಿಸ್ಚಾರ್ಜ್ ಮಾಡಿದರು. ಇದಕ್ಕಾಗಿ ಜಾರಿಗಳನ್ನು ಇಟ್ಟುಕೊಂಡು ಮಾಡತಕ್ಕ ಕ್ರಿಮಿನಲ್ ಮೊಕದ್ದಮೆಗಳ ವಿಚಾರಣೆಯನ್ನೇ ವಜಾ ಮಾಡಿದ ಒಂದು ನೋಟಿಫಿಕೇಷನನ್ನು ಬಂಗಾಳದ ಲೆಫ್ಟಿನೆಂಟ್ ಗವರ್ನರಾದ ಸರ್ ಛಾರ್ಲ್ಸ್ ಇಲಿಯಟರವರು ಗೆಜೆಟ್ಟಿನಲ್ಲಿ ಪ್ರಚುರ ಮಾಡಿಸಿದರು. ಇದರಮೇಲೆ ವರ್ತಮಾನ ಪತ್ರಿಕೆಗಳಲ್ಲಿ ಚರ್ಚೆಗಳು ವಿಪರೀತವಾಗಿ ನಡೆಯುತ್ತಿವೆ. ಸಾಮಾನ್ಯವಾಗಿ ಎಲ್ಲಾ ಹಿಂದೂಪತ್ರಿಕೆಗಳೂ ಈ ನೋಟಿಫಿಕೇಷನ್ನಿಗಾಗಿ ಲೆಫ್ಟಿನೆಂಟ್ ಗವರ್ನರವರು ಮತ್ತು ವೈಸರಾಯಿರವರು ಪೂರ್ವಾಪರ ಯೋಚನೆ ಮಾಡದೆ, ಪರಿಣಾಮಫಲವನ್ನು ನೋಡದೆ, ಜನಗಳ ತಾತ್ಪರ್ಯವನ್ನು ತಿಳಿದುಕೊಳ್ಳದೆ, ಪ್ರಜೆಗಳ ಧನ ಮಾನ ಪ್ರಾಣ ಇವುಗಳ ಸಂರಕ್ಷಣೆಗೋಸ್ಕರವೂ, ಕ್ರಿಮಿನಲ್ ಮೊಕದ್ದಮೆಗಳಲ್ಲಿ ಧರ್ಮ ಪ್ರವರ್ತನೆಗೂ, ನಿಷ್ಪಕ್ಷಪಾತಕ್ಕೂ, ನಡೆಗೊಳ್ಳುವದಕ್ಕೋಸ್ಕರವೂ, ಅಂಗ್ಲೇಯರು ಏರ್ಪಾಡು ಮಾಡಿರತಕ್ಕ ಈ ಜಾರಿಯ ಏರ್ಪಾಡನ್ನು ರದ್ದು ಮಾಡಿದ್ದು ಬಹಳ ಅಸಂಗತವಾದದ್ದೆಂಬುದಾಗಿಯೂ, ಹೀಗೆ ಮಾಡಿದ್ದು ಬಹಳ ಅನರ್ಥಕಾರಿಯೂ ಎಂಬುದಾಗಿಯೂ ಘಂಟಾಘೋಷವಾಗಿ ಹೇಳುತ್ತಾರೆ. ಈ ದೇಶದಲ್ಲಿ ಇಂಗ್ಲೀಷಜನರಿಂದ ನಡೆಸಲ್ಪಡತಕ್ಕ ವರ್ತಮಾನ ಪತ್ರಿಕೆಗಳಲ್ಲಿಯೂ ಅನೇಕ ಪತ್ರಿಕೆಗಳು ವೈಸರಾಯಿರವರನ್ನೂ, ಮತ್ತು ಲೆಫ್ಟಿನೆಂಟ್ ಗವರ್ನರವರನ್ನೂ, ರಾಜತಂತ್ರ ವಿಚಾರದಲ್ಲಿ ವಿಶೇಷ ಮೌಢ್ಯವನ್ನು ತೋರ್ಪಡಿಸಿರುತ್ತಾರೆಂದು ನಿಂದಿಸಿರುತ್ತಾರೆ. ಬಂಗಾಳದ ನಿವಾಸಿಗಳು ಪ್ರತಿಭಟಿಸಿ, ಅನೇಕ ಸಹಸ್ರ ಜನಗಳು ಸೇರಿ, ಮೀಟಿಂಗ್ ಮಾಡಿ, ಈ ವಿಷಯದಲ್ಲಿ ಮಾಡಿರತಕ್ಕ ನೋಟಿಫಿಕೇಷನ್ ಪ್ರಜೆಗಳ ಕ್ಷೇಮಕ್ಕೆ ಪ್ರತಿಕೂಲವಾದದ್ದೆಂಬುದಾಗಿಯೂ, ಅದನ್ನು ಕೂಡಲೆ ರದ್ದು ಮಾಡಬೇಕೆಂಬುದಾಗಿಯೂ, ರೆಜಲ್ಯೂಷನ್‌ಗಳನ್ನು ಮಾಡಿದರು. ಈ ರೆಜಲ್ಯೂಷನ್ ಮಾಡುವದಕ್ಕೋಸ್ಕರ ಸೇರಿದ್ದ ಸಭೆಗೆ, ಧರ್ಮಶಾಸ್ತ್ರವಿಚಾರವುಳ್ಳ ಅನೇಕ ಇಂಗ್ಲೀಷ್ ಬ್ಯಾರಿಸ್ಟರುಗಳೇ ಮೊದಲಾದವರು ಸೇರಿ ಇದ್ದರು. ಇವರೆಲ್ಲರೂ ಏಕಮತ್ಯದಿಂದ ಸರಕಾರದವರು ಪೂರ್ವಾಪರ ವಿಚಾರವಿಲ್ಲದೆ ಹಾಕಿದ ನೋಟಿಫಿಕೇಷನನ್ನು ನಿಂದಿಸಿದರು. ಇದಲ್ಲದೆ, ವಿಲಾಯತಿಯಲ್ಲಿ ಇರತಕ್ಕ ವರ್ತಮಾನ ಪತ್ರಿಕಾಕರ್ತರು ಈ ವಿಷಯದಲ್ಲಿ ಇಂಡಿಯಾ ಗವರ್ನಮೆಂಟಿನವರು ಮಾಡಿರತಕ್ಕ ತಪ್ಪನ್ನು ಬಹಳ ಕ್ರೂರವಾಗಿಯೂ, ಕಠಿಣವಾಗಿಯೂ ಇರತಕ್ಕ ವಾಕ್ಯಗಳಿಂದ ನಿಂದಿಸಿರುವದಲ್ಲದೆ, ಕೆಲವು ಪತ್ರಿಕಾಕರ್ತರು ಇವರಿಬ್ಬರನ್ನೂ ಕೆಲಸದಿಂದ ನಿವೃತ್ತಿ ಮಾಡಬೇಕೆಂಬುದಾಗಿಯೂ ಬರೆದು ಇದ್ದಾರೆ. ಸ್ಟೇಟ್ ಸೆಕ್ರೆಟರಿಯವರಾದ ಲಾರ್ಡ್ ಕಿಂಬರ್ಲಿಯವರು, ಇಂಡಿಯಾ ಗವರ್ನಮೆಂಟಿನವರು ಈ ವಿಷಯದಲ್ಲಿ ಮಾಡಿರತಕ್ಕ ಏರ್ಪಾಡನ್ನು ನೋಡಿ ಬಹಳ ಅಸಮಾಧಾನದಿಂದ, ಈ ಏರ್ಪಾಡನ್ನು ವಾಪಸು ತೆಗೆದುಕೊಳ್ಳಬೇಕೆಂದು ವೈಸರಾಯಿರವರಿಗೆ ಬರೆದಂತೆಯೂ, ಗೌರವದಿಂದ ವಾಪಸು ತೆಗೆದುಕೊಂಡು, ಹೋಗಿರುವ ಮಾನವನ್ನು ಕಾಪಾಡಿಕೊಳ್ಳುವದಕ್ಕೋಸ್ಕರ ಒಂದು ಉಪಾಯವನ್ನು ಇಂಡಿಯಾ ಗವರ್ನಮೆಂಟಿನವರು ಪರ್ಯಾಲೋಚಿಸುತ್ತಿರುವಂತೆಯೂ, ಕೆಲವು ದೇಶೀಯ ವರ್ತಮಾನ ಪತ್ರಿಕಾಕರ್ತರು ಹೇಳುತ್ತಾರೆ. ಮದರಾಸ್ ಹೇರಲ್ಡ್ ಪತ್ರಿಕಾಕರ್ತರು ಈ ಏರ್ಪಾಡನ್ನು ಇಟ್ಟುಕೊಳ್ಳುವದನ್ನೂ, ಬಿಡುವದನ್ನೂ ನಿಷ್ಕರ್ಷೆ ಮಾಡುವದಕ್ಕೋಸ್ಕರ ಒಂದು ಕಮಿಷನನ್ನು ಏರ್ಪಾಡು ಮಾಡಿ ಈ ನೋಟಿಫಿಕೇಷನನ್ನು ಇಂಡಿಯಾ ಗವರ್ನಮೆಂಟಿನವರು ರದ್ದು ಮಾಡಬೇಕೆಂಬ ಸ್ಥಿತಿಗೆ ಬಂದಿರುತ್ತಾರೆಂದು ಹೇಳುತ್ತಾರೆ. ಹಾಗೆ ಮಾಡದೆ ಇದ್ದಪಕ್ಷದಲ್ಲಿಯೂ, ಸ್ಟೇಟ್ ಸೆಕ್ರೆಟರಿಯವರು ಈ ವಿಷಯದಲ್ಲಿ ಪ್ರವರ್ತಿಸದೆ ಇದ್ದಪಕ್ಷದಲ್ಲಿಯೂ, ನ್ಯಾಷನಲ್ ಕಾಂಗ್ರೆಸ್ ಕಮಿಟಿಯವರು ಈ ವಿಚಾರವನ್ನು ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ವಿಚಾರಣೆಗೆ ತಂದು ಇಂಡಿಯಾ ಗವರ್ನಮೆಂಟಿನವರ ಪ್ರವರ್ತನವನ್ನು ಅವರ ನೋಟೀಸಿಗೆ ತರಿಸಬೇಕೆಂದು ನಿಷ್ಕರ್ಷೆ ಮಾಡಿದ್ದಾರೆ. ಹೀಗೆಲ್ಲಾ ಆಗುವದಕ್ಕೆ ಮುಂಚೆಯೇ ಇಂಡಿಯಾ ಗವರ್ನಮೆಂಟಿನವರು ಈ ನೋಟಿಫಿಕೇಷನನ್ನು ರದ್ದು ಮಾಡುವರೆಂದು ನಾವು ನಂಬಿ ಇದ್ದೇವೆ.

ದೇವತಾ ಪ್ರಾರ್ಥನೆ.

ಮನುಷ್ಯನು ಮಾಡತಕ್ಕ ಸರ್ವ ಪ್ರಯತ್ನಗಳೂ ಸಫಲವಾಗತಕ್ಕದ್ದು ಸರ್ವೇಶ್ವರನಿಂದ. ಸತ್ಪ್ರವೃತ್ತಿಯಲ್ಲಿ ನಿರತರಾಗಿರತಕ್ಕವರಿಗೆ ತರಂಗ ತರಂಗಗಳಾಗಿ ವಿಘ್ನ ಪರಂಪರೆಗಳು ಬರುವದು ಸದ್ಯ್ಯಪ್ರಯೋಗಗಳಿಗೆ ಹಿಂದೆ ಸಂಭವಿಸಬಹುದಾಗಿದ್ದ ಅಭ್ಯಂತರಗಳನ್ನೆಲ್ಲಾ ನಿವಾರಣೆ ಮಾಡಿದ್ದಕ್ಕೋಸ್ಕರವಾಗಿಯೂ, ಮುಂದೆ ಯಾವ ವಿಧವಾದ ವಿಘ್ನವೂ ಇಲ್ಲದೆ ನಮ್ಮ ಅಷ್ಟಸಿದ್ಧಿಯಾಗಿ ನಮ್ಮನ್ನು ಕಾಪಾಡುವದಕ್ಕೋಸ್ಕರವಾಗಿಯೂ, ಅನಂತಾನಂತನಾಗಿರತಕ್ಕವನನ್ನು ಪ್ರಾತಃಕಾಲದಲ್ಲಿಯೂ, ಸಾಯಂಕಾಲದಲ್ಲಿಯೂ ಪ್ರಾರ್ಥನೆ ಮಾಡುವ ಮತ್ತಿತರೂ ಅಲಂಘನೀಯವಾಗಿರತಕ್ಕ ಬೇರೆ ಯಾವ ಧರ್ಮವೂ ಇಲ್ಲದಿರುವದರಿಂದ, ನಮ್ಮ ವಾಚಕರಿಗೆ ಅಂಥಾ ಪ್ರಾರ್ಥನೆಯನ್ನು ಇಲ್ಲಿ ತಿಳಿಸುವೆವು.

ಪ್ರಾತಃಕಾಲದಲ್ಲಿ.

ಎಲೈ ಸರ್ವ ರಕ್ಷಕನೇ, ಈ ಭೂಲೋಕದಲ್ಲಿ ಮತ್ತೊಂದು ಮಂಗಳ ಸೂರ್ಯೋದಯವನ್ನು ನೋಡುವಂತೆ ನಮ್ಮನ್ನು ರಕ್ಷಿಸಿದ್ದಕ್ಕೋಸ್ಕರವಾಗಿ ಪ್ರಾರ್ಥನಾರೂಪದಲ್ಲಿ ನಿನಗೆ ನಮ್ಮ ಕೃತಜ್ಞತೆಯನ್ನು ತೋರ್ಪಡಿಸಿ, ಅನಂತರ ಈ ಹಗಲಿನ ವಿಷಯದಲ್ಲಿ ಪರ್ಯಾಲೋಚಿಸುವೆವು. ನಮ್ಮ ದಿವಸಗಳೆಲ್ಲವೂ ನಿನ್ನದಾಗಿರುವವರಿಂದ ನಿನಗೋಸ್ಕರವಾಗಿಯೇ ವಿನಿಯೋಗಿಸಲ್ಪಡಲಿ. ದಿವಸಗಳು ಪವಿತ್ರವಾಗಿರುವದರಿಂದ ಅತಿ ಜಾಗರೂಕತೆಯೊಡನೆ ವ್ಯಯ ಮಾಡಲಿ. ಹಿಂದೆ ನಾವು ಮಾಡಿರತಕ್ಕ ದೋಷಗಳನ್ನು ಕ್ಷಮಿಸಿ, ಮುಂದೆ ನಡೆಯಾಗಿ ಪ್ರಸ್ತುತವಾಗಬಹುದಾದ ಅನರ್ಥಕರವಾದ ದಿವಸಗಳಲ್ಲಿ ಪಾಪ ವಿಧದನ್ನು ಕೊಡು. ನಮ್ಮದಾಗಿರುವ ಈ ದಿವಸದಲ್ಲಿ ನಿನ್ನ ಮಹಿಮೆಗಳನ್ನು ತೋರ್ಪಡಿಸು. ಎಲೈ ಸ್ವಾಮಿಯೇ, ನಾವು ನಮ್ಮ ಲೌಕಿಕ ಕಾರ್ಯಗಳಿಗೆ ಹೋಗುವೆವು. ಕೆಲಸಗಳಲ್ಲಿ ನಡೆಗೆ ಅದನ್ನು ನಡೆಸು. ನಮ್ಮ ಕರ್ತವ್ಯವನ್ನು ವಿಶದವಾಗಿ ತಿಳಿಸಿ, ಕೆಲಸಗಳನ್ನು ವಿಶ್ವಸ್ತರಾಗಿ ಮಾಡುವಂತೆ ಸಹಕಾರಿಯಾಗು. ನಾವು ಮಾಡತಕ್ಕ ಸಮಸ್ತ ಕಾರ್ಯಗಳೂ ನಿನ್ನ ದೃಗ್ಗೋಚರಕ್ಕೆ ಯೋಗ್ಯವಾಗುವಂತೆ ಪರಿಷ್ಕಾರವಾಗಿರಲಿ. ಕೆಲಸವನ್ನು ಮಾಡುವದಕ್ಕೆ ತಕ್ಕ ಬಲವನ್ನೂ, ತಾಳ್ಮೆಯನ್ನೂ ಕೊಟ್ಟು ನಮ್ಮನ್ನು ಅವಿರೋಧ ಚಿತ್ತರನ್ನಾಗಿ ಮಾಡು. ನಾವು ಶ್ರದ್ಧೆಯಿಂದ ಕಾಲದಲ್ಲಿ ಸಂತೃಪ್ತಿ ಪ್ರವರ್ತಕರಾಗಿರುವಾಗ ಸಹಾಯಕನಾಗು. ನಮ್ಮ ಕೆಲಸದ ಜಿಡುಕಿನಲ್ಲಿ ಎಂದಿಗೂ ಆ ಕೆಲಸವು ನಿನ್ನ ಕೆಲಸವೆಂದು ಭಾವಿಸುವಂತೆ ಮಾಡು. ನಿನ್ನ ವಿಷಯದಲ್ಲಿ ನಮಗಿರತಕ್ಕ ಅತ್ಯಧಿಕವಾದ ಪ್ರೀತಿಯು ದಿನೇದಿನೇ ಅಭಿವೃದ್ಧಿ

ಹಜಾರಕಮಾದವುಗಳೂ ನಿನ್ನ ಅಪರಿಮಿತವಾದ ದಯೆಯಿಂದಲ್ಲಿ ಪ್ರಕಾಶಿಸುವಂತೆ ಅನುಗ್ರಹಿಸು. ನಮ್ಮ ಪ್ರೀತಿಗ ಪಾತ್ರರಾಗಿರತಕ್ಕವರಿಗೆ ಅಲ್ಪಮಾಪದ್ರಗಳು ಸಹಾಗೆ ಆಪತ್ಕಾರ್ಯವಾಗಿರುವವು. ಯಜಮಾನನು ಪ್ರೀತಿಯುಳ್ಳವನಾಗಿರತಕ್ಕ ಕಾಲದಲ್ಲಿ ಆತನ ಸೇವೆಯೂ ಸುಖಪ್ರದವಾಗಿಯೇ ಇರುವದು.

ಚರಾಚರಗಳು ಪ್ರತಿಕೂಲರಾಗಿ ಆತ್ಮಗಳಿಗೆ ಕ್ಲೇಶ ಉಂಟಾಗಿ ನಾವು ವ್ಯಸನಾತುರರಾಗತಕ್ಕ ಸಂದರ್ಭದಲ್ಲಿ, ಪಾಪಾತ್ಮರಾದವರ ವಿತಂಡವಾದಗಳನ್ನೆಲ್ಲಾ ಸಹಿಸಿಕೊಂಡಿದ್ದ ನಿನ್ನನ್ನು ಸ್ಮರಿಸೋಣ. ನಮ್ಮ ಕೆಲಸವು ನೀಚವಾಗಿಯೂ, ವೃತ್ತಿಯು ಅಲ್ಪವಾಗಿದ್ದಾಗ, ತಿರಿದು ಬಂದು, ವೈದಗ್ಧ್ಯ ಪ್ರದವರು ಮಾಡತಕ್ಕ ಕೆಲಸಗಳನ್ನು ಅಪೇಕ್ಷಿಸಿ ತನ್ನ ಸೇವೆಯ ವಿಷಯದಲ್ಲಿ ರೋಷವುಳ್ಳವನಾಗಿ ಹಿಂಸಿಸುವಾಗಳನ್ನೆಲ್ಲಾ ಭಕ್ಷಿಸದ್ದವರೆ ಉದ್ಧಾರಕನಾದ ಸರ್ವರಕ್ಷಕನ ಸ್ಮರಣೆಯು ಸಹಾಯ ಮಾಡಲಿ. ಆತ್ಮವು ಮನಸ್ಸಿಗೆ ಅಧೀನವಾಗಿದ್ದೂ, ಶರೀರವು ದುರ್ಬಲವಾಗಿದ್ದೂ ಇರತಕ್ಕ ಕಾಲದಲ್ಲಿಯೂ ಅಥವಾ ಸಂಭವಿಸೀತೆಂಬ ಭಯವಾಗಲಿ, ಕಷ್ಟ ಪ್ರಾಪ್ತಿಯಾದೀತೆಂಬ ಆಲೋಚನೆಯಾಗಲೀ ಇರತಕ್ಕ ಕಾಲದಲ್ಲಿಯೂ, ಅನಾದಿಯಿಂದ ವ್ಯಾಕುಲಿತರಾಗಿದ್ದೂ ಅಲಕ್ಷ್ಯವೃತ್ತರಾಗಿದ್ದೂ ಇರತಕ್ಕ ಕಾಲದಲ್ಲಿಯೂ ಇಹಲೋಕದ ಭೋಗವು ನಶಿಸಿಹೋಗುತ್ತಾ ಕರಗುವಾಗಲೂ, ಸಮ್ಮೋಹಪ್ರೇರಿತನಾಗಿ ನಿಲ್ಲುವಂತ ವ್ಯಸನದಿಂದ ಹೇಳುವಾಗಲೂ, ಎಲೈ ಸ್ವಾಮಿಯೇ, ನೀನು ಸಹಾಯಕನಾಗು. ದುರ್ಬಲವಾದ ನಮ್ಮ ಮನಸ್ಸು ನಿನ್ನ ಮಾರ್ಗವನ್ನು ಅವಲಂಬಿಸುವಂತೆ ಸಾಧಕನಾಗಿ, ಸಾಯಂಕಾಲದ ವರೆವಿಗೂ ನಮ್ಮ ಕೆಲಸದಲ್ಲೇ ಉತ್ಸುಕತರಾಗಿರುವಂತೆ ಮಾಡಿ, ಅನಂತರ ವಿಶ್ರಾಂತಿಯನ್ನು ಕೊಡು. ಪ್ರಭುವೊಬ್ಬನೂ ತನ್ನ ಕೆಲಸವನ್ನು ಮಾಡಿ, ತನ್ನ ನಿತ್ಯವನ್ನು ಕಲಿತು, ತನ್ನ ಭಾರವನ್ನು ತಾನೆ ಹೊರುವಂತೆ ಮಾಡು. ಯಜಮಾನನು ನ್ಯಾಯವಾಗಿಯೂ, ಸೇವಕನು ಸಂತೃಪ್ತನಾಗಿಯೂ ಇರಲಿ. ಮಕ್ಕಳು ಪಾಠಶಾಲೆಯಲ್ಲಿರುವಾಗ ಅವರ ಬಳಿಯಲ್ಲಿರುವ ಹೆಂಗಸರು ಗೃಹಕೃತ್ಯದಲ್ಲಿ ನಿರತರಾಗಿರಲಿ.

ವಿಶ್ರಾಂತಿಯನ್ನು ಹೊಂದುವಾಗ ನಮ್ಮನ್ನು ಆಶೀರ್ವದಿಸು. ಕಷ್ಟಾನಂತರ ಬರತಕ್ಕ ಸುಖವು ಆತ್ಯಲ್ಪ ನಿಕರವಾಗುವಂತೆ ಮಾಡು. ನಮ್ಮ ಆಹಾರವನ್ನು ಹಸಿಗೆಯನ್ನು ಆಶೀರ್ವದಿಸು. ಕ್ಷಮಾಶೀಲನಾಗಿರತಕ್ಕ ನಿನ್ನ ಪ್ರೀತಿಯಿಂದ ಘಾತವಾಗಿ, ದಾಂಪತ್ಯದ ವೃತ್ತಿಗೆ ದೂರನಾಗಿದ್ದೂ, ಬೇರೊಬ್ಬರಿಗೆ ಅಸ್ಪದವಿಲ್ಲದೆಯೂ ಇರತಕ್ಕ ಸ್ಥಳಕ್ಕೆ ನಮ್ಮನ್ನು ಸೇರಿಸು.

ಸಾಯಂಕಾಲದಲ್ಲಿ.

ಅತಿಪ್ರಿಯನಾಗಿಯೂ, ನಿತ್ಯ ಜಾಗ್ರತನಾಗಿಯೂ ಇರತಕ್ಕ ನ್ಯಾಯಾಧೀಶನೇ ವಿಶ್ರಮಿಸಿಕೊಳ್ಳತಕ್ಕ ಕಾಲದಲ್ಲಿ ನಮ್ಮನ್ನು ಕಾಪಾಡು. ನಾವು ನಿದ್ರಾಪರರಾಗಿರತಕ್ಕ ಕಾಲದಲ್ಲಿಯೂ ನಿನ್ನ ಧ್ಯಾನದಲ್ಲೇ ನಿರತರಾಗುವಂತೆ ಮಾಡು. ನಿದ್ರೆ ಮಾಡುತ್ತಲಿರುವ ಪಕ್ಷಿಗಳನ್ನು ತಾಯಿಯು ಕಾಯುವಂತೆ ನೀನು ನಮ್ಮನ್ನು ಕಾಯುತ್ತಲಿದ್ದು, ಪುನಃ ನಿನ್ನನ್ನು ಸ್ತುತಿಸುವದಕ್ಕೂ ನಮ್ಮ ನಿತ್ಯಕರ್ಮಗಳನ್ನು ಮಾಡುವದಕ್ಕೂ ಪ್ರಾತಃಕಾಲದಲ್ಲಿ ಎಬ್ಬಿಸು. ನಮ್ಮ ಬಲಹೀನತೆಗಳಲ್ಲಿ, ಕಾರ್ಯಸಿದ್ಧಿಯಿಲ್ಲದಿರುವಿಕೆಯಲ್ಲಿ, ಇತರರ ಸ್ತುತಿಯಿಂದಲಾಗಲೀ, ಸ್ವಾಭಿಮಾನದಿಂದಲಾಗಲೀ, ಆತ್ಮಶ್ಲಾಘನೆಯಿಂದಲಾಗಲಿ, ವೃಥಾಭಿಮಾನಿಯಾಗಿಯೂ, ಗರ್ವಿತನಾಗಿಯೂ ಇದ್ದರೆ, ನಮ್ರತೆಯನ್ನೂ, ಸತ್ಯಪ್ರಕಾಶವನ್ನೂ ನಿನ್ನ ಆಧೀನರಾಗುವ ದನ್ನೂ, ನಿದ್ರಾಪರರಾಗುವಾಗ ನಾವು ಅವಲಂಬಿಸತಕ್ಕ ನಿಜಸ್ಥಿತಿಯನ್ನೂ ಕಲಿಸಲಿ. ನಿದ್ರೆ ಬಾರದಿದ್ದರೆ ನಿತ್ಯ ಜಾಗೃತನಾದ ನಿನ್ನ ಸ್ಮರಣೆಯಲ್ಲಿಯೂ, ಅಮೋಘವಾದ ಪ್ರೀತಿಯುಳ್ಳ ಏಸುಕ್ರಿಸ್ತನ ಸ್ಮರಣೆಯಲ್ಲಿಯೂ, ಸುಖದಾಯಕನಾದ ಪರಮಾತ್ಮನ ಸ್ತೋತ್ರದಲ್ಲಿಯೂ, ನಮಗೆ ಪ್ರೀತಿಪಾತ್ರರಾಗಿರತಕ್ಕವರ ಸ್ಮರಣೆಯಲ್ಲಿಯೂ, ಪರಲೋಕ ಪ್ರಾಪ್ತಿಯ ವಿಷಯದಲ್ಲಿಯೂ ಇದೇ ಮೊದಲಾದವುಗಳಲ್ಲಿ ನಮ್ಮ ಮನಸ್ಸು ಆಸಕ್ತವಾಗಲಿ. ಬಾಧಕವಾಗಿರತಕ್ಕ ಹಾಸಿಗೆಯನ್ನು ಉಪಯೋಗಿಸತಕ್ಕ ಈ ಕಾಲದಲ್ಲಿ ನಮ್ಮ ಮರಣವನ್ನು ಕುರಿತು ಯೋಚಿಸಲು ಹೇಳದಂತೆ ಮಾಡು. ಅವಸಾನ ಕಾಲ ಪ್ರಾಪ್ತವಾದಾಗ, ಮರಣ ಸಮಯಕವಾದ ದೀರ್ಘನಿದ್ರೆಗೆ ಸಮಾಧಾನದಿಂದ ಭೀತರಾಗಿ ಎಚ್ಚರಗೊಳಿಸಿದಂತೆ ಮಾಡು. ನಿನ್ನ ಮಹಿಮೆಗೋಸ್ಕರವಾಗಿ ಬದುಕಿದ್ದರೆ ನಿನ್ನಲ್ಲಿಯೇ ಮರಣವನ್ನು ಹೊಂದಿ, ಪುನರುತ್ಥಾನವನ್ನು ಹೊಂದಿ, ಹೊಸ ಜೀವದಿಂದಿರುವೆವು.

ಈ ದಿವಸದಲ್ಲಿಯೂ, ಹಿಂದೆಯೂ ನಾವು ಮಾಡಿರತಕ್ಕ ಪಾಪಗಳನ್ನು ಕ್ಷಮಿಸು. ಪಾಪ ವಿಮೋಚಿತರಾಗಿಯೂ, ನಿಶ್ಚಿಂತರಾಗಿಯೂ, ನಿನ್ನ ಮಕ್ಕಳಂತೆ ವಿಶ್ರಾಂತಿ ಹೊಂದಿ, ನಾಳೆ ದಿವಸದ ಚಿಂತೆಯನ್ನೆಲ್ಲಾ ನಿನಗೆ ಒಪ್ಪಿಸುವಂತೆ ಸಹಾಯಕನಾಗು. ನಮ್ಮನ್ನು ಹಿಂಸಿಸಿ ಅಪಮಾನಪಡಿಸತಕ್ಕವರನ್ನೆಲ್ಲಾ ಕ್ಷಮಿಸುವಂತೆ ಅನುಗ್ರಹಿಸು. ನಾವು ಎಚ್ಚರಗೊಂಡಾಗ ಜಾಗರೂಕರಾಗಿರಿಸು. ನಿನ್ನ ಅನುಗ್ರಹವಿದ್ದರೆ, ಪ್ರಾತಃಕಾಲದಲ್ಲಿ ನಮ್ಮನ್ನು, ಆರೋಗ್ಯಶಾಲಿಯಾಗಿಯೂ, ಬಲಶಾಲಿಯಾಗಿಯೂ ಎಬ್ಬಿಸು. ಆದರೆ ಈ ದೀರ್ಘವಾದ ನಿದ್ರೆಯೇ ಕೊನೆಯದಾಗಿ, ಸೂರ್ಯೋದಯವು ಪುನಃ ನಮಗೆ ದರ್ಶನವಾಗದಿದ್ದರೆ, ನಿನ್ನ ಚಿತ್ತವಿದ್ದಂತಾಗಲಿ. ನಮ್ಮ ಹೃದಯವು ನಿನ್ನಲ್ಲೇ ಆಸಕ್ತವಾಗಿರಲಿ, ಸಮಾಧಾನಚಿತ್ತರಾಗಿ ಹೋಗುವಂತೆ ಏಸುಕ್ರಿಸ್ತನ ಮೂಲಕವಾಗಿ ಮಾಡು.

ಖಳವೇಕ ವೃತ್ತಾಂತಗಳು.

ಮದರಾಸ್ ಪಟ್ಟಣದಲ್ಲಿ ಹಿಂದೂ ಎಂಬ ಪತ್ರಿಕಾಕರ್ತರು ಹೈದರಾಬಾದಿನ ದಿವಾನರಿಗೆ ನಮ್ಮ ಸರ್ ಶೇಷಾದ್ರಿ ಅಯ್ಯರವರನ್ನು ಬಹಳವಾಗಿ ಹೊಗಳಿ ಬರೆದಿರುವನ್ನಾರೆ.

ಈ ದೇಶದ ಗವರ್ನಮೆಂಟ್ ಸ್ಕೂಲುಗಳಲ್ಲಿ ಓದಿ ಡಿಗ್ರೀಗಳನ್ನು ಪಡೆದ ಮ|| ದಾಮೋದರ ಮತ್ತು ಶೇಷಯ್ಯಂಗಾರ್ ಎಂಬ ಇಬ್ಬರು ವೈದ್ಯ ವಿದ್ಯಾ ಸಂಪಾದನಾರ್ಥ ಬರುವ ಏಪ್ರಿಲ್ ತಿಂಗಳಲ್ಲಿ ಇಂಗ್ಲೆಂಡಿಗೆ ಹೋಗಬೇಕೆಂದು ಪ್ರಯತ್ನಪಡುತ್ತಿರುವಂತೆ ಕೇಳುವದಕ್ಕೆ ಸಂತೋಷಿಸುತ್ತೇವೆ.

ನೆಲಮಂಗಲ ತಾಲ್ಲೋಕು ಗೆಜ್ಜಗರಲ್ಲಿರುವ ಕಮಸ್ಮಾರ ರ ಯಿನಾಮತೀ ಜಮೀನನ್ನು ಮತ್ತು ಮಾಗಡಿ ತಾಲ್ಲೋಕು ತಿಪ್ಪಸಂದ್ರದಲ್ಲಿರುವ ಬಡಿಗೆಯ ಯಿನಾಮತಿ ಜಮೀನನ್ನೂ, ತೆಗೆದು ಕಂದಾಯದ ಜಮೀನುಗಳಾಗಿ ತಿರುಗಿಸಿ ಆ ಸ್ಥಳಗಳಿಂದ ಸಾಲೀಯಾನಾ ರಮಾಜಿನಮೇರೆ ಆಗುವ ಕಂದಾಯವನ್ನು ವಸೂಲ್ಮಾಡತಕ್ಕದ್ದೆಂದು ವಿಧಿಸಿರುತ್ತಾರೆ.

ರಾಜಧಾನಿಯ ಪ್ಯಾಲೇಸ್ ಬಡಾವಣೆಯಲ್ಲಿ ಒಂದು ಭಾರೀ ರೇಲ್ವೆ ಸ್ಟೇಷನನ್ನು ನಮ್ಮ ಸರ್ಕಾರದವರು ಕಟ್ಟಿಸುತ್ತಾರೆಂದು ಹಿಂದೆ ತಿಳಿಸಿದ್ದೆವಷ್ಟೆ. ಈಗ ವಿಚಾರಿಸುವದಲ್ಲಿ ಈಗ ಇರುವ ರೈಲ್ವೇ ಸ್ಟೇಷನಿನ ಬಳಿಯಲ್ಲೇ ಒಂದು ಭಾರೀ ಸ್ಟೇಷನ್ ಕಟ್ಟುವದಾಗಿಯೂ, ಈ ಕಟ್ಟಡಕ್ಕೆ ಸುಮಾರು ೩-೪ ಲಕ್ಷ ರೂಪಾಯಿಗಳವರೆಗೂ ಖರ್ಚಾಗುವದೆಂತಲೂ ಕೇಳುತ್ತೇವೆ.

ಜಿಲ್ಲಿನ ಅಸಿಸ್ಟೆಂಟ್ ಕಮಿಷನರ್ ಮ|| ರಾಘವಾಚಾರ್ಯರವರು ಚಿಕಾಗೋ ಪಟ್ಟಣದಲ್ಲಿ ನಡೆಯುವ ಪ್ರದರ್ಶನ ಮಹೋತ್ಸವವನ್ನು ನೋಡಿಕೆಂದು ಬರುವದಕ್ಕೆ ಇಷ್ಟಪಟ್ಟಿರುವರೆಂತಲೂ, ಆದರೆ ಅವರು ಮಾಗಸು ಬಂದನಂತರ ಬ್ರಾಹ್ಮಣರಲ್ಲಿ ಯಾವ ಪಂಗಡದವರಾದರೂ ಅವರನ್ನು ಸ್ವೀಕರಿಸಿಕೊಳ್ಳುವನಾದರೆ ಪ್ರಯಾಣ ಮಾಡುವದರಲ್ಲಿ ಸಿದ್ಧರಾಗಿರುವಂತೆಯೂ ಹೇಳಿದಂತೆ ಕೇಳುತ್ತೇವೆ.

ಲೋಕಲ್ ಸರ್ವಿಸ್ ಪರೀಕ್ಷೆಗಳ ಕಾನೂನುಗಳನ್ನು ತಮ್ಮೂರ್ವಾಚಿ ಗೆಜೆಟ್ಟಿನಲ್ಲಿ ಗವರ್ನಮೆಂಟಿನವರು ಧಾಯಿಷ್ ಮಾಡುತ್ತಲಿದ್ದಾರಷ್ಟೆ. ಈ ಪರೀಕ್ಷೆಗಳನ್ನು ಗವರ್ನಮೆಂಟ್ ಸರ್ವಿಸಿನಲ್ಲಿರುವ ಬಹಳ್ಯಾವತರದ ನೌಕರಮಾನೇರು ಪ್ಯಾಸ್ ಮಾಡತಕ್ಕದ್ದು ಅವಶ್ಯವಾಗಿರುತ್ತವೆ; ಅಂಥಾ ನೌಕರಗಳ ದರ್ಜೆಯನ್ನು ಜಾಗ್ರತೆಯಾಗಿ ತಿಳಿಸಬೇಕೆಂದು ಎಲ್ಲಾ ಡಿಪಾರ್ಟುಮೆಂಟುಗಳ ಹೆಡ್ ಆಫೀಸರರುಗಳಿಗೂ ಬರೆದಿರುತ್ತಾರೆ.

ಬೆಂಗಳೂರು ಡಿಸ್ಟ್ರಿಕ್ಟ್ ಹೊಸಕೋಟೆ ತಾಲ್ಲೋಕಿಗೆ ಸೇರಿದ ಪಂಚಪ್ಪನ ಹಳ್ಳಿಯಲ್ಲಿರುವ ಕೊಡಿಗೇ ಕೆರೆಯನ್ನು ಇಂಜನೀರ್ ಆಫೀಸಿನವರು ರಿಪೇರಿ ಮಾಡಿಸದೆ ಬಿಟ್ಟುಬಿಟ್ಟಿರುವದರಿಂದ ಆ ಕೆರೆಯೊಳಗಿರುವ ಕಲ್ಲುಗಳನ್ನು ಕೆರೆಯ ಕೊಡಿಗೆಯಾದರೇ ಉಪಯೋಗಿಸಿಕೊಳ್ಳಬೇಕೆಂದು ಇಷ್ಟಪಟ್ಟಿರುವ ಅಂಶದಲ್ಲಿ ಅವರಿಗೆ ತೆಗೆದುಕೊಳ್ಳುವದಕ್ಕೆ ಯಾವ ಅಕ್ಷೇಪಣೆ ಇರುವದಿಲ್ಲವೆಂದು ತೀರ್ಮಾನಿಸಿರುತ್ತಾರೆ.

ಕಳೆದ ವಾರದೊಳಗೆ ಸಿಟಿ ಮ್ಯುನಿಸಿಪಾಲಿಟಿಯವರು ನರ್ಪಶಿವಂಗೇರ ಮಾಡಿವಾರ ವಿಸಿಟಿಂಗ್ ಮಾಡಿ ಇತರ ಕೆಲಸಗಳೊಂದಿಗೆ ಪ್ರಾರ್ಥನಾದಿದ ತಮ್ಮ ಈ ಸಂಸ್ಥಾನದ ದಿವಾನರವರಿಗೆ ಈಚೆಗೆ ಮಹಾರಾಣಿಯವರ ಸರ್ಕಾರದಿಂದ ಕೆ. ಸಿ. ಎಸ್. ಐ. ಎಂಬ ಪ್ರಶಸ್ತಿ ಕೊಡಲ್ಪಟ್ಟ ವಿಷಯದಲ್ಲಿ ತಮ್ಮ ಸಂತೋಷವನ್ನು ಅವರಿಗೆ ತಿಳಿಸತಕ್ಕ ತಿಸಬೇಕೆಂದು ಮೆಂಬರುಗಳೆಲ್ಲರೂ ಏಕಮತ್ಯದಿಂದ ನಿರ್ಧರಿಸಿದರು.

ಬೆಂಗಳೂರಿನಲ್ಲಿ ಮನೆಗಳಿಗೆ ಉಪಯೋಗಿಸತಕ್ಕ ಸುಟ್ಟಕಲ್ಲುಗಳನ್ನು ಬಹಳ ವಿಶೇಷವಾಗಿ ಉಪಯೋಗಿಸುತ್ತಲಿದ್ದಾರಷ್ಟೆ. ಅದು ತಕ್ಕಷ್ಟುಗೂ ಅಗ್ಗವಾಗಿಯೇ ಇದೆ. ಆದಾಗ್ಯೂ ಅಲ್ಲಿನ ಮನೆಗಳನ್ನು ಕಟ್ಟಿರುವದು ನೋಡಿದರೆ ಅಷ್ಟು ಚೆನ್ನಾಗಿರುವಂತೆ ಕಾಣುವದಿಲ್ಲ. ಆದರೆ ಈ ಕಲ್ಲುಗಳನ್ನು ವಿಶೇಷವಾಗಿ ಕಟ್ಟಡಗಳಿಗೆ ಉಪಯೋಗಿಸಬೇಕೆಂದು ನೆಲಗಾಯಿಂದ ಜನಗಳು ಅವುಗಳನ್ನು ಅಪೇಕ್ಷಿಸುವದನ್ನು ನೋಡಿ ಪರಮಾಶ್ಚರ್ಯಪಡಬೇಕಾಗಿದೆ.

ಕೋಲಾರದಲ್ಲೂ ಸುತ್ತುಮುತ್ತಲೂ ಇರುವ ಕೆಲವು ಗ್ರಾಮಗಳಲ್ಲಿ ಹಾಳ ತಿಂದ ಬಂಡವಿಧದಾಗಿದ್ದನ್ನು ಮತ್ತು ಇತರ ಧಾನ್ಯವನ್ನು ಅಲ್ಲಿನ ಕೆಲವು ಜನಗಳು ತಿಂದದ್ದರಿಂದಲೂ, ಮತ್ತು ಅದರ ಹುಲ್ಲು ಮತ್ತು ಕಡ್ಡಿಗಳನ್ನು ಗೋಕಾಯಿಗಳು ತಿಂದದ್ದರಿಂದಲೂ ಅದು ವಿಷಪ್ರಾಯವಾಗಿ ಪರಿಣಮಿಸಿದ ಸಂಗತಿ ಅಲ್ಲಿನ ಅಧಿಕಾರಿಗಳ ತಿಳುವಳಿಕೆಗೆ ಬಂದದ್ದರಿಂದ ಅವರು ಆ ಧಾನ್ಯವನ್ನು ಹಿಡಿದು ಸುಡಿಸಿದರೆಂದು ಕೇಳುತ್ತೇವೆ.

ಅಮಲ್ದಾರ್ ಲಕ್ಷ್ಮೀನಾರಾಣಪ್ಪನವರು ಈಗ ಕೆಲಸದಿಂದ ನಿವೃತ್ತಿ ಮಾಡಲ್ಪಟ್ಟಿರುತ್ತಾರಷ್ಟೆ. ಹಿಂದೆ ಮ|| ಅಸ್ಟ್ರೊಜೆರಾಯರೆಂಬ ದೊಡ್ಡ ಮನುಷ್ಯರ ವಿಷಯದಲ್ಲಿ ಗ್ರೀನ್ರ್ವ್ಯಾರ ಇವರ ಕೌನ್ಸಿಲ್ ಮೆಂಬರುಗಳು ಒಂದು ಸಂದರ್ಭದಲ್ಲಿ ನಿಂದಿಸಿರುತ್ತಾರೆಂತಲೂ, ಆದರೆ ಅವರಿಗೆ ಯಾವದೊಂದು ಶಿಕ್ಷೆಯೂ ಮಾಡಲಿಲ್ಲವೆಂತಲೂ, ಈಗ ಇವರಿಗೆ ಮಾತ್ರ ಸಸ್ಪೆಂಡ್ ಮಾಡಿರುತ್ತಾರೆಂತಲೂ, ಒಬ್ಬರಿಗೊಂದು, ಮತ್ತೊಬ್ಬರಿಗೊಂದು ಮಾಡುವದರಿಂದ ಪಕ್ಷಪಾತ ಮಾಡಿದ ಹಾಗಾಗುವುದೆಂತಲೂ, ಈ ವಿಷಯದಲ್ಲಿ ಸರಿಯಾದ ತೀರ್ಮಾನವನ್ನು ಮಾಡಬೇಕೆಂತಲೂ ಬೆಂಗಳೂರು ಈವನಿಂಗ್ ಮೇಲ್ ಪತ್ರಿಕಾ ಕರ್ತರು ಬರೆಯುತ್ತಾರೆ.

ಕಿಲ್ಲೆಯಲ್ಲಿ ಹೊಸನಗರದವನೆಂಬ ಹಿಂಭಾಗದಲ್ಲಿರುವ ಆರವನೇ ಪುರೋಹಿತರ ಮನೆಯಲ್ಲಿ ಕಳೆದ ಭಾನುವಾರ ರಾತ್ರಿ ಬೆಂಕಿಯೆದ್ದು ಪ್ರಸನ್ನಾಗಿ ಆ ಮನೆಯ ಕೆಲವು ಭಾಗಗಳನ್ನು ಆಹುತಿಗೊಂಡನು. ಅಷ್ಟರಲ್ಲೇ ಆ ಮನೆಯ ಸುತ್ತುಮುತ್ತಲೂ ಇರುವ ಚಿಕ್ಕದೇವನ, ಮತ್ತು ಚಿಕ್ಕೇಅಂಗಿನವರ ಮನೆಗಳ ಜನಗಳೂ ಮತ್ತು ಇತರರೂ ಸುನ್ನಾರರು ಆರ್ಧರಾತ್ರಿಯಲ್ಲಿ ಬಹಳ ಶ್ರಮಪಟ್ಟು ಬೆಂಕಿಯರನ್ನು ಕೋಪವನ್ನು ದಂಡಿಸಿಬಿಡಿದರೆಂದು ಕೇಳುತ್ತೇವೆ. ಆದರೆ ಈ ಮನೆಗಳಲ್ಲಿ ಮಾಯಾವ್ಯ ಅತ್ಯಲ್ಪ ಸ್ಥಿತಿಯಲ್ಲಿರುವದರಿಂದ ಸಂಭ್ಯವಾದವರ್ಟುಗೂ ಬೆಂಕಿಯನ್ನು ಬೇಗ ಹೋಗಲಾಡಿಸಲು ಆಯಿತು ಎಂದು ಸಾಪ್ರ್ಯವಾಗಿ ಹೇಳಬಲ್ಲವು.

ಪುಲಿಮೂರು ಡಿಪ್ಟಿ ಅಮಲ್ದಾರರ ಮ|| ಶಿವರಾಮಯ್ಯಂಗಾರ್ಯ ಹೊಳೆನರಸೀಪುರಕ್ಕೆ ವರ್ಗಾಯಿಸಲ್ಪಟ್ಟು ಅತಕ್ಕೆ ನಡುವ ಇರುವ ಶ್ರೀನಿವಾಸಪುರದಲ್ಲಿ ಕಟ್ಟಿಸಿರುವ ಗುಡಿನ ಕಟ್ಟೆಯು ಈಗ ದುಸ್ಥಿತಿಯಲ್ಲಿರುವದರಿಂದ ಅದನ್ನು ರಿಪೇರಿ ಮಾಡುವದಕ್ಕೆ ಬೇಕಾಗಿರುವ ೧,೦೫೦ ರೂಪಾಯಿನ ಪೈಕಿ ಅರ್ಧ ಮೊಬಲಗು ಅಂದರೆ ೫೨೫ ರೂಪಾಯಿಯನ್ನು ತಾವೇ ಕೊಡುವರಾಗಿಯೂ, ಉಳಿದ ಅರ್ಧ ಮೊಬಲಗನ್ನು ಸರ್ಕಾರದವರು ಕೊಡಿಸಿಕೊಡಬೇಕೆಂಬದಾಗಿಯೂ ಬರೆದುಕೊಂಡದ್ದರ ಮೇಲೆ ಗವರ್ನಮೆಂಟಿನವರು ಡಿಪ್ಟಿ ಅಮಲ್ದಾರರು ಜನೋಪಯೋಗಕ್ಕಾಗಿಯೇ ಕಟ್ಟಿಸಿರುವ ಅಂಶವನ್ನು ತಿಳಿದು, ಬಹಳ ಸಂತೋಷದಿಂದ ಅವರು ಆ ಕಟ್ಟೆಯ ರಿಪೇರಿ ಖರ್ಚು ಕೇಳುವ ಅರ್ಧ ಹಣ ಅಂದರೆ ೫೨೫ ರೂಪಾಯಿಗಳನ್ನು ಕೊಡುವಂತೆ ಸ್ಯಾಂಕ್ಷನ್ ಮಾಡಿರುತ್ತಾರೆ.

ಕಳೆದ ಶುಕ್ರವಾರದ ದಿವಸ ಬೆಂಗಳೂರಲ್ಲಿ ಕೆಲವರು ಪ್ರಾತಃಸ್ನಾನ ಮಾಡುವದಕ್ಕಾಗಿ ಗವೀಪುರಕ್ಕೆ ಹೋಗಿ ಆ ಸ್ಥಳದ ಸತ್ರದ ಒಂದು ಕೊಠಡಿಯಲ್ಲಿ ತಮ್ಮ ಸಾಮಾನುಗಳೊಡನೆ ಮಲಗಿರಲು ರಾತ್ರಿ ಸುಮಾರು ೧೨ ಘಂಟೆಗೆ ಕಳ್ಳನು ಸದರೀ ಕೊಠಡಿಯ ಕಲ್ಲು ಗೋಡೆಗಳಿಗೆ ಕನ್ನ ಹಾಕಿ ಒಳಗೆ ನುಗ್ಗಿ ಅಲ್ಲಿ ಮಲಗಿದ್ದ ಒಬ್ಬ ಹೆಂಗಸಿನ ಕೊರಳಲ್ಲಿದ್ದ ಆಡಿಕೆಯನ್ನು ಕಿತ್ತುಕೊಂಡನು. ಅಷ್ಟರಲ್ಲಿ ಸ್ವಲ್ಪ ಸಂದಡಿಯುಂಟಾಗಲು ಪಕ್ಕದಲ್ಲಿ ಮಲಗಿದ್ದವರೆಲ್ಲರು ಎದ್ದು ಅವರ ಪೈಕಿ ಧೈರ್ಯಶಾಲಿಯಾದ ಒಬ್ಬಾತನು ಕಳ್ಳನು ಹಿಡಿಯಬೇಕೆಂದು ಪ್ರಯತ್ನ ಮಾಡುವಲ್ಲಿ ಕಳ್ಳನು ಕೈಯಲ್ಲಿದ್ದ ದೊಣ್ಣೆಯಿಂದ ಆತನ ಬಲವಾಗಿ ಹೊಡೆದುಬಿಟ್ಟು, ಕೊಠಡಿಯ ಬಾಗಿಲ ಚಿಲಕವನ್ನು ತೆಗೆದುಕೊಂಡು ಪರಾರಿಯಾದನು. ಕಳವು ನಡೆದ ಸ್ಥಳಕ್ಕೂ ಪೋಲೀಸ್ ಸ್ಟೇಷನಿಗೂ ೫೦ ಗಜ ಫಾಸಲೆ ಯುಂಟು. ಕಳವು ನಡೆದ ಕಾಲದಲ್ಲಿ ಸದರೀ ಕೊಠಡಿಯೊಳಗೆ ದೀಪವಿತ್ತು. ಕಳ್ಳನು ಕಿರೀಯದನ್ನು ಗಳು ಹಾಕಿಕೊಂಡಿದ್ದನು. ತನ್ನ ಗುರ್ತು ಸಿಕ್ಕುವದಕ್ಕೆ ಅವಕಾಶವಿಲ್ಲದಂತೆ ಮುಖವನ್ನು ಬಿಳಿ ಮಾಡಿಕೊಂಡು ಸದರೀ ಕೃತ್ಯ ನಡೆಸಿದ್ದನೆ. ಕಳ್ಳನು ಯಾವನಾಗಿರುವನೋ ಅದನ್ನು ಈ ಪತ್ರಿಕೆಯನ್ನೋದತಕ್ಕವರೇ ಊಹಿಸಿ ತಿಳುಕೊಳ್ಳಬಹುದು ಎಂಬುದಾಗಿ ಪ್ರಶಂಸಕಾರರು ತಿಳಿಸುತ್ತಾರೆ.

ನಮ್ಮ ಅರಮನೆಯ ಮುಂದೆ ಯಾರೊಬ್ಬರೂ ನಾವು ನಡೆದಾಗಲೀ ಆಗಲಿ, ಛತ್ರಿಯನ್ನು ಹಿಡಿದೇ ಆಗಲಿ, ಸಂಚರಿಸುವನ್ನು ನಿತ್ಯವೇಳೆ ಹೊತ್ತುಕೊಂಡೇ ಆಗಲಿ ಸಂಚರ ಮಾಡಕೂಡದೆಂದು ವಿಧಾಯಕ ಮಾಡಿರುವದು ಸಕಲರಿಗೂ ತಿಳಿದೇ ಇದೆಯಷ್ಟೆ. ಆದರೆ ಕಳೆದ ಸೋಮವಾರದ ಹೊತ್ತಿಗೆ ಸುಮಾರು ೧೧ ಘಂಟೆಯ ಹೊತ್ತಿನಲ್ಲಿ ಒಬ್ಬ ಯೌವನಸ್ಥನು ಛತ್ರಿಯನ್ನು ಬಿಸಿಲಿಗೆ ಮರೆಯಾಗಿ ಎತ್ತಿ ಹಿಡಿದುಕೊಂಡು ಆ ಮಾರ್ಗವಾಗಿ ಬಂದನು. ಪಹರೆಯವನು ಅವನನ್ನು ನೋಡಿ ಅವನ ಛತ್ರಿಯನ್ನು ಮುಚ್ಚಿಸುವರೇನೋ ಎಂಬದಾಗಿ ನೋಡುತ್ತಿದ್ದನು. ನಿರೀಕ್ಷೆಯು ವ್ಯರ್ಥವಾಯಿತೇ ಹೊರತು ಪ್ರಯೋಜನ ಇಲ್ಲ. ಅವನು ಹಿಡಿದ ಛತ್ರಿಯನ್ನು ಮುಚ್ಚದೇನೇ ಹೊರಟುಹೋದನು. ಇದು ಏನನ್ನು ಸೂಚಿಸುತ್ತದೆ? ಪಹರೆ ಕಾಯುತ್ತಿದ್ದವರ ಅಜಾಗ್ರತೆಯನ್ನು ವ್ಯಕ್ತಪಡಿಸುವದರಲ್ಲಿ ಸಂದೇಹವಿಲ್ಲ. ಅವರನ್ನು ಯಾಕೆ ನೋಡಿ ಅವನಿಗೆ ಎಚ್ಚರಿಸಲಿಲ್ಲವೆಂಬುದಾಗಿ ಪ್ರಶ್ನೆ ಮಾಡಿದಲ್ಲಿ ನಾವು ನೋಡಲಿಲ್ಲ; ನೋಡಿದ್ದರೆ ಅವನನ್ನು ಎಷ್ಟುಮಾತ್ರಕ್ಕೂ ಬಿಡುತ್ತಿರಲಿಲ್ಲವೆಂದು ಹೇಳಬಹುದು. ಅನ್ಯಾಯ ಸಮಯವನ್ನು ಹೇಳುವದಕ್ಕೂ ಮಾರ್ಗವಿಲ್ಲ. ಇಂಥಾ ನಡತೆಯು ಅವರ ಸ್ಥಿತಿಗೆ ತಕ್ಕದಲ್ಲವೆಂತಲೂ ಅವರ ಅಧಿಕಾರಿಗಳಿಗೆ ಗೌರವವನ್ನು ತರತಕ್ಕದ್ದಲ್ಲವೆಂತಲೂ ಧಾರಾಳವಾಗಿ ಹೇಳಬಹುದಾಗಿದೆ.

ಸನ್ ೧೮೯೨ ನೇ ಇಸವಿ ನವೆಂಬರು ತಿಂಗಳಲ್ಲಿ ಇಂಡಿಯಾ ದೇಶದ ವೈಸರಾಯಿ ಮತ್ತು ಗವರ್ನರ್ ಜನರಲ್‌ಪದವಿಯನ್ನು ಹೊಂದಿದ್ದ ಲಾರ್ಡ್ ಲ್ಯಾನ್ಸ್‌ಡೌನ್‌ ಸಾಹೇಬರವರು ಶ್ರೀಮನ್ಮಹಾರಾಜರ ಸಂದರ್ಶನಾರ್ಥವಾಗಿ ಮೈಸೂರಿಗೆ ದಯಮಾಡಿಸಿದ್ದಾಗ ನಡೆದ ಸಂಗತಿಗಳ ವಿವರ.

(ಕಳೆದ ವಾರದ ಶೇಷ)

ಇದಲ್ಲದೆ ಶ್ರೀಮನ್ಮಹಾರಾಜರವರು ಸೂಚಿಸಲೇಕ್ಷೆನುವ ಮತ್ತೊಂದು ವಿಷಯವುಂಟು; ಬ್ರಿಟಿಷ್ ಸರಕಾರದವರು ಇಂಡಿಯಾ ದೇಶ್ಯ ರಕ್ಷಣ್ಯಾರ್ಥವಾದ ರಾಜಕಾರ್ಯದಲ್ಲಿ ಶ್ರೀಮನ್ಮಹಾರಾಜರವರ ಸಹಾಯವನ್ನು ಅಂಗೀಕರಿಸಿದ್ದು, ಬ್ರಿಟಿಷರವರಿಗೆ ಅವರಲ್ಲಿರುವ ನಂಬಿಕೆಗೆ ಒಂದು ಹೊಸದಾದ ನಿದರ್ಶನವಾಗಿದೆ. ಬ್ರಿಟಿಷ್ ಪ್ರಭುಗಳಲ್ಲಿ ವಂಶಪಾರಂಪರೆಯಾಗಿ ರಾಜಭಕ್ತಿಯುಳ್ಳ ಮನೆತನಕ್ಕೆ ಸೇರಿದವರಾ, ಈ ಸೀಮೆಯ ಸಿಲ್ಲೇದಾರ ಒಂದು ರೆಜಿಮೆಂಟನ್ನು ಇಂಡಿಯಾ ದೇಶ ಸಂರಕ್ಷಣಾರ್ಥವಾಗಿ ಅಂಗೀಕರಿಸಿದ್ದು. ತವಾಗೆ ದೊಡ್ಡ ಮರ್ಯಾದೆಯೆಂತಲೂ, ಶ್ರೀಮಹಾರಾಣಿಯವರ ಚಕ್ರವರ್ತಿನಿಯಾದವರ ಅನುಗ್ರಹವೆಂತಲೂ ಶ್ರೀಮನ್ಮಹಾರಾಜರವರು ಸದರ್ಭಾವಿಸುತ್ತಾರೆ. ಮೈಸೂರು ಸಿಲ್ಲೇದಾರ ಫೌಜು ಪೂರ್ವದಲ್ಲಿ ನಡೆಸಿದ ಕ್ಲಿಷ್ಟಕಾರ್ಯವಾದ ಸಾಹಸಕ್ಕಾಗಿ ಪ್ರಸಿದ್ಧಿಯನ್ನು ಪಡೆದವರಾಗಿ, ಚರಿತ್ರೆಯಿಂದ ವ್ಯಕ್ತವಾಗಿರುತ್ತದೆ. ಮಹಿಮೆ ಒಂದು ವೇಳೆ ದಾಕ್ಷಿಣ್ಯಯುಳ್ಳ ಚಕ್ರೇಶ್ವರ ಈ ಸೈನ್ಯವನ್ನು ಉಪಯೋಗಿಸಬೇಕಾದ ಸಂದರ್ಭ ಬಂದಲ್ಲಿ ಈ ಸೈನ್ಯದವರು ಮಹಾಪ್ರಖ್ಯಾತನಾದ ಬ್ರಿಟಿಷ್ ಸೇನಾಪತಿಯು ಕೈಕೆಳಗೆ ಅಸ್ಸಾಯೆ ಅಗ್ಗಂ ಯುದ್ಧರಂಗಗಳಲ್ಲಿ ಬ್ರಿಟಿಷ್ ಸೈನ್ಯದೊಡನೆ ಜಯಕ್ಕೆ ಭಾಗಿಗಳಾದ ತಮ್ಮ ಹಿಂದಣವರ ಕೀರ್ತಿಗೆ ಕಳಂಕ ಬರದಂತೆ ನಡೆದುಕೊಳ್ಳುವರೆಂದು ಶ್ರೀಮನ್ಮಹಾರಾಜರವರು ದೃಢವಾಗಿ ನಂಬುತ್ತಾರೆ. ಶ್ರೀಮನ್ಮಹಾರಾಜರವರು ಲಾರ್ಡ್ ಲ್ಯಾನ್ಸ್‌ಡೌನ್ ಪ್ರಭುಗಳನ್ನು ಶ್ರೀಮಹಾರಾಣಿ ಚಕ್ರವರ್ತಿನಿಯವರ ಘನವ್ಯಾತವಾದ ಪ್ರತಿನಿಧಿಗಳೆಂದು ಸನ್ಮಾನಿಸುವದು ಮಾತ್ರವಲ್ಲದೆ ಪ್ರಾಯದೇಶಗಳಲ್ಲಿ ಸ್ವರಾಜ್ಯ ಹಿತಾಚರಣೆಗಳಿಂದ ತಾವು ಸಂಪಾದಿಸಿದ ಕೀರ್ತಿಗೆ, ಈ ಪೂರ್ವದೇಶದಲ್ಲಿ ನಡೆಸುತ್ತಿರುವ ಪ್ರಜಾಹಿತಕಾರ್ಯದಿಂದ ಅಧಿಕ ಕಾಂತಿಯನ್ನು ಉಂಟುಮಾಡುವ ರಾಜತಂತ್ರ ವಿಶಾರದರೆಂತಲೂ ಸನ್ಮಾನಿಸುತ್ತಾರೆ. ಇದೇ ಸಮಯದಲ್ಲಿ, ಮಾನನೀಯರಾದ ಮಾರ್ಕ್ವಿಸ್ ಆಫ್ ಲ್ಯಾನ್ಸ್‌ಡೌನರವರ ಪತ್ನಿಯಾದ ಲೇಡಿ ಲ್ಯಾನ್ಸ್‌ಡೌನರವರನ್ನೂ ಅತಿ ಹರ್ಷಚಿತ್ತರಿಂದ ಸನ್ಮಾನಿಸುವದಕ್ಕೆ ಅವಕಾಶ ಲಭಿಸಿದ್ದಕ್ಕಾಗಿ ಶ್ರೀಮನ್ಮಹಾರಾಜರವರು ಬಹಳ ಸಂತೋಷಪಡುತ್ತಾರೆ. ನಮ್ಮ ಹಿಂದೂಜನರಿಗೆ ಬಹಳ ಅಭಿಮತವಾದ ("ದಾನಾತ್ಸ್ವರ್ಗ ಮವಾಪ್ನೋತಿ ಮೋಲನಾದಚ್ಯುತಂ ಪದಂ") ಎಂಬ ವಾಕ್ಯದಲ್ಲಿ ಹೇಳಿರುವಂತೆ, ಧರ್ಮಕಾರ್ಯಗಳನ್ನು ಮಾಡಿದವರಿಗೆ ಹೆಚ್ಚಾದ ಫಲಪ್ರಾಪ್ತಿಯಾಗುತ್ತದೆ; ಧರ್ಮಗಳನ್ನು ಬೆಳಸುವವರಿಗೆ ಅದ್ವಿತೀಯವೂ ಅತಿಶಯವಾದ ಐಶ್ವರ್ಯ ದೊರೆಯುತ್ತದೆ. ಅದರಿಂದ ಲೇಡಿ ಲ್ಯಾನ್ಸ್‌ಡೌನರವರು ಪ್ರಖ್ಯಾತರಾದ ಲೇಡಿ ಡಫರಿನರವರ ಜನೋಪಕಾರಕವಾದ ಧರ್ಮಕಾರ್ಯಗಳಿಗೆ ಬಲವಾದ ಅವಲಂಬನವನ್ನು ಕೊಟ್ಟು, ನಮ್ಮ ಹೆಂಗಸರ ಹೆಚ್ಚಾದ ಪ್ರೀತಿಗೆ, ಆದರಕ್ಕೆಯೂ ಪಾತ್ರರಾಗಿರುತ್ತಾರೆ."

ಇದಕ್ಕೆ ಘನವನ್ನು ಹೊಂದಿದ ವೈಸರಾಯಿ ಮತ್ತು ಗವರ್ನರ್ ಜನರಲ್‌ರವರು ಪ್ರತ್ಯುತ್ತರವನ್ನು ಅಪ್ಪಣೆಕೊಡಿಸಿದ್ದು ಏನೆಂದರೆ:—

"ಶ್ರೀಮನ್ಮಹಾರಾಜರವರ ರಾಜಭಕ್ತಿ ಪೂರ್ವಕವಾದ ವಾಕ್ಯಗಳನ್ನು ಕೇಳಿದ್ದರಿಂದಲೂ, ಬ್ರಿಟಿಷ್ ಪ್ರಭುಗಳಲ್ಲಿ ತಮಗಿರುವ ವಿಶ್ವಾಸವನ್ನು, ಚರಿತ್ರೋಕ್ತವಾಗಿರುವ ಅನೇಕ ಸಂದರ್ಭಗಳಲ್ಲಿ, ಕಾರ್ಯತಃ ವ್ಯಕ್ತಪಡಿಸಿದ್ದನ್ನು ಸೂಚಿಸುವ ಪ್ರೌಢವಾಕ್ಯಗಳನ್ನು ಕೇಳಿದ್ದರಿಂದಲೂ, ಉಂಟಾದ ಸಂತೋಷವನ್ನು ಪ್ರಥಮತಃ ಸೂಚಿಸುತ್ತೇವೆ. ಶ್ರೀಮನ್ಮಹಾರಾಜರವರು ಪ್ರೀತಿಪುರಸ್ಸರವಾದ ಮಾತುಗಳಿಂದ ನಮ್ಮ ಆರೋಗ್ಯಭಾಗ್ಯವನ್ನು ಕೋರಿದ್ದಕ್ಕೂ, ಲೇಡಿ ಲ್ಯಾನ್ಸ್‌ಡೌನರವರ ವಿಷಯದಲ್ಲಿ ಆಡಿದ ಉದಾರೋಕ್ತಿಗಳಿಗೂ, ಲೇಡಿ ಡಫರಿನರವರು ಉಪಕ್ರಮಿಸಿದ ಧರ್ಮಕಾರ್ಯಗಳಲ್ಲಿ ಇಷರಿಗಿರುವ ಅಭಿಮಾನವನ್ನು ಸೂಚಿಸಿದ್ದಕ್ಕೂ, ಶ್ರೀಮನ್ಮಹಾರಾಜರವರಿಗೆ ನಾವು ವಂದಿಸುತ್ತೇವೆ. ನಾವು ಶ್ರೀಮನ್ಮಹಾರಾಜರವರ ಕೋರಿಕೆಯ ಪ್ರಕಾರ ಇಲ್ಲಿಗೆ ಬಂದದ್ದಕ್ಕೂ, ಅವರ ರಾಜ್ಯವಿಷಯವನ್ನು ಕೆಲವು ಮಟ್ಟಿಗೆ ನೋಡುವದಕ್ಕೆ ನಮಗೆ ಅವಕಾಶ ಉಂಟಾದ್ದಕ್ಕೂ, ಬಹಳ ಸಂತೋಷಪಡುತ್ತೇವೆ. ಈ ರಾಜ್ಯದ ಸ್ಥಿತಿಗೂ, ಇತರ ರಾಜ್ಯಗಳ ಸ್ಥಿತಿಗೂ, ಅನೇಕ ವಿಷಯಗಳಲ್ಲಿ ಭೇದವುಂಟು. ಶ್ರೀಮಚ್ಚಕ್ರವರ್ತಿನೀ ಸರಕಾರದವರು ಅರ್ಧ ಶತಮಾನಕಾಲದಿಂದಲೂ ತಮ್ಮ ಆಳಿಕೆಯಲ್ಲಿಟ್ಟುಕೊಂಡಿದ್ದು, ಬಹಳ ಬುದ್ಧಿ ವ್ಯಯಮಾಡಿ, ಶ್ರಮಪಟ್ಟು, ಕ್ರಮವಾದ ಸ್ಥಿತಿಗೆ ತಂದ ಈ ಮೈಸೂರು ರಾಜ್ಯವನ್ನು, ಹಿಂದಿನ ರಾಜವಂಶಕ್ಕೆ ಪುನಃ ಒಪ್ಪಿಸಬೇಕೆಂದು, ಹನ್ನೊಂದು ವರ್ಷಗಳ ಹಿಂದೆ ನಿಷ್ಕರ್ಷಿಸಿದರು. ಹೀಗೆ ನಿಷ್ಕರ್ಷಿಸಿದ್ದು, ಮಹತ್ತರ ಕಾರ್ಯ: ಇದನ್ನು ನಿಷ್ಕರ್ಷಿಸಿದವರು ವಹಿಸಿದ ಭಾರವು ನಿಜವಾಗಿಯೂ ಮಹತ್ತಾದ್ದೇ ಸರಿ. ಅಂಥಾ ಮಹತ್ಕಾರ್ಯವನ್ನು ಗವರ್ನರ್ ಜನರಲ್‌ರವರು ನೆರವೇರಿಸಿದರು. ಹೀಗೆ ನಡೆಸಿದ್ದಕ್ಕಾಗಿ, ಬ್ರಿಟಿಷ್ ಗವರ್ನ್‌ಮೆಂಟಿನವರು ಪಶ್ಚಾತ್ತಾಪಪಡುವದಕ್ಕೆ ಶ್ರೀಮನ್ಮಹಾರಾಜರವರು, ನಮಗೆ ತಿಳಿದ ಮಟ್ಟಿಗೂ, ಸ್ವಲ್ಪವೂ ಅವಕಾಶವನ್ನು ಕೊಡಲಿಲ್ಲ. ಇದನ್ನು ನಮ್ಮ ಸ್ವಾನುಭವದಿಂದ ಹೇಳುವದಕ್ಕೆ ಸಂತೋಷಪಡುತ್ತೇವೆ. ನಮಗಿರುವ ರಾಜ್ಯವಿಷಯಕವಾದ ವ್ಯಾಕುಲತೆಗಳು ಹೆಚ್ಚಾಗುವದಕ್ಕೆ ಅವಕಾಶವನ್ನು ಕೊಡುವದಾದರಂತೆ, ಮೈಸೂರು ರಾಜ್ಯಭಾರವು ಚೆನ್ನಾಗಿಯೇ ನಡೆಯುತ್ತಿದೆ. ಪ್ರಜೆಗಳು ಸಂತುಷ್ಟರಾಗಿದ್ದಾರೆ. ಶ್ರೀಮನ್ಮಹಾರಾಜರವರು, ಬ್ರಿಟಿಷ್ ಗವರ್ನ್‌ಮೆಂಟಿನವರು ತಮ್ಮಲ್ಲಿಟ್ಟಿರುವ ನಂಬಿಕೆಗೆ ತಾವು ಅರ್ಹರೆಂಬುದನ್ನು, ತಮ್ಮ ಕಾರ್ಯಗಳಿಂದ ತೋರ್ಪಡಿಸುತ್ತಿದ್ದಾರೆ. ಹೀಗಲ್ಲದೆ, ಪರಿಣಾಮದಲ್ಲಿ ವ್ಯತ್ಯಸ್ತವಾಗಿದ್ದ ಪಕ್ಷದಲ್ಲಿ, ಶ್ರೀಮನ್ಮಹಾರಾಜರವರು ಜವಾಬ್ದಾರರಾಗಿರಬೇಕಾಗಿತ್ತು. ಹಾಗೆ ವ್ಯತ್ಯಸ್ತವಾಗದೆ ರಾಜ್ಯಭಾರದ ಸ್ಥಿತಿಯು ಈಗಿರುವರೀತಿಯಲ್ಲಿ ರುವದರಿಂದ, ಶ್ರೀಮನ್ಮಹಾರಾಜರವರು ನಮ್ಮ ವಿಶೇಷವಾದ ಶ್ಲಾಘನೆಗೆ ಅರ್ಹರಾಗಿರುತ್ತಾರೆ. ಶ್ರೀಮನ್ಮಹಾರಾಜರವರು ತಾವು ಆಳುವದಕ್ಕೆ ಆರಂಭಿಸಿದಂದಿನಿಂದಲೂ, ರಾಜಧರ್ಮದಲ್ಲಿ ಜಾಗರೂಕರಾಗಿದ್ದುಕೊಂಡು, ತಮ್ಮ ವಿವೇಕವನ್ನೂ ನೀತಿಪರತೆಯನ್ನೂ ವ್ಯಕ್ತಪಡಿಸಿದ್ದಾರೆ. ಪ್ರಜಾಮತೇಯಾರ ಕಾರ್ಯವನ್ನೂ, ಅವರಲ್ಲಿರುವ ವಿಶೇಷವಾದ ಪಾಂಡಿತ್ಯವನ್ನೂ ತಿಳಿದು, ಅವರಿಂದ ಪ್ರಯೋಜನವನ್ನು ಪಡೆಯುವದಕ್ಕೆ ತಕ್ಕ ವಿದ್ಯಾಭ್ಯಾಸವುಳ್ಳವರಾಗಿ, ತಮ್ಮ ಪ್ರಜೆಗಳ ಅನುರಾಗಕ್ಕಾಗಲಿ, ನಂಬಿಕೆಗಾಗಲಿ ಕೊರತೆಯನ್ನುಂಟು ಮಾಡಿಕೊಂಡಿಲ್ಲ. ಪ್ರಜೆಗಳಿಗೂ ಪ್ರಭುಗಳಿಗೂ, ಇಲ್ಲಿರುವದಕ್ಕಿಂತಲೂ ಅತಿಶಯವಾದ ಪರಸ್ಪರಾನುರಾಗವು, ಹಿಂದೂದೇಶದ ಇತರ ಸಂಸ್ಥಾನಗಳಲ್ಲಿ ಬಹಳ ಎಲ್ಲಿಯೂ ಇಲ್ಲವು. ಇದಲ್ಲದೆ, ಶ್ರೀಮನ್ಮಹಾರಾಜರವರು, ಮಹಾಪ್ರಭುವೆನ್ನಿಸಿರುವ ಪ್ರಜಾಕ್ಷೇಮಕ್ಕೋಸ್ಕರವೇ ರಾಜ್ಯಭಾರವೆಂಬ" ರಾಜನೀತಿಯನ್ನು

ಈ ದೇಶದಲ್ಲಿ ಆಚರಣೆಯಲ್ಲಿರುವದಕ್ಕಿಂತಲೂ ವಿಶೇಷವಾಗಿ ಬಹುಶಃ ಇತರ ಸಂಸ್ಥಾನಗಳಲ್ಲಿಲ್ಲ. ಪಂಚತ್ತಾದ ಕಷ್ಟಾಂ ಬದಲ್ಲಿ ಯಾವ ಅಪೇಕ್ಷೆಯೂ ಉಂಟಾಗದಂತೆ ರಾಜ್ಯದ ಅಧಿಕಾರವನ್ನು ನಿರ್ವಹಿಸಿಕೊಂಡು ಹೋಗುವದಕ್ಕಿಂತಲೂ, ರಾಜ್ಯಭಾರದ ಸಮಿಚೀನತೆಗೆ ಉತ್ತಮವಾದ ನಿದರ್ಶನವು ಬೇರೆ ಯಾವದೂ ಇಲ್ಲ. ಕಳೆದವರ್ಷ ಈ ದೇಶದಲ್ಲಿ ಕಷ್ಟಸಂಭವಿಸಿತ್ತು. ಆ ಕಾಲದಲ್ಲಿ ವಿಶೇಷವಾಗಿ ಅದನ್ನು ನಿವಾರಣೆ ಮಾಡಿಕೊಂಡದ್ದಕ್ಕಾಗಿ ನಾವು ಬಹಳ ಸಂತೋಷಪಡುತ್ತೇವೆ. ಹೋದವರ್ಷ ಮಳೆಯಿಲ್ಲದೆ ಹೋದ್ದರಿಂದ ೧೮೭೬-೭೭, ಮತ್ತು ೭೮ ನೇ ವರ್ಷಗಳಲ್ಲುಂಟಾಗಿದ್ದ ವಿಪತ್ತುಗಳು ಪುನಃ ಎಲ್ಲಿ ಪ್ರಾಪ್ತವಾಗುವವೋ ಎಂದು, ಸಲ್ಪಕಾಲ ಭೀತಿಯುಂಟಾಗಿತ್ತು. ಆದರೆ, ಸಮರ್ಥರೂ ಕಾರ್ಯನಿಷ್ಟಾಪರರೂ ಆದ ದಿವಾನರವರು ಶ್ರೀಮನ್ಮಹಾರಾಜರವರ ಆಜ್ಞಾನುಸಾರವಾಗಿ ನಡೆಸಿದ ಪದ್ಧತಿಗಳು ಸಮೀಚೀನಗಳಾಗಿದ್ದವದರಿಂದಲೇ, ದುರ್ಭಿಕ್ಷಕಾಲದಲ್ಲುಂಟಾದ ಮರಣ ಸಂಖ್ಯೆಯು ಇತರ ಕಾಲದ ಮರಣಸಂಖ್ಯೆಗಿಂತಲು ಹೆಚ್ಚಾಗಲಿಲ್ಲವೆಂತಲೂ, ಅನ್ನ ದೊರೆಯದ ಕಾರಣದಿಂದಲೇ ಮರಣ ಉಂಟಾಗಲಿಲ್ಲವೆಂತಲೂ, ಅವರು ಅರಿಕೆಮಾಡುವದಕ್ಕೆ ಸಾಧ್ಯವಾಯಿತು. ಇಷ್ಟುಮಾತ್ರವೇ ಅಲ್ಲ ಹೀಗೆ ಪ್ರಾಪ್ತವಾದ ಸಮಯವನ್ನು ಅವಲಂಬಿಸಿ, ಪ್ರಜೆಗಳಿಗೆ ನಿರಂತರ ಅನುಕೂಲ್ಯವನ್ನು ಹೆಚ್ಚಿಸುವಂಥಾ ರಿಲೀಫ್ ಕಾಮಗಾರಿಗಳನ್ನು ಏರ್ಪಡಿಸುವದಾಯಿತು. ಈ ಕಾಮಗಾರಿಗಳಲ್ಲಿ ಜಲಾಶ್ರಯಗಳಲ್ಲಿ ಸ್ಥಿರವಾಗಿ ನೀರು ನಿಲ್ಲುವಂತೆ ಮಾಡಿಸಿದ್ದರಿಂದ, ಆಗಿನ ಕಷ್ಟನಿವಾರಣೆಯಾದ ಹ್ಯಾಗಲ್ಲದೆ ಮುಂದೆ ಸಂಭವಿಸಬಹುದಾದ ಕ್ಷಾಮದ ಭೀತಿಯೂ ಬಹಳ ಮಟ್ಟಿಗೆ ಕಡಮೆಯಾಗುವಂತೆಯೂ ಆಯಿತು. ಜಲಕ್ಷಾಮವು ಸಂಭವಿಸಬಹುದಾದ ಪ್ರದೇಶಗಳಲ್ಲಿ ವ್ಯವಸಾಯೋಪಯುಕ್ತಗಳಾದ ಭಾವಿಗಳನ್ನು ತೋಡಿಸುವದಕ್ಕೋಸ್ಕರ ಸರಕಾರದ ಹಣವನ್ನು ವೆಚ್ಚಮಾಡುವದಕ್ಕಿಂತಲೂ ಉತ್ತಮವಾದ ಮಾರ್ಗ ಮತ್ತೊಂದಿಲ್ಲ. ಇಂಥಾ ಕಾರ್ಯಗಳನ್ನು ನಡಿಸುವದಕ್ಕೋಸ್ಕರ ಸಾಲುಪವಾದ ಬಡ್ಡಿಗೆ, ಸರಕಾರದಿಂದ, ರೈತರಿಗೆ ಹಣವನ್ನು ಕೊಡುವದರಿಂದ, ಹಿಂದೂದೇಶದ ಇತರ ಪ್ರಾಂತ್ಯಗಳಲ್ಲಿ ಬಹಳ ಪ್ರಯೋಜನವುಂಟಾಗಿದೆ. ಶ್ರೀಮನ್ಮಹಾರಾಜರವರೂ ಇಂಥಾ ಕಾರ್ಯಕ್ಕೆ ಪ್ರೋತ್ಸಾಹವನ್ನುಂಟು ಮಾಡಿದ್ದು ಬಹಳ ಉತ್ತಮವಾಯಿತು.

(ಸೌ|ಪ್ರ|)

ಚಿಕಾಗೋ ಎಗ್ಸಿಬಿಷನ್.

ಸನ್ ೧೮೯೩ ನೇ ಇಸವಿ ಮೇ ತಾರೀಖು ೧ ರಲ್ಲು ಅಮೆರಿಕಾ ಖಂಡದ ಸಂಯುಕ್ತ ಸಂಸ್ಥಾನಗಳಿಗೆ ಸೇರಿದ ಚಿಕಾಗೋ ಎಂಬ ಶಹರದಲ್ಲಿ ಪ್ರಪಂಚದ ಎಲ್ಲಾ ಭಾಗಗಳಿಂದಲೂ ಸಕಲ ವಿಧ ನವೀನ ವಸ್ತುಗಳು ಮಹಾ ಉತ್ಕೃಷ್ಟಸ್ಥಿತಿಯಲ್ಲಿಯೂ, ಅತ್ಯಂತ ಮನೋರಂಜಕವಾದ ತರದಲ್ಲಿಯೂ ಪ್ರದರ್ಶನಗೊಳಿಸಲ್ಪಡುತ್ತವೆಂದು ನಿಷ್ಕರ್ಷೆ ಮಾಡಿರುತ್ತಾರೆ. ಆ ಕಾಲಕ್ಕೆ ಭೂಮಂಡಲದ ನಾನಾದೇಶಗಳಿಂದಲೂ ಪ್ರಧಾನಿಗಳೂ, ಅವರ ಕಡೆಯ ರಾಯಭಾರಿಗಳೂ, ಭಾರೀ ವರ್ತಕರೂ, ಮಹಾಮಹಾ ವಿದ್ವಾಂಸರೂ, ಇತರ ದೊಡ್ಡ ದೊಡ್ಡ ಮನುಷ್ಯರೂ, ಪ್ರಸಿಡೆಂಟುಗಳೂ ಅಲ್ಲಿಗೆ ದಯಮಾಡಿ ಹೋಗುತ್ತಾರೆ. ಇವರಲ್ಲಿ ಕೆಲವರು ಪ್ರದರ್ಶನ ವಸ್ತುಗಳನ್ನು ನೋಡಿಕೊಂಡು ಬರುವ ಕುತೂಹಲಭರಿತರಾಗಿಯೂ, ಮತ್ತೆ ಕೆಲವರು ಪ್ರದರ್ಶನ ಶಾಲೆಗೆ ನವೀನ ಪದಾರ್ಥಗಳನ್ನು ತೆಗೆದುಕೊಂಡು ಹೋಗಲು ಆಯಾಯ ಕಡೆಯ ಅಧಿಕಾರಿಗಳಿಂದ ನಿಯಮಿಸಲ್ಪಟ್ಟ ರಾಯಭಾರಿಗಳಾಗಿಯೂ, ಇನ್ನೂ ಕೆಲವರು ಜೋಗಿ ಪ್ರದರ್ಶನ ಮಂಟಪವನ್ನಲಂಕರಿಸಬೇಕೆಂದು ಅಪೇಕ್ಷಿಸಲ್ಪಟ್ಟವರಾಗಿಯೂ, ಮತ್ತೆ ಕೆಲವರು ಅಲ್ಲಿ ನಡೆಯುತಕ್ಕ ಕೆಲಸಕಾರ್ಯಗಳನ್ನು ಸ್ವತಃ ಪರಾಂಬರಿಸುವದರ ಮೂಲಕವೂ ಮತ್ತು ಲೋಕದ ಸಕಲ ಜಾತಿಯವರೂ ಸಮಸ್ತ ಕಾಲದ ವರೆಗೂ ಒಂದುಕಡೆಯಲ್ಲಿ ಸೇರಿ ಜರುಗಿಸುವ ಪರಸ್ಪರ ಸಂಭಾಷಣೆಯ ಮೂಲಕವೂ, ನಾನಾರೀತಿಯಲ್ಲಿ ತಮ್ಮ ಇಂದ್ರಿಯಗಳ ಪುಷ್ಟಿಗಳನ್ನು ಜಾಗರೂಕವಮಾಡಿಕೊಂಡು ತಮ್ಮ ಸ್ವದೇಶಗಳಿಗೆ ಹಿಂತಿರುಗಿ ಹೋಗಿ, ಅಲ್ಲಿ ವ್ಯಾಪಾರಕವ್ಯವಸಾಯಗಳಲ್ಲಿ ವಿಶೇಷ ಪ್ರಯೋಜನಗಳನ್ನು ಸಂಪಾದಿಸಬೇಕೆಂಬ ಹಾರೈಕೆಯುಳ್ಳವರಾಗಿಯೂ ಹೋಗುತ್ತಾರೆ. ಪ್ರಕೃತದಲ್ಲಿ ಈ ನಮ್ಮ ಭರತ ಖಂಡದ ನಾನಾರಾಜ್ಯಗಳಿಂದಲೂ ಆ ಪಟ್ಟಣದಲ್ಲಿ ಪ್ರದರ್ಶನಕ್ಕೆ ಯೋಗ್ಯವಾಗಿ ಕಂಡುಬರುವ ಪದಾರ್ಥಗಳನ್ನೂ ಮತ್ತು ಈ ಪದಾರ್ಥಗಳನ್ನು ತೆಗೆದುಕೊಂಡು ಹೋಗುವ ದಕ್ಕೆ ತಕ್ಕ ಅಧಿಕಾರಿಗಳನ್ನೂ ಕಳುಹಿಸಿಕೊಡುತ್ತಾರಷ್ಟೆ. ಮತ್ತು ಆ ಪ್ರದರ್ಶನ ಮಹೋತ್ಸವವನ್ನು ನೋಡಿಕೊಂಡು ಬರುವದಕ್ಕಾಗಿ ಹೋಗಬೇಕೆಂದು ಇಷ್ಟಪಡುವ ಹಿಂದೂ ದೊಡ್ಡ ಮನುಷ್ಯರ ಉಪಯೋಗಾರ್ಥವಾಗಿಯೇ ಬಂದು ಹೊಸ ಹಡಗು ಬರುವ ಮಾರ್ಚಿ ಗುರ್ರೇ ತಾರೀಖಿನ ದಿವಸ ಬೊಂಬಾಯಿ ಪಟ್ಟಣದಿಂದ ಪ್ರಯಾಣ ಮಾಡುವ ಹಾಗೆ ಗೊತ್ತು ಮಾಡಿರುತ್ತಾರೆ. ಈ ಹಡಗಿನಲ್ಲಿ ಬ್ರಾಹ್ಮಣರೂ, ಮಾಂಸಹಾರಿಗಳು, ಮಾರರೃತ್ಯಗಳ ಸೇವನೆಯೂ ಮುಂತಾದ ಹಿಂದೂ ಮತ ವಿರುದ್ಧಗಳಾದ ಕಾರ್ಯಗಳೊಂದೂ ನಡೆಸಲ್ಪಡುವದಿಲ್ಲ. ಅವರಲ್ಲಿ ಪ್ರಯಾಣ ಮಾಡತಕ್ಕ ಹಿಂದೂ ದೊಡ್ಡ ಮನುಷ್ಯರ ಜಾತಿ ಪದ್ಧತಿಗಳಿಗೆ ವಿರೋಧವಾಗದ ಆಹಾರ ಪದಾರ್ಥಗಳನ್ನೇ ಅವರಲ್ಲಿಟ್ಟು ಅವರಿಗೆಲ್ಲಾ ಕೊಡುವರು. ಪ್ರತಿಯೊಬ್ಬ ಹಿಂದೂ ದೊಡ್ಡ ಮನುಷ್ಯನೂ ೧ ನೇ ತರಗತಿಯಲ್ಲಿ ಪ್ರಯಾಣ ಮಾಡುವವನಾಗಿದ್ದರೆ ತನ್ನ ಪ್ರಯಾಣ ಪೂರೈಸಿಕೊಂಡು ವಾಪಸು ಬೊಂಬಾಯಿ ಪಟ್ಟಣಕ್ಕೆ ಬಂದು ಇಳಿಯುವವರೆಗೆ ೩,೦೦೦ ರೂಪಾಯಿಗಳನ್ನು ಕೊಡಬೇಕು, ಎರಡನೇ ತರಗತಿಯಲ್ಲಿ ಹೋಗತಕ್ಕವರು ೨,೫೦೦ ರೂಪಾಯಿಗಳನ್ನು ಕೊಡಬೇಕು. ತಮ್ಮ ಜೊತೆಯಲ್ಲಿ ಕರೆದುಕೊಂಡು ಹೋಗುವ ಪ್ರತಿಯೊಬ್ಬ ಪರಿಚಾರಕನಿಗೆ ೫೦೦ ರೂಪಾಯಿಗಳನ್ನು ಕೊಡಬೇಕಾಗುತ್ತದೆ. ಈ ಪ್ರಯಾಣವನ್ನು ಮಾಡಲು ಅಪೇಕ್ಷೆಯುಳ್ಳವರು ಅಗತ್ಯವಾಗಿ ಏಪ್ರಿಲ್ ಕೊನೆಯ ವರೆಗೂ ಅಮೆರಿಕಾ ಪ್ರವೇಶವಾಗುವಹಾಗೆ ವಿಸ್ತಾರವಾದ ವಿಷಯಗಳನ್ನು ಗುರುತಿಸಿ, ಅಮೆರಿಕಾ ಖಂಡದ ಲಂಡನ್ ನಗರವಾದ ನ್ಯೂಯಾರ್ಕ ಪಟ್ಟಣದ ಹತ್ತಿರ ಬಂದರಿಗೆ ಹೋಗಿ ಸೇರಿ ಅಲ್ಲಿಂದ ಮುಂದೆ ಪ್ರಯಾಣ ಮಾಡುವ ಹಿಂದೂ ದೊಡ್ಡ ಮನುಷ್ಯರ ಸಂಗಡ ಮೆಯಿಲ್ ರೈಲಿನ ಮುಖಾಂತರ ನ್ಯೂಯಾರ್ಕ ಪಟ್ಟಣಕ್ಕೆ ತಲುಪುತ್ತದೆ.

ಕರೆದುಕೊಂಡು ಹೋಗುವುದಕ್ಕಾಗಿ ಪ್ರತ್ಯೇಕವಾದ ಪ್ರಯಾಣ ಪತ್ರಿಕೆಗಳನ್ನು ೧,೫೦೦ ರೂಪಾಯಿ ಆಗುವದು. ಈ ಹಡಗು ಅಲ್ಲಿನ ಪ್ರಸಿದ್ಧ ಪಾತೊತ್ಸವದ ವರ್ಷ ಕಳೆದ ನಂತರ ಒಂದು ಜಾಸ್ತಿ ತಿಂಗಳಲ್ಲಿ ಕೋಲುಂಬಿಯಾ ಎಂದು ಹೆಸರುಳ್ಳ ವಾಸ್ಕೋ ದ ಗಾಮಾ ೧೫ ನೇ ತಾರೀಖಿನ ದಿವಸ ಬೊಂಬಾಯಿ ಪಟ್ಟಣವನ್ನು ಬಿಡುವ ಈ ಹಡಗು ಪ್ರಯಾಣ ಮಾಡಿಕೊಂಡು ಸಂಯುಕ್ತ ಸಂಸ್ಥಾನಗಳ ರಾಜಧಾನಿಯಾದ ನ್ಯೂಯಾರ್ಕ ಪಟ್ಟಣಕ್ಕೆ ತಲುಪುತ್ತದೆ. ಅನಂತರ ಅಲ್ಲಿರುವ ಈ ಕಂಪೆನಿಯ ಏಜಂಟ್ರುಗಳು ಈ ಹಡಗಿನಲ್ಲಿ ಪ್ರಯಾಣ ಮಾಡುವ ಹಿಂದೂ ದೊಡ್ಡಮನುಷ್ಯರುಗಳನ್ನೆಲ್ಲಾ ಅಲ್ಲಿಂದ ೯೦೦ ಮೈಲಿಗಳ ದೂರದಲ್ಲಿರುವ ಚಿಕಾಗೋ ಪಟ್ಟಣದ ವರೆಗೂ ರೈಲಿನ ಮೇಲೆ ಕರೆದುಕೊಂಡು ಹೋಗುತ್ತಾರೆ. ಈ ಪ್ರಯಾಣದಲ್ಲೆಲ್ಲಾ ಪ್ರಯಾಣ ಮಾಡುವವರಿಗೆ ತಮ್ಮ ಮನೆಯಲ್ಲಿ ತನಗೆ ನಡೆಯುವ ಸೌಕರ್ಯಗಳ ಚಾರಗಳಿಗಿಂತಲೂ ವಿಶೇಷತರವಾಗಿ ಊಟ ಉಪಚಾರಾದಿಗಳು ಜರುಗುವವು. ಇಂಥಾ ಶ್ರೇಷ್ಠವಾದ ರೀತಿಯಲ್ಲಿ ಕರೆದುಕೊಂಡು ಹೋಗಿ, ಪುನಃ ವಾಪಸು ಕರೆದುಕೊಂಡು ಬಂದು ಬಿಡತಕ್ಕದ್ದಾಗಿ ಬೊಂಬಾಯಿನ ಬಂದೋಬಸ್ತು ಹಡಗಿನ ಕಂಪೆನಿಯವರು ಇಂಗ್ಲೀಷ್ ಪತ್ರಿಕೆಗಳಲ್ಲಿ ಪ್ರಕಟಿಸಿರುತ್ತಾರೆ.

ಇಂಥಾ ಹಡಗಿನಲ್ಲಿ ಪ್ರಯಾಣ ಮಾಡಲು ಅನೇಕ ಮಂದಿ ಹಿಂದೂ ಸಾಹುಕಾರರೂ ವಿದ್ವಾಂಸರೂ ಅಧಿಕಾರಿಗಳೂ ಯಾಕೆ ಪ್ರಯಾಣ ಮಾಡಬಾರದು? ಇಂಥಾ ಸೌಕರ್ಯಗಳನ್ನೆಲ್ಲಾ ಕಲ್ಪಿಸಿಕೊಟ್ಟರುವಾಗ್ಯೆ ತಮ್ಮ ದ್ರವ್ಯವನ್ನು ಸಾರ್ಥಕವಾಗಿ ಖರ್ಚು ಮಾಡಿ, ಅಲ್ಲಿಗೆ ಹೋಗಿ ಬಂದು ಇಲ್ಲಿ ನ ತಮ್ಮ ಭ್ರಾತೃವರ್ಗಕ್ಕೆ ಸಹಿಸಲಾದ ಕೋಟ್ಯನುಕೋಟಿ ಮಹತ್ತರಗಳ ಪ್ರಯೋಜನಗಳನ್ನು ಯಾಕೆ ಕಲ್ಪಿಸಬಾರದು? ಈ ಮೇ ತಿಂಗಳ ಮೊದಲನೇ ತಾರೀಖಿನಲ್ಲಿ ಚಿಕಾಗೋ ಪಟ್ಟಣದಲ್ಲಿ ಜರುಗುವಂಥಾ ಪ್ರದರ್ಶನ ಮಹೋತ್ಸವವು ಹಿಂದೆ ಯಾವಾಗಲೂ ಯಾವ ರಾಜ್ಯದಲ್ಲಿಯೂ ನಡೆದಿಲ್ಲ ಮತ್ತು ಮುಂದೆ ಎಲ್ಲಿಯಾದರೂ ನಡೆಯುವದೆಂಬ ಭರವಸೆಯೂ ಸಾಲದು. ಹ್ಯಾಗೂ ವಿದ್ವಾಂಸರೂ ಲಕ್ಷ್ಮೀಕಟಾಕ್ಷಕ್ಕೆ ಪಾತ್ರರೂ ಆಗಿರುವ ಅನೇಕ ಮಂದಿ ಹಿಂದೂ ದೊಡ್ಡ ಮನುಷ್ಯರು ಪ್ರಾಪ್ತವಾಗಿರುವ ಇಂಥಾ ಸಮಯವನ್ನು ಕೈಕೊಂಡು ಆ ಮಹೋತ್ಸವವನ್ನು ನೋಡಿಕೊಂಡು ಬರದೇ ಇರಲಾರರೆಂದು ದೃಢವಾಗಿ ನಂಬಿದ್ದೇವೆ.

ವಿವಿಧ ವರ್ತಮಾನಗಳು

ಧರ್ಮಾವರಂನಿಂದ ಮೈಸೂರು ರೇವೆಯ ಯಲ್ಲವು ವರೆಗೆ ಸರ್ವೆ ಆಗಿ ಅಂದಾಜು ಮಾಡಿದ್ದ ರೈಲ್ವೇಗೋಸ್ಕರ ಇಂಗ್ಲಿಷ್ ಸರ್ಕಾರದ ಸೆಕ್ರೆಟರಿಯವರು ೩೧,೫೪,೧೫೭ ರೂಪಾಯಿಗಳನ್ನು ಸ್ವೀಕಾರ ಮಾಡಿರುತ್ತಾರೆ

ಪೊರ್ಟೋಕೆಲೊ ಸುಲ್ತಾನರು, ತಮ್ಮ ಜಹಗೀರು ಟ್ಯೂನಿಜ್ ಬಳಿ ಪೋಲೀಸಿನವರು ಒಬ್ಬ ಬ್ರಿಟಿಷ್ ಪ್ರಜೆಯನ್ನು ಕೊಂದದ್ದಕ್ಕಾಗಿ, ಬ್ರಿಟಿಷ್ ಸರ್ಕಾರಕ್ಕೆ ೫,೦೦೦ ಚಿನ್ನದ ನಾಣ್ಯಗಳನ್ನು ತಪ್ಪು ಕಾಣಿಕೆಯಾಗಿ ಕೊಡುವುದಾಗಿ ಒಪ್ಪಿಕೊಂಡಿರುತ್ತಾರೆ.

ಕಳೆದ ೧೭ ನೇ ತಾರೀಖಿನ ಸಂಜೆ ೧೦|| ಘಂಟೆಯ ಹೊತ್ತಿನಲ್ಲಿ ಲ್ಯಾಹೋರಿನಲ್ಲಿ ಒಂದು ಭಯಂಕರವಾದ ಭೂಕಂಪನವುಂಟಾಗಿ ಅದರಿಂದ ಅನೇಕ ಮನೆಗಳು ಬಿದ್ದು ಹೋದವು. ಪ್ರಾಣಹಾನಿ ಏನಾದರೂ ಆಯಿತೋ ಇಲ್ಲವೋ ತಿಳಿಯಲಿಲ್ಲ.

ಗೋವಾ ಪಟ್ಟಣದ ಪಾಪೋಲಿ ಎಂಬಲ್ಲಿ ವಾಸವಾದ ತ್ರಿಸ್ಥ ರೊಡ್ರಿಯೋ ಫರ್ನಾಂಡಿಸ್ ಎಂಬವನು ಕೆಲವು ದಿವಸಗಳ ಕೆಳಗೆ ಸತ್ತನು. ಇವನಿಗೆ ಸಾಯುವಾಗ್ಯೆ ೧೧೮ ವರುಷಗಳು ಆಗಿದ್ದವು. ಆದಾಗ್ಯೂ ಸಾಯುವತನಕ ಆತನು ಪುಷ್ಟನಾಗಿಯೇ ಇದ್ದನಂತೆ.

ರಷ್ಯಾ ದೇಶದಲ್ಲಿರುವ ಸಮರಾ ರೈಲ್ವೇ ಗಾಡಿಗಳಲ್ಲಿ ಸುಮಾರಾಗಿ ೨೦೦ ಜನಗಳವರೆಗೂ ಸಸ್ಥಾಪಿ ಜನರು ಪ್ರಯಾಣ ಮಾಡುತ್ತಿದ್ದರು. ಗಾಡಿಗಳು ಅತ್ಯಂತ ವೇಗವಾಗಿ ಹೋಗುತ್ತಿದ್ದಾಗ್ಯೆ ಬೆಂಕಿ ಕಾಣಿಸಿಕೊಂಡು ಗಾಡಿಗಳೆಲ್ಲಾ ಹತ್ತಿಕೊಂಡು ಸ್ವಲ್ಪ ಹೊತ್ತಿನ ಒಳಗೆ ೫೦ ಜನಗಳವರೆಗೂ ಸುಟ್ಟು ಬೂದಿಯಾದರು.

ಅಮೆರಿಕಾದಲ್ಲಿ ಸೇಂಟಲೂಯಿ ಎಂಬ ಪಟ್ಟಣದಿಂದ ಚಿಕಾಗೋಪಟ್ಟಣದ ವರೆಗೂ ವಿದ್ಯುಚ್ಛಕ್ತಿಯಿಂದಲೇ ರೈಲನ್ನು ನಡಿಸುತ್ತಲಿದ್ದಾರೆ. ಅದು ೬೦ ನಿಮಿಷಗಳಲ್ಲಿ ೧೦೦ ಮೈಲು ದೂರ ಹೋಗುತ್ತಲಿದೆ. ಇನ್ನೂ ವೇಗವಾಗಿ ಒಟ್ಟಿಗೆ ಒಂದು ನಿಮಿಷಕ್ಕೆ ಎರಡು ಮೈಲಿನ ಪ್ರಕಾರ ಹೋಗಲು ಸಾಮರ್ಥ್ಯವಿರುವದೆಂದು ತಿಳಿಯಲಾದವು.

ಪಾಡವರ್ಮಿಯವನಾಗಿದ್ದ ಒಬ್ಬ ಹೆಂಗಸು ಈಚೆಗೆ ಕ್ರೈಸ್ತಮತವನ್ನು ಅವಲಂಬಿಸಿ ಮೇರಿ ಕ್ರೈಷ್ ಎಂಬ ಹೆಸರಿನಲ್ಲಿ ಬ್ಯಾಪ್ಟಿಸ್ಮ ಪಡೆದಿದ್ದಾಳೆ. ಆಕೆಯು ಅಲಿಬಾಗ್ ಬಹದ್ದೂರ್ ಎಂಬ ಸಹೋದರನಿಂದ ತನ್ನ ಪಾಲಿನ ಹಣವನ್ನು ಅಂದರೆ ೧೨ ಲಕ್ಷ ರೂಪಾಯಿಗಳನ್ನು ಕೊಡಿಸಿ ಕೊಡಬೇಕೆಂದು ಅಲಿಪುರದ ಸಬಜಡ್ಜಿ ಕೋರ್ಟಿನಲ್ಲಿ ದಾವೇ ತಂದಿರುತ್ತಾಳೆ.

ಪ್ರತಿವರುಷವೂ ಪ್ರಪಂಚದ ಎಲ್ಲಾ ಭಾಗಗಳಲ್ಲಿಯೂ ಉತ್ಪತ್ತಿಯಾಗುವ ಚಿನ್ನವು ೨೧೬ ಟನ್‌ಗಳೆಂತಲೂ, ಬೆಳ್ಳಿಯು ೧,೭೫೭ ಟನ್‌ಗಳೆಂತಲೂ ಬ್ಯಾಂಕ್ ಪತ್ರಿಕೆಯು ತಿಳಿಸುತ್ತದೆ. ಬೆಳ್ಳಿಗೆ ೧೦ ರೂಪಾಯಿಯೆಂದರೆ ಚಿನ್ನದ ಬೆಲೆಯು ೫೦,೦೦,೦೦೦ ರೂಪಾಯಿಯೂ, ಬೆಳ್ಳಿಯ ಬೆಲೆಯು ೪೬,೬೦,೦೦೦ ರೂಪಾಯಿಯೂ ಆಗುತ್ತದೆ.

ಅಮೆರಿಕಾ ದೇಶದ ಕಾಂಡಿಯಾದಿಪ್ಪ್ರಕ್ಕೆ ಬಂದು ಪಾರದ್ರವ್ಯವು ಮುಕದ್ದಮೆಯಲ್ಲಿ ದುಗ ಆದ ಮಿ|| ಅರೆಸ್ಟಿಂ ಎಂಬವನು ಆಪ್ ರವಡು ಸ್ಥಳದ ಅಮೆರಿಕಕ್ಕೆ ಹೋಗಿ ಅಲ್ಲಿನ ಜನಗಳನ್ನು ಬಾಧಿಸುವುದನ್ನಾಗಿ ವಿನಿಯೋಗಿಸುವದಕ್ಕೆ ಆಗಲಿ ಸಹಾಯ ಮಾಡುವದಕ್ಕಾಗಿ ಬಹುಬಸಿ ಪ್ರತಿಯೋಬ್ಬರು ಗಳಲ್ಲಿರುವ ಮುಖಸ್ಥರಿಯವರಲ್ಲಿಯೂ ಸೇರಿ ಅವನಿಗೆ ೯,೦೦೦ ರೂಪಾಯಿಗಳನ್ನು ಕೊಟ್ಟಿರುತ್ತಾರೆ

ಒಬ್ಬ ಮೊದಲಿಯಾರ್ರವರೂ, ೬-|| ಮಂದಿ ಬ್ರಾಹ್ಮಣ ಯುವಕರೂ ಬಾಲ ವಿಧವೆಯರನ್ನು ಮದುವೆ ಮಾಡಿಕೊಳ್ಳುವದಕ್ಕೆ ಇಷ್ಟಪಟ್ಟು ಮದರಾಸು ಹಿಂದೂ ಎಂಬ ವರ್ತಮಾನ ಪತ್ರಿಕೆಯಲ್ಲಿ ಪ್ರಕಟಿಸಿರುತ್ತಾರೆ. ಪುನರ್ವಿವಾಹ ಮಾಡಲು ಇಷ್ಟಪಡತಕ್ಕ ಮಾತಾಪಿತೃಗಳಾಗಲಿ, ಅಥವಾ ಅಂಥಾ ಬಾಲವಿಧವೆಯರೇ ಆಗಲಿ ಮದರಾಸಿನಲ್ಲಿರುವ ವಿಧವಾ ವಿವಾಹ ಸಮಾಜಕ್ಕೆ ಬರೆದು ತಿಳಿಸಬಹುದು

ಒಬ್ಬ ಬಂಗಾಳೀ ಬಾಬುವು ಆಶ್ಚರ್ಯಕರವಾದ ಒಂದು ಯಂತ್ರವನ್ನು ತಯಾರಿಸಿರುತ್ತಾನೆ. ಆ ಯಂತ್ರದ ಮೇಲೆ ಕೂತುಕೊಂಡು ನೀರಿನ ಮೇಲೆ ಪ್ರಯಾಣ ಮಾಡಬಹುದು. ಅದು ಎರಡು ಚಕ್ರ, ಮೂರು ಚಕ್ರಗಳ ಗಾಡಿಯ ಹಾಗಿದೆ. ಅದನ್ನು ಕಾಲಿನಿಂದಲೇ ನಡಿಸಬೇಕು. ನೀರಿನ ಮೇಲೆ ನಡೆಸುವಾಗ್ಯೆ ಅತ್ಯಂತ ವೇಗವಾಗಿ ಹೋಗುತ್ತದೆ. ಈ ಯಂತ್ರದ ಮೇಲೆ ಕುಳಿತು ಗಂಗೇ ನದಿಯಲ್ಲಿ ನೀರಿನ ಮೇಲೆ ಬಂದು ಕಡೆ ಯಂದಮತ್ತೊಂದು ಕಡೆಗೆ ನಡೆಸಿದನಂತೆ ಆಶ್ಚರ್ಯವೇ ಸರಿ!

ಮದರಾಸು ಪಟ್ಟಣದಲ್ಲಿ ಆರೋಗ್ಯರಕ್ಷಕರ ಕೆಲಸದಲ್ಲಿರುವ ಡಾಕ್ಟರ್ ಕಾಟಿರವರು ೧೮೯೧ ನೇ ಇಸವಿಯಲ್ಲಿ ಆ ಪಟ್ಟಣದ ಆರೋಗ್ಯಸ್ಥಿತಿಯನ್ನು ತಿಳಿಸಿರುತ್ತಾರೆ. ಆ ವರ್ಷದಲ್ಲಿ ೯,೭೭೭ ಜನ ಗಂಡಸರೂ, ೮,೭೮೦ ಜನ ಹೆಂಗಸರೂ, ಒಟ್ಟು ೧೮,೬೬೦ ಜನ ಹುಟ್ಟಿದರೆಂದು ಗೊತ್ತಾಗುತ್ತದೆ. ಅದೇ ವರುಷದಲ್ಲಿ ಸತ್ತವರು ೨೩,೮೯೮ ಜನ. ಆ ಪಟ್ಟಣದ ಜನಸಂಖ್ಯೆಯನ್ನು ಈ ಸಂಖ್ಯೆಗೆ ಹೋಲಿಸಿ ನೋಡಿದರೆ ೧,೦೦೦ ಕ್ಕೆ ಸುಮಾರು ೫೩ ಮಂದಿಯಂತೆ ಸತ್ತಿರುತ್ತಾರೆಂದು ಗೊತ್ತಾಗುತ್ತದೆ.

ಈಗ ಬ್ರಿಟಿಷ್ ಇಂಡಿಯಾದ ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ತಂತೀ ವರ್ತಮಾನವನ್ನು ಕಳುಹಿಸಬೇಕಾದರೆ ೮ ಆಣೆಗಳಿಗೆ ಕಡಮೆಯಾಗದಂತೆ ತಂತೀ ಆಫೀಸಿಗೆ ಕೊಡಬೇಕಾಗಿದೆ. ಇದರಿಂದ ಇಂಡಿಯಾದ ಅನೇಕ ಬಡಬಗ್ಗರಿಗೆ ಉಪಯೋಗಿಸಲು ಆಗದೆ ಇರುವದರಿಂದ ಈ ಅಂಕವನ್ನು ಗವರ್ನಮೆಂಟಿನವರು ತೆಗೆದು ೪ ಆಣೆಗೆ ಕಡಮೆ ಇಲ್ಲದಂತೆ, ತಂತೀ ವರ್ತಮಾನ ಕಳುಹಿಸುವವರು ಆಫೀಸಿಗೆ ಕೊಡಬೇಕೆಂದು ಏರ್ಪಾಟನ್ನು ಕಡಮೆ ಮಾಡಬೇಕೆಂದು ಆಲೋಚಿಸುತ್ತಲಿದ್ದಾರೆ. ಇದು ಜಾರಿಯಲ್ಲಿ ಬರುವಹಾಗಿದೆ. ಆಗ್ಯೆ ಅನೇಕ ಮಂದಿ ಜನರೂ ಈ ಮೂಲಕ ವರ್ತಮಾನಗಳನ್ನು ಕಳುಹಿಸಲು ಸಾಧ್ಯವಾಗಬೇಕೆಂದು ನಂಬಿದ್ದೇವೆ

ಕರಾಚಿ ಪಟ್ಟಣದ ಮ್ಯೂನಿಸಿಪಲ್ ಪದ್ಧತಿಗಳು ಸಮರ್ಪಕವಾದ ಸ್ಥಿತಿಯಲ್ಲಿಲ್ಲವೆ ಇರೋಣದರಿಂದ ಗೌರ್ನಮೆಂಟ್‌ನವರು ಮಹೋಪಾಯ ೧,೨೫೦ ರೂಪಾಯಿಗಳ ತಲೆಯನ್ನು ಕೊಟ್ಟು ಒಬ್ಬ ಮ್ಯೂನಿಸಿಪಲ್ ಕಮಿಷನರನ್ನು ನೇಮಿಸಬೇಕೆಂದು ಗೊತ್ತು ಮಾಡಿದಾರೆ. ಆದರೆ ಇತ್ತಲಾಗೆ ನಮ್ಮ ಕಡೆಗಳಲ್ಲಿ ಗೌರ್ನಮೆಂಟಿನವರು ವಿದ್ವಾಂಸರಲ್ಲದ ವರ್ತಕರನ್ನೂ, ಗೌಡರನ್ನೂ ಮ್ಯೂನಿಸಿಪಲ್ ಕಮಿಷನ್ನರ ಕೆಲಸಕ್ಕೆ ನೇಮಿಸುತ್ತಾರೆ. ಇದರಿಂದ ಪಟ್ಟಣಗಳ ಮ್ಯೂನಿಸಿಪಲ್ ಪದ್ಧತಿಗಳು ಎಷ್ಟುಮಟ್ಟಿಗೆ ಜರುಗುವದೋ, ಇವರನ್ನು ನಡೆಯುವಂಥ ಪ್ರಜೆಗಳು ಎಷ್ಟು ಪುಣ್ಯವಂತರೋ ವಾಚಕರೇ ಊಹಿಸಿಕೊಳ್ಳಬಹುದು.

ಬರ್ಲಿನ್ ಪಟ್ಟಣದಲ್ಲಿ ಒಬ್ಬ ಪತ್ತಾ ಕಳ್ಳನು ತಾನು ಕದ್ದ ಪದಾರ್ಥಗಳನ್ನು ತನ್ನ ಸ್ವಾಧೀನಪಡಿಸಿಕೊಂಡತರುವಾಯ ಕಳ್ಳತನ ನಡೆದ ವರ್ತಮಾನವನ್ನು ಸೊಗಸಾಗಿ ವಿವರಿಸಿ ಅಲ್ಲಿನ ಒಂದು ಪತ್ರಿಕೆಗೆ ಕೊಡುತ್ತಿದ್ದನು. ಅವನಿಗೆ ಇದರಿಂದಲೂ ಸ್ವಲ್ಪ ದುಡ್ಡು ಸಂಪಾದನೆಯಾಗುತ್ತಿತ್ತು. ಪೋಲೀಸಿನವರಿಗೆ ಕಳುವಿನ ವರ್ತಮಾನವು ತಿಳಿಯುವದಕ್ಕಿಂತ ಮುಂಚೆಯೇ ಇವನು ಪತ್ರಿಕೆಯಲ್ಲಿ ಬರೆಯುತ್ತಿದ್ದನಾದ್ದರಿಂದ ಒಂದು ನೆಸಂದುವೇಳೆ ಆ ಪತ್ರಿಕೆಯ ಎಡಿಟರವರಿಗೆ ಈ ತಮ್ಮ ಬಾತ್ಮೀದಾರನಲ್ಲಿ ಅನುಮಾನ ಹುಟ್ಟಿ, ಈ ಸಂಗತಿಯನ್ನು ಪೋಲೀಸಿನವರಿಗೆ ತಿಳಿಸಿದರು. ಅವರು ಬಂದು ಈ ಬಾತ್ಮೀದಾರನನ್ನು ಹಿಡಿದು ತನಿಖೆ ಮಾಡಿದಾಗ ಇದ್ದ ಸಂಗತಿ ಹೊರಕ್ಕೆ ಬಂದು ಬಿಟ್ಟಿತು. ಲೋಕದಲ್ಲಿ ಎಂತೆಂಥಾ ಜನಗಳಿರುತ್ತಾರೆ!

ವಿಲಾಯತಿಗೆ ಪ್ರಪಂಚದ ಇತರ ರಾಜ್ಯಗಳಿಂದ ಹೋಗುವ ಸಾಮಾನುಗಳು ಇಷ್ಟೇ ಎಂದು ಗೊತ್ತು ಮಾಡಿ ಹೇಳುವದಕ್ಕಾಗದಿದ್ದರೂ ಬಂದುವಾದ ಮಾತ್ರಕ್ಕೆ ಸುಮಾರು ೯,೦೦೦ ಜೀವವಿರುವ ದನಗಳೂ, ೯,೦೦೦ ಕುರಿಗಳೂ, ೧೨,೦೦೦ ದಾನು ಬೆಲೆಯುಳ್ಳ ಕೋಳಿಗಳೂ, ೨,೬೯,೦೦೦ ಟಂನು ತೂಕ ಸೀಮೆಯ ಮೊಲಗಳೂ, ೫೦,೪೦,೦೦೦ ಪೌಂಡುತೂಕದ ಬೆಣ್ಣೆಯೂ, ೩೦,೭೬,೦೦೦ ಪೌಂಡುತೂಕದಷ್ಟು ಮುದ್ದೆ ತರಹೇ ಬೆಣ್ಣೆಯೂ, ೭೯,೬೬,೦೦೦ ಪೌಂಡು ತೂಕದಷ್ಟು ಪಾಲಿನ ಗಟ್ಟಿಯೂ, ದಿನ ಒಂದಕ್ಕೆ ೧೭೦ ಕೋಳಿಮೊಟ್ಟೆಗಳ ಪ್ರಕಾರ ಎರಡು ಲಕ್ಷ ಮೊಟ್ಟೆಯ ರಾಶಿಗಳೂ, ೮೩,೮೦,೦೦೦ ಪೌಂಡು ತೂಕದ ಕೊಬ್ಬು, ೧,೭೨,೦೦೦ ಬುಷೆಲ್ಲುಗಳ ಹಸಿ ಬೀನ್ಸುಗಳೂ, ೯೬,೪೯,೦೦೦ ಪೌಂಡು ತೂಕದಷ್ಟು ಉರುಳೆಗೆಡ್ಡೆಯೂ ಮುಂತಾದ ಸಾಮಾನುಗಳು ಹೊರಗಿನಿಂದ ವಿಲಾಯತಿಗೆ ಕಳುಹಿಸಲ್ಪಡುವವೆಂದು ತಿಳಿಯಲಾದವು.

ನಮ್ಮ ಹಿಂದೂಸ್ಥಾನದಲ್ಲಿ ಯೂರೋಪಿಯನ್ ನೌಕರರನೇಕರು ಅನೇಕರಿರುತ್ತಾರಷ್ಟೆ. ಇಂಡಿಯಾ ಸರ್ಕಾರದವರು ಅವರಿಗೆ ರೂಪಾಯಿಗಳಾಗಿ ಕೊಡುವ ಸಂಬಳದಲ್ಲಿ ಕೆಲವು ಭಾಗವನ್ನು ವಿಲಾಯಿತಿಯಲ್ಲಿರುವ ತಮ್ಮ ಹೆಂಡಿರಿಗೂ, ಮಕ್ಕಳ ಸಂಸಾರಗಳಿಗೂ ಚಿನ್ನದ ನಾಣ್ಯ ರೂಪವಾಗಿ ಕಳುಹಿಸಿಕೊಡೋಣದರ ಮೂಲಕ ನಾನಾವಿಧ ಕಷ್ಟಗಳಿಗೆ ಗುರಿಯಾಗಿರುತ್ತಾರೆ. ಯಾಕೆಂದರೆ ಪೂರ್ವದಲ್ಲಿ ಪೌನು ೧ ಕ್ಕೆ ಕೊಡುತ್ತಿದ್ದ ೧೦ ರೂಪಾಯಿಗೆ ಬದಲಾಗಿ ಈಗ ೧೫-೧೬ ರೂಪಾಯಿ ಕೊಡಬೇಕಾಗಿದೆ. ಆದ್ದರಿಂದ ಅವರ ಸಂಬಳದಲ್ಲಿ ಈ ಹೆಚ್ಚು ಖರ್ಚನ್ನು ಸಹಿಸಿಕೊಂಡು, ಇಲ್ಲಿ ಸಂಸಾರವನ್ನೂ ಜರುಗಿಸಿಕೊಳ್ಳುವದು ತುಂಬಾ ಕಷ್ಟವಾಗಿರುವದರಿಂದ ಈಗ ಕೆಲವು ಕಾಲದಿಂದಲೂ, ಈ ಕಷ್ಟವನ್ನು ಅನುಭವಿಸುತ್ತಿರುವವರೆಲ್ಲರೂ ಅಲ್ಲಲ್ಲಿ ಸಭೆ ಸೇರಿ ರೆಜೊಲ್ಯೂಷನ್ಗಳನ್ನು ಮಾಡಿ ಇಂಡಿಯಾ ಸರ್ಕಾರಕ್ಕೆ ತಿಳಿಯಪಡಿಸುತ್ತಿದ್ದರು. ಈಗ ಮೈಸೂರಿಯ ಗೌರ್ನರ್ ಜನರಲವರಾದ ಲಾರ್ಡ್ ಲ್ಯಾನ್ಸ್ ಡೌನ್ ಸಾಹೇಬರವರು ಇಂಥಾ ಜನಗಳ ಅಹವಾಲನ್ನೆಲ್ಲಾ ಸ್ವತಃ ಕೇಳಿ ತಿಳಿದುಕೊಳ್ಳಬೇಕೆಂದು ಇಷ್ಟಪಟ್ಟು ಇದೇ ತಿಂಗಳು ೩೦ ನೇ ತಾರೀಖಿನ ದಿವಸ ಈ ವಿಷಯಕ್ಕೆ ಸಂಪೂರ್ಣ ಗಮನವನ್ನು ಕೊಡುವದಾಗಿ ಒಪ್ಪಿರುತ್ತಾರೆ

ಶಾಲೀವಾಹನಶಕ ೧೮೧೪ ನೇ ನಂದನನಾಮ ಸಂವತ್ಸರದ ಮಾಘ ಶುದ್ಧ ನವಮಿ ಗುರುವಾರದಿಂದ ಮಾಘ ಶುದ್ಧ ಪೂರ್ಣಿಮಾ ಬುಧವಾರದವರೆಗಿನ ವಾರದ ಪಂಚಾಂಗ

೧೮೯೩ ನೇ ಇಸವಿ, ಜನವರಿ.

ತಾ.	ವಾರ.	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.	ಮಕರ ದಕ್ಷಿಣ ತೇದಿ.
26	ಗು	ನ	50-15	ಭ	5-45	15
27	ಶು.	ದ	21-52	ಕೃ.	1-31	16
28	ಶ	ಏ	19-7	ರೋ.	53 21	17
29	ಭಾ.	ದ್ವಾ.	10-46	ಆ.	50-16	18
30	ಸೋ.	ತ್ರ	8-59	ಪು.	47-27	19
31	ಮಂ.	ಚ.	4-55	ಪು.	45-14	20
ಫೆಬ್ರವರಿ 1	ಬು *	ಪೌ. ಉಪರಿ	1-45 57-17	ಶ್ಲೆ.	44-4	11

* ವ್ಯಾಸ ಪೂರ್ಣಿಮಾ.

ಪೇಟೆ ಧಾರಣೆ.

ದಿನಸಿ.	ಮೈಸೂರು	ಬೆಂಗಳೂರು.
	ರೂ. ಆ. ಪೈ.	ರೂ. ಆ. ಪೈ.
ಕಲ್ಲೀ ಅಕ್ಕಿ ಪಲ್ಲ ೧ ಕ್ಕೆ	೧೧-೮-೦	೧೨-೮-೦
ಕೆಂಬೂತಿ ಅಕ್ಕಿ ಅವ್ವಲ್	೧೧-೪-೦	೧೨-೦-೦
ಡಿಟ್ಟೋ ಅಕ್ಕಿ ದುಯಂ	೧೦-೮-೦	೯-೧೨-೦
ಜಾಬಾಣಿ ಅಕ್ಕಿ	೧೦-೪-೦	೧೦-೪-೦
ಸಂಣಕ್ಕಿ ಅವ್ವಲ್	೧೩-೮-೦	೧೩-೮-೦
ಡಿಟ್ಟೋ ಅಕ್ಕಿ ದುಯಂ	೧೩-೦-೦	೧೨-೦-೦
ತೊಗರಿಬೇಳೆ ಪಲ್ಲ ೧ ಕ್ಕೆ	೧೦-೧೨-೦	೧೦-೮-೦
ಡಿಟ್ಟೋ ದುಯಂ ತರಹ	೧೦-೪-೦	೧೧-೦-೦
ಜೈರಾಗಿ ಪಲ್ಲ ೧ ಕ್ಕೆ	೪-೯-೦	೧೩|೪-೦-೦
ಕಾದ್ರಾಗಿ	೪-೪-೦	೩||೨೮-೦
ಹಲಸಂದೆ ಪಲ್ಲ ೧ ಕ್ಕೆ	೧೦-೮-೦	೧೨-೦-೦
ಬಿಳೀ ಅವರೆ	೯-೪-೦	೯-೦-೦
ಹೆಸರು	೧೦-೦-೦	೧೧-೦-೦
ಉದ್ದು	೧೦-೮-೦	೧೨-೦-೦
ಕಡಲೆ	೧೧-೮-೦	೧೦-೧೨-೦
ಎಳ್ಳು	೧೫-೦-೦	೧-೨೦-೦
ಹುರಳಿ	೬-೬-೦	೬-೦-೦
ನೀರುಳ್ಳಿ ಮೂಟೆ ೧ ಕ್ಕೆ	೧-೮-೦	೧-೧೦-೦
ಮೆಣಸಿನಕಾಯಿ	೩-೦-೦	೨-೮-೦
ದುಯಂ ತರಹ	೨-೮-೦	೨-೪-೦
ಬೆಲ್ಲ ದೊಡ್ಡ ಅಚ್ಚು ೧೦೦ ಕ್ಕೆ	೪-೧೨-೦	ಮ ೧-೮-೦
ಸಣ್ಣ ಅಚ್ಚು	೪-೪-೦	೩|| ೦-೬-೦
ಬೆಳ್ಳುಳ್ಳಿ ಮೂಟೆ ೧ ಕ್ಕೆ	೪-೨-೦	೪-೮-೦
ಹರಳೆಣ್ಣೆ	೪-೨-೦	೩-೧೨-೦
ಕೊತ್ತಂಬರಿ ಪಲ್ಲ ೧ ಕ್ಕೆ	೯-೮-೦	೯-೮-೦
ಉಪ್ಪು	೯-೮-೦	೧೪-೦-೦
ಹುಣಿಸೇಹಣ್ಣು ಮೂಟೆ ೧ ಕ್ಕೆ	೧-೪-೦	೧-೬-೦
ಹಳೇ ಹುಣಿಸೇಹಣ್ಣು	೧-೦-೦	೧-೨-೦
ತುಪ್ಪ	೧೩-೧೨-೦	೧೨-೦-೦
ಸೀಮೆ ಯಂಣೆ ಟಿನ್ನು ೧ ಕ್ಕೆ	೬-೮-೦	೬-೫-೦
ತೆಂಗಿನಕಾಯಿ ೧೦೦ ಕ್ಕೆ	೪-೦-೦	೩-೧೨-೦
ಚಿನ್ನ (ತೊಲ)		
ಕೆಂಪು	೧೬-೮-೦	೧೬-೯-೦
ಪಸಿಮೆ	೧೬-೧೨-೦	೧೬-೧೪-೦
ಗಟ್ಟಿ	೨೬-೦-೦	೨೫-೨-೦

Mysore.—Printed and published for the Proprietor at the Wesleyan Mission Press.
26/1/93.

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು | ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೬ — ಮೈಸೂರು ಸನ್ ೧೮೯೪ ನೇ ಇಸವಿ ಫೆಬ್ರುವರಿ ತಾರೀಖು ೨ ನೇ ಗುರುವಾರ. — ಸಂಚಿಕೆ ೪೪

HEALTH WEALTH & PROSPERITY.

ಜಿ. ಬಿ. ನಾಯಿಕ ಕಂಪನಿಯ

ಮಿಂಚಿನ ಉಂಗುರ, ಪದಕ, ಬಳೆ, ಲೋಲಾಕ್,

ಕೊರಳ ಪಟ್ಟಿಗಳು.

೩೫,೦೦೦ ದ ಮೇಲೆ ಮಾರಿ ದವು. ನಿತ್ಯ ಹೊಸಹೊಸ ಬೇಡಿಕೆಗ ಳು ಬರುತ್ತಿರುತ್ತವೆ.

ಗುಣ ಬಂದ ಬಗ್ಗೆ ನೂರಾ ರು ಪತ್ರಗಳು ಬರುತ್ತಿರು ತ್ತವೆ. ಹಾಗೂ ದೊರೆಯು ತ್ತಿವೆ.

ರಕ್ತವು ಮನುಷ್ಯನ ಜೀವನಾಧಾರ ಮತ್ತು ವಿದ್ಯುಚ್ಛಕ್ತಿಯು ರಕ್ತದ ಜೀವನಾಧಾರ.

ರಕ್ತವು ಕೆಟ್ಟದ್ದರಿಂದ ಆಗುವ ಎಲ್ಲ ರೋಗ, ಅರ್ಧಾಂಗ, ಸಂಧಿವಾತ, ಶಿರೋಗತವಾತ, ಹೊಟ್ಟೆಯಲ್ಲಿ ವಾಯು ಬಿದ್ದುಗೊಳ್ಳುವಿಕೆ, ಮೂಲರೋಗ, ಕೈ ಕಾಲು ಸೆಳೆಯುವಿಕೆ, ಭ್ರಾಂತಿ ಬೇನೆ, ಕಿವಿಯ ಬೇನೆ, ಎಲ್ಲ ತರದ ಜ್ವರ, ಅತಿಶಯ ರೋಗ, ತಲೆಶೂಲೆ, ಮೂರ್ಛಾರೋಗ, ಎದೆಯಲ್ಲಿ ಉರಿಯೂ ಮತ್ತು ಸೊಂಟ ನೋವು, ಕೊರಳ ಬಾವು, ಎಲ್ಲ ತರದ ಮೂಲವ್ಯಾಧಿ, ನಿದ್ರೆ ಬಾರದಿರುವಿಕೆ, ಮೂತ್ರಪಿಂಡದ ರೋಗ, ಕೆಮ್ಮು, ದಮ್ಮು, ಗಂಡಮಾಲೆ, ತ್ವಚಾರೋಗ, ಮೇಹ ಮತ್ತು ಇತರ ರೋಗಗಳು, ಇವನ್ನು ಉಪಯೋಗಿಸುವದರಿಂದ ನೆಟ್ಟಗಾಗುತ್ತವೆಂಬುದು ಜಗತ್ಪ್ರಸಿದ್ಧವಾದ. ಕೊರಳ ಪಟ್ಟಿ—ಸಣ್ಣ ಹುಡುಗರಿಗೆ ಹಲ್ಲು ಬರುವಾಗ ತ್ರಾಸವಾಗದೆ ಹಲ್ಲು ಬರುವವು. ಲೋಲಾಕ—ಕೈ ನಡುಗುವಿಕೆ, ಸ್ಮರಣ ಶಕ್ತಿ ಬರುವದು. ಇಂಥ ಉತ್ತಮ, ಗುಣಕಾರಿ, ಸರ್ವ ರೋಗ ನಿವಾರಕ, ವೈದ್ಯ ರೋಗ ಕೊಡುವ ಔಷಧದ ಚಿಕಿತ್ಸೆಯನ್ನು ತಪ್ಪಿಸುವ, ಈ ಬಿಡವೆಯ ಸಂಗ್ರಹ ಮಾಡದೆ ಇರಬೇಡಿರಿ, ಪ್ರತಿ ಬಂದು ಬಿಡವೆಯ ಮೇಲೆ G. B. N. ಗುರುತು ನೋಡಿ ತಗೆದುಕೊಳ್ಳಿರಿ. ಬಂಗಿ ಕಳ್ಳನ ಹುಷಾರು. ಪತ್ರ ವ್ಯವಹಾರ ಮರಾಠಿಯಲ್ಲಿ ಇಲ್ಲವೆ ಇಂಗ್ರೇಜಿಯಲ್ಲಿರ ಬೇಕು. ಪತ್ತೆ ಸ್ಪಷ್ಟ ಬರೆಯಬೇಕು.

ಕ್ರಯವು—ಹಿತ್ತಾಳೆಯ ಉಂಗುರಕ್ಕೆ ಒಂದುವರೆ ರೂ. ಬೆಳ್ಳಿಯ ಉಂಗುರಕ್ಕೆ ೩ ರೂ. ಭಂಗಾರದ ಉಂಗುರಕ್ಕೆ ೨೦ ರೂ. ಹಿತ್ತಾಳೆಯ ಪದಕಕ್ಕೆ ಒಂದೂಕಾಲು ರೂ. ಬೆಳ್ಳಿಯ ಪ. ಕ್ಕೆ ೨ ರೂ. ಭಂಗಾರದ ಪ. ಕ್ಕೆ ೨೨ ರೂ. ಮಕ್ಕಳಿಗೆ ಬಳೆಗೆ ಒಂದೂವರೆ ರೂ. ಲೋಲಾಕಿಗೆ ಒಂದೂವರೆ ರೂ. ಬೆಳ್ಳಿ ಕೊರಳ ಪಟ್ಟಿಗೆ ಒಂದುವರೆ ರೂ. ಒಮ್ಮೆಲೇ ೧೨ ನಗ ತಗೆದುಕೊಂಡರೆ ೧ ಪುಕ್ಕಟೆ ಕೊಡುವದು. ಬೇಕಾದಾಗ ಬಂದರ ಅಥವಾ ವಿ. ಪೇ. ಪಾರ್ಸಲ ಕಳಿಸುವೆವು. ಉಂಗುರ ತರಿಸುವವರು ಬೆರಳಿನ ಸುತ್ತಳತೆ ಕಳಿಸಬೇಕು. ಅನೇಕ ಜನಗಳ ಮೇಲೆ ಗುಣ ಬಂದ ಬಗ್ಗೆ ಡಾಕ್ಟರ, ವೈದ್ಯ, ಪತ್ರಕರ್ತ ಮುಂತಾದವರ ಸರ್ಟಿಫಿಕೇಟಿನ ನಾ ಘಂಟೆ ವ್ಯಾಪಾರ ದರದ ಪುಸ್ತಕ ಪೈ ಕಳುಹಿಸಿದರೆ ಕಳಿಸು ವೆವು. ಮಾಲು ತೆಗೆದುಕೊಂಡವ ಪ್ರಕಟ ಕಳುಹಿಸುವೆವು. ೧ ರಿಂದ ೬ ವರೆಗೆ ಟಿ. ಪಿ. ೬ ಆಣೆ.

ಜಿ. ಬಿ. ನಾಯಿಕ ಮತ್ತು ಕಂಪನಿ, ಬ್ಯಾಂಕಳಾ, ಪಳೇದಾವಣೆ ಎದುರು, ಮುಂಬಯಿ.

ನೋಟೀಸು.

		ಕ್ರಯ			ಅಂಚೆಯ ಸಹಿತವಾಗಿ		
Campbell's.	ಕನ್ನಡ ವ್ಯಾಕರಣ ಸಾರ	೦	೨	೦	೦	೨	೬
Object Lessons.	ವಸ್ತು ಪಾಠಗಳು	೦	೧	೦	೦	೧	೬
Picture do	ಚಿತ್ರಗಳು ಸಹಿತವಾಗಿ	೦	೨	೦	೦	೨	೬

ಈ ಮೂರು ಪುಸ್ತಕಗಳು ಪ್ರೈಮರಿ ಶಾಲೆಗಳಲ್ಲಿ ಓದತಕ್ಕ ಪುಸ್ತಕಗಳು.

	ಕ್ರಯ			ಅಂಚೆಯ ಸಹಿತವಾಗಿ		
ಸ್ತ್ರೀಯರು ಓದತಕ್ಕ ಪುಸ್ತಕ	೦	೫	೦	೦	೫	೬
ಗಣಿತ ವಿದ್ಯೆ ..	೦	೪	೦	೦	೪	೬
ಗಣಿತ ಮಾರ್ಗಗಳು ..	೦	೧	೦	೦	೧	೬
ಸಂಸ್ಕೃತ ಕರ್ಣಾಟಕ ಭಾಷಾಮಂಜರಿ.	೦	೨	೦	೦	೨	೬
ಭೂಗೋಳ ಶಾಸ್ತ್ರ ಪ್ರಶ್ನೋತ್ತರ	೦	೨	೦	೦	೨	೬
ಇಂಗ್ಲಿಷೂ ಕನ್ನಡವೂ ಶಬ್ದಾವಳಿ ೧ನೇ ೨ನೇ ಭಾಗಕ್ಕೆ	೦	೧	೦	೦	೧	೬
ಕಾವ್ಯಮಾಲೆ (Minor Poetical Anthology)	೦	೭	೦	೦	೭	೬
ಬಾಲವ್ಯಾಕರಣ ..	೦	೫	೦	೦	೫	೬
ಹಳಗನ್ನಡ ವ್ಯಾಕರಣ ಸೂತ್ರಗಳು	೦	೬	೦	೦	೬	೬
ಇಂಗ್ಲಿಷೂ ಕನ್ನಡವೂ ಸಂಭಾಷಣ ವಾಕ್ಯಗಳು	೦	೧೦	೦	೦	೧೦	೬
ಶಬ್ದಮಣಿ ದರ್ಪಣ ..	೧	೦	೦	೧	೪	೬
Kan. Eng. Pocket Dictionary	೧	೪	೦	೧	೫	೨
Eng. Kan. School Dictionary	೨	೧೦	೦	೨	೧೨	೬
ಬಳ್ಳೀ ತಾಯಿ ..	೦	೪	೪	೦	೪	೬
ಆತ್ಮಿಕ ದಿವ್ಯ ಯುದ್ಧ (Bunyan)	೦	೧೨	೦	೦	೧೩	೬
ಕ್ರೈಸ್ತ ಪದ್ಧತಿ ೧ ನೇ ಭಾಗ ೨ ಆಣ ೩ ನೇ ಭಾಗ	೦	೧	೬	೦	೨	೦
ಭಕ್ತಿಸಾರ ..	೦	೧	೦	೦	೧	೬
ಸತ್ಯ ವಿಶ್ವಾಸಿ	೦	೧	೦	೦	೧	೬
ಕಾವ್ಯಪುಂಜ ..	೦	೩	೦	೦	೩	೬

A new Edition of the Geography suited for the Lower Secondary Examination is now ready.—Edited by Rev. H. Gulliford. Price 6 As.

ಮೇಲೆ ನಮೂದಿಸಿರುವ ಪುಸ್ತಕಗಳನ್ನು ಬೆಂಗಳೂರು ದಂಡಿನ ಮೋಗಾಟಿನ ಹತ್ತಿರವಿರುವ ಕ್ರಿಸ್ತರ ಶಾಲೆಯಲ್ಲಿ ಸಿಕ್ಕುವು ಇದೆ.

ಜಾಹೀರಾತು

THE KANARA & MYSORE TRADING AGENCY
BOMBAY.

ಕಂಪೆನಿಗೆ ತಂತು ಕೊಡುವ

ಚಂದ್ರಕಾಂತ ಶಿಲೆಯ ಕನ್ನಡಕಗಳು.

೩೬ ರೂಪಾಯಿ ಕೆಳಗಿನ ಕ್ರಯದವು ನಮ್ಮಲ್ಲಿ ಸಿಗುವದು.

ಸಾಧಾರಣ	೩ ‖ ರೂಪಾಯಿ	ಜರ್ಮನ್ ಕೇಸಿನಲ್ಲಿ
ಮಧ್ಯಮ	೫	„	ಜಪಾನಿನ ಕೇಸಿನಲ್ಲಿ
ಉತ್ತಮ	೬ ‖	„	ಬೆಳ್ಳಿ ಕೇಸಿನಲ್ಲಿ
ಭಂಗಾರದಲ್ಲಿ ಕಟ್ಟಿದ್ದು	೧೭	„	ಮೇಲೆ

ಕಿ ರೆ ಯ ಶ ತಿ ಯಾ ರ ಪು.

ಕ್ರಯ ೩ ‖ ರೂಪಾಯಿ.

ಈ ಪೆಟ್ಟಿಗೆಯು ಕಡಿಮೆ ಕ್ರಯವುಳ್ಳದ್ದಾದರೂ, ಕಡಿಮೆ ಕ್ರಯದ ಪೆಟ್ಟಿಗೆಗಳಲ್ಲಿರುವ ಪಳ್ಳೀಕ[illegible] ಇದರಲ್ಲಿ ರುವದಿಲ್ಲ. ಭದ್ರವಾದದ್ದು ಬಾಳಿಕೆ ಬರುವಂಥದ್ದು.

ಕಿಂ ಡಿ ಮು ತ್ತು.

ಪ್ರತಿ ಅಡಿ ೧ ಕ್ಕೆ ೨ ‖ ರೂಪಾಯಿ ಕ್ರಯವು ಅಡಿಯಲ್ಲಿ ೧೦೦, ೨೦೦, ೩೦೦, ೧೫೦, ಈ ರೀತಿ ಮುತ್ತುಗಳಿ ರುವವು. ಒಟ್ಟು ೧೨ ಅಡಿಗಳನ್ನು ತೆಗೆದುಕೊಂಡರೆ ೧ ರೂಪಾಯಿ ಕಡಿಮೆ ಬೀಳುವದು. ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬೇಕು.

ಮ್ಯಾನೇಜರ,

ಕೆನರಾ ಎಂಡ ಮೈಸೂರ ಟ್ರೇಡಿಂಗ ಏಜನ್ಸಿ ಆಫೀಸ, ಮುಂಬಯಿ.

ವೃತ್ತಾಂತ ಪತ್ರಿಕೆ.

ಚಂದಾ ನಿರ್ಣಯ.

	ರೂ. ಆ. ಪೈ.
ಸ್ಥಳದವರಿಗೆ ವರ್ಷ ೧ಕ್ಕೆ ...	೧—೦—೦
ಪರಸ್ಥಳದವರಿಗೆ ವರ್ಷ ೧ಕ್ಕೆ ...	೧—೧೪—೦
ಬಿಡಿ ಪತ್ರಿಕೆ ೧ಕ್ಕೆ ..	೦—೦—೪

ಈ ಪತ್ರಿಕೆಯು ಮೈಸೂರು ರಾಜಧಾನಿಯಲ್ಲಿ ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ, ಪ್ರಕಟಿಸಲ್ಪಡುವದು. ಬಡವರು ಮೊದಲುಗೊಂಡು ಸಮಸ್ತರಿಗೂ ಸುಲಭಸಾಧ್ಯವಾಗುವಂತೆ ಈ ಪತ್ರಿಕೆಗೆ ಇಷ್ಟು ಅಲ್ಪ ಮೌಲ್ಯವನ್ನು ನಿರ್ಣಯಿಸಿರುತ್ತೇವೆ. ಈ ಪತ್ರಿಕೆಯನ್ನು ಅಪೇಕ್ಷಿಸುವವರು ಚಂದಾಹಣವನ್ನು ಮುಂಗಡವಾಗಿ ಕಳುಹಿಸಬೇಕು.

ಪ್ರಕಟನೆಯ ನಿರ್ಣಯ.

	ರೂ. ಆ. ಪೈ.
ಮೊದಲನೇ ಆವರ್ತಿ ಪಙ್ತಿ ೧ ಕ್ಕೆ ...	೦—೨—೦
ಎರಡನೇ ಆವರ್ತಿ ಪಙ್ತಿ ೧ ಕ್ಕೆ ...	೦—೧—೦

ಅನಂತರ ಪ್ರತಿಯೊಂದು ಸಾರೆಯಲ್ಲಿಯೂ ಪಙ್ತಿ ೧ ಕ್ಕೆ ೧ ಆಣೆಯಂತೆಯೇ ಲೆಕ್ಕ ಮಾಡಲ್ಪಡುವದು. ಕಂಟ್ರಾಕ್ಟಿಗೆ ಕೊಡಬೇಕೆಂದಿರುವವರು ಎಡಿಟರಿಗೆ ಬರೆದು ಬಾಬನ್ನು ತಿಳಿಯ ಬಹುದು.

ಎಡಿಟರ,

ವೃತ್ತಾಂತ ಪತ್ರಿಕೆ,

ಮೈಸೂರು

ನೋಟೀಸ್.

ಪುಸ್ತಕಗಳು.	ಕ್ರಯ.
ಪ್ರಾಕೃತ್ಯ ವ್ಯವಹಾರಿಕ	1—8—0
ಕನ್ನಡ ಇಂಗ್ಲೀಷು ನಿಘಂಟು 1 ನೇ ದೊಡ್ಡ ತರಹ	3—0—0
„ „ 2 ನೇ ತರಹ	2—8—0
ಬಾಲಕರು ಓದುವ ವಿರಾನ ಜ್ಞಾನೋಪದೇಶದ ಪ್ರಶ್ನೋತ್ತರಗಳು	0—1—0
ಸಭೆಯ ನಿಯಮಗಳನ್ನು ಕುರಿತದ್ದು	0—0—6
ಕಥಾ ಸಂಗ್ರಹ 1 ನೇ ಭಾಗದಿಂದ 5 ವರೆಗೆ	1—0—0
ಕಥಾ ಸಂಗ್ರಹ 1 ರಿಂದ 6 ನೇ ಭಾಗ ಹೊಸ ಛಾಪ	1—0—0
„ „ ದೊಡ್ಡ ತರಹ	1—8—0
ಮೋಕ್ಷಕಾಸಕ್ತಿ ಬೋಧನೆ	0—1—0
ಸತ್ಯವೇದವನ್ನು ಕುರಿತು 2 ನೇ ಭಾಗ	0—1—0
ಪ್ರಸಂಗಿಯ ದರ್ಪಣ	0—0—6
ಇಂಗ್ಲೀಷು ಭಾಷೆಯಲ್ಲಿಯೂ, ಕನ್ನಡ ಭಾಷೆಯಲ್ಲಿಯೂ, ಶಬ್ದಗಳ ವಿಭಾಗಗಳನ್ನು ವಿವರಿಸಿರುವ ನಿಘಂಟು	0—2—0
ಕನ್ನಡ ವ್ಯಾಕರಣ (ಇಂಗ್ಲೀಷಿನಲ್ಲಿ)	2—0—0
ಹಿಂದುಸ್ಥಾನಿ ವ್ಯಾಕರಣ	1—0—0
ಬಾಲಬೋಧ ಸೋಪಾನಪ್ಪ	0—1—0
ದಿನ ಕಾರ್ಯಗಳ ಉಪಯೋಗ ವಿಚಾರ	0—0—6
ಕ್ರಿಸ್ತರ ಬೋಧನೆಗಳ ಸಾರಾಂಶವು	0—12—0

ಮೇಲೆ ನಮೂದಿಸಿರುವ ಪುಸ್ತಕಗಳನ್ನು ಅಪೇಕ್ಷಿಸುವವರು ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್ಸಿಗೆ ಬರೆದು ತರಿಸಿಕೊಳ್ಳಬಹುದು. ಅಂಚೇ ಹಾಸಲು ಬೇರೆ ಕೊಡಬೇಕು.

ವೆಸ್ಲಿಯನ್ ಮಿಷನ್ ಪ್ರೆಸ್,

ಮೈಸೂರು.

ವಿಶೇಷ, ನೋಡಿನೋಡಿ! ನೋಡಿನೋಡಿ!! ನೋಡಿನೋಡಿ!!!

೧೮೯೩ನೇ ವರುಷದ ಲೋವರ ಸೆಕಂಡರಿ ಪರೀಕ್ಷೆಯ ಟೆಕ್ಸ್ಟಿನ ನೋಟ್ಸು.

ಈ ಪರೀಕ್ಷೆಗಾಗಿ ನಿಯಮಿಸಲ್ಪಟ್ಟ ಸೋಮೇಶ್ವರಶತಕ, ಪಂಪನ ೧೦೮—೨೦೩ ಗೂ ಇರುವ ಪದ್ಯಗಳೂ, ಕನ್ನಡ ಭಾರತ ಕಥಾಸಂಗ್ರಹ ಸಭಾಪರ್ವ: ಇವುಗಳಿಗೆ ಅನ್ವಯ, ಅರ್ಥ, ತಾತ್ಪರ್ಯ ಅವಯವಾರ್ಥ, ವ್ಯಾಕರಣ ಸಂಗತಿಗಳು, ವಾಕ್ಯವಿಭಜನೆ, ಪೂರ್ವಕಥೆ, ಅನೇಕ ಟೊಪಲುಗಳನ್ನು ವಿವರಿಸಿ ವ್ಯಾಖ್ಯಾನವು ಟಿಪ್ಪಣಿಗಳೂ ಇಂಗ್ಲೀಷ್ ಮೈಸೂರು ಪಂಡಿತರಾದ ಎಸ. ರಾಘವೇಂದ್ರಾಚಾರ್ಯರಿಂದ ಬರೆಯಲ್ಪಟ್ಟ ಈ ಮುದ್ರಾಶಾಲೆಯಲ್ಲಿ ಪ್ರಿಂಟಾಗುತ್ತಲಿವೆ. ಈ ನೋಟ್ಸು ಗವರ್ನಮೆಂಟ ಪ್ರತಿಗನುಸಾರವಾಗಿ ಇವೆ. ಕಾಪಿಗಳು ಸ್ವಲ್ಪವಾಗಿಯೇ ಪ್ರಿಂಟು ಮಾಡುವದರಿಂದ ಅಪೇಕ್ಷೆಯುಳ್ಳವರು ಜಾಗ್ರತೆಯಾಗಿ ಜನವರೀ ತಿಂಗಳೊಳಗಾಗಿ ಈ ಕೆಳಗಿನ ವಿಳಾಸದಾರರಿಗೆ ಬರೆದು ತರಿಸಿಕೊಳ್ಳಬಹುದು. ಕ್ರಯ ೮ ಆಣೆ. ಪೋಸ್ಟೇಜು ೧ ಆಣೆ. ಮತ್ತು ಆದಿಪರ್ವ, ಸಭಾಪರ್ವ, ವಿರಾಟಪರ್ವ, ಭೀಷ್ಮಪರ್ವ, ದ್ರೋಣಪರ್ವ, ಶಲ್ಯಪರ್ವ, ಸಾಪ್ತಿಕಪರ್ವ, ಸ್ತ್ರೀಪರ್ವ, ಶಾಂತಿಪರ್ವ—ರಾಜಧರ್ಮ, ಆಪದ್ಧರ್ಮ, ಮೋಕ್ಷಧರ್ಮ ಈ ಪರ್ವಗಳು ಪ್ರಿಂಟಾಗಿ ವಿಕರಿಗೆ ಸಿದ್ಧವಾಗಿವೆ. ಈಗ ಅನುಶಾಸನಿಕಪರ್ವವು ಪ್ರಿಂಟಾಗುತ್ತಲಿದೆ. ಇಷ್ಟವುಳ್ಳವರು ತರಿಸಿಕೊಳ್ಳಬಹುದು.

ಎಂ ರಂಗಪ್ಪ ಆಂಡಸನ,
ಪ್ರೊಪ್ರೈಟರ್, ಶ್ರೀಚಾಮುಂಡೇಶ್ವರಿ ಪ್ರೆಸ್,
ಆ.ಲ—ಬಗ ರೋಡು, ಬೆಂಗಳೂರು

ವೃತ್ತಾಂತ ಪತ್ರಿಕೆ.

—o—

೧೮೯೩ ನೇ ಇಸವಿ ಫೆಬ್ರುವರಿ ತಾ|| ೨ ನೇ ಗುರುವಾರ

ಕಳುವು.

ಚಿತ್ರದುರ್ಗದ ತಾಲ್ಲೂಕ ಕಛೇರಿಯಲ್ಲಿ ಒಂದು ಸಣ್ಣ ಪೆಟ್ಟಿಗೆಯಲ್ಲಿಟ್ಟು ಮೊಹರು ಮಾಡಲ್ಪಟ್ಟಿದ್ದ ಕೆಲವು ನಗಗಳು ಕಳೆದ ಫೆಬ್ರವರಿ ೨೦ ನೇ ತಾರೀಖಿನಲ್ಲಿ ಕಳುವು ಮಾಡಲ್ಪಟ್ಟವು. ಈ ನಗಗಳು ಸುಮಾರು ೩೫೮ ರೂಪಾಯಿ ಬಾಳತಕ್ಕದ್ದಾಗಿಯೂ, ಅಲ್ಲಿನ ವೆಂಕಟರಮಣಸ್ವಾಮಿ ದೇವಸ್ಥಾನಕ್ಕೆ ಸೇರಿದವುಗಳಾಗಿಯೂ ಇದ್ದವು. ಆ ತಾರೀಖಿನ ದಿವಸ ತಾಲ್ಲೂಕ ಖಜಾನೆಯು ಸರಿಯಾಗಿ ಮೊಹರಾದನಂತರ ಮಹಮ್ಮದ ಪಿಯಾರನೆಂಬ ನಾಯಕನೂ, ಖಜಾನೆಯ ದಫೇದಾರ, ಸೈಯದ್ ಇಬ್ರಾಹಿಂ ಮತ್ತು ಬಾಬಾಜಿ ಎಂಬೀ ಸಿಪಾಯಿಗಳೂ ಪಹರೇ ಕಾಯಬೇಕಾದ ಸರದಿ ಇತ್ತು. ಆ ನಾಯಕನ ಮನೆಯಲ್ಲಿ ಮೊ[illegible]ಷ್ಟರು ಸಿಪಾಯಿಗಳೂ ಆ ದಿವಸ ಊಟಕ್ಕೆ ಹೋಗಿದ್ದರಾದ ಕಾರಣ ಬಾಬಾಜಿ ಎಂಬವನೊಬ್ಬನೇ ತಾಲ್ಲೂಕ ಕಛೇರಿಯಲ್ಲಿ ಪಹರೆ ಕಾಯುತ್ತಿದ್ದನು. ಆ ದೇವಸ್ಥಾನದ ನಗಗಳನ್ನು ಹಿಡಿದಿದ್ದ ಪೆಟ್ಟಿಗೆಯು ಹೊರಭಾಗದಲ್ಲೇ ಇದ್ದದರಿಂದ ಅದರಲ್ಲಿ ಭಾರೀ ಖಜಾನೆ ಇರಬಹುದೆಂಬ ಭಾವನೆ ಹುಟ್ಟಿ ಈ ಬಾಬಾಜಿ ಎಂಬ ಸಿಪಾಯಿಯು ಕಛೇರಿಯ ಬಾಗಿಲನ್ನು ಒಳಗಡೆ ಹಾಕಿಕೊಂಡು, ಕಬ್ಬಿಣದ ಸಲಾಕಿಗಳು ಹಾಕಿದ್ದ ಖಜಾನೆಯ ಬಾಗಿಲಿನ ಮೂಲಕ ತನ್ನ ಕೈಗಳನ್ನು ನುಗ್ಗಿಸಿ, ಸಮೀಪದಲ್ಲಿದ್ದ ಪೆಟ್ಟಿಗೆಯ ಬೀಗವನ್ನು ಹ್ಯಾಗೋ ಮುರಿದು, ಅದರಲ್ಲಿದ್ದ ಮೂರು ನಗಗಳನ್ನೂ ತೆಗೆದುಕೊಂಡನು. ಅಷ್ಟು ಹೊತ್ತಿಗೆ ಆಂದರೆ ಸುಮಾರು ರಾತ್ರೆ ೯ ಘಂಟೆಯಲ್ಲಿ ನಾಯಕನ ಮನೆಯಲ್ಲಿ ಊಟ ಉಪಚಾರಾದಿಗಳನ್ನು ತೀರಿಸಿಕೊಂಡು ಆ ಮೂರು ಮಂದಿಯೂ ಪಹರೆ ಕಾಯುವದಕ್ಕೋಸ್ಕರ ಕಛೇರಿಯ ಬಳಿಗೆ ಬಂದರು. ಕಛೇರಿಯ ಬಾಗಲು ಒಳಗಡೆ ಹಾಕಿದ್ದವನ್ನು ನೋಡಿ, ಒಳಗಿದ್ದ ಬಾಬಾಜಿಯನ್ನು ಕೂಗಿ, ಬಾಗಲು ತೆಗೆಸಿ ಪಹರೆ ಕಾಯುತ್ತಿದ್ದರು. ಮಾರನೇ ದಿವಸ ಭಾನುವಾರವಾದ್ದರಿಂದ, ಆ ದಿವಸವೆಲ್ಲಾ ಸುಮ್ಮನೆ ಇದ್ದು ಮಂಗಳವಾರದ ದಿವಸ ಮಧ್ಯಾಹ್ನ ಸುಮಾರು ಮೂರುವರೆ ಘಂಟೆಯ ಹೊತ್ತಿನಲ್ಲಿ ಟ್ರೇಜರಿಯ ಬಾಗಲನ್ನು ತೆರೆದು ನೋಡಿದಾಗ ಈ ಪೆಟ್ಟಿಗೆಯ ಮೊಹರು ಒಡೆದು ಹೋಗಿತ್ತು. ಅದರಲ್ಲಿದ್ದ ನಗಗಳು ಕಾಣಿಸಲಿಲ್ಲ. ಈ ಸಂಗತಿಯನ್ನು ಆ ದಿನ ಸುಮಾರು ೮ ಘಂಟೆಯಲ್ಲಿ ಆ ಪ್ರೊವಿನ್ಸಲ್ಲೇ ಇರುವ ಟ್ರೇಜರಿ ಆಫೀಸರಿಗೆ ತಿಳಿಸಿದರು. ಅನಂತರ ಡಿಪಾರ್ಟುಮೆಂಟ ತಂತ್ರವು ಅಮಲ್ದಾರ, ಶಿರಸ್ತೇದಾರ ಮತ್ತು ಸರ್ರಾಫರನ್ನು ದರ್ಖ್ವಾಸ್ತಿ ಮಾಡಲ್ಪಟ್ಟಿತು. ಕಳುವು ಪತ್ತೆಯಾಗಿ ಸಿಪಾಯಿ ಬಾಬಾಜಿಗೆ ಚಿತ್ರದುರ್ಗದ ಮುನಸಿಫ್ ಮ್ಯಾಜಿಸ್ಟ್ರೇಟರು ದರ್ಖ್ವಾಸ್ತಿಯಿಂದ ಒಂದು ವರುಷದ ಕಠಿಣಸಜಾವನ್ನೂ ೩೦ ರೂಪಾಯಿ ಜುಲ್ಮಾನೆಯನ್ನೂ ವಿಧಿಸಿದರು. ಈ ಕಳುವಿಗೆ ತಾ[illegible] ಅಧಿಕಾರಿಗಳು ತಮ್ಮ ಡ್ಯೂಟಿಯನ್ನು [illegible] ನೋಡಿರುವದರಿಂದ ಅವರೇ ತುಂಬಿ ಕೊಡಬೇಕೆಂದು ಸರ್ಕಾರದವರು ಅಪ್ಪಣೆ ಕೊಟ್ಟಿರುವರೆಂದು ಕೇಳುತ್ತೇವೆ, ನಾವು ಮೊದಲೇ ಹೇಳಿದಂತೆ ಇನ್ನು ಮುಂದೆ ಕಳುವು ನಡೆದರೆ ಅವರೇ ತುಂಬಿ ಕೊಡಬೇಕಾಗುವದು.

ನರಿಂದ ಅವರೇ ತುಂಬಿ ಸಿಂದಗಿ ಪಾತ್ರರಾಗಿರುತ್ತಾರೆ. ಯಾಕೆಂದರೆ ಕಳುವು ನಡೆದದ್ದು ೨೦ ನೇ ತಾರೀಖು ಶನಿವಾರವಾತ್ರೆ. ಸೋಮವಾರ ಅಂದರೆ ೨೨ ನೇ ತಾರೀಖಿನ ದಿವಸವೇ, ತಾಲ್ಲೂಕ ಅಧಿಕಾರಿಗಳು ತಮ್ಮ ಡ್ಯೂಟಿಯನ್ನು ಸರಿಯಾಗಿ ನೆರವೇರಿಸಿದ್ದಲ್ಲಿ ಕಳುವು ಪತ್ತೇ ಆಗುತ್ತಿತ್ತು. ಆ ದಿವಸ ಅಮಲ್ದಾರರೇ ಆಗಲಿ, ಶಿರಸ್ತೇದಾರರಾಗಲಿ, ಅಥವ ಸರ್ರಾಫರಾಗಲಿ ಯಾರೊಬ್ಬರೂ ಖಜಾನೆಯನ್ನು ತೆಗೆಯಲೇ ಇಲ್ಲವೆಂದು ಸ್ಪಷ್ಟವಾಗುತ್ತೆ. ಅಮಲ್ದಾರರು ಮತ್ತು ಶಿರಸ್ತೇದಾರರು ಅಥವ ಇವರಿಬ್ಬರಲ್ಲಿ ಯಾರಾದರೂ ಒಬ್ಬರು ಖಜಾನೆಯನ್ನು ಝಡತಿ ಮಾಡಬೇಕಾದದ್ದು ಅವರ ಮುಖ್ಯ ಕರ್ತವ್ಯವಾಗಿದೆ. ಇದು ಯಾವಾಗಲೂ ಕಛೇರಿಯ ಬೀಗವನ್ನು ತೆರೆದ ಬಳಿಕವೇ ಮಾಡತಕ್ಕ ಕೆಲಸವಾಗಿರುತ್ತೆ. ಆ ದಿವಸವೆಲ್ಲಾ ಖಜಾನೆಯ ಬಾಗಲನ್ನು ತೆರೆದು ತಮ್ಮ ತೋರಬರುವದಿಲ್ಲ. ಹಾಗೆ ತೆರೆದು ಕ್ರಮ ಪ್ರಕಾರ ಝಡತಿ ಆಗಿದ್ದಲ್ಲಿ ಹೀಗೆ ಕಳುವು ನಡೆದದ್ದು ಒಂದಾದರೂ ಅವರಿಗೆ ತಿಳಿದು ಬರುತ್ತಿತ್ತು. ಸ್ಟೋರು ವಾರದವೆಲ್ಲಾ ಕಳೆದು ಹೋಗಿ ೨೩ ನೇ ಮಂಗಳವಾರದ ದಿವಸ, ಅದೂ ಮಧ್ಯಾಹ್ನ ೩|| ಘಂಟೆಯ ಮೇಲೆ ಹೀಗೆ ಕಳುವಾಗಿದೆ ಎಂದು ಅಧಿಕಾರಿಗಳಿಗೆ ತಿಳಿದು ಬರಬೇಕಾಗಿದ್ದರೆ, ಅವರು ತಮ್ಮ ಡ್ಯೂಟಿಯನ್ನು ಎಷ್ಟರ ಮಟ್ಟಿಗೆ ಜಾಗರೂಕತೆಯಿಂದ ನೆರವೇರಿಸುತ್ತಿದ್ದರೋ ವಾಚಕರೇ ಊಹಿಸಿಕೊಳ್ಳಬಹುದು. ಅದಾಗ್ಯೂ ತಮಗೆ ತಿಳಿದ ಉತ್ತರಕ್ಷಣವಲ್ಲಿಯೇ ಟ್ರೇಜರೀ ಆಫೀಸರ ತಿಳುವಳಿಕೆಗೆ ತಾರದೆ, ಆ ದಿವಸ ರಾತ್ರೆ ೮ ಘಂಟೆಯ ಮೇಲೆ ತಿಳಿಯಪಡಿಸಿದ ಇಂಥಾ ಅಧಿಕಾರಿಗಳ ಪ್ರವರ್ತನೆಯೂ ವಿಶೇಷ ನಿಂದಾಸ್ಪದವಾದದ್ದೇ ಸರಿ. ಇದೂ ಅಲ್ಲದೆ ಕಛೇರಿಯ ಕೆಲಸಗಳನ್ನು ಕ್ರಮವಾಗಿ ಪ್ರತಿದಿನವೂ ೧೧ ಘಂಟೆಗೆ ಪ್ರಾರಂಭಿಸುವದಿಲ್ಲವೆಂತಲೂ, ತಮ್ಮ ಇಷ್ಟಬಂದಾಗ ಬಾಗಲನ್ನು ತೆಗೆದು ಮನಸ್ಸು ಬಂದಂತೆ ಕಾರ್ಯಗಳನ್ನು ಮಾಡುತ್ತಾರೆಂತಲೂ ಊಹಿಸಬೇಕಾಗಿದೆ. ಇಂಥಾ ಅಕ್ರಮವು ಅನೇಕಸ್ಥಳಗಳಲ್ಲಿ ನಡೆಯುತ್ತಲಿದೆ ಎಂಬುವದಕ್ಕೆ ಯಾವ ಸಂಶಯವೂ ಇರಬಾರದೆ ಇರುವದರಿಂದ, ಸರ್ಕಾರದವರು ಈ ವಿಷಯದಲ್ಲಿ ಉಚಿತವಾಗಿ ತಕ್ಕ ಕ್ರಮವನ್ನು ತಮ್ಮ ಎಲ್ಲಾ ಆಫೀಸುಗಳಲ್ಲಿಯೂ ಜಾರಿಯಲ್ಲಿ ತರುವರೆಂದು ನಾವು ಕೋರುತ್ತೇವೆ. ಇಷ್ಟು ಅಲ್ಲದೆ ಟ್ರೇಜರೀ ನೌಕರರನ್ನಾದರೂ ೨೨ ನೇ ತಾರೀಖಿನ ದಿವಸ ತಾವು ಪರೀಕ್ಷೆ ಮಾಡಿದಂತೆಯೂ, ಆಗ ಪೆಟ್ಟಿಗೆಗೆ ಹಾಕಿದ್ದ ಬೀಗಮೊಹರುಗಳು ಸರಿಯಾಗಿದ್ದವು ಎಂತಲೂ ಪ್ರಮಾಣ ಮಾಡಿ ಕೈಫಿಯತ್ತು ಕೊಟ್ಟಿರುವದು ಶುದ್ಧ ಸುಳ್ಳು. ಮತ್ತು ಅಲ್ಲಿನ ಅಮಲ್ದಾರ್ರೇ ಆಗಲಿ, ಶಿರಸ್ತೇದಾರರಾಗಲಿ ಸುಮಾರು ಮೂರು ವಾರಗಳ ವರಿಗೂ ಕ್ಯಾಷ ಪುಸ್ತಕಗಳನ್ನು ಝಡತಿ ಮಾಡಲೇ ಇಲ್ಲವೆಂದು ಗೊತ್ತಾಗುತ್ತೆ. ಇದು ಶುದ್ಧ ಅನ್ಯಾಯ. ತಮ್ಮ ಕರ್ತವ್ಯವನ್ನು ನಿರ್ಲಕ್ಷ್ಯದಿಂದ ಜರುಗಿಸಿ, ಕೈಫಿಯತ್ತಿನಲ್ಲಿ ಬರೀ ಸುಳ್ಳನ್ನೇ ಬರೆಸಿರುವ ಈ ಅಧಿಕಾರಿಗಳ ವಿಷಯದಲ್ಲಿ ಗೌರ್ನಮೆಂಟಿನವರು ಸರಿಯಾದ ಉಪಾಯಗಳನ್ನಾಗಿ ಮಾಡುವರೆಂದು ನಂಬಿದ್ದೇವೆ. ಅಲ್ಲಿನ ತಾಲ್ಲೂಕ ಕಛೇರಿಯನ್ನೆಲ್ಲಾ ಒಬ್ಬ ಸಿಪಾಯಿಯೇ ಕಾಯುತ್ತಿದ್ದನಾದರೆ, ತಾಲ್ಲೂಕ

ಪೋಲಿಸಿನವರು ಏನು ಮಾಡುತ್ತಿದ್ದರು. ಅವರೂ ಕೂಡ ಕಾಯಬೇಕಾದದ್ದು ಅವರ ಕರ್ತವ್ಯವಲ್ಲವೆ? ಕಳ್ಳನು ಕಛೇರಿಯ ಹೊರಬಾಗಿಲನ್ನು ಹಾಕಿಕೊಂಡಿರಬೇಕಾದರೆ, ಬಳಭಾಗಗಳಲ್ಲಿರುವ ಅಂಕಣಗಳಲ್ಲಿಯಲ್ಲಿ ಪಹರೆ ಕಾಯಬೇಕಾಗಿದ್ದ ಪೋಲಿಸಿನವನು ಎಲ್ಲಿ ಹೋಗಿದ್ದ? ಆ ದಿವಸ ಪೋಲಿಸಿನ್ಸ್ಟೇಷನ್ನಲ್ಲಿ ಕೂಡ ಜವಾನರು ಪಹರೆ ಕಾಯುತ್ತಿದ್ದರೋ ಇಲ್ಲವೋ ಎಂಬುದಾಗಿ ಶಂಕಿಸಬೇಕಾಗಿದೆ. ಕಳುವು ಮಾಡಿದ ಗಳಿಗೆ ಅವ್ಯಕ್ತವಾಗಿರುವ ನಗಗಳ ಬೆಲೆಯು ಸುಮಾರು ೩೫೮ ರೂಪಾಯಿಗಳಾದರೂ ಶಿರಸ್ತೇದಾರರ ಮತ್ತು ಸರ್ರಾಫರ ಸಂಬಳದಿಂದ ವಸೂಲಿ ಮಾಡಬೇಕೆಂಬ ಶಿಕ್ಷೆಯೇ ಅವರಿಗೆ ಸಾಲದೆಂದು ಹೇಳುತ್ತೇವೆ. ಹ್ಯಾಗೂ ತಪ್ಪಿತಸ್ಥರಿಗೆ ನಮ್ಮ ಸರ್ಕಾರದವರು ಸರಿಯಾದ ಶಿಕ್ಷೆಯನ್ನು ಕೊಡದೆ ಇರಲಾರರೆಂಬದಾಗಿ ವ್ಯಥೆಯಾಗಿದ್ದೇವೆ.

ವಿದ್ಯಾದಾಯಿನಿ.

ವಿದ್ಯಾದಾಯಿನಿ ಎಂಬೀಮಾಸಪತ್ರಿಕೆಯ ಮೊದಲನೇ ಸಂಚಿಕೆಯು ನಮ್ಮಲ್ಲಿಗೆ ಅದರ ಎಡಿಟರುಗಳು ಕಳುಹಿಸಿರುತ್ತಾರೆ. ಅದನ್ನು ಅತ್ಯಾದರಪೂರ್ವಕವಾಗಿ ಸ್ವೀಕರಿಸಿರುವೆವು. ಇದು ಕಳೆದ ಜನವರಿ ತಿಂಗಳಿಂದಾರಭ್ಯ ಪ್ರಾರಂಭಿಸಲ್ಪಟ್ಟಿದೆ. ಇದಕ್ಕೆ ಮ|| ಸಿ. ಸುಬ್ಬರಾವ ಬಿ. ಎ. ಮತ್ತು ಮ|| ಕೆ. ಎಂ. ವೆಂಕಟಸುಬ್ಬಯ್ಯ ಬಿ. ಎ. ಎಂಬೀದೊಡ್ಡ ಮನುಷ್ಯರು ಎಡಿಟರುಗಳಾಗಿದ್ದಾರೆ. ಅಲ್ಲದೆ ಈ ಮಾಸಪತ್ರಿಕೆಯನ್ನು ನಡೆಸುವದರಲ್ಲಿ ಮ|| ಎಂ. ಲಕ್ಷ್ಮೀನಾರಾಣಪ್ಪ ಎಂಬ ಮುಂತಾದ ಬಹಳ ದೊಡ್ಡ ಮನುಷ್ಯರು ತುಂಬಾ ಶ್ರಮ ತೆಗೆದುಕೊಳ್ಳುತ್ತಿದ್ದಾರೆ. ಇಷ್ಟೂ ಅಲ್ಲದೆ ಈ ಮಾಸಪತ್ರಿಕೆಗೆ ಮೈಸೂರು ಗೌರ್ನಮೆಂಟಿನವರ ಪೋಷಣೆಯೂ ತಕ್ಕಮಟ್ಟಿಗೆ ಆಗಿರುತ್ತದೆ. ಈ ಮೈಸೂರು ಸೀಮೆಯಲ್ಲೆಲ್ಲಾ ವಿಶೇಷ ಪಾಂಡಿತ್ಯ ಪ್ರತಿಸಿದ್ಧರಾದವರಲ್ಲಿ ಈ ದೊಡ್ಡ ಮನುಷ್ಯರುಗಳೂ ಒಬ್ಬೊಬ್ಬರಾಗಿರುವರು ಎನ್ನುವದಕ್ಕೆ ಸಂಶಯವಿಲ್ಲ. ಇಂಥಾ ಪಂಡಿತರು ಸೇರಿ, ಮುಖ್ಯವಾಗಿ ಉಪಾಧ್ಯಾಯರುಗಳಿಗೂ ವಿದ್ಯಾರ್ಥಿಗಳಿಗೂ, ಸಾಧಾರಣವಾಗಿ ಕನ್ನಡ ಭಾಷಾಪರಿಚಯವುಳ್ಳ ಸಕಲ ಪಂಡಿತ ಪಾಮರರುಗಳಿಗೂ ಉಪಯೋಗಿಸಬೇಕೆಂಬ ಉದ್ದೇಶದಿಂದ ಮಾಡಿರುವ ಪ್ರಯತ್ನವು ಬಹು ಶ್ಲಾಘ್ಯವಾದದ್ದು. ಇವರುಗಳು ಈ ಮಾಸಪತ್ರಿಕೆಯನ್ನು ಉಪಯೋಗಕರವಾದದ್ದನ್ನಾಗಿಯೂ, ಬಹು ಜನಪ್ರೀತಿಗೆ ಪಾತ್ರವಾದದ್ದನ್ನಾಗಿಯೂ ಮಾಡಬೇಕೆಂದು ಪಡುತ್ತಿರುವ ಕಷ್ಟವು ಈ ಮೊದಲನೇ ಸಂಚಿಕೆಯಿಂದಲೇ ವ್ಯಕ್ತವಾಗುತ್ತದೆ. ಇದರಲ್ಲಿ ಅನೇಕ ಉಪಯುಕ್ತಗಳಾದ ವಿಷಯಗಳು ಬಹು ಸುಲಭತರವಾದ ವಾಕ್ಸರಣಿಯಲ್ಲಿ ಬರೆಯಲ್ಪಟ್ಟಿವೆ. ಈ ಮೊದಲನೇ ಸಂಚಿಕೆಯಲ್ಲಿರುವ ಕಲವು ವಿಷಯಗಳ್ಯಾವವೆಂದರೆ:—ಮೈಸೂರು ಶ್ರೀಮನ್ಮಹಾರಾಜ್ಞಿಯವರ ಬಾಲಿಕಾ ಪಾಠಶಾಲೆಯ ರಿಪೋರ್ಟಿನ ಸಂಗ್ರಹ; ಕರ್ನಾಟಕ ಭಾಷಾಕರಣ, ಕೆಸೊವಾರ ಸಿಸೆಂಟು, ಕರ್ನಾಟಕ ಕಾವ್ಯಮಂಜರಿ, ಮಾಧ್ವಾಚಾರ್ಯರ ಅಷ್ಟಾಧ್ಯಾಯಿ ಎಂಬೀನವೀನ ಪುಸ್ತಕಗಳಲ್ಲಿನ ಗುಣದೋಷಾವಿಷ್ಕರಣೆ; ವಿದ್ಯಾವಿಷಯ; ವಿಶೇಷ ಸಂಗತಿಗಳು ಮತ್ತು ದೇಶೀಯ ಪರೀಕ್ಷೆಯ ಪ್ರಶ್ನೆಗಳು. ಈ ವಿಷಯಗಳೆಲ್ಲಾ ಅತ್ಯಂತ ಸ್ಫುಟವಾಗಿಯೂ, ಸಿರವಾಗಿಯೂ ಮತ್ತು ಸುಲಭ ರೀತಿಯಲ್ಲಿಯೂ ಬರೆದಿರುವದರಿಂದಲೂ, ಉಪಾಧ್ಯಾಯರುಗಳಿಗೂ, ವಿದ್ಯಾರ್ಥಿಗಳಿಗೂ ವಿಶೇಷ ಪ್ರಯೋಜನಕರವಾಗಿರುವದರಿಂದಲೂ, ಇಂಥಾ ಉತ್ಕೃಷ್ಟತರವಾದ ಪತ್ರಿಕೆಗೆ ವಾರ್ಷಿಕ ಚಂದಾವನ್ನು ೧|| ರೂಪಾಯಿ ಮಾತ್ರವೆಂದು ನಿಷ್ಕರ್ಷಿಸಿರುವದರಿಂದಲೂ ಎಲ್ಲಾ ಕನ್ನಡ ಉಪಾಧ್ಯಾಯ ವಿದ್ಯಾರ್ಥಿಗಳೂ ಒಂದೊಂದು ಪತ್ರಿಕೆಯನ್ನು ತರಿಸಿಕೊಳ್ಳದೆ ಇರಬಾರದೆಂದು ನಂಬಿದ್ದೇವೆ. ಮೈಸೂರುಂಪಟಿನ ವಿದ್ಯಾರ್ಥಿಗಳೂ ಇದರಿಂದ ಅನೇಕ ಸಂಗತಿಗಳನ್ನು ಕಲಿಯಬಹುದಾಗಿದೆ. ಈ ಪುಸ್ತಕವು ಬಹು ರಮ್ಯವಾದ ರೀತಿಯಲ್ಲಿ ತಯಾರಾಗಲ್ಪಟ್ಟಿದೆ. ಇದನ್ನು ಅಪೇಕ್ಷಿಸುವವರು ಮೈಸೂರು ಸ್ಟೇಟ್ಸ್ ಬಾಯ್ ಮ್ಯಾನೇಜರಿಗೆ ಬರೆದು ತರಿಸಿಕೊಳ್ಳಬಹುದು. ಇಂಥಾ ಮಾಸಪತ್ರಿಕೆಯು ಶ್ರೇಯೋಭಿವೃದ್ಧಿಯನ್ನು ಹೊಂದುತ್ತಲಿದೆ ಎಂದು ಕೇಳಲು ಕುತೂಹಲಿಗಳಾಗಿದ್ದೇವೆ.

ಕ್ರಿಯೆ! ಗುಣ! ಗತಿ!

ಈ ಲೋಕದಲ್ಲಿ ಮನುಷ್ಯರು ಪಾಪಕೃತ್ಯಗಳನ್ನು ಮಾಡಿಕೊಂಡು ಪರಲೋಕಕ್ಕೆ ಗುರಿಯಾಗುವವರಲ್ಲ. ದೇವರಿಗೆ ಪ್ರಿಯವಿಲ್ಲ. ಆದ್ದರಿಂದ ಒಬ್ಬನು ಕಟ್ಟಕಡೆಯರೆ ಅದು ದುರದೃಷ್ಟವೆಂತಲೂ, ದೈವಯತ್ತವೆಂತಲೂ ಹೇಳುವದು ಅಸಾಧ್ಯವಾಗಿರುವದು. ಒಬ್ಬೊಬ್ಬನು ತನ್ನ ತನ್ನ ಸ್ವಾತಂತ್ರ್ಯಶಕ್ತಿ ಕರಿದಾಗಿ ನಡದುಕೊಂಡು ತನ್ನ ತನ್ನ ಕೃತ್ಯಗಳಿಂದ ಉಂಟಾಗತಕ್ಕ ಫಲಗಳನ್ನು ತಿನ್ನಬೇಕಾದೀತು. ಇದರಲ್ಲಿ ಮನುಷ್ಯರಿಗೆ ಸ್ವಾತಂತ್ರ್ಯ ಉಂಟೋ, ಇಲ್ಲವೋ ಎಂದು ಸಂಶಯ ಬಟ್ಟು, ತಮಗೆ ಸಂಭವಿಸುವಂಥಾದ್ದೆಲ್ಲಾ ಅದೃಷ್ಟದ ಕಾರಣವೆಂದಾಗಿ ಊಹಿಸಿಕೊಳ್ಳುತ್ತಾರೆ. ಅದೃಷ್ಟವೆಂಬ ಶೋಧನೆ ಯಾವ ಅರ್ಥವಿಲ್ಲ, ಸಿದ್ಧಾಂತವೂ ಉಂಟೋ ನಾನರಿಯೆನು. ಆದರೆ ಮನುಷ್ಯರಿಗೆ ಸ್ವಾತಂತ್ರ್ಯವು ಉಂಟೆಂಬುವದಕ್ಕೆ ಬಹಳಷ್ಟು ವಿವಿಧ ಸಂಗತಿಗಳು ತೋರುತ್ತವೆ. ನಮಗೆ ಸ್ವಾತಂತ್ರ್ಯ ಇಲ್ಲವೆಂಬುವದು ಸತ್ಯವಾಗಿದ್ದ ಪಕ್ಷದಲ್ಲಿ ದೇವರು ನಮಗೆ ಬುದ್ಧಿಯನ್ನು ಕೊಟ್ಟಿರುವದು ಯಾತಕ್ಕೆ? ಸ್ವಾತಂತ್ರ್ಯವಿಲ್ಲದಿದ್ದರೆ ನಮ್ಮ ಆ ದೃಷ್ಟದಿಂದ ನಾವು ಮಾಡುವ ಕೃತ್ಯಗಳಿಗೆ ದೇವರು ನಮಗೆ ಶಿಕ್ಷೆಯನ್ನು ವಿಧಿಸುವದರಲ್ಲಿ ನ್ಯಾಯವೇನು? ಸ್ವಾತಂತ್ರ್ಯವಿಲ್ಲದಿದ್ದರೆ ಪಾಪವನ್ನಾದರೂ, ಪುಣ್ಯವನ್ನಾದರೂ ಸುಳ್ಳೆಂದರೆ ಸ್ವಾತಂತ್ರ್ಯವಿಲ್ಲದಿದ್ದರೆ ನಮಗೂ ಒಂದು ಗೊಂಬೆಗೂ ಯಾವ ವ್ಯತ್ಯಾಸವೂ ತೋರುವದಿಲ್ಲ. ಹಿಂದೂ ಶಾಸ್ತ್ರಗಳನ್ನು ನಾವು ಪರಿಶೋಧಿಸಿದರೆ ಪಾಪ, ಪುಣ್ಯ, ಸ್ವರ್ಗ, ನರಕಗಳ ವಿಷಯದಲ್ಲಿ ಧಾರಾಳವಾಗಿ ಸಿಗಬಹುದು. ಆದರೆ ಆ ಮಾತುಗಳನ್ನು ನಾವು ಪರಮಾತ್ಮಕ್ಕನೆ ಜನರಿಗೆ ಸ್ವಾತಂತ್ರ್ಯವುಂಟೆಂದು ಹೇಳಬೇಕಾಗುತ್ತೆ.

ಈ ಜಗದಲ್ಲಿ ಪಾಲ್ಗೊಂಡ ಅಭ್ಯುದಯಕ್ಕೆ ಅನುಗುಣವಾಗಿ ನಾವು ಮೂರು ಮುಖ್ಯಾಂಶಗಳನ್ನು ವಾಚಕರಿಗೆ ತಿಳಿಸಬೇಕೆಂದಿರುತ್ತೇವೆ. ಒಂದು ಮನುಷ್ಯರು ಮಾಡುವ ಒಂದೊಂದು ಕ್ರಿಯೆಯೂ ಒಂದು ಸದಾಚಾರವಾಗಿರುವದರಿಂದ ಅದರಿಂದ ತಕ್ಕ ಫಲವು ಬರುವದು ಖಚಿತವಾಗಿದೆ. ಎಂತೆಂಥ ಫಲ ಬರುತ್ತದೆಂದು ನಾವು ವಿವರವಾಗಿ ಹೇಳುವದು ಅಸಾಧ್ಯವಾಗಿದ್ದಾಗ್ಯೂ ಒಂದು ವಿಧವಾದ ಕ್ರಿಯೆಯನ್ನು ನಾವು ಬಾರಿಬಾರಿಗೂ ಮಾಡುತ್ತಾ ಬಂದರೆ ಅದರಿಂದ ಅಭ್ಯಾಸವೆಂಬ ಒಂದು ಫಲವು ಹುಟ್ಟುತ್ತದೆಂಬುದರಲ್ಲಿ ಯಾವ ಸಂದೇಹವೂ ಇರಲಾರದು. ಇದಕ್ಕೆ ಉದಾಹರಣೆಯಾಗಿ ಒಬ್ಬನು ದಿನಕ್ಕೆರಡು ಪ್ರತಿಸಂಧ್ಯೆಯಿಂದ ಒಂದು ಪರ್ಣ ಮದ್ಯಪಾನವನ್ನು ಮಾಡಿದನಂತರ ಮಾರನೇ ದಿನ ಅದನ್ನು ಮಾಡುವದು ಅವನಿಗೆ ಸುಲಭವಾಗುತ್ತೆ. ಹೀಗೆ ದಿನದಿನಕ್ಕೆ ಅವನು ಇತರರ ಪ್ರೇರಣೆಯಿಂದ ಅದನ್ನು ಮಾಡಬೇಕಾಗಿಲ್ಲ. ತನ್ನ ಸ್ವಂತ ಆಸೆಯಿಂದಲೂ, ಇತ್ತನ ಇಚ್ಛೆಯಿಂದಲೂ ಕುಡಿಯುವನೆಂಬುವದಕ್ಕೆ ಸಂದೇಹವಿಲ್ಲ. ಆದರಿಂದ ಒಂದು ಕ್ರಿಯೆಯಿಂದ ಚಾಪಲ್ಯವಾಗಲಿ, ಒಳ್ಳೇ ಅಭ್ಯಾಸವಾಗಲಿ ಹುಟ್ಟುತ್ತದೆ.

ಎರಡು.—ನಮ್ಮ ಅಭ್ಯಾಸಗಳು ಯಾವಪ್ರಕಾರವಾಗಿ ಬರುವುವು, ನಮ್ಮ ಲಕ್ಷಣಗಳೂ ಅದೇಪ್ರಕಾರವಾಗಿ ಆಗುತ್ತವೆ. ಒಬ್ಬನು ಚಾಪಲ್ಯವನ್ನು ಅಭ್ಯಾಸಿಸಿ ಅದರಲ್ಲಿ ತುಂಬಾ ಅನುಭವಶಾಲಿಯಾದರೆ ಅವನ ಲಕ್ಷಣಗಳು ಬೇರೆಯಾಗಿ ಮಾರ್ಪಡುವವಲ್ಲ. ಆಗಲಿ ಹಾಗೆ ಮಾಡಿಲ್ಲವಾದರೆ ಅವನ ಲಕ್ಷಣಗಳಿಗೆ ಸಮಾನವಾಗುತ್ತದೆ. ಮತ್ತೊಬ್ಬನು ಕುಡಿಯುವ ಅಭ್ಯಾಸವುಳ್ಳವನಾಗಿ, ತನ್ನಕ್ಷರದ ನಿತ್ಯವಾದ ಬಯಕೆಯನ್ನು ತೃಪ್ತಿಪಡಿಸುವದಕ್ಕೆ ಗುಣದೋಷಗಳನ್ನು ವಿಚಾರಿಸದೆ, ಇತರರ ಚಿಂತೆಯನ್ನು ನೆನಸದೆ, ಮನಸ್ಸು ಬಂದಹಾಗೆ ನಡೆದು ಸ್ವಾರ್ಥಪರನಾಗುತ್ತಾನೆ. ವಾಚಕರೇ, ನೀವು ಈ ಬೋಧನೆಯನ್ನು ಆಗಾಗ್ಗೆ ನಿಮ್ಮ ನೆನಪಿಗೆ ತಂದುಕೊಂಡು, ಬಹು ಜಾಗರೂಕರಾಗಿ ನಡೆಯಬೇಕೆಂದು ನಾವು ಕೋರುತ್ತೇವೆ. ನಿಮ್ಮ ನಡವಳಿಕೆಗೂ ನಿಮ್ಮ ಲಕ್ಷಣಗಳಿಗೂ ನಡುವಲು ವ್ಯತ್ಯಾಸವಿದ್ದಾಗ್ಯೂ, ಕಡೆಗೆ ಆ ವ್ಯತ್ಯಾಸವು ಇಲ್ಲದೆ ಹೋಗುವದು. ಒಬ್ಬ ವ್ಯಕ್ತಿಯು ಸ್ವಾಭಾವಿಕವಾಗಿ ದಯಾಳುವಾಗಿದ್ದಾಗ್ಯೂ, ಕಡೆಗೆ ಆ ಸದ್ಗುಣವು ಸಕಲ ದುರ್ಗುಣಗಳಲ್ಲಿ ಮಗ್ನವಾಗಿ ಹೋಗುವದು. ನೀವು ಯಾವಾಗಲೂ ಸದ್ಗುಣವುಳ್ಳವರಾಗಿರಬೇಕೆಂದು ಅಪೇಕ್ಷಿಸಿದರೆ ಯಾವಾಗಲೂ ಸತ್ಕ್ರಿಯೆಗಳಲ್ಲಿಯೇ ನಿರತರಾಗಿರುವದು ಆವಶ್ಯಕ.

ಮೂರು.—ನಡವಳಿಕೆಯಿಂದುಂಟಾಗುವ ನಮ್ಮ ಗುಣಗಳನುಸಾರವಾಗಿ ಮುಂದಿನ ಲೋಕದಲ್ಲಿ ನಮಗೆ ಬಹು ಮಾನವಾಗಲಿ ಕ್ಷೇಮವಾಗಲಿ ಉಂಟಾಗುವದು. ಹಿಂದುಗಳಲ್ಲಿ ಕೂಡ ಈ ಬೋಧನೆಯು ಪ್ರಬಲವಾಗಿದೆ. ಒಬ್ಬನು ಇದರಲ್ಲಿ ಸುಗಂಧಗಳನ್ನು ಅಳುಕ್ಕೆ ಮಾಡಿದರೆ ಪರದಲ್ಲಿ ಮುಂಗಿಲಿಯಾಗಿ ಹುಟ್ಟಬೇಕೆಂತಲೂ, ಒಬ್ಬನು ಇದರಲ್ಲಿ ತಾನು ಅತಿ ಬಿಸ್ರಾಗಿ ಪ್ರಯಾಣ ಮಾಡಬೇಕೆಂದು ಒಂದು ಕುದುರೆಯನ್ನು ಕದ್ದರೆ, ಅವನು ಪರದಲ್ಲಿ ನಡಿಯಲಶಕ್ತನಾಗಿರುವ ಕುಂಟನಾಗಿ ಹುಟ್ಟುವನೆಂತಲೂ, ಒಬ್ಬನು ಇದರಲ್ಲಿ ಜನರನ್ನು ಬಹಳ ಕ್ರೌರ್ಯದಿಂದ ನಡೆಸಿದರೆ, ಪರದಲ್ಲಿ ಹುಲಿಯಾಗಿ ಹುಟ್ಟುವನೆಂತಲೂ ಶಾಸ್ತ್ರದಲ್ಲಿ ಬರೆದಿದೆ. ಆದರೆ ಈ ಕಾಲದಲ್ಲಿ, ನಮ್ಮ ಗುಣಗಳು ಹ್ಯಾಗಿವೆಯೋ ಮುಂದಿನ ಕಾಲದಲ್ಲಿ ನಮ್ಮ ಗತಿಯೂ ಹಾಗೆಯೇ ಇರುವದು. ಯೇಸುಸ್ವಾಮಿಯು ಈ ಬೋಧನೆಯನ್ನು ನಾನಾ ಸಿದ್ಧಾಂತಗಳಿಂದಲೂ, ದೃಷ್ಟಾಂತಗಳಿಂದಲೂ ಸಿರ್ಧರಿಸಿರುತ್ತಾನೆ.

ಆದರೆ ಅನೇಕರು ಈ ದೊಡ್ಡ ಮಾತುಗಳನ್ನು ತಮ್ಮ ಲಕ್ಷ್ಯಕ್ಕೆ ಸರಿಯಾಗಿ ತಂದುಕೊಳ್ಳದೆ, ಸ್ವೇಚ್ಛೆಯುಳ್ಳವರಾಗಿ ನಡೆಯುವದು ಸಂತೋಷಪಡುವರು. ಶಾಸ್ತ್ರದ ಮಾತುಗಳಿಗೂ, ಗುರುಗಳ ಬೋಧನೆಗೂ ಅಸಡ್ಡೆಯುಳ್ಳವರಾಗಿರುತ್ತಾರೆ. ಇಂತವರಿಗೆ ನಾವು ತಿಳಿಸಬೇಕಾದ ಮಾತು ಒಂದು ಇದು

ವರು. ಅದೇನೆಂದರೆ, ನೀವು ನಡೆಯುತ್ತಿರುವ ನಡತೆಯನ್ನು ಸ್ವಲ್ಪ ದಿವಸಗಳೊಳಗಾಗಿ ಬದಲಿಸದಿದ್ದರೂ, ದೇವರು ಅದರಲ್ಲಿ ಒಂದು ತೃಣವನ್ನಾದರೂ ಮರೆಯನು, ಮುಂದಿನ ಕಾಲದಲ್ಲಿ ಅವನ್ನೆಲ್ಲಾ ತಿರಿಗಿ ನಿಮ್ಮ ಜ್ಞಾಪಕಕ್ಕೆ ತರುವನು. ಆ ದೈವದಿಂದ ನೀವು ನಡೆಸಿದ ದುಷ್ಕರ್ಮಗಳನ್ನೂ, ಬಡವರ ನಿಮ್ಮ ಹಣದ ಸುಸ್ಥಿತಿಗಳನ್ನೂ, ಬೇರೆಯವರ ನಿಮ್ಮ ಮನಸ್ಸಿನ ಅನ್ಯಾಯಗಳನ್ನೂ, ಈ ಮನಸ್ಸಿನ ನೀವು ಅಹಂಕಾರದಿಂದ ನಡೆಸಿದ ದುಷ್ಕೃತ್ಯಗಳನ್ನೂ ದೇವರು ಎಂದಿಗೂ ಮರೆಯನು, ಅವುಗಳನ್ನೆಲ್ಲಾ ತಿರಿಗಿ ನಿಮಗೆ ತೋರಿಸಿ, ಅವುಗಳಿಗೆ ತಕ್ಕ ಕಠಿಣವಾದ ಫಲಗಳನ್ನು ನಿಮಗೆ ಅಗತ್ಯವಾಗಿ ಕೊಡುವನು. ಈಗ ನಿಮ್ಮ ದುಷ್ಕೃತ್ಯದಿಂದ ನೀವು ಸುಖವನ್ನು ಪಡೆದರೂ, ಮುಂದೆ ಅದರಿಂದಲೇ ಬರತಕ್ಕ ದುಃಖವು ಅಷ್ಟಿಷ್ಟೆಂದು ಹೇಳುವದು ಅಸಾಧ್ಯವಾಗಿದೆ. ಒಂದಾನೊಂದು ಸಮಯದಲ್ಲಿ ಒಬ್ಬ ಮನುಷ್ಯನು ಅಡವಿಯಲ್ಲಿ ಒಂದು ಜಂತುವನ್ನು ಕಂಡು, ಅದು ತನಗೆ ಬೇಟೆಯಾದೀತೆಂದು ಅದರ ಜೊತೆ ಎದುರು ನಡೆದು, ಸಂತೋಷದಿಂದ ಅದರ ಹಿಂದೆ ಹೋಗಲು, ಅದು ಥಟ್ಟನೆ ಹುಲಿಯಾಗಿ ತಿರುಗಿ, ಅವನ ಮೇಲೆ ಬಿದ್ದು, ಅವನ ಪ್ರಾಣವನ್ನು ತೆಗೆಯಿತು. ಹಾಗೆಯೇ ಅನೇಕರು ಸುಖವೆಂದು ಭಾವಿಸುವ ನಿರಂತರವಾದ ದುಃಖವು ಪ್ರಾಪ್ತವಾಗುತ್ತದೆ. ಈ ಲೋಕದಲ್ಲಿ ದುಷ್ಕೃತ್ಯದಿಂದ ಸುಖವಾದವನೂ, ಧರ್ಮದಿಂದ ದುಃಖವಾದವನೂ ಎಲ್ಲಿ ಇದ್ದರೂ ದುಷ್ಕರ್ಮಿಗೆ ಮುಂದೆ ಯಾತನೆಯು ತಪ್ಪದು. ಪಾಪದ ಫಲ ಸತ್ತ ಬಳಿಕ ಈ ಲೋಕದಲ್ಲಿ ಎಲ್ಲಿಯಾದರೂ ಸಿಕ್ಕೇ ಸಿಕ್ಕುವದು. ಅವನು ಜನರ ಪ್ರೀತಿಗೂ, ಸಂಬಂಧಿಗಳ ಆದರಕ್ಕೂ ಅಪಾತ್ರನಾದವನು ಇಂತಹವನು ಇದ್ದರೂ ಏನು? ಇಲ್ಲದಿದ್ದರೂ ಏನು? ಈ ಲೋಕದಲ್ಲಿ ಇವನ ಜೀವನವು ವ್ಯರ್ಥ. ಕೊನೆಗೆ ತನ್ನ ಕಾಲದಲ್ಲಿ ನಿಂದೆಯನ್ನು ಹೊಂದುವನು. ಆಗಲಾದರೂ, ಹಿಂದಿನ ಪಾಪಗಳಿಂದ ಉಂಟಾದ ಬಾಧೆಗಳಿಗೆ, ದುಃಖಗಳಿಗೆ, ಮನಸ್ತಾಪಗಳಿಗೆ ಒಳಗಾಗಿ ಯಾತನೆಯನ್ನು ಪಡುವನು. ನಾನು ಪಾಪಕ್ಕೆ ಒಳಗಾಗುವುದಿಲ್ಲವೆಂದು ನನ್ನನ್ನು ರಕ್ಷಿಸು ಎಂದು ದೇವರನ್ನು ಪ್ರಾರ್ಥಿಸಬೇಕು. ಆ ಮನುಷ್ಯನು ಆ ಮನುಷ್ಯನಿಗೆ ತನ್ನ ಪಾಪದ ಸಹಾಯವನ್ನು ಕೊಡದೆ ಇರಲೆಂದು ನಾವು ನಾಗಿ ನಂಬುತ್ತೇವೆ.

ಮೈಸೂರು.

ಕೋಲಾರದ ಡಿಸ್ಟ್ರಿಕ್ಟಿಗೆ ಸೇರಿದ ಗೌರೀಬಿದನೂರು ತಾಲ್ಲೂಕು ಅಮಾನಿ ಬೈರಾಪುರದ ಅಮ್ಮ ದೇವಸ್ಥಾನದ ಗುಡಿಯನ್ನು ತಾಲ್ಲೂಕು ಕಛೇರಿಯವರು ಬಿಟ್ಟು ಬಿಟ್ಟಿದ್ದರು. ಯಾರಿಂದ ಅಮಾನಿ ಬೈರಾಪುರದ ಗ್ರಾಮದ ಪಟೇಲರು ಅದರ ಜಾತ್ರೆಯ ಸಮಯಗಳಲ್ಲಿ ದೇವಸ್ಥಾನದಲ್ಲಿ ಅವರ ಸ್ವಾಧೀನಕ್ಕೆ ಅನುಮತಿ ಪಡೆದು ಗರಂತ ಕಳ್ಳರಿದ್ದಾಗ ಅದಿರುತ್ತಿತ್ತು. ಇಲ್ಲಿಯ ಕಾಲ ಹೀಗೆಯೇ ನಡೆಯುತ್ತಿರಲು ಒಂದು ಕೊಸಗಿ ಕೇಸ್ ಅಮ್ಮನವರ ಭಾಗದಲ್ಲಿ ತಾಲ್ಲೂಕು ಕಛೇರಿಯಲ್ಲಿದ್ದ ಆ ಲೋಕಲ್ ಅಧಿಕಾರಿಗಳಿಗೆ ಬರುವಂತೆ ಪಟೇಲರು ದುರಾಭ್ಯಾಸದಿಂದ ನೇಮಕವಾಗಿದ್ದು ಅವನ ಇಷ್ಟಾನುಸಾರವಾಗಿ ಅಮ್ಮನವರಿಗೆ ಅವಮಾನ ಮಾಡಿದ್ದರು. ಅವರ ತಿಳುವಳಿಕೆ ಮೇರೆಗೆ ಅವರು ತಮ್ಮ ಉದ್ಯೋಗವನ್ನು ನಿರ್ವಹಿಸಿಕೊಂಡು ನಂತರ ಅವನ್ನು ಬಿಟ್ಟುಬಿಟ್ಟು ತಂದು ಇಡಲು ಹೋದನೋ ಅಥವಾ ಬೇರೊಂದು ಕಡೆ ಮುಂದೆ ಈ ವಿಷಯದಲ್ಲಿ ಅವನು ಇನ್ನೊಬ್ಬನ ಹತ್ತಿರ ಕೊಟ್ಟನೋ ಎಂಬುದು ಆಗದ ಬಗೆ. ಅನಂತರ ಈ ಕಾಲದಲ್ಲಿ ಮತ್ತು ಪ್ರಸ್ತುತದಲ್ಲಿ ಅವರು ನಡೆಸಿದ ದುಷ್ಕರ್ಮಕ್ಕಾಗಿ ಅವನನ್ನು ಪಟ್ಟಣದ ಅಧಿಕಾರಿಗಳಿಗೆ ತಂದೊಪ್ಪಿಸಿದರು. ಅವರ ಮೊಕದ್ದಮೆಯಲ್ಲಿ ವಿಚಾರಣೆ ನಡೆಸಿ ಅವನಿಗೆ ಶಿಕ್ಷೆ ಮಾಡಿ ಬಿಡುಗಡೆ ಮಾಡಿದ ಮೇಲೆ ಬಿಡುಗಡೆಯಾದ ಬಳಿಕ ಆ ದೇಗುಲದ ಅಲ್ಲಿನ ದೇವಸ್ಥಾನದ ಪಟ್ಟದಲ್ಲಿ ಕೊಡಲಿಲ್ಲ. ಆಮೇಲೆ ಅದರ ನಿರ್ವಹಣೆಯನ್ನು ತಿಳಿದು ನಿನ್ನೆ ಇವರಿಂದ ತಂದ ಪಟ್ಟದಲ್ಲಿ ಇಟ್ಟಿದ್ದರೂ ಇರಬಹುದು. ಅದು ಸರ್ಕಾರದವರಿಂದ ಹೊರಡಿಸಿದ್ದ ಪ್ರಕಟನೆ ಪ್ರಕಾರ ಅದೇ ಮೇರೆಗೆ ಈಗ ಹೊಸ ಆಜ್ಞೆಯನ್ನು ಹೊರಡಿಸುವದರಲ್ಲಿದ್ದಾರೆ. ಈ ವಿಷಯವನ್ನೆಲ್ಲಾ ಡಿಸ್ಟ್ರಿಕ್ಟಿನವರು ಗೌರ್ನಮೆಂಟಿನವರ ತಿಳುವಳಿಕೆಗೆ ತಂದರು. ಅವರು ಈ ಅಮಲ್ದಾರರ ಅಲಕ್ಷ್ಯದ ವಿಷಯದಲ್ಲಿ ನಿಂದೆಗೆ ಗುರಿಯಾಗಲ್ಪಡತಕ್ಕದ್ದೆಂದು ಡಿಪ್ಯೂಟೀ ಕಮಿಷನರು ಹುಕುಂ ದಯಪಾಲಿಸಿರುತ್ತಾರೆ.

ಒಂದು ತಾಲ್ಲೂಕು ಕಚೇರಿಯಲ್ಲಿ ಕೆಲಸದಲ್ಲಿರುವವರಿಂದ ಅವರ ಅಧಿಕಾರಕ್ಕೆ ಎಷ್ಟುಮಂದಿ ಬಳಪಟ್ಟು ಇರುತ್ತಾರೆ? ಮೇಲ್ಪಟ್ಟ ಅಧಿಕಾರಿ ಕೊಡಲ್ಪಟ್ಟ ತಮ್ಮ ಬಿರುದನ್ನೇ ಇವರು ಇಷ್ಟ ಕ್ಷ್ಯವಾಗಿ ಕಂಡಬಳಿಕ ಇವರು ಜನಗಳನ್ನು ಪಾಲಿಸುವ ಎಷ್ಟರವರೆಗೆ ಕಾತುರಿಗಳಾಗುವರೋ ಅದನ್ನು ಹೇಳಲು ಅಸಾಧ್ಯವಾಗಿದೆ. ಇಂಥವರನ್ನು ಅಮಲ್ದಾರರ ಪದವಿಯಲ್ಲಿಡುವ ಜನಗಳ ಕ್ಷೇಮಕ್ಕೂ ಹೇಗೆ ಕೆಲಸವಾಗಲ್ಲಿ ಇನ್ನೂ ಇವರ ವಿಷಯದಲ್ಲಿ ಗೌರ್ನಮೆಂಟಿನವರು ಸರಿಯಾದ ನ್ಯಾಯವಿಚಾರ ಮಾಡದೆ ತಮ್ಮ ಸ್ಥಾನವನ್ನು ಕಾಪಾಡಿಕೊಳ್ಳುವ ಇತರ ಅಧಿಕಾರಿಗಳಿಗೆ ಎಚ್ಚರಿಕೆಯು ಬೇಕಾಗಿದೆ. ಇದು.

ಬಹುದೇಶ ವೃತ್ತಾಂತಗಳು.

ಇನ್ನು ಸುಮಾರು ೨–೩ ದಿವಸಗಳಲ್ಲೇ ಶ್ರೀಮನ್ಮಹಾರಾಜರವರು ಗೌರವ ಸಮೇತರಾಗಿ ಮೈಸೂರಿನಿಂದ ಪ್ರಯಾಣ ಮಾಡಲಿದ್ದಾರೆಂದು ವರ್ತಮಾನವಿದೆ.

ಶ್ರೀಮನ್ಮಹಾರಾಜರವರು ಬಾಬು ಕಿಂದ್ವಾ ಚಿಟ್ಟಿ ಸರ್ಕಾರದಲ್ಲಿರುವ ಸ್ಟೇಟ್ ಅವರ ಸಂಸ್ಥಾನಕ್ಕೆ ಸಂಬಂಧಿಸಿದ ವ್ಯಸನ ಕಾಲದಲ್ಲಿರುವುದರಿಂದ ಸ್ವಲ್ಪಕಾಲ ಬರುವದಕ್ಕಾಗಿ ನಮ್ಮ ಅಕ್ಟಿಂಗ್ ದಿವಾನರವರು ರಾಜಧಾನಿಗೆ ಬರುವವರಾಗಿದ್ದರು.

ಮುನ್ಸಿಪಾಲಿಟಿ ಬಾಬ್ತು ಚೇರ್ಮನ್ ಚುನಾವಣೆ ಆಗುವ ಸಂಭವದಲ್ಲಿ ಎಲ್ಲಾ ಜನಾಂಗದವರೂ ಆ ಜಾಗಕ್ಕೆ ಸಂಘದ ವಶದಲ್ಲಿ ಬರತಕ್ಕದ್ದೆಂದು ಪ್ರಾರ್ಥಿಸಿರುತ್ತಾರೆ.

ಸಂಸ್ಥಾನದ ಪ್ರಸಿದ್ಧ ನಗರದ ಪ್ರಮುಖ ಆರ್ಥಿಕ ವ್ಯಾಪಾರಿಗಳು, ಇಷ್ಟು ಅಲ್ಲದೆ ಪಟ್ಟಣದ ಪಟ್ಟಣಗಳವರ ಹೆಸರುಗಳನ್ನು ಜಾಗ್ರತೆಯಲ್ಲಿ ತಿಳಿಸಬೇಕೆಂದು ಎಲ್ಲಾ ಇನ್ಸ್‌ಪೆಕ್ಟರುಗಳಿಗೂ ಮತ್ತು ಡಿಪುಟಿ ಕಮಿಷನರುಗಳ ಹೆಸರುಗಳನ್ನು ಕೇಳಿದ್ದಾರೆ.

ಮೈಸೂರು ಸಂಸ್ಥಾನದ ರೈಲು ಇಲಾಖೆಯಿಂದ ಬಾಳೆಹೊನ್ನೂರು ಪ್ರಯಾಣಿಕರಿಗೆ ೧೮೯೧ ನೇ ಇಸವಿ ಏಪ್ರಿಲ್ ತಿಂಗಳಿನಿಂದ ೧೮೯೨ ನೇ ಇಸವಿ ಮಾರ್ಚ್ ವರೆಗೆ ನಡೆದ ೧ ಕ್ಕೆ ೬೦ ರೂಪಾಯಿಗಳಂತೆ ಇರುವಷ್ಟು ರೂಪಾಯಿ ಕೊಡತಕ್ಕದ್ದೆಂದು ಗೌರ್ನಮೆಂಟಿನವರು ತೀರ್ಮಾನಿಸಿರುತ್ತಾರೆ.

ಈ ಸಲದ ಲೋಕಲ್ ಫಂಡ್ ಬಜೆಟ್ಟಿನಲ್ಲಿ ತೆಗೆದು ಹಾಕಿದ ಕೆಲವು ಹುದ್ದೆಗಳು ಆಯಾಯ ಪ್ರದೇಶಗಳಿಗೆ ಪುನಃ ಸೇರಿಸಲ್ಪಟ್ಟವು. ಅವರ ಹಾಗೆ ಗೌರ್ನಮೆಂಟ್ ಗೆಜೆಟಿನಲ್ಲಿ ಅಧಿಕಾರ ಬಂದರೆ ಪ್ಯಾಸಾಗಿರುವ ೮–೩ ಮಂದಿಯು ಹುದ್ದೆಗಳು ಅಲ್ಲಿ ಸಮರ್ಪಕವಾಗಿಲ್ಲವೆಂದು ಕೇಳುತ್ತೇವೆ. ಇದಕ್ಕೆ ಕಾರಣವೇನೋ ತಿಳಿಯದು.

ಬೆಂಗಳೂರು ಮ್ಯುನಿಸಿಪಲ್ ಪ್ರೆಸಿಡೆಂಟರನ್ನು ಚುನಾವಣೆಗೆ ಪಡೆಯಬಹುದೆಂದು ಸ್ಟೇಟ್ಸ್‌ಮನ್ ಪತ್ರಿಕೆ ಆರಿಸಿತ್ತು. ಅವರು ಅಲ್ಲಿನ ಮ್ಯುನಿಸಿಪಲ್ ಹುದ್ದೆಗಳಲ್ಲಿ ಬಹಳ ಒಳ್ಳೇ ಕೆಲಸವನ್ನು ಮಾಡಿ ಅಲ್ಲಿನ ಜನಗಳ ಪ್ರೀತಿಗೆ ಪಾತ್ರರಾಗಿರುವುದರಿಂದ ಅವರನ್ನು ಎಷ್ಟು ಶ್ರೀಘ್ರ ಇತರ ಸ್ಥಳಗಳಿಗೆ ವರ್ಗಾಯಿಸಬಾರದೆಂದು ಬೇಡುತ್ತಾರೆ.

ತುಮಕೂರಿನ ಡಿಸ್ಟ್ರಿಕ್ಟ್ ಬೋರ್ಡಿನವರು ಮತ್ತು ಅಲ್ಲಿನ ಮ್ಯುನಿಸಿಪಲ್ ಮೆಂಬರುಗಳು ಪುರಸಭೆಯ ಇನ್ನೂ ಉತ್ತಮ ಕೆಲಸಗಳನ್ನು ಚಿಂತಿಸಿ ಇದ್ದದರಿಂದ ಈ ಪ್ರಾಂತ್ಯ ಗಳಲ್ಲಿ ಬಹುಮಾನಕ್ಕೆ ಯೋಗ್ಯರಾಗಿದ್ದಾರೆ. ಮ್ಯುನಿಸಿಪಲ್ ಮೆಂಬರುಗಳ ಸಹಾಯಕ್ಕಾಗಿ ತಮ್ಮ ಕರ್ತವ್ಯವನ್ನೂ ಗೌರ್ನಮೆಂಟಿನವರು ತಮ್ಮ ಅನುಮೋದನೆಯನ್ನು ಪಡೆದಿರುತ್ತಾರೆ.

ಶ್ರೀಮನ್ಮಹಾರಾಜರವರು ಕಳೆದ ೧೮೯೭ ನೇ ಇಸವಿ ಡಿಸೆಂಬರ್ ತಿಂಗಳಿನಲ್ಲಿ ನಿಯಮಿಸಿದ್ದನ್ನು ತಿಳಿಸಿದ ರು. ವ್ಯಸನದ ಕಾರಣ ಹಿಂದೆ ಇದ್ದಿರಿಂದ ಸ್ಪೆಷಲ್ ಬಗ್ಗೆ ಕಲ್ಪಿಸಿದ್ದ ವ್ಯವಸ್ಥೆಗಳು ಒಳಗಿರಲಿಲ್ಲ. ತೋಟಗಳಲ್ಲಿ ಹಿಂದಿನ ಸಮಯದ ವ್ಯವಸ್ಥೆಯ ಕಟ್ಟಡಗಳು ಆಗಿದ್ದವು ಮಾರ್ಗವಾಗಿ ಆದವನಿಗೆ ಬಹುಮಾನವಿರಲಿ. ಪಿಲಂರ್ ಮೊದಲಾದ ಅಧಿಕಾರಿಗಳೂ ರಾಜ್ಯಕ್ಕೆ ಒಂದು ದಿವಸ ಬಂದಿದ್ದರು.

ಇಲ್ಲಿನ ಖಜಾನೆ ದೇವಸ್ಥಾನದಲ್ಲಿ ಪ್ರತಿನಿತ್ಯ ಗಳನ್ನು ಹೇಳುತ್ತಿದ್ದ ಒಬ್ಬ ವೈಷ್ಣವ ಬ್ರಾಹ್ಮಣನ ಕೂ ಮಾರ್ಚಿ ೧೮–೧೯ ಸ ವರ್ಷ ವಯಸ್ಸಿನವನು ಕಳೆದ ಸೋಮವಾರ ಸಾಯಂಕಾಲ ಗೋಪುರದಲ್ಲಿ ಆಗಿನ ಜನ ಆತನ ಉರುಳಿ ಬಿದ್ದ ಸ್ಥಳಕ್ಕೆ ಬರುವಂಥ ಜನಗಳ ಕಾಣಿಸಿಕೊಳ್ಳಲು ಹಾಗೆ ಬಿದ್ದು ಸತ್ತಿರಬಹುದು. ಹಾಗೆಯೇ ಕಾಲು ಜಾರಿ ಬಿದ್ದುಹೋದನೋ ಎಂದು ಆಸುಪಾಸಿನ ಜನರು ಕೆಲವರು ಹೇಳುತ್ತಾರೆ. ಯಾರು ಕಾರಣರಾಗಿದ್ದರೂ ದೇವರು ತಿಳಿಯಬೇಕಾಗಿದೆ. ಬಹಳ ವಿಷಾದಕರ ಸಂಗತಿಯಲ್ಲವೇ?

ಚಿಕ್ಕಮಗಳೂರು ಆಸ್ಪತ್ರೆಯ ಕಾಂಪೌಂಡಿನಲ್ಲಿ ಮುನಿಸಿಪಲ್ ಪ್ಲಾಂಟಿಂಗ್ ಅಭಿವೃದ್ಧಿಗೆ ಸ್ಥಳಗಳ ಜಾಗಗಳನ್ನು ವಹಿಸಿಕೊಂಡಿರುವ ಡಾಕ್ಟರ್ ಬಂಗಲೆಯನ್ನು ಕಟ್ಟಿಸಿಕೊಡುವ ದಾಗಿ ಮೈಸೂರು ಸರ್ಕಾರದವರು ಒಪ್ಪಿ ಅದಕ್ಕೆ ಬೇಕಾದ ಸ್ಥಳವನ್ನು ಕೊಡಬೇಕೆಂದು ಕೇಳಿದ್ದಾರೆ. ಕಟ್ಟಡವನ್ನು ಕಟ್ಟಿಸುವದಕ್ಕೆ ಮುನಿಸಿಪಾಲಿಟಿಯವರು ಒಪ್ಪಿದ್ದಾರೆ. ಅವರು ಸ್ಥಳ ದಾನವಾಗಿ ಕೊಡಲು ತಮ್ಮ ಸಮ್ಮತಿಯನ್ನು ಸೂಚಿಸಿರುತ್ತಾರೆ. ಈ ವಿಷಯಕ್ಕಾಗಿ ಅಲ್ಲಿನ ಡೆಪ್ಯುಟಿ ಕಮಿಷನರವರಿಗೆ ತಕ್ಕ ಮಾಹಿತಿ ಕೊಟ್ಟಿರುತ್ತಾರೆ.

ಈ ಊರು ಜಿಲ್ಲೆಯ ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಒಬ್ಬ ವೈದಿಕ ವಿದ್ವಾಂಸನು ನಾಲ್ಕೈದು ವರ್ಷ ವಯಸ್ಸಿನವನಿಗೂ ೭–೮ ವರ್ಷ ವಯಸ್ಸಿನ ಕನ್ನಿಕೆಗೂ ಕಳೆದ ಸೋಮವಾರ ವಿವಾಹ ಮಾಡಿದನು. ಅದನ್ನು ತಿಳಿದ ಅಮಲ್ದಾರರು ಮುಚ್ಚಳಿಕೆ ಬರೆಸಿಕೊಂಡು ಅತ್ಯಂತ ವಿಸ್ಮಯಕರವಾದ ದಂಡ ವಿಧಿಸಿದರು. ಇವರು ಕೆಳಗಿನ ಜನರ ಕಾರ್ಯಗಳನ್ನು ಗಮನಿಸಿ ಉತ್ತಮ ಪ್ರಯತ್ನಗಳನ್ನು ನಡೆಸಿದರೆ ಅನೇಕ ಉಪಕಾರಗಳಾಗುವುವು. ಪರಸ್ಪರ ಪ್ರೀತಿ ವಿಶ್ವಾಸಗಳನ್ನು ಇವರು ಸಾಧಿಸಿದ್ದರೆ ಇದರ ಸಂಬಂಧವಾಗಿ ಅನೇಕ ಸಮಾರಂಭಗಳು ನಡೆಯುತ್ತಿವೆ. ಇವರೇ ಮೊದಲಾದ ಅಧಿಕಾರಿಗಳು ಜನರ ಉದ್ಧಾರಕ್ಕಾಗಿ ಸಹಾಯ ಮಾಡುವವರ ಪಟ್ಟಣದ ಮುಖ್ಯಸ್ಥರಾಗಿ ಪ್ರಖ್ಯಾತಿ ಹೊಂದಿದ್ದಾರೆ.

ಅವರ ಈ ಮೆಚ್ಚತಕ್ಕ ದಾಂಪತ್ಯಸುಖಕ್ಕೂ ಚಿರಕಾಲ ಆಯುರಾರೋಗ್ಯ ಐಶ್ವರ್ಯಾಭಿವೃದ್ಧಿಗಳನ್ನು ಹೊಂದಿ, ಶಾಶ್ವತವಾಗಿರಲೆಂದು ಭಗವಂತನನ್ನು ಪ್ರಾರ್ಥಿಸುವೆವು ಎಂಬುದಾಗಿ ನಮ್ಮ ಬುದ್ಧಿವಂತರು ತಿಳಿಸುತ್ತಾರೆ.

ಲೋವರ್ ಸೆಕೆಂಡರಿ ಪರೀಕ್ಷೆಯನ್ನು ಕೊನೆಯಲ್ಲಿ ಪ್ಯಾಸ್ ಮಾಡುವುದಕ್ಕೆ ಇಷ್ಟವಿಲ್ಲದ ವಿದ್ಯಾರ್ಥಿಗಳು ಓದುವದಾಗಿ ಈ ಊರಿನಲ್ಲಿ ನಾಲ್ಕಾರು ಸ್ಕೂಲುಗಳು ಇರುತ್ತವೆ. ಮಕ್ಕಳು ಇದ್ದಾಗಲೇ ಪ್ರತಿ ವರ್ಷ ಬಂದು ಸ್ಕೂಲಿನಲ್ಲಿ ಓದುತ್ತಿದ್ದ ಕೆಲವು ಹುಡುಗರು ಈ ವರ್ಷ ಇನ್ನೊಂದು ಸ್ಕೂಲಿನಲ್ಲಿ ಓದಬೇಕೆಂದು ಇಚ್ಛೆಪಟ್ಟು ಹಾಗೆ ಹೋಗಿ ಸೇರಲು ತಮ್ಮ ಹೆಡ್ಮಾಸ್ಟರಿಂದ ಸರ್ಟಿಫಿಕೇಟ್ ಪಡೆಯಬೇಕೆಂದು ಹೋಗಿ ಕೇಳುವಲ್ಲಿ ಆ ಹೆಡ್ಮಾಸ್ಟರುಗಳು—ನೀವು ಆ ಪಾಠಶಾಲೆಯಲ್ಲಿ ಓದುವದಾಗಿದ್ದರೆ ನಾನು ಸರ್ಟಿಫಿಕೇಟ್ ಕೊಡುವದಿಲ್ಲ. ಈ ಸ್ಕೂಲಿನಲ್ಲಿ ಓದುತ್ತೇವೆಂದು ಹೇಳಿದರೆ ಆಗಲೇ ಕೊಡುತ್ತೇನೆ ಎಂದು ಹೇಳುತ್ತಿದ್ದಾರಂತೆ. ಇದೆಂಥ ಅನ್ಯಾಯ! ತಾವು ಕೊಡುವ ಚೀಟಿಯನ್ನು ಕೊಟ್ಟುಬಿಟ್ಟರೆ ಅವರು ದೇಶಾಂತರ ಹಿಡಿಕೊಳ್ಳಲಿ. ಚೀಟಿ ಕೊಡುವ ಇಷ್ಟವಿದ್ದರೆ ಕೊಡಲೇಬೇಕು. ಇಲ್ಲವಾದರೆ ಕೊಡುವದಿಲ್ಲವೆಂದು ಹೇಳಬೇಕು. ಏನಾದರೂ ಇಲ್ಲದ ಹುಡುಗರನ್ನು ವ್ಯರ್ಥ ತೊಂದರೆಪಡಿಸುವದರಿಂದ ಅವರಿಗೆ ಯಾವ ಪ್ರಯೋಜನ ಉಂಟಾಗುವುದೋ ನಮಗೆ ತಿಳಿಯದು.

ಮೈಸೂರು ಗೆಜೆಟ್ ಸಂಗ್ರಹ.

ಕೋಲಾರ ಸಬ್‌ತಾಲ್ಲೂಕು ಡೆಪ್ಯುಟಿ ಅಮಲ್ದಾರ್ ಕೆ. ನರಸಿಂಹಯ್ಯನವರು ಹೊಸಕೋಟೆ ಸಬ್‌ತಾಲ್ಲೂಕಿಗೆ ವರ್ಗ ಮಾಡಲ್ಪಟ್ಟಿದ್ದಾರೆ. ಬದಲಾಗಿ ಆದ ಕಾರ್ಯಕ್ಕೆ ಹೋಗಿ ಸೇರತಕ್ಕದ್ದು.

೨ ಹೊಸದುರ್ಗದ ಸಬ್‌ತಾಲ್ಲೂಕು ಡೆಪ್ಯುಟಿ ಅಮಲ್ದಾರ್ ಕೆ. ಜೆ. ಎಸ್. ವೆಂಕಣ್ಣ ಬಿ. ಎ. ಯವರು ಕೃಷ್ಣರಾಜಪೇಟೆ ಸಬ್‌ತಾಲ್ಲೂಕಿಗೆ ವರ್ಗ ಮಾಡಲ್ಪಟ್ಟಿರುತ್ತಾರೆ.

೩ (ಎ) ಬಾಗೇಪಲ್ಲಿ ತಾಲ್ಲೂಕು ಅಮಲ್ದಾರ್ ಬಿ. ಲಕ್ಷ್ಮೀನಾರಾಯಣಪ್ಪನವರು ನಡೆಸಿದ ಕೆಲವು ಅಕ್ರಮಗಳ ವಿಷಯದಲ್ಲಿ ಮತ್ತು ವಿಚಾರಣೆ ಮಾಡಬೇಕಾಗಿರುವದರಿಂದ ಅವರು ಕೆಲಸದಿಂದ ಸಸ್ಪೆಂಡ್ ಮಾಡಲ್ಪಟ್ಟಿರುತ್ತಾರೆ.

(ಬಿ) ಕೋಲಾರದ ಡೆಪ್ಯುಟಿ ಅಮಲ್ದಾರ್ ಕೆ. ಜೈ ರಾಮಣ್ಣ, ಬಿ. ಎ. ಯವರು ಸಸ್ಪೆಂಡ್ ಮಾಡಲ್ಪಟ್ಟ ಬಿ. ಲಕ್ಷ್ಮೀನಾರಾಯಣಪ್ಪನವರಿಗೆ ಬದಲಾಗಿ, ಬಾಗೇಪಲ್ಲಿಯ ಆಕ್ಟಿಂಗ್ ಅಮಲ್ದಾರ್ ಆಗಿ ೭ ನೇ ಕ್ಲಾಸ್ ಪ್ರೊಬೇಷನರಿಯಾಗಿ ನೇಮಕ ಮಾಡಲ್ಪಟ್ಟಿರುತ್ತಾರೆ.

೪ ಅವರವರ ಎದುರಿನ ಅಮಲ್ದಾರರ ವರ್ಗಾವರ್ಗಗಳು ಮತ್ತು ಸ್ಥಳನಿಯಾಮಕಗಳು ಹುಕುಂ ಮಾಡಲ್ಪಟ್ಟಿರುತ್ತವೆ. ಪ್ರತಿಯೊಬ್ಬ ಅಧಿಕಾರಿಯು ತನ್ನ ಚಾರ್ಜನ್ನು ಒಪ್ಪಿಸಿ ತನಗೆ ನಿಯಮಿತವಾಗಿರುವ ಸ್ಥಳಕ್ಕೆ ಹೋಗಿ ಸೇರತಕ್ಕದ್ದು —

ಎಸ್. ಆರ್. ಶ್ರೀನಿವಾಸರಾಯರು ತರೀಕೆರೆಯಿಂದ ದೇವನಹಳ್ಳಿಗೆ.

ಟಿ. ವಾಸುದೇವರಾಯರು ದೇವನಹಳ್ಳಿಯಿಂದ ತರೀಕೆರೆಗೆ.

ನ್ಯಾಮಗೊಂಡ್ಲು ಆನೆಗೊಂದಿ ಚನ್ನಪಟ್ಟಣದಿಂದ ಬಾಗೇಪಲ್ಲಿಗೆ.

ವಿ. ವೆಂಕಟಸುಬ್ಬಯ್ಯನವರು ಚಿಕ್ಕನಾಯಕನಹಳ್ಳಿಯಿಂದ ಚನ್ನಪಟ್ಟಣಕ್ಕೆ.

ಎ. ಪುಟ್ಟನಂಜಿ ಅಯ್ಯಂಗಾರ್ಯರು ಮಾಗಡಿಯಿಂದ ಚಿಕ್ಕಮಗಳೂರಿಗೆ.

ಕೆ. ಜೆ. ರಾಮಣ್ಣ ಬಿ. ಎ. ಯವರು ಮಾಗಡಿಗೆ.

೫ ಮೇಲ್ಕಂಡ ವರ್ಗ ಮಾಡಲ್ಪಟ್ಟ ಅಮಲ್ದಾರ್ ಟಿ. ಬಾಬುರಾಯರವರು ೬ ನೇ ಕ್ಲಾಸ್ ಪ್ರೊಬೇಷನರಿ ಅಧಿಕಾರಿಗಳು ಆಗಲ್ಪಟ್ಟಿರುತ್ತಾರೆ.

ಹಾಸನ ಡಿಸ್ಟ್ರಿಕ್ಟ್ ಪೋಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟವರಾದ ಮ|| ಎ. ಶ್ಯಾಮಣ್ಣನವರು ನಾಯಕರವರು ಅವರು ಉಪಯೋಗಿಸಿಕೊಳ್ಳುವ ತಾ|| ೮ನೇ ತಾರೀಖು ಆರು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ.

೨ ರೆಗ್ಯುಲರ್ ಪೋಲೀಸ್ ಇನ್ಸ್‌ಪೆಕ್ಟರುಗಳಲ್ಲಿ ಒಬ್ಬ ಮ|| ಎಂ. ತಿಮ್ಮಯ್ಯ ಚೆಟ್ಟಿಯವರು ಮ|| ಬಿ. ಶ್ಯಾಮಣ್ಣನವರು ಸ್ಥಳದಲ್ಲಿ ರಜೆಯಲ್ಲಿ ಗೈರುಹಾಜರಿಯಾಗಿರುವ ಕಾಲದಲ್ಲಿ ಅವರ ಮ|| ಶ್ಯಾಮಣ್ಣನವರು ಕೆಲಸ ಮಾಡುತ್ತಿರುವ ತನಕ, ಹಾಸನ ಡಿಸ್ಟ್ರಿಕ್ಟ್ ಪೋಲೀಸ್ ಅ|| ಸೂಪರಿಂಟೆಂಡೆಂಟ್ ಆಗಿ ಕೆಲಸ ನೋಡುವಂತೆ ನೇಮಕ ಮಾಡಲ್ಪಟ್ಟಿರುತ್ತಾರೆ.

ಮ|| ಎಂ. ಚಿಂಗಣ್ಣಯ್ಯಂಗಾರ್ಯರವರು ಬೇರೆ ಕೆಲಸದ ಮೇಲಿರುವ ಕಾಲದಲ್ಲಿ ಅಧಿಕಾರಿಯಿಂದ ಹುಕುಂ ಕೊಡಲ್ಪಡುವ ತನಕ, ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟ್ ಆಗಿರುವ ಮ|| ಎ. ಪಿ. ಕೃಷ್ಣಯ್ಯನವರು ಹಾಗೆಯೇ ಡಿಪ್ಯುಟಿ ಪೋಲೀಸ್ ಸೂಪರಿಂಟೆಂಡೆಂಟ್ ಆಗಿರತಕ್ಕದ್ದು.

ತುಮಕೂರು ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟ್ ಆದ ಮ|| ಬಿ. ವೆಂಕಟಪ್ಪನವರು ಮುಂದಿನ ಫೆಬ್ರವರಿ ೧೯ ನೇ ತಾ|| ಮೊದಲು ೩ ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ.

೨ ತುಮಕೂರಿನ ಡಿಸ್ಟ್ರಿಕ್ಟ್ (ರೆಗ್ಯುಲರ್) ಅಸಿಸ್ಟೆಂಟ್ ಕಮಿಷನರಾದ ಮ|| ಅಪ್ಪಾಜಿರಾಯರು, ಮ|| ಬಿ. ವೆಂಕಟಪ್ಪನವರು ರಜೆಯಲ್ಲಿ ಗೈರುಹಾಜರಿಯಾಗಿರುವ ಕಾಲದಲ್ಲಿ, ಪೋಲೀಸ್ ಸೂಪರಿಂಟೆಂಡೆಂಟ್ ಆಗಿ ಕೆಲಸ ನೋಡುವಂತೆ ನೇಮಕ ಮಾಡಲ್ಪಟ್ಟಿರುತ್ತಾರೆ.

ಸನ್ ೧೮೯೨ನೇ ಇಸವಿ ೧೮ನೇ ನಂಬರ್ ರೆಗ್ಯುಲೇಷನ್ ಪ್ರಕಾರ ಅಕ್ಟೋಬರ್ ಸರ್ಕಾರ್ ಆದೇಶದಂತೆ, ಡಿಸ್ಟ್ರಿಕ್ಟ್ ಕೆಲಸಗಳ ಸಂಬಂಧ ಕೆಳಗಣ ತಾಲ್ಲೂಕುಗಳು ಹಾಸನದಲ್ಲಿ ಸೇರಿಸಲ್ಪಟ್ಟು, ಸ್ವಲ್ಪ ದಿವಸದ ವರೆಗೆ ಕಾಯಬೇಕೆಂದು ಇವರಿಗೆ ಸರ್ಕಾರದಿಂದ ತಿಳಿಸಿದೆ.

ಪ್ರಸಿದ್ಧ ಪತ್ರಿಕೆ.

ಅಯ್ಯಾ ಎಡಿಟರವರೇ!

ಈ ಪ್ರಸಿದ್ಧ ಪತ್ರಿಕೆಯನ್ನು ತಮ್ಮ ಅತ್ಯುತ್ತಮವಾದ ಪತ್ರಿಕೆಯಲ್ಲಿ ದಯವಿಟ್ಟು ಪ್ರಚುರಪಡಿಸಬೇಕೆಂದು ಪ್ರಾರ್ಥಿಸುತ್ತೇನೆ.

ಈ ಊರು ಕಲ್ಯಾಣಿ ಮೈದಾನದಲ್ಲಿರುವ ಛತ್ರದ ಸಮೀಪದ ಪಾಠಶಾಲೆ "ಇಂಗ್ಲಿಷ್ ಫ್ರೀ ಸ್ಕೂಲ್" ಎಂಬ ನಾಮಧೇಯವುಳ್ಳ ಒಂದು ಇಂಗ್ಲೀಷ್ ಪಾಠಶಾಲೆಯು ಸ್ಥಾಪಿಸಲ್ಪಟ್ಟಿದೆ. ಅದರಲ್ಲಿ ಧರ್ಮಾರ್ಥವಾಗಿ ಪಾಠ ಹೇಳಲ್ಪಡುತ್ತದೆ. ಈಗ ಸುಮಾರು ೪೦ ಜನ ವಿದ್ಯಾರ್ಥಿಗಳವರೆಗೂ ಇದರಲ್ಲಿ ಓದುತ್ತಲಿದ್ದಾರೆ. ಈ ಪಾಠಶಾಲೆಯು ೧೮೯೨ ನೇ ಇಸವಿ ಡಿಸೆಂಬರ್ ೨೬ ನೇ ತಾ|| ಆರಂಭವಾಯಿತು. ಇದರಲ್ಲಿ ಲೋವರ್ ಸೆಕೆಂಡರಿ ವರೆಗೂ ಇಂಗ್ಲೀಷ್‌ಭಾಷೆ ಮತ್ತು ಗಣಿತಶಾಸ್ತ್ರ (ಅಂದರೆ ಅಂಕಗಣಿತ, ಬೀಜಗಣಿತ, ರೇಖಾಗಣಿತ) ಇವುಗಳಲ್ಲಿ ಪಾಠ ಹೇಳಲ್ಪಡುವವು. ಈ ಪಾಠಶಾಲೆಗೆ ಸೇರಲು ಮತ್ತು ಇತರ ವಿಷಯಗಳನ್ನು ತಿಳಿಯಬೇಕೆನ್ನುವವರು, ಸಾಯಂಕಾಲ ೬ ಘಂಟೆ ಯಾದನಂತರ ಪಾಠಶಾಲೆಯ ಕಟ್ಟಡದಲ್ಲಿ, ಈ ಕೆಳಗೆ ರುಜು ಮಾಡಿರುವವರನ್ನು ಕಾಣಬಹುದು. ಈ ಪಾಠಶಾಲೆಯನ್ನು ಸ್ಥಾಪಿಸುವದಕ್ಕೆ ಸ್ಥಳವನ್ನು ಕೊಟ್ಟದ್ದಕ್ಕಾಗಿ ಮೆ|| ಮಂಡಳಿಯ ದಾನಶಾಸ್ತ್ರಿಗಳವರಿಗೆ ನಾನು ಬಹಳ ಕೃತಜ್ಞನಾಗಿರುತ್ತೇನೆ.

ತಮ್ಮ ವಿಧೇಯ

ವಿ. ಕೃಷ್ಣರಾವ್.

ಸನ್ ೧೮೯೨ನೇ ಇಸವಿ
ನವೆಂಬರು ತಿಂಗಳಲ್ಲಿ ಇಂಡಿಯಾ ದೇಶದ
ವೈಸರಾಯಿ ಮತ್ತು ಗವರ್ನರ್ ಜನರಲ್‌ರವರಾದವರನ್ನು
ಮಹಾ ಘನವಂತರಾದ ಲಾರ್ಡ್ ಲ್ಯಾನ್ಸ್‌ಡೌನ್ ಸಾಹೇಬರವರು
ಶ್ರೀಮನ್ಮಹಾರಾಜರವರ ಸಂದರ್ಶನಾರ್ಥವಾಗಿ ಮೈಸೂರಿಗೆ ದಯಮಾಡಿಸಿದ್ದಾಗ
ನಡೆದ ಸಂಗತಿಗಳ ವಿವರ.

(ಕಳೆದ ವಾರದ ಶೇಷ.)

ಈ ಸಂದರ್ಭದಲ್ಲಿ ನಾವು ಮತ್ತೊಂದು ವಿಷಯವನ್ನು ಸೂಚಿಸಬೇಕಾಗಿದೆ. ನಾವು ಈಗ ತಾನೆ ಸೂಚಿಸಿದ ಹಿಂದಣ ಕ್ಷಾಮಕಾಲದ ಆರಂಭದಲ್ಲಿ ಈ ದೇಶದಲ್ಲಿ 50 ಮೈಲುಗಳ ವರೆಗೆ ರೈಲ್ ಮಾರ್ಗವಿತ್ತು. ಈಗ 351 ಮೈಲುಗಳಷ್ಟು ರೈಲ್ ಮಾರ್ಗದಲ್ಲಿ ವ್ಯಾಪಾರ ನಡೆಯುತ್ತಾ ಇದೆ. ಇದಲ್ಲದೆ, ಇನ್ನೂ 50 ಮೈಲುಗಳ ರೈಲ್ ಮಾರ್ಗವು ತಯಾರಾಗುತ್ತಾ ಇದೆ. ಹೀಗೆ ರೈಲ ಮಾರ್ಗವನ್ನು ಹೆಚ್ಚಿಸಿದ್ದು, ಕ್ಷಾಮದಿಂದ ಬರತಕ್ಕ ವಿಪತ್ತುಗಳನ್ನು ನಿವಾರಿಸುವದಕ್ಕೆ ಪ್ರಕೃತದಲ್ಲಿ ಸಹಾಯಕವಾಯಿತಲ್ಲದೆ ಮುಂದೆಯೂ ಸಾರ್ಥಕವಾಗಿರುವದು. ಇದರಲ್ಲಿ ಯಾವ ಸಂದೇಹವೂ ಇಲ್ಲ. ಶ್ರೀಮನ್ಮಹಾರಾಜರವರು ರಾಜ್ಯಭಾರವನ್ನು ವಹಿಸಿದ್ದು ಮೊದಲ್ಗೊಂಡು, ಇದುವರೆಗೆ ಮೈಸೂರು ಸ್ಟೇಟ್ ರೈಲ್ವೆ ಮಾರ್ಗಕ್ಕಾಗಿಯೇ 150ಲಕ್ಷ ರೂಪಾಯಿಗಳವರೆಗೂ ವ್ಯಯವಾಗಿದೆಯೆಂದು ತಿಳಿಯಬರುತ್ತದೆ. ಈಗ ತಯಾರಾಗುತ್ತಿರುವ ಮಾರ್ಗವಲ್ಲದೆ, ಮೈಸೂರಿಂದ ಪ್ರತಿ ನಗರ ಪ್ರಾಂತ್ಯದವರೆಗೂ ನೆಟ್ಟಗೆ ರೈಲ್ ಹಾಕಿಸಬೇಕೆಂದು ಶ್ರೀಮನ್ಮಹಾರಾಜರವರ ಗೌರ್ನಮೆಂಟಿನವರು ಆಲೋಚಿಸುತ್ತಿರುವುದನ್ನು ಕೇಳಿ, ನಮಗೆ ಪರಮ ಸಂತೋಷವಾಯಿತು. ಇತರ ವಿಷಯಗಳಲ್ಲಿಯೂ ಕೂಡ, ಶ್ರೀಮನ್ಮಹಾರಾಜರವರು ತಮ್ಮ ಪ್ರಜೆಗಳ ಹಿತಚಿಂತನೆಯಲ್ಲಿ ಅತ್ಯಂತ ಜಾಗರೂಕತೆಯುಳ್ಳವರನ್ನು ವ್ಯಕ್ತಪಡಿಸಿಕೊಂಡಿದ್ದಾರೆ. ಶ್ರೀಮನ್ಮಹಾರಾಜರವರು ರಾಜ್ಯಭಾರವನ್ನು ವಹಿಸಿದ ಕಾಲದಲ್ಲಿ, ಸರ್ಕಾರದ ಖಜಾನೆ ಕೆಲಸವು ಅರ್ಧ ಮಟ್ಟಿಗೆ ನಡೆಯುತ್ತಿತ್ತು. ಈಗ ಆ ಹಣ ಸ್ಥಾನದ ಕಾರ್ಯವನ್ನು ಬಹುಮಟ್ಟಿಗೆ ನಡೆಸಿದ್ದಾರೆ. ಹೊಸ ಕಟ್ಟಡಗಳನ್ನು ಮಾಡಿಸಿದ್ದಾರೆ. ಆಸ್ಪತ್ರೆಗಳನ್ನು ಔಷಧ ಶಾಲೆಗಳನ್ನು ಇಡಿಸಿದ್ದಾರೆ. ಜನಗಳ ಆರೋಗ್ಯವನ್ನು ಒಳ್ಳೇ ಸ್ಥಿತಿಗೆ ತರುವದಕ್ಕೆ ಬೇಕಾದ ಪ್ರಯತ್ನಗಳನ್ನು ನಡೆಸಿದ್ದಾರೆ. ವಿದ್ಯೆ ಕಲಿಸುವದು ಮತ್ತು ಪ್ರಜೆಗಳ ಸ್ವತಃ ಕೃತ್ಯಗಳಿಗೂ ಪ್ರೋತ್ಸಾಹವನ್ನುಂಟುಮಾಡಿದ್ದಾರೆ. ನಾವು ಹೇಳುವದರಲ್ಲಿ ಹೊಸದೇನೂ ಇಲ್ಲ, ಗಣನೆಯಲ್ಲಿ ಹೊರಟಿಲ್ಲದ ಮತ್ತೊಂದು ವಿಷಯವಿರುವದು: ಈ ಸಂಸ್ಥಾನವು ವಿದ್ಯಾಭಿವೃದ್ಧಿಗೆ ಅಪರಿಮಿತವಾದ ಸಹಾಯವನ್ನುಂಟುಮಾಡಿದೆ. ಈ ಸಂದರ್ಭದಲ್ಲಿ, ಬಾಲಿಕಾ ಪಾಠಶಾಲೆಗಳನ್ನು ಅತ್ಯಾದರದಿಂದ ಮನೆ ದೃಷ್ಟಾಂತವಾಗಿ ಹೇಳಬೇಕಾಗಿದೆ. ಈ ಶಾಲೆಗೆ ಕೇವಲ ಶ್ರೀಮನ್ಮಹಾರಾಣಿಯವರ ಸಾಮರ್ಥ್ಯವುಳ್ಳ ಸರ್ಕಾರದ ಉದಾರ್ಯವು ಸಂಬಂಧವನ್ನು ಪಡೆದಿರುವುದು. ಮತ್ತು ನಮ್ಮ ಸ್ವದೇಶದವರ ಹಿತಾಭ್ಯುದಯವನ್ನು ರಕ್ಷಿಸುವದಕ್ಕೆ ತಕ್ಕ ಯೋಗ್ಯತೆಯು ಉಂಟಾಗುವಂತೆ, ಶ್ರೀಮನ್ಮಹಾರಾಜರವರು ತಮ್ಮ ಸ್ವದೇಶದ ಒಂದು ಭಾಗವನ್ನು ಕಳೆದು ಮಾಡುವದಕ್ಕೆ ನಡೆಸಿದ ಪ್ರಯತ್ನವು ನಮಗೆ ಸಮಾಧಾನಕರವಾಗಿದೆ. ಇಂಪೀರಿಯಲ್ ಸರ್ವೀಸ್ ಸೈನ್ಯಕ್ಕೋಸ್ಕರ ಉಪಯೋಗಿಸುವ ಪ್ರಯತ್ನ. ಮೈಸೂರು ಘಂಟಾಂಶ್ವ ಸೇನೆ ಪ್ರಮುಖ ಭಾರವನ್ನು ಹೊರಿಸದೆ, ಬ್ರಿಟಿಷ್ ಇಂಡಿಯಾ ರಾಜ್ಯದ ರಕ್ಷಣೆಗೋಸ್ಕರವಾಗಿಯೂ ಹೆಚ್ಚಿಸುವದಕ್ಕೂ ಮೈಸೂರು ಸೈನ್ಯದ ಸಾಮರ್ಥ್ಯವನ್ನು ವೃದ್ಧಿಪಡಿಸುವದಕ್ಕೂ ಸಾಧಕವಾಗಿರುವದು ಸಂತೋಷಕರವಾಗಿದೆ. ಇನ್ನೊಂದು ವಿಷಯ ಕೆಲವು ಮಾತುಗಳನ್ನು ಹೇಳಬೇಕೆಂದಿದ್ದೇನೆ. ಮದರಾಸು ಪ್ರಾಂತ್ಯಕ್ಕೆ ಹೊಂದಿಕೊಂಡ ಒಂದು ಅರಣ್ಯ ಪ್ರದೇಶವನ್ನು ಕಲ್ಪಿಸಿ [illegible]

ವಿಶೇಷ, ನೋಡಿನೋಡಿ! ನೋಡಿನೋಡಿ!! ನೋಡಿನೋಡಿ!!!

೧೯೧೩ ನೇ ವರುಷದ ಲೋವರ ಸೆಕಂಡರಿ ಪರೀಕ್ಷೆಯ ಟೆಕ್ಸ್ಟಿನ ನೋಟ್ಸು.

ಈ ಪರೀಕ್ಷೆಗಾಗಿ ನಿಯಮಿಸಲ್ಪಟ್ಟ ಸೋಮೇಶ್ವರಶತಕ, ಸನ್ನುತಿ ೧೦೧—೨೦೩ ಗೂ ಇರುವ ಪದ್ಯಗಳೂ, ಕನ್ನಡ ಭಾರತ ಕಥಾಸಂಗ್ರಹ ಸಭಾಪರ್ವ: ಇವುಗಳಿಗೆ ಅನ್ವಯ, ಅರ್ಥ, ತಾತ್ಪರ್ಯ ಅವಯವಾರ್ಥ, ವ್ಯಾಕರಣ ಸಂಗತಿಗಳು, ವಾಕ್ಯವಿವೇಚನ, ಪ್ರಾಸ್ತಾವಿಕ, ಇವೇ ಮೊದಲಾದವುಗಳನ್ನು ವಿವರಿಸಿ ವ್ಯಾಖ್ಯಾನವು ಶಿಕ್ಷಕರುಗಳೂ ಇಂಗ್ಲೀಷ್ ಹೈಸ್ಕೂಲ್ ಪಂಡಿತರಾದ ಎ. ರಾಘವೇಂದ್ರಾಚಾರ್ಯರಿಂದ ಬರೆಯಲ್ಪಟ್ಟು ಈ ಮುದ್ರಾಶಾಲೆಯಲ್ಲಿ ಪ್ರಿಂಟಾಗುತ್ತಲಿದೆ. ಈ ನೋಟ್ಸು ಗೌರ್ನಮೆಂಟ್ ಪ್ರತಿಗನುಸಾರವಾಗಿ ಇದೆ. ಕಾಪಿಗಳು ಸ್ವಲ್ಪವಾಗಿಯೇ ಪ್ರಿಂಟು ಮಾಡುವವರಿಂದ ಅಪೇಕ್ಷೆಯುಳ್ಳವರು ಜಾಗ್ರತೆಯಾಗಿ ಜನವರೀ ತಿಂಗಳೊಳಗಾಗಿ ಈ ಕೆಳಗಿನ ವಿಳಾಸದಾರರಿಗೆ ಬರೆದು ತರಿಸಿಕೊಳ್ಳಬಹುದು. ಕ್ರಯ ೮ ಆಣೆ. ಪೋಸ್ಟೇಜು ೧ ಆಣೆ. ಮತ್ತು ಆದಿಪರ್ವ, ಸಭಾಪರ್ವ, ವಿರಾಟಪರ್ವ, ಭೀಷ್ಮಪರ್ವ, ದ್ರೋಣಪರ್ವ, ಶಲ್ಯಪರ್ವ, ಸೌಪ್ತಿಕಪರ್ವ, ಸ್ತ್ರೀಪರ್ವ, ಶಾಂತಿಪರ್ವ—ರಾಜಧರ್ಮ, ಆಪದ್ಧರ್ಮ, ಮೋಕ್ಷಧರ್ಮ ಈ ಪರ್ವಗಳು ಪ್ರಿಂಟಾಗಿ ವಿಕರಿಗೆ ಸಿದ್ಧವಾಗಿವೆ. ಈಗ ಅನುಶಾಸನೀಕಪರ್ವವು ಪ್ರಿಂಟಾಗುತ್ತಲಿದೆ. ಇಷ್ಟಪಟ್ಟವರು ತರಿಸಿಕೊಳ್ಳಬಹುದು.

ಎಂ. ರುದ್ರಪ್ಪ ಅಂಡ್‌ಸನ್,
ಪ್ರಾಪ್ರೈಟರ್ಸ್, ಶ್ರೀಚಾಮುಂಡೇಶ್ವರಿ ಪ್ರೆಸ್,
೮೮—೨೯ ರೋಡ್, ಬೆಂಗಳೂರು

ವೃತ್ತಾಂತ ಪತ್ರಿಕೆ.

೧೯೧೩ ನೇ ಇಸವಿ ಫೆಬ್ರವರಿ ತಾ|| ೬ ನೇ ಗುರುವಾರ

ಕಳುವು.

ಚಿತ್ರದುರ್ಗದ ತಾಲ್ಲೂಕ್ ಕಛೇರಿಯಲ್ಲಿ ಒಂದು ಸಣ್ಣ ಪೆಟ್ಟಿಗೆಯಲ್ಲಿಟ್ಟು ಮೊಹರು ಮಾಡಲ್ಪಟ್ಟಿದ್ದ ಕೆಲವು ನಗಗಳು ಕಳೆದ ಫೆಬ್ರವರಿ ೨೯ ನೇ ತಾರೀಖಿನಲ್ಲಿ ಕಳುವು ಮಾಡಲ್ಪಟ್ಟವು. ಈ ನಗಗಳು ಸುಮಾರು ೫೦೦ ರೂಪಾಯಿ ಬಾಳತಕ್ಕದ್ದಾಗಿಯೂ, ಅಲ್ಲಿನ ವೆಂಕಟರಮಣಸ್ವಾಮಿ ದೇವಸ್ಥಾನಕ್ಕೆ ಸೇರಿದವುಗಳಾಗಿಯೂ ಇದ್ದವು. ಆ ತಾರೀಖಿನ ದಿವಸ ತಾಲ್ಲೂಕ್ ಖಜಾನೆಯು ಸರಿಯಾಗಿ ಮೊಹರಾದನಂತರ ಮುಜರಾಯಿ ಶಿರಸ್ತೇದಾರನೆಂಬ ನಾಯಕನೂ, ಖಜಾನೆಗುಮಾಸ್ತನೂ, ಸೈಡ್ ಖಜಾಂಚಿ ಮತ್ತು ರಾಜಾಜಿ ಎಂಬೀ ಶಿಪಾಯಿಗಳೂ ಮನೆಗೆ ಹೋಗಬೇಕಾದ ಸರದಿ ಇತ್ತು. ಆ ನಾಯಕನ ಮನೆಯಲ್ಲಿ ಮೊದಲನೇ ಇಬ್ಬರು ಶಿಪಾಯಿಗಳೂ ಆ ದಿವಸ ಊಟಕ್ಕೆ ಹೋಗಿದ್ದರಾದ ಕಾರಣ ರಾಜಾಜಿ ಎಂಬವನೊಬ್ಬನೇ ತಾಲ್ಲೂಕ್ ಕಛೇರಿಯಲ್ಲಿ ಪಹರೆ ಕೊಡುತ್ತಿದ್ದನು. ಆ ದೇವಸ್ಥಾನದ ನಗಗಳನ್ನು ಇಡಲ್ಪಟ್ಟ ಪೆಟ್ಟಿಗೆಯು ಹೊರಭಾಗದಲ್ಲೇ ಇದ್ದದರಿಂದ ಅದರಲ್ಲಿ ಭಾರೀ ಖಜಾನೆ ಇರಬಹುದೆಂಬ ಭ್ರಾಂತಿ ಹುಟ್ಟಿ ಈ ರಾಜಾಜಿ ಎಂಬ ಶಿಪಾಯಿಯು ಕಛೇರಿಯ ಬಾಕಲನ್ನು ಒಳಗಡೆ ಹಾಕಿಕೊಂಡು, ಕಟ್ಟಿದ್ದ ಸಲಾಕಿಗಳು ಹಾಕಿದ್ದ ಖಜಾನೆಯ ಬಾಕಲಿನ ಮೂಲಕ ತನ್ನ ಕೈಗಳನ್ನು ನುಗ್ಗಿಸಿ, ಸಮೀಪದಲ್ಲಿದ್ದ ಪೆಟ್ಟಿಗೆಯ ಬೀಗವನ್ನು ಹ್ಯಾಗೋ ಮುರಿದು, ಅದರಲ್ಲಿದ್ದ ಮೂರು ನಗಗಳನ್ನೂ ತೆಗೆದುಕೊಂಡನು. ಅಷ್ಟು ಹೊತ್ತಿಗೆ ಅಂದಿನ ಸುಮಾರು ರಾತ್ರಿ ೯ ಘಂಟೆಯಲ್ಲಿ ನಾಯಕನ ಮನೆಯಲ್ಲಿ ಊಟ ಉಪಚಾರಾದಿಗಳನ್ನು ತೀರಿಸಿಕೊಂಡು ಆ ಮೂರು ಮಂದಿಯೂ ಪಹರೆ ಕೊಡುವದಕ್ಕೋಸ್ಕರ ಕಛೇರಿಯ ಬಳಿಗೆ ಬಂದರು. ಕಛೇರಿಯ ಬಾಕಲು ಒಳಗಡೆ ಹಾಕಿದ್ದನ್ನು ನೋಡಿ, ಒಳಗಿದ್ದ ರಾಜೋಜಿಯನ್ನು ಕೂಗಿ, ಬಾಗಿಲು ತೆಗೆಸಿ ಪಹರೆ ಕೊಡುತ್ತಿದ್ದರು. ಮಾರನೇ ದಿವಸ ಭಾನುವಾರವಾದ್ದರಿಂದ, ಮರುದಿವಸವೆಲ್ಲಾ ಸುಮ್ಮನೆ ಇದ್ದು ಮಂಗಳವಾರದ ದಿವಸ ಮಧ್ಯಾಹ್ನ ಸುಮಾರು ಮೂರುವರೆ ಘಂಟೆಯ ಹೊತ್ತಿನಲ್ಲಿ ಟ್ರೆಜರಿಯ ಬಾಕಲನ್ನು ತೆರೆದು ನೋಡಿದಾಗ ಈ ಪೆಟ್ಟಿಗೆಯ ಮೊಹರು ಒಡೆದು ಹಾಕಿತ್ತು. ಅದರಲ್ಲಿದ್ದ ನಗಗಳು ಕಾಣಿಸಲಿಲ್ಲ. ಈ ಸಂಗತಿಯನ್ನು ಆ ದಿನ ಸುಮಾರು ೪ ಘಂಟೆಯಲ್ಲಿ ಆ ಪ್ರಾಂತನಲ್ಲೇ ಇರುವ ಟ್ರೆಜರಿ ಆಫೀಸರಿಗೆ ತಿಳಿಸಿದರು. ಅನಂತರ ಡಿಪಾರ್ಟುಮೆಂಟ್ ತಂಪ್ತು ಅಮಲ್ದಾರ, ಶಿರಸ್ತೇದಾರ ಮತ್ತು ಸರಾಫರನ್ನು ದಸ್ತಗಿರಿ ಮಾಡಲ್ಪಟ್ಟಿತು. ಕಳುವು ಪತ್ತೆಯಾಗಿ ಶಿಪಾಯಿ ರಾಜಾಜಿಗೆ ಚಿತ್ರದುರ್ಗದ ಮುನಸಿಫ್ ಮ್ಯಾಜಿಸ್ಟ್ರೇಟರು ದಸ್ತಪ್ತಿಯಿಂದ ಒಂದು ವರುಷದ ಕಠಿಣಸಜಾವನ್ನೂ ೫೦ ರೂಪಾಯಿ ಜುಲ್ಮಾನೆಯನ್ನೂ ವಿಧಿಸಿದರು. ಈ ಕಳುವಿಗೆ ತಾ[illegible] ಅಧಿಕಾರಿಗಳು ತಮ್ಮ ಡ್ಯೂಟಿಯನ್ನು [illegible]ದ ನೋಡಿರುವದರಿಂದ ಅವರೇ ತುಂಬಾ ನಿಂದೆಗೆ ಪಾತ್ರರಾಗಿರುತ್ತಾರೆ. ಯಾಕೆಂದರೆ ಕಳುವು ನಡೆದದ್ದು ೨೯ ನೇ ತಾರೀಖು ಶನಿವಾರರಾತ್ರಿ. ಸೋಮವಾರ ಅಂದರೆ ೨೭ ನೇ ತಾರೀಖಿನ ದಿನವೇ, ತಾಲ್ಲೂಕ್ ಅಧಿಕಾರಿಗಳು ತಮ್ಮ ಡ್ಯೂಟಿಯನ್ನು ಸರಿಯಾಗಿ ನಿರ್ವಹಿಸಿದ್ದಲ್ಲಿ ಕಳುವು ಪತ್ತೇ ಆಗುತ್ತಿತ್ತು. ಆ ದಿವಸ ಅಮಲ್ದಾರರೇ ಆಗಲಿ, ಶಿರಸ್ತೇದಾರರಾಗಲಿ, ಆಥವ ಸರಾಫನಾಗಲಿ ಯಾರೊಬ್ಬರೂ ಖಜಾನೆಯನ್ನು ತೆಗೆಯಲೇ ಇಲ್ಲವೆಂದು ಸ್ಪಷ್ಟವಾಗುತ್ತೆ. ಅಮಲ್ದಾರು ಮತ್ತು ಶಿರಸ್ತೇದಾರರು ಆಥವ ಇವರಿಬ್ಬರಲ್ಲಿ ಯಾರಾದರೂ ಒಬ್ಬರು ಖಜಾನೆಯನ್ನು ಝಡತಿ ಮಾಡಬೇಕಾದದ್ದು ಅವರ ಮುಖ್ಯ ಕರ್ತವ್ಯವಾಗಿದೆ. ಇದು ಯಾವಾಗಲೂ ಕಛೇರಿಯ ಬಾಗಿಲನ್ನು ತೆರೆದ ಒಡನೆಯೇ ಮಾಡತಕ್ಕ ಕೆಲಸವಾಗಿರುತ್ತೆ. ಆ ದಿನಸವೆಲ್ಲಾ ಖಜಾನೆಯ ಬಾಕಲನ್ನು ತೆರೆದಂತೆಯೇ ತೋರಬರುವದಿಲ್ಲ. ಹಾಗೆ ತೆರೆದು ಕ್ರಮಪ್ರಕಾರ ಝಡತಿ ಆಗಿದ್ದಲ್ಲಿ ಹೀಗೆ ಕಳುವು ನಡೆದಿದೆ ಎಂದಾದರೂ ಅವರಿಗೆ ತಿಳಿದು ಬರುತ್ತಿತ್ತು. ಸೋಮವಾರವೆಲ್ಲಾ ಕಳೆದು ಹೋಗಿ ೨೩ ನೇ ಮಂಗಳವಾರದ ದಿವಸ, ಅದೂ ಮಧ್ಯಾಹ್ನ ೩½ ಘಂಟೆಯ ವೇಳೆ ಹೀಗೆ ಕಳುವಾಗಿದೆ ಎಂದು ಅಧಿಕಾರಿಗಳಿಗೆ ತಿಳಿದು ಬರಬೇಕಾಗಿದ್ದರೆ, ಅವರು ತಮ್ಮ ಡ್ಯೂಟಿಯನ್ನು ಎಷ್ಟರ ಮಟ್ಟಿಗೆ ಜಾಗರೂಕತೆಯಿಂದ ನಿರ್ವಹಿಸುತ್ತಿದ್ದರೆಂದು ವಾಚಕರೇ ಊಹಿಸಿಕೊಳ್ಳಬಹುದು. ಅದಾಗ್ಯೂ ತಮಗೆ ತಿಳಿದ ಉತ್ತರಕ್ಷಣದಲ್ಲಿಯೇ ಟ್ರೆಜರೀ ಆಫೀಸರ ತಿಳುವಳಿಕೆಗೆ ತಾರದೆ, ಆ ದಿವಸ ರಾತ್ರಿ ೮ ಘಂಟೆಯ ವೇಳೆ ತಿಳಿಯಪಡಿಸಿದ ಇಂಥಾ ಆಫೀಸರುಗಳ ಪ್ರವರ್ತನೆಯು ವಿಶೇಷ ನಿಂದಾಸ್ಪದವಾದದ್ದೇ ಸರಿ. ಇದೂ ಅಲ್ಲದೆ ಕಛೇರಿಯ ಕೆಲಸಗಳನ್ನು ಕ್ರಮವಾಗಿ ಪ್ರತಿದಿನವೂ ೧೧ ಘಂಟೆಗೆ ಪ್ರಾರಂಭಿಸುವದಿಲ್ಲವೆಂತಲೂ, ತಮ್ಮ ಇಷ್ಟಬಂದಾಗ ಬಾಗಿಲನ್ನು ತೆಗೆದು ಮನಸ್ಸು ಬಂದಂತೆ ಕಾರ್ಯಗಳನ್ನು ಮಾಡುತ್ತಾರೆಂತಲೂ ಊಹಿಸಬೇಕಾಗಿದೆ. ಇಂಥಾ ಅಕ್ರಮವು ಅನೇಕಸ್ಥಳಗಳಲ್ಲಿ ನಡೆಯುತ್ತಲಿದೆ ಎಂಬುವದಕ್ಕೆ ಏನಾದ ಸಂಶಯವೂ ಇರಲಾರದೆ ಇರುವದರಿಂದ, ಸರಕಾರದವರು ಈ ವಿಷಯದಲ್ಲಿ ಉಚಿತವಾಗಿ ತಕ್ಕ ಕ್ರಮವನ್ನು ತಮ್ಮ ಎಲ್ಲಾ ಆಫೀಸುಗಳಲ್ಲಿಯೂ ಜಾರಿಯಲ್ಲಿ ತರುವರೆಂದು ನಾವು ಕೋರುತ್ತೇವೆ. ಇಷ್ಟು ಅಲ್ಲದೆ ಟ್ರೆಜರೀ ನೌಕರದವರಾದವರು ೨೨ ನೇ ತಾರೀಖಿನ ದಿವಸ ತಾವು ಪರೀಕ್ಷೆ ಮಾಡಿದಂತೆಯೂ, ಆಗ ಪೆಟ್ಟಿಗೆಗೆ ಹಾಕಿದ್ದ ಬೀಗಮೊಹರುಗಳು ಸರಿಯಾಗಿದ್ದವು ಎಂತಲೂ ಪ್ರಮಾಣ ಮಾಡಿ ಕೈಫಿಯತ್ತು ಕೊಟ್ಟಿರುವದು ಶುದ್ಧ ಸುಳ್ಳು. ಮತ್ತು ಅಲ್ಲಿನ ಅಮಲ್ದಾರರೇ ಆಗಲಿ, ಶಿರಸ್ತೇದಾರರಾಗಲಿ ಸುಮಾರು ಮೂರು ವಾರಗಳ ವರೆಗೂ ಕ್ಯಾಷ್ ಪುಸ್ತಕಗಳನ್ನು ಝಡತಿ ಮಾಡಲೇ ಇಲ್ಲವೆಂದು ಗೊತ್ತಾಗುತ್ತೆ. ಇದು ಶುದ್ಧ ಅನ್ಯಾಯ. ತಮ್ಮ ಕರ್ತವ್ಯವನ್ನು ನಿರ್ಲಕ್ಷ್ಯದಿಂದ ಜರುಗಿಸಿ, ಕೈಫಿಯತ್ತಿನಲ್ಲಿ ಬರೀಸುಳ್ಳನ್ನೇ ಬರೆಸಿರುವ ಈ ಅಧಿಕಾರಿಗಳ ವಿಷಯದಲ್ಲಿ ಗೌರ್ನಮೆಂಟಿನವರು ಸರಿಯಾದ ಉಪಾಯಗಳನ್ನಾಗಿ ಮಾಡುವರೆಂದು ನಂಬಿದ್ದೇವೆ. ಅಲ್ಲಿನ ತಾಲ್ಲೂಕ್ ಕಛೇರಿಯನ್ನೆಲ್ಲಾ ಒಬ್ಬ ಶಿಪಾಯಿಯೇ ಕಾಯುತ್ತಿದ್ದನಾದರೆ, ತಾಲ್ಲೂಕ್ ಪೋಲೀಸಿನವರು ಏನು ಮಾಡುತ್ತಿದ್ದರು. ಅವರೂ ಕೂಡ ಕಾಯಬೇಕಾದದ್ದು ಅವರ ಕರ್ತವ್ಯವಲ್ಲವೆ? ಕ್ಯಾಷು ಕಛೇರಿಯ ಮೊದಲಾದಕಾಲನ್ನು ಹಾಕಿಕೊಂಡಿರಬೇಕಾದರೆ, ಒಳಭಾಗದಲ್ಲಿರುವ ಖಜಾನೆಯ ಸಿಪಾಯಿಯ ಜಾಗದಲ್ಲಿ ಪಹರೆ ಕೊಡಬೇಕಾಗಿದ್ದ ಪೋಲೀಸಿನವನು ಎಲ್ಲಿ ಹೋಗಿದ್ದ? ಆ ದಿವಸ ಪೋಲೀಸ್ ಸ್ಟೇಷನ್ನಲ್ಲಿ ಕೂಡ ಯಾರು ಪಹರೆ ಕೊಡುತ್ತಿದ್ದರೋ ಇಲ್ಲವೋ ಎಂಬದಾಗಿ ಶಂಕಿಸಬೇಕಾಗಿದೆ. ಕಳುವು ಮಾಡಲ್ಪಟ್ಟ ನಗಗಳ ಬೆಲೆ ಸುಮಾರು ೫೦೦ ರೂಪಾಯಿಯಾದರೂ ದೇವಸ್ಥಾನದವರ ಮತ್ತು ಸರಕಾರದ ಸಂಬಂಧದಿಂದ ವಿಚಾರಣೆ ಮಾಡಬೇಕೆಂಬ ಶಿಕ್ಷೆಯೇ ಅವರಿಗೆ ಸಾಲದೆಂದು ಹೇಳುತ್ತೇವೆ. ಹ್ಯಾಗೂ ತಪ್ಪಿತಸ್ಥರಿಗೆ ನಮ್ಮ ಸರಕಾರದವರು ಸರಿಯಾದ ಶಿಕ್ಷೆಯನ್ನು ಕೊಡದೆ ಇರಲಾರರೆಂಬದಾಗಿ ನಂಬಿಕೊಂಡಿದ್ದೇವೆ.

ವಿದ್ಯಾದಾಯಿನಿ.

ರಕ್ತವು ಕೆಟ್ಟಿದ್ದರಿಂದ ಆಗುವ ಎಲ್ಲ ರೋಗ, ಅಶಕ್ತತೆ, ಸಂಧಿವಾತ, ಪಿಂಡಗವಾತ, ಹೊಟ್ಟೆಯಲ್ಲಿ ವಾಯು ಬದ್ಧಾಗೋಣ, ಮಲಬದ್ಧ, ಕೈ ಕಾಲು ಸೆಳೆಯೋಣ, ಭಾಗಾಂತಿ ಬೇನೆ, ಕಳಿಸದ ಬೇನೆ, ಎಲ್ಲ ತರದ ಜ್ವರ, ಗಂಡಮಾಲೆ ಕೂಲಿ, ತಲೆಶೂಲಿ, ಮಲಾವರೋಧ, ಎದೆಯಲ್ಲಿ ಉರಿಯೋಣ ಮತ್ತು ನೋಯೋಣ, ಕೊರಳ ಬಾವು, ಎಲ್ಲ ತರದ ಮೂಲವ್ಯಾಧಿ, ಸಿತ್ರ ಹತ್ತಿ ಬರೋಣ, ಮೂತ್ರಾಶಯದೊಳಗಿನ ರೋಗ, ಕೆಮ್ಮು, ದಮ್ಮು, ಗರ್ಮಿ, ತ್ವಚೆವಿಕಾರ, ಮೇಹ ಮತ್ತು ಇತರ ರೋಗಗಳು ಇದನ್ನು ಉಪಯೋಗಿಸುವದರಿಂದ ನಷ್ಟವಾಗುತ್ತವೆಂಬುದು ಜಗತ್ಪ್ರಸಿದ್ಧವದೆ. ಕೊರಳ ಪಟ್ಟಿ—ಸಣ್ಣ ಮಕ್ಕಳಿಗೆ ಹಲ್ಲು ಬರುವಾಗ ವೇದನೆಯಾಗದೆ ಹಲ್ಲು ಬರುವವು. ಲೇಬಿಲ್—ಕೈ ನಡುಗುವಿಕೆ, ಸ್ಮರಣ ಶಕ್ತಿಯು ಬೆಳೆಯುವದು. ಇಂಥ ಉತ್ತಮ, ಗುಣಕರ, ಸರ್ವ ರೋಗ ಶಾಮಕ, ದೇಶಸ್ಥ ಕೋಟಿ ಕೊಡುವ ದಿಷದವ ಕಿಟಕಿಟಿಯನ್ನು ತಪ್ಪಿಸುವ, ಈ ಒಡವೆಯು ಸಂಗ್ರಹ ಮಾಡದೆ ಇರಬೇಡಿರಿ, ಪ್ರತಿ ಒಂದು ಒಡವೆಯ ಮೇಲೆ G. B. N. ಗುರ್ತು ನೋಡಿ ತೆಗೆದುಕೊಳ್ಳಿರಿ. ಬಂಗಿ ಕಟ್ಟುವದು ಪ್ರಕಟ. ಪತ್ರ ವ್ಯವಹಾರ ಮರಾಠಿಯಲ್ಲಿ ಇಲ್ಲವೇ ಇಂಗ್ರೇಜಿಯಲ್ಲಿರಬೇಕು. ಪತ್ತೆ ಸ್ಪಷ್ಟ ಬರೆಯಬೇಕು.

ಕ್ರಯವು—ಹಿತ್ತಾಳೆಯ ಉಂಗರಕ್ಕೆ ಒಂದುವರೆ ರೂ. ಬೆಳ್ಳಿಯ ಉಂಗರಕ್ಕೆ ೩ ರೂ. ಭಂಗಾರದ ಉಂಗರಕ್ಕೆ ೨೦ ರೂ. ಹಿತ್ತಾಳೆಯ ಪದಕಕ್ಕೆ ಒಂದುಕಾಲು ರೂ. ಬೆಳ್ಳಿಯ ಪ. ಕ್ಕೆ ೨ ರೂ. ಭಂಗಾರದ ಪ. ಕ್ಕೆ ೨೨ ರೂ. ವಾತುಗಳ ಬಳೆಗೆ ಒಂದುವರೆ ರೂ. ಲೇಬಿಲಿಗೆ ಒಂದುವರೆ ರೂ. ರೇಷ್ಮಿ ಕೊರಳ ಪಟ್ಟಿಗೆ ಒಂದುವರೆ ರೂ. ಏಕ್ಕೇಲೇ ೧೬ ನಗ ತೆಗೆದು ಕೊಂಡರೆ ೧ ಹೆಚ್ಚು ಸಿಗುವದು. ರೋಗವಶಾ ಬಂದರೆ ಅಥವಾ ವಿ. ಪೇಬಲ್ ಬೇಕಿದರೆ ಕಳಿಸುವೆವು. ಉಂಗರ ತರಿಸುವವರಾದರೆ ಬೆರಳಿನ ಸುತ್ತಳತೆ ಕಳುಹಿಸಿರಿ. ಅನೇಕ ಬೇನೆಗಳ ಮೇಲೆ ಗುಣ ಬಂದ ಬಗ್ಗೆ ಡಾಕ್ಟರ, ವೈದ್ಯ, ಪತ್ರಕರ್ತ ಮುಂತಾದವರ ಸರ್ಟಿಫಿಕೇಟಿನ ವಾ ಏಜಂಟ ವ್ಯಾಪಾರಿ ವರದ ಪುಸ್ತಕ ೬ ಪೈ ಕಳುಹಿಸಿದರೆ ಕಳಿಸುವೆವು. ಮಾಲು ತೆಗೆದುಕೊಂಡರೆ ಪುಕಟ ಕಳುಹಿಸುವೆವು. ೧ ರಿಂದ ೬ ವರೆಗೆ ಟಿ. ಎ. ೬ ಅಣೆ.

ಜಿ. ಬಿ. ನಾಯಿಕ ಮತ್ತು ಕಂಪನಿ, ಬ್ಯಾಕಳಾ, ಹುಕೇದಾವಣ ಎದುರು, ಮುಂಬಯಿ.

ನೋಟೀಸ್.

		ಕ್ರಯ			ಟಪಾಲು ಸಹಿತವಾಗಿ		
Campbell's.	ಕನ್ನಡ ವ್ಯಾಕರಣ ಸಾರ	೦	೨	೦	೦	೨	೬
Object lessons.	ವಸ್ತು ಪಾಠಗಳು	೦	೧	೦	೦	೧	೬
Picture do	ಚಿತ್ರಗಳು ಸಹಿತವಾಗಿ	೦	೨	೦	೦	೨	೬

ಈ ಮೂರು ಪುಸ್ತಕಗಳು ಪ್ರೈಮರಿ ಮಠಗಳಲ್ಲಿ ಓದತಕ್ಕ ಪುಸ್ತಕಗಳು.

	ಕ್ರಯ			ಟಪಾಲು ಸಹಿತವಾಗಿ		
ಸ್ತ್ರೀಯರು ಓದತಕ್ಕ ಪುಸ್ತಕ	೦	೫	೦	೦	೫	೬
ಗಣಿತ ವಿದ್ಯೆ ..	೦	೪	೦	೦	೪	೬
ಗಣಿತ ಮಗ್ಗಿಗಳು ..	೦	೧	೦	೦	೧	೬
ಸಂಸ್ಕೃತ ಕರ್ಣಾಟಕ ಭಾಷಾಮಂಜರಿ	೦	೨	೦	೦	೨	೬
ಭೂಗೋಳ ಶಾಸ್ತ್ರ ಪ್ರಶ್ನೋತ್ತರ	೦	೨	೦	೦	೨	೬
ಇಂಗ್ಲೀಷು ಕನ್ನಡವೂ ಬಾಲ್ಡವಿನ ೧ನೇ ೨ನೇ ಭಾಗಗಳಿಗೆ	೦	೧	೦	೦	೧	೬
ಕಾವ್ಯಮಾಲೆ (Minor Poetical Anthology)	೦	೮	೦	೦	೮	೬
ಬಾಲವ್ಯಾಕರಣ ..	೦	೫	೦	೦	೫	೬
ಹಳಗನ್ನಡ ವ್ಯಾಕರಣ ಸೂತ್ರಗಳು	೦	೬	೦	೦	೬	೬
ಇಂಗ್ಲೀಷು ಕನ್ನಡವೂ ಸಂಭಾಷಣ ವಾಕ್ಯಗಳು	೦	೧೦	೦	೦	೧೦	೬
ಶಬ್ದಮಣಿ ದರ್ಪಣ ..	೧	೦	೦	೧	೪	೬
Kan. Eng. Pocket Dictionary	೧	೪	೦	೧	೫	೩
Eng. Kan. School Dictionary	೨	೧೦	೦	೨	೧೨	೬
ಒಳ್ಳೇ ತಾಯಿ	೦	೩	೪	೦	೪	೬
ಆತ್ಮಿಕ ದಿವ್ಯ ಯುದ್ಧ (Bunyan)	೦	೧೨	೦	೦	೧೩	೬
ಕ್ರೈಸ್ತ ಪದ್ಧತಿ ೧ ನೇ ಭಾಗ ೨ ಅಥ ೩ ನೇ ಭಾಗ	೦	೧	೬	೦	೨	೦
ಭಕ್ತಿಸಾರ ..	೦	೧	೦	೦	೧	೬
ಸತ್ಯ ವಾಗ್ದಾನ	೦	೧	೦	೦	೧	೬
ಕಾವ್ಯಸಂಗ್ರಹ ..	೦	೩	೦	೦	೩	೬

A new Edition of the Geography suited for the Lower Secondary Examination is now ready.—Edited by Rev. H. Gulliford. Price 6 As.

ಮೇಲೆ ನಮೂದಿಸಿರುವ ಪುಸ್ತಕಗಳನ್ನು ಬೆಂಗಳೂರು ದಂಡಿನ **ಪೋಸ್ಟಾಫೀಸು** ಹತ್ತಿರವಿರುವ ಪುಸ್ತಕ ಶಾಲೆಯಲ್ಲಿ ಪಡೆಯ ಬಹುದು.

ಜಾಹೀರಾತು

THE KANARA & MYSORE TRADING AGENCY
BOMBAY.

ಕಣ್ಣಿಗೆ ತಂಪು ಕೊಡುವ

ಚಂದ್ರಕಾಂತ ಶಿಲೆಯ ಕಣ್ಣಡಕಗಳು.

೩ || ರೂಪಾಯಿ ಕೆಳಗಿನ ಕ್ರಯವನ್ನು ನಮ್ಮಲ್ಲಿ ಸಿಗಲಾರವು.

ಸಾಧಾರಣ	೩ || ರೂಪಾಯಿ	ಜರ್ಮನ ಕೇಸಿನಲ್ಲಿ
ಮಧ್ಯಮ	೫	,,	ಜಪಾನದ ಕೇಸಿನಲ್ಲಿ
ಉತ್ತಮ	೬ ||	,,	ರೇಷ್ಮೆ ಕೇಸಿನಲ್ಲಿ
ಭಂಗಾರದಲ್ಲಿ ಕಟ್ಟಿದ್ದು	೧೮	,,	ಇತ್ಯಾದಿ

ಕಿರಿಯ ಭವಿಷ್ಯ ಭಾರವು.

ಕ್ರಯ ೬ || ರೂಪಾಯಿ.

ಈ ಭವಿಷ್ಯವು ಕಡಿಮೆ ಕ್ರಯದ್ದಾದರೂ, ಅಧಿಕ ಕ್ರಯದ ಭವಿಷ್ಯಗಳಲ್ಲಿರುವ ಎಲ್ಲ ಗುಣ ಇದರಲ್ಲಿ ರುವದಲ್ಲದೆ ಭದ್ರವಾದದ್ದು ಬಾಳಿಕೆ ಬರುವಂಥಾದ್ದು.

ಕಿಂಕಿ ಮುತ್ತು.

ಪ್ರತಿ ಅಥ ೧ ಕ್ಕೆ ೨ || ರೂಪಾಯಿ ಕ್ರಯವು ಆಲಿಯಲ್ಲಿ ೧೦೦, ೨೦೦, ೧೫೦, ೧೫೦, ಈ ದರ ಮುತ್ತುಗಳ ರುವವು. ಒಟ್ಟು ೧೨ ಆಣೆಗಳನ್ನು ತೆಗೆದುಕೊಂಡರೆ ೧ ರೂಪಾಯಿ ಕಡಿಮೆ ಬೀಳುವದು. ಬೇಕಾದವರು ಈ ವಿಳಾಸಕ್ಕೆ ಬರೆದುಕೊಳ್ಳಬೇಕು.

ವ್ಯಾನೇಜರ,
ಕೆನರಾ ಎಂಡ ಮೈಸೂರ ಟ್ರೇಡಿಂಗ ಏಜನ್ಸಿ ಆಫೀಸ್, ಮುಂಬಯಿ.

ವೃತ್ತಾಂತ ಪತ್ರಿಕೆ.

ಚಂದಾ ನಿರ್ಣಯ.

	ರೂ. ಆ. ಪೈ.
ಸ್ಥಳದವರಿಗೆ ವರ್ಷ ೧ಕ್ಕೆ	೧—೦—೦
ಪರಸ್ಥಳದವರಿಗೆ ವರ್ಷ ೧ಕ್ಕೆ ...	೧—೧೨—೦
ಬಿಡಿ ಪತ್ರಿಕೆ ೧ಕ್ಕೆ ...	೦—೦—೪

ಈ ಪತ್ರಿಕೆಯು ಮೈಸೂರು ರಾಜಧಾನಿಯಲ್ಲಿ ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ, ಪ್ರಕಟಿಸಲ್ಪಡುವದು. ಬಡವರು ಮೊದಲುಗೊಂಡು ಸಮಸ್ತರಿಗೂ ಸುಲಭಸಾಧ್ಯವಾಗುವಂತೆ ಈ ಪತ್ರಿಕೆಗೆ ಇಷ್ಟು ಅಲ್ಪ ಮೌಲ್ಯವನ್ನು ನಿರ್ಣಯಿಸಿರುತ್ತೇವೆ. ಈ ಪತ್ರಿಕೆಯನ್ನು ಅಪೇಕ್ಷಿಸುವವರು ಚಂದಾಹಣವನ್ನು ಮುಂಗಡವಾಗಿ ಕಳುಹಿಸಬೇಕು.

ಪ್ರಕಟನೆಯ ನಿರ್ಣಯ.

	ರೂ. ಆ. ಪೈ.
ಮೊದಲನೇ ಅವರ್ತಿ ಪಙ್ಕ್ತಿ ೧ ಕ್ಕೆ ...	೦—೨—೦
ಎರಡನೇ ಅವರ್ತಿ ಪಙ್ಕ್ತಿ ೧ ಕ್ಕೆ .	೦—೧—೦

ಅನಂತರ ಪ್ರತಿಯೊಂದು ವಾರದಲ್ಲಿಯೂ ಪಙ್ಕ್ತಿ ೧ ಕ್ಕೆ ೧ ಆಣೆಯಂತೆಯೇ ಲೆಕ್ಕ ಮಾಡಲ್ಪಡುವದು. ಕಂಟ್ರಾಕ್ಟಿಗೆ ಕೊಡಬೇಕೆಂದಿರುವವರು ಎಡಿಟರಿಗೆ ಬರೆದು ದರವನ್ನು ತಿಳಿಯ ಬಹುದು.

ಎಡಿಟರ,
ವೃತ್ತಾಂತ ಪತ್ರಿಕೆ,
ಮೈಸೂರು.

ನೋಟೀಸ್.

ಪುಸ್ತಕಗಳು	ಕ್ರಯ.
ಪ್ರಾಕೃತ ವ್ಯಾಕರಣ ಮಾಲಿಕೆ	1—8—0
ಕನ್ನಡ ಇಂಗ್ಲೀಷು ನಿಘಂಟು 1 ನೇ ದೊಡ್ಡ ತರಹ	3—0—0
,, ,, 2 ನೇ ತರಹ	2—8—0
ಬಾಲಕರು ಓದುವ ಏಪಸೆ ಜ್ಞಾನೋಪದೇಶದ ಪ್ರಶ್ನೋತ್ತರಗಳು	0—1—0
ಸಭೆಯ ನಿಯಮಗಳನ್ನು ಕುರಿತದ್ದು	0—0—6
ಕಥಾ ಸಂಗ್ರಹ 1 ನೇ ಭಾಗದಿಂದ 3 ವರಿಗೆ	1—0—0
ಕಥಾ ಸಂಗ್ರಹ 4 ರಿಂದ 6 ನೇ ಭಾಗ ಹೊಸ ಭೂತ	1—0—0
,, ,, ದೊಡ್ಡ ತರಹ	1—8—0
ವೇದಧರ್ಮಸಿದ್ಧಿ ಬೋಧಿನಿ	0—1—0
ಸತ್ಯವೇದವನ್ನು ಕುರಿತು 2 ನೇ ಭಾಗ	0—1—0
ಪ್ರಸಂಗಿಯ ದರ್ಪಣ	0—0—6
ಇಂಗ್ಲೀಷು ಭಾಷೆಯಲ್ಲಿಯೂ, ಕನ್ನಡ ಭಾಷೆಯಲ್ಲಿಯೂ, ಶಬ್ದಗಳ ವಿಭಾಗಗಳನ್ನು ವಿವರಿಸಿರುವ ನಿಘಂಟು	0—2—0
ಕನ್ನಡ ವ್ಯಾಕರಣ (ಇಂಗ್ಲೀಷಿನಲ್ಲಿ)	2—0—0
ಹಿಂದುಸ್ತಾನಿ ವ್ಯಾಕರಣ	1—0—0
ಬಾಲಬೋಧ ಸೋಪಾನವು	0—1—0
ಪದ ಕರಣಗಳ ಅಂಟುವ ರೋಗವಿಚಾರ	0—0—6
ಕ್ರೈಸ್ತರ ಬೋಧನೆಗಳ ಸಾರಾಂಶವು	0—12—0

ಮೇಲೆ ನಮೂದಿಸಿರುವ ಪುಸ್ತಕಗಳನ್ನು ಅಪೇಕ್ಷಿಸುವವರು ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್ಸಿಗೆ ಬರೆದು ತರಿಸಿಕೊಳ್ಳಬಹುದು. ಅಂಚೆ ಹಾಸಲು ಬೇರೆ ಕೊಡಬೇಕು.

ವೆಸ್ಲಿಯನ್ ಮಿಷನ್ ಪ್ರೆಸ್,
ಮೈಸೂರು.

ವಿಶೇಷ, ನೋಡಿನೋಡಿ! ನೋಡಿನೋಡು!! ನೋಡಿನೋಡು!!!

೧೮೯೩ ನೇ ಇಸವಿಯ ಲೋವರ್ ಸೆಕಂಡರಿ ಪರೀಕ್ಷೆಯ ಪಠ್ಯದ ನೋಟ್ಸು.

ಈ ಪರೀಕ್ಷೆಗಾಗಿ ನಿಯಮಿಸಲ್ಪಟ್ಟ ಸೋಮೇಶ್ವರಶತಕ, ಪದ್ಯಗಳು ೧ ರಿಂದ ೧೦೭ ಗೂ ೧೨೧ ರ ಪದ್ಯಗಳು, ಕನ್ನಡ ಭಾರತ ಕಥಾಸಂಗ್ರಹ ಸಭಾಪರ್ವ: ಇವುಗಳಿಗೆ ಅನ್ವಯ, ಅರ್ಥ, ತಾತ್ಪರ್ಯ ಅವಯವಾರ್ಥ, ವ್ಯಾಕರಣ ಸಂಗತಿಗಳು, ವಾಕ್ಯವಿಭಜನೆ, ಪ್ರಶ್ನಾವಳಿ, ಇವೇ ಮೊದಲಾದವುಗಳನ್ನು ವಿವರಿಸಿ ವ್ಯಾಖ್ಯಾನವು ಚಿಕ್ಕಮಗಳೂರು ಇಂಗ್ಲೀಷ್ ಹೈಸ್ಕೂಲ್ ಪಂಡಿತರಾದ ಎಸ್. ರಾಘವೇಂದ್ರಾಚಾರ್ಯರಿಂದ ಬರೆಯಲ್ಪಟ್ಟು ಈ ಮುದ್ರಾಶಾಲೆಯಲ್ಲಿ ಪ್ರಿಂಟಾಗುತ್ತಲಿದೆ. ಈ ನೋಟ್ಸು, ಗೌರ್ನಮೆಂಟ್ ಪ್ರತಿಗನುಸಾರವಾಗಿ ಇದೆ. ಕಾಪಿಗಳು ಸ್ವಲ್ಪವಾಗಿಯೇ ಪ್ರಿಂಟು ಮಾಡುವುದರಿಂದ ಅಪೇಕ್ಷೆಯುಳ್ಳವರು ಜಾಗ್ರತೆಯಾಗಿ ಜನವರೀ ತಿಂಗಳೊಳಗಾಗಿ ಈ ಕೆಳಗಿನ ವಿಳಾಸದಾರರಿಗೆ ಬರೆದು ತರಿಸಿಕೊಳ್ಳಬಹುದು. ಕ್ರಯ ೪ ಆಣೆ. ಪೋಸ್ಟೇಜ್ ೧ ಆಣೆ. ಮತ್ತು ಆದಿಪರ್ವ, ಸಭಾಪರ್ವ, ವಿರಾಟಪರ್ವ, ಭೀಷ್ಮಪರ್ವ, ದ್ರೋಣಪರ್ವ, ಶಲ್ಯಪರ್ವ, ಸೌಪ್ತಿಕಪರ್ವ, ಸ್ತ್ರೀಪರ್ವ, ಶಾಂತಿಪರ್ವ—ರಾಜಧರ್ಮ, ಆಪದ್ಧರ್ಮ, ಮೋಕ್ಷಧರ್ಮ ಈ ಪರ್ವಗಳು ಪ್ರಿಂಟಾಗಿ ವಿಕರಿಗೆ ಸಿದ್ಧವಾಗಿವೆ. ಈಗ ಅನುಶಾಸನೀಕಪರ್ವವು ಪ್ರಿಂಟಾಗುತ್ತಲಿದೆ. ಇಷ್ಟವುಳ್ಳವರು ತರಿಸಿಕೊಳ್ಳಬಹುದು.

ಎಂ ರಂಗಪ್ಪ ಅಂಡ್ ಸನ್ಸ್,
ಪ್ರಾಪ್ರೈಟರ್ಸ್, ಶ್ರೀಚಾಮರಾಜೇಶ್ವರ ಪ್ರೆಸ್,
ಒ.ಟಿ.—ಪೇಟ್ ರೋಡು, ಬೆಂಗಳೂರು

ವೃತ್ತಾಂತ ಪತ್ರಿಕೆ.

—೦—

೧೮೯೩ ನೇ ಇಸವಿ ಫೆಬ್ರವರಿ ತಾ ॥ ೧೬ ನೇ ಗುರುವಾರ.

ಮ್ಯುನಿಸಿಪಲ್ ಮೀಟಿಂಗ್.

ಕಳೆದ ತಿಂಗಳು ೨೮ ನೇ ಶನಿವಾರದ ದಿವಸ ಮ್ಯುನಿಸಿಪಲ್ ಮೀಟಿಂಗ್ ನಡೆಯಿತಷ್ಟೆ. ಆ ಮೀಟಿಂಗಿನಲ್ಲಿ ಡಿಸೆಂಬರು ತಿಂಗಳು ಲೆಕ್ಕದ ಜಮಾ ಖರ್ಚುಪತ್ರ ವ್ಯವಸ್ಥೆ ಮಾಡಲ್ಪಟ್ಟು ಪಾಸ್ ಮಾಡಲ್ಪಟ್ಟಿತು. ಅವರ ಚರ್ಚೆಗೋಸ್ಕರ ಪಟ್ಟಿ ಮಾಡಿದ್ದ ವಿಷಯಗಳನ್ನಾದರೂ ವಿಮರ್ಶೆ ಮಾಡುವದಕ್ಕೆ ಅವಕಾಶವಿಲ್ಲದ್ದರಿಂದ ಈ ತಿಂಗಳು ೪ ನೇ ತಾರೀಖಿಗೆ ಅಡ್ಜರ್ನ್ ಆಗಿತ್ತು. ಜನೇವರಿ ತಿಂಗಳ ಮೀಟಿಂಗಿಗೆ ಅಸ್ವಸ್ಥದಿಂದ ಪ್ರೆಸಿಡೆಂಟರಾದ ಮ ॥ ರಂಗಸ್ವಾಮಿಅಯ್ಯಂಗಾರ್ಯರವರು ದಯಮಾಡಿಸಿರಲಿಲ್ಲ. ಈ ತಿಂಗಳ ೪ ನೇ ತಾರೀಖಿನ ಮೀಟಿಂಗಿಗೆ ದಯಮಾಡಿಸಿದ್ದರು. ಮೀಟಿಂಗ್ ಉಪಕ್ರಮವಾಗುವದಕ್ಕೆ ಮೊದಲೇ ಮೀಟಿಂಗಿನ ಮೆಂಬರುಗಳೆಲ್ಲಾ ಮೀಟಿಂಗಿನಲ್ಲಿ ಚರ್ಚಿಸಲ್ಪಟ್ಟ ವಿಷಯಗಳನ್ನು ವರ್ತಮಾನ ಪತ್ರಿಕೆಗಳಿಗೆ ಬರೆಯತಕ್ಕ ವಿಷಯದಲ್ಲಿ ಬರೆಯಬೇಕೆಂದು ಅಪೇಕ್ಷೆಯುಳ್ಳ ಮೆಂಬರುಗಳು ನಡೆದ ವಿಷಯಗಳನ್ನೆಲ್ಲಾ ಸಾಕ್ಷಾತ್ಪೂರ್ವಕವಾಗಿ ಬರೆಯಬೇಕು. ಹಾಗಿಲ್ಲದಿದ್ದರೆ ಬರೆಯದೆ ಇರುವದು ಉತ್ತಮವೆಂದು ಒಂದು ಉಪನ್ಯಾಸವನ್ನು ಮಾಡಿದಂತೆಯೂ, ಅದಕ್ಕೆ ಮ ॥ ಲೀ ಸಾಹೇಬರವರು ಮತ್ತು ಮ ॥ ವೀರ್ ಸಾಹೇಬರವರು ಇವರಿಬ್ಬರೂ—ಬೋರ್ಡಿನ ಮೀಟಿಂಗುಗಳು ಪಬ್ಲಿಕ್ ಮೀಟಿಂಗುಗಳು; ರಿಪೋರ್ಟರ್ ಹಾಜರಿದ್ದು ವಿಷಯಗಳನ್ನು ಪ್ರಕಟಿಸುವದೂ ಉಂಟು. ಈ ವಿಷಯದಲ್ಲಿ ನಿರ್ಬಂಧ ಮಾಡುವದು ಸಮಂಜಸವಲ್ಲ. ಬರೆಯಲಪೇಕ್ಷೆಯುಳ್ಳ ಮೆಂಬರುಗಳ ಯುಕ್ತಾಯುಕ್ತ ವಿವೇಚನೆಗೆ ಈ ವಿಷಯಗಳನ್ನು ಬಿಡುವದು ಉತ್ತಮ ಎಂಬದಾಗಿ ಹೇಳಿದಂತೆಯೂ ತಿಳಿಯಬರುತ್ತದೆ. ಈ ವಿವಾದ ಉಪನ್ಯಾಸ ಬಾರಿಬಾರಿಗೂ ಯಾತಕ್ಕೆ ಆಗುತ್ತದೆಯೋ ಕಾರಣ ತಿಳಿಯದು. ಮೊನ್ನೆ ೪ ನೇ ತಾರೀಖಿನಲ್ಲಿ ನಡೆದ ಮೀಟಿಂಗಿನಲ್ಲಿ ಸಬ್ ಕಮಿಟಿಯವರು ತಯಾರುಮಾಡಿದ್ದ ಬಜೆಟ್ಟಿನ ಜಮಾ ಖರ್ಚಿನ ಎಸ್ಟಿಮೇಟುಗಳು ಪಾಸ್ ಮಾಡಲ್ಪಟ್ಟವು. ಮ ॥ ರಂಗಸ್ವಾಮಿಅಯ್ಯಂಗಾರ್ಯರವರು ಸಬ್ ಕಮಿಟಿಯವರು ಈ ಎಸ್ಟಿಮೇಟುಗಳನ್ನು ತಯಾರುಮಾಡುವದರಲ್ಲಿ ವಿಶೇಷ ಮೆಹನತ್ತು ಮಾಡಿದಾರೆಂಬದಾಗಿಯೂ ಇವರಿಗೂ ಬಜೆಟ್ ತಿದ್ದುಪಡಿಗಳಿಗಾಗಿ ವಾಪಸು ಬರುತ್ತಿದ್ದಂತ ಕಾಗದ ಬರಲಾರದೆಂಬದಾಗಿಯೂ ಕಮಿಟಿ ಮೆಂಬರುಗಳನ್ನು ಶ್ಲಾಘಿಸಿದಂತೆ ತಿಳಿಯಬರುತ್ತದೆ. ೯ ನೇ ತಾರೀಖಿನಲ್ಲಿ ೪ ನೇ ತಾರೀಖಿನ ಅಡ್ಜರ್ನ್ ಮೀಟಿಂಗು ನಡೆಯಿತು. ಆ ದಿವಸ ಪಟ್ಟಣದಲ್ಲಿ ಪ್ರೈಮರಿ ವಿದ್ಯಾಭ್ಯಾಸಕ್ಕಾಗಿ ಇಟ್ಟಿರುವ ಮಠಗಳಿಗೆ ಪರೀಕ್ಷೆಯಲ್ಲಿ ತೇರ್ಗಡೆಯಾದವರ ಸಂಖ್ಯೆಗೆ ಅನುಸಾರವಾಗಿ ಗ್ರಾಂಟುಗಳನ್ನು ಕೊಡಬೇಕೆಂಬದಾಗಿಯೂ, ಇದಕ್ಕಾಗಿ ಸ್ಕೂಲಿನ ಕಮಿಟಿಯವರು ರೂಲುಸುಗಳನ್ನು ಏರ್ಪಡಿಸಬೇಕೆಂಬದಾಗಿಯೂ ಚಾಮರಾಜ ಮೊಹಲಾ ಮತ್ತು ದೇವರಾಜ ಮೊಹಲಾ ಆ ವಿಭಾಗಗಳ ಸಮೀಪದಲ್ಲಿ ಸ್ಮಶಾನಗಳನ್ನು ಏರ್ಪಡಿಸಿಕೊಡಬೇಕೆಂಬದಾಗಿಯೂ, ಹೊಲಗೇರಿ ಜನಗಳಿಗೆ ಶವಗಳನ್ನು ಹೂಳತಕ್ಕ ಸ್ಥಳ ಒಂದನ್ನು ಏರ್ಪಡಿಸಿಕೊಡಬೇಕೆಂಬದಾಗಿಯೂ, ಈ ಸ್ಥಳವನ್ನು ಗುರ್ತು ಮಾಡುವದಕ್ಕೆ ಮ ॥ ಲೀ ಸಾಹೇಬರವರು, ಮ ॥ ಎಂ. ವೆಂಕಟಕೃಷ್ಣಯ್ಯನವರು, ಮ ॥ ಎ. ರಾಮಣ್ಣನವರು, ಮ ॥ ಅಣ್ಣಯ್ಯಪಂಡಿತರು, ಕಮಿಟಿಯಾಗಿರತಕ್ಕದ್ದೆಂಬದಾಗಿಯೂ, ಮಂಡಿ ಮೊಹಲ್ಲೆಗೆ ಎಂ. ಶ್ಯಾಮರಾಯರವರಿಗೆ ಬದಲಾಗಿ ಮ ॥ ಕಂದಾಡಿ ಪಟ್ಟಾಭಿರಾಮರವರು ನೇಮಿಸಲ್ಪಡುವದಕ್ಕೋಸ್ಕರ ಶಿಫಾರಸ್ ಮಾಡಲ್ಪಡಬೇಕೆಂಬದಾಗಿಯೂ; ಮ ॥ ಅಣ್ಣಯ್ಯಪಂಡಿತರವರು, ಮ ॥ ಎಂ. ವೆಂಕಟಕೃಷ್ಣಯ್ಯನವರು, ಮ ॥ ಎಸ್. ಕೃಷ್ಣರಾಯರವರು ಈ ಮೂವರು ಸೂಚಿಸಿದ್ದ ಇತರ ಹೆಚ್ಚಿನ ಮೆಂಬರುಗಳನ್ನು ನೇಮಕ ಮಾಡುವದಕ್ಕೆ ಆವಶ್ಯಕತೆ ಇಲ್ಲವೆಂಬದಾಗಿಯೂ; ಮ ॥ ಲೀ ಸಾಹೇಬರವರು ಪ್ರತಿಯೊಂದು ಮೊಹಲಾ ಕಮಿಷನರರೂ ಹೊಸ ಯೋಜನೆ, ವ್ಯಾಖ್ಯಾನ ಮೊಹಲ್ಲಗಳಲ್ಲಿ ಉಪಕ್ರಮಿಸಿ ಪೂರೈಸಲ್ಪಡದ ಇರತಕ್ಕ ಕಾಲುವೆ ಮೋರಿಗಳ ಮತ್ತು ದಾರಿಗಳನ್ನು ಪೂರೈಸುವದಕ್ಕೆ ಏರ್ಪಾಡು ಮಾಡಬೇಕೆಂಬದಾಗಿಯೂ: ಕನ್ನೇಗೌಡನ ಕೊಪ್ಪಲು, ಪಡುವಾರಳ್ಳಿ, ಮಂಚೆ ಕೊಪ್ಪಲು, ಕುಂಬಾರಳ್ಳಿ ಇವುಗಳೆಲ್ಲಾ ಮ್ಯುನಿಸಿಪಲ್ ಸರಹದ್ದಿನೊಳಗೆ ಸೇರಿಸಲ್ಪಟ್ಟಿರುವದರಿಂದ ಅವುಗಳಲ್ಲಿ ಪಾಕೀಜ, ದೀಪ ಹತ್ತಿಸುವದು ಮೊದಲಾದ ಮ್ಯುನಿಸಿಪಲ್ ಏರ್ಪಾಡುಗಳನ್ನು ಮಾಡಿ, ಆ ಏರ್ಪಾಡುಗಳ ವೆಚ್ಚಕ್ಕೋಸ್ಕರ ಆ ಗ್ರಾಮಗಳಿಗೆ ಮೊಹತರ್ಫಾ ಕಂದಾಯಗಳನ್ನು ವಿಧಿಸತಕ್ಕದ್ದೆಂಬದಾಗಿಯೂ. ಮ್ಯುನಿಸಿಪಲ್ ಕಾನೂನಿನ ಪ್ರಕಾರ ಈ ಪಟ್ಟಣದ ಸೊಪ್ಪಿನ ಬೀದೀ ಕಾಜಾ ಪಾಯಿಖಾನೆ ಮೊದಲಾದವುಗಳನ್ನು ಬೋರ್ಡಿಗೆ ಸ್ವಾಧೀನವಾಗುವಂತೆ ಜಪ್ತಿಮಾಡಿಸಿ, ವಿಕ್ರಯಿಸುವದಕ್ಕೆ ಪ್ರಾನ್ ಮೊದಲಾದ ಷಹರುಗಳಲ್ಲಿ ನಡೆಸುವ ತಕ್ಕ ಏರ್ಪಾಡುಗಳನ್ನು ಇಲ್ಲಿಗೆ ಜಾರಿಗೆ ತರುವ ನ್ಯಾಯ ಆಗುವದೇ ಇಲ್ಲವೇ ಎಂಬುವದನ್ನು ನಿಷ್ಕರ್ಷಿಸುವದಕ್ಕೋಸ್ಕರ ಮ ॥ ಎಂ. ವೆಂಕಟಕೃಷ್ಣಯ್ಯನವರು, ಮ ॥ ಎಸ್. ಸುಬ್ಬರಾಯರವರು, ಮ ॥ ಎ. ರಾಮಣ್ಣನವರು, ಮ ॥ ಅಣ್ಣಯ್ಯಪಂಡಿತರವರು ಇವರು ಕಮಿಟಿಯ ಮೆಂಬರುಗಳಾಗಬೇಕೆಂಬದಾಗಿಯೂ, ಈ ಷಹರಿನ ಪ್ರಜೆಗಳಿಗೆ ಅನುಕೂಲವಾಗುವಂತೆ ಹೊಸದಾಗಿ ತಯಾರಾಗಿರತಕ್ಕ ಬಟ್ಟರು ಸೂಲಗಿತ್ತಿಯರನ್ನು ಈಗಿರತಕ್ಕ ಮುನಿಸಿಪಲ್ ಸೂಲಗಿತ್ತಿಯರ ಜೊತೆಗೆ ಏರ್ಪಡಿಸಿ, ಈ ಐದು ಜನಗಳ ಪೈಕಿ ಒಬ್ಬರನ್ನು ಶ್ರೀಮನ್ಮಹಾರಾಣಿಯವರ ಆಸ್ಪತ್ರೆಯಲ್ಲಿಟ್ಟು, ಉಳಿದ ಮೂವರನ್ನು ಜನರಲ್ ಆಸ್ಪತ್ರೆಗೆ ಸೇರಿಸಿ, ಈ ಪುರನಿವಾಸಿಗಳಲ್ಲಿ ಸಹಾಯ ಬೇಕೆಂದು ಆಸ್ಪತ್ರೆಗೆ ಬರೆದುಕೊಂಡವರ ಮನೆಗೆ ಹೆರಿಗೆ ಮಾಡಿಸುವದಕ್ಕೋಸ್ಕರ ಅವರನ್ನು ಕಳುಹಿಸಿ ಸರ್ಕಾರದ ನಿರಾಜನಂತೆ ಖರ್ಚು ಮಾಡಬೇಕೆಂಬದಾಗಿಯೂ, ನಿರ್ಧರಿಸಲಾಯಿತು. ನೋಟೀಸಿನಲ್ಲಿ ಕಂಡ ಉಳಿದ ವಿಷಯಗಳನ್ನೆಲ್ಲಾ ಈ ತಿಂಗಳನ ಕಡೇ ಭಾಗದಲ್ಲಿ ಆಗತಕ್ಕ ಮೀಟಿಂಗಿಗೆ ಅಡ್ಜರ್ನ್ ಮಾಡಲ್ಪಟ್ಟಿತು ಎಂಬದಾಗಿ ತಿಳಿಯಬಂದಿದೆ. ಇದಲ್ಲದೆ ಮೈಸೂರು ಲಿಟಲೆರಿ ಯೂನಿಯನ್ ಎಂಬ ವರ್ತಮಾನ ಪತ್ರಿಕಾವಾಚಕರು ಹೇಳಿದ ವೃತ್ತಾಂತಪತ್ರಿಕೆಯ ಸಂಪಾದಕರಿಂದ ತಿಂಗಳಿಗೆ ೫ ರೂಪಾಯಿ ಬರುವದನ್ನಲ್ಲಿ ಕಾಣಿಸಿದ್ದರು. ಪ್ರೆಸಿಡೆಂಟರವರು ಮ್ಯುನಿಸಿಪಲ್ ಹಣವನ್ನು ಈ ರೀತಿಯಲ್ಲಿ ವಿನಿಯೋಗಿಸತಕ್ಕ ವಿಷಯದಲ್ಲಿ ಉಪನ್ಯಾಸವನ್ನು ಉಪಕ್ರಮಿಸಬೇಕೆಂಬದಾಗಿಯೂ ಅದರ ಮೇಲೆ ಮ ॥ ಎ. ರಾಮಣ್ಣನವರು ಹೀಗೆ ವಿನಿಯೋಗಿಸಕೂಡದೆಂದು ಹೇಳಿದಹಾಗೆಯೂ ಅದರ ಮೇಲೆ ಮ ॥ ವೀರ್ ಸಾಹೇಬರವರು ತಮ್ಮ ತಾತ್ಪರ್ಯವು ಆದೇ ರೀತಿಯಲ್ಲಿರುವಂತೆಯೂ ರೇಟ್‌ಪೇಯರುಗಳನ್ನು ಕೇಳದೆ ಈ ಗ್ರಾಂಟನ್ನು ಕೊಡುವದು ಸರಿಯಲ್ಲವೆಂದು ಹೇಳಿದಂತೆಯೂ, ಅದಕ್ಕೆ ರೇಟ್‌ಪೇಯರುಗಳ ಪ್ರತಿನಿಧಿಗಳಾದ ನಾವುಗಳು ಒಪ್ಪಿದರೆ ಅವರು ಒಪ್ಪಿದಂತೆ ಆಗುತ್ತದೆ ಎಂದು ಮ ॥ ಎಸ್. ಸುಬ್ಬರಾಯರವರು ಹೇಳಿದಂತೆಯೂ, ಮತ್ತೆ ಕೆಲವರು ಮ್ಯುನಿಸಿಪಲ್ ಹಣದಿಂದ ಇಂಥಾ ಸಹಾಯವನ್ನು ಕೊಡುವದಕ್ಕೆ ಆಗುವದಿಲ್ಲ. ಸರ್ಕಾರದ ಹಣವಾದರೆ ಚಿಂತೆಯಿಲ್ಲವೆಂದು ಹೇಳಿದಹಾಗೆಯೂ, ಅದರ ಮೇಲೆ ಮ ॥ ರಂಗಸ್ವಾಮಿಅಯ್ಯಂಗಾರ್ಯರವರು ಮ್ಯುನಿಸಿಪಲ್ ಹಣವನ್ನು ಸರ್ವರಿಗೂ ಪ್ರಯೋಜನವಾಗತಕ್ಕ ಕೆಲಸಕ್ಕೆ ವಿನಿಯೋಗಿಸಬೇಕು; ಇದು ಸರ್ವತ್ರ ಪ್ರಯೋಜನವಾದದ್ದಲ್ಲವೆಂದು ಹೇಳಿದಹಾಗೂ, ಅದಕ್ಕೆ ಮ ॥ ಎಸ್. ಕೃಷ್ಣರಾಯರವರು ಈ ಪುಸ್ತಕ ಭಂಡಾರವು ಸರ್ವರಿಗೂ ಪ್ರಯೋಜನವಾದದ್ದು. ವಿದ್ಯಾವಂತರಾದವರೆಲ್ಲಾ ಯಾವ ಭೇದವೂ ಇಲ್ಲದೆ ಇದರ ಉಪಯೋಗವನ್ನು ಹೊಂದುತ್ತಾರೆ. ಅವರು ಈ ವಾಚಕ ಶಾಲೆಯಲ್ಲಿ ತಿಳಿದ ವಿಷಯಗಳನ್ನು ವಿಶೇಷ ವಿದ್ಯಾಹೀನರಲ್ಲದೆ ಇರತಕ್ಕವರಿಗೂ ಪ್ರಕಟಪಡಿಸುತ್ತಾರೆ. ಹೀಗೆ ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಈ ಶಾಲೆಗೆ ನಾವು ಕೊಡತಕ್ಕ ಸಹಾಯವು ಜನಗಳಲ್ಲಿ ಜ್ಞಾನಾಭಿವೃದ್ಧಿಯನ್ನು ಹೆಚ್ಚಿಸುವದಕ್ಕೆ ಅವಕಾಶವನ್ನುಂಟುಮಾಡುತ್ತದೆ. ಈ ಊರಿನ ಸಂಸ್ಕೃತ ಪಾಠಶಾಲೆಗಳಿಗೆ ನೂರಾರು ರೂಪಾಯಿಗಳನ್ನು ಪ್ರತಿವರ್ಷ ನಾವು ಕೊಡುತ್ತಲಿಲ್ಲವೆ? ಇದರಿಂದ ಸರ್ವತ್ರ ಪ್ರಯೋಜನವೇನು ಇದೆ! ಈ ಪಾಠಶಾಲೆಗಳಲ್ಲಿ ಭೇದವಿಲ್ಲದೆ ಎಲ್ಲರಿಗೂ ಪಾಠ ಹೇಳುತ್ತಾರೆಯೋ? ಇದಕ್ಕಿಂತಲೂ ಸರ್ವತ್ರ ಉಪಯೋಗಕರವಾದ ಈ ಗ್ರಾಂಟನ್ನು ಅನೇಕ ವಿಷಯಗಳಲ್ಲಿ ಉಪಯೋಗಕರವಾದದ್ದಲ್ಲವೆ? ಇದನ್ನು ಕೊಡಿಸುವದು ಉತ್ತಮವೆಂದು ಹೇಳಿದರೆಂಬದಾಗಿಯೂ ಅದಕ್ಕೆ ಮ ॥ ರಂಗಸ್ವಾಮಿಅಯ್ಯಂಗಾರ್ಯರು ಸಂಸ್ಕೃತ ಪಾಠಶಾಲೆಗಳಿಗೆ ಕೊಡುವದು ಬ್ರಾಹ್ಮಣರಿಗೆಮಾತ್ರ ಉಪಯೋಗವಾಗಿದ್ದಾಗ್ಯೂ ಅದನ್ನು ಸರ್ಕಾರದವರ ಮಂಜೂರಿಯ ಮೇರೆ ಕೊಡುತ್ತೇವೆ. ಇದು ಹಾಗಲ್ಲವೆಂಬದಾಗಿಯೂ ತೀರ್ಮಾನ ಮಾಡಿದರು. ಬಹುಜನರು ಇವರ ತಾತ್ಪರ್ಯವನ್ನೇ ಅನುಸರಿಸಿದ್ದರಿಂದ ಲಿಟರರಿಯೂನಿಯನ್ನಿಗೆ ಗ್ರಾಂಟು ಕೊಡಕೂಡದೆಂದು ವಿಧಾಯಕವಾಯಿತು. ಅದರ ಮೇಲೆ ಆ ೩೦೦ ರೂಪಾಯಿಗಳನ್ನು ಪ್ರೈಮರಿ ವಿದ್ಯಾಭ್ಯಾಸದ ಮಠಗಳಿಗಾಗಿ ನೇಮಿಸಲ್ಪಟ್ಟ ರೂಪ ೩೦೦ ರೂಪಾಯಿಗಳ ಜೊತೆಗೆ ಸೇರಿಸಬೇಕೆಂದು ಮ ॥ ಎಂ. ವೆಂಕಟಕೃಷ್ಣಯ್ಯನವರು ಹೇಳಿದರು. ಅದಕ್ಕೆ ಸರ್ವರೂ ಒಪ್ಪಿದ್ದರಿಂದ ಈ ೩೦೦ ರೂಪಾಯಿಯನ್ನಲ್ಲಿ ೨೦೦ ರೂಪಾಯಿಗಳು ಈ ಬಗ್ಗೆ ಸೇರಿಸಲ್ಪಟ್ಟವು. ಇದಲ್ಲದೆ ಇನ್ನೂ ಕೆಲವು ಚರ್ಚೆಗಳು ನಡೆದು ಬೋರ್ಡಿನಲ್ಲಿ ಸ್ವಲ್ಪ ಮನಸ್ತಾಪಗಳು ಪ್ರೆಸಿಡೆಂಟರಿಗೂ ಇತರರಿಗೂ ಹುಟ್ಟಿದಂತೆ ತಿಳಿಯಬರುತ್ತದೆ. ಆದರೆ ಆ ವಿಷಯಗಳ ನಿಜಸ್ಥಿತಿಯು ಸರಿಯಾಗಿ ಗೊತ್ತಾಗದೆ ಇರೋಣದರಿಂದಲೂ, ಈವರಿಗೂ ವಿಚಾರಿಸಿದವರ ಪೈಕಿ ಆ ಚರ್ಚೆಗಳ ವಿಷಯವಾಗಿ ಎಲ್ಲರೂ ಮೌನವನ್ನು ಅವಲಂಬಿಸುತ್ತಿರುವದರಿಂದಲೂ ನಿಧಾನರ ತಿಳಿಯುವವರಿಗೂ ಇದನ್ನು ಮುದ್ರಿಸಲು ಅವಕಾಶವಿಲ್ಲದಾಗಿದೆ.

ಪಾದ್ರಿಗಳು ಈ ರೀತಿಯಲ್ಲಿರುವದು ಒಳ್ಳೇದೋ ಕೆಟ್ಟದ್ದೋ.

ಈ ಜೊತೆ ವಿದ್ಯಾವಂತರಾದ ಬಹು ದೊಡ್ಡ ಮನುಷ್ಯರನ್ನು ಕಂಡು ಅವರ ಸಂಗಡ ಸಂಭಾಷಣೆ ಮಾಡುತ್ತಿರಲು ಅವರು—ಈ ವೇಳೆಯಾರು ಯಾಕೋ ಕ್ರೈಸ್ತ ಪಾದ್ರಿಗಳ ವಿಷಯದಲ್ಲಿ ಬಹಳವಾಗಿ ಹೇರುತ್ತಾರಂತಲೂ, ಅವರ ಮಾತುಗಳನ್ನು ಕೇಳುವದಕ್ಕೆ ಸಂಪೂರ್ಣವಾಗಿ ಹಿಂತೆಗೆಯದ ದೇಶಾಭಿಮಾನಿಗಳ ಪಾಶಿಕೆಗಳನ್ನು ವಿಚಾರಿಸಿದೆಂದು ಅತ್ಯವಸರದಿಂದ ಹಿಂತಿರುಗಿ ಬಂದು, ಅವರು ಹೀಗೆ ತಾತ್ಪರ್ಯ ಪಟ್ಟಿಗಳನ್ನು ಹಿಂಬಾಲಿಸುವಂಥ ಯೋಚನೆಯನ್ನು ಸ್ವಲ್ಪವೂ ಸಂಬಂಧ ಲೌಕಿಕ ಚಿಂತೆಗಳಲ್ಲ ಸಂಪೂರ್ಣವಾಗಿ ಮನ್ನಿಸದೇ ಪ್ರಾರಂಭವೂ, ನಮಗೆ ಧಾರಾಳವಾಗಿ ಹೇಳಿದರು. ಆ ಪಕ್ಷ ನಿಜವು ಸತ್ಯವೋ ಅಸತ್ಯವೋ ನಮ್ಮ ವಾಚಕರು ಊಹಿಸಿಕೊಳ್ಳಬಹುದು. ಅನೇಕ ಮನುಷ್ಯರು ಎರಡು ಅಭಿಪ್ರಾಯ ಉಳ್ಳವರಾಗಿದ್ದೇವೆಂಬುವದು ಮಾತ್ರ. ಪಾದ್ರಿಗಳು ಮೊದಲು ಅವರು ಧಾರಾಳವಾಗಿ ಬಯಲುಮಾಡುವ ಕ್ರೈಸ್ತಮತದ ಈ ರಾಜ್ಯಕ್ಕೆ ಬರುವದರ ಉಪಕಾರಗಳನ್ನು ಮಾತೆಚ್ಚರದಿಂದ ಹೇಳುತ್ತಾರೆ. ಅವರ ಕ್ರೈಸ್ತರ ಹಿಂದೆ ಅವರ ಪರರೂಪ ಬಲಿಯಾಗಿ ಮಾತನಾಡುತ್ತಾರೆ. ಹಾಗಾದರೆ ಅವರು ಪರರ ಮತಗಳಲ್ಲಿ ಸೂಚಿಸುವ ಈ ಪ್ರತಿಬಂಧ ವಿಷಯಗಳು ತಾತ್ಪರ್ಯಗಳಲ್ಲಿ ಸತ್ಯಕ್ಕನುಗುಣವಾದದ್ದು ಯಾವದು? ಕ್ರೈಸ್ತಪಾದ್ರಿಗಳು ಪರರ ಮೆಚ್ಚುಗೆಗೆ ಗುರಿಯಾಗಿದ್ದಾರೆಯೋ, ಇಲ್ಲದೆ ಅವರ ಪ್ರೇರಣೆಗೆ ಹೆದರಿಕೆಗೂ ಪಾತ್ರರಾಗತಕ್ಕವರಾಗಿದ್ದಾರೆಯೋ? ಇದನ್ನು ವಿಚಾರ ಮಾಡುವದು ಒಳ್ಳೇದು.

೧ ಈ ಮೈಸೂರು ದೇಶದಲ್ಲಿ ಪಾದ್ರಿಗಳಿಂದ ಉತ್ಪತ್ತಿಯಾದ ಕೆಲಸಗಳನ್ನು ತಕ್ಕ ಮಟ್ಟಿಗೂ ಗಣನೆಗೆ ತಂದರಾದರೆ ಅವರ ಗುಣವು ಶ್ಲಾಘನೀಯವಾದದ್ದೋ ಅಯೋಗ್ಯವಾದದ್ದೋ ಎಂಬುದು ಗೋಚರವಾಗುತ್ತದೆ. ಇಂಗ್ಲಿಷ್ ವಿದ್ಯಾಭ್ಯಾಸವು ಅವರ ಪ್ರೋತ್ಸಾಹದಿಂದಲೇ ಮೊದಲು ಆರಂಭಿಸಲ್ಪಟ್ಟು ಇಷ್ಟು ಅಭಿವೃದ್ಧಿಗೆ ಬಂದಿದೆ. ಈ ರಾಜ್ಯದಲ್ಲಿ ಆ ಕಾಲದಲ್ಲಿ ಸ್ಥಾಪಿತವಾದ ಇಂಗ್ಲಿಷ್ ವಿದ್ಯಾಶಾಲೆಯು ಮೈಸೂರಲ್ಲಿದ್ದ ಪಾದ್ರಿಗಳಿಂದ ಸ್ಥಾಪಿತವಾಯಿತು. ಇವರು ಅಲ್ಲದೆ ಈ ದೇಶದಲ್ಲಿ ಹೆಣ್ಣುಮಕ್ಕಳಿಗೆ ವಿದ್ಯೆ ಉಂಟಾಗುವದೆಂದು ಸ್ವಪ್ನದಲ್ಲಿಯಾದರೂ ಯಾರಿಗೂ ತಿಳಿದು ಇರಲಿಲ್ಲ. ಈಗ ಸುಮಾರು ೫೦೦೦ ಮಂದಿ ಹೆಣ್ಣುಮಕ್ಕಳು ವಿದ್ಯಾಭ್ಯಾಸಂಗ ಮಾಡುತ್ತಿರುವದಲ್ಲದೆ ಬ್ರಾಹ್ಮಣರಾದ ದೊಡ್ಡ ಮನುಷ್ಯರಲ್ಲಿ ಕೆಲವರು ಬಾಲಿಕಾ ಪಾಠಶಾಲೆಗಳನ್ನು ಸ್ಥಾಪಿಸಿಯೂ, ಸ್ಥಾಪಿಸುವವರಲ್ಲಿಯೂ ಬಹಳ ಅಭಿಮಾನವನ್ನು ತೋರಿಸುತ್ತಲಿದ್ದಾರೆ. ಅದರ ಪ್ರಾರಂಭವ್ಯವಸ್ಥೆ ಈ ದೇಶದಲ್ಲಿ ಹುಟ್ಟಿದ್ದೂ, ಇಷ್ಟು ಅಭಿವೃದ್ಧಿಗೆ ಬಂದದ್ದೂ ಪಾದ್ರಿಗಳು ಮಾಡಿದ ಧರ್ಮ ಧರ್ಮದ ಪ್ರಯತ್ನದಿಂದಲೇ ಹೊರತು ಮತ್ತೇನೂ ಅಲ್ಲ. ಇದು ಅಲ್ಲದೆ ಕನ್ನಡ ಅಕ್ಷರಗಳನ್ನು ತಯಾರುಮಾಡಿಸಿ ಛಾಪಿಸುವ ರೀತಿಯನ್ನು ಈ ದೇಶದವರಿಗೆ ಮೊದಲು ತೋರಿಸಿದವರು ಕ್ರೈಸ್ತರೇ. ಬೈಬಲ್ ಎಂಬ ಸತ್ಯವೇದವನ್ನು ಛಾಪಿಸಬೇಕೆಂದು ಅವರು ವಿಲಾಯಿತಿಯಲ್ಲಿ ಹೇಳಿದ ಎಲ್ಲಾ ಸಾಮಾನುಗಳನ್ನು ಸಿದ್ಧಮಾಡಿಸಿ ತಂದು ಈ ದೇಶದವರಿಗೆ ಅದರ ಉಪಯೋಗವನ್ನು ಮೊದಲು ಕಲಿಸಿದರು. ಇದರ ಮೇಲೆ ಇನ್ನೇನು ಹೇಳಬೇಕಾಗಿದೆ. ಈ ಸಂಗತಿಗಳನ್ನು ನೋಡಿ ಪಾದ್ರಿಗಳು ಈ ದೇಶಕ್ಕೆ ಬಂದದ್ದು ಉಪಕಾರವೋ ಅಪಕಾರವೋ ವಾಚಕರೇ ಊಹಿಸಿಕೊಳ್ಳಿರಿ.

೨ ಮೇಲ್ಕಂಡ ಸಂಗತಿಗಳನ್ನು ಅನೇಕ ದೊಡ್ಡ ಮನುಷ್ಯರು ಒಪ್ಪಿಕೊಳ್ಳುತ್ತಾರೆ. ಪಾದ್ರಿಗಳನ್ನು ಆ ವಿಷಯಗಳಲ್ಲಿ ಬಹಳ ಹೊಗಳುತ್ತಾರೆ. ಆದರೂ ಪಾದ್ರಿಗಳಿಂದ ನಮಗೆ ಕೆಲವು ವಿಧವಾದ ಪ್ರಯೋಜನಗಳು ಉಂಟಾಗಿದ್ದಾಗ್ಯೂ, ಅದರಿಂದ ಈ ರಾಜ್ಯಕ್ಕೆ ಒಂದುತರವಾದ ಕೇಡು ಉಂಟಾಗುವದು ಹೇಗೆ ತೋರುತ್ತದೆಂದು ನಾವು ಅವರ ವಿಷಯದಲ್ಲಿ ಅನುಸರಿಸಿ ಮಾತಾಡುತ್ತಾರೆ. ಹಾಗಾದರೆ ಪಾದ್ರಿಗಳು ಯಾವ ವಿಧವಾದ ಕೇಡನ್ನು ಈ ದೇಶಕ್ಕೆ ಉಂಟುಮಾಡಿದ್ದಾರೆ? ಅವರು ಒಂದು ವಿಧವಾದ ಬೋಧನೆಯನ್ನು ಹೇಳುತ್ತಾರೆ. ಆ ಬೋಧನೆಯನ್ನು ಅಂಗೀಕರಿಸುವದರಿಂದ ಜನರಿಗೆ ಏನಾದರೂ ಕೇಡು ಬಂದೀತೆ? ಕ್ರಿಸ್ತಸ್ವಾಮಿಯು ಆಜ್ಞಾಪಿಸಿದ ನೀತಿ, ಸುಗುಣಗಳನ್ನು ಜನರು ಅನುಸರಿಸಿದರೆ ಅವರು ಕ್ಲೇಶ ದುಃಖವೇಳೇ ಹೊರತು ಸೌಖ್ಯವಾಗುವದಕ್ಕೆ ಅವಕಾಶವಿರದು. ಸತ್ಯಸಂಧರೂ, ಅಧರ್ಮದ ಎಲ್ಲಾ ಕೆಲಸಗಳನ್ನೂ ಬಿಟ್ಟವರೂ ಈ ಲೋಕದಲ್ಲಿ ಕ್ರಿಸ್ತನ ಶಿಷ್ಯರಾಗಿರಬೇಕಲ್ಲವೆ? ಈ ವಿಷಯಗಳಲ್ಲಿ ಯೇಸು ಕ್ರಿಸ್ತನು ತೋರಿಸಿದ ಮೇಲ್ಪಂಕ್ತಿಯಲ್ಲಿ ಏನಾದರೊಂದು ಕುಂದುಂಟಾಗಿದೆಯೋ, ಶತ್ರುಗಳು ೧೮ ಶತಮಾನಗಳಿಂದೀಚೆಗೆ ಆತನ ನಡೆನುಡಿಗಳಲ್ಲಿ ಪರಿಶೋಧಿಸುತ್ತ ಬಂದಾಗ್ಯೂ ಅವರಿಗೆ ಒಂದೂ ಸಿಕ್ಕಲಿಲ್ಲವಲ್ಲ! ಅಪವಿತ್ರತೆಯಾಗಲೀ ಮೊದಲಾದ ಅಲ್ಪತ್ವಗಳಲ್ಲಿ ಒಂದಾದರೂ ಆತನಲ್ಲಿ ತೋರ್ಪಡಲಿಲ್ಲ! ಹೀಗಿರಲಾಗಿ ಪಾದ್ರಿಗಳು ಕ್ರಿಸ್ತಸ್ವಾಮಿಯ ಎಲ್ಲಾ ಸಂಗತಿಗಳನ್ನೂ ಹೇಳಿ, ಆತನ ಮಾತುಗಳನ್ನೇ ಅನುಸರಿಸಬೇಕೆಂಬದಾಗಿ ಬೋಧಿಸುವದು ಅವಮಾನಾಸ್ಪದವಾದ ಕೆಲಸವೋ? ಇದಕ್ಕೆ ಕೆಲವರು ಹೀಗೆ ಹೇಳಿದ್ದು ಮಿಸ್ಸು ವ್ಯಾಪಾರ ಸರಿ, ಆದರೆ ಕ್ರೈಸ್ತನ ಮತವನ್ನು ಅನುಸರಿಸತಕ್ಕವರು ಕುಲಗೆಟ್ಟವರಾಗುತ್ತಾರಲ್ಲ ಎಂದು ಆಕ್ಷೇಪಣೆ ಮಾಡುತ್ತಾರೆ. ವಾಚಕರೇ, ಕುಲಗೆಟ್ಟವರು ಯಾರು? ಸದ್ಗುಣಸಂಪನ್ನರೂ ಸಕಲಸನ್ಮತಗಳನ್ನು ನಡೆಸುವಂಥವರೂ ಕುಲಗೆಟ್ಟವರೋ? ಕುಲಾಚಾರಗಳನ್ನು ಮಾತ್ರ ಬಿಟ್ಟು ಶುದ್ಧ ದೇವಭಕ್ತರಿಗೆ ಯೋಗ್ಯವಾಗಿರುವ ಎಲ್ಲಾ ನಡವಳಿಕೆಗಳನ್ನು ಅನುಸರಿಸುವವರು ಕುಲಗೆಟ್ಟವರೆನ್ನಿಸುವದು ನ್ಯಾಯವೋ? ಪಾದ್ರಿಗಳ ವಿಷಯದಲ್ಲಿ ಆಕ್ಷೇಪಣೆಗಳನ್ನು ಮಾಡತಕ್ಕ ವಿದ್ಯಾವಂತರ ಸ್ಥಿತಿಯು ಎಂಥಾದ್ದಾಗಿದೆ ಎಂದು ನೋಡೋಣ. ಬಹಿರಂಗದಲ್ಲಿ ಅವರು ಹಿಂದೂ ಮತಾಚಾರಗಳನ್ನೆಲ್ಲಾ ತಪ್ಪದೆ ಅನುಸರಿಸುತ್ತಾ ಬರುತ್ತಾರೆ. ಅಂತರಂಗದಲ್ಲಿ ಸ್ವಲ್ಪ ವಿಚಾರ ಮಾಡಿದರೆ, ಅವರಲ್ಲಿ ಕೆಲವರು ಗೋಮಾಂಸವನ್ನು ಭುಂಜಿಸುತ್ತಾರೆ. ಬ್ರಾಂದಿಯನ್ನು ಪಾನ ಮಾಡುತ್ತಾರೆ. ತ್ರಿಕಾಲಗಳಲ್ಲಿಯೂ ಸಂಧ್ಯಾವಂದನೆಯನ್ನು ಕ್ರಮವಾಗಿ ಉಚ್ಚರಿಸಿದಾಗ್ಯೂ ಜಾತಿತ್ವವನ್ನು ಬಿಟ್ಟಿಲ್ಲ. ನಾಮದಲ್ಲಿ ಮಾತ್ರ ಅವರು ಹಿಂದುಗಳಾಗಿದ್ದಾಗ್ಯೂ, ಅಂತರಂಗದ ನಂಬಿಕೆಯಲ್ಲಿಯೂ, ನಡತೆಯಲ್ಲಿಯೂ ಅವರು ಹಿಂ

ನೋಟೀಸ್.

ನಮ್ಮ ವೆಸ್ಲೆಯನ ಮಿಷನ್ ಪ್ರೆಸ್ಸಿಗೆ ಕೆಲವು ಮಂದಿ ಕರ್ನಾಟಕ ಮತ್ತು ಇಂಗ್ಲಿಷ್ ಕಂಪಾಜಿಟರುಗಳು ಬೇಕಾಗಿರುವುದರಿಂದ ಇಷ್ಟವುಳ್ಳವರು ಆಫೀಸಿನ ಮ್ಯಾನೇಜರಿಗೆ ಅರ್ಜಿ ಬರೆದುಕೊಳ್ಳಬಹುದು. ಸ್ಥಳದವರು ಖುದ್ದು ಹಾಜರಾಗಿ ಅವರ ಸಂಗಡ ಮಾತನಾಡಬೇಕು.

Mysore, 16-2-93　　Rev. Henry Haigh, Wes: Mission.

ಬಂಗಳೂರು ವರ್ತಮಾನಗಳು.

ಮೈಸೂರು ಗೆಜೆಟಿನ ಸಂಗ್ರಹ.

ಕೋಲಾರದ ವೃತ್ತಾಂತ.

ವಿನೋದ ಭಾಗ.

ವಿವಿಧ ವರ್ತಮಾನಗಳು.

ಸಯಾಂ ದೇಶದ ಮಹಾ ಅರಸನು ಇಂಗ್ಲಂಡಿನಲ್ಲಿ ಒಂದು ಪಟಾಲಂ ಸ್ವಸ್ಥವನ್ನು ತರಪೇತು ಮಾಡಿಸ್ಸಿದ್ದನು ಆದರೆ ಈಗಿನ ಸರಕಾರವು ಇವರನ್ನು ಮುಂದು ಪೋಲಿಸ ಕೆಲಸಕ್ಕೆ ನೇಮಿಸಿರುತ್ತಾರಂತೆ!

ಹಿಂದೂಸ್ತಾನದ ಆಚೆಗೆ ಧರ್ಮಾವರಂನಿಂದ ಮೈಸೂರು ಸರಹದ್ದಿನವರೆಗೂ ವಿಲ್ಲಪುರಂ—ಗುಂಟಿಕಲ್ ಸ್ಟೇಟ್ ರೈಲ್ವೆಯನ್ನು ಸುಮಾರು ೪೬ ಮೈಲಿಗಳು ತಯಾರುಮಾಡುವುದಕ್ಕೆ ಇಂಡಿಯ ಸ್ಟೇಟ್ ಸೆಕ್ರೆಟರಿಯವರು ೩೬,೦೫೧,೦೦೦ ರೂಪಾಯಿಗಳನ್ನು ಸ್ವೀಕಾರ ಮಾಡಿರುತ್ತಾರೆ

ಈಸಲದ ಮದರಾಸ ಯೂನಿವರ್ಸಿಟಿ ವಿದ್ಯಾ ಸಂಘದ ಕಾನ್ವೊಕೇಷನ್ ಅಡ್ರೆಸ್ಸನ್ನು ಆನರಬಲ್ ಮ ॥ ವಿ. ಭಾಷ್ಯಂ ಅಯ್ಯಂಗಾರ್ಯರವರು ಕೊಡುವರೆಂತಲೂ, ಈ ಸಭೆಯು ಬರುವ ಮಾರ್ಚಿ ೨೧ ಕ್ಕೆ ನೇರುವದೆಂತಲೂ ಮೇಲ್ ಪತ್ರಿಕೆಯು ತಿಳಿಸುತ್ತದೆ

ಟ್ರಾವಂಕೋರ್ ಮಹಾರಾಜರವರು ಕೆಲವು ದಿವಸಗಳಿಂದಲೂ ಮದರಾಸ ಪಟ್ಟಣದಲ್ಲಿದ್ದರಷ್ಟೆ ಕಳೆದ ೯ ನೇ ತಾರೀಖು ರಾತ್ರಿ ೯½ ಗಂಟೆಯಲ್ಲಿ ಎಗ್ಮೋರ್ ಸ್ಟೇಷನ್ ಬಿಟ್ಟು ಸ್ಪೆಷಲ್ ರೈಲಿನಲ್ಲಿ ಚಿದಂಬರಕ್ಕೆ ಪ್ರಯಾಣ ಮಾಡಿದರು ಅಲ್ಲಿನ ದೇವರುಗಳ ದರ್ಶನ ಮಾಡಿಕೊಂಡು ತಿರುವನಂತಪುರಕ್ಕೆ ದಯಮಾಡುತ್ತಾರೆ

ಒಬ್ಬ ಮಂತ್ರವಾದಿಗೆ ಜೀವಂತ ಮನುಷ್ಯನ ಕರುಳನ್ನು ಬಗೆದು ತಿಂದರೆ ಮಂತ್ರ ಸಿದ್ಧಿಯಾಗುತ್ತದೆಂದು ತೋಚಿದ್ದರಿಂದ ಅವನು ಬಂದು ಕೂಸಿನ ಹೊಟ್ಟೆಯನ್ನು ಕುಯಿದು ಅದು ಒದ್ದಾಡುತ್ತಿರುವಾಗಲೇ ತಿಂದುಬಿಟ್ಟನು ಈ ನರಭಕ್ಷನಿಗೆ ಆಳಿಯುವರ ಬಹುಮಾನವೇನು ಮರಣ ಶಿಕ್ಷೆ ಕೊಟ್ಟರು ಇವನೇನು ಮಾಂತ್ರಿಕನೋ! ರಾಕ್ಷಸನೋ!!

ಒಬ್ಬ ಚೀನಾ ಗೃಹಸ್ಥನು ಒಂದು ಅಕ್ಕಿಯ ಕಾಳಿನ ಮೇಲೆ, ೩೩ ಅಕ್ಷರಗಳುಳ್ಳ ಒಂದು ಕವಿತ್ವವನ್ನು ಮಾಡಿ ಕೆತ್ತಿರುತ್ತಾನಂತೆ ಈ ಅಕ್ಷರಗಳು ಬರೀಕಣ್ಣಿಗೆ ಕಾಣುವದಿಲ್ಲ ಮೈಕ್ರಾಸ್ಕೋಪ್ ಎಂಬ ಸೂಕ್ಷ್ಮ ದರ್ಶಕ ಕನ್ನಡಿಗಳಿಂದ ಓದಬಹುದಂತೆ ಇಂಥಾ ವಿಚಿತ್ರವಾದ ಪದಾರ್ಥವನ್ನು ಮಾಲೀಕನು ಅಲ್ಲಿನ ಒಬ್ಬ ಅರಸುಮಗನಿಗೆ ನಜರು ಮಾಡಿರುತ್ತಾನಂತೆ

ಕಳೆದ ೧೯೦೦ ನೇ ಇಸವಿಯಲ್ಲಿ ಸಂಯುಕ್ತ ಸಂಸ್ಥಾನದ ಪ್ರಧಾನ ಪಟ್ಟಣವಾದ ನ್ಯೂಯಾರ್ಕಿನಲ್ಲಿ ೧೦೩,೬೯೦,೭೦೬ ಪಟ್ಟಣಗಳೂ, ೧೩೩,೬೪೯,೦೦೦ ಸಿಗರೆಟ್ಟುಗಳೂ ತಯಾರಾಗಿದ್ದುವು ಅಲ್ಲಿ ಇನ್ನು ತಯಾರಾಗುವ ಅಂಗಡಿಗಳು ೩೮ ಮಾತ್ರವೇ ಇರುತ್ತವಂತೆ ಇದರಿಂದ ಅಲ್ಲಿನ ಜನಗಳು ಎಷ್ಟರಮಟ್ಟಿಗೆ ಸೇದುಗಾರರಾಗಿರುತ್ತಾರೋ ವಾಚಕರೇ ಊಹಿಸಿಕೊಳ್ಳಬಹುದು

ಮದರಾಸ ಯಿಂಜನಿಯರಿಂಗ್ ಕಾಲೇಜಿನ ಪ್ರಿನ್ಸಿಪಲ್ ರಾದ ಮೇಜರ್ ಹಚ್; ಡಿ; ಲೋವ್ ಆರ್; ಯಿ; ಯವರು ತಮ್ಮ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಮೆಕ್ಯಾನಿಕಲ್ ಇಂಜನಿಯರಿಂಗ್ ಕಲಿಸುವದಕ್ಕೆ ಪ್ರತ್ಯೇಕ ಏರ್ಪಾಟನ್ನೂ, ಅದಕ್ಕೆ ಯಂತ್ರಗಳೂ ಇಲ್ಲವೆಂದು ಗೌರ್ಮೆಂಟಿನವರಿಗೆ ತಿಳಿಸಿದ ಪ್ರಕಾರ ಗೌರ್ನಮೆಂಟಿನವರು ಈ ಕಟ್ಟಡವನ್ನು ಕಟ್ಟಿಸಿಕೊಡತಕ್ಕದ್ದು ಅವಶ್ಯವೆಂದು ಯೋಚಿಸಿ ಅದಕ್ಕಾಗಿ ೩೭,೦೦೦ ರೂಪಾಯಿಗಳನ್ನು ಸ್ವೀಕಾರ ಮಾಡಿರುತ್ತಾರೆ

ಫ್ರಾನ್ಸ ದೇಶದಲ್ಲಿ ಭಿಕಾರಿ ಗೆಜ್ಜೆಟ್ ಎಂಬ ಒಂದು ವರ್ತಮಾನ ಪತ್ರಿಕೆಯು ಪ್ರಚಾರದಲ್ಲಿರುತ್ತದೆ ಅದರಲ್ಲಿ—ಊರಲ್ಲಿ ದಕ್ಷಿಣೆ ಕೊಡುವ ಕಾರ್ಯಗಳು ಯಾವ ಸ್ಥಳದಲ್ಲಿ ಯಾವ ದಿವಸ, ಯಾವ ಹೊತ್ತಿಗೆ ಆಗುತ್ತವೆಂಬ ಸಮಾಚಾರಗಳು ವಿಶೇಷವಾಗಿರುತ್ತವೆ ಆದದರಿಂದ ಅಲ್ಲಿನ ಭಿಕಾರಿ ಜನಗಳು ಈ ಪತ್ರಿಕೆಯನ್ನು ಬಹಳವಾಗಿ ಕೊಂಡುಕೊಳ್ಳುತ್ತಾರೆ ಈ ನಮ್ಮ ಹಿಂದುಸ್ಥಾನದಲ್ಲಿಯೂ ಇಂಥಾ ಪತ್ರಿಕೆಯೊಂದನ್ನು ಪ್ರಕಟಿಸುವದಾದರೆ ಬಹು ಬ್ರಾಹ್ಮಣರೇ ಲಕ್ಷಾಂತರದ ವರೆಗೂ ಚಂದಾದಾರರಾಗುವರೆಂದು ಭಾವಿಸುವೆವು

ತಿರುವನಂತಪುರದಲ್ಲಿ ಹೆಡ್ ಅಸಿಸ್ಟೆಂಟ್ ಕಲೆಕ್ಟರಾದ ಮ॥ ಮರ್ರೇ ಸಾಹೇಬರು ರಜಾದ ಮೇಲೆ ಸೀಮೆಗೆ ಹೋಗಬೇಕಾಗಿದ್ದದರಿಂದ ಅವರ ಕೆಲವು ಸಾಮಾನುಗಳನ್ನು ಹರಾಜು ಹಾಕಿಸುವದಕ್ಕೆ ಅವುಗಳನ್ನೆಲ್ಲ ಕ್ರಮವಾಗಿ ಇಟ್ಟಿದ್ದರು ಕೊಂಡುಕೊಳ್ಳುವದಕ್ಕೆ ಬಂದಿದ್ದ ಒಬ್ಬ ಸಾಹುಕಾರನು ಅಲ್ಲಿದ್ದ ಒಂದು ಬಂದೂಕನ್ನು ಎತ್ತಿ ನೋಡುತ್ತಿರುವಾಗ್ಯೆ ಅದರಲ್ಲಿ ಟಾಕ್ ಮಾಡಿದ್ದ ಮದ್ದು ಗುಂಡು ಹಾರಿ ಸಮೀಪದಲ್ಲಿ ನಿಂತಿದ್ದ ಒಬ್ಬ ಬ್ರಾಹ್ಮಣನಿಗೆ ಬಡಿದು ಆ ಕೂಡಲೆ ಪರಂಧಾಮವನ್ನು ಹೊಂದಿದನು ಇವನನ್ನು ಬದುಕಿಸಬೇಕೆಂದು ಡಾಕ್ಟರವರು ಮಾಡಿದ ಪ್ರಯತ್ನಗಳೆಲ್ಲ ನಿಷ್ಪ್ರಯೋಜನವಾಗಿ ಹೋದವು

ಬಂಗಾಳಾ ಪ್ರಾಂತ್ಯದಲ್ಲಿ ಇಬ್ಬರು ಅಣ್ಣತಮ್ಮಂದಿರು ತಮ್ಮ ಚಿರಾಸ್ತಿಯನ್ನು ಪಾಲು ಮಾಡಿಕೊಳ್ಳುವದರಲ್ಲಿ ದೇವತಾರ್ಚನೆಯ ವಿಗ್ರಹ ಸಾಲಿಗ್ರಾಮ ಮೊದಲಾದವುಗಳನ್ನು ಪಾಲು ಮಾಡಬೇಕಾಗಿ ಬಂದಾಗ, ಅವರಿಬ್ಬರಲ್ಲಿ ಒಬ್ಬನು ವಿಲಾಯಿತಿಗೆ ಹೋಗಿ ಬಂದವನಾದ್ದರಿಂದ, ಹಿರಿಯವನು ವಿಗ್ರಹಗಳನ್ನೆಲ್ಲಾ ತಾನೇ ಇಟ್ಟುಕೊಳ್ಳುವವನಾಗಿ ವ್ಯಾಜ್ಯ ಮಾಡಿದನು ಕೊನೆಗೆ ಆಫೀಸಿನಲ್ಲಿ ಕೈಸಲಾಗದ ಅಣ್ಣತಮ್ಮಂದಿರಿಬ್ಬರೂ ಈ ವಿಗ್ರಹಗಳಿಗಾಗಿ ದಾವಾ ಮಾಡಿದರು ಈ ಮೊಕದ್ದಮೆಯನ್ನು ಫೈಸಲ್ ಮಾಡುವದಕ್ಕೆ ಹೈಕೋರ್ಟಿನ ಜಡ್ಜಿಯವರು ಕೂಡ ಕಷ್ಟವೆಂದು ತಿಳಿದು, ಹಿರಿಯವನನ್ನು ಪೂಜೆಮಾಡುವದಕ್ಕೆ ೧೫ ದಿವಸಗಳ ವಾಯಿದೆ ತೆಗೆದುಕೊಂಡಿರುತ್ತಾರಂತೆ

ಬನಾರಸಿನಲ್ಲಿ ಒಬ್ಬ ನೇಟಿವ್ ವಿದ್ಯಾರ್ಥಿಯು ಅಲ್ಲಿನ ಕಾಲೇಜಿನಲ್ಲಿ ಎರಡನೇ ತರಗತಿಯ ಪರೀಕ್ಷೆಯನ್ನು ಫಾರ್ಮ್ ನಿ, ಎಂದು ವರುಷಗಳ ಸರ್ಟಿಫಿಕೇಟ್ ಕೊಡಬೇಕೆಂದು ಪ್ರಾಫೆಸರನ್ನು ಕೇಳಿದನು ಪ್ರೊಫೆಸರರು—ನೀನು ಮೊದಲನೆ ವರುಷ ಎಲ್ಲಿ ಓದುತ್ತಿದ್ದೆ? ಅದಕ್ಕೆ ನಿನ್ನಲ್ಲಿ ಸರ್ಟಿಫಿಕೇಟ್ ಇರುವದೇ? ಎಂದು, ಕೇಳಿದರು ಆಗ ವಿದ್ಯಾರ್ಥಿಯು ತಾನು ಲಖ್ನೋ ಪಟ್ಟಣದ ಕಾಲೇಜಿನಲ್ಲಿ ಓದುತ್ತಿದ್ದನೆಂತಲೂ, ಅಲ್ಲಿನ ಪ್ರೊಫೆಸರರು ಸರ್ಟಿಫಿಕೇಟ್ ಕೊಟ್ಟರೆಂತಲೂ ಹೇಳಿ ಒಂದು ಕಾಗದವನ್ನು ಮುಂದಿಟ್ಟನು ಅವರು ಅದರಲ್ಲಿ ಅನುಮಾನಪಟ್ಟು ಆ ಪ್ರೊಫೆಸರರಿಗೆ ಬರೆದು ಕೇಳಿದಾಗ ಇವನ ಮೋಸ ಕೃತ್ಯವು ವ್ಯಕ್ತವಾಗಲು ಇವನನ್ನು ಫೋರ್ಜರಿ ಮಾಡಿದವನೆಂದು ಸರಕಾರಿಗೆ ಕಳಿಸಿದೆ ಮಾಡಿರುತ್ತಾರೆ

ಮೆಸ್ಸರ್ಸ್. ಟೇಲರ್ ಕಂಪೆನಿಯವರು ಕೆಲವು ದಿವಸಗಳಲ್ಲಿ ಅಮೇರಿಕಾಖಂಡದಲ್ಲಿ ಚಿಕಾಗೋ ಪಟ್ಟಣದಲ್ಲಿ ನಡೆಯುವ ಪ್ರದರ್ಶನ ಮಹೋತ್ಸವದ ಕಾಲದಲ್ಲಿ ಸಾಮಾನುಗಳನ್ನು ತೆಗೆದುಕೊಂಡು ಹೋಗುವದಕ್ಕೆ ಸಿದ್ಧವಾಗಿರುತ್ತಾರೆ ಇವರ ನಡೆಯಲ್ಲಿರುವ ಮಹಾವರು ಬ್ರಾಹ್ಮಣ ಪಂಡಿತರೂ ಹೋಗುವದಕ್ಕೆ ಇಷ್ಟಪಟ್ಟರು ಆದರೆ ಇಲ್ಲಿ ಪಟ್ಟಣದಲ್ಲಿರುವ ಇವರ ನೆಂಟರಿಷ್ಟರೆಲ್ಲರೂ ಬಂದು ಅವರನ್ನು ಎಷ್ಟುಮಾತ್ರಕ್ಕೂ ಸಮುದ್ರಯಾನ ಮಾಡಕೂಡದೆಂದು ಅಡ್ಡಮಾಡಿ, ಅವರ ಪೈಕಿ ಇಬ್ಬರು ಹೋಗುವದನ್ನು ತಪ್ಪಿಸಿಬಿಟ್ಟರು ಮೂವರು ಪಂಡಿತರು ಹೋಗುವದರಲ್ಲಿ ಜಿತಮನಸ್ಕರಾಗಿದ್ದಾರೆ ಈ ವಿಷಯದಲ್ಲಿ ಪಲ್ಲಿಯ ಬ್ರಾಹ್ಮಣರೆಲ್ಲ ತುಂಬಾ ಗಲಭೆಯನ್ನು ಉಂಟುಮಾಡುತ್ತಲಿದ್ದಾರೆ

ಪುದುಕೋಟೆಯಲ್ಲಿ ಕಳೆದ ಗುರ್ರೇ ತಾರೀಖಿನ ದಿವಸ ೧೬ ವರುಷದ ಒಬ್ಬ ಹುಡುಗನು ಬಂದು ಎತ್ತನ್ನು ಹೊಡೆದುಕೊಂಡು ಬರಬೇಕೆಂದು ಮನೆಯಿಂದ ೩೦ ರೂಪಾಯಿಗಳನ್ನು ತೆಗೆದುಕೊಂಡು ಹೊರಟನು ಇವನ ಗುರ್ತಿನ ಇಂತ ಒಬ್ಬ ಕೂಲಿಯವನು ಇವನ ಸಹಾಯಾರ್ಥವಾಗಿ ಜೊತೆಯಲ್ಲಿ ಹೋದನು ಸಾಯಂಕಾಲದ ವರೆಗೂ ಅಲೆದುಕೊಂಡು ಹೋದಾಗ ಒಂದು ಪ್ರೈವೇಟ್ ಸ್ಥಳದಲ್ಲಿ ಇನ್ನಿಬ್ಬರು ಇವನ ಜೊತೆ ಸೇರಿ ಆ ಹುಡುಗನನ್ನು ಕೆಡವಿ ತುಂಡು ತುಂಡಾಗಿ ಕತ್ತರಿಸಿ ಅವನ ಬಳಿಯಲ್ಲಿದ್ದ ೩೦ ರೂಪಾಯಿಗಳ ಗಂಟನ್ನೂ, ಅವನ ಕೈಗಳಲ್ಲಿ ಹಾಕಿದ್ದ ಬಂಗಾರದ ಮುದ್ರೆಗಳನ್ನೂ ಅಪಹರಿಸಿಕೊಂಡು, ಶವವನ್ನು ಸಮೀಪದಲ್ಲಿದ್ದ ಒಂದು ಕೆರೆಯಲ್ಲಿ ಬಿಸಾಡಿದ್ದರು ಹಾದಿಗೆ ದಾನದ ಗಂಟೂ, ಮುದ್ರೆಗಳೂ, ಆ ಸ್ಥಳಗಳಲ್ಲಿ ಸಿಕ್ಕಿ ನ್ಯಾಯಾಧೀಶರನ್ನು ಎದುರು ನೋಡುತ್ತಲಿದ್ದಾರೆ

ಯೂರೋಪಿನ ಖಂಡದಲ್ಲಿರುವ ಸ್ವಿಟ್ಜರ್‌ಲೆಂಡ್ ಎಂಬ ಭೂಸಂಧಿಯನ್ನು ಒಡೆದು ಜಲಮಾರ್ಗ ಮಾಡುವ ರೀತಿಯಲ್ಲಿ ಸುರಂಗ ಮಾಡಬೇಕೆಂದು (ಸಿಂಪ್ಲನ್ ಟನಲ್ ಎಂಬಂತೆ) ಪ್ರಯತ್ನ ಮಾಡುತ್ತಲಿದ್ದರು ಇದನ್ನು ಕಂಟ್ರಾಕ್ಟ ತೆಗೆದುಕೊಂಡಿದ್ದ ಕಂಪೆನಿಯವರು ಗ್ರಾಸ್ ಇಸವಿ ಮಾರ್ಚಿ ೧೧ ಕ್ಕೆ ಪೂರೈಸಿಕೊಡುವದಾಗಿಯೂ, ತಾಗಿ ಆಗದೆ ಹೋದಲ್ಲಿ ಮುಂದಿನ ಪ್ರತಿ ದಿಂಗಳ ೪,೦೦೦ ಫ್ರಾಂಕುಗಳ ಪ್ರಕಾರ ಕೆಲಸ ಪೂರೈಸುವ ವರೆಗೂ ಕಾಂಪೆನ್ಸೇಷನ್ ಕೊಡುವದಾಗಿಯೂ ಕರಾರು ಆಗಿದ್ದಿತು ಹಾದಿಗೆ ಈ ಸಂಧಿಯಲ್ಲಿ ಅರ್ಧ ಕಾಮಗಾರಿ ಯಾಗಿರುವಾಗ್ಯೆ ನೀರು ತುಂಬಿಕೊಂಡು ಕಂಟ್ರಾಕ್ಟರಿಗೆ ನಷ್ಟವನ್ನುಂಟುಮಾಡಿದ್ದರಿಂದ ಸರ್ಕಾರದವರು ವಾಯಿದೆಯನ್ನು ಇನ್ನೂ ಮುಂದೆ ಹಾಕಿರುತ್ತಾರೆ. ಆಗ್ಯೂ ಬರುವ ಏಪ್ರಿಲ್ ೨೧ ಕ್ಕೆ ಈ ಸಂಧಿಯಲ್ಲಿ ಒಂದು ದಡದಿಂದ ಪ್ರಯಾಣ ಮಾಡುವಂತೆ ಏರ್ಪಾಡಾಗಿರುತ್ತದೆ

ಹೈದರಾಬಾದ ಸಂಸ್ಥಾನದಲ್ಲಿ ಸರಕಾರಿ ಏರ್ಪಾಡುಗಳು ತುಂಬಾ ಅನನುಕೂಲವಾದ ಸ್ಥಿತಿಯಲ್ಲಿದ್ದದರಿಂದ ನೈಜಾಮರವರು ಎಲ್ಲಾ ಡಿಪಾರ್ಟ್‌ಮೆಂಟುಗಳಲ್ಲಿಯೂ ಬಿಕರ್ ಬಹಳ ಪಟ್ಟಿಗೆ ಕಡಿಮೆ ಮಾಡಿ, ಅನೇಕ ನೌಕರಗಳನ್ನು ವಜಾಮಾಡಿ, ಪೂರ್ವದಲ್ಲಿ ಸಂಬಳಕ್ಕಾಗಿಯೇ ಸಾಲಿಯಾನಾ ಖರ್ಚಾಗುತ್ತಿದ್ದ ೯ ಲಕ್ಷ ರೂಪಾಯಿಗಳನ್ನು ೩ ಲಕ್ಷಕ್ಕೆ ಇಳಿಸಿ ಅನೇಕ ಸ್ಟಾಗಳನ್ನು ಮಾಡಿರುತ್ತಾರೆ ಇಲ್ಲಿಂದ ಮುಂದೆ ಈ ಹೊಸ ಏರ್ಪಾಡುಗಳಿಂದ ಸಾಹುಕಾರರಿಗೂ ಸ್ಪತ್ತಿಗೂ ಯಾವ ವಿಧದಿಂದ ತೊಂದರೆಯೂ ಸಂಭವಿಸುವುದಿಲ್ಲವೆಂದು ಊಹಿಸುತ್ತಾರೆ ಈ ಹೊಸ ಏರ್ಪಾಡುಗಳು ಈ ತಿಂಗಳು ೭ ನೇ ತಾರೀಖಿನಿಂದ ಜಾರಿಯಲ್ಲಿರುತ್ತವೆ ಅಲ್ಲಿನ ದಿವಾನ್ ಮಂತ್ರಿಗೆ ಇಗ ಮಾಹೆಯಾನಾ ಸಲ್ಲುತ್ತಿದ್ದ ೧೧,೦೦೦ ರೂಪಾಯಿಗಳನ್ನು ಕಡಿಮೆ ಮಾಡಿ ೬,೦೦೦ ಕೊಡುತ್ತಾರೆ ಮಂತ್ರಿಗಳ ಕೈಕೆಳಗಿದ್ದ ಸ್ವಂತ ನೌಕರರನ್ನೂ ವಜಾ ಮಾಡಿದರು ಅನೇಕ ಡೆಪ್ಯುಟಿ ಮಂತ್ರಿಗಳನ್ನೂ ವಜಾ ಮಾಡಿರುತ್ತಾರೆ ಮೂರು ಸ್ಪೆಷಲ್ ಆಫೀಸರುಗಳೂ, ೩ ಅಂಡರ್ ಸೆಕ್ರೆಟರಿ ಆಫೀಸರುಗಳೂ, ೧೨ ಮಂದಿ ಆಫೀಸ್ ಮ್ಯಾನೇಜರುಗಳೂ, ಒಬ್ಬ ಗಣಿಗಳ ಡೈರೆಕ್ಟರ್ ಜನರಲ್ ಈ ಕೆಲಸಗಳೆಲ್ಲ ವಜಾ ಮಾಡಿಲ್ಪಟ್ಟವು ಇದರಿಂದ ಸಂಸ್ಥಾನದ ಆದಾಯವು ಹೆಚ್ಚಿ ಪ್ರಜೆಗಳ ಸುಖವು ದಿನೇ ದಿನೇ ಅಭಿವೃದ್ಧಿಯಾಗುವದೆಂದು ನಂಬಿರುತ್ತಾರೆ

ಹೈದರಾಬಾದ ನೈಜಾಮರವರ ಅರಮನೆಯಲ್ಲಿ ಹಾರ ತನ್ನ ಚಿಕಾರಿ ನಡೆದು ಕಳ್ಳರು ಮುಂದೆ ಹೇಳುವ ಪ್ರಕಾರ ರಕ್ಷೆ ಹೋಗಿರುತ್ತಾರೆ ಒಬ್ಬ ಮಹಮ್ಮದೀಯನು ಹೈದರಾಬಾದಿನಿಂದ ... ಪಟ್ಟಣಕ್ಕೆ ಬಂದು ಕೆಲವು ದಿವಸಗಳ ಕೆಳಗೆ ಅಲ್ಲಿನ ಒಬ್ಬ ರತ್ನಪಡಿ ಸಾಹುಕಾರನಿಗೆ ಕೆಲವು ನಗಗಳನ್ನು ಬಿಕರಿಗೆ ಕೊಟ್ಟನು ಇಂಥಾ ಉತ್ಕೃಷ್ಟವಾದ ನಗಗಳು ಈ ಅಲ್ಪ ಬೆಲೆಯಾಗಿರುವದನ್ನು ಕಂಡು ಅನುಮಾನವಾಗಿ ಪೋಲೀಸಿನವರಿಗೆ ತಿಳಿಸಿದನು—ಪೋಲೀಸ್ ಇನ್ಸ್‌ಪೆಕ್ಟರ್ ಬಂದು ನೀನು ಈ ನಗಗಳೆಲ್ಲಾ ನನ್ನವೇ ಎಂದು ನಿರ್ಧಾರ ನಿನಗೆ ಎಲ್ಲಿಗೆ ಹೊತ್ತಾಗುತ್ತಿದ್ದರೂ ಪ್ರಶ್ನೆ ತಾನು ಅವುಗಳಿಂತಲೂ ಮುಂಚೆಯೇ ಹೋಗಿ ಒಂದು ಯಿಗ ಟಿಕೆಟನ್ನು ಕೊಂಡುಕೊಂಡಿದ್ದನು ಸಾಹುಕಾರನು ಸುಮ್ಮನಿಂದೆ ಮಾಡಲು ಮುಚ್ಚಿಸಿಬಿಟ್ಟನು ಪೋಲೀಸಿನವರು ಅವನನ್ನು ಹಿಡಿದು ಅವನ ಬಟ್ಟೆಬರೆಗಳನ್ನು ಶೋಧಿಸಿ ನೋಡುವಾಗ್ಯೆ ಅವನಲ್ಲಿ ಸುಮಾರು ೩,೦೦೦ ರೂಪಾಯಿಗಳ ಬಾಳುವಂಥಾ ರತ್ನಾಭರಣಗಳು ಸಿಕ್ಕಿದವು ಆ ಮನುಷ್ಯನೇ ನೈಜಾಮರವರ ಸಮೀಪಬಂಧುಗಳಿಗೆ ಆ ನಗಗಳನ್ನು ಮಾರುವದು ಕೊಟ್ಟನಾಗಲೂ, ಆ ಬಂಧುಗಳು ಇವನಿಗೆ ಸಂಬಂಧಿಗಳಾಗಿದ್ದದರಿಂದ ಅವನ್ನು ತನಗೆ ಮಾರುವದಕ್ಕೆ ಕೊಟ್ಟನಾಗಲೂ ಹೇಳುತ್ತಾನೆ ಈ ಮೊಕದ್ದಮೆಯನ್ನು ಮ್ಯಾಜಿಸ್ಟ್ರೇಟರಲ್ಲಿ ವಿಚಾರಣೆಗೆ ಹಾಕಿರುತ್ತಾರೆ ಆ ಕಾಲದಲ್ಲಿ ಇನ್ನು ಯಾರ‍್ಯಾರು ಸೇರಿ ಎಷ್ಟೆಷ್ಟು ಸಾಮಾನುಗಳನ್ನು ಅಪಹರಿಸಿರುತ್ತಾರೋ ಎಲ್ಲಾ ಗೊತ್ತಾಗುವದು

ಜೋಬಿಯೂ ಕೋರ್ಟಿಗೆ ಸೇರಿದ ಯಿಗತ್ಪೂರ ಡಿಸ್ಟ್ರಿಕ್ಟನಲ್ಲಿರುವ ಒಂದಾನೊಂದು ಹಾಡಿಯವರ ಗ್ರಾಮದಲ್ಲಿ ಒಬ್ಬ ಮಾರ್ವಾಡಿ ಸಾಹುಕಾರನಿಂದ ೩—೪ ಮಂದಿ ಸಾಲ ತೆಗೆದುಕೊಂಡಿದ್ದರು ಅವನು ತನ್ನ ಹಣಕ್ಕಾಗಿ ಅವರನ್ನು ಸಖ್ತ ತಗಾದೆ ಮಾಡಿದರು ಆಗ್ಯೆ ಆ ಮಾರ್ವಾಡಿ ದೇಶೀ ದಾರಿಯ ತಮ್ಮ ಹೊಲಗಳಲ್ಲಿ ದವಸವನ್ನು ತೂರಿ ಸಿದ್ಧ ಮಾಡುತ್ತಿದ್ದರು ಸಾಹುಕಾರನು—ಈ ದವಸವನ್ನೆಲ್ಲಾ ನಾಳೆ ಬೆಳಿಗ್ಗೆ ಬಂದು ತೆಗೆಸಿಕೊಂಡು ಹೋಗುತ್ತೇನೆ ನೀವು ಕೊಡಬೇಕಾಗಿರುವ ಹಣದ ಬದ್ಲಾಗಿ ಕಟಾಯಿಸಿಕೊಳ್ಳುತ್ತೇನೆ ಎಂಬುದಾಗಿ ಹೇಳಿದನು ಅದಕ್ಕೆ ಅವರು—ನಾವು ವರುಷದಲ್ಲೆಲ್ಲಾ ಕಷ್ಟ ಮಾಡಿರುವ ಈ ದವಸವನ್ನು ನೀನು ತೆಗೆದುಕೊಂಡು ಹೋಗಬೇಡ; ಇದರಲ್ಲಿ ಸ್ವಲ್ಪ ಭಾಗವನ್ನು ನಮ್ಮಗಳ ಮನೆಗೆ ಬಿಟ್ಟುಕೊಂಡು, ಉಳಿದದ್ದನ್ನು ನೀನು ಯಾವ ಖರೀದಿಗೆ ಕಟ್ಟಿಕೊಳ್ಳುತ್ತೀಯೋ ಅದಕ್ಕಿಂತಲೂ ಹೆಚ್ಚಿನ ಬೆಲೆಗೆ ಬಜಾರಿನಲ್ಲಿ ಮಾರಿ ನಿನ್ನ ಹಣವನ್ನು ತೀರಿಸುತ್ತೇವೆ ಎಂಬುದಾಗಿ ಬಹಳ ವಿನಯಪೂರ್ವಕವಾಗಿ ಬೇಡಿಕೊಂಡರು ಅವರ ಮಾತಿಗೆ ಸ್ವಲ್ಪವೂ ಲಕ್ಷ್ಯ ಕೊಡದೆ ಚೀಲಗಳನ್ನು ತೆಗೆದುಕೊಂಡು ಮಾರನೇದಿವಸ ಬೆಳಿಗ್ಗೆ ಸಾಹುಕಾರನು ಹೊಲದ ಬಳಿಗೆ ಬಂದೇಬಿಟ್ಟನು ಆಗಲೂ ಈ ದೇಸೀಯರರು ಅವನನ್ನು ಎಷ್ಟುವಿಧದಿಂದ ಬೇಡಿಕೊಂಡರೂ ಸಾಹುಕಾರನ ಮನಸ್ಸು ಕರಗದೇ ಇದ್ದದರಿಂದ, ಆ ಮೂರು ಮಂದಿಯೂ ಸೇರಿ ಈ ಸಾಹುಕಾರನನ್ನು ಎಳೆದುಕೊಂಡು ಹೋಗಿ ನೆಲದ ಮೇಲೆ ಕೆಡವಿ ಗುದ್ದಿ ಗುದ್ದಿ ಅಸ್ತವ್ಯಸ್ತ ಮಾಡಿದರಲ್ಲದೆ, ಅವನು ಚೀಲಗಳಿಗೆ ಹೊಲಿಯುವದಕ್ಕಾಗಿ ಜೊತೆಯಲ್ಲಿ ತಂದಿದ್ದ ಸುತ್ತಲಿಯ ಘರದಿಂದಲೇ ಅವನಿಗೆ ಉರುಲು ಹಾಕಿ ಕೊಂದುಬಿಟ್ಟರು ಸಾಹುಕಾರನು ಅವರು ತನ್ನನ್ನು ಹೊಡೆಯುತ್ತಿರುವಾಗ—ನೀವು ನನ್ನನ್ನು ಬಿಟ್ಟುಬಿಡಿ, ನೀವು ಕೊಡುವ ಹಣವನ್ನು ನಿಮಗೆ ಮಾಫ ಮಾಡಿಬಿಡುತ್ತೇನೆ ಮತ್ತು ಪ್ರತಿಯೊಬ್ಬನಿಗೂ ಹೆಚ್ಚಾಗಿ ಹಣ ಕೊಡುತ್ತೇನೆ ಎಂದು ಬಹಳವಾಗಿ ಕೇಳಿಕೊಂಡನಂತೆ ಅದಕ್ಕೆ ಅವರು—ನಾವು ಇಷ್ಟು ದಿನಗಳಿಂದಲೂ ಸ್ವಲ್ಪ ಸಮಯ ನೀಡಿ ಹಣ ತೆಗೆದುಕೋ ಎಂಬುದಾಗಿ ಕೇಳಿದ್ದಕ್ಕೆ ನೀನು ಸ್ವಲ್ಪವೂ ಕನಿಕರ ಇಟ್ಟೆಯೋ, ಈಗ ನೀನು ಹೇಳುವದರಲ್ಲೆಲ್ಲಾ ನಮಗೆ ನಂಬಿಕೆ ಇಲ್ಲವೆಂದು ಹೇಳಿದರಂತೆ

ಧಾರ್ವಾಡದಲ್ಲಿ ಪ್ರಕಟವಾಗುವ ಲೋಕಬಂಧುವೆಂಬ ವರ್ತಮಾನ ಪತ್ರಿಕಾಕರ್ತರು ಇಂಗ್ಲಿಷರವರಿಗೂ, ಅಫ್ಗನಿಸ್ಥಾನದ ಅಮೀರರವರಿಗೂ ಇರುವ ಸಂಬಂಧವನ್ನು ಕುರಿತು ಬರೆಯುವದೇನಂದರೆ:—

ಅಮೀರ ಸಾಹೇಬರು ಇಂಗ್ಲಿಷರಿಗೆ ಸ್ನೇಹದ ಸ್ವಲ್ಪ ಮಾತ್ರಕ್ಕೆ ಸುಲಭವಾಗಿ ಸೆಳೆಯಲ್ಪಡುವ ಸ್ವಭಾವದವರಲ್ಲವೆಂದು ವ್ಯಸನಪಡಬೇಕಾಗಿದೆ ಇಂಗ್ಲಿಷರು, ರಷಿಯಾದವರು ಹಿಂದುಸ್ಥಾನದ ಮೇಲೆ ದಂಡೆತ್ತಿ ಬಂದರೆ ಅವರ ತೋಫಿನ ಬಾಯಿಗೆ ಕಾಬೂಲದ ಅಮೀರರನ್ನು ಗುರಿ ಮಾಡಿ, ಕೆಲಸ್ವಕಾಲದವರೆಗಾದರೂ ತಮಗೆ ವಿಶೇಷ ಸನ್ನಾಹ ಮಾಡಿಕೊಳ್ಳಲಿಕ್ಕೆ ಸಮಯವಿರುವದೆಂದು ಆಲೋಚಿಸಿ, ಆ ಅಮೀರರೊಡನೆ ಸ್ನೇಹ ಬೆಳಸಿ, ಅವರಿಗೆ ವರುಷ ೧೮ ಲಕ್ಷ ರೂಪಾಯಿಗಳನ್ನೂ, ಮದ್ದು ಗುಂಡು ಮೊದಲಾಗಿ ಬೇಕಾದ ಎಲ್ಲಾ ಸಹಾಯ ಸಂಪತ್ತುಗಳನ್ನೂ ದಯಪಾಲಿಸುತ್ತಿದ್ದರು ಆದದರಿಂದ ಅಮೀರರು ಆ ವೇಳೆಯೊಳಗೆ ಆಳಿದ್ದರು ಇಂಗ್ಲಿಷರು, ಮಹಾರಾಜರ ಅಪೇಕ್ಷೆಯನ್ನು ಧರ್ಮರಾಜನು ಪೂರೈಸಿದಂತೆ ಅಮೀರರ ಅಪೇಕ್ಷೆಗಳನ್ನು ಈ ವರೆಗೂ ಪೂರೈಸಿ ಕೊಡುತ್ತ ಬಂದರು ಈಗ ಸ್ವಲ್ಪ ದಿವಸಗಳ ಕೆಳಗೆ ಮಾಡಿದ ವಿಷಯವಾಗಿ ಬರೆದು, ರಷಿಯಾದವರು ಈಗಾಗಲೇ ಹಿಂದೂಸ್ಥಾನದ ಗಡಿಯ ಮೇಲೆ ಬಂದು ನಿಂತಿರುತ್ತಾರೆಂಬ ವರ್ತಮಾನವು ಮುಚಕರ ಸ್ಮರಣೆಯಲ್ಲಿರಬಹುದು ಆದ್ಯೆ ಇಂಗ್ಲಿಷರು ಈ ಪ್ರಕರಣದ ವಿಷಯವಾಗಿ ವಿಶೇಷ ಕರಡುಮಾಡುಗಳನ್ನು ಮಾಡುವದಕ್ಕೋಸ್ಕರ ಆ ಅಮೀರರ ಭೇಟಿಯಾಗುವದಕ್ಕಾಗಿ ತಮ್ಮ ಸೇನಾಧಿಪತಿಗಳಾದ ಲಾರ್ಡ್ ರಾಬರ್ಟ್ ದೊರೆಗಳನ್ನು ಕಳುಹಿಸಿಕೊಡುವ ಆಲೋಚನೆ ಮಾಡಿ, ಆ ವಿಷಯವಾಗಿ ಅಮೀರರ ಅನುಮೋದನ ತೆಗೆದುಕೊಂಡು, ಉಭಯತ್ರರ ಪರಸ್ಪರ ಲಾಭವು ಇದರಲ್ಲಿ ಆಗಬೇಕೆಂದು ಗೊತ್ತಾದದ್ದು ನೆನಪಿನಲ್ಲಿರಬಹುದು ಇದೆಲ್ಲ ಸಫಲವಾಗಿಯೂ ಆದ ಬಳಿಕ ನಿಜವಾಯಿತೆಂಬುದು ಈ ಕೊನೆಗಾಣಲಿಲ್ಲವು ಇಷ್ಟರೊಳಗೆ ಅಮೀರರ ರಾಜ್ಯದೊಳಗೆ ತುಂಬ ಎದ್ದದರಿಂದ ಪರಸ್ಪರ ಭೇಟಿಯು ವಿಚಾರವು ಕೂಡ ಹಾಳಾಗಿ ಹೋಯಿತು ದೇಶದಲ್ಲಿ ಶಾಂತತೆಯು ಆದನಂತರ ಇಂಗ್ಲಿಷರು ಅಮೀರರನ್ನು—ನಿಮಗೆ ಎಂದು ಪುರಸತ್ತು ಆದೀತು, ಎಂದು ಕೇಳಿದರು ಆದರೆ ಅಷ್ಟರೊಳಗೆ ಅಮೀರರ ಮನಸ್ಸು ಇಂಗ್ಲಿಷರ ವಿಷಯವಾಗಿ ಕೆಟ್ಟಿದ್ದರಿಂದಲೋ ಏನೋ ಅವರು ಉತ್ತರವನ್ನೂ ಕೊಡದೆ ಹೋದರು ಇತ್ತ ಇಂಗ್ಲಿಷರು, ಈ ಹೊತ್ತು ಅಮೀರರ ಕಡೆಯಿಂದ ಜವಾಬು ಬಂದೀತು, ನಾಳೆ ಬಂದೀತು ಎಂದು ಚಾತಕ ಪಕ್ಷಿಗಳಂತೆ ಮಾರ್ಗ ನಿರೀಕ್ಷಣೆ ಮಾಡುತ್ತಿದ್ದರು ಆದರೆ ಇದೆಲ್ಲ ವ್ಯರ್ಥವಾಯಿತೆಂದು ಈಗಲೇ ತಿಳಿಯ ವರ್ತಮಾನ ಬಂದಿರುತ್ತದೆ:—ಅಮೀರರ ಮನಸ್ಸು ಇಂಗ್ಲಿಷರ ವಿಷಯವಾಗಿ ತೀರ ಕೆಟ್ಟು ಹೋಗಿರುತ್ತದೆ ಅಮೀರರು ಸರ್ಕಾರದ ಮೇಲೆ ಬಂದೋಬಸ್ತು ಮಾಡುವದಕ್ಕಾಗಿ ಬೆಳಗಲೂ ಎಂಬ ಜಾತಿಯ ಜನರಿಗೆ ಗುಂಡು ಗುಂಡಾಗಿ ಕೂಡುವಂತೆ ಅಪ್ಪಣೆ ಮಾಡಿರುತ್ತಾರೆ ಇದೆಲ್ಲ ದುರ್ಲಕ್ಷವು ಕಳೆದ ವಾರದಲ್ಲಿ ಕೈಗೆ ಕೈ ಹತ್ತುವ ಕಾಶ್ಮೀರ ಪ್ರಕರಣವು ಕೇವಲವಾಯಿತು ಅದೇ ಈ ವಾರದಲ್ಲಿ ಕಾಬೂಲದವರಿಗೆ ಎದ್ದಿರುತ್ತದೆ ಅಂತೂ ಯಿವಲೀ ದೇಶದ ಮುಸಲ್ಮಾನರ ಭವಿಷ್ಯವು ಪ್ರತಿ ವರುಷದಂತೆ ಹಾಳಾಗಿ ಹೋಗದೆ ಈ ವರುಷ ನಿಜವಾಗುವದೆಂದು ಕಾಣುತ್ತದೆ ಯಾವದರ ಮೇಲೂ ವಿಶ್ವಾಸವಿಡಬಾರದು ಯಾಕೆಂದರೆ ಈಗಿನ ದಿವಸ ಮಾನವೇ ಅಧಿಕವಾಗಿರುತ್ತದೆ

ಶಾಲೀವಾಹನಶಕ ೧೮೨೪ ನೇ ಶುಭಕೃನ್ನಾಮ ಸಂವತ್ಸರದ ಮಾಘ ಬಹುಳ ಅಮಾವಾಸ್ಯೆ ಗುರುವಾರದಿಂದ ಫಾಲ್ಗುಣ ಶುದ್ಧ ಷಷ್ಠಿ ಬುಧವಾರದವರೆಗಿನ ವಾರದ ಪಂಚಾಂಗ.

೧೯೦೩ ನೇ ಇಸವಿ, ಫೆಬ್ರವರಿ

ತಾ.	ವಾರ.	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.	ಚಾಂದ್ರಮಾನ ತಿಥಿ
16	ಸೋ.	ಅ	34-22	ಧ.	41-1	7
17	ಮಂ.	ಪ್ರ.	36-25	ಶ.	40-39	8
18	ಬು.	ದ್ವಿ	33-45	ಪೂ.	30-30	9
19	ಗು.	ತ.	29-41	ಉ.	37-1	10
20	ಶು.	ಚ	25-7	ರೇ.	44-6	11
21	ಶನಿ.*	ಪಂ.	19-46	ಅ.	30-22	12
22	ಭಾ	ಷ	14-7	ಭ	26-55	13

* ಮೀನಸಂಕ್ರಾಂತಿ

ಬೆಲೆ ಧಾರಣೆ.

ದಿನಸಿ.	ಮೈಸೂರು	ಬೆಂಗಳೂರು.
	ರೂ. ಆ. ಪೈ.	ರೂ. ಆ. ಪೈ.
ಕಿಸ್ತಿ ಅಕ್ಕಿ ಪಲ್ಲ ೧ಕ್ಕೆ ..	೧೧—೪—೦	೧೨—೦—೦
ಕೆಂಬೂತಿ ಅಕ್ಕಿ ಅವ್ವಲ್ ..	೧೧—೦—೦	೧೧—೦—೦
ಮಿರೋ ಅಕ್ಕಿ ದುಯಂ ..	೧೦—೮—೦	೧೦—೮—೦
ಜೀರಾಸಾಲೆ ಅಕ್ಕಿ	೧೦—೪—೦	೧೧—೬—೯
ಸಂಣಕ್ಕಿ ಅವ್ವಲ್	೧೯—೮—೦	೧೯—೪—೦
ಮಿರೋ ಅಕ್ಕಿ ದುಯಂ ..	೧೯—೪—೦	೧೧—೮—೦
ತೊಗರೀಬೇಳೆ ಪಲ್ಲ ೧ ಕ್ಕೆ	೧೦—೮—೦	೧೨—೦—೦
ಮಿರೋ ದುಯಂ ತರಹ ..	೧೦—೪—೦	೧೦—೦—೦
ಹೆಸರಾಗಿ ಪಲ್ಲ ೧ಕ್ಕೆ ..	೬—೪—೦	೧೨—೦—೦
ಕಾರಾಗಿ	೮—೨—೦	೧೨—೦—೦
ಹುರುಳಿ ಪಲ್ಲ ೧ಕ್ಕೆ ..	೧೦—೮—೦	೮—೬—೦
ಬಿಳೀ ಅವರೆ	೯—೦—೦	೮—೮—೦
ಹೆಸರು	೧೦—೪—೦	೧೦—೦—೦
ಉಪ್ಪು	೧೨—೦—೦	೯—೮—೦
ಕಡಲೆ	೧೨—೦—೦	೧೦—೦—೦
ಎಳ್ಳು	೧೪—೧೨—೦	೧೨—೦—೦
ಹುರಳಿ	೬—೬—೦	೬—೪—೦
ನೆಲಗಡಲೇಕಾಯಿ ಪಲ್ಲ ೧ಕ್ಕೆ ..	೧—೮—೦	೨—೦—೦
ಮೆಣಸಿನಕಾಯಿ	೩—೦—೦	೨—೮—೦
ದುಯಂ ತರಹ	೨—೮—೦	೨—೬—೦
ಬೆಲ್ಲ ದೊಡ್ಡ ಅಚ್ಚು ೧೦೦ ಕ್ಕೆ	೫—೮—೦	ಮಾ ೧—೯—೦
ಸಣ್ಣ ಅಚ್ಚು ,, ..	೫—೦—೦	ಹಾ॥ ೧—೫—೦
ಒಣ್ಣೆಣ್ಣೆ ಮಣ ೧ಕ್ಕೆ ..	೪—೨—೦	೪—೮—೦
ಹರಳೆಣ್ಣೆ	೪—೨—೦	೩—೧೨—೦
ಕೊಬ್ಬರಿ ಪಲ್ಲ ೧ಕ್ಕೆ	೮—೮—೦	೮—೦—೦
ಜೀರಿಗೆ	೯—೮—೦	೯—೮—೦
ಹೊಗೆಸೊಪ್ಪು ಮಣ ೧ಕ್ಕೆ	೧—೨—೦	೧—೮—೦
ಹಳೇ ಹೊಗೆಸೊಪ್ಪು ..	೧—೦—೦	೧—೩—೦
ತುಪ್ಪ	೧೯—೧೨—೦	೧೨—೦—೦
ಸೀಮೆ ಯಂಗೆ ಹಿಟ್ಟು ೧ ಕ್ಕೆ	೪—೮—೩	೪—೨—೦
ತೆಂಗಿನಕಾಯಿ ೧೦೦ ಕ್ಕೆ	೪—೮—೦	೪—೧೨—೩
ಚಿನ್ನ (ತೊಲ)		
ಹೆಂಪು ..	೧೬—೦—೦	೧೬—೧೧—೦
ಪವನು ..	೧೯—೦—೦	೧೬—೧೪—೦
ಗಟ್ಟಿ ..	೨೬—೮—೦	೨೫—೦—೦

Mysore.—Printed and published for the Proprietor at the Wesleyan Mission Press.

16/2/03.

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೬ | ಮೈಸೂರು ಸರ್ ೧೮೯೩ ನೇ ಇಸವಿ ಫೆಬ್ರವರಿ ತಾರೀಖು ೨೩ ನೇ ಗುರುವಾರ. | ಸಂಚಿಕೆ ೩೬

ವಿಶೇಷ, ನೋಡಿನೋಡಿ! ನೋಡಿನೋಡಿ!! ನೋಡಿನೋಡಿ!!!

೧೮೯೩ ನೇ ವರುಷದ ಲೋವರ್ ಸೆಕಂಡರಿ ಪರೀಕ್ಷೆಯ ಟೆಕಸ್ಟಿನ ನೋಟ್ಸು.

ಈ ಪರೀಕ್ಷೆಗಾಗಿ ನಿಯಮಿಸಲ್ಪಟ್ಟ ಸೋಮೇಶ್ವರಶತಕ, ಪದ್ಯಸಾರ ೧೭೬—೨೦೩ ಗೂ ೩೮೦ ಪ ಪದ್ಯಗಳೂ, ಕನ್ನಡ ಭಾರತ ಕಥಾಸಂಗ್ರಹ ಸಭಾಪರ್ವ: ಇವುಗಳಿಗೆ ಅನ್ವಯ, ಅರ್ಥ, ತಾತ್ಪರ್ಯ ಅವಯವಾರ್ಥ, ವ್ಯಾಕರಣ ಸಂಗತಿಗಳು, ವಾಕ್ಯವಿಭಜನೆ, ಪೂರ್ವಕಥೆ, ಇವೇ ಮೊದಲಾದವುಗಳನ್ನು ವಿವರಿಸಿ ವ್ಯಾಖ್ಯಾನವು ಚಿಕ್ಕಮಗಳೂರು ಇಂಗ್ಲೀಷ್ ಸ್ಕೂಲಿನ ಪಂಡಿತರಾದ ಎಸ್. ರಾಘವೇಂದ್ರಾಚಾರ್ಯರಿಂದ ಬರೆಯಲ್ಪಟ್ಟು ಈ ಮುದ್ರಾಶಾಲೆಯಲ್ಲಿ ಪ್ರಿಂಟಾಗುತ್ತಲಿದೆ. ಈ ನೋಟ್ಸು ಗವರ್ನಮೆಂಟ ಪ್ರತಿಗನುಸಾರವಾಗಿ ಇದೆ. ಕಾಪಿಗಳು ಸ್ವಲ್ಪವಾಗಿಯೇ ಪ್ರಿಂಟು ಮಾಡುವದರಿಂದ ಅಪೇಕ್ಷೆಯುಳ್ಳವರು ಜಾಗ್ರತೆಯಾಗಿ ಜನವರೀ ತಿಂಗಳೊಳಗಾಗಿ ಈ ಕೆಳಗಿನ ವಿಳಾಸದವರಿಗೆ ಬರೆದು ತರಿಸಿಕೊಳ್ಳಬಹುದು. ಕ್ರಯ ೮ ಆಣೆ. ಪೋಸ್ಟೇಜು ೧ ಆಣೆ. ಮತ್ತು ಆದಿಪರ್ವ, ಸಭಾಪರ್ವ, ವಿರಾಟಪರ್ವ, ಭೀಷ್ಮಪರ್ವ, ದ್ರೋಣಪರ್ವ, ಶಲ್ಯಪರ್ವ, ಸೌಪ್ತಿಕಪರ್ವ, ಸ್ತ್ರೀಪರ್ವ, ಶಾಂತಿಪರ್ವ—ರಾಜಧರ್ಮ, ಆಪದ್ಧರ್ಮ, ಮೋಕ್ಷಧರ್ಮ ಈ ಪರ್ವಗಳು ಪ್ರಿಂಟಾಗಿ ವಿಕರಿಗೆ ಸಿದ್ಧವಾಗಿವೆ. ಈಗ ಅನುಶಾಸನೀಕಪರ್ವವು ಪ್ರಿಂಟಾಗುತ್ತಲಿದೆ. ಇಷ್ಟವುಳ್ಳವರು ತರಿಸಿಕೊಳ್ಳಬಹುದು.

ಎಂ. ರುದ್ರಪ್ಪ ಆಂಡಸನ್,
ಪ್ರಾಪ್ರೈಟರ್, ಶ್ರೀಚಾಮರಾಜೇಶ್ವರ ಪ್ರೆಸ್,
ಲಾಲ್—ಬಾಗ್ ರೋಡ್, ಬೆಂಗಳೂರು

WOMAN: HER PLACE AND POSSIBILITIES

A LECTURE

BY

Miss. Frances M. Dryden, B. A.

This is a very powerful lecture and should be read by every Hindu who understands English. We have only a few copies at hand and the price has been greatly reduced, the price of each copy being 3 pies only.

Apply to
THE WESLEYAN MISSION PRESS,
Mysore City.

ÆSOP'S FABLES.

These are well printed in English, and illustrated both inside and out-side. The covers are in striking colours. The set is complete in 3 *Volumes*. The *whole set can now be had* at a reduced price of 3 pies. Only a few copies are available.

Apply at once to
THE WESLEYAN MISSION PRESS,
Mysore City.

ನೋಟೀಸ್.

		ಕ್ರಯ			ಟಪಾಲು ಸಹಿತವಾಗಿ		
Campbell's.	ಕನ್ನಡ ವ್ಯಾಕರಣ ಸಾರ	೦	೨	೦	೦	೨	೬
Object Lessons.	ವಸ್ತು ಪಾಠಗಳು	೦	೧	೦	೦	೧	೬
Picture do	ಚಿತ್ರಗಳು ಸಹಿತವಾಗಿ	೦	೨	೦	೦	೨	೬
	ಈ ಮೂರು ಪುಸ್ತಕಗಳು ಪ್ರೈಮರಿ ಶಾಲೆಗಳಲ್ಲಿ ಓದತಕ್ಕ ಪುಸ್ತಕಗಳು.						
	ಸ್ತ್ರೀಯರು ಓದತಕ್ಕ ಪುಸ್ತಕ	೦	೫	೦	೦	೫	೬
	ಗಣಿತ ವಿದ್ಯೆ ..	೦	೪	೦	೦	೪	೬
	ಗಣಿತ ಮಗ್ಗಿಗಳು ..	೦	೧	೦	೦	೧	೬
	ಸಂಸ್ಕೃತ ಕರ್ಣಾಟಕ ಭಾಷಾಮಂಜರಿ	೦	೨	೦	೦	೨	೬
	ಭೂಗೋಳ ಪ್ರಶ್ನೋತ್ತರ	೦	೨	೦	೦	೨	೬
	ಇಂಗ್ಲೀಷೂ ಕನ್ನಡವೂ ಬಾಲಬೋಧೆ ೧ನೇ ೨ನೇ ಭಾಗಗಳಿಗೆ	೦	೧	೦	೦	೧	೬
	ಕಾವ್ಯಮಾಲೆ (Minor Poetical Anthology)	೦	೭	೦	೦	೭	೬
	ಬಾಲವ್ಯಾಕರಣ ..	೦	೫	೦	೦	೫	೬
	ಹಳೆಗನ್ನಡ ವ್ಯಾಕರಣ ಸೂತ್ರಗಳು	೦	೬	೦	೦	೬	೬
	ಇಂಗ್ಲೀಷೂ ಕನ್ನಡವೂ ಸಂಭಾಷಣ ವಾಕ್ಯಗಳು	೦	೧೦	೦	೦	೧೦	೬
	ಛಂದೋಮಣಿ ದರ್ಪಣ ..	೧	೦	೦	೧	೪	೬
	Kan. Eng. Pocket Dictionary	೧	೮	೦	೧	೫	೭
	Eng. Kan. School Dictionary	೨	೧೨	೦	೨	೧೨	೬
	ಏಸೋಪ ಕಥೆ ..	೦	೮	೪	೦	೪	೬
	ಆತ್ಮಿಕಯಾತ್ರಿಕ ಯುದ್ಧ (Bunyan)	೦	೧೨	೦	೦	೧೩	೬
	ಕ್ರೈಸ್ತ್ಯ ಪದ್ಧತಿ ೧ ನೇ ಭಾಗ ೨ ಅಣ ೩ ನೇ ಭಾಗ	೦	೧	೬	೦	೨	೦
	ಭಕ್ತಿಸಾರ ..	೦	೧	೦	೦	೧	೬
	ಸತ್ಯ ವಾಕ್ಯಾವಳಿ	೦	೧	೦	೦	೧	೬
	ಕಾವ್ಯಪುಂಜ ..	೦	೩	೦	೦	೩	೬

A new Edition of the Geography suited for the Lower Secondary Examination is now ready.— Edited by Rev. H. Gulliford. Price 6 As.

ಮೇಲೆ ನಮೂದಿಸಿರುವ ಪುಸ್ತಕಗಳನ್ನು ಬೆಂಗಳೂರು ದಂಡಿನ **ಮೋಗಾಟೆ ಹತ್ತಿರವಿರುವ** ಪುಸ್ತಕ ಶಾಲೆಯಲ್ಲಿ ಪಡೆಯಬಹುದು.

ವೃತ್ತಾಂತ ಪತ್ರಿಕೆ.

ಚಂದಾ ನಿರ್ಣಯ.

	ರೂ. ಆ. ಪೈ.
ಸ್ಥಳದವರಿಗೆ ವರ್ಷ ೧ಕ್ಕೆ ...	೧—೦—೦
ಪರಸ್ಥಳದವರಿಗೆ ವರ್ಷ ೧ಕ್ಕೆ ...	೧—೪—೦
ಬಿಡಿ ಪತ್ರಿಕೆ ೧ಕ್ಕೆ	೦—೦—೪

ಈ ಪತ್ರಿಕೆಯು ಮೈಸೂರು ರಾಜಧಾನಿಯಲ್ಲಿ ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ, ಪ್ರಕಟಿಸಲ್ಪಡುವದು. ಬಡವರು ಮೊದಲುಗೊಂಡು ಸಮಸ್ತರಿಗೂ ಸುಲಭಸಾಧ್ಯವಾಗುವಂತೆ ಈ ಪತ್ರಿಕೆಗೆ ಇಷ್ಟು ಅಲ್ಪ ಮೌಲ್ಯವನ್ನು ನಿರ್ಣಯಿಸಿರುತ್ತೇವೆ. ಈ ಪತ್ರಿಕೆಯನ್ನು ಅಪೇಕ್ಷಿಸುವವರು ಚಂದಾಹಣವನ್ನು ಮುಂಗಡವಾಗಿ ಕಳುಹಿಸಬೇಕು.

ಪ್ರಕಟನೆಯ ನಿರ್ಣಯ.

	ರೂ. ಆ. ಪೈ.
ಮೊದಲನೇ ಆವರ್ತಿ ಪಙ್ಕ್ತಿ ೧ಕ್ಕೆ ...	೦—೨—೦
ಎರಡನೇ ಆವರ್ತಿ ಪಙ್ಕ್ತಿ ೧ಕ್ಕೆ ...	೦—೧—೦

ಅನಂತರ ಪ್ರತಿಯೊಂದು ವಾರದಲ್ಲಿಯೂ ಪಙ್ಕ್ತಿ ೧ಕ್ಕೆ ೧ ಆಣೆಯಂತೆಯೇ ಲೆಕ್ಕ ಮಾಡಲ್ಪಡುವದು. ಕಂಟ್ರಾಕ್ಟಿಗೆ ಕೊಡಬೇಕೆಂದಿರುವವರು ಎಡಿಟರಿಗೆ ಬರೆದು ವಿವರವನ್ನು ತಿಳಿಯಬಹುದು.

ಎಡಿಟರ್,
ವೃತ್ತಾಂತ ಪತ್ರಿಕೆ.

ನೋಟಿಸ್.

ಪುಸ್ತಕಗಳು.	ಕ್ರಯ.
ವ್ಯಾಕ್ಯಾ ವ್ಯವಹಾರಿಕ	1—8—0
ಕನ್ನಡ ಇಂಗ್ಲೀಷು ನಿಘಂಟು 1 ನೇ ದೊಡ್ಡ ತರಹ	3—0—0
„ „ 2 ನೇ ತರಹ	2—8—0
ಬಾಲಕರು ಓದುವ ಎರಡನೆ ಜ್ಞಾನೋಪದೇಶದ ಪ್ರಶ್ನೋತ್ತರಗಳು	0—1—0
ಸಭೆಯ ನಿಯಮಗಳನ್ನು ಕುರಿತವು	0—0—6
ಕಥಾ ಸಂಗ್ರಹ 1 ನೇ ಭಾಗದಿಂದ 3 ವರೆಗೆ	1—0—0
ಕಥಾ ಸಂಗ್ರಹ 1 ರಿಂದ 6 ನೇ ಭಾಗ ಹೊಸ ಛಾಪೆ	3—0—0
„ „ ದೊಡ್ಡ ತರಹ	1—8—0
ಜೋಸೆಫನ ಚರಿತ್ರೆ	0—1—0
ಸತ್ಯವೇದವನ್ನು ಕುರಿತು 2 ನೇ ಭಾಗ	0—1—0
ಪ್ರಸಂಗಿಯ ದರ್ಪಣ	0—0—6
ಇಂಗ್ಲೀಷು ಭಾಷೆಯಲ್ಲಿಯೂ, ಕನ್ನಡ ಭಾಷೆಯಲ್ಲಿಯೂ, ಬಿಬ್ಲಿನ ವಿಷಯಗಳನ್ನು ವಿವರಿಸುವ ನಿಘಂಟು	0—2—0
ಕನ್ನಡ ವ್ಯಾಕರಣ (ಇಂಗ್ಲೀಷಿನಲ್ಲಿ)	2—0—0
ಹಿಂದುಸ್ತಾನಿ ವ್ಯಾಕರಣ	1—0—0
ಬಾಲಬೋಧ ಸುಬೋಧಿನಿ	0—1—0
ದಶ ಅವತಾರಗಳ ವಿಮರ್ಶೆ	0—0—6
ಕ್ರೈಸ್ತರ ಪ್ರಾರ್ಥನೆಗಳ ಸಂಗ್ರಹ	0—12—0

ಮೇಲೆ ನಮೂದಿಸಿರುವ ಪುಸ್ತಕಗಳನ್ನು ಅಪೇಕ್ಷಿಸುವವರು ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್ಸಿಗೆ ಬರೆದು ತರಿಸಿಕೊಳ್ಳಬಹುದು. ಅದೇ ಹಣವು ಬರಬೇಕು.

ವೆಸ್ಲಿಯನ್ ಮಿಷನ್ ಪ್ರೆಸ್,
ಮೈಸೂರು.

ಜಾಹೀರಾತು

THE KANARA & MYSORE TRADING AGENCY
BOMBAY.

ಕಣ್ಣಿಗೆ ತಂಪು ಕೊಡುವ

ಚಂದ್ರಕಾಂತ ಶಿಲೆಯ ಕಂಡನಕಗಳು.

೩ ॥ ರೂಪಾಯಿ ಕೆಳಗಿನ ಕ್ರಯವನ್ನು ನಮ್ಮಲ್ಲಿಸಿಗಲಾರವು.

ಸಾಧಾರಣ	೩ ॥ ರೂಪಾಯಿ	ಜರ್ಮನ್ ಶಿಲೆಯಲ್ಲಿ
ಮಧ್ಯಮ	೫ „	ಜಪಾನದ ಶಿಲೆಯಲ್ಲಿ
ಉತ್ತಮ	೬ ॥ „	ಬೆಲ್ಜಿ ಶಿಲೆಯಲ್ಲಿ
ಬಂಗಾರದಲ್ಲಿ ಕಟ್ಟಿದ್ದು	೧೮ „	ಡಿಟ್ಟೋ

ಕೀ ಲೆ ಯ ಘ ಡಿ ಯಾ ರ ವು.

ಕ್ರಯ ೩ ॥ ರೂಪಾಯಿ.

ಈ ಘಡಿಯಾರವು ಕಡಿಮೆ ಕ್ರಯದ್ದಾದರೂ, ಹೆಚ್ಚಿನ ಕ್ರಯದ ಘಡಿಯಾರಗಳಲ್ಲಿರುವ **ಪಕ್ಕೀಕರಣ ಇದರಲ್ಲಿ** ಇರುವದು. ಭದ್ರವಾದದ್ದು. ಬಾಳಿಕೆ ಬರುವಂಥಾದ್ದು.

ಪಿಂ ಚ ಮು ತ್ತು.

ಪ್ರತಿ ಒಂದು ೧ಕ್ಕೆ ೨ ॥ ರೂಪಾಯಿ ಕ್ರಯವು. ಇದರಲ್ಲಿ ೧೦೦, ೧೨೫, ೧೫೦, ೨೦೦, ಈ ರೀತಿ ಮುತ್ತುಗಳಿರುವವು. ಇಷ್ಟು ೧೨ ಆಣೆಗಳನ್ನು ಹೆಚ್ಚುಕೊಡದೆ ೧ ರೂಪಾಯಿ ಕಳುಹಿ ಬೇಕಾದವರು. **ಕೇಳುವವರು ಕೆಳಗಿನ** ವಿಳಾಸಕ್ಕೆ ಬರೆಯಬೇಕಾಗಿದೆ.

ಮ್ಯಾನೇಜರ್,
ಕೆನರಾ ಎಂಡ್ ಮೈಸೂರ ಟ್ರೇಡಿಂಗ ಏಜನ್ಸಿ. ಆಫೀಸ್, **ಮುಂಬಯಿ.**

MUNICIPAL NOTICE.

The following business will be transacted at the ordinary Meeting of the Municipal Commissioners for the City of Mysore, to be held **at the Town Hall, on Tuesday, the 28th February, 1893 at 8 a. m.**

Subjects.

I. Passing of accounts of Receipts and Disbursements for the month January 1893

II. Proposals of Mr. Venkata Krishnaiah :-

(1) For the construction of a lahour-ward for High Caste women in the lying-in-Hospital, Mysore, and employment of a Brahmin cook and servant for the benifit of its inmates.

(2) For building a dozen rooms, a Kitchen and a bath-room at the South-Eastern corner of the General Hospital for the accomodation of such of the Brahmin Patients, as wish to take advantage of the Hospital treatment as in-patients and also to employ two cooks.

(3) For the stoppage of pipe water to the Town Hall and Clock Tower gardens and to sink wells for the supply of water for these gardens.

III. The question of disposal of tenders received for the supply of Kerosine oil from 1st March to 30th June 1893.

Deferred Subjects.

IV. Inspection report of the School Committee in connection with :—

(1) Saradavilasa Patasala called for in para 17 of the resolution dated 31st Dec. 1892.

V. Mr. Venkata Krishnaiah's proposals :—

(8) The closing up of well and pit latrines.

(9) Measures to be taken to prevent speculation in building sites.

(10) Election of Committees.—

(1) For the Town Hall.

(2) For the satisfactory disposal of petitions, applications, for sites licenses &c.; consisting of the Municipal Commissioners of each Mohalla, the Sanitary Inspector and D. P. W. Overseers

(3) To aid the Vice-President in cases of land acquisitions

(4) To examine and report whether the question of Mohatarfa and Octroi collection cannot be improved.

Additional Subjects.

V. Application from Mr. B. R. Subba Rao, Secretary to the Dodda Petta Night School Committee for Grant-in-aid of Rs. 10 a month to enable the Committee to do justice to their assuming charge and management of the said institution.

VI. Mr. Ambley Anniah Pandit's proposal for the post-ponement of tax on looms opened by weavers, lately settled in Mysore, under special arrangement.

Municipal Board's Office,
Mysore:
20th February, 1893.

A. NARASIMHENGAR,
Vice-President.

ವೃತ್ತಾಂತ ಪತ್ರಿಕೆ.

—:o:—

೧೮೯೩ ನೇ ಇಸವಿ ಫೆಬ್ರವರಿ ತಾ|| ೨೩ ನೇ ಗುರುವಾರ.

ಹಿಂದೂ ವಿಧವೆಯರು ಮತ್ತು ಅವರಿಗಾಗಿ ಏನು ಮಾಡಬೇಕು.

ಭೂಮಂಡಲದಲ್ಲಿ ಸಾಧಾರಣವಾಗಿ ಬಲಿಷ್ಠರು ದುರ್ಬಲರನ್ನು ಹಿಂಸಿಸುವದು ರೂಢಿಯಾಗಿದೆ. ಕಾಡು ಜನರಲ್ಲಿ ಕಷ್ಟತರವಾದ ಕೆಲಸಗಳನ್ನು ಮಾಡತಕ್ಕವರು ಹೆಂಗಸರೆ. ಗಂಡಸರು ಸಾಧಾರಣವಾಗಿ ಜಗಳವಾಡುವದು, ಬೇಟೆಯಾಡುವದು, ಕುಡಿಯುವದು, ಚುಟ್ಟಾ ಸೇದುವದು ಇವೇ ಮುಂತಾದ ಕೆಲಸಗಳನ್ನು ಮಾಡುವದೇ ಹೊರ್ತು ಬೇರೆ ಏನು ಮಾಡುವದಿಲ್ಲ. ಇವರಿಗಿಂತಲೂ ಹಿಂದುಗಳು ನಾಗರಿಕಳುಳ್ಳವರಾಗಿರುತ್ತಾರೆ. ಆದಾಗ್ಯೂ ಇವರು ಸಹ ಹೆಂಗಸರನ್ನು ಅವಿವೇಕದಲ್ಲಿ ಕಾಣುತ್ತಾರೆ. ಪುರುಷರು ಸ್ವಪ್ರಯೋಜನಕ್ಕಾಗಿ ಸ್ತ್ರೀಯರು ತಾವಾಗಿಯೇ ಪುರುಷರ ಇಷ್ಟಾನುವರ್ತಿಗಳಾಗಿರುವದಕ್ಕೆ ಒಪ್ಪಿಕೊಳ್ಳುವಂತೆ ಉಪಾಯದಿಂದ ಅವರಿಗೆ ಬೋಧಿಸಿರುತ್ತಾರೆ. ಸ್ತ್ರೀಯರು ವಿದ್ಯಾವತಿಯರಾಗದಂತೆ ಮಾಡಿರುವದು ಸ್ತ್ರೀ ಜಾತಿಗೇನೆ ಒಂದು ದೊಡ್ಡ ಅನ್ಯಾಯವಾಗಿರುತ್ತದೆ. ಇದು ಹಿಂದೂಮತದಲ್ಲಿ ಒಂದು ಮುಖ್ಯೋಪದೇಶವಾಗಿರುವದು. ಇವರು ಎಲ್ಲಿವರೆಗೆ ಮೂಢರಾಗಿರುವರೋ ಅಲ್ಲಿವರೆವಿಗೂ ಬ್ರಾಹ್ಮಣರ ಸ್ವಾರ್ಥಗಳನ್ನು ಕೇಳುವದಕ್ಕೂ ಅವರಿಂದ ನೇಮಕವಾದ ಮೂಢಭಕ್ತಿಯುಳ್ಳ ಆಚಾರಗಳನ್ನು ಅನುಸರಿಸುವದಕ್ಕೂ ಸಿದ್ಧವಾಗಿರುತ್ತಾರೆ. ಹಿಂದುಗಳಲ್ಲಿ ಸ್ತ್ರೀಜನ್ಮವೇ ಕೆಟ್ಟದ್ದು, ಅದರಲ್ಲೂ ಅನಾಥರಾದ ವಿಧವೆಯರ ಜನ್ಮವು ಅತ್ಯಂತ ನೀಚವಾದದ್ದು ಎಂದು ಭಾವಿಸಿರುತ್ತಾರೆ. ಇದೇ ಇಂಥಾ ಕೆಟ್ಟ ಯೋಚನೆಗಳಿಗೆಲ್ಲಾ ಮತದ ಬೋಧನೆಯೇ ಮುಖ್ಯ ಕಾರಣವಾಗಿರುವದು. ಈ ಭರತಖಂಡದಲ್ಲಿ ವಿಧವೆಯರ ಸಂಖ್ಯೆಯೇ ಅಧಿಕವಾಗಿರುವದು ಒಂದು ಆಶ್ಚರ್ಯವೆಂದು ಹೇಳಬಹುದು. ಕಳೆದ ೧೮೮೧ ನೇ ಇಸವಿಯ ಜಾನೇಷುಮಾರಿ ಲೆಕ್ಕದ ಮೇರೆ ೨ ಕೋಟಿಯೂ ೬೦ ಲಕ್ಷ ವಿಧವೆಯರು ಈ ದೇಶದಲ್ಲಿ ಇದ್ದರು. ಇಂದರ ೫ ಮಂದಿ ಸ್ತ್ರೀಯರಲ್ಲಿ ಒಬ್ಬಳು ವಿಧವೆ ಎಂದು ಹೇಳಬಹುದಾಯಿತು. ಆದರೆ ಪುರುಷರಲ್ಲಿ ನೂರಾರು ೨೦ ರಲ್ಲಿ ಒಬ್ಬನು ಮಾತ್ರ ಪತ್ನಿಹೀನನು. ದಕ್ಷಿಣಹಿಂದುಸ್ಥಾನದ ಬ್ರಾಹ್ಮಣಸ್ತ್ರೀಯರಲ್ಲಿ ಮೂರುಮಂದಿಗೆ ಒಬ್ಬಳು ವಿಧವೆಯಾಗಿರುತ್ತಾಳೆ. ಹೀಗೆ ವಿಧವೆಯರ ಸಂಖ್ಯೆಯು ಪ್ರಬಲವಾಗಿರುವದಕ್ಕೆ ಮುಖ್ಯ ಕಾರಣಗಳೇನಂದರೆ:—೧ ಬಾಲ್ಯ ವಿವಾಹ; ೨ ವಿಧವಾ ವಿವಾಹ ನಿಷೇಧ. ಹಿಂದುಗಳಲ್ಲಿ ಬ್ರಾಹ್ಮಣರನ್ನು ಎಲ್ಲಾ ವಿಷಯಗಳಲ್ಲೂ ಶೂದ್ರರುಗಳು ಅನುವರ್ತಿಸುತ್ತಾರಾಗಿ ಈ ಬ್ರಾಹ್ಮಣರು ತಿರಸ್ಕರಿಸಿರುವ ವಿಧವಾವಿವಾಹವನ್ನು ಅವರೂ ಸಹ ತಿರಸ್ಕರಿಸಿದ್ದಾರೆ.

ಹಿಂದೂ ವಿಧವೆಯರ ಸ್ಥಿತಿ—ಇದು ನಾನಾ ಪ್ರಕಾರವಾಗಿರುವದು. ಹ್ಯಾಗಂದರೆ—ಅವರು ತೌರು ಮನೆಯಲ್ಲಿ ವಾಸಿಸುವಾಗ ಅವರಿಗೆ ಅಷ್ಟು ಕಷ್ಟಗಳಿರುವದಿಲ್ಲ. ಆದರೆ ಸಾಧಾರಣವಾಗಿ ಅವರು ಮಾವನ ಮನೆಯಲ್ಲಿ ವಾಸಿಸುತ್ತಾ ಇದ್ದರಿಂದ ಅಲ್ಲಿ ಅವರಿಗೆ ಉಂಟಾಗುವ ಕಷ್ಟಗಳನ್ನು ವರ್ಣಿಸಲು ಆದಿಶೇಷನಿಗೂ ಅಳವಲ್ಲ. ಇಂದರ ದಿನಗಳಿಗಿಂತಲೂ ಅಧಿಕವಾಗಿಯೇ ದುಡಿದು ಬಹಳ ಶ್ರಮಪಡುತ್ತಾರೆ. ಹಿಂದೂವಿಧವಾವಿವಾಹದ ಚರ್ಚೆಯಲ್ಲಿ ಈಶ್ವರಚಂದ್ರವಿದ್ಯಾಸಾಗರ ಪಂಡಿತರು—ಯಾರ ಸಂಸಾರದಲ್ಲಿ ಅವರ ಸಹೋದರಿಯರು, ಅಥವಾ ಪುತ್ರಿಯರು, ಇಲ್ಲವೆ ಇತರ ಬಂಧುವರ್ಗದವರು ಚಿಕ್ಕಂದಿನಲ್ಲಿಯೇ ವಿಧವೆಯರಾಗಿರುತ್ತಾರೆಯೋ ಅಂಥವರಿಗೇನೆ ಅವರ ಕಷ್ಟಗಳು ವೇದ್ಯವಾಗಿರುತ್ತವೆ. ನಿಂತವರಿಗೆ ಇವರ ವಿಷಯ ಅಷ್ಟು ಚನ್ನಾಗಿ ತಿಳಿಯದು ಇರ ಬಾರದು ಎಂದು ಹೇಳುತ್ತಾರೆ. ಈ ಹಿಂದೂ ವಿಧವೆಯರು ಎಷ್ಟೇ ಚಿಕ್ಕ ವಯಸ್ಸಿನವರಾಗಿದ್ದಾಗ್ಯೂ ಅವರು ಕೆಂಪು ಬಟ್ಟೆಯನ್ನೇ ಉಡಬೇಕು. ಯಾವ ಆಭರಣವನ್ನೂ ಧರಿಸಲಾಗದು. ಏಕಾದಶಿ ವ್ರತವನ್ನು ಅಂದರೆ—ಆ ದಿವಸಗಳಲ್ಲೆಲ್ಲಾ ಸಂಪೂರ್ಣ ಉಪವಾಸವೇ ಮಾಡಬೇಕು. ಉತ್ಸವಾದಿಗಳಲ್ಲಿ ಅವರು ಸೇರಲಾಗದು. ಯಾವದನ್ನೂ ಅವರು ಸ್ಪರ್ಶನ ಮಾಡಲಾಗದು, ಅವರ ಮುಖದರುಶನವೇ ಒಂದು ದೊಡ್ಡ ಅಪಶಕುನವಾಗಿರುವದು. ಹೀಗೆಲ್ಲಾ ಕಷ್ಟಗಳು ಅವರಿಗೆ ಇದ್ದಾಗ್ಯೂ ಅವರನ್ನು ಒಳ್ಳೇ ಮಾತುಗಳಿಂದಾದರು ಉಪಚರಿಸುವದಕ್ಕೆ ಬದಲಾಗಿ ಎಲ್ಲರು ಅವರಿಗೆ ಹೇಳುವದೇನಂದರೆ—ನೀನು ಪೂರ್ವ ಜನ್ಮಗಳಲ್ಲಿ ಬಹಳ ಪಾಪಿಷ್ಠಳಾಗಿದ್ದುದರಿಂದಲೇ ಈಗ ನೀನು ಇಷ್ಟು ಬೇಗ ಇಂಥಾ ಕಷ್ಟಕ್ಕೆ ಗುರಿಯಾದೆ ಎಂದು ಹೇಳುವದು ಅನೇಕ ಸಂದರ್ಭಗಳಲ್ಲಿ ಬಹಳ ಅನರ್ಥಗಳಿಗೆ ಆಕರವಾಗುತ್ತದೆ. ಹಿಂದೂ ಸ್ತ್ರೀಯರು ಸಾಮಾನ್ಯವಾಗಿ ತಮ್ಮ ಹೀನಸ್ಥಿತಿಯನ್ನು ಯೋಚಿಸದೆ ಇರುವ ಮಟ್ಟಿಗೆ ಪುರುಷರಿಂದ ನಿರಾಕರಿಸಲ್ಪಟ್ಟಿರುವರು. ಆದಾಗ್ಯೂ ತಾವು ಸೌಖ್ಯವಾಗಿರುತ್ತೇವೆಂದು ತಿಳಿಯುತ್ತಾರೆ. ಪುರುಷರು ಸ್ತ್ರೀಯರನ್ನು ಎಷ್ಟೇ ಕ್ರೂರವಾಗಿ ಕಂಡಾಗ್ಯೂ ತಾವು ಪುರುಷರಿಗೆ ವಿಧೇಯರಾಗಿ ನಡೆಯಬೇಕೆಂಬುದು ಶಾಸ್ತ್ರಸಮ್ಮತವೆಂದು ಎಣಿಸುತ್ತಾರೆ. ಮತ್ತು ಅದೇ ರೀತಿಯಲ್ಲಿ ಕೈಲಾದಮಟ್ಟಿಗೂ ನಡೆದುಕೊಳ್ಳುತ್ತಾರೆ. ಆದರೆ ಬುದ್ಧಿಶಾಲಿಗಳಾದ ಸ್ತ್ರೀಯರು ತಮ್ಮ ದುಸ್ಥಿತಿಗಾಗಿ ಬಹಳ ವ್ಯಸನಪಡುವರು. ಇದಕ್ಕೆ ದೃಷ್ಟಾಂತವಾಗಿ ಒಬ್ಬ ಹಿಂದೂ ವಿಧವೆಯು ಮದರಾಸ್ ಮೇಲ್ ಎಂಬ ವರ್ತಮಾನ ಪತ್ರಿಕೆಗೆ ಹೀಗೆ ಬರೆದಿರುತ್ತಾಳೆ. ಏನಂದರೆ—ಅಯ್ಯಾ ಪತ್ರಿಕಾಕರ್ತರೇ, ನಾನು ಮೈಸೂರು ದೇಶದ ಒಬ್ಬ ದುರ್ಭಾಗ್ಯಳಾದ ಅಧಿಕಾರಿಯ ಮಗಳು. ನನ್ನ ತಂದೆಯು ಸಕಲ ಶಾಸ್ತ್ರಗಳನ್ನು ಬಲ್ಲಂಥಾ ಪಂಡಿತನಾಗಿದ್ದಾಗ್ಯೂ ಹಿಂದುಗಳ ಪದ್ಧತಿಗನುಸಾರವಾಗಿ ನನ್ನನ್ನು ಚಿಕ್ಕತನದಲ್ಲಿಯೇ ಒಬ್ಬ ಸಣ್ಣ ಹುಡುಗನಿಗೆ ಕೊಟ್ಟು ಮದುವೆಮಾಡಿದನು. ನನ್ನ ಗಂಡನಾದ ಆ ಹುಡುಗನು ಪಾಠಶಾಲೆಯಲ್ಲಿ ೨ ವರುಷಗಳು ಓದುತ್ತಾ ಇದ್ದು ದೈವವಶಾತ್ತು ತೀರಿಹೋದನು. ನಾನುಮಾತ್ರ ಈ ಭೂಲೋಕದಲ್ಲಿ ಎಲ್ಲಾ ವಿಧವಾದ ಕಷ್ಟಗಳನ್ನನುಭವಿಸುವದಕ್ಕೆ ಉಳಿದಿರುತ್ತೇನೆ. ವಿಧವಾವಿವಾಹವನ್ನು ನಿಷೇಧಿಸುವ ಸಮಸ್ತ ಹಿಂದೂ ಶಾಸ್ತ್ರಜ್ಞರಿಗೂ ನಾನು ಪಡುವಂಥಾ ಕಷ್ಟ ಏನು ಎಂದು ತಿಳಿದೇ ಇರಬಹುದು. ಪ್ರತಿನಿತ್ಯವೂ ಸೂರ್ಯೋದಯವಾದ ಕೂಡಲೆ ಆದಿನವನ್ನು ಹ್ಯಾಗೆ ಕಳೆಯಬೇಕು. ಕಾಲಕಾಲದಲ್ಲೂ ಸುಖವೆಂಬುವದೇ ಇಲ್ಲವಲ್ಲಾ ಎಂದು ಸಂಕಟ ಪಡಬೇಕು. ರಾತ್ರಿವೇಳೆಯಲ್ಲಿ ಮರಣವನ್ನೈದಿದ ನನ್ನ ಪತಿಯ ಮುಖವು ನನಗೆ ಕಾಣಿಸಿ ನನ್ನನ್ನು ಪೀಡಿಸುತ್ತದೆ. ನಾನು ಉತ್ಸವಾದಿಗಳಲ್ಲಿ ಸೇರಕೂಡದು. ಯಾವ ತಮಾಷೆಗಳನ್ನೂ ನೋಡುವದಕ್ಕೆ ಹೋಗಕೂಡದು. ಒಳ್ಳೆ ಉಡಿಗೆತೊಡಿಗೆಗಳನ್ನು ಧರಿಸಲೇ ಕೂಡದು. ನನ್ನ ಸಹೋದರಿಯರು ಮತ್ತು ನನ್ನ ಅತ್ತಿಗೆನಾದಿನಿಯರು ತಮ್ಮ ತಮ್ಮ ಪತಿಗಳೊಡನೆ ಸರಸಸಲ್ಲಾಪಗಳನ್ನಾಡುತ್ತಿರುವದನ್ನು ನಾನು ನೋಡಿದರೆ ಹ್ಯಾಗೆ ಮತ್ತು ಏನೆಂಬದಾಗಿ ಯೋಚಿಸುವರೋ ಅದನ್ನು ವಾಚಕರೇ ಊಹಿಸಲಿ. ಇದರಿಂದ ನನಗೆ ಅವರನ್ನು ನೋಡಿ ಯಾವವಿಧವಾದ ಹೊಟ್ಟೆಕಿಚ್ಚೂ ಇಲ್ಲ. ನನ್ನ ನಿಕೃಷ್ಟವಾದ ಸ್ಥಿತಿಯನ್ನು ನನ್ನ ಸಹೋದರಿಯರೇ ಮುಂತಾದವರ ಸುಖಸ್ಥಿತಿಯನ್ನೂ ಅದೃಷ್ಟವನ್ನೂ ತಿಳಿಯಪಡಿಸುತ್ತೇನೆಯೇ ಹೊರ್ತು ಮತ್ತೆ ಬೇರೆ ಇಲ್ಲ. ನಾನು ಇನ್ನೂ ಚಿಕ್ಕವಯಸ್ಸಳಾಗಿರುತ್ತೇನೆ ಮತ್ತು ಸ್ಫುರದ್ರೂಪಿಯೆಂದೇ ಹೇಳಬಹುದು. ಆದಾಗ್ಯೂ ನಾನು ನಮ್ಮ ನೆಂಟರಿಷ್ಟರ ಅಥವಾ ನೆರೆಹೊರೆಯವರ ಮನೆಗಳಿಗೂ ಉತ್ಸವಾದಿಗಳಿಗೂ ನಮ್ಮ ಮನೆಯ ಹಿರಿಯರ ಸಂಗಡಲೂ ಹೋಗಕೂಡದು. ಈ ಮೇಲ್ಕಂಡ ವಿಷಯಗಳನ್ನು ಕೇಳಿದ ಪ್ರತಿಷ್ಠಿತ ಹಿಂದುವೂ ವಿಧವಾ ವಿವಾಹವನ್ನು ಯಾತಕ್ಕೆ ಮಾಡಲಾಗದು ಎಂಬದಕ್ಕೆ ತಕ್ಕ ಕಾರಣಗಳನ್ನು ತಿಳಿಸುವನೆಂದು ನಂಬುತ್ತೇನೆ. ಇಂತಿ ತಮ್ಮ ಬಡಪಾಯಿಯಾದ ಜಾನಮ್ಮ. ತಾ. ಪೇಟೆ. ೨೧ನೇ ನವಂಬರು ೧೮೯೨ನೆ ಇಸವಿ.

ಮೊಹಬಿನಲ್ಲಿರುವ ಕಾಯಸ್ಥ ಬಂಗಾಳದ ಬಾಲ್ಯ ವಿಧವೆಯು ತನ್ನ ಕಷ್ಟಗಳನ್ನು ಕುರಿತು ಈ ಪ್ರಕಾರವಾಗಿ ತಿಳಿಸುತ್ತಾಳೆ—ಪತಿಯನ್ನಗಲಿ ಜೀವಿಸುವ ನನ್ನ ಜೀವನವು ಜೀವನವಲ್ಲ. ನನಗೆ ಈ ಲೋಕದಲ್ಲಿ ಯಾವವಿಧವಾದ ಸಂತೋಷವೂ ಇಲ್ಲದೆ ಇರುವದು ಮಾತ್ರವೇ ಅಲ್ಲ: ನನ್ನ ಸಂಕಟವನ್ನು ನೆಂಟರಿಷ್ಟರೇ ಮುಂತಾದವರು ಮತ್ತಷ್ಟು ಹೆಚ್ಚಿಸುತ್ತಾರೆ. ನಾನು ಯಾರಸಂಗಡಲೂ ಮಾತನಾಡಲೂ ಸಹ ಇಲ್ಲದೆ ಏಕಾಂಗಿಯಾಗಿ ಬೇರೆ ಒಂದು ಸ್ಥಳದಲ್ಲಿ ಇದ್ದುಕೊಂಡಿದ್ದಾಗ್ಯೂ ನನ್ನನ್ನು ಹುಡುಕಿಕೊಂಡು ಬಂದು ನನಗೆ ಅಧಿಕವಾದ ವ್ಯಸನವನ್ನುಂಟುಮಾಡುವ ಮಾತುಗಳನ್ನೇ ಆಡುತ್ತಾರೆ. ತಾಯಿಯಾದವಳು ಸಹ ಇಂಥಾ ಮಗಳು ಹುಟ್ಟದೆ ಇದ್ದರೇನೇ ಚನ್ನಾಗಿತ್ತು: ಇಂಥಾ ನಿರ್ಭಾಗ್ಯಳನ್ನು ನಾನು ಎಲ್ಲಿಯೂ ಇದುವರೆವಿಗೂ ಕಾಣೆನು ಎಂಬದಾಗಿಯೂ, ಅತ್ತೆಯಾದವಳು ಈ ಪಾಪಿಷ್ಠಳಿಂದಲೇ ಕೈಹಿಡಿದದ್ದರಿಂದಲೇ ನನ್ನ ಮಗನು ಸತ್ತುಹೋದನು, ಇವಳು ಭೂಮಿಗೆ ಭಾರವಾಗಿಯೂ ನಮಗೆ ಗೋಳುಹುಯ್ಯುವದಾಗಿಯೂ ಇದ್ದಾಳೆ ಎಂಬದಾಗಿಯೂ ತಾವ್ಯಾರೂ ನನ್ನಂತೆಯೇ ವಿಧವೆಯರಾಗಿದ್ದಾಗ್ಯೂ ನನ್ನನ್ನೇ ದೂಷಿಸುತ್ತಾರೆ. ನಾದಿನಿಯಾದವಳು ನನ್ನಂಥವಳನ್ನು ನೋಡಲು ಬಾರದೆಂತಲೂ ಮಾತನಾಡಿಸಲೂ ಕೂಡದೆಂತಲೂ ಹೇಳುವದಲ್ಲದೆ—ಈ ನೀಚಳಿಂದಲೇ ನಿನ್ನ ಮನೆಗೆ ಬಂದದ್ದರಿಂದ ನಿನ್ನ ಮನೆಯೇ ನಾಶವಾಗಿಹೋಯಿತು, ನಿನ್ನ ಯಾವ ಜೀವನವೂ ನೀನೂ ಚಿಂತಪಡಬೇಕಾಯಿತು, ಇವಳ ಜನ್ಮವನ್ನು ಸುಡು ಎಂಬದಾಗಿ ನಮ್ಮ ಅತ್ತೆಯನ್ನು ಸಂತೋಷ ಪಡಿಸುತ್ತಾಳೆ. ಅಯ್ಯೋ! ಇಂಗ್ಲೀಷಿನವರು ಸಹಗಮನವನ್ನು ಕೂಡ ನಿಲ್ಲಿಸಿಬಿಟ್ಟರಲ್ಲಾ! ಇಂಗ್ಲೀಷಿನವರೇ ಆಗಲಿ ಅಥವ ಯಾವ ದೇವದೂತರುಗಳೇ ಆಗಲಿ ನಮ್ಮಂಥವರಿಗೆ ಎಂಥಾ ಕಷ್ಟಗಳು ಪ್ರಾಪ್ತವಾಗುತ್ತವೆ ಎಂಬದನ್ನು ಅರಿಯರಲ್ಲಾ! ಹಿಂದುಗಳು ಇವುಗಳನ್ನು ಲಕ್ಷಿಸದೇ ಇರುವದು ಮಾತ್ರವಲ್ಲ. ಇವುಗಳನ್ನೆಲ್ಲಾ ಒಳ್ಳೇವುಗಳೇ ಎಂಬದಾಗಿಯೂ ತಿಳಿದಿರುತ್ತಾರೆ. ಇಂಥಾ ಕಷ್ಟಗಳಿಂದ ಯಾವ ಕೇಡುಗಳು ಸಂಭವಿಸುತ್ತವೆಯೋ ಎಂದು ಇವರು ಯೋಚಿಸುವದಿಲ್ಲವಲ್ಲ! ಇವರು ವಿಧವೆಯರನ್ನು ನೀಚರೆಂದೆಣಿಸುವದಾದರೆ ಅವರ ಸಂಖ್ಯೆಯನ್ನು ತಮ್ಮ ದೇಶದಲ್ಲಿ ಅಭಿವೃದ್ಧಿಪಡಿಸುವದಕ್ಕೆ ಯಾತಕ್ಕೆ ಸ್ಥಳಕೊಡುವರೋ ನನಗೆ ತಿಳಿಯದು. ಇಂಗ್ಲಾಂಡಿನಲ್ಲಿ ವಿಧವೆಯರಿಗೆ ಬಹಳ ಸೌಕರ್ಯಗಳುಂಟೆಂಬದಾಗಿ ಕೇಳಿದ್ದೇನೆ. ಆದರೆ ಇಲ್ಲಿ ನಮಗೆ ಅಂಥಾದ್ದು ಯಾವದೂ ಇಲ್ಲವಲ್ಲಾ!

ಸ್ತ್ರೀಯರ ವಿಷಯವಾಗಿ ಹಿಂದುಗಳು ನಡಿಸಿದ ಪದ್ಧತಿಗಳಲ್ಲಿ ಸಹಗಮನವು ಅತಿ ಕ್ರೌರ್ಯವಾದದ್ದಾಗಿತ್ತು. ಮಗನಾದವನು ಸಜೀವಳಾಗಿರುವ ತಾಯಿಯನ್ನು ಸುಡುವದು ಅಂದರೆ ಕೇಳುವವರಿಗೂ ಸಹ ಭಯಂಕರವಾಗಿರುವದು. ಆದಾಗ್ಯೂ ಹಿಂದುಗಳು ೧೯ ನೇ ಶತಮಾನದಲ್ಲಿ ಈ ಪದ್ಧತಿಯನ್ನು ಜಾರಿಯಲ್ಲಿಯೇ ತರಬೇಕೆಂದು ಬಹಳವಾಗಿ ಸರ್ಕಾರದಲ್ಲಿ ಹೋರಾಡಿದರು. ಮೊದಲು ಇದ್ದ ಆರ್ಯರಲ್ಲಿ ಸಹಗಮನವೆಂಬ ಹೆಸರೇ ಇರಲಿಲ್ಲ. ವೇದಗಳಲ್ಲಿಯೂ ಸಹ ಹೇಳಿಯೇ ಇಲ್ಲ. ಆದಾಗ್ಯೂ ಈ ಕ್ರೂರವಾದ ಪದ್ಧತಿಯನ್ನು ನಡೆಸುವದಕ್ಕೆ ಒಂದು ಶಾಸ್ತ್ರವನ್ನು ಕಲ್ಪಿಸಿಕೊಂಡು ಇದರ ಈ ದೇಶಕ್ಕೆ ಪೂರ್ವಕಾಲದಲ್ಲಿ ದಂಡೆತ್ತಿ ಬಂದು ಗೆದ್ದು ಇಲ್ಲಿ ಆಳುತ್ತಾ ಇದ್ದ ಸಿದ್ಧಿಯರಲ್ಲಿ ಯಾರಾದರು ಒಬ್ಬರು ಸತ್ತರೆ ಸತ್ತವನ ಸಂಗಡ ಅವನ ಉಡಿಗೆತೊಡಿಗೆಗಳನ್ನೂ ವಾಹನಾದಿಗಳನ್ನೂ ಕೆಲವು ವೇಳೆ ಚಾಕರರನ್ನೂ ಸಹ ಹೂಳುತ್ತಾ ಇದ್ದರು. ಆದರ ಪದ್ಧತಿಯನ್ನೇ ಹಿಂದೂ ಜನರು ಕೂಡ ಅನುಸರಿಸಿರಬಹುದೆಂದು ತಿಳಿಯಬರುತ್ತದೆ. ಅಥವಾ ವಿಧವೆಯರ ಪಾಲಿಗೆ ಬರುವ ಸ್ಥಿರಚರಸ್ವತ್ತುಗಳನ್ನು ಅಪಹರಿಸುವದಕ್ಕಾಗಿ ಇಂಥಾ ಉಪಾಯವನ್ನು ಕಲ್ಪಿಸಿದರೋ ಏನೋ ಎಂದು ಯೋಚಿಸಬೇಕಾಗಿದೆ. ವಿಧವೆಯರು ಕ್ರೂರವಾದ ರೀತಿಯಲ್ಲಿ ಮರಣವನ್ನು ಹೊಂದಲು ಒಪ್ಪಿಕೊಳ್ಳುವಂತೆ ಅವರಿಗೆ ಆಶೆ ಹುಟ್ಟಿಸುವದಕ್ಕಾಗಿ ಅವರ ಜೀವನವನ್ನು ಕ್ರಮಸಾಧ್ಯವನ್ನಾಗಿ ಮಾಡಿದರು ಮತ್ತು ಸಹಗಮನವನ್ನು ಮಾಡುವಂಥವರು ಪೂರ್ವಜನ್ಮಗಳಲ್ಲಿಯೂ ನೀತಿವಂತರಾಗಿದ್ದದಲ್ಲದೆ ಈಗಲೂ ಪರಲೋಕದಲ್ಲಿ ತಮ್ಮ ಪತಿಗಳೊಡನೆ ಶಾಶ್ವತವಾದ ಸುಖಾನುಭವಗಳನ್ನು ಹೊಂದುವರೆಂದು ಸಾರುತ್ತಿದ್ದರು.

ಸಹಗಮನ ವಿಷಯವಾಗಿ ಹಿಂದೂ ಶಾಸ್ತ್ರವಚನಗಳು.

(೧) ಯಾವಳು ತನ್ನ ಪತಿಯೊಡನೆ ಸಹಗಮನವನ್ನು ಮಾಡುವಳೋ ಅವಳು ಅರುಂಧತಿಗೆ ಸಮಾನಳು ಮತ್ತು ಸ್ವರ್ಗದಲ್ಲಿ ಶಾಶ್ವತವಾದ ಸುಖಗಳನ್ನು ಅನುಭವಿಸುತ್ತಾಳೆ.

(೧) ಯಾವಳು ತನ್ನ ಪತಿಯೊಡನೆ ಪರಲೋಕವನ್ನೈದುವಳೋ ಆಕೆಯು ಸ್ವರ್ಗದಲ್ಲಿ ತನ್ನ ಪತಿಯೊಡನೆ ೩ ಕೋಟಿಯೂ ೫೦ ಲಕ್ಷ ವರ್ಷಗಳು ಸುಖಿಸುತ್ತಾ ಇರುವಳು.

(೨) ಸಹಗಮನವನ್ನು ಮಾಡುವವಳು ಮೂರು ಕುಲಗಳನ್ನು ಅಂದರೆ ತಂದೆಯ ತಾಯಿಯ ಮತ್ತು ಗಂಡನ ಕುಲಗಳನ್ನು ಪರಿಶುದ್ಧವನ್ನಾಗಿ ಮಾಡುತ್ತಾಳೆ. ಸಹಗಮನವನ್ನು ಮಾಡದೆ ಇರುವ ಸ್ತ್ರೀಯು ಭೂಲೋಕದಲ್ಲಿ ಪುನಃ ನೀಚವಾದ ಸ್ತ್ರೀಜನ್ಮವನ್ನೇ ಎತ್ತುತ್ತಾ ಇರುವಳು.

ಈ ವಿಷಯದಲ್ಲಿ ಹಿಂದೂ ಶಾಸ್ತ್ರಜ್ಞರಾದ ಒಬ್ಬ ದೊಡ್ಡ ಪಂಡಿತರು ತಿಳಿಯಪಡಿಸುವದೇನಂದರೆ—ಸಹಗಮನಕಾಲದಲ್ಲಿ ಸಮೀಪದಲ್ಲಿರುವವರೆಲ್ಲರೂ ಆ ಚಿತೆಗೆ ಆಜ್ಯವನ್ನೂ ಕಾಷ್ಠಗಳನ್ನೂ ಹಾಕಬೇಕು. ಹೀಗೆ ಮಾಡುವ ಮಹಾತ್ಮರಿಗೆ ಅಶ್ವಮೇಧವೇ ಮುಂತಾದ ಕ್ರತುಗಳನ್ನು ಮಾಡಿದ ಫಲವು ಪ್ರಾಪ್ತವಾಗುವದು ಮತ್ತು ಸಹಗಮನವನ್ನು ಮಾಡುವವಳೊಡನೆಯೂ ಅವಳ ಪತಿಯ ಶವದೊಡನೆಯೂ ರುದ್ರಭೂಮಿಗೆ ಹೋಗುವ ಪ್ರತಿ ಮನುಷ್ಯನು ಹೆಜ್ಜೆಗೆ ಅಶ್ವಮೇಧಫಲವನ್ನು ಹೊಂದುವನು. ಈ ಹೀನವಾದ ಸ್ತ್ರೀಜನ್ಮವನ್ನು ತಪ್ಪಿಸಿಕೊಳ್ಳುವದಕ್ಕಾಗಿಯೂ ಪರಲೋಕದಲ್ಲಿ ತಮ್ಮ ಪತಿಗಳೊಡನೆ ಶಾಶ್ವತವಾದ ಸುಖಗಳನ್ನು ಹೊಂದುವೆವೆಂಬ ಭ್ರಾಂತಿಯಿಂದಲೂ ಅನೇಕರು ಈ ಕ್ರೂರಕೃತ್ಯಕ್ಕೆ ಒಪ್ಪಿಕೊಂಡದ್ದಲ್ಲದೆ ಅದಕ್ಕೆ ಅನುಸಾರವಾಗಿ ನಡೆಯುತ್ತಲೂ ಇದ್ದರು. ಹೀಗೆ ಬಂಗಾಳದಲ್ಲಿ ೧೮೧೫ನೇ ಇಸವಿಯಲ್ಲಿ ಪ್ರತಿಸಿತ್ಯವ್ರಾ ಸರಾಸರಿ ೨ ಸಹಗಮನಗಳು ನಡೆಯುತ್ತಿದ್ದವೆಂದು ತಿಳಿಯಬರುತ್ತದೆ.

ನೋಟೀಸ್

ನಮ್ಮ ವೆಸ್ಲೆಯನ್ ಮಿಷನ್ ಪ್ರೆಸ್ಸಿಗೆ ಕೆಲವು ಮಂದಿ ಕರ್ನಾಟಕ ಮತ್ತು ಇಂಗ್ಲಿಷ್ ಕಂಪಾಸಿಟರುಗಳು ಬೇಕಾಗಿರುವದರಿಂದ ಇಷ್ಟವುಳ್ಳವರು ಆಫೀಸಿನ ಮ್ಯಾನೇಜರಿಗೆ ಅರ್ಜಿ ಬರೆದುಕೊಳ್ಳಬಹುದು. ಸ್ಥಳದವರು ಖುದ್ದು ಹಾಜರಾಗಿ ಅವರ ಸಂಗಡ ಮಾತನಾಡಬೇಕು.

Mysore, 16—2—93 — Rev. Henry Haigh, Wes. Mission.

ಒಳದೇಶ ವೃತ್ತಾಂತಗಳು.

ಮ್ಯಾಜಿಸ್ಟ್ರೇಟರುಗಳು ಖೈದಿಗಳನ್ನು ಜೈಲಿಗೆ ಕಳುಹಿಸುವದಕ್ಕೆ ಮುಂಚೆ ಅವರು ಯಾವದಾದರೂ ಅಂಟುರೋಗದಿಂದ ಪೀಡಿತರಾಗಿದ್ದಲ್ಲಿ ಅಂಥಾ ಸಂಗತಿಯನ್ನು ಜೈಲ್ ಅಧಿಕಾರಿಗಳಿಗೆ ತಿಳಿಸಬೇಕೆಂದು ವಿಧಿಸಿರುತ್ತಾರೆ.

ಕಾಲೀನ ಪೇಟೆ ತಾಲ್ಲೂಕಿಗೆ ಸೇರಿದ ಚನ್ನೇಗೌಡನ ಚಿಕ್ಕ ಕೆರೆಯನ್ನು ಕಾವಲಾಗಿ ಮಾಡಿಸಿ ನೀರನ್ನು ಹರಿಸುವ ಕೆಲಸವನ್ನು ಸರ್ಕಾರದವರು ಮಾಡಿಸಬೇಕೆಂದು ತೀರ್ಮಾನಿಸಿರುತ್ತಾರೆ.

ಗರ್ಲ್ಸ್ ಸ್ಕೂಲ್ ಅಡಿಷನಲ್ ಮೇಲೆ ಅಧಿಕಾರಿಗಳು ಪ್ರಿವಿನಲ್ ದಾವಾ ನಡೆಸಿರುತ್ತಾರಷ್ಟೆ. ಈ ಮೊಕದ್ದಮೆಯು ಕಳೆದ ೧೯ ಕ್ಕೆ ಹಿಯರಿಂಗ್ ಬಿದ್ದಿತ್ತು. ಪುನಃ ಆ ದಿವಸ ಮಾರ್ಚಿ ೧೦ ಕ್ಕೆ ಅಡ್ಜರ್ನ್ ಮಾಡಿದಂತೆ ಕೇಳುತ್ತೇವೆ.

ಮಂಡಿಯಲ್ಲಿ ಜಿಂಕೆ ನವಾಬರ ಮನೆಯ ಸಮೀಪದ ಗಲ್ಲಿಯಲ್ಲಿನ ಕೆಲವು ಜನರಿಗೆ ಸಿಡುಬಿನ ರೋಗ ಇನ್ಫ್ಲುಎಂಜಾ ವ್ಯಾಧಿಯನ್ನು ತಂದರೆಂತಲೂ, ಕೆಲವು ಆಸಾಮಿಗಳು ಭೀತಿ ಅವರಂತಲೂ ತೋರುತ್ತದೆ. ಇದನ್ನು ಸ್ಯಾನಿಟರಿ ಕಮಿಷನರವರ ತಿಳುವಳಿಕೆಗೆ ತರುತ್ತೇವೆ.

ಬೆಂಗಳೂರು ಟೌನ್ ಕೋರ್ಟಿನ ಮುನಸೀಫರಾದ ಮ|| ಪಿ. ಎ. ಕೃಷ್ಣಮೂರ್ತಿಯವರು ಮೂರು ತಿಂಗಳ ರಜಾ ಪಡೆದು ತಮ್ಮ ಜಹಗೀರು ವಿಚಾರಣೆಗೆ ಹೋಗುವರೆಂತಲೂ, ಅವರ ಕೆಲಸವನ್ನು ಬದಲಿ ನೋಡುವಂತೆ ಮ|| ವಿನಾಯಕಮೂರ್ತಿಯವರು ನಿಯಮಿಸಲ್ಪಡುವರೆಂತಲೂ ಕೇಳುತ್ತೇವೆ.

ಶ್ರೀ ಮಹಾರಾಜರವರು ನಾಳೆ ಜ್ಯೇಷ್ಠಮಾಸದಲ್ಲಿ ಬಾಲಿಕಾಪುತ್ರಿಯರಿಗೆ ವಿವಾಹಮಹೋತ್ಸವವನ್ನು ಬೆಳೆಸುವರಾಗಿರುವರೆಂದು ದೇಶಾಧಿಕಾರಿಗಳು ತಿಳಿಸುತ್ತಾರೆ. ನಾವು ವಿಚಾರಿಸುವದರಲ್ಲಿ ಅವರಿಗೆ ಪ್ರಾಯದಿಂದ ಮೊದಲು ವಿವಾಹ ಮಾಡುವದಿಲ್ಲವೆಂದು ಗೊತ್ತು ಮಾಡಿದಂತೆ ಕೇಳುತ್ತೇವೆ. ಯಾವದೂ ಗೊತ್ತಾಗಿ ಹೇಳುವದಕ್ಕಿಲ್ಲ.

ಅರಮನೆಯಲ್ಲಿ ಮದುವೆಗೆ ಅವರು ವಿಶೇಷವಾಗಿ ದ್ರವ್ಯ ವ್ಯಯಮಾಡಿ ಸಿಂಗರಿಸಲಾಗುತ್ತದೆಂದು ಮಹಾರಾಜರು ತಿಳಿದು ಅನೇಕ ಮದುವೆಗಳನ್ನೆಲ್ಲಾ ಒಂದಾಗಿ ಒಂದೇ ಮಾಡಲು ಯೋಚಿಸಿರುವದಾಗಿಯೂ ಈಗ ಅರಮನೆಯಲ್ಲಿ ಎಲ್ಲಾ ಮದುವೆಗಳೂ ಆಗುವದಿಲ್ಲವೆಂದೂ ಹೇಳುತ್ತಾರೆ.

ತುಮಕೂರು ಡಿಸ್ಟ್ರಿಕ್ಟ್ ಸಿರಾ ತಾಲ್ಲೂಕು ಚಿಕ್ಕನಹಳ್ಳಿ ಸಮೀಪದಲ್ಲಿ ಒಂದು ಸ್ಥಳದಲ್ಲಿ ಕಾವೇರಿಯ ದೇವಿಗೆ ಒಂದು ಜಾತ್ರೆಯಲ್ಲಿದ್ದವರ ಸರ್ಕಾರದವರಿಗೆ ಸಿಕ್ಕಿರುತ್ತದೆ. ಇದರ ಮಾಲೀಕರ್ಯಾರೆಂಬುದು ಇನ್ನೂ ತಿಳಿಯದಿರುವದರಿಂದ ಗೌರ್ನಮೆಂಟಿಗೆ ಬರೆದುಕೊಳ್ಳತಕ್ಕದ್ದೆಂದು ನೋಟೀಸ್ ಕೊಟ್ಟಿರುತ್ತಾರೆ.

ಲೇಟ್ ವೆಂಕಟವರದಯ್ಯಂಗಾರ್ಯರು ಮೊದಲಾದ ಕೆಲವು ಜನ ದೊಡ್ಡ ಮನುಷ್ಯರು ೫೦೦೦ ರೂಪಾಯಿಗಳ ವರೆಗೂ ಚಂದಾ ಹಾಕಿರುತ್ತಾರಷ್ಟೆ. ಈ ಹಣವನ್ನು ಮುಟ್ಟಿಸಿ ಬೆಂಗಳೂರು ಸೆಂಟ್ರಲ್ ಕಾಲೇಜಿನ ವಿದ್ಯಾರ್ಥಿಗಳ ಉಪಯೋಗಾರ್ಥವಾಗಿ ಒಂದು ಸ್ಕಾಲರ್‌ಶಿಪ್ ಎಂಬ ವೇತನವನ್ನು ತಯಾರ್ ಮಾಡಿಸುತ್ತಲಿದ್ದಾರೆಂದು ಕೇಳುತ್ತೇವೆ.

ಅರಸೀಕೆರೆ ತಾಲ್ಲೂಕಿನಲ್ಲಿ ಬೇಸಾಯದವರು ಯಾಕೆಂದು ಬರುವದಿಲ್ಲವೋ ಕೃಷಿಕರು ಬಹಳ ಕಷ್ಟಪಡುತ್ತಾರೆ. ಈ ಪದ್ಧತಿಯು ಬಹುಕಾಲದಿಂದಲೂ ನಡೆದು ಬಂದಿದೆ. ಮುಂದೆಯೂ ಈ ಪದ್ಧತಿಯನ್ನೇ ಅನುಸರಿಸಬಹುದೇ ಎಂಬುದಾಗಿ ಹಾಸನದ ಡಿ|| ಕಮಿಷನರವರು ಗೌರ್ನಮೆಂಟಿನವರನ್ನು ಕೇಳಿದ್ದಕ್ಕೆ ವಿಧವಾದ ಮಾರ್ಗದಲ್ಲಿ ದರಖಾಸ್ತಿನ ಭೂಮಿಯನ್ನು ತೆಗೆದುಕೊಳ್ಳುವ ಪದ್ಧತಿಯನ್ನು ನಿಲ್ಲಿಸಬೇಕು ಎಂಬುದಾಗಿ ಹುಕುಂ ಆಗಿರುತ್ತದೆ.

ಘೀರೆಪ್ಪ ಇನ್ಸ್‌ಪೆಕ್ಟರ್ ಜನರಲಾಗಿಯೂ, ಮ್ಯಾಜಿಸ್ಟ್ರೇಟ್ ಕಮಿಷನರಾಗಿಯೂ ಇರುವ ಮ|| ಎಸ್. ಶಿಕ್ಷಪ್ಪನವರು ಬರುವ ಏಪ್ರಿಲಿಗೆ ಕೆಲಸದಿಂದ ನಿವೃತ್ತಿಯನ್ನು ಪಡೆಯುವರಾಗಿದ್ದಾರೆ. ಇವರ ಸ್ಥಳಕ್ಕೆ ಮ|| ಆನಂದರಾಯರವರನ್ನು, ಇವರ ಸ್ಥಳಕ್ಕೆ ಮೈಸೂರು ಡಿಪ್ಟಿ ಕಮಿಷನರಾದ ಮ|| ರಂಗನಾಥ ಅಯ್ಯಂಗಾರ್ಯರನ್ನು ಮತ್ತು ಚಿಕ್ಕಬಳ್ಳಾಪುರದ ಸಬ್‌ಡಿವಿಜನ್ ಆಫೀಸರಾದ ಮ|| ಕೃಷ್ಣಸ್ವಾಮಿ ಅಯ್ಯಂಗಾರ್ಯರನ್ನು ಇಲ್ಲಿನ ಡೆಪ್ಯುಟಿ ಕಮಿಷನರನ್ನಾಗಿಯೂ ನೇಮಿಸುವಂತೆ ಆಲೋಚನೆ ನಡೆಯುತ್ತಲಿದೆ.

ಕಾಲ್ಪತಿಯ ಪಾಳ್ಯದಲ್ಲಿ ಜಲ ಬರಲಾಯಿಸಿರುತ್ತದೆ. ಎಲ್ಲಿ ನೋಡಿದರೂ ಜನರು ಭ್ರಾಂತರಾಗಿದ್ದಾರೆ. ಆ ಸ್ಥಾನದವರೂ ತಲೆಹಾಕಿರುತ್ತಾರೆ. ಅಲ್ಲಲ್ಲಿ ಮರ್ಜಿ ಮಾಡಿದ ಈ ಸಲದ ಮಾರ್ಜಿಯು ಜನಗಳಿಗೆ ಎಷ್ಟು ಆರೋಗ್ಯವನ್ನು ಕೊಡುವದಾಗಿರುವದೋ ನೋಡತಕ್ಕದ್ದಾಗಿದೆ. ಧಾರವಾಡದ ಗಳು ಇದಿಲ್ಲ. ಹೆಚ್ಚಾಗುತ್ತಲಿದೆ ಎಂದು ಹೇಳುತ್ತಾರೆ. ಕೆಲವು ಬೀಗ ಕಾರಂಜಿಕರೆಯು ನೀರನ್ನು ೧೮೩ ಜನರಿಗೆ ಬಿಟ್ಟಿರುತ್ತದೆ. ಪಟ್ಟಣದ ಅನೇಕ ಭಾಗಗಳಲ್ಲಿದ್ದ ನಲ್ಲಿಗಳನ್ನು ಬಂದು ಮಾಡಿರುತ್ತಾರೆ. ಕೆಲವು ಕಡೆಗಳಲ್ಲಿ ನಲ್ಲಿಗಳು ಸಾಧಾರಣವಾಗಿ ದಾವಣಗೆರೆಯವರೆಲ್ಲಾ ನೀರೊದಗಿ ಬರುವ ನೀರು ಸುರಿಯುತ್ತದೆ. ಇದರಿಂದ ನೀರು ವ್ಯರ್ಥವಾಗಿ ಹೋಗುತ್ತದೆ. ಹೇಳಲೇಕೆ. ಮೊನ್ನೆ ಸಾಯಂಕಾಲ ಸ್ವಲ್ಪ ಮಳೆಯಾಯಿತು.

ಹೊರದೇಶದ ವೃತ್ತಾಂತಗಳು.

ಈ ದಿವಸಕ್ಕೆ ಸಬ್‌ಡಿವಿಷನ್ ಬಂದು ೪—೫ ತಿಂಗಳು ಆಗುತ್ತಾ ಬಂತು. ಆದರೆ ತಾಲ್ಲೂಕ ಅಧಿಕಾರಿಗಳೂ ಅಮಲ್ದಾರ್ ಮ|| ರಾ|| ಕೃಷ್ಣಯ್ಯನವರು, ಇವರಿಂದ ಟ್ರೆಜರಿ ವಿನಹ ಬೇರೆ ಕೆಲಸಗಳಿಲ್ಲ. ಈ ಸ್ಥಳದಲ್ಲಿಯೇ ಜಮಾಬಂದಿಯು ನಡೆದು ಸರ್ಕಾರಕ್ಕೆ ಹಣ ಕಟ್ಟುವದು ಮತ್ತು ತಮಗೆ ಬರತಕ್ಕ ಹಣ ತೆಗೆದುಕೊಳ್ಳುವದು ಈ ಗ್ರಾಮದಲ್ಲಿ ತಾಲ್ಲೂಕ ಇದ್ದರೆ ಕೂಡ (ಇದು ಇದ್ದ ಕರ ಸುಮಾರು ೫೦ ಮೈಲಿ) ಈ ಪ್ರಾಂತದ ಅನುಕೂಲಕ್ಕೆ ಸರಿಯಾಗಿ ಪೂರ್ವದ ತಾಲ್ಲೂಕ ದಾವಣಗೆರೆಗೆ ಹೋಗಿ ಬರುವದು ತಪ್ಪಲಿಲ್ಲ. ಮನುಷ್ಯನಿಗೆ ಎಷ್ಟು ಅನುಕೂಲವಿದ್ದರೂ ಲಕ್ಷ್ಮೀ ಅನುಕೂಲ ಮಾತ್ರ ಇಲ್ಲದಿದ್ದರೆ ವ್ಯರ್ಥ ಹೋಗುತ್ತದೆ. ಆದ್ದರಿಂದ ಈ ಭಾಗದಲ್ಲಿ ಮೇಲಧಿಕಾರಿಗಳು ಜನಾಂಗದ ಸ್ಥಿತಿಯನ್ನು ಆಲೋಚಿಸುವ ವಿಷಯದಲ್ಲಿ ದಯಮಾಡಿ ಚಿತ್ತಕ್ಕೆ ತರುವರೆಂಬುದಾಗಿ ನಂಬುತ್ತೇವೆ.

ಮ್ಯುನಿಸಿಪಾಲಿಟಿ—ಅಮಲ್ದಾರರು ಮತ್ತು ಆಸ್ಪತ್ರೆ ಅಸಿಸ್ಟೆಂಟ್ ಮ|| ಪಾಪಯ್ಯ ನಾಯುಡುರವರು ಸಕಲ ಪ್ರಜೆಗಳ ಆರೋಗ್ಯಭಾಗ್ಯದ ವಿಷಯದಲ್ಲಿಯೂ ಮತ್ತು ಈ ಟೌನ್ ಅಭಿವೃದ್ಧಿಯ ವಿಷಯದಲ್ಲಿಯೂ ಬಹು ಜಾಗರೂಕತೆಯಿಂದ ಕೆಲಸ ನಡೆಸುತ್ತಾರೆ. ಈ ದೊಡ್ಡ ಮನುಷ್ಯರು ಇಲ್ಲಿನ ಮ್ಯುನಿಸಿಪಲ್ ಮೀಟಿಂಗಿನಲ್ಲಿ ಮ್ಯುನಿಸಿಪಲ್ ಕಮಿಷನರುಗಳ ಸಂಗಡ ಹೊಸ ನಿರ್ಮಾಣಗಳಿಗೆ ತಾವು ಒಪ್ಪಿಯೊಂದ ತಮ್ಮ ವಿಶೇಷ ಕಾಲವನ್ನು ವಿನಿಯೋಗಿಸುತ್ತಿದ್ದಾರೆ. ಈ ಮಹನೀಯರು ಇಲ್ಲಿನ ಮ್ಯುನಿಸಿಪಲ್ ಕಮಿಷನರಿಗೆ ಕೆಳಗಿನ ಅಭಿಪ್ರಾಯಗಳನ್ನು ಆಲೋಚಿಸುವದರಿಂದ ನಮ್ಮ ಮ್ಯುನಿಸಿಪಾಲಿಟಿಯು ಅಭಿವೃದ್ಧಿಗೆ ಸಂಪೂರ್ಣವಾಗಿ ಬಹಳ ಸ್ವಲ್ಪ ಸಮೀಪವಾಗಿದೆ ಎಂದು ಪುರ ಜನಗಳು ಗೌರ್ನಮೆಂಟಿಗೆ ಕೃತಜ್ಞರಾಗಿದ್ದಾರೆ.

ಹವಾ—ಬಿಸಿಗೆ ಕಾಲವು ಸಮೀಪವಾಗುತ್ತಾ ಬರುವದರಿಂದಲೂ, ಸೂರ್ಯನು ದಿನೇದಿನೇ ವೃದ್ಧಿಯನ್ನು ಹೊಂದುವ ತಾಪದಿಂದ ಹೊಳೆಯಲ್ಲಿ ನೀರು ಬತ್ತುತ್ತಿರುವದರಿಂದಲೂ ಆರೋಗ್ಯ ಗಾಳಿಯೋಡಕಕ್ಕೆ ಸಮೀಪವಾಗುತ್ತಾ ಬರುತ್ತಲಿದೆ. ಇದಲ್ಲದೆ ಮಾನಾಪೇಕ್ಷೆಯು ವೃದ್ಧಿಯಾಗಲು ಸಮೀಪವಿಲ್ಲ. ಈಗ ಹವಾ ಬದಲಾಯಿಸಿರುವದರಿಂದ ಎಲ್ಲಾ ಜನಗಳು ಬ್ರಾಹ್ಮಣ ಹಿಂದೂಸ್ಥಾನಿ ಮುಂತಾದವರಿಗೆ ಇಲ್ಲಿಯ ಆಸ್ಪತ್ರೆ ಅಸಿಸ್ಟೆಂಟ್ ಮ|| ಪಾಪಯ್ಯ ನಾಯುಡುರವರು ಈ ರೋಗಗಳಿಗೆ ಔಷಧ ಕೊಡುವ...

ಪ್ರಜೆ ತೆಗೆದುಕೊಂಡು ಬಂದ ರೋಗಗಳಿಗೆ ವಿವಿಧ ಚಿಕಿತ್ಸೆಗಳನ್ನು ಮಾಡಿ ಅವರನ್ನು ರೋಗದಿಂದ ವಿಮುಕ್ತಿ ಪಡಿಸಿದ ದಯಾಶೀಲರಾಗಿದ್ದಾರೆ. ಈ ರೋಗಕ್ಕೆ (ಕಾಲರಾ-ವಾಂತಿಭೇದಿ) ಎಂದು ಅನ್ನುವರು. ಈ ಕಾಲದಲ್ಲಿ ರೋಗಗಳನ್ನು ಗಮನಿಸುವ ಸರ್ಕಾರದ ಸಂರಕ್ಷಣೆ ಮಾಡುವ ಈ ಮಹನೀಯರನ್ನು ಎಷ್ಟು ಕೊಂಡಾಡಿದರೂ ಸ್ವಲ್ಪವೇ ಸರಿ. ಅವರಿಗೆ ದೇವರು ಶ್ರೇಯಸ್ಸನ್ನು ಉಂಟುಮಾಡಲೆಂದು ಪ್ರಾರ್ಥಿಸುತ್ತೇವೆ.

ಆರೋಗ್ಯ ವಿಷಯ—ಈ ಟೌನಿಗೆ ಸ್ವಲ್ಪ ಸ್ವಲ್ಪ ಅತಿ ದೂರವಾಗಿ ಇದೆ. ಅಂದರೆ ಗ್ರಾಮಪಂಚಾಯ್ತಿ ಮುನ್ಸಿಪಲ್ ಫಂಡಿನ ಸಹಾಯದಿಂದ ಈ ಗ್ರಾಮದ ಪ್ರಜಾಜನರ ಪ್ರಯಾಣಕ್ಕೆ ಬಹಳ ಅನನುಕೂಲವಾಗಿದೆ. ಡಿಸ್ಟ್ರಿಕ್ಟ್ ರೋಡ್ ೧೦ ಮತ್ತು ೩ ಘಟ್ಟವೂ ಇಲ್ಲಿಗೆ ಬಂದು ಹೋಗುವದರಿಂದ ಆ ಕಾಲಕ್ಕೆ ಕೃಷ್ಣಪಕ್ಷದಲ್ಲಿ ರುದ್ರಾಂಗವಾಗಿ ಬೆಳಕು ಇರುವದಿಲ್ಲ. ಈ ಗ್ರಾಮದಿಂದ ಸ್ವಸ್ಥಳಕ್ಕೆ ಹೋಗುವ ರೋಡಿಗೆ ಅನನುಕೂಲವಾಗಿಯೂ ಮತ್ತು ಪ್ರಮಾಣದಿಂದಲೂ ಶಬ್ದಮೂಲವಾಗಿ ಪ್ರಯಾಣಿಕರ ಅಂಗಗಳಿಗೆ ಬಾಧೆ ಉಂಟಾಗಲು ಅವಕಾಶವಿದ್ದಷ್ಟು ಅನುಕೂಲವಾಗುತ್ತದೆ. ೩—೪ ವರುಷದಿಂದ ಇದ್ದ ಈ ಸ್ಥಿತಿಯನ್ನು ಲೋಕಲ್ ಅಧಿಕಾರಿಗಳೇ ಆಗಲಿ ಟೌನ್ ಅಧಿಕಾರಿಗಳೇ ಆಗಲಿ ಮ್ಯುನಿಸಿಪಲ್ ಅಧಿಕಾರಿಗಳೇ ಆಗಲಿ ಯೋಚಿಸದೇ ಇರುವರು. ನೋಡಿದರೆ ಪ್ರಯಾಣಿಕರ ದುರವಸ್ಥೆಯೆಂದು ಭಾವಿಸಬೇಕಾಗಿದೆ. ಡಿಸ್ಟ್ರಿಕ್ಟ್ ಬೋರ್ಡಿನ ಮೆಂಬರಿಗೆ ಖಚ್ಚು ಮತ್ತು ತಮ್ಮಗಳ ಅವಗಾಹನೆ ಬಗ್ಗೆ ತಮ್ಮ ಪತ್ರಿಕಾ ಮೂಲಕ ಈ ಅನನುಕೂಲವನ್ನು ಅರಿಕೆ ಮಾಡಿಕೊಂಡಿದ್ದೇನೆ. ಮುಖ್ಯ ಅಧಿಕಾರಿಗಳು ಮನಸ್ಸಿನಲ್ಲಿ ಪ್ರವೇಶಿಸಿ ಈ ಗ್ರಾಮದ ಬಾಗಿಲಿನಿಂದ ರೈಲ್ವೆ ಸ್ಟೇಷನ್ ವರೆಗೂ ೨ ಮೈಲಿನ ಸ್ಥಳಗಳು ಸರಿಪಡಿಸಿ ಪರಿಹರಿಸಿ ಸುಕಾಲ ಪಡಿಸಲಿ ಎಂದು ಪ್ರಾರ್ಥನೆ ಮಾಡುತ್ತೇನೆ.

ದಿನಚರ್ಯೆ.

ಕಾಮು ಜೈಲಿನಲ್ಲಿ ಕೈದಿಗಳು ನುಗ್ಗಿ ಕೆಲವು ಕೊಲೆಯುಳ್ಳ ಸುದಿನಗಳನ್ನು ಅಡಗಿಸಿದ್ದಾರೆ.

ಫೆಬ್ರುವರಿ ತಾ|| ೧೫ನೆ ಇಸ್ವಿ ಕೊಡಿಯಾಲ್ಲಿನಲ್ಲಿ ಮ|| ಸೋಮವಾರ ಟಿಪ್ಪಣಿ ಬರೆದು ಬೀಸುವ ಪಕ್ಷಿ ಪ್ರಯತ್ನ ಮಾಡುವವರ್ಯಾರೆಂಬ ಗಾಗಿ, ಕೈದಿಗಳು ಪರಾರಿಯಾದರು.

ಸೇಲಂನ ಸಂಸ್ಥಾನದ ಪ್ರಧಾನ ಮಂತ್ರಿಗಳಾದ ಜನರಲ್ ಪಿಕ್ ಮಾಸ್ಟರಿಗೆ ಕೆ. ಸಿ. ಐ. ಇ. ಯವರು ದಿವಾನರ ಕಲ್ಕತ್ತೆಯನ್ನು ತಲುಪಿದರು.

೩ನೇ ಪ್ರಾರ್ಥನಾ ಪಂಪೆ ಎಂಬ ಕಾಂಗ್ರೆಸ್ಸಿನ ಸ್ವಸ್ವರ ಕೃತಿ ೧೦೦ ಮುಟ್ಟಿಗೆ ಪಡೆದುದನ್ನು.

ಫೆಬ್ರುವರಿ ತಾ|| ೧೩ನೆ ಬುಧವಾರ ಹಾಲುಟ್ಟಿಗೆ ೧೬ನೇ ತಾ|| ತೋಟ ಮಂಗಳವಾರ — ಗರತ್ತಾರೆ ೨೭ ಕ್ಕೆ ಬೇಗ ಬಂದು ಅಲ್ಲೇ ಪೆಸೆಟ್ಟಂ ಮಾಡಿದ್ದು, ಮುಂಬಯಿಯಿಂದ ಕ್ರೈಸ್ತ ಮತ್ತು ಕ್ರಿಶ್ಚಿಯನ್ ಎಂಬ ಹಡಗುಗಳು ಪ್ರಯಾಣಕ್ಕೆ ಸಿದ್ಧವಾದ ಕೂಡಲೆ ಅವರಲ್ಲಿ ಪ್ರಯಾಣ ಮಾಡುತ್ತಾರೆ.

ಬಿಷಪರವರಲ್ಲಿರುವ ಸೇವಕನು ತುರ್ಕಿಸ್ತಾನದಿಂದ ತಪ್ಪಿಸಿಕೊಂಡು ಹೋಗಿದ್ದ ಮಗನು ಪ್ಯಾರಿಸಿನಲ್ಲಿ ಕೆಲಸ ಮಾಡುತ್ತಿದ್ದ ಗಾಂಧೀಯ ಜನಗಳ ಮನುಷ್ಯನ ಬಗಲಲ್ಲಿ ಮೋಟಿನ ಪೂರದಲ್ಲಿದ್ದನೆಂದು ಹೇಳುತ್ತಾರೆ.

೫ನೇ ಮಂಗಳವಾರ ಫಲ್ಗುಣದಲ್ಲಿ ಧನಿಕರ ಎಂಬ ಒಬ್ಬ ಧನಿಕನು ತನ್ನ ಚೋರನನ್ನು ಕೊಂದುಬಿಟ್ಟನು. ಕಾರಣಕ್ಕಾಗಿ ನನ್ನ ಆತನಿಗೆ ಬಂದೀಖಾನೆಯಲ್ಲಿ ಫಾಸಿ ಶಿಕ್ಷೆ ಕೊಡಲ್ಪಟ್ಟಿತು.

ಭಾರತೀಯ ಮುದ್ರಣಾಲಯ ಸಿಂಗಾಪುರದಲ್ಲಿ ೭ ದಫೆ ಭೂಕಂಪನ ಉಂಟಾಯಿತು. ಆದರೆ ಏನೂ ನಷ್ಟವಾಗಲಿಲ್ಲ.

ಫೆಬ್ರುವರಿ ತಾ|| ೧೫ನೆ ಸ್ಕೋಟ್ಲೆಂಡಿನ ಚೀಫ್ ಕಮಿಷನರರು ನನ್ನ ನೋಟಿಸಿನ ಮೇಲೆ ಸ್ಕೂಲಿಗೆ ಹೋಗಿದ್ದರು. ಮಕ್ಕಳ ಪರೀಕ್ಷೆ ಮಾಡಿ, ಬಳಿಕ ಸಂತೋಷಪಟ್ಟುಕೊಂಡು ಆ ಕೂಡಲೆ ಉತ್ತರ ದಿಕ್ಕಿಗೆ ಪ್ರಯಾಣ ಮಾಡಿದರು.

ಬಂಗಾಳದ ಜಾರಿ ವಿಚಾರವನ್ನು ಈ ವಾರದಲ್ಲಿ ಮೂಲಕ ಸೆಕ್ರೆಟರಿಯವರು ತೀರ್ಮಾನ ಮಾಡುವರೆಂದು ನಿರೀಕ್ಷಿಸುತ್ತಾರೆ.

ಷೇಕ್ಸ್‌ಪಿಯರದಲ್ಲಿ ಒಬ್ಬ ಅಷ್ಟನ ಆಸ್ಪತ್ರೆಯವರು ಕೊಲ್ಲಲ್ಪಟ್ಟನು. ಗುಮಾನಿಯಿಂದ ಒಬ್ಬ ಜವಾನನನ್ನು ಹಿಡಿದಿದ್ದಾರೆ.

ಕಾಬೂಲ್ ರಾಜರು ನಾಳೆ ದಿವಾನ ಕಲ್ಕತ್ತೆಗೆ ಹೋಗಿ ಕಾಣುವುದಾಗಿ ವರ್ತಮಾನವಿದೆ.

ಜಪಾನಿಗೆ ಕಾಬೂಲ್ ಸ್ವರ್ಣವು ೪೦೦ ಮರತ್ತು ಹೋಗುವಂತೆ ಗೊತ್ತುಮಾಡಿದ್ದರು. ಆದರೆ ಈಗ ೨೦೦ ಸೇರಿದೆ. ಇದರಿಂದ ಒಂದು ರಾಜವಿನಾಶಕ-ರೋಗದ ಭಯ ಎಂದು ಹುಕುಂ ಹೊರಡಿಸುತ್ತಾರೆ.

ಮೆಸ್ಸರ್ಸ್ ಸ್ಪೆನ್ಸರ್ ಕಂಪೆನಿಯವರು ಈಗ ತುಂಬ ಬಹುಪ್ರಸಿದ್ಧರಾಗಿದ್ದಾರೆ. ಅವರು ಜಾತಿ ಎಂಬ ನಾನಾವಿಧವಾದ ಧರ್ಮ ಮಾಡುತ್ತಿದ್ದರು. ಫೆಬ್ರುವರಿ ತಾ|| ೧೮ನೆ ಶನಿವಾರ ಕಲಕತ್ತೆ ಮಾರ್ಗವಾಗಿ ಈ ಕಂಪೆನಿಯವರು ತಮ್ಮ ಕಂಪೆನಿಯ ರೋಗದಿಂದ ಬಿದ್ದ ಜನರೆಲ್ಲ ಕಾಲರಾ ಇಲ್ಲಿನ ಭಾಷೆಯು ಕಾಣಿಸುವುದು ಎಂದು ಮುಂಬಯಿ ಮದರಾಸು ಮುಂತಾದ ಸ್ಥಳಗಳನ್ನು ಜಾಹೀರಾತು ಮಾಡುವದಕ್ಕೆ ಧರ್ಮ ಮಾಡುವದಕ್ಕಿದೆ.

ಕಲ್ಕತ್ತೆಯ ಮುನಿಸಿಪಲ್ ಸಂಘದವರು ಇಂಡಿಯಾ ದೇಶಕ್ಕೆ ಹೋಗಬೇಕಾದ ಮುಖ್ಯ ಪ್ರಯಾಣಿಕರು ಬಂದರೆ ಅವರ ತೆರಿಗೆಯನ್ನು ಯಾಕೆ ವಸೂಲ್ ಮಾಡಬಾರದೆಂಬ ಪ್ರಶ್ನೆಯನ್ನು ತೀರ್ಮಾನಿಸುವದರಲ್ಲಿದ್ದಾರೆ.

ಲಂಡನ್ ಪಟ್ಟಣದಲ್ಲಿ ಆಫೀಮು ವ್ಯಾಪಾರ ನಿರೋಧಿನಿ ಎಂಬ ಒಂದು ಸಭೆಯವರು ಸೇರಿ ಮ|| ಗ್ಲಾಡ್‌ಸ್ಟನ್‌ರವರನ್ನು ಈ ವ್ಯಾಪಾರಕ್ಕೆ ಅವರ ಸಹಾಯಕ್ಕೆ ಫೆಬ್ರುವರಿ ತಾ|| ೧೨ನೆ ಅರ್ಜಿ ಮಾಡಬೇಕೆಂಬುದಾಗಿ ಒಂದು ರಾಜ್ಯವಾರ ರೆಜೊಲ್ಯೂಷನ್ ಅವರ ತಿಳುವಳಿಕೆಗೆ ತರಬೇಕೆಂದು ನಿರ್ಧರಿಸಿದರು. ಸರ್ ಜೋಸೆಫ್ ಪೀಸರವರು ಅಗ್ರಾಸನವನ್ನು ವಹಿಸಿದ್ದರು.

ಜರ್ಮನೀ ದೇಶದಲ್ಲಿ ಪ್ರತಿಷ್ಠಾಪಿತರೂ ೧ ವರುಷದ ೮೧.ವರೂ ಸ್ವಸ್ಥದಲ್ಲಿ ಇರಬೇಕು ಆಗಬೇಕೆಂದು ವಿಧಿಸತಕ್ಕ ಒಂದು ಕಾನೂನನ್ನು ವ್ಯಾನ್ ಸ್ಟಾಡ್ ಬ್ಯೂ ಅಲ್ಲಿನ ರೈಚ್‌ಸ್ಟಾಗ್ ಎಂಬ ಪಾರ್ಲಿಮೆಂಟ್ ಸಭೆಯಲ್ಲಿ ಹಂಚಿಗೆ ಮಾಡಿ ಅವುಗಳು ಅದನ್ನು ತಿರಸ್ಕಾರ ಮಾಡಿರುತ್ತಾರೆ.

ಗೋವಾದಲ್ಲಿ ಪತ್ರಿಯವರಾಗಿದ್ದ ಸೆನೆಡರ್ ಲೆಮೊ ಎಂಬವರನ್ನು ಸೇವೆಗೆ ಕರೆಸಿಕೊಂಡು ಅವರು ಲಂಚ ತಿಂದವರೆಂಬ ಛಾರ್ಜ್ ಅವರ ಮೇಲೆ ಹೊರಿಸಿ ಅವರನ್ನು ಮೂರು ವರುಷದವರೆಗೂ ಕೆಲಸಕ್ಕೆ ಹೋಗಕೂಡದೆಂದು ಸಸ್ಪೆಂಡ್ ಮಾಡಿದರು. ಅವರು ಈ ವರ್ತಮಾನವನ್ನು ಕೇಳಿದ ಕೂಡಲೆ ಪತ್ತಿರ ಬಾರ ಹಾಕಿ ಇಟ್ಟುಕೊಂಡಿದ್ದ ಪಿಸ್ತೂಲನ್ನು ಹಾರಿಸಿ ಆತ್ಮಹತ್ಯ ಮಾಡಿಕೊಂಡರು.

ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ಪೋಲೀಸು ಗಳ ಹೊಸ ಇನ್ಸ್‌ಪೆಕ್ಟರ್ ಅಸಿಸ್ಟೆಂಟ್ ಡೈರೆಕ್ಟರ್ ಜನರಲ್ ಎಂಬ ಅಧಿಕಾರವನ್ನು ಸೃಷ್ಟಿಸಿ, ಅದಕ್ಕೆ ಆರೋಗ್ಯ ಅಲ್ಲದೆ ಪ್ರತಿ ತಿಂಗಳಿನ ೫೦೦ ರೂಪಾಯಿ ಸಂಬಳ ನಿಷ್ಕರ್ಷೆ ಮಾಡಿ ಮ|| ಹೋಬಾರ್ಟರವರನ್ನು ಆ ಸ್ಥಳಕ್ಕೆ ನೇಮಿಸುತ್ತಾರೆ.

ಕಲ್ಕತ್ತಾ ಪಟ್ಟಣದಲ್ಲಿ ಪೂರ್ವ ಹೆಸರುವಾಸಿಯಾದಂಥ ಒಬ್ಬ ಸಾಲಿಸಿಟರ್ ಮ|| ಡಿಸ್ಯುಜಾರವರು ದೈವಾಧೀನರಾದರು. ಹೈಕೋರ್ಟಿನ ಜಡ್ಜಿಗಳು ಆ ದಿವಸ ಕೋರ್ಟಿಗೆ ರಜವನ್ನು ಮುಚ್ಚಿದರು. ಅವರನ್ನು ಹೊತ್ತುಕೊಂಡು ಹೋಗುವ ವ್ಯಾಯ ಜಡ್ಜಿಗಳೂ, ಲಾಯರುಗಳೂ, ಪುರಜನಗಳೂ ಅನೇಕರು ಹೋಗಿದ್ದರು. ಮೃತಪಟ್ಟ ಮೇಲೆಯ ಪೂರ್ವ ಧರ್ಮನಿಷ್ಠರಾಗಿಯೂ, ಬಹಳ ಧಾರ್ಮಿಕರಾಗಿಯೂ, ಬಹು ಜನರ ಪ್ರೀತಿಗೆ ಪಾತ್ರರಾಗಿಯೂ ಇದ್ದರು.

ಸ್ವಸ್ಥದ ವಸ್ತುಗಳನ್ನು ತಯಾರಿಸತಕ್ಕ ಪರೀಕ್ಷೆಗೆ ಇಲ್ಲರೂ ಕಲ್ಕತ್ತೆಯಲ್ಲಿ ತಮಗೆ ಹೆಚ್ಚು ಸಹಾಯ ಕೊಡುವದಾಗಿ ಸರ್ಕಾರದವರು ಭರವಸೆ ಕೊಡುವವರೆಗೂ ಸ್ವಸ್ಥದ ಯಾವ ಕೆಲಸವನ್ನೂ ಮುಟ್ಟುವದಿಲ್ಲವೆಂದು ಹೇಳಿದ್ದಾರೆ.

ನಮ್ಮ ಬಳಿಗೆ ಡಾರ್ಜಿಲಿಂಗಿನಲ್ಲಿ ಭೂಕಂಪನ ಉಂಟಾಯಿತು. ಸ್ವಲ್ಪ ಜೋರಾಗಿಯೇ ಇತ್ತು. ಆದರೆ ವಿಶೇಷ ನಷ್ಟ ಉಂಟಾಗಲಿಲ್ಲ.

ವಿಲಾಯಿತಿಗೆ ಸೇರಿದ ಲ್ಯಾಂಕಷೈರ್ ಎಂಬ ಡಿಸ್ಟ್ರಿಕ್ಟಿಗೆ ಪ್ರಧಾನ ಪಟ್ಟಣವಾದ ಲಿವರ್‌ಪೂಲಿನಲ್ಲಿ ಹತ್ತಿಯ ವ್ಯಾಪಾರವು ಬಹಳ ಪ್ರಸಿದ್ಧವಾದದ್ದು. ಫೆಬ್ರುವರಿ ತಾ|| ೧೫ನೆ ಬುಧವಾರ ಅಲ್ಲಿ ಕೆಲಸ ಮಾಡುತ್ತಿದ್ದವರು ಸುಮಾರು ೧ ಲಕ್ಷ ಜನಗಳು ಇನ್ನೂ ಕೆಲಸ ಮಾಡುವದಿಲ್ಲವೆಂದು ಹೇಳುತ್ತಾರೆ. ಇವರ ಜೀತಕ್ಕಾಗಿ ಇವರನ್ನು ೧ನೇ ಸಾಹಿಬರು ಸೇರಿಸುವರು. ಅವರಿಗೆ ಕೊಡುವ ಕೂಲಿ ಸಾಲದು ಮತ್ತು ಹೆಚ್ಚು ಕಾಲ ಕೆಲಸ ಮಾಡಿಸುತ್ತಾರೆ ಎಂಬುದೇ ಮುಖ್ಯ ಕಾರಣ.

ಪ್ರೆಸಿಡೆಂಟ್ ಮ|| ಹ್ಯಾರಿಸನ್‌ರವರು ಹವಾಯಿ ದ್ವೀಪವನ್ನು ಸಂಯುಕ್ತ ಸಂಸ್ಥಾನಗಳಿಗೆ ಸೇರಿಸಿಕೊಂಡು, ಅವರ ಸ್ವಾಧೀನದಲ್ಲಿ ಮಾಡಿ, ಅಲ್ಲಿನ ರಾಣಿಯವರಿಗೆ ಪಿಂಚಣಿ ಕೊಡಲು ಒಪ್ಪಿ ಈ ಕರಾರನ್ನು ಸೆನೆಟ್ಟಿಗೆ ಕಳುಹಿ ಅವರ ಅನುಮತಿಯನ್ನು ನಿರೀಕ್ಷಿಸುತ್ತಲಿದ್ದಾರೆ. ಬಹುಶಃ ಒಪ್ಪಲಿಕ್ಕಿಲ್ಲ.

ಶಿವಪುರ ಮಹಾರಾಜರ ಮಗನ ವಿವಾಹಸಂಬಂಧವಾದ ಮೊಕದ್ದಮೆಯು ಈ ದಿವಸ ಪೂರೈಸಿತು. ಮಹಾರಾಜರನ್ನು ಬಿಟ್ಟುಬಿಟ್ಟರು. ಮ|| ಷಣ್ಮುಖಾಚಾರ್ಯರು ತಿರ್ಪಿನಲ್ಲಿ ಬಹಳ ಚೆನ್ನಾಗಿ ಮಾಡಿದರು. ಮ್ಯಾಜಿಸ್ಟ್ರೇಟ್ ಸಂಸ್ಕೃತ ವಿಷಯದಲ್ಲಿ ಜಡ್ಜಿಯವರು ತಮ್ಮ ಅಭಿಪ್ರಾಯವನ್ನು ತಿಳಿಸಿದರು.

ಮಧ್ಯಪ್ರಾಂತ್ಯಗಳಿಗೆ ಸೇರಿದ ಮಂಡ್ಲಾಕ್ಕೆ ಡೆಪ್ಯುಟಿ ಕಮಿಷನರಾದ ಮ|| ಲ್ಯಾಂಡೇನಾರ್ ಸಾಹೇಬರವರು [illegible] ಯನ್ನು ಪರಿಶೋಧಿಸುವದಕ್ಕೆ ಹೋದರು. ಒಂದು ಹುಲಿಯನ್ನು ಗುಂಡಿನಿಂದ ಹೊಡೆದರು. ಅದು ದೆಬ್ಬಿಯಿಂದ ನರಳುತ್ತಾ ಹುಲಿ ಮೇಲೆ ಬಿದ್ದು ಜವಾನನ ಕಾಲನ್ನು ನುಗ್ಗಿ ಅವನನ್ನು ಎಳೆದು ಕೊಳ್ಳಲು ಇದರಿಂದ ಅವನನ್ನು ಭಯಪಡುವದಕ್ಕೆ ಸಾಹೇಬರು ಹೇಗೆ ಪುನಃ ಗುಂಡಿನಿಂದ ಹೊಡೆದು ಅದಾಗಲು ಅದು ಸಾಯದೆ ಸಾಹೇಬರ ಮೇಲೆ ಬಿದ್ದು ಅವರ ಕಾಲು ತೊಡೆಗಳನ್ನು ಒಡೆದುಬಿಟ್ಟಿತು. ಬಳಿಕ ಪರಿವಾರಕ್ಕೆ ಅವರ ಕಷ್ಟದಿಂದ ತಪ್ಪಿಸಿಕೊಂಡರು. ತಕ್ಷಣ ಬರವಣಿಗೆಗಳಾಗಿ ದೊರೆ ಗಾರ್ಡನ್ ಹೇಳಿದರು, ಪ್ರಾಣವುಳಿದರು.

ಬಂಗಾಳದ ಪ್ರಾಮಿಸರಿಯವಾಗಿ ಇದ್ದಿರುವ ಸೆಕ್ರೆಟರಿಯವರು ತಂತಿಯ ಮೂಲಕ ವರ್ತಮಾನ ಕೊಟ್ಟಿರುವದೇನಂದರೆ:—ಮದರಾಸು ಗೌರ್ನಮೆಂಟಿನವರು ಬಂಗಾಳ ಲಾಟರಿಯಲ್ಲಿ ಗೌರ್ನರವರ ಆಜ್ಞೆಗಳನ್ನು ಒಪ್ಪಿ ಪ್ಯಾರಿ ಮಠದವರನ್ನು ತೆಗೆದು ಹಾಕುವದಕ್ಕೆ ಒಂದು ಕಮಿಷನ್ ಮಾಡುವದಕ್ಕೆ ಇಂಡಿಯಾ ಗೌರ್ನಮೆಂಟ್‌ನವರು ಸ್ವೀಕಾರ ಮಾಡಿರುತ್ತಾರೆ. ಕಮಿಷನರಿನ ದೊರೆಗಳನ್ನು ತ್ವರಿತದಲ್ಲೇ ನೇಮಿಸಲ್ಪಡುತ್ತೆ.

ಜನಾನಾ ಸ್ತ್ರೀಯರು.

[illegible]

ವಿವಿಧ ವರ್ತಮಾನಗಳು.

[illegible]

ಶಾಲಿವಾಹನಶಕ ೧೮೧೫ ನೇ ನಂದನನಾಮ ಸಂವತ್ಸರದ ಫಾಲ್ಗುಣ ಶುದ್ಧ ಸಪ್ತಮಿ ಗುರುವಾರದಿಂದ ಫಾಲ್ಗುಣ ಶುದ್ಧ ಚತುರ್ದಶಿ ಬುಧವಾರದವರೆಗಿನ ವಾರದ ಪಂಚಾಂಗ.

೧೮೯೩ ನೇ ಇಸವಿ, ಫೆಬ್ರವರಿ.

ತಾ.	ವಾರ.	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.	[illegible]
23	ಗು.	ಸ.	8-10	ಕೃ.	22-12	14
24	ಶು.	ಅ / ನವ	2-17 / 54-5	ರೋ.	18-3	15
25	ಶ.	ದ.	50-56	ಮೃ.	14-11	16
26	ರ.	ಏ	46-6	ಆ.	10-45	17
27	ಸೋ.	ದ್ವಾ.	41-54	ಪು.	7-55	18
28	ಮಂ.*	ತ್ರ.	35-19	ಪು.	5-56	19
ಮಾರ್ಚ 1	ಬು.	ಚ	36-22	ಶ್ಲೇ.	4-53	20

* ಉಪವಾಸ.

ಪೇಟೆ ಧಾರಣೆ.

ದಿನಸಿ.	ಮೈಸೂರು ರೂ. ಆ. ಪೈ.	ಬೆಂಗಳೂರು ರೂ. ಆ. ಪೈ.
ಶಿಡ್ಲ ಅಕ್ಕಿ ಪಲ್ಲ ೧ಕ್ಕೆ	೧೧-೦-೦	೧೧-೦-೦
ಕೆಂಬೂತಿ ಅಕ್ಕಿ ಅವ್ವಲ್	೧೨-೧೨-೦	೧೧-೮-೦
ಡಿಟೋ ಅಕ್ಕಿ ದುಯಂ	೧೨-೪-೦	೧೨-೧೨-೦
ಜಾಪಾಳೆ ಅಕ್ಕಿ	೧೨-೦-೦	೧೨-೦-೦
ಸಣ್ಣಕ್ಕಿ ಅವ್ವಲ್	೧೭-೮-೦	೧೩-೮-೦
ಡಿಟೋ ಅಕ್ಕಿ ದುಯಂ	೧೭-೦-೦	೧೧-೮-೦
ತೊಗರಿಬೇಳೆ ಪಲ್ಲ ೧ಕ್ಕೆ	೧೦-೧೨-೦	೧೧-೧೨-೦
ಡಿಟೋ ದುಯಂ ತರಹ	೧೨-೦-೦	೧೦-೧೨-೦
ಕೈರಾಗಿ ಪಲ್ಲ ೧ಕ್ಕೆ	೪-೩-೦	೧೩/೪-೦-೦ [illegible]
ಹಾರ್ಕಿ	೬-೦-೦	೫-೮-೦ [illegible]
ಹುರುಳಿ ಪಲ್ಲ ೧ಕ್ಕೆ	೧೦-೮-೦	೮-೩-೦
ಬಿಳೀ ಅವರೆ	೯-೦-೦	೮-೧೨-೦
ಹೆಸರು	೧೨-೮-೦	೧೫-೦-೦
ಉದ್ದು	೧೭-೪-೦	೯-೧೭-೦
ಕಡಲೆ	೧೧-೦-೦	೧೫-೦-೦
ಎಳ್ಳು	೧೩-೧೨-೦	೧೩-೮-೦
ಹಾರಕ	೬-೦-೦	೬-೮-೦
[illegible]	೧-೮-೦	೧-೧೪-೦
[illegible]	೨-೧೨-೦	೨-೮-೦
[illegible]	೨-೬-೦	೨-೪-೦
[illegible]	೫-೦-೦	೧-೧೦-೦
[illegible]	೪-೮-೦	೧-೬-೦
[illegible]	೪-೮-೦	೪-೮-೦
[illegible]	೪-೦-೦	೩-೧೨-೦
[illegible]	೮-೮-೦	೧೦-೦-೦

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೩. ಮೈಸೂರು ಸಹ ೧೮೯೩ ನೇ ಇಸವಿ ಮಾರ್ಚಿ ತಾರೀಖು ೨ ನೇ ಗುರುವಾರ. ಸಂಚಿಕೆ ೪೭.

ವಿಶೇಷ, ನೋಡಿನೋಡಿ! ನೋಡಿನೋಡಿ!! ನೋಡಿನೋಡಿ!!!

೧೮೯೩ ನೇ ವರುಷದ ಲೋವರ್ ಸೆಕಂಡರಿ ಪರೀಕ್ಷೆಯ ಟೆಕ್ಸ್ಟಿನ ನೋಟ್ಸು.

ಈ ಪರೀಕ್ಷೆಗಾಗಿ ನಿಯಮಿಸಲ್ಪಟ್ಟ ಸೋಮೇಶ್ವರಶತಕ, ಪದ್ಯಸಾರ ೧೮೯೨—೯೩ ನೆಯ ಇರುವ ಪದ್ಯಗಳೂ, ಕನ್ನಡ ಭಾರತ ಕಥಾಸಂಗ್ರಹ ಸಭಾಪರ್ವ: ಇವುಗಳಿಗೆ ಅನ್ವಯ, ಅರ್ಥ, ತಾತ್ಪರ್ಯ ಅವಯವಾರ್ಥ, ವ್ಯಾಕರಣ ಸಂಗತಿಗಳು, ವಾಕ್ಯವಿಭಜನೆ, ಪೂರ್ವಕಥೆ, ಇವೇ ಮೊದಲಾದವುಗಳನ್ನು ವಿವರಿಸಿ ವ್ಯಾಖ್ಯಾನವು ಚಿಕ್ಕಮಗಳೂರು ಇಂಗ್ಲೀಷ್ ಸ್ಕೂಲಿನ ಪಂಡಿತರಾದ ಎ. ನಾರಾಯಣಾಚಾರ್ಯರಿಂದ ಬರೆಯಲ್ಪಟ್ಟು ಈ ಮುದ್ರಾಶಾಲೆಯಲ್ಲಿ ಪ್ರಿಂಟಾಗುತ್ತಿದೆ. ಈ ನೋಟ್ಸು ಗೈಡ್ ಮೋಡಿ ಪ್ರಕಾರವಾಗಿ ಇದೆ. ಪ್ರತಿಗಳು ಸ್ವಲ್ಪವಾಗಿಯೇ ಪ್ರಿಂಟು ಮಾಡುವದರಿಂದ ಇದೇ ಕ್ಲಾಸಿನವರು ಜಾಗ್ರತೆಯಾಗಿ ಇದರ [illegible] ಈ ಕೆಳಗಿನ ವಿಳಾಸದಾರರಿಗೆ ಬರೆದು ತರಿಸಿಕೊಳ್ಳಬಹುದು. ಕ್ರಯ ೮ ಆಣೆ. ಪೋಸ್ಟೇಜು ೧ ಆಣೆ. ಮತ್ತು ಆದಿಪರ್ವ, ಸಭಾಪರ್ವ, ವಿರಾಟಪರ್ವ, ಭೀಷ್ಮಪರ್ವ, ದ್ರೋಣಪರ್ವ, ಶಲ್ಯಪರ್ವ, ಸೌಪ್ತಿಕಪರ್ವ, ಸ್ತ್ರೀಪರ್ವ, ಶಾಂತಿಪರ್ವ—ದಾನಧರ್ಮ, ಆಪದ್ಧರ್ಮ, ಮೋಕ್ಷಧರ್ಮ ಈ ಪರ್ವಗಳು ಪ್ರಿಂಟಾಗಿ ಬಿಕರಿಗೆ ಸಿದ್ಧವಾಗಿವೆ. ಈಗ ಅನುಶಾಸನೀಕಪರ್ವವು ಪ್ರಿಂಟಾಗುತ್ತಿದೆ. ಇಷ್ಟಪಟ್ಟವರು ತರಿಸಿಕೊಳ್ಳಬಹುದು.

ಯಂ. ರಾಮಸ್ವಾಮಿ ಅಂಡ್ ಸನ್ಸ್,
ಪ್ರೊಪ್ರೈಟರ್ಸ್, ಶ್ರೀ ಚಾಮರಾಜೇಂದ್ರ ಪ್ರೆಸ್,
ಅವೆನ್ಯೂ ರೋಡ್, ಬೆಂಗಳೂರು.

WOMAN, HER PLACE AND POSSIBILITIES

A LECTURE

BY

Miss. Frances M. Dryden, B. A.

This is a very powerful lecture and should be read by every Hindu who understands English. We have only a few copies at hand and the price has been greatly reduced, the price of each copy being 3 pies only.

Apply to

THE WESLEYAN MISSION PRESS,

Mysore City.

ÆSOP'S FABLES.

These are well printed in English, and illustrated both inside and outside. The covers are in striking colours. The set is complete in 3 Volumes. *The whole set can now be had* **at a reduced price of 3 pies.** Only a few copies are available.

Apply at once to

THE WESLEYAN MISSION PRESS

Mysore City.

ನೋಟೀಸ್.

		ಕ್ರಯ	ಅಂಚೆ ಕೂಲಿಸಹಿತ
Campbell's.	ಕನ್ನಡ ವ್ಯಾಕರಣ ಸಾರ	೦ ೨ ೦	೦ ೨ ೩
Object Lessons.	ವಸ್ತು ಪಾಠಗಳು	೦ ೧ ೦	೦ ೧ ೩
Picture do	ಚಿತ್ರಗಳು ಸಹಿತವಾಗಿ	೦ ೨ ೦	೦ ೨ ೩

ಈ ಮೂರು ಪುಸ್ತಕಗಳು ಪ್ರೈಮರಿ ಶಾಲೆಗಳಲ್ಲಿ ಓದತಕ್ಕ ಪುಸ್ತಕಗಳು.

	ಕ್ರಯ	ಅಂಚೆ ಕೂಲಿಸಹಿತ
ಸ್ತ್ರೀಯರು ಓದತಕ್ಕ ಪುಸ್ತಕ	೦ ೫ ೦	೦ ೫ ೩
ಗಣಿತ ವಿದ್ಯೆ ..	೦ ೪ ೦	೦ ೪ ೩
ಗಣಿತ ಲೆಕ್ಕಗಳು ..	೦ ೧ ೦	೦ ೧ ೩
ಸಂಸ್ಕೃತ ಕಠಾರಟಿಕ ಭಾಷಾಮಂಜರಿ	೦ ೨ ೦	೦ ೨ ೩
ಭೂಗೋಳ ಪ್ರಶ್ನೋತ್ತರ	೦ ೨ ೦	೦ ೨ ೩
ಇಂಗ್ಲಿಷಿನ ಕನ್ನಡವೂ ರೀಡರುಗಳ ೧ನೇ ೨ನೇ ಭಾಗಗಳು	೦ ೧ ೦	೦ ೧ ೩
ಕಾವ್ಯಮಾಲೆ (Minor Poetical Anthology)	೦ ೮ ೦	೦ ೮ ೩
ಬಾಲವ್ಯಾಕರಣ ..	೦ ೫ ೦	೦ ೫ ೩
ಹಳಗನ್ನಡ ವ್ಯಾಕರಣ ಸೂತ್ರಗಳು	೦ ೩ ೦	೦ ೩ ೩
ಇಂಗ್ಲೀಷಿನ ಕನ್ನಡವೂ ಸಂಭಾಷಣ ವಾಕ್ಯಗಳು	೦ ೧೦ ೦	೦ ೧೦ ೩
ಕನ್ನಡ ದರ್ಪಣ ..	೧ ೦ ೦	೧ ೪ ೩
Kan. Eng. Pocket Dictionary	೧ ೪ ೦	೧ ೫ ೩
Eng. Kan. School Dictionary	೨ ೧೦ ೦	೨ ೧೨ ೩
ಸುವಾರ್ತಾ ಕೀರ್ತನೆ ..	೦ ೪ ೪	೦ ೪ ೩
ಯಾತ್ರಿಕನ ಪ್ರಯಾಣ (Bunyan)	೦ ೧೨ ೦	೦ ೧೪ ೩
ಕೃಷಿ ಪದ್ಧತಿ ೧ ನೇ ಭಾಗ ೨ ಮತ್ತು ೩ ನೇ ಭಾಗ	೦ ೧ ೩	೦ ೨ ೦
ಭಕ್ತಿಸಾರ ..	೦ ೧ ೦	೦ ೧ ೩
ಸತ್ಯ ವಚನ ..	೦ ೧ ೦	೦ ೧ ೩
ಕಾವ್ಯಸಂಗ್ರಹ ..	೦ ೩ ೦	೦ ೩ ೩

A new Edition of the Geography suited for the Lower Secondary Examination is now ready.—Edited by Rev. H. Gulliford. Price 6 As.

ಮೇಲೆ ನಮೂದಿಸಿರುವ ಪುಸ್ತಕಗಳನ್ನು ಬೆಂಗಳೂರು ದಂಡಿನ ವೆಸ್ಲಿಯನ್ ಮಿಷನ್ ಪುಸ್ತಕ ಶಾಲೆಯಲ್ಲಿ ಪಡೆಯಬಹುದು.

ವೃತ್ತಾಂತ ಪತ್ರಿಕೆ.

ಚಂದಾ ನಿರ್ಣಯ.

		ರೂ. ಆ. ಪೈ.
ಸ್ಥಳದವರಿಗೆ ವರ್ಷ ೧ಕ್ಕೆ	...	೧—೦—೦
ಪರಸ್ಥಳದವರಿಗೆ ವರ್ಷ ೧ಕ್ಕೆ	...	೧—೪—೦
ಬಿಡಿ ಪತ್ರಿಕೆ ೧ಕ್ಕೆ	...	೦—೦—೩

ಈ ಪತ್ರಿಕೆಯು ಮೈಸೂರು ರಾಜಧಾನಿಯಲ್ಲಿ ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು. ಇದರ ಮೂಲಕ ಸರ್ವರಿಗೂ ಸುಲಭಸಾಧ್ಯವಾಗುವಂತೆ ಈ ಪತ್ರಿಕೆಗೆ ಇಷ್ಟು ಅಲ್ಪ ಮೌಲ್ಯವನ್ನು ನಿರ್ಣಯಿಸಿರುತ್ತೇವೆ. ಈ ಪತ್ರಿಕೆಯನ್ನು ಅಪೇಕ್ಷಿಸುವವರು [illegible]

ಪ್ರಕಟನೆಯ ನಿರ್ಣಯ.

		ರೂ. ಆ. ಪೈ.
ಮೊದಲನೇ ಆವರ್ತಿ ಪಙ್ಕ್ತಿ ೧ಕ್ಕೆ	...	೦—೨—೦
ಎರಡನೇ ಆವರ್ತಿ ಪಙ್ಕ್ತಿ ೧ಕ್ಕೆ	...	೦—೧—೦

ಅಂತರ ಪ್ರತಿಯೊಂದು ಪಾಠದಲ್ಲಿಯೂ ಪಙ್ಕ್ತಿ ೧ಕ್ಕೆ ೧ ಆಣೆಯಂತೆಯೇ ಲೆಕ್ಕ ಮಾಡಲ್ಪಡುವದು. ಇಂಥಾದ್ದಕ್ಕೆ [illegible] ಬರೆದು ತಿಳಿಯಬಹುದು.

ಎಡಿಟರ್,
ವೃತ್ತಾಂತ ಪತ್ರಿಕೆ.

ನೋಟಿಸ್.

ಪುಸ್ತಕಗಳು.	ಕ್ರಯ.
ಪ್ರಾಕೃತ ವ್ಯಾಕರಣ	1—8—0
ಕನ್ನಡ ಇಂಗ್ಲೀಷು ನಿಘಂಟು 1 ನೇ ದೊಡ್ಡ ತರಹ	3—0—0
" " 2 ನೇ ತರಹ	2—8—0
ಬಾಲಕರು ಓದತಕ್ಕ ಎರಡನೆ ಕ್ಲಾಸಿನ ಪ್ರಶ್ನೋತ್ತರಗಳು	0—1—0
ಸಭೆಯ ನಿಯಮಗಳನ್ನು ಕುರಿತದ್ದು	0—0—6
ಕಥಾಸಂಗ್ರಹ 1 ನೇ ಭಾಗದಿಂದ 3 ವರೆಗೆ	1—0—0
ಕಥಾಸಂಗ್ರಹ 4 ರಿಂದ 6 ನೇ ಭಾಗ ಹೊಸ ಛಾಪು	1—0—0
" " ದೊಡ್ಡ ತರಹ	1—8—0
ಜ್ಞಾನೋದಯ [illegible]	0—4—0
ಸತ್ಯವೇದವನ್ನು ಕುರಿತು 2 ನೇ ಭಾಗ	0—4—0
ಪ್ರಸಂಗಿಯ ದರ್ಪಣ	0—0—6
ಇಂಗ್ಲೀಷು [illegible], ಕನ್ನಡ ಭಾಷೆಯ [illegible] ವಿಭಾಗಗಳನ್ನು [illegible] ನಿಘಂಟು	0—2—0
ಕನ್ನಡ ವ್ಯಾಕರಣ (ಇಂಗ್ಲೀಷಿನಲ್ಲಿ)	2—0—0
ಸಂಸ್ಕೃತ ವ್ಯಾಕರಣ	1—0—0
[illegible]	0—1—0
[illegible]	0—0—6
ಕ್ರಿಸ್ತನ [illegible]	0—12—0

ಮೇಲೆ ನಮೂದಿಸಿರುವ ಪುಸ್ತಕಗಳನ್ನು ಅಪೇಕ್ಷಿಸುವವರು ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್ಸಿಗೆ ಬರೆದು ತರಿಸಿಕೊಳ್ಳಬಹುದು. [illegible]

ವೆಸ್ಲಿಯನ್ ಮಿಷನ್ ಪ್ರೆಸ್,
ಮೈಸೂರು.

ಜಾಹೀರಾತು

THE KANARA & MYSORE TRADING AGENCY
BOMBAY.

[illegible]

[illegible]

೩ || ರೂಪಾಯಿ [illegible]

[illegible]	೩ || ರೂಪಾಯಿ		[illegible]
[illegible]	೫	"	[illegible]
[illegible]	೩ ||	"	[illegible]
[illegible]	೨೫	"	[illegible]

[illegible]

ಕ್ರಯ ೩ || ರೂಪಾಯಿ.

[illegible]

[illegible]

ಪ್ರತಿ [illegible] ೧ಕ್ಕೆ ೨ || ರೂಪಾಯಿ ಕ್ರಯವು [illegible]

[illegible]
ಕೆನರಾ ಎಂಡ್ ಮೈಸೂರ ಟ್ರೇಡಿಂಗ ಏಜೆನ್ಸಿ ಆಫೀಸ್, ಮುಂಬಯಿ.

ವೃತ್ತಾಂತ ಪತ್ರಿಕೆ.

೧೮೯೩ ನೇ ಇಸವಿ ಮಾರ್ಚಿ ತಾ|| ೨ನೇ ಗುರುವಾರ.

ಉಪದೇಶಿಗಳಿಗೆ.

ಮತವಿಚಾರವಾದ ಒಂದು ಉಪನ್ಯಾಸವನ್ನು ಬರೆಯಬೇಕು. ಇದಕ್ಕಾಗಿ ಮೂರು ಬಹುಮಾನಗಳು ಕೊಡಲ್ಪಡುವವು. ಉತ್ಕೃಷ್ಟವಾದದಕ್ಕೆ ೫ ರೂಪಾಯಿಯೂ, ೨ ನೆಯದಕ್ಕೆ ೩ ರೂಪಾಯಿಯೂ, ೩ ನೆಯದಕ್ಕೆ ೨ ರೂಪಾಯಿಯೂ ದೊರೆಯುತ್ತೆ. ಈ ಉಪನ್ಯಾಸಗಳನ್ನು ಬರೆಯುತಕ್ಕವರು ಕೆಳಗಿನ ನಿಬಂಧನೆಗಳಿಗೆ ಚೆನ್ನಾಗಿ ನಿಗಾ ಕೊಡಬೇಕು.

೧ ಈ ಉಪನ್ಯಾಸಗಳು ಮಾರ್ಚಿ ೨ನೇ ತಾರೀಖಿನೊಳಗಾಗಿ ರೆವರೆಂಡ್ ಪೆನ್ರಿ ಹೇಗಿರವರಿಗೆ ತಲುಪಿರಬೇಕು.

೨ ಈ ಉಪನ್ಯಾಸವು ಅರ್ಧಗಜ ಕಾಗದದ ೬ ಪುಟಗಳಿಗೆ ಮೀರಿದ್ದಾಗಿರಕೂಡದು ಮತ್ತು ಒಂದೇ ಪಕ್ಕದಲ್ಲಿ ಬರೆದಿರಬೇಕು.

೩ ಒಂದೊಂದು ಉಪನ್ಯಾಸದಲ್ಲಿನ ಬೋಧನೆಯು ಸ್ಪಷ್ಟವಾಗಿಯೂ, ಮನೋರಂಜಕವಾಗಿಯೂ ಇರಬೇಕಾದದ್ದಲ್ಲದೆ ಅದರಲ್ಲಿ ಯೋಗ್ಯವಾದ ಹೊಸ ದೃಷ್ಟಾಂತಗಳೂ, ಹೊಸ ಉಪಮಾನಗಳೂ ಮತ್ತು ಹೊಸಕಥೆಗಳೂ ಇರಬೇಕು. ಹಳೇ ದೃಷ್ಟಾಂತಗಳನ್ನಾಗಲಿ, ರೂಢಿಯಲ್ಲಿರುವ ಕಥೆಗಳನ್ನಾಗಲಿ ಬರೆದವರಿಗೆ ಬಹುಮಾನ ದೊರೆಯಲಾರದು.

೪ ಉಪನ್ಯಾಸದ ವಾಕ್ಯರಚನೆಯು ರೂಢಿಯಾಗಿ ಎಲ್ಲಾ ಜನರಿಗೆ ತಿಳಿಯತಕ್ಕದ್ದಾಗಿರಬೇಕು.

೫ ಉಪನ್ಯಾಸವನ್ನು ರವಾನಿಸುವಂತೆ ಅದನ್ನು ಬುಕ್‌ಪೋಸ್ಟು ಮೂಲಕ ಕಳುಹಿಸಿ ಅದರ ಮೇಲೆ "ಪ್ರೈಸ ಮ್ಯಾನುಸ್ಕ್ರಿಪ್ಟ್" ಎಂದು ಮಾತ್ರವೇ ಬರೆದು "ವೃತ್ತಾಂತ ಪತ್ರಿಕಾಕರ್ತರಾದ ರೆವರೆಂಡ ಪೆನ್ರಿಹೇಗ್‌ಸಾಹೇಬರವರಿಗೆ" ಎಂದು ಬರೆದು ಕಳುಹಿಸಬೇಕು. ಅದಕ್ಕೆ ಸಂಬಂಧಪಟ್ಟ ಇತರ ಎಲ್ಲಾ ವಿಷಯಗಳನ್ನು ತಿಳಿಸಬೇಕಾದರೆ ಪೋಸ್ಟ್‌ಕಾರ್ಡು ಅಥವ ಬೇರೆ ಕಾಗದಗಳ ಮೂಲಕವೇ ತಿಳಿಸಬೇಕು. ಉಪನ್ಯಾಸದ ಕೊನೆಯಲ್ಲಾಗಲಿ ಮೊದಲಿನಲ್ಲಾಗಲಿ ಅನ್ನೇನೂ ಬರೆಯಕೂಡದು.

೬ ಆ ತಾರೀಖಿನ ವರೆಗೂ ತಲುಪಿದ ಉಪನ್ಯಾಸಗಳನ್ನೆಲ್ಲಾ ಪರೀಕ್ಷಿಸಿದನಂತರ ಬಹುಮಾನಕ್ಕೆ ಯೋಗ್ಯವಾದವರ ಹೆಸರುಗಳನ್ನು ತಿಳಿಸಲಾಗುತ್ತದೆ.

(Sd) *Henry Haigh,*
Mysore.

ಮ್ಯೂನಿಸಿಪಲ್ ಮೀಟಿಂಗುಗಳು ಅಂತರಂಗದಲ್ಲಿ ನಡೆಸ ಬಹುದೆ?

ಈಚೆಗೆ ಮೈಸೂರು ಮ್ಯೂನಿಸಿಪಲ್ ಬೋರ್ಡಿನಲ್ಲಿ ಒಂದು ವಿಷಯವು ಆಗಾಗ್ಯೆ ಚರ್ಚೆಗೆಬರುತ್ತಾ ಇರುವದು ಬಹಳ ಆಶ್ಚರ್ಯಕರವಾದದ್ದಾಗಿದೆ. ಬೋರ್ಡಿನಲ್ಲಿ ನಡೆಯುತಕ್ಕ ಸಂಗತಿಗಳು ಜನರಿಗೆ ಸರ್ವಸಾಮಾನ್ಯವಾಗಿ ಪ್ರಕಟವಾಗುವದು ಸರಿಯೊ? ಇಲ್ಲವೆ, ಸರ್ಕಾರದವರು ಒಪ್ಪಿಕೊಳ್ಳುವಷ್ಟು ಅಂಶಗಳು ಮಾತ್ರ ಬೈಲಾಗುವದು ಸರಿಯೊ? ಎಂಬದಾಗಿ ದೀರ್ಘಾಲೋಚನೆಯು ನಡೆಯುತ್ತಲಿರುವಂತೆ ತೋರುತ್ತೆ. ಈ ವಿಷಯವಾಗಿ ನಮ್ಮ ಬುದ್ಧಿಗೆ ತೋರುವ ಅಭಿಪ್ರಾಯವನ್ನು ಇಲ್ಲಿ ಸಂಕ್ಷೇಪವಾಗಿ ವಾಚಕರಿಗೆ ತಿಳಿಸಬೇಕೆಂದಿರುತ್ತೇವೆ.

೧. ಬೋರ್ಡಿನ ಸಂಗತಿಗಳನ್ನು ಯಾರಾದರೂ ಕೇಳಿ ಪ್ರಚುರ ಪಡಿಸುವದು ಬಹಳ ದಿವಸದಿಂದ ಈ ಷಹರಿನಲ್ಲಿ ಪದ್ಧತಿಯಾಗಿತ್ತು. ನಾಲ್ಕು ವರುಷಗಳ ಕೆಳಗೆ ಡೆಪ್ಯುಟಿ ಕಮಿಷನರಾಗಿದ್ದ ಮಿ|| ಮಿಕಲ್‌ಜಾನ್ ಸಾಹೇಬರು—ಬೋರ್ಡಿನ ಪ್ರೊಸೀಡಿಂಗ್ಸುಗಳು ಎಲ್ಲರಿಗೂ ತಿಳಿಯತಕ್ಕದ್ದಾಗಿವೆ. ಯಾರಾದರು ಅವುಗಳನ್ನು ಕೇಳಿ ಅವುಗಳಲ್ಲಿ ಬೇಕಾದಷ್ಟು ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟಿಸಿ ಅದರ ಮೇಲೆ ಪತ್ರಿಕಾ ಕರ್ತರ ಅಭಿಪ್ರಾಯವನ್ನು ಬರೆಯಬಹುದು ಎಂದು ಹೇಳಿ, ಪತ್ರಿಕಾ ಕರ್ತರಿಗೋಸ್ಕರ ಮೀಟಿಂಗ್ ನಡೆಯತಕ್ಕ ಹಾಲಿನಲ್ಲಿ ಎರಡು ಮೂರು ಕುರ್ಚಿಗಳನ್ನೂ ಮೇಜುಗಳನ್ನೂ ಇಡಿಸಿದ್ದರು. ಆ ಕಾಲದಲ್ಲಿ ಈ ಅಂಶದ ವಿಷಯವಾಗಿ ಯಾವ ಸಂಶಯವೂ ಯಾರಲ್ಲಾದರೂ ತೋರಲಿಲ್ಲ. ತದನಂತರ ಪತ್ರಿಕಾ ಕರ್ತರು ಮ್ಯೂನಿಸಿಪಲ್ ಮೀಟಿಂಗಿಗೆ ಒಂದುವೇಳೆ ಹೋಗದಿದ್ದರೂ ವೈಸ್‌ಪ್ರೆಸಿಡೆಂಟ್‌ರವರು ಪ್ರೊಸೀಡಿಂಗ್ಸುಗಳನ್ನೆಲ್ಲಾ ಬರೆಸಿ ವರ್ತಮಾನ ಪತ್ರಿಕೆಗಳಿಗೆ ಕಳುಹಿಸುವದು ಪದ್ಧತಿಯಾಗಿತ್ತು.

೨. ಈ ಪದ್ಧತಿಯು ಬ್ರಿಟಿಷ್ ಇಂಡಿಯದಲ್ಲೆಲ್ಲಾ ಪ್ರಬಲವಾಗಿರುತ್ತದೆ. ಮದ್ರಾಸಿನಲ್ಲಾಗಲಿ, ಬೆಂಗಳೂರಿನಲ್ಲಾಗಲಿ, ಬೊಂಬಾಯಿನಲ್ಲಾಗಲಿ ಬಾತ್ಮಿದಾರರು ಈ ಮೀಟಿಂಗುಗಳಲ್ಲಿ ಹಾಜರಿದ್ದು, ಅಲ್ಲಿ ನಡೆಯುವ ಎಲ್ಲಾ ಸಂಗತಿಗಳನ್ನೂ ಕೇಳಿ, ಅದರ ಮೇಲೆ ತಮ್ಮ ಅಭಿಪ್ರಾಯವನ್ನು ಧಾರಾಳವಾಗಿ ಬರೆಯುವರು. ಆ ಪುರನಿವಾಸಿಗಳಿಗೂ ಮೈಸೂರು ಬೋರ್ಡಿನ ಮೆಂಬರುಗಳಿಗೂ ವಿದ್ಯೆಯಲ್ಲಿಯೂ, ಅನುಭವದಲ್ಲಿಯೂ, ನಾಗರೀಕತೆಯಲ್ಲಿಯೂ ಬಹಳ ವ್ಯತ್ಯಾಸ ಉಂಟೆಂದು ಇಲ್ಲಿನ ಮ್ಯೂನಿಸಿಪಲ್ ಬೋರ್ಡು ಪ್ರೆಸಿಡೆಂಟರು ಹೇಳಿರುತ್ತಾರೆಂಬದಾಗಿ ನಾವು ಬಹಳ ಆಶ್ಚರ್ಯದಿಂದ ಕೇಳಿದ್ದೇವೆ. ಅಷ್ಟು ವ್ಯತ್ಯಾಸವಿರುವಂತೆ ನಮಗೆ ತೋರುವದಿಲ್ಲ. ಕೆಲವು ದಿವಸಗಳ ಹಿಂದೆ, ವಿದ್ಯಾಹೀನರೂ, ಸ್ವಾತಂತ್ರ್ಯವಿಲ್ಲದವರೂ, ಸರ್ಕಾರದವರು ಹೇಳಿದ್ದಕ್ಕೆಲ್ಲ ಘನವಾದ ಸಮ್ಮತಿಯನ್ನು ಕೊಡುತ್ತಿದ್ದವರೂ, ಪ್ರಪಂಚಕವ್ಯವಹಾರಗಳನ್ನು ತಿಳಿಯದವರೂ, ಬೋರ್ಡಿಗೆ ಮೆಂಬರಾಗಿದ್ದರೆಂಬುವದು ನಿಶ್ಚಯ. ಆದರೆ ಈಚೆಗೆ ಪ್ರಜೆಗಳು ಚುನಾಯಿಸಿದ ಕಮಿಷನರುಗಳಲ್ಲಿ ಕೆಲವರು ವಿದ್ಯಾವಂತರೂ, ಅನುಭವಶಾಲಿಗಳೂ ಆಗಿರುವದರಿಂದ ಮೈಸೂರು ಷಹರಿನ ಬೋರ್ಡಿಗೂ ಬೇರೆ ಪಟ್ಟಣಗಳ ಬೋರ್ಡುಗಳಿಗೂ ಅಷ್ಟು ವ್ಯತ್ಯಾಸವಿರುವಂತೆ ನಮಗೆ ತೋರಿ ಬರುವದಿಲ್ಲ.

೩. ಅದರೆ ಎಷ್ಟೇ ವ್ಯತ್ಯಾಸವಿದ್ದಾಗ್ಯೂ ಬೋರ್ಡಿನಲ್ಲಿ ನಡೆಯುತಕ್ಕ ಸಂಗತಿಗಳನ್ನು ಬೋರ್ಡಿನವರು ಮರೆಮಾಚುವದು ಅವರ ಕರ್ತವ್ಯವಲ್ಲವೆ! ಅಂಥಾ ಸಂಗತಿಗಳನ್ನು ತಿಳಿಯುವದರಲ್ಲಿ ಪ್ರಜೆಗಳಿಗೆ ಹಕ್ಕಿಲ್ಲವೆ! ಬೋರ್ಡಿನವರು ಮಾಡಬೇಕಾದ ಮುಖ್ಯ ಕೆಲಸವೇನೆಂದು ನಾವು ಕೇಳಿದರೆ—ಷಹರಿನವರು ಕೊಡುವ ಸುಂಕವಂಥ ದೆರಿಗೆಗಳನ್ನೂ ವಸೂಲುಮಾಡುವದೂ, ಖರ್ಚುಮಾಡುವದೂ ಅವರ ಮೇಲಿನಸಮು ಕರ್ತವ್ಯವೆಂದು ನಮಗೆ ತಿಳಿದು ಬರುತ್ತದೆ. ಅದರಲ್ಲಿ ರಹಸ್ಯವಾದ ಕಾರ್ಯಗಳು ಯಾವಾದರೂ ಇದ್ದರೆ, ಬೋರ್ಡಿನವರು ಜನರ ಸಂಶಯಕ್ಕೆ ಗುರಿಯಾಗುತ್ತಾರಲ್ಲವೆ? ಇಷ್ಟು ಮಾತ್ರವಲ್ಲದೆ, ಕಮಿಷನರುಗಳಲ್ಲಿ ಬಹಳ ಮಂದಿ ಪುರನಿವಾಸಿಗಳಿಂದ ಚುನಾಯಿಸಲ್ಪಟ್ಟವರಾಗಿರುತ್ತಾರೆ. ಆ ಪ್ರತಿನಿಧಿಗಳು ಬೋರ್ಡು ಮೀಟಿಂಗಿನಲ್ಲಿ ಹೇಳುವ ಅಭಿಪ್ರಾಯಗಳೂ, ಸಮ್ಮತಿಸುವ ಎಲ್ಲಾ ತೀರ್ಮಾನಗಳೂ, ಮಾಡುವ ಪ್ರಯತ್ನಗಳೂ, ತಮ್ಮನ್ನು ಚುನಾಯಿಸಿದ ಪ್ರಜೆಗಳಿಗೆ ತಿಳಿದು ಬರಬಾರದೆ! ಹಾಗೆ ತಿಳಿಯಬಾರದಾಗಿದ್ದರೆ ಸರ್ಕಾರದವರು ಪ್ರಜೆಗಳಿಗೆ ಕೊಟ್ಟಿರುವ ಚುನಾವಣೆಯ ಹಕ್ಕಿನಿಂದ ಅವರಿಗೆ ಬರುವ ಪ್ರಯೋಜನಗಳು ಸ್ವಲ್ಪ ಮಾತ್ರವಾಗಿಯೇ ಇರುತ್ತವಲ್ಲವೆ!

೪. ಬೋರ್ಡಿನಲ್ಲಿ ನಡೆಯತಕ್ಕ ಚರ್ಚೆಗಳೆಲ್ಲಾ ಪ್ರಜೆಗಳಿಗೆ ತಿಳಿಯಬಾರದೆಂಬುವದಕ್ಕೆ ಯಾವದೊಂದು ತಕ್ಕ ಕಾರಣವೂ ನಮಗೆ ತಿಳಿಯುವದಿಲ್ಲವಲ್ಲ. ಅಂತರಂಗದಲ್ಲಿ ಈ ಚರ್ಚೆಗಳನ್ನು ನಡೆಸಬೇಕಾದರೆ ಪ್ರಜೆಗಳು ಅಧಿಕಾರಿಗಳ ಮೇಲೆ ಸಂಶಯ ಪಡುವದು ಸ್ವಾಭಾವಿಕವಾದದ್ದೇ ಸರಿ. ಆ ಚರ್ಚೆಗಳು ಎಷ್ಟುವರಿಗೂ ಬಹಿರಂಗವಾಗಿರುತ್ತವೆಯೋ ಅಷ್ಟುವರಿಗೂ ಪ್ರಜೆಗಳ ಸಂಶಯಗಳು ಇಲ್ಲದೆ ಹೋಗುವವು. ಪ್ರೆಸಿಡೆಂಟರಾಗಲಿ, ವೈಸ್‌ಪ್ರೆಸಿಡೆಂಟರಾಗಲಿ, ಅನ್ಯಾ ಮ್ಯೂನಿಸಿಪಲ್ ಅಧಿಕಾರಿಗಳೇ ಆಗಲಿ ಬೋರ್ಡಿನ ಸಂಗತಿಗಳು ಹೊರಪಡುವದರಲ್ಲಿ ಆಕ್ಷೇಪ ಮಾಡಿದರೆ, ಅವರು ಪ್ರಜೆಗಳಿಗೆ ಆಕ್ಷೇಪಾರ್ಹರಾಗಿರುವರೇ ಹೊರ್ತು, ದೊಡ್ಡ ಜನೋಪಕಾರಿಗಳೆನ್ನಿಸಿಕೊಳ್ಳಲಾರರಲ್ಲವೆ? ಬೋರ್ಡಿಗೆ ಸೇರಿದ ಕಮಿಷನರುಗಳು ಇಂಥಾ ಪದ್ಧತಿಗೆ ಎಂದಿಗೂ ಒಪ್ಪಿಕೊಳ್ಳರು, ಬೇಕಾದರೆ ಬಿನ್ನಾಣದವರಿಗೆ ಈ ವಿಷಯವಾಗಿ ತಮ್ಮ ವಿಜ್ಞಾಪನೆಗಳನ್ನು ಒಪ್ಪಿಸಿ, ಪ್ರಜೆಗಳ ನ್ಯಾಯವಾದ ಹಕ್ಕುಗಳನ್ನು ಕಾಪಾಡುವರೆಂದು ನಂಬಿದ್ದೇವೆ.

೫. ಮೊನ್ನೇ ದಿವಸ ಷಹರಿನ ಸ್ಯಾನಿಟರಿ ಇನ್‌ಸ್ಪೆಕ್ಟರವರು ಈ ಬೋರ್ಡಿನ ಮೀಟಿಂಗಿಗೆ ಪ್ರವೇಶಿಸಲ್ಲದೆ ಹೊರಗಡೆಯಲ್ಲಿ ನಿಂತಿದ್ದದನ್ನು ನಾವು ನೋಡಿದೆವು. ಇದು ನಮ್ಮಲ್ಲಿ ಬಹಳ ವ್ಯಸನವನ್ನು ಉಂಟುಮಾಡಿತು. ಪುರನಿವಾಸಿಗಳ ಆರೋಗ್ಯಕ್ಕೆ ಸಂಬಂಧಪಟ್ಟ ವಿಷಯಗಳನ್ನು ತಿಳಿದವರು ಬೋರ್ಡಿನ ಕಮಿಷನರುಗಳು ಕೂತಿರುವ ಸ್ಥಳಕ್ಕೆ ಹೋಗಿ, ಆರೋಗ್ಯ ವಿಚಾರಗಳು ಮೀಟಿಂಗಿನಲ್ಲಿ ಚರ್ಚೆಯಾಗುತ್ತಿರುವ ಸಂದರ್ಭದಲ್ಲಿ ಸ್ಯಾನಿಟರಿ ಇನ್‌ಸ್ಪೆಕ್ಟರಾಗಿರುವವರು ತಮ್ಮ ಅಭಿಪ್ರಾಯವನ್ನು ತಿಳಿಸುವದು ಪ್ರಯೋಜನಕರವಾಗಿರುವದೇ ಹೊರ್ತು ಬೇರೆ ಅಲ್ಲ. ಆದರೆ ಈ ಮೀಟಿಂಗು ಅಂತರಂಗವಾದದ್ದೆಂದು ಹೇಳಿ, ಅವರನ್ನು ಹೊರಗೆ ನಿಲ್ಲಿಸುವದು ಬಹಳ ಆಶ್ಚರ್ಯಕರವಾಗಿದೆ. ಮುಂದಿನ ಬೋರ್ಡು ಮೀಟಿಂಗಿನಲ್ಲಿ ಪ್ರೆಸಿಡೆಂಟ್ರವರು ಈ ವಿಷಯವನ್ನು ಚರ್ಚೆಗೆ ತಂದು ಯಾವಾಗಲೂ ನಡೆಯುತ್ತಿದ್ದ ಸಂಗತಿಗಳನ್ನೆಲ್ಲಾ ಪ್ರಚುರಪಡಿಸುವದು ಆಗತ್ಯವಾಗಿದೆ ಎಂಬದಾಗಿ ವಾದಿಸುವರೆಂದು ನಾವು ಕೋರುತ್ತೇವೆ.

ಮೋಸಹೋಗಬೇಡಿರಿ.

ಹೆಂಗಸರು ಹಾಲನ್ನು ತೆಗೆದುಕೊಳ್ಳಬೇಕಾದರೆ ಅದರಲ್ಲಿ ನೀರು ಬೆರೆತಿರುವದೊ, ಇಲ್ಲವೋ ಎಂಬದಾಗಿ ಪರೀಕ್ಷಿಸಿ ತೆಗೆದುಕೊಳ್ಳುತ್ತಾರೆಯೇ ಹೊರತು, ಪರೀಕ್ಷಿಸದೆ ಅವರು ಎಂದಿಗೂ ತೆಗೆದುಕೊಂಡು ಮೋಸಹೋಗುವದಿಲ್ಲ. ರೈತರು ಒಂದು ಜೊತೆ ಎತ್ತುಗಳನ್ನು ಕೊಂಡುಕೊಳ್ಳಬೇಕಾದರೆ ಅವುಗಳನ್ನು ಗಾಡಿಗಾಗಲಿ, ನೇಗಿಲಿಗಾಗಲಿ ಕಟ್ಟಿ, ಅವುಗಳ ಲಕ್ಷಣಗಳನ್ನು ಬಲವನ್ನು ಚೆನ್ನಾಗಿ ಪರೀಕ್ಷಿಸಿದ ನಂತರವೇ ಖರೀದಿಯನ್ನು ಗೊತ್ತು ಮಾಡುತ್ತಾರೆ. ಇನ್ನೊಬ್ಬರ ಬಲವಂತದಿಂದ ಯಾರೂ ಪರೀಕ್ಷಿಸದೆ ಕೊಂಡುಕೊಳ್ಳುವದಿಲ್ಲ. ವ್ಯಾಪಾರದ ವಿಷಯದಲ್ಲಿ ಜನರು ಮೋಸಹೋಗುವದು ಬಹುಸಾಧಾರಣವೇ ಸರಿ. ಆದರೆ ಇನ್ನೂ ಕೆಲವು ವಿಷಯಗಳಲ್ಲಿ ಅನೇಕರು ಮೋಸಹೋಗುತ್ತಲಿದ್ದಾರೆಂದು ನಾವು ನೋಡಿ ಬಹಳವಾಗಿ ವಿಷಾದಿಸುತ್ತೇವೆ.

೧ ಜನರ ಪದ್ಧತಿಯು ದೇವರಿಂದ ವಿಧಿಸಲ್ಪಟ್ಟ ಕಟ್ಟಳೆಯಾಗಿದೆ ಎಂಬುವದಾಗಿ ಭಾವಿಸತಕ್ಕವರು ಮೋಸಹೋಗಿರುತ್ತಾರೆ. ಬೇರೆ ಬೇರೆ ಪದ್ಧತಿಗಳು ಬೇರೆ ಬೇರೆ ದೇಶಗಳಲ್ಲಿ ಪ್ರಬಲವಾಗಿರುತ್ತವೆಯಲ್ಲವೆ? ಈ ಪದ್ಧತಿಗಳು ಹ್ಯಾಗೆ ಉತ್ಪತ್ತಿಯಾದವೆಂದು ನಾವು ವಿಚಾರಿಸಿದರೆ ಜನಗಳು ತಮ್ಮ ತಮ್ಮ ಅನುಕೂಲತೆಗೋಸ್ಕರವಾಗಿ ಅವುಗಳನ್ನು ಸ್ಥಾಪಿಸಿದರೆಂಬುವದು ನಮಗೆ ತಿಳಿದುಬರುತ್ತದೆ. ಆದರೆ ಒಬ್ಬನಿಗೆ ಅನುಕೂಲವಾಗಿರುವಂಥದ್ದು ಇನ್ನೊಬ್ಬನಿಗೆ ಒಂದು ವೇಳೆ ಅನನುಕೂಲವಾಗಿದ್ದೀತು. ಹ್ಯಾಗೆಂದರೆ ಈ ದೇಶದಲ್ಲಿ ಸ್ಥಾಪಿತವಾಗಿರುವ ಜಾತಿಯೆಂಬ ಕಟ್ಟಳೆಯು ಬ್ರಾಹ್ಮಣರಿಗೆ ಬಹಳ ಅನುಕೂಲವಾಗಿದ್ದಾಗ್ಯೂ ಅದು ಶೂದ್ರರಿಗೆ ಅಷ್ಟು ಅನುಕೂಲವಾಗಿರಲಾರದು. ಆ ಕಟ್ಟಳೆಯನ್ನು ಅನುಸರಿಸಿ ಬ್ರಾಹ್ಮಣರು ತಾವು ಉತ್ತಮರೆನ್ನಿಸಿಕೊಂಡು, ಮಿಕ್ಕ ಎಲ್ಲಾ ಜನರನ್ನೂ ಧಿಕ್ಕರಿಸಿ ಅವರನ್ನು ತಮ್ಮ ಗುಲಾಮರಂತೆ ಭಾವಿಸಿರುತ್ತಾರೆ. ಭೂಸುರರೆನ್ನಿಸಿಕೊಂಡಿರುವವರಿಗೆ ಈ ಪದ್ಧತಿಯು ಅನುಕೂಲವಾಗಿರುವದೇ ಸರಿ. ಆದರೆ ಮಿಕ್ಕವರಿಗೆ ಅದರಿಂದ ಅನ್ಯಾಯವೂ, ಕಷ್ಟವೂ, ಹಿಂಸೆಯೂ ಬರುವದೆಂಬುವದರಲ್ಲಿ ಯಾವ ಸಂಶಯವಿರಲಾರದು. ಬ್ರಾಹ್ಮಣರು ತಮಗೆ ಬರತಕ್ಕ ಪ್ರಯೋಜನವನ್ನು ತಿಳಿದು ಜಾತಿಪದ್ಧತಿಯು ದೈವಾಜ್ಞೆಯೆಂದು ಬೋಧಿಸುತ್ತಾರೆ. ಜಾತಿಹೀನರು ಅಂಥಾ ಮಾತಿಗೆ ಒಪ್ಪಿಕೊಳ್ಳುವದಕ್ಕೆ ಯಾವದೊಂದು ತಕ್ಕ ಕಾರಣವೂ ನಮ್ಮ ಬುದ್ಧಿಗೆ ತೋರುವದಿಲ್ಲ. ಜಾತಿಯೆಂಬ ಬೋಧನೆಯು ಸತ್ಯವಾಗಿದ್ದರೆ ದೇವರು ಪಕ್ಷಪಾತಿಯಾಗಿದ್ದು ತನ್ನ ಮಕ್ಕಳಲ್ಲಿ ಕೆಲವರನ್ನು ಅನ್ಯಾಯವಾಗಿ ಕೀಳು ಮಾಡಿದ್ದನೆ ಕೆಲವರನ್ನು ಅನ್ಯಾಯವಾಗಿ ಹೆಚ್ಚಿಸಿದ್ದನೆ ಎಂಬದಾಗಿ ಕೆಟ್ಟ ಬುದ್ಧಿಗೆ ಆಸ್ಪದವಾಗುತ್ತದೆ. ಈ ಜಾತಿಯೆಂಬ ಬೋಧನೆಯಿಂದ ಜನರ ಅಭಿವೃದ್ಧಿಗೆ ಬಹಳ ಅಡ್ಡಿಯುಂಟಾಗುತ್ತದೆ. ಉತ್ತಮಜಾತಿಯಲ್ಲಿ ಹುಟ್ಟಿದವನು ತಾನು ವಿದ್ಯಾಹೀನನೂ ಬುದ್ಧಿಹೀನನೂ ಆಗಿದ್ದಾಗ್ಯೂ, ಶ್ರೇಷ್ಠನು, ಪೂಜ್ಯನಾಗತಕ್ಕವನು ಎನ್ನಿಸಿಕೊಂಡು ಅಹಂಕಾರಿಯಾಗಿ ತಿರುಗಾಡುತ್ತಾ ಇರುತ್ತಾನೆ. ವಿದ್ಯಾವಂತರೂ ಬುದ್ಧಿಶಾಲಿಗಳೂ ಆಗಿರುವ ಶೂದ್ರರುಗಳು ಅಂಥವನಿಗೆ ಬಹಳ ಗೌರವವನ್ನು ತೋರಿಸುವದು ಯಾವ ಧರ್ಮ? ಜಾತಿಹೀನರು ವಿದ್ಯೆಯನ್ನೂ, ನಾಗರೀಕತೆಯನ್ನೂ ಹೊಂದಿ ತಾವು ಯಾವಾಗಲೂ ಕೀಳಾದವರಾಗಿ ಎಣಿಸಲ್ಪಡುವದು ನ್ಯಾಯಕ್ಕೆ ಅನುಗುಣವೊ? ಆದರೆ ಕೆಲವರು ಪೂರ್ವದಿಂದ ಬಂದಿರುವ ಪದ್ಧತಿಯನ್ನು ಅನುಸರಿಸದೆ ಇರುವದು ದೊಡ್ಡ ತಪ್ಪೆಂದು ಯೋಚಿಸಿ ಮೋಸಹೋಗುತ್ತಾರೆ. ಪೂರ್ವದಿಂದ ಬಂದದ್ದು ಒಂದು ವೇಳೆ ಒಳ್ಳೆಯದಾಗಿರುತ್ತೆ, ಒಂದು ವೇಳೆ ಕೆಟ್ಟದ್ದಾಗಿರುತ್ತೆ. ವಿವೇಕಿಗಳು ಒಂದೊಂದು ಪದ್ಧತಿಯನ್ನು ಶೋಧಿಸಿ, ಒಳ್ಳೆಯದನ್ನು ಅನುಸರಿಸುತ್ತಾ, ಕೆಟ್ಟದನ್ನು ಬಿಟ್ಟು ಬಿಡುತ್ತಾ ಹೋಗುವರು. ಹೆಂಗಸರಿಗೆ ವಿದ್ಯೆಯನ್ನು ಹೇಳಿ ಕಲಿಸಬಾರದು ಎಂಬ ಆಜ್ಞೆಯು ಪೂರ್ವದಿಂದ ಬಂದದ್ದೇ ಆದಾಗ್ಯೂ ಈಚೆಗೆ ಕೆಲವರು ಅದು ಕೆಟ್ಟದ್ದೇ ಎಂದು ಒಪ್ಪಿಕೊಂಡು, ಬಾಲಿಕಾ ಪಾಠಶಾಲೆಗಳನ್ನು ಎಲ್ಲೆಲ್ಲಿಯೂ ಸ್ಥಾಪಿಸುತ್ತಲಿದ್ದಾರೆ. ವಿಧವೆಯರಿಗೆ ಪುನರ್ವಿವಾಹ ಮಾಡಕೂಡದೆಂಬುವದು ಪೂರ್ವದಿಂದ ಬಂದ ಕಟ್ಟಳೆಯಾಗಿದೆ. ಈಚೆಗೆ ಅನೇಕರು ಅದನ್ನು ಬಿಟ್ಟುಬಿಟ್ಟಿರುತ್ತಾರೆ. ವಾಚಕರೇ, ಕುರಿಗಳಂತೆ ಹಳೇ ಪದ್ಧತಿಗಳನ್ನು ಅನುಸರಿಸತಕ್ಕವರು ಮೋಸಹೋಗಿರುತ್ತಾರೆ.

೨ ಅನ್ಯ ದೇಶದಿಂದ ಬಂದಿರುವ ಮತವನ್ನು ಅನುಸರಿಸುವದು ದೇಶಾಭಿಮಾನಕ್ಕೆ ವಿರೋಧವೆಂದು ಹೇಳತಕ್ಕವರು ಮೋಸ ಹೋಗಿರುತ್ತಾರೆ. ಭಗವಂತನು ಒಬ್ಬನಾಗಿದ್ದರೆ ಆತನು ವಿಧಿಸುವ ಆಜ್ಞೆಯೂ ಒಂದಾಗಿರಬೇಕು. ಆತನು ಒಂದೊಂದು ದೇಶಕ್ಕೆ ಒಂದೊಂದು ಮತವನ್ನು ವಿಧಿಸುವ ಮಾಡುವನೆಂಬ ಯೋಚನೆಯು ವಿವೇಕಕ್ಕೆ ಬಹಳ ದೂರವಾಗಿರುವದು. ದೇಶಕ್ಕೂ ಮತಕ್ಕೂ ಯಾವ ಸಂಬಂಧವೂ ತೋರುವದಿಲ್ಲ. ಭೂಗೋಳಶಾಸ್ತ್ರವು ಎಲ್ಲೆಲ್ಲಿಯೂ ಒಂದೇ ಆಗಿರುವದಿಲ್ಲವೆ? ಜ್ಯೋತಿಷ ಶಾಸ್ತ್ರವು ಬೇರೆ ಬೇರೆ ದೇಶದಲ್ಲಿ ಬೇರೆ ಬೇರೆಯಾಗಿರುವದು. ಸೃಷ್ಟಿಕರ್ತನಿಗೂ ಆತನ ಸೃಷ್ಟಿಗಳಿಗೂ ಇರತಕ್ಕ ಸಮ್ಮಂಧವನ್ನು ವಿವರಿಸುವ ಮತವು ಎಲ್ಲಾ ದೇಶಗಳಲ್ಲಿಯೂ ಒಂದಾಗಿರಬೇಕು ಹಾಗಾದರೆ ಈ ಒಂದೇ ಸತ್ಯವಾದ ಮತವು ಯಾವದು? ಹಿಂದೂ ಮತವೊ? ಹಿಂದೂ ಮತಕ್ಕೆ ಜಾತಿ ಎಂಬ ಬೋಧನೆಯು ಒಂದು ಮುಖ್ಯಾಧಾರವಾಗಿದೆ. ಜಾತಿಯೆಂದರೆ ಜನ್ಮದಿಂದುಂಟಾಗತಕ್ಕ ಪಕ್ಷ. ಹಾಗಾದರೆ ಇಂಗ್ಲಿಷರಾಗಲಿ, ಇನ್ನು ಬೇರೆ ದೇಶದವರಾಗಲಿ ಹಿಂದೂ ಮತವನ್ನು ಅವಲಂಬಿಸುವದಕ್ಕೆ ಜಾತಿಯು ಒಂದು ದೊಡ್ಡ ಅಡ್ಡಿಯಾಗಿದೆ. ಜಾತಿಪೋವನೆಯು ಉಳಿದಿರುವತನಕ ಹಿಂದೂ ಮತವು ಸರ್ವಸಾಮಾನ್ಯವಾಗಲಾರದು. ಆದರೆ ಸತ್ಯವಾದ ಮತವು ಎಲ್ಲಾ ಕಾಲದವರಿಗೂ ಎಲ್ಲಾ ದೇಶಸ್ಥರಿಗೂ ಅನುಕೂಲವಾಗಿರಬೇಕೆಂದು ನಾವು ನೋಡಿದ್ದೇವೆ. ಅಂಥಾ ಮತವು ಎಲ್ಲಿ ಸಿಕ್ಕುವದು? ವಾಚಕರೇ ಕ್ರೈಸ್ತ ಮತವನ್ನು ನೀವು ಚೆನ್ನಾಗಿ ಪರೀಕ್ಷಿಸಿದ್ದೀರಾ? ಅದು ಸಕಲ ದೇಶಸ್ಥರಿಗೂ, ಎಲ್ಲಾ ವಿಧವಾದ ಸ್ಥಿತಿಗತಿಗಳುಳ್ಳವರಿಗೂ ಯೋಗ್ಯವಾಗಿಯೂ, ಅನುಕೂಲವಾಗಿಯೂ ಇರುವಂಥದ್ದಾಗಿದೆ. ಬ್ರಾಹ್ಮಣರು ಅದನ್ನು ಅವಲಂಬಿಸಿ, ದಾಕ್ಷಿಣ್ಯ ಶ್ರೇಷ್ಠರಾಗುತ್ತಾರೆ! ಶೂದ್ರರುಗಳೂ, ಜಾತಿಹೀನರೂ ಅದನ್ನು ಅವಲಂಬಿಸಿ, ಬ್ರಾಹ್ಮಣರಂತೆ ಮುಂದಕ್ಕೆ ಬಂದು ಗೌರವಕ್ಕೆ ಪಾತ್ರರಾದರು! ವಾಚಕರೇ ಕ್ರೈಸ್ತಮತದಿಂದ ಇಷ್ಟು ಪ್ರಯೋಜನಗಳೂ ಬರುತ್ತವೆಂದು ತಿಳಿದು, ಅದು ಅನ್ಯ ದೇಶದಿಂದ ಬಂದದ್ದು; ಅದನ್ನು ಅನುಸರಿಸುವದು ದೇಶಾಭಿಮಾನಕ್ಕೆ ಸರಿಯಲ್ಲ ಎಂದು ಭಾವಿಸಿ ಮೋಸ ಹೋಗಬೇಡಿರಿ. ಈ ಲೋಕದಲ್ಲಿ ಸತ್ಯವಾದ ಒಂದೇ ಮತ ಪ್ರಧಾನತ್ರ ಇರುವದರಿಂದ, ವಾಚಕರು ಅದು ಎಲ್ಲಿದೆ ಎಂದು ಬಹಳ ಜಾಗರೂಕರಾಗಿ ವಿಚಾರಿಸಿ, ಅಸತ್ಯವಾಗಿರುವವುಗಳನ್ನೆಲ್ಲಾ ಧೈರ್ಯವಾಗಿ ಬಿಟ್ಟು ಬಿಡುವರೆಂದು ನಾವು ನಂಬಿದ್ದೇವೆ.

ನೋಟಿಸ್.

ನಮ್ಮ ವೆಸ್ಲಿಯನ್ ಮಿಷನ್ ಪ್ರೆಸ್ಸಿಗೆ ಹಲವು ಹೊಸ ಕರ್ನಾಟಕ ಮತ್ತು ಇಂಗ್ಲಿಷ್ ಕಂಪಾಜಿಟರುಗಳು ಬೇಕಾಗಿರುವದರಿಂದ ಇಷ್ಟವುಳ್ಳವರು ಆಫಿಸಿನ ಮ್ಯಾನೇಜರಿಗೆ ಅರ್ಜಿ ಬರೆದುಕೊಳ್ಳಬಹುದು. ಸ್ಥಳದವರು ಖುದ್ದು ಹಾಜರಾಗಿ ಅವರ ಸಂಗಡ ಮಾತನಾಡಬೇಕು.

Mysore, } Rev. Henry Haigh,
16-2-93. } Wes. Mission.

ಒಳದೇಶ ವೃತ್ತಾಂತಗಳು.

ಕಳೆದ ಭಾನುವಾರ ಬೆಸಸ್ತ್ರೀಸಮಾಜದ ವರ ವೈಶಾಖ ಪುತ್ರಿಯ ಪರ್ವ ಪರ್ವದಿ ಮಹೋತ್ಸವವು ಬಹಳವಿಜೃಂಭಣೆಯಿಂದ ಜರುಗಿತು.

ಕಳೆದ ಭಾನುವಾರ ಬೆಳಿಗ್ಗೆ ಸುಮಾರು ೧೦ ಘಂಟೆಗೆ ಸಂಸ್ಥಾನದ ರೆಸಿಡೆಂಟ್ರವರು ನೀಲಗಿರಿಯಿಂದ ವಾಪಸಿಗೆ ಬಂದು ವಾದರು. ಆಗಮನ ಸೂಚಕವಾದ ೧೩ ತೋಪುಗಳು ಹಾರಿಸಲ್ಪಟ್ಟವು.

ರಾಜಸಭೆಯಲ್ಲಿ ಸ್ತ್ರೀಯರನ್ನು ಭೋಜನದಲ್ಲಿಡುತ್ತಿದ್ದೆಂಬುದು ಅದರಿಂದ ಯಾವಪ್ರಯೋಜನವು ಇರುವದಿಲ್ಲವೆಂದು ಭಾವಿಸಿ ಮಹಾರಾಜರವರು ಅದನ್ನು ನಿರೋಧಿಸಿರುತ್ತಾರೆಂದು ಕೇಳುತ್ತೇವೆ. ಈ ವಿಚಾರವು ಶ್ಲಾಘ್ಯವಾದದ್ದೇ ಸರಿ.

ಮ|| ಕುಪ್ಪುಸ್ವಾಮಿ ಮೊದಲಿಯಾರ್‌ರವರು ಷಹರಿನ ಮ್ಯಾಜಿಸ್ಟ್ರೇಟ್ ಮತ್ತು ಮ್ಯೂನಿಸಿಪಲ್ ವೈಸ್‌ಪ್ರೆಸಿಡೆಂಟ್ ಈ ಎರಡು ಕೆಲಸಗಳ ಛಾರ್ಜನ್ನು ಕಳೆದ ವಾರದಲ್ಲಿ ವಹಿಸಿರುತ್ತಾರೆ. ಇವರು ತುಂಬ ವಯೋವೃದ್ಧರು.

ಸಂಸ್ಥಾನದಲ್ಲಿ ಅಸಿಸ್ಟೆಂಟ್ ದಿವಾನಗಿರಿಯನ್ನು ಹೊಸದಾಗಿ ಸೃಷ್ಟಿಸುವದಾಗಿಯೂ, ನಾಳೆ ಎಸ್ರೇರಿ ಗುತ್ತಿಗೆಯ ಈ ಪದವಿಯನ್ನು ಮ|| ವಿ; ಪಿ; ಮಾಧವರಾಯರಿಗೆ ಕೊಡುವರೆಂದೂ ಕೇಳುತ್ತೇವೆ.

ಜೋಡುತೆಂಗಿನ ಮರದ ಬಳಿ ಇಬ್ಬರು ಬಾವಿ ತೋಡುತ್ತಿದ್ದರು. ಅದರ ದಡ ಕುಸಿದುಕೊಂಡಿದ್ದರಲ್ಲಿ ಒಬ್ಬನಿಗೆ ಕೇವಲ ಅಘಾತವಾಯಿತು. ಇನ್ನೊಬ್ಬನಿಗೆ ಸ್ವಲ್ಪ ಏಟು ಆಯಿತು.

ಕಳೆದ ತಿಂಗಳು ೧೩ ಮತ್ತು ೧೮ ನೇ ತಾರೀಖುಗಳಲ್ಲಿ ಮಾರ್ಕೆಟಿನಲ್ಲಿ ವಿಕ್ರಯಿಸಿದ ಈ ಸಂಸ್ಥಾನದ ಬಾಬತು ೭೮ ಅಣೆಗಳಿಂದ ೨೫,೦೦೦ ರೂಪಾಯಿಗಳ ಮೇಲೇನ ಉತ್ಪತ್ತಿ ಯಾಯಿತೆಂದು ತಿಳಿಯಬರುತ್ತೆ.

ಮ॥ ಸ್ವಿ ಎಚ್; ಕೃಷ್ಣಮೂರ್ತಿಗಳು ರಜಾದ ಮೇಲಿರುವಾಗ್ಯೆ ಅಧಾ ಮತ್ತೊಂದು ಹುಕುಂ ಕೊಡಲ್ಪಡುವತನಕ, ಇಲ್ಲಿನ ಷರ್ಷ ಅಸಿಸ್ಟೆಂಟಾಗಿದ್ದ ಮ॥ ಸಿ, ಶ್ರೀನಿವಾಸಯ್ಯಂಗಾರ್ಯರವರು ಸಂಸ್ಥಾನದ ಲೆಜಿಸ್ಲೇಟಿವ್ ಸೆಕ್ರೆಟರಿ ಕೆಲಸವನ್ನು ನೋಡುತಲಿರಬೇಕೆಂದು ವಿಸಿಸಿರುವಂತೆ ವರಲ್ಡ್ ಪತ್ರಿಕೆಯು ತಿಳಿಸುತ್ತದೆ

ಕಳೆದ ವಾರದಲ್ಲಿ ಬೆಂಗಳೂರು ನಗರ ಮಳೆಯಾಯಿತು ಆದಾಗ್ಯೂ ಬಿಸಲಿನ ಝಳ ಕಡಮೆಯಾಗಿಲ್ಲ ಕಾಲರಾ ಉಪದ್ರದ ವರ್ತಮಾನವನ್ನು ಕೇಳಲಿಲ್ಲ ಆದಾಗ್ಯೂ ಜ್ವರದಿಂದ ಅನೇಕ ಜನರು ನರಳುತ್ತಿದ್ದಾರೆ ಕೆಲವರು ಆದರ ಬಾಧೆಯನ್ನು ತಡೆಯಲಾರದೆ ಪರಲೋಕ ಯಾತ್ರೆಯನ್ನು ಮಾಡಿದರು ಧಾರಣವಾಸಿಗಳು ಇವುಗಳಲ್ಲದೆ ಹೆಚ್ಚುತ್ತಲಿದೆ ಎಂದೇ ಹೇಳಬೇಕು

—

ಈಗಲ ಮದರಾಸಿನಲ್ಲಿ ನಡೆದ ಬಿ ಎಲ್ ಪರೀಕ್ಷೆಗೆ ಮೈಸೂರು ಪಟ್ಟಣದಿಂದ ೧೦ ಮಂದಿ ಹೋಗಿದ್ದರು ಅವ್ರಲ್ಲಿ ೫ ಜನರು ಪ್ಯಾಸಾದಂತೆ ತಿಳಿದುಬರುತ್ತದೆ ಅವರ್ಯಾರೆಂದರೆ— ಮ॥ ಕೆ. ವೈಲಪ್ಪ ಬಿ ಎ ಯವರು, ಮ॥ ಎಂ ಎಸ್ ನೀಲಕಂಠರಾವ್ ಬಿ ಎಯವರು, ವಿನ್ ಹಾರಿ ಸಿಂಗ್ ಬಿ ಎಯವರು ಮ॥ ಎಸ್ ಆರ್. ರಂಗಸ್ವಾಮಿ ಬಿ ಎಯವರು, ಮ॥ ಎಂ. ಬಿ ವರದರಾಜಯ್ಯಂಗಾರ್ ಬಿ ಎಯವರು

—

ಸಂಸ್ಥಾನದಲ್ಲಿ ಸಿವಿಲ್ ಜೈಲ್ ಎಂಬವನ್ನೇ ಕಟ್ಟಬೇಕಾದುದು ಅನಾವಶ್ಯಕ, ಸಿವಿಲ್ ಖೈದಿಗಳಿಗೆ, ಪ್ರತ್ಯೇಕವಾದ ಸ್ಥಳದಲ್ಲಿ ಇರಿಸಿದರೆ ಸಾಕಾಗುವುದೆಂದು ತಿಳಿದುಬಂದಿಲ್ಲದೆ, ಅವನನ್ನು ಜೈಲರ್ ಎಂಬುದಾಗಿ ಸರ್ಕಾರದ ಮಾನವಿಕಾಧಿಕಾರವನ್ನು ಕೊಡಲ್ಪಟ್ಟಿರುತ್ತಾರೆಂದೂ, ಈ ಕಾನೂನು ಹೊಸದಾಗಿ ಇದೇ ವರ್ಷ ಜಾರಿಗೆ ಬಂದಿತು ಜುಲೈನಲ್ಲಿ ಬಂದ ವಿಚಾರ ಕೇಳುತ್ತೇವೆ ಇದರಿಂದ ಅನೇಕರಿಗೆ ನಷ್ಟ, ಪೂರ್ತಿ ತೊಂದರೆಗಳು ಆಗುವುವೆ ಆದರೆ ಸಹ ಕೂಡ ತಪ್ಪಿಸುವುದಕ್ಕೆ ಇದು ಯಾವ ವಿಧ್ಯುಕ್ತವನ್ನು ಕೊಡುವುದಿಲ್ಲ ಸಂಕಟವುಂಟು

—

ದೊಡ್ಡವರ ಕೊಂಡಾಟಗಳು ತಮ್ಮ ಸ್ವೀಕರಿಸುವ ಕ್ಕಾಗಿ ನಗರದವರು ಪ್ರತಿಫಲವನ್ನು ಕೊಡುತ್ತಿದ್ದಾರೆ, ಯಾವ ಮ್ಯಾಜಿಸ್ಟ್ರೇಟುವರು ಕೊಡುತ್ತಾರೆ, ಎಲ್ಲಿಂದ ಈ ಹಣವನ್ನು ಉತ್ಪತ್ತಿ ಮಾಡುವರು, ಯಾವಸಂಸ್ಥಾನಗಳಲ್ಲಿ ಕೊಡತಕ್ಕದ್ದು ಮತ್ತು ಯಾವ ಅಧಿಕಾರವಲ್ಲದ ಕೊಡುತ್ತಾರೆಂದೂ, ಗವರ್ನಮೆಂಟಿನವರು ಎಲ್ಲಾ ಮ್ಯಾಜಿಸ್ಟ್ರೇಟುಗಳನ್ನು ಕೇಳುತ್ತಾ ಬೆಂಗಳೂರು ಮುನಿಸಿಪಾಲಿಟಿ ಸಭೆಗೆ ಈ ಪದ್ಧತಿ ಬಂದಿದ್ದರೂ ಬಂದಿಲ್ಲದೂ ನಗರದ ಅಧಿಕಾರವಂತರೂ, ಮುಂದೆ ಇದನ್ನು ನಿಲ್ಲಿಸಬೇಕೆಂದೂ, ಈ ಹಣವನ್ನೆಲ್ಲಾ ಕಂಡ ದರ್ಬಾರಿನ ಎಲ್ಲಾ ಸಭೆಗಳಲ್ಲಿಯೂ ವಸೂಲ್ ಮಾಡಬೇಕೆಂದೂ ಹುಕುಂ ಮಾಡಿರುತ್ತಾರೆ

—

ಕಡೂರು ಡಿಸ್ಟ್ರಿಕ್ಟಿನಲ್ಲಿ ಜನರಲ್ ಡ್ಯೂಟಿ ಮೇಲಿರುವ ಮ॥ ಎ. ನಾರಾಯಣಯ್ಯಂಗಾರ್ಯರವರು, ಆವರ ರಜಾ ಪೂರೈಸಿದ ಕೂಡಲೆ ಕೋಲಾರ ಡಿಸ್ಟ್ರಿಕ್ಟಿಗೆ ಜನರಲ್ ಡ್ಯೂಟಿಯ ಮೇಲಿರುವರ ವರ್ಗಾಯಿಸಲ್ಪಟ್ಟು ಮೈಸೂರು ಡಿಸ್ಟ್ರಿಕ್ಟಿಗೆ ವರ್ಗಾಯಿಸಲ್ಪಟ್ಟರೂ, ರಜಾ ಮೇಲಿರುವ ಮ॥ ಕುಪ್ಪುಸ್ವಾಮಿ ಮೊದಲಿಯಾರ್ಯರವರನ್ನು ಜಾಗದಲ್ಲಿ ವರ್ತಿತಕ್ಕದ್ದು ಅಲ್ಲದೆ ಸದರಿ ಮ॥ ಅಣ್ಣಾಸ್ವಾಮಿ ಮೊದಲಿಯಾರ್ಯರು ಮೈಸೂರಿನಲ್ಲಿ ಟೌನ್ ಮ್ಯಾಜಿಸ್ಟ್ರೇಟ್ ಗಿರಿಯಾಗಿ ಜನರಲ್ ಮುನಿಸಿಪಲ್ ಬೋರ್ಡ್ ಪ್ರೆಸಿಡೆಂಟರಾಗಿಯೂ ಇದರಿಂದ ಮೊಕರರ್ ಮಾಡಲ್ಪಟ್ಟಿರುತ್ತಾರೆ ಮ॥ ಕೆ. ರಂಗಸ್ವಾಮಯ್ಯಂಗಾರ್ಯರವರು ಕಡೂರು ಡಿಸ್ಟ್ರಿಕ್ಟಿನಲ್ಲಿ ಜನರಲ್ ಡ್ಯೂಟಿಯ ಮೇಲೆ ಥರ್ಡ್ ಅಸಿಸ್ಟೆಂಟ್ ಕಮಿಷನರಾಗಿಯೂ, ಮ॥ ಕೆ ಶ್ರೀನಿವಾಸಾಚಾರ್ಯರವರು ಬೆಂಗಳೂರಿನಲ್ಲಿ ಮ್ಯುನಿಸಿಪಲ್ ಬೋರ್ಡ್ ಪ್ರೆಸಿಡೆಂಟರಾಗಿಯೂ ಇರುತ್ತಲಿರುವರು

—

ಕಳೆದ ಮಂಗಳವಾರ ರಾಜಧಾನಿಯಲ್ಲಿ ನಡೆದ ಶ್ರೀ ವರ್ಧಮಾನೋತ್ಸವದ ವರ್ಷ ವರ್ಧಂತಿಯು ಬಂದಿದ್ದಂತೆ ಅಷ್ಟು ವಿಜೃಂಭಣೆಯಾಗಲಿಲ್ಲ ಕೋಟೆಯಲ್ಲಿ ಆದುದನು ಲ್ಲ ನಡೆಯುವಕ್ಕೆ ಕಟ್ಟಲೆಗಳು ನಡೆದವು ಸಮಯಾಂತಲ್ಲ ಪಟ್ಟಣವನ್ನು ಶೃಂಗರಿಸಿದರು ಶೃಂಗರಿಸಿದ್ದರು ಮಾರ್ಗಗಳ ಪ್ರಕಾರ ೫-೬ ಕಡೆಗಳಲ್ಲಿ ಕಮಾನುಗಳನ್ನು ಚಪ್ಪರಗಳನ್ನು ಹಾಕಿದ್ದರು ಆದರೆ ಶ್ರೀಮನ್ಮಹಾರಾಜರವರು ಸವಾರಿ ಮಾಡಲಿಲ್ಲ ಮೆರವಣಿಗೆ ಹೊರಟು ಅರಮನೆಗೆ ಹೋಗಿ ವಾಪಸು ಬರುತ್ತಿದ್ದದ್ದು ತಪ್ಪಿಹೋಯಿತು ಇದಕ್ಕೆ ಕೆಲವರು ಮಾಂಡಳಿಕರಲ್ಲಿ ಕಲವು ಇರುವದರಿಂದ ಸವಾರಿ ಹೊರಡುವ ಪದ್ಧತಿಯೆಂದೂ, ಮತ್ತೆ ಕೆಲವರು ಸನ್ನಿಧಾನದಲ್ಲಿ ಮಹಾರಾಜರವರಿಗೆ ದೇಹದಲ್ಲಿ ಆರೋಗ್ಯವಾಗಿರಲಿಲ್ಲವಾದ್ದರಿಂದ ಉತ್ಸವವು ನಿಲ್ಲಿಸಲ್ಪಟ್ಟಿತೆಂದೂ, ಇನ್ನೂ ಕೆಲವರು ಶ್ರೀಮನ್ಮಹಾರಾಜರವರು ಪ್ರಜಾನುಮಡಗಿ ಮೆರವಣಿಗೆಯನ್ನು ಅಪೇಕ್ಷಿಸಲಿಲ್ಲವೆಂದೂ ನಾನಾವಿಧವಾಗಿ ಹೇಳುತ್ತಾರೆ ಆದರೆ ಮೊದಲಿನ ಕಾರಣವೇ ಸರಿಯಾದದ್ದಾಗಿರಬಹುದೆಂದು ನಾವು ಊಹಿಸುತ್ತೇವೆ

—

ನಮ್ಮ ಸಂಸ್ಥಾನದ ವೀಣೆ ವಿದ್ವಾಂಸರಾದ ಮ॥ ವೀಣೆ ಶೇಷಣ್ಣನವರು ತಮ್ಮ ಪಾಂಡಿತ್ಯವನ್ನು ಪ್ರಚಾರ ಮಾಡಬೇಕೆಂದು ದೇಶಯಾತ್ರೆ ಹೊರಟಿದ್ದರಲ್ಲಿ ಆನಂತರವು, ಪ್ರಥಮ ಕೋಟೆ ಮೊದಲಾದ ಸಂಸ್ಥಾನಗಳಿಗೂ ಮತ್ತು ಇತರ ಸ್ಥಳಗಳಿಗೂ ಹೋಗಿ ಅಲ್ಲಿನ ಮಹಾಪ್ರಭುಕ್ಕೆ ಅನುಸಾರವಾಗಿ ಆದ ಬಹುಮಾನ ಮೊದಲಾದ ಬಹುಮಾನವನ್ನು ಹೊಂದಿದ್ದಲ್ಲದೆ, ಅನಂತರದಲ್ಲಿ ಸಂಸ್ಥಾನದಲ್ಲಿ ಇವರು ಹೋಗಿದ್ದಾಗ ಅಲ್ಲಿನ ರಾಜರು ಇವರ ಗಾನವಿದ್ಯೆ ಕಂಡು ಬಹಳವಾಗಿ ಮೆಚ್ಚಿ ಅಷ್ಟು ತೋಡ ಎಂಬ ಒಂದು ಪ್ರತಿ ಬಹುಮಾನವನ್ನೂ ಕೊಟ್ಟರು, ತರುವಾಯ ಪುದುಕೋಟೆ ಸಂಸ್ಥಾನಕ್ಕೆ ಹೋಗಿದ್ದಾಗ ಅಲ್ಲಿ ಎರಡನೇ ರಾಜಾಗಿರುವ ಬಾಲಸುಬ್ರಹ್ಮಣ್ಯ ರಥಾನಂದ ರಾಜರು ಇವರ ಸಂಗೀತ ಮತ್ತು ಗಾನ ವಿದ್ಯೆಗಳಿಗೆ ಬಹಳ ಸಂತೋಷ್ಪಿಯನ್ನು ಹೊಂದಿ ಕೆಂಪು ಪಚ್ಚೆಗಳಂತ ರತ್ನದ ಕಂಠಿಗಳನ್ನು ಹಾಕಿರುವ ಒಂದು ಜೊತೆ ತೋಡ ಮತ್ತು ಬನ್ನದ ಪತ್ನಿ, ಶೃಂಗಾರಗಳನ್ನು ಬಹುಮಾನ ಮಾಡಿದ್ದಲ್ಲದೆ ಇವರಿಗೆ ಇವರು ಎಲ್ಲಿದ್ದಾಗ್ಯೂ ೫೦ ರೂಪಾಯಿ ಮಾಸಾಶನ ತನ್ನ ಸಂಸ್ಥಾನದಿಂದ ಕಳುಹಿಸುವಂತೆ ಅಪ್ಪಣೆ ಕೊಡಿಸಿದರು ನಮ್ಮ ಸಂಸ್ಥಾನಕ್ಕೆ ಬೇಕಾಂತರವೇಕೆ ಅನೇಕ ಜನ ವಿದ್ವಾಂಸರು ಈ ಪರಿಗೂ ಬಂದು ಬಹುಮಾನ ಹೊಂದು ಹೋಗುತ್ತಿದ್ದರು ಆದರೆ ಮ॥ ವೀಣೆ ಶೇಷಣ್ಣನವರು ದೇಶಾಂತರಗಳಿಗೆ ಹೋಗಿ ಬಹುಮಾನ ಪಡೆದುಕೊಂಡು ಬಂದದ್ದರಿಂದ ಈ ದೇಶದಲ್ಲಿ ಯೂ ಸಂಗೀತ ವಿದ್ಯೆಯಲ್ಲಿ ಬಹಳ ಸಮರ್ಥರಾದವರೆಂಬ ಹೆಸರನ್ನು ತಂದದ್ದಕ್ಕಾಗಿ ಎಲ್ಲರೂ ಸಂತೋಷಿಸಬೇಕಾದವರು

ಮೈಸೂರು ಗೆಜೆಟ್ ಸಂಗ್ರಹ.

ತಾ॥ ೧೧ ನೇ ಫೆಬ್ರವರಿ, ೧೯೦೩–ಚಿಕ್ಕಮಗಳೂರು, ತರೀಕೆರೆಯವರು, ಸಿವಿಲ್ ಸರ್ಜನ್ ಆಗಿರುವ ಡಾಕ್ಟರ್, ಎ ಎಸ್; ಫರ್ನಾಂಡೀಸ್ ಯವರು, ೧೯೦೩ ನೇ ಇಸವಿ ಡಿಸೆಂಬರ್ ೧೯ ನೇ ಮಾರ್ಚಿ ಆಗಾಯಿತು ೩ ನೇ ಗ್ರೇಡ್ ಸಿವಿಲ್ ಸರ್ಜನ್ ಆಗಿ ಬಡ್ತಿ ಮಾಡಲ್ಪಟ್ಟಿರುತ್ತಾರೆ

ಕ್ರಿಮಿನಲ್ ಪ್ರೊಸಿಜರ್ ಕೋಡ್ ೧೩ ನೇ ಸೆಕ್ಷನ್ ಅನುಸಾರ, ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಜನರಲ್ ಡ್ಯೂಟಿಯ ಮೇಲಿರುವ ಅಸಿಸ್ಟೆಂಟ್ ಕಮಿಷನರ್ ಮ॥ ಸಿ ರಾಘವಾಚಾರ್ಯರವರಿಗೆ ೨ ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳು ಕೊಡಲ್ಪಟ್ಟಿರುತ್ತವೆ

ಬೆಂಗಳೂರು ಸೆಟ್ಟಲ್‌ಮೆಂಟ್ ಆಫೀಸ್ ಸೂಪರಿಂಟೆಂಡೆಂಟ್ ಮ॥ ಸಿ ಎ ಭಾಷ್ಯಂ ಎಂ; ಎ; ಎಸ್ ಯವರು, ಸದರಿ ಸೆಟ್ಟಲ್‌ಮೆಂಟ್ ಸ್ಯೂಪರಿಂಟೆಂಡೆಂಟ್ ಕೆಲಸ ಮಾಡಲ್ಪಟ್ಟಿರುತ್ತಾರೆ

೧೯೦೩ ನೇ ಇಸವಿ ಫೆಬ್ರವರಿ ೩ ನೇ ತಾರೀಖಿನ ಚಿತ್ರದುರ್ಗದವರು ಮಾರನೇ ಕ್ಯಾಪ್ಟನ್ ಸ್ಪೆಕ್ಟ್ ಮತ್ತು ಚಿನ್ನದ ಪ್ರೈಜ್ ಸ್ವೀಕರಿಸಿದರು ಸಿಕ್ಕಿಸಲ್ಪಟ್ಟಿರುತ್ತವೆ

ಹಾಸನ ಡಿಸ್ಟ್ರಿಕ್ಟ್ ಜನರಲ್ ಅಸಿಸ್ಟೆಂಟ್ ಕಮಿಷನರ್ ಮ॥ ಸಿ ನಾರಾಯಣರಾವ್ ರವರು, ೧೯೦೩ ನೇ ಇಸವಿ ಫೆಬ್ರವರಿ ತಾ॥ ಗಳಲ್ಲಿ ಸ್ವಂತ ಕೆಲಸ ಒಪ್ಪಿಸಿ ರಜಾ ಕೊಡಲ್ಪಟ್ಟಿರುತ್ತದೆ ಮ॥ ನಂಜುಂಡಯ್ಯನವರು, ಹಾಸನ ಡಿಸ್ಟ್ರಿಕ್ಟ್ ಜನರಲ್ ಅಸಿಸ್ಟೆಂಟ್ ಕಮಿಷನರ್ ಕೋರ್ಟ್ ರ ಆಫೀಸ್ ೫ ಆದನ್ನು ೧೯೦೩ ನೇ ಇಸವಿ ಮಾರ್ಚಿ ತಾರೀಖಿನ ಫೆಬ್ರವರಿಯಲ್ಲಿ ಮ॥ ಸಿ, ನಾರಾಯಣರಾಗಿಸಲು ಅನುಮತಿ ಕೊಡಿಸಿಕೊಂಡಿರುತ್ತಾರೆ

ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮಿಷನರ್ ಮ॥ ವಿ ಪಿ ಮಾಧವರಾಯರವರಿಗೆ, ಸಮುದ್ರ ಯಾತ್ರೆ ಮಾಡಲು ೧೧ ನೇ ಏಪ್ರಿಲ್ ಮೊದಲುಗೊಂಡು ಕಳುಹಿಸಿದರು ಸದರಿ ೬ ತಿಂಗಳ ಫರ್ಲೋ ರಜಾ ಕೊಡಲ್ಪಟ್ಟಿರುತ್ತದೆ ಸ್ಪೆಷಲ್ ಡ್ಯೂಟಿ ಮೇಲೆ ಇರುವ ಮಿ॥ ಜೆ ಹನುಮಂತರಾಯರವರು ಮೇಲ್ಕಂಡ ಡಿಸ್ಟ್ರಿಕ್ಟ್ ಆಫೀಸ್ ಅಸಿಸ್ಟೆಂಟ್ ಕಮಿಷನರ್ ಮ॥ ರಘುನಾಥರಾಯರವರು ಸದರಿ ಸ್ಥಳದಲ್ಲಿ ಅವರ ಸ್ವಂತ ಕೆಲಸಗಳೊಡನೆ ವಹಿಸಿಕೊಂಡು ಇನ್ಸ್‌ಪೆಕ್ಟರ್ ಜನರಲ್ ರಾಗಿರುವ

ತಾ॥ ೧೨ ನೇ ಫೆಬ್ರವರಿ, ೧೯೦೩–ಹೊಸೂರು ತಾಲ್ಲೂಕಿನ ಅಮಲ್ದಾರ್ ಆಗಿ ಕೆಲಸ ಮಾಡುತ್ತಿದ್ದವರಾಗಿ, ಮುಂದಿನ ಹುಕುಂ ಆಗುವವರೆಗೂ ಅನಾನುಕೂಲವಾಗಿ ಕೆಲಸದಿಂದ ಬಿಡುಗಡೆ ಮಾಡಲ್ಪಟ್ಟರು. ಮೊದಲು ಒಂದು ತಿಂಗಳು ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ ಗ್ಯಾರಂಟಿ ನಂ ತಾಲ್ಲೂಕು ಪಕ್ಕದ ಅಮಲ್ದಾರ್ ವೆಂಕಟ್ರಮಣಯ್ಯನವರು, ಅಮಲ್ದಾರ್ ಚೌಡಯ್ಯನವರು ರಜಾ ಮೇಲೆ ಹೋಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಆಗುವವರೆಗೂ ತನಕ ದೇವನಹಳ್ಳಿ ತಾಲ್ಲೂಕು ಅಮಲ್ದಾರ್ ವ ಮಾರನೇ ಕ್ಯಾಪ್ಟನ್ ಡ್ಯೂಟಿಗಾಗಿ ಆಫೀಸ್ ಅಲ್ಲಿ ಮೊಕರರ್ ಮಾಡಲ್ಪಟ್ಟಿರುತ್ತಾರೆ ಹಾಸನ ತಾಲ್ಲೂಕು ಆಫೀಸಿಂಗ್ ಅಮಲ್ದಾರ್, ಕೆ; ಜೆ, ತಿಮ್ಮಣ್ಣನವರು ತಮ್ಮ ಸ್ವಂತ ಕೆಲಸಗಳೊಡನೆ, ಸದರಿ ವೆಂಕಟ್ರಮಣಯ್ಯನವರ ಗೈರುಹಾಜರಿಯಲ್ಲಿ ಅಥವಾ ಮತ್ತೊಂದು ಹುಕುಂ ಆಗುವ ತನಕ, ಗ್ಯಾರಂಟಿ ಸರಿ ತಾಲ್ಲೂಕ ಅಸಿಸ್ಟೆಂಟ್ ಕೆಲಸವನ್ನು ನೋಡತಕ್ಕದ್ದು

ಇದರಿಂದ ತಿಳಿಸಲ್ಪಡುವ ಪೋಲೀಸ್ ಸೂಪರಿಂಟೆಂಡೆಂಟರುಗಳ ಮತ್ತು ಅಸಿಸ್ಟೆಂಟ್ ಸೂಪರಿಂಟೆಂಡೆಂಟರುಗಳ ವರ್ಗಾವಣೆಗಳು ಹುಕುಂ ಮಾಡಲ್ಪಟ್ಟಿರುತ್ತವೆ

೧ ಪೋಲೀಸ್ ಸೂಪರಿಂಟೆಂಡೆಂಟ್ ಮ॥ ದಳವಾಯಿ ವೆಂಕಟಸ್ವಾಮಿ ಆರಸಿನವರು ಹಾಸನದಿಂದ ಬೆಂಗಳೂರು ಡಿಸ್ಟ್ರಿಕ್ಟಿಗೆ

೨ ಪೋಲೀಸ್ ಸೂಪರಿಂಟೆಂಡೆಂಟ್ ಮ॥ ಜೆ; ಡಿ ಮ್ಯಾಕ್ ಸ್ವೀನಿಯವರು ಹಾಸನದಿಂದ ಕೋಲಾರ ಡಿಸ್ಟ್ರಿಕ್ಟಿಗೆ

೩ ಶಿವಮೊಗ್ಗ ಡಿಸ್ಟ್ರಿಕ್ಟ್ ಪೋಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮ॥ ವಿ ; ಎ , ಗೋಪಾಲಯ್ಯಂಗಾರ್ಯರವರು ಮೈಸೂರು ಪೋಲೀಸ್ ಟ್ರೇನಿಂಗ್ ಸ್ಕೂಲ್ ನಲ್ಲಿರತಕ್ಕದ್ದು

೪ ಪೋಲೀಸ್ ಅ॥ ಸೂಪರಿಂಟೆಂಡೆಂಟ್ ಮ॥ ಸ ; ಹುಚ್ಚರಾಯರವರು ಬೆಂಗಳೂರಿನಿಂದ ಶಿವಮೊಗ್ಗ ಡಿಸ್ಟ್ರಿಕ್ಟಿಗೆ

೫ ಈಗ ರಿಸರ್ವ್ ಪೋಲೀಸ್ ಆಫೀಸಿನಲ್ಲಿರುವ ಪೋಲೀಸ್ ಸೂಪರಿಂಟೆಂಡೆಂಟ್ ಮ॥ ಕೆ; ಸಿ; ಪುಟ್ಟಣ್ಣಶೆಟ್ಟರವರು ಪರ್ಸನಲ್ ಅಸಿಸ್ಟೆಂಟ್ ಆಗಿ ಹೋಗುವರು

ಮ॥ ಎ; ರಾಮಸ್ವಾಮಯ್ಯಂಗಾರ್ಯರವರು, ಚೀಫ್ ಕೋರ್ಟಿನ ಟ್ರಾನ್ಸ್‌ಲೇಟರಾಗಿ ಬೇಸಿಗೆಯಲ್ಲಿ ಮತ್ತು ಬೆಂಗಳೂರಿನ ಸ್ಮಾಲ್ ಕಾಸ್ ಕೋರ್ಟಿನ ರಿಜಿಸ್ಟ್ರಾರ್ ಆಗಿದ್ದವರೂ ಕೆಲಸಗಳ ಚಾರ್ಜನ್ನು ೧೯೦೩ ನೇ ಇಸವಿ ಜನವರಿ ೨೦ ನೇ ತಾರೀಖಿನ ಭೋಜನಾನಂತರದಲ್ಲಿ ಮ॥ ಟಿ ಆರ್ ; ಎ ; ತಂಬೂಚೆಟ್ಟಿರವರಿಗೆ ಒಪ್ಪಿಸಲು ಅವರಿಂದ ತಗೆದುಕೊಂಡಿರುತ್ತಾರೆ

ಸರ್ವೆಯರ್ ಮೇಜರ್ ಸಿ ; ಜೆಪ್ ; ಜನರಲ್ ಎಂ ; ಎ ; ಯವರು, ಮೈಸೂರು ಗವರ್ನಮೆಂಟಿನ ಸಿಕ್ರೆಟರಿ ಸರ್ವೆ ಯೂ ಮತ್ತು ಸ್ಯಾನಿಟರಿ ಕಮಿಷನರ ಆಫೀಸ್ ಚಾರ್ಜನ್ನು ೧೯೦೩ ನೇ ಇಸವಿ ಜನವರಿ ೩೧ ನೇ ತಾರೀಖಿನ ಪೂರ್ವಾಹ್ನದಲ್ಲಿ ಬ್ರಿಗೇಡ್ ಸರ್ಜನ್ ಲೆಫ್ಟಿನೆಂಟ್ ಕರ್ನಲ್ ಟಿ ; ಜೆ , ಮ್ಯಾಗ್ಗಿನ್ ಯವರಿಗೆ ಒಪ್ಪಿಸಲು ಅವರದೂ ತಗೆದುಕೊಂಡಿರುತ್ತಾರೆ

ಮ॥ ಸಿ; ನಿರಾಸ್ವಾಮಿ ಅಯ್ಯಂಗಾರ್ಯರವರು, ಲೆಜಿಸ್ಲೇಟಿವ್ ಸೆಕ್ರೆಟರಿ, ಗವರ್ನಮೆಂಟ್ ಅಡ್ವೊಕೇಟ್, ರಜಿಸ್ಟ್ರೇಷನ್ ಇನ್ಸ್‌ಪೆಕ್ಟರ್ ಜನರಲ್ ಮತ್ತು ಕಂಪನಿಗಳ ರಜಿಸ್ಟ್ರಾರ್ ಕೆಲಸಗಳ ಚಾರ್ಜನ್ನು ೧೯ ನೇ ಇಸವಿ ಜನವರಿ ೩೦ ನೇ ತಾರೀಖಿನ ಪೂರ್ವಾಹ್ನದಲ್ಲಿ ತಗೆದುಕೊಂಡಿರುತ್ತಾರೆ

ಹೊನ್ನಾಳಿ ತಾ॥ ಅಮಲ್ದಾರ್ ಅಬ್ದುಲ್ ಹಮೀದ್‌ಖಾನ್ ರವರು, ೯೦೨ ನೇ ಇಸವಿ ಸಪ್ಟೆಂಬರ್ ೩೧ ನೇ ಮಾರ್ಚಿ ಹಿಂದಿನ ಅಕ್ಟೋಬರ್ ೧೦ ನೇ ತಾರೀಖು ವರೆಗೆ ೧೭ ದಿನಗಳ ಪ್ರಿವಿಲೇಜ್ ರಜಾ ಪಡೆದಿದ್ದರು

ಸಾಗರ ತಾ॥ ಅಟ್ಕಿನ್ಸನ್ ರಾಯರು, ಸಹ ಮತ್ತು ಪೋಲೀಸ್ ಹೆಡ್ ಸ್ಪೆಷಲ್ ಸ್ಯೂಪರಿಂಟೆಂಡೆಂಟ್ ೧೯೦೩ ನೇ ಇಸವಿ ಜನವರಿ ೨೫ ನೇ ತಾರೀಖಿನಲ್ಲಿ ಕಡ್ಡಾಯ ಶಿಕ್ಷೆಗೆ ವರ್ಗ ಮಾಡಲ್ಪಟ್ಟಿರುತ್ತದೆ

ತಾ॥ ೧೯ ನೇ ಫೆಬ್ರವರಿ ೧೯೦೩—ಕಡೂರ್ ಡಿಸ್ಟ್ರಿಕ್ಟ್ ಪೋಲೀಸ್ ಅಸಿಸ್ಟೆಂಟ್ ಮ॥ ಜೆ ; ಡನ್ನಿಂಗ್ ಯವರಿಗೆ ಅವರುಪಯೋಗಿಸಿಕೊಳ್ಳುವ ಹಾಲಿ ಬಾಗಾಯಿತು ಒಂದು ತಿಂಗಳು ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತವೆ ಕೋಲಾರ್ ಗೋಲ್ಡ್‌ಫೀಲ್ಡ್ ಗಳಲ್ಲಿ ಸ್ಪೆಷಲ್ ಪೋಲೀಸ್ ಇನ್ಸ್‌ಪೆಕ್ಟರಾಗಿರುವ ಮ॥ ಡಿ ; ಎ ; ಬಾಲಾಜಿ ಯವರು ಮಿ॥ ಡನ್ನಿಂಗ್ ಯವರು ರಜಾ ಮೇಲೆ ಗೈರುಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವವರೆಗೆ ಕಡೂರ್ ಡಿಸ್ಟ್ರಿಕ್ಟ್ ಪೋಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್‌ರಾಗಿ ಆಫೀಸಿಂಗ್ ತಾತ್ಕಾಲಿಕ ಕೆಲಸ ನೋಡತಕ್ಕದ್ದು

ಬೆಂಗಳೂರು ಆಫೀಸಿಂಗ್ ಸಿಟಿ ಮ್ಯಾಜಿಸ್ಟ್ರೇಟ್ ಮ॥ ಜೆ; ರಘುನಾಥರಾಯರವರು, ಮ॥ ಹಾಜಿ ಸ್ವರೂಪ ಸಾಹೇಬರು ಯವರು ಇತರ ಕೆಲಸದ ಮೇಲೆ ಗೈರುಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವವರೆಗೆ ತನಕ ಕಸ್ಟೋಡಿಯನ್ನು ನಿಯಮಿಸಿ ಅಸಿಸ್ಟೆಂಟ್ ಮೊಕರರ್ ಮಾಡಲ್ಪಟ್ಟಿರುತ್ತಾರೆ ಅಸಿಸ್ಟೆಂಟ್ ಕಮಿಷನರ್ ಮ॥ ಎಸ್; ವೆಂಕಟರಮಣಯ್ಯನವರು ಮ॥ ಜೆ; ರಘುನಾಥರಾಯರವರು ಇತರ ಕೆಲಸದ ಮೇಲೆ ಗೈರುಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಸಿಟಿ ಮ್ಯಾಜಿಸ್ಟ್ರೇಟರಾಗಿ ಆಫೀಸಿಂಗ್ ಕೆಲಸಕ್ಕೆ ಮಾಡಲ್ಪಟ್ಟಿರುತ್ತಾರೆ

ಬಿ ನಿ ಚ ಯ ಗ .

ಹರಿಹರದವರೆ ಸ್ಟೀಫನ್ ಟೋ ಎಂಬ ಪಾದ್ರಿಯವರಿಗೆ ಐವತ್ತನೆ ವರುಷದ ಜ್ಯುಬಿಲಿ ಮಹೋತ್ಸವವು ನೆನ್ನೆ ರೋಮ್ ಪಟ್ಟಣದಲ್ಲಿ ನಡೆಯಿತು ೧೯೦೩ರ ಫೆಬ್ರವರಿ ೧೯ನೇ ತಾರೀಖಿನಿಂದ ಜನರು ಪರಿಗೂ ಆ ಕಾಲದಲ್ಲಿ ಸಹ ನೋಡುವುದಕ್ಕಾಗಿ ಕಾದಿದ್ದರು ಪ್ರೊಟೆಸ್ಟಂಟರೇ ನೋಡಿದರು ಬಹಳ ವಿಶೇಷವಾದ ಉತ್ಸವವನ್ನು ಮಾಡಿದರು ಸುಮ್ಮನೆ ಹೋದರೆ ಅವರ ಹೆಸರು ಸ್ಮರಣೆಯಾಗಿಯೂ, ಧೈರ್ಯವಾಗಿಯೂ ಪ್ರಾರ್ಥನೆ ಮಾಡಿದರು

ಕ್ರೈಸ್ತ್ ಅನೇಕ ದೇಶಗಳಲ್ಲಿ ಪ್ರಜೆಗಳು ಪ್ರಜಾಪ್ರಭುಗಳು ಬಿಟ್ಟಿರುತ್ತಾನೆ ಯಿಸ್ಸಿನ, ಭ್ರಾಂತಿಗಳಲ್ಲಿ ಇದರಿಂದ ಅನೇಕ ಪ್ರಜೆಗಳು ಪತಾ ಅವು ನ್ಯಾಯ ವೇದ್ಯನ್ನೂ ಪ್ರಜಾವರ್ಗದ ವಿಚಾರ ದಾವಿತಾಗಿರುತ್ತದೆ

ಜಿವನದ ಮಧ್ಯದಲ್ಲಿ ಯೋಗಿಯೊಬ್ಬ ಬಹಳಮ್ಮಿ ಎಂಬಲ್ಲಿ ವರ್ಗ ಮಾಡಿ ಇದ್ದುಕೊಂಡು ವರುಣ ದೇವತೆಯನ್ನು ಅಲ್ಲಿಗೆ ತಗೆದುಕೊಂಡು ಹೋಗುವುದಕ್ಕೆ ಆ ದೇವತೆಗೆ ಆಜ್ಞೆಪಡಿಸಿ ಕಾದಿರುತ್ತಾರೆ ಅದರ, ರಸ್ತೆಯಿಂದ ಹೊರಕ್ಕೆ ಒಂದು ಎತ್ತು ಬಿಟ್ಟು ಕುಣಿಯುವವರನ್ನು ಕೊಂಡು ಸಮಯದಲ್ಲಿ ಬಿಸಿ ಮೂರನ್ನು ಮೇವ ಮಾಡಿ ಫಲವಾದ ಪದಗಳು ಎಂಬ ಮೇಳದವರು ಪ್ರೈವೇಟ್ ಸರ್ವರು

ಪಟ್ಟಿಯಾದ ಬಾವಿ ಕಟ್ಟಿಸುವ ಚಿತ್ರಾಪಿಸಲ್ಲಿನ ಆವಿರಾ ದೇವಾಲಯದ ಮಹಾಸುಮಂಗಳಿಯವರು ಸಂಪ್ರದಾಯ ಎಂಬವರನ್ನು ನಾಮಿಸಿ ಎಂಬಲ್ಲಿ ನಡೆದಿರುತ್ತಾರೆಂದು ತಿಳಿದು ವರ್ತಮಾನ ಬಂದಿದೆ ವಿಚಾರ ಈ ದಿನವನು ಆವಿರಾರ ಬಳಗ ಹೋಗಿದ್ದನು

ಬೆಂಗಳೂರಿನ ಜಾರವಿಯಾದಲ್ಲಿ ವಿದ್ಯಾರ್ಥಿ ಹೋಗುವ ಕವಿರವಿಗೆ ವರು ದಾವಿ ಮೆಂಬರುಗಳು ಏರ್ಪಟ್ಟಿರುತ್ತಾರೆ ರ ನೇತಿಬಳಕಟಿಕೆ ಸರ್ ಜೆವ್ರ್ಲೀಂಗ್, ಫೆಬ್ರವರಿ॥ ೨೧ ನೇ ಬೆಂಗಳೂರು ಮತ್ತು ಸರ್ ಮಂಗಳವಾರ ರೋಮಿಷ್ ಚಂದ್ರಮಿತ್ರ ಇವರಿಬ್ಬರು ವರ್ಲೀರಿಕವ ಸರ್ ಗ್ರೀವ್ ಯಿನ್ಯಾಸ್ ರವರು, ಕಲ್ಕತ್ತಾ ಹೈಕೋರ್ಟಿನ ಜಡ್ಜಿಯವರು, ಬಂಗಾಳ ಗೌರ್ನಮೆಂಟಿನ ಒಬ್ಬ ಸೆಕ್ರೆಟರಿ ಜಡ್ಜಿಯವರು ಈ ಹಿಸಿಕೊಂಡು ಯೂ ವಿಚಾರಣೆ ಮಾಡುವಂತೆ ತಿಳಿಯಬರುತ್ತೆ

ಡಾಕ್ಟರ್ ರಾಬರ್ಟ್ಸನ್‌ರವರು ಸವಾರರ್ ಮ್ಯಾನ್ಸನ್ ರುತ್ತಾರೆ ಬಂದರೆರಡು ನಗರಗಳಲ್ಲಿ ಚಿತ್ರಾಲಿನಲ್ಲಿರುವವರು

ರೋಮ್ ಪಟ್ಟಣದ ಜೈಲಿನ ಮೊಕದ್ದಮೆಯಲ್ಲಿ ಮೈದಾನದಲ್ಲಿಡಲ್ಪಟ್ಟಿದ್ದ ಸೀನಿಯರ್ ಡಿವಿಸಿ ಎಂಬವರು ಜೈಲ್ ಖಾನೆಯಲ್ಲಿ ಸತ್ತು ಹೋದರು

ಪಾರ್ಲಿಮೆಂಟಿನಲ್ಲಿ ನೆನ್ನೆ ರಾತ್ರಿ ಮಿ॥ ಬಾಲ್‌ಫರ್ ಸಾಹೇಬರವರು ರಜಿಸ್ಟ್ರೇಷನ್ ಆಕ್ಟನ್ನು ತಿದ್ದುವದಕ್ಕೆ ಒಂದು ಬಿಲ್ಲನ್ನು ಒಪ್ಪಿಸಿದ ಮೆಂಬರುಗಳು ಒಪ್ಪಿದ್ದರಿಂದ ಮೊದಲ ನೇ ಥಡು ಓದಲ್ಪಟ್ಟಿತು

ಲೇಡಿ ಫ್ರಾನ್ಸಿಸ್‌ರವರು ಒಂದು ಸಂಘಕ್ಕೆ ನೆನ್ನೆ ರಾತ್ರಿ ಗಂಡನಾ ದುಸ್ತನ್ನು ಹಾಕಿಕೊಂಡು ಹೋಗಿದ್ದರೆಂದು ಟಾಟ ಗಾರ್ಡಿಯನ್ ಪತ್ರಿಕೆ ಕರ್ತರು ಪ್ರಕಟಿಸಿದ್ದು ಸುಳ್ಳಾದ್ದರಿಂದ ಲೇಡಿ ಫ್ರಾನ್ಸಿಸ್‌ರವರು ಈ ತಪ್ಪನ್ನು ತಿದ್ದಿ ಕ್ಷಮಾಪಣೆಯನ್ನು ಪ್ರಕಟಿಸಬೇಕೆಂದು ಅವರಿಗೆ ಬರೆದಿದ್ದಾರೆ ಅವರು ಇದನ್ನು ವಿಚಾರಿಸುತ್ತಾರೆ

ಹಿಂದುಸ್ಥಾನದ ಸ್ವಾತಂತ್ರ್ಯದ ವಿಷಯಗಳಿಗಾಗಿ ಹೊಸದಾಗಿ ನೇಮಿಸಲ್ಪಟ್ಟ ಜನರಲ್ ಸರ್ ಜಾರ್ಜ್ ವೈಟ್ ರ ಭಟ್ಟರಾಯರು॥ ೩ನೇ ಟರನರಿಗೆ ಕೆ. ಬಿ. ಸಿ. ಐ. ಇ. ಎಂಬ ಬಿರುದನ್ನು ಕೊಟ್ಟಿರುತ್ತಾರೆ ಬುಧವಾರ

ಜನರಲ್ ವೈಟ್ ಎಂಬ ಪ್ರಖ್ಯಾತನಾದ ಚಿತ್ರಗಾರರು ವೃದ್ಧರಾದ್ದರಿಂದ ವರ್ತಮಾನ ಬಂದಿರುತ್ತದೆ

ಹಿಂದೂಗಳ ಯೂನಿವರ್ಸಿಟಿ ಸಂಘದ ಕಾರ್ಯಾಲೋಕನ ಸಭೆ ನೆನ್ನೆ ನಡೆಯಿತು ಧರ್ಮಸಾಲೆಯ ಲಾರ್ಡ್ ಹ್ಯಾರಿಸ್‌ರವರು ಅಧ್ಯಕ್ಷತೆಯನ್ನು ವಹಿಸಿದ್ದರು

ಅಮೀರರಿಗೆ ಈಗ ಆರೋಗ್ಯವಾಗಿರುವದರಿಂದ ಅವರು ಟ್ಯುಲ್ಲಯ ತೀರ್ಮಾನ 'ಪರಿಷತ್ತಿನವನಕ್ಕೆ' ಇಂಡಿಯಾ ಗವರ್ನಮೆಂಟಿನವರಿಗೆ ಬರೆಯುವಂತೆ ಕಾಬೂಲಿನಲ್ಲಿರುವ ಬ್ರಿಟಿಷ್ ಏಜಂಟ್ರಿಗೆ ತಮ್ಮ ಅಭಿಪ್ರಾಯವನ್ನು ತಿಳಿಸಿರುತ್ತಾರೆ ಬಹಳ ಕಾಲದಿಂದಲೂ ಇದಕ್ಕೆ ಕೊಡದೆ ಅಮೀರರು ಮಾತನ್ನು ಸರಿಯಾಗಿ ಕೇಳದಿದ್ದರಿಂದ ಲಾರ್ಡ್ ಕರ್ಜನ್‌ರವರು ಅವರನ್ನು ಹಿಡಿಯಬೇಕೆಂದು ಹೇಳುತ್ತಿದ್ದರೆಂದು ಆಲೋಚನೆ ಮಾಡಲಾಗಿದೆ

ಬೆಂಗಾಳ ಜಾರಿ ನಿವಾರಣೆಯನ್ನು ವಿಚಾರದ ಪ್ರಯತ್ನ ಸಂಸ್ಥಕ್ಕೆ ಮಿ॥ ಜಸ್ಟಿಸ್ ಪ್ರಿಗಿಸ್ ಎಂಬವರನ್ನು ಪ್ರಸಿಡೆಂಟರನ್ನಾಗಿ ನೇಮಿಸುವರದಲ್ಲದೆ ನೆನ್ನೆ ಮೊನ್ನೆಯ ತೀರ್ಮಾನಗಳು ನಿವಾರಣೆಯಾಗಿವೆ ಎಂದು ವರ್ತಮಾನ ಬಂದಿದೆ

ಐರ್ಲೆಂಡಿನಲ್ಲಿ ವಲಸೆ ಮೊದಲಾದ ಗಲಭೆಗಳು ಸಂಪೂರ್ಣವಾಗಿ ಸಮಾಧಾನಕ್ಕೆ ಬಂದಿವೆ ಎಂದು ಸೆಕ್ರೆಟರಿಯವರು ಗಾಲ ಅರ್ಲ್ ಕ್ಯಾನಿಂಗ್‌ರವರಿಗೆ ಫೆಬ್ರವರಿ॥ ೨೧ ನೇ ವಿಶೇಷ ಸ್ಪೆಷಲ್ ಬರುತ್ತದೆ. ಮತ್ತು ಗುರುವಾರ ಪಾರ್ಲಿಮೆಂಟಿನ ಅಧಿವೇಶನದಿಂದ ಈಚೆಗೆ ಬಿ ಜ್ಯುಬಿಲಿ ಆರಂಭವಾಗಿದ್ದ ದಿವಾನರಿಗೆ ಒಪ್ಪಿಸಿಕೊಂಡರು

ಶಾಸಗಿ ಬ್ರಿಟಿಷ್ ಕಮಿಷನರಾದ ಕರ್ನಲ್ ಮೈಕಲ್ ಸರ್ಕಾರವರು ಪರಿಷತ್ತಿನ ಮಾಡಿದ್ದನ್ನು ತಪ್ಪಿದರೂ ಪಟ್ಟಣದನ್ನು ಮಿ॥ ಅಗ್ನಿಟಿ ಸಾಹೇಬರ ಆಜ್ಞೆಯಿಂದ ವಿಶೇಷವಾಗಿ ಅಲಂಕರಿಸಿದ್ದಾರೆ ಅಲ್ಲಿನ ಇಂಗ್ಲಿಷ್ ಮತ್ತು ಕನ್ನಡ ಸ್ಕೂಲುಗಳಲ್ಲಿ ಬಾಲರಾಗಳನ್ನು ಕೂಡುತ್ತಾರೆ ಕೋರ್ಟನ್ನು ನಾಳೆ ಸಮಾರಂಭಿಸುತ್ತಾರೆ ಅಲ್ಲಿಂದ ಪಾಲಿಪೆಟ್ಟಕ್ಕೆ ಹೋಗುವರು ಒಂದು ದಿನ ಅಲ್ಲಿದ್ದು ಬೆಂಗಳೂರಿಗೆ ನಗರಕ್ಕೆ ಹೊರಡುತ್ತಾರೆ

ಬೆಂಗಾಳದ ಜಾರಿ ಕಮಿಷನ್ ಮೆಂಬರುಗಳು.— ಪ್ರೆಸಿಡೆಂಟು—ಅನರಬಲ್ ಜಸ್ಟಿಸ್ ಪ್ರಿಗಿಸ್‌ರವರು ಬಂಗಾಳದ —ಸರ್ ಗ್ರಿಫಿತ್ ಯವರ್ಗ ಯವರು, ಮಹಾರಾಜ ಸರ್ ಜ್ಯೋತೀಂದ್ರಮೋಹನ ಠಾಕೂರ್‌ರವರು, ಸರ್ ರೋಮೇಶ್ ಚಂದ್ರಮಿತ್ರರವರು ಮತ್ತು ಮಿ॥ ಸಸಿಭೂಷಣರವರು ನೆನ್ನೆ ರಾತ್ರಿ ಪಾರ್ಲಿಮೆಂಟ್ ಸಭಾಭವನದಲ್ಲಿ ಮಿ॥ ದಾದಾ ಭಾಯಿನವರೋಜಿಯವರು — ಇಂಡಿ ಫೆಬ್ರವರಿ॥ ೨೦ ನೇ ಯಲ್ಲಿ ಬಾಲಸಾಧನ ನ್ಯಾಯದ ವಿಷಯ ಶುಕ್ರವಾರ ವನ್ನು ಪಾರ್ಲಿಮೆಂಟ್ ಸಭೆಯಲ್ಲಿ ಚರ್ಚೆಗೆ ತರಬೇಕೆಂತ ಸಾಧಿಸಿ ಇದಕ್ಕೆ ಬಿಡಲಾಗದೆ ನಾನು ಮಾಡಬೇಕೆಂದಾಗಿ ತಿಳಿಸಿದರು

ಪ್ಯಾಂಕೋನಿನಲ್ಲಿ ಫ್ರೆಂಚರೂ ಸಯಾಮ ಜನರಿಗೂ ದಂಗೆ ನಡೆದ ಪ್ರಯತ್ನಗಳು ಹುಟ್ಟಿರುತ್ತವಂತಲೂ, ಫ್ರೆಂಚ್ ಕೇಸರರವರನ್ನು ಬ್ಯಾಂಕಾಕಿನ ಪೂರ್ವಕ್ಕೆ ಹೋಗಿರಬೇಕೆಂದು ಆಜ್ಞೆ ಮಾಡಿದಾಗಿಯೂ, ಫ್ರೆಂಚ್ ಪ್ರಜೆಗಳನ್ನು ಅವಮಾನಕರವಾದ ದೇಶದಿಂದ ಓಡಿಸಿದ್ದಕ್ಕಾಗಿ ಸಯಾಮದವರು ಪ್ರತಿಸಿ ಕೊಡ ಬೇಕೆಂದಾಗಿ ಫ್ರೆಂಚ್ ಮಂತ್ರಿಗಳು ಅವರನ್ನು ಕೇಳಿರುತ್ತಾರೆಂದೂ ಸ್ಟ್ಯಾಂಡರ್ಡ್ ಪತ್ರಿಕೆಯು ತಿಳಿಸುತ್ತದೆ

ಜೋಹಾನಿಸ್‌ಬರ್ಗಿನಲ್ಲಿರುವ ಧರ್ಮ ಕಾಕಸ್ ರವರ ಕಂಪನಿ ಯಲ್ಲಿ ನೆನ್ನೆ ಬುಧವಾರ ರಾತ್ರಿ ಬೆಂಕಿ ಬಿದ್ದು ಎಂಬ ಕಟ್ಟಡಗಳಲ್ಲಿ ಅಟ್ಟವೂ ನ್ಯೂಸ್ ಆಫೀಸೂ ಸ್ಕೂಲುಗಳು ಸರ್ಕಾರದ ಕಟ್ಟಡಗಳು ಸುಟ್ಟು ಹೋದುವು, ಮನುಷ್ಯರಿಗೆ ಏನೂ ಅಪಾಯ ಆಗಲಿಲ್ಲ

ಬರುವ ಅಕ್ಟೋಬರ್ ನಲ್ಲಿ ಮಿ॥ ಹಾಬ್ಸ್ ಲೋಗ್ಲಾರ್ ರವರು ಪ್ರಿವೇಟು ಕಂಟ್ರೋಲರ್ ಜನರಲ್ ರವರ ಆಫೀಸ್ ರವನ್ನು ವಹಿಸುವರು ಈಗ ಅವರು ಫರ್ಲೋ ರಜೆಯ ಮೇಲಿದ್ದಾರೆ

ಇಂಡಿಯಾ ದೇಶದಲ್ಲಿರುವ ಎಲ್ಲಾ ಪಾಲಿಬರುಗಳಿಗೆ ಇವರ ಪಟ್ಟಿ ಎಂಬುದನ್ನು ಮಾಡಿ ಇರುತ್ತಾರೆ ಅದು ಹೋದ ವರುಷದಕ್ಕಿಂತ ೧೯೦೪ ಹೆಚ್ಚು

ತಿರುಪತಿಯ ಮಹಂತರು.

ತಿರುಪತಿಯಲ್ಲಿ ಮಹಾವೀರದಾಸ ಎಂಬವರು ಈಗಿನ ಮಹಂತರು. ಇವರು ಕಳೆದ ನವೆಂಬರು ೭ ನೇ ತಾರೀಖಿನಲ್ಲಿ ಸಂಸಾರವತಿಯಾಗಿದ್ದ ಬ್ರನಮ್ಮಾಳ್ ಎಂಬವಳನ್ನು ಕೃಷಿಯ ಪುರಸ್ಸರ್ವಕವಾಗಿ ಅವಳ ಗಂಡನ ಮನೆಯಿಂದ ಕದ್ದು ತಂದು ತಮ್ಮ ಮನೆಯೊಳಗೆ ಇಟ್ಟುಕೊಂಡಿದ್ದರೆಂತಲೂ, ಅದೇ ೧೦ ನೇ ತಾರೀಖಿನ ದಿವಸ ಇದು ಪತ್ತೆ ಆಗಿ ಪೋಲೀಸಿನವರು ಅವಳನ್ನು ವಾರಂಟಿನಿಂದ ಅವರ ಮನೆಯಲ್ಲಿ ಹಿಡಿದರೆಂತಲೂ ಅವಳ ಗಂಡನಾದವನು ಮಹಂತರ ಮೇಲೆ ದಾವಾ ಮಾಡಿದ್ದನು. ಈ ಮೊಕದ್ದಮೆಯು ತಿರುಪತಿಯ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ವಿಚಾರಣೆಯಾಯಿತು. ಮಹಂತರ ಕಡೆ ಮ|| ಷಡಗೋಪಾಚಾರ್ಯರೂ, ಫಿರ್ಯಾದಿಯ ಕಡೆ ಗೌರ್ನಮೆಂಟ್ ಪ್ರಾಸಿಕ್ಯೂಟರ್ ಮ|| ನರಸಿಂಗರಾಯರೂ ವಾದಿಸಿದರು. ಮತ್ತು ಇಬ್ಬರು ಅಸ್ಸೆಸರುಗಳನ್ನು ನೇಮಿಸಿದ್ದರು. ಫಿರ್ಯಾದಿಯ ಕಡೆ ೧೬ ಸಾಕ್ಷಿಗಳೂ ಅಪರಾಧಿಯ ಕಡೆ ೨೪ ಸಾಕ್ಷಿಗಳೂ ವಿಚಾರಣೆ ಮಾಡಲ್ಪಟ್ಟರು. ಪ್ರಾಸಿಕ್ಯೂಟರರು ಫಿರ್ಯಾದಿಯು ವಾದಿಸಿದ್ದೇನೆಂದರೆ:— ನನ್ನ ಹೆಂಡತಿಯನ್ನು ಅಪರಾಧಿಯು ಚಿತಾವಣೆ ಮಾಡಿ ಕರೆದುಕೊಂಡು ಹೋಗಿ ತನ್ನ ಮನೆಯ ಕೋಣೆಯಲ್ಲಿ ಇಟ್ಟುಕೊಂಡಿದ್ದನು. ಹತ್ತನೇ ತಾರೀಖಿನದಿವಸ ಪೋಲೀಸಿನವರು ಅವಳನ್ನು ಅಲ್ಲಿ ಕಂಡು ಹಿಡಿದರು. ವಿಷಯಾಸಕ್ತಿಯಿಂದ ಮಹಂತನು ಈ ಕೆಲಸವನ್ನು ಮಾಡಿರುವದು ಈ ಹದಿನಾರು ಸಾಕ್ಷಿಗಳಿಂದ ರುಜುವಾತಾಗಿರುತ್ತದೆ. ಅವರಿಬ್ಬರೂ ಒಂದೇ ಕೋಣೆಯಲ್ಲಿದ್ದರು ಮತ್ತು ಇಬ್ಬರಿಗೂ ಸ್ನೇಹ ಬೆಳೆದಿದೆ ಎಂಬುವದರಲ್ಲಿ ಸಂದೇಹವಿಲ್ಲ. ಇಂಥ ಧನಿಗೆ ಸಹಕಾರದವರು ನಂಬೂತ ಶಿಕ್ಷೆ ಕೊಡಬೇಕು ಎಂಬದಾಗಿ ವಾದಿಸಿದರು. ಅಪರಾಧಿಯ ಕಡೆ ವಕೀಲರು ೨೪ ಸಾಕ್ಷಿಗಳನ್ನು ವಿಚಾರಣೆ ಮಾಡಿ ಅರ್ಗ್ಯೂಮೆಂಟಿನಲ್ಲಿ ತಿಳಿಸಿದ್ದೇನೆಂದರೆ:—ಆ ಪ್ರಾಂತದಲ್ಲಿ ಮೊದಲಿದ್ದ ಮಹಂತನನ್ನು ಸರ್ಕಾರದವರು ಕೆಲಸದಿಂದ ತೆಗೆದು ಹಾಕಿ, ಈ ಅಪರಾಧಿಯನ್ನು ನೇಮಿಸಿದಲಾಗಾಯಿತು ಜನರು ಇವನನ್ನು ಹ್ಯಾಗಾದರೂ ಕೋರ್ಟಿಗೆ ಎಳೆದು ಅವಮಾನಪಡಿಸಬೇಕೆಂದು ಒಂದು ಗುಂಪು ಮಾಡಿಕೊಂಡು ಇರುತ್ತಿದ್ದರೆಂಬುವದು ಸಾಕ್ಷಿಗಳಿಂದ ಚನ್ನಾಗಿ ರುಜುವಾತಾಗಿರುತ್ತೆ. ಮತ್ತು ಅವರು ಅಪರಾಧಿಗೆ ಅಗಾಗ್ಯೆ ಅನೇಕವಿಧವಾದ ತೊಂದರೆಗಳನ್ನೂ ಕೊಡುತ್ತಿದ್ದರು. ಆದ್ದರಿಂದ ಈ ಮೊಕದ್ದಮೆಯು ಸ್ಪಷ್ಟವಾಗಿಯೂ ಪನ್ನಿನ ಮೇಲೆ ತರಲ್ಪಟ್ಟಿರುತ್ತದೆ. ವಿರೋಧದಿಂದ ಎದುರು ಕಕ್ಷಿಯವರು ಹೀಗೆ ಏರ್ಪಾಡು ಮಾಡಿಕೊಂಡು ಈ ಮೊಕದ್ದಮೆಯನ್ನು ಹುಟ್ಟಿಸಿರುತ್ತಾರೆಂಬುವದರಲ್ಲಿ ಸಂದೇಹವಿಲ್ಲ ಎಂಬದಾಗಿ ಹೇಳಿದರು. ಅನಂತರ ಮ್ಯಾಜಿಸ್ಟ್ರೇಟರವರು ಬ್ರನಮ್ಮಾಳ್ ಎಂಬ ಯುವತಿಯನ್ನು ಕೋರ್ಟಿಗೆ ಹಾಜರ್ಮಾಡಿಸಿಕೊಂಡು ಅವಳನ್ನು ದರ್ಯಾಫ್ತು ಮಾಡಿದರು. ಆಕೆಯು— ನನಗೆ ಅಪರಾಧಿಯಲ್ಲಿ ಯಾವವಿಧವಾದ ಪ್ರೀತಿಯೂ ಇಲ್ಲ. ನನ್ನನ್ನು ೩-೪ ಮಂದಿ ಎತ್ತಿಕೊಂಡು ಹೋಗಿ ಅಪರಾಧಿಯ ಕೋಣೆಯಲ್ಲಿ ಹಾಕಿದರು. ಇದೇ ಕೃಷಿಯತ್ತನ್ನು ಪೋಲೀಸ್ ವಿಚಾರಣೆಯಲ್ಲೂ ಕೊಟ್ಟಿರುತ್ತೇನೆ ಎಂಬದಾಗಿ ಸಾಕ್ಷಿ ನುಡಿದಳು. ಈ ಮೊಕದ್ದಮೆಯಲ್ಲಿ ಡಾಕ್ಟರ್ ಶಂಕರವರೂ ಒಬ್ಬ ಸಾಕ್ಷಿಯಾಗಿದ್ದರು. ಅವರು—ಬ್ರನಮ್ಮಾಳ್ ಎಂಬವಳ ಪ್ರಾಯವನ್ನು ಗೊತ್ತು ಮಾಡುವದಕ್ಕೆ ನನ್ನನ್ನು ಗೊತ್ತು ಮಾಡಿದರು. ಆಕೆಯು ಹದಿನಾರು ವರುಷಗಳಿಗಿಂತಲೂ ಹೆಚ್ಚು ಪ್ರಾಯ ಉಳ್ಳವಳೆಂದು ನನಗೆ ತೋರುತ್ತೆ ಎಂಬದಾಗಿ ಹೇಳಿದರು. ಅನಂತರ ಜಡ್ಜಿಯವರು ಈ ಮೊಕದ್ದಮೆಯ ಸಾರಾಂಶವನ್ನೆಲ್ಲಾ ಕೇಳುತ್ತಿದ್ದ ಅಸ್ಸೆಸರುಗಳನ್ನು—ಈ ಮೊಕದ್ದಮೆಯಲ್ಲಿ ನಿಮ್ಮ ಅಭಿಪ್ರಾಯವೇನೆಂದು ಪ್ರಶ್ನೆ ಮಾಡಿದಾಗ ಅವರು—ಅಪರಾಧಿಯು ತಪ್ಪಿತಸ್ಥನಲ್ಲವೆಂದು ನಮ್ಮಗಳಿಗೆ ತೋರುತ್ತದೆಂದು ಹೇಳಿದರು. ಆಗ ಮ್ಯಾಜಿಸ್ಟ್ರೇಟರವರು— ನಾನೂ ಅದೇ ಅಭಿಪ್ರಾಯವುಳ್ಳವನಾಗಿರುತ್ತೇನೆ. ಇದನ್ನೇ ಹಿಡಿದು ಫೈಸಲ್ ಹೇಳುತ್ತೇನೆ. ಮತ್ತು ಈಗ ಅಪರಾಧಿಯಾದ ಮಹಂತನನ್ನು ಕೋರ್ಟು ನಿರ್ಬಂಧದಿಂದ ಬಿಡುಗಡೆ ಮಾಡಿರುತ್ತೇನೆಂದು ಅಪ್ಪಣೆ ಕೊಡಿಸಿ ತೀರ್ಮಾನವನ್ನು ಹೇಳಿದರು.

ಟೇಲಿಗ್ರಾಫ್.

ತಂತಿಯ ಮೂಲಕ ಸಮಾಚಾರಗಳನ್ನು ಕಳುಹಿಸುವದರಿಂದ ಉಂಟಾಗುವ ಪ್ರಯೋಜನವನ್ನು ವಿವರಿಸಲು ಅಸಾಧ್ಯ. ನಮ್ಮನ್ನು ನೋಡದ ಇರುವವರುಕೂಡ, ನಾವು ನೋಡಿ ಅರಿಯದ ದೇಶಗಳಿಂದ ಸಮ್ಮ ಸ್ನೇಹವನ್ನು ಪಳಿಸಿ ಅಲ್ಲಿನ ವರ್ತಮಾನಗಳನ್ನು ಇಲ್ಲಿಗೂ, ಇಲ್ಲಿನ ವರ್ತಮಾನಗಳನ್ನು ಅಲ್ಲಿಗೂ ಕಳುಹಿಸಬಹುದಾಗಿದೆ. ನಾವು ಕೊಟ್ಟ ಸಮಾಚಾರವು ಉತ್ತರಕ್ಷಣದಲ್ಲಿಯೇ ಅವರಿಗೆ ತಿಳಿಯುತ್ತದೆ. ಇದರಿಂದ ಪ್ರಪಂಚದ ನಾನಾಭಾಗಗಳಲ್ಲಿಯೂ ಎಂತೆಂಥ ಜನಗಳು ಯಾವ ಯಾವ ಕೆಲಸಗಳನ್ನು ಮಾಡುತ್ತಿರುವರೋ, ಒಂದು ಕ್ಷಣದಲ್ಲಿ ಗೊತ್ತು ಮಾಡಬಹುದಾಗಿದೆ. ಕ್ರೀಮಂದಿಯಾ ಚಕ್ರವರ್ತಿನಿಯವರಾದ ವಿಕ್ಟೋರಿಯಾ ಮಹಾರಾಣಿಯವರು ಈ ನಿಮಿಷದಲ್ಲಿ ಏನು ಮಾಡುತ್ತಿದ್ದಾರೆ, ಯಾವಸಂಗತಿ ಯಾವ ವಿಷಯವನ್ನು ಕುರಿತು ಮಾತನಾಡುತ್ತಿದ್ದಾರೆ, ಅಮೇರಿಕಾ ದೇಶದಲ್ಲಿರುವ ಚಿಕಾಗೋಪಟ್ಟಣದಲ್ಲಿ ನಾಳೆ ನಡೆಯುವ ಸರ್ವವಸ್ತು ಪ್ರದರ್ಶನ ಶಾಲೆಯಲ್ಲಿ ತೋರ್ಪಡಿಸುವ ನವೀನ ಪದಾರ್ಥಗಳು ಯಾವತರವಾದವುಗಳಾಗಿವೆ, ಆಸ್ಟ್ರೇಲಿಯಾ ದ್ವೀಪದಲ್ಲಿ ಬ್ರಿಟಿಷ್ ಅಧಿಕಾರಿಗಳು ಚಿನ್ನದ ಗಣಿಗಳಲ್ಲಿ ಎಷ್ಟು ಚಿನ್ನವನ್ನು ತೆಗೆಯುತ್ತಾರೆ, ಆಫ್ರಿಕದ ನೀಗ್ರೋ ಜನಗಳು ಇತರರನ್ನು ಹ್ಯಾಗೆ ಹಿಂಸಿಸುತ್ತಾರೆ, ಈ ಸಂಗತಿಗಳನ್ನೆಲ್ಲಾ ಸವಿಸ್ತಾರವಾಗಿ ತಿಳಿಯಬಹುದಾಗಿದೆ. ನಮ್ಮ ಹಿಂದೂಸ್ಥಾನದಲ್ಲಿ ಮೈಸೂರಿನ ಗ್ರಾನೈಟ್ ಜನರಲ್‍ರವರು ಈಗ ಏನು ಮಾಡುತ್ತಿದ್ದಾರೆಯೋ ಎಂದು ಊಹಿಸುವದಕ್ಕೆ ಮೊದಲೇ ಸ್ಟೇಟೂರ ವರ್ತಮಾನ ತರಿಸಬಹುದು. ಪೂರ್ವದಲ್ಲಿ ನಮ್ಮ ಹಿಂದೂಸ್ಥಾನದ ಜನರು ಕಾಶಿ ರಾಮೇಶ್ವರಗಳಿಗೆ ಹೋಗಿ ಬರುವಾಗ ಬಹಳ ದೀರ್ಘವಾಗುತ್ತಾ ಕಾಲವಾಗಿಹೋಗುತ್ತಲ್ಲಿ. ಈ ಸಂಗತಿಯು ಅವರ ಮಕ್ಕಳು ಮೊಮ್ಮಕ್ಕಳು, ಸಮೀಪದ ಬಂಧು ಮಿತ್ರರುಗಳಿಗೆ ತಿಳಿಯುವದು ಅಸಾಧ್ಯವಾಗಿತ್ತು. ಈಗಲಾದರೂ ಈ ತಂತಿಯ ಮೂಲಕ ಉತ್ತರಕ್ಷಣದಲ್ಲಿಯೇ ಗೊತ್ತಾಗುತ್ತದೆ. ಶ್ರೀಮನ್ಮಹಾರಾಜರವರು ಕೆಲವು ದಿವಸಗಳ ಕೆಳಗೆ ಉತ್ತರ ದೇಶಗಳಿಗೆ ಹೊರಟು ದಯಮಾಡಿಸಿದಾಗ್ಯೆ ಅಂದರೆ ಮೈಸೂರಿನಿಂದ ಹಗಲೂ ರಾತ್ರಿ ವಿಚ್ಛಿತ್ತಿಯಿಲ್ಲದ ರೈಲ್ವೇಯಲ್ಲಿ ಪ್ರಯಾಣ ಮಾಡಿದಾಗ್ಯೂ ೩-೪ ದಿವಸಗಳ ಕಾಲ ಹಿಡಿಯುವಷ್ಟು ದೂರದಲ್ಲಿರುವ ಗ್ವಾಲಿಯರ್ ಪ್ರಾಂತ್ಯಗಳಲ್ಲಿರುವಾಗ, ತಮ್ಮ ರಾಜಧಾನಿಯಲ್ಲಿ ವ್ಯಸನಕರವಾದ ಅಸಂಭವವು ಪ್ರಾಪ್ತವಾಯಿತಷ್ಟೆ. ಈ ವಾರ್ತೆಯು ಆ ನಿಮಿಷವೇ ಅವರಿಗೆ ತಂತಿಯ ಮೂಲಕ ತಿಳಿದು ಬಂತು. ಈ ರೀತಿಯಲ್ಲಿ ಅತ್ಯಂತ ಉಪಯೋಗಕರವಾದ ಈ ಟೇಲಿಗ್ರಾಫಿನ ಪ್ರಯೋಜನಗಳನ್ನು ಕುರಿತು ಯೋಚಿಸಲಾಗಕೂಡದ ಅಸಾಧ್ಯವಾಗಿವೆ. ಕೆಲವು ದಿವಸಗಳ ಕೆಳಗೆ ಮದರಾಸಿನಿಂದ ೩,೦೦೦ ಮೈಲಿ ದೂರದಲ್ಲಿರುವ ಕಲ್ಕತ್ತೆಗೆ ಭೂಮಿಯ ಮೇಲೆ ಟೇಲಿಗ್ರಾಫ್ ತಂತಿಯನ್ನು ಹಾಕುತ್ತಿದ್ದರೆಂದು ತಿಳಿಸಿದ್ದೆವಷ್ಟೆ. ಈ ಅಸಾಧ್ಯಪ್ರಯೋಜನವನ್ನು ಈಗ ಪೂರೈಸಿರುತ್ತಾರೆ. ಇದಕ್ಕೆ ಉಪಯೋಗಿಸಿರುವ ತಂತಿಯು ತಾಮ್ರದ್ದು. ಅಲ್ಲಿಂದ ಮಧ್ಯಾಹ್ನಕ್ಕೂ, ಮದರಾಸಿನಿಂದ ಕಲ್ಕತ್ತೆಗೂ ನಡುವೆ ಯಾವ ಅಂತರಗಳೂ ಇಲ್ಲದೆ ಸಮಾಚಾರಗಳೂ ಹೋಗಿ ಬಂದವು. ಈಗ ಇದಲ್ಲದೆ ಕಲ್ಕತ್ತೆಯಿಂದ ಪ್ರಾಂಚ್, ವರ್ಮಾ ಮುಂತಾದಗಳು ಮೂಲಕವಾಗಿಯೂ ಮದರಾಸಿಗೆ ಮತ್ತೊಂದು ಮಾರ್ಗವಾಗಿ ತಂತಿಗಳನ್ನು ಹಾಕುತ್ತಿದ್ದಾರೆ. ಇದೂ ಪೂರೈಸಿದ ತರುವಾಯ ಇದಕ್ಕೆ ಸಮಾನವಾದದ್ದು ಪ್ರಪಂಚದಲ್ಲಿ ಮತ್ತೆಲ್ಲಿಯೂ ಇರುವದಿಲ್ಲವೆಂದು ತಿಳಿಯಬಹುದು.

ವಿವಿಧ ವರ್ತಮಾನಗಳು.

ವಿಲಾಯತಿಯಲ್ಲಿರುವ ಬ್ರಿಟಿಷ್ ಮ್ಯೂಜಿಯಂ ಎಂಬ ಸಕಲವಸ್ತು ಪ್ರದರ್ಶನಶಾಲೆಯಲ್ಲಿರುವ ಸರಸ್ವತೀ ಭಂಡಾರದ ಪುಸ್ತಕಗಳನ್ನೆಲ್ಲ ಒಂದರಮೇಲೊಂದ ಒಂದನ್ನು ಇಟ್ಟರೆ ೧೬ ಮೈಲಿ ಉದ್ದವಾಗುತ್ತವಂತೆ. ಎಷ್ಟು ಪುಸ್ತಕಗಳಿರಬಹುದೊ ವಾಚಕರೇ ಊಹಿಸಿಕೊಳ್ಳಬಹುದು.

ಚೀಣದ ಉತ್ತರ ಭಾಗಗಳಲ್ಲಿ ಛಳಿಯು ವಿಪರೀತ ಹೆಚ್ಚಿ, ಮೇಲಿನಿಂದ ಬೀಳುವ ಮಂಜುಗಡ್ಡೆಗಳಲ್ಲಿ ಅನೇಕ ಜನರು ಹೂತುಹೋಗಿ ಮೃತಪಟ್ಟರು. ಈ ವರುಷದ ಹವಾವು ಎಲ್ಲೆಲ್ಲಿಯೂ ಪ್ರಾಣನಷ್ಟಕಾರಿಯಾಗಿಯೇ ಪರಿಣಮಿಸಿರುವದನ್ನು ನೋಡಿ ವ್ಯಸನ ಪಡಬೇಕಾಗಿದೆ.

ಬೊಂಬಾಯಿನಲ್ಲಿ ಥಾಮಸ್ ಕುಕ್ ಎಂಬ ಭಾರಿ ವರ್ತಕರಿರುತ್ತಾರೆ. ಅವರು ತುಂಬು ಐಶ್ವರ್ಯವಂತರು. ಕಳೆದ ಬುಧವಾರ ರಾತ್ರಿ ಅವರು ಕಬ್ಬಿಣದ ಪೆಟ್ಟಿಗೆಗಳಲ್ಲಿಟ್ಟಿದ್ದ ಹಣ ಮತ್ತು ನೋಟುಗಳು ೧೫,೦೦೦ ರೂಪಾಯಿಗಳು ಕಳ್ಳರು ಅಪಹರಿಸಿಬಿಟ್ಟರು. ಅವರ ಧೈರ್ಯವೆಂಥಾದ್ದು !!

ಬಿಹಾರ್ ಎಂಬಲ್ಲಿ ಮೇಜರ್ ಗ್ರೇವ್ಸ್ ಎಂಬವರ ಸೇವಕನಾಗಿದ್ದ ಒಬ್ಬ ಪಠಾಣರವನು ಅವರ ಕುದುರೆಯನ್ನು ಅಪಹರಿಸಿಕೊಂಡು ಅಮೀರರ ರಾಜ್ಯಕ್ಕೆ ಓಡಿಹೋದನು. ತುರುಷ್ಕ ಪೋಲೀಸಿನವರು ಆತನನ್ನು ಹಿಡಿಯುವದಕ್ಕೆ ಹೋದರು. ಆದರೆ ಅಫಘಾನ್ ಜನಗಳು ಇವರನ್ನು ತಮ್ಮ ದೇಶದೊಳಕ್ಕೆ ಬಿಡದೆ ತಮ್ಮ ಎಲ್ಲೆಯಿಂದ ಹೊರಕ್ಕೆ ಕಳಿಸಿರುತ್ತಾರೆ.

ಕೆಲವು ದಿವಸಗಳ ಕೆಳಗೆ ಸ್ಪೇನ್ ಎಂಬ ಜಹಜು ಟ್ರಿಕೊಮಾಲಿ ಎಂಬ ರೇವಿನ ಹತ್ತಿರ ಮುಳುಗಿ ಹೋಯಿತಷ್ಟೆ. ಅದರಲ್ಲಿದ್ದ ಖಜಾನೆ, ನಗಗಳು ಮೊದಲಾದ ಬೆಲೆಯುಳ್ಳ ಚಿನ್ನ ಬೆಳ್ಳಿಗಳು ಅಪಹರಿಸಲ್ಪಟ್ಟಿರುವವಂತೆಯೂ, ಅವುಗಳನ್ನು ಪತ್ತೆಮಾಡಬೇಕೆಂತಲೂ ಸಿಲೋನಿನಲ್ಲಿ ಪ್ರಕಟಿಸುವ ವರ್ತಮಾನ ಪತ್ರಿಕೆಯು ತಿಳಿಸುತ್ತದೆ.

ಚೀಣಾ ದೇಶಕ್ಕೆ ಸೇರಿದ ಹ್ಯಾಂಕೊ ಪಟ್ಟಣದಲ್ಲಿ ಯೂರೋಪಿಯನ್ನರಿಗೆ ಸೇರಿದ ಒಂದು ಕಾರ್ಖಾನೆಯ ಮೇಲ್ಛಾವಣಿಯನ್ನು ಅಲ್ಲಿನ ಪುಂಡು ಜನರು ಕಿತ್ತು ಹಾಕಿದರು. ಕೆಲವು ಮಂದಿ ಯೂರೋಪಿಯನ್ ಅಧಿಕಾರಿಗಳು ಕಲ್ಲಿನಿಂದ ಹೊಡೆದು ಕೊಲ್ಲಲ್ಪಟ್ಟರು. ಆದ್ದರಿಂದ ಅಲ್ಲಿನ ಯೂರೋಪಿಯನ್ ಜನರನ್ನು ಕಾಪಾಡುವದಕ್ಕೋಸ್ಕರ ವೈಸರಾಯಿಯವರು ಸೋಲ್ಜರುಗಳನ್ನು ಕಳುಹಿಸಿರುತ್ತಾರೆಂದು ಎಲ್ಲರೂ ನೆನಸಿದ್ದಾರೆ.

ಉತ್ತರ ಹಿಂದೂಸ್ಥಾನದಲ್ಲಿ ಒಬ್ಬ ಹೆಂಗಸು ತನ್ನ ಮಗನಿಗೆ ಹಾಲುಕೊಡುತ್ತ ಹೊಲದಲ್ಲಿ ನಿದ್ರೆ ಮಾಡುತ್ತಿದ್ದಳು. ಒಂದು ಸರ್ಪವು ಬಂದು ಮಗುವಿನ ಬಾಯನ್ನು ಬಿಡಿಸಿ ಅವರ ಬಾಯಿಗೆ ತನ್ನ ಬಾಲವನ್ನು ಕೊಟ್ಟು ತಾನು ತನ್ನ ಬಾಯಿಯಿಂದ ಹಾಲನ್ನು ಕುಡಿಯುತ್ತಿತ್ತು. ಅವಳಿಗೆ ಎಚ್ಚರವಾಗಲು ದಿಗ್ಭ್ರಮೆ ಕವಿಯುವದನ್ನು ಬಿಟ್ಟು ದೂರವಾಗಿ ಹೊರಟು ಹೋಯಿತು. ಇದೆಂಥಾ ಆಶ್ಚರ್ಯ!

ಕಲ್ಕತಾ ಹೈಕೋರ್ಟಿನಲ್ಲಿ ಜಡ್ಜಿಯಾಗಿದ್ದ ಮ|| ಜಸ್ಟಿಸ್ ವಿಲ್ಸನ್‍ರವರ ಹಿರೀಮಗನು ಮಹಮ್ಮದೀಯ ಮತದ ಕಟ್ಟಳೆಗಳನ್ನೂ, ಬೋಧನೆಗಳನ್ನೂ ಪರೀಕ್ಷಿಸಿ, ಅದು ತನ್ನ ಬುದ್ಧಿಗೆ ಸರಿಯಾದ ಮತವೆಂಬದಾಗಿ ಗೊತ್ತು ಮಾಡಿ, ಮಹಮ್ಮದೀಯನಾದನು. ಈಗ ಇಂಗ್ಲೆಂಡ ನಿಮ್ಮ ಪ್ರಾಂತ್ಯಗಳಲ್ಲಿ ಮಹಮ್ಮದೀಯ ಮತದ ಬೋಧನೆಗಳನ್ನು ಇಂಗ್ಲಿಷ್ ಭಾಷೆಯಲ್ಲಿ ಜನಗಳಿಗೆ ಬೋಧಿಸುವದಕ್ಕೆ ಪ್ರಾರಂಭಿಸಿರುತ್ತಾನಂತೆ.

ಸಂಯುಕ್ತ ಸಂಸ್ಥಾನಗಳಿಗೆ ಸೇರಿದ ಕನ್ಸಾಸ್ ಎಂಬ ಡಿಸ್ಟ್ರಿಕ್ಟಿನಲ್ಲಿ ಒಬ್ಬ ವ್ಯಾಪಾರಿಯು ತನ್ನಲ್ಲಿರುವ ಪದಾರ್ಥಗಳನ್ನು ಜನಗಳಿಗೆ ತಿಳಿಯಪಡಿಸಿ ಅವರನ್ನು ತನ್ನ ಅಂಗಡಿಗೆ ಬರುವಂತೆ ಮಾಡುವದಕ್ಕಾಗಿ ಅಲ್ಲಿನ ಜಂಗಲಿನಲ್ಲಿ ಹೋಗುವ ರೈಲುರಸ್ತೆಯ ಪಕ್ಕದಲ್ಲಿ ಹುಲ್ಲನ್ನು ಮೇಯುತಕ್ಕ ಹಸುಗಳ ಮೈಮೇಲೆ ಅಂಥಾ ಪದಾರ್ಥಗಳ ಹೆಸರನ್ನೂ, ಬೆಲೆಯನ್ನೂ ಬಣ್ಣಗಳಿಂದ ಬರೆಯಿಸಿರುತ್ತಾನಂತೆ. ಅವನ ಯುಕ್ತಿಯು ತುಂಬು ಆಶ್ಚರ್ಯಕರವಾದದ್ದೇ ಸರಿ !!

ನವಾಬ್ ಗಾಲಿಬಿನ್ಸೌದ ಎಂಬವರು ಈಗ ಹೈದರಾಬಾದಿನಲ್ಲಿದ್ದಾರೆ. ಇವರು ಅಲ್ಲಿನ ಅರಬ್ಬೀ ಮುಖಂಡರ ಜ್ಯೇಷ್ಠಪುತ್ರರು. ಅರೇಬಿಯಾದಲ್ಲಿ ಇವರ ಅಧಿಕಾರಕ್ಕೊಳಪಟ್ಟ ಒಂದು ಸಣ್ಣ ರಾಜ್ಯವಿರುತ್ತೆ. ಬೊಂಬಾಯಿ ಹೈದರಾಬಾದುಗಳಲ್ಲಿ ವಿಪರೀತ ಜಮೀನುಗಳು ಇವರದಾಗಿರುತ್ತೆ. ಇಂಥಾದ್ದರಲ್ಲಿ ಇವರು ಭಾರಿ ಸಾಹುಕಾರರೆಂದು ಹೇಳಬೇಕಾದ್ದಿಲ್ಲ. ಇಂಥಾ ಸಾಹುಕಾರರು ತಮಗೆ ಮೋಸ ಮಾಡಿರುತ್ತಾರೆಂದು, ರಸಿಡೆಂಟು ಬಜಾರದ ರೋಷ್ಟ್ರ ಸಾಲಿಗ್ರಾಂ ಎಂಬ ಸಾಹುಕಾರರು ಅವರ ಮೇಲೆ ದಾವಾ ಮಾಡಿರುತ್ತಾರೆ. ಪರ್ಯವಸಾನದಲ್ಲಿ ಏನಾಗುವದೋ ನೋಡತಕ್ಕದ್ದಾಗಿದೆ.

ಸಂಯುಕ್ತ ಸಂಸ್ಥಾನಗಳಿಗೆ ಸೇರಿದ ಯಲ್ಲಿನಾಯಿಸ್ ಡಿಸ್ಟ್ರಿಕ್ಟಿನಲ್ಲಿ ಆಲ್ಟನ್ ಎಂಬ ಊರಿನಲ್ಲಿ ಕೆಲವು ದಿವಸಗಳ ಕೆಳಗೆ ಒಂದು ಪ್ಯಾಸೆಂಜರ್ ಟ್ರೇನು ಹೋಗುತ್ತಿತ್ತು. ಅದಕ್ಕೆ ಎದುರಾಗಿ ಸಾಮಾನುಗಳನ್ನು ತೆಗೆದುಕೊಂಡು ಒಂದು ರೈಲ್ ಗಾಡಿಗೆ ಅದು ಬಡಿದು ಎರಡು ಗಾಡಿಗಳೂ ನುಚ್ಚುನೂರಾದವು. ಯಂತ್ರಯ ಬೆಂಕಿ ಹತ್ತಿಕೊಂಡು ಸುಮಾರು ೧೨ ಜನಗಳವರೆಗೂ ಪರಲೋಕ ಯಾತ್ರೆಯನ್ನು ಮಾಡಿದರು. ಈ ವ್ಯಸನಕರವಾದ ವರ್ತಮಾನವನ್ನು ಓದುವವರೆಲ್ಲರೂ ರೈಲುಗಾಡಿಗಳಲ್ಲಿ ಕೂತು ಪ್ರಯಾಣ ಮಾಡುವದು ಎಂಥಾ ಅಪಾಯಕರವಾದದ್ದೋ ತಿಳಿಯುವರು.

ವಿಲಾಯತಿಯಲ್ಲಿ ಮದುವೆಯಾದ ಕೂಡಲೆ ವಧುವರರ ಮೇಲೆ ಜನಗಳು ಜೋಡುಗಳನ್ನು ಎಸೆಯುವ ಪದ್ಧತಿ ಇದೆಯಷ್ಟೆ. ಹಿಂದುಗಳಲ್ಲಿ ಅದಕ್ಕೆ ಬದಲಾಗಿ ಅಕ್ಷತೆಯನ್ನು ಎರಚುತ್ತಾರೆ. ಈ ಪದ್ಧತಿಗನುಸಾರವಾಗಿ ಮೊನ್ನೆ ಉತ್ತರಹಿಂದೂದಲ್ಲಿ ನಡೆದ ಒಂದು ಮದುವೆಯಲ್ಲಿ ಜನರು ವಧುವಿನ ಮೇಲೆ ತಣ್ಣೀರು ಚೆಲ್ಲಿದರು. ಅವಳಿಗೆ ಆ ಕ್ಷಣವೆ ಛಳಿ ಹಿಡಿದು ಸತ್ತು ಹೋದಳು. ಅದಕ್ಕೆ ಮದುವೆಗಂಡನನ್ನು ಕೋರ್ಟಿಗೆ ಎಳೆದು ದರ್ಯಾಪ್ತು ಮಾಡಿ ನೀರು ಎರಚಿದವರನ್ನು ವಧುವಿನ ತಂದೆತಾಯಿಗಳಿಗೆ ಹಣ ಕೊಡಬೇಕೆಂತಲೂ, ವರನ ಮದುವೆ ಖರ್ಚನ್ನು ಸಲ್ಲಿಸಬೇಕೆಂತಲೂ ತೀರ್ಮಾನಿಸಿದರಂತೆ.

ಪರಿಪೂರ್ಣ ಪ್ರೋವೆಲಿದಿಯಾಯವರು ರೋಂ ಪಟ್ಟಣದಲ್ಲಿರುವ ಮಹಾಧಿಪತ್ಯವನ್ನು ವಹಿಸಿ ಕಳೆದ ಫೆಬ್ರವರಿ ೧೯ ಕ್ಕೆ ೬೦ ವರುಷಗಳಾದವು. ಆದ್ದರಿಂದ ವೈದಿಕವಿಧಾನದ ಪ್ರಕಾರ ಅವರಿಗೆ ಜೂಬಿಲಿ ಉತ್ಸವವು ಅದಿನ ನಡೆಯಿತು. ಅವರಿಗೆ ಈಗ ೮೮ ವರ್ಷಗಳಾದವು. ಆದಾಗ್ಯೂ ತನ್ನ ಹಿಂದಿನವರಂತೆ ಪ್ರಪಂಚಕವ್ಯವಹಾರಗಳಲ್ಲಿ ವಿಮುಖತೆಯಿಂದಿರದೆ ಸಮಸ್ತ ದೇಶಗಳ ವರ್ತಮಾನಗಳನ್ನೂ ತಿಳಿಯುವದರಲ್ಲಿ ವಿಶೇಷ ಆತುರವುಳ್ಳವರು. ವಿಲಾಯತಿ ಮುಂತಾದ ಪ್ರಪಂಚದ ನಾನಾ ಭಾಗಗಳಿಂದಲೂ ಸುಮಾರು ೩೦,೦೦೦ ಯಾತ್ರಾರ್ಥಿಗಳು ಆ ಕಾಲದಲ್ಲಿ ಹಾಜರಾಗಿದ್ದರು. ಉತ್ಸವವು ಅತ್ಯಂತ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು.

ವಿಲಾಯತಿಗೆ ರಾಜಧಾನಿಯಾದ ಲಂಡನ್‍ಪಟ್ಟಣದಲ್ಲಿ "ಯಿಂಪೀರಿಯಲ್ ಇನ್‌ಸ್ಟಿಟ್ಯೂಟ್" ಎಂಬ ಭಾರಿ ಕಟ್ಟಡವು ಹೊಸದಾಗಿ ತಯಾರಾಗಿರುತ್ತದೆ. ಇದನ್ನು ಕಟ್ಟುವದಕ್ಕೆ ಈ ಹಿಂದೂಸ್ಥಾನದ ಅನೇಕ ನೇಟಿವ್ ರಾಜರುಗಳು ಭಾರಿ ಭಾರಿ ಹಣವನ್ನು ಚಂದಾ ಹಾಕಿರುತ್ತಾರಷ್ಟೆ. ಈ ಕಟ್ಟಡಕ್ಕೆ ಗೃಹಪ್ರವೇಶ ಕಾಲದಲ್ಲಿ ಶ್ರೀಮನ್ಮಹಾರಾಜ್ಞಿ ಇಂಡಿಯಾ ಚಕ್ರವರ್ತಿನಿಯವರೇ ಹಾಜರಾಗುವಂತೆ ತಿಳಿಸಿರುತ್ತಾರೆ. ಆದ್ದರಿಂದ ಈ ಮಹೋತ್ಸವಕಾಲದಲ್ಲಿ ಹಾಜರಾಗಿರುತ್ತೇವೆಂದು, ಇಲ್ಲಿನ ಅನೇಕ ಹಿಂದೂ ದೊಡ್ಡ ಮನುಷ್ಯರೂ, ನೇಟಿವ್ ದೊರೆಗಳೂ ತಮ್ಮ ಸಂತೋಷವನ್ನು ಅವರಿಗೆ ಬರೆದು ತಿಳಿಸಿರುತ್ತಾರೆ. ಭಾವನಗರದ ಮಹಾರಾಜರವರು ಮೊದಲೇ ಹೋಗಿ ಅಲ್ಲಿ ಕಾದಿರುವರು. ಈ ಉತ್ಸವವು ಬರುವ ಸವಂಬರಿನಲ್ಲಿ ನಡೆಯಬಹುದಾಗಿದೆ.

ಬೊಂಬಾಯಿನಲ್ಲಿ ಗ್ರಿಗರಿ ಎಂಬ ಒಬ್ಬ ಮನುಷ್ಯನು ಒಂದು ಬ್ಯಾಂಕನ್ನು ಹಾಕಿಕೊಂಡಿದ್ದವಂತೆಯೂ, ಅದರ ಬ್ರಾಂಚುಗಳನ್ನು ಮದರಾಸು ಮುಂತಾದ ದೊಡ್ಡ ಸ್ಥಳಗಳಲ್ಲಿ ಸ್ಥಾಪಿಸುವಂತೆಯೂ, ಅದಕ್ಕೆ ಯಾರಾದರೂ ೨,೫೦೦ ರೂಪಾಯಿಗಳನ್ನು ಠೇವಣಿ ಇಟ್ಟಲ್ಲಿ ೫೫೫ ರೂಪಾಯಿ ಸಂಬಳ ಪ್ರತಿ ಮಾಹೆಯಲ್ಲೂ ಕೊಟ್ಟು ಅವನನ್ನು ಅದಕ್ಕೆ ಏಜಂಟಿಯಾಗಿ ಮಾಡುವಂತೆಯೂ, ಒಂದು ನೋಟಿಸನ್ನು ಪ್ರಕಟಿಸಿದ್ದನು. ಅದಕ್ಕೆ ಮದರಾಸಿನಲ್ಲಿದ್ದ ಕೃಷ್ಣಸ್ವಾಮಿ ಎಂಬುವನು ಹಣವನ್ನು ಅವನ ಹೆಸರಿಗೆ ನೋಟುಗಳ ಮೂಲಕ ಕಳುಹಿಸಿಕೊಟ್ಟನು. ಆದರೆ ಆ ಗ್ರಿಗರಿ ಎಂಬವನು ಈ ಹಣವನ್ನು ತೆಗೆದುಕೊಂಡು ತನಗೆ ಮೋಸಮಾಡಿದನೆಂದು ಕೃಷ್ಣಸ್ವಾಮಿಯು ಅವನ ಮೇಲೆ ದಾವಾ ಮಾಡಿರುತ್ತಾನೆ. ಗ್ರಿಗರಿ ಎಂಬವನು ತಿಳಿಯಪಡಿಸಿದ ವಿಷಯಗಳೆಲ್ಲ ಶುದ್ಧ ಸುಳ್ಳಾಗಿಯೂ, ಜನಗಳನ್ನು ಮೋಸ ಮಾಡುವದಕ್ಕೆ ಹೂಡಿದನೆಂತಲೂ ತಿಳಿಯುತ್ತೇನೆ. ಈ ಕಾಲದಲ್ಲಿ ಎಂಥವರನ್ನು ನಂಬುವದೂ ಕಷ್ಟವಾಗಿದೆ.

ಈಗ್ಯೆ ೪-೧೦ ದಿವಸಗಳ ಕೆಳಗೆ ಒಂದು ದಿನ ರಾತ್ರಿ ದಂಡು ಎಂಬಲ್ಲಿ ಒಬ್ಬ ಯೂರೋಪಿಯನ್ ಆಫೀಸರನು ತನ್ನ ಹೆಂಡತಿಯ ಜೊತೆಯಲ್ಲಿ ಕೋಣೆಯಲ್ಲಿ ಮಂಚದ ಮೇಲೆ ಮಲಗಿದ್ದನು. ಅವನ ಹೆಂಡತಿಯು ಸ್ವಲ್ಪ ಹೊತ್ತಿನಲ್ಲಿ ಬುಸು ಗುಟ್ಟುತ್ತಿದ್ದದನ್ನು ಕೇಳಿ ಗಂಡನಿಗೆ ಎಚ್ಚರವಾಗಲು, ತನ್ನ ಹೆಂಡತಿಯು ನೆಲದ ಮೇಲೆ ಬಿದ್ದಿರುವದನ್ನು ನೋಡಿ ಅವಳನ್ನು ಏನೆಂದು ಕೇಳಿದಾಗ ಅವಳು—ನನಗೆ ನಿದ್ದೆ ಹತ್ತುವ ಕಾಲಕ್ಕೆ ಸರಿಯಾಗಿ ನನ್ನ ಮುಖದ ಮೇಲೆ ಒಂದು ವಸ್ತ್ರವನ್ನು ಹಾಕಿ, ಕತ್ತನ್ನು ಬಿಗಿಹಿಡಿದಾಗ ಭಯ್ಯದಿಂದ ಹಿಡಿದುಕೊಂಡಾಗ ಯಾರು ನನಗೆ ದೀಪ ಕಾಣಿಸಲಿಲ್ಲ. ಕೂಗಿ ನಿಮ್ಮನ್ನು ಎಬ್ಬಿಸುವದಕ್ಕೂ ಆಗಲಿಲ್ಲ. ಅನಂತರ ಏನಾಯಿತೋ ನನಗೆ ತಿಳಿಯದು ಎಂದು ಹೇಳಿದಳು. ಅ ದಿವಸವೇ ಮಧ್ಯಾಹ್ನದಲ್ಲಿ ಅವನು ತನ್ನ ಜವಾನನನ್ನು ಕೆಲಸದಿಂದ ತೆಗೆದುಹಾಕಿ, ಬಹಳವಾಗಿ ನಿಂದಿಸಿದ್ದನು. ಆ ಜವಾನನು ಹೀಗೆ ಮಾಡಿರಬಹುದೆಂದು ಅವನನ್ನು ಹುಡುಕಿಸಿ ಅವನ ಮೇಲೆ ಛಾರ್ಜ್ ಮಾಡಿದನು. ಆದರೆ ಅವನ ಮೇಲೆ ತಪ್ಪು ಸಾಬೀತಾಗದೆ ಹೋದ್ದರಿಂದ ಅಧಿಕಾರಿಗಳು ಅವನನ್ನು ಬಿಟ್ಟು ಬಿಟ್ಟರು. ಆ ಹೆಂಗಸಿನ ತಲೆಯಲ್ಲಿದ್ದ ಉದ್ದವಾದ ಕೂದಲನ್ನೆಲ್ಲಾ ಕತ್ತರಿಸಿ ಹಾಕಿದರು. ಯಾರು ಯಾತಕ್ಕಾಗಿ ಇದನ್ನು ಮಾಡಿದರೋ ಇನ್ನೂ ಗೊತ್ತಿಲ್ಲದೆ ಇದೆ.

ಶಾಲೀವಾಹನಶಕ ೧೮೧೯ ನೇ ಹೇಮಲಂಬಿನಾಮ ಸಂವತ್ಸರದ ಫಾಲ್ಗುಣಶುದ್ಧ ಬಿದಿಗೆ ಗುರುವಾರದಿಂದ ಫಾಲ್ಗುಣ ಬಹುಳ ಷಷ್ಠಿ ಬುಧವಾರದವರೆಗಿನ ವಾರದ ಪಂಚಾಂಗ

೧೮೯೮ ನೇ ಇಸವಿ, ಮಾರ್ಚಿ.

ತಾ.	ವಾರ.	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.	ಕುಂಭ ಮಾಸ ತೇದಿ.
2	ಗು.	ಬಿ.	35-56	ಪೂ.	1-58	21
3	ಶು.	ಪೌ	36-21	ಉ.	6-13	22
4	ಶ. *	ಬಿ	37-59	ಹ.	8-44	23
5	ರ.	ತ	40-45	ಚಿ.	12-29	24
6	ಸೋ.	ಚ	44-53	ಸ್ವಾ.	17-22	25
7	ಮಂ.	ಪಂ.	49-41	ವಿ.	23-4	26
8	ಬು	ಷ	55-0	ಅ	29-24	27

* ಕಾಲಘಟ್ಟದಲ್ಲಿ ಶ್ರೀನಿವಾಸಸ್ವಾಮಿ ರಥ.

ಪೇಟೆ ಧಾರಣೆ.

ವಿನಸಿ	ಮೈಸೂರು.	ಬೆಂಗಳೂರು.
	ರೂ. ಆ. ಪೈ.	ರೂ. ಆ. ಪೈ.
ಕನ್ನೀ ಅಕ್ಕಿ ಪಲ್ಲ ೧ಕ್ಕೆ	೧೧—೦—೦	೧೧—೨—೦
ಕೆಂಬೂತಿ ಅಕ್ಕಿ ಅಪ್ಪರೆ	೧೨—೮—೦	೧೧—೮—೦
ಸಿಟೋ ಅಕ್ಕಿ ದಪ್ಪಂ	೧೨—೩—೦	೧೦—೧೨—೦
ಜಾಬರಾಣಿ ಅಕ್ಕಿ	೧೦—೦—೦	೧೦—೬—೮
ಸಣ್ಣಕ್ಕಿ ಅಪ್ಪರೆ	೧೨—೮—೦	೧೪—೮—೦
ಸಿಟೋ ಅಕ್ಕಿ ದಪ್ಪಂ	೧೭—೦—೦	೧೧—೮—೦
ತೊಗರೀಬೇಳೆ ಪಲ್ಲ ೧ಕ್ಕೆ	೧೨—೧೭—೦	೧೧—೧೭—೦
ಸಿಟೋ ದಪ್ಪಂ ತರಹ	೧೨—೦—೦	೧೦—೧೨—೦
ಹ್ಯಾರಾಗಿ ಪಲ್ಲ ೧ಕ್ಕೆ	೩—೪—೦	[illegible]
ಕಾರ್‍ರಾಗಿ	೩—೦—೦	[illegible]
ಹಲಸಂದೆ ಪಲ್ಲ ೧ಕ್ಕೆ	೧೨—೮—೦	೮—೬—೦
ಬಿಳೀ ಅವರೆ	೯—೦—೦	೮—೧೨—೦
ಹೆಸರು	೧೦—೮—೦	೧೦—೬—೦
ಉದ್ದು	೧೭—೩—೦	೯—೧೨—೦
ಕಡಲೆ	೧೦—೮—೦	೧೦—೦—೦
ಎಳ್ಳು	೧೪—೧೭—೦	೧೪—೮—೦
ಹುರುಳಿ	೬—೦—೦	೬—೮—೦
ಸೀಮೇಕಾಯಿ ಮಣ ೧ಕ್ಕೆ	೧—೮—೦	೧—೧೪—೦
ಮೆಣಸಿನಕಾಯಿ	೨—೧೦—೦	೨—೮—೦
ದಪ್ಪಂ ತರಹ	೨—೬—೦	೨—೪—೦
ಬೆಲ್ಲ ದೊಡ್ಡ ಅಚ್ಚು ೧೦೦ ಕ್ಕೆ	೫—೦—೦	ಮ ೧—೧೦—೦
ಸಣ್ಣ ಅಚ್ಚು "	೩—೮—೦	೩|| ೧—೬—೦
ಒಳ್ಳೆಣ್ಣೆ ಮಣ ೧ಕ್ಕೆ	೪—೮—೦	೪—೮—೦
ಹರಳೆಣ್ಣೆ	೪—೦—೦	೪—೧೨—೦
ಕೊತ್ತಂಬರಿ ಪಲ್ಲ ೧ಕ್ಕೆ	೮—೧೨—೦	೧೦—೦—೦
ಉಪ್ಪು	೯—೮—೦	೧೦—೦—೦
ಹುಣಸೇಹಣ್ಣು ಮಣ ೧ಕ್ಕೆ	೧—೭—೦	೧—೬—೦
ಹಳೇ ಹುಣಸೇಹಣ್ಣು	೧—೧—೦	೧—೪—೦
ತುಪ್ಪ	೧೪—೮—೦	೧೭—೦—೦
ಸೀಮೆ ಮುಂಡೆ ಕಟ್ಟು ೧ ಕ್ಕೆ	೪—೬—೦	೬—೭—೦
ತೆಂಗಿನಕಾಯಿ ೧೦೦ ಕ್ಕೆ	೪—೮—೦	೪—೧೨—೦
ಚಿನ್ನ (ತೋಲ)		
ಕೆಂಪು	೧೬—೧೫—೦	೧೬—೧೧—೦
ಪಸಿಮ	೧೬—೪—೦	೧೬—೧೫—೦
ಗಟ್ಟಿ	೨೬—೮—೦	೨೫—೦—೦

Mysore.--Printed and published for the Pproriotor at the Wesleyan Mission Press.
2/3/98.

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೬ ಮೈಸೂರು ಸನ್ ೧೮೯೩ ನೇ ಇಸವಿ ಮಾರ್ಚಿ ತಾರೀಖು ೯ ನೇ ಗುರುವಾರ. ಸಂಚಿಕೆ ೩೮

ವಿಶೇಷ, ನೋಡಿನೋಡು! ನೋಡಿನೋಡು!! ನೋಡಿನೋಡು!!!

೧೮೯೩ ನೇ ವರುಷದ ಲೋಯರ್ ಸೆಕಂಡರಿ ಪರೀಕ್ಷೆಗೆ ಟೆಕ್ಸ್ಟಿನ ನೋಟ್ಸು.

ಈ ಪರೀಕ್ಷೆಗಾಗಿ ನಿಯಮಿಸಲ್ಪಟ್ಟ ಸೋಮೇಶ್ವರಶತಕ, ಪದ್ಯಸಾರ ೧—೨೦೩ ಗೂ ಇರುವ ಪದ್ಯಗಳೂ, ಕನ್ನಡ ಭಾರತ ಕಥಾಸಂಗ್ರಹ ಸಭಾಪರ್ವ. ಇವುಗಳಿಗೆ ಅನ್ವಯ, ಅರ್ಥ, ತಾತ್ಪರ್ಯ ಅವಯವಾರ್ಥ, ವ್ಯಾಕರಣ ಸಂಗತಿಗಳು, ವಾಕ್ಯಾಭಿಧಾನ, ಪೂರ್ವಕಥೆ, ಇವೇ ಮೊದಲಾದವುಗಳನ್ನು ವಿವರಿಸಿ ವ್ಯಾಖ್ಯಾನವು ಚಿಕ್ಕಮಗಳೂರು ಇಂಗ್ಲೀಷ್ ಸ್ಕೂಲ್ ಪಂಡಿತರಾದ ಎಸ್. ರಾಘವೇಂದ್ರಾ ಚಾರ್ಯರಿಂದ ಬರೆಯಲ್ಪಟ್ಟು ಈ ಮುದ್ರಾಶಾಲೆಯಲ್ಲಿ ಪ್ರಿಂಟಾಗುತ್ತಲಿದೆ. ಈ ನೋಟ್ಸು ಗೌರ್ನ ಮೆಂಟ್ ಪ್ರತಿಗನುಸಾರವಾಗಿ ಇದೆ. ಕಾಪಿಗಳು ಸ್ವಲ್ಪವಾಗಿಯೇ ಪ್ರಿಂಟು ಮಾಡುವದರಿಂದ ಅಪೇಕ್ಷೆಯುಳ್ಳವರು ಜಾಗ್ರತೆಯಾಗಿ ಜನವರೀ ತಿಂಗಳೊಳಗಾಗಿ ಈ ಕೆಳಗಿನ ವಿಳಾಸದಾರರಿಗೆ ಬರೆದು ತರಿಸಿಕೊಳ್ಳಬಹುದು. ಕ್ರಯ ೮ ಆಣೆ. ಪೋಸ್ಟೇಜು ೧ ಆಣೆ. ಮತ್ತು ಆದಿಪರ್ವ, ಸಭಾಪರ್ವ, ವಿರಾಟಪರ್ವ, ಭೀಷ್ಮಪರ್ವ, ದ್ರೋಣಪರ್ವ, ಶಲ್ಯಪರ್ವ, ಸೌಪ್ತಿಕಪರ್ವ, ಸ್ತ್ರೀಪರ್ವ, ಶಾಂತಿಪರ್ವ—ರಾಜಧರ್ಮ, ಆಪದ್ಧರ್ಮ, ಮೋಕ್ಷಧರ್ಮ ಈ ಪರ್ವಗಳು ಪ್ರಿಂಟಾಗಿ ವಿಕ್ರಿಗೆ ಸಿದ್ಧವಾಗಿವೆ. ಈಗ ಅನುಶಾಸನಿಕಪರ್ವವು ಪ್ರಿಂಟಾಗುತ್ತಲಿದೆ. ಇಷ್ಟವುಳ್ಳವರು ತರಿಸಿಕೊಳ್ಳಬಹುದು.

ಎಂ. ರಂಗಪ್ಪ ಅಂಡ್ ಸನ್ಸ್,
ಪ್ರಾಪ್ರೈಟರ್ಸ್, ಶ್ರೀಚಾಮುಂಡೇಶ್ವರಿ ಪ್ರೆಸ್,
ಬಳೇಪೇಟೆ ರೋಡ್, ಬೆಂಗಳೂರು

WOMAN: HER PLACE AND POSSIBILITIES

A LECTURE

BY

Miss. Frances M. Dryden, B. A.

This is a very powerful lecture and should be read by every Hindu who understands English. We have only a few copies at hand and the price has been greatly reduced, the price of each copy being 3 pies only.

Apply to

THE WESLEYAN MISSION PRESS,

Mysore City.

ÆSOP'S FABLES.

These are well printed in English, and illustrated both inside and outside. The covers are in striking colours. The set is complete in 3 Books. The *whole set* can *now* be had **at a reduced price of 3 pies.** Only a few copies are available.

Apply at once to

THE WESLEYAN MISSION PRESS,

Mysore City.

ನೋಟೀಸ್.

		ಕ್ರಯ			ಹಾಸಲು ಸಹಿತವಾಗಿ		
Campbell's.	ಕನ್ನಡ ವ್ಯಾಕರಣ ಸಾರ	೦	೨	೦	೦	೨	೬
Object Lessons.	ವಸ್ತು ಪಾಠಗಳು	೦	೧	೦	೦	೧	೬
Picture do	ಚಿತ್ರಗಳು ಸಹಿತವಾಗಿ	೦	೨	೦	೦	೨	೬

ಈ ಮೂರು ಪುಸ್ತಕಗಳು ಪ್ರೈಮರಿ ಮಠಗಳಲ್ಲಿ ಓದತಕ್ಕ ಪುಸ್ತಕಗಳು.

	ಕ್ರಯ			ಹಾಸಲು ಸಹಿತವಾಗಿ		
ಸ್ತ್ರೀಯರು ಓದತಕ್ಕ ಪುಸ್ತಕ	೦	೫	೦	೦	೫	೬
ಗಣಿತ ವಿದ್ಯವು ..	೦	೪	೦	೦	೪	೬
ಗಣಿತ ಮಗ್ಗಿಗಳು ..	೦	೧	೦	೦	೧	೬
ಸಂಸ್ಕೃತ ಕರ್ನಾಟಕ ಭಾಷಾಮಂಜರಿ	೦	೨	೦	೦	೨	೬
ಭೂಗೋಳ ಶಾಸ್ತ್ರ ಪ್ರಶ್ನೋತ್ತರ	೦	೨	೦	೦	೨	೬
ಇಂಗ್ಲಿಷೂ ಕನ್ನಡವೂ ಶಬ್ದಾವಳಿ ೧ನೇ ೨ನೇ ಭಾಗಕ್ಕೆ	೦	೧	೮	೦	೧	೬
ಕಾವ್ಯಮಾಲೆ (Minor Poetical Anthology)	೦	೮	೦	೦	೮	೬
ಬಾಲವ್ಯಾಕರಣ ..	೦	೫	೦	೦	೫	೬
ಹಳಗನ್ನಡ ವ್ಯಾಕರಣ ಸೂತ್ರಗಳು	೦	೬	೦	೦	೬	೬
ಇಂಗ್ಲಿಷೂ ಕನ್ನಡವೂ ಸಂಭಾಷಣ ವಾಕ್ಯಗಳು	೦	೧೦	೦	೦	೧೦	೬
ಶಬ್ದಮಣಿ ದರ್ಪಣ ..	೧	೦	೦	೧	೪	೬
Kan. Eng. Pocket Dictionary	೧	೩	೦	೧	೫	೨
Eng. Kan. School Dictionary	೨	೧೦	೦	೨	೧೨	೬
ಬಸ್ಸೀ ಶಾಮಿ ..	೦	೩	೪	೦	೪	೬
ಆಶ್ಚರ್ಯ ವಿದ್ಯಾ ಯುದ್ಧ (Bunyan)	೦	೧೨	೦	೦	೧೩	೬
ಕೃಷಿಶಾಸ್ತ್ರ ಪದ್ಧತಿ ೧ ನೇ ಭಾಗ ೨ ಅಣೆ ೩ ನೇ ಭಾಗ	೦	೧	೬	೦	೨	೦
ಭಕ್ತಿಸಾರ ..	೦	೧	೦	೦	೧	೬
ಸತ್ಯ ವಾಗ್ಮಾನಿ	೦	೧	೦	೦	೧	೬
ಕಾವ್ಯಪುಂಜ ..	೦	೩	೦	೦	೩	೬

A new Edition of the Geography suited for the Lower Secondary Examination is now ready.—Edited by Rev. H. Gulliford. Price 6 As.

ಮೇಲೆ ಸಮೂದಿಸಿರುವ ಪುಸ್ತಕಗಳನ್ನು ಬೆಂಗಳೂರು ದಂಡಿನ ಪೋಲೀಸಾಫೀಸಿನ ಹತ್ತರವಿರುವ ಪುಸ್ತಕ ಶಾಲೆಯಲ್ಲಿ ಪಡೆಯ ಬಹುದು.

ವೃತ್ತಾಂತ ಪತ್ರಿಕೆ.

ಚಂದಾ ನಿರ್ಣಯ.

ರೂ. ಆ. ಪೈ.

ಸ್ಥಳದವರಿಗೆ ವರ್ಷ ೧ಕ್ಕೆ	...	೧—೦—೦
ಪರಸ್ಥಳದವರಿಗೆ ವರ್ಷ ೧ಕ್ಕೆ	..	೧—೪—೦
ಬಿಡಿ ಪತ್ರಿಕೆ ೧ಕ್ಕೆ	.	೦—೦—೩

ಈ ಪತ್ರಿಕೆಯು ಮೈಸೂರು ರಾಜಧಾನಿಯಲ್ಲಿ ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ, ಪ್ರಕಟಿಸಲ್ಪಡುವದು ಬಡವರು ಮೊದಲುಗೊಂಡು ಸಮಸ್ತರಿಗೂ ಸುಲಭಸಾಧ್ಯವಾಗುವಂತೆ ಈ ಪತ್ರಿಕೆಗೆ ಇಷ್ಟು ಅಲ್ಪ ಮೌಲ್ಯವನ್ನು ನಿರ್ಣಯಿಸುತ್ತೇವೆ. ಈ ಪತ್ರಿಕೆಯನ್ನು ಅಪೇಕ್ಷಿಸುವವರು ಚಂದಾಹಣವನ್ನು ಮುಂಗಡವಾಗಿ ಕೊಡಬೇಕು.

ಪ್ರಕಟನೆಯ ನಿರ್ಣಯ.

ರೂ. ಆ. ಪೈ.

ಮೊದಲನೇ ಆವರ್ತಿ ಪಙ್ಕ್ತಿ ೧ಕ್ಕೆ	...	೦—೨—೦
ಎರಡನೇ ಆವರ್ತಿ ಪಙ್ಕ್ತಿ ೧ಕ್ಕೆ	...	೦—೧—೦

ಅನಂತರ ಪ್ರತಿಯೊಂದು ವಾರದಲ್ಲಿಯೂ ಪಙ್ಕ್ತಿ ೧ಕ್ಕೆ ೧ ಆಣೆಯಂತೆಯೇ ಲೆಕ್ಕ ಮಾಡಲ್ಪಡುವುದು ಕಂಟ್ರಾಕ್ಟಿಗೆ ಕೊಡಬೇಕೆಂದಿರುವವರು ಎಡಿಟರಿಗೆ ಬರೆದು ವಿವರವನ್ನು ತಿಳಿಯ ಬಹುದು

ಎಡಿಟರ್,

ವೃತ್ತಾಂತ ಪತ್ರಿಕೆ.

ನೋಟೀಸ್.

ಪುಸ್ತಕಗಳು.	ಕ್ರಯ.
ಪ್ರಾಕೃತ ವ್ಯವಮಾಲಿಕೆ	1—8—0
ಕನ್ನಡ ಇಂಗ್ಲೀಷು ನಿಘಂಟು 1 ನೇ ದೊಡ್ಡ ತರಹ	3 0 0
„ „ 2 ನೇ ತರಹ	2—8—0
ಬಾಲಕರು ಓದುವ ಎರಡನೆ ಜ್ಞಾನೋಪದೇಶ ಪ್ರಶ್ನೋತ್ತರಗಳು	0 1 0
ಸಭೆಯ ನಿಯಮಗಳನ್ನು ಕುರಿತದ್ದು	0—0—6
ಕಥಾ ಸಂಗ್ರಹ 1 ನೇ ಭಾಗದಿಂದ 3 ವರೆಗೆ	1 0 0
ಕಥಾ ಸಂಗ್ರಹ 1 ರಿಂದ 6 ನೇ ಭಾಗ ಹೊಸ ಛಾಪೆ	1 0 0
„ „ ದೊಡ್ಡ ತರಹ	1—8 0
ಬೋಧಕಪುಸ್ತಕ ಮೂರನೇ	0 1—0
ಸತ್ಯವೇದವನ್ನು ಕುರಿತು 2 ನೇ ಭಾಗ	0—4—0
ಪ್ರಸಂಗಿಯ ದರ್ಪಣ	0—0—6
ಇಂಗ್ಲೀಷು ಭಾಷೆಯಲ್ಲಿಯೂ, ಕನ್ನಡ ಭಾಷೆಯಲ್ಲಿಯೂ, ಶಬ್ದಗಳ ವಿಭಾಗಗಳನ್ನು ವಿವರಿಸಿರುವ ನಿಘಂಟು	0—2—0
ಕನ್ನಡ ವ್ಯಾಕರಣ (ಇಂಗ್ಲೀಷಿನಲ್ಲಿ)	2 0 0
ಹಿಂದುಸ್ಥಾನಿ ವ್ಯಾಕರಣ	1—0—0
ಬಾಲಮಾನಸೋಪದೇಶವು	0—1—0
ವನ ಕಥೆಗಳ ಬಾಲಬೋಧಿನಿ	0 0 6
ಕ್ರೈಸ್ತರ ಮೊದಲನೆ ನಂಬಿಕೆ	0—12—0

ಮೇಲೆ ನಮೂದಿಸಿರುವ ಪುಸ್ತಕಗಳನ್ನು ಅಪೇಕ್ಷಿಸುವವರು ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್ಸಿಗೆ ಬರೆದು ತರಿಸಿಕೊಳ್ಳಬಹುದು. ಅಂಚೆ ಹಾಸಲು ಬೇರೆ ಕೊಡಬೇಕು,

ವೆಸ್ಲಿಯನ್ ಮಿಷನ್ ಪ್ರೆಸ್,

ಮೈಸೂರು

ಜಾಹೀರಾತು

THE KANARA & MYSORE TRADING AGENCY

BOMBAY.

ಕಣ್ಣಿಗೆ ತಂಪು ಕೊಡುವ

ಚಂದ್ರಕಾಂತ ಶಿಲೆಯ ಕನ್ನಡಕಗಳು.

೩ ॥ ರೂಪಾಯಿ ಕೆಳಗಿನ ಕ್ರಯದವು ನಮ್ಮಲ್ಲಿಸಿಗಲಾರವು.

ಸಾಧಾರಣ	೩ ॥ ರೂಪಾಯಿ	ಜರ್ಮನ್ ಕೇಸಿನಲ್ಲಿ	
ಮಧ್ಯಮ	೫	„	ಜಪಾನಿನ ಕೇಸಿನಲ್ಲಿ
ಉತ್ತಮ	೭ ॥	„	ರೇಷ್ಮೆ ಕೇಸಿನಲ್ಲಿ
ಭಂಗಾರದಲ್ಲಿ ಕಟ್ಟಿದ್ದು	೧೮	„	ಡಿಟೋ

ಕಿಳಿಯ ಘಡಿಯಾರವು.

ಕ್ರಯ ೭ ॥ ರೂಪಾಯಿ.

ಈ ಘಡಿಯಾರವು ಕಡಿಮೆ ಕ್ರಯದ್ದಾದರೂ, ಕಡಿಮೆ ಕ್ರಯದ ಘಡಿಯಾರಗಳಲ್ಲಿರುವ ಹಲ್ಕೀತನವು ಇದರಲ್ಲಿರುವದಿಲ್ಲ. ಭದ್ರವಾದದ್ದು. ಬಾಳಿಕೆ ಬರುವಂಥಾದ್ದು.

ಸಿಂಚಿ ಮುಷ್ಟು.

ಪ್ರತಿ ಟಿಕೆ ೧ಕ್ಕೆ ೨॥ ರೂಪಾಯಿ ಕ್ರಮವಾಗಿ ಟಿಕೆಯಲ್ಲಿ ೧೦೦, ೭೫, ೫೦, ೨೫, ಈ ರೀತಿ ಮುದ್ರಿತಗಳು ರುವವು. ಒಟ್ಟು ೯೦ ಟಿಕೆಗಳನ್ನು ತೆಗೆದುಕೊಂಡರೆ ೧ ರೂಪಾಯಿ ಕಡಿಮೆ ಬೀಳುವದು. ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬೇಕು.

ಮ್ಯಾನೇಜರ,

ಕನರಾ ಎಂಡ ಮೈಸೂರ ಟ್ರೇಡಿಂಗ ಏಜನ್ಸಿ ಆಫೀಸ್, ಮುಂಬಯಿ.

ವೃತ್ತಾಂತ ಪತ್ರಿಕೆ.

೧೮೯೩ ನೇ ಇಸವಿ ಮಾರ್ಚಿ ತಾ|| ೯ ನೇ ಗುರುವಾರ.

ಉಪದೇಶಿಗಳಿಗೆ.

ಮತವಿಚಾರವಾದ ಒಂದು ಉಪನ್ಯಾಸವನ್ನು ಬರೆಯಬೇಕು. ಇದಕ್ಕಾಗಿ ಮೂರು ಬಹುಮಾನಗಳು ಕೊಡಲ್ಪಡುವವು. ಉತ್ಕೃಷ್ಟವಾದುದಕ್ಕೆ ೫ ರೂಪಾಯಿಯೂ, ೨ ನೆಯದಕ್ಕೆ ೩ ರೂಪಾಯಿಯೂ, ೩ ನೆಯದಕ್ಕೆ ೨ ರೂಪಾಯಿಯೂ ದೊರೆಯುತ್ತೆ. ಈ ಉಪನ್ಯಾಸಗಳನ್ನು ಬರೆಯತಕ್ಕವರು ಕೆಳಗಿನ ನಿಬಂಧನೆಗಳಿಗೆ ಚೆನ್ನಾಗಿ ಸಿಗಾ ಕೊಡಬೇಕು.

೧ ಈ ಉಪನ್ಯಾಸಗಳು ಮಾರ್ಚಿ ೨೧ ನೇ ತಾರೀಖಿನೊಳಗಾಗಿ ರೆವರೆಂಡ ಹೆನ್ರಿಹೇಗರವರಿಗೆ ತಲುಪಿರಬೇಕು.

೨ ಈ ಉಪನ್ಯಾಸವು ಅರ್ಧಗಜ ಕಾಗದದ ೬ ಪುಟಗಳಿಗೆ ಮೀರಿದ್ದಾಗಿರಕೂಡದು ಮತ್ತು ಒಂದೇ ಪಕ್ಕದಲ್ಲಿ ಬರೆದಿರಬೇಕು.

೩ ಒಂದೊಂದು ಉಪನ್ಯಾಸದಲ್ಲಿನ ಬೋಧನೆಯು ಸ್ಪಷ್ಟವಾಗಿಯೂ, ಮನೋರಂಜಕವಾಗಿಯೂ ಇರಬೇಕಾದುದಲ್ಲದೆ ಅದರಲ್ಲಿ ಯೋಗ್ಯವಾದ ಹೊಸ ದೃಷ್ಟಾಂತಗಳೂ, ಹೊಸ ಉಪಮಾನಗಳೂ ಮತ್ತು ಹೊಸ ಕಥೆಗಳೂ ಇರಬೇಕು. ಹಳೇ ದೃಷ್ಟಾಂತಗಳನ್ನಾಗಲಿ, ರೂಢಿಯಲ್ಲಿರುವ ಕಥೆಗಳನ್ನಾಗಲಿ ಬರೆದವರಿಗೆ ಬಹುಮಾನ ದೊರೆಯಲಾರದು.

೪ ಉಪನ್ಯಾಸದ ವಾಕ್ಸರಣಿಯು ರೂಢಿಯಾಗಿ ಎಲ್ಲಾ ಜನರಿಗೆ ತಿಳಿಯತಕ್ಕದ್ದಾಗಿರಬೇಕು.

೫ ಉಪನ್ಯಾಸವನ್ನು ರವಾನಿಸುವಂತೆ ಅದನ್ನು ಬುಕ್‌ಪೋಸ್ಟು ಮೂಲಕ ಕಳುಹಿಸಿ ಅದರ ಮೇಲೆ "ಪ್ರೈಸ ಮ್ಯಾನುಸ್ಕ್ರಿಪ್ಟ" ಎಂದು ಮಾತ್ರವೇ ಬರೆದು "ವೃತ್ತಾಂತ ಪತ್ರಿಕಾ ಕರ್ತರಾದ ರೆವರೆಂಡ ಹೆನ್ರಿಹೇಗ್‌ಸಾಹೇಬರವರಿಗೆ" ಎಂದು ಬರೆದು ಕಳುಹಿಸಬೇಕು. ಅದಕ್ಕೆ ಸಂಬಂಧಪಟ್ಟ ಇತರ ಎಲ್ಲಾ ವಿಷಯಗಳನ್ನು ತಿಳಿಸಬೇಕಾದರೆ ಪೋಸ್ಟ್‌ಕಾರ್ಡು ಇಲ್ಲವೆ ಲೆಟರುಗಳ ಮೂಲಕವೇ ತಿಳಿಸಬೇಕು. ಉಪನ್ಯಾಸದ ಹೊರಮೈಯನ್ನಾಗಲಿ ಮೊದಲಿನದನ್ನಾಗಲಿ ಇನ್ನೇನೂ ಬರೆಯಕೂಡದು.

೬ ಆ ತಾರೀಖಿನ ವರೆಗೂ ತಲುಪಿದ ಉಪನ್ಯಾಸಗಳನ್ನೆಲ್ಲಾ ಪರೀಕ್ಷಿಸಿದನಂತರ ಬಹುಮಾನಕ್ಕೆ ಯೋಗ್ಯರಾದವರ ಹೆಸರುಗಳನ್ನು ತಿಳಿಸಲಾಗುವದು.

(Sd.) *Henry Haigh,*
Mysore.

ಮೈಸೂರು ಸೀಮೆಯ ಕೋರ್ಟುಗಳಲ್ಲಿ ನಡೆಯುವ ಅಕ್ರಮಗಳು.

ಬೆಂಗಳೂರಿನಲ್ಲಿ ಪ್ರಕಟಿಸಲ್ಪಡುತ್ತಿರುವ ಈವನಿಂಗ್‌ಮೇಲ್ ಎಂಬ ಪತ್ರಿಕೆಯಲ್ಲಿ ಆಶ್ಚರ್ಯಕರವಾದ ಒಂದು ಸಂಗತಿಯನ್ನು ಓದಿದೇವೆ. ಆ ಸಂಗತಿಯಾವದೆಂದರೆ—ಒಬ್ಬ ಯುರೋಪಿಯನನು ತನ್ನಲ್ಲಿದ್ದ ಒಂದು ತುಪಾಕಿಯನ್ನು ಅಕಸ್ಮಾತ್ತಾಗಿ ಕಳಕೊಂಡನು. ಅದರ ಕ್ರಯವು ಸುಮಾರು ನಲವತ್ತು ರೂಪಾಯಿಗಳಾಗಿರಬಹುದು. ಕಳ್ಳರು ಅದನ್ನು ಅಪಹರಿಸಿರುತ್ತಾರೆಂದು ನೆನಸಿ ಆ ಸಂಗತಿಯನ್ನು ತಕ್ಷಣವೇ ಪೋಲೀಸಿಗೆ ತಿಳಿಸಿದನು. ಅವನಿಗೆ ಪೋಲೀಸಿನವರು ಸುಮಾರು ಪ್ರಶ್ನೆಗಳನ್ನು ಹಾಕಿದರು. ಐವತ್ತು ಪುಟಗಳುಳ್ಳ ಒಂದು ಪುಸ್ತಕದ ತುಂಬಾ ಬರೆದುಕೊಂಡರು. ತಾವು ಬಹಳ ಶೋಧನೆಯನ್ನು ಮಾಡುವಂತೆ ತೋರ್ಪಡಿಸಿಕೊಂಡರು. ಆದರೂ ಕಳೆದುಕೊಂಡ ಮಾಲು ಪತ್ತೇ ಆಗಲಿಲ್ಲ. ಹೀಗೆ ಹದಿನಾಲ್ಕು ದಿವಸಗಳು ಕಳೆದನಂತರ ಆ ಮನುಷ್ಯನು ಹೆಡ್‌ಕಾನಸ್ಟೇಬಲಿಗೆ—ನನ್ನ ತುಪಾಕಿಯನ್ನು ಪತ್ತೇ ಮಾಡಿಕೊಟ್ಟರೆ ಹದಿನೈದು ರೂಪಾಯಿಗಳನ್ನು ಇನಾಮು ಕೊಡುತ್ತೇನೆಂಬದಾಗಿ ತಿಳಿಸಿದನು. ಮಾರನೇ ದಿನ ಆ ಕಾನಸ್ಟೇಬಲನು ಬಂದು, ಆ ಮಾಲೀಕನಿಗೆ ಸಲಾಮನ್ನು ಹೊಡೆದು—ಸಾಹೇಬರವರೇ! ದೇವರ ದಯೆಯಿಂದ ರಾತ್ರಿ ತಮ್ಮ ಮಾಲು ಸಿಕ್ಕಿತು. ಕಳ್ಳನನ್ನು ಹಿಡಿದು ಠಾಣಾದಲ್ಲಿ ಇಟ್ಟಿದ್ದೇವೆ ಎಂದು ಅರಿಕೆ ಮಾಡಿದನು. ನ್ಯಾಯಕ್ಕಾಗಿ ಏನಾದರೂ ಸ್ವಲ್ಪ ಕಷ್ಟ ಪಡುವದು ಅಸಾಧ್ಯವಾಗಿದ್ದರೂ ಭಾರಿ ಲಂಚತಿನ್ನುವದಕ್ಕೆಂದರೆ ಎಷ್ಟಾದರೂ ಕಷ್ಟ ಪಡುವುದರಲ್ಲಿ ಸಂಶಯವಿಲ್ಲ. ತಾಲ್ಲೋಕಿನ ಅಮಲ್ದಾರ್ರು ಈ ವಿಷಯವನ್ನು ವಿಚಾರಿಸುವದಕ್ಕೆ ಒಂದು ದಿವಸವನ್ನು ನೇಮಿಸಿ, ಫಿರ್ಯಾದಿ ಮಾಲೀಕನನ್ನು ಕರೆಸಿದರು. ಅವನು ಅವರ ಬಳಿಗೆ ಹೋಗಿ ದಿವಸವೆಲ್ಲ ಸುಮ್ಮನೆ ಕಾದಿದ್ದು ಸಾಯಂಕಾಲದ ನಾಲ್ಕು ಘಂಟೆಯ ಹೊತ್ತಿಗೆ ತನ್ನ ಮನೆಗೆ ಹೋಗಬೇಕೆಂದು ರೈಲಿನಲ್ಲಿ ಪ್ರಯಾಣ ಮಾಡಿದನು. ಎರಡನೇ ಸಾರಿ ಅಮಲ್ದಾರ್ರು ಅವನನ್ನು ಕರೆಸಿದರು. ಎರಡನೇ ಸಾರಿ ಹಾಗೆಯೇ ಆಯಿತು. ಮೂರನೇ ಸಾರಿ ಅವನು ಕೋರ್ಟಿಗೆ ಹೋದನು. ಅಲ್ಲಿ ಎರಡು ಘಂಟೆಯವರೆಗೂ ಅಲ್ಲೇ ಕಾದಿದ್ದನು. ಅಮಲ್ದಾರ್ರು ಇನ್ನೂ ಬಂದಿರಲಿಲ್ಲವಾದ್ದರಿಂದ ಅವನು ರೈಲಿನಲ್ಲಿ ನಾಲ್ಕು ಘಂಟೆಗೆ ಹೊರಟು ಹೋಗಬೇಕು, ದಯವಿಟ್ಟು ಕೋರ್ಟಿಗೆ ಬಂದು ಈ ಮೊಕದ್ದಮೆಯನ್ನು ಫೈಸಲ್ ಮಾಡಬೇಕೆಂದು ಒಬ್ಬ ಜವಾನನಸಂಗಡ ಹೇಳಿ ಅಮಲ್ದಾರ್ರವರ ಮನೆಗೆ ಕಳುಹಿಸಿದನು. ಅದಕ್ಕೆ ಆ ಅಮಲ್ದಾರ್ರು ಊಟಮಾಡಿಕೊಂಡು ಬೇಗ ಬರುತ್ತೇನೆಂದು ಹೇಳಿ ಕಳುಹಿಸಿದರೇ ಹೊರತು ಅವರು ಬರಲೇ ಇಲ್ಲ. ನಾಲ್ಕನೇ ಸಾರಿ ಅಮಲ್ದಾರ್ರು ಆ ಮನುಷ್ಯನನ್ನು ಕರೆಕಳುಹಿಸಿದಾಗ ಅವನು—ಈ ದಿವಸ ಬರುವದಕ್ಕೆ ನನಗೆ ಅನಾನುಕೂಲವಾಗಿದೆ ಎಂದು ತಿಳಿಸಿದನು. ಆ ದಿವಸವೇ ಅಮಲ್ದಾರ್ರು ಆ ಮೊಕದ್ದಮೆಯನ್ನು ವಿಚಾರಣೆ ಮಾಡಿ ಕದ್ದದ್ದಕ್ಕೆ ಸಾಕ್ಷಿಯಿಲ್ಲ ಎಂಬದಾಗಿ ಮೊಕದ್ದಮೆಯನ್ನು ಡಿಸ್‌ಮಿಸ ಮಾಡಿ, ಕೈದಿಯನ್ನು ಖುಲಾಸೆ ಮಾಡಿದರು. ಈ ಕಥೆಯು ನಿಜವೋ ಸುಳ್ಳೋ ನಮಗೆ ತಿಳಿಯದು. ಆದರೆ ಅನೇಕ ತಾಲ್ಲೋಕುಗಳಲ್ಲಿ ಇಂಥಾ ಅನೇಕ ಅಕ್ರಮಗಳು ನಡೆಯುತ್ತಲಿರುವವು ಎಂಬುವದರಲ್ಲಿ ಯಾವ ಸಂದೇಹವಿರಲಾರದು. ಅಮಲ್ದಾರ್ರು ಇಷ್ಟಬಂದಂತೆ ಕೋರ್ಟಿಗೆ ಹೋಗುವದಾಗಲಿ, ಮನೆಯಲ್ಲಿರುವದಾಗಲಿ ಬಹು ಸಾಧಾರಣವಾಗಿದೆ. ನಿಜವಾದ ಮೊಕದ್ದಮೆಗಳನ್ನು ಸ್ವಲ್ಪ ಮಾಡುವದರಲ್ಲಿಯೂ ಬಹಳ ತಡವಾಗುತ್ತದೆ. ರೈತರು ನನ್ನ ಯತ್ನವೇನೂ ಎಂದು ಹೇಳಿ ಅಂತರಂಗದಲ್ಲಿ ಗುಣಗುಟ್ಟುವರೇ ಹೊರತು, ಬಹಿರಂಗವಾಗಿ ತಮ್ಮ ದೂರುಗಳನ್ನು ಯಾರಿಗೂ ಹೇಳುವದಿಲ್ಲ. ಇಂಥ ಅಕ್ರಮಗಳನ್ನು ಪ್ರಜೆಗಳು ಸಹಿಸುವದು ಕಷ್ಟವೂ ಅನ್ಯಾಯವೂ ಆಗಿದೆ. ಅಮಲ್ದಾರ್ರು ಜನರಿಗೆ ಸಹಾಯಕರಾಗಿರಬೇಕೆಂದು ತಮ್ಮ ತಮ್ಮ ತಾಲ್ಲೋಕುಗಳಲ್ಲಿ ಇಡಲ್ಪಟ್ಟಿರುತ್ತಾರೆ. ಪ್ರಜೆಗಳು ತಮ್ಮ ತಮ್ಮ ಪ್ರಾಂತ್ಯಗಳಲ್ಲಿ ನಡೆಯತಕ್ಕ ಎಲ್ಲಾ ವಾಸ್ತವ್ಯವಾದ ಅಕ್ರಮಗಳನ್ನೂ ಪತ್ರಿಕಾ ಕರ್ತರಿಗೆ ಧಾರಾಳವಾಗಿ ತಿಳಿಸುವದು ಪ್ರಯೋಜನಕರವಾಗಿರುವದಲ್ಲವೆ?

ಮೈಸೂರು ಸರ್ಕಾರದವರ ವಿಷಯಗಳು.

ಈ ವಾರದಲ್ಲಿ ನಡೆದಿರುವ ಅಂತರ್ಯ ಸಂಗತಿಗಳಲ್ಲಿ ವಿಶೇಷವಾದವು ಯಾವದೂ ಇಲ್ಲವೆಂದು ತೋರುತ್ತದೆ. ಇನ್ನು ಮೂರು ನಾಲ್ಕು ದಿವಸಗಳಾದ ಮೇಲೆ ದಿವಾನರವರು ಬೆಂಗಳೂರಿಗೆ ದಯಮಾಡಿಸಿ ಆ ಪಟ್ಟಣಕ್ಕೆ ಅವಶ್ಯವಾಗಿರುವ ನೀರಿನ ಸರಬರಾಯಿಯ ವಿಷಯವಾಗಿ ಬೇಗನೆ ತಕ್ಕ ಏರ್ಪಾಡುಗಳನ್ನು ನಿರ್ಣಯಿಸುವರೆಂದು ನಾವು ಕೇಳಿದ್ದೇವೆ. ಮನುಷ್ಯರು ಈ ಭಾಗದಲ್ಲಿ ತಿನ ಮಾಡುತ್ತಿದ್ದಾಗ್ಯೂ ಭಗವಂತನು ಅತ್ಯಂತ ಕೃಪೆಯಿಂದ ಈ ದೇಶದ ಮೇಲೆ ಅಪರೂಪವಾದ ಮೂರು ನಾಲ್ಕು ಹದಗಳ ಮಳೆಯನ್ನು ಸುರಿಸಿದ್ದು ನಮ್ಮಲ್ಲಿ ಅತಿ ಸಂತೋಷವನ್ನು ಉಂಟುಮಾಡಿರುತ್ತೆ. ಸರ್ಕಾರಿ ವರ್ಗಾವರ್ಗಿಗಳ ವಿಷಯವಾಗಿ ಜನರು ನಾನಾ ರೀತಿಯಲ್ಲಿ ಮಾತನಾಡುತ್ತಿರುವರು. ಪೋಲೀಸ್ ಇನ್‌ಸ್ಪೆಕ್ಟರ ಜನರಲ್‌ರಾದ ಮ|| ಮಾಧವರಾಯರವರು ಬಹಳ ಸ್ವಲ್ಪ ಕಾಲದೊಳಗಾಗಿ ಅಸಿಸ್ಟೆಂಟ ದಿವಾನರಾಗಿ ನೇಮಿಸಲ್ಪಡುವರೆಂತಲೂ, ಮ|| ಟಿ. ಆನಂದರಾಯರು ಅವರ ಕೆಲಸಕ್ಕೆ ಹೋಗುವರೆಂತಲೂ, ಮೈಸೂರು ಡಿಪ್ಯುಟಿ ಕಮಿಷನರರಾದ ಮ|| ರಂಗಸಾಮಿ ಅಯ್ಯಂಗಾರ್ರು ಛೀಫ್ ಸೆಕ್ರೆಟರಿಗಳಾಗುವರೆಂತಲೂ ಪ್ರವಾದವು ತಿರಿಗಿ ಬಹು ಬಲವಾಗಿ ಹುಟ್ಟಿರುತ್ತದೆ. ಈ ಪ್ರವಾದಗಳಿಗೆ ಎರಡು ಮೂರು ಕಾರಣಗಳುಂಟು. ದಿವಾನರವರಿಗೂ ಮ|| ಟಿ. ಆನಂದರಾಯರಿಗೂ ಸರಿ ಬೀಳುವದಿಲ್ಲವೆಂದು ಹೇಳುತ್ತಾರೆ. ದಿವಾನರವರು ಮ|| ರಂಗಸಾಮಿ ಅಯ್ಯಂಗಾರ್ರರ ವಿಶ್ವಾಸವನ್ನೂ ಬುದ್ಧಿ ಕುಶಲತೆಯನ್ನೂ ಬಹಳವಾಗಿ ಎಣಿಸಿಕೊಂಡಿರುವದರಿಂದ ಅನೇಕರಿಂದ ನಾವು ಕೇಳಿದ್ದೇವೆ. ಇದು ಹ್ಯಾಗೋ ನಮಗೆ ತಿಳಿಯದು. ಅಂತು ಈ ಬದಲಾವಣೆಗಳು ಉಂಟಾಗುವದಕ್ಕೆ ಇನ್ನೂ ಕೆಲವು ತಿಂಗಳುಗಳು ಹೋಗಬೇಕಾಗಿ ನಮಗೆ ತಿಳಿದುಬಂದಿದೆ. ಏಪ್ರೈಲ ತಿಂಗಳ ಪ್ರಾರಂಭದಿಂದ ಪೋಲೀಸು ಇಲಾಖೆಯು ಮತ್ತು ವಿದ್ಯಾಭ್ಯಾಸದ ಇಲಾಖೆಯ ಹೆಡ್ ಆಫೀಸುಗಳೂ ಮೈಸೂರಿನಲ್ಲಿ ಸ್ಥಾಪಿಸಲ್ಪಡುವ ಹಾಗೆ ಹುಕುಂ ಆಗಿರುವದಾಗಿ ನಾವು ಕೇಳಿದ್ದೇವೆ. ಹುಜೂರು ಖಜಾನೆಯು ಮೈಸೂರಿನಲ್ಲಿರಬೇಕೆಂದು ದಿವಾನರವರು ಕೆಲವು ದಿವಸಗಳವರೆಗೂ ಯೋಚಿಸುತ್ತಿದ್ದರಂತೆ. ಹೀಗೆ ಹುಜೂರು ಖಜಾನೆಯಿಂದ ರೆಸಿಡೆಂಟ್ರವರ ಖಜಾನೆಗೆ ಆಗಾಗ್ಯೆ ಬಹಳ ಹಣವು ಹೋಗಬೇಕಾಗಿರುವದರಿಂದಲೂ, ಯಾವಾಗಲೂ ಮೈಸೂರಿನಿಂದ ಬೆಂಗಳೂರಿಗೆ ಕಳುಹಿಸುವದು ಬಹಳ ಖರ್ಚನ್ನು ಉಂಟುಮಾಡುವದರಿಂದಲೂ ದಿವಾನರವರು ಆ ಏರ್ಪಾಡನ್ನು ನಿಲ್ಲಿಸಿರುತ್ತಾರೆಂದು ಕೇಳುತ್ತೇವೆ.

ಭಂಗಿ ಸೇದುವದು.

ಈ ದೇಶಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ ಏನಾದರು ಅಕ್ರಮವು ಇದ್ದರೆ ಬ್ರಿಟಿಷ್ ಪಾರ್ಲಿಮೆಂಟ ಸಮಾಜದಲ್ಲಿ ಅದನ್ನು ಚರ್ಚೆಗೆ ತರುವ ಹಾಗೆ ಮಾಡುವದು ವಿಶೇಷ ಪ್ರಯೋಜನಕರವಾಗಿದೆ. ಇದಕ್ಕೆ ದೃಷ್ಟಾಂತವೇನೆಂದರೆ—ಇಂಡಿಯ ರಾಷ್ಟ್ರದಲ್ಲಿ ಜನರು ಭಂಗಿ ಸೇದುವದರಿಂದ ವರ್ಷಾಂಪ್ರತಿ ವರ್ಷದಲ್ಲೂ ಸರ್ಕಾರಕ್ಕೆ ೨೩ ಲಕ್ಷ ರೂಪಾಯಿ ಉತ್ಪತ್ತಿಯಾಗುತ್ತದೆ. ಅದರಿಂದ ಸರ್ಕಾರಕ್ಕೆ ಎಷ್ಟು ಪ್ರಯೋಜನವೋ ಪ್ರಜೆಗಳಿಗೆ ಅಷ್ಟೇ ಅಷ್ಟು ಕೇಡು ಉಂಟಾಗುತ್ತದೆ. ಹಣವು ಬರುವದು ಒಳ್ಳೆಯದೇ ಆದರೂ ಪ್ರಜೆಗಳಲ್ಲಿ ದುರಭ್ಯಾಸವು ದಿನೇದಿನೇ ವೃದ್ಧಿಯಾಗುವದು ಶುದ್ಧಾಂಗ ತಪ್ಪಾಗಿರುವದು. ಹೋದವಾರದಲ್ಲಿ ಒಬ್ಬ ದೊಡ್ಡ ದೊರೆಯು ಹೌಸ್ ಆಫ್ ಕಾಮನ್ಸಿನಲ್ಲಿ ಈ ವಿಷಯವಾಗಿ ವಿಚಾರ ಮಾಡಿದಾಗ ವೈಸರಾಯರಿಗಿಂತ ಹೆಚ್ಚಾದ ಅಧಿಕಾರವನ್ನು ಪಡೆದಿರುವ ಇಂಡಿಯ ಸೆಕ್ರೆಟರಿಯವರು ಒಂದು ವಿಶೇಷವಾದ ಮಾತನ್ನು ತಿಳಿಸಿದರು. ಆ ಮಾತು ಏನೆಂದರೆ—ಇಂಗ್ಲಿಷ್ ಸರ್ಕಾರದವರು ಇಂಡಿಯಾ ರಾಷ್ಟ್ರದಲ್ಲಿ ಬಲವಾಗಿರುವ ಈ ದುರಭ್ಯಾಸದಿಂದ ಉತ್ಪತ್ತಿಯನ್ನು ಸಂಪಾದಿಸಬೇಕೆಂದು ತಾತ್ಪರ್ಯಪಡದೆ ತಮ್ಮಿಂದಾಗುವ ಮಟ್ಟಿಗೂ ಆ ದುರಭ್ಯಾಸವನ್ನು ಕಡಮೆ ಮಾಡುವದಕ್ಕೆ ಪ್ರಯತ್ನ ಪಡುವರು ಎಂಬುವದೇ. ಈ ಯೋಚನೆಯು ಬಹು ಶ್ಲಾಘನೆಯಾದುದಾಗಿದೆ.

ಮದ್ಯಪಾನ.

ಭಂಗಿ ಸೇದುವದು ಈ ರಾಷ್ಟ್ರದಲ್ಲಿ ಪ್ರಬಲವಾಗಿರುವಂತೆ ಇಂಗ್ಲೆಂಡಿನಲ್ಲಿ ಬೀರು ಮೊದಲಾದ ಮದ್ಯಪಾನಕಗಳನ್ನು ಕುಡಿಯುವದು ಬಹಳ ಪ್ರಬಲವಾಗಿದೆ. ಆ ಮದ್ಯಪಾನಕಗಳನ್ನು ತಯಾರು ಮಾಡುವ ದೊರೆಗಳು ಬಹಳ ಐಶ್ವರ್ಯವಂತರೂ ಮಹಾ ಪದವಿಯನ್ನುಳ್ಳವರೂ ಆಗಿರುತ್ತಾರೆ. ಕೆಲವು ವರುಷಗಳಿಂದೀಚೆಗೆ ಬೇರೆ ಬೇರೆ ಸಜ್ಜನರಾಗಿರುವವರು ಈ ದುರಭ್ಯಾಸವನ್ನು ನಿರೋಧಿಸುವದಕ್ಕೆ ಎಲ್ಲಾ ಹೌಸ್ ಆಫ್ ಕಾಮನ್ಸಿನಲ್ಲಿಯೂ, ವರ್ತಮಾನ ಪತ್ರಿಕೆಗಳಲ್ಲಿಯೂ, ದೊಡ್ಡ ದೊಡ್ಡ ಸಮಾಜಗಳಲ್ಲಿಯೂ ಈ ವಿಷಯವಾಗಿ ಹೋರಾಡುತ್ತಾ ಬಂದು ಮದ್ಯಪಾನವನ್ನು ನಿಲ್ಲಿಸಬೇಕೆಂದು ಬಹಳ ಪ್ರಯಾಸಪಟ್ಟಿರುತ್ತಾರೆ. ಐಶ್ವರ್ಯವಂತರು ನಿಲ್ಲಿಸಕೂಡದೆಂತಲೂ, ಈ ಸಜ್ಜನರು ನಿಲ್ಲಿಸಬೇಕೆಂತಲೂ ಕಠಿಣವಾದ ವಾಗ್ವಾದವು ನಡೆಯುತ್ತಾ ಬಂದಿದೆ. ಕಡೆಗೆ ಐಶ್ವರ್ಯವಂತರು ಸೋತು ಹೋಗುವ ಹಾಗೆ ಕಾಣಬರುತ್ತದೆ. ಯಾವ ಊರಿನಲ್ಲಾಗಲಿ ಮೂರರಲ್ಲಿ ಎರಡು ಪಾಲಿನ ಜನರು ಮದ್ಯಪಾನಕಗಳನ್ನು ಮಾರುವ ಅಂಗಡಿಗಳಿರಕೂಡದೆಂದು ನಿರ್ಣಯಿಸುತ್ತಾರೆಯೋ, ಅಲ್ಲಿ ಮದ್ಯಪಾನಕಗಳನ್ನು ಮಾರುವವರು ಸರ್ಕಾರದ ದಂಡನೆಗೆ ಗುರಿಯಾಗುವರು. ಇದು ಬಹಳ ಸಂತೋಷಕರವಾದ ಸಮಾಚಾರವು. ಈ ವ್ಯಾಪಾರವು ಇಂಗ್ಲಾಂಡಿನಲ್ಲಿ ಇನ್ನು ಕೆಲವು ವರುಷಗಳೊಳಗಾಗಿ ನಿಲ್ಲಿಸಲ್ಪಡುವದೆಂದು ನಾವು ಭಗವಂತನನ್ನು ಪ್ರಾರ್ಥಿಸಿದ್ದೇವೆ.

ಅನುಭವ ಬೇಕು.

ಒಬ್ಬ ನೊಬ್ಬ ಹೆಣ್ಣುಮಗಳು ಬೈಬಲ್ ಎಂಬ ಸತ್ಯಶಾಸ್ತ್ರವನ್ನು ಸಾವಧಾನದಿಂದ ಕೂತುಕೊಂಡು ಓದುತ್ತಿರಲು ಒಬ್ಬ ದೊರೆಯು ಅವಳನ್ನು ಕಂಡು ನೀನು ಓದುವ ಪುಸ್ತಕ ಯಾವದು? ಅದು ಮನೋಹರವಾಗಿದೆಯೋ ಎಂಬದಾಗಿ ಕೇಳಿದಾಗ ಅವಳು—ಅಯ್ಯಾ, ಮನಸ್ಸಿಗೆ ಬಹಳ ಚೆನ್ನಾಗಿದೆ ಇದು ದೇವರ ವಾಕ್ಯವು ಎಂದು ಹೇಳಿದಳು. ಆ ದೊರೆಯು ದೇವಭಕ್ತನಲ್ಲವಾದ್ದರಿಂದ ಅವನು ಇನ್ನೊಂದು ಪ್ರಶ್ನೆ ಕೇಳಿದನು. ಏನೆಂದರೆ—ಬೈಬಲ್ಲೆಂಬ ಪುಸ್ತಕವು ದೇವರ ವಾಕ್ಯವೆಂದು ನಿನಗೆ ಯಾರು ಹೇಳಿದರು ಎನ್ನಲಾಗಿ ಅವಳು—ದೇವರು ನನಗೆ ಹೇಳಿದನು ಎಂದಳು.

ದೇವರು ಹೇಳಿದ ಎಂದು ಹೇಳುತ್ತೀಯಾ! ಅದು ಅಸಾಧ್ಯ ನೀನು ದೇವರನ್ನು ಕಣ್ಣಾರ ಕಾಣಲಿಲ್ಲ ಅವನ ಮಾತನ್ನು ಕಿವಿಯಾರ ಕೇಳಲಿಲ್ಲ ನಿನಗೆ ಹ್ಯಾಗೆ ಹೇಳಿದನು ಎಂದು ಕೇಳಿದನು. ಸ್ವಲ್ಪ ಹೊತ್ತಿನವರೆಗೂ ಆ ಹುಡುಗಿಯು ಕಳವಳಪಟ್ಟು ಮಾತನಾಡದೆ ಕೂತುಕೊಂಡು ಯೋಚಿಸಿದಳು ಅನಂತರ ಮನಸ್ಸಿಗೆ ಧೈರ್ಯ ತಂದುಕೊಂಡು ಆ ದೊರೆಯನ್ನು ದೃಷ್ಟಿಸಿ ನೋಡಿ ಅಯ್ಯಾ, ಸೂರ್ಯನು ಇರುವನೆಂದು ಯಾರು ನಿನಗೆ ಹೇಳಿದರು ಎಂಬದಾಗಿ ಕೇಳಲು, ಅವನು ಅವಳ ಮಾತನ್ನು ಅಸಡ್ಡೆಮಾಡಿ ಸ್ವಲ್ಪಕೋಪದಿಂದ—ಛೀ, ಇದೆಂಥಾ ಪ್ರಶ್ನೆ, ಅದನ್ನು ಯಾರೊಬ್ಬರೂ ನನಗೆ ಹೇಳಬೇಕಾದ್ದಿಲ್ಲ. ಸೂರ್ಯನು ತಾನೇ ನನಗೆ ಹೇಳಿದನು. ಅದರಿಂದ ನನಗೆ ಬಿಸಿಯಾಗುತ್ತೆ. ಅವನ ಕಿರಣಗಳಿಂದ ನಾನು ಎಲ್ಲವನ್ನು ನೋಡಬಲ್ಲೆನು ಇದಕ್ಕಿಂತಲೂ ಇನ್ನೇನು ಬೇಕಾಗಿದೆ ಎಂದು ಹೇಳಿದನು. ಆ ಹುಡುಗಿಯು ಇದನ್ನೆಲ್ಲಾ ಕೇಳಿ ಸಂತೋಷಯುಕ್ತಳಾಗಿ—ಅಯ್ಯಾ ನೀವು ಹೇಳಿದ್ದು ವಾಸ್ತವ್ಯವಾಗಿದೆ. ಸೂರ್ಯನ ವಿಷಯವಾಗಿ ನೀವು ಹೇಳಿದ್ದು ವಾಸ್ತವ್ಯವಾಗಿದೆ. ಸೂರ್ಯನ ವಿಷಯವಾಗಿ ನೀವು ಹೇಳಿದಮಾತು ಬೈಬಲ್ ಎಂಬ ಸತ್ಯಶಾಸ್ತ್ರದ ವಿಷಯವಾಗಿಯೂ ನಿಜವಾಗಿದೆ. ನಾನು ಇದನ್ನು ಓದಿದರೆ ನನ್ನ ಮನಸ್ಸಿಗೆ ಉಲ್ಲಾಸವೂ, ನನಗೆ ಪರಮಜ್ಞಾನವೂ ಉಂಟಾಗುತ್ತದೆ. ಈ ಪುಸ್ತಕವನ್ನು ಓದುವದರಿಂದ ನನಗೆ ಬಂದಿರತಕ್ಕ ಜ್ಞಾನವನ್ನು ಕೊಡುವದಕ್ಕೆ ಭಗವಂತನು ಅಕ್ಕರೆಯೊಹೊರತು ಅನ್ಯರಾರೂ ಶಕ್ತರಲ್ಲ. ಬೇರೆ ಸಾಕ್ಷ್ಯ ನನಗೆ ಬೇಕಿಲ್ಲ. ಬಿಸಿಲಿನಲ್ಲಿ ಕೂತುಕೊಂಡರೆ ಸೂರ್ಯ ಸಿಕ್ಕಿದನೆಂದು ನನಗೆ ಗೊತ್ತಾಗುತ್ತೆ. ಪುಸ್ತಕವನ್ನು ಓದುವದರಿಂದ ಪರಮಜ್ಞಾನವನ್ನು ಸಂಪಾದಿಸಿದರೆ ದೇವರು ಆ ಪುಸ್ತಕವನ್ನು ಬರೆಸಿದನೆಂಬುದು ನನಗೆ ನಿಸ್ಸಂದೇಹವಾಯಿತು ಎಂದು ಉತ್ತರಕೊಟ್ಟಳು. ವಾಚಕರೆ, ಈ ವರೆವಿಗೂ ನೀವು ಬೈಬಲ್ ಎಂಬ ಸತ್ಯಶಾಸ್ತ್ರವನ್ನು ಓದಿ ನಿಜವಾದ ಅನುಭವವನ್ನು ಪಡೆದಿದ್ದೀರೋ? ಇಲ್ಲವಾದರೆ ಬೇಗ ಓದಿರಿ. ಅದರಿಂದ ನಿಮಗೆ ಕೂಡ ಜ್ಞಾನವು ಉತ್ಪತ್ತಿಯಾಗುತ್ತದೆಂಬುವದರಲ್ಲಿ ಏನೇನೂ ಸಂಶಯವಿಲ್ಲ.

ಸದ್ಭಕ್ತರ ಆಗಮನ.

ಆರು ವರ್ಷಗಳಿಂದ ಮಿಸ್ ವೈಟ್ ಎಂಬುವರು ಬೆಂಗಳೂರಿನಲ್ಲಿದ್ದು ಕ್ರೈಸ್ತಮತಕ್ಕೆ ಸಂಬಂಧವಾದ ಕೆಲಸಗಳನ್ನು ಆಸಕ್ತಿಪೂರ್ವಕವಾಗಿ ನಡೆಸುತ್ತಾ ಇದ್ದದ್ದು ಬಹಳ ಜನರಿಗೆ ಗೊತ್ತಾಗಿಲ್ಲದೆ ಇರಲಾರದು. ಹೋದ ವರ್ಷದಲ್ಲಿ ಅವರು ಆರೋಗ್ಯಕ್ಕೋಸ್ಕರ ಆಸ್ಟ್ರೇಲಿಯಾ ಎಂಬ ಸ್ವದೇಶಕ್ಕೆ ಹೋಗಿ ಸುಖವನ್ನನುಭವಿಸಿ ಹೋದ ವಾರದಲ್ಲಿ ಪುನಃ ಈ ದೇಶಕ್ಕೆ ದಯಮಾಡಿಸಿದರೆಂಬುವದನ್ನು ತಿಳಿಸುವದಕ್ಕೆ ಸಂತೋಷಿಸುತ್ತೇವೆ. ಅವರು ಬಂದದ್ದಕ್ಕೆ ಬಹಳ ಮುಂದೆ ಹರ್ಷಗೊಳ್ಳುವದು ಅವರ ಜೊತೆಯಲ್ಲಿ ಸಿಸ್ಟರ್ ಏಡ ಎಂಬ ಇನ್ನೊಬ್ಬ ಕ್ರಿಸ್ತಭಕ್ತರು ದಯಮಾಡಿಸಿ ಮೈಸೂರಿನಲ್ಲಿ ಇದ್ದು ಕನ್ನಡ ಭಾಷೆಯನ್ನು ಕಲಿಯುವದಕ್ಕೆ ಪ್ರಾರಂಭಿಸಿರುತ್ತಾರೆ. ಸುಮಾರು ನಾಲ್ಕು ತಿಂಗಳೊಳಗಾಗಿ ಇನ್ನು ಕೆಲವು ಮಂದಿ ಸದ್ಭಕ್ತರಾದ ಸ್ತ್ರೀಯರು ಆಸ್ಟ್ರೇಲಿಯ ದ್ವೀಪದಿಂದ ಬಂದು ಈ ದೇಶದ ಜನೋಪಕಾರಾರ್ಥವಾಗಿ ಕನ್ನಡಭಾಷೆಯನ್ನು ಕಲಿತುಕೊಂಡು ಕೆಲವರು ಪಟ್ಟಣಗಳಲ್ಲಿಯೂ, ಕೆಲವರು ಬೇರೆ ಬೇರೆ ತಾಲ್ಲೋಕುಗಳಲ್ಲಿಯೂ ರೋಗಿಗಳಲ್ಲಿಯೂ ತಮ್ಮ ತಮ್ಮ ಕೆಲಸವನ್ನು ಪ್ರೀತಿಯಿಂದಲೂ ಭಕ್ತಿಯಿಂದಲೂ ನಡಸುವರೆಂದು ವರ್ತಮಾನ ಕೇಳಿದ್ದೇವೆ. ಇಂಥವರು ತಮ್ಮ ತಮ್ಮ ದೇಶವನ್ನೂ ಮನೆಗಳನ್ನೂ ಬಿಟ್ಟು ಸಂಬಳದಮೇಲೆ ದೃಷ್ಟಿ ಇಡದೆ ಈ ದೇಶಕ್ಕೆ ಬಂದು ಜನಗಳ ಸ್ನೇಹ ಪಡೆಯಬೇಕೆಂಬುವದೇ ಮನೋಹರಕರವಾಗಿರುವದು. ಬರುವ ೨—೩ ವರ್ಷಗಳೊಳಗಾಗಿ ಅನೇಕ ಮಂದಿ ಸದ್ಭಕ್ತರು ಈ ದೇಶಕ್ಕೆ ದಯಮಾಡಿಸುವರೆಂದು ನಾವು ನಿರೀಕ್ಷಿಸುತ್ತೇವೆ.

ವೃತ್ತಾಂತ ಪತ್ರಿಕೆಯ ಏಜಂಟ್ರುಗಳಿಗೆ.

ನಮ್ಮ ಪತ್ರಿಕೆಯಲ್ಲಿ ೬ ನೇ ಸಂಪುಟಕ್ಕೆ ಮೂರನೇ ಕ್ವಾರ್ಟರು ಈ ವಾರದೊಡನೆ ಪೂರೈಸಿರುತ್ತೆ. ಏಜಂಟ್ರುಗಳು ಕ್ವಾರ್ಟರ ಲೆಖ್ಖಗಳನ್ನು ಜಾಗ್ರತೆಯಾಗಿ ತಯಾರುಮಾಡಿ ತಮ್ಮ ತಮ್ಮ ಹೆಡ್ ಕ್ವಾರ್ಟರುಗಳಿಗೆ ಒಂದೊಂದು ಪ್ರತಿಯನ್ನೂ, ಇಲ್ಲಿಗೆ ಒಂದು ಪ್ರತಿಯನ್ನೂ ರವಾನಿಸುವರೆಂದು ನಂಬಿದ್ದೇವೆ. ಫಾರಮಿನಲ್ಲಿ ಬರೀ ಅಂಕೆಗಳನ್ನು ತುಂಬಿಸಿ ಕೆಲವರು ಕಳುಹಿಸುತ್ತಾರೆ. ಅದರಿಂದ ಸ್ಥಳ, ಹೆಸರು ಗೊತ್ತಾಗದೆ ತುಂಬಾ ತೊಂದರೆ ಯಾಗುತ್ತೆ

ಅವುಗಳನ್ನು ಚನ್ನಾಗಿ ತಿಳಿಯುವ ರೀತಿಯಲ್ಲಿ ಬರೆದು ರವಾನಿಸಬೇಕೆಂದು ಕೋರುತ್ತೇವೆ.

ಮೈಸೂರು } ಎಡಿಟರ್
೫—೩—೧೮೯೩ } ವೃತ್ತಾಂತ ಪತ್ರಿಕೆ

ಒಳದೇಶ ವೃತ್ತಾಂತಗಳು.

ಮೈಸೂರು ಏಜನ್ಸಿ ಸಂಬಂಧ ಫೋರ್ಮೇನಾದ ಲೆವರೆಂಡ ಜೆ. ಹರ್ಸ ಸಾಹೇಬರವರು ಬೆಂಗಳೂರಿನಿಂದ ನಾಳೆ ಸಾಯಂಕಾಲ ಇಲ್ಲಿಗೆ ಬರುವರೆಂದು ತಿಳಿಯಬಂದಿದೆ

ಇಟಲೀ ದೇಶದ ಪೋಪರವರಿಗೆ ಶ್ರೀಮನ್ಮಹಾರಾಜರವರು ಗಂಧದ ಪೆಟ್ಟಿಗೆಯಲ್ಲಿ ಬೆಲೆಯುಳ್ಳ ಒಂದು ಆಭರಣವನ್ನು ಕಳುಹಿಸಿಕೊಟ್ಟಿರುವರೆಂದು ಕೇಳುತ್ತೇವೆ

ಬೆಂಗಳೂರು ಪೇಟೆಯಲ್ಲಿನ ಹೊಸ ಪಸ್ತಾವುಗಳನ್ನು ಪರೀಕ್ಷಿಸುವದಕ್ಕಾಗಿ ಸಂಸ್ಥಾನದ ಸ್ಯಾನಿಟರಿ ಕಮೀಷನರಾದ ಮೆ|| ಸ್ಪ್ಯಾಂಡಿಷ್ ಲೀ ಸಾಹೇಬರವರು ಹೋಗುವರೆಂದು ತಿಳಿಯಬಂದಿದೆ

ಹಿಂದೂಪುರದಿಂದ ದಕ್ಷಿಣಕ್ಕೆ ದೊಡ್ಡಬಳ್ಳಾಪುರದವರಿಗೂ ಸದರ್ನ್ ಮರಾಟ ರೈಲ್ವೆ ಅಧಿಕಾರಿಗಳು ತಯಾರ್ಮಾಡಿಸಿರುವ ರೈಲ್ವೆ ರಸ್ತೆಯಲ್ಲಿ ಬರುವ ಜೂನ್ ಗುರ್ರ್ ತಾರೀಖಿನಿಂದ ಗಾಡಿಗಳನ್ನು ಬಿಡುವಂತೆ ತೀರ್ಮಾನಿಸಿರುತ್ತಾರೆ

ಬೆಂಗಳೂರು ಸೆಂಟ್ರಲ್ ಕಾಲೇಜಿನ ಸಮೀಪದಲ್ಲಿ ಒಂದು ವಿದ್ಯಾರ್ಥಿಗಳ ಮನೆಯನ್ನು ಕಟ್ಟಿಸುವದಕ್ಕಾಗಿ ಮೈಸೂರು ಸರ್ಕಾರದವರು ೧೧,೦೦೦ ರೂಪಾಯಿಗಳನ್ನು ಸ್ಯಾಂಕ್ಷನ್ ಮಾಡಿರುತ್ತಾರೆಂದು ತಿಳಿಸಲು ಸಂತೋಷಿಸುತ್ತೇವೆ

ಬೆಂಗಳೂರು ಲಾಲಬಾಗಿನಲ್ಲಿದ್ದ ಗೇಂಡಾಮೃಗವು ಸತ್ತುಹೋಯಿತು ಅದನ್ನು ಕಳೆದ ೧೮೯೨ ನೇ ಇಸವಿಯಲ್ಲಿ ಅಲ್ಲಿಗೆ ತಂದಿದ್ದರು ಇದರ ಜೊತೆಗಿದ್ದ ಇನ್ನೊಂದನ್ನು ಆಗಲೇ ಇನ್ನೊಂದು ಕಡೆಗೆ ಕಳುಹಿಸಿಕೊಟ್ಟರು ಇದರ ಚರ್ಮವನ್ನು ಪ್ರದರ್ಶನಶಾಲೆಯಲ್ಲಿಡುವದಕ್ಕೆ ಪ್ರಯತ್ನ ಮಾಡಿರುವರು

ಶ್ರೀಮನ್ಮಹಾರಾಜರವರ ಜ್ಯೇಷ್ಠ ಭ್ರಾತೃಗಳಾಗಿದ್ದ ಸುಬ್ರಹ್ಮಣ್ಯರಾಜೇ ಅರಸಿನವರು ಅಪುತ್ರರಾಗಿ ಗತಿಸಿದರಷ್ಟೆ ಕಳೆದ ಶಿವರಾತ್ರಿದಿವಸ ಕಿಲಾ ಪ್ರದೇಶದ ಗೋಪಾಲರಾಜೇ ಅರಸು ಎಂಬ ಬಾಲಕನನ್ನು ಆ ಮನೆಗೆ ದತ್ತು ಮಾಡಿಸಿದರು ಆ ಕಾಲದಲ್ಲಿ ಶ್ರೀಮನ್ಮಹಾರಾಜರವರೂ, ದಿವಾನರವರೂ ಇತರ ದೊಡ್ಡ ಉದ್ಯೋಗಸ್ಥರೂ ಹಾಜರಾಗಿದ್ದರು ಈ ದಿವಸ ಈ ಬಾಲಕನಿಗೆ ಪ್ರಿನ್ಸ ಬಸವಪ್ಪಾಜಿ ಅರಸಿನವರ ಕಾವಲುತನವನ್ನು ಕೊಟ್ಟು ವಿದ್ಯಾಭ್ಯಾಸವನ್ನು ಹೇಳಿಕೊಡುವದಾಗಿ ನಿಷ್ಕರ್ಷೆಯಾಗಿದೆ

ಈ ಸಲದ ಮದರಾಸ್ ಯೂನಿವರ್ಸಿಟಿಯ ಎಂ. ಎ. ಪರೀಕ್ಷೆಯಲ್ಲಿ ಮೆ|| ಪಿ. ರಾಮಸ್ವಾಮಯ್ಯಂಗಾರ್, ಬಿ. ಎ. ಯವರೂ, ಈ ಸಂಸ್ಥಾನದ ಸಿವಿಲ್ ಸರ್ವೀಸ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರಾಗಿ ನೇಮಿಸಲ್ಪಟ್ಟಿರುವ ಮೆ|| ಕೆ. ಎಸ್. ಶ್ರೀನಿವಾಸಯ್ಯಂಗಾರ್, ಬಿ. ಎ. ಯವರೂ ತೇರ್ಗಡೆಯಾಗಿರುತ್ತಾರೆ ಎಂ. ಎಲ್. ಪರೀಕ್ಷೆಯಲ್ಲಿ ಮೆ|| ಜೋಸೆಫ್ ಸತ್ಯನಾಥನ್ ಎಂಬವರೂ, ಬೆಂಗಳೂರಿನ ಸಬ್‌ಜಡ್ಜಿಯವರಾದ ಮೆ|| ಎಸ್. ವಿ. ನಂಜುಂಡಯ್ಯ, ಎಂ. ಎ. ಯವರೂ ತೇರ್ಗಡೆಯಾಗಿರುತ್ತಾರೆ

ಐದಾರು ವರ್ಷಗಳಿಂದ ಮಹಾರಾಣಿಯವರ ಬಾಲಿಕಾ ಪಾಠಶಾಲೆಯಲ್ಲಿ ಕಿಂಡರ್‌ಗಾರ್ಟನ್ ಎಂಬ ರೀತಿಯಾಗಿ ಪಾಠವನ್ನು ಕಲಿಸುತ್ತಿದ್ದ ಮಿಸ್ ಉಲ್‌ಮರ್ ರವರು ತಮ್ಮ ಕೆಲಸಕ್ಕೆ ರಾಜೀನಾಮೆಕೊಟ್ಟು ಜರ್ಮನೀ ದೇಶಕ್ಕೆ ಹೊರಟುಹೋಗುತ್ತಾರೆಂದು ಸತ್ಯವಾದ ಪ್ರವಾದವಿದೆ ಆ ಪಾಠಶಾಲೆಯ ಕಮಿಟಿಯವರು ಇವರ ಕೆಲಸವನ್ನು ಒಪ್ಪಿಕೊಂಡು ಸ್ವದೇಶಕ್ಕೆ ಹೋಗುವ ಪ್ರಯಾಣದ ಖರ್ಚನ್ನು ಕೊಡುವದಾಗಿ ಒಪ್ಪಿಕೊಂಡಿರೆ ಅವರಿಗೆ ಬದಲಾಗಿ ವಿಲಾಯಿತಿಯಿಂದ ಒಬ್ಬರನ್ನು ಕರೆಸಬೇಕೆಂದು ಮಿಸ್ ಓರ್ಕಸ್ ಯವರು ಕಮಿಟಿಯವರನ್ನು ಕೇಳಿಕೊಂಡಾಗ್ಯೂ, ಅವರು ಅದನ್ನು ತಮ್ಮ ಗಣನೆಗೆ ಇನ್ನೂ ತರಲಿಲ್ಲವೆಂದು ತಿಳಿಯಬಂದಿದೆ

ದಿಲ್ಲಿನ ಡೆಯಿಲೀ ಪೋಸ್ಟು ಎಂಬ ಪತ್ರಿಕೆಯು ಬೆಂಗಳೂರಿನ ಸ್ಪಷ್ಟ ವರ್ತಮಾನ ಪತ್ರಿಕೆಗೆ ಬರೆಯುತ್ತಾನೇನೆಂದರೆ:— ಇಲ್ಲಿನ ದಿವಾನರಿಗೆ ದಿನೇ ದಿನೇ ಕೆಲಸಗಳು ಜಾಸ್ತಿಯಾಗುತ್ತಲಿರುವ ಸಹಾಯಕರೊಬ್ಬರಿಲ್ಲದೆ ಅವರು ನಿರ್ವಹಿಸುವದಕ್ಕೆ ಸಾಧ್ಯವಾಗಲಾರದೆಂಬ ಯೋಚನೆಯಿಂದ ಮಹಾಸಾಮಿ ೩,೫೦೦ ರೂಪಾಯಿಗಳ ಸಂಬಳದಲ್ಲಿ ನಾಯಬ್ ದಿವಾನರನ್ನು ಒಬ್ಬರನ್ನು ನೇಮಿಸುವದಕ್ಕೆ ಅಪ್ಪಣೆ ಕೊಡಬೇಕೆಂದು ಮಹಾರಾಜ ಸರ್ಕಾರದವರು ಇಲ್ಲಿನ ರೆಸಿಡೆಂಟರ ಮೂಲಕ ಇಂಡಿಯ ಗವರ್ನಮೆಂಟಿಗೆ ಬರೆದುಕೊಂಡಿರುತ್ತಾರೆಂದು ಅಧಿಕಾರಸ್ಥಾನಗಳಲ್ಲಿ ಪ್ರಬಲ ಪ್ರವಾದ ಹುಟ್ಟಿರುವದಲ್ಲದೆ ಇಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರಾದ ಮೆ|| ವಿ. ಪಿ. ಮಾಧವರಾಯರವರಿಗೆ ಸದರೀ ಅಧಿಕಾರ ಕೊಡಲ್ಪಡುವದೆಂದು ನಂಬಿಕೆಯುಂಟಾಗಿದೆ, ಎಂಬದು

ಕೊಳ್ಳೇಗಾಲ ಸಬ್‌ಡಿವಿಷನ್ ಆಫೀಸರಾಗಿದ್ದ ಮೆ|| ಡಬ್ಲ್ಯು. ಜಿ. ಸ್ಮಿತ್ ನಸೇರಮ್ಮಾನ್ ಸಾಹೇಬರು ಈವರೆಗೆ ಎರಡು ಮೂರು ತಿಂಗಳ ಕಾಲದ ಮೊದಲು ಹುಂಡುವಾಗ ಅಲ್ಲಿಯಿಂದ ಅಸ್ಪಷ್ಟವಾಗಿ ತಿಳಿದಿದ್ದರಷ್ಟೆ ಅದು ನಿಶ್ಚಯವಾಗಿ ಮನವೊಪ್ಪಿದ ಚಿತ್ತಗಳಿಂದ ಶಿಕ್ಷೆ ಮೊದಲಾದವುಗಳ ಕಳೆದ ರುಕ್ಮಿಣೀ ದಿವಸ ಮೈಸೂರಿನ ಬೆಂಗಳೂರಿನಲ್ಲಿರುವ ಅವರ ಮನೆಯಲ್ಲಿ ಮೃತರಾದ್ದರು ಅವರ ವಯಸ್ಸು ೩೯ ವರ್ಷಗಳು ಇವರು ದೊಡ್ಡ ಉದ್ಯೋಗದಲ್ಲಿ ಹುಟ್ಟಿದವರೆಂದು ತಿಳಿಯ ಬಂದಿದೆ ಜನರೆಲ್ಲರಿಗೂ ಒಳ್ಳೆಯ ನಡತೆಯಿಂದ ಪ್ರಸಿದ್ಧಿಗೆ ಬಂದರು ತಾಲ್ಲೂಕು (ಸ್ವಾರ್) ಮೊದಲಾಗಿಯು ಡೆಪ್ಯುಟಿ ಕಮಿಷನರ್ ಅಧಿಕಾರದವರಿಗೆ ಬಿಟ್ಟು ಹೋದರು ಇವರು ಈ ಪ್ರಾಂತ್ಯದ ಕಳೆದ ನೋಡುತ್ತಿರುವಲ್ಲಿ ಬಡವರ ಜನರ ಮೇಲೆ ಪೂರ್ಣ ಕೃಪೆ ತೋರಿಸಿ ಸಂಧ್ಯಾಕಾಲದಲ್ಲಿಯೂ ಅವರ ಪ್ರಸನ್ನತೆಯಿಂದ ಇಲ್ಲಿನ ಮುಸಲ್ಮಾನ ಜನರಲ್ಲಿ ಪ್ರಸಿದ್ಧರಾಗಿದ್ದ ಈ ದೊಡ್ಡ ಮನುಷ್ಯರು ಗತಿಸಿದ ಬಗ್ಗೆ ಬಹಳ ವಿಷಾದಿಸುತ್ತೇವೆ

ಯುಪತೊರೆ ಬಾತ್ಮೀದಾರರು ಬರೆಯುವದೇನೆಂದರೆ:— ಯಾದತೊರೆಗೆ ಟವರ್ನ್ ಮ್ಯುನಿಸಿಪಾಲಿಟಿ ಸಂಬಂಧಾಗಿ ಇಲ್ಲ ಸ್ಯಾನಿಟರಿ ರೂಲ್ಸು ಅನುಸರಿಸಿ ಯಾವ ಕೆಲಸವೂ ನಡೆಯದೆ ಜನರೋಗದಿಂದ ಪ್ರಜೆಗಳ ನೆಮ್ಮದಿಗೆ ತುಂಬಾ ಕುಂದಕ ಉಂಟಾಗಿರುತ್ತೆ ಈ ಊರಿನಲ್ಲಿ ಪೊಲೀಸು ಬಿಟು ಕ್ರಮವಾಗಿ ನಡೆಯದೆ ಅಲ್ಲಲ್ಲಿ ಕನ್ನ ಕಳವು ನಡೆಯಲು ತುಂಬಾ ಅವಕಾಶವಾದ ಇಲ್ಲಿನ ಪ್ಯಾಟೆ ಮಾತ್ರ ಇತರ ಬೀದಿಗಳಲ್ಲಿ ಜೋರ್ನಾದ ಕಲ್ಲುಗಳಿದ್ದನ್ನು ಪಿಶ್ಯಾಯಿಸೋಣವದರಿಂದ ಅದನ್ನು ತಿಂದು ಅಲ್ಲಲ್ಲಿ ಸ್ಪರ್ಷಿಸಿರುತ್ತಾರೆ ಹುಚ್ಚುನಾಯಿ ನಾಯಿ ಮತ್ತು ಇತರ ನಾಯಿಗಳ ಕಾಟವನ್ನು ಸಹಿಸಲು ಅಸಾಧ್ಯವಾಗಿಲ್ಲ ಈ ಪ್ರಾಂತ ಮ್ಯುನಿಸಿಪಾಲಿಟಿಯು ಜಾಗ್ರತೆಯಿಂದ ಕ್ರಮಮಾಡಿ ಪ್ರಜೆಗಳಿಗೆ ಸೌಕರ್ಯವುಂಟಾಗುವಂತೆ ಮಾಡಿರುವರೆಂದು ನಂಬುತ್ತೇನೆ ಯಾದತೊರೆ ನದಿಯ ಬಳಿ ಹೊಸದಾಗಿ ಕಟ್ಟತಕ್ಕ ಸೇತುವೆ ಕೆಲಸವು ಅಳಲುತ್ತಿರುವ ನಾಲೆಯಿಂದ ರಾಜಧಾನಿಗೆ ನೀರು ತೆಗೆದುಕೊಂಡು ಹೋಗುವ ಬಗ್ಗೆ ಹಾಕುವ ರೋಗದ ನಾಲೆಯ ನಷ್ಟ ಲೆವಲ್ ಮಾಡುವ ಕೆಲಸಗಳೂ ತೀವ್ರವಾಗಿ ನಡೆಸಿಯೂ ಅವುಗಳು ನಡೆಸುತ್ತಲಿರುವದರಿಂದ ಈ ಕೆಲಸಗಳು ಜಾಗ್ರತೆಯಲ್ಲಿ ಪೂರೈಸಬಹುದು

ಇನ್ನು ಎರಡು ಮೂರು ತಿಂಗಳವರೊಳಗೆ ದಿವಾನ ಸರ್ಕಾರಿಗಳಿಂದ ಡಾಕ್ಟರ್ ವೆಸ್ಟ್ ಸಾಹೇಬರವರಿಗೆ ಮೈಸೂರಿಂದ ಬೆಂಗಳೂರಿಗೆ ವರ್ಗವಾಗುತ್ತದೆಂದು ಕೇಳಿ ವಿಷಾದಿಸುತ್ತೇವೆ ಡಾಕ್ಟರ್ ವೆಸ್ಟ್ ಸಾಹೇಬರವರು ಬಹಳ ದಿವಸಗಳಿಂದ ಈ ಊರಿನಲ್ಲಿ ಸೀನಿಯರ್ ಸರ್ಜನರಾಗಿದ್ದು ಬೆಂಗಳೂರಿನಿಂದ ಬಂದ ಮೇಲೆ ಬಹಳ ಸಲ ಹೋಗಿ ಬಂದು ಒಂದಾದ ಮೇಲೆ ಅವರ ಆ ದೊಡ್ಡ ಧರ್ಮಿಯಾದರು ಬಡವರನ್ನು ಕಾಪಾಡುವರು ತಮಗೆ ಅನ್ಯಾಯವಾಗಿದ್ದರೂ ತೋರಿಸಲಿಲ್ಲ ಈ ದಿವ್ಯದಲ್ಲಿ ಆದಾಗ್ಯೂ ಅನಾದಿಕರವಾಗಿರುವದರಿಂದ ಆಫೀಸಿನ ಮಹಾರಾಜರವರ ಬಳಿಯಲ್ಲಿ ಇನ್ನು ಕೆಲವು ವರ್ಷಗಳವರೆಗೂ ಇರಬೇಕೆಂದು ದಿವಾನರವನ್ನು ಸರ್ಕಾರಕ್ಕೆ ಮಾಡಿಕೊಂಡು ನಾವು ಕೇಳುತ್ತೇವೆ ಇವರು ಇದ್ದರೆ ಆದರ ಇಲ್ಲಿಂದ ಹೋಗುವ ಸಾಹೇಬರವರು ಇರುವಲ್ಲಿ ಇವರೇ ಬೇಕೆಂದು ಹೇಳುವಾಗಿದೆ ಡಾಕ್ಟರ್ ವೆಸ್ಟ್ ನಮ್ಮೂರ ಮನುಷ್ಯರ ದಯೆ ಬದುಕಿಬಂದಿರುವಾಗ ಸರ್ಕಾರಕ್ಕೆ ಸೀನಿಯರ್ ಸರ್ಜನ್ ಬೇಕಾಗಿರದ ನಿರೀಕ್ಷಣೆ ಸರ್ಕಾರದವರು ಅದೆಲ್ಲವನ್ನೂ ಅರಿತು ಸ್ಪಷ್ಟವಾಗಿ ತೋರುತ್ತದೆ ಇನ್ನು ನಾಲ್ಕು ವರ್ಷಗಳವರೆಗೆ ಅವರು ಮೈಸೂರು ಸಂಸ್ಥಾನದ ಕೆಲಸವನ್ನು ಬಿಟ್ಟು ಮದರಾಸ್ ಗವರ್ನಮೆಂಟಿನ ಕಡೆಗೆ ಸೇರುವರೆಂದು ನಂಬತಕ್ಕ ವರ್ತಮಾನವಿದೆ ಈ ಸುದ್ದಿಯು ಬಹಳ ಆಶ್ಚರ್ಯವನ್ನು ಉಂಟುಮಾಡಿದೆ ಈ ಸಂಗತಿ ವೆಸ್ಟ್ ಸಾಹೇಬರವರು ಮಹಾರಾಜರವರ ಪ್ರೀತಿಗೆ ಪಾತ್ರರಾಗಿದ್ದರೆಂದು ಸರ್ವರೂ ನೆನಸುತ್ತಲಿದ್ದರು ಇಷ್ಟು ಒಳ್ಳೆಯವರೂ, ಕೆಲಸದಲ್ಲಿ ನಿಪುಣರೂ ಆಗಿರುವಂಥ ಸಾಹೇಬರು ನಮ್ಮ ಸಂಸ್ಥಾನದಲ್ಲಿ ನೌಕರಿಯನ್ನು ಬಿಟ್ಟುಬಿಡುವದಕ್ಕೆ ಮಹಾರಾಜರವರು ಯಾಕೆ ಒಪ್ಪಿಕೊಂಡರೋ ನಮಗೆ ತಿಳಿಯದು

ಮೈಸೂರು ಗೆಜೆಟು ಸಂಗ್ರಹ.

ಅಜಸ್ಟೇಟಿವ ಸರ್ಟಿಟು ಗವರ್ನಮೆಂಟ್ ಅಡ್ವೋಕೇಟ್ ಮತ್ತು ರಿಜಿಸ್ಟ್ರೇಷನ್ ಇನ್ಸ್‌ಪೆಕ್ಟರ್ ಜನರಲ್‌ರವರಾದ ಮೈಸೂರು ಮೆ|| ಸಿ. ಮಾದಾಪತಯ್ಯರವರು, ಮೆ|| ಕೃಷ್ಣಮೂರ್ತಿಯವರ ಗೈರುಹಾಜರಿ ಕಾಲದಲ್ಲಿ ಅವರ ಮಾತ್ರವೇ ಈ ಮಾಸಂ ೭ ನೇ ತಾರೀಖಿನ ತನಕ ಅವರ ಕೆಲಸವನ್ನು ನಡೆಸಿಕೊಂಡುಬರುವಂತೆ ಆಜ್ಞೆ ಮಾಡಲ್ಪಟ್ಟಿರುತ್ತಾರೆ

ಮೆ|| ಪಿನಾಸ್ಸು ಅಯ್ಯಂಗಾರರು ೭ನೇ ಕೆಲಸದ ಮೇಲಿರುವ ಕಾಲದಲ್ಲಿ ಅವರ ಮತ್ತು ಇವರ ಕೆಲಸ ಕಾಲದಲ್ಲಿ ಡಿವಿಷನಲ್ ಪೊಲೀಸ್ ಪಿಡ್ಡಯ್ಯನವರು ತಮ್ಮ ಸ್ಥಾನದ ಡ್ರಾಫ್ಟ್ ಸ್ಮನ್, ರಿಜಿಸ್ಟ್ರೇಷನ್ ಇನ್ಸ್‌ಪೆಕ್ಟರ್ ಜನರಲ್ಲಾಗಿಯೂ, ಕಾಂಗ್ರೆಸ್ ಹಸ್ತಪ್ರಾಯೋರು ರಿಜಿಸ್ಟ್ರೇಷನ್ ಆಗಿಯೂ ನೇಮಕಮಾಡಲ್ಪಟ್ಟಿರುತ್ತಾರೆ

ಪ್ರೊಬೇಷನರಿ ಅಸಿಸ್ಟೆಂಟ್ ಕಂಟ್ರೋಲರ್ ಮಿ|| ಡಿ. ಎಸ್. ಸುಬ್ಬರಾಮಯ್ಯರವರು ಮೈಸೂರು ಗವರ್ನಮೆಂಟ್ ಇನ್ಸ್‌ಪೆಕ್ಟರಾಗಿ ನೇಮಕಮಾಡಲ್ಪಟ್ಟಿರುತ್ತಾರೆ

ತಾ|| ೨೭ ನೇ ಫೆಬ್ರವರಿ ೧೮೯೩ ಇಸವಿ ಗವರ್ನಮೆಂಟಿನವರ ಹುಕುಂ ಅನುಸಾರ, ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರ ಆಫೀಸ್ ಮತ್ತು ಸ್ಟೋರುಗಳು ೧ನೇ ಏಪ್ರಿಲ್ ನೇ ಇಸವಿ ಮಾರ್ಚಿ ಗುರ್ರ್ ತಾರೀಖಿನಲ್ಲಿ ಬೆಂಗಳೂರು ಹೆಡ್‌ಕ್ವಾರ್ಟರ್ಸಿನಿಂದ ಮೈಸೂರಿಗೆ ವರ್ಗ ಮಾಡಲ್ಪಡುವದೆಂದು ಇದರಿಂದ ಪ್ರಕಟಿಸಲ್ಪಟ್ಟಿರುತ್ತೆ

ವಿನತ ಯುಗ.

ಇಂಡಿಯಾ ದೇಶದಲ್ಲಿ ಜ್ಯೂರಿ ವಿಚಾರಣೆಯನ್ನು ನಿಲ್ಲಿಸಬೇಕೆಂಬ ಮುಕದ್ದಮೆಯನ್ನು ರದ್ದು ಮಾಡದೆ ಇರುವದರಿಂದ ಗವರ್ನಮೆಂಟಿನವರು ತಪ್ಪುತಪ್ಪಿದರು

ಫೆಬ್ರವರಿ ತಾ|| ೨೭ ನೇ ರಾತ್ರಿ — ಇಂಗ್ಲೆಂಡಿನಿಂದ ಈ ದೇಶದ ಜ್ಯೂರಿ ಕಮಿಷನರ್ ನವರು ಜಾಗ್ರತೆಯಲ್ಲಿ ತೀರ್ಮಾನವನ್ನು ಹೇಳಬೇಕೆಂತಲೂ ಡೇಲಿನ್ಯೂಸ್ ಎಂಬ ಪತ್ರಿಕೆಯಲ್ಲಿ ಪ್ರಕಟಿಸಿರುತ್ತೆ

ಕ್ವೀನ್‌ಸ್ಲ್ಯಾಂಡಿನ ಗವರ್ನಮೆಂಟಿನವರು ಹಿಂದಿನ ಪ್ರವಾಹದಿಂದ ಎಷ್ಟು ನಷ್ಟವಾಯಿತೋ ಈಗಲೂ ಅಷ್ಟೇ ನಷ್ಟವಾಗಿರುತ್ತೆಂತಲೂ ಅದರಿಂದ ೧೨ ಕೋಟಿ ರೂಪಾಯಿಗಳವರೆಗೂ ನಷ್ಟವಾಗಿರುತ್ತೆಂತಲೂ ಪ್ರಜೆಗಳ ಕಷ್ಟವನ್ನು ನಿವಾರಿಸುವದಕ್ಕೆ ಸಾಧ್ಯವಾಗದೆ ಎಂತಲೂ ಲೋಕದ ಜನರೆಲ್ಲರೂ ತಮ್ಮ ಶಕ್ತ್ಯಾನುಸಾರ ಸಹಾಯ ಮಾಡಬೇಕೆಂತಲೂ ಸರ್ಕಾರದವರು ಕೇಳಿರುತ್ತಾರೆ

ಅವಿಸಾರರು ತಮ್ಮ ರಾಜ್ಯದ ಸುತ್ತು ಕಡೆಗಳಲ್ಲಿಯೂ ತಮ್ಮ ಕಡೆ ಸೈನ್ಯವನ್ನು ಜಾಸ್ತಿಯಾಗಿ ಇರಿಸಿಕೊಂಡಿರುತ್ತಾರೆಂತಲೂ ಕಾಫರಿಸ್ತಾನ್ ಎಂಬಲ್ಲಿ ಒಬ್ಬ ಇಂಗ್ಲಿಷ್ ಸಂನ್ಯಾಸಿಯು ಗುಂಡಿನಿಂದ ಹೊಡೆದು ಕೊಲ್ಲಲ್ಪಟ್ಟನೆಂತಲೂ ಇಂಗ್ಲಿಷ್ ಗವರ್ನಮೆಂಟಿನವರಿಗೆ ವಿರೋಧವಾದ ಕಾರ್ಯಗಳನ್ನೇ ಮಾಡುತ್ತಿದ್ದಾರೆಂತಲೂ ಅಮೀರ್ ಖಾನ್ ಎಂಬವರ ವಶಕ್ಕೆ ೪೦,೦೦೦ ಪಡೆಯನ್ನು ಕೊಟ್ಟಿದ್ದಾರೆಂತಲೂ, ಮತ್ತು ಅಲ್ಲಲ್ಲಿ ಜನರನ್ನು ಯುದ್ಧಕ್ಕೆ ಚಿತಾವಣೆ ಮಾಡುತ್ತಿದ್ದಾರೆಂತಲೂ ವರ್ತಮಾನ ಬಂದಿರುತ್ತೆ

ರೋಂ ಪಟ್ಟಣದಲ್ಲಿ ಮತಾಧಿಪತಿಗಳಾದ ಪೋಪರವರು ವಿಲಾಯಿತಿಯಿಂದ ಬಂದಿದ್ದ ರಾಯಭಾರಿಗಳನ್ನು

ಫೆಬ್ರವರಿ ತಾ|| ೨೮ ನೇ ರಾತ್ರಿ — ತಮ್ಮ ಆಶೀರ್ವಾದವನ್ನು ವಿಲಾಯಿತಿಗೆ ತಿಳಿಸುವದಲ್ಲದೆ, ಕೆಲವು ಕಾಲದೊಳಗಾಗಿ ವಿಲಾಯಿತಿಯವರ್ ಕೆಥೋಲಿಕರಾಗುವರೆಂಬದಾಗಿ ತಿಳಿಸಬೇಕೆಂದು ಹೇಳಿ ಕಳುಹಿಸಿರುತ್ತಾರೆ

ಜರ್ಮನಿಯ ವಿಕ್ಟೋರಿಯಾ ಟರ್ಮಿನಸ್ಸಿಗೆ ಎರಡು ಭಾಗದಲ್ಲಿ ಮುಸ್ಲಿಮೇನಿಯಾ ಎಂಬ ಒಂದು ಭಾರಿ ಕಟ್ಟಡಕ್ಕೆ ಗವರ್ನರವರು ಅಸ್ತಿಭಾರ ಹಾಕಿದರು ಅಲ್ಲಿ ಅನೇಕ ಹಿಂದೂ, ಇಂಗ್ಲಿಷ್, ಮಹಮ್ಮದೀಯ ದೊಡ್ಡ ಮನುಷ್ಯರು ಹಾಜರಾಗಿದ್ದರು

ನೇಪಾಳದ ಮಂತ್ರಿಗಳಾದ ಸರ್ ಬೀರಷಂಷೀರ್ ರವರು ಕಲ್ಕತ್ತೆಯಿಂದ ಕಾಟಮಂಡುವಿಗೆ ಹೋಗುವದಕ್ಕೆ ಮುಂಚೆ ತಮಗೆ ಆತಿಥ್ಯ ಮಾಡಿದ ಲಾರ್ಡ್ ರವರ ಶಾಖೆಗೆ ೭೦೦೦ ರೂಪಾಯಿಗಳನ್ನು ಕೊಟ್ಟರು

ಜರ್ಮನೀ ದೇಶದ ರೀಚ್‌ಸ್ಟಾಗ್ ಎಂಬ ಪಾರ್ಲಿಮೆಂಟ್ ಸಭೆಯಲ್ಲಿ ಮಿಲಿಟರಿ ಬಿಲ್ ಎಂಬದನ್ನು ನಾಲ್ಕು ಎಂಬಗೂ ಬದಲಾಯಿಸಿ ಅಂಗೀಕರಿಸಿದರು

ಮಾರ್ಚಿ ತಾ|| ೧ ನೇ ಎಷ್ಟು ಶಕ್ತಿ ಇಲ್ಲದವರೂ ಸಹಾಯ ಎಂಬದಾಗಿ ಜನರಲ್ ವರ್ಣಕ್ಷ್ಯಂಪಿನು ಹರು ತೀರ್ಮಾನಿಸಿದರು

ಉತ್ತರಮೆರಿಕಾ ಕಾನ್ಪೂರು ಈ ಪ್ರಾಂತ್ಯಗಳಲ್ಲಿ ೨೫—೨೬ ತಾರೀಖಿನಂದು ಇನ್ನಷ್ಟು ಮಳೆಯು ಸುರಿದು ಅಲ್ಲಿನ ಕೃಷಿ ತೋಟಗಳಿಗೆ ವಿಶೇಷ ನಷ್ಟವನ್ನುಂಟುಮಾಡಿರುತ್ತೆ ಲಾಹೋರಿನ ಒಂದು ಕೋಟೆಯಲ್ಲಿ ಸುಮಾರು ೨,೫೦೦ ರೂಪಾಯಿಗಳ ಕಳವಾಯಿತು ಹೋಯಿತು

ಜೆರೂಸಲೆಂ ಫ್ರಾನ್ಸಿಸ್ಕನರವರ ಕಾಂವೆಂಟು ೦೭ ಸಾವಿರ ರೂಪಾಯಿನ ಕಳವಾದಂತಲ್ಲಿ ಒಬ್ಬ ನೀಗ್ರೋ ಮುಂಗಳ ಸಭಾ, ಇವನ್ನು ಬೆಳಗಿನ ಜಾವ ಮೂರು ತಿಂಗಳಿಗೆ ಸಜಾ ಆಯಿತು

ಕಲ್ಕತ್ತಾನ ಹಿಂದೂಗಳ ಇಂಗ್ಲಿಷ್ ಸೊಸೈಟಿಯ ಮೂಲಕ ಅವರುಗಳು ಹಲವು ಪತ್ರಗಳನ್ನು ಇಂಡಿಯಾ ಗವರ್ನಮೆಂಟಿಗೆ ಬರೆದು ಕಳುಹಿಸುವವರಲ್ಲಿದ್ದಾರೆ

ಸ್ವೀಡನ್‌ದಲ್ಲಿ ಭೂಕಂಪದ ಉಂಟಾಯಿತು ವಿಶೇಷ ನಷ್ಟವೇನಾಗಿ ಮಾಡಲಿಲ್ಲ

ಮೆ|| ದಾದಾಭಾಯಿ ನವರೋಜಿಯವರು ಇಂಡಿಯನ್ ಸಿವಿಲ್ ಸರ್ವೀಸ್ ಪರೀಕ್ಷೆಯು ಇಂಡಿಯಾದಲ್ಲಿಯೂ, ಇಂಗ್ಲೆಂಡಿನಲ್ಲಿಯೂ ಏಕಕಾಲದಲ್ಲಿ ಜರುಗಬೇಕೆಂದು

ಮಾರ್ಚಿ ತಾ|| ೨ ನೇ ಒಂದು ಬಿಲ್ಲನ್ನು ಪಾರ್ಲಿಮೆಂಟಿನಲ್ಲಿ ಒಪ್ಪಿಸಿದರು ಇದು ಎರಡನೇ ವಾಚನಕ್ಕೆ ಬರುವ ಬಗ್ಗೆ ಚರ್ಚಿಸುವವರು ಇರುವರು

ಹವಾಯಿ ಗವರ್ನಮೆಂಟಿನವರು ತಮ್ಮ ರಾಜ್ಯವನ್ನು ಸಂಯುಕ್ತ ಸಂಸ್ಥಾನಗಳಿಗೆ ಸೇರಿಸಿಕೊಳ್ಳಬೇಕೆಂದು ಬರೆದುಕೊಂಡಿದ್ದ ಅರ್ಜಿಯನ್ನು ಅವರು ಅನುಮೋದಿಸಿರುವಂತೆ ತೋರುತ್ತೆ

ಫೆಬ್ರವರಿ ರಾಜ್ಯದ ಬೊಕ್ಕಸ ಹೋಗತಕ್ಕವರೆಲ್ಲ ಮತ್ತು ಅರ್ಧ ಸಂಬಳವನ್ನು ತಮ್ಮ ಸಂಸಾರಕ್ಕಾಗಿ ವಿಲಾಯಿತಿಗೆ ಕಳುಹಿಸಬೇಕೆಂದು ಅಧಿಕಾರಿಗಳ ಸಂಬಳಕ್ಕೆ ರೂಪಾಯಿಗೆ ೧|| ಷಿಲ್ಲಿಂಗ್ ಪ್ರಕಾರ ನಾಣ್ಯ ಮಾಡುವಂತೆ ಸೆಕ್ರೆಟರಿ ಆಫ್ ಸ್ಟೇಟ್ ರವರು ಒಪ್ಪಿ ಮುಕ್ಕಾಂ ತೀರ್ಮಾನದಲ್ಲಿರುವರೆಂದು ವರ್ತಮಾನ ಬಂದಿದೆ

ಅಮೀರರು ಮೈಸೂರಿನವರಿಗೆ ಮೆ|| ಪೆಮ್ಬ್ರೋಕ್ ರವರ ಮೂಲಕ ಕಾಗದವನ್ನು ಬರೆದು ಕಳುಹಿಸುತ್ತಾರೆಂದು ವಾರ್ತೆಯಿರುವದೆಂದು ಗೊತ್ತಾಗಿದೆ

ಮೊರಾಕೊ ದೊರೆಯ ಹೊಸ ಸ್ವಾಸ್ಥ್ಯಗಳಾದ ಸರ್ ಜೂಜ್ ಪರ್ಸಿ ರವರು ೭ನೇ ತಾರೀಖಿಗೆ ಇಂಡಿಯಾಕ್ಕೆ ಬರುವಂತೆ ಏರ್ಪಾಡಾಗಿದೆ

ಅವಿಸಾರರ್ ಭೂಮಿಯ ಅಲೆಯಲ್ಲಿನ ಭಯ ಏನೆಂದರೆ ಸ್ವಪ್ನವು ಕಾಣಿಸುತ್ತಿರುವಂತೆ ತಮ್ಮ ಆ

ಮಾರ್ಚಿ ತಾ|| ೩ ನೇ ಧಿಕಾರಿಗಳಿಗೆ ಬಜೆಟ್ಟಿ ನಮಾಡಿದಾರೆಂದು ಬುಧವಾರ ಬಿಷಪರಿಗೆ ವರ್ತಮಾನ ಬಂದಿರುತ್ತೆ

ಮೈಸೂರಿನವರು ಕಲ್ಲುತರವನ್ನು ಎಸ್ಟೇಟ್ ಕೈಕಟ್ಟಿ ಖಚಿತವಾಗಿ ಬಿಡುವರೆಂತಲೂ ಸೆಟ್ಟಿಗೆ ಸೆಟ್ಟಿಗೆ ಹೋಗಿ, ಅಲ್ಲಿಂದ ಕ್ಷೇತ್ರದಲ್ಲಿ ಹತ್ತುದಿನಗಳು ಇರುವರೆಂತಲೂ ಗೊತ್ತಾಗಿದೆ

ಬುಧವಾರದ ದಿವಸ ಕಾಶ್ಮೀರ ಮಹಾರಾಜರವರ ಅರಮನೆ ಯಿಂದ ರಾಮಗಢ ಎಂಬ ಸ್ಥಳದಲ್ಲಿ ಪೊಲೀಸಿನವರಿಗೂ ಬ್ರಿಟಿಷ್ ಎಂಬ ಜನರಿಗೂ ಜಗಳವಾಗಿ ಒಬ್ಬ ಪೊಲೀಸಿನವನಿಗೆ ಪೂರಾ ಗಾಯಗಳಾದವು ಎದುರುಕಕ್ಷಿಯವರಲ್ಲಿ ಒಬ್ಬನು ಕೊಲ್ಲಲ್ಪಟ್ಟನು

ಲಾಹೋರಿನಲ್ಲಿ ೧೪ನೆಯ ಉಪದ್ರವದ ಕಳೆದ ಡಿಸೆಂಬರಿನಲ್ಲಿ ೩೦ ಮಂದಿ ಸತ್ತರು ರಾವಲ್ ಪಿಂಡಿಯಲ್ಲಿ ೧೯೬ ಜನರು ಸತ್ತರು ಹಾಜೀಪಿನಲ್ಲಿಲ್ಲ ಈ ಉಪದ್ರವದಿಂದ ಸತ್ತವರು ೬೭೧ ಮಂದಿ ಎಂದು ತಿಳಿಸುತ್ತಾರೆ

ಲಾಹೋರಿನಲ್ಲಿ ಸರ್ ಜನರಲ್ ರವರ ಮನೆಗೆ ಕಳ್ಳರು ನುಗ್ಗಿ ಜವಾಹರುಗಳನ್ನು ಕೊಠಡಿಗಳಲ್ಲಿ ಬೀಗಹಾಕಿ ಬಂಗಲೆಗಳನ್ನು ಒಡೆದು ಒಳಗಿದ್ದ ನಗ ನಾಣ್ಯಗಳನ್ನು ೧,೦೦೦ ರೂಪಾಯಿನ ವರೆಗೂ ಅಪಹರಿಸಿಕೊಂಡು ಹೋದರು

ಬರುವ ಸೋಮವಾರದಿಂದ ಜಂಬೀಸಿಹಾಷ್ ವಿಚಾರಣೆಯು ನಡೆಯುವಂತೆ ಸರ್ ರೋಮೇಶ್ ಚಂದ್ರಮಿತ್ರರು ಕಟಕ್ ನಿಂದ ಕಲ್ಕತ್ತೆಗೆ ನಾಳೆ ಹೋಗಿ ತಲಪುತ್ತಾರೆ

ಲಾರ್ಡ್ ರಾಬರ್ಟ್ಸ್ ರವರು ಬರುವ ತಿಂಗಳ ೮ನೇ ತಾರೀಖಿನ ದಿವಸ ಸರ್ ಜಾರ್ಜ್ ವೈಟ್ ರವರಿಗೆ ಪಾಂಡಿಯಲ್ಲಿ ಸೈನ್ಯದ ಭಾರವನ್ನು ಒಪ್ಪಿಸುವರು

ಮಾರ್ಚಿ ತಾ|| ೪ನೇ ಈ ತಿಂಗಳು ೨೪ಕ್ಕೆ ಅವರು ಕಲ್ಕತ್ತೆಯನ್ನು ಬಿಟ್ಟು, ೨೫—೨೬ರಲ್ಲಿ ಕಲ್ಕತ್ತೆ ಶನಿವಾರ ಪ್ರವಾಸದಲ್ಲಿಯೂ ೨೭—೨೮ರಲ್ಲಿ ದಿಲ್ಲಿಯಲ್ಲಿಯೂ ಇರುವರು ಜಯಪುರದಲ್ಲಿ ಮೂರು ದಿನಸ ಇರುತ್ತಾರೆ ಮುಂಬಯಿಗೆ ಬರುವ ಮಾರ್ಗದಲ್ಲಿ ಜೋಧಪುರ, ಅಹಮ್ಮದಾಬಾದ ಈ ಪಟ್ಟಣಗಳಿಗೆ ಹೋಗುವರು

ಬಂಗಾಳ ೮ರ ವಿಚಾರಣೆಯು ಸೋಮವಾರ ಪ್ರಾರಂಭವಾಗುವಂತೆ ಗೊತ್ತಾಗಿದೆ

ಮುಂಬಯಿಯಲ್ಲಿ ವಿಲಿಯಂ ಡಾವರ್ ಎಂಬ ಒಬ್ಬನ ಶಸ್ತ್ರಕ್ರಿಯೆ ಸಮಯದಲ್ಲಿ ಬಿದ್ದು ಆತನ ಮುಖಾಗಿ ಸತ್ತಿದ್ದನು ಅವನ ತಲೆಯಲ್ಲಿ ಪಿಸ್ತೂಲಿನ ಗುಂಡಿನ ಏಟಿನ ಘಾಯವಿತ್ತು ವಿಚಾರಣೆಯಲ್ಲಿದೆ

ಕರಸ್ಪಾಂಡನ್ಸ್.

ಅಯ್ಯಾ,

ಪ್ರತಿವರ್ಷದ ಡಿಸೆಂಬರು ಜನವರಿ ಮತ್ತು ಫೆಬ್ರವರಿ ತಿಂಗಳುಗಳಲ್ಲಿ ಈ ಪಾಳ್ಯದ ಬ್ರಾಹ್ಮಣರು ಮತ್ತು ಇತರ ಜಾತಿಯವರು ಮನೆಗಳಲ್ಲಿ ಹಾಲು ಕರೆಯುವ ದನಗಳನ್ನು ಇಟ್ಟುಕೊಳ್ಳುವರು ಈ ಪ್ರಾಂತ್ಯದ ರೈತರುಗಳು ತಮ್ಮ ತಮ್ಮ ಅನುಕೂಲವನ್ನು ನೋಡುವಾಗಿ ಸುಮಾರು ೧೦೦ ಮಂದಿ ಲಾಗಾಯಿತು ೧—೨ ವರ್ಷಗಳವರೆಗೂ ಬೆಳೆಯುತ್ತಾರೆ ಇದು ಹಾಗಿರಲಿ

ಅನೇಕ ಜನ ರೈತರು ಮತ್ತು ಒಕ್ಕಲಿಗರಾದವರು ಕಾಫಿ ಹಣ್ಣು ಬಿಡಿಸುವ ಕಾಲದಲ್ಲಿ ತಕ್ಕ ಸಿಬ್ಬಂದಿಗಳ ಸಿಕ್ಕುವ ನಿಗಾವಣೆ ಮಾಡುವದಕ್ಕೆ ಅನಾನುಕೂಲವೂ ಮತ್ತು ಕೈ ಮೊಗ ನೀರಿನ ತೊಂದರೆಗಳು ಪ್ರಾಪ್ತ ವರ್ಷದ ಕಷ್ಟವನ್ನು ಹಿಮದಲ್ಲಿ ನೀಗಿಕೊಳ್ಳುತ್ತಾರೆ ಇದು ಸಸ್ಯದಯುಕ್ತವಾದ ತುಂಬಾ ಸ್ವಾದುತ್ವವನ್ನುಂಟುಮಾಡದ ಇತರ ಊರು

ತೋಟಗಳಲ್ಲಿ ಕಳ್ಳರ ಬಾಯಿಗೆ ಹೋಗುವ ಹಾಲು (ಹಾಲು) ತವನಿಗೆ ಪೂರೈಸಿದಷ್ಟು ಹಣವನ್ನು ಪಡೆದುಕೊಂಡು ಬಂದು ಮನೆಗಳಿಗೆ ಸಮೀಪವಾಗಿ ಮಾಡಿಕೊಂಡಿರುವ ಕಾಣಗೆಂಬವರುಗಳ ಒಡೆಗಳಲು ತಂದು ಹಾಕಿಕೊಂಡು ಇರುತ್ತಾರೆ ಆದರೆ (ರಾಮೇಶ್ವರಕ್ಕೆ ಹೋದರೂ ಶನೈಶ್ಚರನ ಕಾಟ ಬಿಡದು) ಎಂಬ ಗಾದೆಗೆ ಸರಿಯಾಗಿ ರಾತ್ರಿ ಕಾಲದಲ್ಲಿ ಕಾವಲಿಗೆ ತಕ್ಕ ಉಪಪತ್ತಿ ಸ್ಥಳ ಸನಿಹ ಕಣಗಳಲ್ಲಿ ನಿದ್ರಾಭಯದಿಂದ ಸ್ವಲ್ಪಕಾಲ ಮಲಗಿರಲು ಇದೇ ಈ ಸಮಯವನ್ನೇ ನಿರೀಕ್ಷಿಸಿಕೊಂಡು ಇರುವ ಕಳ್ಳರು ಕೈಗೆ ಸಿಕ್ಕಿದಷ್ಟು ತಕ್ಷಣ ದಬ್ಬಿಕೊಂಡು ಹೋಗುತ್ತಾರೆ

ಇದೂ ಅಲ್ಲದೆ ಇನ್ನೂ ಕೆಲವು ಕಡೆಗಳಲ್ಲಿ ಒಣಗಿಸಿ ಹಾಕಿಸಿದ ಬೀಜವನ್ನು ಮನೆಗಳ ಒಳಕ್ಕೆ ಹಾಕಿ ಸಂಧ್ಯಾ ಕಾಲ ಮುಟ್ಟಿಗೆ ಭದ್ರಪಡಿಸಿ ಇಟ್ಟಿದ್ದಾಗ್ಯೂ ರಾತ್ರಿ ಕಾಲದಲ್ಲಿ ಕಳ್ಳರು ಹಿಂದಿನಿಂದ ಮನೆಮಾಡಿ ಮನೆಗಳ ಒಳಕ್ಕೆ ಪ್ರವೇಶಿಸಿ ಬಗರೆಯಲ್ಲಿ ತುಂಬಿಟ್ಟುಕೊಂಡು ಇದ್ದು ಮನೆಯವರಿಗೆ ನಿದ್ರೆ ಬಂದಿದ್ದ ಸಮಯದಲ್ಲಿ ತಲೆಬಾಗಿಲು ತೆರೆದು ಬೀಜವನ್ನು ಸಾಗಿಸಿಕೊಂಡು ಹೋಗುತ್ತಾರೆ

ಅದ್ದರಿಂದ ಒಡೆಯರು ಮತ್ತು ಧನಿಕರೊಬ್ಬರು ಸಹ ಇಂಥಾ ಸಮಯಗಳೂ ಮತ್ತು ನಷ್ಟಕ್ಕೂ ಗುರಿಯಾಗುತ್ತಾರೆ ಪ್ಯಾಗಂಬರೆ ಒಡೆಯರಿಗೆ ಸ್ವತಃ ಕಷ್ಟಯೊಪ್ಪಿದರೂ ಪ್ರಣ್ಯವಂತರಿಗೆ ನಂಬಿದವರು ಮೋಸಹೋಗುವದರಿಂದಲೂ ನಷ್ಟವಾಗುತ್ತೆ

ಈ ಮಲೆನಾಡು ಗ್ರಾಮಾಂತ್ರಗಳಲ್ಲಿ ದನುಕ್ಕಾಲು ಮೂಡಲಬಿಡಿಸುವ ಪಟ್ಲರ ಸಾಹಿಕಲಿಗಳೇ ಮೊದಲು ಒಂದೇ ಬಸ್ತಾದ ಹಣದ ಮನೆಗಳು ಅಧೀನವಾಗಿದ್ದೆ ಅದರ ಗಸ್ತುವಾದ ಗ್ರಾಮಗಳಲ್ಲಿ ಮಾತ್ರ ಬಂದೋಬಸ್ತು ಮಾಡುವದು

ಮನೆಗಳ ಬೇಲಿಯ ವಿಷಯದಲ್ಲಿ ಆಲೋಚನೆ ಮಾಡಿದರೆ ವಿಪರೀತ ಕಾಲಿಯ ದೇಹದಿಂದಲೂ ಮತ್ತು ಪ್ರಾಣದಲ್ಲಿ ಲೆಕ್ಕಸರ ಬುದ್ಧಿ ಬಂದಾ ಕಷ್ಟಿಯಾಗಿದ್ದರಿಂದಲೂ ಅನಾಕೂಲವಾದ ಕಾರಣ ಪಟ್ಟು ಮನೆಯಲ್ಲಿಯೇ ಮಾಡುವುದು ತಕ್ಕವೆಂದು ತೋರುತ್ತದೆ

ಈ ಪ್ರಾಂತ್ಯದ ಪರ್ವತಕ್ಕೆ ಮುಖ್ಯ ಆಧಾರವು ಕಾಫಿ ಮತ್ತು ಏಲಕ್ಕಿ ಬೆಳೆಯಾಗಿದೆ ಇಲ್ಲೇ ಈ ಫಲವು ಅಭಿವೃದ್ಧಿಯಾಗುತ್ತಾ ಬಂದ ಹಾಗೆಲ್ಲಾ ದೇಶದ ಭಾಗ್ಯವು ಹೆಚ್ಚುತ್ತಾ ಬಂದಿರಬಹುದೆಂದು ತೋರುತ್ತೆ.

ಆದರೆ ಮೇಲ್ಕಂಡ ಕಾರಣದಿಂದ ಇಲ್ಲಿನ ಜನಗಳು ಐಶ್ವರ್ಯವಂತರಾಗುತ್ತಾ ಬಂದ ಹಾಗೆಲ್ಲಾ ಸ್ವಲ್ಪ ಮಟ್ಟಿಗೆ ನಾಗರೀಕತೆಯನ್ನು ಹೊಂದಿದವರಾಗಿ ತಮ್ಮ ತಮ್ಮ ಸ್ವತ್ತು ಮತ್ತು ಆತ್ಮಸಂರಕ್ಷಣೆಗಳ ಪಕ್ಷವನ್ನು ಕಾಪಾಡಿಕೊಳ್ಳುತ್ತಾ ಬಂದಾಗ್ಯೂ ಮತ್ತು ಜನಗಳ ಸ್ವತ್ತನ್ನೂ ಪ್ರಾಣವನ್ನೂ ರಕ್ಷಣೆ ಕಾಪಾಡಿಕೊಂಡು ಬರಲೂ ತಕ್ಕ ಮಟ್ಟಿಗೆ ಪೊಲೀಸು ಸಿಬ್ಬಂದಿಗಳು ಇದ್ದಾಗ್ಯೂ ಮೇಲ್ಕಂಡ ರೀತಿಯಾದ ಖೂನಿ ಮತ್ತು ಇನ್ನಿತರ ಕಳುವು ಮತ್ತು ದರೋಡೆಗಳು ತಪ್ಪದೆ ಯಾಗದೆ ಇರಲಿಕ್ಕೆ ಕಾರಣವೇನೆಂದು ನನ್ನ ಬುದ್ಧಿ ಸ್ನೇಹಿತರನ್ನು ಪ್ರಶ್ನೆ ಮಾಡಿದ್ದರಲ್ಲಿ ತಿಳಿದುಬಂದದ್ದೇನೆಂದರೆ

ಒಳ್ಳೆಯವರು ಸಹ ಆರ್ಥಿಕ ಬಗೆಗೆ ಮಾತ್ರ ರಾಗಿಯೂ ಅಥವಾ ದುಸ್ಸಹವಾಸದ ದೆಸೆಯಿಂದ ತಾವು ಮಾಡಿದಕ್ಕೆ ಬರಬೇಕಾಗುತ್ತೆಂಬ ಭಯೋತ್ಪಾದನೆಯಿಂದಲೂ ಕೆಟ್ಟ ಕೃತ್ಯವನ್ನು ನಿಗ್ರಹಿಸುತ್ತಾರೆಂತಲೂ ಮತ್ತು ಸ್ವತ್ತನ್ನು ಕಳೆದುಕೊಂಡವರು ಸಾಕಾದ ರುಜುವಾತು ತೋರಿಸುವುದಿಲ್ಲ ಅಥವಾ ಸರಕಾರಕ್ಕೆ ಹೋದರೆ ಬರಿಯುವವರಿಂದ ತಮ್ಮ ಇತರ ಸ್ವಂತ ಕೆಲಸಗಳೆಲ್ಲಾ ಅವರಿಗೆ ಸಂಭವಿಸುತ್ತದೆಂತಲೂ ಆಟಂಕರವನ ಹೆಚ್ಚುವಿಕೆ ಕಾಡಿಯಂತೆ ಸುಮ್ಮನಿರುತ್ತಾರೆಂದು ಹೇಳಿದರು. ಆದರೆ ಈ ವಿನಾಗಿ ಸಂಕಟ ಪಡುವವರನ್ನು ರಕ್ಷಿಸುವವರ್ಯಾರೆಂದು ಪ್ರಶ್ನೆ ಮಾಡಿದರೆ ಅಯ್ಯೋ— ಈ ಸಂಕಟ ಮತ್ತು ನಷ್ಟ ಸಹ ಪರಿಹಾರಗಳಿಕ್ಕೆ ಯಾತಕ್ಕೆ ಯೋಚನೆ ಮಾಡುವಿರಿ ಸರ್ವಚೈತನ್ಯಸ್ವರೂಪನಾದ ಭಗವಂತನಂತೆ ಇಹಲೋಕಕ್ಕೆ ಸರ್ಕಾರದವರಿಲ್ಲವೇ? ಈಗ ಸರ್ಕಾರದವರು ಇಂಥಾ ಕೃತ್ಯ ವಗೈರೆ ನಡೆಯದಂತೆ ಏರ್ಪಾಡು ಮಾಡಿಲ್ಲವೇ? ಸಂದೇಹವೇನು ಮಾಡಿದ್ದಾರೆ ಆದಾಗ್ಯೂ ಮೇಲ್ಕಂಡ ಕಾರಣಗಳಿಂದ ಈಗಿನ ಪೊಲೀಸ್ ಸಿಬ್ಬಂದಿಯೂ ಕಾಫಿ ಏಲಕ್ಕಿ ರೇಟಿ ಕಾಲಕ್ಕೆ ಮಾತ್ರ ಬರಗಾಲದವರು ಆಕ್ಷನ ಸಾಲವು ಎಂಬ ಅಂಶ ಮತ್ತು ಅವಶ್ಯಕತೆ ಗವರ್ನಮೆಂಟಿನವರ ಚಿತ್ತಕ್ಕೆ ಬಂದು ಯುಕ್ತ ತೋರಿದರೆ ಅದಕ್ಕೆ ತಕ್ಕ ಏರ್ಪಾಡು ಮಾಡದೆ ಇರಲಾರರು. ಮತ್ತು ಇಂತಾ ಸಂಗತಿಗಳನ್ನೂ ಪ್ರಜೆಗಳ ಅವಸ್ಥೆ ವಗೈರೆಯನ್ನೂ ವಿಚಾರಿಸಿ ಮತ್ತು ಆಲೋಚಿಸಿ ಅಗತ್ಯತೋರುವ ಮತ್ತ ವಿಧಗಳಿಕ್ಕೆ ಬಗ್ಗೆ ಅಲ್ಲವೇ ಪ್ರತಿವರ್ಷವೂ ರೆಪ್ರೆಸೆಂಟೆಟಿವ್ ಎಂಬ ಸಭೆಯನ್ನು ಗವರ್ನಮೆಂಟಿನವರು ನೇಮಿಸತಕ್ಕದ್ದು. ಆದರೆ ತಾವು ಯನ್ನ ವಾಕ್ಯವು ಈ ಕೊನ್ನನವಂತ ಪ್ರಜೆಗಳು ತಮ್ಮ ಕಷ್ಟಸುಖಗಳನ್ನು ಮೇಳಕೊಟ್ಟರದೇಯೂ ಸ್ಥಳೀಯ ಸಂಗತಿಗಳನ್ನು ಅವರ ಚಿತ್ತಕ್ಕೆ ತಾರದೇ ಇದ್ದರೆ ಸೋದರ ಪ್ರಜೆಗಳ ತಪ್ಪಲ್ಲವೆ?

ಮೇಲ್ಕಂಡ ನನ್ನ ಸ್ನೇಹಿತರ ಅಭಿಪ್ರಾಯವನ್ನು ಸಹ ಈ ಘನವಾದ ಗವರ್ನಮೆಂಟಿನವರ ದಿವ್ಯ ಚಿತ್ತಕ್ಕೆ ಈ ಕೆಳಗೆ ನಮೂದಿಸುವ ಅಂಶವನ್ನು ತಂದರೆ ಘನವನ್ನು ಹೊಂದಿದ ಸಭೆಯವರು ಸಹ ಆಲೋಚಿಸ್ಯಾರೆಂದು ನಂಬುತ್ತೇನೆ. ಏನೆಂದರೆ ಕಾಫಿ ಡಿಸ್ಟ್ರಿಕ್ಟುಗಳಲ್ಲಿನ ಸರ್ಕಾರದ ಡಿಪಾರ್ಟ್ಮೆಂಟಿನ ಸಿಬ್ಬಂದಿವರವನ್ನು ಮೈಸೂರು ಪ್ರಾಂತ್ಯದ ತಾಲ್ಲೂಕು ಮತ್ತು ಸಮೀಪ ವಗೈರೆ ವಿಶೇಷವಾಗಿಲ್ಲದೆ ಮಾಡಲಾಗುತ್ತಿರಬಹುದೆಂದು ತೋರುತ್ತೆ. ಈ ಸರಿಸಿವಗೈರೆ ಎಲ್ಲವೂ ದೈತರ ಮೂಲಧನವಾದ ಕಾಫಿ ಏಲಕ್ಕಿ ಬೆಳೆಯನ್ನು ಕಾಯಿಸಬೇಕೆಂದು ನಿಸ್ಸಂದೇಹವಾಗಿ ತಿಳಿಯಬಹುದು. ಅದ್ದರಿಂದ ಕಾಫಿ ಬೆಳೆಗೆ ಕಾವಲು ಗಾಯಿದಾರರು ಬೇಕಾದರೆ ಅಂದರೆ ಮೇಲೆ ನಮೂದಿಸಿರುವ ಡಿಸೆಂಬರು ಜನವರಿ ಫೆಬ್ರವರಿ ಈ ಮೂರು ತಿಂಗಳು ಪ್ರಾರ್ಥಿಸುವವರ ಹಂಗಾಮಿಯಾಗಿ ಪೊಲೀಸು ಜಾಸ್ತಿ ಸಿಬ್ಬಂದಿಗಳನ್ನಿಟ್ಟು ಅಂದರೆ ನೈಟ್ ಪೋಲೀಸ್ ಮಾರ್ಗಾನ್ನು ಸೀಂತವೂ ಗ್ರಾಮಾಂತರಗಳಲ್ಲಿ ಗಸ್ತು ಮಾಡುತ್ತಾ ಕಳವು ವಗೈರೆ ಕೃತ್ಯ ನಡೆಯದಂತೆ ಉಸ್ತುವಾರಿ ಮಾಡುತ್ತಾ ಕಳ್ಳರನ್ನು ಹಿಡಿದು ಶಿಕ್ಷೆಗೆ ಗುರಿ ಮಾಡುತ್ತಾ ಬಂದರೆ ಪ್ರಜೆಗಳ ಸ್ವತ್ತು ಬಹಳ ಜಾಗ್ರತೆಯಾಗಿ ರಕ್ಷಿಸಲ್ಪಡುವುದಾಗುತ್ತೆ.

ಕೆಲವು ಮಂದಿ ಈ ಪ್ರಾಂತ್ಯದ ಗ್ರಾಮಾಂತರಗಳಲ್ಲಿ ಕಷ್ಟ ಜೀವನ ಮಾಡತಕ್ಕವರು ಮೇಲ್ಕಂಡ ಕಾಲಗಳಲ್ಲೇ ಸ್ವಗ್ರಾಮ ತ್ಯಾಗಮಾಡಿ ಬಂದು ಸನ್ಯಾಸಿ ವೇಷಧಾರಿಗಳಾಗಿ ಗ್ರಾಮಗಳ ಸಮೀಪದಲ್ಲಿ ಬೀಡುಬಿಟ್ಟು ಹಗಲು ವಗೈರೆ ನಾನಾ ವಿಧವಾದ ನಟನೆಗಳನ್ನು ತೋರಿಸುತ್ತಾ ಉಪಾಯಗಳನ್ನು ಮಾಡುತ್ತಾ ಕೆಲವು ಜನಗಳನ್ನು ಮೋಸ ಮಾಡಿ ತದ್ದಿವಸ ಮೋಸಗೊಳಿಸುತ್ತಾರೆಂದು ಕೇಳ್ಪಟ್ಟಿರೆ ಇಂಥ ಕಷ್ಟ ಜೀವನ ಮಾಡುವವರನ್ನು ಪೊಲೀಸಿನವರು ಗಸ್ತು ಮಾಡುವ ವೇಳೆ ಪತ್ತೆ ಹಚ್ಚಿಕೊಂಡು ಹಿಡಿದು ಶಿಕ್ಷೆಗೆ ಗುರಿಪಡಿಸಿದಲ್ಲಿ ಪ್ರಜೆಗಳಿಗೆ ಕ್ಷೇಮ ಉಂಟಾದೀತು ಎಂಬ ಅಂಶ ಇಲ್ಲಿನ ಪೊಲೀಸ್ ಅಧಿಕಾರಿಯವರಿಗೆ ತಿಳಿದೇ ಇರಬಹುದು.

ತಪ್ಪಿನಿಮಿತ್ತ

ಏಡಿಟರ

ಈ ಹಿಂದೆ ಎಲ್ಲಿ ಬೆಂಗಳೂರಿನವರು ಹೇಳಿದ ಪಾಠಶಾಲೆಗಳಲ್ಲಿ ಪೋಲೀಸು ಪಾಠಗಳು, ಆಸ್ತಿ ನಾಮಗಳು, ಗಸ್ತು ಮುಂತಾದವುಗಳನ್ನು ಸರಿಯಾಗಿ ಎಚ್ಚರಿಸುವಂತೆ ಗವರ್ನಮೆಂಟಿನವರು ಹೊರಡಿಸಿ ಮುಕ್ಕಾಂ ಮಾಡಿರುತ್ತಾರೆ. ಬೆಂಗಳೂರಿನವರಿಗೆ ಈ ಸಂಗತಿ ತಿಳಿದಿದ್ದರೆ ಇದನ್ನು ಬರೆಯುತ್ತಿರಲಿಲ್ಲವೆಂದು ನೆನೆಸುತ್ತೇವೆ. ಅದಾಗಲಿ ಮೈಸೂರಿನವರು ಈ ಸರ್ಕಾರಿ ಮುಕ್ಕಾಮನ್ನು ಸರಿಯಾಗಿ ಜಾರಿಯಲ್ಲಿ ತಂದು ಜನಗಳಿಗೆ ಸಹಾಯ ಮಾಡಿ ಕೀರ್ತಿಯನ್ನು ಪಡೆಯಬೇಕೆಂಬುವದೇ ನಮ್ಮ ಕೋರಿಕೆಯಾಗಿದೆ.

ಎಡಿಟರ್.

ವಿವಿಧ ವರ್ತಮಾನಗಳು.

ರಷ್ಯಾ ದೇಶದ ಚಕ್ರವರ್ತಿಗಳಾದ ಜಾರಿನವರು ತಮ್ಮ ರಾಜ್ಯದಲ್ಲಿ ಚಿನ್ನದ ನಾಣ್ಯಗಳನ್ನು ಚಲಾವಣೆಯಲ್ಲಿ ತರಬೇಕೆಂದು ಪ್ರಯತ್ನಿಸುತ್ತಾರೆಂದು ಸೇಂಟ್ ಪೀಟರ್ಸ್‌ಬರ್ಗಿನ ಚುಕ್ತಿದಾರರು ಪೇಲಿ ಕ್ರಾನಿಕಲ್ ಎಂಬ ವರ್ತಮಾನದ ಪತ್ರಿಕೆಗೆ ಬರೆಯುತ್ತಾರೆ.

ಬರ್ಮ (ಬ್ರಹ್ಮ) ದೇಶದಲ್ಲಿ ಆರ್ಡರು ನೋಟುಗಳನ್ನು ಚಲಾವಣೆಗೆ ತರುವದಕ್ಕಾಗಿ ಅಲ್ಲಿಗೆ ಮುಖ್ಯಪಟ್ಟಣವಾದ ರಂಗೂನ ನಲ್ಲಿ ನೋಟುಗಳನ್ನು ಛಾಪು ಮಾಡ ಬೇಕೆಂತಲೂ, ಸದ್ಯಕ್ಕೆ ಅಲ್ಲಿನ ಕಂಟ್ರೋಲರವರೇ ಒಬ್ಬರ ಕರೆನ್ಸಿಗೂ ಕಾವಿದಾರರಾಗಿರತಕ್ಕದ್ದೆಂತಲೂ ತೀರ್ಮಾನಿಸಿರುತ್ತಾರೆ.

ಸಿಲೋನ್(ಲಂಕಾ) ದ್ವೀಪದಲ್ಲಿ ರೋಮನ್ ಕ್ರಿಸ್ತರಲ್ಲಿ ಅನೇಕರಿಗೆ ವಿಶೇಷ ವಿದ್ಯೆಗಳನ್ನು ಕಲಿಸುವುದಕ್ಕಾಗಿ ಕೆಥೋಲಿಕ್ ಕಾಲೇಜ್ ಎಂಬ ಕಟ್ಟಡವನ್ನು ಕಟ್ಟಿಸುವದಕ್ಕಾಗಿ ಅಲ್ಲಿನ ರೋಮನ್ ಸಭಿಕರು ೧೯,೫೦೦ ರೂಪಾಯಿಗಳನ್ನು ಚಂದಾ ಎತ್ತಿರುತ್ತಾರೆ.

ಕಾಂಜಿಪೇಟೆಯಲ್ಲಿ ಸ್ವದೇಶಿಗಳ ಸಂಸ್ಕೃತ ವ್ಯಾಕರಣಗಳನ್ನು ಸರಿಯಾದ ಸಂಚಿ ವಗೈರೆ ಕೊಡದೆ ಕ್ಷತಮುದ್ರೆ ಹಾಕಿಕೊಂಡು ಹೋಗುತ್ತಿರುವರು ಪತ್ತೆ ಮಾಡುವುದಕ್ಕೆ ಕಷ್ಟವಾಗಿ ಕಂಡು ಬಂದದರಿಂದ ದಿವಸೋ ನೀವುಗಳು ಮೈಸೂರು ಮೈಲಿ ಮುಸಲಮಾನರೂ ಇರುವ ದ್ವಾರದ ಎಲ್ಲಾ ಅಂಗಡಿಗಳೂ ಮೋಹರು ಮಾಡುವಂತೆ ಹುಕುಂ ಮಾಡಿರುತ್ತಾರೆ.

ಈ ವರುಷ ಮದರಾಸಿನಲ್ಲಿ ನಡೆದ ಎಂ. ಎ. ಪರೀಕ್ಷೆಯಲ್ಲಿ ಕೆಳಗೆ ನಮೂದಿಸುವವರು ಪ್ಯಾಸಾಗಿರುತ್ತಾರೆ:—ಕೆ. ವಿ. ರಾಮಸ್ವಾಮಿ ಅಯ್ಯರ್; ಟಿ. ರಂಗನಾಥ ಅಯ್ಯಂಗಾರ್; ಪಿ. ರಾಜಗೋಪಾಲ ಅಯ್ಯರ್; ಟಿ; ಎಂ. ರವಿವರ್ಮ ರಾಜ; ಟಿ. ಎಸ್. ನಾರಾಯಣ ಅಯ್ಯರ್; ಎ. ಬಾಲಸುಬ್ರಹ್ಮಣ್ಯ ಮೊದಲಿ; ಜೆ. ಗಂಗಾಧರ ಸೋಮಯಾಜುಲು; ಬಿ. ಎ. ನರಸಿಂಹಾಚಾರ್ಯ.

ಡ್ಯೂಕ್ ಆಫ್ ಯಾರ್ಕ್ ರವರಿಗೂ ಪ್ರಿನ್ಸೆಸ್ ಮೇ ಯವರಿಗೂ ಬರುವ ಏಪ್ರಿಲ್ ತಿಂಗಳಿನಲ್ಲಿ ಎರಡನೇ ವಾರದಲ್ಲಿ ವಿವಾಹ ಮಹೋತ್ಸವವು ಲಂಡನ್ ಪಟ್ಟಣದಲ್ಲಿ ನಡೆಯುವುದು. ಶ್ರೀಮಹಾರಾಣಿ ಚಕ್ರವರ್ತಿನಿಯವರೇ ಸಿಂತು ಈ ವಿವಾಹವನ್ನು ನಡಿಸುವಾಗ್ಗೆ ಅದು ಎಷ್ಟು ಅಟ್ಟಹಾಸದಿಂದ ಜರುಗುವದೋ ಹೇಳಲಿಕ್ಕೆ ಊಹಿಸಿಕೊಳ್ಳಬಹುದು. ಈ ಮಹೋತ್ಸವವನ್ನು ನೋಡಬೇಕಾದವರೆಲ್ಲಾ ನೋಡುವದಕ್ಕೆ ಯೂರೋಪಿನ ಚಕ್ರವರ್ತಿಗಳು ಬರುವಂತೆ ತಮ್ಮ ಅನುಮತಿಯನ್ನು ಮಹಾರಾಣಿಯವರಿಗೆ ತಿಳಿಸಿರುತ್ತಾರೆ.

ಬಂಗಾಳ ಪ್ರಾಂತ್ಯದಲ್ಲಿ ಬಂಗಿ ಮಾಡುವದರ ವಿಚಾರಕ್ಕೆ ಮಾಡಬೇಕೆಂದು ಬಂದು ಕಮಿಷನ್ ನೇಮಕ ಮಾಡಿರುತ್ತಾರೆ. ಪಾರ್ಲಿಮೆಂಟಿನಲ್ಲಿ ಇದು ತೀರ್ಮಾನವಾಗಿರುತ್ತೆ. ಈ ಪದಾರ್ಥದ ವ್ಯಾಪಾರದಿಂದ ಬಂಗಾಳ ಗವರ್ನಮೆಂಟಿಗೆ ಕಳೆದ ವರ್ಷದಲ್ಲಿ ೩೯,೫೦,೦೦೦ ರೂಪಾಯಿಗಳು ಉತ್ಪತ್ತಿಯಾಗಿರುತ್ತೆ. ಇಂಥಾ ವ್ಯಾಪಾರವನ್ನು ನಿಲ್ಲಿಸುವ ವಿಷಯದಲ್ಲಿ ಸರ್ಕಾರದವರು ಅನುಮಾನಿಸಿದರೂ ಅದರ ಕೆಟ್ಟ ಪದಾರ್ಥದಿಂದ ಎಷ್ಟೇ ಉತ್ಪತ್ತಿಯಾಗುತ್ತಿದ್ದಾಗ್ಯೂ ನಿಲ್ಲಿಸತಕ್ಕದ್ದು ಸರ್ಕಾರದವರಿಗೆ ಧರ್ಮವಾಗಿರುತ್ತೆ.

ಕೈಗಳಿಗೂ ಕಾಲುಗಳಿಗೂ ಹಾಕಿಕೊಳ್ಳುವ ಬೇಡಿಗಳನ್ನು ವಿಲಾಯಿತಿಯಿಂದ ಇಂಡಿಯಾಕ್ಕೆ ತರಿಸುತ್ತಿದ್ದರು. ಈಗ ಈ ಪದಾರ್ಥವನ್ನು ಇಂಡಿಯಾದಲ್ಲೇ ತಯಾರ್ ಮಾಡಬೇಕೆಂದು ಕಲ್ಕತ್ತೆ ಪಟ್ಟಣದಲ್ಲಿ ಒಂದು ಕಾರ್ಖಾನೆಯನ್ನು ಸ್ಥಾಪಿಸುವದರಲ್ಲಿದ್ದಾರೆ. ಇದಕ್ಕೆ ಎರಡು ಲಕ್ಷ ರೂಪಾಯಿಗಳು ವೆಚ್ಚ ಆಗಿದ್ದವು. ಹತ್ತು ರೂಪಾಯಿಗಳ ಷೇರುಗಳಾಗಿ ಮಾಡಿರುತ್ತಾರೆ. ಮುಖ್ಯ ಹಾಲು ಷೇರುಗಳೆಲ್ಲ ಆಗಲೆ ಮಾರಿಹೋದವು. ಇಂಡಿಯಾದಲ್ಲಿ ಇಂಥಾ ಕಾರ್ಖಾನೆಗಳು ಹೆಚ್ಚಿದ ಹಾಗೆ ಇಲ್ಲಿನ ಐಶ್ವರ್ಯ ಹೆಚ್ಚುವದರಲ್ಲಿ ಸಂದೇಹವಿಲ್ಲ.

ಟಿನ್ನಾರೋ ಎಂಬ ಜಹಜು ಮುಳುಗಿಹೋಗಿದ್ದ ವಿಷಯ ಓದುಗರಿಗೆ ತಿಳಿದಿರಬಹುದು. ಆ ಹಡಗು ಪೋರ್ಟಿನಲ್ಲಿ ಕೇಪ ವಿಲಿಸೊ ಎಂಬ ಸ್ಥಳದ ಬಳಿ ದಡಕ್ಕೆ ಬಡಿದು ತಕ್ಷಣವೇ ಜಲದಲ್ಲಿ ನಷ್ಟವಾಯಿತು. ಅದರ ಕ್ಯಾಪ್ಟನ್ ಹೊರಬಿದ್ದಾಗಿ ಅದು ಮಹಾ ಆತ್ಯಂತ ಕ್ರೂರದಿಂದ ಜಾಡಿಕೊಂಡು ಬದುಕನ್ನು ಬಿಟ್ಟ ನೌಕರರು ಕಡಮೆಯಾದವರೆಲ್ಲರೂ ಸುಮಾರು ನೂರು ಮಂದಿ ಹೋದರು. ಅದ್ದೇ ಸುಮಾರು ೭ ವರ್ಷಗಳ ಕೆಳಗೆ ಅದೇ ಸ್ಥಳದಲ್ಲಿ ಸರ್ಕಾಟ ಎಂಬ ಜಹಜು ಒಡೆದು ಹೋಗಿ ಸ್ವಲ್ಪ ಒಟ್ಟು ಕಡಮೆ ೬೦೦ ಮಂದಿಯವರಿಗೂ ಮುಳುಗಿ ಹೋದರು.

ಕಿಪ್ಪಣಿಗಳ ಮಹಾರಾಜರವರು ಯೂರೋಪಿನ ಮತ್ತು ಅಮೇರಿಕ ಖಂಡಗಳಿಗೆ ಹೋಗುವದಲ್ಲದೆ ತಮ್ಮ ಜೊತೆಯಲ್ಲಿ ಬಂದು ದೇಶದ ಕೆಲವು ಮಂದಿ ಸೈನ್ಯದವರುಗಳನ್ನು ಕರ್ತು ಮಾಡುವದಕ್ಕೆ ಕರೆದುಕೊಂಡು ಹೋಗುತ್ತಾರೆ. ಅವರು ಯೂರೋಪಿನ ಅರ್ಸೆನಲುಗಳ ಸಂಗತಿ ಕಸ್ತು ಮಾಡಿದರೆ ಅದೊಂದು ಆಶ್ಚರ್ಯವಾಗುವದರಲ್ಲಿ ಸಂಶಯವಿಲ್ಲ. ಅಲ್ಲಿನ ಇಲ್ಲಿನ ಸಿಕಿ ಜನರ ಪೈಕಿ ವಿಶೇಷ ಬಲಿಷ್ಟರಾಗಿಯೂ, ಅಜಾನುಬಾಹುಗಳಾಗಿಯೂ, ಪರಾಕ್ರಮಶಾಲಿಗಳಾಗಿಯೂ ಇರುವಂಥ ಕೆಲವು ಮಂದಿಯನ್ನು ಕರೆದುಕೊಂಡು ಹೋಗುವರು. ಇವರನ್ನು ಆ ಜನಗಳು ನೋಡಿ ಮಹತ್ವದ ಇರುವರೆಂದು ನಂಬಿದ್ದೇವೆ.

ಮಗ್ಗಿ ದ್ವೀಪಸಮುದ್ರಯಗಳಲ್ಲಿ ಒಬ್ಬರ ಟೆನಾಸಿರಂ ಎಂಬ ದ್ವೀಪದ ಬಳಿಯಲ್ಲಿ ಸಮುದ್ರದಲ್ಲಿ ಸುಮಾರು ೪೦ ಗಜಗಳ ಆಳದಲ್ಲಿ ಇರಾವನೇ ಎಂಬ ಜಹಜು ಮುಳುಗಿ ಹೋಗಿದೆ ಎಂತಲೂ, ಆ ಜಹಜಿನಲ್ಲಿ ಕುಡಾದು ೨೦ ವರುಷ ಕೆಳಗೆ ನಾಲ್ಕಾರು ಕೋಟಿ ಜಹಜೇ ಇದ್ದಿತೆಂದು ಹೇಳುತ್ತಾರೆ. ಬಹುಶಃ ಇದನ್ನು ಸಾಮಾನು ಹೊರಡಿಸುವದಕ್ಕೆ ಯಾರಾದರೂ ಕಲ್ಕತ್ತೆಯ ಪೋರ್ಟ್ ಆಫೀಸರಿಗೆ ಅರ್ಜಿ ಬರೆದುಕೊಳ್ಳಬಹುದೆಂತಲೂ, ಆ ಪದಾರ್ಥಗಳನ್ನು ನೀರಿನಿಂದ ಮೇಲಕ್ಕೆ ಎತ್ತುವ ಪ್ರಯತ್ನಗಳನ್ನು ಮಾಡುವರೆಂತಲೂ ಕಲ್ಕತ್ತೆಯ ಪೋರ್ಟ್ ಆಫೀಸರರು ಪ್ರಕಟಿಸಿರುತ್ತಾರೆ.

ಸುಮಾರು ಹದಿನಾಲ್ಕು ವರ್ಷ ಪ್ರಾಯದ ಒಬ್ಬ ಹುಡುಗನನ್ನು ಭಾಗಲಪುರದ ಡಿಸ್ಟ್ರಿಕ್ಟಿನಲ್ಲಿ ಹಿಡಿದು ತಂದಿರುತ್ತಾರೆ. ಅವನು ಕಾಡಿನಲ್ಲಿ ಸಿಕ್ಕಿದನು. ಅವನನ್ನು ಹಿಡಿದು ಊರಿಗೆ ಕರೆದು ತಂದಾಗ ಅವನಿಗೆ ಮಾತನಾಡುವಷ್ಟು ಯಾವ ತರದ ಆಹಾರವನ್ನು ಕೊಟ್ಟಾಗ್ಯೂ ಒಲ್ಲದೆಹೋಗಿ ಕೊನೆಗೆ ಜೇನು ಬೆರಸಿದ ಮಾಂಸ, ಮೀನು, ತಪ್ಪೆ ಮೊದಲಾದ ವಸ್ತುಗಳನ್ನು ಕೊಂಡುತಂದು ಮುಂದಿಟ್ಟಾಗ ಅವುಗಳನ್ನು ಬಹಳ ಸಂತೋಷದಿಂದ ತಿಂದನು. ಕಡೆಗೆ ಈ ಹುಡುಗನಿಗೆ ಕಾಲರಾ ಉಪದ್ರವ ತಗಲಿತು. ಅವನಿಗೆ ಔಷಧಗಳನ್ನು ಕುಡಿಸಬೇಕೆಂದು ಮಾಡಿದ ಪ್ರಯತ್ನಗಳಲ್ಲಾ ವ್ಯರ್ಥವಾಗಿ ಕೊನೆಗೆ ಅವನು ಹೊಳೆಗೆ ಹೋಗಿ ಬೇಕಾದಷ್ಟು ನೀರನ್ನು ಕುಡಿದನು. ಆ ಕೂಡಲೆ ಉಪದ್ರವು ನಿಂತುಹೋಯಿತು ಎಂಥಾ ಚೋದ್ಯ!

ಹೈದರಾಬಾದು ಮಂತ್ರಿಗಳಾದ ನವಾಬ್ ಸರ್ ಅಸ್ಮಾನ್ ಜಾಹಿಯವರ ಮನೆಯಲ್ಲಿ ಇದ್ದ ಒಬ್ಬರು ನವಾಬರ ಜನಾನಾ ಸ್ತ್ರೀಯರು ತಮ್ಮನ್ನು ಬಹಳ ಕ್ರೂರವಾಗಿ ಕಾಣುತ್ತಾರೆಂತಲೂ, ಅವರ ನಡವಳಿಕೆಯಿಂದ ಅವರು ತಮ್ಮ ಪ್ರಾಣವನ್ನೇ ತೆಗೆಯುವಂತೆ ಪ್ರಯತ್ನ ಮಾಡುವರೆಂತಲೂ ಆ ಕ್ಷಿನ ಮ್ಯಾಜಿಸ್ಟ್ರೇಟರಲ್ಲಿ ಫಿರ್ಯಾದು ಮಾಡಿದರು. ಮತ್ತು ಪ್ರಾಣಭಯದಿಂದ ಅವರ ಮನೆಯನ್ನು ಬಿಟ್ಟು ಹೊರಬಂದುದಾಗಿ ಇರುವದಾಗಿಯೂ ಹೇಳಿದರು. ಆಗ ಮ್ಯಾಜಿಸ್ಟ್ರೇಟರು ನವಾಬರಿಗೆ ಅವರು ಆಪಾದನೆಗಳನ್ನು ಕುರಿತು ಸಂಭವಿಸಿದ ಸಂಗತಿಯನ್ನು ಮಂತ್ರಿಗಳವರಿಗಾಗಲಿ ಅವರ ರಸಿಡೆಂಟ್ರವರಿಗಾಗಲಿ ತಿಳಿಸಬೇಕೆಂದು ಅವರಿಗೆ ನೋಟೀಸು ಕಳುಹಿಸಿಬಿಟ್ಟರು. ನಮ್ಮ ಹಿಂದೂಗಳು ಇದನ್ನು ತಮ್ಮ ಪ್ರಾಚೀನ ಕ್ರೂರಕೃತ್ಯಗಳನ್ನು ಬಿಟ್ಟಿಲ್ಲವಲ್ಲ ಎಂದು ವ್ಯಸನಪಡಬೇಕಾಗಿದೆ.

ಒಂದು ವಿಚಿತ್ರವಾದ ಪ್ರಕಟನೆಯು ಟೈಂಸ್ ಪತ್ರಿಕೆಯಲ್ಲಿ ಹೊರಡುತ್ತಾರೆ. ಅದೇನೆಂದರೆ:—ಚಿಕ್ಕ ಪ್ರಾಯದ ಗಂಡ ಹೆಂಡರು ಒಂದು ಮಗುವನ್ನು ಪಡೆದಿದ್ದಾರೆ. ಗಂಡನಿಗೆ ಸ್ವಲ್ಪದಲ್ಲ ಬಾಕಿ ಇದೆ. ಆದಾಯವು ಸ್ವಲ್ಪವೇ ಮಗುವಿಗಾಗಿ ಖರ್ಚು ಇನ್ನು ಹೆಚ್ಚು ಸಾಧ್ಯವಾಗದಿದ್ದರಿಂದ ಅಪೇಕ್ಷಿಸುತ್ತಾರೆ. ಪರ್ಯಾಯಂತರವಾಗಿ ಮಾರಿಸುವರಾರನ್ನು ಪಡೆದಿರುವ ಗಂಡಸಾಗಲಿ, ಹೆಂಗಸಾಗಲಿ ತಮ್ಮ ಹಣವನ್ನು ನಮ್ಮ ಮಗುವಿನ ಹೆಸರಿನಲ್ಲಿ ಒಡೆದು ಸಾಧುಬಹುದು. ಇಂಥಾ ಬಿಣವನ್ನು ಮಾಸ್ತ್ರೀಯವರಾದ ಕೊಟ್ಟವರ ಅನುದ್ದೇಶವು ಪ್ರಕಾರ ಬಳಕೆಮಾಡುವೆವು. ಇಷ್ಟಪಟ್ಟವರು ನೀತಿ ಕರ್ತಾಂಗ್ರಗೆ ಒರೆದು ಜಾಮಿನ ಪಡೆಯಬಹುದು. ಮಗುವಿಗೆ ಇಂಥಾವರ ಅಪ್ಪ್ಯಾಯನ ಮಾಡತಕ್ಕವರೂ ಆಗುವರೆ? ಇಂಥಾ ಪ್ರಕಟನೆಯನ್ನು ಎಲ್ಲಿಯಾದರೂ ಕೇಳಿಯಾಗಲಿ, ಓದಿಯಾಗಲಿ ಇದ್ದೀರಾ?

ದಕ್ಷಿಣ ಯುಂಡಿಯಾದಲ್ಲಿ ಒಂದು ಚಿನ್ನದ ಗಣಿಯನ್ನು ಅದರ ಕಂಪನಿಯವರು ಷೇರುದಾರರುಗಳ ಇಲ್ಲದೆ ಬಹಳ ಗುಣದಿ ಕೊಟ್ಟು ಬಿಡುವದಾಗಿಯೂ, ಕಳೆದ ನಾಲ್ಕು ಮೂರು ವರುಷಗಳಲ್ಲಿ ಆ ಗಣಿಯಿಂದ ೬,೦೦೦ ಔನ್ಸುಗಳಷ್ಟು ಚಿನ್ನವು ತೆಗೆಯಲ್ಪಟ್ಟಿದೆ ಎಂತಲೂ, ಈಗಿನ ಕಾರ್ಖಾನೆ ಯನ್ನಲ್ಲ ಸಾಮಾನು ಕೂಡಾ ಕೊಟ್ಟು ಬಿಡುವದಾಗಿಯೂ ಅಪೇಕ್ಷೆಯುಳ್ಳವರು ಲಂಡನ್ ಪಟ್ಟಣದ ವಿಕ್ಟೋರಿಯಾ ಬೀದಿಯಲ್ಲಿರುವ ಅಲ್ಬ್ರಿಯನ್ ಮೈನಿಂಗ್ ಕಂಪನಿಯವರಿಗೆ ಬರೆದು ಪಡೆಯಬಹುದೆಂತಲೂ ಮೈನಿಂಗ್ ಜರ್ನಲ್ ಎಂಬ ವರ್ತಮಾನ ಪತ್ರಿಕೆಯಲ್ಲಿ ಪ್ರಕಟಿಸಿರುತ್ತಾರೆ. ಇಂಥಾ ಕಂಪನಿಗಳನ್ನು ಕೊಂಡುಕೊಂಡು ಲಾಭಕಾರಿಯಾಗುವ ರೀತಿಯಲ್ಲಿ ನಡೆಸತಕ್ಕ ಹಿಂದೂ ಸಾಹುಕಾರರು ಅನೇಕರಿರುವದರಿಂದ ಅವರ ಉಪಯೋಗಾರ್ಥವಾಗಿ ಇದನ್ನು ಪ್ರಕಟಿಸಿರುತ್ತೇವೆ.

ಬರ್ದ್ವಾನಿನಲ್ಲಿ ವಿಧವಾಪೋಷಣೆಯೊಬ್ಬ ಕಾಲೀನ ಬ್ರಾಹ್ಮಣಸ್ತ್ರೀಗೆ ಸ್ವತಂತ್ರರಾಗಿದ್ದ ಆಸ್ತಿಯು ಕುಮಾರರಿಯಂಥವ. ಅವನಿಗೆ ವಯಸ್ಸಾಗುತ್ತಾ ಬಂದ ಹಾಗೆಲ್ಲಾ ಅವನ ದ್ರವ್ಯಾಪೇಕ್ಷೆಯೂ ಹೆಚ್ಚುತ್ತಲೇ ಬಂತು. ಕೆಲವು ದಿವಸಗಳ ಕೆಳಗೆ ತನ್ನ ಹೆಂಡತಿಯನ್ನು ಮದುವೆಯಾಗಿಕೊಂಡು ಒಂದು ಕೇವಲ ೯-೧ ವಯಸ್ಸಿನ ವರರುಗಳಿಂದ ವಿವಾಹ ಒಬ್ಬನಿಗೆ ತಿಳಿಯದಂತೆ ಮತ್ತೊಬ್ಬನಿಂದ—ಈ ಪ್ರಕಾರ ೧೦೦೦ ರೂಪಾಯಿಗಳನ್ನು ವಸೂಲ್ ಮಾಡಿಕೊಂಡು ಆ ನ್ಯಾಯಕ್ಕಾಗಿ ವಿವಾಹ ಕಾಲವನ್ನು ಮಾಡುತ್ತಾ ಬಂದನು. ಆ ದಿನದಂಗ ಈ ಮೋಸಕೃತ್ಯವನ್ನು ಪ್ರಕಟಿಸಿ ಅವನ ಮೇಲೆ ಮ್ಯಾಜಿಸ್ಟ್ರೇಟರಲ್ಲಿ ಫಿರ್ಯಾದು ಮಾಡಿದರು. ಅಲ್ಲಿ ಈ ಬ್ರಾಹ್ಮಣೋತ್ತಮನ ಮೋಸಕೃತ್ಯಗಳೆಲ್ಲಾ ಬಯಲಾದವು. ಅವನಿಗೆ ಮ್ಯಾಜಿಸ್ಟ್ರೇಟರು ೯ ತಿಂಗಳ ಕಠಿಣ ಸಜಾ ಮತ್ತು ೧೦೦ ರೂಪಾಯಿ ಜುಲ್ಮಾನೆ ವಿಧಿಸಿ ತೀರ್ಪನ್ನು ಕೊಟ್ಟರು. ಇದು ಅನ್ಯಾಯವೆಂದು ಅಪೀಲ್ ಮಾಡಿದನು. ಅಲ್ಲೂ ಕೆಳಗಿನ ಕೋರ್ಟಿನ ತೀರ್ಮಾನ್ನೇ ಕಾಯಂಮಾಡಿ, ಅಪೀಲನ್ನು ವಜಾ ಮಾಡಿದರು. ಲೋಕದಲ್ಲಿ ಎಂಥಾ ಕೃತ್ಯಕ್ಕಾರರಿರುವರು!!

ಹೈದರಾಬಾದ್ ಹೈಕೋರ್ಟಿನ ವಕೀಲರುಗಳ ಗುಂಪಿಗೆ ಸೇರಿದ ನಾಗು ಲಕ್ಷ್ಮೀರಾವ್ ಎಂಬುವರು ಕಳೆದ ಶನಿವಾರ ಸಾಯಂಕಾಲ ತಮ್ಮ ಕೋರ್ಟಿನ ಕೆಲಸಗಳನ್ನು ತೀರಿಸಿಕೊಂಡು ಮನೆಗೆ ಬಂದು ಸ್ವಲ್ಪ ಹೊತ್ತಿದ್ದು ಅನಂತರ ತಮ್ಮ ಸ್ನೇಹಿತರಾಗಿದ್ದ ನೆ॥ ಏಕಾಂಬರಂ ವಕೀಲರ ಮನೆಗೆ ಹೋಗಿದ್ದರು. ಅವರ ಮೇಜಿನ ಮೇಲೆ ಮದ್ದುಗುಂಡು ಹಾಕಿ ಬಾಕ್ಸಿನಿಂದ್ದ ಒಂದು ಪಿಸ್ತೂಲು ಇಟ್ಟಿತ್ತು. ಏಕಾಂಬರಂರವರು—ಅದನ್ನು ಮುಟ್ಟಬೇಡಿ, ಅದು ತುಂಬಿದೆ, ಏನಾದರೂ ಹೆಚ್ಚು ಕಡಮೆ ಆದಲ್ಲಿ ಪ್ರಾಣವೇ ನಾಶನವಾಗುವದು, ಜೋಕೆ ಜಾಗ್ರತೆಯಾಗಿರಿ ಎಂದು ಎಷ್ಟು ಹೇಳಿದಾಗ್ಯೂ ಅವರ ಮಾತುಗಳಿಗೆ ಕಿವಿಗೊಡದೆ ಅಲಕ್ಷ್ಯದಿಂದ ಆ ಪಿಸ್ತೂಲನ್ನು ಎತ್ತಿ ಹೀಗೆ ಹಾಗೆ ತಿರುಗಿಸುವಲ್ಲಿ ಅದರಲ್ಲಿದ್ದ ಗುಂಡು ಹಾರಿ ಲಕ್ಷ್ಮೀನಾರಾಯಣರ ದುರದೃಷ್ಟದ ನೆತ್ತಿಗೆ ಬಡಿದ ಉತ್ತರಕ್ಷಣದಲ್ಲೇ ಪ್ರಾಣವನ್ನು ಹೊತ್ತುಕೊಂಡು ಹೋಯಿತು. ವಿದ್ಯಾವಂತರು ಅಪಾಯಕರವಾದ ಇಂಥಾ ಪದಾರ್ಥಗಳನ್ನು ಕೈಯಾಡುವದರಲ್ಲಿ ಇಷ್ಟು ಅಲಕ್ಷ್ಯ ಮಾಡುವದು ಆಶ್ಚರ್ಯವೇಸರಿ. ಆದರೆ ಮೃತ್ಯುಮುಖರಾದವರು ಮಾಡಿದರೆ ಅವರ ವಿಷಯದಲ್ಲಿ ಪಶ್ಚಾತ್ತಾಪ ಪಡತಕ್ಕದ್ದಾಗಿದೆ. ಸಕಲವೂ ತಿಳಿದು ಪಿಸ್ತೂಲಿನಲ್ಲಿ ಬರುವದನ್ನು ಎತ್ತಿ ಪ್ರಾಣವನ್ನು ಕಳೆದುಕೊಂಡರೆ ಅವರು ಪಡೆದಿದ್ದ ವಿದ್ಯಾಜ್ಞಾನವು ಅಲ್ಪಮಾತ್ರವಾಗಿಯೋ ಇತ್ತೆಂದು ಹೇಳಲು ಸಂದೇಹವೇನು?

ಶಾಲೀವಾಹನಶಕ ೧೮೧೪ ನೇ ನಂದನನಾಮ ಸಂವತ್ಸರದ ಫಾಲ್ಗುಣ ಬಹುಳ ಸಪ್ತಮಿ ಗುರುವಾರದಿಂದ ಫಾಲ್ಗುಣ ಬಹುಳ ದ್ವಾದಶಿ ಬುಧವಾರದ ವರಿಗಿನ ವಾರದ ಪಂಚಾಂಗ.

೧೮೯೩ ನೇ ಇಸವಿ, ಮಾರ್ಚಿ.

ತಾ.	ವಾರ.	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.	ಶುಂಭು ಮಾಸ ತೇದಿ.
9	ಗು	ಸ	60-0	ಮೂ	36-2	28
10	ಶು.	ಸ	0-27	ಜ್ಯೇ	12-27	29
11	ಶ.	ಅ.	5-20	ಪೂಷಾ.	48-17	30
12	ರ	ನ.	9-29	ಪೂ.	53-9	1
13	ಸೋ.	ದ.	12-37	ಉ	57-4	2
14	ಮಂ.*	ಏ	14-33	ಶ್ರ.	59-37	3
15	ಬು.	ದ್ವಾ	15-10	ಧ	60-	4

* ಸರ್ವತ್ರಏಕಾದಶಿ.

ಪೇಟೆ ಧಾರಣೆ.

ದಿನಸಿ	ಮೈಸೂರು	ಬೆಂಗಳೂರು.
	ರೂ. ಆ. ಪೈ.	ರೂ ಆ ಪೈ
ಕಡ್ಡೀ ಅಕ್ಕಿ ಪಲ್ಲ ೧ಕ್ಕೆ	೧೧—೪—೦	೧೧—೦—೦
ಕೆಂಪುಬಿಳಿ ಅಕ್ಕಿ ಅನ್ನದ್	೧೨—೮—೦	೧೧—೮—೦
ಡಿಟ್ಟೋ ಅಕ್ಕಿ ದಪ್ಪ	೧೨—೮—೦	೧೦—೧೨—೦
ಬಾಪರಾಣಿ ಅಕ್ಕಿ	೧೨—೦—೦	೧೨—೦—೦
ಸಣ್ಣಕ್ಕಿ ಅವಲ್	೧೨—೮—೦	೧೪—೮—೦
ಡಿಟ್ಟೋ ಅಕ್ಕಿ ದಪ್ಪ	೧೨—೦—೦	೧೧—೮—೦
ತೊಗರಿಬೇಳೆ ಪಲ್ಲ ೧ಕ್ಕೆ	೧೧—೮—೦	೧೧—೧೨—೦
ಡಿಟ್ಟೋ ದಪ್ಪ ತರಹ	೧೧—೦—೦	೧೨—೧೨—೦
ಹ್ಯಾರಾಗಿ ಪಲ್ಲ ೧ಕ್ಕೆ	೩—೦—೦	೧೫॥೪—೦—೦
ಕಾಪ್ರಾಗಿ	೭—೧೪—೦	೫॥೭—೮—೦
ಹಲಸಂದೆ ಪಲ್ಲ ೧ಕ್ಕೆ	೧೨—೮—೦	೮—೩—೦
ಬಿಳೀ ಅವರೆ	೯—೦—೦	೮—೧೨—೦
ಹಸಿವು	೧೦—೮—೦	೧೦—೦—೦
ಉದ್ದು	೧೨—೪—೦	೯—೧೨—೦
ಕಡಲೆ	೧೦—೮—೦	೧೦—೦—೦
ಎಳ್ಳು	೧೬—೦—೦	೧೪—೮—೦
ಹುರುಳಿ	೬—೦—೦	೬—೮—೦
ಸಿಗೇಕಾಯಿ ಮಣ ೧ಕ್ಕೆ	೧—೮—೦	೧—೧೨—೦
ಮೆಣಸಿನಕಾಯಿ	೨—೧೦—೦	೨—೮—೦
ದಪ್ಪ ತರಹ	೨—೮—೦	೨—೪—೦
ಬೆಲ್ಲ ದೊಡ್ಡ ಅಚ್ಚು ೧೦೦ ಕ್ಕೆ	೫—೦—೦	ಮು ೧—೧೦—೦
ಸಣ್ಣ ಅಚ್ಚು	೪—೮—೦	ಡ॥ ೧—೬—೦
ಒಳ್ಳೆಣ್ಣೆ ಮಣ ೧ಕ್ಕೆ	೫—೦—೦	೪—೮—೦
ಹರಳೆಣ್ಣೆ	೪—೪—೦	೪—೧೨—೦
ಕೊತ್ತುಂಬರಿ ಪಲ್ಲ ೧ಕ್ಕೆ	೮—೮—೦	೧೦—೦—೦
ಉಪ್ಪು	೯—೮—೦	೧೦—೦—೦
ಹೊಗೇಸೊಪ್ಪು ಮಣ ೧ಕ್ಕೆ	೧—೭—೦	೧—೬—೦
ದಳೀ ಹೊಗೇಸೊಪ್ಪು	೧—೬—೦	೧—೪—೦
ತುಪ್ಪ	೧೪—೮—೦	೧೨—೦—೦
ಸೀಮೆ ಯಣೆ ತೆಂಗಿನ ೧ ಕ್ಕೆ	೪—೪—೦	೪—೨—೦
ತೆಂಗಿನಕಾಯಿ ೧೦೦ ಕ್ಕೆ	೫—೮—೦	೭—೧೨—೦
ಚಿನ್ನ (ತೊಲ)		
ಕೆಂಪು	೧೬—೧೫—೦	೧೬—೫—೦
ಬಿಳಿಯದು	೧೭—೭—೦	೧೭—೩—೦
ಗಟ್ಟಿ	೨೬—೮—೦	೨೬—೮—೦

Mysore.—Printed and published for the Proprietor at the Wesleyan Mission Press
9/3/93.

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. — ಕ್ರಯ ೧ ದುಡ್ಡು.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೬ — ಮೈಸೂರು ಸರ್ ೧೮೯೩ ನೇ ಇಸವಿ ಮಾರ್ಚಿ ತಾರೀಖು ೧೬ ನೇ ಗುರುವಾರ. — ಸಂಚಿಕೆ ೩೮

ವಿಶೇಷ ! ಓದಿನೋಡಿರಿ !! ಓದಿನೋಡಿರಿ !!!

ಅನುಶಾಸನೀಕಪರ್ವವು ಪೂರೈಸಿತು.

ಶ್ರೀಕೃಷ್ಣರಾಜ ವಾಣೀವಿಲಾಸವೆಂಬ ಮಹಾಭಾರತವು ನಮ್ಮ ಶ್ರೀಚಾಮುಂಡೇಶ್ವರಿ ಪ್ರೆಸ್ಸಿನಲ್ಲಿ ಪ್ರಿಂಟಾಗತಕ್ಕದ್ದು ಎಲ್ಲರಿಗೂ ವಿಶದವಾಗಿದ್ದಷ್ಟೆ. ಈಗ ಅನುಶಾಸನೀಕಪರ್ವವು ಚಾಮುಂಡೇಶ್ವರಿ ಪ್ರೆಸ್ಸಿನಿಂದಲೂ ಮಾರಿಗೆ ಯೋಗ್ಯವಾದ ಕಿತ್ತಾನಾರಿನ ಪ್ರತಿಬೈಂಡಿನಿಂದ ತಯಾರಾಗಿರುತ್ತೆ. ಸಭಾಪರ್ವ ವಿರಾಟಪರ್ವದ ಬುಕ್ಕುಗಳು ಮುಗಿದುಹೋದುದರಿಂದ ಪುನಹಾ ಎರಡನೆ ಛಾಪೆಯು ಪ್ರಾರಂಭವಾಗಿದೆ. ಈ ಕೆಳಗೆ ಕಂಡ ಪುಸ್ತಕಗಳು ನಮ್ಮಲ್ಲಿ ಸ್ವಲ್ಪವೇ ಇರುವದ್ದರಿಂದ ಇಷ್ಟವುಳ್ಳವರು ತರಿಸಿಕೊಳ್ಳಬಹುದು. ಅನುಶಾಸನೀಕ ಪರ್ವ ಕಿತ್ತಾನಾರಿನ ಬೈಂಡ್ ೩—೧೨—೦ | ಪ್ರಾರ್ಥಿಸಲಾಗಿ—ಲೂವರ್ ಸೆಕಂಡರಿ ಪರೀಕ್ಷೆಯ ನೋಟ್ಸು

ಆದಿಪರ್ವ	..	ಕ್ರಯ	೩	೧	೦
ಸಭಾಪರ್ವ	..	„	೧	೪	೦
ವಿರಾಟಪರ್ವ	..	„	೧	೦	೦
ಭೀಷ್ಮಪರ್ವ	..	„	೨	೦	೦
ದ್ರೋಣಪರ್ವ	..	„	೨	೮	೦
ಶಲ್ಯಪರ್ವ	..	„	೧	೨	೦
ಸೌಪ್ತಿಕಪರ್ವ	..	„	೦	೬	೦
ಸ್ತ್ರೀಪರ್ವ	..	„	೦	೬	೦
ಶಾಂತಿಪರ್ವ ರಾಜಧರ್ಮ	..	„	೨	೬	೦
„ ಆಪದ್ಧರ್ಮ	..	„	೦	೮	೦
„ ಮೋಕ್ಷಧರ್ಮ	..	„	೨	೬	೦
ಭಗವದ್ಗೀತೆ ೮, ಯುಧಿಷ್ಠಿರಾರ್ಜುನಚರಿತ್ರೆ ೪ ಆ					

WOMAN: HER PLACE AND POSSIBILITIES.

A LECTURE

BY

Miss. Frances M. Dryden, B. A.

This is a very powerful lecture and should be read by every Hindu who understands English. We have only a few copies at hand and the price has been greatly reduced, the price of each copy being 3 pies only.

Apply to

THE WESLEYAN MISSION PRESS,

Mysore City.

ÆSOP'S FABLES.

These are well printed in English, and illustrated both inside and outside. The covers are in striking colours. The set is complete in 3 *Volumes.* The *whole set* can *now* be had at a reduced price of 3 pies. Only a few copies are available.

Apply at once to

THE WESLEYAN MISSION PRESS,

Mysore City.

ನೋಟೀಸ್.

		ಕ್ರಯ			ಟಪಾಲು ಸಹಿತವಾಗಿ		
Campbell's	ಕನ್ನಡ ವ್ಯಾಕರಣ ಸಾರ	೦	೨	೦	೦	೨	೬
Object Lessons.	ವಸ್ತು ಪಾಠಗಳು	೦	೧	೦	೦	೧	೬
Picture do	ಚಿತ್ರಗಳು ಸಹಿತವಾಗಿ	೦	೨	೧	೦	೨	೬

ಈ ಮೂರು ಪುಸ್ತಕಗಳು ಪ್ರೈಮರಿ ಮಠಗಳಲ್ಲಿ ಓದತಕ್ಕ ಪುಸ್ತಕಗಳು.

ಸ್ತ್ರೀಯರು ಓದತಕ್ಕ ಪುಸ್ತಕ	೦	೫	೦	೦	೫	೬
ಗಣಿತ ವಿದ್ಯವು ..	೦	೪	೦	೦	೪	೬
ಗಣಿತ ಮಗ್ಗಿಗಳು ..	೦	೧	೦	೦	೧	೬
ಸಂಸ್ಕೃತ ಕರ್ನಾಟಕ ಭಾಷಾಮಂಜರಿ	೦	೨	೦	೦	೨	೬
ಭೂಗೋಳ ಶಾಸ್ತ್ರ ಪ್ರಶ್ನೋತ್ತರ	೦	೨	೦	೦	೨	೬
ಇಂಗ್ಲೀಷು ಕನ್ನಡವೂ ಶಬ್ದಾವಳಿ ೧ನೇ ೨ನೇ ಭಾಗಗಳಿಕ್ಕೆ	೦	೧	೦	೦	೧	೬
ಕಾವ್ಯಮಾಲೆ (Minor Poetical Anthology)	೦	೮	೦	೦	೮	೬
ಬಾಲವ್ಯಾಕರಣ ..	೦	೫	೦	೦	೫	೬
ಹಳಗನ್ನಡ ವ್ಯಾಕರಣ ಸೂತ್ರಗಳು	೦	೬	೦	೦	೬	೬
ಇಂಗ್ಲೀಷು ಕನ್ನಡವೂ ಸಂಭಾಷಣ ವಾಕ್ಯಗಳು	೦	೧೦	೦	೦	೧೦	೬
ಚಿನ್ನಮಣಿ ದರ್ಪಣ ..	೧	೦	೦	೧	೪	೬
Kan. Eng. Pocket Dictionary	೧	೦	೦	೧	೫	೭
Eng Kan School Dictionary	೨	೧೦	೦	೨	೧೨	೬
ಒಳ್ಳೇ ತಾಯಿ ..	೦	೪	೪	೦	೪	೬
ಆತ್ಮಿಕ ದಿವ್ಯ ಯುದ್ಧ (Bunyan)	೦	೧೨	೦	೦	೧೩	೬
ಕೈವಲ್ಯ ಪದ್ಧತಿ ೧ ನೇ ಭಾಗ ೨ ಆಣೆ ೩ ನೇ ಭಾಗ	೦	೧	೬	೦	೨	೦
ಭಕ್ತಿಸಾರ ..	೦	೧	೦	೦	೧	೬
ಸತ್ಯ ವಾಗ್ದಾನ	೦	೧	೦	೦	೧	೬
ಕಾವ್ಯಪುಂಜ ..	೦	೩	೦	೦	೩	೬

A new Edition of the Geography suited for the Lower Secondary Examination is now ready.—Edited by Rev. H. Gulliford. Price 6 As.

ಮೇಲೆ ನಮೂದಿಸಿರುವ ಪುಸ್ತಕಗಳನ್ನು ಬೆಂಗಳೂರು ದಂಡಿನ ಪೋಸ್ಟಾಫೀಸಿನ ಹತ್ತಿರವಿರುವ ಪುಸ್ತಕ ಶಾಲೆಯಲ್ಲಿ ಪಡೆಯ ಬಹುದು.

ವೃತ್ತಾಂತ ಪತ್ರಿಕೆ.

ಚಂದಾ ನಿರ್ಣಯ.

	ರೂ. ಆ. ಪೈ.
ಸ್ಥಳದವರಿಗೆ ವರ್ಷ ೧ಕ್ಕೆ ...	೧—೦—೦
ಪರಸ್ಥಳದವರಿಗೆ ವರ್ಷ ೧ಕ್ಕೆ ...	೧—೫—೦
ಬಿಡಿ ಪತ್ರಿಕೆ ೧ಕ್ಕೆ ...	೦—೦—3

ಈ ಪತ್ರಿಕೆಯು ಮೈಸೂರು ರಾಜಧಾನಿಯಲ್ಲಿ ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ, ಪ್ರಕಟಿಸಲ್ಪಡುವದು. ಚಂದಾದಾರರು ಮೊದಲುಗೊಂಡು ಸಮಸ್ತರಿಗೂ ಸುಲಭಸಾಧ್ಯವಾಗುವಂತೆ ಈ ಪತ್ರಿಕೆಗೆ ಇಷ್ಟು ಅಲ್ಪ ಮೌಲ್ಯವನ್ನು ನಿಶ್ಚೈಸಿರುತ್ತೇವೆ. ಈ ಪತ್ರಿಕೆಯನ್ನು ಅಪೇಕ್ಷಿಸುವವರು ಚಂದಾಹಣ ವನ್ನು ಮುಂಗಡವಾಗಿ ಕೊಡಬೇಕು.

ಪ್ರಕಟನೆಯ ನಿರ್ಣಯ.

	ರೂ. ಆ. ಪೈ.
ಮೊದಲನೇ ಆವರ್ತಿ ಪಙ್ತಿ ೧ ಕ್ಕೆ ...	೦—೨—೦
ಎರಡನೇ ಆವರ್ತಿ ಪಙ್ತಿ ೧ ಕ್ಕೆ ...	೦—೧—೦

ಅನಂತರ ಪ್ರತಿಯೊಂದು ವಾರದಲ್ಲಿಯೂ ಪಙ್ತಿ ೧ ಕ್ಕೆ ೧ ಆಣೆಯಂತೆಯೇ ಲೆಕ್ಕ ಮಾಡಲ್ಪಡುವುದು. ಕಂಟ್ರ್ಯಾಕ್ಟಿಗೆ ಕೊಡಬೇಕೆಂದಿರುವವರು ಎಡಿಟರಿಗೆ ಬರೆದು ದರವನ್ನು ತಿಳಿಯ ಬಹುದು.

ಎಡಿಟರ್,

ವೃತ್ತಾಂತ ಪತ್ರಿಕೆ.

ನೋಟಿಸ್.

ಪುಸ್ತಕಗಳು.	ಕ್ರಯ.
ನ್ಯಾಯಶಾಸ್ತ್ರ ವ್ಯವಹಾರಿಕೆ	1—5—0
ಕನ್ನಡ ಇಂಗ್ಲೀಷು ನಿಘಂಟು 1 ನೇ ದೊಡ್ಡ ತರಹ	3—0—0
„ „ 2 ನೇ ತರಹ	2—8—0
ಬಾಲಕರು ಓದುವ ಎರಡನೆ ಜ್ಞಾನೋಪದೇಶದ ಪ್ರಶ್ನೋತ್ತರಗಳು	0—1—0
ಸಭೆಯ ನಿಯಮಗಳನ್ನು ಕುರಿತದ್ದು	0—0—6
ಕಥಾ ಸಂಗ್ರಹ 1 ನೇ ಭಾಗದಿಂದ 3 ವರೆಗೆ	1—0—0
ಕಥಾ ಸಂಗ್ರಹ 1 ರಿಂದ 6 ನೇ ಭಾಗ ಹೊಸ ಛಾಪೆ	1—0—0
„ „ ದೊಡ್ಡ ತರಹ	1—8—0
ಬೋಧಕಶಕ್ತಿ ಬೋಧನಿ	0—1—0
ಸತ್ಯವೇದವನ್ನು ಕುರಿತು 2 ನೇ ಭಾಗ	0—1—0
ಪ್ರಸಂಗಿಯ ದರ್ಪಣ	0—0—6
ಇಂಗ್ಲೀಷು ಭಾಷೆಯಲ್ಲಿಯೂ, ಕನ್ನಡ ಭಾಷೆಯಲ್ಲಿಯೂ, ಶಬ್ದಗಳ ವಿಭಾಗಗಳನ್ನು ವಿವರಿಸಿರುವ ನಿಘಂಟು	0—2—0
ಕನ್ನಡ ವ್ಯಾಕರಣ (ಇಂಗ್ಲೀಷಿನಲ್ಲಿ)	2—0—0
ಹಿಂದೂಸ್ತಾನಿ ವ್ಯಾಕರಣ	1—0—0
ಬಾಲಕರ ಸೋಪಾನವು	0—1—0
ದಿನ ಕರಗಳ ಆಚರಣೋಪವಿಚಾರ	0—0—6
ಕ್ರೈಸ್ತರ ಬೋಧನೆಗಳ ಸಾರಾಂಶವು	0—12—0

ಮೇಲೆ ನಮೂದಿಸಿರುವ ಪುಸ್ತಕಗಳನ್ನು ಅಪೇಕ್ಷಿಸುವವರು ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್ಸಿಗೆ ಬರೆದು ತರಿಸಿಕೊಳ್ಳಬಹುದು ಅಂಚೇ ಹಾಸಲು ಏರಿ ಕೊಡಬೇಕು.

ವೆಸ್ಲಿಯನ್ ಮಿಷನ್ ಪ್ರೆಸ್,

ಮೈಸೂರು.

ಜಾಹೀರಾತು

THE KANARA & MYSORE TRADING AGENCY

BOMBAY.

ಕಣ್ಣಿಗೆ ತಂಪು ಕೊಡುವ

ಚಂದ್ರಕಾಂತ ಶಿಲೆಯ ಕಂನಡಕಗಳು.

೩ ॥ ರೂಪಾಯಿ ಕೆಳಗಿನ ಕ್ರಯದವು ನಮ್ಮಲ್ಲಿಸಿಗಲಾರವು.

ಸಾಧಾರಣ	೩ ॥ ರೂಪಾಯಿ	ಜರ್ಮನ್ ಕೇಸಿನಲ್ಲಿ
ಮಧ್ಯಮ	೫	„	ಜಪಾನದ ಕೇಸಿನಲ್ಲಿ
ಉತ್ತಮ	೭ ॥	„	ರೇಷ್ಮೆ ಕೇಸಿನಲ್ಲಿ
ಭಂಗಾರದಲ್ಲಿ ಕಟ್ಟಿದ್ದು	೧೮	„	ಡಿಟೋ

ಕೆರೆಯ ಘಡಿಯಾರವು.

ಕ್ರಯ ೩ ॥ ರೂಪಾಯಿ.

ಈ ಘಡಿಯಾರವು ಕಡಿಮೆ ಕ್ರಯದ್ದಾದರೂ, ಕಡಿಮೆ ಕ್ರಯದ ಘಡಿಯಾರಗಳಲ್ಲಿರುವ ಹಳ್ಳಿತನವು ಇದರಲ್ಲಿರುವದಿಲ್ಲ. ಭದ್ರವಾದದ್ದು. ಬಾಳಿಕೆ ಬರುವಂಥಾದ್ದು.

ಕಿಂಚಿತ್ತು.

ಪ್ರತಿ ಒಡಿ ೧ ಕ್ಕೆ ೨ ॥ ರೂಪಾಯಿ ಕ್ರಯವು ಒಡಿಯಲ್ಲಿ ೧೦೦, ೧೨೫, ೧೫೦, ೧೫೦, ಈ ರೀತಿ ಮಡಿಚ್ಚುಗಳಿರುವವು. ಒಟ್ಟು ೧೦ ಒಡಿಗಳನ್ನು ತೆಗೆದುಕೊಂಡರೆ ೧ ರೂಪಾಯಿ ಕಡಿಮೆ ಬೀಳುವದು. ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬೇಕು.

ಮ್ಯಾನೇಜರ್,

ಕೆನರಾ ಎಂಡ್ ಮೈಸೂರ ಟ್ರೇಡಿಂಗ ಏಜನ್ಸಿ ಆಫೀಸ್, ಮುಂಬಯಿ.

MUNICIPAL NOTICE.

The following business will be transacted at the ordinary Meeting by the Municipal Commissioners for the CITY OF MYSORE, to be held **at the Town Hall, on Saturday, the 25th of March 1893 at 8 a. m.**

Subjects.

I. Accounts of Receipts and Disbursements for the month of February 1893.

II. The Government Proceeding No. $\frac{9861-64}{L. F. 242-92}$ dated 9th January, 1893, regarding Octroi duty on sea-borne piece goods so as to place foreign and local manufactures on an equal footing in respect of Municipal Taxation.

III. Proposals of Mr. N. Subba Rao, Municipal Commissioner.

(1) Each item to be sanctioned in regard to Conservancy and Public Works to be apportioned for each Mohalla, according to the urgency and importance of the works to be executed in each Mohalla or on such terms as the Board may decide.

(2) The amount to be sanctioned for Drains originally be utilized for opening pipe drains in any one particular place as the Board may decide instead of apportioning the same to different Mohallas.

(3) Spacious vacant sites not to be given for building purposes may be ordered to be enclosed by fences or railings to set apart as pasture lands, by giving them for cattle grazing purposes.

IV. Proposals of Mr. Venkatakrishnaiya, Municipal Commissioner.

(1) The cost of system of complete Drainage for the City of Mysore may be ascertained and a loan obtained from Government at 3 per cent to carry out the work.

(2) Before giving out any more sites in the Chamraj Mohalla, the Engineer Special Improvements Division or any other Engineer be requested to lay out the drains and to prepare a plan with respect to ventilation and daily conservancy of latrines for guidance of those who build houses.

(3) Wells to be dug for supply of free water to the suburban villages within the Municipal limits.

(4) The placing of lamp-posts, at the ends of all conservancy lanes with instructions to Police to guard the lanes well.

V. Docket from the Sanitary Engineer No 254, dated 3rd March 1893, forwarding extract from Inspection notes of the chief Engineer with the remarks of the Dewan thereon and enquiring whether the Municipality will pay for the construction of western frontage of the Market in Devaraj Mohalla or make it over to Government.

VI. Government Proceedings No. 249—50 dated 22nd February 1893, appointing Mr A. Koopooswamy Modhar as whole time Vice-President on a salary of Rs. 500 and requesting to be informed what portion of it the Municipality can afford to pay.

VII. Consideration of the subject as to whether the representatives of the Pressesmay be allowed to sit in the Meetings of the Municipal Board at Mysore and takenote of the Proceedings.

Deferred Subjects.

VIII. Proposed by Mr. Venkatakrishnaiya that a Committee be appointed for the Town Hall.

IX. Proposed by Mr. A. Annaiah Pandit for the post-ponement of tax on looms opened by weavers lately settled in Mysore under special arrangements.

Municipal Board's Office, MYSORE. 23th March, 1893.

A. COOPOOSWAMY
FOR VICE-PRESIDENT.

ವೃತ್ತಾಂತ ಪತ್ರಿಕೆ.

೧೮೯೩ನೇ ಇಸವಿ ಮಾರ್ಚಿ ತಾ॥ ೨೩ನೇ ಗುರುವಾರ

ಬಹುಮಾನ ನಿಬಂಧನೆ.

ಮತಸಂಬಂಧವಾದ ಒಂದು ಉಪನ್ಯಾಸವನ್ನು ಬರೆಯಬೇಕು. ಇದಕ್ಕಾಗಿ ಮೂರು ಬಹುಮಾನಗಳು ಕೊಡಲ್ಪಡುವವು. ಉತ್ಕೃಷ್ಟವಾದದಕ್ಕೆ ೩೦ ರೂಪಾಯಿಯೂ, ೨ನೆಯದಕ್ಕೆ ೨೦ ರೂಪಾಯಿಯೂ, ೩ನೆಯದಕ್ಕೆ ೧೦ ರೂಪಾಯಿಯೂ ಕೊಡಲ್ಪಡುತ್ತೆ. ಈ ಉಪನ್ಯಾಸಗಳನ್ನು ಬರೆಯತಕ್ಕವರ ಕೆಳಗಿನ ನಿಬಂಧನೆಗಳಿಗೆ ಚನ್ನಾಗಿ ಗಮನ ಕೊಡಬೇಕು.

೧ ಈ ಉಪನ್ಯಾಸಗಳು ಜೂನ್ ೩೦ನೇ ತಾರೀಖಿನೊಳಗಾಗಿ ರೆವರೆಂಡ್ ಜನ್ನಿಂಗ್ಸವರಿಗೆ ತಲುಪಬೇಕು.

೨ ಈ ಉಪನ್ಯಾಸವು ಅರ್ಧಗಜ ಕಾಗದದ ೩೦ ಪುಟಗಳಿಗೆ ಮಿಂಚಿರಬಾರದು ಮತ್ತು ಒಂದೇ ಪಕ್ಕದಲ್ಲಿ ಬರೆದಿರಬೇಕು.

೩ ಒಂದೊಂದು ಉಪನ್ಯಾಸದಲ್ಲಿನ ಬೋಧನೆಯು ಸ್ಪಷ್ಟವಾಗಿಯೂ, ಮನೋರಂಜಕವಾಗಿಯೂ ಇರಬೇಕಾದುದಲ್ಲದೆ ಅದರಲ್ಲಿ ಯೋಗ್ಯವಾದ ಹೊಸ ದೃಷ್ಟಾಂತಗಳೂ, ಹೊಸ ಉಪಮಾನಗಳೂ ಮತ್ತು ಹೊಸ ಕಥೆಗಳೂ ಇರಬೇಕು. ಹಳೇ ದೃಷ್ಟಾಂತಗಳನ್ನಾಗಲಿ, ರೂಢಿಯಲ್ಲಿರುವ ಕಥೆಗಳನ್ನಾಗಲಿ ಬರೆದವರಿಗೆ ಬಹುಮಾನ ದೊರೆಯಲಾರದು.

೪ ಉಪನ್ಯಾಸದ ವಾಕ್ಸರಣಿಯು ರಂಜಿತವಾಗಿ ಎಲ್ಲಾ ಜನರಿಗೆ ತಿಳಿಯತಕ್ಕದ್ದಾಗಿರಬೇಕು.

೫ ಉಪನ್ಯಾಸವನ್ನು ರವಾನಿಸುವಂತೆ ಅದನ್ನು ಬುಕ್‌ಪೋಸ್ಟು ಮೂಲಕ ಕಳುಹಿಸಿ ಅದರ ಮೇಲೆ "ಪ್ರೈಸ ಎಸ್ಸೇ ಫಾರ್ ಕಾಂಟೆಸ್ಟ್" ಎಂದು ಮತ್ತು ಕೆಳಗೆ "ವೃತ್ತಾಂತ ಪತ್ರಿಕಾ ಕರ್ತರಾದ ರೆವರೆಂಡ್ ಜನ್ನಿಂಗ್ಸಾಹೇಬರವರಿಗೆ" ಎಂದು ಬರೆದು ಕಳುಹಿಸಬೇಕು. ಅದಕ್ಕೆ ಸಂಬಂಧಪಟ್ಟ ಇತರ ಎಲ್ಲಾ ವಿಷಯಗಳನ್ನು ತಿಳಿಸಬೇಕಾದರೆ ಪೂರ್ವಸ್ಕಾರವಾದ ಅದರ ಲೇಖರುಗಳ ಮೂಲಕವೇ ತಿಳಿಸಬೇಕು. ಉಪನ್ಯಾಸದ ಕೊನೆಯಲ್ಲಾಗಲಿ ಮೇಲಾಗಲಿ ಸ್ಲಿಪ್‌ನಲ್ಲಿ ಯಾಗಲಿ ಹೆಸರನ್ನು ಬರೆಯಕೂಡದು.

೬ ಈ ತಾರೀಖಿನ ಒಳಗೂ ತಲುಪುವ ಉಪನ್ಯಾಸಗಳನ್ನು ಪರೀಕ್ಷಿಸಿದನಂತರ ಬಹುಮಾನವನ್ನು ಹೊಂದುವವರ ಹೆಸರುಗಳನ್ನು ತಿಳಿಸಲಾಗುವುದು.

(Sd.) *Henry Haigh,*
Mysore.

ನೋಟೀಸ್.

ಕುಣಿಗಲ್ ಉಪ್ಪಿನ ಮಲ್ಲಯ್ಯನವರ ಸಂಬಂಧವಾಗಿ ಸಕಲರಿಗೂ ತಿಳಿಯಪಡಿಸುವುದೇನೆಂದರೆ. ಈ ಸ್ಥಳದಲ್ಲಿ ಇನ್ನಿತರರುಗಳ ಆಟವು ಬಹಳ ಹೆಚ್ಚಿರುವುದರಿಂದ ನನ್ನ ಮಗ ಮಲ್ಲಯ್ಯನು ಸಹ ಅದಕ್ಕೆ ಪ್ರವರ್ತಿಸಿ ನನಗೆ ಬಹಳ ನಷ್ಟವನ್ನುಂಟುಮಾಡಿರುತ್ತಾನೆ. ಮುಂದೆ ಇವನಿಗೆ ಯಾರಾದರೂ ಸಾಲ ವಗೈರೆ ಕೊಟ್ಟಲ್ಲಿ ನಾನು ಜವಾಬ್ದಾರನಾಗಲಾರೆನಲ್ಲದೆ ಹಾಗೆ ಸ್ವಇಚ್ಛೆಯಿಂದ ಕೊಟ್ಟು ಆಟಕ್ಕೆ ಸೇರಿಸಿಕೊಳ್ಳುವಂಥವರು ನಾನು ತರುವ ತಾಖೀಜಿಗೆ ಗುರಿಯಾಗಿರುತ್ತಾರೆಂದು ಮೊದಲೇ ಎಚ್ಚರಿಸಿರುತ್ತೇನೆ.

ತಾ॥ ೨೦-೩-೯೩ } ಉ॥ ಮ॥ ಸಂಜೀವಯ್ಯ
ಕುಣಿಗಲ್ }

ಮೂಢತನ.

ಈ ದೇಶದಲ್ಲಿ ಮೂಢತನವು ಹೆಚ್ಚು. ಜನರು ಶಕುನಗಳನ್ನು ನೋಡಿ ತಮ್ಮ ಕೆಲಸವನ್ನು ನಡೆಸುವದಾಗಲಿ ಬಿಡುವದಾಗಲಿ ಸರ್ವಸಾಧಾರಣವಾಗಿದೆ. ಈ ವರುಷದಲ್ಲಿ ಮದುವೆಗಳು ಬಹಳ ವಿಶೇಷವಾಗಿ ನಡೆಯುತ್ತಲಿವೆ ಎಂದು ನಾವು ನೋಡುತ್ತೇವೆ. ವಿಷ್ಟು ಕೆಲವು ವಿದ್ವಾಂಸರು ಜ್ಯೋತಿಷ್ಯಂಶಗಳನ್ನು ಪರೀಕ್ಷಿಸಿ ಬರುವ ವರುಷದಲ್ಲಿ ಮದುವೆಗಳನ್ನು ನಡಿಸುವದು ಅಪಶಕುನವಾಗಿ ಇರುವದೆಂದು ಹೇಳಿದ್ದು ಈಗಿನ ಹೆಚ್ಚಾದ ಗಲಭೆಗೆ ಕಾರಣವಾಗಿ ಇದೆ; ನಕ್ಷತ್ರಗಳಿಗೂ ಮದುವೆ ಕೆಲಸಕ್ಕೂ ಯಾವ ಸಂಬಂಧ ಉಂಟೆಂದು ನಮ್ಮ ಬುದ್ಧಿಗೆ ಸ್ಪಷ್ಟವಾಗಿ ತೋರುವದು ಇಲ್ಲ; ವರುಷ ಎಲ್ಲಾ ಸಮಯಗಳಲ್ಲಿ ಸಾವಿರಾರು ಮಂದಿ ನಕ್ಷತ್ರಗಳನ್ನು ವಿಚಾರಿಸದೆ ಮದುವೆ ಮಾಡಿ ಯಾವ ದುರಾದೃಷ್ಟಕ್ಕೂ ಅಪಾಯಕ್ಕೂ ಗುರಿಯಾದರೆಂದು ತೋರುವದು ಇಲ್ಲವಲ್ಲಾ. ನಕ್ಷತ್ರಗಳಿಗೋಸ್ಕರ ಒಂದು ಮದುವೆಯನ್ನಾಗಲಿ ಬೇರೆ ಯಾವದೊಂದು ಕೆಲಸವನ್ನಾಗಲಿ ನಿಲ್ಲಿಸುವದು ನಗಿಸುವ ಕಾರ್ಯವೇ; ಹೊರತು ಬುದ್ಧಿವಂತರು ಲಕ್ಷ್ಯಮಾಡತಕ್ಕ ಕಾರ್ಯವಲ್ಲವು ಆದರೆ ಈ ದೇಶದಲ್ಲಿ ಇರುವ ಮೂಢತನವು ಬೇರೆ ಕೆಲವು ದೃಷ್ಟಾಂತರಗಳಿಂದ ಈಚೆಗೆ ನಮಗೆ ತಿಳಿದು ಬಂದು ಇದೆ: ಉತ್ತರ ದೇಶದಲ್ಲಿ ಸರ್ಕಾರದವರು ಒಂದು ರೈಲ ರಸ್ತೆಯನ್ನು ತಯಾರು ಮಾಡುತ್ತಲಿದಾರೆ; ಲಕ್ಷ್ಮನು ಎಂಬ ಒಂದು ಊರಿನ ಹತ್ತರದಲ್ಲಿ ನದಿಯು ಹರಿಯುತ್ತಲಿರುವದು ಆ ಸ್ಥಳದಲ್ಲಿ ರೈಲ ರಸ್ತೆಗಾಗಿ ಒಂದು ಸೇತುವೆಯನ್ನು ಕಟ್ಟಿಸಬೇಕಾಗಿ ಬಂದಿದೆ, ರೈಲ ರಸ್ತೆಯ ಸೇತುವೆಯನ್ನು ಅಪಾಯವಿಲ್ಲದೆ ಕಟ್ಟಿಸಬೇಕಾದರೆ ಅದರ ಅಸ್ತಿವಾರಗಳಲ್ಲಿ ನೂರು ಮಂದಿ ಸಣ್ಣ ಮಕ್ಕಳ ತಲೆಯನ್ನು ಹಾಕಬೇಕೆಂಬ ತಾತ್ಪರ್ಯವು ಆ ಊರಿನ ಜನರಲ್ಲಿ ಹ್ಯಾಗೋ ಪ್ರಬಲವಾಗಿ ಇದೆ. ಆ ಊರಿನವರು ಗಾಬರಿಯಾಗಿ ತಮ್ಮ ಊರಿಗೆ ಬರುವ ಎಲ್ಲಾ ದಾರಿಗಳಲ್ಲಿ ಕಾವಲನ್ನು ಇಟ್ಟು ಹೊಸಬರು ಯಾರಾದರೂ ಬಂದರೆ ಅವರನ್ನು ಕೊಲ್ಲಬೇಕೆಂದು ನಿರ್ಧಾರವನ್ನು ಮಾಡಿ ಇದಾರೆ; ಇಷ್ಟು ಗಾಬರಿಗೆ ತಕ್ಕ ಕಾರಣವು ಒಂದೂ ತೋರುವದಿಲ್ಲ: ದುಷ್ಟರಲ್ಲಿ ಯಾರೊಬ್ಬನು ವಿನೋದಕ್ಕಾಗಿ ಇವರಿಗೆ ಹೇಳಿರಬೇಕೇ ಹೊರತು ಬೇರೆ ಇಲ್ಲ: ಆದರೆ ಜನರಲ್ಲಿ ಮೂಢತನವು ಹೆಚ್ಚಾಗಿ ಇರುವದರಿಂದ ಅವರು ಇಷ್ಟು ಬೆಗಡು ಬಿದ್ದು ಇದಾರೆ ಇದಕ್ಕಿಂತಲೂ ಜನರಲ್ಲಿ ಇರುವ ಮೂಢಭಕ್ತಿಗೆ ಒಂದು ವಿಶೇಷವಾದ ದೃಷ್ಟಾಂತರವು ನಮ್ಮ ತಿಳುವಳಿಕೆಗೆ ಒಂದು ಇದೆ, ಅದು ಯಾವದೆಂದರೆ ಗಂಜಾಂ ಜಿಲ್ಲೆಯಲ್ಲಿ ಬಾಳೋಜಿ ಮತ್ತು ತರಣಿ ಇಬ್ಬರು ಸ್ನೇಹಿತರು ಇದ್ದರು, ಈ ಇಬ್ಬರು ಆಗಾಗ್ಯೆ ತಮ್ಮ ಊರಿನಿಂದ ಒಂದರಡು ಮೈಲಿಗಳ ದೂರದಲ್ಲಿ ಇರುವ ಕಾಳಿಂಮ್ಮನ ದೇವಸ್ಥಾನಕ್ಕೆ ಹೋಗಿ ಪ್ರಾಣಿ ಮಾಡಿಕೊಂಡು ಬರುವದು ಪದ್ಧತಿಯಾಗಿ ಇತ್ತು; ಆ ದೇವಸ್ಥಾನದ ಹತ್ತರದಲ್ಲಿ ಒಂದು ವಿಸ್ತಾರವಾದ ಬಂಡೆ ಹೂಣಿಸೆಯಾದ್ದು ಇತ್ತು ಕಳೆದ ಜೂನ್ ತಿಂಗಳಿನ ಒಂದು ದಿವಸಮುಂಚಿ ಬಾಳೋಜಿ ತನ್ನ ಕತ್ತಿಯನ್ನು ಸಾಣೆಗಲ್ಲಿನಲ್ಲಿ ತೀಡಿದುಕೊಂಡು ತನ್ನ ಮಿತ್ರನ ಸಂಗಡ ಗುಡಿ ಹೋದನು ಅಲ್ಲಿ ಬಾಳೋಜಿಯು ತನ್ನ ಮಿತ್ರನನ್ನು ಕೊಂದು ಅವನ ತಲೆಯನ್ನು ಕತ್ತರಿಸಿ ಇಟ್ಟು ಅವನ್ನು ಒಂದು ಕಳೆಯಲ್ಲಿ ಹಾಕಿದನು. ಐದು ದಿವಸಗಳ ಮೇಲೆ ಕೊಲೆಯಾಯಿತೆಂದು ಪೋಲೀಸಿನವರು ತಿಳಿದು ಆ ಸ್ಥಳಕ್ಕೆ ಹೋಗಿ ಬಹಳ ನಾತ ಬಡಿದ ಆ ಪ್ರೇತವನ್ನು ಕಂಡು ಬಾಳೋಜಿಯನ್ನು ಹಿಡಿದರು. ಗಂಜಾಂ ಸೆಷನ್ಸ್ ಜಡ್ಜಿಯವರು ಈ ಪೋಕರನೆ ಯನ್ನು ವಿಚಾರಿಸಿ ಮರಣದಂಡನೆಯನ್ನು ವಿಧಿಸಿದ ಮೇಲೆ ಬಾಳೋಜಿಯು ಮದರಾಸು ಹೈಕೋರ್ಟಿಗೆ ಅಪೀಲು ಮಾಡಿದನು. ಅವನು ತನ್ನ ಅಪೀಲಿನಲ್ಲಿ — "ನಾನು ತರಣಿಯನ್ನು ಕೊಂದದ್ದು ನಿಜ; ಆದರೆ ಕೋಪದಿಂದಾಗಲಿ ದ್ವೇಷದಿಂದಾಗಲಿ ನನ್ನ ಮಿತ್ರನನ್ನು ಕೊಲ್ಲಲಿಲ್ಲ, ಕಾಳಿಂಮನಿ ನರಬಲಿಯು ಬೇಕೆಂದು ನನಗೆ ತಿಳಿದು ಬಂದದ್ದರಿಂದ ನನ್ನ ಅತ್ಯಂತ ಪ್ರಿಯನನ್ನು ಕೊಲ್ಲುವದು ಅತ್ಯಂತ ಪುಣ್ಯಕರವಾಗಿ ಇರುವದೆಂದು ನಾನು ನೆನಸಿದೆ, ಕಾಳಿಂಮನಿಗೋಸ್ಕರವಾಗಿ ನನ್ನ ಮಿತ್ರನು ತನ್ನ ಪ್ರಾಣವನ್ನು ಕೊಡುವದಕ್ಕೆ ಒಪ್ಪಿಕೊಂಡನು" ಎಂದು ಇದೆ. ಇಂಥಾ ಮೂಢಭಕ್ತಿಯನ್ನು ನೋಡಲು ಎಲ್ಲರಿಗೆ ಬಹಳ ಆಶ್ಚರ್ಯವನ್ನು ಹುಟ್ಟಿಸತಕ್ಕದ್ದಾಗಿ ಇದೆ, ಬಾಳೋಜಿಯಲ್ಲಿ ಇದ್ದ ತಾತ್ಪರ್ಯವು ಶುದ್ಧ ಮೂಢತನದಿಂದಲೇ ಉತ್ಪತ್ತಿ ಯಾಯಿತು. ಆದರೆ ಕಾಳಿಂಮನ ಗುಡಿಗೆ ಸೇರಿದ ಪೂಜಾರಿಗಳು ಅಥವಾ ಗುರುಗಳು ಇಂಥಾ ಮೂಢತನಕ್ಕೆ ಆಧಾರವನ್ನು ಕೊಟ್ಟು ಇರಬೇಕು; ಬಾಳೋಜಿಗೆ ಮರಣದಂಡನೆ ಉಂಟಾದರೆ ಆ ಪೂಜಾರಿಗಳಿಗೆ ಯಾವ ಶಿಕ್ಷೆ ಉಂಟಾಗತಕ್ಕದ್ದು? ಹಿಂದೂ ಮತವೆಂಬ ವೃಕ್ಷವು ಇಂಥಾ ಫಲವನ್ನು ಬಿಟ್ಟರೆ ಅದರ ಬೇರು ಎಂಥಾದ್ದು ಆಗಿ ಇರಬೇಕು.

ವೇಶ್ಯಾಸ್ತ್ರೀಯರು.

ಗೃಹಪ್ರವೇಶವಾಗಲೀ ಬೇರೆ ಯಾವದಾದರೂ ಒಂದು ಶುಭಸಮಯವಾಗಲೀ ಉಂಟಾಗಬೇಕಾದರೆ ದೊಡ್ಡ ಮನುಷ್ಯರು ವೇಶ್ಯಾಸ್ತ್ರೀಯರನ್ನು ಕರಿಸುವ ಪದ್ಧತಿಯು ಈ ಮೈಸೂರು ಪಟ್ಟಣದಲ್ಲಿ ಬಹಳ ಪ್ರಬಲಕ್ಕೆ ಬರುತ್ತದೆಂದು ನಾವು ನೋಡಿ ವಿಷಾದಿಸುತ್ತೇವೆ. ಪದವಿಯನ್ನು ಹೊಂದಿದವರೂ ಗೌರವವನ್ನು ಜನರಿಂದ ಹೊಂದಬೇಕೆಂದಿರುವವರು ಇಂಥಾ ಹೆಂಗಸರನ್ನು ತಮ್ಮ ಮನೆಗಳಿಗೆ ಸೇರಿಸುವದು ಅತಿನೀಚವಾದ ಕೆಲಸವಾಗಿದೆಯೇ ಹೊರತು ಬೇರೆ ಅಲ್ಲವು; ಮೈಸೂರು ಸರ್ಕಾರದ ಉದ್ಯೋಗಸ್ಥರಲ್ಲಿ ಕೆಲವು ದೊಡ್ಡ ಮನುಷ್ಯರು ಈ ದುರಭ್ಯಾಸದಲ್ಲಿ ಮಗ್ನರಾಗಿ ಇರುತ್ತಾರೆಂದು ನಮಗೆ ವರ್ತಮಾನವು ಬಂದು ಇದೆ. ಬುದ್ಧಿ ಮನುಷ್ಯನಿಗೆ ಎಷ್ಟು ಬುದ್ಧಿ ಕುಶಲತೆಯೂ ಪದವಿಯೂ ಇದ್ದಾಗ್ಯೂ ಅವರು ಇಂಥಾ ದುರ್ಮಾರ್ಗ ಪ್ರವರ್ತಕರಾಗಿದ್ದರೆ ಸಜ್ಜನರು ಅವರನ್ನು ಅಲಕ್ಷ್ಯ ಮಾಡಿ ಅವರನ್ನು ಅಸಹಿಸುವರು. ಇಂಥಾ ದುಷ್ಕೃತ್ಯಗಳನ್ನು ಮಾಡುವವರು ಬುದ್ಧಿ ಹೇಳಿಯೂ, ನಮ್ಮ ರಾಜ್ಯದಲ್ಲಿ ಇರುವ ಕೆಲವು ದೊಡ್ಡ ಮನುಷ್ಯರು ಈ ತಮ್ಮ ದುರ್ನಡತೆಯನ್ನು ಬಿಡ ಲಾಯಿಸದೆ ಹೋದರೆ ೧೮೯೩ನೇ ವರುಷಗಳೊಳಗಾಗಿ ನಮ್ಮ ರಾಜ್ಯಕ್ಕೆ ಅವಮಾನ ಉಂಟಾಗುವ ವಿಷಯದಲ್ಲಿ ಯಾವ ಸಂಶಯವೂ ಇರುವದಿಲ್ಲ.

ಕ್ರಿಸ್ತಭಕ್ತನ ಸಾಕ್ಷಿ.

ಬೆಂಗಳೂರಿನಲ್ಲಿ ನಡೆಯುವ ಶಿಕ್ಷಣದಿಂದ ಅನೇಕ ಜನರು ಸುಶಿಕ್ಷಿತರಾಗುತ್ತಾರೆ. ಆದರೆ ಅವರಿಗೆ ಕೆಲಸಗಳು ದೊರೆಯುವುದಿಲ್ಲ. ಕೆಲವರು ಬೇರೆ ದೇಶಗಳಿಗೆ ಹೋಗುತ್ತಾರೆ. ಈ ವಿಷಯದಲ್ಲಿ ಸರಕಾರದವರು ಗಮನಕೊಡಬೇಕೆಂದು ಕೇಳುತ್ತೇವೆ.

ಒರಿಸ್ಸ ಜಿಲ್ಲೆಯಲ್ಲಿ ಬರಗಾಲವಾಗಿದೆ. ಜನರು ಹಸಿವಿನಿಂದ ಸಾಯುತ್ತಿದ್ದಾರೆ. ಅವರಿಗೆ ಸಹಾಯ ಮಾಡಲು ಸರಕಾರದವರು ಕೆಲವು ಏರ್ಪಾಡುಗಳನ್ನು ಮಾಡಿದ್ದಾರೆ.

ನೆನ್ನೆ ರಾತ್ರಿ ಪಾರ್ಲಿಮೆಂಟ್ ಸಭೆಯಲ್ಲಿ ಮಿ|| ಗ್ಲಾಡ್ಸ್ಟನ್ ರವರು ಹಿಂದೂಸ್ಥಾನದ ವಿಷಯ—ಪಾರ್ಲಿಮೆಂಟ್ ನಲ್ಲಿ ಕೆಲವು ಸಂಗತಿಗಳನ್ನು ಹೇಳಿದರು.

ವರ್ತಮಾನ ತಾ|| ೧೯ನೇ ತಾರೀಖಿನಿಂದ ಬರುವ ವರ್ತಮಾನಗಳು ಇಲ್ಲ. ಮುಂದೆ ಬರುವ ವರ್ತಮಾನವನ್ನು ತಿಳಿಸುತ್ತೇವೆ. ಅದರ ಹಿಂದಿನ ವಿಷಯಗಳನ್ನು ಪ್ರಕಟಿಸುವುದಕ್ಕೆ ಸಮಯವಿಲ್ಲ. ಮುಂದೆ ನೋಡಬೇಕಾಗುವುದು.

ಬೆಂಗಳೂರು ಪಟ್ಟಣದಲ್ಲಿ ಸಿವಿಲ್ ಸ್ಟೇಷನ್ ಕೆಲಸಗಾರರು ತಮಗೆ ಹೆಚ್ಚಿನ ಸಂಬಳ ಬೇಕೆಂದು ಕೇಳಿದರು. ಅವರಿಗೆ ಸಂಬಳವನ್ನು ಹೆಚ್ಚಿಸುವುದಕ್ಕೆ ಸರಕಾರದವರು ಒಪ್ಪಲಿಲ್ಲ. ಅವರು ಕೆಲಸ ಮಾಡುವುದಿಲ್ಲವೆಂದು ಹೇಳಿ ಹೊರಟರು. ಅಧಿಕಾರಿಗಳು ೫೦ ರೂಪಾಯಿ ಕೊಡುತ್ತೇವೆಂದು ಹೇಳಿ ಮಾಡಿಸುತ್ತಾರೆ.

ಸರ್ ಚಾರ್ಲ್ಸ್ ಎಲಿಯಟರವರು ಇಂಡಿಯಾದೇಶದ ಕಡೆಗೆ ಬರುವದಕ್ಕಾಗಿ ಏರ್ಪಾಡುಗಳನ್ನು ಮಾಡಿಕೊಂಡಿದ್ದಾರೆ.

ಬಿಹಾರ ರತ್ನಗಿರಿಗಳಲ್ಲಿ ಒಂದು ಹೊಸ ಕಂಪನಿ ಸ್ಥಾಪಿತವಾಯಿತು. ಅದರಲ್ಲಿ ೧೦ ಲಕ್ಷ ರೂಪಾಯಿಗಳ ಬಂಡವಾಳವಿದೆ. ಕೆಲವು ದಿವಸಗಳ ಕೆಳಗೆ ೫೦ ಲಕ್ಷ ರೂಪಾಯಿ ಬೆಲೆಬಾಳುವ ರತ್ನಗಳು ಸಿಕ್ಕಿದವೆಂಬ ವರ್ತಮಾನವು ಬಂದಿರುತ್ತದೆ.

ಜಾನ್ ಬಿಡಲ್ ನಲ್ ಕಮಿಷನರ್ ರವರು ಅಮೆರಿಕಾಕ್ಕೆ ಹೋಗುವವರಾಗಿದ್ದಾರೆ. ಈ ವಾರದಲ್ಲಿ ಕ್ಯಾಂಪಿಗೆ ಬರುವರು.

ಜನಪ್ರವಾದ.

ಶ್ರೀಮನ್ಮಹಾರಾಜರವರು ೨೩ ನೇ ತಾರೀಖಿನಲ್ಲಿ ಇಲ್ಲಿಂದ ನೀಲಗಿರಿಗೆ ಕುಟುಂಬಸಮೇತರಾಗಿ ಹೊರಟು ಹೋಗುತ್ತಾರೆಂಬುವದು ನಿಶ್ಚಿತವಾಗಿದೆ. ನೀಲಗಿರಿಯಿಂದ ಪಟ್ಟದ ಸೋಲಕ್ಕೆ ಮಹಾರಾಣಿಯವರೂ ಅವರ ಮಕ್ಕಳೂ ನಾಳೆದಿನ ಪ್ರಯಾಣಮಾಡುವರೆಂತಲೂ ಮಹಾರಾಜರವರು ಕರ್ನಲ್ ಕ್ಯಾಂಬೆಲ್ ಸಾಹೇಬರವರ ಸಂಗಡ ಕುದುರೆಯಮೇಲೆ ಸವಾರಿ ಬರುತ್ತಿಸುವರೆಂತಲೂ ನಮಗೆ ತಿಳಿದು ಬಂದಿದೆ. ಅವರೆಲ್ಲರೂ ವಾಪಸು ಪ್ರಯಾಣಮಾಡುವ ಕಾಲವು ಇನ್ನೂ ನಿಶ್ಚಯವಾಗಲಿಲ್ಲ. ಈ ಬೇಸಿಗೆ ಕಾಲದೊಳಗೆ ಮಹಾರಾಜರವರು ನಂದಿದುರ್ಗಕ್ಕೆ ದಯಮಾಡುವದಿಲ್ಲ.

ಮೈಸೂರ್ ಯುವರಾಜರು ವಿದ್ಯಾಭ್ಯಾಸದಲ್ಲಿ ತಕ್ಕ ಮಟ್ಟಿಗೂ ಪ್ರಯಾಸಪಡುತ್ತಲಿದ್ದಾರೆ. ಇಂಗ್ಲಿಷ್ ಭಾಷೆಯನ್ನು ಚೆನ್ನಾಗಿ ಮಾತನಾಡುತ್ತಾರೆ. ಶ್ರೀಮನ್ಮಹಾರಾಜರವರು ಯುವರಾಜರಿಗೋಸ್ಕರ ಇಂಗ್ಲಿಷ್ ಉಪಾಧ್ಯಾಯರನ್ನು ನೇಮಿಸಬೇಕೆಂದು ಯೋಚಿಸುತ್ತಲಿದ್ದಾರೆ. ಈ ವಿಷಯದಲ್ಲಿ ಕೆಲವರು ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿರುವ ಮ|| ಟೇಟ್ ಸಾಹೇಬರು ಈ ಕೆಲಸಕ್ಕೆ ನೇಮಿಸಲ್ಪಡುವರೆಂದು ಅಭಿಪ್ರಾಯಪಟ್ಟಿದ್ದಾರೆ. ಅವರಿಗೆ ತಕ್ಕಷ್ಟು ಯೋಗ್ಯತೆ ಉಂಟೆಂಬುವದರಲ್ಲಿ ಯಾವ ಸಂದೇಹವೂ ಇಲ್ಲ. ಆದರೆ ಮಹಾರಾಜರವರು ಈ ಭಾಗದಲ್ಲಿ ಬೌರಿಂಗ್ ಸಾಹೇಬರಿಗೆ ಒಂದು ಕಾಗದವನ್ನು ಬರೆದು ಯೋಗ್ಯರನ್ನು ಕಳುಹಿಸಿಕೊಡಬೇಕೆಂದು ಕೇಳಿಕೊಂಡಿದ್ದಾರೆಂಬುದಾಗಿ ನಮಗೆ ತಿಳಿದಿದೆ. ಈ ಕೆಲಸಕ್ಕೆ ಬರತಕ್ಕವರು ಗುಣದಲ್ಲಿ ಒಳ್ಳೆಯವರೂ ನಡತೆಯಲ್ಲಿ ಶ್ರೇಷ್ಠರೂ ದೇಹದಲ್ಲಿ ಚಟುವಟಿಕೆಯುಳ್ಳವರೂ ಬುದ್ಧಿಯಲ್ಲಿ ಚುರುಕಾದವರೂ ಆಗಬೇಕೆಂದು ನಮಗೆ ತಾತ್ಪರ್ಯ. ವಿಧ ಅಯೋಗ್ಯರು ಇಂಥಾ ಕೆಲಸಕ್ಕೆ ನೇಮಿಸಲ್ಪಟ್ಟರೆ ಈ ರಾಜ್ಯಕ್ಕೆ ಅನ್ಯಾಯ ಮುಂದೆ ಬರತಕ್ಕ ಗಣಿಯು ಹಾನಿಯು ಹೇಳುವಂತೆ ಅದರ ಯೋಗ್ಯರಿಂದಲೇ ದೇವರು ಈ ರಾಜ್ಯಕ್ಕೆ ಸದ್ಭಾವನನ್ನು ಕೊಟ್ಟಿದ್ದಾನೆಂದು ನಂಬಿದ್ದೇವೆ.

ಹೊಸ ಕಮಿಷನರ ಸಾಹೇಬರಲ್ಲಿ ಮದ್ರಾಸ್ ಸರ್ಕಾರ ಸಾಹೇಬರ ತಂದೆಯವರು ಈ ಪಟ್ಟಣಕ್ಕೆ ದಯಮಾಡಿಸಿದರು. ಅವರು ಲೋಕದಲ್ಲೆಲ್ಲಾ ದೊಡ್ಡ ದೊಡ್ಡ ಪತ್ರಿಕೆ ಕಾರ್ಯಾಲಯಗಳಿಗೆ ಕಳುಹಿಸುವ ಪತ್ರಗಳನ್ನು ತಯಾರುಮಾಡಿಸುತ್ತಾರೆ. ಅವರು ಇಂಡಿಯಾ ದೇಶಕ್ಕೆ ಒಂದು ೨–೩ ತಿಂಗಳು ಇದ್ದು ಮುಂದೆ ಅವರು ಚೀನಾ ದೇಶಕ್ಕೂ ಅಮೇರಿಕ ಖಂಡಕ್ಕೂ ಹೋಗುತ್ತಾರೆಂದು ವರ್ತಮಾನವಿದೆ.

ಈ ಮಧ್ಯದಲ್ಲಿ ಮದ್ರಾಸ್ ಕ್ರಿಶ್ಚಿಯನ್ ಕಾಲೇಜಿನ ವಿದ್ಯಾರ್ಥಿಗಳು ಹೊರಟು ಹೋಗಿದ್ದಾರೆ. ಅವರು ೫೦ ವರ್ಷಗಳು ಈ ಮೈಸೂರು ಶ್ರೀಮಂತರ ಸೇವೆ ಮಾಡಿ ದಾನಿಗೆ ಪಟ್ಟಿಯನ್ನು ವಹಿಸುತ್ತಾ ಬಂದಿದ್ದಾರೆ. ಆ ೫೦ ವರ್ಷಗಳಲ್ಲಿ ತುಮಕೂರಿನಲ್ಲಿ ೨ ವರ್ಷಗಳನ್ನು ಹಾಸನದಲ್ಲಿ ೨ ವರ್ಷಗಳನ್ನು ಶಿವಮೊಗ್ಗದಲ್ಲಿ ೨ ವರ್ಷಗಳನ್ನು ಕಳೆದರು. ೧೫ ವರ್ಷಗಳವರೆಗೂ ಅವರು ಮೈಸೂರಿನಲ್ಲಿದ್ದರು. ಅವರು ಕನ್ನಡ ಭಾಷೆಯನ್ನು ಚೆನ್ನಾಗಿ ಕಲಿತುಕೊಂಡು ಬಹಳ ಪ್ರೀತಿಯಿಂದ ಜನರೊಡನೆ ವಿಷಯಗಳನ್ನು ತಿಳಿಸುತ್ತಿದ್ದರು. ಅವರು ಪಾದ್ರಿಯ ಕೆಲಸಗಳನ್ನು ಅನೇಕರು ಜ್ಞಾಪಕ ಮಾಡುತ್ತಾರೆ. ೨ ವರ್ಷಗಳ ಮೇಲೆ ಅವರು ಪುನಃ ಈ ಭಾಗಕ್ಕೆ ದಯಮಾಡುವರೆಂದು ನಿರೀಕ್ಷಿಸುತ್ತಾ ಇರುವರು.

೧೩ ವರುಷಗಳಿಂದ ಮಿಸ್ಟರ್ ವೆಸ್ಲಿ ಸಾಹೇಬರು ಬೆಂಗಳೂರಿನಲ್ಲಿದ್ದಾರೆ. ಅವರು ಅಲ್ಲಿನ ವೆಸ್ಲಿಯನ್ ಮಿಶನ್ ಸ್ಕೂಲಿನಲ್ಲಿ ಬಹಳ ಮುಖ್ಯವಾದ ಕೆಲಸವನ್ನು ಮಾಡುತ್ತಿದ್ದಾರೆ. ಸಂಸ್ಕೃತ, ಕನ್ನಡ, ತಮಿಳು ಈ ಭಾಷೆಗಳಲ್ಲಿ ಪಾಂಡಿತ್ಯವನ್ನು ಹೊಂದಿದ್ದಾರೆ. ಹೋದವಾರದಲ್ಲಿ ಕೆಲಸವನ್ನು ಬಿಟ್ಟು ಸ್ವದೇಶಕ್ಕೆ ಹೋಗಿದ್ದಾರೆ. ಅಲ್ಲಿ ಒಂದು ವರ್ಷವಿದ್ದು ಇರುವರು. ನಂತರ ಇಲ್ಲಿಗೆ ಬರುವರು.

ಕ್ಯಾಪ್ಟನ್ ಎಂಬ ಸತ್ಯವೇದವನ್ನು ಹೊಸದಾಗಿ ಕನ್ನಡ ಭಾಷಾಂತರ ಮಾಡುವ ಸಭೆಯವರು ಏಪ್ರಿಲ್ ತಿಂಗಳ ೬ ನೇ ತಾರೀಖಿಗೆ ನೀಲಗಿರಿಯಲ್ಲಿ ತಮ್ಮ ಕೆಲಸವನ್ನು ಪ್ರಾರಂಭಿಸಿ ಜೇ ತಿಂಗಳ ಅಖೈರಿನೊಳಗೆ ಮುಗಿಸುವ ಈ ಭಾಗವನ್ನು ತೀರಿಸುವರೆಂದು ನಿರೀಕ್ಷಿಸುತ್ತಾರೆ.

ವಿವಿಧ ವರ್ತಮಾನಗಳು.

ಹೋದವಾರದಲ್ಲಿ ಬೆಂಗಳೂರು ಎಂಬ ಪೇಟೆಯಲ್ಲಿ ಬಿರುಗಾಳಿ ಬೀಸಿ ಅನೇಕ ಮರಗಳು ಬಿದ್ದುಹೋದವು. ಅದರಿಂದ ಅಲ್ಲಿನ ಜನರಿಗೆ ಬಹಳ ನಷ್ಟ ಉಂಟಾಯಿತೆಂದು ಕೇಳಿ ವಿಷಾದಪಡುತ್ತೇವೆ.

ಬರುವ ತಿಂಗಳ ಮೊದಲನೇ ತಾರೀಖಿನಲ್ಲಿ ಮೈಸೂರು ಸಾಹೇಬರವರು ರೈಲ ಗಾಡಿಯಲ್ಲಿ ಮೊದಲನೇ ತರಗತಿಗೆ ೧೦ ರೂ ಮಾಡುವದಕ್ಕಾಗಿ ಹೋಗುತ್ತಾರೆಂದು ವರ್ತಮಾನವಿದೆ. ೭ ರ ಮಗನು ನಮ್ಮ ಮೈಸೂರ ಕಡೆಗೆ ಬರುತ್ತಾರೆಂದು ನಾವು ತಿಳಿದಿದ್ದೇವೆ.

ಲಾರ್ಡ್ ಲ್ಯಾನ್ಸ್‌ಡೌನವರ ಪ್ರತಿಮೆಯನ್ನು ಇಂಡಿಯಾದಲ್ಲಿ ಅನುಸರಿಸಬೇಕೆಂದು ಗೌರವ ಮಾಡುತ್ತಾ ಇದ್ದಷ್ಟು ಆ ಪ್ರತಿಮೆಯನ್ನು ಕೊಂಡುಕೊಳ್ಳುವದಕ್ಕಾಗಿ ವಿಜಯನಗರದ ಮಹಾರಾಜರವರು ೨೦ ಸಾವಿರ ರೂಪಾಯಿಗಳನ್ನು ಕೊಟ್ಟಿರುತ್ತಾರೆಂದು ತಿಳಿದು ಸಂತೋಷಿಸುತ್ತೇವೆ.

ವಿಲಾಯಿತಿಯಲ್ಲಿ ಹೆಂಗಸರು ಮ್ಯೂನಿಸಿಪಲ್ ಕಮಿಷನರರಾಗಿ ಚುನಾಯಿಸಲ್ಪಡಬೇಕೆಂದು ಅನೇಕರು ಪ್ರಯಾಸ ಪಡುತ್ತಾ ಇದ್ದಾರೆ. ಆ ಗುಣವು ನ್ಯಾಯವಾಗಿದೆ ಎಂದು ನಮಗೆ ತೋರುತ್ತದೆ. ಹೆಂಗಸರಲ್ಲಿ ಅನೇಕರು ಗಾಳ್ಪಬರಗಳೂ ಪತ್ರಿಕಾಕರ್ತರೂ ಕೈಗಾರಿಕೆಯ ಕೆಲಸವನ್ನು ನಡಿಸುವವರೂ ಆಗಿರುತ್ತಾರೆ. ಕೆಲವರು ಡಾಕ್ಟರು ಸಾಮಾನವರು ಹಾಗಾದರೆ ಅವರು ಯಾಕೆ ಕಮಿಷನರುಗಳಾಗಬಾರದು?

— —

ಇಂಗ್ಲೆಂಡಿನಲ್ಲಿ ವೆಸ್ಟ್‌ಮೋರ್ಲ್ಯಾಂಡು ಎಂಬ ಡಿಸ್ಟ್ರಿಕ್ಟಿನ ಒಂದು ಆ ಡಿಸ್ಟ್ರಿಕ್ಟಿನಲ್ಲಿ ಸರ್ವಜನ್ಯರುಮಾಡಿದ ಇದ್ದಗ್ರಾಮ ೨ ವರುಷಗಳಿಗೂ ಹಿಂದೆ ಅವರ ಕೈಯಿಗೆ ಬಂದ ಮಹಾ ಕ್ಷಾಮವು ಬಂದರೂ ಬರಲಿಲ್ಲ. ಆ ಗ್ರಾಮದವರು ಕಾಲೇಜಿನ ವ್ಯಾಪ್ಯವನ್ನು ಬಿಟ್ಟುಬಿಟ್ಟಿರುತ್ತಾರೆಂದು ನಮಗೆ ತೋರುತ್ತದೆ. ಈ ದೇಶದವರು ಆ ಶ್ರೇಷ್ಠವಾದ ಮೇಲ್ಪಂಕ್ತಿಯನ್ನು ಯಾವಾಗ ಅನುಸರಿಸುವರು?

— —

ಒಬ್ಬ ನೊಬ್ಬ ಮನುಷ್ಯನು ಇಂಗ್ಲೆಂಡಿನಲ್ಲಿ ಬೆಟ್ಟ ಚುಕ್ಕಿಸುವ ನೋಟುಗಳೆಂಬ ಒಳ್ಳೇ ಖಣವನ್ನು ಕೂಡ ಸಂಗ್ರಹಿಸಿ ತನ್ನ ಜೀವದಲ್ಲಿ ನೂರಾರು ರೂಪಾಯಿಗಳನ್ನು ಗಳಿಸಿ ಕಳುಹಿಸಿದನು. ಆ ಪೆಟ್ಟಿಗೆ ತಮಿಳುನಾಡಿನವರು ಅದನ್ನು ತೆಗ್ಗೆದರಲ್ಲಿ ಸಮಸ್ತ ಜನದವರನ್ನು ಪರಿಣಾಮ ಪ್ರಕಟವಾಗಿಯೂ ಕಳುಹಿಸಿದರು. ಆ ಮನುಷ್ಯನು ಈಗ ದೊಡ್ಡಸ್ಥನಾಗಿದ್ದಾನೆ.

ಇಂಗ್ಲೆಂಡಿನಲ್ಲಿ ಬಡಜನಗಳು ಬಡತನಕ್ಕೆ ಸ್ಥಳಗಳಲ್ಲಿ ಬಹು ಮಂದಿ ಕೂಲಿ ಆಳುಗಳು ತಮ್ಮ ಕೆಲಸವನ್ನು ಮಾಡುತ್ತಿದ್ದರೆ. ಈ ಕೆಲಸಕ್ಕೆ ಏನು ಕಷ್ಟವಿದ್ದರೂ ದಿನಕ್ಕೆ ಎಂಟು ಘಂಟೆಗೆ ಮಾತ್ರವೇ ಸಹಾಯಕರು ೮ ಆರು ಘಂಟೆಗಳಿಗೂ ಕಷ್ಟಪಡಬೇಕಾಗಿದೆ. ಮಧ್ಯಾಹ್ನಕ್ಕೆ ಒಂದು ಘಂಟೆಯಿಂದ ಎರಡು ಘಂಟೆಯವರೆಗೂ ಊಟಕ್ಕಾಗಿ ಬಿಡುತ್ತಾರೆ. ಈ ಕೆಲಸದವರಲ್ಲಿ ಒಬ್ಬೊಬ್ಬನಿಗೆ ವಾರಕ್ಕೆ ಸುಮಾರು ೧೧ ರೂಪಾಯಿ ಕೂಲಿ ಸಿಕ್ಕುತ್ತದೆ.

ಮದರಾಸು ಸರ್ಕಾರದ ಅಧಿಕಾರಿಗಳು ಸ್ವಲ್ಪ ದಿನಗಳ ಹಿಂದೆ ದೊಡ್ಡ ದೊಡ್ಡ ಕೆಲಸಗಳಿಗಾಗಿ ಬಹಳ ಇಲ್ಲಿನಾದವನ್ನು ಉದ್ದೇಶಿಸಬೇಕಾಗಿದೆಯೆನ್ನೆ. ಅವರು ಕಳ್ಳನಾದನ್ನು ತಮ್ಮ ದೇಶದೊಳಗೆ ತಯಾರಿ ಮಾಡಿಸುವದಕ್ಕೆ ಬದಲಾಗಿ ವಿಲಾಯಿತಿ ನಿಂದಲಾದ ತರಿಸುವದರಿಂದ ಮದರಾಸಿನಲ್ಲಿ ದುಡಿ ಕೆಲ್ಸು ನಷ್ಟವಾಗುತ್ತದೆ. ಇದಕ್ಕೆ ಒದಗ ಅಕ್ಷೇಪಣೆ ನಮ್ಮದಾಗಿದೆ. ಅಂದರೆ ಬರುವ ಕಳುಹಿಸುವ ವಿಜ್ಞಾಪನೆಯನ್ನು ಸರ್ಕಾರದವರು ತಮ್ಮ ಗಣನೆಗೆ ತರುವರೆಂದು ನಾವು ನಂಬುತ್ತೇವೆ.

ಇಂಗ್ಲೆಂಡಿಗೆ ಸೇರಿದ ಲಿವರ್‌ಪೂಲ್ ಎಂಬ ಪಟ್ಟಣದಲ್ಲಿ ಕೆಲವು ದೊಡ್ಡ ಮನುಷ್ಯರು ಹೊಸದಾಗಿ ಒಂದು ದೊಡ್ಡ ಜಾಗವನ್ನು ತಯಾರುಮಾಡಿಸಿರುತ್ತಾರೆ. ಅದರ ಉದ್ದವು ೬೦೦ ಅಡಿ ಇದರ ಬೆಲೆ ಒಂದು ಕೋಟಿ ೬೦ ಲಕ್ಷ ರೂಪಾಯಿಗಳು. ಇದು ನೀರಿನ ಮೇಲೆ ಗಂಟೆಗೆ ೨೧ ಮೈಲಿ ವೇಗವಾಗಿ ಪ್ರಯಾಣ ಮಾಡುತ್ತದೆ. ಇದರಲ್ಲಿ ೩೦೦೦ ಕುದುರೆ ಬಲದ ಬಾಯ್ಲರ್ ಎಂಬ ಕಲ್ಲಿದ್ದಲನ್ನು ಉಪಯೋಗಿಸುತ್ತಾರೆ. ಇದು ಒಂದು ಸಾರಿ ಬಹು ದೂರವಾಗಿ ಪ್ರಯಾಣ ಮಾಡುವದಕ್ಕೆ ೬೦ ಸಾವಿರ ರೂಪಾಯಿ ಖರ್ಚು ಆಗುತ್ತದೆ. ಆ ಹಡಗಿನ ಒಂದು ದಿವಸದ ಖರ್ಚು ಬಹು ಲಕ್ಷ ರೂಪಾಯಿಗಳು.

ಅಮೇರಿಕ ಖಂಡದಲ್ಲಿ ೧೫ ವರುಷ ವಯಸ್ಸುಳ್ಳ ಒಬ್ಬ ಹೆಣ್ಣುಮಗಳಿದ್ದಾಳೆ. ಆಕೆಯನ್ನು ನೋಡಿ ಬಹಳ ಆಶ್ಚರ್ಯಪಡತಕ್ಕದ್ದು. ಆಕೆಯ ಉದ್ದ ೨ ಅಂಗುಲ ತೂಕವು ಬಹಳಿಲ್ಲ. ಆಕೆಯು ಚೆನ್ನಾಗಿದೆ. ಅವಳ ಕೈಯ ಸ್ವಲ್ಪ ಚಿಕ್ಕ ಆಳೆಯು ರೂಪವನ್ನು ಚೆನ್ನಾಗಿ ಬರಿ ಸುತ್ತಾಳೆ. ಬಹಳವಾಗಿ ಮಾತಾಡುತ್ತಾಳೆ. ನಮ್ಮ ಸೊಟ್ಟಾಗಿ ಮತ್ತು ಹರ್ಷದಿಂದ ಅವಳನ್ನು ನೋಡುವದಕ್ಕೆ ೧೦|| ವರುಷ ವಯಸ್ಸುಳ್ಳ ಅವಳ ಒಡಹುಟ್ಟಿದವಳು ಬರುತ್ತಾಳೆ. ಈ ಎರಡನೆಯವಳ ಉದ್ದ ೨|| ಅಡಿ ಅವಳ ದೇಹದ ತೂಕವು ಆಕೆಯದಕ್ಕಿಂತ ೬ ಅಂಗುಲ.

ಡ್ಯೂಕ್ ಆಫ್ ಕನಾಟ್ ಎಂಬ ರಾಜಕುಮಾರರು ಲಕ್ಷ್ಮೀಪತಿಗಳಾಗಿರುವರೆಂದು ಪಾಠಕರು ಕೇಳಿರಬಹುದು. ಅವರು ಉಡುಪುಗಳ ತಿನಿಸುಗಳನ್ನು ಬೇರೆ ಬೇರೆ ಸಿಗುತ್ತಾರೆ. ಅವು ಒಂದೆರಡಲ್ಲ ಅನೇಕ ರೀತಿಯಾದವುಗಳು ೫೦ ಸಾವಿರಕ್ಕೂ ಹೆಚ್ಚಿನವಾದವುಗಳೆಂದೂ ಅವುಗಳಿಂದ ತಮ್ಮ ಮಿತ್ರರಿಗೂ ಕೊಡುತ್ತಾರೆ. ಅವುಗಳನ್ನು ತಿನ್ನುವದಕ್ಕಾಗಿ ಮುಂಚೆ ತೋರಿಸುವದಕ್ಕೆ ಸಮಯವಿಲ್ಲದಂತೆ ಅವರು ಅವುಗಳನ್ನು ನೋಡುವದಕ್ಕೆ ತಕ್ಕ ಸಮಯವಿಲ್ಲದೆ ಇರುತ್ತಾರೆ.

— — —

ಹೋದ ತಿಂಗಳಲ್ಲಿ ಒಬ್ಬ ಫ್ರಾನ್ಸ್ ದೇಶಕ್ಕೆ ಸೇರಿದ ಮನುಷ್ಯನು ಪ್ಯಾರಿಸ್ ಪಟ್ಟಣದಲ್ಲಿ ಒಬ್ಬ ಸಬ್‌ಇನ್ಸ್‌ಪೆಕ್ಟರ್ ಮನುಷ್ಯನು ಪೊಲೀಸ್ ಠಾಣೆಗೆ ಹೋಗಿ ಅಲ್ಲಿದ್ದ ಅಧಿಕಾರಿಯನ್ನು ನೋಡಿ ಅಯ್ಯಾ ನನ್ನ ಹೆಸರು ಇಂಥವನೆನ್ನುತ್ತಾರೆ ನಾನು ಒಬ್ಬನಿಂದ ಬಂದಿದ್ದೇನೆ ಎಲ್ಲಿಗೆ ಹೋಗಬೇಕು (ಕೋಪ) ನಾನು ಬಂದಿದ್ದೇನೆ ಎಂದಾಗ ಕೇಳಲು ಆ ಅಧಿಕಾರಿಯು ಏನನ್ನು ಮಾಡಬೇಕೆಂದು ನಮಗೆ ಅವನನ್ನು ಸೈಲಿನಲ್ಲಿ ಸೇರಿಸಿದರು. ಈ ಬಗೆ ಈಚೆ ದುಡ್ಡಿನವರು ಅವನನ್ನು ಪರೀಕ್ಷಿಸಿ ಇವನು ಬುದ್ಧಿಹೀನನೆಂದು ಕಂಡುಹಿಡಿದು ಹುಚ್ಚರ ಆಸ್ಪತ್ರೆಗೆ ಕಳಿಸಿ ಕೊಡುವದಕ್ಕೆ ಅವರು ಹೇಳುತ್ತಾರೆ. ಇದು ಬಹು ಆಶ್ಚರ್ಯವಾಗಿದೆ.

ದುರ್ಯ್ಯಾಸ್ ಕ್ರಿಶ್ಚಿಯನ್ ಕಾಲೇಜಿನಲ್ಲಿ ಮುಖ್ಯ ಉಪಾಧ್ಯಾಯರಾಗಿರುವ ಡಾಕ್ಟರ್ ಮಿಲ್ಲರ್ ಸಿ. ಐ. ಇ. ಯವರು ಸ್ವಲ್ಪ ಪೆಟ್ಟು ಕಳುಹಿಸಿ ವರ್ಷಗಳು ವಿಲಾಯಿತಿಗೆ ಹೋಗಿದ್ದು ಮರಳಿ ಇಲ್ಲಿಗೆ ಬಂದಿದ್ದಾರೆ. ಅವರು ಸ್ವಲ್ಪ ದಿವಸದ ಸನ್ನಸ್ಸಿಗೆ ವಿದ್ಯಾರ್ಥಿಗಳು ಮಾಡುವ ಸನ್ಮಾನ. ಅವರ ಪ್ರಾಂಗಣಗಳು ಈ ದೇಶಕ್ಕೆ ಉಪಕಾರವಾಗಿದೆ. ಆ ದೇಶದ ಪ್ರಾಚೀನರಾದವರು ಅವರನ್ನು ಪ್ರೀತಿಯಿಂದ ಸನ್ಮಾನಿಸುವರು. ಈ ದೇಶದವರಿಗೆ ಉತ್ತಮವಾದ ಪ್ರಯೋಜನವನ್ನು ಉಂಟುಮಾಡಿದ್ದಾರೆ. ಅವರ ಸ್ಥಾನವನ್ನು ಉಪಯೋಗಿಸಿ ಇರುತ್ತೇವೆ.

ಗಂಜಾ ಸೇದುವರು ಸುಧಾರಿಸಲ್ಪಡುವರೇ ಎಂಬ ಪ್ರಶ್ನೆಯನ್ನು ಸರ್ಕಾರವರು ನಿರ್ಧರಿಸಲು ಒಂದು ದೊಡ್ಡ ಕಮಿಟಿಯನ್ನು ನೇಮಿಸಿದರು. ಅವರು ದುಷ್ಟ ಸಹಜನನ್ನು ಒಂದು ದೊಡ್ಡ ಸಭೆಯಾಗಿ ಸೇರಿಸಿದ್ದಾರೆ. ಇದರಲ್ಲಿ ಮುಖ್ಯವಾದ ಈ ಸರ್ಕಾರದ ವಿಷಯವನ್ನು ಕೇಳಿ ಬಿಡುವದಕ್ಕೆ ಸಂಕಲ್ಪಿಸುತ್ತದೆ.

ಗಂಜಾ ಸೇದುವರು ಸುಧಾರಿಸಲ್ಪಡುವರಿಗೆ ಸನ್ಯಾಸಿಗಳಲ್ಲಿ ಸಾಧಾರಣವಾಗಿ ಇದ್ದುಕೊಂಡು ಸಹಜವಾಗಿ ಪತ್ತೆ ಹಚ್ಚಲು ಬಹಳ ತೊಂದರೆಯಾಗುವದರಿಂದ ಆ ವರನ್ನು ಪುನಃ ತನಿಖೆ ಮಾಡಬೇಕೆಂದು ಹೇಳಿರುತ್ತಾರೆ. ಗಂಜಾ ಸೇದುವರಲ್ಲಿ ಬುದ್ಧಿಭ್ರಮೆಯು ಈ ಮನುಷ್ಯರಿಗೆ ಅತ್ಯುಗ್ರವಾಗಿರುವದರಿಂದ ಅವರು ಒಂದು ದಿವಸಕ್ಕೆ ಹತ್ತು ಸಾರಿ ಸೇದುವರು. ಅವರಿಗೆ ಯಾವ ತೊಂದರೆಯೂ ಉಂಟು ಗುಣದಲ್ಲಿ. ಆದರೆ ಸಾಧಾರಣವಾದ ಜನರು ಈ ದುರಭ್ಯಾಸ ಪ್ರವರ್ತಕರಾದ ಅವರ ಅನುಗ್ರಹವುಳ್ಳವರಾಗಿ ಕಮಿಷನರು ಗಂಜಾ ಸೇದುವವನ್ನು ನಿಲ್ಲಿಸಬೇಕೆಂದು ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಹೋದ ತಿಂಗಳಲ್ಲಿ ದೊಡ್ಡ ಚರ್ಚೆ ನಡೆಯಿತು.

ರಷ್ಯ ದೇಶಕ್ಕೆ ಸೇರಿದ ವಾರ್‌ಸಾ ಎಂಬ ಪಟ್ಟಣದಲ್ಲಿ ಅಲೆಕ್ಸಾಂಡರ್ ಬ್ಲಾಕ್ ಎಂಬ ೨೦ ವಯಸ್ಸಿನ ಯುವತಿ ದೇವಾಲಯ ತನ್ನ ಬಾಯಾರಿಕೆಯನ್ನು ತೀರಿಸುವುದಕ್ಕೆ ಮನೆಯಲ್ಲಿ ೨–೩ ಸಾವಿರ ರೂಪಾಯಿಗಳನ್ನು ನಗನಾಣ್ಯಗಳನ್ನು ಅಪಹರಿಸಿದಳು. ಅದಕ್ಕಾಗಿ ಅವಳನ್ನು ದಂಡಿಸಿ ಸ್ತ್ರೀಯರ ಸೈಲಿನಲ್ಲಿ ಇಟ್ಟರು. ಅವಳು ತಾನು ಅಪರಾಧ ಕೊಳ್ಳುವ ಕಾಲದಲ್ಲಿ ಜೈಲ್ ನಲ್ಲಿ ಬೇರೆ ಯಾರಿಗೂ ಬಾಧೆ ಮಾಡಬಾರದೆಂದು ಪ್ರಯತ್ನ ಮಾಡಿದಳು. ಆದರೆ ಅಧಿಕಾರಿಗಳಿಗೆ ತಿಳಿದು ಅವಳನ್ನು ಹಿಡಿದು ಪರೀಕ್ಷಿಸಿ ನೋಡಿ ಅವಳನ್ನು ಬಿಡುವದರಿಂದ ವರುಷ ಕಾಲ ಸಜಾ ಅನುಭವಿಸಬೇಕು. ಆನಂತರ ಮರಣದ್ವಾರವು ಗಣಗಳಲ್ಲಿ ಕೆಲಸಮಾಡಬೇಕು ಎಂಬ ವಿಚಿತ್ರವಾದ ಶಿಕ್ಷೆಗೆ ಗುರಿಯಾಗಿರುತ್ತಾಳೆ.

ಸಾಧಾರಣವಾಗಿ ಎಲ್ಲಾ ದೇಶದ ಹೆಂಗಸರು ಶ್ರೀಮಂತರು ಆಭರಣಗಳನ್ನು ಇಟ್ಟುಕೊಳ್ಳಬೇಕೆಂದು ಇಷ್ಟಪಡುತ್ತಾರೆ. ಈ ದೇಶದಲ್ಲಿ ಹೆಂಗಸರು ತಮ್ಮ ಒಡವೆಗಳಿಗೋಸ್ಕರ ಬಹಳ ಅನ್ಯಾಯವಾದ ಖರ್ಚನ್ನು ಮಾಡುತ್ತಾರೆ. ವಿಲಾಯಿತಿಯಲ್ಲಿ ಹೆಂಗಸರು ವರುಷ ವರುಷಕ್ಕೆ ತಮ್ಮ ಹೆಸರು ಪ್ರಕಟವಾಗಿ ಬರುವದನ್ನು ಇಚ್ಛೆಸುತ್ತಿದ್ದಾರೆ. ಮಾಡಿಕೊಳ್ಳುವ ವಸ್ತ್ರಗಳನ್ನು ಕೊಳ್ಳುವದಕ್ಕೆ ಬದಲು ಮಿಗಿ ವಿಷಯವಿದ್ದಾರೆ. ಒಂದು ವರುಷಕ್ಕೆ ಮೂವರು ನಾ ವಿಧವಾದ ಆಭರಣಗಳನ್ನು ಕೊಂಡ ಹೊಸ ಒಡವೆಗಳನ್ನು ಸೇರಿಸುವದಕ್ಕೆ ೪೫೦೦ ರೂಪಾಯಿಗಳನ್ನು ಖರ್ಚಾಗುತ್ತದೆ. ಈ ಖರ್ಚಿನಿಂದ ಆಗುವ ನಷ್ಟವನ್ನು ಸಾಕ್ಷಾತ್ತಾಗಿ ಅವರು ಗಮನಕ್ಕೆ ತಂದುಕೊಳ್ಳಬೇಕು. ಇದು ಮಹಾ ಅನ್ಯಾಯ ಎಂದು ನಾವು ಅಭಿಪ್ರಾಯ ಪಡುತ್ತೇವೆ.

ದೊಡ್ಡ ಕಟ್ಟಡವನ್ನು ಕಟ್ಟಿಸಬೇಕಾದರೆ ಮೊದಲು ಸಾಧಾರಣವಾಗಿ ಅದರಲ್ಲಿ ಕೆಲಸಗಾರರು ಎಂಬ ಪ್ರಶ್ನೆಯಾದ ಆ ಸ್ಥಳದಲ್ಲಿ ಸುಣ್ಣದಿಂದಲೂ ಕಲ್ಲಿನಿಂದಲೂ ಮಾಡುವ ವಿಷಯ ಪತ್ತೆ ಹಚ್ಚುವ ಕಾರ್ಯವನ್ನು ಪ್ಯಾರಿಸ್ ದೇಶದಲ್ಲಿ ಕೆಲವರು ಮಾಡುವ ಪ್ರತಿ ಆಕೃತಿ ತೊಡಗಿದ ರೀತಿಗಳನ್ನು ಹೊಸದಾಗಿ ಕೊಂಡು ಅದರಿಂದ ಸುಣ್ಣ ಜಲ್ಲಿಗಳಿಂದ ಆಗಬೇಕಾದ ದೊಡ್ಡ ವರ್ಷಗಳನ್ನು ಬೇರೆ ಬೇರೆ ಒಂದು ಅಕ್ಕಿನಲ್ಲಿ ಮಾಡಿ ಅದು ಪಕ್ವವಾಗುವ ತನಕ ಬಿಡುತ್ತಾರೆ. ಅನಂತರ ಅದು ಕಲ್ಲಿನಂತೆ ದೃಢವಾಗಿ ಕಟ್ಟಿದ ಅಸ್ತಿಭಾರದ ಕೆಲಸಕ್ಕೆ ಬರುತ್ತದೆ. ಅನೇಕ ಬಗೆಗಳನ್ನು ನಗರಗಳಿಂದ ಹೊಸದಾಗಿ ತರಿಸಿ ಕಟ್ಟುವದಕ್ಕಾಗಿ ಅವನ್ನು ಉಪಯೋಗಿಸುವದಕ್ಕೆ ಅನುಕೂಲವಾಗುವದಕ್ಕಾಗಿ ಬಹು ಮಾರ್ಗಗಳನ್ನು ಕಲ್ಪಿಸಿದ್ದಾರೆ. ಬಹು ಸುಲಭವಾಗಿ ಕೆಲಸಮಾಡುವದಕ್ಕೆ ಅನುಕೂಲವಾಗುತ್ತದೆ.

ಈಗಿನ ಕಾಲದಲ್ಲಿ ಪತ್ರಿಕೆಗಳು ಎಲ್ಲಾ ದೇಶಗಳಲ್ಲಿ ಹೆಚ್ಚಾಗಿ ಪ್ರಚಾರವಾಗಿ ತಮ್ಮ ಅಭಿಪ್ರಾಯಗಳನ್ನು ಪ್ರಕಟಿಸುತ್ತಲಿರುವವು. ಸಾಮಾನ್ಯರಿಂದ ಅವರಲ್ಲಿ ಕೆಲವರು ಅದರ ಭಾಗಗಳನ್ನು ಸ್ವಲ್ಪವಾಗಿ ಪರಿಶೋಧಿಸಿ ಇನ್ನೂ ಅನೇಕರು ಸುಳ್ಳಾಗಿ ಬರೆದು ಪ್ರಕಟಿಸಿದ ಅಭಿಪ್ರಾಯವನ್ನು ಸಂಗ್ರಹಿಸುವದಕ್ಕೆ ಪ್ರಯತ್ನಿಸುತ್ತಾರೆ. ಇದೀಗ ಪತ್ರಿಕೆಗಳು ಹುಟ್ಟಿದ ಮೇಲೆ ಪ್ರಚುರಿಸುವುದು ಈ ದೇಶದ ಪತ್ರಿಕೆಗಳಲ್ಲಿ ಸ್ಪಷ್ಟವಾಗಿ ಪ್ರಕಟಿಸುತ್ತಾರೆ. ಗತಿಸಿ ಮಾಡಿ ವರ್ತಮಾನದ ಪತ್ರಿಕೆಗಳಲ್ಲಿ ಇಂತಹ ಪ್ರಕಟನೆಯು ಬಹು ಉತ್ತಮ ಸಲ್ಲದು. ಆದ್ದರಿಂದ ಈ ವಿಧವಾಗಿಯನ್ನು ಈಗ ಬಿಟ್ಟು ಅದರ ಲೋಪದೋಷಗಳನ್ನು ಎಂದು ಪ್ರಾಮಾಣಿಕ ವಿಷಯಗಳನ್ನು ಬಿಡಿಸುವುದೇ ಉತ್ತಮ. ಕೆಲವು ದೊಡ್ಡ ವಿದ್ವಾಂಸರು ಈ ವಿಷಯದಲ್ಲಿ ವ್ಯಾಪಿಸುತ್ತಾರೆ.

ವಿಲಾಯಿತಿಯಲ್ಲಿ ವರ್ತಮಾನಪತ್ರಿಕೆಗಳನ್ನು ಪ್ರಕಟಿಸುವವರಿಂದ ಅನೇಕ ದೊಡ್ಡ ಮನುಷ್ಯರು ಬಹಳ ಹಣವನ್ನು ಸಂಪಾದಿಸುತ್ತಾರೆ. ಅವರಿಂದ ನಾವು ಕೇಳುತ್ತೇವೆ. ಮ|| ಬುಕಾನನ್ ಎಂಬವರೊಬ್ಬರು ತಾನು ಒಂದು ಪತ್ರಿಕೆಯನ್ನು ಸ್ಥಾಪಿಸುವದಕ್ಕೆ ಒಂದು ಲಕ್ಷ ಅರವತ್ತು ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದರು. ಅದರಿಂದ ವರುಷ ವರುಷಕ್ಕೆ ಕ್ರಮವಾಗಿ ಒಂದು ಲಕ್ಷ ರೂಪಾಯಿ ಉತ್ಪತ್ತಿ ಬರುತ್ತದೆ. ಅವರು ಈ ಪತ್ರಿಕೆಯನ್ನು ಸ್ಥಾಪಿಸುವ ಮೊದಲು ಲಕ್ಷ ರೂಪಾಯಿಗಳಿಗೆ ಬುದ್ಧಿ ಕೊಟ್ಟು ಬಿಟ್ಟರು. ಆ ಬಗೆ ಆ ಪತ್ರಿಕೆಯ ಲಾಭವು ಬಹಳ ಘನವಾಗಿ ಧನಿಕರಾಗುವರು. ನಮ್ಮಲ್ಲಿ ಬಹಳ ಅಭಿವೃದ್ಧಿಯನ್ನು ಹೊಂದುತ್ತದೆ. ಮನುಷ್ಯರಿಗೆ ಎಷ್ಟು ಉಪಕಾರವಾದರೂ ಕೆಲವು ದಿವಸಗಳಲ್ಲಿ ಅದನ್ನು ಬಿಟ್ಟು ಹೋಗಬೇಕು. ಅಸ್ತಿಯನ್ನು ಕೂಡಿಸುವದು ಕಷ್ಟ ಬಿಡಿಸಿ ಬಿಡುವದು ಕಷ್ಟ. ಈ ಮೂವರು ಸಂಪಾದಿಸ್ಸಿದ ಸ್ಥಳಕ್ಕೆ ಆ ಷ್ಟು ಕಷ್ಟ ಸಹಿಸಿಕೊಳ್ಳುವದು ಯಾತಕ್ಕೆ?

—

ಇಂಡಿಯಾ ಗೌರ್ನಮೆಂಟ್ ಅಧಿಕಾರಿಗಳಾದವರು ಇಬ್ಬರು ದೊಡ್ಡ ಮನುಷ್ಯರು ಈ ದೇಶದ ಜನರಿಗೆ ಸ್ತ್ರೀಯರನ್ನು ಪರೀಕ್ಷಿಸಿ ತನ್ನ ಬಳಿಗೆ ತರಿಸಿ ಬರುತ್ತಾರೆ. ಆ ಬಳಿಯಲ್ಲಿ ಹೆಣ್ಣು ಪಕ್ಷಿಗಳ ವಿಷಯದಲ್ಲಿ ಸರ್ಕಾರದವರು ಒಂದು ವಿಚಾರಣೆ ಮಾಡಬೇಕೆಂದು ಕೇಳಿರುತ್ತಾರೆ. ದೊಡ್ಡವರಾಗುವದಕ್ಕೆ ಒಂದು ತಿಂಗಳು ಮುಂಚಿತವಾಗಿ ಜೈಲ್ ಸೂಪರಿಂಟೆಂಡೆಂಟರವರು ಆ ಹೆಣ್ಣು ಬಳಿಯ ಸೆರೆ ಗೆ ಇದ್ದ ನೇ ತಾರೀಖಿನಲ್ಲಿ ಅವಳನ್ನು ಮನೆಗೆ ಕರೆದುಕೊಂಡು ಹೋಗಬಹುದೆಂದು ಅದರ ತೀರ್ಮಾನಿಸಿ ಕಳುಹಿಸಿದರು. ಆದರ ಸೂಪರಿಂಟೆಂಡೆಂಟರವರು ಆ ಸ್ತ್ರೀಯನ್ನು ಬಿಟ್ಟು ಮನೆಗೆ ಕೊಟ್ಟು ಅವಳ ಮನೆಗೆ ಕಳುಹಿಸಿದ್ದಲ್ಲದೆ ಅತ್ಯಾವಶ್ಯಕವಾಗಿದೆ. ಹೆಂಗಸರು ಜೈಲಿನೊಳಗಿಂದ ಬಂದ ಕೂಡಲೆ ದುಷ್ಟರು ಅವಳನ್ನು ಮೋಸಗೊಳಿಸಿ ಕೆಡಿಸುವದಕ್ಕೆ ಬಯಸಿದರೂ ಕೂಡಿರುವರು. ಇಂಥಾ ಗಂಡಾಂತರಗಳಿಂದ ಹೆಂಗಸರನ್ನು ತಪ್ಪಿಸಿ ಬಿಡುವದಕ್ಕೆ ಈ ವಿಧವನ್ನು ಮಾಡುವದು ಬಹು ಉಪಕಾರವೇಸರಿ!

ಶಾಲೀವಾಹನಶಕ ೧೮೧೫ ನೇ ವಿಜಯನಾಮ ಸಂವತ್ಸರದ ಚೈತ್ರ ಶುದ್ಧ ಷಷ್ಠಿ ಗುರುವಾರದಿಂದ ಚೈತ್ರ ಶುದ್ಧ ದ್ವಾದಶಿ ಬುಧವಾರದ ವರೆಗಿನ ವಾರದ ಪಂಚಾಂಗ

೧೮೯೩ ನೇ ಇಸವಿ, ಮಾರ್ಚಿ.

ತಾ.	ವಾರ.	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.	ವಿವಾನ ಮಾಸ ತೇದಿ.
23	ಗು.	ಷ.	37-53	ರೋ	38-47	12
24	ಶು.	ಸ	32-3	ಮೃ	34-18	13
25	ಶ.	ಅ.	26-37	ಆ	31-12	14
2·	ರ. *	ನ.	21-46	ಪು.	25-13	15
27	ಸೋ. †	ದ.	17-39	ಪು	25-59	16
28	ಮಂ.	ಏ.	14-29	ಆ.	24-42	17
29	ಬು.	ದ್ವಾ	12-21	ಮ.	24-31	18

* ಶ್ರೀರಾಮನವಮಿ.

† ಮೇಲುಕೋಟೆ ವೈರಮುಡಿ ಉತ್ಸವ.

ಪೇಟೆ ಧಾರಣೆ.

ದವಸಿ	ಮೈಸೂರು	ಬೆಂಗಳೂರು.
	ರೂ ಅ. ಪೈ.	ರೂ ಆ ಪೈ.
ಸಣ್ಣ ಅಕ್ಕಿ ಪಲ್ಲ ೧ ಕ್ಕೆ ..	೧೧–೦–೦	೧೧–೪–೦
ಕಂಬೂರಿ ಅಕ್ಕಿ ಅಸ್ಸಲ್ ..	೧೨–೧೨–೦	೧೧–೦–೦
ದಿಡ್ಡಿ ಅಕ್ಕಿ ದುಮ್ಮು ..	೧೨–೨–೦	೧೦–೪–೦
ಜಾಸರಾಣಿ ಅಕ್ಕಿ	೧೨–೦–೦	೧೨–೬–೬
ಸಣ್ಣಕ್ಕಿ ಅಸ್ಸಲ್	೧೭–೧೨–೦	೧೩–೪–೦
ದಿಡ್ಡಿ ಅಕ್ಕಿ ದುಮ್ಮು ..	೧೭–೮–೦	೧೧–೬–೦
ತೊಗರಿಬೇಳೆ ಪಲ್ಲ ೧ ಕ್ಕೆ	೧೭–೦–೦	೧೧–೪–೦
ಉದ್ದು ಮುಂಡು ತರಹ ..	೧೧–೪–೦	೧೦–೪–೦
ಪ್ಯೂಲಾಗಿ ಪಲ್ಲ ೧ ಕ್ಕೆ ..	೮–೦–೦	೧೩||೯–೦–೦
ಕಾಯ್ಗಿ	೭–೧೭–೦	೫||೭–೦–೦
ಹುರುಳಿ ಪಲ್ಲ ೧ ಕ್ಕೆ ..	೧೨–೪–೦	೪–೧೨–೦
ಬಿಳೀ ಅವರೆ	೯–೦–೦	೪–೪–೦
ಹೆಸರು	೧೧–೦–೦	೧೦–೬–೦
ಉದ್ದು	೧೭–೯–೦	೧೨–೧೨–೦
ಕಡಲೆ	೧೨–೦–೦	೧೨–೬–೦
ಎಳ್ಳು	೧೩–೧೪–೦	೧೫–೦–೦
ಹುರುಳಿ	೬–೦–೦	೬–೪–೦
ಸೀಗೇಕಾಯಿ ಮಣ ೧ ಕ್ಕೆ ..	೧–೪–೦	೧–೧೪–೦
ಮೆಣಸಿನಕಾಯಿ	೩–೦–೦	೨–೪–೦
ದಾಳಿಂ ತರಹ	೨–೧೨–೦	೨–೪–೦
ಬೆಲ್ಲ ದೊಡ್ಡ ಅಚ್ಚು ೧೦೦ ಕ್ಕೆ	೮–೧೨–೦	ಮು ೧–೧೦–೦
ಸಣ್ಣ ಅಚ್ಚು " ..	೪–೬–೦	೩|| ೧–೬–೦
ಒಳ್ಳೆಣ್ಣೆ ಮಣ ೧ ಕ್ಕೆ ..	೫–೦–೦	೪–೪–೦
ಹರಳೆಣ್ಣೆ	೪–೬–೦	೩–೧೪–೦
ಕೊತ್ತುಂಬರಿ ಪಲ್ಲ ೧ ಕ್ಕೆ	೪–೪–೦	೧೦–೦–೦
ಉಪ್ಪು	೯–೪–೦	೧೦–೦–೦
ಹುಣಸೇಹಣ್ಣು ಮಣ ೧ ಕ್ಕೆ	೧–೪–೦	೧–೬–೦
ಬೇಳೆ ಹೂಣಸೇಹಣ್ಣು	೧–೨–೦	೧–೮–೦
ತುಪ್ಪ	೧೩–೧೨–೦	೧೩–೦–೦
ಸೀಮೆ ಎಣ್ಣೆ ಪೆಟ್ಟಿಗೆ ೧ ಕ್ಕೆ	೬–೭–೩	೬–೭–೦
ತೆಂಗಿನಕಾಯಿ ೧೦೦ ಕ್ಕೆ ..	೩–೦–೦	೫–೪–೦
ಟನ್ನು (ಸರ್ಕಾರ)		
ಕೆಂಪು	೧೬–೮–೦	೧೬–೪–೦
ಬಿಳಿದು	೧೬–೪–೦	೧೭–೩–೦
ಗಟ್ಟಿ	೨೬–೦–೦	೨೬–೪–೦

Mysore.—Printed and published for the Proprietor at the Wesleyan Mission Press.
23/3/93.

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು — ಕ್ರಯ ೧ ದುಡ್ಡು.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೬ — ಮೈಸೂರು ಸ್ರ್ ೧೮೯೩ ನೇ ಇಸವಿ ಮಾರ್ಚಿ ತಾರೀಖು ೩೦ ನೇ ಗುರುವಾರ. — ಸಂಚಿಕೆ ೪೧

ವಿಶೇಷ ! ಓದಿನೋಡಿರಿ !! ಓದಿನೋಡಿರಿ !!!

ಅನುಶಾಸನೀಕಪರ್ವವು ಪೂರ್ತಿಸಿತು.

ಶ್ರೀಕೃಷ್ಣರಾಜ ವಾಣೀವಿಲಾಸವೆಂಬ ಮಹಾಭಾರತವು ನಮ್ಮ ಶ್ರೀಚಾಮುಂಡೇಶ್ವರಿ ಪ್ರೆಸ್ಸಿನಲ್ಲಿ ಪ್ರಿಂಟಾಗತಕ್ಕದ್ದು ಎಲ್ಲರಿಗೂ ವಿಶದವಾಗಿಯೇ ಇದೆಯಷ್ಟೇ. ಈಗ ಅನುಶಾಸನೀಕಪರ್ವವು ಚಾಮುಂಡೇಶ್ವರಿ ತಸ್ತೀಸಿಂದಲೂ ಮತಿಗೆ ಯೋಗ್ಯವಾದ ಕಿತ್ತಾಬಾರಿನ ಪುಲಬೈಂಡಿನಿಂದ ತಯಾರಾಗಿರುತ್ತೆ. ಸಭಾಪರ್ವ ವಿರಾಟಪರ್ವದ ಬುಕ್ಕುಗಳು ಮುಗಿದುಹೋದುದರಿಂದ ಪುನಹಾ ಎರಡನೆ ಛಾಪೆಯು ಪ್ರಾರಂಭವಾಗಿದೆ. ಈ ಕೆಳಗೆ ಕಂಡ ಪುಸ್ತಕಗಳು ನಮ್ಮಲ್ಲಿ ಸ್ವಲ್ಪವೇ ಇರುವದ್ದರಿಂದ ಇಚ್ಛೆಯುಳ್ಳವರು ತರಿಸಿಕೊಳ್ಳಬಹುದು. ಅನುಶಾಸನೀಕ ಪರ್ವ ಕಿತ್ತಾಬಾರಿನ ಬೈಂಡ್ ೩—೧೨—೦ ಲೋವರ್ ಸೆಕಂಡರಿ ಪರೀಕ್ಷೆಯ ನೋಟ್ಸು ಕ್ರಯ ೮ ಆಣೆ.

ಆದಿಪರ್ವ	..	ಕ್ರಯ	೩	೦	೦
ಸಭಾಪರ್ವ	..	„	೧	೪	೦
ವಿರಾಟಪರ್ವ	..	„	೧	೦	೦
ಭೀಷ್ಮಪರ್ವ	..	„	೨	೦	೦
ದ್ರೋಣಪರ್ವ	..	„	೨	೮	೦
ಶಲ್ಯಪರ್ವ	..	„	೧	೨	೦
ಸೌಪ್ತಿಕಪರ್ವ	..	„	೦	೬	೦
ಸ್ತ್ರೀಪರ್ವ	..	„	೦	೬	೦
ಶಾಂತಿಪರ್ವ ರಾಜಧರ್ಮ	..	„	೨	೬	೦
„ ಆಪದ್ಧರ್ಮ	..	„	೦	೮	೦
„ ಮೋಕ್ಷಧರ್ಮ	..	„	೨	೬	೦

ಭಗವದ್ಗೀತೆ ೮, ಯಯಾತಿನಾಟಕ ಚರಿತ್ರ ೪ ಆ.

ಎ. ರಾಮಪ್ಪ ಅಂಡ್‌ಕೋ.
ಬಳೇಪೇಟೆರೋಡ್,
ಬೆಂಗಳೂರು.

ÆSOP'S FABLES.

These are well printed in English, and illustrated both inside and outside. The covers are in striking colours. The set is complete in 3 *Volumes* The *whole set* can *now* be had **at a reduced price of 3 pies.** Only a few copies are available.

Apply at once to

THE WESLEYAN MISSION PRESS,

Mysore City.

OWMAN HER PLACE: AND POSSIBILITIES.

A LECTURE

BY

Miss. Frances M. Dryden, B.A.

This is a very powerful lecture and should be read by every Hindu who understands English. We have only a few copies at hand and the price has been greatly reduced, the price of each copy being 3 pies only.

Apply to

THE WESLEYAN MISSION PRESS,

Mysore City.

ನೋಟೀಸ್.

		ಕ್ರಯ			ಹಾಸಲು ಸಹಿತವಾಗಿ		
Campbell's.	ಕನ್ನಡ ವ್ಯಾಕರಣ ಸಾರ	೦	೨	೦	೦	೨	೬
Object Lessons.	ವಸ್ತು ಪಾಠಗಳು	೦	೧	೦	೦	೧	೬
Picture do	ಚಿತ್ರಗಳು ಸಹಿತವಾಗಿ	೦	೨	೦	೦	೨	೬
	ಈ ಮೂರು ಪುಸ್ತಕಗಳು ಪ್ರೈಮರಿ ಮಠಗಳಲ್ಲಿ ಓದತಕ್ಕ ಪುಸ್ತಕಗಳು.						
	ಸ್ತ್ರೀಯರು ಓದತಕ್ಕ ಪುಸ್ತಕ	೦	೫	೦	೦	೫	೬
	ಗಣಿತ ವಿದ್ಯವು ..	೦	೪	೦	೦	೪	೬
	ಗಣಿತ ಮಗ್ಗಿಗಳು ..	೦	೧	೦	೦	೧	೬
	ಸಂಸ್ಕೃತ ಕರ್ನಾಟಕ ಭಾಷಾಮಂಜರಿ	೦	೨	೦	೦	೨	೬
	ಭೂಗೋಳ ಶಾಸ್ತ್ರ ಪ್ರಶ್ನೋತ್ತರ	೦	೨	೦	೦	೨	೬
	ಇಂಗ್ಲೀಷು ಕನ್ನಡವೂ ಶಬ್ದಾವಳಿ ೧ನೇ ೨ನೇ ಭಾಗಕ್ಕೆ	೦	೧	೦	೦	೧	೬
	ಕಾವ್ಯಾವಳಿ (Minor Poetical Anthology)	೦	೮	೦	೦	೮	೬
	ಬಾಲವ್ಯಾಕರಣ ..	೦	೫	೦	೦	೫	೬
	ಹಳಗನ್ನಡ ವ್ಯಾಕರಣ ಸೂತ್ರಗಳು	೦	೬	೦	೦	೬	೬
	ಇಂಗ್ಲೀಷು ಕನ್ನಡವೂ ಸಂಭಾಷಣ ವಾಕ್ಯಗಳು	೦	೧೦	೦	೦	೧೦	೬
	ಶಬ್ದಮಣಿ ದರ್ಪಣ ..	೧	೦	೦	೧	೪	೬
Kan. Eng. Pocket Dictionary		೧	೪	೦	೧	೫	೨
Eng. Kan. School Dictionary		೨	೧೨	೦	೨	೧೨	೬
	ಬಳ್ಳೀ ತಾಯಿ ..	೦	೪	೪	೦	೪	೬
	ಆತ್ಮಿಕ ದಿವ್ಯ ಯುದ್ಧ (Bunyan)	೦	೧೨	೦	೦	೧೩	೬
	ಕ್ರೈಸ್ತ ಪದ್ಧತಿ ೧ ನೇ ಭಾಗ ೨ ಅಣ ೩ ನೇ ಭಾಗ	೦	೧	೬	೦	೨	೦
	ಭಕ್ತಿ ಸಾರ ..	೦	೧	೦	೦	೧	೬
	ಸತ್ಯ ವಾಗ್ದಾನ	೦	೧	೦	೦	೧	೬
	ಕಾವ್ಯಸ್ತಂಭ ..	೦	೩	೦	೦	೩	೬

A new Edition of the Geography suited for the Lower Secondary Examination is now ready.—Edited by Rev. H. Gulliford. Price 6 As.

ಮೇಲೆ ನಮೂದಿಸಿರುವ ಪುಸ್ತಕಗಳನ್ನು ಬೆಂಗಳೂರು ದಂಡಿನ ಪೋಸ್ಟಾಫೀಸಿನ ಹತ್ತಿರವಿರುವ ಪುಸ್ತಕ ಶಾಲೆಯಲ್ಲಿ ಪಡೆಯಬಹುದು.

ಕೆನರಾ ಎಂಡ್ ಮೈಸೂರ ಪ್ರಿಂಟಿಂಗ ಏಜನ್ಸೀ ಆಫೀಸ ಮುಂಬಯಿ
ಇವರು ಪ್ರಸಿದ್ಧಿಪಡಿಸುತ್ತಿರುವ
"ಮುಂಬಯಿ ಪಟ್ಟಣದ ವರ್ಣನೆಯು."
ಮೊದಲನೆ "ಹವ್ಯಕಸುಬೋಧ" ಪತ್ರಿಕೆಯ, ಎಡಿಟರರಾಗಿರುತ್ತಿದ್ದ
ರಾ। ರಾ। ವೆಂಕಟರಮಣಶಾಸ್ತ್ರೀ ಸೂರಿ, ಎಂಬವರು ಬರೆದಿರುವಂಥಾದ್ದು.

ಇತ್ತಲಾಗಿ ರೈಲ್ವೆ ಮತ್ತು ಸ್ಟೀಮರುಗಳ ಅನುಕೂಲತೆಯುಂಟಾಗಿರುವದರಿಂದ, ಕನ್ನಡದೇಶದ ಜನರು ಹೆಚ್ಚಾಗಿ ಇಲ್ಲಿಗೆ (ಮುಂಬಯಿಗೆ) ಬರಹೋಗ ತೊಡಗಿರುವರು. ಆದರೆ, ಈ ಪಟ್ಟಣದಲ್ಲಿರುವಂಥ ಅನೇಕ ತರದ, ಕಾರ್ಖಾನೆಗಳೂ, ಪ್ರೇಕ್ಷಣೀಯಸ್ಥಳಗಳೂ, ಭವ್ಯವಾದ ಕಟ್ಟಡಗಳೂ, ಮುಂತಾದವು ಯಾವವು ! ಅವುಗಳೆಲ್ಲಿರುತ್ತವೆ ! ಸುಲಭವಾಗಿ ನೋಡುವ ಬಗೆ ಹ್ಯಾಗೆ ! ಗಿರಿಣಿ, ಟಂಕಸಾಲೆ, ಮುಂತಾದವುಗಳನ್ನು ನೋಡುವದಕ್ಕೆ ಮುಂದಾಗಿ ಮಾಡತಕ್ಕ ಉಪಾಯಗಳೇನು ! ವ್ಯಾಪಾರಗಳ ಕೊಂಡುಕೊಳ್ಳುವಿಕೆಯ ಬಗೆ ಹ್ಯಾಗೆ ! ಮುಖ್ಯ ಮುಖ್ಯ ವ್ಯಾಪಾರಿಗಳೆಲ್ಲಿರುತ್ತಾರೆ ! ಇವೇ ಮುಂತಾದವುಗಳನ್ನು ತಿಳಿದುಕೊಳ್ಳುವದಕ್ಕೆ ಯೋಗ್ಯವಾದ ಯಾವ ತರದ ಸಾಧನಗಳಾದರೂ ಇಲ್ಲದಿರುವದರಿಂದ, ಎಲ್ಲವರೂ ಅಂಗಡಿ ಪೇಟೆ ಸಾಲುಗಳಲ್ಲಿ ತಿರಿಗಿ, ಇಲ್ಲಿಗೆ ಬಂದೂ ಬಾರದಿದ್ದವರಂತೆ ಆಗಿಹೋಗುತ್ತಾರೆ. ಆದರೆ, ನಮ್ಮ ಕನ್ನಡ ದೇಶದ ಜನರ ಕೈಯಲ್ಲಿ ಈ ತರದ ಪುಸ್ತಕವೊಂದಿದ್ದರೆ, ಎಷ್ಟರ ಮಟ್ಟಿಗ ಸಹಾಯವಾ[illegible]ನ್ನು ಪ್ರತ್ಯೇಕವಾಗಿ ಹೇಳುವ ಅವಶ್ಯವಿರುವದಿಲ್ಲ. ಇದಲ್ಲದೇ, ಯಾರು ಇಲ್ಲಿಗೆ ಬರಲಸಮರ್ಥರಾಗುತ್ತಾರೋ ಅಂಥವರಿಗೆ, ಈ ಪುಸ್ತಕವಾಚನದಿಂದ, ಪ್ರತ್ಯಕ್ಷ ನೋಡಿದ ಫಲಪ್ರಾಪ್ತಿಯಾದೀತೆಂಬದರಲ್ಲಿ ಸಂದೇಹವಿಲ್ಲ.

ಇನರಲ್ಲಿ ರಾಜಕೀಯ, ಸಾಮಾಜಿಕ, ವ್ಯಾಪಾರಾದಿ ವಿಷಯಗಳೇ ಮೊದಲ್ಗೊಂಡು, ಇಲ್ಲಿಯ ವಿಶಿಷ್ಟವಾದ ಸಂಗತಿಗಳು, [illegible], ಸಂಕ್ಷೇಪದಿಂದಲೂ, ಬರೆಯಲ್ಪಟ್ಟಿರುತ್ತವೆ. ಈ ಪುಸ್ತಕದ ಕ್ರಯ ೧ ರೂಪಾಯಿ. ಚಂದಾದಾರರಾಗಿ ಮುಂದಾಗಿ ಹಣ ಕೊಡತಕ್ಕವರಿಗೆ ಮಾತ್ರ ಹತ್ತಾಣೆಯಂತೆ ಕೊಡಲ್ಪಡುವದು. ಬೇಕಾದವರು ಮೇಲೆ ಬರೆದ ವಿಳಾಸದವರಿಗಾಗಲೀ, ಮೈಸೂರು ಸ್ಟೂಡೆಂಟ್ಸಹಾಲ ಮ್ಯಾನೇಜರರ ಕಡೆಗಾಗಲೀ ಹಣಕೊಟ್ಟು ರಶೀದಿ ಪಡೆಯಬಹುದು, ಮುಂಗಡದವಾಯ್ದೆಯು ಮಾರ್ಚಿ ಆಖೈರಾಗಿರುವದು. ಎಪ್ರೀಲ್ ಮೊದಲನೇ ವಾರದಲ್ಲಿ, ಪುಸ್ತಕಗಳು ವಿಕ್ರಯಕ್ಕೆ ಸಿದ್ಧವಾಗುವವು.

ಚನ್ನಾಗಿ ಓದಿನೋಡಿರಿ. ಸಮಯಬಿಡ್ಡಾಗ ಆಪ್ತನೆ ಕೊಡಿರಿ.

ಕ್ರಯ ಕಡಿಮೆ ಮಾಡಿದರೂ, ಜಿನಸು ಉತ್ತಮವಾಗಿರುವವು.

"ಸಜ್ಜಾ" ಎಂಬ ಹೆಸರಿನ ಕಿರೆಯ ಪಡಿಯಾರ, (ಒಂದು ವರುಷದ ಜಾಮೀನು) ಕ್ರಯ ೬ ರೂಪಾಯಿ, "ಚಂದ್ರಕಾಂತ ಬಿಳಿಯ ಕನ್ನಡಕ ಉತ್ತಮ ೭। ಮಧ್ಯಮ ೫ ಸಾಧಾರಣ ೩। ರೂಪಾಯಿ. ಬಿಂಪೀ ಮುತ್ತು ಜತೆ ೧ಕ್ಕೆ ಉತ್ತಮ ೩ ರು. ಮಧ್ಯಮ ೨।। ರು. ಸಾಧಾರಣ ೨।. ಶುದ್ಧ ಉಂಣೆಯ ಶಾಲು, ಸುಮಾರು ೬ ಮೊಳ ಉದ್ದ ೩ ಮೊಳ ಅಗಲ, ಕೋಟಿಗೆ ಕೋಟು, ಮುಸುಗೆ ಮುಸು, ಹೊದ್ದುಕೊಳ್ಳಲು ಬೆಚ್ಚಗೆ, ತೆಗೆದುಕೊಳ್ಳುವವರಿಗೆ ಅಗ್ಗ. ಶಾಲು ೧ ಕ್ಕೆ ೩।। ರು. ಎಲ್ಲತರದ ಬಿಷಧಗಳೂ, ಬೇರೆ ಬೇರೆ ತರದ ಸೊಗಸಾದ ಡ್ರೆಸ್ಸುಗಳೂ, ನಿಕ್ಕಲ ಜರ್ಮನ ಸಿಲ್ವರ ಪಾತ್ರೆಗಳುಸಹ ಹೊಸತರದ ಮಾಟದವು.

"ಕುಟುಂಬ ಚಿಕಿತ್ಸಕ" ಎಂಬ ಮಾಸಿಕ ಪುಸ್ತಕವು. ಟಪ್ಪಾಲ ಹಾಸಲು ಸಹ ವರುಷಕ್ಕೆ ೮ ಆಣೆ. ಮೇಲೆ ಬರೆದಿರುವ "ಕೆನರಾ ಎಂಡ ಮೈಸೂರ ಪ್ರಿಂಟಿಂಗ ಏಜನ್ಸೀ ಆಫೀಸ ಮುಂಬಯಿಗೆ, ಇವರಿಗೆ ಬರೆಯುವದು.

ವೃತ್ತಾಂತ ಪತ್ರಿಕೆ.

ಚಂದಾ ನಿರ್ಣಯ.

	ರೂ. ಆ. ಪೈ.
ಸ್ಥಳದವರಿಗೆ ವರ್ಷ ೧ಕ್ಕೆ ..	೧—೦—೦
ಪರಸ್ಥಳದವರಿಗೆ ವರ್ಷ ೧ಕ್ಕೆ ..	೧—೧೪—೦
ಬಿಡಿ ಪತ್ರಿಕೆ ೧ಕ್ಕೆ ..	೦—೧—೪

ಈ ಪತ್ರಿಕೆಯು ಮೈಸೂರು ರಾಜಧಾನಿಯಲ್ಲಿ ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ, ಪ್ರಕಟಿಸಲ್ಪಡುವದು. ಬಡವರು ಮೊದಲುಗೊಂಡು ಸಮಸ್ತರಿಗೂ ಸುಲಭಸಾಧ್ಯವಾಗುವಂತೆ ಈ ಪತ್ರಿಕೆಗೆ ಇಷ್ಟು ಅಲ್ಪ ಮೌಲ್ಯವನ್ನು ನಿರ್ಣಯಿಸಿರುತ್ತೇವೆ. ಈ ಪತ್ರಿಕೆಯನ್ನು ಅಪೇಕ್ಷಿಸುವವರು ಚಂದಾಹಣವನ್ನು ಮುಂಗಡವಾಗಿಯೇ ಕೊಡಬೇಕು.

ಪ್ರಕಟನೆಯ ನಿರ್ಣಯ.

	ರೂ. ಆ. ಪೈ.
ಮೊದಲನೇ ಆವರ್ತಿ ಪಂಕ್ತಿ ೧ಕ್ಕೆ ...	೦—೨—೦
ಎರಡನೇ ಆವರ್ತಿ ಪಂಕ್ತಿ ೧ಕ್ಕೆ ...	೦—೧—೦

ಅನಂತರ ಪ್ರತಿಯೊಂದು ವಾರದಲ್ಲಿಯೂ ಪಂಕ್ತಿ ೧ಕ್ಕೆ ೧ ಆಣೆಯಂತೆಯೇ ಲೆಕ್ಕ ಮಾಡಲ್ಪಡುವುದು ಕಂಟ್ರಾಕ್ಟಿಗೆ ಕೊಡಬೇಕೆಂದಿರುವವರು ಎಡಿಟರಿಗೆ ಬರೆದು ದರವನ್ನು ತಿಳಿಯಬಹುದು.

ಎಡಿಟರ್,

ವೃತ್ತಾಂತಪತ್ರಿಕೆ.

ನೋಟೀಸ್.

ಪುಸ್ತಕಗಳು.	ಕ್ರಯ.
ಪ್ರಾಕ್ಕಾವ್ಯಮಾಲಿಕೆ	1—8—0
ಕನ್ನಡ ಇಂಗ್ಲೀಷು ನಿಘಂಟು 1 ನೇ ದೊಡ್ಡ ತರಹ	3—0—0
„ „ 2 ನೇ ತರಹ	2—8—0
ಬಾಲಕರು ಓದುವ ಎರಡನೆ ಜ್ಞಾನೋಪದೇಶದ ಪ್ರಶ್ನೋತ್ತರಗಳು	0—1—0
ಸಭೆಯ ನಿಯಮಗಳನ್ನು ಕುರಿತದ್ದು	0—0—6
ಕಥಾ ಸಂಗ್ರಹ 1 ನೇ ಭಾಗದಿಂದ 3 ವರೆಗೆ	1—[illegible]
ಕಥಾ ಸಂಗ್ರಹ 4 ರಿಂದ 6 ನೇ ಭಾಗ ಹೊಸ ಛಾಪೆ	1—0—0
„ „ ದೊಡ್ಡ ತರಹ	1—6—0
ಜ್ಯೋತಿಃಶಾಸ್ತ್ರ ಬೋಧಿನಿ	0—4—0
ಸತ್ಯವೇದವನ್ನು ಕುರಿತು 2 ನೇ ಭಾಗ	0—4—0
ಪ್ರಸಂಗಿಯ ದರ್ಪಣ	0—0—6
ಇಂಗ್ಲೀಷುಭಾಷೆಯಲ್ಲಿಯೂ, ಕನ್ನಡ ಭಾಷೆಯಲ್ಲಿಯೂ, ಶಬ್ದಗಳ ವಿಭಾಗಗಳನ್ನು ವಿವರಿಸಿರುವ ನಿಘಂಟು	0—2—0
ಕನ್ನಡವ್ಯಾಕರಣ (ಇಂಗ್ಲೀಷಿನಲ್ಲಿ)	2—0—0
ಹಿಂದುಸ್ಥಾನಿ ವ್ಯಾಕರಣ	1—0—0
ಬಾಲಪಾಠ ಸೋಪಾನವು	0—0—6
ವನ ಕರುಗಳ ಆಟುರೋಗವಿಚಾರ	0—12—0
ಕ್ರೈಸ್ತರ ಬೋಧನೆಗಳ ಸಾರಾಂಶವು	0—12—0

ಮೇಲೆ ನಮೂದಿಸಿರುವ ಪುಸ್ತಕಗಳನ್ನು ಅಪೇಕ್ಷಿಸುವವರು ಮೈಸೂರು ವೆಸ್ಲಿಯನ್ ಮಿಷನ ಪ್ರೆಸ್ಸಿಗೆ ಬರೆದು ತರಿಸಿಕೊಳ್ಳಬಹುದು ಅಂಚೆ ಹಾಸಲು ಬೇರೆ ಕೊಡಬೇಕು.

ವೆಸ್ಲಿಯನ್ ಮಿಷನ್ ಪ್ರೆಸ್,

ಮೈಸೂರು.

ವೃತ್ತಾಂತ ಪತ್ರಿಕೆ.

೧೮೯೩ನೇ ಇಸವಿ ಮಾರ್ಚಿ ತಾ॥ ೩೦ ನೇ ಗುರುವಾರ

ಉಪದೇಶಿಗಳಿಗೆ.

ಉಪದೇಶಿಗಳಲ್ಲಿ ಹದಿನಾಲ್ಕು ಮಂದಿ ನಮ್ಮ ಪ್ರಕಟನೆಗನುಸಾರವಾಗಿ ಉಪನ್ಯಾಸವನ್ನು ಬರೆದು ನಮ್ಮಲ್ಲಿಗೆ ರವಾನಿಸಿರುತ್ತಾರೆ. ನಾವು ಇವುಗಳನ್ನು ಬಹಳ ಜಾಗರೂಕತೆಯಿಂದ ಪರೀಕ್ಷಿಸಿ ಪ್ರತಿಯೊಂದರ ಶ್ರೇಷ್ಠತೆಯನ್ನಾಗಲಿ, ಕೊರತೆಯನ್ನಾಗಲಿ ಗೊತ್ತು ಮಾಡಿರುತ್ತೇವೆ. ಅವುಗಳ ವಿಷಯವಾಗಿ ನಾವು ನಮ್ಮ ಅಭಿಪ್ರಾಯವನ್ನು ತಿಳಿಸಬೇಕಾದರೆ, ನಮಗೆ ಬಹಳ ಅಸಮಾಧಾನ ಉಂಟು ಎಂದು ಹೇಳಬೇಕು. ಹಿಂದುಗಳಿಗಾಗಿ ಉಪನ್ಯಾಸವನ್ನು ಬರೆಯಬೇಕೆಂದು ಸರಿಯಾಗಿ ಯೋಚಿಸದೆ ಕ್ರೈಸ್ತರಿಗೆ ಮಾತ್ರ ಅನುಕೂಲವಾಗಿರುವ ವಿಷಯಗಳನ್ನೂ ಭಾಷೆಯನ್ನೂ ಅನೇಕರು ಬರೆದಿರುತ್ತಾರೆ. ಕ್ರೈಸ್ತದೇವಾಲಯದಲ್ಲಿ ಒಂದು ಉಪನ್ಯಾಸವನ್ನು ಮಾಡುವದಕ್ಕೂ ಹಿಂದುಗಳಿಗಾಗಿ ತಕ್ಕ ಉಪನ್ಯಾಸವನ್ನು ಬರೆಯುವದಕ್ಕೂ ಬಹಳ ವ್ಯತ್ಯಾಸವಿರುವದೆಂಬುವದು ನಮ್ಮ ಉಪದೇಶಿಗಳಲ್ಲಿ ಅನೇಕರಿಗೆ ಗೋಚರವಾಗಲಿಲ್ಲ. ಹೀಗಿರಲಾಗಿ ನಮಗೆ ತಲುಪಿರುವ ಉಪನ್ಯಾಸಗಳ ಪೈಕಿ ಅರ್ಧವು ಯಾವ ಕೆಲಸಕ್ಕೂ ಬರುವದಿಲ್ಲ. ಮಿಕ್ಕಾದವುಗಳಲ್ಲಿ ೫—೬ ಉಪನ್ಯಾಸಗಳನ್ನು ಉಪಯೋಗಿಸಬೇಕಾದರೆ ಮೊದಲು ಹೆಚ್ಚಾದ ಮಾತುಗಳನ್ನು ತೆಗೆದು ಬಾಕಿ ಭಾಷೆಯನ್ನು ಚೆನ್ನಾಗಿ ತಿದ್ದಿ ತಕ್ಕ ದೃಷ್ಟಾಂತಗಳನ್ನು ಸೇರಿಸಬೇಕಾಗಿರುವದರಿಂದ ಅವುಗಳಲ್ಲಿ ಒಂದಕ್ಕೂ ಬಹುಮಾನವನ್ನು ಕೊಡುವದಕ್ಕಾಗಲಾರದು. ಉಳಿದ ಎರಡು ಉಪನ್ಯಾಸಗಳಿಂದ ನಮ್ಮ ಮನಸ್ಸಿಗೆ ತೃಪ್ತಿಯುಂಟಾಗಿರುವದರಿಂದ ಅವುಗಳಗೋಸ್ಕರ ಒಂದನೇ ಎರಡನೇ ಬಹುಮಾನಗಳನ್ನು ಕೊಡುವದರಲ್ಲಿ ನಮಗೆ ಬಹು ಸಂತೋಷವುಂಟಾಗಿರುತ್ತೆ. ನಾವು ಒಂದು ಸಭೆಯನ್ನು ಮಾಡಿಕೊಂಡು ಅದಕ್ಕೆ ಕ್ರೈಸ್ತರನ್ನೂ ಹಿಂದುಗಳನ್ನೂ ಸೇರಿಸಿ ಎಲ್ಲಾ ಉಪನ್ಯಾಸಗಳನ್ನೂ ಓದಿಸಿದೆವು. ಈ ಸಭಿಕರು ಉಪನ್ಯಾಸಕರ್ತರ ಹೆಸರುಗಳು ತಿಳಿಯದೆ "ಶೂರಸೇನನನ್ನು ಗೆದ್ದ ಪ್ರೇಮರೂಪರಾಯನ ಚರಿತ್ರೆಯ ಸಂಗ್ರಹ" ವೆಂಬ ಉಪನ್ಯಾಸವು ಶ್ರೇಷ್ಠವಾದ್ದೆಂತಲೂ, "ಪರೋಪಕಾರ" ವೆಂಬ ಉಪನ್ಯಾಸವು ಎರಡನೆಯದಾಗಿರುತ್ತದೆಂತಲೂ ಎಲ್ಲರೂ ಒಗ್ಗಟ್ಟಾಗಿ ತೀರ್ಮಾನಿಸಿದರು. ಹೀಗಿರಲಾಗಿ ನಾವು ಈ ವಾರದಲ್ಲಿ ಜಾರ್ಜ್ ಪ್ರಿಯೋತ್ ಅಯ್ಯನವರಿಗೆ ಐದು ರೂಪಾಯಿಗಳನ್ನೂ ಜೆ ವೆಸ್ಲಿ ಅಯ್ಯನವರಿಗೆ ಮೂರು ರೂಪಾಯಿಗಳನ್ನೂ ಬಹಳ ಸಂತೋಷದಿಂದ ಕಳುಹಿಸಿದ್ದೇವೆ. ಮೂರನೆ ಬಹುಮಾನದ ವಿಷಯವಾಗಿ ತಕ್ಕ ತೀರ್ಮಾನವು ಇನ್ನೂ ಆಗಲಿಲ್ಲ.

Mysore }
30—3—93 } *Rev. H. Haigh*
Wesleyan Mission.

ಹಿಂದೂ ಮತದಿಂದ ಉಂಟಾಗುವ ಕಷ್ಟಗಳು.

ಈ ದೇಶದಲ್ಲಿ ಹಬ್ಬ, ಜಾತ್ರೆ, ಉತ್ಸವ ಮೊದಲಾದವುಗಳು ಬಹು ಪ್ರಬಲವಾಗಿ ಪ್ರಜೆಗಳಿಗೆ ತುಂಬಾ ಕಷ್ಟವನ್ನೂ ದಾರಿದ್ರ್ಯವನ್ನೂ ಇನ್ನೂ ಬೇರೆ ಬೇರೆ ಅನಾನುಕೂಲತೆಗಳನ್ನೂ ಉಂಟುಮಾಡುತ್ತವೆಂಬುವದು ಸರಿಯಷ್ಟೆ. ಇದೇ ವಾರದಲ್ಲಿ ನಡೆಯುತ್ತಿರುವ ಸಂಗತಿಗಳ ಸಾರಾಂಶವನ್ನು ನಾವು ಸೂಚಿಸಿ ಅದರ ಮೇಲೆ ನಮ್ಮ ತಾತ್ಪರ್ಯವನ್ನು ತಿಳಿಸುವದು ಪ್ರಕೃತ ಉದ್ದೇಶವೂ ಕರ್ತವ್ಯವೂ ಆಗಿದೆ. ಮೊದಲನೆಯದಾಗಿ ಎಲ್ಲಾ ಕಡೆಯಲ್ಲಿಯೂ ರಾಮೋತ್ಸವಗಳು ನಡೆಯುತ್ತಲಿವೆಯಷ್ಟೆ. ಒಂದೊಂದು ಪಟ್ಟಣದಲ್ಲಿಯೂ, ಒಂದೊಂದು ಗ್ರಾಮದಲ್ಲಿಯೂ, ನೂರಾರು ಜನಗಳು ಹಗಲಿನಲ್ಲಿ ತಾವು ಮಾಡತಕ್ಕ ಕೆಲಸಗಳನ್ನು ಧಿಕ್ಕರಿಸಿ ರಾತ್ರಿ ಕಾಲದಲ್ಲಿ ಬಹು ಚಟುವಟಿಕೆಯಿಂದಲೂ, ಉತ್ಸಾಹದಿಂದಲೂ, ವಿಜೃಂಭಣೆಯಿಂದಲೂ, ಭಜನೆಗಳನ್ನೂ ಗಾನಾದಿ ವಿನೋದಗಳನ್ನೂ ನಡೆಸುತ್ತಾ ಬರುವರು. ರಾತ್ರಿಕಾಲವನ್ನು ವಿನೋದಕ್ಕಾಗಿ ಉಪಯೋಗಿಸತಕ್ಕವರು ಹಗಲಿನಲ್ಲಿ ತಮ್ಮ ನ್ಯಾಯವಾದ ಕೆಲಸವನ್ನು ಮಾಡುವದಕ್ಕೆ ಹ್ಯಾಗೆ ಶಕ್ತರಾದಾರು? ಈ ಉತ್ಸವದಿಂದ ಹತ್ತು ದಿವಸಗಳ ವರೆಗೂ ಸಕಲವಿಧವಾದ ಕೆಲಸಗಳಿಗೂ ಎಷ್ಟೋ ಅಭ್ಯಂತರ ಉಂಟಾಗುತ್ತದೆ. ಇದೂ ಅಲ್ಲದೆ ಈ ಉತ್ಸವಗಳಲ್ಲಿ ಜನರ ಆರೋಗ್ಯಕ್ಕೆ ವಿರೋಧವಾಗುವ ಕಲ್ಲೆಹಿಟ್ಟು ಮೊದಲಾದ ಪದಾರ್ಥಗಳು ಕೊಡಲ್ಪಡುವವು. ಇದರಿಂದ ಅನೇಕರು ಈ ಪದಾರ್ಥಗಳನ್ನು ಅಪ್ಯಾಳಗಳಲ್ಲಿ ತಿಂದು ದೇಹಾರೋಗ್ಯವನ್ನು ಕಳಕೊಂಡು ಕ್ಷೀಣರಾಗುತ್ತಾರೆ. ಇದು ಸರಿಯಲ್ಲ

ಇದೇ ಕಾಲದಲ್ಲಿ ಮೂರು ದೊಡ್ಡ ಜಾತ್ರೆಗಳು ನಡೆಯುತ್ತಲಿವೆ ಎಂದು ವಾಚಕರಿಗೆ ಗೊತ್ತಾಗಿರಬಹುದು. ಕಳೆದ ಮಂಗಳವಾರದಲ್ಲಿ ಸಾವಿರಾರು ಮಂದಿ ಮೇಲುಕೋಟೆಗೆ ಹೋಗಿ ಅಲ್ಲಿ ವೈರಮುಡಿ ಉತ್ಸವವನ್ನು ದರುಶನ ಮಾಡಿಕೊಂಡು ಮಾರನೇ ದಿನದ ಬೆಳಗ್ಗೆ ೬—೭ ಘಂಟೆಗೆ ಅಲ್ಲಿಂದ ಹೊರಟು ನಂಜನಗೂಡಿಗೆ ಹೋಗಿ ಅಲ್ಲಿ ರಥದ ಮೇಲೆ ದೇವರನ್ನು ದರುಶನ ಮಾಡಿಕೊಂಡು, ಅಲ್ಲಿಂದ ನೆಟ್ಟಗೆ ತಿರುಮಕೂಡ್ಲು ನರಸೀಪುರಕ್ಕೆ ಹೋಗಿ ಅಲ್ಲಿ ನಡೆಯುವ ತೀರ್ಥಸ್ನಾನವನ್ನು ಮಾಡುವರು. ಹೀಗೆ ಒಂಭತ್ತು ಕ್ಷೇತ್ರ ಮಾಡಿದವರಿಗೆ ಕಾಶೀಯಾತ್ರೆಯ ಫಲವು ಲಭಿಸುವದೆಂದು ನಂಬಿರುತ್ತಾರೆ. ಇದೆಲ್ಲಾ ಬಹು ಕಷ್ಟವಾದದ್ದಾಗಿದೆಯಲ್ಲವೆ? ನಂಜನಗೂಡಿನಿಂದ ಮೇಲುಕೋಟೆಗೆ ೪೭ ಮೈಲು ದೂರವಿದೆ. ನಂಜನಗೂಡಿನಿಂದ ತಿರುಮಕೂಡ್ಲಿಗೆ ಸ್ವಲ್ಪ ಹೆಚ್ಚು ಕಡಿಮೆ ೨೦ ಮೈಲಿ ಇರಬಹುದು. ಜನರು ರಾತ್ರಿಕಾಲದಲ್ಲಿ ಉತ್ಸವಾದಿಗಳನ್ನು ಮಾಡಿಕೊಂಡು ಹಗಲಿನಲ್ಲಿ ಯಾವಾಗಲೂ ಪ್ರಯಾಣ ಮಾಡಬೇಕಾಗಿರುವದರಿಂದ ಮೂರು ದಿವಸಗಳೊಳಗಾಗಿ ಈ ಪ್ರಯಾಣಗಳನ್ನು ಮಾಡಬೇಕಾಗಿರುತ್ತೆ.

ಇದೂ ಅಲ್ಲದೆ ಒಂದು ವರುಷದಲ್ಲಿ ಬರುವ ಹಬ್ಬಗಳನ್ನೆಲ್ಲ ನೋಡಿದರೆ ಯಾವಾಗಲೂ ಎರಡೆರಡು ದಿವಸಗಳಿಗೊಂದಾವರ್ತಿ ಒಂದೊಂದು ಹಬ್ಬವು ಇರುತ್ತದೆಂದು ಗೊತ್ತಾಗುತ್ತೆ. ಮೊನ್ನೆ ಯುಗಾದಿ ಹಬ್ಬ ಆಮೇಲೆ ರಾಮೋತ್ಸವ, ಇನ್ನು ಕೆಲವು ದಿವಸಗಳಲ್ಲಿ ವಿನಾಯಕನ ಹಬ್ಬ ಮತ್ತು ಈ ನಡುವೆ ಪ್ರಸ್ತಪ್ರಯೋಜನಗಳು ಬೇರೆ. ಇವುಗಳೆಲ್ಲಾ ನಡೆಯುತ್ತಾ ಬಂದರೆ ಪ್ರಜೆಗಳು ಅಭಿವೃದ್ಧಿಯಾದ ಸ್ಥಿತಿಯನ್ನೈದುವದಕ್ಕೆ ಅವಕಾಶವಿಲ್ಲಾ ದರೆಂದು ನಮಗೆ ತೋರುತ್ತದೆ. ಮಕ್ಕಳು ವಿದ್ಯೆಯನ್ನು ಸಂಪಾದಿಸುವದಕ್ಕೂ, ವರ್ತಕರು ತಮ್ಮ ವ್ಯಾಪಾರಾದಿಗಳನ್ನು ನಡೆಸುವದಕ್ಕೂ ಎಷ್ಟೋ ಅಭ್ಯಂತರಗಳುಂಟಾಗುತ್ತವೆ. ಪರಂತು ಈ ಕಷ್ಟವನ್ನೆಲ್ಲಾ ಸಹಿಸಿಕೊಳ್ಳುವದಕ್ಕೆ ಯೋಗ್ಯವಾದ ಕಾರಣವುಂಟೋ? ಹಾಗೆ ಹೋದರೆ ಕಾಯದ ಆಯಾಸವೂ, ಕಲ್ಮಷವೂ ಹೆಚ್ಚಾಗಿ ಬರುವದೇ ಹೊರತು ಅನ್ಯವಾದ ಪ್ರಯೋಜನವೂ ಉಂಟಾಗುವಂತೆ ತೋರುವದಿಲ್ಲ. ಹಾಗಾದರೆ ತಿರುಮಕೂಡ್ಲು ನರಸೀಪುರಕ್ಕೆ ಹೋಗಿ ತೀರ್ಥಸ್ನಾನ ಮಾಡಿ ಯಾತ್ರೆ ಪೂರೈಸಿದವರಿಗೆ ಕಾಶೀಯಾತ್ರೆಯ ಫಲ ಬಂದಾಗ್ಯೂ ಅದರಿಂದ ಪ್ರಯೋಜನವೇನು? ಹಿಂದೂಮತವು ಬಹಳ ಕಷ್ಟವನ್ನುಂಟುಮಾಡುವಂಥಾದ್ದಾಗಿದೆಯಲ್ಲವೆ? ಅದು ದೇಹಕ್ಕೆ ಕೇಡನ್ನು ಉಂಟುಮಾಡುವದಾಗಿರುವದೇ ಹೊರತು ಯಾವ ಐಶ್ವರ್ಯವನ್ನೂ, ಅಭಿವೃದ್ಧಿಯನ್ನೂ, ಬೇರೆ ಯಾವ ವಿಧವಾದ ಪ್ರಯೋಜನವನ್ನೂ ಕೊಡತಕ್ಕದ್ದಾಗಿಲ್ಲವು. ಹೀಗೆ ಸಕಲ ವಿಧಗಳಲ್ಲಿಯೂ ದೇಹಕ್ಕೆ ಕಷ್ಟ ಮತ್ತು ಅನಾರೋಗ್ಯವನ್ನೂ, ಮನಸ್ಸಿಗೆ ಜಿಗುಪ್ಸೆಯನ್ನೂ, ಆತ್ಮಕ್ಕೆ ಹಾನಿಯನ್ನೂ ಘಟಿಸುವ ಈ ಪದ್ಧತಿಗಳನ್ನು ಅನುಸರಿಸಬೇಕೆ? ವಾಚಕರೇ, ಮುಂದೆಯಾದರೂ ಇಂಥವುಗಳಿಗೆ ನಿಮ್ಮ ಲಕ್ಷ್ಯವನ್ನು ಕೊಡದೆ ನಿಮ್ಮ ವಿಚಾರಶಕ್ತಿಗೂ, ಬುದ್ಧಿಗೂ, ಆತ್ಮಕ್ಕೂ ಒಪ್ಪಿಗೆಯಾಗಿಯೂ, ಉಪಯೋಗಕರವಾಗಿಯೂ ಇರುವಂಥ ಪದ್ಧತಿಗಳನ್ನು ಹಿಡಿದು ಅವುಗಳನ್ನೇ ಅನುಸರಿಸಿರೆಂದು ಕೋರುತ್ತೇವೆ.

ಸೀತಾವಿಲಾಸ ಸನ್ನಿಧಾನದ ದೇವಾಜಮ್ಮಣ್ಣಿಯವರ ಮರಣ.

ಕಳೆದ ಭಾನುವಾರದ ದಿವಸ ಅರ್ಧ ರಾತ್ರಿಯಲ್ಲಿ ಸ್ವಲ್ಪ ಹೆಚ್ಚು ಕಡಮೆ ಹನ್ನೆರಡುವರೆ ಘಂಟೆಗೆ ಸೀತಾವಿಲಾಸ ಸನ್ನಿಧಾನದ ದೇವಾಜಮ್ಮಣ್ಣಿಯವರು ಮರಣವನ್ನೈದಿದರು. ಎಂಟು ಮೂರು ತಿಂಗಳುಗಳಿಂದೀಚೆಗೆ ಅವರು ಕೋಣೆಯ ರೋಗದಿಂದ ಪೀಡಿತರಾಗಿ ತಮ್ಮ ವಾರ್ಧಕ್ಯದಿಂದ ಆ ರೋಗವನ್ನು ಜೈಸುವದಕ್ಕೆ ಅಶಕ್ತರಾಗಿದ್ದರು. ಲೇಟ್ ಮಹಾರಾಜರವರ ಐದು ಮಂದಿ ಪತ್ನಿಯರಲ್ಲಿ ಇವರು ನಾಲ್ಕನೆಯವರಾಗಿದ್ದರು. ಶಾಲಿವಾಹನ ಶಕೆಯ ೧೭೪೪ ನೇ ವರುಷದಲ್ಲಿ ಅಂದರೆ ಈಗ್ಯೆ ೭೦ ವರುಷಗಳ ಕೆಳಗೆ ಇವರು ಲೇಟ್ ಮಹಾರಾಜರವರನ್ನು ವಿವಾಹಮಂಟಪದಲ್ಲಿ ವರಿಸಿದರು. ಆಗ್ಯೆ ಇವರಿಗೆ ೧೭ ನೇ ವರುಷ. ಆದುದರಿಂದ ಇವರಿಗೆ ಮರಣಕಾಲದಲ್ಲಿ ೮೭ ವರುಷಗಳಾಗಿತ್ತು. ಇದಕ್ಕನುಸಾರವಾಗಿ ನಿಮಿಷಕ್ಕೊಂದಾವರ್ತಿ ಒಂದು ಗುಂಡಿನಂತೆ ೮೭ ತೋಪುಗಳು ಹಾರಿಸಲ್ಪಟ್ಟವು. ಮಾತೋಶ್ರೀಯವರು ತಮ್ಮ ಉದಾರಗುಣಕ್ಕೋಸ್ಕರ ಬಹು ಪ್ರಖ್ಯಾತಿಯನ್ನು ಹೊಂದಿದ್ದರೆಂಬುವದು ಜನರಿಗೆ ಸಾಧಾರಣವಾಗಿ ತಿಳಿದೇ ಇದೆ. ಈಚೆಗೆ ಅವರು ಸೊಗಸಾದ ೧೮ ನೂತನಗ್ರಹಗಳನ್ನು ಸ್ವಂತ ಖಾಸಗಿಯಿಂದ ಕಟ್ಟಿಸಿ ಬ್ರಾಹ್ಮಣರುಗಳಿಗೆ ದಾನಮಾಡಿದರಲ್ಲದೆ ಅವರಲ್ಲಿ ಒಬ್ಬೊಬ್ಬರಿಗೆ ಸಾವಿರ ರೂಪಾಯಿಗಳ ಬೆಲೆಯುಳ್ಳ ಜಮೀನು ಮತ್ತು ದವಸಧಾನ್ಯಗಳನ್ನೂ ಕೊಡಿಸಿದರೆಂದು ನಾವು ಕೇಳಿದೆವು. ಅವರು ಲೇಟ್ ಮಹಾರಾಜರವರ ಪತ್ನಿಯಾಗಿದ್ದರಿಂದಲೂ, ಇಷ್ಟು ವೃದ್ಧರಾಗಿದ್ದದರಿಂದಲೂ ಅರಮನೆಯಲ್ಲಿ ವಿಶೇಷ ಅಧಿಕಾರವನ್ನು ಪಡೆದವರಾಗಿದ್ದರು. ಮುಖ್ಯವಾಗಿ ಶ್ರೀಮನ್ಮಹಾರಾಜರವರು ಸ್ವಾಭಾವಿಕವಾಗಿ ಅವರ ಅಭಿಪ್ರಾಯವನ್ನು ಲಕ್ಷ್ಯಕ್ಕೆ ತರುವದರಲ್ಲಿ ತಮ್ಮ ಪಿತೃವಾತ್ಸಲ್ಯವನ್ನು ತೋರಿಸುತಲಿದ್ದರು. ಮಹಾರಾಜರವರು ವಿದೇಶ ಸಂಚಾರ ಮಾಡಿಕೊಂಡು ಬರುವದರಲ್ಲಿ ಇಷ್ಟವುಳ್ಳವರಾಗಿದ್ದಾಗ್ಯೂ, ಈ ಮಾತೋಶ್ರೀಯವರು ಅದನ್ನು ಬಹಳವಾಗಿ ಆಕ್ಷೇಪ ಮಾಡುತಿದ್ದದರಿಂದ, ಅವರು ಪ್ರಯಾಣವನ್ನು ನಿಲ್ಲಿಸಿ ಇದ್ದರು. ಮುಂದೆ ಮಹಾರಾಜರವರು ತಮ್ಮ ಇಷ್ಟಬಂದಂತೆ ಮಾಡುವದಕ್ಕೆ ವಿಶೇಷವಾದ ಯಾವದೊಂದು ಅಡ್ಡಿಯೂ ಇರುವಂತೆ ತೋರುವದಿಲ್ಲ. ಮಹಾಮಾತೋಶ್ರೀಯವರು ತಾವು ಸಾಯುವದಕ್ಕಿಂತ ಮುಂಚೆ ೪೦ ಸಾವಿರ ರೂಪಾಯಿಗಳನ್ನು ಕೊಟ್ಟು ಅದರಿಂದ ಕಿಲ್ಲೆಯಲ್ಲಿರುವ ತ್ರಿನೇಶ್ವರಸ್ವಾಮಿ ದೇವಸ್ಥಾನಕ್ಕೆ ಗೋಪುರವನ್ನು ಕಟ್ಟಿಸಬೇಕೆಂದು ಹೇಳಿದ ಹಾಗೂ, ಅದು ಉಪಯೋಗವಾದ ಕೆಲಸವಲ್ಲವೆಂದು ಮಹಾರಾಜರವರು ಹೇಳಲು, ಒಂದು ಧರ್ಮಶಾಲೆಯನ್ನು ಕಟ್ಟಿಸಬೇಕೆಂದು ಅಜ್ಞಾಪಿಸಿದ ಹಾಗೂ ಕೇಳುತ್ತೇವೆ. ಇವರ ಉದಾರಗುಣಕ್ಕೆ ಇದು ಒಂದು ಒಳ್ಳೇ ದೃಷ್ಟಾಂತವಲ್ಲವೆ? ಇನ್ನೊಂದು ದೃಷ್ಟಾಂತವನ್ನು ನಾವು ಇಲ್ಲಿ ಸೂಚಿಸುವೆವು. ಅರಮನೆ ಖಜಾನೆಯಿಂದ ಇವರಿಗೆ ಮಾಹೆವಾರು ಕಳುಹಿಸುತಿದ್ದ ೧,೦೦೦ ರೂಪಾಯಿಗಳಲ್ಲಿ ಅನೇಕ ಬಡಬಗ್ಗರಿಗೆ ಜೀವನವನ್ನು ನಡೆಸಿಕೊಡುತ್ತಿದ್ದರು. ಅಲ್ಲದೆ ಇವರ ಚಾಕರರಾಗಿ ಅರಮನೆಯಲ್ಲಿ ಸುಮಾರು ೨೦೦—೩೦೦ ಮಂದಿಯವರಿಗೂ ದಾದಿಯರೇ ಮೊದಲಾದವರು ಇದ್ದರು. ಈಗ ಇವರುಗಳೆಲ್ಲ ಅನಾಥರಾದರು. ಆದದರಿಂದ ಅನೇಕ ಜನರು ಇವರ ಮರಣದ ವಿಷಯವಾಗಿ ವಿಷಾದಿಸುತ್ತಾರೆಂದು ಹೇಳುವದು ಸಹಜವಾಗಿಯೇ ಇದೆಯಲ್ಲವೆ?

ಸರ್ ೧೮೯೩ ನೇ ಇಸವಿ ಮಾರ್ಚಿ ತಾರೀಖು ೨೮ ರಲ್ಲು ಸೀತಾವಿಲಾಸ ಸನ್ನಿಧಾನದಲ್ಲಿ ಅಗ್ರಹಾರವನ್ನು ಧಾರೆಯೆರೆದ ಜನಗಳವಿವರ.

ದಜಾರುಕಟ್ಟೆ.

- ೧ ಧರ್ಮಾಧಿಕಾರಿಗಳು ಸುಂದರಶಾಸ್ತ್ರಿಗಳು
- ೧ ಧರ್ಮಾಧಿಕಾರಿಗಳು ಕುಂಭಕೋಣದ ಸೇಷಾಚಾರ್ರು
- ೧ ದೇವರುಭಟ್ಟರು

ಸೀತಾವಿಲಾಸದ ಸನ್ನಿಧಾನದಕಡೆ.

- ೧ ತುರುವೇಕೆರೆ ಅರಸಿನವರ ಮನೆ ಪುರೋಹಿತರು ತಿರುಮಲೆ ನಾಗಪ್ಪನವರು
- ೧ ಅರಮನೆ ಪುರೋಹಿತರು ಪುಟ್ಟಣ್ಣನವರು
- ೧ ಮೃತ್ಯುಂಜಯಾವಧಾನಿಗಳು
- ೧ ಮಗು ಪುರಾಣೀಕರು
- ೧ ಗುರುಮೂರ್ತಿ ಪಂಡಿತರು
- ೧ ಶ್ರೀಕಂಠಪಂಡಿತರ ಮಕ್ಕಳು ಚಂದ್ರಶೇಖರಯ್ಯನವರು
- ೧ ಬಾಣಾವಾರೆ ಕೋದಂಡರಾಮಯ್ಯನವರು
- ೧ ನೇತ್ರವೈದ್ಯ ನಾರಾಯಣದೀಕ್ಷಿತರು
- ೧ ಶಿರಸ್ತೇದಾರು ರಾಮಕೃಷ್ಣಪ್ಪನವರು
- ೧ ಕೃಷ್ಣಾನಂದ ಸ್ವಾಮಿಗಳು
- ೧ ರಾಮಚಂದ್ರ ಪಂಡಿತರು
- ೧ ತುರುವೇಕೆರೆ ಚಂದ್ರಶೇಖರ ಜೋಯಿಸರು

ತುರುವೇಕೆರೆ ಅರಸಿನವರ ಮನೆಕಡೆ.

- ೧ ಇಂಗ್ಲಿಷ್ ಖಾತೆಯ ವರದಾಸ್ವಾಮಿಯ್ಯಂಗಾರ್ರು
- ೧ ಕನ್ನಡ ಪಾಠದ ಉಪಾಧ್ಯರು
- ೧ ಗುಮಾಸ್ತ ಗರ್ಗೇಶ್ವರಿ ನಾರಣಪ್ಪನವರು

ಈ ಮೇಲ್ಕಂಡ ಮನೆಗಳನ್ನು ಈ ಜನಗಳಿಗೆ ಇದೇ ವಿಜಯಸಂವತ್ಸರದ ಚೈತ್ರಶುದ್ಧ ೭ ಶುಕ್ರವಾರ ದಿವಸ ಧಾರೆಯೆರೆದಿರುತ್ತಾರೆ

ನೋಟಿಸ್.

ನಮ್ಮ ವೃತ್ತಾಂತ ಪತ್ರಿಕೆಯ ಚಂದಾದಾರರು, ಖಾಸ್ಮೀದಾರರು, ಮತ್ತು ಏಜಂಟರು—ಇವರುಗಳಿಗೆಲ್ಲ ಕೃತಪಡಿಸಿಕೊಳ್ಳುವದೇನಂದರೆ:—

ನೀವುಗಳು ವೃತ್ತಾಂತ ಪತ್ರಿಕೆಯ ವಿಷಯವಾದ ಸಕಲ ಕಾಗದಪತ್ರಗಳಿಗೂ, ಖಾತ್ರಿಗಳಿಗೂ ಇಲ್ಲಿಂದ ಮುಂದೆ ಮೇಲ್ವಿಳಾಸ ಬರೆಯುವಾಗ್ಯೆ— "ರೆವರೆಂಡ ಹೆನ್ರಿ ಹೇಗ್ ಸಾಹೇಬರವರಿಗೆ" ಎಂದು ಬರೆಯಕೂಡದು, ಅದಕ್ಕೆ ಬದಲಾಗಿ "ವೃತ್ತಾಂತ ಪತ್ರಿಕೆಯ ಎಡಿಟರಿಗೆ" ಎಂಬದಾಗಿಯೇ ಬರೆಯತಕ್ಕದ್ದು. ಹೀಗೆ ಬರೆಯದೆ ಸಾಹೇಬರವರ ವಿಳಾಸಕ್ಕೆ ಬರೆಯುವ ಕಾಗದ ಪತ್ರಗಳಿಗೆ ನಿಗಾ ಕೊಡಲಾರೆವು.

ಮೈಸೂರು, } ಎಡಿಟರ,
೩೦—೩—೯೩ } ವೃತ್ತಾಂತ ಪತ್ರಿಕೆ.

ಒಳದೇಶ ವೃತ್ತಾಂತಗಳು.

ಕಳೆದ ಭಾನುವಾರ ರಾತ್ರಿ ಅರಮನೆಯಲ್ಲಿ ಸೀತಾವಿಲಾಸ ಸನ್ನಿಧಾನದ ದೇವಾಜಮ್ಮಣ್ಣಿಯವರು ಕ್ಷಯರೋಗದಲ್ಲಿ ಅಂತ್ಯವನ್ನೈದಿದರೆಂದು ತಿಳಿಸಲು ವಿಷಾದಿಸುತ್ತೇವೆ.

ಮೊನ್ನೆ ಶುಕ್ರವಾರ ರಾತ್ರಿ ರೈಲಿನಲ್ಲಿ ನಮ್ಮ ದಿವಾನ್ ಬಹದ್ದೂರವರು ಕಾರ್ಯಾರ್ಥವಾಗಿ ಬೆಂಗಳೂರಿನಿಂದ ಇಲ್ಲಿಗೆ ದಯಮಾಡಿದರು

ಹಾಸನ ಡಿಸ್ಟ್ರಿಕ್ಟಿನ ಮಳ್ಳೂರಿನ ಮೆ॥ ಸಿ ರಾಘವಾಚಾರಿರವರನ್ನು ಕಾಲೇಜಿನ ಸೂಪರಿಂಟೆಂಡೆಂಟ್ ಆಫೀಸರಾಗಿ ನಿಯಮಿಸಿರಂತೆ ಕೇಳುತ್ತೇವೆ

ಅರಮನೆ ಕಂಟ್ರೋಲರಾಗಿದ್ದ ಮೆ॥ ಇ ಆರ್ ಸುಬ್ಬರಾಯರವರು ಕಳೆದ ೨೫ನೆ ಶುಕ್ರವಾರ ಬೆಂಗಳೂರಿನಲ್ಲಿ ಸಂಸ್ಥಾನದ ಕಂಟ್ರೋಲರ್ ಕೆಲಸದ ಭಾರವನ್ನು ವಹಿಸಿದರು

ಹೊಸದಾಗಿ ಡೆಪ್ಯುಟಿ ಕಮಿಷನರಾಗಿಯೂ, ಸ್ಪೆಷಲ್ ಸರ್ಷ ಜಡ್ಜಿಗಳಾಗಿಯೂ ನಿಯಮಿಸಲ್ಪಟ್ಟಿರುವ ಮೆ॥ ಸಿ ಶ್ರೀನಿವಾಸಯ್ಯಂಗಾರ್ರವರು ಕಳೆದವಾರದಲ್ಲಿ ರಾಜಧಾನಿಗೆ ಬಂದಿರುತ್ತಾರೆ

ಮೈಸೂರು ಗಾರ್ನ್‌ಮೆಂಟ್ ಪ್ರೆಸ್ ಸೂಪರಿಂಟೆಂಡೆಂಟರಾದ ಮೆ॥ ಟಿ ಟಿ ಲೆನ್ವರ್ಡ್ ಸಾಹೇಬರಿಗೆ ೪೦೦ ರೂಪಾಯಿಗಳಿಂದ ೬೦೦ ರೂಪಾಯಿಗಳ ತನಕ ಬಡ್ತಿ ಮಾಡಿರುತ್ತಾರೆಂದು ಕೇಳುತ್ತೇವೆ

ಈ ವರುಷ ಬಿ. ಎಲ್. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಮಿಸ್ಟರ್ ಹಂಪಾಪಾಸ್ವಾಮಿ ಬಿ ಎ ಯವರಿಗೆ ಜ್ಯುಡಿಷಲ್ ಡಿಪಾರ್ಟ್‌ಮೆಂಟಿನಲ್ಲಿ ೬೦ ರೂಪಾಯಿನ ಪ್ರೊಬೇಷನರಿ ಕೆಲಸವನ್ನು ನಮ್ಮ ಚೀಫ್ ಕೋರ್ಟಿನವರು ಕೊಟ್ಟಿರುತ್ತಾರೆಂದು ಕೇಳಿ ಸಂತೋಷಿಸುತ್ತೇವೆ

ಕಾಲಸ್ಥಿತಿಯು ಜೋರಾದವಂತೆಯೇ ಇರುತ್ತೆ ಮೊನ್ನೆ ಭಾನುವಾರ ರಾತ್ರಿ ಮತ್ತು ಮಂಗಳವಾರ ರಾತ್ರಿಗಳಲ್ಲಿ ಒಂದು ಹದ ಮಳೆಯಾಯಿತು, ಆದರೂ ಬಿಸಿಲಿನ ಪ್ರಭೆಯು ಹೆಚ್ಚುತ್ತಲಿದೆ, ನೀರಿನ ಸರಬರಾಜು ನೋಡು ಸರ್ಕಾರದವರು ಎರಡು ಏರ್ಪಾಡು ಮಾಡುವರಲ್ಲದೇ

ಪೊಲೀಸ್ ಇಲಾಖೆಯ ಪ್ರವಾಸದ ಮತ್ತು ಇನ್ಸ್‌ಪೆಕ್ಟರ್ ಕೆಲಸಗಳಿಗಾಗಿ ಏರ್ಪಡಿಸಲ್ಪಟ್ಟ ಪರೀಕ್ಷೆಯು ಬರುವ ಏಪ್ರಿಲ್ ತಿಂಗಳ ಆಖೈರಿನಲ್ಲಿ ನಡೆಯುವದಾಗಿದ್ದದನ್ನು ನಿಲ್ಲಿಸಿ, ಸದರಿ ಪರೀಕ್ಷೆಗೆ ಹೊಸದಾಗಿ ಕೆಲವು ಕಾನೂನುಗಳನ್ನು ಸೇರಿಸಿ ಅದು ಬರುವ ಜೂನ್ ತಿಂಗಳಲ್ಲಿ ನಡೆಯತಕ್ಕದ್ದೆಂದು ವ್ಯವಸ್ಥೆಯಾದಂತೆ ಕೇಳುತ್ತೇವೆ

ಬೆಂಗಳೂರು ಚೀಫ್ ಕೋರ್ಟ್ ಜಡ್ಜಿಯವರ ಪೈಕಿ ಒಬ್ಬರಾದ ಮೆ॥ ಪಿ ಎ. ಕೃಷ್ಣಮೂರ್ತಿಯವರು ಕಳೆದ ಫೆಬ್ರವರಿ ೨೬ ನೇ ತಾರೀಖು ಮೊದಲು ಒಂದು ತಿಂಗಳ ಪ್ರಿವಿಲೆಜ ರಜಾ ಪಡೆದುಕೊಂಡು ತಮ್ಮ ಜಾಗೆಗೆ ಹೋಗಿದ್ದರಷ್ಟೆ ಸದರಿಯವರು ಕಳೆದ ಶನಿವಾರ ತಮ್ಮ ಕೆಲಸದ ಚಾರ್ಜನ್ನು ಮರಳಿ ವಹಿಸಿದರೆಂದು ಕೇಳುತ್ತೇವೆ

ಕಳೆದ ಎಂ ಎಲ್ ಪರೀಕ್ಷೆಯಲ್ಲಿ ಮೆ॥ ಹೆಚ್. ವಿ. ನಂಜುಂಡಯ್ಯನವರು ಹೆಚ್ಚಾದ ನಂಬರುಗಳನ್ನು ತೆಗೆದುಕೊಂಡು ಪ್ಯಾಸಾಗಿರುತ್ತಾರಾದ್ದರಿಂದ ಇವರಿಗೆ ಮದ್ರಾಸ್ ಯೂನಿವರ್ಸಿಟಿ ಸಿಂಡಿಕೇಟರವರು ಕಾರ್ಮೈಕಲ್ ಪ್ರೈಜ್ ಎಂಬ ಬಹುಮಾನವನ್ನು

ನ್ನೂ ಮತ್ತು ಇಸ ಪ್ರೈಜ್ ಎಂಬ ಬಹುಮಾನವನ್ನೂ ಕೊಟ್ಟಿರುತ್ತಾರೆಂದು ತಿಳಿಸಲು ಸಂತೋಷಿಸುತ್ತೇವೆ.

ಮೈಸೂರು ಡಿಪ್ಯುಟಿಕಮಿಷನರವರಾದ ಮ|| ರಂಗಸ್ವಾಮಿ ಅಯ್ಯಂಗಾರ್ಯರವರು ಮೊನ್ನೆ ಶನಿವಾರ ನಡೆದ ಮ್ಯುನಿಸಿಪಲ್ ಮೀಟಿಂಗಿನಲ್ಲಿ ಮ್ಯುನಿಸಿಪಲ್ ಮೀಟಿಂಗುಗಳು ಬಹಿರಂಗವಾದವುಗಳಾದ್ದರಿಂದ, ಈ ಮೀಟಿಂಗುಗಳಿಗೆ ಪತ್ರಿಕಾ ಬಾತ್ಮಿದಾರರುಗಳು ಬಂದು, ಇಲ್ಲಿ ನಡೆದ ಸಂಗತಿಗಳನ್ನು ಪತ್ರಿಕೆಗಳಲ್ಲಿ ಧಾರಾಳವಾಗಿ ಪ್ರಕಟಿಸಬಹುದು ಎಂಬದಾಗಿ ಕಮಿಷನರುಗಳಿಗೆ ತಮ್ಮ ಅಭಿಪ್ರಾಯವನ್ನು ತಿಳಿಯಪಡಿಸಿದ್ದಕ್ಕಾಗಿ ನಾವು ತುಂಬಾ ಸಂತೋಷಿಸುತ್ತೇವೆ.

ಯಾದಗಿರಿ ತಾಲೂಕಿನ ಮಮಾದಾರ ಮತ್ತು ಪಟೇಲರು ಲಂಚ ತೆಗೆದುಕೊಂಡರೆಂದು ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಛಾರ್ಜು ಮಾಡಲ್ಪಟ್ಟು ಇದ್ದರು. ಇದು ವಿಚಾರಣೆಯಾಗಿ ಈ ಪೊಲೀಸರು ಕೃತಕವಾದದ್ದೆಂತಲೂ, ಅಪರಾಧಿಗಳು ನಿರಪರಾಧಿಗಳೆಂತಲೂ ಮ್ಯಾಜಿಸ್ಟ್ರೇಟರು ತೀರ್ಮಾನಿಸಿದರು. ಆದಾಗ್ಯೂ ಅವರಿಗೆ ಇರುವರೆಗೆ ಕೆಲಸವನ್ನು ಕೊಡದೆ ಪೋಲೀಸ್ ಸೂಪರಿಂಟೆಂಡೆಂಟರೂ ಡಿಪ್ಯುಟಿಕಮಿಷನರೂ ಪರ ಅಭಿಪ್ರಾಯ ಉಳ್ಳವರಾಗಿರುತ್ತಾರೆಂದು ಕೇಳುತ್ತೇವೆ.

ಕಳೆದ ಭಾನುವಾರದ ತಾರೀಖಿನಲ್ಲಿ ಪ್ರಕಟಿಸಲ್ಪಟ್ಟ ಎಕ್ಸ್ಟ್ರಾರ್ಡಿನರಿ ಎಂಬ ಸರ್ಕಾರಿ ಗೆಜೆಟ್ಟಿನಿಂದ ತಿಳಿಯ ಬರುವದೇನಂದರೆ—ಸೀತಾವಿಲಾಸ ಸನ್ನಿಧಾನದ ಮಹಾಮಾತೃಶ್ರೀಯವರಾದ ದೇವಾಜಮ್ಮಣ್ಣಿಯವರು ೩೬ ಮಾರ್ಚಿ ಈ ದಿನ ಮಧ್ಯಾಹ್ನ ೧ ಘಂಟೆಯಲ್ಲಿ ಮರಣವನ್ನೈದಿದ ಪ್ರಯುಕ್ತ ಸಂಸ್ಥಾನದ ಸಕಲ ಆಫೀಸುಗಳಿಗೂ ಸೋಮವಾರ ಮತ್ತು ಮಂಗಳವಾರಗಳು, ಮತ್ತು ಬರುವ ಏಪ್ರೈಲ್ ೫ನೇ, ೫ನೇ, ೬ನೇ ತಾರೀಖುಗಳೂ ಈ ೫ ದಿವಸಗಳು ರಜಾ ಕೊಡಲ್ಪಟ್ಟಿರುತ್ತವೆ. ಮೈಸೂರಿನಲ್ಲಿಯೂ ಬೆಂಗಳೂರಿನಲ್ಲಿಯೂ ಅವರ ವಯಸ್ಸಿನಷ್ಟು ಅಂದರೆ ೮೯ ಮಿನಿಟ್ ತೋಪುಗಳು ಹಾರಿಸಲ್ಪಟ್ಟವು. ಸಾಂವತ್ಸರಿಕ ದರ್ಬಾರಿನ ಕರ್ಮವು ೧೩ನೇ ದಿವಸವೇ ಏಪ್ರೈಲ್ ೬ರಲ್ಲಿ ನಡೆಯಬೇಕಾಗಿರುವದರಿಂದ ಆ ದಿನದ ವರೆಗೂ ಸಂಸ್ಥಾನದ ಬಾವುಟಗಳನ್ನು ಕಂಬಗಳ ಕೊನೆಯಲ್ಲಿ ಕಟ್ಟಿರುವದನ್ನು ತಪ್ಪಿಸಿ ಅರ್ಧಭಾಗದಲ್ಲಿ ಮಾತ್ರ ಕಟ್ಟಿರುವಂತೆ ಇಳಿಸಬೇಕು.

ಕುಟುಂಬ ಚಿಕಿತ್ಸಕ ಎಂಬ ಮಾಸ ಪತ್ರಿಕೆಯ ಮೊದಲನೇ ಸಂಚಿಕೆಯನ್ನು "ಶೇನಾ ಮತ್ತು ಮೈಸೂರು ಟ್ರೇಡಿಂಗ್ ಕಂಪೆನಿ ಆಫೀಸಿನವರು" ಪ್ರಕಟಿಸಿ ನಮ್ಮಲ್ಲಿಗೆ ಒಂದು ಸಂಚಿಕೆಯನ್ನು ಕಳುಹಿಸಿ ಕೊಟ್ಟಿರುತ್ತಾರೆ. ಇದನ್ನು ಪಡೆಯಲಪೇಕ್ಷಿಸುವವರು ವರುಷ ಒಂದಕ್ಕೆ ಅಂಚೆ ಸಹಿತ ೮ ಆಣೆಗಳು ಮಾತ್ರ ಕೊಡತಕ್ಕದ್ದು. ಇದನ್ನು ಬೊಂಬಾಯಿನ ತಾರಕಾ ಪ್ರೆಸ್ಸಿನಲ್ಲಿ ಮುದ್ರಿಸುತ್ತಾರೆ. ಇದರಲ್ಲಿ ಮೊದಲನೇ ವಿಷಯವು—ಪುಸ್ತಕೋದ್ದೇಶದ ಪ್ರಥಮ ವಿಜ್ಞಾಪನೆಯು, ಎರಡನೇದು—ಪ್ರಸ್ತಾವನೆ, ೩ ನೇದು—ವಾಕ್ಚಾತುರ್ಯಕ, ೪ ನೇದು—ಚಮತ್ಕಾರಿಕ ಚಿಕಿತ್ಸೆಯು, ೫ ನೇದು—ಚಿಕಿತ್ಸಕನು ಹೇಳುವ ವಿಚಾರಿಕ ಎಂಬಿವುಗಳು. ಇವುಗಳಲ್ಲದೆ ಅವರಲ್ಲಿ ಮಾರಾಟಕ್ಕೆ ಸಿದ್ಧವಾಗಿರುವ ನಾನಾವಿಧ ಪದಾರ್ಥಗಳನ್ನೂ ಸುಲಭ ಕ್ರಯ ಸಹಿತ ಪ್ರಕಟ ಪಡಿಸಿರುತ್ತಾರೆ. ಈ ಪದಾರ್ಥಗಳೆಲ್ಲ ಹಿಂದೂ ಜನರಿಗೆ ಉಪಯೋಗಕರವಾದವುಗಳೇ ಸರಿ. ಇದರಲ್ಲಿ ೨೪ ಪುಟಗಳುಂಟು. ಇಂಥಾ ಸುಲಭ ಸೌಲ್ಯವಾದ ಪುಸ್ತಕವನ್ನು ಸಕಲರೂ ಓದಿ ಕಲಿಯತಕ್ಕದ್ದಾಗಿದೆ. ಮುಂದೆ ಈ ಪುಸ್ತಕವನ್ನು ಇನ್ನೂ ಹೆಚ್ಚಿಸುವಂತೆ ಭರವಸೆ ಕೊಡುತ್ತಾರೆ. ಇದನ್ನು ಇನ್ನೂ ಜನೋಪಯೋಗವಾಗುವ ರೀತಿಯಲ್ಲಿ ನಡಸುವರೆಂದು ನಂಬಿದ್ದೇವೆ.

ಮೈಸೂರ ಗೆಜೆಟ ಸಂಗ್ರಹ.

ತಾ || ೧೮ ನೇ ಮಾರ್ಚಿ ೧೮೯೩—ಮೈಸೂರು ಡಿಸ್ಟ್ರಿಕ್ಟು ಟ್ರೆಜರಿ ಆಫೀಸಿನಲ್ಲಿರುವ ಅಸಿಸ್ಟೆಂಟ್ ಕಮಿಷನ್ನರ್ ಮ|| ಬಿ ಕೃಷ್ಣಯ್ಯಂಗಾರ್ಯರವರು ಈ ತಿಂಗಳ ೧೬ ನೇ ತಾರೀಖು ಲಗಾಯಿತು ಅಥವಾ ಅವರು ಬಿಡುಗಡೆ ಮಾಡಲ್ಪಡುವ ತಾರೀಖು ಮೊದಲು ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ

ಪ್ರೊ ಪೊಲೀಸ ಸೂಪರಿಂಟೆಂಡೆಂಟು ಮ|| ಜೆ ಶಪ್ಪಿಯಾ ಸ್ವಾಮಿಯವರು ಮೈಸೂರು ಡಿಸ್ಟ್ರಿಕ್ಟು ಅಸಿಸ್ಟೆಂಟ್ ಕಮಿಷನ್ನರ ಮ ಫಸ್ಟ್‌ಕ್ಲಾಸ ಮ್ಯಾಜಿಸ್ಟ್ರೇಟರಾಗಿ ಕೆಲಸ ನೋಡುವಂತೆ ನೇಮಕ ಮಾಡಲ್ಪಟ್ಟು ಮ|| ಕೃಷ್ಣಯ್ಯಂಗಾರ್ಯರು ರಜಾಮೇಲಿರುವ ಕಾಲದಲ್ಲಿ ಡಿಸ್ಟ್ರಿಕ್ಟು ಟ್ರೆಜರಿ ಛಾರ್ಜಿನಲ್ಲಿರುವರು

ತಾ || ೧೬ ನೇ ಮಾರ್ಚಿ ೧೮೯೩—ಮೈಸೂರು ಸರ್ವಿಸ ರೆಗ್ಯುಲೇಷನ್ ೧೫೦ ನೇ ಆರ್ಟಿಕಲ್ ಅನುಸರಿಸಿ, ಸಂಸ್ಥಾನದ ಹುಜೂರ್ ಟ್ರೆಜರಿ ಬಜಾಂಚಿ ಮ|| ಟಿ. ರಾಮಲಿಂಗಶೆಟ್ಟಿಯವರು ೧೮೯೩ ನೇ ಇಸವಿ ಮಾರ್ಚಿ ೧೬ ನೇ ತಾರೀಖು ಮೊದಲು ೫ ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತಾರೆ

ತಾ || ೧೭ ನೇ ಮಾರ್ಚಿ ೧೮೯೩—ಅಮಲ್‌ದಾರ್ ಎಂ. ರಾಮಚಂದ್ರರಾಯರವರು ಈ ತಿಂಗಳ ೧೫ ನೇ ತಾರೀಖಿನ ಮಧ್ಯಾಹ್ನಾನಂತರ ಬೆಂಗಳೂರಿಗೆ ಬಂದು ಕೆಲಸಕ್ಕೆ ಬಿಡುವದಾಗಿ ರಿಪೋರ್ಟ್ ಮಾಡಿದ್ದರಿಂದ, ೧೮೯೩ ನೇ ಇಸವಿ ಮೇ ತಿಂಗಳ ೮ ನೇ ತಾರೀಖು ೫೦ ನೇ ನಂಬರ್ ಇಸ್ತಿಹಾರಿನಿಂದ ಮಂಜೂರ್ ಮಾಡಲ್ಪಟ್ಟ ಫರ್ಲೋ ರಜಾ ಪೈಕಿ ಬಳಿದ ಭಾಗವು ಇದರಿಂದ ರದ್ದು ಮಾಡಲ್ಪಟ್ಟಿರುವದಲ್ಲದೆ, ಮೃತಪಟ್ಟ ಸ್ಟಯಪ ಆಹಮದ್‌ರವರಿಗೆ ಬದಲು, ಮೈಸೂರು ಡಿಸ್ಟ್ರಿಕ್ಟು ಗುಂಡ್ಲುಪೇಟೆ ತಾಲೂಕಿಗೆ ನೇಮಿಸಲ್ಪಟ್ಟಿರುತ್ತಾರೆ

ತಾ || ೧೮ ನೇ ಮಾರ್ಚಿ ೧೮೯೩—ಚಿಂತಾಮಣಿ ತಾಲ್ಲೂಕು ಅಮಲ್‌ದಾರರು ಮ|| ವಿ. ಪಾರ್ಥಸಾರಥಿ ಅಯ್ಯಂಗಾರ್ಯರು ೧೮೯೩ ನೇ ಇಸವಿ ಮಾರ್ಚಿ ೨೦ ನೇ ತಾರೀಖು ಮೊದಲು ಅಥವಾ ಮುಂದೆ ೩೫ ದಿನಗಳೊಳಗಾಗಿ ಅವರು ಉಪಯೋಗಿಸಿಕೊಳ್ಳಬಹುದಾದ ಬೇರೆ ಒಂದು ತಾರೀಖು ಲಗಾಯಿತು ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ

ಮಹಾಮಾತೃಶ್ರೀಯವರ ದಹನ ಕರ್ಮಗಳು.

ಅರಮನೆ ಸೀತಾವಿಲಾಸ ಸನ್ನಿಧಾನದ ಮಹಾ ಮಾತೃಶ್ರೀಯವರಾದ ದೇವಾಜಮ್ಮಣ್ಣಿಯವರು ಕೆಲವು ಕಾಲದಿಂದ ಕೋಪ ರೋಗಪೀಡಿತರಾಗಿದ್ದು ಕಳೆದ ೨೬ ನೆ ಭಾನುವಾರ ರಾತ್ರಿ ಸುಮಾರು ೧೦|| ಘಂಟೆಗೆ ಮರಣವನ್ನೈದಿದರು. ಮಾರನೇ ಅಂದರೆ ಸೋಮವಾರ ಬೆಳಿಗ್ಗೆ ಹಿಂದುಗಳ ಪದ್ಧತಿಗನುಸಾರವಾಗಿ ದಹನ ಕರ್ಮಗಳನ್ನು ನೆರವೇರಿಸಲು ಸುಮಾರು ೬|| ಘಂಟೆಯ ಹೊತ್ತಿಗೆ ಶವವನ್ನು ಪಾಲಕಿಯಲ್ಲಿ ಮಲಗಿಸಿ, ಅದನ್ನು ನಾನಾವಿಧ ವಸ್ತ್ರಾಭರಣಗಳಿಂದ ಅಲಂಕರಿಸಿ, ಸಕಲ ಮಾನ ಮರ್ಯಾದೆಗಳೊಡನೆ ರುದ್ರಭೂಮಿಗೆ ತೆಗೆದುಕೊಂಡು ಹೋದರು. ಈ ಮೆರವಣಿಗೆಯ ಪ್ರಾರಂಭದಲ್ಲಿ ನಿಶಾನಿ ಬಾವುಟಗಳನ್ನು ಸುತ್ತಿ ಇಟ್ಟಿದ್ದ ೨ ಆನೆಗಳು ಬಂದವು. ಅದರ ಹಿಂದೆ ಕುದುರೇ ಸವಾರರು ನಾಲ್ಕು ನಾಲ್ಕಾಗಿ ಲೈನಿನಲ್ಲಿ ತಮ್ಮ ಬರ್ಚಿಗಳನ್ನು ಕೈಗಳಲ್ಲಿ ಹಿಡಿದುಕೊಳ್ಳದೆ ಹಿಂದಕ್ಕೆ ಇಟ್ಟುಕೊಂಡಿದ್ದರು. ಕುದುರೇ ಸವಾರರ ಹಿಂದೆ ಬ್ಯಾಂಡಿನವರುಗಳು ರಸ್ತೆಯನ್ನು ಪಿಕಾ ಮಾಡುವವರಾಗಿ ತಮ್ಮ ತಮ್ಮ ಆಯುಧಗಳನ್ನು ಹಿಡಿದು ಇದ್ದರು. ಇವರ ಹಿಂದೆ ಕಂಪೆನೀ ಫೌಜುಗಳು ಆಚಾರವಾದಂತೆಗಳಾಗಿ ಲೈನ್ ವಿಂಗಡಿಸಲ್ಪಟ್ಟು, ಬಂದೂಕುಗಳನ್ನು ತಲೆಕೆಳಗಾಗಿ ಹಿಡಿದವರಾಗಿಯೂ, ಇವರ ಅಧಿಕಾರಿಗಳು ಕತ್ತಿಗಳನ್ನು ತಲೆಕೆಳಗಾಗಿ ಬಲತೋಳಿನ ಕಂಕುಳಿನಲ್ಲಿ ಇಟ್ಟವರಾಗಿಯೂ ಬಂದರು. ಅನಂತರ ರಾಜಯೋಗ್ಯವಾದ ಕೆಲವು ಬಿರುದುಗಳನ್ನು ಹಿಡಿದವರೂ, ಕರ್ನಾಟಿಕ ಓಲಗವನ್ನು ಊದತಕ್ಕವರು ಓಲಗ ತಾಳ ಮೊದಲಾದ ಸಂಭ್ರಮದಿಂದ ಹೋಗುತ್ತಿದ್ದರು. ಇವರ ಜೊತೆಯಲ್ಲಿ ರಾಜ ಫೌಜುಗಳು ಕಂಪೆನೀ ಫೌಜುಗಳಂತೆಯೇ ತಮ್ಮ ಬಂದೂಕುಗಳನ್ನೂ ಕತ್ತಿಗಳನ್ನೂ ತಲೆಕೆಳಗಾಗಿ ಹಿಡಿದು ಹೋದರು. ಅವರ ಹಿಂದೆ ನಾಗಸ್ವರವೆಂಬ ವಾದ್ಯಗಾರರೂ, ಇವರ ಹಿಂದೆ ಪ್ರಖ್ಯಾತರಾದ ಇಂಗ್ಲಿಷ್ ಬ್ಯಾಂಡ್ ವಾದ್ಯಗಾರರೂ ದುಃಖ ಸೂಚಕವಾದ ವಾದ್ಯಗಳನ್ನು ಉದ್ಘೋಷಿಸುತಲಿದ್ದರು. ಇವರನ್ನು ಹಿಂಬಾಲಿಸಿ ಅರಮನೆಯ ಸಕಲ ನೌಕರವರ್ಗದವರೂ, ರಾಜಧಾನಿಯ ಸಕಲ ಆಫೀಸುಗಳ ಘನ ಘನ ಉದ್ಯೋಗಸ್ಥರುಗಳೂ, ರಾಜ ಬಂಧುಗಳೂ, ಅನೇಕಮಂದಿ ಸಾಹುಕಾರರೂ, ಇವರಲ್ಲದೆ ಸುಮಾರು ೫೦೦—೬೦೦ ಜನಗಳವರೆಗೂ ಹಿಂಬಾಲಿಸಿ ಹೋದರು. ಒಂದು ಕಡೆ ಮನೆಕಡೆ ಕಟ್ಟಿದ್ದ ಉದ್ದವಾದ ಗಳುವಿನ ಕೊನೆಯನ್ನು ಶ್ರೀಮನ್ಮಹಾರಾಜರವರು ಒಂದು ಕೈಯಲ್ಲಿ ಹಿಡಿದು, ಮುಖವನ್ನು ಧೋತ್ರದಿಂದ ಮರೆ ಮಾಡಿಕೊಂಡು ವ್ಯಸನಾಕ್ರಾಂತರಾಗಿ ದಯಮಾಡಿಸಿದರು. ಸೇವಕರು ಇಬ್ಬರು ಆ ಉಗ್ಗನ್ನು ಬಲವಾಗಿ ಹಿಡಿದು ನಡೆಯುತ್ತಿದ್ದರು. ಶ್ರೀಮನ್ಮಹಾರಾಜರವರ ಎಡ ಪಾರ್ಶ್ವದಲ್ಲಿ ದಿವಾನರವರು ಸಮೀಪವರ್ತಿಗಳಾಗಿ ದಯಮಾಡಿದರು. ಒಕ್ಕೆ ಬಸಪ್ಪಾಜಿ ಅರಸಿನವರು ಶ್ರೀಮನ್ಮಹಾರಾಜರವರಿಗೆ ಅಭಿಮುಖರಾಗಿ ಹಸ್ತಲಾಘವಗಳನ್ನು ಕೊಡುತ್ತಾ ದಯಮಾಡಿದರು. ಇವರ ಹಿಂದೆ ನಾಲ್ಕು ಜನಗಳಿಂದ ಹೊರಲ್ಪಟ್ಟ ಭಂಗಾರದ ಪಾಲಕಿಯಲ್ಲಿ ದಿವ್ಯ ವಸ್ತ್ರಾಭರಣಗಳಿಂದಲೂ, ಪುಷ್ಪಗಳಿಂದಲೂ ಭೂಷಿಸಲ್ಪಟ್ಟು ಮೃತರಾಗಿದ್ದ ದೇವಾಜಮ್ಮಣ್ಣಿಯವರು ಸುಷುಪ್ತಿಯಲ್ಲಿರುವರೋ ಎಂಬಂತೆ ತೋರ್ಪಡುವಂತೆ ಶಯನ ಮಾಡಿದ್ದರು. ಪಾಲಕಿಯ ಹಿಂದೆ ಅನೇಕಮಂದಿ ದಾಸಿಯರು ಶವವನ್ನು ಹೆತ್ತತಾಯಿಯೋ ಎಂಬಂತೆ ಸಾಲಿನಲ್ಲಿ ಬರುತ್ತಿದ್ದ ಆ ಮಹ್ಮನವರೇ ಅರಮನೆಯನ್ನು ಬರ್ಜಿಸಿ ಹೊರಗೆ ಬಂದವಂತರ ನಮಗೆ ಅಲ್ಲೀನಾಶಲಗಳೆಂದು ಅನ್ನುತ್ತಿದ್ದರೋ ಎಂಬಂತೆ ನಾದೋದ್ಗಾರವಾಗಿ ಕಣ್ಣೀರನ್ನು ಸುರಿಸುತ್ತಾ ಹೋಗುತ್ತಿದ್ದರು. ಅವರ ಜೊತೆಯಲ್ಲಿ ಅವ್ಮನವರ ನಾನಾರೀತಿಯಲ್ಲಿ ಸಹಾಯ ಸಂಪತ್ತುಗಳನ್ನು ಪಡೆಯುತ್ತಿದ್ದ ಕೆಲವು ಮುದಿ ಬ್ರಾಹ್ಮಣಸ್ತ್ರೀಯರೂ ರೋದನಮಾಡುತ್ತಾ ಹೋದರು. ಇವರ ಹಿಂದೆ ರಾಜಬಂಧುಗಳು ತಮ್ಮ ಬಟ್ಟೆಗಳನ್ನು ಹಿಡಿದು ಬ್ಯಸನಪಟ್ಟು ಹೋದರು. ಇವರ ಹಿಂದೆ ಫೌಜುಗಳು, ಅವರ ಹಿಂದೆ ಕುದುರೆ ಸವಾರರೂ ಇವರನ್ನೆಲ್ಲಾ ಮುಂದೆ ಕಟ್ಟಕಡೆಯಲ್ಲಿ ಸಿಂಗರಿಸಿದ ನಗಾರಿಗಳನ್ನು ಹೊತ್ತುಕೊಂಡಿದ್ದ ಒಂದು ಅರ್ಧ ಜೋಡಿ ಆನೆಗಳೂ ಹೋದವು. ಈ ಮೆರವಣಿಗೆಯು ಅರಮನೆಯ ದಕ್ಷಿಣ ಬಾಗಿಲಿನಿಂದ ಹೊರಟು ಅರಮನೆಯ ಮುಂದೆ ಹಾಸಿ ನಾಲ್ಕು ಬೀದಿಗಳಲ್ಲಿ ಬಂದು ಕೋಟೆಯ ದಕ್ಷಿಣದ್ವಾರವನ್ನು ದಾಟಿ ಬಲಕ್ಕೆ ತಿರುಗಿ ಪಶ್ಚಿಮಕ್ಕೆ ಹೋಯಿತು. ರಾಜಧಾನಿಯಲ್ಲಿದ್ದ ಸ್ತ್ರೀಯರು ಮೊದಲಾಗಿ ಬಾಲವೃದ್ಧರೂ ಕೋಟೆಯ ಬಳಿ, ಕೆರೆ ಏರಿಯ ಮೇಲೂ ನಿಂತು ನೋಡುತ್ತಿದ್ದರು. ರುದ್ರಭೂಮಿಯಲ್ಲಿ ದಹನಕರ್ಮಗಳು ನೆರವೇರಿದನಂತರ, ಅಲ್ಲಿ ಸೇರಿದ್ದ ಸಮಿತಾರುಮಂದಿ ಬ್ರಾಹ್ಮಣರುಗಳಿಗೆ ೨—೩ ಆಣೆಗಳ ಪ್ರಕಾರ ದಕ್ಷಿಣೆಯನ್ನು ಕೊಟ್ಟರು. ರಾಜಧಾನಿಯು ಶೋಕದಲ್ಲಿ ಮುಳುಗಿದೆ ಎಂದು ತೋರ್ಪಡಿಸುತ್ತೋ ಎಂಬಂತೆ ಆಕಾಶದಲ್ಲಿ ಮೋಡಗಳು ಕವಿದು ಅರ್ಧಾಂಧಕಾರವನ್ನು ಉಂಟುಮಾಡಿದ್ದವು. ಭಾನುವಾರ ರಾತ್ರಿಯಲ್ಲಿ ಒಂದಾಸದ ಮಳೆಯೂ ಬಿತ್ತು. ಈ ಮೆರವಣಿಗೆಯು ಅರಮನೆಯನ್ನು ಬಿಟ್ಟದಾಗಾಯಿತು ಒಂದು ನಿಮಿಷಕ್ಕೆ ಒಂದಾವರ್ತಿ ತೋಪನ್ನು ಹಾರಿಸಿದರು. ಅದನ್ನು ಲೆಕ್ಕ ಮಾಡುವಲ್ಲಿ ಎಂಭತ್ತೊಂಭತ್ತು ತೋಪುಗಳಾದವು. ಇದರಿಂದ ಗತಿಸಿದ ದೇವಾಜಮ್ಮಣ್ಣಿಯವರಿಗೆ ಮರಣಕಾಲದಲ್ಲಿ ೮೯ ವರುಷಗಳೆಂದು ಗೊತ್ತಾಯಿತು. ಸಾಧಾರಣವಾಗಿ ಇಷ್ಟುವಯಸ್ಸಿನವರಿಗೂ ಸ್ವಚ್ಛವಾದ ಇಂದ್ರಿಯ ಪಟುಗಳನ್ನು ಇಟ್ಟುಕೊಂಡು ಬದುಕಿರುವದು ಹಿಂದೂಗಳಲ್ಲಿ ಅಪರೂಪವೆಂದೇ ಹೇಳಬೇಕಾಗಿದೆ.

ವಿವಿಧ ವರ್ತಮಾನಗಳು.

ಧರ್ಮಾವರಂ ಹಿಂದೂಪುರದ ರೈಲನ್ನು ಮೇ ಮೊದಲನೆ ತಾರೀಖಿನಲ್ಲಿ ಬಿಡತಕ್ಕದೆಂದು ಮುಂದಕ್ಕೆ ಹಾಕಿರುತ್ತಾರೆ

ಈಜಿಪ್ಟ ಸಂಸ್ಥಾನಗಳಲ್ಲಿ ರೈಲ್ ರಸ್ತೆಗಳನ್ನು ಹಾಕುವದಕ್ಕಾಗಿ ೧೭ ಕೋಟಿ ರೂಪಾಯಿಗಳನ್ನು ಖರ್ಚು ಮಾಡುವವರಾಗಿದ್ದಾರೆ

ಕ್ವೀನ್ಸ್‌ಲ್ಯಾಂಡಿನಲ್ಲಿ ಇದುವರೆಗೂ ಪ್ರವಾಹಗಳಿಂದ ಉಂಟಾಗಿರುವ ನಷ್ಟವು ೧೦ ಲಕ್ಷ ಪೌನುಗಳೆಂದು ಗೊತ್ತು ಮಾಡಿರುತ್ತಾರೆ

ಕಳೆದ ಫೆಬ್ರುವರಿ ತಿಂಗಳಿನಲ್ಲಿ ಕೋಲಾರ ಕಾಲೋನಿಯಿಂದ ರಫ್ತಾದ ಚಿನ್ನದ ಬೆಲೆಯು ಈಗಿನ ಧಾರಣೆಯ ಪ್ರಕಾರ ೫೫,೩೭,೪೭೦ ರೂಪಾಯಿಗಳೆಂದು ಗೊತ್ತು ಮಾಡಿರುತ್ತಾರೆ

ಕಳೆದ ಸೋಮವಾರ ಬೆಳಿಗ್ಗೆ ಮದರಾಸ ಪಟ್ಟಣದ ಜನರು ೨೦ ಅಡಿ ಉದ್ದವಿರುವ ಒಂದು ಆಶ್ಚರ್ಯಕರವಾದ ಮೀನನ್ನು ಹಿಡಿದಿರುತ್ತಾರೆ ಇದಕ್ಕೆ ಕತ್ತಿಯ ಮೀನೆಂದು ಹೆಸರಿಟ್ಟಿರುತ್ತಾರೆ

ಕಳೆದ ಡಿಸೆಂಬರಿನಲ್ಲಿ ಜರ್ಮನೀ ದೇಶದ ಸೈನ್ಯದಲ್ಲಿ ಸತ್ತ ೧೭೩ ಮಂದಿಯ ಪೈಕಿ ೨೫ ಮಂದಿ ಸೋಜರುಗಳು ಆತ್ಮಹತ್ಯ ಮಾಡಿಕೊಂಡರೆಂದು ಗೊತ್ತಾಗುತ್ತೆ. ಇದರಿಂದ ಅಲ್ಲಿನ ಸೈನ್ಯದ ಕಾನೂನುಗಳು ಎಷ್ಟು ಉಗ್ರವಾದವುಗಳೋ ಎಂದು ಯೋಚಿಸಬೇಕಾಗಿದೆ

ಮಧುರಾ ಪಟ್ಟಣದಲ್ಲಿ ಏಷೆಂಟ್ಟರಿಸ್ಟ ಎಂಬ ಕ್ರೈಸ್ತದೇವಾಲಯಕ್ಕೆ ಕಳ್ಳರು ನುಗ್ಗಿ ಒಳಗಿದ್ದ ನಗದು ಹಣವನ್ನೂ, ಆಭರಣಗಳನ್ನೂ ಸುಮಾರು ೫,೦೦೦ ರೂಪಾಯಿಗಳವರೆಗೂ ಅಪಹರಿಸಿದರೆಂದು ತಿಳಿಯಲಾದವು. ಸೆಕ್ಯುಲರ ನಾಯಿಗೆ ಲಿಂಗವೇನು ಹಿತವೇನು?

ತಿರುಚನಾಪಳ್ಳಿಗೆ ನೀರನ್ನು ಸರಬರಾಜು ಮಾಡುವದಕ್ಕೆ ಆಗಬೇಕಾದ ಖರ್ಚಿಗೆ ಸೌತ್ ಇಂಡಿಯನ್ ರೈಲ್ವೆ ಕಂಪೆನಿಯವರು ೫೦,೦೦೦ ರೂಪಾಯಿಗಳನ್ನು ಅಲ್ಲಿನ ಮ್ಯುನಿಸಿಪಾಲಿಟಿಗೆ ಕೊಡಬೇಕೆಂದು ಇಂಡಿಯಾ ಸರ್ಕಾರದವರು ಸ್ಯಾಂಕ್ಷನ್ ಮಾಡಿರುತ್ತಾರೆ

ಬೊಂಬಾಯಿ ಮ್ಯುನಿಸಿಪಲ್ ಕಾರ್ಪೊರೇಷನ್ ಸಂಘದವರು ಕೊಲಾಬ ಡಿಸ್ಟ್ರಿಕ್ಟಿನಲ್ಲಿ ಚರಂಡಿಗಳನ್ನು ಹೊಸದಾಗಿ ಸುಧಾರಿಸುವಂತೆ ಕಟ್ಟಿಸಿ ಸಾಲೋಚಿತ ರೀತಿಯಲ್ಲಿಡುವದಕ್ಕಾಗಿ ೩,೪೯,೬೦೯ ರೂಪಾಯಿಗಳನ್ನು ಸ್ಯಾಂಕ್ಷನ್ ಮಾಡಿರುತ್ತಾರೆ. ಬೊಂಬಾಯಿ ಪಟ್ಟಣದಲ್ಲಿ ಕಟ್ಟಡಗಳು ಶಿಥಿಲವಾಗುತ್ತವೆ

ಪೂರ್ವದಲ್ಲಿ ನ್ಯೂ ಮುದ್ರಣದ ಹುಬ್ಬಿ ಕೆಮಿಕಲ್ಸ್ ಇಂಜಿನಿಯರಿಂಗ್ ಮಿ|| ಆಲ್ಟ್‌ಗಸ್ಟೇವರವರು ಅಂತರಿಕ್ಷದಿಂದ ಮಳೆಯನ್ನು ಸುರಿಸುವಂತೆ ಒಂದು ಬಿರುಸನ್ನು ಕಂಡು ಹಿಡಿದಿರುತ್ತಾರೆ. ಈ ಬಿರುಸು ಆಕಾಶದಲ್ಲಿ ೧ ಮೈಲಿಯವರೆಗೂ ಏರಿ ಹೋಗುತ್ತದಂತೆ. ಇದೂ ಒಂದು ಹೊಸ ವರ್ತಮಾನವೇ ಸರಿ!

ಯೂರೋಪಿಯನ್ ತುರ್ಕಿ ದೇಶದ ರಾಜಧಾನಿಯಾದ ಕಾನ್ಸ್ಟಾಂಟಿನೋಪಲ್‌ನಲ್ಲಿ ಒಂದು ಭಾಗವು ಅಗ್ನಿಪ್ರಳಯಕ್ಕೆ ಆಹುತಿಯಾಯಿತು ೩,೦೦೦ ಮನೆಗಳು ಸುಟ್ಟು ಬೂದಿಯಾದವು ೩೦,೦೦೦ ಪ್ರಜೆಗಳು ಮನೆಯಿಲ್ಲದೆ ಅಲೆಯುವ ಹಾಗಾಯಿತು. ನಷ್ಟವು ಸುಮಾರು ೩೦ ಲಕ್ಷ ರೂಪಾಯಿಗಳಿಗಿಂತಲೂ ಹೆಚ್ಚಾಗಿಯೇ ಆಗಿರಬಹುದು

ರೀತಿಯಲ್ಲಿ ಕಟ್ಟಿಸಲ್ಪಡುವದನ್ನೂ, ಶಿಥಿಲವಾದವುಗಳನ್ನು ಕಟ್ಟಿಸುವದಕ್ಕೂ ಮತ್ತು ಹೊಸಕಟ್ಟಡಗಳ ನಕ್ಷೆಗಳನ್ನು ಗೊತ್ತು ಮಾಡಿ ಎಸ್ಟಿಮೇಟ್ ಗೊತ್ತು ಮಾಡುವದಕ್ಕೂ ಇವುಗಳನ್ನೆಲ್ಲಾ ಮೇಲ್ವಿಚಾರಣೆ ನೋಡಿಕೊಳ್ಳುವಂತ ದಫೇದಾರ ನಿಗೆ ೭೦೦ ರೂಪಾಯಿ ತಿಂಗಳ ಸಂಬಳ ಕೊಟ್ಟು ಸರ್ವೇಯರನ್ನು ನೇಮಿಸುವಂತೆ ಗೊತ್ತು ಮಾಡಿರುತ್ತಾರೆ

ಪಾಮರ್ ಚಿಲ್ಲಿಯ ವಿಷಯದಲ್ಲಿ ಅಲ್ಲಿ ಇಳಿದುಕೊಂಡಿರುವ ರಷ್ಯದೇಶದವರನ್ನು ಚೀನಾದವರು ತುಂಬಿಕೊಂಡರೆ ಪರಿಣಾಮ ಏನೆಂಬ ವರ್ತಮಾನವು ರಷ್ಯಾಕ್ಕೆ ಬಂದುದರಿಂದ ಜಾರ್‌ರವರು ಅಲ್ಲಿಂದ ಹೆಚ್ಚು ಸೈನ್ಯವನ್ನು ಪಾಮರಿಗೆ ಕಳುಹಿಸುವವರಲ್ಲಿದ್ದಾರೆ. ಇದರಿಂದ ಆಸ್ಥಳವು ಇಂಗ್ಲೀಷರಿಗೂ, ಚೀನಾದವರಿಗೂ ತಪ್ಪಿಹೋಗುವದೆಂದು ಊಹಿಸಬೇಕಾಗಿದೆ

ಬುಡಾಪೆಸ್ತ ಎಂಬ ಪಟ್ಟಣದಲ್ಲಿ ಕೆಲವು ಮಂದಿ ವರ್ತಮಾನ ಪತ್ರಿಕಾಕರ್ತರು ಟೆಲಿಫೋನ್ ಎಂಬ ತಂತಿಯ ಮೂಲಕ ಚಂದಾದಾರರುಗಳಿಗೆ ವರ್ತಮಾನಗಳನ್ನು ತಿಳಿಸುತ್ತಾರೆ. ಇದಕ್ಕಾಗಿ ಚಂದಾದಾರರು ತಿಂಗಳು ೧ಕ್ಕೆ ಮೂರು ಷಿಲ್ಲಿಂಗ್ ಕೊಡಬೇಕು. ಬೆಳಿಗ್ಗೆ ೮ ಘಂಟೆ ಲಗಾಯಿತು ರಾತ್ರಿ ೯ ಘಂಟೆಯವರೆಗೂ ವರ್ತಮಾನಗಳನ್ನು ತಿಳಿಸುತ್ತಲೇ ಇರುತ್ತದೆ. ಇದೊಂದು ಆಶ್ಚರ್ಯವೇ ಸರಿ!

ಪೋಪವರಂಪ ಸಿಕಂದ್ರಾಬಾದಿನಲ್ಲಿ ಒಬ್ಬ ದಾಸನೊಬ್ಬನು ತನ್ನ ಸಂಸಾರದ ಸಮೇತ ರಾಕ್ಷಸರಾಯ ಮತವನ್ನು ಅವಲಂಬಿಸಿದನು. ಈಗ ಆತನ ಪ್ರೇರಣೆಯಿಂದ ೭೩,೭೪ ವಯಸ್ಸಿನ ಇಬ್ಬರು ಯೂರೋಪಿಯನ್ನರು ಮುಸಲ್ಮಾನರಾದರು. ಈ ಇಬ್ಬರ ಪೈಕಿ ಒಬ್ಬನು ತನ್ನ ಸಂಸಾರವನ್ನು ನಾಗಪುರಿಯಲ್ಲಿ ಬಿಟ್ಟಿರುತ್ತಾನೆಂತಲೂ, ಅವನ ಹೆಂಡತಿ ಮಕ್ಕಳು ಮತ್ತು ನಾದಿನಿ ಇವರೆಲ್ಲರೂ ಮುಸಲ್ಮಾನರಾಗಿ ಆಗುವದರಲ್ಲಿದ್ದಾರೆಂತಲೂ ಅಲ್ಲಿನ ಪತ್ರಿಕೆಯು ತಿಳಿಸುತ್ತದೆ

ಕಪೂರ್ಥಾಲದ ಲೇಟ್ ರಾಜರಾದ ರಣಧೀರಸಿಂಗರವರು ಪೂರ್ವದಲ್ಲಿ ಕ್ರೈಸ್ತ ಮತವನ್ನವಲಂಬಿಸಿದ್ದಾಗ್ಯೆ ರಾಜಧಾನಿಯಲ್ಲಿ ಒಂದು ಭಾರಿ ಕ್ರೈಸ್ತ ದೇವಾಲಯವನ್ನು ಕಟ್ಟಿಸಿದ್ದರು. ಆ ಕಟ್ಟಡವು ಕೆಲವು ಕಾಲದವರೆಗೂ ದೇವಸ್ಥಾನವಾಗಿದ್ದು, ರಾಜರು ಪುನಃ ಹಿಂದೂಮತಕ್ಕೆ ಸೇರಿಕೊಂಡಾಗ ಪಾಳುಬಿದ್ದಿತ್ತು. ಈಗ ಗುಡಿಯ ಗೋಪುರವೊದಲಾದವುಗಳನ್ನು ಕೆಡವಿ ಆ ಕಟ್ಟಡದಲ್ಲಿ ಒಂದು ಸಂಘವನ್ನು ಏರ್ಪಾಡು ಮಾಡಿಕೊಂಡಿದ್ದಾರೆ. ಈ ಸಂಘದ ಕಾರ್ಯಗಳನ್ನು ಅಲ್ಲಿನ ರಾಜರೇ ಮುಖ್ಯಸ್ಥರಾಗಿ ನಿಂತು ನಡೆಸುತ್ತಲಿದ್ದಾರೆ

ಸಂಯುಕ್ತ ಸಂಸ್ಥಾನಗಳಿಗೆ ಸೇರಿದ ನ್ಯೂ ಹ್ಯಾಂಪ್‌ಷೈರ್ ಎಂಬ ಪಟ್ಟಣದಲ್ಲಿ ಜೆ. ಮ್ಯಾಕೀ ಎಂಬ ಕೊಲೆಪಾತಕ ಪ್ರಸಿದ್ಧನಾಗಿದ್ದಾನೆ. ಇವನನ್ನು ಕೊಲ್ಲಬೇಕೆಂದು ಒಬ್ಬ ಜಾಗ್ರತಗಾರನು ಗುಂಡಿನಿಂದ ಅವನ ಬೆನ್ನಿಗೆ ಹೊಡೆದು, ಆ ಕೂಡಲೆ ಆತ್ಮಹತ್ಯ ಮಾಡಿಕೊಂಡನು. ಆದರೆ ಆ ಗುಂಡಿನ ಏಟಿನಿಂದ ಸಾಮಾನ್ಯರಿಗೆ ಉಂಟಾದ ಘಾಯವು ಗುಣವಾಯಿತು. ಇವನಿಗೆ "ಜಪೈಯುಫರ" ಎಂದು ಹೆಸರಿಟ್ಟಿರುತ್ತಾರೆ. ಇವರು ಅಲ್ಲಿ ಒಂದು ಪಾಠಶಾಲೆಗೆ ೫೦ ಲಕ್ಷ ರೂಪಾಯಿಗಳನ್ನು ದಾನವಾಗಿ ಕೊಟ್ಟಿರುತ್ತಾರೆ. ಇಂಥ ಧರ್ಮಿಷ್ಠನನ್ನು ಕೊಲ್ಲಬೇಕೆಂದು ಪ್ರಯತ್ನ ಮಾಡಿದವನು ಎಂಥಾ ಪಾಪಿಯಾಗಿರಬೇಕು

ಪಂಜಾಬ ದೇಶದಲ್ಲಿ ಮಿಡಲ್‌ಸ್ಕೂಲ್ ಪರೀಕ್ಷೆಯಲ್ಲಿ ಅನೇಕ ನೂರು ವಿದ್ಯಾರ್ಥಿಗಳು ಫೇಲ್ ಆದರು. ಇಲ್ಲಿಂದ ಮುಂದಕ್ಕೆ ಅಲ್ಲಿನ ವಿದ್ಯಾಸಂಸ್ಥಾನದವರು ಪರೀಕ್ಷೆಗಳನ್ನು ಮಾಡಕೂಡದೆಂತಲೂ, ವಿದ್ಯಾರ್ಥಿಗಳು ಪರೀಕ್ಷೆಗಳಿಗೆ ಹೋಗುವದಿಲ್ಲವೆಂತಲೂ ಅಲ್ಲಿನ ಬಾಲಕರೆಲ್ಲರೂ ಸೇರಿ ಅರ್ಜಿ ಬರೆದುಕೊಳ್ಳಬೇಕೆಂದು ಅಲ್ಲಿನ ಒಂದಾನೊಂದು ಪತ್ರಿಕೆಯು ವಿದ್ಯಾರ್ಥಿಗಳ ಪಕ್ಷವನ್ನು ವಹಿಸಿ ಮಾಡಿ ಅವರಿಗೆ ಬೋಧಿಸುತ್ತದೆ. ಇದು ಶುದ್ಧ ಅನ್ಯಾಯವಲ್ಲವೆ? ವಿದ್ಯಾರ್ಥಿಗಳಿಗೆ ಹೆಚ್ಚು ಮುತುವರ್ಜಿ ಮಾಡಿ ಪ್ಯಾಸ ಮಾಡಬೇಕೆಂದು ಪ್ರೋತ್ಸಾಹಿಸುವದಕ್ಕೆ ಬದಲಾಗಿ, ಹೀಗೆ ಪ್ರೇರಣೆ ಮಾಡುವದನ್ನು ಎಲ್ಲಿಯೂ ಕೇಳಿ ಇಲ್ಲ

ಕೆಲವು ದಿವಸಗಳ ಕೆಳಗೆ ನ್ಯೂಕ್ಯಾಸಲ್ ಎಂಬ ಪಟ್ಟಣದಲ್ಲಿ ಒಂದು ಆಶ್ಚರ್ಯಕರವಾದ ವಿವಾಹವು ನಡೆಯಿತು. ಮಾರ್ಕ್ವೀಸ್ ಎಂಬವಳು ತನಗೆ ೧೬ ನೇ ವಯಸ್ಸಿನಲ್ಲಿ ೩೦ ವರುಷದ ಪುರುಷನನ್ನು ವರಿಸಿದ್ದಳು. ಆತನು ತೀರಿಹೋದನು. ಆಕೆಯು ಪುನಃ ತನ್ನ ೩೦ ನೇ ವಯಸ್ಸಿನಲ್ಲಿ ೬೦ ವರುಷದವನನ್ನು ವಿವಾಹ ಮಾಡಿಕೊಂಡಿದ್ದಳು. ಅವಳ ಅದೃಷ್ಟವು ಎಂಥಾದ್ದೋ! ಆ ಗಂಡನೂ ಸತ್ತುಹೋದನು. ಈಗ ಅವಳಿಗೆ ೬೦ ನೇ ವರುಷ ನಡೆಯುತ್ತಲಿದೆ. ೧೨೦ ವರುಷದವನನ್ನು ಮದುವೆ ಮಾಡಿಕೊಂಡಿರುತ್ತಾಳೆ. ಮೊದಲಿನಿಂದಲೂ ಅವಳು ತನ್ನ ವಯಸ್ಸಿಗಿಂತಲೂ ದ್ವಿಗುಣವಾದ ವಯಸ್ಸಿನ ಗಂಡನನ್ನೇ ಮಾಡಿಕೊಳ್ಳುತ್ತಾ ಬರುತ್ತಿದ್ದಾಳೆ. ಈ ಮೂರನೇ ಗಂಡನ ಸಂಗಡ ಎಷ್ಟು ದಿವಸಗಳು ಬಾಳುವಳೋ ಎಂದು ಆಶ್ಚರ್ಯಪಡಬೇಕಾಗಿದೆ

ಅಲಹಾಬಾದ ಮಾರ್ನಿಂಗ್ ಪೋಸ್ಟ್ ಎಂಬ ಪತ್ರಿಕೆಯಿಂದ ತಿಳಿಯಬರುವದೇನಂದರೆ, ಅವಿನಾಶದ ವಿಷಯವನ್ನು ಎಮರು ಗೊಳ್ಳುವದಕ್ಕೆ ಇಷ್ಟಪಟ್ಟವರಾಗಿರುತ್ತಾರೆ. ಅವರು ವಿಲಾಯಿತಿಗೆ ಹೋಗಕೂಡದೆಂಬ ಆಕ್ಷೇಪಣೆಯನ್ನು ಬಿಡಿಮಾಡಿಸಲ್ಪಡುವರು ತೆಗೆದುಹಾಕಬೇಕೆಂದು ಕೇಳುತ್ತಾರೆ. ವಿಲಾಯಿತಿ ಮತ್ತು ಇತರ ದೇಶಗಳಿಂದ ಅಪರಾಧಿಸಾನಲ್ಲಿ ಬಂದು ಕಾಗದ ಮತ್ತು ಪಿಷಾವರುಗಳಲ್ಲಿ ಇಂಡಿಯಾ ಗವರ್ನಮೆಂಟಿನವರಂತ ತನಿಖೆಯಿಟ್ಟಿರುವ ಹಿಂದೂಗಳು ಮೊದಲಾದ ಸಾಮಾನುಗಳನ್ನು ಸುಂಕವಿಲ್ಲದೆ ನಮ್ಮಲ್ಲಿಗೆ ಕಳುಹಿಸಿಕೊಡಬೇಕೆಂದು ಕೇಳಿರುತ್ತಾರೆ. ಮ|| ವೈಯಸ್ನಿ ಸಾಹೇಬರವರು ಅವಿನಾಶ ವಿಲಾಯಿತಿಯ ಪ್ರಯಾಣದ ವಿಷಯದಲ್ಲಿ ದೇಶಗಳೀಗೆ ಹೋಗಿ ಅಲ್ಲಿ ಏನ್ನಷ್ಟುಗಳನ್ನು ಮಾಡದೆ ಇಂಡಿಯಾಕ್ಕೆ ಯಾತಕ್ಕಾಗಿ ಬಂದರೋ ಗೊತ್ತಾಗುವುದಿಲ್ಲ ಎಂಬುವದೇ

ಕಾಶ್ಮೀರದಲ್ಲಿ ಇಂಗ್ಲೀಷ್ ಗವರ್ನಮೆಂಟಿನವರಿಂದ ಸ್ಥಾಪಿತವಾಗಿರುವ ಚರ್ಮದ ಕಾರ್ಖಾನೆಯಲ್ಲಿ ಬ್ರಾಹ್ಮಣರಾದ ಪಂಡಿತ ಮಹೇಶ್ವರಕೃಷ್ಣ ಮತ್ತು ಇವರ ಸಹೋದರ ಇವರೀರ್ವರೂ ಕೆಲಸಕ್ಕೆ ಸೇರಿ ವಿಶೇಷ ಪ್ರೀತಿಯಿಂದಲೂ, ಚುರುಕಾದ ಬುದ್ಧಿಯಿಂದಲೂ, ಚಿತವನ್ನಿನಿಂದಲೂ ಕೆಲವು ಕಾಲದೊಳಗಾಗಿ ಚರ್ಮವನ್ನು ಹದ ಮಾಡುವ ಸಕಲ ಕ್ರಮಗಳನ್ನೂ ಚೆನ್ನಾಗಿ ಕಲಿತವರಾಗಿ ಅಲ್ಲಿಂದ ಹೊರಟು ಸ್ವಲ್ಪ ದ್ರವ್ಯ ಸಹಾಯದಿಂದ ಆಗ್ರಾ ಪಟ್ಟಣದಲ್ಲಿ ಸ್ವಂತವಾಗಿ ಒಂದು ಚರ್ಮದ ಕಾರ್ಖಾನೆಯನ್ನು ಸ್ಥಾಪಿಸಿ ಅದನ್ನು ತಮ ಮಾತು ವಕ್ರವಾದಲ್ಲೇ ಕೆಲಸ ಮಾಡಿಸುತ್ತಲಿದ್ದಾರೆ. ಈ ಕಾರ್ಖಾನೆಯಲ್ಲಿ ಇನ್ನೂ ಕೆಲವು ಮಂದಿ ನೌಕರರು ಬ್ರಾಹ್ಮಣರೇ ಸೇರಿರುತ್ತಾರೆ. ಮಾತಕಲೇ, ಉತ್ತಮ ವರ್ಣದವರೂ ಅವರವರ ಜಾತಿಕಟ್ಟುಗಳೆ ಎಂದಿರುವಷ್ಟು ಕಟ್ಟುಗಳಿಗೆ ಸ್ವಲ್ಪವೂ ಕಿವಿಗೊಡದೆ ಉದ್ಯೋಗಗಳನ್ನು ತಮಾವಲಂಬಿಸುತ್ತಿರುವದು ಧನವಂತರಾದ ಜೀವನವನ್ನಲ್ಲವೆ? ಜಾತಿ ಎಂಬ ಕಟ್ಟು ಎಷ್ಟಿನವರಾಗಲೂ ಬಲವಾಗಿರುವದರಿಂದೋ ಅಲ್ಲಿನವರಿಗೂ ಈ ಜನಗಳು ಅಭಿವೃದ್ಧಿಗೆ ಬರಲಾರರೆಂಬುದು [illegible] ಗೊತ್ತಾಗುತ್ತಿಲ್ಲವೆ?

ಕೃತುಕೋಟೆ ಸಂಸ್ಥಾನವನ್ನು ಮಹಾರಾಜರವರೇ ಆಳಲು ಇನ್ನೂ ಅವರಿಗೆ ವಯಸ್ಸು ಬಂದಿಲ್ಲವಾದ್ದರಿಂದ ಏಜೆಂಟ್ ರವರು ಅವರ ಹೆಸರಿನಲ್ಲಿ ಆಳುತ್ತಿರುವರು ಸಕಲರಿಗೂ ತಿಳಿದೇ ಇದೆಯಷ್ಟೆ. ಮಹಾರಾಜರವರಿಗೆ ೧೮ ವರುಷಗಳು ತುಂಬಿದನಂತರ ಅಂದರೆ ಬರುವ ೧೮೯೪ ನೇ ಇಸವಿ ನವಂಬರು ತಿಂಗಳಿನಲ್ಲಿ ಪಟ್ಟಾಭಿಷೇಕ ಮಹೋತ್ಸವವನ್ನು ಮಾಡಿಸತಕ್ಕದ್ದೆಂದಾಗಿ ಗವರ್ನಮೆಂಟಿನವರು ತೀರ್ಮಾನಿಸಿರುತ್ತಾರೆ. ಮಹಾರಾಜರವರು ಉಪಾಧ್ಯಾಯರಾದ ಮಿ॥ ಕ್ಯಾಸ್ಸ ಸಾಹೇಬರವರ ಜೊತೆಯಲ್ಲಿ ಕೂಡೇಕನಾಲನ್ನು ಬಿಟ್ಟು ತಿರುಚನಾಪಲ್ಲಿಗೂ ಅಲ್ಲಿಂದ ಉತ್ತರ ಇಂಡಿಯಾಕ್ಕೂ ದಯಮಾಡಿ ಅಲ್ಲಿ ಪ್ರಸಿದ್ಧ ಪಟ್ಟಣಗಳನ್ನು ನೋಡಿಕೊಂಡು, ಅಲ್ಲಿಂದ ವಿಲಾಯತಿಗೆ ದಯಮಾಡುವರೆಂದು ತಿಳಿಯಬರುತ್ತದೆ.

ಫ್ರಾನ್ಸ್ ದೇಶದ ಪಾರ್ಲಿಮೆಂಟಿ ಸಭಾಸದ ಮೆಂಬರುಗಳು ಹಣಾಪಹರಿಸಲ್ಪಟ್ಟ ಆಪಾದನೆಯಲ್ಲಿಯೂ ಅವರ ಅಧಿಕಾರವು ಪೂರೈಸಿದನಂತರ ಕೂಡಲಿನಲ್ಲಿಯೂ ಅವರವರ ಅಸ್ತಿಯು ಪಟ್ಟವನ್ನು ಸರ್ಕಾರದವರಿಗೆ ಬರಹಮೂಲಕವಾಗಿ ನಿವೇದನಗಳೊಡನೆ ತಿಳಿಯಪಡಿಸಬೇಕೆಂಬದಾಗಿ ಎಂ ಬೋಸ್ಟ್ರಿಯರ್ ಎಂಬ ಅಧಿಕಾರಿಗಳು ಗೊತ್ತು ಮಾಡಿರುತ್ತಾರೆ. ಇದರಿಂದ ಅಧಿಕಾರಿಗಳು ತಮ್ಮ ಅಧಿಕಾರ ಕಾಲದಲ್ಲಿ ಲಂಚ ಕಾಣಿಕೆ ಮುಂತಾದ್ದನ್ನು ತೆಗೆದುಕೊಳ್ಳಲು ಅನುಕೂಲವಾಗಿರುತ್ತಿಲ್ಲವೇ? ನಮ್ಮ ಸಂಸ್ಥಾನದಲ್ಲಿಯೂ ಅಮಲ್ದಾರಿ ಮುಂತಾದ ಉದ್ಯೋಗಸ್ಥರು ತಮಗೆ ಅಧಿಕಾರ ಬಂದಾಗಲೂ, ಮತ್ತು ಅಧಿಕಾರವು ತಪ್ಪಿಹೋದಾಗಲೂ ಈ ವಿಷಯ ಕಾಲಗಳಲ್ಲಿಯೂ ಅವರಿಗಿರುವ ಆಸ್ತಿಯ ಬಂದು ವಿವರಣೆಯನ್ನು ಸರ್ಕಾರಕ್ಕೆ ತಿಳಿಸಬೇಕೆಂಬದಾಗಿ ಒಂದು ಆಜ್ಞೆಯು ಹೊರಡಿಸಲ್ಪಟ್ಟರೆ ಆದರವರು ತಮ್ಮ ಅಧಿಕಾರ ಕಾಲದಲ್ಲಿ ಎಷ್ಟೆಷ್ಟು ಸಂಪಾದನೆಯನ್ನು ಮಾಡಿರುತ್ತಾರೋ ಮತ್ತು ಯಾವ ರೀತಿಯಲ್ಲಿ ಮಾಡಿರುತ್ತಾರೂ ಸರ್ಕಾರಕ್ಕೆ ತಿಳಿಯದೆ ಹೋಗಲಾರದು.

ಐಷ್ಟೀಯೇರದ ಪ್ರಿನ್ಸ್ ಕಾರ್ಸೈಲ್ ಬಾಲಿಯಾಸ್ಸ ಎಂಬ ದೊಡ್ಡ ಮನುಷ್ಯರು ಟಿಕ್ ಟರ್ಕಿಗಳಲ್ಲಿ ಸಂಚಾರ ಮಾಡಿಕೊಂಡು ಈಗ ಕಲ್ಕತ್ತಾ ಪಟ್ಟಣವನ್ನು ತಲುಪಿರುತ್ತಾರೆ. ಇವರು ತಾವು ಪಿತ್ರಾರ್ಜಿತದ ಮೂಲಕ ಅಧಿಸಿದ್ಧಿಸಿರುವ ಸಂಸ್ಥಾನ ಅಲ್ಲಿಂದ ಮುಂದಕ್ಕೂ ತೊಂದರೆ ಇಲ್ಲದೆ ಹೋಗುವದಕ್ಕೆ ತಮಗೆ ಒಂದು ಪಾಸ್ ಚೀಟಿಯನ್ನು ಕೊಡಬೇಕೆಂದು ಪೊಲೀಸ್ ಅಧಿಕಾರಿಗಳನ್ನು ಕೇಳಿದ್ದಕ್ಕೆ ಅಲ್ಲಿನ ಅಧಿಕಾರಿಗಳು ಆ ದೇಶಗಳಲ್ಲಿ ಪ್ರಯಾಣಕ್ಕೆ ತಾವು ಅನುಮತಿಸುವದರಿಂದ ಹಾಗೆ ಹೋಗುವದಕ್ಕೆ ಪಾಸ್ ಕೊಡುವದಕ್ಕೆ ಗುಮಾನಿಸುವರು ಹೇಳಿದ್ದರು. ಅದಕ್ಕೆ ಪ್ರಿನ್ಸರವರು ನನಗೆ ತಮ್ಮ ಮಾವರ ಆಣೆ ನನ್ನ ಪ್ರಯಾಣಕ್ಕೆ ಅಡಮಾನ್ಯ ... ಆ ವಿಷಯದಲ್ಲಿ ನಾನೇ ಜವಾಬ್ದಾರನಾಗಿರುತ್ತೇನೆ. ಪ್ಯಾಸ್ ಕೊಡಿ ಎಂದು ಕೇಳಿದಾಗ ಅವರು ಸ್ಯಾಗನ ... ಕೊಡುವದಿಲ್ಲವೆಂದು ಹೇಳಿಬಿಟ್ಟದ್ದರಿಂದ ಈ ಪ್ರಯಾಣಸ್ಥರು ಕಾಷ್ಮೀರದೇಶದ ದೇಹಲಿ ಹೋಗಬೇಕೆಂದು ಗೊತ್ತು ಮಾಡಿಕೊಂಡಿದ್ದಾರೆ. ಇವರಿಂದ ಪ್ರಿನ್ಸ್ ರವರಿಗೆ ಫ್ರಾನ್ಸ್ ಅಧಿಕಾರದ ಸ್ಥಿತಿಯು ಗೊತ್ತಾಗಿರಬಹುದು.

ಶೂರಸೇನನನ್ನು ಗೆದ್ದ ಪ್ರೇಮದಾಯಿನ
ರಾಯನ ಚರಿತ್ರೆಯ ಸಂಗ್ರಹ.

೧ ಅಮರಾವತಿ ಎಂಬ ಪಟ್ಟಣದಲ್ಲಿ ಸತ್ಯವೃತ್ತ ರಾಯನೆಂಬ ಏಕಚಕ್ರಾಧಿಪತಿಯು ಬಹು ಸ್ಥಿತಿಯಿಂದ ತನ್ನ ರಾಜ್ಯವನ್ನಾಳುತ್ತಿದ್ದನು. ಆತನ ಸೇನಾ ನಾಯಕರಲ್ಲಿ ಪ್ರಮುಖನಾದ ಶೂರಸೇನನೆಂಬವನು ಅರಸನಿಗೆ ಎದುರು ಬಿದ್ದು, ಆತನಿಗೆ ಸಲ್ಲತಕ್ಕದ್ದ ಕಪ್ಪವು ತೆರಿಗೆ ಮೊದಲಾದ್ದವುಗಳನ್ನು ತಾನೇ ಅಪಹರಿಸಿಕೊಳ್ಳ ಬೇಕೆಂಬ ದ್ರೋಹ ಚಿಂತನೆಯುಳ್ಳವನಾಗಲು ಅರಸನಿವನ್ನು ತಿಳಿದು ಕೋಪಾವಿಷ್ಟನಾಗಿ ವಿಷಯಿಂದ ಹಡಮಾಡಲ್ಪಡುತ್ತಿದ್ದ ಶಕ್ತಿಯಿಂದ (ವಿಷಯಿಂದ ಮಾಡಲ್ಪಟ್ಟ ಶಕ್ತಿಯ ಛಾಯೆಯಿಂದ) ಯಾವ ವಿಷಯದಿಂದಲೂ ಗುಣವಾಗದಷ್ಟು ಅವನನ್ನು ತಿವಿದು ತನ್ನ ದೇಶದ ಗಡಿಯಾಚೆ ನಾಡಿ ಪಟ್ಟಣದ ಕಡೆಗೆ ಹೊರಡಿಸಿದನು. ಶೂರಸೇನನು ಆ ಗಾಯದ ನೋವಿಂದ ಕಡೆಗೆ ಅವನನ್ನು ಸೆರೆಯಿಂದ ಬಿಟ್ಟನು. ಆ ಸೇನಾನಾಯಕನು ತನ್ನ ಗಾಯದಲ್ಲಿ ವೇದನೆಯುಳ್ಳವನಾಗಿ ತನ್ನ ಜೀವನೋಪಾಯವನ್ನು ಸಂಪಾದಿಸಿಕೊಳ್ಳುವ ಯೋಚನೆ ಕೆಲವು ಉಪಾಯಗಳನ್ನು ಕಲ್ಪಿಸಿದನು.

೨ ಅವುಗಳಲ್ಲಿ ಮೊದಲನೆಯ ಪ್ರಯತ್ನವೇನೆಂದರೆ, ಅವನು ಸತ್ಯವೃತ್ತ ರಾಯನ ಪ್ರಜೆಗಳ ಬಳಿಗೆ ಹೋಗಿ ನಿಮ್ಮ ರಾಜನು ನಿಮ್ಮನ್ನು ಸುಖವಾಗಿ ಆಳುವದಿಲ್ಲ, ನಿಮ್ಮ ಸ್ವಾತಂತ್ರ್ಯವನ್ನು ಕೆಡಿಸಿ ನಿಮ್ಮನ್ನು ಬಾಧಿಸುತ್ತಾನೆ; ನಾನು ನಿಮಗೆ ಆ ರಾಜನನ್ನು ಗೆದ್ದು ಸ್ವಾತಂತ್ರ್ಯವನ್ನು ಕೊಡುವೆನೆಂದು ಹೇಳಿ ಅವರ ಬಳಿಯಲ್ಲಿ ಬಹಳ ಹಣ ಶೇಖರಿಸಿಕೊಳ್ಳುತ್ತಿದ್ದನು. ಆದರೂ ಆ ಪ್ರಜೆಗಳು ಕಷ್ಟ ಪಡುತ್ತಿದ್ದವರಾಗಿರುವದರಿಂದ ಕೆಲವರ ಕಣ್ಣು ತುಂಬಿದುವು. ಕೆಲವರ ಕಾಲುಗಳು ಸಡಿಲವಾದವು. ಕೆಲವರಿಗೆ ಶಿಕ್ಷೆಯಾಯಿತು. ಕೆಲವರಿಗೆ ಕೈಗಳು ಬಿದ್ದು ಹೋದವು. ಎರಡನೇದು ಗಿರಿಯಲ್ಲಿ ಸಾಧನವಾಗಿ ವ್ಯಾಪಾರ—ಗಿರಿಯು ಸೇವನ ಮಾಡುವವರೆಲ್ಲ ಜನರಿಗೆ ತೋರಿಸಿ ಅದು ಚಿಲ್ಲರೆಯಿಂದಿದೆ ಭಂಗ ತರಲೆಂದು ವೇಷ ಮಾಡಿದನು. ಮೂರನೆಯದು—ನಾಟಕಶಾಲೆ ಹೊಂದಿಸಿ ಅದರಿಂದ ಜನರ ಮನಸ್ಸುಗಳನ್ನು ಆಕರ್ಷಿಸಿ ಬಹಳ ಹಣವನ್ನು ಅವರಿಂದ ಪಡೆದುಕೊಳ್ಳುತ್ತಿದ್ದನು.

೩ ತನ್ನ ಕೆಲಸವನ್ನು ಜರುಗಿಸಿಕೊಂಡು ಬರುವದಕ್ಕೆ ಬೇಕಾದಷ್ಟು ಹಣವನ್ನು ಸಂಪಾದಿಸಿಕೊಂಡ ಬಳಿಕ ಶೂರಸೇನನು ಬಂದು ಪ್ರಜೆಗಳು ಇರುವ ಸ್ಥಳಗಳಲ್ಲಿ ಸುತ್ತಾಡಿ, ಆತನ ಮಂತ್ರಿಯಾದ ಸುಂದರನೆಂಬುವನು ತನ್ನ ಪಕ್ಷ ವಹಿಸಿ ಅರಮನೆಯಲ್ಲಿದ್ದವರು ಆ ಸತ್ಯವೃತ್ತ ರಾಯನ ಸೈನ್ಯದಲ್ಲಿ ಕೆಲವರು ಅವನ ಕಡೆಯಿಂದ ತನಗೆ ಬರುವಂತೆ ಭಗ್ನವನ್ನು ಮಾಡುವೆನೆಂದೂ ಆ ಸೇನಾನಾಯಕನ ಮನೆಯಲ್ಲಿರುವ ಪ್ರಜೆಗಳನ್ನು ಆರಿಸಿಕೊಂಡು ಬರಬೇಕೆಂದೂ ಯೋಚಿಸಿ ಅದೇ ರಾತ್ರಿಯಲ್ಲಿ ಸೇನಾ ನಾಯಕನ ಮನೆಗೆ ಬಳಿ ಹೋದನು. ಆತನ ಹೆಂಡತಿಯಾದ ಸುಂದರಾಂಗಿಯು ಬಂದವನಿಗೆ—ನೀವು ಆ ಸ್ನಾನ ಮಾಡಲು ನನ್ನ ಮಕ್ಕಳನ್ನು ವಿಚಾರಿಸದೇ ಬಂದರೆ ನನ್ನ ದುರವಸ್ಥೆಯನ್ನು ನಿಮಗೆ ಹೇಳುತ್ತೇನೆ ಎಂದು ಹೇಳಿದನು. ಅವನು "ನಿನ್ನ ಪತಿಯು ಎಲ್ಲಿ" ಎಂದು ಕೇಳಿದ್ದಕ್ಕೆ ಅವಳು "ನನ್ನ ಪತಿಯು ಈಗ ಸತ್ಯ ಶೋಧನೆ ಮಾಡುವದಕ್ಕೆ ಹೋಗಿದ್ದಾರೆ" ಎಂದು ಹೇಳಿದಳು. ... ಸೇನಾ ನಾಯಕನು ... ತನ್ನ ಮನೆಗೆ ಬಂದು ... ಶೂರಸೇನನು ಬಂದು ಹೋದನೆಂದು ಕೇಳಿ ಬಹು ದುಃಖಪಟ್ಟನು. ... ಆ ಸೇನಾ ನಾಯಕನು ತನ್ನ ಮನೆಯಲ್ಲಿ ... ಶೂರಸೇನನ ಚಿತ್ತವನ್ನು ಅರಿತು ಆ ಪಟ್ಟಣದ ರಾಜನ ಬಳಿಗೆ ಹೋಗಿ ... ಕೆಲವರು ಜನಗಳನ್ನು ಕೂಡಿಸಿಕೊಂಡು ... ಬಹು ಕಷ್ಟದಿಂದ ರಕ್ಷಿಸಿದನು.

ಸ್ನೇಹಿತನ ಬಂದು ಶೂರಸೇನನನ್ನೂ ಆವನ ಕಡೆಯವರನ್ನೂ ಸೆರೆ ಹಿಡಿದು ... ನಾನು ಬರುವ ಪ್ರಯತ್ನದಲ್ಲಿ ಯಾತು ಸುಗುಣನಿಸ್ತರಾಗಿ ನಮ್ಮ ಪಕ್ಷದವರಾಗುತ್ತಾರೋ ಅವರೆಲ್ಲರೂ ರಕ್ಷಿಸಲ್ಪಡುವರು. ಉಳಿದವರೆಲ್ಲ ಶಿಕ್ಷೆಗೆ ಗುರಿಯಾಗುವರು. ಇಗೋ ಇದೇ ನಾನಗದಲ್ಲಿ ಹೋಗುತ್ತೇನೆ. ನೀವು ಬರಬೇಕಾದರೂ ಇದೇ ನಿಮಗೆ ಮಾರ್ಗವು ಎಂದು ಹೇಳಿ ಹೋದನು.

ತಾತ್ಪರ್ಯ.

೧ ಪಿಶಾಚನು—ಸತ್ಯವೃತ್ತ ರಾಯನೆಂಬವನೇ ದೇವರು. ಆತನ ಬಂದು ಸೈನ್ಯಗಳ ಮುಖ್ಯಸ್ಥನು ಗಂಧರ್ವ ಪುರುಷನೆಂದು ಹೇಳಬಹುದು. ಈ ದೇವದೂತನು ಅಹಂಕಾರಪಟ್ಟದ್ದರಿಂದ, ಆವನನ್ನು ಪರಲೋಕದಿಂದ ಹೊರಡಿಸಿ ನರಕವೆಂಬ ಮಹಾ ಅಗ್ನಿಕುಂಡದಲ್ಲಿ ಕೆಡವಿದನು. ಈ ಕಟ್ಟುಹೋದ ದೂತನೇ ಕಲಿಪುರುಷನೆಂಬ ಪಿಶಾಚನು. ಅವನು ದೇವರ ಕೋಪವೆಂಬ ಶಕ್ತಿಯಿಂದ ತಿವಿಯಲ್ಪಟ್ಟು ಅವರಿಂದಾಗುವ ಬಾಧೆ ಏನೆಂಬ ಭಾಗದಲ್ಲಿ ಕಷ್ಟಪಡುತ್ತಾ ಇರುತ್ತಾನಲ್ಲದೆ ನರಮನುಷ್ಯರಿಗೆ ಕೇಡುಂಟುಮಾಡುತ್ತಿದ್ದಾನೆ.

೨ ಐದನೇ—ಕಲಿ ಪುರುಷನ ಪ್ರಯತ್ನ ವಿಷಯವು ... ಅವನ ಕೆಲಸಗಳಲ್ಲಿ ೧ ನೇದು—ವೈದ್ಯ ವಿದ್ಯೆ ... ರೋಗಗಳಲ್ಲಿ ... ಬೇರೆ ಮದ್ದಿಲ್ಲವೆಂದು ... ಬದುಕುತ್ತಾನೆ ... ಮರಣಕ್ಕೆ ... ಈ ಮರಣದ ... ಆದರೆ ... ನಮ್ಮ ಶರೀರ ... ದಿಕ್ಕಿಲ್ಲದ ... ೨ ನೇದು—ಗಿರಿಯು ... ನಾನಾ ರೂಪಗಳನ್ನು ... ೩ ನೇದು ನಾಟಕ ಶಾಲೆ ... ಕೆಟ್ಟ ... ಪುರುಷರ ... ವೇಷಧಾರಿಗಳ ... ನಡೆಯುತ್ತಿದೆ.

೪ ಲೋಕ—ಸುಂದರಾಂಗಿ ಎಂಬವಳೇ ಈ ಪ್ರಪಂಚವು ... ಕಲಿಪುರುಷನು ... ತನ್ನ ಸೇವಕರನ್ನು ... ಕ್ರಿಸ್ತನ ... ರಕ್ಷಣೆ ... ಪ್ರಪಂಚಕ್ಕೆ ... ಕಲಿಪುರುಷನು ... ಪಾಪ ... ಧರ್ಮ ... ಕ್ರಿಸ್ತನ ... ಪವಿತ್ರ ಶಾಸ್ತ್ರ ... ದೇವರ ... ರಕ್ಷಕನಾದ ... ಕೈಗೊಂಡು ... ಮರಣವನ್ನು ಗೆದ್ದು, ಮೂರನೇ ದಿವಸದಲ್ಲಿ ಜೀವಸಹಿತ ಎದ್ದು ಸಮಸ್ತರಿಗೂ ಸರ್ವೋತ್ತಮ ಆತನ ಸ್ನಾನದಿಂದ ... ಅವರಿಗೆ ...

ಹೇಳಿ ಸ್ಥಿರಪಡಿಸಿ, 'ನೀವು ಸುಜ್ಞಾನವೆಂಬ ಆತ್ಮರಕ್ಷಣೆಯನ್ನು ಸಕಲರಿಗೂ ಬೋಧಿಸುತ್ತಿರಬೇಕು. ಈ ಬೋಧನೆಯನ್ನು ಸ್ವೀಕರಿಸುವವರ ಅಜ್ಞಾನವೆಂಬ ಮುತ್ತಿಗೆಯು ಉಚಿತಾರ್ಥವಾದ ರಕ್ಷಣೆಯನ್ನು ಹೊಂದುವರು. ಇಗೋ ಪರಲೋಕಕ್ಕೆ ಹೋಗುತ್ತೇನೆ. ಆದರೂ ದೈವಿಕ ಮತ್ತು ಆತ್ಮಿಕ ಸಂಬಂಧವಾಗಿ ಯಾವಾಗಲೂ ನಿಮ್ಮಸಂಗಡ ಇರುತ್ತೇನೆ. ನಾನು ಎರಡನೇಸರ್ತಿ ಮಹಾಸೈನ್ಯದೊಡನೆ ಬಹಳ ಆರ್ಭಟದಿಂದ ಬಂದು, ನ್ಯಾಯ ತೀರಿಸಿ ಕಲಿಪುರುಷನಾದ ಪಿಶಾಚನಿಗೂ ಅವನನ್ನು ಸೇರಿದವರಿಗೂ ನರಕದ ನಿತ್ಯ ಶಿಕ್ಷೆಯನ್ನು ವಿಧಿಸಿ ನಿಮ್ಮನ್ನು ನಿತ್ಯ ಸುಖವಿರುವ ಮೋಕ್ಷ ರಾಜ್ಯಕ್ಕೆ ಕರೆದುಕೊಂಡು ಹೋಗುತ್ತೇನೆ ನಾನು ಬರುವದಕ್ಕೆ ಮೊದಲಾಗಿ ನನ್ನನ್ನು ಸೇರುವವರು ಮಾತ್ರವೇ ರಕ್ಷಿಸಲ್ಪಡುವರು. ನಾನು ನಡೆದಂತೆ ನೀವೂ ನಡೆಯಿರಿ' ಎಂದು ಹೇಳಿ ಹೋಗಿದ್ದಾನೆ. ನನ್ನ ಪ್ರಿಯರೇ ಆತನು ದೈವತ್ವದ ಮತ್ತು ಮನುಷ್ಯತ್ವದ ಮಹಾ ಇಳಿವಿಯಿಂದಲೇ ಬರುವದು ಮಾತ್ರವಲ್ಲ ನಮ್ಮ ಮರಣದ ಮುಖಾಂತ್ರವಾಗಿಯೂ ನಮ್ಮೊಳಗೆ ಬರುತ್ತಾನೆಂಬುವದನ್ನು ಯೋಚಿಸಿ ಮರಣವು ನಮಗೆ ಬರುವದಕ್ಕೆ ಮುಂಚೆಯೇ ಕ್ರಿಸ್ತಸ್ವಾಮಿಯವರ ಸದ್ವಾಕ್ಯದಿಂದಾಗಿ ರಕ್ಷಣೆಯನ್ನು ಹೊಂದಿಕೊಳ್ಳೋಣ!

ಶಾಲೀವಾಹನಶಕ ೧೮೧೫ ನೇ ವಿಜಯನಾಮ ಸಂವತ್ಸರದ ಚೈತ್ರ ಶುದ್ಧ ತ್ರಯೋದಶಿ ಗುರುವಾರದಿಂದ ಚೈತ್ರ ಬಹುಳ ತೃತೀ ಬುಧವಾರದ ವರೆಗಿನ ವಾರದ ಪಂಚಾಂಗ

೧೮೯೩ ನೇ ಇಸವಿ, ಮಾರ್ಚಿ.

ತಾ.	ವಾರ.	ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ.	ಪಿಜಾನ ಮಾಸ ತೇದಿ
30	ಗು *	ತ್ರ	11-25	ಮ	25-26	19
31	ಶು.	ಚ	11-51	ಉ.	27-45	20
ಏಪ್ರಿಲ್ 1	ಶ †	ಪಾ	13-30	ಹ.	31-16	21
2	ರ	ಪ್ರ	16-17	ಚಿ.	35-45	22
3	ಸೋ.	ದ್ವಿ	20-13	ಸ್ವಾ	41-21	23
4	ಮಂ.	ತ.	24-55	ವಿ.	47-38	24
5	ಬು.	ಚ.	30-6	ಅ.	54-17	25

* ನರಸಿಂಹಪುರದಲ್ಲಿ ಪ್ರಹ್ಲಾದ ಉತ್ಸವ.

† ಚಿತ್ರಾಪೂರ್ಣಿಮಾ

ಪೇಟೆ ಧಾರಣೆ.

ದಿನಸು	ಮೈಸೂರು.	ಬೆಂಗಳೂರು.
	ರೂ. ಆ. ಪೈ.	ರೂ. ಆ. ಪೈ.
ಕಡ್ಡೀ ಅಕ್ಕಿ ಪಲ್ಲ ೧ಕ್ಕೆ ..	೧೧-೦-೦	೧೧-೪-೦
ಕೆಂಬೂತಿ ಅಕ್ಕಿ ಅವ್ವಲ್ ..	೧೦-೧೨-೦	೧೧-೪-೦
ಔಟೋ ಅಕ್ಕಿ ದುಯಂ	೧೧-೦-೦	೧೧-೦-೦
ಜಾಪಣಿ ಅಕ್ಕಿ ..	೧೦-೨-೦	೧೦-೪-೦
ಸಣ್ಣಕ್ಕಿ ಅವ್ವಲ್ ..	೧೩-೦-೦	೧೨-೦-೦
ಔಟೋ ಅಕ್ಕಿ ದುಯಂ	೧೨-೪-೦	೧೨-೦-೦
ಹೊಗರೀಬೇಳೆ ಪಲ್ಲ ೧ಕ್ಕೆ	೧೨-೦-೦	೧೨-೮-೦
ಔಟೋ ದುಯಂ ತರಹ	೧೧-೪-೦	೧೧-೪-೦
ಹೈರಾಗಿ ಪಲ್ಲ ೧ಕ್ಕೆ	೮-೦-೦	ಗಾ॥ ೩-೦-೦
ಕಾರ್ಬ್ಯಾಗಿ ..	೭-೧೨-೦	[illegible]
ಹುರುಳಿ ಪಲ್ಲ ೧ಕ್ಕೆ ..	೧೦-೪-೦	೧೦-೦-೦
ಬಿಳೀ ಅವರೆ ..	೪-೧೨-೦	೧೦-೪-೦
ಹೆಸರು ..	೧೧-೨-೦	೧೦-೮-೦
ಉದ್ದು ..	೧೨-೦-೦	೧೦-೬-೦
ಕಡಲೆ ..	೧೦-೦-೦	೧೦-೪-೦
ಎಳ್ಳು ..	೧೬-೧೮-೦	೧೨-೧೨-೦
ಹುರಳಿ ..	೬-೦-೦	೬-೦-೦
ನೆಲಗಡಲೆ ಮಣ ೧ಕ್ಕೆ ..	೧-೪-೦	೨-೦-೦
ಮೆಣಸಿನಕಾಯಿ ..	೩-೦-೦	೨-೮-೦
ದುಯಂ ತರಹ ..	೨-೧೨-೦	೨-೦-೦
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ	೮-೧೨-೦	ಬು ೧-೧೧-೦
ಸಣ್ಣ ಅಚ್ಚು " ..	೮-೮-೦	೩॥ ೧-೭-೦
ಒಳ್ಳೆಣ್ಣೆ ಮಣ ೧ಕ್ಕೆ ..	೫-೦-೦	೮-೪-೦
ಹರಳೆಣ್ಣೆ ..	೪-೬-೦	೩-೧೨-೦
ಕೊತ್ತುಂಬರಿ ಪಲ್ಲ ೧ಕ್ಕೆ	೪-೪-೦	೯-೦-೦
ಉಪ್ಪು ..	೯-೩-೦	೧೦-೦-೦
ಹುಣಸೇಹಣ್ಣು ಮಣ ೧ಕ್ಕೆ	೧-೪-೦	೧-೫-೦
ಹಳೇ ಹುಣಸೇಹಣ್ಣು ..	೧-೬-೦	೧-೨-೦
ತುಪ್ಪ ..	೧೭-೦-೦	೧೩-೦-೦
ಸೀಮೆ ಯಾಂಗೆ ಚಟ್ಟಿ ೧ಕ್ಕೆ	೮-೨-೩	೮-೩-೦
ತೆಂಗಿನಕಾಯಿ ೧೦೦ಕ್ಕೆ ..	೬-೦-೦	೫-೧೨-೦
ಚಿನ್ನ (ವರಹ)		
ಕೆಂಪು ..	೧೬-೭-೦	೧೬-೧೩-೦
ಪಸಿಮೆ ..	೧೬-೧೨-೦	೧೬-೩-೦
ಗಟ್ಟಿ ..	೨೭-೦-೦	೨೬-೪-೦

Mysore.—Printed and published for the Proprietor at the Wesleyan Mission Press.
30/3/93.

ವೃತ್ತಾಂತ ಪತ್ರಿಕೆ.

ಕಳೆದ ಗುರುವಾರ ಹಾ ಪೋಲೀಸ ಕೋರ್ಟಿನಲ್ಲಿ ಒಂದು ಆಶ್ಚರ್ಯಕರವಾದ ಸಂಗತಿ ನಡೆಯಿತು. ಇಬ್ಬರು ಮುಸಲಮಾನರು ಒಬ್ಬ ಹೆಂಗಸನ್ನು ಪ್ರತಿ ಒಬ್ಬನೂ ತನ್ನ ಹೆಂಡತಿಯೆಂದು ಜಗಳಮಾಡುವದಕ್ಕೆ ಪ್ರಾರಂಭವಾದಾಗ ಅವಳನ್ನು ಸ್ವಾಧೀನಪಡಿಸಿಕೊಳ್ಳುವದಕ್ಕಾಗಿ ಎರಡು ಕಡೆಗೂ ಅನೇಕರು ದೂರುಗಳನ್ನು ಹಿಡಿದು ಹೋರಾಡುವದಕ್ಕೆ ಸಿದ್ಧರಾದರು. ಆಗ ಪೋಲೀಸ ಕೋರ್ಟಿನಲ್ಲಿ ಆ ಹೆಂಗಸನ್ನು ಕರೆದು ಇಬ್ಬರಲ್ಲಿ ನೀನು ಯಾರಸಂಗಡ ಹೋಗುವದಕ್ಕೆ ಇಷ್ಟಪಡುತ್ತೀ ಎಂದು ಕೇಳಿದಾಗ, ಅವಳು ಒಬ್ಬನನ್ನು ಹೆಸರು ಹೇಳಿದರು. ಆದರೆ ತೆಯ್ಯೇ ಪೋಲೀಸಿನವರು ಈ ನೂತನ ಗಂಡನೊಡನೆ ತನ್ನ ತಮ್ಮ ಉಸ್ತುವಾರಿಯಿಂದ ಅವರ ಮನೆಗೆ ಕಳುಹಿಸಿ ಕೊಟ್ಟನು. ಮತ್ತೊಂದು ಗುಂಪಿನವರು ಈ ವಿಷಯದಲ್ಲಿ ಜಗಳ ಮಾಡಿ ಜನಗಳ ನೆಮ್ಮದಿಗೆ ಹಾನಿಯನ್ನುಂಟುಮಾಡ್ಯಾರೆಂದು ಅವರಿಗೆ ಎಚ್ಚರಿಸಿದರು. ಹೀಗೆ ಗಂಡನನ್ನು ಗೊತ್ತು ಮಾಡುವ ಪದ್ಧತಿಯನ್ನು ಎಲ್ಲಿಯೂ ಕೇಳಿರಲಿಲ್ಲ!

ಶಾಲೀವಾಹನಶಕ ೧೮೧೫ ನೇ ವಿಜಯನಾಮ ಸಂವತ್ಸರದ ವೈಶಾಖ ಶುದ್ಧ ಚೌತಿ ಗುರುವಾರದಿಂದ ವೈಶಾಖ ಶುದ್ಧ ದಶಮಿ ಬುಧವಾರದ ವರೆಗಿನ ವಾರದ ಪಂಚಾಂಗ.

೧೮೯೩ ನೇ ಇಸವಿ, ಏಪ್ರಿಲ.

ತಾ.	ವಾರ.	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.	ಮೇಷ ಮಾಸ ತೇದಿ.
20	ಗು.	ಚೌ.	11-35	ಮೃ.	55-30	9
21	ಶು.	ಪಂ.	5-42	ಆ.	51-43	10
22	ಶ. *	ಷ ಉಪಾ.	0-31	ಪು.	54-46	11
23	ರ.	ಅ.	50-45	ಪು.	49-7	12
24	ಸೋ.	ನ.	47-31	ಶ್ಲೇ.	44-40	13
25	ಮಂ.	ದ.	45-15	ಮ.	41-6	14
26	ಬು.	ಏ.	44-20	ಪು.	41-52	15

* ಶ್ರೀರಂಗಪಟ್ಟಣದಲ್ಲಿ ರಂಗನಾಥಜಯಂತಿ.

ಪೇಟೆ ಧಾರಣೆ.

ದಿನಸಿ.	ಮೈಸೂರು.	ಬೆಂಗಳೂರು.
	ರೂ. ಆ. ಪೈ.	ರೂ. ಆ. ಪೈ.
ಕಡ್ಡೀ ಅಕ್ಕಿ ಪಲ್ಲ ೧ಕ್ಕೆ	೧೧-೮-೦	೧೪-೦-೦
ಕೆಂಬೂತಿ ಅಕ್ಕಿ ಅವ್ವಲ	೧೦-೧೨-೦	೧೦-೮-೦
ಡಿಟ್ಟೋ ಅಕ್ಕಿ ದುಯಂ	೧೦-೮-೦	೯-೪-೦
ಜಾಪನಾಣಿ ಅಕ್ಕಿ	೧೦-೨-೦	೧೧-೮-೦
ಸಂಣಕ್ಕಿ ಅವ್ವಲ	೧೩-೦-೦	೧೩-೮-೦
ಡಿಟ್ಟೋ ಅಕ್ಕಿ ದುಯಂ	೧೨-೦-೦	೧೧-೪-೦
ತೊಗರೀಬೇಳೆ ಪಲ್ಲ ೧ಕ್ಕೆ	೧೧-೪-೦	೧೧-೮-೦
ಡಿಟ್ಟೋ ದುಯಂ ತರಹ	೧೧-೦-೦	೧೦-೪-೦
ಕ್ಯಾರದಾಗಿ ಪಲ್ಲ ೧ಕ್ಕೆ	೭-೦-೦	ಗು॥೭೮-೦-೦
ಕಾರಿಗ್ರಿ	೩-೧೨-೦	ಡಿ॥೩೮-೦-೦
ಹಲಸಂದೆ ಪಲ್ಲ ೧ಕ್ಕೆ	೧೦-೧೧-೦	೧೦-೪-೦
ಬಿಳೀ ಅವರೆ	೮-೧೨-೦	೮-೮-೦
ಹೆಸರು	೧೧-೦-೦	೧೦-೦-೦
ಉದ್ದು	೧೨-೦-೦	೧೦-೦-೦
ಕಡಲೆ	೧೦-೮-೦	೧೦-೪-೦
ಎಳ್ಳು	೧೩-೪-೦	೧೩-೦-೦
ಹುರಳಿ	೫-೧೨-೦	೬-೬-೦
ಸೀಗೇಕಾಯಿ ಮಣ ೧ಕ್ಕೆ	೧-೮-೦	೧-೧೨-೦
ಮೆಣಸಿನಕಾಯಿ	೩-೦-೦	೨-೧೨-೦
ದುಯಂ ತರಹ	೨-೧೨-೦	೨-೬-೦
ಬೆಲ್ಲ ದೊಡ್ಡ ಅಚ್ಚು ೧೦೦ ಕ್ಕೆ	೪-೮-೦	ಮು ೧-೧೦-೦
ಸಣ್ಣ ಅಚ್ಚು	೪-೬-೦	ಡಿ॥ ೧-೬-೦
ಬೆಳ್ಳುಳ್ಳಿ ಮಣ ೧ಕ್ಕೆ	೪-೧೦-೦	೪-೮-೦
ಹುರುಳಿ	೪-೮-೦	೪-೦-೦
ಕೊತ್ತುಂಬರಿ ಪಲ್ಲ ೧ಕ್ಕೆ	೭-೪-೦	೮-೮-೦
ಉಪ್ಪು	೯-೪-೦	೧೦-೦-೦
ಹುಣಸೇಹಣ್ಣು ಮಣ ೧ಕ್ಕೆ	೧-೮-೦	೧-೧೦-೦
ಹಳೇ ಹುಣಸೇಹಣ್ಣು	೧-೮-೦	೧-೯-೦
ತುಪ್ಪ	೧೪-೦-೦	೧೩-೦-೦
ಸೀಮೆ ಎಣ್ಣೆ ಟಿನ್ನು ೧ ಕ್ಕೆ	೪-೭-೩	೪-೩-೦
ತೆಂಗಿನಕಾಯಿ ೧೦೦ ಕ್ಕೆ	೬-೦-೦	೫-೧೨-೦
ಚಿನ್ನ (ಪವನು)		
ಕೆಂಪು	೧೬-೧೫-೦	೧೬-೧೮-೦
ಪಸಿಮೆ	೧೭-೩-೭	೧೭-೨-೦
ಗಟ್ಟಿ	೨೭-೬-೦	೨೬-೮-೦

Mysore.—Printed and published for the Proprietor at the Wesleyan Mission Press.
20/4/93.

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು — ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೬ — ಮೈಸೂರು ಸ್ಟ ೧೮೯೩ ನೇ ಇಸವಿ ಏಪ್ರಿಲ್ ತಾರೀಖು ೨೭ ನೇ ಗುರುವಾರ. — ಸಂಚಿಕೆ ೪೩

ವಿಶೇಷ ! ಓದಿನೋಡಿರಿ !! ಓದಿನೋಡಿರಿ !!!

ಅನುಶಾಸನೀಕಪರ್ವವು ಪೂರೈಸಿತು.

ಶ್ರೀಕೃಷ್ಣರಾಜ ವಾಣೀವಿಲಾಸವೆಂಬ ಮಹಾಭಾರತವು ನಮ್ಮ ಶ್ರೀಚಾಮುಂಡೇಶ್ವರಿ ಪ್ರೆಸ್ಸಿನಲ್ಲಿ ಪ್ರಕಟವಾಗತಕ್ಕದ್ದು ಎಲ್ಲರಿಗೂ ವಿಶದವಾಗಿದ್ದಷ್ಟೆ. ಈಗ ಅನುಶಾಸನೀಕಪರ್ವವು ಚಾಮುಂಡೇಶ್ವರಿ ಪ್ರೆಸ್ಸಿನಿಂದಲೂ ಮತ್ತಿಗೆ ಯೋಗ್ಯವಾದ ಕಿತ್ತಾಸಾರಿನ ಪ್ರಾರಬ್ಧದಿಂದ ತಯಾರಾಗಿರುತ್ತೆ. ಸಭಾಪರ್ವ ವಿರಾಟಪರ್ವದ ಬುಕ್ಕುಗಳು ಮುಗಿದು ಹೋದುದರಿಂದ ಪುನಹಾ ಎರಡನೆ ಆವೃತ್ತಿಯು ಪ್ರಕಟವಾಗಿದೆ. ಈ ಕೆಳಗೆ ಕಂಡ ಪುಸ್ತಕಗಳು ನಮ್ಮಲ್ಲಿ ಸ್ಟಾಕಿನಲ್ಲಿ ಇರುವದ್ದರಿಂದ ಇಚ್ಛೆಯುಳ್ಳವರು ತರಿಸಿಕೊಳ್ಳಬಹುದು. ಅನುಶಾಸನೀಕ ಪರ್ವ ಕಿತ್ತಾಸಾರಿನ ಬೈಂಡ್ ೩-೧೨-೦ ಲೋವರ್ ಸೆಕಂಡರಿ ಪರೀಕ್ಷೆಯ ನೋಟ್ಸು ಕ್ರಯ ೮ ಆಣೆ

ಆದಿಪರ್ವ	..	ಕ್ರಯ	೩	೦ ೦
ಸಭಾಪರ್ವ	..	,,	೧	೪ ೦
ವಿರಾಟಪರ್ವ	.	,,	೧	೦ ೦
ಭೀಷ್ಮಪರ್ವ		,,	೨	೦ ೦
ದ್ರೋಣಪರ್ವ		,,	೨	೮ ೦
ಕರ್ಣಪರ್ವ	..	,,	೧	೨ ೦
ಸಾಪ್ತಿಕಪರ್ವ	.	,,	೦	೬ ೦
ಸ್ತ್ರೀಪರ್ವ	.	,,	೦	೬ ೦
ಶಾಂತಿಪರ್ವ ರಾಜಧರ್ಮ		,	೨	೬ ೦
,, ಆಪದ್ಧರ್ಮ		,,	೦	೮ ೦
,, ಮೋಕ್ಷಧರ್ಮ	.	,,	೨	೬ ೦

ಭಗವದ್ಗೀತ ೮, ಯದುಗಿರಿರಾಯಸಚರಿತ್ರ ೪ ಆ.

ಎಂ. ರುದ್ರಪ್ಪ ಆಂಟಿಸರ್.
ಲಾಲ್‍ಬಾಗ್‍ರೋಡು,
ಬಂಗಳೂರು

ನೋಟೀಸ್.

ಪುಸ್ತಕಗಳು	ಕ್ರಯ.
ಪ್ರಾರ್ಥನಾ ಪುಸ್ತಕ	1—8 -0
ಕನ್ನಡ ಇಂಗ್ಲೀಷು ನಿಘಂಟು 1 ನೇ ದೊಡ್ಡ ತರಹ	3 0 0
,, ,, 2 ನೇ ತರಹ	2- 8 -0
ಬಾಲಕರು ಓದುವ ಎರಡನೆ ಜ್ಞಾನೋಪದೇಶದ ಪ್ರಶ್ನೋತ್ತರಗಳು	0—1 - 0
ಸಭೆಯ ದಿನಗಳನ್ನು ಕುರಿತದ್ದು	0—0—6
ಕಥಾ ಸಂಗ್ರಹ 1 ನೇ ಭಾಗದಿಂದ 5 ವರೆಗೆ	1 -0 - 0
ಕಥಾ ಸಂಗ್ರಹ 1 ರಿಂದ 5 ನೇ ಭಾಗ ಹೊಸ ಭಾಷೆ	1 - 0 0
,, ,, ದೊಡ್ಡ ತರಹ	1 8 -0
ಮೂರ್ತಿಪೂಜಾ ಬೋಧನಿ	0 -4 - 0
ಸತ್ಯವೇದವನ್ನು ಕುರಿತು 2 ನೇ ಭಾಗ	0—4—0
ಪ್ರಸಂಗಿಯ ದರ್ಪಣ	0 —6 —0
ಇಂಗ್ಲೀಷುಭಾಷೆಯಲ್ಲಿಯೂ, ಕನ್ನಡ ಭಾಷೆಯಲ್ಲಿಯೂ, ಶಬ್ದಗಳ ವಿಭಾಗಗಳನ್ನು ವಿವರಿಸುವ ನಿಘಂಟು	0—2—0
ಕನ್ನಡ ವ್ಯಾಕರಣ (ಇಂಗ್ಲೀಷಿನಲ್ಲಿ)	2—0—0
ಹಿಂದುಸ್ಥಾನಿ ವ್ಯಾಕರಣ	1—0—0
ಬಾಲರು ನೋಡುವವು	0—0—6
ವನ ಕರಗಳ ಅಂಟುರೋಗವಿಚಾರ	0 12 0
ಕ್ರೈಸ್ತರ ಬೋಧನೆಗಳ ಸಾರಾಂಶವು	0-12 -0

ಮೇಲೆ ನಮೂದಿಸಿರುವ ಪುಸ್ತಕಗಳನ್ನು ಅಪೇಕ್ಷಿಸುವವರು ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್ಸಿಗೆ ಬರೆದು ತರಿಸಿಕೊಳ್ಳಬಹುದು ಅಂಚೇ ಹಾಸಲು ಬೇರೆ ಕೊಡಬೇಕು

ವೆಸ್ಲಿಯನ್ ಮಿಷನ್ ಪ್ರೆಸ್
ಮೈಸೂರು

ಜಗದ್ಗುರುವಿನ ಚರಿತ್ರ ಸಂಗ್ರಹ.

THE LIFE
of
The Lord Jesus Christ.
Selected incidents from the Gospels,
FREELY PARAPHRASED

ನೂತನವಾಗಿ ರಚಿಸಲ್ಪಟ್ಟ ೬೬ ಪುಟಗಳುಳ್ಳ ಈ ಪುಸ್ತಕವನ್ನು ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್ಸಿಗೆ ಬರೆದು ತರಿಸಿಕೊಳ್ಳಬಹುದು.

ಕ್ರಯ (ಟಪ್ಪಾಲ್ ಹಾಸಲ್ ಅಲ್ಲದ)

೧೦೦ ಪ್ರತಿಗಳಿಗೆ — ೫—೦—೦
ಬಿಡಿ ಪ್ರತಿಗೆ — ೦—೧—೦

ಸುಮಾರು ೨೫ ಪ್ರತಿಗಳನ್ನು ಅರ್ಧ ಆಣೆ ಹಾಸಲಿನಿಂದ ಕಳುಹಿಸಬಹುದು.

ÆSOP'S FABLES.

These are well printed in English, and illustrated both inside and outside. The covers are in striking colours. The set is complete in 3 *Volumes*. The *whole set* can now be had at a reduced price of 3 pies. Only a few copies are available.

Apply at once to
The Wesleyan Mission Press,
Mysore City

[illegible] RESPONSIBILITIES.

A LECTURE
by
Miss Frances M. Dryden, B.A.

This is a very powerful lecture and should be read by every Hindu who understands English. We have only a few copies at hand and the price has been greatly reduced, the price of each copy being 3 pies only.

Apply to
The Wesleyan Mission Press,
Mysore City

ವೃತ್ತಾಂತ ಪತ್ರಿಕೆ.

ಚಂದಾ ನಿರ್ಣಯ.

	ರೂ. ಆ. ಪೈ.
ಸ್ಥಳದವರಿಗೆ ವರ್ಷ ೧ಕ್ಕೆ ...	೧—೦—೦
ಪರಸ್ಥಳದವರಿಗೆ ವರ್ಷ ೧ಕ್ಕೆ	೧—೦೪—೦
ಬಿಡಿ ಪತ್ರಿಕೆ ೧ಕ್ಕೆ	೦—೦—೩

ಈ ಪತ್ರಿಕೆಯು ಮೈಸೂರು ರಾಜಧಾನಿಯಲ್ಲಿ ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ, ಪ್ರಕಟಿಸಲ್ಪಡುವದು. ಬಡವರು ಮೊದಲುಗೊಂಡು ಸಮಸ್ತರಿಗೂ ಸುಲಭಸಾಧ್ಯವಾಗುವಂತೆ ಈ ಪತ್ರಿಕೆಗೆ ಇಷ್ಟು ಅಲ್ಪ ಮೌಲ್ಯವನ್ನು ನಿರ್ಣಯಿಸಿರುತ್ತೇವೆ ಈ ಪತ್ರಿಕೆಯನ್ನು ಅಪೇಕ್ಷಿಸುವವರು ಚಂದಾಹಣವನ್ನು ಮುಂಗಡವಾಗಿ ಕಳುಹಿಸಿಕೊಡಬೇಕು.

ಪ್ರಕಟನೆಯ ನಿರ್ಣಯ.

	ರೂ. ಆ. ಪೈ.
ಮೊದಲನೇ ಆವರ್ತಿ ಪಙ್ಕ್ತಿ ೧ಕ್ಕೆ	೦—೨—೦
ಎರಡನೇ ಆವರ್ತಿ ಪಙ್ಕ್ತಿ ೧ಕ್ಕೆ	೦—೧—೦

ಅನಂತರ ಪ್ರತಿಯೊಂದು ವಾರದಲ್ಲಿಯೂ ಪಙ್ಕ್ತಿ ೧ಕ್ಕೆ ೧ ಆಣೆಯಂತೆಯೇ ಲೆಕ್ಕ ಮಾಡಲ್ಪಡುವದು ಕಂಟ್ರ್ಯಾಕ್ಟಿಗೆ ಕೊಡಬೇಕೆಂದಿರುವವರು ಎಡಿಟರಿಗೆ ಬರೆದು ದರವನ್ನು ತಿಳಿಯಬಹುದು

ಎಡಿಟರ್,
ವೃತ್ತಾಂತ ಪತ್ರಿಕೆ.

ನೋಟೀಸ್.

		ಕ್ರಯ			ಹಾಸಲು ಸಹಿತವಾಗಿ		
Campbell's	ಕನ್ನಡ ವ್ಯಾಕರಣ ಸಾರ	೦	೨	೦	೦	೨	೬
Object Lessons.	ವಸ್ತು ಪಾಠಗಳು	೦	೧	೦	೦	೧	೬
Picture do	ಚಿತ್ರಗಳು ಸಹಿತವಾಗಿ	೦	೨	೦	೦	೨	೬

ಈ ಮೂರು ಪುಸ್ತಕಗಳು ಪ್ರೈಮರಿ ಮಠಗಳಲ್ಲಿ ಓದತಕ್ಕ ಪುಸ್ತಕಗಳು.

	ಕ್ರಯ			ಹಾಸಲು ಸಹಿತವಾಗಿ		
ಸ್ತ್ರೀಯರು ಓದತಕ್ಕ ಪುಸ್ತಕ	೦	೫	೦	೦	೫	೬
ಗಣಿತ ವಿದ್ಯಾಪ್ತ ..	೦	೪	೦	೦	೪	೬
ಗಣಿತ ಮಗ್ಗಿಗಳು ..	೦	೧	೦	೦	೧	೬
ಸಂಸ್ಕೃತ ಕರ್ನಾಟಕ ಭಾಷಾಮಂಜರಿ	೦	೨	೦	೦	೨	೬
ಭೂಗೋಳ ಶಾಸ್ತ್ರ ಪ್ರಶ್ನೋತ್ತರ	೦	೨	೦	೦	೨	೬
ಇಂಗ್ಲೀಷು ಕನ್ನಡವೂ ಶಬ್ದಾವಳಿ ೧ನೇ ೨ನೇ ಭಾಗಕ್ಕೆ	೦	೧	೦	೦	೧	೬
ಕಾವ್ಯಮಾಲೆ (Junior Poetical Anthology)	೦	೮	೦	೦	೮	೬
ಬಾಲವ್ಯಾಕರಣ ..	೦	೫	೦	೦	೫	೬
ಹಳಗನ್ನಡ ವ್ಯಾಕರಣ ಸೂತ್ರಗಳು	೦	೬	೦	೦	೬	೬
ಇಂಗ್ಲೀಷು ಕನ್ನಡವೂ ಸಂಭಾಷಣಾ ವಾಕ್ಯಗಳು	೦	೧೦	೦	೦	೧೦	೬
ಪದ್ಯಮಣಿ ದರ್ಪಣ ..	೧	೦	೦	೧	೪	೬
Kan. Eng. Pocket Dictionary	೧	೪	೦	೧	೫	೭
Eng. Kan. School Dictionary	೨	೧೦	೦	೨	೧೨	೬
ಬಕ್ಲೀ ತಾಯಿ ..	೦	೪	೪	೦	೪	೬
ಆತ್ಮಿಕ ದಿವ್ಯ ಯುದ್ಧ (Bunyan)	೦	೧೨	೦	೦	೧೩	೬
ಕ್ರೈಸ್ತ ಪದ್ಧತಿ ೧ ನೇ ಭಾಗ ೨ ಅಣಾ ೩ ನೇ ಭಾಗ	೦	೧	೬	೦	೨	೦
ಭಕ್ತಿ ಸಾರ ..	೦	೧	೦	೦	೧	೬
ಸತ್ಯ ಪಾಠಾವಳಿ	೦	೧	೦	೦	೧	೬
ಕಾವ್ಯಸ್ತಂಭ .	೦	೩	೦	೦	೩	೬

A new Edition of the Geography suited for the Lower Secondary Examination is now ready. Edited by Rev. H. Gulliford. Price 6 As.

ಮೇಲೆ ನಮೂದಿಸಿರುವ ಪುಸ್ತಕಗಳನ್ನು ಬೆಂಗಳೂರು ದಂಡಿನ ಮೇನ್‍ಸ್ಟ್ರೀಟಿನ ಪತ್ತರವಿರುವ ಪುಸ್ತಕ ಶಾಲೆಯಲ್ಲಿ ಪಡೆಯ ಬಹುದು.

ಕೆನರಾ ಎಂಡ್ ಮೈಸೂರು ಪ್ರಿಂಟಿಂಗ್ ವರ್ಕ್ಸ್ ಆಫೀಸ್ ಮಂಗಳೂರು

ಇವರು ಪ್ರಕಟಿಸುತ್ತಿರುವ

'ಮುಂಬಯಿ ಪಟ್ಟಣದ ವರ್ಣನೆಯು.'

ಮೊದಲಿನೆ "ಹಿತಸಂಬೋಧ" ಪತ್ರಿಕೆಯು, ಎಡಿಟರಾಗಿರುತ್ತಿದ್ದ ರಾ ॥ ವೆಂಕಟರಮಣಶಾಸ್ತ್ರೀ ಸೂರಿ, ಎಂಬವರು ಬರೆದಿರುವಂಥಾದ್ದು.

ಇತ್ತಲಾಗಿ ರೈಲ್ವೆ ಮತ್ತು ಸ್ಟೀಮರುಗಳ ಅನುಕೂಲತೆಯುಂಟಾಗಿರುವದರಿಂದ, ಕನ್ನಡದೇಶದ ಜನರು ಹೆಚ್ಚಾಗಿ ಇಲ್ಲಿಗೆ (ಮುಂಬಯಿಗೆ) ಬರಹೋಗ ತೊಡಗಿರುವರು. ಆದರೆ, ಈ ಪಟ್ಟಣದಲ್ಲಿರುವ ಹಿಂದೂ ಜನರ ತರದ, ಕಾರ್ಖಾನೆಗಳೂ, ಪ್ರೇಕ್ಷಣೀಯಸ್ಥಳಗಳೂ, ಭವ್ಯವಾದ ಕಟ್ಟಡಗಳೂ, ಮುಂತಾದವು ಎಷ್ಟೋ ! ಅವುಗಳಲ್ಲಿರುತ್ತವೆ ! ಸುಲಭವಾಗಿ ನೋಡುವ ಬಗೆ ಹ್ಯಾಗೆ ! ಗಿರಣಿ, ಟಂಕಸಾಲೆ, ಮುಂತಾದವುಗಳನ್ನು ನೋಡುವದಕ್ಕೆ ಮುಂದಾಗಿ ಮಾಡತಕ್ಕ ಉಪಾಯಗಳೇನು ! ಸ್ನಾನಾದಿಗಳ ಅನುಕೂಲತೆಯು ಬಗೆ ಹ್ಯಾಗೆ ! ಮುಖ್ಯ ಮುಖ್ಯ ವ್ಯಾಪಾರಿಗಳಲ್ಲಿರುತ್ತಾರೆ ! ಇವೇ ಮುಂತಾದವುಗಳನ್ನು ತಿಳುಕೊಳ್ಳುವದಕ್ಕೆ ಯೋಗ್ಯವಾದ ಯಾವ ತರದ ಸಾಧನಗಳಾದರೂ ಇಲ್ಲದಿರುವದರಿಂದ, ಎಷ್ಟೋ ಜನರು ಅಂಗಡಿ ಬೀದಿ ಸಾಲುಗಳಲ್ಲಿ ತಿರಿಗಿ, ಇಲ್ಲಿಗ ಬಂದೂ ಬಾರದಿದ್ದವರಂತೆ ಆಗಿಹೋಗುತ್ತಾರೆ. ಆದರೆ, ನಮ್ಮ ಕನ್ನಡದೇಶದ ಜನರ ಕೈಯಲ್ಲಿ ಈ ತರದ ಪುಸ್ತಕವೊಂದಿದ್ದರೆ, ಎಷ್ಟರ ಮಟ್ಟಿಗೆ ಸಹಾಯವಾಗುತ್ತದೆಂಬದನ್ನು ಪ್ರತ್ಯೇಕವಾಗಿ ಹೇಳುವ ಅವಶ್ಯವಿರುವದಿಲ್ಲ. ಇದಲ್ಲದೇ, ಯಾರು ಇಲ್ಲಿಗೆ ಬರಲಿಕ್ಕೆ ಸಮರ್ಥರಾಗುತ್ತಾರೋ ಅಂಥವರಿಗೆ, ಈ ಪುಸ್ತಕವಾಚನದಿಂದ, ಪ್ರತ್ಯಕ್ಷ ನೋಡಿದ ಫಲಪ್ರಾಪ್ತಿಯಾಗುತ್ತದೆಂಬದರಲ್ಲಿ ಸಂಶಯವಿಲ್ಲ.

ಇದರಲ್ಲಿ ರಾಜಕೀಯ, ಸಾಮಾಜಿಕ, ವ್ಯಾಪಾರಾದಿ ವಿಷಯಗಳೇ ಮೊದಲ್ಗೊಂಡು, ಇಲ್ಲಿಯ ವಿಶಿಷ್ಟವಾದ ಸಂಗತಿಗಳು, ವಿಶದವಾಗಿಯೂ, ಸಂಕ್ಷೇಪದಿಂದಲೂ, ಬರೆಯಲ್ಪಟ್ಟಿರುತ್ತವೆ. ಈ ಪುಸ್ತಕದ ಕ್ರಯ ೧ ರೂಪಾಯಿ. ಛಾಪಾಖಾನೆಯಾಗಿ ಮುಂದಾಗಿ ಹಣ ಕೊಡತಕ್ಕವರಿಗೆ ಮಾತ್ರ, ಹತ್ತಾಣೆಯಂತೆ ಕೊಡಲ್ಪಡುವದು. ಬೇಕಾದವರು ಮೇಲೆ ಬರೆದ ವಿಳಾಸದವರಿಗಾಗಲೀ, ಮೈಸೂರು ಸ್ಟೇಟ್‍ಮೆಂಟ್ಸ್ ಆಫೀಸ್ ಮ್ಯಾನೇಜರರ ಕಡೆಗಾಗಲೀ ಬರೆದುಕೊಳ್ಳಬೇಕು, ಮುಂಗಡವಾದ್ದರಿಂದ ಮಾರ್ಚಿ ಆಖೈರಾಗಿರುವದು. ಏಪ್ರೀಲ ಮೊದಲನೇ ವಾರದಲ್ಲಿ, ಪುಸ್ತಕಗಳು ವಿಕ್ರಯಕ್ಕೆ ಸಿದ್ಧವಾಗುವವು.

ಚನ್ನಾಗಿ ಓದಿ ನೋಡಿರಿ. ಸಮಯ ಬಿಟ್ಟಾಗಿ ಅಪ್ಪಣೆ ಕೊಡಿರಿ.

ಕ್ರಯ ಕಡಿಮೆ ಮಾಡಿದರೂ, ಜಿನಸು ಉತ್ತಮವಾಗಿರುವವು.

"ಸುನ್ನ" ಎಂಬ ಹೆಸರಿನ ಕಿರಿಯ ಕಥಿಯಾರ, (ಒಂದು ವರುಷದ ಜಾಮೀನು) ಕ್ರಯ ೬ ರೂಪಾಯಿ, 'ಚಂದ್ರಕಾಂತ ರೀತಿಯ ಕನ್ನಡಕ ಉತ್ತಮ ೩॥ ಮಧ್ಯಮ ೩ ಸಾಧಾರಣ ೩ ರೂಪಾಯಿ ಹಿಂದೀ ಮುತ್ತು ಬಿದಿರಿನ ಉತ್ತಮ ೩ ರೂ. ಮಧ್ಯಮ ೨॥ ರೂ. ಸಾಧಾರಣ ೨॥. ಬಿಳ್ಳ ಚಾಂಗಿನ ಗಾಜು, ಸುಮಾರು ೬ ಬಗೆ ಉದ್ದ ೩ ಬಗೆ ಅಗಲ, ಲೋಹದ ಕಬ್ಬೆ, ಪಾಟೀಗೆ ಹಿಡಿ, ದೊಡ್ಡಕೊಳವೆ ಜೆಟ್ಟಿಗೆ, ಈ ಮಕ್ಕಳಿಗಾದ ಕುಳ್ಳ, ಡಜನ ೧ಕ್ಕೆ ೩॥ ರೂ. ಎಲ್ಲತರದ ಔಷಧಗಳೂ, ಬೇರೆ ಬೇರೆ ತರದ ಸೂಗಸಾದ ದೀಪಗಳೂ, ಸಿಕ್ಕರ ಬಗೆ ಸಿಲ್ವರ ಪಾತ್ರೆಗಳು ಸಹ ಹೊಸತರದ ಮಾಟದವು.

"ಕುಟುಂಬ ಚಿಕಿತ್ಸಕ" ಎಂಬ ಮಾಸಿಕ ಪುಸ್ತಕವು. ಟಪ್ಪಾಲ ಹಾಸಲು ಸಹ ವರುಷಕ್ಕೆ ೮ ಆಣೆ. ಮೇಲೆ ಬರೆದಿರುವ "ಕೆನರಾ ಎಂಡ್ ಮೈಸೂರ ಟ್ರೇಡಿಂಗ್ ಏಜನ್ಸೀ ಆಫೀಸ ಮುಂಬಯಿಗೆ ಇವರಿಗೆ ಬರೆಯುವದು.

ವೃತ್ತಾಂತ ಪತ್ರಿಕೆ.

೧೯೧೩ನೇ ಇಸವಿ ಏಪ್ರಿಲ್ ತಾ॥ ೨೪ ನೇ ಗುರುವಾರ.

ಮ್ಯುನಿಸಿಪಲ್ ಮೀಟಿಂಗುಗಳು.

ಮೈಸೂರು ಸಂಸ್ಥಾನದ ಸೀನಿಯರ್ ಸರ್ಜನ್‌ರವರು ಬೆಂಗಳೂರು ಟೌನ್ ಮ್ಯುನಿಸಿಪಲ್ ಮೀಟಿಂಗಿಗೆ ಹಾಜರಾಗಬೇಕಾದದ್ದು ಸರ್ಕಾರ ಅತ್ಯಂತವಾಗಿರುವದೆಂತಲೂ, ಹಾಗೆ ಗೈರುಹಾಜರಾಗುವದಕ್ಕೆ ಸಕಾರಣಗಳನ್ನು ತಿಳಿಸಬೇಕೆಂತಲೂ ಗೌರ್ನಮೆಂಟಿನವರು ಅವರನ್ನು ಪ್ರಶ್ನೆ ಮಾಡಿದರು. ಅದಕ್ಕೆ ಸೀನಿಯರ್ ಸರ್ಜನರವರು—ಈ ಮ್ಯುನಿಸಿಪಲ್ ಮೀಟಿಂಗು ಸಾಧಾರಣವಾಗಿ ಯಾವಾಗಲೂ ಪ್ರಾತಃಕಾಲಗಳಲ್ಲೇ ನಡೆಸಲ್ಪಡುತ್ತವೆ; ಅಂಥಾ ಕಾಲಗಳಲ್ಲಿ ತಾವು ಆಸ್ಪತ್ರೆಗಳಲ್ಲಿ ಹಾಜರಾಗಿದ್ದು ರೋಗಿಗಳಿಗೆ ಔಷಧಗಳನ್ನು ಕೊಡುವದು, ಬೇರೆ ಬೇರೆ ಚಿಕಿತ್ಸೆಗಳನ್ನು ಮಾಡುವದು—ಇವೇ ಮೊದಲಾದ ವಿಶೇಷ ಕೆಲಸದಲ್ಲಿ ನಿರತರಾಗಿರುತ್ತೇವೆಂತಲೂ, ಆದದರಿಂದ ಪ್ರಾತಃಕಾಲಗಳಲ್ಲಿ ಮ್ಯುನಿಸಿಪಲ್ ಮೀಟಿಂಗುಗಳಿಗೆ ಹಾಜರಾಗಲು ಅನುಕೂಲವಿರುವದಿಲ್ಲವೆಂತಲೂ, ಈ ಮೀಟಿಂಗುಗಳನ್ನು ಪ್ರಾತಃಕಾಲಗಳಲ್ಲಿ ನಡೆಸುವದಕ್ಕೆ ಬದಲಾಗಿ ಮಧ್ಯಾನ್ಹಗಳಲ್ಲಾಗಲಿ, ಅಥವ ಪ್ರಾತಃಕಾಲದ ೭ ಘಂಟೆಯೊಳಗಾಗಿ ಪೂರೈಸುವಂತಾಗಲಿ ನಡೆಸುವದಾದರೆ, ತಾವು ಹಾಜರಾಗಲು ಯಾವ ಸಂದೇಹವಿಲ್ಲದೆಂತಲೂ ತಮ್ಮ ನ್ಯಾಯವಾದ ಅನಿವಾರ್ಯಗಳನ್ನು ಗೌರ್ನಮೆಂಟಿನವರ ತಿಳುವಳಿಕೆಗೆ ತಂದರು. ಅದರ ಮೇಲೆ ಗೌರ್ನಮೆಂಟಿನವರು ಸೀನಿಯರ್ ಸರ್ಜನರವರ ಈ ಅನಾನುಕೂಲಗಳನ್ನು ಸಹಜವಾದವುಗಳೆಂದು ಒಪ್ಪಿ, ಈ ಸಂಗತಿಗಳನ್ನು ಮ್ಯುನಿಸಿಪಲ್ ಮತ್ತು ಲೋಕಲ್ ಫಂಡ್ ಬೋರ್ಡುಗಳ ಪ್ರೆಸಿಡೆಂಟ್ರುಗಳಿಗೆ ತಿಳಿಯಪಡಿಸಿದ್ದಲ್ಲದೆ, ಬೋರ್ಡುಗಳ ಮೀಟಿಂಗ್ಗುಗಳು ಆಫೀಸು ನಡೆಯತಕ್ಕ ಕಾಲಗಳಲ್ಲಿ ಅಂದರೆ ೧೧ ಘಂಟೆಯಿಂದ ೫ ಘಂಟೆಯ ತನಕ ಇರುವ ಕಾಲದಲ್ಲಿ ಯಾತಕ್ಕೆ ನಡೆಸಬಾರದು, ಹಾಗೆ ನಡೆಸಲು ಯಾವ ಅನಾನುಕೂಲಗಳು ಅಥವ ಆಕ್ಷೇಪಣೆಗಳು ಇರುವವು ಎಂಬುದಾಗಿ ಕೇಳಿರುತ್ತಾರೆ. ಅಲ್ಲದೆ ಮ್ಯುನಿಸಿಪಲ್ ಮೀಟಿಂಗುಗಳಲ್ಲಿ ಆಗಾಗ್ಯೆ ಚರ್ಚೆಗೆ ಬರುವ ವಿಷಯಗಳ ಮೈಕೆ ಕೆಲವು ಡಾಕ್ಟರುಗಳ ಅಭಿಪ್ರಾಯವನ್ನೂ ಮತ್ತೆ ಕೆಲವು ಇಂಜನಿಯರ್‌ರ ಅಭಿಪ್ರಾಯವನ್ನೂ ಅಪೇಕ್ಷಿಸತಕ್ಕವುಗಳಾಗಿವೆ. ಮೆಡಿಕಲ್ ಮತ್ತು ಪಬ್ಲಿಕ್ ವರ್ಕ್ಸ್ ಆಫೀಸರುಗಳು ಅಂಥಾ ವಿಷಯಗಳು ಚರ್ಚೆಗೆ ಬರುವಾಗ್ಯೆ ಮಾತ್ರವೇ ತಮ್ಮ ಹಾಜರಾತಿಯು ಅವಶ್ಯವೆಂದೂ, ಮ್ಯುನಿಸಿಪಲ್ ಬಡ್ಜೆಟ್ ಮತ್ತು ಇತರ ಬಿಲ್ಲಿನ ವಿಷಯಗಳು ಚರ್ಚಿಸಲ್ಪಡುವಾಗ ತಮ್ಮ ಹಾಜರಾತಿಯು ಅಷ್ಟು ಅವಶ್ಯವಾಗಿಲ್ಲವೆಂದೂ ತಿಳಿಯಬಹುದು. ಆ ಮೀಟಿಂಗುಗಳಲ್ಲಿ ಚರ್ಚೆಗೆ ಬರುವ ಸಮಸ್ತ ವಿಷಯಗಳಲ್ಲೂ ಒಂದೇ ವಿಧವಾದ ಆಸಕ್ತಿಯನ್ನು ಈ ಆಫೀಸರುಗಳು ತೋರ್ಪಡಿಸಬೇಕು ಎಂಬ ಗೌರ್ನಮೆಂಟಿನವರ ಅಭಿಪ್ರಾಯವನ್ನು ಛೀಫ್ ಸೆಕ್ರೆಟರಿಯವರು ತಿಳಿಯಪಡಿಸಿರುತ್ತಾರೆ.

ಇದರಿಂದ ಈ ಮ್ಯುನಿಸಿಪಲ್ ಮತ್ತು ಲೋಕಲ್ ಫಂಡ್ ಮೀಟಿಂಗುಗಳು ಮಧ್ಯಾನ್ಹ ಕಾಲಗಳಲ್ಲಿ ನಡೆಸಲು ಆಗುವದಿಲ್ಲವೆಂಬ ವಿಷಯವು ಗೌರ್ನಮೆಂಟಿನವರ ತಿಳುವಳಿಕೆಗೆ ಬಂದಿಲ್ಲವೆಂದು ಯೋಚಿಸಬೇಕಾಗಿದೆ. ಯಾಕೆಂದರೆ, ಈ ಮೀಟಿಂಗುಗಳು ಮೆಂಬರುಗಳಿಂದ ನಡೆಸಲ್ಪಡಬೇಕು. ಈ ಮೆಂಬರುಗಳೆಲ್ಲರೂ ಒಂದೇ ಕಸಬಿನವರಲ್ಲ. ಕೆಲವರು ಸ್ಕೂಲ್ ಮಾಸ್ಟರುಗಳಾಗಿಯೂ, ಕೆಲವರು ಆಡ್ವೋಕೇಟುಗಳಾಗಿಯೂ, ಮತ್ತೆ ಕೆಲವರು ಬೇರೆ ಬೇರೆ ಆಫೀಸುಗಳಲ್ಲಿ ಕೆಲಸ ಮಾಡತಕ್ಕ ನೌಕರರುಗಳಾಗಿಯೂ, ಇನ್ನೂ ಕೆಲವರು ಇತರ ಉದ್ಯೋಗಸ್ಥರಾಗಿಯೂ ಇರುತ್ತಾರೆಂಬುದು ಸ್ಪಷ್ಟವಾಗಿದೆ. ಮಧ್ಯಾನ್ಹ ಕಾಲದಲ್ಲಿ ಇವರೆಲ್ಲರೂ ಬೇರೇ ಕಡೆ ಕೆಲಸ ಮಾಡತಕ್ಕವರಾಗಿರುತ್ತಾರೆ. ವೈದ್ಯರಿಗೆ ಮಾತ್ರ ಸ್ವಲ್ಪ ವಿನಾಯಿತಿ. ಆದರೆ ಇವರು ವಿನಹ ಇತರರಿಗೆಲ್ಲ ಆಫೀಸ್ ಕಾಲದಲ್ಲಿ ಕೆಲಸವಿದ್ದೇ ಇರುತ್ತೆ. ಅವರ ಅನುಕೂಲ ಪ್ರತಿಕೂಲಗಳನ್ನೂ ನೋಡಬೇಕಾಗಿರುವದರಿಂದ ಈ ಮೀಟಿಂಗುಗಳಿಗೆ ಆಫೀಸ್ ಕಾಲವು ಬಹಳ ಅನಾನುಕೂಲವೆಂಬುದು ಹೇಳಬೇಕಾಗಿಲ್ಲ. ಆದರೆ ಸರ್ಕಾರಿ ನೌಕರರಾಗಿಯೂ, ಬೋರ್ಡಿನ ಮೆಂಬರುಗಳಾಗಿಯೂ ಇರುವವರಿಗೆ ಸರ್ಕಾರದವರು ಅಂಥಾ ದಿವಸಗಳಲ್ಲಿ ರಜಾ ಕೊಡಬಹುದು. ಹಾಗಾದರೆ ಸ್ಕೂಲ್ ಮಾಸ್ಟರುಗಳೂ, ಬೇರೆ ಬೇರೆ ಕೋರ್ಟುಗಳಲ್ಲಿ ಮೊಕದ್ದಮೆಗಳನ್ನು ನಡೆಸಬೇಕಾಗಿರುವ ಆಡ್ವೋಕೇಟ್ರುಗಳೂ ಆ ಮೀಟಿಂಗಿಗೆ ಹಾಜರಾಗುವದು ಹ್ಯಾಗೆ? ಇದರಿಂದ ಇದನ್ನೆಲ್ಲಾ ಆಲೋಚಿಸಿ ನೋಡಿದರೆ ಈ ಮೀಟಿಂಗುಗಳು ಈಗ ನಡೆಯುವಂತೆ ಪ್ರಾತಃಕಾಲದಲ್ಲಿ ನಡೆಯುವದೇ ಎಲ್ಲರಿಗೂ ಅನುಕೂಲವಾಗಿದೆ ಎಂದೂ, ಹಾಗಿಲ್ಲದಿದ್ದರೆ ಈ ಸಂದರ್ಭಗಳಲ್ಲಿ ಸರ್ವರಿಗೂ ಅನುಕೂಲವಾಗಿರುವ ಸಮಯವು ಸಾಯಂಕಾಲವಾಗಿರುವದರಿಂದ ಸಾಯಂಕಾಲ ೬||-೭ ಘಂಟೆಗಳಿಂದ ರಾತ್ರಿ ೮-೯|| ಘಂಟೆಗಳ ವರೆಗೂ ಅಂಥಾ ಮೀಟಿಂಗುಗಳನ್ನು ನಡೆಸಿದರೆ ಬಹುಮಟ್ಟಿಗೆ ಇಷ್ಟಪಟ್ಟ ಸಕಲ ವಿಧವಾದ ನೌಕರರಿಗೂ, ಬೇರೆ ಉದ್ಯೋಗಸ್ಥರಿಗೂ ಅನುಕೂಲವಾಗಿರುತ್ತದೆ ಎಂದೂ ನಾವು ಅಭಿಪ್ರಾಯಪಡುತ್ತೇವೆ.

ಕರ್ನಾಟಕ ಭಾಷಾ ಸಮಾಜವು.

ಇದೇ ಏಪ್ರಿಲ್ ೧೨ ನೇ ತಾರೀಖಿನಲ್ಲಿ ಮದರಾಸ್ ಪಚ್ಚೆಯಪ್ಪ ಪ್ರೆಸಿಡೆನ್ಸಿ ಕಾಲೇಜ್ ಎಗ್ಜಾಮಿನೇಷನ್ ಹಾಲಿನಲ್ಲಿ ಒಂದು ಕರ್ನಾಟಕ ಸಭೆಯು ನಡೆಯಿತು. ಅದಕ್ಕೆ ಕನ್ನಡವನ್ನೇ ದ್ವಿತೀಯ ಭಾಷೆಯನ್ನಾಗಿ ತೆಗೆದುಕೊಂಡು ಬಿ. ಎ. ಪರೀಕ್ಷೆಯನ್ನು ಕೊಟ್ಟ ಗ್ರಾಜುಯೇಟ್ರುಗಳೂ, ಕರ್ನಾಟಕ ಪಂಡಿತರುಗಳೂ ಮೊದಲಾಗಿ ಸುಮಾರು ೨೦೦ ಜನಗಳವರೆಗೂ ಸೇರಿದ್ದರು. ಮದರಾಸ್ ಗೌರ್ನಮೆಂಟಿಗೆ ಕನ್ನಡಾ ಟ್ರಾನ್ಸ್ಲೇಟರಾಗಿರುವ ಮಿ॥ ಎಸ್. ಮಂಗೇಶರಾವ್ ಬಿ. ಎ. ಯವರು ಈ ಸಭೆಯಲ್ಲಿ ಸಭಾಧ್ಯಕ್ಷರಾಗಿದ್ದರು. ಪಂಡಿತ ಕ್ಯಾ. ವಿ. ಕೃಷ್ಣಮಾಚಾರ್ಯರು "ಕರ್ನಾಟಕ ಬಾಷೆ" ಎಂಬ ವಿಷಯವನ್ನು ಕುರಿತು ಉಪನ್ಯಾಸವನ್ನು ಮಾಡಿದರು. ಅವರು ಸಭಿಕರ ತಿಳುವಳಿಕೆಗೆ ತಂದ ಅನೇಕ ವಿಷಯಗಳ ಪೈಕಿ ಕೆಲವನ್ನು ಇಲ್ಲಿ ತಿಳಿಸುವೆವು. ಕನ್ನಡಭಾಷೆಯು ಮಿಕ್ಕ ಭಾಷೆಗಳಿಂತಲೂ ವಿಶೇಷವಾಗಿ ಮೈಸೂರು ಸೀಮೆಯಲ್ಲೂ, ಉತ್ತರ ಮತ್ತು ದಕ್ಷಿಣ ಕನಡಾ ಡಿಸ್ಟ್ರಿಕ್ಟುಗಳಲ್ಲಿಯೂ, ಧಾರ್ವಾಡ, ಬಳ್ಳಾರಿ ಮತ್ತು ಅನಂತಪುರಗಳಲ್ಲಿಯೂ ಪ್ರಚಾರದಲ್ಲಿದೆ. ಆಧಿಕಾರ ಬದಲಾವಣೆಯಿಂದಲೂ, ನೂರದೇಶಗಳಲ್ಲಿರುವದರಿಂದಲೂ ಈ ಭಾಷೆಯಲ್ಲಿ ಅನೇಕ ವ್ಯತ್ಯಾಸಗಳು ಹುಟ್ಟಲು ಕಾರಣವಾಯಿತು. ಈಚೆಗೆ ಇಂಗ್ಲಿಷರ ಅಧಿಕಾರವು ಪ್ರಾಪ್ತವಾದ ಲಾಗಾಯಿತು ಜನಗಳಲ್ಲಿ ಪ್ರೇಮವು ಸ್ವಲ್ಪ ಮೇಲ್ಪಟ್ಟು ಬಂದದ್ದರಿಂದ, ಈ ಕಾಲದಲ್ಲಿ ಜನರು ವಾಡಿಕೆಯಲ್ಲಿರುವ ಕನ್ನಡ ಭಾಷೆಯಲ್ಲೂ, ಪೂರ್ವಕಾಲದಲ್ಲಿ ವಾಡಿಕೆಯಲ್ಲಿದ್ದ ಈಗಿನ ಪುಸ್ತಕಗಳಲ್ಲಿ ಬರೆಯಲ್ಪಟ್ಟಿರುವ ಕನಡ ಭಾಷೆಯಲ್ಲೂ ಸಹಜವಾಗಿ ತುಂಬಾ ವ್ಯತ್ಯಾಸವನ್ನು ಕಂಡು ವಾಡಿಕೆಯಲ್ಲಿರುವದಕ್ಕೆ ಹೊಸಕಸನವೆಂತಲೂ, ಪುಸ್ತಕಗಳಲ್ಲಿನ ಕನ್ನಡಕ್ಕೆ ಹಳಗನ್ನಡವೆಂತಲೂ ಹೆಸರಿಟ್ಟರು. ಇದಕ್ಕನುಸಾರವಾಗಿರುವಂತೆ ಕನಡ ಪಂಡಿತರುಗಳು ತಮ್ಮ ತಮ್ಮ ದೇಶಗಳಲ್ಲಿ ವಾಡಿಕೆಯಾಗಿರುವಂಥ ಕನಡ ಭಾಷೆಗೆ ತಕ್ಕಂತೆ ವ್ಯಾಕರಣಸೂತ್ರಗಳನ್ನು ಮಾಡಿದರು. ಆದರೆ ಇಂಥಾ ಬದಲಾವಣೆಗಳು ತೆಲುಗು, ಅರವ ಭಾಷೆಗಳ ಪ್ರಾಪ್ತವಾಗಲಿಲ್ಲವಾಗಿ ಆ ಭಾಷೆಗಳ ಪುಸ್ತಕದ ಭಾಷೆಗೂ, ವಾಡಿಕೆಯಲ್ಲಿರುವ ಭಾಷೆಗೂ ಯಾವ ವ್ಯತ್ಯಾಸವೂ ಉಂಟಾಗಲಿಲ್ಲ. ಒಬ್ಬ ಹುಡುಗನು ತನ್ನ ಬಾಲ್ಯದಲ್ಲಿ ವ್ಯಾಕರಣವೆಂದು ಛಿಟ್ಟಮಾಡಿ ಸೂತ್ರಗಳನ್ನು, ಅವನು ಇಂಗ್ಲಿಷ್ ಕಾಲೇಜ್‌ಕ್ಲಾಸುಗಳಲ್ಲಿ ಓದುವಾಗ್ಯೆ ಸಂಪೂರ್ಣವಾಗಿ ಮರೆತುಬಿಡುತ್ತಾನೆ. ಆದದರಿಂದ ಕನ್ನಡ ಭಾಷೆಯನ್ನು ಅಭಿವೃದ್ಧಿಗೆ ತರಬೇಕೆಂದು ಕುತೂಹಲಿಗಳಾಗಿರುವ ಎಲ್ಲಾ ಸತ್ಪುರುಷರೂ ಒಂದುಕಡೆ ಸೇರಿ, ಈಗ ಇಂಗ್ಲಿಷ್ ಮತ್ತು ಕನಡ ಸ್ಕೂಲುಗಳಲ್ಲಿ ಜಾರಿಯಲ್ಲಿರುವ ಎಲ್ಲಾ ಕನ್ನಡ ಪುಸ್ತಕಗಳನ್ನೂ ತರಿಸಿಕೊಂಡು ಅವುಗಳ ಭಾಷೆಯನ್ನೆಲ್ಲಾ ಗೊತ್ತಾದ ವ್ಯಾಕರಣ ಸೂತ್ರಗಳಿಗೆ ಅನುಸಾರವಾಗಿರುವಂತೆ ತಿದ್ದಿ ಪುನಹ ಛಾಪಿಸಿ ಸ್ಕೂಲುಗಳಲ್ಲಿ ಉಪಯೋಗಕ್ಕೆ ತರಬೇಕು. ಕನಡವನ್ನು ಈಗಿರುವದಕ್ಕಿಂತಲೂ ಹೆಚ್ಚಾಗಿ ಉಪಯೋಗದಲ್ಲಿ ತರಬೇಕು. ಮತ್ತು ಈ ಭಾಷೆಯು ದಿನೇ ದಿನೇ ಅಭಿವೃದ್ಧಿಯನ್ನೈದುವಂತೆ ಬೇಕಾದ ಇತರ ಏರ್ಪಾಡುಗಳನ್ನು ಮಾಡಬೇಕು. ಈ ವಿಷಯದಲ್ಲಿ ಮೈಸೂರ ಗೌರ್ನಮೆಂಟ್ ಎಜ್ಯುಕೇಷನ್ ಸೆಕ್ರೆಟರಿಯವರು ಮಾಡಿರುವ ಏರ್ಪಾಡುಗಳು ಶ್ಲಾಘನೀಯವಾದವುಗಳೇ ಸರಿ. ಇದೇ ರೀತಿಯಲ್ಲಿ ಮದರಾಸ್ ಮತ್ತು ಬೊಂಬಾಯಿ ಗೌರ್ನಮೆಂಟಿನವರು ಮೈಸೂರು ಗೌರ್ನಮೆಂಟಿನವರ ಸಂಗಡ ಸೇರಿ ಕರ್ನಾಟಕಭಾಷೆಯ ಅಭಿವೃದ್ಧಿಯ ವಿಷಯದಲ್ಲಿ ಒಂದೇ ವಿಧವಾದ ಏರ್ಪಾಡುಗಳನ್ನು ಮಾಡುತ್ತಾ ಬಂದರೆ ದಕ್ಷಿಣ ಹಿಂದುಸ್ಥಾನದಲ್ಲೆಲ್ಲಾ ಕೆಲವು ಕಾಲದಲ್ಲೇ ಕರ್ನಾಟಕ ಭಾಷೆಯು ಒಂದೇ ವಿಧವಾಗಿರುವದಲ್ಲದೆ ಅದು ಅಭಿವೃದ್ಧಿಗೂ ಬರುವದೆಂದು ಸಂಪೂರ್ಣವಾಗಿ ನಂಬುತ್ತೇನೆಂದು ಹೇಳಿ ಉಪನ್ಯಾಸವನ್ನು ಪೂರೈಸಿದರು.

ಅನಂತರ ಸಭಿಕರು ಕಲವು ರೆಜೊಲ್ಯೂಷನ್‌ಗಳನ್ನು ಮಾಡಿ ಅವುಗಳನ್ನು ಮೈಸೂರು, ಮದರಾಸು ಮತ್ತು ಬೊಂಬಾಯಿ ಗೌರ್ನಮೆಂಟಿನವರ ತಿಳುವಳಿಕೆಯ ಬಗ್ಯೆ, ಮತ್ತು ಕನ್ನಡ ಭಾಷೆಯನ್ನು ಅಭಿವೃದ್ಧಿಗೆ ತರುವದರಲ್ಲಿ ಈ ಮೂರು ಗೌರ್ನಮೆಂಟಿನವರೂ ಒಂದಾಗಿ ಸೇರಿಕೆಲಸಗಳನ್ನು ಮಾಡುವ ಬಗ್ಯೆ ಕಳುಹಿಸಿಕೊಟ್ಟರು. ಇದರಿಂದ ಉಂಟಾಗುವ ಫಲವು ಶೀಘ್ರದಲ್ಲೇ ಪ್ರಕಾಶಿಸದೆ ಹೋಗಲಾರದೆಂದು ನಾವು ದೃಢವಾಗಿ ನಂಬಿದ್ದೇವೆ.

ಭಕ್ತರ ಮರಣಕ್ಕೂ ಭಕ್ತಿಹೀನರ ಮರಣಕ್ಕೂ ಇರುವ ವ್ಯತ್ಯಾಸ.

ನಾವು ಯಾವಕಡೆ ಹೋಗಿ ನೋಡಿದಾಗ್ಯೂ ನಿರಂತರವಾಗಿ ಬದುಕತಕ್ಕದವನ್ನು ನೋಡುವದೇ ಇಲ್ಲ. ಎಲ್ಲಿ ನೋಡಿದಾಗ್ಯೂ ಮರಣದ ವಿಷಯವಾಗಿ ದಾಖಲಾತಕ್ಕವನ್ನು ಬರವಾಗಿ ನೋಡುತ್ತೇವೆ. ಹೊರ್ತು ನಿರಂತರವಾಗಿ ಬದುಕತಕ್ಕದವನ್ನು ಎಲ್ಲಿಯೂ ನೋಡಿದ್ದೂ ಇಲ್ಲ. ಕೇಳಿಯೂ ಇಲ್ಲ. ಆದರೆ ಕೆಲವು ಜನಗಳು ಯೋಗಾಭ್ಯಾಸದಿಂದ ಬಹಳ ದಿವಸಗಳು ಬದುಕಿರುತ್ತಾರೆ ಎಂದು ಹೇಳುತ್ತಾರೆ. ಅಂಥವರು ಮನುಷ್ಯರ ಕಣ್ಣಿಗೆ ಕಾಣಿಸಿಕೊಳ್ಳುವದಿಲ್ಲ. ಅವರು ಅಂತರಂಗವಾದ ಸ್ಥಳದಲ್ಲಿ ಇರುತ್ತಾರೆ. ಅವರು ಭೂಗರ್ಭದಲ್ಲಿ ನಿಲುವಾಗಿರುತ್ತಾರೆ. ಅವರ ಅಂಗದ ಮೇಲೆ ಹುತ್ತ ಬೆಳೆದಿರುತ್ತೆ. ಅವರ ಕೂದಲುಗಳ ಜಡೆ ಬಹಳ ಉದ್ದವಾಗಿ ಬೆಳೆದಿರುತ್ತೆ. ಅವರ ಉಗುರು ಮತ್ತು ಬಲಿಯು ಮರಗಳ ಬೇರಿನಂತೆ ಅಂಥವರು ಹುಟ್ಟಿದ ಕಣ್ಣು ಮುಚ್ಚಿದ ಕೈಗಳನ್ನೆಲ್ಲಾ ಜಪಿಸುತ್ತಾ ಇರುತ್ತಾರೆ ಎಂದು ಅಜ್ಞಾನಿಗಳು ಕಥೆ ಹೇಳುತ್ತಾರೆ. ಆದರೆ ಅಂಥವರನ್ನು ಕಂಡವರು ಒಬ್ಬರಾದರೂ ಇಲ್ಲ. ಹ್ಯಾಗೂ ನಮ್ಮ ದೃಷ್ಟಿಗೆ ಗೋಚರವಾಗುವಂಥವರಲ್ಲಲೂ ಬಯಲಾಗುವವರೇ. ಹೊರ್ತು ನಿತ್ಯವಾಗಿ ಬಾಳುವವರನ್ನು ನಾವು ನೋಡಿದ್ದೂ ಇಲ್ಲ. ಕೇಳಿದ್ದೂ ಇಲ್ಲ.

ಹೀಗಿರುವಲ್ಲಿ ಸಾಯುವ ಮನುಷ್ಯರೆಲ್ಲರೂ ಏನಾಗುತ್ತಾರೆಂಬ ಆಲೋಚನೆಯು ನಮ್ಮ ಮನಸ್ಸಿಗೆ ಗೋಚರವಾಗುವದೆಂದು ತೋರುತ್ತದೆ. ಈ ಆಲೋಚನೆಯನ್ನು ಸ್ಪಷ್ಟವಾಗಿ ನಾವು ಹರೀ ಬಿಟ್ಟರೆ, ಮನುಷ್ಯರು ಈ ಲೋಕದಲ್ಲಿ ಶಾಶ್ವತವಾಗಿ ಬಾಳುವದಿಲ್ಲವೆಂದು ಚಿಂತಿತವಾಗಿ ಗೊತ್ತಾಗುತ್ತೆ. ಹೀಗೆ ಗೊತ್ತಾದ ಬಳಿಕ ಸತ್ತ ಮನುಷ್ಯನು ಏನಾಗುವನು ಇವನ ಆತ್ಮ ಏನಾಗುವದು ಎಂಬುವದು ಸ್ವಲ್ಪ ವಿಚಾರಕ್ಕೆ ಬರುತ್ತದೆ. ಇದನ್ನು ಕುರಿತು ಸ್ವಲ್ಪ ಆಲೋಚನೆ ಮಾಡಿದರೆ ದೇವರ ಬಳಿಗೆ ಸತ್ತ ಮನುಷ್ಯನು ಹೋಗುವನು ಎಂಬ ಶಬ್ದವು ಲೋಕದ ಎಲ್ಲಾ ಕಡೆಗಳಿಂದಲೂ ನಮ್ಮ ಕರ್ಣಗಳಿಗೆ ಬೀಳುವದು. ಸತ್ತ ಮನುಷ್ಯನು ದೇವರ ಬಳಿಗೆ ಯಾತಕ್ಕೆ ಹೋಗುವನೆಂದು ಯೋಚಿಸಿದರೆ ಭೂಲೋಕದಲ್ಲಿ ಜೀವಿಸಿಕೊಂಡಿದ್ದಾಗ್ಯೆ ಮಾಡಿದ ಪ್ರವೃತ್ತಿಗಳಿಗೆ ಲೆಖ್ಖವನ್ನು ದೇವರ ಬಳಿಯಲ್ಲಿ ಒಪ್ಪಿಸುವದಕ್ಕೆ ಹೋಗುವನೆಂಬ ಉತ್ತರವನ್ನು ಲೋಕದ ಎಲ್ಲಾ ಜನಗಳಿಂದಲೂ ಕೇಳಬಹುದು. ನಮ್ಮ ತಿಳುವಳಿಕೆಯಿಂದಲೂ ಗ್ರಹಿಸಬಹುದು. ಹಾಗಾದರೆ ಭೂಲೋಕದಲ್ಲಿ ಮನುಷ್ಯನು ಮಾಡಿದ್ದಕ್ಕೆ ದೇವರಿಗೆ ಉತ್ತರ ಕೊಡಬೇಕಾಗಿದ್ದ ಪಕ್ಷದಲ್ಲಿ ಭೂಲೋಕದಲ್ಲಿ ದೇವರಿಗೆ ಮೆಚ್ಚಿಕೆಯಾದ ಕೆಲಸವು ಉಂಟು. ದೇವರಿಗೆ ಮೆಚ್ಚಿಕೆಯಾಗದ ಕೆಲಸವು ಉಂಟೆಂದು ಗೊತ್ತಾಗುತ್ತದೆ. ಯಾಕೆಂದರೆ ಭೂಲೋಕದಲ್ಲಿ ನಡೆಯುವ ಎಲ್ಲಾ ಕಾರ್ಯಗಳೂ ಒಳ್ಳೆಯವುಗಳಾಗಿದ್ದರೆ ದೇವರು ಭೂಲೋಕದಲ್ಲಿ ನಡೆಸಿದ ಕಾರ್ಯಕ್ಕೆ ಮನುಷ್ಯನಿಂದ ಲೆಖ್ಖವನ್ನು ತೆಗೆದುಕೊಳ್ಳುವದು ವ್ಯರ್ಥವಾಗಿರುವದು ದೇವರು ವ್ಯರ್ಥಗಾರನಲ್ಲವೆಂದು ಸತ್ಯವೇದವು ಹೇಳುತ್ತದೆ.

ಹಾಗಾದರೆ ದೇವರು ಮೆಚ್ಚತಕ್ಕ ಕಾರ್ಯಕ್ಕೆ ಪ್ರತ್ಯುಪಕಾರವೆಂತಲೂ ಮೆಚ್ಚದ ಕಾರ್ಯಕ್ಕೆ ಶಿಕ್ಷೆಯೆಂತಲೂ ಹೇಳಬಹುದಲ್ಲವೆ? ಮತ್ತು ಮನುಷ್ಯನು ಪ್ರತ್ಯುಪಕಾರವನ್ನೂ ಶಿಕ್ಷೆಯನ್ನೂ ಹೊಂದತಕ್ಕದ್ದೆಂದು ನಮ್ಮೆಲ್ಲರಿಗೂ ತಿಳಿದಿದೆ. ಇದೇ ಹೀಗಿರುವಲ್ಲಿ ದೇವರಾದವನು ಮನುಷ್ಯನ ಆತ್ಮಕ್ಕೆ ಒಂದು ವಿಧವಾದ ಶಿಕ್ಷೆಯನ್ನು ದೇವರು ಮೆಚ್ಚುವಂಥಾ ಕಾರ್ಯಕ್ಕೆ ಒಂದು ಬಹುಮಾನವನ್ನು ಕೊಡಬೇಕೆಂದು ನಮ್ಮ ಬುದ್ಧಿಗೆ ತೋರುತ್ತೆ. ಇದ್ದರಿಂದ ಬಹುಮಾನವನ್ನು ಕೊಡುವದಕ್ಕಾಗಿಯಾದರೂ ಇಲ್ಲವೆ ಶಿಕ್ಷೆಯನ್ನು ಕೊಡುವದಕ್ಕಾಗಿಯಾದರೂ ಮನುಷ್ಯನನ್ನು ತನ್ನ ಬಳಿಗೆ ಕರೆಸುತ್ತಾನೆ. ಇದೇ ಮನುಷ್ಯನಿಗೆ ಮರಣವೆಂಬುವದು. ಹಾಗೇ ನಮ್ಮನ್ನು ಭೂಲೋಕದಿಂದ ದೇವರ ಬಳಿಗೆ ಕರೆದುಕೊಂಡು ಹೋಗುವದಕ್ಕೆ ಬರುವಂಥದ್ದೇ ಮರಣವೆಂದು ನಾವು ತಿಳಿಯುತ್ತೇವೆ. ಈ ಮರಣದಲ್ಲಿ ಮುಖ್ಯಪ್ರಶ್ನೆ ಇದೆ. ಇದು ದೇವರ ಶಿಕ್ಷೆಯನ್ನು ಅಪೇಕ್ಷಿಸುವ ಒಬ್ಬ ದುಷ್ಟ ಸೇವಕನಾಗಿರುತ್ತಾನೆ. ಇವನು ಆದರೆ ಮರಣರೂಪದ ಮನುಷ್ಯನ ಪ್ರತಿನಿಧಿಯಾಗಿ ಒಪ್ಪತಕ್ಕವನನ್ನು ಮಾಡುವದು ನಮ್ಮಗೆಲ್ಲರಿಗೆ ಗೋಚರವಾಗಿದೆ. ಇದನ್ನು ಬಿಟ್ಟು ಮನುಷ್ಯನಾಗಿ ಹುಟ್ಟಿದವನು ದೇವರಿಗೆ ಹಿತವಾದ ಕಾರ್ಯವನ್ನೇ ಮಾಡಬೇಕು. ಹಾಗೆ ಮಾಡದೆ ಹೋದರೆ ಮನುಷ್ಯಜನ್ಮವು ಸಾರ್ಥಕವಾಗುವದಿಲ್ಲ. ಮನುಷ್ಯನು ಎಲ್ಲಾ ವಿಷಯಗಳನ್ನು ದೇವರಿಗೆ ಮೆಚ್ಚಿಕೆಯಾಗುವಂತೆ ಮಾಡಬೇಕು. ಇದ್ದರೆ ಒಬ್ಬ ಸದ್ಗುರುವನ್ನು ಹಿಡಿದು ಪೀಠದ ಸದ್ಗುರುವಿನ ಉಪದೇಶವನ್ನು ಹೊಂದಿ ಅದರಂತೆ ನಡೆಯುವವನಿಗೆ ಸದ್ಗುರುವು ತನ್ನ ಬಲವನ್ನು ಕೊಟ್ಟು ಕಷ್ಟವನ್ನು ಪರಿಹರಿಸಿ ಒಳ್ಳೇ ದಾರಿಯನ್ನು ತೋರಿಸಿ ವಿವೇಕಗಳನ್ನು ಕೊಡುವನು. ಅಂಥಾ ಸದ್ಗುರುವು ಈ ಲೋಕದಲ್ಲಿ ಯಾರಿದ್ದಾರೆ ಎಂದು ಯೋಚಿಸುವಾಗ ಅನೇಕರು ಮನುಷ್ಯರೇ ಅಂಥಾ ಗುರುಗಳೆಂದು ಅವರನ್ನು ನಂಬಿಕೊಂಡಿರುತ್ತಾರೆ. ಮನುಷ್ಯನು ಗುರುವಾಗ ಕೂಡದೆಂದು ಸತ್ಯವೇದವು ಹೇಳುತ್ತೆ. ಹಾಗೆ ಮನುಷ್ಯನು ಗುರುವಾಗ ಕೂಡದ ಬಳಿಕ ಇನ್ಯಾರು ಗುರುವಾಗಬಹುದೆಂದು ಯೋಚಿಸುವಲ್ಲಿ ದೇವರೇ ಅಂಥಾ ಗುರುವಾಗಿರ ಬೇಕೆಂದು ಯೋಚನೆಗೆ ಹತ್ತುವದು. ಹಾಗೆ ದೇವರೇ ಗುರುವಾಗಿ ಈ ಲೋಕದಲ್ಲಿ ಯಾರು ಇದ್ದಾರೆ ಎಂದು ಪರಿಶೋಧನೆ ಮಾಡಿದರೆ ಜ್ಞಾನಿಗಳೂ, ವೇದವು ಜಗದ್ಗುರುವಿನಾದ ಏಸುಕ್ರಿಸ್ತನೊಬ್ಬನೇ ಇನ್ಯಾರೂ ಈ ಜಗತ್ತಿನಲ್ಲಿ ಮೃಗರು ಇಲ್ಲವೆಂದು ಸಿದ್ಧಾಂತ ಇರುತ್ತದೆ. ಹಾಗಾದರೆ ಈ ಜಗದ್ಗುರುವಿನ ಏಸುಕ್ರಿಸ್ತ ಸ್ವಾಮಿಯನ್ನು ನಂಬಿದವರಿಗೆ ಏನು ಸಿದ್ಧಿಯೆಂದು ಕೇಳಿದರೆ ಬಾಪ್ಟಿಸ್ಮದಲ್ಲಿ ಕ್ರಿಸ್ತಸ್ವಾಮಿಯು ಸಂಗರು ನಾವಾಗಿರುತ್ತೇವೆಂದು ಒಪ್ಪಿಕೊಳ್ಳುವದು ಸಾಲದು. ಬಾಪ್ಟಿಸ್ಮದಲ್ಲಿಯೂ ಅಂತ್ಯದಲ್ಲಿಯೂ ಒಪ್ಪಿಕೊಂಡು ಅತನ ಅನುಗ್ರಹವನ್ನು ಪಡೆದು ಅತನ ನಿಜ ಶಿಷ್ಯನಾಗದೇ ಕಾ ಅಂಥವರಿಗೆ ಮರಣವಿಲ್ಲವೋ? ಕ್ರಿಸ್ತನನ್ನು ಹೃದಯಾಂತರದಲ್ಲಿ ನಂಬಿ ಅತನ ಅನುಗ್ರಹ ಪಡೆದವರು ಸಾಯುವದಿಲ್ಲವೋ? ಅವರಿಗೆ ನರಕಕ್ಕೆ ಇಲ್ಲವೋ? ಈಗ ಕ್ರಿಸ್ತನನ್ನು ನಂಬದವರು ನಿರಂತರವಾಗಿ ಬದುಕುತ್ತಾರೆಂದು ನಾವು ಇಂಥವರಿಲ್ಲ ಎಂದು ಸ್ಪಷ್ಟವಾಗಿ ಹೇಳಬಹುದಿಲ್ಲ! ಹಾಗಾದರೆ ಕ್ರಿಸ್ತಸ್ವಾಮಿಯನ್ನು ನಂಬುವದರಿಂದ ಏನಾಗುತ್ತೆ ಎಂದು ಅನೇಕರು ಕೇಳುತ್ತಾರೆ. ಇದಕ್ಕಾಗಿ ಒಂದು ಕಥೆಯನ್ನು ಈ ಕೆಳಗೆ ಉದಾಹರಿಸುತ್ತೇವೆ.

ಒಬ್ಬ ಅರಸನು ಒಂದು ತೋಟವನ್ನು ಮಾಡಿದ್ದನು. ಆ ತೋಟದಲ್ಲಿ ಎರಡು ಮಾವಿನ ಗಿಡಗಳು ಹುಟ್ಟಿದ್ದವು. ಅವು ಒಂದೇ ಮಾದಿರಿಯಾಗಿ ಆ ಗಿಡಗಳಲ್ಲಿ ಯಾವ ವ್ಯತ್ಯಾಸವೂ ಕಾಣಿಸಲಿಲ್ಲ ಮತ್ತು ಆ ಎರಡು ಮಾವಿನ ಗಿಡಗಳಲ್ಲಿಯೂ ಇದು ಹುಳಿಯಾದದ್ದು ಇದು ಸಿಹಿಯಾದದ್ದು ಎಂದು ಭೇದವು ಕಾಣಿಸಲಿಲ್ಲ. ಕೆಲವು ಕಾಲದ ನಂತರ ಎರಡು ಗಿಡಗಳಲ್ಲಿಯೂ ಫಲವಾಯಿತು. ಆದರೆ ಕಾಯಿಗಳಲ್ಲಿಯೂ ಯಾವ ವ್ಯತ್ಯಾಸವೂ ಕಾಣಿಸಲಿಲ್ಲ. ನಂತರ ಪಕ್ವಕಾಲ ಸಮೀಪಿಸಲಾಗಿ ಅರಸನು ಆ ಎರಡು ಗಿಡಗಳ ಕಾಯಿಗಳನ್ನು ಕೊಯಿಸಿ ಬೇರೆ ಬೇರೆ ಹಣ್ಣು ಮಾಡಿಸಿ ತಿಂದು ನೋಡಲು ಒಂದು ಗಿಡದ ಹಣ್ಣು ಸಿಹಿಯಾಗಿತ್ತು, ಇನ್ನೊಂದರದು ಹುಳಿಯಾಗಿತ್ತು. ಆಗ ಅರಸನು ಒಬ್ಬ ಆಳನ್ನು ಕರೆದು, ಆತನ ಕೈಯಲ್ಲಿ ಒಂದು ಗುದ್ದಲಿಯನ್ನು ಕೊಟ್ಟು ತನ್ನ ತೋಟದಲ್ಲಿರುವ ಎರಡು ಮಾವಿನ ಗಿಡಗಳನ್ನು ಬೇರುಸಹಿತ ಉರುಳಿಸುವಂತೆ ಆಜ್ಞೆಯನ್ನು ಕೊಟ್ಟನು. ಆಗ ಆಳು ರಾಜಾಜ್ಞೆಯಂತೆ ಎರಡು ಮಾವಿನ ಗಿಡಗಳನ್ನು ಬೇರುಸಹಿತ ಗುದ್ದಲಿಯಿಂದ ಕಿತ್ತು ಅರಸನಿಗೆ ತಿಳಿಸಲು ಅರಸನು ಮಾವಿನವುಗಳನ್ನು ಎಲ್ಲಾ ಹೊಡಿಸಿ ಒಳೆಯ ಸದ್ವರವಾಗಿ ಉಪಯೋಗಿಸುವಂತೆಯೂ ಈ ಹುಳಿಯದ್ದನ್ನು ಅರವುನ ಮುಂದೆ ಒಳ್ಳೇ ಫಲ ಕೊಡಲು ಚಿಗುರಿಂದ ಇರುವಂತೆ ನೆಡುವ ಹಾಗೆಯೂ ಅಪ್ಪಣೆ ಕೊಟ್ಟನು. ಹಾಗೆಯೇ ಸೇವಕನು ಮಾಡಿದನು. ಇದು ಒಂದು ಸಾಮ್ಯ ಇದರಿಂದ ತಿಳಿಯತಕ್ಕ ಬೋಧನೆ ಏನೆಂದರೆ.

ಈ ಭೂಲೋಕದಲ್ಲಿ ಭಕ್ತರೂ ಭಕ್ತಿಹೀನರೂ ಇದ್ದಾಗ್ಯೂ ಅವರು ಇರುವಾತ್ರಗಳೂ ಒಂದೇ ಭಾಷೆ ಅವರುಗಳಲ್ಲಿ ಯಾವ ವ್ಯತ್ಯಾಸವೂ ಕಾಣುವದಿಲ್ಲ ಆದರೆ ಗುಣದಲ್ಲಿ ಕಾಣುವದು. ಭಕ್ತರಿಗೂ ಭಕ್ತಿಹೀನರಿಗೂ ಮರಣದ ವಿಷಯದಲ್ಲಿ ಇರುವ ವ್ಯತ್ಯಾಸವೇನು ಹೀಗಿರುವದು ಭಕ್ತರು ಸಾಯುವದಿಲ್ಲ ಅವರು ಅಮರತ್ವವನ್ನು ಹೊಂದುವರು. ಎಂದೆಂದಿಗೂ ಜೀವಿಸುವ ಭಕ್ತಿಗೆ ಮೂಲಾಧಾರವಾದವನು ಮರಣಪಟ್ಟು ತಿರಿಗಿ ಎದ್ದು ನಿರಂತರವಾಗಿ ಜೀವಿಸುವ ಪರಮಾತ್ಮ ಸ್ವರೂಪನಾದ ಏಸುಕ್ರಿಸ್ತನೇ ಅಧಿಕಾರಿಯಾಗಿರುವದರಿಂದ ಇದನ್ನು ಓದಿ ಕೇಳುವ ನನ್ನ ಮಿತ್ರನೇ ನೀವು ಸಾಯದೆ ನಿರಂತರವಾಗಿ ಬದುಕಬೇಕೆಂಬ ಆಶೆ ನಿಮಗಿದ್ದರೆ ನಿರಂತರವಾಗಿ ಬದುಕುವ ಕ್ರಿಸ್ತಸ್ವಾಮಿಯ ಬಳಿಗೆ ಬನ್ನಿರಿ. ಆಶ್ರೀತರಿಗೆ ಜ್ಞಾನವನು ನಿಜವಾಗೂ ಅನುಗ್ರಹವನ್ನು ಕೊಟ್ಟು ಪರಲೋಕದಲ್ಲಿ ತನ್ನ ಉದ್ಯಾನವನದಲ್ಲಿ ನಿರಂತರವಾಗಿ ಬದುಕಲು ತನ್ನ ದಿವ್ಯ ವರಹಸ್ತ ಕೊಡುವನು.

ಸ್ವದೇಶ ವೃತ್ತಾಂತಗಳು.

ಈ ದಿನ ಸಾಯಂಕಾಲ ಶ್ರೀಮನ್ ಮಹಾರಾಜರವರು ವಿರಾಜ ಖಾತ್ಯರಾಗಿ ಸೀಲಿಗೆಗೆ ಪ್ರಯಾಣ ಹೊರಡುವ ರಾಗಿರು

ಕಳೆದ ಗುರುವಾರ ಸಾಯಂಕಾಲ ೪|| ಘಂಟೆಯ ಹೊತ್ತಿನಲ್ಲಿ ಇಲ್ಲಿನ ಪಿಕ್ಸ್ ರೋಡಿನಲ್ಲಿ ಹೊಸಬೀದಿಯ ಏನಾರು ಮಾರ್ಕ್ಸ ರಲ್ಲಿ ಬಂದು ಮನೆಯು ಇದ್ದಕ್ಕಿದ್ದ ಹಾಗೆ ಆಹುತಿ ಯಾಯಿತು

ಸೋಮವಾರದಲ್ಲಿ ಟೌನ್ ಬಂಗಲೆಯಲ್ಲಿ ಸಾಜಸದಲ್ಲಿದ್ದ ಹುಲಿಯು ಪಾಸಿಗೆಯ ತಪ್ಪಿಸಿಕೊಂಡು ಹೊರಗೆ ಬಂದು ಜನರಿಗೆ ಬಹು ಭೀತಿಯನ್ನುಂಟುಮಾಡಿತು ಆದರೆ ಅಷ್ಟರಲ್ಲಿ ಅದನ್ನು ಬಹು ಪ್ರಯತ್ನದಿಂದ ಗೂಡಿಗೆ ಸೇರಿಸಿದರಂತೆ ಒಳ್ಳೆ ಅದೃಷ್ಟವೇ ಸರಿ

ಕಳೆದ ಶುಕ್ರವಾರ ಮತ್ತು ಮಂಗಳವಾರ ಸಾಯಂಕಾಲಗಳಲ್ಲಿ ರಾಜಧಾನಿಯಲ್ಲಿ ಒಳ್ಳೆ ಮಳೆಯಾಯಿತು ಇದರಿಂದ ಕುಡಿಯುವ ನೀರಿಗೆ ಸ್ವಲ್ಪರಮು ಉಂಟಾಯಿತು ಕುಕ್ಕರಹಳ್ಳಿ ಕೆರೆಯಲ್ಲಿ ತುಂಬಿನವರಿಗೂ ನೀರು ಬಂದರುತ್ತೆ ಇನ್ನು ೩-೪ ತಿಂಗಳು ಭಯವಿಲ್ಲ ಜನರ ಕಷ್ಟವು ನಿವಾರಣವಾಗಿದೆ

ಮಾಗಸೂರಿನಲ್ಲಿ ನಡೆದ ರಥೋತ್ಸವಕ್ಕೆ ಮೈಸೂರಲ್ಲಿರುವ ಮ ವೀಣೆ ಶೇಷಣ್ಣನವರ ಶಿಷ್ಯವರ್ಗಗಳು ಅಲ್ಲಿಗೆ ಹೋಗಿ ಅಲ್ಲಿನ ಉತ್ಸವದಲ್ಲಿ ಸೊಗಸಾದ ಸಂಗೀತ ಉದ್ಯೋಗಸ್ಥರಿಗೂ ಇತರ ದೊಡ್ಡ ಮನುಷ್ಯರಿಗೂ ತಮ್ಮ ವಿದ್ಯೆಯನ್ನು ಪ್ರಕಾಶಗೊಳಿಸಿ ಎಲ್ಲರಿಂದ ಮರ್ಯಾದೆಯನ್ನುಂಟು ಮಾಡಿದರೆಂದು ಕೇಳುತ್ತೇವೆ

ನಿರುಪದ್ರ ಗಜ, ಅಶ್ವ, ಅಂಗುಲಗಳ ಪ್ರಮಾಣವನ್ನು ಗೊತ್ತು ಮಾಡಿ ಅದರ ನಕಲನ್ನು ಪ್ರತಿ ಡಿಸ್ಟ್ರಿಕ್ಟು ಸಬ್ ಡಿವಿಜನ್ ಮತ್ತು ತಾಲ್ಲೋಕು ಆಫೀಸುಗಳಲ್ಲಿ ಬಹಿರಂಗವಾದ ಸ್ಥಳದಲ್ಲಿ ಸ್ವಲ್ಪವೂ ಅಳ್ಳಿ ಹೋಗದಂತೆ ಜೋಡಿಸಿರಬೇಕೆಂದು ಗೌರ್ನಮೆಂಟಿನವರು ಹುಕುಂ ಮಾಡಿರುತ್ತಾರೆ

ನಮ್ಮ ಮೈಸೂರು ರೈಲು ಮಾರ್ಗದ ಕೂಲಿಗಳ ಕಷ್ಟಗಳ ವರಗೂ ಪ್ಯಾಸಿಂಜರುಗಳು ವಿದ್ಯಾರ್ಥಿಗಳು, ಅವಕ್ಕೆ ತಕ್ಕ ಆನುಕೂಲ ಗಳೂ ತೃಪ್ತವಾಗಿ ಜರುಗುತ್ತಲಿರುವುದು ಆದು ಪ್ರಾಪ್ತಸುವ ತನಕ ಬೆಂಗಳೂರಿನಿಂದ ನಂಜನಗೂಡಿನ ವರೆಗೂ ರೈಲ್ವೆ ಜಂಕ್ಷನ್ನನ್ನು ಮೈಸೂರು ಸರ್ಕಾರದವರೇ ವಹಿಸಿರತಕ್ಕದ್ದೆಂದು ಇಂಡಿಯಾ ಗೌರ್ನಮೆಂಟಿನವರು ಅಪ್ಪಣೆ ಮಾಡಿರುತ್ತಾರೆ.

ಬೆಂಗಳೂರು ಪೇಟೆಯಲ್ಲಿದ್ದ ಮಹಮದೀಯ ಬಾಲಿಕಾ ಪಾಠಶಾಲೆಗೆ ಗೌರ್ನಮೆಂಟಿನವರು ಮಾಸೋಪಹಾರ ೩೦ ರೂಪಾಯಿ ಗ್ರಾಂಟನ್ನು ಕೊಡುತ್ತಿದ್ದರು ಈಚೆಗೆ ಅಲ್ಲಿನ ಕೆಲಸಗಳು ಸರಿಯಾಗಿ ನಡೆಯುತ್ತಲಿಲ್ಲ ವೆಂದು ತಿಳಿದು ಆ ಗ್ರಾಂಟನ್ನು ತಪ್ಪಿಸಿ ಅದೇ ೩೦ ರೂಪಾಯಿಗಳ ಬದಲಿಗೆ ಬೇರೆ ಒಂದು ಮಹಮ್ಮದೀಯ ಬಾಲಿಕಾ ಪಾಠಶಾಲೆಯು ಪ್ರತ್ಯೇಕವಾಗಿ ಸ್ಥಾಪಿಸಿ ಸ್ವೇಚ್ಛವಾಗಿರುತ್ತೆ

ಮೈಸೂರು ಡಿಸ್ಟ್ರಿಕ್ಟಿಗೆ ಸೇರಿದ ಎಲ್ಲಾ ತಾಲ್ಲೋಕು ಸ್ಕೂಲುಗಳಲ್ಲಿನ ಅಸಿಸ್ಟೆಂಟ್ ಮಾಸ್ತರುಗಳೂ ರಾಜಧಾನಿಗೆ ಬರಬೇಕಾಗಿರುತ್ತೆ ಇವರು ೬೧ ಮಂದಿ ಇದ್ದಾರೆ ಇವರಿಗೆ ಕೃಷಿಸೈನ್ಸ್ ಮತ್ತು ಆರೋಗ್ಯಶಾಸ್ತ್ರಗಳಲ್ಲಿ ಉಪನ್ಯಾಸಗಳನ್ನು ಮಾಡುತ್ತಿದ್ದಾರೆ ಪ್ರಾರಂಭದಲ್ಲಿ ೨-೩ ದಿನಗಳ ವರೆಗೂ ಕಾಲೇಜ್ ಹಾಲಿನಲ್ಲಿ ಸೇರುತ್ತಿದ್ದರು ಈಗ ಮಹಾರಾಣಿ ಬಾಲಿಕಾ ಪಾಠಶಾಲೆಯಲ್ಲಿ ಸೇರುತ್ತಾರೆ

ಹಾಸನಾದಿಂದ ೨ ನೇ ಏಪ್ರಿಲ್ ಶುಕ್ರವಾರ ರಾತ್ರಿ ಸುಮಾರು ೭ ಘಂಟೆಯಿಂದ ೯ ಘಂಟೆಯ ವರೆಗೂ, ಪುನಹ ರಾತ್ರಿ ೨ ಘಂಟೆಯಿಂದ ೪ ಘಂಟೆಯ ವರೆಗೂ ವಿಪರೀತ ಮಳೆಯಾಯಿತು ಇದರಿಂದ ಆ ಜಾಗದ ಕೃಷಿಕರುಗಳು ಸಂತೃಪ್ತರಾಗಿರುವರೆಂದು ವ್ಯಾಪಾರಿಗಳ ಹೊಸ ಬೆಳೆ ಬರುಗಳ ವೇಳೆಗೆ ಅಕ್ಕಿಯ ಬೆಲೆಯು ಕಡಿಮೆಯಾಗುತ್ತಿದ್ದ ಧಾನ್ಯಗಳನ್ನು ತಪ್ಪಿಸಿ ಹಂಗಾಮಿಯನ್ನುಂಟುಮಾಡಿದೆ ಎಂಬುದಾಗಿ ಅಲ್ಲಿನ ಮುಖ್ಯಸ್ಥರು ಬರೆಯುತ್ತಾರೆ

ಅಮೃತಮಹಲ್ ಕಾವಲುಗಳಲ್ಲಿ ಮೇಯುವ ಪ್ರತಿ ದನಗಳಿಗೂ ಹುಲ್ಲುಗಾವಲು ಪ್ರಕಾರ ರುಸುಮ ವಸೂಲು ಮಾಡಲಿದೆ ಇದು ಬಳಿ ಸ್ವಲ್ಪ ಇದನ್ನು ಜಾರಿ ಮಾಡಬೇಕೆಂದು ದಿವಾನರು ತಪ್ಪಿಸ್ಸು ಡೆಪ್ಯುಟಿ ಕಮಿಷನರ್ ರವರು ಗೌರ್ನಮೆಂಟಿನವರ ಅಪ್ಪಣೆಯನ್ನು ಕೇಳಿದ್ದಕ್ಕೆ ಇಂಥಾ ಅಲ್ಪ ವಿಷಯಕ್ಕೆಲ್ಲಾ ರುಸುಮ ಹೆಚ್ಚಿಸೋಣವರಿಂದ ಜನಗಳ ಅತೃಪ್ತಿಗೆ ಆಸ್ಪದ ವಾಗುವದೇ ವಿನಹ ಅದರಿಂದ ಆಗುವ ಪ್ರಯೋಜನವು ಅಷ್ಟರಲ್ಲೇ ಇದೆ ಆದ್ದರಿಂದ ಯಥಾಪ್ರಕಾರ ನಾಲ್ಕಾಣೆಯ ಕರವನ್ನೇ ಖಾಯಂ ಮಾಡಿದೆ ಎಂಬುದಾಗಿ ಹುಕುಂ ಮಾಡಿರುತ್ತೆ

ಕಳೆದ ಶುಕ್ರವಾರ ಸಾಯಂಕಾಲ ೬ ಘಂಟೆ ರೈಲಿನಲ್ಲಿ ಮಿಸ್ ಕಾಮುಬಾಯಿ ಶಾಸ್ತ್ರೀ ಎಂಬುವಳು ರಾಜಧಾನಿಗೆ ಬಂದರು ವಿದ್ಯಾಧಿಕಾರಿಗಳಾದ ಮಹಾಶಯರಾದ ಡಾಕ್ಟರ್ ಪ್ಲೀನ್ ಸ್ಪೆನ್ಸರ್ ಸಿನ ವಿಯ ರಿಗೆ ಮಿಸ್ ಗೋವಿಂದರಾಜುಲುರವರು ಇದ್ದ ಎಂಗಲಿಯಲ್ಲಿ ಇಳಿದುಕೊಂಡಿದ್ದಾರೆ ಇವರು ಬೆಂಗಳೂರಿನವರು ಸಂಸ್ಕೃತ ಮತ್ತು ಇಂಗ್ಲೀಷುಗಳಲ್ಲಿ ಬಿ.ಎ ಪ್ಯಾಸ್ ಮಾಡಿರುತ್ತಾರೆ ಇಲ್ಲಿನ ಮಹಾರಾಣಿ ಬಾಲಿಕಾ ಪಾಠಶಾಲೆಗೆ ಹೆಡ್ ಉಪಾಧ್ಯಾಯಿನಿಯಾಗಿ ನೇಮಿಸಲ್ಪಟ್ಟಿದ್ದಾರೆ ಇವರಿಗೆ ಮಾಹೆಯಾನಾ ೨೦೦ ರೂಪಾಯಿ ಸಂಬಳವಂತೆ ಗರ್ಲ್ಸ್ ಸ್ಕೂಲಿನಲ್ಲಿ ಈಗ ಹೆಡ್ ಮಾಸ್ತರಾಗಿರುವ ಮ|| ಜಿ ಕೃಷ್ಣರಾಯರನ್ನು ಬೇರೆ ಕಡೆಗೆ ವರ್ಗ ಮಾಡುವವರಾಗಿದ್ದಾರೆ

ಮೈಸೂರು ಲೇಜಿಸ್ಲೇಟಿವು ಕೌನ್ಸಿಲುಗಳ ಮಿಟಿಂಗ್.

ಕಳೆದ ೨೫ನೇ ಭಾನುವಾರ ಪ್ರಾತಃಕಾಲ ಮೈಸೂರು ಟೌನ್‌ಹಾಲಿನಲ್ಲಿ ಮೈಸೂರು ಲೆಜಿಸ್ಲೇಟಿವುರವರುಗಳು ಸಭೆ ಸೇರಿದ್ದರು ಆಗ ಮ|| ಅಧ್ಯಕ್ಷ(ನರಸಿಂಹ ಅಯ್ಯಂಗಾರ್ಯ) ಆಗ್ರಾಸನವನ್ನು ವಹಿಸಿದ್ದರು ಈ ಸಂಘದ ಸಕ್ರೆಟರಿಯವರಾದ ಮ|| ಸುಬ್ಬರಾಯರು ಆ ದಿವಸ ಮಿಟಿಂಗಿನ ಉದ್ದೇಶಗಳನ್ನು ವ್ಯಕ್ತಪಡಿಸಿ, ಹಿಂದೆ ಮುಂದೆಯೂ ಸಭೆ ಸೇರಿದಾಗೆಲ್ಲಾ ತಮಗೆ ಅನುಕೂಲಗಳನ್ನು ತಿಳಿಸಿ, ನಮ್ಮ ಕೆಲಸಕ್ಕೆ ರಾಜ್ಯವು ಕೊಟ್ಟಿಲ್ಲದೆ ಮ|| ಕೃಷ್ಣರಾಯರು ಸ್ಟೇಟಿಗಳಿಗೂ ನಮ್ಮ ವಂದನೆಯನ್ನು ಅರ್ಪಿಸುತ್ತೇವೆ ಎಂದು ಹೇಳಿದರು

೨ ಮ|| ವೆಂಕಟಕೃಷ್ಣಯ್ಯನವರು ಈ ರೆಜಿಸ್ಟರುಗಳು ಆಗ್ರಾಸ್ಯ ಸಭೆ ಸೇರುವದರಿಂದ ಉಂಟಾಗುವ ಪ್ರಯೋಜನಗಳನ್ನೂ ಮತ್ತು ಸಭೆಯನ್ನು ನಡೆಸುವ ಕ್ರಮಗಳನ್ನೂ ತಿಳಿಯಪಡಿಸಿದರು

೩ ಮ|| ವೆಂಕಟಕೃಷ್ಣಯ್ಯನವರು ಈ ಸಭೆಗೆ ಮ|| ರಂಗಸ್ವಾಮಿಗಳನ್ನು ಪ್ರಸಿಡೆಂಟರನ್ನಾಗಿಯೂ, ಮ|| ಚನ್ನಯ್ಯನವರನ್ನು, ಮ|| ನರಸಯ್ಯನವರುಗಳನ್ನೂ ಈ ಸಂಘದ ಸಕ್ರೆಟರಿಗಳನ್ನಾಗಿಯೂ ಸಭೆಯವರು ನೇಮಿಸಬೇಕೆಂದು ತಮ್ಮ ಅಭಿಪ್ರಾಯವನ್ನು ಕೇಳಿಕೊಂಡರು ಅದೇ ಪ್ರಕಾರ ಎಲ್ಲರೂ ಒಪ್ಪಿದ್ದರಿಂದ ಇವರುಗಳು ಆಯಾ ಕೆಲಸಕ್ಕೆ ನೇಮಿಸಲ್ಪಟ್ಟರು

೪ ಮ|| ವೆಂಕಟಕೃಷ್ಣಯ್ಯನವರು ಒಂದು ಎಕ್ಸಿಕ್ಯುಟಿವ್ ಕಮಿಟಿಯನ್ನು ನಿಷ್ಕರ್ಷಿಸಬೇಕೆಂತಲೂ, ಅದಕ್ಕೆ ಮ್ಯುನಿಸಿಪಲಿಟಿಗೆ ಚುನಾಯಿಸಿದಂತೆ ಪ್ರತಿ ಬೀದಿಯ ಮೆಂಬರುಗಳ ಪ್ರಕಾರ ಮೆಂಬರುಗಳನ್ನು ಚುನಾಯಿಸಬೇಕೆಂತಲೂ ಸಭೆಯಲ್ಲಿ ಪ್ರಪೋಸ್ ಮಾಡಿದರು ಸಭೆಯವರೆಲ್ಲರೂ ಅದರಂತೆ ಒಪ್ಪಿದ್ದರಿಂದ ಮುಂದೆ ತಿಳಿಸುವ ರೀತಿಯಾಗಿ ಬೀದಿಗಳಿಗೆ ಒಪ್ಪಿದ್ದ ಮೆಂಬರುಗಳನ್ನು ಚುನಾಯಿಸಿದರು

೫ ಕಮಿಟಿಯ ಮೆಂಬರುಗಳು.

೧ ಲಕ್ಷ್ಮೀ ಮೊಹಲ್ಲಾ—ಮ|| ನಾರಾಯಣರಾಯರು ಮತ್ತು ಮ|| ಕೃಷ್ಣಯ್ಯಂಗಾರ್ಯ

೨ ಲಷ್ಕರ್ ಮೊಹಲ್ಲಾ—ಮ|| ಅನಂತರಾಮಯ್ಯನವರು ಮತ್ತು ಮ|| ರಘುನಾಥಲಿಂಗ ಸಟ್ಟಿ

೩ ಮಂಡಿ ಮೊಹಲ್ಲಾ—ಮ|| ಶಾಮಣ್ಣನವರು ಮತ್ತು ಮ|| ಮಾದಪ್ಪನವರು

೪ ಕೃಷ್ಣರಾಜ ಮೊಹಲ್ಲಾ—ಮ|| ವಸ್ತುವಿಲಾಸು ಪೇಟೆರು ಮತ್ತು ಮ|| ಪುಟ್ಟಣ್ಣನವರು

೫ ಚಾಮರಾಜ ಮೊಹಲ್ಲಾ—ಮ|| ನರಸಿಂಗರಾಯರು ಮತ್ತು ನಾರಾಣಯ್ಯಂಗಾರ್ಯ

೬ ದೇವರಾಜ ಮೊಹಲ್ಲಾ—ಮ|| ಅಪ್ಪನ್ನಿಯಾ ಸಾಹೇಬರು ಮತ್ತು ಮ|| ಸೀತಾರಾಮಶಾಸ್ತ್ರಿ

೭ ನಜರಬಾದ ಮೊಹಲ್ಲಾ—ಮ|| ವೆಂಕಟರ್ಮನಸ್ವಾಮಿ ಬರು ಮತ್ತು ಮ|| ಸುಬ್ಬಣ್ಣನವರು

ಈ ಮೆಂಬರುಗಳು ೧೫ ಕಡೆಯಲ್ಲಿ ಭಾವ ೭ ಮಂದಿ ಜಾರಿಯಲ್ಲಿರುವ ಮಿಟಿಂಗ್ ನಡೆಸಬಹುದು ಮತ್ತು ಈ ಕಮಿಟಿಯವರು ಆವಶ್ಯವಿದ್ದಲ್ಲಿ ಮೆಂಬರುಗಳನ್ನು ಹೆಚ್ಚಿಸಿಕೊಳ್ಳಬಹುದು

೬ ಮಿಟಿಂಗಿನಲ್ಲಿ ವ್ಯಸನ ರೆಜೊಲ್ಯೂಷನ್‌ಗಳು

೧ ಪ್ರತಿ ರಿಪೇರಿ ಮಸ್ತಾನ ಪಾಲೀಜು ವಿಷಯವಾಗಿ ಮುರ, ಟಕ್ಕಲುಗಳನ್ನು, ಚರಂಡಿಗಳನ್ನೂ ಶುಚಿ ಮಾಡುವ ವಿಷಯದಲ್ಲಿಯೂ, ಈಗ ನಡೆಯುವ ಕೆಲಸಗಳು ಬಹು ಅಸಮರ್ಪಕವಾಗಿವೆ ಮತ್ತು ದೊಡ್ಡ ದೊಡ್ಡ ರಸ್ತೆಗಳಲ್ಲೂ ೭-೮ ಘಂಟೆಯ ಹೊತ್ತಿನಲ್ಲಿ ಕಸಗುಡಿಸುವವರು ಗುಡಿಸುತ್ತಿರುವರು ಇದು ಜನರಿಗೆ ತೊಂದರೆಯಾಗಿದೆ ಸ್ವಲ್ಪನ್ನ ದಿವಸಗಳಲ್ಲೂ, ಸಂದಿಗೊಂದಿಗಳಲ್ಲೂ ೧-೧೦ ದಿವಸದ ಕಸ ಇದ್ದರೂ ತೆಗೆಯುವುದೇ ದುರ್ಲಭ ಆದದರಿಂದ ಬೆಳಗ್ಗೆ ೭ ಘಂಟೆಗೆ ಮುಂಚಿತವಾಗಿ ಸ್ಕ್ಯಾವೆಂಜರ್ಸ್‌ಗಳು ಪ್ರತಿರಸ್ತೆಯನ್ನು ಪೂರಾ ಶುದ್ಧಮಾಡುವಂತೆ ಆಗಬೇಕೆಂಬುದಾಗಿ ಒಂದು ರೆಜೊಲ್ಯೂಷನ್ ಮ್ಯೂನಿಸಿಪಲ್ ಪ್ರೆಸಿಡೆಂಟರಿಗೆ ಕಳುಹಿಸಬೇಕೆಂದು ಮ|| ವಾಸುದೇವನವರು ಪ್ರಪೋಸ್ ಮಾಡಿದ್ದನ್ನು ಎಲ್ಲರೂ ಅನುಮೋದಿಸಿದರು

೨ ಪಟ್ಟಣದ ದೊಡ್ಡ ದೊಡ್ಡ ರಸ್ತೆಗಳ ಉಭಯ ಪಾರ್ಶ್ವಗಳಲ್ಲೂ ಕಲ್ಲಿನ ಚರಂಡಿಗಳನ್ನು ಕಟ್ಟಿಸಿ ಅವುಗಳನ್ನು ಹ್ಯಾಗೆ ಶುಚಿಮಾಡಿ ರೀತಿಯಲ್ಲಿ ಇಡಿಸಿರುತ್ತಾರೋ ಅದೇ ಪ್ರಕಾರ ಸಣ್ಣ ಸಣ್ಣ ಗಲ್ಲಿಗಳಲ್ಲೂ ಮತ್ತು ರಸ್ತೆಗೆ ಸೇರುವ ಇತರ ಸ್ಥಳಗಳಲ್ಲೂ ನಿಯಮಿತ ಕಲ್ಲಿನ ಚರಂಡಿಗಳನ್ನೇ ಕಟ್ಟಿಸಿಕೊಡಬೇಕೆಂತಲೂ, ಅವುಗಳನ್ನು ಕಾಲಕಾಲಕ್ಕೆ ಶುಚಿ ಮಾಡಿಸುವಂತೆಯೂ ಒಂದು ರೆಜೊಲ್ಯೂಷನ್ ಮಾಡಿ ಮ್ಯೂನಿಸಿಪಲ್ ಪ್ರೆಸಿಡೆಂಟರಿಗೆ ಕಳುಹಿಸಿ ಕೊಡಬೇಕೆಂದು ಮ|| ಪುಟ್ಟನಂಜಪ್ಪನವರು ಪ್ರಪೋಸ್ ಮಾಡಿದ್ದನ್ನು ಸಭಿಕರೆಲ್ಲರೂ ಅನುಮೋದಿಸಿದರು

೩ ಪಟ್ಟಣದಲ್ಲಿ ಜರುಗಿಸುವ ಕಸವನ್ನು ಆ ಕೂಡೆ ಸುರಿಸುವಂತೆ ಈಗ ನಿರ್ಮಿಸಿದ್ದು ಕಸದಗಾಡಿಗಳಿಲ್ಲದ್ದರಿಂದ, ಮ್ಯೂನಿಸಿಪಾಲಿಟಿಯವರು ಹೆಚ್ಚು ಗಾಡಿಗಳನ್ನು ಇಟ್ಟು ಕಸವನ್ನು ಸಾಗಿಸುವದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡಿಸಿಕೊಡಬೇಕೆಂದು ಮ್ಯೂನಿಸಿಪಲ್ ಮಿಟಿಂಗಿನಲ್ಲಿ ರೆಜೊಲ್ಯೂಷನ್ ಮಾಡಿಸಬೇಕೆಂದು ಮ|| ವಾಸುದೇವನವರು ಪ್ರಪೋಸ್ ಮಾಡಿದ್ದನ್ನು ಎಲ್ಲರೂ ಒಪ್ಪಿ ಈಗ ಮಾಡುವುದು ಆವಶ್ಯವೆಂದು ಒಪ್ಪಿದರು

ಈ ಮಧ್ಯೆ ಮ|| ಅನಂತರಾಯರು ಮತ್ತು ಮ|| ನಾರಾಯಣರಾಯರು—ನಮ್ಮ ಈ ಮಿಟಿಂಗಿನಲ್ಲಿ ಪ್ರಪೋಸಿಷನ್ ಗಳನ್ನು ಮಾಡಿ ಕೌನ್ಸಿಲಿಗೆ ಕಳುಹಿಸಿ ಕೊಡುವರು ಏನು ಸುಲಭವೇ ಸರಿ ಆದರೆ ನಮ್ಮ ಇಂದಿನಂತೆ ಆಗದು ನಮ್ಮ ಕೊಡುವದಕ್ಕೆ ಸುಯೋಗ ದೊರೆತಿರುವಂತೆ ಸೂಚಿಸಿರುವ ಪ್ರಯೋಜನಗಳಾದ ಅಧ್ಯಕ್ಷರ ದೇಶಿನ ಪ್ರತಿನಿಧಿಗಳನ್ನು ನಮ್ಮ ಎಕ್ಸಿಕ್ಯುಟಿವ್ ಕಮಿಟಿಯವರ ಆಲೋಚನೆಗೂ ತಿಳಿಸುವುದಕ್ಕೂ ಪ್ರಕಟಕ್ಕದ್ದು ಉತ್ತಮವಲ್ಲವೆ ಎಂದು ಕೇಳಿದ್ದರಿಂದ ಎಲ್ಲರೂ ಅದೇ ಪ್ರಕಾರ ಸಮ್ಮತಿಸಿದರು

೪ ಕೆಲವು ದಿವಸಗಳ ಮ|| ಬೋರಣ್ಣನವರ ಪ್ರಪೋಸಿಷನ್—ಕೋಟೆಯಲ್ಲಿ ಒಬ್ಬರ ದೊಡ್ಡರನ್ನು ಸಾಗಿಸುವದಕ್ಕೆ ಮೈಸೂರು ಗಳನ್ನು ಕಟ್ಟಿಸುತ್ತಾರೆ ಮತ್ತು ಮತ್ತು ವರ್ತ್ಮಾನೋಡಿ ಎಂಬ ದೊಡ್ಡ ಗುಂಡಿಗಳನ್ನು ಮಾಡಿ ಅದಕ್ಕೆ ಮುಚ್ಚುವಾದ ನಾಲ್ಕಾರು ಬೀದಿಗಳಲ್ಲಿ ಮಾತ್ರ ಕಟ್ಟಿಸಿದ ಮುಚ್ಚಳಗಳನ್ನು ಹಾಕಿಸಿರುತ್ತಾರೆ ಇತರ ಬೀದಿಗಳಲ್ಲಿ ಕಟ್ಟಿಸಿರುವುದಕ್ಕೆ ಬದಲಾಗಿ ಮರದ ಮುಚ್ಚಳಗಳನ್ನೇ ಹಾಕಿರುತ್ತಾರೆ ಇವು ಕೆಲವು ದಿವಸ ಮೊದಲು ಹೋಗುತ್ತವೆ ಇನ್ನೂ ಕೆಲವುಗಳು ಕೆಲವು ನುರಿದು ಹೋಗುತ್ತಿವೆ ಇನ್ನೂ ಕೆಲವುಗಳ ಮೇಲೆ ಅಪ್ಪು ಸರಿಯಾಗಿ ಮುಚ್ಚಿಕೊಳ್ಳದೆ ಇರುವ ದೊಡ್ಡ ಕಲ್ಲುಗಳನ್ನು ಹೊರಡಿಸಿದ ಅವುಗಳ ಕಟ್ಟಿಸಿದ ಪಟ್ಟಣಗಳು ಕಿತ್ತು ಬಿದ್ದುಹೋಗಿವೆ ರಾತ್ರಿಕಾಲಗಳಲ್ಲಿ ಕೋಟೆಯ ಗಿದ್ದರುವ ಬಂದು ಕೆಲವುಗಳು ಕತ್ತಲಲ್ಲಿ ಪೆಟ್ಟುಬಿದ್ದು ತಿರುಗುವಿಕೆಯ ಅದನ್ನು ಕಡವೆ ಮಾಡಬೇಕಿಲ್ಲ ಇಂಥಾ ಗುಂಡಿಗಳಲ್ಲಿ ಮುದುಕರು, ಹುಡುಗರು, ದನ ಕರುಗಳು ಕಾಣದೆ ಬಿದ್ದು ಪೆಟ್ಟು ತಿಂದಿರುವದುಗಳನ್ನು ನೋಡಿದ್ದು ಹೊಡೆದು ಅಪ್ಪಗಳಲ್ಲಿ ಬಿದ್ದುಹೋಗಿರುತ್ತಾರೆ ಈ ವಿಷಯವನ್ನು ಮಿಟಿಂಗಿನಲ್ಲಿ ಚರ್ಚಿಸಿ ಸರಿಯಾದ ಏರ್ಪಾಡುಗಳನ್ನು ಮಾಡಿಸಬೇಕೆಂದು ಆಗಬೇಕು ಇದನ್ನು ಎಲ್ಲರೂ ಒಪ್ಪಿದರು

೫ ಈ ಸಂಘದ ಎಕ್ಸಿಕ್ಯುಟಿವ್ ಕಮಿಟಿಯವರು ಪ್ರತಿ ತಿಂಗಳ ಮೊದಲನೆ ಭಾನುವಾರ ಸಭೆಸೇರಿ ಮುಂದಿನ ಮ್ಯೂನಿಸಿಪಲ್ ಮಿಟಿಂಗಿನಲ್ಲಿ ಯಾವ್ಯಾವ ವಿಷಯಗಳನ್ನು ಚರ್ಚಿಸತಕ್ಕದ್ದೆಂದು ಮೊದಲೇ ಗೊತ್ತು ಮಾಡಿ ಅಂಥಾ ಗೊತ್ತಾದ ಪ್ರಶ್ನೆಗಳನ್ನು ಮತ್ತು ಜನರ ವಿಷಯಗಳ ಪ್ರಶ್ನೆಗಳನ್ನು ಮ್ಯೂನಿಸಿಪಾಲಿಟಿಯವರ ತಿಳುವಳಿಕೆಗೂ ಮತ್ತು ಗೌರ್ನಮೆಂಟಿನವರ ತಿಳುವಳಿಕೆಗೂ ಕಳುಹಿಸಿಕೊಡತಕ್ಕದ್ದೆಂದಾಗಿ ಮ|| ವೆಂಕಟಕೃಷ್ಣಯ್ಯನವರು ಪ್ರಪೋಸ್ ಮಾಡಿದ್ದನ್ನೇ ಸಭಿಕರೆಲ್ಲರೂ ಅನುಮೋದಿಸಿದರು

೬ ಹಳೇ ಅಗ್ರಹಾರದಲ್ಲಿ ಪುಟ್ಟಣ್ಣನವರ ಏರಿಯ ಬಳಿಯಲ್ಲಿರುವ ಹಳೆ ಭಾವಿಯಿಂದ ಜನರಿಗೆ ತುಂಬ ತೊಂದರೆಯಾಗಿರುವದರಿಂದಲೂ, ಕೆಲವರು ಅದರಲ್ಲಿ ಬಿದ್ದು ಆತ್ಮಹತ್ಯ ಮಾಡಿಕೊಳ್ಳುತ್ತಿರುವುದರಿಂದಲೂ ಅದನ್ನು ಮುಚ್ಚಿಸಬೇಕೆಂತಲೂ, ಮ|| ಪುಟ್ಟಣ್ಣನವರ ಅಂಗಡಿಯ ಬಳಿಯಾಗಿ ಆಳವಾದ ಚರಂಡಿ ಸಣ್ಣಗಳಲ್ಲಿ ನೀರು ಬಿಡದೆ ಇರುವದರಿಂದ ಅನೇಕ ಜನರು ಕಾಹಿಲೆ ಬೀಳುತ್ತಿರುವುದು ತುಂಬ ಕಷ್ಟಮಾತ್ತು ರೋಗಲೂ ಆದದರಿಂದ ಅಲ್ಲಿಗೆ ನೀರನ್ನು ಬಿಡುವಂತೆ ಮಾಡಿಸಿಕೊಡಬೇಕೆಂತಲೂ ಮ|| ಶಾಸ್ತ್ರಿ ಶೇಷಣ್ಣನವರು ತಿಳಿಸಿದರು ಈ ಸಂಗತಿಯನ್ನು ಎಕ್ಸಿಕ್ಯುಟಿವ್ ಕಮಿಟಿಯವರ ತಿಳುವಳಿಕೆಗೆ ಸೇರಿತ್ತು

[ಈ ಮಿಟಿಂಗಿನ ವಿಷಯದಲ್ಲಿ ನಮ್ಮ ಅಭಿಪ್ರಾಯಗಳನ್ನು ಮುಂದಿನ ವಾರದಲ್ಲಿ ತಿಳಿಸಬೇಕೆಂದಿದ್ದೇವೆ ಎಡಿಟರ್.]

ವಿದ್ಯಾ ವಿಷಯ.

ನಂಜನಗೂಡು ತಾಲ್ಲೋಕು ಗೌರ್ನಮೆಂಟ್ ಕನ್ನಡ ಬಾಲಕರ ಪಾಠಶಾಲೆಯ ರಿಪೋರ್ಟ್—

ಈ ಪಾಠಶಾಲೆಯು ಬಹುಮಾನಸಭೆಯು ೧೯೦೩ ನೇ ಏಪ್ರಿಲ್ ತಾ|| ೨೫ ನೇ ಸೋಮವಾರ ಪ್ರಾತಃಕಾಲ ೮ ಘಂಟೆ ಸಮಯಕ್ಕೆ ಈ ಪಾಠಶಾಲೆಯ ಮಧ್ಯಶಾಲೆ ಹಾಲಿನಲ್ಲಿ ನಡೆಯಿತು ಈ ಸಭೆಗೆ ಮ|| ರಾ|| ವರ್ಗೀಸ್ ಬಿ. ವೆಂಕಟಾಚಾರ್ಯರವರು ಮ|| ರಾ|| ಅನಂತರಾಮನ ನಂಜಯ್ಯನವರೂ ಮಿ|| ರಾ|| ಏನ ಪೆಸಿನ್ಸ್ ಕೃಷ್ಣಸ್ವಾಮಯ್ಯಂಗಾರ್ ರವರು ಮ|| ರಾ|| ಅಮೃತಕೋಟೆ ನರಸಿಂಹಯ್ಯನವರೂ ಇವರೇ ಮೊದಲಾಗಿ ಕೆಲವು ಉದ್ಯೋಗಸ್ಥರೂ ಅಧಿಕಾರಿಗಳೂ ವೈದಿಕರೂ ವರ್ತಕರೂ ಕೃಷಿಕರೂ ಸೇರಿದ್ದರು ೩೦ ಜನರುಗಳೂ ಸಭೆ ಸೇರಿದ್ದರು ಸಭೆಯವರ ಕೋರಿಕೆಯ ಪ್ರಕಾರ ಮ|| ರಾ|| ವರ್ಗೀಸ್ ಬಿ. ವೆಂಕಟಾಚಾರ್ಯರವರು ಅಗ್ರಾಸನಾಧಿಪತಿಗಳಾಗಿದ್ದರು ಬಹುಮಾನ ಕೊಡುವ ಪುಸ್ತಕಗಳನ್ನೆಲ್ಲಾ ಸಭಿಕರ ಮುಂದೆ ಮೇಜಿನಮೇಲೆ ಇಟ್ಟಿದ್ದರು ಸಭೆಯ ಆರಂಭವನ್ನು ಸಭೆಯವರ ಮುಂದೆ ಈ ಪಾಠಶಾಲೆಯ ರಿಪೋರ್ಟನ್ನು ಹೆಡ್‌ಮಾಸ್ತರ್ ಬಿ. ಗುಂಡಪ್ಪನವರು ಓದಿದರು ಅದರಂತೆ ತಿಳುವಳಿಕೆಯ ಮುಖ್ಯ ಸಂಗತಿಗಳು ಏನೆಂದರೆ:—

ಈ ಪಾಠಶಾಲೆಯು ೧೯೦೨-೦೩ ನೇ ಇಸವಿಯಲ್ಲಿ ನಡೆಸಲ್ಪಟ್ಟಿತು ಆ ವರುಷದ ೮೦ ನೇ ಇಸವಿ ವರೆಗೆ ಇರುವ ೧೦೦ ಜನ ವಿದ್ಯಾರ್ಥಿಗಳೂ ಅಲ್ಲದೆ ೧೯ ನೇ ಇಸವಿ ವರೆಗೆ ೧೦ ಜನಗಳು ಆ ವರುಷದ ಒಳಗೆ ೧೨ ನೇ ಇಸವಿ ವರೆಗೆ ೨೪೯ ಜನಗಳು ರಿಜಿಸ್ಟರಿನಲ್ಲಿ ದಾಖಲಾಗಿದ್ದರು

೧೯೦೩ ನೇ ಇಸವಿಯ ವರೆಗೆ ವಿಂಪಲ್ ಅಂಗಡಿಯಲ್ಲಿ ಸರಾಸರಿ ೧೫೬ ಜನ ವಿದ್ಯಾರ್ಥಿಗಳು ಹಾಜರಾಗಿದ್ದರು ವಿದ್ಯಾರ್ಥಿ ಸಂಖ್ಯೆ ಸಾಧಾರಣವಾಗಿ ಹೆಚ್ಚಾಗಿತ್ತು ಈ ವರ್ಷದಲ್ಲಿ ಜನ್ಮ ಧ್ಯಾನಮಾದ ಜನಗಳು ೪ ಜನರಿದ್ದರು ಆಗ ಸರ್ಕಾರದವರಿಂದ ಮೈಸೂರು ಲೋವರ್ ಸೆಕಂಡರಿ ಎಂಬ ಒಂದು ಪರೀಕ್ಷೆಯನ್ನು ಏರ್ಪಡಿಸಿದ್ದರು

ಆ ವರ್ಷದ ೫೦ ನೇ ಇಸವಿಯ ವರೆಗೆ ವಿಂಪಲ್ ತರಗತಿಯಲ್ಲಿ ಸರಾಸರಿ ೪೦ ಜನ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಾ ಇದ್ದರು ೧೯ ನೇ ಇಸವಿ ಬಾಗಿಲು ೧೦ ನೇ ಇಸವಿ ವರೆಗೆ ೩೩ ಜನ ವಿದ್ಯಾರ್ಥಿಗಳು ಪ್ರಾಣ ಪರೀಕ್ಷೆಗೆ ಹೋಗಿದ್ದರು ೩ ಜನಗಳು ೧ ನೇ ತರಗತಿಯಲ್ಲಿಯೂ ೪ ಜನಗಳು ೨ ನೇ ತರಗತಿಯಲ್ಲಿಯೂ ತೇರ್ಗಡೆಯಾದರು ಆ ವರ್ಷ ಪರೀಕ್ಷೆಯಲ್ಲಿ ಬಂದು ಈ ಪಾಠಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿದವರಲ್ಲಿ ೪ ಜನಗಳು ತೇರ್ಗಡೆ ಹಾಗರು ಇದ ಕ್ಕೆಲ್ಲಾ ವಾರ್ಷಿಕ ಬಹುಮಾನವನ್ನು ಕೊಡಲ್ಪಟ್ಟಿತು

ಈ ಪಾಠಶಾಲೆಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳ ಪೈಕಿ ಕೆಲವರಿಗೆ ವಿದ್ಯಾಭ್ಯಾಸ ಇಲಾಖೆಯಲ್ಲಿಯೂ ಕೆಲವರಿಗೆ ಇತರ ಇಲಾಖೆಗಳಲ್ಲಿಯೂ ಕೆಲಸಗಳು ಕೊಡಲ್ಪಟ್ಟಿವೆ ಕೆಲವರು ಇಂಗ್ಲಿಷ್ ಸಂಸ್ಕೃತ ಮೊದಲಾದವುಗಳನ್ನು ಓದುತ್ತಾ ಇದಾರೆ

ಕಳೆದ ೯೦೦ನೇ ಡಿಸೆಂಬರು ತಿಂಗಳಲ್ಲಿ ನಡೆದ ಲೋವರ್ ಸೆಕೆಂಡರಿ ಪರೀಕ್ಷೆಗೆ ಈ ಪಾಠಶಾಲೆಯಿಂದ ೧೪ ಜನ ವಿದ್ಯಾರ್ಥಿಗಳು ಹೋಗಿದ್ದರು ಅವರೊಳಗೆ ಒಬ್ಬ ವಿದ್ಯಾರ್ಥಿಯು ಈ ಸಂಸ್ಥಾನಕ್ಕೆ ಮೊದಲನೆ ತರಗತಿಯಲ್ಲಿ ಮೊದಲಿಗನಾದುದನಾಗಿ ಮತ್ತು ೫ ಜನಗಳು ಎರಡನೇ ತರಗತಿಯಲ್ಲಿಯೂ ತೇರ್ಗಡೆ ಯಾಗಿದ್ದಾರೆ

ತೇರ್ಗಡೆಯಾದವರಲ್ಲಿ ಅವಶ್ಯಕ ಭಾಷೆಯಾಗಿ ಹಳೆ ಕನ್ನಡ ಕಾಂಪೋಸಿಷನ್‌ಗಳಲ್ಲಿ ಒಬ್ಬ ವಿದ್ಯಾರ್ಥಿಯು ಸಂಸ್ಕೃತ ಮತ್ತು ಕ್ಷೇತ್ರಗಣಿತದಲ್ಲಿಯೂ ಒಬ್ಬ ವಿದ್ಯಾರ್ಥಿಯು ಸಂಸ್ಕೃತ ಮತ್ತು ಅರ್ಥಶಾಸ್ತ್ರದಲ್ಲಿಯೂ ನಿಂತ ೮ ಜನ ವಿದ್ಯಾರ್ಥಿಗಳು ವ್ಯವಸಾಯ ಮತ್ತು ಕ್ಷೇತ್ರ ಗಣಿತದಲ್ಲಿಯೂ ತೇರ್ಗಡೆಯಾಗಿದಾರೆ ಒಬ್ಬ ವಿದ್ಯಾರ್ಥಿಯು ಒಂದು ಭಾಗದಲ್ಲಿಯೂ ೭ ಜನ ವಿದ್ಯಾರ್ಥಿಗಳು ೧-೨ ಭಾಗಗಳಲ್ಲಿ ಮಾತ್ರ ತೇರ್ಗಡೆಯಾಗಲಿಲ್ಲ

ಕನ್ನಡ ಅವಶ್ಯಕ ಭಾಷೆಯಲ್ಲಿ ಅತ್ಯಂತ ಹೆಚ್ಚಾಗಿ ನಂಬರನ್ನು ಪಡೆದು ಈ ಸಂಸ್ಥಾನಕ್ಕೆಲ್ಲಾ ಮೊದಲನೆಯವನಾಗಿ ತೇರ್ಗಡೆಯಾದ “ರಂಗಾಸ್ವಾಮಿ” ಎಂಬುವನಿಗೆ ದೇವರಾಯರ ದತ್ತಿ ರವರ ಫಂಡಿನಿಂದ ೩೦ ರೂಪಾಯಿಗಳ ಬಹುಮಾನವನ್ನು ಮ|| ರಾ|| ರಾಮಬಹದ್ದೂರು ಅಂಬಲ್ ನರಸಿಂಹಯ್ಯಂಗಾರ್ಯರವರು ದಯಪಾಲಿಸಿರುತ್ತಾರೆ

ಸ್ಕೂಲ್ ಪರೀಕ್ಷೆಯಲ್ಲಿ ತೇರ್ಗಡೆಯಾದ ೨೪ ಜನ ವಿದ್ಯಾರ್ಥಿಗಳಿಗೆ ಡೆಪ್ಯುಟಿ ಕಮಿಷನರ್ ಮ|| ರಾ|| ಹಸ್ಸ್ ಕೇಳಿದ ಅಯ್ಯನವರು ವಾರ್ಷಿಕ ಬಹುಮಾನವಾಗಿ ೨೪ ಪುಸ್ತಕಗಳನ್ನು ದಯಪಾಲಿಸಿದಾರೆ

ವಿದ್ಯಾಭ್ಯಾಸದ ಇಲಾಖೆಯ ಸ್ಪೆಕ್ಟರುಗಳಾದ ಮೆಸ್ಸರ್ಸ್ ಬಿ. ಜಿ ಭಾಸ್ಕರ ಎಂ.ಎ. ಸಾಹೇಬರವರೂ ಮತ್ತು ಮೈಸೂರು ಲೋಕಲ್ ಎಗ್ಜಾಮಿನೇಷನ್ ಕಮಿಟಿಯವರೂ ಸಹ ಈ ಪಾಠಶಾಲೆಯು ವಿದ್ಯಾಭ್ಯಾಸದಲ್ಲಿಯೂ ವಿದ್ಯಾರ್ಥಿಗಳ ತೇರ್ಗಡೆಯಲ್ಲಿಯೂ ಈ ಸಂಸ್ಥಾನಕ್ಕೆ ಮೊದಲನೇದಾಗಿರುವದೆಂದು ೧೯೦೧-೦೨ ನೇ ಇಸವಿಯ ಸರ್ಕಾರಿ ರಿಪೋರ್ಟಿನಲ್ಲಿ ಬರೆದಿರುತ್ತಾರೆ

ಈ ೧೯೦೩ ನೇ ಇಸವಿ ಜನವರಿ ಗುರ್ತಿಸುಗಾಗಿಯೇ ಈ ಸಂಸ್ಥಾನದ ಎಲ್ಲಾ ಪಾಠಶಾಲೆಗಳಲ್ಲಿಯೂ ಹಿಂದೆ ನಡೆಯುತ್ತಾ ಇದ್ದ ಪಠನಗಳನ್ನು ಬದಲಾಯಿಸಿ ಹೊಸ ಪಠನಗಳನ್ನು ಏರ್ಪಡಿಸಿದೆ ತರಗತಿಗಳನ್ನು ಬದಲಾಯಿಸಿ ಹೊಸದಾಗಿ ೪ ತರಗತಿಗಳನ್ನು ೨ ಮಕ್ಕಳ ತರಗತಿಗಳನ್ನೂ ಏರ್ಪಡಿಸಿ, ಮಕ್ಕಳ ತರಗತಿ ಅಲ್ಲದೆ ೩ ನೆ ತರಗತಿಯಲ್ಲಿ ತೇರ್ಗಡೆಯಾದ ವಿನಹ ಇಂಗ್ಲಿಷ್ ಪಾಠಶಾಲೆಗಳಿಗೆ ಸಂಸ್ಕೃತ ಪಾಠಶಾಲೆಗಳಿಗೆ ಸೇರಕೂಡದೆಂದು ವಿಧಾಯಕವಾಗಿದಾರೆ ಆದರಿಂದ ಕನ್ನಡ ಭಾಷೆಯು ಇನ್ನೂ ಅಭಿವೃದ್ಧಿಯಾಗಬಹುದಾಗಿ ತೋರುತ್ತದೆ ಎಂದು ಈ ಪ್ರಕಾರ ರಿಪೋರ್ಟ್ ಓದಲ್ಪಟ್ಟಿತು

ಅನಂತರ ಮ|| ರಾ|| ವರ್ಗೀಸ್ ಬಿ. ವೆಂಕಟಾಚಾರ್ಯರವರು ಸಭಿಕರ ಪಕ್ಷವಾಗಿ ಅಧ್ಯಕ್ಷ ಕೊಡುವುದು ಏನೆಂದರೆ—

ಈ ಪಾಠಶಾಲೆಯು ಸ್ಥಾಪಿಸಲ್ಪಟ್ಟಿದ್ದು ೧೮೭೩ ನೇ ಇಸವಿಯಿಂದ ಇದುವರೆಗೂ ಪ್ರತಿವರುಷವೂ ತುಂಬ ಅಭಿವೃದ್ಧಿಗೆ ಬರುತ್ತಾ ಇರುವದರಿಂದ ಸಭಿಕರಿಗೆ ತುಂಬ ಸಂತೋಷಕರವಾಗಿರುವದು ಈ ಪಾಠಶಾಲೆಯ ಉತ್ತಮ ಸ್ಥಿತಿಯನ್ನು ತಿಳಿದು ಪರೀಕ್ಷಕರ ವಿದ್ಯಾರ್ಥಿಗಳು ಅನ್ಯವಿಗೆ ಆಸಕ್ತಿಯಿದ್ದರೆ ಇದ್ದಕ್ಕಾಗ್ಯೂ ಈ ಪಾಠಶಾಲೆಯಲ್ಲಿ ವಿದ್ಯಾಭ್ಯಾಸಮಾಡಿದರೆ ತಮಗೆ ತುಂಬ ಪ್ರಯೋಜನ ಆಗುವುದು ತಿಳಿದು ಈ ಪಾಠಶಾಲೆಯಲ್ಲಿ ವಿದ್ಯಾಭ್ಯಾಸವಾಗಿ ದೇಶೀಯ ಪರೀಕ್ಷೆಯಲ್ಲಿ ತೇರ್ಗಡೆ ಯಾಗುತ್ತಿರುವರು ಈ ವಿಷಯಕ್ಕೆ ಈ ಸಂಸ್ಥಾನದಲ್ಲೆಲ್ಲಾ ಕೀರ್ತಿಯನ್ನು ತರುತ್ತದೆ ಪ್ರಸ್ತುತ ತಾಲೂಕು ಈಗ ಹೆಚ್ಚಾಗಿ ವಿದ್ಯಾರ್ಥಿಗಳು ಈ ಶಾಲೆಯಲ್ಲಿ ಸೇರುವುದಕ್ಕೆ ಉತ್ತಮವಾಗಿಯಾಗಿ ವಿದ್ಯಾಭ್ಯಾಸ ಮಾಡಿಸುವದೇ ಕಾರಣವಾಗಿದೆ ಮುಂದೆ ಕನ್ನಡದಲ್ಲಿ ೩ ನೇ ತರಗತಿಯಲ್ಲಿ ತೇರ್ಗಡೆಯಾದ ವಿನಹ ಸಂಸ್ಕೃತ ಮತ್ತು ಇಂಗ್ಲಿಷ್ ಪಾಠಶಾಲೆಗಳಿಗೆ ಸೇರಕೂಡದೆಂದು ನಿರ್ಬಂಧ ಮಾಡಿರುವದರಿಂದ ಮುಂದೆ ಕನ್ನಡ ಭಾಷೆಯು ಅತ್ಯಂತ ಅಭಿವೃದ್ಧಿಯಾಗುವದರಲ್ಲಿ ಸಂದೇಹವಿಲ್ಲ ಈ ಪಾಠಶಾಲೆಯು ಈ ಸಂಸ್ಥಾನಕ್ಕೆ ಮೊದಲನೇದೆಂದನ್ನು ನೋಡಿ ತುಂಬ ಸಂತೋಷಪಡುವೆವು ಈ ಪಾಠಶಾಲೆಯ ಹೆಡ್‌ಮಾಸ್ತರ ಗುಂಡಪ್ಪನವರು ಈ ಪಾಠಶಾಲೆಯನ್ನು ಚೆನ್ನಾಗಿ ನಡೆಸುತ್ತಿರುವುದರಿಂದ ಮಕ್ಕಳ ಆರೋಗ್ಯದ ಬಗ್ಗೆಯೂ ಬಹಳ ಎಚ್ಚರಿಕೆಯಿಂದ ಎಲ್ಲಾ ಉಪಾಧ್ಯಾಯರೂ ಕೂಡ ಕಾಲಕಾಲಕ್ಕೆ ತಮ್ಮ ದಿನದ ಪಾಠಗಳನ್ನು ಆವರ್ತಿಸಿ ತಪ್ಪದೆ ಮಾಡುವುದು ಸಹಕಾರ ಮನಸ್ಸಿನಿಂದ ತುಂಬ ಪರಿಶ್ರಮ ಪಟ್ಟು ಉತ್ತಮ ಸ್ಥಿತಿಯಲ್ಲಿ ಇಟ್ಟುಕೊಂಡಿರುವದಕ್ಕಾಗಿ ಈ ಪಾಠಶಾಲೆಯ ಹೆಡ್‌ಮಾಸ್ತರರಾದ ಗುಂಡಪ್ಪನವರಿಗೂ ಅವರ ಅಸಿಸ್ಟೆಂಟರುಗಳಿಗೂ ಎಲ್ಲರೂ ಕೃತಜ್ಞರಾಗಿರಬೇಕೆಂದು ಅಪ್ಪಣೆ ಕೊಡಿಸಿದರು

ಅನಂತರ ಬಿ. ವೆಂಕಟಾಚಾರ್ಯರವರು ಸಭೆಯವರ ಅಪ್ಪಣೆ ಮೇರೆಗೆ ವಿದ್ಯಾರ್ಥಿಗಳ ಪರೀಕ್ಷೆಯ ಮಾಡಿದ್ದ ಪ್ರಕಾರ ಬಹುಮಾನಗಳನ್ನು ತರಗತಿಯ ಮೇರೆಗೆ ಬಾಲಕರಿಗೆ ಕೊಟ್ಟರು

ಅನಂತರ ಸ್ವಲ್ಪ ಕಾಲದವರೆಗೂ ಹರುಷಕರವಾದ ಅನೇಕ ಸ್ವಾಗತಗಳನ್ನು ಹಾಡುತ್ತಿದ್ದರು ಪ್ರಾತಃಕಾಲ ೧೧ ಘಂಟೆ ಸಮಯಕ್ಕೆ ಸಭೆಯು ಮುಗಿಯಿತು

ವಿವಿಧ ವರ್ತಮಾನಗಳು.

[illegible]

[illegible]

[illegible]

[illegible]

೧೮೯೩ನೇ ... ಸಂವತ್ಸರದ ... ಗುರುವಾರದಿಂದ ... [illegible]

೧೮೯೩ ನೇ ಇಸವಿ, ಏಪ್ರೆಲ್.

ತಾ	ವಾರ.	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.	ಮೋಷ ದಿವಸ [illegible]
27	ಗು	ದ್ವಾ	44-33	ಉ	46-46	16
28	ಶು. *	ತ್ರ	16-2	ಪೂ.	40-51	17
29	ಶ.	ಚ	45-40	ಪ.	54-16	18
30	ರ.	ಅ	53-36	ಸ್ವಾ.	60-0	19
ಮೇ 1	ಸೋ.	ಪ್ರ.	57-15	ಸ್ವಾ	0-3	20
2	ಮಂ	ದ್ವಿ.	60-0	ವಿ.	0-10	21
3	ಬು	ತ	2-38	ಅ	12-21	22

* ಅಕ್ಷಯತೃತೀಯಾ [illegible]

ಪೇಟೆ ಧಾರಣೆ.

ವಿವರ	ಮೈಸೂರು	ಬೆಂಗಳೂರು.
	ರೂ. ಆ ಪೈ	ರೂ ಆ ಪೈ
[illegible] ಅಕ್ಕಿ ಪಲ್ಲ ೧ಕ್ಕೆ	[illegible]	[illegible]
[illegible] ಅಕ್ಕಿ [illegible]	[illegible]	[illegible]
[illegible] ಅಕ್ಕಿ [illegible]	[illegible]	[illegible]
[illegible] ಅಕ್ಕಿ	[illegible]	[illegible]
[illegible]	[illegible]	[illegible]
[illegible] ಅಕ್ಕಿ [illegible]	[illegible]	[illegible]
[illegible] ಪಲ್ಲ ೧ಕ್ಕೆ	[illegible]	[illegible]
[illegible]	[illegible]	[illegible]
[illegible] ಪಲ್ಲ ೧ಕ್ಕೆ	[illegible]	[illegible]
[illegible]	[illegible]	[illegible]
[illegible] ಪಲ್ಲ ೧ಕ್ಕೆ	[illegible]	[illegible]
[illegible] ಅವರೆ	[illegible]	[illegible]
ಹೆಸರು	[illegible]	[illegible]
ಉದ್ದು	[illegible]	[illegible]
ಕಡಲೆ	[illegible]	[illegible]
ಎಳ್ಳು	[illegible]	[illegible]
ಹುರಳಿ	[illegible]	[illegible]
[illegible] ಮಣ ೧ಕ್ಕೆ	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible] ೧೦೦ ಕ್ಕೆ	[illegible]	[illegible]
[illegible]	[illegible]	[illegible]
[illegible] ಮಣ ೧ಕ್ಕೆ	[illegible]	[illegible]
[illegible]	[illegible]	[illegible]
[illegible] ಪಲ್ಲ ೧ಕ್ಕೆ	[illegible]	[illegible]
ಉಪ್ಪು	[illegible]	[illegible]
[illegible] ಮಣ ೧ಕ್ಕೆ	[illegible]	[illegible]
[illegible]	[illegible]	[illegible]
ತುಪ್ಪ	[illegible]	[illegible]
[illegible] ೧ ಕ್ಕೆ	[illegible]	[illegible]
ತೆಂಗಿನಕಾಯಿ ೧೦೦ ಕ್ಕೆ	[illegible]	[illegible]
ಚಿನ್ನ ([illegible])		
ಕೆಂಪು	[illegible]	[illegible]
[illegible]	[illegible]	[illegible]
ಗಟ್ಟಿ	[illegible]	[illegible]

Mysore.—Printed and published for the Proprietor at the Wesleyan Mission Press.
27/4/93.

ವೃತ್ತಾಂತ ಪತ್ರಿಕೆ.

ಕ್ರಯ ೧ ದಾಮ್ಮ | ಕ್ರಯ ೧ ದಾಮ್ಮ

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೩. | ಮೈಸೂರು ಸನ್ ೧೮೯೩ ನೇ ಇಸವಿ ಮೆ ತಾರೀಖು ೪ ನೇ ಗುರುವಾರ. | ಸಂಚಿಕೆ ೧೮.

ನೋಟೀಸ್.

		ಕ್ರಯ			ಹಾಸಲು ಸಹಿತವಾಗಿ		
Campbell's	ಕನ್ನಡ ವ್ಯಾಕರಣ ಸಾರ	೦	೨	೦	೦	೨	೬
Object Lessons	ವಸ್ತು ಪಾಠಗಳು	೦	೧	೦	೦	೧	೬
Picture do	ಚಿತ್ರಗಳು ಸಹಿತವಾಗಿ	೦	೨	೦	೦	೨	೬
ಈ ಮೂರು ಪುಸ್ತಕಗಳು ಕ್ರೈಸ್ತರ ಮಠಗಳಲ್ಲಿ ಓದತಕ್ಕ ಪುಸ್ತಕಗಳು							
ಸ್ತ್ರೀಯರು ಓದತಕ್ಕ ಪುಸ್ತಕ		೦	೩	೦	೦	೩	೬
ಗಣಿತ ವಿದ್ಯೆ		೦	೪	೦	೦	೪	೬
ಗಣಿತ ಮಗ್ಗಿಗಳು		೦	೧	೦	೦	೧	೬
ಸಂಸ್ಕೃತ ಕರ್ನಾಟಕ ಭಾಷಾಮಂಜರಿ		೦	೨	೦	೦	೨	೬
ಭೂಗೋಳ ಶಾಸ್ತ್ರ ಪ್ರಶ್ನೋತ್ತರ		೦	೨	೦	೦	೨	೬
ಇಂಗ್ಲಿಷು ಕನ್ನಡವು ಶಬ್ದಾವಳಿ ೧ನೇ ೨ನೇ ಭಾಗಗಳು		೦	೧	೦	೦	೧	೬
ಕಾವ್ಯಮಾಲೆ (Minor Poetical Anthology)		೦	೮	೦	೦	೮	೬
ಬಾಲವ್ಯಾಕರಣ		೦	೩	೦	೦	೩	೬
ಹಳಗನ್ನಡ ವ್ಯಾಕರಣ ಸೂತ್ರಗಳು		೦	೬	೦	೦	೬	೬
ಇಂಗ್ಲಿಷು ಕನ್ನಡವು ಸಂಭಾಷಣ ವಾಕ್ಯಗಳು		೦	೧೦	೦	೦	೧೦	೬
ಶಬ್ದಮಣಿ ದರ್ಪಣ		೧	೦	೦	೧	೪	೬
Kan Eng Pocket Dictionary		೧	೪	೦	೧	೩	೭
Eng Kan School Dictionary		೨	೧೦	೦	೨	೧೨	೬
ಬಳ್ಳೀ ತಾಯಿ		೦	೪	೪	೦	೪	೬
ಅತ್ಮಿಕ ದಿವ್ಯ ಯುದ್ಧ (Bunyan)		೦	೧೨	೦	೦	೧೩	೬
ಕೃಷಿಶಾಸ್ತ್ರ ಪದ್ಧತಿ ೧ ನೇ ಭಾಗ ೨ ಅಥ ೩ನೇ ಭಾಗ		೦	೧	೬	೦	೨	೦
ಭಕ್ತಿ ಸಾರ		೦	೧	೦	೦	೧	೬
ಸತ್ಯ ವಾಗ್ದಾನ		೦	೧	೦	೦	೧	೬
ಕಾವ್ಯಪುಂಜ		೦	೭	೦	೦	೭	೬

A new Edition of the Geography suited for the Lower Secondary Examination is now ready—Edited by Rev H, Galliford. Price 6 As.
ಮೇಲೆ ನಮೂದಿಸಿರುವ ಪುಸ್ತಕಗಳನ್ನು ಬೆಂಗಳೂರು ವಲಿಯ ಮೋರ್ಗಾಟಿನ ಹತ್ತಿರವಿರುವ ಪುಸ್ತಕ ಶಾಲೆಯಲ್ಲಿ ಪಡೆಯ ಬಹುದು

ನೋಟಿಸ್.

ಪುಸ್ತಕಗಳು	ಕ್ರಯ.
ಪ್ರಾತಃಸ್ಮರಣಿಕೆ	1—8—0
ಕನ್ನಡ ಇಂಗ್ಲೀಷು ನಿಘಂಟು 1 ನೇ ದೊಡ್ಡ ತರಹ	3—0—0
„ „ 2 ನೇ ತರಹ	2—8—0
ಬಾಲಕರು ಓದುವ ಎರಡನೆ ಪ್ರಶ್ನೋತ್ತರಗಳು	0—1—0
ಕಥೆಯ ನಿಗಮಗಳನ್ನು ಕಲಿತದ್ದು	0—0—6
ಕಥಾ ಸಂಗ್ರಹ 1 ನೇ ಭಾಗದಿಂದ 3 ವರೆಗೆ	1—0—0
ಕಥಾ ಸಂಗ್ರಹ 4 ರಿಂದ 6 ನೇ ಭಾಗ ಹೊಸ ಭಾಷೆ	1—0—0
„ „ ದೊಡ್ಡ ತರಹ	1—6—0
ಬೋಧಕಾಚಿತ್ರ ದೀಪಿಕೆ	0—4—0
ಸತ್ಯವೇದವನ್ನು ಕುರಿತು 2 ನೇ ಭಾಗ	0—4—0
ಪ್ರಸಂಗಿಯ ದರ್ಪಣ	0—6—0
ಇಂಗ್ಲೀಷು ಭಾಷೆಯಲ್ಲಿಯೂ, ಕನ್ನಡ ಭಾಷೆಯಲ್ಲಿಯೂ, ಶಬ್ದಗಳ ವಿಭಾಗಗಳನ್ನು ವಿವರಿಸುವ ನಿಘಂಟು	0—2—0
ಕನ್ನಡ ವ್ಯಾಕರಣ (ಇಂಗ್ಲೀಷಿನಲ್ಲಿ)	2—0—0
ಹಿಂದುಸ್ತಾನಿ ವ್ಯಾಕರಣ	1—0—0
ಬಾಲರಾಜ ಸೋಪಾನವು	0—0—6
ದಶ ಕರಣಗಳ ಅನುಕರಣೀಯವಾದ	0-12—0
ಕ್ರೈಸ್ತರ ಬೋಧನೆಗಳ ಸಾರಾಂಶವು	0-12—0

ಮೇಲೆ ಬರೆಯಲ್ಪಟ್ಟಿರುವ ಪುಸ್ತಕಗಳನ್ನು ಅಪೇಕ್ಷಿಸುವವರು ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್ಸಿಗೆ ಬರೆದು ತರಿಸಿಕೊಳ್ಳಬಹುದು ಅಂಚೆ ಹಾಸಲು ಬೇರೆ ಕೊಡಬೇಕು

ವೆಸ್ಲಿಯನ್ ಮಿಷನ್ ಪ್ರೆಸ್,

ಮೈಸೂರು.

ವಿಶೇಷ ! ಓದಿನೋಡಿರಿ !! ಓದಿನೋಡಿರಿ !!!

ಅನುಶಾಸನೀಕಪರ್ವವು ಪೂರೈಸಿತು.

ಶ್ರೀಕೃಷ್ಣರಾಜ ವಾಣೀವಿಲಾಸವೆಂಬ ಮಹಾಭಾರತವು ನಮ್ಮ ಶ್ರೀಚಾಮುಂಡೇಶ್ವರಿ ಪ್ರೆಸ್ಸಿನಲ್ಲಿ ಪ್ರಿಂಟಾಗತಕ್ಕದ್ದು ಎಲ್ಲರಿಗೂ ವಿಶದವಾಗಿಯೇ ಇದೆಯಷ್ಟೆ. ಈಗ ಅನುಶಾಸನೀಕಪರ್ವವು ಚಾಮುಂಡೇಶ್ವರಿ ಪ್ರೆಸ್ಸಿನಿಂದಲೂ ಮುದ್ರಿತ ಯೋಗ್ಯವಾದ ಕಿತಾಬುಗಳಿಂದ ಪ್ರಕಟವಾಗಿರುತ್ತೆ. ಸಭಾಪರ್ವ ವಿರಾಟಪರ್ವದ ಮುಖ್ಯಗಳು ಮುಗಿದು ಹೋಗುವದರಿಂದ ಪುನಹ ಎರಡನೆ ಭಾವಿಯು ಪ್ರಿಂಟಾಗಿದೆ. ಈ ಕೆಳಗೆ ಕಂಡ ಪುಸ್ತಕಗಳು ನಮ್ಮಲ್ಲಿ ಸ್ವಲ್ಪವೇ ಇರುವದರಿಂದ ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು. ಅನುಶಾಸನೀಕ ಪರ್ವ ಕಿತಾಬಿನ ಪೈಕಿ ೩—೧೨—೦ ಕೋರ್ಟು ಸೇಲ್ ಸರ್ಕಾರಿ ಪರೀಕ್ಷೆಯ ಸೋಸೈಟಿ ಕ್ರಯ ೮ ಆಣೆ

		ಕ್ರಯ		
ಆದಿಪರ್ವ		೩	೦	೦
ಸಭಾಪರ್ವ	„	೧	೪	೦
ವಿರಾಟಪರ್ವ	„	೧	೦	೦
ಭೀಷ್ಮಪರ್ವ	„	೨	೦	೦
ದ್ರೋಣಪರ್ವ	„	೨	೮	೦
ಶಲ್ಯಪರ್ವ	„	೧	೨	೦
ಸೌಪ್ತಿಕಪರ್ವ	„	೦	೬	೦
ಸ್ತ್ರೀಪರ್ವ	„	೦	೬	೦
ಶಾಂತಿಪರ್ವ ರಾಜಧರ್ಮ	„	೨	೬	೦
„ ಆಪದ್ಧರ್ಮ	„	೦	೮	೦
„ ಮೋಕ್ಷಧರ್ಮ	„	೨	೬	೦

ಭಗವದ್ಗೀತೆ ೮, ಯುದಿಷ್ಠಿರನು ಯಮನ ಚರಿತ್ರೆ ೪ ಆ.

ಎಂ ಶಿವಪ್ಪ ಅಂಡ್ ಕೋ
ಬುಕ್‌ಬೈಂಡರ್ಸ್
ಬೆಂಗಳೂರು

ಸನ್ ೧೮೮೮ ರಲ್ಲಿ ಸ್ಥಾಪಿಸಲ್ಪಟ್ಟದ್ದು.

ಕೆನರಾ ಅಂಡ್ ಮೈಸೂರ ಟ್ರೇಡಿಂಗ್ ಏಜನ್ಸೀ ಆಫೀಸ್, ಮುಂಬಯಿ.

ಅವರು ತಯಾರಿಸಿರುವಂಥ—

ಹೈಮಧಾತ್ರೀತೈಲ.

ಕಳೆದ ಜನವರಿ ತಿಂಗಳೊಂದರಲ್ಲಿ ೪,೧೦೦ ಬಾಟ್ಲಿಗಳು ಖರ್ಚಾದವು. ಈ ತೈಲದ ಗುಣವನ್ನು ಕಂಡಿತು, ನಾವೀಗ ಹೆಚ್ಚಿಗೆ ವರ್ಣಿಸಲಾರೆವು—ಯಾಕಂದರೆ, ಯಾರು ಈ ತೈಲವನ್ನು ಉಪಯೋಗಿಸುತ್ತಾರೋ ಅವರಿಗೆ ಒಂದೆರಡು ದಿವಸಗಳಲ್ಲಿಯೇ ಇದರ ಅಪ್ರತಿಮವಾದ ಗುಣವು ಸಹಜವಾಗಿ ಅನುಭವಕ್ಕೆ ಬರುವದು. ಆದಾಗ್ಯೂ ಇದರ ಮುಖ್ಯವಾದ ಉಪಯೋಗವನ್ನು ತಿಳಿಸುವುದು ನಮ್ಮ ಕರ್ತವ್ಯವಾಗಿರುತ್ತದೆ

ಈ ನಮ್ಮ "ಹೈಮಧಾತ್ರೀ ತೈಲವನ್ನು" ಪ್ರತಿದಿನ ತಲೆಗೆ ಹಾಕಿಕೊಂಡರೆ ಮಿದುಳಿನಲ್ಲಿರುವ ಉಷ್ಣತೆಯನ್ನು ಪರಿಹರಿಸುವದಲ್ಲದೇ, ಕಣ್ಣಿಗೂ, ಮಿದುಳಿಗೂ ತಂಪುಕರಿಸಿ, ಚಿತ್ತಕ್ಕೆ ಶಾಂತಿಯನ್ನುಂಟುಮಾಡುವದು ಮತ್ತು ಕಣ್ಣುಗಳಿಗುಂಟಾಗುವ ಸಾಮಾನ್ಯವಾದ ವಿಕಾರಗಳನ್ನೆಲ್ಲ ಪರಿಹರಿಸುವದು ದೃಷ್ಟಿಗೆ ತೀವ್ರತೆಯನ್ನುಂಟುಮಾಡುವದು.

ಹೆಚ್ಚಾಗಿ ಓದತಕ್ಕವರಿಗೂ, ಒಂದೇ ಸಮನಾಗಿ ಕಣ್ಣಿಟ್ಟು ಕೆಲಸ ಮಾಡತಕ್ಕ ಕಸಬುಗಾರರಿಗೂ, ಕಣ್ಣುಗಳಲ್ಲಿ ನೀರು ಸುರಿಯುವವರಿಗೂ, ಉರಿಗಣ್ಣಿನವರಿಗೂ, ಚಿತ್ತವ್ಯಗ್ರವಾದವರಿಗೂ, ಅತ್ಯಂತ ಗುಣಕಾರಿಯಾಗಿರುವದು. ಈ ತೈಲದಲ್ಲಿರುವ ಇನ್ನೊಂದು ಅಪ್ರತಿಮವಾದ ಶಕ್ತಿಯೇನೆಂದರೆ—ಕೂದಲುಗಳನ್ನು ನಯವಾಗಿಯೂ, ಹೊಳೆಯುವಂತೆಯೂ, ಮಾಡುವದಲ್ಲದೇ ಬೆಳವಣಿಗೆಯನ್ನು ಹೆಚ್ಚಿಸುವದು. ಕೂದಲುಗಳ ಬೇರುಗಳನ್ನು ಭದ್ರಮಾಡಿ, ಅವು ಉದರಿಹೋಗದಂತೆ ಮಾಡುವದು.

ಪ್ರತಿಯೊಂದು ಬಾಟ್ಲಿಯೊಳಗೆ ೭ ತೊಲೆ ತೈಲವಿರುವದರಿಂದ ಒಬ್ಬವನಿಗೆ ೨ ತಿಂಗಳು ಹಚ್ಚಿಕೊಳ್ಳಲಿಕ್ಕೆ ಸಾಕಾಗುವದು. ಬಡವರ್ಗರು ಸಹ ಕೊಂಡುಕೊಳ್ಳಲಿಕ್ಕನುಕೂಲವಾಗಿರಬೇಕೆಂಬದಕ್ಕಾಗಿ ಪ್ರತಿಯೊಂದು ಬಾಟ್ಲಿಗೆ ೧೦ ಆಣೆ ಕ್ರಯವಿಟ್ಟಿರುವೆವು ೧೨ ಬಾಟ್ಲಿಗಳುಳ್ಳ ೧ ಪೆಟ್ಟಿಗೆಗೆ ೬॥ ರೂಪಾಯಿ. ಪ್ರತಿಯೊಬ್ಬ ಕುಟುಂಬಿಗನೂ, ಈ ತೈಲವನ್ನು ಉಪಯೋಗಿಸುವದು ಅವಶ್ಯವಾಗಿರುತ್ತದೆ. ಚಿಕ್ಕಮಕ್ಕಳಿಗೆ ಸಹ ಈ ತೈಲವು ಸುಖಾವಹವಾಗಿರುತ್ತದೆ.

ಈ ತೈಲ ಮತ್ತು ಈ ಕೆಳಗೆ ಬರೆಯುವಂಥ ಔಷಧಗಳು, ಡ್ರೆಸ್ಸು, ಮುತ್ತು, ರತ್ನ, ಬಂಗಾರ, ಬೆಳ್ಳಿ ಮುಂತಾದ ಸಾಮಾನುಗಳನ್ನು ಪಡೆಯಬಿಚ್ಛಿಸುವವರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬೇಕು

ಮ್ಯಾನೇಜರ್, ಕೆನರಾ ಅಂಡ ಮೈಸೂರು ಟ್ರೇಡಿಂಗ ಏಜನ್ಸಿ ಆಫೀಸ್, ಮಾರ್ಕೆಟ ಪೋಸ್ಟ್ ಮುಂಬಾಯಿ.

ಈ ತೈಲವನ್ನು ನಮ್ಮ ಹೊರತು ಇನ್ಯಾರೂ ಮಾಡಲಾರರು. ನಮ್ಮ ಹೆಸರಿನ ಗುರ್ತನ್ನು ನೋಡಿ ತೆಗೆದುಕೊಳ್ಳಬೇಕು ಬೇರೇತರದ ಎಣ್ಣೆಗಳನ್ನು ಈ ಹೆಸರಿನಿಟ್ಟು ಮಾರುತಿದ್ದರೆ ಜಾಗ್ರತೆ ಪಡಿರಿ!

ಔಷಧಗಳು	ರೂ ಆ	ಡ್ರೆಸ್ಸುಗಳು	ರೂ ಆ.
ನಯನಾಮೃತಭಸ್ಮ ಬಾಟ್ಲಿ ೧ ಕ್ಕೆ	೧—೬	ಪ ಅಲ್ಪ್ಯಾಕಿನ ಮಡ್ಡು	೨—೮
ನಯನಾಮೃತ ಕಾಡಿಗೆ	೧—೬	ಪರೇಸಬೀನ ಅಂಗಕೋಟು	೩—೦
ಕರ್ಣಾಮೃತನಾಮಕ ಅಪ್ರತಿಮತೈಲ	೧—೦	ಡಿಟೋ ಆರ್ಗನ್	೪—೮
ಮಹಾಮಾಷಾಶೋಧಿರತೈಲ	೧—೦	ಡಿಟೋ ಪ ಟ್‌ಕೋಟು (ಇಂಗ್ಲಿಷ ಮಾದರಿ)	೪—೬
ಪ್ರವಾಳಭಸ್ಮವು	೨—೧೨	ಪಪ್ಪನ ಪ ಕಸಿಮಿರಿಕೋಟು	೨—೮
ವಿವಿಧಜ್ವರಹರಪುಟ್ಟಿಕೆಯು	೧—೦	ಡಿಟೋ ಆರ್ಗನ್	೨—೪
ಬಾಲಸಂಜೀವಿನಿಗುಟಿಕೆ	೩—೮	ಪ್ಲಾನೆಲ್ ಶರ್ಟ್ಸ್	೧—೧೨
ಅಜೀರ್ಣವಾತಪ್ರ	೦—೮	ಡಿಟೋ ಒನಿಯನ್	೧—೪
ಸುಗಂಧಕೇಶವರ್ಧನವು	೦—೪	ಬಿಳಿ (ಇಂಗ್ಲಿಷಮಾದರಿ) ಶರ್ಟು	೬—೧೨
ಕಜ್ಜಿಯುಮಲಮು	೦—೨		

ಹಿಮಾಕರನಾದ ಚಂದ್ರಕಾಂತ ಶಿಲೆಯ ಕನ್ನಡಕಗಳ ಕ್ರಯ ರೂ. ೧೦—೩॥—೩—೩॥ ಉತ್ತಮವಾದ "......" ಎಂಬ ಹೆಸರಿನ ೧ಗಡಿಯಾರವು (೧ ವರುಷದ ಜವಾಬುದಾರಿಯುಳ್ಳದ್ದು) ಕ್ರಯ ರೂ. ೬

ವೃತ್ತಾಂತ ಪತ್ರಿಕೆ.

ಚಂದಾ ನಿರ್ಣಯ.

	ರೂ ಆ ಪೈ.
ಸ್ಥಳದವರಿಗೆ ವರ್ಷ ೧ಕ್ಕೆ	೧—೦—೦
ಪರಸ್ಥಳದವರಿಗೆ ವರ್ಷ ೧ಕ್ಕೆ	೧—೫—೦
ಬಿಡಿ ಪತ್ರಿಕೆ ೧ಕ್ಕೆ	೦—೦—೪

ಈ ಪತ್ರಿಕೆಯು ಮೈಸೂರು ರಾಜಧಾನಿಯಲ್ಲಿ ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ, ಪ್ರಕಟಿಸಲ್ಪಡುವದು ಬಡವರು ಸೇರಿದಂತೆ ಸಮಸ್ತರೂ ಸುಲಭಸಾಧ್ಯವಾಗುವಂತೆ ಈ ಪತ್ರಿಕೆಗೆ ಇಷ್ಟು ಅಲ್ಪ ಮೌಲ್ಯವನ್ನು ನಿರ್ಣಯಿಸಿರುತ್ತೇವೆ ಈ ಪತ್ರಿಕೆಯನ್ನು ಅಪೇಕ್ಷಿಸುವವರು ಚಂದಾಹಣವನ್ನು ಮುಂಗಡವಾಗಿ ಕಳುಹಿಸಬೇಕು.

ಎಡಿಟರ್,

ವೃತ್ತಾಂತಪತ್ರಿಕೆ

ಜಗದ್ಗುರುವಿನ ಚರಿತ್ರ ಸಂಗ್ರಹ.

THE LIFE

OF

The Lord Jesus Christ.

Selected incidents from the Gospels,

FREELY PARAPHRASED

ಸುಲಭವಾಗಿ ರಚಿಸಲ್ಪಟ್ಟ ೩೩ ಭಾಗಗಳುಳ್ಳ ಈ ಪುಸ್ತಕವನ್ನು ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್ಸಿಗೆ ಬರೆದು ತರಿಸಿಕೊಳ್ಳಬಹುದು.

ಕ್ರಯ (ಟಪ್ಪಾಲ್ ಹಾಸಲ್ ಅಲ್ಲದೆ)

೧೦೦ ಪ್ರತಿಗಳಿಗೆ	೩—೦—೦
ಬಿಡಿ ಪ್ರತಿಗೆ	೦—೧—೦

ಸುಮಾರು ೨—೩ ಪ್ರತಿಗಳನ್ನು ಅರ್ಧ ಆಣೆ ಹಾಸಲಿನಿಂದ ಕಳುಹಿಸಬಹುದು.

ನೋಟೀಸ್.

ಮೈಸೂರು ದೇಶಸ್ಥರು ಮಹಾಯಾತ್ರೆಗೆ ಹೊರಟು ದಾರಿಯಲ್ಲಿ ದಳ್ಳಾಳಿಗಳಿಗೆ ಸಿಕ್ಕಿ ತ್ರಿಸ್ಥಳದಲ್ಲಿಯೂ ಪ್ರಶಸ್ತವಿಲ್ಲದ ಸ್ಥಳಗಳಲ್ಲಿ ಇಳಿದು ಹಣಕಾಸುಗಳಿಗೆ ಮೋಸಹೊಂದಿ ವಾಪಸು ಹೋಗುವದು ಕಂಡು ತಿಳಿಯಪಡಿಸುವದೇನೆಂದರೆ:— ೩೦ ವರುಷದ ಲಾಗಾಯಿತು ಗಯಾದಲ್ಲಿ ವಾಸ ಮಾಡುತ್ತಿದ್ದು ಈಗ ೮ ವರುಷದಿಂದ ಹನುಮಾನ್‌ಘಾಟಿಯಲ್ಲಿ ವಾಸಮಾಡುವ ಬೋಧಾಯನ ಕಾಶೀನಾಥಶಾಸ್ತ್ರೀ ಮನೆಗೆ ತಿಳಿದಂಥ ಸಕ್ಸಜ್ಜನರು ಬಂದು ಇಳಿದುಕೊಂಡು ಅವರವರ ಶಕ್ತ್ಯಾನುಸಾರ ತ್ರಿಸ್ಥಳದ ಯಾತ್ರೆ ಪೂರೈಸಿಕೊಂಡು ಸುಖದಲ್ಲಿ ಹಿಂದಕ್ಕೆ ಗಮನ ಮಾಡುತ್ತಾರೆ. ಪಂಚ ದ್ರಾವಿಡರ ಪೈಕಿ ಕರ್ನಾಟಕರು ವಿನಹಾ ಬಾಕಿ ಅಂದರೆ ಮಹಾರಾಷ್ಟ್ರ ದ್ರಾವಿಡ ತೆಲುಗು ದೇಶಸ್ಥರು ಅವರವರ ಜನರಲ್ಲೇ ಹುಡುಕಿಕೊಂಡು ಹೋಗುತ್ತಾರೆ. ಕರ್ನಾಟಕರು ಮಾತ್ರ ತಿಳುವಳಿಕೆ ಇಲ್ಲದ ಕಂಡಕಡೆಗಳಲ್ಲಿ ಇಳಿದುಕೊಂಡು ಅನುವಿಸ್ಯಪಟ್ಟು ಹೋಗುವದು ಅವಮಾನವಲ್ಲವೇ! ನಮ್ಮ ದೇಶಸ್ಥರು ಇಳಿಯುವದಕ್ಕಾಗಿ ೫,೦೦೦ರೂಪಾಯಿಗಳು ಮುಟ್ಟಿಸಿ ಉತ್ಕೃಷ್ಟವಾದ ಮನೆ ಹನುಮಾನ್‌ಘಾಟಿನಲ್ಲಿ ಕಟ್ಟಿ ಇರುತ್ತೇನೆ. ಸ್ನಾನ ಪಾನಗಳಿಗೆ ಗಂಗಾ ಸಮೀಪವಾಗಿಯೂ ರಮಣೀಯವಾಗಿಯೂ ಇದೆ. ಇಚ್ಛೈಸಿ ಬರತಕ್ಕವರು ಮುಂಚಿತವಾಗಿ ಇಂಥಾ ದಿವಸ ಪ್ರಯಾಗಕ್ಕೆ ಬರುತ್ತೇವೆಂದು ತಿಳಿಸಿದಲ್ಲಿ ತ್ರಿಸ್ಥಳದ ಯಾತ್ರೆಯೂ ಶಕ್ತ್ಯಾನುಸಾರ ಮಾಡಿ ದೇಶಕ್ಕೆ ಪ್ರಯಾಣ ಮಾಡಿಸಲು ತಕ್ಕ ಏರ್ಪಾಡು ಮಾಡುತ್ತೇನೆ.

ಬೋಧಾಯನ ಕಾಶೀನಾಥಶಾಸ್ತ್ರಿ
ಹನುಮಾನ್‌ಘಾಟ—ಬನಾರಸ್.

ವೃತ್ತಾಂತ ಪತ್ರಿಕೆ.

೧೮೯೩ನೇ ಇಸವಿ ಮೆ ತಾ|| ೪ ನೇ ಗುರುವಾರ

ಮ್ಯುನಿಸಿಪಲ್ ಮೀಟಿಂಗು.

ಹೋದ ತಿಂಗಳು ೨೯ನೇ ತಾರೀಖು ಶನಿವಾರ ಮಧ್ಯಾಹ್ನ ಸುಮಾರು ೪ ಘಂಟೆಯ ಹೊತ್ತಿಗೆ ಟೌನ್‌ಹಾಲಿನಲ್ಲಿ ಮ್ಯುನಿಸಿಪಲ್ ಕಮಿಷನರುಗಳೂ ಅಧಿಕಾರಿಗಳೂ ಮ್ಯುನಿಸಿಪಲ್ ಮೀಟಿಂಗ್ ನಡೆಸುವದಕ್ಕಾಗಿ ಸಭೆ ಸೇರಿದ್ದರು. ಬಿಟ್ಟರು ವಿಷಯ ಮೀಟಿಂಗಿಗೆ ಬರಬೇಕಾಗಿದ್ದವರೆಲ್ಲರೂ ಬಂದು ಹಾಜರಾಗಿದ್ದರು. ಮ|| ಚಿಕ್ಕಣ್ಣನವರನ್ನು ಒಬ್ಬ ಮೆಂಬರಾಗಿ ಸರ್ಕಾರದವರು ಚುನಾಯಿಸಿರುವಂತೆ ಕೇಳುತ್ತೇವೆ. ಆದಾಗ್ಯೂ ಅವರು ಒಂದಾವರ್ತಿಯಾದರೂ ಈ ಮೀಟಿಂಗಿಗೆ ಹಾಜರಾದಂತೆ ಕಾಣಿಸಲಿಲ್ಲ. ಮೆಂಬರುಗಳ ಹಾಜರಾತಿಯ ವಿಷಯದಲ್ಲಿ ಈಚೆಗೆ ಗೌರ್ನಮೆಂಟಿನವರು ಕೊಟ್ಟಿರುವ ಹುಕ್ಕುಮನ್ನು ಅವರು ನೋಡಿಯೇ ಇಲ್ಲವೆಂದು ಊಹಿಸಬೇಕಾಗಿದೆ. ಪ್ರೆಸಿಡೆಂಟ್ರವರು ಅಗ್ರಾಸನವನ್ನು ಅಲಂಕರಿಸಿ ಆದಿಯಲ್ಲಿ ಹಿಂದಿನ ತಿಂಗಳಿನ (ಮಾರ್ಚಿ) ಜಮಾಖರ್ಚುಗಳ ಪಟ್ಟಿಯನ್ನು ಪದ್ಧತಿಯ ಪ್ರಕಾರ ಪಾರಾಯಣ ಮಾಡಿದರು. ಅನಂತರ ಇದರಲ್ಲಿ ಏನಾದರೂ ಚರ್ಚಿಸತಕ್ಕ ವಿಷಯ ಉಂಟೇ ಎಂಬದಾಗಿ ಕೇಳಿದರು. ಎಲ್ಲರೂ ಒಪ್ಪಿಕೊಂಡಂತೆ ಸುಮ್ಮನಿದ್ದರು. ಆದರೆ ಮ|| ಸ್ಟ್ರೆಂಜಿಸ್ ಲೀ ಸಾಹೇಬರವರು—ಪ್ರೆಸಿಡೆಂಟ್ರವರು ಚುಕ್ಕರದಳ್ಳಿ ಕೆರೆಯ ಸಮೀಪದ ಮುಸಾಫರಖಾನೆಗೆ ಹೋದತಿಂಗಳಿನಲ್ಲಿ ೧೧ ರೂಪಾಯಿ ಖರ್ಚು ಎಂದು ಓದಿದಾಗ—ಈ ಖರ್ಚು ನಿಷ್ಪ್ರಯೋಜನವಲ್ಲವೆ ಎಂದು ಪ್ರಶ್ನೆ ಮಾಡಿದರು. ಆಗ ಪ್ರೆಸಿಡೆಂಟ್ರವರು ಅದನ್ನು ಮುಂದೆ ತನಿಖೆ ಮಾಡೋಣ ಎಂದು ಹೇಳಿದರು. ಈ ರಿಪೋರ್ಟಿನಿಂದ ಪಬ್ಲಿಕ್ ವರ್ಕ್ಸಿಗಾಗಿ ೩೩೩೦ ರೂಪಾಯಿಗಳೂ, ಚರಂಡಿಗಳನ್ನು ಹೊಸದಾಗಿ ಕಟ್ಟಿಸಿದ್ದಕ್ಕೆ ೬೩೧ ರೂಪಾಯಿಗಳೂ, ಅಂತು ಒಟ್ಟು ಖರ್ಚು ೫,೯೭೦ ರೂಪಾಯಿಗಳಾದಂತೆಯೂ, ಆದರೆ ಹೋದ ವರುಷದ ಇದೇ ತಿಂಗಳಿಗೆ ೧೩,೩೪೮ ರೂಪಾಯಿಗಳು ಖರ್ಚಾದಂತೆಯೂ ಓದಿದಂತೆ ತಿಳಿಯಬಂತು. ಮ್ಯುನಿಸಿಪಲ್ ಬಜೆಟ್ಟನ್ನು ೧೫ನೇ ತಾರೀಖಿನೊಳಗಾಗಿ ಪೂರೈಸಬೇಕೆಂದು ನಿರ್ಧರಿಸಾಯಿತು. ಪಟ್ಟಣದ ಕೆಲವು ಭಾಗಗಳಲ್ಲಿ ಲಾಂದ್ರ ದೀಪಗಳನ್ನು ಹಚ್ಚುವದಿಲ್ಲವೆಂದು ತಿಳಿಯಬಂದದರಿಂದ ಮ|| ಅಣ್ಣಯ್ಯ ಪಂಡಿತರು ತಮ್ಮ ಓವರ್ಸಿಯರ ವಶಕ್ಕೆ ಒಂದು ಪುಸ್ತಕವನ್ನು ಕೊಟ್ಟು ತಮ್ಮ ಮೊಹಲ್ಲೆಗೆ ಸೇರಿದ ಪ್ರತಿ ಬೀದಿಯಲ್ಲೂ ಕಚರಾ ಚನ್ನಾಗಿ ತೆಗೆದು ಕಂಡಿ ಮಾಡುತ್ತಾರೆಯೋ ಇಲ್ಲವೆ; ರಾತ್ರಿ ಕಾಲಗಳಲ್ಲಿ ಲಾಂದ್ರಗಳಿಗೆ ದೀಪ ಹಚ್ಚಿಸುತ್ತಾರೆಯೋ ಇಲ್ಲವೆ ಎಂಬೀ ಅಂಶಗಳನ್ನು ಆಯಾ ಬೀದಿಯ ನಿವಾಸಿಗಳ ಮೂಲಕ ಬರಸಿಕೊಂಡು ಬರುವಂತೆ ಏರ್ಪಾಡು ಮಾಡಿದಲ್ಲಿ ಉತ್ತಮವಾಗಿದೆ; ನಾನು ಹೀಗೆ ಮಾಡುತ್ತೇನೆ, ಇತರ ಮೆಂಬರುಗಳೂ ಹೀಗೇ ಮಾಡಿದಲ್ಲಿ ಜನಗಳಿಗೆ ಪ್ರಯೋಜನವಾಗುತ್ತೆಂಬದಾಗಿ ತಿಳಿಸಿದರು. ಇದನ್ನು ಅನೇಕರು ಒಪ್ಪಿಕೊಂಡರು ಹೀಗೆ ಮಾಡೋಣದಿಂದ ಮ್ಯುನಿಸಿಪಲ್ ಮೆಂಬರುಗಳು ಕೇರಿಕೇರಿಗಳಲ್ಲಿ ಅಲೆಯುವ ಪಾಡು ತಪ್ಪುತ್ತೆ. ತಾವು ಬೇರೆ ಕೆಲಸದಲ್ಲಿ ನಿರತವಾಗಿರಬಹುದು, ಅನುಕೂಲವಾಗಿ ಒಂದು ದಿನ ಬೇಕಾದರೆ ತಮ್ಮ ಮೊಹಲ್ಲೆಯಲ್ಲಿ ಸಂಚಾರ ಮಾಡಬಹುದು, ಅನಂತರ ತಮ್ಮ ಸಂಚಾರವೂ ವಿಚಾರಣೆಯೂ ಅಷ್ಟು ಅವಶ್ಯವಾಗಿರಲಾರದು ಎಂಬೀ ಊಹೆಗಳಿಂದ ಈ ಏರ್ಪಾಡು ಮಾಡಿರಬಹುದೆಂದು ವ್ಯಕ್ತವಾಗುವದಿಲ್ಲವೆ! ಆದರೆ ಇದೂ ಒಳ್ಳೇ ಏರ್ಪಾಡೇ ಸರಿ ಎಂದು ಒಪ್ಪಬಹುದು. ಮೈಸೂರಿನಲ್ಲಿ ಮಹಾರಾಜ ಬ್ಯಾಂಕಿನ ಕಟ್ಟಡದಲ್ಲಿನ ರಸ್ತೆಯನ್ನು ದೊಡ್ಡದು ಮಾಡುವಾಗ ಅದರ ಪೂರ್ವದ ಮೂಲೆ ಬಂಗಲೆಯಲ್ಲಿ ಒಂದು ಭಾಗವನ್ನು ಮ್ಯುನಿಸಿಪಾಲಿಟಿಯವರು ರಸ್ತೆಗಾಗಿ ಉಪಯೋಗಿಸಿಕೊಂಡು ೧೨ ವರುಷಗಳು ಕಳೆದು ಹೋಗಿದ್ದಾಗ್ಯೂ ಅದಕ್ಕೆ ಸರಿಯಾದ ಪರಿಹಾರವನ್ನು ಮ್ಯುನಿಸಿಪಾಲಿಟಿಯವರು ಕೊಟ್ಟಿಲ್ಲವೆಂಬದಾಗಿ ಬಂಗಲೆಯ ಮಾಲೀಕರಾಗಿ ಬೆಂಗಳೂರಿನಲ್ಲಿರುವ ಮ|| ಚಲುವರಾಯಮೊದಲಿಯಾರ್ರವರು ಅರ್ಜಿ ಬರದುಕೊಂಡಿದ್ದರ ಮೇಲೆ—ಈ ವಿಷಯವು ಮ|| ನ್ಯಾಷನಾಜೇಬರು ಪ್ರೆಸಿಡೆಂಟರಾಗಿದ್ದಾಗ್ಯೆ ನಡೆದಿರುತ್ತಾದ್ದರಿಂದ ಈ ವಿಷಯದಲ್ಲಿ ಅವರು ಏನು ಮಾಡಿದರೆಂದು ಅವರನ್ನು ಕೇಳಿ ತಿಳಿಯತಕ್ಕದ್ದಾಗಿದೆ ಎಂಬದಾಗಿ ತೀರ್ಮಾನಿಸಿದರು.

ಸ್ಟೇಟ್ ಅಸಿಸ್ಟೆಂಟ್ ಮೆಡಿಕಲ್ ಆಫೀಸರು ಮುನ್ಸಿಪಲ್ ಕಮೀಟಿಯವರು ಮತ್ತು ಡೆಪ್ಯುಟಿ ನ್ಯೂಟಿಸ್ಸೂಲಿನ್ನು ಅವಮಾಯಿಷಿ ಮಾಡಿ, ಅದಕ್ಕೆ ೧೨ ರೂಪಾಯಿ ಗ್ರಾಂಟು ಕೊಡಬಹುದೆಂದು ತಮ್ಮ ಇರಾದೆಯನ್ನು ರಿಪೋರ್ಟು ಮಾಡಿದ್ದರು. ಈ ವಿಷಯವನ್ನು ಚರ್ಚೆ ಮಾಡುವಾಗ್ಯೆ ದೊಡ್ಡಪೇಟೆಯಲ್ಲಿರುವ ನ್ಯೂಟಿಸ್ಸೂಲಿಗೆ ೪೦ ರೂಪಾಯಿ ಗ್ರಾಂಟು ಇದೆ ಎಂದು ಆಕಸ್ಮಾತ್ತಾಗಿ ಪ್ರಸ್ತಾವದ ವಿಷಯವು ಚರ್ಚೆಗೆ ಬಂದು ಗ್ರಾಂಟಿನ ವಿಷಯದಲ್ಲಿ ಈಗ ಗ್ರಾಂಟು ಪಡೆಯುವ ಎಲ್ಲಾ ಸ್ಕೂಲುಗಳ ಆದಾಯ ವ್ಯಯಗಳನ್ನು ಪುನಃ ರಿವೈಜ್ ಮಾಡಬೇಕೆಂದು ಎಜ್ಯುಕೇಷನ್ ಸೆಕ್ರೆಟರಿಯವರಿಗೆ ಬರೆಯಬೇಕೆಂದು ತೀರ್ಮಾನಿಸಿದರು. ಇಂಥಾ ಫಲಿತಾಂಶವನ್ನು ನೋಡಿ ತುಂಬಾ ಆಶ್ಚರ್ಯಪಡಬೇಕಾಗಿದೆ.

ಹಳೇ ಅಗ್ರಹಾರದ ಆಸ್ಪತ್ರೆಯ ಛಾರ್ಜಿನಲ್ಲಿರುವ ಅಸಿಸ್ಟೆಂಟರು, ಖಾಯಿಲೆ ಜನಗಳ ಉಪಯೋಗಾರ್ಥವಾಗಿ ೪ ಕೊಠಡಿಗಳನ್ನುಳ್ಳ ಒಂದು ಕಟ್ಟಡವನ್ನು ಕೊಡಿಸಿಕೊಡಬೇಕೆಂದು ಮ್ಯುನಿಸಿಪಾಲಿಟಿಗೆ ಅರ್ಜಿ ಮಾಡಿಕೊಂಡಿದ್ದರು. ಈಗಿರುವ ಕಟ್ಟಡವೇ ಬಹು ಸಮರ್ಪಕವಾಗಿರುವಂತೆಯೂ, ಹಿಂಭಾಗದಲ್ಲಿ ವಾಸಮಾಡುವ ಜನರಿಂದ ಆಸ್ಪತ್ರೆಗೆ ಯಾವ ತೊಂದರೆಗಳೂ ಆಗಲಾರವೆಂತಲೂ ಮ|| ಅಣ್ಣಯ್ಯಪಂಡಿತರು ಅಭಿಪ್ರಾಯ ಪಟ್ಟದ್ದರಿಂದಲೂ, ಡಾಕ್ಟರ್ ಬೆರ್ಗ್‌ಸಾಹೇಬರವರು ಆ ಕಟ್ಟಡ ಸಾಕಾಗಿರುತ್ತೆ; ನನ್ನ ಮೂಲಕ ಈ ಅರ್ಜಿ ಬರಬೇಕಾಗಿತ್ತು ಎಂಬದಾಗಿ ಅಭಿಪ್ರಾಯ ಪಟ್ಟದ್ದರಿಂದಲೂ—ಅಸಿಸ್ಟೆಂಟರು ತಮ್ಮ ಅರ್ಜಿಯನ್ನು ಸಿವಿಲ್ ಸರ್ಜನ್ರ ಮುಖಾಂತರ ಮ್ಯುನಿಸಿಪಾಲಿಟಿಗೆ ಕಳುಹಿಸಿಕೊಳ್ಳಬೇಕೆಂದು ತೀರ್ಮಾನಿಸಿದರು.

ಟೌನ್‌ಮ್ಯುನಿಸಿಪಾಲಿಟಿಗೆ ಒಬ್ಬ ಇಂಜನಿಯರು ಅವಶ್ಯವಾಗಿರುತ್ತೆಂದು ಮೆಂಬರುಗಳು ಅಭಿಪ್ರಾಯಪಟ್ಟಿದ್ದರಿಷ್ಟೆ. ಈ ವಿಷಯದಲ್ಲಿ ಗೌರ್ನಮೆಂಟಿನವರು ಮೆ|| ಸುಂದರಂ ಐಯ್ಯರ್ ಎಂಬ ಎಕ್ಸ್‌ಕ್ಯೂಟಿವ್ ಇಂಜನಿಯರನ್ನು ನೇಮಿಸಿ—ಇವರಿಂದ ಕೆಲಸ ತೆಗೆದುಕೊಳ್ಳುವದಕ್ಕೆ ಒಪ್ಪುತ್ತೀರೋ ಅಥವ ಗೌರ್ನಮೆಂಟಿನಿಂದ ಒಬ್ಬ ಇಂಜನಿಯರನ್ನು ಸಾಲವಾಗಿ 'ತೆಗೆದುಕೊಳ್ಳುತ್ತೀರೋ' ಎಂಬದಾಗಿ ಮ್ಯುನಿಸಿಪಾಲಿಟಿಯವರನ್ನು ಕೇಳಿದ್ದರು. ಈ ವಿಷಯವು ಬಹಳ ಚರ್ಚೆಯಾಗಿ ಕೊನೆಗೆ ಪ್ರೆಸಿಡೆಂಟ್ರ ಇಷ್ಟದಂತೆಯೇ ತೀರ್ಮಾನವಾಗಬೇಕಾಗಿ ಬಂದದಕ್ಕೆ ಆಶ್ಚರ್ಯಪಡುತ್ತೇವೆ. ಮ|| ಸುಂದರಂ ಐಯ್ಯರನ್ನು ಕೆಲಸದ ಮೇಲೆ ಕಳಿಸಿಕೊಡಬೇಕೆಂತಲೂ, ಅವರಿಗೆ ೨೦೦ ರೂಪಾಯಿಗಳು ಸಂಬಳ ಕೊಡಲು ಮ್ಯುನಿಸಿಪಾಲಿಟಿಗೆ ಚೈತನ್ಯವಿರುವದೆಂತಲೂ, ಆದರೆ ಅವರು ೫ ವರುಷವಾದರೂ ಖಾಯಮ್ಮಾಗಿ ವರ್ಗಾವಣೆ ಮಾಡದೆ ಇಲ್ಲೇ ಕೆಲಸಮಾಡುವವರಾಗಿರಬೇಕೆಂತಲೂ ಗೌರ್ನಮೆಂಟಿನವರನ್ನು ಕೇಳಿಕೊಳ್ಳುವಂತೆ ತೀರ್ಮಾನವಾಯಿತು. ಮೀಟಿಂಗಿನಲ್ಲಿ ಚರ್ಚಿಸಲ್ಪಟ್ಟ ಇತರ ವಿಷಯಗಳು ಅಷ್ಟು ವಿಶೇಷವಾಗಿರುವಂತೆ ಕಂಡು ಬರಲಿಲ್ಲವಾಗಿ ಅವುಗಳನ್ನು ಇಲ್ಲಿ ನಮೂದು ಮಾಡಲಿಲ್ಲ. ಮೆಂಬರುಗಳು ವಿಷಯಗಳನ್ನು ಮೀಟಿಂಗಿನಲ್ಲಿ ಚರ್ಚೆ ಮಾಡುವಲ್ಲಿ ಅವರು ಅಷ್ಟು ಮುತುವರ್ಜಿಯನ್ನು ತೋರ್ಪಡಿಸುವಂತೆ ಕಾಣಬರುವದಿಲ್ಲ. ಆದರೆ ಈ ಪದ್ಧತಿಯು ಇನ್ನೂ ಹೊಸದು; ಆದುದರಿಂದ ಹಟ ಹಿಡಿಯುವಂತೆ ಚರ್ಚೆ ಮಾಡುವದು ಸರಿಯಲ್ಲ: ಕಾಲಕ್ರಮದಲ್ಲಿ ತಮಗೆ ಹೆಚ್ಚು ಸಲಿಗೆ ಬರುವದೆಂದು ತಿಳಿದಿರುವರೋ ಏನೋ ಎಂಬೀ ಊಹೆಗಳಿಗೆ ಆಸ್ಪದವಾಗುವಂತೆ ಚರ್ಚಿಸುತ್ತಾರೆ. ಆದರಿಂದ ಮೆಂಬರುಗಳು ಮುಂದೆಯಾದರೂ ಹೆಚ್ಚು ಮುತುವರ್ಜಿಯನ್ನು ತೋರ್ಪಡಿಸುವರೆಂದು ನಂಬಿದ್ದೇವೆ.

ಮೈಸೂರು ರೇಟ್‌ಪೇಯರುಗಳ ಮೀಟಿಂಗ್.

ಕಳೆದವಾರದ ಸಂಚಿಕೆಯಲ್ಲಿ ಹೋದತಿಂಗಳು ೨೩ ನೇ ಭಾನುವಾರ ಬೆಳಗ್ಗೆ ಮೈಸೂರು ರೇಟ್ ಪೇಯರುಗಳ ಸಮಾಜವು ಟೌನ್‌ಹಾಲಿನಲ್ಲಿ ನಡೆಯಿತೆಂಬದಾಗಿ ತಿಳಿಸಿ ಅಲ್ಲಿ ಮೆಂಬರುಗಳು ಪಾಸ್ ಮಾಡಿದ ರೆಜೊಲ್ಯೂಷನ್‌ಗಳನ್ನು ಸಹ ಪ್ರಕಟಿಸಿದ್ದೆವಷ್ಟೆ. ಈ ಮೀಟಿಂಗು ನಡೆದದ್ದು ಬಹುಕಾಲವಾಗಿತ್ತು. ಈ ಸಮಾಜವು ಸಂಪೂರ್ಣವಾಗಿ ಇಲ್ಲವೇ ಇಲ್ಲವೋ ಎಂಬದಾಗಿ ಜನರು ಊಹಿಸುವಂತೆ ಬಹುಕಾಲದಿಂದಲೂ ಜನರು ಇದರ ವಿಷಯವಾಗಿ ಏನೇನೋ ಯೋಚಿಸುತಿದ್ದರು. ಇಂಥಾ ಊಹೆಗಳಿಗೆ ತಕ್ಕ ಕಾರಣಗಳೇನಾಗಿರಬಹುದೆಂದು ಇಲ್ಲಿ ನಮೂದಿಸುವದಕ್ಕಿಂತಲೂ ರಾಜಧಾನಿಯ ಈ ಮೆಂಬರುಗಳಿಗೇ ಚನ್ನಾಗಿ ಗೊತ್ತಿವೆ. ಆದದರಿಂದ ಈ ಸಭೆಯವರಿಗೆ ಹಿಂದೆ ಪ್ರಸ್ತಾವಿತ ಒಂದು ಮನಃಕಂಪ್ಯವು ಇನ್ನೂ ಬಾಧಿಸುತ್ತಲಿದೆ ಎಂದು ಈ ಮೀಟಿಂಗಿನಿಂದ ವ್ಯಕ್ತವಾಯಿತು. ಮೀಟಿಂಗಿಗೆ ಹೋದಾಗಲೂ ಮೆಂಬರುಗಳು ತಾವಾಗಿಯೇ ಅತಿ ಕುತೂಹಲದಿಂದ ದಯಮಾಡಿ, ಅವರ ಕೆಲಸಗಳ ವಿಷಯದಲ್ಲಿ ಬಹು ಆಸಕ್ತಿಯನ್ನು ತೋರ್ಪಡಿಸುತ್ತಿದ್ದದಕ್ಕೆ ಬದಲಾಗಿ, ಮೀಟಿಂಗು ಉಂಟು, ನೀವು ಬನ್ನಿ, ತಾವು ಬನ್ನಿ ಎಂಬದಾಗಿ ಕರೆದಾಗ್ಯೂ ಮೆಂಬರುಗಳು ಬರುವದೇ ಕಷ್ಟವಾಯಿತು. ಬಂದು ವೇಳೆ ಬಂದಾಗ್ಯೂ ಸ್ವಲ್ಪ ಹೊತ್ತು ಮಾತ್ರ ಮೀಟಿಂಗಿನಲ್ಲಿ ಹಾಜರಾಗಿದ್ದು ನಂತರ ಎದ್ದು—ನನಗೆ ಸ್ವಲ್ಪ ಕೆಲಸವಿದೆ, ಯಾರೋ ಬರಹೇಳುತ್ತಾರೆ, ಎಂಬದಾಗಿ ಹೇಳಿ ಹೊರಟು ಹೋದವರು ಕೆಲವರು, ಮೀಟಿಂಗಿನಲ್ಲಿ ಕೊನೆಯ ವರೆಗೂ ನಡೆದ ಸಂಗತಿಗಳು ನೋಟಕರಿಗೂ, ಮೆಂಬರುಗಳಿಗೂ ಅಷ್ಟು ಹರ್ಷವಾಗಿದ್ದಂತೆ ಕಾಣಿಸಲಿಲ್ಲ. ಮೆಂಬರುಗಳು ತಮ್ಮ ತಮ್ಮ ಸ್ವಕಾರ್ಯಗಳ ವಿಷಯಗಳಲ್ಲೇ ಇಷ್ಟು ಅನಾದರಣೆಯನ್ನು ವ್ಯಕ್ತಪಡಿಸಿದ್ದು ಆಶ್ಚರ್ಯ. ತಮ್ಮ ಪಟ್ಟಣದಲ್ಲಿ ತಮ್ಮ ಮತ್ತು ತಮ್ಮ ಸಹೋದರ ವರ್ಗಕ್ಕೆ ಸೇರಿದ ಇತರ ಪ್ರಜೆಗಳ ಆರೋಗ್ಯ ವಿಚಾರದಲ್ಲಿ ಚರ್ಚೆ ಮಾಡುವದಕ್ಕಾಗಿ ಬಂದುಕಡೆ ಸೇರಲು ಯಾಕೆ ಅನುಮಾನ ಪಡಬೇಕು? ತಮ್ಮ ಇಷ್ಟಾರ್ಥಗಳು ನಡೆಸಲಿಲ್ಲವೆಂದು ಸುಮ್ಮನಿದ್ದರೆ ಏನು ಪ್ರಯೋಜನ? ಇದರಿಂದ ಅಧಿಕಾರಿಗಳಿಗೆ ಇವರಲ್ಲಿ ಕಾರ್ಯಸಾಧನ ಕಡಮೆಯೆಂದು ತಿಳಿಯುವದಕ್ಕೆ ಆಕರವಾಗುವದಿಲ್ಲವೇ? ತಮ್ಮ ಇಷ್ಟಾರ್ಥಗಳು ಒಂದಾವರ್ತಿ ನಡೆಯದಿದ್ದರೆ, ಹಾಗೆಯೇ ಎಂದೆಂದಿಗೂ ಆಗುವದೆಂದು ಊಹಿಸಿ ತಮ್ಮ ಕರ್ತವ್ಯಗಳನ್ನು ತ್ಯಜಿಸಿ ಸುಮ್ಮನಿರುವದು ಸರಿಯೇ? ಕೇಳುವದು ಪ್ರಜೆಗಳ ಹಕ್ಕು; ಕೊಡುವದು ರಾಜರ ಧರ್ಮ. ಹೀಗಿರುವಾಗ್ಯೆ ಒಂದಾವರ್ತಿ ಕೇಳಿದರೆ ಕೊಡಲಿಲ್ಲ, ಆದ್ದರಿಂದ ನಮಗೆ ಅವಮಾನವಾಯಿತು, ಇನ್ನು ಮುಂದೆ ನಾವು ಏನೂ ಕೇಳಲೇ ಬಾರದೆಂದು ಸುಮ್ಮನಿರುವದೇ? ಇವರುಗಳು ಸುಮ್ಮನಿದ್ದರೆ ಅವರಿಗೆ ಕೊಡಬೇಕೆಂಬ ನಿರ್ಬಂಧವೇನಿರುತ್ತೆ! ಒಂದಾವರ್ತಿ ತಪ್ಪಿದರೂ, ಅದೇ ವಿಷಯವನ್ನು ಆಗಾಗ್ಯೆ ಚಿತ್ತಮನಸ್ಸಿನಿಂದ ನ್ಯಾಯವಾದ ರೀತಿಯಲ್ಲಿ ಕೇಳುತ್ತಲೇ ಇದ್ದಲ್ಲಿ ಒಂದು ಕಾಲದಲ್ಲಿ ಆಗದಿದ್ದರೂ ಮತ್ತೊಂದು ಕಾಲದಲ್ಲಿ ಯಾದರೂ ಆಸಕ್ತಿಯಿಂದ ಕೊಟ್ಟೇ ಕೊಡುವರು, ಆದದರಿಂದ ಈ ಮೈಸೂರು ರೇಟ್ ಪೇಯರುಗಳಿಗೆ ನಮ್ಮ ವಿಜ್ಞಾಪನೆ ಏನೆಂದರೆ—ನೀವು ನ್ಯಾಯವಾದ ರೀತಿಯಲ್ಲಿ ಆಗಾಗ್ಯೆ ಮೀಟಿಂಗುಗಳನ್ನು ಮಾಡಿಕೊಂಡು ಬರಬೇಕು. ಅಲ್ಲಿ ವ್ಯವಸ್ಥೆ ಮಾಡಲ್ಪಟ್ಟ ವಿಷಯಗಳನ್ನು ಕ್ರಮವಾಗಿ ಸರ್ಕಾರದವರ ತಿಳುವಳಿಕೆಗೆ ತರಬೇಕು. ಅವಮಾನವಾಯಿತೆಂದು ಈಗಿನಂತೆ ನಿಮ್ಮ ದುರ್ಬಲವನ್ನು ತೋರ್ಪಡಿಸದೆ ಚಿತ್ತಮನಸ್ಸಿನಿಂದ—ಒಂದಾವರ್ತಿ ಸೋತಾಗ್ಯೂ ಮತ್ತೊಂದಾವರ್ತಿ ಗೆಲ್ಲುವೆನು ಎಂದು ಕೆಲಸಮಾಡುವವನಂತೆ, ಉತ್ಸಾಹದೊಡನೆ ನಿಮ್ಮ ಕರ್ತವ್ಯಗಳನ್ನು ಧೈರ್ಯವಾಗಿ ನಡೆಸುತ್ತಾ ಬರಬೇಕು. ಹಾಗೆ ಮಾಡುತ್ತಾ ಬಂದಲ್ಲಿ ಕೆಲವು ಕಾಲದಲ್ಲೇ ನಿಮ್ಮ ಸ್ಥಾನವು ಎಂಥಾದ್ದೋ, ನಿಮ್ಮಗಳ ಶಿವಾರ್ಸುಗಳು ಎಷ್ಟು ಗೌರವಾರ್ಹವಾದವುಗಳೋ ನಿಮಗೇ ತಾರ್ಕಾಣಕ್ಕೆ ಬರುವದರಲ್ಲಿ ಸಂಶಯವಿಲ್ಲ ಮತ್ತು ನ್ಯಾಯವಾದ ರೀತಿಯಲ್ಲಿ ನೀವು ನಡೆದುಕೊಂಡು ಹೋಗುತ್ತಿರುವದಾದರೆ ಅಧಿಕಾರಿಗಳ ಭಯ ನಿಮಗೇನು! ಆದಕಾರಣ ರೇಟ್ ಪೇಯರುಗಳೆಲ್ಲರೂ ಈ ಸಂಗತಿಗಳನ್ನು ಆಲೋಚಿಸಿ, ಆಗಾಗ್ಯೆ ಮೀಟಿಂಗುಗಳನ್ನು ನಡೆಸಿ, ಅಲ್ಲಿ ಎಲ್ಲರೂ ಸೇರಿ, ವಿಷಯಗಳನ್ನು ಬುದ್ಧಿವಂತರುಗಳ ಸಹಾಯದಿಂದ ಚರ್ಚಿಸಿ, ಕಾಲಕ್ರಮದಲ್ಲಿ ತಮಗೆ ಪ್ರಾಪ್ತವಾಗುವ ಫಲಿತಾಂಶಕ್ಕೆ ಅರ್ಹರೆನ್ನಿಸಿಕೊಳ್ಳುವಂತೆ ಪ್ರಯೋಜನಗಳನ್ನು ಪಡೆಯಲು ಚಿತ್ತಮನಸ್ಸಿನಿಂದ ಕೆಲಸ ಮಾಡುವರೆಂದು ನಂಬಿದ್ದೇವೆ.

ಹಾವಾಡಿಗನಿಗೆ ಹಾವಿನಿಂದಲೇ ಮರಣ.
ಹಾಗೆಯೇ,
ಕಟ್ಟುವವಗೆ ಕೇಡಿನಿಂದಲೇ ಮರಣ.

ಈ ಪ್ರಪಂಚದಲ್ಲಿ ನಾವು ಸಂಚಾರಮಾಡುವಾಗ ನಾನಾತರದವಾದ ಚಮತ್ಕಾರವುಳ್ಳ ಜನರನ್ನು ನೋಡುತ್ತೇವೆ ಅವರಿಂದ ಕೆಲವು ಸಮಯಗಳಲ್ಲಿ ಕೆಲವರಿಗೆ ತುಂಬುವೇಳೆ ಕೆಲವು ಸಮಯಗಳಲ್ಲಿ ದುಷ್ಪರಿಣಾಮಗಳೂ ಉಂಟಾಗುತ್ತವೆ ಜೊತೆಯಿಂದ ಅನೇಕ ತರಹವಾದ ಪದಾರ್ಥಗಳು ಶಕ್ತ್ಯವಾಗುತ್ತವೆ ಆದರೆ ಅದೇ ಜೊತೆಯನ್ನು ಆಳದೆ ಅದರಿಂದ ಆಸಿಕೊಳ್ಳುವೆವಾದರೆ ಅದು ನಮ್ಮನ್ನೂ ನಮ್ಮಲ್ಲಿನ ಪದಾರ್ಥಗಳನ್ನೂ ಮನೆ ಮಾರು ಹಟ್ಟಿ ಮೊದಲಾದವುಗಳನ್ನೂ ಭಸ್ಮ ಮಾಡುತ್ತವೆ ಮೇಲ್ಕಂಡ ಅಂಶವನ್ನು ಸರಿಯಾಗಿ ತಿಳಿದುಕೊಳ್ಳುವಂತೆ, ಕೆಲವು ವರುಷಗಳಿಗೆ ಮುಂಚೆ ನಡೆದ ಒಂದು ಸಂಗತಿಯನ್ನು ನಾವೆಲ್ಲರೂ ಓದಿ ತಿಳಿಯುವದು ಬಹು ಪ್ರಯೋಜನವಾಗಿರುವದು ವಿಲಾಯತಿಯಲ್ಲಿ ಒಬ್ಬ ಸೊಬ್ಬ ಧೈರ್ಯಶಾಲಿಯೂ ಶೂರನೂ ಆದವನಿದ್ದನು ಅವನು ಕಸರತ್ತು ಮಾಡುವವನು ಅವನು ಮಾಡುತ್ತಿದ್ದ ಕಸರತ್ತು ಯಾವದೆಂದರೆ—ಸಾಧಾರಣವಾಗಿ ಪಕ್ಷಿ ಪಕ್ಷಿಗಳ ಕಸರತ್ತಲ್ಲ; ಆದರೆ ಅವನು ದೊಡ್ಡ ಕಾಡಿನಲ್ಲಿ ಹೆಬ್ಬುಲಿ, ಸಿಂಹ, ಆನೆ, ಕರಡಿ, ಕತ್ತೆಕಿರುಬ—ಇವೇ ಮುಂತಾದವುಗಳನ್ನು ಹಿಡಿದುಕೊಂಡು ಬಂದು ಅವುಗಳಿಂದ ನಾನಾ ತರಹದ ಆಟ ಪಾಟ ವಿನೋದಗಳನ್ನು ಆಡಿಸುತ್ತಾ ಇದ್ದನು ಮತ್ತು ಜನರು ಅವನ ಸಾಹಸ ಶಕ್ತಿ ಬುದ್ಧಿ ಯುಕ್ತಿ ಚಾತುರ್ಯಗಳಿಗೆ ಮೆಚ್ಚಿ ತನಗೆ ಕಡಬಹುಮಾನ ಕೊಡುವದನ್ನು ಯಾವಾಗಲೂ ಎದುರು ನೋಡುವದರಲ್ಲಿ ಬಹು ಕಾಂಕ್ಷೆಯುಳ್ಳವನಾಗಿದ್ದನು ತಾನು ಕಾಡಿನಲ್ಲಿ ಕಷ್ಟಪಟ್ಟು ಸ್ವಾಧೀನಮಾಡಿಕೊಂಡು ಪೋಷಿಸುತ್ತಾ ಬಂದ ಕ್ರೂರ ಪ್ರಾಣಿಗಳನ್ನು ತನ್ನ ನಾಟಕದ ಮೇಲೆ ತನ್ನೊಂದಿಗೆ ಕೂಡಿಸಿಕೊಂಡು ಬರುತ್ತಲೂ ಹೀಗೆ ತಾನು ಸಂತೋಷಪಡುತ್ತಲೂ ಜನರೂ ಸಂತೋಷಪಡುವಂತೆ ಮಾಡುತ್ತಲೂ ಇದ್ದದ್ದಲ್ಲದೆ ಜನಮೆಚ್ಚಿಕೆಗೆ ಪಾತ್ರನಾಗಿದ್ದನು

ಹೀಗಿರುವಾಗ್ಯೆ ಒಂದಾನೊಂದು ಸಮಯದಲ್ಲಿ ಒಬ್ಬ ನೊಬ್ಬ ಮನುಷ್ಯನು ಒಂದು ಹೆಬ್ಬುಲಿಯ ಸಣ್ಣ ಮರಿಯನ್ನು ಅತಿ ಸಾಹಸದಿಂದ ಸಂಗ್ರಹಿಸಿಕೊಂಡು ಈ ಶೂರನೂ ಧೀರನೂ ಆದ ಈತನ ಬಳಿಗೆ ತೆಗೆದುಕೊಂಡುಬಂದು—ಎಲೈ ಧೀರಾ! ನಾನು ನನ್ನ ಸಾಹಸದಿಂದ ಒಂದು ಹೆಬ್ಬುಲಿಯ ಮರಿಯನ್ನು ತಂದಿರುತ್ತೇನೆ; ಅದನ್ನು ನೀನು ಕೊಂಡುಕೊಳ್ಳುವ ಮನಸ್ಸಿದ್ದರೆ ಮಾರಬಿಡುತ್ತೇನೆ ಅಂದನು ಈ ಧೀರನು ಆ ಹುಲಿ ಸಣ್ಣದಾಗಿದೆ; ನೋಟಕ್ಕೆ ನನಗೂ ನೋಟಕರಿಗೂ ಚನ್ನಾಗಿದೆ ಇದನ್ನ ನಾನು ಸಣ್ಣದರಿಂದ್ಲ ಬೆಳಸಿ ಪಳಿಸುವೆನಾದರೆ ಅದು

ರಿಂದ ನಾನು ಬಹು ಖ್ಯಾತಿಯನ್ನು ಪಡೆದು ಶೂರನೂ ಧೀರನೂ ಎಂಬ ಬಿರುದನ್ನು ಸಂಪಾದಿಸಿಕೊಳ್ಳಬಹುದಲ್ಲ ಎಂದು ಆಲೋಚಿಸಿಕೊಂಡು ತನ್ನ ನಿಶ್ಚಯದಲ್ಲೇ ಇಟ್ಟುಕೊಂಡು ಅನೇಕ ಕಾಲ ಹಾಲು ಮುಂತಾದ ಪದಾರ್ಥಗಳಿಂದ ಪೋಷಣೆಯನ್ನು ಮಾಡುತ್ತಾ ಬಂದನು ಅದು ದಿನೇ ದಿನೇ ಬೆಳೆಯುತ್ತಾ ಆಕಾರದಲ್ಲಿ ಗಾತ್ರವಾಗುತ್ತಾ ಉಗ್ರತೆಯಲ್ಲಿ ಉದ್ಧವಾಗುತ್ತಾ ಬಂತು ಈ ದುರಾಶಯವನು ಅದನ್ನು ನೋಡಿ ಸಂತೋಷಪಡುತ್ತಾ ಆಡಿಸುತ್ತಾ ಅದರ ಮೈಯನ್ನು ಸವರುತ್ತಾ ಎತ್ತುತ್ತಾ ಅದು ಯಾವಾಗಲೂ ತನಗೆ ಸಂತೋಷವನ್ನುಂಟುಮಾಡುವ ಪ್ರಾಣಿಯಾಗಿರುವಂತೆ ನಾನಾತರವಾದ ವಿನೋದ ಮಾಡುವಂತೆ ಅಭ್ಯಾಸ ಮಾಡುತ್ತಾ ಬಂದನು ಅಭ್ಯಾಸದಂತೆ ಅಭಿವೃದ್ಧಿಯು ಇರುವದೆಂಬ ಗಾದೇ ಪ್ರಕಾರ ಅದು ಆ ದುರಾಶಯನೊಡನೆ ನಾನಾ ತಮಾಷೆಯಾದ ಆಟಗಳನ್ನು ಕಲಿತು ಯಜಮಾನನಿಗೆ ಸಂತೋಷವನ್ನು ಉಂಟುಮಾಡುತ್ತಿತ್ತು

ಇದನ್ನೆಲ್ಲಾ ನೋಡಿದ ಆ ಧೂರ್ತನು ತನ್ನ ಮನಸ್ಸಿನಲ್ಲಿ ಅಂದುಕೊಂಡದ್ದೇನಂದರೆ—ನನ್ನ ಹಾವಿನಿಂದ ಇದರ ಬುದ್ಧಿ ಚಮತ್ಕಾರಗಳಿಂದ ನಾನೇ ಸಂತೋಷಗೊಂಡರೆ ಏನಾದ ಹಾಗಾಯಿತು? ಅದು ನನ್ನಿಂದ ಕಲಿತುಕೊಂಡಿರುವದನ್ನು ಸಾವಿರಾರು ಜನಗಳ ಮುಂದೆ ನಾನು ತೋರಿಸುವೆನಾದರೆ ಜನರು ಬೆರಗಾಗುವರು; ಸಂತೋಷಪಟ್ಟು ನೇತ್ರ ಮನಸ್ಸುಗಳಿಂದ ಆನಂದವನ್ನು ಅನುಭವಿಸಿ ಅತಿ ಸಾಹಸಿಯಾದ ನನ್ನನ್ನು ಶ್ಲಾಘಿಸುವರು; ಆಗ ನನ್ನ ಸಂತೋಷವು ಸಾರ್ಥಕವಾಗುವದು ಎಂದನು ಆ ಪಟ್ಟಣದ ಒಂದು ದೊಡ್ಡ ಮೈದಾನದಲ್ಲಿ ಆ ಹೆಬ್ಬಾವಿನ ಅತ್ಯಂತ ವಿನೋದಕರವಾದ ಆಟವು, ಕಸರತ್ತು, ನಡೆಯುವದೆಂದು ಊರಲ್ಲೆಲ್ಲಾ ಪ್ರಸಿದ್ಧಪಡಿಸಿದನು ಜನರು ನಿಸ್ಸಾ ಕಾಶವಾದ ಜೊತ್ತಿಗೆ ಸೇರಿದಾಗಿ ಆ ಮೈದಾನಕ್ಕೆ ಬರಲು, ಆ ದುರಾಶಯವನು ಹಾವಿನೊಂದಿಗೆ ನಾನಾ ತರವಾಗಿ ಆಡುತ್ತಾ ತನ್ನ ಆಲೋಚನೆಗೆ ತಕ್ಕಂತೆ ಆಡಿಸುತ್ತಾ ಬಂದನು ಹ್ಯಾಗಂದರೆ—ಇವನು ಮಲಗಿದರೆ ಅದು ಇವನನ್ನು ಹೊರಳಿಸುವದೂ, ಕೈಗೆ ಸುತ್ತಿಕೊಳ್ಳುವದೂ, ಕಾಲಿಗೆ ತೊಡರಿಕೊಳ್ಳುವದೂ, ಮೈಮೇಲೆ ಹತ್ತುವದೂ, ತಲೆಯಮೇಲೆ ನೆಟ್ಟಗೆ ನಿಲ್ಲುವದೂ ಈ ವಿಧವಾದ ಅವರ ಆಟ ಪಾಟಗಳನ್ನು ನೋಡಿದ ಜನ ಸಮೂಹವೆಲ್ಲಾ ಒಟ್ಟಾಗಿ ಒಂದೇ ಕಂಠದಿಂದ ಆ ಧೂರ್ತನ ಸಾಹಸಕ್ಕೆ ಶಭಾಸ್! ಶಭಾಸ್! ಎಂದು ಹೊಗಳಲು ಆರಂಭಿಸಿದರು ಅತನಿಗೂ ಜನರ ಹೊಗಳಿಕೆಯಿಂದ ಬಹಳ ಸಂತೋಷವಾಯಿತು ಇನ್ನೂ ವಿನೋದ ತೋರಿಸಬೇಕೆಂಬದಾಗಿ ಆಲೋಚಿಸಿಕೊಂಡು, ಒಂದುಸಾರಿ ತಾನು ನಿಂತುಕೊಂಡಿರುವಾಗ್ಯೆ ಇವನ ಕಾಲುಗಳಿಗೆ ನಾಗ್ಗ ಹೊಡೆದು ಸಂದಿಸ್ಲುತ್ತಾ ಬೆನ್ನಿನ ಮೇಲೆ ಬಂದು ಇವನನ್ನು ಸುತ್ತಿಕೊಂಡಿತು ಇದರ ಸುತ್ತಾಟದಿಂದ ಅವನ ಎಲುಬು ಲಟಲಟನೇ ಮುರಿಯುತಿದ್ದದ್ದನ್ನು ಜನರು ಕೇಳಿ, ಏನಾಯಿತು! ಅತನು ಸುಮ್ಮನಿದ್ದಾನೆ! ಎಂದು ಜನರೆಲ್ಲಾ ಭಯಸ್ಥರಾದರು ಇನ್ನು ಒಂದೆರಡು ನಿಮಿಷಗಳಲ್ಲಿ ಅಂಥಾ ಶೂರನೂ ಧೀರನೂ ಆದ ಮನುಷ್ಯನು ಸ್ವಲ್ಪ ಹೊತ್ತಿನಲ್ಲಿ ಸತ್ತು ಬಿದ್ದನು ತಿರುಗಿ ಏಳಲೇ ಇಲ್ಲ. ಹಾವಿಗೆ ಹಾಲೆರೆದರೆ ತನ್ನ ವಿಷ ಬಿಟ್ಟೀತೇ ಎಂಬ ನಾಣ್ಣುಡಿಯು ಈಗ ಸರಿಯಾಗಿ ಹೊಂದುತ್ತಲ್ಲವೆ?

ಪ್ರಿಯ ಸ್ನೇಹಿತರೇ, ಇದರಿಂದ ನಾವು ತಿಳಿಯತಕ್ಕದ್ದೇನೆಂದು ನೋಡೋಣ. ನಾವಿನ್ನಾಗಲೇ ಯಾವ ಪಾಪಮಾದರೂ ಪ್ರಾರಂಭದಲ್ಲಿ ಸಣ್ಣದಾಗಿಯೇ ಇರುತ್ತದೆ ಅಲ್ಪ ವಿಷಯಗಳನ್ನು ಮಾಡುತ್ತಾ ಇರುವಾಗ್ಯೆ ದುರಭ್ಯಾಸದಿಂದ ಪೈಯ್ಯವದೂ ನಿಕೃಷ್ಟವಾದ ಮತ್ತು ಅಸಹ್ಯವಾದ ಮಾತುಗಳನ್ನು ಆಡುತ್ತಾ ಬರುವಾಗ್ಯೆ ನಾವು ಅನೇಕಸಾರಿ ಸಮಾಧಾನ ಹೇಳಿಕೊಳ್ಳುತ್ತೇವಲ್ಲ ಹೀಗೆ ಮಾಡುವದು ಒಂದು ತರದ ಆಟವೆಂದು ಅಂದುಕೊಳ್ಳುತ್ತೇವೆ ಇವರ ಸರಸ ಬೆಳೆಸಿಕೊಳ್ಳುವದೆಂಬುವದನ್ನು ಮರೆಯುವದರಿಂದಲೇ ಅಂಥಾ ಪಾಪಗಳನ್ನು ನಮ್ಮ ಹೃದಯ ದೊಳುವದರಲ್ಲಿ ಸಾಕಿಕೊಂಡು ಪೋಷಿಸುತ್ತೇವೆ ಆದರೆ ಅದು ನಮ್ಮಲ್ಲಿ ಕೆಲವು ಕಾಲಾನಂತರ ಬಲವಾಗಿ ಕೊಲ್ಲುವದು ಮುಖ್ಯ ಸಣ್ಣದೆಂದು ಬಿಟ್ಟರೆ ಕೇಡು ಕೊಂಡು ಪ್ರಾಣವಾಗಿ ನಮ್ಮ ಕೀರ್ತಿಯನ್ನು ನಾಶಮಾಡಿ ನಮ್ಮನ್ನೇ ನಾಶಗೊಳಿಸುವದು ವಿಷ ಶ್ವಾಸದ್ರವ್ಯವಾದರೂ ಪ್ರಾಣನಾಶ ಮಾಡುವದು ಶಿವನಿಗೆ ಅದಿಯಲ್ಲಿ ಹೇಳಿದಂತೆ ಪಾಪಿಯು ಒಂದು ಸಣ್ಣ ಕಿಡಿಯಾದರೂ ಪಟ್ಟಣಗಳನ್ನೆಲ್ಲಾ ನಾಶಮಾಡುವದು

೨ ಮದ್ಯಪಾನ, ಸುಳ್ಳು, ಮೋಸ, ವಂಚನೆ, ವಿಗ್ರಹಾರಾಧನೆ, ಜೂಜು ಆಡುವದು, ತುಚ್ಛ ಮಾತುಗಳನ್ನಾಡುವದು, ಭಂಗಿಸೇದುವದು ಅಫೀಮು ಮುಂತಾದ ವಿಷಪದಾರ್ಥಗಳನ್ನು ಸೇವನೆಮಾಡುವದು, ವ್ಯಭಿಚಾರ, ಚೋರತ್ವ, ಮೊದಲಾದ ಪಾಪಗಳನ್ನು ಪ್ರಾರಂಭದಲ್ಲಿ ಧಾರಾಳವಾದ ಮನಸ್ಸಿನಿಂದ ಮಾಡುತ್ತಾ ಬರುತ್ತಾ ಒಂದನಂತರದಲ್ಲಿ ಅವು ಕೆಟ್ಟದು ನಮ್ಮನ್ನು ಕಟ್ಟಿ ನಮ್ಮ ಬಲವನ್ನೆಲ್ಲಾ ಕುಂದಿಸಿ ಕೆಳಕ್ಕೆ ಕೆಡವಿ ಮೇಲೆ ಹತ್ತಿ ನಮ್ಮ ಪ್ರಾಣನಾಶವನ್ನು ಮಾಡುವವು ಆದರೆ ನಮ್ಮ ಜಗದ್ಗುರುವಾದ ಯೇಸುಸ್ವಾಮಿಗಳವರು ಪಾಪಗಳನ್ನು ನಾಶಮಾಡಿ, ಸತ್ಯವನ್ನು ಹೊರಪಡಿಸಿ, ಜನರಲ್ಲಿ ಕಾಣುತ್ತಿದ್ದ ದೋಷಗಳನ್ನು ಅತನು ನೋಡಿ ಅವರಿಗೆ ತಿಳಿಸದೇ ಹೋಗಲಿಲ್ಲ ಅತನು ಹೇಳಿದ್ದೇನಂದರೆ—ನಿನ್ನ ಬಲಗಣ್ಣು ಅಥವಾ ಬಲಗೈ ನಿನ್ನನ್ನು ಆಟಂಕಪಡಿಸಿದರೆ ಅವನ್ನು ನಿನ್ನ ದೇಹದಿಂದ ಕೊಯಿದು ಬಿಸಾಡು! ಆಟಂಕಿಸಿದ ಅಂಗವನ್ನು ನಸತ್ರವಾಗಿ, ಮನಸ್ಸಿನೊಳಗಿನ ದುರಾಶೆ, ದುರ್ಭಾವ, ದುರಾಲೋಚನೆ, ದುಷ್ಪ್ರೇರಣೆ, ವಿಷಯಭೋಗ ಮೊದಲಾದವುಗಳನ್ನು ಅವು ಸಣ್ಣವುಗಳಾಗಿ ನಿನಗೆ ಕಾಣಬರುವಾಗಲೇ ನೀನು ಅವುಗಳನ್ನು ಕೊಲ್ಲದೆ ಹೋದರೆ ಅವು ನಿನ್ನನ್ನು ಸಂಹರಿಸಿ ಕೊಂದುಬಿಡುವವು ಎಂದು ಹೇಳಿರುತ್ತಾನೆ.

ವಾಚಕರೇ ಇನ್ನೂ ನಾನಾ ತರವಾದ ಒಣ್ಣದ ಪಾಪದ ರೂಪಗಳು ನಮ್ಮ ಹೃದಯವೆಂಬ ಗವಿಯಲ್ಲಿ ಹೊಕ್ಕಿಂದು ಇರುತ್ತವಲ್ಲ ಸೊಕ್ಕು, ಮೋಸದ ಆಶೆ, ದ್ವೇಷ, ಹೊಟ್ಟೆ ಕಿಚ್ಚು, ಹಗೆ, ಅಹಂಕಾರ, ಆಲಸ್ಯ, ಕಳ್ಳತನ, ಮಾರಮೋಸ, ಕ್ರೌರ್ಯ ಅವಿಧೇಯತ್ವ ಮೊದಲಾದ ಸರ್ಪದ ಮರಿಗಳು ನಿನಗೆ ಕಾಣುವದಿಲ್ಲವೋ? ಅವುಗಳಲ್ಲಿ ಅನೇಕವು ನಿನ್ನ ನಿನ್ನ ಪರಾಮರಿಕೆಯಿಂದಲೇ ದೊಡ್ಡವುಗಳಾಗಿವೆಯಲ್ಲವೆ? ಇನ್ನು ಅಂಥವುಗಳನ್ನು ಸದಾ ಇರಿಸಿ ಸಾಕಿಕೊಂಡು ಹೋದವನ ಪಾಡಿಗರ ಕಡೆಯಲ್ಲಿ ಅಂಥವರ ಗತಿಯು ಏನಾಗುವದು? ಕಳ್ಳನ ಜೋಳಿಗೆ ಎಂದಾದರೂ ತುಂಬಿತೆ ಎಂಬಂತೆ ಆಗಲು ಅದ್ದುಬೀ ನಾದರೂ ಇರುವದೇ?

ಇವುಗಳನ್ನೆಲ್ಲಾ ಕೋರದೆ ಶ್ರೀ ಯೇಸುಸ್ವಾಮಿಯವರ ಪಾದಾರವಿಂದವನ್ನಾಶ್ರಯಿಸಿ ಅತನ ದಿವ್ಯಾಜ್ಞೆಗಳನ್ನು ಮನವಿಟ್ಟು ಕೇಳಿ ಅದರಂತೆ ನಡೆಯಲು ಅತನನ್ನು ಬೇಡಿಕೊಳ್ಳೋಣ

NOTICE.

ಚಾಮರಾಜನಗರದ ಶ್ರೀಮಾನ್ ವಿದ್ವಾನ್ ಜಷ್ಣಾನೇಶ್ವರಪಂಡಿತರವರು, ಕೊಂಬಿಗೆರೆ ಪ್ರಾಂತ್ಯಕ್ಕೆ ಸಾಧಮತಸ್ಥರ ವಿದ್ಯಾಭಿವೃದ್ಧಿಯ ಪರ್ಯಾಟನ ವಿಷಯವಾಗಿ ಕಳೆದ ಸಂವತ್ಸರದ ಅಂತ್ಯಭಾಗದಲ್ಲಿ ಪಯಣಮಾಡುತ್ತಾರೆಂಬ ವದಂತಿಯಷ್ಟಾಗಿತ್ತಷ್ಟೆ. ಆಗ್ಯೆ ಸವಾರಿ ನಿಂತದ್ದರಿಂದ, ಈ ತಿಂಗಳ ಆದಿಭಾಗದಲ್ಲಿ ಚಿಕ್ಕಬಳ್ಳಾಪುರದ ಮಾರ್ಗವಾಗಿ ಆ ಪ್ರಾಂತ್ಯಕ್ಕೆ ದಯಮಾಡುವರು.

ಸ್ವದೇಶ ವೃತ್ತಾಂತಗಳು.

ಚಾಮರಾಜನಗರದ ಗೌರ್ನಮೆಂಟ್ ಕನ್ನಡ ಸ್ಕೂಲ್ ೭ ನೇ ಉಪಾಧ್ಯಾಯರಾದ ರಾಮದೀಕ್ಷಿತರು ಸರಿಯಾಗಿ ಕೆಲಸ ನೋಡಲಿಲ್ಲವೆಂದು ಅವರ ಸಂಬಳವನ್ನು ೭ ರಿಂದ ೫ ರೂಪಾಯಿಗೆ ಇಳಿಸಿದೆ.

ಮೈಸೂರು ಮಹಾರಾಣಿಯವರ ಬಾಲಿಕಾ ಪಾಠಶಾಲೆಯಲ್ಲಿ ಉಪಾಧ್ಯಾಯಿನಿಯಾದ ಮಿಸ್ ಯೂಸ್‌ಬೋರಡರು ಇಲ್ಲಿಂದ ಪ್ರೆಸಿಡೆನ್ಸಿ ಪಟ್ಟಣಕ್ಕೆ ಪ್ರಯಾಣ ಮಾಡುವದಕ್ಕಾಗಿ ಅವರಿಗೆ ೪೦೦ ರೂಪಾಯಿಗಳನ್ನು ಕೊಡತಕ್ಕದ್ದೆಂದು ಎಜ್ಯುಕೇಷನ್ ಸೆಕ್ರೆಟರಿಯವರು ತೀರ್ಮಾನಿಸಿರುವಂತೆ ಕೇಳುತ್ತೇವೆ

ಮೈಸೂರು ಮಂಡಿ ಕನಡಸ್ಕೂಲ್ ಹೆಡ್ ಮಾಸ್ಟರಾದ ಶ್ರೀನಿವಾಸರಾವ್ ರವರೆಂಬುವರನ್ನು ಅವರು ವಿದ್ಯಾರ್ಥಿಗಳಿಗೆ ಸುಳ್ಳು ಸರ್ಟಿಫಿಕೇಟ್ ಕೊಟ್ಟರೆಂದು ತಿಳಿದುಬಂದದರಿಂದ, ವಿದ್ಯಾ ಇಲಾಖೆಯ ಸೆಕ್ರೆಟರಿಯವರು ಅವರನ್ನು ಸಸ್ಪೆಂಡ್ ಮಾಡಿ ಅವರ ಕೆಲಸಕ್ಕೆ ಎಸ್. ಸುಬ್ಬಯ್ಯನವರನ್ನು ನಿಯಮಿಸಿರುತ್ತಾರೆ

ಕಳೆದ ಗುರುವಾರ ಸಾಯಂಕಾಲ ಸುಮಾರು ೪|| ಗಂಟೆಯ ಹೊತ್ತಿಗೆ ಶ್ರೀಮಾನ್ ಮಹಾರಾಜರವರು ಪದಾತಿ ಸಮೇತರಾಗಿ ಸಂಚಾರಾರ್ಥವಾಗಿ ಸ್ವಾಮಿಗಿರಿಗೆ ದಯಮಾಡಿಸಿದರು ದಕ್ಷಿಣಭಾಗದಲ್ಲಿ ೭ ತೋಪುಗಳು ಹಾರಿಸಲ್ಪಟ್ಟವು ಈ ತಿಂಗಳು ೧೯ಕ್ಕೆ ಮಹಾರಾಜರವರು ... ದಿವ್ಯವಾಗಿದೆ

ವಿಚಾರಕರ ಆಫೀಸಿನ ನಾಗೇಶರಾವ್ ದೇಶಪಾಂಡೆ ಸ್ವಾಮಿಯನ್ನು ನೋಡಿಕೊಳ್ಳುವದಕ್ಕಾಗಿಯೇ ಒಬ್ಬ ವೈದ್ಯರು ನೇಮಿಸಲ್ಪಟ್ಟಿರುತ್ತಾರೆಂತಲೂ ಅವರ ಸಂಬಳವನ್ನು ಸಂಸ್ಥಾನದ ಖರ್ಚಿನಲ್ಲಿ ಸೇರಿಸಿರುತ್ತಾರೆಂತಲೂ ತಿಳಿಯಲಾಗಿದೆ. ಎಷ್ಟು ಕಾಲದಿ ಬದುಕಿದ್ದರು ಇಂಥಾ ವೈದ್ಯರ ಸಹಾಯ ದೊರೆಯದೆ ಸಾಯುತ್ತಲಿದ್ದಾರೆಯೋ ಮಹತ್ತರಗೇ ವೇದ್ಯವಾಗಿದೆ

ಸಾಧಾರಣವಾಗಿ ಅನೇಕ ತಾಲ್ಲೋಕುಗಳಲ್ಲಿ ಗವರ್ನ್‌ಮೆಂಟಿನವರಿಂದ ಸ್ಥಾಪಿತವಾದ ಒಂದು ಇಂಗ್ಲೀಷ್ ಸ್ಕೂಲೂ ಒಂದು ಕನ್ನಡ ಸ್ಕೂಲೂ ಇರುತ್ತವೆಯಷ್ಟೆ ಇಂಗ್ಲೀಷನ್ನು ಓದತಕ್ಕ ವಿದ್ಯಾರ್ಥಿಗಳು ಕನ್ನಡ ಪಾಠಗಳಿಗಾಗಿ ಕನ್ನಡ ಸ್ಕೂಲುಗಳಿಗೆ ಹೋಗಬೇಕು ಹಾಗೆ ಹೋಗದಿದ್ದರೆ ಅಂಥವರನ್ನು ಇಂಗ್ಲೀಷ್ ಸ್ಕೂಲಿನಿಂದ ಹೊರ ಹಾಕತಕ್ಕದ್ದೆಂದು ಹುಕುಂ ಹೊರಟಿರುತ್ತೆ

ಕಳೆದ ಡಿಸೆಂಬರು ತಿಂಗಳಲ್ಲಿ ನಡೆದ ಪಂಡಿತರ ಪರೀಕ್ಷೆಯಲ್ಲಿ ಭಾಷೋತ್ತೀರ್ಣರಾದ ಮೈಸೂರಿನ ಸ್ಥಿರದ ಪಂ|| ಶ್ರೀನಿವಾಸರಾಘವಾಚಾರ್ಯರು ಮತ್ತು ಪಂ|| ವರದಾಚಾರ್ಯರು ಮೊದಲಿಗರಾಗಿ ತೇರಿ ದೇವರಾಜ ಫಂಡಿನಿಂದ ಮೊದಲನೆಯವರಿಗೆ ೧೫೦ ರೂಪಾಯಿಯೂ, ಎರಡನೆಯವರಿಗೆ ೧೦೦ ರೂಪಾಯಿಯೂ ಬಹುಮಾನವು ಕೊಡಲ್ಪಟ್ಟಿತು ಇವರಿಬ್ಬರೂ ಎರಡನೇ ತರಗತಿಯಲ್ಲಿ ತೇರ್ಗಡೆಯಾಗಿರುತ್ತಾರೆ

ಕಳೆದ ೩೦ ನೇ ಭಾನುವಾರ ೧೦|| ಗಂಟೆ ಹೊತ್ತಿನಲ್ಲಿ ಮೈಸೂರಿನ ಅಗ್ರಹಾರದಲ್ಲಿ ಒಬ್ಬ ಅಕ್ಕಸಾಲೆ ಹಾಡಿದ ಯುವ್ವನನಿಯು ಮೂರು ಮಕ್ಕಳನ್ನು ಹೆತ್ತಳೆಂತಲೂ ಆ ಮೂರು ಮಕ್ಕಳೂ ಆರೋಗ್ಯವಾಗಿವೆ ಎಂತಲೂ ಅವರ ಮಕ್ಕಳ ತಾಯಿಗೆ ಕೈಕಾಲುಗಳಲ್ಲ ಬಾಧಿಕೊಂಡಿರುವದೆಂತಲೂ ಆ ದಾಗ್ಯೂ ಅವರು ಒಬ್ಬ ಸೂಲಗಿತ್ತಿಯನ್ನು ಇಡಿಸಿದ ಇರುತ್ತಾರೆಂತಲೂ ಕೇಳುತ್ತೇವೆ ಪ್ರಜೆಗಳು ಇಂಥಾ ಮನುಷ್ಯರನ್ನು ಎಲ್ಲರಿಗೂ ಅನುಸರಿಸುವರೋ ಎಂಬುವ್ಯಸನವಾಗಿದೆ

ಮೈಸೂರಿನಲ್ಲಿ ಒಬ್ಬನೊಬ್ಬ ಬ್ರಾಹ್ಮಣರ ಸೂನಾರವಲ್ಲಿ ಹಿರಿಯನಗನು ತನ್ನ ತಮ್ಮಂದಿರು ತನ್ನ ಮನೆಯಲ್ಲಿ ತನಗೆ ಮಾಡ ಮಾಡುವದಕ್ಕಾಗದ ಹಾಗೆ ಮನೆಯಲ್ಲಿ ಸಾಮಾನುಗಳನ್ನು ಕಿತ್ತು ಹಾಕಿರುತ್ತಾರೆಂಬದಾಗಿಯೂ ಅದರಿಂದ ತನ್ನ ತಮ್ಮಂದಿರಿಗೆ ಸಬ್ಬರಿಪರು ಎಷ್ಟರು ತನಗೆ ಅದರ ತುಂಡ ನ್ಯಾಯವಂತೆ ಮಾಡಿ ಕೊಡಬೇಕೆಂಬುದಾಗಿಯೂ ಇಲ್ಲಿನ ಮ್ಯಾಜಿಸ್ಟ್ರೇಟರಲ್ಲಿ ಫಿರ್ಯಾದು ದಾಖಲ್ ಮಾಡಿರುತ್ತಾನೆ ಇದರ ಫಲಿತಾಂಶವೇನಾಗುವದೋ ನೋಡತಕ್ಕದ್ದಾಗಿದೆ

ಮೈಸೂರಿಗೆ ೬-೮ ಮೈಲಿ ದೂರದಲ್ಲಿರುವ ಪಾಲಹಳ್ಳಿಯಲ್ಲಿ ಈಗ ೨-೩ ದಿನಗಳಿಂದಲೂ ಕಳ್ಳರ ಕಾಟದಿಂದ ಜನಗಳಿಗೆ ರಾತ್ರಿಯು ಹಗಲಾಗಿಯೂ, ಹಗಲು ರಾತ್ರಿಯಾಗಿಯೂ ಪರಿಣಮಿಸಿದೆ ಎಂಬುದಾಗಿ ಕೇಳುತ್ತೇವೆ ಈ ವಿಷಯದಲ್ಲಿ ಪೋಲೀಸಿನವರು ಸ್ವಲ್ಪ ಹೆಚ್ಚು ನಿಗೆ ಕೊಟ್ಟು ಕಳ್ಳರನ್ನು ಪತ್ತೆಮಾಡೋಣದರಿಂದ ಕೀರ್ತಿ ಬತ್ತಿಯಲ್ಲಿ ಬರುವದಲ್ಲದೆ ಜನಗಳ ಸಮ್ಮತಿಯನ್ನುಂಟುಮಾಡಿದ್ದಕ್ಕಾಗಿ ಅವರ ಪ್ರೀತಿಯನ್ನೂ ಸಂಪಾದಿಸುವದರಲ್ಲಿ ಸಂಶಯವಿಲ್ಲವೆಂದು ಈ ಮೂಲಕ ತಿಳಿಯಪಡಿಸುತ್ತೇವೆ

ಬೆಂಗಳೂರಿನ ಟೌನ್ ಮ್ಯಾಜಿಸ್ಟ್ರೇಟಾದ ಶ್ರೀಮಾನ್ ವೈದ್ಯನಾಥಯ್ಯರವರು ಹಿಂದೂ ವೈದ್ಯಶಾಸ್ತ್ರವನ್ನು ಅಭ್ಯಾಸ ಮಾಡಿ ಅನೇಕ ರೋಗಾದ್ಯುಪದ್ರವಗಳಿಂದ ಪೀಡಿಸಲ್ಪಡುವ ಬಡಬಗ್ಗರಿಗೆ ತಮ್ಮ ವಿರಾಮ ಕಾಲದಲ್ಲಿ ಔಷಧಿ ಕೊಟ್ಟು ಆದರಿಸುತ್ತಲಿದ್ದಾರೆಂದು ಕೇಳುತ್ತೇವೆ ಪ್ರತಿದಿನವೂ ಅವರ ಬಂಗಲೆಗೆ ಅನೇಕ ಜನರು ಹೋಗಿ ಅವರು ಕೊಡುವ ಔಷಧಗಳನ್ನು ತೆಗೆದುಕೊಳ್ಳುತ್ತಾರೆ ಇದುವರೆಗೂ ಅವರಲ್ಲಿ ಔಷಧಿ ತೆಗೆದುಕೊಂಡು ಇರುವವರೆಲ್ಲರಿಗೂ ಗುಣವಾಗಿರುತ್ತೆಂದು ಕೇಳುತ್ತೇವೆ ಇಂಥಾ ಮಹದುಪಕಾರಗಳನ್ನು ಬಡಬಗ್ಗರಿಗೆ ಮಾಡುತ್ತಿರುವವರನ್ನೂ ಅವರ ಧರ್ಮಬುದ್ಧಿಯನ್ನು ಕುರಿತು ಎಷ್ಟು ಸ್ತೋತ್ರ ಮಾಡಿದರೂ ಸ್ವಲ್ಪವೇ ಇದೆ

ಒಬ್ಬನೊಬ್ಬ ಜಾತ್ಯಾದವರು ನಮ್ಮನ್ನು ಹೀಗೆ ಪ್ರಶ್ನೆ ಮಾಡುತ್ತಾರೆ—ರೇಟ್ ಪೇಯರುಗಳು ಎಂಬುವದರ್ಥ್ಯವೇನು? ಅವರು ಯಾವ ವಿಧವಾದ ತೆರಿಗೆಗಳನ್ನು ಯಾರಿಗೆ ಕೊಡತಕ್ಕದರಾಗಿರಬೇಕು? ಅವರಿಗೆ ಅಧಿಕಾರಗಳೇನಾದರೂ ಇರುವವೇ? [ಈ ಪ್ರಶ್ನೆಗಳಿಗೆ ನಾವೇ ಉತ್ತರಕೊಡಲು ಈಗ ಕಾಲು ತೀರ್ತವಾದ್ದರಿಂದ ಮುಂದಣ ವಾರದ ಪತ್ರಿಕೆಯಲ್ಲಿ ತಿಳಿಸಬೇಕೆಂದಿದ್ದೇವೆ ಅಷ್ಟರೊಳಗಾಗಿ ವಾಚಕರಲ್ಲಿ ಯಾರಾದರೂ ಈ ವಿಷಯದಲ್ಲಿ ಸರಿಯಾದ ಸಮಾಧಾನಗಳನ್ನು ನಮಗೆ ಬರೆದು ತಿಳಿಸುವರೇನೋ ಎಂಬುದಾಗಿ ಅವರ ಪ್ರಶ್ನೆಯನ್ನು ಪ್ರಕಟಮಾಡಿರುವೆವು ಹಾಗೆ ಸಮಾಧಾನಗಳನ್ನು ಬರೆಯತಕ್ಕವರೆಲ್ಲರೂ ಬರುವ ಮಂಗಳವಾರ ಮಧ್ಯಾಹ್ನದೊಳಗಾಗಿಯೇ ನಮ್ಮ ಆಫೀಸಿಗೆ ಬಂದು ತಲಪುವಂತೆ ಬರೆದು ಕಳುಹಿಸುವರೆಂದು ನಂಬಿದ್ದೇವೆ ಎಡಿಟರ್.]

ಮೂಢನಂಬಿಕೆಯ ಪಟ್ಟುಹಿಡಿತ:—ಅಣ್ಣನೊಂದು ಬ್ಬ ಹುಡುಗನು ೭ ವರುಷಕ್ಕೆ ಓದುವದಕ್ಕೆ ಆರಂಭಿಸಿ ೧೫ ನೇ ವರುಷಕ್ಕೆ ಎ ಬಿ ಸಿ ಡಿಯನ್ನು ಕಲಿತನು ನಂತರ ಮೈಸೂರು ಸಂಸ್ಥಾನಕ್ಕೆ ಪ್ರವೇಶ ಮಾಡಿ ಲೋವರ್ ಸೆಕಂಡರಿ ಕ್ಲಾಸಿಗೆ ಅನೇಕ ವರ್ಷಗಳಿಂದ ಸೇರಿ ಆ ಕ್ಲಾಸಿನ ವಿದ್ಯಾರ್ಥಿಗಳಲ್ಲಿರತಕ್ಕ ಮೂಢತನವನ್ನೆಲ್ಲಾ ಅಭ್ಯಸಿಸಿಕೊಂಡು ಸ್ಕೂಲ ಬಿಡುವಿಕೆಯೆಂಬ ಸಿದ್ಧಾಂತವನ್ನು ಹತ್ತಿ ತನ್ನ ಸ್ವಾರ್ಥಸಾಧನೆ ಮಾಡುವದಕ್ಕೋಸ್ಕರ ದೈವವನ್ನು ಹೊಂದಿಕೊಳ್ಳದೆ ನಾರಾಯಣಗೆ ಎರಡು ಹಣ್ಣು ತೆಂಗಿನಕಾಯನ್ನು ತಪ್ಪದೆ ಮೈಸೂರಿನಲ್ಲಿದ್ದರೆ ತನ್ನ ಮೂಢತನವೆಂಬ ಅಸ್ತಿವಾರ ಗುಣವೆಂದು ತಿಳಿದು ತಮ್ಮ ಸಂಸ್ಥಾನಕ್ಕೆ ಪರಾಭವಹೊಂದಿದವನು ಪ್ರಪಂಚದಲ್ಲಿರತಕ್ಕ ವಿದ್ಯಾರ್ಥಿಗಳು ಏನಿ ಅಧಿಕಾರ ಪಟ್ಟವನ್ನು ಹೊಂದಿದರೆ ಆ ವಿದ್ಯಾರ್ಥಿಯು ಮೂಢನಂಬಿಕೆಯ ಪಟ್ಟವನ್ನು ಇಟ್ಟುಕೊಂಡಿದ್ದು ನಾಚಿಕೆಗೇಡಾಗಿದೆ ಎಂದು ಒಬ್ಬ ಬಾತ್ಮೀದಾರರು ಬರೆಯುತ್ತಾರೆ

ಫ್ರೆಡರಿಕ್ಸ್ ಎಂಬುವದು ಒಂದು ಸಬ್‌ಡಿವಿಜನ್ ಆಗಿದೆ ಅಲ್ಲಿ ಒಬ್ಬ ಸಬ್‌ಡಿವಿಜನ್ ಆಫೀಸರೂ, ಒಬ್ಬ ಪೋಲೀಸ್ ಸೂಪರಿಂಟೆಂಡೆಂಟೂ, ಡೆಪ್ಯುಟಿ ಇನ್ಸ್‌ಪೆಕ್ಟರೂ ಇವರೇ ಮೊದಲಾದ ಸರ್ಕಾರಿ ಅಧಿಕಾರಿಗಳೆಲ್ಲಾ ತುಂಬಿಕೊಂಡಿದ್ದಾಗ್ಯೂ ಈಗ ಸುಮಾರು ೧೫ ದಿವಸಗಳ ಆಗಾಯಿತು ಅಲ್ಲಿ ಕನ್ನ ಚೋರಗಳು ದಿನಾಲೂ ರಾತ್ರಿಗಳಲ್ಲೇ ನಡೆಯುತ್ತಲಿವೆಯೆಂತಲೂ, ಚೋರರನ್ನು ಇದುವರೆಗೂ ಪತ್ತೆಮಾಡುವ ತಂಡವು ನಡೆಯುತ್ತಲಿಲ್ಲವೆಂತಲೂ ಕಳ್ಳರು ಇನ್ನೂ ಪತ್ತೆ ಆಗಿಲ್ಲವೆಂತಲೂ ವರ್ತಮಾನ ಕೇಳುತ್ತೇವೆ ಆದರೆ ಅಲ್ಲಿನ ಆಸ್ಪತ್ರೆಯ ಅಸಿಸ್ಟೆಂಟ್‌ರಾದ ವಂ|| ಜೋಸೆಫ್ ಸ್ಯಾಮ್ಯುಯೆಲ್‌ರವರು ಈಚೆಗೆ ಹೊಸದಾಗಿ ಮ್ಯುನಿಸಿಪಲ್ ಪ್ರೆಸಿಡೆಂಟಾಗಿ ನೇಮಿಸಲ್ಪಟ್ಟಿರುವದರಿಂದ ಇವರ ಮೂಲಕ ಎಡೆಸಲ್ಪಡುವ ಸ್ಯಾನಿಟರಿ ಏರ್ಪಾಡುಗಳು ಜನರಿಗೆ ಅತ್ಯಂತ ಆನಂದವನ್ನುಂಟುಮಾಡುವದಾಗಿರುವವೆಂದು ಕೇಳಿ ಬಹು ಸಂತೋಷಿಸುತ್ತೇವೆ

ಮೈಸೂರು ಲಕ್ಷ್ಮೀನರಸಪ್ಪನವರ ದೇವಸ್ಥಾನದ ಬಳಿ ಶಾಮಣ್ಣನವರ ಮನೆಯಲ್ಲಿರುವ ರಾಮಯ್ಯನಿಗೆ ನಂಜಪ್ಪನವರ ಮಗ ನರಸಿಂಹಯ್ಯ ಫಿರ್ಯಾದಿ ಮೈಸೂರು ದೊಡ್ಡ ಪೇಟೆಯಲ್ಲಿರುವ ತಾಯಮ್ಮ ಮತ್ತೇ ಅಂಗಡಿ ನಾಗಪ್ಪ ೧ ಇವನ ತಾಯಿ ಕಾವೇರಮ್ಮ ೨ ಅಪರಾಧಿಗಳು ಫಿರ್ಯಾದಿಗೆ ೧ ನೆ ಅಪರಾಧಿಯು ಹಣಗಳನ್ನು ಕೊಟ್ಟು ಬರುವೆ ಮಾಡಿಕೊಡುವದಾಗಿ ಒಪ್ಪಿ ಫಿರ್ಯಾದಿಯಿಂದ ೧೦೦ ರೂಪಾಯಿಗಳನ್ನು ತೆಗೆದುಕೊಂಡರು ಬರುವ ಜೇಷ್ಠ ಬಹುಳ ೯ ದಿವಸ ಲಗ್ನಮಾಡಿ ಕೊಡುವದಾಗಿ ಲಗ್ನಪತ್ರಿಕೆಯನ್ನು ಕೊಟ್ಟರು ಆದರೆ ಕಳೆದ ೨೪ ನೇ ಭಾನುವಾರ ದಿವಸ ಈ ಹುಡುಗಿಯನ್ನು ತಮ್ಮ ಹೂಸ ಅಗ್ರಹಾರದಲ್ಲಿರುವ ಅಪ್ಪ ಚಿಕ್ಕದ ವೆಂಕಟಪ್ಪಯ್ಯರೆಂಬುವರಿಗೆ ಅಪರಾಧಿಗಳು ತಮ್ಮ ಹುಡುಗಿಯನ್ನು ಕೊಟ್ಟು ವಿವಾಹ ಮಾಡಿದರು ಈ ಮೋಸದ್ದಕ್ಕೆ ಹೊಣೆ ಫೋರ್‌ಸಿಗೆ ದಾಖಲ್‌ಮಾಡಿದಾಗ ಪ್ರಾಸಿಕ್ಯೂಷನಲ್ಲಿ ಅಪರಾಧಿಗಳ ಮತ್ತು ಸಾಕ್ಷಿ ವಿಚಾರಣೆ ಮಾಡುವವರ ಶ್ರದ್ಧೆಯಿಂದ ತಂಗಿಯನ್ನು ತೆಗೆದುಕೊಂಡಿರುತ್ತಾರೆ ಈ ಮೊಕದ್ದಮೆಯು ೬-೮ ಜೋಯಿಸ್ಟ್ರೇಟರು ಕೋರ್ಟಿನಲ್ಲಿ ನಡೆಯುತ್ತಿರುವದು ಬಹಳ ಸ್ವಾರಸ್ಯವಾಗಿ ನಡೆಯುತ್ತಿದೆ ಎಂಬುದಾಗಿ ಒಬ್ಬ ನೊಬ್ಬ ಬಾತ್ಮೀದಾರರು ತಿಳಿಸುತ್ತಾರೆ

ಮೈಸೂರು ಗೆಜೆಟ್ ಸಂಗ್ರಹ.

ಈ ೧೯೧೬ನೆ ಇಸವಿ ಡಿಸೆಂಬರ್ ಗುರುವಾರ ಆಗಾಯಿತು ಮುಂದೆ ವಿವರಿಸುವ ಅಮಲ್ದಾರರುಗಳ ಬಡ್ತಿಗಳು ಜಾರಿಯಲ್ಲಿ ಬರತಕ್ಕದೆಂದು ಹುಕುಂ ಮಾಡಲ್ಪಟ್ಟಿದೆ

೫ನೆ ಕ್ಲಾಸಿನಿಂದ ೪ನೆ ಕ್ಲಾಸಿಗೆ

೧ ಬಾದರಿಹಳ್ಳಿ ೨ ಸುಬ್ಬರಾಮಶಂಕರ್‌ರಾವ

೬ನೆ ಕ್ಲಾಸಿನಿಂದ ೫ನೆ ಕ್ಲಾಸಿಗೆ

೧ ಹೆಚ್ ಗುಂಡಪ್ಪ ೨ ಬೆಂಗಳೂರು ಸೀತಾರಾಮಯ್ಯ ೩ ಸಿ ಬಾವಾಯ್ಯಂಗಾರ್ ೪ ಎಂ ಕೃಷ್ಣಯ್ಯಂಗಾರ್

೭ನೆ ಕ್ಲಾಸಿನಿಂದ ೬ನೆ ಕ್ಲಾಸಿಗೆ

೧ ಎಸ್ ಕೃಷ್ಣಮೂರ್ತಿರಾವ್ ೨ ಸಿ ವೆಂಕಟಾಚಲಯ್ಯ ೩ ಎಂ ಎ ತಿರುಮಲಾಚಾರ್ ೪ ಬಿ ನಾಗೇಶರಾವ

ನಂ|| ಜಿ ೪೦೭೦—ಅಮಲ್ದಾರ್‌ರುಗಳ ಮತ್ತು ಡಿಪ್ಟಿ ಅಮಲ್ದಾರುಗಳ ವರ್ಗಾವರ್ಗಿಗಳು ಮತ್ತು ನೇಮಕಗಳೂ ಮುಂದೆ ತಿಳಿಸುವ ಪ್ರಕಾರ ಹುಕುಂ ಮಾಡಲ್ಪಟ್ಟಿದೆ

ಅಮಲ್ದಾರ್ ಅಪಮದಲ್ಲಿ, ಸಿಟಿ ಮೈಸೂರಿನಿಂದ ಮೈಸೂರು ತಾಲ್ಲೋಕಿಗೆ

ಅಮಲ್ದಾರ್ ಬಿ ನಾಗೇಶರಾವ್, ಸಿಟಿ ಬೆಂಗಳೂರಿನಿಂದ ಬೆಂಗಳೂರು ತಾಲ್ಲೋಕಿಗೆ

ಅಮಲ್ದಾರ್ ಬಿ ಸೀತಾರಾಮಯ್ಯ, ಮೈಸೂರಿನಿಂದ ಹೊಸಕೋಟೆಗೆ; ಡಿ ವೆಂಕಟರಮಣಯ್ಯನವರಿಗೆ ಫರ್ಲೊ ಆದ ಸಬಬು

ಅಮಲ್ದಾರ್ ಟಿ ಚೊಕ್ಕಣ್ಣ ಬಿ ಎ, ಹಾಸನದ ತಾಲ್ಲೋಕಿಗೆ; ಲಕ್ಷ್ಮೀನಾರಾಯಣಪ್ಪನವರು ಫರ್ಲೊ ತೆಗೆದುಕೊಂಡ ಸಬಬು

ಅಮಲ್ದಾರ್ ಅಳಿಂಗ್ರಯ್ಯಂಗಾರ್, ತರೀಕೆರೆ ತಾಲ್ಲೋಕಿಗೆ; ಬಾಮಾರಾಯರು ಇತರ ಡ್ಯೂಟಿಯ ಮೇಲಿರುವ ಸಬಬು

ಅಮಲ್ದಾರ್ ವೈ ನರಸಿಂಹಯ್ಯನವರು, ಹೊನ್ನಾಳಿ ತಾಲ್ಲೋಕಿಗೆ ಲಾಜರಸ್ ಜೊಸಿಂಗೋಯವರು ಫರ್ಲೊ ಕೊಡಲ್ಪಟ್ಟ ಸಬಬು

ಅಮಲ್ದಾರ್ ಕೃಷ್ಣೇಗೌಡ, ಚನ್ನರಾಯಪಟ್ಣ ತಾಲ್ಲೋಕಿಗೆ

ಡಿಪ್ಟಿ ಅಮಲ್ದಾರ್ ವಾಸುದೇವರಾವ್, ಎಡತೊರೆ, ತಾಲ್ಲೋಕಿಗೆ

ನಂ|| ಜಿ ೪೦೫೧—ಕೆಳಗೆ ನಮೂದು ಮಾಡಿದ ಅಮಲ್ದಾರ್ ಮತ್ತು ಡಿಪ್ಟಿ ಅಮಲ್ದಾರ್ ನೇಮಕ ಮತ್ತು ಬಡ್ತಿಯು ಮಾಡಲ್ಪಟ್ಟು ಹುಕುಂ ಕೆಳಗೆ ನಮೂದಾಗುವವರು ೫ನೆ ಗ್ರೇಡ್ ಅಮಲ್ದಾರರಾಗಿ ಬಡ್ತಿ ಮಾಡಲ್ಪಟ್ಟಿರುತ್ತಾರೆ—ಎಂ ಕೃಷ್ಣರಾವ್; ಪಿ ಎನ್ ಗೋಪಾಲರಾವ್; ಸಿ ಎನ್ ಚೆನ್ನಯ್ಯ; ಕೆ ಜಿ ಅನಂತರಾಮಯ್ಯಂಗಾರ್

ಕೆಳಗೆ ನಮೂದಾಗುವ ಪ್ರೊಬೇಷನ್ ಅಮಲ್ದಾರುಗಳು ೬ನೆ ಗ್ರೇಡಿನಲ್ಲಿ ೯ನೆ ಡಿಸೆಂಬರ ಗುರುವಾರ ಆಗಾಯಿತು ಖಾಯಂ ಮಾಡಲ್ಪಟ್ಟಿರುತ್ತಾರೆ—ನಾರಸಿಂಹಯ್ಯ; ಜಿ ಹನುಮಂತರಾವ್; ರಾಮಸ್ವಾಮಯ್ಯ ಬಿ ಎ

ಕೆಳಗೆ ನಮೂದಾಗುವವರು ೫ನೆ ಕ್ಲಾಸ್ ಅಮಲ್ದಾರ ರಾಗಿರತಕ್ಕದ್ದು—ಮೈಸೂರು ಡಿಸ್ಟ್ರಿಕ್ಟಿನಲ್ಲಿ ರೆವಿನ್ಯೂ ಸ್ಪೆಷಲ್ ಡ್ಯೂಟಿ ಮೇಲಿರುವ ಟಿ. ಚೊಕ್ಕಣ್ಣ ಬಿ ಎ, ಡಿಪ್ಟಿ ಅಮಲ್ದಾರ್ ಅಳಿಂಗ್ರಯ್ಯಂಗಾರ್; ಮೈಸೂರು ಡಿಸ್ಟ್ರಿಕ್ಟ್ ರೆವಿನ್ಯೂ ಹೆಡ್ ಮುನಿಷಿ ವೈ. ಸೀತಾರಾಮಯ್ಯ

ಡಿಪ್ಯುಟಿ ಅಮಲ್ದಾರ್ ಕೃಷ್ಣೇಗೌಡ—ಇವರು ಗೊತ್ತು ಮಾಡಲ್ಪಟ್ಟ ಪರೀಕ್ಷೆಗಳನ್ನು ಕೊಡುವ ಪಕ್ಷದಲ್ಲಿ ೬ನೆ ಗ್ರೇಡ್ ಅಮಲ್ದಾರರಾಗಿರತಕ್ಕದ್ದು

ಚನ್ನರಾಯಪಟ್ಟಣದಲ್ಲಿ ಪ್ರೊಬೇಷನ್ ಅಸಿಸ್ಟೆಂಟ್ ಮತ್ತು ಟ್ರೈನಿಂಗ್ ಅಮಲ್ದಾರರಾಗಿರುವ ವಾಸುದೇವರಾಯರು ಡಿಪ್ಟಿ ಅಮಲ್ದಾರರಾಗಿರತಕ್ಕದ್ದು

೨ ಕೆಳಗಿನ ಡಿಪ್ಟಿ ಅಮಲ್ದಾರ್‌ಗಳನ್ನು ಖಾಯಂ ಮಾಡಿರುತ್ತೆ—ನ್ಯಾಮತಿಯಲ್ಲಿರುವ ವೆಂಕಟರಮಣಯ್ಯನವರು; ಗುಡಿಬಂಡೆಯಲ್ಲಿರುವ ಎಲ್ ರಾಮರಾವ್; ಕುಣಿಗಲ್ಲಿರುವ ಕೆ ಸುಬ್ಬರಾವ್; ಶ್ರೀರಂಗಪಟ್ಟಣದಲ್ಲಿರುವ ಎಸ್ ಪಿ ದೇಶಪಾಂಡ್ಯ

ನಂ|| ಜಿ ೩೯ ೯೬—೯೭ ಕ್ರಿಮಿನಲ್ ಪ್ರೊಸೀಜರ್ ಕೋಡು ೧೦ನೆ ಸೆಕ್ಷನ್ ಅನುಸರಿಸಿ ಕೆಳಗೆ ವಿವರಿಸುವ ಆಫೀಸರುಗಳು ೧ನೆ ಕ್ಲಾಸ್ ಮ್ಯಾಜಿಸ್ಟ್ರೇಟ ಅಧಿಕಾರಗಳನ್ನು ಕೊಡಲ್ಪಟ್ಟಿರುತ್ತಾರೆ— (೧) ಕೊಳ್ಳೇಗಾಲದಲ್ಲಿ ಟ್ರೈನಿಂಗ್ ಸಬ್‌ಡಿವಿಜನ್ ಆಫೀಸರಾಗಿರುವ ಮ|| ಸಿ ವಿ ರಾಘವುಲು ಬಿ ಎ (೨) ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ಜನರಲ್ ಅಸಿಸ್ಟೆಂಟ್ ಕಮಿಷನರಾಗಿರುವ ಮ|| ಪಿ ರಾಮಸ್ವಾಮಿ ನಾಯ್ಡು ಬಿ ಎ (೩) ಮೈಸೂರು ಡಿಸ್ಟ್ರಿಕ್ಟಿನಲ್ಲಿ ಜನರಲ್ ಅಸಿಸ್ಟೆಂಟ್ ಕಮಿಷನರಾಗಿರುವ ಮ|| ಬಿ ನಾರಾಯಣರಾವ್ ಬಿ ಎಸ್

೨ ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಟ್ರೈನಿಂಗ್ ಅಸಿಸ್ಟೆಂಟ್ ಕಮಿಷನರಾದ ಮ|| ಎ. ಶ್ರೀನಿವಾಸಮೂರ್ತಿರಾಯರು ಶಿವಮೊಗ್ಗ ಡಿಸ್ಟ್ರಿಕ್ಟ್ ಟ್ರೈನಿಂಗ್ ಅಸಿಸ್ಟೆಂಟ್ ಕಮಿಷನರ್ ಮ|| ಕೆ. ರಾಮಸ್ವಾಮಯ್ಯಂಗಾರ್‌ರವರ ಸ್ಥಳದಲ್ಲಿ ೧ನೆ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳು ಕೊಡಲ್ಪಟ್ಟಿರುತ್ತಾರೆ

೩ ಕೋಲಾರ ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕಮಿಷನರ್ ಕೆ. ಎಸ್. ದೊರೆಸ್ವಾಮಿಅಯ್ಯಂಗಾರ್ ೨ ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳು ಕೊಡಲ್ಪಟ್ಟಿರುತ್ತಾರೆ

೪ ಈ ೧೯೧೬ ನೆ ಜನವರಿ ೩ನೆ ನಂಬ್ರದಲ್ಲಿ ಕಡೂರು ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕಮಿಷನರ್ ಮ|| ಕೆ. ರಾಮಸ್ವಾಮಯ್ಯಂಗಾರ್‌ರವರು ಕೊಡಲ್ಪಟ್ಟ ೧ನೆ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳನ್ನು ಮತ್ತೊಂದು ಹುಕುಂ ಕೊಡುವ ಪರಿಯಂತರ ನಡೆಸುತ್ತಲಿರತಕ್ಕದ್ದು

ಬೇಲೂರು ವೃತ್ತಾಂತ.

ಕಾಲಸ್ಥಿತಿ.—ಬೃಗುಬರುತ್ತಾ ಬಿಸಲಿನ ಝಳವೂ, ಹೊತೆ ಹೆಚ್ಚಾಗಿ ಧಗೆಯು ದಿನದಿಂದ ಅಲ್ಲಲ್ಲಿ ಕೆಲವು ರೋಗ ಪ್ರಾರಂಭಿಸಿವೆ ಅವುಗಳಲ್ಲಿ ಮುಖ್ಯವಾಗಿ ರಕ್ತಭೇದಿ, ತಲೆನೋವು ಅವು ವಿಶೇಷವಾಗಿ ಉಂಟು ಕೆಲವು ಹಳ್ಳಿಯಲೂ, ಬಾವಿಗಳಲ್ಲಿಯೂ, ನೀರು ಬತ್ತಿಹೋಗಿ ಜನಗಳಿಗೂ, ದನಕರುಗಳಿಗೂ, ತುಂಬ ಕ್ಲೇಶಯುಂಟಾಗಿದೆ ಜಾನುವಾರುಗಳು ಬಾಧಾಪಡುತ್ತಿವೆಯಾದ್ದರಿಂದ ಅತಿತರವಾಗ ಹಾಸ್ಯಾಬಿಕನಾದ ಭಗವಂತನು ಭೂಮಿಯನ್ನು ತಂಪು ಬರುವಹಾಗೆ ಮಳೆಯನ್ನು ದಯಪಾಲಿಸಬೇಕೆಂದು ಜನ ಹಂಬಲಿಸುವವರಾಗಿದ್ದಾರೆ

ಮ್ಯುನಿಸಿಪಾಲಿಟಿ—ಬೇಲೂರಿನ ಪಟ್ಟಣದ ಗುಂಡಿಗಳು ಮಧ್ಯಭಾಗದಲ್ಲಿ ಯಾವ್ಗಲೂ ಹೇಯಿಸುವದರಿಂದ ಜನ ಆರೋಗ್ಯ ಭಾಗ್ಯಕ್ಕೆ ತುಂಬಾ ಕೇಡುಕವಾಗಿದೆ ಒಂದೊಂದು ಕಾಲಿಯಿಂದ ವ್ಯಾಪಿಸುವ ದುರ್ವಾಸನೆಯು ಮೂಗಿನ ರಂಧ್ರಗಳನ್ನು ಸೇರಿ ಬಹುತೊಂದರೆಯನ್ನುಂಟುಮಾಡುತ್ತದೆ ಇದರ ದೆಸೆಯಿಂದ ಕಾಲಸ್ಥಿತಿಯನ್ನು ಅನುಸರಿಸಿ ಬೇರೆ ರೋಗಗಳಿಗೂ ಸಹ ಅವಕಾಶವನು ಕೊಟ್ಟಹಾಗೆ ಆಯಿತು ಈ ಸಾರಿಯಾದರೂ ಕೋಟೆಯಲ್ಲಿ ಮಾಸವಾಗಿ ದ್ರಾಕ್ಷೇಮವನ್ನು ಬೆಂತಿಸುವ ಮ್ಯುನಿಸಿಪಲ್ ಪ್ರೆಸಿಡೆಂಟರ ನಮ್ಮ ಅಮಲ್ದಾರ್ರವರು ಪೇಟೆಯ ಬಡನಿವಾಸಿಗಳಮೇಲೆ ಕನಿಕರವಿಟ್ಟು ಈ ಸಂಗತಿಯನ್ನು ಪರಾಂಬರಿಕೆಗೆ ತಂದಾಳೊಂದು ಹಾವಮೂಲಿನ ಪ್ರಕಾರ ಪಟ್ಟಣದ ಹೊರಭಾಗದಲ್ಲಿ ಯಾಗ್ಗಲೂ ಯನ್ನು ಬೇಯಿಸುವ ಏರ್ಪಾಡು ಮಾಡಿಸಿದಲ್ಲಿ ಪ್ರಜೆಗಳ ಆರೋಗ್ಯಭಾಗ್ಯವೂ ತಮ್ಮ ಬ್ಲ ಘನೀಯವಾದ ಏರ್ಪಾಡಿಗೆ ಕೀರ್ತಿಯೂ ತಪ್ಪಲಾರದು

ಜೂಜಿನ ಗುಂಪು— ಇದಕ್ಕಾಗಿ ಸರ್ಕಾರದವರೇ ಆಂಧ್ರದಿಗೆ ಲೈಸೆನ್ಸನ್ನು ಕೊಡಲು ಪ್ರಾರಂಭಿಸಿದ್ದರಿಂದ ದನ್ನು ತಟ್ಟಿ ಬಿಲುಷ್ ಮಾಡಿದಹಾಗಾಯಿತು ಈಗ ಪೇಟೆಯಲ್ಲಿ ಕೆಂಡಾ ಕಾಣದಹಾಗೆ ೫-೬ ಗುಂಪಿನವರು ಸೇರಿ ಲೇಂದಿ ಷರಾಬ ಮುಕ್ಕಳಗಳಲ್ಲಿಯೂ ಮತ್ತು ಅಂತರಂಗವಾದ ಬೇರೆ ಕೆಲವು ಮನೆಗಳಲ್ಲಿಯೂ ಸ್ಥಳಗಳನ್ನು ಗೊತ್ತುಮಾಡಿಕೊಂಡು ಆಡುವವರಾಗಿದ್ದಾರೆ ಅನೇಕರು ಪರಸ್ಥಳದಿಂದ ಬಂದು ತಮ್ಮ ದ್ರವ್ಯಗಳನ್ನು ನಷ್ಟಪಡಿಸಿಕೊಳ್ಳುತ್ತಲಿದ್ದಾರೆ ಅಲ್ಲದೆ ಹಣಹೀನಸ್ಥಿತಿಯಿಂದ ತಮ್ಮ ಸ್ಥಳಗಳಿಗೆ ಹಿಂತಿರುಗಿಹೋಗಿ ಹಟಸಾಧನೆಯಿಂದ ತಮ್ಮ ತಮ್ಮ ಮನೆ ಪಾತ್ರೆಗಳನ್ನು ವಾಪು ಪುನಃ ಪುನಃ ಬಂದು ನಷ್ಟಪಟ್ಟು ಹೋಗುತ್ತಿದ್ದಾರೆ ಇದರಿಂದ ಜಗಳ, ರಗಳೆ, ಕಲಹ, ವಾದಾವಾದ, ಗದ್ದಲ, ಹಿಂಸೆ, ಕಳ್ಳತನ ಮೊದಲಾದವುಗಳು ಉಂಟಾಗುವದಕ್ಕೆ ಕಾರಣವಾಯಿತು ಪಟ್ಟಣದಲ್ಲಿರುವ ಅನೇಕ ಯೌವನಸ್ಥರು ಇಂಥಾ ಆಟಗಳಿಗೂ ದುರ್ನಡತೆಗಳಿಗೂ ಮನಃಕರಗೂ ಪ್ರೇರಿಸಲ್ಪಟ್ಟಹಾಗಾಯಿತು ಇಲ್ಲಿ ಗ್ಯಾಂಬ್ಲಿಂಗ್ ಆಕ್ಟು ಜಾರಿಯಲ್ಲಿಲ್ಲವೆಂದು ಪೋಲೀಸಿನವರು ಇಂಥವರನ್ನು ಬಿಟ್ಟುಕೊಂಡಿರುವದರಿಂದ ಅನೇಕರಿಗೆ ನಷ್ಟವೂ ಅವರಿಗೆ ಸಹಾಯವೂ ಆದಹಾಗೆ ವ್ಯಸನದಿಂದ ಹೇಳಬೇಕಾಗಿದೆ ಈ ಅಂಶವನ್ನು ನಮ್ಮ ಹಾಸನ ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟ್ ಸಾಹೇಬರವರು ತಮ್ಮ ಧ್ಯಾನ ಮಾದ ಚಿತ್ತಕ್ಕೆ ತೆಗೆದುಕೊಂಡು ಇದಕ್ಕೋಸ್ಕರ ತಕ್ಕ ಏರ್ಪಾಡು ಮಾಡಿಸಿದಲ್ಲಿ ಜನಗಳಿಗೆ ಕ್ಷೇಮವೂ ಸರ್ಕಾರದವರಿಗೆ ಕೀರ್ತಿಯೂ ತಪ್ಪಲಾರದು

ಬುಷ್ಟೋತ್ಸವನಿಗ್ರಹತಿ— ಸುಮಾರು ೧೫-೨೦ ದಿವಸಗಳಿಂದಲೂ ಗುಜೆಗರ ಕೇರಿಯಲ್ಲಿ ಹುಲ್ಲು ಮನೆಗಳ ಸಮೀಪ ಇದ್ದಕ್ಕಿದ್ದಹಾಗೇ ಬೆಂಕಿಯು ಬಿದ್ದು ಹಗಲು ಮತ್ತು ರಾತ್ರಿ ಒಂದೊಂದು ಸಾರಿ ಕಾಣಿಸಿಕೊಂಡು ಹುಲ್ಲು ಮನೆಗಳಿಗೆ ತುಂಬಾ ನಷ್ಟ ಉಂಟುಮಾಡುವದರಿಂದ ಇದು ಬಂದುವಿಧವಾದ ಪೀಡೆಯಾಗಿ ಇರಬಹುದೆಂದು ಜನಗಳು ಮಾತಾಡಿಕೊಳ್ಳುವವರಾಗಿದ್ದಾರೆ ಜನಗಳ ಬಾಯಿಗೆ ಹೀಗೆ ಕೆಲವುಗ್ರಾಮ್ಯ ದ್ವೇಷದಿಂದ ಇತರರ ಸ್ವತ್ತುಗಳನ್ನು ನಾಶ ಮಾಡಬೇಕೆಂಬ ಅಭಿಪ್ರಾಯದಿಂದ ಮೋಸಮಾಡುವ ಮನುಷ್ಯರ ಕಿಡಿಗೇಡಿ ಕೆಲಸವಲ್ಲದೆ ಬೇರೆ ಅಲ್ಲವೆ ಎಂದು ತಿಳಿಯಬೇಕಾಗಿದೆ ಹ್ಯಾಗಾದರೂ ಇಂಥಾ ಮನೆಗಳ ಸಮೀಪದಲ್ಲಿರುವ ಪೋಲೀಸ್ ಇನಸ್ಪೆಕ್ಟರವರ ಮತ್ತು ಬೀಟು ತಿರುಗುತ್ತಲಿರುವ ಪೋಲೀಸಿನವರ ತಿಳುವಳಿಕೆಗೂ ಬಾರದಿರುವದು ಆಶ್ಚರ್ಯವಾಗಿದೆ

ಪೋಲೀಸಿನವರ ಆವಶ್ಯಕತೆ— ಸುಮಾರು ಆರು ತಿಂಗಳ ಕಾಲದಿಂದಲೂ ಈ ತಾಲ್ಲೋಕಿಗೆ ಸೇರಿದ ಹನಿಕೆ ಎಂಬ ಸಂತೆಯಲ್ಲಿ ಜಾಜಗಾರರು ಹೆಚ್ಚಾಗಿ ಅನೇಕ ಜನಗಳಿಗೆ ಸಾವಿರಾರು ರೂಪಾಯಿಗಳನ್ನು ನಷ್ಟ ಮಾಡುತ್ತಾರೆಂತಲೂ, ಗಂಟುಕಳ್ಳರು ಪ್ರವೇಶಿಸಿ ಬಡಬಗ್ಗರಾದ ಅನೇಕ ಜನಗಳ ಸ್ವತ್ತುಗಳನ್ನು ಅಪಹರಿಸುತ್ತಾರೆಂತಲೂ ಇದಕ್ಕೆ ಆ ಪ್ರದೇಶದ ಕೆಲವು ಪಟೇಲರು ಮೊದಲಾದವರು ಅವರಿಗೆ ಸಹಾಯವಾಗಿ ಅನೇಕ ಕಾರ್ಯಗಳನ್ನು ನಡೆಸುವವರಾಗಿದ್ದಾರೆಂತಲೂ ಈ ಸಂಗತಿಗಳನ್ನು ಕೇಳುವವರೇ ಯಾರೂ ದಿಕ್ಕಿಲ್ಲವೆಂತಲೂ ಜನಪ್ರವಾದ ತುಂಬಾ ಉಂಟು ಈ ತಾಲ್ಲೋಕಿನಲ್ಲಿ ನಡೆಯುವ ಸಂತೆಗಳ ಪೈಕಿ ಈ ಹನಿಕೆಸಂತೆಯು ಭಾರಿಯಾಗಿದೆ ಸುಮಾರು ೨೦ ಮೈಲಿಗಳ ಪ್ರದೇಶದ ಜನರು ಪ್ರತಿವಾರದಲ್ಲಿಯೂ ಸೇರುವವರಾಗಿದ್ದಾರೆ ದವಸಧಾನ್ಯ ಮೊದಲಾದ್ದಲ್ಲದೆ ಬತ್ತಿನ ವ್ಯಾಪಾರವೂ ಸಹ ವಿಶೇಷವಾಗಿ ನಡೆಯುತ್ತೆ ಸುಮಾರು ೫-೬ ಸಾವಿರ ಐದಕ್ಕಿಂತ ಹೆಚ್ಚಾಗಿ ನೆರೆದು ಸಾವಿರಾರು ರೂಪಾಯಿಗಳ ಲೇವಾದೇವಿ ನಡೆಯುತ್ತದೆ ಈ ತಾಲ್ಲೋಕಿನಲ್ಲಿ ಇತರ ಸಂತೆಗಳು ನಡೆಯುವ ಸ್ಥಳಗಳಲ್ಲಿ ಪೋಲೀಸ್ ಸ್ಟೇಷನ್‍ಗಳುಂಟು ಇದು ಕಸಬಾ ಹಿಡಿಸ್ಟೇಷನ್ನಿಗೆ ದಾಖಲಾಗಿ ೩ ಮೈಲಿ ಫಾಸಲೆಯಲ್ಲಿರುವದರಿಂದ ಪ್ರತಿಸಂತೆದಿವಸದಲ್ಲಿಯೂ ಇಲ್ಲಿಂದ ಒಬ್ಬರು ಯಾ ಇಬ್ಬರು ಪೋಲೀಸ್ ಕಾನಸ್ಟೇಬಲ್‍ಗಳನ್ನು ಕಳುಹಿಸುವ ಸಂದರ್ಭ ಉಂಟಾಗಿದೆ ಇದಿನ್ನೆಲ್ಲಾ ನಮ್ಮ ಅಮಲ್ದಾರ್ರವರು ಪರಾಂಬರಿಕೆಗೆ ತೆಗೆದುಕೊಂಡು ತಕ್ಕ ಏರ್ಪಾಡು ಮಾಡದ ಇರಲಾರರೆಂದು ನಂಬುತ್ತೇವೆ

ಗುಡ್ಡಾಗಿಗಳು— ೧೬ ವರ್ಷದ ಪ್ರಾಯವುಳ್ಳ ಬಾಲಕನು ಕ್ಷಾಲು ಅಡಿ ಎತ್ತರದ ಕಾಯಪುಷ್ಟಿಯುಳ್ಳ ನೋಟಕ್ಕೆ ದಾಢವೂ ಉಳ್ಳ ರಾಮಲಕ್ಷ್ಮಣರೆಂಬ ಅವಳಿಯಾಗಿ ಹುಟ್ಟಿದ ಸಹೋದರರಿಬ್ಬರು ನೋಟಕರ ಕಣ್ಣಿಗೆ ರಮ್ಯತೆಯನ್ನುಂಟುಮಾಡಿ ಆವಶ್ಯವಾದ ನಯನಾನಂದಿಗಳಿಂದ ಭಿಕ್ಷವನ್ನು ಈ ಜಾತ್ರೆಯಲ್ಲಿ ಅನೇಕ ದ್ರವ್ಯವನ್ನು ಸಂಪಾದಿಸಿದರು

ಜಾತ್ರೆ—ಮಾರ್ಚಿ ೨೬ಕ್ಕೆ ಪ್ರಾರಂಭಿಸಿ ಏಪ್ರಿಲ್ ೭ಕ್ಕೆ ಮುಗಿಯಿತು ಕಳೆದ ವರ್ಷಕ್ಕಿಂತಲೂ ಈ ವರ್ಷ ಜನಗಳು ಹೆಚ್ಚಾಗಿ ಸೇರಿದ್ದರು ನಮ್ಮ ಅಮಲ್ದಾರ್ರವರು ಪ್ರಜಾಕ್ಷೇಮಕ್ಕೋಸ್ಕರ ಸ್ವಪಲ್ಪಾಗಿ ಕೆಲವು ಒಳ್ಳೇ ಏರ್ಪಾಡನ್ನು ಮಾಡಿಸಿದ್ದರು ರಥೋತ್ಸವಕಾಲದಲ್ಲಿ ತೇರನ್ನು ನೆಲೆಗೆ ನಿಲ್ಲಿಸುವದಕ್ಕೆ ಬಹಳ ಶ್ರಮ ತಗಲುಕೊಂಡಿತಾಗಾಯಿತು ಪೋಲೀಸಿನವರ ಕುಮಕು ಬಾಣೆ ಇತ್ತು ನೇತ್ರಾವತೀಕಲಸದ ಕಾದೇಗಾರರಲ್ಲಿ ಕೆಲವರು ಇದಕ್ಕೆ ಸಹಾಯವಾಗಿ ಒದಗಿದರು ಹೀಗೆ ಅಮಲ್ದಾರ್ರವರು ಮುತುವರ್ಜಿಯಿಂದ ಮೆಹನತ್ತು ಮಾಡಿದ್ದರೆ ಈ ಸಾರಿ ತೇರು ನೆಲೆಗೆ ನಿಲ್ಲುವದು ಬಹಳ ಕಷ್ಟವಾಗಿತ್ತೆಂದು ಜನಗಳು ಮಾತನಾಡಿಕೊಳ್ಳುತ್ತಾರೆ

ಜಾತ್ರೆಯ ವಿವರ—ಜಂಗಮ್ಮ್ಯುಯ್ಯಗಳು, ಬಾಸ್ಕಯ್ಯಗಳು, ದ್ಯರಾಗಿಗಳು, ಕಾಂಟನು, ಕಾರಂಪದಃ, ಕಾರಾಜಿಗಳು ಮೊದಲಾದ ಆಟದವರು ತಮ್ಮ ಉದರ ಪೋಷಣೆಗೋಸ್ಕರ ನಾನಾ ಬಗೆಯಿಂದ ನಟಿಸುತ್ತಾ ಪಟ್ಟಣವನ್ನು ತುಂಬಿ ಮೆರೆಯುತ್ತಿದ್ದರು ಮಾರ್ವಾಡಿಗಳೂ ಹಸೇಕರ ಮೇಲೆಲ್ಲಾ ತುಂಬಿ ಧೂರ್ತತನವನ್ನು ನಟಿಸಿ ದೊಂಬಿ, ಜಗಳ, ರಗಳೆ, ಗದ್ದಲ ಮುಂತಾದ್ದಕ್ಕೆ ಪ್ರೇರೇಪಿಸಿ ಬೀದಿಗಳಲ್ಲಿಯೂ ಛತ್ರಗಳಲ್ಲಿಯೂ ಅನೇಕರನ್ನು ಕಡಿಮೆ ನಷ್ಟವನ್ನು ಉಂಟುಮಾಡುವದಾಗಿತ್ತು ಬಿಡಿಬೀಗದವರು ಮುಂತೆ ತಗೆಯುವವರು ಜಾತ್ರೆಯಲ್ಲಿ ಮಾಳವಾಗಿ ನ್ಯಾಯದೆಸೆಯಿಂದ ತಾಟುಗಳನ್ನೂ ಬಿಡಿನಗಳನ್ನೂ ಆಡಿಸುತ್ತಾ ದ್ರವ್ಯವನ್ನು ಬೆಳದುಕೊಂಡು ಗದ್ದಲದಲ್ಲಿ ನುಗ್ಗಿ ಬಿಡಾರುಗಳನ್ನೇ ನಡೆಸುತ್ತಾ ದಸ್ತುಗಳನ್ನೂ, ಜನರ ಮಾರ್ಗಾರ್ಥವನ್ನೂ, ಬಿಸಿಲಿನ ಹೊತೆತನವನ್ನು ಸಹಿಸಲಾರದೆ ಶ್ರಮ ಪಡುವವರಾಗಿದ್ದರು ಜೂಜುಗಾರರು ತಮ್ಮ ಹಲವು ವಿಧವಾದ ಆಟಗಳಿಂದ ಜನಗಳನ್ನು ಮರುಳುಮಾಡಿ ನೂರಾರು ಜನರ ದ್ರವ್ಯವನ್ನು ಕಸುಕೊಳ್ಳುವವರಾಗಿದ್ದರು ಗಂಟುಕಳ್ಳರ ಮೇಲೆಯೂ ಜೂಜುಕೋರರ ಮೇಲೆಯೂ ಪೋಲೀಸಿನವರ ನಿಗಾವಣೆ ಬಹಳ ಚನ್ನಾಗಿತ್ತು ಕಳೆದ ವರ್ಷದ ಹಾಗೆ ಗಂಟುಕಳ್ಳರ ಅವಾಂತರ ಬಹಿರಂಗಪಡಿಸಲಾಗಲಿಲ್ಲ ಆದರೆ ಅಂತರಂಗದಲ್ಲಿ ಮಾತ್ರ ಕೆಲವರು ತಮ್ಮ ಒಡವೆಗಳನ್ನು ಕಳಕೊಂಡು ವ್ಯಸನದಿಂದ ಹಿಂತಿರುಗುವವರಾಗಿದ್ದರು ಇಂಥಾ ಪರಿತಾಪದ ಸ್ಥಿತಿಯನ್ನು ನೋಡಿ ಗುರುಭಕ್ತರಾದ ಪ್ರಸಂಗಿಗಳು ತಮ್ಮ ಉಪದೇಶಗಳಿಂದ ಜನಗಳ ಗುಂಪನ್ನು ಅಲ್ಲಲ್ಲಿ ಸೇರಿಸಿ ಮಹಾ ಸಂತೋಷದಿಂದ ಪರಿಪರಿ ವಿಧದಿಂದ ತೋರಿದಿಂದ ಸತ್ಯವನ್ನು ವಿವರಿಸುತ್ತ ರಕ್ಷಣೆಯ ಮಾರ್ಗಕ್ಕೆ ಕರೆಯುವವರಾಗಿದ್ದರು ಗುರುಗಳು ಬೋಧಿಸುತ್ತಿದ್ದ ಶುಭ ಸಮಾಚಾರವನ್ನು ಸಾವಿರಾರು ಜನಗಳು ಕೇಳಿ ಅಂಗೀಕರಿಸುವವರಾಗಿದ್ದರು ಕೆಲವರು ತಮ್ಮ ಮಹಾದ ಭಕ್ತಿಯಿಂದ ಆಣೆಕೆಗಳನ್ನು ತಂದುಕೊಡುವವರಾಗಿದ್ದರು ಇನ್ನೂ ಕೆಲವರು ಕುಚೇಷ್ಟೆಯಿಂದ ಗದ್ದಲವೆಬ್ಬಿಸುವವರಾಗಿದ್ದರು ಕಡೆಯಲ್ಲಿ ಪ್ರಸಂಗಿಗಳೆಲ್ಲರೂ ತಮ್ಮ ಸೇವೆಯು ಸಾರ್ಥಕ್ಕೋಸ್ಕರ ಭಗವದನುಗ್ರಹವನ್ನು ಬೇಡಿ ತಮ್ಮ ತಮ್ಮ ಸ್ಥಳಗಳಿಗೆ ತೆರಳುವವರಾದರು

ವಿಜ್ಞಾಪನೆ

ಚಂದಾದಾರರುಗಳಿಗೆ—ತಮ್ಮ ಹೆಸರುಗಳನ್ನು ಮತ್ತೊಂದು ಸಾರಿ ಪ್ರಕಟಿಸಿಕೊಳ್ಳದ ಹಾಗೆ ತಮ್ಮ ತಮ್ಮ ಚಂದಾಹಣವನ್ನು ದಯಮಾಡಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ

ಬೇಲೂರು ಏಜೆಂಟ್

ಕರೆಸ್ಪಾಂಡೆನ್ಸ.

ವೃತ್ತಾಂತ ಪತ್ರಿಕಾ ಏಡಿಟರವರೇ!

ಶ್ರೀ ಆದಿಚುಂಚನಗಿರಿ ಬಿಂದುವಮೊಂದು ಕ್ಷೇತ್ರವು ಈ ಮೈಸೂರು ದೇಶದಲ್ಲಿ ಪ್ರಸಿದ್ಧವಾಗಿರುತ್ತಷ್ಟೆ ಈ ಮಠದ ಪಟ್ಟಾಧಿಕಾರಿಗಳಾದ ಸುಂದರನಾಥ ಸ್ವಾಮಿಗಳವರು ೧೮೯೩ನೇ ಇಸವಿ ಜನವರಿ ತಾರೀಖು ೧ರಲ್ಲು ಈ ಲೋಕವನ್ನು ಬಿಟ್ಟು ಪರಲೋಕಕ್ಕೆ ಚಿತ್ತೈಸಿದ್ದರಿಂದ ಅವರ ಸನ್ಯಾಸಾಶ್ರಮ ಪದ್ಧತಿಯಂತೆ ಪದೆಯತಕ್ಕ ಶಿಷ್ಯರಿಗನ್ಯವಿತ್ತು ಈ ಮಠದ ದಳವಾಯಿರು ಆದಿತ್ಯನಾಥಜೆಯವರು ನೇಮಿಸಿದರು ಅನಂತರ ಈ ಮಠದ ಪಟ್ಟಾಧಿಕಾರಕ್ಕೆ ಮತ್ತೊಬ್ಬ ಗುರುವನ್ನು ನೇಮಕ ಮಾಡಿಕೊಳ್ಳತಕ್ಕ ಸಂಪ್ರದಾಯವು ಅಲ್ಲಿನ ಗಂಗಡಿಕಾರ ಮತಸ್ಥರಾದ ಸ್ಥಳದ ಧಳ್ಳಾಯಿಗಳು ಮತ್ತು ಪ್ರಮುಖರುಗಳೂ ಸಹ ಇದೇ ಜನವರಿ ತಾರೀಖು ೧೫ರಲ್ಲು ಪ್ರೇಮದಕ್ಕೆ ಸಭೆಸೇರಿ ಸ್ಥಳದವರ ಅನುಮತಿ ಮೇರೆಗೆ ಈ ಮಠದ ದಳವಾಯಿರು ಆದಿತ್ಯನಾಥಜಿಯವರಿಗೆ ಪಟ್ಟಾಧಿಕಾರ ಮಾಡಾವಂತೆಯೂ, ಅವರು ಇಲ್ಲಿ ನಡೆಯತಕ್ಕ ದೇವತಾ ಉತ್ಸವ ಮುಂತಾದ ಧರ್ಮ ಕಾರ್ಯಗಳು ಮಾಮೂಲ ಪದ್ಧತಿಗೆ ಲೋಪವಿಲ್ಲದಂತೆ ನೆರವೇರುವಂಥಾ ವಿಧವಾಗಿ ತೀರ್ಮಾನಿಸಿದನಂತರ ಮುಂದೆ ಮಾಘ ಬಹುಳಪಾದ ಕೆಂಪಯಿಂಬುವಳ ಹೊಟ್ಟೆಯಲ್ಲಿ ಹುಟ್ಟಿ ಅನ್ನದಾನಿಯೆಂಬ ಹೆಸರಿನಿಂದ ಇದ್ದುಕೊಂಡು ಇದ್ದ ಈ ಅನ್ನದಾನಿಯೆಂಬುವನಿಗೆ ೧೮೯೩ನೇ ಇಸವಿಯಲ್ಲಿ ಜನೇವರಿ ಮಾಹೆಯಲ್ಲಿ ಹಿಂದಿನ ಪ್ರಭುವಿನ ದೀಕ್ಷೆ ಕೊಟ್ಟು ಜಡೆಮಠಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಬಾಲಕನಾಥನೆಂಬ ಹೆಸರನ್ನಿಟ್ಟುಕೊಂಡು ಇದ್ದರು ಆದಿಗೆ ಸದರಿ ಮಠಕ್ಕೆ ನಾಥಜೆಯವರು ಸ್ವರ್ಗಸ್ಥರಾದ್ದರಿಂದ ಬಾಲಕನಾಥನನ್ನು ಸದರಿ ಮಠದ ಆಶ್ರಿತ ಸಹಸ ಶಿಕ್ಷ ಜನರ ಗ್ರಾಮಸ್ಥರೂ ಮಾಡಿದಮುಂದ್ರ ಬಸವೀ ಮಗನೆಂಬದಾಗಿ ಕಂಡು ಇವನ್ನುಗ್ರಾ ತಿರಸ್ಕರಮಾಡಿ ಯಾವ ಆಸ್ತಿಯಿಂದಲೂ ಒಪ್ಪಲಿಲ್ಲವಾದರು

೨ ಈರೀತಿ ಉತ್ಪನ್ನನಾದ ಮಹಲ್ಕಂಡ ಬಾಲನಾಥನು ಕೆಲವು ಜನಗಳ ದುರ್ಬೋಧನೆಯಿಂದ ಈ ಚುಂಚನಗಿರಿ ಮಠದ ಪಟ್ಟಾಧಿಕಾರ ತಾನು ಮಾಡಬೇಕೆಂಬದಾಗಿಯೂ ತನ್ನ ಅಣ್ಣ ತಮ್ಮಂದಿರು ತಂಗಿಯೂ ಸಹ ಮಠದಲ್ಲೇ ಇರಬೇಕೆಂದು ಮಠದಿಂದ ಸಹ ದಳವಾಯಿರು ಆದಿತ್ಯನಾಥಜೀಯವರಿಗೆ ಸ್ಥಳದ ಗಂಗಡಿಕಾರ ಮತಸ್ಥರೂ ಅಧಿಕಾರ ಕೊಡುತ್ತಾರೆಂಬ ಜಿದ್ದಿನಿಂದ ಈ ಮಠದ ವಿಷ್ಣು ಆಸ್ತಿಗಳನ್ನು ಮತ್ತು ಆದಿತ್ಯನಾಥಜೀಯವರ ಸಹಾಯದಿಂದ ಚುಂಚನಹಳ್ಳಿ ಲಿಂಗಣ್ಣಗೌಡ, ಬ್ಯಾಲಕೇರಿ ಚನ್ನೇಗೌಡ, ಚೀರನಹಳ್ಳಿ ಮರಿದೇಗೌಡ, ಅನ್ನದಾನಿಗೌಡ, ಸ್ವರೂಪಹಳ್ಳಿ ಕರೇಗೌಡ, ಸಹಾ ಅವರುಗಳ ಇಧಾರೆ ಹಕ್ಕುದಾರರು ತನ್ನನ್ನು ನಿಮಾಕರಿಸಿ ಇಧಾರೆಂದು ಸದರಿ ಬಾಲನಾಥನು ಮೈಸೂರು ದೇಶದ ದಿವಾನ್ ಸಾಹೇಬರವರ ಹುಜೂರಿಗೂ ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿಕಮೀಷನರ್ ಸಾಹೇಬರವರ ಹುಜೂರಿಗೂ, ಪ್ರಿಂಚರಾಕ್ಸ್ ಸಬ್‌ಡಿವಿಜನ್ ಸಾಹೇಬರವರ ಹುಜೂರಿಗೂ, ನಾಗಮಂಗಲ ತಾಲ್ಲೋಕ್ ಅಮಲ್ದಾರ್ರವರ ಕಛೇರಿಗೂ ಸಹ ಕಳೆದ ಜನವರಿ ೧೨ನೇ ತಾರೀಖಿನಲ್ಲಿ ಮಾಯಿಸಂದ್ರದ ರೈಲ್‍ಸ್ಟೇಷನ್ ಟೆಲಿಗ್ರಾಫ್ ಮೂಲಕ ಫಿರ್ಯಾದು ದಾಖಲುಮಾಡಿದ್ದರಮೇಲೆ ನಾಗಮಂಗಲ ತಾಲ್ಲೋಕ್ ಇನಸ್ಪೆಕ್ಟರವರೂ ಪಟೇಲರೂ ನೆಲ್ಲಿಗೆರೆ ಸ್ಟೇಷನ್ ಅಧಿಕಾರಿಗಳೂ ಸಹ ಚುಂಚನಗಿರಿ ಮಠಕ್ಕೆ ಮಹಜರು ಮಾಡಿಸಿ ಫಿರ್ಯಾದಿ ಬಾಲನಾಥನನ್ನೂ ಆಪಾದಿಗಳಾದ ಮೇಲ್ಕಂಡ ಗೌಡರುಗಳನ್ನೂ ಸಹಾ ತನಿಖೆಮಾಡಿಕೊಂಡು ಸುಳ್ಳು ಫಿರ್ಯಾದಿದ್ದರಿಂದ ಬಿ ಫಾರಂ ಮಾಡಿ ಮೊಕದ್ದಮಾ ಹುಜೂರಿಗೆ ರಿಪೋರ್ಟ್ ಮಾಡಿದ್ದರಮೇಲೆ ನಂಬರು ವಜಾ ಆಯಿತು

೩ ಅನಂತರ ಸದರಿ ಬಾಲನಾಥನು ಮಾಯಿಸಂದ್ರದ ಠಾಣ್ಯಾದಲ್ಲಿ ಮೈಸೂರು ಪೋಲೀಸ್‍ಜನರಲ್ ಇನಸ್ಪೆಕ್ಟರಾದ ಮೇಜರ್ ಮಹಾರಾಜೇಂದ್ರ ಮಾಧವರಾಯರವರ ರೂಬರೂಪ ಇದೇವಿಷಯಕ್ಕಾಗಿ ಅರ್ಜಿ ಕೊಟ್ಟಿದ್ದರ ಮೇಲೆ ಈ ಅರ್ಜಿ ನಾವು ಹಿಡಿಯುವದಿಲ್ಲ ಪ್ರಿಂಚರಾಕ್ಸ ಸಬ್‍ಡಿವಿಜನ್ ಹುಜೂರಿಗಾದರೂ ಮೈಸೂರು ಡಿಸ್ಟ್ರಿಕ್ಟು ಡೆಪ್ಯುಟಿಕಮಿಷನರ್ ಸಾಹೇಬರವರಿಗಾದರೂ ಹೇಳಿಕೊಳ್ಳಬೇಕೆಂದು ಇಂಥಾದ್ದು ಕೊಟ್ಟಿದ್ದರ ಮೇಲೆ ನಾಗಮಂಗಲ ತಾಲ್ಲೋಕ್ ಅಮಲ್ದಾರ್ರವರಲ್ಲಿ ಇದೇಬಗ್ಗೆ ಫಿರ್ಯಾದು ಅರ್ಜಿ ಕೊಟ್ಟಿದ್ದರಿಂದ ನಿನ್ನ ಹಕ್ಕು ಇದ್ದರೆ ಸಿವಿಲ್ ಕೋರ್ಟಿನಲ್ಲಿ ವ್ಯವಹರಿಸಿಕೊಳ್ಳಬಹುದೆಂದು ಅಮಲ್ದಾರ್ರವರು ಅಪ್ಪಣೆ ಕೊಡಿಸಿದರು

೪ ಅನಂತರ ಸದರಿ ಬಾಲಕನಾಥನು ಎಲ್ಲಾ ಕೋರ್ಟುಗಳಲ್ಲಿಯೂ ತನಗೆ ಯಾವದೊಂದು ಹಕ್ಕೂ ಉಂಟಾಗಲಿಲ್ಲವೆಂದಾಗಿಯೂ ಆದಿತ್ಯನಾಥಜೀಯರವಾಗಿ ಇರುವ ಮೇಲ್ಕಂಡ ಗೌಡರುಗಳು ದೂಮದೊಂದು ತಪ್ಪಿತಸ್ಥರಾಗಲಿಲ್ಲವೆಂಬುದಾಗಿಯೂ ಸಹಾ ತಕರಾರು ಹುಟ್ಟಿ ಮಾಯಿಸಂದ್ರ ಸಮ್ಮತಿ ಕೆಲವು ಜನಗಳ ದುರ್ಬೋಧನೆಯಿಂದ ಪ್ರವರು ಪೈಕಿ ಕೆಲವು ಜನಗಳ ದುರ್ಬೋಧನೆಯಿಂದ ಸಹ ಅದೇ ಇಸವಿ ಜನವರಿ ೩೧ನೇ ತಾರೀಖಿನಲ್ಲಿ ಸಾವಿರಾರು ಜನಗಳ ಪರಿಗೆ ಅಕ್ರಮಕೂಟ ಕೂಡಿಸಿ ಮಠದ ಆಸ್ತಿಗಳನ್ನೂ ಸತ್ತು ಹಂಗಾಮ ಮಾಡುತ್ತಾ ಇದ್ದದ್ದರಮೇಲೆ ಪೋಲೀಸ್ ಇನಸ್ಪೆಕ್ಟರವರು ಜಮಾದಾರರು ದಫೇದಾರರು ಸಹ ದಯಮಾಡಿಸಿ ಅಕ್ರಮಕೂಟದವರನ್ನು ಚೆದರಿಸಿ ಜನಗಳ ನೆಮ್ಮದಿಗೆ ಭಂಗವಿಲ್ಲದಂತೆ ಈ ದಿನವನ್ನು ಕಾಪಾಡಿದರು

೫ ನೇ ೧೮೯೩ನೇ ಇಸವಿ ಫೆಬ್ರವರಿ ತಾರೀಖು ೨ನೇ ಗುರುವಾರ ದಿವಸ ದಳವಾಯಿರು ಆದಿತ್ಯನಾಥಜೀಯವರಿಗೆ ಪಟ್ಟಾಭಿಷೇಕವಾಗುತ್ತೆ ಅಲ್ಲಿ ಅನೇಕರು ತುಂಟಜನಗಳು ಅಕ್ರಮಕೂಟ ಕೂಡಿಸಿ ಬಾಲಕನಾಥನು ಕಡಕಾವಾದಿಸುತ್ತಾನೆಂದು ಸದ್ಯದ ಸಂಗತಿ ಕಂಡು ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿಕಮೀಷನರ್ ಸಾಹೇಬರವರಿಗೂ ಪ್ರಿಂಚರಾಕ್ಸ ಸಬ್‍ಡಿವಿಜನ್ ಸಾಹೇಬರಿಗೂ ನಾಗಮಂಗಲ ತಾಲ್ಲೋಕು ಅಮಲ್ದಾರ್ರವರಿಗೂ ಸಹ ಸರ್ಕಾರದ ಕುಮುಕ್ಕು ಅಪೇಕ್ಷಿಸಿ ಅರ್ಜಿ ಬರೆದುಕೊಂಡಿದ್ದರ ಮೇಲೆ ಪ್ರಿಂಚರಾಕ್ಸ ಸಬ್‍ಡಿವಿಜನ್ ಪೋಲೀಸ್ ಅಸಿಸ್ಟೆಂಟು ಕಮಿಷನರ್ ಮಹಾರಾಜೇಂದ್ರ ನಂಜರಾಜಾಜೀ ಅವರಿಗೆ ಡಿಸ್ಟ್ರಿಕ್ಟಿನಿಂದ ೨೦-೩೦ ಜನಗಳ ವರಿಗೆ ರಿಜರ್ವು ಪೋಲೀಸಿನವರನ್ನು ಕರಿಸಿಕೊಂಡು ತಾಲ್ಲೋಕು ಅಮಲ್ದಾರರು ಇನಸ್ಪೆಕ್ಟರು ಮುಂತಾದ ಕುಮುಕ್ಕು ತೆಗೆದುಕೊಂಡು ಆ ದಿವಸ ಪ್ರಾತಃಕ್ಕೆ ದಯಮಾಡಿಸಿ ಉತ್ಸವ ಪಾರಿಕೆಯಲ್ಲೂ ಕೂಡಿದ್ದ ೩-೪ ಸಾವಿರ ಜನಗಳ ಪರಿಗಿನ ಗುಂಪನ್ನು ಪರಾಂಬರಿಸಿ ಡಿಸ್ಟ್ರಿಕ್ಟು ರಿಜರ್ವು ಪೋಲೀಸಿನವರ ಬಲ ಇದ್ದು ಕೈಕೋಳಗಳಸಮೇತ ಸನ್ನದ್ಧರಾಗಿರಬೇಕೆಂದು ಅಪ್ಪಣೆ ಕೊಡಿಸಿ ಸ್ಥಳದವರ ಹೇಳಿಕೆಯನ್ನು ಪರಾಂಬರಿಸಿ ಆದಿತ್ಯನಾಥಜೀಯವರನ್ನೂ ಬಾಲಕನಾಥನನ್ನೂ ಸಹ ಒಂದು ಕಡೆ ಕರಿಸಿಕೊಂಡು ತನಿಖೆಮಾಡಿ ಅಕ್ರಮಕೂಟ ಕೂಡಿಸಿದವನಿಗೆ ಬುದ್ಧಿವಿವೇಕಗಳನ್ನು ಅಪ್ಪಣೆ ಕೊಡಿಸಿ ಆದಿತ್ಯಜೀಯವರಿಗೂ ವಿವೇಕಗಳನ್ನು ಅಪ್ಪಣೆ ಕೊಡಿಸಿ ಸ್ಥಳದ ಮುಖ್ಯಸ್ಥರಿಗೂ ಈ ವಿಷಯವನ್ನು ಅಪ್ಪಣೆ ಕೊಡಿಸಿ ತಂದೆಯು ಮಕ್ಕಳಿಗೆ ಹೇಳಿದ ಬುದ್ಧಿ ವಿವೇಕದಂತೆ ಸಮಾಧಾನಪಡಿಸಿ ಕಲಹಕ್ಕೆ ಸ್ವಲ್ಪವಾದರೂ ಅವಕಾಶವಿಲ್ಲದಂತೆಯೂ ಆ ದಿವಸದ ಲಗ್ನಕ್ಕೆ ಸರಿಯಾಗಿ ಆದಿತ್ಯನಾಥಜೀಯವರಿಗೆ ಪಟ್ಟಾಧಿಕಾರವನ್ನು ಮಾಡಿಕೊಳ್ಳಬಹುದೆಂದು ಸಹ ಅಪ್ಪಣೆ ಕೊಡಿಸಿದ ಪೋಲೀಸ್ ಅಸಿಸ್ಟೆಂಟ್ ಕಮಿಷನರಿಗೆ ಮಹಾರಾಜೇಂದ್ರಗಳವರ ಸಂದರ್ಭಕ್ಕೆ ಡೆಪ್ಯುಟಿಕಮಿಷನರವರಿಗೂ ಅನೇಕ ನಮಸ್ಕಾರವನ್ನೂ ನಾಗಮಂಗಲ ತಾಲ್ಲೋಕು ಅಮಲ್ದಾರ್ರವರಿಗೆ ಅನೇಕ ಸಲ್ಲಾಂಗಳನ್ನೂ ಸಹ ಅಲ್ಲಿ ಕೂಡಿದ್ದ ೩-೪ ಸಾವಿರ ಪ್ರಜೆಗಳು ಭಕ್ತಿಪುರಸ್ಸರವಾಗಿ ಮಾಡಿದರಲ್ಲದೆ ಈ ಪಟ್ಟಾಧಿಕಾರವಾಗಬೇಕೆಂಬದಾಗಿ ಉದ್ದೇಶಿಸಿ ಇದ್ದ ಮುಖ್ಯಸ್ಥರೂ ಮತ್ತು ಅಧಿಕಾರ ಹೊಂದಿದ ಆದಿತ್ಯನಾಥಜೀಯವರೂ ಸಹ ಸರ್ಕಾರಕ್ಕೆ ಕೃತಜ್ಞತೆಯನ್ನು ಈ ಉಭಯ ಮಹನೀಯರುಗಳು ಮಾಡಿದ ಉಪಕಾರವು ಅವರುಗಳು ಹೇಳಿದ ಧರ್ಮಯುಕ್ತವು ಸಹ ಮರೆಯತಕ್ಕದ್ದಲ್ಲವಾಗಿದೆ ಹೀಗೆ

ತಮ್ಮ ವಿಧೇಯ

ಯಥಾರ್ಥವಾದಿ.

ಶಾಲೀವಾಹನಶಕ ೧೮೧೫ ನೇ ವಿಜಯನಾಮ ಸಂವತ್ಸರದ ವೈಶಾಖ ಬಹುಳ ಚೌತಿ ಗುರುವಾರದಿಂದ ವೈಶಾಖ ಬಹುಳ ದಶಮಿ ಬುಧವಾರದ ವರೆಗಿನ ವಾರದ ಪಂಚಾಂಗ.

೧೮೯೩ ನೇ ಇಸವಿ, ಮೆ.

ತಾ.	ವಾರ.	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.	ಮೇಷ ಮಾಸ ತೇದಿ.
4	ಗು.	ಚೌ.	7-45	ಜ್ಯೇ.	19-12	23
5	ಶು.	ಪಂ	12-27	ಮೂ.	25-17	24
6	ಶ.	ಷ.	16-27	ಪೂ.	30-33	25
7	ರ.	ಸ.	19-21	ಉ.	34-56	26
8	ಸೋ.	ಅ.	21-12	ಶ್ರ	38-6	27
9	ಮಂ.	ನ.	21-39	ಧ	39-53	28
10	ಬು. *	ದ.	20-55	ಶ	40-33	29

* ದತ್ತಾತ್ರೇಯ ಜಯಂತಿ.

ಪೇಟೆ ಧಾರಣೆ.

ವಿವರ	ಮೈಸೂರು	ಬೆಂಗಳೂರು.
	ರೂ. ಆ. ಪೈ.	ರೂ. ಆ. ಪೈ.
ಕಡ್ಡೀ ಅಕ್ಕಿ ಪಲ್ಲ ೧ಕ್ಕೆ ..	೧೭-೦-೦	೧೨-೦-೦
ಕೆಂಬೂತಿ ಅಕ್ಕಿ ಅವ್ವಲ್ ..	೧೦-೧೨-೦	೧೨-೮-೦
ಡಿಪೋ ಅಕ್ಕಿ ದುಯಂ ..	೧೭-೦-೦	೧೦-೦-೦
ಜಾಪರಾಣಿ ಅಕ್ಕಿ	೧೨-೨-೦	೧೨-೧೨-೦
ಸಂಣಕ್ಕಿ ಅವ್ವಲ್	೧೩-೦-೦	೧೩-೦-೦
ಡಿಪೋ ಅಕ್ಕಿ ದುಯಂ ..	೧೨-೦-೦	೧೧-೦-೦
ತೊಗರಿಬೇಳೆ ಪಲ್ಲ ೧ಕ್ಕೆ	೧೧-೩-೦	೧೨-೮-೦
ಡಿಪೋ ದುಯಂ ತರಹ ..	೧೧-೦-೦	೧೧-೧೨-೦
ಹ್ಯರಾಗಿ ಪಲ್ಲ ೧ಕ್ಕೆ .	೪-೦-೦	೧೨॥೮-೦-೦
ಕಾರ್ರಾಗಿ	೩-೧೨-೦	೩॥೨೫-೦-೦
ಹುರುಳಿ ಪಲ್ಲ ೧ಕ್ಕೆ ..	೧೨-೧೧-೦	೯-೮-೦
ಬಿಳೀ ಅವರೆ	೮-೧೨-೦	೮-೧೨-೦
ಹೆಸರು	೧೧-೦-೦	೧೨-೨-೦
ಉದ್ದು	೧೨-೦-೦	೯-೧೨-೦
ಕಡಲೆ	೧೨-೦-೦	೧೦-೦-೦
ಎಳ್ಳು	೧೩-೮-೦	೧೨-೮-೦
ಹುರುಳಿ	೬-೦-೦	೬-೧೨-೦
ಸೀಗೇಕಾಯಿ ಮಣ ೧ಕ್ಕೆ ..	೧-೮-೦	೧-೧೨-೦
ಮೆಣಸಿನಕಾಯಿ	೩-೦-೦	೨-೧೦-೦
ದುಯಂ ತರಹ	೨-೧೨-೦	೨-೬-೦
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ	೪-೦-೦	ಮ ೧-೬-೦
ಸಣ್ಣ ಅಚ್ಚು ,, ..	೩-೧೨-೦	ಚಿ॥ ೧-೪-೦
ಒಳ್ಳೆಣ್ಣೆ ಮಣ ೧ಕ್ಕೆ ..	೨-೮-೦	೪-೧೦-೦
ಹರಳೆಣ್ಣೆ	೪-೪-೦	೬-೨-೦
ಕೊಬ್ಬರಿ ಪಲ್ಲ ೧ಕ್ಕೆ	೬-೮-೦	೯-೮-೦
ಉಪ್ಪು	೯-೪-೦	೯-೮-೦
ಸುಣ್ಣದಕಲ್ಲು ಮಣ ೧ಕ್ಕೆ	೧-೧೨-೦	೧-೧೧-೦
ಹಳೇ ಹುಣಿಸೇಹಣ್ಣು ,, ..	೧-೮-೦	೧-೬-೦
ತುಪ್ಪ	೧೩-೮-೦	೧೩-೯-೦
ನೀಲಿ ಮುಂದೆ ತಿಟ್ಟು ೧ಕ್ಕೆ	೪-೨-೩	೪-೩-೦
ತೆಂಗಿನಕಾಯಿ ೧೦೦ಕ್ಕೆ .	೬-೦-೦	೫-೧೦-೦
ಚಿನ್ನ (ತೋಲ)		
ಕೆಂಪು ..	೧೬-೧೫-೦	೧೬-೯-೦
ಪಸಿಮೆ ..	೧೬-೩-೦	೧೬-೧೫-೦
ಗಟ್ಟಿ ..	೨೬-೬-೦	೨೬-೮-೦

Mysore.—Printed and published for the Proprietor at the Wesleyan Mission Press.

4/5/93.

ವೃತ್ತಾಂತ ಪತ್ರಿಕೆ.

ಕ್ರಯ ೧ ಪಮು. ಕ್ರಯ ೧ ಪದ್ದು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೬ ಮೈಸೂರು ಸ್ ೧೮೯೩ ನೇ ಇಸವಿ ಮೆ ತಾರೀಖು ೧೧ ನೇ ಗುರುವಾರ. ಸಂಚಿಕೆ ೧೯

ನೋಟೀಸ್.

		ಕ್ರಯ	ಹಾಸಲು ಸಹಿತವಾಗಿ
Campbell's	ಕನ್ನಡ ವ್ಯಾಕರಣ ಸಾರ	೦ ೨ ೦	೦ ೨ ೬
Object Lessons.	ವಸ್ತು ಪಾಠಗಳು	೦ ೧ ೧	೦ ೧ ೬
Picture do	ಚಿತ್ರಗಳು ಸಹಿತವಾಗಿ	೦ ೨ ೦	೦ ೨ ೬

ಈ ಮೂರು ಪುಸ್ತಕಗಳು ಪ್ರೈಮರಿ ಮಠಗಳಲ್ಲಿ ಓದತಕ್ಕ ಪುಸ್ತಕಗಳು.

	ಕ್ರಯ	ಹಾಸಲು ಸಹಿತವಾಗಿ
ಸ್ತ್ರೀಯರು ಓದತಕ್ಕ ಪುಸ್ತಕ	೦ ೩ ೦	೦ ೩ ೬
ಗಣಿತ ವಿಷ್ಯವು ..	೦ ೪ ೦	೦ ೪ ೬
ಗಣಿತ ಮಗ್ಗಿಗಳು ..	೦ ೧ ೦	೦ ೧ ೬
ಸಂಸ್ಕೃತ ಕರ್ನಾಟಕ ಭಾಷಾಮಂಜರಿ	೦ ೨ ೦	೦ ೨ ೬
ಭೂಗೋಳ ಶಾಸ್ತ್ರ ಪ್ರಶ್ನೋತ್ತರ	೦ ೨ ೦	೦ ೨ ೬
ಇಂಗ್ಲೀಷೂ ಕನ್ನಡವೂ ಶಬ್ದಾವಳಿ ೧ನೇ ೨ನೇ ಭಾಗಗಳು	೦ ೧ ೦	೦ ೧ ೬
ಕಾವ್ಯಮಾಲೆ (Minor Poetical Anthology)	೦ ೮ ೦	೦ ೮ ೬
ಬಾಲವ್ಯಾಕರಣ ..	೦ ೩ ೦	೦ ೩ ೬
ಹಳಗನ್ನಡ ವ್ಯಾಕರಣ ಸೂತ್ರಗಳು	೦ ೬ ೦	೦ ೬ ೬
ಇಂಗ್ಲೀಷೂ ಕನ್ನಡವೂ ಸಂಭಾಷಣ ವಾಕ್ಯಗಳು	೦ ೧೦ ೦	೦ ೧೦ ೬
ಶಬ್ದಮಣಿ ದರ್ಪಣ ..	೧ ೦ ೦	೧ ೪ ೬
Kan. Eng. Pocket Dictionary	೧ ೪ ೦	೧ ೩ ೭
Eng. Kan. School Dictionary	೨ ೧೦ ೦	೨ ೧೨ ೬
ಬಸ್ಕೋ ಸ್ವಾಮಿ ..	೦ ೪ ೪	೦ ೪ ೬
ಆತ್ಮಿಕ ವಿಷ್ಯ ಯುದ್ಧ (Bunyan)	೦ ೧೨ ೦	೦ ೧೫ ೬
ಕೃಷಿಶಾಸ್ತ್ರ ಪದ್ಧತಿ ೧ ನೇ ಭಾಗ ೨ ಅಲ್ಲ ೫ನೇ ಭಾಗ	೦ ೧ ೬	೦ ೨ ೦
ಭಕ್ತಿಸಾರ ..	೦ ೧ ೦	೦ ೧ ೬
ಸತ್ಯ ಸಾಕ್ಷಾನಿ	೦ ೧ ೦	೦ ೧ ೬
ಕಾವ್ಯಪುಂಜ	೦ ೫ ೦	೦ ೫ ೬

A new Edition of the Geography suited for the Lower Secondary Examination is now ready.—Edited by Rev. H. Gulliford. Price 6 As.

ಮೇಲೆ ನಮೂದಿಸಿರುವ ಪುಸ್ತಕಗಳನ್ನು ಬೆಂಗಳೂರು ದಂಡಿನ ಪೋಸ್ಟಾಫೀಸ ಹತ್ತಿರವಿರುವ ಪುಸ್ತಕ ಶಾಲೆಯಲ್ಲಿ ಪಡೆಯ ಬಹುದು.

ನೋಟೀಸ್.

ಪುಸ್ತಕಗಳು	ಕ್ರಯ.
ಪ್ರಾಕ್ಕಾವ್ಯ ಮಾಲಿಕೆ	1—8—0
ಕನ್ನಡ ಇಂಗ್ಲೀಷು ನಿಘಂಟು 1 ನೇ ದೊಡ್ಡ ತರಹ	3—0—0
,, ,, 2 ನೇ ತರಹ	2—8—0
ಬಾಲಕರು ಓದುವ ಎರಡನೆ ಜ್ಞಾನೋಪದೇಶದ ಪ್ರಶ್ನೋತ್ತರಗಳು	0—1—0
ಸಭೆಯ ನಿಗಮಗಳನ್ನು ಕುರಿತವು	0—0—6
ಕಥಾ ಸಂಗ್ರಹ 1 ನೇ ಭಾಗದಿಂದ 3 ವರೆಗೆ	1—0—0
ಕಥಾ ಸಂಗ್ರಹ 4 ರಿಂದ 6 ನೇ ಭಾಗ ಹೊಸ ಛಾಪೆ	1—0—0
,, ,, ದೊಡ್ಡ ತರಹ	1—8—0
ಬೋಧಕಶಕ್ತಿ ದೀಪಿನಿ	0—4—0
ಸತ್ಯವೇದವನ್ನು ಕುರಿತು 2 ನೇ ಭಾಗ	0—4—0
ಪ್ರಸಂಗಿಯ ದರ್ಪಣ	0—6—0
ಇಂಗ್ಲೀಷು ಭಾಷೆಯಲ್ಲಿಯೂ, ಕನ್ನಡ ಭಾಷೆಯಲ್ಲಿಯೂ, ಶಬ್ದಗಳ ವಿಭಾಗಗಳನ್ನು ವಿವರಿಸುವ ನಿಘಂಟು	0—2—0
ಕನ್ನಡ ವ್ಯಾಕರಣ (ಇಂಗ್ಲೀಷಿನಲ್ಲಿ)	2—0—0
ಹಿಂದುಸ್ಥಾನಿ ವ್ಯಾಕರಣ	1—0—0
ಬಾಲದೀಪ ಸೋಪಾನವು	0—0—6
ಮತ ಕರ್ತರುಗಳ ಅಂತರಂಗವಿಚಾರ	0-12—0
ಕ್ರಿಸ್ತರ ಬೋಧನೆಗಳ ಸಾರಾಂಶವು	0-12—0

ಮೇಲೆ ನಮೂದಿಸಿರುವ ಪುಸ್ತಕಗಳನ್ನು ಅಪೇಕ್ಷಿಸುವವರು ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್ಸಿಗೆ ಬರೆದು ತರಿಸಿಕೊಳ್ಳಬಹುದು ಅಂಚೇ ಹಾಸಲು ಬೇರೆ ಕೊಡಬೇಕು

ವೆಸ್ಲಿಯನ್ ಮಿಷನ್ ಪ್ರೆಸ್,

ಮೈಸೂರು.

ವಿಶೇಷ ! ಓದಿನೋಡಿರಿ !! ಓದಿನೋಡಿರಿ !!!

ಅನುಶಾಸನೀಕಪರ್ವವು ಪೂರೈಸಿತು.

ಶ್ರೀಕೃಷ್ಣರಾಜ ವಾಣೀವಿಲಾಸವೆಂಬ ಮಹಾಭಾರತವು ನಮ್ಮ ಶ್ರೀಚಾಮುಂಡೇಶ್ವರಿ ಪ್ರೆಸ್ಸಿನಲ್ಲಿ ಪ್ರಿಂಟಾಗತಕ್ಕದ್ದು ಎಲ್ಲರಿಗೂ ವಿಶದವಾಗಿದೆಯಷ್ಟೆ. ಈಗ ಅನುಶಾಸನೀಕಪರ್ವವು ಚಾಮುಂಡೇಶ್ವರಿ ತಸ್ಪೇರಿನಿಂದಲೂ ಮಡಿಗೆ ಯೋಗ್ಯವಾದ ಕೆತ್ತಾನಿನ ಫುಲಿಬ್ಯಾಂಡಿನಿಂದ ತಯಾರಾಗಿರುತ್ತೆ ಸಭಾಪರ್ವ ವಿರಾಟಪರ್ವದ ಬುಕ್ಕುಗಳು ಮುಗಿದು ಹೋದುದರಿಂದ ಪುನಹಾ ಎರಡನೆ ಛಾಪೆಯು ಪ್ರಿಂಟಾಗಿದೆ. ಈ ಕೆಳಗೆ ಕಂಡ ಪುಸ್ತಕಗಳು ನಮ್ಮಲ್ಲಿ ಸ್ವಲ್ಪವೇ ಇರುವದ್ದರಿಂದ ಇಷ್ಟಯುಳ್ಳವರು ತರಿಸಿಕೊಳ್ಳಬಹುದು. ಅನುಶಾಸನೀಕ ಪರ್ವ ಕೆತ್ತಾನಿನ ಬೈಂಡ್ ೫—೧೨—೦ ಲೋವರ ಸೆಕಂಡರಿ ಪರೀಕ್ಷೆಯ ನೋಟ್ಸು ಕ್ರಯ ೮ ಆಣೆ

ಆದಿಪರ್ವ	..	ಕ್ರಯ	೫ ೦ ೦
ಸಭಾಪರ್ವ	..	,,	೧ ೪ ೦
ವಿರಾಟಪರ್ವ	..	,,	೧ ೦ ೦
ಭೀಷ್ಮಪರ್ವ	..	,,	೨ ೦ ೦
ದ್ರೋಣಪರ್ವ	..	,,	೨ ೮ ೦
ಶಲ್ಯಪರ್ವ	..	,,	೧ ೨ ೦
ಸೌಪ್ತಿಕಪರ್ವ	..	,,	೦ ೬ ೦
ಸ್ತ್ರೀಪರ್ವ	..	,,	೦ ೬ ೦
ಶಾಂತಿಪರ್ವ ರಾಜಧರ್ಮ	..	,,	೨ ೬ ೦
,, ಆಪದ್ಧರ್ಮ	..	,,	೦ ೮ ೦
,, ಮೋಕ್ಷಧರ್ಮ	..	,,	೨ ೬ ೦

ಭಗವದ್ಗೀತೆ ೮, ಯಯಾತಿರಾಯನಚರಿತ್ರ ೪ ಆ.

ಎಂ. ರಂಗಪ್ಪ ಅಂಡ್‌ಸ್.
ಬಳೇಪೇಟೆರೋಡ,
ಬೆಂಗಳೂರು

ಸ್ ೧೮೮೯ ರಲ್ಲಿ ಸ್ಥಾಪಿಸಲ್ಪಟ್ಟದ್ದು.

ಕೆನರಾ ಅಂಡ್ ಮೈಸೂರ ಟ್ರೇಡಿಂಗ ಕಂಪನ್ನೀ ಆಫೀಸ, ಮುಂಬಯಿ.

ಇವರು ತಯಾರಿಸಿರುವಂಥ—

ಹೈಮಧಾತ್ರೀತೈಲ.

ಕಳೆದ ಜನವರಿ ತಿಂಗಳೊಂದರಲ್ಲಿ ೪,೧೦೦ ಬಾಟ್ಲಿಗಳು ಖರ್ಚಾದವು. ಈ ತೈಲದ ಮಹತ್ವವನ್ನು ಕುರಿತು, ನಾವೀಗ ಹೆಚ್ಚಿಗೆ ವರ್ಣಿಸಲಾರೆವು—ಯಾಕಂದರೆ, ಯಾರು ಈ ತೈಲವನ್ನು ಉಪಯೋಗಿಸುತ್ತಾರೋ ಅವರಿಗೆ ಒಂದೆರಡು ದಿವಸಗಳಲ್ಲಿಯೇ ಇದರ ಅಪ್ರತಿಮವಾದ ಗುಣವು ಸಹಜವಾಗಿ ಅನುಭವಕ್ಕೆ ಬರುವದು. ಆದಾಗ್ಯೂ ಇದರ ಮುಖ್ಯವಾದ ಉಪಯೋಗವನ್ನು ತಿಳಿಸುವದು ನಮ್ಮ ಕರ್ತವ್ಯವಾಗಿರುತ್ತದೆ.

ಈ ನಮ್ಮ "ಹೈಮಧಾತ್ರೀ ತೈಲವನ್ನು" ಪ್ರತಿದಿನ ತಲೆಗೆ ಹಾಕಿಕೊಂಡರೆ ಮಿದುಳಿನಲ್ಲಿರುವ ಉಷ್ಣತೆಯನ್ನು ಪರಿಹರಿಸುವದಲ್ಲದೇ, ಕಣ್ಣಿಗೂ, ಮಿದುಳಿಗೂ ತಂಪುಕರಿಸಿ, ಚಿತ್ತಕ್ಕೆ ಶಾಂತತೆಯನ್ನುಂಟುಮಾಡುವದು. ಮತ್ತು ಕಣ್ಣುಗಳಿಗುಂಟಾಗುವ ಸಾಮಾನ್ಯವಾದ ವಿಕಾರಗಳನ್ನೆಲ್ಲ ಪರಿಹರಿಸುವದು. ದೃಷ್ಟಿಗೆ ತೀಕ್ಷ್ಣತೆಯುಂಟಾಗುವದು.

ಹೆಚ್ಚಾಗಿ ಓದತಕ್ಕವರಿಗೂ, ಒಂದೇ ಸಮನಾಗಿ ಕಣ್ಣಿಟ್ಟು ಕೆಲಸ ಮಾಡತಕ್ಕ ಕಸಬುಗಾರರಿಗೂ, ಕಣ್ಣುಗಳಲ್ಲಿ ನೀರು ಸುರಿಯುವವರಿಗೂ, ಉರಿಗಣ್ಣಿನವರಿಗೂ, ಚಿತ್ತವ್ಯಗ್ರವಾದವರಿಗೂ, ಅತ್ಯಂತ ಗುಣಕಾರಿಯಾಗಿರುವದು. ಈ ತೈಲದಲ್ಲಿರುವ ಇನ್ನೊಂದು ಅಪ್ರತಿಮವಾದ ಶಕ್ತಿಯೇನಂದರೆ—ಕೂದಲುಗಳನ್ನು ನಯವಾಗಿಯೂ, ಹೊಳೆಯುವಂತೆಯೂ, ಮಾಡುವದಲ್ಲದೇ ಬೆಳವಣಿಗೆಯನ್ನು ಹೆಚ್ಚಿಸುವದು. ಕೂದಲುಗಳ ಬೇರುಗಳನ್ನು ಘಟ್ಟಿಮಾಡಿ, ಅವು ಉದರಿಹೋಗದಂತೆ ಮಾಡುವದು.

ಪ್ರತಿಯೊಂದು ಬಾಟ್ಲಿಯೊಳಗೆ ೧೬ ತೊಲೆ ತೈಲವಿರುವದರಿಂದ ಒಬ್ಬನಿಗೆ ೨ ತಿಂಗಳು ಹಚ್ಚಿಕೊಳ್ಳಲಿಕ್ಕೆ ಸಾಕಾಗುವದು. ಬಡಬಗ್ಗರು ಸಹ ಕೊಂಡುಕೊಳ್ಳಲಿಕ್ಕೆ ಸುಕರವಾಗಿರಬೇಕೆಂಬದಕ್ಕಾಗಿ ಪ್ರತಿಯೊಂದು ಬಾಟ್ಲಿಗೆ ೧೦ ಆಣೆ ಕ್ರಯವಿಟ್ಟಿರುವೆವು. ೧೨ ಬಾಟ್ಲಿಗಳುಳ್ಳ ೧ ಪೆಟ್ಟಿಗೆಗೆ ೬॥ ರೂಪಾಯಿ. ಪ್ರತಿಯೊಬ್ಬ ಕುಟುಂಬಿಗನೂ, ಈ ತೈಲವನ್ನು ಉಪಯೋಗಿಸುವದು ಅವಶ್ಯವಾಗಿರುತ್ತದೆ. ಮಕ್ಕಳು ಮರಿಗಳಿಗೆ ಸಹ ಈ ತೈಲವು ಸುಖಾವಹವಾಗಿರುತ್ತದೆ.

ಈ ತೈಲ ಮತ್ತು ಈ ಕೆಳಗೆ ಬರೆಯುವಂಥ ಔಷಧಗಳು, ತ್ರೆಸ್ಸು, ಮುತ್ತು, ರತ್ನ, ಬಂಗಾರ, ಬೆಳ್ಳಿ ಮುಂತಾದ ಸಾಮಾನುಗಳನ್ನು ಪಡೆಯಬಿಚ್ಛಿಸುವವರು ಕೆಳಗಿನ ವಿಳಾಸಕ್ಕೆ ಬರೆಸುಕೊಳ್ಳಬೇಕು.

ಮ್ಯಾನೇಜರ್, ಕೆನರಾ ಅಂಡ ಮೈಸೂರು ಟ್ರೇಡಿಂಗ ಕಂಪನ್ನಿ ಆಫೀಸ, ಮಾರ್ಕೆಟ್ ಪೋಸ್ಟ್. ಮುಂಬಾಯಿ.

ಈ ತೈಲವನ್ನು ನಮ್ಮ ಹೊರತು ಇನ್ಯಾರೂ ಮಾಡಲಾರರು. ನಮ್ಮ ಹೆಸರಿನ ಗುರ್ತನ್ನು ನೋಡಿ ತೆಗೆದುಕೊಳ್ಳಬೇಕು. ಬೇರೇತರದ ಎಣ್ಣೆಗಳನ್ನು ಈ ಹೆಸರನ್ನಿಟ್ಟು ಮಾರುತ್ತಿದ್ದರೆ ಜಾಗ್ರತೆ ಪಡಿರಿ!

ಔಷಧಗಳು.	ರು. ಆ.	ತ್ರೆಸ್ಸುಗಳು.	ರು. ಆ.
ನಯನಾಮೃತಭಸ್ಮ ಬಾಟ್ಲಿ ೧ ಕ್ಕೆ	೧—೬	ಮಹಾರಾಣಿಯರಿಗೆ ಪದ್ದು	೨—೯
ನಯನಾಮೃತ ಕಾಡಿಗೆ	೧—೬	ಕಲ್ಕತ್ತಿನ ಲಾಂಗಕೋಟು	೫—೦
ಕರ್ಣಸ್ರಾವನಾಶಕ ಅಪ್ರತಿಮತೈಲ	೧—೦	ಡಿಟೊ ಅರ್ಧನೆರಿ	೪—೮
ದಂತಾಮೃತಕರ್ಪೂರತೈಲ	೧—೦	ಡಿಟೊ. ಷಾರ್ಟ್‌ಕೋಟು (ಇಂಗ್ಲೀಷ ಮಾದರಿ)	೪—೬
ಪ್ರವಾಳಭಸ್ಮವು	೨—೧೨	ದಕ್ಷಿಣದ ಕಸ್ತೂರಿಕೋಟು	೨—೮
ವಿವಿಧಜ್ವರಾಂತಕಪುಷ್ಟಿಕಯು	೧—೦	ಡಿಟೊ ಅರ್ಧನೆರಿ	೨—೪
ಬಾಲಸಂಜೀವಿನಿಗುಟಿಕೆ	೫—೮	ಪ್ಲಾನಲ್ ಕಮೀಜು	೧—೧೨
ಅಜೀರ್ಣಮಾತ್ರೆ	೦—೮	ಡಿಟೊ. ಬನೀಯನ್	೧—೪
ಸುಗಂಧಶಾಂತಕದಂತಚೂರ್ಣವು	೦—೪	ಬಿಳೇ (ಇಂಗ್ಲೀಷಮಾದರಿ) ಷರ್ಟ	೦—೧೨
ಕಜ್ಜಿದುಪಮುಲಾಮು	೦—೨		

ತನುಕರಣಾದ ಚಂದ್ರಕಾಂತ ಶಿಲೆಯ ಕನ್ನಡಕಗಳ ಕ್ರಯ ರೂ. ೧—೬॥—೫—೫॥. ಉತ್ತಮವಾದ "ಎಲ್ಗಿನ್" ಎಂಬ ಹೆಸರಿನ ಗಡಿಯಾರವು (೧ ವರುಷದ ಜವಾಬ್ದಾರಿಯುಳ್ಳದ್ದು) ಕ್ರಯ ರೂ. ೬.

ವೃತ್ತಾಂತ ಪತ್ರಿಕೆ.

ಚಂದಾ ನಿರ್ಣಯ.

		ರೂ ಆ ಪೈ.
ಸ್ಥಳದವರಿಗೆ ವರ್ಷ ೧ಕ್ಕೆ	...	೧—೦—೦
ಪರಸ್ಥಳದವರಿಗೆ ವರ್ಷ ೧ಕ್ಕೆ	...	೧—೪—೦
ಬಿಡಿ ಪತ್ರಿಕೆ ೧ಕ್ಕೆ	...	೦—೦—೪

ಈ ಪತ್ರಿಕೆಯು ಮೈಸೂರು ರಾಜಧಾನಿಯಲ್ಲಿ ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ, ಪ್ರಕಟಿಸಲ್ಪಡುವದು. ಬಡವರು ಮೊದಲುಗೊಂಡು ಸಮಸ್ತರಿಗೂ ಸುಲಭಸಾಧ್ಯವಾಗುವಂತೆ ಈ ಪತ್ರಿಕೆಗೆ ಇಷ್ಟು ಅಲ್ಪ ಮೌಲ್ಯವನ್ನು ನಿರ್ಣಯಿಸಿರುತ್ತೇವೆ ಈ ಪತ್ರಿಕೆಯನ್ನು ಅಪೇಕ್ಷಿಸುವವರು ಚಂದಾಹಣವನ್ನು ಮುಂಗಡವಾಗಿಯೇ ಕಳುಹಬೇಕು.

ಎಡಿಟರ್,

ವೃತ್ತಾಂತ ಪತ್ರಿಕೆ.

ಜಗದ್ಗುರುವಿನ ಚರಿತ್ರ ಸಂಗ್ರಹ.

THE LIFE
OF
The Lord Jesus Christ.

Selected incidents from the Gospels,

FREELY PARAPHRASED.

ನೂತನವಾಗಿ ರಚಿಸಲ್ಪಟ್ಟ ೬೬ ಪುಟಗಳುಳ್ಳ ಈ ಪುಸ್ತಕವನ್ನು ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್ಸಿಗೆ ಬರೆದು ತರಿಸಿಕೊಳ್ಳಬಹುದು.

ಕ್ರಯ (ಟಪ್ಪಾಲ್ ಹಾಸಲ್ ಅಲ್ಲದೆ)

೧೦೦ ಪ್ರತಿಗಳಿಗೆ	೫—೦—೦
ಬಿಡಿ ಪ್ರತಿಗೆ	೦—೧—೦

ಸುಮಾರು ೨೫ ಪ್ರತಿಗಳನ್ನು ಅರ್ಧ ಆಣೆ ಹಾಸಲಿನಿಂದ ಕಳುಹಿಸಬಹುದು.

ನೋಟೀಸ್.

ಮೈಸೂರು ದೇಶಸ್ಥರು ಮಹಾಯಾತ್ರೆಗೆ ಹೊರಟು ದಾರಿಯಲ್ಲಿ ದಳ್ಳಾಳಿಗಳಿಗೆ ಸಿಕ್ಕಿ ತ್ರಿಸ್ಥಳದಲ್ಲಿಯೂ ಪ್ರಶಸ್ತವಿಲ್ಲದ ಸ್ಥಳಗಳಲ್ಲಿ ಇಳಿದು ಹಣಕಾಸುಗಳಿಗೆ ಮೋಸಹೊಂದಿ ವಾಪಸು ಹೋಗುವದು ಕಂಡು ತಿಳಿಸುಪಡಿಸುವದೇನಂದರೆ:— ೩೦ ವರುಷದ ಲಾಗಾಯಿತು ಗಯಾದಲ್ಲಿ ವಾಸ ಮಾಡುತ್ತಿದ್ದು ಈಗ ೮ ವರುಷದಿಂದ ಹನುಮಾನ್‌ಘಾಟಿಯಲ್ಲಿ ವಾಸಮಾಡುವ ಜೋಧಾಯನ ಕಾಶೀನಾಥಶಾಸ್ತ್ರೀ ಮನೆಗೆ ತಿಳಿದಂಥ ಸಜ್ಜನರು ಬಂದು ಇಳಿದುಕೊಂಡು ಅವರವರ ಶಕ್ತ್ಯಾನುಸಾರ ತ್ರಿಸ್ಥಳದ ಯಾತ್ರೆ ಪೂರೈಸಿಕೊಂಡು ಸುಖದಲ್ಲಿ ಹಿಂದಕ್ಕೆ ಗಮನ ಮಾಡುತ್ತಾರೆ. ಪಂಚ ದ್ರಾವಿಡರ ಪೈಕಿ ಕರ್ನಾಟಕರು ವಿನಹಾ ಬಾಕಿ ಅಂದರೆ ಮಹಾರಾಷ್ಟ್ರ ದ್ರಾವಿಡ ತೆಲುಗು ದೇಶಸ್ಥರು ಅವರವರ ಜನರನ್ನೇ ಹುಡುಕಿಕೊಂಡು ಹೋಗುತ್ತಾರೆ. ಕರ್ನಾಟಕರು ಮಾತ್ರ ತಿಳುವಳಿಕೆ ಇಲ್ಲದೆ ಕಂಡಕಡೆಗಳಲ್ಲಿ ಇಳಿದುಕೊಂಡು ಅನುಮಾನಪಟ್ಟು ಹೋಗುವದು ಅವಮಾನವಲ್ಲವೇ! ನಮ್ಮ ದೇಶಸ್ಥರು ಇಳಿಯುವದಕ್ಕಾಗಿ ೫೦೦೦ರೂಪಾಯಿಗಳು ಮುಟ್ಟಿಸಿ ಉತ್ಕೃಷ್ಟವಾದ ಮನೆ ಹನುಮಾನ್‌ಘಾಟಿನಲ್ಲಿ ಕಟ್ಟಿ ಇರುತ್ತೇನೆ. ಸ್ನಾನಪಾನಗಳಿಗೆ ಗಂಗಾ ಸವಿಾಪವಾಗಿಯೂ ರಮಣೀಯವಾಗಿಯೂ ಇರುತ್ತೆ. ಇಚ್ಛೈಸಿ ಬರತಕ್ಕವರು ಮುಂಚಿತವಾಗಿ ಇಂಥಾ ದಿವಸ ಪ್ರಯಾಗಕ್ಕೆ ಬರುತ್ತೇವೆಂದು ತಿಳಿಸಿದಲ್ಲಿ ತ್ರಿಸ್ಥಳದ ಯಾತ್ರೆಯೂ ಶಕ್ತ್ಯಾನುಸಾರ ಮಾಡಿ ದೇಶಕ್ಕೆ ಪ್ರಯಾಣ ಮಾಡಿಸಲು ತಕ್ಕ ಏರ್ಪಾಡು ಮಾಡುತ್ತೇನೆ.

ಜೋಧಾಯನ ಕಾಶೀನಾಥಶಾಸ್ತ್ರಿ
ಹನುಮಾನ್‌ಘಾಟ್—ಬನಾರಸ್.

ವೃತ್ತಾಂತ ಪತ್ರಿಕೆ.

೧೯೦೯ನೇ ಇಸವಿ ಜನವರಿ ೧೧ ನೇ ಗುರುವಾರ

ನೋಟೀಸ್.

ಮೈಸೂರು ಗವರ್ನ್‌ಮೆಂಟ್ ಎಕ್ಸೈಸ್ ಇಲಾಖೆ.

೧ ಬೆಂಗಳೂರು ಷಹರಿನಲ್ಲಿಯೂ, ಬೆಂಗಳೂರು ಡಿಸ್ಟ್ರಿಕ್ಟ್ ಹೊರತು ಕಡಮೆ ಎಲ್ಲಾ ಡಿಸ್ಟ್ರಿಕ್ಟುಗಳಲ್ಲಿಯೂ, ೧೯೦೯ ನೇ ಇಸವಿ ಜುಲೈ ಗುರ್ರೆ ಲಾಗಾಯಿತು ೧೯೧೨ ನೇ ಇಸವಿ ಜೂನ್ ೩೦ ನೇ ತಾರೀಖಿಗೆ ಅಂತ್ಯವಾಗುವ ನಾಲ್ಕು ಸಾಲುಗಳಲ್ಲಿ ಬಾಂಡೆಡ್ ಕೋಠಿಗಳನ್ನು ಸ್ಥಾಪಿಸಿ, ಆ ಕೋಠಿಗಳಿಗೆ ಬೆಂಗಳೂರು ಬಳಿಯಿರುವ ಸರ್ಕಾರದ ಸೆಂಟ್ರಲ್ ಡಿಸ್ಟಿಲರಿಯಿಂದಾ ಷರಾಬನ್ನು ಬಗೆರ ಡ್ಯೂಟಿ ಯಿಾ ಒಗರು ಹಾಸಲೆ ಸಿಕಿ ತೆಗದುಕೊಂಡು ಹೋಗಿ ಆಯಾಯ ಕೋಠಿಗೆ ದಾಖಲಾಗಿರುವ ಷರಾಬು ಬಿಕರೀ ಫಿರ್ಕಾಗಳ ಗುತ್ತಿಗೇದಾರರಿಗೂ, ವ ಸ್ವತಂತ್ರವಾದ ಅಂಗಡಿ ಕಾರರಿಗೂ ಸಂಬಳಾಯಿ ಮಾಡುವ ಹಕ್ಕನ್ನ ವಹಿಯಲಿಕ್ಕೆ ಅಪೇಕ್ಷಿಸುವ ಜನರು ದರಖಾಸ್ತುಗಳನ್ನು ಕೊಡಬಹುದು.

೨ ದರಖಾಸ್ತು ದಾರರು ಸದರಿ ಡಿಸ್ಟಿಲರಿಯಿಂದ ಬಿಡ್ತ್ಯಪ್ಪದುವ ಷರಾಬಿನ ದರ ಗ್ಯಾಲನ್ ೧ಕ್ಕೆ ಅತ್ಯಂತ ಕಮ್ಮಿಯಾದ ಯಾವಾದರಂತೆ ಈ ಕಂಟ್ರಾಕ್ಟನ್ನ ಮಾಡಿಕೊಳ್ಳಲು ಅಪೇಕ್ಷಿಸುವರೋ ಅದನ್ನು ಅವರ ದರಖಾಸ್ತಿನಲ್ಲಿ ಉದಹರಿಸಬೇಕು. ಬೆಂಗಳೂರು ಷಹರಿಗಾಗಿ ಒಂದು ದರವನ್ನೂ, ಬೆಂಗಳೂರು ಡಿಸ್ಟ್ರಿಕ್ಟ್ ಹೊರತು ಕಡಮೆ ಯಲ್ಲಾ ಡಿಸ್ಟ್ರಿಕ್ಟ್‌ಗಳ ಕೋಠಿಗಳಿಗಾಗಿ ಮತ್ತೊಂದು ದರವನ್ನೂ, ವಿವರಿಸಬೇಕು. ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಷರಾಬುಬಿಕರೀ ಫಿರ್ಕಾಗಳ ಗುತ್ತಿಗೇದಾರರು ಅವರ ಸ್ವಂತಖರ್ಚಿನಿಂದ ಷರಾಬನ್ನು ಡಿಸ್ಟಿಲರಿಯಿಂದಲೇ ತೆಗೆದುಕೊಂಡು ಹೋಗುವರು. ಹಾಲಿ ಕಂಟ್ರಾಕ್ಟದಾರರಿಗೆ ಬೆಂಗಳೂರು ಷಹರಿಗೆ ದರ ಗ್ಯಾಲನ್ ೧ಕ್ಕೆ ಹತ್ತು ಪೈಗಳ ಪ್ರಕಾರವೂ ಬೆಂಗಳೂರು ಡಿಸ್ಟ್ರಿಕ್ಟ್ ಹೊರತು ಕಡಮೆ ಯುಲ್ಲಾ ಡಿಸ್ಟ್ರಿಕ್ಟ್‌ಗಳಿಗೆ ಮೂರು ಆಣೆ ಪ್ರಕಾರವೂ ರುಸುಂ ಸಲ್ಲುತ್ತೆ.

೩ ಬೆಂಗಳೂರು ಷಹರು ಬಗ್ಗೆ ಕೊಡುವ ದರಖಾಸ್ತು ಸೊಡನೆ ೧೦೦ ರೂಪಾಯಿ ಹೊರಗಿನ ಕೋಠಿಗಳ ಬಗ್ಗೆ ೫೦೦ ರೂಪಾಯಿ ಠೇವಣಿಯನ್ನು ಕಳುಹಿಸಿಕೊಡಬೇಕು. ಪ್ರತಿ ದರಖಾಸ್ತನ್ನು ಬೆಂಗಳೂರಿನಲ್ಲಿ ಎಕ್ಸೈಸ್ ಕಮಿಷನರು ಸಾಹೇಬರವರಿಗೆ ೧೯೦೯ನೇ ಇಸವಿ ಮೇ ೧೯ನೇ ತಾರೀಖಿನ ಬೃಹಸ್ಪತಿವಾರದ ಮಧ್ಯಾಹ್ನಕ್ಕೆ ಮುಂಚೆಯೇ ಬಂದು ಮುಟ್ಟುವಂತೆ ಕಳುಹಿಸಿಕೊಡಬೇಕು. ಆ ತಾರೀಖಿನ ತರುವಾಯ ಬರುವ ದರಖಾಸ್ತುಗಳು ಅಂಗೀಕರಿಸಲ್ಪಡುವದಿಲ್ಲವು. ದರಖಾಸ್ತುಗಳು, ಹಾಜರಿರುವಂಥಾ ದರಖಾಸ್ತು ದಾರರ ಸಮಕ್ಷಮ ಸದರಿ ಮೇ ೧೯ನೇ ತಾರೀಖಿನ ಮಧ್ಯಾಹ್ನ ೧-೨ ಘಂಟೆಗೆ ಎಕ್ಸೈಸ್ ಕಮಿಷನರ್ ಸಾಹೇಬರವರಿಂದ ಒಡೆಯಲ್ಪಡುವವು.

೪ ಕಡಮೆ ತಪಸೀಲುಗಳು ಅಂದರೆ ಕೋಠಿಗಳ ಸ್ಥಳಗಳು, ಬಿಡ್ತ್ಯ ತಕ್ಕ ಷರಾಬಿನ ಮೊತ್ತ, ವೇರ್‌ಹೌಸ್ ಕಂಟ್ರಾಕ್ಟ್ ಮುಚ್ಚಳಿಕೆ ಷರತ್ತುಗಳು, ಮುಂತಾದ ವಿಷಯಗಳಿಗಾಗಿ ೧೯೦೯ನೇ ಇಸವಿ ಏಪ್ರಿಲ್ ೮ನೇ ತಾರೀಖಿನ ಮೈಸೂರು ಗೆಜೆಟ್ಟನ್ನು ಆ ತರುವಾಯ ಪ್ರಕಟಿಸುವ ಗೆಜೇಟುಗಳನ್ನೂ ನೋಡಬೇಕು. ಅಥವ ಬೆಂಗಳೂರು ಕೋಠಿಯಲ್ಲಿರುವ ಎಕ್ಸೈಸ್ ಕಮಿಷನರ್ ಆಫೀಸಿಗೆ ರೂಬರೂ ಬಂದು ತಿಳಿದುಕೊಳ್ಳಬಹುದು.

೧೯೦೯ ನೇ ಇಸವಿ ಮೆ ತಾ|| ೨	L. Ricketts, Excise Commissioner in Mysore

ರೇಪೆ ಪೇಯರುಗಳ ವಿಾಟಿಂಗ್.

ಕಳೆದ ತಿಂಗಳಿನಲ್ಲಿ ರೇಟೆ ಪೇಯರುಗಳ ಅಸೋಸಿಯೇಷನಿನ ಜನರಲ್ ವಿಾಟಿಂಗ್ ನಡೆದದ್ದನ್ನು, ಇದುವರಿಗೂ ಈ ಸಂಘಕ್ಕೆ ಕಾರ್ಯದರ್ಶಿಗಳಾಗಿದ್ದ ಮ|| ಅಡ್ವೊಕೇಟ್ ಕೃಷ್ಣರಾಯರವರೂ, ಮ|| ಪ್ಲೀಡರ್ ಸುಬ್ರಾಯರವರೂ ಇವರಿಬ್ಬರೂ ಕೆಲಸದಗಲಿಕೆಗಳಿಂದ ಈ ಸಂಘದ ಕಾರ್ಯದರ್ಶಿತ್ವಕ್ಕೆ ರಾಜೀನಾಮೆ ಕೊಟ್ಟದ್ದನ್ನೂ, ಅವರಿಬ್ಬರಿಗೆ ಬದಲಾಗಿ ಅಡ್ವೊಕೇಟರಾದ ಮ|| ಗ. ಚಂದ್ರಶೇಖರಯ್ಯ ಬಿ.ಎ., ಬಿ.ಎಲ್ ರವರೂ ಮತ್ತು ಮ|| ಎ., ನರಸಿಂಹಯ್ಯಂಗಾರ್ಯರವರೂ ಕಾರ್ಯದರ್ಶಿಗಳಾಗಿ ನೇಮಿಸಲ್ಪಟ್ಟದ್ದನ್ನೂ ಸಭೆಯ ಕಾರ್ಯಗಳು ನಿರ್ವಿಘ್ನವಾಗಿಯೂ, ಸರ್ವ ಸಮರ್ಪಕವಾಗಿಯೂ ನಡೆಯುವ ವಕೀಲ್ಯೋಸ್ಕರ ಮೊದಲಿನಿಂದಲೂ ಈ ಸಭೆಯ ಪುರೋಭಿವೃದ್ಧಿಗೋಸ್ಕರ ಶ್ರಮಪಡುತ್ತಿದ್ದ ಮ|| ಎ. ಸಿ. ರಂಗಯ್ಯಂಗಾರ್ ಬಿ. ಎ. ರವರನ್ನು ಪುನಃ ಪ್ರೆಸಿಡೆಂಟರಾಗಿಯೂ, ನಾವು ಪೂರ್ವದಲ್ಲೇ ತಿಳಿಸಿದ ಪ್ರಜಾರಂಜಕ ಬುದ್ಧಿಯುಳ್ಳ ದೊಡ್ಡ ಮನುಷ್ಯರನ್ನ ಎಕ್ಸಿಕ್ಯೂಟಿವ್ ಕಮಿಟಿಯ ಮೆಂಬರುಗಳಾಗಿಯೂ ಮಾಡಿದ್ದರಷ್ಟೆ. ಆ ಮಿಾಟಿಂಗಿನಲ್ಲಿ ಪ್ರತಿ ತಿಂಗಳು ಮೊದಲನೇ ಶನಿವಾರದ ದಿವಸ ಎಕ್ಸಿಕ್ಯೂಟಿವ್ ಕಮಿಟೀ ಮಿಾಟಿಂಗ್‌ನಡೆಸಿ ಈ ಪುರವಾಸಿಗಳಿಗುಂಟಾಗತಕ್ಕ ನ್ಯೂನಾತಿರಿಕ್ತಗಳನ್ನು ಬೋರ್ಡಿಗೆ ತಿಳಿಸಬೇಕೆಂದು ವಿಧಾಯಕವಾಗಿತ್ತು. ಈ ರೆಜಲ್ಯೂಷನಿಗೆ ಅನುಸಾರವಾಗಿ ಕಳೆದ ಶನಿವಾರ ಎಕ್ಸಿಕ್ಯೂಟಿವ್ ಕಮಿಟಿಯ ಮಿಾಟಿಂಗ್ ನಡೆಯಿತು. ಇಪ್ಪತ್ತು ಜನ ಕಮಿಟೀ ಮೆಂಬರುಗಳ ಪೈಕಿ ಹದಿಮೂರು ಜನಾ ಮಿಾಟಿಂಗಿಗೆ ಹಾಜರಾಗಿದ್ದರು. ಈ ಸಂಘದ ಪ್ರೆಸಿಡೆಂಟ್ರಾದ ಮ|| ರಂಗಯ್ಯಂಗಾರ್ಯರವರು ಅಗ್ರಾಸನವನ್ನು ವಹಿಸಿದ್ದರು. ಕೂಡಲೆ ಈ ಸಂಘಕ್ಕೆ ಬಿಲ್ಲು ಜವಾನನಿರಬೇಕೆಂಬದಾಗಿಯೂ, ಪ್ರಿಂಟಿಂಗ್ ಮತ್ತು ಸರ್ಕ್ಯುಲರ್ ಮೊದಲಾದ ಖರ್ಚಿಗೆ ಸ್ವಲ್ಪ ದ್ರವ್ಯ ಬೇಕಾಗುತ್ತದೆಂಬದಾಗಿಯೂ ಚರ್ಚೆ ನಡೆಯಿತು. ತರುವಾಯ ಈ ಬಾಬತು ಖರ್ಚಿಗೋಸ್ಕರ ಈ ಸಂಘದ ಮೆಂಬರುಗಳೆಲ್ಲರೂ ವರುಷಕ್ಕೆ ೪ ಆಣೆ ಚಂದಾವನ್ನು ಕೊಡಬೇಕೆಂಬದಾಗಿಯೂ, ಇದಕ್ಕೋಸ್ಕರ ಒಂದು ಚಂದಾಪುಸ್ತಕವನ್ನು ಇಡಬೇಕೆಂಬದಾಗಿಯೂ ನಿಷ್ಕರ್ಷೆಯಾಯಿತು. ಈ ಎಕ್ಸಿಕ್ಯೂಟಿವ್ ಕಮಿಟಿಗೆ ಸೇರಿದ್ದ ಮ|| ಕೆ. ನಾರಾಯಣಯ್ಯಂಗಾರ್ಯರವರು ತಮ್ಮ ಕೆಲಸದ ಗಲಿಬಿಲಿಯು ಉದ್ದಿಷ್ಟ ಎಕ್ಸಿಕ್ಯೂಟಿವ್ ಕಮಿಟೀ ಮೆಂಬರಾಗಿರುವದಕ್ಕೆ ಅಸಿವಾರ್ಯವಾಗುವದರಿಂದ ಕೆಲಸಕ್ಕೆ ರಾಜೀನಾಮೆಯನ್ನು ಕೊಟ್ಟರು. ಅದಕ್ಕೆ ಮ|| ಬಿ. ಸಿ. ಶ್ರೀನಿವಾಸಯ್ಯಂಗಾರ್ಯರವರನ್ನು ಮತ್ತು ಈ ಸಂಘಕ್ಕೆ ಆಡಿಷನಲ್ ಮೆಂಬರಾಗಿ ಮ|| ಎ. ಸುಬ್ರಾಯ ಆಸಿನವರನ್ನೂ ನೇಮಕಮಾಡಿದರು. ಈ ಸಂಘದ ಪ್ರೊಸೀಡಿಂಗ್ಸಲ್ಲಿ ಕನ್ನಡದಲ್ಲೇ ಬರೆಯಬೇಕೆಂಬದಾಗಿ ವಿಧಾಯಕವಾಯಿತು. ಕಳೆದ ಜನರಲ್ ಮಿಾಟಿಂಗಿನಲ್ಲಿ ಆದ ರೆಜಲ್ಯೂಷನ್‌ಗಳಲ್ಲಿ ಬೋರ್ಡಿಗೆ ಸಂಬಂಧಪಟ್ಟ ವಿಷಯಗಳನ್ನು ಬೋರ್ಡ್ ಪ್ರೆಸಿಡೆಂಟರವರಾದ ಮ|| ಎ. ರಂಗಸ್ವಾಮಯ್ಯಂಗಾರ್ಯರವರಿಗೆ ಕಳುಹಿಸಲ್ಪಟ್ಟವು. ಅವರು ಆ ರೆಜಲ್ಯೂಷನ್‌ಗಳಲ್ಲಿ ಕಂಡ ವಿಷಯಗಳನ್ನು ಕೂಡಲೆ ಜಾರಿಗೆ ತರಬೇಕೆಂದು ವೈಸ್ ಪ್ರೆಸಿಡೆಂಟರವರಿಗೆ ಎಂದರೆ ರೆಜಲ್ಯೂಷನ್‌ಗಳನ್ನು ಕಳುಹಿಸಿದ್ದಲ್ಲದೆ ಈ ಸಂಗತಿಯ ವಿಷಯದಲ್ಲಿ ಮಾಡಿಂತಕ್ಕ ಏರ್ಪಾಟನ್ನು ಕುರಿತು, ಈ ಸಂಘದ ಕಾರ್ಯದರ್ಶಿಗಳಿಗೆ ಲೇಖನವನ್ನು ಬರೆದಿದ್ದರು. ಈ ಲೇಖನವು ಮಿಾಟಿಂಗಿನಲ್ಲಿ ಓದಲ್ಪಟ್ಟ ರೇಟ್ ಪೇಯರುಗಳ ತಿಳುವಳಿಕೆಯು ಬಗ್ಗೆ ಪ್ರಕಟಿಸಬೇಕೆಂಬದಾಗಿಯೂ ವಿಧಾಯಕವಾಯಿತು. ಈ ಸಂಘದ ತಿಳುವಳಿಕೆಯ ಬಗ್ಗೆ ಪ್ರತಿ ತಿಂಗಳಲ್ಲಿಯೂ ನಡೆಯುತಕ್ಕ ಬೋರ್ಡ್ ಮಿಾಟಿಂಗ್ ಪ್ರೊಸೀಡಿಂಗ್ಸಿನ ಕಾಪಿಯನ್ನು ಈ ಸಂಘಕ್ಕೆ ಸರಬರಾಜು ಮಾಡಬೇಕೆಂದು ಪ್ರೆಸಿಡೆಂಟ್ರವರಿಗೆ ಬರೆಯುವಂತೆ ರೆಜಲ್ಯೂಷನ್ ಆಯಿತು. ಬಿಲ್ಲು ಮೆಂಬರುಗಳು ಸಿಟಿ ಪಾಕತಕ್ಕ ವಿಷಯದಲ್ಲಿ ಕೆಲವು ಏರ್ಪಾಡುಗಳನ್ನು ಸೂಚಿಸಿದರು. ಅದರ ಮೇಲೆ ಈ ವಿಷಯದಲ್ಲಿ ಈಗ ಜಾರಿಯಲ್ಲಿ ಇರತಕ್ಕ ಏರ್ಪಾಡುಗಳನ್ನು ಬಯಲಿಟ್ಟು ತಿಳಿಸಬೇಕೆಂಬದಾಗಿ ಸಿವಿಲ್ ಸರ್ಜನ್ನರವರಿಗೆ ಒಂದು ಲೇಖನವನ್ನು ಬರೆದು ಅವರ ಜವಾಬು ಬಂದಮೇಲೆ ಈ ವಿಷಯದಲ್ಲಿ ಕಮಿಟಿಯವರು ಅವಶ್ಯಕವಾದ ಏರ್ಪಾಡುಗಳನ್ನು ಬೋರ್ಡಿನ ಪ್ರೆಸಿಡೆಂಟ್ರವರಿಗೆ ಬರೆಯಬಹುದೆಂದು ನಿಷ್ಕರ್ಷೆಯಾಯಿತು. ಬೀದಿಗಳಲ್ಲಿರತಕ್ಕ ಲಾಂದ್ರಗಳನ್ನು ಹಚ್ಚಿಸುವ ವಿಷಯದಲ್ಲಿ ಈಗ ಇರತಕ್ಕ ಏರ್ಪಾಡು ಸಮರ್ಪಕವಾಗಿ ಇಲ್ಲವೆಂದು ಚರ್ಚೆಯಾಯಿತು. ಈ ಚರ್ಚೆಯಲ್ಲಿ ಅನೇಕ ಲಾಂದ್ರಗಳಲ್ಲಿ ಚಿಮ್ನಿಗಳನ್ನೂ ಲಾಂದ್ರಗಳನ್ನೂ ನಿರ್ಮಲವಾಗಿರುವಂತೆ ತೊಳೆಯುವದಿಲ್ಲವೆಂಬದಾಗಿಯೂ, ಬತ್ತಿಗಳಿಗೆ ಪ್ರಾರಂಭದಲ್ಲೇ ಹಾಕದೆ ಇರುವದರಿಂದ ಸ್ವಲ್ಪ ಹೊತ್ತಿನಲ್ಲಿ ಎಣ್ಣೆ ಬತ್ತೀ ಕಾದು ಬೇಗ್ಗೆ ಆರಿಹೋಗುವದಲ್ಲದೆ ದೊಡ್ಡ ಹೊಗೆಯೊಡನೆ ಲಾಂದ್ರ, ಚಿಮ್ನಿಗಳನ್ನು ಕೆಡಿಸಿ ಹಾಳು, ಆ ದೀಪಗಳಿಂದ ಪ್ರಯೋಜನವಿಲ್ಲದ ಹಾಗೆ ಮಾಡುತ್ತಾರೆಂಬದಾಗಿಯೂ, ಕೆಲವು ಕೆಲವು ಲಾಂದ್ರಗಳಲ್ಲಿ, ಕೆಲವು ಸ್ಥಳಗಳಲ್ಲಿ ದೀಪ ಬಹಳ ಸೂಕ್ಷ್ಮವಾಗಿ ಕಾಣುತ್ತದೆಯೋ ಹೊರತು ಆ ದೀಪದ ಬೆಳಕಿನಿಂದ ರಸ್ತೆಯೂ ಕೂಡ ಕಾಣುವದಿಲ್ಲವೆಂಬದಾಗಿಯೂ, ಜನಗಳು ಅನೇಕರು ತಿರುಗತಕ್ಕ ಸ್ಥಳಗಳಲ್ಲಿ ದೀಪದ ಕಂಭಗಳೇ ಇಲ್ಲವೆಂಬದಾಗಿಯೂ, ಕೃಷ್ಣಪಕ್ಷದಲ್ಲಿ ದೀಪಗಳು ರಾತ್ರಿಯೆಲ್ಲಾ ಉರಿಯುವಂತೆ ಮಾಡಬೇಕಾದ್ದಲ್ಲದೆ ಮೇಲೆ ಹೇಳಿದ ನ್ಯೂನತೆಗಳನ್ನು ಕೂಡ ಪರಿಹಾರ ಮಾಡಬೇಕೆಂದು ಬೋರ್ಡಿನ ಪ್ರೆಸಿಡೆಂಟ್ರವರಿಗೆ ಬರೆಯಬೇಕೆಂಬದಾಗಿಯೂ ವಿಧಾಯಕವಾಯಿತು. ಬಿಷ್ಕರ್ ಮೊದಲಿಯಲ್ಲಿ ದೀವಾಂಗರವರ ಬೀದಿಯಲ್ಲಿ ರತಕ್ಕ ಕೊಳವು ಜನಗಳಿಗೆ ಅಪಾಯಕರವಾಗಿರುವದರಿಂದ ಅದನ್ನು ಆದಷ್ಟು ಜಾಗ್ರತೆಯಿಂದ ಮುಚ್ಚಿಸಬೇಕೆಂದು ಪ್ರೆಸಿಡೆಂಟ್ರವರಿಗೆ ತಿಳಿಸಬೇಕೆಂಬದಾಗಿ ತೀರ್ಮಾನವಾಯಿತು. ಕಳೆದ ವಿಾಟಿಂಗಿನಲ್ಲಿ ಮಾಡಿದ ರೆಜಲ್ಯೂಷನ್‌ಗಳನ್ನು ಕೂಡಲೆ ಜಾರಿಗೆ ತರುವಂತೆ ಏರ್ಪಾಡು ಮಾಡಿದ್ದಕ್ಕೋಸ್ಕರ ಪ್ರೆಸಿಡೆಂಟ್ರವರಿಗೆ ಈ ಸಂಘದವರ ವಂದನೆಯನ್ನು ತಿಳಿಸಬೇಕೆಂಬದಾಗಿಯೂ, ಈ ಕಮಿಟಿಯಲ್ಲಿ ಅಗ್ರಾಸನವನ್ನು ವಹಿಸಿ ಕೆಲಸಗಳನ್ನು ಸರಿಯಾಗಿ ಜರುಗಿಸಿದ್ದಕ್ಕೋಸ್ಕರ ಮ|| ಎ. ಸಿ. ರಂಗಯ್ಯಂಗಾರ್ಯರವರು ಕಮಿಟಿಯವರ ವಂದನೆಯನ್ನು ಸ್ವೀಕರಿಸಬೇಕೆಂಬದಾಗಿಯೂ ಹೇಳಿ ಆ ದಿವಸದ ವಿಾಟಿಂಗನ್ನು ಬರಖಾಸ್ತು ಮಾಡಿದರು. ಈ ಸಂಘವು ಬಹುದಿವಸಗಳಿಂದ ನಿದ್ರೆಯನ್ನು ಮಾಡುತ್ತಿತ್ತು. ಈಗ ಎಚ್ಚರವನ್ನು ಹೊಂದಿದೆ. ಈಗ ನೇಮಕವಾಗಿರತಕ್ಕ ಕಾರ್ಯದರ್ಶಿಗಳೂ, ಪ್ರೆಸಿಡೆಂಟರೂ, ಅನ್ಯಾದೃಶವಾದ ಸ್ವಾರ್ಥತ್ಯಾಗದಿಂದ ಪುರವಾಸಿಗಳ ಯೋಗಕ್ಷೇಮ ಚಿಂತೆಯನ್ನು ಮಾಡುತ್ತಿದ್ದಾರೆ. ಎಕ್ಸಿಕ್ಯೂಟಿವ್ ಕಮಿಟಿ ಮೆಂಬರುಗಳೂ ಕೂಡ ಅವರಂತೆಯೇ ಪುರದ ಯೋಗಕ್ಷೇಮಾಭಿಮಾನಿಗಳಾಗಿದ್ದಾರೆ. ಬೋರ್ಡ್ ಪ್ರೆಸಿಡೆಂಟ್ರವರಾದ ಮ|| ರಂಗಸ್ವಾಮಯ್ಯಂಗಾರ್ಯರವರೂ ಈ ಸಭೆಯನ್ನು ಪುರೋಭಿವೃದ್ಧಿಗ ತರಬೇಕೆಂದು ಛಲವು ಮಾಡತಕ್ಕ, ರೆಜಲ್ಯೂಷನ್‌ಗಳಿಗ ಪುರಸ್ಕಾರವನ್ನು ಸಾವಕಾಶ ಮಾಡದೆ ಕಳ್ಳಿಸುತ್ತಲಿದ್ದಾರೆ. ಇವರೆಲ್ಲರಿಗೂ ಈ ಉತ್ಸಾಹವೂ ಪ್ರಜಾರಂಜಕ ಬುದ್ಧಿಯೂ ಇದೇ ರೀತಿಯಲ್ಲಿರಬೇಕೆಂಬದಾಗಿಯೂ ಇನ್ನೂ ವೃದ್ಧಿಯಾಗಬೇಕೆಂಬದಾಗಿಯೂ, ಎಲ್ಲರೂ ತಮ್ಮ ಪ್ರಾರ್ಥಿಸುವ ವರ್ತಮಾನದ ಈ ಪುರವಾಸಿಗಳ ಯೋಗಕ್ಷೇಮ ಚಿಂತೆಯಿಂದ ಈ ಪುರವಾಸಿಗಳ ಕೃತಜ್ಞತೆಗೆ ಪಾತ್ರರಾಗಬೇಕೆಂಬದಾಗಿಯೂ ನಾವು ಕೋರುತ್ತೇವೆ.

ಒಳದೇಶ ವೃತ್ತಾಂತಗಳು.

(ಮೈಸೂರು)

ಶ್ರೀಮನ್ ಮಹಾರಾಜರವರು ಇದೇ ತಿಂಗಳು ೨೪—೨೫ ನೇ ತಾರೀಖಿಗೆ ರಾಜಧಾನಿಗೆ ದಯಮಾಡಬಹುದೆಂದು ವರ್ತಮಾನವಿದೆ

ಕಳೆದ ಭಾನುವಾರ ಜಾನಿಸಿದ ಸಭಾಪತಿಗಳು ಬೆಂಗಳೂರಿಗೆ ದಯಮಾಡಿದರು ಮೂರನೇದಿನ ಆದರ ಆಗಮನ ಸೂಚಕವಾದ ೧೧ ತೋಪುಗಳು ಹಾರಿಸಲ್ಪಟ್ಟವು ಈ ಸಭಾಪತಿಗಳು ಇಲ್ಲಿಗೂ ಬರಬಹುದೆಂದು ವರ್ತಮಾನವಿದೆ

ಶ್ರೀಮನ್ ಮಹಾರಾಜರವರು ಇದೇತಿಂಗಳು ೧೫ ನೇ ತಾರೀಖಿನ ದಿವಸ ಸಾಯಂಕಾಲ ೫ ಘಂಟೆಗೆ ಫರ್ನ್‌ಹಿಲ್ ಎಂಬ ಬಂಗಲೆಯಲ್ಲಿ ಅನೇಕ ಮಂದಿ ಯೂರೋಪಿಯನ್ ಸರ್ದಾರುಗಳಿಗೆ ದಿತಣವನ್ನು ಮಾಡಿಸುವದಾಗಿ ಗೊತ್ತು ಮಾಡಿರುವಂತೆ ಕೇಳುತ್ತೇವೆ

ಕಳೆದ ವಾರದಲ್ಲಿ ೨—೩ ಪದ ಮಳೆಯಾಯಿತು ದಿನದಿನ ಸಾಯಂಕಾಲಗಳಲ್ಲಿ ಸ್ವಲ್ಪ ಹನಿಗಳು ಬೀಳುತ್ತಲೇ ಇವೆ ಕೆರೆ ಕಟ್ಟೆಗಳಿಗೆ ಸುಮಾರಾಗಿ ನೀರು ಬಂದಿದೆ ಜನರು ಹೊಸ ನೀರನ್ನು ಕುಡಿಯುವದಕ್ಕೆ ಬದಲಾಗಿ ಅದನ್ನು ಕಾಯಿಸಿ ಕುಡಿಯುವದು ಆರೋಗ್ಯ ಕರವಾದದ್ದು

ನರಸಿಂಹಾಚಾರ್ಯರೆಂಬ ಮಧ್ವನಸ್ಥರು ಜರ್ಮನಿಗೆ ಹೋಗಿ ಅಲ್ಲಿ ಪ್ರಾಣಿಗಳ ಚಿಕಿತ್ಸೆಯನ್ನು ಮಾಡುವ ವಿದ್ಯೆ ಕಲಿತು ಅಲ್ಲಿ ಪ್ಯಾಸ್ ಮಾಡಿ ಬಂದಿರುತ್ತಾರೆ ಇವರಿಗೆ ಸ್ವಲ್ಪ ದಿವಸಗಳಲ್ಲೇ ಶ್ರೀಮನ್ ಮಹಾರಾಜರವರ ಖಾಸ್ ಬಂಗಲೆಯಲ್ಲಿ ಕೆಲಸ ನೇಮಕ ಮಾಡುತ್ತಾರೆಂದು ನಿರೀಕ್ಷಿಸುತ್ತೇವೆ

ಶ್ರೀಮನ್ ಮಹಾರಾಜ್ಞಿಯವರ ಬಾಲಿಕಾ ಪಾಠಶಾಲೆಗೆ ಬಂಗಾಳದಿಂದ ಕರಸಿರುವ ಉಪಾಧ್ಯಾಯಿನಿಯರು ಕಸ್ಸೂತಿಯನ್ನು, ಸಂಗೀತ, ವೀಣೆಗಳನ್ನು ಕಲಿಸುವದಕ್ಕೆ ಶಕ್ತರಾಗಿರುತ್ತಾರೆ ಇವರಿಗೆ ಇಂಗ್ಲಿಷ್ ಮತ್ತು ಸಂಸ್ಕೃತ ವಿದ್ಯೆಗಳಲ್ಲಿ ತುಂಬಾ ಪರಿಶ್ರಮ ಇರುವದರಿಂದ ಕೆಲವು ಕಾಲದಲ್ಲೇ ಈ ವಿದ್ಯೆಗಳನ್ನು ಕಲಿತುಕೊಳ್ಳುವದರಲ್ಲಿ ಸಂಶಯವಿಲ್ಲ

ಫಾರೆಸ್ಟು ರೇಂಜರು ಕೆಲಸವನ್ನು ಕಲಿತುಕೊಂಡು ಬರುವದಕ್ಕಾಗಿ ಮೈಸೂರು ಸರ್ಕಾರದವರು ಪಿ ಎಸ್ ಗೋವಿಂದರಾವ್ ಎಂಬ ಯುವ್ವನಸ್ಥರನ್ನು ವಿದ್ಯಾರ್ಥಿ ವೇತನ ಕೊಟ್ಟು ಉತ್ತರ ದೇಶದಲ್ಲಿರುವ ಡೆಹರಾಡೂನ್ ಎಂಬ ಕಾಲೇಜಿಗೆ ಕಳುಹಿಸಿದ್ದರು ಇವರು ಅಲ್ಲಿನ ಪರೀಕ್ಷೆಯಲ್ಲಿ ಪ್ಯಾಸಾಗಿ ಇಲ್ಲಿಗೆ ಬಂದಿರುತ್ತಾರೆ, ಇವರನ್ನು ರೇಂಜರ್ ಕೆಲಸದಮೇಲೆ ಚಿಕ್ಕಬಳ್ಳಾಪುರಕ್ಕೆ ಹಾಕಿರುತ್ತಾರೆಂದು ಕೇಳುತ್ತೇವೆ

ಬೊಂಬಾಯಿ ಗವರ್ನರಾದ ಲಾರ್ಡ್ ಸಿಡ್ನಾಮ್ ಸಹಿತ ಸ್ತ್ರೀಕರಾಗಿಯೂ ಪರಿವಾರ ಸಮೇತರಾಗಿಯೂ ಮಹಾಬಲೇಶ್ವರನಿಂದ ಬೇಸಿಗೆಯ ಹವಾ ಉದ್ದಿಶ್ಯವಾಗಿ ನೀಲಗಿರಿಗೆ ದಯಮಾಡುತ್ತಾರಷ್ಟೆ ನೀಲಗಿರಿಯಿಂದ ವಾಪಸು ಬೊಂಬಾಯಿಗೆ ದಯಮಾಡುವ ಕಾಲದಲ್ಲಿ ಸದರ್ನ್ ಮರಾಟಾ ರೈಲ್ವೇ ಮಾರ್ಗವಾಗಿ ಮೈಸೂರಿನ ಮೇಲೆ ದಯಮಾಡುವದಾಗಿ ಪತ್ರಿಕೆಗಳು ತಿಳಿಸಿರುತ್ತವೆ ಈ ವರ್ತಮಾನವು ನಂಬುವದಕ್ಕೆ ಎಷ್ಟು ಮಟ್ಟಿಗೆ ಅರ್ಹವಾದದ್ದೋ ನಮಗೆ ಸಂದೇಹವಾಗಿದೆ

ಕೆಲವು ದಿವಸಗಳ ಕೆಳಗೆ ಇಲ್ಲಿನ ಸರ್ವರುಪುರದಿನಲ್ಲಿ ಒಂದು ಘೋರವಾದ ಕೊಲೆಪಾತಕವು ನಡೆಯಿತಂತೆ, ಕೊಲೆಯನ್ನು ನಡೆಸಿದವನು ಪರಾರಿ ಯಾವನೇದೂ ಸಿಗಿಸಿದ್ದನಷ್ಟೆ ಹೋದ ವಾರದಲ್ಲಿ ಪೊಲೀಸಿನವರು ಅವನನ್ನು ಹಿಡಿದು ತಂದಿದ್ದರಂತೆ ಅದರೆ ದಾರಿಯಲ್ಲಿ ಅವನು ಅವರಿಗೆ ಚಕ್ಕರ ಕೊಟ್ಟು ಹೊರಟು ಹೋದನು ಅದೇ ಪೊಲೀಸಿನವರು ಪುನಹ ಅವನನ್ನು ಹಿಡಿದು ತರುವದಕ್ಕಾಗಿ ಕಳುಹಿಸಲ್ಪಟ್ಟಿದ್ದರೆ ಹಿಡಿದು ತಂದಿದ್ದವನನ್ನು ಬಿಟ್ಟು ಬಿಡುವದಕ್ಕೆ ಅವರೆಂಥಾ ಸೋಮಾರಿಗಳಾಗಿದ್ದರೋ ಎಂದು ಹೇಳ ಬೇಕಾಗಿದೆ.

ಚಾಮುಂಡೀಬೆಟ್ಟದ ದೇವಸ್ಥಾನದ ನೌಕರರಲ್ಲೊಬ್ಬನು ಎಣ್ಣೇ ಕದ್ದನೆಂದು ಪಾರುಪತ್ತೇಗಾರರು ರಿಪೋರ್ಟು ಮಾಡಿದ್ದರಮೇಲೆ ಅರಮನೇ ಆಫೀಸರವರು ಕ್ರಿಮಿನಲ್ ಪ್ರಾಸಿಕ್ಯೂಷನ್ ಮಾಡಬೇಕೆಂದು ಹುಕುಂ ಮಾಡಿರುವಂತೆ ಕೇಳುತ್ತೇವೆ ಅದರೆ ಆ ಮನುಷ್ಯನು ಪಾರುಪತ್ತೇಗಾರರೇ ತನ್ನ ಕೈಗೆ ಎಣ್ಣೇ ಗಡಿಗೆಯನ್ನು ಕೊಟ್ಟು ತಮ್ಮ ಮನೆಗೆ ಕೊಟ್ಟುಬಾ ಎಂದು ಹೇಳಿದರೆಂತಲೂ ತಾನು ಹೊರಕ್ಕೆ ಹೋಗುವಲ್ಲಿ ಎಣ್ಣೇ ಕದ್ದುಕೊಂಡು ಹೋಗುತ್ತಾನೆಂದು ಪುಕಾರು ಮಾಡಿದರೆಂತಲೂ ಹೇಳುವಂತೆ ಕೇಳುತ್ತೇವೆ ಯಾರ್‌ಯಾರ ಯೋಗ್ಯತೆ ಎಂಥಾದ್ದಾಗಿರುವದೋ ಪ್ರಾಸಿಕ್ಯೂಷನ್ ವಿಚಾರಣೆಯಲ್ಲಿ ಗೊತ್ತಾಗದೆ ಇರುವದಿಲ್ಲವಷ್ಟೆ

ಇದೇ ಮೇ ತಿಂಗಳು ಮೊದಲನೇ ತಾರೀಖಿನಿಂದ ಚಾ ಮರಾಜನಗರದಲ್ಲಿ ಅಮಲ್ದಾರರ ಪ್ರಯತ್ನದಿಂದ ಒಂದು ಇಂಗ್ಲೀಷ್ ಸ್ಕೂಲ್ ಏರ್ಪಾಟಾಗಿದೆ ಸದ್ಯಕ್ಕೆ ಜನರ ಖರ್ಚಿನ ಭಾಗವನ್ನು ಅಲ್ಲಿನ ರೈತರೇ ವಹಿಸಿಕೊಳ್ಳುವಂತೆ ಏರ್ಪಡಿಸಿ ಅ ದಕ್ಕೆ ತಾವೇ ಮುಖಂಡರುಗಳಾಗಿ ತೋರಿಸಿದ್ದಾರೆ ಈ ಮುಂದಿನ ಖರ್ಚು ವಗೈರೆಗಾಗಿ ಸುಮಾರು ೩೦ ಮಂದಿ ಮಾತ್ರ ಪ್ರಸ್ತ ಸದ್ಯಕ್ಕೆ ಮಾಡುತ್ತಿದ್ದಾರೆ ಹೀಗೆ ನಾನಾ ರೀತಿಯಲ್ಲಿ ಅವರು ಅದುರ್ರು ಪ್ರಜೆಗಳ ಹಿತ ಸಾಧಕರಾಗಿರುವದರಿಂದ ಅವರ ಪ್ರೀತಿಯನ್ನು ಸಂಪಾದಿಸುವದಲ್ಲದೆ ಮೇಲ್ಪಟ್ಟ ಅಧಿಕಾರಿಗ ಳಲ್ಲೂ ಗೌರವವನ್ನು ಪಡೆಯುವದರಲ್ಲಿ ಸಂಶಯವಿಲ್ಲವೆಂದು ನಂಬಿದ್ದೇವೆ

— —

ರಾಜಧಾನಿಯಲ್ಲಿರುವ ಜೈಲ್‌ಖಾನೆಗೆ ಮೆ|| ಹಡ್ಸನ್ ಸಾ ಹೇಬರು ಜೈಲರಾಗಿ ಇರುತ್ತಾರಷ್ಟೆ ಇವರು ಪೂರ್ಣ ವ ಯೋವೃದ್ಧರಾಗಿರುವದರಿಂದ ಅವರಿಗೆ ಈಗ ಪೆನ್ಶನ್ ಕೊಡು ವರೆಂತಲೂ, ಬೆಂಗಳೂರಿನಲ್ಲಿ ಇಂಜನಿಯರಿಂಗ್ ಕಂಟ್ರ್ಯಾಕ್ಟರಾ ಗಿರುವ ಮ|| ಲಿಸಿವಿಚ್ ಎಂಬವರನ್ನು ಇಲ್ಲಿನ ಜೈಲರಾಗಿ ನೇಮಿಸುವರೆಂತಲೂ ಕೇಳುತ್ತೇವೆ ಇದು ನಿಜವಾದ ಪಕ್ಷದ ಲ್ಲಿ ಏರಿಗೆಯವನನ್ನು ಚಿನ್ನ ಕೆಲಸಕ್ಕೆ ನೇಮಿಸಿದಂತೆ ಆಗುವ ದಲ್ಲವೇ? ಬಹು ಕಾಲದಿಂದಲೂ ಬತ್ತಿಯನ್ನು ಅಪೇಕ್ಷಿಸುತ್ತಾ ಚಾತಕ ಪಕ್ಷಿಗಳಂತೆ ಬಾಯಿ ಬಿಟ್ಟುಕೊಂಡಿರುವ ಉಮೇದು ವಾರರಿಗೆ ಸೊನ್ನೇ ಸುತ್ತ ಬೇಕಾಗುತ್ತೆ ಹೀಗೆ ಮಾಡುವದು ನ್ಯಾಯವಲ್ಲವೆಂದು ಧೈರ್ಯವಾಗಿ ಹೇಳುತ್ತೇವೆ

— — —

ಕಳೆದ ಮಾರ್ಚ ೬ ನೇ ತಾರೀಖಿನಲ್ಲಿ ತಂತೀವರ್ತಮಾ ನದ ಮೂಲಕ ದಿವಾನರವರಿಗೆ ತಿಳಿಯಪಡಿಸಿದ ಮಹೋತ್ಪಾ ತದಿಂದ ತಿಳಿದು ಬರುವದೇನೆಂದರೆ—ಮಾಗಡಿ ತಾಲ್ಲೋಕಿಗೆ ಸೇರಿದ ಕೆಲವು ಗ್ರಾಮಗಳಲ್ಲಿ ಆ ದಿನ ರಾತ್ರಿ ವಿಪರೀತವಾಗಿ ಮೋಡಗಳು ಕವಿದು ಘೋರವಾಗಿ ಪ್ರಾರಂಭವಾಗಿ ಅನೇಕಕ್ಲಾಗ ಳೊಡನೆ ಕೂಡಿದ ಮಳೆಯಾಯಿತು ಕಲ್ಲುಗಳು ನಿಂಬೇಕಾ ಯಿಯ ಗಾತ್ರದಿಂದ ಹಿಡಿದು ತೆಂಗಿನಕಾಯಿಗಳ ಮಾತ್ರದವರೆಗೂ ಇರುವದು ಹೆಂಚಿನ ಮನೆಗಳೂ ಅವುಗಳಲ್ಲಿ ಶೇಖರಿಸಿ ಇಟ್ಟಿದ್ದ ದವಸ ಧಾನ್ಯಗಳೂ ನಾಶವಾದವು ಒಬ್ಬ ಮನುಷ್ಯನನ್ನು ಕೊಂದು ಪ್ರವಾಹದಲ್ಲಿ ಅವನನ್ನು ಹೊತ್ತುಕೊಂಡು ಹೋ ಯಿತು ಪಕ್ಷಿ ಪಕ್ಷಿಗಳು ಲೆಖ್ಖವಿಲ್ಲದಷ್ಟು ಕಲ್ಲುಗಳ ಏಟಿ ನಿಂದ ಸತ್ತು ಬಿದ್ದವು ಅಲ್ಲಿನ ಪೈರು ಕೆಟ್ಟು ಹೋಗಿದೆ. ಎಲ್ಲಿ ನೋಡಿದರೂ ಹಾಹಾಕಾರವೇ ಕೇಳಿಬರುತ್ತಲಿದೆ.

— — —

ಅಲ್ಲಿನ ಛಾವಣಿಗಳ ಹೆಂಡದಂಗಡಿಗಳೂ ಬ್ರಾಂದಿಅಂಗಡಿಗಳೂ ಮತ್ತು ಭಕ್ಷ್ಯಗಳಿಗೆ ಜಾ ಪಡೆಯಬೇಕೆಂಬವರೂ ಇಲ್ಲಿನ ಡಿಸ್ಟ್ರಿಕ್ಟ್ ಟ್ರೆಜರಿ ಹೋದಾಗ ಅಲ್ಲಿನ ಕೆಲವು ಅಲ್ಪ ನೌಕರರು ಅವರಿಂದ ರುಸುಂ ಪಡೆಯಬೇಕೆಂದು ನಿಲ್ಲಿಸಿ ಮಾಡಿಕೊಂಡು ಇರುವಂತೆ ವರ್ತಮಾನ ಕೇಳುತ್ತೇವೆ ಇದು ನಿಜವಾಗಿದ್ದ ಪಕ್ಷದಲ್ಲಿ ಇದುವರೆಗೂ ಮ|| ಸ್ಟೀಫ್ ಸಾಹೇಬರಿಗೆ ತಿಳಿಯದೆ ಇರುವದು ತುಂಬಾ ಆಶ್ಚರ್ಯವಾಗಿದೆ ಇನ್ನೂ ಕೆಲವು ನಿಜವಾದ ಸಂಗತಿಗಳು ನಮ್ಮ ತಿಳುವಳಿಕೆಗೆ ಬಂದನಂತರ ಎಲ್ಲಾ ಸ್ಪಷ್ಟವಾಗಿ ವಿವರಿಸಬೇಕೆಂದಿದ್ದೇವೆ ಇಷ್ಟಕ್ಕೇ ದು ರ್ಮಾರ್ಗದಲ್ಲಿ ಪ್ರವರ್ತಿಸಿರುವ ನೌಕರರು ಎಚ್ಚೆತ್ತುಕೊಳ್ಳು ವರಾದರೆ ನಮಗೆ ತುಂಬಾ ಸಂತೋಷ ಹಾಗಿಲ್ಲದಿದ್ದ ಪಕ್ಷಕ್ಕೆ ಈ ಸಂಗತಿಗಳು ತ್ವರ್ಯದಲ್ಲೇ ಆಫೀಸರ ತಿಳುವ ಕೆಗೂ ಬಂ ದು ಅನರ್ಥಗಳಿಗೆ ಕಾರಣವಾಗುವದರಲ್ಲಿ ಸಂಶಯವಿಲ್ಲವೆಂಬೀ ಸಂಗತಿಯನ್ನು ಅಲ್ಲಿನ ಕಾ ನೌಕರರಿಗೆ ಜ್ಞಾಪಕಪಡಿಸಿಕೊಳ್ಳುತ್ತೇವೆ

— —

ಹೋದವಾರದಲ್ಲಿ ಒಂದು ದಿವಸ ರಾತ್ರಿ ಇಲ್ಲಿನ ಮೋತೀ ಖಾನೆಯಲ್ಲಿ ಪಟ್ಟಿ ಜಾಯಿಗೆಯಾದ ಕೋಣೆಯಲ್ಲಿ ಅಲ್ಲಿನ ಒಬ್ಬ ಜವಾನನು ಮಲಗಿಕೊಂಡಿದ್ದ ಮೋತೀಖಾನೆಯ ಬೀಗ ಮುದ್ರೆಯಾದ ನಂತರ ದಿವಾನ್ ಕೃಷ್ಣಪ್ಪನವರ ಪೆಟ್ಟಿಗೆಯಿಂ ದ ೫೦—೬೦ ರೂಪಾಯಿಗಳನ್ನು ತೆಗೆದುಕೊಂಡು ಒಂದು ಪಾತ್ರೆಯಲ್ಲಿ ಸುಮಾರು ಅರ್ಧಮಣ ತುಪ್ಪವನ್ನು ಜೋಡಿಸಿ ಕೊಂಡು ದೇಗಿನವರಿಗೂ ಒಳಗೇ ಇದ್ದು ಒಳಗಾಗುತ್ತಲೇ ಕಾಪ್ಲೆ (ಪ್ರಕಾರ ಕಂಟ್ರ್ಯಾಕ್ಟದಾರರು ಬಂದು ಬೀಗತೆಗೆಯುವಲ್ಲಿ ದ್ವಾರದ ಹೊರಕ್ಕೆ ಬಂದನೆಂತಲೂ ಅನಂತರ ತುಪ್ಪ ಮತ್ತು ರೂಪಾಯಿಗಳನ್ನು ಕಳಕೊಂಡವರು ಫಿರ್ಯಾದು ಮಾಡಿದಾಗ ಅವನು ತಾನು ತೆಗೆದುಕೊಂಡದ್ದು ಉಂಟೆಂದು ಒಪ್ಪಿಕೊಂ ಡಂತೆಯೂ ಅನಂತರ ಈ ಸಮಾಚಾರವು ಅರಮನೇ ಆಫೀಸರ ವರ ತಿಳುವಳಿಕೆಗೆ ತರಲ್ಪಟ್ಟಾಗ ಅವರು ಅವನನ್ನು ಪ್ಯೂನಿ ಕ್ಯಾಟ್ ಮಾಡಬೇಕೆಂದು ಹುಕ್ಕುಂ ಮಾಡಿದಂತೆಯೂ ಕೇಳುತ್ತೇವೆ

— — —

ಕೃಷ್ಣರಾಜಪೇಟೆ ತಾಲ್ಲೋಕು ಚಿನಕುರುಳೀ ಹೋ ಬಳಿ ಸೈತ ದತ್ತಾಗಿಪೇಟೆ ಗ್ರಾಮದಲ್ಲಿ ಒಂದು ಗೌರ್ನ್ ಮೆಂಟ್ ಕನ್ನಡ ಪಾಠಶಾಲೆಯು ಇರುವಂತೆಯೂ, ಆ ಪಾಠ ಶಾಲೆಯ ಉಪಾಧ್ಯಾಯರು ಮಾಹೆಯಾನಾ ಹನ್ನೆರಡು ರೂಪಾಯಿ ಸಂಬಳ ಪಡೆಯುತ್ತ, ಹುಡುಗರ ವಿದ್ಯಾವಿಷಯದಲ್ಲಿ ಸ್ವಲ್ಪ ವಾದರೂ ನಿಗಾ ಕೊಡದೆ ಊರಿನಲ್ಲಿ ಜನಗಳ ಅಪ್ರೀತಿಯನ್ನು ಸಂಪಾದಿಸಿರುತ್ತಾರೆಂತಲೂ, ಈ ವಿಷಯವನ್ನೂ ಮತ್ತು ಇ ತರ ಆಕ್ಷೇಪಗಳನ್ನೂ ಕುರಿತು ೨—೩ ಅವರ್ ಡೆಪ್ಯುಟಿ ಇನ್ಸ್‌ಪೆಕ್ಟರಿಗೂ, ಮೆ|| ಛಾರ್ಲಾ ಸಾಹೇಬರಿಗೂ ಅರ್ಜಿ ಬರೆ ದುಕೊಂಡಾಗ್ಯೂ ಅವರುಗಳು ಈ ವಿಷಯದಲ್ಲಿ ಯಾವ ವಿ ಚಾರಣೆಯನ್ನೂ ಮಾಡಿ ಇಲ್ಲ ವೆಂತಲೂ ಒಬ್ಬ ನೊಬ್ಬ ಬುದ್ಧಿವಂತರು ಬರೆದಿರುತ್ತಾರೆ ಹಾಗಾದರೆ ಡಿಪ್ಟಿ ಇನ್ಸ್‌ಪೆಕ್ಟ ರವರು ಹಾಗೇ ಅಲಕ್ಷ್ಯ ಮಾಡಿರುತ್ತಾರೆಂಬುದಾಗಿ ಯೋಚಿಸ ಬೇಕಾಗಿದೆ ಹೀಗೆ ಮಾಡೋಣವರಿಂದ ತಮ್ಮ ಇರುವಿಕೆಗೆ ಕೆಟ್ಟ ಹೆಸರು ತರಿಸಲು ಅವರೇ ಕಾರಣರಾಗುತ್ತಾರೆ ಈಗ ಲಾದರೂ ಡಿಪ್ಟೀ ಸರ್ಕಲ್ಲಿನ ಇನ್ಸ್‌ಪೆಕ್ಟರವರು ಈ ವಿಷಯ ವನ್ನು ಮನಸ್ಸಿಗೆ ತೆಗೆದುಕೊಂಡು ಆ ಸ್ಕೂಲನ್ನು ಪ್ರಜೆ ಗಳ ಉಪಯೋಗಕ್ಕೆ ಬಾಗುವರೀತಿಯಲ್ಲಿ ಇಡಿಸಿ ಕೀರ್ತಿ ಪಡೆಯ ಬೇಕೆಂದು ಕೋರುತ್ತೇವೆ

— —

ಮ|| ವೀರಸಂಗಪ್ಪನವರು ಮ|| ಪಿ ಆರ್ ಕಂಬಣನ ಹಿಸ್ಸೆಗಳಮೇಲೂ ಮತ್ತು ಪಿ ವಿ ರುದ್ರಪ್ಪನವರಮೇಲೂ ತಂದು ಇದ್ದ ಮೊಕದ್ದಮೆಯು ಇನ್ನೂ ನಡೆಯುತ್ತಿರು ವದು ಸರಿಯಷ್ಟೆ ಈ ಮೊಕದ್ದಮೆಯಲ್ಲಿ ವೀರಸಂಗಪ್ಪ ನವರ ಕಡೆ ಅಡ್ವೋಕೇಟ್ ಸಿನ್ನ ಸ್ವಾಮಿನಾಥ ಮಧ್ಯಾಹ್ನ ಸುಮಾರು ಒಂದು ಘಂಟೆಯ ವರೆವಿಗೂ ನಡೆಯಿತು ಅನಂ ತರ ವೀರಸಂಗಪ್ಪನವರು ಇನ್ನೂ ಇಬ್ಬರು ಹುಡುಗರ ಸಂ ಗಡ ಒಂದು ಜಟಕಿನ ಬಂಡಿಯಲ್ಲಿ ಕೂತುಕೊಂಡು ಆ ದಿ ವಸ ನಡೆದ ತಮ್ಮ ಅಡ್ವೋಕೇಟರ ವಿಷಯವನ್ನು ಮಾತ ನಾಡುತ್ತಾ ಹೊಡ್ಡ ಪೇಟೆಯ ಮಾರ್ಗವಾಗಿ ಬರುತ್ತಿರುವಲ್ಲಿ ಮ|| ಆ ಚಂದ್ರಶೇಖರಯ್ಯನವರ ಮನೇ ಸಮೀಪದಲ್ಲಿ ಗಾಡಿ ಎತ್ತು ಬೆಚ್ಚಿಕೊಂಡು ಓಡಿ ಹೋಗಿ ಗಾಡಿಯು ತಲೆಕೆಳಗಾಗಿ ಒಳಗಿದ್ದವರು ಒಬ್ಬರಮೇಲೊಬ್ಬರಾಗಿ ಗಾಡಿ ಮಗುಚಿ ಕೊಂಡದ್ದರಿಂದ ಹೊರಗೆ ಬರುವದೇ ದುರ್ಲಭವಾಗಿ ಒಂದು ಸಣ್ಣ ಕಿಂಡಿಯಿಂದ ಬಹು ಪ್ರಯಾಸ ಪಟ್ಟು ಬರಬೇಕಾಯಿ ತು ಅವರ ಬಿದ್ದವರ ಪೈಕಿ ಯಾರಿಗೂ ಏನೂ ಜಖಂ ಆಗ ಲಿಲ್ಲವೆಂಬ ಅಂಶವನ್ನು ತಿಳಿಸಲು ತುಂಬಾ ಸಂತೋಷಿಸುವೆವು ಈ ಅಸಂಗತವು ಲಷ್ಕರ್ ಪೋಲೀಸ್ ಸ್ಟೇಷನ್ನಿಗೆ ಬಹು ಸ ಮೀಪದಲ್ಲಿ ನಡೆದಾಗ್ಯೂ ಮತ್ತು ಇಂಥ ಅಸಂಗತವು ನಡೆದಿದೆ, ಬೇಗನೆ ಹೋಗಿ ಸಹಾಯ ಮಾಡಿ ಎಂದು ಹೇಳಿದಾಗ್ಯೂ ಪೊ ಲೀಸಿನವರು ತಮಾಷೆ ನೋಡುತ ನಿಂತರೇ ಹೊರತು ಅವರ ಸಹಾಯಕ್ಕೆ ಒಬ್ಬರಾದರೂ ಹೋಗಲಿಲ್ಲವೆಂದು ತಿಳಿಸಲು ತುಂಬಾ ವಿಷಾದಿಸುತ್ತೇವೆ ಇದಂತಿರಲಿ ಗಾಡಿಯಲ್ಲಿ ಕುಳಿತು ಕೊಂಡು ಬರುತ್ತಿದ್ದ ವಿನೋದ ವೇನೂ! ಅಯ್ಯೋ ಪಾಪ! ಮನುಷ್ಯ ಸಂಕಲ್ಪವೇ ಬೇರೆ, ದೈವ ವ್ಯಾಪಾರವೇ ಬೇರೆ ಅ ಲ್ಲವೇ!! ಎಂಬದಾಗಿ ಒಬ್ಬ ಬುದ್ಧಿವಂತರು ಬರೆಯುತ್ತಾರೆ

ರಿಟರ್ನಿಂಗಾಫೀಸರುಗಳ್ಯಾರು ಎಂಬ ಪ್ರಶ್ನೆಯನ್ನು ನಮ್ಮ ಹಿಂದಣ ವಾರದ ಪತ್ರಿಕೆಯಲ್ಲಿ ಪ್ರಕಟಿಸಿದ್ದೆವಷ್ಟೆ ಈ ವಿಷ ಯವಲ್ಲಿ ೩—೪ ಮಂದಿ ಬರೆದಿರುತ್ತಾರೆ ಮತ್ತು ದೇಶಾಭಿ ಮಾನಿಗಳೂ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿರುತ್ತಾರೆ ಇವು ಗಳನ್ನೆಲ್ಲಾ ಪರಿಶೀಲಿಸಿ ನೋಡುವಲ್ಲಿ ಮೈಸೂರು ದೇಶಾಭಿ ಮಾನಿಗಳು ತಮ್ಮ ಪತ್ರಿಕೆಯಲ್ಲಿ ವಿವರಿಸಿರುವದೇ ಸರಿಯಾ ದದ್ದೆಂದು ತಿಳಿದು ಬರುತ್ತಿರುವದರಿಂದ ಅವರನ್ನೇ ಈ ಪ್ರಶ್ನೆ ಯನ್ನು ಹಾಕಿದ ನಮ್ಮ ಬುದ್ಧಿವಂತರಿಗೆ ಸಮಾಧಾನವಾಗಿ ಹೇಳಲು ಸಂತೋಷಿಸುತ್ತೇವೆ ಅದೇನೆಂದರೆ—ವೃತ್ತಾಂತ ಪತ್ರಿಕೆಯ ಬುದ್ಧಿವಂತರ ಸಂಶಯ ನಿವಾರಣೆ ಮಾಡುವದು ನಮಗೂ ಅವಶ್ಯಕವಾಗಿ ಕಂಡು ಬಂದದರಿಂದ ಇಲ್ಲಿ ಅದಕ್ಕೆ ಅನ್ನು ಹಾಕುವೆವು ರೀಟಿ ರ್ನಿಂಗ್ ಆಫೀಸರ್ ಅಂದರೆ ಕಂದಾಯ ವನ್ನು ಕೊಡತಕ್ಕವರು—ಮ್ಯುನಿಸಿಪಲ್ ಟ್ಯಾಕ್ಸೂ ಪರ್ಮಿಟ್ ಕಂದಾಯಕ್ಕೂ ಅನ್ವಯಿಸಿ ಕೊಳ್ಳಬಹುದು, ಪರ್ಮಿಟ್ ಕಂ ದಾಯವನ್ನು ಮುನಿಸಿಪಲ್ ತೆರಿಗೆಯನ್ನು ಸಹಾ ಕೊಡುವ ಪದಗೆ ಇದು ವಿಶೇಷವಾಗಿ ವರ್ತಿಸುತ್ತದೆ, ಇವರು ತಾವು ಕಂ ದಾಯ ಮತ್ತು ತೆರಿಗೆಯ ರೂಪವಾಗಿ ಸರ್ಕಾರಕ್ಕೂ ಮತ್ತು ಮುನಿಸಿಪಾಲಿಟಿಗೂ ಕೊಡುವ ದ್ರವ್ಯವು ಸದ್ವಿನಿಯೋಗ ವಾ ಗುವದೋ ದುರ್ವಿನಿಯೋಗ ವಾಗುವದೋ ಎಂಬ ವಿಷಯದಲ್ಲಿ ಸರ್ಕಾರ ಯಾ ಮುನಿಸಿಪಾಲಿಟಿಯವರನ್ನು ಪ್ರಶ್ನೆ ಮಾಡುವ ದಕ್ಕೆ ಸಂಪೂರ್ಣ ಬಾಧ್ಯತೆಯುಳ್ಳವರಾಗಿರುವದಲ್ಲದೇ ಮುನಿಸಿಪಾಲಿಟಿಗೆ ತಮ್ಮ ಕಡೆ ಮೆಂಬರುಗಳನ್ನು ಚುನಾಯಿ ಸಿ ಕಳುಹಿಸುವದಕ್ಕೂ ಪ್ರಜಾಪ್ರತಿನಿಧಿ ಸಭೆಗೂ ತಮ್ಮ ಕಡೆ ಪ್ರತಿ ನಿಧಿಗಳನ್ನು ಚುನಾಯಿಸಿ ಕಳುಹಿಸುವದಕ್ಕೂ ಅಧಿಕಾ ರ ಉಳ್ಳವರಾಗಿರುತ್ತಾರೆ, ಇವರು ತಮ್ಮ ಅಧಿಕಾರವನ್ನು ಸಾರ್ಥಕ ಪಡಿಸಿಕೊಂಡು ನಡೆಯಬಲ್ಲರಾದರೆ ಸರ್ಕಾರ ದವರು ಪ್ರತಿ ವಿಷಯಕ್ಕೂ ಜವಾಬು ಹೇಳಬೇಕಾಗುವದು ತಮ್ಮ ಸ್ವಶಕ್ತಿಯನ್ನರಿಯದ ಪ್ರಜೆಗಳು ಅಜಾಗ್ರತರಾಗಿ ನಡೆಯುತ್ತಿರುವದರಿಂದ ಸರ್ಕಾರದವರು ಅದಕ್ಕೇ ಬೇಗವಾಗಿ ಯೂ ಅಟವಾಗಿಯೂ ಇವೆ.

ಕರೆಸ್ಪಾಂಡೆನ್ಸ್.

ವೃತ್ತಾಂತ ಪತ್ರಿಕಾ ಎಡಿಟರವರ ಸ|| ಕ್ಕೆ

ಅಯ್ಯಾ, ನಾನು ಈ ಚಾಮರಾಜನಗರದಲ್ಲಿ ಐದು ವ ರುಷಗಳಿಂದಿರುತ್ತಿದ್ದೇನೆ ಇಷ್ಟರಲ್ಲಿ ಇಲ್ಲಿ ನಾಲ್ಕು ಅಮ ಲ್ದಾರರುಗಳನ್ನು ನೋಡಿದೆನು ಇವರುಗಳ ಪೈಕಿ ಸದ್ಯ ಕೆಲಸದಮೇಲಿರುವ ಮೆ|| ನಿಜಾಮುದ್ದೀನ್ ಅಲ್ಲೀಖಾನ್ ಸಾಹೇ ಬರಷ್ಟು ಇವರ ಪೂರ್ವ ಕೆಲಸ ನೋಡುತಲಿದ್ದ ಅಮಲ್ದಾರ ರುಗಳು ಮ್ಯುನಿಸಿಪಾಲಿಟಿಯನ್ನು ಕ್ರಮ ಪಡಿಸುವದಕ್ಕೆ ಹೆಚ್ಚಾಗಿ ಗಮನ ಕೊಡಲಿಲ್ಲವೆಂದು ಹೇಳ ಬಹುದಾಗಿದೆ ಮೆ| ನಿಜಾಮುದ್ದೀನ್ ಅಲ್ಲೀಖಾನ್ ಸಾಹೇಬರು ಪಕ್ಷಪಾತ ವಿಲ್ಲದೆ ಹುಟ್ಟಿಕೊಂಡು ಎಲ್ಲಾ ಬೀದಿಗಳಲ್ಲಿಯೂ ಜಾಡಿ ಮಾಲಿಗಳ ನ್ನು ನೇಮಿಸಿದ್ದಾರೆ ಪ್ಯಾಂಟರೆ ಮುಂಚೆ ಜೈನರ ಮತ್ತು ದೇವಾಂಗದವರ ಬೀದಿಗಳಲ್ಲಿ ಜಾಡಮಾಲಿಗಳು ಕಸವನ್ನು ಗುಡಿಸುತ್ತಿರಲಿಲ್ಲ ಈಗ ಅಲ್ಲಿಗೂ ನೇಮಿಸಿದ್ದಾರೆ ಯೋಗ್ಯ ರಾದ ಹೊಸ ಜಾಡಮಾಲಿಗಳನ್ನೂ, ಒಂದೆರಡು ಕಸದ ಬಂಡಿಗಳನ್ನೂ ಇಡಿಸಿರುವದಲ್ಲದೆ, ಊರಿನ ಮಧ್ಯದಲ್ಲಿದ್ದ ಗೊಬ್ಬರದ ಗುಂಡಿಗಳನ್ನೂ ಪಾಳು ಜಾಗಗಳನ್ನೂ ಮುಚ್ಚಿ ಸುತ್ತಲಿದ್ದಾರೆ ಮತ್ತು ಮಯಿಲಾರಿ ಇಲ್ಲಾದೇ ಸ್ಥಂಭ ನೇವಸ್ಥಾನಗಳನ್ನೂ ತಕ್ಕ ಪಟ್ಟಿಗೆ ಬುಚಿ ಮಾಡಿಸಿರುವದ ಲ್ಲದೆ ಚಾಮರಾಜೇಶ್ವರ ದೇವಸ್ಥಾನದ ಸುತ್ತಲೂ ನೊಣ್ಣ ಸೊಪ್ಪುಗಳು ಬೆಳದು ಅಸಹ್ಯವಾಗಿದ್ದದರಿಂದ ಈಗ ಅದರ ಸುತ್ತುಮುತ್ತಲೂ ಕಲ್ಲು ಕಂಭಗಳನ್ನು ನಿಲ್ಲಿಸಿ, ಕಟಕಟೆ ಗಳನ್ನು ಹಾಕಿಸಿ ಹುವ್ವಿನ ಗಿಡಗಳನ್ನು ನೆಡಿಸುತ್ತಿದ್ದಾರೆ ಇ ದಲ್ಲದೆ ಹಾಳು ಬಿದ್ದಿದ್ದ ಅರಮನೇ ಗೋಡೆಗಳ ಮಧ್ಯದಲ್ಲಿದ್ದ ನಿವೇಶನವನ್ನು ಚೊಕ್ಕ ಮಾಡಿಸಿ ಅದನ್ನು ಟೆನ್ನಿಸ್ ಎಂಬ ಚೆಂಡಾ ಟಕ್ಕೆ ತಕ್ಕದ್ದಾಗಿ ಮಾಡಿದ್ದಾರೆ ನಿಷ್ಪ್ರಯೋಜನವಾಗಿದ್ದ ಎರಡು ಕೊಳಗಳನ್ನು ಪುನಃ ಸ್ಥಾಪಿಸಿ ಕಾಲುವೆಗಳ ಮೂ ಲಕ ಅವುಗಳಿಗೆ ನೀರು ಬರಮಾಡಿ ಅದನ್ನು ಜನರ ಪಾನ ಯೋಗ್ಯವಾದದ್ದಾಗಿರುವಂತೆ ಮಾಡಿದ ಬೇಕೆಂಬದಾಗಿ ಪ್ರ ಯತ್ನ ಮಾಡುತಲಿದ್ದಾರೆ ಈ ತಿಂಗಳಿನ ಪ್ರಾರಂಭದಿಂದ ಒಂದು ಇಂಗ್ಲೀಷ್ ಸ್ಕೂಲನ್ನು ಏರ್ಪಡಿಸಿ ನಡಿಸುತ್ತಿದ್ದಾರೆ ಇ ವರು ಇನ್ನೂ ನಾನಾ ವಿಷಯಗಳನ್ನು ತಿದ್ದಿ ಪ್ರಜೆಗಳ ಅನು ರಾಗಕ್ಕೆ ಪಾತ್ರರಾಗುವರೆಂಬುವದರಲ್ಲಿ ಸಂಶಯವಿಲ್ಲ ಅಂದರೆ ಇವರು ಮತ್ತೊಂದು ಅಕ್ರಮವನ್ನು ಶೀಘ್ರದಲ್ಲಿ ನಿಲ್ಲಿಸುವ ರೆಂದು ನಂಬುತ್ತೇನೆ ಅದಾಗಿ ನಾನಾ ರೋಗಗಳಿಂದ ಸಾಯುವ ಕುರಿ, ಕೋಳಿ, ಎಮ್ಮೆ, ದನ ಮೊದಲಾದವುಗಳನ್ನು ಹೊಲೆ ಯರು ಭಕ್ಷಿಸಿ ಅದರಿಂದ ವಿಷ ಜಾಡ್ಯಗಳನ್ನು ಬರಮಾಡಿ ಕೊಳ್ಳುತ್ತಾರೆ ಹೀಗೆ ನಡೆಸದಂತೆ ಕಟ್ಟು ಮಾಡಿಸಿ, ಅವರು ಅವುಗಳನ್ನು ತಿನ್ನುವದಕ್ಕೆ ಬದಲಾಗಿ ಅವುಗಳನ್ನು ಹೂಳಿ ಡುವಂತ ಟವರ್ಗಳ ಕ್ರಮವನ್ನು ಇಲ್ಲಿಯೂ ಜಾರಿಯಲ್ಲಿ ತಂದರೆ ಮಹದುಪಕಾರವಾಗಿರುವದು ಮ್ಯುನಿಸಿಪಲ್ ವಿಸಿ ಟಿಂಗ್ ಮತ್ತು ಮೆಂಬರುಗಳ ವಿಷಯದಲ್ಲಿ ಮುಂದಕ್ಕೆ ಕೃತ ಪಡಿಸುತ್ತೇನೆ

ಚಾಮರಾಜನಗರ 6—5—93	ತಮ್ಮ ವಿಧೇಯ, J. I.

ವಿವಿಧ ವರ್ತಮಾನಗಳು.

ಕಳೆದಗುರುವಾರ ಮಹಾರಾಜಾ ಘುಲೀಪ್ ಸಿಂಗರವರ ಹಿರೀಮಕ್ಕಳು ವಿಲಾಯಿತಿಯಲ್ಲಿ ಹೇಸ್ಟಿಂಗ್ಸ್ ಪಟ್ಟಣದಲ್ಲಿ ಕಾಲವಾದರು

ಜರ್ಮ ದೇಶಕ್ಕೆ ಸೇರಿದ ಕನಗಾವಾ ಎಂಬ ಊರಿಗೆ ಹೊಕ್ಕಿದ್ದ ಕೊಳೆಗೆ ೨೦,೦೦೦ ಮನೆಗಳು ನಿರ್ಮೂಲ ವಾದ ವೃಷ್ಟಿಯು ನಷ್ಟವೇನಾಗಿರಬಹುದೋ ವಾಚಕರೇ ಊಹಿಸಿ ಕೊಳ್ಳಬಹುದು

ಕೆಲವು ದಿವಸಗಳಕೆಳಗೆ ಸಯಾಂ ರಾಜ್ಯದಲ್ಲಿ ಪ್ಯಾಕ್ ನಾಂ ಎಂಬ ರೇವಿನಿಂದ ಬ್ಯಾಂಕಾಕ್ ರಾಜಧಾನಿಯ ವರೆವಿಗೂ ಹೊಸದಾಗಿ ಹಾಕಿಸಿ ತಯಾರಾಗಿದ್ದ ರೈಲ್ವೇ ಲೈನನ್ನು ಅಲ್ಲಿನ ದೊರೆಗಳು ಪ್ರಾರಂಭಮಾಡಿದರು ಆ ರಾಜ್ಯಕ್ಕೆ ಇದೇ ಮೊ ದಲನೇ ರೈಲ್ವೆ ಎಂದು ತಿಳಿದುಬಂದಿದೆ

— — —

ಸಂಯುಕ್ತ ಸಂಸ್ಥಾನಗಳಿಗೆ ಸೇರಿದ ಸಾಲ್ಟ್‌ಲೇಕ್ ಸಿಟಿ ಎಂಬ ಪಟ್ಟಣದಲ್ಲಿ ೪೦ ವರುಷಗಳಿಂದಲೂ ಕಟ್ಟುತ್ತಲಿದ್ದ ಭಾರಿ ಮಾರ್ಮನ್ ಎಂಬ ದೇವಾಲಯವು ಪೂರೈಸಿತು ಇದಕ್ಕೆ ಖರ್ಚಾದ ಹಣವು ೫೦ ಕೋಟಿ ರೂಪಾಯಿಗಳಂತೆ! ಕಟ್ಟ ಡವು ಎಷ್ಟೆಷ್ಟು ನಮ್ಮಿಂದ ಊಹಿಸುವದಕ್ಕೂ ಅಸಾಧ್ಯವಾ ಗಿದೆ!!

ಚಿಕಾಗೋ ಪಟ್ಟಣದ ಪ್ರದರ್ಶನ ಮಹೋತ್ಸವವನ್ನು ಕಳೆದ ೧ನೇ ತಾರೀಖಿನದಿವಸ ಪ್ರೆಸಿಡೆಂಟ್ ಕ್ಲೀವ್‌ಲೆಂಡರವರು ಪ್ರಾರಂಭಿಸಿದರು ಯಂತ್ರಗಳ ಮೂಲಕ ನಾನಾವಿಧವಾದ ಗಾನ ಗಳು ನಡೆಸಲ್ಪಟ್ಟವು ಅಲ್ಲಿ ಪ್ರದರ್ಶನ ಮಾಡಲ್ಪಟ್ಟ ವಸ್ತು ಗಳೆಲ್ಲವೂ ಸರ್ವೋತ್ಕೃಷ್ಟವಾಗಿದ್ದವೆಂದು ಹೇಳಲು ಸಂದೇ ಹವೇನು?

— —

ಡಂಡೀ ಎಂಬ ಪಟ್ಟಣದಲ್ಲಿ ಜೂಟ್ ಎಂಬ ನಾರಿನಲ್ಲಿ ಕೆಲ ಸಮಾಡುತ್ತಿದ್ದ ಕಾರ್ಖಾನೆಯ ವ್ಯಾಪಾರಿಗಳು ಕೂಲಿಯ ವರಿಗೆ ಅವರ ಕೂಲಿಯನ್ನು ಶೇಕಡಾ ೫ರಂತೆ ಕಡಮೆ ಮಾ ಡುವದಾಗಿ ತಿಳಿಸಿದ್ದರಿಂದ ಕೂಲಿಯವರಲ್ಲೊಕ ೩೦,೦೦೦ ಮಂ ದಿಯು ಯಾರೂ ಕೆಲಸಮಾಡುವದಿಲ್ಲವೆಂದು ಮುಷ್ಕರ ಹೂಡಿ ಕೊಂಡಿರುತ್ತಾರೆ

ಮ್ಯಾಕ್ಸ್ ಮೂಲರ್ ಎಂಬ ಸಂಸ್ಕೃತ ಪಂಡಿತರು ವಿಜಯ ನಗರದ ಮಹಾರಾಜರವರ ಪೂರ್ಣ ಸಹಾಯದಿಂದ ಸಾಯಣ ನೆಂಬ ಭಾಷ್ಯಕಾರರ ವ್ಯಾಖ್ಯಾನಸಹಿತವಾಗಿ ಋಗ್ವೇದವನ್ನು ಅಚ್ಚು ಹಾಕಿಸಿರುತ್ತಾರೆ ಇದಕ್ಕಾಗಿ ಬದರ್ಸೇ ಚಕ್ರವರ್ತಿ ಗಳು ಅವರಿಗೆ ಬಹು ಬೆಲೆಯುಳ್ಳ ಬಹುಮಾನವನ್ನು ದಯ ಪಾಲಿಸಿರುತ್ತಾರೆಂದು ತಿಳಿಸಲು ಸಂತೋಷಿಸುತ್ತೇವೆ

ಜರ್ಮನೀ ದೇಶದಲ್ಲಿ ಆಲೂಗೆಡ್ಡೆಗಳನ್ನು ಕೆಲವು ಧ್ಯತಿ ಗಳಲ್ಲಿ ಅದ್ದಿ ಅನಂತರ ಅವುಗಳನ್ನು ಒತ್ತಿ ಸಣ್ಣನಾಗಿ ಮಾ ಡುತ್ತಾರೆ ಇದು ಕಲ್ಲಿನಷ್ಟು ಘಟ್ಟಿಯಾಗಿರುತ್ತೆ ಜನರು ತಮ್ಮ ಕೋಟು ಮೊದಲಾದ ಉಡುಪುಗಳಿಗೆ ಅವುಗಳನ್ನೇ ಗುಂಡಿಗಳಾಗಿ ಉಪಯೋಗಿಸುತ್ತಾರೆ ಅಲ್ಲದೆ ಅವು ಬಹು ಸುಲಭಕ್ರಯಕ್ಕೆ ದೊರೆಯುತ್ತವೆ

— —

ಆಮ್‌ಸ್ಟರ್‌ಡಾಮ್ ನಗರದ ರೈಲ್ವೇ ಸ್ಟೇಷನ್ನಿನ ಹತ್ತಿರವಿದ್ದ ಹತ್ತೀ ಕಾರ್ಖಾನೆಗೆ ಅಗ್ನಿಸ್ಪರ್ಶವು ಪ್ರವೇಶಿಸಿ, ಅಲ್ಲಿ ಕೆಲಸ ಮಾಡುತ್ತಿದ್ದ ೧೦ ಮಂದಿ ಕೂಲಿಯವರನ್ನೂ, ಅನೇಕ ಸಾ ವಿರ ಹತ್ತೀ ಮೂಟೆಗಳನ್ನೂ ಸಂಪೂರ್ಣವಾಗಿ ಆಹುತಿಗೊಂ ಡವು ಇದರಿಂದ ಕಾರ್ಖಾನೆಯ ವ್ಯಾಪಾರಿಗಳಿಗೆ ೩೦,೦೦೦ ರೂಪಾಯಿಗಳ ಮೇಲೆಯೇ ನಷ್ಟವಾಗಿದೆ ಎಂಬುವದೇ ಸಾಧ್ಯ!!

ಆಸ್ಟ್ರಿಯಾ ದೇಶದಲ್ಲಿ ಪಾಪ ಇಟ್ಟು ಆಡುವವರು ಶೇಕ ಡಾ ೫ರಂತೆ ಸರ್ಕಾರಕ್ಕೆ ಕಂದಾಯ ಕೊಡಬೇಕೆಂದು ವಿಧಿಸ ರುತ್ತಾರೆ ಜೂಜಿನ ಹಣ ಇಷ್ಟು ಎಂದು ಜೂಜು ಕೋರರೇ ಸರ್ಕಾರಕ್ಕೆ ತಿಳಿಸಿ ಅವರ ಅನುಮತಿಯಿಂದ ಜೂಜಾಡಿ, ಹಣವು ತಮಗೆ ಬರುವದಾಗಿದ್ದು ಆಡಿದವನು ತನಗೆ ಮೋಸವಾ ದರೆ ಈ ಸಂಗತಿ ಸರ್ಕಾರದವರು ವ್ಯವಸ್ಥೆ ಮಾಡುವರಂತೆ ಆಶ್ಚರ್ಯಕರವಾದ ಪದ್ಧತಿಯೋ ಸರಿ!

ಪೋಚಕ್‌ಗಳಲ್ಲಿಗೆ ರಾಜಧಾನಿಯಾದ ಲಿಸ್ಬನ್ ಪಟ್ಟಣದಲ್ಲಿ ದೊರೆಗಳು ಸವಾರಿ ಮಾಡಿಕೊಂಡು ಹೋಗುತ್ತಿರುವಾಗ್ಯೆ ಹುಚ್ಚನೆಂದು ವೇಷಹಾಕಿಕೊಂಡು ಬೀದಿ ಬೀದಿಗಳಲ್ಲಿ ಅಲೆ ಯುತ್ತಿದ್ದ ಒಬ್ಬ ಮನುಷ್ಯನು, ದೊರೆಗಳ ಗಾಡಿಗೆ ಕಟ್ಟಿದ್ದ ಕುದುರೆಗಳನ್ನು ಹಿಡಿದು ನಿಲ್ಲಿಸಿಬಿಟ್ಟನು ಅನಂತರ ಅವನು ಏನು ಮಾಡುತ್ತಿದ್ದನೋ ತಿಳಿಯಲಿಲ್ಲ ಅಷ್ಟರಲ್ಲೇ ಅವನನ್ನು ಹಿಡಿದು ಬಂದೀಖಾನೆಗೆ ಸೇರಿಸಿದರು

ರೊವೇಂಯಿನ ಬೆಲೆಯು ಇಂಡಿಯಾದಲ್ಲಿ ಬಹಳ ಕಡಿಮೆ ಯಾಗಿದೆಯಾದ್ದರಿಂದ ಅದನ್ನು ತಪ್ಪಿಸಿ ಕೊಡಬೇಕೆಂದು ಇಲ್ಲಿ ನ ನಾನಾತರನಾದ ಅಧಿಕಾರಿಗಳೂ, ಸಾಹುಕಾರರೂ, ಎಲ್ಲರೂ ಸೇರಿ ಸುಮಾರು ೫೦,೦೦೦ ಮಂದಿ ಒಂದು ಅರ್ಜಿ ಬರೆದು ಅದಕ್ಕೆ ರುಜು ಮಾಡಿ ವಿಲಾಯಿತಿಯ ಪಾರ್ಲಿಮೆಂಟ್ ಸಭಾ ದಕ್ಕೆ ಒಪ್ಪಿಸಿರುತ್ತಾರೆ ಅದರಿಂದ ಪ್ರಯೋಜನವಾಗುವದರಲ್ಲಿ ಸಂಶಯವಿಲ್ಲನೆಂದು ನೆನಸುವ ಹಾಗಿದೆ

ಇಂಡಿಯಾ ಚಕ್ರವರ್ತಿನಿಯಾದರಾದ ಕ್ವೀನ್ ವಿಕ್ಟೋರಿಯಾ ಮಹಾರಾಣಿಯವರು ಈಗ ಇಟಲೀದೇಶದ ರಾಜಧಾನಿಯಾದ ಫ್ಲಾರೆನ್ಸ್ ಪಟ್ಟಣದಲ್ಲಿದ್ದಾರಷ್ಟೆ ಕೆಲವು ದಿವಸಗಳಕೆಳಗೆ ಆ ವರು ಅಲ್ಲಿನ ನೋಟಕ್ಕೆ ಯೋಗ್ಯವಾದ ಸಕಲ ಕಟ್ಟಡಗಳನ್ನೂ ನೋಡಿಕೊಂಡು ಬಂದರು ಅಲ್ಲಿನ ಭಾರೀ ದೇವಾಲಯವನ್ನು ನೋಡಿ, ಅದರಲ್ಲಿ ಕೆಬರವಾಡಿದ್ದ ಚಿತ್ರವೇ ಮೊದಲಾದ ನಾನಾ ನವೀನ ಪದಾರ್ಥಗಳನ್ನೂ ನೋಡಿ ತುಂಬಾ ಸಂತೋಷಪಟ್ಟರು

ವಿಜಯನಗರಂ ಡಿಸ್ಟ್ರಿಕ್ಟ್ ಮುನ್ಸೀಫರಾದ ಮ|| ಲಕ್ಷ್ಮೀ ನರಸಿಂಹಂ ಎಂಬವರು ಅಲ್ಲಿನ ವೈಶ್ಯರಿಗೆ ವೇದಗಳನ್ನು ಕಲಿ ಸುವ ಪಾಠಶಾಲೆಯನ್ನು ಪ್ರಾರಂಭಿಸಿರುತ್ತಾರೆ ಈಗ ಈ ಪಾಠ ಶಾಲೆಯಲ್ಲಿ ೬೦ ಮಂದಿವರೆಗೂ ವಿದ್ಯಾರ್ಥಿಗಳು ಇರುತ್ತಾ ರೆ ಅವರು ಇಂಗ್ಲೀಷನ್ನು ಕಲಿಯುವದಕ್ಕೂ ಏರ್ಪಾಡು ಮಾಡಿರುವದಲ್ಲದೆ ಅವರ ಅನ್ನ ವಸ್ತ್ರಗಳಿಗೆ ಸಹಾಯ ಮಾಡುತ್ತಾರೆ ವೈಶ್ಯರ ಪುಣ್ಯವೇ ಪುಣ್ಯ!

ಉತ್ತರ ಅಮೇರಿಕದಲ್ಲಿರುವ ಯುನೈಟೆಡ್ ಸ್ಟೇಟ್ಸಿನಲ್ಲಿನ ಅನೇಕ ಊರುಗಳು, ಗ್ರಾಮಗಳು, ಸಣ್ಣ ಸಣ್ಣ ಹಳ್ಳಿಗಳು ಅಲ್ಲಿ ಪ್ರಸ್ತಾಪಾದ ಸೈಕ್ಲೋನ್ ಎಂಬ ಸುಂಟರಗಾಳಿಯಿಂದ ಹಾಳಾದವು ಅಸಂಖ್ಯಾತವಾದ ಪ್ರಜೆಗಳು ಸತ್ತರು ಕಟ್ಟ ಡಗಳು ನೆಲಸಮವಾದವು ಕೋಟ್ಯಂತರ ಜನರು ದಾರಿಯಿ ಲ್ಲದೆ ಅಲೆಯುವವರಾಗಿದ್ದಾರೆ ಎಲ್ಲಿನೋಡಿದರೂ ಜನರಗೋಳಾ ಟವೇ ವಿಪರೀತವಾಗಿದೆ ಭಗವಂತನ ಕೋಪವು ಅವರ ಮೇಲೆ ತೋರ್ಪಡಿಸಿದನೋ ಎಂಬಂತೆ ಊಹಿಸಬೇಕಾಗಿದೆ

ಕಳೆದ ಬುಧವಾರ ಸಾಯಂಕಾಲ ೩||| ಘಂಟೆಯಲ್ಲಿ ನೀಲಗಿರಿಗೆ ದಯಮಾಡಿದ್ದ ಮದರಾಸ್ ಸೈನ್ಯಾಧಿಪತಿಗಳಾದ ಸರ್ ಜೇಂಸ್ ಡಾರ್ಮರ್ ದೊರೆಗಳವರು ಮರಣವನ್ನೈದಿದ ರೆಂದು ತಿಳಿಸಲು ವಿಷಾದಿಸುತ್ತೇವೆ ಮದರಾಸ್ ಕೋಟೆಗೆ ಸೇರಿದ ಎಲ್ಲಾ ಮಿಲಿಟರಿ ಸ್ಟೇಷನ್‌ಗಳಲ್ಲಿಯೂ ೧೫ ನಿಮಿಷ ತೋಪುಗಳು ಹಾರಿಸಲ್ಪಟ್ಟವು ೮—೧೦ದಿವಸಗಳಲ್ಲಿ ಸುಲೀ ಕಾರಿಗೆ ಹೋಗಿ ಹುಲಿಯಿಂದ ಒಂದು ಕಾಲು ಪಡಳನ್ನು ಕಳಕೊಂಡು ಅದರ ಬಾಧೆಯಿಂದಲೇ ಕಾಲವಾದರು

ನ್ಯೂಯಾರ್ಕ ನ ಒಬ್ಬ ಕೋಟ್ಯಾಧೀಶ್ವರನು ಸಂಚಾರ ಧ್ಯಾನಿ ಅಮೇರಿಕವನ್ನು ಬಿಟ್ಟು ಯೂರೋಪ್ ಖಂಡದ ನಾ ನಾ ರಾಜ್ಯಗಳಲ್ಲಿ ಸಂಚಾರ ಮಾಡುತ್ತಿದ್ದನು ಅದರ ಅವನು ಪ್ಯಾರಿಸ್ ಪಟ್ಟಣದಲ್ಲಿರುವಾಗ್ಗೆ ದುಮಕರಾರು ಬಂದು ಯಮ ಲೋಕವನ್ನು ನೋಡಿಕೊಂಡು ಬರುವದಕ್ಕೆ ಕರೆಕೊಂಡದ್ದ ರಿಂದ ಅವನು ಅವರ ಜೊತೆಯಲ್ಲಿ ಹೊರಟು ಹೋಗಬೇಕಾ ಯಿತು ಅವನು ಹೋಗುವದಕ್ಕೆ ಮುಂಚೆಯೇ ತನ್ನ ಆ ಸ್ತಿಯ ಪೈಕಿ ಅನೇಕವನ್ನು ಕೆಲವು ಧರ್ಮ ಕಾರ್ಯಗಳಿಗಾಗಿ ವಿನಿಯೋಗಿಸುವಂತೆ ಉಯಿಲು ಬರೆದು ಹೋದನು

ಹಿಂದುಗಳಲ್ಲಿ ಪ್ರಸ್ತ ಪ್ರಯೋಜನಗಳೇ ಮೊದಲಾದ ಸಂ ತೋಷ ಕಾಲಗಳಲ್ಲಿ ಸೂಳೆಯರನ್ನು ಕರೆಸಿ ವ್ಯಾಳ ಸಂಗೀತ ಮೊದಲಾದ್ದನ್ನು ಮಾಡಿಸುವದು ವಾಡಿಕೆಯಾಗಿದೆ ಎಂದು ಹೇಳಲೇ ಅವಶ್ಯವಿಲ್ಲವಷ್ಟೆ ಈಗ ಮದರಾಸಿನಲ್ಲಿ ಹಿಂದೂ ದೊಡ್ಡ ಮನುಷ್ಯರೆಲ್ಲರೂ ಸೇರಿ ಸ್ಥಳೆಮಾಡಿ ಅದರಲ್ಲಿ—ಇಂಥಾ ಉತ್ಸವಾದಿಕಾಲಗಳಲ್ಲಿ ಸೂಳೆಯರನ್ನು ಕರೆಸಿದರೆ ಅಂಥ ಪ್ರಸ್ತ ದವಾನಿಗೆ ಒಬ್ಬರೂ ಹೋಗಕೂಡದು ಎಂದು ಗೊತ್ತು ಮಾಡಿ ಇದಕ್ಕೆ ಮುಖ್ಯವಾಗಿ ಮದರಾಸ್ ಗೌರ್ನರವರ ಅನು ಮತಿಯನ್ನು ಪಡೆಯಬೇಕೆಂದು ಅವರಿಗೆ ಬರೆದುಕೊಂಡಿರು ತ್ತಾರೆ ಇದು ಅತ್ಯಂತ ಶ್ಲಾಘನೀಯವಾದ ವಿಚಾರವೇ ಸರಿ

ಜಾಂಜಿಬಾರಿನಿಂದ ಪ್ರಯಾಣ ಮಾಡುತ್ತಿದ್ದ ಒಂದು ಆ ರಬ್ಬೀಜನರ ಹಡಗಿಗೆ ಇಂಗ್ಲೀಷಿನವರ ಹಡಗಿ ಏನೂ ಪ್ರಸ್ತ ವಾಗದಂತೆ ಫ್ರೆಂಚ್ ಜನಗಳ ಬಾವುಟವನ್ನು ಕಟ್ಟಿಕೊಂಡು ಪ್ರಯಾಣ ಮಾಡುತ್ತಿರುವಲ್ಲಿ ಒಬ್ಬ ಫ್ರೆಂಚ್ ಕಾರ್ಗಸರಂಬ ಅಧಿಕಾರಿಯು ಅಕಸ್ಮಾತ್ತಾಗಿ ಅದನ್ನು ಪರೀಕ್ಷೆ ಮಾಡಬೇಕೆಂದು ನಿಲ್ಲಿಸಿ ಒಳಗೆಹೋಗಿ ನೋಡಿದಾಗ ಜಾಂಜಿಬಾರಿನಿಂದ ಕದ್ದು ಕೊಂಡು ಬಂದಿದ್ದ ಸುಮಾರು ೬೦ ಗುಲಾಮರು ಇದ್ದರು ಈಗ ಹಡಗಿನ ಅಧಿಕಾರಿಗಳನ್ನು ಹಿಡಿದು ನಿರ್ಬಂಧದಲ್ಲಿಟ್ಟಿರುತ್ತಾರೆ

ನೋಟಿಸ್.

ಮೈಸೂರು ದೇಶಸ್ಥರು ಮಹಾಯಾತ್ರೆಗೆ ಹೊರಟು ದಾರಿಯಲ್ಲಿ ದಳ್ಳಾಳಿಗಳಿಗೆ ಸಿಕ್ಕಿ ತ್ರಿಸ್ಥಳದಲ್ಲಿಯೂ ಪ್ರಶಸ್ತವಿಲ್ಲದ ಸ್ಥಳಗಳಲ್ಲಿ ಇಳಿದು ಹಣಕಾಸುಗಳಿಗೆ ಮೋಸಹೊಂದಿ ವಾಪಸು ಹೋಗುವದು ಕಂಡು ತಿಳಿಯಪಡಿಸುವದೇನಂದರೆ:— ೩೦ ವರುಷದ ಲಾಗಾಯಿತು ಗಯಾದಲ್ಲಿ ವಾಸ ಮಾಡುತ್ತಿದ್ದು ಈಗ ೮ ವರುಷದಿಂದ ಹನುಮಾನ್‌ಘಾಟಿಯಲ್ಲಿ ವಾಸಮಾಡುವ ಬೋಧಾಯನ ಕಾಶೀನಾಥಶಾಸ್ತ್ರೀ ಮನೆಗೆ ತಿಳಿದಂಥ ಸಜ್ಜನರು ಬಂದು ಇಳಿದುಕೊಂಡು ಅವರವರ ಐಶ್ವರ್ಯಾನುಸಾರ ತ್ರಿಸ್ಥಳದ ಯಾತ್ರೆ ಪೂರೈಸಿಕೊಂಡು ಸುಖದಲ್ಲಿ ಹಿಂದಕ್ಕೆ ಗಮನ ಮಾಡುತ್ತಾರೆ. ಪಂಚದ್ರಾವಿಡರ ಪೈಕಿ ಕರ್ನಾಟಕರು ವಿನಹಾ ಬಾಕಿ ಅಂದರೆ ಮಹಾರಾಷ್ಟ್ರ, ದ್ರಾವಿಡ ತೆಲುಗು ದೇಶಸ್ಥರು ಅವರವರ ಜನರನ್ನೇ ಹುಡುಕಿಕೊಂಡು ಹೋಗುತ್ತಾರೆ. ಕರ್ನಾಟಕರು ಮಾತ್ರ ತಿಳುವಳಿಕೆ ಇಲ್ಲದ ಕಂಡಕಡೆಗಳಲ್ಲಿ ಇಳಿದುಕೊಂಡು ಅನುಮಾನಪಟ್ಟು ಹೋಗುವದು ಅವಮಾನವಲ್ಲವೇ? ನಮ್ಮ ದೇಶಸ್ಥರು ಇಳಿಯುವದಕ್ಕಾಗಿ ೫,೦೦೦ರೂಪಾಯಿಗಳು ಮುಟ್ಟಿಸಿ ಉತ್ಕೃಷ್ಟವಾದ ಮನೆ ಹನುಮಾನ್‌ಘಾಟಿನಲ್ಲಿ ಕಟ್ಟಿ ಇರುತ್ತೇನೆ. ಸ್ನಾನಸ್ಥಾನಗಳಿಗೆ ಗಂಗಾ ಸಮೀಪವಾಗಿಯೂ ರಮಣೀಯವಾಗಿಯೂ ಇದೆ. ಇಚ್ಛೈಸಿ ಬರತಕ್ಕವರು ಮುಂಚಿತವಾಗಿ ಇಂಥಾ ದಿವಸ ಪ್ರಯಾಗಕ್ಕೆ ಬರುತ್ತೇವೆಂದು ತಿಳಿಸಿದಲ್ಲಿ ತ್ರಿಸ್ಥಳದ ಯಾತ್ರೆಯೂ ಶಕ್ತ್ಯಾನುಸಾರ ಮಾಡಿ, ದೇಶಕ್ಕೆ ಪ್ರಯಾಣ ಮಾಡಿಸಲು ತಕ್ಕ ಏರ್ಪಾಡು ಮಾಡುತ್ತೇನೆ.

ಬೋಧಾಯನ ಕಾಶೀನಾಥಶಾಸ್ತ್ರಿ
ಹನುಮಾನ್‌ಘಾಟ್—ಬನಾರಸ್.

ವೃತ್ತಾಂತ ಪತ್ರಿಕೆ.

೧೮೯೩ನೇ ಇಸವಿ ಮೆ ತಾ|| ೧೧ ನೇ ಗುರುವಾರ

ನೋಟಿಸ್.

ಮೈಸೂರು ಗವರ್ನ್‌ಮೆಂಟ್ ಎಕ್ಸೈಸ್ ಇಲಾಖೆ.

೧ ಬೆಂಗಳೂರು ಷಹರಿನಲ್ಲಿಯೂ, ಬೆಂಗಳೂರು ಡಿಸ್ಟ್ರಿಕ್ಟ್ ಶಿವಾಯಿ ಕಡಮೆ ಎಲ್ಲಾ ಡಿಸ್ಟ್ರಿಕ್ಟುಗಳಲ್ಲಿಯೂ, ೧೮೯೩ ನೇ ಇಸವಿ ಜುಲೈ ಗುರ್ರ್ರೆ ಲಾಗಾಯಿತು ೧೮೯೬ ನೇ ಇಸವಿ ಜೂನ್ ೩೦ ನೇ ತಾರೀಖಿಗೆ ಅಂತ್ಯವಾಗುವ ನಾಲ್ಕು ಸಾಲುಗಳಲ್ಲಿ ಬಾಂಡೆಡ್ ಕೋಠಿಗಳನ್ನು ಸ್ಥಾಪಿಸಿ, ಆ ಕೋಠಿಗಳಿಗೆ ಬೆಂಗಳೂರು ಬಳಿಯಿರುವ ಸರ್ಕಾರದ ಸೆಂಟ್ರಲ್ ಡಿಸ್ಟಿಲರಿಯಿಂದ ಷರಾಬನ್ನು ಬಗೆರ ಡ್ಯೂಟಿ ಯಾ ಬಗೆರ ಹಾಸಲೆ ನಿಂದ ತೆಗದುಕೊಂಡು ಹೋಗಿ ಆಯಾಯ ಕೋಠಿಗೆ ದಾಖಲಾಗಿರುವ ಷರಾಬು ಬಿಕರೀ ಫಿರ್ಕಾಗಳ ಗುತ್ತಿಗೆದಾರರಿಗೂ, ವ ಸ್ವತಂತ್ರವಾದ ಅಂಗಡಿ ಕಾರರಿಗೂ ಸರಬರಾಯಿ ಮಾಡುವ ಹಕ್ಕನ್ನು ಪಡೆಯಲಿಕ್ಕೆ ಅಪೇಕ್ಷಿಸುವ ಜನರು ದರಖಾಸ್ತುಗಳನ್ನು ಕೊಡಬಹುದು.

೨ ದರಖಾಸ್ತು ದಾರರು ಸದರಿ ಡಿಸ್ಟಿಲರಿಯಿಂದ ಒದಗಿಸಲ್ಪಡುವ ಷರಾಬಿನ ದರ ಗ್ಯಾಲನ್ನಿಗೆ ಅತ್ಯಂತ ಕಮ್ಮಿಯಾದ ಯಾವ ದರದ ಮೇಲೆ ಈ ಕಂಟ್ರಾಕ್ಟನ್ನು ಮಾಡಿಕೊಳ್ಳಲು ಅಪೇಕ್ಷಿಸುವರೋ ಅದನ್ನು ಅವರ ದರಖಾಸ್ತಿನಲ್ಲಿ ಉದಹರಿಸಬೇಕು. ಬೆಂಗಳೂರು ಷಹರಿಗಾಗಿ ಒಂದು ದರವನ್ನೂ, ಬೆಂಗಳೂರು ಡಿಸ್ಟ್ರಿಕ್ಟ್ ಶಿವಾಯಿ ಕಡಮೆ ಎಲ್ಲಾ ಡಿಸ್ಟ್ರಿಕ್ಟುಗಳ ಕೋಠಿಗಳಿಗಾಗಿ ಮತ್ತೊಂದು ದರವನ್ನೂ, ವಿವರಿಸಬೇಕು. ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಷರಾಬು ಬಿಕರೀ ಫಿರ್ಕಾಗಳ ಗುತ್ತಿಗೆದಾರರು ಅವರ ಸ್ವಂತ ಬಾಗವತಿನಿಂದ ಷರಾಬನ್ನು ಡಿಸ್ಟಿಲರಿಯಿಂದಲೇ ತೆಗೆದುಕೊಂಡು ಹೋಗುವರು. ಹಾಲಿ ಕಂಟ್ರಾಕ್ಟದಾರರಿಗೆ ಬೆಂಗಳೂರು ಷಹರಿಗೆ ದರ ಗ್ಯಾಲನ್ನಿಗೆ ಹತ್ತು ಪೈಗಳ ಪ್ರಕಾರವೂ ಬೆಂಗಳೂರು ಡಿಸ್ಟ್ರಿಕ್ಟ್ ಶಿವಾಯಿ ಕಡಮೆ ಎಲ್ಲಾ ಡಿಸ್ಟ್ರಿಕ್ಟುಗಳಿಗೆ ಮೂರು ಆಣೆ ಪ್ರಕಾರವೂ ರುಸುಂ ಸಲ್ಲುತ್ತೆ.

೩ ಬೆಂಗಳೂರು ಷಹರು ಬಗ್ಗೆ ಕೊಡುವ ದರಖಾಸ್ತು ನೊಡನೆ ೧೦೦ ರೂಪಾಯಿ ಮೊಬಲಗಿನ ಕೋಠಿಗಳ ಬಗ್ಗೆ ೫೦೦ ರೂಪಾಯಿ ಠೇವಣಿಯನ್ನು ಕಳುಹಿಸಿಕೊಡಬೇಕು. ಪ್ರತಿ ದರಖಾಸ್ತನ್ನು ಬೆಂಗಳೂರಲ್ಲಿ ಎಕ್ಸೈಸ್ ಕಮಿಷನರು ಸಾಹೇಬರವರಿಗೆ ೧೮೯೩ನೇ ಇಸವಿ ಮೇ ೧೮ನೇ ತಾರೀಖಿನ ಬೃಹಸ್ಪತಿವಾರ ಮಧ್ಯಾಹ್ನಕ್ಕೆ ಮುಂಚೆಯೇ ಬಂದು ಮುಟ್ಟುವಂತೆ ಕಳುಹಿಸಿಕೊಡಬೇಕು. ಆ ತಾರೀಖಿನ ತರುವಾಯ ಬರುವ ದರಖಾಸ್ತುಗಳು ಅಂಗೀಕರಿಸಲ್ಪಡುವದಿಲ್ಲವು. ದರಖಾಸ್ತುಗಳು, ಮಾಹರು ಮಾಡಿದ ದರಖಾಸ್ತು ದಾರರ ಸಮಕ್ಷಮ ಸದರಿ ಮೇ ೧೮ನೇ ತಾರೀಖಿನ ಮಧ್ಯಾಹ್ನ ೧೨ ಘಂಟೆಗೆ ಎಕ್ಸೈಸ್ ಕಮಿಷನರ್ ಸಾಹೇಬರವರಿಂದ ಒಡೆಯಲ್ಪಡುವವು.

೪ ಕಡಮೆ ತಾಲೂಕುಗಳು ಅಂದರೆ ಕೋಠಿಗಳ ಸ್ಥಳಗಳು, ಒಯ್ಯ ತಕ್ಕ ಷರಾಬಿನ ಮೊತ್ತ, ಬೇಸ್ಟೇಪ್ ಕಂಟ್ರಾಕ್ಟ್ ಮುಚ್ಚಳಿಕೆ ಷರತ್ತುಗಳು, ಮುಂತಾದ ವಿಷಯಗಳಿಗಾಗಿ ೧೮೯೩ನೇ ಇಸವಿ ಏಪ್ರಿಲ್ ೨೬ನೇ ತಾರೀಖಿನ ಮೈಸೂರು ಗೆಜೆಟ್ಟನ್ನೂ ಆ ತರುವಾಯ ಪ್ರಕಟವಾಗುವ ಗೆಜೇಟುಗಳನ್ನೂ ನೋಡಬೇಕು. ಅಥವ ಬೆಂಗಳೂರು ಕೋಟೆಯಲ್ಲಿರುವ ಎಕ್ಸೈಸ್ ಕಮಿಷನರ್ ಆಫೀಸಿಗೆ ರೂಬರೂಬು ಬಂದು ತಿಳಿದುಕೊಳ್ಳಬಹುದು.

೧೮೯೩ ನೇ ಇಸವಿ }
ಮೆ ತಾರೀಖು ೨ }

L. RICKETTS,
Excise Commissioner
in Mysore.

ರೇಟ್ ಪೇಯರುಗಳ ಮೀಟಿಂಗ್.

ಕಳೆದ ತಿಂಗಳಿನಲ್ಲಿ ರೇಟ್ ಪೇಯರುಗಳ ಅಸೋಸಿಯೇಷನಿನ ಜನರಲ್ ಮೀಟಿಂಗ್ ನಡೆದದ್ದನ್ನೂ, ಇದುವರೆಗೂ ಈ ಸಂಘಕ್ಕೆ ಕಾರ್ಯದರ್ಶಿಗಳಾಗಿದ್ದ ಮ|| ಅತ್ತಿಪೇಟೆ ಕೃಷ್ಣರಾಯರವರೂ, ಮ|| ಪ್ಲೀಡರ್ ಸುಬ್ರಾಯರವರೂ ಇವರಿಬ್ಬರೂ ಕೆಲಸದಗಲಾವಣೆಗಳಿಂದ ಈ ಸಂಘದ ಕಾರ್ಯದರ್ಶಿತ್ವಕ್ಕೆ ರಾಜೀನಾಮೆ ಕೊಟ್ಟಿದ್ದನ್ನೂ, ಇವರಿಬ್ಬರಿಗೆ ಬದಲಾಗಿ ಅಪ್ಪೋತೇಕರಾದ ಮ|| ಕೆ. ಚಂದ್ರಶೇಖರಯ್ಯ ಬಿ.ಎ., ಬಿ.ಎಲ್ ರವರೂ ಮತ್ತು ಮ|| ಎಂ, ನರಸಿಂಹಸ್ವಾಮಿಯವರೂ ಕಾರ್ಯದರ್ಶಿಗಳಾಗಿ ನೇಮಿಸಲ್ಪಟ್ಟಿದ್ದನ್ನೂ ಸಭೆಯ ಕಾರ್ಯಗಳು ನಿರ್ವಿಘ್ನವಾಗಿಯೂ, ಸರ್ವ ಸಮಾಧಾನವಾಗಿಯೂ ನಡೆಯುವ ದಕ್ಕೋಸ್ಕರ ಮೊದಲಿನಿಂದಲೂ ಈ ಸಭೆಯ ಪ್ರವರ್ಧೋತ್ಕರ್ಷ ಕ್ರಮಿಸುತ್ತಿದ್ದ ಮ|| ಎಂ. ಸಿ. ರಂಗಯ್ಯಂಗಾರ್ ಬಿ. ಎ. ರವರನ್ನು ಜಾಯಿಂ ಪ್ರೆಸಿಡೆಂಟಾಗಿಯೂ, ನಾವು ಪೂರ್ವದಲ್ಲೇ ತಿಳಿಸಿದ ಪ್ರಜಾರಂಜಕ ಬುದ್ಧಿಯುಳ್ಳ ದೊಡ್ಡ ಮನುಷ್ಯರನ್ನು ಎಕ್ಸಿಕ್ಯುಟಿವ್ ಕಮಿಟಿಯ ಮೆಂಬರುಗಳಾಗಿಯೂ ಮಾಡಿದ್ದರಷ್ಟೆ. ಅದೇ ಮೀಟಿಂಗಿನಲ್ಲಿ ಪ್ರತಿ ತಿಂಗಳು ಮೊದಲನೇ ಶನಿವಾರದ ದಿವಸ ಎಕ್ಸಿಕ್ಯುಟಿವ್ ಕಮಿಟೀ ಮೀಟಿಂಗ್ ಮಾಡಿ ಈ ಪುರನಿವಾಸಿಗಳಿಗುಂಟಾಗತಕ್ಕ ನ್ಯೂನತೆ ಕ್ಲೇಶಗಳನ್ನು ಬೋರ್ಡಿಗೆ ತಿಳಿಸಬೇಕೆಂದು ನಿಧಾನಿಸಲಾಗಿತ್ತು. ಈ ರೆಜೊಲ್ಯೂಷನಿಗೆ ಅನುಸಾರವಾಗಿ ಕಳೆದ ಶನಿವಾರ ಎಕ್ಸಿಕ್ಯುಟಿವ್ ಕಮಿಟಿಯವರ ಮೀಟಿಂಗ್ ನಡೆಯಿತು. ಇಪ್ಪತ್ತು ಜನ ಕಮಿಟೀ ಮೆಂಬರುಗಳ ಪೈಕಿ ಹದಿಮೂರು ಜನ ಮೀಟಿಂಗಿಗೆ ದಯಮಾಡಿಸಿದ್ದರು. ಈ ಸಂಘದ ಪ್ರೆಸಿಡೆಂಟ್ರಾದ ಮ|| ರಂಗಯ್ಯಂಗಾರ್ಯರವರು ಅಗ್ರಾಸನವನ್ನು ವಹಿಸಿದ್ದರು. ಕೂಡಲೆ ಈ ಸಂಘಕ್ಕೆ ಒಂದು ಭವನವನ್ನು ಕಟ್ಟಿಸಬೇಕೆಂಬದಾಗಿಯೂ, ಪ್ರಿಂಟಿಂಗ್ ಮತ್ತು ಸಾದಿಲ್ವಾರ್ ಮೊದಲಾದ ವರ್ಚಿಗೆ ಸ್ವಲ್ಪ ದ್ರವ್ಯ ಬೇಕಾಗುತ್ತದೆಂಬದಾಗಿಯೂ ಚರ್ಚೆ ನಡೆಯಿತು. ತರುವಾಯ ಈ ಬಾಬತ್ತು ವರ್ಚಿಗೋಸ್ಕರ ಈ ಸಂಘದ ಮೆಂಬರುಗಳೆಲ್ಲರೂ ವರುಷಕ್ಕೆ ಒಂದು ಚಂದಾವನ್ನು ಕೊಡಬೇಕೆಂಬದಾಗಿಯೂ, ಇದಕ್ಕೋಸ್ಕರ ಒಂದು ಚಂದಾ ಬುಕ್ಕನ್ನು ಇಡಬೇಕೆಂಬದಾಗಿಯೂ ನಿಷ್ಕರ್ಷೆಯಾಯಿತು. ಈ ಎಕ್ಸಿಕ್ಯುಟಿವ್ ಕಮಿಟೀಗೆ ಸೇರಿದ್ದ ಮ|| ಕೆ. ನಾರಾಯಣಸ್ವಾಮಿಯಂಗಾರ್ಯರವರು ತಮ್ಮ ಕೆಲಸದ ಗಲಾವಣೆಯ ಉದ್ದೆಶ್ಯ ಎಕ್ಸಿಕ್ಯುಟಿವ್ ಕಮಿಟೀ ಮೆಂಬರಾಗಿರುವದಕ್ಕೆ ಅನಿವಾರ್ಯ ಹಾಗು ವದರಿಂದ ಕೆಲಸಕ್ಕೆ ರಾಜೀನಾಮೆಯನ್ನು ಕೊಟ್ಟರು. ಅದಕ್ಕೆ ಮ|| ಬಿ. ಸಿ. ಶ್ರೀನಿವಾಸಯ್ಯಂಗಾರ್ಯರವರನ್ನು ಮತ್ತು ಈ ಸಂಘಕ್ಕೆ ಅಡಿಷನಲ್ ಮೆಂಬರಾಗಿ ಮ|| ಎಂ. ಸುಬ್ರಹ್ಮಣ್ಯ ಅರಸಿನವರನ್ನೂ ನೇಮಕಮಾಡಿದರು. ಈ ಸಂಘದ ಪ್ರೊಸೀಡಿಂಗ್ಸೆಲ್ಲಾ ಕನ್ನಡದಲ್ಲೇ ಇಡಬೇಕೆಂಬದಾಗಿ ನಿಧಾನಿತವಾಯಿತು. ಕಳೆದುಹೋದ ಮೀಟಿಂಗಿನಲ್ಲಿ ಆದ ರೆಜೊಲ್ಯೂಷನುಗಳಲ್ಲಿ ಬೋರ್ಡಿಗೆ ಸಂಬಂಧಪಟ್ಟ ವಿಷಯಗಳನ್ನು ಬೋರ್ಡ್ ಪ್ರೆಸಿಡೆಂಟ್ರವರಾದ ಮ|| ಎ. ರಂಗಸ್ವಾಮಿಯಂಗಾರ್ಯರಿಗೆ ಕಳುಹಿಸಲ್ಪಟ್ಟಿತು, ಅವರು ಆ ರೆಜೊಲ್ಯೂಷನುಗಳಲ್ಲಿ ಹಲವು ವಿಷಯಗಳನ್ನು ಕೂಡಲೆ ಜಾರಿಗೆ ತರಬೇಕೆಂದು ವೈಸ್ ಪ್ರೆಸಿಡೆಂಟ್ರವರಿಗೆ ಸದರಿ ರೆಜೊಲ್ಯೂಷನುಗಳನ್ನು ಕಳುಹಿಸಿದ್ದಲ್ಲದೆ ಈ ಸಂಗತಿಯ ವಿಷಯದಲ್ಲಿ ಮಾಡತಕ್ಕ ಏರ್ಪಾಡನ್ನು ಕುರಿತು, ಈ ಸಂಘದ ಕಾರ್ಯದರ್ಶಿಗಳಿಗೆ ಲೇಖನವನ್ನು ಬರೆದಿದ್ದರು. ಈ ಲೇಖನವು ಮೀಟಿಂಗಿನಲ್ಲಿ ಓದಲ್ಪಟ್ಟು ರೇಟ್ ಪೇಯರುಗಳ ತಿಳುವಳಿಕೆಯ ಬಗ್ಗೆ ಪ್ರಕಟಿಸಲ್ಪಡಬೇಕೆಂಬದಾಗಿಯೂ ನಿಧಾನಿತವಾಯಿತು. ಈ ಸಂಘದ ತಿಳುವಳಿಕೆಯ ಬಗ್ಗೆ ಪ್ರತಿ ತಿಂಗಳಲ್ಲಿಯೂ ನಡೆಯತಕ್ಕ ಬೋರ್ಡ್ ಮೀಟಿಂಗ್ ಪ್ರೊಸೀಡಿಂಗ್ಸಿನ ಕಾಪಿಯನ್ನು ಈ ಸಂಘಕ್ಕೆ ಸರಬರಾಯಿ ಮಾಡಬೇಕೆಂದು ಪ್ರೆಸಿಡೆಂಟ್ರವರಿಗೆ ಬರೆಯುವಂತೆ ರೆಜೊಲ್ಯೂಷನ್ ಆಯಿತು. ಒಬ್ಬ ಮೆಂಬರು ಹಿಡಿಯಬೇಕಾದ ವಿಷಯದಲ್ಲಿ ಕೆಲವು ಏರ್ಪಾಡುಗಳನ್ನು ಸೂಚಿಸಿದರು. ಅದರ ಮೇಲೆ ಈ ವಿಷಯದಲ್ಲಿ ಈಗ ಜಾರಿಯಲ್ಲಿ ಇರತಕ್ಕ ಏರ್ಪಾಡುಗಳನ್ನು ವಿಮರ್ಶಿಸಿ ತಿಳಿಸಬೇಕೆಂಬದಾಗಿ ಸಿವಿಲ್ ಸರ್ಜನ್ ರವರಿಗೆ ಒಂದು ಲೇಖನವನ್ನು ಬರೆದು ಅವರ ಜವಾಬು ಬಂದಮೇಲೆ ಈ ವಿಷಯದಲ್ಲಿ ಕಮಿಟಿಯವರು ಅವಶ್ಯಕವಾದ ಏರ್ಪಾಡುಗಳನ್ನು ಬೋರ್ಡಿನ ಪ್ರೆಸಿಡೆಂಟ್ರವರಿಗೆ ಬರೆಯಬಹುದೆಂದು ನಿಷ್ಕರ್ಷೆಯಾಯಿತು. ಬೀದಿಗಳಲ್ಲಿರತಕ್ಕ ಲಾಂದ್ರಗಳನ್ನು ಹತ್ತಿಸುವ ವಿಷಯದಲ್ಲಿ ಈಗ ಇರತಕ್ಕ ಏರ್ಪಾಡು ಸಮರ್ಪಕವಾಗಿ ಇಲ್ಲವೆಂದು ಚರ್ಚೆಯಾಯಿತು. ಈ ಚರ್ಚೆಯಲ್ಲಿ ಅನೇಕ ಲಾಂದ್ರಗಳಲ್ಲಿ ಬುಡ್ಡಿಗಳನ್ನೂ ಲಾಂದ್ರಗಳನ್ನೂ ನಿರ್ಮಲವಾಗಿರುವಂತೆ ತೊಳೆಯುವದಿಲ್ಲವೆಂಬದಾಗಿಯೂ, ಬುಡ್ಡಿಗಳಿಗೆ ಸ್ರಾವ ಯೆಣ್ಣೆ ಹಾಕದೆ ಇರುವದರಿಂದ ಸ್ವಲ್ಪ ಹೊತ್ತಿನಲ್ಲಿಯೇ ಬುಡ್ಡೀ ಕಾದ ಯೆಣ್ಣೆಯು ಬೇಗ ಬರಿದಾಗುವದಲ್ಲದೆ ಹೊಗೇ ತುಂಬಿಕೊಂಡು ಲಾಂದ್ರ, ಬುಡ್ಡಿಗಳನ್ನು ಮಲಿನ ಮಾಡಿ, ಆ ದೀಪಗಳಿಂದ ಪ್ರಯೋಜನವಿಲ್ಲದ ಹಾಗೆ ಮಾಡುತ್ತಾರೆಂಬದಾಗಿಯೂ, ಕಳವು ಕೆಲವು ಲಾಂದ್ರಗಳಲ್ಲಿ, ಕೆಲವು ಸ್ಥಳಗಳಲ್ಲಿ ದೀಪ ಬಹಳ ಸೂಕ್ಷ್ಮವಾಗಿ ಕಾಣುತ್ತದೆ. ಮೊರ್ಡ ಆ ದೀಪದ ಬೆಳಕಿನಿಂದ ರಸ್ತೆಯೂ ಕೂಡ ಕಾಣಿಸುವದಿಲ್ಲವೆಂಬದಾಗಿಯೂ, ಜನಗಳು ಅನೇಕರು ತಿರುಗತಕ್ಕ ಸ್ಥಳಗಳಲ್ಲಿ ದೀಪದ ಕಂಭಗಳೇ ಇಲ್ಲವೆಂಬದಾಗಿಯೂ, ಕೃಷ್ಣಪಕ್ಷದಲ್ಲಿ ದೀಪಗಳು ರಾತ್ರಿಯೆಲ್ಲಾ ಉರಿಯುವಂತೆ ಮಾಡಬೇಕಾದ್ದಲ್ಲದೆ ಮೇಲೆ ಹೇಳಿದ ನ್ಯೂನತೆಗಳನ್ನು ಕೂಡ ಪರಿಹಾರ ಮಾಡಬೇಕೆಂದು ಬೋರ್ಡಿನ ಪ್ರೆಸಿಡೆಂಟ್ರವರಿಗೆ ಬರೆಯಬೇಕೆಂಬದಾಗಿಯೂ ನಿಧಾನಿತವಾಯಿತು. ಶ್ವರ ಮೊದಲಿಯಲ್ಲಿ ದೇವಾಂಗದವರ ಬೀದಿಯಲ್ಲಿ ರತಕ್ಕ ಕೊಳವು ಜನಗಳಿಗೆ ಅನಾನುಕೂಲವಾಗಿರುವದರಿಂದ ಅದನ್ನು ಆಜಾಗಾಯಿಷಿಯಿಂದ ಮುಚ್ಚಿಸಬೇಕೆಂದು ಪ್ರೆಸಿಡೆಂಟ್ರವರಿಗೆ ತಿಳಿಸಬೇಕೆಂಬದಾಗಿ ತೀರ್ಮಾನವಾಯಿತು. ಕಳೆದ ಮೀಟಿಂಗಿನಲ್ಲಿ ಮಾಡಿದ ರೆಜೊಲ್ಯೂಷನುಗಳನ್ನು ಕೂಡಲೆ ಜಾರಿಗೆ ತರುವಂತೆ ಏರ್ಪಾಡು ಮಾಡಿದ್ದಕ್ಕೋಸ್ಕರ ಪ್ರೆಸಿಡೆಂಟ್ರವರಿಗೆ ಈ ಸಂಘದವರ ವಂದನೆಯನ್ನು ತಿಳಿಸಬೇಕೆಂಬದಾಗಿಯೂ, ಈ ಕಮಿಟಿಯಲ್ಲಿ ಅಗ್ರಾಸನವನ್ನು ವಹಿಸಿ ಕೆಲಸಗಳನ್ನು ಸರಿಯಾಗಿ ಜರುಗಿಸಿದ್ದಕ್ಕೋಸ್ಕರ ಮ|| ಎಂ. ಸಿ. ರಂಗಯ್ಯಂಗಾರ್ರವರು ಕಮಿಟಿಯವರ ವಂದನೆಯನ್ನು ಸ್ವೀಕರಿಸಬೇಕೆಂಬದಾಗಿಯೂ ಹೇಳಿ ಆ ದಿವಸದ ಮೀಟಿಂಗನ್ನು ಬರಖಾಸ್ತು ಮಾಡಿದರು. ಈ ಸಂಘವು ಬಹುದಿವಸಗಳಿಂದ ನಿದ್ರೆಯನ್ನು ಮಾಡುತ್ತಿತ್ತು. ಈಗ ಎಚ್ಚರವನ್ನು ಹೊಂದಿದೆ. ಈಗ ನೇಮಕವಾಗಿರತಕ್ಕ ಕಾರ್ಯದರ್ಶಿಗಳೂ, ಪ್ರೆಸಿಡೆಂಟೂ, ಅನ್ಯಾದೃಶವಾದ ಸ್ವದೇಶಾಭಿಮಾನದಿಂದ ಪುರನಿವಾಸಿಗಳ ಯೋಗಕ್ಷೇಮ ಚಿಂತೆಯನ್ನು ಮಾಡುತ್ತಲಿದ್ದಾರೆ. ಎಕ್ಸಿಕ್ಯುಟಿವ್ ಕಮಿಟಿ ಮೆಂಬರುಗಳೂ ಕೂಡ ಇವರಂತೆಯೇ ಪುರದ ಯೋಗಕ್ಷೇಮಾಭಿಮಾನಿಗಳಾಗಿದ್ದಾರೆ. ಬೋರ್ಡ್ ಪ್ರೆಸಿಡೆಂಟ್ರವರಾದ ಮ|| ರಂಗಸ್ವಾಮಿಯಂಗಾರ್ರವರೂ ಈ ಸಭೆಯನ್ನು ಪ್ರವರ್ಧೋಭಿವೃದ್ಧಿಗೆ ತರಬೇಕೆಂದು ಇವರು ಮಾಡತಕ್ಕ ರೆಜೊಲ್ಯೂಷನುಗಳಿಗೆ ಪುರಸ್ಕಾರವನ್ನು ಸಾವಕಾಶವಿಲ್ಲದೆ ಕಲ್ಪಿಸುತ್ತಲಿದ್ದಾರೆ. ಇವರೆಲ್ಲರಿಗೂ ಈ ಉತ್ಸಾಹವೂ ಪ್ರಜಾರಂಜಕ ಬುದ್ಧಿಯೂ ಇದೇ ರೀತಿಯಲ್ಲಿರಬೇಕೆಂಬದಾಗಿಯೂ ಇನ್ನೂ ವೃದ್ಧಿಯಾಗಬೇಕೆಂಬದಾಗಿಯೂ, ಇವರೆಲ್ಲರೂ ತಮ್ಮ ಪ್ರಧಾನೋದ್ದೇಶವಾದ ಈ ಪುರನಿವಾಸಿಗಳ ಯೋಗಕ್ಷೇಮ ಚಿಂತೆಯಿಂದ ಈ ಪುರನಿವಾಸಿಗಳ ಕೃತಜ್ಞತೆಗೆ ಪಾತ್ರರಾಗಬೇಕೆಂಬದಾಗಿಯೂ ನಾವು ಕೋರುತ್ತೇವೆ.

ಬಹಿರ್ದೇಶ ವೃತ್ತಾಂತಗಳು.

(ಶಿಮ್ಲಾ) —

ಶ್ರೀಮನ್ಮಹಾರಾಜರವರು ಇದೇ ತಿಂಗಳು ೧೮—೨೦ ನೇ ತಾರೀಖಿಗೆ ರಾಜಧಾನಿಗೆ ದಯಮಾಡಬಹುದೆಂದು ವರ್ತಮಾನವಿದೆ

ಕಳೆದ ಭಾನುವಾರ ಜಾಸೆಫಾದ ನವಾಬರು ಬೆಂಗಳೂರಿಗೆ ಬರುವಸಾಹೇಬರು ಮಾರನೇದಿವಸ್ಸು ಅವರ ಆಗಮನ ಸೂಚಕವಾದ ೧೧ ತೋಪುಗಳು ಹಾರಿಸಲ್ಪಟ್ಟವು ಈ ನವಾಬರು ಇಲ್ಲಿಗೂ ಬರಬಹುದೆಂದು ವರ್ತಮಾನವಿದೆ

ಶ್ರೀಮನ್ಮಹಾರಾಜರವರು ಇದೇತಿಂಗಳು ೧೫ ನೇ ತಾರೀಖಿನ ದಿವಸ ಸಾಯಂಕಾಲ ೫ ಘಂಟೆಗೆ ಫರ್ನ್‌ಹಿಲ್ ಎಂಬ ಬಂಗಲೆಯಲ್ಲಿ ಅನೇಕ ಮಂದಿ ಯೂರೋಪಿಯನ್ ಸರ್ದಾರ್ರುಗಳಿಗೆ ಔತಣವನ್ನು ಮಾಡಿಸುವರಾಗಿ ಗೊತ್ತು ಮಾಡಿರುವಂತೆ ಕೇಳುತ್ತೇವೆ

ಕಳೆದ ವಾರದಲ್ಲಿ ೨—೩ ಸಲ ಮಳೆಯಾಯಿತು ದಿವಸ ಸಾಯಂಕಾಲಗಳಲ್ಲಿ ಸ್ವಲ್ಪ ಹನಿಗಳು ಬೀಳುತ್ತಲೇ ಇವೆ ಕೆರೆ ಕಟ್ಟೆಗಳಿಗೆ ಸುಮಾರಾಗಿ ನೀರು ಬಂದಿದೆ ಜನರು ಹೊಸ ನೀರನ್ನು ಕುಡಿಯುವದಕ್ಕೆ ಬದಲಾಗಿ ಅದನ್ನು ಕಾಯಿಸಿ ಕುಡಿಯುವದು ಆರೋಗ್ಯ ಕಾರಣವಿದ್ದು

ನರಸಿಂಹಾಚಾರ್ಯರೆಂಬ ವಾಗ್ಮಿನಪ್ರವರು ಬೊಂಬಾಯಿಗೆ ಹೋಗಿ ಅಲ್ಲಿ ಮೃಗಾದಿಗಳ ಚಿತ್ರಗಳನ್ನು ಮಾಡುವ ವಿದ್ಯೆ ಕಲಿತು ಅಲ್ಲಿ ಪ್ಯಾಸ್ ಮಾಡಿ ಬಂದಿರುತ್ತಾರೆ ಇವರಿಗೆ ಸ್ವಲ್ಪ ದಿವಸಗಳಲ್ಲೇ ಶ್ರೀಮನ್ಮಹಾರಾಜರವರ ಬಾಸ್ ಬಂಗಲೆಯಲ್ಲಿ ಕೆಲಸ ನೇಮಕ ಮಾಡುತ್ತಾರೆಂದು ನಿರೀಕ್ಷಿಸುತ್ತೇವೆ

ಶ್ರೀಮನ್ಮಹಾರಾಣಿಯವರ ಬಾಲಿಕಾ ಪಾಠಶಾಲೆಗೆ ಬಂಗಾಳದಿಂದ ಕರೆಸಿರುವ ಉಪಾಧ್ಯಾಯಿನಿಯರು ಕನ್ಯೆಯರನ್ನು, ಸಂಗೀತ, ಚಿತ್ರಗಳನ್ನು ಕಲಿಯುವದರಲ್ಲಿ ದಕ್ಷರಾಗಿರುತ್ತಾರೆ ಇವರಿಗೆ ಇಂಗ್ಲಿಷ್ ಮತ್ತು ಸಂಸ್ಕೃತ ವಿದ್ಯೆಗಳಲ್ಲಿ ತೋಟದ ಪರಿಚಯ ಇರುವದರಿಂದ ಕೆಲವು ಕಾಲದಲ್ಲೇ ಈ ವಿದ್ಯೆಗಳನ್ನು ಕಲಿತುಕೊಳ್ಳುವದರಲ್ಲಿ ಸಂಶಯವಿಲ್ಲ

ಧೀರೋಷ್ಮ ದೇಶದವರು ಕೆಲಸವನ್ನು ಕಲಿತುಕೊಂಡು ಬರುವದಕ್ಕಾಗಿ ಮೈಸೂರು ಸರ್ಕಾರದವರು ಪಿ ಎಸ್ ಗೋವಿಂದರಾವ್ ಎಂಬ ಯುವಕನನ್ನು ವಿದ್ಯಾರ್ಥಿ ವೇತನ ಕೊಟ್ಟು ಉತ್ತರ ದೇಶದಲ್ಲಿರುವ ಕೀರ್ಕಿ ಎಂಬ ಕಾಲೇಜಿಗೆ ಕಳುಹಿಸಿದ್ದರು ಇವರು ಆಲ್ಲಿನ ಪರೀಕ್ಷೆಯಲ್ಲಿ ಪ್ಯಾಸಾಗಿ ಇಲ್ಲಿಗೆ ಬಂದಿರುತ್ತಾರೆ, ಇವರನ್ನು ರೇಂಜರ್ ಕೆಲಸದ ಮೇಲೆ ಚಿಕ್ಕಬಳ್ಳಾಪುರಕ್ಕೆ ಹಾಕಿರುತ್ತಾರೆಂದು ಕೇಳುತ್ತೇವೆ

ಬೊಂಬಾಯಿ ಗವರ್ನರವರ ಲಾರ್ಡ್ ಹ್ಯಾರಿಸ್‌ರವರು ಸಹ ಕುಟುಂಬವಾಗಿಯೂ ಪರಿವಾರ ಸಮೇತರಾಗಿಯೂ ಬೊಂಬಾಯಿಯಿಂದ ಹೊರಡಿದವರು ಉದ್ದೇಶವಾಗಿ ನೀಲಗಿರಿಗೆ ದಯಮಾಡಿರುತ್ತಾರಷ್ಟೆ ನೀಲಗಿರಿಯಿಂದ ವಾಪಸು ಬೊಂಬಾಯಿಗೆ ದಯಮಾಡುವ ಕಾಲದಲ್ಲಿ ಸದರಿ ಮಾರಾಟೀ ರೈಲ್ವೇ ಮಾರ್ಗವಾಗಿ ಮೈಸೂರಿನ ಮೇಲೆ ದಯಮಾಡುವರಾಗಿ ಪತ್ರಿಕೆಗಳು ತಿಳಿಸಿರುತ್ತವೆ ಈ ವರ್ತಮಾನವು ನಂಬುವದಕ್ಕೆ ಎಷ್ಟು ಮಟ್ಟಿಗೆ ಅರ್ಹವಾದದ್ದೋ ನಮಗೆ ಸಂದೇಹವಾಗಿದೆ

ಕೆಲವು ದಿವಸಗಳ ಕೆಳಗೆ ಇಲ್ಲಿನ ಸಪಠಾಪಾದಿನಲ್ಲಿ ಒಂದು ಘೋರವಾದ ಕೊಲೆಪಾತಕವು ನಡೆಯಿತಂತೆ, ಕೊಲೆಯನ್ನು ನಡೆಸಿದವನು ಪರಾರಿ ಯಾದನೆಂದೂ ತಿಳಿಸಿದ್ದೆವಷ್ಟೆ ಹೋದ ವಾರದಲ್ಲಿ ಪೋಲೀಸಿನವರು ಅವನನ್ನು ಹಿಡಿದು ತಂದಿದ್ದರಂತೆ ಆದರೆ ದಾರಿಯಲ್ಲಿ ಅವನು ಅವರಿಗೆ ಚಕ್ಕರ ಕೊಟ್ಟು ಹೊರಟು ಹೋದನು ಅದೇ ಪೋಲೀಸಿನವರು ಪುನಃ ಅವನನ್ನು ಹಿಡಿದು ತರುವದಕ್ಕಾಗಿ ಕಳುಹಿಸಲ್ಪಟ್ಟಿದ್ದಾರೆ ಹಿಡಿದು ತಂದಿದ್ದವನನ್ನು ಬಿಟ್ಟು ಬಿಡುವದಕ್ಕೆ ಅವರೇನು ಸೋಮಾರಿಗಳಾಗಿದ್ದರೋ ಎಂದು ಹೇಳ ಬೇಕಾಗಿದೆ.

ಚಾಮುಂಡೀ ಪಟ್ಟದ ದೇವಸ್ಥಾನದ ನೌಕರರಲ್ಲೊಬ್ಬನು ಎಣ್ಣೇ ಕದ್ದನೆಂದು ಪಾರುಪತ್ತೇಗಾರರು ರಿಪೋರ್ಟ್ ಮಾಡಿದ್ದರಮೇಲೆ ಅದನ್ನೇ ಆಫೀಸರವರು ಕ್ರಿಮಿನಲ್ ಪ್ರಾಸಿಕ್ಯೂಷನ್ ಮಾಡಿಸಬೇಕೆಂದು ಹುಕುಂ ಮಾಡಿರುವಂತೆ ಕೇಳುತ್ತೇವೆ ಆದರೆ ಆ ಮನುಷ್ಯನು ಪಾರುಪತ್ತೇಗಾರರೇ ತನ್ನ ಕೈಗೆ ಎಣ್ಣೇ ಗಡಿಗೆಯನ್ನು ಕೊಟ್ಟು ತಮ್ಮ ಮನೆಗೆ ಕೊಟ್ಟುಬಾ ಎಂದು ಹೇಳಿದ್ದರಿಂದಲೇ ತಾನು ಹೊರಕ್ಕೆ ಹೋಗುವಲ್ಲಿ ಎಣ್ಣೇ ಕದ್ದುಕೊಂಡು ಹೋಗುತ್ತಾನೆಂದು ಪ್ರಕಾರ ಮಾಡಿದರೆಂತಲೂ ಹೇಳುವಂತೆ ಕೇಳುತ್ತೇವೆ ಯಾರ್ಯಾರ ಯೋಗ್ಯತೆ ಎಂಥಾದ್ದಾಗಿರುವದೋ ಪ್ರಾಸಿಕ್ಯೂಷನ್ ವಿಚಾರಣೆಯಲ್ಲಿ ಗೊತ್ತಾಗದೆ ಇರುವದಿಲ್ಲವಷ್ಟೆ.

ಇದೇ ಮೇ ತಿಂಗಳು ಮೊದಲನೇ ತಾರೀಖಿನಿಂದ ಚಾಮರಾಜನಗರದಲ್ಲಿ ಅಸಿಸ್ಟೆಂಟರ ಮೇಲ್ವಿಚಾರಣೆಯಿಂದ ಒಂದು ಇಂಗ್ಲೀಷ್ ಸ್ಕೂಲ್ ಏರ್ಪಾಡಾಗಿದೆ ಸ್ಕೂಲಿಗೆ ಇದರ ಖರ್ಚಿನ ಭಾರವನ್ನು ಅಲ್ಲಿನ ರೈತರೇ ವಹಿಸಿಕೊಳ್ಳುವಂತೆ ಮಾಡಿ ಅದಕ್ಕೆ ತಾವೇ ಮಾದರಿಯನ್ನು ತೋರಿಸಿದ್ದಾರೆ ಈ ಸಂಗತಿ ಮಿಸ್ಟರ್ ವಸ್ತಿರಂಗಾಗಿ ಸುಮಾರು ೩೦ ಮಾಡುವರಿಗೆ ದ್ರವ್ಯ ಸಹಾಯ ಮಾಡುತ್ತಿದ್ದಾರೆ ಹೀಗೆ ನಾನಾ ರೀತಿಯಲ್ಲಿ ಅವರು ಆ ದೇಶದ ಪ್ರಜೆಗಳ ಹಿತ ಸಾಧಕರಾಗಿರುವುದರಿಂದ ಅವರ ಪ್ರೀತಿಯನ್ನು ಸಂಪಾದಿಸುವುದಲ್ಲದೆ ಮೇಲ್ಪಟ್ಟ ಅಧಿಕಾರಿಗಳಲ್ಲೂ ಗಣ್ಯತೆಯನ್ನು ಪಡೆಯುವದರಲ್ಲಿ ಸಂಶಯವಿಲ್ಲವೆಂದು ನಂಬಿದ್ದೇವೆ

ರಾಜಧಾನಿಯಲ್ಲಿರುವ ಜೈಲಿನವರಿಗೆ ಮ|| ಪಾರ್ಕರ್ ಸಾಹೇಬರು ಜೈಲರಾಗಿ ಇರುತ್ತಾರಷ್ಟೆ ಇವರು ಪೂರ್ಣ ವಯೋವೃದ್ಧರಾಗಿರುವುದರಿಂದ ಅವರಿಗೆ ಈಗ ಪಿಂಚನ್ ಕೊಡುವರೆಂತಲೂ, ಬೆಂಗಳೂರಿನಲ್ಲಿ ಇಂಜನಿಯರಿಂಗ್ ಕಂಟ್ರಾಕ್ಟರಾಗಿರುವ ಮ|| ಲಿಸಿಚಿ ಎಂಬವರನ್ನು ಇಲ್ಲಿನ ಜೈಲರಾಗಿ ನೇಮಿಸುವರೆಂತಲೂ ಕೇಳುತ್ತೇವೆ ಇದು ನಿಜವಾದ ಪಕ್ಷದಲ್ಲಿ ಬಡಿಗೆಯವನನ್ನು ಟಪ್ಪಾಲು ಕೆಲಸಕ್ಕೆ ನೇಮಿಸಿದಂತೆ ಆಗುವದಲ್ಲದೇ ಬಹು ಕಾಲದಿಂದಲೂ ಬಡ್ತಿಯನ್ನು ಅಪೇಕ್ಷಿಸುತ್ತಾ ಚಾತಕ ಪಕ್ಷಿಗಳಂತೆ ಬಾಯಿ ಬಿಟ್ಟುಕೊಂಡಿರುವ ಉದ್ಯೋಗಿಗಳಿಗೆ ಸೊನ್ನೆ ಸುತ್ತಬೇಕಾಗುತ್ತೆ ಹೀಗೆ ಮಾಡುವದು ನ್ಯಾಯವಲ್ಲವೆಂದು ಧೈರ್ಯವಾಗಿ ಹೇಳುತ್ತೇವೆ

ಕಳೆದ ... ನೇ ತಾರೀಖಿನಲ್ಲಿ ತಂತೀವರ್ತಮಾನದ ಮೂಲಕ ವರಿಗೆ ತಿಳಿಯಪಡಿಸಿದ ಮಹಮೋದ್ಯ ಹಬ್ಬದ ... ರವೇನಂದರೆ—ನಗರದ ತಾಲ್ಲೋಕಿನ ಸೇರಿದ ಕ... ಗಳಲ್ಲಿ ಆ ದಿನ ರಾತ್ರಿ ವಿದ್ಯುತ್ತಾಗಿ ಮೋಡಗಳು ... ನೆಯೂ ಪ್ರಾರಂಭವಾಗಿ ಅನೇಕಸ್ಥಳಗಳ ... ಮಳೆ ... ... ಕಲ್ಲುಗಳು ... ಯಿಂದ ತೇಗು ... ತೀವ್ರವಾದ ಗಾಳಿಯಿಂದ ಹೊಡೆದು ... ಮಾವಿನ ಮರಗಳು ... ಮರಗಳು ಅವುಗಳಲ್ಲಿ ... ಸುಮಾರು ... ಒಬ್ಬ ಮನುಷ್ಯನನ್ನು ... ಬಿದ್ದ ... ಅನೇಕ ... ಕಡಿದು ಕೊಂಡು ... ಯಿತು ... ಜಲ್ಲಿಗಳು ... ಕಲ್ಲುಗಳ ... ನಿಂದ ... ಅಲ್ಲಿದ್ದ ... ಎಲ್ಲಿದ್ದವು ... ನೆ ಹಾನಿಯುಂಟಾಯಿತು.

ಇಲ್ಲಿನ ... ಜನರ ... ಪೋಲೀಸಿನವರು ... ಗಳ ... ಮಸ್ತು ... ಇಲ್ಲಿನ ಡಿಸ್ಟ್ರಿಕ್ಟ್ ... ನೌಕರರು ... ಮಾಡಿಕೊಂಡು ಇರುವಂತೆ ವರ್ತಮಾನ ಕೇಳುತ್ತೇವೆ ಇದು ನಿಜವಾಗಿದ್ದ ಪಕ್ಷದಲ್ಲಿ ಇವರಿಗೂ ಮ|| ... ಸಾಹೇಬರಿಗೂ ... ಇರುತ್ತದೆ ... ಇದನ್ನು ಕೇಳುವ ... ಸಂಗತಿಗಳು ನಮ್ಮ ... ಎಲ್ಲಾ ಸ್ಪಷ್ಟವಾಗಿ ... ಸರ್ಕಾರದಲ್ಲಿ ... ನೌಕರರು ... ಸಾಹೇಬರು ... ಈ ಸಂಗತಿಗಳು ... ಅನ್ಯಾಯ ... ಸಂಗತಿಯನ್ನು ಅಲ್ಲಿನ ಈ ನೌಕರರಿಗೆ ... ಕೊಳ್ಳುತ್ತೇವೆ

ಪೋದವಾರದಲ್ಲಿ ಒಂದು ದಿವಸ ರಾತ್ರಿ ಇಲ್ಲಿನ ... ಕೊಠಡಿಯಲ್ಲಿ ಅಲ್ಲಿನ ಒಬ್ಬ ಜವಾನನು ... ಮಲಗಿದ್ದಾಗ ... ಕೃಷ್ಣಪ್ಪನವರ ಪೆಟ್ಟಿಗೆಯಿಂದ ... ರೂಪಾಯಿಗಳನ್ನು ತೆಗೆದುಕೊಂಡು ಒಂದು ... ಹೋಗಿ ... ಕೊಂಡು ... ಕಂಟ್ರಾಕ್ಟುದಾರರು ಬಂದು ... ಪೊಲೀಸ್ ... ರೂಪಾಯಿಗಳನ್ನು ಕಳೆಕೊಂಡವರು ... ಅವನು ... ಅನಂತರ ಈ ... ಅವನನ್ನು ... ಕೈದಿ ... ಕೇಳುತ್ತೇವೆ

ಕೃಷ್ಣರಾಜಪೇಟೆ ತಾಲ್ಲೋಕು ... ಗ್ರಾಮದಲ್ಲಿ ಒಂದು ಗೌರ್ನಮೆಂಟ್ ಕನ್ನಡ ಪಾಠಶಾಲೆಯು ... ವಿದ್ಯಾವಿಷಯದಲ್ಲಿ ... ಗ್ರಾಮದಲ್ಲಿ ಜನರು ... ಮ|| ... ಅರ್ಜಿ ... ಈ ವಿಷಯವಾಗಿ ... ನಮ್ಮ ... ವಿಷಯದಲ್ಲಿ ... ಸರ್ಕಾರದವರು ಈ ವಿಷಯ

ವನ್ನು ಮನಸ್ಸಿಗೆ ತೆಗೆದುಕೊಂಡು ಆ ಸ್ಕೂಲನ್ನು ಪ್ರಜೆಗಳ ಉಪಯೋಗಕ್ಕೆ ಬರುವಂತೆ ... ಪಡೆಯಬೇಕೆಂದು ಕೋರುತ್ತೇವೆ

ಮ|| ವೀರಸಂಗಪ್ಪನವರು ಮ|| ಬಿ ಎಲ್ ಕಾಲೇಜ ... ಗಳವರೊಳಗೆ ... ಬಿ ಎ ... ವರ ... ಇಂದಿನ ... ಈ ... ಸಾವ ... ಕಾಳ ... ನವರ ... ಸಂಸ್ಥಾನದ ... ಸುಮಾರು ... ವಿರುಪಣ ... ಅನಂತರ ವೀರಸಂಗಪ್ಪನವರು ... ಗಡ ಒಂದು ... ಆ ದಿವಸ ... ನಡೆಯುತ್ತಾ ... ಮ|| ಆ ಚಂದ್ರಶೇಖರಯ್ಯನವರ ಮನೇ ... ಎತ್ತು ... ಬಳಗಿದ್ದ ... ಕೊಂಡಿದ್ದರು ... ಸಣ್ಣ ... ತು ... ಲ್ಲದೆ ... ಈ ಅಸಂಗತವು ... ವಿಚಾರದಲ್ಲಿ ... ಹೇಗನೆ ... ಲೀಸಿನವರು ... ಸಹಾಯಕ್ಕೆ ... ತುಂಬಾ ... ಕೊಂಡು ... ಮನುಷ್ಯ ... ಲ್ಲವೇ!! ...

ರೆಟ್ಟಿಪೇಟೆಯವರಿಗಳೆಂಬ ... ಈ ವಿಷಯದಲ್ಲಿ ... ತಮ್ಮ ಪತ್ರಿಕೆಯಲ್ಲಿ ... ಪತ್ರಿಕೆಯಲ್ಲಿ ... ಗಳನ್ನೆಲ್ಲಾ ... ವೃತ್ತಾಂತ ಪತ್ರಿಕೆಯ ... ಸರ್ಕಾರದ ... ಮುನಿಸಿಪಲ್ ... ಸರ್ಕಾರ ... ಮುನಿಸಿಪಾಲಿಟಿಗೆ ... ಕಳುಹಿಸುವದಕ್ಕೆ ... ಅಧಿಕಾರ ... ಪ್ರಜೆಗಳು ... ಸರ್ಕಾರದವರು ... ದೂರು ...

ಕರೆಸ್ಪಾಂಡೆನ್ಸ್.

ವೃತ್ತಾಂತ ಪತ್ರಿಕಾ ಎಡಿಟರವರ ಸ|| ಕ್ಕೆ

ಅಯ್ಯಾ, ನಾನು ಈ ಚಾಮರಾಜನಗರದಲ್ಲಿ ... ಇಲ್ಲಿ ... ಅಲ್ಲಿ ... ನೋಡಿದೆನು ... ಕೆಲಸ ... ಮ|| ನಿಜಾಮುದ್ದೀನ್ ಅಲ್ಲೀಖಾನ್ ಸಾಹೇಬರು ... ಎಂಬ ... ಸಾಹೇಬರು ... ಎಲ್ಲಾ ... ಮರಗಳನ್ನು ... ಅವರ ... ಈಗ ಅಲ್ಲಿಗೂ ... ಜನ ... ಸುತ್ತಲಿದ್ದ ... ಸುತ್ತುಮುತ್ತಲು ಕಲ್ಲು ... ಕಟಕಟಿ

ಗಳನ್ನು ಹಾಕಿಸಿ ... ಸ್ಥಾಪನೆ ... ಇಂಗ್ಲೀಷ್ ಪಾಠಶಾಲೆಗಳು ... ವೇಳೆಯಲ್ಲಿ ... ಈ ತಿಂಗಳ ... ಒಂದು ಇಂಗ್ಲೀಷ್ ಸ್ಕೂಲನ್ನು ... ಪ್ರಜೆಗಳ ... ಅವರ ... ಕಾಡು, ಕೋಳಿ, ... ಕೊಲ್ಲುತ್ತಾರೆ ... ಮುನಿಸಿಪಲ್ ... ಪಡಿಸುತ್ತೇನೆ

ಚಾಮರಾಜನಗರ } ತಮ್ಮ ವಿಧೇಯ,
೮—೫—೯೩ } J. I.

ವಿವಿಧ ವರ್ತಮಾನಗಳು.

ಶಿಕಾಗೋ ... ಮಹಾರಾಜರು ... ಸಿಂಗರವರ ... ಪಟ್ಟಣದಲ್ಲಿ ಕೊಂದಿದ್ದಾರೆ

ಬರ್ಮ ದೇಶಕ್ಕೆ ... ೫೦,೦೦೦ ... ಸ್ಥಾನಗಳು ...

ಕೆಲವು ದಿವಸಗಳಿಗೆ ... ರಾಜ್ಯದಲ್ಲಿ ... ರಾಜಧಾನಿಯ ... ರೈಲ್ವೇ ... ಆ ರಾಜ್ಯಕ್ಕೆ ... ಎಂದು ತಿಳಿಯಬಂದಿದೆ

ಸಂಯುಕ್ತ ಸಂಸ್ಥಾನಗಳಿಗೆ ಸೇರಿದ ಸಾಲ್ಟ್ ಲೇಕ್ ಸಿಟಿ ಎಂಬ ಪಟ್ಟಣದಲ್ಲಿ ... ಕಟ್ಟುತ್ತಿದ್ದ ... ಕೋಟಿ ರೂಪಾಯಿಗಳಂತೆ! ...

ಚಿಕಾಗೋ ಪಟ್ಟಣದ ಪ್ರದರ್ಶನ ಮಹೋತ್ಸವವನ್ನು ... ಪ್ರಸಿಡೆಂಟ್ ... ಪ್ರದರ್ಶನ ... ಹವೇನು?

ಡಂಡೀ ಎಂಬ ಪಟ್ಟಣದಲ್ಲಿ ಜಟಿ ಎಂಬ ನಾರಿನಲ್ಲಿ ಕೆಲಸ ಮಾಡುತ್ತಿದ್ದ ... ೫೦,೦೦೦ ... ಕೊಂಡಿರುತ್ತಾರೆ

ಮ್ಯಾಕ್ಸ್ ಮುಲ್ಲರ್ ಎಂಬ ಸಂಸ್ಕೃತ ಪಂಡಿತರು ... ಜರ್ಮನಿ ... ಸಂತೋಷಿಸುತ್ತೇವೆ

ಜರ್ಮನೀ ದೇಶದಲ್ಲಿ ... ಉಪಯೋಗಿಸುತ್ತಾರೆ ...

ಆಸ್ಟ್ರೇಲಿಯಾ ... ಪ್ರವೇಶ ... ೫೦,೦೦೦ ... ನ್ನಿನ್ನು!!

ಅಸ್ಸಾಂ ದೇಶದಲ್ಲಿ ಚಹಾ ... ವಿಧಿ

ರುತ್ತಾರೆ ... ಜಾತಿ, ... ಸನ್ನಿವೇಶದ ... ದರ ಈ ಸಂಗತಿ ಸರ್ಕಾರದವರು ... ಆಶ್ಚರ್ಯಕರವಾದ ಪದ್ಧತಿ ಹೇ ಸರಿ!

ಪೋರ್ತುಗಲ್ಲಿನ ರಾಜಧಾನಿಯಾದ ಲಿಸ್ಬನ್ ಪಟ್ಟಣದಲ್ಲಿ ದೊರೆಗಳು ... ಬೀದಿಗಳಲ್ಲಿ ... ಒಬ್ಬ ಮನುಷ್ಯನು, ದೊರೆಗಳ ಗಾಡಿಗೆ ಕಟ್ಟಿದ್ದ ಕುದುರೆಗಳನ್ನು ಹಿಡಿದು ನಿಲ್ಲಿಸಿಬಿಟ್ಟನು ಅನಂತರ ಅವನು ಏನು ಮಾಡುತ್ತಿದ್ದನೋ ತಿಳಿಯಲಿಲ್ಲ ... ಹಿಡಿದು ಟಾಣೆಗೆ ಸೇರಿಸಿದರು

ರೂಪಾಯಿನ ಬೆಲೆಯು ... ಇಂಡಿಯಾದಲ್ಲಿ ... ಅಧಿಕಾರಿಗಳು ... ಸರಿ ... ಪ್ರಯೋಜನವಾಗುವದರಲ್ಲಿ ಸಂಶಯವಿಲ್ಲವೆಂದು ನೆನಸುವ ಹಾಗಿದೆ

ಇಂಡಿಯಾ ಚಕ್ರವರ್ತಿನಿಯವರಾದ ಶ್ರೀ ವಿಕ್ಟೋರಿಯಾ ಮಹಾರಾಣಿಯವರು ಈಗ ಇಟಲೀ ದೇಶದ ರಾಜಧಾನಿಯಾದ ಫ್ಲಾರೆನ್ಸ್ ಪಟ್ಟಣದಲ್ಲಿದ್ದಾರಷ್ಟೆ ಕೆಲವು ದಿವಸಗಳಿಗೆ ಅವರು ಅಲ್ಲಿನ ... ನೋಡಿಕೊಂಡು ಬಂದರು ... ನೋಡಿ ತುಂಬಾ ಸಂತೋಷಪಟ್ಟರು

ನಿಜಾಮರವರ ಡಿಸ್ಟ್ರಿಕ್ಟ್ ... ಮ|| ಲಕ್ಷ್ಮೀ ನರಸಿಂಹಂ ಎಂಬವರು ... ವಿದ್ಯಾರ್ಥಿಗಳು ಇರುತ್ತಾರೆ ಅವರು ಇಂಗ್ಲೀಷನ್ನು ... ಮತ್ತಾರ ... ಪ್ರೈಸ್ ಬೇಡಬೇಡ!

ಉತ್ತರ ಅಮೇರಿಕದಲ್ಲಿರುವ ಯುನೈಟೆಡ್ ಸ್ಟೇಟ್ಸಿನಲ್ಲಿನ ಅನೇಕ ಭಾಗಗಳು, ಗ್ರಾಮಗಳು, ಸಣ್ಣ ಸಣ್ಣ ಪಟ್ಟಣಗಳು ... ಪ್ರಜೆಗಳ ... ಜನರು ... ಕೋಪ ...

ಕಳೆದ ... ಮಹಾರಾಜರು ... ಸರ್ ಜೇಮ್ಸ್ ... ದೊರೆಗಳವರು ... ಕಳೆಕೊಂಡು ...

ನ್ಯೂಯಾರ್ಕಿನ ಒಬ್ಬ ... ಅಮೇರಿಕವನ್ನು ... ರಾಜ್ಯಗಳಲ್ಲಿ ... ಲೋಕವನ್ನು ... ಹೊರಟು ... ಸ್ತ್ರೀಯು ...

ಇಂಡಿಯಗಳಲ್ಲಿ ... ಪ್ರಯೋಜನಗಳೇ ... ಹಿಂದೂ ... ಗೌರ್ನರವರ ... ಸರಿ

ಬೊಂಬಾಯಿನಿಂದ ಪ್ರಯಾಣ ... ಒಂದು ಆ ... ಇಂಗ್ಲೀಷಿನವರ ... ಅಧಿಕಾರಿಗಳನ್ನು ... ಸ್ಟೇಶನ್ ... ಅಧಿಕಾರಿಗಳನ್ನು ಹಿಡಿದು ಸಿಟ್ಟಿಗೆ ... ತ್ತಾರೆ

ಅವರಿಗೆಲ್ಲಾ ಪೂರಾ ಕ್ಷೇಮವಾಗಬಹುದೆಂದು ಊಹಿಸಲ್ಪಟ್ಟಿದೆ ಇವರು ಬಹುಕಾಲದಿಂದಲೂ ಒಂದು ಬೇರೆ ಮನುಷ್ಯರನ್ನು ಕರಕೊಂಡು ಹೋಗಿ ಸ್ಟೇರ ದೇಶಗಳಲ್ಲಿ ಮಾರುತ್ತಿದ್ದರು

ಅನಾಂ ಸಂಸ್ಥಾನದ ಮಹಾರಾಜರು ಇನ್ನೂ ಸ್ವಬುದ್ಧಿಯನ್ನು ಪಡೆದಿಲ್ಲವೆಂದು ಅವರ ಸಂಸ್ಥಾನದಲ್ಲಿ ರಾಜ್ಯವನ್ನು ಆಳುವದಕ್ಕೆ ಒಂದು ಸಭೆಯನ್ನು ಏರ್ಪಡಿಸಿರುತ್ತಾರೆ ರಾಜನು ಪದ್ಧತಿಗೆ ವಿರೋಧವಾಗಿ ಬೀದಿಗಳಲ್ಲಿ ಓಡುವ ಸಿಂಗೋಟಿನಲ್ಲಿ ಸವಾರಿ ಮಾಡಿದರೆಂದು, ಆ ಸಭಿಕರೆಲ್ಲರೂ ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟಿರುತ್ತಾರೆ ಇವರನ್ನು ಪುನಃ ಸಭೆಯ ಮೆಂಬರುಗಳಾಗಿ ಮಾಡುವದಕ್ಕೆ ಗೌರ್ನರ ಜನರಲ್‌ರವರೇ ಮಧ್ಯಸ್ಥ ಮಾಡಬೇಕಾಗಿದೆ ಎಂದು ಗೊತ್ತಾಗಿದೆ ರಾಜನು ಇನ್ನೂ ೧೫ ವರುಷ ವಯಸ್ಸಿನವನಾಗಿದ್ದಾಗ್ಯೂ ಆಗಲೇ ಅವನಿಗೆ ಮೂವರು ಹೆಂಡರಿರುತ್ತಾರೆ ಆ ಸಂಸ್ಥಾನದ ಮುಂದಣಸ್ಥಿತಿಯು ಏನಾಗುವದೋ ವಾಚಕರೇ ಊಹಿಸಿಕೊಳ್ಳಬಹುದಾಗಿದೆ!

ಬಂಗಾಳದಲ್ಲಿ ಒಬ್ಬ ಕುಲೀನ ಜಾತಿಯ ಬ್ರಾಹ್ಮಣನು ಇರುತ್ತಾನೆ ಅವನಿಗೆ ಈಗ ೬೦ ವರುಷಗಳಾಗಿರಬಹುದು ಆಗಲೇ ಅವನು ೩೩ ಮಂದಿ ಹೆಂಡತಿಯರನ್ನು ಮದುವೆ ಮಾಡಿಕೊಂಡಿರುತ್ತಾನೆ ಮತ್ತು ಇನ್ನೂ ಮದುವೆಮಾಡಿಕೊಳ್ಳುವದಕ್ಕೆ ಸಿದ್ಧನಾಗಿದ್ದಾನೆ ಇದರಿಂದ ಕುಲೀನ ಜಾತಿಯಲ್ಲಿ ಅತ್ತೀ ಹಣ್ಣಿನಲ್ಲಿರುವ ಹುಳಗಳಂತೆ ಕನ್ನಿಕೆಯರು ವಿಸ್ತಾರವಾಗಿರುತ್ತಾರೆಂಬುವದು ವ್ಯಕ್ತವಾಗುತ್ತೆ ಇವನಿಗೆ ಇನ್ನೂ ಕನ್ನಿಕೆಯರನ್ನು ಕೊಡುವವರಾಗಿ ಜನಗಳು ಮೇಲುಬಿದ್ದು ಬರುತ್ತಾರೆ ಯಾಕೆಂದರೆ ಇವನು ವರದಕ್ಷಿಣೆಯನ್ನು ವಿಪರೀತವಾಗಿ ಕೇಳದೆ, ಕೆಲವು ಬಟ್ಟೆಗಳ ಬ್ರಾಹ್ಮಣರನ್ನು ದಕ್ಷಿಣೆ ಅಪೇಕ್ಷಿಸುತ್ತಾನಾದ್ದರಿಂದ ಇವನ ಹೆಂಡತಿಯರು ಇನ್ನೂ ಹೆಚ್ಚಬಹುದೆಂದು ಊಹಿಸಬೇಕಾಗಿದೆ ಇಂಥಾ ಅಕೃತ್ಯವನ್ನು ಇದುವರೆಗೂ ಕೇಳಿರಲಿಲ್ಲ

ಜರ್ಮನೀದೇಶದಲ್ಲಿ ಒಬ್ಬ ವರ್ತಮಾನ ಪತ್ರಿಕಾಕರ್ತನು ತನ್ನ ಪತ್ರಿಕೆಯಲ್ಲಿ ತಮ್ಮ ಯುವರಾಜರನ್ನು ಕುರಿತು ಸಾಧಾರಣವಾಗಿ ದೊರೆಗಳು ಕಲಿಯಬೇಕಾದ ವಿದ್ಯೆಗಳು ಇಂಥ ಗುಣಗಳಿರಬೇಕೆಂದು ಒಳ್ಳೇ ಬುದ್ಧಿವಾದಗಳನ್ನು ಬರೆದಿದ್ದನು ಅಧಿಕಾರಿಗಳು ಇದರಿಂದ ತಮ್ಮ ಯುವರಾಜನಿಗೆ ಅವಮಾನವಾಯಿತೆಂದು, ಆ ವರ್ತಮಾನ ಪತ್ರಿಕಾಕರ್ತನನ್ನು ಕೋರ್ಟಿಗೆ ಎಳೆದು ಅವನಿಗೆ ೮ ತಿಂಗಳ ಸಜಾ ವಿಧಿಸಿದರು ಈ ವರ್ತಮಾನವು ಹೊರಗೂ, ಧೊರೆಯವರಿಗೂ ತಿಳಿದ ಕೂಡಲೆ ಆ ಪತ್ರಿಕೆಯನ್ನು ತರಿಸಿಕೊಂಡು ಅದರಲ್ಲಿ ವಿವರಿಸಿದ್ದ ವಿಷಯಗಳನ್ನು ಚನ್ನಾಗಿ ಓದಿನೋಡಿಕೊಂಡು—ಇದರಲ್ಲಿ ಒಳ್ಳೇ ಬುದ್ಧಿವಾದಗಳಿರುತ್ತವೆಯೇ ವಿನಹ ನನಗೆ ಅವಮಾನಕರವಾದ ಸಂಗತಿಗಳ್ಯಾವದೂ ಇಲ್ಲ, ಆತನಿಗೆ ವಿಧಿಸಿರುವ ಶಿಕ್ಷೆಯು ಅನ್ಯಾಯವಾದದ್ದೆಂದು, ಆ ಕೂಡಲೆ ಬೈದಿಯನ್ನು ಖುಲಾಸ ಮಾಡತಕ್ಕದ್ದೆಂದು ಹುಕುಂ ಮಾಡಿರುತ್ತಾರೆ ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟಿಸಿದ್ದನ್ನೇ ಅನುಸರಿಸಿ ನಡೆಯುವವರು ಎಲ್ಲಿದ್ದಾರೆ ಇಲ್ಲಿ ಅದರಿಂದ ವರ್ತಮಾನ ಪತ್ರಿಕೆಗಳ ಗೌರವವು ಎಂಥದ್ದೋ ವಾಚಕರೇ ಊಹಿಸಿಕೊಳ್ಳಬಹುದಾಗಿದೆ

ಪ್ರಶ್ನೋತ್ತರಗಳು.

ಹಿಂದೂ ಮತವಿವರಣಾಸಭೆಯ ಸಭಾಸದರಾದ ಎಂ ಬಿಟ್ಟನವರೆ ನೀವು ಕ್ರೈಸ್ತಮತ ಬೋಧಕರೆಗಳನ್ನು ಕುರಿತು ತಪ್ಪಾಗಿ ಯೋಚಿಸಿ ಜ್ಞಾನಹೀನರಾದ ಜನಗಳು ಕ್ರೈಸ್ತಮತವನ್ನು ಕುರಿತು ತಮ್ಮ ಮನಸ್ಸಿಗೆ ಬಂದಂತೆ ಪ್ರಶ್ನೆಗಳನ್ನು ಕೇಳುವ ರೀತಿಯಲ್ಲಿ ನೀವು ಸಹ ನಿಮ್ಮ ಮತದ ಸತ್ಯ ಸತ್ಯಗಳನ್ನು ಕ್ರೈಸ್ತಮತದ ಸಾರಾಂಶವನ್ನು ಅರಿಯದೆ ಮಾನುಷಬುದ್ಧಿಗೆ ಅನುಚಿತವಾದ ಪ್ರಶ್ನೆಗಳನ್ನು ಪತ್ರಿಕಾದ್ವಾರ ಹಾಕಿ ಅವುಗಳಿಗೆ ಸಮುತ್ತರಗಳನ್ನು ಬರೆಯಬೇಕೆಂದು ಕೇಳಿರುತ್ತೀರಿ

ನೀವು ಕೊಟ್ಟಿರುವ ೧೭ ಪ್ರಶ್ನೆಗಳನ್ನು ನೋಡಲಾಗಿ ನಿಮಗೆ ವಿವೇಕಬುದ್ಧಿ ಹುಟ್ಟುವದಕ್ಕೆ ಅನುಕೂಲವಾಗಲಿ ಎಂದು ನಮಗೆ ದುಃಖವಾಗುತ್ತದೆ ನಿಮ್ಮ ೧೭ ಪ್ರಶ್ನೆಗಳನ್ನು ನಾವು ಪರೀಕ್ಷಿಸಿ ನೋಡಲಾಗಿ ಅವೆಲ್ಲಾ ನಾಸ್ತಿಕ ಪ್ರಶ್ನೆಗಳಲ್ಲಿ ಬಳಗೊಂಡಿವೆ ಆ ನಾಸ್ತಿಕರ ಅಭಿಪ್ರಾಯಗಳನ್ನು ತಿಳಿಯುವದಕ್ಕೆ ಜ್ಞಾನವಿಲ್ಲದವರ ಹಾಗೆ ಅನೇಕ ಪ್ರಶ್ನೆಗಳನ್ನು ಬರೆದು ಇದ್ದೀರಿ ಅವರು ಕಲ್ಪನೆಯನ್ನು ಹಿಡಿದುಕೊಂಡಿದ್ದರೆ ಸಹ್ಯವಾಗಿ ಸಹ ಕಲ್ಪನೆ ವೇಷವನ್ನು ಹಾಕಿಕೊಂಡು ಕಲ್ಪನೆಯನ್ನು ಹಿಡಿಯುವಂತೆ ಅದಕ್ಕೆ ಉತ್ತರವನ್ನು ಬರೆಯುವ ಕ್ರೈಸ್ತಜ್ಞಾನಿಗಳೂ ಸಹ ನಿಮ್ಮ ಅಜ್ಞಾನದ ಪ್ರಶ್ನೆಗಳಿಗೆ ಉತ್ತರವನ್ನು ಬರೆಯುವ ಸ್ವಾತಂತ್ರ್ಯವನ್ನು ಅಜ್ಞಾನಕ್ಕೆ ತಿರುಗಿಸಬೇಕಾಗಿದೆ ಆದ್ದರಿಂದ ನಿಮ್ಮ ೧೭ ಪ್ರಶ್ನೆಗಳನ್ನು ಬಿಡದೆ ಒಂದೊಂದಾಗಿ ಬರೆದು ಅವುಗಳ್ಳುತ್ತರವನ್ನು ಕೊಡುತ್ತೇವೆ ನಿಮ್ಮ ಬುದ್ಧಿಯನ್ನು ಧರ್ಮಯುಕ್ತವಾಗಿ ಮಾಡಿಕೊಂಡು ದೇವನನ್ನು ತಿಳಿಯಬೇಕಾದರೆ ಜ್ಞಾನಿ ಗುರುಹತ್ತಿರ ಇದನ್ನು ಧರಿಸಿಕೊಂಡು ಓದಿ ಗ್ರಹಿಸತಕ್ಕವರಾಗಿ ಮುಂದೆಯಾದರೂ ಇಂಥಾ ನಿಸ್ಸಾರವಾದ ಪ್ರಶ್ನೆಗಳನ್ನು ಕೇಳುವದಕ್ಕೆ ನಿಮ್ಮ ಮನಸ್ಸೂ ಮುಂದಾಗದಂತೆ ನೋಡಿಕೊಳ್ಳಬೇಕು ಹಾಗೆ ಕೊಟ್ಟಲ್ಲವಾದರೆ ಇನ್ನೂ ಹೇಳಲಿ ಉತ್ತರಗಳು ದೊರೆಯಲಾರವು

೧ ಪ್ರಶ್ನೆ—ವಿನಾಶಕ್ಕೆ ವಿಲಕ್ಷಣಬುದ್ಧಿ ಎಂಬುವದು ಯಾರನ್ನು ಗುರಿಮಾಡುತ್ತದೆ?

ಉತ್ತರ—ಸೃಷ್ಟಿಕರ್ತನನ್ನು ಬಿಟ್ಟು ಸೃಷ್ಟಿಗಳನ್ನು ಪೂಜಿಸುವವರಿಗೂ ಸಾರುತ್ತಿರುವವರನ್ನು ತ್ಯಜಿಸುವುದು ಹಾಗೆ ದೇವರುಗಳಲ್ಲಿ ನಂಬಿಕೆ ಇಟ್ಟವರಿಗೂ ದೈವಸೃಷ್ಟಿಯಾದ ಮತಕ್ಕೆ ವಿರೋಧಿ ಕಂಠರುದ್ರಾರ್ದ್ರ ದುರಾಚಾರಿಗಳು ಪಾಪಾಚಾರ್ಯ ಪೂಜಾಚಾರಿಗಳು ಕಲ್ಪಿತ ಮತಗಳಲ್ಲಿ ಪ್ರವರ್ತಿಸುವವರಿಗೂ ವ್ಯ

ವಿಚಿತ್ರಕ್ಕೆ ವಿರೋಧವಾದ ಕೃತ್ಯಗಳನ್ನು ನಡೆಸುವವರಿಗೂ ಗುರಿಮಾಡುತ್ತದೆ

೨ ಪ್ರಶ್ನೆ—ಹಿಂದೂಗಳು ವಿಗ್ರಹಾರಾಧಕರೆಂಬುವದಕ್ಕೆ ಕ್ರೈಸ್ತರು ಯಾರನ್ನು ಆರಾಧಿಸುತ್ತಾರೆ?

ಉತ್ತರ—ಸ್ವಯಂಭೂತನಾದ ಕರ್ತನನ್ನು ಆರಾಧಿಸುತ್ತಾರೆ ಸೃಷ್ಟಿಕರ್ತನು ವಿಗ್ರಹವಲ್ಲ

೩ ಪ್ರಶ್ನೆ ವಿಗ್ರಹಗಳಿಂದ ನಿಮಗೆ ತಿಳಿಯದೆ ಇರುವ ಅಂಶಗಳ್ಯಾವವು?

ಉತ್ತರ—ವಿಗ್ರಹಗಳಿಂದ ನಿಮಗೆ ತಿಳಿದಿರುವದೇನು? ದೈವಲಕ್ಷಣಗಳು ಅವರಲ್ಲಿ ಗೊತ್ತಾಗುತ್ತವೆಯೋ? ಒಬ್ಬ ನಿಜವಾದ ಮನುಷ್ಯನಿಗಿಂತ ವಿಗ್ರಹಾರಾಧನೆ ಮಾಡುವದಕ್ಕೆ ಹೇಳಿದರೆ ಅವನು ಏನು ಹೇಳುವನು? ಈ ಪ್ರಶ್ನೆಯಿಂದ ದೈವಿಕವಾದ ಜ್ಞಾನವು ಬೇಕಾಗಿರುವವರು ಅಂತಃಕರಣ ಇಲ್ಲದವರು ಎಂದು ತೋರುತ್ತದೆ

೪ ಪ್ರಶ್ನೆ—ಕ್ರೈಸ್ತಮತದ ಶಿಕ್ಷಾದಿಕಗಳಿಂದ ನಿಮಗೆ ತಿಳಿಯುವ ಅಂಶಗಳ್ಯಾವವು?

ಉತ್ತರ—ಕ್ರೈಸ್ತಮತಕ್ಕೆ ಶಿಕ್ಷಾದಿಕಗಳು ಅವಶ್ಯವಿಲ್ಲ ಆದರಿಂದ ತಿಳಿಯತಕ್ಕದ್ದೂ ಏನೂ ಇಲ್ಲ ಆದರೆ ನಮ್ಮ ಪ್ರಭುವಾದವರು ಇಟ್ಟುಕೊಂಡಿದ್ದ ಅವನನ್ನು ಕೇಳಿದವರಿಗೆ ತಿಳಿಯಪಡಿಸಿದರು ಜ್ಞಾನವೂ ಕಡಿಮೆ

೫ ಪ್ರಶ್ನೆ—ಪರಮೇಶ್ವರನೆಂದರೆ ಅವತಾರಮೂರ್ತಿ ಯಾವ ಭಗವಂತನಲ್ಲವೆ?

ಉತ್ತರ—ಪರಮೇಶ್ವರನೆಂದರೆ ಅವತಾರಮೂರ್ತಿಯಲ್ಲ ಪರಮ ಅಂದರೆ ಶ್ರೇಷ್ಠವಾದ ಈಶ್ವರ ಅಂದರೆ ಜಗತ್ತಿನ ಪರಿಪಾಲಕನು ಇವನು ಅವತಾರವೆಂಬುವ ಅರ್ಥವು ಎಲ್ಲಿದೆ? ಶಬ್ದವಾದ ಶಬ್ದಕ್ಕೆ ತಕ್ಕಂಥ ಅರ್ಥವನ್ನು ಮಾಡಿ ಕೊಳ್ಳುವದಕ್ಕೂ ನಿಮ್ಮ ಅವಶ್ಯಕತೆಗೆ ಬೇಕಾದ ನಿಮ್ಮದೇವರ ಲಕ್ಷಣಾರ್ಥವನ್ನು ತಿಳಿಯದೆ ಜ್ಞಾನಹೀನರಾದ ಪರಮೇಶ್ವರ ಅಂದರೆ ಅವತಾರಮೂರ್ತಿಯಾದ ಭಗವಂತನೆಂದು ಹೇಳುವದು ಬುದ್ಧಿಹೀನರಿಗೆ ಸ್ವಭಾವವಲ್ಲ

೬ ಪ್ರಶ್ನೆ—ಕ್ರೈಸ್ತರು ಶಿಕ್ಷಾದಿಕಗಳನ್ನು ಯೇಸುಗುರುಮೂರ್ತಿ ಎಂದು ಆರಾಧಿಸುತ್ತಾರೆ ಹಿಂದೂಗಳು ಪರಮೇಶ್ವರನೆಂದು ವಿಗ್ರಹಗಳನ್ನು ಆರಾಧಿಸುತ್ತಾರೆ ಇದರಲ್ಲಿ ನಿಮಗೆ ಉಂಟಾಗುವ ನಿರ್ಬಂಧವೇನು?

ಉತ್ತರ—ಕ್ರೈಸ್ತರು ಶಿಕ್ಷಾದಿಕಗಳನ್ನು ಯೇಸುಗುರುಮೂರ್ತಿ ಎಂದು ಆರಾಧಿಸುವದಿಲ್ಲ ಹಾಗೆ ಆರಾಧಿಸುತ್ತಾರೆಂಬುವದಾದರೆ ಹಿಂದೂಗಳಂತೆ ಇಲ್ಲ ಕ್ರೈಸ್ತಮತದ ಆಚಾರಗಳ ಆಚಾರವಾಗಿದೆ ಗೋಷ್ಠಿಲ್ಲ ಶಿಕ್ಷಾದಿಕಗಳನ್ನು ಯೇಸುಗುರುಮೂರ್ತಿ ಎಂದು ಆರಾಧಿಸುವವರಿಗೂ ಪರಮೇಶ್ವರನೆಂದು ವಿಗ್ರಹವನ್ನು ಆರಾಧಿಸುವವರಿಗೂ ಹಾಗೆ ಆರಾಧನೆಯನ್ನು ಮಾಡುವವರೆಂದು ನಾವು ಬುದ್ಧಿಯನ್ನು ಹೇಳುವ ಪರಾಗಿರುತ್ತವೆ ವಿಗ್ರಹಾರಾಧನೆಯನ್ನು ಯಾವ ವಿಧದಲ್ಲಿ ಯಾರು ಮಾಡಿದಾಗ್ಯೂ ಅದನ್ನು ಸತ್ಯವೇದದ ವಾಕ್ಯಗಳು ತಿಪ್ಪಿಸಬೇಕೆಂದು ಹೇಳುವದಕ್ಕೆ ಎದೆಗುತ್ತದೆ ಈ ಅಜ್ಞಾನವು ಕಾರಣವು ಸಹೋದರರ ಹೋದರ ವೇದದ ನಿರ್ಣಯದಿಂದ

೭ ಪ್ರಶ್ನೆ—ವಿಗ್ರಹವನ್ನು ದೂಷಿಸಿದ್ದರಿಂದ ಅವರಿಗೆ ಬಹಳ ಗೌರವವೆ?

ಉತ್ತರ—ಕುಲಂತರವನ್ನು ಕುರುತಕೆಂದರಿಗಿಯೂ, ಕುಲಂತರವನ್ನು ಕುರುಹಿಕೊಂಡಿದ್ದಿಯಾ ಹೇಳಿದರೆ ಮಾನವೇನು? ಹಾಗಾದರೆ ವಿಗ್ರಹವನ್ನು ವಿಗ್ರಹವೆಂದರೆ ಅದಕ್ಕೆ ದೈವತ್ವವಿಲ್ಲವೆಂದೂ ಅವನ್ನು ಆರಾಧಿಸುವವರಿಗೆ ನರಕವು ಸಿದ್ಧವೆಂದು ಹೇಳುವದರಿಂದ ದೂಷಣವಲ್ಲ

೮ ಪ್ರಶ್ನೆ—ಜಗತ್ತನ್ನು ಸೃಷ್ಟಿಮಾಡಿದವನು ಪಾಪ್ರಕೃತಿಯಾದ ಭಗವಂತನೋ, ಅಥವಾ ಯೇಸುನೋ ಯೇಸುವು ಸೃಷ್ಟಿಮಾಡಿದ್ದ ಪಕ್ಷದಲ್ಲಿ ಹಿಂದೂ ಟಿಸ್ಟ್‌ದಲ್ಲಿ ಹೇಳುವಂತೆ ಕ್ರೈಸ್ತ ಟಿಸ್ಟದಲ್ಲಿ ಉದಾಹರಣೆಗಳನ್ನು ಕೊಡಿರಿ?

ಉತ್ತರ—ಸೃಷ್ಟಿ ವಿಷಯವಾಗಿ ಹಿಂದೂ ಶಾಸ್ತ್ರಗಳು ಹೇಳುವಂಥ ಸುಳ್ಳುಗಳನ್ನು ನೀವು ಚನ್ನಾಗಿ ಪರಿಶೀಲನೆ ಮಾಡಿದ್ದರೆ ಈ ಪ್ರಶ್ನೆಯನ್ನು ನೀವು ಕೇಳುತ್ತಿರಲಿಲ್ಲ ಋಗ್ವೇದಾಂತರ ಹಾಗೆ, ಋಗ್ವೇದ ೧೦ನೆ ಅಧ್ಯಾಯ ೯೦ನೆ ಪದಗಳನ್ನೂ, ಋಗ್ವೇದ ೧೦ನೆ ಅಧ್ಯಾಯ ೯೦, ೩೧ ಪದಗಳನ್ನೂ ಮತ್ತು ೧೦ನೆ ಅಧ್ಯಾಯ ೬೦ನೆ ಪದವನ್ನೂ, ೧೦ನೆ ಅಧ್ಯಾಯ ೧೨೦ನೆ ಪದವನ್ನು ನೋಡಬಹುದು ಮಾತ್ರವಲ್ಲದೆ, ಅಥರ್ವಣವೇದದಲ್ಲಿ ೧೦ನೆ ಅಧ್ಯಾಯ ೩-೧೨ನೆ ಪದಗಳನ್ನು ಸಹ ಓದಿ ಗ್ರಹಿಸಿರಿ ಇವು ಮಾತ್ರವಲ್ಲದೆ, ಶತಪಥಬ್ರಾಹ್ಮಣ ೩, ೧, ೧, ೧ನೆ ಅಧ್ಯಾಯ ೨ ೨ ಮತ್ತು ಶತಪಥಬ್ರಾಹ್ಮಣ ೧೧, ೧೨ ವಿಷ್ಣು ಪುರಾಣ ೧ನೆ ಭಾಗ ೨ನೆ ಅಧ್ಯಾಯ, ಭಾಗವತ ೩ನೆ ಸ್ಕಂಧ ೨ನೆ ಅಧ್ಯಾಯ ೬ನೆ ಶ್ಲೋಕವನ್ನೂ ಇವುಗಳೊಂದಿಗೆ ವರನ್ನು ಪರೀಕ್ಷಿಸಿ, ನಂತರ ವಿಷ್ಣುಪುರಾಣದ ವ್ಯಾಖ್ಯಾನವನ್ನು ಪೂರೈಸಿದರೆ ಎಷ್ಟು ಕಡ ಏನು ಮಾಡಿ ೧೦ನೆ ಸಂಧಿಸುವುದನ್ನು ಓದಿ, ಇವು ಗಳಿಗಿರುವ ವೈಷಮ್ಯಗಳ ಸಂಖ್ಯೆಗಳನ್ನು ಕಂಡು ಹಿಡಿದು ನೀವು ನಮ್ಮೊಡನೆ ಬೇಕಾ ತತ್ವಜ್ಞನಾದರೆ ಅವುಗಳ ಮೇಲಿರುವ ನಿಮ್ಮ ಭ್ರಮೆಯು ಹೋಗುವುದು ನಮ್ಮ ಸತ್ಯವೇದ ಪತ್ರಿಕೆಯನ್ನು ಪ್ರಾರಂಭದಿಂದಲೂ ಓದಿದನಂತರ ನಿಮಗೆ ಜಗತ್ತು ಸೃಷ್ಟಿಮಾಡಿದವನು ಭಗವಂತನೇ ಆದರೆ ಯೇಸುವೇ ಎಂಬುವದನ್ನು ವಿಶದವಾಗಿ ತಿಳಿಯುತ್ತದೆ

೯ ಪ್ರಶ್ನೆ—ಪೂರ್ವದಲ್ಲಿ ಹಿಂದೂಗಳಾಗಿದ್ದ ಕ್ರೈಸ್ತರಾಗುತ್ತಾರೆಯೇ? ಆದರೆ ಕ್ರೈಸ್ತರಾಗಿದ್ದ ಹಿಂದೂಗಳಾಗುತ್ತಾರೆಯೇ?

ಉತ್ತರ—ಪೂರ್ವದಲ್ಲಿ ಬ್ರಾಹ್ಮಣನಾಗಿದ್ದ ಬ್ರಾಹ್ಮಣರಾಗುತ್ತಾನೆಯೇ? ಅಥವಾ ಬ್ರಾಹ್ಮಣನಾಗಿದ್ದ ಶೂದ್ರನಾಗುತ್ತಾನೆಯೇ? ಇಲ್ಲಿ ಬ್ರಾಹ್ಮಣನಾಗುವುದು ಬ್ರಾಹ್ಮಣ ಎಂಬುವ ಅರ್ಥಕ್ಕೆ ನಾಮಕರಣವು ಬ್ರಾಹ್ಮಣನನ್ನು ಕುರಿತು ಹೇಳುತ್ತಿವೆ ಇದರಿಂದ ಬ್ರಾಹ್ಮಣನು ಬ್ರಾಹ್ಮಣನಾಗುವ ಪ್ರಕಾರ ಹಿಂದುವು ಕ್ರೈಸ್ತನಾಗುತ್ತಾನೆ ಮಾನವ ವರತು ಬ್ರಾಹ್ಮಣನು ಶೂದ್ರನಾಗುವಪ್ರಕಾರ ನಾಮವನ್ನು ಕ್ರೈಸ್ತನು ಹಿಂದುವಾಗುವದೂ ಉಂಟು

೧೦ ಪ್ರಶ್ನೆ—ಹಿಂದೂಗಳು ವಿಗ್ರಹಾರಾಧಕರಾಗಿ ಇರುವ ಪಾಪಕಾರಕರೆಂದು ಕ್ರೈಸ್ತರು ಎಂಬ ಸಾಮಾನ್ಯತೆ ವಿಷಯಗಳನ್ನು ತಿಳಿಸುವವೇನು?

ಉತ್ತರ—ಬ್ರಾಹ್ಮಣನು ತಿನ್ನುವದೇನು? ಶೂದ್ರನು ತಿನ್ನುವದೇನು? ಅಪವಿತ್ರತೆಯಲ್ಲಿ ವ್ಯತ್ಯಾಸವು ಯಾವದಿರುತ್ತದೆ? ಒಬ್ಬನು ಜೀವನಾಗಿರುವನೋ? ಕ್ರೈಸ್ತರಲ್ಲಿಯೂ ಅದೇ ಅಭಿಪ್ರಾಯವಿರುತ್ತದೆ ಒಂದು ಜೈಲಿನೊಳಕ್ಕೆ ಇಬ್ಬರು ಮನುಷ್ಯರು ಹೋಗುತ್ತಾರೆ ಒಬ್ಬನು ಜೈಲಿನಧಿಕಾರಿ ಮತ್ತೊಬ್ಬನು ಬಂಧನಕಾರಿ ಹೋಗುವವರಲ್ಲಿ ಅವರಿಬ್ಬರಲ್ಲಿ ವ್ಯತ್ಯಾಸವಿಲ್ಲದಿದ್ದಾಗ್ಯೂ ಕಾರ್ಯಕ್ಕೆ ಉಭಯತ್ರರಿಗೂ ವ್ಯತ್ಯಾಸವು ಕಾಣುವದು ಹಾಗೆಯೇ ವಿಗ್ರಹಾರಾಧಕರಿಗೂ ಕ್ರೈಸ್ತರಿಗೂ ಉಂಟಾದ ಯಾವದ್ವ್ಯತ್ಯಾಸವು ಕಾಣದೇ ಇದ್ದಾಗ್ಯೂ ಮನವರ್ತನೆ ಕಾಲದಲ್ಲಿ ವ್ಯತ್ಯಾಸವು ನೋಡುವಲ್ಲಿಯೂ ಕಾಣುವದು ಉಟ್ಟು ದಯಾ ಕಾಣುವವರೂ ಕ್ರೈಸ್ತಮತವಲ್ಲ ಆದ ವಿಗ್ರಹಾರಾಧಕರು ದೃಷ್ಟಾಂತರ ಧಾರಾಳದಲ್ಲಿ ಕೂಡ್ಡದ ದೇವರಿಗೆ ನ್ಯಾಯವನ್ನು ಎಂಬ ಕೊಲೆ ಕರ್ಮವನ್ನು ಹಿಡಿದಿದ್ದವೆ? ಹಾಗೇ ಭಕ್ತರಲ್ಲಿಯೂ ಪ್ರವರ್ತಿಸುವರು

೧೧ ಪ್ರಶ್ನೆ—ಹಿಂದೂಮತಕ್ಕೆ ಸ್ವಾಗಿದ್ದರೆ ತಾನು ಯಾವ ಸ್ಥಳದಲ್ಲಿಯಾದರೂ ಪ್ರತ್ಯಕ್ಷನಾಗಿ ಜಯಿಸುವವನು ಕ್ರೈಸ್ತಮತ ಸ್ಥಾಪನದ ಪ್ರೇಮವದಕ್ಕೆ ನಾಚಿಕೆ; ರಕ್ಷಿಪರೂ ದೊರೆಯುವ ದಿಲ್ಲ; ಇದಕ್ಕೇನು ಕಾರಣ?

ಉತ್ತರ—ಹಿಂದೂಮತಕ್ಕನು ಹುಡುಕುವವರಿಗೆ ಕ್ರೈಸ್ತಮತಕ್ಕನು ಪ್ರತ್ಯಕ್ಷನಾಗುವದಿಲ್ಲವೆಂದು ನಿಮ್ಮ ಪ್ರಶ್ನೆಯಿಂದ ಗೊತ್ತಾಗುತ್ತೆ ಹ್ಯಾಗಂದರೆ ಉಪಯೋಗವಾಗುವಲಕ್ಷಣ ನಿಮ್ಮ ದೃಷ್ಟಿಗಳು ಅವಲಕ್ಷಣವೆಂಬವಾಗಿ ನ್ಯಾಯ ಹೇಳುತ್ತ ಅದ್ಭುತ ಕ್ರೈಸ್ತರು ತಕ್ಕತಕ್ಕ ಉಪಯೋಗಗಳನ್ನು ಮಾಡುತ್ತಾರೆ ದೇವರು ಕೊಟ್ಟ ಶಕ್ತಿಯನ್ನು ಕಾಪಾಡಿಕೊಳ್ಳುವವ ಕ್ರೈಸ್ತರ ಪ್ರತಿಯೊಬ್ಬ ಮನುಷ್ಯನೂ ಕೆಲಸವನ್ನು ಬಲ್ಲೆನು, ಅದ್ದರಿಂದ ದೇವರು ಕೊಟ್ಟ ಶಕ್ತಿಯನ್ನು ಕಾಳಿಸಿಕೊಳ್ಳುವದು ಪಾಪವೆಂದು ಪ್ರತಿಯೊಬ್ಬ ಕ್ರೈಸ್ತನಿಗೂ ತಿಳಿದಿದೆ ಆದ್ದರಿಂದ ಪ್ರತಿಯೊಬ್ಬನೂ ಕೆಲಸವನ್ನು ಜಯಿಸಬೇಕೆಂಬ ಅಭಿಪ್ರಾಯವುಳ್ಳವರಾಗಿದ್ದರೆಯೋ ವಿನಹ ಭಿಕ್ಷವನ್ನು ಕೇಳುವ ಅವಯವಗಳನ್ನು ನಿರ್ಮೂಲಕ್ಕೆ ಯಾಕೆಯುವ ಪದ್ದತಿಲ್ಲ ಕ್ರೈಸ್ತರು ಬೇಕಾದವರು! ಯಾಚನನಿಂದ ಒಂದುವಿಧವಾದ ಪಾಪವೆಂದು ಅವರಿಗೆ ಗೊತ್ತುಂಟು ಹಾಗೇ ಬೆಷ್ಟನಿದ್ದರೂ ದೊರೆಯುವದು ದುರ್ಲಭವೇ ಎಂಬುವದು ನಿಶ್ಚಯ ಪಾಪಪಕ್ಷಿಯು ಕೊಕ್ಕರೆಯಾಗಲೇ ಬಿಡುವುದಿಲ್ಲದರೆ ಏನು ಕೊಡಿಸುವದು! ಹಾಗೆಯೇ ವಿಗ್ರಹಾರಾಧಕರಿಗೆ ಕ್ರೈಸ್ತ ಚಕ್ರರು ಬಂದು ಬೇಡಿದರೆ ಏನು ಕೊಟ್ಟಾರು?

೧೨ ಪ್ರಶ್ನೆ—ಕ್ರೈಸ್ತ ಬೋಧನೆಯಂತೆ ಆ ಮತವನ್ನು ಅವಲಂಬಿಸಿದ ಸ್ವಲ್ಪ ದಿವಸಗಳಲ್ಲಿಯೋ ಅನಾಚಾರಗಳುಳ್ಳವೆ ನಡೆಯುವದಿಲ್ಲವೆ?

ಉತ್ತರ—ಹಿಂದೂ ಮತವನ್ನು ಅವಲಂಬಿಸಿದವರು ಶ್ರೀಮಂತರಲ್ಲಿ ಹೆಚ್ಚಾಗಿ ವೃತ್ತಿಹಾದರೆ? ಅಥವಾ ಕ್ರೈಸ್ತ ಮತವನ್ನು ಅವಲಂಬಿಸಿದವರು ಹೆಚ್ಚಾಗಿ ನ್ಯಾಯತಪ್ಪಿದರೆ? ಮತ್ತು ಕ್ರೈಸ್ತ ಮತದವರು ಹೆಚ್ಚಾಗಿ ಪ್ರಜೆಗಳನ್ನು ಕಾಪಾಡಿದರೂ? ಅಥವಾ ಹಿಂದೂ ಮತಪಾಲಕರಿಗಳು ಹೆಚ್ಚಾಗಿ ಪ್ರಜೆಗಳನ್ನು ಕಾಪಾಡಿದರೋ? ಈಗಿರತಕ್ಕ ಅನಾಥಬಾಲಕರು ಪೃಧ್ವೀಂತರಗಳಾದೆಯಷ್ಟೆ ಅದ್ದರಿಂದ ಕ್ರೈಸ್ತ ಮತವು ಅನ್ನಾಡಿಗಳನ್ನು ತ್ಯಜಿಸಿ ಪ್ರತಿವಾಕ್ಯವಾಡಿಕೊಳ್ಳಬೇಕೆಂದು ಎಲ್ಲಿಗೂ ಹೇಳುವದಿಲ್ಲ ಆದರೆ ಅಸ್ತ ಅಸಾರದಿಗಳನ್ನು ಬಿಟ್ಟವರನ್ನು ಕಟ್ಟಿಸುವರುಗಳನ್ನು ಕಾಪಾಡುತ್ತದೆ

೧೩ ಪ್ರಶ್ನೆ—ಹಾಗೆ ನಂಬಿದವರ ಮೋಕ್ಷವು ಸಕಲ ಕಾರ ಯಾರ್ಯವನ್ನು ಬಿಟ್ಟಿದ್ದಾರೆ?

ಉತ್ತರ—ಜಿಹಾದ್ ಇಟ್ಟು ಸಿದ್ದಿಯಾಗಿ ಇರುವವರಿಗೆ ಜಯ ಪರವಾಗುವುದಿಲ್ಲವೋ ಧರ್ಮವು ಯಾವುದರ ಸತ್ಯದ ಅನುಸರಣೆಯನ್ನು ಹೊಂದಿದ್ದರೆ ವಿಗ್ರಹಾರಾಧಕರೊ ಏಕೆ ನ್ಯಾಯವಿಲ್ಲ ಮೋಕ್ಷಸಿದ್ಧಿ ಇಲ್ಲವೆಂದರಿಂದ ಸತ್ಯದ ನರಕಕ್ಕೆ ಸರಸರವೂ ಹ್ಯಾಗಂದರೆ ಸತ್ತ ಹೋಗಿದ್ದ ಸ್ವಾಮಿನಿಗೆ ಯಾವ ಪರಿಹಾರವೂ ಹ್ಯಾಗೆ ಇಲ್ಲ ಅವ ಹಾಗೆಯೇ ಬದ್ಧರೆ ಆನರ ಹಿಂದಾದ ಕ್ರೈಸ್ತನು ಸ್ವಮಿಚ್ಛೆ ಮೂಲ ಪರಲೋಕ ಕಾಂತಿ ಇಲ್ಲದವರಿಗೆ ಪತಿತನಿದ್ದರಿಂದ ಅವರು ಸತ್ತರೂ ಪರಲೋಕದಲ್ಲಿ ಜಯಿಸುವರು ಇಂಥಾ ಬಡುಕುವಿಕೆಯು ಯಾವ ಸುಕೃತ್ಯನಲ್ಲ ಯಾರ್ಯರು ನಿಜವಾದ ವಿಶ್ವಾಸವನ್ನಿಟ್ಟರೂ, ಅವರಲ್ಲರಿಗೂ ಉಂಟು

೧೪ ಪ್ರಶ್ನೆ—ಹಿಂದೂ ಮತಸ್ಥರು ಹುಟ್ಟುವದನ್ನು ಸಾಯುತ್ತಾರೆ ಕ್ರೈಸ್ತಮತಸ್ಥರೂ ಹುಟ್ಟುವ ಸಾಯುತ್ತಾರೆ ಇದಕ್ಕೆ ತಮ್ಮ ತಮ್ಮ ವ್ಯಾಜ್ಯಕ್ಕೆ ಸಾಕ್ಷಿಯುಂಟಿವೆ?

ಉತ್ತರ—ಹುಟ್ಟಿದವನು ಸಾಯುತ್ತಾನೆ, ಹಿಂದೂ ಮತಸ್ಥರೂ ಸಾಯುತ್ತಾರೆ ಇದಕ್ಕೆ ಏನಾದರೂ ಭೇದವಿಲ್ಲವೇ? ಹಾಗೆ ಭೇದವಿದ್ದರೆ ಹಿಂದೂ ಮರಣಕ್ಕೂ ನಿಜ ಕ್ರೈಸ್ತನ ಮರಣಕ್ಕೂ ಭೇದವುಂಟು

೧೫ ಪ್ರಶ್ನೆ—ಲೋಕಕಂಟಕರಾದ ದುಷ್ಟರನ್ನು ಕೊಲ್ಲುವದಕ್ಕೆ ಹಿಂದೆ ಏಸು ಅವತಾರವೆತ್ತಿ ದುಷ್ಟರನ್ನು ಸಂಹರಿಸಿದೆನೆಂದು ಹಿಂದೂ ಪುರಾಣಗಳಲ್ಲಿ ಹೇಳಿರುವಂತೆ ಕ್ರೈಸ್ತ ಪುರಾಣದಲ್ಲಿ ಹೇಳಿದ್ದರೆ ಅದನ್ನು ತಿಳಿಸಿರಿ?

ಉತ್ತರ—ಹಿಂದೂ ಪುರಾಣದಲ್ಲಿ ವಿಷ್ಣುವು ಯಾರ್ಯರಿಗೆ ಎಲ್ಲಿದ್ದ ಹ್ಯಾಗೆಂದು ಮೋಕ್ಷವನ್ನು ಕೊಟ್ಟನೆಂದು ಯಾವ ಪುರಾಣ, ಎಷ್ಟನೇ ಅಧ್ಯಾಯ, ಎಷ್ಟನೇ ಶ್ಲೋಕಗಳಲ್ಲಿ ಹೇಳಿರುತ್ತೆ ಎಂಬುವನ್ನು ಬರೆದು ಹಿಡಿ ಮತ್ತು ಮೋಕ್ಷವೆಂಬುವದಕ್ಕೆ ಅರ್ಥವೇನೆಂದು ನಿಮಗೆ ತಿಳಿದ ಹಾಗೂ ಅದರ ಸ್ವಭಾವ, ಸ್ಥಿತಿ, ಲಯಗಳಿಗೆ ಕಾರಣ ಭೂತರ್ಯಾರು! ನಿಜರನ್ನು ಬರೆದು ಪ್ರಕಟಿಸಿದರೆ ವಿವರಿಸಿದ ನಂತರ ನಿಮ್ಮ ಪರಿಶುದ್ಧರನ್ನು ಪ್ರಶ್ನೆಗೆ ಉತ್ತರ ಕೊಡುತ್ತಿವೆ

೧೬ ಪ್ರಶ್ನೆ—ಸ್ವರ್ಗವಾಗಿ ಹಿಂದೂ ವಿಗ್ರಹಗಳನ್ನು ದೂಷಿಸಿ ಕ್ರೈಸ್ತ ಮತದ ಶಿಕ್ಷಾದಿಕಗಳನ್ನು ಭೂಷಿಸಿ ಕ್ರೈಸ್ತನಾಕಕ್ಕೆ ಒಂದಂತರವಾಗಿ ಸೇರಿದರೆ ಅವನ ಸಂಸಾರ ಕಟ್ಟಿ ಹೋಗುವದರಿಂದ ಗೋಹತ್ಯ ಮಾಡಿದ ಪಾಪ ಬರುವದಿಲ್ಲವೇ?

ಉತ್ತರ—ಹಿಂದೂ ವಿಗ್ರಹವನ್ನು ದೂಷಿಸುವವರೂ ಇಲ್ಲ ಆ ಧವ ಕ್ರೈಸ್ತ ಮತದ ಶಿಕ್ಷಾದಿಕಗಳನ್ನು ಭೂಷಿಸುವವರೂ ಇಲ್ಲ ಕ್ರೈಸ್ತ ಮತದ ಶಿಕ್ಷಾದಿಕಗಳನ್ನು ಭೂಷಿಸುವವರೂ ನಿಮ್ಮಂಥಾ ವಿಗ್ರಹಾರಾಧಕರೇ ವಿನಹಾ ಅವರು ಕ್ರೈಸ್ತರಲ್ಲ ನಿಜವಾದ ಕ್ರೈಸ್ತರು ಸ್ವರ್ಗ ಕೆಲಸವನ್ನು ಎಂದಿಗೂ ಮಾಡುವದಿಲ್ಲ ಕ್ರೈಸ್ತಮತಕ್ಕೆ ಬಲನಂತರವಾಗಿ ಇತರರನ್ನು ಎಳೆದುಕೊಳ್ಳುವದೂ ಇಲ್ಲ ನೀವೆಲ್ಲರೂ ಪ್ರಶ್ನೆಯನ್ನು ಕೇಳತಕ್ಕವರಿಗೆ ಅದನ್ನು ಚನ್ನಾಗಿ ತಿಳಿದು ಸತ್ಯವನ್ನು ತಿಳಿಸಿ ಪಾಪಗಳ ಸತ್ಯಮಾರ್ಗಕ್ಕೆ ಕರೆಯುವವರಿಂದ ಅನೇಕ ಕೋಟಿ ಯಜ್ಞಗಳನ್ನು ಮಾಡಿದ ಪುಣ್ಯವು ಕ್ರೈಸ್ತಮತಾವಲಂಬಿಗಳಿಗೆ ಬೋಧಿಸುವವನಿಗೂ ಉಂಟಾಗುವದು

೧೭ ಪ್ರಶ್ನೆ—ನೀವು ಹಿಂದೆ ಯಾವ ಮತಸ್ಥರು? ಈಗ ಯಾವ ಮತದಲ್ಲಿದ್ದೀರಿ? ನಿಮ್ಮ ಮನವೇ ದೃಷ್ಟಾಂತರವಲ್ಲವೇ?

ಉತ್ತರ—ನಂಬಿಕೆಯಿಲ್ಲದ ಮತ್ತು ಆಶ್ರಯವಿಲ್ಲದ ಹಿಂದೂ ಮತದಲ್ಲಿದ್ದವು ಈಗ ಕೊಡುವ ಬ್ರಾಹ್ಮಣನಾದ ರೀತಿಯಲ್ಲಿ ನಾವು ಕ್ರಿಸ್ತ ಶ್ರದ್ಧಾಳುಗಳಾಗಿದ್ದೇವೆ

ಶಾಲೀವಾಹನಶಕ ೧೮೧೫ ನೇ ವಿಜಯನಾಮ ಸಂವತ್ಸರದ ವೈಶಾಖ ಬಹುಳ ಏಕಾದಶಿ ಗುರುವಾರದಿಂದ ಜ್ಯೇಷ್ಠ ಶುದ್ಧ ಬಿದಿಗೆ ಬುಧವಾರದ ವರೆಗಿನ ವಾರದ ಪಂಚಾಂಗ

೧೮೯೩ ನೇ ಇಸವಿ, ಮೆ.

ತಾ	ವಾರ.	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.	ವೈಶಾಖ ಮಾಸ ತೇದಿ.
11	ಗು	ಏ.	18-52	ಪೂ	39-57	30
12	ಶು.*	ದ್ವಾ	15-15	ಉ.	38-18	1
13	ಶ.	ತ್ರ	11-39	ರೆ	33-35	2
14	ರ	ಚ	6-40	ಅ.	35-31	3
15	ಸೋ	ಅ ಊದಿ	10-22	ಭ	51-19	4
16	ಮಂ	ಶು.	19-27	ಕೃ	21-36	5
17	ಬು	ಬಿ	13-12	ರೋ	20-26	6

* ನೃಸಿಂಹಜಯಂತಿ ವರ್ಧಂತಿ.

ಪೇಟೆ ಧಾರಣೆ.

ವಿವರ	ಮೈಸೂರು	ಬೆಂಗಳೂರು.
	ರೂ ಆ ಪೈ	ರೂ ಆ ಪೈ.
ಕಡ್ಡೀ ಅಕ್ಕಿ ಪಲ್ಲ ೧ಕ್ಕೆ	೧೨-೦-೦	೧೩-೦-೦
ಕೆಂಬೂತಿ ಅಕ್ಕಿ ಅವ್ವಲ್	೧೨-೧೩-೦	೧೦-೪-೦
ಡಿಟೋ ಅಕ್ಕಿ ದುಯಂ	೧೨-೬-೦	೯-೧೩-೦
ಜಾನಸಾಲೆ ಅಕ್ಕಿ	೧೨-೩-೦	೧೦-೮-೦
ಸಣ್ಣಕ್ಕಿ ಅವ್ವಲ್	೧೪-೦-೦	೧೩-೧೩-೬
ಡಿಟೋ ಅಕ್ಕಿ ದುಯಂ	೧೩-೦-೦	೧೦-೮-೦
ತೊಗರಿಬೇಳೆ ಪಲ್ಲ ೧ಕ್ಕೆ	೧೧-೪-೦	೧೩-೦-೦
ಡಿಟೋ ದುಯಂ ತರಹ	೧೨-೬-೦	೧೧-೦-೦
ಹ್ಯಾರಾಗಿ ಪಲ್ಲ ೧ಕ್ಕೆ	೪-೦-೦	ಗಾ ೩೮-೦-೦
ಕಾಲ್ರಾಗಿ	೭-೧೩-೦	ಮಾ ೩೯-೦-೦
ಜೋಳದ ಪಲ್ಲ ೧ಕ್ಕೆ	೧೨-೧೧-೦	೮-೧೩-೦
ಬಿಳೀ ಅವರೆ	೮-೧೩-೦	೯-೪-೦
ಹೆಸರು	೧೧-೦-೦	೧೦-೦-೦
ಉದ್ದು	೧೩-೦-೦	-೧೦-೦
ಕಡಲೆ	೧೦-೦-೦	೧೦-೦-೦
ಎಳ್ಳು	೧೫-೮-೦	೧೫-೮-೦
ಹುರುಳಿ	೬-೦-೦	೬-೧೩-೦
ಸಿಗೇಕಾಯಿ ಮಣ ೧ಕ್ಕೆ	೧-೮-೦	೨-೦-೦
ಹೊಣಸಿನಕಾಯಿ	೭-೦-೦	೨-೧೦-೦
ದುಯಂ ತರಹ	೨-೧೨-೦	೨-೬-೦
ಬೆಲ್ಲ ದೊಡ್ಡ ಅಚ್ಚು ೧೦೦ ಕ್ಕೆ	೬-೦-೦	ವಾ ೨-೬-೦
ಸಣ್ಣಚ್ಚು "	೭-೧೩-೦	ಮಿ|| ೨-೫-೦
ಒಳ್ಳೆಣ್ಣೆ ಮಣ ೧ಕ್ಕೆ	೪-೮-೦	೪-೮-೦
ಹರಳೆಣ್ಣೆ	೪-೪-೦	೪-೦-೬
ಕೊತ್ತುಂಬರಿ ಪಲ್ಲ ೧ಕ್ಕೆ	೭-೮-೦	೯-೮-೦
ಉಪ್ಪು	೯-೪-೦	೯-೮-೦
ಹೊಗೆಸೊಪ್ಪು ಮಣ ೧ಕ್ಕೆ	೧-೧೩-೦	೧-೧೩-೦
ಹಳೇ ಹೊಗೆಸೊಪ್ಪು	೧-೮-೦	೧-೬-೦
ತುಪ್ಪ	೧೭-೮-೦	೧೭-೪-೦
ಸೀಮೆ ಯಣ್ಣೆ ಪೆಟ್ಟಿ ೧ ಕ್ಕೆ	೬-೩-೭	೬-೭-೦
ತೆಂಗಿನಕಾಯಿ ೧೦೦ ಕ್ಕೆ	೬-೦-೦	೫-೬-೦
ಚಿನ್ನ (ತೊಲ)		
ಕೆಂಪು	೧೬-೧೫-೦	೧೬-೧೨-೦
ಹಸಿವು	೧೬-೭-೦	೧೬-೧೫-೦
ಗಟ್ಟಿ	೨೩-೬-೦	೨೩-೬-೦

Mysoro.—Printed and published for the Proprietor at the Wesleyan Mission Press.
11/5/93.

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. — ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೬ — ಮೈಸೂರು ಸನ್ ೧೮೯೪ ನೇ ಇಸವಿ ಮೇ ತಾರೀಖು ೧೮ ನೇ ಗುರುವಾರ. — ಸಂಚಿಕೆ ೪೮

ನೋಟೀಸ್.

		ಕ್ರಯ	ಹಾಸಲು ಸಹಿತವಾಗಿ
Campbell's	ಕನ್ನಡ ವ್ಯಾಕರಣ ಸಾರ	೦ ೨ ೦	೦ ೨ ೬
Object Lessons	ವಸ್ತು ಪಾಠಗಳು	೦ ೧ ೦	೦ ೧ ೬
Picture do	ಚಿತ್ರಗಳು ಸಹಿತವಾಗಿ	೬ ೨ ೦	೦ ೨ ೬

ಈ ಮೂರು ಪುಸ್ತಕಗಳು ಪ್ರೈಮರಿ ಸ್ಕೂಲುಗಳಲ್ಲಿ ಓದತಕ್ಕ ಪುಸ್ತಕಗಳು.

	ಕ್ರಯ	ಹಾಸಲು ಸಹಿತವಾಗಿ
ಸ್ತ್ರೀಯರು ಓದತಕ್ಕ ಪುಸ್ತಕ	೦ ೫ ೦	೦ ೫ ೬
ಗಣಿತ ವಿದ್ಯವು ..	೦ ೪ ೦	೦ ೪ ೬
ಗಣಿತ ಮಗ್ಗಗಳು ..	೦ ೧ ೬	೦ ೧ ೬
ಸಂಸ್ಕೃತ ಕರ್ನಾಟಕ ಭಾಷಾಮಂಜರಿ	೦ ೨ ೦	೦ ೨ ೬
ಭೂಗೋಳ ಶಾಸ್ತ್ರ ಪ್ರಶ್ನೋತ್ತರ	೦ ೨ ೦	೦ ೨ ೬
ಇಂಗ್ಲಿಷು ಕನ್ನಡವೂ ಶಬ್ದಾವಳಿ ೧ನೇ ೨ನೇ ಭಾಗಗಳಿಗೆ	೦ ೧ ೦	೦ ೧ ೬
ಕಾವ್ಯಮಾಲೆ (Minor Poetical Anthology)	೦ ೮ ೦	೦ ೮ ೬
ಬಾಲವ್ಯಾಕರಣ ..	೦ ೫ ೦	೦ ೫ ೬
ಹಳಗನ್ನಡ ವ್ಯಾಕರಣ ಸೂತ್ರಗಳು	೦ ೬ ೦	೦ ೬ ೬
ಇಂಗ್ಲಿಷು ಕನ್ನಡವೂ ಸಂಭಾಷಣಾ ವಾಕ್ಯಗಳು	೦ ೧೦ ೦	೦ ೧೦ ೬
ಶಬ್ದಮಣಿ ದರ್ಪಣ ..	೧ ೬ ೦	೧ ೪ ೬
Kan. Eng. Pocket Dictionary	೧ ೪ ೦	೧ ೫ ೨
Eng. Kan. School Dictionary	೨ ೧೦ ೦	೨ ೧೨ ೬
ಬಳ್ಳೇ ತಾಯಿ ..	೦ ೪ ೪	೦ ೪ ೬
ಆತ್ಮಿಕ ದಿವ್ಯ ಯುದ್ಧ Bunyan	೦ ೧೨ ೦	೦ ೧೩ ೬
ಕ್ರೈಸ್ತ ಪದ್ಧತಿ ೧ ನೇ ಭಾಗ ೨ ಅಣ ೩ನೇ ಭಾಗ	೦ ೧ ೬	೦ ೨ ೦
ಭಕ್ತಿ ಸಾರ .	೦ ೧ ೬	೦ ೧ ೬
ಸತ್ಯ ವಾಗ್ದಾನ	೦ ೧ ೦	೦ ೧ ೬
ಕಾವ್ಯಪುಂಜ .	೦ ೩ ೦	೦ ೩ ೬

A new Edition of the Geography suited for the Lower Secondary Examination is now ready. Edited by Rev. H. Gulliford. Price 6 As.

ಮೇಲೆ ನಮೂದಿಸಿರುವ ಪುಸ್ತಕಗಳನ್ನು ಬೆಂಗಳೂರು ಪಂಡಿತ ಮೋರ್ಗಾಟನ ಹತ್ತರವಿರುವ ಪುಸ್ತಕ ಶಾಲೆಯಲ್ಲಿ ಪಡೆಯಬಹುದು.

ಸನ್ ೧೮೮೮ ರಲ್ಲಿ ಸ್ಥಾಪಿಸಲ್ಪಟ್ಟದ್ದು.

ಕೆನರಾ ಅಂಡ್ ಮೈಸೂರ ಟ್ರೇಡಿಂಗ್ ಏಜನ್ಸೀ ಆಫೀಸ್, ಮುಂಬಾಯಿ.

ಇವರು ತಯಾರಿಸಿರುವಂಥ—

ಶ್ವಾಸಘಾತಿ ತೈಲ.

ಕಳೆದ ಜನವರಿ ತಿಂಗಳೊಂದರಲ್ಲಿ ೩,೧೦೦ ಬಾಟ್ಲಿಗಳು ಖರ್ಚಾದವು. ಈ ತೈಲದ ಮಹತ್ವವನ್ನು ಕುರಿತು, ನಾವೀಗ ಹೆಚ್ಚಿಗೆ ವರ್ಣಿಸಬಾರದು—ಯಾಕೆಂದರೆ, ಯಾರು ಈ ತೈಲವನ್ನು ಉಪಯೋಗಿಸುತ್ತಾರೋ ಅವರಿಗೆ ಒಂದೆರಡು ದಿವಸಗಳಲ್ಲಿಯೇ ಇದರ ಅಪ್ರತಿಮವಾದ ಗುಣವು ಸಹಜವಾಗಿ ಅನುಭವಕ್ಕೆ ಬರುವದು. ಆದಾಗ್ಯೂ ಇದರ ಮುಖ್ಯವಾದ ಉಪಯೋಗವನ್ನು ತಿಳಿಸುವದು ನಮ್ಮ ಕರ್ತವ್ಯವಾಗಿರುತ್ತದೆ.

ಈ ನಮ್ಮ "ಶ್ವಾಸಘಾತಿ ತೈಲವನ್ನು" ಪ್ರತಿದಿನ ತಲೆಗೆ ಹಾಕಿಕೊಂಡರೆ ಮಿದುಳಿನಲ್ಲಿರುವ ಉಷ್ಣತೆಯನ್ನು ಪರಿಹರಿಸುವದಲ್ಲದೆ, ಕಣ್ಣಿಗೂ, ಮಿದುಳಿಗೂ ಅನುಕರಿಸಿ, ಚಿತ್ತಕ್ಕೆ ಶಾಂತತೆಯನ್ನುಂಟುಮಾಡುವದು. ಮತ್ತು ಕಣ್ಣುಗಳಿಗುಂಟಾಗುವ ಸಾಮಾನ್ಯವಾದ ವಿಕಾರಗಳನ್ನೆಲ್ಲ ಪರಿಹರಿಸುವದು, ದೃಷ್ಟಿಗೆ ತೀವ್ರತೆಯುಂಟಾಗುವದು.

ಹೆಚ್ಚಾಗಿ ಓದತಕ್ಕವರಿಗೂ, ಒಂದೇ ಸಮನಾಗಿ ಕಣ್ಣಿಟ್ಟು ಕೆಲಸ ಮಾಡತಕ್ಕ ಕಸಬುಗಾರರಿಗೂ, ಕಣ್ಣುಗಳಲ್ಲಿ ನೀರು ಸುರಿಯುವವರಿಗೂ, ಉರಿಗಣ್ಣಿನವರಿಗೂ, ಚಿತ್ತವ್ಯಗ್ರವಾದವರಿಗೂ, ಅತ್ಯಂತ ಗುಣಕಾರಿಯಾಗಿರುವದು. ಈ ತೈಲದಲ್ಲಿರುವ ಇನ್ನೊಂದು ಅಪ್ರತಿಮವಾದ ಶಕ್ತಿಯೇನಂದರೆ—ಕೂದಲುಗಳನ್ನು ನಯವಾಗಿಯೂ, ಹೊಳೆಯುವಂತೆಯೂ, ಮಾಡುವದಲ್ಲದೇ ಬೆಳವಣಿಗೆಯನ್ನು ಹೆಚ್ಚಿಸುವದು. ಕೂದಲುಗಳ ಬೇರುಗಳನ್ನು ಗಟ್ಟಿಮಾಡಿ, ಅವು ಉದುರಿಹೋಗದಂತೆ ಮಾಡುವದು.

ಪ್ರತಿಯೊಂದು ಬಾಟ್ಲಿಯೊಳಗೆ ೧೩ ತೊಲೆ ತೈಲವಿರುವದರಿಂದ ಬಳಸುವದಕ್ಕೆ ೨೩ ದಿನಗಳು ಪೂರ್ತಿ ಕೊಳ್ಳುವದಕ್ಕೆ ಸಾಕಾಗುವದು. ಬಡವರು ಸಹ ಕೊಂಡುಕೊಳ್ಳಲಿಕ್ಕೆ ಅನುಕೂಲವಾಗಿರಬೇಕೆಂಬುದಕ್ಕಾಗಿ ಪ್ರತಿಯೊಂದು ಬಾಟ್ಲಿಗೆ ೧೦ ಆಣೆ ಕ್ರಯವಿಟ್ಟಿರುವೆವು. ೧೨ ಬಾಟ್ಲಿಗಳುಳ್ಳ ೧ ಪೆಟ್ಟಿಗೆಗೆ ೬॥ ರೂಪಾಯಿ. ಪ್ರತಿಯೊಬ್ಬ ಕುಟುಂಬಿಗನೂ, ಈ ತೈಲವನ್ನು ಉಪಯೋಗಿಸುವದು ಅವಶ್ಯವಾಗಿರುತ್ತದೆ. ಮಕ್ಕಳುಮರಿಗಳಿಗೆ ಸಹ ಈ ತೈಲವು ಸುಖಾವಹವಾಗಿರುತ್ತದೆ.

ಈ ತೈಲ ಮತ್ತು ಈ ಕೆಳಗೆ ಬರೆಯುವಂಥ ವಿಷಯಗಳು, ಪ್ರೆಸ್ಸು, ಮುತ್ತು, ರತ್ನ, ಬಂಗಾರ, ಬೆಳ್ಳಿ ಮುಂತಾದ ಸಾಮಾನುಗಳನ್ನು ಪಡೆಯಲಿಚ್ಛಿಸುವವರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬೇಕು.

ಮ್ಯಾನೇಜರ್, ಕೆನರಾ ಅಂಡ್ ಮೈಸೂರು ಟ್ರೇಡಿಂಗ್ ಏಜನ್ಸಿ ಆಫೀಸ್, ಮಾರ್ಕೆಟ್ ಪೋಸ್ಟ್, ಮುಂಬಾಯಿ.

☞ ಈ ತೈಲವನ್ನು ನಮ್ಮ ಹೊರತು ಇನ್ಯಾರೂ ಮಾಡಲಾರರು. ನಮ್ಮ ಹೆಸರಿನ ಗುರ್ತನ್ನು ನೋಡಿ ತಗೆದುಕೊಳ್ಳಬೇಕು. ಬೇರೆ ತರದ ಎಣ್ಣೆಗಳನ್ನು ಈ ಹೆಸರಿಟ್ಟು ಮಾರುತ್ತಿದ್ದರೆ ಜಾಗ್ರತೆ ಸಾಹೇಬ!

ವಿಷಯಗಳು	ರು ಆ	ಪುಸ್ತಕಗಳು.	ರು ಆ.
ಸಮಸ್ತವ್ಯಾಧಿಗಳಿಗೆ ಬಾಟ್ಲಿ ೧ಕ್ಕೆ	೧—೬	ಮಹಾಭಾರತದ ಮದ್ದು	೨—೮
ಸಮಸ್ತಾಮೃತ ಗುಳಿಗೆ	೧—೬	ಕರೀಸಸ್ಯೆನ ಲಾಂಗ್‌ಕ್ಲಾತ್	೫—೦
ಕರ್ನಾಟಕದ ಅಪ್ರತಿಮತೈಲ	೧—೦	ಡಿಟೊ ಅರ್ಧನವ	೪—೮
ಮಹಾಮಾತೃಕಾ ತೈಲ	೧—೦	ಡಿಟೊ. ಸಾಟೀನ್ ಕ್ಲಾತ್ (ಇಂಗ್ಲಿಷಿನವರದು)	೩—೬
ಪ್ರಮೇಹಭಸ್ಮವು	೨—೧೨	ದಪ್ಪನಾದ ಕಷ್ಮೀರಿ ಕೋಟ್	೨—೮
ವಿವಿಧ ಜ್ವರ ದಾಹಪ್ರಶಮನ ಚೂರ್ಣವು	೧—೦	ಡಿಟೊ. ಅರ್ಧನವ	೨—೪
ಬಾಲಸಂಜೀವಿನಿ ಗುಳಿಗೆ	೩—೮	ಫ್ಲಾನಲ್ ಕಮೀಜ್	೧—೧೨
ಅಜೀರ್ಣನಾಶಕ	೦—೮	ಡಿಟೊ. ಬನೀನ್	೧—೪
ಸುಗಂಧಸಾರಕದಂತಮಂಜನವು	೦—೮	ಟೀ (ಇಂಗ್ಲಿಷಿನವರದು) ಪೌಂಡ್	೦—೧೨
ಕಜ್ಜಿ ಮುಲಾಮು	೦—೭		

ತಾರಾನಾಥ ಚಂದ್ರಕಾಂತ ಲೇಖನ ಕನ್ನಡಕಗಳ ಕ್ರಯ ರೂ. ೧೦—೩॥—೫—೩॥. ಉತ್ತಮ ತರದ "ಬಟ್ಟೆ" ಎಂಬ ಹಸಲಿನ ಕಿರಿಗಡಿಯಾರವು (೧ ವರುಷದ ಹಾಮೀನಿನ ಸಹವು) ಕ್ರಯ ರೂ. ೬.

ನೋಟೀಸ್.

ಪುಸ್ತಕಗಳು	ಕ್ರಯ.
ಪ್ರಶ್ನಾ ವ್ಯವಹಾರಿಕೆ	1—8 0
ಕನ್ನಡ ಇಂಗ್ಲೀಷು ನಿಘಂಟು 1 ನೇ ದೊಡ್ಡ ತರಹ	3 -0 -0
„ „ 2 ನೇ ತರಹ	2—8—0
ಬಾಲಕರು ಓದುವ ಎರಡನೆ ಜ್ಞಾನೋಪದೇಶದ ಪ್ರಶ್ನೋತ್ತರಗಳು	0—1 0
ಸಭೆಯ ನಿಗಮಗಳನ್ನು ಕುರಿತದ್ದು	0 0—6
ಕಥಾ ಸಂಗ್ರಹ 1 ನೇ ಭಾಗದಿಂದ 3 ವರೆಗೆ	1 0 0
ಕಥಾ ಸಂಗ್ರಹ 1 ರಿಂದ 6 ನೇ ಭಾಗ ಹೊಸ ಛಾಪು	1—0- 0
„ „ ದೊಡ್ಡ ತರಹ	1—8—0
ಬೋಧಕಶಕ್ತಿ ಬೋಧಿನಿ	0—1- 0
ಸತ್ಯವೇದವನ್ನು ಕುರಿತು 2 ನೇ ಭಾಗ	0—4—0
ಪ್ರಸಂಗಿಯ ದರ್ಪಣ	0—6—0
ಇಂಗ್ಲೀಷು ಭಾಷೆಯಲ್ಲಿಯೂ, ಕನ್ನಡ ಭಾಷೆಯಲ್ಲಿಯೂ, ಶಬ್ದಗಳ ವಿಭಾಗಗಳನ್ನು ವಿವರಿಸಿರುವ ನಿಘಂಟು	0—2—0
ಕನ್ನಡ ವ್ಯಾಕರಣ (ಇಂಗ್ಲೀಷಿನಲ್ಲಿ)	2—0 -0
ಹಿಂದುಸ್ತಾನಿ ವ್ಯಾಕರಣ	1—0 -0
ಬಾಲಪಾಠ ಸೋಪಾನವು	0—0—6
ವನ ಕರಗಳ ಅಂಟುರೋಗವಿಚಾರ	0-12—0
ಕ್ರೈಸ್ತರ ಪ್ರಾರ್ಥನೆಗಳ ಸಂಗ್ರಹ	0-12—0

ಮೇಲೆ ನಮೂದಿಸಿರುವ ಪುಸ್ತಕಗಳನ್ನು ಅಪೇಕ್ಷಿಸುವವರು ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್ಸಿಗೆ ಬರೆದು ತರಿಸಿಕೊಳ್ಳಬಹುದು. ಅಂಚೆ ಹಾಸಲು ಬೇರೆ ಕೊಡಬೇಕು.

ವೆಸ್ಲಿಯನ್ ಮಿಷನ್ ಪ್ರೆಸ್,
ಮೈಸೂರು.

ವಿಶೇಷ! ನೋಡಿರಿ!! ನೋಡಿರಿ!!!

ಅನುಶಾಸನೀಕಪರ್ವವು ಪೂರೈಸಿತು.

ಶ್ರೀಕೃಷ್ಣರಾಜ ವಾಣೀವಿಲಾಸವೆಂಬ ಮಹಾಭಾರತವು ನಮ್ಮ ಶ್ರೀಚಾಮುಂಡೇಶ್ವರಿ ಪ್ರೆಸ್ಸಿನಲ್ಲಿ ಪ್ರಿಂಟಾಗತಕ್ಕದ್ದು ಎಲ್ಲರಿಗೂ ವಿದಿತವಾಗಿದೆಯಷ್ಟೆ. ಈಗ ಅನುಶಾಸನೀಕಪರ್ವವು ಚಾಮುಂಡೇಶ್ವರಿ ಪ್ರೆಸ್ಸಿನಿಂದಲೂ ಮತ್ತಿಗೆ ಯೋಗ್ಯವಾದ ಕಿತ್ತಾನಾರಿನ ಫ್ರಾಯಿಡ್ಯಂಡಿನಿಂದ ತಯಾರಾಗಿರುತ್ತ ಸಭಾಪರ್ವ ವಿರಾಟಪರ್ವದ ಬುಕ್ಕುಗಳು ಮುಗಿದು ಹೋಗಿರುವದರಿಂದ ಪುನಹಾ ಎರಡನೆ ಛಾಪಿಯು ಪ್ರಾರಂಭಿಸಿದೆ. ಈ ಕೆಳಗೆ ಕಂಡ ಪುಸ್ತಕಗಳು ನಮ್ಮಲ್ಲಿ ಸ್ವಲ್ಪವೇ ಇರುವದರಿಂದ ಇಚ್ಛೆಯುಳ್ಳವರು ತರಿಸಿಕೊಳ್ಳಬಹುದು. ಅನುಶಾಸನೀಕ ಪರ್ವ ಕಿತ್ತಾನಾರಿನ ಬೈಂಡ್ ೩—೧೨—೦ ಲೋವರ್ ಸೆಕಂಡರಿ ಪರೀಕ್ಷೆಯ ನೋಟ್ಸು ಕ್ರಯ ೮ ಆಣೆ

		ಕ್ರಯ
ಆದಿಪರ್ವ	..	ಕ್ರಯ ೩ ೦ ೦
ಸಭಾಪರ್ವ	..	„ ೧ ೪ ೦
ವಿರಾಟಪರ್ವ	..	„ ೧ ೦ ೦
ಭೀಷ್ಮಪರ್ವ	..	„ ೨ ೦ ೦
ದ್ರೋಣಪರ್ವ	..	„ ೨ ೮ ೦
ಶಲ್ಯಪರ್ವ	..	„ ೧ ೨ ೦
ಸೌಪ್ತಿಕಪರ್ವ	..	„ ೦ ೬ ೦
ಸ್ತ್ರೀಪರ್ವ	..	„ ೦ ೬ ೦
ಶಾಂತಿಪರ್ವ ರಾಜಧರ್ಮ	..	„ ೨ ೬ ೦
„ ಆಪದ್ಧರ್ಮ	..	„ ೦ ೮ ೦
„ ಮೋಕ್ಷಧರ್ಮ	..	„ ೨ ೬ ೦

ಭಗವದ್ಗೀತೆ ೮, ಯಯಾತಿರಾಯನಚರಿತ್ರೆ ೪ ಆ.

ಎಂ. ರಾಮಪ್ಪ ಅಂಡ್ ಸನ್,
ಬಾಲಬೋಧಿನೀ,
ಬೆಂಗಳೂರು

ವೃತ್ತಾಂತ ಪತ್ರಿಕೆ.

ಚಂದಾ ನಿರ್ಣಯ.

	ರೂ. ಆ. ಪೈ.
ಸ್ಥಳದವರಿಗೆ ವರ್ಷ ೧ಕ್ಕೆ	೧—೦—೦
ಪರಸ್ಥಳದವರಿಗೆ ವರ್ಷ ೧ಕ್ಕೆ	೧—೧೪—೦
ಬಿಡಿ ಪತ್ರಿಕೆ ೧ಕ್ಕೆ	೦—೦—೩

ಈ ಪತ್ರಿಕೆಯು ಮೈಸೂರು ರಾಜಧಾನಿಯಲ್ಲಿ ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ, ಪ್ರಕಟಿಸಲ್ಪಡುವದು. ಓದುವವರು ಮೊದಲುಗೊಂಡು ಸಮಸ್ತರಿಗೂ ಸುಲಭಸಾಧ್ಯವಾಗುವಂತೆ ಈ ಪತ್ರಿಕೆಗೆ ನಮ್ಮ ಅಲ್ಪ ಮೌಲ್ಯವನ್ನು ನಿರ್ಣಯಿಸುತ್ತೇವೆ. ಈ ಪತ್ರಿಕೆಯನ್ನು ಅಪೇಕ್ಷಿಸುವವರು ಚಂದಾಹಣವನ್ನು ಮುಂಗಡವಾಗಿ ಕೊಡಬೇಕು.

ಎಡಿಟರ್,
ವೃತ್ತಾಂತ ಪತ್ರಿಕೆ.

ಜಗದ್ಗುರುವಿನ ಚರಿತ್ರ ಸಂಗ್ರಹ.

THE LIFE
of
The Lord Jesus Christ.
Selected incidents from the Gospels,
FREELY PARAPHRASED.

ನೂತನವಾಗಿ ರಚಿಸಲ್ಪಟ್ಟ ೬೬ ಪುಟಗಳುಳ್ಳ ಈ ಪುಸ್ತಕವನ್ನು ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್ಸಿಗೆ ಬರೆದು ತರಿಸಿಕೊಳ್ಳಬಹುದು.

ಕ್ರಯ (ಟಪ್ಪಾಲ್ ಹಾಸಲ್ ಬೇರೆ)

೧೦೦ ಪ್ರತಿಗಳಿಗೆ	೫—೦—೦
ಬಿಡಿ ಪ್ರತಿಗೆ	೦—೧—೦

ಸುಮಾರು ೭—೩ ಪ್ರತಿಗಳನ್ನು ಅರ್ಧ ಆಣೆ ಹಾಸಲಿನಿಂದ ಕಳುಹಿಸಬಹುದು.

MUNICIPAL NOTICE.

The following business will be transacted at the Ordinary Meeting of the Municipal Commissioners for the CITY OF MYSORE, to be held **at the Town Hall, on Saturday, the 27th May, 1893 at 8 A. M.**

Subjects.

I. The Accounts of Receipts and Disbursements for the month of April 1893.

II. Letter from Mr. J. W. Knight with regard to the claim of Chaluvaraya moodliar, grandson of Thope Moodliar for compensation of his land taken up.

III. Abolition of appointment of the Wheel-tax mutsuddy.

IV. Consideration of the subject to prohibit garden cultivation in the vacant lands in the vicinity of the buildings and dwelling houses within Municipal limits.

V. Consideration of the subject regarding the registry of births and deaths and the utility of maintaining the present establishment for collecting and recording information on the subject.

VI. Manager of SRINGARVIHARANGINI Company praying for a reduction of fees for public performances in the Town Hall.

VII. Application of Hospital Assistant Rangasami Pillay in charge of the Indigenous Hospital for the small building belonging to the Municipality in Mandi Mohalla.

VIII. The non-attendance of Akki Angadi Chickanna, Municipal Commissioner, Chamaraj Mohalla for more than 3 successive meetings.

IX. Government Proceedings No. 135—54, dated 11th February 1893, regarding the proposed bye-law prohibiting the killing of Cow &c. within the Municipal limits.

X. Petition from Retail Arrack Vendors praying for remission of Mohaturfa tax on their Shops as they are paying the Registration fee in addition to the house tax.

XI. Approval of sites selected for cremation and burial in Krishnaraj and Mandy Mohallas.

XII. Mr. Venkata Krishna's proposal to establish a cattle lan below Jeevannarayana Cutta in the Devaraj Mohalla.

XIII. Mr. Ramanna's proposals :—

(1) Improvements &c. to be made to the existing Devaraj Mohalla Market, so as to meet with the convenience of the Merchant Classes, by erecting rear and side walls to the shops or stalls with planked shutters.

(2) Steps to be taken to have the western wing of Devaraj Mohalla Market, intended to be newly built, in a way to become more useful than ornamental.

(3) The propriety of the Municipality appointing one or two well known and popular Native Pundits for each Mohalla for vaccinating the children of that place, and making payment to such Pandits, instead of paying to the vaccinators attached to the Hospital.

XIV. Any other important Subjects that may be brought before the Board.

Municipal Board's Office, MYSORE: *18th May 1893*

A. COOPOOSAWMY,
For VICE-PRESIDENT.

ನೋಟೀಸ್

ಮೈಸೂರು ದೇಶಸ್ಥರು ಮಹಾಯಾತ್ರೆಗೆ ಹೊರಟು ದಾರಿಯಲ್ಲಿ ದಳ್ಳಾಳಿಗಳಿಗೆ ಸಿಕ್ಕಿ ತ್ರಿಸ್ಥಳದಲ್ಲಿಯೂ ಪ್ರಶಸ್ತವಿಲ್ಲದ ಸ್ಥಳಗಳಲ್ಲಿ ಇಳಿದು ಪಡಬಾರದ ಕಷ್ಟಗಳಿಗೆ ಗುರಿಯಾಗಿ ಮೋಸಹೊಂದಿ ವಾಪಸು ಹೋಗುವದು ಕಂಡು ತಿಳಿಸಬೇಕಾದದ್ದೇನಂದರೆ:— ೩೦ ವರುಷದ ಬಾಬತ್ತು ಗಯಾದಲ್ಲಿ ವಾಸ ಮಾಡುತ್ತಿದ್ದು ಈಗ ೮ ವರುಷದಿಂದ ಹನುಮಾನಘಾಟಿನಲ್ಲಿ ವಾಸವಾಗಿರುವ ಬೋಧಾಯನ ಕಾಶೀನಾಥಶಾಸ್ತ್ರೀ ಮನಗೆ ತಿಳಿದಂಥ ಸತ್ಯಜ್ಞನರು ಬಂದು ಇಳಿದುಕೊಂಡು ಅವರವರ ಶಕ್ತ್ಯನುಸಾರ ತ್ರಿಸ್ಥಳದ ಯಾತ್ರೆ ಪೂರೈಸಿಕೊಂಡು ಸುಖದಲ್ಲಿ ಹಿಂದಕ್ಕೆ ಗಮನ ಮಾಡುತ್ತಾರೆ. ಪಂಚದ್ರಾವಿಡರ ಪೈಕಿ ಕರ್ನಾಟಕರು ವಿನಹಾ ಬಾಕಿ ಅಂದರೆ ಮಹಾರಾಷ್ಟ್ರ ದ್ರಾವಿಡ ತೆಲುಗು ದೇಶಸ್ಥರು ಅವರವರ ಜನರನ್ನೇ ಹುಡುಕಿಕೊಂಡು ಹೋಗುತ್ತಾರೆ. ಕರ್ನಾಟಕರು ಮಾತ್ರ ತಿಳುವಳಿಕೆ ಇಲ್ಲದ ಕಂಡಕಡೆಗಳಲ್ಲಿ ಇಳಿದುಕೊಂಡು ಅನುಪಯುಕ್ತರಾಗಿ ಹೋಗುವದು ಅವಮಾನವಲ್ಲವೇ! ನಮ್ಮ ದೇಶಸ್ಥರು ಇಳಿಯುವದಕ್ಕಾಗಿ ೫,೦೦೦ರೂ ಖರ್ಚು ಮಾಡಿ ಉತ್ಕೃಷ್ಟವಾದ ಮನೆ ಹನುಮಾನ್‌ಘಾಟಿನಲ್ಲಿ ಕಟ್ಟಿ ಇರುತ್ತೇನೆ. ಸ್ನಾನ ಪಾನಗಳಿಗೆ ಗಂಗಾ ಸಮೀಪವಾಗಿಯೂ ರಮಣೀಯವಾಗಿಯೂ ಇರುತ್ತೆ. ಇಚ್ಛೈಸಿ ಬರತಕ್ಕವರು ಮುಂಚಿತವಾಗಿ ಇಂಥಾ ದಿವಸ ಪ್ರಯಾಗಕ್ಕೆ ಬರುತ್ತೇವೆಂದು ತಿಳಿಸಿದಲ್ಲಿ ತ್ರಿಸ್ಥಳದ ಯಾತ್ರೆಯೂ ಶಕ್ತ್ಯಾನುಸಾರ ಮಾಡಿಸಿ ದೇಶಕ್ಕೆ ಪ್ರಯಾಣ ಮಾಡಿಸಲು ತಕ್ಕ ಏರ್ಪಾಡು ಮಾಡುತ್ತೇನೆ.

ಬೋಧಾಯನ ಕಾಶೀನಾಥಶಾಸ್ತ್ರಿ
ಹನುಮಾನ್‌ಘಾಟ—ಬನಾರಸ್.

ವೃತ್ತಾಂತ ಪತ್ರಿಕೆ.

೧೮೯೩ನೇ ಇಸವಿ ಮೆ ತಾ॥ ೨೫ ನೇ ಗುರುವಾರ.

ನಾಟ್ಯಗಾತಿಯರು.

ಇಂಡಿಯಾ ರಾಷ್ಟ್ರದಲ್ಲಿ ನಾಟ್ಯವನ್ನು ಭರತಶಾಸ್ತ್ರೀಯವಾಗಿ ಕಲಿತಿರುವವರು ವೇಶ್ಯಾಸ್ತ್ರೀಯರು ವಿನಹ ಮತ್ತ್ಯಾರೂ ಇಲ್ಲವೆಂಬುವದು ಪ್ರಸಿದ್ಧವಾಗಿದೆ. ಅವರು ಸಂಗೀತದಲ್ಲಿ ಸಾಧಾರಣ ಪಾಂಡಿತ್ಯವನ್ನು, ಕೆಲವರು ಪೂರ್ಣಪಾಂಡಿತ್ಯವನ್ನು ಪಡೆದಿರುತ್ತಾರೆ. ಇವರನ್ನು ಮದುವೆ, ಮುಂಜಿ, ಶುಭಶೋಭನಾದಿ ಹಿಂದೂಕರ್ಮಗಳು ನಡೆಯುವಾಗ ಕರೆಸಿ ಇವರಿಂದ ಸಭೆಯವರಿಗೆ ಆನಂದವನ್ನುಂಟುಮಾಡುವದು ಎಲ್ಲೆಲ್ಲಿಯೂ ಪದ್ಧತಿಯಾಗಿ ದೆಯಷ್ಟೆ. ಆದರೆ ಇಂಥಾ ವೇಶ್ಯಾಸ್ತ್ರೀಯರ ನಡವಳಿಕೆಯನ್ನು ಕುರಿತು ಸ್ವಲ್ಪಮಟ್ಟಿಗೆ ಯೋಚಿಸಿದ್ದೇ ಆದರೆ, ಅವರನ್ನು ಗೃಹಸ್ಥರ ಗುಂಪಿನಲ್ಲಿಯೂ, ಮಾನಿಗಳ ಸಹವಾಸದಲ್ಲಿಯೂ ಬಿಡತಕ್ಕದ್ದು ಉಚಿತವಾದದ್ದಲ್ಲ ಎಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಆದಾಗ್ಯೂ ಇಂಥಾ ದೂರಮಾಡಲ್ಪಟ್ಟ ಗುಂಪಿನವರನ್ನು ಹಿಂದೂಗಳು ಭಯಭಕ್ತಿ ಪೂರ್ವಕವಾಗಿ ಪೂಜೆಮಾಡುವದಕ್ಕೆ ಹೋಗುವ ದೇವಾಲಯಗಳಲ್ಲಿ ಸಂಬಳಕೊಟ್ಟು ಇಟ್ಟಿರುತ್ತಾರೆ. ಇದರಿಂದ ಹಿಂದೂಗಳು ಒಂದು ಭಾಗದಲ್ಲಿ ಈ ಗುಂಪಿನವರನ್ನು ತಿರಸ್ಕರಿಸುತಲೂ, ಮತ್ತೊಂದು ಭಾಗದಲ್ಲಿ ಇವರಿಲ್ಲದಿದ್ದರೆ ನಿರ್ವಾಹವೇ ಇಲ್ಲವೆಂದು ಇವರನ್ನು ಪುರಸ್ಕರಿಸುತಲೂ ಇರುವದನ್ನು ನೋಡಿದರೆ ತುಂಬಾ ಆಶ್ಚರ್ಯವೂ, ವ್ಯಸನವೂ ಉಂಟಾಗುತ್ತದೆ. ಈ ಗುಂಪಿನವರಿಗೆ ಮರುಳಾಗಿ ಎಷ್ಟೋ ಮಂದಿ ತಮ್ಮ ಮಿತ್ತಬಾಂಧವರನ್ನು ಕಳೆದುಕೊಂಡು ಹಾಳಾಗಿರುತ್ತಾರೆ ಮತ್ತು ಹಾಳಾಗುತ್ತಿರುವುದು ಇಲ್ಲಿ ಹೇಳಬೇಕಿಲ್ಲ. ಹೀಗಿದ್ದಾಗ್ಯೂ ಅವರಲ್ಲಿ ಹಿಂದೂಗಳಿಗೆ ಅಭಿಮಾನವು ಕಡಮೆಯಾಗಲಿಲ್ಲ. ಯಾಕಂದರೆ ಉತ್ಸವಾದಿಗಳಲ್ಲಿ ಅವರನ್ನು ಕರೆಸುವದರಲ್ಲಿ ಈ ಗುಂಪಿನವರು ಸಹವಾಸಕ್ಕೆ ಯೋಗ್ಯರಲ್ಲವೆಂದು ಬೋಧಿಸುವ ವಿದ್ಯಾವಂತರಾದ ದೊಡ್ಡವರೇ ಆಸಕ್ತರಾಗಿರುವದರಿಂದ, ಅವರನ್ನು ಹಿಂಬಾಲಿಸುವ ಸಾಧಾರಣ ಜನಗಳು ಹ್ಯಾಗೆ ಸುಮ್ಮನಿದ್ದಾರು ! ದೊಡ್ಡವರು ಬೋಧಿಸುವ ತತ್ವವನ್ನು ಆಚರಿಸದಿದ್ದಲ್ಲಿ ತಂದಲ್ಲಿ ಅಲ್ಲದೇ ಸಾಧಾರಣಜನರಿಗೆ ಸುಳಿಯಲ್ಲಿ ಶ್ರದ್ಧೆಯುಂಟಾದೀತು ? ಈ ಪದ್ಧತಿಯನ್ನು ಇಂಡಿಯಾ ರಾಷ್ಟ್ರದ ಅನೇಕ ರಾಜರುಗಳೇ ಬಿಟ್ಟಿಲ್ಲ. ಹ್ಯಾಗಂದರೆ ಯೂರೋಪಿಯನ್ನರಲ್ಲಿ ದೊಡ್ಡ ದೊಡ್ಡ ಮುದ್ದೆದಾರರುಗಳು ಆಯಾರಾಜ್ಯಗಳಿಗೆ ಹೋಗುವಾಗ್ಯೂ ಅವರಿಗೆ ಸಂತೋಷ ಹುಟ್ಟಿಸುವಂತ ಈ ರಾಜರುಗಳು ವೇಶ್ಯಾಸ್ತ್ರೀಯರನ್ನು ಕರೆಸಿ ಅವರೆದುರಿಗೆ ನಾಟ್ಯಗಳನ್ನು ಕಟ್ಟಿಸುವದು, ಅವರಿಂದ ಹಾಡಿಸುವದು ಮೊದಲಾದವುಗಳನ್ನು ಬಹು ವಿಜೃಂಭಣೆಯಿಂದ ಮಾಡಿಸುತ್ತಲಿರುವದು ಈ ಪತ್ರಿಕಾಮೂಲಕ ಅನೇಕ ವೇಳೆಗಳಲ್ಲಿ ಹಿಂದೆ ತಿಳಿಸಿರುವದನ್ನು ವಾಚಕರಲ್ಲಿ ಅನೇಕರು ಜ್ಞಾಪಕ ಇಟ್ಟಿರಬಹುದು. ಮತ್ತು ಹಿಂದೂ ದೊಡ್ಡ ದೊಡ್ಡ ಉದ್ಯೋಗಸ್ಥರುಗಳ ಮನೆಗಳಲ್ಲಿ ಸಾಧಾರಣವಾಗಿ ಸೂಳೆಯರ ನಾಟ್ಯ, ಸಂಗೀತಗಳಿಲ್ಲದೆ ಪ್ರಸ್ತ ಪ್ರಯೋಜನಗಳು ಅಂತ್ಯವಾಗುವದಿಲ್ಲವೆಂಬುವದು ಎಲ್ಲರೂ ತಿಳಿಯುವ ಅಂಶವಷ್ಟೆ. ದೊಡ್ಡ ದೊಡ್ಡ ಶಾಸ್ತ್ರಿಗಳೂ, ಮಠಾಧಿಕಾರಿಗಳೂ ಈ ಪದ್ಧತಿಯನ್ನು ಅನೇಕವೇಳೆ ಹಿಂಬಾಲಿಸಿರುತ್ತಾರೆಂಬುವದನ್ನು ಬಹುಜನರು ಅಲ್ಲವೆನ್ನುವದಿಲ್ಲ.

ಕೆಲವು ದಿವಸಗಳ ಕೆಳಗೆ ಮದರಾಸ್ ಪಟ್ಟಣದಲ್ಲಿರುವ ಅತ್ಯಂತ ಅಭಿಮಾನಿಗಳಾದ ಮತ್ತು ಸಂಸ್ಕೃತ ಭಾಷೆಯಲ್ಲಿಯೂ, ಇಂಗ್ಲೀಷ್ ಮೊದಲಾದ ಪರಭಾಷೆಗಳಲ್ಲಿಯೂ ಅನೇಕ ಮುಖ್ಯ ಗ್ರಂಥಗಳನ್ನು ಓದಿರುವ ದೊಡ್ಡ ಮನುಷ್ಯರು ಸಭೆಸೇರಿ ವೇಶ್ಯಾಸ್ತ್ರೀಯರನ್ನು ಯಾರು ನಿಗಾದರೂ ಕರೆಸಿದಲ್ಲಿ ಅಂತವರನ್ನು ನಿಗೆ ಕರೆಯಲ್ಪಟ್ಟ ಯೂರೋಪಿಯನ್ನರಾಗಲಿ, ಹಿಂದೂಗಳಾಗಲಿ ಮತ್ತೇ ಯಾರಾಗಲಿ ಹೋಗಕೂಡದು ಎಂಬದಾಗಿ ತೀರ್ಮಾನಿಸಿಕೊಂಡಿರುವಂತೆ ವರ್ತಮಾನಪತ್ರಿಕೆಗಳಿಂದ ತಿಳಿಯಬರುತ್ತದೆ. ಇದರ ಅವರು ಈ ನಿಬಂಧನೆಯನ್ನು ಮಾಡಿಕೊಂಡಿರುವದರಿಂದಮಾತ್ರವೇ ಹಿಂದೂಗಳನ್ನು ಒಳ್ಳೇಮಾರ್ಗಕ್ಕೆ ತರುವದರಲ್ಲಿ ಅಭಿಲಾಷೆಯುಳ್ಳವರನ್ನಿಸಿಕೊಳ್ಳಲಾರರು. ಅವರು ಮೊದಲು ತಮ್ಮ ಮನೆಗಳಿಗೆ ಈ ಗುಂಪಿನವರನ್ನು ಕರೆಸಬಾರದು, ಕರೆಸಿರುವವರ ಮನೆಗೆ ಹೋಗಬಾರದು ಇರುವದರಿಂದ ಕಾರ್ಯತಃ ತೋರ್ಪಡಿಸಿ, ಸಾಧಾರಣ ತಿಳುವಳಿಕೆಯುಳ್ಳವರಿಗೆ ಈ ರೀತಿಯಾದ ಬುದ್ಧಿವಾದವನ್ನು ಕಲಿಸುವದಾಗಲೇ ಅವರು ನಿಜವಾಗಿಯೂ ಅತ್ಯಂತಾಭಿಮಾನಿಗಳೆಂದೆನ್ನಿಸಿಕೊಳ್ಳುವರು. ಅವರ ಕೃತ್ಯಗಳನ್ನು ನೋಡಿ ಸಾಧಾರಣಜನಗಳೂ ಒಳ್ಳೇಮಾರ್ಗಕ್ಕೆ ಬರುವದರಲ್ಲಿ ಸಂಶಯವಿಲ್ಲ. ಆ ದೊಡ್ಡ ಮನುಷ್ಯರು ಜಾಗರೂಕತೆಯಿಂದ ಈ ಕೆಟ್ಟಪದ್ಧತಿಯನ್ನು ಮೂಲೋತ್ಪಾಟನ ಮಾಡಿ ಕೊಟ್ಟ್ಯಂತರಜನಗಳ ಪ್ರೀತಿ ಗೌರವಗಳಿಗೆ ಪಾತ್ರರಾಗಬೇಕೆಂದು ಪ್ರಾರ್ಥಿಸುತ್ತೇವೆ.

ಪ್ರಕೃತದಲ್ಲಿ ಮೇಲೆ ಹೇಳುವ ವಿಷಯಗಳನ್ನೆಲ್ಲಾ ವರ್ತಮಾನ ಪತ್ರಿಕೆಗಳ ಮೂಲಕವಾಗಿಯೂ, ಇತರ ಸಂದರ್ಭಗಳ ಮೂಲಕವಾಗಿಯೂ ಮೈಸೂರು ಷಹರಿನ ವಿದ್ಯಾವಂತರಾದ ಹಿರಿಯ ದೊಡ್ಡ ಮನುಷ್ಯರುಗಳು ತಿಳಿದು,*ತಾವೂ ಈ ವಿಷಯದಲ್ಲಿ ತಕ್ಕ ಏರ್ಪಾಡನ್ನು ಮಾಡಿಕೊಳ್ಳತಕ್ಕದ್ದು ತಮ್ಮ ಕರ್ತವ್ಯವೆಂದು ಭಾವಿಸಿರುವಂತಿದೆ. ಇಲ್ಲಿಯೂ ಅಂಥಾ ನಿಬಂಧನೆಗಳಾಗಿ, ಅವಕ್ಕೆ ಎಲ್ಲರೂ ಸಕಚಿತ್ತದಿಂದ ಕೆಲವು ಕಾಲದ ವರಿಗೂ ವಿಧೇಯರಾಗಿ ನಡೆಯುತ್ತಾ ಬಂದಲ್ಲಿ, ಮದರಾಸ ದೊಡ್ಡ ಮನುಷ್ಯರಿಗೆ ಬರುವ ಕೀರ್ತಿಗೆ ಇವರೂ ಭಾಗಿಗಳಾದಾರೆಂದು ನಾವು ದೃಢವಾಗಿ ನಂಬಿ ಈ ಮೂಲಕ ಅರಿಕೆ ಮಾಡಿಕೊಂಡಿದ್ದೇವೆ; ಮತ್ತು ಇಲ್ಲಿನ ದೊಡ್ಡ ಮನುಷ್ಯರು ಈ ವಿಷಯವನ್ನು ತಮ್ಮ ಕರ್ತವ್ಯಾಂಶವೆಂಬದಾಗಿ ಭಾವಿಸಿ ತ್ವರೆಯಲ್ಲೇ ಕೆಲಸ ಮಾಡುವದಕ್ಕೆ ಪ್ರಕ್ರಮಿಸದಿರಲಾರರೆಂದು ನಂಬಿದ್ದೇವೆ.

ರಜಿಸ್ಟ್ರೇಷನ್.

ಬಂಧನಿಮೋಚನೆಯಿಲ್ಲದ ಇನಾಂ ಜಮೀನುಗಳಿಗೆ ಸಂಬಂಧಪಟ್ಟ ಪತ್ರಗಳ ರಜಿಸ್ಟ್ರೇಷನ್ ವಿಷಯ:—

ಸನ್ ೧೮೯೧ನೇ ಇಸವಿ ಮೇ ತಿಂಗಳು ೨೬ನೇ ತಾರೀಖು ೬ನೇ ನಂಬರ ರಜಿಸ್ಟ್ರೇಷನ್ ಅಫೀಸು ಸರ್ಕ್ಯೂಲರಿಂದ ಬಂಧನಿಮೋಚನೆಯಿಲ್ಲದ ಇನಾಂ ಜಮೀನುಗಳಿಗೆ ಸಂಬಂಧಪಟ್ಟ ಪತ್ರಗಳನ್ನು ರಜಿಸ್ಟರ್ ಮಾಡಕೂಡದೆಂದು ವಿಧಿಸಲ್ಪಟ್ಟಿದೆ. ಈ ಸರ್ಕ್ಯೂಲರಿಗೆ ಅನುಸಾರವಾಗಿ ನಂಜನಗೂಡು ಸಬ್ ರಜಿಸ್ಟ್ರೀ ಅಫೀಸಿನವರು ದಾಖಲೆಯೊಪ್ಪಂದದ ಸಸ್ವಿನಿಗಳಿಂದ ಬರೆಯಲ್ಪಟ್ಟ ಅಂಥಾ ಜಮೀನಿಗೆ ಸಂಬಂಧಪಟ್ಟ ಒಂದು ಪತ್ರವನ್ನು ರಜಿಸ್ಟರ್ ಮಾಡುವದಿಲ್ಲವೆಂದು ತಿರಸ್ಕಾರ ಮಾಡಿದರು. ಅಪೀಲು ಮಾಡಿದ್ದರಲ್ಲಿ ಮೈಸೂರು ಡಿಸ್ಟ್ರಿಕ್ಟ್ ರಜಿಸ್ಟ್ರಾರವರೂ ಸಹ ಅದೇ ಪ್ರಕಾರವಾಗಿ ತೀರ್ಮಾನ ಮಾಡಿದರು. ರಜಿಸ್ಟ್ರೇಷನ್ ಆಕ್ಟು ೭೭ ನೇ ಸೆಕ್ಷನ್ ಪ್ರಕಾರವಾಗಿ ಪತ್ರವನ್ನು ಬರೆಸಿಕೊಂಡವರು ಮೈಸೂರು ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ ರಜಿಸ್ಟ್ರೇಷನ್ ಬಗ್ಗೆ ದಾವಾ ಮಾಡಿದರು. ಈ ದಾವಾದಲ್ಲಿ ಮೈಸೂರು ರಜಿಸ್ಟ್ರಾರ್ ಮತ್ತು ನಂಜನಗೂಡು ಸಬ್ ರಜಿಸ್ಟ್ರಾರ್ ಸಹ ಪ್ರತಿವಾದಿಗಳಾಗಿ ಮಾಡಲ್ಪಟ್ಟಿದ್ದರು. ಇವರುಗಳ ವಾಜಬಾತೀ ಬಗ್ಗೆ ಸಮನುಗಳು ಕಳುಹಿಸಲ್ಪಟ್ಟವೆಯೆಂದು ಇನ್ಸ್‌ಪೆಕ್ಟರ್ ಜನರಲ್ ಆಫ್ ರಜಿಸ್ಟ್ರೇಷನ್‌ರವರಿಗೆ ತಿಳಿಸಿದ್ದರಮೇಲೆ ಮೈಸೂರು ಡಿಸ್ಟ್ರಿಕ್ಟ್ ರಜಿಸ್ಟ್ರಾರು ಕೋರ್ಟಿನಲ್ಲಿ ಹಾಜರಾಗಿ ಕೋರ್ಟಿನವರಿಗೆ ಬೇಕಾದ ಅಂಶಗಳನ್ನು ತಿಳಿಸಬೇಕೆಂದು ಅವರು ಆಜ್ಞಾಪಿಸಿದರು. ಡಿಸ್ಟ್ರಿಕ್ಟ್ ಜಡ್ಜಿಯವರು ಆ ಸರ್ಕ್ಯೂಲರನ್ನು ಜಾರಿಯಲ್ಲಿ ತರಬಹುದಾದ ಕಾನೂನೆಂಬದಾಗಿ ಭಾವಿಸದೆ, ರಜಿಸ್ಟ್ರೇಷನ್ ಆಕ್ಟಿಗೆ ಅನುಸಾರವಾಗಿ ನಂಜನಗೂಡಿನ ಸಬ್ ರಜಿಸ್ಟ್ರಾರವರು ರಜಿಸ್ಟರ್ ಮಾಡಬೇಕೆಂದು ಫೈಸಲ್ ಮಾಡಿದರು.

ರಜಿಸ್ಟ್ರೇಷನ್ ಆಫೀಸಿನವರು ರಜಿಸ್ಟ್ರೇಷನ್ ಆಕ್ಟಿಗೂ ಮತ್ತು ತಮ್ಮ ರೂಲ್ಸುಗಳಿಗೂ ಸರ್ಕ್ಯೂಲರುಗಳಿಗೂ ಅನುಸಾರವಾಗಿ ನಡಿಸಿದ ಕಾರ್ಯಗಳಿಗೋಸ್ಕರ ತಾವು ಸಿವಿಲ್ ಕೋರ್ಟುಗಳಲ್ಲಿ ಪಾರ್ಟಿಗಳಾಗಿ ಮಾಡಲ್ಪಡುವದು ತುಂಬಾ ತೊಂದರೆಗಳಿಗೂ ಅಸಮಾಧಾನಗಳಿಗೂ ಕಾರಣವಾಗಿದೆ. ಜುಡಿಷಲ್ ಡಿಪಾರ್ಟ್‌ಮೆಂಟಿನಲ್ಲಿ ಜಡ್ಜಮೆಂಟು ಹೇಳುವ ಜಡ್ಜಿಗಳನ್ನು ಪ್ರತಿವಾದಿಗಳನ್ನಾಗಿ ಮಾಡದೆ ಇರುವದಕ್ಕೆ ಯಾವ ಯಾವ ಕಾರಣಗಳುವೆಯೋ ಅದೇ ಕಾರಣಗಳು ರಜಿಸ್ಟ್ರೇಷನ್ ಅಫಿಸರುಗಳಿಗೂ ಸಹ ಸಂಬಂಧಪಡುತ್ತವೆ. ಆದ್ದರಿಂದ ಈ ಅಂಶದ ವಿಷಯವಾಗಿ ಛೀಫ್ ಕೋರ್ಟಿನವರ ಇರಾದೆಯೇ ಇಂದು ಏನೆಂದು ಬಗ್ಗೆ ದಿವಾನರವರಿಗೆ ತಿಳಿಸಬೇಕೆಂದು ಇನ್ಸ್‌ಪೆಕ್ಟರ್ ಜನರಲ್ ಆಫ್ ರಜಿಸ್ಟ್ರೇಷನ್‌ರವರು ಚೀಫ್ ಸೆಕ್ರೆಟರಿಗಳಿಗೆ ಬರೆದುಕೊಂಡಿದ್ದರು. ಈ ಅಂಶದ ತೀರ್ಮಾನಕ್ಕೆ ಛೀಫ್ ಕೋರ್ಟಿನವರ ಅಭಿಪ್ರಾಯವು ಅವಶ್ಯಕವಿಲ್ಲವೆಂತಲೂ, ತಮ್ಮನ್ನು ಪಾರ್ಟಿಯಾಗಿ ಮಾಡಿದ್ದಕ್ಕೆ ಕಾರಣವಿಲ್ಲವೆಂದು ಡಿಸ್ಟ್ರಿಕ್ಟ್ ರಜಿಸ್ಟ್ರಾರವರು ಡಿಫೆನ್ಸ್ ಹೇಳಬೇಕಾಗಿತ್ತೆಂತಲೂ ದಿವಾನರವರು ತಿಳಿಸಿದ್ದಾರೆ ಮತ್ತು ತಮ್ಮ ಸ್ವಂತ ತಿಳುವಳಿಕೆಯ ಬಗ್ಗೆ ಡಿಸ್ಟ್ರಿಕ್ಟ್ ಜಡ್ಜಿಯವರ ಜಡ್ಜಮೆಂಟಿನ ಕಾಪಿಯನ್ನು ಕಳುಹಿಸಬೇಕೆಂದು ಇನ್ಸ್‌ಪೆಕ್ಟರ್ ಜನರಲ್ ಆಫ್ ರಜಿಸ್ಟ್ರೇಷನ್‌ರವರನ್ನು ಕೇಳಿಕೊಂಡಿದ್ದಾರೆ.

ಮೇಲ್ಕಂಡ ಸರ್ಕ್ಯೂಲರ್ ವಿಷಯವಾಗಿ ಗವರ್ನ್‌ಮೆಂಟಿನವರ ಅನುಮತಿ ಇಲ್ಲದೆ ಅದು ಕೊಡಲ್ಪಟ್ಟಿದ್ದದರಿಂದ ಇನ್ನು ಮೇಲೆ ಅದನ್ನು ಜಾರಿಯಲ್ಲಿಡಕೂಡದೆಂದು ವಿಧಾಯಕ ಮಾಡಲ್ಪಟ್ಟಿದೆ. ಒಬ್ಬ ಮನುಷ್ಯನಿಗೆ ಇಲ್ಲದವಕ್ಕೆ ರಜಿಸ್ಟರ್ ಮಾಡುವದರಿಂದುಂಟಾಗುವದಿಲ್ಲ. ಆದ್ದರಿಂದ ಬಂಧವಿಮೋಚನೆ ಇಲ್ಲದ ಇನಾಂ ಜಮೀನುಗಳ ವಿಷಯವಾದಂಥಾ ಪತ್ರಗಳನ್ನು ರಜಿಸ್ಟರ್ ಮಾಡುವದರಿಂದ ಗವರ್ನ್‌ಮೆಂಟಿನವರಿಗಿರುವ ಅಂಥಾ ಜಮೀನಿಗೆ ಸಂಬಂಧಪಟ್ಟ ಹಕ್ಕು ಯಾವದೂ ತಪ್ಪಿ ಹೋಗುವದಿಲ್ಲವೆಂದು ಚೀಫ್ ಸೆಕ್ರೆಟರಿಯವರು ಇನ್ಸ್‌ಪೆಕ್ಟರ್ ಜನರಲ್‌ರವರ ಇರಾದೆಯಂತೆ ಹುಕುಂ

ಮಾಡಿದ್ದಾರೆ. ಇದರಿಂದ ಅನೇಕ ಜನಗಳಿಗೆ ಉಪಯೋಗವಾಗುವದರಲ್ಲಿ ಸಂಶಯವಿಲ್ಲ. ಇಂಥಾ ತೀರ್ಮಾನವು ಅತ್ಯಂತ ಅಪೇಕ್ಷಣೀಯವಾಗಿತ್ತು ಮತ್ತು ಇಂಥಾ ಸಂದರ್ಭಗಳಲ್ಲಿ ರಿಜಿಸ್ಟ್ರಾರುಗಳಿಗೂ ಹಿಂದುಮುಂದೆ ತುಳಿಯುವುದು ತಪ್ಪಿಹೋಯಿತು. ಶ್ರೀಮನ್ಮಹಾರಾಜಾ ಸರ್ಕಾರದವರು ಇಂಥಾ ತೀರ್ಮಾನವನ್ನು ಮಾಡಿದ್ದಕ್ಕಾಗಿ ಪ್ರಜೆಗಳು ತುಂಬಾ ಕೃತಜ್ಞರಾಗಿರುವರೆಂದು ನಾವು ನಂಬಿದ್ದೇವೆ.

ಯಲ್ಲರಲ್ಲಿಯೂ ವ್ಯಸನವನ್ನು ಹುಟ್ಟಿಸತಕ್ಕ ಕಥೆ.

“ಪಿರಿಯ ಎಂಬ ದೇಶದಲ್ಲಿ ಒಂದು ಸಣ್ಣ ಹಳ್ಳಿ ಇರುವದು. ಈ ಹಳ್ಳಿಯಲ್ಲಿ ಒಬ್ಬ ಹೆಂಗಸು ವಾಸಮಾಡಿಕೊಂಡಿದ್ದಳು. ಆಕೆಯ ಹೆಸರು ಮರಿಯಳು. ಆಕೆಯ ತಂದೆಯ ಹೆಸರು ಎಲಿಜೇಜರ್. ಆಕೆಯು ಶ್ರೇಷ್ಠವಾದ ವಂಶದವಳು. ಇವಳು ಐಶ್ವರ್ಯವಂತಳಾಗಿದ್ದಳು. ಇವಳೂ ಬೇರೇ ಜನಗಳೂ ತಮ್ಮ ಊರಿನಿಂದ ಯೆರೂಸಲೆಮ್ ಪಟ್ಟಣಕ್ಕೆ ಓಡಿಹೋದ ವೇಳೆಯಲ್ಲಿ, ಆ ಜನಗಳೂ ಆಕೆಯೂ ಮುತ್ತಿಗೆ ಹಾಕಲ್ಪಟ್ಟರು. ಇವರ ಮೇಲೆ ಇದ್ದಂಥ ಪಹರೆಯವರು ಬಹಳ ಕೊಳ್ಳೆ ಮಾಡುವಂಥವರಾಗಿದ್ದರು. ಅವಳು ಪಿರಿಯ ದೇಶದಿಂದ ಯೆರೂಸಲೆಮ್ ಪಟ್ಟಣಕ್ಕೆ ಸಾಗಿಸಿಕೊಂಡು ಬಂದಿದ್ದಂಥ ಬೇರೆ ಬೇರೆ ಸಾಮಾನುಗಳನ್ನು ಅಗಲೇ ಕಸುಗೊಂಡರು. ಇದು ಅಲ್ಲದೆ, ಆಕೆಯು ಬಹು ಜಾಗ್ರತೆಯಾಗಿ ಕೂಡಿಟ್ಟಿದ್ದಂಥ ಅನ್ನ ಆಹಾರವನ್ನೂ ಬೇರೆ ಬೇರೆ ತಿನಬೆ ವಸ್ತುಗಳನ್ನೂ ಅವರು ಕಿತ್ತುಕೊಂಡು ಹೋಗುವದಕ್ಕೋಸ್ಕರ ಅವಳ ಮನೆಗೆ ದಿನಾಲೂ ಓಡಿ ಬರುತ್ತಿದ್ದರು. ಆಕೆಯ ಮನೆಯನ್ನು ನುಗ್ಗಿ, ಅವಳಲ್ಲಿ ಇದ್ದವನ್ನೆಲ್ಲಾ ಕಸುಗೊಂಡು ಹೋದರೂ ತಿರುಗಿ ಅವಳ ಮನೆಗೆ ದಿನಾಲೂ ಬರುತ್ತಾ ಇದ್ದದರಿಂದ ಅವಳಿಗೆ ತುಂಬಾ ಕೋಪ ಬಂತು. ಇದರ ಕಾರಣದಿಂದ ಇವಳು ಆ ನೀಚ ಕೊಳ್ಳೆಗಾರರಾದ ಪಹರೆಯವರನ್ನು ಬಯ್ಯುತ್ತಾ, ಶಪಿಸುತ್ತಾ ಇದ್ದಳು. ಇವಳು ಹೀಗೆ ಮಾಡಿ ತನಗೆ ವಿರೋಧವಾಗಿ ಅವರಲ್ಲಿ ಸಿಟ್ಟು ಎಬ್ಬಿಸಿದಳು. ಆದರೆ ಇವಳ ಮೇಲೆ ಕೋಪವುಳ್ಳವರಾಗಿದ್ದಾಗ್ಯೂ ಅವಳು ಇದ್ದಂಥಾ ಸ್ಥಿತಿಯನ್ನು ನೋಡಿ ಬಹಳ ಕನಿಕರ ಪಟ್ಟದ್ದರಿಂದ ಅವಳನ್ನು ಕೊಂದುಹಾಕಲಿಲ್ಲ. ಮತ್ತು ಇವಳಿಗೆ ಎಲ್ಲಿಯವರೂ ಸ್ವಲ್ಪ ಆಹಾರ ಸಿಕ್ಕಿದರೆ, ಆ ಆಹಾರವು ತನ್ನ ಬಾಯಿಗೆ ಬರುವುದಿಲ್ಲವೆಂತಲೂ ಅವರು ಅದನ್ನು ಕಸುಗೊಳ್ಳುವರೆಂತಲೂ ಆಲೋಚನೆ ಮಾಡುವಳು. ತನಗೆ ಸಿಕ್ಕಿದ ಆಹಾರವನ್ನು ಇತರರು ಹೀಗೆ ಕಸುಗೊಳ್ಳುತ್ತಾ ಇದ್ದುದರಿಂದ ಬೇರೆ ಆಹಾರವು ಎಲ್ಲಿಯಾದರೂ ಅವಳಿಗೆ ಸಿಕ್ಕುವದು ಅಸಾಧ್ಯವಾಗಿತ್ತು. ಆ ಮೇಲೆ ದುರ್ಭಿಕ್ಷವು ಅವಳಲ್ಲಿ ವಿಶೇಷವಾಗಿ ಹೆಚ್ಚುತ್ತಾ ಬಂದು ಆಕೆಯ ಕರುಳುಗಳು ಇಂಗಿಹೋಗಿ ಆಕೆಯ ಎಲುಬಿನ ನೆಣವು ಕರಗಿಹೋಯಿತು. ಕಡೆಯಲ್ಲಿ ಆವಳ ಕೋಪವು ದುರ್ಭಿಕ್ಷಕ್ಕಿಂತಲೂ ಬಹಳವಾಗಿ ಉಕ್ಕಿತು. ಮತ್ತು ತನ್ನಲ್ಲಿದ್ದ ಕೋಪವೂ ತಾನು ಇದ್ದ ಸ್ಥಿತಿಯೂ ಇವೆರಡೂ ಹೆಚ್ಚಾಗಿ ಇವೆರಡರ ಚಿಂತೆಯೇ ಅವಳನ್ನು ಹಿಡಿಯಿತು. ಕಡೆಯಲ್ಲಿ ಅವಳು ಸ್ವಭಾವಕ್ಕೆ ವಿರೋಧವಾದ ಒಂದು ಕಾರ್ಯವನ್ನು ಮಾಡುವದಕ್ಕೆ ಪ್ರಯತ್ನಮಾಡಿದಳು. ಏನೆಂದರೆ—ತನ್ನ ಎದೆಯಲ್ಲಿ ಹಾಲು ಕುಡಿಯುತ್ತಾ ಇದ್ದ ತನ್ನ ಮಗುವನ್ನು ಬಹು ಆತುರದಿಂದ ಹಿಡುಕೊಂಡು ಹೇಳಿದ್ದು ಓ ಖಿಷರನಾಗುವೆ! ಇಂದು ಕ್ಷಾಮದಲ್ಲಿ, ಈ ಯುದ್ಧದಲ್ಲಿ, ಈ ದಂಗೆಯು ನಡೆಯುವಲ್ಲಿ, ನಿನ್ನನ್ನು ಯಾರಿಗೋಸ್ಕರ ಪೋಷಣೆ ಮಾಡಿಕೊಂಡು ಬರಲಿ? ರೋಮನ್ನ ಜನರ ಸಂಗಡ ನಡಿಯತಕ್ಕ ಯುದ್ಧದಲ್ಲಿ, ಅವರು ನಮ್ಮನ್ನು ಗೆದ್ದು ನಮ್ಮ ಪ್ರಾಣಗಳನ್ನು ಉಳಿಸಿದರೆ, ನಾವು ಅವರಿಗೆ ಗುಲಾಮರಾಗಬೇಕು! ಮತ್ತು ನಾವು ಅವರಿಗೆ ಗುಲಾಮರಾಗುವದಕ್ಕಿಂತ ಮುಂಚೆಯೇ ಈ ಬಹು ಕಠಿಣವಾದ ದುರ್ಭಿಕ್ಷವು ನಮ್ಮನ್ನು ಕೊಲ್ಲುತ್ತದೆ. ಇದು ಅಲ್ಲದೆ ಈ ದಗಲ್ಬಾಜೀ ದಂಗೆಯವರು ಕ್ಷಾಮಕ್ಕಿಂತಲೂ ನಮ್ಮ ಗುಲಾಮರ ಸ್ಥಿತಿಗಿಂತಲೂ ಬಹು ಭಯಂಕರರಾಗಿರುತ್ತಾರೆ. ಆದದರಿಂದ ನಾಗುವೇ! ಬಾ, ನನಗೆ ಆಹಾರವಾಗಿರು; ಈ ದಂಗೆಯವರ ನಡೆಯುವದರಲ್ಲಿ ದುಷ್ಟತನವನ್ನು ಬಯಲುಮಾಡುವಂಥವನಾಗಿರು, ಮತ್ತು ನಮ್ಮ ಯೆಹೂದ್ಯ ಜನರ ಆಪತ್ತುಗಳನ್ನೆಲ್ಲಾ ಸಂಪೂರ್ಣ ಮಾಡುವದಕ್ಕೆ ಕಡೆಯದಾಗಿರುವಂಥ ಒಂದು ಗಾದೆಯಾಗಿ ಲೋಕಕ್ಕೆಲ್ಲಾ ಇರು.

ಮೇಲೆ ಹೇಳಿದ ಮಾತುಗಳನ್ನು ಬಾಯಿಯಿಂದ ಹೊರಡಿಸಿದಕ್ಷಣ ಆಕೆಯು ತನ್ನ ಕೂಸನ್ನು ಕೊಂದಳು. ತರುವಾಯ ಆ ಮಗುವನ್ನು ಬೇಯಿಸಿ, ಅದರ ಒಂದು ಭಾಗವನ್ನು ತಿಂದು, ಇನ್ನೊಂದನ್ನು ಭದ್ರವಾಗಿ ಬಚ್ಚಿಟ್ಟುಕೊಂಡಳು. ಇದು ಆದ ಸ್ವಲ್ಪ ಹೊತ್ತಿನ ಮೇಲೆ ಅದರು ಅವಳ ಮನೆಗೆ ಬಂದು ನಿಂತಾಗ, ಆವಳು ಊಟ ಮಾಡಿದ ಆಹಾರದ ದುರ್ಗಂಧವು ಅವರ ಮೂಗಿಗೆ ಬಿತ್ತು. ಆದರು, ಯಾವ ಆಹಾರವನ್ನು ಸಿದ್ಧ ಮಾಡಿದ್ದಳೆಂದು ಅವರಿಗೆ ತೋರಿಸದೆ ಹೋದರೆ ಅವಳ ಕುತ್ತಿಗೆಯನ್ನು ಆ ಕ್ಷಣ ಕೊಯಿದು ಹಾಕುವದೆಂತ ಅವಳನ್ನು ಹೆದರಿಸಿದರು. ಆವಳು ಉತ್ತರವಾಗಿ ತಾನು ಸಿದ್ಧ ಮಾಡಿದ್ದ ಆಹಾರದಲ್ಲಿ ಬಹಳ ಸೊಗಸಾಗಿರುವ ಒಂದು ಭಾಗವನ್ನು ಅವರಿಗೋಸ್ಕರ ಮಿಗಿಸಿದ್ದಳೆಂದು ಹೇಳಿದಳು. ಹೇಳಿದ ಪ್ರಕಾರವಾಗಿ ತನ್ನ ಕೂಸನ್ನು ಬೇಯಿಸಿದ್ದರಲ್ಲಿ ಮಿಕ್ಕಿದ್ದನ್ನು ಅವರಿಗೆ ತೋರಿಸಿದಳು. ಅವಳು—ಈಗ ಬೇಯಿಸಿದಂಥ ಆಹಾರವು ನನ್ನ ಸ್ವಂತ ಮಗನು; ಇದನ್ನು ನನ್ನ ಸ್ವಂತ ಕೈಯಿಂದ ಮಾಡಿದ್ದೇನೆ! ಬಂದು ನಾನು ಸಿದ್ಧ ಮಾಡಿರುವ ಆಹಾರವನ್ನು ಊಟ ಮಾಡಿರಿ; ಯಾಕಂದರೆ ಅದನ್ನು ನಾನೇ ತಿಂದಿದ್ದೇನೆ! ನೀವು ಹೆಂಗಸಿಗಿಂತ ಬಹಳ ಮೃದುವಾಗಿರುವವರ ಹಾಗೆಯೂ ತಾಯಿಗಿಂತ ಕನಿಕರವುಳ್ಳವರಾಗಿರುವವರ ಹಾಗೆಯೂ ನಟಿಸುತ್ತೀರಿ; ನೀವು ಹಾಗೆ ಸೂಕ್ಷ್ಮ ಸ್ವಭಾವದವರಾಗಿದ್ದೂ ನಾನು ಸಿದ್ಧ ಮಾಡಿರುವ ಆಹಾರವನ್ನು ಅಸಹ್ಯಪಡುವವರಾಗಿದ್ದರೆ, ನಾನು ಮುಂಚೆಯೇ ಒಂದು ಭಾಗವನ್ನು ತಿಂದ ಹಾಗೆ ಈಗ ಉಳಿದಿರುವದನ್ನು ಸಹಾ ನಾನೇ ತಿನ್ನುವದಕ್ಕೆ ನನಗೇ ಬಿಟ್ಟುಬಿಡಿರಿ! ಎಂದು ಹೇಳಿದಳು. ಈ ಮಾತುಗಳನ್ನು ಅವರು ಕೇಳಿದಾಗ ಅವರಿಗೆ ತುಂಬಾ ಭಯವು ಮನಸ್ಸಿನಲ್ಲಿ ದಿಗಿಲೂ ಹಿಡಿದು, ಬೇಯಿಸಿರುವ ಮಗುವನ್ನು ಹೇಳಕೂಡದ ಆಶ್ಚರ್ಯದಿಂದ ನೋಡುತ್ತಾ ನಿಂತರು. ಇದನ್ನು ನೋಡಿ ಭಯಪಟ್ಟ ಹಾಗೆ ಅವರು ಹೆದರಿದವರನ್ನು ನೋಡಿದರೂ ಇಷ್ಟು ಭಯದ ಕಾರಣ ನಡೆಯುತ್ತಾ ಅವಳ ಮನೆಯನ್ನು ಬಿಟ್ಟು ಮಿಕ್ಕ ಆಹಾರವನ್ನು ಸ್ವಲ್ಪ ಕಷ್ಟದಿಂದ ಅವಳಿಗೆ ಬಿಟ್ಟು ಹೊರಟುಹೋದರು. ಈ ಭಯಂಕರವಾದ ಸಂಗತಿಯು ಪಟ್ಟಣವೆಲ್ಲಾ ಹಬ್ಬಿಕೊಂಡಿತು. ಪ್ರತಿಯೊಬ್ಬರೂ ಇದನ್ನು ತಾವೇ ನೋಡಿ ಎಂದೂ ಕೇಳದಂಥ ಈ ಕೆಲಸವನ್ನು ತಾವೇ ಮಾಡಿದವರ ಹಾಗೆ ಭ್ರಮಿಸಿ, ಬಹಳವಾಗಿ ನಡುಗುವಂಥವರಾದರು. ಬಡಬರು ಕ್ಷಾಮದಿಂದ ಸಂಕಟಪಟ್ಟರೋ ಅಂಥವರು ಸಾಯುವದಕ್ಕೆ ಇಷ್ಟಪಟ್ಟರು; ಮತ್ತು ಯಾರ್ಯಾರು ಮುಂಚೆಯೇ, ಇಂಥಾ ವಿಪತ್ತುಗಳನ್ನು ಕೇಳದೆಯೂ ನೋಡದೆಯೂ, ಸತ್ತುಹೋದರೋ ಅಂಥವರು ಬಹಳ ಒಳ್ಳೆಯವರು ಎಂದು ಎಣಿಸಲ್ಪಟ್ಟರು.

ಮೇಲೆ ಹೇಳಿದ ಚರಿತ್ರೆಯು ಎಲ್ಲರಲ್ಲಿಯೂ ವ್ಯಸನವು ಹುಟ್ಟಿಸುತ್ತದೆ ಎಂಬುವದಕ್ಕೆ ಯಾವ ಅನುಮಾನವೂ ಇಲ್ಲ. ಈ ಚರಿತ್ರೆಯ ವಿಷಯವಾಗಿ ನಾವು ವಿಸ್ತಾರವಾಗಿ ತಿಳಿಯಬೇಕಾದರೆ ಎರಡು ಮೂರು ಪ್ರಶ್ನೆಗಳನ್ನು ಮಾಡಬೇಕು. ಆ ಹೆಂಗಸು ಯಾವ ರಾಜ್ಯಕ್ಕೆ ಸಂಬಂಧಪಟ್ಟವಳು? ಯಾರು ಹೀಗೆ ಆಕೆಯು ಇದ್ದ ಸ್ಥಳವನ್ನು ಮುತ್ತಿಗೆ ಹಾಕಿದರು? ಯಾತಕ್ಕೋಸ್ಕರ ಇಂಥಾ ಸಂಕಟ ಆಕೆಗೆ ಬಂತು?

ಆ ಹೆಂಗಸು ಯಾವ ರಾಜ್ಯಕ್ಕೆ ಸೇರಿದವಳು?—ಪಾಲಿಸ್ತಿನ್ ದೇಶದಲ್ಲಿರುವ ಯೆಹೂದ್ಯರಾಜ್ಯಕ್ಕೆ ಆ ಹೆಂಗಸು ಸೇರಿದವಳು. ಯೆಹೂದ್ಯ ಜನಗಳು ಮುತ್ತಿಗೆ ಹಾಕಲ್ಪಟ್ಟರು. ಈ ಯೆಹೂದ್ಯ ಜನರು ದೇವರ ಸ್ವಂತ ಜನರೆಂದು ಕರೆಯಲ್ಪಟ್ಟರು. ಇವರು ಅಬ್ರಹಾಮನೆಂಬುವನ ಸಂತತಿಯಿಂದ ಉತ್ಪತ್ತಿಯಾದವರು. ಲೋಕದಲ್ಲಿರುವ ಎಲ್ಲಾ ಜನಗಳಿಗಿಂತ ಬಹಳ ಒಳ್ಳೆಯವರಾಗಿದ್ದರು. ಇವರಲ್ಲಿ ವಿಗ್ರಹಾರಾಧನೆ ಇರಲಿಲ್ಲ. ಒಬ್ಬನೇ ದೇವರನ್ನು ಆರಾಧಿಸುತ್ತಾ ಬಂದರು. ಈ ಜನರನ್ನು ದೇವರು ಐಜಿಪ್ಟ್ ದೇಶದಿಂದ ಫರೋಹನ ಎಂಬ ದೊರೆಯ ಅಧಿಕಾರದಿಂದ ಬಿಡಿಸಿಕೊಂಡು ಆರಣ್ಯದ ಮಾರ್ಗವಾಗಿ ಅವರನ್ನು ನಡಿಸಿ ಕಡೆಯಲ್ಲಿ ಕಾನಾನ್ ಎಂಬ ದೇಶಕ್ಕೆ ಸೇರಿಸಿದನು. ಅನೇಕ ವರುಷಗಳು ಅಲ್ಲಿಯೇ ಸಂತೋಷವಾಗಿಯೂ ಸಮಾಧಾನವಾಗಿಯೂ ವಾಸ ಮಾಡಿಕೊಂಡು ಇದ್ದರು. ಕೆಲವು ವೇಳೆಗಳಲ್ಲಿ ಪರರಾಜರು ಇವರನ್ನು ಸದೆಹೊಡೆದುಕೊಂಡು ಹೋದರು; ಕೆಲವು ವೇಳೆಗಳಲ್ಲಿ ಪರರಾಜರ ಕಡೆಯಿಂದ ತುಂಬಾ ಉಪದ್ರವಾ ದೂಷಣೆಯೂ ಇವರಿಗೆ ಬರುತ್ತಿತ್ತು. ಇವರ ದೇಶಕ್ಕೆ ರಾಜಧಾನಿಯಾಗಿದ್ದ ಯೆರೂಸಲೇಮ್ ಪಟ್ಟಣವು ಬಹು ವಿಶೇಷವಾದದ್ದು. ಇದು ಸೊಲೊಮೋನ್ ಎಂಬ ದೊರೆಯಿಂದ ಬಹು ಪವಿತ್ರವಾಗಿ ಕಟ್ಟಲ್ಪಟ್ಟಿತು. ಇದಲ್ಲದೆ ಇವರು ಲೋಕದಲ್ಲಿರುವ ಎಲ್ಲಾ ಜನಗಳಿಗಿಂತ ಹೆಚ್ಚಾಗಿ ನಿಜವಾದ ದೇವರ ವಿಷಯವಾಗಿ ತಿಳಿದು ಆತನನ್ನು ಆರಾಧಿಸುತ್ತಾ ಬಂದರು. ಅವರ ಕೆಲವು ಸಮಯಗಳಲ್ಲಿ ಸುಳ್ಳುದೇವರುಗಳನ್ನು ಪೂಜೆಮಾಡುತ್ತಾ ಇದ್ದದರಿಂದ ಅವರಿಗೆ ತಕ್ಕ ಶಿಕ್ಷೆಯು ದೇವರಿಂದ ಬಂತು. ಈ ಜನಗಳ ಚರಿತ್ರೆಯನ್ನು ಓದಿ ಯೋಚಿಸಿದರೆ ನಮಗೆ ಬಹಳ ಪ್ರಯೋಜನವು ಬರುವದು; ಇವರ ಚರಿತ್ರೆಯನ್ನು ಓದಿ ಯೋಚಿಸಿದರೆ ಆಶ್ಚರ್ಯ ಉಂಟಾಗುವದು; ಇವರ ಚರಿತ್ರೆಯನ್ನು ಓದಿದರೆ ನಿಜವಾದ ದೇವರು ಯಾರು ಎಂಬುವದು ಗೊತ್ತಾಗುವದು; ಇವರ ಚರಿತ್ರೆಯನ್ನು ಓದಿ ಧ್ಯಾನಮಾಡಿದರೆ ನಿಜವಾದ ದೇವರು ಸ್ಪಷ್ಟವಾಗಿ ಇದ್ದಾನೆಂದು ತಿಳಿಯಬಹುದು. (ಸಶೇಷ)

ನೋಟಿಸ್.

ನಂಜನಗೂಡಿನಲ್ಲಿರುವ ಕಾಳಿರಂಗಣ್ಣನವರ ಹಿರೀ ಮಗ ವೆಂಕಟರಾಮಯ್ಯನು ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಮೈಸೂರು ವೇದಾಂತಿವಾಸೀ ಪತ್ರಿಕೆಯ ಮೇ ೬ ಮತ್ತು ೧೩ನೇ ತಾರೀಖಿನ ಸಂಚಿಕೆಗಳಲ್ಲಿ ನಮ್ಮ ತಂದೆಯವರ ಕಾಳಿರಂಗಣ್ಣನು ನನಗೆ ಬುದ್ಧಿ ಸಾಲದಂತೆಯೂ, ಯಾರೂ ನನಗೆ ಸಾಲ ಕೊಡಕೂಡದಂತೆಯೂ ತಿಳಿಸಿ ಇರುವದು ಸರಿಯಲ್ಲ. ನಮ್ಮ ತಂದೆಯು ೬೦—೭೦ ವಯಸ್ಸಿನವನಾಗಿ ೨೩—೨೪ ವಯಸ್ಸು ಆಗಿರುವ ಮಕ್ಕಳನ್ನೂ ಮತ್ತು ಇವರುಗಳ ತಾಯಿ ಮುದುಕಿಯನ್ನೂ ಬಹು ವಿಧವಾಗಿ ಯಲ್ಲವನ್ನು ಹೊಸೆ ಪಡಿಸುವದಲ್ಲದೆ, ವೇಶ್ಯಾಸಂಗವನ್ನು ಮಾಡುತ್ತಾ, ನಮ್ಮ ಪಿತಾಮಹಾರ್ಜಿತವಾದ ಆಸ್ತಿಗಳನ್ನು ತನ್ನ ಸ್ವಯಾರ್ಜಿತವೆಂದು ಜನಗಳಿಗೆ ಹೇಳಿ, ದುರುಪಯೋಗಕ್ಕಾಗಿ ಮಾರಿ ಮಾಡುತ್ತಾನೆಂಬ ಸಂಗತಿಯು ತಿಳಿಯಬಂದಿದೆ. ಆದ್ದರಿಂದ ಈ ನಮ್ಮ ಪಿತಾಮಹಾರ್ಜಿತ ಆಸ್ತಿಯನ್ನು ಯಾರೊಬ್ಬರೂ, ನಾನು, ನನ್ನ ತಮ್ಮ, ನಮ್ಮಗಳ ಸಮ್ಮತಿ ಇಲ್ಲದೆ ಯಾವ ವಿಧವಾಗಿಯೂ ತೆಗೆದುಕೊಳ್ಳಕೂಡದೆಂದು ಸಮಸ್ತ ಜನಗಳಿಗೂ ವಿಜ್ಞಾಪಿಸುತ್ತೇನೆ. ರಂ|| ವೆಂಕಟರಾಮಯ್ಯ.

ಬಹಿರ್ದೇಶ ವೃತ್ತಾಂತಗಳು.

—(ರಾಯಿಟರ್)—

[illegible] ಹಿಂದುಸ್ಥಾನದ ಸ್ಟೀಮರುಗಳು ೨೦—೨೫ನೆ ತಾರೀಖು ಹೋಗಿ ನೀಲಗಿರಿಯಿಂದ ಹೊರಟು ರಾಜಧಾನಿಗೆ ಬರುವುದು ಬಹುದೆಂದು ನಿರೀಕ್ಷಿಸಲ್ಪಟ್ಟಿದೆ.

ಶ್ರೀರಂಗಪಟ್ಟಣದ ಬಳಿ ಇರುವ ಕಾವೇರೀ ನಾಲೆಯು ಉತ್ತರ ಪ್ಯಾಂ ಪ್ರದೇಶಗಳಲ್ಲಿ ಕಿತ್ತುಹೋಗಿರುವದರಿಂದ ಇದನ್ನು ರಿಪೇರಿ ಮಾಡಿಸುವದಕ್ಕೆ ಮೈಸೂರು ಸರ್ಕಾರದವರು ೧೦,೦೦೦ ರೂಪಾಯಿ ಸ್ಯಾಂಕ್ಷನ್ ಮಾಡಿರುವಂತೆ ಕೇಳುತ್ತೇವೆ.

ಕಳೆದ ಶನಿವಾರ ಸಾಯಂಕಾಲ ಇಲ್ಲಿನ ಸರ್ವಾಧಿಕಾರಿಗಳಾದ ಸರ್|| ಕೈಸೆನಾಪತಿಯವರು ನೀಲಗಿರಿಯಿಂದ ರಾಜಧಾನಿಗೆ ಬಂದು ತಲುಪಿದರು. ಕಳೆದ ಸೋಮವಾರದ ಲಾಗಾಯಿತು ಸಿವಿಲ್ ಕೋರ್ಟುಗಳು ತೆರೆಯಲ್ಪಟ್ಟು ಯಥಾಪ್ರಕಾರ ಕಾರ್ಯಗಳು ನಡೆಸಲ್ಪಡುತ್ತಲಿವೆ.

ಮೈಸೂರು ಸರ್ಕಾರದಲ್ಲಿ ಆಫೀಸರ್ ಆಮಲ್ದಾರುಗಳನ್ನು ನೋಡುತಲಿರುವ ಸುಮಾರು ೩೦ ಮಂದಿ ಆಫೀಸರುಗಳು ನಾಳೆ ಜಾನ್ ಗುರ್ರೀ ಲಾಗಾಯಿತು ಖಾಯಂ ಬರುವರ್ಗೆ ಸೇರಿಸಲ್ಪಡುವರೆಂಬದಾಗಿ ಬೆಂಗಳೂರು ಪತ್ರಿಕೆಯೊಂದು ತಿಳಿಸುತ್ತದೆ.

ಪದ್ಧತಿಯ ಪ್ರಕಾರ ಶ್ರೀಮನ್ಮಹಾರಾಜರವರು ನೀಲಗಿರಿ ಬೆಟ್ಟಗಳಲ್ಲಿರುವಾಗ್ಯೆ ಯೂರೋಪಿಯನ್ ಸರದಾರರುಗಳಿಗೆಲ್ಲಾ ಒಂದು ದಿನ ಔತಣವನ್ನು ಮಾಡತಕ್ಕದ್ದು ಹಿಂದೆ ತೀರ್ಮಾನಿಸಿದ್ದ ಪ್ರಕಾರ ಕಳೆದ ೧೪ನೆ ತಾರೀಖಿನಲ್ಲಿ ನಡೆಯಲಿಲ್ಲ. ಕವರ್ನರ್ ಸಾಹೇಬರವರ ಮರಣವನ್ನು ಕುರಿತ ಪ್ರಯುಕ್ತ ಸಧ್ಯದಲ್ಲಿ ನಿಲ್ಲಿಸಿರುವಂತೆ ಕೇಳುತ್ತೇವೆ.

ಕಳೆದ ವಾರದೊಳಗೆ ಸಂಸ್ಥಾನದ ದಿವಾನರವರು ನೀಲಗಿರಿಗೆ ದಯಮಾಡಿದರು. ತಮ್ಮ ತೃತೀಯ ಕುಮಾರನಿಗೆ ಮದುವೆ ಮಾಡುವ ವಿಷಯವನ್ನು ಶ್ರೀಮನ್ಮಹಾರಾಜರವರಿಗೆ ತಿಳಿಯಪಡಿಸಿ ಅವರ ಅಪ್ಪಣೆ ಪಡೆಯುವದಕ್ಕಾಗಿ ಹೋಗಿದ್ದಾರೆಂದು ಕೇಳುತ್ತೇವೆ. ಬೆಂಗಳೂರು ಟೌನ್ ಮ್ಯಾಜಿಸ್ಟ್ರೇಟರಾಗಿರುವ ಮ|| ವೈದ್ಯನಾಥಯ್ಯನವರ ಕುಮಾರ್ತೆಯನ್ನು ತಂದುಕೊಳ್ಳುವದರಲ್ಲಿದ್ದಾರೆ.

ಕನ್ನಡ ಸೂಪರಿಂಟೆಂಡೆಂಟಾದ ಮ|| ರಾಮಯ್ಯಂಗಾರ್ಯರವರು ಚಾಮರಾಜನಗರ ಮತ್ತು ಕನಕಪುರಗಳಲ್ಲಿ ಅನೇಕ ಬಂಗಲೆಗಳನ್ನು ಹೊಸದಾಗಿ ಕಟ್ಟಿಸುತ್ತಲಿರುವದು ಸರಿಯಷ್ಟೆ. ಇದಲ್ಲದೆ ಆನೆಗಳನ್ನು ಹಿಡಿಯುವದಕ್ಕೆಂದು ಖೆಡ್ಡಾಗಳು ಮತ್ತು ಕಾಡಿನ ಹಿಂಸ್ರ ಮೃಗಗಳಲ್ಲಿ ಮೂರು ಕೂಡ ಕಣ್ಣಗಳನ್ನು ಏರ್ಪಡಿಸುತ್ತಲಿದ್ದಾರೆಂದು ಕೇಳಿ ತುಂಬಾ ಸಂತೋಷಿಸುತ್ತೇವೆ.

ಕಳೆದ ಶನಿವಾರ ಶುಕ್ರವಾರದ ದಿವಸ ಕಂಠೀರವ ನರಸರಾಜ ಒಡೆಯರವರ ಜನ್ಮಾಂತೀ ಮಹೋತ್ಸವವು ಪದ್ಧತಿಯ ಪ್ರಕಾರ ಅತ್ಯಂತ ವಿಜೃಂಭಣೆಯಾಗಿ ರಾಜಧಾನಿಯಲ್ಲಿ ನಡೆಸಲ್ಪಟ್ಟಿತು. ಸಾಯಂಕಾಲ ಮೆರವಣಿಗೆಯು ಕೋಟೆಯ ನಾಲ್ಕು ಬೀದಿಗಳಲ್ಲೂ ಹೊರಟಿತ್ತು. ಅನಂತರ ಬಾಣಬಿರುಸುಗಳು ಹಾರಿಸಲ್ಪಟ್ಟವು. ಕೋಟೆಯಲ್ಲಾ ದೀಪಗಳಿಂದಲೂ, ಕದಳೀಸ್ತಂಭಗಳಿಂದಲೂ, ಮಂಗಳವಾದ್ಯಗಳಿಂದಲೂ ಶೋಭಾಯಮಾನವಾಗಿತ್ತು.

ಈಗ ಮೈಸೂರು ಸ್ಟೇಟ್ ರೈಲ್ವೆಯು ಕೃಷ್ಣರಾಜಪೇಟೆವರೆಗೂ ವಿಸ್ತರಿಸುತ್ತದೆ. ಮುಂದಿನ ವರುಷದ ಆರಂಭದಿಂದಲೂ ರೈಲ್ವೆ ಎಂಜಿನೀಯರು ಕೆಲಸ ಆರಂಭಿಸಿ, ಕೋಲಾರ್ ಎಂಬ ಕಲ್ಲಿದ್ದಲನ್ನು ಆ ಬ್ರಾಂಚ್‌ಗಳ ಮೂಲಕ ಬಹು ಸುಲಭವಾಗಿ ತಂದು ಉಪಯೋಗಿಸುತ್ತಾರೆಂದು ಕೇಳುತ್ತೇವೆ. ಇದು ವಾಸ್ತವವಾದ ವರ್ತಮಾನವೆಂದು ಹೇಳಬಹುದಾಗಿದೆ. ಇದರಿಂದ ಇಲ್ಲಿನ ಸರ್ವೇ ಖರ್ಚಿಯು ಬಹಳ ಮಟ್ಟಿಗೆ ಕಡಿಮೆಯಾಗಬಹುದೆಂದು ಊಹಿಸಲ್ಪಟ್ಟಿದೆ.

ಬನ್ನೂರಿನಲ್ಲಿರುವ ಒಂದು ಕೆರೆಯನ್ನು ಹೆಚ್ಚಾಗಿ ಅಗಲ ಮಾಡಿಸಬೇಕೆಂದು ಸರ್ಕಾರದವರು ತೀರ್ಮಾನಿಸಿ ಅದಕ್ಕೆ ಬರತಕ್ಕ ನೀರೆಲ್ಲಾ ಅಡ್ಡಿ ಮಾಡುತ್ತಾರೆಂತಲೂ, ಇದು ವರಿವಿಗೂ ಕಾಣದಿರಲಾರದೇ ಇಲ್ಲವೆಂತಲೂ, ಹೀಗೆಯೇ ಈ ವರ್ಷದ ಮಳೆಗಾಲವೆಲ್ಲಾ ಕಳೆದುಹೋದಲ್ಲಿ ಅಲ್ಲಿನ ನಿವಾಸಿಗಳಿಗೆ ಅನೇಕ ಕಷ್ಟಗಳು ಪ್ರಾಪ್ತವಾಗುವವೆಂತಲೂ ಡಿಪ್ಟೀ ಕಮಿಷನರವರಿಗೆ ತಿಳಿಯಪಡಿಸುವದಕ್ಕಾಗಿ ಅಲ್ಲಿಂದ ಕೆಲವು ರೈತರು ರಾಜಧಾನಿಗೆ ಬರುತ್ತಾರೆಂದು ತಿಳಿದುಬಂದಿದೆ.

ವಿವಾಹ ಬಹಿಷ್ಕಾರ್ ರಘುನಾಥರಾಯರು ಮದರಾಸಿನಲ್ಲಿ ವಿಧವಾ ವಿವಾಹ ಮಾಡಿಸುವದರಲ್ಲಿ ಬದ್ಧಕಂಕಣರಾಗಿದ್ದಾರಷ್ಟೆ. ಈಗ ಸ್ಮಾರ್ತ ಬ್ರಾಹ್ಮಣಜಾತಿಗೆ ಸೇರಿದ ಒಬ್ಬ ಬಾಲ್ಯವಿಧವೆಯು ಇರುವಂತೆಯೂ ಆಕೆಯನ್ನು ಮದುವೆ ಮಾಡಿಕೊಳ್ಳುವದಕ್ಕೆ ಅಪೇಕ್ಷೆಯುಳ್ಳ ವಿದ್ಯಾವಂತನಾದ ಹುಡುಗನು ಇಷ್ಟು ಹಣವಾದರೆ ಆಕೆಯು ಸ್ವಲ್ಪಮಟ್ಟಿಗೆ ಆಸ್ತಿಯನ್ನು ತರುವಳೆಂತಲೂ ಆಕೆಯ ತಂದೆಯ ಮೂಲಕ ಒಂದು ಸರ್ಕ್ಯುಲರ್ ನೋಟೀಸಿಯೂ ಹೊರಡಿಸುವದೆಂತಲೂ ಪ್ರಕಟಿಸಿರುತ್ತಾರೆ. ಈ ಹುಡುಗಿಯು ಬಹು ಸೌಂದರ್ಯವತಿಯಂತೆ. ಇವಳನ್ನು ಮದುವೆ ಮಾಡಿಕೊಳ್ಳುತ್ತೇನೆಂಬ ಮುಂದೆ ಬರುವ ಧೀರವ್ಯಕ್ತನು ಅನ್ಯಪ್ರವಾಸಿಯಂತೆ.

ಮೈಸೂರು ಗೆಜೆಟ್ ಸಂಗ್ರಹ.

ನಂ|| ೧೮೯೫—ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ ೬೩೦ನೆ ಆರ್ಟಿಕಲ್ ಅನುಸಾರ, ಕೋಲಾರ ಚೆನ್ನರಾಯನ ಹಳ್ಳಿ ಸ್ಪೆಷಲ್ ಮ್ಯಾಜಿಸ್ಟ್ರೇಟರಾಗಿರುವ ಮ|| ಡೆಪ್ಯೂಟಿ ಕಮಿಷನರರಿಗೆ ೪೫ನೆ ತಾರೀಖು ಲಾಗಾಯತು ಆದ ಆವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯಿತು ೧೫ ದಿನಗಳ ಗ್ಸಿರ್‌ಹಾಜರಿ ಸಹಿತ ಕ್ಯಾಜ್ಯುಯಲ್ ರಜಾ ಕೊಡಲ್ಪಟ್ಟಿರುತ್ತೆ.

ನಂ|| ೧೮೯೬—ಚಾಮರಾಜನಗರದ ತಾಲ್ಲೋಕ್ ಆಫೀಸರ ಟಿ. ಎಸ್. ನಂಜುಂಡಯ್ಯರ್ ಅಲ್ಲಿ ಬಾರ್‌ಗೆ ಕೊಡಲ್ಪಟ್ಟಿದ್ದ ೧೫ ದಿನಗಳ ಪ್ರಿವಿಲೆಜ್ ರಜಾ ಪೈಕಿ ೧೪ ದಿನಗಳು ಮಾತ್ರ ಉಪಯೋಗ ಮಾಡಿಕೊಂಡದ್ದರ ಕಾರಣ, ಉಳಿದ ಒಂದು ದಿನದ ರಜಾವನ್ನು ರದ್ದು ಮಾಡಿರುತ್ತೆ.

ನಂ|| ೧೮೯೭—ಬೆಂಗಳೂರು ಮ್ಯೂನಿಸಿಪಲ್ ರೆಗ್ಯುಲೇಷನ್ ೫ನೇ ಸೆಕ್ಷನ್ ಪ್ರಕಾರ ಮ|| ಬಸಪ್ಪಶೆಟ್ಟರನ್ನು ಬೆಂಗಳೂರು ಸಿಟಿ ಮ್ಯೂನಿಸಿಪಾಲಿಟಿಗೆ ಮೆಂಬರಾಗಿ ಗೌರ್ನಮೆಂಟಿನವರು ನೇಮಿಸಿರುತ್ತಾರೆ.

ನಂ|| ೧೮೯೮—ಶಿವಮೊಗ್ಗೆಯ ಟೌನ್ ಮ್ಯೂನಿಸಿಪಲ್ ಬೋರ್ಡಿನ ಮೆಂಬರುಗಳ ಪೈಕಿ ಮ|| ವೆಂಕಟರಾಮರ ಮತ್ತು ಮ|| ನರಸಿಂಹಾಚಾರ್ಯರ ಹೆಸರನ್ನು ವಜಾ ಮಾಡಿದ ಸಬಬು, ಅಲ್ಲಿನ ಸಾಹುಕಾರ ಮ|| ವೆಂಕಟರಂಗರಾವ್ ಮತ್ತು ಸ್ಕೂಲ್ ಡೆಪ್ಯುಟಿ ಇನ್ಸ್ಪೆಕ್ಟರ್ ಮ|| ರಾಮಸ್ವಾಮಯ್ಯ ಇವರನ್ನು ಮೆಂಬರಾಗಿ ಸೇರಿಸಲ್ಪಟ್ಟಿರುತ್ತೆ.

ನಂ|| ೧೮೯೯—ಕೋಲಾರು ಮ್ಯೂನಿಸಿಪಲ್ ಬೋರ್ಡಿನಲ್ಲಿ ಮೆಂಬರಾಗಿದ್ದ ಮ|| ಸೂರ್ಯನಾರಣಪ್ಪನವರು ಕ್ರಮವಾಗಿ ಹಲವು ಮೀಟಿಂಗುಗಳಿಗೆ ಗೈರುಹಾಜರ್ ಹೋದ್ದರಿಂದ ಅವರಿಗೆ ಬದಲಾಗಿ ಜಮೀನ್ದಾರ್ ಮ|| ಸೈಯದ್ ಗೌಸ್ ಸಾಹೇಬರನ್ನು ಮೆಂಬರಾಗಿ ನಿಯಮಿಸಲ್ಪಟ್ಟಿರುತ್ತೆ.

ಕರೆಸ್ಪಾಂಡೆನ್ಸ್.

ಮ|| ರಾ|| ವೃತ್ತಾಂತಪತ್ರಿಕಾ ಯೆಡಿಟರವರೆ! ಮೇ ೬ನೆ ತಾರೀಖಿನಲ್ಲಿ ಬಾಲವಿಧವೆಯರ ವಿಷಯ ಪ್ರಕಟಿಸಿ ಇರುತ್ತೀರಲ್ಲಾ. ಅದು ಹಾಗಲ್ಲ ನ್ಯಾಯವಾದ ಸಂಗತಿಗಳೇ! ಇವರಡಿ ನನಗೂ ಬರುವ ಅಭ್ಯಸೆ ಇದನ್ನು ಪ್ರಕಟಿಸುವಿರೆಂದು ನಂಬಿ ವಿಜ್ಞಾಪನೆ ಮಾಡಿಕೊಳ್ಳುತ್ತೇನೆ.

೧ ಗತಿಮೋಕ್ಷ ಸುಂದರನಾಥನೆ ಯಾವರಿಗಿಂತ ಪೂರ್ವದಲ್ಲಿ ಇದ್ದ ಧೀರಜನಾಥನೇ ಯಾವರ ಪಟ್ಟವಾಗುವಾಗ್ಯೆ ಅವರಿಗೆ ಪಟ್ಟವಾಗಕೂಡದೆಂದು ಬೇರೆ ಅಪ್ಪೇಗೌಡನು ತುಂಟತನದಲ್ಲಿ ಪ್ರಮುಖನಾಗಿ ನಿಂತು ಕೂಟ ಕೂಡಿಸಿಕೊಂಡು ಅನೇಕ ಅನರ್ಥಗಳನ್ನು ನಡೆಸಿದನು. ಆದಾಗ್ಯೂ ಧೀರಜನಾಥನೇ ಯಾವರು ಬಂಗಾಳೇ ಹಾಸಿಗೆ ವಿವಾದ ನಡೆಸಿ ಕ್ಷೇಮವಾಗಿ ಕೊಂಡರು. ಅತ್ತ ಅಪ್ಪೇಗೌಡನಿಗೆ ಅವಮಾನವುಂಟಾದ್ದಲ್ಲದೆ ಇವರ ಪಕ್ಷೀಕರನ್ನೇ ಆ ಲಾಗಾಯಿತು ಇಲ್ಲಿನವರಿಗೆ ಮಠದ ಬಾಗಲಿಗೆ ಸೇರಿಸುತ್ತಾ ಇರಲಿಲ್ಲ. ಈಚೆಗೆ ಧೀರಜನಾಥರು ಕಾಲವಾದ ಮೇಲೆ ಪಟ್ಟಾಭಿಷೇಕವು ಸುಂದರನಾಥನೇ ಯಾವರ ಆಳ್ವಿಕೆಯಲ್ಲಿ ಇತ್ತು. ಅವರು ತಿಂಗಳಲ್ಲಿ ಇವರು ದೈವಾಧೀನರಾದರು. ವೈವಾಹಿಕ ಜಾತಿಯಲ್ಲಿ ತನ್ನ ವಿಕ್ರಮರ ಬಾಲಕನಾಥಯೋಗಿಯವರಿಗೆ ಮೋಕ್ಷ ಮುಂತಾದ್ದನ್ನೆಲ್ಲಾ ಮಾಡಿ ಇದ್ದರು. ಇವರು ಜನ್ಮೋದ್ಧಾರ, ಹೊಸವೃತ್ತಿ ಮುಂತಾದ ಇವು ಯಾರನ್ನೂ ಆಳುತ್ತಲಿದ್ದರು.

೨ ಬಾಲಕ ನಾಥಯೋಗಿಯವರಂತೆ ಧೀರಜನಾಥರೇ ಯಾವ ಮಂದಿಯಾದ ಅನನಾನವನ್ನು ನೀಗಬೇಕೆಂದು ಕೆಲವು ಒಡಗಿತೆಂದು ಆಲೋಚಿಸಿ, ಇವರವರ ಅಂದಿನ ಗೌಡನೆಂಬವನು ತುಂಟತನದ ವೇಷ ಮಾಡಿಕೊಂಡು ಬಾಲಕನಾಥನು ಯಾವನಿಂದ ಉಪದೇಶ ಪಡೆದ ಅವನು ನಾಥನೇ ದ್ವೇಷಿಕನು ಇವರ ಮಠ ಯಾರದೋ ಗೊತ್ತಿಲ್ಲದೆ ಇದ್ದರು. ಇವರಿಗೆ ಪಟ್ಟ ಕಟ್ಟಬೇಕೆಂತಲೂ, ಅಂದಿನಿಂದ ಮಂತ್ರತಂತ್ರ ನಡೆಸಬೇಕೆಂತಲೂ, ಕರಿಗೌಡ, ಚಾಮರಸಪ್ಪ ಲಿಂಗೇಗೌಡ ಆಧ್ಯಕ್ಷರಾಗಿರಬೇಕೆಂತಲೂ ಆಲೋಚಿಸಿ ಮಾತನಾಡಿ ಬಾಲಕನಾಥನೇ ಯಾವರ ಸುಪರ್ದನೆಲ್ಲಾ ಮುಂತಾದ್ದನ್ನೆಲ್ಲಾ ಕಿತ್ತುಕೊಂಡರು. ಇವರು ಟೇಲಿಗ್ರಾಪು ಮೂಲಕ ಸರ್ಕಾರಕ್ಕೆ ತಿಳುವಳಿಕೆ ಕೊಟ್ಟರು.

೩ ಪೋಲೀಸಿನವರು ಗುರುಗಳಿಗುಂಟಾಗಿರುವ ಇಸ್ತಹಾರನ್ನು ಅಷ್ಟೇ ವಿಪರೀತ ನಲ್ಕೋರ್ಟಿನವರು ನಡೆಸಬೇಕಾದ ಕೆಲಸವೆಲ್ಲಾ ಇವರೇ ವಹಿಸಿಕೊಂಡು ಆದಿತ್ಯನಾಥರೇ ಯಾವರಿಗೆ ಪಟ್ಟ ನಡೆಸಿದಿದ್ದರೆ ಬಾಲಕನಾಥನೇ ಯಾವರು ಕೇವಲದಲ್ಲಿ ಕ್ರಮವಾದ ತರಲು ಸಿದ್ಧವಾಗಿ ಇದ್ದಾರೆ ಇದು ಹಾಗಿರಲಿ ಧೀರಜನಾಥರೇ ಯಾವರ ಕಾಲಸ ದಾಗನಾಗಿ ಯಾವದನ್ನೂ ಬಿಟ್ಟು ಆಳುತ್ತಲಿರುವ ಬಾಲಕನಾಥರೇ ಯಾವರು ಯೋಗ್ಯರ? ಆಧವ ದೇಶಕನಾಗಿ ಬಂದು ಬಾಲಕನಾಥರೇಯವರಿಂದ ಉಪದೇಶ ತೆಗೆದುಕೊಂಡವನು ಯೋಗ್ಯನೇ ವಾಚಕರೇ ಯೋಚಿಸಲಿ!

೪ ಆದಿತ್ಯನಾಥನಿಗೆ ಪಟ್ಟ ನಡೆಸಿದರುವದಲ್ಲದೆ ಅನೇಕಾಚಾರ್ಯರು ಒಬ್ಬರೆ ಕಾಣಿಕೆ ಅಪ್ಪಣೆ ಕೊಡದೆ ನಿಲ್ಲಿಸಿ ಇದ್ದಾರೆ ಇನ್ನು ಅನೇಕ ಅನರ್ಥಗಳಿಗೂ ಕಾರಣವಾಯಿತು ಅದೆಲ್ಲಾ ಕಾರಣಗಳಿಂದ ತುರುವೇಕೆರೆಯಲ್ಲಿ ಕರೀ ಗೌಡನಿಗೆ ಬಹುಮಾನ ಸನ್ನಾಡಿ ಮಾಡಿಸಿದರು.

ಈ ಕಲಹಗಳಿಂದ ಮಠವು ಕೆಲಸ ಆಗುವದಕ್ಕೂ ಕಾರಣವಾಯಿತು ಮತ್ತು ಚಾಚಲನಹಳ್ಳಿ ಗ್ರಾಮದಲ್ಲಿ ಹಳೆಕೆರೆಯ ಆದಿತ್ಯನಾಥನೇಯವರಿಗೆ ಅನೇಕ ಮತ್ಸರದ ಯೋಚನೆ ಮಾಡಿಸುತ್ತ ಇರುವ ಇವರ ಪುತ್ರರು ತ್ಯಾಗದವರು ಇದರಿಂದ ಅಂದಿನ ಗೌಡನ ಮಂತ್ರತಂತ್ರವೇ ಸಾಕು.

ಸರ್ಕಾರದವರು ನ್ಯಾಯಕ್ಕೆ ತಂದುಕೊಂಡು ವಿಚಾರಣೆಯಿಂದ ಸರ್ಕೇಲರ್ ಪ್ರಕಾರ ಇವರುಗಳ ಯೋಗ್ಯತಾಯೋಗ್ಯತೆಗಳನ್ನು ಪ್ರಜಾವರ್ಗದವರ ಬಹುಭಾಗದ ಅನುಮತಿ ಪ್ರಕಾರವೂ ನಡೆಸೋಣದರಿಂದ ಹಿಂದಿನ ಮಠವನ್ನು ಉದ್ಧರಿಸಿದಂತೆ ಆಗುತ್ತಾ.

ತಮ್ಮ ವಿಧೇಯ
ಬಿ. ಶಿ. ಡಿ. ಸಿ.

ವಿವಿಧ ವರ್ತಮಾನಗಳು.

ಕಳೆದ ಶನಿವಾರ ಪೂರ್ಣಸಿಯಲ್ಲಿ ರಾತ್ರಿ ಸುಮಾರು ೧ ಘಂಟೆಗೆ ಪೊತ್ತಿನಲ್ಲಿ ಒಬ್ಬ "ಕಿರೋಸಿನ್ ವಿಲ್ಡ್" ವ್ಯಾಪಾರಸ್ಥನ ಅಂಗಡಿಗೆ ಬೆಂಕಿ ಬಿದ್ದು ೨೦,೦೦೦ ರೂಪಾಯಿಗಳಷ್ಟು ಮಾಲು ಉರಿದು ಹೋಯಿತು

ವಿಲಾಯಿತಿಯಿಂದ ೧೮೯೧ನೆ ವರುಷದಲ್ಲಿ ಹಿಂದೂಸ್ಥಾನಕ್ಕೆ ಬಂದ ನೂಲುಬಟ್ಟೆಗಿಂತಲೂ ೯೨ನೆ ಇಸವಿಯಲ್ಲಿ ೭,೩೬,೨೦೦ ರೂಪಾಯಿಗಳ ಬೆಲೆಯ ಬಟ್ಟೆಯು ಕಡಿಮೆಯಾಯಿತು ಆದರೆ ಇಂಡಿಯಾದಿಂದ ವಿಲಾಯಿತಿಗೆ ಕಳುಹಿಸಲ್ಪಟ್ಟದರ ಬೆಲೆಯು ಹೋದವರ್ಷಕ್ಕಿಂತಲೂ ಈ ವರುಷದಲ್ಲಿ ೩,೫೧,೦೦೦ ರೂಪಾಯಿಗಳಷ್ಟು ಹೆಚ್ಚಿತು

ವಾಯುವ್ಯ ಪ್ರಾಂತ್ಯಗಳು ಮತ್ತು ಅಯೋಧ್ಯದಲ್ಲಿ ೧೮೯೧ನೆ ಎಣಿಕೆಯ ಪ್ರಕಾರ ೨೦,೭೦೧,೮೯೬ ಹೆಂಗಸರೂ, ೨೨,೪೦೫,೬೦೧ ಗಂಡಸರೂ ಇರುವರೆಂತಲೂ, ಆದರೆ ಇದರಲ್ಲಿ ೨೬,೪೮೯ ವಿಧವೆಯರೂ, ೧೮೩೪ ಹೆಂಗಸರೂ ಅಲ್ಲದೆ ಸಂಕ್ರಾಂತಿ ಮತ್ತು ದಿಬ್ಬಣಪ್ರೋತ್ಸವದಲ್ಲಿ ಇರುತ್ತಾರೆಂತಲೂ ಹೇಳುತ್ತಾರೆ

[illegible]

ಕಳೆದ ೧೦ ನೇ ತಾರೀಖಿನ ದಿವಸ ವಿಲಾಯಿತಿ [illegible]

[illegible]

ಮದರಾಸ್ ಕನ್ಸರ್ವೇಟರ್ ಕೌನ್ಸಿಲಿನ ಮುದ್ರಣ ವೃತ್ತಾಂತವು.

(ಕರ್ನಾಟಕ ಪ್ರಕಾಶಿಕ ಸಂಗ್ರಹ)

[illegible]

ಮುಸ್ಲಿಮ ಮಹ್ಮದೀಯರು.

(ವೃ. ಚಂತಾಮಣಿ ಸಂಗ್ರಹ)

[illegible]

೧೮೯೩ ನೇ ಇಸವಿ ವಿಜಯನಾಮ ಸಂವತ್ಸರದ ಜ್ಯೇಷ್ಠ ಶುದ್ಧ ತದಿಗೆ ಗುರುವಾರದಿಂದ ಜ್ಯೇಷ್ಠ ಶುದ್ಧ ನವಮಿ ಬುಧವಾರದ ವರೆಗಿನ ವಾರದ ಪಂಚಾಂಗ

೧೮೯೩ ನೇ ಇಸವಿ, ಮೆ

ತಾ.	ವಾರ.	ತಿಥಿ.	ಘಳಿಗೆ.	ನಕ್ಷತ್ರ	ಘಳಿಗೆ.	ವೃಷಭ ಮಾಸ ತೇದಿ
18	ಗು	ತ	37-13	ಮೃ	10-22	7
19	ಶು. *	ಚತು	31-78	ಆರ್ದ್ರ	12 36	8
20	ಶ.	ಪಂ	26-47	ಪುನ.	9-20	9
21	ರ	ಷ	22 21	ಪುಷ್ಯ.	6-47	10
22	ಸೋ.	ಸ	19 8	ಆಶ್ಲೇ	4-2	11
23	ಮಂ.	ಅ	16-15	ಮ.	1 21	12
24	ಬು †	ನ	16-[illegible]	ಪು	1-19	13

* ಕೃಷ್ಣಜನ್ಮಾಷ್ಟಮಿ ಯುವರ ವರ್ಧಂತಿ.

† ರಾಣಿಯ ಜನ್ಮದಿನ.

ಪೇಟೆ ಧಾರಣೆ.

ದಿನಸಿ	ಮೈಸೂರು	ಬೆಂಗಳೂರು
	ರೂ. ಅ. ಪೈ	ರೂ ಅ ಪೈ.
ಕಾಳಿ ಅಕ್ಕಿ ಪಲ್ಲ ೧ಕ್ಕೆ ..	೧೧-೦-೦	೧೧-೮-೦
ಕೆಂಬೂತಿ ಅಕ್ಕಿ ಅಸ್ಸಲ್	೧೨-೧೨-೦	೧೨-೦-೦
ದಿಡಿಸೋ ಅಕ್ಕಿ ದೊಡ್ಡ ..	೧೨-೦-೦	೯-೮-೦
ಜಾದಾನಿ ಅಕ್ಕಿ ..	೧೨-೨-೦	೯-೧೨-೦
ಸಂಣಕ್ಕಿ ಅಸ್ಸಲ್	೧೪-೬-೦	೧೪-೮-೦
ಡಿಡಿಸೋ ಅಕ್ಕಿ ದೊಡ್ಡ	೧೨-೦-೦	೧೨-೦-೦
ರೂಗಿಬೇಳೆ ಪಲ್ಲ ೧ ಕ್ಕೆ	೧೧-೮-೦	೧೨-೦-೦
ಡಿಡಿಸೋ ದೊಡ್ಡ ತರಪ ..	೧೧-೬-೦	೧೭-೮-೦
ಹೈದಿ ರಾಗಿ ಪಲ್ಲ ೧ಕ್ಕೆ ..	೬-೪-೦	[illegible]-೦-೦
ಹುರಳಿಗಿ	೪-೧೮-೦	[illegible]-೦-೦
ಸಾಸಿವೆ ಪಲ್ಲ ೧ಕ್ಕೆ	೨೦-೦-೦	೯೧-೦-೦
ಬಿಳಿ ಅವರೆ	೧೧-೮-೦	೧೧-೮-೦
ಹೆಸರು	೧೨-೮-೦	೧೨-೦-೦
ಉದ್ದು	೧೨-೬-೦	೧೨-೨೧-೦
ಕಡಲೆ	೧೨-೦-೦	೧೬-೮-೦
ಎಳ್ಳು	೧೫-೮-೦	೧೫-೬-೦
ಹುರಳಿ	೬-೫-೦	೬-೮-೦
ಸಿಗೆಕಾಯಿ ಮಣ ೧ಕ್ಕೆ ..	೧-೮-೦	೧-೧೨-೦
ಮೆಣಸಿನಕಾಯಿ	೩-೧೨-೦	೨-೧೨-೦
ದೊಡ್ಡ ತರಪ ..	೩-೮-೦	೨-೮-೦
ಬೆಲ್ಲ ದೊಡ್ಡ ಅಚ್ಚು ೧೦ಕ್ಕೆ	೬-೮-೦	೩ ೧-೬-೦
ಸಣ್ಣ ಅಚ್ಚು	೮-೮-೦	೩॥ ೧-೬-೦
ಬಳ್ಳೊಳ್ಳಿ ಮಣ ೧ಕ್ಕೆ ..	೮-೮-೧	೮-೧೨-೦
ಹರಳಿಗೆ	೮-೮-೦	೩-೮-೦
ಕೊತ್ತುಂಬರಿ ಪಲ್ಲ ೧ಕ್ಕೆ	೮-೮-೦	೨-೧೨-೦
ಉಪ್ಪು	೯-೮-೦	೯-೮-೦
ಹುಣಸೇಹಣ್ಣು ಮಣ ೧ಕ್ಕೆ	೧-೧೨-೦	೧-೧೨-೦
ಹಳೇ ಹುಣಸೇಹಣ್ಣು	೧-೮-೦	೧-೮-೦
ತುಪ್ಪ	೧೪-೮-೦	೧೪-೦-೦
ಸೀಮೆ ಯಣ್ಣೆ ಡಬ್ಬ ೧ ಕ್ಕೆ	೭-೭-೩	೩-೧೫-೦
ತೆಂಗಿನಕಾಯಿ ೧೦೦ ಕ್ಕೆ	೬-೦-೦	೮-೮-೦
ಚಿನ್ನ (ತೊಲ)		
ಕೆಂಪು	೧೬-೧೪-೦	೧೬-೨-೦
ಹಸಿರು	೧೫-೦-೦	೧೬-೧೩-೦
ಗಟ್ಟಿ	೨೭-೧-೦	೨೨-೬-೦

Mysore.—Printed and published for the Proprietor at the Wesleyan Mission Press. 18/5/93.

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು ——— ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೬ ಮೈಸೂರು ಸನ್ ೧೮೯೩ ನೇ ಇಸವಿ ಮೇ ತಾರೀಖು ೨೫ ನೇ ಗುರುವಾರ. ಸಂಚಿಕೆ [illegible]

ನೋಟೀಸ್.

	ಕ್ರಯ			ಹಾಸಲು ಸಹಿತವಾಗಿ		
Campbell's ಕನ್ನಡ ವ್ಯಾಕರಣ ಸಾರ	೦	೨	೦	೦	೨	೬
Object Lessons. ವಸ್ತು ಪಾಠಗಳು	೦	೧	೦	೦	೧	೬
Picture do ಚಿತ್ರಗಳು ಸಹಿತವಾಗಿ	೦	೨	೦	೦	೨	೬
ಈ ಮೂರು ಪುಸ್ತಕಗಳು ಪ್ರೈಮರಿ ಶಾಲೆಗಳಲ್ಲಿ ಓದತಕ್ಕ ಪುಸ್ತಕಗಳು.						
ಸ್ತ್ರೀಯರು ಓದತಕ್ಕ ಪುಸ್ತಕ	೦	೫	೦	೦	೫	೬
ಗಣಿತ ವಿದ್ಯೆ ..	೦	೪	೦	೦	೪	೬
ಗಣಿತ ಮಗ್ಗಗಳು ..	೦	೧	೬	೦	೧	೬
ಸಂಸ್ಕೃತ ಕರ್ನಾಟಕ ಭಾಷಾಮಂಜರಿ	೦	೨	೦	೦	೨	೬
ಭೂಗೋಳ ಶಾಸ್ತ್ರ ಪ್ರಶ್ನೋತ್ತರ	೦	೨	೦	೦	೨	೬
ಇಂಗ್ಲೀಷೂ ಕನ್ನಡವೂ ಶಬ್ದಾವಳಿ ೧ನೇ ೨ನೇ ಭಾಗಗಳಿಗೆ	೦	೧	೦	೦	೧	೬
ಕಾವ್ಯಮಾಲೆ (Minor Poetical Anthology)	೦	೮	೦	೦	೮	೬
ಬಾಲವ್ಯಾಕರಣ ..	೦	೫	೦	೦	೫	೬
ಹಳಗನ್ನಡ ವ್ಯಾಕರಣ ಸೂತ್ರಗಳು	೦	೬	೦	೦	೬	೬
ಇಂಗ್ಲೀಷೂ ಕನ್ನಡವೂ ಸಂಭಾಷಣಾ ವಾಕ್ಯಗಳು	೦	೧೦	೦	೦	೧೦	೬
ಶಬ್ದಮಣಿ ದರ್ಪಣ ..	೧	೦	೦	೧	೪	೬
Kan. Eng. Pocket Dictionary	೧	[illegible]	೦	೧	೫	೨
Eng. Kan. School Dictionary	೨	೧೦	೦	೨	೧೨	೬
ಒಳ್ಳೇ ತಾಯಿ ..	೦	೪	೪	೦	೪	೬
ಆತ್ಮಿಕ ದಿವ್ಯ ಯುದ್ಧ (Bunyan)	೦	೧೨	೦	೦	೧೩	೬
ಕ್ರೈಸ್ತ ಪದ್ಧತಿ ೧ನೇ ಭಾಗ ೨ ರಿಂದ ೩ನೇ ಭಾಗ	೦	೧	೬	೦	೨	೦
ಭಕ್ತಿಸಾರ ..	೦	೧	೦	೦	೧	೬
ಸತ್ಯ ವಾಗ್ದಾನ	೦	೧	೦	೦	೧	೬
ಕಾವ್ಯಪುಂಜ ..	೦	೩	೦	೦	೩	೬

A new Edition of the Geography suited for the Lower Secondary Examination is now ready.—Edited by Rev. H. Gulliford. Price [illegible]

ಮೇಲೆ ನಮೂದಿಸಿರುವ ಪುಸ್ತಕಗಳನ್ನು ಬೆಂಗಳೂರು ದಂಡಿನ ಪೋರ್ಗಾಟಿನ ಹತ್ತಿರವಿರುವ ಪುಸ್ತಕ ಶಾಲೆಯಲ್ಲಿ ಪಡೆಯಬಹುದು.

ನೋಟೀಸ್.

ಪುಸ್ತಕಗಳು.	ಕ್ರಯ.
ಪ್ರಾಕ್ಕಾವ್ಯಮಾಲಿಕೆ	1—8—0
ಕನ್ನಡ ಇಂಗ್ಲೀಷು ನಿಘಂಟು 1 ನೇ ದೊಡ್ಡ ತರಹ	3—0—0
" " 2 ನೇ ತರಹ	2—8—0
ಬಾಲಕರು ಓದುವ ಎರಡನೆ ಜ್ಞಾನೋಪದೇಶದ ಪ್ರಶ್ನೋತ್ತರಗಳು	0—1—0
ಸಭೆಯ ನಿಯಮಗಳನ್ನು ಕುರಿತವು	0—0—6
ಕಥಾ ಸಂಗ್ರಹ 1 ನೇ ಭಾಗದಿಂದ 3 ವರೆಗೆ	1—0—0
ಕಥಾ ಸಂಗ್ರಹ 1 ರಿಂದ 6 ನೇ ಭಾಗ ಹೊಸ ಛಾಪೆ	1—0—0
" " ದೊಡ್ಡ ತರಹ	1—8—0
[illegible] ಬೋಧಿನಿ	0—1—0
ಸತ್ಯವೇದವನ್ನು ಕುರಿತು 2 ನೇ ಭಾಗ	0—1—0
ಪ್ರಸಂಗಿಯ ದರ್ಪಣ	0—6—0
ಇಂಗ್ಲೀಷುಭಾಷೆಯಲ್ಲಿಯೂ, ಕನ್ನಡ ಭಾಷೆಯಲ್ಲಿಯೂ, ಶಬ್ದಗಳ ವಿಭಾಗಗಳನ್ನು ವಿವರಿಸುವ ನಿಘಂಟು	0—2—0
ಕನ್ನಡ ವ್ಯಾಕರಣ (ಇಂಗ್ಲೀಷಿನಲ್ಲಿ)	2—0—0
ಹಿಂದುಸ್ತಾನಿ ವ್ಯಾಕರಣ	1—0—0
ಬಾಲಬೋಧ ಸೋಪಾನವು	0—0—6
ದಶ ಕರಣಗಳ ಉಪಯೋಗವಿಚಾರ	0-12—0
ಕ್ರೈಸ್ತರ ಬೋಧನೆಗಳ ಸಾರಾಂಶವು	0-12—0

ಮೇಲೆ ಹೇಳಿದ ಪುಸ್ತಕಗಳನ್ನು ಅಪೇಕ್ಷಿಸುವವರು ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್ಸಿಗೆ ಬರೆದು ತರಿಸಿಕೊಳ್ಳಬಹುದು. [illegible]

ವೆಸ್ಲಿಯನ್ ಮಿಷನ್ ಪ್ರೆಸ್.

ಮೈಸೂರು.

ವಿಶೇಷ ! ಓದಿನೋಡಿರಿ !! ಓದಿನೋಡಿರಿ !!!

ಅನುಶಾಸನೀಕ ಪರ್ವವು ಪೂರೈಸಿತು.

ಶ್ರೀಕೃಷ್ಣರಾಜ ವಾಣೀವಿಲಾಸವೆಂಬ ಮಹಾಭಾರತವು ನಮ್ಮ ಶ್ರೀಚಾಮುಂಡೇಶ್ವರಿ ಪ್ರೆಸ್ಸಿನಲ್ಲಿ ಪ್ರಿಂಟಾಗುತ್ತಿದ್ದು ಎಲ್ಲರಿಗೂ ವಿದಿತವಾಗಿದೆಯಷ್ಟೆ. ಈಗ ಅನುಶಾಸನೀಕಪರ್ವವು ಚಾಮುಂಡೇಶ್ವರಿ [illegible] ಕಿತ್ತಾನವರಿನ ಫ್ರಂಟ್ಪೇಜಿನಿಂದ ತಯಾರಾಗುತ್ತ ಸಭಾಪರ್ವ ವಿರಾಟಪರ್ವದ ಬುಕ್ಕುಗಳು ಮುಗಿದು ಹೋದುದರಿಂದ ಪುನಹಾ ಎರಡನೆ ಛಾಪೆಯು ಪ್ರಾರಂಭವಾಗಿದೆ. ಈ ಕೆಳಗೆ ಕಂಡ ಪುಸ್ತಕಗಳು ನಮ್ಮಲ್ಲಿ ಸ್ವಲ್ಪವೇ ಇರುವದರಿಂದ ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು. ಅನುಶಾಸನೀಕ ಪರ್ವ ಕಿತ್ತಾನವರ ಫ್ರಂಟ್ ೩—೧೨—೦ ಲೋವರ್ ಸೆಕೆಂಡರಿ ಪರೀಕ್ಷೆಯ ನೋಟ್ಸ್ ಕ್ರಯ ೮ ಆಣೆ

ಆದಿಪರ್ವ ..	ಕ್ರಯ	೩	೦	೦
ಸಭಾಪರ್ವ ..	"	೧	೪	೦
ವಿರಾಟಪರ್ವ ..	"	೧	೦	೦
ಭೀಷ್ಮಪರ್ವ ..	"	೨	೦	೦
ದ್ರೋಣಪರ್ವ ..	"	೨	೮	೦
ಶಲ್ಯಪರ್ವ ..	"	೧	೨	೦
ಸೌಪ್ತಿಕಪರ್ವ ..	"	೦	೬	೦
ಸ್ತ್ರೀಪರ್ವ ..	"	೦	೬	೦
ಶಾಂತಿಪರ್ವ ರಾಜಧರ್ಮ ..	"	೨	೬	೦
" ಆಪದ್ಧರ್ಮ ..	"	೦	೮	೦
" ಮೋಕ್ಷಧರ್ಮ ..	"	೨	೬	೦

ಭಗವದ್ಗೀತೆ ೮, ಯುಧಿಷ್ಠಿರಾಯನಚರಿತ್ರೆ ೪ ಆ.

ಎಂ. ರಾಮಪ್ಪ [illegible]

ಲಾಲಬಾಗ್‌ರೋಡ್,

ಬೆಂಗಳೂರು

ಸನ್ ೧೮೮೯ ರಲ್ಲಿ ಸ್ಥಾಪಿಸಲ್ಪಟ್ಟದ್ದು.

ಕೆನರಾ ಅಂಡ್ ಮೈಸೂರ ಪ್ರಿಂಟಿಂಗ್ ಕಂಪನ್ನಿ ಆಫೀಸ್, ಮುಂಬಯಿ.

ಇವರು ಮಾರಾಟಮಾಡುವಂಥ—

ಹೇಮ ಧಾತ್ರೀ ತೈಲ.

ಕಳೆದ ಇನವರಿ ತಿಂಗಳೊಂದರಲ್ಲಿ ೬೧೦೦ ಬಾಟ್ಲಿಗಳು ಮಾರಲಾದವು. ಈ ತೈಲದ ಮಹತ್ವವನ್ನು ಅರಿತು, ನಾವೀಗ ಹೆಚ್ಚಿಗೆ ವರ್ಣಿಸುವದಕ್ಕೆ—ಯಾಕಂದರೆ, ಯಾರು ಈ ತೈಲವನ್ನು ಉಪಯೋಗಿಸುತ್ತಾರೋ ಅವರಿಗೆ ಒಂದೆರಡು ದಿವಸಗಳಲ್ಲಿಯೇ ಇದರ ಅಪ್ರತಿಮವಾದ ಗುಣವು ಸಹಜವಾಗಿ ಅನುಭವಕ್ಕೆ ಬರುವದು. ಆದಾಗ್ಯೂ ಇದರ ಮುಖ್ಯವಾದ ಉಪಯೋಗಗಳನ್ನು ತಿಳಿಸುವದು ನಮ್ಮ ಕರ್ತವ್ಯವಾಗುತ್ತದೆ.

ಈ ನಮ್ಮ "ಹೇಮಧಾತ್ರೀ ತೈಲವನ್ನು" ಪ್ರತಿದಿನ ತಲೆಗೆ ಹಾಕಿಕೊಂಡರೆ ಮಿದುಳಿನಲ್ಲಿರುವ ಉಷ್ಣತೆಯನ್ನು ಪರಿಹರಿಸುವದಲ್ಲದೆ, ಕಣ್ಣಿಗೂ, ಮಿದುಳಿಗೂ ತಂಪುಕೊಟ್ಟು, ಚಿತ್ತಕ್ಕೆ ಶಾಂತತೆಯನ್ನುಂಟುಮಾಡುವದು. ಮತ್ತು ಉಷ್ಣಗಳುಂಟಾಗುವ ಸಾಮಾನ್ಯವಾದ ವಿಕಾರಗಳನ್ನೆಲ್ಲ ಪರಿಹರಿಸುವದು. ದೃಷ್ಟಿಗೆ ತೀಕ್ಷ್ಣತೆಯುಂಟಾಗುವದು.

ಹೆಚ್ಚಾಗಿ ಓದತಕ್ಕವರಿಗೂ, ಒಂದೇ ಸಮನಾಗಿ ಕಷ್ಟಪಟ್ಟು ಕೆಲಸ ಮಾಡತಕ್ಕ ಕಸಬುಗಾರರಿಗೂ, ಕಣ್ಣುಗಳಲ್ಲಿ ನೀರು ಸುರಿಯುವವರಿಗೂ, [illegible]ವರಿಗೂ, ಚಿತ್ತವ್ಯಗ್ರವಾದವರಿಗೂ, ಅತ್ಯಂತ ಗುಣಕಾರಿಯಾಗಿರುವದು. ಈ ತೈಲದಲ್ಲಿರುವ [illegible] ಅಪ್ರತಿಮವಾದ ಶಕ್ತಿಯೋಗದಿಂದ ತಲೆಕೂದಲುಗಳನ್ನು ನಯವಾಗಿಯೂ, ಮೃದುವಾಗಿಯೂ, [illegible], ಮಾಡುವದಲ್ಲದೇ ಬೆಳವಣಿಗೆಯನ್ನು ಹೆಚ್ಚಿಸುವದು. ಕೂದಲುಗಳ ಬೇರುಗಳನ್ನು ಭದ್ರಪಡಿಸಿ, ಅವು ಉದುರಿಹೋಗದಂತೆ ಮಾಡುವದು.

ಪ್ರತಿಯೊಂದು ಬಾಟ್ಲಿಯೊಳಗೆ [illegible] ತೈಲವಿರುವದರಿಂದ ಒಬ್ಬನಿಗೆ ೨ ತಿಂಗಳು ಪೂರ್ತಿ ಉಪಯೋಗಿಸಲು ಸಾಕಾಗುವದು. [illegible] ಪ್ರತಿಯೊಂದು ಬಾಟ್ಲಿಗೆ ೧೨ ಆಣೆ ಕ್ರಯವಿಟ್ಟಿರುವೆವು. ೧೨ ಬಾಟ್ಲಿಗಳುಳ್ಳ ೧ ಪೆಟ್ಟಿಗೆಗೆ ೬|| ರೂಪಾಯಿ. ಪ್ರತಿಯೊಬ್ಬ ಕುಟುಂಬಿಗನೂ, ಈ ತೈಲವನ್ನು ಉಪಯೋಗಿಸುವದು ಅವಶ್ಯವಾಗಿರುತ್ತದೆ. ಮುಖ್ಯ ಊರುಗಳಲ್ಲಿ [illegible].

ಈ ತೈಲ ಮತ್ತು ಈ ಕೆಳಗೆ ಬರೆದಂಥ ಔಷಧಗಳು, ಪ್ರೆಸ್ಸು, ಮುತ್ತು, ರತ್ನ, ಬಂಗಾರ, ಬೆಳ್ಳಿ ಮುಂತಾದ ಸಾಮಾನುಗಳನ್ನು ಪಡೆಯಲಿಚ್ಛಿಸುವವರು ಕೆಳಗಿನ ವಿಳಾಸಕ್ಕೆ ಬರೆಯಬೇಕು.

ಮ್ಯಾನೇಜರ್, ಕೆನರಾ ಅಂಡ್ ಮೈಸೂರು ಪ್ರಿಂಟಿಂಗ್ ಕಂಪನ್ನಿ ಆಫೀಸ್, ಮಾರ್ಕೆಟ್ ಪೋಸ್ಟ್. ಮುಂಬಾಯಿ.

ಸೂ— ಈ ತೈಲವನ್ನು ನಮ್ಮ ಹೊರತು ಇನ್ಯಾರೂ ಮಾಡರಾರರು. ನಮ್ಮ [illegible] ಗುರ್ತನ್ನು ನೋಡಿ ತೆಗೆದುಕೊಳ್ಳಬೇಕು. ಬೇರೇ ಯಾವ [illegible]ಗಳನ್ನು ಈ ಹೆಸರಿಟ್ಟು ಮಾರುತಿದ್ದರೆ ಜಾಗ್ರತ [illegible]!

ಔಷಧಗಳು		ಪ್ರೆಸ್ಸುಗಳು.	ರೂ ಆ.
ಸರ್ವಜ್ವರಹರ ಬಾಟ್ಲಿ ೧ಕ್ಕೆ	೧—೨	[illegible]	೨—೮
[illegible]	೧—೨	[illegible]	೫—೦
[illegible] ಅಪ್ರತಿಮ ತೈಲ	೧—೦	ಡಿಟೊ ಆರ್ಗನ	೪—೮
[illegible] ತೈಲ	೧—೦	[illegible] (ಇಂಗ್ಲಿಷರಮಾಡಿದ)	೪—೬
[illegible]	೨—೧೨	[illegible]	೨—೮
[illegible]	೧—೧	ಡಿಟೊ. ಆರ್ಗನ	೨—೪
[illegible]	೩—೮	[illegible]	೧—೧೨
[illegible]	೦—೮	ಡಿಟೊ. [illegible]	೦—೪
[illegible]	೦—೪	[illegible] (ಇಂಗ್ಲಿಷರಮಾಡಿದ) [illegible]	೦—೧೨
[illegible]	೦—೨		

[illegible] ಕ್ರಯ ರೂ. ೧—೭||-೩—೩|| [illegible]"

[illegible] (೧ ವರುಷದ [illegible]) ಕ್ರಯ ರೂ. ೬.

ವೃತ್ತಾಂತ ಪತ್ರಿಕೆ.

ಚಂದಾ ನಿರ್ಣಯ.

	ರೂ ಆ. ಪೈ.
ಸ್ಥಳದವರಿಗೆ ವರ್ಷ ೧ಕ್ಕೆ ...	೧—೦—೦
ಪರಸ್ಥಳದವರಿಗೆ ವರ್ಷ ೧ಕ್ಕೆ ...	೧—೧೦—೦
ಬಿಡಿ ಪತ್ರಿಕೆ ೧ಕ್ಕೆ ...	೦—೦—೪

ಈ ಪತ್ರಿಕೆಯು ಮೈಸೂರು ರಾಜಧಾನಿಯಲ್ಲಿ ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ, ಪ್ರಕಟಿಸಲ್ಪಡುವದು. [illegible] ಸಮಸ್ತರಿಗೂ ಸುಲಭಸಾಧ್ಯವಾಗುವಂತೆ ಈ ಪತ್ರಿಕೆಗೆ ಬಹಳ ಅಲ್ಪ ಮೌಲ್ಯವನ್ನು ನಿರ್ಣಯಿಸಿರುತ್ತೇವೆ. ಈ ಪತ್ರಿಕೆಯನ್ನು ಅಪೇಕ್ಷಿಸುವವರು ಚಂದಾಹಣವನ್ನು ಮುಂಗಡವಾಗಿ [illegible] ಕಳುಹಿಸಬೇಕು.

ಏಜೆಂಟ್,

ವೃತ್ತಾಂತ ಪತ್ರಿಕೆ.

ಜಗದ್ಗುರುವಿನ ಚರಿತ್ರ ಸಂಗ್ರಹ.

THE LIFE

OF

The Lord Jesus Christ.

Selected incidents from the Gospels,

FREELY PARAPHRASED.

ನೂತನವಾಗಿ ರಚಿಸಲ್ಪಟ್ಟ ೬೬ ಪುಟಗಳುಳ್ಳ ಈ ಪುಸ್ತಕವನ್ನು ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್ಸಿಗೆ ಬರೆದು ತರಿಸಿಕೊಳ್ಳಬಹುದು.

ಕ್ರಯ (ಟಪ್ಪಾಲ್ ಹಾಸಲ್ ಬಿಟ್ಟು)

೧೦೦ ಪ್ರತಿಗಳಿಗೆ	೫—೦—೦
ಬಿಡಿ ಪ್ರತಿಗೆ	೦—೧—೦

ಸುಮಾರು ೨—೩ ಪ್ರತಿಗಳನ್ನು ಅರ್ಧ ಆಣೆ ಹಾಸಲಿನಿಂದ ಕಳುಹಿಸಬಹುದು.

ನೋಟಿಸ್.

ಮೈಸೂರು ಗೌರ್ನಮೆಂಟ್ ಎಕ್ಸೈಸ
ಇಲಾಖಾ.

೧ ಬೆಂಗಳೂರು ಸಿವಿಲ ವ ಮಿಲಿಟರಿ ಸ್ಟೇಷನ ವಿನಾ ಕಡಮೆ ಮೈಸೂರು ಸೀಮೆಯಲ್ಲೆಲ್ಲಾ ಗಾಂಜಾವನ್ನೂ ವ ಹಲವು ವಿಧಾಯಿ ಮಿಕ್ಕ ಗಾಂಜಾದಿಂದ ತಯಾರಾಗುವ ಇತರ ಪದಾರ್ಥಗಳನ್ನೂ ಸನ ೧೮೯೩ ನೇ ಇಸವಿ ಜುಲೈ ಗುತ್ತ ಲಾಗಾಯಿತು ೧೮೯೭ ನೇ ಇಸವಿ ಜೂನ ೩೦ ನೇ ತಾರೀಖಿನ ವರಿವಿಗೆ ನಾಲ್ಕು ಸಾಲುಗಳಲ್ಲಿ ಬಿಟ್ಟು ಬಿಕರಿ ಮಾಡತಕ್ಕ ಹಕ್ಕನ್ನು ಪಡೆಯಲಿಕ್ಕೆ ಅಪೇಕ್ಷಿಸುವ ಜನರು ದರಖಾಸ್ತುಗಳನ್ನು ಕೊಡಬಹುದು.

೨. ದರಖಾಸ್ತುದಾರರು ಸರ್ಕಾರಕ್ಕೆ ಸಾಲು ೧ಕ್ಕೆ ಎಷ್ಟು ಮೊತ್ತಕ್ಕೆ ಕಮ್ಮಿ ಇಲ್ಲದ ಮೊಬಲಗನ್ನು ಕೊಡಲಿಕ್ಕೆ ಬದ್ಧರಾಗಿರುತ್ತೇವೆಂದು ಅಪೇಕ್ಷಿಸುತ್ತಾರೋ ಅಂಥಾ ಮೊಬಲಗನ್ನು ದರಖಾಸ್ತುಗಳಲ್ಲಿ ವಿವರಿಸಬೇಕು. ಸದರಿ ಮೊಬಲಗು ಲೋಕಲ ಸಸ ದೇಖಿಲು ಮೈಸೂರು ಸೀಮೆಗೆಲ್ಲಾ ಒಂದೇ ಮೊತ್ತವಾಗಿರಬೇಕು. ಲೋಕಲ ಸಸ ದೇಖಿಲು ಎಂಟು ಸಾವಿರ ರೂಪಾಯಿಗಳಿಗಿಂತ ಕಮ್ಮಿಯಾದ ಮೊಬಲಗನ್ನು ನಮೂದಿಸಿ ಕೊಡಲ್ಪಡುವ ದರಖಾಸ್ತು ಆಲೋಚಿಸಲ್ಪಡುವದಿಲ್ಲವು.

೩. ಪ್ರತಿ ದರಖಾಸ್ತಿನೊಡನೆ ನಗದಾಗಿ ಇನ್ನೂರು ರೂಪಾಯಿಗಳ ಠೇವಣಿಯನ್ನು ಕಳುಹಿಸತಕ್ಕದ್ದು. ದರಖಾಸ್ತುಗಳು ಸನ ೧೮೯೩ನೇ ಇಸವಿ ಜೂನ ೧೫ನೇ ತಾರೀಖಿನ ಮಧ್ಯಾಹ್ನಕ್ಕೆ ಪೂರ್ವ ಬೆಂಗಳೂರಲ್ಲಿ ಎಕ್ಸೈಸ ಕಮಿಷನರ ಸಾಹೇಬರವರಿಗೆ ಬಂದು ತಲಪುವಂತೆ ಕಳುಹಿಸಲ್ಪಡಬೇಕು. ದರಖಾಸ್ತುಗಳು ಸದರಿ ಜೂನ ೧೫ನೇ ತಾರೀಖಿನ ಮಧ್ಯಾಹ್ನ ೧೨ ಘಂಟೆಗೆ ಸರಿಯಾಗಿ ಎಕ್ಸೈಸ ಕಮಿಷನರ ಸಾಹೇಬರವರಿಂದ ಅವರ ಆಫೀಸಿನಲ್ಲಿ ಹಾಜರಿರಬಹುದಾದ ದರಖಾಸ್ತುದಾರರ ಸಮಕ್ಷಮ ಒಡೆಯಲ್ಪಡುವವು.

೪. ಮೇಲ್ಕಂಡ ಕಂಟ್ರಾಕ್ಟಿನ ಕಡಮೆ ಷರತ್ತುಗಳು ವಗೈರೆ ತಪಸೀಲುಗಳನ್ನು ತಿಳಿದುಕೊಳ್ಳುವದಕ್ಕಾಗಿ ೧೮೯೩ನೇ ಇಸವಿ ಮೇ ೧೧ ನೇ ತಾರೀಖಿನ ಮೈಸೂರು ಗಜೆಟ್ಟನ್ನೂ ಅದಕ್ಕೆ ತರುವಾಯ ಪ್ರಕಟವಾಗುವ ಗೆಜೆಟ್ಟುಗಳನ್ನೂ ನೋಡತಕ್ಕದ್ದು ಅಥವಾ ಬೆಂಗಳೂರು ಕೋಟೆಯಲ್ಲಿರುವ ಎಕ್ಸೈಸ ಕಮಿಷನರ ಆಫೀಸಿಗೆ ಜನರು ರೂಬರೂವ್ ಬಂದು ತಿಳಿದುಕೊಳ್ಳಬಹುದು, ತಾರೀಖು ೧೨ ನೇ ಮೇ ೧೮೯೩ ನೇ ಇಸವಿ.

ಸನ ೧೮೯೩ ನೇ ಇಸವಿ
ಮೇ ತಾರೀಖು ೧೨.

L. RICKETTS,
Excise Commissioner,
in Mysore

ನೋಟಿಸ್.

ಮೈಸೂರು ದೇಶಸ್ಥರು ಮಹಾಯಾತ್ರೆಗೆ ಹೊರಟು ದಾರಿಯಲ್ಲಿ ವಳ್ಳಾಳಗಳಿಗೆ ಸಿಕ್ಕಿ ತ್ರಿಸ್ಥಳವಲ್ಲಿಯೂ ಪ್ರಶಸ್ತವಿಲ್ಲದ ಸ್ಥಳಗಳಲ್ಲಿ ಇಳಿದು ಪಣಕಾಸುಗಳಿಗೆ ಮೋಸಹೊಂದಿ ವಾಪಸು ಹೋಗುವದು ಕಂಡು ತಿಳಿಯಪಡಿಸುವದೇನಂದರೆ:— ೩೦ ವರುಷದ ಲಾಗಾಯಿತು ಗಯಾದಲ್ಲಿ ವಾಸಮಾಡುತ್ತಿದ್ದು ಈಗ ೮ ವರುಷದಿಂದ ಹನುಮಾನ್ ಘಾಟಿನಲ್ಲಿ ವಾಸಮಾಡುವ ಬೋಧಾಯನ ಕಾಶೀನಾಥಶಾಸ್ತ್ರೀ ಮನೆಗೆ ತಿಳಿದಂಥ ಸಜ್ಜನರು ಬಂದು ಇಳಿದುಕೊಂಡು ಅವರವರ ಶಕ್ತ್ಯಾನುಸಾರ ತ್ರಿಸ್ಥಳದ ಯಾತ್ರೆ ಪೂರೈಸಿಕೊಂಡು ಸುಖದಲ್ಲಿ ಹಿಂದಕ್ಕೆ ಗಮನ ಮಾಡುತ್ತಾರೆ. ಪಂಚ ದ್ರಾವಿಡರ ಪೈಕಿ ಕರ್ನಾಟಕರು ವಿನಹಾ ಬಾಕಿ ಅಂದರೆ ಮಹಾರಾಷ್ಟ್ರ ದ್ರಾವಿಡ ತೆಲುಗು ದೇಶಸ್ಥರು ಆಯಾ ತಮ್ಮವರ ಜನರನ್ನೇ ಹುಡುಕಿಕೊಂಡು ಹೋಗುತ್ತಾರೆ. ಕರ್ನಾಟಕರು ಮಾತ್ರ ತಿಳುವಳಿಕೆ ಇಲ್ಲದ ಕಂದಕರಗಳಲ್ಲಿ ಇಳಿದುಕೊಂಡು ಅನುಮಲ್ಯಪಟ್ಟು ಹೋಗುವದು ಅವಮಾನವಲ್ಲವೇ! ನಮ್ಮ ದೇಶಸ್ಥರು ಇಳಿಯುವದಕ್ಕಾಗಿ ೫,೦೦೦ರೂಪಾಯಿಗಳು ಖರ್ಚುಮಾಡಿ ಉತ್ಕೃಷ್ಟವಾದ ಮನೆ ಹನುಮಾನ್ ಘಾಟಿನಲ್ಲಿ ಕಟ್ಟಿ ಇರುತ್ತೇನೆ. ಸ್ನಾನದಾನಗಳಿಗೆ ಗಂಗಾ ಸಮೀಪವಾಗಿಯೂ ರಮಣೀಯವಾಗಿಯೂ ಇರುತ್ತೆ. ಅಪೇಕ್ಷಿಸಿ ಬರತಕ್ಕವರು ಮುಂಚಿತವಾಗಿ ಇಂಥಾ ದಿವಸ ಪ್ರಯಾಗಕ್ಕೆ ಬರುತ್ತೇವೆಂದು ತಿಳಿಸಿದಲ್ಲಿ ತ್ರಿಸ್ಥಳದ ಯಾತ್ರೆಯೂ ಶಕ್ತ್ಯಾನುಸಾರ ಮಾಡಿಸಿ ದೇಶಕ್ಕೆ ಪ್ರಯಾಣ ಮಾಡಿಸಲು ತಕ್ಕ ಏರ್ಪಾಡು ಮಾಡುತ್ತೇನೆ.

ಬೋಧಾಯನ ಕಾಶೀನಾಥಶಾಸ್ತ್ರಿ
೪ ಹನುಮಾನಾಘಾಟ್—ಬನಾರಸ್.

ವೃತ್ತಾಂತ ಪತ್ರಿಕೆ.

೧೮೯೩ನೇ ಇಸವಿ ಮೇ ತಾ|| ೨೫ ನೇ ಗುರುವಾರ.

ಚಿಕಾಗೋ ಮತ್ತು ಪ್ರಪಂಚದ ನಾನಾಮತಗಳು.

ಇದೇ ತಿಂಗಳು ೧೭ನೇ ತಾರೀಖಿನ ದಿವಸ ಉತ್ತರ ಅಮೇರಿಕಕ್ಕೆ ಸೇರಿದ ಚಿಕಾಗೋ ಎಂಬ ಪಟ್ಟಣದಲ್ಲಿ ಮೊ|| ಜಿಸರಲ್ ಕ್ಲಾವಿಲ್ಯಾಂಡರವರು ಸರ್ವ ಪದಾರ್ಥ ಪ್ರದರ್ಶನ ಮಹೋತ್ಸವವನ್ನು ಯಥಾಶಾಸ್ತ್ರೀಯವಾಗಿ ಪ್ರಪಂಚದ ನಾನಾ ರಾಜ್ಯಗಳಿಂದಲೂ ಹೋಗಿದ್ದ ರಾಯಭಾರಿಗಳ ಮತ್ತು ನೋಟಕರ ಎದುರಿಗೆ ಪ್ರಾರಂಭಿಸಿದ್ದನ್ನು ಈ ಪತ್ರಿಕೆಯ ಮೂಲಕ ತಿಳಿದಿದ್ದನ್ನು ವಾಚಕರು ಓದಿರುತ್ತಾರಷ್ಟೆ. ಎಲ್ಲಾ ಪ್ರತಿನಿಧಿಗಳೂ ಸೇರಿ ಮತ್ತೊಂದು ಸಮಾಜವನ್ನು ಮಾಡಿ ಪ್ರಪಂಚದ ನಾನಾ ಮತಗಳಿಂದಲೂ ಒಬ್ಬೊಬ್ಬ ಪ್ರತಿನಿಧಿಯು ಸೇರಿ ಆಯಾಯ ಮತದಲ್ಲಿರುವ ವೇದಗಳಲ್ಲಿನ ಶ್ರೇಷ್ಠಾಂಶಗಳನ್ನು ತಿಳಿಯುವದು ಅವಶ್ಯವೆಂದು ಒಂದು ಸಮಾಜ ಮಾಡಬೇಕೆಂಬದಾಗಿ ತೀರ್ಮಾನಿಸಿ ಸಭಿಕರ ಇಷ್ಟಪ್ರಕಾರ ಹಿಂದೂ, ಬೌದ್ಧ, ಮಹಮದೀಯ, ಕ್ರಿಸ್ತ ಮತ್ತು ಕನ್ಫ್ಯೂಷಿಯಸ್ ಎಂಬೀ ಮತಗ್ರಂಥಗಳನ್ನು ಪರಿಷ್ಕಾರವಾಗಿ ಓದಿರುವ ಪಂಡಿತರುಗಳನ್ನು ಮೆಂಬರುಗಳಾಗಿ ಚುನಾಯಿಸಿರುತ್ತಾರೆ. ನಮ್ಮ ಭರತಖಂಡದಿಂದಲೂ ಐದುಮಂದಿ ಪಂಡಿತರಾದ ಹಿಂದೂ ವಿದ್ವಾಂಸರುಗಳನ್ನು ಚುನಾಯಿಸಿರುತ್ತಾರೆ. ಈ ಸಮಾಜವು ಚಿಕಾಗೋ ಪಟ್ಟಣದಲ್ಲೇ ಇರುಗುವದು. ಇದರ ಫಲಿತಾಂಶಗಳನ್ನು ಎಲ್ಲರೂ ಅತ್ಯಾತುರವಾಗಿ ನಿರೀಕ್ಷಿಸುತ್ತಿದ್ದಾರೆ.

ಹೀಗೆ ಸಾಹ್ಯದಯದಿಂದ ಸಕಲ ಮತದ ಪಂಡಿತರುಗಳನ್ನು ಒಂದು ಕಡೆ ಸೇರಿಸಿ, ಮತವಿಚಾರವಾದ ಚರ್ಚೆಗಳು ನಡೆದ ಎಲ್ಲರಿಗೂ ಸಹಜವಾಗಿರುವಂಥ ಒಳ್ಳೇ ಏರ್ಪಾಡುಗಳನ್ನು ಮಾಡುವದು ಸರ್ವೋತ್ಕೃಷ್ಟವಾದದ್ದೇ ಸರಿ. ಆದರೆ ಇಂಥಾ ಸಮಾಜಗಳು ಇದುವರೆಗೂ ಈಗಿನ ಕಾಲದಲ್ಲಿ ಪ್ರಪಂಚದ ಯಾವ ಭಾಗದಲ್ಲಿಯೂ ನಡೆದು ಇಲ್ಲ. ಮತ್ತು ಪೂರ್ವಕಾಲದಲ್ಲಿ ಮಹಮದೀಯರ ಅರಸನಾದ ಅಕಬರ್ ಬಾದಷಹಾ ಮತ್ತು ಅವನಿಗಿಂತಲೂ ಹಿಂದೆ ಪ್ರಖ್ಯಾತಿಯನ್ನು ಪಡೆದ ಹಿಂದೂ ಅರಸನಾಗಿದ್ದ ಅಶೋಕನು—ಈ ದೊರೆಗಳಿಬ್ಬರೂ ತಮ್ಮ ತಮ್ಮ ಆಳಿಕೆಯಲ್ಲಿ ಇತರ ಮತಗಳನ್ನು ಅವಲಂಬಿಸುತ್ತಿದ್ದವರಲ್ಲಿ ಕೋಪವನ್ನೂ, ಪಕ್ಷಪಾತವನ್ನೂ ಮಾಡದೆ, ಸಕಲ ಪ್ರಜೆಗಳಿಗೂ ಕ್ಷೇಮವುಂಟಾಗಬೇಕೆಂಬ ಅಭಿಪ್ರಾಯದಿಂದ ಎಲ್ಲಾ ಮತದ ಪ್ರತಿನಿಧಿಗಳನ್ನೂ ತಮ್ಮ ತಮ್ಮ ಆಸ್ಥಾನಗಳಲ್ಲಿ ಸಭೆ ಸೇರಿಸಿ ಅವರ ಅಭಿಪ್ರಾಯಗಳನ್ನು ತೆಗೆದುಕೊಂಡರೆಂಬದಾಗಿ ಚರಿತ್ರೆಯಲ್ಲಿ ಎಲ್ಲರೂ ಓದಿ ಇರುತ್ತೇವೆ. ಇನ್ನೂರು ವರುಷಗಳಿಂದೀಚೆಗೆ ಇಂಥಾ ಸಮಾಜಗಳು ನಡೆದು ಇಲ್ಲ. ದೇವರನ್ನು ಆರಾಧಿಸುವದು ಹ್ಯಾಗೆ? ವಿಗ್ರಹಾರಾಧನೆಯಿಂದ ಪ್ರಯೋಜನವಾಗುವದ! ಇಲ್ಲವೇ! ಇತರ ಮತಗಳ ಬೋಧನೆಯ ಪ್ರಕಾರ ನಡೆಯಬೇಕೆ? ಎಂಬೀ ವಿಷಯಗಳನ್ನು ವಿಚಾರಸ್ಥನಾದ ಪ್ರತಿಮನುಷ್ಯನೂ ತಿಳಿಯಬಯಸುತ್ತಾನೆ. ಇವನ್ನು ಸರಿಯಾಗಿ ತಿಳಿಯಲು ಜನರಲ್ಲಿ ಪರಸ್ಪರ ಸಾಮ್ಯವು ಅನಾವಿಷ್ಯವಾಗಿದ್ದದರಿಂದಲೇ ಅಸಾಧ್ಯವಾಗಿತ್ತು. ಈಗ ಈ ಮಹಾಸಭೆಯಲ್ಲಿ ಲೋಕಾಂತರದಲ್ಲಿ ಸಭೆ ಸೇರಿ ಆಯಾ ಮತಗಳ ಯೋಗ್ಯತಾ ಪಕ್ಷಗಳನ್ನೂ, ಅವುಗಳಿಂದ ಜನಗಳಿಗೆ ಉಂಟಾಗುವ ಪ್ರಯೋಜನಗಳನ್ನೂ ವಿಮರ್ಶೆ ಮಾಡಿ ತಮ್ಮ ಅಭಿಪ್ರಾಯಗಳನ್ನು ಪ್ರಕಟ ಪಡಿಸುವದಾಗಿದೆ. ಈಗಿನ ವಿದ್ವಾಂಸರುಗಳು ಹಿಂದಿನವರಿಗಿಂತಲೂ ಶಾಸ್ತ್ರಗಳಲ್ಲಿ ಘಟಕರೆಂಬುವದರಲ್ಲಿ ಸಂಶಯವಿಲ್ಲ. ಆದದರಿಂದ ಇವರ ತೀರ್ಮಾನಗಳು ಜನಗಳ ಪ್ರೀತಿಗೂ ಗೌರವಕ್ಕೂ ಅರ್ಹವಾದವುಗಳಾಗಿರುತ್ತವೆ. ಇಂಥಾ ಸಮಾಜಗಳು ಪ್ರಪಂಚದ ಎಲ್ಲಾ ಭಾಗಗಳಲ್ಲಿಯೂ ೫೦—೧೦೦ ವರುಷಗಳಿಗಾದರೂ ಒಂದಾವರ್ತಿ ನಡೆಯುತಲಿದ್ದಲ್ಲಿ ಅವುಗಳಿಂದ ಉಂಟಾಗುವ ಪ್ರಯೋಜನಗಳು ಇಷ್ಟಿಷ್ಟೆಂದು ಊಹಿಸಲು ಅಸಾಧ್ಯವಾಗಿದೆ.

ಸರ್ಕಾರೀ ನೌಕರರಮಾನೇದಾರರ ಜವಾಬ್ದಾರಿ.

ಶ್ರೀರಂಗಪಟ್ಟಣದಲ್ಲಿ ಅಮಲ್ದಾರ್ ಲಕ್ಷ್ಮೀನಾರಣಯ್ಯನವರು ತಮ್ಮ ಅಧಿಕಾರವು ನಡೆಯುತ್ತಿರುವಾಗ್ಯೆ ದೇವಸ್ಥಾನದ ವಿಷಯವಾಗಿ ನಡೆಸಿದ ಕಾರ್ಬಾರುಗಳೂ, ಅದರಿಂದ ಅವರಿಗೆ ಈಗ ಪ್ರಾಪ್ತವಾದ ಫಲಿತಾಂಶಗಳೂ ವಾಚಕರ ತಿಳುವಳಿಕೆಗಾಗಿ ಇದೇ ಸಂಚಿಕೆಯ ಮತ್ತೊಂದು ಭಾಗದಲ್ಲಿ ಸವಿಸ್ತಾರವಾಗಿ ವಿವರಿಸಲ್ಪಟ್ಟಿರುತ್ತವೆ. ಅಲ್ಲಿ ವಿವರಿಸಿರುವ ಸಂಗತಿಗಳೆಲ್ಲಾ ಅಮಲ್ದಾರ್ರು ತಪ್ಪನ್ನು ಬಹಳವಾಗಿ ಸೂಚಿತುಮಾಡುತ್ತವೆ. ೯೦ನೆ ಇಸವಿ ೧೨ನೆ ಡಿಸೆಂಬರನಲ್ಲಿ ಕೊಡಲ್ಪಟ್ಟ ಪೇರಿಸ್ತು ಪಟ್ಟಿಯಲ್ಲಿ ವಾಪಸುಮಾಡಿದ ಸ್ವತ್ತುಗಳ ತಪಸೀಲು ಇಲ್ಲದಿರುವದರಿಂದ ಆ ಪತ್ರಗಳು ದೇವಸ್ಥಾನಕ್ಕಾಗಿ ಕೊಡಲ್ಪಟ್ಟವೆಂದು ತಿಳಿಯಲಿಲ್ಲವೆಂಬದಾಗಿ ಅಮಲ್ದಾರ್ರು ಡಿಫೆನ್ಸು ಹೇಳುತ್ತಾರೆ. ಹಿಂದಾವೇಳೆ ಇದು ನಿಜವಾಗಿರಬಹುದೆಂದು ಭಾವಿಸಿದರೂ, ಅಮಲ್ದಾರ್ರು ತಮ್ಮ ಸರ್ಕಾರದ ಡ್ಯೂಟಿಯಲ್ಲಿ ಅಜಾಗರೂಕರಾದರಿಲ್ಲವೆಂಬದಾಗಿ ಎಂದಿಗೂ ತೋರ್ಪಡುವದಿಲ್ಲ. ಆ ಪಟ್ಟಿಯಲ್ಲಿ ಈ ಪತ್ರಗಳನ್ನು ನಮೂದು ಮಾಡದಹೋದ ಮಾತ್ರಕ್ಕೇ ಅವುಗಳನ್ನು ಸರ್ಕಾರದವರು ತಮ್ಮ ಸ್ವಾಧೀನಕ್ಕೆ ತೆಗೆದುಕೊಳ್ಳಲು ಅವರಿಗೆ ಯಾವ ಕಾರಣವೂ ಇರಲಿಲ್ಲವೆಂದು ಊಹಿಸುವದಕ್ಕಾಗದು. ಸರ್ಕಾರದ ಖಜಾನೆಯಲ್ಲಿ ಸರ್ಕಾರದವರಿಗೆ ಸಂಬಂಧಪಡದೆ ಇರುವ ಇತರರ ಸ್ವತ್ತು ಇರುವದಕ್ಕೆ ಯಾವ ಕಾರಣವೂ ಇಲ್ಲದಿದ್ದರಿಂದ, ಆ ಪತ್ರಗಳು ಹ್ಯಾಗೆ, ಯಾವಾಗ, ಯಾತಕ್ಕೆ ಅಲ್ಲಿ ಇಡಲ್ಪಟ್ಟವೆಂಬದು ವಿಚಾರಮಾಡುವದು ಅವಶ್ಯಕವೆಂದು ಸಾಧಾರಣ ಬುದ್ಧಿ ಜಾಗ್ರತೆಗಳುಳ್ಳ ಮನುಷ್ಯನಿಗೂ ಕೂಡ ವೇದ್ಯವಾಗಿ ಇರುತ್ತಿತ್ತು. ಆ ಸ್ವತ್ತುಗಳು ಸರ್ಕಾರದವರಿಗೆ ಕೊಡಲ್ಪಟ್ಟವೆಂಬ ವಿಶೇಷ ಅಂಶವನ್ನು ತಿಪ್ಪರಟ್ಟು ತೀರಿಸಿದಾಗ, ಸರ್ಕಾರದವರ ಸ್ವಾಧೀನಕ್ಕೆ ಅವುಗಳು ಹ್ಯಾಗೆ ಬಂದವೆಂದು ಅವರನ್ನು ಕೇಳಬೇಕೆಂಬುವದು ಎಂಥಾ ಮೂಢನಿಗೂ ಹೊಳೆಯುತ್ತಿತ್ತು. ಆದರೆ ಅಮಲ್ದಾರರು ಆ ವಿಷಯವಾಗಿ ವಿಚಾರವೇ ಮಾಡದೆ ೯೦ನೆ ಡಿಸೆಂಬರ್ ೧೨ನೆ ಪೇರಿಸ್ತು ಪಟ್ಟಿಯಲ್ಲಿ ಈ ಸ್ವತ್ತುಗಳನ್ನು ನಮೂದು ಮಾಡದ ಇರುವದು ತಿಪ್ಪರಟ್ಟೆಯು ಹೇಳುವ ಅಂಶವನ್ನು ಸಿರ್ಥಾರಿಸುತ್ತದೆ ಎಂದು ತಿಳಿದು ಸುಮ್ಮನಿದ್ದರು. ಈ ಸ್ವತ್ತುಗಳು ತಿಪ್ಪೆಅಮಲ್ದಾರರಿಗೆ ಎರಡನೇ ಆವರ್ತಿ ಕೊಡಲ್ಪಟ್ಟವೆಂಬುವದನ್ನು ತೋರಿಸತಕ್ಕ ಪಟ್ಟಿ ಯಾವದೂ ಸಿಕ್ಕದೇ ಇದ್ದದರಿಂದಲೂ ಅಂಥಾ ಪಟ್ಟಿ ಇತ್ತು ಎಂಬುವದು ಸಹಿತ ತಮಗೆ ತಿಳಿದಿರಲಿಲ್ಲವಾದ್ದರಿಂದಲೂ ತಾವು ನಡೆಸಿದ ಕಾರ್ಯವು ನ್ಯಾಯವೆಂದು ಹೇಳಿಕೊಂಡಿದ್ದಾರೆ. ಆದರೆ ಈ ಅಂಶವು ಈ ಮೊಕದ್ದಮೆಯಲ್ಲಿ ಯಾವ ಪ್ರಯೋಜನಕ್ಕೂ ಬಾರದ್ದಲ್ಲ. ಸ್ವತ್ತುಗಳು ವೆಂಕಟರಾಮಯ್ಯನವರಿಂದ ಧರ್ಮಕ್ಕಾಗಿ ಕೊಡಲ್ಪಟ್ಟವೆಯೋ ಇಲ್ಲವೇ ಎಂಬುವದನ್ನು ಋಜುವಾತು ಮಾಡುವದಕ್ಕೆ ಅವರ ಕೈಫೀತೇ ಆಗಲೀ ಪಟ್ಟಿಯೇ ಆಗಲೀ ಮುಖ್ಯವಾದದ್ದೇ ಸರಿ. ಅದರೆ, ಆ ಪತ್ರಗಳ ಹಣವು ಗುಡಿಗೆ ಸೇರಿದ್ದು, ನನ್ನ ವಾರಸದಾರರಿಗೆ ಅದರ ಮೇಲೆ ಯಾವ ಹಕ್ಕೂ ಇಲ್ಲ ಎಂದು ಆ ಪತ್ರಗಳ ಮೇಲೆಯೇ ಬರೆದಿರತಕ್ಕ ಷರಾಕ್ಕಿಂತಲೂ ಒಳ್ಳೇದಾದ ಬೇರೇ ಸಾಕ್ಷ್ಯವಾದದ್ದು ಬೇಕಾಗಿತ್ತು? ಈ ಷರಾಗಳನ್ನು ನೋಡಿ ಎಂಬದಾಗಿ ದಿವಾನರು ಅಮಲ್ದಾರರಿಗೆ ತೋರಿಸಿದಾಗ, ತಮಗೆ ತಿಳಿಯಲಿಲ್ಲವೆಂದೂ, ಹಾಗಿದ್ದರೂ ಮಾಡಿದ ಪತ್ರಗಳನ್ನೂ ಆ ಷರಾಗಳು ಯಾವ ತಾರೀಖಿನಲ್ಲಿ ಬರೆಯಲ್ಪಟ್ಟವೋ ಅವುಗಳನ್ನು ಸಹಿತ ತಾವು ನೋಡಲಿಲ್ಲವೆಂದೂ ಹೇಳಿದರು. ಯಾಕಂದರೆ, ಈ ತಾರೀಖುಗಳು ಅವರಿಗೆ ಗೊತ್ತಿದ್ದ ಪಕ್ಷದಲ್ಲಿ, ಎರಡನೇ ಸರ್ತಿ ಕೊಡಲ್ಪಟ್ಟ ಪತ್ರಗಳೆಲ್ಲಾ ೯೦ನೇ ಇಸವಿ ಡಿಸೆಂಬರ್ ೧೨ರ ತರುವಾಯ ಕೊಡಲ್ಪಟ್ಟವೆಂದೂ, ಅವುಗಳನ್ನು ಆ ತಾರೀಖಿನ ಪಟ್ಟಿಯಲ್ಲಿ ಸೇರಿಸುವದಕ್ಕೆ ಅಸಾಧ್ಯವಾಗಿತ್ತೆಂತಲೂ, ಆ ವೇಳೆ ಯಾವಾಗಲೋ ಅವುಗಳು ಸರ್ಕಾರದವರ ಸ್ವಾಧೀನಕ್ಕೆ ಬಂದವೆಂತಲೂ, ಹಾಗೆ ಅವರ ಸ್ವಾಧೀನಕ್ಕೆ ಬರುವದಕ್ಕೆ ಒಳ್ಳೇಕಾರಣಗಳಿದ್ದೇ ಇರಬೇಕೆಂತಲೂ, ಚನ್ನಾಗಿ ವೇದ್ಯವಾಗುತ್ತಿತ್ತು. ಖಜಾನೆಗೆ ಬಂದ ಸ್ವತ್ತುಗಳನ್ನು ತಕ್ಕವರ ಅಪ್ಪಣೆ ಇಲ್ಲದೆ ವಾಪಸು ಕೊಡಬಾರದೆಂಬ ಎಲ್ಲರಿಗೂ ತಿಳಿದಿರುವ ಏರ್ಪಾಡಿಗೆ ವ್ಯತಿರಿಕ್ತವಾಗಿ ಇಷ್ಟು ಅನುಭವವುಳ್ಳ ಮತ್ತು ಬುದ್ಧಿಶಾಲಿಗಳಾದ ಅಮಲ್ದಾರರು ಯಾತಕ್ಕೆ ನಡೆದುಕೊಂಡರೋ ಅದು ಚನ್ನಾಗಿ ಗೊತ್ತಾಗಲಿಲ್ಲ.

ನೋಟಿಸ.

ನಂಜನಗೂಡಿನಲ್ಲಿರುವ ಶ್ರೀರಂಗಣ್ಣನವರ ಹಿರೀ ಮಗ ವೆಂಕಟರಾಮಯ್ಯನು ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಮೈಸೂರು ದೇಶಾಭಿಮಾನೀ ಪತ್ರಿಕೆಯ ಮೇ ೩ ಮತ್ತು ೧೦ನೇ ತಾರೀಖಿನ ಸಂಚಿಕೆಗಳಲ್ಲಿ ನಮ್ಮ ತಂದೆಯಾದ ಶ್ರೀರಂಗಣ್ಣನು ನನಗೆ ಬುದ್ಧಿ ಸಾಲದಂತೆಯೂ, ಯಾರೂ ನನಗೆ ಸಾಲ ಕೊಡಕೂಡದಂತೆಯೂ ತಿಳಿಸಿ ಇರುವದು ಸರಿಯಷ್ಟೆ. ನಮ್ಮ ತಂದೆಯು ೫೦—೬೦ ವಯಸ್ಸಿನವನಾಗಿ ೨೬—೨೩ ವಯಸ್ಸು ಆಗಿರುವ ಮಕ್ಕಳನ್ನೂ ಮತ್ತು ಇವರುಗಳ ತಾಯಿ ಮುದುಕಿಯನ್ನೂ ಬಹು ವಿಧವಾಗಿ ಯಲ್ಲರನ್ನೂ ಹಿಂಸೆ ಪಡಿಸುವದಲ್ಲದೆ, ವೇಶ್ಯಾಸಂಗವನ್ನು ಮಾಡುತ್ತಾ, ನಮ್ಮ ಪಿತಾರ್ಜಿತವಾದ ಆಸ್ತಿಗಳನ್ನು ತನ್ನ ಸ್ವಾರ್ಜಿತವೆಂದು ಜನಗಳಿಗೆ ಹೇಳಿ, ದುರುಪಯೋಗಕ್ಕಾಗಿ ಮಾರಿ ವಿನಾಶಿತ್ತಾನೆಂಬ ಸಂಗತಿಯು ತಿಳಿಯಬಂದಿದೆ. ಆದ್ದರಿಂದ ಈ ನಮ್ಮ ಪಿತಾಮಹಾರ್ಜಿತ ಆಸ್ತಿಯನ್ನು ಯಾರೊಬ್ಬರೂ, ನಾನು, ನನ್ನ ತಮ್ಮ, ನಮ್ಮಗಳ ಸಮ್ಮತಿ ಇಲ್ಲದೆ ಯಾವ ವಿಧವಾಗಿಯೂ ತೆಗೆದುಕೊಳ್ಳಕೂಡದೆಂದು ಸಮಸ್ತ ಜನಗಳಿಗೂ ವಿಜ್ಞಾಪಿಸುತ್ತೇನೆ.

೨ ರುಜು ವೆಂಕಟರಾಮಯ್ಯ.

ಯಲ್ಲರಲ್ಲಿಯೂ ವ್ಯಸನವನ್ನು ಹುಟ್ಟಿಸತಕ್ಕ ಕಥೆ.

(ಕಳೆದ ವಾರದ ಶೇಷ)

ಯಾರು ಆ ಹೆಂಗಸು ಇದ್ದ ಸ್ಥಳವನ್ನು ಮುತ್ತಿಗೆ ಹಾಕಿದರು? ಅಂದರೆ ಜೆರುಸಲೆಮ್ ಪಟ್ಟಣವನ್ನು ಮುತ್ತಿಗೆ ಹಾಕಿದವರು ಯಾರು? ಎಂಬದಾಗಿ ನೋಡಬೇಕು.

ಈ ಪಟ್ಟಣವನ್ನು ಮುತ್ತಿಗೆ ಹಾಕಿದವನು ಟೈತನೆಂಬ ಚಕ್ರವರ್ತಿ ಇವನ ರಾಜಧಾನಿಯು ರೋಮ್ ಎಂಬ ಪಟ್ಟಣವು ಈ ಚಕ್ರವರ್ತಿಯು ಆ ಕಾಲದಲ್ಲಿದ್ದ ಎಲ್ಲಾ ಅರಸುಗಳಿಗಿಂತ ಬಹಳ ಪ್ರಖ್ಯಾತಿ ಪಡೆದಿದ್ದನು ಇತನ ದೊರೆತನವು ಬಹಳ ದೇಶಗಳಲ್ಲಿ ಹಬ್ಬಿತ್ತು ಇತನು ಅನೇಕ ರಾಜರನ್ನು ಗೆದ್ದು ಅವರನ್ನು ತನ್ನ ಅಧಿಕಾರದಲ್ಲಿ ಇಟ್ಟುಕೊಂಡಿದ್ದನು ಈತನು ಜೆರುಸಲೆಮ್ ಪಟ್ಟಣವನ್ನು ನಾಶಮಾಡುವದಕ್ಕೆ ಯೋಚನೆ ಮಾಡಿದಾಗ ತುಂಬಾ ಭಯಪಟ್ಟನು ಆ ಪಟ್ಟಣವು ಇದ್ದಂಥ ಸ್ಥಳವನ್ನೂ ಅದು ಕಟ್ಟಲ್ಪಟ್ಟ ರೀತಿಯನ್ನೂ ಅದರಲ್ಲಿದ್ದ ಅರಮನೆಗಳನ್ನೂ ಗೋಪುರಗಳನ್ನೂ ಅದರಲ್ಲಿದ್ದ ದೇವಸ್ಥಾನವನ್ನೂ ಸುತ್ತುಮುತ್ತಲೂ ಇದ್ದ ಪಟ್ಟಣಗಳನ್ನೂ ಬಲವಾದ ಹೊದಲುವಪುಗಳನ್ನೂ ನೋಡಿ ಆಲೋಚನೆ ಮಾಡುತ್ತಿರುವಾಗ ಅವನು—« ರೋಮನಾ ಜನಗಳೇ ಆ ಪಟ್ಟಣವು ನನ್ನ ಮನಸ್ಸನ್ನು ಕರಗಿಸುತ್ತ ನನ್ನ ಯೋಚನೆಯನ್ನು ಭಂಗ ಪಡಿಸುತ್ತ ಎಂದು ಮುತ್ತಿಗೆ ಹಾಕುವದಕ್ಕಿಂತ ಮುಂಚೆ ಹೇಳಿದನು ಇಂಥಾ ಪ್ರಸಿದ್ಧನೂ ಮಹಾ ಪ್ರವೀಣನೂ ಆದ ಚಕ್ರವರ್ತಿಯು ಆ ಪಟ್ಟಣದ ವಿಷಯವಾಗಿ ಹೆದರಿಕೊಳ್ಳಬೇಕಾದರೆ ಅದು ಎಂಥಾ ಪಟ್ಟಣವಾಗಿರಬಹುದು?

ಯಾತಕ್ಕೋಸ್ಕರ ಇಂಥಾ ಸಂಕಟ ಆ ಹೆಂಗಸಿಗೆ ಸಂಭವಿಸಿತು?—ಕ್ರಿಸ್ತನು ಯೆಹೂದ್ಯ ಜನರ ಸಂತಾನದಲ್ಲಿ ಹುಟ್ಟುವನು ಎಂದು ಅವರಿಗೆ ತಿಳಿಸಲ್ಪಟ್ಟಿತ್ತು ಅವರು ಅದೇಪ್ರಕಾರ ಕ್ರಿಸ್ತನು ಬರುತ್ತಾನೆಂದು ಎದುರು ನೋಡಿಕೊಂಡಿದ್ದರು ಪ್ರವಾದಿಯಾದ ಮೋಶೆಯು ಕ್ರಿಸ್ತನ ವಿಷಯವಾಗಿ ಇಸ್ರಾಯೇಲ್ಯರಿಗೆ—ನನ್ನ ಹಾಗಿರುವ ಪ್ರವಾದಿಯನ್ನು ನಿನ್ನ ದೇವರಾದ ಯೆಹೋವನು ನಿನಗೆ ನಿನ್ನ ಮಧ್ಯದಲ್ಲಿಂದ ನಿನ್ನ ಸಹೋದರರೊಳಗಿಂದ ಎಬ್ಬಿಸುವನು ಅವನ ಮಾತು ನೀವು ಕೇಳಬೇಕು ಎಂದು ಹೇಳಿದನು ಕ್ರಿಸ್ತನು ಬರುತ್ತಾನೆಂಬ ವಿಷಯವು ಅವರಿಗೆ ಸ್ಪಷ್ಟವಾಗಿ ತಿಳಿಸಲ್ಪಟ್ಟಿತ್ತು ಆದದರಿಂದ ಅವರು ಆತನ ಬರೋಣವನ್ನು ನಿರೀಕ್ಷಿಸಿಕೊಂಡು ಇದ್ದರು ನಿರೀಕ್ಷಿಸಿಕೊಂಡು ಇದ್ದ ಪ್ರಕಾರವಾಗಿ ಕ್ರಿಸ್ತನು ಬಂದೇ ಬಂದನು ಆದರೆ ಆತನು ಬಂದನೆಂದು ಅವನನ್ನು ದೂಷಿಸಿ ಬಿಟ್ಟರು ಅವನು ಕ್ರಿಸ್ತನಲ್ಲವೆಂತಲೂ ಅವನು ದೆವ್ವ ಹಿಡಿದವನೆಂತಲೂ ಪಾಪಿಷ್ಠರ ಸ್ನೇಹಿತನೆಂತಲೂ ದೈವದೂಷಣೆ ಮಾಡುವವನೆಂತಲೂ ಹೀಗೇ ತಮಗೆ ಮನಸ್ಸು ಬಂದಹಾಗೆಲ್ಲಾ ಆತನನ್ನು ದೂಷಣೆ ಮಾಡಿದರು ಕ್ರಿಸ್ತನು ದೇವರ ಮಗನೆಂದು ತಿಳಿಯುವದಕ್ಕೆ ಅವರಿಗೆ ಅನೇಕ ಗುರುತುಗಳೂ ಸಾಕ್ಷಿಗಳೂ ಇದ್ದವು ಆದರೆ ಅವುಗಳನ್ನು ತಿರಸ್ಕರಿಸಿದರು ಕ್ರಿಸ್ತನು ಇದ್ದ ಕಾಲದಲ್ಲೆಲ್ಲಾ ಅವನನ್ನು ನಿಂದಿಸಿ ಹಿಂಸಿಸಿದರು ಕಡೆ

ಯಲ್ಲಿ ಅವನ ಪ್ರಾಣವನ್ನೇ ತೆಗೆಸಿಬಿಟ್ಟಿದರು ಅವರು ಮಾಡಿದಂಥ ಹಿಂಸೆಯೂ ದೂಷಣೆಯೂ ಸಾಲದೆ ಹೋಗಿದ್ದಾಗ್ಯೂ ಕ್ರಿಸ್ತನ ಪ್ರಾಣವನ್ನು ತೆಗೆಸುವದಕ್ಕೆ ಪ್ರಯತ್ನ ಮಾಡಿದರು ಯಾಕೆ ಹೀಗೆಲ್ಲಾ ಮಾಡಿದರು? ಯಾಕೆಂದರೆ ಕ್ರಿಸ್ತನು ಲೋಕಕ್ಕೆಲ್ಲಾ ಬಂದಿದ್ದರೂ ಅವರ ಕ್ರಿಯೆಗಳು ಕೆಟ್ಟವಾಗಿದ್ದದರಿಂದ ಕ್ರಿಸ್ತನಿಗಿಂತ ತಮ್ಮ ಕೆಟ್ಟ ಕ್ರಿಯೆಗಳನ್ನೇ ಹೆಚ್ಚಾಗಿ ಪ್ರೀತಿಮಾಡಿದರು ಇದರಿಂದಲೇ ಕ್ರಿಸ್ತನು ಬರಬಲ್ಲನೆಂದು ಹೇಳಿ ಕೊಳ್ಳಹೋದರು ಅವನಿಗೆ ಆದ ಕ್ಲೇಶವು ಮಹಾ ಭಯಂಕರವಾದದ್ದು ಮೇಲೆ ಹೇಳಿದ ಜೆಂಗಿಸನ ಕಥೆಯು ಗೊತ್ತಾಗಿದೆ ಯೆಹೂದ್ಯಜನರಿಗೆ ಅಂಥಾ ಕಷ್ಟಗಳು ಬಹಳವಾಗಿ ಸಂಭವಿಸಿದವು ಅವರಿಗೆ ಬಂದಂಥ ಸಂಕಟಗಳನ್ನೆಲ್ಲಾ ಬರದಲ್ಲಿ ಎಂಥವರಿಗಾದರೂ ಕಣ್ಣೀರು ಬರುವದರಲ್ಲಿ ಯಾವ ಸಂಶಯವೂ ಇಲ್ಲ ಅವರಿಗೆ ಕಷ್ಟಬಂದಾಗ ಕ್ರಿಸ್ತನು ಯಾರೆಂದು ನೆನಸಿರಬಹುದು ಆಗ್ಯೆ ನೆನಸಿದ್ದರೆ ಏನೂ ಪ್ರಯೋಜನ ಬರುವದಿಲ್ಲ ಯಾಕೆಂದರೆ ಸಮಯವೆಲ್ಲಾ ಮೀರಿ ಹೋಗಿತ್ತು. ಈ ಕಾಲದಲ್ಲಿಯೂ ಸಹ ಕ್ರಿಸ್ತನು ಸೇರಲ್ಪಡುತ್ತಾ ಇದ್ದಾನೆ ಕ್ರಿಸ್ತನು ಶಿಲುಬೆಗೆ ಜಡಿಸಿ ರಕ್ತಗೆ ಕೊಡುತ್ತಾನೆಂದು ಜ್ಞಾನದಲ್ಲಿ ಸೇರಲ್ಪಡುತ್ತಾ ಇದ್ದಾನೆ ಅನೇಕರು ಅವನನ್ನು ಹಾಸ್ಯಮಾಡಿ ಅವನ ವಿಷಯದಲ್ಲಿ ಮನಸ್ಸು ಬಂದಹಾಗೆಲ್ಲಾ ಮಾತನಾಡುತ್ತಾ ಇದ್ದಾರೆ ಅಂಥವರಿಗೆ ಯೆಹೂದ್ಯ ಜನಗಳ ಗತಿಯೇ ಹೊರತು ಬೇರೆ ದೊರೆಯುವದಿಲ್ಲ ಕ್ರಿಸ್ತನು ಯಾರೆಂದು ಎಂಥವನೆಂದೂ ಕ್ರಿಸ್ತನು ಕ್ಲೇಶ ಕೊಡುವಾಗ ಗೊತ್ತಾಗಬಹುದು ಅತನನ್ನು ಹಾಸ್ಯಮಾಡಿ ಅತನ ಜನರನ್ನು ಹಿಂಸಿಸುತ್ತಾರೆ ಇದು ಯಾಕೆ? ಯಾಕೆಂದರೆ ಅವರ ಕ್ರಿಯೆಗಳು ಕೆಟ್ಟವುಗಳಾಗಿದ್ದ ಸತ್ಪುರುಷನಾದ ಕ್ರಿಸ್ತನನ್ನು ದೂರಮಾಡುತ್ತವೆ ಯೆಹೂದ್ಯ ಜನಗಳು ಕ್ರಿಸ್ತನ ವಿಷಯವಾಗಿ ಬಹು ತಿರಸ್ಕಾರವಾಗಿ ಮಾತಾಡಿ ಆತನ ಪ್ರಾಣವನ್ನು ತೆಗೆದುಹಾಕಿದರು ಹಾಗೆ ಈ ಕಾಲದಲ್ಲಿಯೂ ಸಹ ಜನರು ಹಾಗೆಯೇ ಮಾಡುತ್ತಾರೆ ಆದರೆ ಇಂಥ ಮಾಡಿದಂಥವರು ಎಲ್ಲಾ ಕೆಟ್ಟ ಕ್ರಿಯೆಗಳ ವಿಷಯದಲ್ಲಿಯೂ ಕ್ರಿಸ್ತನ ಮರಣ ಪ್ರಾಯಶ್ಚಿತ್ತವಾದ ಕಾಲ ಬರುತ್ತೆ ಆಗ ಕ್ರಿಸ್ತನನ್ನು ಸ್ವೀಕಾರಮಾಡಿದರೂ ಪ್ರಯೋಜನವಿಲ್ಲ ಕ್ರಿಸ್ತನು ಅವರ ವಿಷಯವಾಗಿ ಅತ್ತನು ಅವರಿಗೆ ಬರಹೋಗುವದಕ್ಕಿದ್ದ ಸ್ಥಿತಿಯನ್ನು ನೆನಸಿ ಅತ್ತನು ಅತನು ಯೆರೂಸಲೇಮು ಪಟ್ಟಣವನ್ನು ನೋಡಿ ಹೇಳಿದ್ದೇನಂದರೆ:—

"ಅಯ್ಯೋ! ನೀನು ಈ ನಿನ್ನ ದಿವಸದಲ್ಲಾದರೂ ನಿನ್ನ ಸಮಾಧಾನಕ್ಕೆ ಬೇಕಾದವುಗಳನ್ನು ತಿಳಿದಿದ್ದರೆ, ಒಳ್ಳೇದಾಗಿತ್ತು; ಆದರೆ ಈಗ ನಿನ್ನ ಕಣ್ಣುಗಳಿಗೆ ಮರೆಯಾಗಿವೆ" ಎಂದು ಕ್ರಿಸ್ತನು ಅತ್ತು, ಅವರಿಗೂ ಮತ್ತು ನಮಗೂ ಕೆಟ್ಟ ಮಾರ್ಗದಿಂದ ತಿರುಗಿರಿ ಎಂದು ಹೇಳುತ್ತಾನೆ ಅವರ ಕ್ಲೇಶವನ್ನು ಕೊಡುವಾಗ ಅತನು ಅಳುವದಿಲ್ಲ ಆಗ ಸಂತೋಷಪಡುವವನಾಗಿರುತ್ತಾನೆ ವ್ಯಸನಪಡುವ ಕಾಲ ಬರುತ್ತೆ! ಕ್ರೋಧದ ಮಾಡುವ ವೇಳೆ! ಯೆಹೂದ್ಯ ಜನರು ದೇವರ ಸ್ವಂತ ಜನರೆಂದು ಕರೆಯಲ್ಪಟ್ಟಿದ್ದರು ನೋಡಿ, ಅವರ ಹೆಸರು ಪ್ರಖ್ಯಾತಿ ದೊಡ್ಡದಾಗಿತ್ತು ಅವರಿಗೆ ಬಂದಂಥಾ ಕ್ಲೇಶವು ಸಹ ದೊಡ್ಡದಾಗಿಯೇ ಇತ್ತು ಯಾಕೆ? ಯಾಕೆಂದರೆ ದೇವರ ಜನರಿಗೆ ಇರಬೇಕಾದ ಲಕ್ಷಣಗಳು ಅವರಲ್ಲಿ ಇರಲಿಲ್ಲ ಹೆಸರುಮಾತ್ರ ದೊಡ್ಡದಾಗಿತ್ತು; ಆದರೆ ಕ್ರಿಯೆಯು ಅವರ ಹೆಸರಿಗೆ ವಿರೋಧವಾಗಿತ್ತು ಅವರು ದೇವರ ಜನರೆಂಬ ದೊಡ್ಡ ಹೆಸರನ್ನು ಪಡೆದಿದ್ದರು ಆದರೆ ದೇವರ ಸಂತೋಷ ಪಡಿಸುವ ಲಕ್ಷಣಗಳು ಅವರಲ್ಲಿ ಇರಲಿಲ್ಲ ಈ ಕಾಲದಲ್ಲಿಯೂ ಸಹ ದೊಡ್ಡ ಹೆಸರುಗಳನ್ನು ಪಡೆದು ಇರುತ್ತಾರೆ ಕ್ರಿಸ್ತನ ಹೆಸರಿನಿಂದ ಕರೆಯಲ್ಪಟ್ಟವರು ಕ್ರಿಸ್ತನ ಗುಣಗಳನ್ನು ಹೊಂದಿಕೊಳ್ಳದಿದ್ದರೆ, ಅವರ ಹೆಸರಿಗೆ ತಕ್ಕ ಹಾಗೆ ಕ್ಲೇಶವನ್ನು ಪಡೆಯುವರು ಕ್ರಿಸ್ತನ ಬರೀ ಹೆಸರುಮಾತ್ರ ಅವರಲ್ಲಿ ಇದ್ದರೆ ಕ್ರಿಸ್ತನು ಅವರಿಗೋಸ್ಕರ ಈಗ ಅಳುವನು ಕ್ಲೇಶ ಬರುವ ಕಾಲದಲ್ಲಿ ಕೋಪವುಳ್ಳವನಾಗಿರುವನು ಗುರುಗಳೆಂದೂ, ಬೋಧಕರೆಂದೂ, ಬ್ರಾಹ್ಮಣರೆಂದೂ, ದೊಡ್ಡವಿಶೇಷವಾದ ಹೆಸರುಗಳನ್ನು ಹೊಂದಿಕೊಳ್ಳುವದರಿಂದ ಹೆಸರಿಗೆ ಸರಿಯಾಗಿ ಅವರ ಗುಣಗಳು ಇಲ್ಲದೆ ಹೋದರೆ ಬಹು ಕ್ಲೇಶವನ್ನು ಹೊಂದಬೇಕಾಗುವದು ಈ ಕಾಲದಲ್ಲಿ ಸಹ ಕ್ರಿಸ್ತನನ್ನು ತಿರಸ್ಕರಿಸದೆ ಇರುವದಕ್ಕೆ ಪ್ರಯತ್ನ ಮಾಡಬೇಕು ಈ ಕಾಲದಲ್ಲಿ ಅತನು ಬಹು ಹೀನವಾಗಿ ಎಣಿಸಲ್ಪಟ್ಟಿದ್ದರೂ, ಅತನು ತನ್ನ ಮಹಿಮೆಯೊಂದಿಗೆ ಬರುವಾಗ, ಹೀಗೆ ಹೀನವಾಗಿ ಎಣಿಸಲ್ಪಡುವನು ಅವನಿಂದ ಯಾರಾದರೂ ಸರಿ, ಕ್ರಿಸ್ತನು ಯಾರೆಂತಲೂ, ಎಂಥವನೆಂದೂ ವಿಚಾರಮಾಡಿ ಅತನು ಹೇಳುವ ಪ್ರಕಾರ ಮಾಡಬೇಕು ಇಲ್ಲದಿದ್ದರೆ ಯೆಹೂದ್ಯರ ಗತಿಯೇ ಎಲ್ಲರಿಗೂ ಪ್ರಾಪ್ತವಾಗುವದು

ನೋಟೀಸು.

ಇವರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—

ಮೈಸೂರಲ್ಲಿ ಇರುವ ಕುಮಾರ ಬಸಪ್ಪನವರ ಮಕ್ಕಳು ತಮ್ಮ ಬಾಬತು ಕುರುಬಾರಹಳ್ಳಿಯಲ್ಲಿ ಇರುವ ತೆಂಗಿನತೋಟವನ್ನು, ಮಳೇ ಅಗ್ರಹಾರದಲ್ಲಿ ಇರುವ ಮನೆಯನ್ನೂ ಸಹ ಅಕ್ರಮವಾಗಿ ಪರಾಧೀನ ಮಾಡುವ ಪ್ರಯತ್ನದಲ್ಲಿ ಇದ್ದಾರೆ. ಇವರ ಆಸ್ತಿಯ ವಿಷಯದಲ್ಲಿ ಅವರ ಮೈನರ್ ಮಗನ ವ್ಯಾಜ್ಯವು ಹೈಕೋರ್ಟಿನಲ್ಲಿ ನಡೆಯುತ್ತ ಇರುತ್ತೆ. ಅವರಿಂದ ಯಾರಾದರೂ ಸದರಿ ನಂಜಪ್ಪನವರಿಂದ ಆಧಾರ ಮುಂತಾದ್ದು ಮಾಡಿಸಿಕೊಂಡು ಮೊಬಲಗು ಕೊಡುವ ಪಕ್ಷದಲ್ಲಿ ಆ ಆಸ್ತಿಯಲ್ಲಿ ಮೈನರನ ಹಿಸ್ಸೆ ಆಸ್ತಿ ಮೊಬಲಗಿಗೆ ಈಡಾಗಲಾರದು ಎಂಬದಾಗಿ ಮೇಲ್ಕಂಡ ಮೈನರ್ ಗಾರ್ಡಿಯನ್ ತಾಯಿ ಕೆಂಪಮ್ಮನವರು ಪ್ರಕಟನ ಪಡಿಸಿ ಇರುತ್ತಾರೆ.

ಮೈಸೂರು
೨೦-೧-೯೩ ೧

ಸ್ವದೇಶ ವೃತ್ತಾಂತಗಳು.

ನಾಳೇದಿವಸ ರಾಜಧಾನಿಯಲ್ಲಿ ಯುವರಾಜರವರ ವರ್ಷವರ್ಧಂತಿಯು ನಡೆಯುವದು ಸಂಸ್ಥಾನದ ಎಲ್ಲಾ ಆಫೀಸುಗಳಿಗೂ ರಜಾ ಕೊಡಲ್ಪಟ್ಟಿದೆ ಈ ಉತ್ಸವಕ್ಕೋಸ್ಕರ ಮುಖ್ಯಾಧಿಕಾರಿಗಳು ರಾಜಧಾನಿಗೆ ಬರುವವರಲ್ಲಿದ್ದಾರೆ

ನಿನ್ನೇದಿವಸ ಶ್ರೀಮದಿಂಡಿಯಾ ಚಕ್ರವರ್ತಿನಿಯವರ ಜನ್ಮದಿವಸವಾದ್ದರಿಂದ ಸರ್ಕಾರದ ಎಲ್ಲಾ ಆಫೀಸುಗಳಿಗೂ ಸ್ಕೂಲ್ ಮತ್ತು ಕಾಲೇಜುಗಳಿಗೂ ರಜಾ ಕೊಟ್ಟಿದ್ದರು ಕೋಟೆಮೇಲಿನ ಪಿರಂಗೀ ಮೈದಾನದಿಂದ ೨೧ ತೋಪುಗಳು ಹಾರಿಸಲ್ಪಟ್ಟವು

ಕಾಳಹಸ್ತಿಯ ರಾಜರು ಸಂಸಾರ ಸಮೇತ ಕಳೆದ ಗುರುವಾರ ಬೆಂಗಳೂರಿಗೆ ನೆಲ್ಲೂರಿನಿಂದ ಬಂದು ಅಲ್ಲಿನ ಮಿಲ್ಲರ್ ರೋಡಿನಲ್ಲಿರುವ ಆಗಾ ಅಬ್ದುಲ್ಲಾರವರ ಬಂಗಲೆಯಲ್ಲಿ ಇಳಿದುಕೊಂಡಿದ್ದಾರೆಂದು ತಿಳಿಯಲಾದವು

ಕಳೆದ ೧೯ನೆ ಶುಕ್ರವಾರ ಅರಮನೆಯಲ್ಲಿ ಶ್ರೀಮನ್ಮಹಾರಾಜರವರ ಪುತ್ರಿಯಾದ ಕೃಷ್ಣಾಜಮ್ಮಣ್ಣಿಯವರ ವರ್ಷವರ್ಧಂತಿಯು ಅತಿ ವಿಜೃಂಭಣೆಯಾಗಿ ಶಾಸ್ತ್ರೋಕ್ತ ಪ್ರಕಾರ ನಡೆಸಲ್ಪಟ್ಟಿತು ಸಾಯಂಕಾಲ ಕೋಟೆಯಲ್ಲಾ ದೀಪಗಳಲ್ಲಾ ಮೆರವಣಿಗೆಯಾಯಿತು

ಚಿಂತಾಮಣೀ ತಾಲ್ಲೋಕಿಗೆ ಸೇರಿದ ಪಟೇಲ ಬೈರಪ್ಪ ಮತ್ತು ಅವರ ಇಬ್ಬರು ಸಹೋದರರು ಈ ಮೂವರೂ ಸೇರಿಕೊಂಡು ಡಿಸ್ಟ್ರಿಕ್ಟಿನಲ್ಲಿ ಧರ್ಮಾರ್ಥವಾದ ಕೆಲಸಗಳಿಗೆ ಉಪಯೋಗಿಸುವಂತೆ ೧೫,೦೦೦ ರೂಪಾಯಿ ಕೊಟ್ಟಿರೆಂಬದಾಗಿ ಕೇಳಿ ಅವರ ಧರ್ಮಬುದ್ಧಿಗಾಗಿ ತುಂಬ ಕೊಂಡಾಡುವೆವು

ಮೊನ್ನೆ ಮಂಗಳವಾರ ಶ್ರೀಮನ್ಮಹಾರಾಜರವರು ಸಿಲಗಿರಿಯನ್ನು ಬಿಟ್ಟು ಸ್ವಲ್ಪ ದೂರದಲ್ಲಿರುವ ಹಿಮವದ್ಗೋಪಾಲ ಪರ್ವತಕ್ಕೆ ಹೋಗಿ ಅಲ್ಲಿ ದೇವರ ದರ್ಶನವನ್ನು ಮಾಡಿಕೊಂಡು ನನ್ನೆ ನಂಜನಗೂಡಿಗೆ ಬಂದು ಅಲ್ಲಿ ಫಲಹಾರ ಮಾಡಿಕೊಂಡು ಸಾಯಂಕಾಲ ರಾಜಧಾನಿಗೆ ದಯಮಾಡಿದರು

ಯಡತೊರೆಯಲ್ಲಿ ಒಂದು ಹೆಂಗಸು, ಇಬ್ಬರು ಪುರುಷರಿಗೆ ವಿಷಪ್ರಾಶನ ಮಾಡಿಸಿ ಕೊಂದದ್ದು, ಒಂದೇರಾತ್ರಿಯಲ್ಲಿ ೬ ಕಡೆಗಳಲ್ಲಿ ಕನ್ನ ಬೋರಿಯಾದದ್ದು—ಈ ವಿಷಯಗಳನ್ನು ತನಿಖೆಮಾಡಿ ತಪ್ಪಿತಸ್ಥರನ್ನು ಅವರ ಮಾಲಿನ ಸಹಿತ ಹಿಡಿದು ದಾರಿಗೆ ತರುವದಕ್ಕಾಗಿ ಪೋಲೀಸ್ ಸೂಪರಿಂಟೆಂಡೆಂಟು ೪—೬ ದಿನಗಳ ಕೆಳಗೆ ಅಲ್ಲಿಗೆ ಹೋಗಿರುವದಾಗಿ ಕೇಳುತ್ತೇವೆ

ಮೈಸೂರು ಫಾರೆಸ್ಟ್ ಇಲಾಖೆಯಲ್ಲಿದ್ದು, ವಿಶ್ರಾಂತಿಯನ್ನು ಪಡೆಯಬೇಕೆಂಬ ಉದ್ದೇಶದಿಂದ ಫರ್ಲೋ ರಜಾ ಮೇಲೆ ಈಗ ವಿಲಾಯತಿಗೆ ಹೋಗಿರುವ ಮೆ|| ರಸ್ಸಲ್ ಸಾಹೇಬರು ಅಲ್ಲಿನ ಇನ್ನರ್ ಟೆಂಪಲ್ ಎಂಬ ಪಾಠಶಾಲೆಯಲ್ಲಿ ಪರೀಕ್ಷೆ ಕೊಟ್ಟಿದ್ದರಿಂದ ಅವರಿಗೆ ವಕೀಲಿ ನಡೆಸಬಹುದಾದ ಅಧಿಕಾರವನ್ನು ಕೊಟ್ಟಿರುತ್ತಾರೆಂದು ತಿಳಿಯಲಾದವು

ಒಂದೆರಡು ವಾರಗಳಲ್ಲೇ ಈಗ ಪೊಲೀಸ್ ಇನ್ಸ್ಪೆಕ್ಟರ್ ಜನರಲ್ ಆಗಿರುವ ಮೆ|| ಪಿ ಪಿ ಮಾಧವರಾಯರನ್ನು ನಾಯಬ್ ದಿವಾನರನ್ನಾಗಿಯೂ ಮೈಸೂರು ಡಿಪ್ಯುಟಿಕಮೀಷನರಾದ ಮೆ|| ಎ ರಂಗಸ್ವಾಮಯ್ಯಂಗಾರ್ಯರನ್ನು ಇನ್ಸ್ಪೆಕ್ಟರ್ ಜನರಲ್ಲರನ್ನಾಗಿಯೂ ಗವರ್ನಮೆಂಟಿನವರು ಹೊಸದಾಗಿ ನಿಯಮಿಸುವರೆಂದು ಭರವಸೆಯಾದ ವದಂತಿಯುಂಟಾಗಿದೆ

ಹೆಗ್ಗಡದೇವನಕೋಟೆ ತಾಲ್ಲೋಕು ಸರಗೂರಿನಲ್ಲಿ ಒಂದು ಆಸ್ಪತ್ರೆಯನ್ನು ಇಡಬೇಕೆಂದು ಏರ್ಪಾಟಾಗಿದೆ ಇದಕ್ಕೆ ಕಟ್ಟಡವನ್ನು ಸರಗೂರಿನ ನಿವಾಸಿಗಳು ಚಾಲೂ ಭಾಗ ಪಡಿಸಿಂದ ಕಟ್ಟಿಸಿ ಸರ್ಕಾರಕ್ಕೆ ಒಪ್ಪಿಸುವಪಕ್ಷಕ್ಕೆ ಆ ಕಟ್ಟಡದಲ್ಲಿ ಆಸ್ಪತ್ರೆಯನ್ನು ಸ್ಥಾಪಿಸುತ್ತೇವೆಂಬದಾಗಿ ಗವರ್ನಮೆಂಟಿನವರು ತೀರ್ಮಾನಿಸಿರುತ್ತಾರೆ

ಬೆಂಗಳೂರು ಹಲಸೂರು ಪೇಟೆಯಲ್ಲಿ ಒಂದು ರಸ್ತೆಗೆ ಮೊಳೆ ಕಲ್ಲುಗಳನ್ನು ಹಾಕಿಸಿ ರಸ್ತೆಯನ್ನು ಸರಿ ಮಾಡಿಸುವದಕ್ಕೂ, ಅಲ್ಲಿನ ಆಸ್ಪತ್ರೆ ರಸ್ತೆಯಲ್ಲಿ ಜನಗಳಿಗೆ ಉಪಯೋಗವಾಗುವಂತೆ ೨ ಲಾಂದ್ರಗಳನ್ನು ತೂಗಿಸುವದಕ್ಕೂ ಬೆಂಗಳೂರು ಮ್ಯುನಿಸಿಪಲ್ ಕಮಿಷನರಾದ ಮು|| ಅಣ್ಣಾಸಾಮಿ ಮೊದಲಿಯಾರ್ಯರು ೩,೦೦೦ ರೂಪಾಯಿಗಳನ್ನು ಸ್ವಂತ ಹಣದಿಂದ ಕೊಡುತ್ತಾರೆಂದು ಅಲ್ಲಿನ ಒಂದು ಪತ್ರಿಕೆಯು ತಿಳಿಸುತ್ತದೆ ಹೀಗಾದರೆ ಅಲ್ಲಿನ ಮ್ಯುನಿಸಿಪಾಲಿಟಿಯವರೇನು ಮಾಡುತ್ತಾರೆ?

ಕೆಲಂಬಟ್ಟರು ಸನ್ಯಾಸಿಗಳ ವೇಷ ಹಾಕಿಕೊಂಡು ಬೆಂಗಳೂರಿನಲ್ಲಿರುವ ಸಾಹುಕಾರ ದಿವಾಕರ ಶೆಟ್ಟಿರವರ ಮನೆಗೆ ಹೋಗಿ ಅವರ ಮನೆಯಲ್ಲಿ ೮—೬ ದಿವಸಗಳ ವರಿವಿಗೂ ಆಸನ ಧ್ಯಾನ ಮಾಡುತ್ತಿದ್ದು ಸಂದರ್ಭ ಸರಿಯಾಗಿ ನೋಡಿಕೊಂಡಿದ್ದು ಸಾಹುಕಾರರ ಕ್ಯಾಷ್ ಪೆಟ್ಟಿಗೆಯನ್ನೇ ಅಪಹರಿಸಿಬಿಟ್ಟರು ಕೊನೆಗೆ ಪತ್ತೆಯಾಗಿ ಅಲ್ಲಿನ ಮ್ಯಾಜಿಸ್ಟ್ರೇಟರಾದ ಅಬ್ದುಲ್ ರಹಮಾನ್ ಸಾಹೇಬರವರು ಕಳ್ಳರಿಗೆ ಮೂರು ಮೂರು ತಿಂಗಳ ಕಠಿಣ ಸಜೆಯನ್ನೂ ಐವತ್ತು ರೂಪಾಯಿಗಳ ಜುಲ್ಮಾನೆಯನ್ನೂ ವಿಧಿಸಿದರೆಂದು ಕೇಳಿ ಸಂತೋಷಿಸುತ್ತೇವೆ

ಶಿವಮೊಗ್ಗ ಡಿಸ್ಟ್ರಿಕ್ಟ್ ಚನ್ನಗಿರಿ ತಾಲ್ಲೋಕಿನಲ್ಲಿ ಹತ್ತು ಹತ್ತು ರೂಪಾಯಿ ಸಂಬಳಗಳುಳ್ಳ ಎರಡು ತೋಟಗಾರಿಕೆ ಮೇಸ್ತ್ರಿಗಳ ಕೆಲಸವು ಹೊನ್ನಾಳಿಯಲ್ಲಿ ಒಂದು ಬಾಲಿಕಾ ಪಾಠಶಾಲೆಯಲ್ಲಿ ೧೦ ರೂಪಾಯಿನ ಉಪಾಧ್ಯಾಯಿನಿಯ ಖಾಲಿ ಇರುವದಾಗಿಯೂ ಈ ಕೆಲಸಗಳನ್ನಪೇಕ್ಷಿಸುವವರು ಇಂಗ್ಲೀಷಿನಲ್ಲಿ ಮೆಟ್ರಿಕ್ಯುಲೇಷನ್ ಆಗಲಿ ಅಥವ ಕನ್ನಡದಲ್ಲಿ ಉಪಾಧ್ಯಾಯ ಪರೀಕ್ಷೆಯಾಗಲಿ ಕೊಟ್ಟಿದ್ದರೆ ಅಂಥವರು ಅರ್ಜಿ ಬರೆದುಕೊಳ್ಳಬಹುದೆಂಬದಾಗಿ ಅಲ್ಲಿನ ಡಿಪ್ಟಿ ಇನ್ಸ್ಪೆಕ್ಟರವರು ಗಜೆಟ್ಟಿನಲ್ಲಿ ಪ್ರಕಟಿಸಿ ಮಾಡಿಸಿರುತ್ತಾರೆ

ತರೀಕೆರೆಯಲ್ಲಿ ಒಬ್ಬ ವೈರಾಗಿಯು, ತಾನು ಹೂತಿದ್ದ ಹಣವನ್ನು ಕಿತ್ತನೆಂತಲೂ, ಆ ಸ್ಥಳದಲ್ಲಿ ತನಗೆ ೪೦೦ ರೂಪಾಯಿಯೂ, ೨ ಚಿನ್ನದ ಉಂಗುರಗಳೂ ಸಿಕ್ಕಿದವೆಂತಲೂ ಅನ್ಯ ೫ ಜನಗಳ ಸಂಗಡ ಹೇಳಿಕೊಂಡನು ಅವರು ಈ ಮಾತನ್ನು ನಂಬಿ ಅವನ ಜೊತೆಯಲ್ಲಿ ಹೋದರು ಅಲ್ಲಿನ ಒಬ್ಬನೊಬ್ಬ ಕಾಫಿಪ್ಲಾಂಟರನು ಕೆಲವು ದಿವಸಗಳ ಕೆಳಗೆ ಸತ್ತು ರುದ್ರಭೂಮಿಯಲ್ಲಿ ಹೂಣಿಸಲ್ಪಟ್ಟಿದ್ದನು ಈ ವೈರಾಗಿಯು ಜನಗಳನ್ನು ಕರೆದುಕೊಂಡು ರುದ್ರಭೂಮಿಗೆ ಹೋಗಿ ಅಲ್ಲಿ ಆ ಕಾಫಿಪ್ಲಾಂಟರನನ್ನು ಹೂತಿದ್ದ ಸ್ಥಳವನ್ನು ಅಗೆದು, ಶವವನ್ನು ಆಚೆಗೆ ಹಾಕಿದರು, ಇದು ಸರ್ಕಾರದವರಿಗೆ ತಿಳಿದುಬಂದದರಿಂದ ಕಡೂರು ಡೆಪ್ಯುಟಿಕಮೀಷನರಾದ ಮೆ|| ಸ್ಮಿತ್ ಸಾಹೇಬರವರು ಆ ವೈರಾಗಿಗೆ ೧ ವರುಷ ಕಠಿಣ ಸಜೆಯನ್ನೂ ೧೦೦ ರೂಪಾಯಿ ಜುಲ್ಮಾನೆಯನ್ನೂ ವಿಧಿಸಿದರಲ್ಲದೆ ಅವನಿಗೆ ಸಹಾಯಕರಾಗಿದ್ದ ೫ ಜನಗಳು ಆರಾರು ತಿಂಗಳ ಕಠಿಣಸಜೆ, ಐವತ್ತೈವತ್ತು ರೂಪಾಯಿ ಜುಲ್ಮಾನೆ ಈ ಪ್ರಕಾರ ಶಿಕ್ಷೆ ಮಾಡಿದರೆಂದು ತಿಳಿಯಲಾದವು

ಸರ್ಕಾರೀ ಹುಕುಂ.

(ಅಮಲ್ದಾರ್ ಲಕ್ಷ್ಮೀನಾರಣಪ್ಪನವರವಿಷಯ)

ಶ್ರೀರಂಗಪಟ್ಟಣದಲ್ಲಿರುವ ಲಕ್ಷ್ಮೀನಾರಾಯಣಸ್ವಾಮಿ ದೇವಸ್ಥಾನದ ಮೊಕದ್ದಮೆಯಲ್ಲಿ ಕೆಲವು ಅಸಂಗತಗಳು ನಡೆದಿರುವದರಿಂದ ಅಮಲ್ದಾರ್ ಲಕ್ಷ್ಮೀನಾರಣಪ್ಪನವರೂ ಮತ್ತು ಮುಜರಾಯಿ ಗುಮಾಸ್ತ ಇವರುಗಳನ್ನು ಕೆಲಸದಿಂದ ಸಸ್ಪೆಂಡ್ ಮಾಡಬೇಕೆಂಬದಾಗಿ ೧೮೯೩ ನೇ ಇಸವಿ ಜನವರಿ ೧೦ ನೇ ತಾರೀಖಿನ ಪ್ರೊಸೀಡಿಂಗ್ಸನ್ನು ಪ್ರಕಟಪಡಿಸಲಾಯಿತು ; ಮತ್ತು

ಡಿಟೋ ನೌಕರರು ಈ ವಿಷಯದಲ್ಲಿ ಕೊಟ್ಟ ಕೈಫಿಯತ್ತನ್ನು ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿಕಮೀಷನರವರು ಕಳೆದ ಮಾರ್ಚಿ ೧೮ ರಲ್ಲಿ ಎ ಎಂಬ ಲೆಟರಿನಲ್ಲಿ ಅವರಿಗೆ ಕಳಿಸಿದ್ದನ್ನು ಓದಲಾಯಿತು

ಈ ವಿಷಯದಲ್ಲಿ ಗೌರ್ನಮೆಂಟಿನವರ

ತೀರ್ಮಾನ

ಗದಿಪ ವೆಂಕಟನಾರಾಯಣಶೆಟ್ಟಿಯು ಶ್ರೀರಂಗಪಟ್ಟಣದಲ್ಲಿ ಲಕ್ಷ್ಮೀನಾರಾಯಣಸ್ವಾಮಿ, ಶ್ರೀರಾಮದೇವರು ಮತ್ತು ಶ್ರೀನಿವಾಸದೇವರು—ಈ ದೇವರಿಗೆ ಪೂಜೆ ಪುನಸ್ಕಾರಗಳು ನಡೆಯುವದಕ್ಕಾಗಿ ಕೆಲವು ದಸ್ತಾವೇಜುಗಳನ್ನೂ, ಹಣಸಹಿತ ಕಾಗದ ಪತ್ರಗಳನ್ನೂ ತಾಲ್ಲೋಕು ಕಛೇರಿಗೆ ಒಪ್ಪಿಸಿದನು ಅವುಗಳೆಲ್ಲವೂ ತಾಲ್ಲೋಕು ಖಜಾನೆಯಲ್ಲಿ ಇಡಲ್ಪಟ್ಟಿದ್ದವು ಅವುಗಳ ಪೈಕಿ ಕೆಲವು ಕಾಗದ ಪತ್ರಗಳನ್ನು ಅಮಲ್ದಾರ್ ಲಕ್ಷ್ಮೀನಾರಣಪ್ಪನವರು ತಿಮ್ಮಶೆಟ್ಟಿ ಎಂಬವನಿಗೆ ವಾಪಸು ಕೊಟ್ಟರು ಈ ವಿಷಯದಲ್ಲಿ ಅಮಲ್ದಾರರು ನಡೆಸಿದ ನಡವಳಿಕೆಯನ್ನೆಲ್ಲಾ ಬಹು ವಿಸ್ತಾರವಾಗಿ ಗೌರ್ನಮೆಂಟಿನವರು ಪರೀಲನೆ ಮಾಡಿರುತ್ತಾರೆ

ಅಮಲ್ದಾರರ ಅಪರಾಧವು ಬಹಳವಾಗಿರುತ್ತೆಂದು ತಿಳಿದುಬಂದಿರುವ ಕಾರಣಸಹಿತವಾದ ನಿದರ್ಶನಗಳ್ಯಾವವೆಂದರೆ:—

೧ ವೆಂಕಟನಾರಾಯಣಶೆಟ್ಟಿ ಎಂಬವನು ಶ್ರೀರಂಗಪಟ್ಟಣದಲ್ಲಿ ಒಂದು ದೇವಾಲಯವನ್ನು ಕಟ್ಟಿಸಿ, ಅದರಲ್ಲಿ ಲಕ್ಷ್ಮೀನಾರಾಯಣಸ್ವಾಮಿ, ಶ್ರೀರಾಮದೇವರು ಮತ್ತು ಶ್ರೀನಿವಾಸದೇವರುಗಳನ್ನು ಪ್ರತಿಷ್ಠೆ ಮಾಡಿಸಿ ಈ ದೇವರುಗಳಿಗೆ ನಿತ್ಯಕಟ್ಟಳೆ ಪಡಿತರ ಆರಾಧನೆಯು ಅವಿಚ್ಛಿನ್ನವಾಗಿ ನಡೆಯುವಂತೆ ಕೆಲವು ಧರ್ಮಗಳನ್ನು ಏರ್ಪಾಡು ಮಾಡಿದನು

೨ ಡಿಟೋ ವೆಂಕಟನಾರಾಯಣಶೆಟ್ಟಿಯು—ತಾನು ಪ್ರತಿಷ್ಠೆ ಮಾಡಿರುವ ದೇವಸ್ಥಾನದಲ್ಲಿ ಪೂಜೆ ಪುನಸ್ಕಾರಗಳು ತನ್ನ ಅನಂತರದಲ್ಲಿ ಬರುವ ವಾರಸುದಾರರು ಈ ಧರ್ಮವನ್ನು ಸಮರ್ಪಕವಾಗಿ ನಡೆಯುವಂತೆ ಉಳಿಸುವರೋ ಇಲ್ಲವೋ ಎಂಬದಾಗಿ ಸಂದೇಹ ಉಂಟಾಗಿರುವದರಿಂದ, ದೇವಸ್ಥಾನವನ್ನೂ ಮತ್ತು ಅದರ ಧನವನ್ನೂ ಸರ್ಕಾರಕ್ಕೆ ಸೇರಿಸಿಕೊಂಡು, ಅದನ್ನು ಸರಿಯಾಗಿ ನಡೆಯುವಂತೆ ಮಾಡಬೇಕೆಂಬದಾಗಿ ಕಳೆದ ೯೦ನೆ ಇಸವಿ ಅಕ್ಟೋಬರ್ ೧೬ ರಲ್ಲಿ ಶ್ರೀರಂಗಪಟ್ಟಣದ ಅಮಲ್ದಾರರಿಗೆ ಅರ್ಜಿ ಬರೆದುಕೊಂಡನು ಅಮಲ್ದಾರರು ಈ ಅರ್ಜಿಯನ್ನು ಹಿಡಿದು ವಿಚಾರಣೆಮಾಡುವಾಗ ವೆಂಕಟನಾರಾಯಣಶೆಟ್ಟಿಯು ತಾನು ಏರ್ಪಡಿಸಿರುವ ಧರ್ಮಕ್ಕೆ ಸಂಬಂಧಪಟ್ಟ ಕಾಗದ ಪತ್ರಗಳನ್ನೆಲ್ಲಾ ಹಾಜರು ಮಾಡುವದಾಗಿ ಒಪ್ಪಿಕೊಂಡನು

೩ ಅಪ್ಪಣೆಪ್ರಕಾರ ವೆಂಕಟನಾರಾಯಣಶೆಟ್ಟಿಯು ಅದೇ ಡಿಸೆಂಬರು ೧೬ ರಲ್ಲಿ ೧೫ ದಸ್ತಾವೇಜುಗಳನ್ನು ಒಂದು ಪೆಟ್ಟಿಗೆಯೊಡನೆ ತಾಲ್ಲೋಕು ಕಛೇರಿಗೆ ಹಾಜರ್ಮಾಡಿದನು ಇವುಗಳನ್ನು ತಾಲ್ಲೋಕು ಖಜಾನೆಯಲ್ಲಿ ಭದ್ರಪಡಿಸಿಕೊಂಡರು ಆ ದಿನವೇ ತಾಲ್ಲೋಕು ಶಿರಸ್ತೇದಾರರು ವೆಂಕಟನಾರಾಯಣಶೆಟ್ಟಿಯ ವಾಜ್ಮೂಲವನ್ನು ತೆಗೆದುಕೊಂಡರು ಅವರಲ್ಲಿ ಆ ದೇವಸ್ಥಾನವನ್ನು ಗೌರ್ನಮೆಂಟಿನವರು ಹ್ಯಾಗೆ ನಡೆಸಿಕೊಂಡು ಬರಬೇಕೋ ಮತ್ತು ತಾನು ಹಾಕಿರುವ ಷರತ್ತು ಪ್ರಕಾರ ಹುಟ್ಟುವಳೀ ಹಣವು ಯಾವ ರೀತಿಯಲ್ಲಿ ವಿನಿಯೋಗ ಮಾಡಲ್ಪಡಬೇಕೋ ಅವುಗಳನ್ನು ಬಹು ಸ್ಪಷ್ಟವಾಗಿ ವಿವರಿಸಿರುತ್ತಾನೆ ಮತ್ತು ಅಲ್ಲಿಂದ ಆಚೆಗೆ ತನ್ನ ವಾರಸುದಾರರಿಗೋಸ್ಕರ ಆದರ ಪ್ರಮಾಣಕ್ಕಾಗಿ ತಾನು ಹೆಚ್ಚಾಗಿ ಇನ್ನೇನಾದರೂ ಭೂಮಿಯನ್ನಾಗಲಿ ಹಣವನ್ನಾಗಲಿ ಕೊಡುವದಾದರೆ ಅದನ್ನು ಇದೇರೀತಿಯಲ್ಲಿ ದೇವಸ್ಥಾನದ ಖರ್ಚಿಗಾಗಿಯೇ ವಿನಿಯೋಗಿಸಬೇಕೆಂಬದಾಗಿಯೂ ಕೈಫಿಯತ್ತು ಕೊಟ್ಟಿರುತ್ತಾನೆ ಅವನ ದತ್ತೂ ಮಗನಾದ ತಿಮ್ಮಶೆಟ್ಟಿಯು ಈ ಕೈಫಿಯತ್ತನ್ನು ಒಪ್ಪಿಕೊಳ್ಳುತ್ತಾನೆ

೪ ಇದಾದನಂತರ ಮೇಲಿನವರ ಆರ್ಡರಿಗೋಸ್ಕರ ಈ ವಿಷಯಗಳನ್ನೆಲ್ಲಾ ಫ್ರೆಂಚರಾಕ್ಸ್ ಸಬ್‌ಡಿವಿಜನ್ ಆಫೀಸರಿಗೆ ರಿಪೋರ್ಟು ಮಾಡಿದರು ಅವರು ತಮ್ಮ ೯೧ನೆ ಮಾರ್ಚಿ ೨೫ನೆ ತಾರೀಖಿನ ಮುಶ್ಕೂರಿನಲ್ಲಿ ವೆಂಕಟನಾರಾಯಣಶೆಟ್ಟಿಯು ಇಷ್ಟಪಡುವರೀತಿಯಲ್ಲಿ ದೇವಸ್ಥಾನ ಮತ್ತು ಧರ್ಮಗಳನ್ನು ಸರ್ಕಾರದವರ ಮೇಲ್ವಿಚಾರಣೆಗೆ ತೆಗೆದುಕೊಳ್ಳಬೇಕೆಂಬದಾಗಿ ಬರೆದಿರುತ್ತಾರೆ

೫ ಆ ಕೂಡಲೇ ಡಿಪ್ಟಿ ಅಮಲ್ದಾರರು ದೇವಸ್ಥಾನವನ್ನು ತಮ್ಮ ಛಾರ್ಜಿಗೆ ತೆಗೆದುಕೊಳ್ಳುವಾಗ, ಆ ದೇವಸ್ಥಾನದಲ್ಲಿ ವೆಂಕಟನಾರಾಯಣಶೆಟ್ಟಿಯು ದೇವಸ್ಥಾನವನ್ನೂ, ಅದಕ್ಕೆ ಸೇರಿದ ಪಾತ್ರೆ ಪದಾರ್ಥಗಳೇ ಮೊದಲಾದ ಸಾಮಾನುಗಳನ್ನೂ ಡಿಪ್ಟಿ ಅಮಲ್ದಾರರವರ ಸುಪರ್ದು ಮಾಡಿದ್ದಲ್ಲದೆ ನಾಲ್ಕು ಪತ್ರಗಳನ್ನೂ ಹಿಂದು ಮನೆಯನ್ನೂ ಅವರ ಛಾರ್ಜಿಗೆ ಒಪ್ಪಿಸಿದನು ಈ ನಾಲ್ಕು ಪತ್ರಗಳಲ್ಲೂ ಬರುವ ಹಣವೆಲ್ಲಾ ದೇವಸ್ಥಾನದ ಸ್ವಯಂಪಟ್ಟಿಗಾಗಿ ಉಪಯೋಗಿಸತಕ್ಕದೆಂದು ಷರಾ ಬರೆದಿತ್ತು ಮತ್ತು ಪಿನ್ನೇ ಸುಬ್ಬಣ್ಣನವರು ಡಿಟೋ ಶೆಟ್ಟಿಗೆ ಕೊಡಬೇಕಾಗಿದ್ದ ೩,೦೦೦ ರೂಪಾಯಿನ ಪತ್ರವೂ ಆ ನಾಲ್ಕರಲ್ಲಿ ಒಂದಾಗಿತ್ತು ರಜಿಸ್ಟ್ರೇಷನ್ ಗುಮಾಸ್ತ ನಂಜಪ್ಪನವರು ವಾಸವಾಗಿದ್ದ ಮನೆಯನ್ನೂ ದೇವಸ್ಥಾನಕ್ಕೆ ಸೇರಿದ ಆಸ್ತಿ ಎಂಬದಾಗಿ ವಿವರಿಸಿದ್ದನು ಆದರೆ ದೇವಸ್ಥಾನವನ್ನೂ ಮತ್ತು ಮೇಲೆ ನಮೂದಾಗಿರುವ ಪದಾರ್ಥಗಳನ್ನೂ ಸ್ವಾಧೀನಕ್ಕೆ ತಗೆದುಕೊಂಡ ಡಿಪ್ಟಿ ಅಮಲ್ದಾರರು—ಆ ಸಾಮಾನುಗಳ ಮತ್ತು ಸ್ವತ್ತುಗಳ ತಪ್ಸೀಲುಳ್ಳ ವೆಂಕಟನಾರಾಯಣಶೆಟ್ಟಿಯ ಕೈಫಿಯತ್ತನ್ನು ತಗೆದುಕೊಂಡರೆಂದು ತಿಳಿಯಬರುತ್ತೆ ಈಗ ಆ ಕೈಫಿಯತ್ತೂ ಮತ್ತು ಸಾಮಾನುಗಳ ಪಟ್ಟಿಯೂ ಕಾಣಿಸುವದಿಲ್ಲವಾದ್ದರಿಂದ ಇದು ನಡೆದ ತಾರೀಖನ್ನು ಗೊತ್ತು ಮಾಡಲು ಅಸಾಧ್ಯವಾಗಿದೆ ಹ್ಯಾಗೂ ಇದು ಸಬ್‌ಡಿವಿಜನ್ ಆಫೀಸರು ಹುಕುಂ ಕೊಟ್ಟಮೇಲೆ, ವೆಂಕಟನಾರಾಯಣಶೆಟ್ಟಿಯು ಮರಣಕ್ಕೆ ಮುಂಚೆ ನಡೆದಿರಬೇಕು ಮೇಲೆ ನಮೂದಾದ ನಾಲ್ಕು ಪತ್ರಗಳನ್ನು ತಾಲ್ಲೋಕು ಖಜಾನೆಯಲ್ಲಿ ಭದ್ರಮಾಡಿದರು ೯೧ನೆ ಇಸವಿ ನವಂಬರು ೬ ರಲ್ಲು ವೆಂಕಟನಾರಾಯಣಶೆಟ್ಟಿಯು ಕಾಲವಾದನು ಅದೇ ನವಂಬರು ೨೩ ರಲ್ಲು ಡಿಟೋ ೧೬ ದಸ್ತಾವೇಜುಗಳಲ್ಲಿ ನಮೂದಾಗುವ ಜಮೀನು ಮತ್ತು ಹಣಗಳು, ಎರಡನೇ ಪ್ಯಾರಾ ಕೊಟ್ಟಿರುವ ಪತ್ರಗಳಲ್ಲಿ ಕಂಡಹಾಗೆ ಮತ್ತು ಮನೆಯು ಇವುಗಳನ್ನೆಲ್ಲಾ ಯಾರೂ ಪಡೆಯಬಾರದೆಂತಲೂ, ದೇವಸ್ಥಾನದ ಪ್ರಯೋಜನಕ್ಕೆ ಸೇರಿದವುಗಳೆಂತಲೂ ತಾಲ್ಲೋಕು ಕಛೇರಿಯಿಂದ ಒಂದು ಹುಕುಂ ಹೊರಟಿತು

೬ ವೆಂಕಟನಾರಾಯಣಶೆಟ್ಟಿಯು ದತ್ತೂ ಮಗನಾದ ತಿಮ್ಮಶೆಟ್ಟಿಯು ೯೨ನೆ ಏಪ್ರಿಲ್ ೨೩ ರಲ್ಲೂ ೩,೦೦೦ ರೂಪಾಯಿನ ಮತ್ತು ೨೦೦೦ ರೂಪಾಯಿನ ಎರಡು ಪತ್ರಗಳನ್ನೂ ಮತ್ತು ಶ್ರೀರಂಗಪಟ್ಟಣದಲ್ಲಿರುವ ಮನೆಯ ಪತ್ರವನ್ನೂ, ತಮ್ಮ ತಂದೆಯು ಮೊದಲನೇ ಆವರ್ತಿ ಸರ್ಕಾರಕ್ಕೆ ಒಪ್ಪಿಸಿದ ದೇವಸ್ಥಾನದ ಪಟ್ಟಿಯಲ್ಲಿ ಸೇರಿಸಲ್ಪಡಿಲ್ಲವಾದ್ದರಿಂದ ಅವುಗಳನ್ನು ಸರ್ಕಾರದವರು ತನಗೆ ವಾಪಸು ಕೊಡಬೇಕೆಂಬದಾಗಿ ಅಮಲ್ದಾರರಿಗೆ ಅರ್ಜಿ ಬರೆದುಕೊಂಡನು ಅದರಮೇಲೆ ಅಮಲ್ದಾರರು ಮಾಡಿದ ಹುಕುಂ ಏನಂದರೆ— "ಈ ಎರಡು ಪತ್ರಗಳೂ ದೇವಸ್ಥಾನದ ಉಪಯೋಗಾರ್ಥವಾಗಿ ಸರ್ಕಾರಕ್ಕೆ ಒಪ್ಪಿಸಿಲ್ಲವಾದ್ದರಿಂದ ತಾಲ್ಲೋಕಿನಿಂದ ಹೊರಡಿಸಲ್ಪಟ್ಟ ಹುಕುಮಿನಲ್ಲಿ ಇವುಗಳನ್ನು ನಮೂದು ಮಾಡಬಾರದಾಗಿತ್ತು ಈ ಪತ್ರಗಳನ್ನು ತಿಮ್ಮಶೆಟ್ಟಿಗೆ ವಾಪಸು ಕೊಡಬೇಕು ಮನೆಯು ಸರ್ಕಾರದವರ ಸ್ವಾಧೀನವಲ್ಲದ್ದು ಆ ನೋಟೀಸನ್ನು ಇದರಿಂದ ರದ್ದುಮಾಡಿರುತ್ತೆ" ಎಂಬುವದೇ

೭ ಈ ಹುಕುಂಪ್ರಕಾರ ಅಮಲ್ದಾರರು ೨ ಪತ್ರಗಳನ್ನು ತಿಮ್ಮಶೆಟ್ಟಿಗೆ ಒಪ್ಪಿಸಿಬಿಟ್ಟರು ಅನಂತರ ಅಮಲ್ದಾರರು—ತಿಮ್ಮಶೆಟ್ಟಿಗೆ ಡಿಟೋ ೧೬ ಪತ್ರಗಳನ್ನು ಕೊಟ್ಟು ಅವನ ಇಷ್ಟಪ್ರಕಾರ ಕೊಡುವ ೧,೨೫೦ ರೂಪಾಯಿಗಳನ್ನು ದೇವಸ್ಥಾನದ ಖರ್ಚಿಗಾಗಿ ಪಡೆದು ಗೌರ್ನಮೆಂಟ್ ಸೇವಿಂಗ್ಸ್ ಬ್ಯಾಂಕಿನಲ್ಲಿ ಇಟ್ಟುಕೊಳ್ಳುವದು ಒಳ್ಳೇದಾಗಿ ತೋರುತ್ತೆ ಎಂಬದಾಗಿ ತಮ್ಮ ಅಭಿಪ್ರಾಯವನ್ನು ಬರೆದು ಸಬ್‌ಡಿವಿಜನ್ ಆಫೀಸರಿಗೆ ರಿಪೋರ್ಟುಮಾಡಿದರು ಈ ರಿಪೋರ್ಟಿನಲ್ಲಿ ಈ ಎರಡು ಪತ್ರಗಳನ್ನು ಅವನಿಗೆ ವಾಪಸು ಮಾಡಿರುವ ಸಂಗತಿಯೇ ನಮೂದು ಮಾಡಿ ಇಲ್ಲ ಆದದರಿಂದ ಈ ಸಂಗತಿಗಳನ್ನೆಲ್ಲಾ ರೆಕಾರ್ಡು ಸಹಿತವಾಗಿ ಗೌರ್ನಮೆಂಟಿನವರು ಪರೀಲನೆ ಮಾಡಿ ಡಿಟೋ ಅಮಲ್ದಾರ್ ಲಕ್ಷ್ಮೀನಾರಣಪ್ಪನವರನ್ನು ಸಸ್ಪೆಂಡು ಮಾಡಿದ ತಾರೀಖು ಲಗಾಯಿತು ಪಿನ್ಷನ್ ಮೇಲೆ ರಿಟೈರ್ ಮಾಡಿರುತ್ತಾರೆ ಅಲ್ಲದೆಯೂ ವೆಂಕಟನಾರಾಯಣಶೆಟ್ಟಿಯಿಂದ ಕೊಡಲ್ಪಟ್ಟ ಎಲ್ಲಾ ಹಣವನ್ನೂ ತಿಮ್ಮಶೆಟ್ಟಿಯಿಂದ ಸರ್ಕಾರದವರು ವಸೂಲ್ ಮಾಡಿಕೊಳ್ಳಬೇಕೆಂತಲೂ ಸಾಲದೆಹೋದರೆ ಹಣವನ್ನು ಅಮಲ್ದಾರ್ ಲಕ್ಷ್ಮೀನಾರಣಪ್ಪನವರಿಂದ ವಸೂಲ್ ಮಾಡಬೇಕೆಂತಲೂ ಹುಕುಂ ಹೊರಡಿಸಿರುತ್ತಾರೆ

ವಿವಿಧ ವರ್ತಮಾನಗಳು.

ಮಹಿಳಾಶಾಲೆಯ ವ್ಯಾಸಂಗದ ತಸ್ತು ರಾಜಧಾನಿಯಲ್ಲಿ ಸ್ಥಾಪಿಸಲ್ಪಟ್ಟಿರುವ ಮಹೇಂದ್ರ ಕಾಲೇಜ್ ಎಂಬ ಮ. ಕಾಲೇಜಿಗೋಸ್ಕರ ಮಹಾರಾಜರವರು ೮೦೦ ರೂಪಾಯಿಗಳನ್ನು ಮಂಜೂರು ಮಾಡುತ್ತಲಿದ್ದಾರೆ.

ಈ ವರುಷದ ಎಫ್. ಎ. ಪರೀಕ್ಷೆಯಲ್ಲಿ ಕಲ್ಕತ್ತೆಯ ಯೂನಿವರ್ಸಿಟಿಯಲ್ಲಿ ೧೧ ಮಂದಿ ವಿದ್ಯಾರ್ಥಿನಿಯರು ಪ್ಯಾಸ್ ಮಾಡಿರುತ್ತಾರೆ. ಸ್ತ್ರೀವಿದ್ಯಾಭ್ಯಾಸದಲ್ಲಿಯೂ ಕೂಡ ಬಂಗಾಳ ದವರೇ ಮುಂಬರಿಗಿರುತ್ತಾರೆ.

ಮದರಾಸ್ ಪಟ್ಟಣದಲ್ಲಿ [illegible] ಒಂದು ಆಸ್ಪತ್ರೆಯ ಕಟ್ಟಡವನ್ನು [illegible] ಗವರ್ನಮೆಂಟಿನವರು ೧೦,೦೦೦ ರೂಪಾಯಿಗಳನ್ನು ಸ್ಯಾಂಕ್ಷನ್ ಮಾಡಿರುತ್ತಾರೆ.

[illegible]

ರುಷ್ಯಾದೇಶದ ಜಾರವರು [illegible] ಎಂಬ ಪ್ರದೇಶದಲ್ಲಿ ರೈಲಿನಲ್ಲಿ ಪ್ರಯಾಣಮಾಡುತ್ತಿದ್ದಾಗ್ಯೆ ಅನೇಕಮಂದಿ ರೈತರು ಅವರನ್ನು ಕಂಡು ಸ್ವತಃ ತಮ್ಮ ಕಷ್ಟಗಳನ್ನು ಅವರಿಗೆ [illegible]

[illegible]

ವಿಲಾಯತೀ ಪಾರ್ಲಿಮೆಂಟು ಮತ್ತು ಹಿಂದೂಸ್ಥಾನದ ವಿಷಯಗಳು.

[illegible]

ಕಾಲೀಯುಕ್ತನಾಮ ೧೮೧೫ ನೇ ವಿಜಯನಾಮ ಸಂವತ್ಸರದ ಜ್ಯೇಷ್ಠ ಶುದ್ಧ ದಶಮಿ ಗುರುವಾರದಿಂದ ಜ್ಯೇಷ್ಠ ಬಹುಳ ಪಾಡ್ಯಮಿ ಬುಧವಾರದ ವರೆಗಿನ ವಾರದ ಪಂಚಾಂಗ.

೧೮೯೩ ನೇ ಇಸವಿ, ಮೆ.

ತಾ.	ವಾರ.	ತಿಥಿ.	ಘಳಿಗೆ.	ನಕ್ಷತ್ರ	ಘಳಿಗೆ.	ವೈಶಾಖ ಮಾಸ ತೇದಿ.
25	ಗುರು	ದ.	55-41	ಪು.	6-25	14
26	ಶು	ಏ	17-3	ಪು.	9-81	15
27	ಶ.	ದ್ವಾ.	19-43	ಪು.	13-26	16
28	ರ.	ತ್ರ.	23-19	ಸ್ವಾ.	18-32	17
29	ಸೋ.	ಚ.	27-18	ವಿ.	24-29	18
30	ಮಂ.	ಅ	32-50	ಸ್ವಾ.	31-0	19
31	ಬು.	ಪಾ	37-58	ಜ್ಯೆ	17-36	20

* ಮುಸಲ್ಮಾನರ ಪರ್ವ.

ಪೇಟೆ ಧಾರಣೆ.

ದಿನಸಿ.	ಮೈಸೂರು. ರೂ. ಆ. ಪೈ.	ಬೆಂಗಳೂರು. ರೂ. ಆ. ಪೈ.
ಕಗ್ಗಿ ಅಕ್ಕಿ ಪಲ್ಲ ೧ಕ್ಕೆ	೧೧-೨-೦	೧೦-೪-೦
ಕೆಂಬೂತಿ ಅಕ್ಕಿ ಅವ್ವಲ್	೧೦-೮-೦	೯-೧೨-೦
ಡಿಟೋ ಅಕ್ಕಿ ದುಯಂ	೧೦-೨-೦	೯-೪-೦
ಬಾಸುಮತಿ ಅಕ್ಕಿ	೧೦-೪-೦	೮-೧೨-೦
ಸಣ್ಣಕ್ಕಿ ಅವ್ವಲ್	೧೨-೮-೦	೧೩-೪-೦
ಡಿಟೋ ಅಕ್ಕಿ ದುಯಂ	೧೨-೦-೦	೧೨-೦-೦
ತೊಗರೀಬೇಳೆ ಪಲ್ಲ ೧ಕ್ಕೆ	೧೧-೮-೦	೧೦-೮-೦
ಡಿಟೋ ದುಯಂ ತರಹ	೧೧-೦-೦	೧೦-೮-೦
ಹ್ಯಾರಾಗಿ ಪಲ್ಲ ೧ಕ್ಕೆ	೪-೦-೦	[illegible]
ಕಾರ್ರಾಗಿ	೩-೧೨-೦	[illegible]
ಹಲಸಂದೆ ಪಲ್ಲ ೧ಕ್ಕೆ	೧೦-೦-೦	೧೦-೧೨-೦
ಬಿಳೀ ಅವರೆ	೧೦-೮-೦	೧೧-೦-೦
ಹೆಸರು	೯-೮-೦	೯-೧೨-೦
ಉದ್ದು	೧೨-೬-೦	೧೦-೧೫-೦
ಕಡಲೆ	೧೦-೦-೦	೧೦-೦-೦
ಎಳ್ಳು	೧೬-೧೨-೦	೧೫-೮-೦
ಹುರಳಿ	೬-೮-೦	೬-೮-೦
ಸಿಳ್ಳೇಕಾಯಿ ಮಣ ೧ಕ್ಕೆ	೧-೮-೦	೦-೧೨-೦
ಮೆಣಸಿನಕಾಯಿ	೩-೮-೦	೪-೦-೦
ದುಯಂ ತರಹ	೩-೦-೦	೨-೧೨-೦
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ	೪-೮-೦	ಮ ೧-೮-೦
ಸಣ್ಣ ಅಚ್ಚು	೪-೪-೦	೩॥ ೧-೫-೦
ಬಳ್ಳೆಣ್ಣೆ ಮಣ ೧ಕ್ಕೆ	೫-೦-೦	೫-೦-೦
ಹರಳೆಣ್ಣೆ	೪-೪-೦	೩-೧೨-೦
ಕೊಬ್ಬರಿ ಪಲ್ಲ ೧ಕ್ಕೆ	೮-೮-೦	೭-೧೨-೦
ಉಪ್ಪು	೯-೮-೦	೯-೮-೦
ಹುಣಸೇಹಣ್ಣು ಮಣ ೧ಕ್ಕೆ	೧-೧೦-೦	೧-೧೨-೦
ಹಳೇ ಹುಣಸೇಹಣ್ಣು	೧-೪-೦	೧-೮-೦
ತುಪ್ಪ	೧೩-೮-೦	೧೨-೮-೦
ಸೀಮೆ ಎಣ್ಣೆ ಟಿನ್ನು ೧ಕ್ಕೆ	೪-೨-೩	೪-೦-೦
ತೆಂಗಿನಕಾಯಿ ೧೦೦ಕ್ಕೆ	೬-೦-೦	೪-೮-೦
ಚಿನ್ನ (ತೊಲ)		
ಕೆಂಪು	೧೬-೬-೦	೧೬-೭-೦
ಪಸಿಮೆ	೧೩-೦-೦	೧೬-೯-೦
ಗಟ್ಟಿ	೨೬-೮-೦	೨೩-೬-೦

Mysore.—Printed and published for the Propiietor at the Wesleyan Mission Press. 25/5/93.

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು | ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೬ | ಮೈಸೂರು ಸನ್ ೧೮೯೪ ನೇ ಇಸವಿ ಜೂನ್ ತಾರೀಖು ೧ ನೇ ಗುರುವಾರ. | ಸಂಚಿಕೆ ೫೦

ನೋಟೀಸ್.

	ಕ್ರಯ			ಹಾಸಲು ಸಹಿತವಾಗಿ		
Campbell's ಕನ್ನಡ ವ್ಯಾಕರಣ ಸಾರ	೦	೨	೦	೦	೨	೬
Object Lessons ವಸ್ತು ಪಾಠಗಳು	೦	೧	೦	೦	೧	೬
Picture do ಚಿತ್ರಗಳು ಸಹಿತವಾಗಿ	೦	೨	೦	೦	೨	೬
ಈ ಮೂರು ಪುಸ್ತಕಗಳು ಪ್ರೈಮರಿ ವರ್ಗಗಳಲ್ಲಿ ಓದತಕ್ಕ ಪುಸ್ತಕಗಳು.						
ಸ್ತ್ರೀಯರು ಓದತಕ್ಕ ಪುಸ್ತಕ	೦	೫	೦	೦	೫	೬
ಗಣಿತ ವಿದ್ಯವು	೦	೪	೦	೦	೪	೬
ಗಣಿತ ಮಗ್ಗಿಗಳು	೦	೧	೦	೦	೧	೬
ಸಂಸ್ಕೃತ ಕರ್ಣಾಟಕ ಭಾಷಾಮಂಜರಿ	೦	೨	೦	೦	೨	೬
ಭೂಗೋಳ ಶಾಸ್ತ್ರ ಪ್ರಶ್ನೋತ್ತರ	೦	೨	೦	೦	೨	೬
ಇಂಗ್ಲಿಷೂ ಕನ್ನಡವೂ ಶಬ್ದಾವಳಿ ೧ನೇ ೨ನೇ ಭಾಗಗಳಿಗೆ	೦	೧	೦	೦	೧	೬
ಕಾವ್ಯಮಾಲೆ (Minor Poetical Anthology)	೦	೮	೦	೦	೮	೬
ಬಾಲವ್ಯಾಕರಣ	೦	೫	೦	೦	೫	೬
ಹಳಗನ್ನಡ ವ್ಯಾಕರಣ ಸೂತ್ರಗಳು	೦	೬	೦	೦	೬	೬
ಇಂಗ್ಲಿಷೂ ಕನ್ನಡವೂ ಸಂಭಾಷಣ ವಾಕ್ಯಗಳು	೦	೧೦	೦	೦	೧೦	೬
ಶಬ್ದಮಣಿ ದರ್ಪಣ	೧	೦	೦	೧	೪	೬
Kan Eng Pocket Dictionary	೧	೪	೦	೧	೫	೭
Eng Kan School Dictionary	೨	೧೦	೦	೨	೧೨	೬
ಬಿಲ್ಲೀ ಹಾಮಿ	೦	೪	೪	೦	೪	೬
ಆತ್ಮಿಕ ದಿವ್ಯ ಯುದ್ಧ (Bunyan)	೦	೧೨	೦	೦	೧೩	೬
ಕ್ರೈಸ್ತ ಪದ್ಧತಿ ೧ ನೇ ಭಾಗ ೨ ಅಣ ೩ ನೇ ಭಾಗ	೦	೧	೬	೦	೨	೦
ಭಕ್ತಿಸಾರ	೦	೧	೦	೦	೧	೬
ಸತ್ಯ ವಾಗ್ದಾನಿ	೦	೧	೦	೦	೧	೬
ಕಾವ್ಯಪ್ರಬಂಧ	೦	೩	೦	೦	೩	೬

A new Edition of the Geography suited for the Lower Secondary Examination is now ready.—Edited by Rev. H. Galliford. Price 6 As.

ಮೇಲೆ ನಮೂದಿಸಿರುವ ಪುಸ್ತಕಗಳನ್ನು ಬೆಂಗಳೂರು ದಂಡಿನ ಮೋಗಾಟಿನ ಹತ್ತಿರವಿರುವ ಪುಸ್ತಕ ಶಾಲೆಯಲ್ಲಿ ಪಡೆಯ ಬಹುದು.

ನೋಟಿಸ್.

ಪುಸ್ತಕಗಳು	ಕ್ರಯ.
ಪ್ರಾರ್ಥನಾವ್ಯವಹಾರಿಕೆ	1—8—0
ಕನ್ನಡ ಇಂಗ್ಲೀಷು ನಿಘಂಟು 1 ನೇ ದೊಡ್ಡ ತರಹ	3—0—0
„ „ 2 ನೇ ತರಹ	2—8—0
ಬಾಲಕರು ಓದುವ ಎರಡನೆ ಜ್ಞಾನೋಪದೇಶದ ಪ್ರಶ್ನೋತ್ತರಗಳು	0—1—0
ಸಭೆಯ ನಿಗಮಗಳನ್ನು ಕುರಿತದ್ದು	0—0—6
ಕಥಾ ಸಂಗ್ರಹ 1 ನೇ ಭಾಗದಿಂದ 3 ವರೆಗೆ	1—0—0
ಕಥಾ ಸಂಗ್ರಹ 1 ರಿಂದ 6 ನೇ ಭಾಗ ಹೊಸ ಛಾಪೆ	1—0—0
„ „ ದೊಡ್ಡ ತರಹ	1—8—0
ಬೋಧಕಸಕ್ತಿ ಬೋಧನಿ	0—4—0
ಸತ್ಯವೇದವನ್ನು ಕುರಿತು 2 ನೇ ಭಾಗ	0—4—0
ಪ್ರಸಂಗಿಯ ದರ್ಪಣ	0—6—0
ಇಂಗ್ಲೀಷುಭಾಷೆಯಲ್ಲಿಯೂ, ಕನ್ನಡ ಭಾಷೆಯಲ್ಲಿಯೂ, ಶಬ್ದಗಳ ವಿಭಾಗಗಳನ್ನು ವಿವರಿಸುವ ನಿಘಂಟು	0—2—0
ಕನ್ನಡ ವ್ಯಾಕರಣ (ಇಂಗ್ಲೀಷಿನಲ್ಲಿ)	2—0—0
ಹಿಂದುಸ್ತಾನಿ ವ್ಯಾಕರಣ	1—0—0
ಬಾಲರ ಸೋಪಾನವು	0—0—6
ಧನ ಕರುಣೆಗಳ ಅಂತರಂಗವಿಚಾರ	0-12—0
ಕ್ರಿಸ್ತರ ಬೋಧನೆಗಳ ಸಾರಾಂಶವು	0-12—0

ಮೇಲೆ ನಮೂದಿಸಿರುವ ಪುಸ್ತಕಗಳನ್ನು ಅಪೇಕ್ಷಿಸುವವರು ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್ಸಿಗೆ ಬರೆದು ತರಿಸಿಕೊಳ್ಳಬಹುದು ಅಂಚೇ ಹಾಸಲು ಬೇರೆ ಕೊಡಬೇಕು.

ವೆಸ್ಲಿಯನ್ ಮಿಷನ್ ಪ್ರೆಸ್,

ಮೈಸೂರು.

ವಿಶೇಷ ! ಓದಿನೋಡಿರಿ !! ಓದಿನೋಡಿರಿ !!!

ಅ ನು ಶಾ ಸ ನೀ ಕ ಪ ರ್ವ ವು ಪೂ ರ್ತ್ಯ ಸಿ ತು.

ಶ್ರೀಕೃಷ್ಣರಾಜ ವಾಣೀವಿಲಾಸವೆಂಬ ಮಹಾಭಾರತವು ನಮ್ಮ ಶ್ರೀಚಾಮುಂಡೇಶ್ವರಿ ಪ್ರೆಸ್ಸಿನಲ್ಲಿ ಪ್ರಿಂಟಾಗತಕ್ಕದ್ದು ಎಲ್ಲರಿಗೂ ವಿಶದವಾಗಿದ್ದೆಯಷ್ಟೆ. ಈಗ ಅನುಶಾಸನೀಕಪರ್ವವು ಚಾಮುಂಡೇಶ್ವರಿ ತಸ್ವೀರಿನಿಂದಲೂ ಮತ್ತಿಗೆ ಯೋಗ್ಯವಾದ ಕಿತ್ತಾನಾರಿನ 'ಫುಲ್‌ಬೈಂಡಿ'ನಿಂದ ತಯಾರಾಗಿರುತ್ತೆ ಸಭಾಪರ್ವ ವಿರಾಟಪರ್ವದ ಬುಕ್ಕುಗಳು ಮುಗಿದುಹೋದುದರಿಂದ ಪುನಹಾ ಎರಡನೆ ಛಾಪೆಯು ಪ್ರಿಂಟಾಗಿದೆ. ಈ ಕೆಳಗೆ ಕಂಡ ಪುಸ್ತಕಗಳು ನಮ್ಮಲ್ಲಿ ಸ್ವಲ್ಪವೇ ಇರುವದ್ದರಿಂದ ಇಚ್ಛೆಯುಳ್ಳವರು ತರಿಸಿಕೊಳ್ಳಬಹುದು. ಅನುಶಾಸನೀಕ ಪರ್ವ ಕಿತ್ತಾನಾರಿನ ಬೈಂಡ್ ೩—೧೨—೦ ಲೋವರ್ ಸೆಕೆಂಡರಿ ಪರೀಕ್ಷೆಯ ನೋಟ್ಸು ಕ್ರಯ ೮ ಅಣೆ

ಆದಿಪರ್ವ	..	ಕ್ರಯ	೩	೦	೦
ಸಭಾಪರ್ವ	..	„	೧	೪	೦
ವಿರಾಟಪರ್ವ	..	„	೧	೦	೦
ಭೀಷ್ಮಪರ್ವ	..	„	೨	೦	೦
ದ್ರೋಣಪರ್ವ	..	„	೨	೮	೦
ಶಲ್ಯಪರ್ವ	..	„	೧	೨	೦
ಸೌಪ್ತಿಕಪರ್ವ	..	„	೦	೬	೦
ಸ್ತ್ರೀಪರ್ವ	..	„	೦	೬	೦
ಶಾಂತಿಪರ್ವ ರಾಜಧರ್ಮ	..	„	೨	೬	೦
„ ಆಪದ್ಧರ್ಮ	..	„	೦	೮	೦
„ ಮೋಕ್ಷಧರ್ಮ	..	„	೨	೬	೦

ಭಗವದ್ಗೀತೆ ೮, ಯಯಾತಿರಾಯನಚರಿತ್ರೆ ೪ ಆ.

ಎಂ. ರಂಗಪ್ಪ ಅಂಡ್‌ಸನ್,

ಬಾಲೆಬುಗನೋಡ್,

ಬೆಂಗಳೂರು

ಸನ್ ೧೮೮೯ ರಲ್ಲಿ ಸ್ಥಾಪಿಸಲ್ಪಟ್ಟದ್ದು.

ಕೆನರಾ ಅಂಡ್ ಮೈಸೂರ ಟ್ರೇಡಿಂಗ್ ಏಜನ್ಸೀ ಆಫೀಸ್, ಮುಂಬಯಿ.

ಇವರು ತಯಾರಿಸಿರುವಂಥ—

ಹೈಮಧಾತ್ರೀತೈಲ.

ಕಳೆದ ಜನವರಿ ತಿಂಗಳೊಂದರಲ್ಲಿ ೪,೧೦೦ ಬಾಟ್ಲಿಗಳು ಖರ್ಚಾದವು. ಈ ತೈಲದ ಮಹತ್ವವನ್ನು ಕುರಿತು, ನಾವೀಗ ಹೆಚ್ಚಿಗೆ ವರ್ಣಿಸಲಾರೆವು—ಯಾಕಂದರೆ, ಯಾರು ಈ ತೈಲವನ್ನು ಉಪಯೋಗಿಸುತ್ತಾರೋ ಅವರಿಗೆ ಒಂದೆರಡು ದಿವಸಗಳಲ್ಲಿಯೇ ಇದರ ಅಪ್ರತಿಮವಾದ ಗುಣವು ಸಹಜವಾಗಿ ಅನುಭವಕ್ಕೆ ಬರುವದು. ಆದಾಗ್ಯೂ ಇದರ ಮುಖ್ಯವಾದ ಉಪಯೋಗವನ್ನು ತಿಳಿಸುವದು ನಮ್ಮ ಕರ್ತವ್ಯವಾಗಿರುತ್ತದೆ.

ಈ ನಮ್ಮ "ಹೈಮಧಾತ್ರೀ ತೈಲವನ್ನು" ಪ್ರತಿದಿನ ತಲೆಗೆ ಹಾಕಿಕೊಂಡರೆ ಮಿದುಳಿನಲ್ಲಿರುವ ಉಷ್ಣತೆಯನ್ನು ಪರಿಹರಿಸುವದಲ್ಲದೇ, ಕಣ್ಣಿಗೂ, ಮಿದುಳಿಗೂ ತಂಪುಕರಿಸಿ, ಚಿತ್ತಕ್ಕೆ ಶಾಂತತೆಯನ್ನುಂಟುಮಾಡುವದು. ಮತ್ತು ಕಣ್ಣುಗಳಿಗುಂಟಾಗುವ ಸಾಮಾನ್ಯವಾದ ವಿಕಾರಗಳನ್ನೆಲ್ಲ ಪರಿಹರಿಸುವದು. ದೃಷ್ಟಿಗೆ ತೀವ್ರತೆಯುಂಟಾಗುವದು.

ಹೆಚ್ಚಾಗಿ ಓದತಕ್ಕವರಿಗೂ, ಒಂದೇ ಸಮನಾಗಿ ಕಣ್ಣಿಟ್ಟು ಕೆಲಸ ಮಾಡತಕ್ಕ ಕಸಬುಗಾರರಿಗೂ, ಕಣ್ಣುಗಳಲ್ಲಿ ನೀರು ಸುರಿಯುವವರಿಗೂ, ಉರಿಗಣ್ಣಿನವರಿಗೂ, ಚಿತ್ತವ್ಯಗ್ರವಾದವರಿಗೂ, ಅತ್ಯಂತ ಗುಣಕಾರಿಯಾಗಿರುವದು. ಈ ತೈಲದಲ್ಲಿರುವ ಇನ್ನೊಂದು ಅಪ್ರತಿಮವಾದ ಶಕ್ತಿಯೇನೆಂದರೆ—ಕೂದಲುಗಳನ್ನು ನಯವಾಗಿಯೂ, ಹೊಳೆಯುವಂತೆಯೂ, ಮಾಡುವದಲ್ಲದೇ ಬೆಳವಣಿಗೆಯನ್ನು ಹೆಚ್ಚಿಸುವದು. ಕೂದಲುಗಳ ಬೇರುಗಳನ್ನು ಭದ್ರಮಾಡಿ, ಅವು ಉದುರಿಹೋಗದಂತೆ ಮಾಡುವದು.

ಪ್ರತಿಯೊಂದು ಬಾಟ್ಲಿಯೊಳಗೆ ೧೬ ತೊಲೆ ತೈಲವಿರುವದರಿಂದ ಒಬ್ಬನಿಗೆ ೨ ತಿಂಗಳು ಹಚ್ಚಿಕೊಳ್ಳಲಿಕ್ಕೆ ಸಾಕಾಗುವದು. ಬಡವರ್ಗದವರು ಸಹ ಕೊಂಡುಕೊಳ್ಳಲಿಕ್ಕನುಕೂಲವಾಗಿರಬೇಕೆಂಬದಕ್ಕಾಗಿ ಪ್ರತಿಯೊಂದು ಬಾಟ್ಲಿಗೆ ೧೦ ಅಣೆ ಕ್ರಯವಿಟ್ಟಿರುವೆವು. ೧೨ ಬಾಟ್ಲಿಗಳುಳ್ಳ ೧ ಪೆಟ್ಟಿಗೆಗೆ ೬॥ ರೂಪಾಯಿ. ಪ್ರತಿಯೊಬ್ಬ ಕುಟುಂಬಿಗನೂ, ಈ ತೈಲವನ್ನು ಉಪಯೋಗಿಸುವದು ಅವಶ್ಯವಾಗಿರುತ್ತದೆ. ಮಕ್ಕಳುಮರಿಗಳಿಗೆ ಸಹ ಈ ತೈಲವು ಸುಖಾವಹವಾಗಿರುತ್ತದೆ.

ಈ ತೈಲ ಮತ್ತು ಈ ಕೆಳಗೆ ಬರೆಯುವಂಥ ವಿಷಯಗಳು, ಡ್ರೆಸ್ಸು, ಮುತ್ತು, ರತ್ನ, ಬಂಗಾರ, ಬೆಳ್ಳಿ ಮುಂತಾದ ಸಾಮಾನುಗಳನ್ನು ಪಡೆಯಬಿಚ್ಛಿಸುವವರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬೇಕು.

ಮ್ಯಾನೇಜರ್, ಕೆನರಾ ಅಂಡ ಮೈಸೂರು ಟ್ರೇಡಿಂಗ ಏಜನ್ಸಿ ಆಫೀಸ್, ಮಾರ್ಕೆಟ್ ಪೋಸ್ಟ್. ಮುಂಬಾಯಿ.

ಸೂ— ಈ ತೈಲವನ್ನು ನಮ್ಮ ವಿನಹ ಇನ್ಯಾರೂ ಮಾಡಲಾರರು. ನಮ್ಮ ಹೆಸರಿನ ಗುರ್ತನ್ನು ನೋಡಿ ತೆಗೆದುಕೊಳ್ಳಬೇಕು. ಬೇರೇತರದ ಎಣ್ಣೆಗಳನ್ನು ಈ ಹೆಸರನ್ನಿಟ್ಟು ಮಾರುತಿದ್ದರೆ ಜಾಗ್ರತೆ ಪಡಿರಿ!

ವಿಷಯಗಳು.	.	ಡ್ರೆಸ್ಸುಗಳು.	ರೂ ಆ.
ನಯನಾಮೃತಭಸ್ಮ ಬಾಟ್ಲಿ ೧ ಕ್ಕೆ	೧—೬	ಮಲಬಾರಿನ ಮದ್ದು	೨—೮
ನಯನಾಮೃತ ಕಾಡಿಗೆ	೧—೬	ಕಾಲೇಸರ್ಜಿನ ಲಾಂಗಕೋಟ್	೫—೦
ಕರ್ಣಸ್ರಾವನಾಶಕ ಅಪ್ರತಿಮತೈಲ	೧—೦	ಡಿಟೊ ಅಚಕನ	೪—೮
ಮುಖಮಾತಕರಂದತೈಲ	೧—೦	ಡಿಟೊ ಷಾರ್ಟ್‌ಕೋಟ್ (ಇಂಗ್ಲಿಷಮಾದರಿ)	೪—೬
ಪ್ರಾಣಶಕ್ತಿಪ್ರದ	೨—೧೨	ಬಿಸ್ಸಿನ ಕಷ್ಮೀರಕೋಟ್	೨—೮
ವಿವಿಧಪ್ರಣವರಕ್ಷ್ಮೃಕೆಯು	೧—೦	ಡಿಟೊ. ಅಚಕನ	೨—೪
ಬಾಲಸಂಜೀವಿನಿಗುಟಿಕೆ	೩—೮	ಫ್ಲಾನಲ್ ಶರ್ಟ್	೧—೧೨
ಅಜೀರ್ಣಾಮೃತಸ್ನಿ	೦—೯	ಡಿಟೊ. ಬನಿಯನ್	೧—೪
ಸುಗಂಧಶಾರಕರಂತಗಾಣವು	೦—೪	ಟಿಳ (ಇಂಗ್ಲಿಷಮಾದರಿ) ಷರ್ಟ	೦—೧೨
ಕಸ್ತೂರಿಯ ಮಾತ್ರೆ	೦—೨		

ತನುಕರಣದ ಚಿಂತ್ರಾಂತ ಲಿಯು ಕನ್ನಡಕಗಳ ಕ್ರಯ ರೂ. ೧೦—೩॥—೬—೩॥ ಉತ್ತಮತರದ "ಪುಸ್ತಕ" ಎಂಬ ಹೆಸರಿನ ಶಿಗಡಿಯಾರವು (೧ ವರುಷದ ಜವಾಬ್ದಾರಿಯುಳ್ಳದ್ದು) ಕ್ರಯ ರೂ ೬

ವೃತ್ತಾಂತ ಪತ್ರಿಕೆ.

ಚ ಂ ದಾ ನಿ ರ್ಣ ಯ .

	ರೂ ಆ ಪೈ.
ಸ್ಥಳದವರಿಗೆ ವರ್ಷ ೧ಕ್ಕೆ	೧—೦—೦
ಪರಸ್ಥಳದವರಿಗೆ ವರ್ಷ ೧ಕ್ಕೆ	೧—೧೨—೦
ಬಿಡಿ ಪತ್ರಿಕೆ ೧ಕ್ಕೆ	೦—೦—೩

ಈ ಪತ್ರಿಕೆಯು ಮೈಸೂರು ರಾಜಧಾನಿಯಲ್ಲಿ ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ, ಪ್ರಕಟಿಸಲ್ಪಡುವದು. ಬಡವರು ಮೊದಲುಗೊಂಡು ಸಮಸ್ತರಿಗೂ ಗುಲಭಸಾಧ್ಯವಾಗುವಂತೆ ಈ ಪತ್ರಿಕೆಗೆ ಅಷ್ಟು ಅಲ್ಪ ಮೌಲ್ಯವನ್ನು ನಿರ್ಣಯಿಸಿದ್ದೇವೆ ಈ ಪತ್ರಿಕೆಯನ್ನು ಅಪೇಕ್ಷಿಸುವವರು ಚಂದಾಹಣವನ್ನು ಯಾವಾಗ್ಯೂ ಮುಂಗಡವಾಗಿ ಕೊಡಬೇಕು.

ಎಡಿಟರ್,

ವೃತ್ತಾಂತ ಪತ್ರಿಕೆ.

ಜಗದ್ಗುರುವಿನ ಚರಿತ್ರ ಸಂಗ್ರಹ.

THE LIFE
OF
The Lord Jesus Christ.

Selected incidents from the Gospels,

FREELY PARAPHRASED.

ನೂತನವಾಗಿ ರಚಿಸಲ್ಪಟ್ಟ ೬೬ ಪುಟಗಳುಳ್ಳ ಈ ಪುಸ್ತಕವನ್ನು ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್ಸಿಗೆ ಬರೆದು ತರಿಸಿಕೊಳ್ಳಬಹುದು.

ಕ್ರಯ (ಟಪ್ಪಾಲ್ ಹಾಸಲ್ ಬಿಟ್ಟು)

೧೦೦ ಪ್ರತಿಗಳಿಗೆ	೫—೦—೦
ಬಿಡಿ ಪ್ರತಿಗೆ	೦—೦—೬

ಸುಮಾರು ೨—೩ ಪ್ರತಿಗಳನ್ನು ಅರ್ಧ ಅಣೆ ಹಾಸಲಿನಿಂದ ಕಳುಹಿಸಬಹುದು.

ನೋಟಿಸ್.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—

ಮೈಸೂರಲ್ಲಿ ಇರುವ ಕುಮಾರದಾರ(?) ಬನಪ್ಪನವರ ಮಕ್ಕಳು ತಮ್ಮ ಬಾಬತ್ತು ಕುಂಬಾರದೊಡ್ಡಿಯಲ್ಲಿ ಇರುವ ತೆಂಗಿನತೋಟವನ್ನು, ಹಳೇ ಅಗ್ರಹಾರದಲ್ಲಿ ಇರುವ ಮನೆಯನ್ನು ಸಹ ಆಕ್ರಮವಾಗಿ ಪರಾಧೀನ ಮಾಡುವ ಪ್ರಯತ್ನದಲ್ಲಿ ಇದ್ದಾರೆ. ಇವರ ಆಸ್ತಿಯ ವಿಷಯದಲ್ಲಿ ಅವರ ಮೈನರ್ ಮಗನ ವ್ಯಾಜ್ಯವು ಚೀಫ್‌ಕೋರ್ಟಿನಲ್ಲಿ ದಾಖಲಾಗುತ್ತೆ. ಆದದರಿಂದ ಯಾರಾದರೂ ಸದರಿ ನಂಜಪ್ಪನವರಿಂದ ಆಧಾರ ಮುಂತಾದ್ದು ಮಾಡಿಸಿಕೊಂಡು ಕೊಡಬೇಕಾದ(?) ಪಕ್ಷದಲ್ಲಿ ಆ ಆಸ್ತಿಯಲ್ಲಿ ಮೈನರಿನ ಹಿಸ್ಸೆ ಆಸ್ತಿ ಮೊಬಲಗಿಗೆ ಹೊಣೆಯಾಗಲಾರದು ಎಂಬದಾಗಿ ಹೇಳ್ವಂಥ ಮೈನರ್ ಗಾರ್ಡಿಯನ್ ಹಾಮಿ ಕಂಪನ್ಯನವರು ಪ್ರಕಟನೆ ಪಡಿಸಿ ಇರುತ್ತಾರೆ.

ಮೈಸೂರು. } ೨

೨೦-೫-೯೩. }

ವೃತ್ತಾಂತ ಪತ್ರಿಕೆ.

೧೮೯೩ನೇ ಇಸವಿ ಜೂನ್ ತಾ|| ೧ ನೇ ಗುರುವಾರ.

ಚಿಕಾಗೋ ಮತ್ತು ಅದರ ಸರ್ವವಸ್ತು ಪ್ರದರ್ಶನಶಾಲೆ.

ಉತ್ತರ ಅಮೇರಿಕವು ಮನೋಹರವಾದ ಸರೋವರಗಳಿಗೂ, ದಕ್ಷಿಣ ಅಮೇರಿಕವು ಪ್ರಪಂಚದಲ್ಲೆಲ್ಲಾ ಅತ್ಯಂತ ವೇಗವಾಗಿಯೂ, ವಿಸ್ತಾರವಾಗಿಯೂ ಪ್ರವಹಿಸುವ ನದಿಗಳಿಗೂ ಪ್ರಖ್ಯಾತವಾಗಿರುತ್ತವೆಯಷ್ಟೆ. ಉತ್ತರ ಅಮೇರಿಕದಲ್ಲಿನ ಅನೇಕ ಸರೋವರಗಳ ಪೈಕಿ ಮಿಚಿಗನ್ ಎಂಬ ಸರೋವರದ ಅಂಚಿನಲ್ಲಿ ಪ್ರಖ್ಯಾತವಾದ ಚಿಕಾಗೋ ಪಟ್ಟಣವಿರುತ್ತದೆ. ಇದು ೫೦ ವರುಷಗಳ ಕಾಲದಲ್ಲಿಯೇ ಬಹು ಹೆಸರುವಾಸಿಗೆ ಬಂದಿರುತ್ತದೆ. ಕಳೆದ ೧೮೩೩ನೇ ಇಸವಿಯಲ್ಲಿ ಆ ಪಟ್ಟಣದಲ್ಲಿ ೩೫೦(?) ಮಂದಿ ಮಾತ್ರ ಪ್ರಜೆಗಳಿದ್ದವರು ಈಗ ೧೨ ಲಕ್ಷವಾಗಿರಬೇಕಾದರೆ ಆ ಪಟ್ಟಣವು ಎಷ್ಟು ಜಾಗ್ರತೆಯಾಗಿ ಅಭಿವೃದ್ಧಿಯನ್ನೈದಿರಬೇಕೋ, ಅವರ ವ್ಯಾಪಾರವು ಎಂಥಾದ್ದೋ ವಾಚಕರೇ ಊಹಿಸಿಕೊಳ್ಳಬಹುದಾಗಿದೆ. ೧೨ ಲಕ್ಷವೆಂದರೆ ಬೊಂಬಾಯಿ ಪಟ್ಟಣದಲ್ಲಿರುವ ಜನರಿಗಿಂತಲೂ ಒಂದೂವರೆಯಷ್ಟಾಯಿತು. ಈ ಜನಗಳೆಲ್ಲರೂ ಒಂದೇ ಜಾತಿಯವರಾಗಿಲ್ಲವೆಂದು ಹೇಳಲೇ ಬೇಕಿಲ್ಲ. ನಾನಾ ದೇಶಗಳಿಂದಲೂ, ಸಕಲ ಜಾತಿಯ ಜನಗಳೂ ಈಗ ಅಲ್ಲಿ ಹೋಗಿ ನೆಲಸಿರುತ್ತಾರೆ. ಮುಖ್ಯವಾಗಿ ಆ ಪಟ್ಟಣದಲ್ಲಿ ನಡೆಯುವ ವ್ಯಾಪಾರವೇ ಅದಕ್ಕೆ ಇಂಥಾ ಉತ್ಕೃಷ್ಟಸ್ಥಿತಿಯನ್ನು ತಂದಿತು. ಪ್ರತಿ ದಿನವೂ ಆ ಪಟ್ಟಣದಲ್ಲಿ ಲಕ್ಷಾಂತರ ಎತ್ತು, ಹಸು, ಕುರಿ, ಆಡು, ಹಂದಿ ಮೊದಲಾದ ಪ್ರಾಣಿಗಳು ಕೊಲ್ಲಲ್ಪಡುತ್ತವೆ. ಇವುಗಳ ಮಾಂಸವನ್ನು ಅಮೇರಿಕದ ನಾನಾ ಪಟ್ಟಣಗಳಿಗೂ, ಯೂರೋಪ್ ಖಂಡದ ಮುಖ್ಯಸ್ಥಳಗಳಿಗೂ ವಿಶೇಷವಾಗಿ ರಫ್ತು ಮಾಡುತ್ತಾರೆ. ಈ ವ್ಯಾಪಾರವು ಆ ಪಟ್ಟಣದಲ್ಲಿ ನಡೆಯುವಷ್ಟು ಪ್ರಪಂಚದ ಇನ್ಯಾವ ಪಟ್ಟಣದಲ್ಲೂ ನಡೆಯುವದಿಲ್ಲವೆಂಬುದು ಪ್ರಸಿದ್ಧವಾಗಿದೆ. ಆದದರಿಂದ ಈ ಚಿಕಾಗೋ ಪಟ್ಟಣವನ್ನು ಭೂಲೋಕದ ಯಮಪುರಿ ಎಂದು ಹೇಳಬಹುದು. ಇವಲ್ಲದೆ ಇತರ ಧಾನ್ಯಗಳೂ ಅಲ್ಲಿ ವಿಶೇಷವಾಗಿ ವ್ಯಾಪಾರವಾಗುತ್ತಲಿವೆ. ಆ ಪಟ್ಟಣದಲ್ಲಿರುವ ರಾಜಬೀದಿಗಳು ೧೮೦೦ ಮೈಲಿಗಳ ಉದ್ದವೂ, ಆ ಪಟ್ಟಣದ ಸುತ್ತಳತೆಯು ೧೮ ಮೈಲಿಗಿಂತ ಹೆಚ್ಚಾಗಿಯೂ ಇರುತ್ತವೆ.

ಅಮೇರಿಕ ಖಂಡವನ್ನು ಕೊಲಂಬಸ್ ಎಂಬ ನಾವಿಕನು ಕಂಡು ಹಿಡಿದು ಈಗ್ಗೆ ಸುಮಾರು ನಾನೂರು ವರುಷಗಳ ಮೇಲಾಯಿತು. ಆ ಹಬ್ಬವನ್ನು ಅತ್ಯಂತ ಆಡಂಬರವಾಗಿ ನಡೆಸಬೇಕೆಂದು ಆ ಪಟ್ಟಣದಲ್ಲಿ ಪ್ರದರ್ಶನ ಮಹೋತ್ಸವವನ್ನು ಏರ್ಪಡಿಸಿದರು. ಇದಕ್ಕಾಗಿ ಕಟ್ಟಲ್ಪಟ್ಟಿರುವ ಕಟ್ಟಡವು ಮಿಚಿಗನ್ ಸರೋವರವನ್ನು ಒಳಗೊಂಡದ್ದಾಗಿದೆ. ಈ ಮಹೋತ್ಸವವನ್ನು ನಡೆಸುವದಕ್ಕಾಗಿ ಅಮೆರಿಕಾ ಗೌರ್ನಮೆಂಟಿನವರು ಮೂವತ್ತು ಕೋಟಿ ದ್ರವ್ಯವನ್ನು ವ್ಯಯಮಾಡಿದರು. ಆ ಪ್ರದರ್ಶನ ಶಾಲೆಯನ್ನು ವಿವರಿಸಲು ಸಹಸ್ರವದನ ಯುಕ್ತನೆನ್ನಿಸಿಕೊಂಡು ಬರುವವನಿಗೂ ಅಸಾಧ್ಯವೇ ಸರಿ. ಅಲ್ಲಿನ ರಸ್ತೆಗಳಲ್ಲೆಲ್ಲಾ ರೈಲ್ ಕಂಬಿಗಳು ಹಾಕಿಸಿರುತ್ತಾರೆ. ನೋಟಕರು ರೈಲಿನಲ್ಲಿ ಕುಳಿತುಕೊಂಡು ಪ್ರದರ್ಶನವಸ್ತುಗಳನ್ನು ನೋಡುತ್ತಲೂ, ರೈಲು ಗಾಡಿಗಳಲ್ಲೇ ಸಿದ್ಧ ಆಹಾರಾದಿಗಳನ್ನು ಪಡೆಯುತ್ತಲೂ ಇರಬಹುದಾಗಿದೆ. ೨—೩ ಮೈಲಿ ವಿಸ್ತೀರ್ಣ ಪ್ರದೇಶ(?) ರಸ್ತೆಗಳ ಉಭಯ ಪಾರ್ಶ್ವಗಳಲ್ಲಿಯೂ ೧೦—೧೨ ಉಪ್ಪರಿಗೆಗಳುಳ್ಳ ಅರಮನೆಗಳು ನೇತ್ರಾನಂದಕರಗಳಾಗಿವೆ. ಸಮುದ್ರ ಮುಖವಾಗಿ ಕಟ್ಟಲ್ಪಟ್ಟಿರುವ ಉಪ್ಪರಿಗೆ ಸಾಲುಗಳು ೩೦ ಮೈಲಿಯ ದೂರ ಹಬ್ಬಿ ಇರುತ್ತವೆ. ಸಾಯಂಕಾಲದಲ್ಲಿ ವಿದ್ಯುಚ್ಛಕ್ತಿ (ಇಲೆಕ್ಟ್ರಿಸಿಟಿ) ಯಿಂದ ಪಟ್ಟಣವನ್ನೆಲ್ಲಾ ಅಲಂಕರಿಸುತ್ತಾರೆ. ಈ ಪ್ರದರ್ಶನಶಾಲೆಗಾಗಿ ಪ್ರಪಂಚದ ನಾನಾದಿಕ್ಕುಗಳಿಂದಲೂ ಆಯಾಸ್ಥಳದ ವಿಶೇಷ ಪದಾರ್ಥಗಳು ಕಳುಹಿಸಲ್ಪಟ್ಟು ಅಲ್ಲಿ ವಿಚಿತ್ರವಾದ ರೀತಿಯಲ್ಲಿ ಅವುಗಳೆಲ್ಲಾ ಇಡಲ್ಪಟ್ಟಿರುತ್ತವೆ.

ಕಳೆದ ಮೇ ೧ನೇ ತಾರೀಖಿನ ದಿವಸ ಪ್ರಾತಃಕಾಲದಲ್ಲಿ ಸಂಯುಕ್ತ ಸಂಸ್ಥಾನಗಳ ಪ್ರೆಸಿಡೆಂಟಾದ ಜನರಲ್ ಕ್ಲೀವ್‌ಲ್ಯಾಂಡರವರು ಆಚಾರ ಪೂರ್ವಕವಾಗಿ ಪ್ರದರ್ಶನವನ್ನು ಪ್ರಾರಂಭಿಸಿದರು. ಆಗ್ಗೆ ಅವರು ಸಭಿಕರಿಗೆ ತಿಳಿಸಿದ ಸಂಗತಿಗಳನ್ನು ಗುರ್ತುಮಾಡಿಕೊಂಡು ತಮ್ಮ ದೇಶದ ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟಿಸುವದಕ್ಕಾಗಿ ೩೫೦ ಮಂದಿ ಬಾತ್ಮೀದಾರರು ಹಾಜರಾಗಿದ್ದರು. ಯೂರೋಪ್ ಖಂಡದ ಪ್ರತಿಯೊಂದು ರಾಜ್ಯದ ರಾಯಭಾರಿಗಳೂ ಆ ಸಮಯದಲ್ಲಿ ಗೌರವಯುಕ್ತವಾದ ಆಸನಗಳಲ್ಲಿ ಕುಳಿತವರಾಗಿದ್ದರು. ಪ್ರೆಸಿಡೆಂಟ್ರವರು ತಮ್ಮ ಉಪನ್ಯಾಸದ ಅಂತ್ಯದಲ್ಲಿ, ಸಭಿಕರಿಗೆ ಅಗೋಚರವಾಗಿ ಏರ್ಪಡಿಸಿದ್ದ ಒಂದು ಗುಂಡಿಯನ್ನು ನೂಕಿದರು. ಆ ಕೂಡಲೇ ಯಕ್ಷಿಣೀ ಮಾಡಿದಂತೆ ಆಶ್ಚರ್ಯಕರವಾದ ಯಂತ್ರಗಳು ತಮಗೆತಾವೇ ಚಲನೆಮಾಡುವದಕ್ಕೆ ಪ್ರಾರಂಭವಾಯಿತು. ಕಾರಂಜಿಗಳಲ್ಲಿ ನೀರು ಹಾರಿತು. ತೋಪುಗಳು ಹಾರಿಸಲ್ಪಟ್ಟಂತೆ ಶಬ್ದಗಳುಂಟಾದವು. ಘಂಟೆಗಳ ಮತ್ತು ವಾದ್ಯಗಳ ನಾದವು ನಭೋಮಂಡಲವನ್ನು ಹರಡಿದ್ದವು. ಸಭಿಕರಿಗೆ ಆನಂದವನ್ನುಂಟುಮಾಡಿದವು. ಈ ಬಗೆಯ ಮಾಯಾಸೃಷ್ಟಿಯನ್ನು ಅವಲೋಕಿಸಲು ಸಾಂದ್ರವಾಗಿ ನೆರೆದಿದ್ದ ಪ್ರೇಕ್ಷಕಜನರು—ಇದೇನು ಸ್ವಪ್ನವೋ ಜಾಗ್ರತಿಯೋ ಎಂದು ಭ್ರಮಿಸಿ ಬೆಂಗಾದರು.

ಈ ಪ್ರದರ್ಶನ ಶಾಲೆಯಲ್ಲಿ ಇಡಿಸಿರುವ ಸಾಮಾನುಗಳನ್ನೆಲ್ಲಾ ನೋಡುವವರು ಒಂದು ರುಸುಂ ಕೊಟ್ಟು ಹೋಗುವರು. ಇದು ಆರು ತಿಂಗಳ ಕಾಲ ನಡೆಯುತ್ತಲಿರುವದೆಂದು ತಿಳಿಯಲಾದವು. ಇತರ ದೇಶದ ಜನರು ಹೋಗಿ ಅಲ್ಲಿ ತಂಗುವದಕ್ಕೂ, ಅವರ ಆಹಾರ ವಿಹಾರ ಮೊದಲಾದವುಗಳಿಗೂ ಸೌಕರ್ಯಗಳುಂಟಾಗುವಂತೆ ಏರ್ಪಾಡುಗಳು ಆಗಿರುತ್ತವೆ. ಹೋಗುವವರು ಹಣ ಖರ್ಚುಮಾಡುವದೇ ಅತ್ತ, ಸಕಲವಿಧ ಉಪಕರ್ಣಗಳೂ ಸಿದ್ಧವಾಗಿರುವವು. ಪ್ರದರ್ಶನವಸ್ತುಗಳನ್ನು ಬೇಕಾದವರು ಖರೀದಿ ಕೊಟ್ಟು ಪಡೆಯಬಹುದು. ಇವೇ ಮೊದಲಾದ ಕಾರಣಗಳಿಂದ ಇದುವರೆಗೂ ಈ ಮಹೋತ್ಸವಕ್ಕಾಗಿ ಅವರು ಎಷ್ಟು ಖರ್ಚುಮಾಡಿರುತ್ತಾರೋ, ಅದಕ್ಕಿಂತಲೂ ದ್ವಿಗುಣವಾದ ಲಾಭವು ಅವರಿಗುಂಟಾಗುವದೆಂದು ಊಹಿಸಲ್ಪಟ್ಟಿದೆ. ಇಂಥಾ ವಿಶೇಷತರವಾದ ಮಹೋತ್ಸವವು ಪ್ರಪಂಚದ ಆದಿಯಿಂದಲೂ ಎಲ್ಲಿಯೂ ನಡೆದಿಲ್ಲವೆಂಬದಾಗಿ ಹೇಳಲು ಸಂದೇಹವೇನು ?

ಪ್ಲೀಡರುಗಳಾಗುವದಕ್ಕೆ ಸರ್ಕಾರದವರ ಸಹಾಯ.

ಹಿಂದೂಸ್ಥಾನದಲ್ಲಿರುವ ಎಲ್ಲಾ ನೇಟಿವ್ ರಾಜ್ಯಗಳ ಪೈಕಿ ನಮ್ಮ ಮೈಸೂರು ಸಂಸ್ಥಾನವು ಸಕಲವಿಷಯಗಳಲ್ಲೂ ಬಹಳ ಚೆನ್ನಾಗಿ ಆಳಲ್ಪಟ್ಟಿದೆಯೆಂಬದಾಗಿ ಅನ್ನಿಸಿಕೊಂಡಿದೆ. ಇದನ್ನು ಸಿದ್ಧವೆಂದು(?) ಹೇಳುವದಕ್ಕೆ ಕೆಲವು ಸಹಜವಾದ ಕಾರಣಗಳಿರುತ್ತವೆ. ಆದರೆ ಕೆಲವು ವಿಷಯಗಳಲ್ಲಿ ಇನ್ನೂ ಹಿಂದೇ ಇದೆಯೆಂದು ಹೇಳುವದಕ್ಕೂ ಕಾರಣಗಳುಂಟು. ಹೇಗೆಂದರೆ ಈ ಸಂಸ್ಥಾನದಲ್ಲಿ ಪ್ಲೀಡರುಗಳ ಪರೀಕ್ಷೆಯೆಂಬುವದು ಬಹುಕಾಲದಿಂದಲೂ ವರ್ಷಂಪ್ರತಿವರ್ಷವಲ್ಲೂ ನಡೆಯುತ್ತಲಿದೆ. ಅದಕ್ಕೆ ಅಪ್ಲಿಕೇಷನ್ ಮಾಡುವ ಉಮೇದುವಾರರ ಸಂಖ್ಯೆಯು ಹೆಚ್ಚುತಲಿದ್ದಾಗ್ಯೂ(?) ಪ್ಯಾಸಾಗತಕ್ಕವರೇನೋ ಬಹುಕೊಂಚವಾಗಿಯೇ. ಅದಕ್ಕೆ ಕಾರಣವೇನಾಗಿರಬಹುದೆಂದು ಊಹಿಸುವದಕ್ಕಿಂತ ಮುಂಚಿತವಾಗಿಯೇ ಈ ಪರೀಕ್ಷೆಗೆ ಇಷ್ಟರತಕ್ಕ ಪುಸ್ತಕಗಳನ್ನು ಉಮೇದುವಾರರು ಸ್ವತಃ ಓದಿಕೊಳ್ಳಬೇಕಾಗಿರಬಹುದು ; ಅವುಗಳನ್ನು ಬೋಧಿಸತಕ್ಕ ಪಾಠಶಾಲೆಯು ಇಲ್ಲದಿರಬಹುದು ಎಂಬೀಸ್ಫುಟ ವಿಷಯಗಳು ಹೊಳೆಯುತ್ತವೆ. ಇವೆರಡೂ ನಿಜವೇ ಸರಿ. ಉಮೇದುವಾರರು ತಮಗೆ ತಿಳಿಯದ ಸಂಗತಿಗಳನ್ನು ಬಾಯಿಪಾಠವಾಗಿ ಕಲಿತಾಗ ಪರೀಕ್ಷೆಯಲ್ಲಿ(?) ಹೇಳಬಿಡುತ್ತಾರೆಯೇ ವಿನಹ ಅವುಗಳನ್ನು ಉಪಯೋಗಿಸತಕ್ಕ ರೀತಿಯೇ ಅವರಿಗೆ ಹೊಳೆಯುವದಿಲ್ಲ. ಇದು ನಿಜವೇ ಸರಿ ಎಂಬದಾಗಿ ಹೇಳುವದಕ್ಕೆ ಅನೇಕ ದೃಷ್ಟಾಂತರಗಳುಂಟೆಂಬುದು ಸಕಲರಿಗೂ ವೇದ್ಯವೇ ಇದೆ. ಆದರೂ ಈ ವಿಷಯದಲ್ಲಿ ಸರ್ಕಾರದವರು ಯೋಚಿಸಿ ಇದನ್ನು ಹೋಗಲಾಡಿಸುವದಕ್ಕೆ ಅವಶ್ಯವಾದ ಉಪಾಯವನ್ನು ಮಾಡದೆ ಇರುವದು ಆಶ್ಚರ್ಯವೇ ಸರಿ. ಈ ಸಂಸ್ಥಾನಕ್ಕೋಸ್ಕರ ಒಂದು ಲಾ ಕಾಲೇಜ್ ಎಂಬ ವಿದ್ಯಾಶಾಲೆಯನ್ನು ಬೆಂಗಳೂರಿನಲ್ಲಿಯೋ ಅಥವ ರಾಜಧಾನಿಯಲ್ಲಿಯೋ ಸ್ಥಾಪಿಸಿ, ಅದಕ್ಕೆ ಘಟಿಕರೆನ್ನಿಸಿಕೊಂಡಿರುವ ಕೆಲವು ಮಂದಿಯನ್ನು ಬೋಧಕರನ್ನಾಗಿ ನೇಮಿಸಿ, ಪ್ಲೀಡರ್ ಪರೀಕ್ಷೆಯಲ್ಲಿ ಪ್ಯಾಸಾಗಿ ವಕೀಲತ್ತು ನಡೆಸಬೇಕೆಂದು ಪ್ರಯತ್ನಪಡುವವರೆಲ್ಲರೂ ತಲೆಗೆ ಇಷ್ಟು ಫೀಜು ಕೊಡಬೇಕು, ಇಷ್ಟುಕಾಲ ಪಾಠಶಾಲೆಯಲ್ಲಿ ಓದಬೇಕು, ಅನಂತರ ಪರೀಕ್ಷೆಗೆ ಅಪ್ಲಿಕೇಷನ್ ಮಾಡಬಹುದು ಎಂಬದಾಗಿ ಏರ್ಪಾಡುಮಾಡಿದಲ್ಲಿ ಸರ್ಕಾರಕ್ಕೆ ಆದಾಯವೂ ಕೀರ್ತಿಯೂ, ಅನೇಕ ಪ್ರಜೆಗಳಿಗೆ ಜೀವನೋಪಾಯವೂ ಉಂಟಾಗುವದರಲ್ಲಿ ಸಂಶಯವಿಲ್ಲ. ಈ ಸಂಸ್ಥಾನವು ಚಿಕ್ಕದು, ಅನೇಕಮಂದಿ ಲಾಯರುಗಳು ಅನಾವಶ್ಯಕವೆಂಬದಾಗಿ ಹೇಳಬಹುದು. ಹಾಗಿದ್ದ ಪಕ್ಷಕ್ಕೆ ಆ ಕಾಲೇಜನ್ನು ೧೦—೧೫ ವರುಷಗಳವರೆಗೇ ಇರುವಂತೆಯೂ, ಅನಂತರ ಅದನ್ನು ವಜಾಮಾಡುವಂತೆಯೂ, ಏರ್ಪಡಿಸಿದಲ್ಲಿ ಆ ಕಾಲದೊಳಗಾಗಿ ಅಷ್ಟಿಷ್ಟು ಮಂದಿಯಾದರೂ ಲಾವನ್ನು ಚೆನ್ನಾಗಿ ತಿಳಿದವರು ತಲೆದೋರಿದಂತಾಗುತ್ತಾರೆ. ಇದರಿಂದ ಸರ್ಕಾರದವರ ಕೆಲಸಗಳು ಅತಿಜಾಗ್ರತೆಯಾಗಿ ನೆರವೇರಿಸಲ್ಪಡಬಹುದು. ವ್ಯಾಜ್ಯಗಾರರ ಪಕ್ಷ ಅರ್ಥ ತಿಳಿಯದೆ ಇರುವ ವಕೀಲನ ಸಂಗಡ ಜಟ್ಟಿಗಳು(?) ಹೋರಾಡುವದಕ್ಕಿಂತ, ತಿಳಿದಿರುವವರ ಸಂಗಡ ಕಲಹ ಸಮಾಡುವದು ಹರ್ಷಯುಕ್ತವಾದದ್ದಾಗಿರುವದು. ಆದದರಿಂದ ಈ ವಿಷಯಗಳನ್ನೆಲ್ಲಾ ಗೌರ್ನಮೆಂಟಿನವರು ತಮ್ಮ ಘನವಾದ ಆಲೋಚನೆಗೆ ತಂದುಕೊಂಡು ಪ್ರಜೆಗಳ ಅಭಿವೃದ್ಧಿಗೆ ಕಾರಣವಾಗಿರುವ ಈ ಕಾಲೇಜನ್ನು ಸ್ಥಾಪಿಸಿ ಹೊಸದಾದ(?) ಕೀರ್ತಿ ಪಡೆಯುವರೆಂದು ನಂಬಿದ್ದೇವೆ.

ಜಾಗ್ರತೆಯಾಗುತ್ತಿರಿ.

ಎಲೈ ಮಹನೀಯರೇ ದೇವನಿರ್ಮಾಣದಲ್ಲಿ ಇರುವೆಯು ಬಹು ಸಣ್ಣ ಪ್ರಾಣಿ ಎಂಬುದು ಸರ್ವರಿಗೂ ವೇದ್ಯವಾದ ಸಂಗತಿಯಷ್ಟೆ. ಆದಾಗ್ಯೂ ಒಂದಾನೊಂದು ದಿನ ನಾನು ಇರುವೆಯ ಗೂಡಿನ ಬಳಿಯಲ್ಲಿ ಅರ್ಧ ಕಾಲವನ್ನು ಹಾಕುವ(?) ಒಬ್ಬ ಮನುಷ್ಯನನ್ನು ನೋಡಿದೆನು ಆದರೆ ಆತನ ಅಭಿಪ್ರಾಯವು ಬೇರೆಯಾಗಿರಲಿ; ಆ ಗೂಡಿನಲ್ಲಿದ್ದ ಇರುವೆಗಳು ಬಹು ಜಾಗ್ರತೆಯಾಗಿ ಧಾನ್ಯವನ್ನು ಸಾಗಿಸುವದನ್ನು ನೋಡಿ ಹಾಗೆಯೇ ಸ್ವಲ್ಪ ಯೋಚಿಸುತ್ತಿರಲು ಮನುಷ್ಯರೂ ಸಹ ತಮ್ಮ ಜೀವನಾರ್ಥಕ್ಕಾಗಿ ಬಹು ಜಾಗ್ರತೆಯಾಗಿ ಬೇರೆ ಬೇರೆ ಕೆಲಸಗಳನ್ನು ನಡೆಸುತ್ತಾರೆ; ಆದರೆ ಅನೇಕರು ಸೋಮಾರಿ ಎಂಬ ರಾಕ್ಷಸನಿಗೆ ವಶರಾಗಿ ಮೈ ಎತ್ತಲಾರದೆ ತಮ್ಮ ದಿವಸಗಳನ್ನು ಭೂಮಿಗೆ ಸಲ್ಲದೆ ಕಳ್ಳ ಕಾಕರಾಗಿಯೂ, ಕೊಲೆ ಪಾತಕಗಳಾಗಿಯೂ ಇರುತ್ತಾರೆ ಇಂಥವರು ಈ ಇರುವೆಗಳಿಂದ ತಮ್ಮ ಕರ್ತವ್ಯಗಳ ವಿಷಯ ಕಲಿಯಬೇಕಾದ ಪಾಠವು(?) ಏನಾಗಿರಬಹುದು ಎಂದು ಒಂದು ಪ್ರಶ್ನೆಯು ನನ್ನಲ್ಲಿ ಹುಟ್ಟಲು, ಶ್ರೀ ಸರ್ವಜ್ಞನಲ್ಲಿ(?) ಕೂಡಲೇ ಒಂದು ಉತ್ತರವಾಯಿತು ಏನಂದರೆ—ಎಲೈ ಸೋಮಾರಿಯೇ(?) ಇರುವೆಯ ಬಳಿಗೋಗಿ ಅದರ ನಡತೆಯನ್ನು ನೋಡಿ ಜ್ಞಾನಿಯಾಗು ಎಷ್ಟುವರೆಗೆ ಮಲಗುವಿ? ಯಾವಾಗ ನಿನ್ನ ನಿದ್ರೆತಿಳಿದು ಏಳುವಿ? ಸ್ವಲ್ಪ ನಿದ್ರೆ, ಸ್ವಲ್ಪ ತೂಕಡಿಕೆ, ಮಲಗುವದಾಗಿ ಕೈಮುಗಿದು(?) ಮನಸ್ಸು ಮಾಡುವಿ? (ಅಯ್ಯೋ) ಆ ವೇಳೆ ನಿನ್ನ ಬಡತನವು ಓಡುವವನ ಹಾಗೆಯೂ, ನಿನ್ನ ಕೊರತೆಯು ಗುರಾಣಿ ಹಿಡಿದವನ ಹಾಗೆಯೂ ಬರುವದು "

ಜ್ಞಾನಿಯು ಹೇಳಿದ ಈ ಮಾತುಗಳು ಸೋಮಾರಿಯನ್ನು ಕುರಿತು ಎಂದು ಪ್ರತ್ಯಕ್ಷವು(?) ತಿಳಿದ ಮುಖ್ಯ ಜಾಗ್ರತೆಯಾಗಿ ಈ ಲೋಕ ವ್ಯವಹಾರದಲ್ಲಿ ಸಮರ್ಥರಾಗಬೇಕೆಂದು ಬೋಧಿಸಿದರೆ ಪುನರುಕ್ತಿದೋಷಕ್ಕಾಗಿಯೂ(?) ತಿಳಿಯಬೇಕಾದ ಸಂಗತಿಗಳು ಈ ಜ್ಞಾನಿಯ ವಾಕ್ಯದಲ್ಲಿ ಅಡಗಿವೆ ಎಂತಲೂ, ಗಮನದಲ್ಲಿಡತಕ್ಕದ್ದು. ಹ್ಯಾಗೆಂದರೆ—ಒಬ್ಬ ಮನುಷ್ಯನು ಸಹಜವಾಗಿ ತನ್ನ ಶಕ್ತಿಯನ್ನು ಖರ್ಚುಮಾಡಿ ಸಂಪಾದಿಸಿ ತಿನ್ನುವದನ್ನು ಬಿಟ್ಟು ತನ್ನ ಜೊತೆ ಸಹೋದರನು ಕಷ್ಟಪಟ್ಟು ಕೂಡಿಸಿಟ್ಟ ಧನವನ್ನು ತನ್ನ ಸೋಮಾರಿತನದಿಂದ ಕುಳಿತುಕೊಂಡು ಅನುಭವಿಸಬೇಕೆಂತ ಯೋಚಿಸಿ ಆ ಸಹೋದರನಿಗೆ ಮೋಸ ಮಾಡಿ ಆ ಧನವನ್ನು ಅಪಹರಿಸಿದರೆ, ಕಳ್ಳನ(?) ಕೃತ್ಯವು ತನ್ನ ಸೃಷ್ಟಿಕರ್ತನಿಗೂ, ನೆರೆಹೊರೆಯವರಿಗೂ, ಯಜಮಾನನಿಗೂ ವಿರೋಧವಾದ ಪಾಪವೆಂಬ ನಾಮವನ್ನು ಹೊಂದಿ ಆ ಚೋರನನ್ನು ಪ್ರತ್ಯೇಕಿಸುವದು ಇನ್ನೂ ಅನೇಕರು ಸೋಮಾರಿತನಕ್ಕೆ ಒಳಪಟ್ಟು ನಾನಾ ದುರಭ್ಯಾಸಗಳುಳ್ಳವರಾಗಿರಲು ನರಹತ್ಯಕ್ಕೂ ಒಳಪಡುವರು ಇದೂ ಪಾಪಕೃತ್ಯವೆಂದು ತಮ್ಮ ತಮ್ಮ ಮನಸ್ಸುಗಳು ತಾವೇ ಒಪ್ಪಿಕೊಳ್ಳುವಲ್ಲಿ ಅನೇಕ ಅಪಾಯಗಳನೇಕವು ಪುರುಷಾರ್ಥಕ(?) ಕಾರ್ಯಕ್ಕೆ ಒಳಪಡುತ್ತವೆ ಅಂತರೆ ಭಗವಂತನು ತಮಗೆ ತೋರಿಸಿದ ಪ್ರೀತಿಯನ್ನು ನೆನಸದೆ ಆತನ ದಾಕ್ಷಿಣ್ಯಗಳನ್ನು ಪ್ರೀತಿಸದೆ, ಲೋಕ ಜೀವನಸಂಬಂಧ(?) ಜಗದ್ಗುರುವನ್ನು ನಂಬದೆ ಸ್ಥಿರ ಗೃಹಪ್ರವೇಶವಂ ಮಾಡಿತಂಥಾ " ಕೆಲರು ಮನೆ ಮನ ವರ್ತನ(?) ಮಕ್ಕಳಿಗೊಲಿದು ಮಾನತೆಯನಾಡಿ ಧನವನು| ಘೋಸಿಬಿಡದೇ ತೊಡರಿಕೊಂಡಿಹರು|| ಫಲವ ಕಂಡರದೇನನು| ಕಟು| ಫಲವ ನೆಲ್ಲದ ಬಿಟ್ಟು ಬರುಲು| ಗಳವುದರಿಂದ(?) ಮುಖ್ಯದೆ ಸುಖದೆಳ್ಳೆಹರು|| " ಎಂಬ ಸಂಗತಿಯನ್ನು ಮರೆತಿರುವದರಿಂದ ಅವರು ತಮ್ಮ ಸ್ಥಿತಿಯಲ್ಲಿ ಪುನರಾರ್ಥಕವಾಗಿ ಸೋಮಾರಿಗಳೇ ಎಂದು ಸ್ಪಷ್ಟಗೊಳ್ಳುವದು ಅವರು ಅನಿತ್ಯವಾದ ಹೊರಮನುಷ್ಯನು ವರ್ಣಿಸಿ(?) ಪಾಲಾಗುವದರಲ್ಲಿ ನಿತ್ಯನಾದ ಒಳಮನುಷ್ಯನು ವಿನಾಗುತ್ತಾನೆಂಬ ಸಂಗತಿಯನ್ನು ತಮ್ಮ ಗಣನೆಗೆ ತಾರದವರಾಗಿದ್ದಾರೆ ಆದದರಿಂದ ಸೃಷ್ಟಿಕರ್ತನು ಹೇಳುವದೇನಂದರೆ—ಎಲೈ ಜೀವನ್ಮೃತನೇ(?) ! ನೀನು ಲೋಕವಲ್ಲವನ್ನೂ ಒಲಿದವನಂತೆ ಯಾಕೆ ಭೂ ಭಂಡನಾಗಿದ್ದೀ? ಈಗಲಾದರೂ ಎಲ್ಲರ ಅಂಗೀಕಾರಕ್ಕೆ ಯೋಗ್ಯವಾದ ನಾಯಕನಾದ ವಾಕ್ಯಗಳನ್ನು ಕೇಳುವದಕ್ಕೆ ಸಿದ್ಧನಾಗಿದ್ದು ಸತ್ತವರೊಳಗಿಂದ ಎದ್ದೇಳು ಕ್ರಿಸ್ತನು ನಿನಗೆ ಪ್ರಕಾಶ ಕೊಡುತ್ತಾನೆಂದರ್ಥವು(?)

ಇರುವೆಗಳ ಮಾದರಿಯಿಂದ ಈ ಸೋಮಾರಿಯು ಕಲಿಯಬೇಕಾದ ಪಾಠಗಳು ಇನ್ನೂ ಅನೇಕ ಉಂಟು ಅವುಗಳಲ್ಲಿ ಕೆಲವನ್ನು ಸೂಚಿಸೋಣ—ಮನುಷ್ಯರು ಲಕ್ಷ್ಯದಿಂದ(?) ಬೇಕಾದ ಸಾಮಗ್ರಿಗಳನ್ನು ಸಿದ್ಧಮಾಡಿಕೊಳ್ಳಬೇಕು ಇರುವೆಯು ಅಲ್ಪಪ್ರಾಣಿಯಾದರೂ ಬಹುಕಾಲಕ್ಕೆ ಯೋಚಿಸಿ ಮಳೆಗಾಲವು ಬರುವದಕ್ಕೆ ಮುಂಚೆ ಬೇಸಿಗೆಯಲ್ಲಿಯೇ ತನ್ನ ಆಹಾರವನ್ನು ಕೂಡಿಸುತ್ತದೆ ಹಾಗೆಯೇ ಮನುಷ್ಯರೂ ನಮ್ಮ ಮುಂದೆ ಬರತಕ್ಕ ಪರಿಣಾಮ(?) ಪದಾರ್ಥಗಳನ್ನು ಸೇರಿಸುವರು ಆದರೆ ತಮ್ಮ ಶ್ರೇಷ್ಠತ್ವಗಳು ಈ ಸಂಪತ್ತನ್ನು ಬಿಟ್ಟು ಅಥವಾ ಗೂಡನ್ನು ಬಿಟ್ಟು ಹೊರಡುವದಕ್ಕೆ ಬರುತ್ತಾ ಅಗ್ನಿ ಪ್ರಳಯವೆಂಬ ದೇವರ ನ್ಯಾಯವಿಚಾರಣೆಯ ಕಾಲಕ್ಕೆ ತಪ್ಪಿಸಿಕೊಂಡ ಸಾಧನಗಳಾಗಿ ಜೀವಿಸುವದಕ್ಕೆ ತಕ್ಕ ಸಾಧನಗಳನ್ನು ಮಾಡುತ್ತಾ ಗುರುವಿನ ಬೋಧೆಯಿಂದ ಮತ್ತು ಇತರ(?) ಧರ್ಮಗ್ರಂಥದ ವಾಕ್ಯಯಿಂದ ಪಡೆಯಲು ಈ ಲೋಕದಲ್ಲಿಯೇ ನಮಗೆ ಸಾಮಾನ್ಯವೆಂಬ ನೊತ್ತನ್ನು ಕಳೆಯಲು ಜಾಗರೂಕರಾಗಿರುತ್ತೇವೆಯೇ? ಎಂದು ತಿಳಿಯುವದು ಅವಶ್ಯಕ ಕೆಲವರು ತಮ್ಮ ಬಾಯಿಯಿಂದ ಕಷ್ಟಪಡುತ್ತಿದ್ದಾಗ್ಯೂ ತಮ್ಮ ಹೃದಯಗಳನ್ನು ಲೋಕದ ಸಂಪಾದನೆಗಳಿಂದ ಕಟ್ಟಿಕೊಂಡಿರುತ್ತಾರೆ ಇನ್ನೂ ಕೆಲವರು ಒಳ್ಳೆಯವುಗಳನ್ನೇ ಮಾಡುತ್ತಾ ಒಂದರೂ ತಮ್ಮ ಜನ್ಮಸ್ವಭಾವವು ಮಾರ್ಪಡದ ನಿಮಿತ್ತ ಒಂದು ಎಳ್ಳಷ್ಟು ವಿಷಯ ತಪ್ಪಿ ಪಾಪದಲ್ಲಿ ಬಿದ್ದಂತಿರುವರು ಆದ್ದರಿಂದ ನೀತಿವಂತನೂ ಇಲ್ಲ ಒಬ್ಬನೂ ಇಲ್ಲ ಎಲ್ಲರೂ ಪಾಪಮಾಡಿ ದೇವರ ಮಹಿಮೆಗೆ ತಪ್ಪಿಹೋದರೆಂದು ಸತ್ಯ ಶ್ರುತಿಯು ಎಚ್ಚರಿಸುವಲ್ಲಿ ನಾವೆಲ್ಲರೂ ಎಚ್ಚರಿಕೆ ತಂದುಕೊಂಡು ಕಾಮಕ್ರೋಧಾದಿ ಅರಿಷಡ್ವರ್ಗಗಳನ್ನು ಜಯಿಸುವದಕ್ಕೆ ಪ್ರಯತ್ನಿಸೋಣ ಇದು ನಮ್ಮ ಸ್ವಶಕ್ತಿಯಿಂದಾಗಲಾರದು ನಾವು ಬಹುಮಾನುಷರಲ್ಲ(?) ಘಟಕರು(?) ಅದು ಪುರುಷಾರ್ಥಕಕ್ಕೆ ಸಪ್ಪಗೆ ನಮ್ಮನ್ನು ಬದ್ಧರಾಗಿಸುವ(?) ಅವರ ಪೂರ್ಣವಾದ ಪ್ರಾಯಶ್ಚಿತ್ತವನ್ನು ಪೂರ್ಣ ಶ್ರದ್ಧೆಯಿಂದ ಭಜಿಸಿದರೆ ಆತನು ನಮಗಾಗಿ ತೋರಿಸಿರುವ ಕೃಪಾಯತ್ನಗಳನ್ನು ನಮ್ಮ ಅನುಭವಕ್ಕೆ ತಂದು ಎಲೈ ಸಾಧುಜನರೇ ನೀನು ತೃಣಪ್ರಾಯನಾದರೂ ನಾನು ಸಮುದ್ರಪ್ರಾಯನಾಗಿದ್ದು ನಿನ್ನಂಥ ಅಧಮರನ್ನು(?) ನೀನು ಅಪೇಕ್ಷಿಸುವ ಸಂಪದ್ಭಾಗ್ಯವನ್ನು ನಿನಗನುಗ್ರಹಿಸುವೆನು ಆದ್ದರಿಂದ ನಿನ್ನ ಮನವಂ ಎನಗೊಪ್ಪಿಸು ಎಂದು ಪ್ರೇಮದಿಂದಲೇ ಕೇಳುತ್ತಾನೆ ಅದಾದರೂ ನಮ್ಮ ಶತ್ರುಗಳ ವಿಷಯ ನಾವು ನಿಶ್ಚಿಂತರಾಗಿದ್ದರೆ(?) ಈ ಒಳ್ಳೇ ಸಮಯದಲ್ಲಿಯೇ ಬೀಜ ಸಂಗ್ರಹವನ್ನು ಮಾಡಿಕೊಳ್ಳುವದು ಒಳ್ಳೇದು ಇರುವೆಗಳು ಬೇಸಿಗೆಯನ್ನು ಬಿಟ್ಟರೆ ಮಳೆಗಾಲದಲ್ಲಿ ಕಷ್ಟಪಡುವದಕ್ಕೇನದ್ದು? ಹಾಗೆಯೇ ಮನುಷ್ಯರಾದ ನಾವು ಜೀವಿಸುವ ಈ ಜೀವಮಾನವು ದೇವರಿಗೆ ಯುಕ್ತ ಸಮಯಕ್ಕೆ ಸಮಯವನ್ನೂ ಅನುಕೂಲವನ್ನೂ ಕೊಡುವದರಿಂದ ನಮ್ಮ ಅಂತ್ಯಕಾಲಕ್ಕೆ ಬೇಕಾಗಿರುವ ಪರಿಶುದ್ಧಗುಣಗಳನ್ನು ಸಂಪಾದಿಸಬೇಕು ಯಾಕೆಂದರೆ ನಾವು ಹೋಗುವ ಪಾತಾಳದಲ್ಲಿ ಜ್ಞಾನವೂ ಯುಕ್ತಿಯೂ ಏನೂ ಇಲ್ಲ ಎಂದು ಅಸ್ತಮಾನ(?) ಆ ಸಮಯದಲ್ಲಿ ನಾವು ಯಾವ ಕೆಲಸವನ್ನು ಮಾಡುವದಕ್ಕೂ ಆಗದು

ಸೋಮಾರಿಯೊಂದಿಗೆ ಸ್ನೇಹ ಬೆಳಸಿದರೆ ಅನೇಕ ಗುಣಗಳು(?) ಬರುವದು ಈ ಲೋಕದಲ್ಲಿ ಒಳ್ಳೆಯವರು ಕೆಟ್ಟವರು ಎಂದು ತಮ್ಮ ಕಾರ್ಯಗಳಿಂದಲೇ ಮನುಷ್ಯರು ತಿಳಿಯುವರು ಹಾಗಾದರೆ ಸತ್ಪುರುಷರ ಸಹವಾಸದಿಂದ ನಾವು ಉತ್ತ

ವುರಾಗಬಹುದು ಯಾಕೆಂದರೆ ಸಜ್ಜನರ ಸಂಘವು ಹಜ್ಜೇನು ಸಮಿಪಂತೆ ಇರುವದು ಆದದರಿಂದ ಸಾ.ಸಭಿಕನು, ಪರಂಜ್ಯೋತಿಯಾಗಿ ಆಗಿರುವ ಲೋಕ ರಕ್ಷಕನಾದ ಯೇಸುಕ್ರಿಸ್ತ ಸ್ವಾಮಿಯು ಸ್ನೇಹವಂ ಬೆಳಸಬೇಕು ಅದನ್ನು ಬಿಟ್ಟು ದುಂದ್ರಿಗಳ ಪ್ರೇರಕನಾದ ಸೈತಾನನ ಸ್ನೇಹವಂ ಮಾಡಿದರೆ "ದುರ್ಜನೇನ ಸಮಂ ಸಖ್ಯಂ ಪ್ರೀತಿಂಚಾಪಿ ನಕಾರಯೇತ್ ಉಷ್ಣೋದಹತಿಯಾಂಗಾರ, ಶೀತಃ ಕೃಷ್ಣಾಯತೇಕರಂ" ಎಂಬಂತಾಗುವದು ಅಂದರೆ ಇದ್ದಲು ಉಷ್ಣವಾಗಿದ್ದರೆ ಸುಡುವದು ಶೀತವಾಗಿದ್ದರೆ ಕೈಯನ್ನು ಕಪ್ಪಗೆಮಾಡುವದು ಇದು ಹ್ಯಾಗೋ ಹಾಗೆಯೇ ಮಮ್ಮಲ್ಲಿ ಅಧಿಕವಾದ ಸ್ನೇಹವನ್ನು ಮಮತೆಯನ್ನು ಮಾಡಿದರೆ ಯಾವ ಸಂದರ್ಭದಲ್ಲಾದರೂ ದೋಷಗತಿಯೇ ಪ್ರಾಪ್ತಿಸುವದು ತಿಳಿಯಿರಿ ಈಗಲೇ ಜಾಗ್ರತೆ ತಂದುಕೊಂಡು ನಮ್ಮ ವಿರೋಧಿಯಾದ ಪಾಪವನ್ನು ತ್ಯಜ್ಯವಾಡಲಿಕ್ಕೆ ಪ್ರಯತ್ನಿಸಬೇಕು ಯಾಕೆಂದರೆ ನಮಗೆ ತಿಳಿಯದ ಸಮಯದಲ್ಲಿ ಮರಣವೆಂಬ ಬಿರುಗಾಳಿ ಬಂದು ಬಾಣಸಹಿತ ನಮ್ಮನ್ನೆಳದೊಯ್ದರೆ ಆತ್ಮಿಕ ಭಾಗ್ಯದಲ್ಲಿ ಬಡವರಾಗಿರುವೆವು ಶೀಘ್ರವಾಗಿರುವದರಿಂದ ಸಹೋದರರಾದ ಜನರೇ ನಿಮ್ಮ ಬಾಳುವೆಯ ವ್ಯಸನ್ನು ಕುರಿತು ಏನು ಯೋಚಿಸುತ್ತೀರಿ? ಈ ಲೋಕದ ಕಾರ್ಯಗಳಲ್ಲಿ ಬಹಳ ಎಚ್ಚರಿಕೆ ಇದ್ದರೆ ಪರಲೋಕ ಸಂಬಂಧವಾಗಿ ಮತ್ತಷ್ಟು ಜಾಗ್ರತ ಯಾವ ವಿಚಾರ ವಿರಬೇಕು? ಭಗವಂತನು ನಮಗೆ ಕೊಟ್ಟ ಕಾಲ ಸಮಯವನ್ನೂ ಒಳ್ಳೇದಕ್ಕಾಗಿ ಉಪಯೋಗಿಸ ಬೇಕು ಪುತ್ರರಾಗಿರಬೇಕಾದದ್ದು ಸಮಸ್ತರೂ ಮಿಟ್ಟು ತಕ್ಕದ್ದೇ ಅದರ ಮಾತಕಲೇ ನೀವು ಆ ಸ್ಥಲ ಹೊಂದುವೆಗಳನ್ನೂ ಅವುಗಳ ಕೆಲಸವನ್ನು ನೋಡಿ ಎಂದು ಗಮನದಿಂದ ಯೋಚಿಸಿ ದೇವರು ತಮ್ಮ ಕಾಲವನ್ನು ಗೋತುಕ್ತರಾಗಿ ಎಂದು ಗೊತ್ತು ಮಾಡಿಕೊಂಡು ಹಿರಿಯ ಇದ್ದಿದ್ದರೆ ಇಲ್ಲದ ಮಾರ್ಗಕ್ಕೆ ಆ ವಿಷಯದಲ್ಲಿ ತ ತಿಳಿದವರು ವಾಸನೆಸ್ಸಿರಿ ಹೀಗೆ ಬರೆಯುವ ಒಬ್ಬ ಸ್ನೇಹಿತ

ಕ್ರೈಸ್ತ ಸ್ನೇಹಿತ.

ಮ್ಯೂನಿಸಿಪಲ ವಿಷಯಂಗಳು.

ಕಳೆದ ಜೂನ್ ೨೬ ನೆ ಸೋಮವಾರ ಸಾಯಂಕಾಲ ೪ ಘಂಟೆಗೆ ಜರಗಿದ ಮ್ಯೂನಿಸಿಪಲ ಕಮೀಷನರ ವಿಷಯಂಗಳು ಮ್ಯೂನಿಸಿಪಲ್ ಹಾಲಿನಲ್ಲಿ ನಡೆಸಲ್ಪಟ್ಟವು. ಪ್ರಾರಂಭದಲ್ಲಿ ಪ್ರಸಿಡೆಂಟರು ವೈಸ ಪ್ರೆಸಿಡೆಂಟರು, ವಾ|| ಸ್ವಾಮಿನಾಥ ಅಯ್ಯರವರು, ವಾ|| ವೆಂಕಟಕೃಷ್ಣಯ್ಯನವರು, ವಾ|| ರಾಮಚಂದ್ರರಾಯರು, ವಾ|| ಲಿಂಗಣ್ಣನವರು, ವಾ|| ಎ. ಸುಬ್ಬರಾಯರು, ವಾ|| ಎ ರಾಮಣ್ಣನವರು ಮತ್ತು ವಾ|| ಹಚ್. ಕೃಷ್ಣರಾಯರು ಈ ಮೆಂಬರುಗಳು ಮತ್ತು ಸಾಧಾರಣವಾಗಿ ಇರುವವರು ವಿಷಯಂಗಳ ಪ್ರಾರಂಭವಾದ ಮೇಲೆ ಸ್ವಲ್ಪ ಸ್ವಲ್ಪ ಹೊತ್ತು ಮಾಡಿಕೊಂಡು ಬಂದರು ವೈಸ ಪ್ರಸಿಡೆಂಟರು ಸ್ವಾಗತಿಸಿ ...

[illegible]

ಎ ತುಸ್ಸವೊಂದಲಿಯಾದ್ದರಿಂದ ಮ್ಯೂನಿಸಿಪಾಲಿಟಿಯವರು ಈ ವಿಷಯ ಮೊದಲೇ ವಿಚಾರಿಸಿ ... ತಮ್ಮ ಸಿಪಾಯಿಗಳ ಭಾಗಕ್ಕೆ ...

[illegible]

ಶೇಡಿಗೆ ಅವನನ್ನು ಕೊಲ್ಲಬೇಕೆಂದು ಪ್ರಯತ್ನ ಮಾಡಿದಳು ...

[illegible]

ಅಂಗಡಿಗಳ ವೃತ್ತಾಂತಗಳು.

[illegible]

ವಿವಿಧ ವರ್ತಮಾನಗಳು.

ಚೀನಾ ಮತ್ತು ರಷ್ಯಾ ರಾಜ್ಯಗಳಿಗೆ ತ್ವರ್ಯದಲ್ಲೇ ಕಲಹ ಹುಟ್ಟುವಂತೆ ವರ್ತಮಾನವಿದೆ

ಕಾಬೂಲ್ ಪಟ್ಟಣದಲ್ಲಿ ಒಬ್ಬ ಗವರ್ನರನ್ನು ಕೊಂದು ಹಾಕಿದರೆಂದು ವರ್ತಮಾನ ಹುಟ್ಟಿದೆ

ಸವಾರಿ ಮಾಡುವವರಲ್ಲಿ ಇಂಡಿಯಾದಲ್ಲೆಲ್ಲಾ ಪ್ರಸಿದ್ಧಿಯಂ ಪಡೆದಿರುವ ಸಿಂಧಿಯಾ ಮಹಾರಾಜರವರು ಈಗ ೭ ಹುಲಿಗಳನ್ನು ಹೊಡೆದು ಕೊಂದರು

ಉತ್ತರ ಹಿಂದೂಸ್ಥಾನದಲ್ಲಿ ಖೋಟು ನಾಣ್ಯಗಳನ್ನು ತಯಾರ್ಮಾಡುತ್ತಿದ್ದವರು ಮೂವರು ಸಿಕ್ಕಿಹೋಗಿ ಅವರಲ್ಲಿ ಒಬ್ಬನಿಗೆ ೭ ವರುಷದ ಕಠಿಣಸಜಾ ಆಯಿತು

ಬಕ್ಸಾರ್ ಎಂಬಲ್ಲಿ ಈಗ್ಯೆ ೬೦ ವರುಷಗಳ ಕೆಳಗೆ ಕಟ್ಟಲ್ಪಟ್ಟಿದ್ದ ಒಂದು ಗೋರಿಯೊಳಗಿಂದ ಈಗ ಹೊಗೆ ಹೊರಡುತ್ತಲಿದೆ ಅನೇಕ ಮಹಮ್ಮದೀಯರು ಹೋಗಿ ಅದನ್ನು ಪೂಜೆಸುತ್ತಲಿದ್ದಾರಂತೆ

ನ್ಯೂಯಾರ್ಕ್ ದೇಶದಲ್ಲಿ ೬೦ ವರುಷಗಳಿಗೆ ಮೇಲ್ಪಟ್ಟ ಪ್ರತಿಯೊಬ್ಬ ಗಂಡಸಿಗೂ ಹೆಂಗಸಿಗೂ ಸರ್ಕಾರದಿಂದ ಒಂದು ವಿಧವಾದ ಪಿಂಛಿಣಿ ದೊರೆಯುತ್ತದೆ ಎಂಬದಾಗಿ ಕೇಳುತ್ತೇವೆ ಸರ್ಕಾರದವರು ಎಂಥಾ ದಯಾಳುಗಳು!

ಪರ್ಷಿಯಾ ದೇಶದ ದೊರೆಯು ತನ್ನ ಕುದುರೆಗಳಿಗೆಲ್ಲಾ ಬಂಗಾರದ ಲಾಳಗಳನ್ನು ಕಟ್ಟಿಸಿರುತ್ತಾನಂತೆ! ಅದೆಂಥಾ ಸಂತೋಷ!! ಇನ್ನುಮೇಲೆ ತನ್ನ ಗಾಡಿಗಳ ಚಕ್ರದ ಪಟ್ಟಿಗಳಿಗೂ ಚಿನ್ನವನ್ನೇ ಉಪಯೋಗಿಸುವನೋ ಏನೋ!!!

ಶೋಲಾಪುರ ಮ್ಯೂನಿಸಿಪಾಲಿಟಿಯವರು ಕೆಲವು ದಿವಸಗಳ ಕೆಳಗೆ ೨,೦೦೦ ರೂಪಾಯಿಗಳಿಗೆ ಒಂದು ಮನೆಯನ್ನು ಮಾಡಿಸಿ, ಈಗ ಅದನ್ನು ೨೦ ರೂಪಾಯಿಗೆ ಹರಾಜು ಹಾಕಿದರಂತೆ ಇಷ್ಟು ಉತ್ಸಾಹದಿಂದರೂ ಕೊಡುವದಕ್ಕೆ ಅವರಿಗೆ ಬಂದಿದ್ದ ದಾರಿದ್ರ್ಯವೇನೋ?

ಬರ್ಲಿನ್ ಪಟ್ಟಣದಲ್ಲಿ ಕೆಲವು ದಿವಸಗಳ ಕೆಳಗೆ ಶ್ರೀಮಂತನಾದ ಒಬ್ಬ ಯೌವನಸ್ಥನು ಬಡವಳನ್ನು ಮದುವೆ ಮಾಡಿಕೊಂಡನು ಅವನು ಎಳೇ ಮಗುವಾಗಿದ್ದಾಗ್ಯೆ ಅವನಿಗೆ ಆ ದಳು ಹಾಲುಕೊಟ್ಟು ಸಾಕುತ್ತಿದ್ದಳಂತೆ! ಹಾಗಾದರೆ ಅವಳ ಮೊಲೇ ಹಾಲಿನ ಉಪಕಾರವನ್ನು ಅವನು ಈಗಲೀಗ ಸಾರ್ಥಕ ಪಡಿಸಿದಂತಾಯಿತಲ್ಲವೆ?

ಪೂನಾ ಹೇಯಿಲ್ಲಿ ೯ ಮಂದಿ ಬೈರಾಗಿಗಳು ರಸ್ತೆಯಲ್ಲಿ ತಿರುಗುವ ಪುರುಷರನ್ನೆಲ್ಲಾ ಭಿಕ್ಷಕೊಡಿ ಎಂದು ಬಹಳವಾಗಿ ತೊಂದರೆ ಪಡಿಸುತ್ತಲಿದ್ದಾರೆಂದು ಅಲ್ಲಿನ ಪೋಲೀಸಿನವರು ಅವರನ್ನು ದಸ್ತಗಿರಿ ಮಾಡಿ ಅವರಿಗೆ ಎಂಟೆಂಟು ದಿನಗಳ ಜೈಲಿನ ಶಿಕ್ಷೆ ವಿಧಿಸಿದರಂತೆ ನಿಜವಾಗಿಯೂ ಈ ಬೈರಾಗಿಗಳು ಅಷ್ಟು ತೊಂದರೆ ಕೊಡುತ್ತಾ ಇದ್ದರೆ? ಎಂದು ಊಹಿಸಬೇಕಾಗಿದೆ

ಬ್ರಾಹ್ಮಣರು ತಮ್ಮ ಸತ್ತ ಬಂಧುಗಳ ಅಸ್ಥಿಬೂದಿಗಳನ್ನು ಕಾಶೀಗಂಗೆಯಲ್ಲಿ ಹಾಕುವದರಲ್ಲಿ ಕುತಾಕಿಗಳಾಗಿ ಅವುಗಳನ್ನು ಭಾಂಗಿಮಾಡಿ ಕಾಶೀಪಟ್ಟಣಕ್ಕೆ ಟಪ್ಪಾಲ್ ಮೇಲೆ ಕಳುಹಿಸುವದಾದರೆ ಅಲ್ಲಿನ ಒಬ್ಬ ಬ್ರಾಹ್ಮಣಜಾತಿಯವನು ಅದನ್ನು ಬಿಡದು ಗಂಗೆಯಲ್ಲಿ ಹಾಕುವದು ಸಾಧ್ಯವೆ? ಎಂಬದಾಗಿ ಪಂಜಾಬಿನ ಒಬ್ಬನೊಬ್ಬ ಬ್ರಾಹ್ಮಣನು ಪೋಸ್ಟ್ ಮ್ಯಾಸ್ಟರ್ ಜನರಲ್‌ರವರಿಗೆ ಅರ್ಜಿ ಬರೆದುಕೊಂಡಿದ್ದನೆಂಬದಾಗಿ ಈ ಪತ್ರಿಕೆಯ ಹಿಂದಣ ಸಂಚಿಕೆಯಲ್ಲಿ ಪ್ರಕಟಿಸಿದ್ದ ವಿಷಯವನ್ನು ವಾಚಕರು ಜ್ಞಾಪಕವಿಟ್ಟಿರಬಹುದು ಪೋಸ್ಟ್ ಮ್ಯಾಸ್ಟರ್ ಜನರಲ್‌ರವರು ಈ ಅರ್ಜಿಯನ್ನು ಪ್ರಾರಂಭಿಸಿ ಇಂಥಾ ಏರ್ಪಾಟು ಮಾಡುವದಕ್ಕಾಗುವದಿಲ್ಲವೆಂಬದಾಗಿ ಅರ್ಜಿದಾರನಿಗೆ ಹುಕುಂ ಕೊಟ್ಟಿರುತ್ತಾರೆ

ಮದರಾಸಿನಲ್ಲಿ ಇಂಡಿಯನ್ ಸೋಷಲ್ ರಿಫಾರ್ಮರ್ ಎಂಬುವೊಂದು ಪತ್ರಿಕೆಯು ಪ್ರಕಟವಾಗುತ್ತದೆ ಅದರಲ್ಲಿ ಬಹು ಭಯಂಕರ ವಾದ ಒಂದು ವರ್ತಮಾನವು ಪ್ರಕಟಿಸಲ್ಪಟ್ಟಿದೆ ಅದೇನಂದರೆ—ಒಬ್ಬ ಬ್ರಾಹ್ಮಣ ಹೆಂಗಸು ಜೊತೆಯಲ್ಲಿ ತನ್ನ ಅಣ್ಣನನ್ನು ಕರೆದುಕೊಂಡು ಪೋಲಚಿಯಿಂದ ಕೊಯಮುತ್ತೂರಿಗೆ ತನ್ನ ತವರುಮನೆಗೆ ತಾನು ಗರ್ಭಿಣಿಯಾಗಿದ್ದದರಿಂದ ಹೆರಿಗೆಗಾಗಿ ಹೋಗುತ್ತಿದ್ದಳು ಆದರೆ ಅವಳಿಗೆ ದಾರಿಯಲ್ಲೇ ಪ್ರಸವವೇದನೆ ಪ್ರಾರಂಭವಾದ್ದರಿಂದ ದಾರಿಯಲ್ಲಿದ್ದ ಒಂದು ಹೊಲದ ಗುಡಿಸಲಿನೊಳಕ್ಕೆ ಹೋದರು ಆಗ್ಯೆ ಹೊಲದಲ್ಲಿ ಕೈರು ಕೊಯ್ಯುತ್ತಿದ್ದ ಒಬ್ಬನು ಇದನ್ನು ನೋಡಿ ಆ ಗುಡಿಸಲಿನ ಬಾಗಲನ್ನು ಹೊರಗಡೆಯಿಂದ ಚಿಲುಕ ಹಾಕಿಕೊಂಡು ಹೋದನು ಒಳಗಿದ್ದ ಅಣ್ಣತಂಗಿಯರಿಬ್ಬರೂ ಅದನು ಚಿಲುಕ ಹಾಕಿಕೊಂಡು ಹೋದದ್ದು ಏನೋ ಅಪಾಯವೆಂದು ಊಹಿಸಿ ಹೆದರಿದವರಾಗಿ, ಅಣ್ಣನು ತಂಗಿಯ ನಗನಾಣ್ಯಗಳನ್ನೆಲ್ಲಾ ಅವಳಿಂದ ತೆಗೆದುಕೊಂಡು ಆ ಗುಡಿಸಲಿನ ಮೇಲ್ ಛಾವಣಿಯನ್ನು ಮುರಿದು ಹೊರಕ್ಕೆ ಬಂದು ಒಂದು ಮರದ ಮೇಲೆ ಹತ್ತಿ ಮರೆಯಾಗಿಕೊಂಡು ಕೂತುಕೊಂಡನು ಕೂಡಲೇ ಬಾಗಲು ಚಿಲುಕ ಹಾಕಿಕೊಂಡು ಹೋಗಿದ್ದ ಹೊಲದವನು ತನ್ನ ಜೊತೆಯಲ್ಲಿ ಇನ್ನಿಬ್ಬರು ಘಾತಕರನ್ನು ಕರೆದುಕೊಂಡು ಬಂದು ಬಾಗಲನ್ನು ತೆರೆದು ಅಸ್ವಸ್ಥಳಾಗಿ ಒಳಗಿದ್ದ ಸ್ತ್ರೀಯು ಮಗುವನ್ನು ಹೆತ್ತಿದ್ದಳು ಮತ್ತು ಆಯಾಸದಿಂದ ಸಂಕಟ ಪಡುತ್ತಿದ್ದಳು ಈ ಸ್ಥಿತಿಯಲ್ಲಿದ್ದ ಹೆಂಗಸಿನ ಬಳಿಗೆ ಈ ಮೂವರೂ ಹೋಗಿ–ನಿನ್ನ ಆಭರಣಗಳನ್ನು ಎಲ್ಲಿ ಇಟ್ಟುಕೊಂಡಿದ್ದೀ? ಕೊಡು, ತಡವಾದರೆ ಕೊಲ್ಲುತ್ತೇವೆ ಎಂಬದಾಗಿ ಅವಳನ್ನು ಪೀಡಿಸಿದರು ಅವಳು ಪಾಪ! ಏನೂ ಪ್ರತ್ಯುತ್ತರ ಹೇಳಲಾರದ ತನ್ನ ದೇಹಸ್ಥಿತಿಯಿಂದ ಒಂದು ಸೇಲಿತಲ್ಲ ಎಂದು ಸಂಕಟಪಡಲಾರಂಭಿಸಿದಳು ಆ ಘಾತುಕರು ಅಷ್ಟಕ್ಕೇ ಬಿಡದೆ ಅವಳನ್ನು ಎಳೆದು ಮಗುವನ್ನು ಕೊಂದರು ಆಯ್ಯೋ! ಅವಳ ದುಃಖವನ್ನು ಆಗೆತ್ತೋ ಪರಮೇಶ್ವರನಿಗೇ ವೇದ್ಯವು! ಅನಂತರ ಅವಳಿದ್ದರೆ ತಮ್ಮ ಕೃತ್ಯವು ಬಯಲಾಗುವುದೇನೋ ಎಂದು ಆಲೋಚಿಸಿ ಆಕೆಯನ್ನೂ ಕತ್ತರಿಸಿ ತುಂಡು ತುಂಡು ಮಾಡಿದರು ಅಷ್ಟರಲ್ಲೇ ಆ ಮಾರ್ಗವಾಗಿ ಒಂದು ಜಟ್ಕಾ ಗಾಡಿಯೊಳಗೆ ನಾಲ್ಕು ಜನ ಕೂತುಕೊಂಡು ಹೋಗುತ್ತಿದ್ದರು ಮರದ ಮೇಲಿದ್ದವನು–ಇಲ್ಲಿ ಕೊಲೆಯಾಗಿದೆ ಎಂಬದಾಗಿ ಘಟ್ಟಿಯಾಗಿ ಕೂಗಿಕೊಂಡನು ಅವರು ಈ ಧ್ವನಿಯನ್ನು ಕೇಳಿ ಗಾಡಿಯನ್ನು ನಿಲ್ಲಿಸಿ ಇಳಿದುಬಂದು ಆ ಸ್ಥಳವನ್ನು ನೋಡಿದರು ಆಗ ಎರಡು ಶವಗಳನ್ನೂ ಕಂಡು ವಿಸ್ಮಯಾಪಾದರು ಘಾತಕರೋ, ಆಭರಣಗಳನ್ನಿಟ್ಟುಕೊಂಡು ಒಂಟಿಯಾಗಿ ಸಂಚರಿಸಬಾರದೆಂಬುವದಕ್ಕೆ ಇದೂ ಒಂದು ದೃಷ್ಟಾಂತವಾಗಲಿಲ್ಲವೆ!

ಬೆಂಗಳೂರು ವೃತ್ತಾಂತಗಳು.

ಕಾಲಸ್ಥಿತಿ—ಭಗವದನುಗ್ರಹದಿಂದ ೧೫–೨೦ ದಿವಸಗಳಿಂದಲೂ ಇಲ್ಲಿಯೂ, ಮತ್ತು ಸುತ್ತು ಮುತ್ತು ಪ್ರದೇಶಗಳಲ್ಲಿಯೂ ಒಳ್ಳೇ ಮಳೆಯು ಆಗುತ್ತಾ ಬರುತ್ತದೆ ಭೂಮಿಯು ತಂಪಾಗಿ ರೋಗೋಪದ್ರಗಳಿಗೆ ಶಮನವೂ, ಕೆರೆ ಕಟ್ಟೆಗಳಿಗೆ ನೀರೂ, ದನಕರುಗಳಿಗೆ ಮೇವೂ, ಜನರಿಗೆ ಹರ್ಷವೂ, ರೈತರಿಗೆ ಅನುಕೂಲವೂ ಉಂಟಾಗಿದೆ ಕೆಲವು ದಿನಗಳಿಗೆ ಮುಂಚೆ ಆಕಾಶದ ಕಡೆಗೆ ಆಸ್ತಿತ್ತು ನಿಟ್ಟಿಸುತ್ತಾ ಬಿಸುತ್ತಿದ್ದ ಜನಗಳೆಲ್ಲರೂ ಈಗ ಜಗತ್ಪಾಲಕನಾದ ಜಗದೀಶನ ದಯವನ್ನು ಘಟ್ಟಿಯಾಗಿ ನೆನೆಯುತ್ತಿದ್ದಾರೆ

ಉತ್ಪಾತ—ಏಪ್ರಿಲ್ ೨೯ ಮತ್ತು ಮೇ ೫–೬ ನೆ ತಾರೀಖುಗಳಲ್ಲಿ ಬಲವಾದ ಮಳೆಯು ಗಾಳಿಯೂ ಬೀಸಿ ಅನೇಕ ಹಳೇ ಮರಗಳನ್ನೂ, ಹೊಸಮರಗಳ ಕೊಂಬೆಗಳನ್ನೂ, ಮುರಿದು ಹಾಕಿತು ಮತ್ತು ಕೆಲವು ಹೆಂಚಿನ ಮನೆಗಳ ಹೆಂಚುಗಳು ಹಾರಿ ಹೋದವು ಅಲ್ಲದೆ ತೀಕ್ಷ್ಣವಾದ ಸಿಡಿಲಿನ ಪೆಟ್ಟಿನಿಂದ ನೀರು ತರುವದಕ್ಕೆ ಹೋಗುತ್ತಿದ್ದ ಒಬ್ಬ ಹುಡುಗನೂ, ಹೊಲದಲ್ಲಿ ಉಳುತ್ತಿದ್ದ ಒಂದು ಎತ್ತೂ, ಮರದಡಿಯಲ್ಲಿ ನಿಂತಿದ್ದ ಒಬ್ಬ ಮನುಷ್ಯನೂ, ಸತ್ತುಹೋದರು ಮತ್ತು ಈ ತಿಂಗಳು ೧೫ ನೆ ತಾರೀಖಿನಲ್ಲಿ ತಾಲ್ಲೂಕು ಮಾಗಡಿಗೆ ಸೇರಿದ ಸರಸೀಪುರ ಎಂಬ ಗ್ರಾಮದಲ್ಲಿ ಬಿದ್ದ ಒಂದು ಸಿಡಿಲಿನ ಪೆಟ್ಟಿನಿಂದ ಒಂದು ಬಲವಾದ ಮನೆಯ ಗೋಡೆಗೆ ಸುಮಾರು ೧|| ಅಂಗುಲ ತೂತು ಬಿದ್ದು ಕೊಠಡಿಯಲ್ಲಿ ಪ್ರವೇಶಿಸಿ ಅಲ್ಲಿದ್ದ ಎರಡು ಹೋರಿಗಳನ್ನು ಹತಮಾಡಿತು ಸಮೀಪದಲ್ಲಿದ್ದ ಒಬ್ಬ ಹೆಂಗಸು ಮೂರ್ಛಿತಳಾಗಿ ಇನ್ನೂ ಮಾತನಾಡದೆ ಇದ್ದಾಳೆ ಪ್ರಾಣಮಾತ್ರ ಉಳಿದಿದೆ

ಜೂಜುಕೋರರು—ಈ ವಾರದಲ್ಲಿ ಹನಿಕೆರೆ ಸಂತೆಯಲ್ಲಿ ಪ್ರಮಾಣಾಲಾಗಿ ಸೇರುತ್ತಿದ್ದ ಜೂಜುಕೋರರು ತಮ್ಮ ಆಟಗಳನ್ನು ಆಡುವದಕ್ಕೆ ಅವಕಾಶವಾಗಲಿಲ್ಲವೆಂಬುವಂಥಾ ಸಮಾಚಾರವು ಸಂತೋಷವನ್ನು ಹುಟ್ಟಿಸುತ್ತದೆ ಈ ಅಂಶವನ್ನು ಇಲ್ಲಿನ ಅಧಿಕಾರಿಗಳು ಪರಾಂಬರಿಕೆಗೆ ತೆಗೆದುಕೊಂಡು ಇದಕ್ಕೋಸ್ಕರವಾಗಿ ಕಸಬಾ ಸ್ಟೇಷನ್‌ನಿಂದ ಸ್ಪೆಷಲ್ಲಾಗಿ ಪ್ರತಿ ವಾರದಲ್ಲಿಯೂ ಒಬ್ಬ ಪೋಲೀಸ್ ಕಾನಸ್ಟೇಬಲನ್ನು ನೇಮಕ ಮಾಡುವ ಪಾಡಿಕೆಯನ್ನಿಟ್ಟು ಈ ವಾರದಲ್ಲಿ ಬುದ್ಧಿವಂತನಾದ ಒಬ್ಬ ಪೋಲೀಸ್ ಕಾನಸ್ಟೇಬಲನ್ನು ನೇಮಿಸಿ ಕಳುಹಿಸಿದ್ದರು. ಈತನು ತನಗೆ ವಿಧಾಯಕವಾದ ಡ್ಯೂಟಿಯ ಮೇಲೆ ಹೋದದ್ದಲ್ಲದೆ ಮುಖ್ಯವಾಗಿ ಪ್ರಜಾ ಕ್ಷೇಮದ ಮೇಲೆ ದೃಷ್ಟಿಯಿಟ್ಟು ಇತರ ಯಾವ ದುರ್ಮಾರ್ಗಿಗಳಿಗೂ ಆಸ್ಪದವೇ ಇಲ್ಲದಂತೆ ಜನಗಳು ನೆರೆದಿದ್ದ ಭಾರೀ ಸಂತೆಯಲ್ಲಿ ಬಹು ಜಾಗರೂಕನಾಗಿ ಸಂಚರಿಸುತ್ತಾ ಅನ್ಯರ ಸ್ವತ್ತುಗಳನ್ನು ಅಪಹರಿಸಲಿಕ್ಕೆ ಅಲ್ಲಲ್ಲಿ ತಿರುಗುತ್ತಲಿದ್ದ ಗಂಟು ಕಳ್ಳರ ಮೇಲೆಯೂ ಜನಗಳನ್ನು ಮರುಳುಮಾಡಿ ನೂರಾರು ರೂಪಾಯಿಗಳನ್ನು ಕಸುಕೊಳ್ಳುವದಕ್ಕೆ ಪ್ರಯತ್ನ ಮಾಡುತ್ತಿದ್ದ ನಾಲ್ಕೈದು ಜನ ಜೂಜುಕೋರರ ಮೇಲೆಯೂ ಪೂರ್ಣ ನಿಗಾಯಿಟ್ಟು ಅವರಿಗಾವರೂ ಮತ್ತು ಅವರ ಸಹಕಾರಿಗಳಿಗಾದರೂ ಸ್ವಲ್ಪವಾದರೂ ಅಸ್ಪದಕೊಡದೆ ಆಟಗಳನ್ನು ನಿಲ್ಲಿಸಿದನು ಈ ಪಹರೆ ಸಂತೆಯಲ್ಲಿ ಅನೇಕರಿಗೆ ಪ್ರಯೋಜನವಾಯಿತೆಂಬ ಹರ್ಷವಾದ ಸುದ್ದಿಯು ಅಲ್ಲಿ ನೆರೆದಿದ್ದ ಪ್ರತಿಯೊಬ್ಬನ ಬಾಯಿಯಲ್ಲಿಯೂ ಇದು ಪದವಾಗಿತ್ತು ಇದಲ್ಲವೇ ಬುದ್ಧಿವಂತರಾದ ಪೋಲೀಸಿನವರ ಕೆಲಸ! ಇನ್ನೂ ಮುಂದೆ ನೋಡಬೇಕಾಗಿದೆ ಅದು ಹ್ಯಾಗೂ ವಿರಲಿ ಇರಲಿ ೧೧೭೬ನೇ ನಂಬರ್ ಹ|| ಕಾ|| ಪೋಲೀಸ್ ಕಾನ್ಸ್ಟೇಬಲ್ ಅಬ್ದುಲ್‌ರಹಿಮಾನ್ ಸಾಹೇಬರ ಗುಣವು ಬಹು ಪ್ರಶಂಸನೀಯವಾದದ್ದೆಂದು ಹೇಳಬೇಕಲ್ಲವೆ ಗ್ಯಾಂಬ್ಲಿಂಗ್ ಆಕ್ಟ್ ಜಾರಿಯಲ್ಲಿದ್ದರೂ ಪೇಟೆ ಪೇಟೆಗಳಲ್ಲಿ ಇತರ ದುರ್ಮಾರ್ಗಗಳಿಗೆ ಒಳಪಟ್ಟು ಪ್ರಜೆಗಳಿಗೆ ಅನೇಕ ನಷ್ಟವನ್ನು ಉಂಟುಮಾಡುವಂಥಾ ಎಲ್ಲಾ ಪೋಲೀಸಿನವರಿಗೂ ಇದು ಒಳ್ಳೇ ಮೇಲ್ಪಂಕ್ತಿಯಾಗಿದೆ ಇಂಥವರಿಗೆ ಪ್ರೋತ್ಸಾಹ ಕೊಡುವ ವಿಷಯದಲ್ಲಿ ಅಲ್ಲಿನ ಅಧಿಕಾರಿಗಳು ಸದರಿ ಪೋಲೀಸ್ ಕಾನ್ಸ್ಟೇಬಲ್ಲಿನ ಒಳ್ಳೇ ನಡತೆಯ ವಿಷಯದಲ್ಲಿ ಪರಾಂಬರಿಕೆ ತೆಗೆದುಕೊಳ್ಳದೆ ಇರಲಾರರೆಂದು ನಂಬುತ್ತೇನೆ ಆದ್ದರಿಂದ ಸದರಿ ಭಾರಿ ಸಂತೆಗೆ ಇನ್ನು ಮೇಲೆ ಯೋಗ್ಯರಾದ ಇಬ್ಬರು ಕಾನಸ್ಟೇಬಲನ್ನಾದರೂ ನೇಮಿಸುವಂತೆ ಏರ್ಪಡಿಸಿ ಈ ರೀತಿಯಲ್ಲಿ ಅಲ್ಲಿನ ಸಮಸ್ತ ಜನರುದ್ಧರು ಇಲ್ಲಿನ ಪ್ರಜಾ ಕ್ಷೇಮವನ್ನು ಚಿಂತಿಸುವರೆಂದು ನಿರೀಕ್ಷಿಸುತ್ತೇನೆ

ವಸೂಲೀ ಏರ್ಪಾಡು—ಈ ತಾಲ್ಲೂಕು ಮಾಲನಾಡು ಸೀಮೆಗೆ ಒಳಪಟ್ಟು ಸರಕಾರಕ್ಕೆ ಸುಮಾರು ೨೦–೨೫ ಸಾವಿರ ರೂಪಾಯಿಗಳು ರಾಜಾದಾಯ ಬರುವಂಥಾದ್ದಾಗಿದೆ ಮಲೆನಾಡು ಗಾಮನಗಳಲ್ಲಿಯೂ ರೈತಾಪಿ ಜನಗಳಲ್ಲಿಯೂ ಸಾಲೀಯಾನಾ ನಾಡುಸೀಮೆಯಲ್ಲಿ ತಂಗಿವಸೂಲ್ ಮಾಡುವರು ಸ್ವಲ್ಪ ಕಷ್ಟವಾಗಿದೆ ಇದಲ್ಲದೆ ಈ ತಾಲ್ಲೂಕಿನ ಕೆಲವು ಗ್ರಾಮಗಳ ಪ್ರಾನುಭೋಗದಾಗಳು ಬೇಲೂರ ನಿವಾಸಿಗಳಾಗಿಯೇ ಇದ್ದುಕೊಂಡಿರುವದರಿಂದ ತಮ್ಮ ತಮ್ಮ ಗ್ರಾಮಗಳಲ್ಲಿ ಕಾಲಕ್ಕೆ ಸರಿಯಾಗಿ ಹೋಗಿ ತಂಗೀ ವಸೂಲ್ ಮಾಡುವದು ಸಹಾ ಕಷ್ಟವಾಗಿದೆ ಆದರೂ ಇಲ್ಲಿನ ಅಮಲ್ದಾರ್ಯರಾದ ಮೆ|| ಸಿ ಚಾಂಡ್ಯ ಯ್ಯನವರು ಇದಕ್ಕೋಸ್ಕರವಾಗಿ ಬಹು ಶ್ಲಾಘನೀಯವಾದ ಏರ್ಪಾಡುಗಳನ್ನು ಮಾಡಿ ಜನಗಳನ್ನು ನೋಯಿಸದೆ ಬಾಯಿ ಮಾತಿನಿಂದ ಒರೆ ಹಾಕಿದರೆಂಬ ಗಾದೆಗೆ ಸರಿಯಾಗಿ ಉಪಾಯದಿಂದಲೇ ವಸೂಲ್ ಮಾಡಿಸುತ್ತಲಿದ್ದಾರೆ ತಾವು ಸಹಾ ತಮ್ಮ ದೇಹದ ಸುಖವೇಣಿಸದೆ ಅನೇಕಸಾರಿ ಬೆಳಗಿನ ಹೊತ್ತು ಸಮೀಪ ಗ್ರಾಮಾಂತರಗಳಿಗೆ ಪಾದಚಾರಿಗಳಾಗಿಯೂ ದೂರ ಗ್ರಾಮಗಳಿಗೆ ತಮ್ಮ ಅನುಕೂಲವಿದ್ದಂತೆಯೂ ಸಂಚಾರಮಾಡಿ ದಿನಂಪ್ರತಿ ತಮ್ಮ ಸಾಧಾರಣವಾದ ಕೆಲಸಗಳನ್ನು ನೆರವೇರಿಸುತ್ತಾ ಈ ರೀತಿಯಲ್ಲೂ ವಸೂಲ್ ಮಾಡಿಸುತ್ತಾರೆ ಇಷ್ಟು ಘಾರೀ ಮೊಬಲಗಿಗೆ ಸಾವಿರವೂ ಬಾಕ್ಸ್ರಾರಿ ಉಂಟೆಂತಲೂ ಮುಂದಿನ ವಾರದಲ್ಲಿ ಅದೂ ಫೈಸಲಾಗುತ್ತದೆಂತಲೂ ಹಿಂದೆ ಯಾವಾಗಲೂ ವಸೂಲೀ ವಿಷಯದಲ್ಲಿ ಇಂಥಾ ಸಲೀಸಾದ ಏರ್ಪಾಡುಗಳು ನಡೆದಿರಲಿಲ್ಲವೆಂತಲೂ ಸಾಲೀಯಾನಾ ಸರಕಾರಕ್ಕೆ ಸಾವಿರಾರು ರೂಪಾಯಿಗಳು ಬಾಕಿ ನಿಂತಿತ್ತೆಂತಲೂ ಈ ಅಮಲ್ದಾರರು ತಾಂಬೂ ಕ್ರಮ ತೆಗೆದುಕೊಂಡು ಈ ರೀತಿ ತಮ್ಮ ಸಾಹಸದಿಂದ ನ್ಯಾಯವಾದ ತಮ್ಮ ಮಹನತ್ತನ್ನು ಸರಕಾರಕ್ಕೆ ತೋರಿಸಿದ್ದಾರೆಂತಲೂ ಜನರು ಮಾತನಾಡಿಕೊಳ್ಳುವವರಾಗಿದ್ದಾರೆ ಇದು ಶ್ಲಾಘನೀಯವಾದದ್ದೇ ಸರಿ

ಪ್ರಜಾಪಾಲನೆ—ಇಲ್ಲಿನ ಅಮಲ್ದಾರ್ಯರಾದ ಮೆ|| ಸಿ ಚಾಂಡ್ಯಯ್ಯನವರು, ಖೂನಿ, ಕಳವು, ದಗಾಬಾಜಿ, ಮುಂತಾದ ಘೋರ ಮೊಕದ್ದಮೆಗಳುಹೊರ್ತು ಸಾಧಾರಣವಾಗಿ ತಮ್ಮ ಕೋರ್ಟಿಗೆ ಫಿರ್ಯಾದಾಗುವ, ಯಾವ ಮೊಕದ್ದಮೆಯನ್ನಾದರೂ ಸಾವಧಾನದಿಂದ, ಕ್ರಮಪ್ರಕಾರ ಚೆನ್ನಾಗಿ ನ್ಯಾಯವಿಚಾರಿಸಿ, ಕಡೆಯಲ್ಲಿ ಕಕ್ಷಿಗಾರರಿಬ್ಬರಿಗೂ, ಏಕ್ದರಿಕೆಯೊಂದಿಗೆ ಬುದ್ಧಿ ಮಾತಿನಿಂದ ಸಮಾಧಾನವಾಗಿ ಕಳುಹಿಸುವವರಾಗಿದ್ದಾರೆ ಈ ಮಾಸ್ತೆಯಿಂದ ಈ ನಾಡುಸೀಮೆಯಲ್ಲಿ ಹೀಗೆ ನೀತಿಯೂ, ಪ್ರೀತಿಯೂ ಉಳ್ಳವರಾಗಿ ಪ್ರಜಾ ಪಾಲನೆ ಮಾಡುತ್ತಾ ಬರುವದರಿಂದ ಕಕ್ಷಿಗಳು ಯಾದಾದರೂ ಸರಿಯೇ ತಮ್ಮ ತಮ್ಮ ಗ್ರಾಮಗಳಲ್ಲಿ ಸಮಾಧಾನವಾಗಿ ಕೇವಲ ಸಾಧನೆಗಳಿಲ್ಲದ ಸ್ವಸ್ಥಿತಿಯಾಗಿ ಜೀವನ ಮಾಡಿಕೊಳ್ಳುವವರಾಗಿದ್ದಾರೆ ಅಲ್ಲದೆ ಮಾರಾಮಾರಿ, ಜುಲುಂ, ಕಲಹ, ಗದ್ದಲ ಮುಂತಾದ ಸಂದರ್ಭಗಳಲ್ಲಿ ಈ ತಾಲ್ಲೂಕ್ ಕಚೇರಿಗೆ ಫಿರ್ಯಾದು ಹೋಗುವದಕ್ಕಿಂತಲೂ ಮನೆಯಲ್ಲಿರುವದೇ ಉತ್ತಮವೆಂದು ಅನೇಕರು ಫಿರ್ಯಾದಿಗೂ ಬರುವದಿಲ್ಲ ಅಂಥಾ ಕೃತ್ಯಗಳಿಗೆ ಪ್ರೇರಣೆಯಾಗುವವರೂ ಇಲ್ಲ, ಇದಲ್ಲವೇ ಬುದ್ಧಿವಂತರಾದ ಅಮಲ್ದಾರ್ರ ಕೆಲಸ? ಇದನ್ನು ಎಷ್ಟು ಹೇಳಿದರೂ ತೀರದ್ದಾಗಿದೆ

ಆಶ್ಚರ್ಯವಾದ ಕಳವು—ಕಳೆದ ತಿಂಗಳು ೨೩ ರಲ್ಲಿ ತಾಲ್ಲೂಕ್ ಮಜಕೂರ ಚಿಕ್ಕ ಮೇಡಿಗೆರೆಯೆಂಬ ಗ್ರಾಮದಲ್ಲಿರುವ ವೆಂಕಟೇಶ್ವರಯ್ಯನವರ ಮನೆಯಲ್ಲಿ ಸುಮಾರು ೧೫೦೦ ರೂಪಾಯಿನ ಮಾಲುಗಳು ಕಳುವಾಗಿ ಹೋಯಿತೆಂದು ಕಸಬಾ ಹೆಡ್ ಸ್ಟೇಷನ್ನಿಗೆ ಫಿರ್ಯಾದು ದಾಖಲಾಯಿತು ಪೋಲೀಸ್ ಇನ್ಸ್ಪೆಕ್ಟರರವರು ಈ ಮೊಕದ್ದಮೆಯ ತನಿಖೆಯಲ್ಲಿದ್ದಾರೆ ಇದಕ್ಕೋಸ್ಕರ ಸೂಪರಿಂಟೆಂಡೆಂಟ್ ಸಾಹೇಬರವರು ಸಹಾ ಬಂದು ೯ ದಿವಸಗಳು ಇರುವವರಾಗಿದ್ದರು

ಇದು ಆಶ್ಚರ್ಯವಾದ ಮೊಕದ್ದಮೆಯೆಂದು ಜನರು ನಾನಾವಿಧವಾಗಿ ಮಾತನಾಡಿಕೊಳ್ಳುತ್ತಾರೆ ಹ್ಯಾಗೆಂದರೆ ಫಿರ್ಯಾದಿಯು ತಾನು ಕಳೆದುಕೊಂಡ ಮಾಲುಗಳು ಅಷ್ಟೂ ತನ್ನ ಮನೆಯಲ್ಲಿ ಇರಲಿಲ್ಲವೆಂತಲೂ ಹೊಸದಾಗಿ ಮದುವೆಯಾದ ಆತನ ಮಗಳು ತನ್ನ ಮಗಳ ಮೈಮೇಲೆ ಧರಿಸಿದ್ದ ಸುಮಾರು ೨೦೦ ರೂಪಾಯಿಗಳ ನಗಗಳಲ್ಲಿ ಕೆಲವನ್ನು ಗೃಹಕೃತ್ಯಸಮ್ಮಂಧವಾದ ಕೊರತೆಗೋಸ್ಕರ ಮತ್ತೊಬ್ಬರಲ್ಲಿ ಅಡವಾದ ಇಟ್ಟಿತ್ತಿದ್ದರೂ ನಾಳೆಯ ೨ನೆ ದಿವಸ ಬೆಂಗಳೂರಿನಿಂದ ಅಳಿಯನು ಬಂದು ತನ್ನ ಹೆಂಡತಿಯನ್ನು ತಾನಿಟ್ಟ ನಗಗಳೊಂದಿಗೆ ಕಳುಹಿಸಬೇಕೆಂದು ಕೇಳಿದಾಗ ಮಾವನಿಗೂ, ಅಳಿಯನಿಗೂ ಆ ದಿನ ಅರ್ಧರಾತ್ರಿ ಪರಿಯಂತರವೂ ಚರ್ಚೆ ನಡೆದು ಸದರೀ ಒಡವೆಗಳು ಇಲ್ಲವೆಂದು ಹಟಬಿದ್ದು, ಮಾರಣೇದಿನ ಉದಯವಾಗುವದಕ್ಕಿಂತ ಮುಂಚಿತವಾಗಿಯೇ ತಮ್ಮ ಮನೆಗೆ ಯಾರೋ ಕಳ್ಳರು ನುಗ್ಗಿ ಮೇಲ್ಕಂಡ ೧೦೦೦ ಸಾವಿರ ರೂಪಾಯಿಗಳ ಮಾಲುಗಳನ್ನು ತೆಗೆದುಕೊಂಡು ಹೋಗಿದ್ದಾರೆಂದು ಫಿರ್ಯಾದು ತಿಳಿಸಿದರು ಸರ್ಕಾರದವರು ಫಿರ್ಯಾದಿಯನ್ನು ವಿಚಾರಿಸುವಾಗ ಆ ರಾತ್ರಿ ತಾವು ದಂಪತಿಗಳೇ ವರ್ಗರೂ ಶಯನಿಸುವ ಗೃಹದಲ್ಲಿ ನಗಗಳನ್ನು ಇಟ್ಟುಕೊಂಡಿದ್ದ ಸಾಧಾರಣವಾದ ಒಂದು ಪೆಟ್ಟಿಗೆಯನ್ನು ಕಾಣೆವೆಂತಲೂ, ಯಾವೂ ಬರಲಿಲ್ಲ, ಬಾಗಿಲು ತೆರೆದಿತ್ತೆಂತಲೂ, ಅಳಿಯನು ಮಾತ್ರ ಬಾಗಿಲು ಸಮೀಪ ಮಲಗಿದ್ದನೆಂತಲೂ, ಆತನಿಗೆ ತಿಳಿಯದ ಒಳಗೆ ಯಾರೂ ಪ್ರವೇಶಿಸಲಾರರೆಂತಲೂ, ಈ ರೀತಿ ಅಳಿಯನ ಮೇಲೆ ಅನುಮಾನವಾದ ಅಪಾಸ್ವಭಾವದ ವಾಙ್ಮೂಲ ಕೊಟ್ಟನು ಈ ಮಾವನಿಗಿಂತಲೂ ಅಳಿಯನ ಯೋಗ್ಯತೆ ಬಹು ಗಂಭೀರವಾದದ್ದಾಗಿತ್ತು ಆವರು ವಿದ್ಯಾಭ್ಯಾಸದ ಇಲಾಖೆಯ ಒಬ್ಬ ಉದ್ಯೋಗಸ್ಥರಾಗಿ ತಮ್ಮ ಹೆಂಡತಿಯನ್ನು ಕರೆದುಕೊಂಡು ಹೋಗುವ ಉದ್ದಿಷ್ಟ ಕಾರ್ಯದ ಮೇಲೆ ಬಂದು ಬಹು ಇಕ್ಕಟ್ಟು ಪ್ರಾಪ್ತಿಸಿ ಬಣಾವವೂ ಹೇಳ, ಪಟ್ಟಾರದ ಲಾಭವೂ ಬೇಡ, ಕೊಂಡೀ ತಪ್ಪಿದರೆಸಾಕು ಎಂಬ ಗಾದೆಗೆ ಸರಿಯಾಗಿ ಅಳಿಯನಿಗೆ ಹೆಂಡತಿಯೂಬೇಡ, ಆಕೆಗೆ ಗಂಡನೂ ಬೇಡ ಮೋಡ ಒಡವೆಗಳೆಲ್ಲಾ ಹಾಳಾಗಿ ಹೋಗಲಿ, ಅನ್ನಿಸ್ಸು ಬಿಟ್ಟುಬಿಟ್ಟರೆ ಸಾಕು ಎಂದು ಅಳಿಯನ ಗತಿ ವಿಪರೀತವಾಯಿತು ಕಳೆದುಕೊಂಡರೆಂಬ ಮಾಲುಗಳಲ್ಲಿ ಕೆಲವು ಒಬ್ಬ ಅಕ್ಕಸಾಲಿಗನ ಮನೆಯನ್ನು ಶೋಧನೆ ಮಾಡಿದಾಗ ಸಿಕ್ಕಿದವು ಸದರಿ ನಗಗಳನ್ನು ಫಿರ್ಯಾದಿಯು ತಾನೇ ಆ ಉದ್ಯೋಗಸ್ಥನ ಕೈಯಲ್ಲಿ ಕೊಟ್ಟಿದ್ದದ್ದು ತಿಳಿದು ಬಂತು

ಹೀಗೆ ಎರಡುಮೂರುಸಾರಿ ತನ್ನ ಮೂರುಜನ ಅಳಿಯಂದರಿಗೂ ಇದೇರೀತಿ ಮಾಡಿದಾಗ ಅವರು ತಮ್ಮ ನಗಗಳನ್ನು ಕೇಳುವದನ್ನು ಬಿಟ್ಟು, ಹೆಂಡತಿಯರನ್ನೂ ಸಹಾ ಬಿಟ್ಟು ಹೊರಟುಹೋದರೆಂಬುವ ಸಮಾಚಾರ ಎಲ್ಲರಿಗೂ ತಿಳಿಯದ ಅಂಶವಲ್ಲ, ಒಳ್ಳೇ ಮಾವ? ಒಳ್ಳೇ ಅಳಿಯ? ಅಂದರಾಗಿ ಅಯಿತೆಂದು ಹೇಳುತ್ತಾರೆ ಹೀಗಿರುತ್ತಾ ನಿಷ್ಪ್ರಯೋಜನವಾಗಿ ಸರ್ಕಾರದವರಿಗೆ ತಾಂಬೂಲ್ರಮ ಕೊಟ್ಟಿದ್ದಾಗಾಯಿತು ಈ ಸಂಗತಿಗಳೆಲ್ಲಾ ನಿಜವಾಗಿದ್ದ ಪಕ್ಷದಲ್ಲಿ ವಿಚಾರಣೆ ಮಾಡುವ ಆಫೀಸರರು ಇದರ ನಿಶ್ಚಯತ್ವವನ್ನು ಸಂಪೂರ್ಣವಾಗಿ ತಿಳಿದುಕೊಂಡು ಹೀಗೆ ಸುಳ್ಳುಫಿರ್ಯಾದು ತಂದವರಿಗೆ ಸತ್ಯಕ್ಕೆ ಗುಂಪಾಡಿದಲ್ಲಿ ಅನೇಕರಿಗೆ ಎಚ್ಚರಿಕೆಯೂ, ಸರ್ಕಾರದವರಿಗೆ ಶ್ರಮನಿವಾರಣೆಯೂ ಆಗದೇ ಇರಲಾರದು

ಶಾಲೀವಾಹನಶಕ ೧೮೧೫ ನೇ ವಿಜಯನಾಮ ಸಂವತ್ಸರದ ಜ್ಯೇಷ್ಠ ಬಹುಳ ಬಿದಿಗೆ ಗುರುವಾರದಿಂದ ಜ್ಯೇಷ್ಠ ಬಹುಳ ಅಷ್ಟಮಿ ಬುಧವಾರದ ವರೆಗಿನ ವಾರದ ಪಂಚಾಂಗ.

೧೮೯೩ ನೇ ಇಸವಿ, ಜೂನ್.

ತಾ.	ವಾರ.	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.	ವೃಷಭ ಮಾಸ ತೇದಿ.
1	ಗು.	ಬಿ.	42-39	ಮೂ.	6-25	14
2	ಶು.	ತ	17-3	ಪೂ.	9-81	15
3	ಶ	ಚ.	19-13	ಉ.	13-26	16
4	ರ.	ಪಂ	23-19	ಶ್ರ.	18-32	17
5	ಸೋ.	ಷ.	27-48	ಧ.	24-29	18
6	ಮಂ.	ಸ.	32-50	ಶ.	31-0	19
7	ಬು.	ಅ.	37-58	ಪೂ.	37-36	20

ಪೇಟೆ ಧಾರಣೆ.

ದಿನಸಿ.	ಮೈಸೂರು. ರೂ. ಆ. ಪೈ.	ಬೆಂಗಳೂರು. ರೂ. ಆ. ಪೈ.
ಕಡ್ಡಿ ಅಕ್ಕಿ ಪಲ್ಲ ೧ಕ್ಕೆ	೧೨-೧೨-೦	೧೧-೮-೦
ಕೆಂಬೂತಿ ಅಕ್ಕಿ ಅವ್ವಲ್	೧೧-೮-೦	೧೦-೪-೦
ಡಿಟೋ ಅಕ್ಕಿ ದುಯಂ	೧೦-೦-೦	೯-೧೨-೦
ಜೀರಸಾಳೆ ಅಕ್ಕಿ	೧೨-೧೨-೦	೯-೮-೦
ಸಣ್ಣಕ್ಕಿ ಅವ್ವಲ್	೧೩-೦-೦	೧೩-೮-೦
ಡಿಟೋ ಅಕ್ಕಿ ದುಯಂ	೧೨-೦-೦	೧೧-೮-೦
ತೊಗರಿಬೇಳೆ ಪಲ್ಲ ೧ಕ್ಕೆ	೧೧-೮-೦	೧೨-೦-೦
ಡಿಟೋ ದುಯಂ ತರಹ	೧೧-೦-೦	೧೦-೦-೦
ಹೆಸರಾಗಿ ಪಲ್ಲ ೧ಕ್ಕೆ	೪-೦-೦	[illegible]
ರಾಗಿ	೩-೧೨-೦	೩||೧೪-೦-೦
ಹಲಸಂದೆ ಪಲ್ಲ ೧ಕ್ಕೆ	೯-೧೨-೦	೧೦-೪-೦
ಬಿಳೇ ಅವರೆ	೧೨-೮-೦	೧೦-೧೨-೦
ಹೆಸರು	೧೦-೦-೦	೯-೧೩-೦
ಉದ್ದು	೧೨-೮-೦	೧೦-೧೦-೦
ಕಡಲೆ	೧೧-೦-೦	೧೦-೨-೦
ಎಳ್ಳು	೧೩-೮-೦	೧೪-೦-೦
ಹುರುಳಿ	೬-೪-೦	೬-೧೬-೦
ನೆಲಗಡಲೆಕಾಯಿ ಮಣ ೧ಕ್ಕೆ	೧-೧೪-೦	೧-೧೪-೦
ಮೆಣಸಿನಕಾಯಿ	೩-೬-೦	೨-೧೨-೦
ದುಯಂ ತರಹ	೩-೨-೦	೨-೮-೦
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ	೪-೮-೦	ವ೦ ೧-೪-೦
ಸಣ್ಣ ಅಚ್ಚು ,,	೪-೦-೦	೩||೧-೫-೦
ಬೆಳ್ಳುಳ್ಳಿ ಮಣ ೧ಕ್ಕೆ	೫-೮-೦	೫-೦-೦
ಹರಳೆಣ್ಣೆ	೪-೪-೦	೪-೦-೦
ಕೊತ್ತುಂಬರಿ ಪಲ್ಲ ೧ಕ್ಕೆ	೮-೮-೦	೯-೧೦-೦
ಉಪ್ಪು	೯-೬-೦	೯-೬-೦
ಹುಣಸೇಹಣ್ಣು ಮಣ ೧ಕ್ಕೆ	೧-೧೨-೦	೧-೧೨-೦
ಹಳೇ ಹುಣಸೇಹಣ್ಣು ,,	೧-೧೦-೦	೧-೧೦-೦
ತುಪ್ಪ	೧೩-೮-೦	೧೩-೦-೦
ಸೀಮೆ ಎಣ್ಣೆ ಟಿನ್ನು ೧ಕ್ಕೆ	೪-೪-೩	೩-೧೫-೦
ತೆಂಗಿನಕಾಯಿ ೧೦೦ಕ್ಕೆ	೬-೦-೦	೪-೮-೦
ಚಿನ್ನ (ತೊಲ)		
ಕೆಂಪು	೧೬-೮-೦	೧೬-೯-೦
ಹಸಿರು	೧೬-೧೨-೦	೧೬-೧೩-೦
ಗಟ್ಟಿ	೧೭-೮-೦	೧೭-೬-೦

Mysore.—Printed and published for the Proprietor at the Wesleyan Mission Press.
1/6/93.

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು — ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೬. ಮೈಸೂರು ಸ ೧೮೯೩ ನೇ ಇಸವಿ ಜೂನ್ ತಾರೀಖು ೮ ನೇ ಗುರುವಾರ. ಸಂಚಿಕೆ ೨೩.

ನೋಟೀಸ್.

		ಕ್ರಯ			ಅಂಚೆಯು ಸಹಿತವಾಗಿ		
Campbell's.	ಕನ್ನಡ ವ್ಯಾಕರಣ ಸಾರ	೦	೨	೦	೦	೨	೬
Object Lessons.	ವಸ್ತು ಬೋಧೆಗಳು	೦	೧	೦	೦	೧	೬
Picture do	ಚಿತ್ರಗಳು ಸಹಿತವಾಗಿ	೦	೨	೦	೦	೨	೬

ಈ ಮೂರು ಪುಸ್ತಕಗಳು ಪ್ರೈಮರಿ ಶಾಲೆಗಳಲ್ಲಿ ಓದತಕ್ಕ ಪುಸ್ತಕಗಳು.

ಸ್ತ್ರೀಯರು ಓದತಕ್ಕ ಪುಸ್ತಕ	೦	೫	೦	೦	೫	೬
ಗಣಿತ ವಿದ್ಯೆವು ..	೦	೪	೦	೦	೪	೬
ಗಣಿತ ಮುಗ್ಗಿಗಳು ..	೦	೧	೦	೦	೧	೬
ಸಂಸ್ಕೃತ ಕರ್ನಾಟಕ ಭಾಷಾಮಂಜರಿ	೦	೨	೦	೦	೨	೬
ಭೂಗೋಳ ಶಾಸ್ತ್ರ ಪ್ರಶ್ನೋತ್ತರ	೦	೨	೯	೦	೨	೬
ಇಂಗ್ಲೀಷೂ ಕನ್ನಡವೂ ಕಲಿಯುವವರ ೧ನೇ ೨ನೇ ಭಾಗಗಳು	೦	೧	೦	೦	೧	೬
ಕಾವ್ಯಮಾಲೆ (Minor Poetical Anthology)	೦	೮	೦	೦	೮	೬
ಶಾಲಾವ್ಯಾಕರಣ ..	೦	೫	೦	೦	೫	೬
ಹಳಗನ್ನಡ ವ್ಯಾಕರಣ ಸೂತ್ರಗಳು	೦	೬	೩	೦	೬	೬
ಇಂಗ್ಲೀಷೂ ಕನ್ನಡವೂ ಸಂಭಾಷಣ ವಾಕ್ಯಗಳು	೦	೧೦	೦	೦	೧೦	೬
ಶಬ್ದಮಣಿ ದರ್ಪಣ ..	೧	೦	೦	೧	೪	೬
Kan. Eng. Pocket Dictionary	೧	೪	೦	೧	೫	೬
Eng. Kan. School Dictionary	೨	೧೦	೦	೨	೧೨	೬
ಒಳ್ಳೇ ತಾಯಿ ..	೦	೪	೪	೦	೪	೬
ಆತ್ಮಿಕ ದಿವ್ಯ ಚರಿತ್ರೆ (Bunyan)	೦	೧೨	೦	೦	೧೪	೬
ಕ್ರೈಸ್ತ ಪದ್ಧತಿ ೧ನೇ ಭಾಗ ೨ ಅಣ ೩ನೇ ಭಾಗ	೦	೧	೬	೦	೨	೦
ಭಕ್ತಿಸಾರ ..	೦	೧	೦	೦	೧	೬
ಸತ್ಯ ವಾಗ್ದಾನ	೦	೧	೦	೦	೧	೬
ಕಾವ್ಯಪುಂಜ ..	೦	೩	೦	೦	೩	೬

A new Edition of the Geography suited for the Lower Secondary Examination is now ready.—Edited by Rev. H. Gulliford. Price 6 As.

ಮೇಲೆ ನಮೂದಿಸಿರುವ ಪುಸ್ತಕಗಳನ್ನು ಬೆಂಗಳೂರು ದಂಡಿನ ಪೋಸ್ಟಾಫೀಸಿನ ಹತ್ತಿರವಿರುವ ಪುಸ್ತಕ ಶಾಲೆಯಲ್ಲಿ ಪಡೆಯ ಬಹುದು.

ನೋಟಿಸ್.

ಪುಸ್ತಕಗಳು.	ಕ್ರಯ.
ಪ್ರಾಸ್ತಾವ್ಯ ಮಾಲಿಕೆ	1—8—0
ಕನ್ನಡ ಇಂಗ್ಲೀಷು ನಿಘಂಟು 1 ನೇ ದೊಡ್ಡ ತರಹ	3—0—0
„ „ 2 ನೇ ತರಹ	2—8—0
ಬಾಲಕರು ಓದುವ ಎರಡನೆ ಪ್ಯಾಸೋದಾಹರಣ ಪ್ರಶ್ನೋತ್ತರಗಳು	0—1—0
ಸಭೆಯ ನಿಗಮಗಳನ್ನು ಕುರಿತದ್ದು	0—0—6
ಕಥಾ ಸಂಗ್ರಹ 1 ನೇ ಭಾಗದಿಂದ 3 ವರೆಗೆ	1—0—0
ಕಥಾ ಸಂಗ್ರಹ 4 ರಿಂದ 6 ನೇ ಭಾಗ ಹೊಸ ಛಾಪು	1—0—0
„ „ ದೊಡ್ಡ ತರಹ	1—8—0
ಬೋಧಕಾಸಕ್ತಿ ಬೋಧಿನಿ	0—4—0
ಸತ್ಯವೇದವನ್ನು ಕುರಿತು 2 ನೇ ಭಾಗ	0—4—0
ಪ್ರಸಂಗಿಯ ದರ್ಪಣ	0—6—0
ಇಂಗ್ಲೀಷುಭಾಷೆಯಲ್ಲಿಯೂ, ಕನ್ನಡ ಭಾಷೆಯಲ್ಲಿಯೂ, ಶಬ್ದಗಳ ವಿಭಾಗಗಳನ್ನು ವಿವರಿಸುವ ನಿಘಂಟು	0—2—0
ಕನ್ನಡ ವ್ಯಾಕರಣ (ಇಂಗ್ಲೀಷಿನಲ್ಲಿ)	2—0—0
ಹಿಂದುಸ್ತಾನಿ ವ್ಯಾಕರಣ	1—0—0
ಬಾಲಚಾರ ಸೋಪಾನವು	0—0—6
ಜನ ಕರುಣಾ ಅಂಟುರೋಗವಿಚಾರ	0-12—0
ಕ್ರಿಸ್ತರ ಬೋಧನೆಗಳ ಸಮಾಂಕವು	0-12—0

ಮೇಲೆ ನಮೂದಿಸಿರುವ ಪುಸ್ತಕಗಳನ್ನು ಅಪೇಕ್ಷಿಸುವವರು ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್ಸಿಗೆ ಬರೆದು ತರಿಸಿಕೊಳ್ಳಬಹುದು. ಅಂಚೇ ಹಾಸಲು ಬೇರೆ ಕೊಡಬೇಕು.

ವೆಸ್ಲಿಯನ್ ಮಿಷನ್ ಪ್ರೆಸ್,
ಮೈಸೂರು.

ವಿಶೇಷ ! ಓದಿನೋಡಿರಿ !! ಓದಿನೋಡಿರಿ !!!

ಅ ನು ಶಾ ಸ ನಿ ೕ ಕ ಪ ರ್ವ ವು ಪೂ ರ್ತೈ ಸಿ ತು.

ಶ್ರೀಕೃಷ್ಣರಾಜ ವಾಣೀವಿಲಾಸವೆಂಬ ಮಹಾಭಾರತವು ನಮ್ಮ ಶ್ರೀಚಾಮುಂಡೇಶ್ವರಿ ಪ್ರೆಸ್ಸಿನಲ್ಲಿ ಪ್ರಕಟವಾಗತಕ್ಕದ್ದು ಎಲ್ಲರಿಗೂ ವಿಶದವಾಗಿದ್ದೆಯಷ್ಟೆ. ಈಗ ಅನುಶಾಸನೀಕಪರ್ವವು ಚಾಮುಂಡೇಶ್ವರಿ ತಸ್ವೀರಿನಿಂದಲೂ ಮುದ್ರೆಗೆ ಯೋಗ್ಯವಾದ ಶಿಕ್ಷಾನಾರಿನ ಪುಟಬೈಂಡಿನಿಂದ ತಯಾರಾಗಿರುತ್ತೆ. ಸಭಾಪರ್ವ ವಿರಾಟಪರ್ವದ ಬುಕ್ಕುಗಳು ಮುಗಿದುಹೋದುದರಿಂದ ಪುನಹಾ ಎರಡನೆ ಛಾಪೆಯು ಪ್ರಾರಂಭವಾಗಿದೆ. ಈ ಕೆಳಗೆ ಕಂಡ ಪುಸ್ತಕಗಳು ನಮ್ಮಲ್ಲಿ ಸ್ವಲ್ಪವೇ ಇರುವದ್ದರಿಂದ ಇಚ್ಛೆಯುಳ್ಳವರು ತರಿಸಿಕೊಳ್ಳಬಹುದು. ಅನುಶಾಸನೀಕ ಪರ್ವ ಶಿಕ್ಷಾನಾರಿನ ಬೈಂಡ್ ೩—೧೨—೦ ಬೋರ್ಡ್ ಸೌಂದರಿ ಪರಿಶಿಷ್ಟೆಯ ಕೋಟ್ಸು ಕ್ರಯ ೮ ಅಣೆ

ಆದಿಪರ್ವ	..	ಕ್ರಯ	೩	೦	೦
ಸಭಾಪರ್ವ	..	„	೧	೪	೦
ವಿರಾಟಪರ್ವ	..	„	೧	೦	೦
ಭೀಷ್ಮಪರ್ವ	..	„	೨	೦	೦
ದ್ರೋಣಪರ್ವ	..	„	೨	೮	೦
ಸ್ತ್ರೀಪರ್ವ	..	„	೧	೨	೦
ಸೌಪ್ತಿಕಪರ್ವ	..	„	೦	೬	೦
ಸ್ತ್ರೀಪರ್ವ	..	„	೦	೬	೦
ಶಾಂತಿಪರ್ವ ರಾಜಧರ್ಮ	..	„	೨	೬	೦
„ ಆಪದ್ಧರ್ಮ	..	„	೦	೮	೦
„ ಮೋಕ್ಷಧರ್ಮ	..	„	೨	೬	೦

ಭಗವದ್ಗೀತೆ ೮, ಮಯೂರಿರಾಯರಚರಿತ್ರೆ ೪ ಅ.

ಎಂ. ರುದ್ರಪ್ಪ ಅಂಡ್ ಕೋ.
ಬಳೆಪೇಟೆರೋಡ್,
ಬೆಂಗಳೂರು

ಸ ೧೮೮೯ ರಲ್ಲಿ ಸ್ಥಾಪಿಸಲ್ಪಟ್ಟದ್ದು.

ಕೆನರಾ ಅಂಡ್ ಮೈಸೂರ ಟ್ರೇಡಿಂಗ್ ಏಜನ್ಸೀ ಆಫೀಸ್, ಮುಂಬಯಿ.

ಇವರು ತಯಾರಿಸಿರುವಂಥ—

ಹೈಮಧಾತ್ರೀತೈಲ.

ಕಳೆದ ಜನವರಿ ತಿಂಗಳೊಂದರಲ್ಲಿ ೪,೧೦೦ ಬಾಟ್ಲಿಗಳು ಖರ್ಚಾದವು. ಈ ತೈಲದ ಮಹತ್ವವನ್ನು ಕುರಿತು, ನಾವೀಗ ಹೆಚ್ಚಿಗೆ ವರ್ಣಿಸಲಾರೆವು—ಯಾಕಂದರೆ, ಯಾರು ಈ ತೈಲವನ್ನು ಉಪಯೋಗಿಸುತ್ತಾರೋ ಅವರಿಗೆ ಒಂದೆರಡು ದಿವಸಗಳಲ್ಲಿಯೇ ಇದರ ಅಪ್ರತಿಮವಾದ ಗುಣವು ಸಹಜವಾಗಿ ಅನುಭವಕ್ಕೆ ಬರುವದು. ಆದಾಗ್ಯೂ ಇದರ ಮುಖ್ಯವಾದ ಉಪಯೋಗವನ್ನು ತಿಳಿಸುವದು ನಮ್ಮ ಕರ್ತವ್ಯವಾಗಿರುತ್ತದೆ.

ಈ ನಮ್ಮ "ಹೈಮಧಾತ್ರೀ ತೈಲವನ್ನು" ಪ್ರತಿದಿನ ತಲೆಗೆ ಹಾಕಿಕೊಂಡರೆ ಮಿದುಳಿನಲ್ಲಿರುವ ಉಷ್ಣತೆಯನ್ನು ಪರಿಹರಿಸುವದಲ್ಲದೇ, ಕಣ್ಣಿಗೂ, ಮಿದುಳಿಗೂ ತಂಪುಕರಿಸಿ, ಚಿತ್ತಕ್ಕೆ ಶಾಂತತೆಯನ್ನುಂಟುಮಾಡುವದು. ಮತ್ತು ಕಣ್ಣುಗಳಿಗುಂಟಾಗುವ ಸಾಮಾನ್ಯವಾದ ವಿಕಾರಗಳನ್ನೆಲ್ಲ ಪರಿಹರಿಸುವದು. ದೃಷ್ಟಿಗೆ ತೀವ್ರತೆಯುಂಟಾಗುವದು.

ಹೆಚ್ಚಾಗಿ ಓದತಕ್ಕವರಿಗೂ, ಒಂದೇ ಸಮನಾಗಿ ಕಣ್ಣಿಟ್ಟು ಕೆಲಸ ಮಾಡತಕ್ಕ ಕಸಬುಗಾರರಿಗೂ, ಕಣ್ಣುಗಳಲ್ಲಿ ನೀರು ಸುರಿಯುವವರಿಗೂ, ಉರಿಗಣ್ಣಿನವರಿಗೂ, ಚಿತ್ತವ್ಯಗ್ರವಾದವರಿಗೂ, ಅತ್ಯಂತ ಗುಣಕಾರಿಯಾಗಿರುವದು. ಈ ತೈಲದಲ್ಲಿರುವ ಇನ್ನೊಂದು ಅಪ್ರತಿಮವಾದ ಶಕ್ತಿಯೇನಂದರೆ—ಕೂದಲುಗಳನ್ನು ನಯವಾಗಿಯೂ, ಹೊಳೆಯುವಂತೆಯೂ, ಮಾಡುವದಲ್ಲದೇ ಬೆಳವಣಿಗೆಯನ್ನು ಹೆಚ್ಚಿಸುವದು. ಕೂದಲುಗಳ ಬೇರುಗಳನ್ನು ಘಟ್ಟಿಮಾಡಿ, ಅವು ಉದರಿಹೋಗದಂತೆ ಮಾಡುವದು.

ಪ್ರತಿಯೊಂದು ಬಾಟ್ಲಿಯೊಳಗೆ ೧೬ ತೊಲೆ ತೈಲವಿರುವದರಿಂದ ಒಬ್ಬನಿಗೆ ೨ ತಿಂಗಳು ಹಚ್ಚಿಕೊಳ್ಳಲಿಕ್ಕೆ ಸಾಕಾಗುವದು. ಬಡಬಗ್ಗರು ಸಹ ಕೊಂಡುಕೊಳ್ಳಲಿಕ್ಕೆ ಅನುಕೂಲವಾಗಿರಬೇಕೆಂಬದಕ್ಕಾಗಿ ಪ್ರತಿಯೊಂದು ಬಾಟ್ಲಿಗೆ ೧೦ ಆಣೆ ಕ್ರಯವಿಟ್ಟಿರುತ್ತೇವೆ. ೧೨ ಬಾಟ್ಲಿಗಳುಳ್ಳ ೧ ಪೆಟ್ಟಿಗೆಗೆ ೬॥ ರೂಪಾಯಿ. ಪ್ರತಿಯೊಬ್ಬ ಕುಟುಂಬಿಗನೂ, ಈ ತೈಲವನ್ನು ಉಪಯೋಗಿಸುವದು ಅವಶ್ಯವಾಗಿರುತ್ತದೆ. ಮಕ್ಕಳುಮರಿಗಳಿಗೆ ಸಹ ಈ ತೈಲವು ಸುಖಾವಹವಾಗಿರುತ್ತದೆ.

ಈ ತೈಲ ಮತ್ತು ಈ ಕೆಳಗೆ ಬರೆಯುವಂಥ ಔಷಧಗಳು, ಡ್ರೆಸ್ಸು, ಮುತ್ತು, ರತ್ನ, ಬಂಗಾರ, ಬೆಳ್ಳಿ ಮುಂತಾದ ಸಾಮಾನುಗಳನ್ನು ಪಡೆಯಲಿಚ್ಛಿಸುವವರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬೇಕು.

ಮ್ಯಾನೇಜರ್, ಕೆನರಾ ಅಂಡ್ ಮೈಸೂರು ಟ್ರೇಡಿಂಗ್ ಏಜನ್ಸಿ ಆಫೀಸ್, ಮಾರ್ಕೆಟ್ ಪೋಸ್ಟ್. ಮುಂಬಾಯಿ.

☞ ಈ ತೈಲವನ್ನು ನಮ್ಮ ವಿನಹ ಇನ್ಯಾರೂ ಮಾಡಲಾರರು. ನಮ್ಮ ಹೆಸರಿನ ಗುರ್ತನ್ನು ನೋಡಿ ತೆಗೆದುಕೊಳ್ಳಬೇಕು. ಬೇರೇತರದ ಎಣ್ಣೆಗಳನ್ನು ಈ ಹೆಸರನ್ನಿಟ್ಟು ಮಾರುತಿದ್ದರೆ ಜಾಗ್ರತೆ ಪಡಿರಿ!

ಔಷಧಗಳು.	ರೂ. ಆ.	ಡ್ರೆಸ್ಸುಗಳು.	ರೂ. ಆ.
ಪಯನಾಮೃತಭಸ್ಮ ಬಾಟ್ಲಿ ೧ ಕ್ಕೆ	೧—೬	ಮಹಾಲಕ್ಷ್ಮೀಗೆ ಮಡಿ	೭—೮
ನಯನಾಮೃತ ಕಾಡಿಗೆ	೧—೬	ಕಲೇಸರ್ವಣ ಉಂಗಿಕೋಟು	೫—೦
ಕರ್ಣಸ್ರಾವನಾಶಕ ಅಪ್ರತಿಮತೈಲ	೧—೦	ಹಿತಿಲು. ಅರ್ಗಾನು	೪—೮
ಮೇಹಾಮೃತಕಷಾಯತೈಲ	೧—೦	ಹಿತಿಲು. ಸ್ಯಾಟ್‌ಕೋಟು (ಇಂಗ್ಲೀಷತರದು)	೪—೬
ಪ್ರಮೇಹಭಸ್ಮವು	೨—೧೨	ದಪ್ಪನಾದ ಕಷ್ಮೀರಿಕೋಟು	೨—೮
ವಿವಿಧವ್ರಣಹರಪಟ್ಟೀಕರಣ	೧—೦	ಹಿತಿಲು. ಅರ್ಗಾನು	೨—೪
ಬಾಲಸಂಜೀವಿನಿಗುಟಿಕೆ	೩—೮	ಫ್ಲಾನಲ್ ಕಮೀಸ	೧—೧೨
ಅಜೀರ್ಣನಾಶಕ್ಕ	೦—೮	ಹಿತಿಲು. ಬನಿಯನ್	೧—೪
ಸುಗಂಧಕಾರಕದಂತಮಂಜನವು	೦—೪	ಟೊಪ್ಪಿ (ಇಂಗ್ಲೀಷತರದು) ಫೆಲ್ಟ್	೦—೧೨
ಶುದ್ಧಿಭಾಷಾನುಪಾನವು	೭—೨		

ಅನುಕರಣಮಾದ ಚಂದ್ರಕಾಂತ ಚೀಲೆಯ ಕನ್ನಡಕಗಳ ಕ್ರಯ ರೂ. ೧೦—೩॥—೫—೩॥. ಉತ್ತಮವಾದ "ಇಸ್ಪೀಟು" ಎಂಬ ಹೆಸರಿನ ಗಡಿಯಾರವು (೧ ವರುಷದ ಜವಾಬ್ದಾರಿಕೆಯುಳ್ಳದ್ದು) ಕ್ರಯ ರೂ. ೬.

ವೃತ್ತಾಂತ ಪತ್ರಿಕೆ.

ಚಂದಾ ನಿರ್ಣಯ.

	ರೂ. ಆ. ಪೈ.
ಸ್ಥಳದವರಿಗೆ ವರ್ಷ ೧ಕ್ಕೆ ···	೧—೦—೦
ಪರಸ್ಥಳದವರಿಗೆ ವರ್ಷ ೧ಕ್ಕೆ ···	೧—೧೪—೦
ಬಿಡಿ ಪತ್ರಿಕೆ ೧ಕ್ಕೆ ···	೦—೦—೪

ಈ ಪತ್ರಿಕೆಯು ಮೈಸೂರು ರಾಜಧಾನಿಯಲ್ಲಿ ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ, ಪ್ರಕಟಿಸಲ್ಪಡುವದು. ಬಡವರು ಕೊಂಡುಕೊಂಡು ಸಮಸ್ತರಿಗೂ ಸುಲಭಸಾಧ್ಯವಾಗುವಂತೆ ಈ ಪತ್ರಿಕೆಗೆ ಇಷ್ಟು ಅಲ್ಪ ಮೌಲ್ಯವನ್ನು ನಿರ್ಣಯಿಸಿರುತ್ತೇವೆ. ಈ ಪತ್ರಿಕೆಯನ್ನು ಅಪೇಕ್ಷಿಸುವವರು ಚಂದಾಹಣವನ್ನು ಮುಂಗಡವಾಗಿ ಕಳುಹಿಸಬೇಕು.

ಎಡಿಟರ್,
ವೃತ್ತಾಂತ ಪತ್ರಿಕೆ.

ಜಗದ್ಗುರುವಿನ ಚರಿತ್ರ ಸಂಗ್ರಹ.

THE LIFE

OF

The Lord Jesus Christ.

Selected incidents from the Gospels,

FREELY PARAPHRASED.

ನೂತನವಾಗಿ ರಚಿಸಲ್ಪಟ್ಟ ೬೬ ಪುಟಗಳುಳ್ಳ ಈ ಪುಸ್ತಕವನ್ನು ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್ಸಿಗೆ ಬರೆದು ತರಿಸಿಕೊಳ್ಳಬಹುದು.

ಕ್ರಯ (ಟಪ್ಪಾಲ ಹಾಸಲ ಸಹಿತ)

೧೦೦ ಪ್ರತಿಗಳಿಗೆ	೫—೦—೦
ಬಿಡಿ ಪ್ರತಿ	೦—೧—೦

ಸುಮಾರು ೨—೩ ಪ್ರತಿಗಳನ್ನು ಅರ್ಧ ಆಣೆ ಸ್ಟಾಂಪಿನಿಂದ ಕಳುಹಿಸಬಹುದು.

ನೋಟಿಸ್.

ಇದರಿಂದ ಸಮಸ್ತ ಜನರಿಗೂ ತಿಳಿಸುವದೇನಂದರೆ:—

ಮೈಸೂರಲ್ಲಿ ಇರುವ ಕುರ್ಮದಾರ್ ಬಸಪ್ಪನವರ ಮಕ್ಕಳು ತಮ್ಮ ಬಾಬತು ಕುರುಬಾರಹಳ್ಳಿಯಲ್ಲಿ ಇರುವ ತೆಂಗಿನತೋಟವನ್ನು, ಪೇಟೆ ಅಗ್ರಹಾರದಲ್ಲಿ ಇರುವ ಮನೆಯನ್ನೂ ನಾಶ ಅಕ್ರಮವಾಗಿ ಪರಾಧೀನ ಮಾಡುವ ಪ್ರಯತ್ನದಲ್ಲಿ ಇದ್ದಾರೆ. ಅವರ ಆಸ್ತಿಯ ವಿಷಯದಲ್ಲಿ ಅವರ ಮೈನರ್ ಮಗನ ವ್ಯಾಜ್ಯವು ಕ್ರಮವಾಗಿ ಕೋರ್ಟಿನಲ್ಲಿ ದಾಖಲಾಗಿದೆ. ಆದದರಿಂದ ಯಾರಾದರೂ ಸದರಿ ಸಂಬಂಧವಾಗಿ ಅಧೀನ ಮಾಡಿಕೊಂಡ ಪಕ್ಷದಲ್ಲಿ ಆ ಆಸ್ತಿಯಲ್ಲಿ ಮೈನರಿನ ಹಿಸ್ಸೆ ಆಸ್ತಿ ಮೊಬಲಗಿಗೆ ಕ್ಷಾಮೀನುದಾರ ಎಂಬದಾಗಿ ಮೇಲ್ಕಂಡ ಮೈನರ್ ಗಾರ್ಡಿಯನ್ ... ಕೆಂಪಮ್ಮನವರು ಪ್ರಕಟನೆ ಮಾಡಿರುತ್ತಾರೆ.

ಮೈಸೂರು }
೮–೬–೯೩. }

ವೃತ್ತಾಂತ ಪತ್ರಿಕೆ.

ಮೈಸೂರು ಜೂನ್ ತಾ॥ ೮ ನೇ ಗುರುವಾರ.

ಇನಾಂದಾರರು ಮತ್ತು ಸೀರಿನವರ ಕಂದಾಯ.

ಈ ವಿಷಯವು ಅನೇಕ ಸಂದರ್ಭಗಳಲ್ಲಿ ... ದೊರೆತ ಅಧಿಕಾರಿಗಳಿಗೆ ಅನುಮಾನವನ್ನುಂಟುಮಾಡುವದಾಗಿದೆ. ಕೆಲವರು ಜಾರಿಯಲ್ಲಿರುವ ರೂಲ್ಸುಗಳ ಅಭಿಪ್ರಾಯವನ್ನು ಚೆನ್ನಾಗಿ ತಿಳಿದು ಇನಾಂದಾರರುಗಳಿಂದ ಅನ್ಯಾಯವಾದ ಕಂದಾಯಗಳನ್ನು ವಸೂಲ್ ಮಾಡಲು ಪ್ರಾರಂಭವುಂಟಾಗಿದೆ. ಆದದರಿಂದ ಇನಾಂದಾರರುಗಳು ಯಾವಾಗಲೂ ತಮ್ಮ ಆಪಾದನೆಗಳನ್ನು ಗೌರ್ನಮೆಂಟಿನವರಲ್ಲಿ ಹೇಳಿಕೊಳ್ಳುವದೂ, ಅನೇಕವೇಳೆ ಅವರೇ ತೀರ್ಮಾನ ಮಾಡುವದೂ ಅಪರೂಪವಾಗಿಲ್ಲ. ಅಧಿಕಾರಿಗಳೂ ಕೂಡ ನ್ಯಾಯವಾದ ತೀರ್ಮಾನಗಳನ್ನು ಮಾಡಲು ಅನುಮಾನಪಟ್ಟು ಕಾಗದ ಪತ್ರಗಳನ್ನು ನೇರಾ ಗೌರ್ನಮೆಂಟಿನವರಿಗೆ ಕಳುಹಿಸಿ ಕೊಡುತ್ತಾರೆ. ಇಂಥಾ ಒಂದು ವಿಷಯವು ಅಮಲ್ದಾರರಿಗೂ, ಇನಾಂ ಅಸಿಸ್ಟೆಂಟರಿಗೂ, ಡೆಪ್ಯುಟಿ ಕಮಿಷನರಿಗೂ ಇತ್ಯರ್ಥ ಮಾಡಲು ಅಸಾಧ್ಯವಾಗಿ, ಕೊನೆಗೆ ಅದಕ್ಕೆ ಸಂಬಂಧಪಟ್ಟ ಕಾಗದಪತ್ರಗಳನ್ನು ಗೌರ್ನಮೆಂಟಿನವರು ತರಿಸಿಕೊಂಡು ತೀರ್ಮಾನ ಮಾಡಿರುತ್ತಾರೆ. ಅದನ್ನು ಪ್ರಕಟಿಸುವದರಿಂದ ಅನೇಕರಿಗೆ ಉಪಯೋಗವಾಗಿರುವದೆಂದು ಅಭಿಪ್ರಾಯ ಪಡುತ್ತೇವೆ. ಅದೇನಂದರೆ—

ತಿರುಮಕೂಡ್ಲು ನರಸೀಪುರದ ತಾಲ್ಲೂಕಿಗೆ ಸೇರಿದ ತುರುಕರ ಹುಂಡಿಯಲ್ಲಿ ... ವ್ಯಾಗಾರು ... ಇವರ ಮಕ್ಕಳು ರಂಗಯ್ಯಂಗಾರ್ರು, ರಾಜಪರಮೇಶ್ವರೀ ಕಾಲುವೆ ಸೀರಿನಲ್ಲಿ ನಾಲಾ ಓವರ್ಸಿಯರು ತಮ್ಮ ಜಮೀನಿಗೆ ಕೊಡುವದಿಲ್ಲವೆಂದು ಮನವಿಗಳನ್ನು ಬರೆದುಕೊಂಡಿರುತ್ತಾರೆಂತಲೂ, ಇನಾಮತೀ ಸನ್ನದಿನಲ್ಲಿ ಕಂಡ ೧೯॥ ದಾಂಡೀ ಜಮೀನೂ ... ಕಾಲದಲ್ಲಿ ಪೂರಾ ತರೀ ಸಾಗುವಳಿ ಆಗುತ್ತಿತ್ತೆಂತಲೂ, ಹುಚಿಗೆ ಕೊಪ್ಪಲ ಕೆರೆ ಕಟ್ಟಿನ ಜಮೀನು ವಿನಹ ಉಳಿದ ಭಾಗದಲ್ಲಿ ಸಾಗುವಳಿ ಜರುಗುತ್ತಿದ್ದ ವರಮೇಲೆ ... ನೀರಿನ ಕಂದಾಯವನ್ನು ಕೇಳುತ್ತಿದ್ದಾರೆಂತಲೂ, ಆದಾಗ್ಯೂ ನಾಲಾ ಓವರ್ಸಿಯರು ಕಳೆದ ಐದುವರ್ಷಗಳಿಂದ ... ಗಾಯಿತು ಜಮೀನಿಗೆ ನೀರು ಕೊಡದೆ ಬಂದುಮಾಡಿ, ಮೂರು ಅಂಗುಲಪ್ರಮಾಣದ ಒಂದು ಮಡುವಾಯಿಯನ್ನು ಮಾತ್ರ ಬಿಟ್ಟಿರುತ್ತಾರೆಂತಲೂ, ಇದರಿಂದ ಬರತಕ್ಕ ನೀರು ತಮ್ಮ ಪೂರಾ ಜಮೀನಿಗೆ ಸಾಕಾಗುವದಿಲ್ಲವೆಂತಲೂ ಆದದರಿಂದ ಡೆಪ್ಯುಟೀ ಕಮಿಷನರವರು ... ಸ್ಥಳವನ್ನು ಪರಾಂಬರಿಸಿ, ಮಡುವಾಯಿ ಕೊಡುವಂತೆ ಓವರ್ಸಿಯರಿಗೆ ಹುಕುಂ ಮಾಡಬೇಕೆಂಬದಾಗಿ ಮತ್ತೊಂದು ಅರ್ಜಿ ಬರೆದುಕೊಂಡಿದ್ದರು. ಡೆಪ್ಯುಟೀ ಕಮಿಷನರವರು ಈ ಕಾಗದ ಪತ್ರಗಳನ್ನು ಮತ್ತು ಅಮಲ್ದಾರರವರು ನಡೆಸಿದ ಕಾಗದಪತ್ರಗಳನ್ನೂ ಮೈಸೂರು ಡಿವಿಜನ್ ಎಕ್ಸಿಕ್ಯೂಟಿವ್ ಇಂಜನಿಯರವರಿಗೆ ವ್ಯವಸ್ಥೆಗಾಗಿ ಕಳುಹಿಸಿಕೊಟ್ಟು, ಅರ್ಜಿದಾರರು ಪಡೆಯುತ್ತಿರುವ ನೀರು ಸಾಕಾಗದ ಪಕ್ಷದಲ್ಲಿ ಅವರಿಗೆ ನೀರು ಕೊಡಬೇಕೆಂತಲೂ, ಹಾಗೆ ಕೊಡತಕ್ಕದ್ದನ್ನು ಅವಕ್ಕೆ ಸಕಾರಣಗಳನ್ನು ತಿಳಿಸಬೇಕೆಂತಲೂ ಕೇಳಿದ್ದರು. ಈ ಕಾಗದ ಪತ್ರಗಳನ್ನೆಲ್ಲಾ ಎಕ್ಸಿಕ್ಯೂಟಿವ್ ಇಂಜನಿಯರು ಪರಾಂಬರಿಸಿ—ಅರ್ಜಿದಾರರ ಜಮೀನು ನಾಲೆಯ ಕೊನೇಭಾಗದಲ್ಲಿ ೩೦ ಎಕರೆಗಳಷ್ಟು ಇರುತ್ತದೆ; ನಾಲೆಯು ಹೀನಸ್ಥಿತಿಯಲ್ಲಿದ್ದದರಿಂದ ಆ ಪೈಕಿ ನಾಲ್ಕು ಎಕರೆಗಳಿಗೆ ಮಾತ್ರ ಸಾಕಾಗುವಷ್ಟು ನೀರು ಕೊಡಲ್ಪಡುತ್ತಿತ್ತು. ಆದರೆ ಸರ್ಕಾರದವರು ಈಚೆಗೆ ಹುಬ್ಬು ನಾಲೆಯನ್ನು ... ರೂಪಾಯಿ ಖರ್ಚುಮಾಡಿ ಸರಿಪಡಿಸಿರುತ್ತಾರಾದ್ದರಿಂದ ಈಗ ಇನಾಂದಾರರ ಜಮೀನು ಏಕಿಷ್ಟ ಪ್ರಸಾಗುವಳೀ ಆಗಬಹುದಾಗಿದ ಮತ್ತು ಮೊದಲು ಸಾಗುವಳಿ ಆಗುತ್ತಿದ್ದ ೪ ಎಕರೆಗಳು ಹಿಮಾಯಿ ಉಳಿದ ಜಮೀನಿಗೆ ಎಕರೆ ಒಕ್ಕೆ ೪ ರೂಪಾಯಿನ ಮೇರೆ ಇನಾಂದಾರರು ನೀರಿನ ಕಂದಾಯವನ್ನು ಒಪ್ಪಿದಲ್ಲಿ ಆಗ ನಾಲೆಯಿಂದ ಹಣವನ್ನು ... ಪ್ರಕಾರ ... ರೂಪಾಯಿ ಕೊಡುವದಕ್ಕೆ ಇನಾಂದಾರರು ಒಪ್ಪಿದಲ್ಲಿ ಸರ್ಕಾರದವರು ನೀರು ಕೊಡುವದು ನ್ಯಾಯವಾಗಿರುತ್ತದೆ, ಹಾಗಿಲ್ಲದೆ ಈಗ ನಾಲ್ಕು ನೀರೂ ಪಡೆಯುತ್ತಿರುವ ನೀರು ಪರಿಪೂರ್ಣ ಉಪಯೋಗಕ್ಕೆ ಬಂದದ್ದಲ್ಲ ಎಂಬದಾಗಿ ಡೆಪ್ಯುಟೀ ಕಮಿಷನರವರಿಗೆ ಜವಾಬು ಕೊಟ್ಟರು.

"ಇದರಮೇಲೆ ಡೆಪ್ಯುಟೀ ಕಮಿಷನರವರು ಈ ಕಾಗದಪತ್ರಗಳನ್ನೆಲ್ಲಾ ಗೌರ್ನಮೆಂಟಿನವರ ತಿಳುವಳಿಕೆಗೆ ತಂದು ಅದರಮೇಲೆ—ಇನಾಂದಾರರಿಂದ ೪ ರೂಪಾಯಿನ ಮೇರೆ ನೀರಿನವರಿಯನ್ನಾಗಲಿ ಅಥವ ನಾಲೆ ಕಾಪಗಾರೀ ಖರ್ಚಿನ ಪೈಕಿ ... ರೂಪಾಯಿಗಳನ್ನಾಗಲಿ ವಸೂಲ್ ಮಾಡುವದು ಸಮರ್ಪಕವಾದದ್ದಲ್ಲವೆಂತಲೂ, ಅದಕ್ಕೆ ಬದಲಾಗಿ ಎಕರೆಗೆ ೧॥ ರೂಪಾಯಿನ ಪ್ರಕಾರ ಒಟ್ಟು ೩೦ ರೂಪಾಯಿ ಕಂಟ್ರಿಬ್ಯೂಷನ್ ಹಾಕುವದು ಸಮಂಜಸವಾಗಿರುವಂತೆ ತಮಗೆ ತೋರುವದೆಂತಲೂ ತಮ್ಮ ಅಭಿಪ್ರಾಯವನ್ನು ಕೊಟ್ಟರು. ಗೌರ್ನಮೆಂಟಿನವರು ಈ ವಿಷಯಗಳನ್ನು ಪರಿಶೀಲನೆಮಾಡಿ—ಅರ್ಜಿದಾರರ ಇನಾಮತೀ ಜಮೀನು, ಸನ್ನದು ಹುಟ್ಟಿದ ಕಾಲದಲ್ಲಿ ಇದೇ ನಾಲೆಯ ನೀರಿನ ಮೂಲಕ ತರೀ ಸಾಗುವಳಿ ಆಗುತ್ತಿದ್ದದರಿಂದ ಈಗ ನೀರು ಕೊಡುವದಕ್ಕೆ ಅವರಿಗೆ ಹೆಚ್ಚು ಕಂಟ್ರಿಬ್ಯೂಷನ್ ವಿಧಿಸುವದು ಸರಿಯಲ್ಲ. ಈ ಸಂದರ್ಭದಲ್ಲಿ ಅಧಿಕಾರಿಗಳು ವಾಟರ್ ರೇಟಿಗೂ ಇರ್ರಿಗೇಷನ್ ಸೆಸ್ಸಿಗೂ ಇರುವ ಅಂತರ ವ್ಯತ್ಯಾಸವನ್ನು ಸರಿಯಾಗಿ ತಿಳಿದಿರುವಂತೆ ತೋರುವದಿಲ್ಲ. ವಾಟರ್ ರೇಟ್ ಎಂಬುದು ... ಇರ್ರಿಗೇಷನ್ ಸೆಸ್ಸೆಂಬುವದು ಟಾಪ್ಟೀ ಕಂದಾಯವನ್ನು ಮತ್ತು ನೀರಾವರಿಯನ್ನೂ ಬಿಟ್ಟು ವಹಿಸಿದ ಕಂದಾಯವಾಗಿರುತ್ತೆ. ಆದರೆ ಇನಾಮತೀ ಜಮೀನು ಪೂರ್ವದಲ್ಲಿ ಇದೇ ನಾಲೆಯ ಮೂಲಕ ತರೀ ಸಾಗುವಳಿ ಆಗುತ್ತಿತ್ತೆಂದು ಗೊತ್ತಾಗಿದ್ದಲ್ಲಿ ಅಂಥಾ ಜಮೀನಿಗೆ ಗೌರ್ನಮೆಂಟಿನವರು ನಾಲೆ ಕಾಮಗಾರಿ ಮಾಡಿಸಿರುತ್ತಾರೆಂದು ವಾಟರ್ ರೇಟನ್ನು ಗೊತ್ತುಮಾಡುವದಕ್ಕೆ ಗೌರ್ನಮೆಂಟಿನವರಿಗೆ ಹಕ್ಕು ಇರುವದಿಲ್ಲ. ಅರ್ಜಿದಾರರ ಇನಾಮತೀ ಜಮೀನು ನಾಲೆಕಾಮಗಾರಿ ಅದನಂತರ ತರೀ ಸಾಗುವಳಿಗೆ ಸಿದ್ಧವಾಗಿರುವದರಿಂದ ಅವರು ವಾಟರ್ ರೇಟನ್ನು ಕೊಡಬೇಕೆಂತ ಬೇಕು. ... ಉಪಯೋಗವಾಗಿಲ್ಲವಾದ್ದರಿಂದ ಇನಾಮತೀ ಜಮೀನು ಸಾಗುವಳಿ ಆಗದೆ ಇದ್ದ, ನಾಲೆಯನ್ನು ಗೌರ್ನಮೆಂಟಿನವರು ರಿಪೇರಿ ಮಾಡಿಸಿದ್ದಲ್ಲಿ, ಹಾಲಿ ಜಾರಿಯಲ್ಲಿರುವ ರೂಲ್ಸಿನ ಪ್ರಕಾರ ಇನಾಂದಾರರು ರಿಪೇರಿಯ ಖರ್ಚನ್ನು ದಾಮಾಷಾಯಿನ ಮೇರೆ ಕೊಟ್ಟು ನಾಲೆಯ ನೀರನ್ನು ಉಪಯೋಗ ಮಾಡಿಕೊಳ್ಳಬೇಕಾಗಿದೆ. ಈ ಖರ್ಚು ... ರೂಪಾಯಿ ಆಗುವದೆಂದು ಎಕ್ಸಿಕ್ಯೂಟಿವ್ ಇಂಜನಿಯರು ಅಭಿಪ್ರಾಯ ಪಡುತ್ತಾರೆ. ಆದರೆ ಡೆಪ್ಯುಟೀ ಕಮಿಷನರವರು ಸೂಚಿಸಿರುವ ಮೂವತ್ತು ರೂಪಾಯಿಗಳನ್ನು ಮಾತ್ರ ಇನಾಂದಾರರಿಂದ ವಸೂಲ್ ಮಾಡಿ ಬಾಕಿಯನ್ನು ಅವರಿಗೆ ರೆಮಿಷನ್ ಕೊಡಬಹುದಾಗಿದೆ ಎಂಬದಾಗಿ ಷರ್ಯರ ಹುಕುಂ ಮಾಡಿ ಇರುತ್ತಾರೆ. ಗೌರ್ನಮೆಂಟಿನವರ ಈ ತೀರ್ಮಾನವು ಬಹು ಸಮರ್ಪಕವಾದದ್ದೆಂತಲೂ, ಡಿಪೋ ಇನಾಂದಾರರಿಗೆ ಸಹಾಯಕವಾದದ್ದೆಂತಲೂ ಮತ್ತು ಇದರಿಂದ ಮುಂದೆ ಅಂಥಾ ವಿಷಯಗಳು ತೀರ್ಮಾನ ಮಾಡುವಲ್ಲಿ ಇದು ಡೆಪ್ಯುಟೀ ಕಮಿಷನರವರಿಗೆ ಸಹಾಯಕವಾಗುವದೆಂತಲೂ ನಿಸ್ಸಂದೇಹವಾಗಿ ಅಭಿಪ್ರಾಯ ಪಡುತ್ತೇವೆ.

ಬೆಂಗಳೂರು ಮ್ಯುನಿಸಿಪಲ್ ಮೀಟಿಂಗು.

ಬೆಂಗಳೂರು ಷಹರಿನ ಕಳೆದ ಮ್ಯುನಿಸಿಪಲ್ ಮೀಟಿಂಗಿನಲ್ಲಿ ಸ್ವಲ್ಪ ಗಲಭೆಯಾಗಿ ಕೆಲವು ಮಂದಿ ಮ್ಯುನಿಸಿಪಲ್ ಕಮಿಷನರುಗಳು ಎದ್ದು ಹೊರಟು ಹೋದರೆಂದು ಕೇಳುತ್ತೇವೆ. ಮ್ಯುನಿಸಿಪಲ್ ಮೀಟಿಂಗುಗಳಲ್ಲಿ ಕಮಿಷನರುಗಳು ಚರ್ಚಿಸತಕ್ಕ ವಿಷಯಗಳು ಯಾವಾಗಲೂ ಮೀಟಿಂಗು ನಡೆಯುವದಕ್ಕೆ ಒಂದು ವಾರದ ಮುಂಚೆ ಅವರಿಗೆ ತಿಳಿದು ಬರಬೇಕೆಂಬದಾಗಿ ಮ್ಯುನಿಸಿಪಲ್ ರಿಗ್ಯುಲೇಷನ್ ಹೇಳುತ್ತದೆ. ಆದಾಗ್ಯೂ ಅಷ್ಟು ದಿನಗಳ ಕಾಲವಿಳಂಬವಿಲ್ಲದೇನೇ ಪ್ರೆಸಿಡೆಂಟ್ರವರು ಮೀಟಿಂಗು ಮಾಡಿದರು. ಮೆಂಬರುಗಳು ಹಾಜರಾಗಿ ಮೀಟಿಂಗಿನಲ್ಲಿ ಚರ್ಚಿಸತಕ್ಕ ವಿಷಯಗಳನ್ನು ಕುರಿತು ಆಲೋಚನೆ ಮಾಡುವದಕ್ಕೆ ತಮಗೆ ಸಾಕಾದಷ್ಟು ದಿನಗಳು ಪುರಸತ್ತು ಕೊಟ್ಟಿಲ್ಲವಾದ್ದರಿಂದ, ಆ ಮೀಟಿಂಗು ನಡೆಸಕೂಡದೆಂದು ಮೀಟಿಂಗಿನಲ್ಲಿ ಹೇಳಿದರು. ಆಗ ಮೀಟಿಂಗು ನಡೆಸಬಹುದೆ, ಕೂಡದ ಎಂಬದಾಗಿ ಪ್ರಶ್ನೆ ಹುಟ್ಟಿತು. ೮ ಮಂದಿ ಕೂಡದೆಂತಲೂ, ೬ ಮಂದಿ ನಡೆಸಬಹುದೆಂತಲೂ ಹೇಳಿದರು. ಆಗ ಪ್ರೆಸಿಡೆಂಟ್ರವರು ಮೀಟಿಂಗು ನಡೆಸುವದೇ ಸಿದ್ಧವೆಂದು ತಮ್ಮ ಎರಡು ಸಮ್ಮತಿಗಳನ್ನೂ ಆ ೬ ಮಂದಿಗೇ ಸೇರಿಸಿದರು. ಆದಾಗ್ಯೂ ಉಭಯಪಕ್ಷದವರೂ ಒಂದೇ ಸಮನಾದರು. ಇಂಥಾ ಸಂದರ್ಭಗಳಲ್ಲಿ ಮೀಟಿಂಗನ್ನು ಮುಂದಕ್ಕೆ ಹಾಕತಕ್ಕದ್ದು ಎಲ್ಲರಿಗೂ ಸಹಜವಾಗಿರುತ್ತಿದ್ದಾಗ್ಯೂ ಪ್ರೆಸಿಡೆಂಟ್ರವರು ಮೀಟಿಂಗನ್ನು ನಡೆಸುವದಕ್ಕೆ ಪ್ರಾರಂಭಿಸಿದರು. ಆ ಕೂಡಲೆ ಕೆಲವು ಮಂದಿ ಕಮಿಷನರುಗಳು ಪ್ರೆಸಿಡೆಂಟರ ಅಪ್ಪಣೆ ಪಡೆದು ಹೊರಟು ಹೋದರು. ಉಳಿದ ಮೆಂಬರುಗಳನ್ನೇ ಇಟ್ಟುಕೊಂಡು ಪ್ರೆಸಿಡೆಂಟ್ರವರು ಆ ದಿನದ ಕೆಲಸಗಳನ್ನು ಜರುಗಿಸಿದರು. ಆದರೆ ಮೀಟಿಂಗನ್ನು ಬಿಟ್ಟು ಹೊರಕ್ಕೆ ಹೋದ ಮೆಂಬರುಗಳು ತಮ್ಮ ಆಕ್ಷೇಪಣೆಗಳನ್ನು ಬರೆದು ಮೀಟಿಂಗಿನ ಪ್ರೊಸೀಡಿಂಗ್ಸಿನ ಜೊತೆಯಲ್ಲಿ ಅವನ್ನು ಗೌರ್ನಮೆಂಟಿನವರ ತಿಳುವಳಿಕೆಗೂ ಮತ್ತು ಅವರ ತೀರ್ಮಾನಕ್ಕೂ ಒಪ್ಪಿಸಬೇಕೆಂದು ಪ್ರೆಸಿಡೆಂಟರಿಗೆ ಕೊಟ್ಟಿರುವರೆಂದು ... ಇದರಮೇಲೆ ಗೌರ್ನಮೆಂಟಿನವರು ಯಾವ ತೀರ್ಮಾನ ಮಾಡುವರೋ ನೋಡತಕ್ಕದ್ದಾಗಿದೆ. ಆದರೆ ವಿಷಯಗಳನ್ನು ಚನ್ನಾಗಿ ಗ್ರಹಿಸಿಕೊಂಡು ಮೀಟಿಂಗಿನಲ್ಲಿ ಸರಿಯಾದ ತೀರ್ಮಾನ ಮಾಡಬೇಕೆಂಬುವದೇ ಗೌರ್ನಮೆಂಟಿನವರ ತಾತ್ಪರ್ಯವಾಗಿರುತ್ತೆ. ಇದಕ್ಕಾಗಿಯೇ ಮೀಟಿಂಗ್ ನಡೆಯುವದಕ್ಕಿಂತ ಮುಂಚೆ ಕಮಿಷನರುಗಳಿಗೆ ಕಡೇಪಕ್ಷ ಒಂದುವಾರ ಕಾಲವಾದರೂ ಪುರಸತ್ತು ಇದ್ದೇ ಇರಬೇಕೆಂದು ವಿಧಾಯಕ ಮಾಡಿರುತ್ತಾರೆ. ಪ್ರೆಸಿಡೆಂಟ್ರವರು ಈ ವಿಧಿಯನ್ನು ತೀವ್ರವೂ ಹೀಗೆ ಯಾಕೆ ಮಾಡಿದರೋ ಊಹಿಸುವದಕ್ಕಾಗುವದಿಲ್ಲ. ಅಲ್ಲದೆ 'ಮೀಟಿಂಗಿನಲ್ಲಿ' 'ಹೆಚ್ಚು ಮಂದಿ ಯಾವವಿಷಯಕ್ಕೆ ರುಜು ಹಾಕುವರೋ ಅದನ್ನೇ ಪಾಸುಮಾಡಬೇಕಾದದ್ದು ಪ್ರೆಸಿಡೆಂಟ್ರವರ ಕೆಲಸವಾಗಿರುತ್ತೆ.' ಉಭಯ ಪಕ್ಷದವರೂ ಸಮಭಾಗಿಗಳಾಗಿ ಅದಲ್ಲಿ, ಆಗ ಆ ವಿಷಯವನ್ನು ತೀರ್ಮಾನಿಸುವದಕ್ಕೆ ಮತ್ತೊಂದುವರ್ತಿ ಚರ್ಚೆ ನಡೆದರೂ ನಡೆಯಬಹುದು. ಹ್ಯಾಗೂ ಗೌರ್ನಮೆಂಟಿನವರು ತಮ್ಮ ಸನ್ನಿಧಿಗೆ ಕಳುಹಿಸಲ್ಪಟ್ಟಿರುವ ಸಾಮಗ್ರಿಗಳನ್ನೆಲ್ಲಾ ಪರಿಶೀಲಿಸಿ, ತಾವು ಪ್ರಜೆಗಳಿಗೆ ದಯಪಾಲಿಸಿ ಕೊಟ್ಟಿರುವ ಹಕ್ಕುಗಳನ್ನು ಊರ್ಜಿತಪಡಿಸಲು ಬದ್ಧಕಂಕಣರಾಗಿರುತ್ತಾರೆಂಬ ಅಂಕಿತಕ್ಕೆ ಈ ಸಂದರ್ಭದಲ್ಲಿಯೂ ಕೂಡ ಕಾಂಬಿಕ ಬಾರದಂತೆ ತೀರ್ಮಾನ ಮಾಡುವರೆಂದು ನಂಬಿ ಇದ್ದೇವೆ.

ಸೋಮಾರಿಗಳಿಗೆ ಖಂಡನೆ.

ಧೂರ್ತರಿಗೆ ಬುದ್ಧಿಯನ್ನು ನೂರ್ಕಾಲ ಹೇಳಿದರೆ ಹೋಕ್ಕಲ್ಲಮೇಲೆ ಮಳೆಗರೆದಂತೆ ಕಲ್ಲು ನೀರ್ಗುಡಿಯಲಾರದೇ ಎಂಬದಾಗಿ ಸರ್ವಜ್ಞನೆಂಬ ಕವಿಯು ಹೇಳಿರುವದು ಸರಿಯಷ್ಟೆ. ಆದರೆ ಮೈಗಳ್ಳರಿಗೆ ಬುದ್ಧಿ ಹೇಳೋಣದರಿಂದ ಯಾವ ತರವಾದ ಪ್ರಯೋಜನವಾದರೂ ಬರಲಾರದೆಂದು ಜನರು ಸಾಧಾರಣವಾಗಿ ಹೇಳುವರು.

... ಭಗವಂತನ ಅಪ್ಪಣೆಯಮೇರೆಗೆ ಎಂಥಾ ಮೈಗಳ್ಳರಿಗಾದರೂ ಬುದ್ಧಿ ಮಾತುಗಳನ್ನು ತಿಳಿಸದೆ ಇರುವದಕ್ಕಾಗುವದಿಲ್ಲ. ಅಗತ್ಯಗತ್ಯವಾಗಿಯೂ ತಿಳಿಸಬೇಕಾದದ್ದು ನಮ್ಮ ಮುಖ್ಯವಾದ ಹಂಗಾಗಿರುತ್ತದೆ. ಅವರು ಮನಸ್ಸಿಟ್ಟು ಕೇಳಿದರೂ ಕೇಳದೆಹೋದರೂ ನಾವು ಅಂಥವರ ಮೇಲಿಗಾಗಿ ಮಾತುಗಳನ್ನು ಮಾಡಲೇಬೇಕು. ಹೇಳತಕ್ಕದ್ದನ್ನು ಹೇಳಬೇಕು. ಅಂಥಾ ಮೈಗಳ್ಳರನ್ನು ನಾವು ಪುರಸ್ಕರಿಸುವದರಿಂದ ನಮಗೇನೂ ಕ್ಷೇಮವಾಗುವದಿಲ್ಲ. ನಾವು ಅಂಥವರಿಗೆ ಬುದ್ಧಿಮಾತುಗಳನ್ನು ಹೇಳುವದರಿಂದ ನಮ್ಮ ಬುದ್ಧಿಯು ಅಲ್ಪವೇನಾದರೂ ಕೊರತೆಯಾಗುವದಿಲ್ಲ. ದೃಷ್ಟಾಂತರವಾಗಿ ಒಂದು ನೋಡಿರಿ ಬಂಜರು ಭೂಮಿಯನ್ನು ತಾತ್ಕಾಲದಲ್ಲಿ ಸಾಗುವಳಿ ಮಾಡುವದು ಪ್ರಧಮತಃ ಕಷ್ಟವೇ ಹೌದು (ಬಾಯಿ) ಆ ಭೂಮಿಯಲ್ಲಿ ಫಲವಾಗುವದು ಸಹಾ ಬಹು ಕಡಮೆಯೇ ಸರಿ, ಒಳ್ಳೇ ಭೂಮಿಯನ್ನು ಮಾತ್ರವೇ ಸಾಗುವಳಿಮಾಡಿ ಸಾಧಾರಣವಾದ ಭೂಮಿಗಳನ್ನೆಲ್ಲಾ ಬಿಟ್ಟು ಬಿಡೋಣದರಿಂದ ವ್ಯವಸಾಯಗಾರರ ಕೆಲಸವು ಬಹು ಕೊಂಚವಾಗಿರುವದಲ್ಲದೆ ಅವರು ವೃಥಾ ಕೆಲಸವಿಲ್ಲದೇನೆ ಸುಮ್ಮನೆ ನಿರುದ್ಯೋಗಿಗಳಾಗಿ ಕೂತುಕೊಳ್ಳಲೂ ಬೇಕಾಗುವದು. ಅದೇಪ್ರಕಾರ ಸಂಭಾವಿತರುಗಳಿಗೆ ಮಾತ್ರ ಬುದ್ಧಿ ಬೋಧನೆಗಳನ್ನು ಮಾಡುತ್ತಾ ಮೈಗಳ್ಳರುಗಳಿಗೆ ಬುದ್ಧಿ ಹೇಳದೆ ಇರುವದು ಸರಿಯಲ್ಲ ವಿಹಿತವೂ ಆಗಿರುವದಿಲ್ಲ. ಮುಖ್ಯವಾಗಿ ತಿಳುವಳಿಕೆ ಇಲ್ಲದವರಿಗೆ ತಿಳುವಳಿಕೆ ಹೇಳುವದೂ, ದಾರಿ ತಪ್ಪಿದವರಿಗೆ ದಾರಿ ತೋರಿಸುವದೂ ಮೈಗಳ್ಳರಾದವರಿಗೆ ಆಗ್ಯಾಗ್ಯ ಎಚ್ಚರಿಕೆ ಕೊಟ್ಟು ಖಂಡನೆಮಾಡುವದೂ ಸತ್ಪುರುಷರ ಧರ್ಮವಾಗಿರುತ್ತದೆ. ಮೈಗಳ್ಳತನವು ಮಣ್ಣು, ಹುಳು, ಊಕಲು ಜಿಗಟು ಮುಂತಾದ ... ಪ್ರಬಲವಾಗುತ್ತಾ ಬರುತ್ತದೆ. ಇದು ಒಂದು ವರ್ಗದಲ್ಲಿ ಇಲ್ಲವೇ ಒಂದು ವರ್ಣದಲ್ಲಿ ಮಾತ್ರವೇ ಇರುವದಿಲ್ಲ. ಇದು ಹಿಂದೂಜನರಲ್ಲಿಯೂ, ಮುಸಲ್ಮಾನರಲ್ಲಿಯೂ, ಇಂಗ್ಲೀಷಿನವರಲ್ಲಿಯೂ, ಕ್ರೈಸ್ತರಲ್ಲಿಯೂ, ಒಟ್ಟಾಗಿ ಹೇಳುವದಾದರೆ ಎಲ್ಲಾ ಮನುಷ್ಯರಲ್ಲಿಯೂ ವಿಸ್ತಾರವಾಗಿ ಹಬ್ಬಿದ ಒಂದು ಬಳ್ಳಿಯಂತೆ ಹಚ್ಚಿ ಹರಡಿಕೊಂಡಿರುತ್ತದೆ. ಮೈಗಳ್ಳರು ಹುಚ್ಚರೇ ಹೌದು ಯಾಕೆಂದರೆ ಮೈಗಳ್ಳತನದಿಂದ ಬುದ್ಧಿಯು ಕೆಟ್ಟು ಹೋಗುವದು ಮನಸ್ಸು ಭ್ರಷ್ಟತ್ವವನ್ನು ಹೊಂದುತ್ತೆ. ಅಂಥವರು ರಾತ್ರಿಗಳಲ್ಲಿಯೂ ಕೇವಲ ಊಟಮಾಡಿಕೊಳ್ಳುತ್ತಾರೆ. ಅದರೆ ಮೈಗಳ್ಳರಾದ ಸೋಮಾರಿಗಳು, ಅದನ್ನು ತಿಳುವಳಿಕೆಗೆ ತಂದುಕೊಳ್ಳದೆ ಹೋಗುತ್ತಾರಲ್ಲ! ಹೀಗಾದರೆ ಅಂಥವರು ಹುಚ್ಚರಲ್ಲವೆ? ಕೆಲವರಿಗೆ ಸ್ವಭಾವತಃವಾಗಿ ಬುವದು ಅವರ ಜನ್ಮಲಗ್ನದೊಳಗೇ ಸೇರಿಕೊಂಡಿರುತ್ತದೆ ಅವರ ಚರ್ಮದಲ್ಲಿ ಮಾಂಸ ಹತ್ತಿಕೊಂಡಿರುವಂತೆ ಮೈಗಳ್ಳತನವು ಅವರನ್ನು ಕಚ್ಚಿಕೊಂಡಿರ ... ಹುಳವು. ಯಾವಾಗಲೂ ಹ್ಯಾಗೆ ... ಹತ್ತಿಕೊಂಡಿರುತ್ತದೋ ... ಮೈಗಳ್ಳರಾದವರು ಭೂಮಿಯನ್ನು ಸರ್ವಾಂಗಸಹಿತ ಕಚ್ಚಿಕೊಂಡಿರುತ್ತಾರೆ ನೆಲವನ್ನು ಬಿಟ್ಟು ಎದ್ದು ಅತ್ತಿತ್ತ ತಿರುಗಾಡುವದಕ್ಕೆ ಮನಸ್ಸಿಲ್ಲದವರಾಗಿರುತ್ತಾರೆ! ... ಗೂಡನ್ನು ಬಿಟ್ಟು ತಿರುಗುವದೆಂತೆಯೂ, ... ತಿರುಗುವದು ... ರಹಾ ಮೈಗಳ್ಳರಾದವರು ತಮ್ಮ ಹಾಸಿಗೆಯ ಮೇಲೆ ಮಲಗಿದ್ದು ಎಡಕ್ಕೂ ಬಲಕ್ಕೂ ಮಾತ್ರವೇ ತಿರುಗುತಲಿರುತ್ತಾರೆ ಅಂಥವರು ... ಭಾರದ ... ಎದ್ದೇಳುವದನ್ನು ... ಕಣ್ಣುಗಳನ್ನು ತೆರೆದುಕೊಂಡು ... ಆಕಳಿಸುತ್ತಾರೆ ... ಅವರಿಗೆ ಸಕ್ಕರೆಗಿಂತಲೂ ಸವಿಯಾಗಿರುವದು ನಿದ್ರೆಯೇ ಆಗಿ ... ಕೊಂಡು ಹರಕೆ ಕೊಟ್ಟುವದು ಅವರ ಬಾಯಿಗೆ ... ಲೋ ಮಾಧುರ್ಯವಾಗಿರುವದು. ಹ್ಯಾಗಾದರೂ ಹೊತ್ತು ಕಳೆಯುವದೇ ಅವರ ... 'ನಿದ್ರಾದೇವಿಯೇ ಅವರ ಕುಲದೇವತೆ. ಸೂರ್ಯಸ್ತಮಾನ ... ಸುತ್ತಾರೆ ... ಸೂರ್ಯನು ... ಅವರು ಮಾತ್ರ ನಿದ್ರಾಭಂಗದಿಂದ ತಾವು ಮಲಗಿದ ಹಾಸಿಗೆಯಿಂದ ಏಳಲೊಲ್ಲರು. ಅಂಥವರನ್ನು ... ಬಹಳ ... ಕಷ್ಟವಾದ ... ಮೈಗಳ್ಳತನವೇ ಅವರನ್ನು ಬಿಟ್ಟು ಹೋಗುವದಿಲ್ಲ ... ಮಾಡಿ ... ಗುಂಡುಕಲ್ಲು ... ತಿರುಗುತ್ತಾರೆ.

... ಸ್ಥಿತಿಯಲ್ಲಿ ಇರುವ ಮೈಗಳ್ಳರು ತನ್ನ ಕೈಯನ್ನು ಪಾತ್ರೆಯಲ್ಲಿ ಮುಳುಗಿಸಿ ತನ್ನ ಬಾಯಿಗೆ ಅದನ್ನು ಹಿಂಗಿಸುವದಕ್ಕೆ ಆಯಾಸಗೊಳ್ಳುತ್ತಾನೆ. ಅಯ್ಯೋ! ಅಂಥವರನ್ನು ಬುದ್ಧಿವಂತ ಪುರುಷರು ತಮ್ಮ ಸಮೀಪಕ್ಕೆ ಬರಗೊಡಬಹುದು! ಅಂಥವರ ಸಮೀಪಕ್ಕೆ ಹೋಗಬಾರದು. ಅಂಥವರನ್ನು ಪತ್ರ ಬರೆಯಲು ಬರದು ... ಆದರೂ ಬಹಳ ... ಅಂಥವರ ವಿಷಯ ನಮಗೆ ಸಹಾನುಭವವೂ ಅಂತಃಕರಣವೂ ಹುಟ್ಟತಕ್ಕದ್ದು. ಆದರೆ ಮೈಗಳ್ಳತನದ ವಿಷಯವಾಗಿ ... ಕರುಣಿಸಲೂ ಬರದು. ಯಾಕೆಂದರೆ ... ನೋಡಿದರೆ ... ಇವರೆಲ್ಲಾ ಒಂದೇ ... ರಕ್ಷಣೆಯಲ್ಲದೆ ಭೂಷಣವೆಂದಿಗೂ ಬರುವದಿಲ್ಲ. ಅಂಥವರು ಸಾಕಿದ ಯಾವ ... 'ಮನೆಯನ್ನು' 'ಹಾಳುಮಾಡುವ' ಎಂಬದಾಗಿ ... ಸಕಲರಿಗೆ ... ಸನ್ಮಾನಕ್ಕೆ ... ಅಪಕಾರಿಯನ್ನು ಮಾನಭಂಗ ಮಾಡುವವರಾಗಿರುತ್ತಾರೆ. ತಿಂದ ಮನೆಗೆ ಎರಡನ್ನು ಬಗೆಯುವವರು ಅವರಿಗೆ

ಅವಕ್ಕಿಂತ ಯಾವ ಒಂದು ಉದ್ಯೋಗವಿಲ್ಲ ಇಂಥ ಮನುಷ್ಯನಿಗೆ ಪರಮಾನವೇ ಅತ್ಯಂತ ಪ್ರಾಧ್ಯಾನವಾಗಬಹುದಲ್ಲವೇ? ಆದೇ ಅವರಿಗೆ ಬಿಸ್ಸವಾದ [illegible] ಇಂಥವರು ಕೂತು ಭೋಜನಮಾಡುವವರು ಸಹ ಕಷ್ಟವಾಗಿರುವರು. ಇಂದವರು ಆಶ್ರಮದಲ್ಲಿ ಪ್ಯಾಗಿರುವರೆಂದರೆ, ಕಸ್ತೂರಿಗೆ ಬಟ್ಟೆ ಬಸವರಾಜ ಸೆಂಬು ಗೂಳಿಯಾಕೆಯೂ ಗ್ರಾಮ ದೇವರಿಗೆ ವಿನಾಸಲಾಗಿಟ್ಟ ಮಾದರ ಕೋಣನವನೂ ಸಹ ಹಗಲೆಲ್ಲ ನಿರುದ್ಯೋಗಿಗಳಾಗಿ ಮಲಗಿರುತ್ತಾರೆ. ಇವರು ಎರಡನೆಯವರನ್ನು ನೋಡಿ ಬಿಳುಕೊಳ್ಳುವವಲ್ಲ. ತಮ್ಮನ್ನು ನೋಡಿಕೊಳ್ಳುವವರೂ ಇಲ್ಲ. ಇವರೆಲ್ಲರಿಗೆ ಒಂದು ಸಿಲುಗಿಸ್ತತಿಯನ್ನು ತಗಲಿಸಬೇಕಾದರೆ ಆಗಲಾರದು. ಆವರು ತಮ್ಮ ಸ್ವರೂಪ ಕುರೂಪ ಅಕಾಂಡ ವಿಕಾರ ಲಕ್ಷಣದ ಅನುಭವಗಳನ್ನೆಲ್ಲ ತಿಳಿದುಕೊಂಡರೂ ಒಂದುವೇಳೆ ತಿಳಿದುಕೊಳ್ಳಬಹುದು.

ಶ್ರೀ ಜಗದ್ಗುರುಗಳಂತ ಯೋಗಸನ್ಯಾಸಿಯವರು ಅಂಥಾವರಿಗೆ ಧಾನಗಳೂ ಬಿನ್ಯಾಸ ಉಪದೇಶವಮಾಡಿದರೂ ತಾವು ಬೆಳ್ಳಿ ಭೋಧನ ಸಾಧನಗಳಿಂದ ಅವರ ತನುವನಗಳನ್ನು ಅಲಂಕರಿಸಿ ಅವರು ಬದುಕಿಕೊಂಡು ಹೋಗುವ ದಾರಿಯಂತೆ ಆಯುರ್ದೊಡರು ಅವರು ತಪಸ್ಸುವಿದ್ದು ಭಗವಂತನ ಕರುಣೆ ಎಂಬ ದೇವರ ರಾಜ್ಯಕ್ಕೆ ಯೋಗ್ಯರಾಗ ಬೋಧಿಸಿದರು. ಅವರ ಭಕ್ತರು ಸದಾ ಹಾಗೆಯೇ ಬೋಧಿಸಿದರು. ಕೆಲಸಮಾಡದವರು ಊಟಮಾಡಬಾರದು. ಕೆಲಸಮಾಡುವವನು ಕೂಲಿಗೆ ಯೋಗ್ಯನಲ್ಲದ ಕೆಲಸಮಾಡದವನು ಕೂಲಿಗೆ ಅಯೋಗ್ಯ ಎಂಬ ಯೇಸುಸ್ವಾಮಿಯವರ ಬೋಧನೆಯನ್ನು ಹೊರಪಡಿಸಿದರು. ನಮ್ಮನ್ನು ದಾನಾಗಲೂ ದೂಷಿಸಿ ತಿದ್ದಿ ಯೇಸು ಸನ್ಮಾರ್ಗ ಪ್ರವರ್ತಕರನ್ನಾಗಿ ಮಾಡುವವನು ಆತನೇ. ಆದದರಿಂದ ನಮಗೆ ಬೋಧಿಸಲು ಈಗಲೂ ಸಿದ್ಧನಾಗಿರುವ ಆತನ ಪಾದದ ಬಳಿಯಲ್ಲಿ ಕೂತುಕೊಂಡು ಅತಿ ಸಾವಧಾನದಿಂದ ಆತನ ಬುದ್ಧಿವಾದಗಳನ್ನು ಕೇಳಿ ಜಾಗ್ರತೆಯಾಗಿದ್ದು ಸ್ವಾಮಿಯನ್ನು ಹೃದಯದಲ್ಲಿ ಪ್ರತಿಷ್ಠಿಸುವಂತೆ ಪ್ರಾರ್ಥನೆ ಮಾಡುವ.

ನೋಟೀಸ್.

ಈ ಸಂಚಿಕೆಯೊಡನೆ ವೃತ್ತಾಂತ ಪತ್ರಿಕೆಯು ೩ನೆ ವರ್ಷದ ನಾಲ್ಕನೇ ಕ್ವಾರ್ಟರು ಪ್ರಾರಂಭವಾಗುತ್ತದೆ. ಚಂದಾದಾರರಿಗೆ ಪತ್ರಿಕೆಗಳ ಜೊತೆಯಲ್ಲಿ ಬಿಲ್ಲುಗಳನ್ನು ಕಳುಹಿಸಿರುತ್ತೇವೆ. ಸಾವಕಾಶವಿಲ್ಲದೆ ಬಿಲ್ಲುಗಳನ್ನು ತಪ್ಪದೆ ಕಳುಹಿಸಿಕೊಡುವರೆಂದು ನಂಬಿದ್ದೇವೆ.

೮—೬—೯೩ } ಎಡಿಟರ್,
ಮೈಸೂರು } ವೃತ್ತಾಂತ ಪತ್ರಿಕೆ.

ಚಂದಾದಾರರಿಂದ ಬಂದಿರುವ ಈ ವಾರದ ಮತ್ತು ಕಳೆದ ವಾರದ ಸಮಾಚಾರಗಳಿಗೆ ಅವಕಾಶ ಕೊಡಲು ಸಮಯವಿಲ್ಲ. ಎಡಿಟರ್

ಒಳದೇಶ ವೃತ್ತಾಂತಗಳು.

ಕಳೆದ ವಾರದಲ್ಲಿ ಅಂದರೆ ಭಾನುವಾರ ಸಾಯಂಕಾಲ ೬ ಘಂಟೆ ಹೊತ್ತಿಗೆ ಇಲ್ಲಿನ ರೆವೆನ್ಯೂದಾರರಿಗಳ ಸಂಘದವರು ಟೌನ್‌ಹಾಲಿನಲ್ಲಿ ಮೀಟಿಂಗ್ ಮಾಡಿದ್ದರು. ಅದರಲ್ಲಿ ನಡೆದ ಸಂಗತಿಗಳನ್ನು ಮುಂದಲವಾರಕ್ಕೆ ತಿಳಿಸಬೇಕೆಂದಿದ್ದೇವೆ.

ಕಳೆದ ವಾರದಲ್ಲಿ ಬಂಗಳೂರಿನಲ್ಲಿ ಇಬ್ಬರು ತುಂಟರು ಸ್ತ್ರೀ ಒಬ್ಬ ಹುಡುಗಿಯನ್ನು ಕೆಡಿಸಿದ್ದರಿಂದ ಅಲ್ಲಿನ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಮೊದಲನೆಯವನಿಗೆ ೫ ವರುಷವೂ ಎರಡನೆಯವನಿಗೆ ೩ ವರುಷವೂ ಕಠಿನಶಿಕ್ಷೆ ವಿಧಿಸಿದರು.

ಸ್ಪ್ರಿಂಗ್ ಲೀ ನಾಟಕ ಸಂಘದವರು ಬಂಗಳೂರಿನಲ್ಲಿ ನಾಟಕಗಳನ್ನು ಆಡಿ, ಕಳೆದ ಭಾನುವಾರ ರೈಲಿಗೆ ಹೊರಡುತ್ತಾರೆ. ಅರಮನೆಯಲ್ಲಿ ಮೊನ್ನೆ ಮಂಗಳವಾರ ರಾತ್ರಿಯಿಂದ ಆಟಗಳಾಗುವವು ಅನಂತರ ಟಿಕೇಟು ಪಬ್ಲಿಕ್ಕಿನಲ್ಲಿ ೧೦—೫ ಆಟಗಳನ್ನು ಯಾಕೆ ಆಡಬಾರದು?

ಮೊನ್ನೆ ಮಂಗಳವಾರದ ದಿವಸ ಇಲ್ಲಿನ ಅರಮನೆಯ ಮೇಲಿನ ಉಪ್ಪರಿಗೆಗಳು ಕುಸಿದು ಹೋದವು. ಇದಕ್ಕೆ ಕಾರಣವೇನೊ ಗೊತ್ತಾಗಲಿಲ್ಲ. ನೆನ್ನೆ ಕಲಾಸಿಗಳನ್ನು ಇಳಿಸುತ್ತಿದ್ದರು. ಇಂಜನಿಯರುಗಳು ಪ್ಲಾನ್ ಹಾಕುವದಕ್ಕೆ ಅವಕಾಶ ಉಂಟಾಯಿತು.

ಬೀರೂರು ಶಿವಮೊಗ್ಗ ರೈಲ್ವೇಲೈನಿಗೋಸ್ಕರ ೧೫೦,೦೦೦ ಮರದ ದಿಮ್ಮಿಗಳು (ಸ್ಲೀಪರುಗಳು) ಬೇಕಾಗಿರುವದರಿಂದ ಅವುಗಳನ್ನು ತಯಾರುಮಾಡುವ ಕೆಲಸದ ಕಂಟ್ರಾಕ್ಟನ್ನು ಇಲ್ಲಿನ ಮೆ|| ವಾಲೆಸ್ ಸಾಹೇಬರಿಗೆ ಗವರ್ನಮೆಂಟಿನವರು ಕೊಡಿಸಿರುತ್ತಾರೆ. ಈ ವಿಷಯದಲ್ಲಿ ಪೂರ್ಣವಿವರವ ಪತ್ರಿಕೆಯಲ್ಲಿ ಮುಂದಾಗಿ ತಿಳಿಸಬೇಕೆಂದಿರುತ್ತೇವೆ.

ಈ ಸಂಸ್ಥಾನದ ದಿವಾನರವರಾದ ಸರ್. ಕೆ. ಶೇಷಾದ್ರಿ ಅಯ್ಯರ್ ಕೆ. ಸಿ. ಎಸ್. ಐ. ಯವರ ಕುಮಾರರಾದ ಮ|| ವಿಶ್ವನಾಥ ಅಯ್ಯರವರಿಗೆ ಮ|| ವೈದ್ಯನಾಥಅಯ್ಯರವರ ಕುಮಾರ್ತೆಯಂ ಕೊಟ್ಟು ಈ ಜೇಷ್ಠ ಬಹುಳ ನವಮಿ ಬೃಹಸ್ಪತಿವಾರದಿನ ಮೈಸೂರಲ್ಲಿ ವಿವಾಹ ಮಹೋತ್ಸವವು ಅತಿ ವೈಭವದೊಡನೆ ನಡೆಸಲ್ಪಡುವದು.

ಇಲ್ಲಿನ ಅಡಿಷನಲ್ ಮೆಜಿಸ್ಟ್ರೇಟರಾದ ಮ|| ವೆಂಕಟವರದಯ್ಯಂಗಾರ್ಯರು ರಜಾಮೇಲೆ ಹೋಗಿರುತ್ತಾರಾದ್ದರಿಂದ ಅವರ ಕೆಲಸಕ್ಕೆ ಮ|| [illegible] ಬಿ. ಎ., ಬಿ. ಎಲ್ ರವರನ್ನು ನೇಮಿಸಿರುತ್ತಾರೆ. ಇವರು ಇಲ್ಲಿನ ಕಾಲೇಜಿನಲ್ಲಿ ಬಿ. ಎ. ಕ್ಲಾಸಿಗೆ ಸಂಸ್ಕೃತ ಪಂಗಳೂರು [illegible] ಪ್ರೊಫೆಸರ್ ಆಗಿದ್ದರು. ಇವರು ರಾಜಧಾನಿಯಲ್ಲೇ ನೇಮಿಸಲ್ಪಟ್ಟದರಿಂದ ಇಲ್ಲಿನ ಅನೇಕರಿಗೆ ಬಹು ಸಂತೋಷವನ್ನುಂಟುಮಾಡಿದೆ.

ಜೂನ್ ೧ ನೇ ತಾರೀಖು ಗುರುವಾರ ಸಾಯಂಕಾಲ ೬ ಘಂಟೆಗೆ ಮೈಸೂರು ಸಬ್ಬರ್ಬ್ಯೂಟೌನಲ್ಲಿ ಈ ಡಿಸ್ಟ್ರಿಕ್ಟಿನಲ್ಲಿ ಆಗ್ಗಿರುವ ಉಪಾಧ್ಯಾಯರುಗಳು ವಿದ್ಯಾಭ್ಯಾಸದ ಇಲಾಖಾ ಸೆಕ್ರೆಟರಿ ಸಾಹೇಬರವರಿಗೆ ಒಂದು ವಿಜ್ಞಾಪನಾ ಪತ್ರಿಕೆಯನ್ನು ಒಪ್ಪಿಸತಕ್ಕ ಬಗ್ಗೆ ಮತ್ತು ಅಕ್ಟೋಬರುಗಳಿಗೆ ತಮ್ಮ ಕೃತಜ್ಞತೆಯನ್ನು ಪ್ರಕಟಿಸತಕ್ಕ ಬಗ್ಗೆ ಒಂದು ಸಭೆಯನ್ನು ಸೇರಿಸಿದರು. ಆ ಸಭೆಯಲ್ಲಿ ನಡೆದ ವಿಷಯಗಳನ್ನೆಲ್ಲಾ ಮೈಸೂರು "ದೇಶಾಭಿಮಾನಿ" ಪತ್ರಿಕೆಯಲ್ಲಿ ಸವಿಸ್ತಾರವಾಗಿ ಪ್ರಕಟಿಸಿರುವದರಿಂದ ನಮ್ಮ ವಾಚಕರ ತಿಳುವಳಿಕೆಯ ಬಗ್ಗೆ ಅದನ್ನೇ ಈ ಪತ್ರಿಕೆಯ ಮತ್ತೊಂದು ಭಾಗದಲ್ಲಿ ಸಂಗ್ರಹಿಸಿರುವೆವು.

ಚಿಕ್ಕಮಗಳೂರ ಡೆಪ್ಯೂಟಿಕಮಿಷನರವರು ಜಾಸ್ ಮಾಸ್ಟರ್ ಕಮ್ಮ ಕರ ಬಂಗಳೆಯಲ್ಲಿ ಹಾಕಿ ಆಗದಿಸಿದ ಹಿಂದಿನ ಕೈದಿಗಳನ್ನು ಬಿಡಿಸಿಬಿಟ್ಟರು. ಅದನ್ನು ಕಾಯಿಸಲು ಅವರು ಕೊಳ್ಳಲು ಗವರ್ನಮೆಂಟಿನವರ ಸ್ಯಾಂಕ್ಷನ್ ಪಡೆಯಬೇಕಾಗಿತ್ತು. ಆಗ ಗವರ್ನಮೆಂಟಿನವರು—ಈಗ ಡೆಪ್ಯೂಟಿಕಮಿಷನರು ಪ್ರಸಿದ್ಧವಾದ ಬೆಳೆಯನ್ನು ಕಂದಾಯಕ್ಕೆ ಬಿಡುವುದು ಆದರೆ ಇಲ್ಲಿ [illegible] ಗವರ್ನಮೆಂಟು ಭಂಗಲೆಗಳಲ್ಲಿ ವಾಸಿಸುವ ಅಧಿಕಾರಿಗಳು ಸದ್ದಿರಕ್ಕೆ ಅಧಿಕ ಮಾಡಬೇಕೆಂಬಾಗಲಿ ಅಥವ ಸ್ವಂತ ಉಪಯೋಗಕ್ಕಾಗಲಿ ಗವರ್ನಮೆಂಟಿನವರ ಅಪ್ಪಣೆ ಇಲ್ಲದೆ ಇಂಥಾ ಯಾವ ಸಾಲಗಳನ್ನೂ ಬೆಳಸಕೂಡದು. ಅವರು ಬಾಗಸಲಿನಿಂದ ತೂಗಿಸಿ ಗಿಡಗಳನ್ನು ಮಾತ್ರ ತಾವೇ ಕೈಸೇರಿ ಮಾಡಿಕೊಳ್ಳಬಹುದು ಎಂಬದಾಗಿ ಮಾತ್ರ ೦ ಮಾಡಿರುತ್ತಾರೆ.

ಗಡಿಸಿರ ಮಾಡು ಮಠಸ್ತೋತ್ರಯವರು ತಮ್ಮ ವರ್ಣಾಶ್ರಮದಲ್ಲಿ ಮಠದ ಬ್ರಾಹ್ಮಣರುಗಳಿಗೆ ಗೃಹದಾನವನ್ನು ಮಾಡಿತ್ತವರಾಗಿ ಮಾಡಿದ್ದರಷ್ಟೆ. ಈ ಮನೆಗಳು ಕಟ್ಟಿದ್ದು ಈಗ ಪೂರೈಸಿರುತ್ತಿದ್ದರಿಂದ ನಾಳೆ ಬಸ ಆ ಮನೆಗಳನ್ನು ಅವರವರಿಗೆ ಶ್ರೀಮಹಾಸ್ವಾಮಿಯವರು ಕೊಡಿಸುವರೆಂದು ಕೇಳುತ್ತೇವೆ. ಇದಕ್ಕಾಗಿ ಒಂದು ಸವೆಸಂಸ್ಥೆಯೂ ಆಗುವದು. ಪ್ರತಿಮನೆಯಲ್ಲೂ ಸುಮಾರು ೧೦೦ ರೂಪಾಯಿಯ ಪಾತ್ರೆಗಳೂ ೧೦ ಖಂಡಿಯ ಆಹಾರದ ಉಪ್ಪಯೋಗಿಸುವಂತೆ ಮಾಡಬೇಕು. ಆಗಿ ಇದ್ದಿದ್ದರೆ ೧,೨೦೦—೧,೫೦೦ ರೂಪಾಯಿ ಬೆಳುವ ಗದ್ದೆಯನ್ನು ಈ ಮನೆಗಳೂ ಕೊಡುವರೆಂತಲೂ ಇದ್ದವರು ಆ ಮನೆಯವರನ್ನು ಶಿವಾಚಾರದವರಲ್ಲೇ ಕೇಳುತ್ತೇವೆ. ಮನೆಗಳನ್ನು ಪಡೆದ ಬ್ರಾಹ್ಮಣರು ಎಷ್ಟುವರೆಗೂ ಆ ಗೃಹಗಳಲ್ಲಿ ಸಾಧ್ಯವಾಗಿರುವರೋ ನೋಡಬೇಕಾಗಿದೆ. ಯಾತಕ್ಕೆಂದರೆ ಬ್ರಾಹ್ಮಣರು ಬಹು ಚಪಲಚಿತ್ತರಲ್ಲವೆ?

ಚಿತ್ರದುರ್ಗದ ಡಿಸ್ಟ್ರಿಕ್ಟ್ ಮಜಿಸ್ಟ್ರೇಟರು ಮತ್ತು ಕೋರ್ಟ ಹೂಗಾದ ಹಾಲ್ಟಿಂಗುಗಳಲ್ಲಿ ಕ್ಯಾಂಪಿನಲ್ಲಿಯೇ [illegible] ಕೆಲಸ ನೋಡುವುದಕ್ಕಾಗಿ ಅಂದರೆ ೭ನೇ ತಾರೀಖಿನಲ್ಲಿ ೬ ದಿನಗಳು ಮತ್ತು ೯ನೇ ತಾರೀಖಿನಲ್ಲಿ ೮ ದಿನಗಳು ಅಲ್ಲದೆ ೧೦ ದಿನಗಳು ಸಂಬಳ ೫ ರೂಪಾಯಿ ಬಿ. ಆಸ್ಥಾನ ಕಾಣುತ್ತ ಇದಕ್ಕೆ ಕ್ಲೋರೆಸ್ಟರವರು—ಹ. ಲೀ. ನ್ಯಾಯಾಧಿಕಾರಿಗಳು ಸಂಬಳವನ್ನು ಅದಾಲತಿಯವರಲ್ಲಿ ಸ್ವಲ್ಪ ಮಾತ್ರದಲ್ಲಿ [illegible] ವಿದ್ದೇ. ಆದರೆ ಅವನ್ನು ಸರ್ಕಾರಕ್ಕೆ ಸೇರಿಸಬೇಕೆಂಬ ಟೆಂಡರಿನ ಹಿಂದಿನ ಒಂದು ನಕಲು ಇರುತ್ತದೆ. ಎಂಬದಾಗಿ ಗವರ್ನಮೆಂಟಿಗೆ ತಿಳಿಸಿದರು. ಗವರ್ನಮೆಂಟಿನವರು, ಈ ಡಿಸ್ಟ್ರಿಕ್ಟರನ್ನು ನೋಡಿ—ಕಂಟ್ರೋಲರವರು ನಮೂದಿಸಿರುವ ಸರ್ಕಾರಕ್ಕೆ ಸೇರತಕ್ಕದ್ದು; ನ್ಯಾಯವಾಗಿ ಧರ್ಮವ್ಯವಹಾರ ಮುಂತಾದ ಸ್ವಲ್ಪ ಕೆಲಸಗಳು [illegible] ಭಾವಿ ಪ್ರತಿಬಂಧಕ ಎಂಬದಾಗಿ ಹುಕುಂ ಮಾಡಿರುತ್ತಾರೆ.

ಅರ್ಜಿ.

ಬೆಂಗಳೂರಿನ ಕರ್ನಾಟಕ ವೈಭವಸೇನೆ [illegible] ಪತ್ರಿಕೆಯಲ್ಲಿ ಬಂದ ಪತ್ರವನ್ನು ನೋಡಿದ ಪ್ರಕಟಿಸಲ್ಪಟ್ಟಿದೆ. ಶಿವಮೊಗ್ಗೆಯ ವಿದ್ಯಾವಂತರು ಸ್ತ್ರೀಯರು ಯಜಮಾನ ಸ್ಥಿತಿಗೆ ಬಂದಿರುತ್ತಾರೆಂಬುದು ಈ ಪ್ರಕಟಣೆಯಿಂದ ವ್ಯಕ್ತವಾಗುವದು—ನೋಟಿಸ್. ಕರ್ನಾಟಕವೈಭವ—ವಿಷಮ—ಅಂಕ ೧೦ ಬ್ರಾಹ್ಮಣ ವಿವಾಹ ತಂದೆ ದರಿದ್ರ ಇಂಗ್ಲೀಷು ಹಿರೇಪೇಟೆ ಮಠದ ಭಾಗ ಕುಂತಿ ಇವಳಿಗೆ—ಕೇಳಗೆ [illegible] ಮುದುಕಳ ಕಡೆಯಿಂದ ನೋಟೀಸು ಕೊಡುವದದಲ್ಲಿ ಏನೆಂದರೆ ನೀನು ನನ್ನ ಲಗ್ನದ ಗಂಡಶಿಷ್ಯಳು ನಾನು ಮೈಸೂರು ಪ್ರಾಂತ್ಯಕ್ಕೆ ಆಗಮಿಸಿ ೬—೭ ವರ್ಷಗಳಾಗಿದ್ದು ನೆಟ್ಟಗಿರದೆ ಬಾಗಿ ಬಿಡಲು ೫ ವರ್ಷದವಳಿಗೆ ನಿನ್ನ ಕೂಗಿದ ಪ್ರದೂಷಿತ ಮಾಡಿದ ಈ ಸ್ಥಿತಿ ಪತ್ರದಲ್ಲಿ ನಾನು ನೋಡಿದಾಗ್ಯೂ ನಿನ್ನಲ್ಲಿ ಸ್ವಲ್ಪ ಪತ್ರ ಏನೂ ಇಲ್ಲ. ಅಂಬುವದು, ನನಗೆ ಮಾತ್ರ ಪೂರ್ವಕ ತಿಳಿದದ್ದರಿಂದ ನಿನಗೆ ವಿಜ್ಞಾಪಿಸಬಾಗಿ ನನಗೆ ನೀನು ಕಟ್ಟನಿಂದ ಮೈಸೂರಿನ ದಾಗೀನ್ಸುಗಳನ್ನು ತೆಗೆದುಕೊಂಡು ತವರಮನೆಗೆ ಮೂರು ವರ್ಷದ ಹಿಂದೆ ಕಳುಹಿಸಿಕೊಟ್ಟು ಇವತ್ತಿಗೂ ನೀನು ಕರೆದಲ್ಲಿಕ್ಕೆ ಬರಲಿಲ್ಲ. ನಿನ್ನ ತಾಯಿ ತಂದೆಯವರು ಬಹು ಬಡತನದಿಂದ ೧೮೯೦ ರ ವರ್ಷ ೧೦೦ ರೂಪಾಯಿ ಬಾಕಿ ಇತ್ತೆಂತ್ತು ೧೮೯೧ ರ ವರ್ಷದಲ್ಲಿ ೧೫೦ ರೂಪಾಯಿ ಸಾಹುಕಾರರಲ್ಲಿ ಸಾಲ ಮಾಡಿ ಪೂರ್ತಿ ತೀರಿಸಿಕೊಂಡೆನು. ಅದ್ದರಿಂದ ಈ ನೋಟೀಸಿನ ದ್ವಾರ ಹೀಗೆ ತಿಳಿಸತಕ್ಕೇನೆಂದರೆ ಈ ನೋಟೀಸ್ ಮುಟ್ಟಿದ ೮ ದಿವಸದಲ್ಲಿ ನಾನು ಸಾಲ ಮಾಡಿದ ೧೫೦ ರೂ. ಕೊಟ್ಟು ನಿನಗೆ ಹೃದಯಸತ್ಯವಿದ್ದರೆ ಮಾಸಿಕ ನನಗೆ ಬಂದು ಹೆಂಡತಿಯನ್ನು ಅಡಿಕೆ ಎಲೆ ಪ್ರತಿದಿನ ಮಾಡಬೇಕು. ಮಾತು ತಪ್ಪಿದರೆ ಪರಿಚಿತ ಕೊಟ್ಟು ಹೋಗಬೇಕು. ಇದರಂತೆ ಮಾಡದೆ ಪಕ್ಷದಲ್ಲಿ ಸಿವಿಲ್ ಸರ್ಜನ ಸರ್ಟಿಫಿಕೇಟ (ನಿನಗೆ ಪ್ರತಿಷ್ಠೆ ಇದ್ದರೆ) ತಂದು ನನಗೆ ತೋರಿಸಿ ಸತ್ತು ಕೂತುಕೊಟ್ಟು ಕುಳಿತುಕೊಂಡು ಹೋಗಬೇಕು. ಏತದಂತ ಸದರಿ ಮುದ್ದತಿನ ಒಳಗಾಗಿ ಮಾಡದೆ ಹೋದರೆ ನಾನು ಇದೇ ಜೂನ್ ಮಾಸ ಅಂತ್ಯ ತಿಳಿದುಕೊಂಡು ನನ್ನ ಸ್ತ್ರೀ ಧರ್ಮದ ಪ್ರಕಾರ ಎರಡನೇದವರಿಗೆ ಉಡಿಕೆಯಾದೇನು. ಆಮೇಲೆ ನನ್ನ ಮೇಲೆ ನನ್ನನ್ನು ಉಡಿಕೆ ಮಾಡಿಕೊಂಡವರ ಮೇಲೂ ನಿನ್ನ ಯಾವ ರೀತಿ ಹಕ್ಕು ಉಳಿಯಲಿಕ್ಕಿಲ್ಲ. ಈ ನೋಟೀಸಿನಿಂದ ನಿನ್ನ ಮೇಲೆ ಅದೆ ತಿಳಿಯುವದು. ತಾ|| ೬—೫—೯೩ನೇ ಇಸವಿ ಈ ನಿರ್ವಾಣ ಕಾಯಿದೆ ಕೋರ್ಟಿ ಕೇಳದಿಷ್ಟು ಹೀಗೆ ಸಕಲ ಕಂಡ ಇದೆ.

> ಶ್ಲೋ|| ನಷ್ಟೇ ಮೃತೇ ಪ್ರವ್ರಜಿತೇ ಕ್ಲೀಬೇ ಚ ಪತಿತೇ ಪತೌ|
> ಪಂಚಸ್ವಾಪತ್ಸು ನಾರೀಣಾಂ ಪತಿರನ್ಯೋ ವಿಧೀಯತೇ||

ಎಂಬ ಪ್ರಮಾಣವಚನಕ್ಕೆ ಮೇಲಿನ ಮಹಾನುಭಾವಿಯು ಸಾಫಲ್ಯವನ್ನುಂಟುಮಾಡಿದಬಗ್ಗೆ ಆಕೆಯ ವಿಷಯದಲ್ಲಿ ಗ್ರಂಥಕರ್ತರು ಕೇವಲ ಕೃತಜ್ಞರಾಗಿರಬೇಕು.

ಉಪಾಧ್ಯಾಯರುಗಳ ಮೀಟಿಂಗ್.

ಮೈಸೂರು ಡಿಸ್ಟ್ರಿಕ್ಟ್ ಉಪಾಧ್ಯಾಯರುಗಳಿಗೆ ಕಳೆದ ೬ನೆ ದಿವಸಗಳಿಂದ ಈ ಊರಿನಲ್ಲಿ ವಸ್ತುಶಾಸ್ತ್ರ, ಭೂತಶಾಸ್ತ್ರ, ಶಾರೀರಕ ಧರ್ಮಶಾಸ್ತ್ರ, ಆರೋಗ್ಯಶಾಸ್ತ್ರ, ವನಸ್ಪತಿಶಾಸ್ತ್ರ, ವ್ಯವಸಾಯಶಾಸ್ತ್ರ, ಇವೇ ಮೊದಲಾದವುಗಳನ್ನು ಬೋಧಿಸುವದಕ್ಕೋಸ್ಕರವೂ, ಕವಾಯತನ್ನು ಕಲಿಸುವದಕ್ಕೋಸ್ಕರವೂ, ಬೆಂಗಳೂರು ಕೇಂದ್ರ ಕಾಲೇಜ್ ಪ್ರಿನ್ಸಿಪಾಲ್ ಮ|| ಜಾನ್ ಸನ್ ಸಾಹೇಬರವರು ಏರ್ಪಾಟುಮಾಡಿದ್ದರಷ್ಟೆ. ಈ ಕಲ್ಪನೆಗನುಸಾರವಾಗಿ ಮ|| ರಾ|| ಜೆ. ವೆಂಕಟನಾರಾಯಣಯ್ಯನವರೂ, ಮ|| ರಾ|| ಭಟಸ್ವಾಮಿ ಅಯ್ಯಂಗಾರ್ಯರವರೂ, ಉಪನ್ಯಾಸಪೂರ್ವಕ ಶಾಸ್ತ್ರಗಳನ್ನು ಉಪಾಧ್ಯಾಯರುಗಳಿಗೆ ತಿಳಿಸಿದರು. ಮ|| ರಾ|| ಸಿ. ಸುಬ್ರಾಯ ಬಿ. ಎ. ಯವರೂ, ಮ|| ರಾ|| ಭಾಸ್ಕರ ಎಸ್. ನಂಜುಂಡಯ್ಯನವರೂ, ಮ|| ರಾ|| ಕೆ. ನಾರಾಯಣಯ್ಯಂಗಾರ್ ಬಿ. ಎ. ಯವರೂ ಈ ಮೂವರೂ ಮೇಲೆ ಹೇಳಿದ ಶಾಸ್ತ್ರಗಳಲ್ಲಿ ಕ್ರಮವಾಗಿ ಅಭ್ಯಾಸ ಮಾಡಿದವರಾದುದರಿಂದ ತಾವು ಅಭ್ಯಾಸಮಾಡಿದ ಶಾಸ್ತ್ರಕ್ಕೆ ಅನುಸಾರ ಉಪಾಧ್ಯಾಯರುಗಳಿಗೆ ಸೇರುವಕ್ಕೆ ಈ ಕಲ್ಪನೆ ಸತ್ಪರಿಣಾಮವನ್ನುಂಟುಮಾಡತಕ್ಕ ಕಾರಣರು ಆದರು. ಅ ಪ್ರತ್ಯೇಕವಾಗಿ ಆಯಾ ಶಾಸ್ತ್ರಗಳ ವಿಷಯಗಳಲ್ಲಿ ಸಹ ೦ ಬಂಧವನ್ನು ಮಾಡಲ್ಪಟ್ಟ ಉಪನ್ಯಾಸಗಳ ಅನಂತರದಿಂದ ಮಾತ್ರ ವಿಶೇಷಗಳಿಂದಲೂ, ವಸ್ತು ಸಂದರ್ಶನಗಳಿಂದಲೂ ಈ ಶಾಸ್ತ್ರಗಳನ್ನು ಉಪಾಧ್ಯಾಯರುಗಳಿಗೆ ಗ್ರಾಹ್ಯ ಮಾಡುವಂತೆ ಬೋಧಿಸಿದರು. ಮ|| ರಾ|| ವೆಂಕಟ ನಾರಾಯಣಯ್ಯನವರ ಮ|| ಸಿ. ಸುಬ್ಬರಾಯರವರ ಸಹಾಯದಿಂದ ತಾವು ಉಪನ್ಯಾಸ ಮಾಡಿದ ಶಾಸ್ತ್ರ ವಿಷಯಗಳಲ್ಲಿ ಕೆಲವು ಪರೀಕ್ಷೆಗಳನ್ನು ಮಾಡಿ ಉಪಾಧ್ಯಾಯರುಗಳಿಗೆ ಉತ್ಸಾಹವುಂಟಾಗುವಂತೆ ಮಾಡುತ್ತಿದ್ದರು. ಈ ಬೋಧನೆಗಳ ಪರಿಣಾಮ ಉಪನ್ಯಾಸಕರಿಗೆ ಕೀರ್ತಿಯನ್ನು ತಂದುಕೊಡುವದಾಗಿದ್ದು ಮೆ|| ಜಾನ್ ಸನ್ ಸಾಹೇಬರಿಗೆ ಸಂತೋಷವನ್ನು ಕೊಡುವ ವಿದ್ಯಾರ್ಥಿಗಳ ಜಾಗ್ರತೆಯ ಶ್ರದ್ಧೆಯಿಂದ ಕೇಳಿದರು. ಇದನ್ನು ನೋಡಿದ ಮೇಲೆ ಆ ದಿನ ಮಾಡಿದ ಕೆಲಸಕ್ಕೆ ಸವರಿ ವಿಷಯಗಳಿಗೆ ಇವರೂ ಕಮಿಷನರವರೂ, ಜೊತೆಯೂ, ದಯಮಾಡಿದ್ದರು. ಪ್ರಧಾನರಾದ ಮ|| ಲಿಂಗಪ್ಪನವರ ಮಾತು ಕರೆಸಿ ಬೆಂಗಳೂರಿನ ಭಾಗವನ್ನು ಸಭೆಯ ಮುಂದೆ ಮಾಡಿದ ಪರೀಕ್ಷೆಯ ಅನಂತರದಲ್ಲಿ ಮತ್ತು ಉಪಾಧ್ಯಾಯರು ಸ್ವಲ್ಪ ಸಂಗೀತವನ್ನು ಹಾಡಿ ಆನಂದಪಡಿಸಿದ್ದ ಬಂದ ಸಂಕಲ್ಪವನ್ನು ಮಾಡಿದರು. ಆ ದಿವಸ ಸಾಯಂಕಾಲದಲ್ಲಿ ಶಾಸ್ತ್ರಗಳನ್ನು ಉಪನ್ಯಾಸಮಾಡಿ ತಿಳಿಸಿದ ಪಂಡಿತರನ್ನು ಮತ್ತು ಜಿಲ್ಲೆಯ ಮಾಸ್ಟರುಗಳನ್ನೂ ಅನುಸರಿಸಿ ಉಪಾಧ್ಯಾಯರುಗಳು ಮ|| ರಾ|| ನಂಜುಂಡಯ್ಯನವರು ಸಭೆ ಮಾಡಿ ಮಂಗಳವಾರದ ಪ್ರಮಾಣವಚನವನ್ನು ಅನುಮೋದಿಸಿದರು. ಸ್ಪೆಷಲ್ ಕಮಿಷನರ್ ಉಪನ್ಯಾಸ ಮಾಡಿದರು. ಅಲ್ಲದೆ ಪ್ರಸ್ತುತರಾಗಿದ್ದು, ಅನಾಸ್ತವ್ಯರಾಗಿದ್ದು, ತಮ್ಮ ಕಡೆ ಕೈಯೆತ್ತಿ ಬಸ್ತಿ ಮಾರ್ಗದವರನ್ನು ಹೊಸದಾಗಿ ಉಪನ್ಯಾಸಕರಿಗೆ ಅಪ್ಪಣೆ ಕೃತಜ್ಞತೆಯನ್ನು ಹೇಳಿದರು.

ಮ|| ರಾ|| ಅಯ್ಯಂಗಾರ್ಯರವರ "ಕೃತಜ್ಞತಾಪ್ರದರ್ಶನ" ಉಪನ್ಯಾಸವು ಗಂಭೀರವಾಗಿ ಧ್ವನಿತವಾಗಿಯೂ ಪ್ರಯೋಜನಾಗಿಯೂ ಕಾಲೋಚಿತವಾಗಿಯೂ ಇತ್ತು.

ಉಪನ್ಯಾಸದಲ್ಲಿ ಮ|| ವೆಂಕಟನಾರಾಯಣಯ್ಯನವರು ಯಾವದೋ ಗೌರವದ ಅತ್ಯಂತದಿಂದ ಈ ಉಪಾಧ್ಯಾಯರುಗಳ ವಂದನೆಗಳನ್ನು ಸ್ವೀಕರಿಸುವದಕ್ಕೆ ಬರಲಿಲ್ಲ. ಅದಕ್ಕಾಗಿ ಉಪಾಧ್ಯಾಯರುಗಳೆಲ್ಲರೂ ಬಹು ಸಂತಾಪವನ್ನು ಮ|| ನಾರಾಯಣಯ್ಯಂಗಾರ್ಯರವರು ಉಪನ್ಯಾಸದಲ್ಲಿ ತಿಳಿಸಿದರು. ತರುವಾಯ ಮ|| ಜಾನ್ ಸನ್ ಸಾಹೇಬರವರಿಗೆ ಮರೆಯದ ವಿಜ್ಞಾಪನಾ ಪತ್ರಿಕೆಯನ್ನು ಓದಿದರು.

ಅನಂತರದಲ್ಲಿ ಈ ವಿಜ್ಞಾಪನ ಪತ್ರಿಕೆಯನ್ನು ಎಜುಕೇಷನ್ ಸೆಕ್ರೆಟರಿಯವರಿಗೆ ಕಳುಹಿಸಬೇಕೆಂದು ಮ|| ಕ್ರಿಸ್ಟಪ್ಪರವರ ಮ|| ರಾ|| ಎಸ್. ರಂಗಾಚಾರ್ಯರವರನ್ನೂ, ಮ|| ರಾ|| ಕೇಶವಯ್ಯನವರನ್ನೂ ಪ್ರತಿನಿಧಿಗಳನ್ನಾಗಿ ನೇಮಿಸಬೇಕೆಂದು ಸೂಚಿಸಿದರು. ತರುವಾಯ ಮ|| ರಾ|| ವೆಂಕಟಕೃಷ್ಣಯ್ಯನವರು ಮೆ|| ಜಾನ್ ಸನ್ ಸಾಹೇಬರವರ ಉಪಕಾರವನ್ನು ಅನುಮೋದಿಸಿದರು. ಈ ಸಭೆಯ ನಿರ್ಣಯವನ್ನು ಅಂಗೀಕರಿಸಿದರು. ಅದಕ್ಕೆ ಮ|| ವೆಂಕಟಕೃಷ್ಣಯ್ಯನವರು—ಮೈಸೂರು ಗವರ್ನಮೆಂಟಿನವರು ಮತ್ತು ಎಜುಕೇಷನ್ ಸೆಕ್ರೆಟರಿಯವರು ಈ ಸಂಸ್ಥಾನದ ಉಪಾಧ್ಯಾಯರುಗಳಿಗೆ ಶಾಸ್ತ್ರಾಭ್ಯಾಸಗಳನ್ನು ಮಾಡಿಸಿ ತಮ್ಮ ಈ ದೇಶದ ವಿದ್ಯಾರ್ಥಿಗಳ ಯೋಗಕ್ಷೇಮವನ್ನು ಚೆನ್ನಾಗಿ ಮಾಡಿಕೊಳ್ಳುವ ಪ್ರಯತ್ನವನ್ನು ಮಾಡಿರುವದು ಅವರ ಪ್ರಜಾರಂಜಕ ಬುದ್ಧಿಯನ್ನು ವ್ಯಕ್ತಪಡಿಸುತ್ತದೆ; ಎಂಬದಾಗಿಯೂ ಉಪಾಧ್ಯಾಯರುಗಳು ತಮ್ಮ ಕೆಲಸವನ್ನು ವಿದ್ಯಾರ್ಥಿಗಳಿಗೆ ಜ್ಞಾನಪ್ರದವಾಗುವಂತೆಯೂ, ಉಪಾಧ್ಯಾಯರುಗಳಿಗೆ ಯೋಗ್ಯರಾಗುವಂತೆಯೂ, ಮಾಡಬೇಕಾದರೆ ಉಪಾಧ್ಯಾಯರುಗಳು ಶಾಸ್ತ್ರಜ್ಞರಾಗಿಯೂ, ತಮ್ಮ ಅಧೀನಕ್ಕೆ ಒಪ್ಪಿಸಲ್ಪಟ್ಟ ವಿದ್ಯಾರ್ಥಿಗಳ ವಿದ್ಯಾಭಿವೃದ್ಧಿಯ ವಿಷಯದಲ್ಲಿ ನಿರತರಾಗಿರಬೇಕೆಂಬದಾಗಿಯೂ, ಜೀವನಕ್ಕೆ ಸಾಲದಷ್ಟು ಸಂಬಳ ಬರುತ್ತಿದ್ದಾಗ್ಯೂ ಗೃಹಕೃತ್ಯ ವಿಚಾರಗಳಲ್ಲಿಯೂ, ಉದರಪೋಷಣೆ ಪ್ರಯತ್ನಗಳಲ್ಲಿಯೂ ಅನೇಕ ತಾಪತ್ರಯಗಳಿಂದ ಪೀಡಿತರಾಗಿದ್ದಾಗ್ಯೂ ಮನಸ್ಸಮಾಧಾನಗಳನ್ನು ಹೇಳತಕ್ಕ ಕಾಲಗಳಲ್ಲಿ ಅವುಗಳನ್ನೆಲ್ಲಾ ಮರೆತು ಬಾಲಕರ ಧರ್ಮಾಭಿವೃದ್ಧಿಯ ವಿಷಯದಲ್ಲಿಯೂ ತಮ್ಮ ಯಶಸ್ಸಿನ ವಿಷಯದಲ್ಲಿಯೂ ದೃಷ್ಟಿಯಿಟ್ಟು ಕೆಲಸ ಮಾಡುತ್ತಾ ಬರಬೇಕೆಂಬದಾಗಿಯೂ ಈಗ ಇಲ್ಲಿ ಅಭ್ಯಾಸಮಾಡಿಸಿದ ಶಾಸ್ತ್ರಗಳನ್ನು ಚಿಂತನೆಮಾಡುತ್ತಾ ಸಮಯ ಬಂದ ವೇಳೆಯಲ್ಲೆಲ್ಲಾ ಶಾಸ್ತ್ರಜ್ಞಾನವಂ ವೃದ್ಧಿಮಾಡಿಕೊಳ್ಳುತ್ತಾ ದಿನೇದಿನೇ ಸರಿಯಾದ ಉಪಾಧ್ಯಾಯರಾಗತಕ್ಕ ತಕ್ಕ ಯೋಗ್ಯತೆಯನ್ನು ಸಂಪಾದಿಸಿಕೊಳ್ಳುತ್ತಾ ಬರಬೇಕೆಂಬದಾಗಿಯೂ. ಈ ಸ್ಥಿತಿಯಲ್ಲಿ ಮಾತ್ರ ಬಂದರೆ ಉಪಾಧ್ಯಾಯರ ಶ್ರಮವನ್ನು ಸಮಗ್ರವಾಗಿ ಬಲ್ಲವರಾಗಿರುವ ಕನಿಷ್ಠವಾದ ಸಂಬಳದಿಂದ ತಾಪತ್ರಯಗಳಿಗೊಳಗಾಗಿ ಇರತಕ್ಕ ಉಪಾಧ್ಯಾಯರುಗಳ ತೊಂದರೆಗಳನ್ನು ತಪ್ಪಿಸಬೇಕೆಂಬ ಸಂಕಲ್ಪವುಳ್ಳ ಗವರ್ನಮೆಂಟಿನವರು ಈ ವಿಷಯದಲ್ಲಿ ಉದ್ಯುಕ್ತರಾಗಿರುವ ಎಜುಕೇಷನ್ ಸೆಕ್ರೆಟರಿಯವರು ಕ್ರಮೇಣ ಉಪಾಧ್ಯಾಯರುಗಳ ಸಂಬಳವನ್ನು ಜಾಸ್ತಿಮಾಡಿ ಅವರ ತಾಪತ್ರಯಗಳನ್ನು ಕಡಿಮೆ ಮಾಡಿ ಅವರು ವಿಶೇಷ ಶ್ರದ್ಧೆಯಿಂದಲೂ, ಆಸಕ್ತಿಯಿಂದಲೂ ಕೆಲಸ ಮಾಡುವಂತೆ ಮಾಡುವರೆಂಬದಾಗಿಯೂ, ಮ|| ಸಿ. ಸುಬ್ರಾಯರವರು ಬಹಳ ಬಾಯಿಪಾಠವಾಗಿದ್ದರೂ ಆಗತಾನೆ ಸ್ವಲ್ಪ ಗುಣವಾಗಿದ್ದಾಗ್ಯೂ ಆಗ ವಿಶೇಷ ಶ್ರಮಪಡುವದು ಆರೋಗ್ಯಕ್ಕೆ ಬಹಳ ಬಾಧಕವೆಂದು ಡಾಕ್ಟರುಗಳು ಹೇಳಿದ್ದಾಗ್ಯೂ ಇಷ್ಟು ಜನ ಉಪಾಧ್ಯಾಯರುಗಳು ಶಾಸ್ತ್ರಾಭ್ಯಾಸಕ್ಕಾಗಿ ಸೇರುವದು ಅಸಾಧ್ಯ. ಈ ವೇಳೆಯಲ್ಲಿ ತಮಗೆ ತಿಳಿದ ಶಾಸ್ತ್ರವಿಷಯಗಳನ್ನು ಅವರಿಗೆ ತಿಳಿಸತಕ್ಕ ಅವಶ್ಯವನ್ನು ಅನೇಕ ವಿದ್ಯಾರ್ಥಿಗಳಿಗೆ ಪ್ರಯೋಜನವಾಗುವದನ್ನು ಭಾವಿಸಿ ತಮ್ಮ ಶರೀರಸ್ಥಿತಿ ಸರಿಯಾಗಿ ಇಲ್ಲದೆ ಇದ್ದಾಗ್ಯೂ ಬೆಳಿಗ್ಗೆ ಮಧ್ಯಾಹ್ನ ಎರಡು ಹೊತ್ತೂ ತಮಗೋಸ್ಕರ ಅನ್ಯಾಪೇಕ್ಷಿತವಾಗಿ ಶ್ರಮವನ್ನು ತೆಗೆದುಕೊಂಡರು. ಈ ವಿಷಯವನ್ನು ನಾವೆಲ್ಲರೂ ಜ್ಞಾಪಕದಲ್ಲಿಟ್ಟುಕೊಂಡು ಸರ್ವತ್ರ ಕೆಲಸವನ್ನು ಮಾಡತಕ್ಕದ್ದು. ಇವರಿಗೆ ಶ್ರೇಯಸ್ಕರವಾಗಲೆಂದು ಬಹಳ ನಮ್ರತೆಯಿಂದ ವಂದನೆಗಳನ್ನು ಬೋಧಿಸುವದು. ಅಲ್ಲದೆ ದಯಮಾಡಿದವರಿಗೆ ಕೈಯೆತ್ತಿ ಪ್ರತ್ಯುಪಕಾರವನ್ನು ಮಾಡಬೇಕು ಎಂದಿದ್ದರು. ಉಪಾಧ್ಯಾಯರುಗಳು ಈಗ ಮಾಡುವ ರೀತಿಯಲ್ಲಿ ಕೃತಜ್ಞತೆಯನ್ನು ತೋರಿಸುವದು ಧರ್ಮವೆಂಬದಾಗಿಯೂ ಉಪನ್ಯಾಸಕರಿಗೂ, ಗವರ್ನಮೆಂಟಿನವರಿಗೂ ವಹಿಸಲ್ಪಟ್ಟ ವಂದನೆಗಳು ಸರ್ವರಿಗೂ ಆತ್ಮತೃಪ್ತಿಕರವಾಗಿರುವದೆಂಬದಾಗಿಯೂ ಹೇಳಿದರು.

ತರುವಾಯ ಮ|| ರಾ|| ಕೇಶವಯ್ಯನವರು "ಈಗ ಸಂಸ್ಥಾನದ ವಿದ್ಯಾರ್ಥಿಗಳ ಪ್ರಯೋಜನಾರ್ಥವಾಗಿ ಎಜುಕೇಷನ್ ಸೆಕ್ರೆಟರಿಯವರು ಉಪಾಧ್ಯಾಯರುಗಳಿಗೆ ಶಾಸ್ತ್ರಾಭ್ಯಾಸವಂ ಮಾಡಿಸತಕ್ಕ ಏರ್ಪಾಡಿನ ಪ್ರಯೋಜನಗಳನ್ನು ವಿವರಿಸಿ ಒಂದು ಉಪನ್ಯಾಸವನ್ನು ಮಾಡಿದರು. ಡಾ|| ಗ್ರಾಸ್ಟೀನ್ ಸಾಹೇಬರವರು, ಕ್ಲರ್ಕ್ ಮೇಷ್ಟ್ರುವರು, ದಿವಾನರವರು, ಎಜುಕೇಷನ್ ಸೆಕ್ರೆಟರಿಯವರೂ, ಈ ಉಪನ್ಯಾಸಕರೂ ಇವರುಗಳೆಲ್ಲಾ ವಿದ್ಯಾಭ್ಯಾಸವನ್ನು ಮಾಡಿಸತಕ್ಕ ಉಪಾಧ್ಯಾಯರುಗಳಿಗೆ ಶಾಸ್ತ್ರಾಭ್ಯಾಸವನ್ನು ಮಾಡಿಸತಕ್ಕ ವಿಷಯದಲ್ಲಿ ಮಾಡಿರತಕ್ಕ ಏರ್ಪಾಡುಗಳನ್ನು ಅತಿ ಗಂಭೀರವಾಗಿ ಪ್ರಯೋಜನಗಳನ್ನು ಹೇಳುವ ಭಾಷೆಯಲ್ಲಿ ಗದ್ಯಪದ್ಯಾತ್ಮಕವಾಗಿ ಒಂದು ವಿಜ್ಞಾಪನಾಪತ್ರಿಕೆಯನ್ನು ಓದಿದರು. ಅದನ್ನು ಎಜುಕೇಷನ್ ಸೆಕ್ರೆಟರಿಯವರಿಗೆ ಕಳುಹಿಸತಕ್ಕದ್ದೆಂದು ತೀರ್ಮಾನವಾಯಿತು.

ಅನಂತರ ಮ|| ರಾ|| ತಿರುಮಲಾಚಾರ್ಯರವರು ಭಾಷಾಸಾಹಿತ್ಯದವರು ಎಜುಕೇಷನ್ ಸೆಕ್ರೆಟರಿ ಸಾಹೇಬರವರ ಮೇಲೆ ಬೇಗ ಬಂದಿರುವ ಶ್ರೇಯಸ್ಸಿಗೆ ಸಹಾಯ ಮಾಡಿ ತಮ್ಮ ಹೇಳಿಕೆ ಮಾತ್ರ ಶ್ರದ್ಧಾಪೂರ್ವಕವಾದ ಒಂದು ಶ್ಲೋಕವನ್ನು ಹೇಳಿದರು. ಅದರಲ್ಲಿ ಮ|| ಭಾಷ್ಯಂ ಸಾಹೇಬರವರು ತಮ್ಮ ಆಸ್ತಿಕ ಧರ್ಮ ಶಿಕ್ಷಣಗಳಿಂದ ಗುರುಶುಶ್ರೂಷಾಪರರಾದ ಬಾಲಕರೂ ಬಿ. ಎ., ಎಂಬ ದಾಗಿ ಕರೆಸಿಕೊಳ್ಳತಕ್ಕವರಾಗಿದ್ದರೆಂದು ಈ ತಾತ್ಪರ್ಯವಾಗಿಟ್ಟಿದರೆ. ಇದನ್ನು ಕೇಳಿ ಸರ್ವರೂ ಸಂತೋಷಪಟ್ಟರು. ತರುವಾಯ ಮಹಾಶಯರಾದ ವ್ಯಾಕರಣವನ್ನು ಎಲ್ಲರಿಗೂ ಸುಲಭವಾಗಿ ಮ|| ರಾ|| ಗಳು ಪದಗಳನ್ನು ಉಚ್ಚರಿಸುವ ಕ್ರಮವನ್ನೂ ಕುರಿತು ಶಬ್ದರೂಪಗಳನ್ನೂ ವಿಶ್ಲೇಷಣೆಗಳನ್ನೂ ಕುರಿತು ಉಪನ್ಯಾಸಿಸಿದರು; ತರುವಾಯ ಮ|| ರಾ|| ಸಿ. ಸುಬ್ಬರಾಯರವರು ತಮ್ಮ ಪಕ್ಷದಲ್ಲಿಯೂ ಇತರ ಉಪನ್ಯಾಸಕರ ಪಕ್ಷದಲ್ಲಿಯೂ ಉಪಾಧ್ಯಾಯರುಗಳು ತೋರಿಸಿದ ಕೃತಜ್ಞತೆಗೋಸ್ಕರ ಅವರನ್ನು ವಂದಿಸಿ ತಮ್ಮ ಸ್ವಂತವಿಷಯದಲ್ಲಿ ಉಪಾಧ್ಯಾಯರುಗಳು ಮತ್ತು ಮ|| ರಾ|| ವೆಂಕಟಕೃಷ್ಣಯ್ಯನವರು ಹೇಳಿರುವ ಪ್ರಶಂಸೆಗಳು ತಮ್ಮ ವಿಷಯದಲ್ಲಿ ಅವರಿಗೆ ಇರುವ ಅಭಿಮಾನವನ್ನು ತೋರಿಸುತ್ತವೆಯೇ ಹೊರತು ಮತ್ತೆ ಇಲ್ಲವೆಂಬದಾಗಿಯೂ, ಅವರು ಮೇಲೆ ಹೇಳಿಕೆಗಳನ್ನು ಕೇಳಿ ಅನುಕಂಪದಿಂದ 'ಈ ಸಭೆ'ಯನ್ನು ಧನ್ಯವಾದ ಮಾಡಿದರು.

ವಿವಿಧ ವರ್ತಮಾನಗಳು.

ಪ್ರತಿದಿನವೂ ಪ್ರಪಂಚದಲ್ಲೆಲ್ಲಾ ಒಟ್ಟು ೩,೦೦೦ ಮದುವೆಗಳು ನಡೆಯುತ್ತವೆ

ವಿಲ್ಯಾಪಿಯಲ್ಲಿರುವ ಬಾಯರುಗಳೆಲ್ಲರೂ ಸ್ತ್ರೀಯರೇ ಗಂಡಸರು ಆ ಕಸುಬಿನಲ್ಲಿ ಹೆಸರುವಾಸಿಗೆ ಬರುವದಿಲ್ಲವಂತೆ !

ಸಂಟ ಹೆಲೀನಾದಲ್ಲಿ ಗುಲಾಮಾಯಿಗಳನ್ನು ಗಂಡನು ಬಹಿಷ್ಕಾರ ಮಾಡಿದರೆ ತನ್ನ ಹೆಂಡತಿಯನ್ನು ತ್ಯಜಿಸಿ ಬಿಡಬಹುದಂತೆ !

ಸೈಬೀರಿಯದಲ್ಲಿ ೩ ಮೈಲಿ ಅಗಲ ೧೭ ಮೈಲಿ ಉದ್ದವಿರುವ ಒಂದು ಸರೋವರವಿರುತ್ತೆ ಅದರ ಮೇಲೆ ಛತ್ರಿಯೋ ಪಾದಿಯಲ್ಲಿ ಉಪ್ಪಿನ ಬಂಡೆಯು ಬೆಳೆದಿರುತ್ತದೆ

ಅಜಯಘಡದ ಮಹಾರಾಜರವರು ತಮ್ಮ ಸಂಸ್ಥಾನದಲ್ಲಿ ಪ್ರಖ್ಯಾತರಾದ ಕಳ್ಳರಗುಂಪನ್ನು ಹಿಡಿದವರಿಗೆ ಬಹಳ ಸಂತೋಷದಿಂದ ೨೦೦ ರೂಪಾಯಿನ ಜಹಗೀರು ಗ್ರಾಮವನ್ನು ಕೊಟ್ಟರು

ಕುದುರೆ ಸಾಗಾಣಿಕೆಯ ಬಂಡಿಗಳನ್ನು ನೋಡಬೇಕಾದರೆ ಹೈದರಾಬಾದಿನ ರಸ್ತೆಗಳಿಗಿಂತಲೂ ಉತ್ತಮವಾದ ಸ್ಥಳವು ಮತ್ಯಾವದೂ ಇಲ್ಲವಂತೆ ನಮ್ಮ ಮೈಸೂರು ಏನು ಕಡಿಮೆಯೇ ?

ಕಳೆದ ೧೮೯೨ನೆ ಇಸವಿಯಲ್ಲಿ ಜಹಜಿನಲ್ಲಿ ಪ್ರಯಾಣ ಮಾಡಿದವರಲ್ಲಿ ೨೫೦ ಜನರು ಸತ್ತುಹೋದರು ಆದರೆ ರೈಲಿನಲ್ಲಿ ಪ್ರಯಾಣ ಮಾಡಿದವರಲ್ಲಿ ೧೮೩ ಜನರು ಮೃತಪಟ್ಟರು

ಬರಿಸ್ಸಾ ದೇಶದಲ್ಲಿ ಒಂದು ಗುಂಪಿನ ಜನರು ಶ್ರೀಮದಿಂಡಿಯಾ ಚಕ್ರವರ್ತಿನಿಯವರಾದ ವಿಕ್ಟೋರಿಯಾ ಮಹಾರಾಣಿಯವರನ್ನು ವಿಗ್ರಹವಾಗಿ ಇಟ್ಟುಕೊಂಡು ಪೂಜಿಸುತ್ತಿದ್ದಾರೆ ಇದು ಈಗಲೂ ನಡೆಯುತ್ತಲಿದೆ

ಚಿಕಾಗೋ ಪಟ್ಟಣದಲ್ಲಿ ಸಾಳೇ ಸೆಪ್ಟಂಬರಿನಲ್ಲಿ ನಡೆಯುವ ಮತಗಳ ಸಮಾಜಕ್ಕೆ ಮದರಾಸಿನಲ್ಲಿರುವ ಬೋಗಿ ಪಾರ್ಥಸಾರಥಿ ಅಯ್ಯಂಗಾರ್ ಬಿ ಎ , ಬಿ ಎಲ್‌ರವರು ಹಿಂದೂ ಮತದ ವಿಷಯವಾದ ಉಪನ್ಯಾಸವನ್ನು ಬಹಳವಾಗಿ ಬರೆದು ರವಾನಿಸಿರುತ್ತಾರೆ

ಸಂಯುಕ್ತ ಸಂಸ್ಥಾನಗಳಲ್ಲಿ ಈ ವರುಷ ನದಿಗಳಲ್ಲೆಲ್ಲಾ ಪೂರ್ಣ ಪ್ರವಾಹಬಂದು ಅನೇಕ ಪಟ್ಟಣಗಳು ಮುಳುಗಿ ಹೋಗಿವೆ ಕೈರೋ ಪಟ್ಟಣದಿಂದ ನ್ಯೂಆರ್ಲೀನ್ಸ್ ವರೆಗೂ ಏಳಮಾಗಿ ೮—೧೦ ಅಡಿಗಳ ನೀರು ನಿಂತಿದೆ ನಷ್ಟವೇನೆಂದು ಊಹಿಸಲೂ ಅಸಾಧ್ಯವಾಗಿದೆ

ಸಿಲ್‌ಹಟ್ಟಿನಲ್ಲಿ ೯ ಘಂಟೆಗಳ ಕಾಲದಲ್ಲಿ ೧೪ ಅಂಗುಲ ಪ್ರಮಾಣದ ಮಳೆಯು ಸುರಿಯಿತು ಪ್ರತಿಸೇತುವೆಯೂ ಮುರಿದು ಬಿದ್ದುಹೋಯಿತು ಟೀ ತೋಟಗಳು ನೀರಿನಲ್ಲಿ ಮುಳುಗಿ ಹೋದವು ಲಕ್ಷಾಂತರ ಜನರಿಗೆ ಬಾಧಕವಾಗಿದೆ ಎಂದು ವರ್ತಮಾನ ಬಂದಿರುತ್ತೆ

ಪ್ರಸಿದ್ಧನಾದ ಫ್ರೆಂಚ್ ಜೋತಿಷಶಾಸ್ತ್ರಜ್ಞನಾದ ಕನರ್ಲ್ ಪೋಡರ್ಫೀಲ್ಡ್ ಎಂಬಾತನು ಮಳೆ ಬೀಳುವಾಗ್ಯೆ ಅನೇಕಲ್ಲು ಬೀಳುವದನ್ನು ನಿಲ್ಲಿಸಬಹುದೆಂದು ಒಂದು ಯುಕ್ತಿಯನ್ನು ಕಂಡುಹಿಡಿದು ಪ್ರಕಟಿಸಿರುತ್ತಾನೆ ಇದು ನಿಜವಾಗಿ ಜರಗಿ ಏಸಿರುವದನ್ನು ಕೇಳಿ ಆಶ್ಚರ್ಯಪಡುತ್ತೇನೆ

ಕಾಶ್ಮೀರದಲ್ಲಿ ರೈಲ್ವೇಲೈನು ಹಾಕುವ ತಜವೀಜು ನಡೆದು ೨೦೦ ಮೈಲಿಗಳ ರಸ್ತೆ ತಯಾರಾಗುವದಕ್ಕೆ ೩ ಕೋಟಿ ರೂಪಾಯಿಗಳು ಬೇಕಾಗುತ್ತದೆಂದು ಅಂದಾಜು ಮಾಡಿ ಸ್ಟೇಟ್ ಆಫ್ ಇಂಡಿಯಾ ಗೌರ್ನ್ಮೆಂಟಿಗೆ ಕಳುಹಿಸಲ್ಪಟ್ಟಾಗ ಅವರು ಹಣವಿಲ್ಲವೆಂದು ಅದನ್ನು ಮಂಜೂರು ಮಾಡಲಿಲ್ಲ

ಗುಂಟೂರಿಗೆ ಒಂದು ಮೈಲೀ ದೂರದಲ್ಲಿರುವ ಕೋರಿಟ್ಪಾಡು ಎಂಬ ಹಳ್ಳಿಯಲ್ಲಿ ೧೨೦ ಮನೆಗಳು ಅಗ್ನಿದಗ್ಧವಾದವೆಂತಲೂ ಸರ್ಕಾರೀ ಅಧಿಕಾರಿಗಳೆಲ್ಲರೂ ಬಹಳವಾಗಿ ಸಹಾಯ ಮಾಡಿದರೆಂತಲೂ ಅಲ್ಲಿನ ರೈಲ್ವೇ ಡಿಸ್ಟ್ರಿಕ್ಟ್‌ಮೆಂಟಿನ ರಾಜಪಕ್ಷಂ ಮೊದಲಿಯಾರ್ರು ಜನಗಳಿಗೆಲ್ಲಾ ಆಹಾರ ಸಾಮಗ್ರಿಗಳನ್ನು ಕೊಡಿಸಿದರೆಂತಲೂ ತಿಳಿಯಬಂದವು

ಐರ್ಲಂಡ್ ದೇಶದಲ್ಲಿ ಒಂದು ವಿಧವಾದ ರೋಗವು ಪ್ರಾಪ್ತವಾಗಿದೆಯಂತೆ. ಅದು ಬಂದ ಕೂಡಲೆ ಹಲ್ಲು ನೋವು ಪ್ರಾರಂಭವಾಗುತ್ತದೆ ಅನಂತರ ಗಂಟಲಿನಲ್ಲಿ ಹುಣ್ಣಾಗುತ್ತೆ ಕೆಲವು ದಿವಸಗಳವೊಳಗೆ ಬಾಯಿ ಮುಚ್ಚಿ ಹೋಗುತ್ತೆ ಕಣ್ಣು ಬಿಡುವದಕ್ಕೆ ಆಗುವದಿಲ್ಲ ಹಾಗೆಯೇ ಸಾಯುವವರೂ ಬದುಕುವವರೂ ಗೊತ್ತೇ ಇಲ್ಲ ಇದೆಂಥಾ ರೋಗವೊ ! ಅದಕ್ಕೆ ಯಾವ ಔಷಧಿಯೂ ಸಿಕ್ಕಿಯುವದಿಲ್ಲವಂತೆ

ಇಂಡಿಯಾ ನ್ಯಾಷನಲ್ ಕಾಂಗ್ರೆಸ್ ಸಮಾಜವು ಈ ವರುಷದ ಡಿಸಂಬರಿನಲ್ಲಿ ಅಮೃತಸರದಲ್ಲಿ ನಡೆಯುವಂತೆ ಏರ್ಪಾಡುಗಳಾಗುತ್ತಲಿವೆ ಅಲ್ಲಿನ ಮೆಂಬರುಗಳೂ ಹುತ್ತು ಕಮಿಟಿಯವರೂ ವಿಲಾಯತಿಯಲ್ಲಿ ಪಾರ್ಲಿಮೆಂಟ್ ಮೆಂಬರಾಗಿರುವ ದಾದಾಭಾಯಿ ನೌರೋಜಿಯವರನ್ನು ಪ್ರೆಸಿಡೆಂಟ್ಟಾಗಿ ಬರಬೇಕೆಂದು ಕೇಳಿಕೊಂಡಿದ್ದಾರೆ ಅದಕ್ಕೆ ಅವರ ಅನುಮತಿಯು ಇನ್ನೂ ಬಂದಿಲ್ಲ

ಬೊಂಬಾಯಿ ಕೋರ್ಟಿಗೆ ಸೇರಿದ ಸೆಸೆಲುಬಾಗ್ ಎಂಬಲ್ಲಿ ಒಬ್ಬ ಯೂರೋಪಿಯನ್ ಮಹಿಳೆಯು ತನಗೆ ಸಿಕ್ಕಿದ ಒಂದು ಗುಂಡನ್ನು ಮನೆಗೆ ತೆಗೆದುಕೊಂಡುಹೋಗಿ ಅದು ಹ್ಯಾಗೆ ಸಾಚಲ್ಪಟ್ಟಿದೆ ಎಂಬದಾಗಿ ಪರೀಕ್ಷಿಸುತ್ತಿರುವಾಗ್ಯೆ ಅದು ಒಡೆದು ಹೋಗಿ ಅವನನ್ನೂ ಅವನ ಹತ್ತಿರ ನಿಂತಿದ್ದ ಇನ್ನೊಬ್ಬನನ್ನೂ ಕೊಂದಿತು ಮತ್ತು ಇನ್ನೂ ೫–೬ ಮಂದಿಗೆ ಘೋರ ಘಾಯಗಳನ್ನುಂಟುಮಾಡಿತು

ಕಡಪ ಡಿಸ್ಟ್ರಿಕ್ಟಿಗೆ ಸೇರಿದ ಪ್ರೊದ್ದತೂರ್ ಎಂಬ ತಾಲ್ಲೋಕಿನಲ್ಲಿ ಪೋಲೀಸಿನವರು ಒಬ್ಬ ವೈರಿಯಿಂದ ತಪ್ಪುಹೊರಡಿಸಬೇಕೆಂದು ಅವನನ್ನು ರಾತ್ರಿಯೆಲ್ಲಾ ಬಹಳವಾಗಿ ಹಿಂಸೆ ಮಾಡಿದರೆಂತಲೂ ಮಾರನೇ ಬೆಳಗಿನ ಹೊತ್ತಿಗೆ ಅವನು ಕೋರಡಿಯಲ್ಲಿ ಸತ್ತು ಬಿದ್ದಿದ್ದನೆಂತಲೂ ಕೇಳುತ್ತೇವೆ ಈಗ ಆ ಪೋಲೀಸಿನವರು ಶಿಕ್ಷಿಸಲ್ಪಡುವರೆಂದು ವರ್ತಮಾನವಿದೆ ಪೋಲೀಸಿನವರು ಹೀಗೆ ಹಿಂಸೆ ಮಾಡುವದು ಅಪರೂಪವಲ್ಲ

ರಾವಲ್‌ಪಿಂಡಿಯ ಸೆಷನ್ ಕೋರ್ಟಿನಿಂದ ೩೬೩ ರೂಪಾಯಿನ ೩ ಪುಸ್ತಕಗಳನ್ನು ಒಬ್ಬ ಕಳ್ಳನು ಅಪಹರಿಸಿ ಅವನ್ನು ಅಲ್ಲಿನ ಒಬ್ಬ ವಕೀಲನಿಗೆ ೧೪೫ ರೂಪಾಯಿಗಳಿಗೆ ಮಾರಿದನು ಅವನು ಕೋರ್ಟಿಗೆ ಸಿಕ್ಕಿ ಹೋಗಿ ಈಗ ಸೆರೆಮನೆಯಲ್ಲಿದ್ದಾನೆ ಆ ಪುಸ್ತಕದ ಮೊದಲನೇಹಾಳೆಯಲ್ಲಿ ಆ ಕೋರ್ಟಿನ ಸೀಲು ಇದ್ದಾಗ್ಯೂ ಅದನ್ನು ಕೊಂಡುಕೊಂಡು ಉಪಯೋಗಿಸುತ್ತಲಿರುವ ವಕೀಲನಿಗೆ ಏನೇನು ಶಿಕ್ಷೆ ಪ್ರಾಪ್ತವಾಗುವದೋ ಎಂದು ವ್ಯಸನ ಪಡಬೇಕಾಗಿದೆ

ಸೆಂಟ್‌ಪೀಟರ್ಸ್‌ಬರ್ಗ್‌ನಲ್ಲಿ ಒಬ್ಬ ವೈರಿಗೆ ಮರಣ ಶಿಕ್ಷೆಯು ಮೊದಲು ವಿಧಿಸಲ್ಪಟ್ಟು ಅನಂತರ ಅಪೀಲಿನಲ್ಲಿ ೧೦ ವರುಷದ ಕಠಿಣ ಸಜಾ ಗೊತ್ತಾಯಿತು ವೈರಿಯು ಬಂದೀಖಾನೆಗೆ ಹೋಗುವಾಗ್ಯೆ ಕಾಲಿಗೆ ಹಾಕಿದ್ದ ಸರಪಣಿಯೊಂದಿಗೆ ಒಬ್ಬಳನ್ನು ಮದುವೆಯಾದನು ಅವಳೂ ಅವನೂ ದೇವಸ್ಥಾನಕ್ಕೆ ಪಹರೆಯಿಂದ ಹೋಗಿ ಮದುವೆ ಮಾಡಿಕೊಂಡು ದೂರಕ್ಕೆ ಬಂದರು ಈಗ ಅವನ ಜೊತೆಯಲ್ಲಿ ಬಂದೀಖಾನೆಗೆ ಅವನ ಹೆಂಡತಿಯೂ ಹೊರಟಿರುತ್ತಾಳೆ ಆಶ್ಚರ್ಯವಾದ ಮದುವೆಯೇ ಸರಿ !

ಅಮೀರರ ಯೂರೋಪಿಯನ್ ದರ್ಜಿಯು ವಾಲ್ಟರ್ಸ್ ಎಂಬವನು ಈಗ ಅಮೀರರ ಅಪ್ಪಣೆ ಪಡೆದು ಕಾಬೂಲಿನಿಂದ ಸಿಂಬಾಕ್ಕೆ ಬಂದಿರುತ್ತಾನೆ ಅವನು ವಾಪಸು ಹೋಗುವಾಗ್ಯೆ ೩೦೦ ಬಗೆಯ ಉಡುಪುಗಳನ್ನು ತಯಾರುಮಾಡಿಕೊಂಡು ಹೋಗಬೇಕೆಂದು ಅಮೀರರ ಅಪ್ಪಣೆಯಾಗಿದೆ ಮತ್ತು ಇದಕ್ಕಾಗಿ ಅವನಿಗೆ ಅಮೀರರು ೩೦,೦೦೦ ರೂಪಾಯಿ ಇನಾಮು ಕೊಟ್ಟಿರುತ್ತಾರೆ ಇದರಿಂದ ಅಮೀರರಿಗೆ ರೂಪಾಯಿನ ಯೋಗ್ಯತೆಯು ಬಹಳ ಚೆನ್ನಾಗಿ ತಿಳಿದಿದೆ ಎಂದು ಗೊತ್ತಾಗುತ್ತೆ

ಆಗ್ರಾ ಪಟ್ಟಣಕ್ಕೆ ಸ್ವಲ್ಪ ದೂರದಲ್ಲಿರುವ ಮೈನಿಪುರದಲ್ಲಿ ಒಬ್ಬ ಭಾರೀ ಸಾಹುಕಾರನ ಮನೆಗೆ ಕಳ್ಳರು ಆಯುಧಪಾಣಿಗಳಾಗಿ ಹೋಗಿ ಕೊಳ್ಳೆ ಹೊಡೆಯುತ್ತಿದ್ದರು ಇದರ ಸುಳಿವನ್ನು ಹ್ಯಾಗೋ ತಿಳಿದು ಹಿಡಿಯಕೊಂಡಿದ್ದ ಪೋಲೀಸಿನವರು ಅವರನ್ನು ಹಿಡಿಯುವದಕ್ಕೆ ಪ್ರಯತ್ನಮಾಡಿದಾಗ ತಮ್ಮಲ್ಲಿ ಇಬ್ಬರು ಕತ್ತಿಯ ಪೆಟ್ಟಿನಿಂದ ಸಾಯಬೇಕಾಯಿತು ಕೆಲವರು ತಪ್ಪಿಸಿಕೊಂಡುಹೋದಾಗ್ಯೂ ೮–೯ ಮಂದಿಯಾತ್ರ ಲಾಕಪ್ಪಿನಲ್ಲಿದ್ದಾರೆ ಇತರರನ್ನು ಪತ್ತೇ ಮಾಡುತ್ತಲಿದ್ದಾರೆ

ಫ್ರಾನ್ಸ್ ದೇಶದ ಪ್ಯಾರಿಸ್ ಪಟ್ಟಣದಲ್ಲಿ ಒಂದಾನೊಂದು ಪ್ರಸಿದ್ಧವಾದ ಕಾರ್ಖಾನೆಯಲ್ಲಿ ಒಬ್ಬ ಕೂಲಿಯವನು ವಿಷಬೀಜ ಕಳವು ಮಾಡಿದಾಗ್ಯೂ ಅಧಿಕಾರಿಗಳು ಅದನ್ನೆಲ್ಲಾ ಮರೆಮಾಚಿಕೊಂಡು ಅವನನ್ನು ಶಿಕ್ಷಿಸದೇ ಹೋದರು ಹ್ಯಾಗೋ ಈ ವರ್ತಮಾನವು ಕೂಲಿಯವರಿಗೆಲ್ಲಾ ತಿಳಿಯಿತು ಆ ಕೂಲೀ ಅಧಿಕಾರಿಗಳು ಪಕ್ಷಪಾತ ಮಾಡುತ್ತಾರೆಂದೂ, ಅವನನ್ನು ಡಿಸ್ಮಿಸ್ ಮಾಡದಿದ್ದರೆ ತಾವು ಕೆಲಸಕ್ಕೆ ಬರುವದಿಲ್ಲವೆಂದೂ ಮುಷ್ಕರ ಹೂಡಿಕೊಂಡು ಇರುತ್ತಾರಾದಕಾರಣ ಕಾರ್ಖಾನೆಯ ಬಾಕಲು ಮುಚ್ಚಬೇಕಾಯಿತು ಇದಲ್ಲವೇ ಪ್ರಜೆಗಳ ಕೆಲಸ !

ಕ್ಯಾಂಡಿ ಎಂಬಲ್ಲಿ ಡೆಪ್ಯೂಟಿ ಕಮಿಷನರು ತಮ್ಮ ಕೋರ್ಟಿನಲ್ಲಿ ವಾದಿಸುವದಕ್ಕೆ ಬಂದಿದ್ದ ಒಬ್ಬ ವಕೀಲನನ್ನು ಅಗೌರವವಾದ ವಾಕ್ಯಗಳಿಂದ ಅವಮಾನ ಪಡಿಸಿದ್ದಕ್ಕಾಗಿ ಅಲ್ಲಿನ ವಕೀಲರೆಲ್ಲರೂ ಅವರಮೇಲೆ ಒಂದು ಅರ್ಜಿ ಬರೆದುಕೊಂಡಿರು ಆ ಡೆಪ್ಯೂಟಿ ಕಮಿಷನರು ಚೀಫ್ ಕೋರ್ಟಿನಲ್ಲಿ ವಕೀಲರೆಲ್ಲರೂ ಸೇರಿರುವಾಗ್ಯೆ ತಮ್ಮ ಸೀಟಿನಿಂದ ಎದ್ದು ಅವಮಾನಪಡಿಸಲ್ಪಟ್ಟ ವಕೀಲನನ್ನು ಬಹಿರಂಗವಾಗಿ ಕ್ಷಮಾಪಣೆ ಕೇಳಿಕೊಂಡರಂತೆ ಅಲ್ಲಿಂದ ಈಚೆಗೆ ಡೆಪ್ಯೂಟೀ ಕಮಿಷನರಿಗೂ ವಕೀಲರುಗಳಿಗೂ ಸೌಹೃದಯ ಉಂಟಾಗಿರುವಂತೆ ವರ್ತಮಾನಬಂದಿದೆ

ಈಗ ಇಂಡಿಯಾದಲ್ಲಿ ಜನರು ಉಪಯೋಗಿಸುವ ಸಕ್ಕರೆಯಲ್ಲಾ ಸಾಧಾರಣವಾಗಿ ಮೂಳೆಗಳಿಂದ ತಯಾರಾಗುತ್ತದಲ್ಲವೆ ಬಿಟ್ಟದ್ದೆಂಬುದು ಅನೇಕರಿಗೆ ತಿಳಿಯದ ಅಂಶವಲ್ಲ ಇದರಿಂದ ಅನೇಕ ಹಿಂದೂಗಳು ತಾವು ಜಾತಿ ಕೆಡುವರೆಂದು ಸಕ್ಕರೆಯನ್ನೇ ಕೊಂಡುಕೊಳ್ಳದೆ ಅದಕ್ಕೆ ಬದಲಾಗಿ ಬೆಲ್ಲವನ್ನೇ ಉಪಯೋಗಿಸುತ್ತಿದ್ದಾರೆ ಇದನ್ನು ತಿಳಿದು ಕೆಲವು ಮಂದಿ ಹಿಂದೂ ಸಾಹುಕಾರರು ಭಾರೀ ಹಣಗಳನ್ನು ಮೂಲಧನವಾಗಿ ಹಾಕಿ ಉತ್ತರ ಹಿಂದೂಸ್ಥಾನದಲ್ಲಿರುವ ಕಾನ್‌ಪುರವೆಂಬಲ್ಲಿ ಒಂದು ಸಕ್ಕರೇ ಕಾರ್ಖಾನೆಯನ್ನು ಏರ್ಪಾಡು ಮಾಡುವವರಲ್ಲಿದ್ದಾರೆ ಅಲ್ಲಿ ತಯಾರಾಗುವ ಸಕ್ಕರೆಯು ಮೂಳೆಗಳಿಂದ ಅಲ್ಲ ಇತರ ಪದಾರ್ಥಗಳಿಂದ ಮಾಡಿಸುತ್ತಾರಂತೆ ಈ ಕಾರ್ಖಾನೆಯು ಅಭಿವೃದ್ಧಿಗೆ ಬರಬೇಕೆಂಬುವದೇ ನಮ್ಮ ಕೋರಿಕೆಯಾಗಿದೆ

ಶ್ರೀಮದಿಂಡಿಯಾ ಚಕ್ರವರ್ತಿನಿಯವರು ಕಳೆದ ವರ್ಧಂತಿಯಲ್ಲಿ ನಮ್ಮ ಮದರಾಸ್ ಪ್ರೆಸಿಡೆನ್ಸಿಯ ದೊಡ್ಡಮನುಷ್ಯರಲ್ಲಿ ಕೆಲವರಿಗೆ ಕೆಲವು ಬಿರುದುಗಳನ್ನು ದಯಪಾಲಿಸಿರುತ್ತಾರೆ ಅವುಗಳ್ಯಾವವೆಂದರೆ—ಕೊಚ್ಚೀ ರಾಜರು ತಮ್ಮ ರಾಜ್ಯದ ಎಲ್ಲಾ ಭಾಗಗಳಲ್ಲೂ ಸಂಚರಿಸಿದ್ದರಿಂದಲೂ, ಅಲ್ಲಿನ ಇತರ ಯಾವ ರಾಜರೂ ಹೀಗೆ ಸಕ್ರಿಟ್ಟುಮಾಡಿ ಇರಲಿಲ್ಲವಾದ್ದರಿಂದಲೂ, ಅವರ ಧೈರ್ಯಕ್ಕೆ ಮೆಚ್ಚಿ ಅವರಿಗೆ ಜಿ. ಸಿ. ಐ. ಇ ಎಂಬ ಬಿರುದನ್ನೂ ; ಪುದುಕೋಟೆಯ ರಾಜರು ಬಹು ಪರಾಕ್ರಮದಿಂದ ಒಂದು ಆನೇ ಸಲಗವನ್ನು ಹಿಡಿದಿದ್ದರಿಂದ ಅವರಿಗೆ ಕೆ. ಸಿ. ಎಸ್. ಐ ಎಂಬ ಬಿರುದನ್ನೂ ; ರಾಮನಾಡಿನ ರಾಜರು ಸೂಳೇ ರಥಾಳೆ ಸಂಗೀತಗಳು ಎಲ್ಲಿ ಆಗುವವೋ ಅಂಥಾ ಸ್ಥಳಗಳಿಗೆ ತಾವು ಹೋಗುವದೇ ಇಲ್ಲವೆಂದು ಪ್ರತಿಜ್ಞೆ ಮಾಡಿರುವದರಿಂದ ಅವರಿಗೆ ಕೆ ಸಿ ಐ ಇ ಎಂಬ ಬಿರುದನ್ನೂ ಹೀಗೆಯೇ ಇನ್ನೂ ೮ ಮಂದಿಗೆ ಬೇರೆಬೇರೆ ಬಿರುದುಗಳನ್ನೂ ದಯಪಾಲಿಸಲಾಗಿದೆ

ಟರ್ಕೀ ಸೈನ್ಯದಲ್ಲಿ ಸುಲ್ತಾನರು ತಮ್ಮ ಪ್ರಜೆಗಳನ್ನೆಲ್ಲಾ ಸೈನ್ಯದಲ್ಲಿ ತರಬೇತು ಮಾಡಬೇಕೆಂದು ಪ್ರಯತ್ನ ಮಾಡಿದ್ದಾರೆ ಆದರೆ ಅಲ್ಲಿನ ಒಂದು ಸಂಸಾರದಲ್ಲಿ ಒಬ್ಬ ಮುದುಕಿಯು ತನ್ನ ಮಗ ಮತ್ತು ಮಗಳನ್ನು ಸಾಕುವದು ಬಹುಕಷ್ಟವಾಗಿತ್ತು ಇದಕ್ಕಾಗಿ ಮಗನು ಸೈನ್ಯಕ್ಕೆ ಸೇರಿದಲ್ಲಿ ಮನೆಯಲ್ಲಿ ಮುದುಕಿಗೆ ಜೀವನಕ್ಕೆ ಮಾರ್ಗವಿಲ್ಲದಂತಾಗಬಹುದೆಂದು ಯೋಚಿಸಿ ತನ್ನ ತಂಗಿಯನ್ನು ಸೈನ್ಯಕ್ಕೆ ಕಳುಹಿಸಿ ತಾನು ಕೂಲಿನಾಡಿ ಮುದುಕಿಯಾದ ತಾಯಿಯನ್ನು ಸಾಕುತ್ತಿದ್ದನು ಅವನ ತಂಗಿಯು ತನ್ನ ಅಣ್ಣನ ಹೆಸರನ್ನೇ ಇಟ್ಟುಕೊಂಡು ತಾನು ಹೆಂಗಸೆಂದು ಒಬ್ಬರಿಗೂ ಗೊತ್ತಾಗದಂತೆ ಕೆಲಸಗಳನ್ನು ನಡೆಸುತ್ತಿದ್ದಳು ಆದಾಗ್ಯೂ ೩|| ವರ್ಷಗಳು ಹೀಗೆ ಕಳೆಯುವದಲ್ಲಿ ಈ ವರ್ತಮಾನವು ಸುಲ್ತಾನರಿಗೆ ತಿಳಿದುಬಂದದರಿಂದ ಅವರು ಆಶ್ಚರ್ಯಪಟ್ಟು ಈ ಹುಡುಗಿಗೆ ಮಾಹೆಯಾನಾ ೧೦೦ ರೂಪಾಯಿ ಪಿಂಚಣಿ ಸಲ್ಲುವಂತೆಯೂ, ಅವಳ ಅಣ್ಣನು ಸೈನ್ಯಕ್ಕೆ ಬರಬೇಕೆಂಬ ವಿಧಿಯನ್ನು ತಪ್ಪಿಸಿರಂತೆಯೂ ಹುಕುಂ ಕೊಟ್ಟರು ಇದರಿಂದ ಆ ಮುದುಕಿಗೆ ಮಹದಾನಂದ ಉಂಟಾಗಿ ಸುಲ್ತಾನರಿಗೆ ಅನೇಕ ಆಶೀರ್ವಾದಗಳನ್ನು ಮಾಡಿದಳು

ಟಿಬೆಟ್ಟ ದೇಶದಲ್ಲಿ ಹೆಂಡತಿಯನ್ನು ಘಟಸ್ಫೋಟ ಮಾಡಿ ತ್ಯಜಿಸುವ ಪದ್ಧತಿಯು ವಿಶೇಷವಾಗಿದ್ದಾಗ್ಯೂ ಅದು ಅಂತರಂಗದಲ್ಲಿ ನಡೆಯುವದೇ ವಿನಹ ಕೋರ್ಟುಗಳಿಗೆ ಹೋಗುವ ದೇಯಿಲ್ಲ ಅವರ ಪದ್ಧತಿ ಏನೆಂದರೆ:—ಅವರ ಹಿರಿಯರಲ್ಲಿ ಕೆಲವು ಮಂದಿಯನ್ನು ಜಮಾಯಿಸಿ ಹೆಂಡತಿಯನ್ನು ಬಿಡಬೇಕೆಂದು ಇಷ್ಟಪಡುವವನ ಮನೆಗೆ ಕರೆದುಕೊಂಡು ಬರುತ್ತಾರೆ ಗಂಡನ ಕಡೆಯವರೂ, ಹೆಂಡತಿಯ ಕಡೆಯವರೂ ಎದುರುಬದುರಾಗಿ ಕೂತುಕೊಂಡು ಉದ್ದದಲ್ಲಿ ಒಂದೇ ತರದ ೨ ಮೇಣದ ಬತ್ತಿಗಳನ್ನು ತಂದು ಏಕಕಾಲದಲ್ಲಿ ಎರಡನ್ನೂ ಹಚ್ಚಿ ಇಡುತ್ತಾರೆ ಗಂಡನ ಪಕ್ಷದವರು ಹಚ್ಚಿಟ್ಟದ್ದು ಮುಂಚೆಯೇ ಉರಿದು ಹೋದರೆ ಗಂಡನು ತನ್ನ ಮನೆಯನ್ನೂ, ತನ್ನ ಸಕಲ ಆಸ್ತಿಯನ್ನೂ ಹೆಂಡತಿಗೆ ಬಿಟ್ಟು ಹೊರಟು ಹೋಗುವನು ಹೆಂಡತಿಯ ಕಡೆಯ ದೀಪವು ಮೊದಲೇ ಅಂತ್ಯವನ್ನೈದಿದರೆ ಅವಳು ಗಂಡನಿಂದ ತ್ಯಜಿಸಲ್ಪಟ್ಟಳೆಂದು ಗೊತ್ತು ಮಾಡಲ್ಪಡುವಳು ಅದಕ್ಕೆ ಅವಳು ಒಪ್ಪಿಕೊಂಡು ಹೊರಟು ಹೋಗುವಳು ತಮ್ಮ ತಮ್ಮ ಜೀವದ ಅಂತ್ಯದವರಿವಿಗೂ ಪ್ರೀತಿಯಿಂದ ಏಕೀಭವಿಸಿ ಇರತಕ್ಕ ಗಂಡ ಹೆಂಡರಿಗೆ ಮೇಣದಬತ್ತಿಯು ಉರಿಯೋ ಬೇರೆಮಾಡಿಬಿಡತಕ್ಕ ಶಕ್ತಿಯನ್ನು ಪಡೆದಿದ್ದರೆ ಆ ಜನಗಳ ಇತರ ಪದ್ಧತಿಗಳು ಎಷ್ಟು ಗೌರವಪ್ರದವಾಗಿರುವವೋ ವಾಚಕರೇ ಊಹಿಸಿಕೊಳ್ಳಬಹುದು

ರಷ್ಯಾದೇಶದಲ್ಲಿ ಮಾಸ್ಕೋ ಪಟ್ಟಣದ ಹತ್ತಿರ ದೊಗೊರೋಪಸ್ಕ್ ಎಂಬ ಹಳ್ಳಿಯಲ್ಲಿ ೧೭ ವರುಷದ ಒಬ್ಬ ಹುಡುಗಿಗೆ ಪ್ರಾಪ್ತವಾದ ವಿಚಿತ್ರವು ಆಶ್ಚರ್ಯಕರವಾಗಿದೆ ಅದೇನೆಂದರೆ—ಅವಳು ಒಂದು ಹುಲ್ಲುಮೆದೆಯ ಮೇಲೆ ಮಲಗಿ ನಿದ್ರೆಮಾಡುತ್ತಿದ್ದಳು ಕೆಲವು ಘಟಿಗೆಗಳ ಮೇಲೆ ಎಚ್ಚರವಾಯಿತು ಅಷ್ಟರಲ್ಲಿ ತನ್ನ ಮೈಮೇಲೆ ಮಂಜಿನ ಗಡ್ಡೆಗಳು ವಿಪರೀತವಾಗಿ ಬಿದ್ದು ಅದರಲ್ಲಿ ತಾನು ಹೂತುಹೋಗಿದ್ದಳು ಮಂಜು ಸುಮಾರು ೮–೯ ಅಡಿ ಪ್ರಮಾಣ ಬಿದ್ದಿತ್ತು ಅವಳು ಬಿಡಿಸಿಕೊಂಡು ಬರಬೇಕೆಂದು ಪ್ರಯತ್ನ ಮಾಡಿದ್ದಲ್ಲಾ ವ್ಯರ್ಥವಾಗಿ ಕೊನೆಗೆ ಅದರಲ್ಲೇ ಇರಬೇಕಾಗಿ ಬಂತು ಹೀಗೆ ಅವಳು ಮಂಜಿನಲ್ಲಿ ೫೧ ದಿನ (!!!) ಹೂಳಲ್ಪಟ್ಟಿದ್ದಳು ಆ ಕಾಲದಲ್ಲಿ ಅವಳ ಹತ್ತಿರ ಇದ್ದ ಸ್ವಲ್ಪ ರೊಟ್ಟಿಯನ್ನು ತಿಂದು ಪ್ರಾಣ ಉಳಿಸಿಕೊಂಡಿದ್ದಳು ಒಳಗೆ ಇರುವಾಗ್ಯೆ ಅವಳಿಗೆ ವಿಪರೀತ ಭಯವಾಗುತ್ತಿತ್ತೇ ಹೊರತು ಮತ್ತೇನೂ ಆಗಲಿಲ್ಲವಂತೆ ಅವಳು ಹೀಗೆ ಹೂಳಲ್ಪಟ್ಟಿದ್ದಾಗ್ಯೆ ಅವಳ ಸಮೀಪದಲ್ಲಿ ತಿರುಗಾಡುತ್ತಿದ್ದವರ ಶಬ್ದವು ಅವಳಿಗೆ ಕೇಳಿ ಬರುತ್ತಿತ್ತೆಂತಲೂ ಆಗಳು ಎಷ್ಟು ಕೂಗಿದರೂ ಒಬ್ಬರೂ ತನ್ನನ್ನು ಬಿಡಿಸಿಕೊಳ್ಳುವದಕ್ಕೆ ಬರಲಿಲ್ಲವೆಂತಲೂ ಬಹಳ ವ್ಯಸನ ಪಡುತ್ತಾಳೆ ಈಗ ಆ ಹುಡುಗಿಯು ಆರೋಗ್ಯವಾಗಿದ್ದಾಳೆಂದು ಕೇಳುತ್ತೇವೆ ಇದು ಆಶ್ಚರ್ಯಕರವಾದ ವರ್ತಮಾನವೇ ಸರಿ

ಪ್ರಪಂಚಕ್ಕೆಲ್ಲಾ ಅತ್ಯಂತ ಆಶ್ಚರ್ಯವನ್ನುಂಟುಮಾಡುವ ಚಿಕಾಗೋ ಪಟ್ಟಣವು ಕಳೆದ ೧೮೭೧ ನೆಯಿಸವಿಯಲ್ಲಿ ನೆಲಸಮನಾಯಿತು ಅದು ಹ್ಯಾಗೆಂದರೆ—ಒಂದು ಕಟ್ಟೆ ಹಸುವು ತನ್ನ ಕೊಟ್ಟಿಗೆಯಲ್ಲಿ ನುಗ್ಗಿ ಒಂದು ಟೀ ಕೆರೋಸೀನ್ ಲ್ಯಾಂಪನ್ನು ಒದ್ದಿತು ಅದು ಹತ್ತಿಕೊಂಡು ಬರ ಬರ ಉರಿಹಚ್ಚಿ ೮೬೦ ಎಕರೇ ಜಮೀನೂ ಮತ್ತು ಕಟ್ಟಡಗಳೂ ಬೂದಿಯಾದವು ಒಂದು ಲಕ್ಷ ಮನೆಗಳು ಹಾಳಾದವು ಮತ್ತು ನಾಲ್ಕು ಸ್ಪ್ರದು ಕೋಟಿ ದ್ರವ್ಯ ನಷ್ಟವಾಯಿತು ಆದಾಗ್ಯೂ ೨೨ ವರುಷಗಳ ಕಾಲದಲ್ಲಿ ಸರ್ವೋತ್ಕೃಷ್ಟವಾದ ಮತ್ತು ಮನೋರಂಜಕವಾದ ಪಟ್ಟಣವಾಗಿರುತ್ತದೆ ಅದರಲ್ಲಿ ಒಂದು ಭಾರೀ ಕಟ್ಟಡ ಉಂಟು ಅದರಲ್ಲಿ ೯೦೦ ಆಫೀಸುಗಳು ನಡೆಯುತ್ತನೆಯಂತೆ ೬,೦೦೦ ಜನರು ಕೂತುಕೊಳ್ಳುವದಕ್ಕೆ ಸಾಕಾಗುವಂಥಾ ದೊಡ್ಡ ನಾಟಕ ಶಾಲೆಯುಂಟು ಆ ಪಟ್ಟಣದ ವಿಸ್ತೀರ್ಣವು ೧೮೦ ಚದರ ಮೈಲಿಗಳು ರಾಜ ಬೀದಿಗಳು ಕೆಲವು ಮೈಲಿಗಳಷ್ಟು ಉದ್ದವಾಗಿರುತ್ತವೆ ೮ ಗಜ ದೂರಕ್ಕೆ ಹೋಗಬೇಕಾದರೂ ೮ ಮೈಲಿ ದೂರಕ್ಕೆ ಹೋಗಬೇಕಾದರೂ ವಿದ್ಯುಚ್ಛಕ್ತಿಯಿಂದ ನಡೆಸಲ್ಪಡುವ ರೈಲ್ ಗಾಡಿಗಳಿಗೆ ೫|| ಕಾಸನ್ನು ಕೊಟ್ಟಲ್ಲಿ ವಾಯು ವೇಗದಲ್ಲಿ ಕರೆದುಕೊಂಡುಹೋಗಿ ಬಿಡುತ್ತದೆ ಆ ಪಟ್ಟಣದಲ್ಲಿ ೧೫ ಉದ್ಯಾನವನಗಳಿರುತ್ತವೆ ಅವು ೨,೦೦೦ ಎಕರೆಗಳ ಭೂಮಿಯನ್ನು ಆಕ್ರಮಿಸಿರುತ್ತವೆ ಜನರು ಸ್ವೇಚ್ಛೆಯಾಗಿ ತಿರುಗಾಡಬಹುದು ಆ ವನಗಳು ದೇವೇಂದ್ರನ ಉದ್ಯಾನವನವೋ ಎಂಬಷ್ಟು ಮನೋಹರವಾಗಿರುತ್ತವೆ ಮತ್ತು ಆ ಪಟ್ಟಣದಲ್ಲಿ ಪ್ರತಿ ವರುಷವೂ ಕೋಟ್ಯಾಂತರ ಪ್ರಾಣಿಗಳನ್ನು ಮಾಂಸಕ್ಕಾಗಿ ಕೊಂದು ಮಾರುತ್ತಾರೆ ಇದರಿಂದಲೇ ಒಂದು ವರುಷಕ್ಕೆ ೮೬೦ ಕೋಟಿ ದ್ರವ್ಯ ಉತ್ಪತ್ತಿಯಾಗಬೇಕಾದರೆ ಇತರ ಬಾಬುಗಳಲ್ಲಿ ಅಲ್ಲಿನ ಹುಟ್ಟುವಳಿಯೇನೋ ವಾಚಕರೇ ಊಹಿಸಿಕೊಳ್ಳಬಹುದಾಗಿದೆ

ಶಾಲೀವಾಹನಶಕ ೧೮೧೫ ನೇ ವಿಜಯನಾಮ ಸಂವತ್ಸರದ ಜ್ಯೇಷ್ಠ ಬಹುಳ ನವಮಿ ಗುರುವಾರದಿಂದ ಜ್ಯೇಷ್ಠ ಬಹುಳ ಅಮಾವಾಸ್ಯ ಬುಧವಾರದ ವರೆಗಿನ ವಾರದ ಪಂಚಾಂಗ.

೧೮೯೩ ನೇ ಇಸವಿ, ಜೂನ್.

ತಾ	ವಾರ.	ತಿಥಿ.	ಘಳಿಗೆ.	ನಕ್ಷತ್ರ	ಘಳಿಗೆ.	ವೃಷಭ ಮಾಸ ತೇದಿ
8	ಗು	ನ	46-11	ಉ.	58-49	28
9	ಶು.	ದ.	41-59	ರೆ.	56-26	29
10	ಶ. *	ಏ	37-6	ಶ್ರ.	53-18	30
11	ರ.	ದ್ವಾ	31-32	ಧ.	49-29	31
12	ಸೋ	ತ್ರ	25-40	ಶ.	45-29	32
13	ಮಂ	ಚ.	19-29	ಪೂ	41-12	1
14	ಬು	ಅ	13-16	ಉ.	38-11	2

* ಸರ್ವತ್ರಏಕಾದಶಿ

ಪೇಟೆ ಧಾರಣೆ.

ದಿನಸಿ.	ಮೈಸೂರು	ಬೆಂಗಳೂರು.
	ರೂ. ಆ. ಪೈ.	ರೂ. ಆ. ಪೈ.
ಕಡ್ಡೀ ಅಕ್ಕಿ ಪಲ್ಲ ೧ಕ್ಕೆ	೧೦-೮-೦	೧೨-೦-೦
ಕೆಂಬೂತಿ ಅಕ್ಕಿ ಅವ್ವಲ್	೧೦-೬-೦	೧೦-೪-೦
ಡಿಟ್ಟೋ ಅಕ್ಕಿ ದುಯಂ	೧೦-೦-೦	೯-೮-೦
ಜೀರಿಗೆಸಣ್ಣ ಅಕ್ಕಿ	೧೦-೧೨-೦	೧೨-೮-೦
ಸಣ್ಣಕ್ಕಿ ಅವ್ವಲ್	೧೪-೦-೦	೧೪-೦-೦
ಡಿಟ್ಟೋ ಅಕ್ಕಿ ದುಯಂ	೧೨-೦-೦	೧೧-೦-೦
ತೊಗರೀಬೇಳೆ ಪಲ್ಲ ೧ಕ್ಕೆ	೧೧-೮-೦	೧೨-೦-೦
ಡಿಟ್ಟೋ ದುಯಂ ತರಹ	೧೧-೦-೦	೧೦-೦-೦
ಹೈರಾಗಿ ಪಲ್ಲ ೧ಕ್ಕೆ	೪-೦-೦	೧೫|೪-೦-೦
ಕಾರ್ರಾಗಿ	೩-೧೨-೦	೩|೬-೦-೦
ಹುರುಳಿಬೇಳೆ ಪಲ್ಲ ೧ಕ್ಕೆ	೯-೧೨-೦	೯-೧೨-೦
ಬಿಳೀ ಅವರೆ	೧೨-೮-೦	೧೦-೮-೦
ಹೆಸರು	೯-೮-೦	೧೦-೦-೦
ಉದ್ದು	೧೨-೦-೦	೧೦-೮-೦
ಕಡಲೆ	೧೦-೦-೦	೧೦-೪-೦
ಎಳ್ಳು	೧೪-೦-೦	೧೪-೮-೦
ಹುರಳಿ	೬-೪-೦	೬-೮-೦
ಸೀಗೇಕಾಯಿ ಮಣ ೧ಕ್ಕೆ	೧-೧೦-೦	೧-೧೪-೦
ಮೆಣಸಿನಕಾಯಿ	೩-೬-೦	೨-೧೪-೦
ದುಯಂ ತರಹ	೩-೨-೦	೨-೧೦-೦
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ	೪-೮-೦	ಪ ೧-೮-೦
ಸಣ್ಣ ಅಚ್ಚು	೪-೦-೦	ಹಿ|| ೧-೫-೦
ಒಳ್ಳೆಣ್ಣೆ ಮಣ ೧ಕ್ಕೆ	೪-೮-೦	೪-೧೨-೦
ಹರಳೆಣ್ಣೆ	೪-೪-೦	೩-೧೪-೦
ಕೊತ್ತುಂಬರಿ ಪಲ್ಲ ೧ಕ್ಕೆ	೮-೧೪-೦	೮-೪-೦
ಉಪ್ಪು	೯-೬-೦	೯-೮-೦
ಹುಣಿಸೇಹಣ್ಣು ಮಣ ೧ಕ್ಕೆ	೧-೧೨-೦	೧-೧೨-೦
ಹಳೇ ಹುಣಿಸೇಹಣ್ಣು	೧-೧೦-೦	೧-೮-೦
ತುಪ್ಪ	೧೪-೮-೦	೧೪-೦-೦
ಸೀಮೆ ಯಂಣೆ ಡಬ್ಬ ೧ಕ್ಕೆ	೪-೪-೩	೪-೧-೦
ತೆಂಗಿನಕಾಯಿ ೧೦೦ಕ್ಕೆ	೬-೦-೦	೪-೮-೦
ಚಿನ್ನ (ತೊಲ)		
ರುಪ್ಯ	೧೬-೦-೦	೧೬-೯-೦
ಪವನು	೧೬-೧೪-೦	೧೬-೬-೦
ಬೆಳ್ಳಿ	೨೬-೮-೦	೨೬-೬-೦

Mysore.—Printed and published for the Proprietor at the Wesleyan Mission Press.
8/6/93.

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು — ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೭ — ಮೈಸೂರು—ಸನ್ ೧೮೯೩ ನೇ ಇಸವಿ ಜನವರಿ ತಾರೀಖು ೧೨ ನೇ ಗುರುವಾರ. — ಸಂಚಿಕೆ ೧

ನೋಟೀಸ್.

		ಕ್ರಯ	ಅಂಚೆ ಸಹಿತವಾಗಿ
Campbell's	ಕನ್ನಡ ವ್ಯಾಕರಣ ಸಾರ	೦ ೨ ೦	೦ ೨ ೬
Object Lessons	ವಸ್ತು ಪಾಠಗಳು	೦ ೧ ೦	೦ ೧ ೬
Picture do	ಚಿತ್ರಗಳು ಸಹಿತವಾಗಿ	೦ ೨ ೦	೦ ೨ ೬

ಈ ಮೂರು ಪುಸ್ತಕಗಳು ಪ್ರೈಮರಿ ಶಾಲೆಗಳಲ್ಲಿ ಓದತಕ್ಕ ಪುಸ್ತಕಗಳು.

	ಕ್ರಯ	ಅಂಚೆ ಸಹಿತವಾಗಿ
ಸ್ತ್ರೀಯರು ಓದತಕ್ಕ ಪುಸ್ತಕ	೦ ೩ ೦	೦ ೩ ೬
ಗಣಿತ ವಿದ್ಯೆ	೦ ೪ ೦	೦ ೪ ೬
ಗಣಿತ ಪುಸ್ತಕಗಳು	೦ ೧ ೦	೦ ೧ ೬
ಸಂಸ್ಕೃತ ಕರ್ನಾಟಕ ಭಾಷಾಮಂಜರಿ	೦ ೨ ೦	೦ ೨ ೬
ಭೂಗೋಳ ಶಾಸ್ತ್ರ ಪ್ರಶ್ನೋತ್ತರ	೦ ೨ ೦	೦ ೨ ೬
ಇಂಗ್ಲಿಷೂ ಕನ್ನಡವೂ ಶಬ್ದಾವಳಿ ೧ನೇ ೨ನೇ ಭಾಗಗಳು	೦ ೧ ೦	೦ ೧ ೬
ಕಾವ್ಯಮಾಲೆ (Minor Poetical Anthology)	೦ ೮ ೦	೦ ೮ ೬
ಬಾಲವ್ಯಾಕರಣ	೦ ೩ ೦	೦ ೩ ೬
ಹಳಗನ್ನಡ ವ್ಯಾಕರಣ ಸೂತ್ರಗಳು	೦ ೬ ೦	೦ ೬ ೬
ಇಂಗ್ಲಿಷೂ ಕನ್ನಡವೂ ಸಂಭಾಷಣ ವಾಕ್ಯಗಳು	೦ ೧೦ ೦	೦ ೧೦ ೬
ಶಬ್ದಮಣಿ ದರ್ಪಣ	೧ ೦ ೦	೧ ೪ ೬
Kan. Eng. Pocket Dictionary	೧ ೪ ೦	೧ ೫ ೭
Eng. Kan. School Dictionary	೨ ೧೦ ೦	೨ ೧೨ ೦
ಪಿಳ್ಳೈ ತಾಯಿ	೦ ೪ ೪	೦ ೮ ೬
ಆತ್ಮಿಕ ವಿದ್ಯಾ ಯುದ್ಧ (Bunyan)	೦ ೧೨ ೦	೦ ೧೩ ೬
ಕ್ರೈಸ್ತ ಪದ್ಧತಿ ೧ ನೇ ಭಾಗ ೨ ಅಣೆ ೩ ನೇ ಭಾಗ	೦ ೧ ೬	೦ ೨ ೦
ಭಕ್ತಿ ಸಾರ	೦ ೧ ೦	೦ ೧ ೬
ಸತ್ಯ ವಾಕ್ಯಾವಳಿ	೦ ೦ ೬	೦ ೦ ೯
ಕಾವ್ಯಪುಂಜ	೦ ೩ ೦	೦ ೩ ೬

A new Edition of the Geography suited for the Lower Secondary Examination is now ready. Edited by Rev. H. Gulliford. Price 0. 8.

ಮೇಲೆ ನಮೂದಿಸಿರುವ ಪುಸ್ತಕಗಳನ್ನು ಬೆಂಗಳೂರು ಸಂತಿಯ ಪೋರ್ಗಾಟಿನ ಹತ್ತಿರವಿರುವ ಪುಸ್ತಕ ಶಾಲೆಯಲ್ಲಿ ಪಡೆಯ ಬಹುದು.

ಸನ್ ೧೮೮೯ ರಲ್ಲಿ ಸ್ಥಾಪಿಸಲ್ಪಟ್ಟದ್ದು.

ಕೆನರಾ ಅಂಡ ಮೈಸೂರ ಟ್ರೇಡಿಂಗ ಏಜನ್ಸೀ ಆಫೀಸ್, ಮುಂಬಯಿ.

ಇವರು ತಯಾರಿಸಿರುವಂಥ—

ಬ್ರಹ್ಮಧಾತ್ರೀ ತೈಲ.

ಕಳೆದ ಜನವರಿ ತಿಂಗಳೊಂದರಲ್ಲಿ ೪,೧೦೦ ಬಾಟ್ಲಿಗಳು ಖರ್ಚಾದವು. ಈ ತೈಲದ ಮಹತ್ವವನ್ನು ಕುರಿತು, ನಮ್ಮೀಗ ಹೆಚ್ಚಿಗೆ ವರ್ಣಿಸಬೇಕಿಲ್ಲ—ಯಾಕಂದರೆ, ಯಾರು ಈ ತೈಲವನ್ನು ಉಪಯೋಗಿಸುತ್ತಾರೋ ಅವರಿಗೆ ಒಂದೆರಡು ದಿವಸಗಳಲ್ಲಿಯೇ ಇದರ ಅಪ್ರತಿಮವಾದ ಗುಣವು ಸಹಜವಾಗಿ ಅನುಭವಕ್ಕೆ ಬರುವದು. ಆದಾಗ್ಯೂ ಇದರ ಮುಖ್ಯವಾದ ಉಪಯೋಗವನ್ನು ತಿಳಿಸುವದು ನಮ್ಮ ಕರ್ತವ್ಯವಾಗಿರುತ್ತದೆ.

ಈ ನಮ್ಮ "ಬ್ರಹ್ಮಧಾತ್ರೀ ತೈಲವನ್ನು" ಪ್ರತಿದಿನ ತಲೆಗೆ ಹಾಕಿಕೊಂಡರೆ ಮಿದುಳಿನಲ್ಲಿರುವ ಉಷ್ಣತೆಯನ್ನು ಪರಿಹರಿಸುವದಲ್ಲದೇ, ಕಣ್ಣಿಗೂ, ಮಿದುಳಿಗೂ ತಣುಕರಿಸಿ, ಚಿತ್ತಕ್ಕೆ ಶಾಂತತೆಯನ್ನುಂಟುಮಾಡುವದು. ಮತ್ತು ಕಣ್ಣುಗಳಿಗುಂಟಾಗುವ ಸಾಮಾನ್ಯವಾದ ವಿಕಾರಗಳನ್ನೆಲ್ಲ ಪರಿಹರಿಸುವದು. ದೃಷ್ಟಿಗೆ ತೀವ್ರತೆಯುಂಟಾಗುವದು.

ಹೆಚ್ಚಾಗಿ ಓದತಕ್ಕವರಿಗೂ, ಬಿಂದೇ ಸಮನಾಗಿ ಕಣ್ಣಿಟ್ಟು ಕೆಲಸ ಮಾಡತಕ್ಕ ಕಸಬುಗಾರರಿಗೂ, ಕಣ್ಣುಗಳಲ್ಲಿ ನೀರು ಸುರಿಯುವವರಿಗೂ, ಉರಿಗಣ್ಣಿನವರಿಗೂ, ಚಿತ್ತವ್ಯಗ್ರವಾದವರಿಗೂ, ಅತ್ಯಂತ ಗುಣಕಾರಿಯಾಗಿರುವದು. ಈ ತೈಲದಲ್ಲಿರುವ ಇನ್ನೊಂದು ಅಪ್ರತಿಮವಾದ ಶಕ್ತಿಯೇನಂದರೆ—ಕೂದಲುಗಳನ್ನು ನಯವಾಗಿಯೂ, ಹೊಳೆಯುವಂತೆಯೂ, ಮಾಡುವದಲ್ಲದೇ ಬೆಳವಣಿಗೆಯನ್ನು ಹೆಚ್ಚಿಸುವದು. ಕೂದಲುಗಳ ಬೇರುಗಳನ್ನು ಘಟ್ಟಿಮಾಡಿ, ಅವು ಉದುರಿಹೋಗದಂತೆ ಮಾಡುವದು.

ಪ್ರತಿಯೊಂದು ಬಾಟ್ಲಿಯೊಳಗೆ ೧೭ ತೊಲೆ ತೈಲವಿರುವದರಿಂದ ಒಬ್ಬನಿಗೆ ೨ ತಿಂಗಳು ಹೆಚ್ಚಿಗೆ ಸಾಕಾಗುವದು. ಇದು ಎಲ್ಲರೂ ಕೊಂಡುಕೊಳ್ಳುವದಕ್ಕೆ ಅನುಕೂಲವಾಗಿರಬೇಕೆಂಬದಕ್ಕಾಗಿ ಪ್ರತಿಯೊಂದು ಬಾಟ್ಲಿಗೆ ೧೦ ಆಣೆ ಕ್ರಯವಿಟ್ಟಿರುತ್ತೇವೆ. ೧೨ ಬಾಟ್ಲಿಗಳುಳ್ಳ ೧ ಪೆಟ್ಟಿಗೆಗೆ ೬|| ರೂಪಾಯಿ. ಪ್ರತಿಯೊಬ್ಬ ಕುಟುಂಬಿಗರೂ, ಈ ತೈಲವನ್ನು ಉಪಯೋಗಿಸುವದು ಅವಶ್ಯವಾಗಿರುತ್ತದೆ. ಮುತ್ತೈದೆಯರಿಗೆ ಸಹ ಈ ತೈಲವು ಬಹಳ ಹಿತವಾಗಿರುತ್ತದೆ.

ಈ ತೈಲ ಮತ್ತು ಈ ಕೆಳಗೆ ಬರೆದಿರುವಂಥ ಔಷಧಗಳು, ಪ್ರೆಸ್ಸು, ಮುತ್ತು, ರತ್ನ,
ಬಂಗಾರ, ಬೆಳ್ಳಿ ಮೊದಲಾದ ಸಾಮಾನುಗಳನ್ನು ಪಡೆಯಬಿಚ್ಛಿಸುವವರು
ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬೇಕು.

ಮ್ಯಾನೇಜರ್, ಕೆನರಾ ಅಂಡ ಮೈಸೂರು ಟ್ರೇಡಿಂಗ ಏಜನ್ಸಿ ಆಫೀಸು, ಪಾಂಡುರಂಗ ಸ್ಟ್ರೀಟ್. ಮುಂಬಾಯಿ.

ಈ ತೈಲವನ್ನು ನಮ್ಮ ಹೊರತು ಬೇರ್ಯಾರೂ ಮಾಡಲಾರರು. ನಮ್ಮ ಹೆಸರಿನ ಗುರ್ತನ್ನು ನೋಡಿ ತೆಗೆದುಕೊಳ್ಳಬೇಕು. ಬೇರೆ ತರದ ಎಣ್ಣೆಗಳನ್ನು ಈ ಹೆಸರನ್ನಿಟ್ಟು ಮಾರುತ್ತಿದ್ದರೆ ಜಾಗ್ರತೆ ಪಡಿರಿ!

ಔಷಧಗಳು	ರೂ. ಆ.	ಪ್ರೆಸ್ಸುಗಳು.	ರೂ. ಆ.
ನಯನಾಮೃತ ನಸ್ಯ ಬಾಟ್ಲಿ ೧ ಕ್ಕೆ	೧ ೬	ಮುದ್ರಣಯಂತ್ರಕ್ಕೆ ಶಾಯಿ	೨—೮
ನಯನಾಮೃತ ಕಾಡಿಗೆ	೧ ೬	ಕಾಪೀಯಿಂಗ ಇಂಕ ಕೋಟಿ	೫—೦
ಕರ್ಣಸ್ರಾವನಾಶಕ ಅಪ್ರತಿಮತೈಲ	೧ ೦	ಡಿಟೊ. ಅಕ್ಷರ	೪—೮
ಮಹಾಮಾತೃಕಾದಿತೈಲ	೧ ೦	ಡಿಟೊ ಪಾಟೀಕೋಟಿ (ಇಂಗ್ಲಿಷ್ ವಿವರಣ)	೪—೬
ಬ್ರಹ್ಮವರ್ಚಸ್ವ	೨—೧೨	ದಫ್ತರದ ಕೆಮ್ಮುದ್ರೆಕೋಟಿ	೨—೮
ಪಿತ್ತವಾತ ರಕ್ತಶುದ್ಧಿ	೧ ೦	ಡಿಟೊ. ಅಕ್ಷರ	೨—೪
ಬಾಲರೋಗಗುಟಿಕೆ	೩ ೮	ಪ್ಲೇಸ ಕಾಪಿಗೆ	೧—೧೨
ಅಶ್ವಗಂಧಾದಿ	೦ ೮	ಡಿಟೊ ಏಸಿಡ್	೧—೪
ಸುಗಂಧಪಂಚಕಂದತೈಲ	೦ ೬	ಬೆಳ (ಇಂಗ್ಲಿಷ್ ವಿವರಣ) ಶಬ್ದ	೦—೧೨
ಕರ್ಪೂರಾದಿಚೂರ್ಣ	೦ ೨		

ಅನಾಕರಣವಾದ ಮುದ್ರಿತವಾದ ಟಿಪ್ಪಣಿ ಆಸ್ಪತ್ರೆಗಳ ಕ್ರಯ ರೂ. ೧—೩||—೫—೪|| ಉತ್ತಮವಾದರ "ಹಸ್ತ" ಎಂಬ ಸಕಲ ಕಲಾಡಿಯಾದ (೧ ವರುಷದ ಪಂಚಾಂಗದ್ದು) ಕ್ರಯ ರೂ. ೬

ನೋಟೀಸ್.

ಪುಸ್ತಕಗಳು	ಕ್ರಯ.
ಬಾಲ್ಯಾವ್ಯವಹಾರಿಕೆ	1—8 0
ಕನ್ನಡ ಇಂಗ್ಲೀಷು ನಿಘಂಟು 1 ನೇ ದೊಡ್ಡತರಹ	3 0 0
" " 2 ನೇ ತರಹ	2 -8- 0
ಬಾಲಕರು ಓದುವ ಎರಡನೆ ಜ್ಞಾನೋಪದೇಶದ ಪ್ರಶ್ನೋತ್ತರಗಳು	0 - 1 -0
ಸಭೆಯ ನಿಗಮಗಳನ್ನು ಕುರಿತದ್ದು	0—0—1
ಕಥಾ ಸಂಗ್ರಹ 1 ನೇ ಭಾಗದಿಂದ 3 ವರಗೆ	1 0 0
ಕಥಾ ಸಂಗ್ರಹ 1 ರಿಂದ 6 ನೇ ಭಾಗ ಹೊಸ ಛಾಪೆ	1—0 0
" " ದೊಡ್ಡ ತರಹ	1—8 0
ಬೋಧಕಾನಕ್ತಿ ಬೋಧನಿ	0 1—0
ಸತ್ಯವೇದವನ್ನು ಕುರಿತು 2 ನೇ ಭಾಗ	0 1 0
ಪ್ರಸಂಗಿಯ ದರ್ಪಣ	0—6—0
ಇಂಗ್ಲೀಷುಭಾಷೆಯಲ್ಲಿಯೂ, ಕನ್ನಡ ಭಾಷೆಯಲ್ಲಿಯೂ, ಶಬ್ದಗಳ ವಿಭಾಗಗಳನ್ನು ವಿವರಿಸಿರುವ ನಿಘಂಟು	0—2—0
ಕನ್ನಡ ವ್ಯಾಕರಣ (ಇಂಗ್ಲಿಷಿನಲ್ಲಿ)	2 -0 -0
ಹಿಂದುಸ್ಥಾನಿ ವ್ಯಾಕರಣ	1— 0
ಬಾಲರ ಸೋಪಾನವು	0—0 6
ಧನ ಕರಂಗಳ ಅಂಟುರೋಗನಿವಾರ	0-12 0
ಕ್ರೈಸ್ತರ ಬೋಧನೆಗಳ ಸಾರಾಂಶವು	0—12 0

ಮೇಲೆ ನಮೂದಿಸಿರುವ ಪುಸ್ತಕಗಳನ್ನು ಅಪೇಕ್ಷಿಸುವವರು ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್ಸಿಗೆ ಬರೆದು ತರಿಸಿಕೊಳ್ಳಬಹುದು.

ವೆಸ್ಲಿಯನ್ ಮಿಷನ್ ಪ್ರೆಸ್,

ಮೈಸೂರು.

ಹರ್ಷ! ಹರ್ಷ!! ಹರ್ಷ!!!

ಅನುಶಾಸನೀಕಪರ್ವವು ಪ್ರಕಟಿಸಿತು.

ಶ್ರೀಕೃಷ್ಣರಾಜ ವಾಣೀವಿಲಾಸದಿಂದ ಮಹಾಭಾರತವು ನಮ್ಮ ಶ್ರೀಚಾಮುಂಡೇಶ್ವರಿ ಪ್ರೆಸ್ಸಿನಲ್ಲಿ ಪ್ರಕಟವಾಗುತ್ತಿದ್ದು ಎಲ್ಲರಿಗೂ ವಿದಿತವಾಗಿಯೇ ಇದೆ. ಈಗ ಅನುಶಾಸನೀಕಪರ್ವವು ಚಾಮುಂಡೇಶ್ವರಿ ಪ್ರೆಸ್ಸಿನಿಂದಲೂ ಮುದ್ರಿಸಲ್ಪಟ್ಟು ದಿವಾನ್ ಶೇಷಾದ್ರಿ ಅಯ್ಯರವರ ಸಹಾಯದಿಂದ ತಯಾರಾಗಿರುತ್ತೆ. ಸಭಾಪರ್ವ ವಿರಾಟಪರ್ವದ ಬುಕ್ಕುಗಳು ಮುಗಿದು ಹೋದುದರಿಂದ ಪುನಃ ಎರಡನೆ ಛಾಪೆಯು ಪ್ರಕಟವಾಗಿದೆ. ಈ ಕೆಳಗೆ ಕಂಡ ಪುಸ್ತಕಗಳು ನಮ್ಮಲ್ಲಿ ಸ್ವಲ್ಪವೇ ಇರುವದ್ದರಿಂದ ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು. ಅನುಶಾಸನೀಕ ಪರ್ವ ಕಿತಾಬಿನ ಪ್ರೈಸ್ ೩—೧೨—೦ ಲೋಯರ್ ಸೆಕೆಂಡರಿ ಪರೀಕ್ಷೆಯ ನೋಟ್ಸು ಕ್ರಯ ೮ ಆಣೆ

		ಕ್ರಯ
ಆದಿಪರ್ವ	ಕ್ರಯ	೩ ೦ ೦
ಸಭಾಪರ್ವ	"	೧ ೪ ೦
ವಿರಾಟಪರ್ವ	"	೧ ೦ ೦
ಭೀಷ್ಮಪರ್ವ	"	೨ ೦ ೦
ದ್ರೋಣಪರ್ವ	"	೨ ೮ ೦
ಶಲ್ಯಪರ್ವ	"	೧ ೨ ೦
ಸೌಪ್ತಿಕಪರ್ವ	"	೦ ೬ ೦
ಸ್ತ್ರೀಪರ್ವ	"	೦ ೬ ೦
ಶಾಂತಿಪರ್ವ ರಾಜಧರ್ಮ	"	೨ ೬ ೦
" ಆಪದ್ಧರ್ಮ	"	೦ ೮ ೦
" ಮೋಕ್ಷಧರ್ಮ	"	೨ ೬ ೦

ಭಗವದ್ಗೀತೆ ೮, ಮಧುಸೂದನೀಯಸಹಿತ, ೪ ಆ.

ಎಂ. ರಾಮಸ್ವಾಮಿ ಅಯ್ಯರ್.
ಕಾಲೇಜುಗಲ್ಲಿ,
ಬೆಂಗಳೂರು

ವೃತ್ತಾಂತ ಪತ್ರಿಕೆ.

ಚಂದಾ ನಿರ್ಣಯ.

	ರೂ ಆ ಪೈ
ಸ್ಥಳದವರಿಗೆ ವರ್ಷ ೧ ಕ್ಕೆ	೧—೨—೦
ಪರಸ್ಥಳದವರಿಗೆ ವರ್ಷ ೧ ಕ್ಕೆ	೧—೮—೦
ಬಿಡಿ ಪತ್ರಿಕೆ ೧ ಕ್ಕೆ	೦ - ೦ - ೩

ಈ ಪತ್ರಿಕೆಯು ಮೈಸೂರು ಪಟ್ಟಣದಲ್ಲಿ ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ, ಪ್ರಕಟಿಸಲ್ಪಡುವದು. ಚಂದಾ ಮೊದಲಿನಿಂದ ಸಲ್ಲತಕ್ಕದ್ದು. ಸ್ವಲ್ಪ ಹಣವನ್ನು ಕುರಿತು ಈ ಪತ್ರಿಕೆಗೆ ಇಷ್ಟು ಅಲ್ಪ ಹಣವನ್ನು ನಿಶ್ಚಯಿಸಲ್ಪಟ್ಟಿದೆ. ಈ ಪತ್ರಿಕೆಯನ್ನು ಅಪೇಕ್ಷಿಸುವವರು ಚಂದಾ ಹಣವನ್ನು ಮುಂಗಡವಾಗಿ ಕಳುಹಿಸಬೇಕು.

ಎಡಿಟರ್,
ವೃತ್ತಾಂತ ಪತ್ರಿಕೆ.

ಜಗದ್ಗುರುವಿನ ಚರಿತ್ರ ಸಂಗ್ರಹ.

THE LIFE

OF

The Lord Jesus Christ.

Selected incidents from the Gospels,

FREELY PARAPHRASED.

ನೂತನವಾಗಿ ರಚಿಸಲ್ಪಟ್ಟ ೬೬ ಪುಟಗಳುಳ್ಳ ಈ ಪುಸ್ತಕವನ್ನು ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್ಸಿಗೆ ಬರೆದು ತರಿಸಿಕೊಳ್ಳಬಹುದು.

ಕ್ರಯ (ಟಪ್ಪಾಲ್ ಹಾಸಲ್ ಅಲ್ಲದೆ)

೧೦೦ ಪ್ರತಿಗಳಿಗೆ	೫—೦—೦
ಬಿಡಿ ಪ್ರತಿಗೆ	೦—೦—೯

ಸುಮಾರು ೨—೩ ಪ್ರತಿಗಳನ್ನು ಅರ್ಧ ಆಣೆ ಹಾಸಲಿನಿಂದ ಕಳುಹಿಸಬಹುದು.

ಆಕ್ರಮ.

ಕಳೆದವಾರ ನಮ್ಮ ಪತ್ರಿಕೆಯನ್ನು ತುಮಕೂರಿನಲ್ಲಿರುವ ನಮ್ಮ ಏಜಂಟ್ರಾದ ಮಿ|| ಟಿ ಲಕ್ಷ್ಮಯ್ಯನವರಿಗೆ ರೈಲಿನ ಮೂಲಕ ಕಳುಹಿಸಿದ್ದ ಪದ್ಧತಿಯ ಪ್ರಕಾರ ಅವರ ಛಾರ್ಜಿ ಎಂಬ ಆಣೆಯನ್ನು ಮೈಸೂರು ಸ್ಟೇಷನಲ್ಲಿ ವಸೂಲ್ ಮಾಡಿಕೊಂಡು ನಮಗೆ ರಸೀದಿಯನ್ನು ಕೊಟ್ಟಿರುತ್ತಾರೆ. ಆದರೆ ಪತ್ರಿಕೆಗಳು ತುಮಕೂರಿಗೆ ಹೋದಾಗ ಅಲ್ಲಿನ ಸ್ಟೇಷನ್ ಮಾಸ್ಟರು ನಮ್ಮ ಏಜಂಟರಿಂದ ಎಂಟು ಆಣೆಗಳು ವಸೂಲ್ ಮಾಡಿಕೊಂಡು ಅವರಿಗೆ ರಸೀದಿ ಕೊಟ್ಟಿರುತ್ತಾರೆಂದು ಏಜಂಟ್ರು ಬರೆದು ತಿಳಿಸಿರುತ್ತಾರೆ. ಇದು ಅಕ್ರಮವಾದ ನಡವಳಿಕೆ. ಒಂದು ಪಾರ್ಸಲ್ಲಿಗೆ ಎರಡು ಪರ್ತಿ ಛಾರ್ಜಿ ವಸೂಲ್ ಮಾಡಿಕೊಳ್ಳತಕ್ಕ ಕಾನೂನು ಎಲ್ಲಿ ಜಾರಿಯಲ್ಲಿದೆಯೋ ನಮಗೆ ಗೊತ್ತಾಗಲಿಲ್ಲ. ಇದಕ್ಕೆ ಸರಿಯಾದ ಕಾರಣಗಳನ್ನು ರೈಲ್ವೆ ಅಧಿಕಾರಿಗಳು ನಮಗೆ ತಿಳಿಸದಿದ್ದ ಪಕ್ಷಕ್ಕೆ ಮತ್ತು ಹೀಗೆ ಹೆಚ್ಚು ಛಾರ್ಜಿ ವಸೂಲ್ ಮಾಡಿಕೊಂಡಿರುವ ನೌಕರರನ್ನು ಸರಿಯಾಗಿ ವಿಚಾರಣೆ ಮಾಡದೆ ಹೋದಪಕ್ಷಕ್ಕೆ ಇಂಥಾ ಅನ್ಯಾಯಗಳು ಅಗಾಗ್ಯೆ ನಡೆಯಲು ತುಂಬ ಅನುಕೂಲವಾಗುವದೆಂದು ನಾವು ವ್ಯಸನವಾಗಿ ಹೇಳುತ್ತೇವೆ.

ವೃತ್ತಾಂತ ಪತ್ರಿಕೆ.

೧೮೯೩ನೇ ಇಸವಿ ಮಾರ್ಚಿ ತಾ|| ೧೫ ನೇ ಗುರುವಾರ.

ಇಂಡಿಯನ್ ಸಿವಿಲ್ ಸರ್ವಿಸ್ಸಿನ ವಿಷಯದಲ್ಲಿ ಒಹಳ ದಿವಸದಿಂದ ಚರ್ಚೆ ನಡೆಯುತ್ತಾ ಬಂದಿದೆ. ಈ ಸಿವಿಲ್ ಸರ್ವಿಸ್ಸಿಗೆ ಸೇರತಕ್ಕವರು ಶ್ರೇಷ್ಠವಾದ ಪರೀಕ್ಷೆಯನ್ನು ಹೊಂದಬೇಕಾದ ಸರ್ವಿಸ್ಸು. ಇಂಡಿಯನ್ ಸಿವಿಲ್ ಸರ್ವಿಸ್ಸು ಬಳವನ್ನು ಹೊಂದುವದರಿಂದ ಆ ಉದ್ಯೋಗದ ಮೇಲೆ ಅನೇಕರು ಆಶೆಯುಳ್ಳವರಾಗಿರುವರು. ಆ ಉದ್ಯೋಗಕ್ಕೆ ಸೇರಬೇಕೆಂದಿರುವವರು ವಿಲಾಯತಿಯಲ್ಲೇ ಪರೀಕ್ಷೆ ಕೊಡಬೇಕಾಗಿದ್ದದರಿಂದ ಹಿಂದೂ ಜನರು ಆ ಉದ್ಯೋಗವನ್ನು ಪಡೆಯುವದು ಬಹು ಕಷ್ಟವಾಗಿತ್ತು. ಈ ದಿವಸದಲ್ಲಿ ಬಿಟ್ಟು ಸೇರಿದ ಮೇಲೆ ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಈ ವಿಷಯವನ್ನು ಚರ್ಚೆಗೆ ತಂದು, ಹಿಂದೂ ಜನಗಳು ಉಂಟಾದ ರಾಷ್ಟ್ರದಲ್ಲೇ ಪರೀಕ್ಷೆ ಕೊಡುವ ಹಾಗೆ ಗೊತ್ತುಮಾಡಬೇಕೆನ್ನುವರು ತಕ್ಕ ಅನುಕೂಲಗಳನ್ನು ಚನ್ನಾಗಿ ತೋರಿಸಿ ತಮ್ಮ ಅಭಿಪ್ರಾಯವನ್ನು ತಿಳಿಸಿದರು. ಆಗ ಈ ಅಭಿಪ್ರಾಯವನ್ನೇ ಅನೇಕರು ಅನುಮೋದಿಸಿದ್ದರಿಂದ, ಮಿ|| ಗ್ಲಾಡ್‌ಸ್ಟನ್ ಸಾಹೇಬರು ಈ ವರ್ತಮಾನವನ್ನು ತಂತಿ ಮೂಲಕವಾಗಿ ಹಿಂದೂಸ್ಥಾನದ ವೈಸ್‌ರಾಯರವರಿಗೆ ತಿಳಿಸಿರುತ್ತಾರೆ. ಇದರ ಮೇಲೆ ಗೌರ್ನಮೆಂಟಿನವರು ಹ್ಯಾಗೆ ತೀರ್ಮಾನ ಮಾಡುವರೋ, ಹಿಂದೂಸ್ಥಾನದ ಪ್ರಜೆಗಳು ಎಷ್ಟರ ಮಟ್ಟಿಗೆ ಅನ್ನವೃತ್ತಿಯಾಗಿ ಹೋಗುವುದೆಂದು ನಾವು ನೋಡತಕ್ಕದ್ದಾಗಿದೆ. ಆದರೆ ಇದರಿಂದ ಆದಕ್ಕೆ ಒಪ್ಪು ಏರ್ಪಡಲಿಲ್ಲವೆಂದು ನಾವು ಕೇಳುತ್ತೇವೆ. ಬ್ರಿಟಿಷ್ ಸರ್ಕಾರಿನ ಆಧೀನದಲ್ಲಿರುವ ಪ್ರಜೆಗಳು ವಿದ್ಯೆಯನ್ನು ಹೊಂದಬೇಕೆಂದಿರುವವರು ತಾವು ಹುಟ್ಟಿದ ರಾಜ್ಯದಲ್ಲಿ ಮಾತ್ರ ನೆಲೆಗೊಂಡಿರುವದು ಎಷ್ಟು ಮಾತ್ರಕ್ಕೂ ಸಂಗಾರಿಯಲ್ಲಿ. ಸಿವಿಲ್ ಸರ್ವಿಸ್ಸಿಗೆ ಸೇರಿದವರು ಈ ದೇಶದ ಕಾರ್ಯಗಳನ್ನು ನಡೆಸುವದಲ್ಲದೆ, ಇಂಗ್ಲೆಂಡಿಗೂ ಇಂಡಿಯಾ ರಾಜ್ಯಕ್ಕೂ ಸಂಬಂಧಪಟ್ಟ ಕಾರ್ಯಗಳನ್ನು ವಿಚಾರಿಸಿ ನಡೆಸಲು ಅವರಾಗಬೇಕು. ಕಲವು ಸಮಯಗಳಲ್ಲಿ ರಷ್ಯಾ ದೇಶಕ್ಕೂ ಈ ದೇಶಕ್ಕೂ ಸಂಬಂಧಪಟ್ಟ ವಿಷಯಗಳನ್ನು ಕುರಿತು ನಿರ್ಣಯಿಸಬೇಕಾಗುವದು. ಹಾಗಾದರೆ ಒಂದು ದೇಶವನ್ನು ಮಾತ್ರ ನೋಡಿರತಕ್ಕವರು ಇಂಥಾ ಅನ್ಯದೇಶಗಳ ವಿಷಯಗಳನ್ನು ಕುರಿತು ತೀರ್ಮಾನಿಸುವದಕ್ಕೆ ಯೋಗ್ಯರಾಗಿರುವರೋ? ಅನ್ಯದೇಶದ ಕಾರ್ಯಗಳ ವಿಷಯದಲ್ಲಿ ಸರ್ಕಾರಕ್ಕೆ ಸೇರಿದ ಒಟ್ಟು ಉದ್ಯೋಗಸ್ಥರು ತಪ್ಪು ಮಾಡಿದರೆ ಯುದ್ಧಕ್ಕೆ ಕಾರಣವಾಗುತ್ತದೆ. ಇದೂ ಅಲ್ಲದೆ ಇಂಡಿಯಾರಾಜ್ಯದಲ್ಲಿ ಉಂಟಾಗತಕ್ಕ ವಿದ್ಯಾಭ್ಯಾಸವು ಇಂಥಾ ಗೌರವವಾದ ಪದವಿಗೆ ತಕ್ಕಮಟ್ಟಿಗೂ ಸಾಲದ್ದಾಗಿರುವದು. ಹಿರಿಯವರಿಂದ ಒಂದು ತರವಾದ ವಿದ್ಯೆಯನ್ನು ಪಡೆಯುವೆವು. ದೇಶಾಟನೆ ಮಾಡೋಣವರಿಂದ ಉಂಟಾಗುವ ವಿದ್ಯಾಭ್ಯಾಸವು ಅದಕ್ಕೆ ಬಹಳ ಬೆಟ್ಟಿಗ ಸಹಾಯಕವಾಗುವದು. ಇದಕ್ಕೋಸ್ಕರ ಹಿಂದೂ ಜನಗಳು ಇಂಗ್ಲೆಂಡಿಗೆ ಹೋಗಿ, ಅಲ್ಲೇ ಈ ಪರೀಕ್ಷೆಯನ್ನು ಕೊಟ್ಟು ಸಿವಿಲ್ ಸರ್ವಿಸ್ಸಿನ ಪದವಿಯನ್ನು ಪಡೆಯುವದು ಉತ್ತಮವೆಂದು ನಮ್ಮ ಅಭಿಪ್ರಾಯ ಪಟ್ಟಿರುವೆವು.

ಇದೇ ತಿಂಗಳು ೩ನೇ ತಾರೀಖಿನಲ್ಲಿ ಈ ಸಂಸ್ಥಾನದ ಎಕ್ಸಿಕ್ಯೂಟಿವ್ ಕಮಿಟಿಯವರು ಒಂದು ಮೀಟಿಂಗ್ ಮಾಡಿದರು. ಮೆಂಬರುಗಳ ಪೈಕಿ ೧೨ ಮಂದಿ ಹಾಜರಾಗಿದ್ದರು. ಈ ಸಭೆಯವರು ಹಿಂದೆ ಗೌರ್ನಮೆಂಟಿಗೆ ಬರೆದುಕೊಂಡಿದ್ದ ಕಾಗದಕ್ಕೆ ಅಲ್ಲಿಂದ ಬಂದ ಜವಾಬು ಓದಲ್ಪಟ್ಟಿತು. ಇದನ್ನು ಮೆಂಬರುಗಳಿಗೆಲ್ಲಾ ತಿಳಿಸಬೇಕೆಂದು ಗೊತ್ತಾಯಿತು. ಟವನ್‌ಮ್ಯೂನಿಸಿಪಲ್ ವಿಷಯಗಳನ್ನು ಕುರಿತು ಸ್ವಲ್ಪ ಚರ್ಚೆ ನಡೆದ ಅನಂತರ ಬಹುಜನ ಸಮ್ಮತಿಯಿಂದಗೊತ್ತಾದವಿಷಯಗಳ್ಯಾವವೆಂದರೆ:— (೧) ಕಾಡಾಗಾಡಿಗಳು ದಾರಿಯಲ್ಲಿ ತಿರುಗತಕ್ಕವರಿಗೆ ಮುನ್ಸಾನನೆ ಬಡಿಯುವಂತೆ ದಾರಿಯಲ್ಲಿ ನಿಲ್ಲಿಸಲ್ಪಡುತ್ತವೆ. ಹೀಗೆ ಬಹಳ ಹೊತ್ತು ನಿಲ್ಲಿಸದಂಥಾದ್ದಾಗಿ ಗಾಡಿಯವರಿಗೆ ತಾಕೀತುಮಾಡುವಂತೆ ಬಾಲೀಸಿನವರನ್ನು ಕೇಳಿಕೊಳ್ಳಬೇಕು. (೨)ಕೆಲ್ಲಮಲ್ಲಿ ಮಾಕಾಟ್ಟಲ್ಪಟ್ಟವರಂಬೆಬ, ವಿನೋಮೆಂಕಟ ಸುಬ್ಬಯ್ಯನವರು ಮೊದಲಾದವರುಗಳಲ್ಲಿ ಚರಂಡಿಗಳ ಮುಚ್ಚಳಗಳು ಸರಿಯಾಗಿಲ್ಲ. ರಾತ್ರಿ ಕಾಲಗಳಲ್ಲಿ ತಿರುಗತಕ್ಕವರಿಗೆ ಅಪಾಯಕರವಾಗಿವೆ. ಇವುಗಳನ್ನು ಮುಚ್ಚಿ ಸರಿಯಾಗಿಡಬೇಕೆಂದು ದೊರೆಗಳಿಗೆ ಬರೆದು ತಿಳಿಸಬೇಕು. (೩) ಎಕ್ಸ್‌ಚೇಂಜ್ ಮತ್ತು ಜಾಮಿಯಾ ಮೊದಲಾದವುಗಳಲ್ಲಿ ಮಳೆನೀರು, ಚರಂಡಿನೀರು ರಸ್ತೆಗಳಲ್ಲಿ ಹರಿದು ಅಥವ ನಿಂತು ಕಡೆಸೇರಿ ದುರ್ಗಂಧವನ್ನೂ, ಮನೆಗಳಿಗೆ ಅಪಾಯವನ್ನು ಉಂಟುಮಾಡುವದರಿಂದ ಆ ಭಾಗದ ಚರಂಡಿಗಳನ್ನು ದುರಸ್ತು ಮಾಡಿಸಬೇಕೆಂದು ಮ್ಯೂನಿಸಿಪಾಲಿಟಿಯವರನ್ನು ಕೇಳಿಕೊಳ್ಳಬೇಕು. (೪) ಕ್ಯಾಂಟನ್ಮೆಂಟ್ ಮೊದಲಾದಲ್ಲಿ ದ್ರವ್ಯವನ್ನು ನವರ ಮನೆಮತ್ತು ರಸ್ತೆ ಕಲೋನಿ ಹಳ್ಳಿ ಬೀದಿಯಲ್ಲಿ ಇರತಕ್ಕ ನಲ್ಲಿಗಳ ನೀರು ಬಹುಜನಗಳಿಗೆ ಉಪಯೋಗ ವಾಗುವದರಿಂದ ಅವುಗಳ ನೀರಿರುವಂತೆ ದೊರೆಗಳಿಗೆ ಬರೆಯಬೇಕು. (೫) ಕಿಮಯಾಮಾಕುವದಲ್ಲಿ ಬಟ್ಟೆವಾನ್ನೇ ಬಡವರಿಗೂ ಭಾಗ್ಯವಂತರಿಗೂ ಒಂದೇ ರೀತಿಯಾಗಿ ಉಪಯೋಗಿಸುವಂತೆ ಮಾಡಬೇಕೆಂದು ಸಿವಿಲ್ ಸರ್ಜನ್ ರವರಿಗೆ ಬರೆದು ತಿಳಿಸಬೇಕು ಎಂಬದಾಗಿ ಗೊತ್ತು ಮಾಡಿದರು. ಹೀಗೆ ಈ ಸಂಸ್ಥೆಯ ಎಕ್ಸಿಕ್ಯೂಟಿವ್ ಕಮಿಟಿಯ ಮೆಂಬರುಗಳು ಆಗಾಗ್ಯೆ ಮೀಟಿಂಗುಗಳನ್ನು ಮಾಡುತ್ತಲೂ, ಮೀಟಿಂಗಿನಲ್ಲಿ ಪ್ರಸ್ತಾಪಿಸಲ್ಪಟ್ಟ ಸಂಗತಿಗಳನ್ನು ಗೌರ್ನಮೆಂಟಿಗೆ ತಿಳಿಸುತ್ತಲೂ ಬರುತ್ತಿರುವದನ್ನು ನೋಡಿ ಬಹಳವಾಗಿ ಸಂತೋಷಿಸುತ್ತೇವೆ.

ಸಂಸ್ಥಾನದ ಬಜೆಟನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಿಸುವಲ್ಲಿ ಅದನ್ನು ಪಡೆಯುವರು ಉಸ್ತುವಾರಿ ಬಜೆಟಿನ ಮತ್ತು ಮಾಡುವ ವಿಷಯದಲ್ಲೂ, ಪದರೆ. ಮತ್ತು ಬಜೆಟನ್ನು ತಗೆದುಕೊಂಡು ಹೋಗುವಗಾಡಿಗಳು ದಿನ ೧ ಕ್ಕೆ ಎಷ್ಟೆಷ್ಟು ದೂರ ಪ್ರಯಾಣ ಮಾಡಬಹುದೆಂಬ ವಿಷಯದಲ್ಲೂ ಗೌರ್ನಮೆಂಟಿನವರು ಅನೇಕ ನಿಬಂಧನೆಗಳನ್ನು ಹಾಕಿದ್ದರೂ ಕಟ್ಟಳೆಗಳನ್ನು ವಿಧಾಯಕ ಮಾಡಬೇಕಾದದ್ದು ಅವಶ್ಯಕವಾಗಿದೆ ಎಂಬುದಾಗಿ ಕಂಟ್ರೋಲರವರು ಗೌರ್ನಮೆಂಟಿಗೆ ಬರೆದುಕೊಂಡದ್ದರ ಮೇಲೆ ಅವರು ಈ ವಿಷಯಗಳನ್ನು ಕುರಿತು ಆಲೋಚಿಸಿ ಇಂಥಾ ಬಜಟುಗಳನ್ನು ಒಂದು ಊರಿನಿಂದ ಮತ್ತೊಂದು ಊರಿಗೆ ತೆಗೆದುಕೊಂಡು ಹೋಗುವ ಗಾಡಿಗಳು ಮತ್ತು ಅದರ ಮೇಲೆ ಪಹರೇ ಇರತಕ್ಕ ಸಿಬ್ಬಂದಿ ಸಿಪಾಯಿಗಳು ರಸ್ತೆಗೆ ಹೊರಟ ಮೇಲೆ ದಾರಿಯಲ್ಲಿ ಪ್ರಯಾಣ ಮಾಡತಕ್ಕ ವಿಷಯದಲ್ಲಿ ಕಲವು ರೂಲ್ಸುಗಳನ್ನು ವಿಧಿಸಿರುತ್ತಾರೆ:—(೧) ಹಣ ಕಳುಹಿಸತಕ್ಕ ಖಜಾನೆ ಅಧಿಕಾರಿಗಳು ತಮ್ಮ ಮಿಲ್ಲೇರಿ ಅಧಿಕರಣ ಸಂಗಡ ಆಲೋಚಿಸಿ ಬಜಾನೆಯನ್ನು ತೆಗೆಸಿಕೊಂಡು ಹೋಗುವ ಪಹರೆಯವರಿಗೆ ಗೊತ್ತಾಗುವಂತೆ ಪೂರ್ವಭಾವಿಯಾಗಿಯೇ ರಸ್ತೆಯನ್ನೂ ಆ ರಸ್ತೆಯಲ್ಲಿ ತಂಗಬೇಕಾದ ಮುಕಾಮುಗಳನ್ನು ನಿರ್ಧಾರ ಮಾಡತಕ್ಕದ್ದು, (೨) ದಿನ ೧ಕ್ಕೆ ೧೫ ಮೈಲಿಗಳಿಗಿಂತ ಹೆಚ್ಚಾಗಿ ಪ್ರಯಾಣಮಾಡಬಾರದಂತೆ ಮುಕಾಮನ್ನು ಗೊತ್ತು ಮಾಡತಕ್ಕದ್ದು ಮತ್ತು (೩) ಒಂದು ಮಂಜಿಲಿನಲ್ಲಿ ಅಥವಾ ಮುಕಾಮುಗಳ ಹೆಸರನ್ನೂ ಒಂದು ಮುಕಾಮಿನಿಂದ ಮತ್ತೊಂದು ಮುಕಾಮಿಗೆ ಇರುವ ದೂರವನ್ನೂ ನಮೂದಿಸಿ ಆ ಗಾಡಿಗಳ ಪಹರೇ ಇರುವ ಸಿಪಾಯಿಗಳ ಸ್ವಾಧೀನಕ್ಕೆ ಕೊಡತಕ್ಕದ್ದು. ಹದಿನೈದು ಮೈಲಿಗಳಿಗಿಂತ ಹೆಚ್ಚಾಗಿ ದಿನ ೧ ಕ್ಕೆ ಪ್ರಯಾಣ ಮಾಡಬೇಕಾದದ್ದು ಅನಿವಾರ್ಯವಾದಲ್ಲಿ ಗಾಡಿ ೧ ಕ್ಕೆ ೪ ಜನ ಪಹರೇಯವರಿರುವಂತೆ ಏರ್ಪಡು ಮಾಡತಕ್ಕದ್ದು. ಈ ರೀತಿ ಯಾದ ಕ್ರಮಗಳನ್ನು ಅನುಸರಿಸಿದರೆ ಯಾವ ವಿಧವಾದ ಪ್ರಕಾರಿಗೂ ಅವಕಾಶವಿಲ್ಲದಂತೆ ಕೆಲಸಗಳು ಜರುಗುವದರಲ್ಲಿ ಸಂಶಯವಿಲ್ಲ.

ಬೆಂಗಳೂರು ಪಟ್ಟಣದ ಕಳೆದ ಮ್ಯೂನಿಸಿಪಲ್ ಮೀಟಿಂಗಿನಲ್ಲಿ ಪ್ರೆಸಿಡೆಂಟ್ರವರು ನಡೆಸಿದ ಕಾರ್ಯಗಳನ್ನೂ, ಅದಕ್ಕೆ ಬೆಂಗಳೂರು ಮ್ಯೂನಿಸಿಪಲ್ ಕಮಿಷನರು, ಮ್ಯೂನಿಸಿಪಲ್ ಗಳು ಮಾಡಿದ ಉಪಶಾಂತಿ ಮೀಟಿಂಗು ಯನ್ನೂ ವಿಸ್ತಾರವಾಗಿ ಕಳೆದವಾರದ ನಮ್ಮ ಪತ್ರಿಕೆಯಲ್ಲಿ ತಿಳಿಸಿ ಅದರಮೇಲೆ ನಮ್ಮ ಅಭಿಪ್ರಾಯಗಳನ್ನೂ ನಮೂದಿಸಿದ್ದೆವಷ್ಟೆ. ಇಷ್ಟೇ ಅಲ್ಲದೆ ಇಲ್ಲಿನ ಮತ್ತು ಬೆಂಗಳೂರಿನ ವರ್ತಮಾನಪತ್ರಿಕೆಗಳೂ ಕೂಡ ಈ ವಿಷಯದಲ್ಲಿ ಪ್ರಸ್ತಾಪ ಮಾಡಿ ಇದ್ದರು. ಕಳೆದ ಮ್ಯೂನಿಸಿಪಲ್ ಮೀಟಿಂಗಿನಲ್ಲಿ ನಡೆದ ಸಂಗತಿಗಳನ್ನೂ, ಮೀಟಿಂಗಿನಿಂದ ಎದ್ದುಹೋದ ಮೆಂಬರುಗಳು ಆಕ್ಷೇಪಿಸಿದ್ದ ಕಾಗದಪತ್ರಗಳನ್ನೂ ಗೌರ್ನಮೆಂಟಿನವರ ತೀರ್ಮಾನಕ್ಕಾಗಿ ಪ್ರೆಸಿಡೆಂಟ್ರವರು ರವಾನಿಸಿದ್ದಾರಷ್ಟೆ. ಗೌರ್ನಮೆಂಟಿನವರು ಆ ವಿಷಯಗಳನ್ನೆಲ್ಲಾ ಚನ್ನಾಗಿ ಪರ್ಯಾಲೋಚಿಸಿ ಅದರಮೇಲೆ ತಮ್ಮ ಹುಕ್ಕುಂ ಕೊಟ್ಟಿರುತ್ತಾರೆ. ಇದು ಸರ್ವರಿಗೂ ಸಮಾಧಾನಕರವನ್ನುಂಟುಮಾಡಿರುವದು. ಅದೇನೆಂದರೆ:—ಕಳೆದ ೧೩ನೇ ತಾರೀಖಿನಲ್ಲಿ ನಡೆದ ಮ್ಯೂನಿಸಿಪಲ್ ಮೀಟಿಂಗು ಅಕ್ರಮವಾದದ್ದೇ ಹೌದು; ಮೀಟಿಂಗು ನಡೆಯುವದಕ್ಕಿಂತ ಮುಂಚೆ ಅಂದರೆ ೭ ದಿನಗಳ ಪೂರ್ವಸತ್ತು ಮೆಂಬರುಗಳಿಗೆ ಇರಬೇಕು. ಇಲ್ಲಿಂದ ಮುಂದೆ ಜೋನ್ಸ್ ಪ್ರೆಸಿಡೆಂಟಿನೂ, ಮೆಂಬರುಗಳೂ ದಾಕ್ಷಿಣ್ಯವಿಲ್ಲದೆ ಕೆಲಸಗಳನ್ನು ಜರುಗಿಸಬೇಕೆಂದು ಕೋರುತ್ತೇವೆ ಎಂಬದಾಗಿ ಹುಕ್ಕುಂ ಕೊಟ್ಟಿರುವರು. ಈ ತೀರ್ಮಾನವು ಸರ್ಕಾರದವರ ನಿಷ್ಪಕ್ಷಪಾತತ್ವವನ್ನು ವ್ಯಕ್ತಪಡಿಸುವದರಲ್ಲಿ ಸಂಶಯವಿಲ್ಲ. ಇದರಿಂದ ಪ್ರಜೆಗಳಿಗೆ ಸರ್ಕಾರದವರಲ್ಲಿ ಎಷ್ಟು ಮಟ್ಟಿಗೆ ನಂಬಿಕೆಯೂ, ಪ್ರೀತಿಯೂ ಉಂಟಾಗುವದೋ ಹೇಳಲರಿಯೆವು. ಹೀಗೆಯೇ ಸರ್ಕಾರದವರು ತಮ್ಮ ಬಳಿಗೆ ಕಳುಹಿಸಲ್ಪಡುವ ಎಲ್ಲಾ ಕಾಗದಪತ್ರಗಳ ವಿಷಯದಲ್ಲೂ ನ್ಯಾಯವನ್ನೇ ಹಿಡಿದು ತೀರ್ಮಾನಗಳನ್ನು ಮಾಡಿ, ಅಧಿಕಾರಿಗಳಲ್ಲಿ ಸ್ವಲ್ಪವಾದರೂ ಪಕ್ಷಪಾತ ಮಾಡುವದಕ್ಕೆ ತಮ್ಮ ಸಹಾಯವನ್ನು ಕೊಡದಿರುವರೆಂದು ದೃಢವಾಗಿ ನಂಬಿದ್ದೇವೆ.

ಬರುವ ಜುಲೈ ತಿಂಗಳಿನ ೬ ನೇ ತಾರೀಖಿನಲ್ಲಿ ಶ್ರೀಯುವರಾಜ ಚಕ್ರವರ್ತಿ ನಿಯವರ ಮೊಮ್ಮಕ್ಕಳಾದ ಡ್ಯೂಕ್‌ಆಫ್‌ಯಾರ್ಕರವರಿಗೆ ಶಿಷ್ಟಕನ್ಯೆಯಾದ ಪ್ರಿನ್ಸೆಸ್ ಮೇ ಯವರ ಜೊತೆಯಲ್ಲಿ ವಿವಾಹ ಜರುಗುವದು. ಇವರ ಅಣ್ಣಂದಿರಾದ ಪ್ರಿನ್ಸ್ ಆಲ್ಬರ್ಟ್ ವಿಕ್ಟರ್ ರವರು ಒಂದೂವರೆ ವರ್ಷದ ಕೆಳಗೆ ತೀರಿಹೋದರೆಂಬುವದು ನಮ್ಮ ವಾಚಕರಿಗೆ ಗೊತ್ತಾಗಿರುವದಷ್ಟೆ. ಅವರಿಗೆ ನಿಶ್ಚಿತಾರ್ಥವಾಗಿದ್ದ ಪ್ರಿನ್ಸೆಸ್ ಮೇ ಯವರೇ ಈಗ ಡ್ಯೂಕ್‌ಆಫ್ ಯಾರ್ಕರನ್ನು ವರಿಸುತ್ತಾರೆ. ಈ ಸಮಾಚಾರದ ವಿಷಯದಲ್ಲಿ ಬ್ರಿಟಿಷ್ ಪ್ರಜೆಗಳಿಗೆ ಸೇರಿದವರೆಲ್ಲರೂ ಆನಂದಭರಿತರಾಗಿರುವರು. ಡ್ಯೂಕ್‌ಆಫ್‌ಯಾರ್ಕ್‌ರವರಿಗೆ ಈಗ ೨೮ ವರ್ಷ ವಯಸ್ಸಾಗಿದೆ. ಪ್ರಿನ್ಸೆಸ್ ಮೇ ಯವರಿಗೆ ೨೬ ವರುಷ ತುಂಬಿತು. ಇವರಿಬ್ಬರೂ ದೇವಭಕ್ತರೂ, ಸದ್ಗುಣವಂತರೂ, ಜನರ ಪ್ರೀತಿಗೆ ಪಾತ್ರರೂ ಆಗಿರುತ್ತಾರೆ. ಅವರಿಬ್ಬರೂ ರವರ ಬ್ರಿಟಿಷ್ ಸೀಮೆಯ ಧೊರೆತನವನ್ನು ತಕ್ಕ ಕಾಲದಲ್ಲಿ ನಡೆಸುವದಕ್ಕೆ ಯೋಗ್ಯರಾಗಿರುವರೆಂದು ತಿಳಿದವರೆಲ್ಲರೂ ಒಪ್ಪಿಕೊಂಡಿರುವರು. ಪ್ರಿನ್ಸೆಸ್ ಮೇ ಯವರ ಸ್ಥಿತಿಗೂ ಹಿಂದೂಸ್ಥಾನದವರ ಸ್ಥಿತಿಗೂ ಎಷ್ಟೋ ವ್ಯತ್ಯಾಸವಾಯಿತೆಂದು ನಮಗೆ ಇದರಿಂದ ತಿಳಿದುಬರುತ್ತದೆ. ಪ್ರಿನ್ಸೆಸ್ ಮೇ ಯವರು ನಿಶ್ಚಿತಾರ್ಥರಾದ ಮೇಲೆ ಆವರ ನಿಯಮಿತವಾದ ಪತಿಯು ತೀರಿಹೋದರು. ಆದಾಗ್ಯೂ ಅವರು ಯಾವಾಗಲೂ ವಿಧವೆಯಾಗಿರುವಂತಿರುವದಿಲ್ಲ. ಎರಡು ವರುಷಗಳೊಳಗಾಗಿ ದೇವರದಯೆಯಿಂದ ಅವರಿಗೆ ಮತ್ತೊಂದು ಸಂತೋಷವು ಉಂಟಾಗಿದೆ. ೮೦ ವರ್ಷಗಳಾದವರೂ ಕೆ ನಮಗೆ ಮದುವಾಜ್ಞೆಗಳಾಗಿ ಆಗುವ ಇವರು ತಾನೇ ಉದಾಹರಿಸಿ ತೋರಿಸುವ ಈ ಮೇಲುಪಂಕ್ತಿಯನ್ನು ಹಿಂದುಗಳಲ್ಲಿ ಅನೇಕರು ಅನುಸರಿಸುವರೆಂದು ನಾವು ನಂಬಿದ್ದೇವೆ.

ಸುಮಾರು ಒಂದು ತಿಂಗಳಿನ ಕೆಳಗೆ ಮದ್ರಾಸ್ ಕವರ್ನ್‌ಮೆಂಟ್ ಲಾರ್ಡ್ ವೆನ್‌ಲಾಕ್ ರವರ ಸಂಗಡ ನೀಲಗಿರಿ ದುರ್ಮರಣ. ಜಿಲ್ಲೆಗಳಲ್ಲಿ ವ್ಯಾಸಂಗನಕ್ಕೆ ಹೋಗಿದ್ದ ವಿಚಾರವು ನಮ್ಮ ವಾಚಕರಿಗೆ ಹಿಂದೆಯೇ ತಿಳಿಸಲಾಗಿದೆಯಷ್ಟೆ. ಈ ಪ್ರವಾಸದಲ್ಲಿ ಬೆಂಗಳೂರು ಕವರ್ನ್‌ಮೆಂಟ್‌ಲಾರ್ಡ್ ರವರ ಸರ್ಜನ್‌ರವರಾದ ಸಾಹೇಬರು ಪ್ರವಾಸಕಾಲದಲ್ಲಿ ಆಕಸ್ಮಾತ್ತಾಗಿ ಕಾಲಗತಿಯನ್ನು ಹೊಂದಿದರೆಂಬ ವರ್ತಮಾನವನ್ನು ತಿಳಿಸುವದಕ್ಕೆ ಬಹಳವಾಗಿ ವಿಷಾದಿಸುತ್ತೇವೆ. ಕಳೆದ ಭಾನುವಾರ ಪ್ರಾತಃಕಾಲ ಅವರು ಕುದುರೆಯ ಸವಾರಿಯಲ್ಲಿ ಆರೋಗ್ಯಕರವಾಗಿ ಹೋಗುತ್ತಿರಲು ಅವರ ಕುದುರೆಯು ಮುಗ್ಗರಿಸಿ ಬಿದ್ದಿತು. ಅವರ ತಲೆಯು ನೆಲಕ್ಕೆ ಬಹು ಬಲವಾಗಿ ತಗಲಿತು. ಅವರ ಜೊತೆಯಲ್ಲಿ ಸವಾರಿ ಮಾಡುತ್ತಿದ್ದ ಕರ್ನಲ್ ಲೀಕ್ ಸಾಹೇಬರು ಧೈರ್ಯದಿಂದ ತಮ್ಮ ಕುದುರೆಯಿಂದಿಳಿದು ನೋಡಿದಾಗ ಆವರ ಪ್ರಾಣವು ಅಗಲಿ ಹೋಯಿತೆಂದು ತಿಳಿದರು. ಮಹಾರಾಜ್ಞಿಯವರು ಈ ವರ್ತಮಾನವನ್ನು ಕೇಳಿ, ಬೇಗನೆ ತಂತಿಯ ಮೂಲಕವಾಗಿ ತಮ್ಮ ದುಃಖವನ್ನು ಕವರ್ನ್‌ಮೆಂಟ್ ಲಾರ್ಡ್ ರವರ ಪತ್ನಿಯವರಿಗೆ ತಿಳಿಯಪಡಿಸಿದರು. ಸರ್ ಜಾರ್ಜ್ ಹಡ್ಸನ್ ಸಾಹೇಬರು ಈ ಪದವಿಗೆ ಬಂದು ಸ್ವಲ್ಪ ಹೆಚ್ಚು ಕಡಿಮೆ ೩ ತಿಂಗಳಾಯಿತು. ಇವರ ಮರಣದಿಂದ ಹೈಕೋರ್ಟಿನ ಸಂಬಂಧಪಟ್ಟ ಮತ್ತು ಮದ್ರಾಸ್ ಗವರ್ನಮೆಂಟಿನಲ್ಲಿ ಈ ವಿಷಯ ಅಧಿಕಾರದವರಿಗೆ ತಿಳಿಸಿದರೆಂದು ತಿಳಿಯಿತು. ಇವರ ಸ್ಥಾನದಲ್ಲಿ ಬೇರೆಯವರನ್ನು ನೇಮಿಸುವ ಆಲೋಚನೆ ನಡೆಯುತ್ತಿದೆ. ಇಂಥಾ ಸಂದರ್ಭದಲ್ಲಿ ಮದರಾಸ್ ಮತ್ತು ಬೊಂಬಾಯಿ ಕವರ್ನ್‌ಮೆಂಟ್ ಲಾರ್ಡ್‌ಗಳು ಅಕಾಲವಾದ ಮರಣವನ್ನೈದುತ್ತಾರೆ. ಇದು ಬಹು ಆಶ್ಚರ್ಯಕರವಾದ ಸಂಭವವೇ ಸರಿ.

ಪ್ರಿಯಸ್ನೇಹ.

ದೇಶದ ಸ್ವಾಮಿಯು ಧನಿಕರಾಗಿದ್ದರಲ್ಲಿ ಇದ್ದಾಗ ಒಬ್ಬ ರಾಜನು ಆತನ ಬಳಿಗೆ ಬಂದು ತಾನು ದುಃಖದಲ್ಲಿರುವದಾಗಿ ಆತನ ಬಳಿಗೆ ಬಂದದ್ದು ಅಸಹಾಯವಾಗಿತ್ತು. ಇದಕ್ಕೆ ಒಂದು ಕಾರಣವಿತ್ತು. ಒಡನೆ ಎಲ್ಲಿ ಹೋದರೂ ಜನ್ಮದಲ್ಲೂ ಆ ಭಾಗದಲ್ಲಿ ಆಗುವದನ್ನು ಆತನ ಮನೆಯ ಪರು ಹೊಸ ವರ್ಣದ ಕಿವಿಗೊಟ್ಟರೆ ಆತನ ಜನಸಮೂಹ, ಮಾತಿನವರೂ ಆದ ವಿಷಯದಲ್ಲಿ ಅಸಮಾಧಾನ ಪಟ್ಟು ನಿಜವು ಪ್ರಸ್ತಾಪ ಕೊಟ್ಟಿತೋ ಎಂಬದಾಗಿ ತಿರಸ್ಕಾರದಿಂದ ಕೇಳುವದರು ಪದ್ಧತಿಯಾಗಿದೆ. ಅದಕ್ಕೋಸ್ಕರ ಆನೇಕಸಲ ದೊಡ್ಡ ಮನುಷ್ಯರು ಯೋಚಿಸಿದಾಗ ಬಳಿಗೆ ಹೋಗುವದಕ್ಕೆ ಹಿಂತೆಗೆದರು. ಆತನ ಆ ದೇಶದ ಮುಖ್ಯಸ್ಥರಲ್ಲಿ ಸಿಕೊಳ್ಳುವದುನಂಬಿ ಒಪ್ಪಿದ ಯೋಚನಾಸ್ವಾಮಿಯು ಅವರಿಗೇನನ್ನು ಇವನ್ನೂ ಚನ್ನಾಗಿ ತಿಳಿದುಕೊಳ್ಳಬೇಕೆಂದು ಅಪೇಕ್ಷಿತನಾಗಿ ರಾತ್ರಿ ಕಾಲದಲ್ಲಿ ದಾಸನ್ನುಳ್ಳವನ ಬಳಿಗೆ ಬಂದು ಆತನಿಗೆ—ಸ್ವಾಮಿ, ತಾವು ದೇವರ ಕಡೆಯಿಂದ ಬಂದ ಗುರುವೆಂದು ನನಗೆ ತಿಳಿದುಬಂದಿದೆ. ದೈವಶಕ್ತಿಯು ತಮ್ಮಲ್ಲಿಲ್ಲದಿದ್ದರೆ ತಾವು ಮಾಡಿರುವ ಈ ಅಪೂರ್ವ ಮಹತ್ತಾದ ಕಾರ್ಯಗಳನ್ನು ಮಾಡಲಾರದವನಾಗಿ ಇರುತ್ತಿತ್ತು. ತರುಣ ಸಂಪ್ರದಾಯವನ್ನು ಮಾಡತಕ್ಕವನೆಂದು ಹೇಳಿದನು. ಯೇಸುವು ಬಾಲನ ಮಾತನ್ನು ಸ್ವಲ್ಪ ಆಶ್ಚರ್ಯಪಟ್ಟು ಆತನಿಗೆ—ಒಬ್ಬನು ಪೂರ್ಣತ್ವವನ್ನು ಹೊಂದುವದಕ್ಕೆ ಆತನು ಈ ಲೋಕದಲ್ಲಿ ಎರಡನೇ ಸಲ ಹುಟ್ಟಬೇಕು ಅವಶ್ಯ ಎಂದು ಹೇಳಲು, ನಿಕೊದೇಮನು ಗುರುವನ್ನು ನೋಡಿ—ಒಬ್ಬನು ಮುದುಕನಾದ ಮೇಲೆ ಇನ್ನೊಂದು ಸಾರಿ ಹುಟ್ಟುವದು ಹ್ಯಾಗೆ? ಅವನು ತನ್ನ ತಾಯಿಯ ಹೊಟ್ಟೆಯಲ್ಲಿ ತಿರುಗಿ ಸೇರಿ ಹುಟ್ಟಬಲ್ಲನೆ? ಅವನು ಕೇಳಿದ್ದಕ್ಕೆ ಯೇಸು—ಮಗನೆ, ನನ್ನ ಉತ್ತರವು ನಿನ್ನ ಬುದ್ಧಿಗೆ ಗೋಚರವಾಗಲಿಲ್ಲ. ನೋಡುವದನ್ನು ಏನೂ ಪಡೆಯಬೇಕೆಂದಿರುವವರು ಬ್ರಹ್ಮಚರ್ಯದಿಂದ ದೇವರಿಗೋಸ್ಕರ ಹುಟ್ಟಿದ್ದು ಒಂದು ತರವಾದ ಜನ್ಮ ಮನಸ್ಸಿನಲ್ಲಿ ದುರ್ಬಲೆಗಳನ್ನು ಕಳೆದು ದೈವಾನುಗ್ರಹದಿಂದ ಸದ್ಗುಣಗಳನ್ನು ಹೊಂದಿ ಅವುಗಳನ್ನು ನಮ್ಮ ಹೃದಯದಿಂದ ತೋರ್ಪಡಿಸುವದನ್ನು ಎರಡನೆಯ ಜನ್ಮವೆಂದು ಹೇಳಿದ ಜನ್ಮ. ಈ ಎರಡು ಜನ್ಮಗಳೂ ಎಲ್ಲರಿಗೂ ಬೇಕಾಗಿವೆ. ಶರೀರದ ಜನ್ಮ ಉಂಟಾಗುವದು ಸುಲಭ. ಆತ್ಮೀಯವಾದ

ಬನ್ನೀ [illegible] ಈಗಿನ ಕಾಲದಲ್ಲಿ [illegible]

[illegible]

ಚಂದಾದಾರರಿಗೆ.

ಅಯ್ಯಾ ಚಂದಾದಾರರುಗಳಿರಾ, ನಮ್ಮ ವೃತ್ತಾಂತ ಪತ್ರಿಕೆಗೆ ಈಗದವಾರದ ಸಂಚಿಕೆಯೊಡನೆ ೬ ವರ್ಷಗಳು ತುಂಬಿದವು. ಈ ವಾರದ ಪತ್ರಿಕೆಯಿಂದ ೭ನೇ ವರ್ಷವು ಪ್ರಾರಂಭಿಸುತ್ತದೆ. [illegible] ನಂಬಿ ಈ ಮೂಲಕ ವಿಜ್ಞಾಪಿಸಿರುತ್ತೇವೆ.

೧೪-೬-೧೩. ಎಡಿಟರ್,
ಮೈಸೂರು. ವೃತ್ತಾಂತಪತ್ರಿಕೆ.

ಒಳದೇಶ ವೃತ್ತಾಂತಗಳು.

[illegible]

ನೋಟಿಸಲ್ ಮ್ಯೂನಿಸಿಪಾಲಿಟಿ.

[illegible]

ವಿನೋದ ಚರ್ಚೆ.

[illegible]

ವಿವಿಧ ವರ್ತಮಾನಗಳು.

ನ್ಯೂಯಾರ್ಕ್ ಪಟ್ಟಣದಲ್ಲಿ ಒಂದು ರೈಲು ಕೆಲವು ದಿನಗಳ ಕೆಳಗೆ ಒಂದು ಘಂಟೆಗೆ ೧೨೦ (!) ಮೈಲಿ ಪ್ರಯಾಣ ಮಾಡಿತೆಂದಾಗಿ ತಂತೀ ವರ್ತಮಾನ ಬಂದಿದೆ.

ಫ್ರಾನ್ಸ್ ದೇಶದ ಕೆಲವು ರೈಲ್ವೇ ಸ್ಟೇಷನ್‌ಗಳಲ್ಲಿ ಹೆಂಗಸರನ್ನು ಗುಮಾಸ್ತರನ್ನಾಗಿಯೂ, ಟೆಲಿಗ್ರಾಫ್ ವರ್ತಮಾನ ಕೊಡುವವರನ್ನಾಗಿಯೂ ನೌಕರಿ ಮಾಡಿರುತ್ತಾರೆ.

ಲಂಡನ್ ಪಟ್ಟಣದಲ್ಲಿ ಕಟ್ಟಲ್ಪಟ್ಟಿರುವ ಇಂಪೀರಿಯಲ್ ಇನ್ಸ್ಟಿಟ್ಯೂಟ್ ಎಂಬ ಕಟ್ಟಡಕ್ಕೆ ಇನ್ನೂ ೧೬ ಲಕ್ಷ ರೂಪಾಯಿಗಳು ಬೇಕಾಗಿದೆಯಂತೆ. ಅದರ ಗೋಪುರವು ೩೦೦ ಅಡಿಗಳ ಎತ್ತರವಾಗಿದೆ.

ಮಿಸಿಸಿಪೀ ನದಿಯಲ್ಲಿ ಈಗ ಪ್ರವಾಹವು ಬಿಟ್ಟು ಸಾಧಾರಣ ಕಾಲದಲ್ಲಿ ನೀರು ಇದ್ದದಕ್ಕಿಂತಲೂ ೨೫ ಅಡಿಗಳು ಹೆಚ್ಚಾಗಿ ನೀರು ಬಂದಿರುತ್ತೆಂದು ತಿಳಿಯಲಾದವು. ಇದರಿಂದ ಜನಗಳಿಗೆ ಎಷ್ಟು ನಷ್ಟವಾಗಿರಬಹುದೊ!

ಚಿಕಾಗೋ ಪ್ರದರ್ಶನಶಾಲೆಯನ್ನು ನೋಡುವದಕ್ಕೆ ದಿನ ಒಂದಕ್ಕೆ ೧೫,೦೦೦ ಜನರು ಹೋಗುತ್ತಿದ್ದಾರೆ. ಇನ್ನೂ ಹೆಚ್ಚಾಗಿ ಹೋದಲ್ಲಿ ಅವರಿಗೆ ಅಧಿಕಾರಿಗಳಿಗೂ ಇಲ್ಲಿನವರಿಗೂ ಅವರಿಗೆ ನಷ್ಟವಾಗಿರುತ್ತದೆಂತಲೂ ಕೇಳುತ್ತೇವೆ.

ಫೋಟೋಗ್ರಾಫಿನಲ್ಲಿ ಬಣ್ಣಗಳನ್ನು ತೆಗೆಯುವುದು ಇದುವರೆಗೂ ಕಷ್ಟವಾಗಿತ್ತು. ಆದರೆ ಕೆಲವು ದಿನಗಳ ಕೆಳಗೆ ಇಂಥದ್ದು ಸಾಧ್ಯವೆಂದು ಫ್ರಾನ್ಸ್ ದೇಶದ ಒಬ್ಬ ಶಾಸ್ತ್ರಜ್ಞನು ಪರೀಕ್ಷೆಗಳಿಂದ ಗೊತ್ತು ಮಾಡಿ ತೋರಿಸಿರುತ್ತಾನೆ.

ಶ್ರೀಮದಿಂಡಿಯಾ ಚಕ್ರವರ್ತಿನಿಯವರಾದ ವಿಕ್ಟೋರಿಯಾ ಮಹಾರಾಣಿಯವರ ಮೊಮ್ಮಕ್ಕಳಿಗೆ ತ್ವರೆಯಲ್ಲೇ ವಿವಾಹ ಮಹೋತ್ಸವವು ಜರುಗುವದರಿಂದ ಎಲ್ಲಾ ರಾಜ್ಯಗಳಿಂದಲೂ ವಧೂವರರಿಗೆ ಉಡುಗೊರೆಗಳನ್ನು ಕೊಟ್ಟು ಕಳುಹಿಸಲು ಪ್ರಯತ್ನ ಮಾಡುತಲಿದ್ದಾರೆ.

ವಿಲಾಯಿತಿಯಲ್ಲಿರುವ ರೈಲ್ವೇ ಕಂಪೆನಿಗಳಲ್ಲೆಲ್ಲಾ ಬಹಳ ಪೂರ್ವಕಾಲದಿಂದಲೂ ಇರುವ ಒಂದು ಕಂಪೆನಿಯಲ್ಲಿ ಒಬ್ಬ ನೌಕರನಿರುವನು. ಅವನಿಗೆ ಈಗ ೭೭ ವರುಷಗಳಾಗಿವೆ. ಇಷ್ಟು ಕಾಲದಲ್ಲಿ ಅವನು ೨೦ ಲಕ್ಷ (!) ಮೈಲಿ ಫಾಸಲೆ ಸಂಚಾರ ಮಾಡಿರುತ್ತೇನೆಂದು ಹೇಳುತ್ತಾನೆ.

ಲಂಡನ್ ಪಟ್ಟಣದಲ್ಲಿ ಕಳೆದ ಮೇ ೧೦ನೇ ತಾರೀಖಿನ ದಿವಸ ನಡೆದ ಇಂಪೀರಿಯಲ್ ಇನ್ಸ್ಟಿಟ್ಯೂಟಿನ ಗೃಹಪ್ರವೇಶದ ಉತ್ಸವಕಾಲದಲ್ಲಿ ೨೦,೦೦೦ ದೊಡ್ಡ ಮನುಷ್ಯರು ಹಾಜರಾಗಿದ್ದರಂತೆ. ಇದುವರೆಗೂ ಇಷ್ಟು ಜನರು ಯಾವ ಕೆಲಸಕ್ಕೂ ಒಟ್ಟಾಗಿ ಸೇರಿ ಇರಲಿಲ್ಲ.

ಲಂಡನ್ ಪಟ್ಟಣದಲ್ಲಿರುವ ಭಾರೀ ಆಸ್ಪತ್ರೆಗೆ ಒಂದು ವರುಷದಲ್ಲಿ ೬೦,೦೦೦ ರೋಗಿಗಳು ಬರುತ್ತಾರೆ. ಆಸ್ಪತ್ರೆಯಲ್ಲಿ ಈಗ ಔಷಧಗಳನ್ನು ಮಾಡುತ್ತಿರುವವರು ೧೨,೦೦೦ ಮಂದಿ ಎಂತಲೂ, ಔಷಧಗಳನ್ನು ತೆಗೆದುಕೊಂಡು ಹೋಗತಕ್ಕ ರೋಗಿಗಳು ೧೩,೧೯೬ ಮಂದಿ ಎಂತಲೂ ತಿಳಿದುಬಂದಿದೆ.

ಬೊಂಬಾಯಿ ಪಟ್ಟಣದಲ್ಲಿ ಕಳೆದ ... ಮೇ ತಿಂಗಳಲ್ಲಿ ಆದಷ್ಟು ಹುಟ್ಟಿದವು ... ಆಗಿಲ್ಲವೆಂತಲೂ, ಆ ತಿಂಗಳಲ್ಲಿ ಸಾವುಗಳನ್ನು ... ಮಾಡಿದ್ದಕ್ಕಾಗಿ ಸರ್ಕಾರಕ್ಕೆ ವಸೂಲಾದ ತೆರಿಗೆಯು ೩೩,೦೦೦ ರೂಪಾಯಿ ಎಂತಲೂ ಗೊತ್ತು ಮಾಡಿರುತ್ತಾರೆ.

ರಷ್ಯಾ ಚಕ್ರವರ್ತಿಗಳನ್ನು ಅವರ ಸಂಸ್ಥಾನವನ್ನೂ ಕೆಡಿಸಬೇಕೆಂದು ಆಲೋಚನೆ ಮಾಡುತ್ತಿರುವ ಒಂದು ಗುಂಪಿನ ಜನರು ಅದೇ ರಾಜ್ಯದಲ್ಲಿದ್ದಾರಷ್ಟೆ. ಈ ಗುಂಪಿನವರಲ್ಲಿ ಸರಿಯಾಗಿ ಕೆಲಸ ಮಾಡಲಿಲ್ಲವೆಂದು ಒಬ್ಬನನ್ನು ಹಿಡಿದು ಕೊಂದಿರುತ್ತಾರೆ. ಆದರೆ ಅವನ ರಹಸ್ಯವಾದ ಮುಖಾಂತರದಿಂದ ಯಾರೆಂದು ಗೊತ್ತು ಮಾಡಲು ಅಸಾಧ್ಯವಾಗಿದೆ.

ಫ್ರಾನ್ಸ್ ದೇಶದಲ್ಲಿ ಇದುವರೆಗೂ ಮನೆಗಳಿಗೆ ತೆರಿಗೆ ಹಾಕುವದಕ್ಕೆ ಬದಲಾಗಿ ಮನೆಗೆ ಇರುವ ಬಾಗಲುಗಳು ಮತ್ತು ಕಿಟಕಿಗಳು ಇವುಗಳ ಲೆಖ್ಖದ ಪ್ರಕಾರ ಕಂದಾಯ ವಿಧಿಸುತ್ತಿದ್ದರು. ಈ ವರುಷದಲ್ಲಿ ಇಂಥಾ ತೆರಿಗೆಯನ್ನು ಹಾಕುವದು ಸರಿಯಲ್ಲವೆಂದು ಭಾವಿಸಿ ಮನೆಗಳ ಬಾಡಿಗೆಗಳನ್ನು ಗೊತ್ತು ಮಾಡಬೇಕೆಂದು ಗೊತ್ತು ಮಾಡಿರುತ್ತಾರೆ.

ಪರ್ಷಿಯಾ ದೇಶದಲ್ಲಿ ೬,೦೦೦ ಜನರನ್ನು ಕಟ್ಟಿಕೊಂಡು ಒಬ್ಬ ಮುಖಂಡನು ಹಳ್ಳಿಗಳನ್ನೂ, ಚಿಕ್ಕ ಪಟ್ಟಣಗಳನ್ನೂ ಕೊಳ್ಳೆ ಮಾಡುತ್ತಲೂ, ಮನೆಗಳನ್ನು ಸುಡುತ್ತಲೂ, ಜನಗಳನ್ನು ಕೊಂದು ಹಿಂಸೆ ಪಡಿಸುತ್ತಿದ್ದಾನೆಂಬದಾಗಿಯೂ, ಸರ್ಕಾರದವರು ಅವನನ್ನು ಹಿಡಿಯುವದಕ್ಕೆ ಮಾಡಿರುವ ಪ್ರಯತ್ನಗಳು ನಿಷ್ಪ್ರಯೋಜನವಾಗಿರುವವೆಂತಲೂ ಕೇಳುತ್ತೇವೆ.

ಸ್ಪೇನ್ ದೇಶದಲ್ಲಿ ಮ್ಯುನಿಸಿಪಲ್ ಕಮಿಷನರುಗಳನ್ನು ಚುನಾವಣೆ ಮಾಡುವದರಲ್ಲಿ ಅನೇಕ ಅನ್ಯಾಯಗಳು ನಡೆದವೆಂಬದಾಗಿ ಸರ್ಕಾರಕ್ಕೆ ಗೊತ್ತಾದ್ದರಿಂದ ಈ ವಿಷಯವನ್ನು ಕುರಿತು ವಿಚಾರಣೆ ನಡಿಸುವದಕ್ಕಾಗಿ ಅಲ್ಲಿನ ಪಾರ್ಲಿಮೆಂಟ್ ಸಭೆಯವರು ೩ ದಿವಸಗಳವರೆಗೂ ಪಾರ್ಲಿಮೆಂಟ್ ಮನೆಯಲ್ಲೇ ಇದ್ದರು. ಇದು ಅತ್ಯಂತ ಅಸಂಭವನೀಯ ವರ್ತಮಾನವೇ ಸರಿ.

ಸಂಯುಕ್ತ ಸಂಸ್ಥಾನಗಳಲ್ಲಿ ಚೀನಾರಾಜ್ಯದ ಅನೇಕ ಜನರು ಇರುತ್ತಾರೆ. ಇವರ ಹೆಸರುಗಳನ್ನೆಲ್ಲ ಒಂದು ಪಟ್ಟಿ ಮಾಡಿದ್ದಾರೆ. ಇದುವರೆಗೆ ಈ ಪಟ್ಟಿಯ ಪ್ರಕಾರ ತನಿಖೆ ಮಾಡುವಲ್ಲಿ ಅದರಲ್ಲಿ ಸುಮಾರು ... ಪಟ್ಟಿಗೆ ದಾಖಲಾಗದೆ ಇದ್ದವರು ಸಿಕ್ಕಿದ್ದಾರೆ. ಇವರನ್ನು ಆ ಜನಗಳನ್ನು ತಮ್ಮ ರಾಜ್ಯದಿಂದ ಹೊರಡಿಸಬೇಕೆಂಬದಾಗಿ ಹಿಂದೆ ಪ್ರೆಸಿಡೆಂಟ್ ಮಾಡಿದ್ದ ಒಂದು ಕಾನೂನನ್ನು ಈಗ ಜಾರಿಯಲ್ಲಿ ತರಬೇಕೆಂದು ತೀರ್ಮಾನಿಸಿರುತ್ತಾರೆ. ಇದರ ಫಲಿತಾಂಶವೇನೋ ಇನ್ನು ಕೆಲವೇ ದಿವಸಗಳಲ್ಲಿ ತಿಳಿಯಬಹುದು.

ಚಿಕಾಗೋ ಸರ್ವವಸ್ತು ಪ್ರದರ್ಶನಶಾಲೆಯನ್ನು ಸುಟ್ಟುಬಿಡಬೇಕೆಂದು ಪ್ರಯತ್ನ ಮಾಡಿದ್ದ ಕೆಲವು ಮಂದಿ ತುಂಟರು ಕೆಲವು ಕಾಗದ ಪತ್ರಗಳನ್ನು ಗುಟ್ಟಾಗಿ ನಡೆಸುತ್ತಿದ್ದರು. ಇವುಗಳ ಪೈಕಿ ಒಂದು ಕಾಗದವು ಅಧಿಕಾರಿಗಳಿಗೆ ಸಿಕ್ಕಿ ಇರುತ್ತೆ. ಅದರಲ್ಲಿ ಕೆಲವು ಜನರ ಹೆಸರು ನಮೂದಾಗಿದೆ. ಪೋಲೀಸಿನವರು ಆ ಜನರನ್ನು ಹುಡುಕುತ್ತಲಿದ್ದಾರೆ. ಪ್ರಪಂಚಕ್ಕೆಲ್ಲಾ ಉಪಯೋಗ ಮಾಡಿರುವ ಈ ಪ್ರದರ್ಶನಶಾಲೆಯನ್ನು ನಾಶ ಮಾಡಬೇಕೆಂದು ಅವರು ಯಾಕೆ ಪ್ರಯತ್ನ ಮಾಡಿದರೋ ಆಲೋಚನೀಯವಾಗಿದೆ.

ಮದರಾಸ್ ಸರ್ಕಾರದವರು ಜೈಲ್ ಖಾನೆಗಳ ಸೂಪರಿಂಟೆಂಡುಗಳಿಗೆ ಒಂದು ಹೊಸ ಕಾನೂನನ್ನು ಏರ್ಪಾಡು ಮಾಡಿರುತ್ತಾರೆ. ಅದರಂತೆ ಸಾದಾ ಸಜಾವನ್ನು ಅನುಭವಿಸತಕ್ಕವರನ್ನು ಕಠಿಣ ಸಜಾ ಅನುಭವಿಸುತ್ತಿರುವ ಖೈದಿಗಳ ಜೊತೆಯಲ್ಲಿ ಸೇರಿಸಕೂಡದು. ಇವರಿಗೂ ಅವರಿಗೂ ಸಂಬಂಧವೇ ಇಲ್ಲದಂತೆ ಬೇರೆ ಬೇರೆ ಭಾಗಗಳಲ್ಲಿ ಅವರನ್ನು ಇಡಬೇಕು. ಸಿವಿಲ್ ಖೈದಿಗಳು ತಮಗೆ ಬೇಕಾದ ಉಡುಪುಗಳನ್ನು ಹಾಕಿಕೊಳ್ಳಬಹುದು. ಅವರಿಗೆ ಕ್ಷೌರ ಮಾಡಿಸತಕ್ಕ ಅವಶ್ಯವಿರುವದಿಲ್ಲ. ಮತ್ತು ಅವರು ಪುಸ್ತಕಗಳೇ ಮೊದಲಾದ ಪದಾರ್ಥಗಳನ್ನು ಖೈದಿನಲ್ಲಿರುವಾಗ್ಯೂ ಉಪಯೋಗಿಸಬಹುದು ಎಂಬುವದೇ.

ವಿಲಾಯಿತಿಯ ಛಾನ್ಸರಿ ಕೋರ್ಟಿಗೆ ಸನ್ ೧೮೩೮ ರಲ್ಲಿ ಮಿ|| ಗ್ರೀಸ್‌ಹಾಲ್ ಎಂಬವನು ತನ್ನ ಆಸ್ತಿಯ ವಿಷಯವಾಗಿ ಒಂದು ಮೊಕದ್ದಮೆಯನ್ನು ದಾಖಲ್ ಮಾಡಿದ್ದನು. ಕೋರ್ಟಿನವರು ಆ ಸ್ವತ್ತನ್ನು ಮಾರಿ ಹಣವನ್ನು ಬ್ಯಾಂಕಿನಲ್ಲಿ ಹಾಕಿದ್ದರು. ಆ ಮೊಕದ್ದಮೆಯು ಆ ಕಾಲಮೊದಲು ೫೫ ವರುಷಗಳವರೆಗೂ ಫೈಸಲಾಗದೆ ಇದ್ದು ಈಗ ತೀರ್ಮಾನವಾಗಿರುತ್ತದೆ. ಮ. ಮಾ. ದಾಖಲ್ ಮಾಡಿದವನು ಸತ್ತು ಹೋದರೂ ಅವನ ವಂಶಕರಿಗೆ ಆ ಸ್ವತ್ತು ಕೊಡತಕ್ಕಂತೆ ತೀರ್ಮಾನವಾಯಿತು. ಕೊನೆಗೆ ಸ್ವತ್ತು ಎಷ್ಟೆಂಬದಾಗಿ ಲೆಖ್ಖಾಚಾರ ಮಾಡಿದಾಗ ಈ ೫೫ ವರುಷಗಳಿಂದಲೂ ಬಂದ ಬಡ್ಡಿಯೇ ೧೫,೦೦೦ ಪೌನುಗಳಾಗುತ್ತವೆ, ಅಂದರೆ ೨|| ಲಕ್ಷ ರೂ.

ಮದರಾಸ್ ಪ್ರೆಸಿಡೆನ್ಸಿಗೆ ಸೇರಿದ ಸಕಲ ಪ್ರದೇಶಗಳಲ್ಲಿಯೂ ಬೇಸಿಗೆ ಕಾಲದಲ್ಲಿ ಪ್ರಯಾಣಿಕರಿಗೆ ದಾರಿಯಲ್ಲಿ ನೀರು ದೊರೆಯುವದೇ ಅಸಾಧ್ಯವೆಂಬ ವಿಷಯವು ಗೌರ್ನಮೆಂಟಿನವರ ತಿಳುವಳಿಕೆಗೆ ಬಂದದ್ದರಿಂದ ಪ್ರತಿವರುಷವೂ ೫ ತಿಂಗಳು ವರೆಗೂ (ಬೇಸಿಗೆಯಲ್ಲಿ) ಮುಖ್ಯವಾದ ಸ್ಥಳಗಳಲ್ಲಿ ಅರವಟ್ಟಿಗೆಗಳನ್ನು ಸರ್ಕಾರದಿಂದ ಇಡಿಸಬಹುದೆಂತಲೂ, ಪ್ರತಿ ಅರವಟ್ಟಿಗೆಯ ಖರ್ಚು ತಿಂಗಳೊಂದಕ್ಕೆ ಹತ್ತು ರೂಪಾಯಿಗಿಂತಲೂ ಜಾಸ್ತಿ ಆಗಕೂಡದೆಂತಲೂ, ಈ ಬಾಬತು ಖರ್ಚನ್ನು ತಾಲ್ಲೂಕ್ ಬೋರ್ಡುಗಳ ಖರ್ಚಿನಲ್ಲಿ ಸೇರಿಸಬಹುದೆಂತಲೂ ಗೌರ್ನಮೆಂಟಿನವರು ಹುಕುಂ ಮಾಡಿರುತ್ತಾರೆ. ಪ್ರಯಾಣಿಕರಿಗೆ ಇದರ ಉಪಯೋಗವು ಎಷ್ಟೆಂದು ಹೇಳಲು ಅಸಾಧ್ಯ.

ವಿಲಾಯಿತೀ ರಾಜ್ಯದ ಪ್ರಧಾನಮಂತ್ರಿಗಳಾದ ಮಿ|| ಗ್ಲ್ಯಾಡ್‌ಸ್ಟನ್ ಸಾಹೇಬರು ಒಂದು ಹೊಸ ಕಾನೂನು ಐರ್ಲೆಂಡಿನಲ್ಲಿ ತರಬೇಕೆಂದು ಸಾಹಸ ಮಾಡುತ್ತಲಿದ್ದಾರೆ. ಒಬ್ಬ ಮನುಷ್ಯನು ಅವರಿಗೆ ನೀವು ಈ ಉದ್ದೇಶವನ್ನು ಬಿಡದೇ ಇದ್ದಲ್ಲಿ ನಿಮ್ಮನ್ನು ಗುಂಡಿನಿಂದ ಕೊಲ್ಲುತ್ತೇನೆ. ಜವಾಬು ಕೊಡಿ ಎಂಬದಾಗಿ ಕಾಗದ ಬರೆದನು. ಅವರು ಜವಾಬು ಕೊಡಲಿಲ್ಲ. ಅವನು ತನ್ನ ಬರಹದಂತೆ ನಡೆಯಬೇಕೆಂದು ಅವರನ್ನು ಎದುರು ನೋಡುತ್ತಿದ್ದನು. ಆದರೆ ತನ್ನ ಬಾಯಲ್ಲಿ ಬುಲೆಟ್ ತುಂಬಿದ ಪಿಸ್ತೂಲನ್ನು ಇಟ್ಟುಕೊಂಡಿರುವಾಗ್ಯೆ ಪೋಲೀಸಿನವರಿಂದ ಹಿಡಿಯಲ್ಪಟ್ಟನು. ಈಗ ಅವನು ಎಲ್ಲಾ ಸಂಗತಿಗಳನ್ನೂ ಒಪ್ಪಿಕೊಳ್ಳುತ್ತಾನೆ. ಅವನನ್ನು ದರ್ಯಾಫ್ತು ಮಾಡುವದಕ್ಕೆ ಮ್ಯಾಜಿಸ್ಟ್ರೇಟರ ಛಾರ್ಜಿಗೆ ಕೊಟ್ಟಿರುತ್ತಾರೆ.

ಮಳವಳ್ಳಿಯ ವೃತ್ತಾಂತ.

ಅಯ್ಯಾ—ಇಷ್ಟು ದಿವಸವೂ ಅಂಧಕಾರದ ಅಧೀನದಲ್ಲಿ ಸ್ತಂಭವಾಗಿರುವ ಮಳವಳ್ಳೀ ತಾಲ್ಲೂಕಿಗೆ ತಮ್ಮ ಅಮೂಲ್ಯವಾದ ಪತ್ರಿಕೆಯ ಮೂಲಕವಾಗಿ ಬೆಳಕನ್ನು ಕೊಡುವದಕ್ಕೋಸ್ಕರ ಮನಃಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಅದೇನೆಂದರೆ—ಇಲ್ಲಿಗೆ ೧|| ಮೈಲು ದೂರದಲ್ಲಿ ಶುಕ್ರವಾರದ ದಿವಸ ನಡೆಸುತ್ತ ಸ್ವಾಮಿಯ ಜಾತ್ರೆ ನಡೆಯಿತು. ಇದಕ್ಕೆ ಅಲ್ಲಿನ ಸುವಾರ್ತಾಪ್ರಸಂಗಿ ವೆಸ್ಲೇಯನ್ ಮಿಷನರಿ ಮುಂತಾದವರು ತಮ್ಮ ಸತ್ಯಶಿವೋದ್ದೇಶವಾಗಿ ಹೋಗಿದ್ದರು. ಸ್ವಲ್ಪ ಹೊತ್ತಾದ ನಂತರ ದೇವಸ್ಥಾನದ ಮುಂದೆ ಬಹಳ ಗಲಾಟೆಯಾಗಿ ಒಂದು ರೋದನ ನಾಟಕವು ನಡೆಯಿತು. ಅದೇನೆಂದರೆ—ತೇರು ದೇವಸ್ಥಾನವನ್ನು ಬಳಸಿಕೊಂಡು ಬರುತ್ತಿರುವಾಗಲೇ ಕೆಲವು ಬ್ರಾಹ್ಮಣ ಪುರೋಹಿತರು ಮೊದಲಾದವರು ಒಂದು ಮರದ ಕೆಳಗೆ ಕೂತುಕೊಂಡು ಮಂತ್ರೋಚ್ಚಾರಣೆ ಇತ್ಯಾದಿ ಕರ್ಮಗಳನ್ನು ಜರುಗಿಸುತ್ತಿರುವಾಗ್ಯೆ ಸಮೀಪದಲ್ಲಿ ಜಾತಿಯಲ್ಲಿ ಬದ್ಧನಾದ ಒಬ್ಬ ಮನುಷ್ಯನು ಇದ್ದದನ್ನು ಕಂಡು ಪುರೋಹಿತರು ಕೋಪೋದ್ರೇಕರಾದರು. ಅವರಲ್ಲಿ ಒಬ್ಬನಾದ ಗೌರ್ನಮೆಂಟ್ ಕನ್ನಡ ಸ್ಕೂಲ್ ಟೀಚರ್ ನರಸಪ್ಪಯ್ಯ ಎಂಬವನು ಬ್ರಾಹ್ಮಣರಲ್ಲಿ ಮುಖಂಡನಾಗಿದ್ದ ಅವನನ್ನು ಅಲ್ಲಿಂದ ಹೊರಡಿಸುವದರಲ್ಲಿ ಆತ್ಯಾತುರನಾಗಿ ಆತನ ಮೇಲೆ ಕೈಯನ್ನು ಚಲಾಯಿಸ ಪ್ರಾರಂಭಿಸಿದನು. ತಕ್ಷಣವೇ ಇತರ ಬ್ರಾಹ್ಮಣರು ಆತನಿಗೆ ಸಹಾಯಕರುಗಳಾಗಿ ಬಂದು ಪಾಪ! ಆ ಬಡವನು ಮನುಷ್ಯನ ಮೇಲೆ ಬಿದ್ದು ಕಂಡು ಬಟ್ಟೆ ಹರಿಯುತ್ತಾ ಹೊಡೆಯುತ್ತಾ ಸುಮಾರು ಅರ್ಧ ಫರ್ಲಾಂಗ್ ಫಾಸಲೆ ತಗದುಕೊಂಡು ಹೋದರು. ಪೋಲೀಸಿನವರ ಕಡೆ ಕಾಣಿಸಲಿಲ್ಲ. ಮತ್ತು ಇತರ ಹಿಂದೂಗಳು ಮಾತ್ರ ಈ ವಿಪರೀತವಾದ ಸನ್ನಿವೇಶವನ್ನು ನೋಡಿಕೊಂಡು ನಿಂತಿದ್ದರು. "ಸಮಾಧಾನ ಪ್ರಿಯರು" (ಸಮಾಧಾನ ಮಾಡುವವರು ಭಾಗ್ಯವಂತರು) ಎಂಬ ಸತ್ಯ ವಚನದ ಪ್ರಕಾರ ಪೇಷ್ಕಾರ್ ಸಾಹೇಬರನ್ನು ಹಿಂಬಾಲಿಸಿ ಹೋಗಿ ಆ ಆಕ್ರಮವು ನಡೆದ ಸ್ಥಳದಲ್ಲಿ ಕಾಣಿಸಿಕೊಂಡರು. ಅವರು ಇನ್ನೂ ಜುಲುಂ ಮಾಡುತ್ತಿರುವಾಗ ಪಾಪ! ಆತನನ್ನು ಹೊಡೆಯ ಬೇಡಿರಿ ಯಾತಕ್ಕೆ ಹೊಡೆಯುತ್ತೀರಿ ಸಮಾಧಾನವಾಗಿ ನಿಮ್ಮ ಕೆಲಸ ನಡಿಸಿಕೊಂಡು ಹೋಗಿರಿ ಎಂಬದಾಗಿ ಹೇಳಿದ ಕೂಡ್ಲೆ ಅವರು ಸಭ್ಯರಕ್ಕೆ ನಿಂತರು. ಅಷ್ಟರಲ್ಲೇ ಆ ಬಡಮನುಷ್ಯನು ಪೆಟ್ಟುಗಳನ್ನು ತಾಳಲಾರದೆ ಅದೃಶ್ಯನಾದನು. ಇದು ಆದಕೂಡ್ಲೇ ಸದರಿ ಟೀಚರ್ ನರಸಪ್ಪಯ್ಯನು ಪೇಷ್ಕಾರ್ ಸಾಹೇಬರವರ ಕಡೆಗೆ ತಿರುಗಿಕೊಂಡು ರೌದ್ರ ಮುಖದಿಂದ ಕೆಲವು ಹೀನವಾದ ಮಾತುಗಳನ್ನು ಹೇಳಿದನು. ಅದಕ್ಕೆ ಪೇಷ್ಕಾರ್ ಸಾಹೇಬರು ಆತನಿಗೆ ಚಿಂತೆಯಿಲ್ಲ ಹೊಡೆಯುವದು ಬೇಡ ಸಮಾಧಾನವಾಗಿ ಹೋಗು ಎಂಬದಾಗಿ ಹೇಳುವಷ್ಟರಲ್ಲಿಯೇ ಈ ಪ್ರಾಂತ್ಯದಲ್ಲಿ ಮಸ್ತಾನ ಎಂಬದಾಗಿ ಪ್ರಸಿದ್ಧನಾಗಿರುವ ತುಂಟನಾದ ಸಾಬ್ಬ ಎಂಬ ತುರುಕನು ಥಕ್ಕನೆ ಅಲ್ಲಿ ಗಬಂದು ನಿಷ್ಕಾರಣವಾಗಿ ಕ್ರೈಸ್ತರ ಕಡೆಗೆ ಇರುವ ವೈಷಮ್ಯದಿಂದ ಒಬ್ಬ ನೇಟಿವ್ ಕ್ರೈಸ್ತರ ಮೇಲೆ ತನ್ನ ಛಲವನ್ನು ತೀರಿಸಿಕೊಳ್ಳುವಂತೆ ಒಂದು ಕಲ್ಲಿನ ಪೆಟ್ಟನ್ನು ಹೊಡೆದನು. ಆದರೆ ಕ್ರೈಸ್ತರು ಅವನಿಗೆ ನೀನು ಯಾಕೆ ಹೊಡೆದೆಯೆಂದು ಪ್ರಶ್ನೆಯಾಗಿ ಕೇಳದೆ ಸುಮ್ಮನಿದ್ದರು. ಇದು ಒಂದು ದೊಡ್ಡ *ಗಲಾಟೆಯು ಗುಂಪಾಗಿತ್ತು. ಮಹಾರಾಜಶ್ರೀ ಅಮಲ್ದಾರರು* ಪುರೋಹಿತರೊಳಗಿದ್ದರು. ಈ ಸಂಗತಿಗಳೆಲ್ಲಾ ಇವರಿಗೆ ಚೆನ್ನಾಗಿ ತಿಳಿದಿರಬಹುದು. ಈ ಗಲಾಟೆ ನಡೆಯುವದರಲ್ಲಿ ಅವರಾದರೂ ಬರಲಿಲ್ಲ. ಪೋಲೀಸಿನವರ ಸುಳಿವೂ ಇರಲಿಲ್ಲ. ಮತ್ತು ಈ ಕಾರ್ಯವನ್ನು ನಡೆಸುತ್ತಿದ್ದ ತುಂಟರಿಗೆ ಮ|| ಅಮಲ್ದಾರರ ಭಯವೂ ಇರಲಿಲ್ಲ. ಮತ್ತು ಪೋಲೀಸಿನವರನ್ನು ಕಂಡರೆ ಮೊದಲೇ ಲಕ್ಷ್ಯವಿಲ್ಲ. ಕಡೆಗೆ ಅವರವರೇ ತಮ್ಮ ತಮ್ಮ ಕೆಲಸಗಳ ಮೇಲೆ ಹೊರಟುಹೋದರು. ಆ ಮೇಲೆ ಕ್ರೈಸ್ತ ಭಕ್ತಾದಿಗಳು ಕ್ರಿಸ್ತನ ಸುವಾರ್ತೆಯನ್ನು ಸಾರಲು ಒಂದು ಪ್ರತ್ಯೇಕ ಸ್ಥಳಕ್ಕೆ ಹೊರಟುಹೋದರು. ಅವರು ತಮ್ಮ ಕೆಲಸವನ್ನು ಪ್ರಾರಂಭಿಸುವಷ್ಟರಲ್ಲಿ ಮುಂಚಿತವಾಗಿಯೇ ಮ|| ಅಮಲ್ದಾರರವರು ಆ ಮಾರ್ಗವಾಗಿ ಯಾವದೋ ಒಂದು ಉದ್ದೇಶದಿಂದ ಚಿತ್ತೈಸಿದರು. ಪೇಷ್ಕಾರ್ ಸಾಹೇಬರು ಅವರ ಭೇಟಿಗೋಸ್ಕರ ಹೋಗಿ ಈ ಸಂಗತಿಗಳನ್ನು ತಿಳಿಸಿದರು. ಈ ಕೃಷಿಯಾತ್ತನ ಮೇಲೆ ಆ ಅಸಾಮಿಯನ್ನೂ ಸಾಕ್ಷಿಗಳನ್ನೂ ಕರಸಿದನಂತರ ಹೊಡೆದವನು ಸದರಿ ಮಸ್ತಾನ ಎಂಬವನನ್ನು ಪೆಟ್ಟು ಸಹಿಸಿಕೊಂಡವರ ಕಡೆಗೆ ತೋರಿಸಿ ಇವರನ್ನು ನೀನು ಹೊಡೆದೆಯೋ ಎಂದು ಕೇಳಿದರು. ಅದಕ್ಕೆ ಅವನು ಮಹಾಸ್ವಾಮಿ ನಾನು ಈಗಲೇ ಬಾವಿಯಿಂದ ನೀರನ್ನು ಹೊತ್ತುಕೊಂಡು ಬಂದೆನು ತಪ್ಪು ಕರೆಯುತ್ತೀರಿ ಎಂಬದಾಗಿ ಕಳ್ಳ ಹೊರಟು ಬಂದನು. ಅಷ್ಟ ಸ್ವಾಮಿ ನನಗೆ ಏನೂ ತಿಳಿಯದು. ಇವರನ್ನು ನೋಡಲೂ ಇಲ್ಲ. ಹೊಡೆಯಲೂ ಇಲ್ಲ ಎಂಬದಾಗಿ ಸಂಪೂರ್ಣವಾಗಿ ಮರೆಮಾಚಿದನು. ತರುವಾಯ ಸಾಕ್ಷಿಯನ್ನು ಕೇಳಿದರು. ಆ ಸಾಕ್ಷಿಗಳು ನಮಗೆ ನಾನೂ ಕಾಣೆ ಎಂದು ಸುಳ್ಳು ಹೇಳಿದರು. (ಇಲ್ಲಿ ನಿಜವಾದ ಸಾಕ್ಷಿಯನ್ನು ಹೇಳುವದಕ್ಕೆ ಅಂಜಿದವರನ್ನು ಪ್ರತ್ಯೇಕವಾಗಿ ಊರಿನಲ್ಲಿ ಕೇಳಿದಾಗ ಒಪ್ಪಿಕೊಂಡು ತಮ್ಮ ಹೊಟ್ಟೆಗಾಗಿ ... ಹೀಗೆ ಎಲ್ಲರೂ ಸುಳ್ಳು ಹೇಳಿದರು.) ಮ|| ಅಮಲ್ದಾರರು ಪೇಷ್ಕಾರ್ ಸಾಹೇಬರು ಮತ್ತು ಅವರಸಂಗಡ ಇರುವಂಥವರು ಎಂದಿಗೂ ಸುಳ್ಳು ಹೇಳುವದಿಲ್ಲ. ಅವರ ಮಾತನ್ನು ನಾನು ನಂಬುತ್ತೇನೆ ನಿನ್ನ ವಿಷಯ ಇಷ್ಟೇ ಅಲ್ಲದೆ ಊರೊಳಗೂ ನಿನ್ನ ವಿಷಯ ಬಹಳ ಕೇಳಿದ್ದೇನೆ ಇಂಥದ್ದನ್ನು ಇನ್ನೊಂದುಸರ್ತಿ ಮಾಡಬೇಡ ಎಂಬದಾಗಿ ಮೃದುವಾದ ಸ್ವರದಿಂದ ಕೆಲವು ಮಾತುಗಳನ್ನು ಹೇಳಿ ಕಳುಹಿಸಿ ಬಿಟ್ಟರೇ ಹೊರತು ಇಂಥಾ ತುಂಟನೆಂಬದಾಗಿ ತಿಳಿದಾಗ್ಯೂ ತಕ್ಕ ಶಿಕ್ಷೆಯನ್ನು ಮಾಡಲಿಲ್ಲ. ... ನೋಡಿಕೊಂಡು ಮನೆಗೆ ಹೋದರು. ಅವರ ಪೆಟ್ಟು ತಿಂದವರು ನೋವು ಪಟ್ಟು ಹೊಡೆದವನು ಗೆದ್ದುಕೊಂಡನು. ಮ|| ಅಮಲ್ದಾರರವರು ಹೊರಟು ಹೋದರು. ಇದರಿಂದ ನನಗೆ ಉಂಟಾದ ಯೋಚನೆಯ ಸಂಗತಿಯೇನಂದರೆ ಗವರ್ನ್ಮೆಂಟಿನ ಪವರ್ ಶೂನ್ಯವಾಗಿತ್ತು. ಈ ಊರಿನಲ್ಲಿ ಇಷ್ಟು ಅನಾಯಕವಾಗಿರುವದರಿಂದ ಇವನ್ನು ತಕ್ಕ ಸ್ಥಿತಿಗೆ ತರುವದಕ್ಕೋಸ್ಕರ ಗವರ್ನ್ಮೆಂಟಿನವರು ತಮ್ಮ ಘನವಾದ ಚಿತ್ತಕ್ಕೆ ತಂದುಕೊಳ್ಳಬೇಕು. ತುಂಟರ ಪುಂಡನ್ನು ಅಡಗಿಸಿ ದೇಶಕ್ಷೇಮವನ್ನೂ ನ್ಯಾಯವನ್ನೂ ಉಂಟುಮಾಡಬೇಕು. ಮತ್ತು ಇಲ್ಲಿನ ಪೋಲೀಸಿನವರ ಸ್ಥಿತಿಯು ಬಹು ದುರ್ಬಲವಾಗಿಯೂ ನಿರರ್ಥಕವಾಗಿಯೂ ಇರುವದರಿಂದ ಅದಕ್ಕೆ ತಕ್ಕ ಏರ್ಪಾಡನ್ನು ಮಾಡಬೇಕು. ಮೇಲೆ ಬರೆದ ಗಲಾಟೆ ಕಾಲದಲ್ಲಿ ಪೋಲೀಸಿನವರು ಎಲ್ಲಿ ಇದ್ದರೋ ತಿಳಿಯದು. ತರುವಾಯ ಪೋಲೀಸ್ ಇನ್ಸ್ಪೆಕ್ಟರ್ ಜಮೇದಾರರೇ ಮುಂತಾದ ಇಬ್ಬರು ಮೂವರು ಗಲಾಟೆ ಮುಗಿದ ಮೇಲೆ ಜಾತ್ರೆ ನೋಡಲಿಕ್ಕೆ ಬಂದರು. ಇದರಿಂದ ಪೋಲೀಸಿನವರ ಸ್ಥಿತಿಯು ಹ್ಯಾಗೆ ಇದೆಯೋ ವಾಚಕರೇ ಊಹಿಸಿಕೊಳ್ಳಲಿ. ಇಲ್ಲಿನ ಅಮಲ್ದಾರರೇ ಮುಂತಾದ ಅಧಿಕಾರಿಗಳು ಸುಮ್ಮನೆ ಕಾಲವನ್ನು ಕಳೆಯಿಸಿಕೊಂಡು ಹೋಗಬೇಕು ಎಂಬಹಾಗೆ ಕೆಲಸ ಮಾಡುತ್ತಿರುವದರಿಂದ ಗವರ್ನ್ಮೆಂಟಿಗೆ ಇದರಿಂದ ಉಂಟಾಗಿರುವ ದೋಷವನ್ನು ಪರಿಹರಿಸಿಕೊಳ್ಳಬೇಕು. ಈ ತಾಲ್ಲೋಕಿಗೆ ಈ ನಿರ್ಭಾಗ್ಯವಾದ ಸ್ಥಿತಿಯು ಬಹಳ ಕಾಲದಿಂದಲೂ ಇರುವದರಿಂದ ಹೈಯರ್ ಅಥಾರಿಟಿಯವರಿಗೆ ಗೋಚರವಿಲ್ಲದೆ ಇರುವಂಥಾದ್ದು ಎಲ್ಲಾ ಮನಸ್ಸಿಗೆ ತುಂಬಾ ಆಶ್ಚರ್ಯವನ್ನುಂಟುಮಾಡುತ್ತದೆ. ಇಲ್ಲಿನ ಸಗಸ್ತ ಜನರು ಇಂಥಾ ದುಷ್ಕರ ಕೃತ್ಯ ನಡೆಸಕೂಡದ್ದಾಗಿದೆ ಸಮಾಧಾನಕ್ಕೋಸ್ಕರ ಎದುರು ನೋಡುತ್ತಾರೆ. ಇಲ್ಲಿ ದೇಶದಲ್ಲಿ ನಡೆಯುವ ಮೋಸವೂ, ಅನ್ಯಾಯವೂ, ಬರವಣಿಗೆಯಿಂದ ವರ್ಣಿಸಲು ದಡ್ಡಾಗಿವೆ. ಇವುಗಳ ವಿಷಯವಾಗಿ ಮುಂದೆ ಸಾಧ್ಯವಾದ ಮಟ್ಟಿಗೆ ತಮಗೆ ಬರೆಯಬೇಕಾಗಿದೆ. ಜನರು ಅನ್ಯಾಯಗಳನ್ನು ಗವರ್ನ್ಮೆಂಟಿಗೆ ಹೇಳಿಕೊಳ್ಳುವದು ನಿಷ್ಪ್ರಯೋಜನವೆಂದು ತಮಗೆ ತಾವೇ ಮೌನವಾಗಿದ್ದಾರೆ. ತಮ್ಮ ಪತ್ರಿಕೆಗೆ ದೊಡ್ಡ ಭಾರವಾಗುವದೆಂಬ ಭಯದಿಂದ ಹೆಚ್ಚಾಗಿ ಬರೆಯುವದಕ್ಕೆ ಆಗುವದಿಲ್ಲ. ಇವುಗಳನ್ನೆಲ್ಲ ನಿಷ್ಪಕ್ಷಪಾತವಾಗಿ ಪರಿಶೀಲನೆ ಮಾಡಿ ತಮ್ಮ ಬಲವಾದ ಪತ್ರಿಕೆಯ ಪ್ರಕಟನೆಗಳನ್ನು ಹೈಯರ್ ಅಥಾರಿಟಿಯವರು ಅನಗಾಹನೆಗೆ ತಂದುಕೊಂಡು ಗವರ್ನ್ಮೆಂಟಿನ ಶಕ್ತಿಯನ್ನು ಈ ಮೂಲಕ ತೋರ್ಪಡಿಸಿ ಹೆಚ್ಚಾದ ಮಾನವನ್ನೂ ಪ್ರಜೆಗಳ ಪ್ರೀತಿಯನ್ನೂ ಪಡೆದುಕೊಳ್ಳಬೇಕೆಂದು ಮನಃಪೂರ್ವಕವಾಗಿ ಕೇಳಿಕೊಳ್ಳುವ

ಸುವಾರ್ತಿಕ

ಶಾಲೀವಾಹನಶಕ ೧೮೧೫ ನೇ ವಿಜಯನಾಮ ಸಂವತ್ಸರದ ಅಧಿಕ ಆಷಾಢಶುದ್ಧ ಪಾಡ್ಯಮಿ ಗುರುವಾರದಿಂದ ಅಧಿಕಾಷಾಢಶುದ್ಧ ಅಷ್ಟಮಿ ಬುಧವಾರದ ವರೆಗಿನ ವಾರದ ಪಂಚಾಂಗ.

೧೮೯೩ ನೇ ಇಸವಿ, ಜೂನ್.

ತಾ.	ವಾರ.	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.	ವೃಷಭಮಾಸ ತೇದಿ.
15	ಗು.	ಪಾ.	7-16	ಪು.	33-10	3
16	ಶು.	ಬಿ ಉಪರಿ	1-38	ಪು.	54-31	4
17	ಶ	ಚೌ.	51-51	ಷ್ಯ.	27-0	5
18	ರ	ಪಂ	48-11	ಶ್ಲೆ.	24-59	6
19	ಸೋ.*	ಷ	45-53	ಮ.	34-4	7
20	ಮಂ.	ಸ.	44-36	ಪು.	24-12	8
21	ಬು.	ಅ	44-41	ಉ.	25-36	9

* ಕುಯಿಲೂರಾಣಿ ರಾಜ್ಯಭಾರ.

ಪೇಟೆ ಧಾರಣೆ.

ದವಸ.	ಮೈಸೂರು.	ಬೆಂಗಳೂರು.
	ರೂ. ಆ ಪೈ.	ರೂ ಆ ಪೈ.
ಕಡ್ಡೀ ಅಕ್ಕಿ ಪಲ್ಲ ೧ಕ್ಕೆ ..	೧೨-೮-೦	೧೨-೦-೦
ಕೆಂಪುಕಡಿ ಅಕ್ಕಿ ಅಪ್ಪಲ್ ..	೧೦-೬-೦	೯-೮-೦
ಡಿಟೋ ಅಕ್ಕಿ ದುಮಾಂ ..	೧೨-೦-೦	೯-೦-೦
ಜಾಪರಾಣಿ ಅಕ್ಕಿ	೧೨-೧೨-೦	೧೨-೬-೦
ಸಂಣಕ್ಕಿ ಅಪ್ಪಲ್ ..	೧೪-೦-೦	೧೪-೦-೦
ಡಿಟೋ ಅಕ್ಕಿ ದುಮಾಂ ..	೧೨-೦-೦	೧೧-೦-೦
ತೊಗರೀಬೇಳೆ ಪಲ್ಲ ೧ಕ್ಕೆ	೧೨-೮-೦	೧೨-೧೨-೦
ಡಿಟೋ ದುಮಾಂ ತರಹ ..	೧೧-೦-೦	೧೧-೮-೦
ಕೈರಾಗಿ ಪಲ್ಲ ೧ಕ್ಕೆ ..	೪-೦-೦	[illegible]
ಕಾರ್ರಾಗಿ	೪-೧೨-೦	[illegible]
ಹಲಸಂದೆ ಪಲ್ಲ ೧ಕ್ಕೆ ..	೯-೪-೦	೧೦-೦-೦
ಬಿಳೀ ಅವರೆ	೧೨-೮-೦	೧೧-೮-೦
ಹೆಸರು	೯-೪-೦	೧೦-೦-೦
ಉದ್ದು	೧೨-೦-೦	೧೨-೮-೦
ಕಡಲೆ	೧೦-೦-೦	೧೦-೦-೦
ಎಳ್ಳು	೧೬-೮-೦	೧೫-೦-೦
ಹುರುಳಿ	೬-೪-೦	೬-೧೪-೦
ಸೀಗೇಕಾಯಿ ಮಣ ೧ಕ್ಕೆ ..	೧-೧೦-೦	೧-೧೨-೦
ಮೆಣಸಿನಕಾಯಿ	೪-೮-೦	೪-೪-೦
ದುಯಾಂ ತರಹ	೪-೪-೦	೨-೧೨-೦
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ	೬-೮-೦	ಮ ೧-೧೦-೦
ಸಣ್ಣ ಅಚ್ಚು " ..	೪-೦-೦	೩|| ೧-೩-೦
ಬಳ್ಳೊಳ್ಳಿ ಮಣ ೧ಕ್ಕೆ ..	೬-೮-೦	೫-೦-೦
ಹರಳೆಣ್ಣೆ	೩-೪-೦	೪-೧೪-೦
ಕೊತ್ತಂಬರಿ ಖಂಡಗ ೧ಕ್ಕೆ	೯-೦-೦	೮-೧೦-೦
ಉಪ್ಪು	೧೦-೮-೦	೯-೧೨-೦
ಹುಣಸೇಹಣ್ಣು ಮಣ ೧ಕ್ಕೆ	೧-೧೨-೦	೧-೧೨-೦
ಹಳೇ ಹುಣಸೇಹಣ್ಣು ..	೧-೧೧-೦	೧-೮-೦
ತುಪ್ಪ	೧೪-೮-೦	೧೨-೮-೦
ಸೀಮೆ ಯಂಣೆ ಟಿನ್ನು ೧ಕ್ಕೆ	೩-೩-೪	೩-೧-೦
ತೆಂಗಿನಕಾಯಿ ೧೦೦ಕ್ಕೆ ..	೪-೮-೦	೪-೮-೦
ಚಿನ್ನ (ತೊಲ)		
ಕೆಂಪು ..	೧೬-೧೨-೦	೧೬-೧೧-೦
ಪಸಿಮೆ ..	೧೬-೧೪-೦	೧೬-೧೫-೦
ಗಟ್ಟಿ ..	೨೬-೧೨-೦	೨೫-೬-೦

Mysore.—Printed and published for the *Proprietor* at the Wesleyan Mission Press.

15/6/93.

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು ——— ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೬ — ಮೈಸೂರು—ಸನ್ ೧೮೯೩ ನೇ ಇಸವಿ ಜೂನ್ ತಾರೀಖು ೨೨ ನೇ ಗುರುವಾರ. — ಸಂಚಿಕೆ ೨೫

ನೋಟೀಸ್.

		ಕ್ರಯ			ಹಾಸಲು ಸಹಿತವಾಗಿ		
Campbell's	ಕನ್ನಡ ವ್ಯಾಕರಣ ಸಾರ	೦	೨	೦	೦	೨	೬
Object Lessons.	ವಸ್ತು ಪಾಠಗಳು	೦	೧	೦	೦	೧	೬
Picture do	ಚಿತ್ರಗಳು ಸಹಿತವಾಗಿ	೦	೨	೦	೦	೨	೬

ಈ ಮೂರು ಪುಸ್ತಕಗಳು ಪ್ರೈಮರಿ ಮಠಗಳಲ್ಲಿ ಓದತಕ್ಕ ಪುಸ್ತಕಗಳು.

	ಕ್ರಯ			ಹಾಸಲು ಸಹಿತವಾಗಿ		
ಸ್ತ್ರೀಯರು ಓದತಕ್ಕ ಪುಸ್ತಕ	೦	೫	೦	೦	೫	೬
ಗಣಿತ ವಿದ್ಯವು	೦	೪	೦	೦	೪	೬
ಗಣಿತ ಮಗ್ಗಿಗಳು ..	೦	೧	೦	೦	೧	೬
ಸಂಸ್ಕೃತ ಕರ್ಣಾಟಕ ಭಾಷಾಮಂಜರಿ	೦	೨	೦	೦	೨	೬
ಭೂಗೋಳ ಶಾಸ್ತ್ರ ಪ್ರಶ್ನೋತ್ತರ	೦	೨	೦	೦	೨	೬
ಇಂಗ್ಲೀಷು ಕನ್ನಡವು ಶಬ್ದಾವಳಿ ೧ನೇ ೨ನೇ ಭಾಗಕ್ಕೆ	೦	೧	೦	೦	೧	೬
ಕಾವ್ಯಮಾಲೆ (Minor Poetical Anthology)	೦	೮	೦	೦	೮	೬
ಬಾಲವ್ಯಾಕರಣ ..	೦	೫	೦	೦	೫	೬
ಹಳಗನ್ನಡ ವ್ಯಾಕರಣ ಸೂತ್ರಗಳು	೦	೬	೦	೦	೭	೬
ಇಂಗ್ಲೀಷು ಕನ್ನಡವು ಸಂಭಾಷಣ ವಾಕ್ಯಗಳು	೦	೧೦	೦	೦	೧೧	೬
ಶಬ್ದಮಣಿ ದರ್ಪಣ ..	೧	೦	೦	೧	೪	೬
Kan Eng Pocket Dictionary	೧	೪	೦	೧	೫	೩
Eng Kan School Dictionary	೨	೧೦	೦	೨	೧೨	೬
ಒಳ್ಳೇ ತಾಯಿ ..	೦	೪	೪	೦	೪	೬
ಆತ್ಮಿಕ ವಿದ್ಯೆ ಯುದ್ಧ (Bunyan)	೦	೧೨	೦	೦	೧೩	೬
ಕೈವಲ್ಯ ಪದ್ಧತಿ ೧ ನೇ ಭಾಗ ೨ ಆಣೆ ೩ ನೇ ಭಾಗ	೦	೧	೬	೦	೨	೬
ಭಕ್ತಿಸಾರ ..	೦	೧	೦	೦	೧	೬
ಸತ್ಯ ವಾಗ್ದಾನಿ	೦	೧	೦	೦	೧	೬
ಕಾವ್ಯಪುಂಜ ..	೦	೩	೦	೦	೩	೬

A new Edition of the Geography suited for the Lower Secondary Examination is now ready.—Edited by Rev. H. Gulliford. Price 6 As.

ಮೇಲೆ ನಮೂದಿಸಿರುವ ಪುಸ್ತಕಗಳನ್ನು ಬೆಂಗಳೂರು ದಂಡಿನ ಪೋಸ್ಟಾಫೀಸಿನ ಹತ್ತರವಿರುವ ಪುಸ್ತಕ ಶಾಲೆಯಲ್ಲಿ ಪಡೆಯ ಬಹುದು.

ನೋಟಿಸ್.

ಪುಸ್ತಕಗಳು.	ಕ್ರಯ.
ಪ್ರಾರ್ಥನಾ ವ್ಯಮಾಲಿಕೆ	1—8—0
ಕನ್ನಡ ಇಂಗ್ಲೀಷು ನಿಘಂಟು 1 ನೇ ದೊಡ್ಡ ತರಹ	3—0—0
„ „ 2 ನೇ ತರಹ	2—8—0
ಬಾಲಕರು ಓದುವ ಎರಡನೆ ಜ್ಞಾನೋಪದೇಶದ ಪ್ರಶ್ನೋತ್ತರಗಳು	0—1—0
ಸಭೆಯ ನಿಗಮಗಳನ್ನು ಕುರಿತದ್ದು	0—0—6
ಕಥಾ ಸಂಗ್ರಹ 1 ನೇ ಭಾಗದಿಂದ 3 ವರೆಗೆ	1—0—0
ಕಥಾ ಸಂಗ್ರಹ 4 ರಿಂದ 6 ನೇ ಭಾಗ ಹೊಸ ಛಾಪೆ	1—0—0
„ „ ದೊಡ್ಡ ತರಹ	1—8—0
ಬೋಧಕಾಸಕ್ತಿ ಬೋಧಿನಿ	0—1—0
ಸತ್ಯವೇದವನ್ನು ಕುರಿತು 2 ನೇ ಭಾಗ	0—4—0
ಪ್ರಸಂಗಿಯ ವರ್ತನ	0—6—0
ಇಂಗ್ಲೀಷುಭಾಷೆಯಲ್ಲಿಯೂ, ಕನ್ನಡ ಭಾಷೆಯಲ್ಲಿಯೂ, ಶಬ್ದಗಳ ವಿಭಾಗಗಳನ್ನು ವಿವರಿಸುವ ನಿಘಂಟು	0—2—0
ಕನ್ನಡ ವ್ಯಾಕರಣ (ಇಂಗ್ಲೀಷಿನಲ್ಲಿ)	2—0—0
ಹಿಂದುಸ್ತಾನಿ ವ್ಯಾಕರಣ	1—0—0
ಬಾಲಬೋಧ ಸೋಪಾನವು	0—0—6
ದನ ಕರುಗಳ ಆರೋಗ್ಯರೋಗವಿಚಾರ	0—12—0
ಕ್ರಿಸ್ತರ ಬೋಧನೆಗಳ ಸಾರಾಂಶವು	0—12—0

ಮೇಲೆ ನಮೂದಿಸಿರುವ ಪುಸ್ತಕಗಳನ್ನು ಅಪೇಕ್ಷಿಸು ವವರು ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್ಸಿಗೆ ಬರೆದು ತರಿಸಿಕೊಳ್ಳಬಹುದು ಅಂಚೇ ಹಾಸಲು ಬೇರೆ ಕೊಡಬೇಕು

ವೆಸ್ಲಿಯನ್ ಮಿಷನ್ ಪ್ರೆಸ್,

ಮೈಸೂರು.

ವಿಶೇಷ ! ಓದಿನೋಡಿರಿ !! ಓದಿನೋಡಿರಿ !!!

ಅನುಶಾಸನೀಕಪರ್ವವು ಪೂರೈಸಿತು.

ಶ್ರೀಕೃಷ್ಣರಾಜ ವಾಣೀವಿಲಾಸವೆಂಬ ಮಹಾಭಾರತವು ನಮ್ಮ ಶ್ರೀಚಾಮುಂಡೇಶ್ವರಿ ಪ್ರೆಸ್ಸಿನಲ್ಲಿ ಪ್ರಿಂಟಾಗತಕ್ಕದ್ದು ಎಲ್ಲರಿಗೂ ವಿಶದವಾಗಿದೆಯಷ್ಟೆ. ಈಗ ಅನುಶಾಸನೀಕಪರ್ವವು ಚಾಮುಂಡೇಶ್ವರಿ ತನ್ನೀರಿನಿಂದಲೂ ಮದಿಗೆ ಯೋಗ್ಯವಾದ ಕಿತ್ತಾ ಸಾರಿನ ಪುಲಿಬ್ಯೆಂಡಿನಿಂದ ತಯಾರಾಗಿರುತ್ತೆ. ಸಭಾಪರ್ವ ವಿರಾಟಪರ್ವದ ಬುಕ್ಕುಗಳು ಮುಗಿದು ಹೋದುದರಿಂದ ಪುನಹಾ ಎರಡನೆ ಛಾಪೆಯು ಪ್ರಿಂಟಾಗಿದೆ. ಈ ಕೆಳಗೆ ಕಂಡ ಪುಸ್ತಕಗಳು ನಮ್ಮಲ್ಲಿ ಸ್ವಲ್ಪವೇ ಇರುವದ್ದರಿಂದ ಇಷ್ಟಯುಳ್ಳವರು ತರಿಸಿಕೊಳ್ಳಬಹುದು. ಅನುಶಾಸನೀಕ ಪರ್ವ ಕಿತ್ತಾ ಸಾರಿನ ಬೈಂಡ ೩—೧ ೬—೦ ಲೋವರ್ ಸೆಕಂಡರಿ ಪರಿಕ್ಷೆಯ ನೋಟ್ಸು ಕ್ರಯ ೮ ಆಣೆ

ಆದಿಪರ್ವ	..	ಕ್ರಯ	೩	೦	೦
ಸಭಾಪರ್ವ	..	„	೧	೪	೦
ವಿರಾಟಪರ್ವ	..	„	೧	೦	೦
ಭೀಷ್ಮಪರ್ವ	..	„	೨	೦	೦
ದ್ರೋಣಪರ್ವ	..	„	೨	೮	೦
ಶಲ್ಯಪರ್ವ	..	„	೧	೨	೦
ಸೌಪ್ತಿಕಪರ್ವ	..	„	೦	೬	೦
ಸ್ತ್ರೀಪರ್ವ	..	„	೦	೬	೦
ಶಾಂತಿಪರ್ವ ರಾಜಧರ್ಮ	..	„	೨	೬	೦
„ ಆಪದ್ಧರ್ಮ	..	„	೦	೮	೦
„ ಮೋಕ್ಷಧರ್ಮ	..	„	೨	೬	೦

ಭಗವದ್ಗೀತೆ ೮, ಯಯಾತಿರಾಯನಚರಿತ್ರೆ ೪ ಆ.

ಎಂ. ರುದ್ರಪ್ಪ ಅಂಡ್ ಕೋ.

ಬಳೇಪೇಟೆ,

ಬೆಂಗಳೂರು

ಸನ್ ೧೮೮೮ ರಲ್ಲಿ ಸ್ಥಾಪಿಸಲ್ಪಟ್ಟದ್ದು.

ಕೆನರಾ ಅಂಡ ಮೈಸೂರ ಟ್ರೇಡಿಂಗ ಏಜನ್ಸೀ ಆಫೀಸ, ಮುಂಬಯಿ.

ಇವರು ತಯಾರಿಸಿರುವಂಥ—

ಹೈಮಧಾತ್ರೀತೈಲ.

ಕಳೆದ ಜನವರಿ ತಿಂಗಳೊಂದರಲ್ಲಿ ೪,೧೦೦ ಬಾಟ್ಲಿಗಳು ಖರ್ಚಾದವು. ಈ ತೈಲದ ಮಹತ್ವವನ್ನು ಕುರಿತು, ನಾವೀಗ ಹೆಚ್ಚಿಗೆ ವರ್ಣಿಸಲಾರೆವು—ಯಾಕಂದರೆ, ಯಾರು ಈ ತೈಲವನ್ನು ಉಪಯೋಗಿಸುತ್ತಾರೋ ಅವರಿಗೆ ಒಂದೆರಡು ದಿವಸಗಳಲ್ಲಿಯೇ ಇದರ ಅಪ್ರತಿಮವಾದ ಗುಣವು ಸಹಜವಾಗಿ ಅನುಭವಕ್ಕೆ ಬರುವದು. ಆದಾಗ್ಯೂ ಇದರ ಮುಖ್ಯವಾದ ಉಪಯೋಗವನ್ನು ತಿಳಿಸುವದು ನಮ್ಮ ಕರ್ತವ್ಯವಾಗಿರುತ್ತದೆ.

ಈ ನಮ್ಮ "ಹೈಮಧಾತ್ರೀ ತೈಲವನ್ನು" ಪ್ರತಿದಿನ ತಲೆಗೆ ಹಾಕಿಕೊಂಡರೆ ಮಿದುಳಿನಲ್ಲಿರುವ ಉಷ್ಣತೆಯನ್ನು ಪರಿಹರಿಸುವದಲ್ಲದೇ, ಕಣ್ಣಿಗೂ, ಮಿದುಳಿಗೂ ತಣುಕರಿಸಿ, ಚಿತ್ತಕ್ಕೆ ಶಾಂತತೆಯನ್ನುಂಟುಮಾಡುವದು. ಮತ್ತು ಕಣ್ಣುಗಳಿಗುಂಟಾಗುವ ಸಾಮಾನ್ಯವಾದ ವಿಕಾರಗಳನ್ನೆಲ್ಲ ಪರಿಹರಿಸುವದು. ದೃಷ್ಟಿಗೆ ತೀವ್ರತೆಯುಂಟಾಗುವದು.

ಹೆಚ್ಚಾಗಿ ಓದತಕ್ಕವರಿಗೂ, ಒಂದೇ ಸಮನಾಗಿ ಕಣ್ಣಿಟ್ಟು ಕೆಲಸ ಮಾಡತಕ್ಕ ಕಸಬುಗಾರರಿಗೂ, ಕಣ್ಣುಗಳಲ್ಲಿ ನೀರು ಸುರಿಯುವವರಿಗೂ, ಉರಿಗಣ್ಣಿನವರಿಗೂ, ಚಿತ್ತವ್ಯಗ್ರವಾದವರಿಗೂ, ಅತ್ಯಂತ ಗುಣಕಾರಿಯಾಗಿರುವದು. ಈ ತೈಲದಲ್ಲಿರುವ ಇನ್ನೊಂದು ಅಪ್ರತಿಮವಾದ ಶಕ್ತಿಯೇನಂದರೆ—ಕೂದಲುಗಳನ್ನು ನಯವಾಗಿಯೂ, ದೊಳೆಯುವಂತೆಯೂ, ಮಾಡುವದಲ್ಲದೇ ಬೆಳವಣಿಗೆಯನ್ನು ಹೆಚ್ಚಿಸುವದು. ಕೂದಲುಗಳ ಬೇರುಗಳನ್ನು ಭದ್ರಪಡಿಸಿ, ಅವು ಉದರಿಹೋಗದಂತೆ ಮಾಡುವದು.

ಪ್ರತಿಯೊಂದು ಬಾಟ್ಲಿಯೊಳಗೆ ೧೬ ರೂಲ ತೈಲವಿರುವದರಿಂದ ಒಬ್ಬನಿಗೆ ೨ ತಿಂಗಳು ಹಚ್ಚಿಕೊಳ್ಳಲಿಕ್ಕೆ ಸಾಕಾಗುವದು. ಬಡಬಗ್ಗರು ಸಹ ಕೊಂಡುಕೊಳ್ಳಲಿಕ್ಕೆ ಅನುಕೂಲವಾಗಿರಬೇಕೆಂಬುದಕ್ಕಾಗಿ ಪ್ರತಿಯೊಂದು ಬಾಟ್ಲಿಗೆ ೧೦ ಆಣೆ ಕ್ರಯವಿಟ್ಟಿರುವೆವು. ೧೨ ಬಾಟ್ಲಿಗಳುಳ್ಳ ೧ ಪೆಟ್ಟಿಗೆಗೆ ೬॥ ರೂಪಾಯಿ. ಪ್ರತಿಯೊಬ್ಬ ಕುಟುಂಬಿಗನೂ, ಈ ತೈಲವನ್ನು ಉಪಯೋಗಿಸುವದು ಅವಶ್ಯವಾಗಿರುತ್ತದೆ. ಮಕ್ಕಳುಮರಿಗಳಿಗೆ ಸಹ ಈ ತೈಲವು ಸುಖಾವಹವಾಗಿರುತ್ತದೆ.

ಈ ತೈಲ ಮತ್ತು ಈ ಕೆಳಗೆ ಬರೆಯುವಂಥ ಔಷಧಗಳು, ಡ್ರೆಸ್ಸು, ಮುತ್ತು, ರತ್ನ, ಬಂಗಾರ, ಬೆಳ್ಳಿ ಮುಂತಾದ ಸಾಮಾನುಗಳನ್ನು ಪಡೆಯಬಿಚ್ಛಿಸುವವರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬೇಕು.

ಮ್ಯಾನೇಜರ್, ಕೆನರಾ ಅಂಡ ಮೈಸೂರು ಟ್ರೇಡಿಂಗ ಏಜನ್ಸಿ ಆಫೀಸ, ಮಾರ್ಕೆಟ ಪೋಸ್ಟ. ಮುಂಬಾಯಿ.

☞ ಈ ತೈಲವನ್ನು ನಮ್ಮ ವಿನಹ ಇನ್ಯಾರೂ ಮಾಡಲಾರರು. ನಮ್ಮ ಹೆಸರಿನ ಗುರ್ತನ್ನು ನೋಡಿ ತೆಗೆದುಕೊಳ್ಳಬೇಕು. ಬೇರೆತರದ ಎಣ್ಣೆಗಳನ್ನು ಈ ಹೆಸರನ್ನಿಟ್ಟು ಮಾರುತ್ತಿದ್ದರೆ ಜಾಗ್ರತೆ ಪಡಿರಿ!

ಔಷಧಗಳು.	ರು ಆ.	ಡ್ರೆಸ್ಸುಗಳು.	ರು. ಆ.
ನಯನಾಮೃತಭಸ್ಮ ಬುಡ್ಡಿ ೧ಕ್ಕೆ	೧—೬	ಮೂಲವ್ಯಾಧಿಗೆ ಮದ್ದು	೨—೮
ನಯನಾಮೃತ ಕಾಡಿಗೆ	೧—೬	ಕರ್ಲೆಸ್ಟೇನ ಲಾಂಗ್‌ಕೋಟ್	೫—೦
ಕರ್ಣಸ್ರಾವನಾಶಕ ಅಪ್ರತಿಮತೈಲ	೦—೦	ಡಿಟೊ. ಅಂಗಿನ್ನು	೪—೮
ಮಹಾಮಾತಕಾಗ್ನಿ ರತೈಲ	೧—೦	ಡಿಟೊ ಷರ್ಟ್‌ಕೋಟ (ಇಂಗ್ಲೀಷಮಾದರಿ)	೪—೬
ಪ್ರವಾಳಭಸ್ಮವು	೨—೧೨	ದಪ್ಪನಾದ ಕಷ್ಮೀರಕೋಟ	೨—೮
ವಿವಿಧವ್ರಣಹರಪಟ್ಟಿಕೆಯು	೧—೦	ಡಿಟೊ. ಅಂಗಿ	೨—೪
ಬಾಲಸಂಜೀವಿನಿಗುಟಿಕೆ	೩—೮	ಫ್ಲಾನಲ್ ಕಮೀಜು	೧—೧೨
ಅಜೀರ್ಣಮಾತ್ರೆ	೦—೮	ಡಿಟೊ ಬನೀನು	೧—೪
ಸುಗಂಧದಂತಧಾವನಚೂರ್ಣವು	೦—೪	ಬೆಳೆ (ಇಂಗ್ಲೀಷಮಾದರಿ) ಷರ್ಟ	೦—೧೨
ಕಜ್ಜಿಯಮುಲಾಮು	೦—೨		

ತಾನಾಕರನಾಧ ಚಂದ್ರಕಾಂತ ಎಂಬ ಕನ್ನಡಗಳ ಕ್ರಯ ರೂ. ೧೦—೬॥—೫—೩॥ ಉತ್ತರ ಪಾಕರದ "ಸಖ್ಯ" ಎಂಬ ಹೆಸರಿನ ನಿಗಂಟುವಿನ (೧ ವರುಷದ ಜುಮಿಖಾನೆ ಸೇರಿದ್ದು) ಕ್ರಯ ರೂ. ೭.

ವೃತ್ತಾಂತ ಪತ್ರಿಕೆ.

ಚಂದಾ ನಿರ್ಣಯ.

	ರೂ ಆ. ಪೈ.
ಸ್ಥಳದವರಿಗೆ ವರ್ಷ ೧ಕ್ಕೆ	೧—೧—೦
ಪರಸ್ಥಳದವರಿಗೆ ವರ್ಷ ೧ಕ್ಕೆ	೧—೫—೦
ಬಿಡಿ ಪತ್ರಿಕೆ ೧ಕ್ಕೆ	೦— ೦—೪

ಈ ಪತ್ರಿಕೆಯು ಮೈಸೂರು ರಾಜಧಾನಿಯಲ್ಲಿ ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ, ಪ್ರಕಟಿಸಲ್ಪಡುವದು ಜನರು ಮೊದಲುಗೊಂಡು ಸಮಸ್ತರಿಗೂ ಸುಲಭಸಾಧ್ಯವಾಗುವಂತೆ ಈ ಪತ್ರಿಕೆಗೆ ಇಷ್ಟು ಅಲ್ಪ ಮೌಲ್ಯವನ್ನು ನಿರ್ಣಯಿಸುತ್ತೇನೆ. ಈ ಪತ್ರಿಕೆಯನ್ನು ಅಪೇಕ್ಷಿಸುವವರು ಚಂದಾಹಣವನ್ನು ಮುಂಗಡವಾಗಿ ಕೊಡಬೇಕು

ಎಡಿಟರ್,

ವೃತ್ತಾಂತ ಪತ್ರಿಕೆ.

ಜಗದ್ಗುರುವಿನ ಚರಿತ್ರ ಸಂಗ್ರಹ.

THE LIFE

OF

The Lord Jesus Christ.

Selected incidents from the Gospels,

FREELY PARAPHRASED.

ನೂತನವಾಗಿ ರಚಿಸಲ್ಪಟ್ಟ ೬೬ ಪುಟಗಳುಳ್ಳ ಈ ಪುಸ್ತಕವನ್ನು ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್ಸಿಗೆ ಬರೆದು ತರಿಸಿಕೊಳ್ಳಬಹುದು.

ಕ್ರಯ (ಟಪ್ಪಾಲ ಹಾಸಲ ಅಲ್ಲದೆ)

೧೦೦ ಪ್ರತಿಗಳಿಗೆ	೫—೦—೦
ಬಿಡಿ ಪ್ರತಿಗೆ	೦—೧—೦

ಸುಮಾರು ೨—೩ ಪ್ರತಿಗಳನ್ನು ಅರ್ಧ ಆಣೆ ಹಾಸಲಿನಿಂದ ಕಳುಹಿಸಬಹುದು.

ಚಂದಾದಾರರಿಗೆ.

ಅಯ್ಯಾ ಚಂದಾದಾರರುಗಳಿರಾ, ನಮ್ಮ ವೃತ್ತಾಂತ ಪತ್ರಿಕೆಗೆ ಕಳೆದವಾರದ ಸಂಚಿಕೆಯೊಡನೆ ೬ ವರ್ಷಗಳು ತುಂಬಿದವು. ಈ ವಾರದ ಪತ್ರಿಕೆಯಿಂದ ೭ನೆ ವರ್ಷವು ಪ್ರಾರಂಭಿಸುತ್ತದೆ. ತಮ್ಮಲ್ಲಿ ಅನೇಕರು ಚಂದಾಗಳನ್ನು ಇನ್ನೂ ಕೊಡದೆ ಬಾಕಿ ಯುಳ್ಳಿಟ್ಟುಕೊಂಡಿರುತ್ತೀರಿ. ಇದು ಸರಿಯಲ್ಲ. ಆದ್ದರಿಂದ ದಯವಿಟ್ಟು ತಾವುಗಳಾವರೂ ಉದಾಸೀನವಾಡದೆ ತಮ್ಮ ತಮ್ಮ ಬಾಕಿಗಳನ್ನು ಪಾವತಿಮಾಡುವಿರೆಂದು ದೃಢವಾಗಿ ನಂಬಿ ಈ ಮೂಲಕ ವಿಜ್ಞಾಪಿಸಿರುತ್ತೇವೆ.

೧೪-೬-೯೩. } ಎಡಿಟರ್,
ಮೈಸೂರು. } ವೃತ್ತಾಂತ ಪತ್ರಿಕೆ.

ವೃತ್ತಾಂತ ಪತ್ರಿಕೆ.

೧೮೯೩ನೇ ಇಸವಿ ಜೂನ್ ತಾ|| ೨೦ ನೇ ಗುರುವಾರ.

ಹಿಂದೂ ವೈದ್ಯಶಾಲೆ.

ಕಳೆದ ವರುಷದ ಪ್ರಜಾ ಪ್ರತಿನಿಧಿಸಭೆಯಲ್ಲಿ ಮೆಂಬರುಗಳು ಇಂಗ್ಲೀಷ್ ಔಷಧಿಗಳಿಂದ ತಮಗೆ ಅಷ್ಟು ಉಪಯೋಗವಾಗುವದಿಲ್ಲವೆಂತಲೂ, ಹಿಂದೂ ಮತ್ತು ಯುನಾನೀ ಔಷಧಿಗಳು ಬಹಾಯತಿನಿಂದ ಪ್ರಜೆಗಳು ಉಪಯೋಗಿಸುತ್ತಿರುವದರಿಂದ ಘಟುಕರಾದ ಕರ್ನಾಟಕ ವೈದ್ಯರನ್ನು ಗೊತ್ತುಮಾಡಿ ಅವರು ಈ ದೇಶಕ್ಕೆ ಅನುಗುಣವಾದ ಮೂಲಿಕೆಗಳ ಔಷಧಿಗಳನ್ನು ನೇಟಿವ್ ರೋಗಿಗಳಿಗೆ ಕೊಡುವಂತೆ ಏರ್ಪಾಡು ಮಾಡಿಕೊಡಬೇಕೆಂಬದಾಗಿಯೂ, ಇದಕ್ಕಾಗಿ ರಾಜಧಾನಿಯಲ್ಲಿ ಒಂದು ವೈದ್ಯಶಾಲೆಯನ್ನು ಸ್ಥಾಪಿಸಿ ಕೊಡಬೇಕೆಂಬದಾಗಿಯೂ ವಿಜ್ಞಾಪಿಸಿಕೊಂಡಿದ್ದ ಪ್ರಕಾರ ಗವರ್ನ್ಮೆಂಟಿನವರು ಇಂಥಾ ಔಷಧಶಾಲೆಯೊಂದನ್ನು ಏರ್ಪಡಿಸಿ ಅದರ ಸಾಧಕ ಬಾಧಕಗಳನ್ನು ನೋಡತಕ್ಕದ್ದಾಗಿದೆ ಎಂಬದಾಗಿ ನಿಶ್ಚಯಿಸಿ ಕಳೆದ ೯ನೆ ಇಸವಿ ಸೆಪ್ಟೆಂಬರು ಗುರ್ರೇ ಲಾಗಾಯಿತು ರಾಜಧಾನಿಯಲ್ಲಿ ಹಿಂದೂ ವೈದ್ಯಶಾಲೆಯೊಂದನ್ನು ದೊಡ್ಡ ಮಾರ್ಕೆಟ್ಟಿನ ಬಂದುಶಾಪಿನಲ್ಲಿ ಸ್ಥಾಪಿಸಿದರು. ಇವರಲ್ಲಿ ರೋಗಿಗಳಿಗೆ ಔಷಧಿ ಕೊಡುವದಕ್ಕಾಗಿ ನೇಟಿವ್ ವೈದ್ಯರೊಬ್ಬರನ್ನು, ಯುನಾನಿ ವೈದ್ಯರೊಬ್ಬರನ್ನೂ, ಇವರಿಬ್ಬರೂ ಕೊಡುವ ಔಷಧಿಗಳನ್ನು ಪೂರ್ವಭಾವಿಯಾಗಿಯೇ ಪರಿಶೀಲಿಸುವದಕ್ಕಾಗಿ ತುಂಬಾ ಅನುಭವಸ್ಥರಾದ ಒಬ್ಬ ಆಸ್ಪಿಟಲ್ ಅಸಿಸ್ಟೆಂಟರನ್ನೂ ಸರ್ಕಾರದವರು ನೇಮಕರೂರು ಮಾಡಿರುತ್ತಾರೆ. ಮೇಲ್ಕಂಡ ತಾರೀಖಿನಿಂದ ಲಾಗಾಯಿತು ಇಲ್ಲಿನ ವರೆವಿಗೂ ಅಂದರೆ ಕಳೆದ ೯ ತಿಂಗಳುಗಳಲ್ಲಿ ಈ ವೈದ್ಯಶಾಲೆಯು ಎಷ್ಟರಮಟ್ಟಿಗೆ ಅಭಿವೃದ್ಧಿಯನ್ನೈದಿರುವದೆಂದೂ, ಈ ವೈದ್ಯಶಾಲೆಯ ವಿಷಯದಲ್ಲಿ ಪ್ರಜೆಗಳು ಎಂಥಾ ಅಭಿಪ್ರಾಯವುಳ್ಳವರಾಗಿರುವರೆಂದೂ ವಿಚಾರಿಸುವಲ್ಲಿ ನಮಗೆ ತಿಳಿದುಬಂದ ಕೆಲವು ಸಂಗತಿಗಳು ತುಂಬಾ ಸಂತೋಷಪಡತಕ್ಕವುಗಳಾಗಿರುವದರಿಂದ ಆ ಸಂಗತಿಗಳನ್ನು ಇಲ್ಲಿ ಸೂಚಿಸಲು ಪ್ರಯತ್ನಪಟ್ಟಿದ್ದೇವೆ.

ಈ ವೈದ್ಯಶಾಲೆಯಲ್ಲಿ ಪ್ರಾರಂಭ ಲಾಗಾಯಿತು ಕಳೆದ ಮೇ ಆಖೈರುವರಿಗೆ ೧೩,೬೧ ಮಂದಿ ರೋಗಿಗಳು ತಮ್ಮ ಹೆಸರುಗಳನ್ನು ರಿಜಿಸ್ಟರಿಗೆ ದಾಖಲು ಮಾಡಿಸಿ ಔಷಧವನ್ನು ಪಡೆದಿರುತ್ತಾರೆ. ಇಷ್ಟು ಮಂದಿಯ ಪೈಕಿ ೧೧,೭೦೩ ಜನ ರೋಗಿಗಳು ಸಂಪೂರ್ಣ ಆರೋಗ್ಯವನ್ನು ಹೊಂದಿದವರಾಗಿಯೂ, ೧,೦೪೩ಜನ ರೋಗಿಗಳು ಸ್ವಲ್ಪ ಆರೋಗ್ಯವನ್ನು ಪಡೆದವರಾಗಿಯೂ, ೭೪೪ಜನ ರೋಗಿಗಳು ತಮ್ಮ ತಮ್ಮ ಕಾರ್ಯ ಗೌರವಗಳಿಂದ ಗೈರುಹಾಜರಾದವರಾಗಿಯೂ ಇರುತ್ತಾರೆ.

ಮತ್ತು ಕಳೆದ ನವೆಂಬರು ೧ನೇ ಲಾಗಾಯಿತು ಸ್ಥಾಪಿಸಲ್ಪಟ್ಟ ಯುನಾನೀ ವೈದ್ಯಶಾಲಾ ಭಾಗದಲ್ಲಿ ೯,೦೦೧ಜನ ರೋಗಿಗಳು ತಮ್ಮ ಹೆಸರನ್ನು ರಿಜಿಸ್ಟರಿಗೆ ದಾಖಲುಮಾಡಿಸಿ ಔಷಧಿಗಳನ್ನು ಪಡೆದಿರುತ್ತಾರೆ. ಈ ಪೈಕಿ ೭,೫೪೭ ಜನ ರೋಗಿಗಳು ಚೆನ್ನಾಗಿ ಗುಣಪಟ್ಟವರಾಗಿಯೂ ೮೫೩ ಜನ ಸ್ವಲ್ಪಮಟ್ಟಿಗೆ ಆರೋಗ್ಯಹೊಂದಿದವರಾಗಿಯೂ, ೬೦೧ ಜನ ಗೈರುಹಾಜರಾದವರಾಗಿಯೂ ಇರುತ್ತಾರೆ.

ಈ ಮೇಲ್ಕಂಡ ಪಟ್ಟಿಯಿಂದಲೇ ಈ ವೈದ್ಯಶಾಲೆಯ ಅಭಿವೃದ್ಧಿಯನ್ನು ತಿಳಿಯಬಹುದಾಗಿದೆ. ಹಿಂದೂಜನರು ತಮ್ಮ ನೇಟಿವ್ ಪಂಡಿತರಿಂದ ಕೊಡಲ್ಪಡುವ ಔಷಧಿಗಳಿಂದಲೂ ಆರೋಗ್ಯವನ್ನು ಪಡೆಯುವರೆಂತಲೂ, ಹಿಂದೂಜನರು ಕಲಿತಿರುವ ವೈದ್ಯವು ಗೌರವಿಸತಕ್ಕದ್ದಾಗಿರುವದೆಂತಲೂ ಈ ಸಂದರ್ಭದಲ್ಲಿಯೂ ಸ್ಥಿರಪಟ್ಟಿರುತ್ತೆ. ಇಂಥಾ ವೈದ್ಯಶಾಲೆಯನ್ನು ಸ್ಥಾಪಿಸಿರುವದರಿಂದ ಪ್ರಜೆಗಳು ಸರ್ಕಾರದವರನ್ನು ಕೊಂಡಾಡುವವರಾಗಿರುತ್ತಾರೆ. ಇದರಿಂದ ಟವನ್ನಿನ ಪ್ರಜೆಗಳಿಗೆ ತಕ್ಕಮಟ್ಟಿಗೆ ಉಪಕಾರವಾಗಿರುವದರಲ್ಲಿ ಸಂಶಯವಿಲ್ಲ. ಅಲ್ಲದೆ ಈ ವೈದ್ಯಶಾಲೆಗಳಲ್ಲಿ ನೇಮಿಸಲ್ಪಟ್ಟಿರುವ ನೇಟಿವ್ ಪಂಡಿತರುಗಳು ಪ್ರಾತಃಕಾಲ ಮತ್ತು ಸಾಯಂಕಾಲಗಳಲ್ಲಿ ಹಾಜರಾಗಿದ್ದು ತಂಡೋಪತಂಡವಾಗಿ ಬರುವಜನರಿಗೆಲ್ಲಾ ಸ್ವಲ್ಪವೂ ಬೇಜಾರಿಲ್ಲದೆ ಪಸನ್ನಮುಖಿಗಳಾಗಿ ಬಹು ಆದರದಿಂದ ಅವರ ರೋಗಗಳನ್ನು ವಿಚಾರಿಸಿ, ನಾಡಿಗಳನ್ನು ಹಿಡಿದುನೋಡಿ, ಅವರವರ ದೇಹಬಾಧೆಗಳನ್ನು ತಿಳಿದು ಚಿಕಿತ್ಸೆಮಾಡುತ್ತಲೂ, ಔಷಧಿಗಳನ್ನು ಕೊಡಿಸುತ್ತಲೂ, ಅನುಮಾನಗಳನ್ನು ಹೇಳುತ್ತಲೂ ಇರುವದನ್ನು ನೋಡಿಯೂ, ಕೇಳಿಯೂ ತುಂಬಾ ಹರ್ಷಿಸುತ್ತೇವೆ. ಆದರೆ ಸರ್ಕಾರದವರು ಈ ಪಂಡಿತರುಗಳ ಸಾಹಸವನ್ನು ತಿಳಿದು ಆಗಾಗ್ಯೆ ಅವರಿಗೆ ಪ್ರೋತ್ಸಾಹ ಮಾಡುತಲಿದ್ದಲ್ಲಿ ಇನ್ನೂ ಅಭಿವೃದ್ಧಿಗೆ ಬರುವದರಲ್ಲಿ ಸಂಶಯವಿಲ್ಲ. ಅಲ್ಲದೆ ಈ ಪಂಡಿತರುಗಳು ಇದೇ ಉತ್ಸಾಹದೊಡನೆ ತಮ್ಮ ಕೆಲಸಗಳನ್ನು ಜರುಗಿಸುತ್ತಾ ಬಂದಲ್ಲಿ ಪ್ರಜೆಗಳ ಪ್ರೀತಿ ಗೌರವಗಳಿಗೆ ವಿಶೇಷವಾಗಿ ಪಾತ್ರರಾಗಿ ತನ್ಮೂಲಕ ಯಶಸ್ಸನ್ನು ಪಡೆಯಲು ಪ್ರಯತ್ನ ಮಾಡಬೇಕೆಂದು ಕೋರುತ್ತೇವೆ.

ನಾಟ್ಯಗಾತಿಯರು.

ಕಳೆದ ವಾರದಲ್ಲಿ ದಿವಾನರವರ ಬಂಗಲಿಯಲ್ಲಿ ಮದುವೆ ಪ್ರಸ್ತವು ನಡೆಯುತ್ತಿರುವಾಗ ಮಹಾರಾಜರವರ ಮುಂದೆಯೂ ದಿವಾನರೇ ಮುಂತಾದ ಅನೇಕ ದೊಡ್ಡಮನುಷ್ಯರಮುಂದೆಯೂ ಕೆಲವುಮಂದಿ ವೇಶ್ಯಾಸ್ತ್ರೀಯರು ನಾಟ್ಯವಾಡಿದರೆಂದು ವರ್ತಮಾನವಿದೆ. ಈ ವಿಷಯದಲ್ಲಿ ದಿವಾನರವರು ಇತರರಿಗಿಂತ ಏನಾದರೂ ವಿಶೇಷ ನಡೆಸಿದರೆಂಬದಾಗಿ ನಮಗೆತೋರುವದಿಲ್ಲ. ಇವರು ಕರೆಸಿದ ಈ ನಾಟ್ಯಗಾತಿಯರಿಗಿಂತ ಈ ದೇಶದಲ್ಲಿರುವ ಬೇರೆ ದೊಡ್ಡಮನುಷ್ಯರು ಇಂಥಾ ಸಮಯದಲ್ಲಿ ಬಹುಹೆಚ್ಚಾಗಿ ವೇಶ್ಯಾಸ್ತ್ರೀಯರನ್ನು ಕರೆಸುವದು ಪದ್ಧತಿಯಾಗಿರುತ್ತದೆ. ಆದರೆ ಈ ಪದ್ಧತಿಯು ಅತಿ ಶೋಚನೀಯವಾದದ್ದಾಗಿದೆ. ಮೊದಲು ಈ ನಾಟ್ಯಗಾತಿಯರು ಕೆಟ್ಟಹೆಂಗಸರೆಂಬುವದು ಎಲ್ಲರಿಗೂ ತಿಳಿದೇಇದೆಯಷ್ಟೆ. ವಿದ್ಯಾವಂತರಾದವರು ಇಂಥವರನ್ನು ತಮ್ಮ ಮನೆಗಳಿಗೆ ಕರೆಸಿ ಇವರ ಚೇಷ್ಟೆಗಳನ್ನು ತಮ್ಮ ಮನೆಯವರಮುಂದೆ ತೋರ್ಪಡಿಸುವದರಿಂದ ಬರತಕ್ಕ ಫಲ ಏನೆಂದು ಹೇಳೋಣ. ಆದರಿಂದ ಯುವ್ವನಸ್ಥರೂ ಕಾಮಿಗಳಾಗಿ ವಿಷಯಾಸಕ್ತರಾದರೆ ಆಶ್ಚರ್ಯವೇನು? ತನ್ನ ಮನೆಗೆ ಇಂಥಾ ವೇಶ್ಯಾಸ್ತ್ರೀಯರನ್ನು ಕರೆಸುವ ಪ್ರತಿಯೊಬ್ಬ ಮನುಷ್ಯನೂ ತನ್ನ ಮಗನು ದುರ್ಮಾರ್ಗಪ್ರವರ್ತಕನಾಗುವದಕ್ಕೆ ಕಾರಣನೂ, ಸಹಾಯಕನೂ ಆಗುತ್ತಾನೆ. ಈ ಪದ್ಧತಿಯನ್ನು ಜನರು ನಿಲ್ಲಿಸಬೇಕೆನ್ನುವದಕ್ಕೆ ಇನ್ನೂ ಅನೇಕ ಕಾರಣಗಳುಂಟು. ಅದರಿಂದುಂಟಾಗುವ ಖರ್ಚು ಬಹು ದುಬಾರಿಯಾಗಿದೆ. ಕೆಲವು ಸಂದರ್ಭಗಳಲ್ಲಿ ಕೆಲವು ಸಾವಿರರೂಪಾಯಿಗಳೇ ಖರ್ಚಾಗಿ ಹೋಗುತ್ತವೆ. ಇಂಥಾ ಹೆಂಗಸರು ಬಂದುವಾಸೆಯಲ್ಲಿರುವದು ಆ ಮನೆಯ ಹೆಂಗಸರಿಗೆ ಶುದ್ಧ ಅವಮಾನಕರವಾಗಿದೆ. ಮತ್ತು ಪತಿಭಕ್ತಿಯನ್ನು ಕಡಮೆಮಾಡುವದರಲ್ಲಿ ಸಂಶಯವಿಲ್ಲ. ಹಿಂದುಗಳಲ್ಲಿ ಅನೇಕರು ಈ ಪದ್ಧತಿಯನ್ನು ಬಿಡುವದಿಲ್ಲವಾದರೂ ಎಲ್ಲರಿಗೂ ಮೇಲುದಜ್ಜೆಯನ್ನು ತೋರಿಸತಕ್ಕ ಈ ದೇಶದ ಮುಖ್ಯಾಧಿಕಾರಿಗಳು ತಮ್ಮತಮ್ಮ ಮನೆಗಳಲ್ಲಿ ನಿಲ್ಲಿಸುವದು ಮತ್ತು ಇಂಥಾ ಕೆಲಸಗಳು ನಡೆಯುವ ಸ್ಥಳಗಳಿಗೆ ಹೋಗದೇ ಇರುವದು—ಹೀಗೆ ಮಾಡಿದಲ್ಲಿ ಅವರು ಈ ದೇಶಕ್ಕೆ ಮಹದುಪಕಾರಿಗಳಾಗಿಪರಿಣಮಿಸುವದರಲ್ಲಿ ಸಂಶಯವಿಲ್ಲ. ಸುಮಾರು ಎರಡು ತಿಂಗಳುಗಳಿಂದೀಚೆಗೆ ಮದರಾಸ್ ಬೊಂಬಾಯಿ ಮುಂತಾದ ದೊಡ್ಡಪಟ್ಟಣಗಳಲ್ಲಿರುವ ಅನೇಕಮಂದಿ ಯೂರೋಪಿಯನ್ ದೊರೆಗಳೂ, ವಿದ್ಯಾವಂತರಾದ ಹಿಂದೂ ದೊಡ್ಡ ಮನುಷ್ಯರೂ ಈ ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು ಬಹು ಪರಿಷ್ಕಾರವಾಗಿ ವೈಸಿರಾಯಿರವರಿಗೂ, ಗವರ್ನರವರಿಗೂ ಅರ್ಜಿಗಳ ಮೂಲಕವಾಗಿಯೂ ವರ್ತಮಾನಪತ್ರಿಕೆಗಳಮೂಲಕವಾಗಿಯೂ ತಿಳಿಯಪಡಿಸಿರುತ್ತಾರೆಂಬುವದು ವಾಚಕರು ಬಹುಶಃ ತಿಳಿದೇ ಇರುವರು. ಪ್ರಿನ್ಸಾಲಬರ್ಟ್ ವಿಕ್ಟರವರು ಹಾಗ್ಯೆ ೩ ವರುಷಗಳಕೆಳಗೆ ಮೈಸೂರಿಗೆ ದಯಮಾಡಿಸಿದ್ದಾಗಲೂ, ಕಳೆದವರುಷದಲ್ಲಿ ವೈಸಿರಾಯಿಸಾಹೇಬರವರು ಇಲ್ಲಿಗೆ ದಯಮಾಡಿಸಿದ್ದಾಗಲೂ ಇಲ್ಲಿನ ಕಮಿಟಿಯವರು ತಂಜಾವೂರಿನಿಂದ ಕೆಲವುಮಂದಿ ವೇಶ್ಯಾಸ್ತ್ರೀಯರನ್ನು ಕರೆಸಿದ್ದರು. ಆದರೆ ಯೂರೋಪಿಯನ್ ದೊರೆಗಳು ಸಾಧಾರಣವಾಗಿ, ಇವರ ನಾಟ್ಯಗಳನ್ನು ತಿಳಿಯದೆ ಜನರು ಏರ್ಪಡಿಸಿದ ವಿನೋದವನ್ನು ಸ್ವೀಕರಿಸಿಕೊಳ್ಳಬೇಕೆಂಬ ಇರಾದೆಯಿಂದ ಸುಮ್ಮನಿದ್ದರೇ ಹೊರತು ಮತ್ತೇನೂ ಬೇರೆ ಅಲ್ಲ. ಇಂಥಾ ವಿನೋದಗಳಿಂದ ಅವರಿಗೆ ಸಂತೋಷ ಉಂಟಾಗುವದಿಲ್ಲ. ಇಂಥಾ ಸ್ತ್ರೀಯರನ್ನು ಒಂದು ಊರಿನಿಂದ ಮತ್ತೊಂದು ಊರಿಗೆ ಕರೆಸುವದು ಕಲರಾಉಪದ್ರವನ್ನು ತಂದದ್ದಕಿಂತ ಶೋಚನೀಯವಾದದ್ದೂ ಅನ್ಯಾಯವಾದದ್ದೂ ಆಗಿರುತ್ತದೆಂದು ನಾವು ಅಭಿಪ್ರಾಯಪಟ್ಟಿದ್ದೇವೆ.

ಹೀನಜಾತಿಯವರಿಗೆ ಅನ್ಯಾಯ ಮಾಡಕೂಡದು.

ಮೈಸೂರು ಕಸಬಾ ಇಟ್ಟಿಗೆಗೂಡಿನ ಬಾಜಾನಲ್ಲಿ ಬಲಗೈ ಜಾತಿಯ ಜನಗಳು ಲಾಗಾಯತಿನಿಂದ ಮನೆಗಳನ್ನು ಕಟ್ಟಿಕೊಂಡು ಮಕ್ಕಳು ಮರಿಗಳು ಸುಖವಾಗಿದ್ದುಕೊಂಡು ಬಂದಿರುತ್ತಾರೆ. ಹಾಗ್ಯೆ ಸುಮಾರು ಮೂರು ವರುಷಗಳ ಕೆಳಗೆ ಉತ್ತಮ ಜಾತಿಯವರೆನ್ನಿಸಿಕೊಂಡ ಒಬ್ಬಿಬ್ಬರು ಈ ಬಲಗೈ ಜಾತಿಯವರು ವಾಸವಾಗಿರುವ ಪ್ರದೇಶವನ್ನು ಅವರಿಗೆ ತಪ್ಪಿಸಿ, ಅವರನ್ನು ಅಲ್ಲಿಂದ ಓಡಿಸಿ ಆ ಸ್ಥಳವನ್ನು ಸ್ವಪ್ರಯೋಜನಕ್ಕಾಗಿ ಉಪಯೋಗಿಸಿಕೊಳ್ಳಬೇಕೆಂಬದಾಗಿ ವಗೈರೆ ಸ್ವಲ್ಪ ತಂಟೆಯನ್ನು ಮಾಡಿದ್ದರು. ಆದರೆ ಅದು ಆಗ ಅವರಿಗೆ ಸಾಧ್ಯವಾಗದೆ ಹೋಯಿತಾದ್ದರಿಂದ ಈ ಪ್ರಸ್ತಾಪವೇ ಅಡಗಿಹೋಗಿ ಇತ್ತು. ಈಗ ಅಧಿಕಾರ ಪಡೆದಿರುತ್ತೇವೆಂಬ ಊಹೆಯಿಂದ ಅದೇ ಜನಗಳು ಪುನಹಾ ಈ ಪ್ರಸ್ತಾಪವನ್ನು ಎತ್ತಿ ಈಗ ಆ ಬಡಪಾಯಿಗಳನ್ನು ಅಲ್ಲಿಂದ ಓಡಿಸಬೇಕೆಂದೂ, ಆ ಪ್ರದೇಶವನ್ನು ತಾವು ಆಕ್ರಮಿಸಬೇಕೆಂದೂ ಕೆಲಸಮಾಡುತ್ತಿದ್ದಾರೆ. ಈಗ ಬಲಗೈಜಾತಿಯವರು ಆ ಸ್ಥಳದಲ್ಲಿ ಆರ್ಷೇಯದಿಂದಲೂ ಆದರೆ ಉತ್ತಮ ಜಾತಿಯವರು ಬಂದು ಆ ಪ್ರಾಂತ್ಯ ನಿಲ್ಲುವದಕ್ಕಿಂತಲೂ ಮುಂಚಿನಿಂದಲೂ ಮಕ್ಕಳು ಮರಿಗಳನ್ನು ಕಟ್ಟಿಕೊಂಡು, ಒಬ್ಬರ ಗೋಜಿಗೆ ಹೋಗದೆ, ಕೂಲಿ ವ್ಯವಸಾಯ ಮುಂತಾದ್ದನ್ನು ಮಾಡಿಕೊಂಡು, ಸರ್ಕಾರಕ್ಕೆ ಮೊಹತರ್ಫಾ ಮತ್ತು ಜಮೀನ್ದಾರಿ ಕಂದಾಯಗಳನ್ನು ಕೊಟ್ಟುಕೊಂಡು ಸುಖವಾಗಿರುತ್ತಾರೆ. ಇಂಥಾವರನ್ನು ಹೊರಡಿಸಲು ಯಾರಿಗೆತಾನೇ ಇಷ್ಟವಿದ್ದೀತು! ಆದದರಿಂದ ಮ್ಯುನಿಸಿಪಲ್ ಪ್ರೆಸಿಡೆಂಟ್ರು ಮತ್ತು ವೈಸ್‌ಪ್ರೆಸಿಡೆಂಟ್ರು ಈ ವಿಷಯದಲ್ಲಿ ಸ್ವಪ್ರಯೋಜನಕ್ಕಾಗಿ ಸಲಹೆಕೊಡುವ ದುಷ್ಟರಾದ ಉತ್ತಮಜಾತಿಯವರ ಮಾತಿನಲ್ಲಿ ನಂಬಿಕೆ ಇಡದೆ ಆ ಬಡಪಾಯಿಗಳನ್ನು ಅಲ್ಲೇ ನಿಲ್ಲಿಸಿ ಅವರಿಗೆ ಉತ್ತಮವಾದರೀತಿಯಲ್ಲೂ, ಆರೋಗ್ಯಕರವಾದ ರೀತಿಯಲ್ಲೂ ಮನೆಕಟ್ಟಿಕೊಂಡು ಇರುವಂತೆ ಬುದ್ಧಿವಾದಗಳನ್ನು ಬೋಧಿಸುವರೆಂದು ನಂಬಿದ್ದೇವೆ.

ಕುದ್ದಾಂಗವಾಗಿ ಮದ್ಯಪಾನವನ್ನು ತ್ಯಜಿಸಿರುವ ಬೆಂಗಳೂರು ಸ್ತ್ರೀಯರ ಕ್ರಿಶ್ಚಿಯನ್ ಸಭೆ.

ಕುದ್ದಾಂಗವಾಗಿ ಮದ್ಯಪಾನವನ್ನು ತ್ಯಜಿಸಿರುವ ಬೆಂಗಳೂರು ಸ್ತ್ರೀಯರ ಕ್ರಿಶ್ಚಿಯನ್ ಸಭೆಯು ಕುದ್ದಾಂಗವಾಗಿ ಮದ್ಯಪಾನವನ್ನು ನಿಷೇಧಿಸಿರುವ ಪ್ರಪಂಚದ ಸ್ತ್ರೀಯರ ಕ್ರಿಶ್ಚಿಯನ್ ಸಭೆಗಾಗಿ ಪ್ರಧಾನ ಪ್ರತಿನಿಧಿಯಾದ ಮಿಸೆಸ್ ಆಕರ್ಮನ್ ಎಂಬಾಕೆಯಿಂದ ೧೮೯೩ ನೇ ಇಸವಿ ಜನವರಿ ೨೧ ನೇ ತಾರೀಖಿನಲ್ಲಿ ಸ್ಥಾಪಿಸಲ್ಪಟ್ಟಿತು. ಆಕೆಯು ಬೆಂಗಳೂರಿಗೆ ಬಂದು ಸ್ತ್ರೀಯರುಗಳೂ ಅವರ ಸಂಸಾರಕ್ಕೂ ಘೋರತರವಾದ ಕಷ್ಟವಾಗಿರುವ ಸಾರಾಯಿ ಎಂಬ ಪಿಶಾಚವು ಸೇರಿದ್ದ ಕಡೆಗಳಲ್ಲೆಲ್ಲಾ ಎಲ್ಲಾ ಜಾತಿಯ ಮತ್ತು ಮತದ ಸ್ತ್ರೀಯರು ಒಂದು ಸಭೆಯಾಗಿ ಸೇರಿ ಆ ಪಿಶಾಚವನ್ನು ಆಯಾಸ ಅನ್ಯೋನ್ಯವಾದ ಸಂಘದ ಪ್ರಾರ್ಥನೆಯಿಂದಲೂ ಪ್ರಯತ್ನಗಳಿಂದಲೂ ಈ ಪಿಶಾಚವನ್ನು ಭೂಮಿಯಿಂದ ಹೊರಡಿಸಬೇಕೆಂದು ಪ್ರಸಂಗ ಮಾಡಿದಳು.

ಮದ್ಯಪಾನವನ್ನು ಮಾಡುವವನಿಗೆ ಸಹಾಯ ಮಾಡಿ ಅವನನ್ನು ಮದ್ಯಪಾನದ ಅಭ್ಯಾಸದಿಂದಲೂ ಮತ್ತು ಅದರಿಂದ ಉಂಟಾಗುವ ಪಾಪದಿಂದಲೂ ರಕ್ಷಿಸುವವನಾದ ಸರ್ವಕರ್ತನಾದ ದೇವರನ್ನು ಆಶ್ರಯಿಸಬೇಕೆಂದು ಬೋಧಿಸುವದು ನಮ್ಮ ಕೆಲಸವಾಗಿದ್ದಾಗ್ಯೂ ಕುದ್ದಾಂಗವಾಗಿ ಮದ್ಯಪಾನವನ್ನು ತ್ಯಜಿಸುವ ಕಟ್ಟಳೆಗಳನ್ನು ಮಕ್ಕಳಿಗೆ ಬೋಧಿಸುವದು ನಮ್ಮ ಮುಖ್ಯಾಭಿಪ್ರಾಯವಾಗಿರುತ್ತೆ. ಸಾರಾಯಿಯು ಆಹಾರಾರ್ಥವಾಗಿಯಾಗಲೀ ಪಾನಾರ್ಥವಾಗಿಯಾಗಲೀ ಉಪಯೋಗಿಸಿದರೆ ಅದು ಕ್ಷೇಮಕ್ಕಾಗಲೀ ಸುಖಕ್ಕಾಗಲೀ ಅಭಿವೃದ್ಧಿಗಾಗಲೀ ಕಾರಣವಾಗುವದಿಲ್ಲವು. ಆದರೆ ಇವುಗಳಿಗೆ ವ್ಯತಿರಿಕ್ತವಾಗಿ ದಾರಿದ್ರ್ಯಕ್ಕೂ ದೌರ್ಭಾಗ್ಯಕ್ಕೂ ಮುಖ್ಯ ಕಾರಣವಾಗುತ್ತೆ ಮತ್ತು ಅಗತ್ಯ ಕೈ ಹಾಕದೆ ರುಚಿನೋಡದೆ ಉಪಯೋಗಿಸದೆ ಇರುವದು ದುರ್ವ್ಯಸನದಿಂದ ನಿವೃತ್ತಿಯಾಗಲು ಅನುಕೂಲವಾದ ಮಾರ್ಗವಾಗಿದೆ ಎಂಬುವ ಕಟ್ಟಳೆಗಳಿಂದ ಮಕ್ಕಳು ಶಿಕ್ಷಿತರಾಗಿರುವ ಪಕ್ಷದಲ್ಲಿ ಅವರ ಕಾಲಗಳಲ್ಲಿ ಅವರ ಸಂತತಿಗಳಿಗೆ ವಿಶೇಷ ಕ್ಷೇಮವನ್ನು ಉಂಟು ಮಾಡುವಂಥವರಾಗುವರು.

ಚಿಕಾಗೋ ಎಂಬ ಪಟ್ಟಣದಲ್ಲಿ ಕುದ್ದಾಂಗವಾಗಿ ಮದ್ಯಪಾನವನ್ನು ನಿಷೇಧಿಸುವ ಒಂದು ಸಭೆಯು ಸೇರಿದಾಗ ಒಬ್ಬ ಕುಡಿಯುವ ಬಡಮನುಷ್ಯನು ಆ ಸಂಘದ ಒಬ್ಬ ಪ್ರತಿನಿಧಿಯನ್ನು ಕಂಡು ನೀವುಗಳು ಏನು ಮಾಡುತ್ತಿದ್ದೀರಿ ನೀವು ಕುದ್ದಾಂಗವಾಗಿ ಮದ್ಯಪಾನವನ್ನು ತ್ಯಜಿಸಲು ಆಸಕ್ತಿಯಿಂದ ಬೋಧಿಸುತ್ತೀರೆಂದು ಪತ್ರಿಕೆಗಳ ಮೂಲಕ ನಾನು ತಿಳಿಯುತ್ತೇನೆ ನಾನು ಮದ್ಯಪಾನವನ್ನು ಬಿಡದಂತೆ ಮಾಡುವುದನ್ನು ಸಭೆಯವರು ಕಲ್ತರೆಂದು ನೆನಸುತ್ತೀರೋ ಅಂದನು. ಪ್ರತಿನಿಧಿಯು ನಿನ್ನ ವಿಷಯವಾಗಿ ನಾವು ವಿಶೇಷವಾಗಿ ವಿನೋದಪಡಲಾರೆವು ಆದರೆ ನಿನ್ನ ಮಗನ ವಿಷಯವಾಗಿ ವಿಚಾರಿಸಿಕೊಳ್ಳುತ್ತೇವೆ ಅಂದನು. ಅತನು ಈ ಉತ್ತರಗಳಿಂದ ವಿಸ್ಮಯನಾಗಿ ಒಳ್ಳೇದು ನೀವು ಹೇಳುವದು ವಿಹಿತವಾಗಿದೆ ನಾನು ಬಾಲಕನಾಗಿದ್ದ ಕಾಲದಲ್ಲಿ ಯಾರಾದರು ನನ್ನನ್ನು ವಿಚಾರಿಸಿದ್ದೇ ಆಗಿದ್ದರೆ ನಾನೂ ಈಗಿರುವದಕ್ಕಿಂತ ಒಳ್ಳೇ ಮನುಷ್ಯನಾಗುತ್ತಿದ್ದೆನೆಂದನು.

ತಾತ್ಕಾಲದಲ್ಲಿ ಮದ್ಯವನ್ನು ವಿಕ್ರಯ ಮಾಡಬಾರದೆಂದು ನಿಷೇಧಿಸಲ್ಪಟ್ಟಿರುವ ಕೆಲವು ಪಟ್ಟಣಗಳುಂಟು. ಇವುಗಳಲ್ಲಿ ಬಾಲಕರು ಮದ್ಯವನ್ನು ನೋಡದೇ ಕುಡಿಯದೇ ಅಭಿವೃದ್ಧಿಯನ್ನು ಹೊಂದಿ ದೊಡ್ಡವರಾಗಿರುತ್ತಾರೆ. ಬೆಂಗಳೂರಲ್ಲಿರುವ ಕ್ರೈಸ್ತ ಸ್ತ್ರೀಯರ ಮೇಲ್ಕಂಡ ಸಭೆಯನ್ನು ಸೇರದೇ ಇದ್ದರೆ ನನ್ನ ಪ್ರಮಾಣಕ್ಕೆ ಬಿಟ್ಟು ಸಂವತ್ಸರಕ್ಕೆ ೧ರೂಪಾಯಿ ಮೇಲೆ ಧನವನ್ನು ಕೊಡತಕ್ಕದ್ದು. ಕೆಲವು ಸ್ವದೇಶೀಯ ಸ್ತ್ರೀಯರೂ ಒಬ್ಬ ಸ್ವದೇಶೀಯ ದೊಡ್ಡ ಮನುಷ್ಯನೂ ಸೇರಿದ್ದಾರೆ ಗಂಡಸರನ್ನು ಗೌರವಾರ್ಥಕ ಸಭಿಕರನ್ನಾಗಿ ಸೇರಿಸುತ್ತೇವೆ. ಈ ಪತ್ರಿಕಾ ಪ್ರಕಟಿಸುವವರು ಮದ್ಯಪಾನವನ್ನು ತ್ಯಜಿಸುವ ವಿಷಯವನ್ನು ಕುರಿತು ಆಗಾಗ್ಯೆ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಲು ವಾಗ್ದಾನ ಮಾಡಿರುತ್ತಾರೆ. ಇಂಥಾ ಮಹಾಕಾರ್ಯದಲ್ಲಿ ನನ್ನ ಸ್ವದೇಶೀಯ ಸ್ನೇಹಿತರ ಸಹಾಯಕ್ಕೂ ಪ್ರೀತಿಗೂ ಪಾತ್ರರಾಗಬೇಕೆಂದು ಅಪೇಕ್ಷಿಸುತ್ತೇವೆ. ಮದ್ಯಪಾನವು ಯೂರೋಪಿಯನ್ ಜನಗಳಲ್ಲಿಯೂ ದೇಶೀಯರಲ್ಲಿಯೂ ಬಹಳ ಕೇಡನ್ನು ಉಂಟುಮಾಡುತ್ತದೆ. ಅದ್ದರಿಂದ ಎಲ್ಲಾ ವಿಧವಾದ ಜನಗಳೂ ಸೇರಿ ಇದನ್ನು ನಿಷೇಧಿಸುವಂತೆ ಸಾಹಸಪ್ರಯತ್ನ ಮಾಡುವದು ಯುಕ್ತವಾಗಿದೆ.

ಬೆಕ್ಕು ಮತ್ತು ಸುಂಡಿಲಿಯನ್ನು ಕುರಿತು—ಒಂದು ಸುಂಡಿಲಿಯು ಒಂದು ಬೀರ್ ಎಂಬ ಸಾರಾಯಿ ತೊಟ್ಟಿಯಲ್ಲಿ ಬಿತ್ತು. ಅಯ್ಯೋ ಪಾಪ! ಅಲ್ಲಿ ಹೋಗುತ್ತಾ ಇದ್ದ ಒಂದು ಬೆಕ್ಕು ಸಾರಾಯಿ ತೊಟ್ಟಿಯಲ್ಲಿ ಹೊರಳುತ್ತಿದ್ದ ಈ ಸಣ್ಣ ಜಂತುವನ್ನು ನೋಡಿತು ಇಲಿಯು ನನ್ನ ಕಷ್ಟವನ್ನು ತಪ್ಪಿಸು ಎಂದು ಬೇಡಿಕೊಂಡಿತು. ಬೆಕ್ಕು ನಾನು ನಿನ್ನನ್ನು ಈ ಕಷ್ಟದಿಂದ ತಪ್ಪಿಸಿದರೆ ನಿನ್ನನ್ನು ಭಕ್ಷಿಸುವೆನೆಂದು ಹೇಳಿತು. ಇಲಿಯು ಒಳ್ಳೇದು ಈ ಅಸಹ್ಯಕರವಾದ ಸಾರಾಯಿನಲ್ಲಿ ಮುಳುಗಿ ಹೋಗುವದಕ್ಕಿಂತಲೂ ಯೋಗ್ಯವಾದ ಬೆಕ್ಕಿನಿಂದ ಭಕ್ಷಿಸಲ್ಪಡಲು ಅಪೇಕ್ಷಿಸುತ್ತೇನೆ ಎಂದು ಹೇಳಿತು. ಬೆಕ್ಕು ವಿವೇಕ ಉಳ್ಳದ್ದಾಗಿತ್ತು ಮತ್ತು ನಿನ್ನನ್ನು ನಾನು ನಿಶ್ಚಯವಾಗಿ ಭಕ್ಷಿಸುವೆನು ನಾನು ಹಾಗೆ ಮಾಡಬಹುದೆಂದು ನೀನು ಪ್ರಮಾಣಪೂರ್ವಕವಾಗಿ ವಾಗ್ದಾನವನ್ನು ಕೊಡಬೇಕು ಎಂದಿತು. ಇಲಿಯು ಒಳ್ಳೇದು ನಾನು ನಿನಗೆ ವಾಗ್ದಾನ ಮಾಡುತ್ತೇನೆ. ವಾಗ್ದಾನ ತೆಗೆದುಕೊಂಡ ಕೂಡಲೇ ಬೆಕ್ಕು ಇಲಿಯನ್ನು ಹೊರಕ್ಕೆ ತೆಗೆಯಿತು. ಮತ್ತು ವಾಗ್ದಾನವನ್ನು ನಂಬಿ ಇಲಿಯನ್ನು ಭಕ್ಷಣವಾಗಿ ಮಾಡಿಕೊಳ್ಳುವದಕ್ಕೆ ಮುಂಚೆ ತನ್ನ ಬಾಯನ್ನು ಶುಚಿಮಾಡಿಕೊಳ್ಳಬೇಕೆಂದು ಯೋಚಿಸಿ ಬಾಯನ್ನು ಆ ಸಾರಾಯಿ ತೊಟ್ಟಿಯ ಅಸಹ್ಯದಿಂದ ತೊಳೆದುಕೊಳ್ಳುವದಕ್ಕೋಸ್ಕರ ಆ ಇಲಿಯನ್ನು ಒಂದು ನಿಮಿಷ ಕೆಳಕ್ಕೆ ಬಿಟ್ಟಿತು. ಇಲಿಯು ತಕ್ಷಣವೇ ಎಗರಿ ಓಡಿ ಬೆಕ್ಕು ತನ್ನನ್ನು ಹೊಂದಕೂಡದ ಮೂಲೆಯಲ್ಲಿದ್ದ ಒಂದು ಬಿಲವನ್ನು ಹೊಕ್ಕಿತು. ಬೆಕ್ಕು ಆದರೆ ನಿನ್ನನ್ನು ನಾನು ಭಕ್ಷಿಸಬಹುದೆಂದು ನೀನು ನನಗೆ ವಾಗ್ದಾನ ಕೊಡಲಿಲ್ಲವೋ ಎಂದು ಹೇಳಿತು. ಇಲಿಯು ಹೌದು ಆದರೆ ನಾನು ಆ ವಾಗ್ದಾನವನ್ನು ಮಾಡಿದಾಗ ನಾನು ಮದ್ಯಪಾನಿಯಾಗಿದ್ದೆನೆಂದು ನಿನಗೆ ತಿಳಿಯದೋ ಎಂದು ಉತ್ತರ ಕೊಟ್ಟಿತು. ಮದ್ಯಪಾನಿಗಳಾಗಿರುವ ಕಾಲದಲ್ಲಿ ಮಾ

ಹೆಚ್ಚು ವಾಗ್ವಾದಗಳು ಏನೊಂದೂ ನಡೆಯಬೇಕಾಗಿಲ್ಲದೆ ಹೋಗಿರು ತ್ತವೆಯಲ್ಲವೆ!

ಮತ್ತನ್ನುಂಟುಮಾಡುವ ಮದ್ಯವು ವಿಷಜನಕವಾಗಿರುವುದೆಂದು ಡಾಕ್ಟರ್ ಜೋನಥನ್ ಕಾಕ್ಸ್ ಸಾಹೇಬರು ಹೇಳುತ್ತಾರೆ. ಆ ಗುಣವು ಸುಲಭವಾಗಿ ಚಾಚಿಕೊಳ್ಳುತ್ತದೆ. ಅದರ ಹೊರಗೆ ಬರುವುದು ಕಷ್ಟ. ಶಾಸ್ತ್ರೀಯವಾದ ಮದ್ಯದ ಸ್ವಲ್ಪ ಉಪಯೋಗದಿಂದುಂಟಾಗುವ ಗುಣವು ವಿಶೇಷವಾಗಿ ಉಪಯೋಗಿಸಬೇಕೆಂಬ ದುರಾಶೆಯನ್ನು ಉಂಟುಮಾಡುತ್ತ ಮದ್ಯವು ಕಾರಾಗೃಹದಂತಿರುವುದು ಮತ್ತು ಅದರಿಂದ ತಪ್ಪಿಸಿಕೊಳ್ಳುವವನು ಸ್ವತಂತ್ರನಲ್ಲ. ಮದ್ಯಪಾನ ಮಾಡುವುದು ವಿಷವನ್ನು ಸೇವಿಸುವಂತೆ ಕಷ್ಟವಾಗಿದೆ.

ಪ್ರಪಂಚದೊಳಗಿನ ಪಟ್ಟಣಗಳಲ್ಲಿ ಹ್ಯಾಂಬರ್ಗ್ ಎಂಬ ಪಟ್ಟಣವು ಬಹಳ ಕಷ್ಟ ಸೇರನ್ನೂ ಉತ್ಕೃಷ್ಟವಾದ ಬೀರ್ ಎಂಬ ಮದ್ಯವನ್ನೂ ಉಂಟುಮಾಡುತ್ತದೆಂದು ಹೇಳಲ್ಪಟ್ಟಿರುತ್ತದೆ. ಆ ಪಟ್ಟಣದಲ್ಲಿ ಮಹಾರೋಗ ಉಪದ್ರವು ಬಂದಾಗ ಅದರ ಫಲಿತಾಂಶವನ್ನು ಯೋಚಿಸಿರಿ.

ಮದ್ಯಪಾನವನ್ನು ಬಹಿರಂಗವಾಗಿ ಬಿಡಬೇಕೆಂಬ ಪ್ರಯತ್ನವು ಇಂಡಿಯಾದಲ್ಲಿರುವ ಇಂಗ್ಲೀಷ್ ಸಿಪಾಯಿಗಳಲ್ಲಿ ಪ್ರಬಲವಾಗಿರುತ್ತದೆ. ತಮ್ಮ ಅಧಿಕಾರಿಗಳು ಹೆಚ್ಚು ೧೪,೦೦೦ ಇಂಗ್ಲೀಷ್ ಸಿಪಾಯಿಗಳು ಮದ್ಯಪಾನವನ್ನು ಬಹಿರಂಗವಾಗಿ ಬಿಡುವಂತೆ ಪ್ರಮಾಣ ಮಾಡಿದ್ದಾರೆಂದು ಲಾರ್ಡ್ ರಾಬರ್ಟ್ಸ್ ಸಾಹೇಬರು ಹೇಳುತ್ತಾರೆ. ಬೆಂಗಳೂರಿನಲ್ಲಿರುವ ತೆಲುಗು ಮತ್ತು ಅರವ ಬ್ಯಾಪ್ಟಿಸ್ಟ್ ಸಭೆಗೆ ಸೇರಿದ ಸ್ವದೇಶ ಕ್ರೈಸ್ತ ಜನರು ಮದ್ಯಪಾನವನ್ನು ಬಹಿರಂಗವಾಗಿ ಬಿಡುವ ಸಭೆಯನ್ನು ಸ್ಥಾಪಿಸಿದ್ದಾರೆಂದೂ ಈ ಸಭೆಯಲ್ಲಿ ಸ್ವದೇಶ ಕ್ರೈಸ್ತ ಜನರು ಮತ್ತು ಸ್ವದೇಶಸ್ಥರಿಂದ ಎಲ್ಲಾ ಜಾತಿಯವರೂ ಸೇರಬಹುದೆಂಬುದನ್ನೂ ನಾವು ಕೇಳಿ ಸಂತೋಷಿಸುತ್ತೇವೆ. ಈ ಕ್ರೈಸ್ತರು ಮತ್ತನ್ನುಂಟುಮಾಡುವ ವಿಷವು ಮದ್ಯಗಳನ್ನೂ, ವಿಧವಿಧವಾಗಿರುವ ಅಫೀಮನ್ನೂ, ಗಾಂಜಾವನ್ನೂ ಬಹಿರಂಗವಾಗಿ ಉಪಯೋಗಿಸುವದಿಲ್ಲವೆಂದು ಪ್ರಮಾಣಪೂರ್ವಕವಾಗಿ ಹೇಳುತ್ತಾರೆ. ಇವರ ಕೋರಿಕೆಯು ಸಂಪೂರ್ಣವಾಗಿ ಕೈಗೂಡಿ ಬರಲೆಂದು ಕೋರುತ್ತೇವೆ ಮತ್ತು ಇವರ ಮೂಲಕ ಪಟ್ಟಣದ ಜನಗಳಿಗೆ ವಿಶೇಷ ಆಶೀರ್ವಾದ ಉಂಟಾಗುವದೆಂದು ನಂಬುತ್ತೇವೆ.

ಬಾತ್ಮೀ ದಾರರುಗಳಿಗೆ.

ಈ ವಾರದಲ್ಲಿ ಪ್ರಕಟಿಸಬೇಕೆಂದು ಬಾತ್ಮೀದಾರರು ಕೆಲವು ಸಮಾಚಾರಗಳನ್ನು ಕಳುಹಿಸಿರುವದು ಸಕಾಲಕ್ಕೆ ಬಂದಿಲ್ಲವಾದ್ದರಿಂದ ಅವುಗಳಿಗೆಲ್ಲಾ ಮುಂದಿನವಾರಕ್ಕೆ ಸ್ಥಳ ಕೊಡಬಹುದು.

ಎಡಿಟರ್,

ವೃ. ಪ.

ಸ್ವದೇಶ ವೃತ್ತಾಂತಗಳು.

—(೦)—

ರಾಜಧಾನಿಯಲ್ಲಿ ಕಾವೇರಿ ಶರತ್ತು ಇವತ್ತಿನಿಂದ ಪ್ರಾರಂಭವಾಗುತ್ತದೆ.

ಸಂಸ್ಥಾನದ ಅಸಿಸ್ಟೆಂಟ್ ರೆಸಿಡೆಂಟ್ರವರು ಮೂರು ತಿಂಗಳು ರಜಾ ಪಡೆದು ಸೀಮೆಗೆ ಹೋಗಿಬರುವವರಾಗಿದ್ದಾರೆ.

ಈ ವಾರದಲ್ಲಿ ನಾಟಕಕ್ಕೆ ಸೇರಿದ್ದ ಒಬ್ಬ ಹುಡುಗನು ಸೀರೆಯನ್ನು ಕದ್ದದಕ್ಕಾಗಿ ಸಜಾ ಶಿಕ್ಷೆಯನ್ನು ಅನುಭವಿಸುತ್ತಲಿದ್ದಾನೆ.

ಮದರಾಸಿನ ಛೀಫ್ ಜಡ್ಜಿಗಳು ಪತ್ನೀಸಮೇತರಾಗಿ ಕೆಲ ದಿವಸದಲ್ಲಿ ಬೆಂಗಳೂರಿಗೆ ಬಂದಿರುತ್ತಾರೆ. ಇನ್ನೂ ಎರಡು ತಿಂಗಳು ಇಲ್ಲೇ ಇರುವಂತೆ ಅಲ್ಲಿನ ಪತ್ರಿಕೆಯು ತಿಳಿಸುತ್ತದೆ.

ಬೆಂಗಳೂರು ಟ್ರೆಜರಿ ಅಸಿಸ್ಟೆಂಟಾಗಿದ್ದ ಮ॥ ಅಣ್ಣಾಜಿರಾಯರನ್ನು ಪೆನ್‌ಷನ್ ಕೊಟ್ಟು ರಿಟೈರ್ ಮಾಡಿಸಿದರೆಂದು ಕೇಳುತ್ತೇವೆ. ಈಗ ಆತನಿಗೆ ೬೪ ವರುಷ ವಯಸ್ಸಾಗಿದೆಯಂತೆ.

ಬೆಂಗಳೂರು ನ್ಯೂಮಾರ್ಕೆಟ್ಟಿನ ಮೇಲುಛಾವಣಿಗೆ ಹಾಕಿದ್ದ ತಗಡುಗಳು ವಿಪರೀತ ಗಾಳಿಯು ಬಡಿದದರಿಂದ ಹಾರಿಹೋಗಿ ಬಹಳ ನಾಶವನ್ನು ಉಂಟುಮಾಡಿತು. ಆ ತಗಡನ್ನು ಮರಾಮತ್ತು ಮಾಡಿಸುವಾಗ ೪೦೦ ರೂಪಾಯಿ ಹೆಚ್ಚುವರಿ ಆಯಿತೆಂತಲೂ, ಅದಕ್ಕೆ ಬೇಕಾಗಿದ್ದದ್ದು ೧,೫೦೦ ರೂಪಾಯಿಗಳೆಂತಲೂ ತಿಳಿಯಬರುತ್ತದೆ.

ನಮ್ಮ ದಿವಾನರವರ ಮನೆಯು ವಿವಾಹಪ್ರಸ್ತದಲ್ಲಿ ಪಟ್ಟಸಿಂಹಾಸನದಿಂದ ಪ್ರೊಫೆಸರುಗಳೇ ಮುಂತಾದವರು ಬಂದು ಬಹಳ ಮೆಹನತ್ತು ಮಾಡಿದ್ದು ಸರಿಯಷ್ಟೆ. ನಮ್ಮ ದಿವಾನರವರು ಸನ್ಮಾನಾರ್ಥವಾಗಿ ಬಡಿಸಿದವರಿಗೆ ಒಂದೊಂದು ಧೋತ್ರವನ್ನೂ ಮೇಳ್ಗಂಡ ಜನಗಳಿಗೆ ಒಂದೊಂದು ರೂಪಾಯನ್ನೂ ಇನಾಂ ದಯಪಾಲಿಸಿದರೆಂದು ತಿಳಿಯಬರುತ್ತೆ.

ಈ ವಾರ ಹೊಸ ಅಗ್ರಹಾರದ ಕೆಲವು ಭಾಗಗಳಲ್ಲಿ ಮ್ಯುನಿಸಿಪಲ್ ಲಾಂದ್ರದ ಕಂಭಗಳು ಇರುವದರಿಂದ ಅಷ್ಟು ರಾತ್ರಿ ಕಾಲಗಳಲ್ಲಿ ಕೆಲವು ಕಡೆ ದೀಪಗಳು ಹತ್ತಿಸುವದಿಲ್ಲ. ಒಂದು ವೇಳೆ ಹತ್ತಿಸಿದಾಗ್ಯೂ ಅರ್ಧರಲ್ಲಿಯೇ ಕ್ಷೀಣವಾಗಿ ಹೋಗುತ್ತವೆ. ಕತ್ತಲೆ ಕಾಲಗಳಲ್ಲಿ ಸಂಚರಿಸುವದು ಬಹು ಕಷ್ಟವಾಗಿದೆ. ಆದ್ದರಿಂದ ಮ್ಯುನಿಸಿಪಾಲಿಟಿಯವರು ಈ ವಿಷಯವನ್ನು ಗಮನಕ್ಕೆ ತಂದುಕೊಂಡು ಕೃಪಾಪೂರ್ವಕವಾಗಿ ಏರ್ಪಾಡು ಮಾಡಬೇಕೆಂದು ಅಲ್ಲಿನ ಬಾತ್ಮೀದಾರರು ಬರೆಯುತ್ತಾರೆ.

ಮೈಸೂರಿನಲ್ಲಿ ಕೆಲವು ತುಂಟ ವರ್ತಕರು ತೂಕದಲ್ಲೂ, ಅಳತೆಯಲ್ಲೂ ಮೋಸ ಮಾಡುತ್ತಾ ಸರ್ಕಾರದವರು ಆಜ್ಞಾಪಿಸಿದ ಕಾಲದಲ್ಲಿ ಕರಾರು ಸೇರನ್ನೇ ತೆಗೆಯುತ್ತಾರೆ. ಅವರಲ್ಲಿ ಎರಡು ತರಹ ಸೇರು ಇರುತ್ತವೆ. ಈ ಮೋಸವನ್ನು ಸರ್ಕಾರದವರು ತಿದ್ದಬೇಕಾದರೆ, ಜಾಬು ಅಂಗಡಿಗಳಲ್ಲಿ ಇರತಕ್ಕ ಸೇರುಗಳನ್ನೆಲ್ಲಾ ಜಪ್ತಿಸಿ ನೂತನವಾಗಿ ತೂಕ ಕ್ಕೂ, ಅಳತೆಗೂ ಕರಾರಾದ ಸೇರುಗಳನ್ನೂ, ಬೊಟ್ಟುಗಳನ್ನೂ ಒದಗಿಸಿದರೆ ಜನರಿಗೆ ಬಹಳ ಉಪಕಾರ ಮಾಡಿದಂತಾಗುವದು. ಹಾಗಿಲ್ಲದೆ ಒಬ್ಬರಿಬ್ಬರು ತಪ್ಪಿತಸ್ಥರಿಗೆ ಘೋರ ಶಿಕ್ಷೆ ವಿಧಿಸಿದರೂ ಈ ಪುಂಡು ಅಡಗುತ್ತದೆ.

ಈಗ್ಯೆ ಕೆಲವು ದಿನಗಳ ಕೆಳಗೆ ಮೇಲುಕೋಟೆ ದೇವಸ್ಥಾನದ ಗೋಲಕದಲ್ಲಿ ಹತ್ತು ರೂಪಾಯಿ ಸೇರಿದ್ದನ್ನು ದೇವಸ್ಥಾನದ ಪಾರುಪತ್ಯಗಾರರಲ್ಲಿ ಕೊಟ್ಟಿದ್ದರು. ಪಾರುಪತ್ಯಗಾರರು ಬಹಳ ದಿವಸ ತಡೆದು ೭—೮ ದಿವಸಗಳು ಕಳೆದ ನಂತರ ಒಬ್ಬ ಸಿಪಾಯಿಯು ಇದರ ತೂಕ ಕಮ್ಮಿಯಾಗಿರುವದರಿಂದ ಛಾರ್ಜ ತೆಗೆದುಕೊಳ್ಳದೆ, ಆಪಾದಿಸಿದ್ದರಲ್ಲಿ ೯ ರೂಪಾಯಿಗಳು ಕಡಿಮೆಯಾಗಿದ್ದ ಕಾರಣ ಸಬ್ ಡಿವಿಜನ್ ಆಫೀಸರಿಗೆ ರಿಪೋರ್ಟಾಗಿ ಆಫೀಸರು ಆ ೬ ಜನ ಸಿಪಾಯಿಗಳನ್ನೂ ಒಬ್ಬ ಪಾರುಪತ್ಯಗಾರನನ್ನೂ ಡಿಸ್‌ಮಿಸ್ ಮಾಡಿರುವುದಾಗಿ ತಿಳಿಯಬರುತ್ತೆ. ಕಳವು ಮಾಡಿದವನನ್ನು ಪತ್ತೆ ಮಾಡದೆ ಎಲ್ಲರನ್ನೂ ಶಿಕ್ಷಿಸುವದು ಅನ್ಯಾಯವಾಗಿ ತೋರುತ್ತೆ. ಮುಂದೆಯಾದರೂ ಸರಿಯಾಗಿ ವಿಚಾರಿಸಿ ಕ್ರಮಪಡಿಸುವರೆಂದು ನಂಬಿರುವೆವು.

ನಮ್ಮ ಮಹಾರಾಜರವರ ಅರಮನೆಯಲ್ಲಿ ಪ್ರತಿನಿತ್ಯವೂ ನಡೆಯುವ ನಿತ್ಯದಾನ ಮೊದಲಾದ ಖರ್ಚುಗಳಿಗಾಗಿ ನಗದು ಬೊಂಬಲಗನ್ನು ಮೊದಲು ದಿನವೇ ಖಜಾನೆಯಿಂದ ತರಿಸಿ ಅರಮನೆಯಲ್ಲಿ ಇಟ್ಟಿದ್ದು ನಿತ್ಯದಾನ ಕಾಲದಲ್ಲಿ ಉಪಯೋಗಿಸಿಕೊಳ್ಳುವ ಪದ್ಧತಿಯುಂಟು. ಕಳೆದ ಶನಿವಾರ ಸಾಯಂಕಾಲ ಖಜಾನೆಯಿಂದ ತರಿಸಿದ ಬೊಂಬಲಗಿನ ಪೈಕಿ ೬೪ ರೂಪಾಯಿಗಳನ್ನು ಒಂದು ಚೀಲದಲ್ಲಿ ಹಾಕಿ ಬೊಕ್ಕಸದಲ್ಲಿಟ್ಟಿದ್ದನ್ನು ಮಾರನೆ ನೋಡಲು ಚೀಲವೇ ಇರಲಿಲ್ಲವೆಂದೂ ಈ ವಿಷಯ ಮಹಾರಾಜರಿಗೂ ತಿಳಿದು ಆ ದರ ಬಗ್ಗೆ ಸದರಿ ಮುಜರಾಯಿ ತೊಟ್ಟಿಯ ಅಧಿಕಾರಿಗಳು ದ ಆ ಮಾನ್ಯ ರಂಗಾಚಾರ್ಯರೇ ಮೊದಲಾದ ೭ ಜನ ಅಧಿಕಾರಿಗಳಿಗೂ ಡಿಪೋ ಮೊಬಲನ್ನು ಭರ್ತಿ ಮಾಡಿ ಅಲ್ಲಿಯ ೭ ಜನ ಕಾವಲುಗಾರರಿಗೆ ಪತ್ತೆಯಾಗುವ ವರೆವಿಗೂ ಸಸ್ಪೆಂಡ್ ಮಾಡಿರುವರಾಗಿ ಕೇಳುತ್ತೇವೆ.

ಲೋಕಲ್‌ಫಂಡ್ ಮತ್ತು ಮ್ಯುನಿಸಿಪಲ್ ಲೆಕ್ಕಗಳನ್ನು ಇಂಗ್ಲೀಷಿನಲ್ಲಿ ತರ್ಜುಮೆ ಮಾಡಿಸಿ ಕಳುಹಿಸಬೇಕೆಂದು ಕಂಟ್ರೋಲರವರು ಡೆಪ್ಯುಟಿ ಕಮಿಷನರಿಗೆ ಬರೆದಿರಲು, ತಾಲ್ಲೂಕು ಗಳಿಂದ ಬರುವ ಈ ಬಾಬತಿನ ಲೆಕ್ಕಗಳೆಲ್ಲಾ ಕನ್ನಡದಲ್ಲಿಯೇ ತಯಾರಾಗಿ ಬರುತಿವೆ. ಆದ್ದರಿಂದ ಆ ಲೆಕ್ಕಗಳನ್ನು ಡಿಸ್ಟ್ರಿಕ್ಟಿನಲ್ಲಿ ಇಂಗ್ಲೀಷ್ ತರ್ಜುಮೆ ಮಾಡಿಸಿ ಕಳುಹಿಸುವದಕ್ಕೆ ಆಗಿರುವ ಒಬ್ಬ ರೈಟರಿಂದ ಆಗತಕ್ಕದ್ದಲ್ಲವೆಂದು ಹಾಸನ ಮತ್ತು ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರುಗಳು ಕಂಟ್ರೋಲರವರಿಗೆ ಜವಾಬು ಕೊಟ್ಟಿದ್ದರ ಮೇಲೆ ಅವರು ದಿವಾನರವರ ಅಪ್ಪಣೆಗೆ ತರಲು ಇಂಥಾ ಲೆಕ್ಕಗಳನ್ನು ತಾಲ್ಲೂಕು ಗಳಿಂದ ಇಂಗ್ಲೀಷಿನಲ್ಲಿ ತಯಾರು ಮಾಡಿಸಿ ಕಳುಹಿಸುವದಕ್ಕಾಗಿ ಪ್ರತಿ ತಾಲ್ಲೂಕಿನಲ್ಲಿಯೂ ಈಗಿರುವ ಏಜೆನ್ಸಿ ಸ್ಟಾಫ್ ಇಂಗ್ಲೀಷ್ ತಿಳಿದ ಒಬ್ಬ ಗುಮಾಸ್ತೆ ಇರುವಂತೆ ಏರ್ಪಾಡು ಸಂದರ್ಭಾನುಸಾರ ಮಾಡಿಕೊಳ್ಳಬೇಕೆಂದು ದಿವಾನರವರು ಅಪ್ಪಣೆ ಮಾಡಿದಂತೆ ಕೇಳುತ್ತೇವೆ.

ಈ ವಾರ ಸುಣ್ಣದಕೇರಿಯಲ್ಲಿ ಸುಮಾರು ೩೫—೪೦ ವರುಷ ವಯಸ್ಸುಳ್ಳ ಗೊಲ್ಲರಾಮಯ್ಯ ಎಂಬುವನು ಕೆಲದಿವಸಗಳ ಕೆಳಗೆ ತಂದೆಯ ಸಂಗಡ ಜಗಳಮಾಡಿ ತನ್ನ ಹಿಸ್ಸೆಗೆ ಸಲ್ಲಬೇಕಾದ ಮೊಬಲಗುಗಳನ್ನೆಲ್ಲಾ ವಸೂಲು ಮಾಡಿಕೊಂಡನು. ಸ್ವಲ್ಪ ದಿವಸ ಬಿಟ್ಟು ಮತ್ತೊ ದ್ರವ್ಯವನ್ನೆಲ್ಲಾ ದುರ್ವಿನಿಯೋಗಪಡಿಸಿ ಕಳೆದ ಭಾನುವಾರ ದಿನ ಪ್ರಾತಃ ಕಾಲದಲ್ಲಿ ನೆರೆಯವರು ನಿಷ್ಕಾರಣವಾಗಿ ವ್ಯಾಜ್ಯತೆಗೆದು ತನ್ನ ಬಾಕಿ ಮೊಬಲಗು ಕೊಡದಿದ್ದರೆ ಈಗಲೇ ಆತ್ಮಹತ್ಯ ಮಾಡಿಕೊಳ್ಳುತ್ತೇನೆಂದೂ, ಒಂದು ಆಯುಧದಿಂದ ಬಲವಾಗಿ ಹೊಡೆದುಕೊಂಡು ಘೋರ ಜಖಮುಮಾಡಿಕೊಂಡಿರುತ್ತಾನೆ. ಆ ಕಾಲದಲ್ಲಿ ಪೇಟೆಯಲ್ಲಿ ಯಾರಾದರೂ ಇದ್ದರೆ ಆವರಿಗತಿಯು ಏನಾಗುತ್ತಿತ್ತೋ! ಈಗ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆಯುತ್ತಾ ಇದಾನೆ. ಆತನ ತಂದೆಯು ಪೋಲೀಸ್ ಸ್ಟೇಷನ್ನಿನಲ್ಲಿ ಕ್ರಮವಾಗಿ ಕೈಫಿಯತ್ತು ಕೊಟ್ಟಿರುತ್ತಾನೆ. ಮುಖ್ಯವಾಗಿ ವಿಷಯಾಸಕ್ತಿಗಳಲ್ಲಿ ಪ್ರವರ್ತಿಸುವವರ ಪಾಡೆಲ್ಲಾ ಹೀಗೆಯೇ ಸರಿಯಲ್ಲವೆ ಎಂಬದಾಗಿ ಅಲ್ಲಿನ ಬಾತ್ಮೀದಾರನೊಬ್ಬನು ಬರೆಯುತ್ತಾನೆ.

ಶಿವಲ್ ಮ ವಿಲಿಯಂ ಸ್ಪೆನ್ಸರ್ ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ ಈಚೆಗೊಂದು ಶಿಷಾಬಿಯಾದ ಮೊಕದ್ದಮೆಯು ನಡೆಯುತಲಿದೆ ಅದರ ವಿವರವೇನಂದರೆ—ಶಾಮಸ್ವಾಮಿನಾಯುಡು ಎಂಬಾತನು ತನ್ನ ಮಕ್ಕಳಿಲ್ಲದೆ ೭ ವರುಷದ ಒಂದು ಹೆಣ್ಣು ಮಗುವನ್ನು ಹೆಣ್ಣುಮಕ್ಕಳಿಲ್ಲದ ವೆಂಕಟಸ್ವಾಮಿನಾಯುಡು ಎಂಬಾತನು ಸಾಕಿಕೊಳ್ಳುವದಕ್ಕಾಗಿ ಕೊಟ್ಟಿದ್ದನು. ಈಗ ಆಮಗುವಿಗೆ ೧೬ ವರುಷವಾದ್ದರಿಂದ ಒಂದು ವರಾಂತ ತನ್ನ ಹೆಣ್ಣುಮಗಳನ್ನು ತನಗೆ ವಾಪಸ್ ಕೊಡಬೇಕೆಂದು ಮೇಲ್ಕಂಡ ಕೋರ್ಟಿನಲ್ಲಿ ರಾಮಸ್ವಾಮಿನಾಯುಡು ದಾವೆ ತರಲು ವೆಂಕಟಸ್ವಾಮಿನಾಯುಡುಬಾತನು ತಾನು ಕಳೆದ ೯ ಸಂವತ್ಸರಗಳ ಕಾಲದಲ್ಲಿ ಆ ಹುಡುಗಿಯನ್ನು ಕೇವಲ ವಿಶ್ವಾಸದೊಡನೆ ಸಾಕಿದವನಾದ್ದರಿಂದ ಈಗ ಆ ಹುಡುಗಿಯನ್ನು ವಾಪಸ್ ಕಳುಹಿಸಲು ಆಗುವದಿಲ್ಲವೆಂದು ವಾದಿಸುತ್ತಾನಂತೆ. ಇದರಮೇಲೆ ಜಡ್ಜಿಯವರಾದ ಮಿ॥ ರಾ॥ ಕೃಷ್ಣರಾಯರವರು ಹೆತ್ತ ತಂದೆತಾಯಿಗಳು ತಮ್ಮ ಮಗುವನ್ನು ಇನ್ನೊಬ್ಬರ ಸಂರಕ್ಷಣೆಯಲ್ಲಿ ೯ ವರುಷಗಳ ಕಾಲ ಬಿಟ್ಟು ನಂತರದಲ್ಲೇ ಆ ಮಗುವಿನ ಮೇಲೆ ಅವರಿಗಿದ್ದ ಬಾಧ್ಯತೆಯು ತಪ್ಪಿ ಹೋಗುವದೋ ಎಂಬುದನ್ನು ನಿರ್ಧರಿಸುವದಕ್ಕಾಗಿ ಇದನ್ನು ಇಟ್ಟಿರುವಂತೆ ಕೇಳುತ್ತೇವೆ. ಪರ್ಯವಸಾನವನ್ನು ಮುಂದೆ ತಿಳಿಸುವೆವು.

ಹಾಸನದ ವೃತ್ತಾಂತ—ಇಲ್ಲಿನ ಮೈಸಿಪಾಲಿಟಿಯವರು ಕಸಬು ಮತ್ತು ವ್ಯಾಪಾರದ ಮೇಲಿನ ತೆರಿಗೆಯನ್ನೂ ಮನೆ ತೆರಿಗೆಗಳನ್ನೂ ಮಾಮೂಲು ಇದ್ದದಕ್ಕಿಂತಲೂ ಜಾಸ್ತಿಯಾಗಿ (ಒಂದಕ್ಕೆ ದ್ವಿಗುಣವಾಗಿ) ದಾಖಲುಮಾಡಿ ಇದ್ದದರಮೇಲೆ ಈ ಪ್ರಾಂತದಲ್ಲಿ ಇರುವ ಯೂರೋಪಿಯನ್ ಮತ್ತು ನೇಟಿವ್ ದೊಡ್ಡ ಮನುಷ್ಯರೂ ಪ್ರಜೆಗಳೂ ಸೇರಿ ಸುಮಾರು ಒಂದು ಸಾವಿರ ಜನಗಳವರೆಗೆ ಡೆಪ್ಯುಟಿ ಕಮಿಷನರ್ ಸಾಹೇಬರವರಿಗೆ ಅರ್ಜಿ ಕೊಟ್ಟಿದ್ದಲ್ಲದೆ ಈ ವ್ರಾರು ಜಾಸ್ತಿ ಮಾಡತಕ್ಕ ಕಾರಣವೇ ಇಲ್ಲದಿರುವದಕ್ಕೆ ಆಕ್ಷೇಪಣೆ ಮಾಡುವದಲ್ಲವೆಂದು ಜನಾಬಂದಿ ಆಫೀಸರ್ರಾದ ಮಿ॥ ನಂಜುಂಡರಾಯರೇ ಅವರಿಸಿದರೊಡನೆ ಬಹಳ ಚರ್ಚೆ ನಡೆಸಿದರು. ಇವರು ಮೈಸೂರಿಗೆ ಹೋಗಿ ನೋಡಿ ಅಲ್ಲಿನ ದರಗಳಿಗಿಂತಲೂ ಇಲ್ಲಿಗೆ ಕಮ್ಮಿಯಾಗಿ ದ ಹಾಕ್ಷಿಕೆವಂತೆ ಹೇಳಿ ಹೋಗಿ ಮ್ಯುನಿಸಿಪಲ್ ಮೆಂಬರಾದ ಮಿ॥ ಶೇಷಪ್ಪ ಮೇಲಿರುವ ದರಗಳನ್ನು ಹೊಕರೂರು ಮಾಡಿ ಜರೂರಾಗಿ ಇಂಡಾರ್ಸ್ ಕೊಟ್ಟರು. ಮಿ॥ ಶೇಷಪ್ಪ ಮೇಲಿರುವ ದರಗಳನ್ನು ಹೊಕರೂರು ಮಾಡುವ ವಿಷಯವೇ ತನಗೆ ಗೊತ್ತಿಲ್ಲವೆಂತ ಹೇಳುತ್ತಾರಲ್ಲದೆ ಈ ಬಾಬಿಗೆ ಜಾಸ್ತಿ ಮಾಡತಕ್ಕ ಕಾರಣವೇನೆಂದು ತಾವು ಇದಿರುದೆ ಕೊಟ್ಟಿರುವದಾಗಿ ಹೇಳುತ್ತಾರೆ. ಇದನ್ನು ಕುರಿತು ಡೆಪ್ಯುಟಿಕಮಿಷನರವರಿಗೆ ಅಪೀಲು ಅರ್ಜಿ ಬರೆದುಕೊಂಡಿದ್ದಾರೆ. ಇಲ್ಲಿನ ಮ್ಯುನಿಸಿಪಲ್ ಮೆಂಬರು ಮೆಂಬರಾದವರು ಬಹು ದಾಕ್ಷಿಣ್ಯವುಳ್ಳವರೆಂತಲೂ ಇವರನ್ನು ತೆಗೆದು ಬೇರೆ ಒಬ್ಬರನ್ನು ನೇಮಿಸಬೇಕೆಂತಲೂ ಅರ್ಜಿ ಕೊಟ್ಟಿದ್ದಾರೆ. ಮಳೆ ಜೋರಾಗಿ ರಾಗಿ ಪೈರು ಬಹು ಚೆನ್ನಾಗಿ ಕಟ್ಟಿ ಹೋಯಿತು. ಲಕ್ಷ್ಮೀನರಸಿಂಹ ಸ್ವಾಮಿಗೆ ಸುಮಾರು ಪ್ರವಾಹ ಬಂದಿರುತ್ತೆ. ಈ ದಿನ ಬೆಳಿಗ್ಗೆ ಮುಮ್ಮಡಿಯವರ್ಗೆ ಸಿಸ್ಟ್ರ ನಾಕ್ಕಳು ನಾಟ್ಯಮಾಡಿದರು. ಸುಮಾರು ೩೦ ವರುಷ ವಯಸ್ಸಿನ ದೊಡ್ಡ ಮನುಷ್ಯರು ಒಂದೊಕನ್ನು ಬಿಡುವನಾದಿ ಎವಗೆ ಹೊಡೆದುಕೊಂಡು ಆತ್ಮಹತ್ಯ ಮಾಡಿಕೊಂಡರು. ಕಾರಣವೇನೋ ಗೊತ್ತಾಗಲಿಲ್ಲ.

ದಿನಚರ್ಯ.

ಜೂ॥ ತಾ॥ ೧೨ ನೇ ಸೋಮವಾರ	ನೆಸ್ಸಿ ಕ್ಯಾಂಟೋನ್ಮೆಂಟಿನ ಜೈಲ್ಖಾನೆಯಲ್ಲಿ ಬಂದೀವಾನರು ೬೦೦ ಮಂದಿ ಸುಮಾರಿನಲ್ಲೂ ಗಣಿಗಳಲ್ಲಿ ಕೆಲಸ ಮಾಡುತ್ತಿದ್ದು ತಪ್ಪಿಸಿಕೊಂಡು ಹೋಗಬೇಕೆಂದು ಪ್ರಯತ್ನ ಮಾಡಿದರು. ಅವರ ಮೇಲೆ ಪಹರೇ ಕಾ

ಯುತ್ತಿದ್ದವರು ಪಿಸ್ತೂಲಿನಿಂದ ಸುಮಾರು ೩೯ ಜನರನ್ನು ಕೊಂದರು. ೧೧ ಮಂದಿ ಮಾತ್ರ ತಪ್ಪಿಸಿಕೊಂಡರು. ಮಿಗಿಲಾದವರು ಅಡಗಿಸಲ್ಪಟ್ಟರು.

ಹೈದರಾಬಾದಿನಲ್ಲಿ ನವಾಬ್ ನಿಜಾಮತ್ ಜಂಗ್ ಎಂಬವರು ಗಾಡಿಯ ಮೇಲೆ ಹೋಗುತ್ತಿದ್ದಾಗ್ಯೆ ಕುದುರೆಗಳು ಬೆದರಿ ಕೋಚಿನ ಗೋಡೆಗೆ ಗಾಡಿಯನ್ನು ಬಡಿದವು. ನವಾಬರು ಕೆಳಕ್ಕೆ ಬಿದ್ದು ೧೫ ನಿಮಿಷಗಳಲ್ಲಿ ಸತ್ತುಹೋದರು. ಅವರ ಶವವನ್ನು ಹೂಳುವದಕ್ಕೆ ರಾಜಧಾನಿಗೆ ತೆಗೆದುಕೊಂಡು ಹೋದರು.

ಅಫ್ಘಾನಿಸ್ಥಾನದ ಅಮೀರರ ಕೈಕೆಳಗೆ ನೌಕರರಾಗಿದ್ದ ಡಾಕ್ಟರ್ ಗ್ರೇ ಸಾಹೇಬರು ರಜಾ ಪಡೆದೂ, ಮಿ॥ ಫೈರ್‌ಸ್ ಸಾಹೇಬರು ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟೂ ಹಿಂದೂಸ್ಥಾನಕ್ಕೆ ಬಂದಿರುತ್ತಾರೆ. ಅಮೀರರು ತಮ್ಮ ವಿಷಯದಲ್ಲಿ ಒಳ್ಳೇ ಮಾಡಿರುತ್ತಾರೆಂದು ಹೇಳುತ್ತಿದ್ದಾರೆ. ಬರುವ ವರುಷದಲ್ಲಿ ಅಮೀರರ ನೌಕರಿಯ ಇತರ ಯೂರೋಪಿಯನ್ನರು ತಮಗೆ ಸಂಬಳ ಜಾಸ್ತಿ ಮಾಡುವದಿಲ್ಲವೆಂದು ಅಮೀರರು ತಿರಸ್ಕರಿಸಿದ್ದರಿಂದ ಅವರ ರಾಜ್ಯವನ್ನು ಬಿಡುವರೆಂದು ವರ್ತಮಾನವಿದೆ.

ಜೂ॥ ತಾ॥ ೧೩ ನೇ ಮಂಗಳವಾರ	ಹಿಂದೂಸ್ಥಾನದಲ್ಲಿ ಸ್ಟೇಟ್ ಸೆಕ್ರೆಟರಿಯನ್ನು ನೋಡುತಲಿದ್ದು ಈಗ ನಿವೃತ್ತಿಸುವುದನ್ನು ಪಡೆದು ವಿಲಾಯತಿಗೆ ಹೋಗಿರುವ ಆ೦ಡ್ರು ಸ್ಕೋಬಲ್ ರವರು ಲಾರ್ಡ್ ಪಟ್ಟಣದ ವರ್ಣ್ಯಮ್ ಹೌಸಿನಲ್ಲಿ ನಡೆದ ಔತಣಕ್ಕೆ ದಯ

ಮಾಡಿಸಿದ್ದರು. ಆಗ ಎಲ್ಲರಿಗೂ ಉಚಿತವಾದ ಮಾತಿನ ಉಪನ್ಯಾಸವನ್ನು ಮಾಡಿ ಅದರಲ್ಲಿ ಇಂಡಿಯಾ ರಾಜ್ಯದ ಆರ್ಥಿಕ ಸ್ಥಿತಿಯನ್ನು ಕುರಿತು ಬಹಳವಾಗಿ ಹೇಳಿದರು.

ವಿಲಾಯತಿಯಲ್ಲಿರುವ ಮಿ॥ ಸ್ಟೀವನ್ ಸಿಂಗರವರು ಸ್ಪೈರಿಟ್ ಎಂಬ ಚಂದಿನ ಆಟದಲ್ಲಿ ಪ್ರವೀಣರಾಗಿ ವಿಲಾಯತಿಯವರಿಗೂ ಆಸ್ಟ್ರೇಲಿಯಾದವರಿಗೂ ನಡೆದ ಚಂಡಿನ ಆಟದಲ್ಲಿ ವಿಶೇಷವಾದ ಹೆಸರುವಾಸಿಯನ್ನು ಪಡೆದಿರುತ್ತಾರೆ.

ಬ್ರಿಟಿಷ್ ಪಾರ್ಲಿಮೆಂಟ್ ಸಭೆಯ ಸೆಕ್ರೆಟರಿಯವರು ಸಿವಿಲ್ ಸರ್ವಿಸ್ ಪರೀಕ್ಷೆಗಳು ವಿಲಾಯತಿಯಲ್ಲೂ, ಹಿಂದೂಸ್ಥಾನದಲ್ಲೂ ಏಕಕಾಲದಲ್ಲಿ ನಡೆಯಬೇಕೆಂದು ತಮ್ಮ ಇರಾದೆಯನ್ನು ಹೊರಪಡಿಸಿರುತ್ತಾರೆ.

ಜೂ॥ ತಾ॥ ೧೪ ನೇ ಬುಧವಾರ.	ಲಾರ್ಡ್ ಹರ್ಷೆಲ್ ಕಮಿಟಿಯವರ ರಿಪೋರ್ಟಿನಲ್ಲಿ ಹಿಂದೂಸ್ಥಾನದಲ್ಲಿ ಬೆಳ್ಳೀ ನಾಣ್ಯಗಳನ್ನು ಅಚ್ಚು ಹಾಕುವದನ್ನು ನಿಲ್ಲಿಸಬೇಕೆಂಬದಾಗಿ ಬರೆದಿದೆಯೋ ಎಂಬದಾಗಿ ಸರ್ ರಿಚರ್ಡ್ ಟೆಂಪಲ್ ರವರು ಪ್ರಶ್ನೆ ಮಾಡಿ

ದರು. ಆ ರಿಪೋರ್ಟು ಗಟ್ಟಾದ್ದು ಇನ್ನೂ ಬಹಿರಂಗಕ್ಕೆ ಬಂದಿಲ್ಲ. ಇಂಡಿಯಾ ಸರ್ಕಾರದವರು ತಮ್ಮ ಅಭಿಪ್ರಾಯಗಳನ್ನು ತಿಳಿಸುವ ವರಿಗೂ ಆ ವಿಷಯದಲ್ಲಿ ಏನೂ ಹೇಳಕೂಡದಾಗಿದೆ ಎಂಬದಾಗಿ ಸರ್ ಹಾರ್‌ಕೋರ್ಟವರು ಜವಾಬು ಕೊಟ್ಟರು.

ಗ್ರೀಕ್ ಗೌರ್ನಮೆಂಟಿನವರು ಪ್ಯಾರಿಸ್ ಕಂಪೆನಿಯವರಲ್ಲಿ ೬೦ ಲಕ್ಷ ಪೌನುಗಳು (೬ ಕೋಟಿ ೪ ಲಕ್ಷ ರೂಪಾಯಿ) ಸಾಲ ತೆಗೆಯಬೇಕೆಂಬದಾಗಿ ತೀರ್ಮಾನಿಸಿರುತ್ತಾರೆ.

ಇಟಲೀರಾಜ್ಯದ ನೇಪಲ್ಸ್ ಬ್ಯಾಂಕಿನಲ್ಲಿ ಒಬ್ಬ ಡೈರೆಕ್ಟರೂ ಮತ್ತು ಕ್ಯಾಷಿಯರೂ ಸೇರಿ ೩೦ ಕೋಟಿ ದ್ರವ್ಯವನ್ನು ಅಪಹರಿಸಿದ್ದು ಸಿದ್ಧಾಂತವಾದ್ದರಿಂದ ಡೈರೆಕ್ಟರಿಗೆ ೧೦ ವರ್ಷಗಳೂ ಕ್ಯಾಷಿಯರಿಗೆ ೬ ವರ್ಷಗಳೂ ಕೋಲಸಜಾ ವಿಧಿಸಿರುತ್ತಾರೆ.

ಮಾರಿಷಸ್ ದ್ವೀಪದಿಂದ ಸಕ್ಕರೆಯನ್ನು ಭರ್ತಿಮಾಡಿಕೊಂಡು ಬೊಂಬಾಯಿಗೆ ಬರುತ್ತಿದ್ದ ಜಹಜು ಸುಂಟರಗಾಳಿಗೆ ಸಿಕ್ಕಿ ಜನಸಮೇತ ಮುಳುಗಿಹೋಯಿತೆಂದು ವರ್ತಮಾನವಿದೆ.

ಹಿಂದೂಸ್ಥಾನದ ೧೮೯೨ ನೇ ವರುಷದ ರೈಲ್ವೆ ಅಡ್ಮಿನಿಸ್ಟ್ರೇಷನ್ ರಿಪೋರ್ಟು ತಯಾರಾಗಿರುತ್ತದೆ. ಅದರಿಂದ ೧೮೯೧ ರಲ್ಲಿ ರೈಲಿನಲ್ಲಿ ಪ್ರಯಾಣ ಮಾಡಿದವರಲ್ಲಿ ೬೦೪ ಮಂದಿಯೂ, ೧೮೯೨ ರಲ್ಲಿ ೫೩೭ ಮಂದಿಯೂ ಸತ್ತು ಹೋದರೆಂದೂ, ೯೦ರಲ್ಲಿ ೧೦೧೮ ಮಂದಿಗೂ, ೯೨ ರಲ್ಲಿ ೯೫೦ ಮಂದಿಗೂ ಅಪಾಯ ಸಂಭವಿಸಿತೆಂದೂ ಗೊತ್ತಾಗಿದೆ.

ಜೂ॥ ತಾ॥ ೧೫ ನೇ ಗುರುವಾರ.	ಲಂಡನ್ ಪಟ್ಟಣದಲ್ಲಿ ನಾಳೆ ನೆಡ್ಡಂಬರನಲ್ಲಿ ನಡೆಯುವ ಡ್ಯೂಕ್ ಆಫ್ ಯಾರ್ಕ್‌ರವರ ವಿವಾಹದ ಕಾಲದಲ್ಲಿ ರಷ್ಯಾ ಚಕ್ರವರ್ತಿಯವರು ಹೋಗಿ ಭಾಗಿಗಳಾಗುತ್ತಾರೆಂದು ವರ್ತಮಾನವಿದೆ

ಕೆಲವು ವಾರಗಳ ಕೆಳಗೆ ಯೂರೋಪಿನಲ್ಲಿ ಕಲರಾ ಪ್ರಾರಂಭವಾಗಿ ೫೦೦ ಮಂದಿಗೆ ತಗಲಿ ಅ ಪೈಕಿ ೩೦೦ ಜನರು ಸತ್ತರೆಂದೂ, ಉಪದ್ರವು ಇನ್ನೂ ಪ್ರಬಲವಾಗುತ್ತಲಿದೆ ಎಂದೂ ಗೊತ್ತಾಗಿದೆ.

ಚಿತ್ರಾಲಿನ ಉಮ್ರಾಖಾನರನ್ನು ಕಾಣಬೇಕೆಂದು ನಾಕ್ಸ್ ರಾಬರ್ಟ್ಸ್‌ನರವರು ಹೋಗಿದ್ದರು. ಆದರೆ ಅವರು ಯುದ್ಧದಲ್ಲಿ ಮಗ್ನರಾಗಿದ್ದದರಿಂದ ಅವರ ಉದ್ದೇಶ ನೆರವೇರಲಿಲ್ಲ.

ಜೂ॥ ತಾ॥ ೧೬ ನೇ ಶುಕ್ರವಾರ	ಹಿಂದೂಸ್ಥಾನದ ವೈಸರಾಯರಾದ ಲಾರ್ಡ್ ಲ್ಯಾನ್ಸ್‌ಡೌನ್ ಸಾಹೇಬರಿಗೆ ಬದಲಾಗಿ ಲಾರ್ಡ್ ಸ್ಪೆನ್ಸರ ವರೂ, ಲಾರ್ಡ್ ಡಫರಿನ್‌ರವರೂ ಇಲ್ಲವೆ ಲಾರ್ಡ್ ಕ್ರೋಮರ್ ರವರೂ, ಈ ಮೂವರಲ್ಲಿ ಒಬ್ಬರು ನೇಮಿಸಲ್ಪಡುವರೆಂತ

ಲೂ, ಬರುವ ತಿಂಗಳಿನ ಅಖೈರಿನೊಳಗಾಗಿ ಇತ್ಯರ್ಥ ವಾಗುವದೆಂತಲೂ ಕೇಳುತ್ತೇವೆ.

ಪೋಲತ್ತಿನ ಖೈದಿಗಳಿಗೆ ಗೌರ್ನಮೆಂಟಿನವರು ತಿಂಗಳಿಗೆ ೧೦೦ ರೂಪಾಯಿಯಂತೆ ಪಿಂಚನ್ ಕೊಟ್ಟು ಅವರ ವಾಸಕ್ಕಾಗಿ ಪಟ್ಟಣ ಕಟ್ಟಿಸುತ್ತಾರೆಂದು ವರ್ತಮಾನವಿದೆ.

ಅಮೀರರ ಡಾಕ್ಟರೂ ಮತ್ತು ಇಂಜಿನಿಯರುಗಳೂ ಈಗ ಸಿಂಲಾಕ್ಕೆ ಬಂದಿರುತ್ತಾರೆ. ವಾಪಸು ಹೋಗುವಂತಿಲ್ಲ.

ಕಮ್ಯಾಂಡರ್ ಇನ್ ಛೀಫರಾಗಿದ್ದ ಲಾರ್ಡ್ ರಾಬರ್ಟ್ಸ್‌ರವರ ಪ್ರತಿಮೆಯನ್ನು ಹಿಂದೂಸ್ಥಾನದಲ್ಲಿ ಇಡುವದಕ್ಕೋಸ್ಕರ ಇಲ್ಲಿನವರಿಗೂ ೩೫,೦೦೦ ರೂಪಾಯಿ ಚಂದಾ ಸೇರಿರುತ್ತೆ. ತ್ವರಿತದಲ್ಲೇ ಕೆಲಸಗಳು ಪ್ರಾರಂಭವಾಗಬಹುದು.

ಫ್ರಾನ್ಸ್ ದೇಶದಲ್ಲೆಲ್ಲಾ ಬೆಳೆಗಳು ಚೆನ್ನಾಗಿ ಆಗದೆ ಇರುವದರಿಂದ ಸರ್ಕಾರದವರು ಈ ಸಂಗತಿಯನ್ನು ಕುರಿತು ಆಲೋಚನೆ ಮಾಡಿ ಕೆಲವು ಧಾನ್ಯಗಳ ಮೇಲೆ

ಜೂ॥ ತಾ॥ ೧೭ ನೇ ಶನಿವಾರ.	ಈ ವರುಷ ಕಂಮಿಯು ವಸೂಲ್ ಮಾಡುವದಿಲ್ಲವೆಂತಲೂ, ಕೆಲವಕ್ಕೆ ಅರ್ಧ ಕಂದಾಯವನ್ನು ಮಾತ್ರ ಕೊಡಬೇ

ಕೆಂತಲೂ ತೀರ್ಮಾನಿಸಿರುತ್ತಾರೆ.

ವಿಲಾಯತಿಯಲ್ಲಿ ನಡೆಯುವ ರಾಜ ಬಿ.ಎ.ಡಿಗೆ ಯೋಗ್ಯವಾದ ಅಧ್ಯಕ್ಷರನ್ನೂ, ಪೆಟ್ಟಿಗೆಯೊಳಗಿನ್ನೂ ಉಡುಗೊರೆಗಳನ್ನೂ ಕಳುಹಿಸುವದಕ್ಕಾಗಿ ಕಲ್ಕತ್ತಾ ಪ್ರೆಸಿಡೆನ್ಸಿಗಳು ಸಭೆ ಸೇರಿದ್ದರು. ದರ್ಭಾಂಗದ ಮಹಾರಾಜರವರು ಈ ಸಭೆಯಲ್ಲಿ ಅಗ್ರಾಸನವನ್ನು ವಹಿಸಿದ್ದರು.

ಪ್ರಸಂಗದಿಂದ ಗಿಲ್ಗಿಟ್ ವರೆಗೂ ಟೆಲಿಗ್ರಾಫ್ ತಂತಿಗಳು ಹಾಕಿ ಪೂರೈಸುವದಿಲ್ಲದ

ವಿವಿಧ ವರ್ತಮಾನಗಳು.

ಸ್ಪೆಯಿನ್ ದೇಶದಲ್ಲಿರುವ ಹೆಣ್ಣು ಹಕ್ಕಿಯ ಪ್ರೈವೇಟಿಗೆ ಭಾಷೆ ಹೊಸತಾಗಿ ... ಇನ್ನು ಇಡಬೇಕೆಂದು ... ರವರು ಯೋಚಿಸುತ್ತಾರೆ

ಕಳೆದ ವರ್ಷದಲ್ಲಿ ವಿಲಾಯತಿಗೆ ಕಳುಹಿಸಲ್ಪಟ್ಟ ವಿಜಾನಗಳು ಒಟ್ಟು ೩೪,೮೬,೦೦೦ ಹಂಡ್ರೆಡ್ ವೇಟುಗಳಷ್ಟು ಇದರ ಖರೀದಿ ೯೭,೮೩,೦೦೦ ಪೌನುಗಳು

ವಿಕ್ಟೋರಿಯಾ ಮಹಾರಾಣಿಯವರಿಗೆ ಕಳೆದ ಮೇ ತಿಂಗಳಿಗೆ ೮೦ ವರುಷಗಳು ತುಂಬಿದವು ಇಂಗ್ಲೆಂಡಿನ ಮಹಿಳೆಯರೆಲ್ಲಾ ವರ್ಧಂತಿಯ ದಿವಸ ಮಹಾರಾಣಿಯವರು ಒಂದು ಭಾರೀ ಚಿತ್ರವನ್ನು ಮಾಡಿಸಿದರು

ಪರ್ಷಿಯಾ ದೇಶದಲ್ಲಿ ೨೭ ವರ್ಷಗಳಿಗೆ ಮುಂಚೆ ಅಚ್ಚುಕೂಟದ ಹೆಸರೇ ಜನಗಳಿಗೆ ಗೊತ್ತಿರಲಿಲ್ಲ ಈಗ ಪ್ರತಿಯೊಬ್ಬ ಶ್ರೀಮಂತನ ಬಳಿಯಲ್ಲೂ ಯಾವಾಗಲೂ ಒಂದು ಪೆಟ್ಟಿಗೆಯಲ್ಲಿ ಅಚ್ಚುಗಳು ಮತ್ತು ಒಂದು ದೀಪದ ಕಡ್ಡೀ ಪೆಟ್ಟಿಗೆ ಹಾಜರಿರುತ್ತವೆ

ಗತಿಸಿದ ಸರ್ ಟಿ ಮಾಧವರಾಯರವರ ಪ್ರತಿಮೆಯನ್ನು ಚೆಂದಾಗಿ ತಯಾರುಮಾಡಿಸಿ ಟ್ರಾವಂಕೂರಿನಲ್ಲಿ ಕೆಲವು ದಿವಸಗಳ ಕೆಳಗೆ ಪ್ರತಿಷ್ಠೆ ಮಾಡಿಸಿರುತ್ತಾರೆ ಆ ಪ್ರತಿಮೆಯನ್ನು ನೋಡಿದರೆ ಸರ್ ಟಿ ಮಾಧವರಾಯರವರು ಪುನಹ ಹುಟ್ಟಿಬಂದಿದ್ದಾರೋ ಎಂಬಂತಿರುವುದಂತೆ!

ಸುಮಾರು ೧೩ ವಯಸ್ಸಿನ ಮೂಸೆಯಮ್ಮಾಳ್ ಎಂಬ ಹುಡುಗಿಯನ್ನು ೫೦ ವರುಷದ ಚಿಟ್ಟೆಗೆ ಕಂಟ್ರಾಕ್ಟರನಾಗಿದ್ದ ಮುನಿಸಾಮಿಚೆಟ್ಟಿ ಎಂಬವನು ಅಪಹರಿಸಿಕೊಂಡು ಹೋಗಿದ್ದರಿಂದ ಅವನಿಗೆ ಮದ್ರಾಸಿನಲ್ಲಿ ಪರ್ಯಾಪ್ತಿಯಿಂದ ೬ ವಾರಗಳ ಕಾಲ ಸಜಾ ವಿಧಿಸಲ್ಪಟ್ಟಿತು

ನಾರ್ವೇ ದೇಶದಲ್ಲಿ ಟ್ರಾಂಡ್ಜೆಂ ಎಂಬ ಪಟ್ಟಣದಬಳಿಯಲ್ಲಿ ಒಂದು ಹಳ್ಳಿಯಲ್ಲಿ ಆಕಸ್ಮಾತ್ತಾಗಿ ಭೂಮಿಯು ಕುಸಿದು ಹೋಯಿತು ೬೦ ಭಾರೀ ಮನೆಗಳು ಮುಳುಗಿಹೋದವು ೧೦೦ ಜನರು ಸತ್ತರು ಆ ಸ್ಥಳವು ಒಂದು ದೊಡ್ಡ ಕೆರೆಯಾಗಿ ಆಗಿದೆ ಅದರ ತುಂಬ ಕೆಸರೇ ವಿಪರೀತವಾಗಿದೆ

ಸರದಾರ್ ಸಾಟೋರ್ಜ್ ಎಂಬವನು ಟ್ರ್ಯಾನ್ಸ್‌ವಾಲ್ ಪಟ್ಟಣದಲ್ಲಿದ್ದುಕೊಂಡು ಇಂಡಿಯಾದೇಶದ ವರ್ತಮಾನಗಳನ್ನು ಅವಿಸಾರರಿಗೆ ಬರೆದು ಕಳುಹಿಸುತ್ತಿದ್ದನು ಇದಕ್ಕಾಗಿ ಇವನಿಗೆ ಅವಿಸಾರರು ವರ್ಷ ೧ಕ್ಕೆ ೫,೦೦೦ ರೂಪಾಯಿ ಸಂಬಳ ಕೊಡುತ್ತಿದ್ದರು ಈ ಸಾಟೋರ್ಜನನು ಸತ್ತುಹೋದನೆಂದು ಪತ್ರಿಕೆಗಳು ತಿಳಿಸುತ್ತವೆ

ಅಲ್ಜೀರಿಯಾದಲ್ಲಿ ಮೊನ್ನೆ ಒಂದು ರೈಲು ಹೋಗುತ್ತಿರುವಾಗ ಮಿಡತೆಗಳು ಗುಂಪಾಗಿ ಸೇರಿಕೊಂಡು ರೈಲನ್ನು ಮುಂದಕ್ಕೆ ಹೋಗದಹಾಗೆ ಅಡ್ಡಿ ಮಾಡಿದವು ಇದರಿಂದ ರೈಲು ೨ ಘಂಟೆಗಳ ಕಾಲ ಅಲ್ಲೇ ನಿಂತಿತ್ತು ಕೊನೆಗೆ ಮುಂದಕ್ಕೆ ಹೋಗುವುದು ಅಸಾಧ್ಯವಾಗಿ ರೈಲನ್ನು ಹಿಂದಕ್ಕೆ ತೆಗೆದುಕೊಂಡು ಹೋಗಬೇಕಾಯಿತು ಇದೆಂಥಾ ಆಶ್ಚರ್ಯ!

ಮದರಾಸಿನಲ್ಲಿ ಮೂಸಾಮಿಯಾ ಎಂಬುವನು ಒಬ್ಬ ವರದಾಚಾರಿಗೆ ೧೫೦ ಚೆಲ್ಲರೆ ರೂಪಾಯಿಗೆ ರಸೀದಿ ಬರೆದುಕೊಟ್ಟನೆಂತಲೂ, ಆದರ ಆದಕ್ಕೆ ೧ ಆಣೆಯ ರಸೀದೀ ಸ್ಟಾಂಪನ್ನು ಹತ್ತಿಸಲಿಲ್ಲವೆಂತಲೂ ಆತನು ಮೋಸಮಾಡಿರುತ್ತಾನೆಂದೂ ಛಾರ್ಜ್ ಮಾಡಲ್ಪಟ್ಟಿರುತ್ತಾನೆ ಆದ್ದರಿಂದ ಲೇವಾದೇವಿ ಮಾಡತಕ್ಕವರು ಈ ವಿಷಯವನ್ನು ಬಹಳ ಚೆನ್ನಾಗಿ ತಿಳಿಯತಕ್ಕದ್ದಾಗಿದೆ

ಕಳೆದ ಮೇ ತಿಂಗಳಿನಲ್ಲಿ ಕೊಲಂಬೋ ಪಟ್ಟಣದಿಂದ ವಿಲಾಯತಿಗೆ ಭರ್ತಿ ಮಾಡಲ್ಪಟ್ಟಷ್ಟು ತೇಯಿಲೆಯು ಹಿಂದೆ ಯಾವ ತಿಂಗಳಿನಲ್ಲೂ ಕಳುಹಿಸಿ ಇಲ್ಲವಂತೆ ಆ ತಿಂಗಳಿನಲ್ಲಿ ೮ ಕೋಟಿಯೂ ೩೫ ಲಕ್ಷ ಪೌಂಡುಗಳಷ್ಟು ತೇಯಿಲೆಯನ್ನು ಭರ್ತಿ ಮಾಡಬೇಕಾಗಿದ್ದರೆ ಅಲ್ಲಿನ ಜನಗಳು ಎಷ್ಟರ ಮಟ್ಟಿಗೆ ವ್ಯವಸಾಯಗಾರರಾಗಿರುತ್ತಾರೆಂದು ವಿವರಿಸಲು ಅಸಾಧ್ಯವಾಗಿದೆ

ಅವಿಸಾರದ ಪ್ರಜೆಗಳು—ಯೂರೋಪಿಯನರು ಹೆಚ್ಚು ಸಂಬಳ ತಿಂದು ಸ್ವಲ್ಪ ಕೆಲಸವನ್ನು ಮಾತ್ರ ಮಾಡುತ್ತಾರೆಂದು ಅವಿಸಾರರಿಗೆ ಅರ್ಜಿ ಬರೆದುಕೊಂಡಾಗ ಅವರು ತಮ್ಮ ಕೈಕೆಳಗಿರುವ ಯೂರೋಪಿಯನರನ್ನೆಲ್ಲಾ ಕೆಲಸದಿಂದ ವಜಾಮಾಡಿ ಸ್ವಲ್ಪ ಸಂಬಳಕ್ಕೆ ತಮ್ಮ ಜನಗಳನ್ನೇ ನೇಮಿಸುತ್ತಿದ್ದಾರಂತೆ ಅಂತೂ ಅಲ್ಲಿಂದ ಯೂರೋಪಿಯನ್ ಜನಗಳು ಒಪ್ಪೊಟ್ಟಾಗಿ ಇಂಡಿಯಾಕ್ಕೆ ಬರುತ್ತಲಿದ್ದಾರೆ

ಕಳೆದ ೧೮೫೬ ನೇ ವರುಷದಿಂದ ೧೮೯೮ ನೇ ವರುಷದವರೆಗೆ ಅಂದರೆ ೪೨ ವರುಷದಲ್ಲಿ ಇಂಡಿಯಾ ದೇಶದ ನೇಟಿವ್ ಜನರು ಚಿನ್ನಾಭರಣಗಳಲ್ಲಿಟ್ಟ ೧೧ ಕೋಟಿಯೂ ೩೦ ಲಕ್ಷ ಚಿನ್ನದ ನಾಣ್ಯಗಳನ್ನೂ ೨೦ ಕೋಟಿಯೂ ೬೦ ಲಕ್ಷ ಬೆಳ್ಳಿಯ ನಾಣ್ಯಗಳನ್ನೂ ಕರಗಿಸಿ ಹಾಕಿರುತ್ತಾರೆ ಇಲ್ಲದೆ ಆಭರಣಗಳನ್ನು ಮಾಡಿಸಿರುತ್ತಾರೆ ಎಂಬದಾಗಿ ಫೈನಾನ್ಷಲ್ ಸೆಕ್ರೆಟರಿಯವರು ರಿಪೋರ್ಟು ಮಾಡಿರುತ್ತಾರೆ

ಕಲ್ಕತ್ತಾ ಪಟ್ಟಣದಲ್ಲಿ ಮ್ಯುನಿಸಿಪಾಲಿಟೀ ಹೊಡೆಯುವ ಒಬ್ಬ ಮುಸಲ್ಮಾನನವನು ಗಾಡಿಯ ಮೇಲೆ ಕೂತು ಕಣ್ಣು ಮುಚ್ಚಿಕೊಂಡು ಹಿವಾಬ್ ಮಾಡುತ್ತಿರುವಲ್ಲಿ ಕುದುರೆಯು ಥಟ್ಟನೆ ವೇಗವಾಗಿ ಗಾಡಿಯನ್ನು ಬಲವಾಗಿ ಎಳೆಯಿತು ಕೂಡಲೆ ಜವಾನನು ತಲೆಕೆಳಗಾಗಿ ಬಿದ್ದು ತಲೆಯನ್ನು ಒಡೆದುಕೊಂಡನು ಆಸ್ಪತ್ರೆಗೆ ಹೊತ್ತುಕೊಂಡು ಹೋದರು ಬದುಕುವ ... ಇದೆಂಥಾ ಪ್ರಾರಬ್ಧವೋ!

ಅಮೇರಿಕಾ ದೇಶದ ಬಗ್ಗಿಯರ್ ಪಟ್ಟಣದ ಆಸ್ಪತ್ರೆಯಲ್ಲಿ ಒಬ್ಬ ರೋಗಿಯು ಚಿಕಿತ್ಸೆ ಹೊಂದುತ್ತಲಿದ್ದನು ಇವನು ಪೇಯಿಸಿದ ೨೫೦ ಪೆಣಚೆ ಕಲ್ಲುಗಳನ್ನು ಹಟಕ್ಕಾಗಿ ತಿಂದುಬಿಟ್ಟನು ಆ ಕೂಡಲೆ ಅವನ ಹೊಟ್ಟೆಯು ಒಡೆಯುವ ಸಮಯ ಬಾಗಿಲಿಕ್ಕೆ ಬಂತು ಆಸ್ಪತ್ರೆಗೆ ಹೊತ್ತುಕೊಂಡು ಹೋಗುವಲ್ಲಿ ಡಾಕ್ಟರುಗಳು ಚಿಕಿತ್ಸೆ ಮಾಡಿ ೨೪೭ ಕಲ್ಲುಗಳನ್ನು ಅವನ ಹೊಟ್ಟೆಯಿಂದ ಹೊರಕ್ಕೆ ತೆಗೆದಿರುತ್ತಾರೆ ಐದು ಶಿಲ್ಲಿಂಗ್ ಅಥವ ಸುಮಾರು ೩||| ರೂಪಾಯಿಯ ಸಂಪಾದನೆಗಾಗಿ ಅವನು ತನ್ನ ಪ್ರಾಣವನ್ನೇ ಕಳೆದುಕೊಂಡಿದ್ದನಲ್ಲಾ!

ಅಮೇರಿಕಾ ದೇಶದ ಜನಗಳ ಸಾಹಸ ಚಮತ್ಕಾರಗಳನ್ನು ನೋಡಿ. ಒಬ್ಬನೊಬ್ಬ ಪ್ಯಾರಿಸ್ ಹುಡುಗನು ತಾನು ೧೨ ವರುಷ ವಯಸ್ಸಿನವನಾಗಿದ್ದಾಗ್ಯೂ ತನ್ನ ಜೊತೆಯವರನ್ನು ಸೇರಿಸಿಕೊಂಡು ಒಂದು ಆಚ್ಚಿನ ಕಾರ್ಖಾನೆಯನ್ನು ಏರ್ಪಡಿಸಿ ಒಂದು ವರ್ತಮಾನ ಪತ್ರಿಕೆಯನ್ನು ಹೊರಡಿಸುತ್ತಲಿದ್ದಾನಂತೆ ಇನ್ನು ಬಾಗಿ ೧೨—೧೫ ವರುಷದವರಾದರೂ ಚೆನ್ನಾಗಿ ಓದಿ ಬರೆದು ಪದಕ್ಕೆ ಪಡೆಯುವದೇ ಬಹು ಅಪರೂಪವಾಗಿರುತ್ತೆ ಹೀಗಿರಲಾಗಿ ಈ ದೇಶದ ಮತ್ತು ಪಾಶ್ಚಿಮಾತ್ಯರ ಕೆಲಸಗಳಲ್ಲಿ ಎಷ್ಟು ವ್ಯತ್ಯಾಸವಿರುವದೋ ವಾಚಕರೇ ಊಹಿಸಿಕೊಳ್ಳಬಹುದು

ವೆಲ್ಲೂರು ಪ್ರಾಂತ್ಯದಲ್ಲಿ ಸುಬ್ಬನೆಂಬವನು ಒಬ್ಬ ದಾಸರಿಯವನು ತನ್ನ ಹೆಂಡತಿಯನ್ನು ಇಟ್ಟುಕೊಂಡಿದ್ದನೆಂದು ತಿಳಿದು ಇನ್ನೂ ಏಳು ಮಂದಿಯನ್ನು ಜೊತೆ ಮಾಡಿಕೊಂಡು ಆ ದಾಸರಿಯನ್ನು ಹೊಡೆದು ಕೊಂದು ಒಂದು ಸ್ಥಳದಲ್ಲಿ ಹೂತಿಟ್ಟನೆಂತಲೂ, ಗುಳ್ಳೆನರಿಗಳು ಆ ಸ್ಥಳವನ್ನು ಕೆರೆದು ಒಳಗಿದ್ದ ಶವವನ್ನು ಹೊರಕ್ಕೆ ಹಾಕಿತೆಂತಲೂ ಅದರಿಂದ ಪೋಲೀಸಿನವರು ಈ ೮ ಜನಗಳನ್ನೂ ಹಿಡಿದು ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸಿದರೆಂತಲೂ ಅವರು ಈ ಮೊಕದ್ದಮೆಯನ್ನು ಚೆಂಗಲ್ಪಟ್ಟಿನ ಸೆಷನ್ಸಿಗೆ ಕಮಿಟ್ ಮಾಡಿರುತ್ತಾರೆಂತಲೂ ಕೇಳುತ್ತೇವೆ

ಡಾಕ್ಟರ್ ಹೆಚ್ ಗುಂಡರ್ಟ್ ಸಾಹೇಬರು ಬಾಸಲ್ ಜರ್ಮನ್ ಮಿಷನ್ ಪಾದ್ರಿಗಳಾಗಿದ್ದರು ಇವರು ಕೆಲವು ದಿನಗಳ ಕೆಳಗೆ ತಮ್ಮ ಸ್ವದೇಶವಾದ ಜರ್ಮನಿಯಲ್ಲಿ ಕಾಲಗತಿಯನ್ನೈದಿದರು ಇವರು ಮಲಬಾರ್ ಪ್ರಾಂತ್ಯದಲ್ಲಿ ಸ್ಕೂಲ್ ಇನ್ಸ್‌ಪೆಕ್ಟರಾಗಿದ್ದರು ಕಳೆದ ೧೮೭೨ ರಲ್ಲಿ ಇವರು ಮಲಯಾಳ ಮತ್ತು ಇಂಗ್ಲೀಷ್ ನಿಘಂಟನ್ನು ಅಚ್ಚು ಹಾಕಿಸಿದರು ವ್ಯಾಕರಣವೂ ಲವರು ಸಂಸ್ಕೃತವನ್ನು ವಿಸ್ತರವಾಗಿ ಅಭ್ಯಾಸ ಮಾಡಿರುತ್ತಾರೆಯೂ, ಗುಂಡರ್ಟ್ ಸಾಹೇಬರು ಮಲಯಾಳದಲ್ಲಿ ಅಷ್ಟು ಪ್ರವೀಣರಾಗಿದ್ದರು ಇವರು ತೀರಿಹೋದದ್ದಕ್ಕಾಗಿ ಆ ಪ್ರಾಂತ್ಯದಲ್ಲಿ ಅನೇಕರು ವ್ಯಸನ ಪಡುತ್ತಿರುವರು

ನಾಜರ್ ಮುಖ್ಯಸ್ಥನಾದ ಅಬ್ದುಲ್ಲಾ ಖಾನನೆಂಬುವನು ಬಜಾರ್‌ನ ಕಡೆ ಎಂಬಲ್ಲಿ ತನ್ನ ಒಂಟೆಗಳನ್ನು ಇಳಿಸಿಕೊಂಡು ತಾನೂ ತನ್ನ ಪರಿವಾರ ಸಮೇತ ವಿಶ್ರಮಿಸಿಕೊಳ್ಳುತ್ತಿದ್ದನು ಅಷ್ಟರಲ್ಲೇ ಪಠಾಣರು ಎಂಬ ಕಳ್ಳರ ಗುಂಪು ೫೦ ಜನರು ಅವರಮೇಲೆ ಬಿದ್ದು ಮುಖ್ಯವಾದ ಸಾಮಾನುಗಳನ್ನೂ ಮತ್ತು ಹಣವನ್ನೂ ಕೊಳ್ಳೆಹೊಡೆದುಕೊಂಡು ಮುಖ್ಯಸ್ಥನನ್ನೂ ಇತರರನ್ನೂ ಕೊಂದು, ಸುಮಾರು ೨೦೦ ಒಂಟೆಗಳನ್ನು ಅಪಹರಿಸಿಕೊಂಡು ಓಡಿಹೋದರು ಈ ಜನಗಳು ಆ ಪ್ರಾಂತ್ಯದಲ್ಲಿ ಹೀಗೆಯೇ ಪ್ರಜೆಗಳಿಗೆ ಬಹು ಕಂಟಕಪ್ರಾಯರಾಗಿ ಪರಿಣಮಿಸಿರುವದನ್ನು ಕೇಳಿ ವಿಷಾದಿಸಬೇಕಾಗಿದೆ

ಉತ್ತರ ಹಿಂದೂಸ್ಥಾನದಲ್ಲಿ ಒಬ್ಬನೊಬ್ಬ ಅಸಿಸ್ಟೆಂಟ್ ಕಮಿಷನರಾದ ಬ್ಲಾಕ್‌ಬರ್ನ್ ಮಾಯಿಸ್ಟರ್ ಎಂಬವರ ಕೋರ್ಟಿನಲ್ಲಿ ಜಡ್ಜಿಗಳು ಒಬ್ಬ ಖೈದಿಯನ್ನು ದರ್ಯಾಪ್ತಿ ಮಾಡಿ ಅವನಿಗೆ ಶಿಕ್ಷೆ ವಿಧಿಸಿದರು ಆ ಕೂಡಲೆ ಖೈದಿಯು ತನ್ನ ಕಾಲಿನಲ್ಲಿ ಹಾಕಿಕೊಂಡಿದ್ದ ಜೋಡನ್ನು ತೆಗೆದು ಜಡ್ಜಿಯ ಮೇಲೆ ಎಸೆದನು ಈ ತಪ್ಪಿತಕ್ಕಾಗಿ ಅವನು ಪುನಹ ದರ್ಯಾಪ್ತಿ ಮಾಡಲ್ಪಡಬೇಕೆಂದು ಗೊತ್ತು ಮಾಡಿದರು ಆದರ ಆ ಮ್ಯಾಜಿಸ್ಟ್ರೇಟರಿಗೆ ಛೀಫ್ ಕೋರ್ಟಿನಲ್ಲಿ ಹೀಗೆ ಜೋಡಿನ ಏಟನ್ನು ತಿಂದದ್ದು ಏನಾನರ್ಥವಾಯಿತೆಂದು ವರ್ತಮಾನ ಪತ್ರಿಕೆಗಳು ತಿಳಿಸುತ್ತವೆ ಒಳ್ಳೇ ಸನ್ಮಾನವೇ ಸರಿ!

ಫ್ರ್ಯಾನ್ಸ್ ದೇಶದಲ್ಲೂ ಮತ್ತು ಗ್ರೇಟ್ ಬ್ರಿಟನ್ ದೇಶಗಳಲ್ಲೂ ಸ್ವಂತಕಸುಬಿನಿಂದ ಜೀವಿಸತಕ್ಕ ಜನಗಳು ೯,೩೪,೦೬೦ ಮಂದಿಯೆಂತಲೂ, ಅದರ ಆ ಪೈಕಿ ೬೦ ಸಾವಿರ ಜನರು ೫೦೦ ಪೌನು ಸಂಪಾದಿಸತಕ್ಕವರೆಂತಲೂ, ಮತ್ತು ಫ್ರ್ಯಾನ್ಸ್ ದೇಶದಲ್ಲಲ್ಲಿ ೮,೦೦೦ ಪೌನುಗಳನ್ನು ಸಂಪಾದಿಸತಕ್ಕವರು ೬೦೦ ಮಂದಿ ಮಾತ್ರವೇ ಇರುವರೆಂತಲೂ, ಕೋಟ್ಯಾಧೀಶ್ವರರೆನ್ನಿಸಿಕೊಳ್ಳುವವರು ೩೫ ಜನರಿಗಿಂತಲೂ ಹೆಚ್ಚಾಗಿಲ್ಲವೆಂತಲೂ ಅಲ್ಲಿನ ಒಂದಾನೊಂದು ಪತ್ರಿಕೆಯು ತಿಳಿಸುತ್ತದೆ ಆದರೆ ವಿಲಾಯತೀ ರಾಜ್ಯದಲ್ಲಿ ಪ್ರಜಾಸಂಖ್ಯೆಯು ಇದಕ್ಕಿಂತಲೂ ಕಡಮೆಯಾಗಿದ್ದಾಗ್ಯೂ ಕೋಟ್ಯಾಧೀಶ್ವರರು ಅನೇಕರು ಇರುವರು.

ಮದರಾಸಿನಲ್ಲಿ ಕೃಷ್ಣಸಾಮಿ ನಾಯಕನೆಂಬವನು ಪಾರ್ಥಸಾರಥಿ ಎಂಬ ತನ್ನ ಸ್ನೇಹಿತನ ಮನೆಗೆ ಹೋಗಿ ೬೦೦ ರೂಪಾಯಿ ಬಾಳುವ ಒಂದು ನಗವನ್ನು ಎರವು ತಗೆದುಕೊಂಡು ಹೋದನು ಸಾಯಂಕಾಲಕ್ಕೆ ತಂದು ಕೊಡುತ್ತೇನೆಂದು ಹೋದವನು ಪುನಹ ಮನೆಗೆ ಬರಲೇ ಇಲ್ಲ ಆಗ ಪಾರ್ಥಸಾರಥಿಯು ಅವನನ್ನು ಮ್ಯಾಜಿಸ್ಟ್ರೇಟರ ಮುಂದೆ ತಂದು ನಿಲ್ಲಿಸಿದಾಗ ಗುಟ್ಟೆಲ್ಲಾ ರಟ್ಟಾಯಿತು ಆ ಒಡವೆಯನ್ನು ೪೦೦ ರೂಪಾಯಿಗೆ ಒತ್ತೆಯಿಟ್ಟು ಆ ಪೈಕಿ ೧೭೦ ರೂಪಾಯಿಯನ್ನು ಒಬ್ಬ ಸೂಳೆಗೆ ಕೊಟ್ಟಿದ್ದನು ಆ ಮೇಲೆ ಈ ೧೭೦ ರೂಪಾಯಿಯನ್ನು ಅವಳಿಂದ ವಸೂಲ್ ಮಾಡಿಕೊಂಡರು ಅಪರಾಧಿಯನ್ನು ಕೇಳಿದರೆ—ನಮ್ಮ ಪ್ಪನಿಗೆ ಹಣದ ದರದು ಇತ್ತು; ೪೦೦ ರೂಪಾಯಿ ಬೇಕಾಗಿದೆ ಎಂದು ಹೇಳಿದ್ದಕ್ಕೆ ನಾನು ಈ ನಗವನ್ನು ಅಡವಿಟ್ಟು ಹಣತಂದೆ ಎಂಬದಾಗಿ ಹೇಳುತ್ತಾನೆ ಇವನಲ್ಲವೇ ಸುಪುತ್ರ!

ವಿಲಾಯತಿಯಲ್ಲಿ ಒಬ್ಬ ಡಾಕ್ಟರನು ಒಬ್ಬ ರೋಗಿಗೆ ಔಷಧಿ ಕೊಡುತ್ತಲೂ, ಅವನ ಹತ್ತರಲೇ ಕಾಯುತ್ತಲೂ ಇದ್ದನು ರೋಗಿಷ್ಟನ ತಂದೆಯು ತನ್ನ ಮಗನಿಗೆ ಗುಣವಾದಾಗ ಡಾಕ್ಟರನಿಗೆ ಎಷ್ಟು ಫೀಜು ಕೊಡಬೇಕೆಂದು ಕೇಳಿದನು ಅವನು ತನಗೆ ೮೯ ಪೌನುಗಳು ಬರಬೇಕೆಂದು ಕೇಳಿದನು ಇದು ಕೊನೆಗೆ ಕೋರ್ಟಿಗೆ ಹೋಯಿತು ನ್ಯಾಯಾಧಿಪತಿಗಳು ಇಂಥಾ ಮೊಕದ್ದಮೆಯು ಯಾವಾಗಲೂ ಕೋರ್ಟಿಗೆ ಬಂದಿರಲಿಲ್ಲ ವಾದ್ದರಿಂದ, ಇದನ್ನು ತೀರ್ಮಾನಿಸುವದು ತುಂಬಾ ಕಷ್ಟವೆಂದು ಹೇಳಿದರು ಮೊಕದ್ದಮೆಯನ್ನು ಸಂಚಾಯಿತ ಎದುರಿಗೆ ದರ್ಯಾಪ್ತಿ ಮಾಡಿ ಅವರ ಅನುಮತಿಯ ಪ್ರಕಾರ ನ್ಯಾಯಾಧಿಪತಿಗಳು ಡಾಕ್ಟರನಿಗೆ ೩೫೦ ಪೌನುಗಳನ್ನು ಕೊಡಿಸಿಬಿಟ್ಟರು ಇದು ಡಾಕ್ಟರು ೧೫ ದಿನಗಳು ಕೆಲಸಮಾಡಿ ಸಂಪಾದಿಸಿದುದರ ಉತ್ಪತ್ತಿ ರೂಪಿನ ಧಾರಣೆಯ ಪ್ರಕಾರ ೫೨೫೦ ರೂಪಾಯಿಗಳಾದವು ಅಂದರೆ ಡಾಕ್ಟರನಿಗೆ ಪ್ರತಿದಿನಕ್ಕೂ ೩೫೦ ರೂಪಾಯಿಗಳು ಕೊಟ್ಟಹಾಗಾಯಿತು!

ಕನಡಾ ರಾಜ್ಯದ ಮಾಂಟ್ರಿಯಾಲ್ ಪಟ್ಟಣದಲ್ಲಿ ಒಂದು ಹೊಸದಾದ ನೂತನ ಚಾಳಿಯಲ್ಲಿ ಬರುವಂತೆ ಪ್ರಯಾಸ ಮಾಡುತ್ತಾರೆ ಅದೇನೆಂದರೆ—ಕನಡಾ ರಾಜ್ಯಕ್ಕೆ ಸೇರಿದ ಸಕಲ ಪಟ್ಟಣಗಳಲ್ಲಿಯೂ ಹಳ್ಳಿಹಳ್ಳಿಗಳಲ್ಲಿಯೂ ಪ್ರತಿದಿವಸವೂ ರಾತ್ರಿ ೯ ಘಂಟೆಯ ಹೊತ್ತಿಗೆ ಸರಿಯಾಗಿ ಒಂದು ಘಂಟೆಯು ಬಾರಿಸಲ್ಪಡುವದು ಆ ಘಂಟೆಯಾದ ನಂತರ ಸಕಲ ಪ್ರಜೆಗಳೂ ತಮ್ಮ ತಮ್ಮ ಮನೆಗಳಲ್ಲಿರಬೇಕು ಹದಿನೇಳು ವರ್ಷಕ್ಕಿಂತ ಕಡಮೆ ಯಾದ ವಯಸ್ಸಿನ ಹುಡುಗರು ರಸ್ತೆಗಳಲ್ಲಿ ತಮ್ಮ ತಂದೆಗಳ ಅಥವ ತಮ್ಮ ಪೋಷಕರ ಅನುಮತಿ ಇಲ್ಲದೆ ಸಂಚರಿಸುತ್ತಿದ್ದಲ್ಲಿ ಅಂಥವರನ್ನು ಸರ್ಕಾರದವರು ಹಿಡಿದು ಜುಲ್ಮಾನೆ ಮಾಡುವರು ಇಲ್ಲದಿದ್ದರೆ ಸಜಾ ವಿಧಿಸುವರು ಯಾರೇ ಪ್ರಾಯದವರು ಸಂಚರಿಸುತ್ತಿದ್ದಲ್ಲಿ ಅವರನ್ನು ಸರ್ಕಾರದವರು ತಮ್ಮ ಇಷ್ಟ ಬರುವವರೆಗೂ ಗಡಿಯಾರ ಕಟ್ಟಡಗಳಲ್ಲಿ ಇಟ್ಟುಕೊಂಡಿರುವರು ಈ ಆಶ್ಚರ್ಯಕರವಾದ ಶಾಸನವನ್ನು ಅಲ್ಲಿನ ಪ್ರಜೆಗಳೆಲ್ಲರೂ ಅನುಮೋದಿಸಿರುತ್ತಾರೆಂದು ಕೇಳುತ್ತೇವೆ

ಕಲ್ಕತ್ತಾ ಪಟ್ಟಣದಲ್ಲಿ ನಾರನ್ನು ಕೊಂಡುಮಾರುವ ಕಂಪನಿಯವರು ಪ೦|| ಸ್ಟೀಲ್ ಎಂಬ ಯೂರೋಪಿಯನನಿಗೆ ಸಂಬಳ ಕೊಟ್ಟು ಇಟ್ಟುಕೊಂಡಿದ್ದರು ಇವನು ೩|| ವರುಷ ಆ ಕಂಪೆನಿಯಲ್ಲಿ ಕೆಲಸ ಮಾಡಿದಾಗ ಕಂಪೆನಿಯವರು ಇವನು ಇಲ್ಲವಿದ್ದರೆ ತಮಗೆ ನಷ್ಟವಾಗುವದೆಂದು ತಿಳಿದು ಇನ್ನೂ ೩ ವರುಷ ತಮ್ಮ ಕಂಪೆನಿಯಲ್ಲೇ ಕೆಲಸ ಮಾಡುತ್ತಿರಬೇಕೆಂದು ಅವನಿಂದ ಕರಾರು ಬರಸಿಕೊಂಡರು ಕೂಡಲೆ ಅತನಿಗೆ ೬ ತಿಂಗಳು ರಜಾ ಕೊಟ್ಟು ಊರಿಗೆ ಕಳಿಸಿ ತಿಂಗಳಿಗೆ ಸುಮಾರು ೩೫೦ ರೂಪಾಯಿಯವರೆಗೂ ಅವನಿಗೆ ಅಲೋವನ್ಸು ಕೊಡುತ್ತಿದ್ದರು ಅವನು ಊರಿನಿಂದ ಬಂದು ಹೆಚ್ಚು ಸಂಬಳವನ್ನು ಕೊಡುತ್ತೇವೆಂದು ಹೇಳಿದ ಮತ್ತೊಂದು ಕಂಪನಿಗೆ ಹೋಗಿ ಕೆಲಸ ಮಾಡಲು ಪ್ರಾರಂಭಿಸಿದನು ಆಗ ಮೊದಲನೆ ಕಂಪೆನಿಯವರು ಇವನ ಮೇಲೆ ೩,೦೦೦ ರೂಪಾಯಿ ನಷ್ಟಕ್ಕೆ ದಾವಾ ಮಾಡಿದರು ಜಡ್ಜಿಗಳು ಅವನನ್ನು ಹೆಚ್ಚು ಸಂಬಳ ಕೊಡುತ್ತೇವೆಂದು ಕರೆದುಕೊಂಡ ಕಂಪೆನಿಯವರನ್ನು ನಿಂದಿಸಿ ಕೊನೆಗೆ ಪ್ರತಿವಾದಿಯಿಂದ ೧,೫೦೦ ರೂಪಾಯಿಗಳನ್ನು ವಾದಿಗೆ ಕೊಡಿಸಿಬಿಟ್ಟರು

ದಕ್ಷಿಣ ಆಫ್ರಿಕದಲ್ಲಿ ಪ್ರಿಟೋರಿಯಾ ಎಂಬ ಪಟ್ಟಣವಿದೆ ಕಳೆದ ೧೮೫೭ನೇ ವರುಷದಲ್ಲಿ ಇಂಡಿಯಾದೇಶದಲ್ಲಿ ನಡೆದ ಭಾರೀ ದಂಗೆಕಾಲದಲ್ಲಿ ಇಂಗ್ಲೀಷಿನವರ ಸೈನ್ಯದಲ್ಲಿ ಗ್ಲೀಸರ್ ಎಂಬವನು ಒಬ್ಬ ಶಿಪಾಯಿಯಾಗಿದ್ದನು ಇವನು ಕಳೆದ ಡಿಸೆಂಬರಿನಲ್ಲಿ ತನ್ನ ಸ್ವದೇಶದಲ್ಲಿ ಸತ್ತನು ಅವನು ಸಾಯುವಾಗ್ಯೆ ತನ್ನ ಆಪ್ತರಿಗೆ ಹೇಳಿದ್ದು—ನಾನು ಹಿಂದೂಸ್ಥಾನದ ದಂಗೆಯಲ್ಲಿ ಅಯೋಧ್ಯೆಯ ದೊರೆಯನ್ನು ಕೊಂದೆನು ದೊರೆಯಬಳಿ ಇದ್ದ ಅಮೂಲ್ಯವಾದ ನಗನಾಣ್ಯಗಳನ್ನು ಕದ್ದು ಬಂದು ಕಾಡಿನಲ್ಲಿ ಹೂತಿಟ್ಟೆನು ಅಷ್ಟರಲ್ಲೇ ಇಂಗ್ಲೀಷರು ಅಯೋಧ್ಯೆಯನ್ನು ನೇಟಿವರಿಗೆ ಬಿಟ್ಟುಕೊಟ್ಟರು ನಾನು ಹೂತಿಟ್ಟ ನಗಗಳನ್ನು ತರಲು ಅಸಾಧ್ಯವಾಯಿತು ಎಂಬದಾಗಿ ಇನ್ನೂ ಅನೇಕವಿಷಯಗಳನ್ನು ಹೇಳಿ ಸತ್ತನಂತೆ ಅದರ ಪ್ರಕಾರ ಅವನ ಅಳಿಯನು ಆ ಸ್ಥಳವನ್ನು ಗೊತ್ತುಮಾಡಿ ನಗಗಳನ್ನು ತೆಗೆಯಬೇಕೆಂದು ಇಂಡಿಯಾಕ್ಕೆ ಪ್ರಯಾಣಮಾಡಿರುತ್ತಾನೆ ಹೂತಿಟ್ಟಿರುವ ನಗಗಳಲ್ಲಿ ಒಂದು ವಜ್ರವಿದೆಯೆಂತಲೂ, ಅದು ಮಹಾರಾಣಿಯವರ ಕಿರೀಟದಲ್ಲಿರುವ ಕೊಹಿನೂರೆಂಬ ವಜ್ರದಹಾಗೆ ಎಂಬದಾಗಿಯೂ ಪತ್ರಿಕೆಗಳು ತಿಳಿಸುತ್ತವೆ ದ್ರವ್ಯ ಮತ್ತು ಆಭರಣಗಳು ಹೀಗೆ ಎಷ್ಟೆಷ್ಟು ಎಲ್ಲೆಲ್ಲಿ ಹೂಳಲ್ಪಟ್ಟವೆಯೊ!

ಬಂಗಾಳ ಪ್ರಾಂತ್ಯದಲ್ಲಿ ಸಿದ್ಧೇಶ್ವರಹಾಲ್ದಾರ್ ಎಂಬ ಬ್ರಾಹ್ಮಣನು ಶರತ್ಕುಮಾರಿ ಎಂಬ ಒಬ್ಬ ಶೂದ್ರಳನ್ನು ಇಟ್ಟುಕೊಂಡಿದ್ದನು ಅವಳಲ್ಲಿ ಹುಟ್ಟಿದ ಹೆಣ್ಣಿಗೆ ಗುಲಾಬಿಮಣಿ ಎಂದು ಹೆಸರಿಟ್ಟಿದ್ದನು ಜಾನಕೀನಾಥಮುಖರ್ಜಿ ಎಂಬ ಒಬ್ಬ ಬ್ರಾಹ್ಮಣನು ಗುಲಾಬಿಮಣಿ ಎಂಬ ಹುಡುಗಿಯನ್ನು—ಅವಳು ಶೂದ್ರಳೆಂದು ತಿಳಿಯದೆ ಮೋಸಹೋಗಿ ಮದುವೆ ಮಾಡಿಕೊಂಡು ಬಹಳ ಕಾಲ ... ತಿಂಗಳು ಸಂಸಾರ ಮಾಡಿಕೊಂಡಿದ್ದನು ಅನಂತರದಲ್ಲಿ ಇವಳು ಶೂದ್ರರ ಹುಡುಗಿಯೆಂತಲೂ, ಅವಳ ತಾಯಿಯನ್ನು ಅವಳ ತಂದೆಯು ಹಿಂದೂ ಪದ್ಧತಿಯ ಪ್ರಕಾರ ಮದುವೆ ಆಗಿರಲಿಲ್ಲ ವೆಂತಲೂ ಜಾನಕೀ ನಾಥನಿಗೆ ತಿಳಿದುಬಂದು ತಾನು ಶೂದ್ರ ಹುಡುಗಿಯ ಸಹವಾಸ ಮಾಡಿದೆನಲ್ಲಾ ಎಂದು ವ್ಯಸನಪಟ್ಟು ಕೊನೆಗೆ ಅವಳನ್ನು ಮನೆಯಿಂದ ಓಡಿಸಿಬಿಟ್ಟನು ಆದರೆ ಆ ಹುಡುಗಿಯು ಜೀವನಾಂಶ ಕೊಡಿಸಬೇಕೆಂದು ಅವನ ಮೇಲೆ ದಾವಾ ಮಾಡಿದಳು ಮ್ಯಾಜಿಸ್ಟ್ರೇಟರು ಮೊಕದ್ದಮೆಯನ್ನು ವಿಚಾರಣೆ ಮಾಡಿ ಜಾನಕೀನಾಥನಿಗೆ ಇದ್ದ ೨೦ ರೂಪಾಯಿ ಸಂಬಳದಲ್ಲಿ ೮ ರೂಪಾಯಿಯನ್ನು ಅವಳ ಜೀವನಾಂಶಕ್ಕೆ ಕೊಡಬೇಕೆಂದು ತೀರ್ಮಾನ ಮಾಡಿದರು ಈ ತೀರ್ಮಾನವನ್ನು ರದ್ದು ಮಾಡಬೇಕೆಂದು ಅಪೀಲ್ ಮಾಡಿದನು ಅಪೀಲ್ ಕೋರ್ಟಿನಲ್ಲೂ ಅದೇ ತೀರ್ಮಾನವನ್ನು ಸ್ಥಾಪಿಸಿಬಿಟ್ಟರು ಇವರಿಂದ ಮದುವೆ ಮಾಡಿಕೊಳ್ಳುವದಕ್ಕೆ ಮುಂಚೆಯೇ ಎಲ್ಲಾ ರಹಸ್ಯ ವಿಷಯಗಳನ್ನೂ ತಿಳಿದುಕೊಂಡು ಅನಂತರ ಮಾಡಬೇಕೆಂತಲೂ ಈ ವಿಷಯದಲ್ಲಿ ಸರ್ಕಾರದವರು ಹಿಂದೂ ಪದ್ಧತಿಗಳನ್ನು ಎಲ್ಲಾ ಸಂದರ್ಭದಲ್ಲಿಯೂ ಊರ್ಜಿತ ಪಡಿಸಲಾರರೆಂತಲೂ ತಿಳಿಯತಕ್ಕದ್ದಾಗಿದೆ

ಶಾಲೀವಾಹನಶಕ ೧೮೨೧ ನೇ ವಿಕಾರಿನಾಮ ಸಂವತ್ಸರದ ಅಧಿಕ ಆಷಾಢಶುದ್ಧ ನವಮಿ ಗುರುವಾರದಿಂದ ಅಧಿಕಾಷಾಢ ಶುದ್ಧ ಚತುರ್ದಶಿ ಬುಧವಾರದ ವರೆಗಿನ ವಾರದ ಪಂಚಾಂಗ.

೧೮೯೯ ನೇ ಇಸವಿ, ಜೂನ್.

ತಾ.	ವಾರ.	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.	ವೃಷಭ ಮಾಸ ತೇದಿ.
22	ಗು.	ನ.	45-13	ಪೂ.	26-5	10
23	ಶು.	ದ.	48-30	ಉ.	32-4	11
24	ಶ.	ಏ	51-50	ಶ್ರ.	36-50	12
25	ರ.	ದ್ವಾ	56-29	ಧ.	42-47	13
26	ಸೋ.	ತ್ರ.	60-0	ಶ.	49-6	14
27	ಮಂ	ತ್ರ.	1-33	ಪೂ.	55-48	15
28	ಬು.*	ಚ.	6-31	ಉ.	60-0	16

* ಕಾಯಿಗಾರಣ ಚೂಪೀಧಾರಣ.

ಪೇಟೆ ಧಾರಣೆ.

ದಿನಸಿ.	ಮೈಸೂರು	ಬೆಂಗಳೂರು.
	ರೂ. ಆ. ಪೈ.	ರೂ. ಆ. ಪೈ.
ಕಡ್ಡೀ ಅಕ್ಕಿ ಪಲ್ಲ ೧ಕ್ಕೆ	೧೦-೮-೦	೧೧-೦-೦
ಕೆಂಬೂತಿ ಅಕ್ಕಿ ಅವ್ವಲ್	೧೦-೬-೦	೯-೮-೦
ಡಿಟೋ ಅಕ್ಕಿ ದುಯಂ	೧೨-೦-೦	೯-೦-೦
ಜಿಪಾಣಿ ಅಕ್ಕಿ	೧೨-೧೨-೦	೧೨-೬-೦
ಸಣ್ಣಕ್ಕಿ ಅವ್ವಲ್	೧೩-೦-೦	೧೩-೦-೦
ಡಿಟೋ ಅಕ್ಕಿ ದುಯಂ	೧೨-೮-೦	೧೧-೬-೦
ತೊಗರೀಬೇಳೆ ಪಲ್ಲ ೧ಕ್ಕೆ	೧೧-೮-೦	೧೨-೧೨-೦
ಡಿಟೋ ದುಯಂ ತರಹ	೧೧-೦-೦	೧೧-೪-೦
ಹೈರಾಗಿ ಪಲ್ಲ ೧ಕ್ಕೆ	೪-೦-೦	[illegible]
ಕಾರ್ರಾಗಿ	೩-೧೨-೦	[illegible]
ಹುಲಸಂದೆ ಪಲ್ಲ ೧ಕ್ಕೆ	೯-೦-೦	೧೦-೪-೦
ಬಿಳೀ ಅವರೆ	೧೨-೬-೦	೧೧-೮-೦
ಹೆಸರು	೯-೦-೦	೧೦-೦-೦
ಉದ್ದು	೧೨-೭-೦	೧೨-೮-೦
ಕಡಲೆ	೧೨-೦-೦	೧೦-೦-೦
ಎಳ್ಳು	೧೬-೮-೦	೧೫-೦-೦
ಹುರುಳಿ	೬-೬-೦	೬-೧೪-೦
ಸೀಗೇಕಾಯಿ ಮಣ ೧ಕ್ಕೆ	೧-೧೦-೦	೧-೧೨-೦
ಮೆಣಸಿನಕಾಯಿ	೩-೮-೦	೩-೪-೦
ದುಯಂ ತರಹ	೩-೬-೦	೨-೧೨-೦
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ	೪-೮-೦	ಮ ೧-೧೦-೦
ಸಣ್ಣ ಅಚ್ಚು ,,	೬-೦-೦	ಡಿ|| ೧-೭-೦
ಬೆಳ್ಳುಳ್ಳಿ ಮಣ ೧ಕ್ಕೆ	೪-೮-೦	೫-೦-೦
ಹರಳೆಣ್ಣೆ	೪-೪-೦	೩-೧೪-೦
ಕೊತ್ತಂಬರಿ ಪಲ್ಲ ೧ಕ್ಕೆ	೯-೪-೦	೮-೧೦-೦
ಉಪ್ಪು	೯-೮-೦	೯-೧೨-೦
ಹುಣಿಸೇಹಣ್ಣು ಮಣ ೧ಕ್ಕೆ	೧-೧೨-೦	೧-೧೨-೦
ಹಳೇ ಹುಣಿಸೇಹಣ್ಣು ,,	೧-೮-೦	೧-೮-೦
ತುಪ್ಪ	೧೩-೮-೦	೧೨-೮-೦
ಸೀಮೆ ಯೆಣ್ಣೆ ಟಿನ್ನು ೧ಕ್ಕೆ	೪-೪-೩	೬-೧-೦
ತೆಂಗಿನಕಾಯಿ ೧೦೦ಕ್ಕೆ	೪-೮-೦	೪-೮-೦
ಚಿನ್ನ (ತೊಲ)		
ಕೆಂಪು	೧೬-೧೨-೦	೧೬-೧೧-೦
ಬಿಳುಪು	೧೬-೧೪-೦	೧೬-೧೪-೦
ಗಟ್ಟಿ	೨೬-೧೨-೦	೨೬-೬-೦

Mysore.—Printed and published for the Proprietor at the Wesleyan Mission Press.
22/6/99.

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು — ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಸಂಪುಟ ೩ — ಮೈಸೂರ — ೧೮೯೨ ನೇ ಇಸವಿ ಜೂನ್ ತಾರೀಖು ೨೯ ನೇ ಗುರುವಾರ — ಸಂಚಿಕೆ ೩

ನೋಟೀಸ್.

		ಕ್ರಯ			ಅಂಚೆಕೂಲಿ ಸಹಿತವಾಗಿ		
Campbell's	ಕನ್ನಡ ವ್ಯಾಕರಣ ಸಾರ	೦	೫	೦	೦	೨	೬
Object Less'n	ವಸ್ತು ಪಾಠಗಳು	೦	೧	೦	೦	೧	೬
Picture le	ಚಿತ್ರಗಳ ಸಹಿತವಾಗಿ	೦	೨	೦	೦	೨	೬
ಈ ಮೂರು ಪುಸ್ತಕಗಳು ಪ್ರೈಮರಿ ವರಗಳಲ್ಲಿ ಓದತಕ್ಕ ಪುಸ್ತಕಗಳು							
ಸ್ತ್ರೀಯರು ಓದತಕ್ಕ ಪುಸ್ತಕ		೦	೪	೦	೦	೪	೬
ಗಣಿತ ವಿದ್ಯವು		೦	೪	೦	೦	೪	೬
ಗಣಿತ ಮಗ್ಗಿಗಳು		೦	೧	೦	೦	೧	೬
ಸಂಸ್ಕೃತ ಕರ್ಣಾಟಕ ಬಾಷಾಮಂಜರಿ		೦	೨	೦	೦	೨	೬
ಭೂಗೋಳ ಶಾಸ್ತ್ರ ಪ್ರಶ್ನೋತ್ತರ		೦	೨	೦	೦	೨	೬
ಇಂಗ್ಲಿಷೂ ಕನ್ನಡವೂ ಶಬ್ದಾವಳಿ ೧ನೇ ೨ನೇ ಭಾಗಂಕ್ಕೆ		೦	೧	೦	೦	೧	೬
ಕಾವ್ಯಾವಳಿ (Minor Poetical Anthology)		೦	೮	೦	೦	೮	೬
ಶಾಲಾವ್ಯಾಕರಣ		೦	೪	೦	೦	೪	೬
ಹಳಗನ್ನಡ ವ್ಯಾಕರಣ ಸೂತ್ರಗಳು		೦	೬	೦	೦	೬	೬
ಇಂಗ್ಲಿಷೂ ಕನ್ನಡವೂ ಸಂಭಾಷಣ ವಾಕ್ಯಗಳು		೦	೧೦	೦	೦	೧೦	೬
ಶಬ್ದಮಣಿ ದರ್ಪಣ		೧	೦	೦	೧	೪	೬
Kan Eng School Dictionary		೧	೪	೦	೧	೪	೨
Eng Kan School Dictionary		೨	೧೦	೦	೨	೧೨	೬
ಬಳ್ಳೀ ತಾಯಿ		೦	೪	೪	೦	೪	೬
ಆತ್ಮಿಕ ವಿಸ್ಸ ಯುದ್ಧ (Bunyan)		೦	೧೨	೦	೦	೧೩	೬
ಕ್ರೈಸ್ತ ಪದ್ಧತಿ ೧ ನೇ ಭಾಗ ೨ ಆಣೆ		೦	೧	೬	೦	೨	೦
ಭಕ್ತಿ ಸಾರ		೦	೧	೦	೦	೧	೬
ಸತ್ಯ ವಿಜ್ಞಾನಿ		೦	೧	೦	೦	೧	೬
ಕಾವ್ಯಪ್ರಪಂಚ		೦	೩	೦	೦	೩	೬

A new Edition of the Geography suited for the Lower Secondary Examination is now ready.—Edited by Rev. H. Gull, [illegible]

ಮೇಲೆ ನಮೂದಿಸಿರುವ ಪುಸ್ತಕಗಳನ್ನು ಬೆಂಗಳೂರು ದಂಡಿನ ಮೋರ್ಗಾಪಿನ ಹತ್ತರವಿರುವ ಪುಸ್ತಕ ಶಾಲೆಯಲ್ಲಿ ಪಡೆಯ ಬಹುದು

ನೊ ಟೀ ಸ್.

ಪುಸ್ತಕಗಳು	ಕ್ರಯ
ವ್ಯಾಕ್ಯಾ ವ್ಯವಹಾರಿಕೆ	1—6—0
ಕನ್ನಡ ಇಂಗ್ಲೀಷು ನಿಘಂಟು ೧ ನೇ ದೊಡ್ಡ ತರಹ	3—0—0
೨ ನೇ ತರಹ	2—8—0
ಬಾಲಕರು ಓದುವ ಎರಡನೆ ಜ್ಞಾನೋದಯ	
ಪ್ರಶ್ನೋತ್ತರಗಳು	0—1—0
ಕಥೆಯ ನಿಗಮಗಳನ್ನು ಕುರಿತದ್ದು	0—0—6
ಕಥಾ ಸಂಗ್ರಹ 1 ನೇ ಭಾಗದಿಂದ 3 ವರೆಗೆ	1—0—0
ಕಥಾ ಸಂಗ್ರಹ 4 ರಿಂದ 6 ನೇ ಭಾಗ ಹೊಸ ಛಾಪು	1—0—0
ದೊಡ್ಡ ತರಹ	1—8—0
ಶೋಧಶಾಸ್ತ್ರ ಬೋಧಿನಿ	0—4—0
ಸತ್ಯವೇದವನ್ನು ಕುರಿತು 2 ನೇ ಭಾಗ	0—4—0
ಪ್ರಸಂಗಿಯ ವರ್ತಣ	0—6—0
ಇಂಗ್ಲೀಷುಭಾಷೆಯಲ್ಲಿಯೂ, ಕನ್ನಡ ಭಾಷೆಯಲ್ಲಿಯೂ, ಶಬ್ದಗಳ ವಿಭಾಗಗಳನ್ನು ವಿಶದ ಮಾಡುವ ನಿಘಂಟು	0—2—0
ಕನ್ನಡ ವ್ಯಾಕರಣ (ಇಂಗ್ಲೀಷಿನಲ್ಲಿ)	2—0—0
ಹಿಂದುಸ್ತಾನಿ ವ್ಯಾಕರಣ	1—0—0
ಬಾಲರ ಸೋಪಾನವು	0—0—6
ವಣಕರುಗಳ ಅನುಸರಣೆಯ ವಿಚಾರ	0—12—0
ಕ್ರೈಸ್ತರ ಬೋಧನೆಗಳ ಸಾರಾಂಶವು	0—1—0

ಮೇಲೆ ನಮೂದಿಸಿರುವ ಪುಸ್ತಕಗಳನ್ನು ಅಪೇಕ್ಷಿಸುವವರು ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್ಸಿಗೆ ಬರೆದು ತರಿಸಿಕೊಳ್ಳಬಹುದು. ಅಂಚೆ ಹಾಸಲು ಬೇರೆ ಕೊಡಬೇಕು.

ವೆಸ್ಲಿಯನ್ ಮಿಷನ್ ಪ್ರೆಸ್,
ಮೈಸೂರು

ವಿಶೇಷ 'ಓದಿನೋಡಿರಿ' ಓದಿನೋಡಿರಿ

ಆನುಶಾಸನೀಕಪರ್ವವು ಪೂರೈಸಿತು.

ಶ್ರೀಕೃಷ್ಣರಾಜ ವಾಣೀವಿಲಾಸವೆಂಬ ಮಹಾಭಾರತವು ನಮ್ಮ ಶ್ರೀಚಾಮುಂಡೇಶ್ವರೀ ಪ್ರೆಸ್ಸಿನಲ್ಲಿ ಪ್ರಕಟವಾಗುತ್ತಿದ್ದು ಎಲ್ಲರಿಗೂ ವಿಶದವಾಗಿಯಷ್ಟೆ ಈಗ ಅನುಶಾಸನೀಕಪರ್ವವು ಚಾಮುಂಡೇಶ್ವರೀ ಪ್ರೆಸ್ಸಿನಿಂದಲೂ ಮಡಿಗೆ ಯೋಗ್ಯವಾದ ಕಿತ್ತಾ ಸಾರಿನ ಪ್ರತಿಬಿಂಬದಿಂದ ತಯಾರಾಗಿರುತ್ತೆ. ಸಭಾಪರ್ವ ವಿರಾಟಪರ್ವದ ಬುಕ್ಕುಗಳು ಮುಗಿದು ಹೋದುದರಿಂದ ಪುನಹಾ ಎರಡನೆ ಛಾಪೆಯು ಪ್ರಾರಂಭವಾಗಿದೆ. ಈ ಕೆಳಗೆ ಕಂಡ ಪುಸ್ತಕಗಳು ನಮ್ಮಲ್ಲಿ ಸ್ವಲ್ಪವೇ ಉಳಿದಿರುವದರಿಂದ ಇಷ್ಟಯುಳ್ಳವರು ತರಿಸಿಕೊಳ್ಳಬಹುದು. ಅನುಶಾಸನೀಕ ಪರ್ವ ಕಿತ್ತಾ ಸಾರಿನ ಬೈಂಡ್ ೩—೧೨—೦ ಲೋವರ್ ಸೆಕಂಡರಿ ಪರೀಕ್ಷೆಯ ನೆಳ್ಸ್ ಕ್ರಯ ೮ ಆಣೆ

ಆದಿಪರ್ವ	ಕ್ರಯ	೩	೦	೦
ಸಭಾಪರ್ವ	„	೧	೪	೦
ವಿರಾಟಪರ್ವ	„	೧	೦	೦
ಭೀಷ್ಮಪರ್ವ	„	೨	೦	೦
ದ್ರೋಣಪರ್ವ	„	೨	೮	೦
ಕರ್ಣಪರ್ವ	„	೧	೨	೦
ಸೌಪ್ತಿಕಪರ್ವ	„	೦	೬	೦
ಸ್ತ್ರೀಪರ್ವ	„	೦	೬	೦
ಶಾಂತಿಪರ್ವದ ರಾಜಧರ್ಮ	„	೨	೬	೦
ಆಪದ್ಧರ್ಮ	„	೦	೮	೦
„ ಮೋಕ್ಷಧರ್ಮ	„	೨	೬	೦

ಭಗವದ್ಗೀತೆ ೮, ಯಯಾತಿರಾಯನಚರಿತ್ರೆ ೩ ೬

ಎಂ ರಂಗಯ್ಯ ಅಂಡ್ ಸನ್ಸ್
ರಾಲೀಬಾಗ್‌ರೋಡ್,
ಬೆಂಗಳೂರು

ಸನ್ ೧೮೯೧ ರಲ್ಲಿ ಸ್ಥಾಪಿಸಲ್ಪಟ್ಟದ್ದು.

ಕೆನರು ಅಂಡ್ ಮೈಸೂರ್ ಟ್ರೇಡಿಂಗ್ ಏಜನ್ಸೀ ಆಫೀಸ್, ಮುಂಬಯಿ.

ಇವರು ತಯಾರಿಸಿರುವಂಥ—

ಧನ್ವಂತರಿ ತೈಲ.

ಕಳೆದ ಜನವರಿ ತಿಂಗಳೊಂದರಲ್ಲಿ ೩,೧೦೦ ಬಾಟ್ಲಿಗಳು ಖರ್ಚಾದವು. ಈ ತೈಲದ ಮಹತ್ವವನ್ನು ಕುರಿತು, ನಾವಿಗ ಹೆಚ್ಚಿಗೆ ವರ್ಣಿಸಬೇಕೆಂದೂ ಯಾಕೆಂದರೆ, ಯಾರು ಈ ತೈಲವನ್ನು ಉಪಯೋಗಿಸುತ್ತಾರೋ ಅವರಿಗೆ ಒಂದೆರಡು ದಿವಸಗಳಲ್ಲಿಯೇ ಇದರ ಅಪ್ರತಿಮವಾದ ಗುಣವು ಸಹಜವಾಗಿ ಅನುಭವಕ್ಕೆ ಬರುವದು ಆದಾಗ್ಯೂ ಇದರ ಮುಖ್ಯವಾದ ಉಪಯೋಗವನ್ನು ತಿಳಿಸುವದು ನಮ್ಮ ಕರ್ತವ್ಯವಾಗಿರುತ್ತದೆ

ಈ ನಮ್ಮ "ಧನ್ವಂತರಿ ತೈಲವನ್ನು" ಪ್ರತಿದಿನ ತಲೆಗೆ ಹಾಕಿಕೊಂಡರೆ ಮಿದುಳಿನಲ್ಲಿರುವ ಉಷ್ಣತೆಯನ್ನು ಪರಿಹರಿಸುವದಲ್ಲದೇ, ಕಣ್ಣಿಗೂ ಮಿದುಳಿಗೂ ತಣುಕರಿಸಿ, ಚಿತ್ತಕ್ಕೆ ಶಾಂತಿಯನ್ನುಂಟುಮಾಡುವದು ಮತ್ತು ಕಣ್ಣುಗಳಿಗುಂಟಾಗುವ ಸಾಮಾನ್ಯವಾದ ವಿಕಾರಗಳನ್ನೆಲ್ಲ ಪರಿಹರಿಸುವದು ದೃಷ್ಟಿಗೆ ತೀಕ್ಷ್ಣತೆಯುಂಟಾಗುವದು

ಹೆಚ್ಚಾಗಿ ಓದತಕ್ಕವರಿಗೂ, ಒಂದೇ ಸಮನಾಗಿ ಕಣ್ಣಿಟ್ಟು ಕೆಲಸ ಮಾಡತಕ್ಕ ಕಸಬುಗಾರರಿಗೂ, ಕಣ್ಣುಗಳಲ್ಲಿ ನೀರು ಸುರಿಯುವವರಿಗೂ, ಉರಿಗಣ್ಣಿನವರಿಗೂ, ಚಿತ್ತವ್ಯಗ್ರವಾದವರಿಗೂ, ಅತ್ಯಂತ ಗುಣಕಾರಿಯಾಗಿರುವದು ಈ ತೈಲದಲ್ಲಿರುವ ಇನ್ನೊಂದು ಅಪ್ರತಿಮವಾದ ಶಕ್ತಿಯೇನೆಂದರೆ—ಕೂದಲುಗಳನ್ನು ನಯವಾಗಿಯೂ, ಹೊಳೆಯುವಂತೆಯೂ, ಮಾಡುವದಲ್ಲದೇ ಬೆಳವಣಿಗೆಯನ್ನು ಹೆಚ್ಚಿಸುವದು. ಕೂದಲುಗಳ ಬೇರುಗಳನ್ನು ಭದ್ರಮಾಡಿ ಅವು ಉದುರಿಹೋಗದಂತೆ ಮಾಡುವದು

ಪ್ರತಿಯೊಂದು ಬಾಟ್ಲಿಯೊಳಗೆ ೨೬ ತೊಲೆ ತೈಲವಿರುವದರಿಂದ ಒಬ್ಬನವನಿಗೆ ೨ ತಿಂಗಳು ಹೆಚ್ಚಿಕೆಯ್ಯಕ್ಕೆ ಸಾಕಾಗುವದು. ಎಷ್ಟಾದರು ಸಹ ಕೋಪೀಷ್ಟರಿಗೆ ಅನುಕೂಲವಾಗಿರಬೇಕೆಂಬುದಕ್ಕಾಗಿ ಪ್ರತಿಯೊಂದು ಬಾಟ್ಲಿಗೆ ೧೦ ಆಣೆ ಕ್ರಯವಿಟ್ಟರಿವೆ ೨ ಬಾಟ್ಲಿಗಳುಳ್ಳ ೧ ಪೆಟ್ಟಿಗೆಗೆ ೩।। ರೂ ಮಾತ್ರ ಪ್ರತಿಯೊಬ್ಬ ಕುಟುಂಬಿಗೂ, ಈ ತೈಲವನ್ನು ಉಪಯೋಗಿಸುವದು ಅವಶ್ಯವಾಗಿರುತ್ತದೆ. ಮಕ್ಕಳು ಮರಿಗಳಿಗೆ ಸಹ ಈ ತೈಲವು ಸುಖಪ್ರದವಾಗಿರುತ್ತದೆ.

ಈ ತೈಲ ಮತ್ತು ಈ ಕೆಳಗೆ ಬರೆಯುವಂಥ ಔಷಧಗಳು, ಪ್ರೆಸ್ಸು, ಮುತ್ತು, ರತ್ನ, ಬಂಗಾರ, ಬೆಳ್ಳಿ ಮುಂತಾದ ಸಾಮಾನುಗಳನ್ನು ಪಡೆಯಬೇಕೆನ್ನುವವರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬೇಕು

ಮ್ಯಾನೇಜರ್, ಕೆನರು ಅಂಡ್ ಮೈಸೂರು ಟ್ರೇಡಿಂಗ್ ಏಜನ್ಸಿ ಆಫೀಸ್, ಮಾರ್ಕೆಟ್ ಫೋರ್ಟ್ ಮುಂಬಯಿ. ಈ ತೈಲವನ್ನು ನಮ್ಮ ವಿನಹ ಅನ್ಯರೂ ಮಾಡಲಾರರು. ನಮ್ಮ ಹೆಸರಿನ ಗುರ್ತನ್ನು ನೋಡಿ ತೆಗೆದುಕೊಳ್ಳಬೇಕು ಬೇರೆಯವರ ಎಣ್ಣೆಗಳನ್ನು ಈ ಹೆಸರನ್ನಿಟ್ಟು ಮಾರುತ್ತಿದ್ದರೆ ಜಾಗ್ರತೆ ಜವಾಬು!

ಔಷಧಗಳು	ರೂ ಆ	ಪ್ರೆಸ್ಸುಗಳು	ರೂ ಆ
ನಯನಾಮೃತಭಸ್ಮ ಚಟ್ಟಿ ೧ ಕ್ಕೆ	೧—೬	ಮಹಿಳೆಯರಿಗೆ ಮುದ್ದು	೨—೮
ನಯನ ಮೃತ ಕಡಿಗೆ	೧—೬	ಕರ್ಚೀಫಿನ ಬಂಗ್‌ಕೇಫು	೪—೬
ವರ್ಣಸ್ತನವರಕ ಅಪ್ರತಿಮತೈಲ	೧—೦	ಡಿಟೋ ಆರ್ಗನು	೩—೮
ದಂತಮಂತಕಸಾಪರತೈಲ	೧—೦	ಡಿಟೋ ಪರ್ಮೇಕೋಟು (ಇಂಗ್ಲೀಷಿನವರು)	೩—೬
ಪ್ರಮೇಹಭಸ್ಮವು	೨—೧೨	ಪಿಸ್ತನಾದ ಕಚ್ಚೀರಕೋಟು	೨—೮
ವಿವಿಧವಾತಹರಪಟ್ಟಿಕೆಯು	೧—೦	ಡಿಟೋ ಆರ್ಗನು	೨—೮
ಓ ಆನಂದವಿನಿಗುಟಿಕೆ	೩—೮	ಪ್ಯಾಂಟ್ ಕಮಿಸ್	೧—೩
ಬಿಚಿಣಾದ ತೈಲ	೦—೮	ಡಿಟೋ ಟನಿಯ	೨—೩
ಸುಗಂಧರೋಕರಂಪಾದಗಳು	೦—೪	ಟೀ (ಇಂಗ್ಲೀಷಿನವರು) ಪರ್ಸ್	೧—೨
ಕಜ್ಜಿಮುಲಾಮು	೦—೨		

ತಮಿಳುಕರದ ಚಂದ್ರಕಾಂತಿ ತಿಲಯ ಕನ್ನಡಕಗಳ ಕ್ರಯ ರೂ. ೧೦—೩।।—೪—೪।। ಉತ್ತಮವಾದ ಮೋದು" ಬಂಡಿ ರಸಿಕರ ಹೆಸರಿನವೆ (೧ ಪ್ಯಾಕ ಬ ಮಿಕ್ಸ್ಚರು) ಕ್ರಯ ರೂ ೬

ವೃತ್ತಾಂತ ಪತ್ರಿಕೆ

ಚಂದಾ ನಿರ್ಣಯ.

	ರೂ ಆ ಪೈ
ಸ್ಥಳದವರಿಗೆ ವರ್ಷ ಒಕ್ಕೆ	೧—೦—೦
ಪರಸ್ಥಳದವರಿಗೆ ವರ್ಷ ಒಕ್ಕೆ	೧—೧೨—೦
ಬಿಡಿ ಪ್ರತಿ ಒಕ್ಕೆ	೦—೦—೬

ಈ ಪತ್ರಿಕೆಯು ಮೈಸೂರು ರಾಜಧಾನಿಯಲ್ಲಿ ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು. ಇದರ ಚಂದಾ ಕೊಡತಕ್ಕವರು ಮುಂಗಡವಾಗಿ ಕೊಡಬೇಕು. ಗಾರರು ಈ ಪತ್ರಿಕೆಗೆ ಇಷ್ಟು ಅಲ್ಪ ಮೌಲ್ಯವನ್ನು ನಿಶ್ಚಯಿಸಿದ್ದೇವೆ ಈ ಪತ್ರಿಕೆಯನ್ನು ಅಪೇಕ್ಷಿಸುವವರು ಚಂದಾಹಣವನ್ನು ಯಾವಾಗ್ಯೂ ಮುಂಗಡವಾಗಿ ಕಳಿಸಬೇಕು.

ಎಡಿಟರ್,
ವೃತ್ತಾಂತಪತ್ರಿಕೆ

ಜಗದ್ಗುರುವಿನ ಚರಿತ್ರ ಸಂಗ್ರಹ.

THE LIFE

OF

The Lord Jesus Christ

Selected incidents from the Gospels,

FREELY PARAPHRASED

ನೂತನವಾಗಿ ರಚಿಸಲ್ಪಟ್ಟ ೩೩ ಭಾಗಗಳುಳ್ಳ ಈ ಪುಸ್ತಕವನ್ನು ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್ಸಿಗೆ ಬರೆದು ತರಿಸಿಕೊಳ್ಳಬಹುದು

ಕ್ರಯ (ಅಂಚೆಯ ಹಾಸಲ ಸಹಿತ).

೧೦೦ ಪ್ರತಿಗಳಿಗೆ	೫—೦—೦
ಬಿಡಿ ಪ್ರತಿಗೆ	೦—೧—೦

ಸುಮಾರು ೨೦ ಪ್ರತಿಗಳನ್ನು ಕೊಂಡರೆ ಅಂಚೆ ಹಾಸಲಿನಿಂದ ಬಿಡುಗಡೆಯು.

ಟೋಪಿಗಳು!

ಟೋಪಿಗಳು!! WOOL CAPS ಟೋಪಿಗಳು!!

ಹಾಸನದ ಅರ್ಫನೇಜಿನಲ್ಲಿ ತಯಾರಾಗುವಂಥ ಅಚ್ಚ ಕಂಬಳೀ ನೂಲಿನ ಟೋಪಿಗಳೇ (Wool Caps) ನಮ್ಮ ಆಫೀಸಿನಲ್ಲಿ ಮಾರಿಕೆಗೆ ಸಿದ್ಧವಾಗಿರುತ್ತವೆ. ಕ್ರಯದಿ—೧ ರೂ. ೨ ಆಣೆ ಇಂದ ೧ ರೂ. ೬ ಆಣೆಗಳ ವರಿಗೂ ಬೇರೆ ಬೇರೆ ರಕಂಗಳುಂಟು. ಸ್ಥಳದವರು ಖುದ್ದು ನೋಡಿ ಕೊಳ್ಳಬಹುದು. ಪರಸ್ಥಳದವರು ಮುಂಗಡವಾಗಿಯೇ ಹಣ ಕಳುಹಿಸಿದಲ್ಲಿ ತ್ವರೆಯಲ್ಲಿ ಛಾಪಾ ಮೂಲಕ ಕಳುಹಿಸುತ್ತೇವೆ. ಛಾಪಿಂಗೆ ಛಾರ್ಜ್ ಬೇರೆ ಕೊಡಬೇಕು. ಹೊದಿಕೆ ಮೇಲ್ಭಾಗದಲ್ಲಿ ಟೋಪಿಗೆ ಸಂಬಂಧವಾದದ್ದು ಎಂದು ಬರಯಬೇಕು.

ಮ್ಯಾನೇಜರ್,
ವೆಸ್ಲಿಯನ್ ಮಿಷನ್ ಪ್ರೆಸ್,
ಮೈಸೂರು.

ವೃತ್ತಾಂತ ಪತ್ರಿಕೆ.

ಸಾಗರೆಯ ಜೂನ್ ೭ನೇ ಗುರುವಾರ.

ಮ್ಯುನಿಸಿಪಲ್ ಮೀಟಿಂಗು.

ಕಳೆದ ಜೂನ್ ೩ನೇ ತಾರೀಖು ಶನಿವಾರ ಪ್ರಾತಃಕಾಲ ಮೈಸೂರು ಮ್ಯುನಿಸಿಪಲ್ ಬೋರ್ಡ್ ಮೀಟಿಂಗು ನಡೆಯಿತು. ಪ್ರೆಸಿಡೆಂಟ್ರವ ಮ|| ರಂಗಸ್ವಾಮಯ್ಯಂಗಾರ್ರು ಆರೋಗ್ಯವಾಗಿಲ್ಲವಾದ್ದರಿಂದ ಅವರು ಮೀಟಿಂಗಿಗೆ ದಯಮಾಡಿಸಲಿಲ್ಲ. ಮ|| ಕುಪ್ಪುಸ್ವಾಮಿ ಮೊದಲಿಯಾರ್ರವರು, ಡಾಕ್ಟರ್ ಭೋರ್ಸ್ ಸಾಹೇಬರವರು, ಮ|| ಪೀರಸಾಹೇಬರವರು, ಮ|| ಎಂ. ಎಸ್. ನರಸಿಂಹ ಅಯ್ಯಂಗಾರ್ರವರು, ಮ|| ಎಂ. ವೆಂಕಟಕೃಷ್ಣಯ್ಯನವರು ಮ|| ಎಸ್. ಕೃಷ್ಣರಾಯರು, ಮ|| ಎ. ಸುಬ್ರಾಯರವರು, ಮ|| ಎ. ರಾಮಣ್ಣನವರು, ಮ|| ಅಣ್ಣಯ್ಯ ಪಂಡಿತರವರು, ಮ|| ಲಿಂಗರಾಜ ಅರಸಿನವರು, ಮ|| ನಾರಾಯಣಸ್ವಾಮಿ ಮೊದಲಿಯಾರ್ರವರು, ಮ|| ತಿಮ್ಮೇಗೌಡರು, ಮ|| ಲಿಂಗಣ್ಣನವರು ಇವರುಗಳು ಹಾಜರಾಗಿದ್ದರು. ಮ|| ಕುಪ್ಪುಸ್ವಾಮಿ ಮೊದಲಿಯಾರ್ರು ಮೆಂಬರುಗಳ ತಾತ್ಪರ್ಯಕ್ಕನುಸಾರವಾಗಿ ಅಗ್ರಾಸನವನ್ನು ವಹಿಸಿದರು. ಮೇ ತಿಂಗಳಿನ ಖರ್ಚು ವೆಚ್ಚಿನ ಲೆಕ್ಕವು ಓದಲ್ಪಟ್ಟು ಸ್ಥಿರವಾಯಿತು. ನೇಟಿವ್ ಆಸ್ಪತ್ರೆಗೆ ಸೇರಿರತಕ್ಕ ಮ|| ರಂಗಸ್ವಾಮಯ್ಯನವರು ಮಂಡೀ ಮೊಹಲ್ಲೆಯಲ್ಲಿರತಕ್ಕ ಒಂದು ಮ್ಯುನಿಸಿಪಲ್ ಕಟ್ಟಡವನ್ನು ತಮಗೆ ಕೊಡಬೇಕೆಂದು ಬರೆದುಕೊಂಡಿದ್ದರು ಸದರಿ ಕಟ್ಟಡವು ಮಂಡೀಮೊಹಲ್ಲೆಯಲ್ಲಿ ಮ್ಯುನಿಸಿಪಲ ಸ್ಕೂಲಾಗಿ ಉಪಯೋಗಿಸುವದರಿಂದ ಅದನ್ನು ಅವರಿಗೆ ಕೊಡಕೂಡದೆಂದು ನಿರ್ಧರಿಸಲಾಯಿತು. ಕೃಷ್ಣರಾಜ, ಮಂಡಿ, ದೇವರಾಜ, ಚಾಮರಾಜ—ಈ ಮೊಹಲ್ಲೆಗಳಿಗೆ ಸಬ್ ಕಮಿಟಿಯವರು ಗೊತ್ತುಮಾಡಿದ್ದ ಸ್ಮಶಾನ ಭೂಮಿಗಳನ್ನು ಬೋರ್ಡಿನವರು ಒಪ್ಪಿದರು. ಚಾಮುಂಡೀ ಬೆಟ್ಟದಬಳಿಯಲ್ಲಿದ್ದ ಸ್ಮಶಾನವನ್ನು ತಪ್ಪಿಸಿ ಕೃಷ್ಣಾಗ್ರವ ಎದುರಿಗಿರತಕ್ಕ ಪ್ರದೇಶವನ್ನು ಪ್ರೆಸಿಡೆಂಟ್ರವರು ಒಂದು ಸಾವಿರದ ಮೂವತ್ತು ಕೊಟ್ಟು ತೆಗೆದುಕೊಂಡು, ಅಲ್ಲಿಗೆ ಆ ಸ್ಮಶಾನವನ್ನು ಬದಲಾಯಿಸಿದರು. ಈಗ ಹೊಸದಾಗಿರತಕ್ಕ ಜೈಲಿನ ರೋಡಿಗೆ ಸಮೀಪದಲ್ಲೇ ಸ್ಮಶಾನವಿದ್ದದರಿಂದ ಈ ಬದಲಾವಣೆಯು ನಡೆಸಬೇಕಾಯಿತು. ಈಗ ಬದಲಾಯಿಸಿರತಕ್ಕ ಸ್ಮಶಾನವು ನೀರು ನೆರಳು ಇವೆರಡರ ವಿಷಯದಲ್ಲಿಯೂ ಪೂರ್ವದ ಸ್ಮಶಾನಕ್ಕಿಂತಲೂ ಉತ್ತಮವಾಗಿದೆ. ಇದಲ್ಲದೆ ಈಗ ಸಾವಿರರೂಪಾಯಿಗೆ ಕೊಂಡುಕೊಂಡಿರತಕ್ಕ ಸ್ಥಳದಲ್ಲಿ ಸ್ಮಶಾನಕ್ಕೆ ಬೇಕಾದಷ್ಟು ಬಿಟ್ಟುಕೊಂಡು ಬಾಕೀ ಭಾಗವನ್ನು ವಿಕ್ರಯಿಸಿದಾಗ್ಯೂ ಸದರಿ ಮೊಬಲಗು ಬರಬಹುದೆಂಬದಾಗಿ ಮ|| ಅಣ್ಣಯ್ಯಪಂಡಿತರು ಹೇಳುತ್ತಾರೆ. ಆದ್ದರಿಂದ ಈ ಏರ್ಪಾಡು ಉತ್ತಮವಾದದ್ದೆಂದೇ ತೋರುತ್ತೆ. ಮ|| ಎ. ರಾಮಣ್ಣನವರು ದೇವರಾಜಮೊಹಲ್ಲೆಯ ಮಾರ್ಕೆಟ್ಟಿನ ಅಂಗಡಿಗಳಿಗೆ ಹಿಂದುಗಡೆಯೂ ಮಗ್ಗುಲಲ್ಲಿಯೂ ಗೋಡೆಗಳನ್ನು ತಾಕಿಸಿ ಬಾಗಿಲುಗಳನ್ನು ಇಡಿಸಬೇಕೆಂಬದಾಗಿಯೂ, ಸದರಿಮಾರ್ಕೆಟ್ಟಿನ ಪಶ್ಚಿಮಭಾಗದಲ್ಲಿ ಕಟ್ಟಬೇಕೆಂದು ಮಾಡತಕ್ಕ ಪ್ಲಾನಿನ ವಿಷಯದಲ್ಲಿಯೂ, ತಿಳಿಯಹಾಕಿಸುವದಕ್ಕೆ ಮೊಹಲ್ಲೆಗೆ ಬಿಟ್ಟರು ಅಥವ ಬಿಟ್ಟರೆ ನೇಟಿವ್ ಪಂಡಿತರನ್ನು ನೇಮಕವಾಗಿ ಆಸ್ಪತ್ರೆಗೆ ಸೇರಿದ ವಿಷಬಾಧಾಕಿತ್ಸವನ್ನು ವಜಾಮಾಡಬೇಕೆಂಬದಾಗಿಯೂ ಸಲಹೆಗಳನ್ನು ಮಾಡಿ ಇದ್ದರು. ಇವುಗಳಲ್ಲಿ ಮೊದಲನೇ ಎರಡು ಸಲಹೆಗಳು ಅಂಗೀಕಾರ ಆದವು ಮೂರನೇದರ ವಿಷಯವಾಗಿ ಚರ್ಚೆಯಾಗಲು ಈ ವಿಷಯಕತಕ್ಕವರ ಜೊತೆಗೆ ಇನ್ನೊಬ್ಬ ಒಬ್ಬನನ್ನು ಜಾಸ್ತಿ ಮಾಡಿ ಆದಕ್ಕೆ ನೇಟಿವ್ ಪಂಡಿತರನ್ನೇ ತಕ್ಕಯೋಗ್ಯತೆಯುಳ್ಳವರ್ಯಾವರೂ ಸಿಕ್ಕದೆ ಇದ್ದ ಪಕ್ಷದಲ್ಲಿ ಯೋಗ್ಯತಾಸಿದ್ಧಿಯುಳ್ಳವರ್ಯಾರು ದೊರೆತರೂ ಅವರನ್ನು ನೇಮಿಸಿಕೊಳ್ಳಬಹುದಾದು ಪರ್ಯಾಲೋಚಿಸಿದರು. ಚಾಮರಾಜಮೊಹಲ್ಲೆಯ ಮ್ಯುನಿಸಿಪಲ್ ಕಮಿಷನರು ಮ|| ಚಿಕ್ಕಣ್ಣನವರು ರಾಜೀನಾಮೆ ಕೊಟ್ಟದ್ದರಿಂದ ಆ ಕೆಲಸಕ್ಕೆ ಬೇಕಾದ ಯೋಗ್ಯತಾ ಸಿದ್ಧಿಯೂ, ಪ್ರಸಿದ್ಧಿಯೂ ಉಳ್ಳವರು ಮ|| ಅಸ್ಸಿಸ್ಟೆಂಟ್ ಎಸ್. ನರಸಿಂಗರಾಯರಿದ್ದಾರೆ. ಅವರನ್ನು ನೇಮಿಸುವದು ಉತ್ತಮವೆಂಬದಾಗಿ ಮ|| ಎಸ್. ಕೃಷ್ಣರಾಯರವರು ಹೇಳಿದರು. ಅದನ್ನು ಮ|| ಎ. ಸುಬ್ರಾಯರು ಅನುಮೋದಿಸಿದರು. ಅದಕ್ಕೆ ಮ|| ಲಿಂಗಣ್ಣನವರು ಆ ಮೊಹಲ್ಲೆಗೆ ವರ್ತಕರನ್ನೇ ನೇಮಿಸಬೇಕು. ಇನ್ಯಾರನ್ನೂ ನೇಮಿಸಕೂಡದೆಂದು ಹೇಳಿದರು. ಆದರಮೇಲೆ ತುಂಬಾ ವಾದಚರ್ಚೆನಡೆಯಿತು. ಕೊನೆಗೆ ಮ|| ನರಸಿಂಗರಾಯರವರನ್ನೇ ನೇಮಿಸಬೇಕೆಂಬದಾಗಿ ಬಹುಮತವಾಯಿತು. ಈ ಬಹುಮತಕ್ಕೆ ಪಕ್ಷವಾಗಿ ೮ ಜನರು ಓಟುಮಾಡಿದರು. ಇದಕ್ಕೆ ವಿರೋಧವಾಗಿ ಮ|| ಲಿಂಗಣ್ಣನವರೂ, ಮ|| ನಾರಾಯಣಸ್ವಾಮಿ ಮೊದಲಿಯಾರ್ರೂ ಇವರಿಬ್ಬರೂ ಓಟುಮಾಡಿದರು. ಮ|| ಲಿಂಗರಾಜೇ ಅರಸಿನವರೂ, ಮ|| ಅಣ್ಣಯ್ಯಪಂಡಿತರೂ ಈ ಕೆಲಸಕ್ಕೆ ಯೋಗ್ಯತಾಸಿದ್ಧಿ ಪ್ರಸಿದ್ಧಿಗಳ ವಿಷಯದಲ್ಲಿ ಮ|| ನರಸಿಂಗರಾಯರು ಸಂಪೂರ್ಣವಾದ ಅರ್ಹರಾಗಿಯುಳ್ಳವರೆಂದು ಹೇಳಿದರು. ಆದರೆ ಯಾವ ಪಕ್ಷಕ್ಕೂ ತಮ್ಮ ಓಟ ಕೊಡಲಿಲ್ಲ. ಮ್ಯುನಿಸಿಪಾಲಿಟಿಗೆ ಸೇರಿದ್ದ ಕ್ಯಾಟಲ್ ಪೌಂಡುಗಳುಳ್ಳಿರತಕ್ಕ ಸರ್ಕಾರಿ ಘಾರಂಗೆ ಮಾಡಿದ ೧೨ ರೂಪಾಯಿನ ಪ್ರಕಾರ ಕೊಡಬೇಕಾಗಿ ಸಿವಿಲ್ ಸರ್ಜನ್‌ರವರು ಬರದಿದ್ದ ಪ್ರಕಾರ ಅನ್ಯಥಾ ಬೇರೆ ಬಹುಮತ್ಯವು ಆಗುವವರೆಗೂ ಕೊಟ್ಟಿರಬಹುದೆಂದು ತೀರ್ಮಾನವಾಯಿತು. ಸ್ಪೆಷಲ್ ಇಂಪ್ರೂವ್ಮೆಂಟ್ ಡಿವಿಜನ್ ಎಕ್ಸಿಕ್ಯೂಟಿವ್ ಇಂಜನಿಯರವರು ಬೇಸಿಗೆಯಲ್ಲಿ ಕುಕ್ಕರಹಳ್ಳಿ ಕೆರೆಯಿಂದ ನೀರುಎತ್ತಿಸಿ ಪಟ್ಟಣಕ್ಕೆಲ್ಲಾ ನೀರು ಸರಬರಾಜು ಮಾಡಿದ್ದಕ್ಕಾಗಿ ಆಗಿರುವ ೧,೧೧೧ ರೂಪಾಯಿ ಖರ್ಚು ಮ್ಯುನಿಸಿಪಾಲಿಟಿಯವರು ಕೊಡಬೇಕೆಂದು ಬರೆದುಕೊಂಡಿದ್ದರು. ಇನ್ನುಮೇಲಾದರೂ ಇಂಥಾ ಕೆಲಸಗಳು ಸರ್ಕಾರದವರು ಮಾಡಿಸುತ್ತಿದ್ದರು. ಆದಾಗ್ಯೂ ದಯವಿಟ್ಟು ಈ ಮೊಬಲಗನ್ನು ಸರ್ಕಾರದಿಂದಲೇ ಬರಮಾಡಿಕೊಳ್ಳಬೇಕು ಎಂಬದಾಗಿ ನಿರ್ಧರಿಸಿದರು. ೧೮೯೩—೯೪ನೇ ಇಸವಿಯಲ್ಲಿ ಪಟ್ಟಣದಲ್ಲಿ ಬೀದಿಗಳನ್ನು ಪತ್ತಿಸುವ ಬಗ್ಗೆ ಟೆಂಡರುಗಳು ಬರುವಂತೆ ಮಾಡಿದ್ದರು. ಕಂಟ್ರಾಕ್ಟಿಗಾಗಿ ಟೆಂಡರುಗಳು ಕೊಟ್ಟಿದ್ದವರೂ ಹಾಜರಾಗಿದ್ದರು. ಕಮಿಷ್ನರ್ ಟೆಂಡರುದಾರರಿಂದ ೩೦೦ ರೂಪಾಯಿ ಹಾಜರು ಮಾಡಿಸಿಕೊಂಡು ಅವರಿಂದ ಕ್ರಮವಾದ ವಸ್ತೈವಜು ಬರೆಸಿಕೊಂಡು ಕಂಟ್ರಾಕ್ಟರಿಗೆ ವೈಸ್‌ಪ್ರೆಸಿಡೆಂಟ್ರವರು ಈ ಕಂಟ್ರಾಕ್ಟು ಕೊಡಬಹುದೆಂದು ಗೊತ್ತುಮಾಡಿದರು. ದೇವರಾಜಮೊಹಲ್ಲೆಯಲ್ಲಿರತಕ್ಕ ದುರ್ಗೈಯ್ಯನ ಕೊಳವು ಜನರಿಗೆ ಅಪಾಯಕರವಾಗಿರುವದರಿಂದ ಅದನ್ನು ಮುಚ್ಚಿಸಬೇಕು; ಇಲ್ಲವೆ ಅದರ ವಹಿವಾಟಿಯನ್ನು ಮ್ಯುನಿಸಿಪಲ್ ಬೋರ್ಡಿಗೆ ಬಿಟ್ಟರೆ ಅವರು ಅದನ್ನು ಮುಚ್ಚಿಸಿ ಆ ಸ್ಥಳವನ್ನು ವಿಕ್ರಯಿಸುವರು; ಮುಚ್ಚುವದಕ್ಕೆ ಆಗುವ ಖರ್ಚನ್ನು ಉತ್ತಮವಾಗಿ ಮಾಡುವರು ಎಂಬದಾಗಿ ಬೋರ್ಡಿನವರಲ್ಲಿ ಒಂದು ಯೋಚನೆ ಇತ್ತು. ಈ ಯೋಚನೆಗೆ ಅನುಸಾರವಾಗಿ ದುರ್ಗೈಯ್ಯನ ವಾರಸುದಾರನಾದ ವೆಂಕಟ್ರಮಣಯ್ಯನಿಗೆ ನೋಟೀಸೂ ಕೊಟ್ಟಿತ್ತು. ಆತನು ಕೊಳವನ್ನು ಮುಚ್ಚಿಸಿಯಿ, ಅವರ ಬೀದೀ ಕಡೆಗಿರತಕ್ಕ ನಿವೇಶನವನ್ನು ದುರ್ಗೈಯ್ಯನು ಕಟ್ಟಿಸಿರತಕ್ಕ ಒಂದು ದೇವಸ್ಥಾನದ ಪ್ರಯೋಜನಾರ್ಥವಾಗಿ ಮಳಿಗೆಗಳನ್ನು ಕಟ್ಟುವದಕ್ಕೆ ನಿವೇಶನವನ್ನು ಕೊಡಿ ಎಂಬದಾಗಿ ಕೇಳಿಕೊಂಡಿದ್ದನು. ಇದು ಚೆನ್ನಾಗಿ ಕೆರೆಯದಾಗಿ ಧರ್ಮಾರ್ಥವಾಗಿ ಕಟ್ಟಿಸಿರತಕ್ಕ ಕೊಳದ ಹಕ್ಕು ಈ ವಾರಸುದಾರನಿಗಿರುವದಿಲ್ಲ. ಆ ಸ್ಥಳವನ್ನು ಮುಚ್ಚುವದಕ್ಕಾಗುವ ಖರ್ಚಿಗೆ ಬೇಕಾದಷ್ಟು ಭೂಮಿಯನ್ನು ಮಾರಿ ಉಳಿದ ಭೂಮಿಯಲ್ಲಿ ದುರ್ಗೈಯ್ಯನ ಹೆಸರಿನಲ್ಲಿ ಒಂದು ಕಾರಂಜಿಯನ್ನು ಕಟ್ಟಿಸಿ ಆ ಭಾಗದಲ್ಲಿರತಕ್ಕ ಜನಗಳಿಗೆ ಕೊಳಾಯಿ ನೀರು ದೊರೆಯುವಂತೆ ಮಾಡುವದರಿಂದ ಈ ಕೊಳವನ್ನು ಕಟ್ಟಿಸಿದವನ ಧರ್ಮವು ಉಜ್ಜೀವನವಾಗುವದಲ್ಲದೆ ಈಗಿರುವಂತೆ ಕೊಳವನ್ನು ಬಿಡುವದರಿಂದ ಉಂಟಾಗಿರತಕ್ಕ ಅಪಾಯವನ್ನೂ ನಿವಾರಣೆ ಮಾಡಿದಂತಾಗುತ್ತದೆ. ಈ ವಿಷಯವನ್ನು ವೈಸ್‌ಪ್ರೆಸಿಡೆಂಟ್ರವರು ಪರ್ಯಾಲೋಚಿಸಿ ಆಗುವರೀತಿ ಮಾಡತಕ್ಕದ್ದೆಂದು ನಿರ್ಧರಿಸಲಾಯಿತು. ಮಿಕ್ಕ ವಿಷಯಗಳೆಲ್ಲಾ ಮುಂದಣ ಮೀಟಿಂಗಿಗೆ ಅಡ್ಜರ್ನ್ ಮಾಡಲ್ಪಟ್ಟವು.

ಮನುಧರ್ಮಶಾಸ್ತ್ರ.

ಹಿಂದುಗಳ ವೇದಗಳಲ್ಲಿ ಶ್ರುತಿಗಳೆಂತಲೂ ಸ್ಮೃತಿಗಳೆಂತಲೂ ಎರಡು ವಿಧಗಳುಂಟು ಶ್ರುತಿಗಳಲ್ಲಿ ಮಂತ್ರಗಳು, ಬ್ರಾಹ್ಮಣಗಳು, ಉಪನಿಷತ್ತುಗಳು ಎಂದು ಮೂರುವಿಧ ಇತರ ಹಿಂದೂ ಗ್ರಂಥಗಳೆಲ್ಲಾ ಸ್ಮೃತಿಗಳಿಗೆ ಸೇರಿದವುಗಳಾಗಿವೆ ಇವುಗಳಲ್ಲಿ ಮನುಸ್ಮೃತಿಯು ಬಹಳ ವಿಶೇಷತ್ವವನ್ನು ಹೊಂದಿದೆ ಇದು ಹಿಂದುಗಳ ಆಧುನಿಕ ನ್ಯಾಯಶಾಸ್ತ್ರವಾಗಿರುವದರಿಂದ ಇದನ್ನು ಬಹಳ ಪ್ರಾಮುಖ್ಯವಾದದ್ದೆಂದು ಎಣಿಸುತ್ತಾರೆ ಈ ಮಾನವಧರ್ಮಶಾಸ್ತ್ರಕ್ಕೆ ವ್ಯತಿರಿಕ್ತವಾಗಿರುವ ಸ್ಮೃತಿಯನ್ನು ಯಾರೂ ಒಪ್ಪುವದಿಲ್ಲ ಹಿಂದೂ ನ್ಯಾಯಶಾಸ್ತ್ರಗಳಲ್ಲೆಲ್ಲಾ ಇದೇ ಮುಖ್ಯವಾಗಿರುವದಲ್ಲದೆ ಇದು ಪಾರಂಪರ್ಯದಲ್ಲಿಯೂ ವೇದಗಳಿಗೆ ಸಮಾನವಾಗಿದೆ ಎಂದು ಹೇಳಿ ಇದೆ ಪ್ರತಿಯೊಬ್ಬ ಬ್ರಾಹ್ಮಣನೂ ಹಿಂದುವರ್ತಿಯಾದವರೂ ಇದನ್ನು ಪಠಿಸಬೇಕು ಯಾವ ಮನೆತನದಲ್ಲಿ ಹಲವು ತಲೆಗಳವರೆಗೂ ಈ ಗ್ರಂಥವನ್ನು ಪಠಿಸದೆ ಇರುತ್ತಾರೋ, ಆ ಮನೆತನದ ಜನರು ಬ್ರಾಹ್ಮಣರೆನ್ನಿಸಿಕೊಳ್ಳುವದಕ್ಕಾಗುವದಿಲ್ಲವೆಂದು ಏರಿದೆ ಮಾನವಧರ್ಮಶಾಸ್ತ್ರದಲ್ಲಿ ೧೨ ಅಧ್ಯಾಯಗಳೂ, ಒಂದು ಲಕ್ಷ ಶ್ಲೋಕಗಳೂ ಇದ್ದವಂತೆ ನಾರದರು ಇವನ್ನು ೧೨ ಸಾವಿರ ಶ್ಲೋಕಗಳಾಗುವಂತೆ ಸಂಗ್ರಹಿಸಿದರಂತೆ ಅದನ್ನು ಪುನಃ ಸುಮತಿ ಎಂಬವರು ೪ ಸಾವಿರ ಶ್ಲೋಕಗಳಿಗೆ ತನ್ನು ಇಳಿಸಿ ಮಾಡಿದರಂತೆ ಆದರೆ ಆ ವ್ಯಕ್ತಿ ... ಸಗಳುವರೂತ್ರ ಈಗ ಪ್ರಚಾರದಲ್ಲಿದೆ ಎಂದು ಹೇಳುತ್ತಾರೆ, ಇದೆಲ್ಲಾ ಸುಳ್ಳುಕಲ್ಪನೆ.

ಸದುಪದೇಶಗಳು

ಈ ಧರ್ಮಶಾಸ್ತ್ರಗಳಲ್ಲಿ ಹೇಳಿರುವ ಅನೇಕ ಆಜ್ಞೆಗಳಲ್ಲಿ ಕೆಲವು ಸತ್ಯೋಪದೇಶಾತ್ಮಕವಾದವುಗಳೇ ಸರಿ ಯಾವನೇವರೆ ವೇದವಂದನೆಯನ್ನು ತಪ್ಪದಾಗಿ ಮಾಡಬಾರದು ; ಸ್ವಯಂನ್ನೇ ಸಮರ್ಥಿಸಬೇಕು, ಕ್ಷಮಿಸಬಾರದು ; ಪರಿಶುದ್ಧನಾಗಿಯೂ, ಜಿತೇಂದ್ರಿಯನಾಗಿಯೂ ಇರಬೇಕು ; ಎಂಬದಾಗಿ ನಾಲ್ಕು ವರ್ಣದವರಿಗೂ ತಿಳಿಸಿರುತ್ತಾನೆ ರಾಜನು, ಜನರ ಕೆಲಸಗಳೂ ತನ್ನ ರಾಜ್ಯದಲ್ಲಿ ನಡೆಯುವಂತೆ ಧೊರಯನು ನೋಡಿಕೊಳ್ಳಬೇಕು, ಮನುಷ್ಯನು ತಾ ಪ್ರಮಾದವ ತಪ್ಪಿತಗಳನ್ನು ಯಾರೂ ನೋಡುವದಿಲ್ಲವೆಂದು ಎಣಿಸುತ್ತಾರೆ ಆದರೆ ಭಗವಂತನು ಸರ್ವಾಂತರ್ಯಾಮಿಯಾಗಿರುವದರಿಂದ ಸಮಸ್ತರೂ ಮಾಡುವ ಕೆಲಸಗಳನ್ನು ಅನುಲಕ್ಷ್ಯವಾಗಿ ನೋಡಿ ತಿಳಿಯುತ್ತಾನೆ ಮನಃಸಾಕ್ಷಿಯನ್ನು ಮಾಡಬೇಕೆಂತಲೂ, ಮಾಡಕೂಡದೆಂತಲೂ ಎರಡು ವಿಧವಾದ ಬೋಧನೆಗಳೂ ಇರುತ್ತವೆ

ದೋಷಗಳು.

ಇವು ಒಳ್ಳೆವಾಗಿವೆ ಇವುಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ತಿಳಿಸುತ್ತೇವೆ ನಿಷ್ಪ್ರಯೋಜನವಾದುದ ಮೂಢಭಕ್ತಿಯನ್ನುಂಟುಮಾಡುವ ಮಾತುಗಳು ಬಹುವಿಶೇಷವಾಗಿರುತ್ತವೆ ಹ್ಯಾಗೆಂದರೆ—“ತಲೆಗೆ ವಸ್ತ್ರವನ್ನು ಕಟ್ಟಿಕೊಂಡು ಭುಜಿಸುವ ಆಹಾರವೂ, ದಕ್ಷಿಣ ದಿಕ್ಕುಮುಖವಾಗಿ ತಿನ್ನುವ ಆಹಾರವೂ, ಪಾದರಕ್ಷೆಗಳನ್ನು ಹಾಕಿಕೊಂಡು ತಿನ್ನುವ ತಿಂಡಿಯೂ ರಾಕ್ಷಸಾಹಾರವೆನ್ನಿಸಿಕೊಳ್ಳುವದು”

“ಗುರುವು ಪಕ್ಕದಲ್ಲಿ ಪಾಠ ಹೇಳುತ್ತಿರುವಾಗ ಅವರುಗಳ ಮಧ್ಯೆ ಹಸುವು, ಕಪ್ಪೆ, ಬೆಕ್ಕು, ಹಾವು, ಇಲಿ ಮುಂತಾದವುಗಳಲ್ಲಿ ಯಾವದೊಂದಾದರೂ ಬಂದರೆ ಒಂದುದಿನ ಪಾಠವನ್ನು ನಿಲ್ಲಿಸಬೇಕೆಂದು ತಿಳಿಯತಕ್ಕದ್ದು”

ಮಾನವಧರ್ಮಶಾಸ್ತ್ರದಲ್ಲಿ ಅತಿ ಕ್ರೂರವಾದ ಶಿಕ್ಷೆಗಳು ವಿಧಿಸಲ್ಪಟ್ಟಿವೆ ಹ್ಯಾಗೆಂದರೆ—

“ಬಿಟ್ಟು ಹೆಂಗಸು ತಾನು ಉತ್ತಮಳೆಂದು ಅಹಂಕಾರಿಯಾಗಿ ನಡೆದಾಗ್ಯೂ ತನ್ನ ಪತಿಗೆ ಯಾವವಿಧದಲ್ಲಾದರೂ ವಂಚಿಸುವವಳಾಗಿದ್ದಾಗ್ಯೂ ಅಂಥವಳನ್ನು ಧೊರೆಯು ಕೊಲ್ಲಿಸಿ ರಾಜಮಾರ್ಗಗಳು ಸೇರುವ ಚೌಕಗಳಲ್ಲಿ ನಾಯಿಗಳಿಂದ ಆ ಶವವನ್ನು ತಿನ್ನಿಸಬೇಕು”

ಈ ಶಾಸ್ತ್ರದಿಂದ ಅಸ್ಪೃತವನ್ನು ಹೇಳುವದಕ್ಕೆ ಪ್ರತ್ಯಕ್ಷವಾದವು ಹ್ಯಾಗೆಂದರೆ—

“ದಂಪತಿಗಳ ಅನುರಾಗ, ಮದುವೆ, ಗೋಗ್ರಾಸ, ಬ್ರಾಹ್ಮಣರಿಗೆ ಮಾಡುವ ಸಹಾಯ ಮುಂತಾದ ಕಾರ್ಯಗಳಲ್ಲಿ ಸುಳ್ಳು ಪ್ರಮಾಣವನ್ನೇ ಮಾಡಿದಾಗ್ಯೂ ಅದರಿಂದ ದೋಷವಿಲ್ಲ”

ಹೆಂಗಸಿನ ವಿಷಯವಾಗಿ ನಿಬಂಧನೆಯು ಈ ಶಾಸ್ತ್ರದಲ್ಲಿ ಉಂಟು ಹ್ಯಾಗೆಂದರೆ —

“ಪತಿಯು ತನ್ನ ಸತಿಯೊಡನೆ ಸಹಪಂಕ್ತಿ ಭೋಜನ ಮಾಡಲಾಗದು”

“ಪತಿಯಾದವನು ಎಷ್ಟೇ ಕೆಟ್ಟನಡತೆಗಳನ್ನುಳ್ಳವನಾದರೂ, ವ್ಯಭಿಚಾರಿಯಾದರೂ, ಅವನಲ್ಲಿ ಯಾವದೊಂದು ಸುಗುಣವೂ ಇಲ್ಲದಿದ್ದರೂ, ಪತಿವ್ರತಾಧರ್ಮವನ್ನುಳ್ಳವಳು ತನ್ನ ಪತಿಯನ್ನೇ ದೇವರಂತೆ ಭಾವಿಸಿ ಯಾವಾಗಲೂ ಅವನ ಇಷ್ಟಾನುಸಾರಿಯಾಗಿ ನಡೆಯುತಲಿರಬೇಕು”

“ಸ್ತ್ರೀಯರಿಗೆ ಯಾವ ಯಜ್ಞಕರ್ಮಗಳೂ, ವ್ರತಗಳೂ, ಕರ್ಮಗಳೂ, ಉಪವಾಸಾದಿ ನೇಮಗಳೂ ಯಾವದೊಂದೂ ಇರುವದಿಲ್ಲ ವಿವಾಹ ಒಂದು ವಿನಹ ಸ್ತ್ರೀಯರಿಗೆ ಯಾವ ಮಾಂತ್ರಿಕಕರ್ಮವೂ ಇಲ್ಲ”

ಇಂಥಾ ಆಜ್ಞೆಗಳು ಹೆಂಗಸರಿಗೆ ಎಷ್ಟೋ ಅನ್ಯಾಯವನ್ನು ಉಂಟುಮಾಡಿರುತ್ತವೆ ಈ ಶಾಸ್ತ್ರದಲ್ಲಿ ಬ್ರಾಹ್ಮಣರ ಶಿಕ್ಷಾಪ್ರಕರಣವನ್ನು ಪರಾಂಬರಿಸಿದರೆ, ಉತ್ತಮ ವರ್ಣದವರಿಗೆ ಬಹು ಪಕ್ಷಪಾತಮಾಡಿರುತ್ತೆಂದು ತೋರುತ್ತದೆ ಹ್ಯಾಗೆಂದರೆ—

“ಬ್ರಾಹ್ಮಣರು ಎಷ್ಟೇ ದೊಡ್ಡ ತಪ್ಪಿತವನ್ನು ಮಾಡಿದರೂ, ಅವರಿಗೆ ... ದಂಡನೆಯನ್ನು ವಿಧಿಸುವದೇ ... ಶಿಕ್ಷೆಯಾಗಿರುತ್ತವೆ ಇತರ ವರ್ಣದವರಿಗಾದರೋ ಮರಣದಂಡನೆಯೇ ವಿಧಿಸಲ್ಪಡಬೇಕು ಒಬ್ಬ ಬ್ರಾಹ್ಮಣನು ಅನೇಕ ವಿಧವಾದ ತಪ್ಪಿತಗಳನ್ನು ಮಾಡಿ ದೊಡ್ಡ ಅಪರಾಧಿಯಾಗಿದ್ದಾಗ್ಯೂ, ರಾಜನು ಅವನನ್ನು ಬಂಧಿತನಾಗಿಯೂ ಕೊಲ್ಲಿಸಲಾಗದು ಬ್ರಹ್ಮಹತ್ಯೆಕ್ಕಿಂತಲೂ ಘೋರವಾದ ಪಾಪವು ಭೂಲೋಕದಲ್ಲಿ ಯಾವದೂ ಇಲ್ಲ ಬೆಕ್ಕು, ಕಪ್ಪೆ, ನಾಯಿ, ಇಲಿ ಮುಂತಾದ ಪ್ರಾಣಿಗಳಲ್ಲಿ ಯಾವದಾದರೂ ಒಂದನ್ನು ಕೊಂದವನಿಗೆ ಯಾವ ಶಿಕ್ಷೆಯೋ, ಬ್ರಾಹ್ಮಣನನ್ನು ಕೊಂದವನಿಗೂ ಅದೇ ಶಿಕ್ಷೆಕೊಡುವದು ಸಾಕೆಂದು ಹೇಳಿ ಇದೆ

ಶೂದ್ರರಸ್ಥಿತಿ

ಶೂದ್ರರು ಚಾಕರರಾಗಿರುವದಕ್ಕಾಗಿಯೇ ಸೃಷ್ಟಿಸಲ್ಪಟ್ಟಿರುತ್ತಾರೆಂತಲೂ ; ಶೂದ್ರನು ಯಾವಾಗಲೂ ಸ್ವಲ್ಪವೂ ಗೊಣಗುಟ್ಟದೆ ದ್ವಿಜರಿಗೆ ಸೇವೆಯನ್ನು ಮಾಡುತ್ತಿರಬೇಕೆಂತಲೂ ; ಧನಮದದಿಂದ ಗರ್ವಿಷ್ಠನಾಗಿ ಬ್ರಾಹ್ಮಣರನ್ನು ಧಿಕ್ಕರಿಸಬಹುದೆಂದು ಶೂದ್ರನು ಎಂದಿಗೂ ಧನಿಕನಾಗಲೇ ಕೂಡದೆಂತಲೂ ; ಬಿಟ್ಟನ್ನ, ಜೀರ್ಣವಸ್ತ್ರ, ಕೆಟ್ಟಹೋದಧಾನ್ಯ, ಹಳೇ ಪಾತ್ರೆಗಳು ಇವುಗಳೇ ಶೂದ್ರನಿಗೆ ಯೋಗ್ಯವೆಂತಲೂ ; ದ್ವಿಜರನ್ನು ನಿಂದಿಸುವ ಶೂದ್ರನ ನಾಲಿಗೆಯನ್ನೇ ಕತ್ತರಿಸಿಹಾಕಬೇಕೆಂತಲೂ, ಮಾನವಧರ್ಮಶಾಸ್ತ್ರದಲ್ಲಿ ಬರೆದಿರುವ ಮಾತುಗಳು ಆಶ್ಚರ್ಯಕರವಾಗಿವೆ

ಹೀನಜಾತಿಯವರ ಸ್ಥಿತಿಗತಿಗಳು

ಹೊಲೆಯರು ಮುಂತಾದ ನೀಚಜಾತಿಯವರ ವಿಷಯದಲ್ಲಿ ಮನುಧರ್ಮಶಾಸ್ತ್ರವು ಹೇಳಿರುವ ಆಜ್ಞೆಗಳು ಬಹುಕಠಿಣವಾದವುಗಳನ್ನು ನಡೆಸಕ್ಕೆ ಸಂದೇಹವಿಲ್ಲ ಹ್ಯಾಗೆಂದರೆ—“ಚಂಡಾಲರ ಮತ್ತು ಶ್ವಪಾಕರ ಮನೆಗಳು ಊರಿನ ಆಚೆ ಪ್ರತ್ಯೇಕವಾಗಿರಬೇಕು ಅವರಿಗೆ ಯಾವ ಪಾತ್ರಸಾಮಗ್ರಿಗಳೂ ಇರಕೂಡದು ಅವರು ನಾಯಿ, ಕತ್ತೆಗಳನ್ನೇ ಆಸ್ತಿಯಾಗಿ ಇಟ್ಟುಕೊಳ್ಳಬೇಕು ಅವರು ಸತ್ತವರ ಮೈಮೇಲಿನ ಬಟ್ಟೆಗಳನ್ನೇ ಹೊದ್ದುಕೊಳ್ಳಬೇಕು ... ಅಕ್ಕರೆಗಳಲ್ಲಿ ಊಟಮಾಡಬೇಕು ಕಬ್ಬಿಣದ ಒಡವೆಗಳನ್ನು ಹಾಕಿಕೊಳ್ಳಬೇಕು ಅವರು ಯಾವಾಗಲೂ ಸ್ಥಾನಭ್ರಷ್ಟರಾಗಿ ಅಲೆಯುತ್ತಲಿರಬೇಕು ಸನ್ಮಾರ್ಗಪ್ರವರ್ತಕರಾಗಿರಬೇಕೆಂದು ಯಾವನು ಅಪೇಕ್ಷಿಸುತ್ತಾನೊ, ಅಂಥವನು ಈ ಜನಗಳ ಸಂಗತಿ ಯಾವವಿಧವಾದ ಸಂಪರ್ಕವನ್ನೂ ಮಾಡಕೂಡದು ಈ ಜನರ ಕೆಲಸಕಾರ್ಯಗಳೂ ವ್ಯಾಪಾರ ಸಂಬಂಧಗಳೂ, ಹೆಣ್ಣು ಕೊಟ್ಟುತರುವದೂ ಸಕಲವೂ ಅವರಿಗೆ ಸಮಾನರಾದ ಆ ಜನರಲ್ಲಿಯೇ ನಡೆಯತಕ್ಕದ್ದು ಅವರು ತಮ್ಮ ಹೊಟ್ಟೆಯನ್ನು ಹೊರಕೊಳ್ಳುವದಕ್ಕಾಗಿ ಇತರರ ಅಧೀನದಲ್ಲಿ ಇದ್ದುಕೊಂಡು ಅವರು ಹಾಕುವ ಎಂಜಲುಗಳನ್ನು ತಿಂದು ಜೀವಿಸುತ್ತಲಿರಬೇಕು”

ಮೇಲ್ಕಂಡ ಆಜ್ಞೆಗಳನ್ನು ಪರಾಂಬರಿಸತಕ್ಕವರು ತಿಳಿಯತಕ್ಕದ್ದೇನು? ಇವುಗಳು ಬ್ರಾಹ್ಮಣರು ಅಹಂಕಾರಿಗಳಾಗಿರುವದಕ್ಕೂ, ಶೂದ್ರರು ಅಧೈರ್ಯರಾಗಿರುವದಕ್ಕೂ, ಹೊಲೆಯರು ನೀಚರಾಗುವದಕ್ಕೂ ಮೂಲಕಾರಣಗಳಾಗಿರುತ್ತವೆ. ಪಕ್ಷಪಾತವಿಲ್ಲದ ಭಗವಂತನು ತಾನು ಸೃಷ್ಟಿಸಿದ ಜನಗಳಲ್ಲಿ ಯಾರಿಗಾದರೂ ಇಂಥಾ ಪಕ್ಷಪಾತವಾದ ಆಜ್ಞೆಗಳನ್ನು ಎಂದಾದರೂ ವಿಧಿಸಿರುವನೋ? ಹಾಗೆ ವಿಧಿಸಿದನೆಂದು ನಂಬುವದು ಅಸಾಧ್ಯವಾಗಿದೆ ಆತನು ಸರ್ವರಿಗೂ ತಂದೆಯಾದುದರಿಂದ ಎಲ್ಲರನ್ನೂ ಸಮನಾದ ಪ್ರೀತಿಯಿಂದ ದಯವನ್ನೂ, ಮತ್ತೊಬ್ಬನಿಗೆ ದ್ವೇಷವನ್ನೂ ತೋರಿಸ್ಯಾನೆ? ಶೂದ್ರರೇ ಮೊದಲಾದವರು ಭಗವಂತನಿಗೂ ತಮಗೂ ವಿರೋಧವಾಗಿರುವ ಆಜ್ಞೆಗಳಿಗೆ ಒಳಪಟ್ಟದ್ದು ಆಶ್ಚರ್ಯವಾಗಿದೆ ಈ ಧರ್ಮಶಾಸ್ತ್ರದ ಮಾತಿಗೂ ಏಸುಸ್ವಾಮಿಯು ಹೇಳಿದ ಮಾತಿಗೂ ಬಹಳ ವ್ಯತ್ಯಾಸತೋರುತ್ತದೆ. ಸರ್ವರೂ ದೇವರ ಮಕ್ಕಳಾಗಿದ್ದಾರೆಂತಲೂ, ಆತನು ಪಕ್ಷಪಾತವಿಲ್ಲದೆ ಎಲ್ಲರನ್ನೂ ಒಳ್ಳೇ ಸ್ಥಿತಿಗತಿಗಳಿಗೆ ತರುವದಕ್ಕೆ ಬಂದಿದ್ದಾನೆಂತಲೂ, ಮೇಲ್ಪಟ್ಟವರು ಬಡಬಗ್ಗರನ್ನು ಅಲಕ್ಷ್ಯದಿಂದ ಕಾಣುವದು ಬುದ್ಧಿ ನೀಚತನವೆಂತಲೂ, ಹೇಳಿಧೀನೆ ಆತನು ಹೇಳಿದ ಉಪದೇಶವು ಎಲ್ಲರಲ್ಲಿ ಧೈರ್ಯವನ್ನೂ ಆನಂದವನ್ನೂ ಉಂಟುಮಾಡತಕ್ಕದ್ದಾಗಿದೆ ಮಾನವಧರ್ಮಶಾಸ್ತ್ರದ ಮಾತು ಈಗಿನ ಕಾಲಕ್ಕೆ ಅನುಚಿತವಾಗಿಯೂ ನಿಷ್ಪ್ರಯೋಜನವಾಗಿಯೂ ಇದೆ ಎಂದು ನಾವು ಅಭಿಪ್ರಾಯಪಟ್ಟು ವಾಚಕರು ತಮ್ಮ ನಡೆವಳಿಗೆ ಬೇರೆ ಒಂದು ಆಧಾರವನ್ನು ನೋಡಿಕೊಳ್ಳಬೇಕೆಂಬುವದು ನಮ್ಮ ಪ್ರಾರ್ಥನೆಯಾಗಿದೆ ಸನ್ಮಾರ್ಗಿಗಳಾಗಿರಬೇಕೆಂಬವರಿಗೆ ಯೇಸುಕ್ರಿಸ್ತನು ಹೇಳಿರುವ ಉಪದೇಶವು ತಕ್ಕ ಆಧಾರವಲ್ಲವೆ? ವಾಚಕರೇ ಚೆನ್ನಾಗಿ ಯೋಚಿಸಿ ಹೇಳಿರಿ.

ಚಂದಾದಾರರಿಗೆ.

ಅಯ್ಯಾ ಚಂದಾದಾರರುಗಳಿರಾ, ನಮ್ಮ ವೃತ್ತಾಂತ ಪತ್ರಿಕೆಗೆ ಕಳೆದುಹೋದ ಸಂಚಿಕೆಯೊಳಗೆ ೬ ವರ್ಷಗಳು ತುಂಬಿದವು. ಈ ವಾರದ ಪತ್ರಿಕೆಯಿಂದ ೭ನೆ ವರ್ಷವು ಪ್ರಾರಂಭಿಸುತ್ತದೆ. ತಮ್ಮಲ್ಲಿ ಅನೇಕರು ಚಂದಾಗಳನ್ನು ಬಹಳ ಕಾಲದಿಂದ ಬಾಕಿಯುಳ್ಳಿಟ್ಟುಕೊಂಡಿರುತ್ತೀರಿ. ಇದು ಸರಿಯಲ್ಲ. ಆದ್ದರಿಂದ ದಯವಿಟ್ಟು ಈಗಲಾದರೂ ಉದಾಸೀನವಾಗದೆ ತಮ್ಮ ತಮ್ಮ ಬಾಕಿಗಳನ್ನು ಪಾವತಿಮಾಡುವಿರೆಂದು ದೃಢವಾಗಿ ನಂಬಿ ಈ ಮೂಲಕ ವಿಜ್ಞಾಪಿಸಿರುತ್ತೇವೆ.

೧೫-೬-೯೩, ಮೈಸೂರು. — ಎಡಿಟರ್, ವೃತ್ತಾಂತ ಪತ್ರಿಕೆ.

ಸ್ವದೇಶ ವೃತ್ತಾಂತಗಳು.

(ಮೈಸೂರು)

ಮೆ|| ವಿನ್ಸ್‌ಕೋಂಬ್ ಡೇವಿಸ್ ಸಾಹೇಬರನ್ನು ತಿಂಗಳಿಗೆ ೫೦೦ ರೂಪಾಯಿಗಳ ಸಂಬಳದ ಮೇಲೆ ಅಸಿಸ್ಟೆಂಟ್ ಎಕ್ಸೈಜ್ ಕಮಿಷನರಾಗಿ ನೇಮಿಸುತ್ತಾರೆಂದು ಪ್ರವಾದವಿದೆ

ರಾಜಧಾನಿಯ ಅಡ್ವೊಕೇಟುಗಳೂ, ಪ್ಲೀಡರುಗಳೂ ಮತ್ತು ಕೆಲವುಮಂದಿ ಸ್ಕೂಲ್ ಮಾಸ್ಟರುಗಳೂ ಕಾರಣಾಂತರಗಳಿಗೆ ಕಳೆದ ಭಾನುವಾರ ಹೋಗಿ ಅಲ್ಲಿ ದಿನವನ್ನು ವಿನೋದವಾಗಿ ಆಟಪಾಟ ತಿಂಡಿತೀರ್ಥಗಳಿಂದ ಕಳೆದರೆಂಬದಾಗಿ ತಿಳಿದಿದೆ

ಹೊಳೇನರಸೀಪುರದ ಮುನ್ಸೀಫರಾದ ಮಾ|| ಚಲುವಯ್ಯಂಗಾರ್ಯರವರು ಇಷ್ಟರಲ್ಲೇ ರಜಾ ಪಡೆಯುವವರಾಗಿರುವದರಿಂದ ಅವರ ಕೆಲಸಕ್ಕೆ ಮಿ|| ಹಂಜಾಸ್ವಾಮೀ ಬಿ. ಎ; ಬಿ. ಎಲ್‌ರವರನ್ನು ಗೊತ್ತುಮಾಡುವರೆಂದು ಹೆರಲ್ಡ್ ಪತ್ರಿಕೆಯು ತಿಳಿಸುತ್ತದೆ

ಮುಳಬಾಗಿಲಿನಲ್ಲಿ ಒಬ್ಬ ಮುಸಲ್ಮಾನನು ಕೆಲವು ಕಾಲದಿಂದ ಜ್ಞಾನ ಸ್ವಾಧೀನವಿಲ್ಲದೆ ಹುಚ್ಚ ಹಿಡಿದವನಾಗಿದ್ದು ಶುಕ್ರವಾರ ಬೆಳಗ್ಗೆ ಕಜ್ಜಿಯಾಲ ರಂಗಯ್ಯನ ಬಾವಿಯಲ್ಲಿ ಬಿದ್ದು ಸತ್ತು ತೇಲಾಡುತ್ತಾ ಊರವರೆಲ್ಲರಿಗೆ ದರ್ಶನ ಕೊಟ್ಟನು. ಅನಂತರ ಪೋಲೀಸ್ ಜವಾನರಿಂದ ಶವವು ಆಚೆಗೆ ತೆಗೆಯಲ್ಪಟ್ಟು ಪರೀಕ್ಷಣಾರ್ಥಕ್ಕೆ ಕೊಡಲ್ಪಟ್ಟಿತು

ಫ್ರೇಜರ್‌ಟೌನ್ ಸಬ್ ಡಿವಿಜನಿಗೆ ಸೇರಿದ ಬಿಲ್ಲವದುಸ್ಥನಾದ ಅಂದರೆ ೧೦ ವರುಷದ (!) ಒಬ್ಬನು ಒಬ್ಬ ೯ ವರುಷದ ಹುಡುಗಿಯನ್ನು ಅವಳ ತಂದೆಗೆ ತಿಳಿಯದಂತೆ ಕರೆದುಕೊಂಡು ಹೋಗಿ ಮದುವೆಮಾಡಿಕೊಂಡನಂತೆ ಕೂಸಿಗೆ ಮದುವೆಯು ತಂದೆಯು ದುಷ್ಟೋಪಾಯದಿಂದ ಬಿಡಿಸಿಕೊಂಡಿರುತ್ತಾನಂತೆ ಇದು ಆಶ್ಚರ್ಯಕರವಾದ ವರ್ತಮಾನವೇಸರಿ

ಹೊಳೇನರಸೀಪುರದ ತಾಲ್ಲೋಕು ಬ್ಯಾಗಡಹಳ್ಳಿ ಗ್ರಾಮದ ವೆಂಕಟ್ರಮಣ ಸೆಟ್ಟಿಯ ಹೆಂಡತಿ ಪುಟ್ಟಿ ಎಂಬುವಳು ಕೆಲವು ದಿನಗಳ ಕೆಳಗೆ ತನ್ನ ೧೧ ವರುಷದ ಮಗುವನ್ನು ಕೊಂದಾಪಾದಿ ಪರಾರಿಯಾಗಿರುವದರಿಂದ ಅವಳನ್ನು ಹಿಡಿದು ಕೊಟ್ಟವರಿಗೆ ೫೦ ರೂಪಾಯಿಗಳು ಇನಾಮಾಗಿ ಕೊಡಲ್ಪಡುತ್ತ ಎಂಬದಾಗಿ ಮೈಸೂರು ಸರ್ಕಾರದವರು ಘೋಷಿಸ್ ಮಾಡಿರುತ್ತಾರೆ

ತುಮಕೂರು ತಾಲ್ಲೋಕಿನಲ್ಲಿ ೧೪೦೦ ರೂಪಾಯಿಗಳ ವೆಚ್ಚ ಮಾಡಿ ಸರ್ಕಾರದವರಿಂದ ತೆಗೆಸಿರುವ ೧೯ ಬಾವಿಗಳೂ ೧೯ ಗ್ರಾಮಗಳ ಜನಗಳಿಗೆ ಉಪಯೋಗವಾಗಿದೆ ಎಂಬದಾಗಿ ಕೇಳಿ ಗವರ್ನಮೆಂಟಿನವರು ತುಂಬಾ ಸಂತೋಷಿಸುತ್ತಾರೆ ಮತ್ತು ಇದೇ ರೀತಿಯಾದ ರಿಪೋರ್ಟನ್ನು ಪ್ರತಿ ಕ್ರಿಮಿನಲ್ಲಿ ಸರ್ಕಾರಕ್ಕೆ ಕಳುಹಿಸುತ್ತಾ ಬರಬೇಕೆಂಬದಾಗಿ ಎಲ್ಲಾ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರುಗಳಿಗೂ ತಿಳಿಸಿರುತ್ತಾರೆ

ಮೈಸೂರು ಸೀಮೆಯ ಸರಹದ್ದಿನೊಳಗೆ ಯೂರೋಪಿಯನ್ ಜನರು ಯಾರಾದರೂ ಸತ್ತಲ್ಲಿ ಅವರ ಹೆಸರು, ವಯಸ್ಸು, ಸತ್ತ ಮತ್ತು ಹೂಳಲ್ಪಟ್ಟ ತಾರೀಖುಗಳು ಮತ್ತು ಹೂಳಲ್ಪಟ್ಟ ಸ್ಥಳ ಇವುಗಳನ್ನು ಸ್ಪಷ್ಟವಾಗಿ ಪೋಲೀಸಿನವರು ಬೇಕಾದ ಅಧಿಕಾರಿಗಳಿಗೆ ತಪ್ಪದೆ ತಿಳಿಸಬೇಕೆಂಬದಾಗಿ ಒಂದು ಹುಕುಂ ಕೊಡುವಂತೆ ಗವರ್ನಮೆಂಟಿನವರು ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರಿಗೆ ತಿಳಿಯಪಡಿಸಿರುತ್ತಾರೆ

ಮುಳಬಾಗಲ್ ತಾಲ್ಲೋಕ್ ಯಲ್ದೂರ್ ಹೋಬಳಿ, ಬೈದರಹಳ್ಳಿಯಲ್ಲಿ ಒಂದು ಕಳವು ಆಯಿತು ರಂಗಮ್ಮನೆಂಬುವ ಒಬ್ಬ ವಿಧವೆಯ ಮನೆಯಲ್ಲಿ ರಾತ್ರಿಹೊತ್ತು ಕನ್ನವಿಕ್ಕಿ ಮನೆಯಲ್ಲಿದ್ದ ಬೆಳ್ಳಿ, ಬೋಂಡೆ, ತುಪ್ಪ, ಅಡಿಕೆ ಮುಂತಾದ ಪದಾರ್ಥಗಳನ್ನು ಕಳ್ಳರು ತೆಗೆದುಕೊಂಡು ಮತ್ತೆ ಕೆಲವನ್ನು ಊರಿನ ಹೊರಗೆ ಸಿವನಾಜಿ ಹತ್ತಿರ ಬಿಸಾಟು ಹೋಗಿರುತ್ತಾರೆ ಕೆಲವು ವರುಷಗಳ ಕೆಳಗೆ ಸದರಿ ಗ್ರಾಮದಲ್ಲಿ ಇಂಥಾ ಒಂದು ಕಳ್ಳತನವಾಗಿ ಇನ್ನೂ ಪತ್ತೆಯಲ್ಲಿ ಇರುವದಾಗಿ ಕಾಣುತ್ತದೆ

ಸಂಸ್ಥಾನದ ದಿವಾನರಾದ ಕೆ. ಶೇಷಾದ್ರಿ ಅಯ್ಯರವರಿಗೆ ಮಹಾರಾಜ್ಞೀ ಸರ್ಕಾರದವರು ಈಚೆಗೆ ಕೆ ಸಿ ಎಸ್ ಐ ಎಂಬ ಘನತರವಾದ ಪ್ರೈಸ್ಟ್‌ಯನ್ನು ಕೊಟ್ಟರಷ್ಟೆ ಸದರೀ ಪ್ರಸ್ಟಿಯನ್ನು ದಿವಾನರವರಿಗೆ ಅರಮನೆಯಲ್ಲಿ ನೆನ್ನೆ ಮಧ್ಯಾಹ್ನ ಒಂದು ದರ್ಬಾರು ಮಾಡಿರೆಸಿದೆಂಟ್ರವರು ಯೂರೋಪಿಯನ್ ಮತ್ತು ನೇಟಿವ್ ದೊಡ್ಡ ಮನುಷ್ಯರೆಲ್ಲರಿಗೆ ತಿಳಿಯಪಡಿಸಿ ಒಪ್ಪಿಸಿದರು ರಾತ್ರಿ ಗವರ್ನಮೆಂಟ್ ಹೌಸಿನಲ್ಲಿ ಸರ್ ಶೇಷಾದ್ರಿ ಅಯ್ಯರವರು ಯೂರೋಪಿಯನ್ ದೊಡ್ಡ ಮನುಷ್ಯರುಗಳಿಗೆಲ್ಲಾ ಒಂದು ಭಾರೀ ಔತಣವನ್ನು ಮಾಡಿಸಿದರು

ಮುಳಬಾಗಲ್ ತಾಲ್ಲೋಕಿನಲ್ಲಿ ಕಸಬೆಗೆ ೩ ಮೈಲಿ ದೂರದಲ್ಲಿ ಕಪ್ಪಲಸೊಣ್ಣನು ಎಂಬುವ ಒಂದು ಗ್ರಾಮ ಉಂಟು ಈ ಗ್ರಾಮದ ಒಬ್ಬ ಕುರುಬ ಸಣ್ಣ ಸಣ್ಣಗೆ ಹೊಡ ಕಾಡಿದು, ಒಬ್ಬ ವೈಶ್ಯ ವಿಧವೆಯನ್ನು ನೋಡಿ ಕೂಡುತ್ತೇನೆಂದು ಹೆಳಿ ಊರಿಗೆ ಸ್ವಲ್ಪ ದೂರ ದಲ್ಲಿರುವ ಒಂದು ತೋಟಕ್ಕೆ ಕರಕೊಂಡುಹೋಗಿ ಸ್ವಲ್ಪ ಕೂಡಿ ಒಕ್ಕೆ ಬರಲಾಗಿ ಅವಳ ದೇಹದಮೇಲೆ ಕ್ಯಾಡಾಕಿ ಆಭರಣಗಳನ್ನು ಕತ್ತುಕೊಳ್ಳುವದಕ್ಕೆ ಪ್ರಯತ್ನಿಸಿ ಇದಕ್ಕೆ ೬ ಅಮಲ್ದಾರ್ ಮೇಜಿಸ್ಟ್ರೇಟರ ಕೋರ್ಟಿನಲ್ಲಿ ಒಂದು ತಿಂಗಳು ಸಜಾ ವಿಧಿಸಲ್ಪಟ್ಟವನಾದನು ಹೆಂಡ ಕುಡಿಯುವದರ ಫಲ ಇದೇ ಅಲ್ಲವೆ?

ಮುಳಬಾಗಲ್ ತಾಲ್ಲೋಕ್ ಅವಣಿ ಹೋಬಳಿಯಲ್ಲಿ ಬ್ಯಲ್ಲ ಎಂಬುವ ಒಂದು ಗ್ರಾಮದಲ್ಲಿ ಗವರ್ನಮೆಂಟ ಮಾಲ್ಬಾರ್ ಸ್ಕೂಲ್ ಉಂಟು ಈ ಸ್ಕೂಲಿನಲ್ಲಿ ಬ್ರಾಹ್ಮಣರ ಹುಡುಗರೂ, ಕಮ್ಮಾರ ಹುಡುಗರೂ, ವಿದ್ಯಾಭ್ಯಾಸ ಮಾಡುವವರಲ್ಲದೆ ಹೊಲೆಯರ ಹುಡುಗರು ಸಹ ಸುಮಾರು ಐದು ಮಂದಿ ವಿದ್ಯಾರ್ಥಿಯಾಗುತ್ತಾರೆ ಇದು ಬಹಳ ಆಶ್ಚರ್ಯವೇ ಯಾಕೆಂದರೆ ಹೊಲೆಯರು ವಿದ್ಯಾಭ್ಯಾಸ ಮಾಡುವದು ಹಿಂದೂ ಶಾಸ್ತ್ರಕ್ಕೆ ಕೇವಲ ವಿರೋಧವು ಹೀಗೇ ಹೊಲೆಯರ ಮತ್ತು ಮಾದಿಗರ ವಿದ್ಯಾಭ್ಯಾಸವನ್ನು ಮೈಸೂರು ಸೀಮೆಯಲ್ಲಿ ಹೆಚ್ಚು ವೃದ್ಧಿಗೆ ತಂದಲ್ಲಿ ಎಲ್ಲಾ ಮಾದಿಗರನ್ನು ದೂರಾಗಿ ಹುಟ್ಟ ನಾಗಂಕಸ್ತಿಗೆ ಒಳಗಾಗುವದರಲ್ಲಿ ಏನೂ ಸಂದೇಹವಿಲ್ಲ

ಹಾಸನವನ್ನು ಆಗಸ್ಟಿಕ್ಕೆ ಮುನ್ಸಿಪಾಲಿಟಿಗಳಿಂದ ಬೇರೆ ಮಾಡಿದ ಮುನ್ಸಿಪಾಲಿಟಿಗೆ ೧೮೯೩—೯೪ ನ್ನು ಸಾಲಿಗಾಗಿ ತೆಗೆದುಕೊಂಡಿದ್ದದ್ದು ಈಗ ಕೊಡುವದಕ್ಕೆ ಸ್ಯಾಂಕ್ಷನ್ ಆಗಬೇಕೆಂಬದಾಗಿ ಹಾಸನದ ಡೆಪ್ಯುಟಿ ಕಮಿಷನರವರು ಗವರ್ನಮೆಂಟಿಗೆ ಬರೆದದ್ದರ ಮೇಲೆ ಈ ಮೊಬಲಗನ್ನು ಈಗ ಸ್ಯಾಂಕ್ಷನ್ ಮಾಡಿರುತ್ತೇವೆಂತಲೂ, ಇಲ್ಲಿಂದ ಮುಂದೆ ಗವರ್ನಮೆಂಟಿನವರ ಸ್ಯಾಂಕ್ಷನ್ ಹೊಂದಲೇ ಪಡೆಯದೆ ಹೀಗೆ ಒಂದು ಮುನ್ಸಿಪಾಲಿಟಿಯಿಂದ ಹಣವನ್ನು ಮತ್ತೊಂದು ಮುನ್ಸಿಪಾಲಿಟಿಗೆ ತೆಗೆದು ಉಪಯೋಗಿಸುವದು ದುಸ್ಸಾಧ್ಯಗಳ ಅಕ್ರಮವಾದ್ದರಿಂದ ಈ ಪದ್ಧತಿಯನ್ನು ನಿಲ್ಲಿಸಬೇಕೆಂತಲೂ ಗವರ್ನಮೆಂಟಿನವರು ಹುಕುಂ ಮಾಡಿರುತ್ತಾರೆ

ಬೆಂಗಳೂರು ತಾಲ್ಲೋಕಿನಲ್ಲಿ ಹೋಗುವದಾಸ್ತು ಕೆಲಸಕ್ಕೆ ಶ್ರೀರಂಗಪಟ್ಟಣದ ಸ್ಕೂಲ್‌ಮಾಸ್ತರಾಗಿದ್ದ ನಾರಾಯಣರಾವ್ ಎಂಬುವನನ್ನು ಡೆಪ್ಯುಟಿ ಕಮಿಷನರವರು ನೇಮಿಸಿದರು ಇದೊ ಕೆಲಸವು ಬೇರೆ ಬರುವದಕ್ಕೆ ನುಳುಚಿದಾಯಿತೆಂಬದಾಗಿ ಗವರ್ನಮೆಂಟಿನವರು ಕೇಳಿರುತ್ತಾರೆ ಮತ್ತು ತುಮಕೂರು ಡಿಸ್ಟ್ರಿಕ್ಟಿನಲ್ಲಿ ವೆಂಕಟಪ್ಪಯ್ಯ, ಸಬ್ಬ್‌ಮುನ್ಸಿಫ್ ಇವರಿಬ್ಬರನ್ನು ಬಿಟ್ಟು ಇನ್‌ಸ್ಪೆಕ್ಟರ್ ಕೆಲಸಕ್ಕೆ ನೇಮಿಸುತ್ತಾರೆ ಇವರುಗಳ ಯೋಗ್ಯತೆಗಳೇನೆಂದು ಗವರ್ನಮೆಂಟಿನವರು ಕೇಳಿದಾಗ ಡೆಪ್ಯುಟಿಕಮಿಷನರವರು ಏನೂ ಇಲ್ಲವೆಂದು ತಿಳಿಸುತ್ತಾರೆ ಯಾವ ಯೋಗ್ಯತೆಯೂ ಇಲ್ಲದೆ ಅವರನ್ನು ಯಾಕೆ ನೇಮಿಸಿರುತ್ತೀರೆಂದು ಪುನಃ ಸರ್ಕಾರದವರು ಪ್ರಶ್ನೆ ಮಾಡಿರುತ್ತಾರೆ

ಚನ್ನಪಟ್ಟಣದ ಕೋಟೆಯೊಳಗೆ ದೇವಸ್ಥಾನದ ಮೆರವಣಿಗೆಗಳು ಬರುವ ದಾರಿಯಲ್ಲಿ ಒಂದು ಮಸೀದಿಯನ್ನು ಕಟ್ಟಬೇಕೆಂದು ಅಲ್ಲಿನ ಮಹಮ್ಮದೀಯರು ಮೊಹರ್ರಮ್ ಸುಬೇದಾರರು ಸ್ವಂತ ಖರ್ಚಿನಿಂದ ಆರಂಭಿಸಿ ಮಾಡಿಸಲು ಪ್ರಾರಂಭಿಸಿದರು ಹಿಂದೂಗಳೆಲ್ಲರೂ ಮುಜರಾಯಿ ಸೆಕ್ರೆಟರಿಯವರಿಗೆ ಈ ವಿಷಯವನ್ನು ಬರೆದು ಇದರಿಂದ ಮುಂದೆ ಹಿಂದೂ ಮಹಮ್ಮದೀಯರಿಗೆ ವೈರವ್ಯಾಜ್ಯಗಳುಂಟಾಗುವದಕ್ಕೆ ಆಸ್ಪದವಾಗಿರುವದರಿಂದ ಇದನ್ನು ಕಟ್ಟದಹಾಗೆ ಹುಕುಂ ಮಾಡಬೇಕೆಂದು ಕೇಳಿಕೊಂಡರು ಅದಕ್ಕೆ ಡೆಪ್ಯುಟಿಕಮಿಷನರವರು ಅದನ್ನು ಇಷ್ಟವರೆಗೂ ಕಟ್ಟುವದಕ್ಕೆ ಅವಕಾಶಕೊಡುವುದಿಲ್ಲವೆಂತಲೂ, ಈಗಲೂ ಅವರ ದಕ್ಷಿಣದಿಕ್ಕಿನ ಬಾಗಿಲನ್ನು ತೆಗೆದು ನಾಶಸಿ ಪೂರ್ವದಿಕ್ಕಿಗೆ ಇಡಿಸಿ ಕಟ್ಟಿಸುವ ನಕ್ಷೆಯನ್ನು ಗವರ್ನಮೆಂಟಿನವರು ನೋಡುವದಕ್ಕಾಗಿ ಕಳುಹಿಸಿಕೊಡಬೇಕೆಂಬದಾಗಿಯೂ ಹುಕುಂ ಮಾಡಿರುತ್ತಾರೆ

ಲೋಕದಲ್ಲಿ ವಿವೇಕಶಾಲಿಗಳು ಹೆಂಡ ಮತ್ತು ಸಾರಾಯಿ ಕುಡಿಯಬಾರದೆಂದು ಹೇಳುವರು ಆದರೆ ಬಹಳ ನಾಗರಿಕರಾದವರು ರಹಸ್ಯವಾಗಿಯೂ, ಅನಾಗರಿಕರಾದವರು ಬಹಿರಂಗವಾಗಿಯೂ ಸೇವಿಸುವರು ಮುಳಬಾಗಲ್ ತಾಲ್ಲೋಕ್ ಮುಷ್ಟೂರಿನ ಹೋಬಳಿ ಚಿಕ್ಕನಹಳ್ಳಿ ಗ್ರಾಮದ ಒಬ್ಬ ಹೊಲೇರವನು ರಾತ್ರಿಯಲ್ಲಿ ಹೆಂಡ ಕಳವುಮಾಡಹೋಗಿದ್ದಾಗ ಕಾವಲಿದ್ದ ಅಧಿಕಾರವನು ಪ್ರಾಣ ಹೋಗುವ ಹಾಗೆ ಅವನನ್ನು ಹೊಡೆದು ಬೇರೆ ಊರಿನ ಹತ್ತಿರ ತಂದುಹಾಕಿದನು ಹೊಲೇರವನು ಅವನ ದಾರಿ ಹಿಡುಕೊಂಡುಹೋದ ಆದರೆ ಈಗ ಅಮಲ್ದಾರ್ ಮೇಜಿಸ್ಟ್ರೇಟರ ಕೋರ್ಟಿನಲ್ಲಿ ವಿಚಾರಣೆ ಆಗುತ್ತಲಿದೆ "ಅರಿಸಿನ ಕಾಗೆ ಹೋಗಿ ವರುಷದ ಕೋಳು ಹೋಯಿತು" ಎಂಬುವ ಗಾದೆಯ ಪ್ರಕಾರ ಒಂದು ಮೊಗೆ ಹೆಂಡ ಕದಿಯಹೋಗಿ ತನ್ನ ಪ್ರಾಣ ಕಳಕೊಂಡನು ಹೆಂಡ ಸಾರಾಯಿ ಕುಡಿಯುವ ಅಭ್ಯಾಸವೇ ಕೆಟ್ಟದ್ದು ಅದನ್ನು ಕಳ್ಳತನವಾಗಿ ಮಾಡಿದರೆ ಮತ್ತಷ್ಟು ಕೆಟ್ಟದ್ದು ಕಳ್ಳತನದ ಫಲ ಬಹಳ ಭಯಂಕರವಾದದ್ದು

ಕಿರಸ್ತಾನರಿಯರ ಸತಮತಸ ವೆಂಕಟವರೂ, ಸೋಲೆಯರ ಸಮಾನ ಮಾಡುವದೂ ಪಾಪವೆಂದು ಎಲ್ಲರೂ ಒಪ್ಪುವರು ಮುಳಬಾಗಲು ತಾಲ್ಲೋಕ್ ಮುಷ್ಟೂರ ಹೋಬಳಿ ಗಾಜಲಬಾವಿ ಹತ್ತಿರ ಒಬ್ಬ ಕಾಮಾತುರ ಒಬ್ಬ ಒಕ್ಕಲಿಗ ಸ್ತ್ರೀಯನ್ನು ಇಟ್ಟುಕೊಂಡಿದ್ದ ಆಕೆ ಬೇರೊಬ್ಬನ ಸಹವಾಸ ಮಾಡುವದನ್ನು ಒಕ್ಕಲಿಗನು ನೋಡಿ ತಾಳಲಾರದೆ ಕ್ರೋಧದಲ್ಲಿ ಮುಳುಗಿಸಿದ ಆಕೆಯನ್ನು ಕತ್ತರಿಸಿ ಕಡೆಗೆ ಭಯದಿಂದ ತಾನೂ ಸಾಯಬೇಕೆಂದು ಎಂದು ತನ್ನ ಪ್ರಾಣವನ್ನು ಹೋಗಲಾಡಿಸಿಕೊಳ್ಳುವದಕ್ಕೆ ಕೈಯಲ್ಲಿದ್ದ ಚಾಕುವಿನಿಂದ ತನ್ನ ಕತ್ತು ಕೊಯಿದುಕೊಳ್ಳುವದಕ್ಕೆ ಪ್ರಯತ್ನಪಡಲು ಪ್ರಾಣ ಹೋಗದೆ ಕತ್ತಿನ ಹತ್ತಿರ ಗಾಯವಾಗಿ ಬಿದ್ದಿರಲು ಇದ ಕಾರಣ ಸಿಪಾಯಿ, ಒಕ್ಕಲಿಗ ಪೊಲೀಸ್ ಮುಳಬಾಗಲ ಲೋಕಲ್ ಫಂಡ್ ಆಸ್ಪತ್ರೆಯಲ್ಲಿ ಔಷಧ ಕೊಡುತ್ತಲಿದ್ದಾರೆ ಜಾಗ್ರತೆಯಾಗಿ ಇದು ಗುಣವಾಗುವದಕ್ಕೆ ಏನೂ ಸಂದೇಹವಿಲ್ಲ ಇವನಿಗೆ ಜೇಲ್‌ಖಾನೆಯಲ್ಲಿ ಬಿದ್ದು ಹಾಗೆ" ಕಾರಣವನು ಆವಳನ್ನು ನಂಬಿಸಿದ ಕತ್ತರಿಸಿ ಅವಳ ಪ್ರಾಣಹೋಗುವದಕ್ಕೆ ಮುಂಚೆ ತನ್ನ ಪ್ರಾಣ ತೆಗೆದುಕೊಳ್ಳುವದಕ್ಕೆ ಎತ್ನಿಸಿದ್ದನ್ನು ನೋಡಿದರೆ ಬಹಳ ಆಶ್ಚರ್ಯವಲ್ಲವೇ?

ಮುಳಬಾಗಲು ಊರಿನಲ್ಲಿ ಎಲ್ಲಾ ಜನರು ತಮ್ಮ ಸ್ವಕಲ್ಪಿತವಾದ ದೇವತೆಗಳಿಗೆ ಪೂಜೆಮಾಡುವ ಉದ್ದೇಶದಿಂದ ಕರೀರ ಮುಪ್ಪವೂಡಿದ, ಜಯೋತ್ಸವ ಗಾಯನಗಳೊಡನೆ ತಂದಿಟ್ಟು ದೀಪಗಳ ಸಂಗಡ ದೇವತೆಗಳಿಗೆ ಪೂಜೆ ಮಾಡಿದರು ಆದರೆ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ, ಸುಳ್ಳು, ಕಳ್ಳತನ, ಸೂಳೆಗಾರಿಕೆ, ಮೋಸ ಎಂಬ ಅವಗುಣಗಳಡಗಿರುವ ಮನುಷ್ಯನು ಅಂದವಿನ ಸ್ನಾನಮಾಡಿ ಬೇಗ ಒಟ್ಟಿ ತೊಟ್ಟುಕೊಂಡು ತಂದಿಟ್ಟು, ತಾಗಿನಕಾಯಿ, ಸಾಂಬ್ರಾಣಿ, ಕರ್ಪೂರ ಮುಂತಾದವುಗಳಿಂದ ಪೂಜೆಮಾಡಿದರೆ ಅವನ ಪಾಪ ಹೋಗುವದೇ? ಹೋಗಲಾರದು ಮತ್ತು ಜನರು ದೇವತೆಗಳ ಸಂಗಡ ಅವರಿಷ್ಟ ಆಗಿರಬೇಗೆ ಕಾಣುವದೇ ನಿಜ ಹ್ಯಾಗಂದರೆ ದೇವತೆಗಳಿಗೆ ಹರಕೆಗೆಂದು ತೆಗೆದುಕೊಂಡುಹೋದ ಪದಾರ್ಥಗಳನ್ನೆಲ್ಲಾ ಹಿಂದಕ್ಕೆ ತಾವೇ ಭಕ್ಷಿಸುವದಕ್ಕೆ ತರುವದು ಅದಾಶ್ಚರ್ಯವಲ್ಲವೇ? ದೇವತೆಗಳು ಅವರ ವಾಸನೆ ಸಹ ತೆಗೆಯಲಾರವು ಅರಕ್ಷರು ಸಾಕ್ಷಾತ್ಪುರುಷನಂತಾಗಿ ಶುದ್ಧ ಹೃದಯವುಳ್ಳವನೂ, ಸುಳ್ಳು ಹೇಳದವನೂ, ಮೋಸ ಮಾಡದವನೂ, ವ್ಯಭಿಚಾರ ಮಾಡದವನೂ, ಕದಿಯದವನೂ, ಸತ್ಯವಂತನೂ ಬೇಕು; ಹಾಗಾದರೆ ತಂದಿಟ್ಟ ದೀಪಗಳು ದೇವರನ್ನು ಸಂತೋಷಪಡಿಸುವವೋ? ಅಥವ ಅದನ್ನು ಭಕ್ಷಿಸುವವರನ್ನು ಸಂತೋಷಪಡಿಸುವವೋ? ನೀವೇ ಆಲೋಚನೆ ಮಾಡಿರಿ

ವಿದೇಶ ಸಮಾಚಾರ.

ವಿಲಾಯಿತಿನ ಬಿಟ್ಟು ವರ್ಗವಾದ ದೊಡ್ಡ ಮನುಷ್ಯನು ತನ್ನ ಸ್ನೇಹಿತನನ್ನು ಕರೆಸಿ ಒಬ್ಬ ಫ್ರೆಂಚ್ ಅಧಿಕಾರಿಯನ್ನು ಗುಂಡಿನಿಂದ ಹೊಡೆದು ಕೊಲ್ಲಿಸಿದ್ದನು ಅವನ ಜೊತೆಯಲ್ಲಿದ್ದ ಎಂಟು ಮಂದಿ ಅನ್ಯಾಯದವರನ್ನೂ ಕೊಲ್ಲಿಸಿದನಂತೆ ಇದಕ್ಕಾಗಿ ಫ್ರೆಂಚರ ಸೈನ್ಯವು ಅನಾಮಿಗೆ ಕಳುಹಿಸಲ್ಪಟ್ಟಿತು ಅದರ ಸ್ವಾಧೀನದಲ್ಲಿರುವ ನಾವೀಪ್‌ಬ್ರಿಡ್ಜನ್ನು ಸ್ವಾಧೀನಪಡಿಸಿಕೊಂಡಿರುತ್ತಾರೆ

ಜಾ|| ತಾ|| ೧೯ನೇ ಸೋಮವಾರ

ಸಂಯುಕ್ತ ಸಂಸ್ಥಾನಗಳ ಕಾಂಗ್ರೆಸ್ ಪ್ರತಿನಿಧಿಗಳು ಸರ್ಕಾರಕ್ಕೆ ಬೆಳ್ಳಿಯನ್ನು ಕೊಂಡುಕೊಳ್ಳುವ ಪದ್ಧತಿಯನ್ನು ನಿಲ್ಲಿಸಬೇಕೆಂದು ತೀರ್ಮಾನಿಸಿದರು ಇದರಿಂದ ಇಂಡಿಯಾದಲ್ಲಿ ಬೆಳ್ಳಿಯ ಬೆಲೆಯು ಇನ್ನೂ ಕಡಿಮೆಯಾದೀತೆಂದು ಹೆದರುತ್ತಲಿದ್ದಾರೆ

ಪಿರಾಜಿನಿಂದ ಪ್ಯಾರಿಸ್ಸಿಗೆ ಹೋಗುತ್ತಿದ್ದ ರೈಲು ನೆನ್ನೆ ಕಾಂಪೇತಿಪ್ಪೆ ಪ್ರದೇಶಂಗೆ ಎಂಬಲ್ಲಿ ಅಪಕ್ಕೆ ಅಪಾಯ ಉಂಟಾಯಿತು ಆದರೆ ಪ್ರಯಾಣಸ್ಥರಲ್ಲಿ ಯಾರಿಗೂ ಯಾವ ಅಪಾಯವೂ ಸಂಭವಿಸಲಿಲ್ಲ

ಲಾರ್ಡ್ ರಾಬರ್ಟ್ಸ್‌ರವರು ಲಾಹೋರ್ ಪಟ್ಟಣವನ್ನು ತಲುಪಿದ ಕೂಡಲೆ ಅವರನ್ನು ರಾಯಲ್ ಜಿಯಾಗ್ರಫಿಕಲ್ ಸೊಸೈಟಿಗೆ ಪ್ರೆಸಿಡೆಂಟರಾಗಬೇಕೆಂದು ಕೇಳಿಕೊಂಡರು ಅವರು ಒಪ್ಪಲಿಲ್ಲ

ಕಾಬೂಲ್ ಪಟ್ಟಣದಿಂದ ನಾಲ್ಕು ಮೈಲಿ ದೂರದಲ್ಲಿರುವ ಪಟ್ಟಗಳವರಿಗೂ ಒಂದು ಟ್ರಾಂವೇ ಹಾಕಬೇಕೆಂತಲೂ, ಪಟ್ಟದಿಂದ ಕಲ್ಲುಗಳನ್ನು ತರಿಸಿ ಪಟ್ಟಣವನ್ನು ಬಲಪಡಿಸಬೇಕೆಂತಲೂ ಅಮೀರರು ಹುಕುಂ ಮಾಡಿರುತ್ತಾರೆ

ಜಾ|| ತಾ|| ೨೦ನೇ ಮಂಗಳವಾರ

ಅಂಗೋರದಲ್ಲಿ ಕಾಲಪ್ಪಿನವರು ನಡೆಸಿದ ಕ್ರೂರಕೃತ್ಯಗಳಿಗಾಗಿ ಪೈದಿಗಳು ವಿಚಾರಿಸಿ ಮಾಡಲ್ಪಟ್ಟು, ೮ ಪೈಕಿ ೧೭ ಮಂದಿಗೆ ಮರಣದಂಡನೆ ವಿಧಿಸಲ್ಪಟ್ಟಿತು ಈ ೧೭ ಜನರಲ್ಲಿ ೮ ಕಾಲೇಜಿನ ಉಪಾಧ್ಯಾಯರುಗಳಿದ್ದರು ಸೇರಿಧರೆ ಇದ್ದವರ ಇನ್ನೂ ೬ ಮಂದಿ ಪೈದಿಗಳಿಗೆ ೧೦—೧೫ ವರುಷಗಳ ಪ್ರಕಾರ ಶಿಕ್ಷೆ ವಿಧಿಸಲ್ಪಟ್ಟಿರುತ್ತ

ನೆನ್ನೆ ರಾತ್ರಿ ಮೊದಲನೇ ಅರ್ಲ್ ಅಫ್ ರಾಬರ್ಟ್ಸ್‌ರವರು ಬ್ರಿಟಿಷ್ ಪಾರ್ಲಿಮೆಂಟ್ ಲಾರ್ಡ್ಸ್ ಸಭೆಗೆ ಹೋಗಿದ್ದರು

ಲಾಹೋರ್ ಪಟ್ಟಣದ ಗೋಶಾಲೆಗಳಿಗೆ ಸಿಕ್ಕರೂ ಮೇಲ್ಪೇಟೆ ಬೀದಿಯವರು ದುಷ್ಟ ಕೃತ್ಯದಿಂದ ಅನೇಕ ಗೋವುಗಳನ್ನು ಕೊಂದು ಅವರ ಮಾಂಸವನ್ನು ಮಾರಕಟ್ಟೆಗಳಲ್ಲಿಟ್ಟು ಮಾರುತ್ತಲಿದ್ದರೆ ಅಲ್ಲಿ ನೀರೂ ಹಾಲೂ ಜನಗಳಿಗೆ ದೊರೆಯುವದಿಲ್ಲ ಬಹು ವಿಪರೀತವಾಗಿರುತ್ತ

ಸಯಾಂ ಜನಗಳು ಫ್ರೆಂಚ್ ಅಧಿಕಾರಿಯನ್ನು ಕೊಂದದಕ್ಕೆ ಪರಿಹಾರ ಕೊಡಬೇಕೆಂದು ಫ್ರೆಂಚ್ ಗವರ್ನಮೆಂಟಿನವರು ಸಯಾಂ ಗವರ್ನಮೆಂಟನ್ನು ಪ್ರಶ್ನೆ ಮಾಡಿರುತ್ತಾರೆ

ಇಂಗ್ಲೆಂಡಿನಲ್ಲಿ ಈಗ ವಿಪರೀತ ಬಿಸಿಲು ಇರುವದರಿಂದ ಅನೇಕರು ಬಿಸಿಲಿನ ಹೊಡೆತದಿಂದ ಸತ್ತರು, ಕೆಲವರು ಪರವಶರಾಗಿದ್ದಾರೆ

ಜಾ|| ತಾ|| ೨೧ನೇ ಬುಧವಾರ

ಯೂರೋಪ್ ಖಂಡದ ಮಾಸ್ಕೋ ನಗರಕ್ಕೆ ಹೋಗಿರುವ ಯಾತ್ರಿಕರಿಗೆ ಅಲ್ಲಿ ಕಲರಾ ಪ್ರಾರಂಭವಾಗಿ ಅನೇಕರನ್ನು ಕೊಂದಿತು

ಪಾರ್ಸಿ ಪ್ರಾಂತ್ಯಗಳ ಹೈಕೋರ್ಟ್ ಜಡ್ಜಿಗಳು ಬಹು ಪ್ರಖ್ಯಾತಿವಂತ ಮಹಮ್ಮದ್ ಎಂಬ ವಕೀಲರು ಅವಮಾನಕೃತ್ಯಗಳನ್ನು ನಡೆಸಿದರೆಂದು ಅವರ ಹೆಸರನ್ನು ವಜಾಮಾಡಿದರು

ಕಲ್ಕತ್ತೆಯಲ್ಲಿ ೩ ಘಳಿಗೆ ಕಾಲದಲ್ಲಿ ೮|| ಅಂಗುಲ ಪ್ರಮಾಣ ಮಳೆಯಾಯಿತು ಅನೇಕ ಕಟ್ಟಡಗಳಿಗೆ ಅಪಾಯ ಸಂಭವಿಸಿತು

ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ಸನ್ನು ಅಭಿವೃದ್ಧಿಮಾಡುವದಕ್ಕೆ ಸರ್ವ ಸಹಾಯಗಳನ್ನೂ ಮಾಡಬೇಕೆಂಬ ವಿಷಯವನ್ನು ಚರ್ಚಿಸುವದಕ್ಕಾಗಿ ೩೦೦ ಮಂದಿ ಪಾರ್ಲಿಮೆಂಟ್ ಮೆಂಬರುಗಳು ಏಕೀಭವಿಸಿದ್ದರು

ಜಾ|| ತಾ|| ೨೨ನೇ ಗುರುವಾರ

ಸಯಾಂ ಗವರ್ನಮೆಂಟಿನವರು ತಮ್ಮ ಕಡೆಯ ಜನಗಳು ಫ್ರೆಂಚರನ್ನು ಕೊಂದದಕ್ಕಾಗಿ ತುಂಬಾ ವ್ಯಸನಪಡುತ್ತೇವೆಂತಲೂ, ಕೊಲ್ಲಲ್ಪಟ್ಟವರ ಸಂಸಾರಗಳಿಗೆ ಜೀವನೋಪಾಯಗಳನ್ನು ಕಲ್ಪಿಸಿಕೊಡುತ್ತೇವೆಂಬದಾಗಿಯೂ ಫ್ರೆಂಚ್ ಸರ್ಕಾರಕ್ಕೆ ತಿಳಿಸಿರುತ್ತಾರೆ

ಕಳೆದ ೧೭ ನೆ ತಾರೀಖಿನಿಂದ ಆಪತ್ತಿನವರಿಗೂ ಬೊಂಬಾಯಿ ಪಟ್ಟಣದಲ್ಲಿ ಕಲರಾ ಜಾಡ್ಯದಿಂದ ೪೦ ಜನ ಸತ್ತಿರುತ್ತಾರೆ

ಕಲ್ಕತ್ತೆಯಲ್ಲಿ ವಾಸಮಾಡುವ ಮದ್ರಾಸಿ ಜನಗಳು ತಮ್ಮಲ್ಲಿ ಆಸ್ಪತ್ರೆ ಮನಾದಿಗಳನ್ನು ಮಾಡಿಕೊಳ್ಳಬೇಕೆಂದು ಒಂದು ಸಂಘವನ್ನು ಏರ್ಪಡಿಸಿರುತ್ತಾರೆ

ವಿಲಾಯಿತಿಯ ಉತ್ತರಭಾಗದ ಕೆಲವುಮಂದಿ ಸಾಹುಕಾರರು ಇಂಡಿಯಾದಲ್ಲಿನ ರೈಲ್ವೆಗಳನ್ನು ತಮ್ಮ ಹಣದಿಂದ ನಡೆಸಬೇಕೆಂತಲೂ, ಮುಖ್ಯವಾಗಿ ಕಾಬೂಲ್ ರೈಲನ್ನು ಮೊದಲು ವಿಸ್ತರಿಸಬೇಕೆಂತಲೂ ಇಂಡಿಯಾ ಸೆಕ್ರೆಟರಿಯವರಾದ ಲಾರ್ಡ್ ಕಿಂಬರ್ಲಿಯವರನ್ನು ಕೇಳಿಕೊಂಡರು ಅದಕ್ಕೆ ಲಾರ್ಡ್ ಕಿಂಬರ್ಲಿಯವರು—ಈ ವರುಷ ಇಂಡಿಯಾದಲ್ಲಿ ರೈಲನ್ನು ವಿಸ್ತರಿಸುವದಕ್ಕಾಗಿ ಗವರ್ನಮೆಂಟಿನವರು ೮ ಕೋಟಿಯನ್ನು ವೆಚ್ಚಮಾಡುವಂತೆ ಗೊತ್ತುಮಾಡಿದ್ದಾರೆ ಅದಕ್ಕಿಂತ ಹೆಚ್ಚಾಗಿ ಖರ್ಚುಮಾಡಲು ಗವರ್ನಮೆಂಟಿನವರಿಗೆ ಶಕ್ತಿಸಾಲದು ನೀವುಗಳೇ ಅಲ್ಲಿನ ವ್ಯಾಪಾರವನ್ನು ಅಭಿವೃದ್ಧಿ ಪಡಿಸುವದಕ್ಕೆ ಪ್ರಯತ್ನಮಾಡಬೇಕು ಎಂಬದಾಗಿ ಪ್ರತ್ಯುತ್ತರಕೊಟ್ಟರು

ಜಾ|| ತಾ|| ೨೩ನೇ ಶುಕ್ರವಾರ

ಲಾರ್ಡ್ ಲ್ಯಾನ್ಸ್‌ಡೌನ್‌ರವರ ಸ್ಥಾನಕ್ಕೆ (ವೈಸರಾಯಿ) ಲಾರ್ಡ್ ಹಾರ್ಷಲ್‌ರವರೇ ಬರುತ್ತಾರೆಂತಲೂ, ಲಾರ್ಡ್ ಸ್ಪೆನ್ಸರರವರಿಗೆ ಈ ಕೆಲಸದಲ್ಲಿ ಇಷ್ಟವಿಲ್ಲವೆಂತಲೂ ವರ್ತಮಾನ

ಆಫ್ಗನಿಸ್ಥಾನದ ಅಮೀರರು ತಮ್ಮ ದೇಶದೊಳಕ್ಕೆ ಬರುವದಕ್ಕೆ ಆಗುವಮೇಲೆ ಒಂದು ಬೀಟೇ ಹೂವೆಯಷ್ಟಕ್ಕೆ ಸುಂಕವನ್ನು ೧೯ ರೂಪಾಯಿನಿಂದ ೨೪ ರೂಪಾಯಿಗಳವರೆಗೆ ಹೆಚ್ಚಿಸುತ್ತಾರೆ

ಅಮೀರರ ಹೆದರಿಕೆಯಿಂದ ಇಂಡಿಯಾದಲ್ಲಿ ಆಶ್ರಯವನ್ನು ಹುಡುಕಿಕೊಂಡಿದ್ದ ಅವರ ೬೦೦ ಮಂದಿ ಪ್ರಜೆಗಳು ವಾಪಸು ತಮ್ಮಲ್ಲಿಗೆ ಬರಬಹುದೆಂದು ಅಪ್ಪಣೆ ಕೊಟ್ಟರು

ಜಾ|| ತಾ|| ೨೪ನೇ ಶನಿವಾರ.

ವಿಕ್ಟೋರಿಯ ಮತ್ತು ಕ್ಯಾಂಪರ್‌ಡೌನ್ ಎಂಬ ಎರಡು ಯುದ್ಧದ ಹಡಗುಗಳು ಟ್ರಿಪೋಲಿಯಾದಲ್ಲಿ ಟ್ರಿಪೋಲಿಗೆ ಸ್ವಲ್ಪ ದೂರದಲ್ಲಿ ಒಂದಕ್ಕೊಂದು ತಗಲಿ ಹೊಡೆದು ವಿಕ್ಟೋರಿಯ ಹಡಗು ಮುಳುಗಿಹೋಯಿತು ಅಡ್ಮಿರಲ್ ಟ್ರೈಯಾನ್ ಮತ್ತು ೪೦೦ ಮಂದಿ ಕೆಲಸಗಾರರು ಆ ಹಡಗಿನಲ್ಲಿದ್ದರು ಎಲ್ಲರೂ ಗಂಗೆಯ ಪಾಲಾದರು ಹಡಗು ೧೪ ನಿಮಿಷಗಳಲ್ಲಿ ೧೩೦ ಗಜ ನೀರಿದ್ದ ಸಮುದ್ರದಲ್ಲಿ ತಳಕ್ಕಾಗಿ ಮುಳುಗಿಹೋಯಿತು

ಈ ವ್ಯಸನಕರವಾದ ವರ್ತಮಾನವು ಬ್ರಿಟಿಷ್ ರಾಜ್ಯದೆಲ್ಲೆಲ್ಲಾ ಹರಡಿಕೊಂಡು ಎಲ್ಲರಿಗೂ ವ್ಯಸನವನ್ನು ಉಂಟುಮಾಡಿರುತ್ತ

ನೆನ್ನೆ ರಾತ್ರಿ ಬ್ರಿಟಿಷ್ ಹೌಸ್ ಆಫ್ ಕಾಮನ್ಸ್ ಸಭೆಯಲ್ಲಿ ಮಿ|| ಗ್ಲಾಡ್‌ಸ್ಟನ್‌ರವರು—ಆ ಮುಳುಗಿಹೋದ ಹಡಗಿನಲ್ಲಿ ೬೫೦ ಮಂದಿ ಇದ್ದರು, ಆ ಪೈಕಿ ಮುಳುಗಿಹೋದವರು ೪೦೦ ಮಂದಿಗೆ ಕಡಿಮೆಯಾಗಿರಲಾರರು ಎಂದು ಊಹಿಸುತ್ತೇನೆ ಎಂದು ತಿಳಿಸಿದರು

ಈ ದುಃಖಕರವಾದ ವರ್ತಮಾನವನ್ನು ಕೇಳಿದ್ದರಿಂದ ಮಹಾರಾಣಿಯವರು ಈ ದಿನ ರಾತ್ರಿ ನಡೆಯಬೇಕಾಗಿದ್ದ ಸ್ಟೇಟ್ ಬಾಲ್ ಎಂಬುವದನ್ನು ನಿಲ್ಲಿಸುವಂತೆ ಹುಕುಂ ಮಾಡಿರುತ್ತಾರೆ

ವಿಲಿಯಂ ಚಕ್ರವರ್ತಿಗಳು ತಮ್ಮ ಸಂಪೂರ್ಣ ದುಃಖವನ್ನು ತಂತಿಯಮೂಲಕ ತಿಳಿಸಿರುತ್ತಾರೆ ಲಾರ್ಡ್ ಮೇಯರವರು ಮುಳುಗಿಹೋದವರ ಸಂಸಾರಗಳಿಗೆ ಸಹಾಯ ಮಾಡುವದಕ್ಕಾಗಿ ಒಂದು ಫಂಡನ್ನು ಏರ್ಪಡಿಸಿರುತ್ತಾರೆ

ಅಲಹಾಬಾದಿನ ಮ್ಯಾಜಿಸ್ಟ್ರೇಟರು ಮಾರ್ನಿಂಗ್ ಪೋಸ್ಟ್ ಎಂಬ ವರ್ತಮಾನ ಪತ್ರಿಕೆಯ ಎಡಿಟರು ಮತ್ತು ಪಬ್ಲಿಷರುಗಳು ಒಬ್ಬ ಪ್ಲೀಡರಿಗೆ ಅವಮಾನಕರವಾದ ಸಂಗತಿಯನ್ನು ಪ್ರಕಟಿಸಿದ್ದರಿಂದ ಎಡಿಟರಿಗೆ ೫೦೦ ರೂಪಾಯಿ ಮತ್ತು ಪಬ್ಲಿಷರಿಗೆ ೨೫ ರೂಪಾಯಿಗಳ ಜುಲ್ಮಾನೆಯನ್ನು ವಿಧಿಸಿದರು

ಡಾರ್ಜಿಲಿಂಗಿನಲ್ಲಿ ವಿಪರೀತ ಮಳೆಯಾದ್ದರಿಂದ ರೈಲ್ವೇ ರಸ್ತೆಯು ಹಾಳಾಗಿಹೋಗಿದೆ ಪ್ರಯಾಣಿಕರಿಗೆ ಬಹು ಕಷ್ಟವಾಗಿದೆ ರಿಪೇರಿಯಾಗುವದಕ್ಕೆ ಇನ್ನೂ ೬ ವಾರಗಳು ಬೇಕು

ವಿವಿಧ ವರ್ತಮಾನಗಳು.

ನಮ್ಮ ಹಿಂದೂಸ್ಥಾನದ ವೈಸರಾಯರ ಬಿಟ್ಟಿಗೆಗಳನ್ನು ಹೊಯುವಕ್ಕೆ ಕೆಲಸದಾಗೆ (ಸ್ರೀಬಿ) ವಹಾಪ್ರಮಾಣ ೫೦೦ ರೂಪಾಯಿ ಸಂಬಳ ದೊರೆಯುತ್ತೆ.

ಅಪ್ರಿಕಾಖಂಡದ ಜನರು ಹಂಸೆಗಳನ್ನು ಸಾಕಿ ತಮ್ಮ ಜೀವನವನ್ನು ಮಾಡಿಕೊಳ್ಳುವದು ಪ್ರಬಲವಾಗುತ್ತಲಿದೆ ಇಲ್ಲಿ ಸ್ವಲ್ಪರಿಗೆ ೧|| ಲಕ್ಷ ಹಂಸೆಗಳನ್ನು ಸಾಕುತ್ತಲಿದ್ದಾರೆ.

ಹಿಂದೂಸ್ಥಾನದ ಮಧ್ಯಪ್ರಾಂತ್ಯಗಳಲ್ಲಿ ಒಂದು ಹುಂಟು ರಗಾಳಿ ಹುಟ್ಟಿ ರೈಲುಪ್ರದೇಶದಲ್ಲಿ ಹೋಗುತ್ತಿದ್ದ ೫೧,೦೦೦ ಗೋಕಾಯಿಗಳನ್ನು ಕೊಂದಿರುತ್ತೆಂಬದಾಗಿ ತಿಳಿಯಲಾದೆವು.

ಅಮೇರಿಕಾದಲ್ಲಿ ಮುಖ್ಯಪಟ್ಟಣವಾದ ಕಲ್ಕತ್ತೆಯ ಕೆಲ ವಾ ಅಪದ್ರಕ್ಕೆ ಜನ್ಯಸ್ಥನವೆಂಬದಾಗಿ ಒಬ್ಬ ನೊಬ್ಬ ಯುರೋಪಿಯನನು ವಿಲಾಯತಿಯಲ್ಲಿ ಒಂದು ಸಹಾಯದಲ್ಲಿ ತಿಳಿಸಿರುತ್ತಾನೆ.

ಗುಮ್ಮಕಪಾಡಿ ಮಹಾರಾಜರವರು ಈಗ ಯುರೋಪಿನಲ್ಲಿ ಸಂಚರಿಸುತ್ತಲಿದ್ದಾರಷ್ಟೆ ತಮ್ಮ ಜೊತೆಯಲ್ಲಿ ಕೆಲವು ಹುಲಿಗಳನ್ನು ಇಟ್ಟುಕೊಂಡಿರುತ್ತಾರಂತೆ ಒಳ್ಳೇ ಸಹವಾಸವೇ ಸರಿ!

ಬ್ಯಾಕೆಬರ್ನ ಎಂಬಲ್ಲಿ ಒಂದು ಸಂಸಾರದಲ್ಲಿ ಒಬ್ಬ ಹೆಂಗಸು ತನ್ನ ತಾಯಿಗೆ ಸಹಾಯ ಬರದೆ ಎಂದು ಕೇಳಿ ಜಾತಿಯ ಹೆಸರಿನಿಂದ ಪರವಶಳಾದಳು ಮತ್ತು ಆ ಬಾಗಿಯು ೧೫ ದಿನಗಳವರೆಗೂ ಮೂಗಳಾಗಿದ್ದಳಂತೆ!

ಈಗ ಹೋದ ಶತವರ್ಷದಲ್ಲಿ ವಿಪರೀತ ಹೆಚ್ಚಾಗಿರುವದರಿಂದ ೧೮೯೧-೯೨ನೆ ವರುಷದಲ್ಲಿ ಹಿಂದೂಸ್ಥಾನದ ರೈಲ್ವೇಕಂಪೆನಿಯವರು ಸರಕುಗಳಿಗಾಗಿ ಮಾಡಿದ್ದರಿಂದ ೫|| ಲಕ್ಷರೂಪಾಯಿ ನಷ್ಟವಾಯಿತೆಂದು ರಿಪೋರ್ಟಿನಲ್ಲಿ ಹಿಡಲಾಯಿತು.

ಚಿಕಾಗೊ ಪ್ರದರ್ಶನ ಶಾಲೆಯನ್ನು ನೋಡಿ ಬರುವದಕ್ಕಾಗಿ ಪ್ರತಿದಿನವೂ ೪೦,೦೦೦ ಜನರು ದುಡ್ಡು ಕೊಟ್ಟು ಹೋಗುತ್ತಲಿದ್ದಾರೆ ಮತ್ತು ದಿನವೂ ಗತಿ ಇಲ್ಲದ ಬಡಬಗ್ಗರನ್ನು ಉಚಿತಾರ್ಥವಾಗಿ ಬಿಡುತ್ತಾರೆ ದುಡ್ಡಿಲ್ಲದೆ ನೋಡಿಕೊಂಡು ಬರತಕ್ಕವರೇ ದಿನಕ್ಕೆ ೧,೫೫,೦೦೦ ಮಂದಿಯಂತೆ!

ಪ್ಯಾರಿಸ ಪ್ರೈವೆಟ ವೈದ್ಯನು ಪ್ಯಾರಿಸ ಪಟ್ಟಣದಲ್ಲಿ ೩೦೦ ಕನ್ನಡಕಗಳನ್ನೂ, ೩೦೦ ಜೋಡಿಕನ್ನಡಿಗಳು ಪಾಕಿರುವ ಉಪನಯನಗಳನ್ನೂ, ೩೦೦ ಬತ್ತಿಗಳನ್ನೂ, ೩೦೦ ಹಿಡಿಯುವ ದೊಣ್ಣೆಗಳನ್ನು ಕೊಂಡುಕೊಂಡನು ಇಷ್ಟೆಂಬ ಯಾತಕ್ಕಾಗಿ ಕೊಂಡುಕೊಂಡನೆಂಬದಾಗಿ ಎಲ್ಲರೂ ಆಶ್ಚರ್ಯಪಡುತ್ತಲಿದ್ದಾರೆ.

ಕೂಲಿಯವರು ಸಮ್ಯುಕ್ತದಲ್ಲಿನ ಗಣಿಗಳಲ್ಲಿ ಕೆಲವರು ಮುತ್ತಿದ್ದನ್ನು ಬ ದೆಗಲವೋಳ ಪಕ್ಷಿಗಳ ಗುಡ್ಡುಗಳನ್ನು ಕಂಡರು ಆ ಗುಡ್ಡುಗಳು ಮನುಷ್ಯನದೇ ಆಗಿದ್ದವನ್ನು, ಅಷ್ಟು ದೊಡ್ಡ ಪಕ್ಷಿಗಳು ಪ್ರಪಂಚದಲ್ಲಿ ಯಾವಿಗೂ ಇಲ್ಲವಾದ್ದರಿಂದ ಅದೇನಾಗಿರಬಹುದೆಂದು ಅನೇಕಮಂದಿ ಶಾಸ್ತ್ರಜ್ಞರು ಚರ್ಚಿಸುತ್ತಲಿದ್ದಾರೆ.

ಈಗ ಆಕಾಶದಲ್ಲಿ ಕಾಣಬರುವ ನಕ್ಷತ್ರಗಳು ೬೦ ಕೋಟಿ ಇವೆ, ಆದರೆ ಕಾಣಬರದವು ಇನ್ನು ಅಸಂಖ್ಯಾತವಾದವಾಗಿರುತ್ತವೆ ಇವುಗಳಲ್ಲಿ ಮುಳ್ಳುಭಾಗದ ನಕ್ಷತ್ರಗಳನ್ನೂ, ಅವುಗಳ ಆಕಾರಗಳನ್ನೂ ಪ್ಯಾರಿಸೀವೇಧಸ್ಥಾನದ ಒಬ್ಬ ಫೋಟೋಗ್ರಾಫರನು ನಕ್ಷೆ ತೆಗೆದಿರುತ್ತಾನೆ ಇದಕ್ಕಾಗಿ ಅವನಿಗೆ ೨ ಕೋಟಿ ದ್ರವ್ಯ ಖರ್ಚಾಯಿತಂತೆ!

ಸಿಂಲಾ ಪಟ್ಟಣದಲ್ಲಿ ಹಗಲಿಗೆ ಕಳ್ಳತನವೆಂಬುವದು ಹೆಚ್ಚಾಗಿರುತ್ತಲಿದೆ ಮೊಂದು ಕೇಳಿ ಆಶ್ಚರ್ಯಪಡುತ್ತೇವೆ ಜನರಲ್ ಪ್ಲಾರ್ಷಲರವರ ಬಂಗಲೆಯಲ್ಲಿ ೩,೦೦೦ ರೂಪಾಯಿ ಕಳುವಾಯಿತು ಅಲ್ಲಿನ ಪ್ರತಿಕಂಪನಿಯವರಿಗೆ ಜಾಹೀರಾದರು ಬರುತ್ತಲಿದ್ದಾರೆ ಜವಾನರು ಈ ಕೆಲಸದಲ್ಲಿ ಶಿಳಸೇರಿದರೆ ಆ ಪಡಿಗೆ ಇನ್ಯಾರೊಡನೆಯಲ್ಲಿ ಹಾನಿ ಹೊಣೆ?

ಘಂಟೆಗೆ ೫೦ ಮೈಲಿಗಳ ಪ್ರಕಾರ ಹಗಲೂರಾತ್ರಿ ಒಂದು ನಿಮಿಷವೂ ನಿಲ್ಲದೆ ೬ ತಿಂಗಳು ರಥ ಪ್ರಯಾಣ ಮಾಡಿದರೆ ಚಂದ್ರನ ಬಳಿಗೆ ಹೋಗಬಹುದೆಂತಲೂ, ಸೂರ್ಯನ ಕಡೆ ಇದೇ ರೀತಿಯ ಪ್ರಕಾರ ೨೦೦ ವರುಷಗಳ ವರೆಗೂ ಪ್ರಯಾಣ ಮಾಡಿದರೆ ಸೂರ್ಯನ ಬಳಿಗೆ ಹೋಗಬಹುದಾಗಿದೆ ಎಂತಲೂ ವಿಲಾಯತಿಯ ಒಬ್ಬ ಜ್ಯೋತಿಷಜ್ಞನು ತಿಳಿಸಿರುತ್ತಾನೆ.

ಅಸ್ತ್ರಿಯದ ಚಕ್ರವರ್ತಿಯವರು ಪ್ರತಿದಿನವೂ ೫೦-೬೦ ಚುಟ್ಟಾಗಳಿಗೆ ಕಡಿಮೆಯಿಲ್ಲದೆ ಸೇದುತ್ತಾರೆ ಮತ್ತು ಸಾಯಂಕಾಲದ ಹೊತ್ತಿನಲ್ಲಿ ಬಹು ತೀಕ್ಷ್ಣವಾದವುಗಳನ್ನು ಸೇದುತ್ತಾರೆ ಅವರು ವೈದ್ಯನು ಹೇಳುವ ಬುದ್ಧಿವಾದಗಳಿಗೆ ಗಮನ ಕೊಡುವದಿಲ್ಲ ಆದಾಗ್ಯೂ ಅವರು ದೇಹಾರೋಗ್ಯದಿಂದ ಇರುವದು ಅನೇಕರಿಗೆ ಆಶ್ಚರ್ಯವನ್ನುಂಟುಮಾಡಿ ಇದೆ.

ವಾರಾಣಸಿಯಲ್ಲಿ ಗೌತಮನ ದೇವಾಲಯವು ಬಹು ಪ್ರಾಚೀನವಾಗಿತ್ತು ಅದಕ್ಕೆ ಅಕಸ್ಮಾತ್ತಾಗಿ ಬೆಂಕಿ ಬಿದ್ದು ಎಲ್ಲಾ ಸುಟ್ಟು ಬೂದಿಯಾಯಿತು ವಿಗ್ರಹವು ಸಂಪೂರ್ಣವಾಗಿ ನಾಶಹೊಂದಿತು ಯಜ್ಞೇಶ್ವರನು ೩ ಘಂಟೆಗಳ ಕಾಲ ರೌದ್ರಾಕಾರವನ್ನು ತಾಳಿದ್ದನು ಅಷ್ಟರಲ್ಲೇ ಘೋರವಾಗಿ ಯಜ್ಞೇಶ್ವರನ ವಿರಾಹವನ್ನು ಆಗಗಿಸಿತೆಂಬದಾಗಿ ತಿಳಿದುಬರುತ್ತೆ.

ಲಿವರು‌ಪೂಲ್ ನಗರ ಕೋರ್ಟಿನಲ್ಲಿ ಒಬ್ಬ ಹೆಂಗಸು ತನ್ನ ಅಲ್ಲರ ಮಕ್ಕಳಿಗೆ ಬಕ್ಷೀಸವಾಗುವದೆಂದು ತಿಳಿದು ಹೆದರಿ ಘಾಬ ರಿಯಿಂದ ಥರ್ಮ್ಯಾರಿಯು ಮೂಗನಾಗಿ ಹೋಗಲಿಯೆಂದು ಹಸು ರಳಂತೆ ಅದೇಪ್ರಕಾರ ಆ ಕ್ಷಣವೇ ಥರ್ಮ್ಯಾರಿಯು ಮಾತನಾಡುವದಕ್ಕಾಗದೆ, ಸ್ವಲ್ಪ ಹೊತ್ತು ಸುಮ್ಮನೆ ನಿಂತಿದ್ದು ಥರ್ಮ್ಯಾರನ್ನು ನಿಜ ಮಾಡಿಸಿಕೊಂಡನಂತೆ ಅವನು ೨೦ ದಿನಗಳವರೆಗೂ ಮೂಗನಾಗಿ ಮಾತನಾಡುವದಕ್ಕಾಗದೆ ಇದ್ದನಂತೆ!

ವಾಲಿಯರ್ ಪಟ್ಟಣದಲ್ಲಿ ಹುದ್ದೆದಾರನಾದ ಒಬ್ಬ ಯೂರಪಿಯನನು ಒಬ್ಬ ಧಗ್ಗಿಯವನು ತನ್ನ ಸಂಗಡ ಮಾತ್ಸರ ಮಾಡಿದನೆಂಬದಾಗಿ ಅವನಿಗೆ ಚೆನ್ನಾಗಿ ಕೊರಡೇ ಯಿಂದ ಹೊಡೆಸಿದನಂತೆ ಈ ಸಂಗತಿಯು ಗೌರ್ನಮೆಂಟಿನವರಿಗೆ ತಿಳಿದು ಬಂದಾಗ ಅವರು ಈ ಯೂರಪ್ಪಿಯನನಿಗೆ ಡಿಪ್ಯೂಟಿಪದವಿಯ ದರ್ಜೆಯಿಂದ ಅಸಿಸ್ಟೆಂಟರ ದರ್ಜೆಗೆ ಕಂಪರಾಗಿಸಿ ತಮ್ಮ ಅಸಮಾಧಾನವನ್ನು ತಿಳಿಯಪಡಿಸಿರುತ್ತಾರೆ.

ಚೀನಾ ರಾಜ್ಯದ ಸ್ವಾಟಿ ಪಟ್ಟಣದಲ್ಲಿ ಕೆಲವು ದಿನಗಳೊಳಗೆ ಒಂದಾದನೊಂದು ರಾತ್ರಿ ಅನೇಕಲ್ಲುಗಳ ಮಳೆಯಾಯಿತು ಆದರೆ ಆ ಕಲ್ಲುಗಳು ಕೋಳಿ ಮೊಟ್ಟೆಯಗಾತ್ರ ವಿದ್ದು ರಕ್ತದ ನೀಲಿ ಬಣ್ಣ ಉಳ್ಳದ್ದಾಗಿಯೂ ದುರ್ವಾಸನೆಯಿಂದ ಕೂಡಿದ್ದಾಗಿದ್ದೂ ಇತ್ತು ಇದರಿಂದ ನೇವರ ಕೋಪವು ಆ ರಾಜ್ಯದ ಮೇಲಿರಬೇಕೆಂದೂ, ಏನೇನೋ ಕೇಡುಗಳು ಉಂಟಾಗುವವೆಂದೂ ಅಲ್ಲಿನ ಅನೇಕರು ನೆನೆಸಿ ಹೆದರುತ್ತಿದ್ದಾರೆಂದು ವರ್ತಮಾನವಿದೆ.

ಸುಮಾರು ೨೬ ವಯಸ್ಸಿನ ಅಮೇರಿಕ ದೇಶಸ್ಥನಾದ ಲೆಪ್ ಎಂಬ ಯುವ್ವನಪುರುಷನು ಬೈಸಿಕಲ್ ಎಂಬ ಎರಡು ಚಕ್ರಗಳ ಗಾಡಿಯ ಮೇಲೆ ಕುಳಿತು ಪ್ರಪಂಚವನ್ನೆಲ್ಲಾ ಸಂಚರಿಸಿಕೊಂಡು ಬರಬೇಕೆಂದು ಹೊರಟು ಈಗ ಚೀನಾದೇಶಕ್ಕೆ ಬಂದಿರುತ್ತಾನೆ ಅಲ್ಲಿ ಚೀನಾಜನಗಳು ಅವನ ಸಂಗಡ ಜಗಳವಾಡಿ ಅವನ ಪ್ರೀತಿಪಾತ್ರವಾದ ಗಾಡಿಯನ್ನು ಮುರಿದಿರುತ್ತಾರೆಂತಲೂ, ಅದನ್ನೇ ಅವನು ಸ್ವಸ್ಥಮಾಡುತ್ತಾ ಮಾಡುತ್ತಲಿದ್ದಾನೆಂತಲೂ ಕೇಳುತ್ತೇವೆ.

ಅಮೇರಿಕಖಂಡವು ಆರುಕೋಟಿ ಜನಸಂಖ್ಯೆಯನ್ನು ಮಾತ್ರ ಪಡೆದಿದ್ದಾಗ್ಯೂ ೧||| ಲಕ್ಷ ಮೈಲಿಗಳ ವಿಸ್ತೀರ್ಣವುಳ್ಳ ರೈಲುರಸ್ತೆಯನ್ನು ಪಡೆದಿರುತ್ತದೆ ಆದರೆ ನಮ್ಮ ಹಿಂದೂಸ್ಥಾನದಲ್ಲಿ ೨೮ ಕೋಟಿ ಪ್ರಜೆಗಳಿದ್ದಾಗ್ಯೂ ಅಮೇರಿಕದಲ್ಲಿರುವ ರೈಲು ರಸ್ತೆಗಿಂತಲೂ ೩ ಪಾಲಿನ ಮೈಲು ಕಡಿಮೆಯಾಗಿಯೇ ಇರುತ್ತೆ ಅದ್ದರಿಂದಲೇ ಹಿಂದೂಸ್ಥಾನವು ಅಭಿವೃದ್ಧಿಯನ್ನು ಪಡೆಯಲ್ಲ ಎಂಬದಾಗಿ ವಿಲಾಯತಿಯ ಒಬ್ಬ ದೊಡ್ಡ ಮನುಷ್ಯನು ಹೇಳುತ್ತಾನೆ.

ನೆಪ್ಕೆ ಕೋವಿನ ಗಣಿಗಳಲ್ಲಿ ಪ್ಲಾಟಿನಂ ಮೊದಲಾದ ಲೋಹಗಳನ್ನು ಅಗೆದು ತೆಗೆಯುವದಕ್ಕಾಗಿ ಕೂಲಿಯವರು ಅಹೋರಾತ್ರಿಯೂ ಕೆಲಸಮಾಡುತ್ತಲಿದ್ದಾರೆ ಅಲ್ಲಿ ಚಳಿಯು ತುಂಬಾ ಎಷ್ಟು ವಿಪರೀತವಾಗಿ ಇದ್ದಿದರೂ ಜನರು ಅದಕ್ಕೆ ಅಷ್ಟು ಹಿಂಜರಿಯುವದಿಲ್ಲ ಯಾಕೆಂದರೆ ಚಳಿಯನ್ನು ಬಿಸಿ ಜಾಗಗಳಲ್ಲಿ ಬಹಳ ಕೆಳಗಿಳಿಯುವದೆಂದು ಬರೆದಿರುತ್ತಾರೆ ಈ ನಿರಸ್ತರಿಸಲ್ಪಟ್ಟ ಪಳ್ಳಿಗೆ ಹಿಂದೆ ಯಾವಲ್ಲಿ ಪ್ಲಾಟಿನಂ ಉಂಟಾಗಿದೆ ಆದ್ದರಿಂದಲೇ ರೂಪಾಯಿನ ಬೆಲೆಯು ದಿನೇ ದಿನೇ ಕಡಮೆ ಯಾಗುತ್ತಲಿದೆ.

ಕಳೆದ ೨೦ ನೆ ಮಂಗಳವಾರ ರಾತ್ರಿ ೧೧ ಘಂಟೆಗೆ ಬೊಂಬಾಯಿಪಟ್ಟಣದ ಸಿಪ್ರಿ ಭಾಗದ ಅಳಗ್ಸಾಂಡರ್ ಮಿಲ್ ಎಂಬ ಕಾರ್ಖಾನೆಯ ಬಳಿ ಮಹೇಶ್ವರಿಪ್ತ ಘಾರ ಹುಲ್ಲುಮೆದೆಗೆ ಬೆಂಕಿಬಿದ್ದು ಪಟ್ಟಣವನ್ನೆಲ್ಲಾ ಅಲ್ಲೋಲ ಕಲ್ಲೋಲ ಮಾಡಿತು ಅಧಿಕಾರಿಗಳೆಲ್ಲರೂ ಅಲ್ಲಿ ಹಾಜರಾದರು ನೀರನ್ನು ಎತ್ತಿ ಸುರಿಯುವ ಯಂತ್ರಗಳು ಅನೇಕವಾಗಿ ಕೆಲಸ ಮಾಡಲಾರಂಭಿಸಿದವು ಇದಲ್ಲದೆ ಮಳೆಯೂ ವಿಪರೀತವಾಗಿ ಸುರಿಯುತ್ತಿತ್ತು ಆದಾಗ್ಯೂ ೨೪ ಮೆದೆಗಳು ಸಂಪೂರ್ಣವಾಗಿ ಉರಿದು ಬಿದು ಉಂಟಾದವು ಜ್ವಾಲೆಯು ಪಟ್ಟಣವನ್ನೆಲ್ಲಾ ಪ್ರಕಾಶಮಾಡಿತ್ತು.

ಅಸ್ಟ್ರೇಲಿಯದ ಒಬ್ಬ ನೊಬ್ಬ ವೈದ್ಯಶಾಸ್ತ್ರಜ್ಞನು ಜೇನುಹುಳಗಳಿಂದ ಕಡಿಸಿಕೊಳ್ಳುವ ವಿಷಯದಲ್ಲಿ—ಧನುರ್ವಾಯು, ದೇಹದಲ್ಲಿ ಅಂಗಗಳ ಭಗಳಕಂ ಮೊದಲಾದ ವಾಯುಸಂಬಂಧವಾದ ರೋಗಿಗಳು ಈ ಹುಳಗಳಿಂದ ಕಡಿಸಿಕೊಂಡಲ್ಲಿ ೩-೪ ಆವರ್ತಿಯೊಳಗಾಗಿ ಅವರಿಗೆ ಗುಣವಾಗುವದೆಂತಲೂ, ವಾಲ್ಟಮ್ಸ್ಟವ ನಿವಾಸಿಗಳಾಗಿಯೂ, ಈ ವಿಧವಾದ ರೋಗಗಳಿಂದ ಪೀಡಿಸಲ್ಪಡುವವರಾಗಿಯೂ ಇರುವ ಅನೇಕರು ಹೀಗೆ ಜೇನುಹುಳಗಳಿಂದ ಕಡಿಸಿಕೊಂಡು ಆರೋಗ್ಯವನ್ನು ಪಡೆದಿರುತ್ತಾರೆಂತಲೂ ವರ್ತಮಾನಪತ್ರಿಕೆಗಳಲ್ಲಿ ಪ್ರಕಟಿಸಿರುತ್ತಾನೆ.

ಇಂಗ್ಲೀಷ್ ಸೈನ್ಯದ ಮಯಿದೇಶಿನೂರುಗಳು ಎಷ್ಟರ ಮಟ್ಟಿಗೆ ಸ್ವೇಚ್ಛೆ ಮುಖ್ಯಿವ ಸಂಗತಿಯಿಂದ ವಾಚಕರೇ ಊಹಿಸಿಕೊಳ್ಳಬಹುದು ಜಲಂಧರದಲ್ಲಿ ಪ್ರೈವೆಟ್ ಎಡ್ವರ್ಡ್ ಎಂಬ ಸೋಜರನು ಪಹರೇ ಕೊಡುತ್ತಿದ್ದಾಗ್ಯೆ ಕೋಟೆಯೊಳಗೆ ಹೋಗುತ್ತಿದ್ದ ಒಬ್ಬನನ್ನು ತಡೆಯುವ ಹಾಗೆ ನಿಸನನ್ನು ತೋರಿಸಿ ಹೆದರಿಸಿದನು ಈ ಅಪರಾಧಕ್ಕೆ ಅವನನ್ನು ಕವರ್ನ್ಮೆಂಟ ರವರು ದರ್ಬಾರ್ನಲ್ಲಿ ಮಾಡಿ ಅವನಿಗೆ ೭ ವರುಷಗಳ ಕಠಿಣಸಜಾ ವಿಧಿಸಿದರು ಆದರೆ ಅವರ ಶಿರ್ಮ್ಯಾಕವನ್ನು ಕಮ್ಯಾಂಡರ್ ಇನ್ ಚೀಫರವರು ಖಾಯಂ ಮಾಡುವಾಗ್ಯೆ ೭ ವರುಷವನ್ನು ಕಡಿದು ೫ ವರುಷ ಮಾಡಿದರು.

ಮಾಂಟರಿಪಟ್ಟಣದ ಬರ್ಮನಿವಾಸಿಗಳ ಸಹವಾಸಿಗಳಿಗಾಗಿ ಒಂದು ಆಶ್ಚರ್ಯಕರವಾದ ಹುಕುಂ ಕೊಡಲ್ಪಟ್ಟಿರುತ್ತೆ ಪ್ರತಿನಿವಾಸಿಯು ಮನೆಯಲ್ಲೂ ೧೦ ಬಟ್ಟೆಗಳನ್ನೂ, ಬಾಪ್ಟಿಸ್ಟ ಪದ್ಧತಿಯ ೫ ಕಂಬಗಳನ್ನೂ, ಒಂದು ಭಾರ್ಯೆಯನ್ನೂ, ಒಂದು ಮಡಿಕೆಯ ತುಂಬ ನೀರನ್ನೂ ಹಜಾರಾತಿಯಲ್ಲಿ ಇಟ್ಟುಕೊಂಡಿರಬೇಕು ಎಂಬುವದೇ ಇದಲ್ಲದೆ ಪ್ರತಿ ಮನೆಗೂ ಒಂದು ರಹಸ್ಯವಾದ ಸಂಕೇತವಿರಬೇಕು ರಾತ್ರಿ ಕಾಲಗಳಲ್ಲಿ ಇಂಥಾ ಸಂಕೇತಗಳನ್ನು ತಿಳಿಯದವನು ಒಂದು ಮನೆಯನ್ನು ಹೊಕ್ಕರೆ ಆದರೆ ಅವನನ್ನು ಹಿಡಿದು ಶಿಕ್ಷಿಸುವರು ಇಂಥಾ ವಿಚಿತ್ರವಾದ ಹುಕುಂ ಯಾತಕ್ಕಾಗಿ ಹೊರಡಿಸಿರುತ್ತಾರೋ ಅವರ ಉದ್ದೇಶವೇನೋ ಯಾರಿಗೂ ಗೊತ್ತಾಗಿಲ್ಲ.

ಒಂದಾನೊಂದು ಅಮೇರಿಕ ಪತ್ರಿಕೆಯಲ್ಲಿ ಒಬ್ಬ ಗೃಹಸ್ಥನು ತನ್ನ ಹೆಂಡತಿಯ ವಿಷಯವಾಗಿ ಹೀಗೆ ಪ್ರಕಟನೆಮಾಡಿಸಿರುತ್ತಾನೆ—ನನ್ನ ಹೆಂಡತಿ ಅನ್ನಾ ಮೇರಿಯೂ ಎಂಬವಳು ಯಾರನ್ನೋ ಎತ್ತಿಹಾಕಿಕೊಂಡು ಹೋಗಿದಾಳೆ ಅಲ್ಲದೆ ಅವಳನ್ನು ಯಾರೋ ಅಪಹರಿಸಿಕೊಂಡು ಹೋಗಿರುತ್ತಾರೆ ಅವಳನ್ನು ಪುನಹಾ ನನ್ನ ಬಳಿಗೆ ಕರೆತಂದು ಬಿಡುವವನ್ಯಾವನಾದರೂ ಸರಿಯೆ ಅವನ ತಲೆಯನ್ನು ಒಡೆದುಹಾಕುವೆನು ಅವಳಿಗೆ ಯಾರಾದರೂ ಸಾಲ ವಸ್ತ್ರ ಕೊಡುವವಿಷಯದಲ್ಲಿ, ವರ್ತಕರ್ಯಾರಾದರೂ ಕೊಡಬಹುದು ಆದರೆ ನನ್ನ ಸಾಲವನ್ನೇ ಕೊಡದೆ ಸುಮ್ಮನಿದ್ದುಮಾಡಿಕೊಂಡಿರುವ ಸ್ವಾನು ಅವಳ ಸಾಲಗಳನ್ನು ತೀರಿಸುತ್ತೇನೆಂಬ (ಗ್ರಹ)ಯಾರನ್ನೂ ಅವಲಂಬಿಸದಿರಲಿ ಎಂಬುವದೇ.

ಟೆನಿಸೀ ಪ್ರಾಂತ್ಯದಲ್ಲಿ ಒಬ್ಬ ಹೆಂಗಸು ರೈಲಿನಲ್ಲಿ ಬಂದನೇ ತರಗತಿಯ ಟಿಕೆಟ್ಟನ್ನು ಕೊಂಡು ಕೊಂಡು ಗಾಡಿಯಲ್ಲಿ ಕುಳಿತುಕೊಳ್ಳುವಲ್ಲಿ ಆ ಬಿಳಿಯಜನರು ಹೆಂಗಸಿಗೆ ಇಷ್ಟವಾದಿದ್ದೀಯೇ ರುವದೆ! ಎಂದು ಆಶ್ಚರ್ಯಪಟ್ಟು ಅವಳನ್ನು ಗಾಡಿಯಿಂದ ಹೊರಕ್ಕೆ ಎಳೆದುಹಾಕಿದರು ಅವಳು ಇವರಮೇಲೆ ದಾವಾ ಮಾಡಿದಳು ಜಡ್ಜಿಯವರು—ಹೆಂಗಸು ಮಾನವಾಗಿರಬೇಕು ೧ನೆ ತರಗತಿಯಲ್ಲಿ ತಿರುಗುವಷ್ಟು ಧನವನ್ನು ತೋರ್ಪಡಿಸಕೂಡದು ಎಂಬದಾಗಿ ಹೇಳಿ ನಿಜಮಾಡಿದರು ಕಡೆಗೆ ಜನರು ಅವಳ ಅಚ್ಚೆತನವನ್ನು ಸಂಪಾದಿಸಿ ಅವಳನ್ನು ಗುಂಡಿನಿಂದ ಹೊಡೆದುಕೊಲ್ಲುತ್ತೇವೆಂದು ಹೆದರಿಸಿದರು ಅವಳು ಅಲ್ಲಿಂದ ವಿಲಾಯತಿಗೆ ಹೋಗಿ, ಅಲ್ಲಿ ತನ್ನ ಕಷ್ಟಗಳನ್ನೂ, ತನಗುಂಟಾದ ಅವಮಾನಗಳನ್ನೂ ಹೇಳಿಕೊಳ್ಳುತ್ತಲಿದ್ದಾಳೆ.

ಪಂಚೇತ್ತರದಲ್ಲಿ ವಿದ್ಯಾರ್ಥಿಗಳು ಎಫ್ ಎ ಮತ್ತು ಬಿ ಎ ಪರೀಕ್ಷೆಗಳನ್ನು ಪ್ಯಾಸ್ ಮಾಡಬೇಕೆಂದು ಬಯಸುತ್ತಿದ್ದಾಗ್ಯೆ ಅಲ್ಲಿಗೆ ಒಬ್ಬ ಜೋತಿಷ ಶಾಸ್ತ್ರಜ್ಞನು ಬಂದು—ನೀವು ಓದದೇ ಇದ್ದಾಗ್ಯೂ ನಿಮಗೆ ಪ್ಯಾಸಾಗುವಂತೆ ಮಾಡಿಕೊಡುತ್ತೇನೆಂಬದಾಗಿ ಆ ವಿದ್ಯಾರ್ಥಿಗಳಿಗೆ ಹೇಳಿದನು ಆ ಪೈಕಿ ಕೆಲವರು ಸೋಮಾರಿಗಳಾಗಿದ್ದವರು ಅವನ ಮಾತನ್ನು ನಂಬಿ ಇವನ ಹೇಳಿದ್ದಲ್ಲಿ ತಲೆಗೆ ೩೦ ರೂಪಾಯಿ ಪ್ರಕಾರ ಒಬ್ಬನ ವಶದಲ್ಲಿ ಕೊಟ್ಟಿದ್ದರು, ಆದನಿಗೆ ೨೦ ರೂಪಾಯಿ ಮುಂಗಡ ಕೈಗೆ ಕೊಟ್ಟರು ಈ ಹಣವನ್ನೆಲ್ಲಾ ತೆಗೆದುಕೊಂಡು ಬಲಿಯನ ಸೂಕ್ತವನ್ನು ಪಠಿಸಲಾರಂಭಿಸಿದನು ಪರೀಕ್ಷೆಯ ಕಾಲದಲ್ಲಿ ಆ ಸ್ವಾಮಿಯ ಹಣಗೆ ಮಂತ್ರವೇಳುತ್ತಾ ಬೂದಿಯನ್ನು ಬಳಿದು ಕಳುಹಿಸುತ್ತಿದ್ದನು ಒಬ್ಬನೂ ಪ್ಯಾಸಾಗಲಿಲ್ಲ ಈಗ ಅವನು ಅವರಿಗೆ ಕಾಣಿಸಿಕೊಂಡಿರುತ್ತಾನೆ ಹುಡುಗರು ಅವನನ್ನು ಹಿಗ್ಗಾಮುಗ್ಗಾ ಹೊಯುತ್ತಲಿದ್ದಾರೆ ಪರ್ಯವಸಾನ ಇನ್ನೂ ಗೊತ್ತಾಗಲಿಲ್ಲ.

ಸ್ಕಾಟ್‌ಲೆಂಡಿನಲ್ಲಿ ಒಬ್ಬ ಉಪದೇಶಿಯು ತನ್ನ ದೇವಸ್ಥಾನದಲ್ಲಿ ಪ್ರಸಂಗಮಾಡುತ್ತಿದ್ದನು ಇವನ ಪ್ರಸಂಗವನ್ನು ಕೇಳಬೇಕೆಂದು ಒಬ್ಬ ಮಂಗಲಿಸವನೂ ಆ ದೇವಸ್ಥಾನಕ್ಕೆ ಹೋದನು ಮಂಗಲಿಸವರು ಯಾರೂ ತನ್ನ ಪ್ರಸಂಗವನ್ನು ಕೇಳುವದಕ್ಕೆ ಬರಲಿಲ್ಲವೆಂದು ಊಹಿಸಿ ಆ ಉಪದೇಶಿಯು ಹೇಳಿದ್ದೇನಂದರೆ—ಜನರೇ! ನೀವು ಮಂಗಲಿಸವನ ಅಂಗಡಿಗೆ ಯಾವಾಗಲೂ ಹೋಗಿ ಕೂತುಕೊಳ್ಳಬೇಡಿ; ಸೋಮಾರಿತನ ಕಷ್ಟ, ಕುಡುಕರನ್ನೂ, ತುಚ್ಛವಾದ ಜನಗಳನ್ನೂ ಆ ಅಂಗಡಿಯು ಸ್ವಾಗತಿಸುವಸ್ಥಾನವಾಗಿರುತ್ತೆ ಮತ್ತು ಮಂಗಲಿಸ ಮಾಡುವವನು ನಿಷ್ಪ್ರಯೋಜಕನೂ, ಕುಡುಕನೂ ಮತ್ತು ಸಹವಾಸಕ್ಕೆ ಅಯೋಗ್ಯನೂ ಆಗಿರುತ್ತಾನೆ ಎಂಬುವದೇ ಇದನ್ನು ಕೇಳುತ್ತಿದ್ದ ಮಂಗಲಿಸದವನು ಅತಿಕ್ರೋಧವಾಗಿ ಆ ಉಪದೇಶಿಯು ತನಗೆ ಮಾನನಷ್ಟ ಮಾಡಿರುತ್ತಾನೆಂತಲೂ, ಅವನಿಂದ ೧,೩೦೦ ರೂಪಾಯಿ ಹಾನಿಯನ್ನು ಕೊಡಿಸಬೇಕೆಂದೂ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಫಿರ್ಯಾದು ಮಾಡಿರುತ್ತಾನೆ.

ಸಂಯುಕ್ತಸಂಸ್ಥಾನದ ಸೇರಿದ ಅಲ್ಬಾನಿ ಎಂಬ ಊರಿನ ಬಳಿ ೧೬ ಬಂಡಿಗಳನ್ನು ಕಟ್ಟಿ ಇದ್ದ ಒಂದು ಸ್ಪೆಷಲ್‌ಟ್ರೇನು ಹೋಗುತ್ತಿದ್ದಾಗ್ಯೆ ಆಕಸ್ಮಾತ್ತಾಗಿ ಕಂಬಿಗಳನ್ನು ಬಿಟ್ಟು ಹೊರಗೆ ಬಿದ್ದು ನುಚ್ಚುನೂರಾಯಿತು ಅದರಲ್ಲಿ ಒಂದು ಸರ್ಕಸ್ಸಿನ ಆಟದವರೂ, ಅವರ ಮೃಗಗಳೂ, ಸಾಮಾನುಗಳೂ ಇದ್ದವು ತಕ್ಷಣವೇ ೭ ಮಂದಿ ಮನುಷ್ಯರೂ, ತರದೇಶಾಗಿದ್ದ ಈ ಕುದುರೆಗಳೂ ಸತ್ತವು ಅನೇಕ ಮೃಗಗಳಿಗೆ ಅಂಗಹೀನವಾಯಿತು ಸಿಂಹಗಳೂ, ಚಿರತೆಗಳೂ, ಹುಲಿ, ಆನೆ ಮೊದಲಾದ ಮೃಗಗಳೂ ತಪ್ಪಿಸಿಕೊಂಡು ಓಡಿಹೋದವು ಆ ಪೈಕಿ ಒಂದು ಹುಲಿಯು ಸಮೀಪದ ಹೊಲದಲ್ಲಿ ಮೇಯುತ್ತಿದ್ದ ಒಂದು ಹಸುವನ್ನು ಕೊಂದು ತಿನ್ನುವದಕ್ಕಾರಂಭಿಸಿತು ಕೂಡಲೆ ಅದನ್ನು ಗುಂಡಿನಿಂದ ಹೊಡೆದು ಕೊಲ್ಲಬೇಕಾಯಿತು ಹೀಗೆ ಆ ಸರ್ಕಸ್ ಕಂಪೆನಿಯವರಿಗೆ ಉಂಟಾದ ಆಪತ್ತನ್ನು ಏನೆಂದು ಹೇಳೋಣ ಅವರ ನಷ್ಟವು ಅಷ್ಟಿಷ್ಟೆಂದು ವಿವರಿಸುವದಕ್ಕಾಗದು ಅವರ ಪ್ರಾಣಿಜನಗಳು ಈಗ ಆ ರೈಲ್ವೇ ಕಂಪೆನಿಯವರ ಮೇಲೆ ದಾವಾ ಹಾಕಿರುತ್ತಾರೆಂದು ತಿಳಿಯುವದೇ ನಾಶ್ಚರ್ಯ!

ವಿಷ್ಣು ವೈನಗರಿಗೆ ಸೇರಿದ ಆರಲೆ ಎಂಬ ಊರಿನಲ್ಲಿ ಕೆಲವು ದಿನಗಳ ಕೆಳಗೆ ಪರಮಾತ್ಮ ಧ್ಯಾನವನ್ನು ಆಚರಿಸುವ ಒಂದು ಸಂಗತಿಯು ನಡೆದದ್ದು ಯಥಾರ್ಥವೆಂದು ಅಲ್ಲಿನ ಒಬ್ಬ ಪಾದ್ರಿಯವರು ಬರೆಯುತ್ತಾನೆ—ಆ ಸ್ತ್ರೀಯಲ್ಲಿ ೧೮-೧೯ ವರುಷದ ಒಬ್ಬ ಹುಡುಗಿಗೆ ಆಪಸ್ಮಾರವೆಂಬ ಮಹಾಕಠಿಣವಾದ ರೋಗದಿಂದ ಪೀಡಿತಳಾಗಿ ತಿಂಗಳುಗಳನ್ನು ಬಿಟ್ಟು ಹಲವು ಎಷ್ಟು ಮಾತ್ರಕ್ಕೂ ಆಗುತ್ತಿರಲಿಲ್ಲ ಒಬ್ಬ ವೈದ್ಯರನು ಅವಳಿಗೆ ಔಷಧಗಳನ್ನು ಕೊಟ್ಟು ಕೊಟ್ಟು ಸಾಕಾಗಿದ್ದನು ಅವಳು ತನ್ನ ಅಣ್ಣನ ಮನೆಯಲ್ಲಿದ್ದಳು ಕಡೆಗೆ ಈ ಅಣ್ಣನು ಮನಸ್ಸು ಮಾಡಿಕೊಂಡು ಇವಳನ್ನು ಮನೆಯಿಂದ ಹೊರಡಿಸಿಬಿಟ್ಟನು ಅವಳು ಒಂದು ಕ್ಯಾಸಲಿಯಲ್ಲಿ ಬಿದ್ದುಕೊಂಡು ಬಾಧೆಪಡುತ್ತಿರುವಾಗ್ಯೆ ಅವಳಿಗೆ ಕ್ರಿಸ್ತನತಾಯಿಯಾದ ಮರಿಯಮ್ಮನು ಕಾಣಿಸಿಕೊಂಡು—ಇಲ್ಲಿ ನನಗೆ ಇದ್ದೀಯೆ, ನನ್ನ ದೇವಾಲಯಕ್ಕೆ ಬಾ ಎಂಬದಾಗಿ ಹೇಳಿದ ಹಾಗಾಯಿತೆಂದು ಆ ಹುಡುಗಿಯು ಹೇಳುತ್ತಾಳೆ ಅವಳು ಅದೇಪ್ರಕಾರ ತನಗೆ ಕೈಲಾದಷ್ಟು ಆ ಗುಡಿಗೆ ಹೋಗಿ ಆ ರಾತ್ರಿ ಅಲ್ಲಿ ಮಲಗಿದ್ದಳು ಮಾರನೆಯ ದಿನ್ಯೆ ಅವಳಿಗೆ ರೋಗಹೋಗಿ ಆರೋಗ್ಯವಾದಳು! ಎದ್ದು ತಿರುಗಾಡುತ್ತಲೂ, ಸಂತೋಷದಿಂದ ಕುಣಿಯುತ್ತಲೂ ಇದ್ದಾಳೆ!! ಈ ಸಂಗತಿಯನ್ನು ಪಟ್ಟಣದವರೆಲ್ಲ ಕೇಳಿ ಆಶ್ಚರ್ಯಪಟ್ಟು ಆ ದಿನ ಎಲ್ಲರೂ ತಮ್ಮ ತಮ್ಮ ಕೆಲಸಗಳನ್ನು ಬಿಟ್ಟು ಆನಂದವಾಗಿದ್ದರು ಅಷ್ಟರಲ್ಲಿ ಇತರ ಸಕಲವಿಧವಾದ ರೋಗಿಗಳೂ ಆ ರಾತ್ರಿ ಅದೇ ದೇವಸ್ಥಾನಕ್ಕೆ ಆ ಹುಡುಗಿಯಂತೆಯೇ ತಮಗೂ ಆರೋಗ್ಯವಾಗುವದೆಂದು ಭಾವಿಸಿಕೊಂಡು ಹೋಗುತ್ತಲಿದ್ದರು ಎಂಬುವದೇ.

ಶಾಲೀವಾಹನಶಕ ೧೮೧೫ ನೇ ವಿಜಯನಾಮ ಸಂವತ್ಸರದ ಅಧಿಕ ಆಷಾಢಶುದ್ಧ ಪೌರ್ಣಮಿ ಗುರುವಾರದಿಂದ ಅಧಿಕ ಆಷಾಢಬಹುಳ ಷಷ್ಠಿ ಬುಧವಾರದ ವರೆಗಿನ ವಾರದಪಂಚಾಂಗ.

೧೮೯೩ ನೇ ಇಸವಿ, ಜೂನ್.

ತಾ.	ವಾರ.	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.	ವೃಷಭ ಮಾಸ ತೇದಿ
29	ಗು	ಪೌ	11-11	ಮೂ	2-5	17
30	ಶು	ಪ್ರ	15 12	ಪೂ.	7-13	18
1	ಶ	ದ್ವಿ	18-15	ಉ.	12-30	19
2	ರ	ತ್ರಿ	20-1	ಶ್ರ	16-47	20
3	ಸೋ	ಚ	20-21	ಧ.	18-31	21
4	ಮಂ	ಪಂ	19-31	ಶ	19-38	22
5	ಬು	ಷ	18 0	ಪೂಭಾ.	19-37	23

ಪೇಟೆ ಧಾರಣೆ,

ದಿನಸಿ	ಮೈಸೂರು.	ಬೆಂಗಳೂರು.
	ರೂ ಆ. ಪೈ.	ರೂ ಆ. ಪೈ.
ಕಡ್ಡೀ ಅಕ್ಕಿ ಪಲ್ಲ ೧ಕ್ಕೆ	೧೨-೮-೦	೧೧-೦-೦
ಕೆಂಬೂತಿ ಅಕ್ಕಿ ಅಷ್ಟೆ	೧೨-೬-೦	೯-೮-೦
ದಿಟಿಗೆ ಅಕ್ಕಿ ದಪ್ಪ	೧೨-೦-೦	೯-೦-೦
ಜೀರಿಗೆ ಅಕ್ಕಿ	೧೨-೧೨-೦	೧೦-೬-೦
ಸಂಣಕ್ಕಿ ಅಷ್ಟೆ	೧೪-೦-೦	೧೪-೦-೦
ದಿಟಿಗೆ ಅಕ್ಕಿ ದಪ್ಪ	೧೨-೮-೦	೧೨-೦-೦
ತೊಗರೀಬೇಳೆ ಪಲ್ಲ ೧ಕ್ಕೆ	೧೧-೮-೦	೧೨-೧೨-೦
ದಿಟಿಗೆ ದಪ್ಪ ತರಹ	೧೧-೦-೦	೧೧-೪-೦
ಕಡಲೆ ಪಲ್ಲ ೧ಕ್ಕೆ	೮-೦-೦	೧೧|೯-೦-೦
ರಾಗಿ	೩-೧೨-೦	[illegible]
ಹುರುಳಿ ಪಲ್ಲ ೧ಕ್ಕೆ	೯-೦-೦	೧೦-೪-೦
ಬೇಳೆ ಅವರೆ	೧೨-೬-೦	೧೧-೮-೦
ಕಡಲೆ	೯-೦-೦	೧೦-೦-೦
ಉದ್ದು	೧೨-೦-೦	೧೦-೮-೦
ಹೆಸರು	೧೦-೦-೦	೧೦-೪-೦
ಎಳ್ಳು	೧೬-೮-೦	೧೫-೦-೦
ಹುರುಳಿ	೬-೬-೦	೬-೧೪-೦
ಸೀಗೇಕಾಯಿ ಮಣ ೧ಕ್ಕೆ	೧-೧೨-೦	೦-೧೨-೦
ಮೆಣಸಿನಕಾಯಿ	೩-೮-೦	೩-೪-೦
ದಪ್ಪ ತರಹ	೩-೪-೦	೨-೧೨-೦
ಬೆಲ್ಲ ನೊರ್ಡ್ ಉಂಡೆ ೧೦೦ಕ್ಕೆ	೬-೮-೦	ದು ೧-೧೦-೦
ಸಣ್ಣ ಉಂಡೆ	೪-೦-೦	೫|| ೧-೫-೦
ಬೆಳ್ಳುಳ್ಳಿ ಮಣ ೧ಕ್ಕೆ	೪-೨-೦	೫-೦-೦
ಹರಳೆಣ್ಣೆ	೬-೪-೦	೩-೧೪-೦
ಕೊತ್ತುಂಬರಿ ಪಲ್ಲ ೧ಕ್ಕೆ	೯-೦-೦	೮-೧೨-೦
ಉಪ್ಪು	೯-೮-೦	೯-೧೨-೦
ಹೂಗೆಸೊಪ್ಪು ಮಣ ೧ಕ್ಕೆ	೧-೧೨-೦	೧-೧೨-೦
ಹಳೇ ಹೊಗೆಸೊಪ್ಪು	೧-೮-೦	೧-೮-೦
ತುಪ್ಪ	೧೪-೦-೦	೧೨-೮-೦
ಸೀಮೆ ಎಣ್ಣೆ ಟಿನ್ ೧ಕ್ಕೆ	೪-೨-೬	೪-೧-೦
ತೆಂಗಿನಕಾಯಿ ೧೦೦ಕ್ಕೆ	೪-೮-೦	೪-೮-೦
ಚಿನ್ನ (ತೊಲ)		
ಕೆಂಪು	೧೬-೮-೦	೧೬-೧೧-೦
ಪಸಿಮೆ	೧೬-೧೦-೦	೧೬-೧೪-೦
ಗಟ್ಟಿ	೨೬-೮-೦	೨೬-೬-೦

Mysore —Printed and published for the Proprietor at the Wesleyan Mission Press.
29/6/93.

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು | ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಸಂಪುಟ ೬ | ಮೈಸೂರು—ಸ್ ೧೮೯೩ ನೇ ಇಸವಿ ಜುಲೈ ತಾರೀಖು ೬ ನೇ ಗುರುವಾರ. | ಸಂಖ್ಯೆ ೪

ನೋಟೀಸ್.

		ಕ್ರಯ	ಹಾಸಲು ಸಹಿತ
Campbell's	ಕನ್ನಡ ವ್ಯಾಕರಣ ಸಾರ	೦ ೨ ೦	೦ ೨ ೬
Object Lessons	ವಸ್ತು ಪಾಠಗಳು	೦ ೧ ೬	೦ ೧ ೬
Picture do	ಚಿತ್ರಗಳು ಸಹಿತವಾಗಿ	೦ ೨ ೦	೦ ೨ ೬

ಈ ಮೂರು ಪುಸ್ತಕಗಳು ಪ್ರೈಮರಿ ಶಾಲೆಗಳಲ್ಲಿ ಓದತಕ್ಕ ಪುಸ್ತಕಗಳು.

	ಕ್ರಯ	ಹಾಸಲು ಸಹಿತ
ಸ್ತ್ರೀಯರು ಓದತಕ್ಕ ಪುಸ್ತಕ	೦ ೫ ೦	೦ ೫ ೬
ಗಣಿತ ವಿದ್ಯವು ..	೦ ೪ ೦	೦ ೪ ೬
ಗಣಿತ ಮಗ್ಗಿಗಳು ..	೦ ೧ ೦	೦ ೧ ೬
ಸಂಸ್ಕೃತ ಕರ್ನಾಟಕ ಭಾಷಾಮಂಜರಿ	೦ ೨ ೦	೦ ೨ ೬
ಭೂಗೋಳ ಶಾಸ್ತ್ರ ಪ್ರಶ್ನೋತ್ತರ	೦ ೨ ೦	೦ ೨ ೬
ಇಂಗ್ಲೀಷೂ ಕನ್ನಡವೂ ಶಬ್ದಾವಳಿ ೧ನೇ ೨ನೇ ಭಾಗಂಕ್ಕೆ	೦ ೧ ೦	೦ ೧ ೬
ಕಾವ್ಯಮಾಲೆ (Minor Poetical Anthology)	೦ ೮ ೦	೦ ೮ ೬
ಬಾಲವ್ಯಾಕರಣ ..	೦ ೫ ೦	೦ ೫ ೬
ಹಳಗನ್ನಡ ವ್ಯಾಕರಣ ಸೂತ್ರಗಳು	೦ ೬ ೦	೦ ೬ ೬
ಇಂಗ್ಲೀಷೂ ಕನ್ನಡವೂ ಸಂಭಾಷಣ ವಾಕ್ಯಗಳು	೦ ೧೦ ೦	೦ ೧೦ ೬
ಶಬ್ದಮಣಿ ದರ್ಪಣ	೧ ೦ ೦	೧ ೪ ೬
Kan Eng Pocket Dictionary	೧ ೪ ೦	೧ ೫ ೨
Eng Kan School Dictionary	೨ ೧೦ ೦	೨ ೧೨ ೬
ಬಸ್ಸೇ ತಾಯಿ	೦ ೪ ೪	೦ ೪ ೬
ಆತ್ಮಿಕ ದಿವ್ಯ ಯುದ್ಧ (Bunyan)	೦ ೧೨ ೦	೦ ೧೩ ೬
ಕೃಷಿ ಪದ್ಧತಿ ೧ ನೇ ಭಾಗ ೨ ಅಣ ೩ನೇ ಭಾಗ	೦ ೧ ೬	೦ ೨ ೦
ಭಕ್ತಿಸಾರ	೦ ೧ ೦	೦ ೧ ೬
ಸತ್ಯ ವಾಗ್ದಾನಿ	೦ ೧ ೦	೦ ೧ ೬
ಕಾವ್ಯಪುಂಜ	೦ ೩ ೦	೦ ೩ ೬

A new Edition of the Geography suited for the Lower Secondary Examination is now ready.—Edited by Rev. H. Gulliford. Price 6 A.

ಮೇಲೆ ನಮೂದಿಸಿರುವ ಪುಸ್ತಕಗಳನ್ನು ಬೆಂಗಳೂರು ದಂಡಿನ ವೆಸ್ಲೇಯನ ಮಿಷನ ಪುಸ್ತಕ ಶಾಲೆಯಲ್ಲಿ ಪಡೆಯ ಬಹುದು.

ನೋಟೀಸ್.

ಪುಸ್ತಕಗಳು	ಕ್ರಯ
ಪ್ರಾಕೃತ ವ್ಯವಹಾರಿಕ	1—8—0
ಕನ್ನಡ ಇಂಗ್ಲೀಷು ನಿಘಂಟು 1 ನೇ ದೊಡ್ಡ ತರಹ	3—0—0
„ „ 2 ನೇ ತರಹ	2—8—0
ಬಾಲಕರು ಓದುವ ಎರಡನೆ ಜ್ಞಾನೋಪದೇಶದ ಪ್ರಶ್ನೋತ್ತರಗಳು	0—1—0
ಸಭೆಯ ನಿಯಮಗಳನ್ನು ಕುರಿತದ್ದು	0—0—6
ಕಥಾ ಸಂಗ್ರಹ 1 ನೇ ಭಾಗದಿಂದ 3 ವರೆಗೆ	1—0—0
ಕಥಾ ಸಂಗ್ರಹ 1 ರಿಂದ „ ನೇ ಭಾಗ ಹೊಸ ಭಾಷೆ	1—0—0
„ „ ದೊಡ್ಡ ತರಹ	1—8—0
ಬೋಧಶಾಸ್ತ್ರ ಬೋಧಿನಿ	0—4—0
ಸತ್ಯವೇದವನ್ನು ಕುರಿತು 2 ನೇ ಭಾಗ	0—4—0
ಪ್ರಸಂಗಿಯ ದರ್ಪಣ	0—6—0
ಇಂಗ್ಲೀಷುಭಾಷೆಯಲ್ಲಿಯೂ, ಕನ್ನಡ ಭಾಷೆಯಲ್ಲಿಯೂ, ಶಬ್ದಗಳ ವಿಭಾಗಗಳನ್ನು ವಿವರಿಸಿರುವ ನಿಘಂಟು	0—2—0
ಕನ್ನಡ ವ್ಯಾಕರಣ (ಇಂಗ್ಲೀಷಿನಲ್ಲಿ)	2—0—0
ಹಿಂದುಸ್ಥಾನಿ ವ್ಯಾಕರಣ	1—0—0
ಬಾಲಬೋಧನೆಯು	0—0—6
ವನ ಕರಗಳ ಅಂಟುರೋಗಪರಿಹಾರ	0-12—0
ಕ್ರಿಸ್ತರ ಬೋಧನೆಗಳ ಸಂಗ್ರಹವು	0-12—0

ಮೇಲೆ ನಮೂದಿಸಿರುವ ಪುಸ್ತಕಗಳನ್ನು ಅಪೇಕ್ಷಿಸು ವವರು ಮೈಸೂರು ವೆಸ್ಲೆಯನ ಮಿಷನ ಪ್ರೆಸ್ಸಿಗೆ ಬರೆದು ತರಿಸಿಕೊಳ್ಳಬಹುದು ಅಂಚೇ ಹಾಸಲು ಕೊಡಬೇಕು

ವೆಸ್ಲೆಯನ ಮಿಷನ ಪ್ರೆಸ್,

ಮೈಸೂರು.

ವಿಶೇಷ! ಓದಿನೋಡಿರಿ!! ಓದಿನೋಡಿರಿ!!!

ಅನುಶಾಸನೀಕ ಪರ್ವ ಪ್ರಸಿದ್ಧಿ ಸಿದು.

ಶ್ರೀಕೃಷ್ಣರಾಜ ವಾಣೀವಿಲಾಸದಿಂದ ಮಹಾಭಾರತವು ನಮ್ಮ ಶ್ರೀಚಾಮುಂಡೇಶ್ವರಿ ಪ್ರೆಸ್ಸಿನಲ್ಲಿ ಪ್ರಕಟಿಸಲ್ಪಡುತ್ತಿದ್ದು ಎಲ್ಲರಿಗೂ ವಿದಿತವಾಗಿದ್ದಷ್ಟೆ. ಈಗ ಅನುಶಾಸನೀಕಪರ್ವವು ಚಾಮುಂಡೇಶ್ವರಿ ಪ್ರೆಸ್ಸಿನಿಂದಲೂ ಮುದ್ರಿತವಾಗಿ ಸೇರ್ಪಡೆಯಾದ ಕಿತಾಬಿನ ಪುಸ್ತಕ್ಕಂಡಿಸಿಂದ ತಯಾರಾಗಿರುತ್ತ ಸಭಾಪರ್ವ ವಿರಾಟಪರ್ವದ ಬುಕ್ಕುಗಳು ಮುಗಿದು ಹೋದದರಿಂದ ಪುನಹ ಎರಡನೆ ಛಾಪೆಯು ಪ್ರಾರಂಭವಾಗಿದೆ. ಈ ಕೆಳಗೆ ಕಂಡ ಪುಸ್ತಕಗಳು ನಮ್ಮಲ್ಲಿ ಸ್ವಲ್ಪವೇ ಇರುವದರಿಂದ ಇಚ್ಛೆಯುಳ್ಳವರು ತರಿಸಿಕೊಳ್ಳಬಹುದು. ಅನುಶಾಸನೀಕ ಪರ್ವ ಕಿತಾಬಿನ ಬೈಂಡ ೩—೧೪—೦ ಲೋವರ ಸೆಕಂಡರಿ ಪರೀಕ್ಷೆಯ ನೋಟ್ಸು ಕ್ರಯ ೮ ಅಣೆ

ಆದಿಪರ್ವ	.	ಕ್ರಯ	೩ ೦ ೦
ಸಭಾಪರ್ವ	..	„	೧ ೪ ೦
ವಿರಾಟಪರ್ವ	.	„	೧ ೦ ೦
ಭೀಷ್ಮಪರ್ವ	..	„	೨ ೦ ೦
ದ್ರೋಣಪರ್ವ	.	„	೨ ೮ ೦
ಶಲ್ಯಪರ್ವ	.	„	೧ ೨ ೦
ಸೌಪ್ತಿಕಪರ್ವ	..	„	೦ ೬ ೦
ಸ್ತ್ರೀಪರ್ವ	..	„	೦ ೬ ೦
ಶಾಂತಿಪರ್ವ ರಾಜಧರ್ಮ	..	„	೨ ೬ ೦
„ ಆಪದ್ಧರ್ಮ	.	„	೦ ೮ ೦
„ ಮೋಕ್ಷಧರ್ಮ	.	„	೨ ೬ ೦

ಭಗವದ್ಗೀತೆ ೮, ಯುಧಿಷ್ಠಿರಾದಿಸ್ವರ್ಗಾರೋಹಣ ಚರಿತ್ರೆ ೪ ಅ.

ಎ. ರುದ್ರಪ್ಪ ಆಫೀಸರ.

ಚ. ಪೇಟೆ,

ಬೆಂಗಳೂರು

ಸ್ ೧೮೯೯ ರಲ್ಲಿ ಸ್ಥಾಪಿಸಲ್ಪಟ್ಟದ್ದು.

ಕೆನರಾ ಅಂಡ್ ಮೈಸೂರ ಟ್ರೇಡಿಂಗ ಏಜನ್ಸೀ ಆಫೀಸ್, ಮುಂಬಯಿ.

ಇವರು ತಯಾರಿಸಿದಂಥ—

ಧನ್ವಂತರಿ ತೈಲ.

ಕಳೆದ ಜನವರಿ ತಿಂಗಳೊಂದರಲ್ಲಿ ೬,೧೦೦ ಬಾಟ್ಲಿಗಳು ಖರ್ಚಾದವು. ಈ ತೈಲದ ಮಹತ್ವವನ್ನು ಕುರಿತು, ನಾವೇನ ಹೆಚ್ಚಿಗೆ ವರ್ಣಿಸಲಾರೆವು—ಯಾಕೆಂದರೆ, ಯಾರು ಈ ತೈಲವನ್ನು ಉಪಯೋಗಿಸುತ್ತಾರೋ ಅವರಿಗೆ ಒಂದೆರಡು ದಿವಸಗಳಲ್ಲಿಯೇ ಇದರ ಅಪ್ರತಿಮವಾದ ಗುಣವು ಸಹಜವಾಗಿ ಅನುಭವಕ್ಕೆ ಬರುವದು. ಆದಾಗ್ಯೂ ಇದರ ಮುಖ್ಯವಾದ ಉಪಯೋಗವನ್ನು ತಿಳಿಸುವದು ನಮ್ಮ ಕರ್ತವ್ಯವಾಗಿರುತ್ತದೆ.

ಈ ನಮ್ಮ "ಧನ್ವಂತರೀ ತೈಲವನ್ನು" ಪ್ರತಿದಿನ ತಲೆಗೆ ಹಚ್ಚಿಕೊಂಡರೆ ಮಿದುಳಿನಲ್ಲಿರುವ ಉಷ್ಣತೆಯನ್ನು ಪರಿಹರಿಸುವದಲ್ಲದೇ, ಕಣ್ಣಿಗೂ, ಮಿದುಳಿಗೂ ತಂಪುಕರಿಸಿ, ಚಿತ್ತಕ್ಕೆ ಶಾಂತತೆಯನ್ನುಂಟುಮಾಡುವದು ಮತ್ತು ಕಣ್ಣುಗಳಿಗುಂಟಾಗುವ ಸಾಮಾನ್ಯವಾದ ವಿಕಾರಗಳನ್ನೆಲ್ಲ ಪರಿಹರಿಸುವದು ದೃಷ್ಟಿಗೆ ತೀವ್ರತೆಯುಂಟಾಗುವದು.

ಹೆಚ್ಚಾಗಿ ಓದತಕ್ಕವರಿಗೂ, ಒಂದೇ ಸಮನಾಗಿ ಕಣ್ಣಿಟ್ಟು ಕೆಲಸ ಮಾಡತಕ್ಕ ಕಸಬುಗಾರರಿಗೂ, ಕಣ್ಣುಗಳಲ್ಲಿ ನೀರು ಸುರಿಯುವವರಿಗೂ, ಉರಿಗಣ್ಣಿನವರಿಗೂ, ಚಿತ್ತವ್ಯಗ್ರವಾದವರಿಗೂ, ಅತ್ಯಂತ ಗುಣಕಾರಿಯಾಗಿರುವದು. ಈ ತೈಲದಲ್ಲಿರುವ ಇನ್ನೊಂದು ಅಪ್ರತಿಮವಾದ ಶಕ್ತಿಯೇನೆಂದರೆ—ಕೂದಲುಗಳನ್ನು ನಯವಾಗಿಯೂ, ಹೊಳೆಯುವಂತೆಯೂ, ಮಾಡುವದಲ್ಲದೇ ಬೆಳವಣಿಗೆಯನ್ನು ಹೆಚ್ಚಿಸುವದು. ಕೂದಲುಗಳ ಬೇರುಗಳನ್ನು ಭದ್ರಮಾಡಿ, ಅವು ಉದುರಿಹೋಗದಂತೆ ಮಾಡುವದು.

ಪ್ರತಿಯೊಂದು ಬಾಟ್ಲಿಯೊಳಗೆ ೧೭ ರೂಪಾಯಿ ತೈಲವಿರುವದರಿಂದ ಒಬ್ಬ ಮನುಷ್ಯನಿಗೆ ೨ ತಿಂಗಳು ಹೆಚ್ಚು ಕಾಲ ಸಾಕಾಗುವದು. ಖರೀದಿದಾರರು ತಮಗೆ ಬೇಕಾದಷ್ಟು ಬಾಟ್ಲಿಗಳನ್ನು ತರಿಸಿಕೊಳ್ಳುವದಕ್ಕಾಗಿ ಪ್ರತಿಯೊಂದು ಬಾಟ್ಲಿಗೆ ೧೨ ಅಣೆ ಕ್ರಯವಿಟ್ಟಿರುವದು ೧೨ ಬಾಟ್ಲಿಗಳುಳ್ಳ ೧ ಪೆಟ್ಟಿಗೆಗೆ ೬॥ ರೂಪಾಯಿ. ಪ್ರತಿಯೊಬ್ಬ ಕುಟುಂಬಿಗನೂ, ಈ ತೈಲವನ್ನು ಉಪಯೋಗಿಸುವದು ಅವಶ್ಯವಾಗಿರುತ್ತದೆ. ಮಕ್ಕಳುಮರಿಗಳಿಗೆ ಸಹ ಈ ತೈಲವು ಸುಖಪ್ರದವಾಗಿರುತ್ತದೆ.

ಈ ತೈಲ ಮತ್ತು ಈ ಕೆಳಗೆ ಬರೆಯುವಂಥ ಔಷಧಗಳು, ಪ್ರೆಸ್ಸು, ಮುತ್ತು, ರತ್ನ,

ಬಂಗಾರ, ಬೆಳ್ಳಿ, ಮುಂತಾದ ಸಾಮಾನುಗಳನ್ನು ಪಡೆಯಬೇಕೆನ್ನುವವರು

ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬೇಕು

ಮ್ಯಾನೇಜರ್, ಕೆನರಾ ಅಂಡ್ ಮೈಸೂರು ಟ್ರೇಡಿಂಗ ಏಜನ್ಸಿ ಆಫೀಸ್, ಮಾರ್ಕೆಟ ಪೋಸ್ಟ್, ಮುಂಬಯಿ.

ಈ ತೈಲವನ್ನು ನಮ್ಮ ಹೆಸರ ಅನ್ಯರೂ ಮಾರುವರು. ನಮ್ಮ ಹೆಸರಿನ ಗುರ್ತನ್ನು ನೋಡಿ ತೆಗೆದುಕೊಳ್ಳಬೇಕು. ಬೇರೆತರದ ಎಣ್ಣೆಗಳನ್ನು ಈ ಹೆಸರಿಟ್ಟು ಮಾರುತ್ತಿದ್ದರೆ ಜಾಗ್ರತೆ ಪಡಿರಿ!

ಔಷಧಗಳು	ರು ಅ.	ಪ್ರೆಸ್ಸುಗಳು.	ರು ಅ.
ಸಮುದ್ರಾಮೃತ ಗಸ್ತು ಬಾಟ್ಲಿ ೧ ಕ್ಕೆ	೧—೬	ಅಂಗುಷ್ಟಛಾಪೆ ಮುದ್ರೆ	೨—೮
ಸಮುದ್ರಾಮೃತ ಕುಡಿ	೧—೬	ಕರ್ಪೋರೇಶನ ಅಂಗುಷ್ಟ	೫—೦
ಕರ್ಣಸ್ರಾವನಾಶಕ ಅಪ್ರತಿಮತೈಲ	೧—೦	ಡಿಟೊ ಆರ್ಡರ್ನರಿ	೪—೮
ಮಧುಮಾತ್ರಕರತೈಲ	೧—೦	ಡಿಟೊ ಪ್ರಕಾರ (ಇಂಗ್ಲೀಷಿನಿಂದ)	೪—೬
ಪ್ರಮೇಹಭಸ್ಮ	೨—೧೨	ಹವಾಮಾನ ಕಲೆಕ್ಷನ	೨—೮
ವಿರೇಚನಶರ್ಕರಗುಳಿಗೆಯು	೧—೦	ಡಿಟೊ ಆರ್ಡರ್ನರಿ	೨—೪
ಬಾಲಸಂಜೀವಿನಿಗುಳಿಗೆ	೩—೮	ಪ್ಲೇನ ಕವರಿನ	೧—೧೨
ಅಜೀರ್ಣಹಾರಿ	೦—೮	ಡಿಟೊ ಚಿಕ್ಕದು	೧—೪
ಸುಗಂಧಯುಕ್ತದಂತಧಾವನವು	೦—೪	ಬಿಳಿ (ಇಂಗ್ಲೀಷಿನಿಂದ) ಪಟ್ಟಿ	೦—೧೨
ಕಜ್ಜಿ ಮುಲಾಮು	೦—೨		

ತಮಾಷೆಯಾದ ಚಂದ್ರಕಾಂತ ಬಿಲ್ಲೆಯ ಕನ್ನಡಕಗಳ ಕ್ರಯ ರೂ. ೧—೩॥—೫—೩॥ ಉತ್ತಮವಾದ "ಸ್ವಾಮಿ" ಎಂಬ ರಸದ ಗಡಿಯಾರವು (೧ ವರುಷದ ಜವಾಬ್ದಾರಿಯದ್ದು) ಕ್ರಯ ರೂ. ೬.

ವೃತ್ತಾಂತ ಪತ್ರಿಕೆ.

ಚಂದಾ ನಿರ್ಣಯ.

	ರೂ ಅ ಪೈ
ಸ್ಥಳದವರಿಗೆ ವರ್ಷ ೧ಕ್ಕೆ	೧—೦—೦
ಪರಸ್ಥಳದವರಿಗೆ ವರ್ಷ ೧ಕ್ಕೆ	೧—೨—೦
ಬಿಡಿ ಪತ್ರಿಕೆ ೧ಕ್ಕೆ	೦—೦—೪

ಈ ಪತ್ರಿಕೆಯು ಮೈಸೂರು ರಾಜಧಾನಿಯಲ್ಲಿ ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ, ಪ್ರಕಟಿಸಲ್ಪಡುವದು. ಜನರು ಓದುವದಕ್ಕೋಸ್ಕರ ಸಹಾಯ ಮಾಡಬೇಕೆಂದು ಸಮರ್ಥ್ಯವಾಗುವಂತೆ ಈ ಪತ್ರಿಕೆಗೆ ಇಷ್ಟು ಅಲ್ಪ ಮೌಲ್ಯವನ್ನು ನಿರ್ಣಯಿಸಿರುತ್ತೇನೆ. ಈ ಪತ್ರಿಕೆಯನ್ನು ಅಪೇಕ್ಷಿಸುವವರು ಚಂದಾಹಣವನ್ನು ಮುಂಗಡವಾಗಿ ಕೊಡಬೇಕು

ಎಡಿಟರ,

ವೃತ್ತಾಂತ ಪತ್ರಿಕೆ.

ಜಗದ್ಗುರುವಿನ ಚರಿತ್ರ ಸಂಗ್ರಹ.

THE LIFE

OF

The Lord Jesus Christ.

Selected incidents from the Gospels,

BRIEFLY PARAPHRASED

ನೂತನವಾಗಿ ರಚಿಸಲ್ಪಟ್ಟ ೬೬ ಪುಟಗಳುಳ್ಳ ಈ ಪುಸ್ತಕವನ್ನು ಮೈಸೂರು ವೆಸ್ಲೆಯನ ಮಿಷನ ಪ್ರೆಸ್ಸಿಗೆ ಬರೆದು ತರಿಸಿಕೊಳ್ಳಬಹುದು.

ಕ್ರಯ (ಟಪ್ಪಾಲ ಹಾಸಲ ಅಲ್ಲದೆ)

೧೦೦ ಪ್ರತಿಗಳಿಗೆ	೫—೦—೦
ಬಿಡಿ ಪ್ರತಿಗೆ	೦—೦—೯

ಸುಮಾರು ೨—೩ ಪ್ರತಿಗಳನ್ನು ಅರ್ಧ ಅಣೆ ಹಾಸಲಿನಿಂದ ಕಳುಹಿಸಬಹುದು.

ಟೋಪಿಗಳು!

ಟೋಪಿಗಳು!! WOL CAPS ಟೋಪಿಗಳು!!

ಹಾಸನದ ಅರ್ಫನೇಜಿನಲ್ಲಿ ತಯಾರಾಗುವಂಥ ಅಚ್ಚ ಕಂಬಳೀನೂಲಿನ ಟೋಪಿಗಳೇ (Wool Caps) ನಮ್ಮ ಆಫೀಸಿನಲ್ಲಿ ಮಾರಿಕೆಗೆ ಸಿದ್ಧವಾಗಿಯುತ್ತವೆ. ಕ್ರಯ ಒಂದಕ್ಕೆ ೦-೨ ಆಣೆ ಇಂದ ೧ ರೂ. ೬ ಆಣೆಗಳ ವರಿಗೂ ಬೇರೆ ಬೇರೆ ದರಗಳುಂಟು. ಸ್ಥಳದವರು ಖುದ್ದು ನೋಡಿ ಪಡೆಯಬಹುದು. ಪರಸ್ಥಳದವರು ಮುಂಗಡವಾಗಿಯೇ ಹಣ ಕಳುಹಿಸಿದಲ್ಲಿ ತ್ವರೆಯಲ್ಲಿ ಛಾಂಗೀ ಮೂಲಕ ಕಳುಹಿಸುತ್ತೇವೆ. ಛಾಂಗಿ ಛಾರ್ಜ ಬೇರೆ ಕೊಡಬೇಕು. ಮೇಲಿನ ವಿಳಾಸದಲ್ಲಿ ಟೋಪಿಗೆ ಸಂಬಂಧವಾದದ್ದು ಎಂದು ಬರೆಯಬೇಕು.

ಮ್ಯಾನೇಜರ್,
ವೆಸ್ಲಿಯನ್ ಮಿಷನ್ ಪ್ರೆಸ್,
ಮೈಸೂರು.

ವೃತ್ತಾಂತಪತ್ರಿಕೆ.

೧೮೯೩ನೇ ಇಸವಿ ಜುಲೈ ತಾ|| ೬ ನೇ ಗುರುವಾರ.

ಸರ್. ಕೆ. ಶೇಷಾದ್ರಿ ಐಯ್ಯರ್ ಕೆ. ಸಿ. ಎಸ್. ಐ. ಯವರು.

ಕಳೆದ ವಾರದಲ್ಲಿ ಶ್ರೀಮನ್ಮಹಾರಾಜ್ಞಿಯವರು ಪ್ರೀತಿಪೂರ್ವಕವಾಗಿ ನಮ್ಮ ಮೈಸೂರು ಮಹಾರಾಜರವರಿಗೂ ಅವರ ರಾಜ್ಯಕ್ಕೂ ದಿವಾನರಿಂದ ಮೂಲಕವಾಗಿ ಬಹುಘನತೆಯನ್ನು ಉಂಟುಮಾಡಿರುತ್ತಾರೆ. ನೈಟ್ ಕಮ್ಯಾಂಡರ್ ಸ್ಟಾರ್ ಅಫ್ ಇಂಡಿಯ (ಕೆ. ಸಿ. ಎಸ್. ಐ) ಎಂಬಬಿರುದನ್ನು ಹಿಂದೂ ದೊಡ್ಡ ಮನುಷ್ಯರಿಗೆ ದಯಪಾಲಿಸುವದು ಬಹುಅಪರೂಪವಾದದ್ದಾಗಿದೆ. ನಮ್ಮ ದಿವಾನರಿಗೆ ಈ ಬಿರುದನ್ನು ಕೊಡುವದಕ್ಕೆ ಕಾರಣವೇನೆಂದು ನಾವು ಕೇಳವರೆ ಅವರು ಮೈಸೂರುರಾಜ್ಯವನ್ನು ಅಭಿವೃದ್ಧಿ ಸ್ಥಿತಿಗೆ ತಂದು ಈ ದೇಶದಜನಗಳಿಗೆ ಕ್ಷೇಮವನ್ನು ಉಂಟುಮಾಡುವದರಲ್ಲಿ ಬಹು ಕುಶಲತೆಯನ್ನೂ, ಅಸಾಧಾರಣವಾದ ಸಾಮರ್ಥ್ಯವನ್ನೂ ತೋರ್ಪಡಿಸಿದ್ದೇ ಕಾರಣ. ಬ್ರಿಟಿಷ್ ರಾಜ್ಯವನ್ನಾಗಲಿ ಬೇರೆ ಕೆಲವು ನೇಟಿವ್ ರಾಜ್ಯಗಳನ್ನಾಗಲಿ ನೋಡಿದರೆ ಅವುಗಳ ಸ್ಥಿತಿಗೂ, ಈ ನಮ್ಮ ಮೈಸೂರು ಸಂಸ್ಥಾನದ ಸ್ಥಿತಿಗೂ ಇರುವ ವ್ಯತ್ಯಾಸವು ನಮಗೆ ಬಹುಪರಿಷ್ಕಾರವಾಗಿ ತಿಳಿಯಬರುತ್ತೆ. ಅಲ್ಲಿಗಳಲ್ಲಿ ಪ್ರಬಲವಾಗಿರುವ ಪ್ರಜಾಅಸಮಾಧಾನವೂ, ಜಗಳಸಂಚಗಳೂ, ತಂತ್ರಗಳೂ, ಅನ್ಯಾಯಗಳೂ ಈ ಸಂಸ್ಥಾನದಲ್ಲಿ ಪ್ರಬಲವಾಗಿರುವದಿಲ್ಲ. ಪ್ರಜೆಗಳು ಯಾವ ಅಡ್ಡಿಯೂ, ಭಯವೂ ಇಲ್ಲದೆ ತಮ್ಮ ತಮ್ಮ ಕೆಲಸಗಳನ್ನು ನಡಿಸುತ್ತಾ ಅಭಿವೃದ್ಧಿಗೆ ಬರುತ್ತಲಿದ್ದಾರೆ. ವರುಷವರುಷಕ್ಕೂ ದವಿನಸ್ಯ ಬಾಬಿನಲ್ಲಿ ರಾಜಾದಾಯವು ಹೆಚ್ಚುತ್ತಾ ಬಂದಾಗ್ಯೂ, ಅದನ್ನು ವಸೂಲ್ ಮಾಡುವದಕ್ಕೆ ಸರ್ಕಾರದವರು ಪ್ರಜೆಗಳ ಮೇಲೆ ಹೊರಲಾರದ ಭಾರವನ್ನು ಹೊರಿಸುವದಿಲ್ಲ. ಅವರಿಗೆ ಸುಲಭತರವಾಗಿರುವ ರೀತಿಯಲ್ಲಿ ವಸೂಲ್ ಮಾಡುತ್ತಾರೆ. ಮೊದಲು ಸಂಸ್ಥಾನಕ್ಕಿದ್ದ ಭಯಂಕರವಾದ ಸಾಲವು ಈಗ ಅದೃಶ್ಯವಾಯಿತು. ಪ್ರತಿವರ್ಷದಲ್ಲಿಯೂ ಇಲ್ಲಿನ ಐಶ್ವರ್ಯವು ವೃದ್ಧಿಹೊಂದುತ್ತಲಿರುವದು, ಈ ಅಭಿವೃದ್ಧಿಸ್ಥಿತಿಯನ್ನು ನೋಡಿ ದಿವಾನರವರು ಬುದ್ಧಿಕುಶಲತೆಯಿಂದ ಈ ಸಂಸ್ಥಾನದ ಅಡಳತಗಳನ್ನು ಕ್ರಮಪಡಿಸಿರುವದರಿಂದ ಎಂದು ಒಪ್ಪಿಕೊಂಡು ಅವರನ್ನು ಸ್ತುತಿಸಬೇಕಲ್ಲವೆ? ಮಹಾರಾಜ್ಞಿಯವರು ನೇಟಿವ್ ದೊಡ್ಡಮನುಷ್ಯರಲ್ಲಿ ಯಾರಿಗಾದರೂ ಒಂದು ಬಿರುದನ್ನು ಕೊಡಬೇಕೆಂದು ಇದ್ದರೆ, ಮಿಕ್ಕಾದ ಎಲ್ಲರ ಯೋಗ್ಯತೆಗಿಂತಲೂ ಸರ ಶೇಷಾದ್ರಿ ಐಯ್ಯರವರ ಯೋಗ್ಯತೆಯು ಹೆಚ್ಚೆಂಬುವದರಲ್ಲಿ ಯಾರೂ ಸಂದೇಹಪಡಲಾರರು. ದಿವಾನರವರು ಈ ವಿಷಯದಲ್ಲಿ ಉಪನ್ಯಾಸಮಾಡುತ್ತಿರುವಾಗ—ಈ ರಾಜ್ಯವು ಇಷ್ಟು ಅಭಿವೃದ್ಧಿಯನ್ನು ಹೊಂದಿದ್ದಕ್ಕೆ ಮೂರು ಕಾರಣಗಳುಂಟು. ಅದನ್ನು ಆಳತಕ್ಕ ನಮ್ಮ ಮಹಾರಾಜರವರು ಎಲ್ಲರಿಗಿಂತಲೂ ಅತ್ಯಧಿಕವಾಗಿ ಪ್ರಜಾ ಹಿತಚಿಂತಕರಾಗಿರುತ್ತಾರೆ. ಬ್ರಿಟಿಷ್ ಗೌರ್ನಮೆಂಟಿನವರು ನಮ್ಮ ಅಭಿಪ್ರಾಯಗಳನ್ನು ಒಪ್ಪಿಕೊಂಡು, ನಾವು ಇಲ್ಲಿ ಜಾರಿಯಲ್ಲಿ ತರಬೇಕೆಂದು ಮಾಡಿದ ಏರ್ಪಾಡುಗಳಿಗೆಲ್ಲಾ ಸಾಕಾದಷ್ಟು ಪ್ರೋತ್ಸಾಹವನ್ನು ಮಾಡುತ್ತ ಬಂದಿರುತ್ತಾರೆ. ಇದುಮಾತ್ರವಲ್ಲದೆ ಈ ರಾಜ್ಯದಲ್ಲಿರತಕ್ಕ ಶ್ರೇಷ್ಠ ದೊಡ್ಡ ಉದ್ಯೋಗಸ್ಥರುಗಳೆಲ್ಲಾ ಬಹು ಅನುಭವಶಾಲಿಗಳೂ, ಸಾಮರ್ಥ್ಯ ಉಳ್ಳವರೂ, ಕಾರ್ಯನಿರ್ವಾಹಕರೂ ಆಗಿದ್ದು, ಆತ್ಯಾಸಕ್ತಿ ಪೂರ್ವಕವಾಗಿ ಸರ್ಕಾರದ ಕೆಲಸಗಳನ್ನು ನಡೆಸುತ ಬಂದಿರುತ್ತಾರೆ. ಈ ಮೂರುಕಾರಣಗಳಿಂದಲೇ ನಮ್ಮ ರಾಜ್ಯವು ಈಗಿರುವ ಉತ್ತಮಸ್ಥಿತಿಗೆ ಬಂದಿದೆಯೇ ಹೊರ್ತು ಮತ್ತೆ ಬೇರೆ ಅಲ್ಲ ಎಂದು ತಮ್ಮ ಅಭಿಪ್ರಾಯವನ್ನು ತಿಳಿಸಿದರು. ಇದೆಲ್ಲಾ ನಿಜವೇ. ಆದರೆ ಈ ರೀತಿಯು ರಾಜ್ಯಭಾರದಾಡಳತಗಳನ್ನು ನಿರ್ವಹಿಸುವಶಕ್ತಿಯು ದಿವಾನರವರಲ್ಲಿ ವಿಶೇಷವಾಗಿರುವದು ಮತ್ತೊಂದು ಅಸಾಧಾರಣವಾದ ಕಾರಣವೆಂದು ಮಹಾರಾಜ್ಞಿಯವರುತಿಳಿದು, ಅವರಿಗೆ ಈ ದೊಡ್ಡಕೀರ್ತಿಯನ್ನು ದಯಪಾಲಿಸಿರುತ್ತಾರೆ. ಎಂಟುದಿವಸಗಳೊಳಗೆ ಸಂಸ್ಥಾನದ ರೆಸಿಡೆಂಟ್ರಾದ ಕರ್ನಲ್ ಹೆಂಡರ್ಸನ್ ಸಾಹೇಬರವರು, ಈ ಬಿರುದನ್ನು ಪ್ರಕಟಮಾಡುವ ಮಹೋತ್ಸವವನ್ನು ಅರಮನೆಯಲ್ಲಿ ಶ್ರೀಮನ್ಮಹಾರಾಜರವರ ಮುಂದೆಯೂ, ಇನ್ನೂ ಅನೇಕಾನೇಕ ಯೂರೋಪಿಯರ್ ಮತ್ತು ಹಿಂದೂದೊಡ್ಡಮನುಷ್ಯರುಗಳ ಮುಂದೆಯೂ, ಅತ್ಯಂತವಿಜೃಂಭಣೆಯಿಂದ ನಡೆಸುತ್ತಿರುವಾಗ ಶ್ರೀಮನ್ಮಹಾರಾಜರವರು ತಮ್ಮ ಮಂತ್ರಿ ಶ್ರೇಷ್ಠರನ್ನು ನೋಡಿ ಅತಿಸಂತೋಷಭರಿತರಾದರು. ಪ್ರಧಾನಮಂತ್ರಿಯು ಪ್ರಜೆಗಳಿಗೆ ಪ್ರತಿನಿಧಿಯಾಗಿರುತ್ತಾನಾದ್ದರಿಂದ ಅಂಥವನಿಗೆ ಬಂದ ಬಿರುದು ಸಂಸ್ಥಾನದ ಎಲ್ಲಾ ಪ್ರಜೆಗಳಿಗೂ ಬಂದಹಾಗಾಯಿತಲ್ಲವೆ! ನಮ್ಮ ದಿವಾನರವರು ಇನ್ನೂ ಬಹುಕಾಲದವರಿಗೂ ಈ ಘನತರವಾದ ಪದವಿಯನ್ನು ಅನುಭವಿಸುವದಕ್ಕಾಗಿ ಬದುಕಿ ಇನ್ನೂ ವಿಶೇಷವಾದ ಸಾಮರ್ಥ್ಯದಿಂದಲೂ, ನಿಷ್ಪಕ್ಷಪಾತತೆಯಿಂದಲೂ ಈ ರಾಜ್ಯಭಾರದಾಡಳತಗಳನ್ನು ನಿರ್ವಹಿಸುವರೆಂದು ನಾವು ಸಂತೋಷದೊಡನೆ ಕೋರುತ್ತೇವೆ. ಈ ಸಂದರ್ಭದಲ್ಲಿ ಬೆಂಗಳೂರು ವೃತ್ತಾಂತಬೋಧಿನೀಪತ್ರಿಕೆಯು ತಿಳಿಸಿದ ಕೆಲವು ಸಂಗತಿಗಳು ಶ್ಲಾಘನೀಯವಾದವುಗಳಾಗಿರುವದರಿಂದ ಅದರ ಕೆಲವು ಭಾಗಗಳನ್ನು ವಾಚಕರ ತಿಳುವಳಿಕೆಗೋಸ್ಕರ ಇಲ್ಲಿ ಪ್ರಕಟಿಸಿದ್ದೇವೆ—

ಈಗ ಕೊಟ್ಟಿರುವ ಬಿರುದಿನಾಭರಣವು ಪಂಚಕಿರಣಗಳುಳ್ಳ ನಕ್ಷತ್ರವು ಕಾಲರೆಂಬ ಕೊರಳಪಟ್ಟಿಯು ಗುಲಾಬಿ ಮತ್ತು ಕಮಲಪುಷ್ಪದಾಕಾರ ವುಳ್ಳ ಕೆತ್ತನೆಯಿಂದಲೂ, ಭಂಗಾರದ ೨ ಸರಪಣಿಗಳಿಂದಲೂ, ಪ್ರಜ್ವಲಿಸುತಿರುವದಲ್ಲದೆ ಭಂಗಾರದತಗಡಿನಿಂದ ಕೆಲವುಪದಕವುಳ್ಳದ್ದಾದ ಮಾಲೆಗಳನ್ನು ಬರೆಯುವಂಥಾದ್ದಾಗಿದೆ. ಇದರ ಸುತ್ತಲೂ ಉತ್ತಮವಾದ ಭಂಗಾರದಿಂದ ಅಂಚುಕಟ್ಟಿರುವದಲ್ಲದೆ ಅತ್ಯಂತ ಬೆಲೆಯುಳ್ಳ ವಜ್ರಗಳನ್ನು ಕೆತ್ತಿದೆ. ದೊರೆಗಳು ಆಳುತ್ತಾರೆ, ಮಂತ್ರಿಗಳು ರಾಜ್ಯಭಾರವನ್ನು ನಡೆಸುತ್ತಾರಾದ್ದರಿಂದ ಘನವನ್ನು ಹೊಂದಿದ ಗವರ್ನರ್ ಜನರಲ್ ವೈಸರಾಯಿ ಜಿ. ಎಮ್. ಐ. ಯವರು ಮತ್ತು ಶ್ರೀಮನ್ಮಹಾರಾಣಿಯವರ ಪಕ್ಕಕ್ಕೆ ಮಾತ್ರವಾಗಿ ಅವರಿಂದ ಮೆಚ್ಚಲ್ಪಟ್ಟಂಥಾ ನಮ್ಮ ಸರ. ಶೇಷಾದ್ರೈಯ್ಯರವರಂಥಾ ದಿವಾನರನ್ನು ಪಡೆದಿರುವ ನಮ್ಮ ಶ್ರೀಮನ್ಮಹಾರಾಜರವರನ್ನು ನಾವು ಕೊಂಡಾಡಬೇಕಾದದ್ದು ಅತ್ಯವಶ್ಯಕವಾಗಿದೆ. ದಿವಾನರವರು ತಮ್ಮ ಮಹೋನ್ನತವಾದ ಬುದ್ಧಿಕುಶಲತೆಯನ್ನು ಮತ್ತು ಅಘಟನಘಟನಾಶಕ್ತಿಯನ್ನು ತಮ್ಮ ರಾಜ್ಯಭಾರಕ್ಕಾಗಿ ಧಾರೆಯೆರದು ಇದ್ದಾರೆ. ಇವರಿಗಿರತಕ್ಕ ಚಮತ್ಕಾರವಾದ ಪ್ರಜಾಪರಿಪಾಲನಾ ಶಕ್ತಿಯು ಲಾರ್ಡ್ ಷರಬ್ರೂಕ್‌ಮುವರಂತೆ ಇದೆ ಎಂದು ಪೂರ್ವಕ್ಕೆ ನಾರ್ಟನ್‌ರವರು ಸೂಚಿಸಿದ್ದನ್ನು ನಾವು ಈಗ್ಗೆ ಕೆಲವುದಿವಸಗಳಕೆಳಗೆ ಸೂಚಿಸಿದ್ದೆವು. ಇವರು ಸಾಧಾರಣವಾಗಿ ನೋಡುವವರಲ್ಲಿ ಚಿಕ್ಕವಯಸ್ಸಿನವರಾಗಿಯೇ ಇದ್ದಾರೆ. ಈಗ ಇವರಿಗೆ ೫೮ ವರುಷಗಳು ನಡಿಯುತ್ತಾ ಇದೆ. ಇವರು ಕಲ್ಲೀಕೋಟೆ ಪ್ರಾವಿನ್ಷಿಯಲ್ ವಿದ್ಯಾಶಾಲೆಯಲ್ಲಿ ವಿದ್ಯೆಯನ್ನು ಕಲಿತು ಮದರಾಸ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ೧೮೬೩ರಲ್ಲಿ ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆಯಾಗಿ ೧೮೬೮ ರಲ್ಲಿ ಬಿ. ಎಲ್. ಪರೀಕ್ಷೆಯಲ್ಲಿ ತೇರ್ಗಡೆಯಾದರು. ಇವರಿಗೆ ಇದುವರಿವಿಗೆ ಮೈಸೂರು ದೇಶದ ನೌಕರಿಯಲ್ಲಿ ೨೫ ವರುಷಗಳ ಸರ್ವೀಸ ಆಗಿರುತ್ತದೆ. ಇವರು ಕ್ಷಿಪ್ರದಲ್ಲಿಯೇ ಬಡತಿಗೆ ಬಂದದ್ದರಿಂದ ಲೇಟ್ ದಿವಾನ ಮ|| ಸಿ. ರಂಗಾಚಾರ್ಯರ ಅವಸಾನಕಾಲದಲ್ಲಿ ಇವರನ್ನು ಕರೆಸಿ ಮುಂದೆರಿಗು ದೊಡ್ಡ ಕೆಲಸಗಳಲ್ಲಿ ನಿರ್ವಾಹಕರಾಗಿ ಈ ಮೈಸೂರು ಸೀಮೆಯ ರಾಜ್ಯಭಾರದಾಡಳತವನ್ನು ನಿರ್ವಹಿಸುವ ಶಕ್ತಿ ಉಳ್ಳವರಾಗಿ ಕಂಡು ಬಂದದ್ದರಿಂದ ಇವರನ್ನು ದಿವಾನಗಿರಿಗೆ ನೇಮಿಸಿದರು. ಈ ವಿಷಯವನ್ನೆಲ್ಲಾ ರೆಸಿಡೆಂಟರು ಉಪನ್ಯಾಸಮಾಡಿ ನಮ್ಮ ಶ್ರೀಮನ್ಮಹಾರಾಜರ ಆಳ್ವಿಕೆಗೆ ಇಂಥಾ ದೊಡ್ಡ ಕೀರ್ತಿಬಂದದ್ದಕ್ಕಾಗಿ ಬಹಳ ಕೊಂಡಾಡಿದರು. ಆ ಮೇಲೆ ದಿವಾನರವರು, ಶ್ರೀಮನ್ಮಹಾರಾಣಿಯವರು, ಗವರ್ನರವರು, ಮತ್ತು ಅವರ ಪ್ರತಿನಿಧಿಗಳು, ತಮ್ಮ ದಯಾಳತ್ವವನ್ನು ಮೆಚ್ಚಿದ್ದಕ್ಕಾಗಿ ಅನೇಕ ವಂದನೆಗಳನ್ನು ಮಾಡಿದರು. ಈ ಮೇಲ್ಕಂಡ ಕೆ. ಸಿ. ಎಸ್. ಐ. ಎಂಬಬಿರುದನ್ನು ಅನುಭವಿಸುವದಕ್ಕಾಗಿ ನಮ್ಮ ದಿವಾನರವರು ದೀರ್ಘಾಯುಷ್ಯವಂತರಾಗಿರಲೆಂದು ಹಾರೈಸುವೆವು.

ರೂಪಾಯಿನಬೆಲೆ.

ಹಲವುವರುಷಗಳಿಂದೀಚೆಗೆ ರೂಪಾಯಿನಬೆಲೆಯು ಕ್ರಮೇಣ ಕಡಮೆಯಾಗುತ್ತಾ ಬಂದದ್ದು ನಮ್ಮವಾಚಕರಿಗೆ ತಿಳಿದಿರುವ ಅಂಶವಾಗಿರುತ್ತದೆ. ಇದರಿಂದ ಸರ್ಕಾರಕ್ಕೂ ಈ ದೇಶದಪ್ರಜೆಗಳಿಗೂ ಉಂಟಾದನಷ್ಟ ಅಷ್ಟಿಷ್ಟೆಂದು ಹೇಳುವದು ಅಸಾಧ್ಯವಾಗಿದೆ. ಪ್ರತಿವರ್ಷದಲ್ಲೂ ಇಂಡಿಯಾ ಗೌರ್ನಮೆಂಟಿನವರು ಇಂಗ್ಲೆಂಡಿಗೆ ಬೇರೆ ಬೇರೆ ಕಾರಣಗಳಿಂದ ಕೋಟ್ಯಂತರರೂಪಾಯಿಗಳನ್ನು ನಾಣ್ಯದ ರೂಪವಾಗಿಯಾಗಲಿ ದಿನಸಿಗಳ ರೂಪವಾಗಿಯಾಗಲಿ ಕಳುಹಿಸಬೇಕಾಗುವದು. ಇಂಗ್ಲೆಂಡ್ ದೇಶದವರು ತಾವುಕಳುಹಿಸುವ ಬಿಲ್ಲುಗಳಲ್ಲಿ ತಮಗೆ ಸಲ್ಲತಕ್ಕ ಮೊಬಲಗನ್ನು ಸವರಿನ್‌ಗಳ ರೂಪವಾಗಿ ಸೂಚಿಸುತ್ತಾರೆ. ಈ ದೇಶದ ಅಧಿಕಾರಿಗಳು ಹೀಗೆ ಸೂಚಿಸಲ್ಪಟ್ಟ ಸವರಿನ್‌ಗಳ ಬೆಲೆಗೆ ತಕ್ಕಷ್ಟುಹಣವನ್ನು ರೂಪಾಯಿಗಳಿಂದ ಸಲ್ಲಿಸಬೇಕಾಗಿದೆ. ಚಿನ್ನದಪ್ರಮಾಣವು ಯಾವಾಗಲೂ ಒಂದೇಪ್ರಕಾರವಾಗಿರುವದು. ಬೆಳ್ಳಿಯ ಪ್ರಮಾಣಮಾತ್ರ ಬದಲಾವಣೆಯಾಗುತ್ತಾ ಬರುತ್ತದೆ. ಕೆಲವುವರುಷಗಳಿಂದೀಚೆಗೆ ಆ ಬೆಳ್ಳಿಯ ಧಾರಣೆಯು ಕಡಮೆಯಾಗುತ್ತಾ ಬಂದದರಿಂದ ಇಲ್ಲಿನ ಗೌರ್ನಮೆಂಟಿನವರು ಇಂಗ್ಲೆಂಡಿಗೆ ಕಳುಹಿಸತಕ್ಕ ಮೊಬಲಗೂ ಬಹಳವಾಗಿ ಹೆಚ್ಚುತ್ತಾ ಬಂದಿದೆ. ಇದಕ್ಕೆ ಉದಾಹರಣೆಯಾಗಿ ಕಳೆದ ೩೩ನೇ ಇಸವಿಯಲ್ಲಿ ಇಂಡ್ಯಾಸರ್ಕಾರದವರು ೧೩ ಕೋಟಿ ಸವರಿನ್‌ಗಳ ಸಾಲವನ್ನು ತೀರಿಸುವದಕ್ಕೆ ೧೫ ಕೋಟಿ ರೂಪಾಯಿಗಳನ್ನು ಇಂಗ್ಲೆಂಡಿಗೆ ಕಳುಹಿಸಿದರು. ಮತ್ತು ೯೨ನೇ ಇಸವಿಯಲ್ಲಿ ೧೬ ಕೋಟಿ ಸವರಿನ್‌ಗಳಿಗೆ ೨೬ ಕೋಟಿರೂಪಾಯಿ ಕಳುಹಿಸಬೇಕಾಯಿತು. ಇದರಿಂದುಂಟಾಗತಕ್ಕ ಫಲಿತಾಂಶಗಳು ಯಾವವೆಂದು ವಾಚಕರು ಸುಲಭವಾಗಿ ಗ್ರಹಿಸಿಕೊಳ್ಳಬಹುದು. ಸರ್ಕಾರದವರು ವಿಲಾಯತಿಗೆ ವಿಪರೀತ ಹಣಗಳನ್ನು ಕಳುಹಿಸಬೇಕಾಗಿರುವದರಿಂದ ಈ ದೇಶದಲ್ಲಿ ಉಳಿಯುವ ಹಣಗಳು ಎಷ್ಟುಮಾತ್ರದವರೆಗೂ ಅಷ್ಟಿಯೋ? ಇದುಮಾತ್ರವಲ್ಲದೆ ಪ್ರಜೆಗಳು ಕೊಡತಕ್ಕ ಕಂದಾಯಗಳನ್ನು ಸರ್ಕಾರದವರು ಎಲ್ಲೆಲ್ಲಿಯೂ ಹೆಚ್ಚಿಸಿ ತಮಗೆ ಬೇಕಾದಷ್ಟು ಮೊಬಲಗನ್ನು ಉತ್ಪತ್ತಿ ಮಾಡಿಕೊಳ್ಳಬೇಕಾಗಿಬಂತು. ಹೀಗಿರುವದರಿಂದ ಈ ದೇಶಕ್ಕೆ ಪ್ರಾಪ್ತವಾಗುತಲಿರುವ ನಷ್ಟವನ್ನು ನಿಲ್ಲಿಸಬೇಕೆಂದು ಮ|| ಗ್ಲ್ಯಾಡ್‌ಸ್ಟನ್ ಸಾಹೇಬರು ವಿಲಾಯತಿಯಲ್ಲಿ ಒಂದು ಕಮಿಟಿಯನ್ನು ಏರ್ಪಡಿಸಿ ಅದಕ್ಕೆ ಲಾರ್ಡ್ ಹರ್ಷೆಲ್ ಎಂಬ ಮಹನೀಯರನ್ನು ಪ್ರೆಸಿಡೆಂಟ್ರನ್ನಾಗಿ ನೇಮಿಸಿದರು. ಸದರಿ ಕಮಿಟಿಯವರು ಕ್ರಮಕ್ರಮವಾಗಿ ಸಭೆಸೇರಿ ಈ ವಿಷಯವನ್ನು ಸಾಂಗೋಪಾಂಗವಾಗಿ ವಿಚಾರಿಸಿ ಒಂದು ರಿಪೋರ್ಟನ್ನು ಬರೆದು ಅದರಲ್ಲಿ ತಮ್ಮ ಅಭಿಪ್ರಾಯವನ್ನು ಪರಿಷ್ಕಾರವಾಗಿ ತಿಳಿಯಪಡಿಸಿದ್ದಾರೆ. ಆ ಅಭಿಪ್ರಾಯಕ್ಕನುಸಾರವಾಗಿ ಇಂಡಿಯಾ ಗೌರ್ನಮೆಂಟಿನವರು ಕಳೆದವಾರದಲ್ಲಿ ಒಂದುಇಸ್ತಿಹಾರ್‌ನಾಮೆಯನ್ನು ಪ್ರಕಟಿಸಿ ಮತ್ತೊಂದು ಹುಕುಂ ಕೊಡುವತನಕ ಸವರಿನ್‌ಗಳ ಧಾರಣೆಯು ಬಾಯಿಮಾತಾಗಿ ೧೫ರೂಪಾಯಿಗಳಂತೆಯೂ, ಅರ್ಧಸವರಿನ್ನುಗಳ ಕ್ರಯವು ೭|| ರೂಪಾಯಿಗಳಂತೆಯೂ, ಬೆಳ್ಳಿಕೊಟ್ಟವರಿಗೆ ರೂಪಾಯಿಗಳನ್ನು ಛಾಪಾಹಾಕಿ ಕೊಡುವಪದ್ಧತಿಯನ್ನು ನಿಲ್ಲಿಸಬೇಕೆಂತಲೂ, ಸರ್ಕಾರಕ್ಕೆ ಕೊಡಬೇಕಾದ ಕಂದಾಯವಗೈರೆ ಬಾಕಿಗಳಿಗೋಸ್ಕರ ಜನರು ಸವರಿನ್‌ಗಳನ್ನು ೧೫ ರೂಪಾಯಿಗಳಂತೆ ಕೊಡತಕ್ಕದ್ದೆಂತಲೂ ವಿಧಿಸಿರುತ್ತಾರೆ. ಈ ಏರ್ಪಾಡಿನಿಂದ ಕೆಲವರಿಗೆ ಸದ್ಯಕ್ಕೆ ನಷ್ಟವಾದರೂ, ಅನೇಕಜನರಿಗೆ ಪ್ರಯೋಜನ ಉಂಟಾಗುತ್ತದೆಂಬುವದರಲ್ಲಿ ಯಾವಸಂಶಯವಿರಲಾರದು.

ಸುಖಜೀವಿಗಳ್ಯಾರು?

ಈ ಲೋಕದಲ್ಲಿ ಎಲ್ಲರೂ ಸುಖಪಡಬೇಕೆಂದು ಪ್ರಯತ್ನಿಸುತಲಿರುವಷ್ಟು ಕೆಲವರು ಪದವಿಯನ್ನಾಗಲಿ, ಐಶ್ವರ್ಯವನ್ನಾಗಲಿ, ಅಪೇಕ್ಷಿಸಿ ಸುಖಿಗಳಾಗಬೇಕೆಂದು ನಿರೀಕ್ಷಿಸುತ್ತಾರೆ. ಆದರೆ ಕೆಲವರು ವಿಷಯಾಲಂಪಟರಾಗಿ ಸುಖವನ್ನು ಅನುಭವಿಸುವರೆಂದು ಭಾವಿಸುತ್ತಾರೆ. ಆದರೆ ನಿಜವಾದ ಸುಖವನ್ನು ಅನುಭವಿಸುವವರು ಯಾರು? ಒಂದಾನೊಂದು ದಿವಸ ಒಬ್ಬ ಮನುಷ್ಯನು ಪ್ರಸಿದ್ಧಿಯನ್ನು ಹೊಂದಿದ ಒಬ್ಬ ವೈದ್ಯನ ಹತ್ತಿರಕ್ಕೆ ಹೋಗಿ ತನ್ನದೇಹದ ದುಸ್ಥಿತಿಯನ್ನು ನಿವೇದಿಸಿ ತಿಳಿಸಿ—ನನಗೆ ಯಾವಾಗಲೂ ಭಯವುಂಟಾಗುತ್ತೆ ನನ್ನಲ್ಲಿ ಧೈರ್ಯವೆಂಬುವದು ಸ್ವಲ್ಪವೂ ಇಲ್ಲ ನನ್ನ ಮನಸ್ಸು ಯಾವಾಗಲೂ ಸಂತೋಷರಹಿತವಾದುದಾಗಿರುತ್ತದೆ ಎಂದು ಹೇಳಲು ಆ ವೈದ್ಯನು—ನಿಮಗೆ ಯಾವಚಿಕಿತ್ಸೆಯೂ ಅವಶ್ಯಕವಿಲ್ಲ ನಿಮ್ಮನ್ನು ಚೆನ್ನಾಗಿ ನಗಿಸುವ ಯಾವದಾದರೂ ಒಂದು ವಿನೋದವನ್ನು ನೋಡುವದಕ್ಕೆ ಹೋಗಬೇಕು ಊರಲ್ಲಿ ವಿಲಾಸ ನಾಟಕಶಾಲೆಯೊಂದು ಇದೆಯಷ್ಟೆ ಅಲ್ಲಿ ಪ್ರತಿನಿತ್ಯವೂ ರಾತ್ರಿಯಲ್ಲಿ ಒಬ್ಬನು ತನ್ನ ಅದ್ಭುತಕೃತ್ಯಗಳನ್ನು ನಟಿಸಿ, ಎಲ್ಲರನ್ನು ಬಹಳವಾಗಿ ನಗಿಸುತಲಿದ್ದಾನೆ ನೀವು ಅಲ್ಲಿಗೆಹೋಗಿ ಅವನುಮಾಡುವ ವಿನೋದಗಳನ್ನು ನೋಡುವದು ನಿಮ್ಮ ಮನಸ್ಸಿಗೆ ದಿವ್ಯಔಷಧವಾಗಿರುವದು ಆ ತನ್ನ ಅದ್ಭುತಕೃತ್ಯನು ಬಹುಪ್ರಸಿದ್ಧನು ಎಂದು ಹೇಳಿದನು ಆ ಮನುಷ್ಯನು ಆ ವೈದ್ಯನನ್ನು ನೋಡಿ—ಅಯ್ಯಾ ಆ ತನ್ನ ಅದ್ಭುತಕೃತ್ಯನು ನಾನೇ, ನಾನು ಇತರರನ್ನು ಚೆನ್ನಾಗಿ ನಗಿಸುತ್ತೇನೆ, ನನ್ನನ್ನು ನಗಿಸುವದಕ್ಕೆ ಯಾರಿದ್ದಾರೆ ಎಂದು ಕೇಳಲು, ಆ ವೈದ್ಯನು ನಾಚಿಕೊಂಡು ಸುಮ್ಮನಾದನು ಮನಸ್ಸಿಗೆ ಸಂತೋಷ ಉಂಟಾಗಬೇಕಾದರೆ ಆ ವೈದ್ಯನು ಸೂಚಿಸಿದ ಉಪಾಯಕ್ಕಿಂತಲೂ ಬೇರೆ ಒಂದು ಒಳ್ಳೇ ಉಪಾಯವು ಮನುಷ್ಯನಿಗೆ ಬೇಕಾಗಿದೆ ಈ ಪ್ರಪಂಚಕ್ಕೆ ಸಂಬಂಧಪಟ್ಟ ಯಾವಕಾರ್ಯವಾದರೂ, ಯಾವಸಂಗತಿಯಾದರೂ ಶಾಶ್ವತವಾದ ಸಂತೋಷವನ್ನು ಜನರಲ್ಲಿ ಹುಟ್ಟಿಸುವದಕ್ಕೆ ಶಕ್ಯವಾಗಿದೆಯೆ? ಪ್ರಪಂಚವೇ ಶಾಶ್ವತವಾದದ್ದಲ್ಲವಲ್ಲ ನಿತ್ಯಸುಖವನ್ನು ಕೊಡುವದಕ್ಕೆ ನಿತ್ಯನಾಗಿರುವ ದೇವರು ಶಕ್ತನೇಹೊರ್ತು ಅನಿತ್ಯರಾದ ಮಾನವರು ಶಕ್ತರಲ್ಲ ಹಾಗಾದರೆ ದೇವರಭಕ್ತರು ಸುಖಜೀವಿಗಳೆಂದು ನಾವು ಹೇಳಬೇಕಲ್ಲವೆ? ದೈವಾವತಾರನಾದ ಯೇಸುಕ್ರಿಸ್ತನು ಮಾನವಕ್ಕಂತಿಯನ್ನೂ, ನಿತ್ಯಾನಂದವನ್ನೂ ತನ್ನನ್ನು ಆಶ್ರಯಿಸಿಕೊಂಡಿರುವವರಿಗೆ ತಪ್ಪದೆ ದಯಪಾಲಿಸುತ್ತ ಬರುತ್ತಾನೆ ವಾಚಕರೇ ನೀವು ಈ ಸದ್ಗುರುವಿನಲ್ಲಿ ವಿಶ್ವಾಸವಿಟ್ಟು ಸುಖಿಗಳಾಗುವದಕ್ಕೆ ಮನಸ್ಸನ್ನು ಕೊಡುವದಿಲ್ಲವೊ? ಪದವಿಯಾಗಲಿ, ಪ್ರಖ್ಯಾತಿಯಾಗಲಿ, ಐಶ್ವರ್ಯವಾಗಲಿ, ಲೋಕಭೋಗಗಳಾಗಲಿ ನಿಮಗೆ ಇಷ್ಟರೂ ಆತ್ಮಸಂತೋಷ ನಿಮ್ಮಲ್ಲಿ ದೃಢವಾಗಿ ನಿಲ್ಲುವದಿಲ್ಲ ಆದರೆ ನೀವು ಯೇಸುಸ್ವಾಮಿಯನ್ನು ನಿಮ್ಮ ಗುರುವನ್ನಾಗಿ ಅಂಗೀಕರಿಸಿ ಆತನ ಪ್ರೇರಣೆಯಿಂದಲೂ, ಸಹಾಯದಿಂದಲೂ ಪವಿತ್ರತೆಯನ್ನು ಹೊಂದಿ ಭಗವಂತನಲ್ಲಿ ಭಕ್ತಿಯನ್ನಿಟ್ಟರೆ, ಮನಸ್ಸಿನಲ್ಲಿ ಸುಖವು ಶಾಶ್ವತವಾಗಿ ನಿಲ್ಲುವದು

ಯಾರನ್ನು ಬೇಡಬೇಕು?

ಒಂದಾನೊಂದು ದಿವಸದಲ್ಲಿ ಇಬ್ಬರು ಭಿಕ್ಷುಕರು ರಸ್ತೆಯಪಕ್ಕದಲ್ಲಿ ಕೂತುಕೊಂಡು ಮಾತಾಡುತಿದ್ದರು ಅವರಲ್ಲಿ ಒಬ್ಬನಿಗೆ ಚನ್ನನೆಂತಲೂ, ಇನ್ನೊಬ್ಬನಿಗೆ ತಿಮ್ಮನೆಂತಲೂ ಹೆಸರಿದ್ದಿತು ಚನ್ನನು ತಿಮ್ಮನನ್ನು ನೋಡಿ—ಭಿಕ್ಷೆಗಾಗಿ ತಿರುಗಿ ತಿರುಗಿ ಸಾಕಾಯಿತು ನನಗೆ ಏನೂ ದೊರೆಯಲಿಲ್ಲ ಎಂದು ಹೇಳಲು ತಿಮ್ಮನು—ಹಾಗೇನಪ್ಪ ನಾನು ಬೇಡುವದನ್ನು ಬಿಡುವದಿಲ್ಲ ದಿನ ದಿನಕ್ಕೆ ನನಗೆ ಹೆಚ್ಚು ಸಿಗುತ್ತಾ ಬರುತಲಿದೆ ಎನ್ನಲಾಗಿ ಚನ್ನನು ಬಹು ಆಶ್ಚರ್ಯಪಟ್ಟು—ಅದು ಹ್ಯಾಗಪ್ಪಾ. ಭಿಕ್ಷೆಗಾರರಿಗೆ ಬಹಳ ತೊಂದರೆಗಳಿವೆ ಒಂದು ಮನೆಗೆ ಅನೇಕಾವರ್ತಿ ಹೋಗುವದಕ್ಕೆ ಆಗುವದಿಲ್ಲ ಆ ಮನೆಯವರಿಗೆ ಸಿಟ್ಟು ಬರುತ್ತದಲ್ಲಾ ಎಂದು ಕೇಳಲು ತಿಮ್ಮನು—ನನ್ನ ಅನುಭವವಾಗಲ್ಲ ನಾನು ಎಷ್ಟಾವರ್ತಿ ಒಬ್ಬನನ್ನು ಬೇಡುತ್ತೇನೋ, ಅಷ್ಟಾವರ್ತಿ ಆತನು ನನ್ನ ಮೇಲೆ ದಯವಿಟ್ಟು ನನಗೆ ಭಿಕ್ಷೆ ಕೊಡುವದರಲ್ಲಿ ಸಂತೋಷಿಸುವನು ಎಂದು ಹೇಳಿದನು ಚನ್ನನು ಮತ್ತಷ್ಟು ಆಶ್ಚರ್ಯಭರಿತನಾಗಿ—ಒಬ್ಬರೂ ನನಗೆ ಸಂತೋಷದಿಂದ ಕೊಡುವದಿಲ್ಲ ಕೆಲವರು ನನ್ನನ್ನು ನೋಡಿ—ನೀಚ, ಸೋಮಾರಿ ಎಂದು ಅಂದು ನನ್ನನ್ನು ಓಡಿಸುತ್ತಾರೆ ನಾನು ಕಣ್ಣೀರಿಡುತ್ತಾ ದುಃಖಿತನಾಗಿ ಅವರ ಬಳಿಗೆ ಹೋದರೆ ಅವರು—ನೀನು ಬಡವನ ವೇಷ ಹಾಕಿಕೊಂಡು ಬಂದೆಯೋ ಎಂದು ಕೇಳುತ್ತಾರೆ ನಾನು ನಸುನಗುತ್ತಾ ಬೇಡುವದಕ್ಕೆ ಹೋದರೆ ಜನರು—ನಿನಗೇನೂ ಕಡಮೆಯಾಗಿಲ್ಲ ಎನ್ನುವರು ಆದ್ದರಿಂದ ಯಾರೂ ಭಿಕ್ಷೆ ಕೊಡರು ನನ್ನ ಮಾತನ್ನು ಯಾರೂ ನಂಬರು ನನಗೆ ಬಹಳ ತೊಂದರೆಯಾಗಿದೆ ಜೀವನಕ್ಕೆ ಬೇರೆ ಮಾರ್ಗವನ್ನು ನಾನು ಹುಡುಕಬೇಕು ಎಂಬದಾಗಿ ಹೇಳಿದನು ತಿಮ್ಮನು ಇದನ್ನೆಲ್ಲಾ ಕೇಳುತಿದ್ದು—ಏನೋ ಚನ್ನಾ, ನಾನು ಭಿಕ್ಷಬೇಡುವಾಗ ನನಗೆ ಯಾವಾಗಲೂ ಬೇಕಾದದ್ದೆಲ್ಲಾ ದೊರೆಯುತ್ತದೆ ಒಂದು ಸರ್ತಿ ಕೊಟ್ಟವನು, ನನ್ನನ್ನು ಪುನಹ ಬಾರಪ್ಪ ಎಂದು ಹೇಳಿ ತನ್ನಲ್ಲಿರುವ ಶ್ರೇಷ್ಠವಾದವುಗಳನ್ನೂ ಬೇರೆ ಬೇರೆ ಅಮೂಲ್ಯವಾಗಿರುವ ಪದಾರ್ಥಗಳನ್ನೂ ಕೊಡುತ್ತಾನೆ ನನಗೆ ಯಾವದಕ್ಕೂ ಕೊರತೆಯಾಗಿಲ್ಲ ಬೇಡುವದು ಬಹು ಒಳ್ಳೇ ಉಪಾಯವೆಂದು ನನಗೆ ತೋರುತ್ತದೆ ಎಂಬದಾಗಿ ಹೇಳಿದನು ಆಗ ಚನ್ನನು ಓ ತಿಮ್ಮ, ನೀನು ಯಾವ ಯಾವ ಮನೆಗಳಲ್ಲಿ ಬೇಡುವದಕ್ಕೆ ಹೋಗುವೆ ನನಗೂ ಸ್ವಲ್ಪ ಹೇಳು ಎಂದು ಕೇಳಿದಾಗ ತಿಮ್ಮನು—ನಾನು ಭಗವಂತನಲ್ಲಿ ಯೇಸುವಿನ ಮೂಲಕ ಬೇಡುತ್ತೇನೆಯೇಹೊರ್ತು ಬೇರೆ ಯಾರಲ್ಲಿಯೂ ನಾನು ಬೇಡುವದಿಲ್ಲ ಆತನೇ ನನಗುಳ್ಳ ನನಗೆ ಯಾವಕೊರತೆ ಇದ್ದಾಗ್ಯೂ ಆತನು ಅವುಗಳನ್ನೆಲ್ಲಾ ಪರಿಹರಿಸುತ್ತಾನೆ ನನ್ನಲ್ಲಿ ಕೃಪೆಯೇ

ನೂ ಇಲ್ಲ. ದೇವರು ಯೇಸುವಿನ ಪ್ರೀತಿಯನ್ನು ತಿಳಿದು ಆದ ಕಾರಣ ನನ್ನ ಮೇಲೆ ತನ್ನ ದಯವನ್ನು ಇಡುತ್ತಾ ಬಂದಿದ್ದಾನೆ. ನಾನು ತೀರ್ಥಯಾತ್ರೆ ಮೊದಲಾದ ಕ್ಷೇತ್ರಗಳಿಗೆ ಹೋಗಲಿಲ್ಲ. ನಾನು ಫಲ ಪುಷ್ಪಗಳನ್ನು ದೇವಸ್ಥಾನಗಳಲ್ಲಿರುವ ವಿಗ್ರಹಗಳಿಗೆ ಅರ್ಪಿಸುವುದಿಲ್ಲ. ಇವೆಲ್ಲಾ ನಿರರ್ಥಕವಾಗಿ ಏರಿ ಣವಿಸುವುದಿಲ್ಲ. ಪ್ರಾರ್ಥನೆಯ ಯೇಸುಸ್ವಾಮಿಯನ್ನು ನನ್ನ ಪಾಲಿನವನ್ನಾಗಿ ಇಟ್ಟುಕೊಂಡಿದ್ದೇನೆ. ನನ್ನ ವಿಜ್ಞಾಪನೆಗಳನ್ನೆಲ್ಲಾ ಕೇಳತಕ್ಕ ಭಗವಂತನಿಗೆ ಅರ್ಪಿಸುತ್ತೇನೆ. ಆ ದಯಾತಂದೆಯು ಆ ಪ್ರಾರ್ಥನೆಯ ಮಾತನ್ನು ಕೇಳಿ, ಹಿತವನ್ನೂ, ಪಾಪಿಯೂ ಆಗಿರುವ ನನ್ನನ್ನು ಕ್ಷಮಿಸುತ್ತಾನೆಯೋ? ಎಂದಿಗೂ ತಳ್ಳುವನು. ನಾನು ಹಾಡುವದು ಹ್ಯಾಗೆಂದರೆ —

ನಿನ್ನ ಸಮಿಪ್ಯದೇ ಸ್ವಾಮಿ |
ಇನ್ನೊಂದಾಸರೆ ಇಲ್ಲ ಧರೆಯೊಳ್ ||
ಎನ್ನ ಪಾಪಗಳನ್ನೆಲ್ಲ |
ಮನ್ನಿಸಿ ಕೊಡು ನಿನ್ನ ಭಯ || ಪ ||
ಪ್ರಾಣ್ಯಕರ್ತ ನೀನೊಬ್ಬನೆ |
ಉನ್ನತ ಕೃಪಾಕರನು ||
ಬಿನ್ನ ಹೀನವಾದ ಎನ್ನ |
ಮನ್ನಿಸಿ ಕೊಡು ನಿನ್ನ ಭಯ || ೧ ||
ಮಾರ್ಗತಪ್ಪಿ ಹೋದೇ ನಾನ |
ರೋಗದಿಂದ ಸಾಯುತ್ತೇನೆ ||
ಕೂಗುವ ಎನ್ನ ತಪ್ಪಿದೆ |
ಈಗಲೆ ಕೊಡು ನಿನ್ನ ಭಯ || ೨ ||
ಬಂದ ಪಾಪಿಯನ್ನು ನೀನು |
ಬೆಂದು ಕೊಡ ತಪ್ಪಲಾರೆ ||
ನಂಬಿ ಎಲ್ಲಾ ಕರುಣಿಯು |
ತಂದೆಯೇ ಕೊಡು ನಿನ್ನ ಭಯ || ೩ ||

ಬಾತ್ಮಿದಾರರಿಗೆ.

ಬಾತ್ಮಿದಾರರು ತಮ್ಮ ಲೇಖನಗಳಲ್ಲಿ ವಿವರಿಸಿರುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ.

ಈ ವಾರದಲ್ಲಿ ಪ್ರಕಟಿಸಲ್ಪಡದೇ ಇರುವ ಬಾತ್ಮಿಗಳನ್ನು ಬರುವ ವಾರಕ್ಕೆ ನಿಲ್ಲಿಸಿದೆ. ಎಡಿಟರು.

ಬಳಿದೇಶ ವೃತ್ತಾಂತಗಳು.

——(೦೦೦)——

ಸಂಸ್ಥಾನದ ಪಿರ್ಯಾಖಾನೆಯವರು ಶ್ರೀಮನ್ಮಹಾರಾಜರವರ ಜೊತೆಯಲ್ಲಿ ಬೆಂಗಳೂರಿಗೆ ದಯಮಾಡುವರಂತೆ.

ದೇವನಹಳ್ಳಿ ತಾಲ್ಲೂಕಿಗೆ ಸೇರಿದ ನಾಯಕನ ಕೆರೆಕಳಗಣ ಜಮೀನಿನ ಕಾಲುವೆಯಲ್ಲಿ ನಾಲ್ಕನಲ್ಲಿ ಒಂದು ಭಾಗವನ್ನು ರಿಮಿಷನ್ ಮಾಡಬಹುದೆಂದು ಸ್ಯಾಂಕ್ಷನ್ ಆಗಿದೆ.

ಕಳೆದ ಶುಕ್ರವಾರ ಪ್ರಾತಃಕಾಲ ೮ ಘಂಟೆಗೆ ಸಂಸ್ಥಾನದ ರೆಸಿಡೆಂಟರವರಾದ ಕರ್ನಲ್ ಡೇಲ್ಸ್ ನ್ಯಾಡರವರು ಬೆಂಗಳೂರಿಗೆ ದಯಮಾಡಿದರು. ಕಂಟೋನ್ಮೆಂಟ್ ೧೩ ತೋಪುಗಳು ಹಾರಿಸಲ್ಪಟ್ಟವು.

ಶ್ರೀಮನ್ಮಹಾರಾಜರವರು ಸಪರಿವಾರ ಸಮೇತರಾಗಿ ಈದಿವಸ ಸ್ಪೆಷಲ್ ರೈಲಿನಲ್ಲಿ ಬೆಂಗಳೂರಿಗೆ ದಯಮಾಡಿಸಲು ಎಲ್ಲಾ ಏರ್ಪಾಡುಗಳೂ ಆಗುತ್ತಲಿದೆ. ಬೆಂಗಳೂರಿಗೆ ಸನ್ನಿಧಿ ದಯಮಾಡಿದ ಕೂಡಲೆ ಅಲ್ಲಿ ಕುಮಾರೀ ಬಾಜಾಗಳು ಪ್ರಾರಂಭವಾಗುತ್ತವೆ.

ಬೆಂಗಳೂರು ಷಹರಿಗೂ ಇತರ ಕಡೆಗಳಿಗೂ ಜಾಂತಿ ಡಿಪೋಗಳನ್ನು ಸ್ಥಾಪಿಸುವ ದರಖಾಸ್ತನ್ನು ಮ|| ಬಸ್ಟಿಣ್ಣಿ ಮತ್ತು ಪೆರ್ಗುಂಡನೇವ ಮೊದಲಿಯಾರ್ ಇವರಿಗೆ ಕೊಟ್ಟು, ಆದರಿಂದ ಡಿಪೋಗಳು ತೆರೆಯಲ್ಪಡತಕ್ಕದ್ದೆಂದು ಅವರಿಗೆ ಸ್ಯಾಂಕ್ಷನ್ ಆಗಿದೆ.

ಯಡತೊರೆ ತಾಲ್ಲೂಕಿಗೆ ೨ ನೇ ದರ್ಜೆಯ ಹೆಡ್ ಡಾಕ್ಟರು ಅವಶ್ಯಕವಿಲ್ಲವೆಂತಲೂ, ಲೋಕಲ್ ಡಾಕ್ಟರುಗಳಿಗೆ ೩೦ ರೂ ೩೫ ರೂ ಎಂಬದಾಗಿ ಸ್ಯಾಂಕ್ಷನ್ ಆಗಿರುವ ತಲಬುಗಳಲ್ಲಿ ಕುಮಾರೀ ಅಲೋವೆನ್ಸ್ ಕೂಡ ಸೇರಿಕೊಂಡಿರುವಂತೆ ಭಾವಿಸಬೇಕು ಎಂಬದಾಗಿ ಹುಕುಂ ಮಾಡಿರುತ್ತಾರೆ.

ಬರುವ ದಸರಾಸಭೆಗೆ ಲಾಯಖಾಗಿರುವ ಮೆಂಬರುಗಳನ್ನು ಚುನಾಯಿಸಿ ಅವರ ಹೆಸರುಗಳನ್ನು ಸ್ಯಾಂಕ್ಷನ್‌ಬಸ್ಸೆ ಇದೇ ಜುಲೈ ಅಖೈರಿನೊಳಗಾಗಿ ತಿಳಿಸಿ ಪಡಿಸಬೇಕೆಂತಲೂ ಅವರವರು ಚರ್ಚೆಗೆ ತರಬೇಕೆಂಬ ಸಂಗತಿಗಳನ್ನು ನಮೂದಿಸಿ ರಿಪೋರ್ಟನ್ನು ಕಳುಹಿಸಿ ಕೊಡಬೇಕೆಂತಲೂ ಎಲ್ಲಾ ಡೆಪ್ಯೂಟಿಕಮಿಷನರುಗಳಿಗೂ ನಿರ್ಬಂಧಿಸಿರುತ್ತಾರೆ.

ಕಳೆದ ನವಂಬರಿನಲ್ಲಿ ಇಂಡಿಯಾ ಪೈಸೆನ್ಯಾಯದಾದ ಲಾರ್ಡ್ ಬ್ಯಾರನ್ ಹಾರ್ಡಿಂಜ್ ಸಾಹೇಬರವರು ದಯಮಾಡಿದ್ದಾಗ್ಯೆ ನಮ್ಮ ಗವರ್ನಮೆಂಟಿನವರು ಅನೇಕ ಏರ್ಪಾಡುಗಳನ್ನು ಮಾಡಿಸಿದ್ದರಷ್ಟೆ. ಅವಕ್ಕೆಲ್ಲಾ ಒಟ್ಟು ೩೩,೯೭೫-೬-೧೧ ರೂ ಖರ್ಚಾಯಿತೆಂತಲೂ, ಆ ಪೈಕಿ ೩ ಸಾವಿರ ರೂಪಾಯಿಗಳು ಷಹರ್ ಮ್ಯುನಿಸಿಪಾಲಿಟಿಯವರು ಕೊಟ್ಟರೆಂತಲೂ ತಿಳಿಯಬಂದಿದೆ.

ಕೆಲವು ತಾಲ್ಲೂಕುಗಳಲ್ಲಿ ವ್ಯವಸ್ಥೆಯಾಗದೆ ಇರುವ ದರಖಾಸ್ತುಗಳು ಬಹಳ ಹೆಚ್ಚಾಗಿರುವದರಿಂದ ಅವುಗಳನ್ನು ಕೂಡಿದ ಮಟ್ಟಿಗೂ ಜಾಗ್ರತೆಯಾಗಿ ಫೈಸಲ್ ಮಾಡಬೇಕೆಂತಲೂ, ಈ ವಿಷಯದಲ್ಲಿ ಅಮಲ್ದಾರರು ಮತ್ತು ಶಿರಸ್ತೇದಾರರ ಮೇಲೆ ಜವಾಬ್ದಾರಿಗಳು ಹೆಚ್ಚು ಮಾತುವಹಿಸಿಯನ್ನು ತೋರ್ಪಡಿಸಬೇಕೆಂತಲೂ ಸರ್ಕಾರದವರು ತಮ್ಮ ಅಸಮಾಧಾನತೆಯನ್ನು ತಿಳಿಯಪಡಿಸಿರುತ್ತಾರೆ.

The following business will be transacted at the ordinary Meeting of the Municipal Commissioners for the CITY OF MYSORE, to be held **at the Town Hall, on Saturday, the 29th July, 1893 at 8 a. m.**

Subjects.

I. Consideration of the accounts of Receipts and disbursements for the month of June 1893.

II. Election of 2 Municipal Commissioners for the approaching Dassara Representative Assembly, to represent the Municipality.

III. Consideration of taxing private vacant lands within Municipal limits.

IV. Proposal to grant receipts to purchasers of cattle in the weekly Market Fair, in order to check clandestine and dishonest sales, and to collect a small fee from the seller and the purchaser, to defray the cost of an Establishment to grant receipts and otherwise keep the locality clean.

V. Selection of proper burial grounds for Kanna Gowdan Koppal and Padavarahally.

VI. Proposal to construct Bandy stands near Karangere, Bundygere, Wokkelgere, Suppangere, Kannegowdan Koppal, and Padavarahally.

VII. Purchase of 60 Iron covers for sewage and storm water drain manholes in the Fort, at an outlay of about Rs. 750.

And any other subjects that may be brought before the Meeting.

Municipal Board's Office,
Mysore,
18th July 1893.

A. COOPOOSAWMY,
Vice President.

ವೃತ್ತಾಂತ ಪತ್ರಿಕೆ.

೧೮೯೩ನೇ ಇಸವಿ ಜುಲೈ ತಾ|| ೨೦ ನೇ ಗುರುವಾರ.

ಪೋಲೀಸ್ ಸ್ಕೂಲು.

ಮೈಸೂರು ಸರ್ಕಾರದವರು ಬೆಂಗಳೂರಿನಲ್ಲಿ ಒಂದು ಪೋಲೀಸ್ ಸ್ಕೂಲನ್ನು ಸ್ಥಾಪಿಸಿ ವಿದ್ಯಾರ್ಥಿಗಳಿಗೆ ಅಲ್ಲಿ ಪೋಲೀಸ್ ರೂಲ್ಸುಗಳನ್ನೆಲ್ಲಾ ಕಲಿಸುತ್ತ ಇದ್ದಾರಷ್ಟೆ. ಅವರೆ ಕೆಲವು ಸಂದರ್ಭಗಳಲ್ಲಿ ಪೋಲೀಸ್ ಜವಾನರು ಮತ್ತು ಇನ್‌ಸ್ಪೆಕ್ಟರುಗಳು ಈ ರೂಲ್ಸುಗಳನ್ನು ಮಾತ್ರ ಕಲಿತಿರುವದು ಸಾಲದೆ ಸರ್ವೆ ಮಾಡುವದೂ, ನಕ್ಷೆ ಬರೆಯುವದೂ, ಫೋಟೋಗ್ರಾಫ್ (ತಸ್ವೀರು) ತೆಗೆಯುವದೂ—ಇವೇ ಮೊದಲಾದ ವಿಷಯಗಳೂ ತಿಳಿದಿರತಕ್ಕದ್ದು ಆವಶ್ಯಕವೆಂಬದಾಗಿ ಸಂಸ್ಥಾನದ ಇನ್‌ಸ್ಪೆಕ್ಟರ್ ಜನರಲ್‌ರವರು ತೋರಿಸಿದ ಅಭಿಪ್ರಾಯವನ್ನು ಗೌರ್ನಮೆಂಟಿನವರು ಒಪ್ಪಿಕೊಂಡು, ಇದಕ್ಕಾಗಿ ಕಂಟ್ರೋಲರವರು ಇನ್‌ಸ್ಪೆಕ್ಟರ್ ಜನರಲ್‌ರವರಿಗೆ ಅವರು ಅಪೇಕ್ಷಿಸಿದ ೧,೫೦೦ ರೂಪಾಯಿಗಳನ್ನು ಕೊಡತಕ್ಕದ್ದೆಂತಲೂ, ಇಂಥಾ ಸಂಗತಿಗಳೆಲ್ಲಾ ಪೋಲೀಸಿನವರ ಅಧಿಕಾರಿಗಳಾದರೂ ತಿಳಿದಿರತಕ್ಕದ್ದು ಬಹು ಉಪಯೋಗವೆನಿಸುವದೆಂತಲೂ ಒಪ್ಪಿ ಸ್ಯಾಂಕ್ಷನ್ ಮಾಡಿದ್ದಾರೆ. ಮೇಲ್ಕಂಡ ಪೋಲೀಸ್ ಸ್ಕೂಲಿನಲ್ಲಿ ಓದತಕ್ಕವರು ಸ್ವಲ್ಪಮಟ್ಟಿಗೆ ರೇಖಾಗಣಿತವನ್ನು ತಿಳಿದಿದ್ದರೆ ಮೂರು ತಿಂಗಳ ಕಾಲದಲ್ಲೇ ಈ ವಿಷಯಗಳನ್ನೆಲ್ಲಾ ತಕ್ಕಮಟ್ಟಿಗೆ ಕಲಿತುಕೊಳ್ಳಬಹುದಾಗಿರುತ್ತೆ. ಪ್ರತಿಯೊಬ್ಬ ಉಮೇದುವಾರನೂ ತನ್ನ ಸ್ವಂತ ಉಪಯೋಗಕ್ಕಾಗಿ ಈ ಸಾಮಾನುಗಳುಳ್ಳ ಒಂದೊಂದು ಪೆಟ್ಟಿಗೆಯನ್ನು ಕೊಂಡುಕೊಳ್ಳಬೇಕು. ಸರ್ವೇ ಮತ್ತು ನಕ್ಷೆಬರೆಯುವದು—ಇವನ್ನು ಕಲಿಸುವದಕ್ಕೆ ಮೂರು ತಿಂಗಳವರಿಗೂ ಛೀಫ್ ಇಂಜನಿಯರವರಿಂದ ಬೇರೆ ಮಾಡಲ್ಪಡುವ ಒಬ್ಬ ಓವರ್‌ಸೀಯರು ಈ ಉಮೇದುವಾರರುಗಳ ಶ್ರಮಪಡುವರು. ಫೋಟೋಗ್ರಾಫನ್ನು ಕಲಿಸುವದಕ್ಕೆ ಇಲ್ಲಿ ಹೆಸರುವಾಸಿಯಾಗಿರುವ ಒಬ್ಬನನ್ನು ಗೊತ್ತುಮಾಡುವರು. ಆತನು ಎರಡು ವಾರಗಳವರಿಗೂ ಶ್ರಮಪಟ್ಟು ಕಲಿಸಿದಲ್ಲಿ ಸುಲಭವಾಗಿ ಫೋಟೋ ತೆಗೆಯುವದು ತಿಳಿಯಬಹುದು. ಪೋಲೀಸ್ ಸ್ಕೂಲಿನಲ್ಲಿ ಓದುತ್ತಿರುವ ಉಮೇದುವಾರರಲ್ಲದೆ ಸಂಸ್ಥಾನದ ಎಲ್ಲಾ ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟುಗಳೂ ಮತ್ತು ಹೆಡ್‌ಕ್ವಾರ್ಟರ್ ಇನ್‌ಸ್ಪೆಕ್ಟರುಗಳೂ ಈ ವಿಷಯಗಳನ್ನು ತಿಳಿದಿರತಕ್ಕದ್ದು ಆವಶ್ಯಕವಾಗಿರುವದರಿಂದ [illegible] ತಿಂಗಳವರಿಗೆ ಮೇಲ್ಕಂಡ ಅಧಿಕಾರಿಗಳನ್ನು ಮತ್ತು ಇನ್‌ಸ್ಪೆಕ್ಟರುಗಳನ್ನು ಬೆಂಗಳೂರಿಗೆ ಕರೆಸಿಕೊಂಡು ಎಲ್ಲರಿಗೂ ಏಕಕಾಲದಲ್ಲಿ ಮೇಲ್ಕಂಡ ವಿಷಯಗಳನ್ನು ಕಲಿಸುತ್ತಾರೆ. ಇದರಿಂದ ಪ್ರಜೆಗಳಿಗೇನು ಹೆಚ್ಚಿನ ಸೌಖ್ಯ ಸರ್ಕಾರದವರಿಗೆ ಇಲ್ಲವೇನು ಪ್ರತಿಭಟಿಸಲು ಯಾರಿಗೆ ಸಾಧ್ಯವಾದೀತು? ಇನ್ನು ಮೇಲೆ ಸಂಸ್ಥಾನದ ಪೋಲೀಸ್ ಇಲಾಖೆಯು ಸಮರ್ಪಕವಾದ ರೀತಿಯಲ್ಲಿ ಕೆಲಸ ಮಾಡುವದೆಂಬದಕ್ಕೆ ಯಾವ ಸಂಶಯವೂ ಇಲ್ಲ. ಯಾಕಂದರೆ ಶಾಸನಾಗರಿಕವಾದ ಬ್ರಿಟಿಷ್ ರಾಜ್ಯಭಾರದಲ್ಲಿ ಪ್ರಜಾಸ್ವಾತಂತ್ರ್ಯವು ಯಾವರೀತಿಯಲ್ಲಿ ಇರಬಹುದೋ, ಈ ಸಂಸ್ಥಾನದಲ್ಲಿ ಕೂಡ ಹಾಗೆಯೇ ಇರುವಂತೆ ತಕ್ಕ ಯೋಚನೆಗಳನ್ನು ಗೌರ್ನಮೆಂಟಿನವರು ಆಗಾಗ್ಗೆ ಮಾಡುತ್ತಾ ಬಂದಿರುವದನ್ನು ನಾವು ನೋಡಿ ಬಹು ಸಂತೋಷಿಸುತ್ತೇವೆ.

ಶಿವಮೊಗ್ಗ ಸಬ್‌ಜಡ್ಜ್ ಕೋರ್ಟಿನ ಪ್ರಸ್ತಾಪ.

ಕಳೆದ ೧೮೯೨—೯೦ ನೇ ಇಸವಿಯನ್ನು ಸ್ತ್ರೀಸಿವರೆ ಭಯಾನಕವಾಗಿರುವ ಶಿವಮೊಗ್ಗ [illegible] ಕಳೆದನಂತರ ಒಳ್ಳೆ [illegible] ವ್ಯಾಜ್ಯಗಳು ಬಹಳಕಡಿಮೆಯಾಗಿ ಈಚೆಗೆ ಜನಗಳಲ್ಲಿ ಕ್ಷಾಮವೂ ಸಮೃದ್ಧಿಯೂ [illegible] ವ್ಯಾಜ್ಯಗಳೂ ಹೆಚ್ಚುತ್ತ ಬಂದಿರುವದನ್ನು ಮೈಸೂರು ಸರ್ಕಾರದವರು [illegible] ಇದ್ದ ಸಬ್ ಜಡ್ಜರವರ ಕೋರ್ಟುಗಳನ್ನು [illegible] ಆವಶ್ಯಕವಾಗಿ ಕಂಡು ಬಂದದ್ದರಿಂದ ಈಗ ಹೊಸದಾಗಿ ಶಿವಮೊಗ್ಗದಲ್ಲಿ ಒಂದು ಸಬ್‌ಜಡ್ಜ್ ಕೋರ್ಟನ್ನು ಗೌರ್ನಮೆಂಟಿನವರು ಸ್ಥಾಪಿಸಿ [illegible] ಬೇಕಾದ ಸಕಲ ಕಾರಣಗಳನ್ನೆಲ್ಲಾ ಸ್ಯಾಂಕ್ಷನ್ ಮಾಡಿದ್ದಾರೆ. ಅದರ ಮೇಲ್ಕಂಡ ಸ್ಥಾನವು [illegible] ಮುಖ್ಯವಾಗಿ ಆ ಪ್ರಾಂತ್ಯದಲ್ಲಿ ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆಗಳು ಹ್ಯಾಗೆ ಅಭಿವೃದ್ಧಿಯಾಗಿರುತ್ತವೆಂದು ಸ್ವಲ್ಪ [illegible] ಅವಶ್ಯವಾಗಿ ಕಂಡುಬಂದದ್ದರಿಂದ ಈ ವಿಷಯದಲ್ಲಿ ಕೆಲವು ಸಂಗತಿಗಳನ್ನು ನಮ್ಮ ವಾಚಕರ ತಿಳುವಳಿಕೆಗಾಗಿ ಇಲ್ಲಿ ಸ್ವಲ್ಪಮಟ್ಟಿಗೆ ಪ್ರಸ್ತಾಪಿಸುವೆವು—ಪ್ರತಿವರ್ಷದಲ್ಲಿಯೂ ೧೫೦ ಭಾನುವಾರಗಳೂ, ಹತ್ತೊಂಭತ್ತು ರಜಾದಿವಸಗಳೂ ಇರುವದರಿಂದ ಕೋರ್ಟಿನವರು ಕೆಲಸಮಾಡುವದಕ್ಕೆ ೨೫೫ ದಿನಗಳಿಗಿಂತಲೂ ಹೆಚ್ಚಾಗಿ ಕಾಲ ದೊರೆಯುವದಿಲ್ಲ. ಈ ದಿನಗಳಲ್ಲಿ ಸೆಷನ್ ಕೇಸುಗಳ ವಿಚಾರಣೆಗೇ ೧೦೦ ದಿನಗಳು ಆಗುತ್ತವೆ. ಸಿವಿಲ್ ಅಪೀಲುಗಳಿಗಾಗಿ ದಿನ ೧ ಕ್ಕೆ ೪ ಅಪೀಲುಗಳನ್ನು ವ್ಯವಸ್ಥೆ ಮಾಡುವದೆಂದು ಇಟ್ಟುಕೊಂಡಾಗ್ಯೂ ವರ್ಷಕ್ಕೆ ೧೫೫ ದಿನಗಳು ಬೇಕಾಗುತ್ತವೆ. ಸರಾಸರಿ ವರ್ಷ ೧ ಕ್ಕೆ ಕ್ರಿಮಿನಲ್ ಅಪೀಲುಗಳು ೧೫೦ ಕ್ಕೆ ಕಡಮೆಯಾಗುವದಿಲ್ಲವಾದ್ದರಿಂದ ಇವುಗಳನ್ನು ತೀರ್ಮಾನ ಮಾಡಬೇಕಾದರೆ ಕನಿಷ್ಠ ೫೦ ದಿನಗಳವರೂ ಬೇಕು. ಉಳಿದ ೫೦ ದಿನಗಳಲ್ಲಿ ಒರಿಜಿನಲ್ ಸಿವಿಲ್ ಮೊಕದ್ದಮೆಗಳೂ ಮತ್ತು ಇತರ ಸಿವಿಲ್ ಬಾಬಿನ ಚಿಲ್ಲರೆ ಕೆಲಸಗಳೂ ನಡೆಯಬೇಕಾಗಿದೆ. ಇವುಗಳಲ್ಲಿ ಹೇಗೆ ಕಾಲ ಕಳೆದುಹೋಗುತ್ತೆ. ಇಷ್ಟಲ್ಲದೆ ಜಡ್ಜಿಯು ಕಷ್ಟವಾದ ಮೊಕದ್ದಮೆಗಳಲ್ಲಿ ಲಾಯರುಗಳ ಆರ್ಗ್ಯುಮೆಂಟುಗಳನ್ನು ಕೇಳಿ ತನ್ನ ತೀರ್ಮಾನವನ್ನು ಹೇಳುವದಕ್ಕೆ ಮುಂಚೆ ಅನೇಕ ಅಥಾರಿಟಿಗಳನ್ನು ಹುಡುಕಿ ತೆಗೆಯುವದಕ್ಕಾಗಿ ಪುಸ್ತಕಗಳನ್ನು ಓದುವದಕ್ಕೆ ಕಾಲವೇ ಇಲ್ಲ. ಈಚೆಗೆ ಒರಿಜಿನಲ್ ಸಿವಿಲ್ ನಂಬರುಗಳು ಬಹು ಹೆಚ್ಚಾಗುತ ಬಂದಿರುವದರಿಂದ ಮೇಲ್ಕಂಡ ೫೦ ದಿನಗಳಲ್ಲಿ ಅರ್ಧಪಾಲು ಮೊಕದ್ದಮೆಗಳು ತೀರ್ಮಾನವಾಗುವದೇ ದುರ್ಲಭವಾಗುತ್ತಾ ಬಂದಿದೆ. ಕೋರ್ಟಿನವರಿಗೆ ವಿಚಾರಣೆ ಮಾಡುವದಕ್ಕೆ ಕಾಲವಿಲ್ಲದೆ ಮೊಕದ್ದಮೆಗಳನ್ನು ಮುಂದಕ್ಕೆ ಹಾಕಿರಿಂಗು ಹಾಕಿದಲ್ಲಿ ಕಕ್ಷಿಗಾರರಿಗೂ, ಅವರ ಕಡೆಯ ಸಾಕ್ಷಿಗಳಿಗೂ ಉಂಟಾಗುವ ತೊಂದರೆಗಳನ್ನು ವಿವರಿಸಲು ಅಶಕ್ಯವಾಗುತ್ತೆ. ಕಳೆದ ವರ್ಷಗಳಲ್ಲಿ ನಗರದ ಡಿವಿಜನಲ್ಲಿ ಸಿವಿಲ್ ಕೋರ್ಟುಗಳಿಂದ ಸರ್ಕಾರಕ್ಕೆ ೩೫,೫೮೮ ರೂಪಾಯಿಗಳು ಉತ್ಪತ್ತಿಯಾಯಿತು. ಈ ಪೈಕಿ ೨೩,೯೯೩ ರೂಪಾಯಿ ಶಿವಮೊಗ್ಗ [illegible] ಸ್ಥಳದು. ಆದದರಿಂದ ಖರ್ಚು ಹೋಗಾ ೧೧,೯೦೯ ರೂಪಾಯಿ ಸರ್ಕಾರಕ್ಕೆ ಮಿಗುತ್ತಿರುವ ಆದಾಯ ಆಗಿರುತ್ತೆ. ಆದರೆ ಕಳೆದ ವರುಷದಲ್ಲಿ ವ್ಯವಸ್ಥೆಯಾಗದೆ ಈ ವರ್ಷಕ್ಕೆ ಬಾಕಿಯಲ್ಲಿ ಬಿದ್ದಿರುವ ಮೊಕದ್ದಮೆಗಳು—ಒರಿಜಿನಲ್ ಮೊಕದ್ದಮೆಗಳು ೬೪; ಸಿವಿಲ್ ಅಪೀಲುಗಳು ೧೪೩; ಮಿಸಲೇನಿಯಸ್ ಮತ್ತು ಜಾರೀ ಮೊಕದ್ದಮೆಗಳು ೪೮; ಸೆಷನ್ ಮೊಕದ್ದಮೆಗಳು ಒಂದೂ ಇಲ್ಲ, ಕ್ರಿಮಿನಲ್ ಅಪೀಲುಗಳು ೩—ಈ ರೀತಿಯಾಗಿ ಬಾಕಿಯಲ್ಲಿ ಬಿದ್ದಿದ್ದುವು. ಹೀಗೆ ಒಂದು ವರ್ಷದಲ್ಲಿ ವ್ಯವಸ್ಥೆಯಾಗಬೇಕಾದ ಮೊಕದ್ದಮೆಗಳು ಮುಂದಿನ ವರ್ಷಕ್ಕೆ ಹಾಕುತ್ತಾ ಬಂದಲ್ಲಿ ಪ್ರಜೆಗಳಿಗೆ ಬಹು ತೊಂದರೆಯುಂಟಾಗುವದರಲ್ಲಿ ಸಂದೇಹವಿಲ್ಲ. ಜಡ್ಜಿಗಳಿಗೂ, ಕಕ್ಷಿಗಾರರಿಗೂ, ಅವರ ಸಾಕ್ಷಿಗಳಿಗೂ ಇದರಿಂದ ಎಷ್ಟು ಬೇಸರವುಂಟಾಗುತ್ತಿದೆ. ಇವೇ ಮೊದಲಾದ ತೊಂದರೆಗಳನ್ನೆಲ್ಲಾ ಕಾಣಿಸಿ ನಗರದ ಡಿಸ್ಟ್ರಿಕ್ಟ್ ಜಡ್ಜರು ಛೀಫ್ ಕೋರ್ಟಿಗೆ ಸ್ಪಷ್ಟವಾದ ಒಂದು ರಿಪೋರ್ಟನ್ನು ಬರೆದುಕೊಂಡು ಶಿವಮೊಗ್ಗೆಗೆ ಒಂದು ಸಬ್‌ಜಡ್ಜ್ ಕೋರ್ಟನ್ನು ಸ್ಥಾಪಿಸಿಕೊಡಬೇಕೆಂದು ಬರೆದಿದ್ದರು. ಈ ಅಭಿಪ್ರಾಯವನ್ನು ಪ್ರೋಷಿಸಿ ಛೀಫ್ ಕೋರ್ಟ್ ಜಡ್ಜಿಯವರು ಗೌರ್ನಮೆಂಟಿಗೆ ಬರೆದುಕೊಂಡರು. ಗೌರ್ನಮೆಂಟಿನವರು ಶಿವಮೊಗ್ಗದಲ್ಲಿ ಒಂದು ಸಬ್‌ಜಡ್ಜ್ ಕೋರ್ಟನ್ನು ಸ್ಥಾಪಿಸುವದಕ್ಕೆ ಸ್ಯಾಂಕ್ಷನ್ ಮಾಡಿ ಅಲ್ಲಿನ ಸಬ್‌ಜಡ್ಜಿಗಳು ಆವಶ್ಯವಿದ್ದಾಗ ಬೆಂಗಳೂರಿನಲ್ಲಿಯೂ, ಇತರ ಕಡೆಗಳಲ್ಲಿಯೂ ಕೆಲಸವಾದ ಹಾಗೆ [illegible] ವಿಧಿಸುತ್ತಾರೆ. ಅಂತೂ ಅವರೀಗ ಸಕಾದಷ್ಟು ಕೆಲಸ ಶಿವಮೊಗ್ಗದಲ್ಲಿ ಇಲ್ಲದಿದ್ದಾಗ [illegible] ಇತರ ಕಡೆಗಳಿಗೆ ಸೈನ್ಯದ ಹಾಗೆ [illegible] ಕಳುಹಿಸುತ್ತಾರೆ. ಆದರೆ ಇಂಥಾ ಸಂದರ್ಭಗಳು ಯಾವಾಗಲೂ ಪ್ರಾಪ್ತವಾಗಲಾರವೆಂದು ನಾವು ನಂಬಿದ್ದೇವೆ. ಯಾಕಂದರೆ ಅವರ ಕಾಲವನ್ನೆಲ್ಲಾ ಅಲ್ಲೇ ವಿನಿಯೋಗಿಸುವಂತೆ ಬೇಕಾದಷ್ಟು ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆಗಳು ಬೆಳೆದುಬಂದಿವೆ. ಈ ಹೊಸ ಏರ್ಪಾಡಿನಿಂದ ಆ ಪ್ರಾಂತ್ಯದ ಪ್ರಜೆಗಳಿಗೆ ಅನೇಕ ವಿಧವಾದ ಕಷ್ಟಗಳೆಲ್ಲಾ ನಿವೃತ್ತಿಯಾಗುವವೆಂಬ ವಿಷಯದಲ್ಲಿ ಯಾವ ಸಂಶಯವೂ ಇಲ್ಲ. ಇದಕ್ಕಾಗಿ ಪ್ರಜೆಗಳೆಲ್ಲರೂ ಸರ್ಕಾರದವರಿಗೆ ವಿಶೇಷವಾಗಿ ಕೃತಜ್ಞರಾಗಿರುವರೆಂದು ನಾವು ಸಂತೋಷಿಸುತ್ತೇವೆ.

ಗುರುಲಕ್ಷಣ.

(ಕಳೆದವಾರದ ಶೇಷ)

೨ ನಿಜಗುರುವು ದೇವರೂ ಮನುಷ್ಯನೂ ಆಗಿರಬೇಕು

ಗುರುವು ಕೇವಲ ಮನುಷ್ಯನಾಗಿದ್ದರೆ, ರಕ್ಷಕನಾಗಿರಲಾರನು. ಯಾಕಂದರೆ ನೇಲೆ ವಿವರಿಸಿದ ಪ್ರಕಾರ ಪ್ರತಿಯೊಬ್ಬ ಮನುಷ್ಯನೂ ಪಾಪಿಯಾಗಿದ್ದಾನೆ. ಹಿಂದುಜನರು ತಮ್ಮ ಕೆಲವು ಗುರುಗಳಿಗೂ, ಆಚಾರ್ಯ ಪುರುಷರಿಗೂ, ಪರಿಶುದ್ಧಾತ್ಮನ ಮಹಿಮೆಯನ್ನೂ ಹೇಳಿ [illegible] ಬಹಳ ತುಂಬ ಹೊಗಳಿ ಸನ್ಮಾನ ಕೊಡುತ್ತಾರೆ. ಆದರೆ ಆ ಗುರುಗಳ ನಡೆನುಡಿ ಚರಿತ್ರೆಗಳನ್ನು ವಿಚಾರಿಸಿ ನೋಡಿದರೆ, ಅವರಲ್ಲಿ ಒಬ್ಬನಾದರೂ ಸ್ವಾಮಿ ದೇವರ ಮುಂದೆ ನಿಂತು ನನ್ನ ತಪ್ಪು ಯಾವುದೆಂದು ಹೇಳಲಾರನು [illegible] ಆದರೂ ಪವಿತ್ರ ದೇವರ ಮುಂದೆ ಗಡಗಡನೆ ನಡುಗುತ್ತಾ ತಮ್ಮ ಪಾಪಗಳ ಕ್ಷಮೆಯನ್ನು ಬೇಡಿಕೊಳ್ಳತಕ್ಕದ್ದು. ಇಂಥಾ ನರಗುರುಗಳು ನರಕಾಲವನ್ನು ಉದ್ಧಾರ ಮಾಡಲಿಕ್ಕೆ ತಕ್ಕ ಗುಣ, ಬಲ, ಪ್ರೀತಿ ತಮ್ಮಲ್ಲಿ ಇರುತ್ತದೆಂದು ಹೇಳಿ, ಶ್ರೀಮಂತರಿಂದ ತೋರಿಸದೆ ತಮ್ಮ ಪ್ರಸಂಗ ತಾವೇ ಮಾಡಿಕೊಳ್ಳುವದು ಅವರಿಗೆ ಆಗತಕ್ಕದ್ದಲ್ಲ. ಆದಾಗ್ಯೂ ಪಾಪಗಳಿಂದಲೂ ದೇವರ ಕೋಪದೊಳಗಿಂದಲೂ ಬಿಡುಗಡೆಯಾಗುವಂತೆ ಅವರಿಗೆ ಒಬ್ಬ ದಿವ್ಯ ಗುರುವು ಅಗತ್ಯವಾಗಿ ಬೇಕಾಗಿರುವದರಿಂದ, ತಾವು ಇನ್ನು ಎರಡನೆಯವರನ್ನು ರಕ್ಷಿಸಿ ಮುಕ್ತಿ ಮಾಡುವ ಯಾವ ಶಕ್ತಿಯು? ನರಗುರುಗಳು ಕೇವಲ ಪಾಪಿಷ್ಠರಾಗಿರುವದರಿಂದ ಅವರು ರಕ್ಷಣೆಯ ಕೆಲಸವನ್ನು ಮಾಡಲಿಕ್ಕೆ ಯೋಗ್ಯರಾಗಿರುವದಿಲ್ಲ ಈ ಕೆಲಸವು ಮನುಷ್ಯರ ಕೈಯಿಂದಾದೀತೆ? ಅದು ಆಗದ ಮಾತು ಎಂದು ತಿಳಿದ ಮೇಲೆ, ದೇವರು ಸರ್ವಶಕ್ತನಾದ ರಕ್ಷಕನಾಗ್ಯಾಗಿರತಕ್ಕ ಅಗತ್ಯವನಾಗಿದೆ ಎಂಬುದು ಮೇಲೆ ತಿಳಿದು ಬರುತ್ತದೆ. ಆತನು ತನ್ನ ಮಂಗಳ ಸ್ವಭಾವದಲ್ಲಿಯೇ ನರಾವತಾರವೆತ್ತಿಕೊಂಡು ಒಂದೇ ಆತ್ಮದಲ್ಲಿ ದೇವರ ಮತ್ತು ಮನುಷ್ಯರ ಸ್ವಭಾವವು ಒಂದಾಯಿತು. ಆದದರಿಂದ ದೇವರ ಸಕಲ ಸದ್ಗುಣಗಳು ಆತನಲ್ಲಿ ಸಂಪೂರ್ಣವಾಗಿ ತೋರಿ ಬಂದವು. ಸದ್ಗುರುವಿನಲ್ಲಿ ದೇವರ ಮತ್ತು ಮನುಷ್ಯರ ಸ್ವಭಾವವು ಕೂಡಿ ಇದ್ದುದರಿಂದ ಆತನು ದೇವರಿಗೂ ಮನುಷ್ಯರಿಗೂ ಮಧ್ಯಸ್ಥಿಕೆಯನ್ನು ಮಾಡಲಿಕ್ಕೆ ಸಮರ್ಥನಾದವನು ಗುರುವು ಎನ್ನುವದು ಸರಿಯಾಗಿದೆ.

೩ ನಿಜಗುರುವು ಪಾಪವಿಲ್ಲದ ಪವಿತ್ರನೂ ಆಗಿರಬೇಕು

ಪಾಪಗಳಿಂದ ಬಿಡಿಸುವ ಜಗದ್ಗುರುಗಳು ಎಂಬುವರಾರು ಬಂದರು? ಎಲ್ಲರೂ ಬರಿ ಕೈಲಿ. ಹಾಗೆಯೇ ನರರಿಗೆ ಅದಿ [illegible] ಆದವನು ಪಾಪ ಮಾಡಿದವನಿಂದ ಆತನ ವಂಶದಲ್ಲಿ ಹುಟ್ಟಿದ ಜನರೆಲ್ಲರೂ ಪಾಪಿಗಳಾದ ಮೇಲೆ, ಅವರು ಪವಿತ್ರರಾಗಿದ್ದಾರೆ? ಲೋಕದಲ್ಲಿ ಎಲ್ಲಿ ಹೋದರೂ, ಎಲ್ಲಾ ದೇಶಕಾಲಗಳಲ್ಲಿ ಸ್ವೇಚ್ಛೆಯ ದೀನತೆಯಿಂದ [illegible] ದುರಾಚಾರಿಗಳು ಕಣ್ಣಿಗೆ ಬೀಳುತ್ತಾರೆ. ಆದದರಿಂದ ಈಗ ದೇವರ ಕೋಪವು [illegible] ಹೀಗೆ ನರಕಾಲದವರೆಲ್ಲರ ಮೇಲೆ ಬರುತ್ತಾ ಇರುತ್ತದೆ. ಹೀಗಿರುವ [illegible] ದುಃಖದಿಂದ ಬಿಡಿಸಿ [illegible] ಹಿಂದಿನ ಮತ್ತು ಈಗ ಇರುವ [illegible] ಗುಣಗಳನ್ನು ಸಾಕಾದ [illegible] ಅನೇಕ ಜನಗಳಲ್ಲಿ ನಂಬಿಕೆಯೂ ಇಲ್ಲದೆ [illegible] ಗುರುಗಳ ಪಾದಕ್ಕೆ ಬಿದ್ದು ಪ್ರಾರ್ಥನೆಗಳನ್ನು ಮಾಡುತ್ತಿರುವರು ಇಂಥವರನ್ನು ನೋಡುವದಕ್ಕೆ ಬಾರದ ಹೋಗುವದು ಅವಶ್ಯವಲ್ಲ. ನಾಗರ ಹಾವಿನಿಂದ ಕಚ್ಚಲ್ಪಟ್ಟ ಮನುಷ್ಯನಿಗೆ ಜೀವಕೊಡಲು ಅವನನ್ನು ಹುಟ್ಟಿಸಿದ್ದಲ್ಲವೇ? ಇನ್ನೊಬ್ಬ ಕಚ್ಚಲ್ಪಟ್ಟವನು ಕೊಡಲಾರನು. ಜಗತ್ತಿನ, ಸ್ತ್ರೀಪುರುಷರು [illegible] ಸ್ಥಿತಿಯ ಲಕ್ಷಣಗಳ ಸಹಿತ ಶೋಧಿಸಿ, ದೇವರ ಮನಸ್ಸಿಗೆ ಬರುವಂಥ ಧರ್ಮಿಷ್ಠರೂ, ಪವಿತ್ರ ಸದ್ಗುಣಗಳುಳ್ಳ ಮತ್ತು ಬಲವುಳ್ಳ ನರಕಾಲವನ್ನು ಉದ್ಧಾರ ಮಾಡುವದಕ್ಕೆ ನರಗುರುಗಳು ಮಾಡುವ ಉಪಾಯದಿಂದ ಕೆಲಸ ಕೈಗೂಡೀತೆ?

ದೇವರು ಈ ಲೋಕವನ್ನು ಉದ್ಧಾರ ಮಾಡಲಿಕ್ಕೆ ನೇಮಿಸಿದ ಜಗದ್ಗುರುವು ಪಾಪದ ಕಳಂಕವಿಲ್ಲದ ದೇವಪುರುಷನಾಗಿದ್ದನೆಂಬದಕ್ಕೆ ಸಂದೇಹವಿಲ್ಲ. ಅವನು ಮನುಷ್ಯರ ಪಾಪಗಳನ್ನು ಪರಿಹರಿಸುವದಕ್ಕೆ ಯೋಗ್ಯನಾದ ರಕ್ಷಕನಾಗಿ ಸದ್ಗುರುವಿನಲ್ಲಿ ಪಾಪವಿಲ್ಲದ ಪ್ರೀತಿಯೂ, ಭಯವಿಲ್ಲದ ಶಕ್ತಿಯೂ, ಸಕಲವಿಧ ಸದ್ಗುಣಗಳೂ ಸಂಪೂರ್ಣವಾಗಿ ಪ್ರತ್ಯಕ್ಷವಾದವೆಂಬ ವಿಷಯ, ಜಗದ್ಗುರುವಿನ ಧರ್ಮಕ್ಕೆ ವೈರಿಗಳಾದವರು ಸಹ ಒಪ್ಪಿಕೊಳ್ಳುತ್ತಾರೆ. ನರಪಾಪಿಗಳ ನಿತ್ಯ ಜೀವ ಗುರುವಾದವನು, ಮಾರ್ಗವೂ, ಸತ್ಯವೂ, ಪವಿತ್ರನೂ, ಪ್ರಜಾಪಾಲಕ ಸತ್ಯವಂತನೂ ಆಗಿರಬೇಕಾದವನು [illegible] [illegible] ಆದರೆ ಈ ಜಗದ್ಗುರುವಿನ ಪ್ರಭಾವವನ್ನು ಕಣ್ಣಾರೆ ಕಂಡವರು ಆತನ ದಿವ್ಯತೆಯನ್ನು [illegible] ಒಂದು ಮಾತನ್ನಾದರೂ ಅಲ್ಲಗಳೆಯಲು ಶಕ್ತರಾಗಲಿಲ್ಲ. ಆತನು [illegible] ಅವರ ರೀತಿ ಪ್ರಾಯಶ್ಚಿತ್ತ ಮಾಡಿದ ಬಲದಿಂದ!

ಸಮುದ್ರದ ಸಂಕಟದಲ್ಲಿ ಬಿದ್ದವರನ್ನು ಕಾಪಾಡಿದ ಸುಕ್ಷೇತ್ರಯ ಚರಿತ್ರೆ

ಸೌಭಾಗ್ಯವೆಂಬ ಪುರದಲ್ಲಿ ಪ್ರಿಯಸಾಗರನೆಂಬ ವರ್ತಕ ಶ್ರೇಷ್ಠನು ದಿವ್ಯದ್ವೀಪಕ್ಕೆ ಹೋಗಬೇಕೆಂದಿದ್ದನು. ಆ ವರ್ತಕನು ಒಂದು ಶ್ರೇಷ್ಠವಾದ ಹಡಗನ್ನು ಸಿದ್ಧಪಡಿಸಿ, ಅದರಲ್ಲಿ ತನ್ನ ದಿವ್ಯ ದೇಶಗಳಿಂದ ಬೆಲೆಯುಳ್ಳ ವಜ್ರವೈಡೂರ್ಯಗಳೆಂಬ ನವರತ್ನಗಳನ್ನೂ, ಪದಾರ್ಥಗಳನ್ನೂ ತುಂಬಿಸಿ, ಅವನ್ನು ವ್ಯಾಪಾರಕ್ಕಾಗಿ ದ್ವೀಪಾಂತರಕ್ಕೆ ಕೊಂಡುಹೋದನು—ಆ ಪ್ರದೇಶದಲ್ಲಿ ವ್ಯಾಪಾರವನ್ನು ನಡೆಸುತ್ತ [illegible] ಒಬ್ಬನಿಗೆ ಅವರ ಯಾವತ್ತೂ ಸಾಮಾನುಗಳನ್ನು ಮಾರಿ ಲಾಭವನ್ನು ಸಂಪಾದಿಸಿದನು. ಆ ವರ್ತಕನು ಧನವನ್ನು ಒಟ್ಟುಮಾಡಿಕೊಂಡು ವ್ಯಾಪಾರಕ್ಕಾಗಿ ಪ್ರಯಾಣ ಹೊರಟನು. ನಂತರ ಎರಡು ತಿಂಗಳು ಸಂಚರಿಸಿ ಬಹಳ ದೂರ ಹೋಗುತ್ತಿರಲು ಒಂದು ದ್ವೀಪವನ್ನು ಸೇರಿದರು. ಅಲ್ಲಿಗೆ ಸೇರಿದ ಮೇಲೆ ಸೌಭಾಗ್ಯವಾದ ದ್ವೀಪದಿಂದ ಹೊರಟನು. ಆ ದ್ವೀಪದಲ್ಲಿ ಬಹು ಪದಾರ್ಥಗಳನ್ನು ಸಾಕಷ್ಟು ಕೊಂಡುಕೊಂಡರು. ಈ ದೊಡ್ಡ ಹಡಗನ್ನು ನೋಡಿ ಅಂಗಡಿಗಳ ಮನುಷ್ಯರು ನೋಡಿ ತಮ್ಮ ಸೇವಕರಿಗೆ ಹೇಳಿದ್ದೇನಂದರೆ—ನೀವು ಈ ವಸ್ತು ಪದಾರ್ಥಗಳನ್ನು ತಕ್ಕೊಂಡು ದೋಣಿಗಳನ್ನು ಹಿಡಿದು ಆ ದೊಡ್ಡ ಹಡಗಿನ ಹತ್ತಿರಕ್ಕೆ ಹೋಗಿ ಬೇಕಾದಷ್ಟು ಲಾಭ ಹೊಂದಿಕೊಳ್ಳಿ ಎಂದು ಹೇಳಿ ಕಳುಹಿಸಿದನು. ಇದನ್ನು ನೋಡಿ ಹಡಗಿನ ವ್ಯಾಪಾರಿಗಳು ಸ್ವಲ್ಪಹೊತ್ತು ಸುಮ್ಮನಿದ್ದು ನಂತರ ಧೈರ್ಯವನ್ನು ಹೊಂದಿ ಆ ಪದಾರ್ಥಗಳನ್ನು ತುಂಬಿಕೊಂಡು ಹೋಗಿ ತಮ್ಮ ದೇಶದ ಸಂಪತ್ತನ್ನು ಮಾರಿ ಎಲ್ಲರೂ ಪದಾರ್ಥಗಳನ್ನು ಕೊಂಡುಕೊಂಡರು. ಆ ಮೇಲೆ ವಿಶೇಷ ಲಾಭದಿಂದ ಹಡಗನ್ನು ತಮ್ಮ ದೇಶಕ್ಕೆ ತಿರುಗಿಸಿಕೊಂಡು ಹೊರಟರು. ಹಡಗಿನಲ್ಲಿಯೇ ಬಿದ್ದುಕೊಂಡರು. ನಂತರ ಸಮುದ್ರದಲ್ಲಿ ಒಂದು ದಿನಗಳ ಎಂದು ಹಡಗನ್ನು ಅವರು ತೀರದ ಕಡೆಗೆ ಹೋಗುವಂತೆ ನಡೆಸಿದರು. ಹೀಗೆ ಹೋಗುತ್ತಿರುವಲ್ಲಿ ಒಂದು ಘೋರವಾದ ಬಿರುಗಾಳಿ ಹಡಗನ್ನು ಬಡಿದು ಚೂರುಚೂರಾಯಿತು. ವಿಪರೀತ ನಷ್ಟವಾದದ್ದರಿಂದ ಪ್ರಾಣನಷ್ಟವಾಯಿತು ಮತ್ತು ಕೆಲವರು ಹಲಗೆಗಳ ಮೇಲೆಯೂ ದೋಣಿಗಳ ಮೇಲೆಯೂ ಕೂ

[illegible]

ಟೊಪಿಗಳು!

ಟೊಪಿಗಳು!! WOOL CAPS ಟೊಪಿಗಳು!!

ಹಾಸನದ ಅರ್ಫನೇಜಿನಲ್ಲಿ ತಯಾರಾಗುವಂಥ ಉಣ್ಣೆ ಕಂಬಳಿನೂಲಿನ ಟೊಪಿಗಳು (Wool Caps) ನಮ್ಮ ಆಫೀಸಿನಲ್ಲಿ ಮಾರಿಕೆಗೆ ಸಿದ್ಧವಾಗಿರುತ್ತವೆ. [illegible] ೧ ರೂ. ೨ ಆಣೆ ಇಂದ ೧ ರೂ ೬ ಆಣೆಗಳ ವರೆಗೂ ಬೇರೆ ಬೇರೆ ದರಗಳುಂಟು. ಸ್ಥಳದವರು ಬಂದು ನೋಡಿ ಕೊಳ್ಳಬಹುದು. ಪರಸ್ಥಳದವರು [illegible] ವಿ. ಪಿ. ಮೂಲಕ ಕಳುಹಿಸುತ್ತೇವೆ. [illegible]

ಮೈಸೂರು.

ಬಹಿರ್ದೇಶ ವೃತ್ತಾಂತಗಳು.

[illegible]

ಮೈಸೂರಿಗೆ ಬಂದ ಸಂಗ್ರಹ.

[illegible]

ವಿನೋದ ಯುಗ.

[illegible]

ಕರ್ನಾಟಕಭಾಷೆ.

(ನಮ್ಮ ವಾಚಕರ ಬುಕ್ಕಿದಾರರಿಂದ)

ಕರ್ನಾಟಕ ಭಾಷೆಯು ಸಂಸ್ಕೃತ ಭಾಷೆಯಿಂದ ಉತ್ಪತ್ತಿಯಾದದ್ದೆಂದು ಹೇಳುತ್ತಾರೆ. ಈ ಕರ್ನಾಟಕ ಭಾಷೆಯು ದ್ರಾವಿಡಭಾಷೆಯ ವರ್ಗದಲ್ಲಿ ಸೇರಿದಾಗಿರುತ್ತದೆ. ೧ನೇದು ತಮಿಳು, ೨ನೇದು ತೆಲುಗು, ೩ನೇದು ಕನ್ನಡ, ೪ನೇದು ತುಳು, ೫ನೇದು ಮಲಯಾಳ, ಎಂಬ ಐದು ಸುಧಾರಿಸಿದ ಭಾಷೆಗಳಲ್ಲದೆ ನೀಲಗಿರಿಯ ನಿವಾಸಿಗಳು ಆಡುವ ತೋದರ, ಕೋತ, ಎಂಬ ಭಾಷೆಗಳೂ ಗೊಂಡರ ಭಾಷೆಯೂ, ಒರಾಂವರು ಆಡುವ ... ಎಂಬ ಭಾಷೆಯೂ, ಇವೆಲ್ಲಾ ದ್ರಾವಿಡವರ್ಗದ ಭಾಷೆಗಳಾಗಿರುತ್ತವೆ. ಇವುಗಳಲ್ಲಿ ತಮಿಳು, ಮೊದಲಾದ ಭಾಷೆಗಳಿಗೆ ಲಿಪಿಗಳುಂಟು. ಅವುಗಳಲ್ಲಿ ವಿಧವಿಧದ ಕವಿತಾಗ್ರಂಥಗಳು ಬರೆಯಲ್ಪಟ್ಟು ಶಕ್ತವಸ್ತುಗಳಿಗೆ ಗೌರವ ಉಂಟಾಗಿದೆ. ಮಿಕ್ಕ ಭಾಷೆಗಳೆಲ್ಲಾ ಇನ್ನೂ ಕಾಡುಸ್ಥಿತಿಯಲ್ಲಿಯೇ ಉಳಿದಿವೆ.

(೧) ತಮಿಳುಭಾಷೆಯು ಉಳಿದವುಗಳಿಗಿಂತ ಮೊದಲು ತಿದ್ದಿಸಲ್ಪಟ್ಟದ್ದಾಗಿ ಬಹಳ ಹಳೆಯರ ಶಬ್ದಗಳಿಂದ ಅತಿವಿಸ್ತಾರವಾಗಿ ... [illegible]

(೨) ತೆಲುಗುಭಾಷೆಯು ಸುಧಾರಣೆಯ ... [illegible]

[illegible]

ಭಾಷೆಗಳ ರೂಪದಲ್ಲಿ ಹೆಚ್ಚು ಕಡಿಮೆ ಉಂಟಾಗುತ್ತೆಂದು ಸಾಧಾರಣ ನಿಯಮವುಂಟು. ಅದರಂತೆ ಹಳಗನ್ನಡದಲ್ಲಿ ರೂಪಾಂತರವಾಗಿ ಹೊಸಗನ್ನಡವು ಉಂಟಾಯಿತು. ಆದಾಗ್ಯೂ ಈ ಎರಡರಲ್ಲಿ ... [illegible]

[illegible]

ವಿವಿಧ ವರ್ತಮಾನಗಳು.

[illegible]

ಕಾಲೀಯಾಹಕನಕ ೧೮೧೫ ನೇ ವಿಜಯನಾಮ ಸಂವತ್ಸರದ ನಿಜಾಷಾಢಶುದ್ಧ ಸಪ್ತಮಿ ಗುರುವಾರದಿಂದ ನಿಜಾಷಾಢಶುದ್ಧ ತ್ರಯೋದಶಿ ಬುಧವಾರದ ವರೆಗಿನ ವಾರಪಂಚಾಂಗ.

೧೮೯೩ ನೇ ಇಸವಿ, ಜುಲೈ

ತಾ	ವಾರ.	ತಿಥಿ	ಘಳಿಗೆ.	ನಕ್ಷತ್ರ	ಘಳಿಗೆ.	ಕರ್ಕಟಕ ಮಾಸ ತೇದಿ
20	ಗು.	ಸ	11-10	ಚಿ	50-20	7
21	ಶು	ಅ	17-1	ಸ್ವಾ	54-59	8
22	ಶ	ನ	20-33	ವಿ	60-0	9
23	ರ	ದ	21-53	ವಿ	0-59	10
24	ಸೋ *	ಏ	20-47	ಅನು	7-14	11
25	ಮಂ	ದ್ವಾ	34-52	ಜ್ಯೇ	13-47	12
26	ಬು	ತ್ರ	39-38	ಮೂಲ	20-10	13

* ಸರ್ವತ್ರಪ್ರಥಮೈಕಾದಶಿ

ಪೇಟೆ ಧಾರಣೆ.

ದಿವಸಿ	ಮೈಸೂರು.	ಬೆಂಗಳೂರು.
	ರೂ. ಆ. ಪೈ.	ರೂ. ಆ. ಪೈ.
ಕಡ್ಡೀ ಅಕ್ಕಿ ಪಲ್ಲ ೧ಕ್ಕೆ	೧೧-೮-೦	೧೧-೮-೦
ಕೆಂಬತ್ತಿ ಅಕ್ಕಿ ಅವ್ವಲ್	೧೦-೬-೦	೯-೧೨-೦
ಚಿಟ್ಟೋ ಅಕ್ಕಿ ದುಯ್ಯಂ	೧೦-೦-೦	೯-೪-೦
ಜಾಲಾರಿ ಅಕ್ಕಿ	೧೧-೪-೦	೯-೮-೦
ಸಂಬಕ್ಕಿ ಅವ್ವಲ್	೧೪-೦-೦	೧೪-೦-೦
ಚಿಟ್ಟೋ ಅಕ್ಕಿ ದುಯ್ಯಂ	೧೨-೮-೦	೧೧-೮-೦
ತೊಗರೀಬೇಳೆ ಪಲ್ಲ ೧ ಕ್ಕೆ	೧೧-೧೨-೦	೧೨-೦-೦
ಚಿಟ್ಟೋ ದುಯ್ಯಂ ತರಹ	೧೧-೮-೦	೧೧-೮-೦
ಕ್ಯಾರಾಗಿ ಪಲ್ಲ ೧ಕ್ಕೆ	೪-೨-೦	೩-೦-೦
ಕಾರ್ರಾಗಿ	೪-೦-೦	೨೬-೦-೦
ಹುರುಳಿ ಪಲ್ಲ ೧ಕ್ಕೆ	೯-೦-೦	೧೦-೦-೦
ಬಿಳೀ ಅವರೆ	೧೨-೮-೦	೧೧-೮-೦
ಹೆಸರು	೯-೦-೦	೧೦-೦-೦
ಉದ್ದು	೧೨-೦-೦	೧೨-೦-೦
ಕಡಲೆ	೧೧-೦-೦	೧೦-೦-೦
ಎಳ್ಳು	೧೪-೦-೦	೧೨-೦-೦
ಹುರಳಿ	೬-೬-೦	೬-೧೦-೦
ನೆಲಗಡಲೆ ಮಣ ೧ಕ್ಕೆ	೧-೧೦-೦	೧-೧೨-೦
ಮೆಣಸಿನಕಾಯಿ	೪-೮-೦	೪-೮-೦
ದುಯ್ಯಂ ತರಹ	೪-೩-೦	೪-೦-೦
ಬೆಲ್ಲ ದೊಡ್ಡ ಅಚ್ಚು ೧೦೦ ಕ್ಕೆ	೫-೮-೦	ಮು ೨-೦-೦
ಸಣ್ಣ ಅಚ್ಚು	೫-೦-೦	ಚಿ ೧-೧೦-೦
ಒಣಕೊಬ್ಬರಿ ಮಣ ೧ಕ್ಕೆ	೪-೦-೦	೪-೮-೦
ಹರಳೆಣ್ಣೆ	೪-೦-೦	೪-೧೨-೦
ಕೊತ್ತುಂಬರಿ ಪಲ್ಲ ೧ಕ್ಕೆ	೮-೧೨-೦	೮-೬-೦
ಉಪ್ಪು	೯-೮-೦	೧೦-೦-೦
ಹುಣಸೇಹಣ್ಣು ಮಣ ೧ಕ್ಕೆ	೨-೦-೦	೧-೧೨-೦
ಹಳೇ ಹುಣಸೇಹಣ್ಣು	೧-೧೨-೦	೧-೧೦-೦
ತುಪ್ಪ	೧೨-೧೨-೦	೧೨-೮-೦
ಸೀಮೆ ಎಣ್ಣೆ ಟಿನ್ನು ೧ ಕ್ಕೆ	೪-೨-೪	೪-೧೫-೦
ತೆಂಗಿನಕಾಯಿ ೧೦೦ ಕ್ಕೆ	೪-೮-೬	೪-೪-೦
ಚಿನ್ನ (ತೊಲ)		
ಕೆಂಪು	೧೫-೦-೦	೧೫-೧೨-೦
ಪಸಿಮೆ	೧೬-೮-೦	೧೬-೦-೦
ಗಟ್ಟಿ	೨೬-೮-೦	೨೬-೬-೦

Mysore.—Printed and published for the Proprietor at the Wesleyan Mission Press. 20/7/93.

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು — ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಸಂಪುಟ ೬ — ಮೈಸೂರು—ಸ ೧೮೯೩ ನೇ ಇಸವಿ ಜುಲೈ ತಾರೀಖು ೨೭ ನೇ ಗುರುವಾರ. — ಸಂಚಿಕೆ ೩೦

ನೋಟೀಸ್.

	ಕ್ರಯ	ಹಾಸಲು ಸಹಿತವಾಗಿ
Campbell's ಕನ್ನಡ ವ್ಯಾಕರಣ ಸಾರ	೦ ೨ ೦	೦ ೨ ೬
Object Lessons ವಸ್ತು ಪಾಠಗಳು	೦ ೧ ೦	೦ ೧ ೬
Picture do ಚಿತ್ರಗಳು ಸಹಿತವಾಗಿ	೦ ೨ ೦	೦ ೨ ೬
School Geography ಭೂಗೋಳ ಶಾಸ್ತ್ರಸಾರ	೦ ೬ ೦	೦ ೭ ೦

ಈ ನಾಲ್ಕು ಪುಸ್ತಕಗಳು ಮೈಸೂರು ಸರ್ಕಾರದವರ ಆಜ್ಞೆ ಪ್ರಕಾರ ಸಕಲ ಪಾಠ ಶಾಲೆಗಳಲ್ಲಿಯೂ ಉಪಯೋಗಿಸತಕ್ಕವುಗಳು.

	ಕ್ರಯ	ಹಾಸಲು ಸಹಿತವಾಗಿ
ಮಾರ್ಟಿನ್ ಲೂಥರ್ ಎಂಬವರ ಚರಿತ್ರೆ	೦ ೧ ೬	೦ ೨ ೦
ಸ್ತ್ರೀಯರು ಓದತಕ್ಕ ಪುಸ್ತಕ	೦ ೫ ೦	೦ ೫ ೬
ಗಣಿತ ಮಗ್ಗಿಗಳು	೦ ೧ ೦	೦ ೧ ೬
ಸಂಸ್ಕೃತ ಕರ್ನಾಟಕ ಭಾಷಾಮಂಜರಿ	೦ ೨ ೦	೦ ೨ ೬
ಇಂಗ್ಲೀಷೂ ಕನ್ನಡವೂ ಶಬ್ದಾವಳಿ ೧ನೇ ೨ನೇ ಭಾಗಂಕ್ಕೆ	೦ ೧ ೦	೦ ೧ ೬
ಕಾವ್ಯಮಾಲೆ (Minor Poetical Anthology)	೦ ೮ ೦	೦ ೮ ೬
ಬಾಲವ್ಯಾಕರಣ	೦ ೫ ೦	೦ ೫ ೬
ಹಳಗನ್ನಡ ವ್ಯಾಕರಣ ಸೂತ್ರಗಳು	೦ ೬ ೦	೦ ೬ ೬
ಇಂಗ್ಲೀಷೂ ಕನ್ನಡವೂ ಸಂಭಾಷಣ ವಾಕ್ಯಗಳು	೦ ೧೦ ೦	೦ ೧೦ ೬
ಶಬ್ದಮಣಿ ದರ್ಪಣ	೧ ೦ ೦	೧ ೪ ೬
Kan. Eng. Pocket Dictionary	೧ ೪ ೦	೧ ೫ ೭
Eng. Kan. School Dictionary	೨ ೧೨ ೦	೨ ೧೨ ೬
ಬಳ್ಳೇ ತಾಯಿ	೦ ೪ ೪	೦ ೪ ೬
ಆತ್ಮೀಕ ದಿವ್ಯ ಯುದ್ಧ (Bunyan)	೦ ೧೨ ೦	೦ ೧೪ ೬
ಕೃಷಿ ಪದ್ಧತಿ ೧ನೇ ಭಾಗ ೨ನೇ ೩ನೇ ಭಾಗ	೦ ೧ ೬	೦ ೨ ೦
ಭಕ್ತಿಸಾರ	೦ ೧ ೦	೦ ೧ ೬
ಸತ್ಯ ವಾಗ್ದಾನಿ	೦ ೧ ೦	೦ ೧ ೬

ಈ ಪುಸ್ತಕಗಳೂ ಇನ್ನೂ ಅನೇಕ ಪ್ರಯೋಜನಕರವಾದ ಪುಸ್ತಕಗಳೂ ಕೆಳಗೆ ನಮೂದಿಸಿರುವ ಸ್ಥಳಗಳಲ್ಲಿ ದೊರಕುತ್ತವೆ.

ಬೆಂಗಳೂರು—ಪೋಸ್ಟಾಫೀಸಿನ ಹತ್ತಿರವಿರುವ ಪುಸ್ತಕಶಾಲೆ

ಚಿಕ್ಕಬಳ್ಳಾಪುರ—ವೆಸ್ಲೇಯನ್ ಮಿಷನ್ ರೀಡಿಂಗ್ ರೂಮ್

ತುಮಕೂರು—ವೆಸ್ಲೇಯನ್ ಮಿಷನ್ ಬಂಗಲೆ. ಮೈಸೂರು—ವೆಸ್ಲೇಯನ್ ಮಿಷನ್ ಪ್ರೆಸ.

ನೋಟೀಸ್.

ಪುಸ್ತಕಗಳು	ಕ್ರಯ
ವ್ಯಾಕ್ಯಾನ್ಯಮಾಲಿಕೆ	1—8—0
ಕನ್ನಡ ಇಂಗ್ಲೀಷು ನಿಘಂಟು 1 ನೇ ದೊಡ್ಡ ತರಹ	3—0—0
" " 2 ನೇ ತರಹ	2—8—0
ಬಾಲಕರು ಓದುವ ಎರಡನೆ ಜ್ಞಾನೋಪದೇಶದ ಪ್ರಶ್ನೋತ್ತರಗಳು	0—1—0
ಸಭೆಯ ನಿಗಮಗಳನ್ನು ಕುರಿತದ್ದು	0—0—6
ಕಥಾ ಸಂಗ್ರಹ 1 ನೇ ಭಾಗದಿಂದ 3 ವರೆಗೆ	1—0—0
ಕಥಾ ಸಂಗ್ರಹ 4 ರಿಂದ 6 ನೇ ಭಾಗ ಹೊಸ ಛಾಪೆ	1—0—0
" " ದೊಡ್ಡ ತರಹ	1—8—0
ಬೋಧಕ ಸಕ್ತಿ ಶೋಧಿನಿ	0—4—0
ಸತ್ಯವೇದವನ್ನು ಕುರಿತು 2 ನೇ ಭಾಗ	0—4—0
ಪ್ರಸಂಗಿಯ ದರ್ಪಣ	0—0—6
ಇಂಗ್ಲೀಷುಭಾಷೆಯಲ್ಲಿಯೂ, ಕನ್ನಡ ಭಾಷೆಯಲ್ಲಿಯೂ, ಶಬ್ದಗಳ ವಿಭಾಗಗಳನ್ನು ವಿವರಿಸಿರುವ ನಿಘಂಟು	0—2—0
ಕನ್ನಡ ವ್ಯಾಕರಣ (ಇಂಗ್ಲೀಷಿನಲ್ಲಿ)	2—0—0
ಹಿಂದುಸ್ತಾನಿ ವ್ಯಾಕರಣ	1—0—0
ಬಾಲಕರ ಸೋಪಾನವು	0—1—0
ದನಕರುಗಳ ಅಂಟುರೋಗವಿಚಾರ	0—0—6
ಕ್ರಿಸ್ತನ ಬೋಧನೆಗಳ ಸಂಗ್ರಹವು	0-12—0

ಮೇಲೆ ನಮೂದಿಸಿರುವ ಪುಸ್ತಕಗಳನ್ನು ಅಪೇಕ್ಷಿಸುವವರು ಮೈಸೂರು ವೆಸ್ಲೇಯನ್ ಮಿಷನ್ ಪ್ರೆಸ್ಸಿಗೆ ಬರೆದು ತರಿಸಿಕೊಳ್ಳಬಹುದು ಅಂಚೇ ಹಾಸಲು ಬೇರೆ ಕೊಡಬೇಕು

ವೆಸ್ಲೇಯನ್ ಮಿಷನ್ ಪ್ರೆಸ,

ಮೈಸೂರು

ಪ್ರಸಿದ್ಧಪತ್ರಿಕೆ.

ಕಂ|| ಸಕಲರುಮನಸಾಗಿಹ ಸುಮನೋ | ಸುಕರದ್ವ್ಯಾಸಮುನೀಂದ್ರ
ಒರೆದುದನೆ ತಾನಿಂ || ಪ್ರಕಟಿಪನು ಭಾರತದ ಕತೆ |
ವಿಕಸಿತ ಹೃದಯದಿಂದ ಕೇಳ್ವುದು ಜನರಿಂದು ||

ಕನ್ನಡ ಮಹಾ ಭಾರತ.

"ಶ್ರೀಕೃಷ್ಣರಾಜ ವಾಣೀವಿಲಾಸ" ಎಂಬ ಕನ್ನಡ ದಿನಪತ್ರಿಕೆಯಲ್ಲಿ ನಮ್ಮ ಸ್ವಕೀಯ ಶ್ರೀಚಾಮುಂಡೇಶ್ವರಿ ಪ್ರೆಸ್ಸಿನಲ್ಲಿ ಪ್ರಕಟಿಸಲಾಗುವದು ಎಲ್ಲರಿಗೂ ವಿಶದವಾಗಿರುವಷ್ಟೆ. ಈಗ ಹದಿನೆಂಟು ಪರ್ವಗಳೂ ಪೂರ್ತಿಯಾಗಿ ಪ್ರಸಿದ್ಧವಾಗಿ ಅಪೇಕ್ಷಿಸುವವರು ಕೆಳಗೆ ವಿವರಿಸುವ ಕ್ರಯದ ಮೇರೆಗೆ ಕ್ರಯ ಕೊಟ್ಟು ತರಿಸಿಕೊಳ್ಳಬಹುದು

ಆದಿಪರ್ವ ರೂ ೩, ಸಭಾಪರ್ವ ೧—೨—೦, ಅರಣ್ಯಪರ್ವ, ವಿರಾಟಪರ್ವ ಪ್ರತಿ ವರ್ಷದ ಪ್ರಕಟಣೆ ೧೨ ಆಣೆ ಹಿಡಿದ ಕಾಗದ ದಿನ ಪ್ರತಿ ೧ ರೂ, ಉದ್ಯೋಗಪರ್ವ ಭೀಷ್ಮಪರ್ವ ದ್ರೋಣಪರ್ವ ೨—೮—೦, ಕರ್ಣಪರ್ವ ಶಲ್ಯಪರ್ವ ೧—೨— ಸೌಪ್ತಿಕಪರ್ವ ೬ ಆಣೆ ಸ್ತ್ರೀಪರ್ವ ೬ ಆಣೆ, ಶಾಂತಿಪರ್ವ ರಾಜಧರ್ಮ ೨—೬—೦, ಆಪದ್ಧರ್ಮ ೮ ಆ, ಮೋಕ್ಷಧರ್ಮ ೨—೬—೦, ಅನುಶಾಸನಿಕಪರ್ವ ೩—೧೨—೦ ಅಶ್ವಮೇಧಿಕಪರ್ವ ೧—೧೨—೦, ಆಶ್ರಮವಾಸಿಕಪರ್ವ—ಮೌಸಲಪರ್ವ—ಮಹಾಪ್ರಸ್ಥಾನಪರ್ವ—ಸ್ವರ್ಗಾರೋಹಣಪರ್ವ ೧೫ ಆಣೆ, ಭಗವದ್ಗೀತೆ ೮ ಆಣೆ, ಯಾಯಾತಿಯ ಚರಿತ್ರೆ ೪ ಆಣೆ, ಹರಿವಂಶ ೨ ರೂ ೬ ಪ್ರತಿ ಬೋಧಿಸತಕ್ಕಂಥ ಟಿಪ್ಪಣಿಸಹಿತ ಸೌಪ್ತಿಕ ೮ ಆಣೆ

ಅರಣ್ಯಪರ್ವ, ಉದ್ಯೋಗಪರ್ವ, ಕರ್ಣಪರ್ವ ಈ ಮೂರು ಪರ್ವಗಳು ಗೌರ್ನಮೆಂಟ್ ಟೆಕ್ಸ್ಟ್‌ಬುಕ್ಕಿನಲ್ಲಿ ದೊರೆಯುತ್ತದೆ ಮೇಲೆ ಹೇಳಲ್ಪಟ್ಟಿರುವ ಪುಸ್ತಕಗಳು ನಮ್ಮಲ್ಲಿ ಸ್ವಲ್ಪವೇ ಇರುವದರಿಂದ ಜಾಗ್ರತೆಯಾಗಿ ತರಿಸಿಕೊಳ್ಳಬಹುದು ಶ್ರವಣಮಾತ್ರದಿಂದಲೇ ಫಲಪ್ರದವಾದ ಇದು ಕೂಡಲೆ ಮುಖ್ಯವಾಗಿ ಸೇವಿಸಲ್ಪಟ್ಟಿದೆ,

ಎಂ ರಾಘವೇಂದ್ರ, ಎಂಜಿನೀರ,

ಪ್ರೊಪ್ರೈಟರ್, ಶ್ರೀಚಾಮುಂಡೇಶ್ವರಿ ಪ್ರೆಸ್,

ಬೆಂಗಳೂರು—ಬಿ. ಜಿ. ರೋಡ್, ಬೆಂಗಳೂರು

ಸ ೧೮೮೮ ರಲ್ಲಿ ಸ್ಥಾಪಿಸಲ್ಪಟ್ಟದ್ದು.

ಕೆನರಾ ಅಂಡ ಮೈಸೂರ ಟ್ರೇಡಿಂಗ್ ಏಜನ್ಸೀ ಆಫೀಸ, ಮುಂಬಯಿ.

ಇವರು ತಯಾರಿಸಿರುವಂಥ—

ಹ್ಯಾಮಡ್ರಾತ್ರೀತೈಲ.

ಕಳೆದ ಜನವರಿ ತಿಂಗಳೊಂದರಲ್ಲಿ ೪,೦೦೦ ಬಾಟ್ಲಿಗಳು ಖರ್ಚಾದವು. ಈ ತೈಲದ ಮಹತ್ವವನ್ನು ಕುರಿತು, ನಾವೀಗ ಹೆಚ್ಚಿಗೆ ವರ್ಣಿಸಲಾರೆವು—ಯಾಕಂದರೆ, ಯಾರು ಈ ತೈಲವನ್ನು ಉಪಯೋಗಿಸುತ್ತಾರೋ ಅವರಿಗೆ ಒಂದೆರಡು ದಿವಸಗಳಲ್ಲಿಯೇ ಇದರ ಅಪ್ರತಿಮವಾದ ಗುಣವು ಸಹಜವಾಗಿ ಅನುಭವಕ್ಕೆ ಬರುವದು. ಆದಾಗ್ಯೂ ಇದರ ಮುಖ್ಯವಾದ ಉಪಯೋಗವನ್ನು ತಿಳಿಸುವದು ನಮ್ಮ ಕರ್ತವ್ಯವಾಗಿರುತ್ತದೆ.

ಈ ನಮ್ಮ "ಹ್ಯಾಮಡ್ರಾತ್ರೀ ತೈಲವನ್ನು" ಪ್ರತಿದಿನ ತಲೆಗೆ ಹಾಕಿಕೊಂಡರೆ ಮಿದುಳಿನಲ್ಲಿರುವ ಉಷ್ಣತೆಯನ್ನು ಪರಿಹರಿಸುವದಲ್ಲದೇ, ಕಣ್ಣಿಗೂ, ಮಿದುಳಿಗೂ ತಂಪುಕರಿಸಿ, ಚಿತ್ತಕ್ಕೆ ಶಾಂತತೆಯನ್ನುಂಟುಮಾಡುವದು ಮತ್ತು ಕಣ್ಣುಗಳಿಗುಂಟಾಗುವ ಸಾಮಾನ್ಯವಾದ ವಿಕಾರಗಳನ್ನೆಲ್ಲ ಪರಿಹರಿಸುವದು. ದೃಷ್ಟಿಗೆ ತೀವ್ರತೆಯುಂಟಾಗುವದು.

ಬಹಳಾಗಿ ಓದತಕ್ಕವರಿಗೂ, ಒಂದೇ ಸಮನಾಗಿ ಕಣ್ಣಿಟ್ಟು ಕೆಲಸ ಮಾಡತಕ್ಕ ಕಸಬುಗಾರರಿಗೂ, ಕಣ್ಣುಗಳಲ್ಲಿ ನೀರು ಸುರಿಯುವವರಿಗೂ, ಉರಿಗಣ್ಣಿನವರಿಗೂ, ಚಿತ್ತವ್ಯಗ್ರವಾದವರಿಗೂ, ಅತ್ಯಂತ ಗುಣಕಾರಿಯಾಗಿರುವದು. ಈ ತೈಲದಲ್ಲಿರುವ ಇನ್ನೊಂದು ಅಪ್ರತಿಮವಾದ ಶಕ್ತಿಯೇನಂದರೆ—ಕೂದಲುಗಳನ್ನು ನಯವಾಗಿಯೂ, ಹೊಳೆಯುವಂಥಯೂ, ಮಾಡುವದಲ್ಲದೇ ಬೆಳವಣಿಗೆಯನ್ನು ಹೆಚ್ಚಿಸುವದು. ಕೂದಲುಗಳ ಬೇರುಗಳನ್ನು ಘಟ್ಟಿಮಾಡಿ, ಅವು ಉದುರಿಹೋಗದಂತೆ ಮಾಡುವದು.

ಪ್ರತಿಯೊಂದು ಬಾಟ್ಲಿಯೊಳಗೆ ೧೭ ತೊಲೆ ತೈಲವಿರುವದರಿಂದ ಒಬ್ಬನಿಗೆ ೨ ತಿಂಗಳು ಹಚ್ಚಿಕೊಳ್ಳಲಿಕ್ಕೆ ಸಾಕಾಗುವದು. ಬಡವರು ಸಹ ಕೊಂಡುಕೊಳ್ಳಲಿಕ್ಕೆ ಅನುಕೂಲವಾಗಿರಬೇಕೆಂಬದಕ್ಕಾಗಿ ಪ್ರತಿಯೊಂದು ಬಾಟ್ಲಿಗೆ ೧೦ ಆಣೆ ಕ್ರಯವಿಟ್ಟಿರುವೆವು. ೧೨ ಬಾಟ್ಲಿಗಳು ಒಟ್ಟಿಗೆ ೬|| ರೂಪಾಯಿ. ಪ್ರತಿಯೊಬ್ಬ ಕುಟುಂಬಿಗನೂ, ಈ ತೈಲವನ್ನು ಉಪಯೋಗಿಸುವದು [illegible] ಮಕ್ಕಳು ಮರಿಗಳಿಗೆ ಸಹ ಈ ತೈಲವು ಸುಖಾವಹವಾಗಿರುತ್ತದೆ.

ಈ ತೈಲ ಮತ್ತು ಈ ಕೆಳಗೆ ಬರೆಯುವಂಥ ಔಷಧಗಳು, ಗ್ರಂಥಗಳು, ಮುತ್ತು, ರತ್ನ, ಬಂಗಾರ, ಬೆಳ್ಳಿ ಮುಂತಾದ ಸಾಮಾನುಗಳನ್ನು ಅಪೇಕ್ಷಿಸುವವರು

ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬೇಕು

ಮ್ಯಾನೇಜರ್, ಕನರಾ ಅಂಡ ಮೈಸೂರು ಟ್ರೇಡಿಂಗ್ ಏಜನ್ಸಿ ಆಫೀಸ್, ಮಾರ್ಕೆಟ್ ಪೋಸ್ಟ್. ಮುಂಬಾಯಿ.

ಈ ತೈಲವನ್ನು ನಮ್ಮ ವಿನಹ ಇನ್ಯಾರೂ ಮಾಡಲಾರರು. ನಮ್ಮ ಹೆಸರಿನ ಗುರ್ತನ್ನು ನೋಡಿ ತೆಗೆದುಕೊಳ್ಳಬೇಕು. ಬೇರೇತರದ ಎಣ್ಣೆಗಳನ್ನು ಈ ಹೆಸರನ್ನಿಟ್ಟು ಮಾರುತಿದ್ದಾರೆ ಜಾಗ್ರತೆ ಪಡಿರಿ!

ಔಷಧಗಳು.	ರು ಆ.	ಪುಸ್ತಕಗಳು	ರು ಆ.
ಸಮಾಸಾಮೃತ ಗುಳಿಗೆ ೧ ಕ್ಕೆ	೧—೬	ಮಾಧವನಿಧಿಗೆ ಮದ್ದು	೨—೮
ಸಂಜೀವನಾಮೃತ ಕಡಿಗೆ	೧—೬	ಕಂಠಗರ್ಜನ ಧಾಂಗಕೋಪಿ	೫—೦
ಕರ್ಣಸ್ರಾವನಾಶ ಅಪ್ರತಿಮತೈಲ	೧—೦	ಡಿಟ್ಟೊ ಆರ್ಡಿನರಿ	೪—೮
ಮಹಾನಾರಾಯಣತೈಲ	೧—೦	ಡಿಟ್ಟೊ ಪಾಕೆಟ್ (ಇಂಗ್ಲಿಷ [illegible])	೪—೬
ಪ್ರಮೇಹ ಪಕ್ವ	೨—೧೦	ದಿಷ್ಟಸಾರ ಕೆಮಿಸ್ಟರಿ ಕೋಪಿ	೨—೮
ವಿವಿಧವ್ರಣಹರಸ್ವೈದೆಯು	೧—೦	ಡಿಟ್ಟೊ ಆರ್ಡಿನರಿ	೨—೪
ಬಾಲಗುಟಿ ಪಿಸಿಗೋಟಕ	೩—೮	ಪ್ರಾಸಲ ಕವಿತೆ	೧—೧೦
ಅಜೀರ್ಣನಾಶ	೦—೮	ಡಿಟ್ಟೊ ಒರಿಜಿನ	೧—೪
ಸುಗಂಧ ವಿಕಾರಹರಣವು	೦—೪	ಬಿ (ಇಂಗ್ಲಿಷರೂಪ) ಪಟಿಕ	೦—೧೦
ಕಜ್ಜಿಯ ಮಲಾಮು	೦—೨		

ತಮಾಷೆಯಾದ ಹೊಂದ ಕಥೆ ಕನ್ನಡದಗಳ ಕ್ರಯ ರೂ. ೧—೫||—೫—೨|| ಉತ್ತಮತರದ "[illegible]" ಎಂಬ ಕಥೆದ [illegible] (೧ ವರುಷದ ಉಪಯುಕ್ತವು) ಕ್ರಯ ರೂ ೩

ವೃತ್ತಾಂತ ಪತ್ರಿಕೆ.

ಚಂದಾ ನಿರ್ಣಯ.

	ರೂ ಆ. ಪೈ
ಸ್ಥಳದವರಿಗೆ ವರ್ಷ ೧ಕ್ಕೆ	೧—೦—೦
ಪರಸ್ಥಳದವರಿಗೆ ವರ್ಷ ೧ಕ್ಕೆ	೧—೫—೦
ಬಿಡಿ ಪತ್ರಿಕೆ ೧ಕ್ಕೆ	೦— ೦—೪

ಈ ಪತ್ರಿಕೆಯು ಮೈಸೂರು ರಾಜಧಾನಿಯಲ್ಲಿ ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ, ಪ್ರಕಟಿಸಲ್ಪಡುವದು ಜನರು ಬೊಮ್ಮಳಗೊಂಡು ಸಮಸ್ತರಿಗೂ ಸುಲಭಸಾಧ್ಯವಾಗುವಂತೆ ಈ ಪತ್ರಿಕೆಗೆ ಇಷ್ಟು ಅಲ್ಪ ಮೌಲ್ಯವನ್ನು ನಿರ್ಣಯಿಸಿರುತ್ತೇವೆ ಈ ಪತ್ರಿಕೆಯನ್ನು ಅಪೇಕ್ಷಿಸುವವರು ಚಂದಾಹಣವನ್ನು ಯಾವಾಗ್ಯೂ ಮುಂಗಡವಾಗಿ ಕೊಡಬೇಕು.

ಎಡಿಟರ್,

ವೃತ್ತಾಂತ ಪತ್ರಿಕೆ

ಜಗದ್ಗುರುವಿನ ಚರಿತ್ರ ಸಂಗ್ರಹ.

THE LIFE

OF

The Lord Jesus Christ.

Selected incidents from the Gospels

BRIEFLY PARAPHRASED.

ನೂತನವಾಗಿ ರಚಿಸಲ್ಪಟ್ಟ ಈ [illegible] ಈ ಪುಸ್ತಕವನ್ನು ಮೈಸೂರು [illegible] ಮಿಷನ ಪ್ರೆಸ್ಸಿಗೆ ಬರೆದು ತರಿಸಿಕೊಳ್ಳಬಹುದು.

ಕ್ರಯ (ಟಪ್ಪಾಲ ಹಾಸಲ ಬಿಟ್ಟರೆ)

[illegible] ಪ್ರತಿಗಾಗಿ	೫—೦—೦
ಬಿಡಿ ಪ್ರತಿಗೆ	೦—೧—೦

ಸುಮಾರು ೨—೩ ಪ್ರತಿಗಳನ್ನು [illegible] ಹಾಸಲಿನಿಂದ ಕಳುಹಿಸಬಹುದು.

ಟೋಪಿಗಳು!

ಟೋಪಿಗಳು!! WOOL CAPS ಟೋಪಿಗಳು!!

ಹಾಸನದ ಆರ್ಫನೇಜಿನಲ್ಲಿ ತಯಾರಾಗುವಂಥ ಅಚ್ಚ ಕಂಬಳೀನೂಲಿನ ಟೋಪಿಗಳು (Wool Caps) ನಮ್ಮ ಆಫೀಸಿನಲ್ಲಿ ಮಾರಕಕ್ಕೆ ಸಿದ್ಧವಾಗಿರುತ್ತವೆ. ಬೆಲೆ:— ೧ ರೂ. ೨ ಆಣೆ ಇಂದ ೧ ರೂ. ೬ ಆಣೆಗಳ ವರೆಗೂ ಬೇರೆ ಬೇರೆ ರಮಾಗಳುಂಟು. ಸ್ಥಳದವರು ಖುದ್ದು ನೋಡಿ ಪಡೆಯಬಹುದು. ಪರಸ್ಥಳದವರು ಮುಂಗಡವಾಗಿಯೇ ಹಣ ಕಳುಹಿಸಿದಲ್ಲಿ ತ್ವರೆಯಲ್ಲಿ ಭಾಂಗೀ ಮೂಲಕ ಕಳುಹಿಸುತ್ತೇವೆ. ಭಾಂಗೀ ಛಾರ್ಜು ಬೇರೇ ಕೊಡಬೇಕು. ಮೇಲುವಿಳಾಸದಲ್ಲಿ ಟೋಪಿಗೆ ಸಂಬಂಧವಾದದ್ದು ಎಂದು ಬರೆಯಬೇಕು.

ಮ್ಯಾನೇಜರ್,
ವೆಸ್ಲೀಯನ್ ಮಿಷನ್ ಪ್ರೆಸ್,
ಮೈಸೂರು.

ವೃತ್ತಾಂತ ಪತ್ರಿಕೆ.

೧೯೦೩ನೇ ಇಸವಿ ಜುಲೈ ತಾ|| ೨೩ ನೇ ಗುರುವಾರ.

ಯುವರಾಜರು.

ನಮ್ಮ ಮೈಸೂರು ಯುವರಾಜರಿಗೆ ಈಗ ಹದಿನೈದು ವರ್ಷ ವಯಸ್ಸೆಂಬುದು ನಮ್ಮ ವಾಚಕರಿಗೆ ತಿಳಿದೇ ಇದೆಯಷ್ಟೆ. ಇವರಿಗೂ ಇವರ ವಿದ್ಯಾಭ್ಯಾಸಂಗಕ್ಕಾಗಿ ಶ್ರೀಮನ್ಮಹಾರಾಜರವರು ೩-೪ ಮಂದಿ ನೇಟಿವ್ ವಿದ್ವಾಂಸರನ್ನು ನೇಮಿಸಿದ್ದಾರೆ. ಮ|| ಪೂರ್ಣಾಚಾರ್ಯರೆಂಬುವರು ಇಂಗ್ಲೀಷ್ ಮತ್ತು ಕನ್ನಡಭಾಷೆಗಳನ್ನೂ, ಮ|| ಹುಸೇನಲ್ಲಿಸಾಹೇಬರು ಹಿಂದೂಸ್ಥಾನಿ ಪರ್ಷಿಯನ್ ಭಾಷೆಗಳನ್ನೂ, ಮ|| ಅಯ್ಯಾಶಾಸ್ತ್ರಿಗಳು ಸಂಸ್ಕೃತಭಾಷೆಯನ್ನೂ ಹೇಳಿ ಕಲಿಸುತ್ತಿದ್ದಾರೆ; ಒಂಭತ್ತು ವರ್ಷ ವಯಸ್ಸಿನ ಬಾಲಕನಿಗೆ ಇಷ್ಟೇ ಸಾಕೆಂದು ಜನರು ಸಾಧಾರಣವಾಗಿ ನೆನಸಿಕೊಳ್ಳಬಹುದು. ಯುವರಾಜರು ಈ ಭಾಷೆಗಳನ್ನು ಕಲಿಯುವದರಲ್ಲಿ ಒಳ್ಳೇ ಅಭಿವೃದ್ಧಿಯನ್ನು ಹೊಂದಿದ್ದಾರೆಂದು ಬೇರೆಬೇರೆ ಸಾಕ್ಷಿಗಳಿಂದ ನಮಗೆ ತಿಳಿದುಬಂದಿದೆ. ಮುಖ್ಯವಾಗಿ ಅವರು ಇಂಗ್ಲಿಷ್‌ಭಾಷೆಯಲ್ಲಿ ಸರಸ ಸಲ್ಲಾಪಗಳನ್ನು ಆಡುತ್ತಿರುವದು ಅನುಭವದಿಂದಲೇ ನಮಗೆ ಗೊತ್ತಾಗಿದೆ. ಅವರು ಶೀಘ್ರವಾಗಿ ಇಂಥಾ ಅಭಿವೃದ್ಧಿಸ್ಥಿತಿಗೆ ಬಂದಿರುವದರಿಂದ, ಶ್ರೀಮನ್ಮಹಾರಾಜರವರು ಒಬ್ಬ ಯೂರೋಪಿಯನ್ ಉಪಾಧ್ಯಾಯರನ್ನು ನೇಮಿಸುವದಕ್ಕೆ ಯಾವಕಾರಣ ವಿಳಂಬವೆಂದು ಅನೇಕರು ಕೇಳಿದ್ದಾರೆ. ಹೀಗೆ ಕೇಳುವದಕ್ಕೆ ಅನೇಕ ಕಾರಣಗಳುಂಟು. ಮೈಸೂರು ರಾಜ್ಯಾಸನದಲ್ಲಿ ಪಟ್ಟಾಭಿಷೇಕವನ್ನು ಹೊಂದತಕ್ಕವರು ಇಂಗ್ಲೀಷಿನವರಲ್ಲಿ ಸಲಿಗೆಯನ್ನು ಪಡೆಯುವದು ಅವಶ್ಯಕವಾದದ್ದೇಸರಿ. ಅವರಲ್ಲಿ ಪ್ರಬಲವಾಗಿರತಕ್ಕ ವಿದ್ಯಾಭ್ಯಾಸದ ಕ್ರಮಗಳೂ ಮತ್ತು ತತ್ವಗಳೂ ಈ ಯುವರಾಜರಿಗೆ ತಿಳಿಯದಿದ್ದರೆ, ವಾಕ್ಯಕಾಕ್ಷಾ ಪ್ರಭುಗಳ ಇಂಗ್ಲಿಷ್ ಸ್ನೇಹಿತರ್ ಸಂಬಂಧಪಟ್ಟ ಕಾರ್ಯಗೌರವಗಳನ್ನು ಮುಂದೆ ಸರಾಗವಾಗಿ ನಡಿಸುವದು ಕಷ್ಟವಾಗಿರುವದು. ಇದು ಹ್ಯಾಗಾದರೂ ಆಗಲಿ. ಆಂವರ ಇಲ್ಲಿನ ವಿದ್ವಾಂಸರು ಈ ದೇಶದ ವಿಷಯದಲ್ಲಿ ಮಾತ್ರ ಅನುಭವಶಾಲಿಗಳಾಗಿರುತ್ತಾರೆ. ಸಮುದ್ರದ ಆಚೆ ಇರುವ ದೇಶದಲ್ಲಿ ನಡೆಯುವ ಸಂಗತಿಗಳನ್ನು ಪುಸ್ತಕಗಳ ಮತ್ತು ವರ್ತಮಾನಪತ್ರಿಕೆಗಳ ಮೂಲಕವಾಗಿ ತಿಳಿದಿರುತ್ತಾರೆಯೇ ಹೊರತು ಸ್ವತಃ ಪ್ರಯಾಣಮಾಡಿ ಅಲ್ಲಿನ ಜನರ ಗುಣಾತಿಶಯಗಳನ್ನು ಮತ್ತು ಇನ್ನೂ ಅನೇಕ ಸಂಗತಿಗಳನ್ನೂ ತಿಳಿದು ಬಂದವರಾಗಿಲ್ಲ. ವಿದ್ಯಾಭ್ಯಾಸದಲ್ಲಿ ಗ್ರಂಥಪಾರಾಯಣವು ದೊಡ್ಡ ಭಾಗವೇಸರಿ. ಆದರೆ ಅದು ಅನುಭವಕ್ಕಿಂತಲೂ ಎಷ್ಟು ಮಾತ್ರವೂ ದೊಡ್ಡದಲ್ಲ. ಮತ್ತು ವಿದ್ಯಾಭ್ಯಾಸವನ್ನು ಸಂಪೂರ್ತಿಮಾಡುವದಕ್ಕೆ ದೇಶಸಂಚಾರವಾಡಿಕೊಂಡು ಬರುವದು ಆಗತ್ಯವಾದದ್ದಾಗಿದೆ. ಪುಸ್ತಕಗಳಲ್ಲಿಯೂ ಪ್ರಯಾಣದಲ್ಲಿಯೂ ಅನುಭವಶಾಲಿಗಳಾಗಿರುವ ಉಪಾಧ್ಯಾಯರನ್ನು ನಮ್ಮ ಯುವರಾಜರಿಗೋಸ್ಕರ ನೇಮಿಸುವದು ಅಪೇಕ್ಷಣೀಯವಾದದ್ದಾಗಿದೆ.

ಈ ವಿಷಯದಲ್ಲಿ ಇನ್ನೊಂದು ಸ್ವಾರಸಂಗತಿಯನ್ನು ನಮ್ಮ ವಾಚಕರಿಗೆ ತಿಳಿಯಪಡಿಸಬೇಕಾಗಿದೆ. ಅದೇನೆಂದರೆ—ಹಿಂದೂಗಳು ಅನೇಕ ಸಂದರ್ಭಗಳಲ್ಲಿ ಸ್ವಾರ್ಥವನ್ನು ಅನುಸರಿಸತಕ್ಕವರೆಂಬ ಪ್ರಸಿದ್ಧಿ ಹೊಂದಿದ್ದಾರೆ; ಅಲ್ಲದೆ ಅದರ ಸಂಪ್ರಾಪ್ತಿಗಾಗಿ ತಮ್ಮ ಕರ್ತವ್ಯಗಳನ್ನಾದರೂ ಲೋಪಿಸುತ್ತಾರೆ. ಆದರೆ ಯೂರೋಪಿಯನ್ನರು ಸ್ವಾರ್ಥವನ್ನು ಲಕ್ಷಿಸದೆ ಸರ್ವದಾ ಕರ್ತವ್ಯವನ್ನೇ ಅನುಸರಿಸತಕ್ಕ ಜನಾಗಿರುವರೆಂದು ಅನೇಕ ವೇಳೆಗಳಲ್ಲಿ ನ್ಯಾಯವಾಗಿ ಪ್ರಸಿದ್ಧಿಪಟ್ಟಿರುವದು ನಮ್ಮ ವಾಚಕರಿಗೆ ತಿಳಿಯದ ಅಂಶವಲ್ಲ. 'ಸ್ವಾರ್ಥಕ್ಕೆ ಅನುಕೂಲವಾಗಿದ್ದರೂ, ಇಲ್ಲವೆ ಅನಾನುಕೂಲವಾಗಿದ್ದರೂ, ನೇಮಕವಾದ ಕೆಲಸವನ್ನು ನ್ಯಾಯವಾಗಿಯೂ ನಿರಾಕ್ಷೇಪಣೀಯವಾಗಿಯೂ ತೀರಿಸುವ ತಾತ್ಪರ್ಯವು ಯೂರೋಪಿಯನ್ನರುಗಳಲ್ಲಿ ಬಹು ವಿಶೇಷವಾಗಿದೆ. ಇದಕ್ಕೆ ಚರಿತ್ರೆಯಿಂದ ಅನೇಕ ದೃಷ್ಟಾಂತಗಳು ದೊರೆಯಬಹುದಲ್ಲದೆ, ಈಗಿನ ಕಾಲದಲ್ಲಿ ನಡೆಯುತ್ತಿರುವ ಸಂಗತಿಗಳಿಂದಲೂ ಅನೇಕ ಸಿದ್ಧಾಂತಗಳು ಸಿಕ್ಕುತ್ತವೆ. ಹ್ಯಾಗೆಂದರೆ ಕಳೆದ ತಿಂಗಳಿನಲ್ಲಿ ಕೋಟ್ಯಾಂತರ ರೂಪಾಯಿಗಳ ಬೆಲೆಯುಳ್ಳ ಒಂದು ಯುದ್ಧದ ಜಹಜು ಅಕಸ್ಮಾತ್ತಾಗಿ ಸಮುದ್ರದಲ್ಲಿ ಮುಳುಗುವ ದಕ್ಕೆತೊಡಗಿದಾಗ, ಅದರಲ್ಲಿದ್ದ ಆರುನೂರುಮಂದಿ ಸೈನಿಕರು ಈ ಗಂಡಾಂತರದಿಂದ ತಪ್ಪಿಸಿಕೊಳ್ಳಬೇಕೆಂಬ ಆಸೆಯನ್ನು ಕಿಂಚಿತ್ತಾದರೂ ತೋರ್ಪಡಿಸದೆ ತಮ್ಮ ಸೇನಾನಾಯಕರ ಅಪ್ಪಣೆಯನ್ನು ಪಡೆಯುವ ತನಕ ತಮ್ಮ ತಮ್ಮ ಕೆಲಸಗಳಲ್ಲಿ ನಿರತರಾಗಿದ್ದರು. ಇದೆಷ್ಟು ಶ್ಲಾಘನೀಯವಾದದ್ದು! ಇಂಥಾ ವಿನಸ್ವಸರ್ವಾಂಗಳಿನೂ ಇರುವದು ಅವಶ್ಯಕವೆಂದು ನಮ್ಮ ವಾಚಕರು ಒಪ್ಪಿಕೊಳ್ಳಬೇಕಷ್ಟೆ. ಕರ್ತವ್ಯವನ್ನು ನೆರವೇರಿಸುವುದು ಉತ್ತಮವೂ, ಸಂತೋಷಪ್ರದವೂ, ಶ್ಲಾಘ್ಯವೂ ಆಗಿದೆ ಎಂದು ಯೂರೋಪಿಯನ್ನರು ತಾತ್ಪರ್ಯಪಟ್ಟಿರುವುದಕ್ಕೆ ಮುಖ್ಯಕಾರಣವೇನಾಗಿರಬಹುದೆಂದು ವಿಚಾರಿಸಬೇಕಾದರೆ ಇದ್ದಲ್ಲಿ ಯೇಸುಕ್ರಿಸ್ತನ ಚರಿತ್ರೆಯನ್ನು ಓದಿದರೆ, ಧಾರಾಳವಾಗಿ ತಿಳಿಯಬಹುದು. ಆ ಮಹಾಗುರುವು ಯಾವಾಗಲೂ ಸ್ವಾರ್ಥವನ್ನು ಉಲಕ್ಷ್ಯಮಾಡಿ, ಅನುಕೂಲತೆಯನ್ನೂ, ಅನಾನುಕೂಲತೆಯನ್ನೂ ಯೋಚಿಸದೆ, ದೇವರು ತನಗೆ ನೇಮಿಸಿದಕೆಲಸವನ್ನು ನೆರವೇರಿಸುವದಕ್ಕೆ ದೃಢಚಿತ್ತನಾಗಿದ್ದನು. ಆತನು ತೋರಿಸಿದ ಮೇಲ್ಪಂಕ್ತಿಯು ಯೂರೋಪಿಯನ್ನರಲ್ಲಿರತಕ್ಕ ಈ ಸುಗುಣಕ್ಕೆ ಮೂಲಕಾರಣವೆಂದು ನಾವು ಹೇಳಬೇಕಾಗಿದೆ.

ನಮ್ಮ ಯುವರಾಜರು ಇಂಥಾ ಸದ್ಗುಣಶೀಲರ ಸಹವಾಸದಲ್ಲಿ ಇರಬೇಕೆಂದು ನಾವು ಅಪೇಕ್ಷಿಸಿದ್ದರಿಂದ ಶ್ರೀಮನ್ಮಹಾರಾಜರು ತಮ್ಮ ಕುಮಾರನಿಗೆ ಉಪಾಧ್ಯಾಯರನ್ನಾಗಿ ಮಿ|| ವೈಟ್ಲೀ ಎಂಬುವವರನ್ನು ನೇಮಿಸಿರುವವರನ್ನು ಕೇಳಿ ಬಹಳ ಸಂತೋಷಿಸುತ್ತೇವೆ. ಈ ಸಾಹೇಬರು ಕೆಲವು ಕಾಲದ ಹಿಂದೆ ಶ್ರೀಮದ್ಯುವರಾಜರವರ ಪ್ರೈವೇಟ್ ಸೆಕ್ರೆಟರಿಗಳಾಗಿದ್ದ ಮೇಜರ್ ಡಾನ್ಲೋಪನವರಿಗೆ ಅಳಿಯಂದಿರು. ಇವರು ಕೆಲವು ವರ್ಷಗಳಿಂದ ಮದ್ರಾಸ್ ಪ್ರೆಸಿಡೆನ್ಸಿಯಲ್ಲಿ ಇಂಜನಿಯರ್ ಇಲಾಖೆಯಲ್ಲಿ ನೌಕರರಾಗಿದ್ದರಂತೆ. ಇವರ ಯೋಗ್ಯತೆಯ ವಿಷಯದಲ್ಲಿ ಅನೇಕರು ಬಹಳವಾಗಿ ಹೊಗಳುತ್ತಾರೆ ಮತ್ತು ಇವರು ಪ್ರಾರ್ಥನೆಯನ್ನು ಅಭ್ಯಾಸಿಗಳಿಗಿಂತ ಕೇಳಿದ್ದೇವೆ. ಈ ಸಾಹೇಬರು ತಮ್ಮ ವಶಕ್ಕೆ ಕೊಟ್ಟಿರುವ ಯುವರಾಜರನ್ನು ವಿದ್ಯೆಯಲ್ಲಿ ಅಭಿವೃದ್ಧಿ ಹೊಂದುವಂತಲ್ಲದೆ ಸಕಲವಿಧವಾದ ಸನ್ಮಾರ್ಗದಲ್ಲಿಯೂ ಅವರನ್ನು ನಡೆಸುತ್ತಾ, ಎಲ್ಲಾ ಸುವರ್ತನೆಗಳಿಗೂ ಅವರನ್ನು ದೃಷ್ಟಾಂತವನ್ನಾಗಿ ಮಾಡುತ್ತಾ ಬರುವರೆಂದು ನಾವು ನಂಬಿದ್ದೇವೆ. ತಮ್ಮ ಬುದ್ಧಿಕುಶಲತೆಯಿಂದಲೂ, ನ್ಯಾಯದಿಂದಲೂ ತಮ್ಮ ಕರ್ತವ್ಯವನ್ನು ನೆರವೇರಿಸಿದ ದೇಶೋಪಕಾರಿಗಳೆಂದು ಬಹಳ ಪ್ರಸಿದ್ಧಿಯನ್ನು ಹೊಂದುವರು. ಆದರೆ ಅವರು ನಮ್ಮ ಯುವರಾಜರನ್ನು ಸನ್ಮಾರ್ಗಾವಲಂಬಿಗಳಾಗಿ ಮಾಡಿದ್ದರೆ, ಈ ರಾಜ್ಯಕ್ಕೆ ಮಹಾ ಉಪಕಾರವನ್ನು ಮಾಡುವದೇಹೊರತು ಬೇರೆ ಅಲ್ಲವು.

ಕರ್ಣಾಟಕ ಗ್ರಂಥಮಾಲೆ.

ಕಳೆದ ವಾರದಲ್ಲಿ ಮೇಲ್ಕಂಡಹೆಸರಿನ ಹೊಸ ಮಾಸಪತ್ರಿಕೆಯ ಮೊದಲನೇಸಂಚಿಕೆಯ ಒಂದುಪ್ರತಿಯನ್ನು ಅದರ ಕಾರ್ಯದರ್ಶಿಗಳು ನಮ್ಮಲ್ಲಿಗೆ ಕಳುಹಿಸಿಕೊಟ್ಟಿರುತ್ತಾರೆ. ಸಂಸ್ಥಾನದ ವಿದ್ಯಾಭ್ಯಾಸದ ಇಲಾಖೆಯಲ್ಲಿ ಅಸಿಸ್ಟೆಂಟ್ ಸೆಕ್ರೆಟೆರಿಯವರಾದ ಮ|| ಎಂ. ಶಾಮೈಯ್ಯ ಎಂ. ಎ ಯವರು ಈ ಕರ್ಣಾಟಕ ಗ್ರಂಥಮಾಲೆಯನ್ನು ಹೊರಡಿಸುತ್ತಾರೆ. ಮೈಸೂರು ಮಹಾರಾಜಾ ಕಾಲೇಜಿನ ಸಹಾಯೋಪಾಧ್ಯಾಯರಾದ ಮ|| ಬಿ. ಸುಬ್ಬರಾವ್ ಬಿ. ಎ ಯವರು ಇದಕ್ಕೆ ಸಮ್ಮಂಧಪಟ್ಟ ಎಲ್ಲಾ ವ್ಯವಹಾರಗಳನ್ನೂ ನಡೆಸುತ್ತಾರೆ. ನೇಟಿವ್ ಪಂಡಿತರೂ ಮತ್ತು ಇಂಗ್ಲಿಷ್ ವಿದ್ಯಾಭ್ಯಾಸಮಾಡಿರುವ ದೊಡ್ಡ ದೊಡ್ಡ ಅಧಿಕಾರಿಗಳೂ ಈ ಮಾಸಪತ್ರಿಕೆಗೆ ವಿಷಯಗಳನ್ನು ಬರೆದು ಕಳುಹಿಸುವದಾಗಿ ಒಪ್ಪಿಕೊಂಡಿದ್ದಾರೆ. ಈ ಮೊದಲನೆ ಸಂಚಿಕೆಯಲ್ಲಿ ಪ್ರಕಟಿಸುವ ಸಂಗತಿಗಳು—ಸುಮತಿ ಮದನಕುಮಾರರ ಚರಿತ್ರೆ, ಯೂರೋಪ್ಯರ ನಾಗರೀಕತೆ, ಜೀವಂಧರ ಚರಿತ್ರೆ, ನಾಗಾನಂದ ನಾಟಕ ಮತ್ತು ಛಂದವಾದ ಎಂಬವುಗಳೇ. ಈ ಮಾಸಪತ್ರಿಕೆಯನ್ನು ಹೊರಡಿಸುವುದಕ್ಕೆ ಅವರು ತಿಳಿಸಿರುವ ಕಾರಣವನ್ನೇ ಇಲ್ಲಿ ವಿವರಿಸಿರುವದು ಉತ್ತಮವಾಗಿದೆ. ಅದೇನಂದರೆ—'ಕರ್ಣಾಟಕ ಭಾಷೆಯಲ್ಲಿ ಪಾಠ್ಯಗ್ರಂಥಗಳುವುವೇ ಬಹಳ ಕಡಮೆ' ಯಾಗಿಯೂ, 'ನವೀನಕವಿಗಳು ರಚಿಸಿದ ಉತ್ತಮಗ್ರಂಥಗಳನ್ನು ಕ್ರಮವಾಗಿ ಪ್ರಕಟಿಸಲು ದ್ರವ್ಯಾನುಕೂಲವೇ ಮೊದಲಾದ ಸ್ಥಗಳು ಕಡಮೆ' ಯಾಗಿಯೂ ಇರುವದರಿಂದ 'ಈ ಎರಡು ಕೊರತೆಗಳನ್ನು ಹೋಗಲಾಡಿಸುವದಕ್ಕೋಸ್ಕರ . . . ಕರ್ಣಾಟಕ ಭಾಷೆಯನ್ನು ತಿಳಿದ ಪಂಡಿತರಲ್ಲಿ ಕೆಲವರು ಮತ್ತು ಇಂಗ್ಲಿಷ್ ಭಾಷೆಯನ್ನು ತಿಳಿದ ಪಂಡಿತರಲ್ಲಿ ಕೆಲವರು, ಇಂಗ್ಲಿಷ್ ಮತ್ತು ಸಂಸ್ಕೃತಭಾಷೆಗಳಲ್ಲಿರುವ ಉತ್ತಮಗ್ರಂಥಗಳನ್ನು ಕನ್ನಡಕ್ಕೆ ಭಾಷಾಂತರ ಮಾಡೋಣವೆಂದೂ, ನೂತನವಾಗಿ ಗ್ರಂಥವನ್ನು ರಚಿಸೋಣವೆಂದೂ ಶಾಸ್ತ್ರ, ವ್ಯವಸಾಯ, ಇವೇ ಮೊದಲಾದವುಗಳ ಸಂಬಂಧವಾದ ಉಪನ್ಯಾಸಗಳನ್ನು ಬರೆಯೋಣವೆಂದೂ, ಕನ್ನಡಭಾಷೆಯಲ್ಲಿರುವ ಪ್ರಾಕ್ಯಗ್ರಂಥಗಳನ್ನು ವೃದ್ಧಿಪಡಿಸಬೇಕೆಂಬ ಕುತೂಹಲವುಳ್ಳವರಾಗಿದ್ದಾರೆ.' ಇದಕ್ಕೆ ಸ್ಥಳದವರಿಗೆ ೩—೪—೦ಯೂ, ಪರಸ್ಥಳದವರಿಗೆ ಹಾಸಂಚೆಯಿಂದ ೩—೯—೦ಯೂ ಚಂದಾ ನಿರ್ಣಯಿಸಿತ್ತಾರೆ. ಈ ಮಾಸಪತ್ರಿಕೆಯು ಪಾಠ್ಯಪುಸ್ತಕವು ಬಹುಸುಲಭವಾದದ್ದೇಸರಿ. ಆದರೆ ಇದನ್ನು ಅಚ್ಚು ಹಾಕಿರುವುದು ಚೆನ್ನಾಗಿದೆಯೆಂದು ಯಾರೂ ಹೇಳಲಾರರು. ಇಂಥಾ ಉತ್ಕೃಷ್ಟತರವಾದ ಮಾಸಪತ್ರಿಕೆಯು ಬೇರೆಬೇರೆಭಾಗಗಳಾಗಿ ವಿಂಗಡಿಸಿರುವದರಿಂದಲೂ, ಆಯಾಭಾಗಗಳು ಪ್ರಾರಂಭಿಸಿದ ಕೂಡಲೇ ಅವುಗಳನ್ನು ಬೇರೆಬೇರೆ ಪುಸ್ತಕವಾಗಿ ಮಾತ್ರ ಬಯಸುವವರಿಂದಲೂ ಇದಾ ಈಗಿನ ಅಂತವೂ, ಅಚ್ಚಿನ ರೀತಿಯೂ ಸಾಲದಾಗಿರುತ್ತೆ. ಆದರೆ ಇವನ್ನು ಪ್ರೋತ್ಸಾಹಿಸಬೇಕೆಂಬುವವರು ಈ ಭಾಗವಲ್ಲಿಯೂ ಯೋಚಿಸತಕ್ಕದ್ದು ಸಹಜವಾಗಿದ್ದಾಗ್ಯೂ ಇವರಲ್ಲಿ ಅಡಕವಾದ ವಿಷಯಗಳಿಗೆ ಹೆಚ್ಚಾಗಿ ಗಮನಸನ್ನಿತ್ತು ಪ್ರೋತ್ಸಾಹಪಡಿಸುವರೆಂದು ನಂಬಿದ್ದೇವೆ. ಈ ಮಾಸಿಕಪತ್ರವು ದಿನೇ ದಿನೇ ಅಭಿವೃದ್ಧಿಗೆ ಬರುವಂತೆ ಕನ್ನಡಭಾಷಾ ಪಕ್ಷಪಾತಿಗಳೆಲ್ಲರೂ ಸಹಾಯಮಾಡಿ, ಇದರಿಂದುಂಟಾಗತಕ್ಕ ಪ್ರಯೋಜನಗಳನ್ನು ಪಡೆಯದಿರಲಾರರೆಂದು ಹಾರೈಸುವೆವು.

ಸುಮತಿಶತಕ.

ಮೈಸೂರು ವೆಸ್ಲೀಯನ್ ಮಿಷನ್ ಸ್ಕೂಲಿನಲ್ಲಿ ಕನ್ನಡದ ಮುನಷಿಗಳಾದ ಮ|| ಲಕ್ಷ್ಮೀನರಸಿಂಹಶಾಸ್ತ್ರಿಗಳು ಈ "ಸುಮತಿ ಶತಕ" ವೆಂಬ ಪುಸ್ತಕವನ್ನು ರಚಿಸಿ, ಇಲ್ಲಿನ ಗ್ಯಾರ್ಯಸನ್ ಟ್ರೇಡಿಂಗ್ ಅಸೋಸಿಯೇಷನ್ ಪ್ರೆಸ್ಸಿನಲ್ಲಿ ಅಚ್ಚು ಹಾಕಿಸಿ ನಮ್ಮಲ್ಲಿಗೆ ಒಂದುಪ್ರತಿಯನ್ನು ಕಳುಹಿಸಿ ಕೊಟ್ಟಿರುತ್ತಾರೆಂದು ತಿಳಿಸಲು ಸಂತೋಷಿಸುತ್ತೇವೆ. ಗ್ರಂಥಕರ್ತರು ಮೂರನೇ ಪದ್ಯದಲ್ಲಿ ತಿಳಿಸುವಂತೆ ಈ ಶತಕವು ಮೊದಲು ಆಂಧ್ರಭಾಷೆಯಲ್ಲಿತ್ತು. ಇದನ್ನು ಈಗ ಕನ್ನಡಭಾಷೆಯಲ್ಲಿ ಬರೆದಿರುತ್ತಾರೆ. ಆದರೆ ಆಂಧ್ರಭಾಷೆಯಲ್ಲಿದ್ದ ದೂಷ್ಯಗಳಾದ ಕೆಲವು ಭಾಗಗಳನ್ನು ಇವರಲ್ಲಿ ಬಿಟ್ಟು ಆ ಹೆಸರಿಗೆ ತಕ್ಕಂತೆ ಯೋಗ್ಯವಾದಪದಗಳನ್ನೇ ಸೇರಿಸಿಸುಲಭತರವಾದ ಸರಣಿಯಲ್ಲೇ ಬರೆದಿರುತ್ತಾರೆ. ಲೋವರ್ ಸೆಕೆಂಡರಿ ಪರೀಕ್ಷೆಗೆ ಓದತಕ್ಕ ಬಾಲಕರಿಗೆ ಇದು ಬಹುಸುಲಭವಾಗಿಯೂ, ಕನ್ನಡಸ್ಕೂಲುಗಳ ಮೂರನೆ ನಾಲ್ಕನೆ ತರಗತಿಗಳ ವಿದ್ಯಾರ್ಥಿಗಳಿಗೆ ತಕ್ಕದ್ದಾಗಿಯೂ ಇರುವಂತೆ ನಮಗೆ ತೋರುತ್ತದೆ. ಅದರ ಅನೇಕಸ್ಥಳಗಳಲ್ಲಿ ತಪ್ಪುಗಳುಂಟು. ಇದಕ್ಕೋಸ್ಕರ ಒಂದು ಪುಟದಲ್ಲಿ ಶುದ್ಧಾಶುದ್ಧಗಳನ್ನು ತಿಳಿಸಿರುತ್ತಾರೆ. ಪುಸ್ತಕವನ್ನು ತಯಾರ್ಮಾಡಿರುವ ರೀತಿಯೂ, ಪ್ರಿಂಟುಮಾಡಿರುವ ತರವೂ ಅಷ್ಟು ರಮ್ಯವಾಗಿಲ್ಲದಿದ್ದಾಗ್ಯೂ ಅದರಲ್ಲಿ ಅಡಕವಾಗಿರುವ ಸಂಗತಿಗಳು ತಕ್ಕಮಟ್ಟಿಗೂ ಶ್ಲಾಘನೀಯವಾದವುಗಳೇಸರಿ ಎಂಬದಾಗಿ ನಾವು ಅಭಿಪ್ರಾಯ ಪಟ್ಟಿದ್ದೇವೆ. ಉದಾಹರಣಾರ್ಥವಾಗಿ ಅದರಲ್ಲಿ ಒಂದು ಪದ್ಯವನ್ನು ಇಲ್ಲಿ ಸಂಗ್ರಹಿಸಿರುವೆವು—

ಲೆಸಿಸಂ ಬೆಸೇಷಣಂಸರಸುವ |
ಮನುಜನ ನೋಲಗಿಸ ಲಾಗದಾಂದಾಯಲದುಂ ||
ವಿನಪಡೆವೆಳಲಡೆಯೊಳ್ |
ಪ್ರಸಿನಾಸಂಗೆಯ್ದ ಪೊಳ್ಕೆ ಯಿಪ್ಪುದು ಸುಮತಿ ||

ನಿಜಾನುಭವ ಪರೀಕ್ಷೆ.

ಪ್ರಿಯರೇ! ಮಿತ್ರಭಾವದಿಂದ ನಿಮಗೆ ಕೆಲವು ಮಾತುಗಳನ್ನು ಹೇಳಬೇಕೆಂದಿದ್ದೇನೆ. ಬಾಳೇಕಷ್ಟಪಟ್ಟಿಯುಳ್ಳ ಒಬ್ಬ ಮನುಷ್ಯನ ವರ್ಣವನ್ನು ಸ್ಪಷ್ಟವಾಗಿ ನೋಡಬೇಕೆಂದು ಪ್ರಯತ್ನಿಸಿ. ಹಸುರು ಕನ್ನಡಿಯನ್ನು ಕಣ್ಣಿಗೆ ಹಾಕಿಕೊಂಡರೆ ಯಾವಬಣ್ಣದ ವಸ್ತುಗಳನ್ನು ನೋಡಿದರೂ ಹಸುರಾಗಿಯೇ ಕಾಣುವದು. ಕೆಂಪು ಕನ್ನಡಿಯನ್ನು ಹಾಕಿಕೊಂಡು ನೋಡಿದರೆ ಎಲ್ಲಾ ವರ್ಣಗಳೂ ಕೆಂಪಾಗಿಯೇ ಕಾಣುವವು. ನೀಲೀ ಕನ್ನಡಿಯನ್ನು ಹಾಕಿಕೊಂಡು ನೋಡಿದರೆ ಎಲ್ಲಾ ನೀಲೀವರ್ಣವಾಗಿಯೇ ಕಾಣುವವು. ತನ್ನತು ಕೆಟ್ಟ ಮನಸ್ಸಿನಿಂದ ಕ್ರೈಸ್ತಮತವನ್ನು ಪರಿಶೋಧಿಸಿದರೆ ಅದು ಅವರ ಮನಸ್ಸಿನಂತೆಯೇ ಅವರಿಗೆ ತೋರುವದು. ಅದಸ್ತಯುಕ್ತ ಸತ್ಯವಾದದ್ದನ್ನು ತಿಳಿಯಬೇಕಾದರೆ ಬೇಕನ್ನಾಗಿ ಸಮಾನವಾದ ನಿರ್ಮಲವಾದ ಮನಸ್ಸಿನಿಂದ ಪರೀಕ್ಷಿಸಬೇಕು. "ಯೇಸುವೇ ಲೋಕರಕ್ಷಕನೆಂದು" ಸಾಕ್ಷ್ಯನೀಡುವದು ಸರ್ವರ ಅಂಗೀಕಾರಕ್ಕೆ ಯೋಗ್ಯವಾದಸತ್ಯವೆಂದು ಈವರೆಗೆ ಅಸಂಖ್ಯಾತರಾದ ಮಹಾನುಭಾವರ ಮತ್ತು ವಿದ್ವಾಂಸರ ನಾನಾತರದ ಸಾಕ್ಷಿಗಳಿಂದಲೂ ಸಿದ್ಧಾಂತವಾಗಿದೆ. ಅವುಗಳನ್ನೇ ಪುನಃ ನಿಮಗೆ ಹೇಳುವದು ಬಹುಕಷ್ಟ. ನಿಮಗೆ ಬೇಸರಿಕೆಯನ್ನುಂಟು ಮಾಡದ ದೆಂದೆಣಿಸಿ ನಿಮ್ಮಲ್ಲಿಯೇ ಇರುವಂಥಾ ಸಾಕ್ಷಿಗಳನ್ನು ತೋರ್ಪಡಿಸಿ ಹೇಳುತ್ತೇನೆ.

೧ ವಾಡಿಕೆಯಸಾಕ್ಷಿ—ಆರ್ಯರು ಹಿಂದೂದೇಶಕ್ಕೆ ಉತ್ತರದಿಕ್ಕಿನಲ್ಲಿರುವ ಫಾರಸ್, ಶಾಲ್ಡಿಯ, ಪಶ್ಚಿಮಾಸ್ಯಾ ಮಧ್ಯಪ್ರದೇಶಗಳಿಂದಲೂ, ಬಾಬೆಲ್ ಮೊದಲಾದ ದ್ವೀಪಗಳಿಂದಲೂ ಬಂದವರೆಂದು ಕೆಲವು ವರುಷಗಳ ಕೆಳಗೆ ಮೈಸೂರು ಟೌನ್ ಹಾಲಿನಲ್ಲಿ ಪಂಡಿತ ಭಾಷ್ಯಾಚಾರ್ಯರು ಶಾಸ್ತ್ರಗಳ ಸಿದ್ಧಾಂತಪಡಿಸಿ ಅದರಲ್ಲಿ ಹಾಸಿಯಾಯನೆಂದು ತಿಳಿಸಿದ್ದು ಇದಲ್ಲದೆ ಉಪನ್ಯಾಸ ಮಾಡಿದ್ದನ್ನು ನಿಮ್ಮಲ್ಲನೇಕರು ಕೇಳಿರಬಹುದು. ಫಲಸ್ತೀನ ದೇಶದಲ್ಲಿ ಸ್ಥಾನಗಳೂ, ಘೋರಯುದ್ಧಗಳೂ ಉಂಟಾದದರಿಂದಲೂ, ವ್ಯಾಪಾರಕ್ಕಾಗಿಯೂ, ಯೆಹೂದ್ಯರೆಂಬ ಕ್ರೈಸ್ತಮತದ ಹಿರಿಯರು ಹಿಂದೂದೇಶಕ್ಕೆ ಬಂದು ಆರ್ಯವರ್ಗದಲ್ಲಿ ಸೇರಿದ್ದರು. ಇದರ ಜನಸಂಖ್ಯೆ ದೇಶಜನರ ಸಂಖ್ಯೆಗಿಂತಲೂ ಹೆಚ್ಚಾಗಿತ್ತೆಂಬುವದಕ್ಕೆ ಸಾಕ್ಷಿಗಳುಂಟು ಈ ಯೆಹೂದ್ಯರು ದೈವಾಜ್ಞೆಯಿಂದ ಕೊಡಲ್ಪಟ್ಟಿದ್ದ ಯಾಗಾದಿಮತಾಚಾರವನ್ನು ಇತರರಿಗಿಂತ ಖಂಡಿತವಾಗಿ ಅನುಸರಿಸುತ್ತಿದ್ದರು. ಈ ಆಚಾರಗಳು ಯೇಸುಸ್ವಾಮಿಯು ನೆರವೇರಿಸಿದ ಮಹಾಯಾಗಾದಿಗಳಿಗೆ ಮುಂಗುರುತುಗಳಾಗಿರುವಂತೆ ಆತನಿಂದಲೇ ಕೊಡಲ್ಪಟ್ಟವು. ಈ ಯೆಹೂದ್ಯರೆಂಬ ಆರ್ಯರು ದೇವಸುನ್ನತಿಯಾಗಿ ಈ ಆಚಾರಗಳನ್ನು ತಮ್ಮ ದೇಶದಲ್ಲಿ ಮಾತ್ರವಲ್ಲದೆ ಹಿಂದೂದೇಶದಲ್ಲಿಯೂ ಹೆಚ್ಚಾಗಿ ಅನುಸರಿಸುತ್ತಿದ್ದರು. ಅವುಗಳಲ್ಲಿ ಕೆಲವು ಈಗ್ಯೆ ಮಾರ್ಪಟ್ಟಿದ್ದರೂ ಅನೇಕವು ಈಗಿನವರೆಗೆ ಹಿಂದೂಮತಸ್ಥರಲ್ಲಿ ಉಳಿದಿವೆ ಎಂಬುವದಕ್ಕೆ ಸಾಕಾದಷ್ಟು ಸಾಕ್ಷಿಗಳಿವೆ. ಈ ಆಚಾರಗಳನ್ನು ಮಾತ್ರ ಕೈಕೊಂಡು ಅವುಗಳಿಂದ ಎದುರುನೋಡುತ್ತಿದ್ದ ಕ್ರಿಸ್ತನನ್ನು ನಿರಾಕರಿಸುವದುಮ್ಯಾಗೆ? ಯೇಸುಸ್ವಾಮಿ ಬಹುಜಾಚಣೆಗಳನ್ನು ಸಂಪೂರ್ತಿಮಾಡಿ ಅಕ್ಷಯವಾದವುಗಳನ್ನು ನೇಮಿಸಿರುವಲ್ಲಿ ಅನ್ಯವಾದ ಬಹುಚಾಚಣೆಗಳಿಂದ ಪ್ರಯೋಜನವೇನು? ತಾವೆಯು ಭವಪ್ರತೀತ್ಯವನ್ನು ಅಂಗೀಕರಿಸಿ ತಂದೆಯನ್ನು ತಿರಸ್ಕರಿಸುವದೂ, ನಾನಾಬಗೆ ನಾಮ್ಯ ಮತ್ತು ಆಗದಗೆ ಮೇಲಿರುವ ಆಸನ ಮುದ್ರೆಗಳನ್ನು ಮಾತ್ರ ಲಕ್ಷಿಸಿ ಅವುಗಳಿಗೆ ಕಾರಣವಾದ ಅರಸನನ್ನು ಅಲಕ್ಷಿಸುವದೂ ನ್ಯಾಯವೋ? ಮನೆಕಟ್ಟುವದಕ್ಕೆ ಬರೆದ ನಕ್ಷೆಯೇ ಮಾಸವಾಸವಕ್ಕೆ ಸಾಕು—ಅದರಂತೆ ಕಟ್ಟಿರುವ ಮನೆಯು ಅವಶ್ಯಕವಿಲ್ಲವೆಂದು ನೆನಸುವದು ಬುದ್ಧಿವಂತಿಕೆಯೋ? ಯೇಸುಕ್ರಿಸ್ತನಿಗಾಗಿ ಕೊಡಲ್ಪಟ್ಟ ಮುಂಗುರುತುಗಳನ್ನು ಮಾತ್ರ ಇಟ್ಟುಕೊಂಡು ಕ್ರಿಸ್ತಸ್ವಾಮಿಯನ್ನು ತಳ್ಳುವದು ಯಾವನ್ಯಾಯ?

೨ ಋಷಿಗಳಸಾಕ್ಷಿ—ಅಗಸ್ತ್ಯರು "ಮುಮುಕ್ಷು ಜ್ಞಾನ" ಎಂಬ ತಮ್ಮಗ್ರಂಥದಲ್ಲಿ ಮುಸಿಕ್ರೇಷ್ಠನಾದ ಮೋಜಯನಿಂದ ಕೊಡಲ್ಪಟ್ಟಿರುವ ದಶಾಜ್ಞೆಗಳನ್ನು ವರ್ಣಿಸಿರುವದಲ್ಲದೆ ಸದ್ಗುರುವಾದ ಯೇಸುಕ್ರಿಸ್ತನ ವಿಷಯ ಹೇಳಿರುವದೇನೆಂದರೆ:—"ಒಬ್ಬನೇ ಆಗಿರುವಂಥಾ, ಜಗಜ್ಜ್ಯೋತಿಯಾದಂಥಾ, ಲೋಕವನ್ನು ತನ್ನ ನುಡಿಯಿಂದಲೇ ನಿರ್ಮಿಸಿದಂಥಾ, ಗುಣವಂತರಾದ (ಆತ್ಮ, ಬುದ್ಧಿ, ಚಿತ್ತ, ತಿಳುವಳಿಕೆಗಳುಳ್ಳ) ಮನುಷ್ಯರನ್ನು ನಿರ್ಮಿಸಿ, ನಂತರ ಈ ಲೋಕದಲ್ಲಿ ಹುಟ್ಟಿ, ಗುರುವಾಗಿ ಬಂದು ಸನ್ಯಾಸಿಯಂತಿದ್ದು ತಪೋಧನನಂತೆ ತೋರಿಸಿಕೊಂಡು, ಪ್ರೀತಿಪಾತ್ರನಾದ ಸಿದ್ಧರನ್ನು (ತನ್ನ ಹನ್ನೆರಡು ಶಿಷ್ಯರನ್ನು) ಕಾಣೋ

ಕಡಲ್ಲಿರಿಸಿ ಪರಲೋಕಕ್ಕೆ ಹೋದವನನ್ನೇ ಪೂಜಿಸು" ಎಂಬುವದೇ ಮೊದಲಾದ ವಾಕ್ಯಗಳನ್ನೂ, ಯೇಸುಸ್ವಾಮಿಯು ದೀಕ್ಷೆಯನ್ನೂ ಅದರಿಂದುಂಟಾಗುವ ಪ್ರಯೋಜನವನ್ನೂ ವರ್ಣಿಸಿಧಾರೆ

೪ ಭೋಗಿಗಳು(ಷಿಗಳ) ಸತ್ತಾ— ಭೋಗರ ಹಿಳವಸಾ ಎಂಬ ಗ್ರಂಥದಲ್ಲಿ ಹೇಳಿರುವದೇನೆಂದರೆ,—ಯೇಸುಸ್ವಾಮಿಯವರ ಮಹಿಮೆಯನ್ನು ಕೇಳಿದಂಥಾ ಭೋಗಮುಷಿಗಳು ಆತನದರ್ಶನವನ್ನು ಮಾಡಬೇಕೆಂಬಭಿಲಾಷೆಯಿಂದ ಆತನಿರುವಕ್ಷೇತ್ರವನ್ನು ವಿಚಾರಿಸಲು ಸೀನಾಯಿ ಪಟ್ಟದಲ್ಲಿರುತ್ತಾನೆಂದು ತಿಳಿಸಲ್ಪಟ್ಟಿತು ತಕ್ಷಣವೇ ಹೊಗೆಬಂಡಿಯಲ್ಲಿ ಕೂತುಕೊಂಡು ಸೀನಾಯಿ ಎಂಬುವದನ್ನು ಪಾರಿತು ಚೀನಾದೇಶಕ್ಕೆ ಹೋದರು ಅಲ್ಲಿ ಮಹಾದೇವರಾದ ಯೇಸುಸ್ವಾಮಿಯವರು ಎಲ್ಲಿದ್ದಾರೆಂದು ವಿಚಾರಿಸಲು ಆತನು ಯೆರೂಸಲೇಂ ಪಟ್ಟಣದ ಬಳಿಯಲ್ಲಿರುವ ಸೀನಾಯಿಪಟ್ಟದಲ್ಲಿದ್ದಾರೆಂದು ತಿಳಿಸಲ್ಪಟ್ಟಿತು ಅಲ್ಲಿಂದ ಪುನಃ ಹೊಗೆಬಂಡಿಯನ್ನು ಹತ್ತಿ ಯೆರೂಸಲೇಂ ಪಟ್ಟದ ಬಳಿಗೆ ಹೋಗಿ ಬೆಟ್ಟದಿಂದಿಳಿದು ಪಟ್ಟವನ್ನು ಹತ್ತುತ್ತಿರಲಾಗಿ ಅಲ್ಲಿದ್ದ ಸಿದ್ಧರಾಗಿರುವ ಯೇಸುಸ್ವಾಮಿಯವರ ಶಿಷ್ಯರು ಭೋಗರುಷಿಗಳನ್ನು ನೋಡಿ— ಅಯ್ಯಾ ನಿಮ್ಮನ್ನು ನೋಡಿದರೆ ತಪಸ್ವಿಗಳಂತೆ ತೋರುತ್ತೆ, ಎಲ್ಲಿಗೆ ದಯಮಾಡುವಿರಿ" ಎಂದು ಪ್ರಶ್ನೆಮಾಡಲು—ದೇವರಾದ ಯೇಸುಸ್ವಾಮಿಯವರ ದರ್ಶನಾರ್ಥವಾಗಿ ಹೋಗುತ್ತಿದ್ದೇನೆಂದು ಹೇಳಿ ದರ್ಶನಮಾಡಿಕೊಂಡು ಬಂದರು ಹೀಗೆ ಸರ್ವರಿಂದಲೂ ಪೂಜಿತನಾಗಿರುವ ಯೇಸುಸ್ವಾಮಿಯನ್ನೂ ಆತನ ಮತವನ್ನೂ ದೂಷಿಸುವವರು ಇನ್ನೂ ತಮ್ಮ ಮತವನ್ನೇ ಅರಿಯದೆಯೂ ಸಂಬಧೆಯೂ ಇರತಕ್ಕವರೆಂದು ಗೊತ್ತಾಗುತ್ತದೆ ಇವರಂತೆ ಇನ್ನು ಕೆಲವು ಶಾಸ್ತ್ರಗಳು ದೊರಕುತ್ತಾ ಇವೆ ಸಮಯೋಚಿತವಾಗಿ ಅವುಗಳನ್ನು ಸಂಗ್ರಹಿಸಿ ಸಿಮಗೊಂದು ಪ್ರಬಂಧವನ್ನು ಬರೆಯುತ್ತೇವೆಂದಿದ್ದೇವೆ

೪ ಶಿವ್ಯಪಾಟಗಳನ್ನು ತಿಳಿ—ಕ್ರಿಸ್ತುಮತವು ಯಾವಡಾವ ದೇಶಕ್ಕೆ ಹೋಗಿದೆಯೋ ಅಲ್ಲಿ ದೇಶದವರೂ ಆ ಮತವನ್ನನುಸರಿಸಿದವರೂ ತಮ್ಮ ಅಜ್ಞಾನವನ್ನು ಹೋಗಲಾಡಿಸಿಕೊಂಡು ಒಳ್ಳೇ ಮಾರ್ಗದ ವಿದ್ಯೆಗಳನ್ನು ಕಲಿತು ಐಕಮತ್ಯದಿಂದಲೂ ಸಂತೋಷದಿಂದಲೂ ವಾಸಮಾಡುತ್ತಿದ್ದಾರೆ ಅಪ್ಪಾ ಹಿಂದೂದೇಶದವರಿಗೂ ಕ್ರಿಸ್ತುಮತದಿಂದಲೇ ಇವುಗಳೆಲ್ಲಾ ಲಭ್ಯವಾಗುತ್ತವೆ ಹಿಂದೂ ಮತಸ್ಥರು ಒಳ್ಳೇ ಮಾರ್ಗದ ವಿದ್ಯೆಗಳಲ್ಲಿಯೂ ಉದ್ಯೋಗಗಳಲ್ಲಿಯೂ ಕ್ರಿಸ್ತನನ್ನು ಹಿಂಬಾಲಿಸಿ ಕಲಿಯುವ ವೇಳೆಗೆ ಸ್ವಮತವನ್ನು ಅವಸಿಂದಲೇ ಕಲಿಯಬೇಕೆಂಬುವದು ನ್ಯಾಯವಲ್ಲವೋ? ಇದಲ್ಲದೆ ಹಿಂದೂ ಮತಸ್ಥರು ನಾನಾ ಕಡೆಗಳಲ್ಲಿಯೂ ಮಾಡುತ್ತಾ ಬರುವ ಶಿವ್ಯಪಾಟಗಳನ್ನು ಪರ್ಯಾಲೋಚಿಸುವಲ್ಲಿ ಎಲ್ಲಾ ಯೇಸುಸ್ವಾಮಿಯವರ ವಾಕ್ಯಕ್ಕೇನೇ ಪಕ್ಷವಾಗುತ್ತಿದೆ ಎಂಬುವದು ಪರಿಷ್ಕಾರವಾಗಿ ತೋರುವದಿಲ್ಲವೇ!

ಅಯ್ಯಾ ಮಿತ್ರರೇ ಕೃಪೆಯಲ್ಲಿ ಚೆನ್ನಾಗಿ ಯೋಚಿಸಿಕೊಂಡು ಬುದ್ಧಿವಂತಿಕೆಯಿಂದ ಇದು ಚೆನ್ನಾಗಿಲ್ಲವೆಂಬ ಪಟ್ಟವನ್ನು ಆಗಲೇ ಚೆನ್ನ ತಗೆಯಬೇಕೆಂಬುದಾಗಿಯೂ ಸತ್ಯವಾದ ಯೇಸುವಿನಲ್ಲಿ ಐಕ್ಯವಾಗುವ ಪಟ್ಟ ಚೆನ್ನಾಗಿ ಆಲೋಚಿಸಿಯೂ ಪರೀಕ್ಷಿಸಿಕೊಂಡು ಪಟ್ಟವಲ್ಲದ ಎಂದು ಊರೆಲ್ಲಾ ಹುಡುಕಿದಂತೆಯೂ ಹಿಂದೂಮತಾಭಿಮಾನಿಗಳಲ್ಲಿ ಕೆಲವರು ಸತ್ಯವು ತಮ್ಮದಾಗಿ ಸಲ್ಲದಿದ್ದರೂ ಅದನ್ನು ಬಿಟ್ಟು ಅದಲ್ಲದ ಕಡೆಗಳಲ್ಲಿ ಹುಡುಕುತ್ತಾರೆ ಈಗಲಾದರೂ ನಿಮ್ಮ ವ್ಯರ್ಥಪ್ರಯಾಸಗಳನ್ನು ಬಿಟ್ಟು ಜಗದ್ಗುರುವಾದ ಯೇಸುಸ್ವಾಮಿಯನ್ನು ನಂಬಿ ಸತ್ಯಮಾರ್ಗದಲ್ಲಿ ನಡೆದು ಕೈವಲ್ಯಪದವಿಯನ್ನು ಹೊಂದಿರಿ ಇಂಥ ಸರ್ವೇಶ್ವರ ದೇವರು ನಿಮ್ಮನ್ನು ಆಶೀರ್ವದಿಸಲಿ!

ಒಳದೇಶ ವೃತ್ತಾಂತಗಳು.

ನಾಳೆ ೨೭ ನೇ ತಾ|| ಕಮಿಷನರ್ ಆಫೀಸಿನ ಹಾಲಿನಲ್ಲಿ ಹಿಂಗಳೂರು ಮುನಿಸಿಪಲ್ ಮೀಟಿಂಗ್ ನಡೆಯುತ್ತೆ

ಮಹಾರಾಣಿಯವರ ಬಾಲಿಕಾಪಾಠಶಾಲೆಯಲ್ಲಿ ಬಡವರಾಗಿಯೂ ಯೋಗ್ಯರಾಗಿಯೂ ಇರುವ ಬಾಲಿಕೆಯರಿಗೆ ಪುಸ್ತಕಗಳನ್ನು ಉಚಿತಾರ್ಥವಾಗಿ ಕೊಡಿಸುವದಕ್ಕೆ ಸರ್ಕಾರದ ಸ್ಯಾಂಕ್ಷನ್ ಆಗಿದೆ

ರಜಾಪಡೆದು ಮೈಸೂರಿಗೆ ಹೋಗಿದ್ದ ಮ|| ಶಾಕಸಾಹೇಬರು ಬೆಂಗಳೂರಿಗೆ ಬಂದು ಕಳೆದವಾರದಲ್ಲಿ ಸೆಂಟ್ರಲ್ ಜೈಲಿನ ಸುಪರಿಂಟೆಂಡೆಂಟ್ ಕೆಲಸದ ಛಾರ್ಜನ್ನು ಇವರ ಗೈರುಹಾಜರಿಯಲ್ಲಿ ಬದಲಿ ನೋಡುತ್ತಿದ್ದ ಮ|| ಟೈಬಸಾಹೇಬರಿಂದ ಪಡೆದರು

ಕಳೆದವಾರವಮ್ಮ ಡೆಪ್ಯೂಟಿ ಕಮೀಷನರವರು ಮೂರು ತಿಂಗಳು ರಜಾದಮೇಲೆ ದಯಮಾಡಿದರು ಮ|| ಮಾಸ್ತಿಯಲ್ಲಿ ಯವರು ಛಾರ್ಜನ್ನು ವಹಿಸಿ ಕೆಲಸನೋಡುತ್ತಿದ್ದಾರೆ ಫ್ರೇಂಚರ್ ಸಬ್‌ಡಿವಿಜನ್ ಕೆಲಸವನ್ನು ಮ||ಸಂಜೀವರಾಯರು ನೋಡುತ್ತಿದ್ದಾರೆ

ತಾ|| ೨೮ನೇ ಶನಿವಾರ ಸಾಯಂಕಾಲ ಮೈಸೂರು ಲಿಬರಲ್ ಯೂನಿಯನ್ ಎಂಬ ವಾಚಕಸಂಘದ ಮೆಂಬರುಗಳ ಪೈಕಿ ಒಬ್ಬರನ್ನು ಪ್ರಜಾಪ್ರತಿನಿಧಿಸಭೆಗೆ ಮೆಂಬರನ್ನಾಗಿ ಚುನಾಯಿಸುವದಕ್ಕಾಗಿ ಟೌನ್ ಹಾಲಿನಲ್ಲಿ ಮೆಂಬರುಗಳೆಲ್ಲರೂ ಸೇರಿ ಒಂದು ಜನರಲ್ ಮೀಟಿಂಗ್ ನಡೆಸುವರು

ಹೊಳೆನರಸೀಪುರದಲ್ಲಿ ಮುನ್ಸಿಫರಾಗಿದ್ದು ಈಗ ರಜಾದಮೇಲಿರುವ ಮ|| ಚಲುವಯ್ಯಂಗಾರ್ಯರವರು ತಮ್ಮ ಕೆಲಸಕ್ಕೆ ರಾಜೀನಾಮೆಯನ್ನು ಕೊಟ್ಟು ಈಗ ಬೆಂಗಳೂರಿನಲ್ಲಿ ಲಾಯರಾಗಿ ವಕೀಲವೃತ್ತಿಗಳನ್ನು ಹಿಡಿದು ಮಾಡಿಸುತ್ತಿದ್ದಾರೆಂಬದಾಗಿ ಅಲ್ಲಿನ ಕ ಪ್ರ ತಿಳಿಸುತ್ತದೆ

ಮೈಸೂರಿನ ಪಟ್ಟಣದಲ್ಲಿ ಪ್ರಜಾಪ್ರತಿನಿಧಿ ಸಭೆಗೆ ಮೆಂಬರಾಗಿ ಹೋಗಲು ಯೋಗ್ಯತಾಗಿರುವವರ ಹೆಸರುಗಳನ್ನು ಪ್ರೆಸಿಡೆಂಟ್ ಪ್ರಕಟಿಸುತ್ತಾರೆ ಇವರೆಲ್ಲರೂ ತಮ್ಮಲ್ಲಿ ಒಬ್ಬನ್ನು ಮೆಂಬರನ್ನು ಚುನಾಯಿಸುವದಕ್ಕೆ ನಾಳೆ ೨೭ನೇ ತಾ|| ಸೋಮವಾರ ಬೆಳಿಗ್ಗೆ ಟೌನ್ ಹಾಲಿನಲ್ಲಿ ಸಭೆ ಸೇರುವರು

ಕೆಲವುದಿನಗಳ ಕೆಳಗೆ ಹಾಸನದ ಡಿಸ್ಟ್ರಿಕ್ಟ್ ಟ್ರೆಷರಿ ಆಫೀಸರಾದ ಮ|| ಶ್ರೀನಿವಾಸಾಚಾರ್ಯರವರ ಮನೆಯಲ್ಲಿಸುವವರು ೭,೦೦೦ ರೂಪಾಯಿನ ಬಂಗಾರದ ಒಡವೆ ಬಾಬತ್ತುಗಳನ್ನು ಕಳುವಾಯಿತು ಇದನ್ನು ಪತ್ತೆಮಾಡಿ ಕೊಟ್ಟವರಿಗೆ ೧೦೦ ರೂಪಾಯಿ ಇನಾಮು ಕೊಡುತ್ತೇನೆಂದು ಪ್ರಕಟಿಸಿರುತ್ತಾರೆ

ಸಂಸ್ಥಾನದ ಸ್ಯಾನಿಟರಿ ಇಂಜನಿಯರಾದ ಮ|| ಸ್ಟ್ಯಾಂಡಿಷ್ ಲೀ ಸಾಹೇಬರನ್ನೂ ಮತ್ತು ಬೆಂಗಳೂರು ಸಬ್‌ಡಿವಿಜನ್ ಕ್ಲರ್ಕರಾದ ಮ|| ರಾಘವೇಂದ್ರರಾಯರನ್ನೂ ಅವರಿಗೆ ೬೦ ವಯಸ್ಸು ತುಂಬುವವರೆಗೂ ಸರ್ಕಾರದ ನೌಕರಿಯನ್ನು ನೋಡುತ್ತಿರಬಹುದೆಂಬದಾಗಿ ಗೌರ್ನ್ಮೆಂಟಿನವರು ಸ್ಪೆಷಲ್ ಹುಕುಂ ಕೊಟ್ಟಿರುತ್ತಾರೆ

ಮೈಸೂರು ರಿಕಾರ್ಡ್ ಆಫೀಸಿನ ಬಹಳದಿವಸದಿಂದಲೂ ನಂಬಿಕೆಯಿಂದ ಕೆಲಸ ಮಾಡುತ್ತಿದ್ದ ಮ|| ಚಾಮರಾಜೇ ಅರಸಿನವರಿಗೆ ಪಿಂಚಣಿಯಿಂದ ಜಮಾದಾರಿಯ ಬೇಕೆಂದು ಕೋರಿದ ೧೫ನೇ ಜುಲೈ ಕಾಗದಿಂದ ಸಂಬಳಸಹಿತ ಕೊಡುವ ಹುಕುಂ ಹೊರಟಿರುವಂತ ಮೊನ್ನೆ ತಿಳಿದು ತುಂಬಾ ಸಂತೋಷಿಸುತ್ತೇವೆ

ಸೀರದ ತಾಲ್ಲೂಕಿನ ಕಳ್ಳಂಬೆಳ್ಳ ಸಮ್ಮತು ಚಿಕ್ಕನಹಳ್ಳಿ ಎಂಬ ಸಣ್ಣ ಗ್ರಾಮದಲ್ಲಿ ನಾಯಕರ ಭೀಮಣ್ಣನೆಂಬುವನ ಮನೇ ಹಿತ್ತಲುಭಾಗದಲ್ಲಿ ಹುಡುಗರು ಆಡುತ್ತಿರುವಾಗ್ಯೆ ಭೂಮಿಯಲ್ಲಿ ಅವರಿಗೆ ಒಂದು ಮಡಕೆ ಸಿಕ್ಕಿತು ಅದನ್ನು ಒಡೆದು ನೋಡುವಾಗ್ಯೆ ಅದರಲ್ಲಿ ೯೯ ಕಂಠೀರಾಯಿ ಹಣವಿತ್ತು ಇದು ಸುಮಾರು ೩೦ ರೂಪಾಯಿ ಬಾಳುತ್ತೆ ಸರ್ಕಾರದವರು ಅದರ ವಾರೀಸಿನವನ್ನು ಗೊತ್ತುಮಾಡುವದರಲ್ಲಿದ್ದಾರೆ

ಇಲ್ಲಿನ ಟೌನ್ ಹಾಲಿನಲ್ಲಿ ಸ್ಥಾಪಿಸಲ್ಪಟ್ಟಿರುವ ರೀಡಿಂಗ್‌ರೂಮಿನ ಸಭಿಕರುಗಳು ತಮ್ಮ ಸಂಘದಿಂದಲೂ ಒಬ್ಬ ಮೆಂಬರನ್ನು ಚುನಾಯಿಸಿ ಪ್ರಜಾಪ್ರತಿನಿಧಿ ಸಭೆಯಾಕ್ಕೆ ಕಳುಹಿಸುವದಕ್ಕೆ ಅಪ್ಪಣೆಯಾಗಬೇಕೆಂದು ಗೌರ್ನ್ಮೆಂಟಿಗೆ ಬರೆದುಕೊಂಡಿದ್ದರು ಇದರಂತೆಯೇ ಗೌರ್ನ್ಮೆಂಟಿನವರು ಸಂತೋಷಪಟ್ಟು ಒಬ್ಬ ಮೆಂಬರನ್ನು ಚುನಾಯಿಸಿ ಕಳುಹಿಸಬಹುದೆಂದಾಗಿ ಸ್ಯಾಂಕ್ಷನ್ ಮಾಡಿ ಹುಕುಂ ಕೊಟ್ಟಿರುತ್ತಾರೆ

ರಾಜಧಾನಿಯಲ್ಲಿ ಮ|| ಶ್ರೀಕಂಠೇಶ ಗೌಡರೆಂಬ ವಕೀಲರು ಇರುತ್ತಾರಷ್ಟೆ ಇವರು ಹತ್ತಿರಸಂಬಂಧಿಗಳಾದ ಸ್ವಾಮೀಗೌಡರೆಂಬವರು ವಕೀಲರ ಗಾಡಿ ಮನೇಲಿ ಕೂತುಕೊಂಡು ಬೋವಾವರದಲ್ಲಿ ರೈಲ್ವೆಸ್ಟೇಷನಿಗೆ ಹೋಗುತ್ತಿರುವಾಗ್ಯೆ ಒಬ್ಬ ಹೆಂಗಸು ಗಾಡಿಗೆ ಸಿಕ್ಕಿ ಪೆಟ್ಟಾಗಿ ಆದರಿಂದ ಆಕೆಗೆ ತಕ್ಕ ಪೆಟ್ಟಿಗೆ ಅದೀ ಮೂಲಾಯಿತು ಈ ಸಂಗತಿಯು ಇತ್ಯರ್ಥಕ್ಕಾಗಿ ಮ್ಯಾಜಿಸ್ಟ್ರೇಟರಲ್ಲಿಗೆ ಹೋಗಿರುತ್ತೆಂದು ಕೇಳಿದೆವು

ಹಾಸನದ ಅಮಲ್ದಾರರಾದ ಮ|| ಕೇಶವಯ್ಯಂಗಾರ್ಯರು ಬಹು ಮುತುವರ್ಜಿಯಿಂದ ಎಲ್ಲಾ ಕೆಲಸಗಳನ್ನು ತೃಪ್ತಿಕರವಾಗಿ ನಡಿಸುತ್ತಲಿದ್ದ ಪ್ರಯುಕ್ತದಿಂದ ಅವರಿಗೆ ಮೆಚ್ಚುತುಪ್ರಾಪ್ತದ ಅಮಲ್ದಾರರಿಗೆ ಸಲ್ಲುವಂತೆ ಮಾಹೆಯಾನ ೨೫ ರೂಪಾಯಿ ಅಲೋಯನ್ಸು ಶಾಶ್ವತವಾಗಿ ಕೊಡಬೇಕೆಂದು ಡೆಪ್ಯುಟಿ ಕಮೀಷನರವರು ಶಿಫಾರಸು ಬರೆದದ್ದರಮೇಲೆ ಗೌರ್ನ್ಮೆಂಟಿನವರು ಕಳೆದ ಮೇ ಜುಲೈ ತಿಂಗಳಿಂದ ಸಲ್ಲತಕ್ಕದ್ದೆಂಬದಾಗಿ ಸ್ಯಾಂಕ್ಷನ್ ಮಾಡಿರುತ್ತಾರೆ

ನೆನ್ನೆ ಮಂಗಳವಾರಕ್ಕೆ ಇಲ್ಲಿನ ಪೊಲೀಸರು ಪಟ್ಟಣದ ಗಲ್ಲಿಗಳನ್ನು ಶುದ್ಧಮಾಡಿಸಿ ಜನಗಳ ನಮ್ಮೆರಿಯನ್ನು ನೋಡುವದಕ್ಕೆ ಮಾಡಿದ್ದಪ್ರೊಲೀಸಿನವರ ಮತ್ತು ಸವಾರರ ವ್ಯಾಯಾಮಗಳು ಬಹು ಸಂತೋಷಕರವಾಗಿದ್ದವೆಂದು ಕೇಳಿ ಸಂತೋಷಿಸುತ್ತೇವೆ ಕೆಲವರು ತಮ್ಮ ಬೈಸಿಕಲಿನಲ್ಲಿ ಕಾಣಿಸುವಂಥ ವೇಷಗಳನ್ನು ಧರಿಸಿಕೊಳ್ಳುವ ಇತರರ ವೇಷಗಳನ್ನು ಧರಿಸಿಕೊಂಡಿದ್ದರು ಇವುಗಳಿಗಾಗಿ ಅವರನ್ನು ಸ್ವಲ್ಪಮಟ್ಟಿಗೆ ಮೆಚ್ಚಿಕೆಯನ್ನು ತೋರಿಸಿದರೆಂದು ಕೇಳಿದೆವು

ಮೂರಮ್ಮಳ್ಳಪ್ಪನವರ ಸ್ಕೂಲಿನ ಫಂಡಿನ ಬಡ್ಡಿ ೩೦ ಸಾವಿರ ರೂಪಾಯಿಗಳನ್ನು ಗೌರ್ನ್ಮೆಂಟ್ ಟ್ರೆಷರಿಯಲ್ಲಿ ಇಡಲು ಅಪ್ಪಣೆಯಾಗಬೇಕೆಂದು ಡಿ. ಫಂಡಿನ ಸೆಕ್ರೆಟರಿಯವರಾದ ಮ|| ವೀರಭದ್ರಪ್ಪನವರು ಗೌರ್ನ್ಮೆಂಟಿಗೆ ಬರೆದುಕೊಂಡದ್ದರಮೇಲೆ ಗೌರ್ನ್ಮೆಂಟಿನವರು ಒಪ್ಪಿಕೊಂಡು ಆ ಹಣವನ್ನು ಸಂಸ್ಥಾನದ ಬ್ಯಾಂಕಿನಲ್ಲಿ ಡಿಪಾಜಿಟ್ ಇಡಬಹುದೆಂತಲೂ ಆ ಹಣಕ್ಕೆ ೬ ತಿಂಗಳಿಗೊಂದಾವರ್ತಿ ಶೇಕಡ ವರ್ಷಕ್ಕೆ ೫|| ರೂಪಾಯಿನಂತೆ ಬಡ್ಡಿ ಕೊಡಲ್ಪಡುವದೆಂತಲೂ ಹುಕುಂ ಮಾಡಿರುತ್ತಾರೆ

ಸಂಭಾಷಣೆ.

ತಾನನಕ್ಕೆ ಅಧಿಪತಿಯಾದ ಧರ್ಮಕ್ಕೆ ಅತ್ಯಂತವಿಮುಖನಾದ ನಿರಂಕುಶನಾದ ಜಗದೇಕಮುಖ ರಾಜ್ಯಾಧಿಪನ ಮಹಾತಕ್ಕರೀತಿ ಹ್ಯಾಗೆಂದರೆ ಆತನು ತನ್ನ ಮುಖ್ಯ ೧ ಮನಾಡಿಕ ೨ ಮಯ ೩ ಗೃಧ್ರನೆಂಬ ಮೂರಾದಶ ಮಂತ್ರಿಗಳೊಡನೆ ಕೂಡಿ ರಾಜ್ಯಭಾರಗಳನ್ನು ಬಹಳ ನಿರ್ಗುಣವಾಗಿ ನಡಿಸುತ್ತಾ ಇದ್ದಾನೆ ೪ನೆ ಮಂತ್ರಿಯಾದ ಗೃಧ್ರನು ತುಕ್ಕ ಅಧ್ಯಾಪಕನಾದ್ದರಿಂದ ಜಗದ್ರಕ್ಷಕನೆಂಬ ಪ್ರೈವೇಟ್ ಸೆಕ್ರೆಟರಿಯು ಈ ಮಂತ್ರಿಗೆ ಕೇವಲ ಅನ್ಯನಾಗಿದ್ದಾನೆ ಈ ರಾಜ್ಯಭಾರಕ್ಕೆ ಅನುಗುಣವಾದ ಅನ್ಯೋನ್ಯವೆಂಬನಾಟಕ—

ಗೃಧ್ರ—ಬೆಳಿಗ್ಗೆ ಎದ್ದು ಆಕಾರವನ್ನು ಕರೆದುಕೊಂಡು ಬಂದು ನನ್ನ ಜಗದ್ರಕ್ಷಕನನ್ನು ೪ ಘಳಿಗೆಯಲ್ಲಿ ಕರೆ ಹೇಳು

ಆಕಾರ—ಅಪ್ಪಣೆ ಸ್ವಾಮಿ ಆಗಲೇ ಜಗದ್ರಕ್ಷಕನನ್ನು ಕರೆದುಕೊಂಡು ಬರುವೆನು

ಜಗದ್ರಕ್ಷಕ—ಒಂದು ದಿವಸ ಸಂಜೆವರೆಗೂ ಸವಾರಿಯಲ್ಲಿ ಕಾದುಕೊಂಡಿದ್ದೆನು

ಗೃಧ್ರ—ಎಲೈ ಜಗದ್ರಕ್ಷಕನೆ ನೀನು ನನ್ನ ಮನೆಯಲ್ಲಿ ಪ್ರಸ್ತವೆಂದು ಕೇಳಿ ನಿನ್ನ ಸೇವೆಯನ್ನು ಮೆಚ್ಚಿದ್ದೇನೆ ನಾನು ದೊರೆಯನ್ನು ಕಾಣಲು ಹೋಗುವೆನು

ಜಗದ್ರಕ್ಷಕ—ನಾನು ಜೊತೆಯಲ್ಲಿ ಬರುತ್ತೇನೆಂದು ಹೇಳಿ ಹೋಗುತ್ತಾನೆ ಮಧ್ಯಮಾರ್ಗದಲ್ಲಿ ಮನಾಡಿಕ, ಮಯ ಇವರಿಬ್ಬರೂ ಸೇರಿಕೊಳ್ಳುವರು ಎದುರುಕಂಡರು

ಮನಾಡಿಕ ಮತ್ತು ಮಯ—ನಮಸ್ಕಾರ ಹೋಗುತ್ತೀರ

ಗೃಧ್ರ—ಅಯ್ಯಾ ಮಾರ್ಗವಾದರೆ ಪ್ರಭುಗಳ ಭೇಟಿತೆಗೆದುಕೊಂಡು ಬರುವ ಒತ್ತು ಎಂದು ಕರೆದುಕೊಂಡುಬಂದರು ಪ್ರಭುಗಳ ಅಸ್ಥಾನದ್ವಾರದಲ್ಲಿ ನಿಂತರು

ಮಯ—ಮೊದಲು ಪ್ರಭುಗಳ ಸಮಾಚಾರ ತಿಳಿದುಬರಲು

ದೂತ—ಬುದ್ಧಿ ಸಮಯ ಸರಿಯಾಗಿದೆ ದಯಮಾಡಿಸಬಹುದು ನಂತರ ಮೂರು ಜನ ಮಂತ್ರಿಗಳೂ ಒಳಗೆ ಪ್ರವೇಶಿಸಿ ಮಂದನೆಮಾಡಿ ಕೂತುಕೊಂಡರು.

ಪ್ರಭು—ಮಂತ್ರಿಗಳೇ ಬಂದ ಕಾರ್ಯವೇನು"

ಮನಾಡಿಕ—ಗೃಧ್ರನ ಮನೆಯಲ್ಲಿ ಪ್ರಸ್ತ ಆದ್ದರಿಂದ ತಮ್ಮನ್ನು ಕಾಣಲು ದಯಮಾಡಿಸಿದ್ದಾನೆ

ಗೃಧ್ರ—ಈ ದಿವಸ ನನ್ನ ಮನೆಯಲ್ಲಿ ಪ್ರಸ್ತ ಆದ್ದರಿಂದ ಫಲತಾಂಬೂಲ ತೆಗೆದುಕೊಂಡು ದಯಮಾಡಿಸಿದರೆ ಕೃತಜ್ಞನಾಗುವೆನು

ಪ್ರಭು—ಸಂತೋಷ ಹಾಗೇ ಆಗಲಿ ನನ್ನ ದೇಹಸ್ಥಿತಿ ಸರಿಯಾಗಿಲ್ಲ ಮಾಯಾ ನನ್ನ ದೇಹಸ್ಥಿತಿ ನೋಡಿ ಹೇಳು

ಮಯ—ಬುದ್ಧಿ ಅತ್ಯಂತ ಕಷ್ಟಕರವಾಗಿದೆ ಇದನ್ನು ಕೇಳಬೇಕು ಹೀಗೇಬಿಟ್ಟರೆ ಬಹಳ ತೊಂದರೆ ಪಡಿಸುವದು ಆದ್ದರಿಂದ ನಾನು ಈಗಲೇ ಸ್ವದೇಶಕ್ಕೆ ಹೋಗಿ ತಕ್ಕ ವಿಷಧಿ ಕಳುಹಿಸುವೆನು

ಗೃಧ್ರ ಮಯ ಮನಾಡಿಕ—ಇವರುಗಳು ಜಗದ್ರಕ್ಷಕನೊಡನೆ ಸೇರಿ ಪ್ರಭುಗಳ ಅಪ್ಪಣೆತೆಗೆದುಕೊಂಡು ಹೊರಡಲು ಸಿದ್ಧರಾದರು

ಪ್ರಭು—ಮಂತ್ರಿಗಳೇ ನಮ್ಮ ದೇಶಕ್ಕೆ ಒಬ್ಬ ವಿದ್ವಾಂಸನು ದೇಶಾಂತರದಿಂದ ಬಂದಿರುವನು ನಮ್ಮ ದೇಶದಲ್ಲಿ ಇರಿಸಿಕೊಳ್ಳಲು ಯೋಗ್ಯನಾಗಿ ಕಾಣುತ್ತಾನೆ ಈ ವಿಷಯದಲ್ಲಿ ನೀವು ಆಲೋಚಿಸಿ ತಿಳಿಸಬೇಕು ಅವರಿಗೆ ಇರಿಸಿಕೊಳ್ಳಬಹುದು

ಮಂತ್ರಿಗಳು—ಆತನ ಗುಣಸ್ವಭಾವವನ್ನು ನೋಡಿ ಅರಿಕೆ ಮಾಡಿಕೊಳ್ಳುತ್ತೇವೆಂದು ಹೇಳಿ ಹೊರಟರು

ಪ್ರಭು—ವಸಾಹತನ್ನು ನಂತರಗಳು ಇಲ್ಲವೋ ಆಗಬಹುದು

ಮನಾಡಿಕ—ಮಯಸ್ವಾಮಿ ಅಪ್ಪಣೆ ಎಂದು ಸ್ನಾನಕ್ಕೆ ಹೊರಟನು

ಪ್ರಭು—ಗೂಢಚಾರರು ಜಾಣರಿಂದ ಬಹಳ ಹೊತ್ತಾಯಿತು ದಿವಸ ಕಳುಹಿಸಲಿಲ್ಲ ಎಲ್ಲಿದ್ದಾನೋ ವಿಚಾರಿಸಿ ತಿಳಿಸು ತಗೆದುಕೊಂಡು ಬಾ

ದೂತ—ಮಯನು ಪ್ರಸ್ತದ ಮನೆಯಲ್ಲಿ ಇನ್ನೂ ಮನೆಯಲ್ಲಿ ಇಲ್ಲ ಜಗದ್ರಕ್ಷಕನ ಮನೆಯಲ್ಲಿದ್ದಾನೆ ಒಬ್ಬ ಆಚಾರ್ಯ ಆಗಿರುವ ಇವ್ವನಿಗೆ ಇತ್ತು ಅದ್ದರಿಂದ ಕೂಗುವದಕ್ಕೆ ಸಂದೇಹಪಟ್ಟು ಹಗಲೇಬಂದೆನು

ಜಗದ್ರಕ್ಷಕ—ಮೂರನೇದಿವಸ ವಿದ್ವಾಂಸನನ್ನು ಕಂಡು ವಿದ್ವಾಂಸನೆ ತಮ್ಮ ವಿದ್ಯೆಯನ್ನು ನೋಡಬೇಕಾಗಿರುವದರಿಂದ ನಮ್ಮ ಮನೆಗೆ ದಯಮಾಡಬೇಕು

ವಿದ್ವಾಂಸನು—ಹಾಗೇ ಆಗಲೆಂದು ಮನೆಗೆ ಹೋಗಿವಿದ್ಯೆಯನ್ನು ತೋರಿಸಿದನು ಜಗದ್ರಕ್ಷಕನು ಬಹಳ ತೃಪ್ತನಾಗಿ ಒಂದು ದಿವಸದಲ್ಲಿಯೇ ಮನುಷ್ಯನ ಯೋಗ್ಯತೆ ಗೊತ್ತಾಗುವುದಿಲ್ಲವೆಂದು ಯೋಚಿಸಿ ಪ್ರತಿನಿತ್ಯವೂ ಕರೆಸುತ್ತಿದ್ದನು ಒಂದು ದಿವಸ ವಿದ್ವಾಂಸನಿಗೆ ದೇಹಸ್ಥಿತಿ ಚೆನ್ನಾಗಿ ಇಲ್ಲದ್ದರಿಂದ ಮೂರಾದಿವಸ ಅತನ ಮನೆಗೆ ಹೋಗಲಿಲ್ಲ ಅದ್ದರಿಂದ ಜಗದ್ರಕ್ಷಕನು ಗೃಧ್ರ ಮಂತ್ರಿಯಲ್ಲಿ ಹೋಗಿ ವಿದ್ವಾಂಸನು ಬಹಳ ಯೋಗ್ಯ ಜಾತನನ್ನು ಸಮ್ಮಲ್ಲಿ ಇರಿಸಿಕೊಳ್ಳುವದಕ್ಕೆ ಆಕ್ಷೇಪಣೆಯಿಲ್ಲವೆಂದು ಪ್ರಭುಗಳಿಗೆ ತಿಳಿಸಬೇಕೆಂದು ಹೇಳಿದನು ಗೃಧ್ರ ಮಂತ್ರಿಯು ಜಗದ್ರಕ್ಷಕನೊಡನೆ ಸೇರಿ ಮಯನ ಮನೆಗೆ ಹೋಗಿ ಇದೇ ಸಂಗತಿ ಆತನಿಗೂ ತಿಳಿಸಿ ಆತನ ಮೂಲಕ ಪ್ರಭುಗಳಿಗೆ ಅರಿಕೆಮಾಡಿದರು ಪ್ರಭು ಖುಷಿಯಿಂದ ಆ ವಿದ್ವಾಂಸನಮೇಲೆ ಇಲ್ಲದ ಆದರವನ್ನು ಅರಿತು ಸಿದ್ಧರಿಂದ ಇವರ ಮಾತಿನಮೇಲೆ ಪ್ರಭುವು ವಿಚಾರಿಸದೆ ವಿದ್ವಾಂಸನನ್ನು ದೂಷಿಸಿ ಜಾತಕ ಬರೆಸಲಿಲ್ಲ A B

ಯುರೋಪುಖಂಡದ ನಾಗರೀಕತೆ.

(ಕರ್ನಾಟಕ ಗ್ರಂಥಮಾಲೆಯಿಂದ ಸಂಗ್ರಹಿಸಿದ್ದು)

ಭರತಖಂಡದಲ್ಲಿ ಎಷ್ಟೋ ಕಾಲದಿಂದ ಬೆಳೆದ ಜಾಣರ್; ಇಂಗ್ಲೆಂಡಿನಲ್ಲಿ ೩ ಶತಮಾನಗಳಿಂದ ನಮ್ಮ ದೇಶದಲ್ಲಿ ಆಸ್ತಿಕ ಹಿಂದೂ ಜನಗಳನ್ನು ನೋಡಿದರೆ ಒಂದು ಅಲ್ಲದೆ ಬೇರೆ ಯುರೋಪಿಯನರನ್ನು ಅವರೂ ಅವರಿಗೆ ಬೇಕಾದ ನಿರ್ವಾಹಕರಾಗಿ ಈ ಹಿಂದೂಜನರ ಅವರು ಅಳುತಿದ್ದರ ಆಳುವವರಾದರೂ ಅಲ್ಲ; ಹಿಂದೂ ಪ್ರಪಂಚದಿಂದ ಇವರ ವೇಗೂ ಯುರೋಪಿಯನರ ವೃದ್ಧಿಯಲ್ಲಿ ಆರುತ್ತಿದ್ದರೆ ಸ್ವಾಭಿಮಾನ ಪ್ರೈಚರಿನಿಂದ ಸ್ವತಂತ್ರವಾದ ಜನ ತಮ್ಮ ಪರದೇಶಗಳಲ್ಲಿ ಒಬ್ಬ ನಿಲ್ಲದೆ ಆರಸನ ನಮ್ಮವರು ೨೦೦ ಮಾತ್ರ ವರ್ಷದಿಂದಿರುವುದು ಬಹಳ ಅದ್ಭುತವಾದ ವಿಷಯವಲ್ಲವೆ?

ಈ ಪ್ರಪಂಚದಲ್ಲಿ ಕಾಣಿಸಿದ ಕಾರ್ಯವು ಯಾವುದೂ ಉಂಟಾಗುವದಿಲ್ಲ ಈ ಇಂಗ್ಲೀಷರಿಗೆ ಬಂದಿರುವ ದೊಡ್ಡ ಹೆಸರಿಗೆ ಕಾರಣವಾಗಿರುವ ಜನರನ್ನು ತಿಳಿದು ಇರುವ ಕಾರಣವನ್ನು ಯೋಚಿಸಿ ತಿಳಿದುಕೊಂಡರೆ, ನಮಗೆ ತಕ್ಕ ಫಲ ದೊರೆಯಬಹುದು ಅವರ ಗುಣಗಳನ್ನು ಗ್ರಹಿಸಿ ನಮ್ಮ ದೋಷಗಳನ್ನು ತ್ಯಜಿಸಿ ನಾವೂ ಅಭಿವೃದ್ಧಿಯನ್ನು ಹೊಂದುವುದಕ್ಕೆ ಪ್ರಯತ್ನ ಮಾಡಬಹುದು

ಬಹಳ ಚಂದವಾಗಿ ಮೈ ಸಡಿಗುತ್ತಿರುವಾಗ, ಬಡವನು ಮಂಚದ ದೇಹಶ್ರಮವನ್ನು ಬಿಟ್ಟುಕಾದ ಕಾರ್ಯವು ಕಾಲವನ್ನು ಬಿಡದೆ ಅವರ ಕಾರ್ಯವು ಉತ್ತಮವಾದುದು ಹೊದಿಕೆಯಮೇಲೆ ಹೊದಿಕೆಯನ್ನು ಎಷ್ಟು ಹೇರಿಕೊಂಡರೂ ಅದರಷ್ಟು ಕೆಲಸಕ್ಕೆ ಬಾರದು ಇಂಗ್ಲೆಂಡ್ ಮುಂತಾದ ಅತಿಶೀತವಾದ ದೇಶಗಳಲ್ಲಿನ ಜನರು ಈ ತತ್ವವನ್ನು ಬಹುಕಾಲದಿಂದಲೇ ತಿಳಿದುಕೊಂಡರು ನಮ್ಮ ಸೀಮೆಯಲ್ಲಿ ಕಡಿಮೆ ಬಹಳವಾಗಿರುವುದರಿಂದ ಜನರು ಸುಖದಿಂದ ಒಬ್ಬೊಬ್ಬರಾಗುವರು ಅನೇಕ ತಲೆಮಾರುಗಳಿಂದ ಯುರೋಪಿಯನರು ಸೀತುವದಲ್ಲಿದ್ದು ಕಷ್ಟಸಹಿಷ್ಣುತ್ವವನ್ನು ಅಭ್ಯಾಸಮಾಡಿ ಬಹಳ ಸಾಹಸವುಳ್ಳವರಾದರು, ಅನೇಕ ತಲೆಮಾರುಗಳಿಂದ ನಮ್ಮವರು ಈ ಉಷ್ಣ ದೇಶದಲ್ಲಿದ್ದು ಕಷ್ಟದಲ್ಲಿ ಬಲಹೀನರಾದರು.

ಯುರೋಪಿನ ಉತ್ತರಭಾಗದಲ್ಲಿರುವ ಶೀತಪ್ರದೇಶದಲ್ಲಿ ಫಲ ಉಂಟಾಗಬೇಕಾದರೆ ಬಹಳ ಕಷ್ಟಪಟ್ಟು ಕೃಷಿಮಾಡಬೇಕು ನಮ್ಮ ಸೀಮೆಯ ಭೂಮಿಯನ್ನು ಕೆರೆದರೆಸಾಕು, ವಸಂತಲಕ್ಷ್ಮಿಯು ಅಲ್ಲಿ ನಾಟ್ಯಮಾಡುವಳೆಂದು ಯಾರೋ ಕವಿಗಳು ಹೇಳುತ್ತಾರೆ ಅಲ್ಲಿ ವಿಶೇಷಕಷ್ಟವಿಲ್ಲದೆ ಜೀವನವು ನಡೆಯುವದು ; ಸೂರ್ಯನಿಂದ ಪಕ್ವಮಿಂದ ಬಹಳ ಸುಲಭವಾಗಿ ಫಲಪುಷ್ಪಗಳು ಧಾನ್ಯಗಳು ಪಕ್ವವಾಗುವವು; ಜನರಿಗೆ ಚಳಿಯ ವಿಷಯದಲ್ಲಿ ಬೇಕಾದಷ್ಟು ತಿಂಡಿಯಾಗಲಿ ವಸ್ತ್ರವಾಗಲಿ, ಇಲ್ಲಿ ಬೇಕಾಗುವದಿಲ್ಲ ಹೀಗೆ ಸಮಸ್ತ ಪದಾರ್ಥಗಳಲ್ಲಿಯೂ ಇಲ್ಲಿನ ಜೀವನವು ಸುಲಭವಾಗಿರುವದರಿಂದ, ಇಲ್ಲಿನಜನರು ಕಷ್ಟಕ್ಕಾಗಿ ಧೈರ್ಯಸ್ಥೈರ್ಯಾದಿ ಗುಣಗಳನ್ನು ಸಂಪಾದಿಸಿಕೊಳ್ಳುವುದಕ್ಕೆ ಮಾರ್ಗವಿಲ್ಲದೆ ಹೋಯಿತು

ಇದೇ ಮೂಲಕಾರಣವೆಂದು ಹೇಳಬೇಕು ಯಾವ ಪ್ರಾಣಿಗಳಾಗಲಿ, ಗುಣದೋಷಗಳೆರಡೂ ವಂಶದರವಾಗಿ ಅನುಸರಿಸಿಕೊಂಡು ಬರುವವು ಅನೇಕ ಕಾಲದಿಂದ ಅವರಿಗೆ ಸಾಹಸದ ಗುಣಗಳು ಅಭಿವೃದ್ಧಿಯಾಗುತಲೂ ನಮಗೆ ಆ ಗುಣದ ಗುಣಗಳು ಹೆಚ್ಚುತಲೂ ಬಂದವು

ನಮ್ಮ ಸೀಮೆಯಲ್ಲಿ ಕೃಷಿ ಉತ್ಪತ್ತಿ ವಿಷಯಗಳು ಸುಲಭವಾದವು ಈ ಗುಣಗಳಿಂದ ಚೆನ್ನಾಗಿದ್ದವೋ ಕಾಗಲೂ, ಅದೇ ಸ್ಥಿತಿಯಲ್ಲಿವೆ, ಆದ್ದರಿಂದಲ್ಲಿ ಅಂದ ಕಾಲದ ಈಗ ಇಲ್ಲವೆಂದು ಹೇಳಬೇಕು ಇಂಗ್ಲೆಂಡಿನಲ್ಲಿಯಾದರೋ ಈಗಿರುವ ಸ್ಥಿತಿಗೂ ಆಗಿನ ಸ್ಥಿತಿಗೂ ಹೋಲಿಕೆಯೇ ಹೇಳಲಾಗದು ಅವರ ವೇಷವು ಎಷ್ಟೋ ಬದಲಾಯಿತು; ನಾಲ್ಕು ದಿಕ್ಕಿನಲ್ಲಿಯೂ ಸಮುದ್ರದಿಂದ ಆವರಿಸಲ್ಪಟ್ಟಿರುವುದು ಪೂರ್ವದಲ್ಲಿ ಅವರು ಸ್ವಲ್ಪದಿಕ್ಕಿಗೆ ಅಲ್ಲದೆ ಬೇಕಾದ ಪದಾರ್ಥಗಳನ್ನು ಬೆಳೆದುಕೊಳ್ಳುತ್ತಿದ್ದರು, ಕಾಲಕ್ರಮದಲ್ಲಿ ಜನರು ಬಹಳ ಹೆಚ್ಚುತ್ತಿರುವದರಿಂದ ಅವರಿಗೆ ಬೇಕಾದ ಆಹಾರ ಪದಾರ್ಥಗಳನ್ನು ಇತರ ರಾಜ್ಯದಿಂದ ವ್ಯಾಪಾರ ಮೂಲಕವಾಗಿ ತರಿಸುತ್ತಾರೆ ಮೊದಲಿಂದ ಈ ಹಡಗುವ್ಯಾಪಾರದಲ್ಲಿ ಇವರು ಅತಿ ನಿಪುಣರಾದವರು ಇವರ ಅಭ್ಯುದಯಕ್ಕೆ ಇದೊಂದು ಮುಖ್ಯ ಕಾರಣವು

ಇಂಗ್ಲೆಂಡಿನಲ್ಲಿ ಕಲ್ಲಿದ್ದಲು ಕಬ್ಬಿಣವೂ ಬಹಳವಾಗಿ ದೊರೆಯುತ್ತವೆ, ಸುಮಾರು ೧೯೦ ವರ್ಷಗಳ ಕೆಳಗೆ ಸ್ಟೀಮಿನ ಹಬೆಯ ಶಕ್ತಿಯಿಂದ ಕೆಲಸವನ್ನು ಮಾಡಿಸಿಕೊಳ್ಳಬಹುದೆಂಬ ಅಂಶವನ್ನು ತಿಳಿದುಕೊಂಡರು ಅಂದಿನಿಂದ ಇವರ ವಶದಲ್ಲಿದ್ದ ಕಲ್ಲಿದ್ದಲನ್ನು ಉಪಯೋಗಿಸಿಕೊಂಡು ಸಮಸ್ತ ಯಂತ್ರಗಳನ್ನೂ ಬಂಡಿಗಳು ಹಡಗುಗಳು ಇವನ್ನು ನಡೆಯುವ ವಿಷಯಕ್ಕೆ ಈ ಹಬೆಯ ಶಕ್ತಿಯಿಂದ ಮಾಡಿಸಿಕೊಳ್ಳ ತೊಡಗಿದರು ಈ ಒಂದು ವಿಷಯದಿಂದುಂಟಾದ ಅಭಿವೃದ್ಧಿಯನ್ನು ಇಷ್ಟೆಂದು ಗಣಿಸುವುದಕ್ಕಾಗುವುದಿಲ್ಲ ಇದರಿಂದ ಇಂಗ್ಲಂಡಿನ ವ್ಯಾಪಾರವೂ ದ್ರವ್ಯವೂ ಐಶ್ವರ್ಯವೂ ಸಾವಿರಪಾಲು ಹೆಚ್ಚಿತು ತರಾತಕೆಯಿಂದ ಮತ್ತಾಗ ಬೋಗುತ್ತಿದ್ದ ಮನುಷ್ಯನನ್ನು ಒಡೆಯನಾದ ಉತ್ತಮವಾದದ್ದ ಮೇಲೆ ಕೂಡಿಸಿದಂತೆ ಆ ಬಡತನದಿಂದ ಈ ಎಲ್ಲರವರು ಧನಿಕರಾದರು ಈಗಲ್ಲಿ ಹಿಡಿದಿದ್ದ ಅದ್ಭುತವಾದ ವಿಷಯಗಳಿಂತ ಅದ್ಭುತವಾದ ಸಂಗತಿಗಳೆಲ್ಲಾ ಅನುಭವಕ್ಕೆ ಬಂದವು

ಇದು ಸಾಲದು ಎಂಬಂತೆ ವಿದ್ಯುಚ್ಛಕ್ತಿಯ ಗುಣವನ್ನು ಗ್ರಹಿಸಿಕೊಂಡರು ಇದರ ಬಲದಿಂದ ಟೆಲಿಗ್ರಾಫ್ ಮೂಲಕ ಸಾವಿರಾರು ಮೈಲಿಗಳಾಚೆಯವರೂ ವರ್ತಮಾನಗಳು ನಿಮಿಷಮಾತ್ರದಲ್ಲಿ ತಲುಪುವಂತೆ ಇರುವವರಿಗೂ ಮಾಡಿದ್ದರು ಈಗ ಒಂದು ಸ್ಥಳದಲ್ಲಿ ಮಾತಾಡಿದ ಧ್ವನಿಯು ಬಹಳ ದೂರದಲ್ಲಿ ಕೇಳುವ ಈ ವಿದ್ಯುಚ್ಛಕ್ತಿಯು ಮೂಲಕ ಟೆಲಿಫೋನ್ ಮಾಡಿದ್ದಾರೆ ಇದರಿಂದ ಮೈಸೂರಿನಲ್ಲಿರುವವರು ಬೆಂಗಳೂರಿನಲ್ಲಿರುವವರೊಡನೆ ಮಾತನಾಡಬಹುದು ಇದೀಗ ಶಿವಸಮುದ್ರದಲ್ಲಿ ಬೀಳುವ ಕಾವೇರಿಯ ಜಲಪಾತದಿಂದ ವಿದ್ಯುಚ್ಛಕ್ತಿಯನ್ನು ಹುಟ್ಟಿಸಿ ಅದನ್ನು ತಂತಿಗಳ ಮೂಲಕ ಕೋಲಾರದ ಚಿನ್ನದ ಗಣಿಗಳಿಗೆ ಕಳುಹಿಸುತ್ತಾರೆ ಅದರಿಂದ ಅಲ್ಲಿನ ಯಂತ್ರಗಳೆಲ್ಲಾ ನಡೆಯುತ್ತಿವೆ ಈಗ ವಿದ್ಯುಚ್ಛಕ್ತಿಯ ಬಳಕೆಯನ್ನು ಮಾಡಬೇಕಾಗಿರುವ ವ್ಯಾಪಾರವೇ ಹೆಚ್ಚಾಗಿ ಹೊಸದಾಗಿ ವೈದ್ಯಶಾಸ್ತ್ರವನ್ನು ಎಲ್ಲವೂ ಹಡಗು ಕ್ರಮೇಣ ಬದಲಾಗಿ ವಿದ್ಯುಚ್ಛಕ್ತಿಯನ್ನು ಈಗಲೇ ಉಪಯೋಗಿಸುವುದಕ್ಕೆ ಮೊದಲಾಗಿದೆ ಈ ವಿಷಯದಲ್ಲಿ ಅನೇಕ ಬಗೆಯ ಅತಿಸಿಪುಣರು ಯುರೋಪ್ ಮತ್ತು ಅಮೆರಿಕ ಖಂಡಗಳಲ್ಲಿ ನಿರಂತರವೂ ಹೊಸ ಉಪಾಯಗಳನ್ನು ಹುಡುಕುವುದಕ್ಕೆ ಬದ್ಧಕಂಕಣರಾಗಿರುವುದರಿಂದ, ವಿದ್ಯುಚ್ಛಕ್ತಿಯು ಉಪಯೋಗವು ಮುಂದೆ ಕ್ಕೆ ಅಪರಿಮಿತವಾಗುವುದೆಂದು ಹೇಳಬೇಕಾಗಿದೆ ಸಶೇಷ"

ವಿವಿಧ ವರ್ತಮಾನಗಳು

ದಾಸಿ ಅಬ್ಬಗಾಂ' ಎಂಬೊಬ್ಬ ನೀಟಫ ಸ್ತ್ರೀಸ್ತ್ರೀಳು ೧೧೩ ವರ್ಷಗಳವರಿಗೂ ಬದುಕಿದ್ದು ಮೊನ್ನೆ ಮದರಾಸಿನಲ್ಲಿ ಕಾಲವಾದಳು

ಜರ್ಮ ರಾಜ್ಯದಲ್ಲಿ ಕಳೆದ ೧೮೯೦ನೆ ಇಸವಿಯಲ್ಲಿ ೪,೭೦,೮೮೪ ಮದುವೆಗಳು ನಡೆದವು ಅದೇ ವರ್ಷದಲ್ಲಿ ೧,೦೩,೪೭೯ ಮಂದಿ ಗಂಡದಿರು ತಮ್ಮ ತಮ್ಮ ಹೆಂಡರನ್ನು ಕೈಬಿಟ್ಟಿರುತ್ತಾರೆ.

ಮಹಾರಾಜ ಸಿಂಧಿಯಾ ಬಹದೂರರವರು ಕೆಲವು ದಿನಗಳ ಕೆಳಗೆ ಕಲ್ಕತ್ತೆಯ ಒಂದು ಸ್ಕೂಲಿಗೆ ೫೦೦ ರೂಪಾಯಿಗಳನ್ನು ಕೊಟ್ಟಿದ್ದರು ಈಗ ಪುನಃ ೧,೦೦೦ರೂ ಗಳನ್ನು ಕೊಟ್ಟಿರುತ್ತಾರೆಂದು ಕೇಳಿ ತುಂಬಾ ಸಂತೋಷಿಸುತ್ತೇವೆ

ಕೆಲವು ಸಂಗತಿಗಳನ್ನು ಕೇಳಿದ್ದಕ್ಕೆ ಈತನು ನಾನು ಜನ್ಮ ತಾಳುವಾಗ ನನಗೇನೂ ಗೊತ್ತಿರಲಿಲ್ಲ ನಾನು ವಿದ್ಯಾವಂತನಾಗಿ ಪುನಃ ರಾಜ್ಯಕ್ಕೆ ಹೋದಾಗ ಈ ವಿಷಯಗಳನ್ನು ಕುರಿತು ಯೋಚಿಸುತ್ತೇನೆ ಎಂದು ಹೇಳಿ ಅವರು ಕೇಳಿದ ಸಂಗತಿಗಳನ್ನು ತನ್ನ ಪುಸ್ತಕದಲ್ಲಿ ಬರೆದುಕೊಂಡನು

ಹಿಂದುಸ್ಥಾನದಲ್ಲಿರುವ ಜನಗಳ ಪೈಕಿ ಲಕ್ಷ್ಯಾಧಿಪತಿಗಳು ಒಂದು ಗುಂಪಿನವರಷ್ಟೆ ಇದುವರೆಗೂ ಇವರಲ್ಲಿ ಯಾರೊಬ್ಬರೂ ಇಂಗ್ಲೀಷ್ ವಿದ್ಯದಲ್ಲಿ ಪಾಂಡಿತ್ಯವನ್ನು ಹೊಂದಿ ಇರಲಿಲ್ಲ ...

ಶಾಲಿವಾಹನಶಕ ೧೮೧೫ ನೇ ವಿಜಯನಾಮ ಸಂವತ್ಸರದ ನಿಜಾಷಾಢ ಶುದ್ಧ ಚತುರ್ಥಿ ಗುರುವಾರದಿಂದ ನಿಜಾಷಾಢ ಬಹುಳ ಪಂಚಮಿ ಬುಧವಾರದ ವರೆಗಿನ ಪಾನಿಚಾಂಗ.

೧೮೯೩ ನೇ ಇಸವಿ, ಜುಲೈ.

ತಾ.	ವಾರ.	ತಿಥಿ	ಘಳಿಗೆ.	ನಕ್ಷತ್ರ.	ಘಳಿಗೆ.	ಕರ್ಕಟಮಾಸ ತೇದಿ.
27	ಗು.	ಚ	43 17	ಪೂ	26-2	14
28	ಶು.	ಪಂ	46-59	ಉ	31-3	15
29	ಶ	ಷ	49-2	ಹ	35-1	16
30	ರ	ಸ	49-46	ಚ	37-41	17
31	ಸೋ.	ಅ	49-8	ಸ್ವಾ	39-9	18
1	ಮಂ	ನ	47-20	ವಿ	39-23	19
2	ಬು *	ದ	44-15	ಅ	38-22	20

* ಮೇಲುಕೋಟೆ ಕೃಷ್ಣರಾಜಮುಡಿ ಉತ್ಸವ

ಪೇಟೆ ಧಾರಣೆ.

ದಿನಸು.	ಮೈಸೂರು.	ಬೆಂಗಳೂರು.
	ರೂ. ಅ. ಪೈ.	ರೂ. ಅ. ಪೈ.
ತೊಗರಿಬೇಳೆ ಪಲ್ಲ ೧ ಕ್ಕೆ	[illegible]	[illegible]
ಹೆಸರು	[illegible]	[illegible]
ಉದ್ದು	[illegible]	[illegible]
ಕಡಲೆ	[illegible]	[illegible]
ಎಳ್ಳು	[illegible]	[illegible]
ಹುರಳಿ	[illegible]	[illegible]
ಸೀಗೇಕಾಯಿ ಮಣ ೧ ಕ್ಕೆ	[illegible]	[illegible]
ಮೆಣಸಿನಕಾಯಿ	[illegible]	[illegible]
ದುಂಡು ತರಹ	[illegible]	[illegible]
ಬೆಲ್ಲ ದೊಡ್ಡ ಅಚ್ಚು ೧೦೦ ಕ್ಕೆ	[illegible]	[illegible]
ಸಣ್ಣ ಅಚ್ಚು	[illegible]	[illegible]
ಒಳ್ಳೆಣ್ಣೆ ಮಣ ೧ ಕ್ಕೆ	[illegible]	[illegible]
ಹರಳೆಣ್ಣೆ	[illegible]	[illegible]
ಕೊತ್ತುಂಬರಿ ಪಲ್ಲ ೧ ಕ್ಕೆ	[illegible]	[illegible]
ಉಪ್ಪು	[illegible]	[illegible]
ಹುಣಸೇಹಣ್ಣು ಮಣ ೧ ಕ್ಕೆ	[illegible]	[illegible]
ಹಳೇ ಹುಣಸೇಹಣ್ಣು	[illegible]	[illegible]
ತುಪ್ಪ	[illegible]	[illegible]
ಸೀಮೆ ಯಾಣೆ ಪೆಟ್ಟಿಗೆ ೧ ಕ್ಕೆ	[illegible]	[illegible]
ತೆಂಗಿನಕಾಯಿ ೧೦೦ ಕ್ಕೆ	[illegible]	[illegible]
ಚಿನ್ನ (ಪವನ್)		
ಕೆಂಪು	[illegible]	[illegible]
ಪಚ್ಚೆ	[illegible]	[illegible]
ಗಟ್ಟಿ	[illegible]	[illegible]

Mysore.--Printed and published for the Proprietor at the Wesleyan Mission Press.
27/7/93.

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು ———— ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೭ | ಮೈಸೂರು—ಸಗ ೧೮೯೩ ನೇ ಇಸವಿ ಆಗಸ್ಟ್ ತಾರೀಖು ೩ ನೇ ಗುರುವಾರ. | ಸಂಖ್ಯೆ ೮

ನೋಟಿಸ್.

	ಕ್ರಯ	ಅಂಚೆ ಹಾಸಲು ಸಹಿತವಾಗಿ
Campbell's ಕನ್ನಡ ವ್ಯಾಕರಣ ಸಾರ	೦ ೨ ೦	೦ ೨ ೬
Object Lessons ವಸ್ತು ಪಾಠಗಳು	೦ ೧ ೦	೦ ೧ ೬
Picture do ಚಿತ್ರಗಳು ಸಹಿತವಾಗಿ	೦ ೨ ೦	೦ ೨ ೬
School Geography ಭೂಗೋಳ ಶಾಸ್ತ್ರಸಾರ	೦ ೬ ೦	೦ ೭ ೦

ಈ ನಾಲ್ಕು ಪುಸ್ತಕಗಳು ಮೈಸೂರು ಸರ್ಕಾರದವರ ಅಪ್ಪಣೆ ಪ್ರಕಾರ ಸಕಲ ಪಾಠಶಾಲೆಗಳಲ್ಲಿಯೂ ಉಪಯೋಗಿಸತಕ್ಕವುಗಳು.

	ಕ್ರಯ	ಅಂಚೆ ಹಾಸಲು ಸಹಿತವಾಗಿ
ಮಾರ್ಟಿನ್ ಲೂಥರ್ ಎಂಬವರ ಚರಿತ್ರೆ	೦ ೧ ೬	೦ ೨ ೦
ಸ್ತ್ರೀಯರು ಓದತಕ್ಕ ಪುಸ್ತಕ	೦ ೫ ೦	೦ ೫ ೬
ಗಣಿತ ಮಗ್ಗಿಗಳು	೦ ೧ ೦	೦ ೧ ೬
ಸಂಸ್ಕೃತ ಕರ್ಣಾಟಕ ಭಾಷಾಮಂಜರಿ	೦ ೨ ೦	೦ ೨ ೬
ಇಂಗ್ಲೀಷೂ ಕನ್ನಡವೂ ಶಬ್ದಾವಳಿ ೧ನೇ ೨ನೇ ಭಾಗಗಳಿಕ್ಕೆ	೦ ೧ ೦	೦ ೧ ೬
ಕಾವ್ಯಮಾಲೆ (Minor Poetical Anthology)	೦ ೮ ೦	೦ ೮ ೬
ಬಾಲವ್ಯಾಕರಣ	೦ ೫ ೦	೦ ೫ ೬
ಹಳಗನ್ನಡ ವ್ಯಾಕರಣ ಸೂತ್ರಗಳು	೦ ೬ ೦	೦ ೬ ೬
ಇಂಗ್ಲೀಷೂ ಕನ್ನಡವೂ ಸಂಭಾಷಣ ವಾಕ್ಯಗಳು	೦ ೧೦ ೦	೦ ೧೦ ೬
ಶಬ್ದಮಣಿ ದರ್ಪಣ	೧ ೦ ೦	೧ ೪ ೬
Kan Eng Pocket Dictionary	೧ ೪ ೦	೧ ೫ ೭
Eng Kan School Dictionary	೨ ೧೦ ೦	೨ ೧೨ ೬
ಬಳ್ಳೇ ಪಾಯಿ	೦ ೪ ೪	೦ ೪ ೬
ಆತ್ಮಿಕ ದಿವ್ಯ ಯುದ್ಧ (Bunyan)	೦ ೧೨ ೦	೦ ೧೨ ೬
ಕ್ರೈಸ್ತ ಪದ್ಧತಿ ೧ ನೇ ಭಾಗ ೨ ಆಣೆ ೩ನೇ ಭಾಗ	೦ ೧ ೬	೦ ೨ ೦
ಭಕ್ತಿಸಾರ	೦ ೧ ೦	೦ ೧ ೬
ಸತ್ಯ ವಾಗ್ದಾನ	೦ ೧ ೦	೦ ೧ ೬

ಈ ಪುಸ್ತಕಗಳೂ ಇನ್ನೂ ಅನೇಕ ಪ್ರಯೋಜನಕರವಾದ ಪುಸ್ತಕಗಳೂ ಕೆಳಗೆ ನಮೂದಿಸಿರುವ ಸ್ಥಳಗಳಲ್ಲಿ ದೊರಕುತ್ತವೆ

ಬೆಂಗಳೂರು—ಮೋರ್ಗನವರ ಪತ್ರವಿರುವ ಪುಸ್ತಕಶಾಲೆ

ಚಿಕ್ಕಬಳ್ಳಾಪುರ—ವೆಸ್ಲಿಯನ್ ಮಿಷನ್ ರೀಡಿಂಗ್ ರೂಮು

ತುಮಕೂರು—ವೆಸ್ಲಿಯನ್ ಮಿಷನ್ ಬಂಗಳೆ. ಮೈಸೂರು—ವೆಸ್ಲಿಯನ್ ಮಿಷನ್ ಪ್ರೆಸ್

ನೋಟಿಸ್.

ಪುಸ್ತಕಗಳು	ಕ್ರಯ
ಪ್ರಾರ್ಥನಾಮಾಲಿಕೆ	1—8—0
ಕನ್ನಡ ಇಂಗ್ಲೀಷು ನಿಘಂಟು 1 ನೇ ದೊಡ್ಡ ತರಹ	3—0—0
„ „ 2 ನೇ ತರಹ	2—8—0
ಬಾಲಕರು ಓದುವ ಎರಡನೆ ಜ್ಞಾನೋಪದೇಶದ ಪ್ರಶ್ನೋತ್ತರಗಳು	0—1—0
ಸಭೆಯ ನಿಗಮಗಳನ್ನು ಕುರಿತದ್ದು	0—0—6
ಕಥಾ ಸಂಗ್ರಹ 1 ನೇ ಭಾಗದಿಂದ 3 ವರೆಗೆ	1—0—0
ಕಥಾ ಸಂಗ್ರಹ 4 ರಿಂದ 6 ನೇ ಭಾಗ ಹೊಸ ಛಾಪಿ	1—0—0
„ „ ದೊಡ್ಡ ತರಹ	1—6—0
ಬೋಧಕಾಸಕ್ತಿ ಬೋಧಿನಿ	0—4—0
ಸತ್ಯವೇದವನ್ನು ಕುರಿತು 2 ನೇ ಭಾಗ	0—4—0
ಪ್ರಸಂಗಿಯ ದರ್ಪಣ	0—0—6
ಇಂಗ್ಲೀಷು ಭಾಷೆಯಲ್ಲಿಯೂ, ಕನ್ನಡ ಭಾಷೆಯಲ್ಲಿಯೂ, ಶಬ್ದಗಳ ವಿಭಾಗಗಳನ್ನು ವಿವರಿಸುವ ನಿಘಂಟು	0—2—0
ಕನ್ನಡ ವ್ಯಾಕರಣ (ಇಂಗ್ಲೀಷಿನಲ್ಲಿ)	2—0—0
ಹಿಂದುಸ್ತಾನಿ ವ್ಯಾಕರಣ	1—0—0
ಬಾಲರಿಗಾ ಸೋಪಾನವು	0—1—0
ದಿನ ಕರಮಗಳ ಅಂಟುರೋಗವಿಚಾರ	0—0—6
ಕ್ರಿಸ್ತರ ಬೋಧನೆಗಳ ಸಾರಾಂಶವು	0-12—0

ಮೇಲೆ ನಮೂದಿಸಿರುವ ಪುಸ್ತಕಗಳನ್ನು ಅಪೇಕ್ಷಿಸುವವರು ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್ಸಿಗೆ ಬರೆದು ತರಿಸಿಕೊಳ್ಳಬಹುದು ಅಂಚೇ ಹಾಸಲು ಬೇರೆ ಕೊಡಬೇಕು

ವೆಸ್ಲಿಯನ್ ಮಿಷನ್ ಪ್ರೆಸ್,

ಮೈಸೂರು.

ಪ್ರಸಿದ್ಧಪತ್ರಿಕೆ.

ಕಂ|| ಸಕಲಸುಮನಸರಗರಾಹಾಪೆ | ಸುಕರದಿ ಶ್ರೀಬಾವನಾಜ
ಒಡೆಯರಮುತಾಂ || ಪ್ರಕಟಿಪಮಾಕ್ಷ್ಮಾರಕವಕಥೆ |
ವಿಕಸಿಪುದೆಲ್ಲಿಪವ ಕೇಳಲ್ಕನಿಕಾನಂದಂ ||

ಕನ್ನಡ ಮಹಾಭಾರತ.

"ಶ್ರೀಕೃಷ್ಣರಾಜ ವಾಣೀವಿಲಾಸ" ಎಂಬ ಕನ್ನಡ ಗದ್ಯಾಭಾರತವು ನಮ್ಮ ಸ್ವಕೀಯ ಶ್ರೀಚಾಮುಂಡೇಶ್ವರಿ ಪ್ರೆಸ್ಸಿನಲ್ಲಿ ಪ್ರಕಟಿಸಲಾಗುವದು ಯಲ್ಲರಿಗೂ ವಿಶದವಾಗಿರುವಷ್ಟೆ. ಈಗ ಹದಿನೆಂಟು ಪರ್ವಗಳೂ ಪೂರ್ತಿಯಾಗಿ ಪ್ರಸಿದ್ಧಿ ಅಪೇಕ್ಷಿಸುವವರು ಕೆಳಗೆ ವಿವರಿಸುವ ಕ್ರಯದವರೀಗೆ ಕ್ರಯ ಪಾವತಿಮಾಡಿ ಪಡೆಯಬಹುದು

ಆದಿಪರ್ವ ರೂ ೩, ಸಭಾಪರ್ವ ೧—೪—೦, ಅರಣ್ಯಪರ್ವ ವಿರಾಟಪರ್ವ ಸ್ಪೆಷಲ್‍ಕವರಿಸ್ಯಾಂಪ್ ೧೨ ಆಣೆ, ಟಿಟೋ ಕಿತ್ತಿನಾರಿನ ಪ್ರಲಿಪ್ಯಾಂಪ್ ೧ ರೂ, ಉದ್ಯೋಗಪರ್ವ ಭೀಷ್ಮಪರ್ವ—, ದ್ರೋಣಪರ್ವ ೨—೮—೦, ಕರ್ಣಪರ್ವ ಶಲ್ಯಪರ್ವ ೧ ೨—೦ ಸೌಪ್ತಿಕಪರ್ವ ೬ ಆಣೆ, ಸ್ತ್ರೀಪರ್ವ ೬ ಆಣೆ, ಶಾಂತಿಪರ್ವ ರಾಜಧರ್ಮ ೨—೬—೦, ಆಪದ್ಧರ್ಮ ೮ ಆ, ಮೋಕ್ಷಧರ್ಮ ೨—೬—೦, ಅನುಶಾಸನೀಕಪರ್ವ ೩—೧೨—೦ ಅಶ್ವಮೇಧಿಕಪರ್ವ ೧—೧೨—೦, ಆಶ್ರಮವಾಸಿಕಪರ್ವ—ಮೌಸಲಪರ್ವ—ಮಹಾಪ್ರಸ್ಥಾನಪರ್ವ—ಸ್ವರ್ಗಾರೋಹಣಪರ್ವ ೧೦ ಆಣೆ, ಭಗವದ್ಗೀತ ೮ ಆಣೆ, ಯದುವಾಗಿಯವನ ಚರಿತ್ರೆ ೪ ಆ, ಪದಭಕ್ತಿಸಾರ ೭ ಪೈ, ಲೋಕವರಿಸಿಕೆಂಪರೀ ಟೆಕ್ಸ್ಟಿನ ನೋಟ್ಸು ೮ ಆಣೆ

ಅರಣ್ಯಪರ್ವ, ಉದ್ಯೋಗಪರ್ವ, ಕರ್ಣಪರ್ವ ಈ ಮೂರು ಪರ್ವಗಳು ಗವರ್ನಮೆಂಟ್ ಏಕಡಿಷೋನಿನಲ್ಲಿ ದೊರೆಯಬಹುದು ಮೇಲೆ ಹೇಳಲ್ಪಟ್ಟಿರುವ ಪುಸ್ತಕಗಳು ನಮ್ಮಲ್ಲಿ ಸ್ವಲ್ಪವೇ ಇರುವದರಿಂದ ಜಾಗ್ರತೆಯಾಗಿ ತರಿಸಿಕೊಳ್ಳಬಹುದು.

ಶ್ರೀಮನ್ಮಹಾರಾಜರವರಿಗೆ ಫಲಪುಷ್ಪ ಸರಬರಾಯಿ ಮಾಡುವದಕ್ಕೆ ಮುಖ್ಯವಾಗಿ ನೇಮಿಸಲ್ಪಟ್ಟ,

ಎಂ ರಾಮಪ್ಪ, ಅಂಡ್‍ಸನ್,
ಪ್ರೊಪ್ರೈಟರ್ಸ್, ಶ್ರೀಚಾಮುಂಡೇಶ್ವರಿ ಪ್ರೆಸ್,
ಲಾಲ್—ಬಾಗ್ ರೋಡ್, ಬೆಂಗಳೂರು

ಸಗ ೧೮೮೯ ರಲ್ಲಿ ಸ್ಥಾಪಿಸಲ್ಪಟ್ಟದ್ದು.

ಕೆನರಾ ಅಂಡ ಮೈಸೂರ ಟ್ರೇಡಿಂಗ ಏಜನ್ಸೀ ಆಫೀಸ, ಮುಂಬಯಿ.

ಇವರು ತಯಾರಿಸಿರುವಂಥ—

ಹೈಮಧಾತ್ರೀತೈಲ.

ಕಳೆದ ಜನವರಿ ತಿಂಗಳೊಂದರಲ್ಲಿ ೪,೧೦೦ ಬಾಟ್ಲಿಗಳು ಖರ್ಚಾದವು. ಈ ತೈಲದ ಮಹತ್ವವನ್ನು ಕುರಿತು, ನಾವೀಗ ಹೆಚ್ಚಾಗಿ ವರ್ಣಿಸಲಾರೆವು—ಯಾಕಂದರೆ, ಯಾರು ಈ ತೈಲವನ್ನು ಉಪಯೋಗಿಸುತ್ತಾರೋ ಅವರಿಗೆ ಒಂದೆರಡು ದಿವಸಗಳಲ್ಲಿಯೇ ಇದರ ಅಪ್ರತಿಮವಾದ ಗುಣವು ಸಹಜವಾಗಿ ಅನುಭವಕ್ಕೆ ಬರುವದು. ಆದಾಗ್ಯೂ ಇದರ ಮುಖ್ಯವಾದ ಉಪಯೋಗವನ್ನು ತಿಳಿಸುವದು ನಮ್ಮ ಕರ್ತವ್ಯವಾಗಿರುತ್ತದೆ.

ಈ ನಮ್ಮ "ಹೈಮಧಾತ್ರೀ ತೈಲವನ್ನು" ಪ್ರತಿದಿನ ತಲೆಗೆ ಹಾಕಿಕೊಂಡರೆ ಮಿದುಳಿನಲ್ಲಿರುವ ಉಷ್ಣತೆಯನ್ನು ಪರಿಹರಿಸುವದಲ್ಲದೇ, ಕಣ್ಣಿಗೂ, ಮಿದುಳಿಗೂ ತಂಪುಕರಿಸಿ, ಚಿತ್ತಕ್ಕೆ ಶಾಂತಿಯನ್ನುಂಟುಮಾಡುವದು ಮತ್ತು ಕಣ್ಣುಗಳಿಗುಂಟಾಗುವ ಸಾಮಾನ್ಯವಾದ ವಿಕಾರಗಳನ್ನೆಲ್ಲ ಹೋಗಲಾಡಿಸುವದು. ದೃಷ್ಟಿಗೆ ತೀವ್ರತೆಯುಂಟಾಗುವದು.

ಹೆಚ್ಚಾಗಿ ಓದತಕ್ಕವರಿಗೂ, ಒಂದೇ ಸಮನಾಗಿ ಕಣ್ಣಿಟ್ಟು ಕೆಲಸ ಮಾಡತಕ್ಕ ಕಾರಕೂನರಿಗೂ, ಕಣ್ಣುಗಳಲ್ಲಿ ನೀರು ಸುರಿಯುವವರಿಗೂ, ಉರಿಗಣ್ಣಿನವರಿಗೂ, ಚಿತ್ತವ್ಯಗ್ರತಾವುಳ್ಳವರಿಗೂ, ಅತ್ಯಂತ ಗುಣಕಾರಿಯಾಗಿರುವದು. ಈ ತೈಲದಲ್ಲಿರುವ ಇನ್ನೊಂದು ಅಪ್ರತಿಮವಾದ ಶಕ್ತಿಯೇನೆಂದರೆ—ಕೂದಲುಗಳನ್ನು ನಯವಾಗಿಯೂ, ಬೆಳೆಯುವಂತೆಯೂ, ಮಾಡುವದಲ್ಲದೇ ಕಪ್ಪು ಬಣ್ಣವನ್ನು ಹೆಚ್ಚಿಸುವದು. ಕೂದಲುಗಳ ಬೇರುಗಳನ್ನು ಗಟ್ಟಿಮಾಡಿ, ಅವು ಉದುರಿಹೋಗದಂತೆ ಮಾಡುವದು.

ಪ್ರತಿಯೊಂದು ಬಾಟ್ಲಿಯೊಳಗೆ ೧೬ ತೊಲೆ ತೈಲವಿರುವದರಿಂದ ಒಬ್ಬನಿಗೆ ೨ ತಿಂಗಳು ಹಚ್ಚಿಕೊಳ್ಳಲಿಕ್ಕೆ ಸಾಕಾಗುವದು. ಬಡವರು ಸಹ ಕೊಂಡುಕೊಳ್ಳಲಿಕ್ಕನುಕೂಲವಾಗಿರುವದಕ್ಕೋಸ್ಕರ ಪ್ರತಿಯೊಂದು ಬಾಟ್ಲಿಗೆ ೧೦ ಆಣೆ ಕ್ರಯವಿಟ್ಟಿರುವೆವು ೧೨ ಬಾಟ್ಲಿಗಳುಳ್ಳ ೧ ಪೆಟ್ಟಿಗೆಗೆ ೬|| ರೂಪಾಯಿ. ಪ್ರತಿಯೊಬ್ಬ ಕುಟುಂಬಿಗನೂ, ಈ ತೈಲವನ್ನು ಉಪಯೋಗಿಸುವದು ಅವಶ್ಯವಾಗಿರುತ್ತದೆ. ಮಕ್ಕಳುಮರಿಗಳಿಗೆ ಸಹ ಈ ತೈಲವು ಸುಖಾವಹವಾಗಿರುತ್ತದೆ.

ಈ ತೈಲ ಮತ್ತು ಈ ಕೆಳಗೆ ಬರೆಯುವಂಥ ಔಷಧಗಳು, ಕ್ರಿಸ್ಟಲ್, ಮುತ್ತು, ರತ್ನ, ಬಂಗಾರ, ಬೆಳ್ಳಿ ಮುಂತಾದ ಸಾಮಾನುಗಳನ್ನು ಪಡೆಯಲಿಚ್ಛಿಸುವವರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬೇಕು

ಮ್ಯಾನೇಜರ, ಕೆನರಾ ಅಂಡ ಮೈಸೂರು ಟ್ರೇಡಿಂಗ ಏಜನ್ಸಿ ಆಫೀಸ, ಮಾರ್ಕೆಟ ಪೋಸ್ಟ್. ಮುಂಬಯಿ.

☞ ಈ ತೈಲವನ್ನು ನಮ್ಮ ವಿನಹ ಇನ್ಯಾರೂ ಮಾಡಲಾರರು. ನಮ್ಮ ಹೆಸರಿನ ಗುರ್ತನ್ನು ನೋಡಿ ತೆಗೆದುಕೊಳ್ಳಬೇಕು. ಬೇರೇತರದ ಎಣ್ಣೆಗಳನ್ನು ಈ ಹೆಸರನ್ನಿಟ್ಟು ಮಾರುತ್ತಿದ್ದರೆ ಜಾಗ್ರತೆ ಪಡಿರಿ!

ಔಷಧಗಳು	ರೂ ಆ.	ಕ್ರಿಸ್ಟಲ್‍ಗಳು.	ರೂ. ಆ.
ನಯನಾಮೃತಘೃತ ಒಟ್ಲಿ ೧ಕ್ಕೆ	೧—೬	ಮೂಲವ್ಯಾಧಿಗೆ ಮದ್ದು	೨—೮
ನಯನಾಮೃತ ಕಾಡಿಗೆ	೧—೬	ಕರೇಸರ್ಜನ ರಾಂಗ್‍ಕೋಟ	೫—೦
ಕರ್ಣಸ್ರಾವನಾಶಕ ಅಪ್ರತಿಮತೈಲ	೧—೦	ಡಿಟೊ ಆರ್ಗನ	೪—೮
ಮಹಾಮಾತಕುಮಾರತೈಲ	೧—೦	ಡಿಟೊ ಪಾರ್ಟಿಕೋಟ (ಇಂಗ್ಲಿಷಿನಮಾದರಿ)	೪—೬
ಪ್ರವಾಳಭಸ್ಮವು	೨—೧೨	ದಕ್ಷಿಣದ ಶೆಪ್ಟೇರಿಕೋಟ	೨—೮
ವಿವಿಧವ್ರಣಹರಪಟ್ಟಿಕೆಯು	೧—೦	ಡಿಟೊ ಆರ್ಗನ	೨—[illegible]
ಬಾಲಸಂಜೀವಿನೀಗುಟಿಕೆ	೩—೮	ಫ್ಲಾನಲ್ ಶರ್ಟಿಂಗ	೧—[illegible]
ಅಜೀರ್ಣಹರಮಾತ್ರೆ	೦—೮	ಡಿಟೊ ಬನಿಯನ್	೦—[illegible]
ಸುಗಂಧಲೇಪನಕರವಂತಗಂಧವು	೦—೪	ಬೆಳ (ಇಂಗ್ಲಿಷಿನಮಾದರಿ) [illegible]	[illegible]
ಕಜ್ಜಿಮುಲಾಮು	೦—೨		

ತನುಕರವಾದ ಚಂದ್ರಕಾಂತ ಲೆಯ ಕನ್ನಡಕಗಳ ಕ್ರಯ ರೂ. ೧೦—೪||—೫—೩|| ಉತ್ತಮವಾದ [illegible]" ಎಂಬ ಹೆಸರಿನ ರಿಗಡಿಯಾರವು (೧ ವರುಷದ ಜಾಮೀನುಳ್ಳದ್ದು) ಕ್ರಯ ರೂ. ೬.

ವೃತ್ತಾಂತ ಪತ್ರಿಕೆ.

ಚಂದಾ ನಿರ್ಣಯ.

	ರೂ. ಆ. ಪೈ
ಸ್ಥಳದವರಿಗೆ ವರ್ಷ ೧ಕ್ಕೆ	೧—೪—೦
ಪರಸ್ಥಳದವರಿಗೆ ವರ್ಷ ೧ಕ್ಕೆ	೧—೧೦—೦
ಬಿಡಿ ಪತ್ರಿಕೆ ೧ಕ್ಕೆ	೦— ೦—೩

ಈ ಪತ್ರಿಕೆಯು ಮೈಸೂರು ರಾಜಧಾನಿಯಲ್ಲಿ ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಬಡವರು ಮೊದಲುಗೊಂಡು ಸರ್ವಸ್ತರಿಗೂ ಸುಲಭಸಾಧ್ಯವಾಗುವಂತೆ ಈ ಪತ್ರಿಕೆಗೆ ಇಷ್ಟು ಅಲ್ಪ ಮೌಲ್ಯವನ್ನು ನಿರ್ಣಯಿಸಿರುತ್ತೇವೆ ಈ ಪತ್ರಿಕೆಯನ್ನು ಅಪೇಕ್ಷಿಸುವವರು ಚಂದಾಹಣವನ್ನು ಮುಂದಾಗ್ಯೆ ಕಳುಹಿಸಿಕೊಡಬೇಕು.

ಎಡಿಟರ್,

ವೃತ್ತಾಂತ ಪತ್ರಿಕೆ

ಜಗದ್ಗುರುವಿನ ಚರಿತ್ರ ಸಂಗ್ರಹ.

THE LIFE

OF

The Lord Jesus Christ.

Selected Incidents from the Gospels,

FREELY PARAPHRASED.

ನೂತನವಾಗಿ ರಚಿಸಲ್ಪಟ್ಟ ೬೬ ಪುಟಗಳುಳ್ಳ ಈ ಪುಸ್ತಕವನ್ನು ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್ಸಿಗೆ ಬರೆದು ತರಿಸಿಕೊಳ್ಳಬಹುದು.

ಕ್ರಯ (ಟಪ್ಪಾಲ ಹಾಸಲ ಅಲ್ಲದೆ)

೧೦೦ ಪ್ರತಿಗಳಿಗೆ	೫—೦—೦
ಬಿಡಿ ಪ್ರತಿಗೆ	೦—೦—೯

ಸುಮಾರು ೨—೩ ಪ್ರತಿಗಳನ್ನು ಅಂಚೆ [illegible] ಹಾಸಲಿನಿಂದ ಕಳುಹಿಸಲಾಗುವುದು.

ಇಸ್ತಿಹಾರ್ ನಾಮಾ

ಹೊನ್ನಾಳಿ ಸಬ್ ಡಿವಿಜನ್ ಮುನಸಿಫ್ ಕೋರ್ಟಿನಲ್ಲಿ.
೧೮೯೩ನೇ ಇಸವಿ ಸಿವಿಲ್ ಸೂಟ ನಂಬರ ೧೬೮.

ವಾದಿ.

೧ ಹರಿಹರ ಸ್ವಾಮಿ ಉರುಫ್ ಹರಿಮಸ್ತ ಸಾಬಾ ಹಿಹಮುದನ್, ೪೦ ವರುಷದ ವಯಸ್ಸು, ಕಸುಬು ವ್ಯಾಪಾರ, ಹರಿಹರದ ವಾಸಸ್ಥ.

ಪ್ರತಿವಾದಿಗಳು.

೧ ಗಂಧಗಸೂರ್, ರಜಪೂತ ಜಾತಿ, ವ್ಯಾಪಾರ ಕಸಬು, ಹರಿಹರದ ವಾಸಸ್ಥ.

೨ ಮಕ್ಕಾಸದಾರ ಷಂಘಟನ ಸಾಹೇಬ್, ಹರಿಹರದ ವಾಸಿ.

೩ ಲಾಲಾಸಾಹೇಬ, ಹರಿಹರದ ವಾಸಿ.

೪ ಅಬ್ದುಲ್ಲಾ ಸಾಹೇಬ, ಡಿಟೋ ವಾಸಿ.

೫ ಬುಡನ ಸಾಹೇಬ, ಡಿಟೋ

೬ ದಾವಲ ಸಾಹೇಬ, ಡಿಟೋ

ಇದರಿಂದ ಸಮಸ್ತ ಜನರಿಗೆ ತಿಳಿಯಪಡಿಸುವದೇನಂದರೆ—ಮೇಲೆ ಕಂಡ ವ್ಯಾಜ್ಯದಲ್ಲಿ ವಾದಿಯು ತನಗೆ ಎರಡನೇ ಪ್ರತಿವಾದಿಯಿಂದಾ ೪—೬—೮೬ ನೇ ಮರ್ಗ್ಗೇಜಿನಲ್ಲಿ ೩೦೦ ರುಪಾಯಿಗಳಿಗೆ ತನಗೆ ಭೋಗ್ಯಕ್ಕೆ ಕೊಡಿ ತಂತ ಸ್ವಾಧೀನವಿದ್ದ ಈ ಕೆಳಗೆ ವಿವರಿಸುವ ಮನೆಯಿಂದ ಮಂದನೆ ಪ್ರತಿವಾದಿ ಅಕ್ರಮ ಸ್ವಾಧೀನ ಹೊಂದಿ ಇರುವದರಿಂದ ಸದರೀ ಮನೆ ಬರಬೇಕೆಂದು ವಗೈರೆ ತಂದ ದಾವೆಯಲ್ಲಿ ೧ ನೇ ಪ್ರತಿವಾದಿಯು ಸದರೀ ಸ್ವತ್ತನ್ನು ತಾನು ಅಕ್ರಮಸ್ವಾಧೀನ ಹೊಂದಲಿಲ್ಲವೆಂತಲೂ, ಈ ಸ್ವತ್ತು ಎರಡನೇ ಪ್ರತಿವಾದಿ ಸ್ವಂತದ್ದಲ್ಲವೆಂತಲೂ, ಹರಿಹರದ ಬಾಬಾಯಿಮಾಂಮುಕಾಸಿಗೆ ಸೇರಿದ್ದಾಗಿಯೂ, ಸದರೀ ಮಕಾನ ಮ್ಯಾನೇಜರಾದ ೩—೪—೫—೬ ನೇ ಪ್ರತಿವಾದೀರಿಂದ ತನಗೆ ಬಾಡಿಗ್ಯೆ ಕೊಡಲ್ಪಟ್ಟಿದೆಯೆಂತಲೂ, ಈ ಸ್ಥಳ ಹರಿಹರದ ಗ್ರಾಮಸ್ಥರಿಗೆ ಸಂಬಂಧಿಸಿದ್ದೆಂದೂ ಕೊಟ್ಟ ಉದಹರಣೇ ಮೇಲೆ ಮೇಲೆ ಕಂಡ ೩—೬ ಲಾಗಾಯಿತು ಹರಿಹರದ ಗ್ರಾಮಸ್ಥರಿಗೆ ಸಂಬಂಧಿಸಿದ್ದೆಂದೂ ಕೊಟ್ಟ ಉದಹರಣೆ ಇರುವದಲ್ಲದೆ ಇಂನೂ ಆ ಗ್ರಾಮದಲ್ಲಿ ಇರತಕ್ಕ ಇತರರಿಗಿನ ಪ್ರತಿವಾದೀರೆಂದ ಕಕ್ಷಿಗಾರರಾಗಿ ಸೇರಿಸಿ ಇರುವದಲ್ಲದೆ ಇಂನೂ ಆ ಗ್ರಾಮದಲ್ಲಿ ಇರತಕ್ಕ ಜನ ದಾವೆಗೆ ಕಕ್ಷಿಗಾರರಾಗಬೇಕೆಂದು ಇಷ್ಟಪಟ್ಟ ಸಮಸ್ತ ಜನರೂ ೧೮೯೩ ನೇ ಇಸವಿ ಆಗಸ್ಟ ತಿಂಗಳು ೨೮ ನೇ ತಾರೀಖು ದಿವಿ ೧೧ ಗಂಟೆಗೆ ಹೊನ್ನಾಳಿ ಮೊಕ್ಕಾಂ ಈ ಕೋರ್ಟು ೧೧ಬರೂಬ ಹಾಜರಾಗಿ ವ್ಯವಹರಿಸ ಬಹುದಂತ ಇದರಿಂದ ಪ್ರಕಟಿಸಲ್ಪಟ್ಟಿದ

ಭೋಗ್ಯದ ಸ್ವತ್ತಿನ ವಿವರ.

ಹರಿಹರ ಕಸಬೆಯಲ್ಲಿರುವ ಉತ್ತರಭಾಗದ ಖಾನೇಷುಮಾರಿ ನಂಬರು ನೆ ಪಂಜಿನ ಮನೆಗೆ ಚಕ್ಕುಬಂದಿ—ಪೂರ್ವಕ್ಕೆ ಮೊಹಿದೀನ್ ಸಾಬನಮನೆ, ಪಶ್ಚಿಮಕ್ಕೆ—ರಸ್ತೆ, ಉತ್ತರಕ್ಕೆ—ಕಿರಸ್ತಾನದ ಮಸೀದಿ, ದಕ್ಷಿಣಕ್ಕೆ—ಬಾಜಾರದ ರಸ್ತೆ, ಈ ಮಧ್ಯ ಇರತಕ್ಕ ಮನೆ.

P. S. S[illegible] P[illegible],
Munsif

೨೮—೬—೯೩
ಹೊನ್ನಾಳಿ.

ವೃತ್ತಾಂತ ಪತ್ರಿಕೆ.

೧೮೯೩ನೇ ಇಸವಿ ಅಗಸ್ಟ್ ತಾ|| ೩ ನೇ ಗುರುವಾರ

೧೮೯೧ನೇ ಇಸವಿಯಲ್ಲಿ ನಡೆದ ಖಾನೇಷುಮಾರೀ ರಿಪೋರ್ಟು.

ಮ|| ವಿ. ಎನ್. ನರಸುಮ್ಮಯ್ಯಂಗಾರ್ರವರು ಸರ್ಕಾರದ ಅಪ್ಪಣೆಯನ್ನು ಪಡೆದು ತಯಾರುಮಾಡಿ ಕಳುಹಿಸಿರುವ ಖಾನೇಷುಮಾರಿಯ ರಿಪೋರ್ಟು ಮೂರು ದಿವಸಗಳ ಕೆಳಗೆ ನಮಗೆ ತಲುಪಿದ್ದಕ್ಕಾಗಿ ನಾವು ಕೃತಜ್ಞತಾ ಭಾವದೊಡನೆ ಸಂತೋಷಿಸುತ್ತೇವೆ. ಈ ರಿಪೋರ್ಟನ್ನು ಎರಡು ಭಾಗವಾಗಿ ವಿಂಗಡಿಸಿ, ಇದನ್ನು ಎರಡು ಪುಸ್ತಕಗಳಲ್ಲಿ ಛಾಪಿಸಿ ಇದ್ದಾರೆ. ಇವುಗಳ ಪೈಕಿ ಮೊದಲನೇ ಪುಸ್ತಕದಲ್ಲಿ ೩೯೩ ಪುಟಗಳೂ ಎರಡನೇ ಪುಸ್ತಕದಲ್ಲಿ ೩೧೪ ಪುಟಗಳೂ ಇರುತ್ತವೆ ಎರಡನೆ ಭಾಗದಲ್ಲಿ ಜನಸಂಖ್ಯೆ, ಮತ, ಜಾತಿ, ವಿದ್ಯೆ, ಆರೋಗ್ಯಗಳನ್ನು ತಿಳಿಸತಕ್ಕ ಪಟ್ಟಿಗಳು ಅಡಕವಾಗಿವೆ ಮೊದಲನೆ ಪುಸ್ತಕದಲ್ಲಿ ಮೇಲ್ಕಂಡ ಪಟ್ಟಿಗಳನ್ನು ವಿವರಿಸತಕ್ಕ ಲೇಖನಗಳು ಇದ್ದುದಲ್ಲದೆ ಅತ್ಯಂತೋಪಯುಕ್ತವಾದ ಚಿತ್ರಗಳೂ, ನಕ್ಷೆಗಳೂ, ಬೊಂಬೆಗಳೂ ಅನೇಕವಾಗಿ ತುಂಬಿ ಇವೆ. ಹ್ಯಾಗೆಂದರೆ ಒಂದು ಸ್ಥಳದಲ್ಲಿ ಮೈಸೂರು ಸೀಮೆಯ ನಕ್ಷೆಯನ್ನು ಬರೆದು ಅದರಲ್ಲಿ ಚಿಕ್ಕ ದೊಡ್ಡತಕ್ಕ ಪ್ರದೇಶಗಳನ್ನು ತೋರ್ಪಡಿಸುವಂತೆ ಅವರಲ್ಲಿ ಭಂಗಾರದ ರೇಖೆಗಳನ್ನು ಹಾಕಿಸಿರುತ್ತಾರೆ. ಇದರಿಂದ ಆ ನಕ್ಷೆಯು ಬಹು ವಿಚಿತ್ರವಾಗಿದೆ. ಅನೇಕ ನಕ್ಷೆಯಲ್ಲಿ ನಾನಾ ತರದ ಬಣ್ಣಗಳನ್ನು ಉಪಯೋಗಿಸಿ, ಜನರು ವಿಶೇಷವಾಗಿರುವ ಸ್ಥಳಗಳನ್ನೂ, ವಿರಳವಿರಳವಾಗಿರತಕ್ಕ ಸ್ಥಳಗಳನ್ನೂ ಎಲ್ಲರಿಗೂ ಸುಲಭವಾಗಿ ತಿಳಿಯುವಂತೆ ತೋರಿಸಿ ಇದ್ದಾರೆ. ಈ ನಕ್ಷೆಯನ್ನು ನೋಡಿದರೆ ಜನಭರಿತದಲ್ಲಿ ಮೈಸೂರು ಬೆಂಗಳೂರು ಡಿಸ್ಟ್ರಿಕ್ಟುಗಳೇ ಮೊದಲನೇದೆಂತಲೂ, ಕೋಲಾರ, ಹಾಸನ ಡಿಸ್ಟ್ರಿಕ್ಟುಗಳು ಎರಡನೆಯದೆಂತಲೂ, ಶಿವಮೊಗ್ಗ, ಕಡೂರು, ತುಮಕೂರು ಮೂರನೆಯದೆಂತಲೂ, ಚಿತ್ರಕಲ್ಲುದುರ್ಗವೇ ನಾಲ್ಕನೆಯದೆಂತಲೂ, ನೋಡಿದಮಾತ್ರದಲ್ಲೇ ಗೊತ್ತಾಗುತ್ತದೆ. ಈ ನಕ್ಷೆಯನ್ನು ನಾವು ನೋಡಿ, ಜನಸಂಖ್ಯೆಯ ಪಟ್ಟಿಯನ್ನು ನೋಡಿದಲ್ಲಿ, ಚದರ ಮೈಲಿಗೆ ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ೨೩೬, ಮೈಸೂರು ಡಿಸ್ಟ್ರಿಕ್ಟಿನಲ್ಲಿ ೨೩೩, ಹಾಸನದಲ್ಲಿ ೧೮೮, ಕೋಲಾರದಲ್ಲಿ ೧೮೩, ತುಮಕೂರಿನಲ್ಲಿ ೧೬೨, ಶಿವಮೊಗ್ಗೆಯಲ್ಲಿ ೧೩೭, ಕಡೂರಿನಲ್ಲಿ ೧೨೪, ಚಿತ್ರಕಲ್ಲುದುರ್ಗದಲ್ಲಿ ೧೧೩—ಈ ಪ್ರಕಾರ ಜನವಿರುವರೆಂದು ತಿಳಿದುಬರುತ್ತದೆ. ಇನ್ನೊಂದು ನಕ್ಷೆಯಲ್ಲಿ ಗೋಪುರದಂತಿರುವ ಕೆಲವು ಆಕಾರಗಳನ್ನು ತೋರಿಸಿ ಅವುಗಳ ಮೂಲಕ ಈ ದೇಶದ ಸ್ತ್ರೀಪುರುಷರ ವಿದ್ಯಾಭಿವೃದ್ಧಿಯನ್ನು ಕಾಣಿಸಿದ್ದಾರೆ. ಹ್ಯಾಗೆಂದರೆ ಒಂದೊಂದು ಗೋಪುರಕ್ಕೆ ೧೨ ಅಂತಸ್ತುಗಳಿದ್ದರೆ ಮೇಲಿನ ಎರಡು ಅಂತಸ್ತುಗಳಲ್ಲಿಮಾತ್ರ ವಿದ್ಯೆಯನ್ನು ತಿಳಿದ ಪುರುಷರು ನಮಗೆ ಸಿಕ್ಕುವರು. ಸ್ತ್ರೀಯರ ವಿದ್ಯಾಭಿವೃದ್ಧಿಯನ್ನು ತಿಳಿಯಬೇಕಾದರೆ, ಕೊನೇ ಅಂತಸ್ತಿನಲ್ಲಿ ತುಂಬಿರುವಷ್ಟು ಮಂದಿ ಸ್ತ್ರೀಯರು ಸಿಕ್ಕುವದೇ ದುರ್ಲಭ. ಮತ್ತೊಂದು ನಕ್ಷೆಯಮೂಲಕವಾಗಿ ಬೇರೇ ಬೇರೆ ವಯಸ್ಸಿನ ವಿಧವೆಯರೂ, ಪತ್ನೀಹೀನರೂ ಎಷ್ಟುಮಂದಿ ಇದ್ದಾರೆಂಬುವುದು ನಮಗೆ ಗೊತ್ತಾಗುತ್ತದೆ. ಹ್ಯಾಗೆಂದರೆ ೧೫ ವರ್ಷ ವಯಸ್ಸಿನೊಳಗಿರತಕ್ಕ ಸ್ತ್ರೀಯರಲ್ಲಿ ೮,೦೦೦ ಮಂದಿ ಯುವತಿಯರು ವಿಧವೆಯರಾಗಿರುತ್ತಾರೆಂದು ನಾವು ನೋಡಿ ಬಹಳವಾಗಿ ವಿಷಾದಿಸಬೇಕಾಗಿದೆ ೨೫ ವರ್ಷವಯಸ್ಸಿನೊಳಗೆ ಇರುವ ಸ್ತ್ರೀಯರಲ್ಲಿ ೩೦,೦೦೦ ಮಂದಿ ವಿಧವೆಯರಾಗಿರುತ್ತಾರೆಂದು ತಿಳಿಸಿರುತ್ತಾರೆ. ಇತ್ತಲಾಗೆ, ಪುರುಷರಪಟ್ಟಿಯನ್ನು ನಾವು ನೋಡಿದರೆ ಪತ್ನೀಹೀನರಾಗಿರತಕ್ಕವರು ಅಲ್ಪಸ್ವಲ್ಪ ಜನರೆಂದು ತಿಳಿದು ಬರುವುದರಿಂದ, ಈ ದೇಶದಲ್ಲಿ ಗಂಡಸರೇ ಪುಣ್ಯಾತ್ಮರು, ಹೆಂಗಸರು ಪುಣ್ಯಹೀನರು ಎಂದು ನಾವು ಹೇಳಬೇಕಾಗುತ್ತದೆ. ಆದರೆ ಈ ಊಹೆಯು ಅನ್ಯಾಯವಾಗಿದೆಯೋ ಹೊರ್ತು, ನ್ಯಾಯಕ್ಕೆ ಅನುಸಾರವಾಗಿದೆ ಎಂದು ಯಾರಿಗೂ ತೋರುವದಿಲ್ಲ ೧೫ ವರ್ಷ ವಯಸ್ಸಿನೊಳಗಿರುವವರಲ್ಲಿ ೩೩,೦೦೦ ಮಂದಿ ಗಂಡಸರೂ, ೧,೬೦,೦೦೦ ಮಂದಿ ಹೆಂಗಸರೂ ವಿವಾಹಿತರಾಗಿರುವುದನ್ನು ನಾವು ಈ ರಿಪೋರ್ಟಿನಿಂದ ತಿಳಿದು, ಅಂಥಾ ಚಿಕ್ಕವಯಸ್ಸಿನ ತಂದೆತಾಯಿಗಳಿಂದ, ಎಂಥಾ ಬಲವಾದ ಮಕ್ಕಳು ಹುಟ್ಟಿಯಾರೆಂದು ಹೇಳೋಣ! ಇನ್ನೊಂದು ನಕ್ಷೆಯನ್ನು ನಾವು ನೋಡುವಾಗ ಈ ದೇಶದಲ್ಲಿ ಹಿಂದು, ಮುಸಲಮಾನ್, ಕ್ರೈಸ್ತ, ಜೈನ ಎಂಬೀ ಮುಖ್ಯವಾದ ನಾಲ್ಕು ಮತಗಳೇ ಪ್ರಬಲವಾಗಿರುತ್ತವೆಂದು ವ್ಯಕ್ತವಾಗುತ್ತದೆ. ಸಂಖ್ಯೆಯಿಂದೂ ಜನರು ಅನುಸರಿಸುವ ಮತವೇ ವಿಶೇಷವಾಗಿ ಪ್ರಬಲಸ್ಥಿತಿಯಲ್ಲಿದ್ದಾಗ್ಯೂ, ಕಳೆದ ೧೦ ವರ್ಷಗಳಲ್ಲಿ ಕ್ರೈಸ್ತ ಮತ್ತು ಜೈನಮತಸ್ಥರು ವಿಶೇಷವಾಗಿ ಅಭಿವೃದ್ಧಿಗೆ ಬಂದಿರುತ್ತಾರೆಂದು ಗೊತ್ತಾಗುತ್ತೆ.

ಒಂದೊಂದು ನಕ್ಷೆಯನ್ನು ನೋಡುವದರಿಂದಲೇ ನಮಗೆ ಇಷ್ಟು ಸಂಗತಿಗಳು ತಿಳಿದು ಬರಬೇಕಾದರೆ, ಈ ರಿಪೋರ್ಟಿನಲ್ಲಿರತಕ್ಕ ವಿಸ್ತಾರವಾದ ಲೇಖನಗಳನ್ನೆಲ್ಲಾ ನೋಡುವುದರಿಂದ ಎಷ್ಟು ತಿಳುವಳಿಕೆಯು ಉಂಟಾದೀತೆಂದು ವಾಚಕರೇ ಊಹಿಸಿಕೊಳ್ಳಲಿ. ಇದನ್ನು ಸಾವಕಾಶವಾಗಿ ನೋಡಿ, ಮ|| ವಿ. ಎನ್. ನರಸುಮ್ಮಯ್ಯಂಗಾರ್ರವರು ಇಂಥಾ ದೊಡ್ಡಪುಸ್ತಕವನ್ನು ಬರೆಯುವದಕ್ಕೆ ಬಹಳ ಪ್ರಯತ್ನವನ್ನು ಮಾಡಿರುವದು ಸಿದ್ಧಾಂತವಾಗಿರುವದಲ್ಲದೆ, ಅವರಿಗೆ ಇದಕ್ಕಾಗಿ ದೊರಕಿದ ಸಂಗತಿಗಳನ್ನು ಬಹು ಪರಿಷ್ಕಾರವಾಗಿಯೂ ಮನೋಜ್ಞವಾಗಿಯೂ ವಿವರಿಸಿದ್ದಾರೆಂದು ಸಂತೋಷದಿಂದ ಒಪ್ಪಿಕೊಳ್ಳುವೆವು. ಈ ರಿಪೋರ್ಟು ಒಂದು ವಿಧವಾದ ಖಜಾನೆಯಾಗಿರುತ್ತದೆಂದು ನಾವು ಹೇಳಬಹುದು. ಯಾವ ವಿಧವಾದ ತಿಳುವಳಿಕೆಯೆಂಬ ಐಶ್ವರ್ಯವು ಬೇಕಾಗಿ ಹ್ಯಾಗ್ಯೆ ಅವುಗಳೆಲ್ಲಾ ಈ ಖಜಾನೆಯಲ್ಲಿ ನಮಗೆ ಧಾರಾಳವಾಗಿ ಸಿಕ್ಕುವುದು. ಮೈಸೂರು ಸೀಮೆಯ ವಿಷಯಗಳನ್ನು ತಿಳಿಯಬೇಕೆಂದು ಹಾರೈಸುವವರೆಲ್ಲರೂ ಈ ರಿಪೋರ್ಟನ್ನು ಓದಿದಲ್ಲಿ ಅವರ ಇಷ್ಟಾರ್ಥಗಳೆಲ್ಲಾ ನೆರವೇರುತ್ತವೆ ಎಂಬುವದರಲ್ಲಿ ಯಾವ ಸಂಶಯವೂ ಇರಲಾರದು. ಆದರೆ ಒಂದು ವಿಷಯವಾಗಿ ನಮಗೆ ದುಃಖವಿರುವುದು ಈ ರಿಪೋರ್ಟು ಇಂಗ್ಲೀಷಿನಲ್ಲಿ ಬರೆದಿರುವುದರಿಂದ, ಈ ಸೀಮೆಯ ಮುಕ್ಕಾಲುಪಾಲು ಜನರು ಇದರ ರಸವನ್ನು ಸೇವಿಸುವದಕ್ಕೆ ಯಾವ ಅವಕಾಶವೂ ಇಲ್ಲವಲ್ಲಾ ಎಂಬುವದೇ ಅದಲ್ಲದೆ ಈ ಪುಸ್ತಕಗಳನ್ನು ಭಾಷಾಂತರ ಮಾಡಬೇಕಾದರೆ ಬಹಳ ಹಣವು ವೆಚ್ಚಾಗಬೇಕು. ಆದರೆ ವಿದ್ಯಾಭ್ಯಾಸದ ಇಲಾಖೆಗೆ ಮುಖ್ಯಾಧಿಕಾರಿಗಳಾದ ಮ|| ಬಾಬಾ ಸಾಹೇಬರವರು ಇವರಲ್ಲಿರತಕ್ಕ ಮುಖ್ಯಾಂಶಗಳನ್ನು ಸಂಗ್ರಹಿಸಿ, ಸ್ಕೂಲುಗಳಲ್ಲಿ ವಿದ್ಯಾರ್ಥಿಗಳು ಉಪಯೋಗಿಸುವ ಪುಸ್ತಕಗಳ ರೂಪವಾಗಿ ಬರೆದು ಪ್ರಕಟಿಸುವುದಕ್ಕಾಗಿ ವಿದ್ವಾಂಸಶ್ರೇಷ್ಠರೆನ್ನಿಸಿ ಕೊಂಡಿರುವವರಿಗೆ ಕೊಟ್ಟರೆ, ವಿದ್ಯಾರ್ಥಿಗಳಿಗೆ ಉಪಕಾರವಾದ ಪ್ರಯೋಜನವಾಗುವುದಲ್ಲದೆ, ಸಾಮಾನ್ಯವಾಗಿ ಇಂಗ್ಲೀಷು ತಿಳಿಯದ ಎಲ್ಲಾ ಪ್ರಜೆಗಳಿಗೂ ಮಹೋಪಕಾರ ಮಾಡಿದಂತೆ ಪರಿಣಮಿಸುವುದರಲ್ಲಿ ಸಂಶಯವಿಲ್ಲವೆಂದು ನಂಬಿದ್ದೇವೆ.

ಶ್ರೀನಗರದ ಪ್ರವಾಹ.

ಕಾಶ್ಮೀರ ರಾಜ್ಯವು ಹಿಮಾಲಯ ಪರ್ವತಗಳ ಪ್ರಾಂತ್ಯದಲ್ಲಿರುವದಲ್ಲದೆ ಅಲ್ಲಿ ನಾಲ್ಕಾರು ಮುಖ್ಯ ನದಿಗಳು ಉತ್ಪತ್ತಿ ಯಾಗುತ್ತವೆ. ಈ ರಾಜ್ಯಕ್ಕೆ ಶ್ರೀನಗರವೆಂಬುವದೇ ರಾಜಧಾನಿ. ನದಿಗಳಲ್ಲಿ ಇದ್ದಕ್ಕಿದ್ದ ಹಾಗೆಯೇ ಪ್ರವಾಹ ಹೆಚ್ಚಿ ಈಗ ರಾಜಧಾನಿಯಲ್ಲಿ ಅರ್ಧಭಾಗವನ್ನೆಲ್ಲಾ ಮುಳುಗಿಸಿರುತ್ತೆ. ಇಷ್ಟು ಪ್ರವಾಹವು ಹಿಂದೆ ಯಾವಾಗಲೂ ಬಂದಿರಲಿಲ್ಲ. ನೀರು ಅನೇಕ ಮೈಲಿಗಳ ದೂರದವರೆಗೂ ವಿಸ್ತರಿಸಿಕೊಂಡಿವೆ ಪೈರುಗಳೆಲ್ಲಾ ಹಾಳಾದವು. ಎಲ್ಲರೂ ದೋಣಿಗಳಲ್ಲಿ ತಮ್ಮ ಮುಖ್ಯವಾದ ಸಾಮಾನುಗಳನ್ನು ಸಾಗಿಸುತ್ತಲಿದ್ದಾರೆ. ಆಸ್ಪತ್ರೇ ಕಾಂಪೌಂಡಿನಲ್ಲಿ ೫—೬ ಅಡಿ ನೀರುನಿಂತಿದೆ. ರೋಗಿಗಳನ್ನು ದೋಣಿಗಳಲ್ಲಿ ಮಲಗಿಸಿರುತ್ತಾರೆ. ರಾಜಧಾನಿಯಲ್ಲಿ ಐಶ್ವರ್ಯವಂತರಾಗಿರುವಂತೆ ಕಟ್ಟಿದ್ದ ಬಹು ಭಾರೀ ಸೇತುವೆಗಳಲ್ಲೆಲ್ಲಾ ಒಂದು ಮಾತ್ರ ಉಳಿದಿರುತ್ತೆ. ಜನರು ಎಲ್ಲಿದ್ದವರು ಅಲ್ಲೇ ಇರಬೇಕಾಗಿದೆ. ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೋಗುವುದು ಅಸಾಧ್ಯ. ಟೇಲಿಗ್ರಾಫ್ ತಂತಿಗಳು ಕೊಚ್ಚಿ ಹೋದವು. ಅಲ್ಲಿಗೆ ಯಾವವಿಧವಾದ ವರ್ತಮಾನವೂ ಹೋಗುವುದು ಕಷ್ಟವಾಗಿದೆ. ಮುರ್ಷಿಬಾಗ್, ಚನ್ನಾರಬಾಗ್, ಪೋಸ್ಟಾಫೀಸು, ಸೆಟಲ್‌ಮೆಂಟ್ ಆಫೀಸ್ ಮೊದಲಾದ ಅನೇಕ ಭಾರೀ ಕಟ್ಟಡಗಳೂ, ಅಂಗಡಿಗಳೂ ಕೊಚ್ಚಿ ಹೋದವು. ರಾಜಾ ಅಮರ ಸಿಂಗರವರೇ ಪ್ರಜೆಗಳ ತೊಂದರೆಗಳನ್ನು ಹೋಗಲಾಡಿಸುವುದಕ್ಕೆ ಬಹು ಸಾಹಸ ಮಾಡುತ್ತಲಿದ್ದಾರೆ. ಅಲ್ಲಿನ ನಾನಾ ತರವಾದ ಜನಗಳಿಗೂ ಎಷ್ಟು ನಷ್ಟವುಂಟಾಗಿರಬಹುದೆಂದು ಊಹಿಸಲೂ ಅಸಾಧ್ಯವಾಗಿದೆ. ಅಂಬಾಲಾದಿಂದ ಹೋಗಿದ್ದ ಪ್ರೀಟ್‌ಮೋತ್ ತಿಗೆಯುವವನು ದೋಣಿಯಲ್ಲಿ ಹೋಗುತ್ತಿರುವಾಗ್ಯೆ ಪ್ರವಾಹ ಬಹಳವಾಗಿದ್ದು ದೋಣಿಯನ್ನು ತಟಕೆಳಗೆ ಮಾಡಿದ್ದರಿಂದ ಅವನು ತನ್ನ ಸಾಮಾನುಗಳೊಡನೆ ಮುಳುಗಿಹೋದನು ಕಳೆದ ೨೧ ನೆ ತಾರೀಖು ಮಧ್ಯಾಹ್ನ ೩ ಘಂಟೆಯ ಹೊತ್ತಿನಲ್ಲಿ ನೀರು ರಾಜಧಾನಿಯೊಳಕ್ಕೆ ನುಗ್ಗುವುದಕ್ಕೆ ಪ್ರಾರಂಭವಾಗಿ, ಸ್ವಲ್ಪ ಹೊತ್ತಿನಲ್ಲೇ ಎಲ್ಲಿ ನೋಡಿದರೂ ೪—೬ ಅಡಿಗಳ ಪ್ರಮಾಣ ನೀರುನಿಂತಿತು. ನೆನ್ನೆಯವರಿಗೂ ಪ್ರವಾಹ ಇಳಿದಿರಲಿಲ್ಲ. ವಾಚಕರೇ, ಅಲ್ಲಿನ ಪ್ರಜೆಗಳಿಗೆ ಈಗ ಪ್ರಾಪ್ತವಾಗಿರುವ ದುಃಖಗಳನ್ನು ವರ್ಣಿಸಲು ಯಾರಿಂದಲೂ ಅಸಾಧ್ಯವಾಗಿದೆಯಲ್ಲವೆ! ಪರಮೇಶ್ವರನು ಅವರಿಗೆ ಎಲ್ಲಾ ವಿಧವಾದ ತೊಂದರೆಗಳನ್ನೂ ಹೋಗಲಾಡಿಸಿ, ಅವರನ್ನು ಆಶೀರ್ವದಿಸಲೆಂದು ಪ್ರಾರ್ಥಿಸ ವೆವು

ಸತ್ಸಂಗ

ಸನ್ಮಿತ್ರರೇ, ನಾವು ಪ್ರಪಂಚವನ್ನು ನೋಡುವ ಕಾಲದಲ್ಲಿ ಸಕಲಮನುಷ್ಯರೂ ಬೇರೆಬೇರೇ ಕೆಲಸಗಳನ್ನು ಮಾಡುವದಕ್ಕಿಂತ ಮುಂಚೆಯೇ ದೇವರು ತಮಗೆ ದಯಪಾಲಿಸಿರುವ ಬುದ್ಧಿಯ ಕುಶಲತೆಯಿಂದ ಅದನ್ನು ಕುರಿತು ಆಮೂಲಾಗ್ರವಾಗಿ ವಿಮರ್ಶೆಮಾಡಿ ಅದರಿಂದಾಗುವ ಲಾಭನಷ್ಟಗಳನ್ನು ವಿಮರ್ಶೆಮಾಡಿ ತೀರ್ಮಾನಿಸುತ್ತಾರೆ ಈ ಪ್ರಕಾರ ಮಾಡುವದು ಮನುಷ್ಯವರ್ಗಕ್ಕೆ ಯೋಗ್ಯವಾಗಿದೆ ಹಾಗಾದರೆ ನಾವು ಈ ಲೋಕದಲ್ಲಿ ಸತ್ಸಂಗ ಮಾಡುವ ವಿಷಯವೂ ಆದೇ ಮೇರೆಗೆ ಯೋಚಿಸತಕ್ಕ ಅಂಶವಾಗಿರುತ್ತದೆ

ಯಾಕೆಂದರೆ ಈ ಲೋಕದ ವ್ಯವಹಾರಗಳೊಳಗೆ ಈ ವಿಷಯದಲ್ಲಿ ನಮ್ಮ ಉತ್ತಮವಾದ ಮಾರ್ಗವಾಗಿರತಕ್ಕದೆಂದು ತಿಳಿಯುವಂತೆ ನಮ್ಮ ಕಣ್ಣುಗಳ ಎದುರಿನಲ್ಲಿ ಇರುವವುಗಳನ್ನು ಕೊಂಚವಾಗಿ ನೋಡುವ ನಾವೆಲ್ಲಾ ದಿನಗಳ ಮುಂದೆಯನ್ನು ನೋಡಿರುತ್ತೇವಷ್ಟೆ ಅಲ್ಲಿಗಳಲ್ಲಿ ಯಾವದಾದರೂ ಒಂದು ಎತ್ತಾಗಲೀ ಹಸುವಾಗಲೀ ತಮ್ಮ ಜೊತೆಯವುಗಳನ್ನು ನೋಡಿ ಅಕ್ಷಣವೇ ಬಿಡಿಸಿಕೊಂಡು ಹೋಗಿ ತಿವಿಯುವದೂ, ಇನ್ನು ಎರೆತರವಾದ ತೊಂದರೆಗಳನ್ನು ಕೊಡುತ್ತಾ ಇರುವವುಗಳ ಸಂಗವನ್ನು ಮಾಡುವದೂ, ಆ ತೊಂದರೆಪಡುವವುಗಳನ್ನು ಬಾರಿದಲ್ಲಿರುವಾಗಲೇ ಕಂಡರೆ ಏನೂ ಮಾಡಲಾಗುವವು ಆದರೆ ತನ್ನ ಸಹವಾಸಿಗಳನ್ನು ಕಂಡರೆ ಯಾವನಷ್ಟೂ ಮಾಡದೆ ಇರುವಂಥವುಗಳ ಹತ್ತಿರ ಎಲ್ಲಾ ಗುಂಪಾಗಿ ಸೇರಿ ಮೇಯುವದಲ್ಲದ ಒಂದರಮೇಲೊಂದು ನೆಕ್ಕುತ್ತಾ ಅತಿ ಉಲ್ಲಾಸದಿಂದಿರುವವು ಮತ್ತು ಉತ್ತಮವಾದವುಗಳ ಸಂಗವನ್ನೇ ಮಾಡುವವೆಂದು ಬಹಳ ಮಾಡುವದರಿಂದ ಅರಿತುಕೊಳ್ಳುತ್ತೇವೆ ಸರ್ವಜೀವಗಳಲ್ಲಿಯೂ ಮನುಷ್ಯವರ್ಗಕ್ಕೆ ಸರಿಹೋಲುವಂಥವುಗಳು ಈ ಮೇರೆಗೆ ಮಾಡಿದರೆ ಎಲ್ಲಾ ದರಲ್ಲಿಯೂ ಅತಿ ಶ್ರೇಷ್ಠರಾದ ನಾವು ಹಾಗೆ ಮಾಡುವದು ಯೋಗ್ಯವಾಗಿದೆ ಹಾಗಾದರೆ ನಾವು ಗುಣಾವಗುಣಗಳನ್ನರಿತು ಸತ್ಸಂಗಿಗಳಾಗಬೇಕೆಂದು ಮೇಲೆತಿಳಿಸಿದ ಸಂಗತಿಯಿಂದಲೂ, ಸತ್ಸಂಗಿಗಳಾಗಿ ಜೀವಿಸುವದರಿಂದಲೂ, ತಿಳಿದುಕೊಳ್ಳಬಹುದು ಹಾಗಾದರೆ ನಾವು ಸಹವಾಸಮಾಡುವದರಿಂದುಂಟಾಗುವ ಫಲಾಫಲಗಳ ವಿಷಯ ಕೊಂಚವಾಗಿ ಯೋಚಿಸುವ

೧ ಸತ್ಸಂಗವನ್ನು ಕುರಿತು ಯೋಚಿಸುವ—ಹೀಗೆಮಾಡುವದು ಮನುಷ್ಯರ ದೃಷ್ಟಿಯಲ್ಲಿಯೂ, ದೇವರ ದೃಷ್ಟಿಯಲ್ಲಿಯೂ ಮೇಲಿಗೆ ಪಾತ್ರರನ್ನಾಗಿ ಮಾಡುತ್ತೆ ಉದಾಹರಣೆಯಾಗಿ—ಒಬ್ಬನೊಂದು ಮಹತ್ತಾದ ಕಾಡಿನಲ್ಲಿ ಬಹು ಬೆಲೆಯುಳ್ಳ ವಸ್ತ್ರಾಭರಣಗಳಿಂದ ಯುಕ್ತನಾಗಿದ್ದ ಒಂದು ದೇವಾಲಯವಿತ್ತು ದೇವತಾ ಪ್ರಾರ್ಥನೆಯನ್ನು ಮಾಡುವಂಥವರು ಆ ಗುಡಿಯು ಸಮೀಪದಲ್ಲಿಯೇ ಮಾಡುತ್ತಾ ಇದ್ದರು ಆದೇ ಕಾಡಿಗೆ ಬೇಟೆಗಾರನೂ, ಕಳ್ಳನೂ, ಮನುಷ್ಯರೂ, ದೇವರಿಗೂ ಭಯಪಡದ ನಿಷ್ಠುರವ್ಯಕ್ತಿಯೂ ಆದ ವ್ಯಾಧನು ಆ ಕಾಡಿಗೆ ಬೇಟೆಯಾಡುವಂತೆ ಬಂದು ಏನೂ ಸಿಕ್ಕದೆ ಬಳಲಿ ಆ ಗುಡಿಯಲ್ಲಿದ್ದ ವಸ್ತ್ರಾಭರಣಗಳನ್ನು ಕದ್ದುಕೊಂಡು ಹೋಗಲು ಆ ಗುಡಿಯ ಹತ್ತಿರಕ್ಕೆ ಬಂದನು ಅಲ್ಲಿ ದೇವರಪ್ರಾರ್ಥನೆ ಮಾಡುತ್ತಿದ್ದ ಒಬ್ಬನನ್ನು ನೋಡಿ ಇವನಿಂದ ತನ್ನ ಕಾರ್ಯ ಸಿದ್ಧಿಸುವದಿಲ್ಲವೆಂದೂ, ಅವನನ್ನು ಕೊಂದುಹಾಕಬೇಕೆಂದು ಯೋಚಿಸಿ ಅವನನ್ನು ಹಿಡಿದು ಕಡಿಯಲು ಸಿದ್ಧನಾದನು ಆಗ ಆ ದೇವತಾಪ್ರಾರ್ಥಕನು ಅಯ್ಯಾ ಭಗವಂತ, ಈ ಕಷ್ಟಲೋಕದಲ್ಲಿ ನಿರ್ದೋಷಿಗಳಿಗೆ ಹೇಳಲಾರದಷ್ಟು ಸಂಕಟಗಳು ಬರುತ್ತವೆ ಆದರೆ ದುಷ್ಟರಿಗೆ ಸಾಮ್ರಾಜ್ಯವು ಬರುತ್ತದೆಂದು ದುಃಖಿಸಿ ಮುಹೂರ್ತಮಾತ್ರ ಯೋಚಿಸಿ ಒಂದುವೇಳೆ ದುಷ್ಟರು ಈ ಲೋಕದಲ್ಲಿ ಸುಖವಾಗಿದ್ದರೂ, ಸಜ್ಜನರು ಕಷ್ಟದಲ್ಲಿದ್ದರೂ ಬರುವ ಲೋಕದಲ್ಲಿ ದುಷ್ಟರನ್ನೂ ಶಿಷ್ಟರನ್ನೂ ಹಿಂಬಾಲಿಸುವ ಪುಣ್ಯಪಾಪಗಳಿರುವಂತೆ ಅವರವರಿಗೆ ಶಿಕ್ಷೆಗಳಾಗುವವೆಂದುಹೇಳಿ ಆ ವ್ಯಾಧನಿಗೆ—ನಶ್ವರವಾದ ಇಹಲೋಕ ಸುಖವನ್ನು ನೆಚ್ಚಿಕೊಂಡು ಬರುವಲೋಕದ ನಿತ್ಯ ದಂಡನೆಗೆ ಗುರಿಯಾಗಬೇಡವೆಂದು ಬುದ್ಧಿ ಹೇಳಿದನು ಅಪೂರ್ವವಾದ ಮಾತನ್ನು ಕೇಳಿದ ಆ ವ್ಯಾಧನು ಮಹಾಭಯಸ್ಥನಾಗಿ

ಸ್ವಾಮಿ ಹೀಗಾದರೆ ನಾನು ಅನಿತ್ಯದಂತನೆಯಿಂದ ತಪ್ಪಿಸಿಕೊಳ್ಳ ... [illegible] ... ಯಾಲಿಂದಾಗುತ್ತೋ ಆ ಭಗವಂತನ ವಿಷಯವಾದ ಬೋಧನೆಗಳನ್ನು ತಿಳಿಸಿದನು ... [illegible]

[illegible]

ಟೋಪಿಗಳು!

ಟೋಪಿಗಳು!! WOOL CAPS ಟೋಪಿಗಳು!!

ಹಾಸನದ ಆರ್ಫನೇಜಿನಲ್ಲಿ ತಯಾರಾಗುವಂಥ ಅಚ್ಚ ಕಂಬಳೀನೂಲಿನ ಟೋಪಿಗಳು (Wool Caps) ನಮ್ಮ ಆಫೀಸಿನಲ್ಲಿ ಮಾರಿಕೆಗೆ ಸಿದ್ಧವಾಗಿರುತ್ತವೆ. ಖರೀದಿ—೧ ರೂ. ೨ ಆಣೆ ಇಂದ ೧ ರೂ. ೬ ಆಣೆಗಳ ವರೆಗೂ ಬೇರೆ ಬೇರೆ ದರಗಳುಂಟು. ಸ್ಥಳದವರು ಖುದ್ದು ನೋಡಿ ಪಡೆಯಬಹುದು. ಪರಸ್ಥಳದವರು ಮುಂಗಡವಾಗಿಯೇ ಹಣ ಕಳುಹಿಸಿದಲ್ಲಿ ತ್ವರ್‍ಯದಲ್ಲಿ ಛಾಂಗೀ ಮೂಲಕ ಕಳುಹಿಸುತ್ತೇವೆ. ಛಾಂಗೀ ಛಾರ್ಜ ಬೇರೇ ಕೊಡಬೇಕು. ವೋಬುವಿಳಾಸದಲ್ಲಿ ಟೋಪಿಗೆ ಸಂಬಂಧವಾದದ್ದು ಎಂದು ಬರೆಯಬೇಕು.

ಮ್ಯಾನೇಜರ್,
ವೆಸ್ಲಿಯನ್ ಮಿಷನ್‌ಪ್ರೆಸ್,
ಮೈಸೂರು.

ಬಳದೇಶ ವೃತ್ತಾಂತಗಳು.

ಬರುವ ಪ್ರಜಾಪ್ರತಿನಿಧಿಸಭೆಗೆ ಇಲ್ಲಿನ ಮ್ಯೂನಿಸಿಪಾಲಿಟಿಯಿಂದ ಮ|| ವೆಂಕಟಕೃಷ್ಣಯ್ಯನವರನ್ನೂ ಮ|| ಎಚ್ ಸುಬ್ಬರಾಯರನ್ನೂ ಚುನಾಯಿಸಿದರು.

[illegible]

ಗವ್ವನ್ನೂರು, ಯಾತತೂರೆ, ... [illegible]

[illegible]

ಆರೋಗ್ಯಶಾಸ್ತ್ರ ಮತ್ತು ವ್ಯವಸಾಯಶಾಸ್ತ್ರಗಳ ಪರೀಕ್ಷೆ.

ಮೈಸೂರು ... [illegible]

[illegible]

ಯೂರೋಪ್ಯರ ನಾಗರಿಕತೆ.

(ಕಳೆದ ವಾರದ ಶೇಷ)

ಈ ಪ್ರಕಾರ ಅನೇಕ ವಿಷಯಗಳಲ್ಲಿ ಜನರಿಗೆ ಬೇಕಾದ ಮಾರ್ಗಗಳಲ್ಲಿ ಅಭಿವೃದ್ಧಿಯನ್ನು ಹೊಂದಿದ ... [illegible]

[illegible]

ತುಮಕೂರು ಬಾಲಿಕಾ ಪಾಠಶಾಲೆ.

ಕಳೆದ ಜುಲೈ ತಾ|| [illegible] ಘಂಟೆಯೊಳಗೆ ತುಮಕೂರು [illegible] ಬಾಲಿಕಾ ಪಾಠಶಾಲೆಯು ಅತ್ಯಂತ ಸುಂದರವಾದ ಸಭೆಯಲ್ಲಿ ವೆಸ್ಲೆಯನ್ ಮಿಷನ್ ಗರಲ್ಸ್ ಸ್ಕೂಲುಗಳ ವಿದ್ಯಾರ್ಥಿನಿಯರಿಗೆ ಬಹುಮಾನಗಳು ಕೊಡಲ್ಪಟ್ಟವು. ರೆವರೆಂಡ್ ಹೆಚ್. ಸಿ. ಥೋರೆಯವರು ಅಗ್ರಾಸನಾಧಿಪತಿಗಳಾಗಿಯೂ; ರೆವರೆಂಡ್ ಸಿ. ಹೆಚ್. ಥೋರೆಯವರೂ, ಇವರ ಘನ ಧರ್ಮಪತ್ನಿಯವರೂ, ಘನ ಡೆಪ್ಯುಟಿ ಕಮಿಷನರವರೂ, ಕೆಲವು ಯೂರೋಪಿಯನ್ ಸ್ತ್ರೀಯರೂ, ಹಿಂದೂ ದೊಡ್ಡ ಮನುಷ್ಯರೂ ಸಭಾಸದರಾಗಿಯೂ ಇದ್ದರು. ಇದೂ ಅಲ್ಲದೆ ಅಸಂಖ್ಯಾತ ಜನರ ನೋಟಕರು ನೆರೆದಿದ್ದರು. ಈ ಪುರದಲ್ಲಿ ಸ್ಥಾಪಿಸಲ್ಪಟ್ಟಿರುವ ಮೂರು ಮಿಷನ್ ಬಾಲಿಕಾ ಪಾಠಶಾಲೆಗಳಿಂದಲೂ ಸುಮಾರು ೩೦೦ ಮಂದಿ ಬಾಲಿಕೆಯರವರೆಗೂ ಕೂಡಿಬಂದಿದ್ದರು. ಮುಂಗಡೆಯ ಮೇಜುಗಳ ಮೇಲೆ, ಬಿಂದಿಗೆ, ತಾಂಬೂಲ ಪಟ್ಟಿ, ಚೆಂಬು, ಸೀರೆ, ರವಿಕೆ, ಪೆಟ್ಟಿಗೆ, ದಿಂಬು, ಮೊದಲಾದ ವಿವಿಧ ಬಹುಮಾನ ಪದಾರ್ಥಗಳು ಕ್ರಮವಾಗಿ ಹರಡಲ್ಪಟ್ಟಿದ್ದವು. ಆರಂಭದಲ್ಲಿ ಸ್ವದೇಶೀಯ ಪಾದ್ರಿಗಳಾದ ಘನ ಟಿ. ಬೂಳ್ಳೆಯ್ಯನವರು ಭಗವತ್ಪ್ರಾರ್ಥನೆಯನ್ನು ಪ್ರಾರ್ಥಿಸಿದರು. ಆ ಮೇಲೆ ಬಾಲಿಕೆಯರು ಕೆಲವು ಇಂಪಾದ ಹಾಡುಗಳನ್ನು ಹಾಡಿದರು. ಬಳಿಕ ರೆವರೆಂಡ್ ಸಿ. ಹೆಚ್. ಥೋರೆಯವರು ಗರಲ್ಸ್ ಸ್ಕೂಲುಗಳ ರಿಪೋರ್ಟುಗಳನ್ನು ಓದಿ "ಸ್ತ್ರೀವಿದ್ಯಾಭ್ಯಾಸವು ಪೂರ್ವಕ್ಕಿಂತ ಈಗ ತುಂಬ ವೃದ್ಧಿಸ್ಥಿತಿಯಲ್ಲಿದೆ" ಎಂಬ ಅಭಿಪ್ರಾಯವನ್ನು ವ್ಯಕ್ತಗೊಳಿಸಿದರು. ತರುವಾಯ ರೆವರೆಂಡ್ ಹೆಚ್. ಸಿ. ಥೋರೆಯವರು ಬಹುಮಾನಗಳನ್ನು ಕೊಡಲಾರಂಭಿಸಿ ೧೮೯೨ನೆ ಇಸವಿ ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದ ಪೇಟೆ ಬಾಲಿಕಾ ಶಾಲೆಯ ವಿದ್ಯಾರ್ಥಿನಿಯರಾದ ಟಿ. ವೃಷ್ಟಮ್ಮನಿಗೂ, ಕೆ. ಬಸಮ್ಮನಿಗೂ ಎಜ್ಯುಕೇಷನ್ ಸೆಕ್ರೆಟರಿ ಸಾಹೇಬರವರಿಂದ ಕೊಡಲ್ಪಟ್ಟಿದ್ದ ಅವರವರ ಸರ್ಟಿಫಿಕೇಟುಗಳನ್ನೂ, ಇದಲ್ಲದೆ ಬೆಲೆಯುಳ್ಳ ಬಹುಮಾನರೂಪವಾದ ಒಂದೊಂದು ತಾಂಬ್ರದ ಬಿಂದಿಗೆಯನ್ನೂ, ಮೇಲಿನ ತರಗತಿಯವರಿಗೆ ಪಾತ್ರವಾಗತಕ್ಕ ಬಹುಮಾನ ಪದಾರ್ಥಗಳನ್ನೂ, ಉಳಿದವರಿಗೆ ಕ್ರಮವಾಗಿ ಒಂದೊಂದು ಬಹುಮಾನ ಪದಾರ್ಥವನ್ನೂ ಅವರವರ ಯೋಗ್ಯತಾನುಸಾರವಾಗಿ ಕೊಟ್ಟು, ಎಲ್ಲಾ ವಿದ್ಯಾರ್ಥಿನಿಯರಿಗೂ ತಕ್ಕ ಬುದ್ಧಿವಾದಗಳನ್ನರುಹಿ, ತಮಗೆ ರೆವರೆಂಡ್ ಸಿ. ಹೆಚ್. ಥೋರೆಯವರಿಗೆ ಇರುವ ಸ್ನೇಹತನದ ಸಂಬಂಧವನ್ನು ವಿವರಿಸೋಣದಿಂದ ಸಭಿಕರ ಮೊಗಸಾಲೆಗಳಲ್ಲಿ ಮುಗುಳುನಗೆಯೆಂಬ ಪುಷ್ಪಗಳಂ ಪಸರಿಸಿದರು. ಅನಂತರ ಮ|| ರಾ|| ರಾಮದಾಸಪ್ಪ ಎಂಬ ಮಹನೀಯರು ಪ್ರಸ್ತುತ ಈ ದೇಶದಲ್ಲಿ ಶಾಲೆಗಳನ್ನು ಸ್ಥಾಪಿಸಿ ಬಾಲಿಕೆಯರಿಗೂ ವಿದ್ಯಾಭ್ಯಾಸ ಮಾಡಿಸಲುಪಕ್ರಮಿಸಿದವರೂ, ಸ್ತ್ರೀವಿದ್ಯಾ ಪ್ರೋತ್ಸಾಹಕ್ಕೆ ಮೂಲಕರ್ತರಾದವರೂ, ಪ್ರಮುಖ್ಯವಾಗಿ ವಿದ್ಯೆಯನ್ನು ಕ್ರಮೇಣ ವೃದ್ಧಿಗೆ ತಂದವರೂ, ಪಾದ್ರಿಗಳೆಂತಲೂ, ಈ ಊರಿನಲ್ಲಿ ಒಂದು ಇಂಗ್ಲೀಷ ಶಾಲೆಯನ್ನು ಏರ್ಪಡಿಸಬೇಕೆಂಬುವದು ನನ್ನ ಮತ್ತು ನನ್ನ ಕಡೆಗಿರುವ ಅನೇಕ ದೊಡ್ಡ ಮನುಷ್ಯರ ಮನೋಭಿಪ್ರಾಯವಾಗಿದೆ ಎಂತಲೂ, ಇಂಥಾ ಇವರ ಪರೋಪಕಾರಬುದ್ಧಿಯನ್ನು ಸ್ಮರಿಸಿಕೊಂಡು ಕೆಲವರು ಇವರ ಧರ್ಮಕಾರ್ಯಕ್ಕೆ ಕಂಟಕರಾಗಿ ಅಲ್ಲಲ್ಲೇ ಪರೀಕ್ಷಿಸುತ್ತಾರೆಂತಲೂ, ಜಗದ್ವ್ಯಾಪಕನಾದ ದೇವರು ಇವರ ಸತ್ಕಾರ್ಯಕ್ಕೆ ನಿಷ್ಕಂಟಕತ್ವವನ್ನೂ, ಇವರಿಗೆ ಚಿರಾಯುಷ್ಯವನ್ನೂ ದಯಪಾಲಿಸಲೆಂತಲೂ, ಒಂದು ಯೋಗ್ಯವಾದ ಉಪನ್ಯಾಸವನ್ನು ಮಾಡಿದರು. ಅನಂತರ ಸಭಿಕರು ಪುಷ್ಪತಾಂಬೂಲಗಳಿಂದಲೂ, ವಿದ್ಯಾರ್ಥಿನಿಯರು ವಿವಿಧ ಮೋದಕಾದಿ ತಿಂಡಿ ಪದಾರ್ಥಗಳಿಂದಲೂ ತೃಪ್ತರಾಗಿ ತಮ್ಮತಮ್ಮ ಗೃಹಮಂಕುರಿತು ತೆರಳಿದರು.

ವಿವಿಧ ವರ್ತಮಾನಗಳು.

ಕಲ್ಕತ್ತೆಯಲ್ಲಿ ಒಂದು ಇಂಗ್ಲೀಷ ನಾಟಕಶಾಲೆಗೆ ಸೇರಿದ ಪ್ರೊಪ್ರೈಟರ್ ಎಂಬುವನಿಗೆ ಆರು ತಿಂಗಳಿಗೆ ೯೬,೦೦೦ ರೂಪಾಯಿಗಳನ್ನು ಮ್ಯಾನೇಜರು ಕೊಟ್ಟಿರುತ್ತಾರೆ.

ಜಾವಿನಿಕಾ ಎಂಬ ಊರಿನಲ್ಲಿ ನೀಗ್ರೋ ಜನಗಳು ದಂಗೆ ಎದ್ದು ಬಹು ಗಲಾಟೆ ಮಾಡಿದ್ದರಿಂದ ಅವರಲ್ಲಿ ನಾಲ್ಕು ಮಂದಿಯನ್ನು ಕೊಂದು ಕೊಲ್ಲಬೇಕಾಯಿತು. ಅನಂತರ ಸಮಾಧಾನಕ್ಕೆ ಬಂದರು.

ಅಬಿಸೀನಿಯಾರಾಜ್ಯದ ದೊರೆಯನ್ನು ಕೊಲ್ಲಬೇಕೆಂದು ಕೆಲವು ಮಂದಿ ಪಿತೂರಿ ಮಾಡಿದ್ದರು. ಆದರೆ ಅದು ತೋರಿದ ಕೂಡಲೆ ಅವರಿಗೆ ನಾಲ್ಕು ವರುಷ ಈಗ ಮರಣ ಶಿಕ್ಷೆಯನ್ನು ಅನುಭವಿಸಬೇಕೆಂದು ವಿಧಿಸಲ್ಪಟ್ಟಿದ್ದಾರೆ.

ಕಳೆದ ಗುರುವಾರ ರಾತ್ರಿ ದಿನ [illegible] ಯನಗರದ ಬಳಿಯ ತಪ್ಪಿಸಲ್ಪಟ್ಟಿದ್ದ ರೈಲ್ ರಸ್ತೆಯಲ್ಲಿ ಗಾಡಿಗಳನ್ನು ಬಿಟ್ಟರು. ಆ ಪ್ರಾಂತ್ಯದ ಕ್ಷೇಮವು ಇನ್ನು ಉಂಗುವುದನ್ನು ಕುರಿತು ಸಂದೇಹವೇನು?

ರಷ್ಯಾ ದೇಶದಲ್ಲಿನ ರೈಲ್ ಗಾಡಿಗಳಲ್ಲಿ ಸಂಚಾರ ಮಾಡತಕ್ಕ ಹೆಂಗಸರು ಟಿಕೆಟ್ಟು ಕೊಡುವವರಿಗೆ ಅನುಕೂಲವಾಗಿರುವಂತೆ ಅವರಿಗಾಗಿಯೇ ಒಂದೆರಡು ಗಾಡಿಗಳು ಖಾಲಿ ಇರಬೇಕೆಂಬದಾಗಿ ಗೌರ್ನಮೆಂಟಿನವರು ವಿಧಿಸಿರುತ್ತಾರೆ.

ಬರ್ಮಾದೇಶದಲ್ಲಿ ದೊರೆತನಮಾಡುತಿದ್ದ [illegible] ರಾಜರು ಈಗ ರತ್ನಗಿರಿಯಲ್ಲಿರುವರಷ್ಟೆ. [illegible] ಇಂಗ್ಲೀಷ ವಿದ್ಯೆಯನ್ನು ಚೆನ್ನಾಗಿ ಅಭ್ಯಾಸ [illegible] ಮತ್ತು ಅವರ ಪುತ್ರಿಯು ಇಂಗ್ಲೀಷ ಹಿಂದುಸ್ಥಾನಿ ಭಾಷೆಗಳಲ್ಲಿ ತಕ್ಕ ಮಟ್ಟಿಗೆ ಪಾಂಡಿತ್ಯವನ್ನು ಪಡೆಯುತ್ತಾಳೆ.

[illegible] ಸ್ತ್ರೀವರ್ಷ ಒಂದು ಘನಸ್ತ್ರೀಯು ಇಂಗ್ಲೆಂಡು ಮೊದಲಾದ ಸ್ಥಳಗಳಲ್ಲಿ ಧರ್ಮ ಬೋಧನೆಗಾಗಿ ೫೨,೦೦೦ ರೂಪಾಯಿಗಳನ್ನು ಕೊಟ್ಟಿರುವದಾಗಿ ತಿಳಿಯಲಾಗಿದೆ. ಅವರ ಧರ್ಮಬುದ್ಧಿಯನ್ನು ಎಷ್ಟು ಕೊಂಡಾಡಿದರೂ ಸ್ವಲ್ಪವೇ ಸರಿ.

ಸರ್ ವಿಲ್ಲಿಯಂ ವ್ಯಾಕಿನರ್ ಎಂಬೊಬ್ಬ ವಿಲಾಯಿತಿಯವನು ತನ್ನ ಹೆಂಡತಿಗೆ ೧೫,೦೦೦ ಪೌನುಗಳು, ಫ್ರೀಚರ್ಚ ಸಂಘಕ್ಕೆ ೬೪,೦೦೦ ಪೌನುಗಳು, ಇಂಡಿಯಾ ದೇಶದಲ್ಲಿ ಕೆಲಸ ಮಾಡುವ ಮಿಷನ್ ಸಂಘಕ್ಕೆ ೩೦,೦೦೦ ಪೌನುಗಳು ಈ ಪ್ರಕಾರ ತನ್ನ ಆಸ್ತಿಯನ್ನು ಪಾಲು ಮಾಡಿ ಮರಣವನ್ನೈದಿದನು.

ನಾಗಪಟ್ಟಣದ ಹತ್ತಿರ ವೇಲಂಗಣಿ ಎಂಬ ಊರಿನಲ್ಲಿ ಜನರು ಸಮುದ್ರದಿಂದ ಒಂದು ತಿಮಿಂಗಲವನ್ನು ಹಿಡಿದು ದಡದಲ್ಲಿ ಹಾಕಿದರು. ಅದರ ಉದ್ದ ೬೩|| ಅಡಿ ಇತ್ತಂತೆ. ಅದರ ನಡುವಿನ ಸುತ್ತಳತೆಯು ೨೦ ಅಡಿ ಇತ್ತು. ಶುಕ್ರವಾರ ಹೊರಕ್ಕೆ ಹಾಕಿದ್ದು, ಭಾನುವಾರ ಸಾಯಂಕಾಲ ಸತ್ತಿತು.

ಮದರಾಸ ರೈಲ್ವೆಯು ಸ್ಥಾಪಿಸಲ್ಪಟ್ಟು ಅನೇಕ ವರ್ಷಗಳಾಗಿದ್ದಾಗ್ಯೂ ಅದರ ಖರ್ಚುಗಳು ಈಚೆಗೆ ವಿಪರೀತವಾಗಿ ಹೆಚ್ಚಿದ್ದರಿಂದ ಅವರ ಆದಾಯವೇ ಏನೂ ಇಲ್ಲವೆಂತಲೂ, ಇದರ ವಿಷಯದಲ್ಲಿ ತ್ವರಿತದಲ್ಲೇ ಒಳ್ಳೇ ಏರ್ಪಾಡುಗಳನ್ನು ಮಾಡಬೇಕೆಂತಲೂ ಅಧಿಕಾರಿಗಳು ಅಪೇಕ್ಷಿಸುತ್ತಾರೆ. ಇದು ಆಶ್ಚರ್ಯವೇ ಸರಿ.

ಪ್ರಪಂಚದಲ್ಲಿರುವ ಎಲ್ಲಾ ವಜ್ರಗಳಿಗಿಂತಲೂ ಮಹಾರಾಣಿಯವರ ಕಿರೀಟದಲ್ಲಿರುವದೇ ಅತ್ಯಂತ ಭಾರಿಯಾದ್ದಷ್ಟೆ. ಅದರ ತೂಕವು ೧೮೬|| ಕ್ಯಾರೆಟ್ಟುಗಳು. ಆಫ್ರಿಕಾ ಖಂಡದ ಜಾಗರ್ಸ್ ಫಾಂಟೇನ್ ಎಂಬ ಗಣಿಯಲ್ಲಿ ಈಗ ಒಂದು ಹೊಸ ವಜ್ರವನ್ನು ತೆಗೆದಿರುತ್ತಾರೆ. ಅದು ಈಗ ೯೭೦ ಕ್ಯಾರೆಟ್ಟುಗಳ ತೂಕವಿದೆಯಂತೆ!

ಕೆಲವು ದಿನಗಳ ಕೆಳಗೆ ಕಲ್ಲಿಕೋಟೆಗೆ ಸೇರಿದ [illegible] ಎಂಬ ಊರಿನಲ್ಲಿ ಒಬ್ಬ ಪ್ರಚಾರಕನು ಪಕ್ಷಿಮಾಂಸವು ಮನುಷ್ಯನ ದೇಹಕ್ಕೆ ಬಹು ಬಲಕಾರಿಯೆಂಬದಾಗಿ ಒಂದು ಉಪನ್ಯಾಸವನ್ನು ಮಾಡಿದನು. ಅಲ್ಲದೆ ಇವನ ವಾದದಂತೆ ಅನೇಕರು ತಮ್ಮ ದೇಹವನ್ನು ಬಲಪಡಿಸಿಕೊಳ್ಳಬೇಕೆಂಬ ಇರಾದೆಯಿಂದ ಅನೇಕ ಪಕ್ಷಿಗಳನ್ನು ಹೊಡೆದು ತಿಂದುಬಿಟ್ಟರು!

ಲಂಡನ್ ಪಟ್ಟಣದಲ್ಲಿ ಕಳೆದ ಗುರುವಾರ ತಾರೀಖಿನ ದಿವಸ ಪ್ರಿನ್ಸ್ ಆಫ್ ವೇಲ್ಸರವರು ಪತ್ನೀ ಸಮೇತರಾಗಿ ಗಾಡಿಯಲ್ಲಿ ಹೋಗುತ್ತಿರುವಾಗ್ಯೆ ಗಾಡಿಗೆ ಕಟ್ಟಿದ್ದ ಕುದುರೆಗಳಲ್ಲಿ ಒಂದು ಕುದುರೆಯು ಆಕಸ್ಮಾತ್ತಾಗಿ ನೆಲಕ್ಕೆ ಬಿದ್ದು ಸತ್ತುಹೋಯಿತು. ಗಾಡಿಗೆ ಅಪಾಯ ಸಂಭವಿಸಿತೇ ಹೊರತು ಅವರಿಗೆ ಏನೂ ತೊಂದರೆಯಾಗಲಿಲ್ಲವೆಂದು ತಿಳಿಸಲು ಸಂತೋಷಿಸುತ್ತೇವೆ.

ಕತ್ಯವಾಡಕ್ಕೆ ಸೇರಿದ ಜುನಾಘಡವೆಂಬ ಸಂಸ್ಥಾನದಲ್ಲಿ ಹಿಂದುಗಳ ಕೃಷ್ಣನು ಸತ್ತ ಸ್ಥಳವಿರುತ್ತೆ. ಅಲ್ಲಿ ಒಂದು ಪ್ರಖ್ಯಾತವಾದ ದೇವಾಲಯವಿತ್ತು. ಕಳೆದ ಮೊಹರಂ ಗಲಾಟೆಯಲ್ಲಿ ಅಲ್ಲಿನ ಮುಸಲ್ಮಾನರು ಹಿಂದುಗಳ ಮೇಲೆ ಬಿದ್ದು ಅನೇಕರನ್ನು ಕೊಂದು ಆ ಭಾರೀ ದೇವಾಲಯವನ್ನು ಸುಟ್ಟುಬಿಟ್ಟರೆಂದು ರಾಯಿಟರ್ ತಂತಿವಾರ್ತಾಲೇಖಕನು ಬರೆದಿರುತ್ತದೆ.

ಕಳೆದ ಸೆನ್ಸಸ್ ಲೆಖ್ಖದಿಂದ ಚದರ ಮೈಲಿಗೆ ಬಂಗಾಳದಲ್ಲಿ ೪೭೦ ಮಂದಿಯೂ, ವಾಯುವ್ಯ ಪ್ರಾಂತ್ಯಗಳಲ್ಲಿ ೪೩೬ ಮಂದಿಯೂ, ಮದರಾಸಿನಲ್ಲಿ ೨೭೦ ಮಂದಿಯೂ ವಾಸವಾಗಿರುವರೆಂದು ಗೊತ್ತಾಯಿತು. ಆದರೆ ಬಂಗಾಳ ಪ್ರಾಂತ್ಯಕ್ಕೆ ಸೇರಿದ ಸಾರನ್ ಎಂಬ ಊರಿನಲ್ಲಿ ಚದರ ಮೈಲಿ ೧ಕ್ಕೆ ೯೩೦ ಜನರು ಇರುತ್ತಾರೆ. ಇದರಷ್ಟು ಜನಭರಿತವಾದ ಊರು ಇಂಡಿಯಾದಲ್ಲಿ ಮತ್ತಾವುದೂ ಇಲ್ಲ.

ವಿಕ್ಟೋರಿಯಾ ಮಹಾರಾಣಿಯವರಿಗಾಗಲಿ, ಅವರ ಸಂಸಾರಕ್ಕಾಗಲಿ ಸಂತೋಷಸೂಚಕವಾದ ಅಥವಾ ವ್ಯಸನಸೂಚಕವಾದ ವರ್ತಮಾನಗಳನ್ನು ಮದ್ರಾಸ ಪ್ರೆಸಿಡೆನ್ಸಿಗೆ ಸೇರಿದ ಜಮೀನ್ದಾರರು ಯಾವಾಗಲಿ ಕಳುಹಿಸಬೇಕಾದರೆ ಅವರಿಗೇನೆ ಕಳುಹಿಸಕೂಡದೆಂತಲೂ, ವರ್ತಮಾನಗಳನ್ನು ಮದ್ರಾಸ ಗೌರ್ನರವರ ಮೂಲಕ ಕಳುಹಿಸಬೇಕೆಂತಲೂ ಗೌರ್ನರವರು ತೀರ್ಮಾನಿಸಿ ಸಕಲರಿಗೂ ತಿಳಿಯಪಡಿಸಿರುತ್ತಾರೆ.

ಪಂಜಾಬ ದೇಶದಲ್ಲಿ ರಾವಲ್ಪಿಂಡಿಯಿಂದ ಅಟಾಕ್ಕಿಗೆ ಹೋಗುವ ರೈಲರಸ್ತೆಯಲ್ಲಿ ಎರಡು ಭಾರೀ ಕಬ್ಬಿಣದ ಸೇತುವೆಗಳು ಪ್ರವಾಹದಿಂದ ಕೊಚ್ಚಿಕೊಂಡು ಹೋದವು. ಆದರೆ ರೈಲುಗಾಡಿಗಳು ಹೋಗಿ ೮—೧೦ ನಿಮಿಷಗಳು ಮಾತ್ರವೇ ಆಗಿದ್ದವು. ಸ್ವಲ್ಪಸಮಯವಾಗಿದ್ದಲ್ಲಿ ಪ್ರಾಣ ಅನಾಹುತಕ್ಕೆ ಕಾರಣವಾಗುತ್ತಿತ್ತು. ಪುನಹ ಕಟ್ಟಿಸುವದಕ್ಕೆ ಕೆಲವು ಲಕ್ಷರೂಪಾಯಿಗಳೇ ಬೇಕಾಗಿರುತ್ತವೆ.

[illegible]ನಲ್ಲಿ ಒಬ್ಬನು ಒಂದು ಪಕ್ಷಿಯನ್ನು ಸಾಕುತ್ತಿದ್ದನು. ಆ ಪಕ್ಷಿಯು ಬೆಳಗಿನ ಝಾವದ ೨—೩ ಘಂಟೆಯಲ್ಲೇ ಎದ್ದು ವಿಪರೀತವಾಗಿ ಅರಚಿಕೊಳ್ಳುತಿತ್ತು. ಇದರಿಂದ ನೆರೆಹೊರೆಯವರಿಗೆ ನಿದ್ರಾಭಂಗವೂ ಬಹು ತೊಂದರೆಯೂ ಉಂಟಾಗಿದ್ದರಿಂದ ಅವರು ಅದರ ಮಾಲೀಕನಮೇಲೆ ಫಿರ್ಯಾದು ಮಾಡಿದರು. ಜಡ್ಜಿಗಳು ಅಪರಾಧಿಗೆ ನಾಮಮಾತ್ರವಾದ ಶಿಕ್ಷೆಯನ್ನು ವಿಧಿಸಿ ಅವನಿಗೆ ಎಚ್ಚರಿಸಿ ಇರುತ್ತಾರೆ.

ಡಿಲ್ಲಿಪಟ್ಟಣದ ನಾಲ್ಕು ಮಂದಿ ಯೂರೋಪಿಯನ್ ಸೋಲ್ಜರುಗಳು ಅಲ್ಲಿನ ಒಂದು ತೋಟದೊಳಗೆ ನುಗ್ಗಿ ಕಾವಲುಗಾರನಿಂದ ಹಣ್ಣು [illegible] ಆ ತೋಟದಲ್ಲಿ ಒಂದು ಗಿಡದ ಕೆಳಗೆ ಮಲಗಿದ್ದರು. ಈ ವರ್ತಮಾನವು ತೋಟದ ಮಾಲೀಕನಿಗೆ ತಿಳಿದ ಕೂಡಲೆ ಅವನು ಆಳುಗಳನ್ನು ಕಳಿಸಿ [illegible] ಹೊಡೆದು ಕೊಟ್ಟಿದ್ದರಿಂದ ಹೊರಕ್ಕೆ ದಬ್ಬಿಸಿದನಂತೆ. ಇದೆಂಥ ಕ್ರೂರಕೃತ್ಯ!

ವಿಕ್ಟೋರಿಯಾ ಮಹಾರಾಣಿಯವರ ಸೊಸೆಯಾದ ಪ್ರಿನ್ಸೆಸ ಆಫ್ ವೇಲ್ಸರವರು ಸ್ವತಃ ಒಂದು ಕಸೂತಿಯನ್ನು [illegible] ಬಹು ರಮ್ಯವಾಗಿ ತಯಾರುಮಾಡಿ, ಅದನ್ನು ಚಿಕಾಗೊ ಸರ್ವವಸ್ತು ಪ್ರದರ್ಶನಶಾಲೆಗೆ ಕಳುಹಿಸಿಕೊಟ್ಟಿದ್ದರು. ಆ ಕಸೂತಿಯನ್ನು ಅನೇಕರು ನೋಡಿ ಸಂತೋಷಪಟ್ಟು [illegible] ಅದನ್ನು [illegible] ಇದಕ್ಕಾಗಿ ಕಲಾಭಿಜ್ಞರು ೧೦೦ ಪೌನುಗಳು [illegible] ತೆರಬೇಕೆಂದು ಕೇಳಿದ್ದಾರಂತೆ.

ವಿರ್ಗ ಎಂಬ ಸ್ವೀಡ ದೇಶಸ್ಥನು ಕಳೆದ ಸೆಪ್ಟಂಬರನಲ್ಲಿ ತನ್ನ ಊರನ್ನು ಬಿಟ್ಟು ಭೂಪ್ರದಕ್ಷಿಣೆ ಮಾಡಿಕೊಂಡು ಈಗ ಬಂದಿರುತ್ತಾನೆ. ಇದಕ್ಕಾಗಿ ಅವನು ಒಂದು ಕಾಸನ್ನೂ ಖರ್ಚು ಮಾಡಲಿಲ್ಲವಂತೆ. ಅವನು ಊರಿನಲ್ಲಿ ಚಾಕರಿಮಾಡಿ ದುಡ್ಡು ಸಂಪಾದಿಸಿಕೊಂಡು ಮುಂದಕ್ಕೆ ಹೋಗಿ ಹೀಗೇ ಲಂಡನ, ನ್ಯೂಯಾರ್ಕ, ಚಿಕಾಗೊ, ಸ್ಯಾನ್‌ಫ್ರಾನ್ಸಿಸ್ಕೋ, ಯೋಕೊಹಾಮಾ, ಹಾಂಕಾಂಗ್, ಸೈಗಾನ್, ಸಿಂಗಪೂರ ಮೊದಲಾದ ಸ್ಥಳಗಳನ್ನು ನೋಡಿಕೊಂಡು ಈಗ ಹ್ಯಾಂಬರ್ಗನಲ್ಲಿರುತ್ತಾನೆ.

ಕೆಲವು ದಿನಗಳ ಕೆಳಗೆ ಚಿಕಾಕೋಲ್, ಮಂಗಳೂರು, ವಿಶಾಖಪಟ್ಣ, ವಿಜಯನಗರ ಈ ಸ್ಥಳಗಳಲ್ಲಿ ಅಪ್ಪರಸೆಕೆಂಡರಿ ಎಂಬ ಪರೀಕ್ಷೆಯು ನಡೆಯಿತಷ್ಟೆ. ವಿದ್ಯಾರ್ಥಿಗಳು ಉತ್ತರ ಬರೆದಿದ್ದ ಚರಿತ್ರೆ ಭೂಗೋಳಗಳ ಕಾಗದಗಳನ್ನು ತಿದ್ದುವದಕ್ಕೆ ಮದರಾಸಿನಲ್ಲಿ ತೆಗೆದುಕೊಂಡು ಹೋಗುತ್ತಿದ್ದಾಗ ದಾರಿಯ ಮಧ್ಯದಲ್ಲೋ ಆ ಕಾಗದಗಳ ಕಟ್ಟನ್ನೇ ಅಪಹರಿಸಿಬಿಟ್ಟರು. ಇನ್ನೂ ಪತ್ತೇ ಆಗಿಲ್ಲ. ಮೇಲ್ಕಂಡ ಊರುಗಳಲ್ಲಿ ಪುನಹ ಆ ಪರೀಕ್ಷೆ ಆಗುವದೆಂದು ಮೇಲ್ ಪತ್ರಿಕೆಯು ತಿಳಿಸುತ್ತದೆ.

ಚೀನಾದೇಶದ ಜನರು ಕೋರ್ಟಿನಲ್ಲಿ ಪ್ರಮಾಣಮಾಡಬೇಕಾದರೆ ಅವರು ಒಂದು ಚೀನಾತಟ್ಟೆಯನ್ನು ತಂದು ಅದನ್ನು ಕೋರ್ಟಿನಲ್ಲಿ ತುಂಡುತುಂಡಾಗಿ ಒಡೆಯುತ್ತಾರೆ. ಈ ಪ್ರಕಾರ ಪ್ರಮಾಣ ಮಾಡಿದೆಂದು ಕಲ್ಕತ್ತೆಯ ಹೈಕೋರ್ಟಿನಲ್ಲಿ ಜಡ್ಜಿಗಳು ಒಬ್ಬ ಚೀನಾದೇಶದ ಸಾಕ್ಷಿಗಾರನಿಗೆ ಹೇಳಿದಾಗ ಅವನು ತಾನು ಮಾಡುವದಿಲ್ಲವೆಂದು ಹೇಳಿದನು. ತಾನು ಸೂರ್ಯನನ್ನು ನೋಡುತ್ತ ಪ್ರಮಾಣಮಾಡುತ್ತೇನೆಂದನು. ಆ ದೇಶಪ್ರಕಾರ ಜಡ್ಜಿಗಳು ಒಪ್ಪಿ ಅವನಿಂದ ವಾಙ್ಮೂಲವನ್ನು ವಿಚಾರಿಸಿ ಬರೆದುಕೊಂಡರು.

ಫೋಸ್ಟೆಲ್ ಡಿಸ್ಟ್ರಿಕ್ಟಿನಲ್ಲಿ ಜಾಂತಿ ಎಂಬಗ್ರಾಮದಲ್ಲಿ ಕಳ್ಳರು ಆಯುಧಪಾಣಿಗಳಾಗಿ ಮುಖಗಳಿಗೆ ಮುಖವಾಡಗಳನ್ನು ಕಟ್ಟಿಕೊಂಡು ಒಬ್ಬ ಮಾರ್ವಾಡಿ ಸಾಹುಕಾರನ ಮನೆಗೆ ಕಳೆದ ೨೦ನೇ ತಾರೀಖು ಸಾಯಂಕಾಲ ೭ ಘಂಟೆಯಲ್ಲಿ ನುಗ್ಗಿ ೧೬ ಸಾವಿರ ರೂಪಾಯಿ ಬಾಳುವಷ್ಟು ಸಾಮಾನುಗಳನ್ನು ಕದ್ದುಬಿಟ್ಟರು. ಪಹರೆಯಿನ ಪೋಲೀಸಿನವರು ಅಲ್ಲಿಗೆ ಹೋಗಿ ಆ ಗ್ರಾಮದ ಪಟೇಲನು ಈ ಕಳ್ಳತನಕ್ಕೆ ಸೇರಿದ್ದನೆಂಬ ಸಂಶಯದಿಂದ ಅವನನ್ನು ಕೈಸೆರೆಯಲ್ಲಿಟ್ಟರು. ಇಷ್ಟು ಎರಡುಮೂರು ದಿವಸದ ಹೊತ್ತಿನಲ್ಲೇ ಪಟೇಲನು ಆಕಸ್ಮಾತ್ತಾಗಿ ಪ್ರಾಣಬಿಟ್ಟನು. ಪತ್ತೇತರದೂ ನಡೆಯುತ್ತಲಿದೆ.

ಜಮೇಕಾಕ್ಕೆ ಸೇರಿದ ಬ್ರೌನ್ಸ್‌ವಿಲ್ ಎಂಬ ಊರಿನಲ್ಲಿ ಒಬ್ಬ ಪಾದ್ರಿಗೋಸ್ಕರ ಜನರು ಚಂದಾ ಎತ್ತಿ ಒಂದು ದೇವಾಲಯವನ್ನು ಕಟ್ಟಿಸಿಕೊಟ್ಟರು. ಆದರೆ ಅಲ್ಲಿನ ಹೆಂಗಸರೆಲ್ಲಾ ಮತ್ತೊಬ್ಬನನ್ನು ಪಾದ್ರಿಯಾಗಿ ನೇಮಿಸಬೇಕೆಂದು ಹೇಳಿದರು. ಆದರೆ ಇದನ್ನು ಇತ್ಯರ್ಥಮಾಡುವದಕ್ಕೆ ಅದೇ ದೇವಸ್ಥಾನದಲ್ಲಿ ಜನರೆಲ್ಲರೂ ಸಭೆ ಸೇರಿದರು. ಮೊದಲನೆ ಪಾದ್ರಿಯು ಪೀಠವನ್ನೇರಿ ತನ್ನ ಪರವಾಗಿ ಬಹಳ ಹೊತ್ತು ಉಪನ್ಯಾಸಮಾಡಿ ಕೊನೆಗೆ ಆ ದೇವಸ್ಥಾನವು ತನಗೆ ಲಭಿಸದಿದ್ದಲ್ಲಿ ಅದು ಕ್ಷಣಮಾತ್ರದಲ್ಲಿ ನಾಶವಾಗಿಹೋಗುವದೆಂಬದಾಗಿ ಶಾಪವನ್ನು ಹಾಕಿಬಿಟ್ಟನು. ಅವನು ಈ ಮಾತು ಹೇಳಿದ ಐದು ನಿಮಿಷದೊಳಗಾಗಿ ದೇವಸ್ಥಾನವು ಆಕಸ್ಮಾತ್ತಾಗಿ ಮುರಿದುಹೋಯಿತು. ಇದೆಂಥಾ ಶಾಪ!

ಸಂಯುಕ್ತಸಂಸ್ಥಾನಕ್ಕೆ ಸೇರಿದ ಇಲಿನಾಯಿಸ್ ಡಿಸ್ಟ್ರಿಕ್ಟಿನಲ್ಲಿ ಬ್ರ್ಯಾಂಡಟ್ ಎಂಬವನು ಜರ್ಮನೀ ಭಾಷೆಯಲ್ಲಿ ಒಂದು ವರ್ತಮಾನ ಪತ್ರಿಕೆಯನ್ನು ಪ್ರಕಟಿಸುತಿದ್ದನು. ಅವನು ತನ್ನ ಚಿಕ್ಕ ಪ್ರಾಯದಲ್ಲಿ ಜರ್ಮನೀ ದೇಶದಲ್ಲಿ ಒಬ್ಬಳನ್ನು ಮದುವೆ ಮಾಡಿಕೊಂಡನು. ಕಾರಣಾಂತರದಿಂದ ಅವಳನ್ನು ಅಲ್ಲೇ ಬಿಟ್ಟು ಅಮೇರಿಕಕ್ಕೆ ಹೋಗಿ ಅಲ್ಲಿ ಒಂದು ಪತ್ರಿಕೆಯನ್ನು ನಡೆಸುತ್ತಿದ್ದನು. ಅವನು ಕೆಲವು ದಿನಗಳ ಕೆಳಗೆ ಸತ್ತುಹೋದನು. ತನ್ನ ಮರಣಕಾಲದಲ್ಲಿ ತನ್ನ ಹೃದಯವನ್ನು ಜರ್ಮನಿಯಲ್ಲಿರುವ ತನ್ನ ಹೆಂಡತಿಗೆ ಕಳುಹಿಸಬೇಕೆಂದು ಬರೆದಿರುತ್ತಾನೆ. ಇದರ ಖರ್ಚಿಗಾಗಿ ತನ್ನ ಸ್ನೇಹಿತನ ಕೈಯಲ್ಲಿ ಹಣವನ್ನು ಕೊಟ್ಟು ಇಟ್ಟಿದ್ದನು. ಬದುಕಿದ್ದಾಗ ಅವನು ಅನುರಾಗವಾಗ್ಯೂ ತನ್ನ ಹೆಂಡತಿಗೆ ತನ್ನ ಹೃದಯವನ್ನು ತನ್ನ ಮರಣಾನಂತರ ಕಳುಹಿಸುತ್ತೇನೆಂದು ಹೇಳುತ್ತಿದ್ದನು. ಈಗ ಆ ಸ್ನೇಹಿತನು ಇವನು ಸತ್ತ ಸಮಾಚಾರವನ್ನು ತಿಳಿದು ಅವನ ಹೃದಯವನ್ನು ಜರ್ಮನಿಯಲ್ಲಿರುವ ಅವನ ಹೆಂಡತಿಯ ಬಳಿಗೆ ಕಳುಹಿಸುವ ತರದೂದು ಮಾಡುತ್ತಿದ್ದಾನೆಂದು ವರ್ತಮಾನಪತ್ರಿಕೆಗಳು ತಿಳಿಸುತ್ತವೆ.

ಕಳೆದ ಮಾರ್ಚಿ ತಿಂಗಳಲ್ಲಿ [illegible] ಕೋರ್ಟಿಗೆ ಸೇರಿದ ಒಬ್ಬ [illegible] ಎಂಬ [illegible]—ಅಂದರೆ ಮೆ|| [illegible] ಎಂಬುವರು [illegible] ತಯಾರುಮಾಡಿ ಅದನ್ನು ತಿಂದರೆ ರೋಗ ಗುಣವಾಗುವದೆಂದು ಯಾರೋ ಒಬ್ಬರು ಅವಳಿಗೆ ಹೇಳಿದರು. ಅದೇ ಪ್ರಕಾರ ಅವಳು [illegible] ಬಾಳುವಷ್ಟು ಉಪ್ಪನ್ನು ಸ್ವತಃ ತನ್ನ ಮನೆಯಲ್ಲಿ ತಯಾರುಮಾಡಿಕೊಂಡಳು. ಹೀಗೆ ತಯಾರುಮಾಡುವದು ಒಂದು ಅಪರಾಧವೆಂಬದಾಗಿ ಅವಳು ಸ್ವಲ್ಪವೂ ತಿಳಿದಿರಲಿಲ್ಲ. [illegible] ಇದು ಹೊರಪಟ್ಟಿತು. ಇದಕ್ಕೆ ಅವಳಿಗೆ ಮೇಲ್ಕಂಡ ಶಿಕ್ಷೆಯು ವಿಧಿಸಲ್ಪಟ್ಟಿತು. ಹೈಕೋರ್ಟು ಜಡ್ಜಿಗಳು ಈ ತೀರ್ಮಾನವನ್ನು ಓದಿ ಆಶ್ಚರ್ಯಪಟ್ಟು ಅವಳು ಮಾಡಿದ್ದ [illegible] ವಿರೋಧವಾಗಿದ್ದಾಗ್ಯೂ ಅವಳು ತಿನ್ನುವ ತನ್ನ ರೋಗವನ್ನು ಗುಣಪಡಿಸಿಕೊಳ್ಳುವದಕ್ಕೆ ಮಾಡಿರುತ್ತಾಳೆಯೇ ಹೊರತು ಮತ್ತೆ ಬೇರೇ ಅಲ್ಲವಾದ್ದರಿಂದ ಅವಳಿಗೆ ೧ ರೂಪಾಯಿ ಮಾತ್ರ ಜುಲ್ಮಾನೆ ವಿಧಿಸಿ ಬಾಕಿ [illegible] ರೂಪಾಯಿಯನ್ನು ಅವಳಿಗೆ ವಾಪಸ ಕೊಡತಕ್ಕದ್ದು ಎಂಬದಾಗಿ ಫೈಸಲ್ ಮಾಡಿದರು.

ಶಾಲಿವಾಹನಶಕ ೧೮೧೫ ನೇ ವಿಜಯನಾಮ ಸಂವತ್ಸರದ ನಿಜಾಷಾಢ ಬಹುಳ ಷಷ್ಠಿ ಗುರುವಾರದಿಂದ ನಿಜಾಷಾಢ ಬಹುಳ ದ್ವಾದಶಿ ಬುಧವಾರದ ವರೆಗಿನ ವಾರದ ಪಂಚಾಂಗ.

೧೮೯೩ ನೇ ಇಸವಿ, ಆಗಸ್ಟು.

ತಾ	ವಾರ.	ತಿಥಿ	ಘಳಿಗೆ.	ನಕ್ಷತ್ರ	ಘಳಿಗೆ.	ಕಟಕ ಮಾಸ ತೇದಿ.
3	ಗು. *	ಷ	10-22	ರೆ	36-29	21
4	ಶು	ಸ	35-25	ಅ	33-35	22
5	ಶ †	ಅ	30-3	ಭ	30-13	23
6	ರ	ನ	21-5	ಕೃ	26-16	24
7	ಸೋ.	ದ	18-0	ರೋ	22-7	25
8	ಮಂ.	ಏ	11 18	ಮೃ	17-56	26
9	ಬು	ದ್ವಾ	5-40	ಆ	13-51	27

* ಬಾಬಾಜೀಸ್ವಾಮಿ ಉತ್ಸವ

† ಮೇಲುಕೋಟೆ ಕೃಷ್ಣರಾಜಮುಡಿ ರಥ.

ಪೇಟೆ ಧಾರಣೆ.

ದವಸ	ಮೈಸೂರು	ಬೆಂಗಳೂರು.
	ರೂ. ಆ. ಪೈ.	ರೂ. ಆ. ಪೈ.
ಕಡ್ಡೀ ಅಕ್ಕಿ ಪಲ್ಲ ೧ಕ್ಕೆ	೧೨—೮—೦	೧೨—೦—೦
ಕೆಂಬೂತಿ ಅಕ್ಕಿ ಅವ್ವಲ್	೧೦—೬—೦	೧೨—೮—೦
ದೊಡ್ಡೀ ಅಕ್ಕಿ ದುಯ್ಯಂ	೧೨—೦—೦	೧೦—೮—೦
ಜಾಪಾನಿ ಅಕ್ಕಿ	೧೧—೪—೦	೧೨—೧೨—೦
ಸಂಣಕ್ಕಿ ಅವ್ವಲ್	೧೩—೦—೦	೧೨—೧೨—೦
ದೊಡ್ಡೀ ಅಕ್ಕಿ ದುಯ್ಯಂ	೧೨—೮—೦	೧೧—೪—೦
ತೊಗರೀಬೇಳೆ ಪಲ್ಲ ೧ಕ್ಕೆ	೧೧—೧೨—೦	೧೨—೦—೦
ದೇಸೀ ದುಯ್ಯಂ ತರಕ	೧೧—೮—೦	೧೧—೮—೦
ಕೈರಾಗಿ ಪಲ್ಲ ೧ಕ್ಕೆ	೪—೦—೦	[illegible]
ಕಾರಾಗಿ	೪—೧೪—೦	[illegible]
ಹಲಸಂದೆ ಪಲ್ಲ ೧ಕ್ಕೆ	೯—೦—೦	೧೦—೦—೦
ಬಿಳೀ ಅವರೆ	೧೨—೮—೦	೧೦—೮—೦
ಹೆಸರು	೯—೮—೦	೧೦—೬—೦
ಉದ್ದು	೧೨—೦—೦	೧೦—೦—೦
ಕಡಲೆ	೧೧—೦—೦	೧೦—೦—೦
ಎಳ್ಳು	೧೪—೦—೦	೧೩—೬—೦
ಹುರಳಿ	೬—೬—೦	೬—೬—೦
ಸೀಗೇಕಾಯಿ ಮಣ ೧ಕ್ಕೆ	೧—೧೨—೦	೧—೧೪—೬
ಮೆಣಸಿನಕಾಯಿ	೪—೦—೦	೪—೪—೦
ದುಯ್ಯಂ ತರಕ	೪—೧೨—೦	೨—೧೪—೦
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ	೫—೮—೦	ಮ ೧—೧೨—೦
ಸಣ್ಣ ಅಚ್ಚು ,,	೫—೦—೦	ಡ|| ೧—೧೦—೦
ಬೆಳ್ಳುಳ್ಳಿ ಮಣ ೧ಕ್ಕೆ	೪—೪—೦	೪—೪—೦
ಹರಳೆಣ್ಣೆ	೪—೨—೦	೪—೧೪—೦
ಕೊತ್ತುಂಬರಿ ಪಲ್ಲ ೧ಕ್ಕೆ	೮—೧೨—೦	೮—೧೦—೦
ಉಪ್ಪು	೯—೮—೦	೯—೧೨—೦
ಹುಣಸೇಹಣ್ಣು ಮಣ ೧ಕ್ಕೆ	೧—೧೨—೦	೧—೧೪—೦
ಹಳೇ ಹೊಗೆಸೊಪ್ಪು ,,	೧—೧೦—೦	೧—೧೦—೦
ತುಪ್ಪ	೧೩—೦—೦	೧೨—೮—೦
ಸೀಮೆ ಎಣ್ಣೆ ಟಿನ್ನು ೧ಕ್ಕೆ	೪—೨—೦	೪—೨—೦
ತೆಂಗಿನಕಾಯಿ ೧೦೦ಕ್ಕೆ	೫—೦—೦	೪—೩—೦
ಚಿನ್ನ (ತೋಲ)		
ಕೆಂಪು	೧೫—೧೬—೦	೧೪—೧೪—೦
ಪವನು	೧೬—೨—೦	೧೬—೧—೦
ಗಟ್ಟಿ	೨೬—೮—೦	೨೬—೬—೦

Mysore.—Printed and published for the Proprietor at the Wesleyan Mission Press.
3/8/93.

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು | ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವುದು.

ಸಂಪುಟ ೭ | ಮೈಸೂರು—ಸ ೧೮೯೩ ನೇ ಇಸವಿ ಆಗಸ್ಟ್ ತಾರೀಖು ೧೦ ನೇ ಗುರುವಾರ. | ಸಂಚಿಕೆ ೯

ನೋಟಿಸ್.

		ಕ್ರಯ			ಹಾಸಲು ಸಹಿತವಾಗಿ		
Campbell's	ಕನ್ನಡ ವ್ಯಾಕರಣ ಸಾರ	[illegible]	೨	೦	[illegible]	೨	೬
Object Lessons	ವಸ್ತು ಪಾಠಗಳು	೦	೧	೦	೦	೧	೬
Picture do	ಚಿತ್ರಗಳು ಸಹಿತವಾಗಿ	೦	೨	೦	೦	೨	೬
School Geography	ಭೂಗೋಳ ಶಾಸ್ತ್ರಸಾರ	೦	೨	೦	೦	೨	೬

ಈ ನಾಲ್ಕು ಪುಸ್ತಕಗಳು ಮೈಸೂರು ಸರ್ಕಾರದವರ ಒಪ್ಪಿಗೆ ಪ್ರಕಾರ ಸಕಲ ಪಾಠಶಾಲೆಗಳಲ್ಲಿಯೂ ಉಪಯೋಗಿಸತಕ್ಕವುಗಳು.

ಪರಶಿವ [illegible] ಚರಿತ್ರೆ	೦	೧	೬	೦	೨	೦
ಸ್ತ್ರೀಯರಿಗೆ ಉಪದೇಶ ಪುಸ್ತಕ	೦	೫	೦	೦	೫	೬
ಗಣಿತ ಮಾರ್ಗಗಳು	೦	೧	೦	೦	೧	೬
ಸಂಸ್ಕೃತ [illegible] ಭಾಷ್ಯಾಮಂಜರಿ	೦	೨	೦	೦	೨	೬
ಇಂಗ್ಲೀಷು [illegible] ೧ನೇ ೨ನೇ ಭಾಗಕ್ಕೆ	೦	೧	೬	೦	೧	೬
ಕಾವ್ಯಮಾಲೆ (Indian Poetical Anthology)	೦	೮	೦	೦	೮	೬
ಬಾಲವ್ಯಾಕರಣ	೦	೫	೦	೦	೫	೬
ಹಳಗನ್ನಡ ವ್ಯಾಕರಣ ಸೂತ್ರಗಳು	೦	೬	೦	೦	೬	೬
ಇಂಗ್ಲೀಷು ಕನ್ನಡವು ಸಂಭಾಷಣಾ ವಾಕ್ಯಗಳು	೦	೧೦	೦	೦	೧೦	೬
ಶಬ್ದಮಣಿ ದರ್ಪಣ	೧	೦	೦	೧	೪	೬
Kan. Eng. Pocket Dictionary	೧	೪	೦	೧	೫	೭
Eng. Kan. School Dictionary	೨	೧೦	೦	೨	೧೨	೬
[illegible]	೦	೪	೪	೦	೪	೬
ಆತ್ಮಿಕ ವಿದ್ಯಾ ಯುದ್ಧ (Bunyan)	೦	೧೨	೦	೦	೧೪	೬
ಕೃಷಿ ಪದ್ಧತಿ ೧ನೇ ಭಾಗ ೨ ಅಥವಾ ೩ನೇ ಭಾಗ	೦	೧	೬	೦	೨	೦
ಭಕ್ತಿಸಾರ	೦	೧	೦	೦	೧	೬
ಸತ್ಯ ವಾಗ್ದಾನ	೦	೧	೦	೦	೧	೬

ಈ ಪುಸ್ತಕಗಳೂ ಇನ್ನೂ ಅನೇಕ ಪ್ರಯೋಜನಕರವಾದ ಪುಸ್ತಕಗಳೂ ಕೆಳಗೆ ನಮೂದಿಸಿರುವ ಸ್ಥಳಗಳಲ್ಲಿ ದೊರಕುತ್ತವೆ.

ಬೆಂಗಳೂರು—ವೋರ್ಗಾಪಿನ ಪತ್ರವಿರುವ ಪುಸ್ತಕಶಾಲೆ.

[illegible]—[illegible] ರೀಡಿಂಗ್ ರೂಮ್

[illegible]—ವೆಸ್ಲೆಯನ್ ಮಿಷನ್ ಬಂಗಲೆ. ಮೈಸೂರು—ವೆಸ್ಲೆಯನ್ ಮಿಷನ್ ಪ್ರೆಸ್.

ನೋಟಿಸ್.

ಪುಸ್ತಕಗಳು	ಕ್ರಯ.
ಪ್ರಾರ್ಥನಾ ಪದಾವಳಿ	1—[illegible]—0
ಕನ್ನಡ ಇಂಗ್ಲೀಷು ನಿಘಂಟು ೧ ನೇ ದೊಡ್ಡ ತರಹ	[illegible]—0—0
„ „ 2 ನೇ ತರಹ	2—8—0
[illegible] ಪ್ರಶ್ನೋತ್ತರಗಳು	[illegible]—1—0
[illegible]	0—0—6
ಕಥಾ ಸಂಗ್ರಹ 1 ನೇ ಭಾಗ [illegible]	1—[illegible]—0
ಕಥಾ ಸಂಗ್ರಹ [illegible] ಹೊಸ ಭಾವ	1—0—0
„ „ [illegible]	[illegible]
[illegible]	[illegible]
[illegible] 2 ನೇ ಭಾಗ	0—[illegible]—0
ಪ್ರಸಂಗಿಯ ದರ್ಪಣ	0—0—6
ಇಂಗ್ಲೀಷಿನ ಪದಗಳಿಗೆಯೂ, ಕನ್ನಡ ಭಾಷೆಯ [illegible], [illegible] ವಿಭಾಗಗಳನ್ನು ವಿವರಿಸುವ ನಿಘಂಟು	0—2—0
ಕನ್ನಡ ವ್ಯಾಕರಣ (ಇಂಗ್ಲೀಷಿನಲ್ಲಿ)	2—0—0
ಹಿಂದುಸ್ತಾನಿ ವ್ಯಾಕರಣ	1—0—0
ಬಾಲರ [illegible]	0—1—0
ದಿನ ಕರಣಗಳ [illegible]	0—0—6
ಕ್ರೈಸ್ತರ [illegible]	0—11—0

ಮೇಲೆ ನಮೂದಿಸಿರುವ ಪುಸ್ತಕಗಳನ್ನು ಅಪೇಕ್ಷಿಸುವವರು ಮೈಸೂರು ವೆಸ್ಲೆಯನ್ ಮಿಷನ್ ಪ್ರೆಸ್ಸಿಗೆ ಬರೆದು ತರಿಸಿಕೊಳ್ಳಬಹುದು. ಅಂಚೆ ಹಾಸಲು ಬೇರೆ ಕೊಡಬೇಕು.

ವೆಸ್ಲೆಯನ್ ಮಿಷನ್ ಪ್ರೆಸ್,

ಮೈಸೂರು

ಪ್ರಸಿದ್ಧಪತ್ರಿಕೆ.

ಶಂ॥ ಸಕಲಸಂಪಾದನೆಗಿದು [illegible] | [illegible]

[illegible] ॥ [illegible] |

[illegible] ||

ಕನ್ನಡ ಮಹಾಭಾರತ.

"[illegible]" ಎಂಬ ಕನ್ನಡ ಮಹಾಭಾರತವು [illegible] ಪ್ರೆಸ್ಸಿನಲ್ಲಿ ಪ್ರಕಟಿಸಲ್ಪಡುವುದು [illegible] ಕ್ರಯ [illegible]

[illegible]

[illegible] ಪುಸ್ತಕಗಳು [illegible]

ಎಂ. [illegible], ಆಂಡರ್ಸನ್,

ಪ್ರಾಪ್ರೈಟರ್ಸ್, [illegible] ಪ್ರೆಸ್,

[illegible], ಬೆಂಗಳೂರು.

ಸ ೧೮೮೯ ರಲ್ಲಿ ಸ್ಥಾಪಿಸಲ್ಪಟ್ಟಿದ್ದು.

ಕೆನರಾ ಅಂಡ ಮೈಸೂರ ಟ್ರೇಡಿಂಗ್ ಏಜೆನ್ಸೀ ಆಫೀಸ್, ಮುಂಬಯಿ.

ಇವರು ತಯಾರಿಸಿರುವಂಥ—

[illegible]

[illegible] ಈ ತೈಲದ ಮಹತ್ವ [illegible], ಯಾರು ಈ ತೈಲವನ್ನು ಉಪ[illegible] ಅವರ ಅತ್ಯಂತವಾದ ಗುಣವು ಸಹಜ[illegible] ಉಪಯೋಗವನ್ನು ತಿಳಿಸುವದು [illegible]

ಈ ತೈಲ [illegible] ತಲೆಗೆ ಹಾಕಿಕೊಂಡರೆ ಮಿದುಳಿನಲ್ಲಿರುವ [illegible] ಶಾಂತಿಯು [illegible] ಪರಿಹಾರವಾದ [illegible] ಪರಿಹಾರವಾಗುವದು. [illegible]

[illegible] ಕಸಬುಗಾರರಿಗೂ, [illegible], ಚಿತ್ತವ್ಯಗ್ರವಾದವರಿಗೂ, ಅತ್ಯಂತ [illegible] ಶಕ್ತಿಯೋಗ [illegible] ಬೆಳವಣಿಗೆಯನ್ನು [illegible], ಅವು ಉದುರಿಹೋಗದಂತೆ ಮಾಡುವದು.

[illegible] ೨ ತಿಂಗಳು ಪೂರ್ತಿ [illegible] ಪ್ರತಿಯೊಂದು [illegible] ಕ್ರಯ [illegible] ೧ ಪೆಟ್ಟಿಗೆಗೆ ೬॥ ರೂಪಾಯಿ. [illegible] ಅವಶ್ಯವಾಗಿರುತ್ತದೆ. ಮಕ್ಕಳು [illegible]

ಈ ತೈಲ [illegible], ಪ್ರೆಸ್ಸು, ಮುತ್ತು, ರತ್ನ, ಬಂಗಾರ, ಬೆಳ್ಳಿ ಮುಂತಾದ [illegible] ಮಾರುವವರು

[illegible]

[illegible], ಕೆನರಾ ಅಂಡ ಮೈಸೂರ [illegible] ಆಫೀಸ್, [illegible] ಮುಂಬಯಿ.

ಈ [illegible] ನಮ್ಮ ಹೆಸರಿನ ಗುರ್ತನ್ನು ನೋಡಿ ತೆಗೆದುಕೊಳ್ಳಬೇಕು. [illegible] ಬರುತ್ತಿದ್ದರೆ ಜಾಗ್ರತೆ ನಡಿರಿ!

ಔಷಧಗಳು.	ರು. ಆ.	ಪುಸ್ತಕಗಳು.	ರು. ಆ.
ನಯನಾಮೃತ [illegible] ೧ ಕ್ಕೆ	೧—೬	[illegible]	೨—೮
ನಯನಾಮೃತ [illegible]	೧—೬	[illegible]	೫—೦
[illegible]	೧—೦	[illegible]	೮—೮
[illegible]	೧—೦	[illegible] (ಇಂಗ್ಲೀಷಿನಲ್ಲಿ)	೪—೬
[illegible]	೨—೧೨	[illegible]	೨—೮
[illegible]	[illegible]	[illegible]	[illegible]—೪
[illegible]	೪—೮	[illegible]	೧—೧೨
[illegible]	೦—೮	[illegible]	೧—೪
[illegible]	[illegible]	[illegible] (ಇಂಗ್ಲೀಷಿನಲ್ಲಿ) [illegible]	೦—೧೨
[illegible]	[illegible]		

[illegible] ಕ್ರಯ ರೂ. ೧—೭॥ [illegible] ಉತ್ತಮವಾದ [illegible]" ಎಂಬ [illegible] (೧ ವರುಷದ [illegible]) ಕ್ರಯ ರೂ. ೬.

ವೃತ್ತಾಂತ ಪತ್ರಿಕೆ.

ಚಂದಾ ನಿರ್ಣಯ.

	ರು ಆ ಪೈ
[illegible]	೧ ೦ ೦
[illegible]	೧ [illegible] ೦
ಬಿಡಿ ಪತ್ರಿಕೆ ೧ ಕ್ಕೆ	೦ ೦ ೩

ಈ ಪತ್ರಿಕೆಯು [illegible] ಪ್ರತಿ ಗುರುವಾರ [illegible] ಪ್ರಕಟಿಸಲ್ಪಡುವುದು. [illegible] ಈ ಪತ್ರಿಕೆಯನ್ನು ಅಪೇಕ್ಷಿಸುವವರು [illegible]

[illegible] ಎಡಿಟರ್,

ವೃತ್ತಾಂತ ಪತ್ರಿಕೆ

ಟೋಪಿಗಳು!

ಟೋಪಿಗಳು!! WOOL CAPS ಟೋಪಿಗಳು!

[illegible] ತಯಾರಾಗುವಂಥ [illegible] (Wool Caps) ನಮ್ಮ [illegible] ಮಾರಿಕೆಗೆ ಸಿದ್ಧವಾಗಿರುತ್ತವೆ [illegible] ಆಣೆ ಇಂದ ೧ ರೂ. ೬ ಆಣೆಗಳ ವರೆಗೂ ಬೇರೆ ಬೇರೆ ರಚನೆಗಳುಂಟು. [illegible] ನೋಡಿ ಪಡೆಯಬಹುದು. [illegible] ಮುಂಗಡವಾಗಿಯೇ [illegible] ಕಳುಹಿಸುತ್ತ [illegible] ಮೂಲಕ ಕಳುಹಿಸುತ್ತ [illegible] ಎಂದು [illegible]

[illegible],

ವೆಸ್ಲೆಯನ್ ಮಿಷನರಿ,

ಮೈಸೂರು.

ಇಸ್ತಿಹಾರ್‌ನಾಮಾ.

ಹೊಂನಾಳಿ ಸಬ್‌ಡಿವಿಜನ್ ಮುನಸಿಫ್ ಕೋರ್ಟಿನಲ್ಲಿ.
೧೮೯೩ನೇ ಇಸವಿ ಸಿವಿಲ್‌ಸೂಟ್ ನಂಬರ್ ೧೨೯.

ವಾದಿ.	ಪ್ರತಿವಾದಿಗಳು.
ಸರವರ ಸಾಬಾ ಉರುಫ್ ಸರವುಸ್ತಸಾಬಾ ಮುಹಮುದನ್, ೩೦ ವರುಷವಯುಸ್ಸು, ಕಸುಬು ವ್ಯಾಪಾರ, ಹರಿಹರದ ವಾಸಸ್ಥ.	೧ ಗಂದಗಸೂರ್, ರಜಪೂತ್ತಜಾತಿ, ವ್ಯಾಪಾರ ಕಸಬ್, ಹರಿಹರದ ವಾಸಸ್ಥ. ೨ ಮುಕ್ತಾಸದಾರ್ ಷರಫದೀನ್ ಸಾಹೇಬ್, ಹರಿಹರದ ವಾಸಿ. ೩ ಲಾಲಾಸಾಹೇಬ್, ಹರಿಹರದ ವಾಸಿ. ೪ ಅಬ್ದುಲ್ಲಾ ಸಾಹೆಬ, ಡಿಟೋ ವಾಸಿ. ೫ ಬುಡನ್ ಸಾಹೆಬ್, ಡಿಟೋ. ೬ ದಾವಲ್ ಸಾಹೇಬ್, ಡಿಟೋ

ಇದರಿಂದ ಸಮಸ್ತ ಜನರಿಗೆ ತಿಳಿಯಪಡಿಸುವದೇನೆಂದ್ರೆ—ಮೇಲೆ ಕಂಡ ವ್ಯಾಜ್ಯದಲ್ಲಿ ವಾದಿಯು ತನಗೆ ಎರಡನೇ ಪ್ರತಿವಾದಿಯಿಂದಾ ೪—೬—೯೨ ನೇ ಪತ್ರದಲ್ಲಿ ೭೫ ರೂಪಾಯಿಗಳಿಗೆ ತನಗೆ ಭೋಗ್ಯ ಮಾಡಿ ತಂನ ಸ್ವಾಧೀನವಿದ್ದ ಈ ಕೆಳಗೆ ವಿವರಿಸುವ ಮನೆಯುಂನ ಒಂದನೆ ಪ್ರತಿವಾದಿ ಅಕ್ರಮ ಸ್ವಾಧೀನ ಮಾಡಿ ತಂನ ಸ್ವಾಧೀನವಿದ್ದ ಈ ಕೆಳಗೆ ವಿವರಿಸುವ ಮನೆಯುಂನ ಒಂದನೆ ಪ್ರತಿವಾದಿ ಅಕ್ರಮ ಸ್ವಾಧೀನ ಹೊಂದಿ ಇರುವದರಿಂದ ಸದರೀ ಮನೆ ಬರಬೇಕೆಂದು ವಗೈರೆ ತಂದ ದಾವೆಯಲ್ಲಿ ೧ನೇ ಪ್ರತಿವಾದಿಯು ಸದರೀ ಸ್ವತ್ತನ್ನು ತಾನು ಅಕ್ರಮಸ್ವಾಧೀನ ಹೊಂದಲಿಲ್ಲವೆಂತಲೂ, ಈ ಸ್ವತ್ತು ಎರಡನೇ ಪ್ರತಿವಾದಿ ಸ್ವಂತದ್ದಲ್ಲವೆಂತಲೂ, ಹರಿಹರದ ಬಾಬಾಯಿ ಮಹಂಮದಖಾನನಿಗೆ ಸೇರಿದ್ದಾಗಿಯೂ, ಸದರೀ ಮಖಾನ್ ವ್ಯಾಸೇಜ ತಂದ ೩—೪—೯೨ ನೇ ಪ್ರತಿವಾದೀರಿಂದ ತನಗೆ ಬಾಡಿಗೆ ಕೊಡಲ್ಪಟ್ಟಿದ್ದೆಯೆಂತಲೂ, ಈ ಸ್ಥಳ ಹರಿಹರದ ಗ್ರಾಮಸ್ಥರಿಗೆ ಸಂಬಂಧಿಸಿದ್ದೆಂದೂ ಕೊಟ್ಟ ಉದಾಹರಣೇ ಮೇಲೆ ಮೇಲೆ ಕಂಡ ೩ರಿಂದ ೬ರ ವರಿಗಿನ ಪ್ರತಿವಾದೀರಂನ ಕಕ್ಷಿಗಾರರಾಗಿ ಸೇರಿಸಿ ಇರುವದಲ್ಲದೆ ಇನ್ನೂ ಆ ಗ್ರಾಮದಲ್ಲಿ ಇರತಕ್ಕ ಈ ದಾವೇಕ್ಕೆ ಕಕ್ಷಿಗಾರರಾಗಬೇಕೆಂದು ಇಷ್ಟಪಟ್ಟ ಸಮಸ್ತಜನರೂ ೧೮೯೩ನೇ ಇಸವಿ ಆಗಸ್ಟ ತಿಂಗಳು ೨೮ ನೇ ತಾರೀಖು ದಿವಿ ೧೧ಗಂಟೆಗೆ ಹೊಂನಾಳಿ ಮೊಕ್ಕಾಂ ಈ ಕೋರ್ಟು ರೂಬರೂಬ್ ಹಾಜರಾಗಿ ವ್ಯವಹರಿಸ ಬಹುದೆಂತ ಇದರಿಂದ ಪ್ರಕಟಿಸಲ್ಪಟ್ಟಿದೆ

ಭೋಗ್ಯದ ಸ್ವತ್ತಿನ ವಿವರ.

ಹರಿಹರ ಕಸಬಾದಲ್ಲಿರುವ ಉತ್ತರಭಾಗದ ಖಾನೇಷುಮಾರಿ ನಂಬರು ನೆ ಹಂಚಿನ ಮನೆಗೆ ಚಕ್ಕಬಂದಿ—ಪೂರ್ವಕ್ಕೆ ಮೊಹದೀನ್ ಸಾಬನಮನೆ, ಪಶ್ಚಿಮಕ್ಕೆ—ರಸ್ತೆ, ಉತ್ತರಕ್ಕೆ—ಕಿರಸ್ತಾನರದೇವಸ್ಥಾನ, ದಕ್ಷಿಣಕ್ಕೆ—ಬಜಾರದರಸ್ತೆ, ಈ ಮಧ್ಯೆ ಇರತಕ್ಕ ಮನೆ.

೨೮—೭—೯೩
ಹೊಂನಾಳಿ

P. S. Shaprakasam Pillay,
Munsiff.

ವೃತ್ತಾಂತ ಪತ್ರಿಕೆ.

—o—

೧೮೯೩ನೇ ಇಸವಿ ಆಗಸ್ಟ್ ತಾ|| ೧೧ ನೇ ಗುರುವಾರ

ಬಾಲ್ಯ ವಿವಾಹ.

ಈ ವಾರದ ಪತ್ರಿಕೆಯಲ್ಲಿ ಬಾಲ್ಯ ವಿವಾಹಕ್ಕೆ ಅಡ್ಡಿಮಾಡತಕ್ಕ ಸರ್ಕಾರದ ಹೊಸ ಬಿಲ್ಲನ್ನು ಪ್ರಚುರಗೊಳಿಸುವದಕ್ಕೆ ಸಂತೋಷಿಸುತ್ತೇವೆ. ಈ ಆಕ್ಟನ್ನು ಸರಿಯಾಗಿ ಪರಿಪಾಲಿಸಿದರೆ ಈ ದೇಶದಲ್ಲಿ ಪ್ರಬಲವಾಗಿರುವ ಈ ಕೆಟ್ಟ ಪದ್ಧತಿಯನ್ನು ನಿಲ್ಲಿಸುವುದಕ್ಕೆ ಅದರಿಂದ ಬರುವ ಸಹಾಯವು ಸ್ವಲ್ಪ ಮಾತ್ರವೆಂದು ನಮಗೆ ತಿಳಿದುಬರುತ್ತದೆ. ಆದಾಗ್ಯೂ ಸರ್ಕಾರದವರು ಈ ವಿಷಯವನ್ನು ಕುರಿತು ಗಮನವಿಟ್ಟು ಅದನ್ನು ಶಾಸನ ಮೂಲಕವಾಗಿ ನಡೆಸುವದಕ್ಕೆ ಪ್ರಾರಂಭಮಾಡಿರುವದಕ್ಕಾಗಿ ನಾವು ಆನಂದಯುಕ್ತರಾಗಿದ್ದೇವೆ. ಈ ಆಕ್ಟಿನಪ್ರಕಾರ ೮ ವರ್ಷ ವಯಸ್ಸಿಗೊಳಪಟ್ಟ ಬಾಲಿಕೆಯರಿಗಾಗಲಿ, ೧೪ ವಯಸ್ಸಿನೊಳಪಟ್ಟ ಬಾಲಕನಿಗಾಗಲಿ ವಿವಾಹ ಮಾಗಲೇ ಕೂಡದೆಂದು ಖಂಡಿತವಾಗಿ ವಿಧಿಸಲ್ಪಟ್ಟಿದೆ. ೧೮ವರ್ಷ ವಯಸ್ಸಿಗೆ ಮೇಲ್ಪಟ್ಟವರ ಪೈಕಿ ಯಾವನಾದರೂ ೮ ವರ್ಷ ವಯಸ್ಸಿನೊಳಗಿರುವ ಹೆಣ್ಣನ್ನು ಮದುವೆಯಾದರೆ ಅವನು ಆರು ತಿಂಗಳಿನ ಸಜಕ್ಕೂ ಜುಲ್ಮಾನೆಗೂ ಗುರಿಯಾಗುವನು. ಇಷ್ಟುಮಾತ್ರವಲ್ಲದೆ ೩೦ ವರ್ಷ ವಯಸ್ಸುಳ್ಳ ಒಬ್ಬ ಮನುಷ್ಯನು ೧೪ ವರ್ಷ ವಯಸ್ಸಿನೊಳಪಟ್ಟ ಹೆಣ್ಣನ್ನು ಮದುವೆಮಾಡಿಕೊಂಡರೆ, ಅಂಥವನು ೨ ವರ್ಷ ಸಜಕ್ಕೂ ಭಾರೀ ಜುಲ್ಮಾನೆಗೂ ಪಾತ್ರನಾಗುವನು.

ಮೇಲ್ಕಂಡ ಏರ್ಪಾಡುಗಳು ನ್ಯಾಯ್ಯವೂ, ಹಿತಕರವೂ ಆಗಿರುತ್ತವೆಯಲ್ಲದೆ ಬೇರೆ ಅಲ್ಲವು. ಈ ದೇಶದ ಪ್ರಜೆಗಳಲ್ಲಿ ಕೆಲವರು ಈ ವಿಷಯದಲ್ಲಿ ಬಹು ಆಕ್ಷೇಪಣೆ ಮಾಡಿದಾಗ್ಯೂ ಬುದ್ಧಿವಂತರೆಲ್ಲರೂ ಇದನ್ನು ಒಳ್ಳೆಯದೆಂದು ಒಪ್ಪಿಕೊಳ್ಳುವವರಲ್ಲಿ ಯಾವ ಸಂಶಯವಿರಲಾರದು. ಬಾಲ್ಯ ವಿವಾಹದಿಂದ ಪ್ರಜೆಗಳಿಗೆ ಉಂಟಾಗಿರತಕ್ಕ ನಷ್ಟ ಮತ್ತು ಅಡಚಣೆಗಳು ಇಷ್ಟೆಂದು ವಿವರಿಸಲು ಅಸಾಧ್ಯವಾಗಿದೆ. ಇಂಥಾ ವಿವಾಹವು ಮಕ್ಕಳ ವಿದ್ಯಾಭಿವೃದ್ಧಿಗೂ, ದೇಹದ ಸೌಖ್ಯಕ್ಕೂ ಮುಖ್ಯವಾಗಿ ವಿರೋಧವಾಗಿರುತ್ತದೆ ಮದುವೆಯೂ ಚಿಂತೆಯೂ ಹುಟ್ಟಿದಮೇಲೆ, ವಿದ್ಯದ ಚಿಂತೆಯು ಹೋಗೇ ಹೋಯಿತು. ಪೂರ್ವಕಾಲದಲ್ಲಿ ಈ ದೇಶವು ಕ್ಷೀಣಸ್ಥಿತಿಗೆ ಬಂದುದಕ್ಕೆ ಇರುವ ಅನೇಕ ಕಾರಣಗಳಲ್ಲಿ ಬಾಲ್ಯ ವಿವಾಹವು ಒಂದು ವಿಶೇಷವಾದದ್ದಲ್ಲವೆ !.

ಆದರೆ ಜನರು ಪ್ರತ್ಯಕ್ಷವಾಗಿಯಾಗಲಿ, ಬೇರೆ ಯಾವ ವಿಧವಾದ ಗುಪ್ತರೀತಿಯಿಂದಲಾಗಲಿ, ಈ ಕಾನೂನು ಸೂಚಿಸುವ ವಯಸ್ಸಿಗೆ ತತ್ಪೂರ್ವ ತಂದೆತಾಯಿಗಳು ತಮ್ಮ ಪುತ್ರೀ ಪುತ್ರರುಗಳಿಗೆ ಮದುವೆಮಾಡಬೇಕಾದರೆ ಅದಕ್ಕೆ ಈ ಆಕ್ಟಿನಿಂದ ಯಾವ ಅಡಚಣೆಯಿರುವದು ? ಜನರು ತಮ್ಮ ಮಕ್ಕಳನ್ನು ಕೊಳ್ಳೇಗಾಲದಲ್ಲಾಗಲಿ, ಬೆಂಗಳೂರು ದಂಡಿನಲ್ಲಾಗಲಿ ಅಥವ ಇನ್ಯಾವ ಬ್ರಿಟಿಷ್ ಸೀಮೆಯಲ್ಲಾಗಲಿ ತಮ್ಮ ಇಷ್ಟವನ್ನು ನೆರವೇರಿಸಿಕೊಂಡು ವಾಪಸು ಬಂದರೆ ಅಂಥವರಿಗೆ ಈ ಆಕ್ಟಿನಿಂದ ಯಾವ ಅತ್ಯಂತರತಾನೇ ಇರುವದು ? ದಿವಾನರವರು ಈ ಆಕ್ಟಿಗೆ ಇನ್ನೊಂದು ಸೆಕ್ಷನನ್ನು ಸೇರಿಸಿ ಮೈಸೂರು ಸೀಮೆಯ ಜನರು ಬ್ರಿಟಿಷ್ ರಾಜ್ಯಕ್ಕೆ ಹೋಗಿ ಈ ಆಕ್ಟಿನ ತಾತ್ಪರ್ಯಕ್ಕೆ ವಿರೋಧವಾಗಿ ತಮ್ಮ ಮಕ್ಕಳಿಗೆ ಮದುವೆಮಾಡಿಕೊಂಡು ಬಂದರೆ ಆ ಮದುವೆಯು ಅನ್ಯಾಯವಾದದ್ದೆಂತಲೂ, ಅದರಿಂದ ಹುಟ್ಟುವ ಮಕ್ಕಳು ನ್ಯಾಯಕ್ಕೆ ವಿರೋಧವಾದ ಮಕ್ಕಳೆಂತಲೂ ಪ್ರಚುರಪಡಿಸುವುದು ಉಪಯೋಗಕಾರವಾಗಿರುವುದು.

ಬ್ರಿಟಿಷ್ ಅಧಿಕಾರಿಗಳು ತಮ್ಮ ರಾಜ್ಯದೊಳಗೆ ಇನ್ನು ಜಾರಿಯಲ್ಲಿ ತಾರದಿರುವಂಥಾ ಈ ಕಾನೂನನ್ನು ದಿವಾನರವರು ಮೈಸೂರು ಸೀಮೆಗೆ ವಿಧಿಸಿರುವದು ಅತಿ ಶ್ಲಾಘನೀಯವಾಗಿರುತ್ತದೆ. ಮುಂದೆ ವಿಧವಾ ವಿವಾಹವೂ ಈ ದೇಶದಲ್ಲಿ ಪ್ರಬಲವಾಗುವಂತೆ ಸರ್ಕಾರದಿಂದ ತಕ್ಕ ಪ್ರೋತ್ಸಾಹ ಉಂಟಾಗಬೇಕೆಂದು ನಮಗೆ ಕೋರಿಕೆ ಇರುವುದು.

ಶ್ರೀಮನ್ಮಹಾರಾಜರವರಿಗೆ ಬಂದ ಕರ್ನಲ್ ಬಿರುದು.

ಕಳೆದ ನವಂಬರು ತಿಂಗಳಲ್ಲಿ ಮೈಸೂರಿಗೆ ಮತ್ತು ಇಂಡಿಯಾ ಗವರ್ನರ್ ಜನರಲ್ ರವರಾದ ಲಾರ್ಡ್ ಲ್ಯಾನ್ಸ್‌ಡೌನ್ ಸಾಹೇಬರವರು ರಾಜಧಾನಿಗೆ ದಯಮಾಡಿಸಿದ್ದಾಗ್ಯೆ ಶ್ರೀಮನ್ಮಹಾರಾಜರವರು ಅತ್ಯಾದರಪೂರ್ವಕವಾಗಿ ಅವರಿಗ ಮಾಡಿದ ಆತಿಥ್ಯವು ವೈಸ್‌ರಾಯರವರಿಗೆ ಮಹದಾನಂದವನ್ನುಂಟುಮಾಡಿತೆಂಬದು ವಾಚಕರಿಗೆ ತಿಳಿದೇ ಇದೆಯಷ್ಟೆ. ಇಷ್ಟೇ ಅಲ್ಲದೆ ಶ್ರೀಮನ್ಮಹಾರಾಜರವರು ಯೂರೋಪ್ಯರ ನಾಗರಿಕತೆಗನುಗುಣವಾಗಿ ರಾಜ್ಯಭಾರದಾಡಳಿತಗಳನ್ನು ನಡೆಸಿಕೊಂಡು ಬಂದಿರುವುದರಿಂದಲೂ ಮತ್ತು ಅವುಗಳಲ್ಲೆಲ್ಲಾ ಸ್ವಪ್ರಜಾಹಿತಚಿಂತಕರಾಗಿಯೇ ಇರುವುದರಿಂದಲೂ, ಈ ವಿಷಯಗಳನ್ನೆಲ್ಲಾ ವೈಸ್‌ರಾಯರವರು ತಾವು ಮುದ್ದಾಗಿ ದಯಮಾಡಿಸಿದ್ದಾಗ್ಯೆ ತಿಳಿದು, ಇಂಥಾ ಪ್ರಜಾಹಿತೈಕನಿರತರಾದ ಮತ್ತು ಹಿಂದೂಸ್ಥಾನದ ನೇಟಿವ್ ರಾಜರುಗಳಲ್ಲೆಲ್ಲಾ ಪ್ರಧಾನರಾದ ನಮ್ಮ ಮಹಾರಾಜರವರಿಗೆ ಮತ್ತೊಂದು ಗಣನಾರ್ಹವಾದ ಬಿರುದನ್ನು ದಯಪಾಲಿಸುವುದು ಸಹಜವೆಂದು ಭಾವಿಸಿ, ಇದೇ ಅರ್ಥಕ್ಕೆ ಶ್ರೀಮನ್ಮಹಾರಾಣಿಯವರಿಗೆ ವಿಜ್ಞಾಪನೆ ಮಾಡಿಕೊಂಡು ಮಹಾರಾಣಿಯವರ ಸೈನ್ಯದಲ್ಲಿ ಕರ್ನಲ್ ಎಂಬ ಬಿರುದನ್ನು ದಯಪಾಲಿಸಲು ಶ್ರೀಮನ್ಮಹಾರಾಜರವರು ಆ ಬಿರುದಿಗೆ ಅರ್ಹರಾಗಿರುತ್ತಾರೆಂಬದಾಗಿ ವಗೈರೆ ಶಿಫಾರಸು ಬರದಿದ್ದರು. ಶ್ರೀಮದ್ರಾಜರಾಜೇಶ್ವರಿ ಚಕ್ರವರ್ತಿನಿಯವರು ಬಹುಸಂತೋಷಪಟ್ಟು ಈ ಬಿರುದನ್ನು ಇವರಿಗೆ ಕೊಡಲು ತಮಗೆ ಇಷ್ಟವೆಂಬದಾಗಿ ಅಪ್ಪಣೆಕೊಡಿಸಿದರು. ಇದಕ್ಕನುಸಾರವಾಗಿ ಈ ಬಿರುದನ್ನು ಶ್ರೀಮನ್ಮಹಾರಾಜರವರಿಗೆ ಕೊಡುವ ಉದ್ದೇಶದಿಂದ ಸಂಸ್ಥಾನದ ರೆಸಿಡೆಂಟ್‌ರವರು ಕಳೆದ ಬುಧವಾರ ಬೆಂಗಳೂರು ಅರಮನೆಯಲ್ಲಿ ಸಪರಿವಾರ ಸಮೇತರಾಗಿ ಮಹಾರಾಜರವರನ್ನು ಕಂಡು ದರ್ಬಾರಿನಲ್ಲಿ ಮಹಾರಾಣಿಯವರ ಸಂತೋಷವನ್ನು ತಿಳಿಯಪಡಿಸಿ ಬಿರುದನ್ನು ಒಪ್ಪಿಸಿದರು. ಹಿಂದೂಸ್ಥಾನದಲ್ಲಿ ಅನೇಕ ನೇಟಿವ್ ರಾಜರುಗಳಿಗೆ ಲಭಿಸದಂಥಾ ಈ ಕರ್ನಲ್ ಪದವಿಯು ನಮ್ಮ ಮಹಾರಾಜರವರಿಗೆ ಬಂದಿರುವುದಕ್ಕಾಗಿ ನಾವು ತುಂಬಾ ಸಂತೋಷಿಸುವೆವು.

ಅಕಾಲಮರಣ.

ಸಂಸ್ಥಾನದ ದಿವಾನ್ ಸರ್ ಕೆ. ಶೇಷಾದ್ರಯ್ಯರವರ ದೊಡ್ಡ ಅಳಿಯಂದರಾದ ಆರ್. ವಿ. ಶಿವರಾಮಯ್ಯನವರು ಕಳೆದ ೧೪ನೆ ಸೋಮವಾರ ಬೆಂಗಳೂರಿನಲ್ಲಿ ದಿವಾನರವರ ಮನೆಯಲ್ಲೇ ಮರಣವನ್ನೈದಿದರೆಂದು ತಿಳಿಸಲು ವಿಷಾದಿಸುವೆವು. ಇವರಿಗೆ ಮದುವೆಯಾಗಿ ಸುಮಾರು ೭ ವರ್ಷಗಳು ಮಾತ್ರವೇ ಆಗಿತ್ತು. ಇವರು ಇನ್ನೂ ೨೨ ವಯಸ್ಸಿನ ಪ್ರಾಯಸ್ಥರಾಗಿದ್ದರು. ಇವರಿಗೆ ಇಂಗ್ಲಿಷ್ ವಿದ್ಯೆಯಲ್ಲಿ ತಕ್ಕಮಟ್ಟಿಗೆ ಪರಿಶ್ರಮವಿತ್ತು. ಇನ್ನೂ ಎಫ್. ಎ ಪರೀಕ್ಷೆ ಪ್ಯಾಸಾಗಿರಲಿಲ್ಲ. ಇವರು ಕ್ರಿಕೆಟ್ಟಿನಲ್ಲಿಯೂ ವರ್ಮುಸೆಸಾರ ನುಕ್ತಳು, ಆವರಿಗೆ ಪರಿಚಯವು ವ್ಯವರಲ್ಲರಲ್ಲಾ ಬಹುಸಲಿಗೆಯವರಾಗಿಯೂ, ಆಟಪಾಟಗಳಲ್ಲಿ ತಕ್ಕಮಟ್ಟಿಗೆ ಚತುರರಾಗಿಯೂ ಇದ್ದರೆಂದು ಕೇಳುತ್ತೇವೆ. ಆದರೆ ಇವರ ಅಕಾಲ ಮರಣದಿಂದ, ಇನ್ನೂ ಸರಿಯಾಗಿ ೧೮ ವಯಸ್ಸಿಗದ ನಮ್ಮ ದಿವಾನರವರ ಮಗಳಿಗೆ ಸಂಭವಿಸಿದ ದುಸ್ಥಿತಿಯನ್ನು ಕುರಿತು ಎಷ್ಟು ವಿಚಾರಪಟ್ಟರೂ ಸ್ವಲ್ಪವಾಗಿಯೇ ಇರುವದ. ದಿವಾನರವರಿಗೆ ಇದರಿಂದ ಉಂಟಾದ ದುಃಖವನ್ನು ವಿವರಿಸಲಳವಲ್ಲ. ಸಕಲ ಭಾಗಗಳಲ್ಲಿಯೂ ಅಸಾಧಾರಣವಾದ ಯೋಗ್ಯತೆಯನ್ನು ಪಡೆದಿರುವ ನಮ್ಮ ದಿವಾನರವರು ಇತರರನ್ನು ನೋಡಿ ತಮ್ಮ ದುಃಖವನ್ನು ಮರೆಯುವಂತೆ ದೈವಾನುಗ್ರಹವಾಗಲೆಂದು ಕೋರುವೆವು. ಈ ದುಃಖಸೂಚನಾರ್ಥವಾಗಿ ಆ ದಿವಸ ಮೈಸೂರು ಸೀಮೆಯ ಎಲ್ಲಾ ಆಫೀಸುಗಳಿಗೂ ರಜಾ ಕೊಡಲ್ಪಟ್ಟಿತ್ತೆಂದು ತಿಳಿಯಬಂದಿದೆ.

ಕ್ರತುಧ್ವಂಸಿ.

ಮನುಷ್ಯರಲ್ಲಿ ಪರ್ವ ದಿವಾರ ಮಾರ್ಗಗಳು ಅನೇಕ ಉಂಟು ಅವೈಕೆ ಯಜ್ಞವು ಪ್ರಧಾನವಾದದ್ದು ಅದನ್ನು ಐಶ್ವರ್ಯವಂತರು ಮಾತ್ರ ಮಾಡಬಹುದೇ ಹೊರ್ತು ಬಡವರು ಮಾಡುವುದಕ್ಕೆ ಆಗುವದಿಲ್ಲ ಈ ಯಜ್ಞಗಳನ್ನು ಪೂರ್ವದಿಂದಲೂ ಅರಸರೇ ಮುಂತಾದವರು ಮಾಡಿದರೇ ಹೊರ್ತು ಬಡವರು ಮಾಡಲಿಲ್ಲ ಎಂದು ಹೇಳುವರು

ಈ ಯಜ್ಞದಿಂದ ಇಂದ್ರ ಪದವಿಯನ್ನಾದರೂ ಅಪೇಕ್ಷಿಸಬಹುದೆಂದು ಹಿಂದೂಗಳಲ್ಲಿ ಅಭಿಪ್ರಾಯವಿರುತ್ತೆ ಹಾಗಾದರೆ ಈ ಯಜ್ಞವನ್ನು ಕುರಿತು ನಾವು ಸ್ವಲ್ಪವಾಗಿ ಯೋಚನೆ ಮಾಡೋಣ ಮೊದಲು ಯಜ್ಞ ಅಂದರೆ ಏನು ಎಂದು ಯೋಚನೆ ಮಾಡೋಣ ಯಜ್ಞ ಅಂದರೆ ಯಾಗ ಯಜ್ಞ ಯಜದೇವ ಪೂಜಾಸಂಗತಿ ಕರಣದಾನೇಷು ಯಜ್ಞವೆನ್ನಲ್ಪಡುವದು, ಅಂದರೆ ದೇವರಿಗೂ ಮನುಷ್ಯರಿಗೂ ಮಧ್ಯದಲ್ಲಿ ನಿಂತು ದೇವರ ಕೋಪವನ್ನು ಶಾಂತಿಪಡಿಸುವ ಒಂದು ಪರಿಹಾರ್ಥಕಾರ್ಯ ಇದಕ್ಕೆ ಯಜ್ಞವೆಂದು ಹೇಳುವರು ಹಾಗಾದರೆ ಈ ಯಜ್ಞ ನಿಯಾಮಕವಾದ್ದಕ್ಕೆ ಕಾರಣಗಳು ಹ್ಯಾಗೆ ಎಂದು ಯೋಚಿಸುವ ಸರ್ವಜ್ಞನಾದ ದೇವರ ಆಜ್ಞೆಯನ್ನು ಮನುಷ್ಯನು ಭಂಗಪಡಿಸಿ ಆತನ ನೀತಿಗೆ ಮತ್ಸರನಾದಕಾರಣ ಆ ನೀತಿಯು ಮನುಷ್ಯನಿಗೆ ವಿಧಿಸಿದ ನಿತ್ಯ ನರಕಕ್ಕೆ ಮನುಷ್ಯನು ದೇಹಾತ್ಮಗಳೆರಡನ್ನೂ ಆಹುತಿಯಾಗಿ ಕೇಳಿತು ಆಗ ಅಂತಃಕರಣನಾದ ದೇವರು ತನ್ನ ಪ್ರೀತಿಎಂಬ ಗುಣದಿಂದ ಮನುಷ್ಯನಿಗುಂಟಾದ ಅನಾಹುತದಿಂದ ತಪ್ಪಿಸುವದಕ್ಕೋಸ್ಕರ ತನ್ನ ಪ್ರೀತಿಯನ್ನೇ ಕಾಲದ ಸಂಪೂರ್ಣತೆ ಬರುವದಾಗಿ ಯಜ್ಞಕರ್ತೃವಾಗಿ ನಿಯಾಮಿಸಿ ಆ ಕರ್ತೃವಿನ ಆಗಮನದ ಪರಿಯಂತರಕ್ಕೂ ಕೃತಕ ಯಜ್ಞವನ್ನು ನಿಯಮಿಸಿದನು ಈ ಕೃತಕ ಯಜ್ಞವೇ ಎಲ್ಲಾ ಜನರಲ್ಲಿಯೂ ಈಗಿನ ವರೆಗೂ ನಡೆಯುತ್ತಾ ಬರುವದು ಹಾಗಾದರೆ ಈಗ ಕೃತಕ ಯಜ್ಞವನ್ನು ಮನುಷ್ಯನು ಮಾಡುವದು ನ್ಯಾಯವಾಗಿದೆಯೋ ಎಂದು ಯೋಚಿಸೋಣ ಹಾಗೆ ಯೋಚಿಸಿದ್ದೇ ಆದರೆ ಈಗ ಮಾಡುವ ಕೃತಕಯಜ್ಞದಿಂದ ನಿಷ್ಫಲವೆಂದು ಗೊತ್ತಾಗುತ್ತದೆ ಹ್ಯಾಗಂದರೆ ಕ್ರತುಧ್ವಂಸಿ ಎಂಬ ಒಂದು ಹೆಸರು ರೂಢಿಯಾಗಿರುವದನ್ನು ಎಲ್ಲಾ ಜನಗಳೂ ಅನಿವಾರ್ಯವಾಗಿ ತಿಳಿದಿರುತ್ತಾರೆ ಈ ಶಬ್ದ ಹುಟ್ಟುವದಕ್ಕೆ ಕಾರಣವೇನು ಎಂದು ಯೋಚಿಸಿದರೆ ನಮಗೆ ಸರಿಯಾದ ಉತ್ತರವು ದೊರೆಯುತ್ತದೆ ಆದರೆ ಈಚಿಗೆ ಮನುಷ್ಯರು ಕ್ರತುಧ್ವಂಸಿ ಎಂಬ ಹೆಸರಿಗೆ ಸರಿಯಾದ ಚರಿತ್ರೆಯನ್ನು ಕಂಡು ಹಿಡಿಯುವದಕ್ಕೆ ಶಕ್ತಿಸಾಲದೆ ಅಜ್ಞಾನದಿಂದ ಈಶ್ವರನಿಗೆ ಈ ಹೆಸರು ಬಂತೆಂದು ತಿಳಿದಿರುತ್ತಾರೆ ಆತನ ಈ ಹೆಸರಿನ ಕ್ರತುಧ್ವಂಸಿಸುವದಕ್ಕೆ ಅಯೋಗ್ಯವಾದ ಚರಿತ್ರೆಯನ್ನು ನಿರ್ಮಿಸಿದರು ಹ್ಯಾಗಂದರೆ ಪಾರ್ವತಿಯ ತಂದೆಯಾದ ದಕ್ಷಬ್ರಹ್ಮನು ಯಜ್ಞವನ್ನು ಮಾಡುತ್ತಿರುವಾಗ ದಕ್ಷಬ್ರಹ್ಮನು ಸಕಲ ಸುರಮುನಿ ದೇವತೆಗಳನ್ನೂ ಕರೆದು ಗೌರೀ ಕಾಂತನನ್ನು ಅಂದರೆ ಪಾರ್ವತೀ ಗಂಡನನ್ನೂ ಪಾರ್ವತಿಯನ್ನೂ ಕರೆಯದೆ ಇದ್ದು ಪಾರ್ವತಿಯು ತಂದೆಯು ಯಜ್ಞಮಾಡುವದನ್ನು ನೋಡುವುದಕ್ಕೆ ಪರಮೇಶ್ವರನನ್ನು ಒಲವಂತದ ಮೇಲೆ ಕರೆದುಕೊಂಡು ಹೋದಾಗ್ಯೂ ಪರಮನನ್ನು ದಕ್ಷಬ್ರಹ್ಮನು ದೂಷಿಸಿದ್ದರಿಂದ ಆ ದೂಷಣೆಯನ್ನು ಪಾರ್ವತಿಯು ಕೇಳಲಾರದೇ ದಕ್ಷನು ಮಾಡುತ್ತಿದ್ದ ಯಜ್ಞಕುಂಡದಲ್ಲಿ ಬಿದ್ದು ಪ್ರಾಣಹತ್ಯ ಮಾಡಿಕೊಂಡದ್ದನ್ನು ಪರಮೇಶ್ವರನು ನೋಡಿ ಕೋಪವನ್ನು ತಾಳಲಾರದೆ ತನ್ನ ಕೋಪದ ಜಟೆಯನ್ನು ನೆಲದಮೇಲೆ ಬಡಿಯಲು ಆ ಜಟೆಯಿಂದ ವೀರಭದ್ರನನ್ನು ಪಡೆದು ಆ ವೀರಭದ್ರನ ಮುಖಾಂತ್ರ ದಕ್ಷಬ್ರಹ್ಮನ ಯಜ್ಞವನ್ನು ನಾಶಮಾಡಿದ್ದರಿಂದ ಈಶ್ವರನಿಗೆ ಕ್ರತುಧ್ವಂಸಿ ಎಂದು ನಾಮಬಂತೆಂದು ಹೇಳಿಕೊಳ್ಳುತ್ತಾರೆ ಇದು ಹಾಗಲ್ಲ ಕ್ರತುಧ್ವಂಸಿ ಎಂಬ ಪದದ ನಿಜವಾದ ಅಭಿಪ್ರಾಯವನ್ನೂ ಆ ಚರಿತ್ರೆಯನ್ನೂ ನೋಡಿದರೆ ತಂದೆಯಾದ ದೇವರ ನಿತ್ಯಕುಮಾರನಾದ ಯೇಸುಕ್ರಿಸ್ತನಿಗೆ ಕ್ರತುಧ್ವಂಸಿಎಂಬ ಹೆಸರು ಸಲ್ಲತಕ್ಕದ್ದಾಗಿರುತ್ತೆ ಹ್ಯಾಗಂದರೆ ಯಜ್ಞವನ್ನು ಮಾಡುವದು ಯಾತಕ್ಕೆ ? ದೈವಭೂತ ತೃಪ್ತಿಗೆ ಹಾಗಾದರೆ ಯಜ್ಞವು ದೇವರಿಗೆ ಪ್ರೀತಿಯಾಗುತ್ತಿರುವಾಗ ಅಂಥಾ ಪ್ರೀತ್ಯರ್ಥವಾದ ಯಜ್ಞವನ್ನು ಈ ಸ್ವಾಮಿ ಹಾಳುಮಾಡಿದ್ದನೆಂಬ ಯೋಚನೆಯು ಶುದ್ಧ ತಪ್ಪು ದೇವರು ಯಾವಾಗಲೂ ಪಕ್ಷರ ಪ್ರತ್ಯರ್ಥವಾದ ಕಾರ್ಯಗಳಿಂದ ತೃಪ್ತಿಹೊಂದುವ ಆರ್ಥಗಳನ್ನು ಮಾಡತಕ್ಕವನೇ ವಿನಹ ಭಕ್ತರನ್ನು ಹಾಳುಮಾಡುವ ಅವಮಾನಪಡಿಸತಕ್ಕವನಲ್ಲ ಇಂಥಾ ಆಲೋಚನ ತಪ್ಪಿದದ್ದು ಈ ಚಕ್ಕ ಚರಿತ್ರೆಯಲ್ಲಿ ಯಜ್ಞನೆಂದೂ ಈಶ್ವರನೆಂದೂ ಅವನ ಮಗನೆಂದೂ ಯಜ್ಞ ನಾಶನವೆಂದೂ ಸ್ಪಷ್ಟವಾಗಿ ಸೂಚಿಸುತ್ತದಷ್ಟೆ ಈ ಸೂಚನೆಯು ನಿಜವಾದವು ಹೌದೆಂದು ನಿಜವಾಗಿ ಪರೀಕ್ಷಿಸಬೇಕಾದರೆ ನಮಗೆ ಏನಾಗಿ ಚರಿತ್ರೆಯ ಅರ್ಥವು ಗೊತ್ತಾಗುವದು ಹ್ಯಾಗಂದರೆ ನಾವು ಪೂರ್ವದಲ್ಲಿ ಹೇಳಿದಹಾಗೆ ಮನುಷ್ಯರ ಪಾಪ ಪರಿಹಾರಕ್ಕೆ ದೇವರ ಪ್ರೀತಿಯು ಯಜ್ಞ ಕರ್ತೃವಾಗಿ ಬರುವ ಕಾಲದ ಸಂಪೂರ್ಣತೆಯವರಿಗೂ ಬರುವವನು ಒಂದು ಮಹಾಯಜ್ಞವನ್ನು ಸೂಚಿಸುವದಕ್ಕೋಸ್ಕರ ಮನುಷ್ಯರು ಕೃತಕಯಜ್ಞವನ್ನು ಮಾಡಲು ದೇವರಿಂದ ನಿಯಮಿಸಲ್ಪಟ್ಟಿರು ದೃಷ್ಟಾಂತವಾಗಿ ಹೇಳವು ಇಲ್ಲದ ಗವಿಯಲ್ಲಿ ಕೈ ದೀವಟಿಗೆಯಿಂದ ಹೇಳವನ್ನು ಪಡೆಯುವದು ; ಸೂರ್ಯ ಕಂಡವ ಹೇಳ ಬಂದಮೇಲೆ ಹೀಗೆಯೇ ಹೇಳ ಹೊಡಿಯುವದು ಎಂದು ಸೂಚಿಸುವವರೆಗೆ ದೇವರ ಪ್ರೀತಿಎಂಬ ಕ್ರಿಸ್ತನು ಎಂಬುವ ಕಾಲದ ಸಂಪೂರ್ಣತೆಯಾದಾಗ ಬಂದು ದೇವರ ನಿತ್ಯ ಕೋಪಕ್ಕೆ ಪಾತ್ರರಾಗಿ ನರಕವ ನಾಶದ ಬಾಯಿಗೆ ತುತ್ತಾಗುವದ ವೃದ್ಧಿ ಮನುಷ್ಯರನ್ನು ರಕ್ಷಿಸುವದಕ್ಕೋಸ್ಕರ ಈ ಭೂಲೋಕಕ್ಕೆ ಪರಿಶುದ್ಧ ಮನುಷ್ಯನಾಗಿಬಂದು ಮನುಷ್ಯರು ಮಾಡುತ್ತಿದ್ದ ಕೃತಕಯಜ್ಞದ ನಿಜಗುಣಾರ್ಥ ಆತನ ನಿಜವಾದ ತನ್ನ ದೇಹವನ್ನು ಸರ್ವಹೋಮವಾಗಿ ಮಾಡಿ ಯಜ್ಞರಕ್ಷಕನಾದ ಯಾಜಕನಾಗಿ ತಾನೇ ನಿಂತು ಪರಿಶುದ್ಧನಾದ ನಿತ್ಯನೀತಿವಂತನಾದ ದೇವರಿಗೆ ಪರಿಶುದ್ಧನಾದ ನಿತ್ಯಕುಮಾರನು ಮನುಷ್ಯರಿಗೋಸ್ಕರ ಪ್ರತಿನಿಧಿಯಾಗಿ ನಿಂತು ತನ್ನ ನಿತ್ಯದೇಹವನ್ನು ದೇವರ ನೀತಿಯ ತೃಪ್ತಿಗೋಸ್ಕರವೂ ಮನುಷ್ಯರ ನೀತಿ ರಕ್ಷಣೆಗೋಸ್ಕರವೂ ತನ್ನ ದೇಹವನ್ನು ಬ್ರಹ್ಮಯಜ್ಞವಾಗಿ ಅರ್ಪಿಸಿದ್ದರಿಂದ ಅಲ್ಲಿಗೆ ಮನುಷ್ಯರು ಮಾಡುತ್ತಿದ್ದ ಕೃತಕಯಜ್ಞಗಳೆಲ್ಲಾ ನಾಶವಾಯಿತು ಅಂದಿನಿಂದ ಈಪುಸ್ತಕವಾಸಿಗಳಿಗೆ ಆತನಿಗೆ ಕ್ರತುಧ್ವಂಸಿ ಎಂದು ಹೆಸರುಬಂತು ಆದ್ದರಿಂದ ಈ ಪತ್ರಿಕೆಯನ್ನು ಓದುವ ನನ್ನ ಸ್ನೇಹಿತನೇ ದೇವರ ನೀತಿಗೂ ನಿನ್ನ ಪಾಪಕ್ಕೂ ಹೋಲಿಸಿ ನೀನು ನೋಡಿದರೆ ನಿನ್ನ ವಿಷಯವಾಗಿ ನಿನಗೆ ಸಂತೋಷವಾಗುತ್ತಾ ಇಲ್ಲವೇ ? ಹಾಗಾದರೆ

ನರಕದಿಂದ ನೀನು ಮುಕ್ತನಾಗುವಹಾಗೆ ನಿಜವಾದಯಜ್ಞ ಮಾಡಿದನಂತರ ಕೃತಕಯಜ್ಞದಿಂದ ಫಲವಿಲ್ಲವಷ್ಟೆ. ಹಾಗಾದರೆ ನೀನು ಬಡವನಾದರೂ ಐಶ್ವರ್ಯವಂತನಾಗಿದ್ದರೂ ದೇವನಿಗೆ ನೀನು ಸಂತೋಷಪಡತಕ್ಕ ಕೆಲವು ಸಮಿಯಿಸಿದೆ, ನಿನಗಿರುವ ಸಂತೋಷವು ನಿನ್ನ ಪಿತೃಗಳಿಗಿರಲಿಲ್ಲ. ಹಾಗಾದರೆ ನೀನು ಧನ್ಯನು ಯಾರಿಂದ ನೀನು ಧನ್ಯನಾದೆ? ಕ್ರಿಸ್ತಸ್ವಾಮಿಯಿಂದ ನೀನು ಧನ್ಯನಾದಿ. ಹಾಗಾದರೆ ಆತನನ್ನು ನೀನು ತಿರಸ್ಕರಿಸದೆ ಈ ಘಳಿಗೆಯಲ್ಲಿ ಆತನು ಮಾಡಿದ ಬ್ರಹ್ಮಯಜ್ಞದಲ್ಲಿ ನಿಜವಾದ ನಂಬಿಕೆ ಇಡು. ವ್ಯರ್ಥವಾದ ಆಚಾರಗಳನ್ನು ಬಿಡು. ನಿನ್ನದು ಬಹಳ ಕೃಷ್ಯಂತ ತೀರೆ ಕ್ರಿತುಧ್ವಂಸಿಯು ನಿನಗೆ ಹೀಗೆ ವ್ಯಾಖ್ಯಾನ ಮಾಡಿದ್ದಾನೆ: ನನ್ನ ಮಕ್ಕಳೇ ಒಬ್ಬರಿ ಬಣವಿಲ್ಲದೆ ಕ್ರಯವಿಲ್ಲದೆ ವಂಭೂಕರವಾದ ಅಮೃತರಸ ಪಾನವನ್ನೂ ಅದಕ್ಕೆ ಯೋಗ್ಯವಾದ ನಿವಾಸವನ್ನೂ ನಿಮಗೆ ಕೊಡುವದಕ್ಕೆ ನನ್ನ ಮನಸ್ಸುಂಟು. ನಿಮಗೋಸ್ಕರ ನನ್ನ ಪ್ರಾಣವನ್ನು ಬ್ರಹ್ಮಯಜ್ಞವಾಗಿ ಅರ್ಪಿಸಿದ್ದೇನೆ. ನನ್ನ ನಿಜವಾದ ಬ್ರಹ್ಮಯಜ್ಞವನ್ನು ನೀವು ವಿಶ್ವಾಸದಿಂದ ಮಾತ್ರ ಅಂಗೀಕರಿಸಿ ಎಂದು ಹೇಳಿದ್ದಾನೆ ಮತ್ತು ಈಗಲೂ ಹೇಳುತ್ತಾ ಇದ್ದಾನೆ. ಪಾಪಿಯೇ ನಿನ್ನ ಪಾಪವು ನಿನಗೆ ಪ್ರತಿನಿಧಿಯಾಗಿ ಬಂದವನ ಪ್ರಾಣದ ಬೆಲೆ ಎನ್ನೆಂದು ನಿಜವಾಗಿ ನೀನು ತಿಳಿದು ನಿನಗಾಗಿ ಪ್ರಾಣ ಕೊಟ್ಟ ಯೇಸುವಿನಲ್ಲಿ ನಿನ್ನ ಪೂರ್ಣ ಹೃದಯದಿಂದ ನಂಬಿಕೆ ಇಡು. ಆಗ ರಕ್ಷಣೆ ಪಡೆಯುವೆ.

ಉಪದೇಶಿಗಳಿಗೆ.

ಇದರಿಂದ ತಿಳಿಯಪಡಿಸುವದೇನಂದರೆ—ಹಿಂದೂಜನರಿಗೋಸ್ಕರವಾದ ಒಂದು ಉಪನ್ಯಾಸವನ್ನು ಬಹು ರಮ್ಯವಾಗಿರುವಂತೆ ಬರೆದು ಇದೇ ಆಗೋಷ್ಟು ೩೧ನೇ ತಾ|| ನೊಳಗಾಗಿ ಕಳುಹಿಸಬೇಕು. ಅದಕ್ಕೆ ಬಹುಮಾನವು ಕೊಡಲ್ಪಡುತ್ತೆ. ಉಪನ್ಯಾಸವು ಹೊಸವಿಷಯವನ್ನು ಕುರಿತು ಒಳ್ಳೇ ಚತುರತೆಯಿಂದ ಕೂಡಿದ್ದಾಗಿರಬೇಕು. ಇತರರಿಗೆ ತೋರಿಸದೆ ಸ್ವಂತವಾಗಿಯೇ ಬರೆದಿರಬೇಕು. ೪—೫ನಿಮಿಷಗಳೊಳಗಾಗಿ ಉಪನ್ಯಾಸವು ಪೂರೈಸತಕ್ಕದ್ದಾಗಿರಬೇಕು.

H. Haigh
Mysore.

ಬಹುದೇಶ ವೃತ್ತಾಂತಗಳು.

ಬ್ರಿಟಿಷರುಗಳ ಪಂಕ್ತಿಯು ಮೊನ್ನೆ ಸೋಮವಾರದ ಊಗಾಯಿತು ಟರ್ಕಾಪಿನಲ್ಲಿ ನಡೆಯುತ್ತಲಿದೆ.

ಬೆಂಗಳೂರು ಮಾರ್ಕೆಟ್ಟಿನ ಎದುರಿಗಿರುವ ಕೊಳದಲ್ಲಿ ಒಬ್ಬ ಮುದುಕನು ಹೋಗಿ ಆಯ ತಪ್ಪಿ ಬಿದ್ದು ಸತ್ತನು.

ಬೆಂಗಳೂರಿಗೆ ಸೇರಿದ ಬ್ಲೂಕಿಸಲ್ಲಿ ಎಂಬಲ್ಲಿ ಒಬ್ಬ ದಾಸಿಯು ಇಬ್ಬರನ್ನು ಕೊಂದು ಈಗ ಅವನು ಸರ್ಕಾರ ವಿಚಾರಣೆಗೆ ಗುರಿ ಮಾಡಲ್ಪಟ್ಟಿರುತ್ತಾನೆ.

ಮೈಸೂರು ಗವರ್ನಮೆಂಟ್‌ಪ್ರೆಸ್ ಸೂಪರಿಂಟೆಂಡೆಂಟರಾದ ಮಿ|| ಟಿ ಟಿ ಅನರ್ಷಕಾಸ್ಟಲರು ಪಂಜಾಬದೇಶದಲ್ಲಿ ೧,೦೦೦ ರೂಪಾಯಿ ಸಂಬಳದ ಒಂದು ಕೆಲಸದಮೇಲೆ ಹೋಗುತ್ತಾರೆಂದು ಕೇಳುತ್ತೇವೆ.

ಬೆಂಗಳೂರು ಮಾರ್ಕೆಟ್ಟಿನ ಆಸ್ಪತ್ರೆಗೆ ಆಗುವ ಸಕಲವಿಧ ಖರ್ಚುಗಳನ್ನು ಮತ್ತು ಆಸಿಸ್ಟೆಂಟರ ಸಂಬಳವನ್ನೂ ಮ್ಯುನಿಸಿಪಲ್ ಫಂಡಿನಿಂದಲೇ ಕೊಡತಕ್ಕದ್ದೆಂದು ಗವರ್ನಮೆಂಟಿನವರು ವಿಧಿಸಿರುತ್ತಾರೆ.

ಮೊನ್ನೆ ಮಂಗಳವಾರ ಬೆಳಿಗ್ಗೆ ಸುಬ್ರಮಣ್ಯದಕೆರೆಯಲ್ಲಿ ಬಟ್ಟೆಗಳನ್ನು ಒಗೆಯುತಿದ್ದ ಒಬ್ಬ ಹೆಂಗಸು ಕಾಲುಜಾರಿ ನೀರಿನೊಳಕ್ಕೆ ಬಿದ್ದು ಎಂಟಾವರ್ತಿ ಮುಳುಗಿದ್ದಳು. ಅಷ್ಟರಲ್ಲೇ ಇದನ್ನು ನೋಡಿದ ಒಬ್ಬ ಮುಸಲ್ಮಾನರವನು ನೀರಿನಲ್ಲಿ ಬಿದ್ದು ಆವಳನ್ನು ದಡಕ್ಕೆ ಎಳೆದು ಹಾಕಿದನು.

ಚಿತ್ರದುರ್ಗದ ಡಿಸ್ಟ್ರಿಕ್ಟಿಗೆ ಸೇರಿದ ೧೪ ಮುನಿಸಿಪಾಲಿಟಿಗಳ ಕಾವಲುಗಾರರಿಗೆ ಮಾಸೋಯಾನಾ ೧ರೂ ನಿಂದ ೪ ರೂಪಾಯಿಗೆ ಸಂಬಳ ಬಟ್ಟಿ ಮಾಡಿದೆ ಎಂಬದಾಗಿಯೂ, ಹೊಳಲಕೆರೆ ಬೈಲ್ಡ್ಸ್ ಸ್ಟೇಷನ್ ಬಳಿ ಹೊಸದಾಗಿ ಕಟ್ಟಿಸಿರುವ ಮುಸಾಫರಖಾನೆಗೆ ಮಾಸೋಯಾನಾ ೨ರೂ ಸಂಬಳದ ಒಬ್ಬ ಕಾವಲುಗಾರನನ್ನು ನೇಮಿಸತಕ್ಕದ್ದೆಂಬದಾಗಿಯೂ ಸರ್ಕಾರದವರು ಸ್ಯಾಂಕ್ಷನ್ ಮಾಡಿರುತ್ತಾರೆ.

ಬೇವಾರಸು ಗೋಕಾಯಿಗಳು ದಾರಿಯರು ಹ್ಯಾಗಳಲ್ಲಿ ಸತ್ತರೆ, ಅದರ ಚರ್ಮವನ್ನು ಸರ್ಕಾರದವರು ಹರಾಜು ಹಾಕಿಸಿ ಹುಟ್ಟುವಳಿಯನ್ನು ಸರ್ಕಾರದವರೇ ತೆಗೆದುಕೊಳ್ಳುತಿದ್ದರು. ಈಗ ಯಾವ ಗ್ರಾಮದಲ್ಲಿ ಸಾಯುವದೊ ಅಂಥಾ ಗೋಕಾಯಿಯ ಚರ್ಮವನ್ನು ಆಯಾ ಗ್ರಾಮದ ಬೇಗಾರರುಗಳಿಗೆ ಉಚಿತಾರ್ಥವಾಗಿ ಕೊಡತಕ್ಕದ್ದೆಂತಲೂ, ಅದರಿಂದ ಅವರಿಗೆ ಪ್ರೋತ್ಸಾಹ ಮಾಡತಕ್ಕದ್ದೆಂತಲೂ ಸರ್ಕಾರದವರು ವಿಧಿಸಿರುತ್ತಾರೆ.

ಹಾಸನದ ಡಿಸ್ಟ್ರಿಕ್ಟಿಗೆ ಸೇರಿದ ಗ್ರಾಮವೆಂಬಲ್ಲಿ ಒಂದು ಸಪತುಲ್ಲೋಕು ಮಾಡಿರುವದರಿಂದ, ಅಲ್ಲಿನ ಜನರೂ ತಮಗೆ ಮ್ಯುನಿಸಿಪಾಲಿಟಿಯನ್ನು ಏರ್ಪಡಿಸಿ ಕೊಡಬೇಕೆಂತಲೂ ತಾವು ಕಂದಾಯ ವಗೈರೆಗಳನ್ನು ಕೊಡುತ್ತೇವೆಂತಲೂ ಬಿನ್ನೈಸಿರುವದರಿಂದ ಅಲ್ಲಿಗೆ ಒಂದು ಮ್ಯುನಿಸಿಪಾಲಿಟಿಯನ್ನು ಏರ್ಪಡಿಸಬಹುದೆಂದು ಗವರ್ನಮೆಂಟಿನವರು ಡಿಪ್ಯೂಟಿಕಮಿಷನರವರಿಗೆ ಹುಕುಂ ಕೊಟ್ಟಿರುತ್ತಾರೆ. ಆ ಗ್ರಾಮದಲ್ಲಿ ಹುಟ್ಟುವಳಿ ಆಗುವದನ್ನು ಏನೂ ಗಳೆಂತಲೂ, ಅದರಲ್ಲಿ ಎನು ರೂಪಾಯಿಗಳನ್ನು ಮಾತ್ರ ಮ್ಯುನಿಸಿಪಲ್‌ಗೋಸ್ಕರ ಖರ್ಚು ಮಾಡಬೇಕೆಂತಲೂ ಆಂಡಾ ಸ್ಯಾಂಕ್ಷನ್ ಆಗಿದೆ.

ತುಮಕೂರು ವೃತ್ತಾಂತ.

(ನಮ್ಮ ಬಾತ್ಮಿದಾರರಿಂದ ಬಂದದ್ದು)

ಈ ಮೈಸೂರು ಸೀಮೆಯಲ್ಲಿ ದಸರಾ ಹಬ್ಬಕ್ಕೆ ಮೈಸೂರು, ಹೋಳೀಹಬ್ಬಕ್ಕೆ ಬೆಂಗಳೂರು, ಮೊಹರಂ ಹಬ್ಬಕ್ಕೆ ತುಮಕೂರು, ಎಲ್ಲ ಸ್ಥಳಗಳು ಮಾಡವುಗಳೆಂಬುದು ಜನಜನಿತವಾಗಿದೆ. ಗತಸಂವತ್ಸರ ಈ ಮೊಹರಂ ಹಬ್ಬದಲ್ಲಿ ತುಮಕೂರು ಪೇಟೆಯಲ್ಲಿದ್ದ ಬಾಡಿನವರಿಗೂ, ಕೋಟೆಯಲ್ಲಿದ್ದ ಪೋಲೀಸಿನವರಿಗೂ, ಮುಷ್ಟಿಯುದ್ಧ ನಡೆದದ್ದರಿಂದ ಈ ಸಂವತ್ಸರ ಈ ಹಬ್ಬದಲ್ಲಿ ಆಗ ಅನಾಚಾರಕ್ಕೆ ಆಸ್ಪದವಿಲ್ಲದಂತೆ ಕೋಟೆಯ ವೇಷಗಳು ಪೇಟೆಗೂ ಪೇಟೆಯ ವೇಷಗಳು ಕೋಟೆಗೂ ಪ್ರವೇಶಿಸದಹಾಗೆ ಸರ್ಕಾರದವರು ನಿರ್ಬಂಧ ವಿಧಿಸಿದ್ದರಿಂದ ವೇಷಧಾರಿಗಳೆಲ್ಲರೂ ರಾಗ ಪಾರಾಬ್ಧಾಯಿಗಿದ್ದರು. ಈ ಹಬ್ಬದ ಕಡೇದಿವಸ ಕಾರಣಾಂತರದಿಂದ ಉಸ್ತುವಾರಿ ಬಗ್ಗೆ ಕೆಲವು ಸರ್ಕಾರಿ ಸಿಬ್ಬಂದಿಗಳನ್ನಿಟ್ಟು ಆ ನಿರ್ಬಂಧವನ್ನು ತಪ್ಪಿಸಿದ್ದರಿಂದ ಆ ವೇಷಧಾರಿಗಳೆಲ್ಲರೂ ಹರುಷೋನ್ಮತ್ತರಾಗಿ ಅವುಗಳಿಗೂ ನಿಂತಿದ್ದ ತಪಶಿಗಳನ್ನು ಈ ಒಂದೇ ದಿವಸವೇ ತೋರಿಸಬೇಕೆಂದು ಬಗೆದು ಬಹುವಿಧ ವೇಷಗಳಂ ಧರಿಸಿಕೊಂಡು ತಂಬೂರಿಗಳ ಉತ್ಸವದೊಡನೆ ಬೀದಿಯಲ್ಲಿ ಬರುತ್ತಿರುವವಷ್ಟರಲ್ಲೇ ಅಪಶೃತಿಸ್ವನವಾಗಿ ಫೋಹರನೆ ಕರೆದ ಬಿರುಮಳೆಯು ಉಸ್ತುವಾರಿ ಮಾಡುವ ಸರ್ಕಾರಿ ಸಿಬ್ಬಂದಿಗಳ ಶ್ರಮ ತಪ್ಪಿಸಲು ನಿವಾರಣಂತ ಅತಿಶಯವಾಗಿಯೂ, ಬಾಡಿನವರ ಮತ್ತು ಪೋಲೀಸಿನವರ ಮನಃಕಲಹ ಪ್ರವಾಹಪೂರ ಭೈರವಿಯಾಗಿಯೂ, ನೋಟಕರ ಮತ್ತು ವೇಷಧಾರಿಗಳ ಚಿಂತಾ ವೃದ್ಧಿಕರ ಪ್ರಚಂಡ ಪವನನಾಗಿಯೂ ಪರಿಣಮಿಸಲು ಎಲ್ಲರೂ ಒಡನೆ ಸ್ವಗೃಹಾಭಿಮುಖಿಗಳಾಗಿ ತೆರಳಿದರು. ಇದೆಲ್ಲಾ ದೈವಯತ್ನವಲ್ಲವೇ?

ಮೊಹರಂಹಬ್ಬ, ಹಿಂದೂಜನ.—ಮೊಹರಂ ಹಬ್ಬವು ಮಹಮ್ಮದೀಯ ಮತಕ್ಕೆ ಸಂಬಂಧಿಸಿದ ಒಂದು ವಿಷ್ಯಂಘಟನೆಯಿಂದ ನಡೆಯುತ್ತದೆಂಬುವದೇ ಲೋಕವಿದಿತವಾಗಿದೆಯಷ್ಟೆ. ಈ ಹಬ್ಬದೊಳು ಮುಸಲ್ಮಾನರಲ್ಲಿ ಕೆಲವರು ಅತಿವಿಚಿತ್ರ ಪಂಜಾಗಳನ್ನು ರಚಿಸಿ ಅದರಲ್ಲಿ ಲೋಹನಿರ್ಮಿತ ವಿಗ್ರಹಗಳನ್ನಿಟ್ಟು ಆರಾಧಿಸುತ್ತಿರುವರು. ಇನ್ನು ಕೆಲವರು ಹೀಗೆ ಆರಾಧಿಸುವದು ಅಶಾಸ್ತ್ರೀಯವೆಂದು ತಿರಸ್ಕರಿಸುವರು. ಹೀಗೆ ಸ್ವಮತಸ್ಥರಿಂದಲೇ ತಿರಸ್ಕರಿಸುವ ತದ್ವಿಗ್ರಹಗಳಂ ಅಸಂಖ್ಯಾತ ಹಿಂದೂಜನಗಳು ಪೂಜಿಸಿ ಅವುಗಳಿಗೆ ಕಾಣಿಕೆಗಳಂ ಸಮರ್ಪಿಸಿ ತದ್ವೈನ ಲಾಂಛನವಾದ ಬಡಿಯಿಂದಲಂಕೃತರಾಗಿ ಅಸತ್ಯಕರವಾದ ವಿವಿಧ ವೇಷಗಳಂಧರಿಸಿ "ಹಸೇಣ್, ಹುಸೇಣ್" ಎಂದು ಆ ದೈವಸ್ವಭಾವಂ ಸ್ಮರಿಸುತ್ತಾ ಶಿರಹಸ್ತೆಯಿಂದ ಬೀದಿ ಬೀದಿಗಳಲ್ಲಿಯೂ ಸಂದು ಗೊಂದುಗಳಲ್ಲಿಯೂ ಮೃಗವಾದಯಂತ ನಾಟಕಗಳಂತೆ ಕುಣಿದಾಡುತ್ತಿರುವರು. ಸರ್ಕಾರದವರು ಕಳೆದ ವರ್ಷದಲ್ಲಿ ಇಂಥಾವರಿಗೋಸ್ಕರ ಒಂದು ಹದ್ದಿಂಗನ್ನು ಪ್ರತ್ಯೇಕಿಸಿ ಕೊಟ್ಟಿದ್ದರೆ ಮೈಸೂರು ಸೀಮೆಯಲ್ಲಿ ಇವರ ಸಂಖ್ಯೆ ಕಷ್ಟವೆಂದು ಹೇಳಬಹುದಾಗಿತ್ತು. ಇಷ್ಟು ಜನಗಳು ಹೀಗೆ ಪ್ರವರ್ತಿಸಲು ಮೊಹರಂ ಹಬ್ಬಕ್ಕೂ, ಹಿಂದುಗಳಿಗೂ ಏನು ಬಗೆ ಸಂಬಂಧ ಉಂಟೋ ಎಂದು ನ್ಯಾಯವಾಗಿ ವಿಚಾರಮಾಡಿ ನೋಡಿದರೆ ಗೋಕುಲಾಷ್ಟಮಿಗೂ ಮುಸಲ್ಮಾನರಿಗೂ ಯಾವ ಸಂಬಂಧವಿರುವುದೋ, ಹಾಗೆ ಸಂಬಂಧವಿಲ್ಲದ ಇವರಾತಿ ಮಹಮ್ಮದಿಯರೂ ಕೂಡ ಹಿಂದೂ ದೈವ ವಿಷಯವಾಗಿ ಯಾಕೆ ಭಕ್ತಿನಿರತರಾಗಿರಬಾರದು? ಲಕ್ಷಾಂತರ ಧನಲಕ್ಷ್ಮಿ ಮಹಮ್ಮದೀಯರು ಒಬ್ಬ ಮಹಮ್ಮದೀಯನಾದರೂ ಹಿಂದುಗಳ ಹೋಳೀ ಹಬ್ಬದಲ್ಲಿ ಎಂದಾದರೂ ಯಾವದಾದರೂ ವೇಷವನ್ನು ಧರಿಸಿಕೊಂಡು ಕುಣಿದಾರೇ? ರಂಗನಾಥಸ್ವಾಮಿಯ ಹಿಂದೂ ದೇವಾಲಯಕ್ಕೆ ಹೋಗಿ ಅಡ್ಡಬಿದ್ದು ಒಂದಾವರ್ತಿ ಯಾದರೂ "ಗೋವಿಂದಾ! ರಂಗಾ!" ಎಂದು ನುಡಿದಾರೇ? ಎಂದಿಗೂ ಇಲ್ಲವಲ್ಲಾ! ಈ ಪಾವರ್ತನೆಯು ಸ್ವಪತಿಬಂಧಿತವಾದ ಗಳ್ಯವಂ ತ್ಯಜಿಸಿ ಪರಪತಿಬಂಧಿತ ಮಾಂಗಲ್ಯದಿಂದಲಂಕೃತಳಾದ ಜಾರಿಣಿಯಹಾಗೆ ನಿಂದಾರ್ಹವಾದದ್ದೆಂದೂ, ಹಿಂದೂ ಮತಕ್ಷಯಕ್ಕೆ ಹೇತುವೆಯಾಗಿದೆ ಎಂಬದಾಗಿಯೂ ಈಸ ತ್ತಾದರೂ ಬೋಧಿಸುವ ಎಲ್ಲರೂ ಅಂಥಾವರನ್ನು ಮಾತ್ರ ಬಹಳ ಕಟ್ಟಾಗಿ ಪ್ರೋತ್ಸಾಹಿಸುತ್ತಿರುವರು. ಹಾಗಾದರೆ ಇವರಂತೆ ಯೇ ಕ್ರೈಸ್ತದೇವಾಲಯಕ್ಕೆ ಹೋಗಿ, ಆ ಭಕ್ತರಂತೆ ಜಪ ಮೊದಲಾದ ಆಚಾರಗಳಂಕೈಕೊಂಡು ಬರುವವರನ್ನು ತಪ್ಪತ್ತೇ ಪ್ರೋತ್ಸಾಹಿಸಬೇಕಲ್ಲ! ಹಿಂದೂಮತಾಭಿಮಾನಿಗಳೂ ಕೂಡ ಇಂಥಾವರಿಗೆ ತಕ್ಕ ಬುದ್ಧಿವಾದಗಳನ್ನ ರುಜದೆ ಮಾಡಿಯು ಕೋಗಿಲೆಯಂತೆ ಮೌನಾವಲಂಬಿಗಳಾಗಿರುವದರಿಂದ ಇವರಿಗೆ ಈ ಪದ್ಧತಿಗಳು ತಿಳಿಯಬಂದಿಲ್ಲವೋ? ಅಥವಾ ಇವು ನಿರ್ದೋಷಕಗಳೆಂದು ಭಾವಿಸಿರುವರೋ? ಎಂಬ ಸಂದೇಹಕ್ಕೆ ಪಾತ್ರಗಳಾಗಿವೆ. ಆದಕಾರಣ ಅವರು ತಮ್ಮ ಮನೋಗತಾಭಿಪ್ರಾಯವನ್ನು ಮುಂದಣ ಪತ್ರಿಕೆಯಲ್ಲಿ ವ್ಯಕ್ತಪಡಿಸಿ ತತ್ಸಂದೇಹವಂ ನಿವೃತ್ತಿ ಮಾಡಬೇಕೆಂದು ಕಾಂಕ್ಷಿಸುತ್ತೇನೆ.

ಗುರುಲಕ್ಷಣ.

(ಸಭಾಪತ್ರದಿಂದ ಸಂಗ್ರಹಿಸಿದ್ದು)

೪ ನಿಜಗುರುವು ನಮಗಾಗಿ ಹೋರಾಡುವನೂ, ನಮ್ಮ ಪಾಪಗಳಿಗೋಸ್ಕರ ತನ್ನ ದೇಹವನ್ನು ಯಜ್ಞವಾಗಿ ಅರ್ಪಿಸುವವನೂ ಆಗಿರಬೇಕು.

ಕಳೆದ ಅಂಕೆಯಲ್ಲಿ ನಿಮ್ಮ ಮುಂದಿಟ್ಟ ಸದ್ಗುರುವಿನ ಲಕ್ಷಣಗಳಂತಲೇ ಆವನಾದವನ ತಕ್ಕ ಕೆಲಸ ಕೇಳಿತೆಂದು ಯೋಚಿಸಕೂಡದು. ಆತನು ದೇವರಿಂದ ನೇಮಕವಾದ ಜಗದ್ಗುರುವಾಗಿದ್ದನೆಂತಲೂ, ಆತನಲ್ಲಿ ದೇವರ ಸಕಲ ದಿವ್ಯಸದ್ಗುಣಗಳು ಕೂಡಿಕೊಂಡಿದ್ದ, ಆತನು ಪಾಪ ಒಂದೇ ಹೊರ್ತು ಉಳಿದ ವಿಷಯಗಳಲ್ಲಿ ತೀರ ಮನುಷ್ಯನಾಗಿದ್ದನೆಂತಲೂ, ಆತನು ಕೇವಲ ಮನುಷ್ಯನಾಗಿದ್ದು ಅವರಿಗಿಂತ ಮೇಲ್ಪಟ್ಟ ದೇವರು ರಷನಾಗಿದ್ದನೆಂತಲೂ ಸಿದ್ಧಾಂತ ಮಾಡಬೇಕಾದರೆ, ಆತನು ಪಾಪಿಗಳ ಸ್ಥಳದಲ್ಲಿ ನಿಂತುಕೊಂಡು ಅವರ ಪಾಪ ಬವೆಗಳನ್ನೆಲ್ಲ ತನ್ನ ಮೇಲೆ ಹಾಕಿಕೊಂಡು ನ್ಯಾಯದ ಕೋಪದಿಂದ ಅವರನ್ನು ತಪ್ಪಿಸಿ, ಆತನ ದಯಾವು ಪುನಃ ಅವರ ಮೇಲೆ ಬರುವಹಾಗೆ ಮಾಡುವವನಾಗುವ ಅವಶ್ಯ ವಿಶೇಷವಾಗುತ್ತದೆ. ಇಲ್ಲದಿದ್ದರೆ ಪಾಪಕ್ಷಮೆ ಆಗುವದಾಗಲಿ, ಪ್ರತಿ ಒಬ್ಬನು ತನ್ನ ಪಾಪ ಸಲುವಾಗಿ ದೇವರಿಗೆ ಲೆಕ್ಕ ಕೊಡತಕ್ಕವನಾಗುತ್ತಾನೆ ಎಂದು ಮಾನಸಾಕ್ಷಿಯು ಶಾಸ್ತ್ರದಿಂದಲೂ ಸರ್ವರಿಗೆ ಗೊತ್ತಾಗುವಿಕೆಯಿಂದಲೂ ಸಿದ್ಧಾಂತವಾಗುತ್ತದೆ. ಅನೇಕರು ದೇವರ ಮುಂದೆ ತಾವು ಒಳ್ಳೆಯವರು ಪುಣ್ಯವಂತರು ಎಂದು ಒಂದು ವೇಳೆ ಹೇಳಿಕೊಂಡಾಗ್ಯು, ಹೀಗೆಯೇ ಭಗವಂತನ ಚಿತ್ತಕ್ಕೆ ಸರಿಯಾಗಿ ನಡಕೊಂಡವರ್ಯಾರು? ನೀತಿ ಸ್ಥಿತಿ ಮತಿ ಗತಿಗಳೆಂಬಿವು ಪಾಪಕ್ಕೆ ತಮ್ಮ ಪಾಪಗಳನ್ನು ಅರ್ಪಿಸಿದುದ ಪುಣ್ಯ ಮಾಡುವದು ಹ್ಯಾಗಾದೀತು? ಅವರು ಮಾಡಿದ ಸ್ವಾಮಿದ್ರೋಹಗಳಿಗೆ ಪ್ರಾಯಶ್ಚಿತ್ತವಾಗತಕ್ಕ ಈಡು ಕೊಡಲು ಸಮರ್ಥರ್ಯಾರು? ಅಂಥಾ ಈಡು ಕೊಡದಿದ್ದರೆ, ಪಾಪಕ್ಷಮೆಯು ಮಾನಸಾಕ್ಷಿಗೆ ಸಮಾಧಾನವೂ ಆಗುವದು ಹ್ಯಾಗೆ? ಸದ್ಗುರುವು ತಾನೇ ಮನುಷ್ಯರ ಪಾಪಗಳ ಫಲಗಳನ್ನು ತಿಂದು ದೇವರಿಗೆ ಪ್ರಾಯಶ್ಚಿತ್ತಕ್ಕೋಸ್ಕರ ಆತ್ಮಸಂತೋಷದಿಂದ ತನ್ನ ಜೀವವನ್ನೇ ಈಡಾಗಿ ಕೊಡದಿದ್ದರೆ, ಆದಿಯಿಂದ ಗುರುಸ್ಥಳಗಳಲ್ಲ ಹಿಂದು ಅರ್ಪಿಸಿದ ದಾನ, ವ್ರತ, ತೀರ್ಥಯಾತ್ರೆ, ಕ್ಷೇತ್ರ, ಯಾತ್ರೆ, ಜಪ, ತಪ ಮುಂತಾದ ಕರ್ಮಗಳು ಸಂಗಾಂಗಗಳು ಮನುಷ್ಯರ ಪಾಪವೆಂಬ ರೋಗವನ್ನು ನಾಶಮಾಡಿ, ಅವರಿಗೆ ಸದ್ಗತಿ ದೊರೆಯಿಸಿಕೊಟ್ಟಾವೆ? ಹೃದಯದಲ್ಲಿ ಪ್ರಕಾಶವಾಗುವದು ಹ್ಯಾಗಾದೀತು?

ಹಲವು ತೀರ್ಥವು ಕ್ಷೇತ್ರ
ಹಲವು ಗಿರಿ ಗಹ್ವರವು
ತೊಳಲಿ ಬಳಲುವರೇತಕೆನ ಮರುಳೆ?
ಮಲಹರನ ನನಕು ತಾ
ನೆಲಸಿಲು ಮಾಟಿಯೊಳಗೆ,
ಹಲವನರಸುವದೇನು? ಶಾ ಮಾತ್ರನೂ

ಒಬ್ಬನು ದಾರಿ ತಪ್ಪಿದವನಾಗಿದ್ದ, ತನ್ನ ಪ್ರಾಣಿಗೆ ಒಂದು ರಕ್ಷಣೆಯು ಮಾರ್ಗವನ್ನು ಕಲ್ಪಿಸಲಿಕ್ಕೆ ಶಕ್ತನಾದರೂ, ಉದಯದ ಫಲವೇನು? ತಾನು ಹಿಂದಿರೆ, ಸರ್ವರಿಗೆ ತೃಪ್ತಿಯಾದ ಹಾಗೆ ಆದೀತೇ? ಒಬ್ಬನು ತನ್ನ ಶಕ್ತಿಯನ್ನು ಹೀರಿ, ಪರರೊಬ್ಬನನ್ನು ಕಾಡಿಯೂ ಕೊಂದವನಾಗ, ಮರಣದ ದಾವನು ಒಂದು ಆ ಪ್ರಾಣಸಂಕಟಕ್ಕೆ ಗುರಿಯಾದವನನ್ನು ಉಳಿಸಬೇಕೆಂದು ತನ್ನ ಜೀವದ ಹಂಗು ತೊರೆದು, ತಾನೇ ನೀರಿನಲ್ಲಿ ಬಿಂದು ನಿಂತುಕೊಂಡರೆ, ಆ ಮನುಷ್ಯನು ಜೀವದಿಂದ ಉಳಿಯುವನು. ಅದರಂತೆ ದೇವರ ನ್ಯಾಯವಾದ ಕೋಪವೆಂಬ ಶಕ್ತಿಯು ಪಾಪಿಷ್ಠರ ಮೇಲೆ ಒಟ್ಟಾಗಿ ಬರಲಿಕ್ಕೆ ಮಿಥ್ಯದಿಂದ ಬಂದ ರಕ್ಷಣೆಗಾಗಿ ಆ ಶಕ್ತಿಯ ಪಟ್ಟನ್ನು ತಾನು ಹಿಡಿಕೊಂಡು, ನರಕದುಃಖ ನಿತ್ಯಮರಣ ವಂದೀ ದೈತ್ಯನ ಬಾಯಿಗೆ ತಪ್ಪಿ, ಸ್ವರ್ಗಲೋಕದ ಶಾಶ್ವತ ಜೀವ ಪಡೆಯುವಂತೆ, ಒಂದು ರಕ್ಷಣೆಯು ಮಾಡಿದನು ನರಕದಲ್ಲಿರುವವರನ್ನು ಪರಮ ಪ್ರೀತಿಯಿಂದ ಉದ್ಧಾರ ಮಾಡಿದ ಸದ್ಗುರುವಿನ ಹಾಗೆ ಯಾರೊಬ್ಬ ಗುರು ಮಾಡಿದ್ದಾನೆ? ಪಾಪರಹಿತನಾದ ಸದ್ಗುರುವು ಒಬ್ಬ ಗುರುವಾಗಿ ನಿಂತರೆ, ಆತನೇ ಜಗದ್ಗುರು ಎಂಬ ಮಹಿಮೆಯು ಜ್ಞಾನದ ಅಂಥಾ ಸದ್ಗುರು ಒಬ್ಬನೇ ಅವನು ಸ್ವರ್ಗದಿಂದ ಕೆಳಗೆ ಇಳಿದು ಬಂದು ಮನುಷ್ಯರನ್ನು ಸ್ವಂತ ದುಃಖ ಕಷ್ಟಗಳಿಂದ ಬಿಡಿಸಿ ಸ್ವರ್ಗಲೋಕದಲ್ಲಿ ಅವರನ್ನು ಸೇರಿಸಬೇಕೆಂದು ತನ್ನ ಪ್ರಾಣವನ್ನು ಕೊಟ್ಟದ್ದರಿಂದ ಸರ್ವ ಜನರ ಉದ್ಧಾರಕನಾದನು. ಸದ್ಗುರುವು ಒಂದೇ ಅಂಥವನಾದ ದೊರೆಯು, ಆತನು ಎಲ್ಲರಿಗೋಸ್ಕರ ದೇವರ ಮುಂದೆ ಒಂದು ಕಡಿಮೆಯ ಸ್ಥಾನ ಪಡೆದನು. ಆತನೇ ನಮ್ಮ ಪಾಪಗಳನ್ನು ತನ್ನ ದೇಹದಲ್ಲಿ ಶಿಲುಬೆಯ ಮೇಲೆ ಹೊತ್ತುಕೊಂಡು ನಿಗ್ರಹಿಸಿದನು. ನಮ್ಮ ಪಾಪಗಳ ಸಲುವಾಗಿ ಗಾಯಪಟ್ಟನು, ನಮ್ಮ ಅನ್ಯಾಯಗಳ ಸಲುವಾಗಿ ಜಜ್ಜಲ್ಪಟ್ಟನು. ಆದದರಿಂದ ದೇವರು ಆತನನ್ನು ಬಹಳವಾಗಿ ಹೆಚ್ಚಿಸಿ, ಸದ್ಗುರುವಿಗೆ ದೇವರು ಅತಿ ಶ್ರೇಷ್ಠವಾದ ನಾಮ ಸ್ಥಾನಗಳನ್ನು ಕೊಟ್ಟನು. ಸ್ವರ್ಗ ಮರ್ತ್ಯ ಪಾತಾಳವೆಂಬ ತ್ರಿಲೋಕಗಳಲ್ಲಿ ಇರುವ ಸಕಲ ಜೀವರಾಶಿಗಳು ಆತನಿಗೆ ಅಡ್ಡಬಿದ್ದು—ದೇವರು ನೇಮಿಸಿದ ಸದ್ಗುರುವೇ ಕ್ರಿಸ್ತನಭಿಷಿಕ್ತನು ಎಂದು ಸಿಂಹಾಸನದ ಮಹಿಮೆಗಾಗಿ ಸ್ತೋತ್ರ ಗಾನವಾಗುವ ಕಾಲವು ಬರುವದು. ಆಗ ಜಾತಿಭೇದ, ಗುರುಭೇದ ಇತ್ತ ಎಲ್ಲಿ ಉಂಟಾಯಿತು?

ನಿನ್ನ ನೆನಪಿನ ಅದವು, ನಿನ್ನ ನೆನಪಿನ ಜಪವು,
ನಿನ್ನ ನೆನಪಿನ ಸಕಲ ತತ್ವ,
ನಿನ್ನ ನೆನಪಿನ ನಿತ್ಯ,
ನಿನ್ನ ನೆನಪಿನ ಸತ್ಯ,
ನಿನ್ನ ನೆನಪಿನ ಮುಕ್ತಿ ಕೈವಲ್ಯವು

ಮೈಸೂರು ಗವರ್ನಮೆಂಟ್ ಲಜಿಸ್ಲೇಟಿವ್ ಇಲಾಖೆ.

ಶ್ರೀಮನ್ಮಹಾರಾಜಾ ಸರ್ಕಾರದವರ ಪರ್ಯಾಲೋಚನೆಯಲ್ಲಿರತಕ್ಕ ಇದರ ಕೆಳಗೆ ನಮೂದಿಸಿದ ರೆಗ್ಯುಲೇಷನ್ನು, ಅದರ ಕಾರಣೋದ್ದೇಶಗಳೊಡನೆ ಸಕಲ ಜನಗಳ ತಿಳುವಳಿಕೆಯ ಬಗ್ಗೆ ಇದರಿಂದ ಪ್ರಕಟಿಸಲ್ಪಟ್ಟಿರುತ್ತದೆ.

೧೮೯೩ನೇ ಇಸವಿ ೧ನೇ ನಂ|| ಮೈಸೂರು ರೆಗ್ಯುಲೇಷನ್
ಮೈಸೂರು ಸೀಮೆಯಲ್ಲಿ ಬಾಲ್ಯವಿವಾಹಗಳನ್ನು ನಿರೋಧಿಸುವ ಬಗ್ಗೆ ಏರ್ಪಟ್ಟ ರೆಗ್ಯುಲೇಷನ್

ಪೀಠಿಕೆ—ಮೈಸೂರು ಸೀಮೆಯಲ್ಲಿ ಬಾಲ್ಯ ವಿವಾಹಗಳನ್ನು ನಿರೋಧಿಸತಕ್ಕದ್ದು ಯುಕ್ತವೆಂದು ಕಂಡು ಬಂದದರಿಂದ ಘನವಾದ ಶ್ರೀಮನ್ಮಹಾರಾಜಾ ಸಾಹೇಬ ಬಹದ್ದೂರವರು ಇದರ ಕೆಳಗೆ ಕಂಡಂತೆ ನಿಬಂಧಿಸಿರುತ್ತಾರೇನಂದರೆ—

೧ (೧) ಚಿಕ್ಕ ಹೆಸರು—ಈ ರೆಗ್ಯುಲೇಷನ್ ೧೮೯೩ನೇ ಇಸವಿಯ "ಮೈಸೂರ್ ಇನ್ಫೆಂಟ್ ಮ್ಯಾರಿಯೇಜಸ್ ಪ್ರಿವೆನ್ಷನ್ ರೆಗ್ಯುಲೇಷನ್, ಯಾನೆ ಮೈಸೂರು ಸೀಮೆಯ ಬಾಲ್ಯವಿವಾಹ ನಿರೋಧಕ ನಿಬಂಧನೆ," ಎಂದು ಕರೆಯಲ್ಪಡಬಹುದು.

(೨) ಸ್ಥಳವ್ಯಾಪ್ತಿ—ಇದು ಮೈಸೂರ್ ದೇಶದಲ್ಲಿ ಸರ್ವತ್ರ ವ್ಯಾಪಿಸುತ್ತದೆ ಮತ್ತು,

ಪ್ರಾರಂಭ—ಇದು ಸರ್ಕಾರಿ ಗೆಜೆಟಿನಲ್ಲಿ ಪ್ರಕಟಿಸಲ್ಪಟ್ಟ ತಾರೀಖು ಲಾಗಾಯಿತು ಆರು ತಿಂಗಳು ಪೂರೈಸಿದ ನಂತರ ಜಾರಿಯಲ್ಲಿ ಬರತಕ್ಕದ್ದು.

೨ ಅರ್ಥವಿವರಣೆಯ ಕಲಂ—ಈ ರೆಗ್ಯುಲೇಷನಿನ ಉದ್ದೇಶಗಳ ಬಗ್ಗೆ, "ಒಬ್ಬ ಚಿಕ್ಕ ಹುಡುಗಿ ಯಾನೆ ಬಾಲೆ," ಅಂದರೆ ಎಂಟು ವರುಷಗಳ ವಯಸ್ಸು ಪೂರೈಸದಿರತಕ್ಕ ಒಬ್ಬ ಹುಡುಗಿಯೆಂತಲೂ, "ಒಬ್ಬ ಚಿಕ್ಕ ಹುಡುಗ ಯಾನೆ ಬಾಲಕ," ಅಂದರೆ ಹದಿನಾಲ್ಕು ವರುಷಗಳ ವಯಸ್ಸು ಪೂರೈಸದಿರತಕ್ಕ ಒಬ್ಬ ಬಾಲಕನೆಂತಲೂ ಅರ್ಥ ಮಾಡಿಕೊಳ್ಳತಕ್ಕದ್ದು.

೩ ಬಾಲ್ಯವಿವಾಹ ಮಾಡಿದರೆ ವ ಆ ಬಗ್ಗೆ ಸಹಾಯ ಮಾಡಿದರೆ ದಂಡನೆ—ಯಾವ ಮನುಷ್ಯನಾಗಲಿ ಒಬ್ಬ ಚಿಕ್ಕ ಹುಡುಗಿಗೆ ಯಾ ಚಿಕ್ಕಹುಡುಗನಿಗೆ ವಿವಾಹ ಮಾಡಿಸುತ್ತಾನೆಯೋ ಮತ್ತು ಯಾವ ಮನುಷ್ಯನು ಮನಃಪೂರ್ವಕ ತಿಳಿದು ಅಂಥ ವಿವಾಹಕ್ಕೆ ಇಂಡಿಯನ್ ಪೀನಲ್‌ಕೋಡಿನ ಅರ್ಥವ್ಯಾಪ್ತಿ ಸಹಕರಿಸಿ ವ ಮದ್ದ, ವಹಿಸ್ತಾನೆಯೋ ಮತ್ತು ಯಾವ ಮನುಷ್ಯನು ತನಗೆ ಹದಿನೆಂಟು ವರುಷಗಳ ವಯಸ್ಸಾದಮೇಲೆ ಒಬ್ಬ ಚಿಕ್ಕಹುಡುಗಿಯನ್ನು ವಿವಾಹ ಮಾಡಿಕೊಳ್ಳುತ್ತಾನೆಯೋ ಅಂಥಾ ಮನುಷ್ಯನು, ಆರು ತಿಂಗಳವರಿಗೆ ವ್ಯಾಪಿಸಬಹುದಾದ ಒಂದು ಮಿಯಾದಿನ ಸಾಧಾರಣ ಶಿಕ್ಷೆಯಾಗಲಿ ಅಥವಾ ಜುಲ್ಮಾನೆ ಮೂಲಕವಾಗಲಿ ಯಾ ಈ ಎರಡರ ಮೂಲಕವಾಗಲಿ ದಂಡಿಸಲ್ಪಡತಕ್ಕದ್ದು.

೪ ಐವತ್ತು ವರುಷಗಳಿಗಿಂತ ಮೇಲ್ಪಟ್ಟ ವಯಸ್ಸುಳ್ಳವನು ಹದಿನಾಲ್ಕು ವರ್ಷಗಳ ವಯಸ್ಸಿಗೆ ಕಡಿಮೆಯಾದ ಹುಡುಗಿಯನ್ನು ವಿವಾಹ ಮಾಡಿಕೊಂಡರೆ ದಂಡನೆ—ಐವತ್ತು ವರ್ಷಗಳಿಗೆ ಮೇಲ್ಪಟ್ಟ ವಯಸ್ಸುಳ್ಳ ಯಾವ ಮನುಷ್ಯನಾಗಲಿ ೧೪ ವರುಷಗಳ ವಯಸ್ಸು ಪೂರೈಸದಿರತಕ್ಕ ಒಬ್ಬ ಹುಡುಗಿಯನ್ನು ವಿವಾಹ ಮಾಡಿಕೊಂಡರೆ ಅಂಥವನು ಎರಡು ವರ್ಷಗಳವರೆಗೆ ವ್ಯಾಪಿಸಬಹುದಾದ ಒಂದು ಮಿಯಾದಿಯುಳ್ಳ ಸಕ್ತ ಯಾನೆ ಕಠಿಣ ಶಿಕ್ಷೆ ಮೂಲಕವಾಗಲಿ ಅಥವ ಜುಲ್ಮಾನೆಯ ಮೂಲಕವಾಗಲಿ ಯಾ ಈ ಎರಡರ ಮೂಲಕವಾಗಲಿ ದಂಡಿಸಲ್ಪಡತಕ್ಕದ್ದು.

೫ ನಾಲ್ಕನೇ ಪ್ರಕರಣದಲ್ಲಿ ತಿಳಿಸಲ್ಪಟ್ಟ ತಕ್ಸೀರಿಗೆ ಸಹಾಯ ಯಾ ಮದ್ದ ಮಾಡತಕ್ಕವರಿಗೆ ದಂಡನೆ—ಹದಿನಾಲ್ಕು ವರ್ಷಗಳ ವಯಸ್ಸು ಪೂರೈಸದಂತ ಒಬ್ಬ ಹುಡುಗಿಗೂ ಐವತ್ತು ವರ್ಷಗಳ ವಯಸ್ಸಾದ ಒಬ್ಬ ಪುರುಷನಿಗೂ ಯಾವನು ವಿವಾಹವನ್ನು ಮಾಡಿಸುತ್ತಾನೆಯೋ ಮತ್ತು ಯಾವನು ಮನಃಪೂರ್ವಕವಾಗಿ ಅಂಥಾ ವಿವಾಹಕ್ಕೆ ಇಂಡಿಯನ್ ಪೀನಲ್‌ಕೋಡಿನ ಅರ್ಥವ್ಯಾಪ್ತಿ ಸಹಾಯ ಮತ್ತು ಮದ್ದ, ಮಾಡುತ್ತಾನೆಯೋ ಅಂಥಾ ಮನುಷ್ಯನು ಆರು ತಿಂಗಳವರೆಗೆ ವ್ಯಾಪಿಸಬಹುದಾದ ಒಂದು ಮಿಯಾದಿಯುಳ್ಳ ಸಾಧಾರಣ ಶಿಕ್ಷೆ ಮೂಲಕವಾಗಲಿ ಅಥವಾ ಜುಲ್ಮಾನೆಯ ಮೂಲಕವಾಗಲಿ ಯಾ ಈ ಎರಡರ ಮೂಲಕವಾಗಲಿ ದಂಡಿಸಲ್ಪಡತಕ್ಕದ್ದು.

೬ ರೆಗ್ಯುಲೇಷನಿನಲ್ಲಿ ಕಂಡ ತಕ್ಸೀರುಗಳು ಯಾರಿಂದ ವಿಚಾರಿಸಲ್ಪಡತಕ್ಕದ್ದು—ಈ ರೆಗ್ಯುಲೇಷನ್ ಅನುಸಾರ ದಂಡಿಸಲ್ಪಡತಕ್ಕಂಥ ಯಾವದೊಂದು ಕೃತ್ಯವಾಗಲಿ ಒಬ್ಬ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗಿಂತ ಕೆಳಪಟ್ಟ ಯಾವ ಕೋರ್ಟಿನವರಿಂದಲೂ ವಿಚಾರಿಸಲ್ಪಡತಕ್ಕದ್ದಲ್ಲ.

೭ ರೆಗ್ಯುಲೇಷನಿನಲ್ಲಿ ತಿಳಿಸಲ್ಪಟ್ಟಂತೆ ದಂಡಿಸಲ್ಪಟ್ಟ ವಿವಾಹ ನಿಮಿತ್ತ ನಡೆದ ವಿವಾಹಗಳು ರದ್ದಾಗಲಾರವು—ಈ ರೆಗ್ಯುಲೇಷನಿನಲ್ಲಿ ವಿಧಿಸಲ್ಪಟ್ಟಿರುವ ದಂಡನೆಗಳ ನಿಮಿತ್ತದಿಂದಲೇ ಯಾವಾಗ ಸರ್ವಥಾ ಯಾವ ವಿವಾಹವಾಗಲಿ ರದ್ದಾಗಲಾರದು.

ಈ ರೆಗ್ಯುಲೇಷನಿನ ಕಾರಣೋದ್ದೇಶಗಳು

ಸಾಮಾನ್ಯವಾಗಿ ಹಿಂದೂಗಳಲ್ಲಿಯೂ ವಿಶೇಷವಾಗಿ ಬ್ರಾಹ್ಮಣ, ವೈಶ್ಯಜಾತಿಯವರಲ್ಲಿಯೂ, ಜರುಗತಕ್ಕ ಬಾಲ್ಯವಿವಾಹಗಳಂ ಕುರಿತು ಒಂದು ಮುಖ್ಯ ವಿಷಯವು ಈಗ್ಯೆ ಕೆಲವು ಕಾಲದಿಂದಲು ಗವರ್ನಮೆಂಟಿನವರ ಅವಧಾನವನ್ನಾಕರ್ಷಿಸಿರುತ್ತದೆ.

೨ ವಧುವು ೫ ವರ್ಷಗಳ ಮತ್ತು ಅದಕ್ಕಿಂತ ಕಡಿಮೆ ವಯಸ್ಸುಳ್ಳ ಮಗುವಾಗಿಯೂ, ವರನು ಅವಳಿಗಿಂತ ಐವತ್ತು ವರ್ಷಗಳ ವಯಸ್ಸು ಸಹ ವಿಪರೀತವಾದಂತಾ ಬಹಳಷ್ಟಾಗಿಯೂ ಇರುವ ಪ್ರಸಂಗಗಳು ಅಸಾಧಾರಣಗಳಲ್ಲವು. ತಾಯಿತಂದೆಗಳ ಅಥವ ಅದ್ರಕ್ಷಕರಿಂದ ಇತರರ ಅರ್ಥಾತುರತ್ವದಿಂದಾಗಲಿ ಅಥವ ಅಯೋಗ್ಯಗಳಿಂದ ಅವರ ಇತರ ಉದ್ದೇಶಗಳಿಂದಾಗಲಿ ಅತಿ ಬಾಲ್ಯದಲ್ಲಿರತಕ್ಕ ಹುಡುಗಿಯರನ್ನು ವೃದ್ಧರಿಗಿತ್ತು ವಿವಾಹ ಮಾಡುವ ಸಂಭವಗಳು ನಡೆಯುತ್ತಿರುತ್ತದೆ. ಇಂತಾ ವಿವಾಹಗಳಿಂದ ವಿಶೇಷ ಅಪಾಯಕರಗಳಾದ ದೋಷಗಳು ಮತ್ತು ಬಹಳ ಪ್ರಾಪ್ತವಾಗದೆ ಹೋಗುವದಿಲ್ಲವು

(ಸಶೇಷ)

ಕತ್ಯವಾಡದಲ್ಲಿ ನಡೆದ ಮೊಹರಂ ಗಲಾಟೆಗಳು.

ದೊಂಬಾಯಿ ಅಧಿಪತ್ಯಕ್ಕೆ ಸೇರಿದ ಕತ್ಯವಾಡವೆಂಬ ಡಿಸ್ಟ್ರಿಕ್ಟಿನಲ್ಲಿ ಜುನಾಗಡವೆಂಬ ನೇಟಿವ ಸಂಸ್ಥಾನವಿದೆ. ಪಟ್ಟಣ ಎಂಬುದು ಆ ಸ್ಥಳಕ್ಕೆ ಸೇರಿದ ಒಂದು ದೊಡ್ಡ ಪಟ್ಟಣ. ಅಲ್ಲಿ ಮೊಹರಂ ಹಬ್ಬಕ್ಕೆ ಮುಂಚಿತವಾಗಿ ಸರ್ಕಾರದವರು ಬಹಳ ಬಂದೋಬಸ್ತು ಮಾಡಿಸಿದ್ದರು. ಮಹಾರಾಜರವರು ಹಿಂದೂ ಮುಸಲ್ಮಾನರು ಏನಾದರೂ ಜಗಳಕದನಗಳನ್ನು ನಡಿಸಬಹುದೆಂದು ಊಹಿಸಿ ಪೋಲೀಸ್ ಅಧಿಕಾರಿಗಳಿಗೆ ತಕ್ಕ ಎಚ್ಚರದಿಂದ ಕಾವಲು ಇರಬೇಕೆಂದು ಕೊಟ್ಟಿದ್ದ ಹುಕುಮನ್ನೇ ಪೋಲೀಸ ಕಮಿಷನರುಗಳು ಹಿಂದೂ ಮುಸಲ್ಮಾನರುಗಳಿಗೆ ತಿಳಿಸಿದ್ದಲ್ಲದೆ, ಹಾಗೇ ರೂಪಿಸಿಟ್ಟು ಹೇಳಿದ್ದರು. ಕೊನೇ ದಿವಸ ಮುಸಲ್ಮಾನರು ತಮ್ಮ ದೇವರನ್ನು ತೆಗೆದುಕೊಂಡು ಹೋಗುವುದಕ್ಕೆ ರಸ್ತೆಯನ್ನು ನಿಘಾಯಿಕ ಮಾಡಿ ಆಯಾ ರಸ್ತೆಗಳಲ್ಲಿ ಪೋಲೀಸರನ್ನು ಹಾಕಿಸಿದ್ದರು. ಪೋಲೀಸ್ ಜವಾನರನ್ನು ಕ್ರಮವಾಗಿ ಪಹರೆ ಇರುವಂತೆ ಮಾಡಿದ್ದರು. ಇಷ್ಟು ಬಂದೋಬಸ್ತು ಮಾಡಿಸಿದ್ದಾಗ್ಯೂ ಮುಸಲ್ಮಾನರು ತಮ್ಮ ಮಂಟಪಗಳನ್ನು ಕೋಟೆಯ ಬಾಗಿಲು ಹಿಡಿಸದಷ್ಟು ಬಹು ಎತ್ತರವಾಗಿ ಕಟ್ಟಿಸಿದ್ದರು. ಸರ್ಕಾರದವರು ಇದಕ್ಕೆ ವಿಶೇಷ ನಿಗಾ ಕೊಡದೆ ಅವರ ಇಷ್ಟದಂತೆ ಕೋಟೆಯ ಬಾಗಿಲ ನೆಲವನ್ನು ಅಗಿಸಿ ಮಂಟಪಗಳನ್ನು ಸುಲಭವಾಗಿ ಆಚೆಗೆ ಹೊತ್ತುಕೊಂಡು ಹೋಗುವಂತೆ ಮಾಡಿಕೊಟ್ಟರು. ಮುಸಲ್ಮಾನರು ಕೋಟೆಯ ಹೊರಕ್ಕೆ ಹೋದಮೇಲೆ ವಿಪರೀತವಾಗಿ ಗುಂಪು ಕೂಡಿಕೊಂಡು ಸ್ವಲ್ಪದೂರದ ವರೆಗೂ ಗೊತ್ತಾಗಿದ್ದ ರಸ್ತೆಯಲ್ಲೇ ಹೋಗಿ, ಅನಂತರ, ತಮ್ಮ ಜೊತೆಯಲ್ಲಿ ಬಸ್ತುವಾಗಿ ಸರ್ಕಾರದಿಂದ ಕೊಡಲ್ಪಟ್ಟಿದ್ದ ಪೋಲೀಸ್ ಜವಾನರ ಮೇಲೆ ತಿರುಗಿಬಿದ್ದು ಅವರನ್ನು ಕಲ್ಲುಗಳಿಂದ ಹೊಡೆದು ಓಡಿಸಿಬಿಟ್ಟರು. ಅಲ್ಲಿಂದ ಗುಂಪುಕಟ್ಟಿಕೊಂಡು ರಸ್ತೆಯನ್ನು ಬಿಟ್ಟು ಸ್ವಲ್ಪ ದೂರದಲ್ಲಿದ್ದ ದೇವಸ್ಥಾನ ಸೋಮನಾಥ ಎಂಬ ಹಿಂದೂ ದೇವಸ್ಥಾನದೊಳಕ್ಕೆ ನುಗ್ಗಿ ಹೊಗಿದ್ದ ಸನ್ಯಾಸಿಗಳನ್ನು ಹೊಡೆದು ... ದೇವಸ್ಥಾನವನ್ನು ಕೆಡಿಸಿ ಕೆತ್ತು ಬಂಕಿ ಹಾಕಿದರು. ಕರೋಸಿನ್ ಎಣ್ಣೆ ಯನ್ನು ಸುರಿದು ಗರ್ಭಗುಡಿ ... ಒಳಗಿದ್ದ ಶಿವಲಿಂಗವನ್ನು ಕಿತ್ತು ಆ ಸ್ಥಳಕ್ಕೂ ಬೆಂಕಿ ಹಚ್ಚಿದರು. ದೇವಸ್ಥಾನದ ಗೋಪುರಗಳನ್ನು ಕೆಡವಿ, ರಸ್ತೆ ಮಾಡಿಕೊಂಡು ಸರ್ಕಾರದವರು ಗೊತ್ತು ಮಾಡಿದ್ದ ಕಡೆಗೆ ಹೋಗದೆ, ನವಾಬರಿಗೆ ಹೋಗಿ ಅಲ್ಲಿ ಬಿದ್ದಿದ್ದರು. ಹೀಗೆ ಮಾಡಿದ್ದಕ್ಕೆ ಹಿಂದುಗಳು ಅವರಿಗೆ ಸ್ವಲ್ಪವಾದರೂ ರೇಗಲಿಲ್ಲ. ಆ ಸ್ಥಳದಲ್ಲಿ ಕೆಲವು ಮಂದಿ ಸತ್ತುಹೋದರು. ಕೆಲವರು ಪೂರಾ ಗಾಯಹೊಂದಿ ನರಳುತ್ತಿದ್ದರು. ಇವನ್ನೆಲ್ಲಾ ಪೋಲೀಸಿನವರು ನೋಡಿ, ದುಷ್ಟರನ್ನು, ... ಮತ್ತು ಜೈಲರನ್ನೂ ಕರೆಕಳುಹಿಸಿದರು. ಅವರು ಮಾರ್ಗದಲ್ಲಿ ಬರುತ್ತಿರುವಾಗ್ಯೂ ಅವರನ್ನೂ ದಾರಿಯಲ್ಲಿ ಕೊಂದುಹಾಕಿದರು. ಇಷ್ಟಾದರೂ ಹಿಂದುಗಳು ತಮ್ಮ ಮನೆಗಳನ್ನು ಬಿಟ್ಟು ಹೊರಕ್ಕೆ ಹೋಗಲಿಲ್ಲ. ದೇವಸ್ಥಾನದಲ್ಲಿ ಕೊಲ್ಲಲ್ಪಟ್ಟವರೆಲ್ಲಾ ಯಾತ್ರಾರ್ಥಿಗಳಂತೆ. ಆ ಕೂಡಲೆ ತಂತಿವರ್ತಮಾನಗಳು ಮಹಾರಾಜರಿಗೂ, ಬೊಂಬಾಯಿಯಲ್ಲಿ ದೊಡ್ಡದೊರೆ ಹಿಂದುಗಳಿಗೂ ತಿಳಿಸಲ್ಪಟ್ಟಿತು. ಅನೇಕರು ಆಗಲೇ ಹೋಗಿರುತ್ತಾರೆ. ಹಿಂದುಗಳಲ್ಲಿ ೧೧ ಜನ ಸತ್ತರು, ಸುಮಾರು ೨೦ ಮಂದಿಗೆ ಪೆಟ್ಟುಗಳಾಗಿವೆ. ಪರ್ಯವಸಾನ ಪೇನಾಗುವದೋ ಮುಂದೆ ತಿಳಿಯತಕ್ಕದ್ದಾಗಿದೆ.

ವಿವಿಧ ವರ್ತಮಾನಗಳು.

ಸೋಮವಾರ ಪೇಟೆ ಸೈರಿನಲ್ಲಿ ಮಳೆಯಾಗದೆ ಪೈರೆಲ್ಲಾ ನಷ್ಟವಾಗಿ ಹೋಯಿತು. ಪ್ರಜೆಗಳಿಗೆ ಇದರಿಂದ ೧೪೦ ಕೋಟಿ ರೂಪಾಯಿನವರೆಗೂ ನಷ್ಟವಾಯಿತಂತೆ!

ಕಾಟನ್ಪೇಟೆಯಲ್ಲಿ ಸರ್ಕಾರದವರು ಪಟ್ಟಿ ಕಿತ್ತುಬಿಟ್ಟಿರುವ ... ಶೇಖರ ಮಾಡಿಸುತ್ತಿರುವಾಗ್ಯೂ ಎಚ್ಚಲು ... ಕಾಲಿಯವರು ಸತ್ತುಹೋದರು. ಇನ್ನು ಕೆಲವರಿಗೆ ಸ್ಪಲ್ಪ ಜಖಂ ಆಯಿತು.

ಮದ್ರಾಸಿನ ದ್ವೀಪದಿಂದ ಬಂದ ... ಒಂದು ವೊಟ್ಟೆಯೊಂದನ್ನು ಇಟ್ಟು ... ರೂಪಾಯಿ ಕೊಟ್ಟು ಕೊಂಡುಕೊಂಡನಂತೆ ಅಂಥಾ ವೊಟ್ಟೆಯೊ!

ಲಂಡನ್ ಪಟ್ಟಣದಲ್ಲಿ ೧೩ ಸಂವತ್ಸರ ವಯಸ್ಸುಳ್ಳ ಹುಡುಗನೊಬ್ಬನು ಆ ಹುಡುಗನು ೩೦,೦೦೦ ಮೈಲು ದೂರ ಪ್ರಯಾಣ ಮಾಡಿದ್ದಾನಂತೆ. ಬಹಳ ಅಪಾಯದ ವಿನಾ ... ಅವನ ಸ್ವಭಾವದಿಂದ ಕಾಣಬರುತ್ತದೆ.

ಜೇಕಾರ್ಸ್ಯದಲ್ಲಿ ಒಂದಾದ ನೇರಂಗ್ ... ಎಂಬ ಊರಿನಲ್ಲಿ ವಿಪರೀತವಾಗಿ ... ಸಣಗಳಲ್ಲಿ ... ಆ ಊರನ್ನೇ ಮುಳುಗಿಸಿ ಬಿಟ್ಟಿವೆ. ಹತ್ತು ಸಾವಿರ ಪ್ರಜೆಗಳು ಮುಳುಗಿ ಹೋದರು. ಅಗಾಧವಾಗಿ ಬೆಳದಿದ್ದ ಬೈರುಗಳೆಲ್ಲಾ ಕೊಚ್ಚಿಹೋದವು.

ಸಂಯುಕ್ತ ಸಂಸ್ಥಾನಗಳಲ್ಲಿ ವಯೋಮಿ ಎಂಬ ... ಸುಂಟರಗಾಳಿಯು ಹುಟ್ಟಿ ಸುವಿದಾರುವು ... ಹಿಂದೆ ಬಿದ್ದವು. ... ನೆಲಸಮವಾದವು. ಸುಮಾರು ೨೦೦ ಜನರಿಗೂ ಅಪಾಯವಾಗಿ ಸತ್ತುಹೋದರು.

ಚಿಕಾಗೋ ಸರ್ವವಸ್ತು ಪ್ರದರ್ಶನಶಾಲೆಯಲ್ಲಿ ಮರದಿಂದ ... ಎತ್ತರವಾಗಿಕಟ್ಟಿ ಇದ್ದ ಒಂದು ಭಾರಿಯಾದ ಮತ್ತು ಚಿತ್ರವಿಚಿತ್ರವಾದ ಕಟ್ಟಡವು ಆಕಸ್ಮಿಕವಾಗಿ ದುಷ್ಟೇಕ್ಷರ ಮೂಲಕ ... ಆದರಲ್ಲಿ ಇದ್ದವರಿಗೂ ಪ್ರದರ್ಶನವಸ್ತುಗಳು ಬೂದಿಯಾದವು. ಮತ್ತು ೩ ಜನರು ಮಾಯವಾದರು.

ಬೊಂಬಾಯಿ ವಿಕ್ಟೋರಿಯಾ ರೈಲ್ವೆ ಟರ್ಮಿನಸ್ಸ್ ... ರಸ್ತೆ ಕಟ್ಟುವುದಕ್ಕೆ ೪೦ ಲಕ್ಷ ರೂಪಾಯಿಗಳು (ಪ್ರತಿ ಲಕ್ಷ ...) ಬೇಕಾಗಬೇಕೆಂದು ಅಂದಾಜು ಹಾಕಿದ್ದನ್ನು ಸರ್ಕಾರದವರು ಸ್ವೀಕರಿಸಿ ಮಂಜೂರು ಮಾಡಿರುತ್ತಾರೆ. ಆ ... ಹಾಗೆ ಮಾಡಿದ್ದರಿಂದ ಹಾಗಾಯಿತು.

ಕಲಕತ್ತ ಮುದ್ರಾಸು ಮುಂತಾದ ಕಡೆಗಳಲ್ಲಿ ... ಇರುತ್ತವೆ. ಆ ... ಅದರ ಬಲದಿಂದ ಅತಿಕಠಿನವಾಗಿ ವರ್ತಮಾನಪತ್ರಿಕೆಗಳನ್ನು ಕೂಡ ಜನರು ಬಹು ಜಾಗರೂಕತೆಯಿಂದ ಓದಬೇಕು ಮತ್ತು ದುಷ್ಟ ... ಯಾಕೆಂದರೆ ಅವುಗಳಲ್ಲಿ ಕೆಲವು ಹುಸಿಗಳು ಅಡಕೊಂಡು ಇರುತ್ತವೆ ಎಂಬುದಾಗಿ ಒಬ್ಬ ನೊಬ್ಬ ವೈದ್ಯನು ತಿಳಿಸಿರುತ್ತಾನೆ.

ನಾಲ್ಕು ವರುಷದ ಮಗುವೊಂದು ... ಬೇನಾ ... ದಲ್ಲಿ ೩೦ ನಾಡಿಗಳ ಒಂದು ಪದ್ಯ ಕಾವ್ಯವನ್ನು ಕಲಿತಿರುತ್ತದೆ. ಇದನ್ನು ಪರೀಕ್ಷಿಸುವದಕ್ಕೆ ಒಂದು ದೊಡ್ಡ ಸಭೆ ... ಆ ಕಾವ್ಯವನ್ನು ಒಪ್ಪಿಸಿತು. ... ಆ ಮಗುವಿಗೆ ... ನಯವಾಗಿಸಿದರು.

ಇಂಡಿಯಾದಲ್ಲಿ ಮೊದಲು ಬಾಲ್ಯ ... ಬೇಕೆಂದು ... ಯ ಸೊಸೈಟಿ ... ಬಾಲ್ಯವಿವಾಹ ... ಸ್ತ್ರೀಯರಿಗೆ ... ಕೆಲಸಗಳನ್ನು ನಡಿಸುವರು. ... ಅನೇಕರಿಗೂ ಇದು ದೊಡ್ಡ ... ಕೆಲಸವಾಗಿರುವದು. ಈ ... ಸ್ತ್ರೀಕೃತ್ಯ ...

ಇತ್ತೀಚೆಗೆ ಕೆಲ್ಲತೊಪ್ಪಿಯಗಳನ್ನು ತಯಾರುಮಾಡುವ ... ಹಿಂದಿನ ವರ್ಷದಲ್ಲಿ ... ೮೦೦೦೦೦ ... ಇಪ್ಪತ್ತು ಸಾವಿರ ನಾಮಗಳು ... ಆ೦ತೂ ೧೦೦ ನೋಟುಗಳು ಸಿಕ್ಕಿರುತ್ತವೆ.

ಸಿಕ್ತ ... ಸಿಗರೇಟು ... ಎಂಬ ... ಆದರಲ್ಲಿ ಪ್ರಯಾಣ ... ಇರುವದು ... ರಿಂದ ಸರ್ಕಾರದವರು ... ಮೊಕದ್ದಮೆಯನ್ನು ವಿಚಾರಣೆ ಮಾಡುವದಕ್ಕೆ ಒಬ್ಬ ಸ್ಪೆಷಲ್ ಜಡ್ಜಿಯನ್ನು ನೇಮಿಸಿ ...

ಬೆಂಗಾಲ್ ಲೈಬ್ರರಿ ಎಂಬ ನೇಟಿವ ಸಿಲ್ಕಿನ ... ವಿಲಾಯಿತಿಯಲ್ಲಿ ... ಮಹಾರಾಣಿಯವರು ... ಕೆಲವು ದಿನಗಳ ಕೆಳಗೆ ... ಆ ಸ್ಯಲ್ಪವಿನವರ ಸಂಗಡ ಬಂಗಾಳೀ ಭಾಷೆಯಲ್ಲಿ ಮಾತನಾಡಿ, ... ಅವರು ನೋಡಿದ್ದರು ... ಹಿಂದೂಸ್ಥಾನದ ಪ್ರಜೆಗಳವರಲ್ಲಿ ... ವ್ಯಕ್ತವಾಗುತ್ತದೆ.

ಕೆಲವು ದಿನಗಳ ಕೆಳಗೆ ... ಅವರನ್ನು ... ದೇಶವನ್ನು ... ಹಿಂದೂಸ್ಥಾನದಲ್ಲಿದ್ದ ... ಆ ... ಇಂಡಿಯಾ ಗೌರ್ನ್ಮೆಂಟಿನವರು ... ಕೊಡುತ್ತಾರೆ ... ರೂಪಾಯಿಗಳನ್ನು ...

ಬೊಂಬಾಯಿ ಕೋರ್ಟಿನ ... ಕೋರ್ಟಿನಲ್ಲಿ ... ಅವನು ... ತಪ್ಪು ... ಹುಡುಗನನ್ನು ... ಆ ... ಇದೆ!

ತುರ್ಕೀ ಸಂಸ್ಥಾನದ ... ಕೊಲ್ಲಬೇಕೆಂದು ... ಕೆಲವು ಮಂದಿ ದೊಡ್ಡ ಮನುಷ್ಯರು ... ಆದರೆ ... ಆದರು ಗುಮಾನಿಯಿಂದ ಕೆಲವು ಮಂದಿ ಅಧಿಕಾರಿಗಳನ್ನೂ ಮುಖಂಡರನ್ನೂ ಹಿಡಿದುಲಿವರನ್ನು ಗಡೀಪಾರು ಮಾಡಿಬಿಟ್ಟರು.

ಆದವನು ಉದ್ಯೋಗಸ್ಥರುಗಳಲ್ಲಿರೂ ಬಾಯಿಯಲ್ಲಿ ... ವಿಚಾರಣೆ ಮಾಡದ ಸುಲ್ತಾನರು ... ವಿಧಿಸುವರು.

ಬ್ಯಾರಿಲಿಯಲ್ಲಿ ಮೊಹರಂ ಗಲಾಟೆಯಲ್ಲಿ ... ಹುಡುಗನನ್ನು ... ಕೊಟ್ಟಿದ್ದನು ... ಆನೇಕರು ... ದೇವರ ... ಅವರಲ್ಲಿ ಒಬ್ಬ ... ಜಡ್ಜಿಯವರು ... ೩ ತಿಂಗಳು ಕಠಿಣ ಸಜಾ ... ರೂಪಾಯಿ ಜುಲ್ಮಾನೆಯನ್ನು ... ನಾಲ್ಕು ತಿಂಗಳವರೆಗೂ ಕಠಿಣ ಸಜಾ ವಿಧಿಸಲ್ಪಟ್ಟಿತು.

ಕೆಲವುಕಾಲದ ಕೆಳಗೆ ... ಎಂಬ ಹೆಸರುಳ್ಳ ಒಂದು ಹಡಗು ... ಕೆಲವು ಮಾರ್ತಾಂಡರು ... ಬಿಡಬೇಕೆಂದು ... ಸರ್ಕಾರಕ್ಕೆ ಸಂಬಂಧಪಟ್ಟ ಪೋಲೀಸಿನವರು ... ತಿಳಿದುಕೊಂಡು ಆ ಹಡಗಿನ ಮೇಲೆ ... ಆ ಹಡಗಿನ ... ಒಂದು ... ಇಟ್ಟಿದ್ದ ... ಗಂಟೆಗೆ ... ಅಲ್ಲಿ ... ಹಡಗಿನ ... ರಕ್ಷಣೆಯಾಯಿತು.

ಮದರಾಸಿನಲ್ಲಿ ... ಸಪ್ಲೈಯರ್ ... ಯಲ್ಲಿ ... ತಮ್ಮ ... ಅವನ್ನು ... ಆ ಗಾಡಿಯನ್ನು ... ಇನ್ನೂ ... ಈ ಗಾಡಿಯನ್ನು ... ಕೊಟ್ಟುಕೊಂಡು ... ದುರಂಗಿಗಳು ... ಆ ಹುಡುಗನಿಗೆ ... ಕೊಟ್ಟು ... ಇರಬೇಕು ... ಜುಲ್ಮಾನೆ ತರಬೇಕು ಎಂದು ತೀರ್ಮಾನಿಸಿಯಾಯಿತು.

ಮದರಾಸಿ ... ಗೆ ಸೇರಿದ ... ಕೃಷ್ಣ ಗೋದಾವರಿ ... ಹತ್ತಿರ ... ಲಕ್ಷ ... ಕಳೆದು ಹೋಯಿತು ... ಈಗ ... ಎಂಬುವರು ... ಆದುದರಿಂದ ... ೪೦ ಲಕ್ಷ ... ಲಕ್ಷರೂಪಾಯಿಗಳು ... ಸರ್ಕಾರದವರು ಅಂದಾಜುಮಾಡುತ್ತಾರೆ.

ಉತ್ತರ ಅಮೇರಿಕಕ್ಕೆ ಸೇರಿದ ಸಂಯುಕ್ತ ಸಂಸ್ಥಾನಗಳಲ್ಲಿ ಜನರು ಹಾಲನ್ನು ... ಲಕ್ಷ ಗ್ಯಾಲನ್‌ಗಳ ... ಉನ್ನು ... ಹಸುವನ್ನು ಕಟ್ಟಿ ... ಕೂಡಿ ... ಹೋಗುವ ... ಈ ... ಬೆಂಬ ... ಹುಲ್ಲನ್ನು ... ರ್ಮೆಂಟಿನವರು ... ಅವುಗಳು ... ಹಾಲನ್ನು ... ಕೊಡುತ್ತಾರೆ ... ಆದ ... ಉತ್ಪತ್ತಿಯಾಗುವ ... ಮಾಡುತ್ತಾರೆ.

ಕಲ್ಕತ್ತೆಯಲ್ಲಿ ಒಬ್ಬ ... ಹೆಂಡತಿ ... ಹುಡುಗನನ್ನು ... ಹೋಗುತ್ತಿದ್ದನು. ಅವನನ್ನು ... ಹೊರವಕ್ಕೆ ...

ವಿಪರೀತ ... ಬೆಂಗಳೂರು ... ಅವನು ... ಸಾಯಿಸಿ ... ತಿಳಿಸುವ ... ಸರ್ಕಾರದವರು ... ಕೋರ್ಟಿನ ... ಅವರ ... ಹಿಂದೆ ... ಆ ದೊಂಬೀಲಾಗಿ ... ಅನುಸರಿಸುವ ... ಅವರು ... ಅವರಿಗೆ ... ಪ್ರಶ್ನೆಯನ್ನು ಕೇಳಿದ ... ಸರಿಯಾದ ...

ಶಾಲಿವಾಹನಶಕ ೧೮೧೫ ನೇ ವಿಜಯನಾಮ ಸಂವತ್ಸರದ ನಿಜಆಷಾಢ ಶುದ್ಧ ತ್ರಯೋದಶಿಗುರುವಾರದಿಂದ ಶ್ರಾವಣಶುದ್ಧ ಪಂಚಮಿ ಬುಧವಾರದ ವರೆಗಿನ ವಾರದ ಪಂಚಾಂಗ.

೧೮೯೩ ನೇ ಇಸವಿ, ಆಗಸ್ಟ

ತಾ.	ವಾರ.	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಕಟಿಕ ಮಾಸ ತೇದಿ
10	ಗು	ತ್ರ ಉದಯ	0-4	ಜ್ಯೇ	54-37	28
11	ಶು	ಚ	50 2	ಮೂ	[illegible]	29
12	ಶ	ಪಾ	[illegible]	ಪೂ	[illegible]	30
13	ರ.	ಬಿ	13-[illegible]	ಉ	[illegible]	31
14	ಸೋ.	ರ	12 [illegible]	ಶ್ರ	[illegible]	3
15	ಮಂ.	[illegible]	12-10	ಧ	3-40	1
16	ಬು	ಪಂ	[illegible]	ಶ	[illegible]	2

* ಸರ್ವತ್ರ ಶಿವಮಹಾನಸ್ಯ

† ಶ್ರಾವಣಸೋಮ

ಪೇಟೆ ಧಾರಣೆ.

ದಿನಸಿ	ಮೈಸೂರು	ಬೆಂಗಳೂರು.
	ರೂ. ಆ. ಪೈ	ರೂ ಆ ಪೈ
ಕಪ್ಪೇಅಕ್ಕಿ ಪಲ್ಲ ೧ಕ್ಕೆ	೧೨-೧೨-೦	೧೨-೧-೦
ಕೆಂಬಾಗೆ ಅಕ್ಕಿ ಅಪ್ಪಲಿ	೧೨-೮-೦	೧೨-೮-೦
ಜಿಗಿ ಅಕ್ಕಿ ದಪ್ಪ	೧೨-೦-೦	೧೦-೪-೦
ಜಾಡಗಾಲ ಅಕ್ಕಿ	೧೧-೦-೦	೧೨-೧೦-೦
ಸಂಣಕ್ಕಿ ಅಪ್ಪಲಿ	೧೪-೦-೦	೧೨-೧೨-೦
ಜಿಟಿ ಅಕ್ಕಿ ದಪ್ಪ	೧೨-೮-೦	೧೧-೪-೦
ತೊಗರಿಬೇಳೆ ಪಲ್ಲ ೧ ಕ್ಕೆ	೧೨-೦-೦	೧೨-೦-೦
ಜಿಟಿ ದಪ್ಪ ತರಹ	೧೧-೮-೦	೧೧-೮-೦
ಮೈಲಾಗಿ ಪಲ್ಲ ೧ಕ್ಕೆ	೪-೭-೦	೧೨-೦-೦
ಕಾಬ್ಳಗಿ	೭-೦-೦	೧೨-೦-೦
ಹಲಸಂದೆ ಪಲ್ಲ ೧ಕ್ಕೆ	೯-೦-೦	೧೩-೦-೦
ಬಿಳೀ ಅವರೆ	೧೨-೮-೦	೧೨-೮-೦
ಹೆಸರು	೯-೧೨-೦	೧೦-೪-೦
ಉದ್ದು	೧೨-೮-೦	೧೧-೦-೦
ಕಡಲೆ	೧೦-೧೨-೦	೧೦-೦-೦
ಎಳ್ಳು	೧೦-೮-೦	[illegible]
ಹುರಳಿ	೬-೪-೦	[illegible]
ಸಿಗೇಕಾಯಿ ಮಣ ೧ಕ್ಕೆ	೧-೧೦-೦	[illegible]
ಮೆಣಸಿನಕಾಯಿ	೨-೬-೦	೩-೪-೦
ದಪ್ಪ ತರಹ	೩-೧೨-೦	೨-೧೨-೦
ಬೆಲ್ಲದ ದೊಡ್ಡ ಅಚ್ಚು ೧೦೦ ಕ್ಕೆ	೫-೮-೦	೬ ೧-೧೨-೦
ಸಣ್ಣ ಅಚ್ಚು	೫-೦-೦	೩ ೧-೧-೦
ಬೆಳ್ಳುಳ್ಳಿ ಮಣ ೧ಕ್ಕೆ	೩-೧೪-೦	೪-೬-೦
ಹರಳೆಣ್ಣೆ	೪-೦-೦	೩-೧೨-೦
ಕೊತ್ತುಂಬರಿ ಪಲ್ಲ ೧ಕ್ಕೆ	೮-೦-೦	೮-೧೦-೦
ಉಪ್ಪು	೧೦-೦-೦	೯-೧೨-೦
ಹುಣಸೇಹಣ್ಣು ಮಣ ೧ಕ್ಕೆ	೧-೦-೦	೧-೧೪-೦
ಹಳೇ ಹುಣಸೇಹಣ್ಣು,,	೧-೮-೦	೧-೧೦-೦
ತುಪ್ಪ	೧೩-೦-೦	೧೨-೮-೦
ಸೀಮೆ ಯಂಣೆ ಪೆಟ್ಟಿ ೧ ಕ್ಕೆ	೪-೦-೪	೪-೨-೦
ತೆಂಗಿನಕಾಯಿ ೧೦೦ ಕ್ಕೆ	೫-೨-೦	೪ ೬-೦
ಚಿನ್ನ (ತೊಲ)		
ಕೆಂಪು	೧೫-೧೪-೦	೧೫-೧೫-೦
ಪಸಿಮೆ	೧೬-೪-೦	೧೬-೦-೦
ಗಟ್ಟಿ	೨೬-೮-೦	೨೬-೬-೦

Mysore.—Printed and published for the Proprietor at the Wesleyan Mission Press.
10/8/93

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು — ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೩ — ಮೈಸೂರು—ಸ ೧೮೯೩ ನೇ ಇಸವಿ ಆಗಸ್ಟ್ ತಾರೀಖು ೧೭ ನೇ ಗುರುವಾರ. — ಸಂಚಿಕೆ ೧೦

ನೋಟಿಸ್.

		ಕ್ರಯ			ಅಂಚೆ ಸಹಿತವಾಗಿ		
Campbell's.	ಕನ್ನಡ ವ್ಯಾಕರಣ ಸಾರ	೦	೨	೦	೦	೨	೬
Object Lessons.	ವಸ್ತು ಬೋಧೆಗಳು	೦	೧	೯	೦	೧	೬
Picture do	ಚಿತ್ರಗಳು ಸಹಿತವಾಗಿ	೦	೨	೦	೦	೨	೬
School Geography	ಭೂಗೋಳ ಶಾಸ್ತ್ರಸಾರ	೦	೬	೦	೦	೭	೦

ಈ ನಾಲ್ಕು ಪುಸ್ತಕಗಳು ಮೈಸೂರು ಸರ್ಕಾರದವರ ಅಪ್ಪಣೆ ಪ್ರಕಾರ ಸಕಲ ಬೋಧ ಶಾಲೆಗಳಲ್ಲಿಯೂ ಉಪಯೋಗಿಸತಕ್ಕವುಗಳು.

	ಕ್ರಯ			ಅಂಚೆ ಸಹಿತವಾಗಿ		
ಮಾರ್ಟಿನ್ ಲೂಥರ್ ಎಂಬವರ ಚರಿತ್ರೆ	೦	೧	೬	೦	೨	೦
ಸ್ತ್ರೀಯರು ಓದತಕ್ಕ ಪುಸ್ತಕ	೦	೫	೦	೦	೫	೬
ಗಣಿತ ಮಗ್ಗಿಗಳು	೦	೧	೦	೦	೧	೬
ಸಂಸ್ಕೃತ ಕರ್ಣಾಟಕ ಭಾಷಾಮಂಜರಿ	೦	೨	೦	೦	೨	೬
ಇಂಗ್ಲೀಷು ಕನ್ನಡವು ಶಬ್ದಾವಳಿ ೧ನೇ ೨ನೇ ಭಾಗಗಳಿಕ್ಕೆ	೦	೧	೦	೦	೧	೬
ಕಾವ್ಯಾವಳಿ (Minor Poetical Anthology)	೦	೮	೦	೦	೮	೬
ಬಾಲವ್ಯಾಕರಣ	೦	೫	೦	೦	೫	೬
ಹಳಗನ್ನಡ ವ್ಯಾಕರಣ ಸೂತ್ರಗಳು	೦	೬	೦	೦	೬	೬
ಇಂಗ್ಲೀಷು ಕನ್ನಡವು ಸಂಭಾಷಣ ವಾಕ್ಯಗಳು	೦	೧೦	೦	೦	೧೦	೬
ಶಬ್ದಮಣಿ ದರ್ಪಣ	೧	೦	೦	೧	೪	೬
Kan. Eng Pocket Dictionary	೧	೪	೦	೧	೫	೩
Eng. Kan School Dictionary	೨	೧೦	೦	೨	೧೨	೬
ಬಳ್ಳೀ ತಾಯಿ	೦	೪	೪	೦	೪	೬
ಆತ್ಮಿಕ ದಿವ್ಯ ಯುದ್ಧ (Bunyan)	೦	೧೨	೦	೦	೧೩	೬
ಕೈವಲ್ಯ ಪದ್ಧತಿ ೧ ನೇ ಭಾಗ ೨ ಆಣ ೩ನೇ ಭಾಗ	೦	೧	೬	೦	೨	೦
ಭಕ್ತಿಸಾರ	೦	೧	೦	೦	೧	೬
ಸತ್ಯ ವಿಜ್ಞಾನಿ	೦	೧	೦	೦	೧	೬

ಈ ಪುಸ್ತಕಗಳೂ ಇನ್ನೂ ಅನೇಕ ಪ್ರಯೋಜನಕರವಾದ ಪುಸ್ತಕಗಳೂ ಕೆಳಗೆ ನಮೂದಿಸಿರುವ ಸ್ಥಳಗಳಲ್ಲಿ ದೊರುಕುತ್ತವೆ.

ಬೆಂಗಳೂರು—ಪೋಲೀಸ್ ಸ್ಟೇಷನ್ ಪತ್ರವಿರುವ ಪುಸ್ತಕಶಾಲೆ.

ಚಿಕ್ಕಬಳ್ಳಾಪುರ—ಆರ್ಡರ್ ಮಿಷನ್ ರೀಡಿಂಗ್ ರೂಮ್

ತುಮಕೂರು—ವೆಸ್ಲಿಯನ್ ಮಿಷನ್ ಬಂಗಲೆ. ಮೈಸೂರು—ವೆಸ್ಲಿಯನ್ ಮಿಷನ್ ಪ್ರೆಸ್.

ಸರ್ಕಾರದ ೧೮೮೯ ರಲ್ಲಿ ಸ್ಥಾಪಿಸಲ್ಪಟ್ಟದ್ದು.

ಕೆನರಾ ಅಂಡ್ ಮೈಸೂರ ಟ್ರೇಡಿಂಗ್ ಏಜನ್ಸೀ ಆಫೀಸ್, ಮುಂಬಯಿ.

ಇವರು ತಯಾರಿಸಿರುವಂಥ—

ಹೈಮಧಾತ್ರೀತೈಲ.

ಕಳೆದ ಜನವರಿ ತಿಂಗಳೊಂದರಲ್ಲಿ ೪,೧೦೦ ಬಾಟ್ಲಿಗಳು ಖರ್ಚಾದವು. ಈ ತೈಲದ ಮಹತ್ವವನ್ನು ಕುರಿತು, ಸವಿಸ್ತರವಾಗಿ ವರ್ಣಿಸಬಾರದು—ಯಾಕೆಂದರೆ, ಯಾರು ಈ ತೈಲವನ್ನು ಉಪಯೋಗಿಸುತ್ತಾರೋ ಅವರಿಗೆ ಒಂದೆರಡು ದಿವಸಗಳಲ್ಲಿಯೇ ಇದರ ಅಪ್ರತಿಮವಾದ ಗುಣವು ಸಹಜವಾಗಿ ಅನುಭವಕ್ಕೆ ಬರುವದು. ಆದಾಗ್ಯೂ ಇದರ ಮುಖ್ಯವಾದ ಉಪಯೋಗವನ್ನು ತಿಳಿಸುವದು ನಮ್ಮ ಕರ್ತವ್ಯವಾಗಿರುತ್ತದೆ.

ಈ ನಮ್ಮ "ಹೈಮಧಾತ್ರೀ ತೈಲವನ್ನು" ಪ್ರತಿದಿನ ತಲೆಗೆ ಹಾಕಿಕೊಂಡರೆ ಮಿದುಳಿನಲ್ಲಿರುವ ಉಷ್ಣತೆಯನ್ನು ಪರಿಹರಿಸುವದಲ್ಲದೇ, ಕಣ್ಣಿಗೂ, ಮಿದುಳಿಗೂ ತಂಪುಕರಿಸಿ, ಚಿತ್ತಕ್ಕೆ ಶಾಂತತೆಯನ್ನುಂಟುಮಾಡುವದು. ಮತ್ತು ಕಣ್ಣುಗಳಿಗುಂಟಾಗುವ ಸಾಮಾನ್ಯವಾದ ವಿಕಾರಗಳನ್ನೆಲ್ಲ ಪರಿಹರಿಸುವದು. ದೃಷ್ಟಿಗೆ ತೀವ್ರತೆಯುಂಟಾಗುವದು.

ಹೆಚ್ಚಾಗಿ ಓದತಕ್ಕವರಿಗೂ, ಒಂದೇ ಸಮನಾಗಿ ಕಣ್ಣಿಟ್ಟು ಕೆಲಸ ಮಾಡತಕ್ಕ ಕಸಬುಗಾರರಿಗೂ, ಕಣ್ಣುಗಳಲ್ಲಿ ನೀರು ಸುರಿಯುವವರಿಗೂ, ಉರಿಗಣ್ಣಿನವರಿಗೂ, ಚಿತ್ತವ್ಯಗ್ರವಾದವರಿಗೂ, ಅತ್ಯಂತ ಗುಣಕಾರಿಯಾಗಿರುವದು. ಈ ತೈಲದಲ್ಲಿರುವ ಇನ್ನೊಂದು ಅಪ್ರತಿಮವಾದ ಶಕ್ತಿಯೇನೆಂದರೆ—ಕೂದಲುಗಳನ್ನು ನಯವಾಗಿಯೂ, ಹೊಳೆಯುವಂತೆಯೂ, ಮಾಡುವದಲ್ಲದೇ ಬೆಳವಣಿಗೆಯನ್ನು ಹೆಚ್ಚಿಸುವದು. ಕೂದಲುಗಳ ಬೇರುಗಳನ್ನು ಘಟ್ಟಿಮಾಡಿ, ಅವು ಉದರಿಹೋಗದಂತೆ ಮಾಡುವದು.

ಪ್ರತಿಯೊಂದು ಬಾಟ್ಲಿಯೊಳಗೆ ೧೬ ತೊಲೆ ತೈಲವಿರುವದರಿಂದ ಒಬ್ಬನಿಗೆ ೨ ತಿಂಗಳು ಹಚ್ಚಿಕೊಳ್ಳಲಿಕ್ಕೆ ಸಾಕಾಗುವದು. ಬಡಬಗ್ಗರು ಸಹ ಕೊಂಡುಕೊಳ್ಳಲಿಕ್ಕನುಕೂಲವಾಗಿರಬೇಕೆಂಬದಕ್ಕಾಗಿ ಪ್ರತಿಯೊಂದು ಬಾಟ್ಲಿಗೆ ೧೦ ಆಣೆ ಕ್ರಯವಿಟ್ಟಿರುವೆವು. ೧೨ ಬಾಟ್ಲಿಗಳುಳ್ಳ ೧ ಪೆಟ್ಟಿಗೆಗೆ ೬॥ ರೂಪಾಯಿ. ಪ್ರತಿಯೊಬ್ಬ ಕುಟುಂಬಿಗನೂ, ಈ ತೈಲವನ್ನು ಉಪಯೋಗಿಸುವದು ಅವಶ್ಯವಾಗಿರುತ್ತದೆ. ಮಕ್ಕಳುಮರಿಗಳಿಗೆ ಸಹ ಈ ತೈಲವು ಸುಖಾವಹವಾಗಿರುತ್ತದೆ.

ಈ ತೈಲ ಮತ್ತು ಈ ಕೆಳಗೆ ಬರೆಯುವಂಥ ಔಷಧಗಳು, ಡ್ರೆಸ್ಸು, ಮುತ್ತು, ರತ್ನ, ಬಂಗಾರ, ಬೆಳ್ಳಿ ಮುಂತಾದ ಸಾಮಾನುಗಳನ್ನು ಪಡೆಯಬಿಚ್ಛಿಸುವವರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬೇಕು.

ಮ್ಯಾನೇಜರ್, ಕೆನರಾ ಅಂಡ್ ಮೈಸೂರು ಟ್ರೇಡಿಂಗ್ ಏಜನ್ಸಿ ಆಫೀಸ್, ಮಾರ್ಕೆಟ ಪೋಸ್ಟ್. ಮುಂಬಾಯಿ.

☞ ಈ ತೈಲವನ್ನು ನಮ್ಮ ವಿನಹ ಇನ್ಯಾರೂ ಮಾಡಲಾರರು. ನಮ್ಮ ಹೆಸರಿನ ಗುರ್ತನ್ನು ನೋಡಿ ತೆಗೆದುಕೊಳ್ಳಬೇಕು. ಬೇರೇತರದ ಎಣ್ಣೆಗಳನ್ನು ಈ ಹೆಸರನ್ನಿಟ್ಟು ಮಾರುತ್ತಿದ್ದರೆ ಜಾಗ್ರತೆ ಪಡಿರಿ!

ಔಷಧಗಳು.	ರೂ. ಅ.	ಪುಸ್ತಕಗಳು.	ರೂ. ಅ.
ನಯನಾಮೃತಭಸ್ಮ ಬುಟ್ಟಿ ೧ ಕ್ಕೆ	೧—೬	ಮಾಲವ್ಯಾಧಿಗೆ ಮದ್ದು	೨—೮
ನಯನಾಮೃತ ಕಡ್ಡಿಗೆ	೧—೬	ಕಾರ್ನೇಷನ ಲಾಂಗ್‌ಕೋಟು	೫—೦
ಕರ್ಣಸ್ರಾವನಾಶಕ ಅಪ್ರತಿಮತೈಲ	೧—೦	ಡಿಟ್ಟೊ. ಆರ್ಡಿನರಿ	೪—೮
ಮೊಡವೆತಕ್ಕ... ತೈಲ	೧—೦	ಡಿಟ್ಟೊ. ವಾಟರ್‌ಕೋಟು (ಇಂಗ್ಲಿಷರಾದರು)	೪—೬
ಪ್ರವಾಳಭಸ್ಮವು	೨—೧೨	ದಪ್ಪನಾದ ಕಷ್ಮೀರಕೋಟು	೨—೮
ವಿವಿಧವ್ರಣಪರಿಹಾರಕೆಯು	೧—೦	ಡಿಟ್ಟೊ ಆರ್ಡಿನರಿ	೨—೪
ಬಾಲಸಂಜೀವಿನಿಗುಟಿಕೆ	೪—೮	ಫ್ಲಾನಲ್ ಕಮೀಸ	೧—೧೨
ಅಜೀರ್ಣವಾತಪ್ನ	೦—೮	ಡಿಟ್ಟೊ ಬನಿಯನ್	೧—೪
ಸಂಗ್ರಹಣೀಕರದಂತಬಣವು	೦—೪	ಛತ್ರಿ (ಇಂಗ್ಲಿಷರಾದರು) ಪಟ್ಟಿ	೦—೧೨
ಕಜ್ಜಿಯಮುಲಾಮು	೦—೨		

ತನಾಕರಪಾದ ಪಂಚಾಂಗ (ಅಯ್ಯ ಕನ್ನಡದಲ್ಲಿ ಕ್ರಯ ರೂ. ೧—೩॥—೫—೩॥. ಉತ್ತರಾದಿದ "...." ಎಂಬ ಕಸಿದಿಸ ಕಿತಾಬಿಯವರದು (೧ ವರುಷದ ಜಾಹಿರಾತುಕ್ಕದ್ದು) ಕ್ರಯ ರೂ ೬.

ನೋಟಿಸ್.

ಪುಸ್ತಕಗಳು.	ಕ್ರಯ.
ಪ್ರಾಕ್ಕಾವ್ಯ ಮಾಲಿಕೆ	1—8—0
ಕನ್ನಡ ಇಂಗ್ಲೀಷು ನಿಘಂಟು 1 ನೇ ದೊಡ್ಡ ತರಹ	3—0—0
„ „ 2 ನೇ ತರಹ	2—8—0
ಬಾಲಕರು ಓದುವ ಎರಡನೆ ಜ್ಞಾನೋಪದೇಶದ ಪ್ರಶ್ನೋತ್ತರಗಳು	0—1—0
ಸಭೆಯ ನಿಗಮಗಳನ್ನು ಕುರಿತದ್ದು	0—0—6
ಕಥಾ ಸಂಗ್ರಹ 1 ನೇ ಭಾಗದಿಂದ 3 ವರೆಗೆ	1—0—0
ಕಥಾ ಸಂಗ್ರಹ 4 ರಿಂದ 6 ನೇ ಭಾಗ ಹೊಸ ಛಾಪೆ	1—0—0
„ „ ದೊಡ್ಡ ತರಹ	1—6—0
ಬೋಧಕಾನಕ್ತಿ ಚೋಧಿನಿ	0—4—0
ಸತ್ಯವೇದವನ್ನು ಕುರಿತು 2 ನೇ ಭಾಗ	0—1—0
ಪ್ರಸಂಗಿಯ ದರ್ಪಣ	0—0—6
ಇಂಗ್ಲೀಷುಭಾಷೆಯಲ್ಲಿಯೂ, ಕನ್ನಡ ಭಾಷೆಯಲ್ಲಿಯೂ, ಶಬ್ದಗಳ ವಿಭಾಗಗಳನ್ನು ವಿವರಿಸುವ ನಿಘಂಟು	0—2—0
ಕನ್ನಡ ವ್ಯಾಕರಣ (ಇಂಗ್ಲೀಷಿನಲ್ಲಿ)	2—0—0
ಹಿಂದುಸ್ತಾನಿ ವ್ಯಾಕರಣ	1—0—0
ಬಾಲದಾರ ಸೋಪಾನವು	0—1—0
ಹಸ ಕರುಗಳ ಅಂಟುರೋಗವಿಚಾರ	0—0—6
ಕ್ರಿಸ್ತರ ಬೋಧನೆಗಳ ಸಾರಾಂಶವು	0-12—0

ಮೇಲೆ ನಮೂದಿಸಿರುವ ಪುಸ್ತಕಗಳನ್ನು ಅಪೇಕ್ಷಿಸುವವರು ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್ಸಿಗೆ ಬರೆದು ತರಿಸಿಕೊಳ್ಳಬಹುದು ಅಂಚೆ ಹಾಸಲು ಬೇರೆ ಕೊಡಬೇಕು

ವೆಸ್ಲಿಯನ್ ಮಿಷನ್ ಪ್ರೆಸ್,

ಮೈಸೂರು.

ಪ್ರಸಿದ್ಧಪತ್ರಿಕೆ

ಶಂ॥ ಸಕಲಸುಜನಸಂಗದೇವಕುವ । ಸುಕರದಿವ್ಯಸುಧಾಮಾಂಜ ಐತಿಯಾರವಾವರಿಂ ॥ ಪ್ರಕಟಿಪದುಮಹಾಭಾರತಕಥೆ । ವಿಕಸಿತಪ್ರದೀಪದೆ ಕೇಳಲ್ಕನೇಕಾನಂದಂ ॥

ಕನ್ನಡ ಮಹಾಭಾರತ.

"ಶ್ರೀಕೃಷ್ಣರಾಜ ವಾಣೀವಿಲಾಸ" ಎಂಬ ಕನ್ನಡ ಮಹಾಭಾರತವು ನಮ್ಮ ಸ್ವಕೀಯ ಶ್ರೀಚಾಮುಂಡೇಶ್ವರಿ ಪ್ರೆಸ್ಸಿನಲ್ಲಿ ಪ್ರಕಟನವಾಗುವದು ಯಲ್ಲರಿಗೂ ವಿಶದವಾಗಿಯೆಯಷ್ಟೆ ಈಗ ಹದಿನೆಂಟು ಪರ್ವಗಳೂ ಪೂರ್ತಿಯಾಗಿ ಪೂರೈಸಿದೆ ಅಪೇಕ್ಷಿಸುವವರು ಕೆಳಗೆ ವಿವರಿಸುವ ಕ್ರಮದಮೇರೆಗೆ ಕ್ರಯ ಪಾವತಿಮಾಡಿ ಪಡೆಯಬಹುದು

ಆದಿಪರ್ವ ರೂ ೩. ಸಭಾಪರ್ವ ೧—೪—೦, ಆರಣ್ಯಪರ್ವ.. ವಿರಾಟಪರ್ವ ಷ್ಟ್ರೈಕರವರಿತ್ಯಂತ ೧೨ ಆಣೆ, ಡಿಟ್ಟೊ ಕಿತ್ತಾನಾರಿನ ಫುಲ್‌ಸ್ಕ್ಯಾಪ್ ೧ ರೂ, ಉದ್ಯೋಗಪರ್ವ . ಭೀಷ್ಮಪರ್ವ ೨, ದ್ರೋಣಪರ್ವ ೨—೮—೦, ಕರ್ಣಪರ್ವ .. ಶಲ್ಯಪರ್ವ ೧—೨—೦ ಸೌಪ್ತಿಕಪರ್ವ ೬ ಆಣೆ, ಸ್ತ್ರೀಪರ್ವ ೬ ಆಣೆ, ಶಾಂತಿಪರ್ವ ರಾಜಧರ್ಮ ೨—೬—೦, ಆಪದ್ಧರ್ಮ ೮ ಆ, ಮೋಕ್ಷಧರ್ಮ ೨—೬—೦, ಅನುಶಾಸನೀಕಪರ್ವ ೩—೧೨—೦ ಅಶ್ವಮೇಧಿಕಪರ್ವ ೧—೧೨—೦, ಆಶ್ರಮವಾಸಿಕಪರ್ವ—ಮೌಸಲಪರ್ವ—ಮಹಾಪ್ರಸ್ಥಾನಪರ್ವ—ಸ್ವರ್ಗಾರೋಹಣಪರ್ವ ೧೦ ಆಣೆ, ಭಗವದ್ಗೀತೆ ೮ ಆಣೆ, ಯಾಮುನಾಚಾರ್ಯರ ಚರಿತ್ರೆ ೪ ಆಣೆ, ಜಯಶ್ರೀ ಸಾರ ೬ ಪೈ, ಲೋಕವಶೀಕರಣದ ಟೆಕಸ್ಟಿನ ನೋಟ್ಸು ೮ ಆಣೆ.

ಆರಣ್ಯಪರ್ವ, ಉದ್ಯೋಗಪರ್ವ, ಕರ್ಣಪರ್ವ ಈ ಮೂರು ಪರ್ವಗಳು ಗವರ್ನಮೆಂಟ ಬುಕಡಿಪೋದಿನಲ್ಲಿ ದೊರೆಯಬಹುದು ಮೇಲೆ ಹೇಳಲ್ಪಟ್ಟಿರುವ ಪುಸ್ತಕಗಳು ನಮ್ಮಲ್ಲಿ ಸ್ವಲ್ಪವೇ ಇರುವದರಿಂದ ಜಾಗ್ರತೆಯಾಗಿ ತರಿಸಿಕೊಳ್ಳಬಹುದು.

ಶ್ರೀಮನ್ಮಹಾರಾಜರವರಿಗೆ ಫಲಪುಷ್ಪ ಸರಬರಾಯಿ ಮಾಡುವದಕ್ಕೆ ಮುಖ್ಯವಾಗಿ ನೇಮಿಸಲ್ಪಟ್ಟ,

ಎಂ. ರಾಮಪ್ಪ, ಅಂಡ್‌ಸನ್,

ಪ್ರೊಪ್ರೈಟರ್ಸ್, ಶ್ರೀಚಾಮುಂಡೇಶ್ವರಿ ಪ್ರೆಸ್,

ಲಾಲ್—ಬಾಗ್ ರೋಡ್, ಬೆಂಗಳೂರು

ವೃತ್ತಾಂತ ಪತ್ರಿಕೆ.

ಚಂದಾ ನಿರ್ಣಯ.

	ರೂ ಅ. ಪೈ.
ಸ್ಥಳದವರಿಗೆ ವರ್ಷ ೧ಕ್ಕೆ	೧—೦—೦
ಪರಸ್ಥಳದವರಿಗೆ ವರ್ಷ ೧ಕ್ಕೆ	೧—೪—೦
ಬಿಡಿ ಪತ್ರಿಕೆ ೧ಕ್ಕೆ	೦—೦—೪

ಈ ಪತ್ರಿಕೆಯು ಮೈಸೂರು ರಾಜಧಾನಿಯಲ್ಲಿ ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ, ಪ್ರಕಟಿಸಲ್ಪಡುವದು ಬಡವರು ಹೊರಲಾಗೊಂಡು ಸಮಸ್ತರಿಗೂ ಸುಲಭಸಾಧ್ಯವಾಗುವಂತೆ ಈ ಪತ್ರಿಕೆಗೆ ಇಷ್ಟು ಅಲ್ಪ ಮೌಲ್ಯವನ್ನು ನಿರ್ಣಯಿಸಿರುತ್ತೇವೆ ಈ ಪತ್ರಿಕೆಯನ್ನು ಅಪೇಕ್ಷಿಸುವವರು ಚಂದಾಹಣವನ್ನು ಮುಂಗಡವಾಗಿ ಕೊಡಬೇಕು.

ಎಡಿಟರ್,

ವೃತ್ತಾಂತ ಪತ್ರಿಕೆ

ಟೋಪಿಗಳು!

ಟೋಪಿಗಳು!! WOOL CAPS ಟೋಪಿಗಳು!!

ಹಾಸನದ ಅರ್ಫನೇಜಿನಲ್ಲಿ ತಯಾರಾಗುವಂಥ ಅಚ್ಚ ಕಂಬಳಿನೂಲಿನ ಟೋಪಿಗಳೇ (Wool Caps) ನಮ್ಮ ಆಫೀಸಿನಲ್ಲಿ ಮಾರಿಕೆಗೆ ಸಿದ್ಧವಾಗಿರುತ್ತವೆ. ಕ್ರಯವು—೧ ರೂ. ೨ ಆಣೆ ಇಂದ ೧ ರೂ. ೬ ಆಣೆಗಳ ವರಿಗೂ ಬೇರೆ ಬೇರೆ ರಕಂಗಳುಂಟು. ಸ್ಥಳದವರು ಖುದ್ದು ನೋಡಿ ಪಡೆಯಬಹುದು. ಪರಸ್ಥಳದವರು ಮುಂಗಡವಾಗಿಯೇ ಹಣ ಕಳುಹಿಸಿದಲ್ಲಿ ವೀಪೀಯಲ್ಲಿ ಛಾಂಗೀ ಮೂಲಕ ಕಳುಹಿಸುತ್ತೇವೆ. ಛಾಂಗೀ ಛಾರ್ಜ ಬೇರೇ ಕೊಡಬೇಕು. ಮೇಲುವಿಳಾಸದಲ್ಲಿ ಟೋಪಿಗೆ ಸಂಬಂಧವಾದದ್ದು ಎಂದು ಬರೆಯಬೇಕು.

ಮ್ಯಾನೇಜರ್,

ವೆಸ್ಲಿಯನ್ ಮಿಷನ್ ಪ್ರೆಸ್,

ಮೈಸೂರು.

ಇಸ್ತಿಹಾರ್‌ನಾಮಾ.

ಹೊನ್ನಾಳಿ ಸಬ್‌ಡಿವಿಜನ್ ಮುನಸಿಫ್ ಕೋರ್ಟಿನಲ್ಲಿ.
೧೮೯೩ನೇ ಇಸವಿ ಸಿವಿಲ್ ಸೂಟ್ ನಂಬರ್ ೧೩೮.

ವಾದಿ.	ಪ್ರತಿವಾದಿಗಳು.
ಸರವರ ಸಾಬು ಉರಫ್ ಸರವುಸ್ತ ಸಾಬು ಮಹಮುದನ್, ೪೦ ವರುಷವಯಸ್ಸು, ಕಸುಬು ವ್ಯಾಪಾರ, ಹರಿಹರದ ವಾಸಸ್ತ.	೧ ಗಂಡಗಸೂರ, ರಜಪುತ್ತ ಜಾತಿ, ವ್ಯಾಪಾರ ಕಸಬು, ಹರಿಹರದ ವಾಸಸ್ತ. ೨ ಮುಕ್ತಾಸಿದಾರ್ ಷರಫದೀನ್ ಸಾಹೇಬ, ಹರಿಹರದ ವಾಸಿ. ೩ ಲಾಲಾಸಾಹೇಬ, ಹರಿಹರದ ವಾಸಿ. ೪ ಅಬ್ದುಲ್ಲಾ ಸಾಹೆಬ, ಡಿಟೋ ವಾಸಿ. ೫ ಬುಡನ ಸಾಹೆಬ್, ಡಿಟೋ. ೬ ದಾವಲ್ ಸಾಹೇಬ್, ಡಿಟೋ.

ಇದರಿಂದ ಸಮಸ್ತ ಜನರಿಗೆ ತಿಳಿಯಪಡಿಸುವದೇನೆಂತ್ರೆ—ಮೇಲೆ ಕಂಡ ವ್ಯಾಜ್ಯದಲ್ಲಿ ವಾದಿಯು ತನಗೆ ಎರಡನೇ ಪ್ರತಿವಾದಿಯಿಂದಾ ೪–೬–೮೩ ನೇ ಮಸ್ತಿಂನಲ್ಲಿ ೩೫ ರೂಪಾಯಿಗಳಿಗೆ ತನಗೆ ಭೋಗ್ಯ ಮಾಡಿ ತಂನ ಸ್ವಾಧೀನವಿಸ್ತ ಈ ಕೆಳಗೆ ವಿವರಿಸುವ ಮನೆಯಂನ ವಾದಿಸ ಪ್ರತಿವಾದಿ ಅಕ್ರಮ ಸ್ವಾಧೀನ ಹೊಂದಿ ಇರುವದರಿಂದ ಸದರೀ ಮನೆ ಬರಬೇಕೆಂದು ಮತ್ತೆರೆ ತಂದ ದಾವೆಯಲ್ಲಿ ೧ನೇ ಪ್ರತಿವಾದಿಯು ಸದರೀ ಸ್ವತ್ತನ್ನ ತಾನು ಅಕ್ರಮ ಸ್ವಾಧೀನ ಹೊಂದಲಿಲ್ಲವೆಂತಲೂ, ಈ ಸ್ವತ್ತು ಎರಡನೇ ಪ್ರತಿವಾದಿ ಸ್ವಾಂ ತವಲ್ಲವೆಂತಲೂ, ಹರಿಹರದ ಬಾಬಾಯಿಮನೆಯಂಮುಕಾನಿಗೆ ಸೇರಿದ್ದಾಗಿಯೂ, ಸದರೀ ಮುಕಾನ ಮಸ್ಸೇನೇಜ ರರಾದ ೩–೪–೫–೬ ನೇ ಪ್ರತಿವಾದೀರಿಂದ ತನಗೆ ಬಾಡಿಗ್ಯೆ ಕೊಡಲ್ಪಟ್ಟಿತೆಂತಲೂ, ಈ ಸ್ಥಳ ಹರಿಹರದ ಗ್ರಾಮಸ್ತರಿಗೆ ಸಂಬಂಧಿಸಿದ್ದೆಂದೂ ಕೊಟ್ಟ ಉದಪರಗೇ ಮೇಲೆ ಮೇಲೆಕಂಡ ೩ರ ಲಾಗಾಯಿತು ೬ರ ವರಿಗಿನ ಪ್ರತಿವಾದೀರಂನ ಕಕ್ಷಿಗಾರರಾಗಿ ಸೇರಿಸಿ ಇರುವದಲ್ಲದೆ ಇಂನೂ ಆ ಗ್ರಾಮದಲ್ಲಿ ಇರತಕ್ಕ ಈ ದಾವೆಗೆ ಕಕ್ಷಿಗಾರರಾಗಬೇಕೆಂದು ಇಷ್ಟಪಟ್ಟ ಸಮಸ್ತ ಜನರೂ ೧೮೯೩ನೇ ಇಸವಿ ಆಗಸ್ಟ ತಿಂಗಳು ೨೮ ನೇ ತಾರೀಖು ದಿವ ೧೧ ಗಂಟೆಗೆ ಹೊಂನಾಳಿ ಮೊಕ್ಕಾಂ ಈ ಕೋರ್ಟಿನ ರೂಬರೂಬ ಹಾಜರಾಗಿ ವ್ಯವಹರಿಸ ಬಹುದೆಂತ ಇದರಿಂದ ಪ್ರಕಟಿಸಲ್ಪಟ್ಟಿದೆ

ಭೋಗ್ಯದ ಸ್ವತ್ತಿನ ವಿವರ.

ಹರಿಹರ ಕಸಬಾದಲ್ಲಿರುವ ಉತ್ತರಭಾಗದ ಖಾನೇಷುಮಾರಿ ನಂಬರು ನೆ ಹಂಚಿನ ಮನೆಗೆ ಚಕ್ಕಬಂದಿ—ಪೂರ್ವಕ್ಕೆ ಮೊಹದೀನ್ ಸಾಬನಮನೆ, ಪಶ್ಚಿಮಕ್ಕೆ—ರಸ್ತೆ, ಉತ್ತರಕ್ಕೆ—ಶಿರಸ್ತೆ ನರದೇವಸ್ಥಾನ, ದಕ್ಷಿಣಕ್ಕೆ—ಬಾಜಾರದರಸ್ತೆ, ಈ ಮಧ್ಯೆ ಇರತಕ್ಕ ಮನೆ.

P S SHAMRAO(?) Pil. ..,
Munsif.

೨೮–೬–೯೩.
ಹೊಂನಾಳಿ

ವೃತ್ತಾಂತ ಪತ್ರಿಕೆ.

೧೮೯೩ನೇ ಇಸವಿ ಆಗಸ್ಟ ತಾ|| ೧೭ ನೇ ಗುರುವಾರ

ಕ್ಯಾಪ್ಟನ್ ಅಂಡ್ ಕಂಪೆನಿ.

ಮೈಸೂರಿನ ಕೆಮಿಸ್ಟ್ಸ್.

ಇವರು ಶಿವರಾಮ ಪೇಟೆಯಲ್ಲಿ ಒಂದು ಬ್ರಾಂಚ ಔಷಧ ಶಾಲೆಯನ್ನು ಸ್ಥಾಪಿಸಿರುತ್ತಾರೆ. ಇಲ್ಲಿ ನಾನಾವಿಧವಾದ ಔಷಧಗಳು ಸುಲಭ ಬೆಲೆಗೆ ದೊರೆಯುತ್ತವೆ. ಮತ್ತು ಉತ್ತಮತರವಾದ ಸಾಮುಗ್ರಿಯಗಳನ್ನು ಉಪಯೋಗಿಸಿ ಔಷಧಗಳನ್ನು ತಯಾರು ಮಾಡಿ ಕೊಡುತ್ತಾರೆ.

ಈ ಜನೋಪಯುಕ್ತವಾದ ಔಷಧ ಶಾಲೆಯಲ್ಲಿ ರಾತ್ರಿ ಹಗಲು ಯಾವವೇಳೆ ಬಂದಾಗ್ಯೂ ಔಷಧಗಳು ದೊರೆಯುತ್ತವೆ.

ಬೊಂಬಾಯಿನಲ್ಲಿ ಮಹಮದೀಯರಿಗೂ ಹಿಂದುಗಳಿಗೂ ನಡೆದ ಕಲಹ.

ಕಾತ್ಯವಾಡಕ್ಕೆ ಸೇರಿದ ಪ್ರಭಾಸ ಪಟ್ಟಣವೆಂಬಲ್ಲಿ ಕಳೆದ ಮೊಹರಂ ಹಬ್ಬದ ಕೊನೇ ದಿವಸ ಮಹಮದೀಯರು ಹಿಂದುಗಳ ಪ್ರಸಿದ್ಧವಾದ ದೇವಾಲಯಗಳನ್ನು ನಾಶಮಾಡಿ ಕೆಲವರನ್ನು ಕೊಂದು, ಅನೇಕರಿಗೆ ಘಾಯಗೊಳಿಸಿದ ವರ್ತಮಾನವನ್ನು ಕಳೆದವಾರದ ಪತ್ರಿಕೆಯ ಮೂಲಕ ನಮ್ಮ ವಾಚಕರಿಗೆ ತಿಳಿಸಿರುವದು ಸರಿಯಷ್ಟೆ. ಅಲ್ಲಿನಬಡ ಸಮಾಚಾರಗಳು ಬೊಂಬಾಯಿಪಟ್ಟಣಕ್ಕೆ ಬಹು ಜಾಗ್ರತೆಯಾಗಿ ತಲಪಿದ್ದರಿಂದ ಹಿಂದೂ ಮಹಮದೀಯರುಗಳಲ್ಲಿ ಅಂತರ್ಭ್ಯವಾದ ವೈಷಮ್ಯಗಳು ಅಂಕುರಿಸಿ ಅವನ್ನು ಬಹಿರಂಗವಾಗಿ ತೋರ್ಪಡಿಸಲು ಉಭಯತ್ರರೂ ಸಮಯವನ್ನು ನಿರೀಕ್ಷಿಸುತ್ತಿದ್ದರು. ಮತ್ತು ಬೊಂಬಾಯಿಪಟ್ಟಣದ ಹಿಂದುಗಳು ಆಗ್ಗಾಗ್ಯೆಸಭೆಗಳನ್ನು ಸೇರಿಸಿ, ಮಹಮದೀಯರು ಗೋಹತ್ಯವನ್ನು ಮಾಡುತ್ತಾರೆಂತಲೂ, ಅದನ್ನು ತಪ್ಪಿಸುವದಕ್ಕೆ ... ಹಣ ಕೂಡಿಹಾಕಿ, ಎಲ್ಲಾ ಜಾನ್ವಾರುಗಳನ್ನೂ ಕೊಂಡುಕೊಳ್ಳಬೇಕೆಂತಲೂ, ಹೀಗೆ ಮಾಡಿದರೆ ತಮಗೆ ... ಸಂಭವಿಸುವದಿಲ್ಲವೆಂತಲೂ, ಮಹಮದೀಯರು ಯಾವ ಪ್ರಾಣಿಯನ್ನಾದರೂ ಕೊಲ್ಲಿದ ಹಾಗೆ ತಪ್ಪಿಲ್ಲದೆ ಇಟ್ಟದವನ್ನು ಮಾಡಿಕೊಳ್ಳಬೇಕೆಂತಲೂ ನಾನಾ ವಿಧವಾಗಿ ಮಹಮದೀಯರನ್ನು ದೂಷಿಸಿ, ಎಲ್ಲೆಲ್ಲಿಯೂ ಸಾರುವದಕ್ಕೆ ಪ್ರಕ್ರಮಿಸಿದರು. ಇದರಿಂದ ತಮ್ಮ ಆಹಾರವನ್ನು ತಪ್ಪಿಸುವದಕ್ಕೆ ಹಿಂದುಗಳು ಪ್ರಯತ್ನ ಮಾಡುತ್ತಿದ್ದಾರಲ್ಲಾ ಎಂಬದಾಗಿ ಯೋಚಿಸಿ ಮಹಮದೀಯರು ಕೋಪೋದ್ರೇಕರಾಗಿ, ತಮ್ಮ ಮನಃಕಷಾಯಗಳನ್ನು ವ್ಯಕ್ತಪಡಿಸಲು ಸಮಯವನ್ನು ನಿರೀಕ್ಷಿಸುತ್ತಿದ್ದರು. ಈ ಮನಸ್ತಾಪಗಳನ್ನು ಅಲ್ಲಿನಪೋಲೀಸ್ ಇಲಾಖೆಯವರು ಅಂತರಂಗವಾಗಿ ತಿಳಿದು ಅದಕ್ಕೆ ತಕ್ಕ ಸನ್ನಾಹಗಳನ್ನೆಲ್ಲಾ ಬದಗಿಸಿಕೊಳ್ಳುತ್ತಿದ್ದರು. ಆದರೆ ಬೊಂಬಾಯಿಪಟ್ಟಣದ ಹಿಂದೂ ಮಹಮದೀಯರ ಸಂಖ್ಯೆಯನ್ನು ಮತ್ತು ಅಲ್ಲಿನ ಪೋಲೀಸ್ ಶಿಬ್ಬಂದಿಯ ಸಂಖ್ಯೆಯನ್ನೂ ನೋಡಿದರೆ ಅರ್ಥಾರ್ಥ ಸಂಬಂಧವಿಲ್ಲದಂತಿತ್ತು.

ಆದರೆ ಕಳೆದ ಶುಕ್ರವಾರ ಮಧ್ಯಾಹ್ನ ಪೋಲೀಸಿನವರು ಅಲ್ಲಿನ ಜಾಮ್ಮಾಮಸೀತಿಯ ಹೊರಭಾಗದಲ್ಲಿ ಆಯುಧಪಾಣಿಗಳಾಗಿ, ಮಹಮದಿಯರು ನಿವಾಜನ್ನು ತೀರಿಸಿಕೊಂಡು ಹೊರಗೆ ಬರುವಾಗ್ಯೆ ಆವ ದೇನಾದರೂ ದೊಂಬಿಮಾಡಿ ಸಮೀಪದಲ್ಲಿದ್ದ ಹಿಂದೂದೇವಾಲಯಕ್ಕೆ ಎಲ್ಲಿ ನುಗ್ಗುವರೋ ಎಂಬದಾಗಿ ಆಲೋಚಿಸಿ, ಅವರನ್ನು ಆ ದೇವಸ್ಥಾನದ ಕಡೆಗೆ ಬಿಡಬಾರದೆಂತಲೂ, ಅವರನ್ನು ಹಿಂದುಗಳ ಸಂಚಾರವು ವಿಶೇಷವಾಗಿ ಇಲ್ಲದ ಮತ್ತೊಂದು ಮಾರ್ಗವಾಗಿ ಕಳುಹಿಸಬೇಕೆಂತಲೂ ಆಲೋಚಿಸಿಕೊಂಡು ಮಹಮದಿಯರು ಹೊರಗೆ ಬರುವದನ್ನೇ ಕಾದು ಎದುರುನೋಡುತ್ತಿದ್ದರು. ಪೋಲೀಸಿನವರ ನಿರೀಕ್ಷಗೆ ಸರಿಯಾಗಿ ಮಹಮದಿಯರು ಮಸೀತಿಯಿಂದ ಹೊರಗೆ ಬರುವಾಗ್ಯೆ ದೊಣ್ಣೆಗಳನ್ನು ಹಿಡಿದಿದ್ದರು. ಬೀದಿಯು ನಿರ್ಜನವಾಗಿಯೂ, ಪೋಲೀಸಿನವರಿಂದ ಬಸ್ತುವಾರಿ ಮಾಡಲ್ಪಡುತ್ತಲೂ ಇದ್ದುದನ್ನು ಮಹಮದಿಯರು ನೋಡಿ ಆಶ್ಚರ್ಯಪಟ್ಟರು. ಆಗ ಪೋಲೀಸಿನವರು ಅವರಿಗೆ ಸಮಾಧಾನ ಹೇಳಿ, ಅವರನ್ನು ಮತ್ತೊಂದು ಮಾರ್ಗವಾಗಿ ಕಳುಹಿಸುವದಕ್ಕೆ ಪ್ರಯತ್ನ ... ಮಾಡಿದರು. ಕೂಡಲೆ ಮಹಮದಿಯರಲ್ಲಿ ಕೆಲವರು "ದೀನ್ ದೀನ್" ... ಎಂದು ಆರ್ಭಟಿಸಿ ಪೋಲೀಸಿನವರ ಮೇಲೆ ಬಿದ್ದು, ಅವರನ್ನು ದೊಣ್ಣೆ... ಹೊಡೆದರು. ಪೋಲೀಸಿನವರು ಕೊಂಚವಾಗಿದ್ದದರಿಂದ ಹಿಮ್ಮೆಟ್ಟಬೇಕಾಯಿತು. ಅಲ್ಲಿಂದ ಮಹಮದಿಯರು ಹಿಂದೂದೇವಾಲಯಕ್ಕೆ ನುಗ್ಗಿದರು. ಅಲ್ಲೂ ಪೋಲೀಸಿನವರು ಅವರನ್ನು ಒಳಕ್ಕೆ ಬಿಡದೆ ಬಾಗಿಲು ಹಾಕಿದರು. ಸಮೀಪದಲ್ಲಿದ್ದ ಹಿಂದುಗಳು ಈ ಸಮಾಚಾರಗಳನ್ನು ನೋಡಿ, ತಮ್ಮ ದೇವಸ್ಥಾನಕ್ಕೆ ಅಪಾಯ ಬರುವದಲ್ಲಾ ಎಂದು ತಾವೂ ದೊಣ್ಣೆಗಳನ್ನು ಹಿಡಿದು ಮಹಮದಿಯರ ಮೇಲೆ ಬಿದ್ದರು. ಈ ಪ್ರಕಾರ ಮುಷ್ಟಾಮುಷ್ಟಿ ಕಲಹವು ಜಗಳವಾಗುತ್ತಿದೆ ಎಂಬ ವರ್ತಮಾನವು ಪಟ್ಟಣದ ಇತರ ಭಾಗಗಳಿಗೂ ಹಬ್ಬಿ, ಅಲ್ಲಲ್ಲಿ ಹಿಂದೂ ಮಹಮದೀಯರಿಗೆ ಜಗಳವಾಯಿತು. ಹಿಂದುಗಳ ಮನೆಗಳನ್ನೂ ಅಂಗಡಿಗಳನ್ನೂ ಮಹಮದಿಯರು ನುಗ್ಗಿ ಅವರನ್ನು ಹೊಡೆದು, ಸಾಮಾನುಗಳನ್ನು ಬೀದಿಗೆ ಎಸೆಬಿಟ್ಟರು. ಇಷ್ಟಾಗುವದರಲ್ಲಿ ಮಿಲ್ಟೆರೀ ಸಿಪಾಯಿಗಳನ್ನು ಬೀದಿಬೀದಿಗಳಲ್ಲೂ, ಸಂದುಗೊಂದುಗಳಲ್ಲೂ ತಂದು ನಿಲ್ಲಿಸಿದರು. ಆಗ ಜಗಳವು ಸ್ವಲ್ಪಮಟ್ಟಿಗೆ ಅಡಗಿದ ಹಾಗೆ ಕಂಡಿತು. ಪುನಹಾ ರಾತ್ರಿಯೂ ಮಾರನೆ ದಿನವೂ ಜಗಳ ವಿಪರೀತವಾಗಿ ನಡೆಯಿತು. ಅಂಗಡಿಗಳೂ ಮನೆಗಳೂ ಪಾಳಾದವು, ದೇವಸ್ಥಾನಗಳೂ ಮಸೀತಿಗಳೂ ಕೆಡಿಸಲ್ಪಟ್ಟವು, ಟ್ರಾಂವೇಗಾಡಿಗಳ ಮೇಲೆ ಬಿದ್ದು ಅವುಗಳನ್ನು ಒಡೆದು ನಾನಾತರವಾಗಿ ನಷ್ಟಪಡಿಸಿದರು. ಅನೇಕರು ಸತ್ತರು ಮತ್ತು ಬಹುಮಂದಿಗೆ ಘಾಯಗಳುಂಟಾದವು.

ಈ ವರ್ತಮಾನಗಳೆಲ್ಲಾ ಗೌರ್ನರವರು ತಿಳಿದು ಬಹು ವಿಷಾದಿಸಿ, ಉಭಯಾಂಗಡದ ಗುರುಹಿರಿಯರನ್ನು ಕರಿಸಿ ಆವರಮೂಲಕ ಆಯಾಜನಗಳನ್ನು ಸಮಾಧಾನಪಡಿಸಬೇಕೆಂದು ಅಪ್ಪಣೆಕೊಡಿಸಿದರು. ಪ್ರಸಹೇಪಟ್ಟಣದಿಂದಲೂ ಸೂರತಸವಾನ ಇವಂಷಹರುಗಳಿಂದಲೂ ಕುದುರೆಯ ಮತ್ತು ಸೋಜರ್ ಪಟಾಲಂಗಳನ್ನು ರೈಲ್ವೇ ಅಧಿಕಾರಿಗಳು ಅವಿಚ್ಛಿತ್ತಿಯಾಗಿ ಹೊತ್ತುಕೊಂಡುಹೋಗಿ ಬೊಂಬಾಯಿಗೆ ಬಿಡುತ್ತಿದ್ದಾರೆ. ಆ ಪಟ್ಟಣದಲ್ಲಿ ಸೈನ್ಯವು ಬೀದಿಬೀದಿಗೂ ಒಂದೊಂದು ಸ್ಥಳದಲ್ಲಿ ನಿಂತು ರಾತ್ರೀ ಹಗಲೂ ಪಹರೇ ಕಾಯುತ್ತಿದ್ದಾರೆ. ಪೂನೆ, ಸೋಲಾಪುರ, ಶೋಲಾಪುರ, ಥಾನ, ನಾಸಿಕ ಮತ್ತು ಕೊಲಾಬಾ ಮುಂತಾದ ಸ್ಥಳಗಳಿಂದ ಲೆಕ್ಕವಿಲ್ಲದ ಪೋಲೀಸ್‌ಸ್ಟಾಫ್ ಹೋಗುತ್ತಲಿದೆ. ಇಂಥಾ ಸಮಯದಲ್ಲಿ ಪ್ರಯಾಣಿಕರಿಗೆ ರೈಲ್ವೇ ಅಧಿಕಾರಿಗಳು ಪೂರ್ಣಸಹಾಯ ಮಾಡುತ್ತಿದ್ದಾರೆಂದು ಕೇಳಿ ಹರ್ಷಿಸುತ್ತೇವೆ. ಇದಕ್ಕೋಸ್ಕರ ದಿನವಹಿ ಬೊಂಬಾಯಿಗೆ ಹೋಗುವ ಗಾಡಿಗಳನ್ನೂ ಮೋಕೂಫ್ ಮಾಡಿರುತ್ತಾರೆ. ವ್ಯಾಪಾರ ಸಾಮಾನುಗಳ ಸುದ್ದಿಯೇ ಇಲ್ಲ. ಜಹಾಜುಗಳಲ್ಲಿ ಸಾಮಾನುಗಳು ಬಂದು ನಿಂತಿವೆ. ಅವನ್ನು ಸಮುದ್ರದಿಂದ ದಡಕ್ಕೆ ತರುವದಕ್ಕಾ ಕೂಲಿಯವರೇ ಗತಿಯಿಲ್ಲ. ವಾಚಕರೇ ಇಂಥಾ ದಂಗೆಯು ಈಚೆಗೆ ೫೦–೬೦ ವರ್ಷಗಳಿಂದ ಬ್ರಿಟಿಷ್ ದೇಶವನ್ನೇ ಬಿಟ್ಟು ಹೋಗಿತ್ತು. ಮತಾಂತರಗಳು ಇರುವ ವರಿವಿಗೂ ಇಂಥಾ ಕೃತ್ಯಗಳು ಎಲ್ಲಿಯೂ ತಪ್ಪುವದಿಲ್ಲ. ಈ ವ್ಯಸನಕರವಾದ ವರ್ತಮಾನಗಳನ್ನು ವಿಲಾಯತಿಯಲ್ಲಿ ಮಹಾರಾಜ್ಞಿಯವರು ಕೇಳಿ—ತಾವು ಈ ವಿಷಯದಲ್ಲಿ ತುಂಬಾ ವಿಷಾದಿಸುತ್ತೇನೆಂಬದಾಗಿ ತಂತಿಯಮೂಲಕ ತಿಳಿಯಪಡಿಸಿರುತ್ತಾರೆ. ಪರ್ಯವಸಾನವನ್ನು ನೋಡಬೇಕಾಗಿದೆ.

ಇಟ್ಟಿಗೇಗೂಡಿನ ಬಲ್ಗೈ ಯವರು.

ಕಲವು ಮಾಸಗಳಕೆಳಗೆ ಈ ಷಹರಿಗೆ ಸೇರಿರುವ ಇಟ್ಟಿಗೇ ಗೂಡಿನಲ್ಲಿರತಕ್ಕ ಬಲ್ಗೈಜಾತಿಯ ಜನಗಳು ತಮ್ಮ ಹುಲ್ಲಿನ ಮನೆಗಳನ್ನು ತೆಗೆದುಹಾಕಿ ಹೆಂಚಿನ ಮನೆಗಳನ್ನು ಕಟ್ಟಿಕೊಳ್ಳುತ್ತೇವೆಂದು ಟೌನ್‌ಮ್ಯುನಿಸಿಪಲ್ ಬೋರ್ಡಿಗೆ ಒಂದು ಅರ್ಜಿಯನ್ನು ಬರೆದುಕೊಂಡಿದ್ದವನ್ನು ನಮ್ಮ ವಾಚಕರಿಗೆ ತಿಳಿದೇ ಇದೆಯಷ್ಟೆ. ಈ ಬಡಜನರು ಅನಾದಿಯಿಂದ ಆ ಸ್ಥಳದಲ್ಲಿ ವಾಸಮಾಡಿಕೊಂಡು ಬರುತ್ತಿದ್ದಾಗ್ಯೂ, ಈಚೆಗೆ ಆ ಸ್ಥಳಕ್ಕೆ ಬಂದಿರುವ ಉತ್ತಮರೆನ್ನಿಸಿಕೊಂಡಿರುವ ಕೆಲವುಮಂದಿ, ತಾವು ಬಲ್ಗೈ ಜಾತಿಯವರ ಸಮೀಪದಲ್ಲಿ ವಾಸಮಾಡುವದು ತಮಗೆ ಅನಾನುಕೂಲವೆಂದು ಆಲೋಚಿಸಿ, ಆ ಬಲ್ಗೈಯವರ ಮನೆಗಳನ್ನು ಮೂಲೋತ್ಪಾಟನ ಮಾಡುವದಕ್ಕೆ ನಾನಾವಿಧವಾದ ಪ್ರಯತ್ನಗಳನ್ನು ಮಾಡುತ್ತಾ ಇದ್ದಾರೆ. ಅದರೆ ಈ ಉತ್ತಮರು ಜಾತಿಯೆಂಬ ವಿಷಯದಲ್ಲಿ ಅಸಹ್ಯಪಡುವದಕ್ಕೆ ತಮಗೆ ತಕ್ಕ ಕಾರಣಗಳೇನಾದರೂ ಇದ್ದಲ್ಲಿ ಅವರು ಮೊದಲು ಅಂಥಾ ಪ್ರಾಂತ್ಯಕ್ಕೆ ಯಾಕೆ ಹೋದರು? ಇದೂ ಹಾಗಿರಲಿ ಯೆಂದರೆ, ಬಲ್ಗೈ ಜನರು ತಮ್ಮ ಊಟ, ಬಟ್ಟೆ, ಮನೆ ಮುಂತಾದ ವಿಷಯಗಳಲ್ಲಿ ಬಹು ಅನಾಚಾರಿಯಾಗಿರುತ್ತಾರೆಂದು ಉತ್ತಮರಾದವರು ಹೇಳುವದು ನಿಜವಾಗಿದ್ದಲ್ಲಿ ಸರ್ಕಾರದವರು ಅದನ್ನು ಪರೀಕ್ಷಿಸಿ ಅಂಥವರನ್ನು ದೂರಮಾಡುವದು ನ್ಯಾಯವೇ ಸರಿ. ಆದರೆ ಈ ಇಟ್ಟಿಗೇ ಗೂಡಿನ ಬಲ್ಗೈ ಜಾತಿಯ ಜನಗಳು ತಕ್ಕಮಟ್ಟಿಗೂ ನಾಗರೀಕವಂತರಾಗಿರುವದಲ್ಲದೆ, ತಮ್ಮ ಅಶುಚಿಯಾದ ಮನೆ ಮಾರುಗಳನ್ನು ತೆಗೆದುಹಾಕಿ, ನಾಲ್ಕಾರು ಮಂದಿ ಐಶ್ವರ್ಯವಂತರಿರುವಲ್ಲಿ ಬಹು ಉತ್ತಮವಾಗಿ ಕಟ್ಟಿದ ಮನೆಗಳನ್ನು ಕಟ್ಟಿಸುವದಕ್ಕೂ, ಮ್ಯುನಿಸಿಪಲ್ ರೂಲ್ಸುಗಳ ಪ್ರಕಾರವಾಗಿ, ತಮ್ಮ ಮನೆಗಳನ್ನೂ ಬೀದಿಗಳನ್ನೂ ಚೊಕ್ಕಟವಾಗಿರುವಂತೆ ಇಟ್ಟುಕೊಳ್ಳುವದಕ್ಕೂ ಒಪ್ಪಿಕೊಂಡಿದ್ದಾರಲ್ಲಾ. ಇಂಥಾ ಸಂದರ್ಭದಲ್ಲಿ ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟ್ರವರು ಈ ಬಡಜನರ ಕೋರಿಕೆಯಂತೆ, ಹೊಸಮನೆಗಳನ್ನು ಕಟ್ಟಿಕೊಳ್ಳಬಹುದೆಂದು ಅವರಿಗೆ ಯಾಕೆ ಅಪ್ಪಣೆಕೊಡಬಾರದು! ಅವರು ಈ ಜನರ ಅರ್ಜಿಗೆ ಜವಾಬು ಬರೆಸಿ ಅದರಲ್ಲಿ—"ಈ ಮನೆಗಳೆಲ್ಲಾ ಇಂಪ್ರೂವ್‌ಮೆಂಟುಮಾಡುವದಕೋಸ್ಕರ ತೆಗೆದುಹಾಕಬೇಕೆಂತಾ ಮೊದಲೇ ಉದ್ದೇಶಿಸಿರುವದರಿಂದ ನಿಮ್ಮಗಳ ಕೋರಿಕೆಯಂತೆ ಮಾಡಲು ಆಗಲಾರದು" ಎಂಬದಾಗಿ ಅಪ್ಪಣೆ ಕೊಡಿಸಿರುತ್ತಾರೆ. ನಾವು ಈ ಅಪ್ಪಣೆಯನ್ನು ನೋಡಿ ಆಶ್ಚರ್ಯಯುಕ್ತರಾಗಿದ್ದೇವೆ. ಇಂಪ್ರೂವ್‌ಮೆಂಟಿಗಾಗಿ ತೆಗೆದುಹಾಕಬೇಕೆಂದು ಮೊದಲೇ ಉದ್ದೇಶಿಸಿದ್ದೇವೆಂದು ಬರೆದಿರುವದು ಸರಿಯಾಗಿರುವಂತೆ ನಮಗೆ ತೋರುವದಿಲ್ಲ. ೫೦–೬೦ ವರುಷಗಳಿಂದ ಅಲ್ಲಿನ ಉತ್ತಮರೆನ್ನಿಸಿಕೊಳ್ಳುವವರಲ್ಲಿ ನಾಲ್ಕಾರು ಜನರು, ಬಲ್ಗೈಜಾತಿಯವರನ್ನು ಅಲ್ಲಿಂದ ಹೊರಡಿಸಬೇಕೆಂತಲೂ, ಆ ಜಾಗವನ್ನು ತಮಗೆ ಅನುಕೂಲ ಪಡಿಸಿಕೊಳ್ಳಬೇಕೆಂತಲೂ ಬೇರೆಬೇರೆ ಉಪಾಯಗಳಿಂದ ಪ್ರಯತ್ನ ಮಾಡುತ್ತಾ ಬಂದಿದ್ದಾರೆ. ಬಲ್ಗೈ ಯವರ ಕೋರಿಕೆಯನ್ನು ನೆರವೇರಿಸುವದಕ್ಕೆ ಇವರ ಪ್ರೇರಣೆಯು ಮೂಲಕಾರಣವೇ ಹೊರತು, ಇಂಪ್ರೂವ್‌ಮೆಂಟ್ ಮಾಡಬೇಕಂಬ ಉದ್ದೇಶವು ಎಷ್ಟುಮಾತ್ರವೂ ಕಾಣೋದಿಲ್ಲವೆಂದು ನಂಬಿದ್ದೇವೆ. ಆದರೆ ಮ್ಯುನಿಸಿಪಲ್ ಅಧಿಕಾರಿಗಳು ಆ ಸ್ಥಳದಲ್ಲಿ ಇಂಪ್ರೂವ್‌ಮೆಂಟ್ ಮಾಡಬೇಕೆಂದು ಕುತೂಹಲ ಭರಿತರಾಗಿದ್ದರೆ, ಈ ಬಡಜನರು ತಮ್ಮ ಹುಲ್ಲಿನಮನೆಗಳನ್ನು ತೆಗೆದುಹಾಕಿ, ಇಟ್ಟಿಗೆಯಿಂದ ಕಟ್ಟಿದ ಹಂಚಿನಮನೆಗಳನ್ನು ಉತ್ತಮರಾದವರು ಕಟ್ಟಿಸಿಕೊಂಡಿರುವಂತೆಯೇ ಕಟ್ಟಿಕೊಳ್ಳುವದು ದೊಡ್ಡ ಇಂಪ್ರೂವ್‌ಮೆಂಟಲ್ಲವೇ ಎಂದು ಯಾಕೆ ತಿಳಿದುಕೊಳ್ಳಬಾರದು? ಇದನ್ನು ಇಂಪ್ರೂವ್‌ಮೆಂಟ್ ಅಲ್ಲವೆಂದು ಯಾರುತಾನೇ ಹೇಳ್ಯಾರು? ಸ್ಥಳವು ಶುಚಿಯಾಗಿರಬೇಕೆಂದು ಮ್ಯುನಿಸಿಪಾಲಿಟಿಯವರು ಯಾವರೂಲುಗಳನ್ನು ವಿಧಿಸಿದರೂ ವಿಧಿಸಬಹುದು. ಅದಕ್ಕೆ ನಾವು ಸಮ್ಮತಿಸಹುತ್ತೇವೆ ಆದರೆ ಈ ಜನರು ಕೀಳುಜಾತಿಯವರೆಂದು ಅವರ ಕೋರಿಕೆಯನ್ನು ತಿರಸ್ಕರಿಸಿ, ಉತ್ತಮರೆಂದು ನಟಿಸುವವರ ಬೋಧನೆಗಳಿಗೆ ಅಧಿಕಾರಿಗಳು ಒಳಪಡುವದು ಬಹಿರಂಗವಾಗಿ ಅನ್ಯಾಯವೆಂದು ನಮಗೆ ತೋರುತ್ತದೆ. ಸರ್ಕಾರದವರು ಜಾತಿಯನ್ನು ಲಕ್ಷ್ಯಕ್ಕೆ ತಾರದೆ ಪ್ರಜೆಗಳೆಲ್ಲರಿಗೂ ಒಂದೇಸಮವಾಗಿ ನ್ಯಾಯ ತೋರಿಸಬೇಕಾದದ್ದು ಆಗತ್ಯವಾದದ್ದಲ್ಲವೆ? ಇದೂ ಅಲ್ಲದೆ ಹೀನಸ್ಥಿತಿಯಲ್ಲಿದ್ದವರು ನಾಗರೀಕತೆಯನ್ನು ಕಲಿತುಕೊಂಡು, ಉತ್ತಮರಂತೆ ನಡೆಯಬೇಕೆಂದು ಪ್ರಯಾಸಪಡುತ್ತಿರುವಲ್ಲಿ ಸರ್ಕಾರದವರು ತಕ್ಕಮಟ್ಟಿಗೂ ಅವರ ಪ್ರಯತ್ನಕ್ಕೆ ಪ್ರೋತ್ಸಾಹ ಕೊಡುವದು ಅತ್ಯಂತಾವಶ್ಯಕವೆಂದು ಯಾರುತಾನೆ ಹೇಳಲಾರರು? ಆದದರಿಂದ ಮ್ಯುನಿಸಿಪಲ್ ಅಧಿಕಾರಿಗಳು ಈ ಬಡಜನರ ಕೋರಿಕೆಯನ್ನು ಶೀಘ್ರವಾಗಿ ನೆರವೇರಿಸಿ ತಾವು ಪಡೆದಿರುವ ನಿಷ್ಪಕ್ಷಪಾತಿಗಳೆಂಬ ಬಿರುದನ್ನು ಉಳಿಸಿಕೊಳ್ಳುವಂತೆ ಮಾಡುವರೆಂದು ನಂಬಿದ್ದೇವೆ.

ಅದೃಷ್ಟಾಂಧನ.

ಅನಂತಪುರವೆಂಬ ಪಟ್ಟಣದಲ್ಲಿ ಕೃಪಾರ್ಣವ ಶೆಟ್ಟಿಯೆಂಬ ಒಬ್ಬ ಧನಸಮೃದ್ಧನು ಒಂದಾನೊಂದು ದಿನ ತನ್ನ ಸೇವಕನಾದ ದೇವದತ್ತನನ್ನು ಕರೆದು, ನೀನು ನನ್ನಲ್ಲಿರುವ ಮುತ್ತು, ರತ್ನ, ವಜ್ರ, ವೈಢೂರ್ಯ, ಹವಳ, ಗೋಮೇಧಿಕವೇ ಮೊದಲಾದ ರತ್ನಖಚಿತವಾದ ನಗಗಳನ್ನು ತಕ್ಕೊಂಡು ದೇಶಾಟನವಂ ಮಾಡಿ ಅಲ್ಲಲ್ಲಿಗಳಲ್ಲಿ ಒಳ್ಳೇ ಲಾಭವನ್ನು ಸಂಪಾದಿಸಬೇಕು ಆದರೆ ದುರ್ವ್ಯಾಪಾರದಲ್ಲಿ ಪ್ರವೇಶಿಸಬೇಡ ಈ ನಗಗಳು ನಿನ್ನ ವಶದಲ್ಲಿರುತ್ತವೆ ನೀನು ಅವುಗಳಿಗೆ ಯಜಮಾನನಾಗಿಯೂ, ಸ್ವತಂತ್ರನಾಗಿಯೂ ಇದ್ದು ವ್ಯಾಪಾರವನ್ನು ನ್ಯಾಯಕ್ಕೆ ನಡಿಸಬೇಕೆಂದು ಆದರಗುಟ್ಟು ಹೇಳುವದಾದು ಹೋಗುವ ಹ್ಯಾಗಾದರೂ ನಾನು ಕೊಟ್ಟ ಈ ನಗಗಳನ್ನು ಮಾರಿದ ಲೆಕ್ಕವನ್ನು ಇಡಬೇಕು ನಾನು ಕೇಳುವ ಲೆಕ್ಕಕ್ಕೆ ಸರಿಯಾದ ಉತ್ತರ ಕೊಡಬೇಕು ಹಾಗಿರದೆ ನಗಗಳಿಗೆ ಏನಾದರೂ ನಷ್ಟಬಂದರೆ ಸರ್ಕಾರದ ಶಿಕ್ಷೆಗೆ ಗುರಿಯಾಗುವಿ, ಈಗ ನಿನ್ನ ಪ್ರಯಾಣಕ್ಕೆ ಅಗತ್ಯವಾದ ಸಾಮಗ್ರಿಗಳನ್ನು ಸಿದ್ಧಮಾಡಿಕೊಂಡು ಹೋಗು ಎಂದು ಆಜ್ಞೆಮಾಡಿದನು ಮತ್ತು ದಾರಿಯಲ್ಲಿ ಬಹುಜಾಗ್ರತೆಯಿಂದ ರಾತ್ರಿಯನ್ನು ಕಳೆಯಬೇಕು ಚೋರಭಯಯುಕ್ತಸ್ಥಾನಗಳಲ್ಲಿ ನಿಲ್ಲಬೇಡ ಎಚ್ಚರಿಕೆ, ಎಚ್ಚರಿಕೆಯಾಗಿರು ಎಂದು ಆಜ್ಞೆಮಾಡಿ ದೇವದತ್ತನನ್ನು ಕಳುಹಿಸಿಕೊಟ್ಟನು

ಅಲ್ಲಿಂದ ಈ ದೇವದತ್ತನೆಂಬ ವ್ಯಾಪಾರಿಯು ದಕ್ಷಿಣಾಭಿಮುಖವಾಗಿ ಪ್ರಯಾಣವಂ ಬೆಳಸಿ ಆನಂತಪುರವೆಂಬ ಪಟ್ಟಣವನ್ನು ಸೇರಿದನು ಅಲ್ಲಿ ಕೆಲವುದಿನಗಳು ವ್ಯಾಪಾರ ಸಾಹಸವನ್ನು ನಡಿಸಿಕೊಂಡು ನೆಮ್ಮದಿಯಾಗಿದ್ದನು ಇವನ ರತ್ನ ಖಚಿತನಗಗಳನ್ನೂ, ಇವನ ರೂಪು ಲಾವಣ್ಯಗಳನ್ನೂ ನೋಡಿದ ಆ ಪುರದ ವಿಟಪುರುಷರಲ್ಲಿ ಕೆಲವರು ಇವನಲ್ಲಿ ಅತಿ ಸ್ನೇಹವಂ ಬೆಳಸಲು ದೇವದತ್ತನು ಸುಲಭವಾಗಿ ಅವರ ವಶನಾದನು ತರುವಾಯ ಅವರೊಡನೆ ಬೇರೆಬೇರೆ ನಾಟಕಶಾಲೆಗಳಿಗೆ ಹೋಗುವುದಕ್ಕೂ, ಜೂಜು ಮುಂತಾದ ಆಟಗಳನ್ನು ಆಡುವದಕ್ಕೂ ತೊಡಗಿದನು ಆ ಮೇಲೆ ವೇಶ್ಯಾಂಗನೆಯರ ಮನೆಗಳನ್ನು ಭೇಟಿಮಾಡುವದಕ್ಕೆ ಉಪಕ್ರಮಿಸಿದನು ಆಪುರದಲ್ಲಿದ್ದ ಜನರೆಲ್ಲರೂ ಈ ವ್ಯಾಪಾರಿಯು ಕೆಟ್ಟುಹೋದನೆಂದೂ, ಇವನ ಕೇಡಿಗೆ ಮದ್ದೇ ಇಲ್ಲವೆಂದೂ ಹೇಳಿಕೊಂಡು ಬಹುವಿಚಾರಪಡುತ್ತಿದ್ದರು ದೇವದತ್ತನು ಆಮೇಲೆ ಅಲ್ಲಿ ಗುರುವೆನ್ನಿಸಿಕೊಂಡಿದ್ದ ಒಬ್ಬ ಬ್ರಾಹ್ಮಣನ ಬಳಿಗೆ ಹೋಗಿ—ಪವಿತ್ರ ಮಹಾಸ್ವಾಮಿ, ನಾನು ಅಕ್ರಮವಾಗಿ ಜನಗಳ ನಿಂದೆಗೆ ಗುರಿಯಾದೆನು, ಆದ್ದರಿಂದ ಹಗಲೆಲ್ಲಾ ಪರಿತಾಪವಾಗುವದಾಗಿ ಏನುಮಾಡಬೇಕು ನನಗೊಂದುಪಾಯವನ್ನು ಹೇಳಿಕೊಡಿ ಅನ್ನಲು; ಗುರುವು—ಅಯ್ಯಾ ನೀನು ಗುರುದಕ್ಷಿಣೆ ಕೊಡಬೇಕು ಮತ್ತು ಬ್ರಾಹ್ಮಣರಿಗೆ ಗೋದಾನ, ಭೂದಾನ, ಕನ್ಯಾದಾನ, ಅನ್ನದಾನ, ವಸ್ತ್ರದಾನ, ಇವೇ ಮೊದಲಾದ ಸತ್ಕಾರ್ಯಗಳನ್ನು ಮಾಡಬೇಕು ಅನಂತರ ನೀನು ಪುಣ್ಯಾತ್ಮನೂ, ಧರ್ಮಿಷ್ಠನೂ ಆಗುವೆ ಎಂದು ಬೋಧನೆ ಮಾಡಿದನು ಅದರಂತೆ ಈ ದೇವದತ್ತನು ಮಾಡಿದಾಗ್ಯೂ ಅವನಿಗೆ ಯಾವ ಪ್ರಯೋಜನವೂ ಆಗಲಿಲ್ಲ ತರುವಾಯ ತೀರ್ಥಯಾತ್ರೆ ಹೋಗಿ ಗಂಗಾಸ್ನಾನವನ್ನು ಮಾಡಿಕೊಂಡು ಬಂದನು ಹಾಗೂ ಅವನಿಗೆ ಹಿಂದೆ ಬಂದಿದ್ದ ಕೆಟ್ಟಹೆಸರು ತಪ್ಪಲಿಲ್ಲ ಈ ರೀತಿಯಾಗಿ ವ್ಯರ್ಥವಾಗಿ ಆಯಾಸಪಟ್ಟು ಚಂಚಲ ಚಿತ್ತನಂತೆ ಅಲೆಯುತ್ತಿದ್ದನು

ಹೀಗಿರುವಲ್ಲಿ ಅತ್ತ ಅನಂತಪುರದಲ್ಲಿದ್ದ ಇವನ ಯಜಮಾನನಿಗೆ ದೇವದತ್ತನೆಂಬ ನಿನ್ನ ಸೇವಕನು ನಿನ್ನ ಸೊತ್ತನ್ನು ಹಾಳುಮಾಡಿದ್ದಾನೆಂಬ ಸಂಗತಿಯು ತಿಳಿದುಬಂದು, ಸಾಹುಕಾರನ ಕಡೆಯಿಂದ ಇವನಮೇಲೆ ಫಿರ್ಯಾದಾಯಿತು ಆಗ ಸರ್ಕಾರದವರು ದೇವದತ್ತನನ್ನು ಹಿಡಿದು ತರಿಸಿ—ಎಲೈ ಚೆನ್ನನೇ, ನಿನ್ನ ಯಜಮಾನನ ಆಸ್ತಿಯನ್ನು ದುರುಪಯೋಗಪಡಿಸಿ, ಆತನಿಗೆ ಬಹಳ ನಷ್ಟವನ್ನುಂಟುಮಾಡಿದ್ದೀ ಎಂದು ಸಾಕ್ಷಿಗಳಿಂದ ಸಾಬೂತಾಗುತ್ತೆ ಆದ್ದರಿಂದ ಈಗ ನಮ್ಮ ಸರ್ಕಾರದ ತೀರ್ಮಾನದ ಪ್ರಕಾರ ನಿನಗೆ ಮರಣದಂಡನೆಯು ವಿಧಿಸಲ್ಪಡುವದು ಇದರಮೇಲೆ ನೀನು ತಪ್ಪಿಸಿಕೊಳ್ಳುವ ಮಾರ್ಗವಿದ್ದರೆ ಆ ಮಾರ್ಗವನ್ನು ಹುಡುಕಿಕೋ ಎಂದು ಅಪ್ಪಣೆಯಾಯಿತು ಕೂಡಲೇ ಆಯುಧಪಾಣಿಗಳಾದ ದೂತರು ಅವನ ಎಡಬಲ ಪಾರ್ಶ್ವಗಳಲ್ಲಿ ನಿಂತರು ಯಾಕೆಂದರೆ ದೇವದತ್ತನು ತನಗೆ ಆಗ ಪ್ರಾಪ್ತವಾಗಿದ್ದ ಕಷ್ಟದಲ್ಲಿ ಸಹಾಯಮಾಡಿ ಆ ಸಾಲವನ್ನು ತೀರಿಸುವವರನ್ನು ಕಾಣದೆ, ದಿಕ್ಕುತೋಚದೆ ಯಾವ ಉತ್ತರವನ್ನೂ ಕೊಡದೆ ಸ್ತಬ್ಧನಾಗಿದ್ದನು ಸ್ವಲ್ಪ ಹೊತ್ತಿನಮೇಲೆ ದೇವದತ್ತನು ಪ್ರಜ್ಞೆ ತಂದುಕೊಂಡು—ಈಗ ನನ್ನ ಮನಸ್ಸಿನಲ್ಲಿ ನಿಶ್ಚಯವಾಗಿ ಪ್ರಾರ್ಥಿಸುವೆನು ಎಂದು ಅಂದುಕೊಂಡು ಒಳಗೊಳಗೇ—ಎಲೈ ಸರ್ವವ್ಯಾಪಕಾ, ದೋಷದೂರಾ, ಕೃಪಾರ್ಣವಾ, ಅದೃಷ್ಟಾಂಧಪಾ, ಅನಾಥರಕ್ಷಕಾ, ಈಗ ನನಗೆ ಪ್ರಾಪ್ತವಾಗಿರುವ ಕಷ್ಟವಂ ಪರಿಹರಿಸು, ಎಂದು ತನ್ನಲ್ಲೆ ಹಾಡಿಕೊಳ್ಳುತ್ತಾ—ಹೇ ದೇವದೇವೇಶ ಸ್ವಾಮಿನ್| ಶರಣಂ ಪ್ರಪನ್ನೋಸ್ಮಿ|| ಅತಿದೀನವರದೇಶಂ| ಪ್ರಾರ್ಥಯಾಮಿ ಕೃಪಾಂ ಕುರು|| ಅಂದರೆ, ಸಮಸ್ತರಿಗೂ ತಂದೆಯಾದ, ಭೂಲೋಕದಲ್ಲಿ ಪಾಪಿಷ್ಠರಿಗೆ ರಕ್ಷಕನಾದ, ಏಕಸ್ವರೂಪನಾಗಿರುವ ನಿನ್ನನ್ನು ನಾನು ದೀನನಾಗಿ ಬೇಡುತ್ತೇನೆ ಇಂಥಾ ವಿಪತ್ತಿಗೆ ಗುರಿಮಾಡಲ್ಪಟ್ಟವನಾದ ನನ್ನ ಸಹಾಯಕ್ಕೆ ಬಾರದೆ ಎಂದೂ ಅಳುತ್ತಾ, ಹಾ ವಿಧಿಯೇ ಎಂದು ನಿಟ್ಟುಸಿರು ಬಿಡುತ್ತಿದ್ದನು ಆಗ ದೇವರು ತನ್ನ ಭಕ್ತನಿಗೆ ಒದಗಿದ ವಿಪತ್ತನ್ನು ನೋಡಿ, ಪ್ರತ್ಯಕ್ಷನಾಗಿ ಬಂದು—ಎಲೈ ಭಕ್ತನೇ, ನೀನು ಭಯಪಡಬೇಡ, ನಿನ್ನ ಪ್ರಾಣಕ್ಕೆ ಬದಲಾಗಿ ನನ್ನ ಪ್ರಾಣವನ್ನು ಕೊಟ್ಟು ಸರ್ಕಾರದ ನ್ಯಾಯವನ್ನು ತೀರಿಸುವೆನೆನಲು, ದೇವದತ್ತನು—ಸ್ವಾಮಿ, ತಮ್ಮ ಅನುಗ್ರಹದಿಂದ ಧನ್ಯನಾದೆ, ಪಾಪಿಗಳ ರಕ್ಷಕನು ನೀನೇ ಅಲ್ಲವೇ ಎಂದು ಸ್ತುತಿಸುತ್ತಾ—ಅಷ್ಟುಮೇಲೆ ಬುದ್ಧಿಬಂತು ಅಷ್ಟುಮೇಲೆ ಬಲೆ ಉರಿಯಿತು—ಎಂಬಂತೆ ಇನ್ನುಮೇಲೆ ಯಾವರೂ ಜಾಗರೂಕನಾಗಿರಬೇಕೆಂದು ತನ್ನ ವಿಷಯವನ್ನು ಕುರಿತು ಆಲೋಚಿಸುತ್ತಾ ಹೊರಟು ಹೋದನು

ಇತ್ತ ಹೋಗುವಾಗ ಸಾರ್ವತ್ರದಲ್ಲಿ ಒಂದ ಪರಮೇಶ್ವರನಾದ ಸ್ವಾಮಿಗೆ ಸರ್ಕಾರದವರು ತಾವು ಒಪ್ಪುವಂತೆಯೂ, ಬೇರೆ ಜನಗಳ ಇಷ್ಟಪೂರ್ತಿಯಾಗುವಂತೆಯೂ ಮರಣದಂಡನೆಯುಂ ವಿಧಿಸಿದರು

ಎಲೈ ದಯಾಳುಗಳಾದ ವಾಚಕರೇ, ಈ ಸಣ್ಣ ಕಥೆಯಿಂದ ನಾವು ತಿಳಿಯತಕ್ಕದ್ದೇನು? ಅನಂತಪುರ ಎಂಬ ಕೈವಲ್ಯರಾಜ್ಯದಲ್ಲಿ ಸಾಹುಕಾರನೆಂಬ ನಮ್ಮೆಲ್ಲರ ಸೃಷ್ಟಿಕರ್ತನು ಇದ್ದನು ಆತನು ನಮ್ಮ ಯಜಮಾನನಾಗಿಯೂ, ತಂದೆಯಾಗಿಯೂ ಇದ್ದಾನೆ ಆ ದೇವದತ್ತನೆಂಬ ಸೇವಕನಿಂದ ಮನುಷ್ಯರಾದ ನಮ್ಮೆಲ್ಲರನ್ನೂ ಕುರಿತು ಹೋಲಿಸಲ್ಪಟ್ಟಿದೆ ಸಾಹುಕಾರನು ಕೊಟ್ಟ ರತ್ನಖಚಿತನಗಗಳು ಯಾವವೆಂದರೆ—ಬುದ್ಧಿ, ಜ್ಞಾನ, ಚಿತ್ತ, ಮನಸ್ಸಾಕ್ಷಿ, ಸ್ವಾತಂತ್ರ್ಯ ಇವೇ ಮೊದಲಾದವುಗಳು ಅನಂತಪುರವೆಂಬ ಈ ಪ್ರಪಂಚದಲ್ಲಿ ಇಂಥಾ ರತ್ನಖಚಿತಗಳಿಂದ ಸರಿಯಾದ ವ್ಯಾಪಾರ ನಡಿಸಬೇಕೆಂದು ಸ್ವಾಮಿಯು ಮಾನವರಿಗೆಲ್ಲಾ ಅಪ್ಪಣೆ ಕೊಟ್ಟನು ಮತ್ತು ಅವುಗಳನ್ನು ನಷ್ಟಪಡಿಸಿದರೆ ದೇವರ ನೀತಿ ಎಂಬ ಸರ್ಕಾರಕ್ಕೆ ಒಳಗಾಗಿ ನೇಮಕವಾಗಿರುವ ದೈವಶಿಕ್ಷೆಗೆ ಪಾತ್ರರಾಗುವೆವು ಆದ್ದರಿಂದ ಪ್ರತಿಒಬ್ಬನೂ ತಾನುನಡಿಸುವ ವ್ಯಾಪಾರದಲ್ಲಿ ಬಹು ಜಾಗ್ರತೆಯಾಗಿದ್ದು, ಆತನ ಹೆಸರಿನ ಮಹಿಮೆಗಾಗಿ ಜೀವಿಸಬೇಕೆಂದು ಅಪ್ಪಣೆಕೊಟ್ಟಿದ್ದಾನೆ ಆದರೆ ದೇವದತ್ತನೆಂಬ ಶೆಟ್ಟಿಯು ಹ್ಯಾಗೆ ಅನೇಕ ದುಸ್ನೇಹಿತರಿಗೆ ವಶನಾಗಿ ಅಂತ್ಯದಲ್ಲಿ ತನ್ನ ಯಜಮಾನನಿಗೆ ದ್ರೋಹಿಯಾದನೋ ಹಾಗೆಯೇ ನಾವೆಲ್ಲರೂ ಅಲ್ಪಕಾಲಿಕವಾದ ಈ ಲೋಕದ ಸಂತೋಷವನ್ನು ನಂಬಿ, ನಮ್ಮ ಶರೀರದ ದಾಹಗಳನ್ನು ಪೂರೈಸಿಕೊಳ್ಳುವದಕ್ಕೂ, ಜನರು ಮೆಚ್ಚುವದಕ್ಕೂ, ಅನೇಕ ದುರಭ್ಯಾಸಗಳನ್ನು ಕಲಿತು ದೇವರ ಕ್ರಿಷ್ಟದಂಗಳನ್ನು ನಷ್ಟಪಡಿಸಿಕೊಂಡಿದ್ದೇವೆ ನಮ್ಮ ಪ್ರಾಣದಾಯಕನನ್ನು ಮರೆತು, ಬರೀ ವೇಷವನ್ನು ಹಾಕಿಕೊಂಡು ಅಲಂಕಾರವಾಗಿರುವ ವೇಶ್ಯಾಂಗನೆಯರೆಂಬ ವಿಗ್ರಹಗಳನ್ನು ಹೆಚ್ಚಾಗಿ ಪ್ರೀತಿಸಿದ್ದೇವೆ ನಮ್ಮ ಅಕ್ರಮನಿವಾರಣೆಗಾಗಿ ಅನೇಕ ಬಹುಮಾನಗಳನ್ನು ನಡಿಸಿ, ಮನುಷ್ಯಕಲ್ಪಿತಗಳಿಂದ ಮೋಸಹೋಗಿ, ಕಡೆಗೆ ಏನೂ ತೋರದೆ ಸ್ತಬ್ಧರಾಗಿದ್ದೇವೆ ನಮ್ಮ ಸ್ಥಿತಿಯನ್ನು ಭಗವಂತನು ನೋಡಿ ಕೇಳಿ ಪ್ರಾದ್ರೇಕನಾಗಲು, ನಾವೆಲ್ಲರೂ ದೇವರ ನೀತಿ ಎಂಬ ಸರ್ಕಾರದ ವರಿಂದ ಹಿಡಿಯಲ್ಪಟ್ಟು ಮರಣಕ್ಕೆ ಗುರಿಯಾಗುತ್ತೇವೆ ಆದರೋ ಸ್ನೇಹಿತರೇ, ಆ ದೇವದತ್ತನು ನಿಜವಾಗಿ ತನ್ನನ್ನು ತಿಳುಕೊಂಡಂತೆ ಈಗ ನಿರ್ಬಲ್ಯರಾದ ನಾವೇ ಅಂತ್ಯದಲ್ಲಿ ಪರೀಕ್ಷಿಸಿ—ಹೇ ದೇವಾ, ದ್ರೋಹಿಗಳಾದ ನಮ್ಮನ್ನು ಕರುಣಿಸು ನಿನ್ನ ನೀತಿಯು ಏನು ನಮ್ಮ ಸಮಾಧಾನಕ್ಕೆ ಈ ಲೋಕದಲ್ಲಿಯೂ ನಿನ್ನಲ್ಲದೆ ಇನ್ನ್ಯಾರೂ ನಮಗೆ ದಿಕ್ಕಿಲ್ಲ, ಕಾಪಾಡು, ಸ್ವಾಮಿ, ಎಂದು ಪೂರ್ಣಶ್ರದ್ಧೆಯಿಂದ ಬೇಡಿದರೆ—ಮಗನೇ ಭಯಪಡಬೇಡ, ನಿನಗೆ ಬದಲಾಗಿ ನನ್ನ ಪ್ರಾಣವನ್ನು ಕೊಟ್ಟು ದೇವರ ನೀತಿಗೆ ಕುಂದಕ ಇಲ್ಲದಂತೆ ಸಮಾಡಿದ್ದೇನೆ ನಾನೇ ನಿನ್ನ ಆಪದ್ಬಾಂಧವ ಮೃತ್ಯುಂಜಯನೆಂಬ ಶ್ರೀ ಯೇಸುಕ್ರಿಸ್ತನು ಎಂದು ನಂಬು ಎನ್ನುವ ವೇಳೆ ಪಾಪವಿಮೋಚಕನಾದ ನಿನ್ನ ಯಜಮಾನನು ಪುನಃ ನಿನ್ನನ್ನು ಪ್ರೀತಿಸುವನು ಎಂದು ಅಭಯವನ್ನು ಕೊಡುತ್ತಾನೆ ಮತ್ತು ಮನುಷ್ಯರೊಳಗೆ ಶಾಂತಿ ಕೊಡುವ ಸಮಸ್ತ ಪಾಪಿಷ್ಠರ ಉದ್ಧಾರವನಿಗೆ ಭಾಷೆಯನ್ನು ಕೊಟ್ಟಿದ್ದಾನೆ ಹಾಗಾದರೆ "ಅದತ್ತಮಿತ್ರಂ ಜಾನೀಯಾತ್" ಎಂಬಂತೆ ನಮ್ಮ ಅದೃಷ್ಟಾಂಧನನು ಇವನೇ ಅಲ್ಲವೇ?

ಉಪದೇಶಿಗಳಿಗೆ.

ಇದರಿಂದ ತಿಳಿಯಪಡಿಸುವದೇನಂದರೆ—ಹಿಂದೂಜನಗಳಿಗೋಸ್ಕರವಾದ ಒಂದು ಉಪನ್ಯಾಸವನ್ನು ಬಹು ರಮ್ಯವಾಗಿರುವಂತೆ ಬರೆದು ಇದೇ ಆಗೋಷ್ಟು ೩೧ನೇ ತಾ|| ನೊಳಗಾಗಿ ರವಾನಿಸಬೇಕು ಅದಕ್ಕೆ ಬಹುಮಾನವು ಕೊಡಲ್ಪಡುತ್ತೆ ಉಪನ್ಯಾಸವು ಹೊಸವಿಷಯವನ್ನು ಕುರಿತು ಒಳ್ಳೇ ಚರಿತ್ರೆಯಿಂದ ಕೂಡಿದ್ದಾಗಿರಬೇಕು ಇತರರಿಗೆ ತೋರಿಸದೆ ಸ್ವಂತವಾಗಿಯೇ ಬರೆದಿರಬೇಕು ೮—೧೦ ನಿಮಿಷಗಳೊಳಗಾಗಿ ಉಪನ್ಯಾಸವು ಪೂರೈಸತಕ್ಕದ್ದಾಗಿರಬೇಕು

H. Haigh,
Mysore

ಒಳದೇಶ ವೃತ್ತಾಂತಗಳು.

ಬೆಂಗಳೂರಿನ ಗೌರ್ನಮೆಂಟ್ ಪ್ರಿಂಟಿಂಗ್ ಕಾರ್ಖಾನೆಗೆ ಅಲ್ಲಿನ ಕಮಿಸರಿ ಡಿಪಾರ್ಟಮೆಂಟ್ ಆಫೀಸಿನಿಂದ ಮೆ|| ಲಿಸ್ಸಂಬರ್ಗ ಸಾಹೇಬರನ್ನು ಸೂಪರಿಂಟೆಂಡೆಂಟಾಗಿ ನೇಮಿಸುವರೆಂದು ಪ್ರವಾದವಿದೆ

ತೀರ್ಥಹಳ್ಳಿ ತಾಲ್ಲೋಕು ದೇವಂಗಿ ಗ್ರಾಮದಲ್ಲಿ ಪಂಚಿತ ಕಳ್ಳರು ವೆಂಕಟಗಿರಿಯಪ್ಪನ ಮನೆಗೆ ನುಗ್ಗಿ ೮—೧೦ ಸಾವಿರ ರೂಪಾಯಿಗಳನ್ನು ಚೋರಿ ಮಾಡಿರುತ್ತಾರೆಂಬದಾಗಿ ತಿಳಿಯಲಾದೆವು

ಕೋಲಾರದ ಕುರುಬರ ಪ್ಯಾಟೆಯಲ್ಲಿರುವ ಕೆಂಪಮ್ಮನೆಂಬವಳು ತನ್ನ ಬಳಿಯಲ್ಲಿ ಇಟ್ಟುಕೊಂಡಿದ್ದ ೧,೦೦೦ ರೂಪಾಯಿನ ನಗಗಳನ್ನು ಕಳಕೊಂಡಿರುತ್ತಾಳೆಂದು ಸುವಾರ್ತಾಪತ್ರಿಕೆಯು ತಿಳಿಸುತ್ತದೆ

ಬಂಗಳೂರು ಕೋಟೆಯಲ್ಲಿ ಪೋಲೀಸಿನವರು ಈಸ್ಟ ಪಿಲರುಗಳ ಉಪಯೋಗಕ್ಕೋಸ್ಕರ ಒಂದು ಕಟ್ಟಡವನ್ನು ಕಟ್ಟುವದಕ್ಕೆ ತಳಹದಿ ತೆಗೆಯುವಾಗ— ...ಗ ಬಂದಿರುವ ಹಳೇಕತ್ತಿಗಳು ದೊರಕಿದವು ಅವನ್ನು ರಾಣೀಸಾಹೇಬರಿಗೆ ಕಳುಹಿಸುತ್ತಾರೆಂದು ಅಲ್ಲಿನ ಪತ್ರಿಕೆಯು ತಿಳಿಸುತ್ತದೆ

ಇಲ್ಲಿನ ಸರ್ಕಸ್ ಆಟದವರು ಕೋಲಾರದಲ್ಲಿ ಆಟಗಳನ್ನು ಆಡುತ್ತಿದ್ದಾಗ ಅವರಲ್ಲಿ ಇಬ್ಬರು ಹುಡುಗಿಯರು ಇದ್ದರು ಇವರಲ್ಲಿ ಒಬ್ಬ ಹುಡುಗಿಯನ್ನು ಯಾವನೋ ಚಮತ್ಕಾರದಿಂದ ಕದ್ದುಕೊಂಡು ಪರಾರಿಯಾಗಿರುತ್ತಾನೆಂದು ಅಲ್ಲಿನ ಚಿತ್ರಾದರ್ಶಕರು ತಿಳಿಸುತ್ತಾರೆ

ಸಂಸ್ಥಾನದ ದಿವಾನ್ ಸರ್ ಶೇಷಾದ್ರಯ್ಯರವರು ಕ್ಷಿಪ್ರದಲ್ಲಿಯೇ ಮೂರು ತಿಂಗಳ ರಜಾ ಪಡೆದು ಮದರಾಸಿಗೆ ಹೋಗುವರೆಂದು ಬೆಂಗಳೂರು ಮತ್ತು ಮದರಾಸ್ ಪತ್ರಿಕೆಗಳು ತಿಳಿಸುತ್ತವೆ ಈಚೆಗೆ ಅವರಿಗೆ ಪ್ರಾಪ್ತವಾದ ದುಃಖವೇ ಇದಕ್ಕೆ ಕಾರಣವಿರಬಹುದೆಂದು ಊಹಿಸಬೇಕಾಗಿದೆ

ಫೋರ್ತುಗೀಸರ ಬೆಳ್ಳಿಯ ಮತ್ತು ತಾಂಬ್ರದ ನಾಣ್ಯಗಳು ಸಲ್ಲದ ನಾಣ್ಯಗಳೆಂದು ಇಂಡಿಯಾ ಗೌರ್ನಮೆಂಟಿನವರು ತಿಳಿಸಿರುತ್ತಾರಾದಕಾರಣ ಮೈಸೂರು ಸರ್ಕಾರದ ಕಂಟ್ರೋಲರವರೂ ಇಂಥಾ ನಾಣ್ಯಗಳನ್ನು ಸರ್ಕಾರದವರು ಕೊಡಲೂ, ತೆಗದುಕೊಳ್ಳಲೂ ಕೂಡದೆಂಬದಾಗಿ ಎಲ್ಲಾ ಅಧಿಕಾರಿಗಳಿಗೂ ತಿಳಿಯಪಡಿಸಿರುತ್ತಾರೆ

ಕಳೆದ ಶನಿವಾರ ಸುಬ್ರಾಯನಕೆರೆಯಲ್ಲಿ ಒಬ್ಬ ಹೆಂಗಸಿನ ಶವವು ತೇಲುತ್ತಿತ್ತು ವಿಚಾರಣೆ ಮಾಡುವಲ್ಲಿ ಅವಳಿಗೆ ಹೊಟ್ಟೆಶೂಲೆ ಬರುತ್ತಿದ್ದದರಿಂದ ಬಿದ್ದು ಆತ್ಮಹತ್ಯ ಮಾಡಿಕೊಂಡಳೆಂದು ಹೇಳುತ್ತಾರೆ ಆ ಪ್ರಾಂತ್ಯದಲ್ಲಿ ಪೋಲೀಸ್ ಸಿಬ್ಬಂದಿಯು ಸಾಲದಾಗಿರಬಹುದು, ಇಲ್ಲವೇ ಇರತಕ್ಕವರು ಸರಿಯಾಗಿ ಕೆಲಸ ಮಾಡದಿರಬಹುದು

ಸುಬ್ರಾಯನಕೆರೆ ಬಳಿ ಇರುವ ವ್ಯಾಪಾರದ ಜಾತಿಯ ಒಬ್ಬರ ಮಕ್ಕಳಿಗೆ ಹೋಗಿದ್ದ ಕಣ್ಣುಗಳಿಗೆ ನಜರ್‌ಬಾದಿನಲ್ಲಿರುವ ಕೃಷ್ಣಶೆಟ್ಟಿಪ್ಪನವರು ಔಷಧಗಳನ್ನು ಹಾಕಿ ಗುಣಮಾಡಿದರೆಂದು ಆ ಮಕ್ಕಳ ತಂದೆತಾಯಿಗಳು ನಮಗೆ ತಿಳಿಸಿರುತ್ತಾರೆ ಈ ನೇತ್ರವೈದ್ಯರ ಸಾಮರ್ಥ್ಯವನ್ನು ನಮ್ಮ ವಾಚಕರಿಗೆ ತಿಳಿಸಲು ಸಂತೋಷಿಸುತ್ತೇವೆ

ಹೊಳೆನರಸೀಪುರದಲ್ಲಿ ಈಚೆಗೆ ಕಳ್ಳತನವು ಪ್ರಾರಂಭವಾಗಿದೆ ಎಂತಲೂ, ಕೆಲವು ಮನೆಗಳಲ್ಲೂ, ಅಂಗಡಿಗಳಲ್ಲೂ ನಾನಾ ತರದಿಂದ ಕಳ್ಳರು ಮಾಲುಗಳನ್ನು ಅಪಹರಿಸಿದರಂತಲೂ ಒಬ್ಬ ಬಾತ್ಮೀದಾರರು ತಿಳಿಸಿರುತ್ತಾರೆ ಈ ವಿಷಯದಲ್ಲಿ ಪೋಲೀಸಿನವರು ಸರಿಯಾಗಿ ಪಹರೆಕಾದು, ಕಳ್ಳರನ್ನು ಹಿಡಿದು ಶಿಕ್ಷೆಗೆ ಗುರಿಮಾಡಿದಲ್ಲಿ ತಾವು ಇದ್ದದ್ದಕ್ಕೆ ಸಾರ್ಥಕವಾಗುತ್ತೆ

ಕೋಲಾರದಲ್ಲಿ ವಾಸಮಾಡುತ್ತಿರುವ ಪಿಂಚನಿ ಅಮಲ್ದಾರ್ ವೆಂಕಟಪ್ಪಯ್ಯರವರು ಸ್ವಸ್ಥಾನಸ್ಥ್ಯವನ್ನು ಬಹಾಲ್ ಮಾಡಿದನೆಂಬ ತಪ್ಪಿಗೆ ಗುರಿಮಾಡಲ್ಪಟ್ಟು ಅವರಿಗೆ ಸಲ್ಲುವ ಪಿಂಚನಿ ಮೋಕೂಫ್ ಮಾಡಲಾಗಿ, ಮುಖ್ಯವಾಗಿ ಗೌರ್ನಮೆಂಟಿಗೆ ಅಲ್ಲಿನ ಡೆಪ್ಯುಟಿ ಕಮಿಷನರವರು ಬರೆದು ಕೇಳಿದ್ದಕ್ಕೆ ಇಂಥಾ ಅಲ್ಪವಿಷಯಗಳಲ್ಲಿ ಕಷ್ಟಾರ್ಜಿತವಾದ ಪೆನ್ಶನ್ನನ್ನು ನಿಲ್ಲಿಸುವದು ಸರಿಯಾದ್ದಲ್ಲವೆಂಬದಾಗಿ ಸರ್ಕಾರದವರು ತೀರ್ಮಾನಿಸಿರುತ್ತಾರೆ

ಬೆಂಗಳೂರಿನಲ್ಲಿ ಡಾಕ್ಟರ್ ರಾಮಸ್ವಾಮಯ್ಯಂಗಾರ್ರವರು ಡಾಕ್ಟರ್ ಬೆಗ್ಬಿ ಸಾಹೇಬರವರ ಸಹಾಯಕರಾಗಿ ನೇಮಿಸಲ್ಪಟ್ಟು ಕೆಲಸ ನೋಡುತ್ತಿದ್ದಾರಷ್ಟೆ ಇವರನ್ನು ಇಲ್ಲಿನ ಮಹಾರಾಣಿಯವರ ಬಾಲಿಕಾ ಪಾಠಶಾಲೆಗೆ ವೈದ್ಯಾಧಿಕಾರಿನ್ನಾಗಿ ನೇಮಿಸಿರುತ್ತಾರೆಂತಲೂ, ಆದರೆ ಅವರು ಸಂಬಳದ ವಿಷಯದಲ್ಲಿ ಇನ್ನೂ ಚರ್ಚೆ ಮಾಡುತ್ತಲಿದ್ದಾರೆಂತಲೂ ಇದರ ಇತ್ಯರ್ಥವು ೮—೧೦ ದಿನಗಳೊಳಗಾಗಿ ತಿಳಿಯಬಹುದಾಗಿದೆ ಎಂತಲೂ ಇಲ್ಲಿನ ಒಬ್ಬ ದೊಡ್ಡ ಮನುಷ್ಯರು ತಿಳಿಸಿರುತ್ತಾರೆ

ಅಸ್ಪಿಟಲ್ ಅಸಿಸ್ಟೆಂಟುಗಳು ಸರ್ಟಿಫಿಕೇಟನ್ನು ಕೊಡಬಹುದೇ, ಹಾಗೆ ಅವರಿಂದ ಕೊಡಲ್ಪಡತಕ್ಕ ಸರಟಿಫಿಕೇಟಿಗೆ ಗೌರವವನ್ನು ತೋರಿಸಬಹುದೇ ಎಂಬದಾಗಿ ಸಂಸ್ಥಾನದ ಸೀನಿಯರ್ ಸರ್ಜನ್‍ರವರು ಗೌರ್ನಮೆಂಟಿನವರನ್ನು ಕೇಳಿದ್ದಕ್ಕೆ ಮೆಡಿಕಲ್ ಸರ್ಟಿಫಿಕೇಟನ್ನು ಅಸಿಸ್ಟೆಂಟ್ ಸರ್ಜನ್‍ರಿಂದ ಕೆಳಗಿರುವ ಆಫೀಸರುಗಳಿಗೆ ಕೀಳಾದವರು ಕೊಟ್ಟರೆ ಅದಕ್ಕೆ ಗೌರವಿಸಕೂಡದೆಂತಲೂ, ಕಡೆ ಪಕ್ಷ ಅಸಿಸ್ಟೆಂಟ್ ಸರ್ಜನ್‍ರುಗಳು ಇಂಥಾ ಸರ್ಟಿಫಿಕೇಟನ್ನು ಕೊಡಬಹುದೆಂತಲೂ ಗೌರ್ನಮೆಂಟಿನವರು ವಿಧಿಸಿರುತ್ತಾರೆ

ನಂಜನಗೂಡು ತಾಲ್ಲೋಕಿನಲ್ಲಿ ಪೋಲೀಸ್ ಇನ್ಸ್‌ಪೆಕ್ಟರಾಗಿರುವ ಮ|| ಸಿ ಸುಬ್ರಾಯಲು ಶೆಟ್ಟಿಗೆ ೪೦ ರೂಪಾಯಿಗಳ ಬೆಲೆಯುಳ್ಳ ಒಂದು ಕತ್ತಿಯನ್ನೂ, ಪಟೇಲ್ ವೆಂಕಟಯ್ಯ ಎಂಬುವನಿಗೆ ೩೦ ರೂಪಾಯಿನ ಒಂದು ಪೇಟವನ್ನೂ, ಹೆಡ್ ಕಾನ್ಸ್ಟೇಬಲ್ ಬಾಬು ಸಾಹೇಬನಿಗೆ ೨೦ ರೂಪಾಯಿಯನ್ನೂ ಅವರವರ ಮೆಹನತ್ತಿಗಾಗಿ ಸರ್ಕಾರದವರು ಮೆಚ್ಚಿ ಇನಾಮಾಗಿ ದಯಪಾಲಿಸುವದಕ್ಕಾಗಿ ಹಣವನ್ನು ಸ್ಯಾಂಕ್ಷನ್ ಮಾಡಿರುವರೆಂದು ತಿಳಿದು ತುಂಬಾ ಸಂತೋಷಿಸುತ್ತೇವೆ ಇದಲ್ಲವೇ ಪೋಲೀಸಿನವರ ಮಹತ್ತು!

ಮಂಜರಾಬಾದು ತಾಲ್ಲೋಕಿನಲ್ಲಿ ಈಸಲ ಸಾಹುಕಾರ ಮತ್ತು ಕಾಫಿಪ್ಲಾಂಟರ್ ಮೆ|| ಹೊಸಕೆರೆ ಸಿದ್ದೇಗೌಡರು, ಕಾಫಿಪ್ಲಾಂಟರ್ ಮೆ|| ದೈವೂರು ಮಲ್ಲೇಗೌಡರು, ಮ|| ಉಚ್ಚಂಗಿ ನರಸಿಂಹಯ್ಯನವರು ಮತ್ತು ಮ|| ಕೋಟೆಹಳ್ಳಿ ರಾಮಯ್ಯಂಗಾರ್ರು—ಈ ನಾಲ್ಕು ಮಂದಿಯನ್ನು ಈಸಾಲ ಪ್ರಜಾಪ್ರತಿನಿಧಿ ಸಭೆಗೆ ಮೆಂಬರಾಗಿ ಚುನಾಯಿಸುತ್ತಾರೆಂದು ತಿಳಿಯಲಾದವು ಆದರೆ ಇವರು ತಮ್ಮ ಪ್ರಾಂತ್ಯಗಳಲ್ಲಿ ಇರುವ ಸಕಲವಿಧವಾದ ಕೊರತೆಗಳನ್ನೂ ಧೈರ್ಯವಾಗಿ ಸರ್ಕಾರದವರಿಗೆ ತಿಳಿಯಪಡಿಸಲು ಹಿಂತೆಗೆಯರೆಂಬದಾಗಿ ಕೋರುತ್ತೇವೆ

ನಂಜನಗೂಡಿನ ಆಸ್ಪತ್ರೆಯಲ್ಲಿ ಚಿಲ್ಲರೆ ನೌಕರರಿಗೆ ತಿಂಗಳು ಕಳೆದು ೧೦—೧೫ ತಾರೀಖು ಆದಾಗ್ಯೂ ಅವರಿಗೆ ಕೊಡುವ ಅಲ್ಪ ಸಂಬಳಗಳನ್ನು ಕೊಡದೆ ಇರುವುದರಿಂದ ಅವರಿಗೆ ಸಂಭವಿಸುವ ಅನೇಕ ತೊಂದರೆಗಳನ್ನು ಕುರಿತು ಅಲ್ಲಿನ ಒಬ್ಬ ಬಾತ್ಮೀದಾರರು ಬರೆಯುತ್ತಾರೆ ಆಸ್ಪತ್ರೆಯ ಆಸಿಸ್ಟೆಂಟರಿಗೆ ಪ್ರತಿ ತಿಂಗಳು ತುಂಬುವದರೊಳಗಾಗಿ ಸಂಬಳ ತರಿಸಿಕೊಳ್ಳುವದಕ್ಕೆ ಮಾತ್ರವೇ ತಿಳಿದರೆ ಬಡಪಾಯಿಗಳಾದ ೩—೪—೫ ರೂಪಾಯಿ ಸಂಬಳ ಪಡೆಯುವವರಿಗೂ ಹಾಗೆಯೇ ಮೆಹನತ್ತು ಮಾಡಿ ಅಧಿಕಾರಿಗಳಿಂದ ಸಂಬಳ ತರಿಸಿಕೊಡಬೇಕಾಗಿರುತ್ತೆ ಅಲ್ಪ ಸಂಬಳಗಾರರ ಕಷ್ಟ ಸುಖಗಳನ್ನು ವಿಚಾರಿಸಿ, ಅವರ ಕಷ್ಟಗಳನ್ನು ಹೋಗಲಾಡಿಸುವದು ಅಧಿಕಾರಿಗಳಿಗೆ ಸಹಜ ಧರ್ಮವಲ್ಲವೇ!

ಬೆಂಗಳೂರು ಡಿಸ್ಟ್ರಿಕ್ಟ್ ಮಾಗಡಿ ಕಸಬಾದಲ್ಲಿ ವಾಸಮಾಡುತ್ತಿದ್ದ ಕರಣೀಕ ತಿಪ್ಪಯ್ಯನವರು ಗತವಾರದಲ್ಲಿ ಮರಣವನ್ನೈದಿದರೆಂದು ತಿಳಿಸಲು ವಿಷಾದಿಸುತ್ತೇವೆ ಈ ಮಹನೀಯರು ಅನೇಕ ಬಡಬಗ್ಗರಿಗೆ ಆಧಾರಿಗಳಾಗಿ, ಅನೇಕ ಕುಟುಂಬ ಸಂರಕ್ಷಕರೆಂದು ಕೀರ್ತಿಪಡೆದಿದ್ದರು ಕಳೆದ ಘೋರ ಕ್ಷಾಮದಲ್ಲಿ ಲಕ್ಷಾಂತರ ಪ್ರಜೆಗಳಿಗೆ ಅನ್ನದಾನ ಮಾಡಿ ಪ್ರಾಣಗಳನ್ನುಳಿಸಿದರು ಈ ಸಂಸ್ಥಾನದಲ್ಲಿ ಹಿಂದಿನ ಅರಸರೂ ಮತ್ತು ಒಪ್ಪಸಂಸ್ತನರೇ ಮುಂತಾದವರೂ ಈ ಕರಣೀಕ ತಿಪ್ಪಯ್ಯನವರಲ್ಲಿ ಪೂರ್ಣ ಅಭಿಮಾನ ಗೌರವಗಳನ್ನಿಟ್ಟಿದ್ದರು ಇಂಥಾ ಪರೋಪಕಾರಿಗಳಾದವರಿಗೆ ಪ್ರಾಪ್ತವಾದ ಮರಣಕ್ಕೆ ಅನೇಕರು ವ್ಯಸನಪಡದಿರಲಾರರು ಈ ಮಹನೀಯರಿಗೆ ಕೃಷ್ಣರಾವ್ ಶಿವರಾಮರೆಂಬ ಯೌವನಸ್ಥರಾದ ಪುತ್ರರು ಇದ್ದಾರೆ ಇವರು ಭಾರೀ ಐಶ್ವರ್ಯವಂತರು ಇವರು ತಮ್ಮ ವಂಶಕ್ಕೆ ಬಂದಿರುವ ಹೆಸರುವಾಸಿಯನ್ನು ಕಾಪಾಡಿಕೊಳ್ಳದಿರಲಾರರೆಂದು ಕೋರುವೆವು

ವಿವಿಧ ವರ್ತಮಾನಗಳು.

ಕಳೆದ ಜೂನ್ ತಿಂಗಳಿನಲ್ಲಿ ಸಯಾಂನವರಿಗೂ ಫ್ರೆಂಚರಿಗೂ ಯುದ್ಧವಾಗಿ ಅದರಲ್ಲಿ ಸಯಾಂನವರಕಡೆಯಲ್ಲಿ ಮುನ್ನೂರು ಮಂದಿಯವರೆಗೂ ಕೊಲ್ಲಲ್ಪಟ್ಟರೆಂದು ಗೊತ್ತಾಗಿದೆ

ವರ್ಸೇಲ್ಸ್ ಪಟ್ಟಣದಲ್ಲಿ ಮ್ಯೂನಿಸಿಪಾಲಿಟಿಯವರು ಪಬ್ಲಿಕ ಚರಂಡಿಗೋಸ್ಕರ ಸ್ವಲ್ಪ ಸ್ಥಳಸಾಲದೆಂದು ಒಬ್ಬ ದೊಡ್ಡಮನುಷ್ಯನಿಗೆ ಸೇರಿದ್ದ ಜಾಗವನ್ನು ಖರೀದಿಗೆ ತೆಗೆದುಕೊಂಡರು ಪಂಚಾಯಿತರು ಅದಕ್ಕೆ ಸರ್ಕಾರದಿಂದ ೧ ಕೋಟಿ ದ್ರವ್ಯವನ್ನು ಕೊಡಿಸಿದರಂತೆ! ಮಹಾಲೋಕಸಮೃದ್ಧಿಯೇ ಪುಣ್ಯ!

ಉತ್ತರ ಹಿಂದೂಸ್ಥಾನದಲ್ಲಿ ಬರುವ ಡಿಸೆಂಬರಿನಲ್ಲಿ ನಡೆಯುವ ನ್ಯಾಷನಲ್ ಕಾಂಗ್ರೆಸ್ಸಿಗೆ ಸಭಾಪತಿಸ್ಥಾನಕ್ಕೆ ವಿಲಾಯತಿಯಲ್ಲಿ ಈಗ ಪಾರ್ಲಿಮೆಂಟ್ ಮೆಂಬರಾದ ಮೆ|| ದಾದಾಭಾಯಿ ನೌರೋಜಿಯವರು ಪ್ರಸಿದ್ಧರಾಗಿರುವದಕ್ಕಾಗಿ, ಅವರು ನವೆಂಬರಿನಲ್ಲಿ ವಿಲಾಯತಿಯನ್ನು ಬಿಟ್ಟು ಇಂಡಿಯಾಕ್ಕೆ ಬರುವರೆಂದು ಗೊತ್ತಾಗಿದೆ

ಜಬಲ್‍ಪುರದಲ್ಲಿ ಅಸಿಸ್ಟೆಂಟ್ ಮ್ಯಾಜಿಸ್ಟ್ರೇಟರಾದ ಮೆ|| ವೇಸ್ಟ್ ಸಾಹೇಬರು ಒಂದು ಮೊಕದ್ದಮೆಯನ್ನು ವಿಚಾರಣೆ ಮಾಡುತ್ತಿದ್ದಾಗ ಅಪರಾಧಿಯಾದ ಒಬ್ಬ ಮುಸಲ್ಮಾನರವನು ಭರ ಕೋರ್ಟಿನಲ್ಲಿ ಜಡ್ಜಿಯವರಮೇಲೆ ಬಿದ್ದು ಅವರಿಗೆ ಪಾದರಕ್ಷಾ ಪ್ರಯೋಗ ಮಾಡಿದನಂತೆ ಈಗ ಅವನನ್ನು ಶಿಕ್ಷಿಸುವದಕ್ಕೆ ಹಿಡಿದು ಕರೆಯಿಸಲ್ಪಟ್ಟಿದೆ

ಅಫ್ಘಾನಿಸ್ತಾನದ ಅಮೀರರನ್ನು ಕಂಡು ಎಲ್ಲೆಗಳ ವಿಚಾರವನ್ನು ಗೊತ್ತುಮಾಡುವದಕ್ಕೋಸ್ಕರ ಇಂಡಿಯಾ ಸರ್ಕಾರದವರು ಸರ್ ಮಾರ್ಟಿಮರ್ ಡ್ಯೂರಾಂಡ್ ರವರನ್ನು ಕಳುಹಿಸುತ್ತಾರೆ ಇವರ ಜೊತೆಗೆ ಇನ್ನೂ ಕೆಲವು ಮಂದಿ ಚುನಾಯಿಸಲ್ಪಟ್ಟ ಯೂರೋಪಿಯನ್ ಅಧಿಕಾರಿಗಳು ಹೋಗುವರು ಈ ತಿಂಗಳಿನ ಅಖೈರಿನೊಳಗೆ ಹೋಗಿ ಬರಬೇಕೆಂದು ಗೊತ್ತಾಗಿರುವಂತೆ ವರ್ತಮಾನವಿದೆ

ಕೆಲತ್ತಿನ ಖಾನರವರು ಇತರ ವಿಷಯಗಳಲ್ಲಿ ಎಷ್ಟು ಖರ್ಚುದಾರರೂ ಸರಿಯೇ, ತಮ್ಮ ಸ್ವಂತ ಗೃಹಕೃತ್ಯದ ಖರ್ಚು ಮಾತ್ರ ಬಹು ಕಡಮೆ ಆಗಬೇಕೆಂದು ಮಾಡುತ್ತಿದ್ದಾರೆ ಅವರಿಗೆ ಈಗ ೮೦ ಮಂದಿ ಹೆಂಡತಿಯರಿದ್ದಾರೆ ಅವರಲ್ಲಿ ಪ್ರತಿ ಒಬ್ಬ ಹೆಂಡತಿಗೂ ತಿಂಗಳು ೧ಕ್ಕೆ ೬ ರೂಪಾಯಿನಮೇಲೆ ಕೊಡುವದಿಲ್ಲ ಮತ್ತು ಅವರಿಗಿರುವ ಅನೇಕ ಮಂದಿ ಮಕ್ಕಳಿಗೆ ತಲೆ ೧ಕ್ಕೆ ೬ ರೂಪಾಯಿನಿಂದ ೮ ರೂಪಾಯಿನವರೆಗೆ ಕೊಡುತ್ತಾರೆ ಇದೆಂಥಾ ಆಶ್ಚರ್ಯಕರವಾದ ಜೀವನಾಂಶ!

ಬರ್ಸ್ಟಿ ಎಂಬ ಜೈಲ್‍ಖಾನೆಯಲ್ಲಿ ಖೈದಿಗಳಮೇಲೆ ಉಸ್ತುವಾರಿ ಮಾಡುವ ಜವಾನರೂ, ಅವರ ಜೈಲರೂ ಮತ್ತು ಅಲ್ಲಿನ ಇತರ ಅಧಿಕಾರಿಗಳೂ ಪ್ರತಿದಿನವೂ ಸಾಯಂಕಾಲದ ನಂತರ ಖೈದಿಗಳನ್ನು ಬಂದೀಖಾನೆಯ ಕೊಠಡಿಗಳಿಂದ ಹೊರಕ್ಕೆ ಬಿಟ್ಟು ಅವರಿಂದ ಊರಿನಲ್ಲಿ ಕಳ್ಳತನವನ್ನು ಮಾಡಿಸಿ, ಅವರು ಕದ್ದುತಂದ ಮಾಲುಗಳಲ್ಲಿ ಸಮಭಾಗವನ್ನು ಹಂಚಿಕೊಳ್ಳುತ್ತಿದ್ದರೆಂಬ ಸಂಗತಿ ಸರ್ಕಾರದವರಿಗೆ ತಿಳಿದು ಆ ಜೈಲರಿಗೂ ಇತರ ಅಧಿಕಾರಸ್ಥರಿಗೂ ಎರಡೆರಡು ವರ್ಷ ಕಾರಾವಾಸ ಆಯಿತು

ಷಹಪುರದಲ್ಲಿ ಈಗ ಪ್ರವಾಹಗಳಿಂದ ಪ್ರಜೆಗಳಿಗೆ ಉಂಟಾದ ಕಷ್ಟಗಳನ್ನು ಯಾರಿಂದಲೂ ವಿವರಿಸುವದಕ್ಕಾಗದು ಹೆಣಗಳು ನದಿಯಲ್ಲಿ ಹೊಡಕೊಂಡು ಹೋಗುತ್ತವೆ ಅನೇಕರು ಪ್ರಾಣಗಳನ್ನು ಕಾಪಾಡಿಕೊಳ್ಳಬೇಕೆಂದು ಭಾರೀ ಮರಗಳನ್ನು ಹತ್ತಿಕೊಂಡರು ಅವರು ೩ ದಿನಗಳವರೆಗೂ ಅನ್ನಾಹಾರವಿಲ್ಲದೆ ಅಲ್ಲೇ ಕೂತಿರಬೇಕಾಯಿತು ಅನೇಕರು ಹುಲ್ಲುಮನೆಗಳ ಮೇಲೆ ಹತ್ತಿಕೊಂಡರು ಪ್ರವಾಹ ಜೋರಾಗಿ ಬಂದದ್ದರಿಂದ ಮನೆಗಳೆಲ್ಲಾ ಹೊಡಕೊಂಡು ಹೋಗಿ ಅ

[illegible]

ಲೆಜಿಸ್ಲೇಟಿವ್ ಕೌನ್ಸಿಲ್.

ಮೈಸೂರು ಸೀಮೆಯಲ್ಲಿ ಬಾಲ್ಯವಿವಾಹಗಳನ್ನು ನಿರೋಧಿಸುವ ಒಬ್ಬ ಮೆಂಬರ್ [illegible]

[illegible]

(ಕಳೆದ ವಾರದ ಶೇಷ)

[illegible]

ಶಾಲಿವಾಹನಶಕ ೧೮೧೯ ನೇ ವಿಜಯನಾಮ ಸಂವತ್ಸರದ ಶ್ರಾವಣಶುದ್ಧ ಷಷ್ಠಿ ಗುರುವಾರದಿಂದ ಶ್ರಾವಣಶುದ್ಧ ಏಕಾದಶಿ ಬುಧವಾರದ ವರೆಗಿನ ವಾರದ ಪಂಚಾಂಗ.

೧೮೯೭ ನೇ ಇಸವಿ, ಆಗಸ್ಟು.

ತಾ.	ವಾರ.	ತಿಥಿ	ಘಳಿಗೆ.	ನಕ್ಷತ್ರ	ಘಳಿಗೆ.	ಸಿಂಹದ ಮಾಸ ತೇದಿ.
17	ಗು	ಷ	45-50	ಚಿ	9-3	3
18	ಶು.	ಸ	49-28	ಸ್ವಾ	13-30	4
19	ಶ. *	ಅ	53-10	ವಿ	18-51	5
20	ರ	ನ	56-47	ಅನು	25-2	6
21	ಸೋ.	ದ	60-0	ಜ್ಯೆ	31-34	7
22	ಮಂ.	ದ	[illegible]-2	ಮೂ	38-4	8
23	ಬು	ಏ	8-[illegible]	ಪೂ	41-11	9

* ಶ್ರಾವಣಶನಿವಾರ

ಪೇಟೆ ಧಾರಣೆ.

ದಿನಸಿ.	ಮೈಸೂರು	ಬೆಂಗಳೂರು.
	ರೂ. ಆ. ಪೈ	ರೂ. ಆ. ಪೈ
ಕಪ್ಪು ಅಕ್ಕಿ ಪಲ್ಲ ೧ಕ್ಕೆ	[illegible]	[illegible]
ಕೆಂಬಾಗಿ ಅಕ್ಕಿ ಅನ್ನಕ್ಕೆ	[illegible]	[illegible]
ಜಿಡ್ಡೆ ಅಕ್ಕಿ ಗುಮ್ಮ	[illegible]	[illegible]
ಜಾಪರಾಣೆ ಅಕ್ಕಿ	[illegible]	[illegible]
ಸಣ್ಣಕ್ಕಿ ಅನ್ನಕ್ಕೆ	[illegible]	[illegible]
ಜಿಡ್ಡೆ ಅಕ್ಕಿ ಗುಮ್ಮ	[illegible]	[illegible]
ತೊಗರಿಬೇಳೆ ಪಲ್ಲ ೧ಕ್ಕೆ	[illegible]	[illegible]
ಜಿಡ್ಡೆ ಜಾಜಮ ತರಕ	[illegible]	[illegible]
ಹೈಗಾರಿಗೆ ಪಲ್ಲ ೧ಕ್ಕೆ	[illegible]	[illegible]
ಕಾಯ್ರಿಗಿ	[illegible]	[illegible]
ಹುಲಸಂದೆ ಪಲ್ಲ ೧ಕ್ಕೆ	[illegible]	[illegible]
ಬಿಳೀ ಅವರೆ	[illegible]	[illegible]
ಹೆಸರು	[illegible]	[illegible]
ಉದ್ದು	[illegible]	[illegible]
ಕಡಲೆ	[illegible]	[illegible]
ಎಳ್ಳು	[illegible]	[illegible]
ಹುರಳಿ	[illegible]	[illegible]
ಸೀಗೇಕಾಯಿ ಮಣ ೧ಕ್ಕೆ	[illegible]	[illegible]
ಮೆಣಸಿನಕಾಯಿ	[illegible]	[illegible]
ಗುಮ್ಮ ತರಕ	[illegible]	[illegible]
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ	[illegible]	[illegible]
ಸಣ್ಣ ಅಚ್ಚು	[illegible]	[illegible]
ಬಳ್ಳಿಕ್ಕೆ ಮಣ ೧ಕ್ಕೆ	[illegible]	[illegible]
ಹರಳೆಣ್ಣೆ	[illegible]	[illegible]
ಕೊತ್ತುಂಬರಿ ಪಲ್ಲ ೧ಕ್ಕೆ	[illegible]	[illegible]
ಉಪ್ಪು	[illegible]	[illegible]
ಹೊಗೆಸೊಪ್ಪು ಮಣ ೧ಕ್ಕೆ	[illegible]	[illegible]
ಹಳೇ ಹೊಗೆಸೊಪ್ಪು	[illegible]	[illegible]
ತುಪ್ಪ	[illegible]	[illegible]
ಸೀಮೆ ಎಣ್ಣೆ ಕ್ಯಾನ ೧ಕ್ಕೆ	[illegible]	[illegible]
ತೆಂಗಿನಕಾಯಿ ೧೦೦ಕ್ಕೆ	[illegible]	[illegible]
ಚಿನ್ನ (ತೊಲ)		
ಕೆಂಪು	[illegible]	[illegible]
ಬಿಳಿದು	[illegible]	[illegible]
ಗಟ್ಟಿ	[illegible]	[illegible]

Mysore—Printed and published for the Proprietor at the Wesleyan Mission Press.

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೭ ಮೈಸೂರು—ಸನ್ ೧೮೯೯ ನೇ ಇಸವಿ ಆಗಸ್ಟ್ ತಾರೀಖು ೨೪ ನೇ ಗುರುವಾರ. ಸಂಚಿಕೆ ೧೧

ನೋಟಿಸ್.

		ಕ್ರಯ			ಅಂಚೆ ಸಹಿತವಾಗಿ		
Campbell's	ಕನ್ನಡ ವ್ಯಾಕರಣ ಸಾರ	೧	೨	೦	೧	೦	೬
Object Lessons	ವಸ್ತು ಪಾಠಗಳು	೦	೧	೦	೦	೧	೬
Picture do	ಚಿತ್ರಗಳು ಸಹಿತವಾಗಿ	೧	೨	೦	೧	೦	೬
School Geography	ಭೂಗೋಳ ಶಾಸ್ತ್ರಸಾರ	೦	೬	೦	೦	೬	೨

ಈ ನಾಲ್ಕು ಪುಸ್ತಕಗಳು ಮೈಸೂರು ಸರ್ಕಾರದವರ ಆಜ್ಞೆ ಪ್ರಕಾರ ಸರ್ಕಾರಿ ಪಾಠಶಾಲೆಗಳಲ್ಲಿಯೂ ಉಪಯೋಗಿಸತಕ್ಕವುಗಳು.

	ಕ್ರಯ			ಅಂಚೆ ಸಹಿತವಾಗಿ		
ಮಾರ್ಟಿನ್ ಲೂಥರ್ ಎಂಬವರ ಚರಿತ್ರೆ	೦	೧	೬	೦	೨	೦
ಸ್ತ್ರೀಯರು ಓದತಕ್ಕ ಪುಸ್ತಕ	೦	೫	೦	೦	೫	೬
ಗಣಿತ ಮಗ್ಗಗಳು	೦	೧	೦	೦	೧	೬
ಸಂಸ್ಕೃತ ಕರ್ನಾಟಕ ಭಾಷಾಮಂಜರಿ	೦	೨	೦	೦	೨	೬
ಇಂಗ್ಲೀಷೂ ಕನ್ನಡವೂ ಶಬ್ದಾವಳಿ ೧ನೇ ೨ನೇ ಭಾಗಗಳು	೦	೧	೦	೦	೧	೬
ಕಾವ್ಯಮಾಲೆ (Mirror Poetical Anthology)	೦	೪	೦	೦	೪	೬
ಬಾಲವ್ಯಾಕರಣ	೦	೫	೦	೦	೫	೬
ಹಳಗನ್ನಡ ವ್ಯಾಕರಣ ಸೂತ್ರಗಳು	೦	೬	೦	೦	೬	೬
ಇಂಗ್ಲೀಷೂ ಕನ್ನಡವೂ ಸಂಭಾಷಣಾ ವಾಕ್ಯಗಳು	೦	೧೦	೦	೦	೧೦	೬
ಜ್ಞಾನಮಣಿ ನಿಘಂಟು	೧	೦	೦	೧	೮	೬
Kan. Eng. Pocket Dictionary	೧	೮	೦	೧	೫	೭
Eng. Kan. School Dictionary	೨	೧೦	೦	೨	೧೨	೬
ಒಳ್ಳೇ ತಾಯಿ	೦	೮	೮	೦	೮	೬
ಯಾತ್ರಿಕ ದಿವ್ಯ ಯುದ್ಧ (Bunyan)	೦	೧೨	೦	೦	೧೨	೬
ಕೃಷಿಶಾಸ್ತ್ರ ಪದ್ಧತಿ ೧ ನೇ ಭಾಗ ೭ ಆಣೆ ೨ನೇ ಭಾಗ	೦	೧	೬	೦	೨	೦
ಭಕ್ತಿಸಾರ	೦	೧	೦	೦	೧	೬
ಸತ್ಯ ಪರೀಕ್ಷೆ	೦	೧	೦	೦	೧	೬

ಈ ಪುಸ್ತಕಗಳೂ ಇನ್ನೂ ಅನೇಕ ಪ್ರಯೋಜನಕರವಾದ ಪುಸ್ತಕಗಳೂ ಕೆಳಗೆ ಹೇಳಿರುವ ಸ್ಥಳಗಳಲ್ಲಿ ದೊರೆಯುತ್ತವೆ.

ಬೆಂಗಳೂರು—ಪ್ರೋಟೆಸ್ಟೆಂಟ್ ಮಿಷನ್ ಪುಸ್ತಕಶಾಲೆ.
ಚಿಕ್ಕಬಳ್ಳಾಪುರ—ವೆಸ್ಲಿಯನ್ ಮಿಷನ್ ರೀಡಿಂಗ್ ರೂಮ್.
ತುಮಕೂರು—ವೆಸ್ಲಿಯನ್ ಮಿಷನ್ ಬಂಗಲೆ. ಮೈಸೂರು—ವೆಸ್ಲಿಯನ್ ಮಿಷನ್ ಪ್ರೆಸ್.

ಸರ್ ೧೮೯೯ ರಲ್ಲಿ ಸ್ಥಾಪಿಸಲ್ಪಟ್ಟದ್ದು.

ಕೆನರಾ ಅಂಡ್ ಮೈಸೂರ ಟ್ರೇಡಿಂಗ್ ಕಂಪನಿ ಆಫೀಸ್, ಮುಂಬಯಿ.

ಅವರು ತಯಾರಿಸಿರುವಂಥ—

ದಿವ್ಯಾಮೃತತೈಲ.

ಕೆಲವು ದಿವಸದ ತರುವಾಯಲ್ಲಿ ಔಷಧಿ ಗುಣಗಳು ಬಯಲಾದವು. ಈ ತೈಲದ ಮಹತ್ವವನ್ನು ಬರೆದು, ಬಹಳ ವರ್ಣಿಸಲಾದವು—ಯಾಕಂದರೆ, ಯಾರು ಈ ತೈಲವನ್ನು ಉಪಯೋಗಿಸುತ್ತಾರೋ ಅವರಿಗೆ ಒಂದೆರಡು ದಿವಸಗಳಲ್ಲಿಯೇ ಇದರ ಅಪ್ರತಿಮವಾದ ಗುಣವು ಸಹಜವಾಗಿ ಅನುಭವಕ್ಕೆ ಬರುವದು. ಆದಾಗ್ಯೂ ಇದರ ಮುಖ್ಯವಾದ ಉಪಯೋಗವನ್ನು ತಿಳಿಸುವದು ನಮ್ಮ ಕರ್ತವ್ಯವಾಗಿರುತ್ತದೆ.

ಈ ನಮ್ಮ "ದಿವ್ಯಾಮೃತ ತೈಲವನ್ನು" ಪ್ರತಿದಿನ ತಲೆಗೆ ಹಾಕಿಕೊಂಡರೆ ಮಿದುಳಿನಲ್ಲಿರುವ ಉಷ್ಣತೆಯನ್ನು ಹೋಗಲಾಡಿಸುವದಲ್ಲದೆ, ಕಣ್ಣುಗಳೂ, ಮಿದುಳೂ ತಣ್ಣಗಾಗಿ, ಚಿತ್ತಕ್ಕೆ ಶಾಂತತೆಯು ಉಂಟಾಗುವದು ಮತ್ತು ಕಣ್ಣುಗಳಿಗುಂಟಾಗುವ ಸಾಮಾನ್ಯವಾದ ವಿಕಾರಗಳನ್ನೆಲ್ಲ ಪರಿಹರಿಸುವದು ದೃಷ್ಟಿಗೆ ತೀಕ್ಷ್ಣತೆಯುಂಟಾಗುವದು.

ಹೆಚ್ಚಾಗಿ ಓದತಕ್ಕವರಿಗೂ, ಒಂದೇ ಸಮನಾಗಿ ಕಣ್ಣಿಟ್ಟು ಕೆಲಸ ಮಾಡತಕ್ಕ ಕಸಬುಗಾರರಿಗೂ, ಕಣ್ಣುಗಳಲ್ಲಿ ನೀರು ಸುರಿಯುವವರಿಗೂ, ಉರಿಗಣ್ಣಿನವರಿಗೂ, ಚಿತ್ತವ್ಯಗ್ರವಾದವರಿಗೂ, ಅತ್ಯಂತ ಗುಣಕಾರಿಯಾಗಿರುವದು. ಈ ತೈಲದಲ್ಲಿರುವ ಇನ್ನೊಂದು ಅಪ್ರತಿಮವಾದ ಶಕ್ತಿಯೇನಂದರೆ—ಕೂದಲುಗಳನ್ನು ನಯವಾಗಿಯೂ, ಹೊಳೆಯುವಂತೆಯೂ, ಮಾಡುವದಲ್ಲದೇ ಬೆಳವಣಿಗೆಯನ್ನು ಹೆಚ್ಚಿಸುವದು. ಕೂದಲುಗಳ ಬೇರುಗಳನ್ನು ಧೃಢಪಡಿಸಿ, ಅವು ಉದುರಿಹೋಗದಂತೆ ಮಾಡುವದು.

ಪ್ರತಿಯೊಂದು ಬಾಟ್ಲಿಯೊಳಗೆ ಇರುವ ತೈಲವು ಉಪಯೋಗಿಸುವವರಿಗೆ ೨ ತಿಂಗಳು ಹೆಚ್ಚು ಕಡಿಮೆ ಸಾಕಾಗುವದು. ಪ್ರತಿ ಬಾಟ್ಲಿಗೆ ೧೦ ಆಣೆ, ಮೂರು ಬಾಟ್ಲಿಗಳಿಗೆ ೧ ರೂಪಾಯಿ ೧೨ ಆಣೆ, ಒಂದು ಡಜನ್ ಬಾಟ್ಲಿಗಳಿಗೆ ೬ ರೂ. ಪ್ರತಿ ಕೆಲಸಕ್ಕೂ ಒಂದು ಬಾಟ್ಲಿಯನ್ನು ಉಪಯೋಗಿಸುವದು ಅವಶ್ಯವಾಗಿರುತ್ತದೆ. ಪ್ಯಾಕಿಂಗ್ ಮತ್ತು ಅಂಚೆ ಖರ್ಚು ಪ್ರತ್ಯೇಕವಾಗಿರುತ್ತದೆ.

ಈ ತೈಲವು ಮತ್ತು ನಾವು ತಯಾರಿಸುವ ಔಷಧಗಳು, ಸೆಂಟ್ಸು, ಮುತ್ತು, ರತ್ನ, ಬಂಗಾರ, ಬೆಳ್ಳಿ ಮುಂತಾದ ಸಾಮಾನುಗಳನ್ನು ಕಳುಹಿಸುವವರು ಕೆಳಗಿನ ವಿಳಾಸಕ್ಕೆ ಬರೆಯತಕ್ಕದ್ದು.

ಮ್ಯಾನೇಜರ್, ಕೆನರಾ ಅಂಡ್ ಮೈಸೂರು ಟ್ರೇಡಿಂಗ್ ಕಂಪನಿ ಆಫೀಸ್, ಮಾರ್ಕೆಟ್ ಪೋಸ್ಟ್, ಮುಂಬಯಿ.

ಈ ತೈಲವನ್ನು ನಮ್ಮ ಹೆಸರಿನ ವ್ಯಾಪಾರಿಗಳು ಮಾರುತ್ತಾರೆ. ನಮ್ಮ ಹೆಸರಿನ ಗುರ್ತನ್ನು ನೋಡಿ ತೆಗೆದುಕೊಳ್ಳಬೇಕು. ಬೇರೆ ತರದ ಬಾಟ್ಲಿಗಳನ್ನು ಈ ಹೆಸರಿನಿಂದ ಮಾರುತ್ತಿದ್ದರೆ ಜಾಗ್ರತ ಪಡಿರಿ!

ಔಷಧಗಳು	ರೂ. ಆ.	ಸೆಂಟ್ಸುಗಳು	ರೂ. ಆ.
ಸುಧಾಮೃತವನ್ನು ಬಾಟ್ಲಿ ೧ಕ್ಕೆ	೧ ೬	ಮಾಲತಿಸ್ವಾರಿಗೆ ಮತ್ತು	೨—೪
ಸಮುದ್ರಾಮೃತ ಅಂಡಿಗೆ	೧—೭	ಕಸ್ತೂರಿಯ ಉಂಗುರಗಳು	೫—೮
ಕರ್ಣಾಸ್ರಾವನಾಶಕ ಅಪ್ರತಿಮತೈಲ	೧—೦	ಬಿಳಿ ಆರ್ಗನ	೪—೪
ಮಧುಮೇಹಕಾಂತಕವಟಿಕೆ	೦ ೧೦	ಬಿಳಿ ಪಟಾಕೋಟಿ (ಇಂಗ್ಲೀಷಿನವರ)	೪—೬
ಪ್ರಮೇಹಾಮೃತ	೨—೧೦	ಪಪ್ಪಾಯದ ಸಿಲ್ಕು (ರೆಕೋಟು)	೨—೪
ದಿನದ ಜ್ವರದ ಮಾತ್ರೆ	೦—೮	ಬಿಳಿ ಆರ್ಗನಿ	೨—೮
ಬಾಲರೋಗನಿವಾರಕ	೩—೪	ಪ್ಲಾನಲ್ ಕವಿಷನ	೧—೨
ಅಜೀರ್ಣಾಮೃತ	೦ ೪	ಬಿಳಿ ಬನೀಯನ್	೧—೮
ಸುಗಂಧಕೇಶತೈಲ	೨—೪	ಬಿಳಿ (ಇಂಗ್ಲೀಷಿನವರ) ಷರ್ಟು	೦—೧೨
ಕಣ್ಣಿನ ಔಷಧ	೨—೮		

ಜಾನ್ಸನ ಡಿಪಾರ್ಟ್ಮೆಂಟಿನ ಶಬ್ದ ಕೋಶ ಕ್ರಯ ರೂ. ೧೦—೮||—೩—೮|| ಉತ್ತಮವಾದ "ಸ್ಪ್ರಿಂಗ್" ಎಂಟು ದಿನ ನಡೆಯುವಂಥದ್ದು (೧ ವರ್ಷದ ಗ್ಯಾರಂಟಿ ಇರುವದು) ಕ್ರಯ ರೂ. ೬.

ನೋಟಿಸ್.

	ಕ್ರಯ		
ಪುಸ್ತಕಗಳು			
ವ್ಯಾಖ್ಯಾನ ಮಾಲಿಕೆ	೧	೮	೦
ಕನ್ನಡ ಇಂಗ್ಲೀಷು ನಿಘಂಟು ೧ ನೇ ದೊಡ್ಡ ತರಹ	3	0	0
" " ೨ ನೇ ತರಹ	2	8	0
ಬಾಲಕರು ಓದುವ ಎರಡನೆ ಜ್ಞಾನೋಪದೇಶ ಪ್ರಶ್ನೋತ್ತರಗಳು	0	1	0
ಸಭೆಯ ನಿಗಮಗಳನ್ನು ಕುರಿತದ್ದು	0	0	6
ಕಥಾ ಸಂಗ್ರಹ ೧ ನೇ ಭಾಗದಿಂದ ೩ ವರೆಗೆ	1	0	0
ಕಥಾ ಸಂಗ್ರಹ ೪ ರಿಂದ ೬ ನೇ ಭಾಗ ಹೊಸ ಛಾಪ	1	0	0
" " ದೊಡ್ಡ ತರಹ	1	8	0
ಬೋಧಕಶಾಸ್ತ್ರ ಬೋಧಿನಿ	0	1	0
ಪಕ್ಷಿಗಳನ್ನು ಕುರಿತು ೭ ನೇ ಭಾಗ	0	1	0
ಪ್ರಸಂಗದ ವಿವರಣ	0	0	6
ಇಂಗ್ಲೀಷುಭಾಷೆಯಲ್ಲಿಯೂ, ಕನ್ನಡ ಭಾಷೆಯಲ್ಲಿಯೂ, ಶಬ್ದಗಳ ವಿಭಾಗಗಳನ್ನು ವಿವರಿಸುವ ನಿಘಂಟು	0	2	0
ಕನ್ನಡ ವ್ಯಾಕರಣ (ಇಂಗ್ಲೀಷಿನಲ್ಲಿ)	2	0	
ಹಿಂದುಸ್ಥಾನಿ ವ್ಯಾಕರಣ	1	0	
ಬಾಲಬೋಧ ಸೋಪಾನವು	0	0	6
ದನ ಕರುಗಳ ಅಂಟುರೋಗವಿಚಾರ	0	12	
ಕ್ರೈಸ್ತರ ಪ್ರೊಟೆಸ್ಟಂಟರ ಸಾರಾಂಶವು	0	12	0

ಮೇಲೆ ಹೇಳಲ್ಪಟ್ಟಿರುವ ಪುಸ್ತಕಗಳನ್ನು ಅಪೇಕ್ಷಿಸುವವರು ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್ಸಿಗೆ ಬರೆದು ತರಿಸಿಕೊಳ್ಳಬಹುದು. ಅಂಚೇ ಹಾಸಲು ಬೇರೆ ಕೊಡಬೇಕು.

ವೆಸ್ಲಿಯನ್ ಮಿಷನ್ ಪ್ರೆಸ್,
ಮೈಸೂರು.

ಪ್ರಸಿದ್ಧಪತ್ರ.

ಶ್ರೀ || ಸಕಲಗುಣ ಸಂಪನ್ನರಾದ | ಸೂರ್ಯ ಚಂದ್ರಮಾನ | ಭಾಷಾಶಾಸ್ತ್ರ || ಪ್ರಕಟನಕರ್ತರಾದ ಶ್ರೀ ಕನ್ನಡ ವಿಶಾಲ ಪತ್ರಿಕೆಯ ಕರ್ತರಿಗೆ ನಮಸ್ಕಾರ ||

ಕನ್ನಡ ಮಹಾಭಾರತ.

"ಶ್ರೀಕೃಷ್ಣರಾಜ ವಾಣೀವಿಲಾಸ" ಎಂಬ ಕನ್ನಡ ಮಹಾಭಾರತವು ನಮ್ಮ ಸ್ವಕೀಯ ಶ್ರೀಮುಮ್ಮಡಿ ಕೃಷ್ಣರಾಜರವರ ಕಾಲದಲ್ಲಿ ಪ್ರಕಟವಾಗುವದು ಎಲ್ಲರಿಗೂ ವಿದಿತವಾಗಿಯೇ ಇದೆ. ಈಗ ಏಳನೆಯ ಸಂಪುಟಗಳು ಪೂರೈಸಿಯಾಗಿ ಪ್ರಸಿದ್ಧವಾಗಿರುವದರಿಂದ ಕೆಳಗೆ ವಿವರಿಸಿದ ಕ್ರಯದ ಮೇಲೆ ಕ್ರಯ ಪಾವತಿಸಬೇಕು.

ಆದಿಪರ್ವ ರೂ ೪, ಸಭಾಪರ್ವ ೧—೨ ೦, ಆರಣ್ಯಪರ್ವ ವಿರಾಟಪರ್ವ ಸ್ತ್ರೀಪರ್ವ ಶಾಂತಿಪರ್ವ ೦ ಆಣೆ, ಶಲ್ಯ ಶಿಖಾನ ದಿನ ಸ್ವರೂಪಪರ್ವ ೧ ರೂ. ಅನುಶಾಸನಿಕಪರ್ವ ಭೀಷ್ಮಪರ್ವ ರೂ. ೨ ... ಕರ್ಣಪರ್ವ ಸೌಪ್ತಿಕಪರ್ವ ೬ ಆಣೆ, ಶಾಂತಿಪರ್ವ ೨ ... ದ್ರೋಣಪರ್ವ ೩ ರೂ, ಉದ್ಯೋಗಪರ್ವ ... ೨—೮, ಆಶ್ವಮೇಧಿಕಪರ್ವ ... ೧—೨ ೦, ಆಶ್ರಮವಾಸಿಕಪರ್ವ ... ಸ್ವರ್ಗಾರೋಹಣಪರ್ವ ೧೦ ಆಣೆ, ಮೌಸಲಪರ್ವ ... ಆಣೆ, ಮಹಾಪ್ರಸ್ಥಾನಿಕಪರ್ವ ... ಆಣೆ. ಪ್ರತಿ ಒಂದು ಸಂಪುಟಕ್ಕೆ ಅಂಚೆ ಹಾಸಲು ಬೇರೆ ...

ಆದ್ಯಾಪಕರೂ, ಉದ್ಯೋಗಸ್ಥರೂ, ಇತರರೂ ಈ ಗ್ರಂಥಗಳನ್ನು ಗವರ್ನಮೆಂಟ್ ಬುಕ್ ಡಿಪೋವಿನಲ್ಲಿ ನೋಡಬಹುದು. ಮೇಲೆ ಹೇಳಲ್ಪಟ್ಟಿರುವ ಪುಸ್ತಕಗಳು ನಮ್ಮಲ್ಲಿ ಸ್ವಲ್ಪವೇ ಇರುವದರಿಂದ ಆಗ್ರಹಪಟ್ಟು ತರಿಸಿಕೊಳ್ಳಬಹುದು. ಶ್ರೀಮುಮ್ಮಡಿ ಕೃಷ್ಣರಾಜರವರಿಗೆ ಭಕ್ತಿಪೂರ್ವಕ ಸಹಾಯಮಾಡುವ ತಾವುಗಳು ಶೀಘ್ರವಾಗಿ ಸಲಿಸಬೇಕು.

ಎಂ. ರಾಮಣ್ಣ, ಏಜೆಂಟ್,
ಕೃಷ್ಣರಾಜ ವಾಣೀವಿಲಾಸ ಪ್ರೆಸ್,
ಅರಳೇಪೇಟೆ ರೋಡ್, ಬೆಂಗಳೂರು.

ವೃತ್ತಾಂತ ಪತ್ರಿಕೆ.

ಚಂದಾ ನಿರ್ಣಯ.

	ರೂ. ಆ. ಪೈ.
ಸ್ಥಳದ ಚಂದಾ ೧ಕ್ಕೆ	೦—೬—೦
ಹೊರ ಸ್ಥಳದ ಚಂದಾ ೧ಕ್ಕೆ	೦—೮—೦
ಬಿಡಿ ಪತ್ರಿಕೆ ೧ಕ್ಕೆ	೦—೦—೩

ಈ ಪತ್ರಿಕೆಯು ಮೈಸೂರು ರಾಜಧಾನಿಯಲ್ಲಿ ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ, ಪ್ರಕಟಿಸಲ್ಪಡುವದು. ಇದರ ಚಂದಾದಾರರಾಗ ಬಯಸುವವರು ಕೆಳಗೆ ಸಹಿ ಮಾಡಿರುವವರಿಗೆ ಬರೆಯಬೇಕು. ಮುಂಗಡವಾಗಿ ಚಂದಾ ಹಣವನ್ನು ಕಳುಹಿಸುವವರಿಗೆ ಈ ಪತ್ರಿಕೆಯು ಅಂಚೆ ಮೂಲಕ ಕಳುಹಿಸಲ್ಪಡುವದು. ಈ ಪತ್ರಿಕೆಗೆ ಇಷ್ಟು ಅಲ್ಪ ಕ್ರಯವನ್ನು ನಿರ್ಣಯಿಸಿದ್ದೇವೆ. ಈ ಪತ್ರಿಕೆಯನ್ನು ಅಪೇಕ್ಷಿಸುವವರು ಚಂದಾ ಹಣವನ್ನು ಮುಂಗಡವಾಗಿ ಕೊಡಬೇಕು.

ಏಜೆಂಟ್,
ವೃತ್ತಾಂತ ಪತ್ರಿಕೆ.

ಟೋಪಿಗಳು!

ಟೋಪಿಗಳು!! WOOL CAPS ಟೋಪಿಗಳು!!

ಹಾಸನದ ಅನಾಥಶಾಲೆಯಲ್ಲಿ ತಯಾರಾಗುವಂಥ ಅನೇಕ ವಿಧವಾದ ಉಣ್ಣೆ ಟೋಪಿಗಳು (Wool Caps) ನಮ್ಮ ಆಫೀಸಿನಲ್ಲಿ ಮಾರಿಕೆಗೆ ಸಿದ್ಧವಾಗಿರುತ್ತವೆ. ಬೆಲೆ—೧ ರೂ. ೨ ಆಣೆ ಇಂದ ೧ ರೂ. ೬ ಆಣೆ ವರೆಗೆ. ಬೇಕಾದವರು ಬೇಗ ತರಿಸಿಕೊಳ್ಳಬಹುದು. ಸ್ಥಳದವರು ಖುದ್ದಾಗಿ ನೋಡಿ ಕೊಳ್ಳಬಹುದು. ಪರಸ್ಥಳದವರು ಮುಂಗಡವಾಗಿ ಹಣ ಕಳುಹಿಸಿದರೆ ವಿ. ಪಿ. ಮೂಲಕ ಕಳುಹಿಸುತ್ತೇವೆ. ಅಂಚೆ ಖರ್ಚು ಬೇರೆ ಕೊಡಬೇಕು. ಕಾಗದ ಬರೆಯುವಾಗ ಟೋಪಿಗೆ ಸಂಬಂಧವಾದದ್ದು ಎಂದು ಬರೆಯಬೇಕು.

ಮ್ಯಾನೇಜರ್,
ವೆಸ್ಲಿಯನ್ ಮಿಷನ್ ಪ್ರೆಸ್,
ಮೈಸೂರು.

ಕ್ಯಾಪ್ಟನ್ ಅಂಡ್ ಕಂಪೆನಿ

ಮೈಸೂರಿನ ಕೆಮಿಸ್ಟ್ಸ್.

ಇವರು ಶಿವರಾಮ ಪೇಟೆಯಲ್ಲಿ ಒಂದು ಬ್ರಾಂಚ್ ಔಷಧ ಶಾಲೆಯನ್ನು ಸ್ಥಾಪಿಸಿರುತ್ತಾರೆ. ಇಲ್ಲಿ ನಾನಾವಿಧವಾದ ಔಷಧಗಳು ಸುಲಭ ಬೆಲೆಗೆ ದೊರೆಯುತ್ತವೆ. ಮತ್ತು ಉತ್ತಮತರವಾದ ಸಾಮಗ್ರಿಯುಗಳನ್ನು ಉಪಯೋಗಿಸಿ ಔಷಧಗಳನ್ನು ತಯಾರು ಮಾಡಿ ಕೊಡುತ್ತಾರೆ.

ಈ ಜನೋಪಯುಕ್ತವಾದ ಔಷಧ ಶಾಲೆಯಲ್ಲಿ ರಾತ್ರಿ ಹಗಲು ಯಾವವೇಳೆ ಬೇಕಾದಾಗ್ಯೂ ಔಷಧಗಳು ದೊರೆಯುತ್ತವೆ.

ವೃತ್ತಾಂತ ಪತ್ರಿಕೆ.

—o.—

೧೮೯೩ನೇ ಇಸವಿ ಆಗಸ್ಟ್ ತಾ|| ೨೪ ನೇ ಗುರುವಾರ

ಸೆನ್ಸಸ್ ರಿಪೋರ್ಟು.

II

ಮೂರು ವಾರಗಳ ಕೆಳಗೆ ಸೆನ್ಸಸ್ ರಿಪೋರ್ಟಿನ ವಿಷಯವಾಗಿ ನಮ್ಮ ಅಭಿಪ್ರಾಯ ತಾತ್ಪರ್ಯವನ್ನು ವಾಚಕರಿಗೆ ತಕ್ಕಮಟ್ಟಿಗೆ ಪರಿಷ್ಕಾರವಾಗಿ ತಿಳಿಸಿದೆವಷ್ಟೆ. ಆ ರಿಪೋರ್ಟಿನಲ್ಲಿ ಕಂಡಂತೆ ಮೈಸೂರು ಸೀಮೆಯ ಜನಸಂಖ್ಯೆಯಲ್ಲಿ ೨೪ ಕೋಟಿ ೯೩ ಲಕ್ಷ ದಶೈಹ೯ ಮಂದಿ ಗಂಡಸರೂ, ೨೪ ಕೋಟಿ ೩೦ ಲಕ್ಷದ ೩೫ ಮಂದಿ ಹೆಂಗಸರೂ ಇರುವರೆಂದು ತಿಳಿಯಬರುವುದಾಗಿದೆ. ಈ ಜನರಲ್ಲಿ ಕೆಲವರು ಮದುವೆಯಿಲ್ಲದವರು, ಕೆಲವರು ಮದುವೆಯಾದವರು, ಕೆಲವರು ವಿಧವೆಯರು ಆಗಿರುವಲ್ಲಿ ಒಂದೊಂದು ಸ್ಥಿತಿಯಲ್ಲಿ ಎಷ್ಟೆಷ್ಟು ಜನರು ಇರುತ್ತಾರೆಂದು ವಿಚಾರಿಸುವದು ಪ್ರಯೋಜನವಾಗಿರುವದು. ಜನರನ್ನು ಒಟ್ಟಾಗಿ ನೋಡಿದರೆ ಶೇಕಡಾ ೪೫ ಮಂದಿ ಮದುವೆಯಿಲ್ಲದವರೂ, ೪೭ ಮಂದಿ ಮದುವೆಯಾದವರೂ, ೧೩ ವಿಧವೆಯರೂ ಇರುತ್ತಾರೆ. ಈ ವಿಷಯದಲ್ಲಿ ಮೈಸೂರು ಸೀಮೆಗೂ ಅನ್ಯದೇಶಗಳಿಗೂ ಬಹು ತಾರತಮ್ಯವುಂಟೆಂದು ನಮಗೆ ತೋರುತ್ತದೆ. ಹ್ಯಾಗೆಂದರೆ ಇಂಗ್ಲೆಂಡಿನಲ್ಲಂತೆಕ್ಕೆ ಹೆಂಗಸರಲ್ಲಿ ಶೇಕಡ ೬೧ ಮಂದಿ ಮದುವೆಯಿಲ್ಲದವರಾಗಿರುವಲ್ಲಿ, ಮೈಸೂರಿನಲ್ಲಿ ಶೇಕಡ ೩೦ ಮಂದಿ ಹೆಂಗಸರು ಮಾತ್ರ ಮದುವೆಯಿಲ್ಲದವರಾಗಿರುವರು. ಹ್ಯಾಗೆಯೇ ವಿಧವೆಯರ ಲೆಖ್ಖವನ್ನು ನೋಡಿದರೆ ವಿಲಾಯತಿಯಲ್ಲಿ ಶೇಕಡ ೮ ಮಂದಿ ಹೆಂಗಸರೂ, ಮೈಸೂರಿನಲ್ಲಿ ಶೇಕಡ ೨೧ ಮಂದಿ ಹೆಂಗಸರೂ ವಿಧವೆಯರಾಗಿರುತ್ತಾರೆ. ಈ ದೇಶದಲ್ಲಿ ಮದುವೆಯಾಗಿರುವ ಎಲ್ಲಾ ಹೆಂಗಸರನ್ನು ನಾವು ಏಣಿಕೆಮಾಡಿದರೆ ಅವರಲ್ಲಿ ಅರ್ಧಪಾಲಿನವರು ವಿಧವೆಯರಾಗಿ ದುಃಖದಲ್ಲಿ ಬಿದ್ದಿರುವರೆಂದು ನಮಗೆ ತಿಳಿಯಬರುತ್ತೆ. ಇಂಗ್ಲೆಂಡಿನ ವಿಧವೆಯರಿಗೂ ಮೈಸೂರಿನ ವಿಧವೆಯರಿಗೂ ಲೆಖ್ಖದಲ್ಲಿ ಮಾತ್ರವಲ್ಲದೆ ಸ್ಥಿತಿಯಲ್ಲಿ ಕೂಡ ಬಹು ವ್ಯತ್ಯಾಸವಿರುವಂತೆ ತೋರುತ್ತದೆ. ವಿಲಾಯತಿಯಲ್ಲಿರುವ ವಿಧವೆಯರು ಜನರ ನಿಂದನೆಗೂ, ಹಿಂಸೆಗೂ ಗುರಿಯಾಗದೆ, ಅವರ ಪ್ರೀತಿಗೂ ಕರುಣೆಗೂ ಯಾವಾಗಲೂ ಪಾತ್ರರಾಗಿರುತ್ತಾರೆ. ಮುಂಡನ ಮಾಡುವದು, ಉಪವಾಸವಿರುವದು, ಒಡವೆಗಳನ್ನು ತೆಗೆದುಹಾಕುವದು ಅವೇ ಮೊದಲಾದ ದುಃಖಕರವಾದ ಸಂಗತಿಗಳಿಗ್ಯಾವವೂ ಅವರಿಗಿಲ್ಲ. ಪುನರ್ವಿವಾಹ ಮಾಡಿಕೊಳ್ಳುವದಕ್ಕೆ ಅವರಿಗೆ ಇಷ್ಟವಿದ್ದರೆ ಯಾರೂ ಅವರ ಪ್ರತಿಬಂಧವನ್ನು ಮಾಡುವದಿಲ್ಲ. ಈ ದೇಶದಲ್ಲಿ ವಿಧವೆಯರಿಗಿರುವ ಸ್ಥಿತಿಯನ್ನು ವರ್ಣಿಸಿ ವಾಚಕರಿಗೆ ತಿಳಿಸಬೇಕಾದ ಅವಶ್ಯಕವಿಲ್ಲವು. ಪ್ರತಿ ಊರಿನಲ್ಲೂ, ಪ್ರತಿಬೀದಿಯಲ್ಲೂ, ಪ್ರತಿಮನೆಯಲ್ಲೂ ಅವರ ದುಸ್ಥಿತಿಯು ನಮ್ಮ ವಾಚಕರಿಗೇನೇ ಪ್ರತ್ಯಕ್ಷ ಪ್ರಮಾಣವಾಗಿರುವದು. ಈ ವಿಧವೆಯರ ದುಸ್ಥಿತಿಗೆ ಯಾವ ಕಾರಣವಿರುವದು? ಹಿರಿಯರಿಂದ ಅನುಸರಿಸಿಕೊಂಡು ಬಂದ ಸಂಪ್ರದಾಯವೂ ಈಗಿನವರ ದುರ್ಬುದ್ಧಿಯೂ ಈ ಅನ್ಯಾಯಕ್ಕೆ ಕಾರಣವೇಹೊರ್ತು ಬೇರೆ ಯಾವ ಕಾರಣವೂ ತೋರುವದಿಲ್ಲ.

ಅಯೋಧ್ಯೆಯಲ್ಲಿ ಆಳುತ್ತಿದ್ದ ಪೂರ್ವ ಅರಸರ ಸಂತತಿಯಲ್ಲಿ ಒಬ್ಬರು ಸಂಸಾರ ಸಮೇತರಾಗಿ ಕಲ್ಕತ್ತೆಯಲ್ಲಿ ವಾಸಮಾಡುತ್ತಿದ್ದರು ಗವರ್ನಮೆಂಟಿನವರು ಅವರಿಗೆ ಮಾಸವಾರಾ ೫೦೦ ರೂಪಾಯಿ ಪಿಂಚನಿ ಸಲ್ಲಿಸುತ್ತಿದ್ದರು ಕೆಲವು ದಿನಗಳ ಕೆಳಗೆ ಆ ಸಂಸಾರದಲ್ಲಿದ್ದ ೫ ಮಂದಿಯ ಪೈಕಿ ಮೂವರು ಏಕಕಾಲದಲ್ಲಿ ಸತ್ತುಹೋದರು ಉಳಿದಿರುವವರಿಬ್ಬರೂ ಹೆಂಗಸು ಇವರ ಗತಿಯನ್ನು ವರ್ಣಿಸುವದಕ್ಕಾಗದಾಗಿದೆ

ಕಾಬೂಲಿನ ಒಬ್ಬ ವರ್ತಕನು ತನ್ನ ಸಾಮಾನುಗಳ ಗಂಟುಗಳಲ್ಲಿ ವಿಪರೀತ ವಜ್ರಗಳನ್ನು ಕಳವು ಮಾಡಿಕೊಂಡು ಹೊರಗೆ ಬಂದನು ಈ ಪ್ರಕಾರ ತನಗೆ ಪೂರಾ ಅದಾಯವಾಗಿರುತ್ತೆಂದು ಒಂದು ಕಾಗದದಲ್ಲಿ ಬರೆದು ಕಾಬೂಲಿನಲ್ಲಿದ್ದ ತನ್ನ ಮಿತ್ರನಿಗೆ ತಿಳಿಸಿದನು ಆದರೆ ಆ ಕಾಗದವನ್ನು ಇನ್ಯಾರೋ ಒಬ್ಬನು ನೋಡಿದರು ಇದರಿಂದ ಕಳ್ಳನು ಪತ್ತೇ ಆದನು ಅದನಿಗೆ ಅಮೀರರು ೫೦,೦೦೦ ರೂಪಾಯಿ ಜುಲ್ಮಾನೆ ಹಾಕಿರುತ್ತಾರೆ.

ಈಗ ಹಿಂದೂಸ್ಥಾನದಲ್ಲಿ ಒಟ್ಟು ೧೮,೦೦೦ ಮೈಲಿಗಳಷ್ಟು ರೈಲ್ವೆ ಇದೆ ಇದಕ್ಕಾಗಿ ೨೦ ಕೋಟಿ ದ್ರವ್ಯ ಖರ್ಚಾಗಿರುತ್ತೆ ಹಿಂದೂಸ್ಥಾನದಲ್ಲಿರುವ ಸಮಸ್ತ ನಾಲೆಗಳಿಗೂ ೩|| ಕೋಟಿ ರೂಪಾಯಿಗಳನ್ನು ಗವರ್ನಮೆಂಟಿನವರು ಖರ್ಚುಸಿರುತ್ತಾರೆ ಆದರೆ ಇದರಿಂದ ಸರಾಸರಿ ನಾಲಿವರ್ಷಾ ೨೯ ಕೋಟಿ ರೂಪಾಯಿ ಉತ್ಪತ್ತಿಯಾಗುತ್ತಲಿದೆ ಮತ್ತು ಭಾರೀವೃಷ್ಟಿ ಬಾವಿನಲ್ಲಿ ಕಳೆದ ವರ್ಷ ೬೬,೬೬,೫೬೦ ರೂಪಾಯಿ ಹುಟ್ಟುವಳಿಯಾದಂತೆ ರಿಪೋರ್ಟಿನಿಂದ ಗೊತ್ತಾಗಿದೆ

ಕಳೆದ ಮಂಗಳವಾರ ನೇರುಂಕಾಲ ಮದರಾಸಿನಲ್ಲಿ ೩೫ ವರ್ಷ ವಯಸ್ಸಿನ ರಾಮಾಂಜಿ ಚೆಟ್ಟಿ ಎಂಬವನು ಇನ್ನೊಬ್ಬನ ಜೊತೆಯಲ್ಲಿ ಒಂದು ಜಟ್ಕಾ ಗಾಡಿಯಲ್ಲಿ ಕೂತುಕೊಂಡು ಹೋಗುತ್ತಿದ್ದನು ಅಕಸ್ಮಾತ್ತಾಗಿ ಗಾಡಿಯು ಹೊರಳಿ ಅವನು ಕೆಳಕ್ಕಾಗಿ ಬಿದ್ದು ಮೂರ್ಛೆಹೋದನು ಕೂಡಲೆ ಅವನನ್ನು ಜನರಲ್ ಆಸ್ಪತ್ರೆಗೆ ಹೊತ್ತುಕೊಂಡು ಹೋಗಿ ಚಿಕಿತ್ಸೆ ಮಾಡಿದರು ಆದರೂ ಅವನಿಗೆ ಪುನಃ ಪ್ರಜ್ಞೆ ಬರಲೇ ಇಲ್ಲ ಹಾಗೇ ಸತ್ತು ಹೋದನು ಆದ್ದರಿಂದ ಜಟ್ಕಾ ಗಾಡಿಯಲ್ಲಿ ಕೂತುಕೊಳ್ಳುವವರು ತುಂಬಾ ಜಾಗರೂಕರಾಗಿರಬೇಕು

ಮಿಷ್ರೀ ಜಂಬಾನೆಗಳು ಪ್ರಪಂಚದಲ್ಲೆಲ್ಲಾ ಪ್ರಖ್ಯಾತವಾದವುಗಳಲ್ಲವೆ? ಕಳೆದ ಸಣ್ ೧೮೫೧ನೇ ಇಸವಿಯಲ್ಲಿ ತಯಾರ್ಮಾಡಲ್ಪಟ್ಟ ಒಂದು ಜಂಬಾನವನ್ನು ಈಗ ಬ್ರಿಟಿಷ್ ಮ್ಯೂಜಿಯಂ (ಲಂಡನ್) ನಲ್ಲಿ ಇಟ್ಟಿರುತ್ತಾರೆ ಅದು ೩೩ ಅಡಿ ಉದ್ದ, ೧೩ ಅಡಿ ಅಗಲ, ೬ ಅಂಗುಲ ದಪ್ಪದ ಉಳ್ಳದ್ದಾಗಿದೆ ಅದರ ಒಂದು ಚದರ ಅಂಗುಲಕ್ಕೆ ೩೮೦ ಹೆಣಿಗೆಗಳುಂಟು ಹೀಗೆ ಆ ಜಂಬಾನದಲ್ಲೆಲ್ಲಾ ಒಟ್ಟು ೩|| ಕೋಟಿ ಹೆಣಿಗೆಗಳಿರುತ್ತವೆ ಅದರ ಮೇಲೆ ಪಾರಸೀ ಭಾಷೆಯಲ್ಲಿ ಮಾಡಿದ ಸ್ಥಳ, ಕಾಲ, ಮಾಡಿದವನ ಹೆಸರು, ಇವೇ ಮುಂತಾದ ಅಕ್ಷರಗಳು ಇವು ಇರುತ್ತವೆ ಇಂಥಾ ಜಂಬಾನವು ಯೂರೋಪ್ ಖಂಡಕ್ಕೇ ಅಪೂರ್ವವೆಂದು ಎಲ್ಲರೂ ಒಪ್ಪಿಕೊಂಡಿದ್ದಾರೆ

ಮ್ಯಾಂಚೆಸ್ಟರಿನಲ್ಲಿ ಜೆಂಕಿನ್ಸ್ ಎಂಬವನು ಸ್ಪ್ರಿಂಗ್ ಫೀಲ್ಡ್ ಎಂಬವನಿಗೆ ಪೂರ್ವದಲ್ಲಿ ೩೦ ಷಿಲ್ಲಿಂಗ್‌ಸಾಲ ಕೊಡಬೇಕಾಗಿತ್ತು ಆದರೆ ಈಗ ನಿರ್ಗತಿಕನಾಗಿ ಸರ್ಕಾರದವರಿಂದ ಪೋಷಿಸಲ್ಪಡುತ್ತಲಿದ್ದಾನೆ ಅವನಮೇಲೆ ಈ ಸಾಲಕ್ಕಾಗಿ ದಾವಾ ಆಯಿತು ಡಸ್ಟ್ರಿಯವರು ಪ್ರತಿವಾದಿಯ ನಿರ್ಗತಿಯನ್ನು ತಿಳಿದು ವರ್ಷ ೧ ಕ್ಕೆ ೧ ಪೆನ್ನಿ ಪ್ರಕಾರ ವಾದಿಗೆ ಬರತಕ್ಕ ಬರತಕ್ಕದ್ದೆಂತಲೂ ಮೊದಲನೆ ಕಿಸ್ತು ೧೮೯೯ ನೆ ಜುಲೈನಲ್ಲಿ ಕೊಡತಕ್ಕದ್ದೆಂತಲೂ ತೀರ್ಮಾನಿಸಿದರು ಪ್ರತಿವಾದಿಗೆ ಈಗಲೇ ೬೫ ವರ್ಷ ವಯಸ್ಸಾಗಿದೆ ವರ್ಷಕ್ಕೆ ೧ ಪೆನ್ನಿ ಪ್ರಕಾರ ೩೦ ಷಿಲ್ಲಿಂಗ್ ಕೊಟ್ಟು ಸಾಲ ತೀರಿಸುವದು ಎಂಥಾದ್ದೋ ವಾಚಕರೇ ಊಹಿಸಿಕೊಳ್ಳಬಹುದು

ಚೈನಾ ಸಂಸ್ಥಾನದ ರಾಜಧಾನಿಯಾದ ಪೀಕಿಂಗ್‌ಪಟ್ಟಣದ ದಕ್ಷಿಣದಿಕ್ಕಿನ ಹಾಂಗ್‌ಕೋ ಪಟ್ಟಣದಲ್ಲಿ ಮಳೆಯು ಸಮೋಧ್ಧಾರವಾಗಿ ಸುರಿದು ಊರಲ್ಲೆಲ್ಲಾ ಕೆಲವು ಅಡಿಗಳ ಪ್ರಮಾಣ ನೀರುನಿಂತಿದೆ ಮನೆಗಳೆಲ್ಲಾ ತೇಲಾಡುತ್ತವೆ ಛಾವಣಿ ಮನೆಗಳ ಕೊನೆಗಳು ಮಾತ್ರ ಕಾಣುತ್ತವೆ ಪ್ರಜೆಗಳು ಅನೇಕವಾಗಿ ನಾಶಹೊಂದಿದರಲ್ಲದೆ, ಇರುವವರ ಗೋಳಾಟವನ್ನು ವಿವರಿಸಲು ಯಾರಿಂದಲೂ ಸಾಧ್ಯವಲ್ಲ ಅಲ್ಲಿನ ಅಧಿಕಾರಿಗಳು ಪ್ರಭುಗಳಿಗೆ ತಂತಿಯಮೂಲಕ ಕೊಟ್ಟರು ದೋಣಿಗಳಲ್ಲಿ ಆ ಹಾರಗಳನ್ನು ತುಂಬಿಕೊಂಡು ಹೋಗುತ್ತಿದ್ದಾರೆ ಇನ್ನೂ ನಾನಾವಿಧವಾಗಿ ಅವರಿಗೆ ಸಹಾಯ ಮಾಡಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆಂದು ತಿಳಿದು ಸಂತೋಷಿಸುತ್ತೇವೆ

ಬೊಂಬಾಯಿಯಲ್ಲಿ ಹಿಂದೂ ಮುಸಲ್ಮಾನರುಗಳಿಗೆ ಕಲಹ ಹತ್ತಿಕೊಂಡಿದ್ದಾಗ್ಯೆ ಇಬ್ಬರು ಯೂರೋಪಿಯನ್ ಸ್ತ್ರೀಯರು ಒಂದು ಗಾಡಿಯಲ್ಲಿ ಕೂತುಕೊಂಡು ಆ ಮಾರ್ಗವಾಗಿ ಹೋಗುತ್ತಿದ್ದರು ಆ ಗಾಡಿಯನ್ನು ಹೊಡೆಯುತ್ತಿದ್ದವನು ಮುಸಲ್ಮಾನನು ಅವನನ್ನು ದಂಗೆಯವರು ಹಿಡಿದು ಎಳೆದು ಹೊಡೆದು ಗಾಡಿಯೊಳಕ್ಕೆ ನುಗ್ಗಿ ಲೇಡಿಗಳನ್ನು ಹಿಂಸಿಸಿ ಅವರ ಬಳಿಯಲ್ಲಿದ್ದ ಸುಮಾರು ರೂಪಾಯಿ ನಗಗಳನ್ನು ಕಿತ್ತುಕೊಂಡರು ಅವರ ಅದೃಷ್ಟದಲ್ಲೇ ಪೋಲೀಸಿನವರು ಅವರಿಗೆ ಸಹಾಯ ಮಾಡಿದ್ದರಿಂದ ಅವರು ತಮ್ಮ ಪ್ರಾಣಗಳನ್ನು ಉಳಿಸಿಕೊಂಡು ತಾವೇ ತಮ್ಮ ಗಾಡಿ ಹೊಡೆಯುತ್ತಾ ಮನೆಗೆ ಸೇರಿದರು ಅಷ್ಟಕ್ಕೇ ತಮಗೆ ಬಿಡುಗಡೆಯಾಯಿತಲ್ಲಾ ಎಂದು ಹರ್ಷಿಸುತ್ತಾರೆ

ಟ್ರೈಬರ್‌ನದಿಯ ಸೇತುವೆಯ ಮೇಲೆ ಆಡುತ್ತಿದ್ದ ಒಬ್ಬ ಬಾಲೆಯು ಆಯತಪ್ಪಿ ನದಿಯೊಳಕ್ಕೆ ಬಿದ್ದು ಕೊಚ್ಚಿಕೊಂಡು ಹೋಗುತ್ತಿದ್ದಳು ಇದನ್ನು ಅನೇಕರು ನೋಡಿದಾಗ್ಯೂ ನದಿಯೊಳಕ್ಕೆ ಯಾರೂ ಹಾರಿಬಿದ್ದು ಅವಳನ್ನು ಬದುಕಿಸಲಾರದೆ ಹೋದರು ಅಷ್ಟರಲ್ಲಿ ಒಂದು ನಾಯಿ ನೀರಿನಲ್ಲಿ ಬಿದ್ದು ಈಜಿಕೊಂಡು ಹೋಗಿ ಆ ಹುಡುಗಿಯ ಜುಟ್ಟನ್ನು ಕಚ್ಚಿ ಎಳೆದುತಂದು ಬಹು ಸಾಹಸದಿಂದ ದಡಕ್ಕೆ ಸೇರಿಸಿತು ಕೂಡಲೆ ಅವಳ ಬಳಿಯಲ್ಲಿ ಕುಣಿಯುತ್ತಲೂ, ಸಂತೋಷವಾಗಿ ಬಾಲವನ್ನು ಅಲ್ಲಾಡಿಸುತ್ತಲೂ ನಿಂತಿತ್ತು ಸ್ವಲ್ಪ ಹೊತ್ತಿನ ಮೇಲೆ ಹುಡುಗಿಗೆ ಪ್ರಜ್ಞೆಬಂದು ತನ್ನ ಮನೆಗೆ ಹೋದಳು ಈ ನಾಯಿ ಅವಳ ನೆರೆಮನೆಯಲ್ಲಿತ್ತು ಅದಕ್ಕೆ ಆಗಾಗ್ಯೆ ಸ್ವಲ್ಪ ತಿಂಡಿಯನ್ನು ಕೊಟ್ಟು ಅದನ್ನು ಸಂತೋಷಪಡಿಸುತ್ತಿದ್ದಳು ಆ ದಿನ ಆಕಸ್ಮಾತ್ತಾಗಿ ಅವಳೂ ನಾಯಿಯೂ ಇಬ್ಬರೂ ಆ ಸೇತುವೆಯ ಮೇಲೆ ಆಡುತ್ತಿದ್ದರು ಈ ಪ್ರಕಾರ ನಾಯಿಯ ಗುಣವನ್ನು ಅನೇಕವೇಳೆ ಜನರು ನೋಡಿರುತ್ತಾರೆ

ಬೊಂಬಾಯಿ ಕೋಟೆಗೆ ಸೇರಿದ ಚೆಲ್ವಾ ಎಂಬೂರಿನಲ್ಲಿ ಒಬ್ಬ ಬಾಬೂ ತನ್ನ ೧೩ ವರ್ಷದ ಹೆಣ್ಣುಮಗಳನ್ನು ಆ ಊರ ಮನೆಗೆ ಕಳುಹಿಕೊಟ್ಟನು ಅಳಿಯನಾದವನು ಆ ಹುಡುಗಿಯನ್ನು ಒಂದು ಕೊಠಡಿಯಲ್ಲಿ ಹಗ್ಗದಿಂದ ಕಟ್ಟಿಹಾಕಿ ಬಾಕಲು ಬೀಗ ಹಾಕಿಕೊಂಡಿದ್ದನು ಅಲ್ಲದೆ ಅವಳನ್ನು ಆಗಿಂದಾಗ್ಯೆ ನಾನಾವಿಧವಾಗಿ ಹಿಂಸೆಪಡಿಸುತ್ತಿದ್ದನು ಆ ಹುಡುಗಿಯ ತಂದೆಯು ಅವಳನ್ನು ನೋಡಬೇಕೆಂದು ಎಷ್ಟುಮಾತ್ರ ಆ ಯುವನನ್ನು ಕೇಳಿದರೂ ತೋರಿಸಲಿಲ್ಲ ಹೀಗೆ ಹಿಂಸೆಪಡಿಸುತ್ತಲಿದ್ದನೆಂದು ನೆರೆಹೊರೆಯವರಿಂದ ತಿಳಿದು ಅಳಿಯನಮೇಲೆ ದಾವಾ ಮಾಡಿದನು ಮ್ಯಾಜಿಸ್ಟ್ರೇಟರ ಹುಕುಂಪ್ರಕಾರ ಅಳಿಯನು ತನ್ನ ಹೆಂಡತಿಯನ್ನು ಕೋರ್ಟಿಗೆ ತಂದು ನಿಲ್ಲಿಸಬೇಕಾಯಿತು ಆಗ ಮ್ಯಾಜಿಸ್ಟ್ರೇಟರು ಆ ಹುಡುಗಿಯ ಮೈಮೇಲಿದ್ದ ನಾನಾತರದ ಗಾಯಗಳನ್ನು ನೋಡಿ ಅವಳನ್ನು ಆಸ್ಪತ್ರೆಗೆ ಕಳುಹಿಸಿಕೊಟ್ಟು, ಅವಳ ಗಂಡನನ್ನು ವಿಚಾರಣೆಗಾಗಿ ಅರೆಸ್ಟು ಮಾಡಿರುತ್ತಾರೆ ಹಿಂದೂಗಳಲ್ಲಿ ಇಂಥಾ ಕ್ರೂರ ಗಂಡಂದಿರು ಅನೇಕರಿರುತ್ತಾರೆ ಹೀಗೆಯೇ ಎಷ್ಟೋ ಬಾಲೆಗರು ಬಹಿರಂಗಕ್ಕೆ ಬಂದು ಶಿಕ್ಷಿಸಲ್ಪಟ್ಟರೆ ಕ್ಷೇಮವುಂಟಾಗುತ್ತವೆ

ಫ್ರಾನ್ಸದೇಶದಲ್ಲಿ ಮುದುಕನಾದ ಒಬ್ಬ ರೈತನು ತನ್ನ ಜಮೀನುಗಳನ್ನೆಲ್ಲಾ ಮಗನ ಹೆಸರಿಗೆ ಮಾಡಿ ತಾನು ಮನೆಯಲ್ಲಿ ಮಗ ಕೊಡುವ ಅನ್ನವಸ್ತ್ರಗಳಿಂದ ತನ್ನ ಮುಪ್ಪನ್ನು ಕಳೆಯಬೇಕೆಂದಿದ್ದನು ಒಂದಾನೊಂದು ದಿನ ಮಗನಾದವನು ಒಂದು ಬಾವಿಯನ್ನು ಎತ್ತಿ ಬೇರೆಕಡೆ ಹಾಕುವದಕ್ಕೆ ತಂದೆಯ ಸಹಾಯವನ್ನು ಅಪೇಕ್ಷಿಸಿದನು ತಂದೆ ಹೋಗಿ ಆ ಬಾವಿಯನ್ನು ಎತ್ತುವದಕ್ಕೆ ಪ್ರಯತ್ನ ಮಾಡುತ್ತಿದ್ದಾಗ ಮಗನು ಅವನನ್ನು ಬಾವಿಗೆ ತಳ್ಳಿ ಅದರ ಮೇಲೆ ಕಲ್ಲುಗುಂಡುಗಳನ್ನು ಹಾಕಿ ಕಂಟ್ಟೆನೆಯ ಬಾಕಲನ್ನು ಬೀಗಮುದ್ರೆ ಮಾಡಿಕೊಂಡು ಬಂದನು ಮೂರು ದಿನಗಳನಂತರ ಪುನಃ ಹೋಗಿ ನೋಡುವಾಗ್ಯೆ ತಂದೆಗೆ ಇನ್ನೂ ಸ್ವಲ್ಪಪ್ರಾಣ ಉಂಟೆಂದು ಕಂಡು ಆಗ ಮಗನು ಅವನನ್ನು ಪ್ರಾಣಬಿಡಿಸಿದನು ಈ ಪಾತಕನಿಗೆ ಸರ್ಕಾರದಿಂದ ಮರಣದಂಡನೆಯಾಗಿದೆ ದಸ್ತ್ಯಾಪ್ತಿ ಕಾಲದಲ್ಲಿ—ಈ ಹಾಳು ವಯಿದಿಕನಮೇಲೆಯಿಂದ ನನಗೆ ಖರ್ಚು ಹೆಚ್ಚಿ ಯಿತು ಆದ್ದರಿಂದ ಅವನನ್ನು ಕೊಂದುಹಾಕಿರುತ್ತೇನೆ ಎಂಬ ದಾಗಿ ದುರಾತ್ಮನು ತಿರ್ಗಿಸು ಹೇಳಿದನು. ಇಂಥವನಿಗೆ ೪೦ ವರ್ಷ ವಯಸ್ಸಾಗಿದ್ದರೂ ಇನ್ನೂ ಮದುವೆಯಾಗಿರಲಿಲ್ಲ ಕಾರಣ ಗೊತ್ತೇ ಇದೇ ಅಲ್ಲವೆ ?

ಚಿಕಾಗೋ ಅಧಿಕಾರಿಗಳು ಸ್ಟೆಮಾಪ್ ಎಂಬ ಇತರರ ಮನೋಭಿಪ್ರಾಯಗಳನ್ನು ತಿಳಿಯತಕ್ಕ (ಫೋಟೋಗ್ರಾಫ್) ದೊಡ್ಡ ಮನುಷ್ಯರನ್ನು ಅವರ ಇಷ್ಟಾನುಸಾರ ಸಜೀವವಾಗಿ ಸಮಾಧಿಮಾಡುವ ಪ್ರಯತ್ನಗಳನ್ನು ಮಾಡಿಸುತ್ತಲಿದ್ದಾರೆ ಅವರನ್ನು ಒಂದು ಪೆಟ್ಟಿಗೆಯೊಳಗೆ ಅನ್ನೊಂದು ಪೆಟ್ಟಿಗೆ, ಅದರಲ್ಲಿ ಮತ್ತೊಂದು ಪೆಟ್ಟಿಗೆ ಹೀಗಿರುವಂಥಾ ಮೂರು ಪೆಟ್ಟಿಗೆಗಳಲ್ಲಿ ಒಳಗಿನ ಪೆಟ್ಟಿಗೆಯಲ್ಲಿ ಮಲಗಿಸಿ ಮೂರು ಪೆಟ್ಟಿಗೆಗಳನ್ನು ಕ್ರಮವಾಗಿ ಬೀಗಹಾಕಿ ಅದನ್ನು ಆರುಅಡಿ ನೆಲವನ್ನು ಅಗೆದು ಆ ಗುಂಡಿಯಲ್ಲಿ ಇಟ್ಟು ಮೇಲೆ ಮಣ್ಣು ಮುಚ್ಚಿದ ಕೂಡಲೆ ಆ ಗೋರಿಯಲ್ಲಿ ಬಾರ್ಲಿ ಎಂಬ ಧಾನ್ಯವನ್ನು ಬಿತ್ತುವರು ಆ ಧಾನ್ಯವು ಬೆಳೆದು ಫಲಬಿಡುವದಕ್ಕೆ ಬಹಳಕಾಲವಾಗುವದು ಈ ಪ್ರಕಾರ ಬಿತ್ತಿ ಕಾಯಿಲಿಗೆ ಬರುವತನಕ ಆವು ಭೂಮಿಯ ಗರ್ಭದಲ್ಲೇ ಇರುವರಂತೆ ಈ ಮಧ್ಯೆ ಏನಾದರೂ ಅನುಮಾನ ಬಂದಲ್ಲಿ ಗೋರಿಯನ್ನು ಆ ಕೂಡಲೆ ಅಗೆದು ತೆಗೆಯುವದಕ್ಕೆ ಒಳಗಿನಿಂದ ಆಚೆಗೆ ವರ್ತಮಾನ ಬರುವಂತೆ ಏರ್ಪಾಡು ಮಾಡುವರು ಸ್ಟೆಮೂರರವರು ಇದರಲ್ಲಿ ಜಯವನ್ನು ಹೊಂದಿದರೆ ಅನಂತರ ಭೂಗರ್ಭದಲ್ಲೇ ವಾಸವಾಗಿದ್ದುಕೊಂಡು ಮನುಷ್ಯಜಾತಿಗೆ ಅನೇಕ ಉಪಕಾರಗಳನ್ನು ಮಾಡಲು ಯೋಚಿಸುತ್ತಾರಂತೆ ಇನ್ನು ಕೆಲವುದಿನಗಳಲ್ಲೇ ಈ ಪರೀಕ್ಷೆಯು ಚಿಕಾಗೋ ಪಟ್ಟಣದಲ್ಲಿ ಜರುಗುವದು

ಕಲಿಯುಗದ ಶಕ ೧೮೧೬ ನೇ ವಿಜಯನಾಮ ಸಂವತ್ಸರದ ಶ್ರಾವಣಶುದ್ಧ ೧೯ತಿ ಗುರುವಾರದಿಂದ ಶ್ರಾವಣಬಹುಳ ೩ ಶಾ ದಿ ಬುಧವಾರದ ವರೆಗಿನ ವಾರದ ಪಂಚಾಂಗ.

೧೮೯೩ ನೇ ಇಸವಿ, ಆಗಸ್ಟ್ ಮತ್ತು ಸೆಪ್ಟಂಬರ್.

ತಾ.	ವಾರ.	ತಿಥಿ	ಘಳಿಗೆ.	ನಕ್ಷತ್ರ.	ಘಳಿಗೆ.	ಸಿಂಹ ಮಾಸ ತೇದಿ.
31	ಗು	ಚತು	10-16	ಪೂ	53-16	17
1	ಶು	ಪಂ	5-17	ಧ	50-26	18
ಸೆಪ್ಟೆಂ 2	ಶ *	ಷ ಉಪರಿ	0-20	ಶ	54-30	19
3	ರ	ಅ	40-36	ರೂ	12-45	20
4	ಸೋ.	ನ	42-23	ಮೃ	38-8	21
5	ಮಂ	ದ	36-21	ಪ್ರ	34-0	22
6	ಬು †	ಏ	30-40	ಶ್ವ	30-13	23

*ಶ್ರಾವಣೀಉಪನಿವಾರ †ಸರ್ವತ್ರಏಕಾದ:.

ಪೇಟೆ ಧಾರಣೆ.

ದಿನಸಿ.	ಮೈಸೂರು.	ಬೆಂಗಳೂರು.
	ರೂ. ಆ. ಪೈ.	ರೂ. ಆ. ಪೈ.
ಕಸ್ತೂರಿ ಅಕ್ಕಿ ಪಲ್ಲ ೧ಕ್ಕೆ	೧೧—೦—೦	೧೨—೪—೦
ಕೆಂಬೂತಿ ಅಕ್ಕಿ ಆವ್ವಲ್	೧೦—೧೨—೦	೯—೧೨—೦
ಡಿಟೋ ಅಕ್ಕಿ ದಾಯಂ	೧೦—೪—೦	೯—೬—೦
ಜಾಪರಾಣಿ ಅಕ್ಕಿ	೧೦—೬—೦	೯—೧೨—೦
ಸಂಣಕ್ಕಿ ಆವ್ವಲ್	೧೪—೦—೦	೧೨—೮—೦
ಡಿಟೋ ಅಕ್ಕಿ ದಾಯಂ	೧೨—೮—೦	೧೧—೦—೦
ತೊಗರೀಬೇಳೆ ಪಲ್ಲ ೧ಕ್ಕೆ	೧೨—೦—೦	೧೨—೦—೦
ಡಿಟೋ ದಾಯಂ ತರಹ	೧೧—೮—೦	೧೧—೬—೦
ಹೈದರಾಗಿ ಪಲ್ಲ ೧ಕ್ಕೆ	೪—೨—೦	ಗಾ|೩—೦—೦
ಕಾರ್‍ರಾಗಿ	೪—೦—೦	೩|೩||—೦—೦
ಹಲಸಂದೆ ಪಲ್ಲ ೧ಕ್ಕೆ	೯—೪—೦	೧೦—೨—೦
ಬಿಳೀ ಅವರೆ	೧೨—೮—೦	೧೧—೪—೦
ಹೆಸರು	೧೧—೦—೦	೯—೧೨—೦
ಉದ್ದು	೧೨—೮—೦	೧೦—೬—೦
ಕಡಲೆ	೧೧—೦—೦	೯—೧೦—೦
ಎಳ್ಳು	೧೨—೮—೦	೧೨—೪—೦
ಹುರಳಿ	೬—೬—೦	೬—೨—೦
ಶೇಂಗೇಕಾಯಿ ಮಣ ೧ಕ್ಕೆ	೧—೧೦—೦	೧—೧೪—೦
ಬೆಣಸಿನಕಾಯಿ	೭—೧೨—೦	೭—೮—೦
ದಾಯಂ ತರಹ	೭—೧೨—೦	೭—೪—೦
ಬೆಲ್ಲ ದೊಡ್ಡ ಅಚ್ಚು ೧೦೦ ಕ್ಕೆ	೬—೦—೦	ಮ ೨—೨—೦
ಸಣ್ಣ ಅಚ್ಚು	೫—೧೨—೦	ಔ|| ೨—೦—೦
ಒಳ್ಳೆಣ್ಣೆ ಮಣ ೧ಕ್ಕೆ	೭—೧೨—೦	೪—೮—೦
ಹರಳೆಣ್ಣೆ	೭—೧೪—೦	೭—೧೨—೦
ಕೊತ್ತುಂಬರಿ ಪಲ್ಲ ೧ಕ್ಕೆ	೬—೮—೦	೭—೦—೦
ಉಪ್ಪು	೧೦—೦—೦	೯—೧೪—೦
ಹುಣಸೇಹಣ್ಣು ಮಣ ೧ಕ್ಕೆ	೨—೦—೦	೧—೧೨—೦
ಹಳೇ ಹುಣಸೇಹಣ್ಣು	೧—೧೨—೦	೧—೧೦—೦
ತುಪ್ಪ	೧೭—೦—೦	೧೨—೦—೦
ಸೀಮೆ ಯಾಣೆ ಪಟ್ಟಿ ೧ಕ್ಕೆ	೪—೨—೦	೪—೧—೦
ತೆಂಗಿನಕಾಯಿ ೧೦೦ ಕ್ಕೆ	೫—೦—೦	೪—೭—೦
ಚಿನ್ನ (ತೋಲ)		
ಕೆಂಪು	೧೫—೧೪—೦	೧೫—೧೨—೦
ಹಸಿಮೆ	೧೬—೭—೦	೧೫—೧೪—೦
ಗಟ್ಟಿ	೨೬—೪—೦	೨೬—೨—೦

Mysore.—Printed and published for the Proprietor at the Wesleyan Mission Press.
31/8/93.

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು | ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೭ — ಮೈಸೂರು—ಸನ್ ೧೮೯೩ ನೇ ಇಸವಿ ಸೆಪ್ಟೆಂಬರು ತಾರೀಖು ೭ ನೇ ಗುರುವಾರ. — ಸಂಖ್ಯೆ ೧೩

ನೋಟಿಸ್

		ಕ್ರಯ	ಹಾಸಲು ಸಹಿತವಾಗಿ
Campbell's.	ಕನ್ನಡ ವ್ಯಾಕರಣ ಸಾರ	೦ ೨ ೦	೦ ೨ ೬
Object Lessons.	ವಸ್ತು ಪಾಠಗಳು	೦ ೧ ೦	೦ ೧ ೬
Picture do	ಚಿತ್ರಗಳು ಸಹಿತವಾಗಿ	೦ ೨ ೦	೦ ೨ ೬
School Geography	ಭೂಗೋಳ ಶಾಸ್ತ್ರಸಾರ	೦ ೬ ೦	೦ ೭ ೦

ಈ ನಾಲ್ಕು ಪುಸ್ತಕಗಳು ಮೈಸೂರು ಸರ್ಕಾರದವರ ಅಪ್ಪಣೆ ಪ್ರಕಾರ ಸಕಲ ಪಾಠ ಶಾಲೆಗಳಲ್ಲಿಯೂ ಉಪಯೋಗಿಸತಕ್ಕವುಗಳು.

	ಕ್ರಯ	ಹಾಸಲು ಸಹಿತವಾಗಿ
ಮಾರ್ಟಿನ್ ಲೂತರ್ ಎಂಬವರ ಚರಿತ್ರ	೦ ೧ ೬	೦ ೨ ೦
ಸ್ತ್ರೀಯರು ಓದತಕ್ಕ ಪುಸ್ತಕ	೦ ೫ ೦	೦ ೫ ೬
ಗಣಿತ ಮಗ್ಗಿಗಳು	೦ ೧ ೦	೦ ೧ ೬
ಸಂಸ್ಕೃತ ಕರ್ಣಾಟಕ ಭಾಷಾಮಂಜರಿ	೦ ೨ ೦	೦ ೨ ೬
ಇಂಗ್ಲೀಷೂ ಕನ್ನಡವೂ ಶಬ್ದಾವಳಿ ೧ನೇ ೨ನೇ ಭಾಗಂಕ್ಕೆ	೦ ೧ ೦	೦ ೧ ೬
ಕಾವ್ಯಮಾಲೆ (Minor Poetical Anthology)	೦ ೮ ೦	೦ ೮ ೬
ಶಾಲಾವ್ಯಾಕರಣ	೦ ೫ ೦	೦ ೫ ೬
ಹಳಗನ್ನಡ ವ್ಯಾಕರಣ ಸೂತ್ರಗಳು	೦ ೬ ೦	೦ ೬ ೬
ಇಂಗ್ಲೀಷೂ ಕನ್ನಡವೂ ಸಂಭಾಷಣ ವಾಕ್ಯಗಳು	೦ ೧೦ ೦	೦ ೧೦ ೬
ಶಬ್ದಮಣಿ ದರ್ಪಣ	೧ ೦ ೦	೧ ೪ ೬
Kan. Eng. Pocket Dictionary	೧ ೪ ೦	೧ ೫ ೭
Eng. Kan. School Dictionary	೨ ೧೦ ೦	೨ ೧೨ ೬
ಒಳ್ಳೇ ಪಾಮಿ	೦ ೪ ೪	೦ ೪ ೬
ಆತ್ಮಿಕ ದಿವ್ಯ ಯುದ್ಧ (Bunyan)	೦ ೧೨ ೦	೦ ೧೩ ೬
ಕೈವಲ್ಯ ಪದ್ಧತಿ ೧ ನೇ ಭಾಗ ೨ ಅಣ ೩ ನೇ ಭಾಗ	೦ ೧ ೬	೦ ೨ ೦
ಭಕ್ತಸಾರ	೦ ೧ ೦	೦ ೧ ೬
ಸತ್ಯ ವಾಗ್ದಾನಿ	೦ ೧ ೦	೦ ೧ ೬

ಈ ಪುಸ್ತಕಗಳೂ ಇನ್ನೂ ಅನೇಕ ಪ್ರಯೋಜನಕರವಾದ ಪುಸ್ತಕಗಳೂ ಕೆಳಗೆ ನಮೂದಿಸಿರುವ ಸ್ಥಳಗಳಲ್ಲಿ ದೊರಕುತ್ತವೆ.

ಬೆಂಗಳೂರು—ಪೋಸ್ಟಾಫೀಸ ಹತ್ತಿರವಿರುವ ಪುಸ್ತಕಶಾಲೆ.

ಚಿಕ್ಕಬಳ್ಳಾಪುರ—ಲಂಡನ್ ಮಿಷನ್ ರೀಡಿಂಗ್ ರೂಮು.

ತುಮಕೂರು—ವೆಸ್ಲಿಯನ್ ಮಿಷನ್ ಬಂಗಳೆ. ಮೈಸೂರು—ವೆಸ್ಲಿಯನ್ ಮಿಷನ್ ಪ್ರೆಸ.

ಸನ್ ೧೮೮೮ ರಲ್ಲಿ ಸ್ಥಾಪಿಸಲ್ಪಟ್ಟದ್ದು.
ಕೆನರಾ ಅಂಡ ಮೈಸೂರ ಟ್ರೇಡಿಂಗ್ ಏಜನ್ಸೀ ಆಫೀಸ, ಮುಂಬಯಿ.
ಇವರು ತಯಾರಿಸಿರುವಂಥ—

ಹೈಮಧಾತ್ರೀತೈಲ.

ಕಳೆದ ಜನವರಿ ತಿಂಗಳೊಂದರಲ್ಲಿ ೩,೦೦೦ ಬಾಟ್ಲಿಗಳು ಖರ್ಚಾದವು. ಈ ತೈಲದ ಮಹತ್ವವನ್ನು ಕುರಿತು, ನಾವೀಗ ಹೆಚ್ಚಾಗಿ ವರ್ಣಿಸಲಾರೆವು—ಯಾಕೆಂದರೆ, ಯಾರು ಈ ತೈಲವನ್ನು ಉಪಯೋಗಿಸುತ್ತಾರೋ ಅವರಿಗೆ ಒಂದೆರಡು ದಿನಗಳಲ್ಲಿಯೇ ಇದರ ಅಪ್ರತಿಮವಾದ ಗುಣವು ಸಹಜವಾಗಿ ಅನುಭವಕ್ಕೆ ಬರುವದು. ಆದಾಗ್ಯೂ ಇದರ ಮುಖ್ಯವಾದ ಉಪಯೋಗವನ್ನು ತಿಳಿಸುವದು ನಮ್ಮ ಕರ್ತವ್ಯವಾಗಿರುತ್ತದೆ.

ಈ ನಮ್ಮ "ಹೈಮಧಾತ್ರೀ ತೈಲವನ್ನು" ಪ್ರತಿದಿನ ತಲೆಗೆ ಹಾಕಿಕೊಂಡರೆ ಮಿದುಳಿನಲ್ಲಿರುವ ಉಷ್ಣತೆಯನ್ನು ಪರಿಹರಿಸುವದಲ್ಲದೇ, ಕಣ್ಣಿಗೂ, ಮಿದುಳಿಗೂ ತನುಕರಿಸಿ, ಚಿತ್ತಕ್ಕೆ ಶಾಂತತೆಯನ್ನುಂಟುಮಾಡುವದು. ಮತ್ತು ಕಣ್ಣುಗಳಿಗುಂಟಾಗುವ ಸಾಮಾನ್ಯವಾದ ವಿಕಾರಗಳನ್ನೆಲ್ಲ ಪರಿಹರಿಸುವದು. ದೃಷ್ಟಿಗೆ ತೀವ್ರತೆಯುಂಟಾಗುವದು.

ಹೆಚ್ಚಾಗಿ ಓದತಕ್ಕವರಿಗೂ, ಒಂದೇ ಸಮನಾಗಿ ಕಣ್ಣಿಟ್ಟು ಕೆಲಸ ಮಾಡತಕ್ಕ ಕಸಬುಗಾರರಿಗೂ, ಕಣ್ಣುಗಳಲ್ಲಿ ನೀರು ಸುರಿಯುವವರಿಗೂ, ಉರಿಗಣ್ಣಿನವರಿಗೂ, ಚಿತ್ತವ್ಯಗ್ರವಾದವರಿಗೂ, ಅತ್ಯಂತ ಗುಣಕಾರಿಯಾಗಿರುವದು. ಈ ತೈಲದಲ್ಲಿರುವ ಇನ್ನೊಂದು ಅಪ್ರತಿಮವಾದ ಶಕ್ತಿಯೇನಂದರೆ—ಕೂದಲುಗಳನ್ನು ನಯವಾಗಿಯೂ, ಹೊಳೆಯುವಂತೆಯೂ, ಮಾಡುವದಲ್ಲದೇ ಬೆಳವಣಿಗೆಯನ್ನು ಹೆಚ್ಚಿಸುವದು. ಕೂದಲುಗಳ ಬೇರುಗಳನ್ನು ಘಟ್ಟಿಮಾಡಿ, ಅವು ಉದರಿಹೋಗದಂತೆ ಮಾಡುವದು.

ಪ್ರತಿಯೊಂದು ಬಾಟ್ಲಿಯೊಳಗೆ ೧೬ ತೊಲೆ ತೈಲವಿರುವದರಿಂದ ಒಬ್ಬವನಿಗೆ ೨ ತಿಂಗಳು ಹಚ್ಚಿಕೊಳ್ಳುವದಕ್ಕೆ ಸಾಕಾಗುವದು. ಬಡಬಗ್ಗರು ಸಹ ತೆಗೆದುಕೊಳ್ಳುವದಕ್ಕೆ ಸುಲಭವಾಗಿರಬೇಕೆಂಬದಕ್ಕಾಗಿ ಪ್ರತಿಯೊಂದು ಬಾಟ್ಲಿಗೆ ೧೦ ಆಣೆ ಕ್ರಯವಿಟ್ಟಿರುವೆವು. ೧೨ ಬಾಟ್ಲಿಗಳುಳ್ಳ ೧ ಪೆಟ್ಟಿಗೆಗೆ ೬॥ ರೂಪಾಯಿ. ಪ್ರತಿಯೊಬ್ಬ ಕುಟುಂಬಿಗನೂ, ಈ ತೈಲವನ್ನು ಉಪಯೋಗಿಸುವದು ಅವಶ್ಯವಾಗಿರುತ್ತದೆ. ಮಕ್ಕಳುಮರಿಗಳಿಗೆ ಸಹ ಈ ತೈಲವು ಸುಖವಹವಾಗಿರುತ್ತದೆ.

ಈ ತೈಲ ಮತ್ತು ಈ ಕೆಳಗೆ ಬರೆಯುವಂಥ ಔಷಧಗಳು, ಡ್ರೆಸ್ಸು, ಮುತ್ತು, ರತ್ನ,
ಬಂಗಾರ, ಬೆಳ್ಳಿ ಮುಂತಾದ ಸಾಮಾನುಗಳನ್ನು ಪಡೆಯಲಿಚ್ಛಿಸುವವರು
ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬೇಕು.

ಮ್ಯಾನೇಜರ್, ಕೆನರಾ ಅಂಡ್ ಮೈಸೂರು ಟ್ರೇಡಿಂಗ್ ಏಜನ್ಸಿ ಆಫೀಸ, ಮಾರ್ಕೆಟ್ ಪೋಸ್ಟ್. ಮುಂಬಾಯಿ.

ಈ ತೈಲವನ್ನು ನಮ್ಮ ವಿನಹ ಇನ್ಯಾರೂ ಮಾಡಲಾರರು. ನಮ್ಮ ಹೆಸರಿನ ಗುರ್ತನ್ನು ನೋಡಿ ತೆಗೆದುಕೊಳ್ಳಬೇಕು. ಬೇರೇವರರ ಎಣ್ಣೆಗಳನ್ನು ಈ ಹೆಸರನ್ನಿಟ್ಟು ಮಾರುತಿದ್ದರೆ ಜಾಗ್ರತೆ ಸಹಿರಿ!

ಔಷಧಗಳು.	ರು. ಆ.	ಡ್ರೆಸ್ಸುಗಳು.	ರು. ಆ.
ನಯನಾಮೃತಭಸ್ಮ ಬಾಟ್ಲಿ ೧ ಕ್ಕೆ	೧—೬	ಮಖಮಲ್ಲಿನ ಟೊಪ್ಪಿಗೆ ಹುಡ್ಡು	೨—೮
ನಯನಾಮೃತ ಕಾಡಿಗೆ	೧—೬	ಕರೇಸರ್ಜಿನ ಲಾಂಗಕೋಟು	೫—೦
ಕರ್ಣಸ್ರಾವನಾಶಕ ಅಪ್ರತಿಮತೈಲ	೧—೦	ಡಿಟೊ. ಅರ್ಧಸರಿ	೪—೮
ಮಹಾವಾತಕಫಾರಿತೈಲ	೧—೦	ಡಿಟೊ ಷಾರ್ಟಕೋಟು (ಇಂಗ್ಲಿಷಮಾದರಿ)	೪—೬
ಪ್ರಾಣಭಸ್ಮಪತ್ರೆ	೨—೧೨	ಆಲ್ಪಾಕ ಕಪ್ಪು ಕೋಟು	೨—೮
ವಿವಿಧಪ್ರಕಾರವೃಷ್ಯಗುಟಿಕೆಗಳು	೧—೦	ಡಿಟೊ. ಅರ್ಧಸರಿ	೨—೪
ಬಾಲಸಂಜೀವಿನೀಗುಟಿಕೆ	[illegible]	ಪ್ಲಾನೆಲ್ ಕಮೀಜು	೧—೧೨
ಅಜೀರ್ಣನಾಶಕ್ಷಾರ	[illegible]	ಡಿಟೊ ಬನೀಯನ್	೧—೪
ಸುಗಂಧಪದಾರ್ಥಗಂಧಾಕ್ಷತ	೦—[illegible]	ಟೊಪ್ಪಿ (ಇಂಗ್ಲಿಷಮಾದರಿ) ಹರ್ಟ	೦—೧೨
ಕಜ್ಜಿಮುಲಾಮು	೦—[illegible]		

ತನಾಕರವಾದ ಚಂದ್ರಕಾಂತ ಶಿಲೆಯ ಕನ್ನಡಕಗಳ ಕ್ರಯ ರೂ. ೧—೩॥—೫—೩॥. ಉತ್ತಮತರದ "ಪಂಪ್ಲಾ" ಎಂಬ ಹೆಸರಿನ ಗಡಿಯಾರವು (೧ ವರುಷದ ಹಮಿಯಸುವದು) ಕ್ರಯ ರೂ. ೬.

ನೋಟಿಸ್.

ಪುಸ್ತಕಗಳು.	ಕ್ರಯ.
ದ್ರಾಕ್ಷಾವೃಷಮಾಲಿಕೆ	1—8—0
ಕನ್ನಡ ಇಂಗ್ಲೀಷು ನಿಘಂಟು 1 ನೇ ದೊಡ್ಡ ತರಹ	3—0—0
„ „ 2 ನೇ ತರಹ	2—8—0
ಬಾಲಕರು ಓದುವ ಎರಡನೆ ಜ್ಞಾನೋಪದೇಶದ ಪ್ರಶ್ನೋತ್ತರಗಳು	0—1—0
ಕಥೆಯು ನಿಯಮಗಳನ್ನು ಕುರಿತವು	0—0—6
ಕಥಾಸಂಗ್ರಹ 1 ನೇ ಭಾಗದಿಂದ 3 ವರೆಗೆ	1—0—0
ಕಥಾಸಂಗ್ರಹ 4 ರಿಂದ 6 ನೇ ಭಾಗ ಹೊಸ ಛಾಪೆ	1—0—0
„ „ ದೊಡ್ಡ ತರಹ	1—8—0
ಬೋಧಕಾಸಕ್ತಿ ಬೋಧಿನಿ	0—1—0
ಸತ್ಯವೇದವನ್ನು ಕುರಿತು 2 ನೇ ಭಾಗ	0—4—0
ಪ್ರಸಂಗಿಯ ದರ್ಪಣ	0—0—3
ಇಂಗ್ಲೀಷುಭಾಷೆಯಲ್ಲಿಯೂ, ಕನ್ನಡ ಭಾಷೆಯಲ್ಲಿಯೂ, ಶಬ್ದಗಳ ವಿಭಾಗಗಳನ್ನು ವಿವರಿಸಿರುವ ನಿಘಂಟು	0—2—0
ಕನ್ನಡ ವ್ಯಾಕರಣ (ಇಂಗ್ಲೀಷಿನಲ್ಲಿ)	2—0—0
ಹಿಂದುಸ್ತಾನಿ ವ್ಯಾಕರಣ	1—0—0
ಬಾಲರ ಸೋಪಾನವು	0—12—0
ಹಸೆ ಕರುಗಳ ಆಂಟುರೋಗವಿಚಾರ	0—0—6
ಕ್ರಿಸ್ತರ ಬೋಧನೆಗಳ ಸಾರಾಂಶವು	0—12—0

ಮೇಲೆ ನಮೂದಿಸಿರುವ ಪುಸ್ತಕಗಳನ್ನು ಅಪೇಕ್ಷಿಸುವವರು ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್ಸಿಗೆ ಬರೆದು ತರಿಸಿಕೊಳ್ಳಬಹುದು ಅಂಚೇ ಹಾಸಲು ಖರ್ಚು ಕೊಡಬೇಕು.

ವೆಸ್ಲಿಯನ್ ಮಿಷನ್ ಪ್ರೆಸ್,
ಮೈಸೂರು.

ಪ್ರಸಿದ್ಧಪತ್ರಿಕೆ

ಕಂ॥ ಸಕಲಸುಮನಸರಂಜಕಮೆ । ಸುಕರದಿ ಬಾಲಾವಬೋಧ
ಚತುರಮತಮದಿಂ । ಪ್ರಕಟಿಪಮಸಭಾರತಕಥೆ ।
ವಿಕಸಿಪುದೇಳಿರವೆ ಕೇಳ್ವಜನಕಾನಂದಂ ॥

ಕನ್ನಡ ಮಹಾಭಾರತ.

"ಶ್ರೀಕೃಷ್ಣರಾಜ ವಾಣೀವಿಲಾಸ" ಎಂಬ ಕನ್ನಡ ಮಹಾಭಾರತವು ನಮ್ಮ ಸ್ವಕೀಯ ಶ್ರೀಚಾಮರಾಜೇಂದ್ರ ಪ್ರೆಸಿನಲ್ಲಿ ಪ್ರಕಟಿಸಲಾಗುವದು ಯೆಲ್ಲರಿಗೂ ವಿದಿತವಾಗಿರುವುದಷ್ಟೆ. ಈಗ ಹದಿನೆಂಟು ಪರ್ವಗಳೂ ಪೂರ್ತಿಯಾಗಿ ಪ್ರಸಿದ್ಧ ಆಪ್ರೆಸಿನವರು ಕೆಳಗೆ ವಿವರಿಸುವ ಕ್ರಮದಮೇರೆಗೆ ಕ್ರಯ ಮಾಡಿರುವ ಪ್ರತಿಗಳು ಸಿದ್ಧವಿರುವು.

ಆದಿಪರ್ವ ರೂ ೩, ಸಭಾಪರ್ವ ೧—೬—೦, ಅರಣ್ಯಪರ್ವ, ವಿರಾಟಪರ್ವ ಪ್ರತ್ಯೇಕವಾಗಿ ೧೨ ಆಣೆ, ಡಿಟೊ ಕೆತ್ತನೆಯ ಘಳಿಗೆಯಿಂದ ೧ ರೂ, ಉದ್ಯೋಗಪರ್ವ, ಭೀಷ್ಮಪರ್ವ ೬, ದ್ರೋಣಪರ್ವ ೨—೮—೦, ಕರ್ಣಪರ್ವ, ಶಲ್ಯಪರ್ವ ೧—೨—೦ ಸೌಪ್ತಿಕಪರ್ವ ೬ ಆಣೆ, ಸ್ತ್ರೀಪರ್ವ ೬ ಆಣೆ, ಶಾಂತಿಪರ್ವ ರಾಜಧರ್ಮ ೨—೬—೦, ಆಪದ್ಧರ್ಮ ೮ ಆ, ಮೋಕ್ಷಧರ್ಮ ೨—೬—೦, ಅನುಶಾಸನಿಕಪರ್ವ ೩—೧೨—೦ ಅಶ್ವಮೇಧಿಕಪರ್ವ ೧—೧೨—೦, ಆಶ್ರಮವಾಸಿಕಪರ್ವ—ಮೌಸಲಪರ್ವ—ಮಹಾಪ್ರಸ್ಥಾನಪರ್ವ—ಸ್ವರ್ಗಾರೋಹಣಪರ್ವ ೧೦ ಆಣೆ, ಭಗವದ್ಗೀತ ೮ ಆಣೆ, ಯಯಾತಿಯ ಚರಿತ್ರ ೩ ಆಣೆ, ಪಾಂಡವಸಾರ ೬ ಪೈ, ಲೋಪವರಿಸಿಕೊಂಡ ಟಿಕ್ಕಿನ ನೋಟ್ಸು ೮ ಆಣೆ.

ಆದಿಪರ್ವ, ಉದ್ಯೋಗಪರ್ವ, ಕರ್ಣಪರ್ವ ಈ ಮೂರು ಪರ್ವಗಳು ಗೌರ್ನಮೆಂಟ ಬುಕ್‌ಡಿಪೋವಿನಲ್ಲಿ ದೊರೆಯುವವು ಮೇಲೆ ಹೇಳಲ್ಪಟ್ಟಿರುವ ಪುಸ್ತಕಗಳು ನಮ್ಮಲ್ಲಿ ಸ್ವಲ್ಪವೇ ಇರುವದರಿಂದ ಜಾಗ್ರತೆಯಾಗಿ ತರಿಸಿಕೊಳ್ಳಬಹುದು.

ಶ್ರೀಮನ್ಮಹಾರಾಜರವರಿಗೆ ಫಲಪುಷ್ಪ ಸಮರ್ಪಣೆಯ ಮಾಡುವದಕ್ಕೆ ಮುಖ್ಯವಾಗಿ ನೇಮಿಸಲ್ಪಟ್ಟ.

ಎಂ. ರಾಮಪ್ಪ, ಅಂಡ್ ಕೋ,
ಪ್ರೊಪ್ರೈಟರಸ, ಶ್ರೀಚಾಮರಾಜೇಂದ್ರ ಪ್ರೆಸ್,
ಲಾಲ್—ಬಾಗ್ ರೋಡು, ಬೆಂಗಳೂರು.

ವೃತ್ತಾಂತ ಪತ್ರಿಕೆ.

ಚಂದಾ ನಿರ್ಣಯ.

	ರೂ ಆ ಪೈ.
ಸ್ಥಳದವರಿಗೆ ವರ್ಷ ೧ಕ್ಕೆ	೦—೨—೦
ಪರಸ್ಥಳದವರಿಗೆ ವರ್ಷ ೧ಕ್ಕೆ	೦—೧೫—೦
ಬಿಡಿ ಪತ್ರಿಕೆ ೧ಕ್ಕೆ	೦—೦—೩

ಈ ಪತ್ರಿಕೆಯು ಮೈಸೂರು ರಾಜಧಾನಿಯಲ್ಲಿ ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ, ಪ್ರಕಟಿಸಲ್ಪಡುವದು. ಬಡವರು ಮೊದಲುಗೊಂಡು ಸಮಸ್ತರಿಗೂ ಸುಲಭಸಾಧ್ಯವಾಗುವಂತೆ ಈ ಪತ್ರಿಕೆಗೆ ಇಷ್ಟು ಅಲ್ಪ ಮೌಲ್ಯವನ್ನು ನಿರ್ಣಯಿಸಿರುತ್ತೇವೆ. ಈ ಪತ್ರಿಕೆಯನ್ನು ಅಪೇಕ್ಷಿಸುವವರು ಚಂದಾಹಣವನ್ನು ಮುಂಗಡವಾಗಿ ಯೆಡಿಟರಿಗೆ ಕಳುಹಿಸಿಕೊಡಬೇಕು.

ಎಡಿಟರ್,
ವೃತ್ತಾಂತ ಪತ್ರಿಕೆ

ಟೋಪಿಗಳು

ಟೋಪಿಗಳು!! WOOL CAPS ಟೋಪಿಗಳು!!

ನಾಸನದ ಅರ್ಫನೇಜಿನಲ್ಲಿ ತಯಾರಾಗುವಂಥ ಅಚ್ಚು ಕಂಬಳಿನೂಲಿನ ಟೋಪಿಗಳೀ (Wool Caps) ನಮ್ಮ ಆಫೀಸಿನಲ್ಲಿ ಮಾರಿಕೆಗೆ ಸಿದ್ಧವಾಗಿರುತ್ತವೆ. ಪೂರ್ತಿ—೧ ರೂ. ೨ ಆಣೆ ಇಂದ ೧ ರೂ. ೬ ಆಣೆಗಳ ವರೆಗೂ ಬೇರೆ ಬೇರೆ ರಕಮಂಗಳುಂಟು. ಸ್ಥಳದವರು ಖುದ್ದು ನೋಡಿ ಪಡೆಯಬಹುದು. ಪರಸ್ಥಳದವರು ಮುಂಗಡವಾಗಿಯೇ ಹಣ ಕಳುಹಿಸಿದರೆ ತ್ವರಿತದಲ್ಲಿ ಛಾಂಗೀ ಮೂಲಕ ಕಳುಹಿಸುತ್ತೇವೆ. ಛಾಂಗೀ ಛಾರ್ಜ ಬೇರೇ ಕೊಡಬೇಕು. ಮೇಲುವಿಳಾಸದಲ್ಲಿ ಟೋಪಿಗೆ ಸಂಬಂಧವಾದದ್ದು ಎಂದು ಬರೆಯಬೇಕು.

ಮ್ಯಾನೇಜರ್,
ವೆಸ್ಲಿಯನ್ ಮಿಷನ್ ಪ್ರೆಸ್,
ಮೈಸೂರು.

ಏಜೆಂಟ್ರುಗಳಿಗೆ.

ನೋಟೀಸ್.

ಈ ಸಂಚಿಕೆಯೊಡನೆ ವೃತ್ತಾಂತ ಪತ್ರಿಕೆಯು ೭ ನೆ ಸಂಪುಟದ ಮೊದಲನೇ ಕ್ವಾರ್ಟರು ಪೂರೈಸುತ್ತಿದ್ದರಿಂದ ಏಜೆಂಟ್ರುಗಳೆಲ್ಲರೂ ಲೆಖ್ಖಗಳನ್ನು ತಯಾರ್ಮಾಡಿ ತ್ವರಿತದಲ್ಲಿ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

೭—೯—೯೩. ಎಡಿಟರ್,
ಮೈಸೂರು. ವೃತ್ತಾಂತ ಪತ್ರಿಕೆ

ನಂಬರು ೧೧

ಇಸ್ತಿಹಾರ್ನಾಮೆ.

ಮೈಸೂರು ಧನಾಭಿವೃದ್ಧಿ ಬ್ಯಾಂಕ್ ಲಿಮಿಟೆಡ್ ಆಫೀಸಿನಿಂದ.

ಇದರಿಂದ ಸಮಸ್ತ ಜನಗಳಿಗೂ ತಿಳಿಯುವ ಪ್ರಿಕಾರ ಪ್ರಕಟಿಸಲ್ಪಡುವದೇನಂದರೆ.—

೧. ಬ್ಯಾಂಕಿನ ಡಿಪಾಜಿಟ್ದಾರರ ದೇಣಿಗಳ ಸಮಾಧಾನಕ್ಕಾಗಿ ಬ್ಯಾಂಕಿನ ಆಸ್ತಿಯನ್ನು ೧೮೯೩ ನೇ ಇಸವಿ ಸೆಪ್ಟೆಂಬರು ೧೭—೧೮—೧೯ ನ ತಾರೀಖು ಗಳಲ್ಲಿ ಪ್ರತಿದಿವಸವೂ ಪ್ರಾತಃಕಾಲ ೮ ಘಂಟೆ ಆಗಾಯಿತು ೧೧ ಘಂಟೆ ವರಿಗೂ ಮಧ್ಯಾಹ್ನ ೩ ಘಂಟೆ ಆಗಾಯಿತು ೫ ಘಂಟೆವರಿಗೂ ಬ್ಯಾಂಕ್ ಆಫೀಸಿನಲ್ಲಿ ತಾತ್ಕಾಲದಲ್ಲಿ ಹಾಜರಿರತಕ್ಕ ಸ್ಟೇಕ್ಹೋಲ್ಡರುಗಳು ಮೆಂಬರುಗಳ ರೂಬರೂಬು ಒಟ್ಟಾಗಿಯಾಗಲಿ, ಅಥವ ಪ್ರತ್ಯೇಕವಾಗಲಿ, ಬಹಿರಂಗವಾದ ಹರಾಜ್ಮೂಲಕ ವಿಕ್ರಯಿಸಲ್ಪಡುವದು.

೨. ಚರಸ್ಥಿರಾಸ್ತಿನಲ್ಲಿ ತೆಗೆದುಕೊಂಡ ಕ್ರಯದಾರರು ಕೂಡಲೆ ಹರಾಜ್ ಮೊಬಲಗು ಸ್ಟೈಕಿ ಶೇಕಡಾ ೨೫ರ ಪ್ರಕಾರ ಠೇವಣಿ ಇಡತಕ್ಕದ್ದಲ್ಲದೆ ಹರಾಜ್ ತಾರೀಖು ಆಗಾಯಿತು ೧೫ ದಿವಸಗಳ ಒಳಗಾಗಿ ಬಾಕಿ ಮೊಬಲಗನ್ನು ಪಾವತಿ ಮಾಡತಕ್ಕದ್ದು; ಅದಕ್ಕೆ ತಪ್ಪಿದರೆ ಡಿಪಾಜಿಟ್ ಮೊಬಲಗು ಕಂಪನಿಗೆ ಜಂತವಾಗಿ ತೆಗೆದುಕೊಳ್ಳಲ್ಪಡುವದು.

೩. ಮೇಲಿನ ಷರತ್ತುಗಳಲ್ಲಿ ಯಾ ಆ ವ್ಯಕ್ತಿ ಯಾವದಾದರೂ ಆಗಲಿ ನಡೆಸಲ್ಪಡದೆ ಇದ್ದರೆ ಸದರಿ ಆಸ್ತಿಯನ್ನು ಪ್ರಥಮ ಕ್ರಯದಾರರ ದೆಸೆಯಿಂದ ಆದ ಖರ್ಚಿಗೂ ಲುಕ್ಸಾನಿಗೂ ಒಳಪಟ್ಟು ಮರಳಿ ಹರಾಜ್ ಮಾಡಲ್ಪಡುವದು.

೪. ಈ ಹರಾಜ್ ಬಾಬು ಮಾಡುವದಕ್ಕೂ ತಿರಸ್ಕರಿಸುವದಕ್ಕೂ ಸಹ ತತ್ಕಾಲದಲ್ಲಿದ್ದ ಡೈರೆಕ್ಟರುಗಳು ಸ್ವತಂತ್ರರಾಗಿರುತ್ತಾರೆ.

೫. ಇದಕ್ಕಾಗಿ ಇನ್ನೂ ವಿವರಿಸಲಾ ವಿಶೇಷ ಷರತ್ತುಗಳು ಬ್ಯಾಂಕಿನಿಂದ ತಿಳಿದುಕೊಳ್ಳತಕ್ಕದ್ದಾಗಿರುತ್ತೆ.

೬. ಹರಾಜಿಗೆ ಬರುವವರಲ್ಲಿ ಯಾರುಷ್ಟು ಉಳ್ಳವರು ಮುಂಚಿತವಾಗಿ ಬ್ಯಾಂಕಿಗೆ ಸಕಾಲದಲ್ಲಿ ಹೋಗಿ ಅಲ್ಲಿ ಇರುವ ಲೇಣೀ ರಿಜಿಸ್ಟರು ನೋಡಿ ಬೇಕಾದ ತಪಶೀಲು ತಿಳಿದುಕೊಳ್ಳಬಹುದು.

ತಾ|| ೩೧ನೆ ಆಗಸ್ಟು ೧೮೯೩ನೆ ಇಸವಿ, ಮೈಸೂರು. ಜಾನ್ ಬಾಬು, ಮ್ಯಾನೇಜಿಂಗ್ ಡೈರೆಕ್ಟರ್.

ವೃತ್ತಾಂತ ಪತ್ರಿಕೆ.

೧೮೯೩ನೇ ಇಸವಿ ಸೆಪ್ಟೆಂಬರ ತಾ|| ೭ ನೇ ಗುರುವಾರ.

ಪ್ಲಾಂಟರುಗಳ ಸಭೆ.

ಕಳೆದ ವಾರದಲ್ಲಿ ಮೈಸೂರು, ಕೊಡಗು, ತಿರುವಾಂಕೂರು, ನೀಲಗಿರಿ, ಮೈನಾಡು ಮುಂತಾದ ಪ್ರದೇಶಗಳಲ್ಲಿರುವ ಕಾಫೀಪ್ಲಾಂಟರುಗಳ ಪ್ರತಿನಿಧಿಗಳು ಬೆಂಗಳೂರಿನಲ್ಲಿ ಸಭೆ ಮಾಡಿ ತಮ್ಮ ಪ್ಲಾಂಟೇಷನ್ ಕೆಲಸಕ್ಕೆ ಇರುವ ಅಡಚಣೆಗಳನ್ನೆಲ್ಲಾ ಚರ್ಚಿಸಿ, ಗೌರ್ನಮೆಂಟಿಗೆ ತಮ್ಮ ಅಭಿಪ್ರಾಯವನ್ನು ತಿಳಿಯಪಡಿಸುವದಕ್ಕೆ ಏರ್ಪಾಡು ಮಾಡಿದರು. ಈ ಪ್ಲಾಂಟರುಗಳಿಗೆ ಇರುವ ಮುಖ್ಯಕೊರತೆಯಾವದೆಂದರೆ— ಮೇಸ್ತ್ರಿಗಳು ಕಾಫೀತೋಟಗಳಿಗೆ ಕೆಲವು ಮಂದಿ ಕೂಲಿಯವರನ್ನು ಕರೆದುಕೊಂಡು ಬರುವದಕ್ಕೆ ಒಪ್ಪಿಕೊಂಡು ಪ್ಲಾಂಟರುಗಳಿಂದ ೧೦೦—೨೦೦ ರೂಪಾಯಿಗಳನ್ನು ಮುಂಗಡವಾಗಿ ಪಡೆದು ತಮ್ಮ ತಮ್ಮ ಸ್ಥಳಗಳಿಗೆ ಹೊರಟು ಹೋಗುವದು ಅವರಿಗೆ ಪದ್ಧತಿಯಾಗಿದೆ. ಈ ಮೇಸ್ತ್ರಿಗಳು ಕೂಲಿಆಳುಗಳನ್ನು ಕರೆದುಕೊಂಡು ಹೋಗದೆ, ಸುಮ್ಮನೆ ತಮ್ಮ ಊರಿನಲ್ಲಿದ್ದುಕೊಂಡು ಹಣವನ್ನೆಲ್ಲಾ ತಿಂದುಹಾಕಿ ಪ್ಲಾಂಟರುಗಳಿಗೆ ಸಂಪೂರ್ಣವಾಗಿ ಮೋಸಮಾಡಿದರೂ ಅವರನ್ನು ಪತ್ತೆ ಮಾಡಿ ಶಿಕ್ಷೆಗೆ ಗುರಿ ಮಾಡುವದು ಅಸಾಧ್ಯವಾಗಿದೆ. ಕೆಲವು ಜನ ಮೇಸ್ತ್ರಿಗಳು ಒಳ್ಳೆಯವರಾಗಿಯೂ, ನಂಬಿಕಸ್ಥರಾಗಿಯೂ ಇದ್ದಾಗ್ಯೂ, ಇನ್ನೂ ಕೆಲವರು ಶುದ್ಧ ಮೋಸಗಾರರಾಗಿ ಇರುತ್ತಾರಾದ್ದರಿಂದ ಪ್ಲಾಂಟರುಗಳು ಅವರ ಮೂಲಕ ಬಹು ಅನ್ಯಾಯವಾದ ನಷ್ಟಕ್ಕೆ ಗುರಿಮಾಡಲ್ಪಟ್ಟಿದ್ದಾರೆ. ಈ ನಷ್ಟವನ್ನು ತಪ್ಪಿಸಿಕೊಳ್ಳಬೇಕೆಂದು ಕೆಲವು ವರ್ಷಗಳಿಂದೀಚೆಗೆ ಪ್ಲಾಂಟರುಗಳು ಗೌರ್ನಮೆಂಟಿನವರಿಗೆ ವಿಜ್ಞಾಪನೆಗಳನ್ನು ಮಾಡಿಕೊಂಡು ಬಂದಾಗ್ಯೂ ಅವರ ಪ್ರಯತ್ನಗಳೆಲ್ಲಾ ನಿಷ್ಪ್ರಯೋಜನವಾಗಿ ಪರಿಣಮಿಸಿದ್ದರಿಂದ ಅವರು ಹೋದವಾರ ಬೆಂಗಳೂರಿನಲ್ಲಿ ಒಂದು ಸಭೆಯನ್ನು ಸೇರಿಸಿಕೊಂಡು ಗೌರ್ನಮೆಂಟಿನವರು ನ್ಯಾಯವಾದ ಒಂದು ಆಕ್ಟನ್ನು ಪ್ರಕಟಿಸಿ ಜಾರಿಯಲ್ಲಿ ತರುವವರೆಗೂ ಈ ಉದ್ದೇಶವನ್ನು ಬಿಡಬಾರದೆಂದು ನಿಷ್ಕರ್ಷೆಮಾಡಿದರು. ಈ ಭಾಗದಲ್ಲಿ ಗೌರ್ನಮೆಂಟಿನವರು ಪ್ಲಾಂಟರುಗಳ ವಿಜ್ಞಾಪನೆಗಳು ನ್ಯಾಯವಾದದ್ದೆಂದು ಒಪ್ಪಿಕೊಂಡು, ಮೈಸೂರಿನವರಿಗೆ ತಿಳಿಯಪಡಿಸುವದಕ್ಕಾಗಿ ನಾವು ಬಹಳ ಸಂತೋಷಿಸುತ್ತೇವೆ. ಒಬ್ಬ ಮೇಸ್ತ್ರಿಯು ಕೊಂಪಣಿಯವರಿಂದ ತಪ್ಪಿಸಿಕೊಂಡು ನೆರೆಯ ರಾಜರ ಸೀಮೆಗೆ ಬಂದು ಪ್ಲಾಂಟರುಗಳಿಂದ ತೆಗೆದುಕೊಂಡ ಅಡ್ವಾನ್ಸು ಹಣವನ್ನು ನಿರ್ಭೀತಿಯಾಗಿ ತಿಂದುಹಾಕಿ ಅವರಿಗೆ ಮೋಸಮಾಡುವದೂ, ಅಂಥವನನ್ನು ಪ್ಲಾಂಟರುಗಳು ಹಿಡಿದು ತಂದು ಕ್ರಮವಾದ ಶಿಕ್ಷೆಗೆ ಗುರಿಮಾಡುವದಕ್ಕೆ ತಕ್ಕ ಕಾನೂನು ಇಲ್ಲದೆ ಇರುವದೂ ಬಹು ಅನ್ಯಾಯವಾಗಿದೆ ಎಂದು ಎಲ್ಲರೂ ಒಪ್ಪಿಕೊಳ್ಳುವರು. ಈ ಅಕ್ರಮವನ್ನು ತಿದ್ದುವದಕ್ಕೆ ಯಾವ ಅಡ್ಡಿಯೂ ಇಲ್ಲವಲ್ಲ!

ಈಗ ಬೆಂಗಳೂರಿನಲ್ಲಿ ಪ್ಲಾಂಟರುಗಳು ನಡೆಸಿದ ಸಭೆಯಲ್ಲಿ ಇನ್ನೊಂದು ಆಕ್ಷೇಪಣೆ ಹುಟ್ಟಿದೆ. ಅದೇನಂದರೆ—ಮದರಾಸ್ ಮಂತ್ರಾಲೋಚನಾ ಸಭೆಗೆ ಗೌರ್ನರ್ ಸಾಹೇಬರು ಪ್ಲಾಂಟರುಗಳಲ್ಲಿ ಒಬ್ಬರನ್ನು ಆರಿಸಿ ಮೆಂಬರಾಗಿ ನೇಮಿಸಿರುವಂತೆಯೇ, ಅದರಂತೆಯೇ ಶ್ರೀಮನ್ಮಹಾರಾಜರವರೂ ಕೂಡ ತಮ್ಮ ಮಂತ್ರಾಲೋಚನಾಸಭೆಗೆ ಮೈಸೂರು ಪ್ಲಾಂಟರುಗಳ ಕಡೆ ಒಬ್ಬರನ್ನು ಮೆಂಬರಾಗಿ ಮಾಡಿಕೊಳ್ಳಬೇಕೆಂತಲೂ ಯೋಚನೆ ಹುಟ್ಟಿತು. ಮದ್ರಾಸ ಗೌರ್ನರವರು ಈ ವಿಷಯದಲ್ಲಿ ಹ್ಯಾಗೆ ಮಾಡಿದರೂ ಮಾಡಲಿ, ಅವರೆ ನಮ್ಮ ಮಹಾರಾಜರವರು ಸರ್ಕಾರೀ ನೌಕರರಲ್ಲದ ಇಂಥಾ ಒಬ್ಬ ಯೂರೋಪಿಯನ್ ಪ್ಲಾಂಟರನ್ನು ತಮ್ಮ ಸಭೆಗೆ ಸೇರಿಸಿಕೊಂಡರೆ ಎಲ್ಲಾ ವಿಷಯಗಳಲ್ಲಿಯೂ ಒಳ್ಳೇದಾಗುವದೇ ಹೊರತು ಕೆಡುಕು ಆಗುವದಿಲ್ಲವು ಯೂರೋಪಿಯನ್ ಜನರು ಈ ರಾಜ್ಯಕ್ಕೆ ತಂದಿರುವ ಐಶ್ವರ್ಯವನ್ನು ನಾವು ನೋಡಿದರೆ ಹೀಗೆ ಅವರನ್ನು ಮೆಂಬರಾಗಿ ನೇಮಿಸಿಕೊಳ್ಳುವದು ನ್ಯಾಯವೆಂಬದಾಗಿ ನಮಗೆ ತೋರುತ್ತದೆ. ನಮ್ಮಾರಿದ ಸಂಬಳವನ್ನು ತಿನ್ನುವವರು ಆ ಮಹಾರಾಜರವರ ಸಂಸ್ಥಾನದಲ್ಲಿ ನಡೆಸುವ ಆಳುತನಗಳಲ್ಲಿ ತಕ್ಕ ಮಟ್ಟಿಗೂ ಬುದ್ಧಿವಾಕ್ಯಗಳ ಸಹಾಯವನ್ನು ಕೊಡುವದರಿಂದ ಪ್ರಜೆಗಳಿಗೆ ಕ್ಷೇಮವನ್ನೂ, ಮಹಾರಾಜರವರಿಗೆ ಕೀರ್ತಿಯನ್ನೂ ನಿಸ್ಸಂದೇಹವಾಗಿ ಉಂಟುಮಾಡುವರೆಂದು ನಾವು ದೃಢವಾಗಿ ನಂಬಿದ್ದೇವೆ.

ಮ|| ರಾ|| ಎಂ. ರಂಗಾಚಾರ್ಯರು.

ಕಳೆದ ೧೩ನೆ ತಾರೀಖಿನಲ್ಲಿ ಮದ್ರಾಸ ಯೂನಿವರ್ಸಿಟಿ ವಿದ್ಯಾಸಂಘದವರು ಸೆನೆಟ್ ಹೌಸಿಂಬ ಕಟ್ಟಡದಲ್ಲಿ ಸಭೆ ಸೇರಿದ್ದಾಗ್ಯೆ ಮದರಾಸ್ ಕ್ರಿಶ್ಚಿಯನ್ ಕಾಲೇಜ್ ಪ್ರಿನ್ಸಿಪಲರಾದ ರೆವರೆಂಡ್ ಡಾಕ್ಟರ ಮಿಲ್ಲರಸಾಹೇಬರವರು, ಕನ್ನಡಭಾಷೆಯಲ್ಲಿ ಪೂರ್ಣ ಪಾಂಡಿತ್ಯವನ್ನು ಪಡೆದು ಎಂ.ಎ. ಪರೀಕ್ಷೆಯಲ್ಲಿ ತೇರ್ಗಡೆಹೊಂದಿ ವಿದ್ಯಾವಂತರಾದವರೆಲ್ಲರಿಂದಲೂ ಗೌರವಿಸಲ್ಪಡುತ್ತಲಿರುವ ಮ|| ರಾ|| ಎಂ. ರಂಗಾಚಾರ್ಯರು ಎಂ. ಎ. ಅವರು ಯೂನಿವರ್ಸಿಟಿಯ ಸಭೆಯಲ್ಲಿ ಒಬ್ಬ ಫೆಲೊ ಎಂಬ ಪದವನ್ನು ಪಡೆಯುವದಕ್ಕೆ ಅರ್ಹರಾಗಿರುತ್ತಾರೆಂಬದಾಗಿ ಅವರ ಹೆಸರನ್ನು ಸೂಚನೆ ಮಾಡಿದರು. ಈ ಸಾಹೇಬರವರ ಸೂಚನೆಯನ್ನು ಅಲ್ಲಿ ಹಾಜರಾಗಿದ್ದ ಮ|| ರಾ|| ಪಿ. ವಿಜಯರಂಗಂ ಮೊದಲಿಯಾರವರು ಪುಷ್ಟೀಕರಿಸಿದ್ದರಿಂದ ಮ|| ರಂಗಾಚಾರ್ಯರಿಗೆ ಈ ಪದವಿಯು ಪ್ರಾಪ್ತವಾಗುವದೆಂದು ತಿಳಿದು ಬಹಳ ಸಂತೋಷಿಸುತ್ತೇವೆ. ಇವರು ಇನ್ನೂ ಪ್ರಾಯದವರಾಗಿದ್ದರೂ ಕರ್ನಾಟಕಭಾಷೆಯನ್ನು ಅಭಿವೃದ್ಧಿಗೊಳಿಸುವದಕ್ಕೂ ಮತ್ತು ಯೂನಿವರ್ಸಿಟಿಯವರು ವಿದ್ಯಾರ್ಥಿಗಳಿಗೆ ವರ್ಷವರ್ಷಕ್ಕೆ ವಿಧಾಯಕಮಾಡುತ್ತಲಿರುವ ಕನ್ನಡಕಾವ್ಯಗಳನ್ನು ಪರಿಷ್ಕಾರವಾಗಿ ಮೊದಲು ಪರೀಕ್ಷಿಸಿ ಪ್ರಶಸ್ತವಾದ ಗ್ರಂಥಗಳನ್ನು ಆರಿಸುವದಕ್ಕೂ ಮ|| ರಾ|| ರಂಗಾಚಾರ್ಯರವರು ನಿಜವಾಗಿಯೂ ಯೋಗ್ಯತೆಯನ್ನು ಪಡೆದಿರುತ್ತಾರೆನ್ನುವದರಲ್ಲಿ ಯಾವ ಸಂದೇಹವು ಇರಲಾರದು. ಕನ್ನಡಭಾಷೆಯಲ್ಲಿ ವಿಶೇಷ ಪರಿಶ್ರಮ ವಿರುವ ವಿದ್ವಾಂಸರು ಯೂನಿವರ್ಸಿಟಿ ಸಂಘದಲ್ಲಿ ಬಹು ಕೊಂಚಮಂದಿಮಾತ್ರ ಇರುವದರಿಂದ ಸೆನೆಟ್ಟಿನವರು ಇವರನ್ನು ಒಬ್ಬ ಮೆಂಬರನ್ನಾಗಿ ನೇಮಿಸುವರೆಂದು ನಂಬಿದ್ದೇವೆ. ಇದರಿಂದ ಕನ್ನಡಿಗರಿಗೆ ಗೌರವವೂ ವಿದ್ಯಾಸಂಘಕ್ಕೆ ಸಹಾಯವೂ ಉಂಟು ಮಾಡಿದಂತಾಗುವದು. ಮತ್ತು ಈ ಸಂತೋಷವರ್ತಮಾನವನ್ನು ಕೇಳುವ ಎಲ್ಲಾ ಕನ್ನಡಿಗರೂ ತಮ್ಮವರೊಬ್ಬರು ಈ ಪದವಿಗೆ ಎಂದಿಗಾದರೂ ಒಂದಿನ ನ್ಯಾಯವಾಗಿ ಅಧಿಕಾರವುಳ್ಳವರಾಗಿದೆ. ಸಭೆಯವರಲ್ಲಿ ನಮ್ಮ ಮ|| ರಾ|| ರಂಗಾಚಾರ್ಯರ ಹೆಸರನ್ನು ಸಮರ್ಥನಮಾಡಿ, ಹ್ಯಾಗಾದರೂ ಕನ್ನಡಭಾಷೆಯನ್ನು ಒಳ್ಳೆಸ್ಥಿತಿಗೆ ತರಬೇಕೆಂದು ಪ್ರಯತ್ನಮಾಡುತ್ತಲಿರುವ ಸದರಿ ಮಿಲ್ಲರ ಸಾಹೇಬರವರಿಗೆ ಕರ್ನಾಟಕ ದೇಶೀಯರೆಲ್ಲರೂ ಕೃತಜ್ಞರಾಗಿರುವರೆಂದು ನಂಬಿದ್ದೇವೆ.

ಕ್ಯಾಪ್ಟನ್ ಅಂಡ್ ಕಂಪನಿ.

ಮೈಸೂರಿನ ಕೆಮಿಸ್ಟ್ಸ್

ಇವರು ಶಿವರಾಮ ಪೇಟೆಯಲ್ಲಿ ಒಂದು ಬ್ರ್ಯಾಂಚ್ ಔಷಧ ಶಾಲೆಯನ್ನು ಸ್ಥಾಪಿಸಿರುತ್ತಾರೆ. ಇಲ್ಲಿ ನಾನಾವಿಧವಾದ ಔಷಧಗಳು ಸುಲಭ ಬೆಲೆಗೆ ದೊರೆಯುತ್ತವೆ. ಮತ್ತು ಉತ್ತಮೋತ್ತಮವಾದ ಸಾಮಗ್ರಿಯಗಳನ್ನು ಉಪಯೋಗಿಸಿ ಔಷಧಗಳನ್ನು ತಯಾರು ಮಾಡಿ ಕೊಡುತ್ತಾರೆ.

ಈ ಜನೋಪಯುಕ್ತವಾದ ಔಷಧ ಶಾಲೆಯಲ್ಲಿ ರಾತ್ರಿ ಹಗಲು ಯಾವಾಗ್ಗೆ ಬಂದಾಗ್ಯೂ ಔಷಧಗಳು ದೊರೆಯುತ್ತವೆ. (1)

ಸುಗುಣಾಕರ.

ಕೆಲವು ಶತಮಾನಗಳ ಹಿಂದೆ, ಭೂಮಧ್ಯ ಸಮುದ್ರದ ದಡದಲ್ಲಿರುವ ಒಂದು ದೇಶದಲ್ಲಿ ಸುಗುಣಾಕರನೆಂಬ ಗಣಿಯು ಕಾಣಿಸಿತು. ಅದು ಬರಿದ ಹೊರಗಿನ ನೋಟಕ್ಕೆ ಅಷ್ಟು ಅಲಂಕಾರವಾಗಿ ಕಾಣಿಸಲಿಲ್ಲ ಅದರ ಒಳಗೆ ಲೋಕದ ಐಶ್ವರ್ಯವನ್ನೆಲ್ಲಾ ಅಡಗಿಸಿಕೊಂಡಿತ್ತು. ಹೊರಗೆ ಅಲಂಕಾರವಿಲ್ಲವೆಂದು, ಅನೇಕ ಧನವಂತರು ಮತ್ತು ಅರಸುಗಳು ಬೇರೆ ಉ ಆ ಗಣಿಯ ವ್ಯಾಪಾರಕ್ಕೆ ಸೇರಲಿಲ್ಲ ಆದರೆ ಮೊದಲು ಕೇವಲ ಬಡವನೇ ಅದರಲ್ಲಿ ಸೇರಿ ವ್ಯಾಪಾರ ಮಾಡಿದರು. ಇವರು ಅದರಲ್ಲಿ ಕೆಲಸ ಮಾಡತೊಡಗಿದಂದಿನಿಂದ ಮೊದಲು ತಾವು ಮಾಡುತ್ತಿದ್ದ ವ್ಯಾಪಾರಗಳನ್ನೆಲ್ಲಾ ತ್ಯಜಿಸಿಬಿಟ್ಟರು. ನಂತರ ಇವರ ವ್ಯಾಪಾರವು ಬಹಳ ಅಭಿವೃದ್ಧಿಗೆ ಬಂತು. ಇದನ್ನು ನೋಡಿದ ಧನವಂತರಾದವರು ತಮಗೆ ಈಗ ಇರುವ ವ್ಯಾಪಾರವು ಇಷ್ಟಾದರೂ ಚಿಕ್ಕದಾದರೂ ಪ್ರಯೋಜನವಾಗುವಂತೆ ಕಾಣುವದಿಲ್ಲ ಈ ಯುಕ್ತಿಯಾರವು ಹೊಸದಾದರೂ ಹಾಳಾಗಲಿ ಎಂದು ಅವನ್ನು ತ್ಯಜಿಸಿಬಿಟ್ಟು ಆ ಬಡವರು ಸೇರಿದ್ದ ಗಣಿಗೆ ಹೋಗಿ ಬಹು ಆದಾಯವಾದ ಆದಾಯ ಹೊಂದುವದಕ್ಕೆ ಪ್ರಯತ್ನಿಸಿದರು. ಇದು ಅಲ್ಲದೆ ಲೋಕದಲ್ಲಿ ಪ್ರಸಿದ್ಧ ವ್ಯಾಪಾರಗಳೆಂದು ಹೆಸರು ಪಡೆದವರನ್ನು ಕೂಡ ವಿಚಾರವಂತೆ ತಮ್ಮ ವ್ಯಾಪಾರದಲ್ಲಿ ಭ್ರಷ್ಟರಾದರು ನಂತರ ಈ ಸುದ್ದಿಯು ದೊಡ್ಡ ದೊಡ್ಡ ಅರಸುಗಳ ವರಿವಿಗೂ ಮುಟ್ಟಿತು. ಭೂಪಾಲಕರಲ್ಲಿ ಪ್ರಸಿದ್ಧನಾದ ಒಬ್ಬ ಚಕ್ರವರ್ತಿಯು ಸುಗುಣಾಕರವೆಂಬ ಗಣಿಯಲ್ಲಿ ಸಿಲುಕೊಂಡು ದೊಡ್ಡದೊಡ್ಡ ಪಲ್ಲಟ ವ್ಯಾಪಾರವನ್ನು ತ್ಯಜಿಸಿಬಿಟ್ಟು, ತನ್ನ ಆ ಕೈಯಲ್ಲಿರುವ ಪ್ರಜೆಗಳೆಲ್ಲರೂ ಇದೇ ಗಣಿಯಲ್ಲಿ ಸೇರಿ ಉತ್ಕೃಷ್ಟವಾದ ಸ್ಥಿತಿಗೆ ಬರಬೇಕೆಂದು ತಿಳಿಸಿದನು. ಆಮೇಲೆ ದೂರದೇಶಗಳಲ್ಲಿದ್ದ ಅನೇಕ ಜನರು ಅದರಲ್ಲಿ ಸೇರಿಕೊಂಡರು ಯಾಕೆಂದರೆ ಅದರಲ್ಲಿ ಸೇರುವವರಲ್ಲಾ ಆ ಲೋಕದ ಮುಂದೆ ತಮ್ಮ ಕೆಲಸಗಳನ್ನು ಬಹು ಚತುರತೆಯಿಂದ ನಡೆಸುತ್ತಿದ್ದದ್ದೆ ಅದರ ಪ್ರಯೋಜನವನ್ನು ಆ ಲೋಕ ನೋಡಿ ತಿಳಿದುಕೊಳ್ಳುವಂತೆ ಗ್ರಂಥಗಳನ್ನೂ ಪತ್ರಿಕೆಗಳನ್ನೂ ಬರೆಸಿದರು. ಅನ್ಯದೇಶದವರು ಅದರ ಅಭಿವೃದ್ಧಿ ಪ್ರಯೋಜನಗಳನ್ನು ಪರೀಕ್ಷಿಸಿ ನೋಡಿ ನಂತರ ಆ ವ್ಯಾಪಾರವನ್ನು ನಡೆಸುವದಕ್ಕೆ ತೊಡಗಿದರು. ಈಗ ಅದು ಭೂಲೋಕದಲ್ಲೆಲ್ಲಾ ಗೋಚರವಾಗುವದಲ್ಲದೆ ದಿನದಿನಕ್ಕೂ ಅಭಿವೃದ್ಧಿಗೆ ಬರುತ್ತದೆ. ಸ್ನೇಹಿತರೇ ಮೇಲೆ ತಿಳಿಸಲ್ಪಟ್ಟ ಗಣಿಯು ಎಷ್ಟು ದುಃಖ ಅದರ ಐಶ್ವರ್ಯವು ವಿಷಯದಲ್ಲಿ ಅದರಲ್ಲಿ ಸೇರಿಕೊಂಡ ಅನಂತರ ಅನುಭವ ವಿಷಯವಾಗಿ ಯೂರೋಪಿನವರು ಹಿಂಗೆ ನಿನಗೆ ಇದನ್ನು ಕೊಡುವಂತೆ ಮಾಡಿಕೊಳ್ಳುತ್ತೇನೆ.

೧ ಎಲ್ಲಾ ಸುಗುಣಗಳಿಗೆ ಆಕರವಾಗಿರುವ ಪಾಂಡ್ಯೇಶ ರಾದ ಯೇಸುಸ್ವಾಮಿಯು ಪಾಲೆಸ್ತೀನಿ ಎಂಬ ಭೂಮಧ್ಯ ಸಮುದ್ರದ ದಡದಲ್ಲಿರುವ ಪಾಲಸ್ತೀನ ದೇಶದೊಳಗೆ ಅವತರಿಸಿಕೊಂಡು ಆಗ್ಯ ಹದಿನೆಂಟು ಶತಮಾನ ನಡೆಯುತ್ತದೆ ಆತನು ಹ್ಯಾಗೆ ಸುಗುಣಾಕರನಾಗಿದ್ದನೆಂದು ಕೇಳುವರೆ ಒಂದನ್ನು ವಿವರಿಸುತ್ತೇನೆ. ಆತನು ತನ್ನ ಶಿಷ್ಯರೊಂದಿಗೆ ಒಂದು ತೋಟದೊಳಗೆ ಪ್ರಾರ್ಥನೆ ಮಾಡುತ್ತಿರುವಲ್ಲಿ ಸನ್ಮಾರ್ಗ ವಿರೋಧಿಗಳಾದ ಕೆಲವರು ಬಂದು, ರಾತ್ರಿಯಲ್ಲಿ ಸ್ವಾಮಿಯನ್ನು ಹಿಡಿಯುವದಕ್ಕೆ ಪ್ರಯತ್ನಮಾಡಿದರು. ಆಗ ಸ್ವಾಮಿಯ ಶಿಷ್ಯರಲ್ಲಿ ಒಬ್ಬನು ಆ ಕತ್ತಿಯನ್ನು ಹಿಡಿದು ಬಂದ ಒಬ್ಬ ಆಳಿನ ಕಿವಿಯನ್ನು ತನ್ನಲ್ಲಿದ್ದ ಕತ್ತಿಯಿಂದ ಕಡಿದುಹಾಕಿದನು. ಸ್ವಾಮಿಯು ಆ ಕಾರ್ಯವನ್ನು ನೋಡಿ ತನ್ನ ಶಿಷ್ಯನನ್ನು ಹೊಡೆಯಲಿಲ್ಲ ಬದಲಾಗಿ ಗದರಿಸಿದನು. ಮತ್ತು ಆ ಕಡಿದ ಕಿವಿಯನ್ನು ಮುಟ್ಟಿ ಮೊದಲಾಗುವಂತೆ ಸ್ವಸ್ಥಮಾಡಿದನು ಮತ್ತು ತನ್ನ ಶಿಷ್ಯನಿಗೆ ಇನ್ನುಮೇಲೆ ಅಂಥ ಕೆಲಸ ಮಾಡದಂತೆ ಸನ್ಮಾರ್ಗವನ್ನು ತೋರಿಸಿದನು. ಸಕಲ ಸನ್ಮತಿಗಳಿಗೂ ನಿತ್ಯ ವಾಸವಾಗಿರುವದರಿಂದ ಸುಗುಣಾಕರ ಎಂಬ ಹೆಸರು ಆತನಿಗೆ ಮಾತ್ರ ಸಲ್ಲತಕ್ಕದ್ದಾಗಿದೆ.

೨ ಆತನು ಪರಲೋಕಕ್ಕೆ ಸೇರಿದ ಎಂಟನೂರು ವರುಷ ತರುವಾಯ ಜರ್ಮನಿ, ಕೋಲ, ಫ್ರಾನ್ಸ, ಇಂಗ್ಲಂಡ್ ಮುಂತಾದ ಕೆಲವು ರಾಜ್ಯಭಾರಗಳಲ್ಲಿ ಬಂದಂಥ ಪರಾಕ್ರಮಶಾಲಿಗಳಾದ ರಾಜರುಗಳು ತಮ್ಮ ವ್ಯಾಪಾರಗಳನ್ನೆಲ್ಲಾ ಬಿಟ್ಟು ಆದರೆ ಅವುಗಳನ್ನೆಲ್ಲಾ ಮರೆತುಬಿಟ್ಟು ಸುಗುಣಾಕರವೆಂಬ ಗಣಿಯ ಒಳಗೆ ಹೋಗಿ ಸದ್ಗುಣಗಳನ್ನು ಕೊಂಡುಕೊಂಡು ಲೋಕವ್ಯಾಪಾರವನ್ನು ಮಾಡತೊಡಗಿದರು. ಇವರು ಸದ್ಗುಣಗಳಲ್ಲಿಯೂ ಅಭಿವೃದ್ಧಿಯನ್ನು ಹೊಂದಿದರು.

೩ ಎಂಟನೂರು ವರುಷದಲ್ಲಿ ಅನೇಕರು ಲೌಕಿಕ ವ್ಯಾಪಾರವಾದ ರಾಜ್ಯಭಾರವನ್ನು ಬಿಟ್ಟು ಇನ್ನು ಕೆಲವರು ಪರಲೋಕಕ್ಕೆ ಹೋಗಲು ಸುಗುಣಾಕರವೆಂಬ ಗಣಿಯಲ್ಲಿ ಸೇರಿ ಕೈವಲ್ಯವನ್ನು ಹೊಂದಬೇಕೆಂದು ತಮ್ಮ ಅಧಿಕಾರವನ್ನು ಬಿಟ್ಟು ಸಂಪೂರ್ಣವಾಗಿ ಮೊದಲಿನ ಪಾಪಗಳನ್ನೆಲ್ಲಾ ಮಾರಿಬಿಟ್ಟು ಸದ್ಗುಣಗಳನ್ನು ಕೊಂಡುಕೊಂಡರು. ಇವರಲ್ಲಿ ಅನೇಕರು ಸುಗುಣಸಂಪನ್ನರಾಗಿ ಕೊಂಡು ಅವರಿಗೆ ಸಿಕ್ಕಿದ ಲಾಭಗಳನ್ನು ಕುರಿತು ಗ್ರಂಥರಚನೆಮಾಡಿದರು. ಇವರು ಸುಗುಣಗಳಲ್ಲಿ ಎಷ್ಟು ಅಭಿವೃದ್ಧಿ ಹೊಂದಿದಾಗ್ಯೂ ಗಣಿಯು ಕೊರತೆಯಾಗಲಿಲ್ಲ ಮತ್ತು ಸುಗುಣಾಕರವೆಂಬ ಗಣಿಯಲ್ಲಿ ವ್ಯಾಪಾರವು ಸರಿಯೆ ಉಚಿತವಾಗಿ ಲಾಭವಾಗಿರುವದೆಂದು ಪ್ರಸಿದ್ಧ ಲೋಕದ ಜನರಿಗೆ ತಿಳಿಸಿದರು. ಇದರಲ್ಲಿ ಸೇರಿ ಕೆಲಸಮಾಡಿದವರು ಒಂದಕ್ಕೆ ಹತ್ತರಷ್ಟು ಫಲ ಹೊಂದಿದ್ದರಿಂದ ಬಹು ಶೀಘ್ರವಾಗಿ ಅಭಿವೃದ್ಧಿಗೆ ಬಂದರು.

೪ ಮಹಾನೀಯರು ಗಣಿಯೊಳಗೆ ಸೇರಿದವರು ಅರಸುಗಳೇ ಇವರಲ್ಲಿ ಪ್ರಮುಖನು ಕಾನ್ಸ್ಟಂಟೈನ್ ಎಂಬ ರೋಮ ಚಕ್ರವರ್ತಿಯು ಈ ಚಕ್ರವರ್ತಿಯು ತ್ಯಜಿಸಿದ ರಾಜ್ಯಭಾರವನ್ನು ಸ್ವಲ್ಪವಾಗಿ ಕೇಳಿ ರೋಮಚಕ್ರವರ್ತಿಗಳ ಆಳಿಕೆಯಲ್ಲಿದ್ದ ಪ್ರಜೆಗಳೆಲ್ಲಾ ತಮ್ಮ ಚಕ್ರವರ್ತಿಯನ್ನೇ ಒಂದು ಪ್ರತಿಮೆಯಾಗಿ ರಚಿಸಿ ಅದನ್ನೇ ಎಲ್ಲರು ಆರಾಧಿಸುತ್ತಿದ್ದರು ಮೇಲೆ ತಿಳಿಸಲ್ಪಟ್ಟ ಚಕ್ರವರ್ತಿಗೆ ಈ ಘನವಿದ್ದಾಗ್ಯೂ ಆತನು ಭಗವಂತನು ಆಳುವದಕ್ಕೆ ಯೋಗ್ಯನಾದವನು ತಾನು ಅದನ್ನು ತ್ಯಜಿಸಿದನು ಇನ್ನೂ ಅನೇಕ ಭೂಪಾಲಕರು ತಮ್ಮ ರಾಜ್ಯಭಾರಗಳನ್ನೆಲ್ಲಾ ತ್ಯಜಿಸಿ ತಮ್ಮ ತಮ್ಮ ಪ್ರಜೆಗಳೂ ಸನ್ಮಾರ್ಗ ಪ್ರವರ್ತಕರಾದರು. ಇವರೆಲ್ಲಾ ಇಂಥಾ ಉತ್ಕೃಷ್ಟ ಪದವಿಗೆ ಬರುವದಕ್ಕೆ ಸುಗುಣಾಕರವೆಂಬ ಗಣಿಯೇ ಮುಖ್ಯಕಾರಣ ಇಲ್ಲಿಂದ ಮುಂದಕ್ಕೆ ಅದರ ಸಂಪತ್ತಿಯು ಲೋಕವನ್ನೇ ವ್ಯಾಪಿಸಿತು ಇದನ್ನು ಯೋಚನೆಗೆ ತಂದುಕೊಳ್ಳುವ ವಿಚಾರಶೀಲರಿಗೇ ಈಗಲೂ ಸುಗುಣಾಕರ ಎಂಬ ಗಣಿಯು ನಿಮ್ಮ ಮುಂದೆಯೂ ಕಾಣಿಸುತ್ತದೆ ಸನ್ಮತಿಯಲ್ಲಿ ನಡೆದು ಸುಗುಣವಂತರಾಗುವದಕ್ಕೆ ಅಪೇಕ್ಷೆಯುಳ್ಳವರು ಅದರಲ್ಲಿ ಸೇರಿ ಸ್ವಚ್ಛವಾಗಿ ಎದುರುವದು ಮಾತ್ರವಲ್ಲದೆ ಈಗಲಿಂದಲೇ ಕೈವಲ್ಯಪದವಿಗೆ ಅರ್ಹರಾಗುವರು ಸುಗುಣಾಕರವೆಂಬ ಗಣಿಯು ಯುಕ್ತವಾದ ಯೇಸುಸ್ವಾಮಿಯಿಂದ ನಿರ್ಮಿತವಾಗಿರುವ ರಕ್ಷಣೆಯು ಬಂದು ಸನ್ಮಾರ್ಗ ಪ್ರವರ್ತಕರಾಗುವದಕ್ಕೆ ಆ ಕ್ಷೇಮಯಾತ್ರೆಯ ನಿಮ್ಮ ದುರ್ಗುಣಗಳನ್ನು ಯೇಸುಸ್ವಾಮಿಗೆ ಒಪ್ಪಿಸಿಬಿಟ್ಟು ಆತನಿಂದಲೇ ಭಗವಂತನು ಮೆಚ್ಚತಕ್ಕ ಸುಗುಣಗಳನ್ನು ಹೊಂದಿಕೊಂಡು ಧನ್ಯರಾಗಿರಿ

ನೋಟೀಸ್.

ಬೆಂಗಳೂರಿನಲ್ಲಿರುವ ರಾ|| ರಾ|| ಉಪಾಧ್ಯಾಯ ಭಗವಾಚಾರ್ಯರು ಹಿಂದೂಸ್ಥಾನದಲ್ಲೆಲ್ಲಾ ತಿರುಗುತ್ತಿ ಅರ್ಥಸಹಿತ ಪಾರಾಯಣ ಜನಗಳು ಯಲ್ಲಿರುವ ಆರಾಧಿತ ಪರಮೇಶ್ವರ

ರುದ ಚಂದ್ರಪ್ಪನವರೂ ಮುನ್ನಿಸಿಪಾಲಿಟಿಯ [illegible] ಗೆ ಮಾಡಿಸುತ್ತೇವೆಂಬದಾಗಿ ನಿಶ್ಚಯ ಮಾಡಿಕೊಂಡು ಅದೇ ಸಾಲಿನಲ್ಲಿರುವ ಷಪೆ ಕಾರ ಮ|| ರಾ|| ವೀರೂರು ಬ್ರಹ್ಮಯ್ಯನವರನ್ನು ನೇಮಿಸಿ ಅವರ ವಶಕ್ಕೆ ಸ್ವಲ್ಪಹಣವನ್ನು ಕೊಟ್ಟು ಕಳುಹಿಸಿದರು ಬಳಿಕ ಬ್ರಹ್ಮಯ್ಯನವರು ಜನಗಳೊಡನೆ ಇದೇ ತಿಂಗಳು ೩ ಬುಧವಾರದ ದಿವಸ ಲಗ್ನ ಸ್ಥಿರ ನಿಶ್ಚಯ ಮಾಡಿಕೊಂಡು, ಮಂಗಳವಾರ ರಾತ್ರಿ ನಡೆಯಬೇಕಾದ ಮಂಗಳ ಕೆಲಸಗಳೆಲ್ಲಾ ಮಾಡಿ, ಮಾರನೇ ದಿನ ಲಗ್ನವನ್ನು ನಿರ್ಧರಿಸುವದಕ್ಕೆ ಪ್ರಯತ್ನ ಮಾಡುತ್ತಿದ್ದಾಗ್ಯೆ ಆನಗೂರು ವರ್ತಕರಾದ ಉಪಾಧ್ಯಾಯರು ರಾ|| ರಾ|| ಚಂದ್ರಯ್ಯನವರು, ಜನಗಳೊಡನೆ [illegible] ರಾ|| ರಾ|| ಬಾಜವರ ಸೂರಪ್ಪ ಇವರಿಬ್ಬರೂ ಆ ಸ್ಥಳಕ್ಕೆ ಬಂದು—ಈ ಕೆಲಸವನ್ನು ನೀವು ಚಂದವಾಗಿ ನೆರವೇರಿಸುವದು ಸರಿಯಾಗಿಲ್ಲ, ನಮಗೇನೇ ವಹಿಸಿದ್ದಲ್ಲಿ ನಾವು ಸ್ವಂತ ಖರ್ಚಿನಿಂದಲೇ ಈ ಕೆಲಸವನ್ನು ಪೂರೈಸುತ್ತೇವೆ; ನಾವು ಯಾರಸಹಾಯವನ್ನೂ ಅಪೇಕ್ಷಿಸುವದಿಲ್ಲ; ಬಿಟ್ಟುಕೊಡಿ—ಎಂಬದಾಗಿ ಮ|| ರಾ|| ಬ್ರಹ್ಮಯ್ಯನವರನ್ನು ಬಲತ್ಕರಿಸಿದ್ದರಿಂದ, ಡಿಪೋ ಬ್ರಹ್ಮಯ್ಯನವರು ಆ ಕೆಲಸಗಳನ್ನೆಲ್ಲಾ ರಾ|| ರಾ|| ಚಂದ್ರಯ್ಯನವರಿಗೂ ರಾ|| ರಾ|| ಬಾಜವರ ಸೂರಪ್ಪಗೂ ಒಪ್ಪಿಸಿಬಿಟ್ಟು ಇರುತ್ತಾರೆಂದು ಈ ಮೂಲಕ ಸಮಸ್ತರಿಗೂ ತಿಳಿಯಪಡಿಸಿರುತ್ತಾರೆ

೩—೯—೯೩. } (ರುಜು) ವೀರೂರು ಬ್ರಹ್ಮಯ್ಯ,
ಬೇಲೂರು. } ಷಾಪ ಕೀಪರ.

ಒಳದೇಶ ವೃತ್ತಾಂತಗಳು.

—(ಸ್ವಂ.)—

ಬೆಂಗಳೂರು ಅರಮನೆಯಲ್ಲಿ ಕಳೆದ ವಾರದಲ್ಲಿ ಶ್ರೀಮನ್ಮಹಾರಾಜರವರು ಯು. ರೋಯಿಯರ ಸರದಾರರಿಗೆಲ್ಲಾ ಪ್ಯಾಲ್ಸ ಪ್ರೆಸ್ಟಿವಲ್ ಎಂಬ ಔತಣವನ್ನು ಮಾಡಿಸಿದರು

ನಾಳೆ ೧೧ ನೇ ತಾರೀಖು ಸೋಮವಾರ ಶ್ರೀಮನ್ಮಹಾರಾಜರವರು ಪತ್ನೀ ಪುತ್ರ ಪುತ್ರೀಯರುಗಳೊಡನೆ ಸಪರಿವಾರವಾಗಿ ತ್ವರಿತವಾಗಿ ಬೆಂಗಳೂರಿನಿಂದ ರಾಜಧಾನಿಗೆ ದಯಮಾಡುವದಾಗಿ ವಿಶ್ವಾಸಾರ್ಹವಾಗಿ ತಿಳಿದಿದೆ

ಹಾಸನದ ಡಿಸ್ಟ್ರಿಕ್ಟಿಗೆ ಸೇರಿದ ಒಬ್ಬ ಸಬ್‌ಡಿವಿಜನ್ ಆಫೀಸರು ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟಿರುವದಾಗಿಯೂ ಗವರ್ನಮೆಂಟಿನವರು ಅದನ್ನು ಒಪ್ಪಿಕೊಂಡಿರುತ್ತಾರೆಂತಲೂ ಬೆಂಗಳೂರು ಪತ್ರಿಕೆಯು ತಿಳಿಸುತ್ತದೆ

ಇಲ್ಲಿನ ಒಂದು ಕೋರ್ಟಿನಲ್ಲಿ ಒಬ್ಬ ಹೆಡ್ ಮುನಸೀಫರಿಗೆ ಬದಲಾವಣೆ ಮತ್ತು ಇಬ್ಬರು ಗುಮಾಸ್ತರಿಗೆ ಬೇರೆ ಸ್ಥಳಕ್ಕೆ ವರ್ಗವು ಆಗಿರುವಂತೆ ಕೇಳಿದೆವು ಇವರ ಹೆಸರುಗಳನ್ನು ಗೊತ್ತುಮಾಡಿ ಮುಂದಿನ ವಾರದಲ್ಲಿ ತಿಳಿಸುತ್ತೇವೆ

ಸರ್ವೆ ಮತ್ತು ಸೆಟ್ಲ್‌ಮೆಂಟ್ ಡಿಪಾರ್ಟ್ಮೆಂಟಿಗೆ ಟ್ರಾನ್ಸಫರ್ ಆಗಿದ್ದ ಮ|| ಸ್ಟುವರ್ಟ್ ಸಾಹೇಬರನ್ನು ಇಂಜನೀಯರ ವರ್ಗ ಮಾಡಿ ಆಯೋಗ್ಯ ರೈಲ್ವೆ ಬಾಬಿನ ಸೈಲ್ನಲ್ಲಿ ಕೆಲಸ ಮಾಡುತ್ತಿದ್ದ ಮ|| ಅಟ್ಕಿನ್ಸನ್ ಸಾಹೇಬರು ಎಂಬವರನ್ನು ಇಲ್ಲಿಗೆ ನೇಮಿಸಿರುತ್ತಾರೆಂಬದಾಗಿ ಕೇಳುತ್ತೇವೆ

ಕಳೆದ ಸೋಮವಾರದ ಬೆಳಗಿನ ಜಾವದಲ್ಲಿ ಸೋಪುಗಳ ಮಾರಾಟಗಾರರು [illegible] ನಡೆಯುತ್ತಲಿದೆ ಇದುವರೆಗೆ ದಿನಗಳವರೆಗೂ ನಡೆಯುವದರಿಂದ ಹೆಂಗಸರು ಮಕ್ಕಳು ನೋಟವನ್ನು ನೋಡುವ ಸಂದರ್ಭದಲ್ಲಿ ಎಷ್ಟು ಮಂದಿ ಒಡವೆಗಳನ್ನು ಕಳೆದುಕೊಳ್ಳುವರೋ ನೋಡತಕ್ಕದ್ದಾಗಿದೆ

ಹರದನಹಳ್ಳಿ [illegible] ಸಾಗರದ ಪಟೇಲ ವೆಂಕಟಸುಬ್ಬರವರು ಸುಮಾರು ೭೦೦ ರೂಪಾಯಿಗಳಷ್ಟು ಕರೆನ್ಸಿ ನೋಟುಗಳನ್ನು ಹಿಂದೆ ಕಳೆದುಕೊಂಡಿದ್ದರೆಂಬದಾಗಿ ಆಗಲೇ ತಿಳಿಸಿದ್ದೆವಷ್ಟೆ ಆ ನೋಟುಗಳಲ್ಲಿ ಯಾವದೋ ಒಂದು ಈಗ ಪೋಲೀಸಿನವರಿಗೆ ಸಿಕ್ಕಿರುವದಾಗಿ ಇಲ್ಲಿನ ಹೆರಲ್ಡ್ ಪತ್ರಿಕೆಯು ತಿಳಿಸುತ್ತದೆ

ಕಳೆದ ಜುಲೈ ೨೦ ನೇ ತಾರೀಖಿನ ದಿನ ಮೈಸೂರು ಜೈಲ್‌ಖಾನೆಯಿಂದ ತಪ್ಪಿಸಿಕೊಂಡು ಹೋಗಿದ್ದ ವೆಂಗಟರಮಣಯ್ಯ ಎಂಬ ಕೈದಿಯು ಕಳೆದ ಆಗಸ್ಟ ೧೩ ನೇ ತಾರೀಖಿನ ದಿನ ಜಗಲೂರ ತಾಲ್ಲೋಕ ಪೋಲೀಸಿನವರಿಗೆ ಸಿಕ್ಕಿರುತ್ತಾನಾದ್ದರಿಂದ ಅವನಿಗೆ ಜೈಲಿನಿಂದ ತಪ್ಪಿಸಿಕೊಂಡು ಹೋದ ತಪ್ಪಿತಕ್ಕಾಗಿ ಬೇರೆ ಶಿಕ್ಷೆಯನ್ನು ವಿಧಿಸುತ್ತಾರೆ

ಸಂಸ್ಥಾನದ ದಿವಾನರವರು ಮಾರ್ಚ ತಿಂಗಳು ಪ್ರಿವಿಲೇಜ್ ರಜಾ ಪಡೆದು ಸಂಚಾರ ಮಾಡುತ್ತಾ [illegible] ಅವರ ಪ್ರಕೃತಿಗೆ ಈಗ ಸ್ವಲ್ಪ ಗುಣವಾಗಿರುವದೆಂತಲೂ ಅದರಿಂದ ದಿವಾನರವರು ಸುಮಾರು ಬರುವ ವಾರದಲ್ಲಿ ಪುನಃ ಕೆಲಸದಮೇಲೆ ಹಾಜರಾಗುವರೆಂತಲೂ, ಸ್ಯಾಂಕ್ಷನ್ ಆಗಿರುವ ಪೂರೈಸದ ರಜವನ್ನು ರದ್ದುಪಡಿಸುವರೆಂತಲೂ ಬೆಂಗಳೂರು ಇಂಗ್ಲೀಷ್ ಪತ್ರಿಕೆಯು ತಿಳಿಸುತ್ತದೆ

ಕಳೆದ ಸೋಮವಾರ ಮೈಸೂರಿನ ಈ ಊರ [illegible] ವ್ಯಾಟಿಮ ನವಿಶಾಸದಲ್ಲಿ ಯಾವಳೋ ಒಬ್ಬ ಸ್ತ್ರೀ ಗರ್ಭಿಣಿಯು ಅಕ್ರಮವಾಗಿ ಮಗುವನ್ನು ಪ್ರಸವಿಸಿ ಆ ಮಗುವನ್ನು ಕೊಂದು ಬಿಸಾಡಿದ್ದಳೆಂಬದಾಗಿ ಜನಗಳು ಬಂದು ಹೇಳಿದರು ಅಯ್ಯೋ! ಇಂಥಾ ಅತ್ಯಾಚಾರಕೃತ್ಯಗಳಿಗೆ ಯಾವಾಗ ಕೊನೆಯಾಗುವದೋ! ಆ ಪಾಪಿಷ್ಠೆಯನ್ನು ಹಿಡಿದು ಸರ್ಕಾರದವರು ಶಿಕ್ಷಿಸುವರಲ್ಲಂತೆ ಈ ನೀಚಕೃತ್ಯಕ್ಕೆ ಕಾರಣವಾಗಿರುವ ವಿಧವಾ ವಿವಾಹವನ್ನು ಪ್ರೋತ್ಸಾಹಿಸುವರ ಪ್ರಯತ್ನವಲ್ಲವೆ?

ಊಟಿಯಲ್ಲಿ ಕೊಡಗು ಮತ್ತು ಮೈಸೂರು ಟ್ರೇಡಿಂಗ್ ಕಂಪೆನಿಯವರು [illegible] ಮಾಡಿಸಿದ ಪುಸ್ತಕವನ್ನು ಪ್ರಕಟಿಸುತ್ತಲಿರುವದು ಸರಿಯಷ್ಟೆ ಅದರೆ ಅವರ ಬಳಿ ಇರುವ ತಮಗೆ ಕಳೆದ ತಿಂಗಳ ಸಂಚಿಕೆಯು ತಲುಪಲಿಲ್ಲವೆಂಬದಾಗಿ ಬರೆಯುತ್ತಾರೆ [illegible] ಸಲ್ಲಿ [illegible] ಪಟ್ಟಣದಲ್ಲಿ ನಡೆದ ಸ್ವಾಗತ ಸಂಗತಿಯನ್ನು [illegible] ವಿದೇ ಇದರ ವಿಚಾರ [illegible] ದಿರುವದಕ್ಕೂ ಊರಿ ಜನಗಳು ಸ್ವೀಕರಿಸಬಹುದಾಗಿದ್ದ ಆದ್ದರಿಂದಲೇ ಅವರು ತಮ್ಮ ಸಂಚಿಕೆಯನ್ನು ಪ್ರಕಟಿಸಲು ಅನುಕೂಲವಾಯಿತೆಂತಲೂ, ಅವರ ಈ ತಿಂಗಳಿನಲ್ಲಿ ಬರುವ ಸಂಚಿಕೆಗಳನ್ನೆಲ್ಲಾ ಮುಂದೆ ದಾರಿಯಾಗ [illegible] ಬರುವರೆಂತಲೂ ನಾವು ಊಹಿಸುತ್ತೇವೆ

ಊಟಿಗೆ ಕಾಡುಗಳಲ್ಲಿ ಹೊಸದಾಗಿ ಹಿಡಿಯಲ್ಪಟ್ಟ ನಾಲ್ಕು ಆನೆಗಳನ್ನೂ ನಂಜನಗೂಡಿನಲ್ಲೇ ಇಟ್ಟು ಸರ್ಕಾರದವರು ಅವುಗಳನ್ನೆಲ್ಲಾ ಪಳಗಿಸುತ್ತಿದ್ದರೆಂತಲೂ, ಕಳೆದ ಭಾನುವಾರ ಸಾಯಂಕಾಲ ಒಬ್ಬ ಮುಸಲ್ಮಾನನು ಒಂದು ಹೆಣ್ಣಾನೆಯ ಕಾಲನ್ನು ಬಿಚ್ಚುತ್ತಿರುವಾಗ್ಯೆ ಆ ಆನೆಯು ರೇಗಿ ಸೊಂಡಿಲಿಂದ ಅವನನ್ನು ಹಿಡಿದು ಅವನ ಕಾಲನ್ನು ಮುರಿದುಹಾಕಿದ್ದಲ್ಲದೆ ಅವನನ್ನು ನೆಲದಮೇಲೆ ಮಲಗಿಸಿಕೊಂಡು ತನ್ನ ಪಾದದಿಂದ ಅವನ ತಲೆ ಮತ್ತು ಎದೆಗಳಮೇಲೆ ತುಳಿದು ಕೊಂದುಹಾಕಿತೆಂತಲೂ, ಆ ಬಳಿ ಮುಸಲ್ಮಾನನಿಗೆ ಒಬ್ಬ ಹೆಂಡತಿಯೂ ಒಬ್ಬ ಗಂಡುಮಗನೂ ಇರುವನೆಂದು ಅವರಿಗೆ ಸರ್ಕಾರದವರು ಪಿಂಚನಿಯನ್ನು ಕಲ್ಪಿಸಿಕೊಡಬೇಕಾದದ್ದು ಅವಶ್ಯಕವೆಂಬದಾಗಿಯೂ ಅಲ್ಲಿನ ಬಾತ್ಮಿದಾರರೊಬ್ಬರು ತಿಳಿಸುತ್ತಾರೆ

ಮೈಸೂರ ಗೆಜೆಟ ಸಂಗ್ರಹ.

ತಾ|| ೨೬ನೇ ಆಗಸ್ಟು ೧೮೯೩ನೇ ಇಸವಿ

ಮೈಸೂರು ಡಿಸ್ಟ್ರಿಕ್ಟ್ ೩ನೇ ಜನರಲ ಅಸಿಸ್ಟೆಂಟ ಕಮಿಷನರಾದ ಮ|| ಹೆಚ್ ನಂಜುಂಡಯ್ಯನವರಿಗೆ ಕಳೆದ [illegible] ದಲ್ಲಿ ಕೊಡಲ್ಪಟ್ಟ [illegible] ಪ್ರಿವಿಲೇಜ್ [illegible] ಅದೇ ೩೦ನೇ ತಾ|| ಯಿಂದ ಉಪಯೋಗಿಸಿಕೊಂಡು ಕಳೆದ ಆಗಸ್ಟ ೩ನೇ ತಾರೀಖಿನ ಸಾಯಂಕಾಲ ಕೆಲಸದ ಛಾರ್ಜನ್ನು ವಹಿಸಿಕೊಂಡಿರುವದರಿಂದ, ಅವರ ಉಪಯೋಗಿಸಿಕೊಂಡ ಇಷ್ಟು ರಜವನ್ನು ಅದರಿಂದ ರದ್ದು ಮಾಡಲ್ಪಟ್ಟಿದೆ

ಹಿರಿಯೂರು ತಾಲ್ಲೋಕು ಅಮಲ್ದಾರ ಎಂ ಸುಬ್ಬರಾಯರಿಗೆ ಕೊಡಲ್ಪಟ್ಟ ೩೦ನೇ ತಾರೀಖಿನಲ್ಲಿ ಸ್ಯಾಂಕ್ಷನಾದ ೯ ದಿನಗಳ ಪ್ರಿವಿಲೇಜ ರಜವನ್ನು ಅವರ ಅಪೇಕ್ಷೆಯ ಪ್ರಕಾರ ಈ ಮೂಲಕ ರದ್ದು ಮಾಡಲ್ಪಟ್ಟಿದೆ

ತುಮಕೂರು ಡಿಸ್ಟ್ರಿಕ್ಟ್ ಪ್ರಾಬೇಷನರ ಸರ್ವೀಸಿನವರ ಕೆಲಸದ [illegible] ಬದಲಿ ಕೆಲಸ ನೋಡುತ್ತಿದ್ದ ಮ|| ಆ [illegible] ಯವರಿಂದ ಮ|| ಜೆ ಹಬ್ಬಿಯು ನ್ಯಟ ಸಾಹೇಬರು ಕಳೆದ ಆಗಸ್ಟು ೫ನೇ ತಾರೀಖಿನಿಂದ ವಹಿಸಿರುತ್ತಾರೆ

ತಾ|| ೩೦ನೇ ಆಗಸ್ಟು ೧೮೯೩ನೇ ಇಸವಿ

ಮೈಸೂರು ಸರ್ವೆ ಡೆಪ್ಯುಟೀ ಸೂಪರಿಂಟೆಂಡೆಂಟ್ ೩ನೇ ಅಸಿಸ್ಟೆಂಟ ಆದ ಕೆ [illegible] ಡಿಸ್ಟ್ರಿಕ್ಟ್ [illegible] ಮಾಡಿದ ಮ|| ಹೆಚ್ [illegible] ಯವರಿಗೆ ೩ನೇ ಆಗಸ್ಟು ಆಗಿಯಿತು ಅವರ ಅವರು ಉಪಯೋಗಿಸಿಕೊಳ್ಳುವ ತಾರೀಖು [illegible] ೧೨ ದಿವಸಗಳ ಪ್ರಿವಿಲೇಜ ರಜಾ ಕೊಡಲ್ಪಟ್ಟಿತು

ಹಾಸನ ತಾಲ್ಲೋಕು ಶಿರಸ್ತೇದಾರ ಚನ್ನಪ್ಪನವರಿಗೆ [illegible] ಮಹಲ್ ಅಧಿಕಾರವನ್ನು ಈ ಮೂಲಕ ಕೊಡಲ್ಪಟ್ಟಿತು ಅವರು [illegible] ರವನ್ನು [illegible] ರಜವನ್ನು ಅಲ್ಲಿನ ಕಚೇರಿಯಲ್ಲಿ [illegible] ಕೊಡುವದಕ್ಕೆ ಕಾನೂನಿನ ತಾಲ್ಲೋಕಿನಲ್ಲಿ ನಡೆಸುತ್ತಿದ್ದರು

ತಾ|| ೩೧ನೇ ಆಗಸ್ಟು ೧೮೯೩ನೇ ಇಸವಿ

ಮೈಸೂರು ಸರ್ವೆ ಡೆಪ್ಯುಟೀ ಸೂಪರಿಂಟೆಂಡೆಂಟ್ [illegible] ಕಲ್ ಅಸಿಸ್ಟೆಂಟ ಆನೆಕಲ್ಲು ತಾಲ್ಲೋಕು ಅಮಲ್ದಾರ ಎಂ ಕೃಷ್ಣಪ್ಪನವರಿಗೆ ಸೆಪ್ಟೆಂಬರು ೧ನೇ ತಾರೀಖು ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ [illegible] ರಜಾ ಕೊಡಲ್ಪಟ್ಟಿರುತ್ತದೆ

ಚಿಕ್ಕಮಗಳೂರು ತಾಲ್ಲೋಕು ಡೆಪ್ಯುಟಿ ಅಮಲ್ದಾರ ಎ. ವೆಂಕಟನಾರಾಯಣಪ್ಪನವರು [illegible] ಕೃಷ್ಣಪ್ಪನವರು [illegible] ಅವರ ಮಕ್ಕಳು ಕೊಡು [illegible] ತಾಲ್ಲೋಕಿಗೆ [illegible] ಮತ್ತು [illegible] ಸ್ಪೆಷಲ್ [illegible] ಕೊಡಲ್ಪಟ್ಟಿರುವದು

ತಾ|| ೩೧ನೇ ಆಗಸ್ಟು ೧೮೯೩ನೇ ಇಸವಿ

ಮೈಸೂರು [illegible] ಅಸಿಸ್ಟೆಂಟ ಸೆಕ್ರೆಟರಿ [illegible] ಛಾರ್ಜನ್ನು ಮ|| ಸಿ ಶ್ರೀನಿವಾಸಯ್ಯನವರಿಂದ ಮ|| ವಿ [illegible] ವಹಿಸಿಕೊಂಡಿರುತ್ತಾರೆ

ಸಂಸ್ಥಾನದ ಜಿ. ಜನ್ಸನ್ ಅಧಿಕಾರವನ್ನು ಮತ್ತು [illegible] ಕೆಲಸದ ಛಾರ್ಜನ್ನು ಮ|| [illegible] ಮ|| ಎಂ [illegible] ಯ್ಯನವರು ಕಳೆದ ಆಗಸ್ಟು ೨೬ನೇ ಮಧ್ಯಾಹ್ನದ ದಿನ ಪೂರ್ವಾಹ್ನದಲ್ಲಿ ವಹಿಸಿರುತ್ತಾರೆ

ಮೈಸೂರು ಸಂಸ್ಥಾನದ ರಿಜಿಸ್ಟ್ರೇಷನ್ ಡಿಪಾರ್ಟ್ಮೆಂಟ್ ಜನರಲ ಕೆಲಸದ ಮತ್ತು ಕಂಟ್ರೋಲರ ರಿಜಿಸ್ಟ್ರಾರ ಕೆಲಸದ ಛಾರ್ಜುಗಳನ್ನು ಮ|| ಸಿ ಶ್ರೀನಿವಾಸಯ್ಯನವರಿಂದ ಮ|| ಆರ್ [illegible] ರವರು ಕಳೆದ ಆಗಸ್ಟು ೨೬ನೇ ತಾರೀಖಿನ ಪೂರ್ವಾಹ್ನದಲ್ಲಿ ವಹಿಸಿರುತ್ತಾರೆ

ಮೈಸೂರು ಸರ್ವೆ ಡೆಪ್ಯುಟೀ ಸೂಪರಿಂಟೆಂಡೆಂಟ್ ೨ನೇ ಅಸಿಸ್ಟೆಂಟ ಕಮೀಷನ ರಾದ ಮ|| ಕೆ ಎಸ್ ದೊರೆಸ್ವಾಮಿ ಅಯ್ಯಂಗಾರವರಿಗೆ ಸರ್ಟಿಫಿಕೇಟ್ ಮೇರೆಗೆ ಆಗಸ್ಟು ೭ನೇ ತಾರೀಖು ಮೊದಲುಗೊಂಡು ೧೫ ದಿನಗಳ ರಜಾ ಕೊಡಲ್ಪಟ್ಟಿತ್ತು

ಅಸಿಸ್ಟೆಂಟ್ ಕಮೀಷನರು ಮ|| ಕೆ ಎಸ್ ದೊರೆಸ್ವಾಮಿ ಅಯ್ಯಂಗಾರು ಕಡೂರಿನ ಡಿಸ್ಟ್ರಿಕ್ಟ್ ಬೋರ್ಡಿನ ಛಾರ್ಜನ್ನು ಮ|| ಪಿ [illegible] ಯ್ಯನವರಿಂದ ೫ನೇ ತಾರೀಖು ಪೂರ್ವಾಹ್ನದಲ್ಲಿ ವಹಿಸಿರುತ್ತಾರೆ

ವಿದ್ಯಾಶಾಖೆ ಇಲಾಖೆ

ತುಮಕೂರು ಡಿಸ್ಟ್ರಿಕ್ಟ್ ಸ್ಕೂಲಿನ ಇನ್ಸ್‌ಪೆಕ್ಟರ್ ಮ|| ಎಂ ಶ್ರೀನಿವಾಸರಾಯರಿಗೆ ಆಗಸ್ಟು ೨೬ನೇ ತಾರೀಖು ಆಗಾಯಿತು ೬ ದಿನಗಳ ಪ್ರಿವಿಲೇಜ ರಜಾ ಕೊಡಲ್ಪಟ್ಟಿರುತ್ತೆ

ತ್ಯಾಮಗೊಂಡ್ಲು ವೆಸ್ಲಿಯನ್ ಮಿಷನ ಬಾಲಿಕಾ ಪಾಠಶಾಲೆ

(ನಮ್ಮ ಬಾತ್ಮಿದಾರರಿಂದ)

ಕಳೆದ ಆಗಸ್ಟು ತಿಂಗಳು ೨೫ ನೇ ತಾರೀಖು ಗುರುವಾರ ಮಧ್ಯಾಹ್ನ ೩ ಘಂಟೆಗೆ [illegible] ವೆಸ್ಲಿಯನ್ ಮಿಷನ [illegible] ಅತ್ಯಂತ ಸುಂದರವಾಗಿ ಅಲಂಕರಿಸಲ್ಪಟ್ಟ [illegible] ಪಾರಿತೋಷಿಕ ವಿತರಣೆ ನಡೆಯಿತು. [illegible] ಘನ ಪರ್ಣ ಅಮ್ಮನವರು ಅಗ್ರಾಸನಾಧಿಪತ್ಯವನ್ನು ವಹಿಸಿದ್ದರು. [illegible] ಅವರ ಪತಿ ದೊರೆಯವರೂ ಘನ ವಿಸಿತ [illegible] ಮತ್ತು [illegible] ಬಾಲಿಕೆಯರೂ [illegible] ಮತ್ತು ಈ ಸ್ಥಳದಲ್ಲಿ [illegible] ಬಾಲಿಕೆಯರು [illegible] ಪ್ರಾರ್ಥನೆ [illegible] ಅಭ್ಯಾಸಗಳಲ್ಲಿ ಈ ಪಾಠಶಾಲೆಯು [illegible] ಭಗವತ್ಪ್ರಾರ್ಥನೆಯನ್ನು ಪೂರೈಸಿದರು ಆ ಮೇಲೆ ಬಾಲಿಕೆಯರು ಕೆಲವು [illegible] ಹಾಡುಗಳನ್ನು ಹಾಡಿದರು [illegible] ವರ್ಷದ ರಿಪೋರ್ಟನ್ನು ಓದಿದರು [illegible] ವಿದ್ಯಾರ್ಥಿನಿಯರ ಸಂಖ್ಯೆ [illegible] ವೃದ್ಧಿ [illegible] ಯಲ್ಲಿರುವ [illegible] ವ್ಯಕ್ತಪಡಿಸಿದರು [illegible] ವಿದ್ಯಾರ್ಥಿನಿಯರು [illegible] ಪರೀಕ್ಷೆಯಲ್ಲಿ [illegible] ಉತ್ತೀರ್ಣರಾದರು [illegible] ಅದರ ನಂತರ [illegible] ಬಾಲಿಕೆಯರು [illegible] ಉಡುಗೊರೆಗಳನ್ನು ಕೊಟ್ಟು [illegible] ವಿದ್ಯಾರ್ಥಿನಿಯರಿಗೆ [illegible] ಬಹುಮಾನಗಳನ್ನು [illegible] ಅವರಿಗೆ ಉಪದೇಶಗಳನ್ನು [illegible] ಅನಂತರ ಅತ್ಯಂತ ಸಂತೋಷಪೂರ್ವಕವಾಗಿ ತಮ್ಮ ನಿವಾಸವನ್ನು ಸೇರಿದರು

ವಿವಿಧ ವರ್ತಮಾನಗಳು.

ಎಕ್ಸಿಬಿಷನ ಮಹಾಸಭೆಯಲ್ಲಿ ಇಟ್ಟಿರುವ ನಾನಾ ತರದ ಪದಾರ್ಥಗಳನ್ನು ನೋಡಿಕೊಂಡು ಬರುವುದಕ್ಕೆ ೧೦೫ ಮೈಲಿಗಳು ಆಗುತ್ತೆ ಹಾಗಾದರೆ ಎಷ್ಟು ವಿಸ್ತಾರವಾದ ಪದಾರ್ಥಗಳಿಟ್ಟಿರಬೇಕೋ ಊಹಿಸಿಕೊಳ್ಳಬಹುದು

ಕಾಬೂಲಿನಲ್ಲಿರುವ ಜಗಪ್ರಸಿದ್ಧ ಅಮೀರರವರು [illegible] ತಿಂಗಳು ೧ ನೇ ತಾರೀಖು [illegible] ಅವರ [illegible] ಗೆ ಕಾಣಿಸಿಕೊಂಡಿರು ಅವರು ಕಳ್ಳತ್ತಲೆಯಲ್ಲಿರುವ ಸ್ಥಳಗಳಿಗೆ [illegible] ಮಾಡುವಂತೆ ಏನಾದರಾದಿದರು

ಸಿಲೋನ ದ್ವೀಪದ ಕೆಲವು ಭಾಗಗಳಲ್ಲಿ ಬಂದು ಜಾತಿ ರೋಗವು ಹುಟ್ಟಿಕೊಂಡಿದೆ ಇದರಿಂದ ರೋಗಿಗೆ ಮೊದಲನೆ ದಿನ ಜ್ವರವು, ಎರಡನೆ ದಿನ ಮೈಯೆಲ್ಲಾ ಬೊಬ್ಬೆಗಳು ಎದ್ದು ಗುಳ್ಳೆಯಾಗಿ ಮೂರನೆ ದಿನ ಮರಣವನ್ನು ಹೊಂದುವನು ಇದುವರೆಗೆ ಈ ರೋಗಕ್ಕೆ ಔಷಧವು ಇಲ್ಲವೆಂದು ಹೇಳುತ್ತಾರೆ

ಮಹಾದೇವಪುರದಲ್ಲಿ ನೂಲಿನ ಕಾರ್ಖಾನೆಯಲ್ಲಿ ಅಧಿಪತಿಯಾಗಿರುವ ಮ|| ಸ್ಮಿತ್ ಎಂಬವರು ಒಬ್ಬ ಜವಾನನನ್ನು—ಇಲ್ಲಿ ಕೂತುಕೋ, ಪೋಲೀಸಿಗೆ ಹೇಳಬೇಡ ಎಂದು [illegible] ಆ ಜವಾನನು ಕ್ರಿಮಿನಲ [illegible] ಅಕ್ರಮ [illegible] ತಪ್ಪು ಹೊರಿಸಿ ದಂಡ [illegible] ಮ್ಯಾಜಿಸ್ಟ್ರೇಟರು ಅವರಿಗೆ ೨೫ ರೂಪಾಯಿ ಜುಲ್ಮಾನೆ ಹಾಕಿದರು

ಗೋದಾವರಿ ಜಿಲ್ಲೆಯಲ್ಲಿ ಒಬ್ಬ ಹೆಂಗಸು ಮೊದಲನೇ ದಿವಸ ೧ ಗಂಡುಮಗುವನ್ನು ಹೆತ್ತಳು ಎರಡು ದಿನಗಳಮೇಲೆ ಪುನಃ ಎರಡು ಹೆಣ್ಣುಮಕ್ಕಳನ್ನು ಹೆತ್ತಳು ಈ ಪ್ರಕಾರವಾದ ವಿಚಿತ್ರ ಹೆರಿಗೆ ಕಾರಣಭೂತಳಾಗಿರುವ ಸ್ತ್ರೀಗೆ ಪಿಠಾಪುರದ ಸಮ್ಮ ಮಹಾರಾಣಿಯವರು ಬಹುಮಾನ ಕಳುಹಿಸುತ್ತಾರೆಂದು ಅಲ್ಲಿನ ಒಂದು ಪತ್ರಿಕೆಯು ತಿಳಿಸುತ್ತದೆ

ಸಂಯುಕ್ತ ಸಂಸ್ಥಾನಗಳಲ್ಲಿ ಕೆರೋಲಿನ, ಜಾರ್ಜಿಯಾ, ಫ್ಲೋರಿಡಾ ಎಂಬ ಡಿಸ್ಟ್ರಿಕ್ಟ್‌ಗಳಲ್ಲಿ ಸೈಕ್ಲೋನ್ ಎಂಬ ಪ್ರಚಂಡ ವಾಯುವು ಬೀಸಿದ್ದರಿಂದ, ಇದರಿಂದ ಸಮುದ್ರದ ಅಲೆಗಳು ಮುಕ್ಕಿ ಅನೇಕ ನಷ್ಟವಾದರೆಂತಲೂ, ಸುಮಾರು ೫೦೦ ಜನಗಳಿಗೆ ತಲೆಮರೆಯಿಲ್ಲದೆ ಸತ್ತುಹೋದರೆಂತಲೂ, ಕಟ್ಟಡಗಳೆಲ್ಲಾ ನೆಲಸಮವಾಗಿ ಕೋಟ್ಯಂತರ ದ್ರವ್ಯ ನಷ್ಟವಾಯಿತೆಂತಲೂ ತಂತಿಯ ವರ್ತಮಾನ ಬಂದಿದೆ

ಇಂಗ್ಲೆಂಡ್ ಎಂಬ ದ್ವೀಪದಲ್ಲಿ ಕೆಲವು ದಿನಗಳಿಗೆ ಎದುರು ಬದುರಾಗಿ ಬರುತ್ತಿದ್ದ ರೈಲುಗಳು ಒಂದಕ್ಕೊಂದು ಬಡಿದು ಆ [illegible] ೮—೧೦ ಗಾಡಿಗಳು ನುಚ್ಚುನೂರಾದವು ಅವುಗಳಲ್ಲಿ ಕುಳಿತಿದ್ದ ಜನಗಳಲ್ಲಿ ಸುಮಾರು ೨೦—೨೫ ಮಂದಿ ಸತ್ತರು ೫೦—೬೦ ಜನಗಳವರೆಗೂ ನಾನಾವಿಧವಾದ ಗಾಯಗಳನ್ನು ಪಡೆದು ಈಗ ಆಸ್ಪತ್ರೆಯಲ್ಲಿ ನರಳುತ್ತಲಿದ್ದಾರೆ ಇವರ ಪೈಕಿ ಇನ್ನೆಷ್ಟು ಮಂದಿ ಸಾಯುವರೋ

ಬೊಂಬಾಯಿಯಲ್ಲಿ ದಂಗೆ ಆದ ಸಂಗತಿಯನ್ನು ಇಂಡಿಯಾ ಸೆಕ್ರೆಟರಿಯವರು ಕೇಳಿ, ಅಲ್ಲಿನ ಪೋಲೀಸ್ ಖಾತೆಯು ಸಾಕಷ್ಟು ಇಲ್ಲವೆಂದು ಅಭಿಪ್ರಾಯಪಟ್ಟು ಇನ್ನೂ ೬೦೦ ಮಂದಿ ಪೋಲೀಸು ಆಫೀಸರುಗಳನ್ನು ಜಾಸ್ತಿ ಮಾಡಬೇಕೆಂದು ಹುಕುಂ ಮಾಡಿ, ಅದಕ್ಕೆ ತಕ್ಕ ಹಣವನ್ನು ಸ್ಯಾಂಕ್ಷನ್ ಮಾಡುವರು ಎಂದು ವರ್ತಮಾನವಿದೆ ಇದರಿಂದ ಅಲ್ಲಿನ ಜನಗಳಿಗೆ ಸಮಾಧಾನದಲ್ಲಿಯೂ ಕ್ಷೇಮದಲ್ಲಿಯೂ ಹೆಚ್ಚುವರೆಂಬಲ್ಲಿ ಸಂಶಯವಿಲ್ಲ

ರಷ್ಯ ಸರ್ಕಾರದವರು ಹೀರಾಟ ಪಟ್ಟಣವನ್ನು ಸ್ವಾಧೀನ ಮಾಡಿಕೊಳ್ಳಬೇಕೆಂದು ಪ್ರಯತ್ನಮಾಡುತ್ತಿದ್ದಾರೆಂತಲೂ, ಅದರ ಸಮೀಪದಲ್ಲಿ ತಮ್ಮ ಸ್ವಾಧೀನದಲ್ಲಿರುವ ಮೂರು ಊರುಗಳಲ್ಲಿ ಭದ್ರವಾದ ಕೋಟೆಗಳನ್ನು ಕಟ್ಟಿಸುತ್ತಿದ್ದಾರೆಂತಲೂ, ಒಂದು ಪತ್ರಿಕೆಯು ತಿಳಿಸುತ್ತದೆ ಇದರಿಂದ ರಷಿಯನ್ ಜನರು ಇಂಡಿಯಾಕ್ಕೆ ಅವಶ್ಯಕವಾದ ಉಪಾಯಗಳನ್ನು [illegible] ಈ ವರ್ತಮಾನದ ಯೋಗ್ಯತೆಯು ಎಂಥಾದ್ದೋ ಹೇಳಲಾಗದು

ಸಿಲೋನಿನ ಸೈಂಟ ಲಿಸ್ಟರ ಎಂಬ ಡಿಸ್ಟ್ರಿಕ್ಟಿನಲ್ಲಿ ಅಕಸ್ಮಾತ್ತಾಗಿ ಭೂಮಿ ನಡುಗಿತು ಇದು ೧೫ ಮೈಲಿಗಳ ದೂರದವರೆಗೂ ವ್ಯಾಪಿಸಿತ್ತು ಜನಗಳೆಲ್ಲರೂ ಆ ಅದ್ಭುತ [illegible] ವನ್ನು ಕಂಡು ಭಯಗ್ರಸ್ತರಾಗಿ ಕೂಗಿಕೊಳ್ಳುತ್ತಾ ತಮ್ಮ ಮನೆಗಳನ್ನು ಬಿಟ್ಟು ದಿಕ್ಕು ದಿಕ್ಕಿಗೆ ಓಡಿಹೋದರು ಕೆಲವು ಕಟ್ಟಡಗಳು ಬಿದ್ದವು, ಹಾಳಾದವು ತಪ್ಪಿಹೋಯಿತು ಅವರ ಪ್ರಾಣಹಾನಿಯೇನೂ ಆಗಲಿಲ್ಲವೆಂದು ಕೇಳಿ ಸಂತೋಷಿಸುತ್ತೇವೆ

[illegible] ಕಂಪೆನಿಗೆ ಒಬ್ಬ ಪರ್ಸಾರಸನು ಹೋಗಿ [illegible] ೧,೦೦೦—೧,೫೦೦ ರೂಪಾಯಿಗಳ ಚೆಕ್ಕುಗಳನ್ನು ಕೊಟ್ಟು [illegible] ಬಹು ಪ್ರಯತ್ನ ಮಾಡುತ್ತಿದ್ದನು ಅದರೆ ಇವನ ಆತುರವನ್ನು ನೋಡಿ ಇವನಲ್ಲಿ [illegible] ಅಧಿಕಾರಿಗಳು ಇವನನ್ನು ಪೋಲೀಸಿಗೆ ಕೊಟ್ಟರು ಕೊನೆಗೆ ವಿಚಾರಣೆಯಲ್ಲಿ ಅವು ಫೋರ್ಜರಿ ಮಾಡಿದ್ದವೆಂದು ಅವನು ಒಪ್ಪಿಕೊಂಡನು [illegible] ಹಣವೆಲ್ಲಾ ಇವನದೇ ಸರಿ

[illegible] ಮೋಹನನಿಗೆ ವಿಲಾಯತಿಯಲ್ಲಿ ಕೇಂಬ್ರಿಜ್ ಯೂನಿವರ್ಸಿಟಿಯವರು ಎಲ್ ಎಲ್ ಡಿ ಎಂಬ ಬಿರುದನ್ನು ದಯಪಾಲಿಸಿದರು ಅದಕ್ಕಾಗಿ [illegible] ೫೦೦ ಪೌಂಡುಗಳನ್ನು ಬಹುಮಾನವಾಗಿ ಕೊಟ್ಟು [illegible] ಉತ್ಪತ್ತಿಯಾಗುವ ಹಣದಲ್ಲಿ ತಮ್ಮ ಹೆಸರಿನ ಮೇಲೆ ಒಂದು [illegible] ವನ್ನು ಸ್ಥಾಪಿಸಬೇಕೆಂದು ಅಪ್ಪಣೆ ಕೊಡಿಸಿರುತ್ತಾರೆ ಇದರಿಂದ [illegible] ತಮ್ಮ ಹೆಸರನ್ನು ವಿಲಾಯತಿಯಲ್ಲಿ ಶಾಶ್ವತ ಪಡಿಸಿಕೊಂಡಿರುವರೆಂದು ಬಹುಸಂತೋಷಿಸುತ್ತೇವೆ

[illegible] ಒಂದು ಗ್ರಾಮದಲ್ಲಿ ಕೆಲವು ದಿನಗಳ ಕೆಳಗೆ ನಡೆದ ಜಾತ್ರೆಯಲ್ಲಿ ಜನಗಳು ಸೇರಿ ಒಬ್ಬನಿಗೆ ಮೈಮೇಲಿರುವ ವಸ್ತ್ರಗಳನ್ನು ಬಿಚ್ಚಿಸಿ, ಅವನಿಗೆ ನಾನಾತರವಾಗಿ ಹೊಡೆದು ಅವನ ಸರ್ವಾಂಗವನ್ನು, ಅವನ ಪಕ್ಕದ ಮಾಳಿಗೆಗೆ ಕೊಕ್ಕೆಗಳನ್ನು ಚುಚ್ಚಿ ಸಿಡಿಗೆ ಕಟ್ಟಿ ೧೫—೨೦ ಅಡಿ ಎತ್ತರದಲ್ಲಿ ಅವನನ್ನು ೧೦ ನಿಮಿಷಗಳವರೆಗೂ ಆಡಿಸಿದರು ಈ ಘೋರಕೃತ್ಯವು ಎಲ್ಲಾ ನಡೆಯುವಾಗ [illegible] ನೋಡುವವರು ಸಹಿಸುತ್ತಾರೆ ಆದರೂ ಹುಕುಂ [illegible] ತಿರಸ್ಕರಿಸಿ ಕಾಳಿಕೆ ನಡೆಯುತ್ತಿರುವ ವಿಷಯಕ್ಕಾಗಿ ತಾವು ವಿಷಾದಿಸಬೇಕಾಗಿದೆ

[illegible]

ನ್ಯಾಯದ ನಿರ್ಣಯವು.

[illegible]

ಇನ್ನು ಬೇರೆ ಕಾರಣ ಬೇಕೆ? ಕ ಮು.

ಶಾಲಿವಾಹನಶಕ ೧೮೧೫ ನೇ ವಿಜಯನಾಮ ಸಂವತ್ಸರದ ಶ್ರಾವಣಬಹುಳ ದ್ವಾದಸಿ ಗುರುವಾರದಿಂದ ಭಾದ್ರಪದ ಶುದ್ಧ ತದಿಗೆ ಬುಧವಾರದ ವರಿಗಿನ ವಾರದ ಪಂಚಾಂಗ.

೧೮೯೩ ನೇ ಇಸವಿ, ಸೆಪ್ಟಂಬರ.

ತಾ.	ವಾರ.	ತಿಥಿ	ಘಳಿಗೆ.	ನಕ್ಷತ್ರ.	ಘಳಿಗೆ.	ಸಿಂಹ ಮಾಸ ತಾರೀ.
7	ಗು.	ದ್ವಾ	25-30	ಪುಷ್ಯ	26-58	24
8	ಶು.	ತ್ರ	21-4	ಶ್ಲೆ	24-26	25
9	ಶ *	ಚ	17-30	ಮ	22-41	26
10	ರ.	ಅ	17-1	ಪು	22-7	27
11	ಸೋ	ಪ್ರ	13-31	ಉ	22-32	28
12	ಮಂ †	ದ್ವಿ	13-26	ಹ	24-17	29
13	ಬು ‡	ತ	14-35	ಚಿ	27-14	30

*ಶ್ರಾವಣಶನಿವಾರ ಸರ್ವತ್ರ್ಯಮಾವಾಸ್ಯ.
†ಸಾಮವೇದೋಪಾಕರ್ಮ ‡ಸ್ವರ್ಣಗೌರೀವ್ರತ.

ಪೇಟೆ ಧಾರಣೆ.

ದಿನಸಿ.	ಮೈಸೂರು	ಬೆಂಗಳೂರು.
	ರೂ. ಅ. ಪೈ	ರೂ ಅ ಪೈ.
ಕಡ್ಡಿ ಅಕ್ಕಿ ಪಲ್ಲ ೧ಕ್ಕೆ	೧೧-೮-೦	೧೦-೮-೦
ಕಂಬಳಿ ಅಕ್ಕಿ ಅವ್ವಲ್	೧೧-೦-೦	೧೦-೦-೦
ಮಿಡಿಲ್ ಅಕ್ಕಿ ದೊಯಂ	೧೦-೮-೦	೯-೪-೦
ಜಾಸರಾಳಿ ಅಕ್ಕಿ	೧೨-೦-೦	೧೦-೦-೦
ಸಂಣಕ್ಕಿ ಅವ್ವಲ್	೧೪-೦-೦	೧೨-೮-೦
ಮಿಡಿಲ್ ಅಕ್ಕಿ ದೊಯಂ	೧೨-೮-೦	೧೧-೪-೦
ತೊಗರಿಬೇಳೆ ಪಲ್ಲ ೧ಕ್ಕೆ	೧೨-೦-೦	೧೨-೦-೦
ಮಿಡಿಲ್ ದೊಯಂ ತರಹ	೧೧-೧೨-೦	೧೧-೮-೦
ಬ್ಯಾಗಡಿ ರಾಗಿ ಪಲ್ಲ ೧ಕ್ಕೆ	೪-೪-೦	[illegible]
ರಾಗಿ	೪-೦-೦	[illegible]
ಹಲಸಂದೆ ಪಲ್ಲ ೧ಕ್ಕೆ	೯-೦-೦	೧೦-೦-೦
ಬಿಳೇ ಅವರೆ	೧೨-೧೨-೦	೧೧-೮-೦
ಹೆಸರು	೧೧-೪-೦	೯-೧೨-೦
ಉದ್ದು	೧೪-೦-೦	೧೦-೮-೦
ಕಡಲೆ	೧೧-೦-೦	೧೦-೪-೦
ಎಳ್ಳು	೧೨-೦-೦	೧೨-೦-೦
ಹುರಳಿ	೬-೧೦-೦	೬-೬-೦
ಸೀಗೇಕಾಯಿ ಮಣ ೧ಕ್ಕೆ	೧-೧೦-೦	೧-೧೨-೦
ಮೆಣಸಿನಕಾಯಿ	೩-೮-೦	೩-೮-೦
ದೊಯಂ ತರಹ	೩-೪-೦	೩-೪-೦
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ	೫-೦-೦	[illegible]
ಸಣ್ಣ ಅಚ್ಚು	೪-೧೨-೦	[illegible]
ಒಳ್ಳೆಣ್ಣೆ ಮಣ ೧ಕ್ಕೆ	೩-೧೨-೦	೪-೮-೦
ಹರಳೆಣ್ಣೆ	೪-೦-೦	೩-೧೨-೦
ಕೊತ್ತುಂಬರಿ ಪಲ್ಲ ೧ಕ್ಕೆ	೬-೪-೦	೭-೪-೦
ಉಪ್ಪು	೧೦-೪-೦	೯-೧೨-೦
ಹುಣಸೇಹಣ್ಣು ಮಣ ೧ಕ್ಕೆ	೨-೦-೦	೧-೧೨-೦
ಹಳೇ ಹುಣಸೇಹಣ್ಣು	೧-೧೨-೦	೧-೧೦-೦
ತುಪ್ಪ	೧೩-೦-೦	೧೨-೪-೦
ಸೀಮೆ ಎಣ್ಣೆ ಡಬ್ಬ ೧ಕ್ಕೆ	೪-೨-೦	೪-೧-೦
ತೆಂಗಿನಕಾಯಿ ೧೦೦ಕ್ಕೆ	೫-೦-೦	೬-೦-೦
ಚಿನ್ನ (ತೊಲ)		
ಕೆಂಪು	೧೫-೧೪-೦	೧೬-೮-೦
ಪಸಿಮೆ	೧೬-೪-೦	೧೬-೧೦-೦
ಗಟ್ಟಿ	೧೬-೮-೦	[illegible]

Mysore.—Printed and published for the Proprietor at the Wesleyan Mission Press.
7/9/93.

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು ——— ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೭ | ಮೈಸೂರು—ಸನ್ ೧೮೯೮ ನೇ ಇಸವಿ ಸೆಪ್ಟಂಬರ ತಾರೀಖು ೧೫ ನೇ ಗುರುವಾರ. | ಸಂಖ್ಯೆ ೧೫

ನೋಟಿಸ್

		ಕ್ರಯ			ಹಾಸಲು ಸಹಿತವಾಗಿ		
Campbell's.	ಕನ್ನಡ ವ್ಯಾಕರಣ ಸಾರ	೦	೨	೦	೦	೨	೬
Object Lessons.	ವಸ್ತು ಪಾಠಗಳು	೦	೧	೦	೦	೧	೬
Picture do	ಚಿತ್ರಗಳು ಸಹಿತವಾಗಿ	೦	೨	೦	೦	೨	೬
School Geography	ಭೂಗೋಳ ಶಾಸ್ತ್ರಸಾರ	೦	೬	೦	೦	೭	೦

ಈ ನಾಲ್ಕು ಪುಸ್ತಕಗಳು ಮೈಸೂರು ಸರ್ಕಾರದವರ ಆಜ್ಞೆ ಪ್ರಕಾರ ಸಕಲ ಪಾಠಶಾಲೆಗಳಲ್ಲಿಯೂ ಉಪಯೋಗಿಸತಕ್ಕವುಗಳು.

ಮಾರ್ಟಿನ್ ಲೂಥರ್ ಎಂಬವರ ಚರಿತ್ರೆ	೦	೧	೬	೦	೨	೦
ಸ್ತ್ರೀಯರು ಓದತಕ್ಕ ಪುಸ್ತಕ	೦	೩	೦	೦	೩	೬
ಗಣಿತ ಮಗ್ಗಿಗಳು ..	೦	೧	೦	೦	೧	೬
ಸಂಸ್ಕೃತ ಕರ್ನಾಟಕ ಭಾಷಾಮಂಜರಿ	೦	೨	೦	೦	೨	೬
ಇಂಗ್ಲೀಷು ಕನ್ನಡವೂ ಶಬ್ದಾವಳಿ ೧ನೇ ೨ನೇ ಭಾಗಗಳು	೦	೧	೦	೦	೧	೬
ಕಾವ್ಯಮಾಲೆ (Minor Poetical Anthology)	೦	೮	೦	೦	೮	೬
ಬಾಲವ್ಯಾಕರಣ ..	೦	೩	೦	೦	೩	೬
ಹಳಗನ್ನಡ ವ್ಯಾಕರಣ ಸೂತ್ರಗಳು	೦	೬	೦	೦	೬	೬
ಇಂಗ್ಲೀಷು ಕನ್ನಡವೂ ಸಂಭಾಷಣ ವಾಕ್ಯಗಳು	೦	೧೦	೦	೦	೧೦	೬
ಶಬ್ದಮಣಿ ದರ್ಪಣ ..	೧	೦	೦	೧	೫	೬
Kan. Eng. Pocket Dictionary	೧	೫	೦	೧	೩	೭
Eng. Kan. School Dictionary	೨	೧೦	೦	೨	೧೨	೬
ಒಳ್ಳೇ ತಾಯಿ ..	೦	೫	೫	೦	೫	೬
ಆತ್ಮಿಕ ದಿವ್ಯ ಯುದ್ಧ (Bunyan)	೦	೧೨	೦	೦	೧೩	೬
ಕೃಷಿ ಪದ್ಧತಿ ೧ ನೇ ಭಾಗ ೨ ಅಣಾ ೩ನೇ ಭಾಗ	೦	೧	೬	೦	೨	೦
ಭಕ್ತಿಸಾರ ..	೦	೧	೦	೦	೧	೬
ಸತ್ಯ ವಾಗ್ದಾನ	೦	೧	೦	೦	೧	೬

ಈ ಪುಸ್ತಕಗಳೂ ಇನ್ನೂ ಅನೇಕ ಪ್ರಯೋಜನಕರವಾದ ಪುಸ್ತಕಗಳೂ ಕೆಳಗೆ ನಮೂದಿಸಿರುವ ಸ್ಥಳಗಳಲ್ಲಿ ದೊರಕುತ್ತವೆ.

ಬೆಂಗಳೂರು—ಮೋರ್ಗಾಟಿನ ಪತ್ರವಿರುವ ಪುಸ್ತಕಶಾಲೆ.

ಚಿಕ್ಕಬಳ್ಳಾಪುರ—ಲಾರ್ಡ ಮಿಷನ್ ರೀಡಿಂಗ್ ರೂಮ್

ತುಮಕೂರು—ವೆಸ್ಲಿಯನ್ ಮಿಷನ್ ಬಂಗಳೆ. ಮೈಸೂರು—ವೆಸ್ಲಿಯನ್ ಮಿಷನ್ ಪ್ರೆಸ್.

ನೋಟಿಸ್.

ಪುಸ್ತಕಗಳು.	ಕ್ರಯ.
ಪ್ರಾಥಮ್ಯ ವ್ಯವಹಾರಿಕ	1—8—0
ಕನ್ನಡ ಇಂಗ್ಲೀಷು ನಿಘಂಟು 1 ನೇ ದೊಡ್ಡ ತರಹ	3—0—0
„ „ 2 ನೇ ತರಹ	2—8—0
ಬಾಲಕರು ಓದುವ ಎರಡನೆ ಜ್ಞಾನೋಪದೇಶದ ಪ್ರಶ್ನೋತ್ತರಗಳು	0—1—0
ಸೃಷ್ಟಿಯು ನಿಯಮಗಳನ್ನು ಕುರಿತದ್ದು	0—0—6
ಕಥಾ ಸಂಗ್ರಹ 1 ನೇ ಭಾಗದಿಂದ ೩ ವರಗೆ	1—0—0
ಕಥಾ ಸಂಗ್ರಹ 4 ರಿಂದ 6 ನೇ ಭಾಗ ಹೊಸ ಛಾಪೆ	1—0—0
„ „ ದೊಡ್ಡ ತರಹ	1—8—0
ಬೋಧಕಾಸಕ್ತಿ ಬೋಧಿನಿ	0—4—0
ಸತ್ಯವೇದವನ್ನು ಕುರಿತು 2 ನೇ ಭಾಗ	0—4—0
ಪ್ರಸಂಗಿಯ ದರ್ಪಣ	0—0—6
ಇಂಗ್ಲೀಷು ಭಾಷೆಯಲ್ಲಿಯೂ, ಕನ್ನಡ ಭಾಷೆಯಲ್ಲಿಯೂ, ಶಬ್ದಗಳ ವಿಭಾಗಗಳನ್ನು ವಿವರಿಸುವ ನಿಘಂಟು	0—2—0
ಕನ್ನಡ ವ್ಯಾಕರಣ (ಇಂಗ್ಲೀಷಿನಲ್ಲಿ)	2—0—0
ಹೊಸ ಶಬ್ದ ನಿ ವ್ಯಾಕರಣ	1—0—0
ಬಾಲಬೋಧ ಸೋಪಾನವು	0-12-0
ಬಾಲಕರುಗಳ ಆಟಪಾಠೋಪಯೋಗಿ	0—0—6
ಕ್ರೈಸ್ತರ ಬೋಧನೆಗಳ ಸೂಚಿಕವು	0—12—0

ಮೇಲೆ ನಮೂದಿಸಿರುವ ಪುಸ್ತಕಗಳನ್ನು ಅಪೇಕ್ಷಿಸುವವರು ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್ಸಿಗೆ ಬರೆದು ತರಿಸಿಕೊಳ್ಳಬಹುದು. ಅಂಚೆ ಹಾಸಲು ಏರೆ ಕೊಡಬೇಕು.

ವೆಸ್ಲಿಯನ್ ಮಿಷನ್ ಪ್ರೆಸ್,
ಮೈಸೂರು.

ಪ್ರಸಿದ್ಧಪತ್ರಿಕೆ

ಕಂ|| ಸಕಲಸುಮನಸ್ಸಾಗರುಹುವೆ | ಸುಕರದಿ ಪ್ರಕಟಮವಾದ
ಒಪ್ಪುವರವಾಡಿಂ || ಪ್ರಕಟಿಪಮಹಭಾರತದಕಥೆ |
ವಿಕಸಿತವೇರಿದ ಕೇಳಲ್ಕಸಕಾಸನದಂ ||
ಕನ್ನಡ ಮಹಾ ಭಾರತ.

"ಶ್ರೀಕೃಷ್ಣರಾಜ ವಾಣೀವಿಲಾಸ" ಎಂಬ ಕನ್ನಡ ಮಹಾಭಾರತವು ನಮ್ಮ ಸ್ವಕೀಯ ಶ್ರೀಚಾಮುಂಡೇಶ್ವರಿ ಪ್ರೆಸಿನಲ್ಲಿ ಪ್ರಕಟಿಸಲಾಗುವದು ಯೆಲ್ಲರಿಗೂ ವಿದಿತವಾಗಿರುವಷ್ಟೆ. ಈಗ ಹದಿನೆಂಟು ಪರ್ವಗಳೂ ಪೂರ್ತಿಯಾಗಿ ಪ್ರಸಿದ್ಧವಾಗಿದೆ. ಅಪೇಕ್ಷಿಸುವವರು ಕೆಳಗೆ ವಿವರಿಸುವ ಕ್ರಯವನ್ನು ಕೊಟ್ಟು ಕ್ರಯ ಪಡೆಯಬಹುದು.

ಆದಿಪರ್ವ ರೂ ೩, ಸಭಾಪರ್ವ ೧—೬—೦, ಅರಣ್ಯಪರ್ವ . ವಿರಾಟಪರ್ವ ಷಷ್ಟಿಕೆ ಹಿನ್ನೆಲ ೧೨ ಆಣೆ, ಉದ್ಯೋಗ ಪರ್ವ ೧ ರೂ, ಉದ್ಯೋಗಪರ್ವ . ಭೀಷ್ಮಪರ್ವ . ದ್ರೋಣಪರ್ವ ೩—೮—೦, ಕರ್ಣಪರ್ವ . ಶಲ್ಯಪರ್ವ ೧—೦—೦ ಸೌಪ್ತಿಕಪರ್ವ ೬ ಆಣೆ, ಸ್ತ್ರೀಪರ್ವ ೬ ಆಣೆ, ಶಾಂತಿಪರ್ವ ರಾಜಧರ್ಮ ೨—೬—೦, ಆಪದ್ಧರ್ಮ ೮ ಆ, ಮೋಕ್ಷಧರ್ಮ ೨—೬—೦, ಅನುಶಾಸನಿಕಪರ್ವ ೩—೧೨—೦ ಅಶ್ವಮೇಧಿಕಪರ್ವ ೧—೧೨—೦, ಆಶ್ರಮವಾಸಿಕಪರ್ವ—ಮೌಸಲಪರ್ವ—ಮಹಾಪ್ರಸ್ಥಾನಪರ್ವ—ಸ್ವರ್ಗಾರೋಹಣಪರ್ವ ೧೦ ಆಣೆ, ಭಗವದ್ಗೀತೆ ೮ ಆ, ಯುಧಿಷ್ಠಿರ ಚರಿತ್ರೆ ೭ ಆ, ಪರಿಭಕ್ತ ೭ ಆ. ಶ್ರೀ ಭೋಜರಾಜನ ಟಿಕ್ಕೆಯ ನೋಟ್ಸು ೮ ಆಣೆ

ಅರಣ್ಯಪರ್ವ, ಉದ್ಯೋಗಪರ್ವ, ಕರ್ಣಪರ್ವ ಈ ಮೂರು ಪರ್ವಗಳು ಗವರ್ನಮೆಂಟ ಬುಕ್‌ಡಿಪೋದಲ್ಲಿ ದೊರೆಯುವವು ಮೇಲೆ ಹೇಳಲ್ಪಟ್ಟಿರುವ ಪುಸ್ತಕಗಳು ನಮ್ಮಲ್ಲಿ ಸ್ವಲ್ಪವೇ ಇರುವದರಿಂದ ಜಾಗ್ರತೆಯಾಗಿ ತರಿಸಿಕೊಳ್ಳಬಹುದು.

ಶ್ರೀಮನ್ಮಹಾರಾಜರವರಿಗೆ ಈ ಪುಸ್ತಕ ಸಮರ್ಪಿಸಿ ಮಾಡುವದಕ್ಕೆ ಅಪ್ಪಣೆಯಾಗಿ ನೇಮಿಸಲ್ಪಟ್ಟಿದೆ.

ಎಂ. ರುದ್ರಪ್ಪ, ಅಂಡ್‌ಸನ್,
ಪ್ರೊಪ್ರೈಟರ್, ಶ್ರೀಚಾಮುಂಡೇಶ್ವರಿ ಪ್ರೆಸ್,
ಲಾಲ್—ಬಾಗ್ ರೋಡ್, ಬೆಂಗಳೂರು.

ಸನ್ ೧೮೯೮ ರಲ್ಲಿ ಸ್ಥಾಪಿಸಲ್ಪಟ್ಟಿದ್ದು.

ಕೆನರಾ ಅಂಡ್ ಮೈಸೂರ ಟ್ರೇಡಿಂಗ್ ಏಜನ್ಸೀ ಆಫೀಸ, ಮುಂಬಯಿ

ಇವರು ತಯಾರಿಸುವಂಥ—

ಬ್ರಾಹ್ಮೀಧಾತ್ರೀತೈಲ.

ಕಳೆದ ಜನವರಿ ತಿಂಗಳೊಂದರಲ್ಲಿ ೫,೧೦೦ ಬಾಟ್ಲಿಗಳು ಖರ್ಚಾದವು. ಈ ತೈಲದ ಮಹತ್ವವನ್ನು ಅರಿತು, ನಾಪೀಗ ಹೆಚ್ಚಿಗೆ ವರ್ಣಿಸಬೇಕೆ?—ಯಾಕೆಂದರೆ, ಯಾರು ಈ ತೈಲವನ್ನು ಉಪಯೋಗಿಸುತ್ತಾರೋ ಅವರಿಗೆ ಒಂದೆರಡು ದಿವಸಗಳಲ್ಲಿಯೇ ಇದರ ಅಪ್ರತಿಮವಾದ ಗುಣವು ಸಹಜವಾಗಿ ಅನುಭವಕ್ಕೆ ಬರುವದು. ಆದಾಗ್ಯೂ ಇದರ ಮುಖ್ಯವಾದ ಉಪಯೋಗವನ್ನು ತಿಳಿಸುವದು ನಮ್ಮ ಕರ್ತವ್ಯವಾಗಿರುತ್ತದೆ.

ಈ ನಮ್ಮ "ಬ್ರಾಹ್ಮೀಧಾತ್ರೀ ತೈಲವನ್ನು" ಪ್ರತಿದಿನ ತಲೆಗೆ ಹಾಕಿಕೊಂಡರೆ ಮಿದುಳಿನಲ್ಲಿರುವ ಉಷ್ಣತೆಯನ್ನು ಪರಿಹರಿಸುವದಲ್ಲದೆ, ಕಣ್ಣಿಗೂ, ಮಿದುಳಿಗೂ ತಣುಕೊಳಿಸಿ, ಚಿತ್ತಕ್ಕೆ ಶಾಂತತೆಯನ್ನುಂಟುಮಾಡುವದು. ಮತ್ತು ಕಣ್ಣುಗಳಿಗುಂಟಾಗುವ ಸಾಮಾನ್ಯವಾದ ವಿಕಾರಗಳನ್ನೆಲ್ಲ ಪರಿಹರಿಸುವದು. ದೃಷ್ಟಿಗೆ ತೀವ್ರತೆಯುಂಟಾಗುವದು.

ಹೆಚ್ಚಾಗಿ ಓದತಕ್ಕವರಿಗೂ, ಒಂದೇ ಸಮನಾಗಿ ಕಣ್ಣಿಟ್ಟು ಕೆಲಸ ಮಾಡತಕ್ಕ ಕಸಬುಗಾರರಿಗೂ, ಕಣ್ಣುಗಳಲ್ಲಿ ನೀರು ಸುರಿಯುವವರಿಗೂ, ಉರಿಗಣ್ಣಿನವರಿಗೂ, ಚಿತ್ತವ್ಯಗ್ರವಾದವರಿಗೂ, ಅತ್ಯಂತ ಗುಣಕಾರಿಯಾಗಿರುವದು. ಈ ತೈಲದಲ್ಲಿರುವ ಇನ್ನೊಂದು ಅಪ್ರತಿಮವಾದ ಶಕ್ತಿಯೇನಂದರೆ—ಕೂದಲುಗಳನ್ನು ನಯವಾಗಿಯೂ, ಹೊಳೆಯುವಂತೆಯೂ, ಮಾಡುವದಲ್ಲದೆ ಬೆಳವಣಿಗೆಯನ್ನು ಹೆಚ್ಚಿಸುವದು. ಕೂದಲುಗಳ ಬೇರುಗಳನ್ನು ಘಟ್ಟಿಮಾಡಿ, ಅವು ಉದುರಿಹೋಗದಂತೆ ಮಾಡುವದು.

ಪ್ರತಿಯೊಂದು ಬಾಟ್ಲಿಯೊಳಗೆ ೧೬ ತೊಲೆ ತೈಲವಿರುವದರಿಂದ ಒಬ್ಬನಿಗೆ ೨ ತಿಂಗಳು ಹೆಚ್ಚು ಕಡಿಮೆ ಸಾಕಾಗುವದು. ಬಡಬಗ್ಗರು ಸಹ ಉಪಯೋಗಿಸಿಕೊಳ್ಳಲಿಕ್ಕೆ ಸುಲಭವಾಗಬೇಕೆಂಬುದಕ್ಕಾಗಿ ಪ್ರತಿಯೊಂದು ಬಾಟ್ಲಿಗೆ ೧೦ ಆಣೆ ಕ್ರಯವಿಟ್ಟಿರುವೆವು. ೧೨ ಬಾಟ್ಲಿಗಳಿಗೆ ೧ ಪೆಟ್ಟಿಗೆಗೆ ೬|| ರೂಪಾಯಿ. ಪ್ರತಿಯೊಬ್ಬ ಕುಟುಂಬಿಗನೂ, ಈ ತೈಲವನ್ನು ಉಪಯೋಗಿಸುವದು ಅವಶ್ಯವಾಗಿರುತ್ತದೆ. ಮಕ್ಕಳು ಮರಿಗಳಿಗೆ ಸಹ ಈ ತೈಲವು ಹಿತಕರವಾಗಿರುತ್ತದೆ.

ಈ ತೈಲ ಮತ್ತು ಈ ಕೆಳಗೆ ಬರೆಯುವಂಥ ಔಷಧಗಳು, ಪ್ರೆಸ್ಸು, ಮುತ್ತು, ರತ್ನ,
ಬಂಗಾರ, ಬೆಳ್ಳಿ ಮುಂತಾದ ಸಾಮಾನುಗಳನ್ನು ಮಾರಾಟಮಾಡುವವರು
ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬೇಕು.

ಮ್ಯಾನೇಜರ್, ಕೆನರಾ ಅಂಡ್ ಮೈಸೂರ ಟ್ರೇಡಿಂಗ್ ಏಜನ್ಸಿ ಆಫೀಸ, ಮಾರ್ಕೆಟ ಪೋಸ್ಟ್. ಮುಂಬಾಯಿ.

☞ ಈ ತೈಲವನ್ನು ನಮ್ಮ ಹೊರತು ಇನ್ನಾರೂ ಮಾಡುವದಿಲ್ಲ. ನಮ್ಮ ಹೆಸರಿನ ಗುರ್ತನ್ನು ನೋಡಿ ತೆಗೆದುಕೊಳ್ಳಬೇಕು. ಬೇರೇತರದ ಎಣ್ಣೆಗಳನ್ನು ಈ ಹೆಸರನ್ನಿಟ್ಟು ಮಾರುತಿದ್ದರೆ ಜಾಗ್ರತೆ ಇರಲಿ!

ಔಷಧಗಳು.	ರೂ ಆ.	ಪ್ರೆಸ್ಸುಗಳು.	ರೂ. ಆ.
ನಯನಾಮೃತಭಸ್ಮ ಬಾಟ್ಲಿ ೧ ಕ್ಕೆ	೧—೬	ಮಡಿಲಸ್ಸ್ಯಾಪಿಗೆ ಮುದ್ರೆ	೨—೮
ನಯನಾಮೃತ ಕಾಡಿಗೆ	೧—೬	ಆರ್ಸೆನಿಕನ ಲಾಂಗಕೋಟು	೩—೦
ಕರ್ಣಸ್ರಾವನಾಶಕ ಅಪ್ರತಿಮತೈಲ	೧—೦	ಡಿಟ್ಟೊ. ಆರ್ಡಿನರಿ	೫—೮
ಮಹಾಮಂತ್ರಕುಠಾರತೈಲ	೧—೦	ಡಿಟ್ಟೊ. ಷಾರ್ಟಕೋಟು (ಇಂಗ್ಲಿಷ ಮಾದರಿ)	೫—೬
ಪ್ರವಾಳಭಸ್ಮವು	೨—೧೨	ವಿದ್ವಾನರ ಕಸ್ಮೀರಿಕೋಟು	೨—೮
ವಿವಿಧಜ್ವರಹರಪಟ್ಟಿಕೆಯು	೧—೦	ಡಿಟ್ಟೊ. ಆರ್ಡಿನರಿ	೨—೫
ಬಾಲಸಂಜೀವಿನಿಗುಟಿಕೆ	೩—೮	ಫ್ಲಾನಲ ಕಮೀಜು	೧—೧೨
ಅಜೀರ್ಣಾಮೃತಪ್ರಿ	೦—೮	ಡಿಟ್ಟೊ ಬನಿಯನ್	೧—೪
ಸುಗಂಧದಂತಶೋಧನವು	೦—೫	ಟೊಪಿ (ಇಂಗ್ಲಿಷ ಮಾದರಿ) ಪಟ್ಟೊ	೦—೧೨
ಕಜ್ಜಿಯುದ್ದಾಮನು	೦ ೨		

ತನೂಕರಣದ ಬಂದ್ರಿಕಾಂತ ಹೆಸರು ಕನ್ನಡಕಗಳ ಕ್ರಯ ರೂ. ೧೦—೨||—೩—೪||. ಉತ್ತಮವಾದ "ಚಾಪ್ಪು" ಎಂಬ ಸಸರಿನ ಸೆಗರೇಟುಗಳು (೧ ಪೆಟ್ಟಿಗೆ ೫೦೦ ಸೆಗರೇಟುಗಳು) ಕ್ರಯ ರೂ. ೬.

ವೃತ್ತಾಂತ ಪತ್ರಿಕೆ.

ಚಂದಾ ನಿರ್ಣಯ.

—೦—

	ರೂ ಆ. ಪೈ.
ಸ್ಥಳದವರಿಗೆ ವರ್ಷ ೧ಕ್ಕೆ	೧—೦—೦
ಪರಸ್ಥಳದವರಿಗೆ ವರ್ಷ ೧ಕ್ಕೆ	೧—೧೨—೦
ಬಿಡಿ ಪತ್ರಿಕೆ ೧ಕ್ಕೆ	೦—೦—೫

ಈ ಪತ್ರಿಕೆಯು ಮೈಸೂರು ರಾಜಧಾನಿಯಲ್ಲಿ ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ, ಪ್ರಕಟಿಸಲ್ಪಡುವದು. ಬಡವರು ಕೊಡಲಾಗುವಂತೆ ಸಮಸ್ತರಿಗೂ ಸುಲಭಸಾಧ್ಯವಾಗುವಂತೆ ಈ ಪತ್ರಿಕೆಗೆ ಇಷ್ಟು ಅಲ್ಪ ಮೌಲ್ಯವನ್ನು ನಿರ್ಣಯಿಸಿರುತ್ತೇವೆ. ಈ ಪತ್ರಿಕೆಯನ್ನು ಅಪೇಕ್ಷಿಸುವವರು ಚಂದಾಹಣವನ್ನು ಮುಂಗಡವಾಗಿ ಕೊಡಬೇಕು.

ಎಡಿಟರ್,
ವೃತ್ತಾಂತ ಪತ್ರಿಕೆ

ಟೊಪ್ಪಿಗಳು!

ಟೊಪ್ಪಿಗಳು!! WOOL CAPS ಟೊಪ್ಪಿಗಳು!!

ಮೈಸೂರು ಟ್ರೇನಿಂಗ ಹೋಂನಲ್ಲಿ ತಯಾರಾಗುವಂಥ ಉಣ್ಣೆ ಕಂಬಳಿಯಿಂದ ಹೊಲಿದ ಟೊಪ್ಪಿಗಳು (Wool Caps) ನಮ್ಮ ಆಫೀಸಿನ್ನ ಮಾರಾಟಕ್ಕೆ ಸಿದ್ಧವಾಗಿರುತ್ತವೆ. ಕ್ರಯವು—೧ ರೂ. ೨ ಆಣೆ ಇಂದ ೧ ರೂ. ೬ ಆಣೆಗಳ ವರೆಗೂ ಬೇರೆ ಬೇರೆ ರಂಗುಗಳುಂಟು. ಸ್ಥಳದವರು ಬಂದು ನೋಡಿ ಕೊಳ್ಳಬಹುದು. ಪರಸ್ಥಳದವರು ಮುಂಗಡವಾಗಿಯೇ ಹಣ ಕಳುಹಿಸಿದರೆ ತ್ವರಿತದಲ್ಲಿ ಛಾಂಗೀ ಮೂಲಕ ಕಳುಹಿಸುತ್ತೇವೆ. ಛಾಂಗೀ ಛಾರ್ಜ ಬೇರೇ ಕೊಡಬೇಕು. ಮೇಲ್ಕಂಡ ವಿಷಯದಲ್ಲಿ ಟೊಪ್ಪಿಗೆ ಸಂಬಂಧವಾದದ್ದು ಎಲ್ಲ ಬರೆಯಬೇಕು.

ಮ್ಯಾನೇಜರ್,
ವೆಸ್ಲಿಯನ್ ಮಿಷನ್ ಪ್ರೆಸ್,
ಮೈಸೂರು.

ಏಜಂಟ್ರುಗಳಿಗೆ.

ನೋಟೀಸು.

ಕಳೆದ ಸಂಚಿಕೆಯೊಡನೆ ವೃತ್ತಾಂತ ಪತ್ರಿಕೆಯ ೩ ನೆ ಸಂಪುಟದ ಮೊದಲನೇ ಕ್ವಾರ್ಟರು ಪೂರೈಸಿರುತ್ತಾದ್ದರಿಂದ ಏಜಂಟ್ರುಗಳೆಲ್ಲರೂ ಲೆಕ್ಕಗಳನ್ನು ತಯಾರಿಸ್ಯಾದಿ ತ್ವರ್‍ಯದಲ್ಲಿ ಕಳುಹಿಸಿಕೊಡಬೇಕೆಂದು ಕೋರಿರುತ್ತೇವೆ. ತಪ್ಪಬಾರದು.

೧೭—೯—೯೩. } ಎಡಿಟರ್,
ಮೈಸೂರು. } ವೃತ್ತಾಂತ ಪತ್ರಿಕೆ.

ಕ್ಯಾಪ್ಟನ್ ಅಂಡ್ ಕಂಪೆನಿ.

ಮೈಸೂರಿನ ಕಮಿಸ್ಸ್ಟನ.

ಇವರು ಶಿವಾಜಿ ಪೇಟೆಯಲ್ಲಿ ಒಂದು ಬ್ರಾಂಚ ಔಷಧ ಶಾಲೆಯನ್ನು ಸ್ಥಾಪಿಸಿರುತ್ತಾರೆ. ಇಲ್ಲಿ ನಾನಾವಿಧವಾದ ಔಷಧಗಳು ಸುಲಭ ಬೆಲೆಗೆ ದೊರೆಯುತ್ತವೆ. ಮತ್ತು ಉತ್ತಮತರವಾದ ಸಾಮಗ್ರಿಯುಗಳನ್ನು ಉಪಯೋಗಿಸಿ ಔಷಧಗಳನ್ನು ತಯಾರು ಮಾಡಿ ಕೊಡುತ್ತಾರೆ.

ಈ ಜನೋಪಯುಕ್ತವಾದ ಔಷಧ ಶಾಲೆಯಲ್ಲಿ ರಾತ್ರಿ ಹಗಲು ಯಾವವೇಳೆ ಬಂದಾಗ್ಯೂ ಔಷಧಗಳು ದೊರೆಯುತ್ತವೆ. (೧)

ನಂಬರು.
೧೦

ಇಸ್ತಿಹಾರ್‌ನಾಮಾ.

ಮೈಸೂರು ಧನಾಭಿವೃದ್ಧಿ ಬ್ಯಾಂಕ್ ಲಿಮಿಟೆಡ್ ಆಫೀಸಿನಿಂದ.

ಇದರಿಂದ ಸಮಸ್ತ ಜನಗಳಿಗೂ ತಿಳಿಯುವ ಪ್ರಕ್ಕೆ ಪ್ರಕಟಿಸಲ್ಪಡುವದೇನಂದರೆ:—

೧. ಬ್ಯಾಂಕಿನ ಡಿಪಾಜಿಟ್ಟಿನ ಮೊದಲಾದ ಬಾಕಿಗಳ ಸಮಾಧಾನಕ್ಕಾಗಿ ಬ್ಯಾಂಕಿನ ಆಸ್ತಿಯನ್ನು ೧೮೯೩ ನೇ ಇಸವಿ ಸೆಪ್ಟಂಬರು ೧೬—೧೮—೧೯ ನೆ ತಾರೀಖು ಗಳಲ್ಲಿ ಪ್ರತಿದಿವಸವೂ ಪ್ರಾತಃಕಾಲ ೮ ಘಂಟೆ ಆರಂಭಿಸಿ ೧೧ ಘಂಟೆ ವರೆಗೂ ಮಧ್ಯಾಹ್ನ ೩ ಘಂಟೆಯಿಂದ ೫ ಘಂಟೆ ವರೆಗೂ ಬ್ಯಾಂಕ್ ಆಫೀಸಿನಲ್ಲಿ ತಾತ್ಕಾಲದಲ್ಲಿ ಹಾಜರಿರತಕ್ಕ ಡೈರೆಕ್ಟರುಗಳ ಮೆಂಬರುಗಳ ಸಮಕ್ಷಮ ಬಟ್ಟಾಗಿಯಾಗಲಿ, ಅಥವ ಪ್ರತ್ಯೇಕ ಪ್ರತ್ಯೇಕವಾಗಲಿ, ಬಹಿರಂಗವಾದ ಹರಾಜುಮೂಲಕ ವಿಕ್ರಯಿಸಲ್ಪಡುವದು.

೨. ಟಹವರ್‌ಸ್ಥನಲ್ಲಿ ತೆಗೆದುಕೊಂಡ ಕ್ರಯದಾರರು ಕೂಡಲೆ ಹರಾಜು ಮೊಬಲಗು ಪೈಕಿ ಸೇಕಡಾ ೨೫ರ ಪ್ರಕಾರ ರೊಕ್ಕ ಇತರ್ ಷ್ಟಲ್ಲಿಗೆ ಹರಾಜು ತಾರೀಖು ಮೊದಲು ೧೫ ದಿವಸಗಳ ಒಳಗಾಗಿ ಬಾಕಿ ಮೊಬಲಗನ್ನು ಪೂರ್ತಿ ಮಾಡತಕ್ಕದ್ದು; ಅದಕ್ಕೆ ತಪ್ಪಿದರೆ ಮುಂಗಡ ಮೊಬಲಗು ಕಂಪೆನಿಗೆ ದಂಡವಾಗಿ ತೆಗೆದುಕೊಳ್ಳಲ್ಪಡುವದು.

೩. ಮೇಲಿನ ಷರತ್ತುಗಳಲ್ಲಿ ಯಾವ ವ್ಯಕ್ತಿ ಯಾವವನಾದರೂ ಅಗಲಿ ನಡೆಸ್ಸದವ ಇದ್ದರೆ ಸದರಿ ಆಸ್ತಿಯನ್ನು ಪ್ರಥಮ ಕ್ರಯದಾರರ ಬೆಲೆಯಿಂದ ಆದ ನಷ್ಟಕ್ಕೂ ಬಾಕ್ಸಿಗೂ ಒಳಪಟ್ಟ ಮರಳಿ ಹರಾಜು ಮಾಡಲ್ಪಡುವದು.

೪. ಈ ಹರಾಜು ಖಾಯಂ ಮಾಡುವದಕ್ಕೂ ತಿರಸ್ಕರಿಸುವದಕ್ಕೂ ಸದರಿ ತತ್ಕಾಲದಲ್ಲಿದ್ದ ಡೈರೆಕ್ಟರುಗಳು ಸ್ವತಂತ್ರರಾಗಿರುತ್ತಾರೆ.

೫. ಇದಕ್ಕಾಗಿ ಇನ್ನೂ ವಿಧಿಸುವ ವಿಶೇಷ ಷರತ್ತುಗಳು ಬ್ಯಾಂಕಿನಿಂದ ತಿಳಿದುಕೊಳ್ಳತಕ್ಕದ್ದಾಗಿರುತ್ತೆ.

೬. ದರಖಾಸ್ತು ಮಾಡುವದಕ್ಕೆ ಶಾಯಿಷ್ಟ ಉಳ್ಳವರು ಮುಂಚಿತವಾಗಿ ಬ್ಯಾಂಕಿಗೆ ಸಕಾಲದಲ್ಲಿ ಹೋಗಿ ಅಲ್ಲಿ ಇರುವ ಬೇರೋ ರಿಜಿಸ್ಟರು ನೋಡಿ ಬೇಕಾದ ತಪಶೀಲು ತಿಳಿದುಕೊಳ್ಳಬಹುದು.

೩॥ ನೆ ಆಗಸ್ಟು } ಮುಖಾಂತರ
೧೮೯೩ ಇಸವಿ, } ಡಿಪ್ಟಿ ಚೇರ್‌ಮನ
ಮೈಸೂರು.

ವೃತ್ತಾಂತ ಪತ್ರಿಕೆ.

೧೮೯೩ನೇ ಇಸವಿ ಸೆಪ್ಟಂಬರ ತಾ॥ ೧೭ ನೇ ಸೋಮವಾರ.

ಧರ್ಮ.

ಮೊದಲು ಕಾಲೇಜಿನಲ್ಲಿ ಪ್ರೊಫೆಸರಾಗಿದ್ದ ಮ॥ ರಾ॥ ಕೃಷ್ಣರಾವ ರವರು ಧನದಿಂದಾಗಲಿ ಪತ್ರಸ್ಥಾಪನೆ ಮಾಡುವುದನ್ನು [illegible] ವರ್ತಮಾನವನ್ನು ಕೇಳಿ ಬಹಳವಾಗಿ ಸಂತೋಷಿಸುತ್ತೇವೆ. ಇವರು ಐವತ್ತುಸಾವಿರವನ್ನು ಸಂಸ್ಕೃತ ವಿದ್ಯಾಭಿವೃದ್ಧಿಗಾಗಿ ವಿನಿಯೋಗಿಸ ಪ್ರಾಲೋಚನೆ ಮಾಡುವವರಾಗಿ ಕೊಟ್ಟಿರುವರು ಬಹಳ ಶ್ಲಾಘನೀಯವಾದದ್ದಾಗಿದೆ. ಪತ್ರಿಕೆಯ ರೂಪಾಯಿಗಳಿಗೆ ವರ್ಷಕ್ಕೆ ೩೦೦ ರೂಪಾಯಿ ಬಡ್ಡಿ ಬರುವದಾದರೆ ಐದುಮಂದಿ ವಿದ್ಯಾರ್ಥಿಗಳಿಗೆ ಮಾಹೆಯಾನ ೧೦ರೂಪಾಯಿಗಳ ಪ್ರಕಾರ ವೇತನಗಳನ್ನು ಕೊಡಲು ಸಾಧ್ಯವಾಗುವದು. ಈ ವೇತನಗಳನ್ನು ಪಡೆಯತಕ್ಕವರು ಸಂಸ್ಕೃತವನ್ನು ತೀವ್ರವಾಗಿ [illegible] ದೆಮೆಟ್ರಿಕ್ಯುಲೇಷನ ಕ್ಲಾಸಿನ ವರೆಗಾದರೂ ಇಂಗ್ಲೀಷನ್ನು ಕಲಿತವರಾಗಿರಬೇಕು. ಮ॥ ಕೃಷ್ಣರಾಯರವರ ಉದ್ದೇಶವು ಉಪಯೋಗ್ಯವಾದದ್ದಂದು ನಮಗೆ ತೋರುತ್ತದೆ. ಸಾಧಾರಣವಾಗಿ ಸಂಸ್ಕೃತವನ್ನು ಓದುವವರು ಇಂಗ್ಲೀಷನ್ನು ಓದುವುದಿಲ್ಲ. ಇಂಗ್ಲೀಷಿನಲ್ಲಿ ಪರೀಕ್ಷೆಯನ್ನು ಪಡೆದವರಿಗೆ ಸಂಸ್ಕೃತವು ಚೆನ್ನಾಗಿ ಬರುವದಿಲ್ಲ. ಸಂಸ್ಕೃತವನ್ನು ಓದಿದವರು ತಮ್ಮ ಜೀವನಕ್ಕೆ ತಕ್ಕಷ್ಟು ಸಂಪಾದನೆಯಿಲ್ಲದೆ ಬಹಳ ಕಷ್ಟಪಡುತ್ತಾರೆ. ಇಂಗ್ಲೀಷುಮಾತ್ರವೇ ಕಲಿತವರು ಸಂಸ್ಕೃತ ಗ್ರಂಥಗಳನ್ನು ತಕ್ಕಷ್ಟು ಪರಿಶೀಲಿಸುವದಿಲ್ಲ. ಸಂಸ್ಕೃತ ಇಂಗ್ಲೀಷ ಎರಡನ್ನೂ ಕಲಿತವರು ಲೌಕಿಕ ಮತ್ತು ವೈದಿಕ ವಿಷಯಗಳನ್ನು ಬಲ್ಲವರಾಗುತ್ತಾರೆಂದು ನಮ್ಮ ಅಭಿಪ್ರಾಯ. ಮ॥ ಕೃಷ್ಣರಾಯರವರು ಕೊಡುವ ವೇತನಗಳನ್ನು ಪಡೆಯುವವರು ಎರಡು ಭಾಷೆಗಳಲ್ಲಿಯೂ ತಕ್ಕಷ್ಟು ಸಿದ್ಧರಾಗಿ ದೇಶಕ್ಕೆ ಉಪಯೋಗ ಪಡುವರೆಂದು ಆಶಿಸುತ್ತೇವೆ. [illegible] ಈ ವಿದ್ಯಾರ್ಥಿವೇತನಗಳು [illegible] ಹೆಸರು ಶಾಶ್ವತವಾಗಿ ನಿಲ್ಲುವುದರಲ್ಲಿ ಸಂದೇಹವಿಲ್ಲ. ಇದು ನಮಗೆ ಬಹಳ ಸಂತೋಷವನ್ನುಂಟುಮಾಡುತ್ತದೆ. ಪ್ರಸ್ತುತದಲ್ಲಿ ಈ ಧರ್ಮವನ್ನು ಸ್ಥಾಪನೆ ಮಾಡುವುದಕ್ಕಾಗಿ ಬೇರೆ ತಮ್ಮ ಧನವನ್ನು ವಿನಿಯೋಗಿಸದೆ, ದೊಡ್ಡ ದಾನಿಗಳಂತೆ ತಮ್ಮ ಕೀರ್ತಿಯನ್ನು ತೋರಿಸಿಕೊಳ್ಳದೆ ಉದ್ದೇಶಿಸಿರುವ ಕೃಷ್ಣರಾಯರು ತಮ್ಮ ಸ್ವದೇಶೀಯರಿಗೆ ಉತ್ತಮವಾದ ಮೇಲ್ಪಂಕ್ತಿಯನ್ನು ತೋರಿಸಿದವರಾಗುತ್ತಾರೆ.

ಈ ದೇಶದಲ್ಲಿ ಧನಿಕರಾದವರು ಬಹಳ ಧರ್ಮ ಮಾಡುವರು ಪ್ರಸಿದ್ಧ. ಅನೇಕರು [illegible] ಲ್ಲಿ ಕೆಲವರು ತಮ್ಮ ಆಸ್ತಿಯನ್ನು [illegible] ರ್ಥವಾಗಿ ಕೊಟ್ಟಿರುವರು. ಸಾಧಾರಣವಾಗಿ ಐಶ್ವರ್ಯವಂತರು ತಮ್ಮ ಹಣವನ್ನು ಸ್ವಂತ ಮಕ್ಕಳನ್ನು ಪ್ರೀತಿಸುವಂತೆ ಪ್ರೀತಿಸುವರು, ಯಾವಾಗಲಾದರೂ ಸರಿಯೆ ಅದನ್ನು ಯಾವ ಸತ್ಕಾರ್ಯಕ್ಕೂ ಕೊಡುವುದಿಲ್ಲ. ಅವರಿಗೆ ಮಕ್ಕಳಿಲ್ಲದಿದ್ದರೆ [illegible] ದತ್ತುಮಾಡಿಕೊಳ್ಳುವರು ಹೊರತು ಒಂದು ಕಾಸನ್ನೂ ಕೊಡುವವರಲ್ಲ. ದಾನವಿಲ್ಲದ ಅಂಥಾ ಧನವು ಏನು ಪ್ರಯೋಜನವಾದು? ಸಮಯರೂಪವಾಗಿ ಬಡ್ಡಿ ಗಳಿಸಿ, ಆಸ್ತಿಯನ್ನು ಭೂಮಿಯಲ್ಲಿ ಬಚ್ಚಿಟ್ಟು, ಅದರಿಂದ ಯಾರಿಗಾದರೂ ಪ್ರಯೋಜನ ಉಂಟೆ? ಹಣದಿಂದ ಏನಾದರೂ ಸುಖವನ್ನು, ಅದನ್ನು ಸತ್ಕಾರ್ಯಕ್ಕೆ ಉಪಯೋಗಿಸಿದರೆ ಮಾತ್ರ ಅನುಭವಿಸುವರು. ಅನ್ಯರಿಗೆ ಕೊಡದಿರುವ ಬಚ್ಚಿಟ್ಟರೆ ಆ ಹಣವೂ ಒಂದು ಮಣ್ಣೂ ಒಂದೇ. ಅನೇಕ ಜನರು ತಾವು ಬದುಕಿರುವ ಪರ್ಯಂತರ, ತಮ್ಮ ಹಣವನ್ನು ಬಿಗಿಯಾಗಿ ಹಿಡಿದು, ಸಾಯುವ ಕಾಲದಲ್ಲಿ ಪ್ರಯಶ್ಚಿತ್ತಮೂಲಕ ಇಷ್ಟು ರೂಪಾಯಿಗಳನ್ನು ಧರ್ಮಾರ್ಥ ಮಾಡಬೇಕೆಂದು ನೇಮಿಸುತ್ತಾರೆ. ಅವರಿಗಿಂತಲೂ ತಾವು ಜೀವಂತರಾಗಿರುವಾಗ ತಮ್ಮ ಬುದ್ಧಿಗೆ ಬೇಕಾದಂತೆ ಆ ಹಣವನ್ನು ಉಪಯೋಗಿಸಿದರೆ ಎಷ್ಟೋ ಶ್ಲಾಘನೀಯರಾಗಿರುತ್ತಾರೆ. ದಾನಧರ್ಮಗಳನ್ನು ತಕ್ಕಬುದ್ಧಿಯಿಂದ ಮಾಡುವದು ಬ್ಯಾಂಕಿನಲ್ಲಿ ಹಣವನ್ನು ಹಾಕಿದ ಹಾಗಾಗುತ್ತದೆ. ಬ್ಯಾಂಕಿಗೆ ಹಣ ಕೊಟ್ಟರೆ ಬಡ್ಡಿ ಬರುತ್ತದೆಯಷ್ಟೆ. ದಾನಧರ್ಮಗಳನ್ನು ಮಾಡಿದರೆ ದೇಶಕ್ಕೆ ಸಾರ್ವತ್ರಿಕ ಪ್ರಯೋಜನ ಉಂಟಾಗುತ್ತದೆ ಕೀರ್ತಿಯೂ ಉಂಟಾಗುವುದು, ಜನರ ಪ್ರೀತಿಯೂ ಬರುವದು. ಇದು ಬುದ್ಧಿವಂತಿಕೆ ಯಲ್ಲವೆ?

ವಿಶಾಖಪಟ್ಟಣದಲ್ಲಿದ್ದ ಒಬ್ಬ ಧನಿಕನು ಮರಣ ಕಾಲದಲ್ಲಿ ತನ್ನ ಆಸ್ತಿಯ ವಿಷಯದಲ್ಲಿ ತನ್ನ ಅಭಿಪ್ರಾಯವನ್ನು ಮೂರು ವಾಕ್ಯಗಳ ಮೂಲಕ ತಿಳಿಯಪಡಿಸಿದನು. ಆ ವಾಕ್ಯಗಳು ಏನೆಂದರೆ:—

(೧) ನನ್ನ ಆಸ್ತಿಯಲ್ಲಿ ನಾನು ಖರ್ಚುಮಾಡಿದ್ದು ನನಗೆ ಇದ್ದೇ ಇತ್ತು. ಅಂದರೆ—ಅದರ ಉಪಯೋಗವು ನನಗೆ ಬಂತು.

(೨) ಧರ್ಮಾರ್ಥವಾಗಿ ನಾನು ಕೊಟ್ಟದ್ದು ನನಗೆ ಈಗಲೂ ಮುಂದೆಯೂ ಇದ್ದೇ ಇರುತ್ತದೆ. ಅಂದರೆ—ಹಣ ಹೋಯಿತು, ಆದಾಗ್ಯೂ ಜನರಿಗೆ ಅದರಿಂದುಂಟಾದ ಪ್ರಯೋಜನವು ಇನ್ನೂ ಇರುತ್ತದೆ ಮತ್ತು ಜನರ ಪ್ರೀತಿಯು ನನ್ನ ಪಾಲಿಗೆ ಬಂದಿದೆ.

(೩) ನಾನು ಕೂಡಿಸಿಟ್ಟ ಹಣಮಾತ್ರವೇ ಸಂಪೂರ್ಣವಾಗಿ ಕಳೆದುಹೋಗಿದೆ. ಅಂದರೆ—ಅದರಿಂದ ನನ್ನ ಹೊಟ್ಟೆಗಾಗಲಿ ಅಥವ ಬೆನ್ನಿಗಾಗಲಿ ಏನೂ ಪ್ರಯೋಜನವಾಗಲಿಲ್ಲ. ಮತ್ತು ಇತರ ಜನಗಳಿಗೆ ಸಂತೋಷವಾಗಲಿ ಸಹಾಯವಾಗಲಿ ಅದರಿಂದುಂಟಾಗಲಿಲ್ಲ. ಅದು ಇಲ್ಲದಹಾಗಿರುತ್ತದೆ ಎಂಬುವದೇ. ಆದ್ದರಿಂದ ನಮ್ಮ ವಾಚಕರು ಈ ಮಾತುಗಳನ್ನು ತಮ್ಮ ಜ್ಞಾಪಕದಲ್ಲಿಟ್ಟುಕೊಂಡು ಅವುಗಳಿಗೆ ಸರಿಯಾಗಿ ನಡೆಯಬೇಕೆಂದು ನಾವು ಕೋರುವೆವು.

ಹೊಸ ಮೈಸೂರಿಯವರು.

ಈ ಭರತಖಂಡದಲ್ಲಿ ಮಹಾರಾಜ್ಞಿಯವರಿಗೆ ಪ್ರತಿನಿಧಿಗಳಾಗಿ ರಾಜ್ಯಭಾರಮಾಡುತ್ತಿರುವ ಲ್ಯಾರ್ಡ ಹೌನ್‍ಸಸಾಹೇಬರವರ ಅಧಿಕಾರಕಾಲವು ಪೂರೈಸುತ್ತಾ ಬಂದಿರುವದರಿಂದ ಅವರಸ್ಥಾನಕ್ಕೆ ಸರ್ ಹೆನ್ರಿನಾರ್ಮನ ರವರನ್ನು ಹೊಸದಾಗಿ ನೇಮಿಸುತ್ತಾರೆಂತಲೂ, ಅವರಿಗೆ ಆಗಲೇ ೮೬ ವಯಸ್ಸು ಕಳೆದು ವೃದ್ಧರಾಗಿರುತ್ತಾರೆಂತಲೂ, ಆದಾಗ್ಯೂ ಹಿಂದೆ ಬಹುಕಾಲದವರೆಗೆ ಇಲ್ಲಿಯೇ ಅಧಿಕಾರವನ್ನು ವಹಿಸಿದ್ದುದರಿಂದ, ಇಲ್ಲಿನ ವಿಷಯಗಳೆಲ್ಲವೂ ಅವರಿಗೆ ಚೆನ್ನಾಗಿ ಪರಿಚಿತವಾಗಿರುತ್ತವೆಂದು ಕುಮಾರಾಣಿ ಮುನವ ವರ್ತಮಾನಪತ್ರಿಕೆಗಳಾದವು. ಗ್ಲಾಡ್‍ಸ್ಟನ್ ಸಾಹೇಬರವರು ಇವರನ್ನೇ ಈ ಜವಾಬ್ದಾರಿಕೆಯ ಸ್ಥಾನಕ್ಕೆ ನೇಮಿಸಿದ್ದ ಸಂಗತಿಯನ್ನು ನಮ್ಮ ಹಿಂದಿನವಾರದ ಸಂಚಿಕೆಯಲ್ಲಿ ವಾಚಕರಿಗೆ ತಿಳಿಯಪಡಿಸಿದ್ದೆವಷ್ಟೆ. ಸರ್ ಹೆನ್ರಿನಾರ್ಮನರವರು ಈ ಪದವಿಯನ್ನು ಆದಿಯಲ್ಲಿ ಒಪ್ಪಿಕೊಂಡು ಇದ್ದರು. ಈಚೆಗೆ ತಮ್ಮ ವಯಸ್ಸಿನ ಸ್ಥಿತಿಯನ್ನೂ, ಹೊಸಹುದ್ದೆಯ ಜವಾಬ್ದಾರಿಯನ್ನೂ ಚೆನ್ನಾಗಿ ಆಲೋಚಿಸಿ, ತಮಗೆ ಸರಿಯಾದದ್ದಲ್ಲವೆಂದು ತೀರ್ಮಾನಿಸಿ—ನಮ್ಮ ದೇಹದಾರ್ಢ್ಯವು ಚೆನ್ನಾಗಿಲ್ಲವೆಂತಲೂ, ವೈಸರಾಯಿ ಹುದ್ದೆಯನ್ನು ನಿರ್ವಹಿಸಲು ತಮಗೆ ಶಕ್ತಿ ಸಾಲದಾಗಿರುವದರಿಂದ, ತಮಗೆ ಆ ಹೊಸಹುದ್ದೆಯು ಅವಶ್ಯಕವಿಲ್ಲವೆಂತಲೂ ರಾಜೀನಾಮೆಯನ್ನು ಕಳೆದ ೨೦ನೆ ತಾರೀಖಿನ ಕೊಟ್ಟಿರುತ್ತಾರೆ. ಅವರು ತಮ್ಮ ತೀರ್ಮಾನವನ್ನು ಯಥಾರ್ಥವಾಗಿ ತಿಳಿಸಿದ್ದಕ್ಕಾಗಿ ನಾವು ತುಂಬಾ ಸಂತೋಷಿಸುತ್ತೇವೆ. ಕೆಲವರು ತಮಗೆ ಯಾವ ಹುದ್ದೆಯನ್ನು ಕೊಟ್ಟಾಗ್ಯೂ ನಿರ್ವಹಿಸುತ್ತೇವೆಂತಲೂ, ತಮಗೆ ತಿಳಿಯದ ವಿಷಯಗಳೇ ಇಲ್ಲವೆಂತಲೂ ಅಹಂಕಾರದಿಂದ ಕೊಚ್ಚಿಕೊಳ್ಳುವದು ಅಪರೂಪವಲ್ಲ. ಹೀಗಿರುವಾಗ್ಯೆ ಸರ್ ಹೆನ್ರಿಯವರು ತಮಗೆ ಶಕ್ತಿ ಸಾಲದೆಂದು ಈ ಪದವಿಯನ್ನು ನಿಜವಾಗಿಯೂ ತಿರಸ್ಕರಿಸಿದ್ದಕ್ಕಾಗಿ ಎಲ್ಲರೂ ಅವರ ಯೋಗ್ಯತೆಯನ್ನು ಕೊಂಡಾಡುತ್ತಲಿರುತ್ತಾರೆ. ಹಾಗಾದರೆ ಈ ಹುದ್ದೆಗೆ ಗ್ಲಾಡ್‍ಸ್ಟನ್‍ರವರು ಇನ್ನು ಯಾರನ್ನು ನೇಮಿಸುವರು? ಸಾವಕಾಶಮಾಡಲು ಕಾಲವಿಲ್ಲ. ಹಿಂದೆ ನಾವು ಸೂಚಿಸುತ್ತಿದ್ದವರಲ್ಲೊಬ್ಬರನ್ನೇ ಅಥವ ಇಲ್ಲಿ ಹಿಂದೆ ಗೌರ್ನರುಗಳಾಗಿದ್ದು ಈಗ ವಿಲಾಯತಿಯಲ್ಲಿರುವವರಲ್ಲೊಬ್ಬರನ್ನೇ ನೇಮಿಸಬಹುದೆಂದು ತೋರುತ್ತೆ. ಆದರೆ ಮಂತ್ರಿಗಳು ಯಾರಿಗೂ ತೋರದೆ ಇದ್ದವರನ್ನೇ ಹಿಂದೆ ನೇಮಿಸಿದಕಾರಣ ಈಗ ಇನ್ಯಾವ ಹೊಸಬರನ್ನು ಈ ಪದವಿಗೆ ಕಳುಹಿಸುವರೋ ಊಹಿಸಲು ಯಾರಿಂದಲೂ ಅಸಾಧ್ಯವಾಗಿರುತ್ತದೆ. ಏತೇನ ಮುಂದಿನ ವಾರದೊಳಗಾಗಿ ಗೊತ್ತಾಗಬಹುದೆಂದು ನಿರೀಕ್ಷಿಸುತ್ತೇವೆ. ಹಿಂದೂಸ್ಥಾನದ ವಿಷಯಗಳಲ್ಲಿ ಅನುಭವವಿದ್ದವರು ಬರುವದಕ್ಕಿಂತಲೂ ಹೊಸಬರಾಗಿ ಏನೂ ತಿಳಿಯದವರು ಬರುವದು ಒಳ್ಳೇದೆಂದು ಅನೇಕರು ಅಭಿಪ್ರಾಯಪಡುತ್ತಾರೆ

ಶ್ರೀ ಶ್ರೀಕಂಠೇಶ್ವರ ಪ್ರಸಿಡೆನ್ಸಿ ಟ್ರೋಫಿ.

ಇಲ್ಲಿನ ಸ್ಟೂಡೆಂಟ್ಸ್ ಪ್ರಸಿಡೆನ್ಸಿ ಚೆಂಡಾಟದ ಗುಂಪಿನವರು ಕೆಲವು ಮಂದಿ ದೊಡ್ಡಮನುಷ್ಯರ ಸಹಾಯದಿಂದ ಒಂದು ಟ್ರೋಫಿಯನ್ನು ಇಟ್ಟಿರುತ್ತಾರೆ. ಇದು ಒಂದು ಬೆಳ್ಳಿಯಬಟ್ಟಲು. ಮೈಸೂರು ರಾಜ್ಯದ ಎಲ್ಲಾ ಭಾಗಗಳಿಂದಲೂ ಬರತಕ್ಕ ಚೆಂಡಾಟದವರು ದಸರಾ ಹಬ್ಬದಲ್ಲಿ ರಾಜಧಾನಿಯಲ್ಲಿ ಸೇರಿ ಆಟವನ್ನು ಅತಿ ಅಭಿವೃದ್ಧಿಯಾಗಿ ೩ ವರ್ಷ ಕಾಲ ಯಾವ ಗುಂಪಿನವರು ಎಲ್ಲರನ್ನೂ ಸೋಲಿಸುವರೋ ಅಂಥಾ ಸಂಘದವರು ಕೊನೇವರ್ಷದಲ್ಲಿ ಈ ಬಟ್ಟಲನ್ನು ಬಹುಮಾನವಾಗಿ ಹೊಂದುವರು. ಈ ಸಂಘಕ್ಕೆ ಮಿ|| ವಿ.ಎಂ., ರೆವರೆಂಡ್ ಹೋಲ್ಡನ್ ಹರ್ಟ್ ಮತ್ತು ಮಿ|| ವೆಂಕಟ ಕೃಷ್ಣಯ್ಯನವರು ಈ ಮೂವರು ದೊಡ್ಡಮನುಷ್ಯರೂ ಜಾಯಿಂಟ್ ಸೆಕ್ರೆಟರಿಗಳಾಗಿರುತ್ತಾರೆ. ಅವರು ಇದಕ್ಕಾಗಿ ಅವಶ್ಯಕವಾಗಿರುವ ಕಟ್ಟುನಿಬಂಧನೆಗಳನ್ನು ಅಚ್ಚು ಹಾಕಿಸಿರುತ್ತಾರೆ. ಈ ಆಟಕ್ಕೋಸ್ಕರ ಬರಬೇಕೆಂದಿರುವ ಸಂಘದವರೆಲ್ಲರೂ ತಮ್ಮ ಹೆಸರುಗಳನ್ನು ನಾಳೆ ಅಕ್ಟೋಬರು ೧ನೇ ತಾರೀಖಿನೊಳಗಾಗಿ ನಾಲ್ಕು ರೂಪಾಯಿ ದಸ್ತುವನ್ನು ಕೊಟ್ಟು ಸೆಕ್ರೆಟರಿಯವರಿಗೆ ತಿಳಿಸಬೇಕಾಗಿದೆ. ಹೀಗಾದರೂ ಯುವ್ವನಸ್ಥರು ರಜಾಕಾಲದಲ್ಲಿ ತಮ್ಮ ಸ್ಥಳಗಳನ್ನು ಬಿಟ್ಟು ರಾಜಧಾನಿಗೆ ಬಂದು ಅನೇಕವಿಧದಲ್ಲಿ ತಿಳುವಳಿಕೆಯನ್ನು ಹೊಂದಲು ಅವಕಾಶ ಉಂಟಾದದ್ದಕ್ಕಾಗಿ ನಾವು ತುಂಬಾ ಸಂತೋಷಿಸುತ್ತೇವೆ. ಈ ಟ್ರೋಫಿಯನ್ನು ಏರ್ಪಾಡುಮಾಡಿದ ಇಲ್ಲಿನ ಮಹನೀಯರಿಗೆ ಎಲ್ಲಾ ವಿದ್ಯಾರ್ಥಿಗಳೂ ಕೃತಜ್ಞರಾಗಿರಬೇಕು. ಇಲ್ಲಿನ ಸ್ಕೂಲುಗಳ ಹೆಡ್‍ಮಾಸ್ಟರುಗಳೇ ಇದಕ್ಕೆ ಸೆಕ್ರೆಟರಿಗಳಾಗಿ ನಿಂತಿರುವುದು ಬಹುಕಾಲ ಶಾಶ್ವತವಾಗಿರುವದರಲ್ಲಿ ಸಂದೇಹವಿಲ್ಲ. ವಿದ್ಯಾರ್ಥಿಗಳ ರಕ್ತಿಯನ್ನು ಆಕರ್ಷಿಸತಕ್ಕ ಇಂಥಾ ಶಿಕ್ಷಣದ ಗ್ರಾಮದ ಸಮೀಪದಲ್ಲಿ ಕೆಲವು ದಿವಸ ಯಾರೂ ಸಹ ಯಾವ ದೊಡ್ಡಮನುಷ್ಯರೂ ಸ್ಥಾಪಿಸಲ್ಪಟ್ಟಿರುತ್ತವೆಯಲ್ಲವೆ ನಮ್ಮ ಸಂಸ್ಥಾನಗಳಲ್ಲಿ ಸಹಾಯವಾಗಿತ್ತು. ಎಲ್ಲಾ ಹೊಸಪದ್ಧತಿಗಳ ವಿಷಯದಲ್ಲೂ ಹಿಂದೂಸ್ಥಾನದಲ್ಲೇ ಮೊದಲನೆಯದಾಗಿರುವ ಈ ಮೈಸೂರು ಸಂಸ್ಥಾನವು ಈ ವಿಷಯದಲ್ಲೂ ಅಗ್ರಾಸನವನ್ನು ಪಡೆಯದೇ ಇಲ್ಲ. ಇಂಥಾ ಸಂಘಗಳ ಹಿತವಾಗಿ ಅವುಗಳಿಗೆ ಶ್ರೀಮನ್ಮಹಾರಾಜರವರು ಏಕರೂಪ ಸಹಾಯ ಸಂಪತ್ತುಗಳನ್ನು ಒದಗಿಸಿ ವಿದ್ಯಾರ್ಥಿಗಳ ನಾನಾ ಕಡೆಗಳಿಂದಲೂ ಬಾಲಕರನ್ನು ಆಕರ್ಷಿಸೋಣದರಿಂದ ಅವರು ದೃಢಾಂಗಿಗಳಾಗಿ ತನ್ಮೂಲಕ ಕೌಶಲ್ಯ ಹೆಚ್ಚಿ ದೊಡ್ಡ ಪದವಿಗಳ ಹೆಚ್ಚಾದ ಜವಾಬ್ದಾರಿ ಕೆಲಸಗಳನ್ನು ನಿರ್ವಹಿಸಲು ತಕ್ಕವರಾಗುವರೆಂದು ನಿರೀಕ್ಷಿಸುತ್ತೇವೆ

ಮಳವಳ್ಳಿಯಲ್ಲಿ ಅಕ್ರಮ.

ಇದೇಪತ್ರಿಕೆಯ ಮತ್ತೊಂದುಕಡೆ ವಿವರಿಸಿರುವ ಮಳವಳ್ಳಿಯ ವೃತ್ತಾಂತದಲ್ಲಿರುವ ಸಂಗತಿಗಳನ್ನು ನಮ್ಮ ವಾಚಕರು ಓದಿ ಬಹು ಆಶ್ಚರ್ಯಪಡಬಹುದು. ಅಲ್ಲಿನ ಇತರ ಜಾತಿಯವರು ಬೆಸ್ತರ ಗುಂಪಿನವರನ್ನು ನಾನಾವಿಧವಾಗಿ ತೊಂದರೆ ಪಡಿಸುವ ದಕ್ಕಾಗಿ ಮಾಡಿಕೊಂಡಿರುವ ಕಟ್ಟುಗಳನ್ನು ಕೇಳಿ ತುಂಬಾ ವಿಷಾದಿಸಬೇಕಾಗಿದೆ. ಕೆಲವನ್ನು ಇಲ್ಲಿ ಸೂಚಿಸುವೆವು ಯಾವವೆಂದರೆ—ಹಜಾಮರು ಬೆಸ್ತರಕೇರಿಗೆ ಹೋಗಕೂಡದು, ಅವರಿಗೆ ಕ್ಷೌರಮಾಡಕೂಡದು, ಅಗಸರು ಬೆಸ್ತರ ಬಟ್ಟೆಗಳನ್ನು ಒಗೆಯಕೂಡದು, ಇತರ ಜಾತಿಯ ಜನಗಳು ಯಾರೂ ಬೆಸ್ತರಕೇರಿಗೆ ಹೋಗಿ ಏನೂ ಕೊಂಡುಕೊಳ್ಳಕೂಡದು; ಬೆಸ್ತರು ಹಳ್ಳಿಸಳ್ಳಿಗಳಿಗೆ ವ್ಯಾಪಾರಕ್ಕಾಗಿ ಹೋದರೆ ಅವರನ್ನು ಹಳ್ಳಿಯೊಳಕ್ಕೆ ಬಿಡಕೂಡದು; ಇದನ್ನು ವಿಚಾರ ನಡೆಸುವ ಪ್ರತಿಯೊಬ್ಬನೂ ೮ ಆಣೆ ದಂಡಕೊಡಬೇಕು ಎಂಬುವದೇ. ಇಂಥಾ ಅನ್ಯಾಯಗಳನ್ನು ಜನರು ದ್ವೇಷದಿಂದ ನಡಿಸುತ್ತಿರುವಾಗ ಸರ್ಕಾರಿ ಅಧಿಕಾರಿಗಳು ಮುಖ್ಯವಾಗಿ ಆಮಲ್ದಾರರು ಸುತ್ತಮುತ್ತಿನ ಹಳ್ಳಿಗಳಿಂದ ಹಿರಿಯರನ್ನು ಕರೆಕಳುಹಿಸಿ ಅವರಲ್ಲಿ ತಾವೂ ಒಬ್ಬರಾಗಿ ಇದ್ದುಕೊಂಡು ಇಂಥಾ ಕಟ್ಟಡಕಗಳಿಂದ ಜನರಿಗೆ ಎಷ್ಟು ತೊಂದರೆಗಳುಂಟಾಗುವವೋ ಮತ್ತು ಅವು ಎಷ್ಟು ಅನ್ಯಾಯವಾದವುಗಳೋ ಅದನ್ನೆಲ್ಲಾ ಅವರಿಗೆ ತಿಳಿಯಪಡಿಸಿ, ಹೀಗೆ ಒಂದು ಸ್ಥಳದಲ್ಲಿದ್ದುಕೊಂಡು ಪರಸ್ಪರ ಜಗಳವಾಡುವ ವೈರಭೇದ ಮತಸ್ಥರಿಗೆ ಸಮಾಧಾನಮಾಡುವದು ಅವರ ಕರ್ತವ್ಯವಾಗಿರುತ್ತೆ. ಇದು ಸರ್ಕಾರಿಯಾಗಿ ತಮ್ಮ ಅಧಿಕಾರಕ್ಕೊಳಪಟ್ಟಿಲ್ಲವಾದಾಗ್ಯೂ ಅವರು ಇದನ್ನು ಮಾಡಿ ಜನಗಳಲ್ಲಿ ತಮ್ಮ ಪ್ರೀತಿಯನ್ನು ಹೆಚ್ಚಿಸಿಕೊಳ್ಳಬೇಕು. ಹೀಗೆ ಜನಗಳಲ್ಲಿ ಬೆರತು ಅವರ ಕಷ್ಟಸುಖಗಳನ್ನು ವಿಚಾರಿಸಿ ಕಷ್ಟವನ್ನು ಕಡಮೆ ಮಾಡುತ್ತಲೂ, ಸುಖವನ್ನು ಹೆಚ್ಚಿಸುತ್ತಲೂ ಬರುವದರಿಂದಲ್ಲವೆ ತಮ್ಮ ಹೆಸರು ಮುಂದಕ್ಕೆ ಬರುವದು? ಈಗಲಾದರೂ ಈ ವಿಷಯಗಳನ್ನು ಆಮಲ್ದಾರ್ರು ಪರ್ಯಾಲೋಚಿಸಿ ನಿಷ್ಕಾರಣವಾಗಿ ಕಷ್ಟಪಡುವ ಈ ಬೆಸ್ತರಿಗೂ ಇತರ ಜಾತಿಯವರಿಗೂ ಸ್ನೇಹವನ್ನು ಉಂಟುಮಾಡಲು ಪ್ರಯತ್ನಮಾಡುವರೆಂದು ನಿರೀಕ್ಷಿಸುತ್ತೇವೆ. ಯಾಕೆಂದರೆ ತಮ್ಮ ಅಧಿಕಾರಕ್ಕೊಳಪಟ್ಟ ಗ್ರಾಮಗಳಲ್ಲಿ ಬೇರೆಬೇರೆ ಗುಂಪಿನವರು ಜಗಳ ಮಾಡುತ್ತಿರುವಾಗ್ಯೆ ಎಲ್ಲಾ ವಿಷಯಗಳಲ್ಲಿಯೂ ಗ್ರಾಮಸ್ಥರನ್ನು ಆಳುವದಕ್ಕೆ ಸರ್ಕಾರದವರಿಂದ ನೇಮಿಸಲ್ಪಟ್ಟಿರುವ ಅಮಲ್ದಾರರು ಸುಮ್ಮನಿರುವದು ಸರಿಯಲ್ಲ.

ಕಸಬನ್ನು ಕಲಿಸುವ ಕಾರ್ಖಾನೆಗಳು.

ಪ್ರಸಂಗದಲ್ಲಿ ಎಲ್ಲರೂ ಒಂದೇವಿಧವಾದ ಉದ್ಯೋಗವನ್ನು ಅವಲಂಬಿಸಿ ಜೀವನಮಾಡುವದು ಅಸಾಧ್ಯವೆಂದು ಹೇಳಬೇಕಾಗಿಲ್ಲ. ಪ್ರಕೃತ ಮೈಸೂರು ಸೀಮೆಯಲ್ಲಿ ಬೇರೆಬೇರೆ ಕಸಬುಗಳನ್ನು ಕಲಿಸುವದಕ್ಕೆ ಸಾಕಾದಷ್ಟು ಸಾಧ್ಯಗಳಿಲ್ಲವೆಂಬ ಸಂಗತಿಯನ್ನು ಇವರೊಗ್ಗೆಯ ವಿದ್ಯಾವಂತರಿಂದ ಕೆಲವರು ದತ್ತಮನಸ್ಸಿನಿಂದ ತಿಳಿದು, ತಮ್ಮ ಪ್ರಾಂತ್ಯದ ಪ್ರಜೆಗಳು ಬೇರೆಬೇರೆ ಕಸಬನ್ನು ಕಲಿಯಕೊಳ್ಳುವದಕ್ಕೆ ತಕ್ಕ ಏರ್ಪಾಡನ್ನು ಮಾಡಬೇಕೆಂದು ಕೆಲವು ದಿನಗಳ ಕೆಳಗೆ ಸಭೆಸೇರಿ, ಅದರ ಉಪಾಯಗಳನ್ನು ಕುರಿತು ಚರ್ಚಿಸಿ, ಯಾವದಾದರೂ ಒಂದು ಕಸಬನ್ನು ಕಲಿಸುವ ಕಾರ್ಖಾನೆಯನ್ನು ಸ್ಥಾಪಿಸುವದು ಅವಶ್ಯಕವೆಂದು ಗೊತ್ತುಮಾಡಿದರು. ದೊಡ್ಡಮನುಷ್ಯರೆಲ್ಲರೂ ಶಕ್ತ್ಯಾನುಸಾರ ಮೂಲಧನವನ್ನು ಹಾಕುವದಲ್ಲದೆ ತಿಂಗಳುಕಟ್ಟೆ ಇಷ್ಟುಹಣ ಕೊಡುವುದೆಂದೂ ಒಪ್ಪಿಕೊಂಡಿರುತ್ತಾರೆ. ಇದರಂತೆಯೇ ರಾಜಧಾನಿಯಲ್ಲೂ ಮುಂಗಳೂರಿನಲ್ಲಿ ತಯಾರಾಗುವಂಥ ಹೆಂಚುಗಳನ್ನು ಮಾಡುವ ಒಂದು ಕಾರ್ಖಾನೆಯು ಸ್ಥಾಪನೆಯಾಗುವದರಲ್ಲಿದೆ. ಇಂಥಾ ಕಸಬಿನ ಕಾರ್ಖಾನೆಗಳು ಹೆಚ್ಚಿದಹಾಗೆಲ್ಲಾ ಜನರು ಅಷ್ಟಷ್ಟು ಐಶ್ವರ್ಯವಂತರಾಗುವದಲ್ಲದೆ, ತಮ್ಮ ಭ್ರಾತೃವರ್ಗಕ್ಕೆ ಸೇರಿದ ಅನೇಕಮಂದಿ ಬಡಬಗ್ಗರಿಗೂ ಜೀವನವನ್ನು ಕಲ್ಪಿಸಿಕೊಡುವರು. ಇವು ಆದಿಯಲ್ಲಿ ಸಾಹುಕಾರಿಯಾಗಿದ್ದು ಚೆನ್ನಾಗಿ ನಡೆಸಲ್ಪಡುತ್ತಿದ್ದರೆ, ಗೌರ್ನಮೆಂಟಿನವರೂ ತಕ್ಕ ಮಟ್ಟಿಗೆ ತಮ್ಮ ಸಹಾಯವನ್ನು ಮಾಡದೆ ಎಂದಿಗಾದರೂ ಇರುವರೆ?

ಕ್ಯಾಪ್ಟನ್ ಅಂಡ್ ಕಂಪೆನಿ

ಮೈಸೂರಿನ ಕೆಮಿಸ್ಟ್ಸ.

ಇವರು ಶಿವರಾಮ ಪೇಟೆಯಲ್ಲಿ ಒಂದು ಬ್ರಾಂಚ ಔಷಧದ ಶಾಲೆಯನ್ನು ಸ್ಥಾಪಿಸಿರುತ್ತಾರೆ ಇಲ್ಲಿ ನಾನಾವಿಧವಾದ ಔಷಧಗಳು ಸುಲಭ ಬೆಲೆಗೆ ದೊರೆಯುತ್ತವೆ. ಮತ್ತು ಉತ್ತಮತರವಾದ ಸಾಮಗ್ರಿಯಗಳನ್ನು ಉಪಯೋಗಿಸಿ ಔಷಧಗಳನ್ನು ತಯಾರು ಮಾಡಿ ಕೊಡುತ್ತಾರೆ.

ಈ ಜನೋಪಯುಕ್ತವಾದ ಔಷಧ ಶಾಲೆಯಲ್ಲಿ ರಾತ್ರಿ ಹಗಲು ಯಾವವೇಳೆ ಬಂದಾಗ್ಯೂ ಔಷಧಗಳು ದೊರೆಯುತ್ತವೆ. (7)

ಅಶ್ವರ್ಯಕರವಾದ ಪ್ರೀತಿ.

ಒಂದು ದೇಶದಲ್ಲಿ ಒಬ್ಬ ದೊಡ್ಡಮನುಷ್ಯನಿದ್ದನು ಆತನ ಹೆಸರು ಸತ್ಯಪ್ರ. ಆತನು ತುಂಬಾ ಐಶ್ವರ್ಯವಂತನೂ ಘನವ್ಯಕ್ತನೂ, ಪರೋಪಕಾರಿಯೂ ಆಗಿದ್ದನು. ಆತನಿಗೆ ಒಬ್ಬ ಗಂಡುಮಕ್ಕಳಿದ್ದರು. ಒಬ್ಬನ ಹೆಸರು ವಿಧೇಯಪ್ರ ಇನ್ನೊಬ್ಬನ ಹೆಸರು ಚಂಚಲಪ್ರ. ಒಂದಾನೊಂದುದಿನ ತಂದೆಯು ತನ್ನ ಇಬ್ಬರು ಮಕ್ಕಳನ್ನು ಕರೆದು ಹೇಳಿದ್ದೇನೆಂದರೆ— ಮಕ್ಕಳೇ ನನ್ನ ಆಸ್ತಿಯೆಲ್ಲಾ ನಿಮ್ಮದೇ ಹೀಗೆಯೇ ಎಂದಿಗೂ ನೀವು ಸುಖಿಗಳಾಗಿರುವಂತೆ ನಿಮಗೆ ಒಂದು ಮಾತು ಹೇಳುತ್ತೇನೆ ಅದನ್ನು ನೀವು ಕೈಕೊಳ್ಳಬೇಕು. ಯಾವ ದಿವಸದಲ್ಲಿ ದರೂ ಯಾವ ಸಮಯದಲ್ಲಾದರೂ ನೀವು ಆ ಕ್ರೀಡಾ ವನಕೆರೆಗೆ ಮಾತ್ರ ಹೋಗಬಾರದು. ಹೋದ ದಿವಸವೇ ನೀವು ಅನೇಕ ಗಂಡಾಂತರಗಳಿಗೂ ಮರಣಕ್ಕೂ ಗುರಿಯಾಗುತ್ತೀರಿ. ಎಚ್ಚರಿಕೆಯಾಗಿರಿ ಎಂಬುವದೇ ಈ ಆಜ್ಞೆಯನ್ನು ಮಕ್ಕಳು ವಿಚಾರದಿಂದ ದರು. ಹೀಗಿರುವಾಗ್ಯೆ ಈ ಹುಡುಗರ ತಂದೆಯು ಕೃತ್ಯಗಳು ಎಲ್ಲಾ ಇದೇ ಇವನ ಮನಸ್ಸನ್ನು ಈ ಮಕ್ಕಳೆಲ್ಲಾ ಕಲಿಸುವ ಸಮಯವೆಂದು ಯೋಚಿಸಿ ಈ ಮಕ್ಕಳೊಂದಿಗೆ ಸ್ನೇಹವನ್ನು ಬಳಸಿ ಒಂದಾನೊಂದು ದಿನ—ಅಯ್ಯಾ ಸ್ನೇಹಿತರೇ ಆಗ್ನೇಯದಿಕ್ಕಿನೊಳಗೆ ಹೋಗಬೇಡವೆಂದು ನಿಮ್ಮ ತಂದೆ ಯಾಕೆ ಆಜ್ಞೆಮಾಡಿದ್ದಾನೆಂಬುದು ನಿಮಗೆ ಗೊತ್ತೇ? ನಾವು ನಿಮ್ಮ ತಂದೆಯೊಂದಿಗೆ ಇದ್ದವರು ನಿಮ್ಮ ತಂದೆಯ ಮನಸ್ಸನ್ನು ಪೂರ್ಣವಾಗಿ ತಿಳಿದಂಥವರು ಅಲ್ಲಿ ಅಪರಿಮಿತವಾದ ದ್ರವ್ಯವಿದೆ ಅದಕಾರಣ ಆ ಸ್ಥಳಕ್ಕೆ ಹೋದರೆ ನಿಮಗೆ ಅದು ಲಭಿಸುತ್ತೆ ತರುವಾಯ ನೀವು ತನಗಿಂತ ಕುಬೇರರಾಗಿ ತನ್ನನ್ನು ತಿರಸ್ಕರಿಸುತ್ತೀರಿ ಎಂದೇ ತಾನು ಆಜ್ಞೆಯನ್ನು ಕೊಟ್ಟು ನಿಲ್ಲಿಸಿಬಿಟ್ಟನು ನೀವು ಹಾಗೆ ಸಮನಾಗುವದಿಲ್ಲ ಎಂದೇ ಆಲೋಚನೆ ನಿಮ್ಮ ತಂದೆಯಲ್ಲಿದೆ ಈ ಸಂಗತಿಯನ್ನು ನೀವು ಅಷ್ಟು ಮಾತ್ರವೇ ನಿಮ್ಮೊಂದಿಗೆ ಆಡಬಾರದೆಂದು ನಾವು ನಿಮಗೆ ಹೇಳಿದರು. ದೊಡ್ಡ ಮಗನು ಈ ಆಲೋಚನೆಗೆ ಒಳಗಾಗಲಿಲ್ಲ. ಚಿಕ್ಕವನ ಮನಸ್ಸು ಪ್ರೇರೇಪಿಸಲ್ಪಟ್ಟು ಆ ಮಾರ್ಗವಾಗಿ ಸ್ನೇಹಿತರೊಂದಿಗೆ ಹೊರಟುಹೋಗಿ ಅಲ್ಲಿ ನೋಡುವಾಗ್ಯೆ ಮೊದಲು ಆತನ ಕಣ್ಣುಗಳಿಗೆ ಬಹು ಸುಂದರವಾದ ಅಂಗನೆಯರು ತುಂಬಿದ್ದರು. ಅವರು ತಮ್ಮಲ್ಲಿದ್ದ ಮಂಕುಬೂದಿಯನ್ನು ಇವನಿಗೆ ತಳೆದರು. ಇವನ ಕಣ್ಣುಗಳು ಅವರ ಕಡೆಗೆ ಸೆಳೆಯಲ್ಪಟ್ಟವು. ಅವರಲ್ಲಿ ಬೆರತು ಅಂತರಂಗವಾಗಿ ಅಸ್ತಿಯನ್ನೆಲ್ಲಾ ಅವರ ವಶಮಾಡಿದನು. ಆ ವೇಶ್ಯಾಂಗನೆಯರು ಎಷ್ಟು ಅಲಂಕಾರವಾಗಿದ್ದರೋ ಅಷ್ಟು ರೋಗಗ್ರಸ್ತರಾಗಿದ್ದ ಕಾರಣ ಇನ್ನೊಂದು ದಿವಸದಲ್ಲಿ ಈ ಯೌವನಸ್ಥನಲ್ಲಿ ಭಯಂಕರವಾದ ವ್ಯಾಧಿಯು ತಲೆದೋರಿತು ಅದ್ಯಾವದೆಂದರೆ ಕುಷ್ಠರೋಗವೇ. ತಂದೆಗೆ ಹೇಳಲು ನಾಚಿಕೆಯೂ ದಿಗಿಲೂ ತುಂಬಿ ಮರೆಮಾಡಿಕೊಳ್ಳಲು ಯತ್ನಿಸುತ್ತಿದ್ದನು. ಆದರೆ ತಂದೆಯು ಬಹು ವಿವೇಕಿಯೂ ಬುದ್ಧಿವಂತನೂ ಆಗಿದ್ದಕಾರಣ ಮಗನ ವ್ಯಾಧಿಯನ್ನು ತಿಳಿದು ಆತನ ದೇಹವನ್ನು ಪರೀಕ್ಷಿಸಿ ಬಹಳವಾಗಿ ಆದರಿಸಿಕೊಂಡು ಮಗನನ್ನು ಮರಣಕ್ಕೆ ಗುರಿಮಾಡಿರುವ ಭಯಂಕರವಾದ ವ್ಯಾಧಿಗೋಸ್ಕರ ಚಿಂತೆಪಟ್ಟು ಮಗನ ಅವಿವೇಕಕ್ಕೆ ಚಿಂತೆಪಡದೆ ಅಯ್ಯೋ ನನ್ನ ಮಗನು ಬದುಕುವ ರೀತಿ ಯಾವದು ಎಂದು ಗೋಳಾಡಿ ಈ ರೋಗಕ್ಕೆ ತಕ್ಕ ಔಷಧವು ಬಹು ಗಂಡಾಂತರವಾದ ಒಂದು ಸ್ಥಳದಲ್ಲಿದೆ ಅದನ್ನು ಯಾರೂ ತರಲಾರರು ನನ್ನ ಮಗನಿಗೆ ಮೊದಲೇ ಸ್ಮೃತಿಯಿಲ್ಲ ನಾನೇ ಬದುಕಿಸಬೇಕೆಂದು ಆಯುಧಪಾಣಿಯಾಗಿ ಮಗನನ್ನು ತನ್ನ ಜೊತೆಯಲ್ಲಿ ಕರೆದುಕೊಂಡು ಘೋರಾರಣ್ಯದ ಮಧ್ಯಕ್ಕೆ ಹೋಗಿ ಅಲ್ಲಿ ಒಂದು ಬಿಸ್ಸೆಯ ಮೇಲೆ ಮಗನನ್ನು ನಿಲ್ಲಿಸಿ ತಾನು ಒಳಗೆ ಇಳಿದು ಹೋದನು ಅಲ್ಲಿರುವ ಕ್ರೂರಗಳೂ, ಮೃಗಗಳೂ ತುಂಬಿದ್ದವು ಅವುಗಳೆಲ್ಲಾ ಮೇಲೆ ಬೀಳುವಾಗ ಪೆಟ್ಟುಗಳನ್ನು ಸಹಿಸುತ್ತಾ ಸೋರುವ ರಕ್ತವನ್ನು ಲಕ್ಷಿಸದೆ, ಮೃಗಗಳನ್ನು ತನ್ನ ಆಯುಧಗಳಿಂದ ಪ್ರಹರಿಸುತ್ತಾ ಕಡೆಗೆ ಮೂಲಿಕೆಯನ್ನು ಕಿತ್ತು ಮೇಲಕ್ಕೆ ಬಂದನು ಮಗನು ತಂದೆಯ ತಲೆಯಿಂದ ಕಾಲಿನವರೆಗೂ ರಕ್ತಮಯವಾಗಿ ಸೋರುತ್ತಾ ಇದ್ದದ್ದನ್ನು ನೋಡಿದವನಾಗಿ ಅಯ್ಯೋ ತಂದೆಯೇ ನನ್ನ ಅಕ್ರಮದ ದೆಸೆಯಿಂದಲ್ಲವೇ ನಿಮಗಿಷ್ಟು ಕಷ್ಟ ಬಂದೆಂದು ಪ್ರಲಾಪಿಸುತ್ತಿರುವಾಗ್ಯೆ ತಂದೆಯು ಅಪ್ಪಾ ಮಗನೇ ಚಿಂತಿಸಬೇಡ ಬಹಳ ಪ್ರಯಾಸದಿಂದ ಈ ಮೂಲಿಕೆಯನ್ನು ತಂದಿದ್ದೇನೆ ಇದನ್ನು ನೀನು ತಿಂದರೆ ಸ್ವಸ್ಥವಾಗುತ್ತೀ ತರುವಾಯ ನಿನ್ನ ಮೇಲಿರುವ ರೋಗಗಳಿಗೆ ಅದರಿಂದ ಏನೂ ತಗಿದುಕೊಳ್ಳದೆ ಇದನ್ನು ಬಲವಂತವಾಗಿ ತಿನ್ನಿಸಬೇಕೆಂದು ಅಷ್ಟಾಗಿ ಕೊಟ್ಟು ಅಲ್ಲಿಯೇ ಸತ್ತುಹೋದನು. ನಂತರ ಆ ಮಗನು ಈ ಮೂಲಿಕೆಯನ್ನು ತಿಂದು ಸ್ವಸ್ಥ ಹೊಂದಿ ಬೀದಿಬೀದಿಗಳಲ್ಲಿ ಈ ಮೂಲಿಕೆಯನ್ನು ಸಾರುತ್ತಾ ಇರುವಾಗ್ಯೆ ಅನೇಕರು ನೋಡಿ ಹಾಸ್ಯಮಾಡುತ್ತಾ ಈ ನೀಚನ ಬಳಿ ಘನವಾದ ಔಷಧವು ಇದೆಯೇ ಹಾಗೆ ಇದ್ದರೆ ಸುಲಭವಾಗಿ ಕೊಡುತ್ತಾನೆಯೇ ಎಂದು ಹೊರಟುಹೋದರು. ಅನೇಕರು ಅದನ್ನು ನಂಬಿ ಅದನ್ನು ತಿಂದು ಕಾಯಿಲೆ ಸ್ವಸ್ಥರಾದರು. ಪ್ರಿಯಸ್ನೇಹಿತರೇ ಈ ಹೋಲಿಕೆ ಚರಿತ್ರೆಯಿಂದ ನಾವು ಅನೇಕ ಸತ್ಯಗಳನ್ನು ತಿಳುಕೊಳ್ಳಬಹುದು

ಆ ದೊಡ್ಡಮನುಷ್ಯನೇ ಭಗವಂತನು ಆತನೇ ನಮ್ಮೆಲ್ಲರ ತಂದೆ ಆತನ ಮಕ್ಕಳು ಪರಲೋಕದಲ್ಲಿರುವ ದೂತರೂ ಭೂಮಿಯಲ್ಲಿರುವ ಮನುಷ್ಯರೂ ಆಗಿದ್ದೇವೆ ನಮಗೂ ದೇವರಿಗೂ ಸತ್ಯಪ್ರ ಸ್ವಭಾವನೆಂಬ ನಿಜನಾಮ. ದೇವರು ಲೋಕವನ್ನು ನಿರ್ಮಿಸಿ ಮನುಷ್ಯನನ್ನು ಉಂಟುಮಾಡಿ ಆತನಿಗೆ ಪರಿಶುದ್ಧತ್ವವನ್ನೂ ಅಮರತ್ವವನ್ನೂ ಸಕಲ ಸುಲಕ್ಷಣಗಳನ್ನೂ ಕೊಟ್ಟು ಏದೆನ್ ತೋಟದಲ್ಲಿ ದಂಪತಿಗಳನ್ನಿರಿಸಿ—ಲೋಕವನ್ನು ಸ್ವತಂತ್ರಿಸಿ ಆಳಿರಿ, ನನ್ನದೆಲ್ಲಾ ನಿಮ್ಮದೇ ಆದರೆ ನಿಮ್ಮ ಭೂಮಿಯಲ್ಲೆಲ್ಲಾ ಅಲಂಕರಿಸಲ್ಪಟ್ಟ ಎಂದು ಹೇಳಿ ಈ

ಆಜ್ಞೆಯನ್ನು ನೀವು ಕೈಕೊಂಡರೆ ಎಂದೆಂದಿಗೂ ನೀವು ಚಿರ ಜೀವಿಗಳು ಆಗುವಿರಿ ಆ ಕಾಲದಿ ನೀವು ಅಶ್ವಸಂಬಂಧವಾಗಿ ಸತ್ತು ನಿತ್ಯನರಕಕ್ಕೆ ಗುರಿಯಾಗುವಿರಿ ನಿಮ್ಮಿಂದ ಭೂಮಿಯಲ್ಲಿ ಕೆಡಿಸಲ್ಪಡುತ್ತ ಎನ್ನುವ ಶಪಥಗಳು ಎಂದು ದೇವರ ಒಂದು ಆಜ್ಞೆಯನ್ನಿತ್ತನು ಇದನ್ನು ಕೇಳಿದ ಸ್ತ್ರೀವಾದ ಸೈತಾನನು ಉಪಾಯವಾಗಿ ಬಂದು ಅವರಿಗೆ ದುರ್ಬೋಧನೆಮಾಡಿ ಅವರ ಕಣ್ಣುಗಳನ್ನು ಕಳಕೊಂಡಕಾರಣ ಅವರು ದೇವರ ಆಜ್ಞೆಯನ್ನು ಮೀರಿ ಪಾಪವೆಂಬ ಕುಷ್ಠರೋಗಕ್ಕೆ ಬಿದ್ದರು ಕಡೆಗೆ ಅವರಿಗೆ ನಾಚಿಕೆಯೂ ಭಯವೂ ಹುಟ್ಟಿ ತಮ್ಮನ್ನು ಮರೆಮಾಡಿಕೊಳ್ಳಲು ಅಡಗಿಕೊಂಡರು ಆದರೆ ದೇವರು ತಂಪಾದಲ್ಲಿ ಅವರಿಗೆ ಕಾಣಿಸಿಕೊಂಡು ಆದ್ಯ ಮನುಷ್ಯನೇ ನನ್ನ ಅಪ್ಪಣೆ ಮೀರಿ ಪಾಪವೆಂಬ ಕುಷ್ಠಕ್ಕೆ ಒಳಗಾಗಿ ನಿತ್ಯನರಕಕ್ಕೆ ಗುರಿಯಾದೆಯಾ ಎಂದು ಮನುಷ್ಯನ ವಿಷಯದಲ್ಲಿ ಬಹಳವಾಗಿ ನೊಂದುಕೊಂಡು ಈ ಪಾಪವನ್ನು ಪರಿಹರಿಸಲು ಪ್ರಾಯಶ್ಚಿತ್ತ ಬಲಿಯೇ ಆಗಬೇಕು ಈ ಪಾಪವನ್ನು ಹೋಗಲಾಡಿಸುವದಕ್ಕೆ ಲೋಕದಲ್ಲಿ ಯಾವನೂ ಯೋಗ್ಯನಾಗಿಲ್ಲ ನಿನ್ನನ್ನು ರಕ್ಷಿಸಲು ನನ್ನ ಪ್ರಿಯಕುಮಾರ ನನ್ನೇ ಇನ್ನು ೪,೦೦೦ ವರುಷಗಳ ತರುವಾಯ ಭೂಲೋಕವೆಂಬ ಘೋರಾರಣ್ಯಕ್ಕೆ ಮನುಷ್ಯನಾಗಿ ಅವತರಿಸುವ ಹಾಗೆ ಕಳುಹಿಸುತ್ತೇನೆಂದು ವಾಗ್ದಾನ ಮಾಡಿದನು ಈಗ್ಯೆ ೧೮೯೩ ವರುಷಗಳ ಕೆಳಗೆ ಹೇಳಲ್ಪಟ್ಟಂತೆ ಸರಿಯಾಗಿ ಪಾಲಸ್ತೀನ ಎಂಬ ದೇಶದಲ್ಲಿ ಮನುಷ್ಯನಾಗಿಯೂ ದೇವರಾಗಿಯೂ ದೇವರ ಮಗನು ಅವತರಿಸಿ ತನ್ನ ದೈವತ್ವವನ್ನು ಅನೇಕ ಅದ್ಭುತಗಳ ಮೂಲಕ ತೋರಿಸುತ್ತಾ ಇರುವಾಗ್ಯೆ ಅನೇಕರು ದುಷ್ಟರು ಆತನನ್ನು ಬಾಧಿಸಿದರು ನಮ್ಮೆಲ್ಲರಿಗೆ ತನ್ನ ಪ್ರಾಣವನ್ನು ದಾನವಾಗಿ ಬಲಿಕೊಟ್ಟು ರಕ್ಷಣೆ ಎಂಬ ಮುಖ್ಯಕಾರ್ಯವನ್ನು ನೆರವೇರಿಸಲು ಹಿಂಸೆಗಳನ್ನೆಲ್ಲಾ ಸಹಿಸಲು ತನಗೆ ಕರ್ತವ್ಯವೆಂದೂ ನವಾಗಿ ಸಾಕ್ಷ್ಯನಿದ್ದನು ಆಹಾ! ಲೋಕಪಾಲಕನಾಗಿಯೂ ನಮ್ಮ ತಂದೆಯಾಗಿಯೂ ಇರುವ ರಕ್ಷಕನು ಅಂದರೆ ಕ್ರಿಸ್ತ ಯೇಸುಸ್ವಾಮಿಯು ಪಟ್ಟಂಥ ಘೋರವಾದ ಕಷ್ಟಗಳನ್ನು ನೆನಸಿದರೆ ಯಾರಿಗೆ ತಾನೆ ದುಃಖಬಾರದು? ಈ ರೀತಿಯಾಗಿ ತನ್ನ ಪ್ರಾಣವನ್ನು ಎಲ್ಲಾ ಮನುಷ್ಯರಿಗೋಸ್ಕರ ಬಲಿಕೊಟ್ಟು ಮೂರನೇ ದಿನದಲ್ಲಿ ಸಮಾಧಿಯಿಂದ ಎದ್ದು ಪರಲೋಕಕ್ಕೆ ಹೋಗುವಾಗ್ಯೆ ತನ್ನ ಶಿಷ್ಯಮಂಡಲಿಗೆ ಅಪ್ಪಣೆ ಕೊಟ್ಟದ್ದೇನೆಂದರೆ—ಇಗೋ ಈ ದೊಡ್ಡ ರಕ್ಷಣೆಯ ಸುದ್ದಿಯನ್ನು ಎಲ್ಲಾ ಲೋಕಕ್ಕೂ ಸಾರಿರಿ ಯಾರು ನನ್ನನ್ನು ನಂಬುತ್ತಾರೋ ಅವರಿಗೆ ರಕ್ಷಣೆ ಉಂಟಾಗಿ ಮೋಕ್ಷಪದವಿ ಬರುತ್ತದೆ ಯಾರು ನನ್ನನ್ನು ವಿಶ್ವಾಸಿಸುವದಿಲ್ಲವೋ ಅವರಿಗೆ ನಿತ್ಯ ನರಕವೇ ಎಂದು ಹೇಳಿ ಹೋದನು ಅದೇ ಅಪ್ಪಣೆಯೊಳಗೆ ಆತನ ಶಿಷ್ಯಮಂಡಲಿಯವರು ಸಂತೋಷವಾಗಿ ಪಟ್ಟಣಗಳಲ್ಲಿಯೂ ಹಳ್ಳಿಗಳಲ್ಲಿಯೂ ವಿದ್ವಾಂಸರ ಸಭೆಯಲ್ಲಿಯೂ, ವಿದ್ಯಾಹೀನರ ಸಭೆಯಲ್ಲಿಯೂ ಈ ಜಗದ್ಗುರುವಿನ ವಾಕ್ಯವನ್ನು ಸಾರುತ್ತಾ ಇದ್ದರು ಆದರೆ ಆ ಹುಡುಗನನ್ನು ವಾಸ್ಯ ಮಾಡಿದಾಗೆ ಅನೇಕರು ರೋಗಲ ಉಬ್ಬರಗಳನ್ನು ವಾಸ್ಯಮಾಡಿ ಅದೇ ರೋಗವೆಂದಿಗೆ ಹೋಗುತ್ತಾರೆ ಆದರೆ ಅನೇಕರು ಆಲಿಸಿ ಪರೀಕ್ಷಿಸಿ ನಂಬಿ ಸ್ವಸ್ಥರಾಗಿದ್ದಾರೆ ಮತ್ತು ಕ್ರಿಸ್ತನಲ್ಲಿ ನಂಬಿಕೆಯಿಟ್ಟು ಸ್ವಸ್ಥ ಹೊಂದಿದ ಅನೇಕ ಭಕ್ತರು ನಿಮ್ಮ ಎದುರಿಗೆ ಬಂದು ಬೋಧಿಸುವಾಗ್ಯೆ ಅವರ ಬೋಧನೆಯನ್ನು ಆಸಕ್ತಿಯಿಂದ ಆಲಿಸಿರಿ ಆ ಮೂಲಕ ರಕ್ಷಣೆಯನ್ನು ಹೊಂದಿಕೊಳ್ಳಿರಿ

ಆಕ್ರಮ.

ನಮ್ಮ ವೃತ್ತಾಂತ ಪತ್ರಿಕೆಯನ್ನು ಚಂದಾದಾರರುಗಳೆಲ್ಲ ಎಲ್ಲರಿಗೂ ತಪ್ಪದೆ ಪ್ರತಿವಾರಕ್ಕೂ ಕ್ರಮವಾಗಿ ರವಾನಿಸುತ್ತೇವೆ ಕೆಲವು ಮಂದಿ ಚಂದಾದಾರರು ತಮಗೆ ಪತ್ರಿಕೆಗಳು ಸಕಾಲಕ್ಕೆ ತಲಪುವದಿಲ್ಲವೆಂದು ಆಗಾಗ್ಯೆ ಬರೆಯುತ್ತಾರೆ ಕೆಲವರಿಗೆ ತಲಪುವದೇ ಇಲ್ಲವೆಂದು ಬರೆಯುತ್ತಾರೆ ಇದರಿಂದ ಅಂಥವರ ಮೇಲ್ವಿಳಾಸಗಳು ತಪ್ಪಾಗಿರಬಹುದು, ಇಲ್ಲವೆ ಸಬ್ ಆಫೀಸಿನಿಂದ ಜವಾನರು ಆಯಾ ಕಡೆಗಳಲ್ಲಿ ಸರಿಯಾಗಿ ಡೆಲಿವರಿ ಮಾಡದೆ ಇರಬಹುದು ಎಂಬೀ ಎರಡು ಊಹೆಗಳು ಹುಟ್ಟುತ್ತವೆ ಪತ್ರಿಕೆಗಳು ಯಾರ್ಯಾರಿಗೆ ಸಕಾಲಕ್ಕೆ ತಲಪುವದಿಲ್ಲವೋ ಅಂಥವರು ತಮ್ಮ ಸರಿಯಾದ ವಿಳಾಸವನ್ನು ಚೆನ್ನಾಗಿ ಬರೆದು ಕಳಿಸಬೇಕು ಮತ್ತು ಸಬ್ ಆಫೀಸಿನ ಪೋಸ್ಟ್ ಮಾಸ್ತರರುಗಳು ತಮ್ಮ ತಮ್ಮ ಡಿವಿಜನ್ ಜವಾನರುಗಳ ಸರಿಯಾಗಿ ಬಟವಾಡೆ ಮಾಡುವಂತೆ ಸೂಚನೆ ಮಾಡಬೇಕು ಎಂಬದಾಗಿ ಈ ಮೂಲಕ ಅವರವರಿಗೆ ತಿಳಿಯಪಡಿಸಿದ್ದೇವೆ

ಎಡಿಟರ್,

ವೃತ್ತಾಂತ ಪತ್ರಿಕೆ.

ಬಹುದೇಶ ವೃತ್ತಾಂತಗಳು.

—— ಮೈಸೂರು ——

ಇಲ್ಲಿನ ಬಾಯಾಂ ಹೆಡ್ಡ್ ಟೀಚರ ಮಿ॥ ರಂಗಸ್ವಾಮಯ್ಯಂಗಾರ್ಯರು ಕಳೆದ ೨೨ ನೆ ತಾರೀಖಿನಿಂದ ಕೆಲಸದ ಛಾರ್ಜನ್ನು ಮಿ॥ ಶಾಮರಾಯರವರಿಂದ ವಹಿಸಿದರು

ಇಲ್ಲಿ ಸುಬ್ಬರಾಯನೆಂಬೊಬ್ಬನು ವಿಧವಾ ವಿವಾಹವನ್ನು ಮಾಡಿಕೊಳ್ಳುವದಕ್ಕೆ ಇಷ್ಟಪಟ್ಟು ಅದಕ್ಕೆ ಶ್ರೀಗುರುಗಳ ಅನುಮತಿ ಪಡೆಯಬೇಕೆಂದು ಶೃಂಗೇರಿಗೆ ಅರ್ಜಿ ಬರೆದುಕೊಂಡಿರುತ್ತಾನೆ

ಇನ್ನುಮೇಲೆ ಖಾಲಿಯಾಗತಕ್ಕ ಕೆಳಗಿನ ಉದ್ಯೋಗಗಳೆಲ್ಲವು ಯೂನಿವರ್ಸಿಟಿ ಪರೀಕ್ಷೆಗಳಲ್ಲಿ ತೇರ್ಗಡೆಯಾದವರಿಗೆ ಮಾತ್ರವೇ ಕೊಡತಕ್ಕದ್ದೆಂದು ಮೈಸೂರ್ ಗವರ್ನಮೆಂಟಿನವರು ಪ್ರೊಸೀಡಿಂಗ್ಸ್ ಮಾಡಿರುತ್ತಾರೆ

ವಿಶೇಷ ಅಸಿಸ್ಟೆಂಟ್ ಕಮಿಷನರುಗಳ ತಪ್ಪಿತವಿರುವುದರಿಂದ ವಿದ್ಯಾಭ್ಯಾಸಗಳನ್ನು ನಿವೃತ್ತಿ ಮಾಡ ಬಗ್ಗೆ ಮೈಸೂರ್ ಗವರ್ನಮೆಂಟಿನವರು ಒಂದು ರೆಗ್ಯುಲೇಷನ್ ಮಾಡಿ ಅದನ್ನು ಮೈಸೂರ್ ಗೆಜೆಟಿನಲ್ಲಿ ಪ್ರಕಟಿಸಿರುತ್ತಾರೆ

ಇಲ್ಲಿನ ಬಾಯಾಂ ದಿವಾನರಾದ ಸರ್. ಕೆ. ಶೇಷಾದ್ರಿ ಅಯ್ಯರವರು ಮೊನ್ನೆಯ ದಿನ ರಾತ್ರಿ ಊಟಕ್ಕೆ ಮಂತ್ರಕ್ಕೆ ಹೋಗುವ ದಾರಿಯಲ್ಲಿ ಬರುವ ತಿಂಗಳ ೨೮ ನೇ ತಾರೀಖಿನಲ್ಲಿ ತಮ್ಮ ಕೆಲಸದ ಛಾರ್ಜನ್ನು ತೆಗೆದುಕೊಳ್ಳುವರೆಂತಲೂ ಬಳಿ ದೇಶದ ಈವಿನಿಂಗ್ ಮೆಯಿಲ್ ಪತ್ರಿಕೆಯು ತಿಳಿಸುತ್ತದೆ

ಬಂಡಿಸಲ್ಲಿರುವ ಪೊನ್ನಸಾಮಿ ಎಂಬುವನು ತನ್ನ ಹೆಂಡತಿಯನ್ನು ಹೊಡೆದದ್ದಕ್ಕಾಗಿ ಡಿಪುಟಿ ಮ್ಯಾಜಿಸ್ಟ್ರೇಟರಿಂದ ೩ ತಿಂಗಳು ಸಜಾ ವಿಧಿಸಲ್ಪಟ್ಟಿತು. ಹೆಂಡತಿಯನ್ನು ತಾನು ಫಿರ್ಯಾದಿ ಹೇಳಿದಂತೆ ಅಷ್ಟು ಕ್ರೂರವಾಗಿ ಹೊಡೆದುದಿಲ್ಲವೆಂತಲೂ, ಹೆಂಡತಿಯು ಆಡಿಗೆ ಮಾಡದೆ ಸುಮ್ಮನೆ ತನ್ನ ಅಕ್ಕ ತಂಗಿಯರ ಮನೆಗೆ ಹೋಗಿದ್ದದ್ದರಿಂದ ಸಾಧಾರಣವಾಗಿ ಬೆನ್ನೆಯ ಮೇಲೆ ಎರಡು ಪೆಟ್ಟುಗಳು ಹೊಡೆದೆನೆಂತಲೂ ಹೇಳಿದನು, ಆದರೂ ಅವನ ಹೇಳಿಕೆಯಂತೆ ರುಜುವಾತು ಆಗಲು ಸಾಕ್ಷಿಗಳಿಲ್ಲವಾಗಿ ಮೇಲ್ಕಂಡ ಶಿಕ್ಷೆಗೆ ಗುರಿಯಾಗಬೇಕಾಯಿತು ಇತ್ಯಾದಿ ಪರದೇಶಿಯರನ್ನು ಹೊಡೆಯುವವರು ಮುಂದಿನ ಆಲೋಚನೆ ತಿಳಿದು ನಡೆಯುವದು ಉತ್ತಮವಾಗಿರುತ್ತೆ

ಮೊನ್ನೆ ಭಾನುವಾರ ಇಲ್ಲಿನ ಟೌನ್ ಹಾಲಿನಲ್ಲಿ ಒಂದು ಸಭೆ ನಡೆಯಿತು ಮಂಗಳೂರಿನಲ್ಲಿ ತಯಾರಾಗುವಂಥ ಹೆಂಚುಗಳನ್ನು ಇಲ್ಲಿಯೂ ಮಾಡಿಸುವದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡಬೇಕೆಂಬ ಉದ್ದೇಶದಿಂದ ಅನೇಕ ಸಾಹುಕಾರರು ಈ ಪ್ರಯತ್ನಕ್ಕೆ ಪ್ರೋತ್ಸಾಹಿಸಿ ಸಹಾಯ ಮಾಡುವವರಾಗಿ ಒಪ್ಪಿ ಮಿಟಿಂಗ್ ಮಾಡಿದರು ಆದರೆ ಇನ್ನೂ ಕೆಲವು ನಾಗರಿಕರು ನೇರು ಹಾಜರಾಗಿರಲಿಲ್ಲವಾದ್ದರಿಂದ ಆ ದಿನ ಸಭೆಯನ್ನು ಪೂರೈಸಿ ಬರುವ ಭಾನುವಾರ ಸಾಯಂಕಾಲ ೫ ಘಂಟೆಗೆ ನಡೆಯುವಂತೆ ಗೊತ್ತು ಮಾಡಿರುತ್ತಾರೆ ಇಂಥಾ ಕಾರ್ಖಾನೆಗಳು ಇಲ್ಲಿ ಹೆಚ್ಚಾದಾಗೆಲ್ಲಾ ಪ್ರಜೆಗಳು ಹೆಚ್ಚು ನಮ್ಮಲ್ಲಿ ಮೂಲಕ ಜನರಿಗೆ ವಿಶೇಷ ಕೀರ್ತಿಯೂ ಪ್ರಸಿದ್ಧವಾಗುತ್ತಾದ್ದರಿಂದ ಅನೇಕ ಹುದ್ದೆದಾರರೂ, ಸಾಹುಕಾರರೂ ಆದಿನ ನಮ್ಮ ಮಿಟಿಂಗಿಗೆ ಹಾಜರಾಗಿ ತ್ವರಿತದಲ್ಲೇ ಕಾರ್ಖಾನೆಯನ್ನು ಸ್ಥಾಪಿಸುವ ಏರ್ಪಾಡುಗಳನ್ನು ಮಾಡುವರೆಂದು ನಿರೀಕ್ಷಿಸುತ್ತೇವೆ

ಈ ಪಟ್ಟಣದಲ್ಲಿ ೧—೨ ವರ್ಷದಿಂದ ಲೈಸೆನ್ಸಿಗೋಸ್ಕರ ವೀರಶೈವಸಜ್ಜನ ಮತಸ್ಥರು ವಿವಾದಿಸುತ್ತಿದ್ದರು ಕಳೆದ ಶುಕ್ರವಾರ ಲೈಸೆನ್ಸನ್ನು ಡಿಪ್ಟಿಕಮಿಷನರವರಿಂದ ಪಡೆದು ಜೋಡಿ ಕುದುರೆ ಸಾರೋಟಿನ ಮೇಲೆ ತಮ್ಮ ಶಾಸ್ತ್ರ ಗ್ರಂಥವನ್ನು ಕೂರಿಸಿ ಛತ್ರಿ ಚಾಮರಗಳನ್ನು ಹಿಡಿಸಿಕೊಂಡು, ಬಾಜಾಬಜಂತ್ರಿಗಳ ಸಮೇತರಾಗಿ, ಪೋಲೀಸಿನವರ ಉಸ್ತುವಾರಿಯಿಂದ ಸಾಕೇ ಬೇಜಾ ಮೆರವಣಿಗೆಯಾಗಿ ಕಸ್ತೂರಿ ಚಿಕ್ಕಪೇಟೆ ಬಜಾರವರಿಗೂ ಹೋದರು ಅಲ್ಲಿ ಕೆಲವು ಪ್ರಾಮುಖ್ಯ ಜನಗಳೂ, ಮಲ್ಲಾಪುರದಿಂದ ಮೆರವಣಿಗೆಯನ್ನು ಅಡ್ಡಿ ಮಾಡಿ ಸರ್ಕಾರದ ಹುಕ್ಕುಮನ್ನು ಉಲ್ಲಂಘಿಸಿ, ಗಾಡಿ ಮುಂದೆ ಕಲ್ಲುಗಳನ್ನು ಬೀಸಾಡಿದರು ವ್ಯಾಪಾರವನ್ನು ಮಾಡಿ ಕೆಲವು ವಾದ್ಯಗಳನ್ನು ಮುರಿದುಹಾಕಿದರು ಛತ್ರಿ ಹಿಡಿದಿದ್ದವನನ್ನು ಹೊಡೆದು, ಅದನ್ನು ಕಿತ್ತು ಮುರಿದುಬಿಟ್ಟರು ಅಷ್ಟರಲ್ಲೇ ೨ ಜೋಡುಗಳು ಬಿಸಿಯಲ್ಪಟ್ಟವು ಬಿಡು ಕುದುರೆಯಮೇಲೂ, ಮತ್ತೊಂದು ಅವರ ಪತ್ತಾರ ಮೇಲೂ ಬಿದ್ದವು ಪೋಲೀಸು ಇನ್ಸ್ಪೆಕ್ಟರು ಬಂದು ಅವರನ್ನು ಹಿಂದಕ್ಕೆ ಹೋಗುವಹಾಗೆ ಹೇಳಿದರು ಅವರು ಅಪೇಕ್ಷಿಸಿದರ ಹಿಮ್ಮೆಟ್ಟಿದರು ಅವರೂ ಹಿಮ್ಮೆಟ್ಟದೆ ಕಲಹಕ್ಕೆ ನಿಂತಿದ್ದರೆ ಫಲಿತಾಂಶ ವೇನಾಗುತ್ತಿತ್ತೋ ವಾಚಕರೇ ಊಹಿಸಿಕೊಳ್ಳಬಹುದು. ಅನಂತರ ಯಜಮಾನನಾದವನು ಗುಂಪಿನ ಜನಗಳಮುಂದೆ ಹುಪ್ಪಿವಾಗಿ ಹಾರಿಕೊಂಡು ತನ್ನ ಕಡೆಯವರನ್ನು ಹೊಗಳುತ್ತಲೂ, ಎದುರಿನವರನ್ನು ವೈಯುತ್ತಲೂ ಹೋದನು. ಪೊಲೀಸಿನವರೇ ಮುಂತಾಗಿ ಮುಖ್ಯ ಅಧಿಕಾರಿಗಳೆಲ್ಲ ಅಗ್ರಹಾರಕ್ಕೆ ಬಂದು ನೋಡಿಕೊಂಡುಹೋದರು. ಮುಂದಿನ ಸಂಗತಿಗಳು ಆಗ ಬಿನ್ನೈ ಕೃತಪಡಿಸಿಕೊಳ್ಳುವೆನು ಎಂಬದಾಗಿ ಒಬ್ಬ ಬಾತ್ಮಿದಾರರು ಬರೆದಿರುತ್ತಾರೆ. ಈ ಜಾತಿವೈರವ್ಯಾಗಳಿಂದಾಗ ನಾಶ ಹೊಂದುವನ್ನು! ಎಂದಿಗೆ ಕ್ಷೇಮ ಉಂಟಾಗುವದೊ!

ಏಜಂಟ್ರುಗಳಿಗೆ.

ನೋಟೀಸ್.

ಕಳೆದ ಸಂಚಿಕೆಯೊಡನೆ ವೃತ್ತಾಂತ ಪತ್ರಿಕೆಯ ೭ ನೆ ಸಂಪುಟದ ಮೊದಲನೇ ಕ್ವಾರ್ಟರು ಪೂರೈಸಿರುತ್ತಾದ್ದರಿಂದ ಏಜಂಟ್ರುಗಳೆಲ್ಲರೂ ಲೆಕ್ಕಗಳನ್ನು ತಮಗೆ ಪ್ರೀತಿ ತ್ವರೆಯಲ್ಲಿ ಕಳುಹಿಸಿಕೊಡಬೇಕೆಂದು ಕೋರುತ್ತೇವೆ. ತಪ್ಪಬಾರದು.

೧೭—೭—೯೩. } ಎಡಿಟರ್,

ಮೈಸೂರು. } ವೃತ್ತಾಂತ ಪತ್ರಿಕೆ.

ವಿ ವಿ ಧ ವ ರ್ತ ಮಾ ನ ಗ ಳು.

—— o ——

ಹಿಂದೂದೇಶದಲ್ಲಿ ವಿಪರೀತ ಮಳೆಯಾಗಿ ಸುಮಾರು ೩೬೦ ಮನೆಗಳೂ, ಭಾರಿಭಾರಿ ಕಟ್ಟಡಗಳೂ ಕೊಚ್ಚಿ ಹೋದವು

ಕೈರೋಜಿಪಸಿರೋ ಎಂಬಲ್ಲಿ ಪ್ರಜೆಗಳು ಸರ್ಕಾರದ ಅಧಿಕಾರಕ್ಕೆ ವಿರೋಧ ತಿರುಗಿಬಿದ್ದು ದಸ್ತೇವನ್ನು ಕೊಳ್ಳೆ ಹೊಡೆದಿದ್ದಾರೆ ಕೆಲವು ಪ್ರಾಣಿಗಳನ್ನು ಕಳಕೊಂಡರು

ಜಪಾನ್ ದೇಶದಲ್ಲಿ ನಡೆದ್ದನಂಗೆ ಸಹಾಯ ಮಾಡುವದಕ್ಕಾಗಿ ಹಿಡಿದ್ದಸರ ಫಂಡಿನಲ್ಲಿ ಈಗ ೧೨,೦೦೦ ರೂ ಜಮೆಯಾಗಿದೆ ಎಂದು ತಿಳಿದುಬರುತ್ತದೆ

ಆಮೆರಿಕದ ಕೆಲವು ಪ್ರದೇಶಗಳಲ್ಲಿ ಎಂಬ ನಗರದಿಂದ ನಿರುತ್ತರ ಮಳೆ ಸುರಿದು ೨ ದಿನಗಳಲ್ಲಿ ೪೨ ಅಂಗುಲದಷ್ಟು ನೀರು ಹರಿಯಿತು ಎಂದು ವರ್ತಮಾನ ಬಂದಿದೆ

ಲೇಸಿ ಎಂಬ ಆಮೇರಿಕ ದೇಶದವನು ಬೈಸಿಕಲ್ ಎಂಬ ೨ ಚಕ್ರದ ಗಾಡಿಯಮೇಲೆ ಕೂತು ಪ್ರಪಂಚವನ್ನೆಲ್ಲಾ ಸಂಚಾರ ಮಾಡುತ್ತಿದ್ದಾನೆ ಈತನು ಈಗ ಕಲ್ಕತ್ತೆಗೆ ಬಂದಿದ್ದಾನೆ ಈತನ ಸಾಹಸವೆಂಥಾದ್ದು!

ಹಿಂದುಸ್ಥಾನದಲ್ಲಿ ಕಳೆದ ೯೧ ನೆ ಇಸವಿಯಲ್ಲಿ ನಡೆದ ಜನಸಂಖ್ಯೆಯಿಂದ ಬ್ರಿಟಿಷ್ ಇಂಡಿಯಾದಲ್ಲಿ ಈಗ ೨೮,೬೦,೦೦,೦೦೦ ಪ್ರಜೆಗಳಿದ್ದಾರೆಂತಲೂ, ಇವರಲ್ಲಿ ೭೯,೭೯೯ ಜನ ಮೇಷ್ಟ್ರುಗಳು, ೧,೯೭,೪೬೦ ಜನ ವ್ಯಾಪಾರಸ್ಥರು, ೪,೫೧೯,೪೯೯ ಜನ ಕೂಲಿಗಾರರೂ ಇದ್ದಾರೆಂದು ಗೊತ್ತುಮಾಡಿದ್ದಾರೆ

ಜಮಾಂಗಿರ್ ರೆಡಿಮನಿ ಎಂಬಾತನು ವಿಲಾಯತಿಗೆ ಹೋಗಿದ್ದನು ಈತನು ಅಲ್ಲಿಂದ ವಾಪಸು ಬೊಂಬಾಯಿಗೆ ಬರುವಾಗ್ಯೆ ಅಲ್ಲಿನ ಇಂಪೀರಿಯಲ್ ಇನ್ಸ್ಟಿಟ್ಯೂಟಿಯಿಂದಕ್ಕೆ ೨೫,೦೦೦ ಪವನುಗಳನ್ನು ಧನಸಹಾಯವಾಗಿ ಕೊಟ್ಟಿರುತ್ತಾನೆಂಬದಾಗಿ ವಿಲಾಯಿತಿಯವರೆಲ್ಲರೂ ಬಹು ಆನಂದಭರಿತರಾಗಿದ್ದಾರೆ

ಮಾರ್ಕ್ಹ ದಿನ ಪ್ರಾಂತ್ಯದ ಮೂಲಕ ಹಿಂದೆ ಯಾಕ್ಕೆ ಕೂಲಿಗಳನ್ನು ಬಿಸಿ ಮಾಡುವದಕ್ಕೆ ತರುತ್ತಿದ್ದ ಕೆಲವು ಮಂದಿ ವರ್ತಕರನ್ನು ಅಲ್ಲಿನ ದಸ್ಯುಗಳ್ಳರು ಅಡ್ಡಹಾಕಿ ಕೂಲಿಗಳನ್ನು ಕೆಲವು ದಿನಗಳವರೆಗೂ ತಮಗೆ ಬಂಧಿಸಿ ಕೊಟ್ಟರೆ ಅನಂತರ ಬಿಡುತ್ತೇವೆಂದು ಹಿಂಸೆಪಡಿಸುತ್ತಿದ್ದಾರೆಂಬದಾಗಿ ಅಲ್ಲಿನ ಸೇಟರ ಬಾತ್ಮಿದಾರರು ಬರೆಯುತ್ತಾರೆ

ಅಮೇರಿಕೆಯ ನವಾಬನವರುಗಳು ತಮ್ಮ ಗುಡಿಗಳಲ್ಲಿ ಆಕ್ರಮಗಳನ್ನು ಆರೋಪಿಸಿ, ವಿವಾಹಸಂಬಂಧವನ್ನೇ ನಿವೃತ್ತಿ ಮಾಡಬೇಕೆಂದು ಮಾಡಿದ್ದ ದಾವೆಯು ರುಜುವಾತಾಗದಿದ್ದುದರಿಂದ ವಜಾ ಆಯಿತು ಈಗ ಅವಳಗಂಡನು ತನ್ನ ಹೆಂಡತಿಯನ್ನು ತನ್ನ ಸ್ವಾಧೀನಕ್ಕೆ ಕೊಡಿಸಬೇಕೆಂದು ದಾವೆ ಮಾಡಿರುತ್ತಾನೆ ಒಂದುವೇಳೆ ಆಗಳು ಆತನನಾಶಗೆ ಹೋದಾಗ್ಯೂ ಹ್ಯಾಗೆ ಬಾಳುವಳೋ?

ರಾಜಕೀಯನು ಲೈಬ್ರೆಸ್ ಸ್ಟರ್ನಲ್ಲಿ ಒಬ್ಬ ನಾರು ದವನು ಬಿಡುವರಿಗೆ ಹೋಗುವುದಕ್ಕೆ ಟಿಕೆಟು ತೆಗೆದುಕೊಂಡನು ಪ್ಲಾಟ್ಫಾರಮಿಗೆ ಇರಲಿಲ್ಲ ಬಿಸೋ ಆತನುಮಾಡಿಯಿಟ್ಟು ಅವನನ್ನು ಹಿಡಿದು ಶೋಧನೆ ಮಾಡಿದಾಗ ಅವನ ... ಲ್ಲಿ ಒಂದು ಪಿಸ್ತೂಲೂ, ಚಿಟ್ಟಿನ ಊಟಗಳಲ್ಲಿ ಗುಂಡುಗಳೂ ಕೆಲವು ಗೋಲಿಗಳೂ ಸಿಕ್ಕಿದವು ಆ ಕೂಡಲೆ ಅವನನ್ನು ಲಾಕಪ್ಪಿಗೆ ಕಳಿಸಿದರು

ಜೇಲಾ ಡಿಸ್ಟ್ರಿಕ್ಟನಲ್ಲಿ ಒಂದು ಮನೆಗೆ ಮಾಲೀಕನಾದವನು ತನ್ನ ಮನೆಯನ್ನು ಒಬ್ಬನಿಗೆ ಬಾಡಿಗೆಗೆ ಕೊಟ್ಟನು ಆತನು ಈಗ ೯೨೩ ತಿಂಗಳು ತಿಂಗಳಿಗೆ ತಪ್ಪದೆ ಬಾಡಿಗೆಯನ್ನು ಕೊಡುತ್ತ ಬಂದಿರುತ್ತೇನಾದ್ದರಿಂದ, ನಾನು ಏನೊಂದು ತಪ್ಪುಮಾಡಿದರೂ ನನ್ನನ್ನು ಮಾಲೀಕನು ಮನೆಬಿಟ್ಟು ಹೋಗು ಎಂದು ಹೇಳಲು ಅವನಿಗೆ ಅಧಿಕಾರವಿಲ್ಲವೆಂತ ಅಪ್ಪಣೆ ಪಡೆಯುವದಕ್ಕೆ ದಾವೆ ಮಾಡಿರುತ್ತಾನೆ ಇದೆಂಥಾ ನ್ಯಾಯ!

ಆಫ್ರಿಕಾದಲ್ಲಿ ಬುದ್ಧನೊಂದು ದೇವಸ್ಥಾನದಲ್ಲಿ ಘಂಟೆ ಹೊಡೆಯುವ ಜವಾನನು ದಿವಾನನನ್ನು ಸೂಚಕಕ್ಕೆ ಘಂಟೆಯನ್ನು ಬಾರಿಸುತ್ತಾ ಇದ್ದಾಗ ಒಂದು ಕಂಬದಮೇಲೆ ನಿಂತು ಘಂಟೆ ನಾದ್ಯ ಪಶುವನ್ನೇ ಉರುಳು ಮಾಡಿ ತನ್ನ ಕುತ್ತಿಗೆಗೆ ಹಾಕಿಕೊಂಡು ಕಂಬದಿಂದ ನೆಗೆದು ಬಿದ್ದುಬಿಟ್ಟನು ತಕ್ಷಣ ಆತನು ಅಲ್ಲಿ ತೂಗುತ್ತ ಪ್ರಾಣಬಿಟ್ಟನು ಬೋಧಕನು ಬಂದು ದೇವಸ್ಥಾನದಲ್ಲಿ ತೂಗಾಡುತ್ತಿದ್ದ ಹೆಣವನ್ನು ನೋಡಿ ಕಾರಣತಿಳಿಯದೆ ಆಶ್ಚರ್ಯಪಟ್ಟರು

ಯೂನಿವರ್ಸಿಟಿ ಎಂಬ ವಿದ್ಯಾಸಂಘಗಳು ಪ್ರಪಂಚದ ಎಲ್ಲಾ ನಾಗರಿಕ ರಾಜ್ಯಗಳಲ್ಲಿಯೂ ಉಂಟು ಅಮೇರಿಕದಲ್ಲಿ ಕ್ಯಾಲಿಫೋರ್ನಿಯಾ ಎಂಬ ಡಿಸ್ಟ್ರಿಕ್ಟಿನಲ್ಲಿ ಸ್ಥಾಪಿಸಲ್ಪಟ್ಟ ಒಂದು ಯೂನಿವರ್ಸಿಟಿಗೆ ಇರುವಷ್ಟು ಐಶ್ವರ್ಯವು ಪ್ರಪಂಚದಲ್ಲೇ ಮತ್ಯಾವುದಕ್ಕೂ ಇಲ್ಲವೆಂದು ಎಲ್ಲರೂ ಒಪ್ಪಿಕೊಂಡಿದ್ದಾರೆ ಅದರಿಂದ ಬರುತ್ತಿದ್ದ ೧ ವರ್ಷಕ್ಕೆ ಅದಕ್ಕೆ ಉತ್ಪತ್ತಿಯಾಗುವದು ೨೫ ಲಕ್ಷ ಪವನುಗಳು ಹೀಗಿರುವಾಗ್ಯೆ ಅಲ್ಲಿನವರು ವಿದ್ಯಾದಕ್ಷರಾದವರೂ, ವಿದ್ಯಾಭಿವೃದ್ಧಿಯಲ್ಲಿ ನಿರತರೂ ಆಗಿ ಧನವನ್ನು ಆದಕ್ಕೆ ಸಂದೇಹವೇನು?

ತುರ್ಕಸ್ತಾನದ ಸುಲ್ತಾನನು ತನ್ನ ಜನಾನಾದೊಳಗಿರುವ ಸ್ತ್ರೀಯರಿಗೆಲ್ಲಾ ಒಂದು ಹಾಕಬೇಕೆಂದು ಇಟಲೀದೇಶದ ಒಬ್ಬ ಚಿತ್ರಕಾರನನ್ನು ಕರೆಕಳುಹಿಸಿದರು ಅದಕ್ಕೆ ಮೊದಲೆ ಮಾರ್ದಿವಾರ ಒಂದು ಪರದೆಯನ್ನು ಕಟ್ಟಿಸಿ, ಅದರಲ್ಲಿ ಒಂದು ತೂತು

ಹಿಡಿಸುವಷ್ಟು ತೂತುಮಾಡಿ ಅದರ ಮೂಲಕ ಹೆಂಗಸರ ಕೈಯನ್ನು ನುಗ್ಗಿಸಿ ಅದಕ್ಕೆ ಅವನು ಉಂಗುರ ತೊಡಿಸಿಕೊಂಡರೆ ಮತ್ತು ಬಿಟ್ಟರೆ ಕ್ರೈಸ್ತರ ವಸತಿಗೂ ಅವನಿಗೆ ಬಂದು ಮೊಹರಾದ ಸಾಕ್ಷಿಪತ್ರಗಳ ಪ್ರಕಾರ ೧೫೦ ಮಂದಿ ಸುಂದರಿಯರಿಗೆ ಉಂಗುರ ತೊಡಿಸುವಷ್ಟರೊಳಗಾಗಿ ವೈದ್ಯನಿಗೆ ಉಸಿರುಕಟ್ಟಿ ಬಳಲಿಸುವದಾಯಿತು

ಬರೋಡೆಯ ಗಾಯಕವಾಡ ಮಹಾರಾಜರವರು ತಮ್ಮ ಸಂಸ್ಥಾನದಲ್ಲಿ ಒಂದು ಹೊಸ ಕಾನೂನನ್ನು ಜಾರಿಯಲ್ಲಿ ತಂದಿರುತ್ತಾರೆಂತಲೂ, ಅದರ ಪ್ರಕಾರ ಎಲ್ಲಾ ಜಾತಿಯವರೂ ತಮ್ಮ ಹುಡುಗರನ್ನು ೭ ವರ್ಷದಿಂದ ೧೨ ವರ್ಷಗಳವರೆಗೂ ಮತ್ತು ಹುಡುಗಿಯರನ್ನು ೭ ವರ್ಷದಿಂದ ೧೦ ವರ್ಷದವರೆಗೂ ವಿದ್ಯಾಭ್ಯಾಸ ಮಾಡಿಸಬೇಕು, ಇದಕ್ಕೆ ತಪ್ಪಿದವರನ್ನು ಶಿಕ್ಷಿಸುವದಾಗಿಯೂ ಅಲ್ಲಿನ ಗುಜರಾತಿ ಪತ್ರಿಕೆಯಲ್ಲಿ ಪ್ರಕಟಿಸಿರುತ್ತೆ ಇಂಥಾ ಕಾನೂನು ಎಲ್ಲೆಲ್ಲಿಯೂ ಜಾರಿಯಲ್ಲಿ ತಂದರೆ ಬಡಿಯಲ್ಲಿ ಸ್ವಲ್ಪ ಕಷ್ಟವಾಗಿ ಕಂಡರೂ ಅದರ ಫಲಿತಾಂಶವೇನೋ ಮಹೋಪಕಾರವಾಗಿರುವದರಲ್ಲಿ ಸಂಶಯವಿಲ್ಲ

ಪರಿಬ್ಬ್ರೀನ್ ಎಂಬಲ್ಲಿ ಒಬ್ಬ ಹೆಂಗಸು ತನ್ನ ಗಂಡನು ವೃದ್ಧನಾಗಿದ್ದದರಿಂದಲೂ, ಮನೆಯಲ್ಲಿ ಜಗಳ ಮಾಡಿಯುವಾಗಲೂ ಹೆಂಡತಿಯನ್ನು ಹೊಡೆಯುತ್ತಿದ್ದದರಿಂದಲೂ, ಅವನ ಹಿಂಸೆಯನ್ನು ತಡೆಯಲಾರದೆ ತನ್ನ ಸೀರೆಯ ಅರ್ಧಭಾಗವನ್ನು ಸೀರೆಯಾಗ್ಗೆಯಲ್ಲಿ ಅದ್ದಿ ಅವನನ್ನು ದೀಪಕ್ಕೆ ಹಿಡಿದು, ತನ್ನ ಗಂಡನನ್ನು ಕೂಗಿ, ಅವನನ್ನು ಬಿಡದೆ ಬಲವಾಗಿ ಅಪ್ಪಿ ಹಿಡಿದುಕೊಂಡಳು ಆಗ ಇವರ ಕೂಗಿಗೆಲ್ಲರೂ ಬಂದು ಬಿಡಿಸುವಷ್ಟರೊಳಗಾಗಿ ಅವಳು ಸತ್ತುಹೋಗಿದ್ದಳು ಅವನಿಗೆ ಉತ್ತರ ಪ್ರಾಣಾಪಾಯವಾಗಿತ್ತು ಅನ್ಯಾಯವಾಗಿ ಹೆಂಗಸರನ್ನು ಹಿಂಸಿಸತಕ್ಕವರ ಗತಿಯಲ್ಲಾ ಇದೇ ಸರಿ

ಸೋಲ್ಡಸ್ಟಾರ್ ಎಂಬ ಒಂದು ಹಡಗನ್ನು ಜಾಂಜಿಬಾರಿನ ಮಹಾರಾಜರವರು ಕಳೆದ ೧೮೯೧ ರಲ್ಲಿ ೫೦ ಸಾವಿರ ರೂಪಾಯಿ ಖರೀದಿ ಕೊಟ್ಟು ಕೊಂಡುಕೊಂಡಿದ್ದರು ಅದರಲ್ಲಿ ಸುಮಾರು ೧೨,೦೦೦ ಮೂಟೆಗಳ ಧಾನ್ಯವನ್ನು ಭರ್ತಿಮಾಡಿ ಪರ್ಶಿಯನ್ ಗಲ್ಫ್‌ಕ್ಕೆ ಪ್ರಯಾಣಮಾಡಿಸಿದ್ದರು ಅದು ದಾರಿಯಲ್ಲಿ ಇನ್ನೊಂದು ಹಡಗಿಗೆ ಬಡಿದು ಮುಳುಗಿಹೋಯಿತು ಇನ್ನೊಂದುಮಾತ್ರ ಮುಳುಗಲಿಲ್ಲ ಇದರಲ್ಲಿದ್ದವರೆಲ್ಲರೂ ಬದುಕಿಕೊಂಡರು ಆದರೆ ಅಷ್ಟು ಸಾಮಾನೂ, ಆರುಮಂದಿ ಕೂಲಿಯವರೂ ಹಡಗಿನಲ್ಲಿ ಮುಳುಗಿಹೋದರು ಇದರಿಂದ ಮಹಾರಾಜರವರಿಗೆ ತುಂಬಾ ವ್ಯಸನ ಉಂಟಾಗಿರುವದಕ್ಕೆ ಸಂದೇಹವೇನು?

ಬೊಂಬಾಯಿನಲ್ಲಿ ಕಾಂಟಿನೆಂಟಲ್ ಎಂಬುವನು ಮತ್ತು ಇನ್ನು ಕೆಲವು ಹಿಂದುಗಳೂ ಸೇರಿ ಚಿಕಿತ್ಸೆಗಳನ್ನು ಅಚ್ಚುಹಾಕಿಸಿ ಹಿಂದುಗಳಿಗೆಲ್ಲಾ ಹಂಚಿದರು ಅದರಲ್ಲಿ—ಹುಲ್ಲು ಯುದ್ಧವಾಗಿ, ನಡೆದರೆ, ಎಲ್ಲರೂ ಸಂಯೋಜಿಸಬೇಕೆಂಬುದು ... ಸಹಾಯ ಮಾಡುವದಕ್ಕೆ ಭಾಷಿತ ... ಎಲ್ಲರೂ ಸಿದ್ಧರಾಗಬೇಕು ... ಯುದ್ಧದಲ್ಲಿ ಸತ್ತರೆ ಅವರಿಗೆ ಸ್ವರ್ಗವು ಪ್ರಾಪ್ತವಾಗುವದು ... ಇದೇ ಮೊದಲಾದ ಸಂಗತಿಗಳು ಅಚ್ಚುಹಾಕಲ್ಪಟ್ಟವು ಇಂಥಾ ಪತ್ರಿಕೆಗಳು ೩,೦೦೦ ಪೋಲೀಸಿನವರಿಗೆ ಸಿಕ್ಕಿರುತ್ತೆ ಇದು ದಂಗೆಯನ್ನು ಎಬ್ಬಿಸುವದಕ್ಕೆ ಸಹಾಯವಾಗಿರುವದರಿಂದ ಅದರ ಮೂಲ ಪುರುಷರನ್ನು ಹಿಡಿದು ಶಿಕ್ಷಿಸುವದಕ್ಕೆ ಪ್ರಯತ್ನ ಮಾಡುತ್ತಲಿದ್ದಾರೆ

ಒಬ್ಬ ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರನು ಮಹಮ್ಮದ್ ಖಾನ್ ಎಂಬುವನ ... ನ್ನು ಸರಕಾರದ ಮಾಡಿಕೊಂಡು ... ಒಂದು ಪಟ್ಟಿಕೊಂಡು ಆಬ್ಕಾರಿ ರೈಲ್ವೆ ಕಂಪೆನಿಯವರಲ್ಲಿ ಕೆಲವು ದಿನವನ್ನು ಲಕ್ಷಣದ ಇಟ್ಟಿದ್ದನು ಈ ವಿಷಯವು ಸರ್ಕಾರದಿಂದ ನೇಮಿಸಲ್ಪಟ್ಟ ಅಧಿಕಾರಿಗಳಿಗೆ ತಿಳಿದುಬಂದಾಗ ... ರೈಲ್ವೆ ಕಂಪೆನಿಯವರು ಸರ್ಕಾರದವರ ಕಡೆಯಿಂದ ಕೇವಲ ಇರಿಸಿಕೊಳ್ಳುವವರು ಇದ್ದರೆ ತಪ್ಪು ಹೀಗೆ ಸರ್ಕಾರದವರ ಫಾರೆಸ್ಟು ಆಫೀಸರನ ನಡೆಯನ್ನು ಸರ್ಕಾರದ ಮಾಡಿಕೊಂಡದ್ದು ತಪ್ಪಲ್ಲಿ ಅದಕ್ಕೆ ಗವರ್ನಮೆಂಟಿನವರು ತಪ್ಪಿತಸ್ಥರಾಗುತ್ತಾರೆಂತಲೂ, ರೈಲ್ವೆ ಅಧಿಕಾರಿಗಳು ಗವರ್ನಮೆಂಟಿನವರ ಮೇಲೆ ದಾವೆಮಾಡಿ ದಾವೆ ತರಬಹುದಾಗಿರುತ್ತೆ ಅದ್ದರಿಂದ ಆಫೀಸರನ ತೆಗೆದುಕೊಂಡಿರುವ ಜಾಮೀನು ಹಣವನ್ನು ರೈಲ್ವೆಯವರು ವಾಪಸು ಕೊಡಬೇಕೆಂದು ತೀರ್ಮಾನಮಾಡಿದರು

ಪರನ ವಿರೋಧಿ.

ಒಬ್ಬ ಕಾಲೇಜ ಬ್ರಾಹ್ಮಣನು ತನಗೆ ಮೊಂಡುಗುಣವಾದ ನೆಗ ಬರೆದಿಟ್ಟ ಒಂದು ಕಾಗದವನ್ನು ಮಿಂಚಿ ಪತ್ರಿಕೆಕಾರರು ಪ್ರಕಟಿಸಿರುತ್ತಾರೆ ಅದರಿಂದ ಒಂಗಾಳಿ ಹಿಂದೂ ಬ್ರಾಹ್ಮಣರ ಸ್ಥಿತಿಯನ್ನು ಸ್ವಲ್ಪಮಟ್ಟಿಗೆ ವಾಚಕರು ತಿಳಿಯಬಹುದಾಗಿದೆ —ನಿಮ್ಮ ಕಾಗದ ತಲುಪಿತು ನಾನು ಬಹು ಸಂತೋಷಪಡುವೆ ನಿಮ್ಮ ಮನೆತನದ ತಾಯಿಗಾಗಿ ನಮ್ಮ ತಿಳಿಸುವೆನು ನಾನು ನಮ್ಮ ತಂದೆತಾಯಿಗಳ ಏಕಪುತ್ರನು ನಿಮ್ಮ ಮಗಳನ್ನು ಮದುವೆ ಮಾಡಿಕೊಂಡು ನಿಮ್ಮೆಲ್ಲರೀ ಇರಬೇಕಾದಲ್ಲಿ ನನಗೆ ನಗದಾಗಿ ೧,೫೦೦ ರೂಪಾಯಿ ಕೊಡಬೇಕು ೧ ಸಾವಿರ ರೂಪಾಯಿ ನಗಗಳನ್ನು ನಿಮ್ಮ ಮಗಳಿಗೆ ಬಳುವಳಿ ಕೊಡಬೇಕು ಮದುವೆಯಾಗಿ ನನಗೆ ಬಿ ಎ ಪರೀಕ್ಷೆಗೆ ಹೋಗುವುದಕ್ಕೆ ಹಣ ಬೇಕಾಗುವುದು ... ನನಗೆ ಒಂದುವೇಳೆ ಎಮ್ ಎ ಪರೀಕ್ಷೆಗೆ ಹೋಗುವದಕ್ಕೆ ಮನಸ್ಸಾದರೆ ... ಇದು ಪ್ರಯಾಸಗಳನ್ನೆಲ್ಲಾ ನೀವೇ ವಹಿಸಿಕೊಳ್ಳಬೇಕು ನೀವು

ಇಷ್ಟು ಒಪ್ಪಿಕೊಂಡರೆ ನಿಮ್ಮ ಮಗಳನ್ನು ಮದುವೆ ಮಾಡಿಕೊಂಡು ನಿಮ್ಮ ಮನೆಯಲ್ಲಿಯೇ ಇರುವದಕ್ಕೆ ನಮ್ಮ ತಂದೆ ತಾಯಿಗಳ ಅನುಮತಿಯನ್ನು ಪಡೆಯುವೆನು; ನನ್ನ ಮೊದಲನೇ ಅಪೇಕ್ಷೆಯನ್ನು ನೀವು ಸಂಪೂರ್ಣವಾಗಿ ನಡಿಸಿಕೊಡಬೇಕು ಯಾಕಂದರೆ ನಾನು ನಿಮಗೆ ಮಗನೂ, ಆಳಿಯನೂ ಆಗಿ ನಿಮ್ಮನ್ನೇ ತಂದೆಯಂತೆ ನೆನಸುತ್ತೇನೆ ಈ ವಿಷಯಗಳು ಚೆನ್ನಾಗಿ ಆಲೋಚನೆ ಮಾಡಿ ನಿಷ್ಕರ್ಷೆಯಾದ ಉತ್ತರವನ್ನು ಕೂಡಲೇ ಬರೆಯಬೇಕಲ್ಲದೆ—ನಿಮ್ಮ ಮಗಳು ಹ್ಯಾಗೆ ಇದ್ದಾಳೆ? ಅವಳು ನಿಜವಾಗಿಯೂ ೧೧ ವರ್ಷದವಳೋ? ಸುಂದರಿಯಾಗಿದ್ದಾಳೋ? ಎಂಬೀವಿಷಯಗಳಿಗೂ ಸರಿಯಾಗಿ ಉತ್ತರವನ್ನು ಬರೆಯಬೇಕು ಅವಳು ನೋಡುವದಕ್ಕೆ ಚೆನ್ನಾಗಿಲ್ಲದಿದ್ದರೆ, ನೀವು ನನ್ನ ಕರಾರುಗಳಲ್ಲಿ ಒಪ್ಪಿದಾಗ್ಯೂ ನನಗೆ ಅವಶ್ಯವಿಲ್ಲ ನಿಮ್ಮ ಉತ್ತರವನ್ನು ಬಂದು ಲಕೋಟಿಯಲ್ಲಿ ಬರೆಯಿರಿ ಕಾರಣದಿನಲ್ಲಿ ಬರೆದರೆ ನಮ್ಮ ತಂದೆತಾಯಿಗಳು ನೋಡಿಕೊಂಡು ನಿಮಗೆ ವಿರೋಧವಾದ ಉತ್ತರವನ್ನು ಕೊಟ್ಟುಬಿಟ್ಟಾರು! ನಿಮ್ಮ ಕಾಗದ ಬಂದ ಒಡನೆಯೇ ನಾನು ಹೊರಟು ನಿಮ್ಮ ಪ್ರಗಳನ್ನು ನೋಡಿಕೊಂಡು ಬರುವೆನು ಮತ್ತು ಆಗಲೇ ಎಲ್ಲಾ ನಿಷ್ಕರ್ಷೆಮಾಡುವೆನು ಇಂತಿನಮಸ್ಕಾರ

ಮಳವಳ್ಳಿಯ ವೃತ್ತಾಂತ.

ಮಳವಳ್ಳಿಯ ಸಮೀಪದಲ್ಲಿ ನಡೆದ ಜಾತ್ರೆಯವಿಷಯ ತಮ್ಮ ಅಮೂಲ್ಯಪತ್ರಿಕೆಯಲ್ಲಿ ಪ್ರಕಟಮಾಡಿದ್ದರಿಂದ ತುಂಬಾ ಕೃತಜ್ಞತೆಯುಳ್ಳವನಾಗಿದ್ದೇನೆ ಆದರೆವಿಷಯ ಮೇಲಿನ ಅಧಿಕಾರಿಗಳು ಎಷ್ಟರಮಟ್ಟಿಗೆ ತಮ್ಮ ಗಮನಕ್ಕೆ ತೆಗೆದುಕೊಂಡರೋ ಕಾಣೆ; ಅದರೂ ಸಂಗತಿಯು ಅವರಮುಂದೆ ಪ್ರತ್ಯಕ್ಷವಾಗಿದೆ

ಈಚೆಗೆ ಇನ್ನೊಂದು ಕೆಲಸವು ಈಊರಿನಲ್ಲಿ ಕೆಲವುತಿಂಗಳುಗಳಿಂದ ಪ್ರಾರಂಭವಾಗಿ ಇನ್ನೂ ಮುಗಿದಿಯಿಲ್ಲ ಈವಿಷಯದಲ್ಲಿ ಅನೇಕರು ಕೇಳಿ ತಿಳುಕೊಂಡಿರುವದೇನಂದರೆ,—ಪಸ್ತುವು ಪ್ರಸ್ತದಕಾಲದಲ್ಲಿ ವಿಘ್ನಗಳನ್ನು ಐಬ್ಬಿಕ ರೋಗಗಳಲ್ಲಿ ದುರವಸ್ಥೆಗೆ ಪಾತ್ರರಾದರು ಎಂಬುವದೇ ಅವರು ಬೆರಣಿಗೆ ಮಾಡುವದು ಅನೇಕವರುಷಗಳಿಂದ ನಡೆದುಬಂದಿರುವ ಮಾಮೂಲೇ ಅಪ್ಪಣೆಯಿಂದ ಯಾರೊಬ್ಬರೂ ಅದನ್ನು ಆಟಂಕಿಸಲಿಲ್ಲ ಎಲ್ಲರೂ ಮೌನವಾಗಿಯೂ ತೃಪ್ತರಾಗಿಯೂ ಇದ್ದರು ಆದಾಗ್ಯಂದರೆ, ಮೊನ್ನೆ ಪ್ರಸ್ತಗಳಕಾಲದಲ್ಲಿ ಪಸ್ತರವು ಕೆಲವು ಅದವು ಅವುಗಳನ್ನು (ಅಧಿಕಾರದಲ್ಲಿ) ಮೆರವಣಿಗೆಯಾಗಿ ಕರೆತಂದಾಗ ಎಲ್ಲರೂ ಕಣ್ಣಾರ ಕಂಡರು ಮತ್ತು ಸುಮ್ಮನಿದ್ದರು ಅವರ ಕೋಟೆಯಲ್ಲಿರುವ ಪಸ್ತರಿಗೂ ಮತ್ತು ಪೇಟೆಯಲ್ಲಿರುವ ಪಸ್ತರಿಗೂ ಸಂಬಂಧದಲ್ಲಿ ಒಂದು ಪ್ರಸ್ತವು ಜರುಗಿ ಕೋಟೆಯಲ್ಲಿಂದ ಆ ಗಂಡನ್ನು ಹೆಣ್ಣನ್ನೂ ಮೆರವಣಿಗೆಯಾಗಿ ಕರೆದುಕೊಂಡು ಬರುವಾಗ ಪತನಾಚಿ ಜನಗಳು ಅವರನ್ನು ಅಡ್ಡಿಪಡಿಸಿದರು ಆಗಲೇ ದೊಡ್ಡ ಕಲಹ ನಡೆಯುತ್ತಿತ್ತು ಆಷ್ಟರಲ್ಲೇ ಅವರೆಲ್ಲರೂ ಒಂದು, ಪಸ್ತರ ಮೆರವಣಿಗೆಯನ್ನು ಅಡ್ಡಿಮಾಡಿ ಇತರ ಜನರನ್ನು ಸಮ್ಮತಿಪಡಿಸಿದರು ಅಂದಿನಿಂದ ಮಾಗವಣಿಗೆಯಾಗಲಿಲ್ಲ ಅವರ ಕೋರ್ಟುಕಚೇರಿಗಳಲ್ಲಿ ಸಮಾರಂಭಿದ್ದರೆ ಇದಕ್ಕೆಲ್ಲಾ ಮುಖ್ಯಕಾರಣವೇನಂದರೆ, ಪೂರ್ವಕ್ಕೆ ಪಸ್ತರು ಬೇಲಿಹೊತ್ತುಕೊಂಡು, ಕೂಲಿನಾಲಿ ಮಾಡಿಕೊಂಡು, ಜೀವನಮಾಡುತ್ತಿದ್ದರು ಈಗ ಮೈಸೂರಿನ ಕೆಲಸವಹಿಡಿ ಸ್ವಲ್ಪ ಹಣಸಂಪಾದಿಸಿ, ಎಲೆತೋಟಗಳನ್ನು ಮಾಡಿಕೊಂಡು ಮತ್ತು ವ್ಯಾಪಾರ ಸಹಾ ಮಾಡಿಕೊಂಡು ನೆಮ್ಮದಿಯಾಗಿರುವದರಿಂದಲೂ ಮತ್ತು ಮೆರವಣಿಗೆ ಕಾಲದಲ್ಲಿ ಸ್ವಲ್ಪ ಕಣ್ಣಿಗೆ ಅಂದವಾದ ತನವನ್ನು ಮಾಡಿಕೊಂಡು ಹೋಗುತ್ತಾ ಇದ್ದದ್ದರಿಂದಲೂ ಇತರರಲ್ಲಿ ವ್ಯಸನದಿಂದಲೂ ಗರ್ವದಿಂದಲೂ, ಇವರು ತಲೆಯೆತ್ತದಾಗೆ ಮಾಡಬೇಕೆಂತಲೂ ಮತ್ತು ಇವರಜೀವನಾರ ಕೀಳಾಗಿಟ್ಟುಕೊಳ್ಳಬೇಕೆಂತಲೂ ಆಲೋಚಿಸಿಕೊಂಡಿರುವ ಹೊಟ್ಟೆಕಿಚ್ಚೇ ಒಂದು ಊರಿನಲ್ಲಿ ಅನೇಕಜಾತಿಜನರಿರುವಲ್ಲಿ ಒಬ್ಬರಿಗೆಮಾತ್ರ ಪಲ್ಲಕ್ಕಿ ರೋಜುಗಳಲ್ಲಿ ಸ್ವತಂತ್ರವಿರುವದೇನು? ಇವರಿಗೆ ಇಷ್ಟುದಿನ ಇನ್ನೊಬ್ಬರಿಗೆ ಇಲ್ಲವ್ವೇ? ಇಂಥಾ ಕಾನೂನು ಮೈಸೂರ ಗೌರ್ನ್ಮೆಂಟಿನವರಿಂದ ಏರ್ಪಾಡಾಗಿದೆಯೋ? ಅವರು ಊರಿನವರು ಆಯಾಊರಿನಲ್ಲೇ ಇರುವ ಗಲ್ಲಿಕಿ ರೋಜುಗಳಲ್ಲಿ ತಿರುಗಾಡುವದಕ್ಕೂ ಮತ್ತು ತಮ್ಮ ಮಾಮೂಲುಗಳನ್ನು ನಡಿಸುವದಕ್ಕೂ ಪೂರ್ಣಸ್ವತಂತ್ರ ವ್ಯವಸ್ಥೆಯಿದ್ದರೆ ನ್ಯಾಯಕ್ಕೆ ಅನುಮಾನವೇನು? ಪಸ್ತಜಾತಿಗೆ ವಿರೋಧವಾಗಿ ಇತರ ಎಲ್ಲಾ ಹಿಂದೂ ಜಾತಿಗಳು ಎದ್ದಿರುವದಲ್ಲದೆ, ಮುಸಲ್ಮಾನರುಸಹಾ ಹೆಚ್ಚಾದ ಜಾತಿಗಳವರೊಡನೆ ಸೇರಿಕೊಂಡಿದ್ದರೆ ಇದು ಎಷ್ಟಿನ್ಯಾಯ? ತಮ್ಮದಲ್ಲದ ಕಾರ್ಯಗಳಲ್ಲಿ ಕೈಹಾಕುವದಕ್ಕೆ ಇವರಿಗೆ ನ್ಯಾಯ ಎಲ್ಲಿಂದಬಂತು? ಈಗ ಇವರೆಲ್ಲರೂ ಸೇರಿಕೊಂಡು, ಸರ್ಕಾರದವರು ಮಾಡಿದ ಇರುವಂಥ ಪಸ್ತರಿಗೆವಿರೋಧವಾದಂಥ ರೂಲ್ಸುಗಳನ್ನು ದಾಖಿಲಾದರೆ ಅಪ್ರಯೋಜನವೆಂದಿರೆ,—ಹಾಗಾದರೆ ಪಸ್ತರಕೇರಿಗೆ ಹೋಗಲೂ ಅವರಿಗೆ ಸ್ವಾತಂತ್ರ್ಯವಿಲ್ಲದಾಗಬಹುದು ಆಗದು, ಅವರಬೀದಿಗಳನ್ನು ಒಗೆಯಾಕೂಡದು ಇತರಜಾತಿ ಜನಗಳು ಪಸ್ತಕೇರಿಗೆ ಹೋಗಿ ಏನೂ ತೊಂದರೆ ಕೊಡುವುದು ಮತ್ತು ಪಸ್ತರು ಪ್ರತ್ಯೇಕವಾಗಿ ವ್ಯಾಪಾರಕ್ಕಾಗಿ ಹೋದರೆ ಅವರನ್ನು ಹ್ಯಾಗೂ ಒಳಗೆ ಬಿಡಕೂಡದು ಮತ್ತು ಅವರ ತ್ರಿರ ಏನೂ ತೊಂದರೆಕೊಡಕೂಡದು ಇದನ್ನು ಮೀರುವ ಪ್ರತಿ ಇವರಿಗೆ ೮ ಆಣೆ ಜುಲ್ಮಾನೆ ಎಂಬುವದೇ

ಇಂಥಾ ಕಟ್ಟುಗಳನ್ನು ಮಾಡಿಕೊಂಡಿರುವದಲ್ಲದೆ ಎರಡುವಾರಗಳಿಂದ ಸಂತೆಯು ವಿಭಾಗವಾಗಿದೆ ಇತರಜಾತಿಯವರೆಲ್ಲಾ ಸಮುವೆಟ್ಟಿಯಲ್ಲಿ ಸಂತೆ ಮಾಡುತ್ತಾರೆ ಪಸ್ತರುಮಾತ್ರ ಮಹಾಮಾಲ್ಪಕಲ್ಲೇ ಕೂಡುತ್ತಾರೆ ಅಹಾ! ಇಂಥಾಪ್ರಭುಗಳು ಎಲ್ಲಿಯಾದರೂ ಇದ್ದಿತೆ? ಇಂಥಾ ಅನ್ಯಾಯಗಳೆಲ್ಲಾ ನೋಡಿಕೊಂಡು ಮೈಸೂರ ಸರ್ಕಾರದವರು ತೃಪ್ತರಾಗಿರುವರೇ? ಈ ಅನ್ಯಾಯಗಳೆಲ್ಲಾ ಮಾಮೂಲಾಗಿರುವ ಗೊಂದಿಯನ್ನು ವಕ್ಕೀಲರಾದ ಬಳ್ಳಿ ಕೃಷ್ಣರಾಯರೂ ರಘನಾಥರಾವು ಮತ್ತು ಗುಮಾಸ್ತರು ಸರ್ಕಾರದವರಿಂದ ಆಗುವದಿಲ್ಲ ಎಂದು, ಇಲ್ಲಿ ಅಧಿಕಾರಸ್ಥರು ಇದ್ದರೆ, ಅವರು ಎಲ್ಲರಂತೆ ಸಮನಾಗಿ ನಡಿಸುತ್ತಿದ್ದರೆಂದು ಹೇಳಿದ್ದಾರೆ ನೀವೇ ನೋಡಿರಿ ಅವರೆ ಇಲ್ಲಿನ ಅಧಿಕಾರಸ್ಥರು ಪ್ರಜೆಗಳಿಂದ ತಿರಸ್ಕರಿಸಲ್ಪಟ್ಟರು ಎಷ್ಟರಮಟ್ಟಿಗೆ ಅನ್ಯಾಯವಾಗಿದೆ ಇಲ್ಲಿ ಅವರಲ್ಲಿರುವರ ಹುಕ್ಕುಮಿಗಿಂತಲೂ ಒಬ್ಬ ಕಂಟ್ರ್ಯಾಕ್ಟರನ ಅಪ್ಪಣೆಯನ್ನೇ ನಡಿಯುತ್ತದೆ ಇಲ್ಲಿನ ಅಧಿಕಾರಸ್ಥರು ಪ್ರಜೆಗಳಿಗೆ ಒಳಪಟ್ಟು ಅವರ ಅನುಮತಿಗ್ಗ ಕಾರಕರಾಗುತ್ತಿರುವದರಿಂದ ಅವರಿಗೂ ಲಾಭವಾಗಿದೆ, ಒಂದೇ ಕಡೆಕಟ್ಟಿಕೊಂಡೂ ಇದ್ದರೆ ಪ್ರಜೆಗಳಿಂದ ತಿಟ್ಟಿಕೊಳಿಸಲ್ಪಟ್ಟ ಅಧಿಕಾರಸ್ಥರು ಇರುವದರಿಂದ ಅಪ್ರದೇಶಕ್ಕೆ ಹೆಚ್ಚಿಕೆಯೇ ಹೊರತು ಮೇಲು ಉಂಟಾಗಲಾರದೆಂದು ಸ್ಪಷ್ಟವಾಗಿ ಹೇಳಬಹುದು ಪೋಲೀಸಿನವರ ವಿಷಯವಂತೂ ಹೇಳಲೇ ಅವಶ್ಯಕವಿಲ್ಲ ಇಟ್ಟರು ಜಗಳವಾಡುತ್ತಿದ್ದರೆ, ಹೋಗಿ ಬಿಡಿಸು ಅಂದರೆ, ನನಗೆ ಏನಾಗುವದೋ ಎಂದು, ತಪ್ಪಿಸಿಕೊಂಡು ಮನೆಸೇರಿದರೆ ಸಾಕು ಎಂದು ಸಂಧಿಗೊಂದುಗಳು ಹುಡುಕುತ್ತಾರೆ ಪೋಲೀಸಿ ಇನಸ್ಪೆಕ್ಟರೇ ಮೊದಲಾದವರು ಎಲ್ಲಿದ್ದಾರೋ ದೇವರೇಬಲ್ಲ

ಆದರನ್ನು ಕಂಡರೆ, ಅಧೀನದಲ್ಲಿರುವ ಪೋಲೀಸಿನವರಿಗೇನೇ ಭಯವಿಲ್ಲ ಸರ್ಕಾರದ ಕೆಲಸ ಇನ್ನು ಎಷ್ಟರಮಟ್ಟಿಗೆ ನಡೆಯುವದೋ ತಿಳಿದುಕೊಳ್ಳಬಹುದು ಕೆಲವುಮಂದಿ ಪೋಲೀಸಿನವರು ಹೇಳುವದೇನಂದರೆ, ಎಡಮನಿನ ನಾವೂ ಕಾಲತಪ್ಪಿ, ಎನವನಾದ ಕೇಂಕೊಳ್ಳುಕ್ಕೇನೆಸ್ವಾಮಿ ಇವರು ಇಂಥಾ ಹೇಡಿಗಳಾಗಿಯೂ, ನಿರ್ಲಕ್ಷ್ಯಭಾವದಾಗಿಯೂ ಇರುವದಕ್ಕೆ ಕಾರಣವೇನೆಂದು ಕೇಳಿದರೆ, ಮೇಲಿನ ಅಧಿಕಾರಸ್ಥರು ಇಲ್ಲಿ ಇಲ್ಲದ ಕಾರಣ ಕೆಳಗಿನ ಕೆಲಸದವರು ಇಲ್ಲ ಮತ್ತು ಇಲ್ಲಿರುವ ಸರ್ಕಾರದ ಕೆಲಸದವರಿಗೆ ವರ್ಗಾವರ್ಗಿ ಇಲ್ಲದೆ ಒಂದೇ ಸ್ಥಳದಲ್ಲಿರುವವರಿಂದ ಕಾದುಕೊಂಡು ಸರ್ಕಾರದ ಕೆಲಸವೆಂದರೆ, ಬೇಕಾಬಿಟ್ಟಿಯಾಗಿ ನೋಡುತ್ತಾರೆ ಇಂಥ ಅಧಿಕಾರಸ್ಥರನ್ನು ಇಲ್ಲಿ ಇನ್ನೂ ಇರಿಸಿ ದೇಶಕ್ಕೆಲ್ಲಾ ನಷ್ಟವನ್ನು ಮಾಡಬೇಕೆಂದು ನಂಬುತ್ತೇನೆ ಯಾಕೆಂದರೆ ಅಧಿಕಾರಸ್ಥರು ಒಬ್ಬಗಿಲ್ಲದೆ ಇರುವದರಿಂದ ಇಲ್ಲಿನ ಕಲಹ ಆಗಾಗ ಇನ್ನೂ ಹೆಚ್ಚುತ್ತಾ ಬರುವದೆಂಬುವದಕ್ಕೆ ಲೇಶಾಂಶವಾದರೂ ಸಂದೇಹವಿಲ್ಲ ಮತ್ತು ಮೈಸೂರು ಮಹಾಪ್ರಭುಗಳವಲ್ಲ ಮುಖ್ಯ ಅಧಿಕಾರಸ್ಥರು ಇದು ಇಂಥಾ ಸ್ಥಾನಕ್ಕೆ ಯೋಗ್ಯರೆಂದು ನೋಡಿ ಯಾಕೆ ಅಗತ್ಯ ಬಂದು ಮೇಲೆ ಮನ್ನಿಸುವುದಿಲ್ಲವೋ?

ಮತ್ತು ಪೊಲೀಸಿನವರ ಅಧಿಕಾರಕ್ಕೆ ಒಂದುಸರ್ಪ ಬರುವದೂ ಅಪಾಯವೇ ಇನ್ನು ಇಲ್ಲಿನವರಿಗೆ ಏನು ಭಯವಿದ್ದಿತು? ಗಂಡಹೆಂಡಿರು ಜಗಳದಲ್ಲಿ ಕೂಡ ಮೆತ್ತಗಾಯಿತು ಎಂಬ ಗಾದೆಗೆ ಸರಿಯಾಗಿ, ಈ ಗಲಾಟೆಯ ದೆಸೆಯಿಂದ ಅನೇಕರು ತಮ್ಮ ಮನೆಯ ಕೆಲಸಗಳನ್ನು ಸಾಯಂಕಾಲದ ವರೆಗೆ ಬಿಟ್ಟು ಕೆಲಸವಿಲ್ಲದೆ ... ಆ ಕೆಲಸಕ್ಕೆ ಹೋಗಲು ಆಯಾಸಪಟ್ಟು ... ಎಂದು ಬಯಸುತ್ತಿದ್ದಾರೆ ಅವರು ಬಂದರೆ ಮತ್ತು ಅಸಿವಿನ, ಅನೇಕ ಮನೆ ಹಿಡಿಕೊಂಡು ಬಂದು, ಅವರನ್ನು ಕಿತ್ತುಕೊಳ್ಳುವೆನೆಂದು ದೊಡ್ಡ ಮಾತನ್ನು ಹೇಳುತ್ತಾರೆ ಈದಿವಸ ಸಾಯಂಕಾಲ ವಿಷಯೇರಿಗಳು ಬಸ್ತರ ಕೇರಿಯಲ್ಲಿ ಸಂತೆಗಳು ಪ್ರಸಂಗಿಸುತ್ತಿರುವಾಗ ಬಾಗಿಲೋ ಎಂಬತೆ ಇ ೭ ಕಲ್ಲುಗಳು ಅವರ ಪಕ್ಕದಲ್ಲಿ ಹಾಸಿ, ಪಸ್ತರ ಮನೆಗಳಮೇಲೆ ಬಿದ್ದವು ವಿಷಯೇರಿಗಳು ತಪ್ಪಿಸಿಕೊಂಡು ಬಾಗಿಲ ಕೇಳಿದರು ಪ್ರಯಾಸವಾಗಿತ್ತು ಇದನ್ನು ವಿಚಾರಿಸುವವನೇ ಇಲ್ಲ ಇಲ್ಲಿರುವ ಸರ್ಕಾರದ ಅಧಿಕಾರಸ್ಥರಿಂದ ಯಾವವನೇನಾದರೂ ಇಲ್ಲ ಮತ್ತು ಈ ಕಲಹದ ದೆಸೆಯಿಂದ ಕೆಲವು ಸಮಾನುಗಳು ಪ್ರಿಯವಾದವು ಒಂದು ಬುತ್ತಿ ಕ್ರಯಬಾಳುವಂಥದ್ದಕ್ಕೆ ಆಗ ಎರಡರಷ್ಟು ಕೊಡಬೇಕು ಇಲ್ಲದಿದ್ದರೆ, ಸುಮ್ಮನೆ ಮನೆಗೆ ಹೋಗಬಹುದು ಈ ಅನ್ಯಾಯವನ್ನು ಇನ್ಯಾರಪತ್ರಿಕ ಹೇಳಿಕೊಳ್ಳುವದು?

ಈ ಕಲಹವು ಬಲಿಯುವದರೊಳಗಾಗಿ ಮುಂದೆ ಶೀಘ್ರವಾಗಿ ಮಹಾರಾಜಾ ಸರ್ಕಾರದವರು ಆಲೋಚಿಸಿ ನಿಲ್ಲಿಸದೆ, ಹೋದರೆ ಭವಿಷ್ಯದಲ್ಲಿ ಬೆಳೆಯುವ ಕಲಹ ಇಲ್ಲಿಯೂ ತಲೆದೋರಿದರೆಂದು ನಿರೀಕ್ಷಿಸಬೇಕು

ಈ ವಿಚಿತ್ರ ಊರಿನಲ್ಲಿ ಚಿತ್ರಕೃತ್ಯದವರು ಸೇರಿಕೊಂಡು ತಮ್ಮ ಚಿಕ್ಕನುಮಾರ ವಿಗ್ರಹವಾಗ ಮೇಲಿನ ಅಧಿಕಾರಿಗಳು ಬಂದಿದ್ದರೆ ಬಂದಿರುವರೋ ಎಂದು ಬೈದನ್ನುದ ಅಧಿಕಾರಸ್ಥರನ್ನು ಸೇವಿಸಿ, ಪೂಜಿಸಿ ಪುನಃ ಬಂಗಿಸಿ ಪ್ರಜೆಗಳಿಗೆ ಸಮಾಧಾನವನ್ನೂ ಬೆಕ್ಕಿ ಕ್ಷೇಮವನ್ನೂ ಉಂಟುಮಾಡಿ, ಇಲ್ಲಿ ಗ್ರೆಸುಜಾಗಿರುವ ಗೌನ್ಮೆಂಟ್ ಅಧಿಕಾರವನ್ನು ತೋರಿಸಿ ಭಗವಂತನಿಂದ ಹೊಂದುವರೆಂದು ಕುಶಲ ಹಲವಿಂದ ನಿಟ್ಟುಸಿರುಬಿಡುತ್ತಿರುವ

ತಮ್ಮ ಮಾಚಳವಲಿ ನಲ್ಲಿನ

ಗದೆ ಸಪ್ಪಿನ ಪೇ ಗ ಸ.

ಉದಯ್ಯಾ— ಸ್ವಲ್ಪ ಕಾಲಕ್ಕೆ ಮೊದಲು ಜಾಮದಾರನವರು ತನ್ನ ಪತಿಯ ಕಳೆಯನ್ನು ಆಳಿಕೊಂಡ ವಿಧವಾಸ್ತ್ರೀ ಭಾವದಿಂದಿರುವದೆಂದು ಇಲ್ಲಿ ಬಯಲಾಗುವುದರ ಟೀಕುಗಳು ಮತ್ತು ದೃಕ್ಕರಮನೆಗಳನ್ನು ನೋಡಿದವರು ಹೇಳಿಕೊಳ್ಳುತ್ತಿದ್ದರು, ಈಗ ಇದನ್ನು ನೋಡುವವರೆಲ್ಲರೂ ಪತಿಯಾಸಂತೋಷದಿಂದ ಪಶ್ಚಿಮದಿಕ್ಕಿನ ಉಚ್ಚಿನಂತೆ ಸ್ವರ್ಣಪತ್ನಿ, ರಾಜಪತ್ನಿ, ನಾಗರೀಕ ಸಾಂಸರ್ಗಿಕವ್ಯಾಪಾರಗಳಲ್ಲಿ ಅಭಿವೃದ್ಧಿಯನ್ನು ಹೊಂದುತ್ತಲಿದೆಯೆಂದು, ಹೇಳುತ್ತಾರೆ ಇದರೊಳಗೆ ಪೂರ್ವದ ಸ್ಥಿತಿ ಅಮಲ್ದಾರರುಗಳೇ ಮೊದಲಾದ ಇಲ್ಲಿನ ಅಧಿಕಾರಿಗಳು ಸಹಾ ಪ್ರಯಾಸ್ತಿ ನಡಿಸಿದಂಥಾ ಇಂಗ್ಲೀಷ್ ಸ್ಕೂಲನ್ನು ಈಗ ದೈತರು ಕಾಪಾಡಿಸುತ್ತಿದ್ದಾರೆ ವಿವಿಧವರ್ತಮಾನಪತ್ರಿಕೆಗಳನ್ನು ತರಿಸಿ ಓದುತ್ತಲಿದ್ದಾರೆ ಬೂದಿಕೊಳಗಳಲ್ಲಿ ಹುಲ್ಲಿನ ತೋಟಗಳುಗುತ್ತಲೂ ಜನರಲ್ಲಿ ಸರ್ವ ಆಸ್ತಿಗಳು ಹೆಚ್ಚುತ್ತಲೂ ಇದೆ ಈ ಪಟ್ಟಣದ ಸಸ್ಯ ವೈದ್ಯಕೀಯ ಮಂದಿರಗಳಲ್ಲಿ ಶಿಕ್ಷಣವು ಮಾಡುವಂಥ ... ರದಲ್ಲಿ ಭಕ್ತಿ ... ಇನಾಮತಿ ವ್ಯವಸ್ಥೆಯ ಎರಡಂತ ವೈದ್ಯ ಸಾರುತಿದ್ದಲ್ಲಿ ವಿಷಯ ಮಾತ್ರವಿಯೂ ನಡೆಯಲಿಲ್ಲ ಇಲ್ಲಿ ರುವ ಹುಮ್ಮನ ತೋಟಗಳಲ್ಲಿ ಆಗಾಗ್ಯೆ ಸಾಂಸರ್ಗಿಕಜಾಡ್ಯಗಳು ನಡೆಯುತ್ತಲಿವೆ ಲಂಚಕೋರರ ಉಪಾಯಗಳು ನಿಂತುಹೋಗುತ್ತವೆ ಇಷ್ಟರಮಟ್ಟಿಗೆ ತಿದ್ದುಪಾಟಿಗೆ ಬಂದದ್ದು ಹ್ಯಾಗೆ? ಸರ್ವಜನರೂ ಅಮಲ್ದಾರರಾದ ಮೆ|| ಟಿ ಎ ನಿಜಾಮೊದ್ದೀನ್ ಅಲ್ಲೀಖಾನಸಾಹೇಬರೇ ಮೆಚ್ಚುಗೆಯನ್ನು ಹಾಕಿ ನಡಿಸುತ್ತಿದ್ದರೆಂದು. ಆದರಿಗೆ ಮೇಲ್ಪಟ್ಟ ಅಧಿಕಾರಗಳ ಗ್ರಹಿಕೆಗೆ ಒಂದವೆ ಅದರೂ ದುರ್ಭಾಗ್ಯವಾದ ಲೋಕವಿರೋಧಿ ಎಂಬಂತೆ ಕಲವರು ಅವರನ್ನು ವಿರೋಧಿಸಿ ಇವರ ಪ್ರಯತ್ನಗಳನ್ನು ಭಂಗಪಡಿಸುವ ಆಲೋಚನೆಯನ್ನು ಮಾಡುತ್ತಿರುವರು ಈವರ್ತನೆ ಹಿಡಿಯುವಕಾಲದಲ್ಲಿ ಈ ವೈರುಗ್ಯವನ್ನು ಸಾಧಿಸುತ್ತಿದ್ದರು ಇತ್ತಕಡೆ ಅಮಲ್ದಾರರಿಗೂ ಅತ್ತಕಡೆ ಕೆಲ್ಲಾಸೂದರಿಂಟೆಂಡೆಂಟರಾದ ಮೆ|| ಶಾಮೈಯ್ಯಂಗಾರರಿಗೂ ಆಗದವರು ಹ್ಯಾಗಾದರೂ ಆನೆಸಿಕ್ಕದಂತೆಮಾಡಿ ಉಭಯತ್ರರಿಗೂ ಅಪಕೀರ್ತಿಯನ್ನುಂಟುಮಾಡಬೇಕೆಂದು, ಎರಡುಮೂರು ಮರ್ತಿಕೆಗಳ್ಳ ಬಳಿಗೆ ನುಗ್ಗುವದಕ್ಕೆ ಬಂದಂಥಾ ಆನೆಗಳನ್ನು ಊರಿನಿಂದ ಓಡಿಸಿಬಿಟ್ಟರು ಆದರಿಂದ ಕಾಕತೀ ಆನೆಗಳನ್ನು ಹಿಡಿವದ್ದು ಬಹುಕಷ್ಟಸಾಧ್ಯವಾಗಿತ್ತು ಈ ವಿಷಯದಲ್ಲಿ ನಂಬಿಕೆಯುಳ್ಳವರಾಗಿದ್ದ ತಮ್ಮಶಕ್ತಿ ಯುಕ್ತಿಗಳಿಂದ ಸಹಾಯಮಾಡಿದ ಕಿವಿಮಾರರುಗಳನ್ನೂ ಜನಗಳನ್ನೂ ಕರೆಸಿ, ಇಲ್ಲಿಯ ಹುವ್ವಿನತೋಟದಲ್ಲಿ ಒಂದು ಸಭೆ ಸೇರಿಸಿ ಗಂಧ ಹುಷ್ಪ ಮೊದಲಾದವುಗಳನ್ನಿತ್ತಿಸಿ, ಅಮಲ್ದಾರರು ತಮ್ಮ ಕೃತಜ್ಞತೆಯನ್ನು ತೋರಿಸಿದರು ಜನಾಪರಲ್ಲಿ ಪ್ರಮುಖರಿಗೆ ಒಂದು ಕಲಾಬತ್ತುರುಮಾಲು ಅಂಗಿ ಮೊದಲಾದವುಗಳನ್ನು ಇನಾಂ ಕೊಟ್ಟರು ಇದೇತಿಂಗಳು ೧೫ ನೇ ತಾರೀಖು ಶುಕ್ರವಾರದ ಸಾಯಂಕಾಲ ೬ ಘಂಟೆಗೆ ಇಲ್ಲಿಯ ಸರಕಾರದ ನೌಕರರೂ ಇತರರೂ ಸಭೇಸಮೇತವಾಗಿ ಬಂದು ಅಮಲ್ದಾರರನ್ನು ಕರೆದು ... ಹೋಗಿ ಬಾಣಸವಾಡಿರ ದೇವಸ್ಥಾನದ ಮುಂದಿನ ತೋಟದಲ್ಲಿ ಸಭೆಮಾಡಿದರು ಅಗ್ರಭಾಗದಲ್ಲಿ ಕೂರಿಸಿ, ಹುಷ್ಪ ಗಂಧ ತಾಂಬೂಲಾದಿಗಳನ್ನು ಸಮರ್ಪಿಸಿ, ಈ ವಂಗೆ ಇಷ್ಟು ಸುಗುಣಶೀಲ ... ವೈವರ ಹಿತವನ್ನು ಕೋರುವರೂ ಆದ ಇನ್ನೊಂದು ಅಮಲ್ದಾರರು ನಮಗೆ ಲಭ್ಯವಾಗಲಿಲ್ಲವೆಂತಲೂ ... ಇಲ್ಲಿನ ಪ್ರಥಮಭಾಗದಲ್ಲಿ ಈ ವಿಲುವಿಕೆ ನಮ್ಮಲ್ಲಿ ಬಿಟ್ಟಿರಲಿಲ್ಲವೆಂದೂ ತಮ್ಮ ಉದಕಾರಗಳಿಗೆಲ್ಲಾ ನಾವು ಕೃತಜ್ಞರಾಗಿದ್ದೇವೆಂದೂ ಸೂಚಿಸುವ ಒಂದು ವಂದನಾಪತ್ರಿಕೆಯನ್ನು ಓದಿ, ಅದನ್ನು ಅಮಲ್ದಾರರಿಗೆ ಒಪ್ಪಿಸಿದರು ... ಕೆಲವರು ಸ್ವಲ್ಪ ಕಾಲಕ್ಕೆ ಮುಂಚೆ ಬಾಮದಾರರುಗಳವು ಇದ್ದಸ್ಥಿತಿಯನ್ನು ನೋಡಿದರೆ ಅದಕ್ಕೂ ಅದಾವಸರಿಗೂ ಸಹ ... ಈಗ ಅದು ಹೊಂದುತ್ತಿರುವ ತಿದ್ದುಪಾಟುಗಳನ್ನು ನೋಡಿದರೆ ಹೇರಳಿತಕ್ಕ ಸ್ಥಳವಾಗುವದಕ್ಕೆ ಆರಂಭವಾಗಿದೆ ಎಂದು ಹೇಳಿದರು ಸಭೆ ಬರಖಾಸ್ತಾಯಿತು ಅವರ ಹೇಳುವವರಮಾತನ್ನು ಕೇಳಿ ಇಲ್ಲಿನ ಅಮಲ್ದಾರರನ್ನು ದೂಷಿಸಿದ ಬೇರೇ ಪತ್ರಿಕಾಕರ್ತರು ಈಗ ಏನು ಹೇಳುವರು? ಶಿವದ ದೂಷಿಸಿದ್ದಕ್ಕೆ ಪಶ್ಚಾತ್ತಾಪ ಪಡಬೇಕಿಲ್ಲವೆ?

ಯಥಾರ್ಥವಾದಿ

ಉಯಸ್ಸ್ಯಾ—ಬಹುಕಾಲದಿಂದ ನನ್ನ ಪ್ರೀತ್ಯಕ್ಕೆ ಉದದೇಶಿಗಳಾಗಿದ್ದ ನಮಗೆಲ್ಲಾ ರಕ್ಷಕನ ವಿಷಯವಾಗಿ ಸದುಪಮಾನಸರವಾಗಿ ಶೋಧಿಸುತ್ತಾ ಇದ್ದ, ಮಹಾಸ್ತೋಮದ ಆರ್ ಡಿ ಜೋನೆಲ್ ಅಯ್ಯನವರು, ತಮ್ಮ ದಿವ್ಯಪ್ರಮಾಣತ್ತ ಚಿತ್ತತ್ತಗೆಡತ್ತಂತೆ, ಮುಂದಿರುವಂತೆ ಕೆಲವುಂದ ತಮ್ಮ ಭವಿಷ್ಯವನ್ನು ಮೊದಲೇ ಸೂಚಿಸುತ್ತಿದ್ದ ಈ ಸೆಪ್ಟಂಬರ ೩ ನೇ ತಾರೀಖು ಭಾನುವಾರ ಮಧ್ಯಾಹ್ನ ೨ ಘಂಟೆಯ ಸಮಯದಲ್ಲಿ ಇಹಲೋಕವಂ ಬಿಟ್ಟರೆಂಬದನ್ನು ಸೂಚಿಸುವದಕ್ಕೆ ಬಹು ವ್ಯಸನಪಡುತ್ತೇನೆ ಇವರು ಬಾಲ ವೃದ್ಧರಲ್ಲಿಯೂ, ಹೆಂಗಸರು ಮಕ್ಕಳು ರೋಗಿಗಳು ಮುಂತಾದವರೆಲ್ಲರಲ್ಲಿಯೂ, ಉಪದೇಶಕರೆಂದು ಸಮಬಗೆಯದ, ಒಂದೇ ವಿಧವಾದ ವಿಶ್ವಾಸವನ್ನಿಟ್ಟು ಬೋಧಿಸುತ್ತಾ ಬುದ್ಧಿವಾದಗಳನ್ನರುಹುತ್ತಾ ತಮ್ಮ ನಿರ್ಮಲ ತಾತ್ಪರ್ಯವನ್ನು ಬಲಿತ್ತರಕ್ಕಿಲ್ಲದೆ ತಮ್ಮ ಅಂತರ್ಗತವರವೇಶ್ವರನ ಸೃಷ್ಟಿಗಾಗಿಯೇ ಕಲ್ಪಿತವಾದ ಕಾಲವಿದೆಂದು ಸಹಸಿಟಾಟಿ ಕೊಟ್ಟಿದ ನಡಿಸುತ್ತಿದ್ದರು ಇವರ ಸಂಗನಶ್ಯಕ್ಕೆ ತಕ್ಕಂತೆಯೇ ಭಗವದನುಗ್ರಹವು ಇವರಲ್ಲಿ ಮೂರ್ತಿಕರಿಸಿ ಸರ್ವವಿಧದಲ್ಲಿಯೂ ಅವರಿಗೆ ಅನುಕೂಲತೆಯನ್ನು ಕಲ್ಪಿಸಿತ್ತು ಇವರೊಡನೆ ೭ ೩ ಬಂದವರು ಚಾಮಿಲಿ ಮುಲಗಿ, ಮಿಸ್ಟರ ಮಾರುಮನ್ಸ್ಪುರವರ ಬಿಷಪ್ ಸಹ್ಯಸ್ಥಲದಲ್ಲಿದ್ದರು, (ಆವಿಂತಿಯು ಅಷ್ಟು ಜೋರಾಗಿಲ್ಲವೆ ಸುಮಾರಾಗಿದ್ದರೂ) .. ತಾವೇನೋ ಮರಣ ಉಳಿಯುವದಿಲ್ಲವೆಂದು " ಖಚಿತವಾಗಿ ತಿಳಿದುಕೊಂಡು, ತಮಗೆ ಅತ್ಯಂತ ಪರಿಚಿತರಾಗಿಯೂ, ವಿಶ್ವಾಸಭಾಜರಾಗಿಯೂ ಇರುವ ಸ್ನೇಹಿತರನ್ನೆಲ್ಲಾ ಗ್ರಾಮಾಂತ್ರಗಳಿಂದ ಸಹ ಕರೆಕಳುಹಿಸಿ, ಸರ್ವರೊಂದಿಗೂ ನನಗೆ ಅಪ್ಪಣೆಯನ್ನು ಕೊಡಿರಿ; ನಾನು ನನ್ನ ತಂದೆಯಬಳಿಗೆ ಹೋಗಿ ಅಲ್ಲಿ ನಿಮಗಾಗಿ ಸಿದ್ಧವಿರುವ ಸ್ಥಳವನ್ನು ನಿರ್ಮಾ ನನ್ನಂತೆಯೇ ಕರ್ತನಲ್ಲಿ ವಿಶ್ವಾಸವಿಟ್ಟು ನನ್ನನ್ನು ಹಿಂಬಾಲಿಸಿರಿ; ನಾಶವಾಗುವ ಈ ಜಗತ್ತಿನ ಆಶೆಯಲ್ಲಿ ಸಿಗ್ಗದೆ, ಬಹುಕಾಲ ಆನಂದಪಡುತ್ತಿರುವ ಜಗತ್ಪತಿಯ ದಿವ್ಯ ಕರುಣೆಗೆ ಭಾಗಿಗಳಾಗಿರಿ ಯೆಂದು ಮುಂದಾಗಿ ಪ್ರಾಣೋತ್ಕ್ರಮಣಾವ ಮಟ್ಟಿಗೂ ಬೋಧಿಸುತ್ತಲೇ ಇದ್ದು, ಕೊನೆಗೆ ಹಾಸ್ಪಿಟಲ್ ಅಸಿಸ್ಟೆಂಟರವರ ಕೈ ಹಿಡಿದುಕೊಂಡು .. ಉಯಸ್ಸ್ಯಾ! ನಾನೇನೋ ಆನಂದವಾಗಿ ತಂದೆಯಬಳಿಗೆ ಹೋಗುತ್ತೇನೆ; ನೀವೆಲ್ಲರೂ ನನ್ನನ್ನು ಹಿಂಬಾಲಿಸಿರಿ" ಯೆಂದುಹೇಳಿ, ಪ್ರಾರ್ಥಿಸುತ್ತಲೇ ಅಸ್ತಿರವಾದ ಕಳೇಬರವನ್ನು ಬಿಟ್ಟುಬಿಟ್ಟರು ಅಹಾ! ಇವರಂತೆ ಭವಿಷ್ಯವನ್ನು ಸೂಚಿಸಿ ಈ ವೇದಿತಲು ... ತಿಂಗಳ ... ಪತನಾಗಿವೆ ತನ್ನ ಸಮಾಧಿಯನ್ನು ... ಸ್ಥಳವನ್ನು ತೋರಿಸಿ ಸೂಚಿಸುವದುಂಟೆ? ... ಗೇ ಆನಂದವಾಗಿ ಕಾಲವನ್ನು ಕಳೆದವರುಂಟೇ? ಉಯಸ್ಸ್ಯಾ! ಈ ಮಹನೀಯರ ಕುಟುಂಬವು ಬಹು ದೊಡ್ಡದಾಗಿದ್ದು ಚಿಕ್ಕಚಿಕ್ಕ ಮಕ್ಕಳುಗಳನ್ನು ತಮ್ಮ ಸಹೋದರರಾದ ಮಿಷನರಿಗಳ ಕೈಯಲ್ಲಿ ಒಪ್ಪಿಸಿ ತಾವು ವಿಶ್ರಾಂತಿಯನ್ನು ಹೊಂದಿರುವರು ಇಂಥಾ ಪರೋಪಕಾರಿಗಳೂ, ದೇವಭಕ್ತರೂ, ನಿಸ್ಪೃಹರೂ, ಮಹಾಧೀರರೂ, ದಯಾರ್ದ್ರ ಪರಿಶುದ್ಧ ಹೃದಯರೂ ಸಿಕ್ಕುವದು ದುರ್ಲಭವೇ! " ಮಾಡಿದ ಮಾನವನೇ ಸಾಕ್ಷಿ " ಎಂಬ ಗಾದೆಗನುಗುಣವಾಗಿ, ಇವರ ನಿರ್ಯಾಣವು ಬಹು ವಿಚಿತ್ರವಾದದ್ದಾಗಿದೆ ಇವರು ತಮ್ಮ ಸ್ನೇಹಿತರೆಲ್ಲರಲ್ಲಿಯೂ ಪ್ರತ್ಯೇಕವಾಗಿ ೫ ೬ ತಿಂಗಳಿಂದಲೂ ತಮ್ಮ ಪರಲೋಕಗಮನವನ್ನು ಸೂಚಿಸುತ್ತಲೇ ಇದ್ದರು ಅವರ್ಯಾರಿಗೂ ಆಗ ತಿಳಿಯದೆ ಈಗ ಸ್ಮೃತಿಗೆ ಬಂದಿದೆ

ಇಂಥಾ ಮಹನೀಯರನ್ನು ಯೋಗ್ಯವಾದ ರೀತಿಯಿಂದ ನಡಿಸಿದ ವಿಧರವರೇ ಇವರ ಕುಟುಂಬವನ್ನೆಲ್ಲಾ ಚೆನ್ನಾಗಿ ಪಾಲಿಸಿ, ಇವರ ಮಕ್ಕಳ ವಿದ್ಯಾಭ್ಯಾಸಾದಿಗಳಿಗೆ ಸಹಾಯಕರಾಗುವರೆಂದು ನಂಬಿ ಪ್ರಾರ್ಥಿಸುವ

| ತಂಜೇಶರೆಯ ಪತ್ರಿಕಾ ಗ್ರಾಹಕರಲ್ಲಿ ಒಬ್ಬವನು

ಶಾಲಿವಾಹನಶಕ ೧೮೧೫ ನೇ ವಿಜಯನಾಮ ಸಂವತ್ಸರದ ಭಾದ್ರಪದ ಬಹುಳ ತದಿಗೆ ಗುರುವಾರದಿಂದ ಭಾದ್ರಪದ ಬಹುಳ ನವಮಿ ಬುಧವಾರದ ವರೆಗಿನ ವಾರದ ಪಂಚಾಂಗ.

೧೮೯೩ ನೇ ಇಸವಿ, ಸೆಪ್ಟಂಬರ ಮತ್ತು ಅಕ್ಟೋಬರ

ತಾ.	ವಾರ.	ತಿಥಿ	ಘಳಿಗೆ.	ನಕ್ಷತ್ರ.	ಘಳಿಗೆ	ಹಿಂದಿ ಮಾಸ ತೇದಿ.
28	ಗು	ತ	47 02	ಽ	13 13	11
29	ಶು	ಚ	2-41	ಧ	10 8	1
30	ಶ	ಪ	26 ..	ಶ	6-27	16
ಅಕ್ಟೋ 1	ರ *	ಷ	21-37	ಪೂ	2-24	17
2	ಸೋ †	ಸ	14-..	ಉ	53-50	18
3	ಮಂ ‡	ಅ	8-01	ಠ	50-7	19
4	ಬು	ನ	5-15	ಅ	47-30	20

* ಮಹಾಲಯಾರಂಭ † ಮಧ್ಯಾಷ್ಟಮಿ.
‡ ಅವಿಧವಾನವಮಿ.

ಪೇಟೆ ಧಾರಣೆ.

ದಿನಸಿ	ಮೈಸೂರು	ಬೆಂಗಳೂರು.
	ರೂ. ಆ. ಪೈ.	ರೂ ಆ ಪೈ
ಭತ್ತೀ ಅಕ್ಕಿ ಪಲ್ಲ ೧ಕ್ಕೆ	೧೪-೦-೦	೧೧-೪-೦
ಕೆಂಬತ್ತಿ ಅಕ್ಕಿ ಅವ್ವಲ್	೧೪-೦-೦	೧೦-೧೨-೦
ದಿಟೀ ಅಕ್ಕಿ ದುಯಂ	೧೨-೮-೦	೧೦-೪-೦
ಜಾಪದಾಳೆ ಅಕ್ಕಿ	೧೨-೦-೦	೧೦-೮-೦
ಸಂಣಕ್ಕಿ ಅವ್ವಲ್	೧೭-೦-೦	೧೪-೦-೦
ದಿಟೀ ಅಕ್ಕಿ ದುಯಂ	೧೪-೮-೦	೧೧-೮-೦
ತೊಗರೀಬೇಳೆ ಪಲ್ಲ ೧ ಕ್ಕೆ	೧೬-೮-೦	೧೨-೦-೦
ದಿಟೀ ದುಯಂ ತರಪ	೧೪-೦-೦	೧೧-೮-೦
ಹೈಗರಾಗಿ ಪಲ್ಲ ೧ಕ್ಕೆ	೫-೦-೦	೧೨-೦-೦
ಕಾರಾಗಿ	೪-೮-೦	೩೨-೦-೦
ಹುರುಳಿ ಪಲ್ಲ ೧ಕ್ಕೆ	೧೦-೮-೦	೯-೧೨-೦
ಬೇಳೆ ಅವರೆ	೧೨-೮-೦	೧೧-೮-೦
ಹೆಸರು	೧೧-೦-೦	೯-೧೧-೦
ಉದ್ದು	೧೨-೯-೦	೧೧-೭-೦
ಕಡಲೆ	೧೦-೦-೦	೧೦-೦-೦
ಎಳ್ಳು	೧೨-೮-೦	೯-೦-೦
ಹುರುಳಿ	೭-೧೨-೦	೬-೬-೦
ಸೀಮೇಕಾಯಿ ಮಣ ೧ಕ್ಕೆ	೧-೧೨-೦	೧-೧೫-೦
ಮೆಣಸಿನಕಾಯಿ	೩-೧೨-೦	೪-೨-೦
ದುಯಂ ತರಪ	೩-೮-೦	೩-೧೨-೦
ಚಿಪ್ಪಿ ದೊಡ್ಡ ಬೆಲ್ಲ ೧೦೦ ಕ್ಕೆ	೫-೦-೦	ಪು ೧-೧೫-೦
ಸಣ್ಣ ಬೆಲ್ಲ	೪-೮-೦	ಪ || ೧-೧೧-೦
ಒಣ್ಣೆ ಮಣ ೧ಕ್ಕೆ	೪-೦-೦	೪-೮-೦
ಸರಳೆಣ್ಣೆ	೪-೦-೦	೩-೧೫-೦
ಕೊತ್ತುಂಬರಿ ಪಲ್ಲ ೧ಕ್ಕೆ	೬-೦-೦	೬-೧೨-೦
ಉಪ್ಪು	೧೦-೦-೦	೯-೧೨-೦
ಹೊಸೆಣ್ಣೆ ಮಣ ೧ಕ್ಕೆ	೧-೧೨-೦	೧-೧೨-೦
ಹಳೇ ಹುಣಸೇಹಣ್ಣು	೧-೮-೦	೧-೧೦-೦
ತುಪ್ಪ	೧೩-೦-೦	೧೨-೦-೦
ಸೀಮೆ ಯಂಣೆ ಟಿನ್ ೧ ಕ್ಕೆ	೨-೨-೦	೩-೧೫-೦
ತೆಂಗಿನಕಾಯಿ ೧೦೦ ಕ್ಕೆ	೫-೦-೦	೪-೦-೦
ಚಿನ್ನ (ತೊಲ)		
ಕೆಂಪು	೧೬-೧೧-೦	೧೬-೬-೦
ಪಸಿರು	೧೩-೦-೦	೧೬-೧೧-೦
ಗಟ್ಟಿ	೨೮-೦-೦	೨೬-೨-೦

Mysore.—Printed and published for the Proprietor at the Wesleyan Mission Press.
28/9/93.

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತ:ಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು

ಸಂಪುಟ ೭ — ಮೈಸೂರು—ಸ ೧೮೯೩ ನೇ ಇಸವಿ ಅಕ್ಟೋಬರ್ ತಾರೀಖು ೫ ನೇ ಗುರುವಾರ. — ಸಂಚಿಕೆ ೧೭

ನೋಟಿಸ್.

		ಕ್ರಯ			ಹಾಸಲು ಸಹಿತವಾಗಿ	
Campbell's. ಕನ್ನಡ ವ್ಯಾಕರಣ ಸಾರ	೦	೨	೦	೦	೨	೬
Object Lessons. ವಸ್ತು ಪಾಠಗಳು	೦	೧	೯	೦	೧	೬
Picture do ಚಿತ್ರಗಳು ಸಹಿತವಾಗಿ	೦	೨	೦	೦	೨	೬
School Geography ಭೂಗೋಳ ಶಾಸ್ತ್ರಸಾರ	೦	೬	೦	೦	೭	೦

ಈ ನಾಲ್ಕು ಪುಸ್ತಕಗಳು ಮೈಸೂರು ಸರ್ಕಾರದವರ ಅಪ್ಪಣೆ ಪ್ರಕಾರ ಸಕಲ ಪಾಠಶಾಲೆಗಳಲ್ಲಿಯೂ ಉಪಯೋಗಿಸತಕ್ಕವುಗಳು.

ಮಾರ್ಟಿನ್‌ಲೂತರ್ ಎಂಬವರ ಚರಿತ್ರೆ	೦	೧	೬	೦	೨	೦
ಸ್ತ್ರೀಯರು ಓದತಕ್ಕ ಪುಸ್ತಕ	೦	೫	೦	೦	೫	೬
ಗಣಿತ ಮಗ್ಗಿಗಳು	೦	೧	೦	೦	೧	೬
ಸಂಸ್ಕೃತ ಕರ್ನಾಟಕ ಭಾಷಾಮಂಜರಿ	೦	೨	೦	೦	೨	೬
ಇಂಗ್ಲೀಷೂ ಕನ್ನಡವೂ ಶಬ್ದಾವಳಿ ೧ನೇ ೨ನೇ ಭಾಗಗಳ್ಕೆ	೦	೧	೦	೦	೧	೬
ಕಾವ್ಯಮಾಲೆ (Minor Poetical Anthology)	೦	೮	೦	೦	೮	೬
ಬಾಲವ್ಯಾಕರಣ	೦	೫	೦	೦	೫	೬
ಹಳಗನ್ನಡ ವ್ಯಾಕರಣ ಸೂತ್ರಗಳು	೦	೬	೦	೦	೬	೬
ಇಂಗ್ಲೀಷೂ ಕನ್ನಡವೂ ಸಂಭಾಷಣಾ ವಾಕ್ಯಗಳು	೦	೧೦	೦	೦	೧೦	೬
ಶಬ್ದಮಣಿ ದರ್ಪಣ	೧	೬	೦	೧	೪	೬
Kan. Eng. Pocket Dictionary	೧	೪	೦	೧	೫	೭
Eng. Kan. School Dictionary	೨	೧೦	೦	೨	೧೨	೬
ಬಳ್ಳೀ ತಾಯಿ	೦	೪	೪	೦	೪	೬
ಆತ್ಮಿಕ ದಿವ್ಯ ಯುದ್ಧ (Bunyan)	೦	೧೨	೦	೦	೧೩	೬
ಕ್ರೈಸ್ತಪದ್ಧತಿ ೧ ನೇ ಭಾಗ ೨ ಆಣೆ ೩ನೇ ಭಾಗ	೦	೧	೬	೦	೨	೦
ಭಕ್ತಿಸಾರ	೦	೧	೦	೦	೧	೬
ಸತ್ಯ ವಾಗ್ದಾನ	೦	೧	೦	೦	೧	೬

ಈ ಪುಸ್ತಕಗಳೂ ಇನ್ನೂ ಅನೇಕ ಪ್ರಯೋಜನಕರವಾದ ಪುಸ್ತಕಗಳೂ ಕೆಳಗೆ ನಮೂದಿಸಿರುವ ಸ್ಥಳಗಳಲ್ಲಿ ದೊರೆಯುತ್ತವೆ.

ಬೆಂಗಳೂರು—ಪೇಟೆಗಾಟಿನ ಸತ್ರವಿರುವ ಪುಸ್ತಕಶಾಲೆ.

ಚಿಕ್ಕಬಳ್ಳಾಪುರ—ಲಂಡನ್‌ಮಿಷನ್ ರೀಡಿಂಗ್ ರೂಮ್.

ತುಮಕೂರು—ವೆಸ್ಲೀಯನ್ ಮಿಷನ್ ಬಂಗಲೆ. ಮೈಸೂರು—ವೆಸ್ಲೀಯನ್ ಮಿಷನ್ ಪ್ರೆಸ್.

ನೋಟಿಸ್

ಪುಸ್ತಕಗಳು	ಕ್ರಯ.
ಪ್ರಾರ್ಥನಾಪ್ರವಾಲಿಕೆ	1—6—0
ಕನ್ನಡ ಇಂಗ್ಲೀಷು ನಿಘಂಟು । ನೇ ದೊಡ್ಡ ತರಹ	3—0—0
,, ,, 2 ನೇ ತರಹ	2—8—0
ಬಾಲಕರು ಓದುವ ಎರಡನೆ ಜ್ಞಾನೋಪದೇಶದ ಪ್ರಶ್ನೋತ್ತರಗಳು	0—1—0
ಸಭೆಯ ನಿಯಮಗಳನ್ನು ಕುರಿತದ್ದು	0—0—6
ಕಥಾ ಸಂಗ್ರಹ 1 ನೇ ಭಾಗದಿಂದ 3 ವರೆಗೆ	1—0—0
ಕಥಾ ಸಂಗ್ರಹ 4 ರಿಂದ 6 ನೇ ಭಾಗ ಹೊಸ ಭಾಷೆ	1—0—0
,, ,, ದೊಡ್ಡ ತರಹ	1—8—0
ಬೋಧಕ ಸಕ್ತಿ ಬೋಧಿನಿ	0—1—0
ಸತ್ಯವೇದವನ್ನು ಕುರಿತು 2 ನೇ ಭಾಗ	0—4—0
ಪ್ರಸಂಗಿಯ ದರ್ಪಣ	0—0—6
ಇಂಗ್ಲೀಷು ಭಾಷೆಯಲ್ಲಿಯೂ, ಕನ್ನಡ ಭಾಷೆಯಲ್ಲಿಯೂ, ಶಬ್ದಗಳ ವಿಭಾಗಗಳನ್ನು ವಿವರಿಸುವ ನಿಘಂಟು	0—2—0
ಕನ್ನಡ ವ್ಯಾಕರಣ (ಇಂಗ್ಲೀಷಿನಲ್ಲಿ)	2—0—0
ಹಿಂದುಸ್ಥಾನಿ ವ್ಯಾಕರಣ	1—0—0
ಬಾಲರಿಗೆ ಸೋಪಾನವು	0-12—0
ದನಕರುಗಳ ಉಪಚಾರೋಗವಿಚಾರ	0- 0—6
ಕ್ರೈಸ್ತರ ಬೋಧನೆಗಳ ಸಾರಾಂಶವು	0-12—0

ಮೇಲೆ ನಮೂದಿಸಿರುವ ಪುಸ್ತಕಗಳನ್ನು ಅಪೇಕ್ಷಿಸುವವರು ಮೈಸೂರು ವೆಸ್ಲೀಯನ್ ಮಿಷನ್ ಪ್ರೆಸ್ಸಿಗೆ ಬರೆದು ತರಿಸಿಕೊಳ್ಳಬಹುದು. ಅಂಚೆ ಹಾಸಲು ಏರೆ ಕೊಡಬೇಕು.

ವೆಸ್ಲೀಯನ್ ಮಿಷನ್ ಪ್ರೆಸ್,

ಮೈಸೂರು.

ಪ್ರಸಿದ್ಧ ಪತ್ರಿಕೆ

ಕಂ॥ ಸಕಲಸುಮನಸರಿಗಾನಂದ | ಸುಕರದಿ ಪ್ರಚುರಮಾದ

ಚಾತುರ್ಯವಾದಿಂ ॥ ಪ್ರಕಟಿಸದಭಾರತಕಥೆ |

ವಿಕಸಿಪುದೆಂದಿದ ಕೇಳ್ವುದೆಲ್ಲನಂದಂ ॥

ಕನ್ನಡ ಮಹಾಭಾರತ.

"ಶ್ರೀಕೃಷ್ಣರಾಜ ವಾಣೀವಿಲಾಸ" ಎಂಬ ಕನ್ನಡ ಮಹಾಭಾರತವು ನಮ್ಮ ಸ್ವಕೀಯ ಪ್ರಚುರಮುಂಡೇಶ್ವರಿ ಪ್ರೆಸಿನಲ್ಲಿ ಪ್ರಕಟವಾಗುವದು ಯಲ್ಲರಿಗೂ ವಿಶದವಾಗಿರುವುದು. ಈಗ ಹದಿನೆಂಟು ಪರ್ವಗಳೂ ಪೂರ್ತಿಯಾಗಿ ಪ್ರಚುರಸಿದ್ಧ ಅಪೇಕ್ಷಿಸುವವರು ಕೆಳಗೆ ವಿವರಿಸುವ ಕ್ರಯದಮೇಲೆ ಕ್ರಯ ಪಾವತಿಮಾಡಿ ಪಡೆಯಬಹುದು.

ಆದಿಪರ್ವ ರೂ ೩, ಸಭಾಪರ್ವ ೧-೬-೦, ಅರಣ್ಯಪರ್ವ . ವಿರಾಟಪರ್ವ ಪ್ರತಿಪ್ರತಿಗೆ ೨ ಆಣೆ, ಡಿಟ್ಟೊ ಶಿಕ್ಷಾದಿನ ಫಲಿಸ್ಥಿಗೆ ೧ ರೂ, ಉದ್ಯೋಗಪರ್ವ. ಭೀಷ್ಮಪರ್ವ ೨ ದ್ರೋಣಪರ್ವ ೨-೮-೦, ಕರ್ಣಪರ್ವ ಶಲ್ಯಪರ್ವ ೧-೨-೦ ಸೌಪ್ತಿಕಪರ್ವ ೬ ಆಣೆ, ಸ್ತ್ರೀಪರ್ವ ೬ ಆಣೆ, ಶಾಂತಿಪರ್ವ ರಾಜಧರ್ಮ ೨-೬-೦, ಆಪದ್ಧರ್ಮ ೮ ಆ, ಮೋಕ್ಷಧರ್ಮ ೨-೬-೦, ಅನುಶಾಸನಿಕಪರ್ವ ೩-೧೨-೦ ಅಶ್ವಮೇಧಿಕಪರ್ವ ೧-೧೨-೦, ಆಶ್ರಮವಾಸಿಕಪರ್ವ—ಮೌಸಲಪರ್ವ—ಮಹಾಪ್ರಸ್ಥಾನಪರ್ವ—ಸ್ವರ್ಗಾರೋಹಣಪರ್ವ ೧೦ ಆಣೆ, ಭಗವದ್ಗೀತ ೮ ಆಣೆ, ಯುಧಿಷ್ಠಿರನ ಚರಿತ್ರೆ ೪ ಆ, ಹರಿವಂಶಸಾರ ೬ ಪೈ, ಲೋಕೋಪಕಾರ ಚಿಕಿತ್ಸೆಯ ನೋಟ್ಸು ೮ ಆಣೆ

ಅರಣ್ಯಪರ್ವ, ಉದ್ಯೋಗಪರ್ವ, ಕರ್ಣಪರ್ವ ಈ ಮೂರು ಪರ್ವಗಳು ಗೌರ್ನಮೆಂಟ್ ಬುಕ್‌ಡಿಪೋವಿನಲ್ಲಿ ದೊರೆಯುವಹದು ಮೇಲೆ ಹೇಳಲ್ಪಟ್ಟಿರುವ ಪುಸ್ತಕಗಳು ನಮ್ಮಲ್ಲಿ ಸ್ವಲ್ಪವೇ ಇರುವದರಿಂದ ಬೇಗ್ರತೆಯಾಗಿ ತರಿಸಿಕೊಳ್ಳಬಹುದು.

ಶ್ರೀಮನ್ಮಹಾರಾಜರವರಿಗೆ ಫಲಪುಷ್ಪ ಸರಬರಾಯಿ ಮಾಡುವದಕ್ಕೆ ಮುಖ್ಯವಾಗಿ ನೇಮಿಸಲ್ಪಟ್ಟ.

ಎಂ. ರಾಮಪ್ಪ, ಅಂಡ್‌ಸನ್,

ಪ್ರೊಪ್ರೈಟರ್ಸ್, ಪ್ರಚುರಮುಂಡೇಶ್ವರಿ ಪ್ರೆಸ್,

ಲಾಲ್—ಬಾಗ್ ರೋಡ್, ಬೆಂಗಳೂರು

ಸ ೧೮೮೯ ರಲ್ಲಿ ಸ್ಥಾಪಿಸಲ್ಪಟ್ಟದ್ದು.

ಕನರಾ ಅಂಡ್ ಮೈಸೂರ ಟ್ರೇಡಿಂಗ ಏಜನ್ಸೀ ಆಫೀಸ್, ಮುಂಬಯಿ.

ಇವರು ತಯಾರಿಸಿರುವಂಥ—

ದ್ಯುಮಧಾತ್ರೀತೈಲ.

ಕಳೆದ ಜನವರಿ ತಿಂಗಳೊಂದರಲ್ಲಿ ೪,೧೦೦ ಬಾಟ್ಲಿಗಳು ಖರ್ಚಾದವು. ಈ ತೈಲದ ಮಹತ್ವವನ್ನು ಕುರಿತು, ಈಹೀಗ ಹೆಚ್ಚಿಗೆ ವರ್ಣಿಸಲಪೇಕ್ಷೆ—ಯಾಕೆಂದರೆ, ಯಾರು ಈ ತೈಲವನ್ನು ಉಪಯೋಗಿಸುತ್ತಾರೋ ಅವರಿಗೆ ಒಂದೆರಡು ದಿವಸಗಳಲ್ಲಿಯೇ ಇದರ ಅಪ್ರತಿಮವಾದ ಗುಣವು ಸಹಜವಾಗಿ ಅನುಭವಕ್ಕೆ ಬರುವದು. ಅದಾಗ್ಯೂ ಇದರ ಮುಖ್ಯವಾದ ಉಪಯೋಗವನ್ನು ತಿಳಿಸುವದು ನಮ್ಮ ಕರ್ತವ್ಯವಾಗಿರುತ್ತದೆ.

ಈ ನಮ್ಮ "ದ್ಯುಮಧಾತ್ರೀ ತೈಲವನ್ನು" ಪ್ರತಿದಿನ ತಲೆಗೆ ಹಾಕಿಕೊಂಡರೆ ಮಿದುಳಿನಲ್ಲಿರುವ ಉಷ್ಣತೆಯನ್ನು ಪರಿಹರಿಸುವದಲ್ಲದೇ, ಕಣ್ಣಿಗೂ, ಮಿದುಳಿಗೂ ತಂಪುಕರಿಸಿ, ಚಿತ್ತಕ್ಕೆ ಶಾಂತತೆಯನ್ನುಂಟುಮಾಡುವದು. ಮತ್ತು ಕಣ್ಣುಗಳಿಗುಂಟಾಗುವ ಸಾಮಾನ್ಯವಾದ ವಿಕಾರಗಳನ್ನೆಲ್ಲ ಪರಿಹರಿಸುವದು. ದೃಷ್ಟಿಗೆ ತೀವ್ರತೆಯುಂಟಾಗುವದು.

ಹೆಚ್ಚಾಗಿ ಓದತಕ್ಕವರಿಗೂ, ಒಂದೇ ಸಮನಾಗಿ ಕಣ್ಣಿಟ್ಟು ಕೆಲಸ ಮಾಡತಕ್ಕ ಕಸಬುಗಾರರಿಗೂ, ಕಣ್ಣುಗಳಲ್ಲಿ ನೀರು ಸುರಿಯುವವರಿಗೂ, ಉರಿಗಣ್ಣಿನವರಿಗೂ, ಚಿತ್ತವ್ಯಗ್ರವಾದವರಿಗೂ, ಅತ್ಯಂತ ಗುಣಕಾರಿಯಾಗಿರುವದು. ಈ ತೈಲದಲ್ಲಿರುವ ಇನ್ನೊಂದು ಅಪ್ರತಿಮವಾದ ಶಕ್ತಿಯೇನಂದರೆ—ಕೂದಲುಗಳನ್ನು ನಯವಾಗಿಯೂ, ಹೊಳೆಯುವಂತೆಯೂ, ಮಾಡುವದಲ್ಲದೇ ಬೆಳವಣಿಗೆಯನ್ನು ಹೆಚ್ಚಿಸುವದು. ಕೂದಲುಗಳ ಬೇರುಗಳನ್ನೆಲ್ಲ ಘಟ್ಟಿಮಾಡಿ, ಅವು ಉದರಿಹೋಗದಂತೆ ಮಾಡುವದು

ಪ್ರತಿಯೊಂದು ಬಾಟ್ಲಿಯೊಳಗೆ ೧೬ ತೊಲೆ ತೈಲವಿರುವದರಿಂದ ಒಬ್ಬನಿಗೆ ೨ ತಿಂಗಳು ಹೆಚ್ಚಿಕೊಳ್ಳಲಿಕ್ಕೆ ಸಾಕಾಗುವದು. ಬಡಬಗ್ಗರು ಸಹ ಕೊಂಡುಕೊಳ್ಳಲಿಕ್ಕೆ ಅನುಕೂಲವಾಗಿರಬೇಕೆಂಬುದಕ್ಕಾಗಿ ಪ್ರತಿಯೊಂದು ಬಾಟ್ಲಿಗೆ ೧೦ ಆಣೆ ಕ್ರಯವಿಟ್ಟಿರುವೆವು ೧೨ ಬಾಟ್ಲಿಗಳುಳ್ಳ ೧ ಪೆಟ್ಟಿಗೆಗೆ ೬|| ರೂಪಾಯಿ. ಪ್ರತಿಯೊಬ್ಬ ಕುಟುಂಬಿಗನೂ, ಈ ತೈಲವನ್ನು ಉಪಯೋಗಿಸುವದು ಅವಶ್ಯವಾಗಿರುತ್ತದೆ. ಮಕ್ಕಳುಮರಿಗಳಿಗೆ ಸಹ ಈ ತೈಲವು ಸುಖಾವಹವಾಗಿರುತ್ತದೆ.

ಈ ತೈಲ ಮತ್ತು ಈ ಕೆಳಗೆ ಬರೆಯುವಂಥ ಔಷಧಗಳು, ಡ್ರೆಸ್ಸು, ಮುತ್ತು, ರತ್ನ, ಬಂಗಾರ, ಬೆಳ್ಳಿ ಮುಂತಾದ ಸಾಮಾನುಗಳನ್ನು ಪಡೆಯಬಿಚ್ಛಿಸುವವರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬೇಕು.

ಮ್ಯಾನೇಜರ್, ಕನರಾ ಅಂಡ್ ಮೈಸೂರು ಟ್ರೇಡಿಂಗ ಏಜನ್ಸಿ ಆಫೀಸ್, ಮಾರ್ಕೆಟ ಪೋಸ್ಟ್. ಮುಂಬಾಯಿ.

☞ ಈ ತೈಲವನ್ನು ನಮ್ಮ ವಿನಹ ಇನ್ಯಾರೂ ಮಾಡಲಾರರು. ನಮ್ಮ ಹೆಸರಿನ ಗುರ್ತನ್ನು ನೋಡಿ ತೆಗೆದುಕೊಳ್ಳಬೇಕು ಬೇರೇತರದ ಎಣ್ಣೆಗಳನ್ನು ಈ ಹೆಸರಿನಿಂದ ಮಾರುತಿದ್ದರೆ ಜಾಗ್ರತೆ ಪಡಿರಿ!

ಔಷಧಗಳು.	ರೂ ಆ.	ಡ್ರೆಸ್ಸುಗಳು.	ರೂ. ಆ.
ನಯನಾಮೃತಭಸ್ಮ ಬಾಟ್ಲಿ ೧ ಕ್ಕೆ	೧—೬	ಮಖಮಲ್ಲಿನ ಟೊಪ್ಪಿಗೆ ಹುದ್ದು	೨—೮
ನಯನಾಮೃತ ಕಾಡಿಗೆ	೧—೬	ಕಾಶ್ಮೀರಿ ಶಾಲಿನ ಲಾಂಗಕೋಟು	೫—೦
ಕರ್ಣಸ್ರಾವನಾಶಕ ಅಪ್ರತಿಮತೈಲ	೧—೦	ಡಿಟೊ. ಅಂಗರಖ	೪—೮
ಮಹಾವಾತಕುಠಾರತೈಲ	೧—೦	ಡಿಟೊ. ಷಾರ್ಟಕೋಟು (ಇಂಗ್ಲಿಷಮಾದರಿ)	೬—೬
ಪ್ರಾಣಭಸ್ಮ ಹ	೨—೧೨	ರೇಶ್ಮೆಯ ಕಸ್ಮೀರಿ ಕೋಟು	೨—೮
ಪವಿದಪ್ರಣಾಪರ ಕ್ಷತ್ರಿಕೆಯು	೧—೦	ಡಿಟೊ. ಅಂಗರಖ	೨—೪
ಬಾಲಸಂಜೀವಿನಿಗುಟಿಕೆ	೩—೮	ಫ್ಲಾನಲ್ ಕಮೀಜ	೧—೧೨
ಅಜೀರ್ಣಮಾತ್ರೆ	೦—೮	ಡಿಟೊ ಬನಿಯನ್	೧—೪
ಸುಗಂಧಕಾರಕದಂತಚೂರ್ಣವು	೦—೪	ಚೀಲ (ಇಂಗ್ಲಿಷಮಾದರಿ) ಷರ್ಟ	೧—೧೨
ಕಜ್ಜಿಯಮಲಾಮು	೦—೨		

ತನಾಕರವಾದ ಚಂದ್ರಕಾಂತ ಶಿಲೆಯ ಕನ್ನಡಕಗಳ ಕ್ರಯ ರೂ. ೧—೩||—೫—೩||. ಉತ್ತಮತರದ "ಸ್ಟಾಕ್" ಎಂಬ ಹೆಸರಿನ ಗಡಿಯಾರವು (೧ ವರುಷದ ಜಾಮೀನುಳ್ಳದ್ದು) ಕ್ರಯ ರೂ. ೬.

ವೃತ್ತಾಂತ ಪತ್ರಿಕೆ.

ಚಂದಾ ನಿರ್ಣಯ.

	ರೂ ಆ. ಪೈ.
ಸ್ಥಳದವರಿಗೆ ವರ್ಷ ೧ ಕ್ಕೆ	೧—೬—೦
ಪರಸ್ಥಳದವರಿಗೆ ವರ್ಷ ೧ ಕ್ಕೆ	೧—೧೦—೦
ಬಿಡಿ ಪತ್ರಿಕೆ ೧ಕ್ಕೆ	೦—೦—೪

ಈ ಪತ್ರಿಕೆಯು ಮೈಸೂರು ರಾಜಧಾನಿಯಲ್ಲಿ ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ, ಪ್ರಕಟಿಸಲ್ಪಡುವದು. ಬಡವರು ಮೊದಲುಗೊಂಡು ಸಮಸ್ತರಿಗೂ ಸುಲಭಸಾಧ್ಯವಾಗುವಂತೆ ಈ ಪತ್ರಿಕೆಗೆ ಇಷ್ಟು ಅಲ್ಪ ಮೌಲ್ಯವನ್ನು ನಿರ್ಣಯಿಸಿರುತ್ತೇವೆ ಈ ಪತ್ರಿಕೆಯನ್ನು ಅಪೇಕ್ಷಿಸುವವರು ಚಂದಾಹಣವನ್ನು ಮುಂಗಡವಾಗಿ ಕಳುಹಿಸಬೇಕು.

ಎಡಿಟರ್,

ವೃತ್ತಾಂತ ಪತ್ರಿಕೆ

ಟೊಪ್ಪಿಗೆಗಳು!

ಟೊಪ್ಪಿಗೆಗಳು!! WOOL CAPS ಟೊಪ್ಪಿಗೆಗಳು!!

ಹಾಸನದ ಆರ್ಫನೇಜಿನಲ್ಲಿ ತಯಾರಾಗುವಂಥ ಅಚ್ಚ ಕಂಬಳಿನೂಲಿನ ಟೊಪ್ಪಿಗೆಗಳು (Wool Caps) ನಮ್ಮ ಆಫೀಸಿನಲ್ಲಿ ಮಾರಿಕೆಗೆ ಸಿದ್ಧವಾಗಿರುತ್ತವೆ. ಕ್ರಯ ೧ ರೂ. ೨ ಆಣೆ ಇಂದ ೧ ರೂ. ೬ ಆಣೆಗಳ ವರೆಗೂ ಬೇರೆ ಬೇರೆ ರಕಂಗಳುಂಟು. ಸ್ಥಳದವರು ಬಂದು ನೋಡಿ ಪಡೆಯಬಹುದು. ಪರಸ್ಥಳದವರು ಮುಂಗಡವಾಗಿಯೇ ಹಣ ಕಳುಹಿಸಿದರೆ ತ್ವರಿತದಲ್ಲಿ ಭಾಂಗೀ ಮೂಲಕ ಕಳುಹಿಸುತ್ತೇವೆ. ಭಾಂಗೀ ಛಾರ್ಜ ಬೇರೇ ಕೊಡಬೇಕು. ಮೇಲುವಿಳಾಸದಲ್ಲಿ ಟೊಪ್ಪಿಗೆ ಸಂಬಂಧವಾದದ್ದು ಎಂದು ಬರೆಯಬೇಕು.

ಮ್ಯಾನೇಜರ್,

ವೆಸ್ಲೀಯನ್ ಮಿಷನ್ ಪ್ರೆಸ್,

ಮೈಸೂರು.

ಪ್ರಕಟನೆ.

ಲೋಕವ್ಯವಹಾರವನ್ನರಿಯಬೇಕೆಂಬುಳ್ಳ ಕನ್ನಡ ಪಾಠಶಾಲೆಗಳಲ್ಲಿನ ಉಪಾಧ್ಯಾಯರಿಗೂ, ಪ್ರೀಮೆಟ್ರಿಕ ಮತ್ತು ಮೆಟ್ರಿಕ್ಯುಲೇಷನ ಕ್ಲಾಸಗಳಲ್ಲೋದುವವಿದ್ಯಾರ್ಥಿಗಳಿಗೂ ವಿದ್ಯಾರ್ಥಿನಿಯರಿಗೂ, ಪ್ರಜಾಪ್ರತಿನಿಧಿಗಳಿಗೂ, ವರ್ತಕರಿಗೂ, ಪವಿತ್ರವಿಷಯಗಳಲ್ಲಾಸಕ್ತರಾದ ಸರ್ವರಿಗೂ, ಅತ್ಯಂತೋಪಯುಕ್ತವಾದ ಇಂಗ್ಲೀಷು ಚರಿತ್ರಸಂಗ್ರಹ (History of England in Kanarese) ವೆಂಬ ಪುಸ್ತಕವು ಮುದ್ರಿತವಾಗಿ ಸಿದ್ಧವಾಗಿದೆ. ಅನುಭವಶಾಲಿ ಶಾಸ್ತ್ರಜ್ಞರು ಈ ವಿಲಾಯತಿ ಚರಿತ್ರೆಯನ್ನು ಅತ್ಯಂತ ಗಮನವಿಟ್ಟು ಓದಿನೋಡಿ, ಅದರ ಪ್ರಯೋಜನವೇ ಮುಂತಾದವುಗಳನ್ನು ಕುರಿತು ತಮ್ಮ ಉತ್ತಮಾಭಿಪ್ರಾಯಗಳಂ ದಯಪಾಲಿಸಿರುತ್ತಾರೆ. ಆದವರಿಂದ ಬೇಕಾದವರು ದಯವಿಟ್ಟು, ಮೈಸೂರು ಬಿ ಗ್ರಾಜ್ಯುಯೇಟ್ಸ್ ಟ್ರೇಡಿಂಗ್ ಅಸೋಸಿಯೇಷನಿಗಾಗಲಿ, ಮೈಸೂರು ಚಲುವಾಂಬಾಗ್ರಹಾರದ ೩೫೦ನೆ ನಂ|| ಮನೆಯಲ್ಲಿರುವ ಗ್ರಂಥಕರ್ತರಾದ ಮ. ವೆಂ. ಚಂದ್ರಶೇಖರಶಾಸ್ತ್ರಿಗಳಿಗಾಗಲಿ, ಶೀಘ್ರವಾಗಿ ಬರೆದು ತರಿಸಿಕೊಳ್ಳಬಹುದು. ಕ್ರಯ ಪ್ರತಿ ೧ಕ್ಕೆ ೮ ಆಣೆ, ಅಂಚೆಹಾಸಲು ಬೇರೆ ೧ ಆಣೆ. (೧೦ ಪ್ರತಿಗಳಿಗೆ ಒಂದು ಪ್ರತಿ ಹೆಚ್ಚಾಗಿ ಕೊಡಲ್ಪಡುವದು.) (3)

ವೃತ್ತಾಂತ ಪತ್ರಿಕೆ.

೧೮೯೪ನೇ ಇಸವಿ ಅಕ್ಟೋಬರ್ ತಾ|| ೧೩ನೇ ಶನಿವಾರ.

ಪುರವಿಸ್ತೀರ್ಣ.

ಈ ವಿಷಯವಾಗಿ ಕಳೆದವಾರ ಮೈಸೂರು ದೇಶಾಭಿಮಾನಿ ಪತ್ರಿಕೆಯಲ್ಲಿ ವಿಸ್ತಾರವಾಗಿ ಬರೆದಿದ್ದ ಅಂಶದಿಂದ ತಮ್ಮಗಳಿಗೆ ಎಲ್ಲಾ ವಿಷಯವು ವಿದಿತವಾಗಿರಬಹುದು. ಪಟ್ಟಣವು ವಿಸ್ತೀರ್ಣವಾಗಬೇಕೆಂದರೆ ದೂರದೂರದಲ್ಲಿ ನಾಲ್ಕಾರು ಕಟ್ಟಡಗಳು ಲಕ್ಷಾಂತ್ರ ರೂಪಾಯಿಗಳ ವೆಚ್ಚದಿಂದ ಕಟ್ಟಿದಾದ ಮಾತ್ರದಿಂದಲೇ ಆಗಲಾರದು. ಪಟ್ಟಣದ ವಿಸ್ತೀರ್ಣಕ್ಕೆ ತಕ್ಕಂತೆ ಜನಸಂಖ್ಯೆಯೂ ಅಧಿಕವಾಗಬೇಕು. ಎಲ್ಲಿ ಜೀವನೋಪಾಯಗಳು ಧಾರಾಳವಾಗಿ ದೊರೆಯುತ್ತವೆಯೋ ಅಲ್ಲಿ ಜನಗಳು ತಾವಾಗಿಯೇ ಸೇರುತ್ತಾರೆ. ಜನಗಳಿಗೆ ಸರ್ಕಾರದವರೇ ಜೀವನೋಪಾಯಗಳನ್ನು ಕಲ್ಪಿಸಬೇಕೆಂದು ಹೇಳುವದಕ್ಕೆ ಆಗುವದಿಲ್ಲ. ಎಲ್ಲಾ ಜನರಿಗೂ ಸರ್ಕಾರದ ನೌಕರಿಯನ್ನು ಒದಗಿಸುವದು ಅಸಾಧ್ಯವೆಂಬುವ ಅಂಶಗಳನ್ನು ವಾಚಕರು ತಿಳಿದೇ ಇರುವರು. ಕೆಲವರು ವ್ಯಾಪಾರದಿಂದ ಜೀವನ ಮಾಡುವರೆ, ಕೆಲವರು ವ್ಯವಸಾಯದಿಂದ ಜೀವಿಸುವರು. ಇನ್ನು ಕೆಲವರು ಕೂಲಿನಾಲಿಯಿಂದ ಜೀವಿಸುವರು. ಕೆಲವರು ನೌಕರಿಯಿಂದ ಜೀವಿಸುವರು. ಈ ರೀತಿಯಾಗಿ ನಾನಾಮಾರ್ಗದಿಂದ ಜೀವನವು ಕಲ್ಪಿಸಲ್ಪಟ್ಟಿದೆ. ಈ ವಿಧವಾಗಿ ಮಾಡುವ ಜೀವನೋಪಾಯದಲ್ಲಿ ಯಾವದು ಸಾಧ್ಯವಾದದ್ದು, ಯಾವದು ಅಸಾಧ್ಯವಾದದ್ದು ಎಂಬುವದನ್ನು ಪ್ರಜೆಗಳು ತಾವೇ ಪರ್ಯಾಲೋಚಿಸಬೇಕು.

ಉತ್ತಮಂ ಕಾರುವಿದ್ಯಾನಾಂ
ಮಧ್ಯಮಂ ಕೃಷಿವಾಣಿಜೇ|
ಅಧಮಂ ಸೇವಯಾ ವೃತ್ತಿಃ
ಮೃತ್ಯುಶ್ಚೌರ್ಯೋಪಜೀವನಂ||

ಅಂದರೆ ಕಾರುವಿದ್ಯೆಯಿಂದ ಜೀವಿಸುವವನ ಜೀವನವೇ ಉತ್ತಮವಾದದ್ದು; ಕೃಷಿಯಿಂದಲೂ ವ್ಯಾಪಾರದಿಂದಲೂ ಜೀವಿಸುವದು ಮಧ್ಯಮಜೀವನವೆನ್ನಿಸಿಕೊಳ್ಳುತ್ತದೆ. ಸೇವಾವೃತ್ತಿಯಿಂದ ಅಂದರೆ ನೌಕರಿಯಿಂದ ಜೀವಿಸುವದು ಅಧಮಜೀವನವೆನ್ನಿಸಿಕೊಳ್ಳಲ್ಪಡುವದು; ಚೌರ್ಯದಿಂದ ಅಂದರೆ ಕಳ್ಳತನ ಮೋಸದಿಂದ ಜೀವಿಸುವದಕ್ಕಿಂತಲೂ ಸಾಯುವುದೇ ಮೇಲೆಂದು ಶ್ಲೋಕತಾತ್ಪರ್ಯ. ನೀತಿಯು ಈ ರೀತಿಯಾಗಿದ್ದಾಗ್ಯೂ ಇಲ್ಲಿನ ಬಹುಜನರು ನೌಕರಿಯಿಂದ ಜೀವಿಸುವದಕ್ಕೇ ಆಶಿಸುತ್ತಾರೆ. ತತ್ರಾಪಿ ಈ ಮೈಸೂರು ಪಟ್ಟಣದವರು ನೌಕರಿಯ ಜೀವನವನ್ನೇ ಹೇರಳವಾಗಿ ಅಪೇಕ್ಷಿಸುತ್ತಾರೆ. ಇದು ಬಹು ಶೋಚನೀಯವಾದದ್ದು. ಅನೇಕ ಗ್ರಾಮಗಳಲ್ಲಿ ಜನಬಾಹುಳ್ಯವಿಲ್ಲದರೆ ಕೃಷಿವೃತ್ತಿಯು ಸಾಗದೆ ಅನೇಕ ಜಮೀನುಗಳು ಬಂಜರುಬಿದ್ದಿವೆ. ಅವುಗಳನ್ನು ದರಖಾಸ್ತಿನಲ್ಲಿ ಪಡೆದು ವ್ಯವಸಾಯ ಮಾಡಬಹುದು. ಹೀಗೆ ವ್ಯವಸಾಯ ಮಾಡಿ ಜೀವಿಸುವವರಿಂದ ತಮಗೆ ವಿಶೇಷ ಸುಖವುಂಟಾಗುವದಲ್ಲದೆ ಸರ್ಕಾರಕ್ಕೆ ಕಂದಾಯವೂ ಸಿಕ್ಕಿ ವ್ಯಾಪಾರವೂ ಅಭಿವೃದ್ಧಿಯಾಗುವುದಕ್ಕೆ ಅವಕಾಶವಾಗುತ್ತದೆ:—

ಕೃಷಿತೋ ನಾಸ್ತಿ ದುರ್ಭಿಕ್ಷಂ
ಜಪತೋ ನಾಸ್ತಿ ಪಾತಕಂ|
ಮೌನೇನ ಕಲಹಂ ನಾಸ್ತಿ
ನಾಸ್ತಿ ಜಾಗರತೋ ಭಯಂ||

ಅಂದರೆ ಕೃಷಿಮಾಡುವವನಿಗೆ ದುರ್ಭಿಕ್ಷವಿಲ್ಲ, ಅಂದರೆ ವ್ಯವಸಾಯ ಮಾಡುವವನಿಗೆ ಯಾವಾಗಲೂ ಕೊರತೆಯುಂಟಾಗುವುದಿಲ್ಲವೆಂಬದು. ದೇವರಧ್ಯಾನ ಮಾಡುವದರಿಂದ ಪಾತಕ ಬರುವದಿಲ್ಲ. ಕೃಷಿಮಾಡುವ ಮನುಷ್ಯನಿಗೆ ಅವಕಾಶ ವಿಶೇಷವಾಗಿರುವದರಿಂದ ದೇವರ ಧ್ಯಾನದಲ್ಲಿ ಮಗ್ನನಾಗಿ ಪುಣ್ಯ ಸಂಪಾದನೆಯನ್ನು ಮಾಡಬಹುದು. ಮತ್ತು ಮೌನವಾಗಿರತಕ್ಕವನಿಗೆ ಕಲಹ ಬರುವುದಿಲ್ಲವೆಂತಲೂ, ಜಾಗರೂಕನಾಗಿರುವವನಿಗೆ ಯಾವವಿಧವಾದ ಭಯವೂ ಉಂಟಾಗುವುದಿಲ್ಲವೆಂತಲೂ ಶ್ಲೋಕದ ಉತ್ತರಾರ್ಧದ ಅಭಿಪ್ರಾಯ.

ಈರೀತಿಯಾಗಿ ಯಾವವಿಧವಾದ ಜೀವನೋಪಾಯವನ್ನೂ ಅಂದರೆ ಕೃಷಿ ವಾಣಿಜ್ಯ ಸೇವಾವೃತ್ತಿಗಳಿಂದ ಜೀವನೋಪಾಯಗಳಂ ಸಂಪಾದಿಸದ ಅನೇಕ ಜನಗಳು ಇರುತ್ತಾರೆ. ಅಂಥಾವರುಗಳಿಗೆ ಅಲ್ಲಿ ಕುಶಲ ವಿದ್ಯೆಯಂ ಕಲಿಸುವುದು ಉತ್ತಮ. ಇತ್ಯಾದಿ ಕಾರಣಗಳಿಂದ ಜೀವನೋಪಾಯವಂ ಸಂಪಾದಿಸಲಾರರು ತಮ್ಮ ಜೀವನೋಪಾಯ ನಡಿಯುವದಕ್ಕಾಗಿ ಚೌರ್ಯ ಮಾಡಬೇಕು, ದ್ರೋಹಮಾಡಬೇಕು, ಮನೆಗಳನ್ನು ಮುಳುಗಿಸಬೇಕು, ಇಲ್ಲದ ದುರ್ವ್ಯಾಜ್ಯಗಳನ್ನು ತಂದು ಜನರಲ್ಲಿರುವ ಪರಸ್ಪರ ಮೈತ್ರಿಯವನ್ನು ತಪ್ಪಿಸಬೇಕು. ಈ ರೀತಿಯಾಗಿ ಹೊಟ್ಟೆಹೊರೆಯುವವರು ಈ ಪ್ರಾಂತ್ಯದಲ್ಲಿ ಬಹುಮಂದಿಯರು ಇರುತ್ತಾರೆ. ಅವರ ಸಹವಾಸದಲ್ಲಿ ಮಾಡುವದಕ್ಕೆ ಯಾವಕೆಲಸವೂ ಇಲ್ಲದೆ ಯಾವಕಸಬೂ ತಿಳಿಯದೆ ಬಹುಮಂದಿಯರು ಪುಂಡಾಡಿಗಳೂ ಇದ್ದಾರೆ. ಇವರುಗಳಿಂದ ಸಂಭವಿಸುವ ದಾವಾ ಕಲಹಗಳ ನಿವಾರಣೆಗಾಗಿ ಎಷ್ಟು ಕೋರ್ಟುಗಳನ್ನು ಸ್ಥಾಪಿಸಬಹುದು, ಎಷ್ಟು ಪೋಲೀಸು ನಿಯಮಿಸಬಹುದು ಎಷ್ಟು ವಿಧವಾಗಿ ಕಾಯಿದೆಗಳನ್ನು ಬದಲಾಯಿಸಬಹುದು. ಇವುಗಳನ್ನು ವರ್ಣಿಸುವುದಕ್ಕೆ ಆಗಲಾರದು. ಇನ್ನು ಕೆಲವರು ಕಳವುಮಾಡುವುದಕ್ಕೆ ಶಕ್ತರಾಗಿದ್ದರೂ ಕೊಂಬುತೆಗೆದುಕೊಂಡು ಉಪಾದಾನಕ್ಕೆ ಬರುವರು. ಮನೆಯವರು ಅಜಾಗರೂಕರಾಗಿದ್ದರೆ ಕೈಗೆಸಿಕ್ಕಿದ್ದನ್ನು ಸಂಗ್ರಹಿಸುವರು. ಬೆಳಗಾದರೆ ಯಾಚಕಕ್ಕೆ ಅನೇಕಮಂದಿಯರು ಬರುವರು. ವಿದ್ಯಾವಂತರಾಗಿದ್ದರೆಯೋ? ಅಂದರೆ ಮೊದಲೇ ಇಲ್ಲ. ಹಾಗೇನು ಬಂದಿದ್ದರೂ "ನನ್ನ ಮಗ ಸತ್ತು ಇವತ್ತಿಗೆ ನಾಲ್ಕುದಿವಸ, ದಿನ ಮಾಡುವುದಕ್ಕೆ ಏನಾದರೂ ಕೊಡಬೇಕು" ಅನ್ನುವರು. ಕೆಲವರು "ತಂದೆಸತ್ತುಹೋದ ದಿನಮಾಡಬೇಕು" ಎಂದು ಕೇಳುವವರು ಇರುವರು. ಇಂಥಾ ಸೋಮಾರಿಗಳಿಗೆಲ್ಲಾ ಕೊಡುವದಕ್ಕಿಂತಲೂ ಆ ದುಡ್ಡನ್ನು ಒಂದು ಪಾಠಶಾಲೆಯಲ್ಲಿ ಬಡಹುಡುಗರ ... ಧರ್ಮಮಾಡುವುದಕ್ಕೆ ಯಾರು ಅರ್ಹರು, ಯಾರು ಅನರ್ಹರು ಎಂಬುದನ್ನು ಪರ್ಯಾಲೋಚಿಸಿ ನೋಡಿದರೆ, ಬಡವನಿಗೆ ಅಂಗಾಂಗಗಳು ಕೆಲಸಮಾಡುವುದಕ್ಕೆ ಆಗದಿದ್ದರೆ, ಅಂಥವನು ಕೊಡುವ ದ್ರವ್ಯವನ್ನು ಸದ್ವ್ಯಯದಲ್ಲಿ ವ್ಯಯಮಾಡುವವನಾಗಿದ್ದರೆ ಮಾತ್ರವೇ ಧರ್ಮಮಾಡಬೇಕು. ಇತರರಿಗೆ ಕೊಡುವದರಿಂದ ಪಾಪಸಂಘಟನವಾಗುವುದಲ್ಲದೆ ದೈವಪ್ರೀತಿಯುಂಟಾಗುವುದಿಲ್ಲ. ನಮ್ಮ ಮೈಸೂರಿನಲ್ಲಿ ಇದನ್ನರಿಯದೆ ಧರ್ಮಮಾಡುವ ಕಟ್ಟಸ್ಥಿತಿಯು ಹೇರಳವಾಗಿರುವದರಿಂದ ಸೋಮಾರಿಗಳು ಹೆಚ್ಚುತ್ತಾರೆ. ಸರ್ಕಾರದವರು ಪ್ರಜೆಗಳನ್ನು ಪ್ರೋತ್ಸಾಹಪಡಿಸಿ ಅಂದರೆ ಭಾರಿವರ್ತಕರನ್ನು ಕರೆಸಿ ಅವರುಗಳಿಂದ ಜನಗಳಿಗೆ ಜೀವನೋಪಾಯವಾಗತಕ್ಕ ಕಾರ್ಖಾನೆಗಳನ್ನು ಏರ್ಪಾಡುಮಾಡಿಸಿ ತಾವೂ ಅದಕ್ಕೆ ಸ್ವಲ್ಪ ಮೂಲಧನಕೊಟ್ಟು, ಸರಿಯಾದ ಮಾರ್ಗದಿಂದ ಜೀವನೋಪಾಯ ಮಾಡದವರನ್ನು ಹಿಡಿದು ಬಲವಂತದಿಂದ ಈ ಕಾರ್ಖಾನೆಗಳಿಗೆ ರವಾನಿಸಿಕೊಡುತ್ತಾ ಬಂದಲ್ಲಿ, ಅವರಿಗೆ ಕಷ್ಟಪಟ್ಟು ಜೀವನೋಪಾಯ ಸಂಪಾದಿಸಿಕೊಳ್ಳಬೇಕೆಂಬ ಅಭಿಲಾಷೆಯು ಹುಟ್ಟುತ್ತದೆ. ಇದರಿಂದ ಇತರರಿಗೆ ಯಾವವಿಧವಾದ ಬಾಧಕಗಳೂ ಇರುವುದಿಲ್ಲ. ಕೋರ್ಟುಕಚೇರಿಗಳಿಗೆ ಕೆಲಸಗಳು ಕಡಿಮೆಯಾಗುತ್ತೆ. ಪೋಲೀಸಿನವರಿಗೆ ವಿಶೇಷ ವಿಶ್ರಾಂತಿಯೂ ಸಿಕ್ಕುತ್ತದೆ. ಈ ವಿಷಯದಲ್ಲಿ ಮಂತ್ರಿಯು ಮಧ್ಯಗಮನ ಕೊಡಬೇಕಾದದ್ದು ಅತ್ಯಾವಶ್ಯಕವಾದದ್ದು. ನಮ್ಮ ಮೈಸೂರು ಸರ್ಕಾರದವರು ಈ ವಿಷಯವನ್ನು ಪರ್ಯಾಲೋಚಿಸಿ, ಕಾರ್ಖಾನೆಗಳನ್ನು ಏರ್ಪಡಿಸುವ ಮೂಲಕ ಪುರವನ್ನು ವಿಸ್ತೀರ್ಣಗೊಳಿಸಿ ಪ್ರಜೆಗಳಿಗೆ ಕೇಡಿಗರಿಂದ ಉಂಟಾಗಿರುವ ಕಾಟಬಾಧೆಗಳನ್ನು ತಪ್ಪಿಸುವರೆಂದು ನಂಬಿರುವೆವು.

ಕೊಡಗು ರೈಲ್ವೆ ಮತ್ತು ಅಂಚೆ.

ಕೊಡಗು ಪ್ರಾಂತ್ಯದ ನಿವಾಸಿಗಳಿಗೆ ಅಂಚೆಯು ಸಕಾಲಕ್ಕೆ ಬಟವಾಡೆಯಾಗದೇ ಇರೋಣದರಿಂದ, ಅವರಿಗೆ ನಾನಾವಿಧ ಅನಾನುಕೂಲಗಳುಂಟಾಗುತ್ತವೆಂಬುವದು ಹೇಳಲೇ ಅವಶ್ಯವಿಲ್ಲ. ಕೊಡಗಿಗೂ, ಮೈಸೂರಿಗೂ ಹೋಗಿಬರುವ ಕಾಗದ ಪತ್ರಗಳೆಲ್ಲಾ ಇದುವರೆಗೂ ಜವಾನರಿಂದಲೇ ಒಯ್ಯಲ್ಪಡುತ್ತಲಿವೆ. ಈಗ ಮದರಾಸ ಪೋಸ್ಟುಮಾಸ್ಟರ ಜನರಲ್‌ರವರು ಪುನಹ ಮೆ|| ಡಿ. ಪಾಪಂಜಯ್ಯನವರ ಸಂಗಡ ಈ ಅಂಚೆಯನ್ನು ಮೈಸೂರಿನಿಂದ ಕೊಡಗಿಗೆ ಟಾಂಗಾ ಎಂಬ ಟಪಾಲುಗಾಡಿಯ ಮೂಲಕ ತೆಗೆದುಕೊಂಡು ಹೋಗಿ ಬಟವಾಡೆಮಾಡುವದಕ್ಕೂ, ಅಲ್ಲಿಂದ ಮೈಸೂರಿಗೆ ತರುವದಕ್ಕೂ, ಘಂಟೆ ೧ಕ್ಕೆ ೫-೬ ಮೈಲಿಗಳಂತೆ ಜಾಗ್ರತೆಯಾಗಿ ಪ್ರಯಾಣಮಾಡುವದಕ್ಕೆ ತಕ್ಕ ಸನ್ನಾಹಗಳನ್ನು ಮಾಡುವದಕ್ಕೂ ಒಪ್ಪಿ ಕರಾರು ಮಾಡಿರುತ್ತಾರೆಂದು ತಿಳಿಸಲು ಬಹುಸಂತೋಷಿಸುತ್ತೇವೆ. ಫ್ರೇಜರ ಪೇಟೆಯಿಂದ ಮರಕೇರಿಗೆ ಹೋಗುವ ಮಾರ್ಗವು ಬಹು ಕಷ್ಟವಾಗಿರುವದರಿಂದ ಅದೇ ಒಂದು ಘಂಟೆಯ ಪ್ರಯಾಣವಾಗುವಂತೆ ಗೊತ್ತಾಗಿದೆ. ಬೇಸಿಗೇಕಾಲದಲ್ಲಿ ಘಂಟೆಗೆ ೬ ಮೈಲಿ ಪ್ರಕಾರವೂ, ಮಳೆಗಾಲದಲ್ಲಿ ೫ ಮೈಲಿ ಪ್ರಕಾರವೂ ಪ್ರಯಾಣವಾಗುವಂತೆ ಏರ್ಪಾಡುಮಾಡಿದ್ದಾರೆ. ಅದಲ್ಲದೆ ಹೀಗೆ ಟಪಾಲನ್ನು ಕ್ರಮವಾಗಿ ತೆಗೆದುಕೊಂಡು ಹೋಗುವದಕ್ಕೆ ಒಪ್ಪಿರುವ ಮೆ|| ಡಿ. ಪಾಪಂಜಯ್ಯನವರಿಗೆ ಮೈಸೂರು ಮತ್ತು ಕೊಡಗು ಪ್ರಾಂತ್ಯಗಳಲ್ಲಿನ ಪ್ಲಾಂಟರುಗಳೇ ಮುಂತಾದ ಜನರು ಪ್ರಯಾಣ ಮಾಡುವಾಗ್ಯೆ ಈ ಕಂಪೆನಿಯವರ ಗಾಡಿಗಳಲ್ಲೇ ಹೋಗಿಬರುವದಕ್ಕೆ ಒಪ್ಪಿ ಅವರಿಗೆ ಸಹಾಯಮಾಡಿದರೆ ಅವರಿಗೆ ಅನುಕೂಲವಾಗುವದಲ್ಲದೆ ಅನೇಕ ಕೆಲಸದವರಿಗೂ ಉದ್ಯೋಗವೂ ಇಲ್ಲದ ಕೆಲಸ ನಡೆಯುತ್ತೆ. ಇದೂ ಅಲ್ಲದೆ ಮೆ|| ಪಾಪಂಜಯ್ಯನವರು ಈ ಪ್ರಯಾಣಮಾಡುವವರಿಗೆ ಘಾಟಿನ ದರವನ್ನು ಕೂಡಿದಮಟ್ಟಿಗೆ ಕಡಮೆ ಮಾಡುವದಕ್ಕೆ ಒಪ್ಪಿಕೊಂಡಿರುತ್ತಾರೆ. ಈಗ ಪಾರ್ಸೆಲುಗಳು ಅಂಚೆಯಲ್ಲದೇ ಬಟವಾಡೆಯಾಗುತ್ತಿರುವದರಿಂದ, ಅವುಗಳಿಗೆ ಹೊತ್ತುಕೊಂಡು ಹೋಗುವದಕ್ಕೆ ಹೆಚ್ಚಾಗಿಯೂ, ಸಕಾಲದಲ್ಲಿ ವಿಳಾಸದಾರರಿಗೆ ಬಟವಾಡೆ ಆಗದೆಯೂ ಇರುತ್ತೆ. ಆದರೆ ಟಪಾಲುಬಂಡಿಯ ಮೂಲಕ ಪಾರ್ಸಲ್ಲುಗಳು ಬಹಳವಾಗಿ ಹೆಚ್ಚಾಗಲು ಅನಾನುಕೂಲಗಳೆಂಬವೂ ಇರುವದಿಲ್ಲ. ಈ ಏರ್ಪಾಡು ಚನ್ನಾಗಿ ನಡೆಯುವದಕ್ಕೂ ನಿರಾಕ್ಷೇಪಣೆಯಾಗಿ ಜನರಿಗೆ ಸಹಕಾರಿಯಾಗಿರುವದಕ್ಕೂ, ಅಲ್ಲಿಂದ ಇಲ್ಲಿಗೂ, ಇಲ್ಲಿಂದ ಅಲ್ಲಿಗೂ ಪ್ರಯಾಣ ಮಾಡತಕ್ಕವರು ಅವರಿಗೆ ಎಷ್ಟು ಸಹಾಯ ಮಾಡುತ್ತಾರೋ ಅದರಿಂದ ಗೊತ್ತಾಗತಕ್ಕದ್ದಾಗಿದೆ. ಈ ಏರ್ಪಾಡು ನಾಳೆ ನವಂಬರು ತಿಂಗಳಿನ ಗುರ್ತುತಾರೀಖಿನಿಂದಾರಂಭಿಸಿ ಜಾರಿಯಲ್ಲಿ ಬರುವಂತೆ ಗೊತ್ತಾಗಿದೆ. ಆದರೆ ಈ ವಿಷಯದಲ್ಲಿ ಒಂದು ಆಕ್ಷೇಪಣೆಮಾತ್ರ ಬರುತ್ತೆ. ಅದೇನಂದರೆ—ಫ್ರೇಜರಪೇಟೆಯ ಮೂಲಕ ರಸ್ತೆಯನ್ನು ಗೊತ್ತುಮಾಡಿದ್ದಾರೆ. ಇದಕ್ಕಿಂತಲೂ ಸಿದ್ದಾಪುರದಮೇಲೆ ಹೋಗಿಬರುವಂತೆ ಮಾಡುವದರಿಂದ ಟಪ್ಪಾಲ ಗಾಡಿಗಳನ್ನು ಇಡತಕ್ಕವರಿಗೂ, ಪೋಸ್ಟಾಫಿಸಿನವರಿಗೂ ಬಹುಸುಲಭವಾಗುವದಲ್ಲದೆ, ಆ ಮಾರ್ಗದಲ್ಲಿ ಅನುದುರಸ್ತು ಹೆಚ್ಚಾಗಿದೆ. ದಾರಿಯೂ ಕೂಡ ಅಷ್ಟು ಕಠಿಣವಾಗಿಲ್ಲ, ಆದ್ದರಿಂದ ಪೋಸ್ಟುಮಾಸ್ಟರು ಜನರಲ್‌ರವರು ಚನ್ನಾಗಿ ಆಲೋಚನೆಮಾಡಿ, ಸುಲಭವೂ ಅಧಿಕವೂ ಆದೊಡನೆ ಕೂಡಿಬರುವ ಸಿದ್ದಾಪುರದ ಮಾರ್ಗವಾಗಿಯೇ ಅಂಚೆಯು ಹೋಗಿಬರುವಂತೆ ಏರ್ಪಾಡು ಮಾಡ್ಯಾರೆಂತಲೂ, ಮುಖ್ಯವಾಗಿ ಯಾವ ರಸ್ತೆಯಮೂಲಕ ಅಂಚೆ ಮಮುರಸ್ತು ನಡೆಯಬೇಕಾದರೂ ಮೈಸೂರಿಗೂ ಕೊಡಗಿಗೂ ಹೋಗಿಬರುವ ಪ್ಲಾಂಟರುಗಳೇ ಮೊದಲಾದ ಜನಗಳು ಕಂಪೆನಿಯನ್ನು ಸ್ವೀಕರಿಸುವ ಮೆ|| ಪಾಪಂಜಯ್ಯನವರಿಗೆ ಸಹಾಯಮಾಡದಹೊರತು ಆಗುವದಿಲ್ಲವಾದ್ದರಿಂದ ಅವರು ಇದಕ್ಕೆ ತಮ್ಮ ಎಲ್ಲಾ ಸಹಾಯವನ್ನೂ ಮಾಡಬಲ್ಲರೆಂತಲೂ ನಂಬಿರುತ್ತೇವೆ.

ಕ್ಯಾಪ್ಟನ್ ಅಂಡ್ ಕಂಪೆನಿ.

ಮೈಸೂರಿನ ಕೆಮಿಸ್ಟ್ಸ್.

ಇವರು ಶಿವರಾಮ ಪೇಟೆಯಲ್ಲಿ ಒಂದು ಬ್ರಾಂಚ್ ಔಷಧ ಶಾಲೆಯನ್ನು ಸ್ಥಾಪಿಸಿರುತ್ತಾರೆ. ಇಲ್ಲಿ ನಾನಾವಿಧವಾದ ಔಷಧಗಳು ಸುಲಭ ಬೆಲೆಗೆ ದೊರೆಯುತ್ತವೆ. ಮತ್ತು ಉತ್ತಮತರವಾದ ಸಾಮಗ್ರಿಯುಗಳನ್ನು ಉಪಯೋಗಿಸಿ ಔಷಧಗಳನ್ನು ತಯಾರು ಮಾಡಿ ಕೊಡುತ್ತಾರೆ.

ಈ ಜನೋಪಯುಕ್ತವಾದ ಔಷಧ ಶಾಲೆಯಲ್ಲಿ ರಾತ್ರಿ ಹಗಲು ಯಾವವೇಳೆ ಬಂದಾಗ್ಯೂ ಔಷಧಗಳು ದೊರೆಯುತ್ತವೆ. (5)

ದಯಾವೃಕ್ಷ ಅರಸನು.

ಒಬ್ಬನೊಬ್ಬ ಅರಸನು ತನ್ನ ರಾಜ್ಯದಲ್ಲಿರುವ ಬಡವನಿಗೆ ತಕ್ಕ ಜೀವನೋಪಾಯ ನಡಿಸಬೇಕೆಂದು, ಒಂದು ದೊಡ್ಡ ಹಡಗವನ್ನು ಕಟ್ಟಿಸಿ ಅದನ್ನು ನಡಿಸಲಿಕ್ಕೆ ಒಬ್ಬ ಬುದ್ಧಿವಂತನನ್ನು ನೇಮಿಸಿ ಆ ಬಡವರು ವ್ಯಾಪಾರಮಾಡುವದಾಗಿ ನಾನಾವಿಧವಾದ ಪದಾರ್ಥಗಳನ್ನು ಕೊಟ್ಟು, ಅವರೆಲ್ಲರನ್ನೂ ಹಡಗದಲ್ಲಿ ಕೂರಿಸಿ ಈ ಹಡಗಿನಲ್ಲಿ ಯಾರೂ ನಿಷ್ಕಪಟರಾಗಿ ವ್ಯಾಪಾರಮಾಡಿ ಜೀವನಮಾಡಿರಿ ಎಂದು ಅಪ್ಪಣೆ ಕೊಟ್ಟನು ಕೆಲವು ದಿನಗಳವರೆಗೆ ಎಲ್ಲರೂ ಅರಸನ ಅಪ್ಪಣೆಯನ್ನು ಕೈಕೊಂಡು ವ್ಯಾಪಾರದಿಂದ ಲಾಭ ಪಡೆಕೊಂಡರು ಒಂದುದಿನ ಛಳಿ ಜೋರಾಗಿತ್ತು ಆದಕಾರಣ ಒಬ್ಬನು ಸೌದೆಯನ್ನು ತೆಗೆದು ಕಾಯಿದನು ಇನ್ನೊಬ್ಬನು ಅದೇಪ್ರಕಾರ ಮಾಡಿದನು ಮತ್ತೊಬ್ಬನು ಅಡಿಗೆ ತಿಂದನು ಹೀಗೆ ಎಲ್ಲರೂ ಅರಸನ ಆಜ್ಞೆಯಂ ಉಲ್ಲಂಘಿಸಿ ಮತ್ತರಾದರು ಆದಿನ ರಾತ್ರಿಯಲ್ಲಿ ಕತ್ತಲು ಬಹಳವಾಗಿತ್ತು ಛಳಿ ಜೋರಾಗಿತ್ತು ದೊಡ್ಡದೊಡ್ಡ ತೆರೆಗಳು ಬೀಸಿದವು ಹಡಗವನ್ನು ಯಾರೂ ನೋಡಿಕೊಳ್ಳದಕಾರಣ ಒಂದು ಬಂಡೆಗೆ ತಗಲಿ ಚೂರು ಚೂರಾಯಿತು ಅನೇಕರು ಸತ್ತುಹೋದರು ಕೆಲವರು ದೋಣಿಯಮೇಲೂ, ಹಲಿಗೆಗಳ ಮೇಲೂ ಕೂತುಕೊಂಡರು ಬೆಳಗಾದರೂ ಛಳಿ ಜೋರಾಗಿತ್ತು ಅದಾಗ್ಯೂ ಇವರ ಮತ್ತು ಆರಿಯಲಿಲ್ಲ ತಾವುಕೂತಿರುವ ಜಾಗವೇ ಶ್ರೇಷ್ಠವೆಂದು ತಿಳುಕೊಂಡರು ಈ ಹಡಗಿನ ಗಂಡಾಂತರಸ್ಥಿತಿಯು ಅರಸನಿಗೆ ತಿಳಿಯಲು, ಆ ಪ್ರೀತಿಯುಳ್ಳ ಅರಸನು ಎಂದಿಗೂ ಮುಳುಗಲಾರದ ಒಂದು ದೋಣಿಯನ್ನು ಕೊಡುಕೊಂಡು ತನ್ನ ಪ್ರಿಯ ಮಗನವಶಕ್ಕೆ ಕೊಟ್ಟು ಆ ಜನರ ಪ್ರಾಣಗಳನ್ನು ನೀನು ಉಳಿಸು ಎಂದು ಕಳುಹಿಸಿದನು ಆ ಯುವರಾಜನು ಬಹು ವೇಗದೊಂದಿಗೆ ಬಂದು ಆ ಹಡಗು ಮುಳುಗಿದ ಸ್ಥಳದಲ್ಲಿದ್ದ ಜನರನ್ನು ಕಂಡು ನೀವು ಈ ದೋಣಿಯಲ್ಲಿ ಕೂತುಕೊಳ್ಳಿ ನಿಮ್ಮನ್ನು ದಡಕ್ಕೆ ಸೇರಿಸುತ್ತೇನೆಂದು ಕರೆದನು ಕೆಲವರು ಇವನು ಚಿಕ್ಕವನು ನಮ್ಮನ್ನು ಸಾಯಿಸುವಂತೆ ಮಾಡುತ್ತಾನೆ ಎಂದು ಹಾಸ್ಯಮಾಡಿದರು ಇನ್ನು ಕೆಲವರು ಆ ದಯಾಪೂರ್ಣ ಅರಸನಿಗೆ ಮುಖ ಹ್ಯಾಗೆ ತೋರಿಸೋಣ ಅಂದರು ಇನ್ನೂ ಕೆಲವರು ಈ ದೋಣಿಗಳಿಂದ ನಾವೇ ತಪ್ಪಿಸಿಕೊಳ್ಳುತ್ತೇವೆ ನಿನ್ನ ಸಹಾಯ ನಮಗೇನಾಬೇಕು ಅಂದರು ಕೆಲವರು ಮಾತ್ರ ಕೂತುಕೊಂಡು ಪ್ರಾಣ ಉಳಿಸಿಕೊಂಡರು

ಈ ಮೇಲಿನ ಕಥೆಯಿಂದ ನಾವೆಲ್ಲರೂ ತಿಳಿಯತಕ್ಕ ಕೆಲವು ಮುಖ್ಯಾಂಶಗಳಿವೆ ಎಂದು ಗೊತ್ತಾಗುತ್ತದೆ ಭಗವಂತನು ನಮ್ಮ ಅರಸನು ನಾವು ಆತನ ಪ್ರಜೆ ಅರಸನು ಹ್ಯಾಗೆ ವ್ಯಾಪಾರಕ್ಕೆ ಕಳುಹಿಸಿದನೋ ಹಾಗೆ ದೇವರು ನಮ್ಮನ್ನು ಈ ಭೂಲೋಕಕ್ಕೆ ಕಳುಹಿಸಿದ್ದಾನೆ ನಾವೆಲ್ಲರೂ ಮಾಡಬೇಕಾದ ವ್ಯಾಪಾರ ಸತ್ಯದ ವ್ಯಾಪಾರ ಅಥವಾ ಸದ್ವ್ಯಾಪಾರ ಇದರಲ್ಲಿ ಮೊದಲನೆಯ ದೇವರ ವಿಷಯವಾದದ್ದು ಅಂದರೆ ನಮಗೆ ಇರುವ ಶಕ್ತಿ ಆಸ್ತಿ ಆತನಿಂದಲೇ ಬಂದದೆ ಹಾಗಾದರೆ ಇವುಗಳನ್ನು ಕೊಟ್ಟವನು ಭಗವಂತನೆಂದೂ ಇವುಗಳಿಂದ ಆತನನ್ನು ಸಂತೋಷಪಡಿಸಬೇಕೆಂದೂ ತಿಳಿಯುವದಿಲ್ಲವೆ? ಆತನಿಗೆ ಕೊಡಬೇಕಾದ ಆರಾಧನೆಯನ್ನು ಭಕ್ತಿಯಿಂದಲೂ ಸತ್ಯದಿಂದಲೂ ಪೂರ್ಣಹೃದಯದಿಂದಲೂ ಕೊಡಬೇಕು ಆತನು ಶುದ್ಧನೂ, ಪ್ರೀತಿಯುಳ್ಳವನೂ ಆಗಿರುವದರಿಂದ ನಾವುಗಳು ಸಹ ಇರಬೇಕು ಎರಡನೇದು—ನಮ್ಮ ನೆರೆ ಹೊರೆಯವರಲ್ಲಿ ಪ್ರೀತಿಯೂ ಸ್ನೇಹವೂ ವಾತ್ಸಲ್ಯವೂ ಉಳ್ಳವರಾಗಿರಬೇಕು ಬಡವರನ್ನೂ ದಿಕ್ಕಿಲ್ಲದವರನ್ನೂ ಕಂಡರೆ ಸಹಾಯ ಮಾಡಬೇಕು ಯಾರಿಗೂ ಕೇಡನ್ನು ಮಾಡಕೂಡದು ಈ ರೀತಿಯಲ್ಲಿ ನಡೆಯುವದೇ ಸದ್ವ್ಯಾಪಾರವಾಗಿದೆ ಇವುಗಳಿಗೆ ವ್ಯತಿರಿಕ್ತವಾಗಿರುವದೇ ದುರ್ವ್ಯಾಪಾರ ಅಥವಾ ಮತ್ತರಾಗಿರುವರು ಒಬ್ಬೊಬ್ಬರು ಮೇಲಿನ ಕಾರ್ಯಗಳನ್ನು ಆಲೋಚಿಸಿದರೆ ಎಲ್ಲರೂ ಅನೇಕ ತಪ್ಪು ನಡೆದಿರುತ್ತಾರೆಂದು ಗೋಚರವಾಗುತ್ತೆ ಮತ್ತರು ಅಥವಾ ನಿಷ್ಕಾಳಜಿಯರು ಹ್ಯಾಗೆ ಹಡಗಿನ ನಿಜಸ್ಥಿತಿಯನ್ನು ತಿಳಿ

ಯಾಲಿಲ್ಲವೋ ಹಾಗೆಯೇ ನಾವು ಪಾಪದಿಂದ ಮತ್ತರಾಗಿ ಉತ್ತಮ ವ್ಯಾಪಾರಗಳಾಗದೆ ದುರ್ವ್ಯಾಪಾರ ಮಾಡಿದ್ದೇವೆ ಮೋಸಗಳ ಚೋರತ್ವ ಜಾರತ್ವ ವಿಗ್ರಹಾರಾಧನೆ ಸುಳ್ಳುಸಾಕ್ಷಿ ಅಹಂಕಾರ ಇತ್ಯಾದಿ ಕಾರ್ಯಗಳನ್ನು ಮಾಡಿದ್ದೇವೆ ಇಂಥವುಗಳನ್ನು ಮಾಡಿದ್ದೇವೆಂಬೂ ಇವು ಅಯೋಗ್ಯವಾದವುಗಳೆಂದೂ ನಮ್ಮ ನಮ್ಮ ಮನಸ್ಸಾಕ್ಷಿಯು ಖಂಡಿತವಾಗಿ ಹೇಳುತ್ತದೆ ದುರ್ವ್ಯಾಪಾರ ಮಾಡಿದ ಆ ಜನರು ಹ್ಯಾಗೆ ಮರಣಕ್ಕೆ ಪಾತ್ರರಾದರೋ ಹಾಗೆಯೇ ನಾವುಗಳೂ ನರಕವೆಂಬ ಭಯಂಕರವಾದ ಹಂಡಿಯ ಸಮುದ್ರಕ್ಕೆ ಗುರಿಯಾಗಿದ್ದೇವೆ

ಆ ಅರಸನು ಹ್ಯಾಗೆ ದೋಣಿಯನ್ನು ಕಳುಹಿಸಿದನೋ ಹಾಗೆಯೇ ಭಗವಂತನು ಜೀವದ ದೋಣಿಯನ್ನು ಕಳುಹಿಸಿದನು ಪಾಪದಿಂದ ಕೆಟ್ಟುಹೋದ ಜನರನ್ನು ಉದ್ಧಾರಮಾಡುವವರು ಯಾರೂ ಇಲ್ಲಿಲ್ಲ ಆದರೆ ದೇವರು ತನ್ನ ಅನಾದಿಸುತನನ್ನು ಈ ಲೋಕಕ್ಕೆ ಜೀವದ ದೋಣಿಯಾಗಿ ಕಳುಹಿಸಿದನು ಜನರು ತಮ್ಮ ಶಕ್ತಿಯಿಂದಲೂ ಉಪಾಯಗಳಿಂದಲೂ ನರಕದ ದಂಡನೆಯನ್ನು ತಪ್ಪಿಸಿಕೊಳ್ಳಲಾರದೆ ಇದ್ದರು ಆದರೆ ಕ್ರಿಸ್ತನು ಎಲ್ಲರನ್ನೂ ರಕ್ಷಿಸುವ ದೋಣಿಯಾಗಿ ಬಂದನು ತನ್ನ ಉಪದೇಶ ಭಯಸಾಧನೆ ಅದ್ಭುತಗಳಿಂದ ತನ್ನ ಬಳಿಗೆ ಕರೆದನು ಆದರೆ ಅನೇಕರು ಆತನನ್ನು ಹಾಸ್ಯಮಾಡಿ ತಳ್ಳಿಬಿಟ್ಟರು ಇನ್ನು ಕೆಲವರು ತಮ್ಮ ಶಕ್ತಿ ಆಚಾರ ಪುಣ್ಯಗಳನ್ನು ನಂಬಿಕೊಂಡು ಆತನನ್ನು ಬಿಟ್ಟರು ಯಾಕಂದರೆ ಪಾಪ ಅಜ್ಞಾನ ಮತ್ತು ಅಕ್ರಮ ಇವೇ ಅವರಿಗೆ ಪ್ರಿಯವಾಗಿತ್ತು

ಕೆಲವರು ಯುವರಾಜನ ದೋಣಿಯಲ್ಲಿ ಕೂತುಕೊಂಡರು ಹಾಗೆಯೇ ಕ್ರಿಸ್ತನು ಲೋಕದಲ್ಲಿ ಅವತಾರವೆತ್ತಿದಾಗ ಮೊದಲು ಕೆಲವು ಶಿಷ್ಯರು ಆತನನ್ನು ನಂಬಿ ಮೋಕ್ಷದ್ವಾರಕ್ಕೆ ಸಿದ್ಧರಾದರು ತರುವಾಯ ಕ್ರಿಸ್ತನು ತನ್ನನ್ನು ಬಲಿಯಜ್ಞವಾಗಿ ಜನರಿಗೆ ಕೊಟ್ಟು ಉತ್ಥಾನನಾಗಿ ಶಿಷ್ಯರಿಗೆ ದರ್ಶನನಾಗಿ ನೀವು ಲೋಕದ ಎಲ್ಲಾ ಜನರಿಗೆ ಈ ಶುಭಸಂಗತಿ ತಿಳಿಸಿರಿ ಯಾರು ಭಕ್ತಿ ವಿಶ್ವಾಸಗಳನ್ನು ಹೊಂದಿ ನನ್ನನ್ನು ಭಜಿಸುತ್ತಾರೋ ಅವರೆಲ್ಲರಿಗೆ ನಾನು ಜೀವದ ದೋಣಿಯಾಗಿ ಮೋಕ್ಷ ರೇವಿಗೆ ಸೇರಿಸುತ್ತೇನೆ ಅಂದನು ಪ್ರಾರಂಭದಲ್ಲಿ ಕೊಂಚವಾದ ಮಾತ್ರ ಆತನ ಶಿಷ್ಯರಾದರು ಆದರೆ ಈ ಕಾಲದಲ್ಲಿ ಎಲ್ಲಾ ದೇಶಗಳಲ್ಲಿಯೂ ಆತನ ಭಕ್ತರು ಇದ್ದಾರೆ ಇವರ ಸಂಖ್ಯೆ ಹೆಚ್ಚುತ್ತಾ ಇದೆ ಯೂರೋಪ್ಯರು ಅಮೇರಿಕದವರು ಅಲ್ಲದೆ ಕಿರಾತಕರಾದ ಆಫ್ರಿಕರು ಫಿಜೀ ಮೊದಲಾದ ದ್ವೀಪಗಳವರು ಈ ಪುಣ್ಯಗುರುವನ್ನು ಆಶ್ರಯಿಸಿ ತಮ್ಮ ಕ್ರೂರತ್ವವನ್ನು ಬಿಟ್ಟಿದ್ದಾರೆ ಎಲ್ಲೆಲ್ಲಿಯೂ ಕ್ರಿಸ್ತಭಕ್ತರು ಈ ಜೀವದ ಗುರುವನ್ನು ಸಾರುತ್ತಾ ಬರುತ್ತಾರೆ ಆ ಮುರುಕಾದ ಹಡಗಿನಲ್ಲಿದ್ದ ಜನರು ಹ್ಯಾಗೆ ಅರಸನ ಮಗನನ್ನು ಹಾಸ್ಯಮಾಡಿದರೋ ಪಾಪದಲ್ಲಿ ಆಸಕ್ತರಾದವರೂ ಹಾಗೆಯೇ ಹಾಸ್ಯಮಾಡುತ್ತಾರೆ ನಮ್ಮ ಗುರುಗಳು ದೇವತೆಗಳು ಪುರಾಣಗಳು ಸಾಕಾಗದೆ ಕ್ರಿಸ್ತನೆಂಬ ದೋಣಿ ಬೇರೆ ಅನ್ನುತ್ತಾರೆ ಯಾರು ಏನು ಅನ್ನುತ್ತಾರೂ ಅವರಿಗೆ ನಷ್ಟ ತಪ್ಪಲಾರದು ಅವರ ಭಕ್ತಿಪೂರ್ವಕವಾಗಿ ಆ ಜೀವದ ದೋಣಿಯನ್ನು ಆಶ್ರಯಿಸಿ ಸತ್ಯವ್ರತಿಗಳವರ ಮೋಕ್ಷದ ರೇವಿಗೆ ಸೇರುವರಲ್ಲ ಸಂದೇಹವಿಲ್ಲ

ಅಕ್ರಮ.

ನಮ್ಮ ವೃತ್ತಾಂತ ಪತ್ರಿಕೆಯನ್ನು ಚಂದಾದಾರರುಗಳಲ್ಲಿ ಎಲ್ಲರಿಗೂ ತಪ್ಪದೆ ಪ್ರತಿವಾರವೂ ಕ್ರಮವಾಗಿ ರವಾನಿಸುತ್ತೇವೆ ಕೆಲವು ಮಂದಿ ಚಂದಾದಾರರು ತಮಗೆ ಪತ್ರಿಕೆಗಳು ಸಕಾಲಕ್ಕೆ ತಲುಪುವದಿಲ್ಲವೆಂದು ಆಗಾಗ್ಯೆ ಬರೆಯುತ್ತಾರೆ ಕೆಲವರಿಗೆ ತಲುಪುವದೇ ಇಲ್ಲವೆಂದು ಬರೆಯುತ್ತಾರೆ ಇದರಿಂದ ಅಂಥವರ ವಿಳಾಸಗಳು ತಪ್ಪಾಗಿರಬಹುದು, ಇಲ್ಲವೆ ಸಬ್ ಆಫೀಸಿನ ಜವಾನರು ಆಯಾ ಕಡೆಗಳಲ್ಲಿ ಸರಿಯಾಗಿ ತಿಳಿದು ನಡಿಸದೆ ಇರಬಹುದು ಎಂಬೀ ಎರಡು ಊಹೆಗಳು ಹುಟ್ಟುತ್ತವೆ ಪತ್ರಿಕೆಗಳು ಯಾರ್ಯಾರಿಗೆ ಸಕಾಲಕ್ಕೆ ತಲುಪುವದಿಲ್ಲವೋ ಅಂಥವರು ತಮ್ಮ ಸರಿಯಾದ ವಿಳಾಸವನ್ನು ಚೆನ್ನಾಗಿ ಬರೆದು ತಿಳಿಸಬೇಕು ಮತ್ತು ಸಬ್ ಆಫೀಸಿನ ಪೋಸ್ಟುಮಾಸ್ಟರುಗಳು ತಮ್ಮ ತಮ್ಮ ಡಿವಿಜನ್ ಪ್ರಾಂತಗಳಿಗೆ ಸರಿಯಾಗಿ ಪ್ರತಿ ವಾರವೂ ಕಳುಹಿಸಿಕೊಡಬೇಕು ಎಂಬದಾಗಿ ಈ ಮೂಲಕ ಅವರವರಿಗೆ ತಿಳಿಯಪಡಿಸುತ್ತೇವೆ

ಎಡಿಟರ್,
ವೃತ್ತಾಂತ ಪತ್ರಿಕೆ

ಒಳದೇಶ ವೃತ್ತಾಂತಗಳು.

—(೨೦)—

ಮೈಸೂರು ಪಟ್ಟಣದಲ್ಲಿ ಕಳೆದ ಆಗಸ್ಟಿನಲ್ಲಿ ೯೯ ಜನನವೂ, ೧೧೫ ಮರಣವೂ ಆಯಿತು

ಹರಿಹರದ ಬಾಲಿಕಾಪಾಠಶಾಲೆಯ ರಿಪೋರ್ಟನ್ನು ಕಾಲ ಮೀರಿ ಬಂದದ್ದರಿಂದ ಪ್ರಕಟಿಸಲು ಅವಕಾಶವಿಲ್ಲವಾಗಿದೆ

ದೀಪಾವಳಿ ಹಬ್ಬವಾದನಂತರ ಕ್ರೀವರ್ಟ್ ಮಹಾರಾಜರವರು ಬೊಂಬಾಯಿಗೆ ಚಿತ್ತೈಸುತ್ತಾರೆಂದು ಆಗಲೇ ವದಂತಿ ಹುಟ್ಟಿದೆ

ಈಸಲದ ದಸರಾಹಬ್ಬದ ಉತ್ಸವ ಇದೇ ತಿಂಗಳು ೧೦ನೆ ತಾರೀಖು ಆಗಾಯಿತು ೧೮ನೇ ತಾರೀಖುವರಿಗೆ ನಡ್ಯೂರೀ ರೀತು ಮಾಡಲಾಗಿದೆ

ಮ|| ರಂಗನಾಥರಾಯರು ಇಲ್ಲಿನ ಟೌನ್ ಮ್ಯಾಜಿಸ್ಟ್ರೇಟ ಛಾರ್ಜನ್ನು ವಹಿಸುವರೆಂದು ಇಲ್ಲಿನ ಹೆರಲ್ಡ್ ಪತ್ರಿಕೆಯು ತಿಳಿಸುತ್ತದೆ

ಮೊನ್ನೆ ನಡೆದ ಮ್ಯೂನಿಸಿಪಲ್ ಮಿಟಿಂಗಿನಿಂದ ಕಳೆದ ಆಗಸ್ಟು ತಿಂಗಳಲ್ಲಿ ಮ್ಯೂನಿಸಿಪಾಲಿಟಿಗೆ ಎಲ್ಲಾ ಬಾಬ್ತುಗಳಿಂದ ೪,೩೦೮ ಚಿಲ್ಲರೆ ರೂಪಾಯಿಗಳ ಉತ್ಪತ್ತಿಯಾಯಿತೆಂತಲೂ, ಅದರಲ್ಲಿ ೫,೬೦೧ ರೂಪಾಯಿ ಖರ್ಚಾಯಿತೆಂತಲೂ ತಿಳಿದು ಬಂತು

ನಮ್ಮ ಶ್ರೀಮನ್ಮಹಾರಾಜರವರಿಗೆ ಪ್ರಯಾಣಮಾಡುವಾಗ್ಯೆ ತಮ್ಮ ಸ್ವಂತಗಾಡಿಗಳೇ ಇರಬೇಕೆಂದು ಗೊತ್ತುಮಾಡಿ ಎಲ್ಲಾ ರೈಲ್ವೆಗಳಿಗೂ ಉಪಯೋಗವಾಗುವಂತೆ ಎರಡು ಸಲೂನ್ ಗಾಡಿಗಳನ್ನು ಬಿ ಬಿ ಸಿ ರೈಲ್ವೆ ಕಂಪೆನಿಯವರಿಂದ ತಯಾರ್ಮಾಡಿಸುತ್ತಲಿದ್ದಾರೆ ಇದಕ್ಕಾಗಿ ೫೦,೦೦೦ ರೂಪಾಯಿ ಖರ್ಚಾಗಬೇಕಾಗಿದೆ

ಇಲ್ಲಿನ ಬಾರಿ ಲೈಸೆನ್ಸಿಗೆ ಸರ್ಕಾರದವರು ಕಟ್ಟಿಸಿಕೊಟ್ಟಿರುವ ಮನೆಗಳು ೩೦ ಇರುತ್ತವೆಯಷ್ಟೆ ಇವುಗಳಲ್ಲಿನ ಕಟ್ಟಡವನ್ನೂ ಮತ್ತು ಗೊಬ್ಬರ ಮುಂತಾದ್ದನ್ನೂ ಸಾಗಿಸುವದಕ್ಕಾಗಿ ಇಬ್ಬರು ಇನ್ಸ್ಪೆಕ್ಟರ್ ಜವಾನರನ್ನು ಗೊತ್ತು ಮಾಡಬೇಕೆಂತಲೂ ಅಲ್ಲಿನ ವಿಚಾರಣೆಯನ್ನು ಮ್ಯೂನಿಸಿಪಾಲಿಟಿಯವರೇ ವಹಿಸತಕ್ಕದ್ದೆಂತಲೂ ತೀರ್ಮಾನಿಸಿರುತ್ತಾರೆ

ಮೈಸೂರು ಮ್ಯೂನಿಸಿಪಲ್ ರೆಗ್ಯುಲೇಷನ್ನಿನ ಸೆಕ್ಷನ್ ಪ್ರಕಾರ ಬೈಲಾಗಳನ್ನು ಗೊತ್ತುಮಾಡುವದಕ್ಕೆ ಮ|| ಸುಬ್ಬರಾಯರು, ಮ|| ರಾಮಣ್ಣನವರು, ಮ|| ತೊಟ್ಟಿ ರಂಗಣ್ಣನವರು, ಮ|| ವೆಂಕಟಕೃಷ್ಣಯ್ಯನವರು ಮ|| ಅಣ್ಣಯ್ಯಪಂಡಿತರು ಇವರುಗಳು ಒಂದು ಸಬ್ ಕಮಿಟಿಯಾಗಿರಬೇಕೆಂತಲೂ ಇದಕ್ಕೆ ಮ|| ಕಾಳಪ್ಪನಾಯಡುರವರು ಪ್ರೆಸಿಡೆಂಟರಾಗಿರಬೇಕೆಂತಲೂ ಗೊತ್ತಾಯಿತು

ನಂಜರಾಜ ಬಹದ್ದೂರರವರು ಛತ್ರದ ತೊಟ್ಟಿಗಾಗಿ ೩೦೦ ರೂಪಾಯಿ ಕೊಡಬೇಕಾಗಿತ್ತು ಇದಕ್ಕೆ ತಮ್ಮ ತೋಟದಲ್ಲಿರುವ ಕೊಳಕ್ಕೆ ಬಿಡುವ ನೀರನ್ನು ಎಲ್ಲಾ ಜನರೂ ತೆಗೆದುಕೊಂಡು ಹೋಗುತ್ತಲಿರುವದರಿಂದಲೂ ಅದನ್ನು ತಾವು ಉಪಯೋಗ ಮಾಡದೆ ಇರುವದರಿಂದಲೂ ಹಣವನ್ನು ತಪ್ಪ ಕೊಡುವದಿಲ್ಲವೆಂದಾಗಿ ಅರ್ಜಿ ಬರೆದಿದ್ದರು ಈ ವಿಷಯವು ಮ್ಯೂನಿಸಿಪಲ್ ಮಿಟಿಂಗಿನಲ್ಲಿ ಚರ್ಚೆಯಾಗಿ ಅದರಿಂದ ಹಣ ಕೊಡಬೇಕೆಂತಲೂ ಆ ಕೊಳಕ್ಕೆ ನೀರು ಬರುವ ನಲ್ಲಿಯನ್ನು ಬಂದುಮಾಡಬೇಕೆಂತಲೂ ತೀರ್ಮಾನವಾಯಿತು

ಇಲ್ಲಿನ ಸಂಸ್ಕೃತ ಪಾಠಶಾಲೆಯಲ್ಲಿ ವಿದ್ಯಾಂಸರುಗಳಿಗೆ ಅಗ್ರತಾಂಬೂಲದ ವ್ಯವಹಾರವು ಬಿದ್ದಿರುವದರಿಂದಲೂ ಕೆಲವು ದಿನಗಳಿಂದ ಪ್ರತಿಸಾಯಂಕಾಲವೂ ಪಾಠಶಾಲೆಯಲ್ಲಿ ನಡೆಯುವ ಸಭೆಯಲ್ಲಿ ಅಡಿಕೆಲೆ ಕೊಡುವ ಪದ್ಧತಿಯನ್ನೇ ಮನ್ನಿಸಾ ದಿರುವದಾಗಿಯೂ ಕೇಳುತ್ತೇವೆ ಸಕಲ ಶಾಸ್ತ್ರಗಳಲ್ಲೂ ನಿಪುಣನಾಗಿ ಈಗಿನ ಪ್ರಾಚೀನ ಧರ್ಮವನ್ನು ತಿಳಿದು ಶ್ರೀಮನ್ಮಹಾರಾಜರವರಲ್ಲಿಯೂ ದಿವಾನರೇ ಮುಂತಾದ ಘನಾಧಿಕಾರಿಗಳಲ್ಲಿಯೂ ಗೌರವಿಸಲ್ಪಡುತ್ತಲಿರುವಂಥ ಇಲ್ಲಿನ ವಿದ್ವಾಂಸರು ಅಲ್ಪವಿಷಯಕ್ಕಾಗಿ ಹೀಗೆ ಹೋರಾಡುತ್ತಲಿರುವದು ಯಥಾರ್ಥವಾಗಿದ್ದಲ್ಲಿ ಅತ್ಯಂತ ಶೋಚನೀಯವು ಇದ್ದೀ ಸಣ್ಣ ವಿಷಯಗಳನ್ನು ಚೆನ್ನಾಗಿ ತಿಳಿದು ಮುಂದೆ ವಿಜ್ಞಾಪಿಸಿಕೊಳ್ಳುವೆವು

ಈ ವಾರದಲ್ಲಿ ಎರಡು ಮೂರು ಸಲ ಸರ್ವೋತ್ತಮವಾದ ಮಳೆಯಾಯಿತು ಜನರೆಲ್ಲರೂ ಆನಂದಿಸುತ್ತಲಿದ್ದಾರೆ ಆದರೇನು ವರ್ತಕರು ಪೇರಿ ಧಾನ್ಯಾದಿಗಳನ್ನು ಇಳಿಸುವದಿಲ್ಲ ಸಾಲದ್ದಕ್ಕೆ ದವಸವು ಸ್ವಲ್ಪವೂ ಬಂತು ಅವರ ಸುಗ್ಗಿ ಹೋ ಸುಗ್ಗಿ ಅವರು ಹೇಳಿದ್ದೇ ಧಾರಣೆ ಬಡಜನರುಗಳ ಜೀವನವು ಹ್ಯಾಗೆ ನಡೆಯಬೇಕೆಂದು ಕೇಳುವವರೇ ದಿಕ್ಕಿಲ್ಲದಿದ್ದಲ್ಲಿ ಈ ವಿಷಯದಲ್ಲಿ ಸರ್ಕಾರದವರು ನಿಗಾ ಕೊಡದೆ ಸುಮ್ಮನಿರುವದು ಸಮಂಜಸವಲ್ಲ ಮಂಗಳವಾರದ ಸಾಯಂಕಾಲ ಸುರಿದ ಮಳೆಯು ವಾತ್ಸಾಸ್ಪತ್ರೆ ಆಫೀಸು ಮಾರ್ಕೆಟ್ ಎಲ್ಲಕ್ಕೂ ಹೊರತಾಗಿ ಮಣ್ಣು ಬಹು ಗ್ಗರ ಜಾಗಗಳಿಗೆ ಅತ್ಯಂತ ಕಷ್ಟವಾಗಿಯೂ ಹಾನಿಯಾಯಿತು ಪಟ್ಟಣದ ನಡುವಿನಲ್ಲಿಯೇ ೬–೮ ಅಂಗುಲ ನೀರು ನಿಂತಿತ್ತು ಹೊಸಮನೆಗಳೆಲ್ಲಾ ಹಳೆಯನ್ನುಗಳಿಗಿಂತ ಹೆಚ್ಚಾಗಿ ಕೆಟ್ಟುಹೋಗಿವೆ

ಕಳೆದ ಭಾನುವಾರ ಸಾಯಂಕಾಲ ಟೌನ್ ಹಾಲಿನಲ್ಲಿ ಅನೇಕ ಮಂದಿ ದೊಡ್ಡಮನುಷ್ಯರು ಸಭೆಸೇರಿದ್ದರು ಸಭೆಯಲ್ಲಿ ಮಂಗಳೂರು ಮುಂತಾಗಿ ಗಳನ್ನು ತಯಾರ್ಮಾಡುವ ಒಂದು ಕಾರ್ಖಾನೆಯನ್ನು ಸ್ಥಾಪಿಸತಕ್ಕ ವಿಷಯವನ್ನು ಚರ್ಚಿಸಿದರು ಆದರೆ ಕೆಲವು ಮುಖ್ಯವಾದ ಅಂಶಗಳನ್ನು ಗೊತ್ತುಮಾಡುವದಕ್ಕಾಗಿ ಸಾಕಾದಷ್ಟು ಮಂದಿ ಸಾಹುಕಾರರೇ ಮುಂತಾದ ಸರ್ಕಾರದ ಅಧಿಕಾರಿಗಳು ಹಾಜರಾಗಿರಲಿಲ್ಲವಾದಕಾರಣ ಆ ದಿವಸ ಮಿಟಿಂಗನ್ನು ಬರಖಾಸ್ತುಮಾಡಿ ಆದಿನ ಸಾಯಂಕಾಲ ನಡೆಯುವಂತೆಯೂ ಆಗ್ಯೆ ಎಲ್ಲರನ್ನೂ ಕರೆಸುವಂತೆಯೂ ಮಾಡಿದರು ಕೆಲವು ಮಂದಿ ದೊಡ್ಡಮನುಷ್ಯರು ನಿರ್ಧರಿಸಿದರು ಈ ಕಾರ್ಖಾನೆಯಲ್ಲಿ ಹಂಚನ್ನು ತಯಾರ್ಮಾಡಿಸುವ ವಿಧಾನಗಳನ್ನು ಚೆನ್ನಾಗಿ ತಿಳಿದು ಬರತಕ್ಕವರು ಈಗ ಆಕಸ್ಮಾತ್ತಾಗಿ ಇಲ್ಲಿಗೆ ಬಂದಿರುವದರಿಂದ ದಸರಾ ದಾದರೊಂದು ರೀತಿಯಾಗಿ ಆದರೆನ್ನು ಇಲ್ಲಿಯೇ ನಿಲ್ಲಿಸಿಕೊಂಡು ಅವರಿಗೆ ಈ ವಿದ್ಯಾದನ್ನೆಲ್ಲಾ ಒಪ್ಪಿಸಿ ಜಾಗ್ರತೆಯಲ್ಲಿ ಕೆಲಸಗಳನ್ನು ಪ್ರಾರಂಭಿಸದೆ ಇರಲಾರರೆಂತಲೂ ಒದಗಿರುವ ಸಮಯವನ್ನು ಚೆನ್ನಾಗಿ ಉಪಯೋಗಿಸಿ ಹ್ಯಾಗಾದರೂ ಒಂದು ಕಾರ್ಖಾನೆಯನ್ನು ಸ್ಥಾಪಿಸಿ ಜನರಿಗೆ ಜೀವನವನ್ನು ಕಲ್ಪಿಸಿ ಕೊಟ್ಟಾರೆಂತಲೂ ನಿರೀಕ್ಷಿಸುತ್ತೇವೆ

ನಂಜನಗೂಡು ವೃತ್ತಾಂತ.

ಶ್ರೀಮನ್ ಮಹಾರಾಜರವರು—ಕಳೆದ ಆಗಸ್ಟ್ ೨೬ ನೇ ತಾರೀಖು ಶ್ರೀಮನ್ ಮಹಾರಾಜರವರು ನಂಜನಗೂಡಿಗೆ ದಯಮಾಡಿಸಿದ್ದರು ಮೊದಲು ಹೊಸದಾಗಿ ಹಿಡಿಯಲ್ಪಟ್ಟ ಆನೆಗಳನ್ನು ನೋಡುವದಕ್ಕೆ ಹೋಗಿ ಅಲ್ಲಿನ ಹತ್ತಿರವಿರುವ ಮೈದಾನಕ್ಕೆ ದಯಮಾಡಿ ಸುಮಾರು ಎರಡು ಘಂಟೆಗಳ ಹೊತ್ತು ಅಲ್ಲಿನ ಕಾರ್ಯಗಳನ್ನೆಲ್ಲಾ ಪರಾಂಬರಿಸಿದರು ಆ ಕಾಲದಲ್ಲಿ ಹಳೇ ಆನೆಗಳ ಜೊತೆ ಆನೆಗಳ ಜೊತೆಗೆ ನಿಲ್ಲಿಸಲ್ಪಟ್ಟದ್ದವು ಕಡೆಯಲ್ಲಿ ಒಂದು ಆನೆಯು ಶ್ರೀಮನ್ ಮಹಾರಾಜರವರಿಗೆ ಹಾರವನ್ನು ಒಪ್ಪಿಸಿತು ನಂತರ ಸಂತೋಷಕರವಾದ ಸಲ್ಲಾಪಗಳಾದಮೇಲೆ ಆ ಸ್ಥಳವನ್ನು ಬಿಟ್ಟು ದೇವಸ್ಥಾನಕ್ಕೆ ದಯಮಾಡಿಸಿ ಅಲ್ಲಿಯ ಮಾನ್ಯತೆಗಳನ್ನು ಸ್ವೀಕರಿಸಿ ಸುಮಾರು ಆರು ಘಂಟೆಗೆ ರಾಜಧಾನಿಗೆ ಚಿತ್ತೈಸಿದರು

ದೇವಸ್ಥಾನದ ಶ್ರೀಯವರು—ಇಲ್ಲಿರತಕ್ಕಂಥ ನಂಜುಂಡೇಶ್ವರನ ಗುಡಿಗೆ ವೇದವ್ಯಾಸ ಶ್ರೀಯವರು ಹೋಗಿ ಪೂಜೆಯ ಸಮಯದಲ್ಲಿಯೂ ಇನ್ನೂ ಕೆಲವು ಸಮಯಗಳಲ್ಲಿಯೂ ಹಾಜರಾಗುತ್ತಿದ್ದದ್ದು ಪದ್ಧತಿಯಾಗಿತ್ತು ಆದರೆ ಈಚೆಗೆ ಅಂಥಾ ಶ್ರೀಯವರು ದೇವಸ್ಥಾನದಲ್ಲಿ ಪ್ರವೇಶಿಸುವದು ಭಕ್ತರಿಗೆ ಅಂತಕವೇ ಹೊರತು ಪ್ರಯೋಜನವಿಲ್ಲವೆಂದು ತಿಳಿದು ಮ|| ರಾ|| ಅನಂತಸ್ವಾಮಿಯೂ ಲಕ ವಾಸುದೇವರ ಅಧಿಕಾರಿಯು ಸೂಚಿಸಿದ್ದರಿಂದ ಅವರು ಒಂದುದಿನ್ಯೆ ದೇವಸ್ಥಾನದ ಒಳಗೆ ಕೆಲವು ಕಟ್ಟುಗಳು ಸರಿಯಾಗಿಲ್ಲವೆಂದು ಹೊಸದಾಗಿ ಅಪ್ಪಣೆ ಕೊಟ್ಟದ್ದಲ್ಲದೆ ಆ ಹೊತ್ತಿನಿಂದ ಮೇಲೆ ತಿಳಿಸಲ್ಪಟ್ಟ ಶ್ರೀಯವರು ದೇವಸ್ಥಾನದಲ್ಲಿ ಪ್ರವೇಶವಾಗದಂತೆ ಅಪ್ಪಣೆ ಕೊಟ್ಟಿದ್ದರೆ ಆದರೆ ಈ ವೇದವ್ಯಾಸ ಶ್ರೀಯವರು ತಮ್ಮ ಅಧಿಕಾರದ ಅನುಮತಿಯಿಂದ ಇದನ್ನು ನಡೆಯಿತೆಂಬ ಚಿಂತೆಯಿಂದಲೋ ಅಥವಾ ದೇವರದರ್ಶನ ತಪ್ಪಿತೆಂಬ ಶೋಕದಿಂದಲೋ ಶ್ರೀಮನ್ ಮಹಾರಾಜರವರು ದಯಮಾಡಿಸಿದ್ದಾಗ್ಯೆ ಒಂದು ಅರ್ಜಿಯನ್ನು ಒಪ್ಪಿಸಿದರು ಈ ವಿಷಯದಲ್ಲಿ ಮಹಾರಾಜರವರು ಯಾವ ಹುಕುಂ ಕೊಡುವರೋ ಎಂದೂ ಈ ಊರಿನ ನಿವಾಸಿಗಳೆಲ್ಲರೂ ನಿರೀಕ್ಷಿಸುತ್ತಿದ್ದಾರೆ ಬಹುಶಃ ಮಹಾರಾಜರವರು ಇವರಿಗೆ ಪೂರ್ವದಂತೆ ಎಂದು ಸ್ಥಿರವಾದ ಅಪ್ಪಣೆ ಎಂದು ತಿಳಿದ್ದಾಗ್ಯೆ ಹಾಸ್ಯಕೊಡಲಾರರೆಂದು ಕೆಲವರು ಮಾತನಾಡಿಕೊಳ್ಳುತ್ತಿದ್ದಾರೆ ಅಂತೂ ಈ ಊರಿನ ಜನರು ಮಾತನಾಡಿಕೊಳ್ಳುವಪ್ರಕಾರ ಸುಳ್ಳಿನಿಂದ ಕೆಟ್ಟುಹೋಗುವ ಜನರ ಸಂಖ್ಯೆಯೇ ಹೆಚ್ಚುತ್ತಿರುವದು ನಿಜವಾಗಿದೆ ಇವರನ್ನು ಒಳಗೆ ಸೇರಿಸದೆ ಇರುವದು ದೇವಸ್ಥಾನಕ್ಕೆ ಗೌರವವೂ ಅನೇಕರಿಗೆ ಪ್ರಯೋಜನವೂ ಆಗಿದೆ

ಮಳೆ—ಈ ಪ್ರಾಂತ್ಯಗಳಲ್ಲಿ ಮಳೆ ಸುರಿದು ಎರಡು ತಿಂಗಳಿಗೆ ಸಮೀಪವಾಯಿತು ರಾಗಿಯನ್ನು ಕೊಯ್ಯುವ ನಿರೀಕ್ಷೆಯೇ ಜನರಲ್ಲಿ ಇಲ್ಲ ಹೋಗಲಿ ಹುಲ್ಲಿಗೆ ಕೂಡ ಮಳೆ ಬಾರದಿರುವದರಿಂದ ದನಕರುಗಳಿಗೆ ಬಹಳ ಕಷ್ಟವಾಗಿರುತ್ತದೆ ಮುಂದೆ ಮಳೆ ಆಗುವ ಲಕ್ಷಣ ಕಾಣುವದಿಲ್ಲ ಈ ಸಾರಿ ಸಾಕಷ್ಟು ಮಳೆಯಿಲ್ಲದೆ ಅನೇಕರ ಕೆಟ್ಟುಹೋಯಿತು ಇನ್ನು ಮುಂದೆಯೂ ಮಳೆ ಇಲ್ಲದಿದ್ದರೆ ಏನುಗತಿಯಾಗುವದೋ? ಹೇಳಲು ಅಸಾಧ್ಯವಾಗಿದೆ

ಗೆಜೆಟು ಸಂಗ್ರಹ.

ತಾರೀಖು ೮ನೇ ಸಪ್ಟಂಬರ್, ೧೮೯೩—ಬೆಂಗಳೂರು ಡಿವಿಜನ್ ಅಸಿಸ್ಟಂಟ್ ಕಮಿಷನರ್ ಮ|| ಬಿ ಕೃಷ್ಣಸ್ವಾಮಿರಾಯರವರು, ಹಿಂದಕ್ಕೆ ತಮ್ಮ ಹುದ್ದೆ ವಹಿಸಿಕೊಳ್ಳುವ ತನಕ ಅಸಿಸ್ಟಂಟ್ ಕಮಿಷನರ ಆಫೀಸಿನ ಛಾರ್ಜನ್ನು, ೧೮೯೩ನೇ ಇಸವಿ ಆಗಸ್ಟ್ ೩೧ ನೇ ತಾರೀಖಿನ ಅಪರಾಹ್ನದಲ್ಲಿ ಮ|| ಸಿ ಡಿ ರಾಮಸ್ವಾಮಯ್ಯನವರು ತೆಗೆದುಕೊಂಡಿರುತ್ತಾರೆ

ಬೆಂಗಳೂರು ಡಿಸ್ಟ್ರಿಕ್ಟ್ ಸಿಟಿ ಮ್ಯಾಜಿಸ್ಟ್ರೇಟ ಮ|| ಎ. ವೈದ್ಯನಾಥ ಅಯ್ಯಂಗಾರು, ೧೮೯೩ ನೇ ಇಸವಿ ಆಗಸ್ಟ್ ೨೦ ನೇ ತಾರೀಖು ಆಗಾಯಿತು ಒಂದು ವಾರದ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ

ತಾರೀಖು ೨೨ ನೇ ಸಪ್ಟಂಬರ ೧೮೯೩—ಮ|| ಎನ್ ನರಸಿಂಹಯ್ಯಂಗಾರ್ಯರವರು ಮೈಸೂರು ಡಿಸ್ಟ್ರಿಕ್ಟ್ ೩ನೇ ಜನರಲ್ ಅಸಿಸ್ಟಂಟ್ ಕಮಿಷನರವರ ಕೆಲಸದ ಛಾರ್ಜನ್ನು ಮಹಾರಾಜರ ೧೧ ನೇ ತಾರೀಖಿನ ಅಪರಾಹ್ನದಲ್ಲಿ ಮ|| ಎನ್ ವೆಂಕಟರಾಯಪ್ಪನವರಿಗೆ ಒಪ್ಪಿಸಲು ಅವರೇ ತೆಗೆದುಕೊಂಡಿರುತ್ತಾರೆ

ತಾ|| ೨೧ ನೇ ಸೆಪ್ಟಂಬರ ೧೮೯೩—ಇದಕ್ಕಿಂತ ಸಮಸ್ತ ಜನರಿಗೂ ತಿಳಿಯಪಡಿಸುವದೇನೆಂದರೆ—ಹಾಸನ ತಾಲ್ಲೂಕು ಮಂಡ್ಯಾದಿ ಪ್ರಾಂತ್ಯ ಮಂಜರಾಬಾದು ತಾಲ್ಲೂಕು ಮಾಗಡಿ ಮ|| ಎಸ್ ವೆಂಕಟಪ್ಪನವರಿಗೆ ಸದರ ಸರ್ಕಾರಿನ ಪೂರ್ವಾನುಮತಿಯಿಂದ ಸಾಗುವಳಿ ಮಾಡಲು ಇನ್ನೂ ಐದು ವರ್ಷಗಳ ತನಕ ಕಾಫೀ ತೋಟಗಳನ್ನು ಬಿಟ್ಟಿರುತ್ತದೆ

ತಾರೀಖು ೨೪ ನೇ ಸೆಪ್ಟಂಬರ ೧೮೯೩—ಈ ಸಂವತ್ಸರದ ವಿಷಯ ಮೈಸೂರು ೧೮೯೩ ನೇ ಇಸವಿ ಅಕ್ಟೋಬರು ೧೦ ನೇ ತಾರೀಖು ಕಡೆಯಾದ ಆಗಾಯಿತು ಇದೇ ತಿಂಗಳು ೨೮ ನೇ ತಾರೀಖು ಕಡೆಯಾದ ಪರ್ಯಂತ ಉಭಯವಾದಿಗಳಿಗೂ ಸೇರಿದ ರಜಾ ದಿವಸಗಳಾಗಿರುತ್ತವೆ ಜರೂರಾದ ಕೆಲಸಗಳ ನಿಮಿತ್ತ ಹಾಕಿದ ಒಟ್ಟು ಅರ್ಜಿ ಅಧಿಕಾರಿಗಳಿಂದ ತಕ್ಷ ವಿಚಾರಗಳು ಮಾಡಲ್ಪಡತಕ್ಕದ್ದು

ತಾ|| ೨೫ ನೇ ಸಪ್ಟಂಬರ ೧೮೯೩—ಇವರಿಗೆ ಕಂಡ ಆ ಮಂಜೂರಿಗಳ ಪತ್ರವರ್ಗಗಳು ಹುಕುಂ ಮಾಡಲ್ಪಟ್ಟಿರುತ್ತವೆ

ಎಸ್ ನರಸಿಂಗರಾಯರವರು ಚನ್ನಗಿರಿ ತಾಲ್ಲೂಕಿನಿಂದ ನಾಗಲೂರು ತಾಲ್ಲೂಕಿಗೆ

ಟಕ್ಕ ಒಟ್ಟಾಯರ ಕೃಷ್ಣರಾಯರವರು, ನಗರ ತಾಲ್ಲೂಕಿನಿಂದ ಚನ್ನಗಿರಿ ತಾಲ್ಲೂಕಿಗೆ

ವಿವಿಧ ವರ್ತಮಾನಗಳು.

—:०:—

ಪರ್ಷಿಯಾ ರಾಜ್ಯಕ್ಕೆ ಸೇರಿದ ಬಾಜರೋನ್ ಎಂಬ ಊರಿನಲ್ಲಿ ಕಾಲರಾ ಉಪದ್ರವು ಪ್ರಾರಂಭವಾಗಿ ದಿನವೊಂದಕ್ಕೆ ನೂರಾರು ಮಂದಿ ಸಾಯುತ್ತಲಿದ್ದಾರೆ ಬುಷ್ಯರಿಗೆ ಹೋಗುವ ಮಾರ್ಗದ ಲ್ಲಿನ್ನ ಹಳ್ಳಿಗಳೆಲ್ಲಾ ಪಾಳಾಗಿವೆ

ರಷ್ಯಾರಾಜ್ಯಕ್ಕೆ ಸೇರಿದ ರೂಸಾಲ್ಕ ಎಂಬ ಜಹಜು ಬಾಲ್ಟಿಕ್ ಸಮುದ್ರದಲ್ಲಿ ಮುಳುಗಿಹೋಯಿತೆಂತಲೂ, ಅದರಲ್ಲಿದ್ದ ೧೨ ಮಂದಿ ಆಫೀಸರುಗಳೂ, ೧೬೦ ಮಂದಿ ನಾವಿಕರೂ ಮತ್ತು ಪ್ರಯಾಣಸ್ಥರೂ ಸತ್ತುಹೋದರೆಂತಲೂ ತಂತಿಯ ವರ್ತಮಾನ ಬಂದಿದೆ

ಬೊಂಬಾಯಿ ಶಹರದಲ್ಲಿ ೬ ಮಂದಿ ಘಾತುಕರು ಸೇರಿ ಒಬ್ಬ ಹೆಂಗಸನನ್ನು ಹಿಡಿದು ಅವಳಿಗೆ ವಿಷಹಾಕಿ ಕೊಂದು ಅವಳ ಬಳಿಯಲ್ಲಿದ್ದ ಒಡವೆಗಳನ್ನು ಅಪಹರಿಸಿದ್ದಕ್ಕಾಗಿ ಬೊಂಬಾಯಿ ಹೈಕೋರ್ಟಿನ ಜಡ್ಜಿಗಳು ಪ್ರತಿಒಬ್ಬರಿಗೂ ಐದು ವರ್ಷದಂತೆ ಕಠಿಣಶಿಕ್ಷೆ ವಿಧಿಸಿದರು

ವಿಜಯನಗರಕ್ಕೆ ಸೇರಿದ ಜೋಗೇಶ್ವರ ಪಟ್ಟಣದಲ್ಲಿ ಹೋದ ವರ್ಷದ ಫಲಕಾಲದಲ್ಲಿ ಒಂದು ಗಿಡದಲ್ಲಿ ಸಪೋಟಾಯಿ ಬಹಳವಾಗಿ ಬಿಟ್ಟಿತ್ತು ಅದೇ ಮರದಲ್ಲಿ ಈವರ್ಷದಲ್ಲಿ ಕಿತ್ತಳೆಹಣ್ಣುಗಳು ಬಿಟ್ಟಿವೆ ಇದೆಂಥಾ ಆಶ್ಚರ್ಯ! ಎಂಬದಾಗಿ ಅಲ್ಲಿನ ಒಂದು ಪತ್ರಿಕೆಯಲ್ಲಿ ಬರೆದಿರುತ್ತೆ ನಿಜವಿರಬಹುದೆ?

ಕಳೆದವಾರದ ಆದಿಭಾಗದಲ್ಲಿ ತಿರುಚನಾಪಳ್ಳಿ ರೈಲ್ವೆ ಸ್ಟೇಷನ್ ಮಾಸ್ಟರ ಕೊಠಡಿಯಲ್ಲಿ ಪೆಟ್ಟಿಗೆಯೊಳಗಿಟ್ಟಿದ್ದ ೫,೫೦೦ ರೂಪಾಯಿಗಳು ಅದನ್ನಿಟ್ಟ ಅರ್ಧಘಂಟೆಯೊಳಗಾಗಿ ಕಳವಾಯಿತು, ಈಗ ಪೋಲೀಸಿನವರು ಅದರ ಪತ್ತೆಕರರಾಧನಲ್ಲಿರುತ್ತಾರೆ,ಎಂದು ಪತ್ರಿಕೆ ತಿಳಿಸಿದವು. ಕಷ್ಟ.

ಪಂಜಾಬ ಟೈಂಸ್ ಎಂಬ ಪತ್ರಿಕೆಗೆ ವರದಿಗಾರರಾದ ಮ|| ಬೀರ್ಸ ಎಂಬವನು ತನ್ನ ಹೆಂಡತಿ ಇಟ್ಟುಕೊಂಡಿದ್ದ ಒಂದು ಅಂಗಡಿಯೊಳಕ್ಕೆ ಅವಳಗ್ಯೆ ಹಾಜರು ಕಾಲದಲ್ಲಿ ಹೋಗಿ ಕೆಲ ಸಾಮಾನುಗಳನ್ನು ತಂದಿದ್ದನು ಆಗಿ ಅವಳು ಈಗ ಅವನ ಮೇಲೆ ಕಳುವಿನ ಫಿರ್ಯಾದು ತಂದಿರುತ್ತಾಳೆ ಈ ಬೀರ್ಸನು ಅವಳನ್ನು ಮದುವೆಮಾಡಿಕೊಂಡು ಇನ್ನೂ ಸರಿಯಾಗಿ ಮೂರು ತಿಂಗಳಾಗಲಿಲ್ಲವಂತೆ ಅವಳ ಧೈರ್ಯವೆಂಥಾದ್ದೋ! ಈ ಹೆಳ್ಳವೆ ವಿಚಿತ್ರವ್ಯವಹಾರಗಳು!

ಇಂಡಿಯಾ ಗವರ್ನಮೆಂಟಿನವರು ಈಚೆಗೆ ಪ್ರಕಟಿಸಿದ ಪಟ್ಟಿಯ ಪ್ರಕಾರ ಈಗ ಇಲ್ಲಿನ ಅನೇಕಮಂದಿ ಸಾಹುಕಾರರಿಗೂ ಯೂರೋಪಿಯನ್ ಮನ್ನೆಯಾರರುಗಳಿಗೂ ತುಂಬ ನಷ್ಟಕಾರವಾಗಿರುವದೆಂತಲೂ ಅದಕ್ಕೆ ತಕ್ಕ ಉಪಕರಣಗಳನ್ನು ಮಾಡಿಕೊಡಬೇಕೆಂತಲೂ ಸುಮಾರು ನಾನೂರು ಸಹಸ್ರ ಗಂಡ ೬ ಭಾಷೆಗಳಲ್ಲಿ ಬರೆಯಲ್ಪಟ್ಟ ಅರ್ಜಿಗಳು ವಿಲಾಯತೀ ಪಾರ್ಲಿಮೆಂಟಿನಲ್ಲಿ ಮಿ|| ಭಾವ್ಲೇರ್ ಎಂಬವರು ಅವರ ಪ್ರತಿಷ್ಠಾನಕ್ಕಾಗಿ ಹಾಜರ್ಪಡಿಸುವ ಸಂಭವವಿದೆ

ಜೋಹೋರ್ ಸುಲ್ತಾನರು ವಿಲಾಯತಿಯಿಂದ ತಮ್ಮ ರಾಜಧಾನಿಗೆ ಹೊರಟಿರುತ್ತಾರೆ ಇವರು ವಿಲಾಯತಿಯಲ್ಲಿ ವ್ಯಾಗ್ಯೆ ಅಲ್ಲಿನ ಒಬ್ಬ ಯುವತಿಯ ಮೇಲೆ ತಮ್ಮ ಪ್ರೀತಿಯನ್ನಿಟ್ಟಿದ್ದರೆಂತಲೂ, ಅವಳನ್ನು ಮದುವೆಮಾಡಿಕೊಳ್ಳುವಂತೆ ಅವಳಿಗೆ ವಾಗ್ದಾನಮಾಡಿದ್ದರೆಂತಲೂ, ಆದರೆ ಅದಕ್ಕೆ ತಪ್ಪಿ ಅವಳನ್ನು ಮಾನಭಂಗಮಾಡಿರುತ್ತಾರೆಂತಲೂ ಆ ಹೆಂಗಸು ಅವರ ಮೇಲೆ ದಾವೆ ತಂದಿರುತ್ತಾಳೆ ತನಗೆ ಸುಲ್ತಾನರಿಂದ ಇದಕ್ಕಾಗಿ ೧೦,೦೦೦ ಪೌನುಗಳನ್ನು ದಾವಿಯಾ ಕೊಡಿಸಬೇಕೆಂದು ಕೇಳಿರುತ್ತಾಳೆ

ಮದರಾಸ ಪಟ್ಟಣದಲ್ಲಿ ಸ್ಮಿತ್ ಎಂಬವನು ಏನೋ ಒಂದು ತಪ್ಪುಕೆಲಸವನ್ನು ಮಾಡಿದ್ದಕ್ಕಾಗಿ ಅವನ ತಂದೆಯು ಅವನಿಗೆ ಹಾಗೆಮಾಡಬಾರದೆಂದು ಬುದ್ಧಿಹೇಳಿದನು ಅಷ್ಟಕ್ಕೇ ಆ ಮಗನಿಗೆ ಕೋಪಬಂದು ತನ್ನ ಮುಷ್ಟಿಯಿಂದ ಮುದುಕತಂದೆಯ ಬೆನ್ನಿನಮೇಲೆ ಗುದ್ದಿ ಅವನನ್ನು ಅರ್ಧಪ್ರಾಣಮಾಡಿಟ್ಟನು ಈ ವಿಷಯವು ಮ್ಯಾಜಿಸ್ಟ್ರೇಟರಲ್ಲಿ ಹೋದಾಗ, ಅವರು ಈ ಸುಪುತ್ರನಿಗೆ ಒಂದು ತಿಂಗಳು ಕಠಿಣಶಿಕ್ಷೆ ವಿಧಿಸಿದರು ಇಂಥಾ ಪುತ್ರರತ್ನವನ್ನು ಪಡೆಯುವದಕ್ಕೆ ಆತನು ಎಷ್ಟು ಪುಣ್ಯಮಾಡಿದ್ದನೊ?

ಹೈದರಾಬಾದಿನ ನೈಜಾಮರವರು ತಮ್ಮ ಮಂತ್ರಿಗಳನ್ನು ಇವರಾಯಿಸಬೇಕೆಂದು ವೈಸರಾಯರಿಗೆ ತಿಳಿಸಿದ್ದಕ್ಕೆ ವೈಸರಾಯರು—ನಿಮ್ಮ ಅಭಿಪ್ರಾಯವು ಹಾಗಿದ್ದರೆ ನಿಶ್ಚಯ ಮಾಡಿಕೊಂಡು ಅಪ್ರಕಾರ ಬದಲಾಯಿಸಬಹುದೆಂದೂ ಆಲೋಚನೆ ಇಲ್ಲದೆ ಯಾವದನ್ನೂ ಮಾಡಬಾರದೆಂದೂ ನೈಜಾಮರವರಿಗೆ ಜವಾಬು ಕೊಟ್ಟರು ಅವರ ವೈಸರಾಯರವರು ಅಲ್ಲಿನ ಮಂತ್ರಿಯವರನ್ನು ತೆಗೆದುಹಾಕಿ ಮತ್ತೊಬ್ಬರನ್ನು ಆ ಪದವಿಗೆ ನೇಮಿಸುತ್ತಾರೆಂಬದಾಗಿ ಒಂದು ಸುಳ್ಳುವರ್ತಮಾನವು ಹೈದರಾಬಾದಿನಲ್ಲೆಲ್ಲಾ ಹರಡಿಕೊಂಡಿದೆ

ಫ್ರೆಮಾಂಟಲ್ ದೊರೆಗೆ ೧೮೯೦ನೆ ಇಸವಿಯ ನವಂಬರ ತಿಂಗಳಲ್ಲಿ ರಾಜ್ಯಭಾರದ ಹಕ್ಕುಗಳನ್ನು ಗವರ್ನಮೆಂಟಿನವರು ಒಪ್ಪಿಸುವರೆಂದು ತೀರ್ಮಾನವಾಗಿದೆ ಆದ್ದರಿಂದ ಆ ದಕ್ಕೆ ಮುಂಚಿತವಾಗಿ ಅವರನ್ನು ಹಿಂದೂಸ್ಥಾನದ ಎಲ್ಲಾ ಪಟ್ಟಣಗಳಿಗೂ ಕರೆದುಕೊಂಡು ಹೋಗಿ ಅಲ್ಲಿನ ಸಂಗತಿಗಳನ್ನೆಲ್ಲಾ ಅವರಿಗೆ ಚೆನ್ನಾಗಿ ತಿಳಿಯಪಡಿಸಿ ಅವರಿಗೆ ಪ್ರಪಂಚ ಧರ್ಮವೆಲ್ಲಾ ಚೆನ್ನಾಗಿ ತಿಳಿಯುವಂತೆ ಪ್ರಯಾಣಗಳನ್ನು ಬೆಳೆಸಿ, ಆ ಕಾಲಕ್ಕೆ ಸರಿಯಾಗಿ ರಾಜಧಾನಿಗೆ ಕರೆದುಕೊಂಡು ಹೋಗುವಂತೆ ಗೊತ್ತುಮಾಡಿದೆ ಸುಳಿ ಡಿಸೆಂಬರು ಗವರ್ನರು ಈ ಸಲ್ಕೀಟು ಹೊರಡುವಂತೆ ಏರ್ಪಾಡಾಗಿದೆ

ಸ್ವೀಡನ್‌ದೇಶದ ಸ್ಟಾಕ್‌ಹೋಂ ಎಂಬಲ್ಲಿ ರಾಣಿಯವರು ವಾಸವಾಗಿದ್ದಾಗ ಸಾಮಾನ್ಯವಾಗಿ ನಡೆದುಕೊಂಡು ಹೋಗುತ್ತಿರುವಾಗ್ಗೆ ಎದುರು ಭಾಗದಲ್ಲಿ ಸ್ವಲ್ಪ ದೂರದಲ್ಲಿ ಒಂದು ಕೈಚೀಲವನ್ನು ... ಲ್ಲಿಟ್ಟು ಹುಡುಗ್ಯನು ಹಿಂದು ಮುಂದು ಕಾಣದೆ ಓಡುತ್ತಿದ್ದನು. ಇದನ್ನು ರಾಣಿಯವರು ನೋಡಿಕೊಂಡು ತಮ್ಮ ಗಾಡಿಯಿಂದಿಳಿದು ಆ ಹುಡುಗನನ್ನು ಕರೆದುಕೊಂಡು ಬಂದು ... ಆ ಹಣ್ಣು ಮಾರುವವಳು ಆ ಹುಡುಗನ ತಾಯಿಯಾಗಿದ್ದರು. ಆ ಹುಡುಗನು ಈ ರೀತಿಯಾಗಿ ರಾಣಿಯವರಿಗೆ ಅನೇಕವಾಗಿ ಉಪಕಾರಗಳನ್ನು ಮಾಡುತ್ತಿದ್ದಾರೆ.

ಮೆ॥ ಮಾರಿಸನ್ ಎಂಬವರನ್ನು ಸರ್ಕಾರದವರು ಟ್ರಾನ್ಸ್‌ವಾಲ್‌ಗೆ ಬ್ರಿಟಿಷ್ ಏಜೆಂಟಾಗಿ ೫೦ ಸಿವಿಲ್ ಏಜೆಂಟ್ ನೇಮಿಸಿಕೊಂಡಿರುತ್ತಾರಷ್ಟೆ. ಇವರು ಆರೋಗ್ಯವುತ್ತ ರೋಡೆಸಿಯಾ ರೈಲ್ವೆಯಲ್ಲಿ ಮಾಡುವ ೫೦೦ ರೂಪಾಯಿಗಳನ್ನು ಪಡೆಯುತ್ತಿದ್ದರು. ಈಗ ಅವರಿಗೆ ವಿಶೇಷವಾಗಿ ೧,೫೦೦ ರೂಪಾಯಿ ಸಂಬಳವಾಗಿರುತ್ತದೆ. ಹೀಗೆ ದಿಢೀರಾಗಿ ಸಂಬಳ ಹೆಚ್ಚಿಸುವದಕ್ಕೆ ಕಾರಣವೇನು ಎಂಬದಾಗಿ ಜೊಂಬಾಯಿ ಗೌರ್ನಮೆಂಟಿನವರು ಕಂಪೆನಿಯ ವಿವರವನ್ನು ಕೇಳಿರುತ್ತಾರೆ. ಅಲ್ಲಿಂತಲೂ ಈಗ ಕಂಪೆನಿಯ ಉತ್ಪತ್ತಿ ಹೆಚ್ಚಾಗಿದೆಯಲ್ಲ, ಇದನ್ನು ವಿಚಾರಮಾಡುವದಕ್ಕೆ ಅವರಿಗೆ ಅನ್ಯಾಯವಾರ್ಗವು ಇರಲಿಲ್ಲವೇನೊ?

ಸ್ಕಾಟ್ಲೆಂಡಿನ ಎಂಬಲ್ಲಿ ೧೬ ವರ್ಷಗಳ ಹಿಂದೆ ಒಬ್ಬಳು ಅಕಸ್ಮಾತ್ತಾಗಿ ಸತ್ತನು ಅವನ ಸಂಬಂಧಿಕಳೊಬ್ಬಳು ವಿಷಯಾ ಕಿವಿಯಿಂದ ಅವಳಮೇಲೆ ಛಾರ್ಜಾಗಿ, ಯಾವಜ್ಜೀವವೂ ಅವಳು ಸಜಾಶಿಕ್ಷೆಯನ್ನು ಅನುಭವಿಸಬೇಕೆಂದು ತೀರ್ಮಾನವಾಗಿ ಅದರಂತೆ ಅವಳು ಸಜಾ ಅನುಭವಿಸುತ್ತಿದ್ದಳು. ಈಗ ಆದೇಶದಲ್ಲಿ ವೃತ್ತಾಂತ ಮರಣ ಪ್ರಾಪ್ತವಾಯಿತು. ಅಲ್ಲಿ ಸುತ್ತುಮುತ್ತು ಇರುವ ಪ್ರದೇಶಗಳನ್ನು ಪರೀಕ್ಷಿಸಿದಾಗ ಒಂದು ವಿಧ ಕಪ್ಪುರೋಗದ ... ಆ ಸಂಗತಿಯನ್ನು ತಿಳಿಸಿದರು. ಆಗ ಹಿಂದೆಯೂ ಇದೇ ಕಾರಣದಿಂದ ಅವನು ಸತ್ತಿರಬಹುದೆಂದು ಸಿದ್ಧಾಂತವಾದ್ದರಿಂದ ಅನ್ಯಾಯವಾಗಿ ಸಜಾ ಅನುಭವಿಸುತ್ತಿದ್ದ ಆ ಹೆಂಗಸನ್ನು ಈಗ ಕೈದಿನಿಂದ ಬಿಡುಗಡೆಮಾಡಿದರು. ಇದೇನಾ ಆಶ್ಚರ್ಯ!

ನಿಷ್ಪಕ್ಷಪಾತಿ ಭಕ್ತರಾದ ಮಹಾ ಮೈಸೂರು ಸಂಸ್ಥಾನದಲ್ಲಿ ತಮ್ಮ ಯೋಗ್ಯತೆಗೆ ಸಮಾನವಾದ ಒಂದು ನೌಕರಿಯನ್ನು ... ಅಲ್ಲಿನ ಮಂತ್ರಿಗಳಿಗೆ ಅರ್ಜಿ ... ಕೊಂಡಿರು ... ವರ್ಷ ... ರಿಂದ ನಿಮಗೆ ... ಯಾವ ಅಧಿಕಾರ ... ಮಂತ್ರಿಗಳು ಅವರಿಗೆ ... ಆನಂತರ ಅವರು ತಮ್ಮ ... ಕ್ಕೆ ಬಂದ ... ಉತ್ತರವನ್ನು ... ಸರಿಯಾಗಿದೆ ಎಂತಲೂ, ... ಯೋಗ್ಯತೆ ಉಳ್ಳವರೆಂತಲೂ ಒಂದು ಸರ್ಟಿಫಿಕೇಟನ್ನು ... ಮೈಸೂರು ಸರ್ವಿಸಿನಲ್ಲಿ ಮೆ॥ ... ದಾಖಲೆ ... ಅವರು ಈ ... ಸನ್ನು ಪರೀಕ್ಷಿಸಿ ಅವನ್ನು ವಿಚಾರಣೆಮಾಡುವದಕ್ಕಾಗಿ ಒಂದು ದಿವಸವನ್ನು ನೇಮಕ ಮಾಡಿರುತ್ತಾರೆ.

ಅಫ್ಘಾನಿಸ್ಥಾನದ ಅಮೀರರ ಕೈಕೆಳಗೆ ಯೂರೋಪಿಯನ್ ಇಂಜಿನಿಯರ ಮೆ॥ ... ಇವನು ಅಲ್ಲಿ ಬಂದೂಕು, ಫಿರಂಗಿ ಮುಂತಾದ ಸಾಮಾನುಗಳನ್ನು ಒಂದು ಕಾರ್ಖಾನೆಯಲ್ಲಿ ಮಾಡಿಸುತ್ತಿದ್ದನು. ಈ ಕಾರ್ಖಾನೆಯನ್ನು ನೋಡಿಕೊಂಡು ಹೋಗುವದಕ್ಕಾಗಿ ಅಮೀರರು ಒಂದಾನೊಂದುದಿನ ಕಾರ್ಖಾನೆಗೆ ಹೋದರೆಂತಲೂ, ಅಲ್ಲಿ ನೋಡುತ್ತಿರುವಾಗ್ಯೆ ಒಂದು ಬಂದೂಕಿನಲ್ಲಿ ಕೆಲವು ದೋಷಗಳನ್ನು ಮಾಡಿ ತೋರಿಸುತ್ತಿದ್ದರೆಂತಲೂ, ಅದು ಅಕಸ್ಮಾತ್ತಾಗಿ ಒಡೆದು ಹೋಗಿ ಸವಿಪದಲ್ಲಿದ್ದ ೩-೪ ಮಂದಿಯನ್ನು ಕೊಂದಿತೆಂತಲೂ ಸ್ವಲ್ಪ ಹೆಚ್ಚುಕಡಿಮೆಯಾಗಿದ್ದರೆ ಅಮೀರರಿಗೆ ಅಪಾಯಕರವಾಗಿತ್ತೆಂತಲೂ, ಆದರೆ ಪ್ರಿನ್ಸನ್ನು ವೆಯಿನ್ನ ಸಾಹೇಬರು ಮೊದಲೇ ಮಾಡಿ ಅಮೀರರಿಗೆ ಅಪಾಯವನ್ನುಂಟುಮಾಡಬೇಕೆಂದು ಇದ್ದರೆಂಬ ಸಂಗತಿ ಅಮೀರರಿಗೆ ತಿಳಿಯಿತೆಂತಲೂ, ಬಳ್ಳಿಕೆಯಿಂದ ಅವರು ಪ್ರೊಫೆಸರ ... ಕೊಂದುಹಾಕಬೇಕೆಂದು ಹುಕ್ಕುಂಮಾಡಿದರೆಂತಲೂ ವರ್ತಮಾನ ಬಂದಿದೆ. ಇದು ಎಷ್ಟರಮಟ್ಟಿಗೆ ನಂಬತಕ್ಕದಾಗಿದೆಯೋ ನಮ್ಮಿಂದ ಹೇಳುವದಕ್ಕಾಗದು.

ರೆವರೆಂಡ್ ಡಾಕ್ಟರ್ ಮಿಲ್ಲರ್ ಸಾಹೇಬರವರು ಕಳೆದ ೧೮೯೨ ನೆ ಇಸವಿಯಲ್ಲಿ ಮದರಾಸ್ ಯೂನಿವರ್ಸಿಟಿಗೆ ವೈಸ್‌ಛಾನ್ಸಲರಾಗಿದ್ದಾಗ್ಯೆ ತಮ್ಮ ಯೋಗ್ಯತೆಯನ್ನು ಸಮ್ಮಾನದ ವಾಗ್ಮಿತ್ವದಿಂದ ತೋರಿಸಿದ್ದರಿಂದ, ಅವರು ಬಹುಕಾಲದಿಂದ ವಿದ್ಯಾಭಿವೃದ್ಧಿಗಾಗಿ ಮಿಲ್ಲರ್ ಸಾಹೇಬರಿಗೆ ಸಿ. ಐ. ಇ. ಎಂಬ ಬಿರುದನ್ನು ದಯಪಾಲಿಸಿದರು. ಇವರು ದಕ್ಷಿಣ ಹಿಂದೂಸ್ಥಾನದಲ್ಲಿರುವ ಕ್ರೈಸ್ತ ಮತ್ತು ಇತರ ಜನಾಂಗದ ಪ್ರಜೆಗಳಿಗೆ ಎಷ್ಟರವಟ್ಟಿಗೆ ಉಪಕಾರಿಗಳಾಗಿಯೂ, ವಿದ್ಯಾದಾನಶೀಲರಾಗಿಯೂ ಇರುತ್ತಾರೆಂಬುದು ನಮ್ಮ ವಾಚಕರಿಗೆ ತಿಳಿಯದೆ ಇಲ್ಲ. ಮದ್ರಾಸ್ ಪ್ರೆಸಿಡೆನ್ಸಿಯಲ್ಲಿಲ್ಲ ... ಕ್ರಿಶ್ಚಿಯನ್ ಕಾಲೇಜ್ಗೆ ಇವರು ಪ್ರಿನ್ಸಿಪಾಲರಾಗಿಯೂ, ಯೂನಿವರ್ಸಿಟಿಯ ಸಂಘದಲ್ಲಿ ಬಹಳ ಮೆಂಬರಾಗಿಯೂ ಇರುವದರಿಂದ ಇಂಥವರನ್ನು ಪ್ರೆಸಿಡೆನ್ಸಿಯ ವಿದ್ಯಾಸಂಘದವರು ತಮ್ಮ ಪ್ರತಿನಿಧಿಗಳನ್ನಾಗಿ ಆರಿಸುವುದು ಯೋಗ್ಯವಾಗಿರುತ್ತದೆ. ಮದ್ರಾಸ

ಗೌರ್ನರವರ ಸಾಮಾನ್ಯಾಲೋಚನಾ ಸಭೆಯಲ್ಲಿ ಇವರನ್ನು ಮೆಂಬರಾಗಿ ಸೇರಿಸಿರುವದರಿಂದ ಇವರಿಗೆ ಕೊಡಲ್ಪಟ್ಟಿರುವ ಗೌರವವನ್ನು ... ಕೇಳಿ ಬಹು ಆನಂದಿಸುತ್ತಿದ್ದೇವೆ.

ಮೈಸೂರು ಸಂಸ್ಥಾನದ ಪ್ರಧಾನ ಮಂತ್ರಿಯವರಾದ ಸರ್ ಶೇಷಾದ್ರಿ ಅಯ್ಯರವರು ಇವರ ತಿಳಿಸಲ್ಪಟ್ಟಿರುವಂತೆ ನಿಜಾಮರವರಿಗೆ ಬರೆದಿರುವುದಾಗಿ ಸಂಸ್ಥಾನಕ್ಕೆ ಅರ್ಹವಾದ ಮೂಲಕ ನಿಯಮಿಸುವಂತೆ ಅಡ್ವೊಕೇಟ್ ಆಫ್ ಇಂಡಿಯಾ ಎಂಬ ಪತ್ರಿಕೆ ಪ್ರಕಟಿಸಿರುತ್ತದೇನಂದರೆ,—ನಾನು ಯಾವಾಗಲೂ ತಮ್ಮ ಆಜ್ಞಾನುಸಾರವಾಗಿ ನಡೆಯುವದಕ್ಕೆ ಸಿದ್ಧನಾಗಿರುತ್ತೇನೆ. ಏನಾದ ನಿಮಿತ್ತದಲ್ಲಿ ನಾನು ನನ್ನ ಅಧಿಕಾರವಂ ಬಿಟ್ಟುಬಿಡುವಂತೆ ನೀವು ಕೊಟ್ಟಿರ ಉತ್ತರ ಕ್ಷಣದಲ್ಲಿ ಅಂಗೀಕರಿಸುವದಕ್ಕೆ ಸಿದ್ಧನಾಗಿರುತ್ತೇನೆ. ನಿಷ್ಪಕ್ಷಪಾತವಾಗಿ ಒಂದು ಮಾರ್ಗವನ್ನು ಅವಲಂಬಿಸುವದಕ್ಕೆ ಮುಂದಾಗಿ ಸಂಸ್ಥಾನದ ರಾಜನೀತಿ ಕಾರ್ಯಗಳ ಪ್ರಸ್ತುತಸ್ಥಿತಿಯಂ ಚೆನ್ನಾಗಿ ಆಲೋಚಿಸಿ, ಈ ಕಾಲದಲ್ಲಿ ನನಗೆ ಅಧಿಕಾರವಂ ತಪ್ಪಿಸಿ, ರಾಜ್ಯಕಾರ್ಯವಂ ಬೇರೆಯೊಬ್ಬರಿಗೆ ಒಪ್ಪಿಸುವದು ಉಚಿತವೆ ಎಂಬ ಅಂಶವನ್ನು ತಮಗೆ ತಾವು ಚೆನ್ನಾಗಿ ಯೋಚಿಸಿ ... ನನಗೆ ಬೇಕಾದಷ್ಟು ವಿಶ್ವಾಸವು ಅಧಿಕಾರವು ಇರುತ್ತ ಸ್ವತಂತ್ರನಾಗಿರುತ್ತೇನೆ. ನನ್ನ ಸ್ವಂತ ಪ್ರಯೋಜನಕ್ಕೆಂತಲೂ ಸಂಸ್ಥಾನದ ಕ್ಷೇಮದಲ್ಲಿ ವಿಶೇಷವಾದ ಅಪೇಕ್ಷೆಯುಳ್ಳವನಾಗಿರುತ್ತೇನೆ. ಒಂದು ವೇಳೆ ನಾನು ಅಧಿಕಾರವಂ ಬಿಟ್ಟುಹೋಗಲು ವಾರಿಗಿ ಅದನ್ನು ಯಾವ ಕಾರಣದ ಮೇಲೂ ವಹಿಸಲಾರೆನು. ಸಂಸ್ಥಾನದ ಕಾರ್ಯಗಳಿಂದ ಕೈಗಳಂ ತೊಳೆದುಕೊಂಡು ಬಂದುಬಿಡುವೆನು, ಎಂಬದು.

ವಿಜಯನಗರದಲ್ಲಿರುವ ವೇಶ್ಯಾಂಗನೆಯೊಬ್ಬಳು ದೂಸ ... ಆಂಧ್ರಪ್ರಕಾಶಿಕಾ ಪತ್ರಿಕೆಗೆ ಇವರ ತಿಳಿಸಲ್ಪಟ್ಟಿದೆ. ಒಂದು ಲೇಖನವಂ ಬರೆದಿರುತ್ತಾಳೇನಂದರೆ :—

ದೇವತೋತ್ಸವ ವಿವಾಹಾದಿ ಶುಭಕಾರ್ಯಗಳಿಗೆ ಸಹ ಸಭ್ಯ ಗಾಯಕರನ್ನು ಕರೆಯಿಸುವದು ಪದ್ಧತಿಯಾಗಿರುವಂತೆ ಪೂರ್ವಿಕರ ಆಚಾರವಾಗಿರುವಂತೆ ಅನೇಕ ಗ್ರಂಥಗಳಿಂದ ವ್ಯಕ್ತವಾಗುತ್ತಿರುವಲ್ಲದೆ ಜನಸಮೂಹವು ಆಚಾರವು ಸಹ ಇದುವರೆಗೆ ಅನುಸರಿಸಲ್ಪಡುತ್ತಿದೆ. ಹೀಗಿದ್ದಾಗ್ಯೂ ಈಗ ಕೆಲವರು ನಿಷೇಧಿಸಲ್ಪಡುತ್ತಿರುವದು ಸ್ವಾಭಾವಿಕವಾಗಿ ... ವನವೊ ... ಗ್ರಂಥಗಳಲ್ಲಿ ದೇವಸ್ಥಾನದ ... ಸಭಾಭಿಮುಖರಾಗಿ ಒಂದು ಪುಷ್ಪಾಂಜಲಿ ಮಾಡಿ ಅನಂತರ ನೃತ್ಯಗೀತವಾದ್ಯಾದಿ ವಿದ್ಯೆಗಳನ್ನು ಪ್ರದರ್ಶಿಸಬೇಕೆಂದು ... ಅನುಸರಿಸದೆ ನಮ್ಮಲ್ಲಿ ... ಸಭಾ ... ಗ್ರಂಥಗಳಿಂದ ... ಸ್ಪಷ್ಟವಾಗುತ್ತದೆ ... ನೆಲೆಗೊಂಡಿರುತ್ತದೆ. ಅಂತಹ ಸ್ಥಿತಿಯನ್ನು ... ನಿಂದಿಸಿದಂತೆ ಕಾಣಿಸಲಿಲ್ಲವು, ಎಂಬದು.

ಕಳೆದ ಸೆಪ್ಟಂಬರು ೨೮ ನೆ ತಾರೀಖಿನಲ್ಲಿ ಬೆಂಗಳೂರು ಪ್ರೆಸಿಡೆನ್ಸಿಗೆ ಸೇರಿದ ಬೆಳಗೊಳ ಎಂಬಲ್ಲಿ ದೀಪದ ಕಡ್ಡಿಗಳನ್ನು ತಯಾರಿಸುವ ಒಂದು ಕಾರ್ಖಾನೆಯು ಸ್ಥಾಪಿಸಲ್ಪಟ್ಟಿತು. ಆ ದಿನದಿಂದ ಕೆಲಸ ಪ್ರಾರಂಭವಾಗಿದೆ. ಪ್ರಾರಂಭವಾದ ದಿನ ಆ ಕಟ್ಟಡವನ್ನು ನಾನಾವಿಧವಾಗಿ ಅಲಂಕರಿಸಿದ್ದರು. ನೇಟಿವ್ ಮತ್ತು ಯೂರೋಪಿಯನ್ ದೊಡ್ಡ ಮನುಷ್ಯರುಗಳನೇಕರು ಹಾಜರಾಗಿದ್ದರು. ಈ ಸಭೆಯಲ್ಲಿ ಮಹಾರಾಜ ಸರ್ ಜ್ಯೋತೀಂದ್ರಮೋಹನಟಾಗೋರರವರು ಅಗ್ರಾಸನವನ್ನು ಅಲಂಕರಿಸಿದ್ದರು. ... ಡೈರೆಕ್ಟರುಗಳಲ್ಲಿ ಪ್ರಥಮರಾಗಿದ್ದ ... ಒಂದು ರಿಪೋರ್ಟನ್ನು ಓದಿದರು. ಅದರಿಂದ ತಿಳಿಯುವ ಸಂಗತಿಗಳು ಏನೆಂದರೆ:— ಕಳೆದ ೯೨ ನೆ ಇಸವಿ ೧೮ ರಲ್ಲಿ ಇಂಡಿಯನ್ ಮ್ಯಾಚ್ ಫ್ಯಾಕ್ಟರಿ ಕಂಪೆನಿಯು ಕ್ರಮವಾಗಿ ರಿಜಿಸ್ಟರಾಯಿತು. ಷೇರು ೧ ಕ್ಕೆ ೧೦ ರೂಪಾಯಿನ ಪ್ರಕಾರ ೬,೦೦೦ ಷೇರುಗಳನ್ನು ಮಾಡಿ ೬೦,೦೦೦ ರೂಪಾಯಿ ಮೂಲಧನವಾಗಬೇಕೆಂದು ಗೊತ್ತಾಯಿತು. ಅದರಲ್ಲಿ ಆಗಲೇ ೫,೨೦೦ ಷೇರುಗಳನ್ನು ಬಿಹಾರ್, ... ಮುಂತಾದ ... ಆ ದೇಶದಲ್ಲಿ ತಯಾರಾಗುವದಕ್ಕೆ ... ಮೈಷಿನ್ ... ರೂಪಾಯಿ ಬೇಕಾಗುವುದೆಂದು ಗೊತ್ತಾಯಿತು. ... ರೂಪಾಯಿಯನ್ನು ... ಕಾರ್ಖಾನೆಯು ಕಟ್ಟುವದಕ್ಕೆ ಆಗಿದ್ದ ... ರೂಪಾಯಿಯ ... ಕಾರ್ಖಾನೆಯಲ್ಲಿ ಯೂರೋಪಿಯನ್ನರನ್ನು ನೇಮಿಸಬೇಕಾದ ಅವಶ್ಯವಿಲ್ಲವಾಗಿ ... ಈ ಬಾಬಿನಲ್ಲಿ ೬,೦೦೦ ... ಸಂಬಳವನ್ನು ವರ್ಷಕ್ಕೆ ೩,೦೦೦ ರೂಪಾಯಿಯನ್ನು ಉಳಿಸಿರುತ್ತಾರೆ. ಕಾರ್ಖಾನೆಯಲ್ಲಿ ಕೆಲಸ ಸರಿಯಾಗಿ ನಡೆಯುವಾಗ ದಿನ ೧ ಕ್ಕೆ ೬,೦೦೦ ಡಜನುಕಡ್ಡಿಯ ಪೆಟ್ಟಿಗೆಗಳನ್ನು ತಯಾರುಮಾಡಬಹುದೆಂದು ನ್ಯಾಯವಾಗಿ ಊಹಿಸಲ್ಪಟ್ಟಿತು. ಆದರೆ ಆದಿಯಲ್ಲಿ ದಿನ ೧ ಕ್ಕೆ ೩,೦೦೦ ದಿಂದ ೪,೦೦೦ ದವರೆಗೂ ಪೆಟ್ಟಿಗೆಗಳು ತಯಾರಾಗುವದಕ್ಕೆ ಸಂಶಯ

ವುವಿಲ್ಲ. ಕನಿಷ್ಠ ದಿನ ೧ ಕ್ಕೆ ೨೦೦ ಗ್ರೋಸ (೧ ಗ್ರೋಸಿಗೆ ೧೨ ಡಜನ್) ಪೆಟ್ಟಿಗೆಗಳು ತಯಾರಾದರೂ ಅದಕ್ಕೆಲ್ಲಾ ಆಗುವ ಒಟ್ಟು ಖರ್ಚು ತಿಂಗಳಿಗೆ ೩,೫೦೦ ರೂಪಾಯಿ. ಈಗ ದೇಶದ ಕಡ್ಡಿಯ ಪೆಟ್ಟಿಗೆಗಳಿಗೆ ಗ್ರೋಸ್ ೧ ಕ್ಕೆ ೧೨ ಆಣೆ ಬೆಲೆ ಇದೆ. ಆದರೆ ಇಲ್ಲಿ ತಯಾರಾಗುವವುಗಳನ್ನು ಗ್ರೋಸ ೧ ಕ್ಕೆ ೧೦ ಆಣೆಯಂತೆ ವಿಕ್ರಯಮಾಡಿದಾಗ್ಯೂ (ಇ.ಸಿಗೆ ೧ ಪೆಟ್ಟಿಗೆಯಂತೆ) ಕಾರ್ಖಾನೆಗೆ ಅಧಿಕ ಲಾಭವಾಗುವದಲ್ಲದೆ ಷೇರುದಾರರಿಗೂ ಲಾಭ ದೊರೆಯುವುದರಲ್ಲಿ ಸಂಶಯವಿಲ್ಲ. ವಾಚಕರೇ ಹಿಂದೂಸ್ಥಾನದಲ್ಲಿ ಇಂಥಾ ಕಾರ್ಖಾನೆಗಳಿಗೆ ಸಹಾಯಕರಾದ ತಮ್ಮ ಆಸ್ತಿಯನ್ನು ವಿನಿಯೋಗಿಸಿ ಎಲ್ಲಾ ಕಾರ್ಯಾದಿ ಸರಿಯಾಗಿ ನಡೆಸಿಕೊಂಡುಬಂದರೆ ಇವರ ಹಣವು ಎಷ್ಟು ಹೆಚ್ಚಿ, ಎಷ್ಟು ಜನಗಳಿಗೆ ಜೀವನೋಪಾಯವುಂಟಾಗುವದೋ ಊಹಿಸಲೂ ಅಸಾಧ್ಯವಾಗದೆ ಇತರ ದೇಶದವರಿಗೆ ದಾಸರಾಗಿ ಕೊಂಡುಕೊಳ್ಳುವ ಎಲ್ಲಾ ಪದಾರ್ಥಗಳನ್ನು ಎಷ್ಟು ಸುಲಭದಲ್ಲಿಯೂ ಇಲ್ಲೇ ಪಡೆಯಬಹುದು? ಅದೃಷ್ಟದಿಂದ ಯಾವ ಕೆಲಸಕ್ಕೂ ಕೊಡದೆ ಹೂಳಿಟ್ಟ ಹಣವು ಏನಾಗುವದು? ಪಾಶ್ಚಾತ್ಯರನ್ನು ಹೋಲುವದರಲ್ಲಿ ಸಂಶಯವೇನು?

ದಕ್ಷಿಣ ಮೈಸೂರು ನೇಟಿವ್ ಕಾಫೀ ಪ್ಲಾಂಟರ್ಸ್ ಅಸೋಸಿಯೇಷನ್.

ತಾ॥ ೩೧ನೇ ಆಗಸ್ಟು ೧೮೯೩ನೇ ಇಸವಿ.

ಈದಿವಸ ಹಗಲು ೨ ಘಂಟೆಯಲ್ಲಿ ಸಕಲೇಶಪುರದ ಮಾಸ್ತರ್ ಬಂಗ್ಲೆಗೆ ದಯಮಾಡಿದ ಮೆಂಬರುಗಳು ನಡೆಸಿದ ಪ್ರೊಸೀಡಿಂಗ್ಸ:—

ಪ್ರಥಮತಃ ಈ ತಿಂಗಳ ೧೦ನೇ ತಾರೀಖಿನಲ್ಲಿ ಈ ಸಕಲೇಶಪುರದೊಳು ಕೇಳ್ಪಡುವ ದೊಡ್ಡ ಮನುಷ್ಯರು ಮಾಡಿದ ಮೀಟಿಂಗಿನಲ್ಲಿ ನಿಶ್ಚಯವಾದಂತೆ ಆಹ್ವಾನ ಪತ್ರಿಕೆಗಳನ್ನು ಕಳುಹಿಸಿದವರ ಪೈಕಿ ಈದಿವಸ ಸಭೆಗೆ ದಯಮಾಡಿಸಿದ ಮೆಂಬರುಗಳು ೭೪ ಜನರು.

ಕಾಫೀ ವ್ಯವಸಾಯ ಸಂಬಂಧವಾದ ವಿಷಯದಲ್ಲಿ ಸಾಂಪ್ರತಿಕವಾಗಿ ಉಂಟಾಗಿರತಕ್ಕ ಅನಾನುಕೂಲಗಳನ್ನು ನಿವಾರಣೆ ಮಾಡಿಕೊಳ್ಳುವದಕ್ಕೆ ಒಬ್ಬೊಬ್ಬರಿಂದಲೇ ಅಸಾಧ್ಯವಾಗಿರುವದರಿಂದಲೂ, ಈಸ್ಥಳದಲ್ಲಿ ಮುಖ್ಯವಾದ ಒಂದು ಸಭೆಯನ್ನು ಏರ್ಪಡಿಸಬೇಕೆಂಬ ಉದ್ದೇಶವು ಅನೇಕದಿನದಿಂದಲೂ ಇದ್ದುದರಿಂದಲೂ, ಸಕಲೇಶಪುರದಲ್ಲಿ ಈ ಬಗೆಯ ಸಮಾಜವನ್ನು ಏರ್ಪಡಿಸುವದು ಅತ್ಯುತ್ತಮವೆಂದು ಕಾಫಿ ಬೆಳೆಗಾರರೆಲ್ಲರೂ ಅಂಗೀಕರಿಸಿದರು. ಈ ಸಭಾಕಾರ್ಯವನ್ನು ಈದಿವಸ ನಡೆಸುವದಕ್ಕೆ ಒಬ್ಬರು ಛೇರ್ಮನ್ನರಾಗಬೇಕೆಂದು ಆಲೋಚಿಸಿದ್ದಕ್ಕೆ ಮ॥ ರಾ॥ ... ಅಗ್ರಾಸನವನ್ನು ವಹಿಸಬೇಕೆಂಬುದಾಗಿ ಮ॥ ರಾ॥ ... ಸೂಚಿಸಿದರು. ಮ॥ರಾ॥ ... ಅನುಮೋದಿಸಿದರು. ... ಮ॥ರಾ॥ ... ಆಗ್ರಾಸನವನ್ನು ವಹಿಸಿದರು. ಮ॥ರಾ॥ ... ಈ ಸಭೆಯನ್ನು ಪ್ರಸಿದ್ಧ ನಾಮಧೇಯದಿಂದ ಅಲಂಕರಿಸಬೇಕೆಂದು ಪ್ರಸ್ತಾಪಿಸಿದ್ದಕ್ಕೆ ಮೆ॥ ಕೊಯಿಲೂರ ಸಾಹೇಬರು ಮ॥ರಾ॥ ಶ್ರೀಕಂಠಯ್ಯನವರು, ಮ॥ರಾ॥ ಎಂ. ಎಸ್. ಸುಬ್ಬಯ್ಯನವರು ಸಹಾ "ದಕ್ಷಿಣ ಮೈಸೂರು ನೇಟಿವ್ ಕಾಫಿಪ್ಲಾಂಟರ್ಸ್ ಅಸೋಸಿಯೇಷನ್" ಎಂಬ ನಾಮಧೇಯದಿಂದ ಭೂಷಿಸತಕ್ಕದ್ದಾಗಿ ತನೆಂದು ಅಭಿಪ್ರಾಯಪಟ್ಟಿದ್ದಕ್ಕೆ ಸರ್ವರೂ ಸಮ್ಮತಿಸಿ ಶ್ಲಾಘಿಸಿದರು. ಬೆಂಗಳೂರಲ್ಲಿ ಈವರಾಶೀ ೨೯ನೇ ತಾರೀಖಿನಲ್ಲಿ ನಡೆಯುವ ದಕ್ಷಿಣ ಹಿಂದೂಸ್ಥಾನದ ಪ್ಲಾಂಟರ್ಸ್ ಕಾನ್ಫರೆನ್ಸ ವಾಡಕ್ಕೆ ಈ ಸಭೆಯಿಂದ ಮೆಂಬರುಗಳನ್ನು ಕಳುಹಿಸಬೇಕೆಂದು ಮಹಾರಾಜ್ರಿಗಳಾದ ಶ್ರೀಕಂಠಯ್ಯನವರು, ಗುಂಡಶೆಟ್ಟರು, ಛೇರ್ಮನ್ನರು ಸಹ ಸೂಚಿಸಿದ್ದಕ್ಕೆ ಮ॥ ಗಳಾದ ಉದ್ದೇವಾಡದ ಎಸವೇಗೌಡರು, ವಳಲಹಳ್ಳಿ ಮಂಜಯ್ಯನವರು, ಹೊಸಕೆರೆ ಸಿದ್ದೇಗೌಡರು ಸಹ ಆಲೋಚಿಸಿ ಮ॥ ಸುಬ್ಬಯ್ಯನವರು, ಮೆ॥ ಕೊಯಿಲೂರು ಸಾಹೇಬರವರು, ಮ॥ ಮಹಮ್ಮದ್ ಗೌಸ್ ಸಾಹೇಬರು, ಈ ೩ ಜನರನ್ನು ಆರಿಸಿದ್ದಕ್ಕೆ ಸರ್ವರೂ ಒಪ್ಪಿದ್ದನ್ನು ಅವರುಗಳು ಅಂಗೀಕರಿಸಿದರು. ಈ ಸಭೆಗೆ ಒಬ್ಬ ಪ್ರೆಸಿಡೆಂಟನ್ನೂ, ಒಬ್ಬರು ಸೆಕ್ರೆಟರಿಯವರನ್ನೂ, ಹನ್ನೆರಡು ಎಕ್ಸಿಕ್ಯೂಟಿವ್ ಮೆಂಬರುಗಳನ್ನೂ ಸಹ ನಿಯಾಮಕ ಮಾಡಬೇಕೆಂದು ಮ॥ ರಾ॥ ಭೈರಪ್ಪ ... ಸೂಚಿಸಿದ್ದಕ್ಕೆ ಎಲ್ಲರೂ ಒಪ್ಪಿದರು. ಈ ಪ್ರಕಾರಕ್ಕೆ ಮೆ॥ ಕೊಯಿಲೂರು ಸಾಹೇಬರು ಪ್ರೆಸಿಡೆಂಟರಾಗಿಯೂ, ಮಹಾರಾಜ್ರಿಗಳಾದ ಎಂ. ಎಸ್. ಸುಬ್ಬಯ್ಯನವರು ಸೆಕ್ರೆಟರಿಯವರಾಗಿಯೂ, ಶ್ರೀಕಂಠಯ್ಯನವರು ಜಾಯಿಂಟ್ ಸೆಕ್ರೆಟರಿಯವರಾಗಿಯೂ, ಮಹಮ್ಮದ್ ಗೌಸ್ ಸಾಹೇಬರು, ಮೆಜೆಸ್ಟರ್ ಪಟೇಲ್ ವಗೈರೆ ವಳ್ಳೇಗೌಡರು, ಕೆಳಲ್ಪನವರು, ಉದ್ದೇವಾಡದ ಬಸವೇಗೌಡರು, ಪಾನಿಪ ಬಿಲಾಪಟ್ಟಿನ ಗುಂಡಶೆಟ್ಟರು, ಹೊಸಕೆರೆ ಸಿದ್ದೇಗೌಡರು, ಅಟ್ಟದಹಾಡು ಪಟೇಲ್ ಈರೇಗೌಡರು, ಹಾನವಡ್ಡೇರಿ ಪಂಡಿತ ಸಿದ್ಧಯ್ಯನವರು, ಎಸಳೂರು ದೇಶಿ ಮಲ್ಲಪ್ಪನವರು, ಚಿಕ್ಕಿಗೆ ... ಶೆಟ್ಟರು, ಬೆಳ್ಳೂರ ಮಲ್ಲೇಗೌಡರು, ಈ ಹತ್ತುಜನರು ಎಕ್ಸಿಕ್ಯೂಟಿವ್ ಮೆಂಬರಗಳಾಗಿಯೂ ಇರಬೇಕೆಂತ ಮಹಾರಾಜ್ರಿಗಳಾದ ನಿಡಿಗೆರೆ ಕೃಷ್ಣಯ್ಯಂಗಾರ್ಯರು, ಹೆಬ್ಬಸಾಲೆ ಸೋಮೇಗೌಡರು, ಕೊಪ್ಪ ಸುಬ್ಬರಾಯಾಚಾರ್ಯರು, ಸಕಲೇಶಪುರದ ಸೋಮೇಗೌಡರು, ಮಲ್ಲಶೆಟ್ಟರು, ವಳಲಹಳ್ಳಿ ಮಂಜಯ್ಯನವರು ಮುಂತಾದವರು ಅಭಿಪ್ರಾಯಪಟ್ಟದ್ದಕ್ಕೆ ಎಲ್ಲರೂ ಒಪ್ಪಿದರು. ಬೇಲೂರು ದೊಡ್ಡ ಮನುಷ್ಯರು ತಮಗೆ ಈ ಸಭೆಯಲ್ಲಿ ಸ್ಥಳವನ್ನು ಕೊಟ್ಟು ಗೌರವಕ್ಕಾಗಿ ಸಭೆಗೆ ವಂದಿಸಿ ಅಂಗೀಕರಿಸಿದರು. ೧೮೯೩ನೇ ಇಸವಿ ಆಗಸ್ಟು ೩೧ರಲ್ಲಿ ಈ ಸಭೆಯು ಸ್ಥಾಪಿಸಲ್ಪಟ್ಟದ್ದರಿಂದ ಈ ದಿವಸದಾರಭ್ಯ ಆಚರಣೆಯಲ್ಲಿ ಏರಡುವರ್ಷದೊಂದು ನಿರ್ಣಯಿಸಲ್ಪಟ್ಟಿತು. ಈ ಸಭೆಯು ಸ್ಥಾಪಿತವಾದದ್ದನ್ನು ಮೈಸೂರು ಗೌರ್ನಮೆಂಟಿನವರ ಘನಪದ ಸನ್ನಿಧಿಗೆ ತಲುಪಿಸತಕ್ಕದ್ದು ಆವಶ್ಯಕವಾದ್ದರಿಂದ ಉಚಿತ ರೀತಿಯಲ್ಲಿ ಈ ಪ್ರೊಸೀಡಿಂಗ್ಸ್ ಕಾಪಿಯನ್ನು ವಿನಯಪೂರ್ವಕ ವಿಜ್ಞಾಪಿಸಿಕೊಳ್ಳಬೇಕೆಂದೂನನ್ನೂ ಇತರ ಸ್ಥಳಗಳಲ್ಲಿ ಸ್ಥಾಪಿತವಾಗಿರುವ ದೊಡ್ಡ ದೊಡ್ಡ ಸಮಾಜಗಳಿಗೂ ದಕ್ಷಿಣ ಮತ್ತು ಉತ್ತರ ಮಹಿಸೂರು ಕಾಫಿ ಪ್ಲಾಂಟರ್ಸ್ ಅಸೋಸಿಯೇಷನ್‌ಗಳಿಗೂ ಈ ಕಾಪಿಯನ್ನು ಕಳುಹಿಸಬೇಕೆಂದು ದುವನ್ನು ತೀರ್ಮಾನಿಸಲಾಯಿತು.

ಈ ಸಭೆಗಾಗಿ ಶ್ರಮವನ್ನು ವಹಿಸಿ ಕಾರ್ಯನಿರ್ವಾಹವನ್ನು ಮಾಡಿದ್ದಕ್ಕೆ ಈ ಸಭಾಸದರು ಅಗ್ರಾಸನಾಧಿಪತಿಗೆ ವಂದಿಸಿ ಸಂತೋಷದಿಂದ ಗಂಧ ಪುಷ್ಪ ತಾಂಬೂಲವನ್ನು ಸ್ವೀಕರಿಸಿ ಸಭೆಯನ್ನು ವಿಸರ್ಜನೆ ಮಾಡಿದರು.

ಎಂ. ಎಸ್. ಸುಬ್ಬಯ್ಯ

ಕಾಫೀಪ್ಲಾಂಟರು ಹಾದಿಗೆ ಎಸ್ಟೇಟು

ಸೆಕ್ರೆಟರಿ

ಶ್ರೀಕಂಠಯ್ಯ

ಕಾಫೀ ಪ್ಲಾಂಟರು ಸುಂಡೆಕೆರೆ ಎಸ್ಟೇಟು

ಜಾಯಿಂಟ್ ಸೆಕ್ರೆಟರಿ

ವಿ. ಎ ಕೊಯಿಲೂರು

ಕಾಫೀ ಪ್ಲಾಂಟರು ಹೊಸಕೆರೆ ಎಸ್ಟೇಟು

ಪ್ರೆಸಿಡೆಂಟ್

ಶಾಲಿವಾಹನಶಕ ೧೮೧೫ ನೇ ವಿಜಯನಾಮ ಸಂವತ್ಸರದ ಭಾದ್ರಪದ ಬಹುಳ ಏಕಾದಶಿ ಗುರುವಾರದಿಂದ ಆಶ್ವೀಜ ಶುದ್ಧ ಬಿದಿಗೆ ಬುಧವಾರದ ವರೆಗಿನ ವಾರದ ಪಂಚಾಂಗ.

೧೮೯೩ ನೇ ಇಸವಿ, ಅಕ್ಟೋಬರ

ತಾ.	ವಾರ.	ತಿಥಿ	ಘಳಿಗೆ.	ನಕ್ಷತ್ರ.	ಘಳಿಗೆ.	ಹಿಂದೂ ಸೌರ ತೇದಿ.
೫	ಗು	ಏ	53-28	ಪ್ಲ	43-56	21
6	ಶು	ದ್ವಾ	50-8	ಮ	42-7	22
7	ಶ.	ತ್ರ	47-27	ಪು	41-5	23
೮	ರ.	ಚ	16-9	ಉ	41-17	24
9	ಸೋ.*	ಅ	16-6	ಹ	42-44	25
10	ಮಂ.†	ಪ್ರ	47-16	ಚಿ	45-20	26
11	ಬು	ದ್ವಿ	49-52	ಸ್ವಾ	49-19	27

* ಮಹಾಲಯಾಮಾವಾಸ್ಯೆ † ನವರಾತ್ರಾರಂಭ

ಪೇಟೆ ಧಾರಣೆ.

ದಿನಸಿ.	ಮೈಸೂರು	ಬೆಂಗಳೂರು.
	ರೂ. ಆ. ಪೈ.	ರೂ. ಆ. ಪೈ.
ಕಡ್ಡೀ ಅಕ್ಕಿ ಪಲ್ಲ ೧ಕ್ಕೆ	೧೩-೮-೦	೧೨-೮-೦
ಕೆಂಬೂತಿ ಅಕ್ಕಿ ಅವ್ವಲ್	೧೩-೦-೦	೧೦-೧೨-೦
ಹಿಟ್ಟೀ ಅಕ್ಕಿ ದುಯಂ	೧೨-೦-೦	೧೦-೮-೦
ಉದರಾಣಿ ಅಕ್ಕಿ	೧೨-೦-೦	೧೧-೦-೦
ಸಂಣಕ್ಕಿ ಅವ್ವಲ್	೧೪-೦-೦	೧೪-೦-೦
ಹಿಟ್ಟೀ ಅಕ್ಕಿ ದುಯಂ	೧೩-೦-೦	೧೨-೮-೦
ತೊಗರಿಬೇಳೆ ಪಲ್ಲ ೧ಕ್ಕೆ	೧೪-೦-೦	೧೩-೮-೦
ಹಿಟ್ಟೀ ದುಯಂ ತರಹ	೧೩-೮-೦	೧೨-೮-೦
ಕೈಗರಾಗಿ ಪಲ್ಲ ೧ಕ್ಕೆ	೪-೮-೦	೫॥-೦-೦
ಹಾರಕ್ಕಿ	೪-೪-೦	೫-೦-೦
ಹುರುಳಿ ಪಲ್ಲ ೧ಕ್ಕೆ	೧೦-೦-೦	೯-೮-೦
ಬಿಳೀ ಅವರೆ	೧೩-೮-೦	೧೨-೦-೦
ಹೆಸರು	೧೧-೮-೦	೧೨-೧೦-೦
ಉದ್ದು	೧೨-೦-೦	೧೧-೦-೦
ಕಡಲೆ	೧೦-೮-೦	೯-೧೨-೦
ಎಳ್ಳು	೧೩-೪-೦	೧೦-೮-೦
ಹುರಳಿ	೭-೮-೦	೭-೭-೦
ಸೀಗೇಕಾಯಿ ಮೂಟೆ ೧ಕ್ಕೆ	೨-೦-೦	೨-೦-೦
ನೊರೆಸಿನಕಾಯಿ	೪-೦-೦	೩-೧೨-೦
ದುಯಂ ತರಹ	೩-೧೨-೦	೩-೮-೦
ಬೆಲ್ಲ ದೊಡ್ಡ ಅಚ್ಚು ೧೦೦ ಕ್ಕೆ	೪-೧೨-೦	ಪು ೨-೨-೦
ಸಣ್ಣಚ್ಚು	೪-೮-೦	೩॥-೧೨-೦
ಒಣಕೊಬ್ಬರಿ ಮೂಟೆ ೧ಕ್ಕೆ	೪-೦-೦	೩-೧೪-೦
ತರಳೆಕ್ಕು	೩-೧೪-೦	೩-೮-೦
ಕೊತ್ತುಂಬರಿ ಪಲ್ಲ ೧ಕ್ಕೆ	೭-೧೨-೦	೮-೦-೦
ಉಪ್ಪು	೧೦-೮-೦	೯-೧೨-೦
ಹುಣಸೇಹಣ್ಣು ಮೂಟೆ ೧ಕ್ಕೆ	೨-೦-೦	೧-೧೪-೦
ಹಳೇ ಹುಣಸೇಹಣ್ಣು	೧-೧೨-೦	೧-೧೨-೦
ತುಪ್ಪ	೧೩-೦-೦	೧೨-೦-೦
ಸೀಮೆ ಯಣ್ಣೆ ಪೆಟ್ಟಿ ೧ಕ್ಕೆ	೪-೨-೦	೩-೧೫-೦
ತೆಂಗಿನಕಾಯಿ ೧೦೦ ಕ್ಕೆ	೫-೮-೦	೬-೪-೦
ಚಿನ್ನ (ತೊಲ)		
ಕೆಂಪು	೧೬-೧೨-೦	೧೬-೪-೦
ಪಸಿಮ	೧೭-೨-೦	೧೬-೧೦-೦
ಗಟ್ಟಿ	೨೬-೭-೦	೨೬-೨-೦

Mysore.—Printed and published for the Proprietor at the Wesleyan Mission Press.
5/10/93.

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು — ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಸಂಪುಟ ೬ — ಮೈಸೂರು—ಸ್ರ ೧೮೯೩ ನೇ ಇಸವಿ ಅಕ್ಟೋಬರ್ ತಾರೀಖು ೧೨ ನೇ ಗುರುವಾರ. — ಸಂಖ್ಯೆ [illegible]

ನೋಟೀಸ್.

		ಕ್ರಯ			ಟಪಾಲು ಸಹಿತವಾಗಿ		
Campbell's	ಕನ್ನಡ ವ್ಯಾಕರಣ ಸಾರ	೦	೨	೦	೦	೨	೬
Object Lessons.	ವಸ್ತು ಬೋಧೆಗಳು	೦	೧	೦	೦	೧	೬
Picture do	ಚಿತ್ರಗಳು ಸಹಿತವಾಗಿ	೦	೨	೦	೦	೨	೬
School Geography	ಭೂಗೋಳ ಶಾಸ್ತ್ರಸಾರ	೦	೬	೦	೦	೭	೦

ಈ ನಾಲ್ಕು ಪುಸ್ತಕಗಳು ಮೈಸೂರು ಸರ್ಕಾರದವರ ಅಪ್ಪಣೆ ಪ್ರಕಾರ ಸಕಲ ಪಾಠ ಶಾಲೆಗಳಲ್ಲಿಯೂ ಉಪಯೋಗಿಸತಕ್ಕವುಗಳು.

	ಕ್ರಯ			ಟಪಾಲು ಸಹಿತವಾಗಿ		
ಮಾರ್ಟಿನ್ ಲೂತರ್ ಎಂಬವನ ಚರಿತ್ರೆ	೦	೧	೬	೦	೨	೦
ಸ್ತ್ರೀಯರು ಓದತಕ್ಕ ಪುಸ್ತಕ	೦	೪	೦	೦	೪	೬
ಗಣಿತ ಮಗ್ಗಗಳು ..	೦	೧	೦	೦	೧	೬
ಸಂಸ್ಕೃತ ಕರ್ನಾಟಕ ಭಾಷಾಮಂಜರಿ	೦	೨	೦	೦	೨	೬
ಇಂಗ್ಲೀಷೂ ಕನ್ನಡವೂ ಶಬ್ದಾವಳಿ ೧ನೇ ೨ನೇ ಭಾಗಂಕ್ಕೆ	೦	೧	೦	೦	೧	೬
ಕಾವ್ಯಮಾಲೆ (Minor Poetical Anthology)	೦	೮	೦	೦	೮	೬
ಬಾಲವ್ಯಾಕರಣ ..	೦	೪	೦	೦	೫	೬
ಹಳಗನ್ನಡ ವ್ಯಾಕರಣ ಸೂತ್ರಗಳು	೦	೬	೦	೦	೬	೬
ಇಂಗ್ಲೀಷೂ ಕನ್ನಡವೂ ಸಂಭಾಷಣ ವಾಕ್ಯಗಳು	೦	೧೦	೦	೦	೧೦	೬
ಪಟ್ಟಣಾಶಿ ದರ್ಪಣ ..	೧	೦	೦	೧	೪	೬
Kan. Eng. Pocket Dictionary	೧	೮	೦	೧	೫	೭
Eng. Kan. School Dictionary	೨	೧೦	೦	೨	೧೨	೬
ಮಿಸ್ಸೋ ಶಾಯಿ ..	೨	೪	೪	೦	೪	೬
ಆತ್ಮಿಕ ಯುದ್ಧ (Bunyan)	೨	೧೨	೦	೦	೧೩	೬
ಕೃಷಿ ಪದ್ಧತಿ ೧ ನೇ ಭಾಗ ೭ ಆಣೆ ೩ನೇ ಭಾಗ	೦	೧	೬	೦	೨	೦
ಭಕ್ತಸಾರ ..	೦	೧	೦	೦	೧	೬
ಸತ್ಯ ವಾಗ್ದಾನ	೦	೧	೦	೦	೧	೬

ಈ ಪುಸ್ತಕಗಳೂ ಇನ್ನು ಅನೇಕ ಪ್ರಯೋಜನಕರವಾದ ಪುಸ್ತಕಗಳೂ ಕೆಳಗೆ ನಮೂದಿಸಿರುವ ಸ್ಥಳಗಳಲ್ಲಿ ದೊರಕುತ್ತವೆ.

ಬೆಂಗಳೂರು—ಮೋರ್ಗಾಟಿನ ಹತ್ತಿರವಿರುವ ಪುಸ್ತಕಶಾಲೆ.

ಚಿಕ್ಕಬಳ್ಳಾಪುರ—ಲಂಡನ್ ಮಿಷನ್ ರೀಡಿಂಗ್ ರೂಮ್.

ತುಮಕೂರು—ವೆಸ್ಲಿಯನ್ ಮಿಷನ್ ಬಂಗಲೆ. ಮೈಸೂರು—ವೆಸ್ಲಿಯನ್ ಮಿಷನ್ ಪ್ರೆಸ್.

ನೋಟೀಸ್

ಪುಸ್ತಕಗಳು.	ಕ್ರಯ.
ಪ್ರಾಚ್ಯ ಸ್ಯಾಹಿತ್ಯ	1—6—0
ಕನ್ನಡ ಇಂಗ್ಲೀಷು ನಿಘಂಟು 1 ನೇ ದೊಡ್ಡತರಹ	3—0—0
„ „ 2 ನೇ ತರಹ	2—8—0
ಬಾಲಕರು ಓದುವ ಪೀಠಿಕೆ ಜ್ಞಾನೋಪದೇಶದ ಪ್ರಶ್ನೋತ್ತರಗಳು	0—1—0
ಸಭೆಯ ನಿಯಮಗಳನ್ನು ಕುರಿತದ್ದು	0—0—6
ಕಥಾ ಸಂಗ್ರಹ 1 ನೇ ಭಾಗದಿಂದ 3 ವರೆಗೆ	1—0—0
ಕಥಾ ಸಂಗ್ರಹ 4 ರಿಂದ 6 ನೇ ಭಾಗ ಹೊಸ ಛಾಪೆ	1—0—0
„ „ ದೊಡ್ಡ ತರಹ	1—8—0
ಬೋಧಕಸಿದ್ಧ ಪೋಧಿನಿ	0—1—0
ಸತ್ಯವೇದವನ್ನು ಕುರಿತು 2 ನೇ ಭಾಗ	0—1—0
ಪ್ರಸಂಗಿಯ ದರ್ಪಣ	0—0—6
ಇಂಗ್ಲೀಷುಭಾಷೆಯಲ್ಲಿಯೂ, ಕನ್ನಡ ಭಾಷೆಯಲ್ಲಿಯೂ, ಶಬ್ದಗಳ ವಿಭಾಗಗಳನ್ನು ವಿವರಿಸಿರುವ ನಿಘಂಟು	0—2—0
ಕನ್ನಡ ವ್ಯಾಕರಣ (ಇಂಗ್ಲೀಷಿನಲ್ಲಿ)	2—0—0
ಹಿಂದುಸ್ತಾನಿ ವ್ಯಾಕರಣ	1—0—0
ಬಾಲಬೋಧ ಸೋಪಾನವು	0—12—0
ವನಚರಗಳ ಉಪಯೋಗದ ವಿಚಾರ	0—0—6
ಕ್ರಿಸ್ತರ ಬೋಧನೆಗಳ ಸಂಗ್ರಹವು	0—12—0

ಮೇಲೆ ನಮೂದಿಸಿರುವ ಪುಸ್ತಕಗಳನ್ನು ಅಪೇಕ್ಷಿಸುವವರು ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್ಸಿಗೆ ಬರೆದು ತರಿಸಿಕೊಳ್ಳಬಹುದು ಅಂಚೇ ಹಾಸಲು ಬೇರೆ ಕೊಡಬೇಕು.

ವೆಸ್ಲಿಯನ್ ಮಿಷನ್ ಪ್ರೆಸ್,
ಮೈಸೂರು.

ಪ್ರಸಿದ್ಧ ಪತ್ರಿಕೆ

ಕಂ॥ ಸಕಲಸುಮನಸರಿಗರುಹುವೆ । ಸುಕಲಿತ್ರೀಮನ್ಮಹಾಭಾರ
ತಮೆಯುದಸುತರಿಂ ॥ ಪ್ರಕಟಪಮಹಾಭೂತಕಥೆ ।
ವಿಕಸಿಪುದೇಪಿದ ಕೇಳಿ ಕೃತ್ಯನಾನಂದಂ ॥
ಕ ನ್ನ ಡ ಮ ಹಾ ಭಾ ರ ತ .

“ಶ್ರೀಕೃಷ್ಣರಾಜ ವಾಣೀವಿಲಾಸ” ಎಂಬ ಕನ್ನಡ ಮಹಾಭಾರತವು ನಮ್ಮ ಸ್ವಕೀಯ ಶ್ರೀಚಾಮರಾಜೇಶ್ವರ ಪ್ರೆಸ್ಸಿನಲ್ಲಿ ಪ್ರಕಟವಾಗುವದು ಯಲ್ಲರಿಗೂ ವಿಶದವಾಗಿಯೇ ಇದ್ದು ಈಗ ಬರೆದಿಟ್ಟು ಪರ್ವಗಳೂ ಪೂರ್ತಿಯಾಗಿ ಪ್ರಸಿದ್ಧ ಅಪೇಕ್ಷಿಸುವವರು ಕೆಳಗೆ ವಿವರಿಸುವ ಕ್ರಯದಿ ಮೇಲೆ ಕ್ರಯ ಮಾತ್ರ ಪಡೆಯಬಹುದು.

ಆದಿಪರ್ವ ರೂ ೩, ಸಭಾಪರ್ವ ೧—೪—೦, ಅರಣ್ಯಪರ್ವ.. ವಿರಾಟಪರ್ವ ಪ್ರತಿ [illegible] ೧೨ ಆಣೆ, ಡಿಟೋ [illegible] ೧ ರೂ, ಉದ್ಯೋಗಪರ್ವ.. ಭೀಷ್ಮಪರ್ವ ೨ ದ್ರೋಣಪರ್ವ ೨—೮—೦, ಕರ್ಣಪರ್ವ.. ಶಲ್ಯಪರ್ವ ೧—೨—೦ ಸೌಪ್ತಿಕಪರ್ವ ೬ ಆಣೆ, ಸ್ತ್ರೀಪರ್ವ ೬ ಆಣೆ, ಶಾಂತಿಪರ್ವ ರಾಜಧರ್ಮ ೨—೬—೦, ಆಪದ್ಧರ್ಮ ೮ ಆ, ಮೋಕ್ಷಧರ್ಮ ೨—೬—೦, ಅನುಶಾಸನಿಕಪರ್ವ ೩—೧೨—೦ ಅಶ್ವಮೇಧಿಕಪರ್ವ ೧—೧೨—೦, ಆಶ್ರಮವಾಸಿಕಪರ್ವ—ಮೌಸಲಪರ್ವ—ಮಹಾಪ್ರಸ್ಥಾನಪರ್ವ—ಸ್ವರ್ಗಾರೋಹಣಪರ್ವ ೧೦ ಆಣೆ, ಭಗವದ್ಗೀತೆ ೮ ಆಣೆ, ಯಾಜ್ಞವಲ್ಕ್ಯರ ಚರಿತ್ರೆ ೪ ಆ, ಹರಿಭಕ್ತಸುಧಾ ೨ ರೂ, ಲೋಕವಸಿಷ್ಠ [illegible] ಸೂಕ್ತಿ ೮ ಆಣೆ

ಅರಣ್ಯಪರ್ವ, ಉದ್ಯೋಗಪರ್ವ, ಕರ್ಣಪರ್ವ ಈ ಮೂರು ಪರ್ವಗಳು ಗೌರ್ನಮೆಂಟ್ ಬುಕ್ ಡಿಪೋವಿನಲ್ಲಿ ದೊರೆಯುವವು ಮೇಲೆ ಹೇಳಲ್ಪಟ್ಟಿರುವ ಪುಸ್ತಕಗಳು ನಮ್ಮಲ್ಲಿ ಸ್ವಲ್ಪವೇ ಇರುವದರಿಂದ ಜಾಗ್ರತೆಯಾಗಿ ತರಿಸಿಕೊಳ್ಳಬಹುದು.

ಶ್ರೀಮನ್ಮಹಾರಾಜರವರಿಗೆ ಫಲಪುಷ್ಪ ಸಮರ್ಪಣೆಯು ಮಾಡುವದಕ್ಕೆ ಮುಖ್ಯವಾಗಿ ಸ್ಥಾಪಿಸಲ್ಪಟ್ಟ.

ಎಂ. ರಾಮಪ್ಪ, ಅಂಡರ್,
ಪ್ರೊಪ್ರೈಟರ್, ಶ್ರೀಚಾಮರಾಜೇಶ್ವರ ಪ್ರೆಸ್
ಬಳೆ—ಪೇಟೆ ರೋಡ್, ಬೆಂಗಳೂರು

ಸ್ರ ೧೮೮೮ ರಲ್ಲಿ ಸ್ಥಾಪಿಸಲ್ಪಟ್ಟದ್ದು.
ಕೆನರಾ ಅಂಡ್ ಮೈಸೂರ ಟ್ರೇಡಿಂಗ್ ಏಜನ್ಸೀ ಆಫೀಸ್, ಮುಂಬಯಿ.
ಇವರು ತಯಾರಿಸಿರುವಂಥ—

ಹೈಮಧಾತ್ರೀತೈಲ.

ಕಳೆದ ಜನವರಿ ತಿಂಗಳೊಂದರಲ್ಲಿ ೪,೧೦೦ ಬಾಟ್ಲಿಗಳು ಖರ್ಚಾದವು. ಈ ತೈಲದ ಮಹಿಮೆಯನ್ನು ಕುರಿತು, ನಾವೀಗ ಪತ್ರಿಕೆಗೆ ವರ್ಣಿಸಲಾರೆವು—ಯಾಕಂದರೆ, ಯಾರು ಈ ತೈಲವನ್ನು ಉಪಯೋಗಿಸುತ್ತಾರೋ ಅವರಿಗೆ ಒಂದೆರಡು ದಿವಸಗಳಲ್ಲಿಯೇ ಇದರ ಅಪ್ರತಿಮವಾದ ಗುಣವು ಸಹಜವಾಗಿ ಅನುಭವಕ್ಕೆ ಬರುವದು. ಆದಾಗ್ಯೂ ಇದರ ಮುಖ್ಯವಾದ ಉಪಯೋಗವನ್ನು ತಿಳಿಸುವದು ನಮ್ಮ ಕರ್ತವ್ಯವಾಗಿರುತ್ತದೆ.

ಈ ನಮ್ಮ “ಹೈಮಧಾತ್ರೀ ತೈಲವನ್ನು” ಪ್ರತಿದಿನ ತಲೆಗೆ ಹಾಕಿಕೊಂಡರೆ ಮಿದುಳಿನಲ್ಲಿರುವ ಉಷ್ಣತೆಯನ್ನು ಪರಿಹರಿಸುವದಲ್ಲದೇ, ಕಣ್ಣಿಗೂ, ಮಿದುಳಿಗೂ ತಣುಕರಿಸಿ, ಚಿತ್ತಕ್ಕೆ ಶಾಂತತೆಯನ್ನುಂಟುಮಾಡುವದು. ಮತ್ತು ಕಣ್ಣುಗಳಿಗುಂಟಾಗುವ ಸಾಮಾನ್ಯವಾದ ವಿಕಾರಗಳನ್ನೆಲ್ಲ ಪರಿಹರಿಸುವದು. ದೃಷ್ಟಿಗೆ ತೀವ್ರತೆಯುಂಟಾಗುವದು.

ಹೆಚ್ಚಾಗಿ ಓದತಕ್ಕವರಿಗೂ, ಒಂದೇ ಸಮನಾಗಿ ಕಣ್ಣಿಟ್ಟು ಕೆಲಸ ಮಾಡತಕ್ಕ ಕಸಬುಗಾರರಿಗೂ, ಕಣ್ಣುಗಳಲ್ಲಿ ನೀರು ಸುರಿಯುವವರಿಗೂ, ಉರಿಗಣ್ಣಿನವರಿಗೂ, ಚಿತ್ತವ್ಯಗ್ರವಾದವರಿಗೂ, ಅತ್ಯಂತ ಗುಣಕಾರಿಯಾಗಿರುವದು. ಈ ತೈಲದಲ್ಲಿರುವ ಇನ್ನೊಂದು ಅಪ್ರತಿಮವಾದ ಶಕ್ತಿಯೇನೆಂದರೆ—ಕೂದಲುಗಳನ್ನು ನಯವಾಗಿಯೂ, ಹೊಳೆಯುವಂತೆಯೂ, ಮಾಡುವದಲ್ಲದೇ ಬೆಳವಣಿಗೆಯನ್ನು ಹೆಚ್ಚಿಸುವದು. ಕೂದಲುಗಳ ಬೇರುಗಳನ್ನು ಘಟ್ಟಿಮಾಡಿ, ಅವು ಉದುರಿಹೋಗದಂತೆ ಮಾಡುವದು

ಪ್ರತಿಯೊಂದು ಬಾಟ್ಲಿಯೊಳಗೆ ೧೬ ತೊಲೆ ತೈಲವಿರುವದರಿಂದ ಒಬ್ಬನಿಗೆ ೨ ತಿಂಗಳು ಹಚ್ಚಿಕೊಳ್ಳಲಿಕ್ಕೆ ಸಾಕಾಗುವದು. ಬಡಬಗ್ಗರು ಸಹ ಕೊಂಡುಕೊಳ್ಳಲಿಕ್ಕನುಕೂಲವಾಗಿರಬೇಕೆಂಬದಕ್ಕಾಗಿ ಪ್ರತಿಯೊಂದು ಬಾಟ್ಲಿಗೆ ೧೦ ಆಣೆ ಕ್ರಯವಿಟ್ಟಿರುವೆವು. ೧೨ ಬಾಟ್ಲಿಗಳುಳ್ಳ ೧ ಪೆಟ್ಟಿಗೆಗೆ ೬॥ ರೂ ಮಾಂಸಿ. ಪ್ರತಿಯೊಬ್ಬ ಕುಟುಂಬಿಗನೂ, ಈ ತೈಲವನ್ನು ಉಪಯೋಗಿಸುವದು ಆವಶ್ಯವಾಗಿರುತ್ತದೆ. ಮಕ್ಕಳುಮರಿಗಳಿಗ ಸಹ ಈ ತೈಲವು ಸುಖಾವಹವಾಗಿರುತ್ತದೆ.

ಈ ತೈಲ ಮತ್ತು ಈ ಕೆಳಗೆ ಬರೆಯುವಂಥ ಔಷಧಗಳು, ತ್ರೆಸ್ಸು, ಮುತ್ತು, ರತ್ನ, ಬಂಗಾರ, ಬೆಳ್ಳಿ ಮುಂತಾದ ಸಾಮಾನುಗಳನ್ನು ಪಡೆಯಲಿಚ್ಛಿಸುವವರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬೇಕು.

ಮ್ಯಾನೇಜರ್, ಕೆನರಾ ಅಂಡ್ ಮೈಸೂರು ಟ್ರೇಡಿಂಗ್ ಏಜನ್ಸಿ ಆಫೀಸ್, ಮಾರ್ಕೆಟ್ ಪೋಸ್ಟ್. ಮುಂಬಾಯಿ.
ಜಾ' ಈ ತೈಲವನ್ನು ನಮ್ಮ ವಿನಹ ಇನ್ಯಾರೂ ಮಾಡಲಾರರು. ನಮ್ಮ ಹೆಸರಿನ ಗುರ್ತನ್ನು ನೋಡಿ ತೆಗೆದುಕೊಳ್ಳಬೇಕು ಬೇರೇತರದ ಎಣ್ಣೆಗಳನ್ನು ಈ ಹೆಸರಿನ್ನಿಟ್ಟು ಮಾರುತ್ತಿದ್ದರೆ ಜಾಗ್ರತೆ ಜಾರಿ!

ಔಷಧಗಳು.	ರೂ ಆ.	ತ್ರೆಸ್ಸುಗಳು.	ರೂ. ಆ.
ನಯನಾಮೃತಭಸ್ಮ ಬಾಟ್ಲಿ ೧ ಕ್ಕೆ	೧—೬	ಮಖಮಲ್ಲಿನ ಟೊಪ್ಪಿ	೨—೮
ನಯನಾಮೃತ ಕಾಡಿಗೆ	೧—೬	ಕರೇಸಬ್ಜಿನ ಲಾಂಗ್‌ಕೋಟು	೫—೦
ಕರ್ಣನಾದನಾಶಕ ಅಪ್ರತಿಮತೈಲ	೧—೦	ಡಿಟೋ. ಅಂಗಿ	೩—೮
ಮಹಾಮಾತಕಾರರತೈಲ	೧—೦	ಡಿಟೋ. ಷಾರ್ಟಕೋಟು (ಇಂಗ್ಲಿಷತರಹ)	೩—೬
ಪ್ರಮೇಹಭಸ್ಮವು	೨—೧೨	ವಸ್ತ್ರದ ಕಪ್ಪುಕೋಟು	೨—೮
ವಿಷಮಜ್ವರನಾಶಕಚೂರ್ಣ	೧—೦	ಡಿಟೋ. ಅಂಗಿ	೨—೪
ಬಾಲಸಂಜೀವಿನೀಗುಟಿಕೆ	೩—೮	ಫ್ಲಾನಲ್ ಕಮೀಸ್	೧—೬
ಅಜೀರ್ಣಾಂತಕವಟ್ಟಿ	೦—೮	ಡಿಟೋ ಬನೀಯನ್	೧—೪
ಸುಗಂಧತಾರಕದಂತಚೂರ್ಣವು	೦—೪	ಟೊಪಿ (ಇಂಗ್ಲಿಷತರಹ) ಸೆಟ್	೧—೬
ಕಜ್ಜಿಯಮುಲಾಮು	೦—೨		

ತಮಾಕುಮಾದ ಚಂದ್ರಕಾಂತ ಲೇಖ ಕನ್ನಡಕಗಳ ಕ್ರಯ ರೂ. ೧—೪॥—೫—೪॥. ಆತ್ತ[illegible] ಎಂಬ ಹೆಸರಿನ ಔಷಧಿಪುಸ್ತಕವು (೧ ವರುಷದ ಅನುಭವವುಳ್ಳದ್ದು) ಕ್ರಯ ರೂ. ೬.

ವೃತ್ತಾಂತ ಪತ್ರಿಕೆ.

ಚಂದಾ ನಿರ್ಣಯ.

	ರೂ. ಆ. ಪೈ.
ಸ್ಥಳದವರಿಗೆ ವರ್ಷ ೧ಕ್ಕೆ …	೧—೦—೦
ಪರಸ್ಥಳದವರಿಗೆ ವರ್ಷ ೧ಕ್ಕೆ …	೧—೬—೦
ಬಿಡಿ ಪತ್ರಿಕೆ ೧ಕ್ಕೆ …	೦—೦—೪

ಈ ಪತ್ರಿಕೆಯು ಮೈಸೂರು ರಾಜಧಾನಿಯಲ್ಲಿ ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ, ಪ್ರಕಟಿಸಲ್ಪಡುವದು. ಬಡವರು ಮೊದಲುಗೊಂಡು ಸಮಸ್ತರಿಗೂ ಸುಲಭಸಾಧ್ಯವಾಗುವಂತೆ ಈ ಪತ್ರಿಕೆಗೆ ಇಷ್ಟು ಅಲ್ಪ ಮೌಲ್ಯವನ್ನು ನಿರ್ಣಯಿಸುತ್ತೇವೆ ಈ ಪತ್ರಿಕೆಯನ್ನು ಅಪೇಕ್ಷಿಸುವವರು ಚಂದಾಹಣವನ್ನು ಯಾವಾಗ್ಯೂ ಮುಂಗಡವಾಗಿ ಕೊಡಬೇಕು.

ಎಡಿಟರ್,
ವೃತ್ತಾಂತ ಪತ್ರಿಕೆ.

ಟೋಪಿಗಳು!

ಟೋಪಿಗಳು!! WOOL CAPS ಟೋಪಿಗಳು!!

ಹಾಸನದ ಅರ್ಫನೇಜಿನಲ್ಲಿ ತಯಾರಾಗುವಂಥ ಅಚ್ಚುಕಂಬಳಿನೂಲಿನ ಟೋಪಿಗಳೇ (Wool Caps) ನಮ್ಮ ಆಫೀಸಿನಲ್ಲಿ ಮಾರಿಕೆಗೆ ಸಿದ್ಧವಾಗಿರುತ್ತವೆ. ಕ್ರಯದಿ—೧ ರೂ. ೨ ಆಣೆ ಇಂದ ೧ ರೂ. ೬ ಆಣೆಗಳ ವರೆಗೂ ಬೇರೆ ಬೇರೆ ರಕಂಗಳುಂಟು. ಸ್ಥಳದವರು ಖುದ್ದು ನೋಡಿ ಪಡೆಯಬಹುದು. ಪರಸ್ಥಳದವರು ಮುಂಗಡವಾಗಿಯೇ ಹಣ ಕಳುಹಿಸಿದಲ್ಲಿ ತ್ವರಿತದಲ್ಲಿ ಭಾಂಗೀ ಮೂಲಕ ರವಾನಿಸುತ್ತವೆ. ಭಾಂಗೀ ಛಾರ್ಜ ಬೇರೇ ಕೊಡಬೇಕು. ಮೇಲಿನ ಟೋಪಿಗೆ ಸಂಬಂಧವಾದದ್ದು ಎಲ್ಲ ಬರೆಯಬೇಕು.

ಮ್ಯಾನೇಜರ್,
ವೆಸ್ಲಿಯನ್ ಮಿಷನ್ ಪ್ರೆಸ್
ಮೈಸೂರು.

ಪ್ರಕಟನೆ.

ಲೋಕವ್ಯವಹಾರವನ್ನು ಲಕ್ಷಿಸುವ ಕನ್ನಡ ಪಾಠಶಾಲೆಗಳಲ್ಲಿನ ಉಪಾಧ್ಯಾಯರಿಗೂ, ಪ್ರೀಮೆಟ್ರಿಕ ಮತ್ತು ಮೆಟ್ರಿಕ್ಯುಲೇಷನ ಕ್ಲಾಸುಗಳ ಲ್ಲೋದುವ ವಿದ್ಯಾರ್ಥಿಗಳಿಗೂ ವಿದ್ಯಾರ್ಥಿನಿಯರಿಗೂ, ಪ್ರಜಾಪ್ರತಿನಿಧಿಗಳಿಗೂ, ವರ್ತಕರಿಗೂ, ವಿದ್ಯಾಭಿಮಾನಿಗಳಲ್ಲಾ ಸಕ್ತರಾದ ಸರ್ವರಿಗೂ, ಅತ್ಯಂತ ಉಪಯುಕ್ತವಾದ ಆಂಗ್ಲೇಯ ಚರಿತ್ರ ಸಂಗ್ರಹ (History of England in Kannese) ವೆಂಬ ಪುಸ್ತಕವು ಮುದ್ರೆಯಾಗಿ ಸಿದ್ಧವಾಗಿದೆ. ಆಧುನಿಕರಾದ ಶಾಸ್ತ್ರಜ್ಞರು ಈ ವಿಲಾಯತಿ ಚರಿತ್ರೆಯನ್ನು ಅತ್ಯಂತವಾಗಿ ಓದಿನೋಡಿ, ಅದರ ಪ್ರಯೋಜನವೇ ಮುಂತಾದವುಗಳ ಕುರಿತು ತಮ್ಮ ಉತ್ತಮಾಭಿಪ್ರಾಯಗಳನ್ನು ದಯಪಾಲಿಸಿರುತ್ತಾರೆ. ಅದುದರಿಂದ ಬೇಕಾದವರು ದಯವಿಟ್ಟು, ಮೈಸೂರು ಬಿ ಗ್ರಾಜ್ಯುಯೇಟ್ಸ ಟ್ರೇಡಿಂಗ್ ಅಸೋಸಿಯೇಷನಿಗಾಗಲಿ, ಮೈಸೂರು ಚಲುವಾಂಬ ಅಗ್ರಹಾರದ ಕ್ರಾಸು ೫ ನೆ ನಂ|| ಮನೆಯಲ್ಲಿರುವ ಗ್ರಂಥಕರ್ತರಾದ ಮ. ವೆಂ. ಚಂದ್ರಶೇಖರಶಾಸ್ತ್ರಿಗಳಿಗಾಗಲಿ, ಶೀಘ್ರವಾಗಿ ಬರೆದು ತರಿಸಿಕೊಳ್ಳಬಹುದು. ಕ್ರಯ ಪ್ರತಿ ೧ಕ್ಕೆ ೮ ಆಣೆ, ಅಂಚೆ ಹಾಸಲು ಬೇರೆ ೧ ಆಣೆ. (೧೫ ಪ್ರತಿಗಳಿಗೆ ಒಂದು ಪ್ರತಿ ಹೆಚ್ಚಾಗಿ ಕೊಡಲ್ಪಡುವುದು.) (1)

... ವೃತ್ತಾಂತ ಪತ್ರಿಕೆ.

೧೮೯೯ನೇ ಇಸವಿ ಅಕ್ಟೋಬರ ತಾ|| ೧೨ನೇ ಗುರುವಾರ.

ನವರಾತ್ರಿಬಂತು, ಜಾತ್ರೆ ಪ್ರಾರಂಭವಾಯಿತು.

ನವರಾತ್ರಿಯು ಬರುವುದಕ್ಕೆ ಮುಂಚೆ ೮–೧೦ ದಿನಗಳಿಂದಲೂ ಮಳೆ ಬಹುಚೆನ್ನಾಗಿ ಆಯಿತು. ಈಗಲೂ ಆಗುತ್ತಲಿದೆ. ದನಾ ಬಹು ಆರೋಗ್ಯಕರವಾದದ್ದಾಗಿದೆ. ಅದ್ದರಿಂದ ಈಸಲದ ದಸರಾಹಬ್ಬಕ್ಕೆ ನಾನಾ ಕಡೆಗಳಿಂದಲೂ ಜನಗಳು ವಿಪರೀತವಾಗಿ ಬರಲು ಆದ್ದರಿಂದಲೂ ಇಲ್ಲ. ಇದಕ್ಕೋಸ್ಕರಲೇ ರೈಲಿನ್ನು ದಿನ ೧ಕ್ಕೆ ೫–೬ ಸಲ ಬಿಡುವರು. ಬಂದು ಹಾದವರೂ ರಾಜಧಾನಿಗೆ ಹೊಗಳಿ ತನಿಯವರಗಳನ್ನು ನೋಡಿಕೊಂಡು ಸಂತೋಷವಾಗಿದ್ದು ಬರೋಣವೆಂದು ಇಷ್ಟಪಡುವ ಪ್ರತಿ ಬ್ರಿಟಿಷ ಅದಕ್ಕೆ ಅನುಕೂಲವಾಗುವುದ ಪ್ರಯತ್ನಗಳೇ ಎಲ್ಲಿ ಆಗಿರುವದರಿಂದ ರಾಜಧಾನಿಯಲ್ಲಿ ಈ ವರುಷ ವಿಪರೀತ ಜನರು ಬಂದು ಸೇರುವದರಲ್ಲಿ ಯಾವ ಸಂದೇಹವೂ ಕಂಡುಬರುವದಿಲ್ಲ. ಈ ದಸರಾಹಬ್ಬದಲ್ಲಿ ಬಂದ ಜನರು ಸಂತೋಷವಾಗಿ ಕಾಲ ಕಳೆಯುವಂತೆ ಇಲ್ಲಿನ ಮ್ಯುನಿಸಿಪಾಲಿಟಿಯವರು ಮಾಡಿರುವ ಅನೇಕ ಏರ್ಪಾಡುಗಳ ಪೈಕಿ ಒಂದು ವಿಷಯವು ಅತ್ಯಕ್ಷವಾಗಿ ಸಮಾಯ ಮಾತಾಡುವದಾಗಿರುತ್ತೆ. ಕೆಲವು ದಲ್ಲಿ ಕೋಪವು ಬಗಲು ಬಿಟ್ಟಾರದಲ್ಲಿರುವ ಮಳಿಗೆಗಳನ್ನು ಈ ಹಬ್ಬಕಾಲದಲ್ಲಿ ಜನರು ಜಾತ್ರೆ ತಲಿ ಎಂದು ಹರಾಜು ಹಾಕಿದರು. ಅದನ್ನು ಇಲ್ಲಿನ ಅಕ್ಕೀಣಗರಿ ಸಾಮುಕಾರೊಬ್ಬರು ಹರಾಜಿನಲ್ಲಿ ಬೀಟುಮಾಡಿ ೩೪೦೦ ರೂಪಾಯಿಗಳಿಗೆ ತೆಗೆದುಕೊಂಡಿರುತ್ತಾರೆ. ಈ ಹಬ್ಬದಿನದಲ್ಲಿ ಅನು ಜಾತ್ರೆಯ ಕಷ್ಟವಾಗಿರುವದು. ಇದರ ಅಕ್ಷ್ಯೇಕರಣವಾದ್ದಕ್ಕೂ ಆಗಬೇ? ಗೌರ್ನ್ಮೆಂಟಿನವರು ವಿಪರೀತ ಪರ್ಚಿನ್ನಿಟ್ಟು ಪೊಲೀಸ ಏರ್ಪಾಡು ಬಹುತನ್ನಾಗಿ ಮಾಡಿದ್ದಾರೆ. ಇದರ ಕಲಸವೇನು? ಕಳ್ಳರನ್ನು ಹಿಡಿದು ಜೈಲಿಗೆ ಕಳುಹಿಸುವದಲ್ಲವೆ? ಈ ಏರ್ಪಾಡಿನಿಂದ ಪ್ರಜೆಗಳಿಗೆ ಮಹದುಪಕಾರವಾಗಿದೆ. ಆದರೆ ಮ್ಯುನಿಸಿಪಾಲಿಟಿಯವರು ಏನುಮಾಡುತ್ತಾರೆ! ಇತರೆ ಕಡೆಗಳಿಂದ ಜನರಿನ್ನು ಇಲ್ಲಿ ರಾಜಧಾನಿಯಲ್ಲಿ ನೀವು ಬಂದು ವಿಗನಿನಲ್ಲೇ ಕಳ್ಳತನ ಮಾಡಿರಿ ಎಂದು ಸಾರುತ್ತಾರೆ. ಯಾಕೆಂದರೆ ಇಲ್ಲಿ ಜಾತ್ರೆಯ ಕಟ್ಟೆಗಳನ್ನಿಟ್ಟಿರುವವರು ವಹಿಸಿಕ್ಕೊಳ್ಳರು. ಅವರು ತಮ್ಮ ಸ್ವಂತವಲ್ಲವನ್ನು ತಕ್ಕ ಪ್ರತಿಫಲವಿಲ್ಲದೆ ಸಾಲೆಮಾಡಿಕೊಳ್ಳುತ್ತಾರೆ. ಇಂತವರಿಗೆ ಕಳ್ಳರು ಎಂದಲ್ಲವೆ ಪಟ್ಟಾಭಿಷೇಕರು ಕೊಡೋಣ? ಪರದ್ರವ್ಯವನ್ನು ಸುಲಭವಾಗಿ ಅಪಹರಿಸುತ್ತಾರಲ್ಲ! ಇಂಥಾ ಕೃತ್ಯಕ್ಕೆ ಮ್ಯುನಿಸಿಪಾಲಿಟಿಯವರು ಯಾಕೆ ಅಪ್ಪಣೆ ಕೊಡುತ್ತಾರೋ ತಿಳಿಯುವದಕ್ಕಾಗುವದಿಲ್ಲವಲ್ಲ! ೩೪೦೦ ರೂಪಾಯಿಗೋಸ್ಕರ ಅಪ್ಪಣೆ ಕೊಡುತ್ತಾರೆಂದು ಕೆಲವರು ಸಮಾಧಾನ ಹೇಳಬಹುದು. ಹಾಗಾದರೆ ಯಾವನಾದರೂ ಒಬ್ಬ

ಪ್ರಜೆಯು ಬಂದು—ನಾನು ಮ್ಯುನಿಸಿಪಾಲಿಟಿಗೆ ೫೦೦೦ ರೂಪಾಯಿ, ಇಲ್ಲವೆ ೧೦,೦೦೦ ರೂಪಾಯಿ ಕೊಡುತ್ತೇನೆ. ನನ್ನ ಮನೋಭಿಷ್ಟದಂತೆ ನನ್ನ ಬೀದಿಗೆ ಬಿಡುವದಕ್ಕೆ ಅಪ್ಪಣೆಕೊಡಿ ಎಂದು ಕೇಳಿದರೆ, ಮ್ಯುನಿಸಿಪಾಲಿಟಿಯವರು ಒಪ್ಪಿ ಅವನಿಗೆ ಅಪ್ಪಣೆಕೊಡುವರೆ! ಈಗ ಜಾತ್ರೆಯ ಕಟ್ಟಿಗ ಅವರು ಅಪ್ಪಣೆ ಕೊಟ್ಟಿರುವದು ಇದಕ್ಕಿಂತಲೂ ಹೇಯವಾದದ್ದು. ದಸರಾ ಹಬ್ಬಕ್ಕೋಸ್ಕರ ಪ್ರವಾಸಿಸಿರುವ ಕೆಲವು ಮಂದಿ ನಾಯಕಸಾನಿಯರು ಹೋದಸಾರಿ ರಾಜಧಾನಿಗೆ ಬಂದರು ಹಾಗಾದರೆ ಇವರೂ ಬಳ್ಳೀದಲ್ಲವೆ ಎಂದು ಕೇಳಬಹುದು. ದಸರಾಹಬ್ಬವು ಸಾಂಗವಾಗಿ ನಡೆಯಬೇಕಾದರೆ ಜಾತ್ರೆ, ಕಳ್ಳರು ಮತ್ತು ದೇಹ ವಿಕ್ರಯಮಾಡುವವರೂ ಬರಬೇಕಾಕಲ್ಲವೆ ಎಂದು ನಾವು ಕೇಳುತ್ತೇವೆ. ನಾಯಕಸಾನಿಯರು ಇಲ್ಲಿಗೆ ಬಂದ ವಿಷಯಕ್ಕೆ ಮ್ಯುನಿಸಿಪಾಲಿಟಿಯವರು ಜವಾಬ್ದಾರರಲ್ಲ. ಅವರ ಜಾತ್ರೆ ದದವಕ್ಕೆ ಅಪ್ಪಣೆ ಕೊಟ್ಟವರ್ಯಾರೆಂದರೆ, ಮ್ಯುನಿಸಿಪಲ ಕೌನ್ಸಿಲನವರು ಎಂದು ಹೇಳದಿರುವದಕ್ಕಾದೀತೆ! ಈ ಅಕೃತ್ಯವನ್ನು ನಿಲ್ಲಿಸುವದಕ್ಕೆ ಪ್ರಯತ್ನ ಮಾಡುವಂಥಾ ನೀತಿವಂತರೂ, ದೈವಭಕ್ತರೂ ಆಗಿರುವ ಮೆಂಬರುಗಳು ಕೌನ್ಸಿಲಿನಲ್ಲಿ ಯಾರೂ ಇಲ್ಲವೆ? ವರ್ಷವರ್ಷಕ್ಕೂ ಇದು ಹೆಚ್ಚುತ್ತಲೇ ಬರುವದಲ್ಲಾ! ಇದರಲ್ಲಿ ಅನೇಕ ಯುವಕರ ಸ್ವಂತ ಭಾಗಿಗಳಿಗೆ ಕೊನೆಗೆ ಹಾಳಾಗುವದಕ್ಕೆ ಮಾರ್ಗವಾಗುತ್ತಲಿದೆಯಲ್ಲಾ! ಸರ್ವಶಕ್ತನಸ್ತು ರಾಜನಾದ ಸರವಶ್ಯನಮ್ಮ ಸನ್ನಿದಿಯಲ್ಲೇ ಇಲ್ಲಿನ ಮ್ಯುನಿಸಿಪಲ ಮೆಂಬರುಗಳಿಗೆ ಜ್ಞಾನಕವಿಲ್ಲವೆ! ಕಳ್ಳತನ, ಜೂಜು, ಹಾದರ ಮುಂತಾದವು ಬಿಡವಾಸಿಗೆ ಅಸಹ್ಯವಾದದ್ದುಗಳಿಂದೀ, ತಿಮ್ಮ ಶ್ಯಾಬಾದ ಮತ್ತೆಗೂ ಇಸ್ತಗಳನ್ನು ಸ್ವೀಕರಿಸಿಂತವಲ ಅವರಿಗೆ ಸಿಕ್ಕಿದೆ! ಮ್ಯುನಿಸಿಪಲ ಪ್ರೆಸಿಡೆಂಟ್ ರವರೇ, ಇದಕ್ಕೆ ಮನಸ್ಕೊಟ್ಟು ತಮ್ಮ ಕೈ ಯಿಂದರ ಮುಂದೆ ಈ ಜಾತ್ರೆಯ ಕಟ್ಟಗಳನ್ನು ನಮಿಸಿ ಬಿಡಿಸಿರಲು ಉದ್ದೇಶ್ಯವೈಕಸ್ತ್ಯಯಿಸರೆ! ಇಲ್ಲದಿದ್ದರೆ ಅವರು ತಮ್ಮ ಅಧಿಕಾರವಿಯನ್ನು ತೋರ್ಪಡಿಸಿ ಪ್ರಹ್ಲಾದ್ಲೀ ಫಲಿತಾಂಶವನ್ನು ತೋರ್ಪಡಿಸ್ಯಾರೆಂದು ನಿರೀಕ್ಷಿಸುತ್ತೇವೆ.

ಧರ್ಮಸತ್ರ ಮತ್ತು ಸರ್ಕಾರೀ ಉದ್ಯೋಗಸ್ತರು.

ಕಳೆದ ಗುರುವಾರ ರಾತ್ರಿ ರೈಲಿನಲ್ಲಿ ಸೊರಬಿನ ತಾಲ್ಲೋಕಿನಿಂದ ಪ್ರಜಾಪ್ರತಿನಿಧಿಸಭೆಗೆ ಮೆಂಬರಾಗಿ ಚುನಾಯಿಸಲ್ಪಟ್ಟಿರುವ ಒಬ್ಬ ಮೆಂಬರು ಸಂಸಾರಸಮೇತರಾಗಿ ರಾಜಧಾನಿಯ ರೈಲ್ವೇಸ್ಟೇಷನಿನಲ್ಲಿ ಇಳಿದು ತಮ್ಮ ಸಾಮಾನುಗಳನ್ನು ಬಂದು ಗಾಡಿ ಮೇಲಕ್ಕೆ ಹಾಕಿಸುವಷ್ಟರಲ್ಲಿ ಮಳೆಯು ವಿಪರೀತವಾಗಿ ಸುರಿಯುವದಕ್ಕಾರಂಭವಾಯಿತು. ಹಾಗೇ ಮಳೆಯಲ್ಲಿ ನನೆದುಕೊಂಡು ಸುಬ್ಬರಾಯನಛತ್ರದಂಜರಾಬಾಧನ್ನಿರುವ ಸತ್ರಕ್ಕೆ ಹೋದರು. ಅಲ್ಲಿ ಇಳಿದುಕೊಳ್ಳುವದಕ್ಕೆ ಪ್ರಯತ್ನ ಮಾಡುವಷ್ಟರೊಳಗಾಗಿ ನಾಲ್ಕು ಮಂದಿ ಬಿಳ್ಲೆಜವಾನರು ಬಳಗಿನಿಂದ ಬಂದು—ಯಜಮಾನರು ಸವಾರರು ಇಲ್ಲಿ ಇತರಕೊಡಿರು, ಇಲ್ಲಿ ಸ್ಥಳವಿಲ್ಲ ಹೊರಟುಹೋಗಿ ಎಂಬದಾಗಿ ಗದ್ದರಿಸಿದರು. ಮೆಂಬರು ಅಗ—ಯಾಕಪ್ಪ, ಇದು ಧರ್ಮಸತ್ರವಲ್ಲವೆ! ಮಳೆ ಸುರಿಯುತ್ತಾ ಇದೆಯಲ್ಲಾ, ಎಲ್ಲಿ ಹೋಗುವದಕ್ಕೂ ಗತ್ಯಂತರವಿಲ್ಲ. ಈ ಕಟ್ಟಿ ಕತ್ತಲೆಯ ಮಾರ್ಗವೇ ಕಾಣುವದಿಲ್ಲ. ಈ ದಿನವೂ ರಾತ್ರಿ ಒಂದು ಕೊಠಡಿಯಲ್ಲಿ ಸಾಮಾನನ್ನು ಇಟ್ಟುಕೊಂಡು ಆವ್ಯಾ ನಾಳೇ ಬೆಳಗ್ಗೆ ಎಲ್ಲಾದರೂ ವಿಚಾರಿಸಿ ನೋಡಿಕೊಂಡು ಹೋಗುತ್ತೇವೆ. ನಾವೂ ಸರ್ಕಾರದವರು ಕರೆಸಿದವರು, ೫೦೦ ಮೈಲು ದೂರದಲ್ಲಿರುವ ಸ್ಥಳದಿಂದ ಬಂದಿದ್ದೇವೆ ಎಂದು ಬಿನ್ನವಿಸಿದರೂ ಬಿಡದೆ—ಈಗ ರಾತ್ರಿ ಮತ್ತು ದ್ವಾರದವರೂ ಸ್ವಲ್ಪ ಸ್ಥಳಕೊಡಿ ಎಂದು ಬೇಡಿದಕ್ಕೂ ಹೊರಟು, ನಾನು ಅವರ ಸಾಮಾನನ್ನು ಬಳಗೆ ನಿಂದ ಬೀದಿಗೆ ಹಾಕಿ—ಹೊರಟುಹೋಗಿ, ಅದೆಲ್ಲ ನನಗೆ ತಿಳಿಯದು, ಇಲ್ಲಿಗೆ ಗೌರ್ನಮೆಂಟ ಹುದ್ದೆದಾರರು ಬಂದು ಇಳಿದುಕೊಳ್ಳುವದಕ್ಕೆ ಏರ್ಪಾಡು ಮಾಡಿ ಯಾರನ್ನೂ ಬಿಡದಿಹಾಗೆ ನಮಗೆ ಸರ್ಕಾರದವರೇ ಅಪ್ಪಣೆ ಮಾಡಿದ್ದಾರೆ. ಎಷ್ಟು ಮಾತ್ರಕ್ಕೂ ನಿಮಗೆ ಇಲ್ಲಿ ಸ್ಥಳವಿದೆಯೆಂದು ಹೇಳಿಬಿಡಿ ಎಂದು ಬಡಿತವಾಗಿ ಹೇಳಿದರು. ಆಗ ಮೆಂಬರು ರಾತ್ರಿಯಲ್ಲಾ ಆ ಕೈಸಾಲೆಯಲ್ಲಿ ತಮ್ಮ ಸಾಮಾನನ್ನು ಕಾದು

ಕೊಂಡು ನಿಜ್ರೆ ವಿಹಾರದ ಕೂತಿದ್ದು, ಬೆಳಗಾಗುತಲೆ ಒಬ್ಬ ಅಧಿಕಾರಿಯು ಬಳಿಗೆ ಹೋಗಿ—ಏನು ಸ್ವಾಮಿ, ನೀವು ಜವಾನರಿಗೆ ಹುಕುಂ ಕೊಟ್ಟಿರಾ? ಸರ್ಕಾರದ ಅಧಿಕಾರಿಗಳಿಗೂ ಧರ್ಮಸತ್ರಗಳಿಗೂ ಸಂಬಂಧವೇನು? ಧರ್ಮಸ್ಥಳದಿಂದ ಅನಾಥರು ಇಲ್ಲಿ ಬಂದರೆ ಸತ್ರದಲ್ಲೂ ಅವರಿಗೆ ಇಳಿದುಕೊಳ್ಳುವದಕ್ಕೆ ಸ್ಥಳಕೊಡದಿದ್ದರೆ, ಅವರ ಪಾಡೇನಾಗಬೇಕು? ದಯವಿಟ್ಟು ಜವಾನರಿಗೆ ನಮ್ಮನ್ನು ತಂಟೆ ಮಾಡದ ಹಾಗೆ ಅಪ್ಪಣೆ ಕೊಡಿಸಿ ಎಂಬದಾಗಿ ಕೇಳಿದರು. ಆಗ ಆ ಅಧಿಕಾರಿಗಳು—ನಾವೇನು ಮಾಡೋಣ, ಹುದ್ದೆದಾರರು ದಸರಾಕ್ಕೆ ಇಲ್ಲಿಗೆ ಬಂದರೆ ಅವರಿಗೆ ಇಳಿದುಕೊಳ್ಳುವದಕ್ಕೆ ಆ ಸತ್ರವನ್ನು ಬಿಡಿಸಿರಬೇಕೆಂದು ಮೇಲಿನ ಅಪ್ಪಣೆಯಾಗಿದೆ. ನೀವು ಇನ್ನಲ್ಲಾದರೂ ಸ್ಥಳ ನೋಡಿಕೊಳ್ಳಬೇಕು. ನಾನು ಜವಾನರಿಗೆ ಅಪ್ಪಣೆ ಕೊಡುವದಕ್ಕಾಗುವದಿಲ್ಲ ಎಂದು ಜವಾಬು ಕೊಟ್ಟರು. ಅನಂತರ ಆ ಮೆಂಬರು ಈ ಸಂಗತಿಗಳನ್ನೆಲ್ಲಾ ರಾಜಧಾನಿಯ ಪ್ರತಿನಿಧಿಗಳಲ್ಲಿ ಕೆಲವರಿಗೆ ತಿಳಿಸಿದರಂತೆ. ಆವರು—ಅಯ್ಯೋ, ಹೀಗೆ ಮಾಡೋಣ, ಹಾಗೆ ಮಾಡೋಣ, ಇರಲಿ ಎಂಬದಾಗಿ ಅವರಿಗೆ ಹೇಳಿ ಸಮಾಧಾನಪಡಿಸಿದರಂತೆ.

ಇದೆಲ್ಲಾ ನಿಜವಿರಬಹುದೆ! ಏಕೆಂದರೆ ಸುಳ್ಳೆಂದು ಹೇಳಲಾಗದು ಎಂದು ನಾವು ನಂಬಿದ್ದೇವೆ. ಯಾಕಂದರೆ ಸಾಧಾರಣವಾಗಿ ದಿನಗಳಲ್ಲಿ ಅಧಿಕಾರಿಗಳು ಕೆಲವು ಕಾಲ ಧರ್ಮಸತ್ರಗಳಲ್ಲಿ ಇಳಿದುಕೊಳ್ಳುವದು ಎಲ್ಲರಿಗೂ ಸಹಜವಾದದ್ದು. ಇಂಥಾ ದಸರಾ ಗಲಭೆಯ ಕಾಲದಲ್ಲಿ ಇತರ ಕಡೆಗಳಿಂದ ಜನರು ತಂಡತಂಡವಾಗಿ ರಾಜಧಾನಿಗೆ ಬರುತ್ತಿರುವಾಗ ಧರ್ಮಾರ್ಥವಾಗಿಯೂ, ಇದೇ ಜನರ ಉಪಯೋಗಾರ್ಥವಾಗಿಯೂ ಧರ್ಮಿಷ್ಟರು ಕಟ್ಟಿಸಿರುವ ಸತ್ರ, ಮತ್ತು ಛತ್ರ ಮುಂತಾದ ಕಟ್ಟಡಗಳನ್ನು ಸರ್ಕಾರದ ಅಧಿಕಾರಿಗಳಾಗಲಿಯೂ, ಛತ್ರ ಸಂಬಳಗಳನ್ನು ಸಾವಿರ ರೂಪಾಯಿ ಅಲೋವೆನ್ಸುಗಳನ್ನು ಪಡೆಯುತಕ್ಕವರಾಗಲಿಯೂ ಇಂತಹ ಪುಣ್ಯವಂತರು ಉಪಯೋಗಿಸಿಕೊಳ್ಳುವದು ಧರ್ಮಸತ್ರದ ಉದ್ದೇಶಕ್ಕೆ ಭಂಗವಾಗಲಿ, ಅಥವ ಗೌರ್ನ್ಮೆಂಟಿನವರು ಈ ವಿಧವಾದ ಹುಕುಮನ್ನು ಕೊಡುತ್ತಾರೆಂಬುದಾಗಲಿ ನಾವು ನಂಬಲಾರೆವು. ಆದರೂ ಇದು ಅವ್ಯಾಕ್ತವಾಗಿ ದಿವಾನರ ಬಂಗಲೆಯ ಎದುರು ಭಾಗದಲ್ಲಿ ಸರ್ಕಾರದವರು ಮ್ಯಾಜಿಸ್ಟ್ರೇಟಿನ ಬಿಡುವಿಗಾಗಿ ಎಂಬ ವಿಸ್ತಾರವಾದ ಕಟ್ಟಡವನ್ನು ತುಹಾರಾಜ್ಯಾಗಿರುವದಿಲ್ಲವೆ! ದುದ್ದೇದಾರರುಗಳ ಪೈಕಿ ಅನೇಕರಿಗೆ ಇಲ್ಲಿ ಸ್ವಂತ ಮನೆಗಳೇ ಇರುತ್ತವೆ. ಹಾಗೆ ಇಲ್ಲದವರು ತಮ್ಮ ಸ್ನೇಹಿತರು, ಬಂಧುಗಳು ಮೊದಲಾದವರ ಮನೆಗಳಲ್ಲಿ ಇರುತ್ತಾರೆ. ಆದ್ದರಿಂದ ಧರ್ಮಸತ್ರವನ್ನು ಸರ್ಕಾರೀ ಉದ್ಯೋಗಸ್ತರಿಗೋಸ್ಕರ ಬಿಡಿಸಿ ಇರುತ್ತಾರೆಂದು ಹೇಳುವಾಗ ಇದನ್ನು ನಾವು ನಂಬಲಾರೆವು.

ಇದೂ ಅಲ್ಲದೆ ಈ ಮೈಸೂರು ಸಂಸ್ಥಾನದಲ್ಲಿ ಪ್ರಜಾಪ್ರತಿನಿಧಿ ಸಭೆಯು ಸ್ಥಾಪನೆಯಾಗಿ ಸುಮಾರು ೧೭ ವರ್ಷಗಳಾದವು. ಮೊದಲು ಪ್ರತಿನಿಧಿಗಳನ್ನು ಸರ್ಕಾರದವರೇ ಚುನಾಯಿಸುತ್ತಿದ್ದರು. ಈಗಲಾದರೂ ಈ ಚುನಾವಣೆಯು ದಕ್ಷನ್ನು ಸರ್ಕಾರದವರು ಪ್ರಜೆಗಳಿಗೇ ಒಪ್ಪಿಸಿರುತ್ತಾರೆ. ಇದರಿಂದ ಅವರಿಗೆ ಪ್ರಜೆಗಳಲ್ಲಿ ಎಷ್ಟು ವಿಶ್ವಾಸ ಮತ್ತು ಗೌರವವಿರುವದೋ ವಾಚಕರಿಗೇ ಗೊತ್ತಾಗಿದೆ. ಇಷ್ಟಲ್ಲಾ ಆಗಿರುವಾಗ್ಯೂ ಈಗ ಪ್ರತಿನಿಧಿಗಳನ್ನು ಹೆಚ್ಚು ಗೌರವದಿಂದ ನೋಡುವದು, ಅವರಿಗೆ ಸರ್ಕಾರದವರು ಎಲ್ಲಾ ವಿಧವಾದ ಸೌಕರ್ಯಗಳನ್ನು ಉಂಟುಮಾಡಿಕೊಡುವದು, ಅವರ ಅಭಿಪ್ರಾಯಗಳಂತೆ ರಾಜ್ಯಭಾರದಾಖಲೆಗಳನ್ನು ಜರುಗಿಸುವದು—ಇವೆಲ್ಲಾ ಇಲ್ಲದೆಯೋ, ನಾನುನಾದರವಾದವುಗಳಿಂದಲೂ ಹೇಳುವದಕ್ಕಾಗುತ್ತದೆ! ಬಂದುವೇಳೆ ಹೇಳುವದಾಗ್ಯೂ ಅದನ್ನು ಯಾರಾದರೂ ನಂಬ್ಯಾರೆ!

ಪ್ರೀತಿ.

ದೇವಪುರ ಎಂಬ ಪಟ್ಟಣದಲ್ಲಿ ದೇವಪ್ರಿಯನೆಂಬ ಅರಸನು ಇದ್ದನು. ಈ ಅರಸು ಎಷ್ಟನವನಿದ್ದರೆ—ತನ್ನ ಪಟ್ಟಣದ ಆಡಳಿತಕ್ಕೆ ತಕ್ಕ ಹಾಗೆ ತನ್ನ ಸೃಷ್ಟಿಕರ್ತನ ಮುಂದೆ ಆತನ ಪ್ರೀತಿಯನ್ನು ಹೊಂದತಕ್ಕ ರೀತಿಯಲ್ಲಿ ನಡೆಯಕೊಳ್ಳುವವನು. ಆದಕಾರಣ ತನ್ನ ದೇಶದಲ್ಲಿರುವ ಎಲ್ಲಾ ಜನರನ್ನು ಬಹಳವಾಗಿ ಪ್ರೀತಿಸುವವನಾಗಿರುವ ಇದ್ದನು. ಹೀಗಿರುವಲ್ಲಿ ಆ ದೇಶದ ಜನರು ಪರಿಪೂರ್ಣರಾದರೇ—ಅರಸನು ಬಹಳ ಒಳ್ಳೆಯವನು ನಾವು ಮಾಡತಕ್ಕ ತಪ್ಪುಗಳನ್ನು ಎಣಿಸುವದೂ ಇಲ್ಲ ಚಿಂತಿಸುವದಿಲ್ಲ

ಅರಸನು ಕರುಣೆಯುಳ್ಳವನಾದ ನಮ್ಮ ತಪ್ಪುಗಳನ್ನು ಮನ್ನಿಸುವನು ಎಂದು ತಿಳಿದು ತಪ್ಪುಗಳನ್ನು ಮಾಡುವದಕ್ಕೆ ಪ್ರಾರಂಭಿಸಿದರು. ಈ ತಪ್ಪುಗಳ ಮೂಲದಿಂದ ದೊಡ್ಡ ದಂಗೆ ಉತ್ಪತ್ತಿಯಾಗಿ ಕಡೆಗೆ ಎಲ್ಲರಿಗೂ ನಾಶ ಸಮೀಪವಾಯಿತು. ಆಗ ಆ ಅರಸನು ತನ್ನ ಸಿಂಹಾಸನವನ್ನು ಬಿಟ್ಟು ಜನರ ಅಂತರ್ಯವನ್ನು ನೋಡಿ ಕಂಡು, ತನ್ನ ರಾಜ್ಯದ ಕಾರ್ಯದಲ್ಲಿ ಬಹಳ ಕ್ರೂರಸ್ವಭಾವದವರನ್ನು ಶಿಕ್ಷಿಸಿ ನಿಮಗೆ ಶಿಕ್ಷೆ ವಿಧಿಸಲಾಗಿದೆ ಅಲ್ಲದೆ ನನ್ನ ಮಕ್ಕಳು ಆದವರನ್ನು ಪ್ರೀತಿಸುತ್ತೇನೆ. ದಂಗೆ ಉಂಟುಮಾಡಿದವರು ದುಷ್ಟರು ನಾನು ನನ್ನ ಪ್ರಜೆಗಳನ್ನು ಪ್ರೀತಿಸುತ್ತೇನೆ ಎಂದು ಅವರನ್ನು ಕರೆಯಿಸಿ ಹೇಳಿದನು. ಆ ಪ್ರಜೆಗಳು ಆತನ ಪ್ರೀತಿಯನ್ನು ತಿಳಿದುಕೊಂಡು ತಮ್ಮ ಅಪರಾಧಗಳನ್ನು ಒಪ್ಪಿಕೊಂಡರು. ಅರಸನು ಹೀಗೆ ಮಾಡಿದ್ದರಿಂದ ಎಲ್ಲಾ ಜನರನ್ನು ಪ್ರೀತಿಸಲು ಪ್ರಯತ್ನಿಸುತ್ತಾ ಬಂದಿದ್ದನು. ಈ ನನ್ನ ಪ್ರೀತಿಯನ್ನು ತಿಳಿದುಕೊಳ್ಳಲಿ ಎಂದು ಕೆಲಸಗಳನ್ನು ಮಾಡಿ, ವಿದ್ಯೆ ಹೀನರಿಗೆ ವಿದ್ಯಾಲಯಗಳನ್ನು, ಹಣವಿಲ್ಲದವರಿಗೆ ಹಣವನ್ನು ಕೊಟ್ಟು ಎಲ್ಲಾ ವಿಷಯಗಳಲ್ಲಿಯೂ ಅವರ ಚೇತರಿಕೆಗೆ ಉಪಾಯಗಳನ್ನು ಕಲ್ಪಿಸಿಕೊಟ್ಟನು. ನನ್ನ ದೇಶದವರೆಲ್ಲರೂ ನನ್ನ ಮಕ್ಕಳಂತೆ ಎಂದು ನನಗೆ ಅವರ ಮೇಲೆ ಪ್ರೀತಿಯುಂಟಾಗಿದೆ. ಅವರು ಅದನ್ನು ತಿಳಿಯದೆ ನಾನಾ ವಿಧವಾದ ಕಷ್ಟಗಳಲ್ಲಿ ಬಿದ್ದು ನನ್ನ ರಾಜ್ಯಕ್ಕೆ ಕೆಡುಕು ಉಂಟುಮಾಡುತ್ತಿದ್ದಾರೆ. ಆಗಲಿ ಇಲ್ಲದಿರಲಿ ಅವರ ನನ್ನ ವಿಷಯದಲ್ಲಿ ನನ್ನ ಪ್ರೀತಿಯುಳ್ಳವನಾಗಿರುವನಲ್ಲವೆ, ಅವರ ಯಾರೂ ಅರಿತುಕೊಂಡು, ನಾನು ಯಾವಾಗಲೂ ಸಮಾಧಾನದಿಂದ ಮಾ ಗಿರುವ ಎಲ್ಲರೂ ನಡೆಯುವಂತೆ ಇಷ್ಟಪಡುವ ಕಾಲದಲ್ಲಿ ತೀರಿ ಹೋಗುವರು. ಹೀಗೆ ನಿಜವುಳ್ಳವನಾದವರೆಲ್ಲರೂ ಆತನನು ಸಭೆಯಲ್ಲಿ ಬಹುಮಾನಗಳಿಗೆ ಯೋಗ್ಯರಾಗುವರು. ಹೀಗೆ ನಡೆಯದ ತಪ್ಪು ಮಾಡಿದ ಕಷ್ಟ ಬಂದಾಗಲೇ ಯಾರು ಪ್ರತಿಫಲವನ್ನೂ ಅವರಿಗೆ ತಿಳಿದುಕೊಂಡು ತಮ್ಮ ಮಾರ್ಗದಲ್ಲಿ ತಪ್ಪಿದ ದ್ರೋಹಿಗಳಿಗೆ ಬಳಲುವವರು ಎಂದು ತಿಳಿಯಬೇಕಾದುದು. ಆಗ ಅನೇಕರು ಈ ಆಜ್ಞೆಯನ್ನು ನೋಡಿ ಅರಸನು ಎನಾದ ಈ ಕಷ್ಟವಿಯು ಒಳ್ಳೆಯದು ಇನ್ನು ಅನುಸರಿಸಿದರೆ ಸಹಾಯ ಪ್ರಯೋಜನವಿದ್ದರೂ ಒಬ್ಬರಲ್ಲಿ ಏನುಮಾಡುತ್ತಾರೆ ಎಂದು ತಿಳಿದು ಅದನ್ನು ಸಂತೋಷವಾಗಿ ಸ್ವೀಕರಿಸಿದರು. ಆದರೆ ಯಾರು ಕೋಪ ದುರಭಿಮಾನದಲ್ಲಿಯೂ ಕಷ್ಟ ಇಚ್ಛೆಯಲ್ಲಿಯೂ ನಾನಾ ವಿಧವಾದ ವಿಷಯಗಳಲ್ಲಿಯೂ ಆಸಕ್ತರು ಆದವರು ಈ ಜಗತ್ತಿನಲ್ಲಿ ದುಷ್ಟ ಕಾರ್ಯಗಳನ್ನು ಮಾಡಿ ಅರಸನ ಆಜ್ಞೆಯನ್ನು ಅಲಕ್ಷ್ಯ ಮಾಡಿದರೋ ಅವರು ತಮ್ಮ ದುರ್ಮಾರ್ಗದಿಂದ ಆ ಗತಿಯ ದ್ರೋಹಿಗಳೆ ಶಿಕ್ಷೆಗೊಳಗಾದರು.

ಈ ಕಥೆಯಿಂದ ನಾವು ತಿಳಿಯತಕ್ಕದ್ದೇನಂದರೆ ಈ ಅರಸನೇ ಪರಮಾತ್ಮನು. ದೇವರು ಸೃಷ್ಟಿಸಿರುವ ಈ ಜನರು ಪ್ರತಿಯೊಬ್ಬರು ಪಾಪವಂತರು, ತನ್ನ ಎಲ್ಲಾ ಸೃಷ್ಟಿಗಳನ್ನು ಬಹಳವಾಗಿ ಪ್ರೀತಿಸುವವನು ಆಗಿದ್ದನು. ಆ ಜನರೆಲ್ಲರು ನಂಬಿ ಆರಸನ ಆಜ್ಞೆಗಳಿಗೆ ಬಲಿಯಾಗದೆ ತಿರುಗಿದವರು ಪಾಪಿಗಳಾದರು. ಪ್ರೀತಿಸ್ವರೂಪಿಯಾದ ಎಲ್ಲಾ ತನ್ನ ಸೃಷ್ಟಿಗಳಿಗೆ ಬುದ್ಧಿಯನ್ನು ಕೊಡುವನು. ಕೆಲವರು ರಾಜ್ಯ ಈ ಲೋಕದಲ್ಲಿ ಅವರು ಪಾಪದಿಂದ ಕೂಡಿ ಏಳಬೇಕಾದರೆ ಪರಮಾತ್ಮನ ಅನುಗ್ರಹ ಅತ್ಯವಶ್ಯಕವೆಂದು ತಿಳಿದು ನಡೆಯುವವರು ಬಹಳ ಕಡಿಮೆಯಾಗಿರುವರು. ಯಾರು ಈ ದುರ್ಮಾರ್ಗದಲ್ಲಿ ಬಿದ್ದಿರುವರೋ ಅವರಿಗೆ ದೇವರ ಪ್ರೀತಿ ಸಿಕ್ಕದು. ಅವರು ಆ ದೇವರ ಪ್ರೀತಿಯನ್ನು ಕಾಣದೆ ದುಃಖದಲ್ಲಿ ಬಳಲುವರು. ದೇವರು ತನ್ನ ಸೃಷ್ಟಿಯನ್ನು ಪ್ರೀತಿಸಿ ಅವರ ಪಾಪಗಳಿಂದ ಬಿಡುಗಡೆ ಮಾಡುವದಕ್ಕಾಗಿ ತನ್ನ ಏಕಪುತ್ರನನ್ನು ಕಳುಹಿಸಿದನು. ಆತನು ಪಾಪಿಗಳನ್ನು ಸ್ವೀಕರಿಸಿ ಅವರಿಗೆ ನಿತ್ಯಜೀವವನ್ನು ಕೊಡುವನು. ಯಾರು ಆತನನ್ನು ನಂಬುವರೋ ಅವರು ನಾಶವಾಗದೆ ನಿತ್ಯಜೀವವನ್ನು ಪಡೆಯುವರು. ಆತನ ಪ್ರೀತಿಯನ್ನು ಅರಿತು ಆತನಿಗೆ ವಿಧೇಯರಾಗಿ ನಡೆದರೆ ಆತನ ರಾಜ್ಯದಲ್ಲಿ ಸೇರುವರು. ಆತನ ಆಜ್ಞೆಗಳನ್ನು ಕೈಕೊಳ್ಳದೆ ದುರ್ಮಾರ್ಗದಲ್ಲಿ ನಡೆಯುವವರು ಶಿಕ್ಷೆಗೆ ಒಳಗಾಗುವರು. ಆದುದರಿಂದ ನಾವು ಆತನ ಪ್ರೀತಿಯನ್ನು ಅರಿತು ಆತನ ಆಜ್ಞೆಯ ಪ್ರಕಾರ ನಡೆದು, ದೇವರ ಮುಂದೆ ನಮ್ಮ ಪಾಪಗಳನ್ನು ಅರಿಕೆಮಾಡಿ ಪಶ್ಚಾತ್ತಾಪಪಟ್ಟು ಆತನ ಕೃಪೆಯನ್ನು ಹೊಂದೋಣ. ಪರಮಾತ್ಮನಾದ ಕ್ರಿಸ್ತಸ್ವಾಮಿಯು ಉತ್ತಮವಾದ ಮಾರ್ಗವನ್ನು ತೋರಿಸಿದ್ದಾನೆ. ಯಾರು ಆತನ ಮಾರ್ಗದಲ್ಲಿ ನಡೆಯುವರೋ ಅವರಿಗೆ ನಿತ್ಯಜೀವವನ್ನು ಕೊಡುವನು. ಆದುದರಿಂದ ನಾವು ಆತನನ್ನು ಸ್ನೇಹಿತನೆಂದು ನಂಬಿ ಕ್ರಿಸ್ತಸ್ವಾಮಿಯ ಉತ್ತಮಮಾರ್ಗವನ್ನು ಅನು

ಪ್ರೀತಿಯನ್ನೂ ಆತನು ನಮಗೆ ಸಿದ್ಧಮಾಡಿರುವ ಮರಣಾನಂತರದ ಸೌಖ್ಯವನ್ನೂ ಹೊಂದುಕೊಂಡು ಪರಲೋಕದ ನಿತ್ಯವಾದ ಬಹುಮಾನವನ್ನು ಹೊಂದಲಿಕ್ಕೆ ನಿಮಗೆ ಮನಸ್ಸಿದ್ದರೆ ಕ್ರಿಸ್ತನಲ್ಲಿ ವಿಶ್ವಾಸವಿಟ್ಟು ಆತನ ಪ್ರೀತಿಯಲ್ಲಿ ನೆಲೆಗೊಂಡು ನಿತ್ಯಜೀವಕ್ಕೆ ಬಾಧ್ಯರಾಗಿರಿ.

ಕ್ಯಾಪ್ಟನ್ ಅಂಡ್ ಕಂಪೆನಿ.

ಮೈಸೂರಿನ ಕೆಮಿಸ್ಟ್ಸ್.

ಇವರು ಶಿವರಾಮ ಪೇಟೆಯಲ್ಲಿ ಒಂದು ಬ್ರಾಂಚ್ ಔಷಧ ಶಾಲೆಯನ್ನು ಸ್ಥಾಪಿಸಿರುತ್ತಾರೆ. ಇಲ್ಲಿ ನಾನಾವಿಧವಾದ ಔಷಧಗಳು ಸುಲಭ ಬೆಲೆಗೆ ದೊರೆಯುತ್ತವೆ. ಮತ್ತು ಉತ್ತಮತರವಾದ ಸಾಮಗ್ರಿಯಗಳನ್ನು ಉಪಯೋಗಿಸಿ ಔಷಧಗಳನ್ನು ತಯಾರು ಮಾಡಿ ಕೊಡುತ್ತಾರೆ.

ಈ ಅನುಕೂಲಯುಕ್ತವಾದ ಔಷಧ ಶಾಲೆಯಲ್ಲಿ ರಾತ್ರಿ ಹಗಲು ಯಾವವೇಳೆ ಬಂದಾಗ್ಯೂ ಔಷಧಗಳು ದೊರೆಯುತ್ತವೆ. (೪)

ಮ್ಯುನಿಸಿಪಲ್ ಮೀಟಿಂಗು.

ಕಳೆದ ೩೦ ನೆ ಶನಿವಾರ ಬೆಳಗ್ಗೆ ಮೈಸೂರು ಷಹರ್ ಮ್ಯುನಿಸಿಪಲ್ ಬೋರ್ಡಿನ ತಿಂಗಳುಕಟ್ಟಲೆಯ ಮೀಟಿಂಗ್ ಜರುಗಿತು. ಈ ಸಲದ ಮೀಟಿಂಗಿನಲ್ಲಿ ನಡೆದ ಮುಖ್ಯ ಸಂಗತಿಗಳನ್ನು ಮಾತ್ರವೇ ಇಲ್ಲಿ ಸೂಚಿಸುವೆವು. ಷಹರಿನಲ್ಲಿ ಕಾಲರಾ, [illegible], [illegible], [illegible], ಅಪಸ್ಮಾರ ಮೊ॥ ತಾ[illegible]ಗೆ [illegible] ಯೋಗ್ಯವಾದ ಒಂದು ಕಟ್ಟಡವನ್ನು ಕಟ್ಟಿಸಿಕೊಡಬೇಕೆಂಬ ವಿಷಯವನ್ನು ಮ॥ ರಂಗನಾಥಯ್ಯಂಗಾರ್ರವರ ಗೈರುಹಾಜರಿಯಲ್ಲಿ ಬೇರೇ ನೋಡುತ್ತಿದ್ದ ಮೆ॥ [illegible] ಹಿಂದಲ್ಲಿಯವರು ಮೀಟಿಂಗಿನಲ್ಲಿ ಚರ್ಚಿಸಬೇಕೆಂದು ಗೊತ್ತಿಸಿದ್ದರು. ಆದರೆ ಅಸ್ವಸ್ಥರಾಗಿದ್ದ ಮ॥ ರಂಗನಾಥಯ್ಯಂಗಾರ್ರವರೇ ಕೆಲಸದ ಮೇಲೆ ಬಂದು ಬಿಟ್ಟಿದ್ದರಿಂದ ಈಸಲದ ಮೀಟಿಂಗಿನಲ್ಲಿ ಅವರೇ ಪ್ರೆಸಿಡೆಂಟ್ರಾಗಿದ್ದರು. ಈ ವಿಷಯವು ಬೋರ್ಡಿನಲ್ಲಿ ಚರ್ಚೆಗೆ ಬಂದಾಗ ಪ್ರೆಸಿಡೆಂಟ್ ಮಹಾರಾಜರವರ ಧರ್ಮಸತ್ರದಲ್ಲಿ ೬೦೦ ಜನಗಳವರೆಗೂ ಅನ್ನವನ್ನು ಹಾಕುತ್ತಾರೆಂತಲೂ, ಸುಲ್ತಾನರ ಫಂಡಿನಿಂದ ೩೦೦ ಜನರ ಆಹಾರವನ್ನು ಹಾಕುತ್ತಾರೆಂತಲೂ, ಆದಕಾರಣ ಈ ಎರಡು ಫಂಡಿನಲ್ಲಿಯೂ ವರ್ಷ ೧ಕ್ಕೆ ಸ್ವಲ್ಪ ಹೆಚ್ಚು ಕಡಿಮೆ [illegible] ರೂಪಾಯಿ ಖರ್ಚಾಗುತ್ತಲಿರುವುದರಿಂದ [illegible] ಬೇರೆ [illegible] ಅವಶ್ಯಕವಿಲ್ಲ [illegible] [illegible] ವಾಸಿಸುವ [illegible] ಅವಕ್ಕೆ ಬೇಕಾದ [illegible] ಎಂಬರ್ಥವನ್ನು ಪ್ರೆಸಿಡೆಂಟ್ರವರು ತಿಳಿಸಿದರು. ಆಗ ಮೆಂಬರುಗಳು—ಈ ಫಂಡುಗಳಿಂದ ಅನಾಥರಿಗೆ ಅನ್ನ ದೊರೆಯುತ್ತಿದ್ದರೂ ಅವರು ಇರುವುದಕ್ಕೆ ಬೇರೆ ಒಂದು ಸ್ಥಳವಿಲ್ಲ ಆದ್ದರಿಂದ ಮ್ಯುನಿಸಿಪಾಲಿಟಿಯಿಂದ ಒಂದು ಕಟ್ಟಡವನ್ನು ಕಟ್ಟಿಸಿಕೊಡಬೇಕು [illegible] ಎಂಬುದಾಗಿ [illegible] ಪ್ರತಿಭಟಿಸಿದರು. ಆದರೆ ಪ್ರೆಸಿಡೆಂಟ್ರವರು ತಮ್ಮ ಅಭಿಪ್ರಾಯವನ್ನು ಹೇಳಿದನಂತರ ಮೆಂಬರುಗಳು ಅದಕ್ಕೆ ಅನುಮೋದಿಸಿ ಸುಮ್ಮನಾದರು. ಇದರಿಂದ ಮೆಂಬರುಗಳು ಮೀಟಿಂಗಿನಲ್ಲಿ ಎಷ್ಟುಮಟ್ಟಿಗೆ ಸ್ವತಂತ್ರರಾಗಿರುವರೆಂಬ ಸಂಗತಿಯೇ ಊಹಿಸಿಕೊಳ್ಳಬಹುದಾಗಿದೆ.

ಇಲಾಖೆಯ ರಿಸ್ಟ್ರೇಷನ್ನು ಜನಗಳು ಪ್ರಬಲವಾದ ತಮ್ಮ ಬೀದಿಗಳಲ್ಲಿ ಮನೆಗಳನ್ನು ಕಟ್ಟಿಸಿಕೊಳ್ಳುವುದಕ್ಕೆ ಮ್ಯುನಿಸಿಪಾಲಿಟಿಯವರಿಂದ ಲೈಸನ್ಸು ಪಡೆಯಬೇಕೆಂದು ಅರ್ಜಿ ಬರೆದುಕೊಂಡಿದ್ದರು. ವೈಸ್‌ಪ್ರೆಸಿಡೆಂಟ್ರವರು ಈ ವಿಷಯದಲ್ಲಿ ಮೆ॥ ಲೀ ಸಾಹೇಬರ ಅನುಮತಿಯು ಅವಶ್ಯವಾಗಿದೆ ಎಂದು ಅರ್ಜಿಯನ್ನು ಅವರಿಗೆ ಕಳುಹಿಸಿಕೊಟ್ಟರು. ಮ॥ ಲೀಸಾಹೇಬರು ಅಲ್ಲಿ ರಸ್ತೆಯು ಸಾಕಾದಷ್ಟು ಅಗಲವಾಗಿರುವುದರಿಂದ ಅವರಿಗೆ ಮನೆಯನ್ನು ಕಟ್ಟಿಕೊಳ್ಳುವುದಕ್ಕೆ ಅಪ್ಪಣೆ ಕೊಡಲು ತಮ್ಮ ಅಡ್ಡಿಯೂ ಇರುವುದಿಲ್ಲವೆಂಬುದಾಗಿ ತಮ್ಮ ಅಭಿಪ್ರಾಯವನ್ನು ಬರೆದು ತಿಳಿಸಿದರು. ಆದರೆ ವೈಸ್‌ಪ್ರೆಸಿಡೆಂಟ್ರವರು, ಅವೇ ಕಾಗದಪತ್ರಗಳನ್ನು ಪ್ರೆಸಿಡೆಂಟ್ರವರಿಗೆ ಕಳುಹಿಸಿಕೊಡದೇನೂ, ಅವರಿಗೆ ಈ ವಿಷಯವನ್ನು ಸ್ವಲ್ಪವಾದರೂ ತಿಳಿಸದೇನೂ, ಮೀಟಿಂಗಿನಲ್ಲಿ ಮೆಂಬರುಗಳು ಒಪ್ಪಲಿಲ್ಲ ಆದ್ದರಿಂದ ಲೈಸನ್ಸು ಕೊಡಬಹುದಿಲ್ಲವೆಂದು ಈ ವಿಷಯವನ್ನು ಮೀಟಿಂಗಿನಲ್ಲಿ ಚರ್ಚೆಗೆ ತಂದರು. ಆಗ ಪ್ರೆಸಿಡೆಂಟ್ರವರು ತಮ್ಮ ಅರಿವಿಲ್ಲದೆ ಬಂದಿದ್ದ ವಿಷಯವನ್ನು ವೈಸ್‌ಪ್ರೆಸಿಡೆಂಟ್ರವರು ಮೀಟಿಂಗಿಗೆ ತಂದಿರುವುದರಿಂದ [illegible] ವೈಸ್‌ಪ್ರೆಸಿಡೆಂಟ್ರವರ [illegible] ಈ ವಿಷಯವನ್ನು ಮೀಟಿಂಗಿನಲ್ಲಿ ಚರ್ಚೆಗೆ ತಂದಿರುವ [illegible] ಎಂದು ಗೊತ್ತುಮಾಡಬೇಕೆಂತಲೂ, ಅಂದಮೇಲೆ ತಾವೇ ಅಧ್ಯಕ್ಷರಾಗಿದ್ದರೆ ಅಂಥವುಗಳನ್ನು ಮೀಟಿಂಗಿಗೆ ತರಬಾರದೆಂತಲೂ ಎಲ್ಲಾ ಸಂದರ್ಭಗಳಲ್ಲಿಯೂ ವೈಸ್‌ಪ್ರೆಸಿಡೆಂಟ್ರವರು ಪ್ರೆಸಿಡೆಂಟ್ರವರ ಅಧಿಕಾರಕ್ಕೊಳಪಟ್ಟಿರಬೇಕೆಂತಲೂ ಖಚಿತವಾಗಿ ಹೇಳಿದರು. ಆಗ ಮ್ಯುನಿಸಿಪಲ್ ಕಮಿಷನರಾದ ಮ॥ ಲಕ್ಷ್ಮೀನರಸಿಂಹಯ್ಯಂಗಾರ್ರು ಮ್ಯುನಿಸಿಪಲ್ ಆಕ್ಟನ್ನು ತೆಗೆದು ಅದರಲ್ಲಿ—ಪ್ರೆಸಿಡೆಂಟ್ರವರಿಗೆ ಕೊಡಲ್ಪಟ್ಟಿರುವ ಅಧಿಕಾರಗಳೆಲ್ಲಾ ವೈಸ್‌ಪ್ರೆಸಿಡೆಂಟರಿಗೂ ಸಹ ಕೊಡಲ್ಪಟ್ಟಿವೆ, ಪ್ರೆಸಿಡೆಂಟ್ರವರು ಮಾಡತಕ್ಕ ಕೆಲಸವನ್ನು ವೈಸ್‌ಪ್ರೆಸಿಡೆಂಟ್ರು ಮಾಡಬಹುದು ಎಂಬರ್ಥವನ್ನು ಸೂಚಿಸುವ ವಿಭಾಗವನ್ನು ತೆಗೆದು ಓದಿ ಅದಕ್ಕೆ ಅರ್ಥವನ್ನು ಹೇಳದೇ ಇನ್ನೂ ಕೆಲವು ಮಂದಿ ಕಮಿಷನರುಗಳೂ ಕೂಡ ಅದೇ ಅಭಿಪ್ರಾಯವುಳ್ಳವರಾಗಿದ್ದರು. ಇದು ಪ್ರೆಸಿಡೆಂಟ್ರವರಿಗೆ ಸಮಾನವಾಗಿ ತೋರಲಿಲ್ಲ. ಪ್ರೆಸಿಡೆಂಟ್ರ ಅಧಿಕಾರವನ್ನೂ ವೈಸ್‌ಪ್ರೆಸಿಡೆಂಟ್ರ ಅಧಿಕಾರವನ್ನೂ ಒಂದೇ ಮಾಡಬಹುದಿಲ್ಲ ಎಂದು ತೋರುತ್ತದೆ. ಹಾಗಾದರೆ ಎರಡು ಕಡೆಗಳಲ್ಲಿ ಮಾತುಗಳು ಬೇರೆ ಇದ್ದಾಗ್ಯೂ ಅವರ ಉದ್ದೇಶವು ಅಲ್ಲ ಮತ್ತು ಆಕ್ಷೇಪಣೆಯೂ [illegible]. ವೈಸ್‌ಪ್ರೆಸಿಡೆಂಟ್ರ ಅಧಿಕಾರವು ಎಷ್ಟುಮಾತ್ರಕ್ಕೆ ಪ್ರೆಸಿಡೆಂಟ್ರ ಅಧಿಕಾರಕ್ಕೆ ಸಂಗಮವಾದದ್ದಲ್ಲ ಎಂಬರ್ಥವನ್ನು ಸೂಚಿಸುವಂತೆ ತಮ್ಮ ಅಭಿಪ್ರಾಯವನ್ನು ತಿಳಿಯಪಡಿಸಿದರು. ಆಗ ವೈಸ್‌ಪ್ರೆಸಿಡೆಂಟ್ರು ಎದ್ದು ತಾವು ಯಾವಾಗಲೂ ಎಲ್ಲಾ ಸಂಗತಿಗಳನ್ನೂ ಬೋರ್ಡಿನಲ್ಲಿ ಚರ್ಚೆಗೆ ತರುವದಕ್ಕಿಂತ ಮುಂಚಿತವಾಗಿ ಪ್ರೆಸಿಡೆಂಟ್ರವರಿಗೆ ತಿಳಿಯಪಡಿಸದೆ ಇರಲಿಲ್ಲವೆಂತಲೂ, ಹಾಗೆ ಮಾಡುವುದು ಲೈಸನ್ಸಿನ ವಿಷಯದಲ್ಲಿ ಮೆ॥ ಲೀ ಸಾಹೇಬರವರ ಅಭಿಪ್ರಾಯವನ್ನು ತೆಗೆದುಕೊಳ್ಳುವುದು ಅವಶ್ಯಕವಾಗಿದೆ ಎಂತಲೂ ಅನಂತರ ಮೀಟಿಂಗಿಗೆ ಇತ್ಯರ್ಥಕ್ಕಾಗಿ ತರಬಹುದೆಂತಲೂ ಬೋರ್ಡಿನಲ್ಲಿ ಚರ್ಚೆಯಾಗುವಾಗ್ಗೆ ಹ್ಯಾಗೂ ಪ್ರೆಸಿಡೆಂಟ್ರಿಗೆ ತಿಳಿಯುವುದೆಂತಲೂ ಊಹಿಸಿ ಈ ವಿಷಯವನ್ನು ಪೂರ್ವಭಾವಿಯಾಗಿ ಪ್ರೆಸಿಡೆಂಟ್ರಿಗೆ ತಿಳಿಯಪಡಿಸಲಿಲ್ಲವೆಂತಲೂ ತಮ್ಮ ಅಧಿಕಾರವು ಪ್ರೆಸಿಡೆಂಟ್ರ ಅಧಿಕಾರಕ್ಕೆ ಒಳಪಟ್ಟಿದ್ದೆಂದು ತಾವು ಒಪ್ಪಿಕೊಳ್ಳುತ್ತೇವೆಂತಲೂ ವಗೈರೆ ಹೇಳಿದರು. ಮತ್ತು ಕಮಿಷನರಾದ ಮ॥ ಲಕ್ಷ್ಮೀನರಸಿಂಹಯ್ಯಂಗಾರ್ರು ಎದ್ದು ತಾವು ಹೇಳಿದ ಸಂಗತಿಗಳು ವ್ಯಂಗ್ಯಾರ್ಥಕ್ಕೆ ಕಾರಣವಿಲ್ಲವೆಂತಲೂ ಕಾನೂನಿನಲ್ಲಿ ಇದ್ದ ಸಂಗತಿಯನ್ನು ತಾವು ವ್ಯಕ್ತಗೊಳಿಸಿದರೆಂತಲೂ ಹೇಳಿದರು. ಆ ಮೇಲೆ ಮ್ಯುನಿಸಿಪಾಲಿಟಿಗೆ ಇಲ್ಲಿಂದ ಮುಂದೆ ಬರತಕ್ಕ ಅರ್ಜಿಗಳ ಇತ್ಯರ್ಥದ ವಿಷಯದಲ್ಲಿ ಪ್ರೆಸಿಡೆಂಟ್ರು ಒಂದು ಮಾರ್ಗವನ್ನು ವಿಧಾಯಿಸಿದರು. ಅದೇನೆಂದರೆ—ಅರ್ಜಿಯನ್ನು ಮೊದಲು ಪ್ರೆಸಿಡೆಂಟ್ರವರಿಗೆ ವೈಸ್‌ಪ್ರೆಸಿಡೆಂಟ್ರು ಕಳುಹಿಸಿಕೊಡಬೇಕು. ಅವರು ಅದರಮೇಲೆ ಯಾವ ಇಂಡಾರ್ಸ್ ಮಾಡುವರೋ ಆ ರೀತಿ ಅದರಂತೆಯಲ್ಲಿ ಬರಬೇಕು. ಬೋರ್ಡಿನಲ್ಲಿ ಚರ್ಚೆಗೆ ತರಬಹುದೆಂದು ಇಂಡಾರ್ಸು ಆಗಿದ್ದರೆ ಹಾಗೆ ಮಾಡಬೇಕು. ಇಲ್ಲವೆ ತಾವೇ ಅದನ್ನು ಇತ್ಯರ್ಥಿಸಿ ಈ ವಿಷಯವನ್ನು ಹೀಗೆ ಮಾಡತಕ್ಕದ್ದೆಂದು ಷರಾ ಬರೆದಿದ್ದಲ್ಲಿ ಆಗ ಅದರಂತೆ ವೈಸ್‌ಪ್ರೆಸಿಡೆಂಟ್ರು ನಡೆಸಬೇಕು. ಪ್ರೆಸಿಡೆಂಟ್ರೇ ತೀರ್ಮಾನ ಮಾಡಿದ ವಿಷಯವನ್ನು ಅವಶ್ಯವಿದ್ದಲ್ಲಿ ಕಮಿಷನರುಗಳ ಪೈಕಿ ಯಾರಾದರು ಚರ್ಚೆಗೆ ತರಬಹುದು. ಬೋರ್ಡಿನಲ್ಲಿ ಆಗ ತೀರ್ಮಾನವಾಗುವುದೇ ಕೊನೇ ತೀರ್ಮಾನ ಎಂಬುದರ್ಥ. ಈ ಅರ್ಥಕ್ಕೆ ಹಾಜರಾಗಿದ್ದ ಎಲ್ಲಾ ಮೆಂಬರುಗಳೂ ತಮ್ಮ ಅನುಮತಿಯನ್ನು ಕೊಟ್ಟರು.

ಮೈಸೂರು ಷಹರಿನಲ್ಲಿ ಮೂಗುದಾರಗಳ ಸಂರಕ್ಷಣಾರ್ಥವಾದ ಕಾನೂನನ್ನು ಜಾರಿಯಲ್ಲಿ ತರಬೇಕೆಂಬ ವಿಷಯಕ್ಕೆ ಈ ಸಂಗತಿಯು ಮ್ಯುನಿಸಿಪಾಲಿಟಿಯವರೇ ಸ್ವತಂತ್ರವಾಗಿ ಚರ್ಚಿಸಬಾರದು. ಅವರಿಗೆ ಅಧಿಕಾರವಿಲ್ಲವಾದ್ದರಿಂದ ಸಂಗತಿಯನ್ನು ಸರ್ಕಾರದ ವೈತಸಂಘದವರು ಬ್ರಾಂಚ್ ಮಾತ್ರ ಅಲ್ಲಿ ಚರ್ಚಿಸಿ ಅವರ ತೀರ್ಮಾನವನ್ನು ಅವರಾಗಿಯೇ ನಮಗೆ ಕಳುಹಿಸಿಕೊಟ್ಟರೆ ಆ ವಿಷಯವನ್ನು ಬೋರ್ಡಿನವರು ಚರ್ಚೆ ಮಾಡಬೇಕೆಂಬುದಾಗಿ ಪ್ರೆಸಿಡೆಂಟ್ರವರು ಸೂಚಿಸಿದ್ದನ್ನು ಮೆಂಬರುಗಳೆಲ್ಲಾ ಅನುಮೋದಿಸಿದರು. ಅದ್ದರಿಂದ ವೈತಸಂಘದವರು ತಮ್ಮ ಮೀಟಿಂಗಿನಲ್ಲಿ ಈ ವಿಷಯವನ್ನು ಚರ್ಚೆ ಮಾಡುವರೆಂದು ನಿರೀಕ್ಷಿಸುತ್ತೇವೆ.

ಅಕ್ರಮ.

ನಮ್ಮ ವೃತ್ತಾಂತ ಪತ್ರಿಕೆಯನ್ನು [illegible]ಗಳಲ್ಲಿ ಎಲ್ಲರಿಗೂ ಅಲ್ಪದ ಪ್ರತಿವಾರವೂ ಕ್ರಮವಾಗಿ ರವಾನಿಸುತ್ತೇವೆ. ಕೆಲವು ಮಂದಿ [illegible] ತಮಗೆ ಪತ್ರಿಕೆಗಳು ಸಕಾಲಕ್ಕೆ ತಲುಪುವದಿಲ್ಲವೆಂದು ಆಗಾಗ್ಯೆ ಬರೆಯುತ್ತಾರೆ. ಕೆಲವರಿಗೆ ತಲುಪುವದೇ ಇಲ್ಲವೆಂದು ಬರೆಯುತ್ತಾರೆ. ಇದರಿಂದ ಅಂಥವರ ಮೋಲ್ಪಿಯಸಗಳು ತಪ್ಪಾಗಿರಬಹುದು, ಇಲ್ಲವೆ ಸಬ್ ಆಫೀಸಿನ ಜವಾನರು ಆಯಾ ಕಡೆಗಳಲ್ಲಿ ಸರಿಯಾಗಿ ಬಿಲಿವರಿ ಮಾಡದೆ ಇರಬಹುದು ಎಂಬೀ ಎರಡು ಊಹೆಗಳು ಹುಟ್ಟುತ್ತವೆ. ಪತ್ರಿಕೆಗಳು ಯಾರ್ಯಾರಿಗೆ ಸಕಾಲಕ್ಕೆ ತಲುಪುವದಿಲ್ಲವೋ ಅಂಥವರು ತಮ್ಮ ಸರಿಯಾದ ವಿಳಾಸವನ್ನು ಚೆನ್ನಾಗಿ ಬರೆದು ತಿಳಿಸಬೇಕು. ಮತ್ತು ಸಬ್ ಆಫೀಸಿನ ಪೋಸ್ಟ್‌ಮಾಸ್ಟರುಗಳು ತಮ್ಮ ತಮ್ಮ ಬಿಲಿವರಿ ಪ್ಯೂನುಗಳಿಗೆ ಸರಿಯಾಗಿ ಬಟವಡೆ ಮಾಡುವಂತೆ ಹುಕುಂ ಮಾಡಬೇಕು ಎಂಬುದಾಗಿ ಈ ಮೂಲಕ ಅವರವರಿಗೆ ತಿಳಿಯಪಡಿಸುತ್ತೇವೆ.

ಎಡಿಟರ್,
ವೃತ್ತಾಂತ ಪತ್ರಿಕೆ.

ಸ್ವದೇಶ ವೃತ್ತಾಂತಗಳು.

ಈಸಲದ ಪ್ರಜಾಪ್ರತಿನಿಧಿಸಭೆಯನ್ನು ಅಕ್ಟೋಬರ್ ಮಾಸದಲ್ಲೇ ನಡಿಸುವರೆಂದು ಕೇಳುತ್ತೇವೆ.

ಪ್ರಸಿದ್ಧಪತ್ರಿಕೆ

ಕಂ|| ಸಕಲಸುಮನೋಹರಗುಣಮಂ | ಸುಕರದಿ ಪ್ರಕಟಿಸುವ [illegible] |
ಒಡೆಯರವಂಶದಿಂ || ಪ್ರಕಟಿಪಸುಮನೋಹರಕಥೆ |
ವಿಕಸಿಪ ದೇವಿಯಿದ [illegible] ||
ಕನ್ನಡ ಮಹಾಭಾರತ.

'ಶ್ರೀಕೃಷ್ಣರಾಜ ವಾಣೀವಿಲಾಸ' ಎಂಬ ಕನ್ನಡ ಮಹಾಭಾರತವು ನಮ್ಮ ಸ್ವಂತ ಶ್ರೀಚಾಮರಾಜೇಶ್ವರ ಪ್ರೆಸ್ಸಿನಲ್ಲಿ ಪ್ರಕಟವಾಗುವದು ಎಲ್ಲರಿಗೂ ತಿಳಿದಿರಬಹುದಷ್ಟೆ ಈಗ ಹದಿನೆಂಟು ಪರ್ವಗಳೂ ಪೂರೈಯಾಗಿ ವ್ಯವಸ್ಥೆ ಅಪೇಕ್ಷಿಸುವವರು ಕೆಳಗೆ ವಿವರಿಸುವ ಕ್ರಯದ ಮೇರೆಗೆ ಕ್ರಯ ಸಂದಾಯಮಾಡಿ ಪಡೆಯಬಹುದು

ಆದಿಪರ್ವ ರೂ ೩, ಸಭಾಪರ್ವ ೧—೨—೦, ಅರಣ್ಯಪರ್ವ [illegible] ವಿರಾಟಪರ್ವ ಸ್ಥಿಪಕವರ್ಗ್ಯಂಡ ೧೨ ಆಣೆ, ಡಿಟೊ [illegible] ದನ ಪ್ರತಿಕ್ಷ್ಯಂಡ ೧ ರೂ ಉದ್ಯೋಗಪರ್ವ ಭೀಷ್ಮಪರ್ವ ೨ ದ್ರೋಣಪರ್ವ ೨—೭—೦, ಕರ್ಣಪರ್ವ ಶಲ್ಯಪರ್ವ ೧—೨—೦ ಸೌಪ್ತಿಕಪರ್ವ ೬ ಆಣೆ ಸ್ತ್ರೀಪರ್ವ ೬ ಆಣೆ, ಶಾಂತಿಪರ್ವ ರಾಜಧರ್ಮ ೨—೬—೦, ಆಪದ್ಧರ್ಮ ೯ ಆ, ಮೋಕ್ಷಧರ್ಮ ೨—೬—೦, ಅನುಶಾಸನಿಕಪರ್ವ ೩—೧೨—೦ ಅಶ್ವಮೇಧಿಕಪರ್ವ ೧—೧೨—೦, ಆಶ್ರಮವಾಸಿಕಪರ್ವ—ಮೌಸಲಪರ್ವ—ಮಹಾಪ್ರಸ್ಥಾನಪರ್ವ—ಸ್ವರ್ಗಾರೋಹಣಪರ್ವ ೧೦ ಆಣೆ, ಭಗವದ್ಗೀತೆ ೯ ಆಣೆ, ದಾಯಭಾಗದ [illegible] ೬ ಆ, ಪಂಥಕ್ರಿಸ ೮ ೬ ಪೈ, ಲೋವರ್‌ಸೆಕೆಂಡರೀ ಟೆಕ್ಸ್ಟಿನ ನೋಟ್ಸ್ ೯ ಆಣೆ

ಅರಣ್ಯಪರ್ವ, ಉದ್ಯೋಗಪರ್ವ, ಕರ್ಣಪರ್ವ ಈ ಮೂರು ಪರ್ವಗಳು ಗವರ್ನಮೆಂಟ್ ಬುಕ್‌ಡಿಪೋವಿನಲ್ಲಿ ದೊರೆಯುವುದು ಮೇಲೆ ಹೇಳಲ್ಪಟ್ಟಿರುವ ಪುಸ್ತಕಗಳು ನಮ್ಮಲ್ಲಿ ಸ್ವಲ್ಪವೇ ಇರುವದರಿಂದ ಜಾಗ್ರತೆಯಾಗಿ ತರಿಸಿಕೊಳ್ಳಬಹುದು.

ಶ್ರೀಮನ್ಮಹಾರಾಜರವರಿಗೆ ಫಲವನ್ನು ಸರಬರಾಯಿ ಮಾಡುವದಕ್ಕೆ ಮುಖ್ಯವಾಗಿ ನೇಮಿಸಲ್ಪಟ್ಟ.

ಎಂ. ರಾಮಪ್ಪ, ಅಂಡ್‌ಸನ್,

ಪ್ರೊಪ್ರೈಟರ್ಸ್, ಶ್ರೀಚಾಮರಾಜೇಶ್ವರ ಪ್ರೆಸ್,

ಲಾಲ್—ಬಾಗ್ ರೋಡ್, ಬೆಂಗಳೂರು

ವೃತ್ತಾಂತ ಪತ್ರಿಕೆ.

ಚಂದಾ ನಿರ್ಣಯ.

	ರೂ ಆ ಪೈ.
ಸ್ಥಳದವರಿಗೆ ವರ್ಷ ೧ಕ್ಕೆ	೧—೨—೦
ಪರಸ್ಥಳದವರಿಗೆ ವರ್ಷ ೧ಕ್ಕೆ	೧—೪—೦
ಬಿಡಿ ಪತ್ರಿಕೆ ೧ಕ್ಕೆ	೦—೦—೪

ಈ ಪತ್ರಿಕೆಯು ಮೈಸೂರು ರಾಜಧಾನಿಯಲ್ಲಿ ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ, ಪ್ರಕಟಿಸಲ್ಪಡುವದು ಒಡೆಯರು ಮೊದಲುಗೊಂಡು ಸಮಸ್ತರಿಗೂ ಸುಲಭಸಾಧ್ಯವಾಗುವಂತೆ ಈ ಪತ್ರಿಕೆಗೆ ಅಷ್ಟು ಅಲ್ಪ ಮೌಲ್ಯವನ್ನು ನಿಶ್ಚಯಿಸಿರುತ್ತೇವೆ ಈ ಪತ್ರಿಕೆಯನ್ನು ಅಪೇಕ್ಷಿಸುವವರು ಚಂದಾಹಣವನ್ನು ಮುಂಗಡವಾಗಿ ಕಳುಹಿಸಬೇಕು

ಎಡಿಟರ್,

ವೃತ್ತಾಂತ ಪತ್ರಿಕೆ

ಟೊಪಿಗಳು!

ಟೋಪಿಗಳು!! WOOL CAPS ಟೋಪಿಗಳು!!

ಹಾಸನದ ಅರ್ಫನೇಜಿನಲ್ಲಿ ತಯಾರಾಗುತಂಥ ಅಚ್ಚ ಕಂಬಳಿನೂಲಿನ ಟೋಪಿಗಳೇ (Wool Caps) ನಮ್ಮ ಆಫೀಸಿನಲ್ಲಿ ಮಾರಿಕೆಗೆ ಸಿದ್ಧವಾಗಿರುತ್ತವೆ. ಬೆಲೇದು—೧ ರೂ. ೨ ಆಣೆ ಇಂದ ೧ ರೂ. ೬ ಆಣೆಗಳ ವರಿಗೂ ಬೇರೆ ಬೇರೆ ರಂಗುಗಳುಂಟು. ಸ್ಥಳದವರು ಬಂದು ನೋಡಿ ಪಡೆಯಬಹುದು. ಪರಸ್ಥಳದವರು ಮುಂಗಡವಾಗಿಯೇ ಹಣ ಕಳುಹಿಸಿದಲ್ಲಿ ತ್ವರೆಯಲ್ಲಿ ಛಾಂಗೀ ಮೂಲಕ ಕಳುಹಿಸುತ್ತೇವೆ. ಛಾಂಗೀ ಛಾರ್ಜ ಬೇರೇ ಕೊಡಬೇಕು. ಮೇಲುವಿಳಾಸದಲ್ಲಿ ಟೋಪಿಗೆ ಸಂಬಂಧವಾದದ್ದು ಎಂದು ಬರೆಯಬೇಕು.

ಮ್ಯಾನೇಜರ್,

ವೆಸ್ಲಿಯನ್ ಮಿಷನ್ ಪ್ರೆಸ್,

ಮೈಸೂರು.

ಫಾರೆಸ್ಟು ನೋಟೀಸು.

ನಂ. ೧೧೮೯/೯೬ *NOTIFICATION.*

೧. ಸರ್ ೧೮೯೬ನೆ ಇಸವಿ ಸೆಪ್ಟಂಬರು ೨೫ನೆ ತಾರೀಖು.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ:—ಮೈಸೂರು ಸಂಸ್ಥಾನದ ಉತ್ಪತ್ತಿಯಾದ ಸಂದಲ್ ಯಾನೆ ಗಂಧದ ಮರಗಳನ್ನು ಪ್ರತಿವರ್ಷದಲ್ಲಿಯೂ ಹರಾಜ್ ಮೂಲಕ ವಿಕರಿ ಮಾಡುವದು ಪದ್ಧತಿಯಾಗಿದೆ. ಈ ಪದ್ಧತಿಯನ್ನನುಸರಿಸಿ ಕೆಳಗೆ ನಮೂದಾಗುವ ಸ್ಥಳಗಳಲ್ಲಿ ಮತ್ತು ಅದರ ಬಾಜೂದಲ್ಲಿ ವಿವರಿಸಿರುವ ತಾರೀಖುಗಳಲ್ಲಿ ಆಯಾ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರ ಮತ್ತು ಫಾರೆಸ್ಟ ಆಫಿಸರುಗಳ ರೂಬರೂಬ ಸಂದಲ್ ಹರಾಜು ನಡೆಸಲ್ಪಡುವದು.

ಡಿಸ್ಟ್ರಿಕ್ಟು	ಕೋಠಿಯ ಹೆಸರು.	ಹರಾಜು ತಾರೀಖು.	ಟನ್ಗಳ ಮೊತ್ತ.	ಷರಾ.
ಶಿವಮೊಗ್ಗ.	ಸಾಗರ.	೧೩ನೆ ನವಂಬರ್ ೯೬	೨೫೦ ಟನ್.	
ಡಿಟೋ.	ಶಿವಮೊಗ್ಗೆ.	೧೭ನೆ ,,	೪೬೦ ,,	
ಡಿಟೋ.	ತೀರ್ಥಹಳ್ಳಿ.	೨೧ನೆ ,,	೧೨೦ ,,	
ಕಡೂರು.	ಚಿಕ್ಕಮಗಳೂರು.	೩೦ನೆ ,,	೨೦೦ ,,	
ಹಾಸನ.	ಹಾಸನ.	೪ನೆ ಡಿಸಂಬರ್ ೯೬	೨೭೫ ,,	ಸರ್ಕಾರೀ ಬಾಬತು.
			೨೫ ,,	ಇನಾಂತೀ ಬಾಬತು.
ಬೆಂಗಳೂರು.	ಬೆಂಗಳೂರು.	೮ನೆ ,,	೧೫೦ ,,	
ಮೈಸೂರು.	ಶ್ರೀರಂಗಪಟ್ಟಣ.	೧೧ನೆ ,,	೩೫೦ ,,	
ಡಿಟೋ.	ಹುಣಸೂರು.	೧೫ನೆ ,,	೫೦೦ ,,	

೨. ಹರಾಜಿನ ನಿರ್ಣಯ.—ಸರ್ ೧೮೯೬ನೆ ಇಸವಿ ಜನವರಿ ೧೬ನೆ ತಾರೀಖಿನ ಮೈಸೂರು ಸರ್ಕಾರೀ ಗೆಜೆಟ್ಟಿನ ೧ನೇ ಭಾಗದ ೩೦ನೆ ಪೇಜಿನಲ್ಲಿ ಪಬ್ಲಿಷ್ ಮಾಡಲ್ಪಟ್ಟಿರುವ ೧೮೯೫ನೆ ನವಂಬರು ೨೯ನೆ ತಾರೀಖು ಉಳ್ಳ ನಂ| ೧೫೪—೯೫ನೆ ಗೌರ್ನ್ಮೆಂಟ್ ರಿವ್ಯೆನ್ಯೂ ನೋಟಿಫಿಕೇಷನಿನಲ್ಲಿ ಹರಾಜಿನ ನಿರ್ಣಯವನ್ನು ಚೆನ್ನಾಗಿ ತಿಳಿಯಬಹುದು. ಮತ್ತು ಇದೇ ನೋಟಿಫಿಕೇಷನು ಹರಾಜು ಕಾಲದಲ್ಲಿ ಓದಲಾಗುವದು.

ಬೆಂಗಳೂರು,
೨೫ನೆ ಅಕ್ಟೋಬರ,
೧೮೯೬ನೆ ಇಸವಿ.

ಎಲ್. ರಿಕ್ಕೆಟ್ಸ್,
ಫಾರೆಸ್ಟು ಇನ್ಸ್ಪೆಕ್ಟರ್ ಜನರಲ್.

ವೃತ್ತಾಂತ ಪತ್ರಿಕೆ.

೧೮೯೬ನೇ ಇಸವಿ ನವಂಬರ ತಾ|| ೨೬ನೇ ಗುರುವಾರ.

ಮ್ಯುನಿಸಿಪಲ್ ಮೀಟಿಂಗು.

ಕಳೆದ ೨೮ ನೆ ತಾರೀಖು ಶನಿವಾರ ಬೆಳಗ್ಗೆ ಟೌನ್‌ಹಾಲಿನಲ್ಲಿ ಮ್ಯುನಿಸಿಪಲ್‌ಮೀಟಿಂಗು ಜರುಗಿತು. ಮೀಟಿಂಗು ಪ್ರಾರಂಭವಾದ ಕೂಡಲೆ ಮ|| ಎಸ್. ಸುಬ್ಬರಾಯರು ವರ್ತಮಾನಪತ್ರಿಕೆಗಳಲ್ಲಿ ಈ ಮೀಟಿಂಗಿನಲ್ಲಿ ನಡೆದ ಎಲ್ಲಾ ಸಂಗತಿಗಳನ್ನೂ ಪ್ರಕಟಿಸದೆ ಅಲ್ಪಸ್ವಲ್ಪ ಪ್ರಕಟಿಸಿ ಅದರ ಮೇಲೆ ಎಡಿಟರ ಅಭಿಪ್ರಾಯಗಳನ್ನು ತೋರಿಸುತ್ತಾರೆ. ಇದು ಸರಿಯಲ್ಲ. ವರ್ತಮಾನಪತ್ರಿಕಾ ಕರ್ತರು ಮೀಟಿಂಗಿನಲ್ಲಿ ನಡೆದ ಸಂಗತಿಗಳನ್ನೆಲ್ಲಾ ಸವಿಸ್ತಾರವಾಗಿ ಪ್ರಕಟಿಸಬೇಕು. ಇಲ್ಲವಾದರೆ ಪ್ರಕಟಿಸುವವನ್ನೇ ನಿಲ್ಲಿಸಬೇಕು. ಇವೆರಡೂ ಇಲ್ಲದೇ ಹೀಗೆ ಅರ್ಧಗಟ್ಟಿಯಾಗಿ ಪ್ರಕಟಿಸಿ ಅದರ ಮೇಲೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಕೂಡದು. ಈ ವಿಷಯದಲ್ಲಿ ಪ್ರೆಸಿಡೆಂಟ್ರವರ ಇರಾದೆಯನ್ನು ಅಪೇಕ್ಷಿಸುತ್ತೇವೆ ಎಂಬದಾಗಿ ಹೇಳಿದರು. ಪ್ರೆಸಿಡೆಂಟ್ರವರು ಅವರಂತೆಯೇ ಅಭಿಪ್ರಾಯಪಟ್ಟರು. ಮ|| ಎಂ. ವೆಂಕಟಕೃಷ್ಣಯ್ಯನವರು ಬೆಂಗಳೂರ. ಮ್ಯುನಿಸಿಪಾಲಿಟಿಯವರು ಒಬ್ಬ ರೈಟರನ್ನು ಇದಕ್ಕಾಗಿಯೇ ಇಟ್ಟುಕೊಂಡಿರುತ್ತಾರೆಂತಲೂ, ಮೀಟಿಂಗಿನಲ್ಲಿ ನಡೆದ ಸಂಗತಿಯನ್ನೆಲ್ಲಾ ಸವಿಸ್ತಾರವಾಗಿ ಗುರುತುಮಾಡಿಕೊಂಡು ಪತ್ರಿಕೆಗಳಿಗೆ ಕಳಿಸುತ್ತಾರೆಂತಲೂ, ಅದೇ ಪ್ರಕಾರ ಅಂಥಾ ಒಬ್ಬ ರೈಟರನ್ನು ಇಲ್ಲಿಯೂ ಬೇಕಾದರೆ ಇಟ್ಟುಕೊಳ್ಳಬಹುದೆಂತಲೂ ಹೇಳಿದರು. ಇದಕ್ಕೆಲ್ಲಾ ಫಂಡು ಎಲ್ಲಿದೆ ಎಂಬದಾಗಿ ಪ್ರೆಸಿಡೆಂಟ್ರು ಹೇಳಿ ವಿಷಯವನ್ನು ಮುಕ್ತಾಯ ಮಾಡಿದರು. ಆನಂತರ ಕಳೆದ ಸೆಪ್ಟಂಬರು ಮಾಹೆಯ ಮ್ಯುನಿಸಿಪಲ್ ಜಮಾಖರ್ಚನ್ನು ಓದಿಸಿ ಪಾಸ್ ಮಾಡಿದರು. ಮೊಹತರ್ಫಾ ವಸೂಲಿಯ ವಿಷಯದಲ್ಲಿ ವೈಸ್‌ಪ್ರೆಸಿಡೆಂಟ್ರು ಹೆಚ್ಚು ಗಮನಕೊಡಬೇಕೆಂದು ಷರಾ ಕಾಣಿಸಿದರು. ಮ|| ಎಂ. ವೆಂಕಟಕೃಷ್ಣಯ್ಯನವರು ಮಂಡಿ ನೈಟ್‌ಸ್ಕೂಲ್ ಮೊದಲಾದ ಕೆಲವು ಪಾಠಶಾಲೆಗಳನ್ನು ಹೇಳಿ ಅವುಗಳಿಗೆ ಮ್ಯುನಿಸಿಪಲ್ ಗ್ರಾಂಟನ್ನಾದರೂ ಕೊಡುವ ವಿಷಯ ಚರ್ಚೆ ಮಾಡಬೇಕು ಎಂದು ಹೇಳಿದರು. ಪ್ರೆಸಿಡೆಂಟ್ರವರು ಹಿಂದೆ ನಾವು ಪೊಲೀಸ್ ಇಟ್ಟುಕೊಂಡಿದ್ದಾಗ್ಯೆ ವರ್ಷಕ್ಕೆ ೨೫ ಸಾವಿರ ರೂಪಾಯಿನವರಿಗೂ ಅವರಿಗಾಗಿ ಖರ್ಚುಮಾಡುತ್ತಿದ್ದೆವು. ಗೌರ್ನಮೆಂಟನವರು ಇದನ್ನು ಪರ್ಯಾಲೋಚಿಸಿ ಪೊಲೀಸ್ ಇಲಾಖೆಯನ್ನು ತಾವೇ ವಹಿಸಿಕೊಂಡು ಸಾಲೀಯಾನ ೯,೧೮೦ ರೂಪಾಯಿ ಖರ್ಚಾಗುತಲಿದ್ದ ಸ್ಕೂಲು ಗ್ರಾಂಟುಗಳನ್ನು ನಮಗೆ ಒಪ್ಪಿಸಿದರು. ನಾವು ಈಗ ಅದಕ್ಕಿಂತಲೂ ಹೆಚ್ಚಾಗಿ ೬೦೦ ರೂಪಾಯಿ ಖರ್ಚು ಮಾಡುತ್ತೇವೆ. ಇದೇ ಮ್ಯುನಿಸಿಪಾಲಿಟಿಗೆ ಭಾರವಾಗಿರುವಾಗ್ಗೆ ಇನ್ನು ಗ್ರಾಂಟು ಇತರ ಸ್ಕೂಲುಗಳಿಗೆ ಕೊಡಬೇಕೆಂದರೆ ಹಣವೆಲ್ಲಿಂದ ತರಬೇಕು ಎಂಬದಾಗಿ ಹೇಳಿದರು. ಆಗ ಈ ವಿಷಯದಲ್ಲಿ ಎರಡನೆ ದರ್ಜೆ ಮತ್ತು ಉತ್ತಮ ವಿದ್ಯಾಭ್ಯಾಸಗಳಿಗಾಗಿ ಮ್ಯುನಿಸಿಪಾಲಿಟಿಯವರು ಕೊಡುವ ಹಣವನ್ನು ಗೌರ್ನಮೆಂಟಿನವರು ತಪ್ಪಿಸಿ ಅವುಗಳಿಗೆ ತಾವೇ ಪ್ರಾವಿನ್ಷಿಯಲ್ ಫಂಡಿನಿಂದ ಸರಬರಾಜು ಮಾಡಿಸಿ ಪ್ರೈಮರಿ ಯಾನೆ ಬಾಲಪಾಠಗಳನ್ನು ಕಲಿಸುವ ಬಾಲಕ ಮತ್ತು ಬಾಲಿಕಾಪಾಠಶಾಲೆಗಳಿಗೆ ಮಾತ್ರ ಮ್ಯುನಿಸಿಪಾಲಿಟಿಯವರು ಗ್ರಾಂಟು ಕೊಡುವಂತೆ ಮಾಡಿಕೊಡಬೇಕೆಂದು ಗೌರ್ನಮೆಂಟಿನವರನ್ನು ಕೇಳಿಕೊಳ್ಳುವಂತೆ ಗೊತ್ತುಮಾಡಿದರು. ಮ|| ಎಂ. ವೆಂಕಟಕೃಷ್ಣಯ್ಯನವರು ಲಿಂಗಣ್ಣನವರ ಮನೆಯ ಪೂರ್ವಭಾಗದಲ್ಲಿ ಚಾಮರಾಜರಸ್ತೆಯನ್ನು, ಅಗ್ರಹಾರವನ್ನು ಸೇರಿಸುವಂತೆ ಒಂದು ಹೊಸರಸ್ತೆ ತಯಾರ್ಮಾಡಿಸಬೇಕೆಂದು ಸೂಚಿಸಿದರು. ಬೋರ್ಡಿನವರು ಅದರ ಆವಶ್ಯಕತೆಯನ್ನು ಕುರಿತು ಪರಿಕ್ಷಿಸಿ ರಿಪೋರ್ಟು ಮಾಡುವಬಗ್ಗೆ ಒಂದು ಸಬ್‌ಕಮಿಟಿಯನ್ನು ಗೊತ್ತುಮಾಡಿದರು. ಮ್ಯುನಿಸಿಪಲ್ ಕಮಿಷನರುಗಳಿಗೆ ತೈನಾತಿ ಕೊಟ್ಟಿರುವ ಜವಾನರುಗಳನ್ನು ಬೆಳಗ್ಗೆ ೧೧ ಘಂಟೆಯಿಂದ ೩ಘಂಟೆವರಿಗೆ ಆಯಾ ಹೊಳೆಯ ಓವರ್ಸಿಯರುಗಳ ಕೈಕೆಳಗೆ ಕೊಟ್ಟು ಪಟ್ಟಣದ ಕಚರಾ ತೆಗಿಸುವದರಲ್ಲಿ ಅವರಿಗೆ ಸಹಾಯ ಮಾಡುವಂತೆ ಏರ್ಪಾಡಾಗಬೇಕೆಂದು ಮ|| ಎಂ. ವೆಂಕಟಕೃಷ್ಣಯ್ಯನವರು ಅಪೇಕ್ಷಿಸಿದ್ದನ್ನೇ ಎಲ್ಲಾ ಮೆಂಬರುಗಳೂ ಅನುಮೋದಿಸಿದ್ದರಿಂದ ಅದೇ ಪ್ರಕಾರ ಏರ್ಪಾಡಾಗಬೇಕೆಂದು ತಿರ್ಮಾನವಾಯಿತು. ಆನಂತರ ಮ|| ಎಸ್. ಸುಬ್ಬರಾಯರು ದಸರಾ ಮೊದಲಾದ ಮಹೋತ್ಸವಕಾಲಗಳಲ್ಲಿ ಕೋಟೆಯ ಎದುರಿಗೆ ಜೂಜಾಟದ ಸ್ಥಳವನ್ನು ಮ್ಯುನಿಸಿಪಾಲಿಟಿಯವರು ಕೊಡಕೂಡದೆಂತಲೂ, ಅದರಿಂದ ಅನೇಕರಿಗೆ ನಷ್ಟವಾಗುವದೆಂತಲೂ, ಬಾಲಕರು ಕೆಟ್ಟ ಅಭ್ಯಾಸಗಳಿಗೆ ಬೀಳಬೇಕಾಗುವದೆಂತಲೂ, ಕಳೆದ ದಸರಾಹಬ್ಬದಲ್ಲಿ ಒಬ್ಬ ಹುಡುಗನು ತನ್ನ ೩೦ ರೂಪಾಯಿಗಳನ್ನೂ ಒಡವೆಗಳನ್ನೂ ಜೂಜಾಡಿ ಸೋತು ಈಗ ಪೊಲೀಸ ಇನ್ಸ್‌ಪೆಕ್ಟರ ಮುಂದೆ ಛಾರ್ಜ ಮಾಡಿರುತ್ತಾನೆಂತಲೂ ಹೀಗೆ ಮಾಡುವದು ಮ್ಯುನಿಸಿಪಾಲಿಟಿಯವರಿಗೆ ಆದೀಕ್ಷವಾಗಿ ಕಂಡುಬಂದಾಗ್ಯೂ ಜೂಜಾಡುವದನ್ನು ತಪ್ಪಿಸಿ ಅದೇ ಸ್ಥಳವನ್ನು ತಮಾಷೆಗಳನ್ನು ತೋರಿಸತಕ್ಕವರಿಗೂ, ಅಟ್ಟೆಬರೆಗಳನ್ನು ಹರಾಜು ಹಾಕುವವರಿಗೂ ಬಾಡಿಗೆಗೆ ಕೊಡುವದರಿಂದ ಉತ್ಪತ್ತಿ ಮಾಡಿಕೊಳ್ಳಬಹುದೆಂತಲೂ ಹೇಳಿದರು. ಈ ವಿಷಯವನ್ನು ಓಟಿಗೆ ಹಾಕಿದಾಗ ೮ ಮಂದಿ ಇದೇ ಸರಿ ಎಂದು ಹೇಳಿದ್ದರಿಂದ ಇವರಂತೆಯೇ ಮಾಡುವದು ಸರಿ ಎಂದು ಒಪ್ಪಿಕೊಂಡರು. ಇನ್ನುಮೇಲೆ ದಸರಾಹಬ್ಬದಲ್ಲಿ ರಾಜಧಾನಿಯಲ್ಲಿ ಜೂಜಾಟವು ನಡೆಯುವದಿಲ್ಲವಲ್ಲಾ ನಮ್ಮ ಮೊರೆಯನ್ನು ಸರ್ಕಾರದವರು ಲಾಲಿಸಿದರಲ್ಲಾ ಎಂದು ಬಹಳವಾಗಿ ಸಂತೋಷಿಸುವೆವು.

ಲೇಟ ಧುಲೀಪ್ ಸಿಂಗರವರು.

ಇವರು ಪಂಜಾಬರಾಜ್ಯದ ಮಹಾರಾಜರಾಗಿದ್ದ ಪ್ರಸಿದ್ಧರಾದ ರಣಜಿತ ಸಿಂಗರವರಪುತ್ರರು. ಇವರ ಚಿಕ್ಕವಯಸ್ಸಿನಲ್ಲಿಯೇ ಇವರಿಗೆ ಸಂಸ್ಥಾನದ ಬಿರುದುಗಳನ್ನು ಕೊಟ್ಟು, ಕೆಲವುಕಾಲದಮೇಲೆ ಇವರಿಂದ ಪ್ರಜೆಗಳಿಗೆ ನಾನಾಸಂಕಟಗಳು ಪ್ರಾಪ್ತವಾದವನ್ನು ಪ್ರಭುಗಳಾದ ಬ್ರಿಟಿಷ್ ಗೌರ್ನಮೆಂಟನವರು ಪರಾಂಬರಿಸಿ, ಅವರಿಂದ ರಾಜ್ಯವನ್ನು ಕಿತ್ತುಕೊಂಡು, ಅವರಿಗೆ ವರ್ಷ ೧ಕ್ಕೆ ೨೫ ಸಾವಿರ ಪೌನುಗಳನ್ನು ಪೋಷಣಕೊಡುವಂತೆ ಗೊತ್ತುಮಾಡಿ, ಆ ರಾಜ್ಯವನ್ನೆಲ್ಲಾ ಇಂಡಿಯಾ ಗೌರ್ನಮೆಂಟನವರೇ ಆಳುವ ದಕ್ಕಾರಂಭಿಸಿದರು. ಸುಮಾರು ೯—೧೦ ವರ್ಷದಲ್ಲೇ ಧುಲೀಪಸಿಂಗರನ್ನು ವಿಲಾಯತಿಗೆ ಕಳಿಸಿ ಅಲ್ಲಿ ವಿದ್ಯಾಭ್ಯಾಸಮಾಡಿಸಿ, ಅವರಿಗೆ ಅಲ್ಲೇಒಂದು ಬಂಗಲೆಯನ್ನು ಬಿಡಿಸಿಕೊಟ್ಟದ್ದರಿಂದ, ಅವರು ದೊಡ್ಡವರಾಗುವವರಿಗೂ ವಿಲಾಯತಿಯಲ್ಲೇ ಇದ್ದುಕೊಂಡು ಹೂಣವಿದ್ಯೆಯಲ್ಲಿಯೂ ತಕ್ಕಮಟ್ಟಿಗೆ ಯೋಗ್ಯತೆಯನ್ನು ಪಡೆದು, ಆಗಾಗ್ಯೆ ಮಹಾರಾಜ್ಞಿಯವರ ಜೊತೆಯಲ್ಲಿ ಊಟ ಉಪಚಾರಾದಿಗಳನ್ನು ಸ್ವೀಕರಿಸುತಲಿದ್ದರು. ಇವರಿಗೆ ಯವ್ವನ ಪ್ರಾಪ್ತವಾದ ಒಡನೆ ಒಬ್ಬ ಯೂರೋಪಿಯನ್ ಹುಡುಗಿಯನ್ನು ಮದುವೆ ಮಾಡಿಕೊಂಡರು. ಕೆಲವುಕಾಲದಮೇಲೆ ಆಕೆ ತೀರಿಹೋದಳು. ಅಲ್ಲಿಂದ ಸಿಂಗರವರು ಫ್ರಾನ್ಸಿದೇಶಕ್ಕೆ ಬಂದು ಅಲ್ಲಿ ಒಂದು ಅರಮನೆಯನ್ನು ಕೊಂಡುಕೊಂಡು, ಒಬ್ಬ ಫ್ರೆಂಚ್ ಲೇಡಿಯನ್ನು ಮದುವೆಯಾಗಿ ಕೆಲವುಕಾಲ ಸುಖವಾಗಿದ್ದರು. ಅವರು ತಮಗೆ ಗೌರ್ನಮೆಂಟನವರು ಕೊಡುವ ಪೆನ್ಶನನ್ನು ಖರ್ಚುಮಾಡಿ, ಬರಬರುತ್ತಾ, ಸಾಲಗಾರರಾದರು. ಇವರು ಪೂರ್ವದಲ್ಲಿ ವಿಲಾಯತಿಗೆ ಹೋದಾಗಲೇ ಕ್ರೈಸ್ತಮತವನ್ನು ಅಂಗೀಕರಿಸಿದ್ದರು. ತಮಗೆ ಇಂಡಿಯಾ ಗೌರ್ನಮೆಂಟನವರು ಬಹಳ ಅನ್ಯಾಯಮಾಡಿರುತ್ತಾರೆಂತಲೂ, ತಮಗೆ ನ್ಯಾಯವಾಗಿ ಸಲ್ಲಬೇಕಾದಷ್ಟು ಹಣ ಕೊಡುತಲಿಲ್ಲವೆಂತಲೂ ಯೂರೋಪಿನ ಇತರರಾಜ್ಯಗಳಲ್ಲಿ ತಿಳಿಯಪಡಿಸುವದಕ್ಕೂ, ಇಂಡಿಯಾಕ್ಕೆ ಬಂದು ತಮ್ಮ ಸಿಕ್ಖರನ್ನು ಎತ್ತಿಕಟ್ಟಿ ತಮ್ಮಪಕ್ಷ ಹಿಡಿದು ಹೋರಾಡುವದಕ್ಕೂ ಫ್ರಾನ್ಸಿನಿಂದ ಹೊರಟು ಪ್ರಯಾಣಮಾಡಿ ಅರಬ್ಬಿಕಡಲಿನವರಿಗೂ ಬಂದಿದ್ದರು. ಆಗ ಬ್ರಿಟಿಷ್ ಗೌರ್ನಮೆಂಟನವರು ಇಂಡಿಯಾದಲ್ಲಿ ಇವರಿಂದ ಉಂಟಾಗಬಹುದಾದ ತೊಂದರೆಗಳನ್ನು ಪೂರ್ವಭಾವಿಯಾಗಿಯೇ ಪರ್ಯಾಲೋಚಿಸಿ, ಅವರನ್ನು ಅಲ್ಲಿಂದ ಮುಂದಕ್ಕೆ ಬಿಡದಂತೆಯೂ, ಅಲ್ಲಿಂದ ವಾಪಸು ವಿಲಾಯತಿಗೆ ಕಳಿಸಿಬಿಡುವಂತೆಯೂ ಪ್ರಯತ್ನಮಾಡಿದರು. ಆದ್ದರಿಂದ ಸಿಂಗರವರು ಪುನಹಾ ಹಿಂದೂಸ್ಥಾನಕ್ಕೆ ಬರಲು ಅವರಿಗೆ ರಹಾ ಇಲ್ಲದೆಹೋಯಿತು. ಈಗ ಮಹಾರಾಣಿಯವರು ತಮ್ಮ ಶ್ರೇಷ್ಠ ಕಿರೀಟದಲ್ಲಿ ಹಾಕಿಕೊಂಡಿರುವ ಪ್ರಸಿದ್ಧವಾದ ಕೋಹಿನೂರ ಎಂಬ ಭಾರೀವಜ್ರವು ಈ ಸಿಂಗರ ಆಸ್ತಿಯಾಗಿತ್ತು. ಸಿಂಗರವರು ಆಗ ಪ್ಯಾರಿಸ್ ಪಟ್ಟಣದಲ್ಲಿ ವಾಸಮಾಡುವದಕ್ಕೆ ಪ್ರಾರಂಭಿಸಿ, ತಾವು ಬರೆದ ಕಾಗದಪತ್ರಗಳೂ, ನಡಿಸಿದ ಕೆಲಸಗಳೂ ಎಲ್ಲಾ ಅನ್ಯಾಯವಾದವುಗಳೆಂತಲೂ, ಅದಕ್ಕಾಗಿ ತಾವು ತುಂಬಾ ಪಶ್ಚಾತ್ತಾಪಪಡುವನೆಂತಲೂ ಬಹಳವಾಗಿ ದುಃಖಪಟ್ಟು ಮಹಾರಾಣಿಯವರಿಗೆ ಬರೆದುಕೊಂಡು ಅವರ ಕ್ಷಮಾಪಣೆಯನ್ನು ಬೇಡಿದ್ದರಿಂದ ದಯಾರ್ದ್ರಹೃದಯರಾದ ಚಕ್ರವರ್ತಿನಿಯವರು ಅವನ್ನು ಕ್ಷಮಿಸಿ ಪೂರ್ವದಂತೆಯೇ ಅವರಿಗೆ ಸಲ್ಲುತಿದ್ದ ಎಲ್ಲಾ ಮಾನಮರ್ಯಾದೆಗಳನ್ನೂ ಕೊಟ್ಟು ಕಾಪಾಡುತಲಿದ್ದರು. 'ಇಂಥಾ ಪಂಜಾಬ್ ರಾಜವಂಶಜರಾದ ಮಹಾರಾಜಾ ಧುಲೀಪಸಿಂಗ್ ಜಿ. ಸಿ. ಎಸ್. ಐ ಯವರು ಫ್ರೆಂಚ್ ರಾಜ್ಯದ ಪ್ರಧಾನನಗರವಾದ ಪ್ಯಾರಿಸ ಪಟ್ಟಣದಲ್ಲಿರುವ ಒಂದು ಹೋಟೆಲಿನಲ್ಲಿ ಸಹಾಯಶೂನ್ಯರಾಗಿ ಕೇವಲ ಅನುತಾಪಸ್ಥಿತಿಯೊಳು ಕಳೆದ ೨೩ನೇ ತಾರೀಖು ಸೋಮವಾರದದಿನ ಸಕಲವಿಧ ದುಃಖನಿಮಿತ್ತಕವಾಗಿದ್ದ ತಮ್ಮ ಮಾನುಷಶರೀರವನ್ನು ತ್ಯಜಿಸಿದರೆಂಬ ವೃತ್ತಾಂತವು ನಮಗೆ ಅಮಿತವಾದ ವ್ಯಸನವನ್ನೂ ಕದಾಚಿತ ಉಪಶಾಂತಿಯನ್ನೂ ಉಂಟುಮಾಡುತಿದೆ.'

ಆಂಗ್ಲೇಯ ಚರಿತ್ರ ಸಂಗ್ರಹ.

ಈ ನೂತನ ಪುಸ್ತಕವು ಇಂಗ್ಲಿಷ್ ಭಾಷೆಯಲ್ಲಿ ಅಚ್ಚಾಗಿರುವ ಇಂಗ್ಲೆಂಡ ರಾಜ್ಯದ ಚರಿತ್ರೆಗಳನ್ನೋದಿ ಕ್ರೋಢೀಕರಿಸಿ ಬರೆದ ಭಾಷಾಂತರವಾಗಿದೆ. ಇದುವರಿಗೆ ಇಂಗ್ಲಿಷ್ ಭಾಷಾಭ್ಯಾಸಿಗಳಲ್ಲಿ ಮೆಟ್ರಿಕ್ಯುಲೇಷನ್ ತರಗತಿಯ ವಿದ್ಯಾರ್ಥಿಗಳು ಇದನ್ನೋದಲವಕಾಶವಿತ್ತೇಹೊರತು, ಇತರ ಕನ್ನಡಿಗರು ಓದಲೂ, ಕೇಳಲೂ, ಅಪೇಕ್ಷೆಯುಳ್ಳವರಾಗಿದ್ದರೂ ದೇಶಭಾಷೆಯಲ್ಲಿ ಇಲ್ಲದಿದ್ದ ಕಾರಣ ಈ ನ್ಯೂನತೆಯನ್ನು ಪರಿಹರಿಸಬೇಕೆಂಬ ಉದ್ದೇಶ್ಯದಿಂದ ಬ್ರಹ್ಮಶ್ರೀ ವಿದ್ಯಾರ್ಥಿ ನಂಜುಂಡಶಾಸ್ತ್ರಿಗಳವರ ಮ| ಮ|| ವೆಂಕಟನರಸಿಂಹ ಚಂದ್ರಶೇಖರ ಶಾಸ್ತ್ರಿಗಳು ಕನ್ನಡ ಭಾಷೆಯಲ್ಲಿ ವಾಕ್ಯರೂಪವಾಗಿ ರಚಿಸಿ ಪ್ರಕಟಿಸಿರುತ್ತಾರೆ. ಇವರು ದಯಮಾಡಿ ಕಳುಹಿಸಿದ ಪ್ರತಿಯೊಂದನ್ನು ಸ್ವೀಕರಿಸಿ ಆಮೂಲಾಗ್ರವಾಗಿ ಓದಿನೋಡಿದವಾದ್ದರಿಂದ ಈಗ ನಮ್ಮ ಅಭಿಪ್ರಾಯವಂ ಉತ್ಸಾಹದೊಡನೆ ಸಮಸ್ತರಿಗೂ ತಿಳಿಯಪಡಿಸುವದು ಕರ್ತವ್ಯವಾಗಿರುವದು.

ನಮಗೆ ಪಾಲಕರಾಗಿರುವ ಇಂಗ್ಲಿಷರು ಈಗ್ಯೆ ೨,೦೦೦ ವರುಷಗಳಿಗೆ ಮುಂಚೆ ಎಷ್ಟರಮಟ್ಟಿಗೆ ಇದ್ದರೆಂಬುವದನ್ನೂ, ಅಲ್ಲಾಗಾಯಿತು ಇದುವರಿಗೆ ಆಯಾಯ ಕಾಲದ ಅರಸರಾದಿಯಾಗಿ ನಡೆಸಿದ ಸಮಸ್ತರಾಜಕಾರ್ಯಗಳನ್ನೂ, ಈಗ ಇಂಗ್ಲಿಷರು ಸರ್ವವ್ಯಾಪಕರಾಗಿ ಏಕಚ್ಛತ್ರಾಧಿಪತ್ಯವಂ ಮಾಡಲು ಅವರು ನಡೆಸಿದ ಕಾರ್ಯಸಾಧನೆ ಮುಂತಾದ್ದೆಲ್ಲವನ್ನೂ, ಸುಲಭತರವಾದ ಶೈಲಿಯಲ್ಲಿ ವಿದ್ವಾಂಸರು ಒಪ್ಪುವಂತೆ, ಸಮಗ್ರವಾಗಿ ವಿವರಿಸುವದರಿಂದ, ಈ ವಿಲಾಯತಿ ಚರಿತ್ರೆಯು ವಿದ್ಯಾರ್ಥಿಗಳಿಗೂ ಪ್ರಜಾಪ್ರತಿನಿಧಿಗಳೇ ಮುಂತಾದ ಸಕಲರಿಗೂ, ಗ್ರಂಥಕರ್ತರು ಉಪೋದ್ಘಾತದಲ್ಲಿ ತಿಳಿಸಿರುವಂತೆ ಬಹುಪ್ರಯೋಜನಕರವಾಗಿರುವದರಲ್ಲಿ ಸಂಶಯವಿಲ್ಲ. ಆದರೆ ಇವರು ಮುಟ್ಟಿಸಿರುವ ಪಟ್ಟಾದರೂ ಪಳುಕಂತೆಯೂ, ದೀರ್ಘಕಾಲ ಕ್ರಮಕ್ಕೆ ತಕ್ಕ ಸಾಫಲ್ಯವನ್ನು ವಿದ್ವತ್ಪಕ್ಷಪಾತಿಗಳೂ ಗುಣಗ್ರಾಹಿಗಳೂ ಆದ ವಿದ್ಯಾಭ್ಯಾಸದ ಇಲಾಖೆಯವರು ಉಂಟುಮಾಡದೆ ಇರಲಾರರೆಂದು ದೃಢವಾಗಿ ನಂಬಿರುವೆವು. ಈ ಗ್ರಂಥದ ವಿಷಯವಾಗಿ ಸ್ವದೇಶೀಯ ಪತ್ರಿಕಾ ಕರ್ತರುಗಳು ಉಪಯೋಗಿಸಿರುವ ಉತ್ತಮ ವಾಕ್ಯಗಳು ಶ್ಲಾಘ್ಯವಾಗಿರುವವೆಂದು ನಾವು ಅನುಮೋದಿಸುತ್ತೇವೆ. ಈ ಚರಿತ್ರೆಯು, ಪಾಠಶಾಲೆಗಳ ಉಪಯೋಗಕ್ಕಾಗಿ ಬರೆಯಲ್ಪಟ್ಟದ್ದಾಗ್ಯೂ, ಸಾಧಾರಣವಾಗಿ, ಇಂಗ್ಲಿಷರ ಚರಿತ್ರೆಯನ್ನು ಅವ್ಯಂಗವಾಗಿ ತಿಳಿಯುವದು ಅತ್ಯಾವಶ್ಯಕವೆಂದು ಆಶಿಸುವ ಕರ್ನಾಟಕ ದೇಶೀಯರಿಗೆಲ್ಲರಿಗೂ, ಅತ್ಯಂತೋಪಯುಕ್ತವಾಗಿರುವದರಿಂದ, ಶಾಸ್ತ್ರಿಗಳ ಉದ್ದೇಶ ನೆರವೇರುವದಕ್ಕೆ ಅರ್ಹವಾಗಿದೆಯೆಂದು ಭಾವಿಸುವೆವು.

ಸಿ. ಸುಬ್ಬರಾವ್ ಬಿ. ಎ. ಯವರ ಮರಣ.

ಕಳೆದ ೨೮ನೆ ತಾರೀಖು ಶನಿವಾರ ಮಧ್ಯಾಹ್ನ ಸುಮಾರು ೧ಘಂಟೆಹೊತ್ತಿನಲ್ಲಿ ಮ|| ಸಿ. ಸುಬ್ಬರಾವ್ ಬಿ. ಎ. ಯವರು ದಿವಾನರವರ ಬಂಗಲೆಯ ಆಚೆ ಮ|| ಡಿ. ಸುಬ್ಬಯ್ಯನವರ ಮನೆಯಲ್ಲಿ ಮರಣವನ್ನೈದಿದರೆಂದು ನಮ್ಮ ವಾಚಕರಿಗೆ ತಿಳಿಸಲು ಬಹಳವಾಗಿ ವ್ಯಸನ ಪಡುವೆವು. ಇವರು ಅರಮನೆ ಮುತಸಮ್ಮತ್ ಕಛೇರಿಯ ದಸ್ತೇದಾರರಾದ ಮ|| ಕೃಷ್ಣರಾಯರ ದ್ವಿತೀಯ ಪುತ್ರರಾಗಿ, ಚಿಕ್ಕಂದಿನಲ್ಲಿ ಶ್ರೀಮನ್ಮಹಾರಾಜರವರ ಜೊತೆಯಲ್ಲಿ ಖಾಸಬಂಗಲೆಯಲ್ಲಿ ಸ್ಥಾಪಿಸಲ್ಪಟ್ಟಿದ್ದ ರಾಯಲ್‌ಸ್ಕೂಲಿನಲ್ಲಿ ಇಂಗ್ಲಿಷ ಪ್ರಾರಂಭಿಸಿ, ಮಹಾರಾಜರವರ ಕಾಲೇಜಿನಲ್ಲಿಯೇ ಮೆಟ್ರಿಕ್ಯುಲೇಷನ್, ಮತ್ತು ಎಫ್. ಎ. ಪರೀಕ್ಷೆಗಳಲ್ಲಿ ಪ್ಯಾಸಾಗಿ, ಅಲ್ಲಿಂದ ಮದ್ರಾಸಿಗೆ ಹೋಗಿ ಅಲ್ಲಿ ಪ್ರಸಿದ್ಧವಾದ ಕ್ರಿಶ್ಚಿಯನ್ ಕಾಲೇಜಿನಲ್ಲಿ ಮೂರುವರ್ಷ ಬಿ. ಎಗೆ ಓದಿ ತೇರ್ಗಡೆಹೊಂದಿ ಅಷ್ಟಕ್ಕೆ ವಿದ್ಯಾಭ್ಯಾಸವನ್ನು ನಿಲ್ಲಿಸದೆ ವೈದ್ಯಶಾಸ್ತ್ರವನ್ನು ತಕ್ಕಮಟ್ಟಿಗೆ ಕಲಿತರು. ಅನಂತರ ಅಲ್ಲಿಯೇ ಇನ್ನೂ ೨-೩ ವರುಷಗಳು ಇದ್ದು ಕೆಲವುಶಾಸ್ತ್ರ

ಗಳಲ್ಲಿ ತಕ್ಕ ಮಟ್ಟಿಗೆ ಯೋಗ್ಯತೆಯನ್ನು ಸಂಪಾದಿಸಿಕೊಂಡರು ಅವರು ವಿದ್ಯಾಭ್ಯಾಸಮಾಡುತಲಿರುವವರಿಗೂ ಅವರಿಗೆ ಗ[illegible] ರ್ನಮೆಂಟಿನಿಂದ ೨೫ ರೂಪಾಯಿಯೂ, ಅರಮನೇ ಖಚಾನೆ ಯಿಂದ ೧೫ ರೂಪಾಯಿಯೂ ವೇತನದೊರೆಯುತ್ತಿತ್ತು. ಈ ರೂಪಾಯಿಗಳನ್ನೆಲ್ಲ ನವೀನವಾದ ಪುಸ್ತಕಗಳನ್ನು ಕೊಂಡುಕೊಳ್ಳುವದರಲ್ಲಿ ವಿನಿಯೋಗಿಸಿದರೇ ಹೊರ್ತು ಮತ್ತೆ ಬೇರೆ ಅಲ್ಲವು. ಚಿಕ್ಕಂದಿನಿಂದಲೂ ಇವರು ಯಾರಿಗೂ ಹೆದರುತಿರಲಿಲ್ಲ ಬಹು ಯಥಾರ್ಥವಾದಿಗಳಾಗಿಯೂ, ಮಿತ್ರ ಮಂಡಲಿಗೆ ಪೂರ್ಣಸಹಾಯಕರಾಗಿಯೂ, ಕರ್ತವ್ಯವನ್ನು ತೀರಾ ನೆರವೇರಿಸುವದರಲ್ಲಿ ಅಭಿಮಾನಿಯಾಗಿಯೂ, ಭೂತದಯಾ ಪಕ್ಷಪಾತವುಳ್ಳವರಾಗಿಯೂ ಇದ್ದರು. ಮಹಾಮಹೋಪಾಧ್ಯಾಯರುಗಳಿಗೆ ಅತ್ಯಂತಪ್ರೇಮಪಾತ್ರರಾಗಿದ್ದರು. ಈಚೀಚಿಗೆ ಶ್ರೀಮನ್ಮಹಾರಾಜರವರು ಅವರನ್ನು ವಿಶೇಷಪ್ರೀತಿ ಗೌರವಗಳೊಡನೆ ಕಾಣುತಿದ್ದರು ೩ ವರ್ಷಗಳ ಕೆಳಗೆ ಇವರು ಶ್ರೀಮನ್ಮಹಾರಾಜ್ಞಿಯವರ ಬಾಲಿಕಾಪಾಠಶಾಲೆಗೆ ಉಪಾಧ್ಯಾಯರಾಗಿ ನೇಮಿಸಲ್ಪಟ್ಟು ಅಲ್ಲಿಗಾಯಿತು ಆ ಪಾಠಶಾಲೆಯ ಅಭಿವೃದ್ಧಿಗಾಗಿ ಇವರು ಬಹಳವಾಗಿ ಪ್ರಯತ್ನಮಾಡಿದರೆಂಬುವದರಲ್ಲಿ ಯಾವ ಸಂದೇಹವಿಲ್ಲಾರದು. ಅಲ್ಲಿನ ಬಾಲೆಯರಿಗೆ ನಿಜವಾದ ಶಾಸ್ತ್ರವಿದ್ಯೆಯನ್ನು ಕ್ರಮವಾಗಿ ಬೋಧಿಸಿದವರು ಇವರೇ. ಎಲ್ಲರೂ ಆರೋಗ್ಯ ಕ್ರಮಗಳನ್ನು ಸುಬ್ಬರಾಯರಿಂದಲೇ ಕಲಿಯಬೇಕೆಂದು ಹೇಳುವಷ್ಟು ಯೋಗ್ಯತೆಯನ್ನು ಪಡೆದಿದ್ದರು. ಇವರ ಸ್ವಂತ ಪುಸ್ತಕಭಂಡಾರದಲ್ಲಿ ಸಾವಿರಾರು ಪುಸ್ತಕಗಳು ಇರುತ್ತವೆ. ಸಾಧಾರಣವಾಗಿ ಅವರಿಗೆ ತಿಳಿಯದ ಮತ್ತು ಅವರು ಓದದ ಪುಸ್ತಕವೇ ಇಲ್ಲವೆಂದು ಅವರ ಸ್ನೇಹಿತರು ಹೇಳುತ್ತಾರೆ. ಸ್ನೇಹಿತರ ವಿಷಯದಲ್ಲಿ ಇವರು ಚಿಂತಿಸುತ್ತಿದ್ದಷ್ಟು ಇವರನ್ನು ಹೊಗಳಿಕೆ ಮತ್ಸರವನ್ನೂ ಹೇಳುವದಕ್ಕಾಗುವದಿಲ್ಲ. ತಮ್ಮ ಸರ್ವಸ್ವವನ್ನೂ ಅವರಿಗೋಸ್ಕರವೇ ವಿನಿಯೋಗಿಸುತಿದ್ದರೆಂದು ಕೇಳಿದ್ದೇವೆ. ಈಗ ಅವರುಗಳ ದುಃಖವನ್ನು ವರ್ಣಿಸಲು ಶಕ್ಯವಲ್ಲ. ಅವರು ಜೀವಿಸಿದ್ದ ೩೦ ವರ್ಷಗಳಲ್ಲಿ ಅವರು ಪರಹಿತ ಚಿಂತನೆಯಿಂದ ಮಾಡಿರುವ ಕೆಲಸಗಳನ್ನು ಅಲ್ಲವೆನ್ನುವವರು ಅಪರೂಪ. ಇವರ ಬ್ರಾಹ್ಮಸಕೋಶದ ಒಂದುಭಾಗವು ಈ ಕ್ಷ್ಮಾಹೋಗಿದ್ದಾಗ್ಯೂ ಅನೇಕವೇಳೆ ಆಸ್ಪತ್ರೆಯಲ್ಲಿ ದಿನಗಳನ್ನು ಕಳೆಯುತ್ತಿದ್ದಾಗ್ಯೂ ಮೊದಲು "ಹಿತಬೋಧಿನಿ" ಎಂಬ ಹೆಸರಿನ ಮಾಸಿಕಪುಸ್ತಕವನ್ನೂ, ಈಚೆಗೆ "ವಿದ್ಯಾದಾಯಿನಿ" ಎಂಬ ಮಾಸಿಕಪುಸ್ತಕವನ್ನೂ ನಡಿಸುವದರಲ್ಲಿ ಮುಖ್ಯರಾಗಿದ್ದರು. ಇವರ ಯೋಗ್ಯತೆಯನ್ನು ಗೌರ್ನಮೆಂಟಿನವರು ಪರ್ಯಾಲೋಚಿಸಿ ಇವರನ್ನು ಬಾಲಿಕಾಪಾಠಶಾಲೆಯಿಂದ ತೆಗೆದು ವಿದ್ಯಾಭ್ಯಾಸದ ಇಲಾಖೆಯಲ್ಲಿ ಟ್ರಾನ್ಸ್ಲೇಟರ್ ಎಂಬ ಒಂದು ಹೊಸ ಕೆಲಸಕ್ಕೆ ನಿರ್ಗಮನಾಡಿದರು. ಸುಬ್ಬರಾಯರು ಆ ಕೆಲಸವನ್ನು ವಹಿಸಿ ಇನ್ನೂ ೧ ತಿಂಗಳಾದರೂ ಚೆನ್ನಾಗಿ ಆಗಲಿಲ್ಲವಲ್ಲಾ ಎಂಬುದಾಗಿ ವ್ಯಸನಪಡಬೇಕಾಗಿದೆ. ಅವರು ಹುಟ್ಟಿದ್ದು ೧೮೬೩ ನೆ ಇಸವಿ. ಸತ್ತದ್ದು ೨೮ ನೆ ಅಕ್ಟೋಬರ್ ೧೮೯೩ ನೆ ಇಸವಿ. ಇವರಿಗೆ ಒಬ್ಬ ಹೆಣ್ಣು ಮಗುವೂ, ಪೂರ್ವವಯಸ್ಕಳಾದ ಹೆಂಡತಿಯೂ, ಈರ್ವರು ಸಹೋದರರೂ, ವೃದ್ಧರಾದ ತಂದೆಯೂ ಇರುವರು. ಇಂಥಾವರನ್ನು ಕಳೆದುಕೊಂಡದ್ದಕ್ಕಾಗಿ ಇವರ ಸಂಸಾರದವರ ಮತ್ತು ಸ್ನೇಹಿತರುಗಳ ದುಃಖವನ್ನು ಏನೆಂದು ಹೇಳೋಣ.

ನೋಟೀಸ.

ಮದ್ರಾಸ ಇಲಾಖೆಗೊಳಪಟ್ಟ ಬಳ್ಳಾರಿ ಜಿಲ್ಲೆಯೊಳಗಣ ಸಂಸ್ಥಾನ ಸೊಂಡೂರಲ್ಲಿ ಶ್ರೀಕಾರ್ತಿಕಸ್ವಾಮಿ ಮಹಾಸ್ಥಾನವುಂಟು. ಅಲ್ಲಿ ಇದೇ ಸಂವತ್ಸರದ ಕಾರ್ತೀಕಶುದ್ಧ ೧೫ ತಾರೀಖು ೨೩-೧೧-೯೩ ನೆ ದಿವಸ ಮಹಾಯಾತ್ರೆಯು ನೆರೆಯತಕ್ಕದ್ದಾಗಿದೆ. ಆದರೆ ಈ ಯಾತ್ರೆಗೆ ಬರಲಪೇಕ್ಷಿಸುವ ಮುಮುಕ್ಷು ಜನರ ಅನುಕೂಲತೆಯ ನಿಮಿತ್ತ ಕೆಳಗೆ ವಿವರಿಸಿದ ಮೇರೆಗೆ ಟಿಕೀಟುಗಳ ದರಗಳು ಇಡಲ್ಪಟ್ಟಿವೆ.

	ರೂಪಾಯಿ.
ಪಂಚಾಮೃತಾಭಿಷೇಕ	೨೫
ಸರ್ವಾಂಗಾಭಿಷೇಕ	೧೫
ಕ್ಷೀರಾಭಿಷೇಕ	೧೦
ಪಾದಸ್ಪರ್ಶವು	೫
ದರ್ಶನಟಿಕೀಟು	೭
೧೨ ವರ್ಷವಿಲ್ಲದ ಹುಡುಗರಿಗೆ ದರ್ಶನಟಿಕೀಟು	೧

ಕಾರ್ತೀಕಶುದ್ಧ ೧೪ ದಿವಸ ಅಭಿಷೇಕ ಮೊದಲಾದ ಟಿಕೀಟುಗಳನ್ನು ಕೊಡಲಾರಂಭವಾದೀತು ಶುದ್ಧ ೧೫ ದಿವಸ ಮಧ್ಯಕಾಲ ೭ ಘಂಟೆಗೆ ದರ್ಶನವನ್ನು ತೆಗೆದುಕೊಳ್ಳುವದಕ್ಕೆ ಆರಂಭವಾದೀತು ಈ ಟಿಕೀಟುಗಳು ಕಾರ್ತೀಕಸ್ವಾಮಿಯು ಇಟ್ಟಿದ ಮೇಲೆ ದೊರೆತಾವು ಬ್ರಾಹ್ಮಣ ಹೊರ್ತು ಇತರ ಜನರು ಯಾತ್ರೆಗೆ ನಿದ್ದಾರೆ ಅಭಿಷೇಕ ಪಾದಸ್ಪರ್ಶಗಳನ್ನು ಮಾಡಿಸತಕ್ಕದ್ದಲ್ಲ.

ಈವರ್ಷ ದೇಶಕಾಲಸುಭಿಕ್ಷವಿದೆ. ಸೊಂಡೂರು ಸಂಸ್ಥಾನಕ್ಕೆ ಬರುವದಕ್ಕೆ ಹೊಸಪೇಟೆಸ್ಟೇಷನವು ೬ ಹರದಾರಿಗಳು ಗಾದಿಗನೂರುಸ್ಟೇಷನವು ೩ ಹರದಾರಿಗಳು ತೋರಣಗಲ್ಲ ಸ್ಟೇಷನವು ೪ ಹರದಾರಿಗಳು ಈಮೇರೆಗೆ ಸೊಂಡೂರಲ್ಲಿಂದ ರೈಲ್ವೆ ಸ್ಟೇಷನಗಳುಂಟು. ಸೊಂಡೂರಲ್ಲಿಂದ ಕಾರ್ತಿಕಸ್ವಾಮಿಬೆಟ್ಟವು ೫ ಮೈಲಿ ದೂರವಿದ್ದು ಸ್ವಾಮಿಗುಡಿಗೆ ಹೋಗುವಕ್ಕೆ ಯಾತ್ರಾರ್ಥಿ ಜನರಸಲುವಾಗಿ ರೋಡುಮಾರ್ಗವು ಮಾಡಿಸಲ್ಪಟ್ಟಿದೆ. ಸ್ಟೇಷನದಿಂದ ಸೊಂಡೂರಿಗೆ ಬರುವದಕ್ಕೆ ಬಂಡಿಗಳು ದೊರೆಯುತ್ತವೆ. ಯಾತ್ರಿಕಾರರಿಗೆ ಆವಪೂತಿನ ತೊಂದರೆಯೂ ಇಲ್ಲ. ಶ್ರೀಸ್ವಾಮಿದರ್ಶನವನ್ನು ತೆಗೆದುಕೊಳ್ಳುವ ಯೋಗವು ಕಾರ್ತೀಕಶುದ್ಧ ೧೫ ದಿನವಿದ್ದು ಪಂಚೇ ೧ ದಿವಸ ೨೪ ಘಂಟೆವರೆಗುಂಟು.

ತಾ|| ೧೫-೧೦-೯೩ ಘೋರ್ಪಡೆಯವರೊಳ್
ದಿವ್ಯಾನೇಜರ

ನೋಟೀಸ್.

ಮೈಸೂರು ಷಹರಿನಲ್ಲಿ ಸಾಲಿ ಮಂಟಿಪೊಹಲಿಗೆ ಸೇರಿರುವ ಕಾಳಮ್ಮನಗುಡಿಯ ದಕ್ಷಿಣದ್ವಾರದ ವೀಥಿ ಪೂರ್ವಕ್ಕೆ ಸುಮಾರು ೧-೨ ಮನೆಗಳ ಆಚೆ ಡೋರಿನಂಬರು ಮಾಲೆ ೧೭ ಹಾಲಿನಂಬರ ೩೧ನೇ ಮನೆಯಲ್ಲಿ ವಾಸಮಾಡುತ್ತಿರುವ ಕುಂದಣದ ಉದ್ಯೋಗದ ರಿವಾಮಯ್ಯನಂಬಾತನು ಈ ಮೂಲಕ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—

ನಮ್ಮಮನೆಯ ಪಕ್ಕದಲ್ಲಿ ಪೂರ್ವಕ್ಕೆ ಜನಗಳು ತಿರುಗಾಡುವಗಲ್ಲಿ ಮತ್ತು ಪಶ್ಚಿಮ ಲಿಂಗೈಯನಮನೆ ಪಶ್ಚಿಮಕ್ಕೆ ಜನಗಳು ತಿರುಗಾಡುವಗಲ್ಲಿ ಉತ್ತರಕ್ಕೆ ಚಿಕ್ಕಚಲುವಯ್ಯನಮನೆ ದಕ್ಷಿಣಕ್ಕೆ ರಸ್ತೆ ಈ ಮಧ್ಯದಲ್ಲಿರುವ ಹಾಲಿ ಡೋರಿನಂಬರು ೩೫೧-೩೫೨ ಮನೆಗಳನ್ನು ನಾರಣಮ್ಮ ಚನ್ನಮ್ಮ ಗಂಗಮ್ಮ ಇವರುಗಳಿಗೆ ವಾಸಕ್ಕಾಗಿ ಕೊಟ್ಟಿದ್ದಮನೆಯನ್ನು ಮರಗೆಲಸದ ಅರಮನೇ ಸುಬ್ಬೈಯನಮಗ ಸುಬ್ಬಯ್ಯ ಆಥವಾ ಇವರ ಅಣ್ಣ ನಂಜುಂಡಯ್ಯ ಎಂಬವರು ಕ್ರಯ, ಭೋಗ್ಯ, ಆಧಾರ, ಮಾಡಬೇಕೆಂದು ಪ್ರಯತ್ನಮಾಡಿರುವದಾಗಿ ನಾನು ವರ್ತಮಾನ ಕೇಳುತ್ತೇನೆ. ಡಿಟೋ ಮನೆಯನ್ನು ಹಾಗೆ ಅವರಿಂದ ಪಡೆಯಲು ಇಷ್ಟಪಟ್ಟು ಸಿದ್ಧರಾಗುವಂಥವರು ನನ್ನ ಅನುಮತಿಯಿಲ್ಲದೆ ಯಾವರೀತಿಯಲ್ಲೂ ಆ ಮನೆಯನ್ನು ಪಡೆದುಕೊಳ್ಳಕೂಡದು. ಸದರಿಮನೇ ನನ್ನ ಹಕ್ಕಿಗೆ ಒಳಪಟ್ಟಿರುತ್ತೆ. ಹಾಗೆ ಬಂದಾಗ್ಯೂ ಪಡೆದುಕೊಂಡವರು ಕೋರ್ಟುಖರ್ಚಿಗೆ ಗುರಿಯಾದಾರು.

ನವರಾತ್ರಿ ವಚನಗಳು.

(ಕಳೆದ ವಾರದ ಶೇಷ.)

ವಿದ್ಯವು ಇತರ ಜಾತಿಗಳವರಲ್ಲಿ ಹುಟ್ಟುತ್ತಲಿದೆ ಬ್ರಾಹ್ಮಣರಲ್ಲಿ ಆವರಿಗಿರುವ ಲಕ್ಷ್ಯವೂ ದಿನೇದಿನೇ ಕಡಮೆಯಾಗುತ್ತಲಿದೆ ಈಗ ಇವರು ಕಾಲೋಚಿತವಾದ ಧರ್ಮವನ್ನರಿತು ನಡೆಯಕೊಳ್ಳದಿದ್ದರೆ ತಮ್ಮ ಸಂಸ್ಥಾನವನ್ನು ತಾವು ಕಾಪಾಡಿಕೊಳ್ಳಲಾರರು ಮತ್ತೊಬ್ಬರ ಮನೆಯಲ್ಲಿ ನೀರಹೊತ್ತು ಅಡಿಗೆಯನ್ನು ಮಾಡಿಸಿಕೊಂಡು ದುಡ್ಡು ಸಂಪಾದಿಸುವದರಿಂದ ಅವಮಾನವೆನ್ನುತ್ತಾರೆ ಇವರು ಕಂಡವರ ಮನೆಯ ಬಾಗಲಲ್ಲಿ ಕಾದು ಮಾನವತ್ತರಾ ಹಲ್ಲಗಿ ನುಳೆದು ಮೂರು ಕಾಸನ್ನು ಬೀದಿ ತೆಗೆದುಕೊಳ್ಳುವದಕ್ಕೆ ಹಿಂದೆಗೆಯುವದಿಲ್ಲ ಹನ್ನೆರಡು ವರ್ಷದ ಮಗನಿಗೆ ಮದುವೆಮಾಡುವದಕ್ಕೆಂದು ತಿರುಪೆ ಮಾಡುತ್ತಾರೆ ಮದುವೆ ಮಾಡುವದಕ್ಕೆ ಗತಿಯಿಲ್ಲದವನಿಗೆ ಮುಂದೆ ಗತಿಯುಂಟೆ? ಸಾಕುವದಕ್ಕೆ ಗತಿಯುಂಟೆ? ತಿರುಪೆಯಾದರೂ ಮಾಡಿ ಮದುವೆ ಮಾಡದಿದ್ದರೇನು ಕುಲ್ಕೇಹೋಗುತ್ತಿತ್ತೋ? ನಮ್ಮ ದೇಶದವರಲ್ಲಲ್ಲಾ ತಾವು ಅತ್ಯುತ್ತಮರೆಂದು ಹೇಳಿಕೊಳ್ಳುವರೇ ಹೀಗೆ ನಾಚಿಕೆ ಕೆಟ್ಟಿದ್ದರೆ ಅನ್ಯ ದೇಶದವರಿಗೆ ನಮ್ಮಲ್ಲಿ ಗೌರವ ಹ್ಯಾಗೆ ಉಂಟಾದೀತು?

೬ ಉದ್ಯೋಗಂ ಪುರುಷಲಕ್ಷಣಂ

"ಉತ್ತಮಂ ಸ್ವಾರ್ಜಿತಂ ವಿತ್ತಂ" ಎಂಬುವದರಿಂದ ಪ್ರತಿಯೊಬ್ಬನು ತನ್ನ ಜೀವನಕ್ಕೆ ತಕ್ಕಮಟ್ಟಿಗಾದರೂ ತನ್ನ ಸ್ವಂತ ಕಷ್ಟದಿಂದ ಸಂಪಾದಿಸಬೇಕು. ಜೀವನಕ್ಕೆ ಸಂಪಾದಿಸುವ ಅಗತ್ಯವಿಲ್ಲದವರು ಇತರರಿಗಾಗಿ ಕಷ್ಟಪಡಬೇಕು. ಕಳೆದುಹೋದಕಾಲವು ಹಿಂದಕ್ಕೆ ಬರಲಾರದು; ಅವಸಾನಕಾಲಬಂದಾಗ ಇನ್ನೊಂದು ಘಳಿಗೆ ಇದ್ದು ನನ್ನ ಕೆಲಸಕಾರ್ಯಗಳನ್ನೆಲ್ಲಾ ಸರಿಪಡಿಸಿಕೊಂಡು ಬರುತ್ತೇನೆಂದು ಸಾವಿನವರಿಗಾ ಕೊಟ್ಟಾಗ್ಯೂ ಅವಕಾಶ ಸಿಕ್ಕುವದಿಲ್ಲ. ಇಷ್ಟು ಅಮೂಲ್ಯವಾದ ಕಾಲವನ್ನು ವ್ಯರ್ಥವಾಗಿ ಕಳೆಯುವವರ ಎಷ್ಟು ಮೂಢರೆಂದು ಹೇಳಬೇಕು? ಕಟ್ಟವ್ಯಾಪಾರಗಳಲ್ಲಿ ಕಳೆಯುವವರು ಅವರಿಗಿಂತಲೂ ಅಧಮರು. ಉಂಡಾಡಿಪಟ್ಟಣದಲ್ಲಿ ಕೂಲಿಯವರುಕೂಡ ತಮ್ಮ ಕೆಲಸದ ಸ್ಥಳಕ್ಕೆ ನಡೆದು ಹೋದರೆ ಹೊತ್ತು ಕಳೆದು ಹೋಗುತ್ತದೆಯೆಂದು ಕುದುರೇಗಾಡಿಗಳಲ್ಲಿ ಹೋಗುವರು. ಹಾಗಿರುವದರಿಂದಲೇ ಅಲ್ಲಿ ಕೂಲಿಯವನಿಗೆ ತಿಂಗಳಿಗೆ ೫೦ ರೂಪಾಯಿ ಬಂದರೆ ಬಹಳ ಕಡಮೆಯ ಸಂಪಾದನೆಯೆಂದುಕೊಳ್ಳುವರು. ನಮ್ಮಲ್ಲಿ ವರ್ಷಕ್ಕೆ ೫೦ ರೂಪಾಯಿ ಬಂದರೆ ಸಂತೋಷಪಡುವರು. ನಮ್ಮಲ್ಲಿ ವ್ಯವಸಾಯ ಮಾಡುವಂಥಾವರೆಲ್ಲರೂ ಹೊಲ ಗದ್ದೆಗಳ ಕೆಲಸವಿಲ್ಲದಾಗ ಸುಮ್ಮನೆ ಗೋಟಿಕೆ ಹೊಗೇಸೊಪ್ಪು ಅಗಿಯುತ ಹಾಟೇ ಒಡೆಯುವದಕ್ಕೆ ಕಾತುಕೊಳ್ಳುವರು. ಅದಕ್ಕೆ ಬದಲಾಗಿ ಯಾವದಾದರೂ ಚಿಲ್ಲರೇ ಕೆಲಸಗಳನ್ನು ಕಲಿತುಕೊಂಡು ಆದರಿಂದ ಅಲ್ಪಸ್ವಲ್ಪ ದುಡ್ಡು ಸಂಪಾದಿಸಿಕೊಳ್ಳುವದಕ್ಕೆ ಪ್ರಯತ್ನ ಮಾಡಬಾರದೆ? ತಮ್ಮ ಮನೆಗಳನ್ನು ಭದ್ರಪಡಿಸಿಕೊಳ್ಳಕೂಡದೆ? ಬಟ್ಟೆಗಳನ್ನು ಒಗೆದು ಚೊಕ್ಕಟವಾಗಿಟ್ಟುಕೊಳ್ಳಬಾರದೆ? ಊರಿನಲ್ಲಿ ನೀರಿನಭಾವಿ ಯಿಲ್ಲದಿದ್ದರೆ ಎಲ್ಲರೂ ಸ್ವಲ್ಪಸ್ವಲ್ಪ ಆಗೆದರೆ ಸುಲಭವಾಗಿ ಭಾವಿಯಾಗಲಾರದೆ? ಬ್ರಾಹ್ಮಣರು ಮಧ್ಯಾಹ್ನದವರಿಗೂ ಜಪಿಸಿದವನ್ನು ನಿಮಿತ್ತಿಯಾಗಿ ಹಾಕಿಕೊಂಡು ಮಂಚವನ್ನು ತೊಳೆಯದೆ ಕೂಡಿರುವದಕ್ಕೆ ಬದಲಾಗಿ ಬೆಳಗಾದಕೂಡಲೆ ಸ್ನಾನ ಸಂಧ್ಯಾವಂದನೆಗಳನ್ನು ತೀರಿಸಿಕೊಂಡು ಕಂಡವರಮನೆಯ ಬಾಗಲಲ್ಲಿ ಹಲ್ಲಿರಿಯುವದಕ್ಕೆ ಬದಲಾಗಿ ಏನಾದರೂ ತೋಟಗದ್ದೆಯನ್ನು ಕಾದ ಬದುಕಬಾರದೆ?

ಶ್ರೀಮನ್ಮಹಾರಾಜರವರ ಸರಸ್ವತೀಪ್ರಸಾದ ಪಾಠಶಾಲೆಯ ವಿಜಯ ವತ್ಸರೀಯ ಪರೀಕ್ಷಾವೃತ್ತಾಂತ ಪ್ರವರ್ತನಪತ್ರಿಕಾ.

1. ಈ ಸಂವತ್ಸರ ವಿದ್ವತ್ಪರೀಕ್ಷೆಗೆ ಬಂದವರು 21. ಈವೈಕಿ ಋಗ್ವೇದಕ್ಕೆ ಇಬ್ಬರು, ಸಾಮವೇದಕ್ಕೆ ಮೂರು ಮಂದಿ, ಅದ್ವೈತ ವೇದಾಂತಕ್ಕೆ ಒಬ್ಬರು, ಧರ್ಮಶಾಸ್ತ್ರಕ್ಕೆ ಒಬ್ಬರು, ವ್ಯಾಕರಣಕ್ಕೆ ಆರುಮಂದಿ; ತರ್ಕಶಾಸ್ತ್ರಕ್ಕೆ ನಾಲ್ವರು; ಸಾಹಿತ್ಯಕ್ಕೆ ನಾಲ್ವರು; ಈರೀತ್ಯಾಗಿ ಉತ್ತೀರ್ಣರಾದವರು ಬಂದಿದ್ದರು ಇವರುಗಳವೈಕಿ 13 ಮಂದಿ ಇದೇ ಪಾಠಶಾಲೆಯಲ್ಲಿ ವ್ಯಾಸಂಗಮಾಡುತ್ತಾಯಿದ್ದವರಾಗಿ ಬ್ಬರು; ಧರ್ಮಾಧಿಕಾರಿ ಸುಂದರಶಾಸ್ತ್ರಿಗಳಲ್ಲಿ ವ್ಯಾಸಂಗಮಾಡುತಾಯಿದ್ದವರು ಒಬ್ಬರು; ಪಂಡಿತರತ್ನಂ ಮನ್ನಾರ್‌ಗುಡಿ ಕಸ್ತೂರಿರಂಗಾಚಾರ್ಯರಲ್ಲಿ ವ್ಯಾಸಂಗ ಮಾಡುತ್ತಾಯಿದ್ದವರು ಮೂರ್ವರು ಸ್ಥಳಾಂತರದಿಂದ ಬಂದವರಬ್ಬರು.

2. ಕಳೆದ ಸಂವತ್ಸರದಲ್ಲಿ ಹುಜೂರು ಮಾಹಾಸನ್ನಿಧಾನದಿಂದ ಅಪ್ಪಣೆಯನ್ನು ಪಡೆದು ಏರ್ಪಡಿಸಿದ ನಿಬಂಧನಪತ್ರಿಕೆಯಲ್ಲಿ ಪ್ರಕಟಿಸಿರುವಂತೆ ಈ ಸಂವತ್ಸರದಲ್ಲಿ ಪರೀಕ್ಷಿಸಲ್ಪಟ್ಟವರು ಹಿಂದಿನಂತೆ ಪುಸ್ತಕಗಳನ್ನು ನೋಡದೇನೆ ಪ್ರಶ್ನೆಗಳಿಗೆ ಲಿಖಿತಮೂಲಕವಾಗಿ ಪ್ರತ್ಯುತ್ತರಗಳನ್ನು ಕೊಟ್ಟಿರುತ್ತಾರೆ. ಆದರೆ ಇವರುಗಳ ಶಾಸ್ತ್ರಾರ್ಥವ್ಯವಹಾರಸಾಮರ್ಥ್ಯವು ಮತ್ತು ವಾಕ್ಸ್ವಾತಂತ್ರ್ಯವನ್ನು ತಿಳಿಯುವದಕ್ಕಾಗಿ ವಾಕ್ಪರೀಕ್ಷೆಯೂ ಪ್ರತ್ಯೇಕವಾಗಿ ನಡಿಸಲ್ಪಟ್ಟು ಅದರ ಫಲಸಂಖ್ಯೆಯನ್ನು ಲೇಖನಮೂಲಕ ಪರೀಕ್ಷಾಲಬ್ಧ ಫಲಸಂಖ್ಯೆಯೊಡನೆ ಸೇರಿಸಿ ಇವರುಗಳ ಅಂತರವನ್ನೂ ನಿರ್ಣಯಿಸಲ್ಪಟ್ಟಿರುತ್ತದೆ.

3. ಪರೀಕ್ಷೆಯಲ್ಲಿ ತೇರ್ಗಡೆಯಾದ ಅಂಕವನ್ನು ನಿರ್ಣಯಿಸುವದಕ್ಕಾಗಿ ಕೆಳಗೆ ವಿವರಿಸಲ್ಪಡುವ ನಿಯಮವು ಪಾಠಶಾಲೆಯ ಕಮಿಟಿಯಿಂದ ಈ ಸಂವತ್ಸರ ವ್ಯವಸ್ಥೆಮಾಡಲ್ಪಟ್ಟಿರುತ್ತದೆ. ಆ ನಿಯಮವು ಯಾವದೆಂದರೆ:—

ಪರೀಕ್ಷಾಗ್ರಂಥಗಳ ಪ್ರತಿಸಂದರಲ್ಲಿಯೂ, ಕ್ಲುಪ್ತವಾದಫಲಸಂಖ್ಯೆಯಲ್ಲಿ ನೂರಕ್ಕೆ ೫೦ಕ್ಕೆ ಕಡಮೆಯಿಲ್ಲದ ಸಂಖ್ಯೆಯನ್ನು ಪಡೆದು ಒಟ್ಟುಸಂಖ್ಯೆಯಲ್ಲಿ ೬೦ಕ್ಕೆ ಕಡಮೆಯಿಲ್ಲದ ಸಂಖ್ಯೆಯನ್ನು ಸಂಪಾದಿಸುವವರು ಎರಡನೆ ತರಗತಿಯಲ್ಲಿ ತೇರ್ಗಡೆಯಾಗುವರೆಂತಲೂ; 70ಕ್ಕೆ ಕಡಮೆಯಿಲ್ಲದ ಫಲಸಂಖ್ಯೆಯನ್ನು ಪಡೆದವರು; ಉತ್ತಮಕಕ್ಷೆಯಲ್ಲಿ ತೇರ್ಗಡೆಯಾಗುವರೆಂತಲೂ; ಉತ್ತಮ ತರಗತಿಯಲ್ಲಿ ತೇರ್ಗಡೆಯಾದವರಿಗೆ ಕ್ಲುಪ್ತವಾಗಿರುವ ದ್ರವ್ಯ ಸಂಭಾವನೆಮಾತ್ರವಲ್ಲದೆ ವಿಶೇಷ ಸನ್ಮಾನರೂಪವಾದ ಶಾಲುಜೋಡಿಯೂ ಕೊಡಲ್ಪಡುವದೆಂತಲೂ ನಿರ್ಣಯಿಸಲ್ಪಟ್ಟಿರುತ್ತದೆ.

ಮೇಲ್ಕಂಡ ನಿಯಮವನ್ನನುಸರಿಸಿ ಪರೀಕ್ಷೆಯಲ್ಲಿ ತೇರ್ಗಡೆಯಾದವರ ಹೆಸರು, ತರಗತಿಯೂ, ಬಹುಮಾನವು ಸಹ ಇದರ ಕೆಳಗೆ ಪ್ರಕಾಶಪಡಿಸಲ್ಪಟ್ಟಿರುತ್ತದೆ

ಹೆಸರು	ಪರೀಕ್ಷಾ ವಿಷಯ	ತೇರ್ಗಡೆಯಾದ ತರಗತಿ	ನಿಷ್ಕರ್ಷಿತ ಬಹುಮಾನ	ಷರಾ.
1. ಕೃಷ್ಣವಧಾನಿ	ಋಗ್ವೇದ ..	ಉತ್ತಮ ತರಗತಿ	ರೂಪಾಯಿ	
2 ಚಾಮರಾಜನಗರಂ ಸುಬ್ರಹ್ಮಣ್ಯಶಾಸ್ತ್ರಿ	ಋಗ್ವೇದ ..	ಉತ್ತಮ ತರಗತಿ	60	
3 ಸುಬ್ರಹ್ಮಣ್ಯಶ್ರೌತಿ	ಸಾಮವೇದ ..	೨ನೇ ತರಗತಿ ..	60	
4 ರಂಗಭಟ್ಟರು	ಅದ್ವೈತವೇದಾಂತ	ಉತ್ತಮ ತರಗತಿ	50	
5 ಕಾನಕಾನಹಳ್ಳಿ ನರಸಿಂಹಶಾಸ್ತ್ರಿ	ಧರ್ಮಶಾಸ್ತ್ರ ..	೨ನೇ ತರಗತಿ ..	100	
6. ಕಂಚಿ ರಂಗಸ್ವಾಮಯ್ಯಂಗಾರಿ	ತರ್ಕಶಾಸ್ತ್ರ ..	ಉತ್ತಮ ತರಗತಿ	125	
7. ಶೋಂದಾಪುರಂ ಕೃಷ್ಣಮಾಚಾರ್ಯರು	ತರ್ಕಶಾಸ್ತ್ರ ..	ಉತ್ತಮ ತರಗತಿ	150	ಶಾಲುಜೋಡಿ ಸಹಾ
8 ಶ್ರೀರಂಗಂ ಕೃಷ್ಣಮಾಚಾರ್ಯರು	ತರ್ಕಶಾಸ್ತ್ರ ..	೨ನೇ ತರಗತಿ ..	150	ಶಾಲುಜೋಡಿ ಸಹಾ
9. ಹಾವಗಡದ ಸುಬ್ಬಾಶಾಸ್ತ್ರಿ	ತರ್ಕಶಾಸ್ತ್ರ ..	೨ನೇ ತರಗತಿ ..	125	
10 ಕಾಸಿ ಸುಬ್ರಹ್ಮಣ್ಯಶಾಸ್ತ್ರಿ	ವ್ಯಾಕರಣ ..	೨ನೇ ತರಗತಿ ..	75	
11 ಕಂಚಿ ವೆಂಕಟಾಚಾರ್ಯರು	ವ್ಯಾಕರಣ ..	೨ನೇ ತರಗತಿ ..	125	
12. ಲಕ್ಷ್ಮೀನಾರಾಯಣಾಚಾರ್ಯ	ವ್ಯಾಕರಣ ..	೨ನೇ ತರಗತಿ ..	125	
13. ಹಾಸನದ ಕೇಶವಶಾಸ್ತ್ರಿ	ಸಾಹಿತ್ಯ ..	ಉತ್ತಮ ತರಗತಿ	70	
14 ಚಾಮರಾಜನಗರಂ ಶ್ರೀಕಂಠಶಾಸ್ತ್ರಿ	ಸಾಹಿತ್ಯ ..	ಉತ್ತಮ ತರಗತಿ ..	150	ಶಾಲುಜೋಡಿ ಸಹಾ
15 ವೇಲೂರುಕೋಟೆ ತಿರುನಾರಾಯಣಯ್ಯಂಗಾರಿ	ಸಾಹಿತ್ಯ ..	ಉತ್ತಮ ತರಗತಿ	150	ಶಾಲುಜೋಡಿ ಸಹಾ
			....	ಇವರು ಮತ್ತೊಂದು ಭಾಗದ ಪರೀಕ್ಷೆಯನ್ನು ಕೊಟ್ಟಬಳಿಕ ಕ್ಲುಪ್ತ ಸಂಭಾವನೆ ನಡಿಯಬೇಕಾಗಿದೆ
			1,315	

ಈರೀತಿ ೧೫ ಮಂದಿ ತೇರ್ಗಡೆಯಾಗಿರುತ್ತಾರೆ

4 ಪಾಠಶಾಲೆಯ ನಿಯಾಮಿತ ಪರೀಕ್ಷಕರಿಗೆ ಸಹಾಯಾರ್ಥವಾಗಿ ದೇಶಾಂತರದಿಂದ ಇಬ್ಬರು ಪಂಡಿತರು ಅಂದರೆ ಕುಂಭಕೋಣಂ ಸುಬ್ರಹ್ಮಣ್ಯಾಚಾರ್ಯರು, ಸುಗ್ಗಿರೆ ನಾರಾಯಣಶಾಸ್ತ್ರಿಗಳು ಇವರಿಬ್ಬರು ಆಹ್ವಾನಪತ್ರಮೂಲಕವಾಗಿ ಕರಿಸಲ್ಪಟ್ಟಿರುತ್ತಾರೆ ಇವರು ಪ್ರಸಿದ್ಧಪಂಡಿತರಾಗಿರುವದ್ದರಿಂದ ಇವರೊಬ್ಬೊಬ್ಬರಿಗೆ 100 ರೂಪಾಯಿಗಳು ಮತ್ತು ಶಾಲುಜೋಡಿಯೂ ಸಹ ಸನ್ಮಾನವಾಗಿ ಕೊಡಬೇಕೆಂದು ನಿರ್ಣಯಿಸಲ್ಪಟ್ಟಿರುತ್ತೆ

5 ಈ ಊರಲ್ಲ ರಾಯಲ್‌ಕಾಲೇಜ್, ಸದ್ವಿದ್ಯಾಪಾಠಶಾಲೆ, ಎಂಬ ಎರಡು ಪಾಠಶಾಲೆಗಳಲ್ಲಿಯೂ ಚಂಪು ಮೊದಲಾದ ಗ್ರಂಥಗಳು ವಿಶೇಷವಾಗಿ ಪಾಠ ನಡೆಯುತ್ತಾ ಇದ್ದದ್ದರಿಂದ, ಈ ಪಾಠಶಾಲೆಯಲ್ಲಿ ಆ ತರಗತಿಗಳು ಅನಾವಶ್ಯಕವೆಂದು ತೆಗೆಯಲ್ಪಟ್ಟಿದ್ದವು. ಈಚೆಗೆ ಸದರಿ ಪಾಠಶಾಲೆಗಳಲ್ಲಿ ಯೂನಿವರ್ಸಿಟಿ ಪರೀಕ್ಷೆಗೆ ಅನುಕೂಲವಾದ ಭಾಗಗಳೇ ವಿಶೇಷವಾಗಿ ಹೇಳಲ್ಪಡುವದೆಂದು ತಿಳಿಯಲ್ಪಟ್ಟದ್ದರಿಂದ ಪೂರ್ವದಂತೆಯೇ ಚಂಪು ಮತ್ತು ಕಾವ್ಯತರಗತಿಗಳನ್ನೂ ಇದಕ್ಕೆ ಸಂಬಂಧಪಟ್ಟ ಕನ್ನಡ ತರಗತಿಯನ್ನೂ ಸಹ ಈ ಕಾಲೇಜಿನಲ್ಲಿ ಇಡಬೇಕೆಂಬ ವ್ಯವಸ್ಥೆ ಮಾಡಲ್ಪಟ್ಟಿರುತ್ತದೆ

6 ಪರೀಕ್ಷಿಸಲ್ಪಡತಕ್ಕವರಿಗೆ ಪರೀಕ್ಷಾಕಾಲದಲ್ಲಿ ಪುಸ್ತಕಗಳನ್ನು ನೋಡದೇನೆ ಪರೀಕ್ಷೆ ಕೊಡಬೇಕೆಂದು ನಿಬಂಧನವು ಆಚರಣೆಯಲ್ಲಿ ಬರುವದಕ್ಕೆ ಇದೇ ಪ್ರಥಮಸಂವತ್ಸರವಾಗಿದ್ದಾಗ್ಯೂ ಈ ವಿದ್ಯಾರ್ಥಿಗಳು ಅಧಿಕಶ್ರಮದಿಂದ ವಿಶೇಷ ವ್ಯಾಸಂಗಮಾಡಿ ತೃಪ್ತಿಕರವಾಗಿ ಪ್ರತ್ಯುತ್ತರಗಳನ್ನು ಕೊಟ್ಟು ಇರುವಂತೆ ಪರೀಕ್ಷಕರು ತಿಳಿಸಿದರು. ಅದ್ದರಿಂದ ಈ ಸಂಗತಿಯನ್ನು ಮಹಾಸನ್ನಿಧಾನದಲ್ಲಿ ವಿಜ್ಞಾಪಿಸಿಕೊಳ್ಳುತ್ತೇನೆ

ಮೈಸೂರು,
೨೭ ನೇ ಅಕ್ಟೋಬರ್ ೯೩ }

ಎ. ಶ್ರೀನಿವಾಸಾಚಾರ್ಲು,
ಪಾಠಶಾಲೆಯ ಸೂಪರಿಂಟೆಂಡೆಂಟ್.

೪ ಆರೋಗ್ಯಭಾಗ್ಯವನ್ನೆಲ್ಲರೂ ಪಡೆಯಬೇಕು.

ಇದಕ್ಕೆಲ್ಲರೂ ಸಂಮತಿಸುವರು ಆದರೆ ರೋಗಗಳುಬಂದಾಗ ಅವು ತಮ್ಮ ತಪ್ಪಿನಿಂದ ಬಂದವು ಅದೃಷ್ಟವಾಗಲಿ ಮಾರಿ ಮಸಣಿ ಮುಂತಾದ ಇಲ್ಲದ ಕ್ಷುದ್ರದೈವಗಳಿಂದ ಅಲ್ಲವೆಂದು ಅನೇಕರು ನಂಬುವದಿಲ್ಲ. ನಾವು ಮಾಡಬೇಕಾದ ಉಪಾಯಗಳನ್ನೆಲ್ಲಾ ಮಾಡಿ ಆಮೇಲೆ ಅದೃಷ್ಟದ ತಲೆಯ ಮೇಲೆ ತಪ್ಪನ್ನು ಹೊರಿಸಬೇಕು. ಮನೆಗಳನ್ನು ಎತ್ತರವಾಗಿರುವ ಆರೋಗ್ಯಕರವಾದ ಸ್ಥಳಗಳಲ್ಲಿ ಕಟ್ಟಿಕೊಳ್ಳಬೇಕು. ಕಲ್ಮಷ ಪದಾರ್ಥಗಳು ಹತ್ತಿರವಿರಕೂಡದು. ಮುಚ್ಚಲು ಮೋರಿ ವಿಶಾಲವಾಗಿರಬೇಕು. ದನಗಳ ಸಗಣಿ ಗಂಜಲ ಸುತ್ತುಮುತ್ತ ನಾರುತ್ತಿರುವ ಸ್ಥಳಗಳಲ್ಲಿ ಹಂದಿಗಳಂತೆ ಬಿದ್ದುಕೊಳ್ಳುತ್ತಿದೆ ತಮ್ಮ ದನಗಳ ಗೊಬ್ಬರವಾದ ಪದಾರ್ಥಗಳನ್ನು ತಮಗೆ ಪತ್ಯಾಪಾದಿ ರಾತ್ರಿಯಲ್ಲಾ ತಮ್ಮ ಸ್ವಂತ ಮಲಮೂತ್ರವನ್ನು ಸುತ್ತುಮುತ್ತ ಹರಡಿಕೊಂಡು ಮಲಗಿಕೊಳ್ಳುವದಕ್ಕೂ ದನಗಳ ಮಧ್ಯದಲ್ಲಿ ಮಲಗಿಕೊಳ್ಳುವದಕ್ಕೂ ವ್ಯತ್ಯಾಸವೇನು ದನಗಳ ಕೊಟ್ಟಿಗೆಗೂ ಮನುಷ್ಯರಿರುವ ಮನೆಗೂ ಮಧ್ಯ ಗೋಡೆಯನ್ನು ಹಾಕಿ ಅದಕ್ಕೆ ಬೇರೆ ಬಾಗಲಿಟ್ಟುಕೊಳ್ಳಬೇಕು. ಮನೆಯೊಳಗೆ ಕಸ ಕಡ್ಡಿಯನ್ನು ಎತ್ತಿಹಾಕಿ ನಾರುವ ಪದಾರ್ಥಗಳನ್ನು ದೂರದಲ್ಲಿ ಹಾಕಿಸಿ ನಿಲ್ಲುವ [illegible] ಸ್ಥಳಗಳನ್ನು ಒಣಗಿರುವಂತೆ ಮಾಡಿಕೊಳ್ಳಬೇಕು. ಬೆಳಕು ಗಾಳಿ ಬೀಳದ ಸ್ಥಳವು [illegible] ಯಾವಾಗಲೂ ಕೆಟ್ಟದ್ದು. ಗಾಳಿಯು ನ[illegible] ಹೊಸದಾಗಿ ಶಿಸ್ತಾಗ ಅದಕ್ಕೆ ಗಾಳಿಯು ಚನ್ನಾಗಿ ತಾಗುವದಕ್ಕೆ ಮೊಂಟೆ ಮನುಷ್ಯನಿಗಿದರೆ ಸತ್ತೇಹೋಗುತ್ತಾನೆ. ಮನೆಯಲ್ಲಿಯೂ ಹಾಗೆಯೇ. ಸರಿ ಬಟ್ಟೆಗಳನ್ನು ಚೊಕ್ಕಟವಾಗಿಟ್ಟುಕೊಂಡಿರಬೇಕು. ನಾರುವ ಬಟ್ಟೆಗಳನ್ನು ಹಾಕಿಕೊಳ್ಳುವವರು ಮನುಷ್ಯರೇ ಅಲ್ಲ. ಪ್ರತಿದಿನವೂ ಮೈಯನ್ನು ಅಬಾತಿ ಕಾಪಾಡಿಯನ್ನದೆ ಸಮಸ್ತ ಜಾತಿಯವರೂ ಚೊಕ್ಕಟವಾಗಿ ತೊಳೆದುಕೊಳ್ಳಬೇಕು. ಮುಖ್ಯವಾಗಿ ಊಟ ಮನೆ ಮೈ ತಿಂಡಿ ತೀರ್ಥ ಸಮಸ್ತ ವಿಷಯಗಳಲ್ಲಿಯೂ ದುರ್ವಾಸನೆಯನ್ನು ತಿಳಿದು ಸರ್ವಪ್ರಯತ್ನದಿಂದಲೂ ನಿರ್ಮೂಲವಾಗಿ ಕಳೆದುಕೊಳ್ಳಬೇಕು. ಕಲ್ಮಷಪ್ರದೇಶಗಳಲ್ಲಿರುವ ನೀರನ್ನು ಕುಡಿಯುವದರಿಂದ ಅನೇಕ ರೋಗಗಳುಂಟಾಗುತ್ತವೆ. ಎತ್ತರವಾದ ಭೂಮಿಯಲ್ಲಿ ಆಳವಾಗಿದ್ದು ಕಲ್ಲುಕಟ್ಟಿರುವ ಸೇದುವ ಭಾವಿಗಳಲ್ಲಿ ಸಾಧಾರಣವಾಗಿ ನೀರು ಚನ್ನಾಗಿರುತ್ತವೆ. ಗ್ರಾಮಗಳಲ್ಲಿ ದನಗಳು ಕುಡಿಯುವವು ಮನುಷ್ಯರು ಮೈ ತೊಳೆಯುವರು ಬಟ್ಟೆಗಳನ್ನು ಒಗೆಯುವರು ಮುಂತಾದ ಕಾರ್ಯಗಳಿಗುಪಯೋಗಿಸುವ ಸಣ್ಣ ಕುಂಟೆಗಳ ನೀರನ್ನು ಕುಡಿಯುತ್ತಾರೆ. ಬಚ್ಚಲನೀರಿಗೂ ಇದಕ್ಕೂ ವ್ಯತ್ಯಾಸವೇ ಇರುವದಿಲ್ಲ. [illegible] ಸರ್ವ ಸಾಮಾನ್ಯವಾದ ಒಳ್ಳೇ ಭಾವಿಯಿಂದ [illegible]ದರೂ ತೆಗೆದುಕೊಳ್ಳಬೇಕು. ನಿರ್ಮಲವಿಲ್ಲದ ಪಕ್ಷದಲ್ಲಿ ಈ ನೀರನ್ನು ಕಾಯಿಸಿ ಆರಿಸಿ ಶೋಧಿಸಿಕೊಂಡು ಕುಡಿಯಬಹುದು. ಗ್ರಾಮ ಸಾರವನ್ನೆಲ್ಲಾ ದೂರವಾಗಿ ತೆಗೆದುಕೊಂಡು ಹೋಗಿ ಭೂಮಿಗೆ ಗೊಬ್ಬರಕ್ಕೆ ಉಪಯೋಗಿಸಿಕೊಳ್ಳಬೇಕು.

(ಸಶೇಷ)

೧೮೯೩ನೇ ಇಸವಿ ಅಕ್ಟೋಬರ್ ತಾ॥ ೨೩ನೇ ಸೋಮವಾರದಲ್ಲು ಮೈಸೂರಲ್ಲಿ ಸೇರಿದ ಪ್ರಜಾ ಪ್ರತಿನಿಧಿಗಳ ಸಭೆಯಲ್ಲಿ ನಡೆದ ಮೈಸೂರು ಸಂಸ್ಥಾನದ ದಿವಾನರವರ ಉಪನ್ಯಾಸ.

ಶ್ರೀಮನ್ಮಹಾರಾಜ ರಾಜಶ್ರೀ ಸಾಹೇಬ್ ಬಹದ್ದೂರವರು, ೧೧ನೇ ಸಂವತ್ಸರದ ಈ ಸಭೆಯಲ್ಲಿ, ಕಳೆದ ವರುಷದ ದವಾಖರ್ಚು ತಪ್ಸೀಲನ್ನೂ, ಕೋಶದ ಸ್ಥಿತಿಯನ್ನೂ ಮುಖ್ಯವಾದ ಇಲಾಖೆಗಳ ಆಡಳಿತದ ವಿಷಯಗಳನ್ನೂ ನಿಮಗೆ ತಿಳಿಸುವಂತೆ ಅಪ್ಪಣೆ ದಯಪಾಲಿಸಿರುತ್ತಾರೆ.

ಕಳೆದ ಸಂವತ್ಸರದಲ್ಲಿ ನಡೆದ ವಿಶೇಷ ಸಂಗತಿಗಳ ಪೈಕಿ, ಘನವನ್ನು ಹೊಂದಿದ ವೈಸ್‌ರಾಯಿ ಮತ್ತು ಗವರ್ನರ್ ಜನರಲ್ ರವರಾದ ಲಾರ್ಡ್ ಲ್ಯಾನ್ಸ್‌ಡೌನ್‌ರವರು ಸಕುಟುಂಬರಾಗಿ ಈ ದೇಶಕ್ಕೆ ದಯಮಾಡಿಸಿದ್ದನ್ನು ಮುಖ್ಯವಾದ್ದಾಗಿರುತ್ತೆ. ಆ ಕಾಲದಲ್ಲಿ ವೈಸ್‌ರಾಯಿಯವರಿಗೆ ಈ ದೇಶದ ಪ್ರಜೆಗಳೆಲ್ಲರೂ ವಿಶೇಷವಾಗಿ ತೋರಿಸಿದ ನಿಜವಾದ ಮತ್ತು ಶ್ರದ್ಧಾಪೂರ್ವಕವಾದ ರಾಜಭಕ್ತಿಯು ಶ್ರೀಮನ್ಮಹಾರಾಜರವರಿಗೆ ವಿಶೇಷವಾದ ಆನಂದವನ್ನುಂಟುಮಾಡಿತು. ವೈಸ್‌ರಾಯಿ, ಶ್ರೀಮನ್ಮಹಾರಾಜರವರು ರಾಜ್ಯಭಾರವನ್ನು ವಹಿಸಿದಂದಿನಿಂದ ಸರ್ಕಾರದವರು ನಡಿಸಿರತಕ್ಕ ಪ್ರಜಾಕ್ಷೇಮಾಭಿವೃದ್ಧಿಗೆ ಕಾರಣವಾದ ಅನೇಕ ಕಾರ್ಯಗಳನ್ನು ಕೊಂಡಾಡಿ, ಈಗ ಇಲ್ಲಿ ಸೇರಿರುವ ಸಭಿಕರು ವರ್ತಕರು ಮತ್ತು ಕೃಷಿಕರು ನಡಿಸತಕ್ಕ ಕೆಲಸಗಳ ವಿಷಯದಲ್ಲಿ ಸಂಪೂರ್ಣವಾದ ತೃಪ್ತಿಯನ್ನು ವ್ಯಕ್ತಪಡಿಸಿ, ವೈಸ್‌ರಾಯಿರವರು ಅಂತಃಕರಣ ಪೂರ್ವಕವಾಗಿ ಅಪ್ಪಣೆಕೊಟ್ಟ ಮಾತುಗಳು ನಿಮಗೆ ಜ್ಞಾಪಕದಲ್ಲಿರಬಹುದು. ರಾಜರೂ ಪ್ರಜೆಗಳೂ ಪರಸ್ಪರ ತೃಪ್ತರಾಗಿರುವ ಭಾಗದಲ್ಲಿಯೂ, "ರಾಜಾ ಪ್ರಕೃತಿರಂಜನಾತ್" ಎಂಬ ಧರ್ಮೋಕ್ತಿಯು ಶ್ರೀಮನ್ಮಹಾರಾಜರವರ ಆಳಿಕೆಯಲ್ಲಿ ಸಾರ್ಥಕವಾಗಿರುವ ಭಾಗದಲ್ಲಿಯೂ, ಮೈಸೂರು ದೇಶಕ್ಕಿಂತ ಅತಿಶಯವಾಗಿ ಭರತಖಂಡದ ಇನ್ಯಾವ ರಾಜ್ಯದಲ್ಲಿಯೂ ಪ್ರಾಯಶಃ ಇರುವದಿಲ್ಲವೆಂದು ವೈಸ್‌ರಾಯಿರವರು ದಯಮಾಡಿ ಅಪ್ಪಣೆಕೊಡಿಸಿದ ಉಕ್ತಿಗಳ ಸ್ಮರಣೆಯು ನಮ್ಮೆಲ್ಲರಿಗೂ ಕೇವಲ ಆನಂದವನ್ನುಂಟುಮಾಡತಕ್ಕದ್ದೆಂಬ ಅಂಶದಲ್ಲಿ ನಾವು ವಿಶೇಷವಾಗಿ ತಿಳಿಸತಕ್ಕ ಅವಶ್ಯವಿರುವದಿಲ್ಲ.

ಹುಟ್ಟುವಳಿ.—ಕಳೆದ ಸಂವತ್ಸರದ ಹುಟ್ಟುವಳಿಯು ಅನನ್ಯಸದೃಶವಾಗಿ ಸಮೃದ್ಧಿಯಾಗಿತ್ತು (ರೈಲ್ವೆಯು ಶಾಮಿಲು) ಎಲ್ಲಾ ಬಾಬುಗಳ ಹುಟ್ಟುವಳಿಯೂ ಅತ್ಯಲ್ಪವಾಗಿ ೧೮೩ ಲಕ್ಷ ರೂಪಾಯಿಗಳಾಯಿತು. ಈ ಮೊತ್ತ ಹಿಂದಣ ಯಾವ ಸಂವತ್ಸರದಲ್ಲಿಯೂ ಉತ್ಪತ್ತಿಯಾಗಿರಲಿಲ್ಲ. ೧೮೯೦—೯೧ನೇ ಇಸವಿಯಲ್ಲಿ ೧೬೩ ಲಕ್ಷ ರೂಪಾಯಿಗಳಿಂದ ಉದಹರಿಸಿದ ೧೮೯೫—೯೬ನೇ ಸಾಲಿನವರಿಗೂ ವಿಶೇಷವಾದ ಜಾಸ್ತಿ ಕಮ್ಮಿ ಇಲ್ಲದೆ, ಆ ಸಂವತ್ಸರದಲ್ಲಿ ಅನಾವೃಷ್ಟಿ ಪರಂಪರಾ ಕ್ಷಾಮ ಪ್ರಾರಂಭವಾಗಿ, ಆಗ ಗಾಯಿತು ಪ್ರತಿವರ್ಷದ ಹುಟ್ಟುವಳಿಯಲ್ಲಿ ಯೂ ಕೆಲಕೆಲವು ಲಕ್ಷ ರೂಪಾಯಿಗಳು ಜಾಸ್ತಿಯಾಗುತ್ತ ಬಂದು, ಕಳೆದ ಸಂವತ್ಸರವೆಂದರೆ ೧೮೯೨—೯೩ನೇ ಇಸವಿಯಲ್ಲಿ ೧೮೯೧—೯೨ನೇ ಇಸವಿಗಿಂತ ೨೩,೫೬೦ ರೂಪಾಯಿಗಳ ಮಟ್ಟಿನ ಜಾಸ್ತಿ ಹುಟ್ಟುವಳಿಯಾಗಿರುತ್ತೆ. (ಇನ್ನೇರ ಜಾಸ್ತಿ ಉತ್ಪತ್ತಿ ಕಂಡುಬಂದಿರತಕ್ಕ ಬಾಬುಗಳನ್ನು ತಪ್ಸೀಲಾಗಿ ಕಳೆದ ವಾರದಲ್ಲಿ ತಿಳಿಸಿರುತ್ತೇವೆ.)

ಮೇಲ್ಕಂಡ ಅಂಕೆಯನ್ನು ಕಂಡು ತಪ್ಪಾಗಿ ವಿಚಾರ ಮಾಡುವದಕ್ಕೆ ಮುಂಚಿತವಾಗಿ ನಿಮಗೆ ತಿಳಿಸಬೇಕಾದ್ದೇನೆಂದರೆ: ೧೮೯೧—೯೨ನೇ ಇಸವಿಯಲ್ಲಿ ೧೮೯೧ನೇ ಜುಲೈ ೧ನೇ ತಾರೀಖಿನಿಂದ ೧೮೯೨ನೇ ಜೂನ್ ವರೆಗೆ ೧೨ ತಿಂಗಳ ಲೆಕ್ಕ, ಕಾಬಿಲ ಗೋಸ್ವರ ೧೮೯೨ನೇ ಜುಲೈ ೧ನೇ ತಾರೀಖಿನಿಂದ ೧೮೯೩ನೇ ಇಸವಿ ಜೂನ್ ವರೆಗಿನ ೧೨ ತಿಂಗಳುಗಳನ್ನು ಮಟ್ಟಿಗೆ ಗಣನೆಗೆ ತೆಗೆದುಕೊಂಡು ೧೮೯೨—೯೩ನೇ ಇಸವಿಯಲ್ಲಿ ಹುಟ್ಟುವಳಿ ಬಾಬುಗಳಲ್ಲಿ ಜಾಸ್ತಿ ಕಮ್ಮಿ ಆಗಿರುವದನ್ನು ನೋಡತಕ್ಕದ್ದಾಗಿರುತ್ತೆ. ಈ ಪ್ರಕಾರವಾಗಿ ೧೨ ತಿಂಗಳುಗಳಿಗೆ ಎರಡು ಸಂವತ್ಸರಗಳನ್ನು ಹೋಲಿಸಿ ಜಮೀನ್, ಮೊಹತರ್ಫ, ಸಂಣಿ ಸ್ಟ್ಯಾಂಪ್ ಮುಂತಾದ ಬಾಬುಗಳಲ್ಲಿ ವಸೂಲಿ ಕಾಲಕ್ರಮವು ವ್ಯತ್ಯಾಸವಾಗಿದ್ದರಿಂದ ಆದಾಯ ಹೋಲಿಸಿಕೆಗೆ ಅನುಕೂಲವಾಗಿರುತ್ತೆ.

ಈ ಅನುಕ್ರಮಣಿಕೆಯೊಡನೆ ಬೇರೆ ವರುಷದ ಜಾಸ್ತಿ ಹುಟ್ಟುವಳಿಗೆ ಮುಖ್ಯಕಾರಣವಾದ ಜಮೀನ್ ಮತ್ತು ಆಬ್ಕಾರಿ ಬಾಬುಗಳ ವಿಷಯವಾಗಿ ತಪ್ಸೀಲನ್ನು ಕಾಣಿಸುತ್ತೇವೆ.

ಜಮೀನ್‌ಬಾಬು.—ಸುಮಾರು ಜಮೀನ್ ಬಾಬಿನಲ್ಲಿ ೧೬,೯೦೦೦ ರೂಪಾಯಿ ಜಾಸ್ತಿಯಾಗಿರುತ್ತೆ. ಸಾಗುವಳಿ ವಿಸ್ತೀರ್ಣವು ೧೮೯೧—೯೨ನೇ ಇಸವಿಯಲ್ಲಿ ೫,೬೮೫,೧೦೨ ಎಕರೆಗಳಾಗಿದ್ದದ್ದು ೧೮೯೨—೯೩ನೇ ಇಸವಿಯಲ್ಲಿ ೫,೮೯೧,೨೬೮ ಎಕರೆಗಳವರೆಗೆ ಹೆಚ್ಚಿದ್ದರಿಂದ ಸಾಗುವಳಿ ಜಾಸ್ತಿಯಿಂದಲೇ ಸುಮಾರು ೩ ಲಕ್ಷದವರೆಗೆ ಜಾಸ್ತಿ ಹುಟ್ಟುವಳಿಯಾಗಿರುತ್ತೆ. ೪ನೇಯ ಹೋದ ವರ್ಷದಲ್ಲಿ ಮಳೆಬೆಳೆಯು ಸರಿಯಾಗಿ ನಡೆಸಿದ್ದರಿಂದ ಆ ಸಾಲಿನ ಬಾಕಿಬಂದ ಹಣವು ಸಹಾ ಮಾಮೂಲ್ ಮೇರೆ ವಸೂಲಾದ್ದಲ್ಲದೆ, ೧೮೯೧—೯೨ನೇ ಇಸವಿಯಲ್ಲಿ ಅನಾವೃಷ್ಟಿ ಕಾರಣದಿಂದ ಮುಂದಣ ವರುಷವೆಂದರೆ ೧೮೯೨—೯೩ನೇ ಇಸವಿಯಲ್ಲಿ ವಸೂಲಿ ಆಗ ಮುಂದಿಟ್ಟಿದ್ದ ಸುಮಾರು ೩½ ಲಕ್ಷ ರೂಪಾಯಿಗಳ ಪೈಕಿ ವಿಶೇಷವಾದ ಭಾಗವು ವಸೂಲಾಗುವದಕ್ಕೆ ಅವಕಾಶವಾದ್ದರಿಂದ ಮೇಲ್ಕಂಡ ಬೇರೆ ಹುಟ್ಟುವಳಿ ಜಾಸ್ತಿಯಾಗಲು ಕಾರಣವಾಯಿತು.

ಕಳೆದ ೧೨ ಸಂವತ್ಸರಗಳಲ್ಲಿ ಸಾಗುವಳಿ ವಿಸ್ತೀರ್ಣವು ಶೇಕಡ ೫೧ ಅಂದರೆ ಸಾಲ್ ೧ಕ್ಕೆ ಶೇಕಡ ೪ರ ಪ್ರಕಾರವಾಗಿಯೂ, ಜಮೀನ್ ಕಂದಾಯದ ಹುಟ್ಟುವಳಿಯು ಶೇಕಡ ೪೧ ಅಂದರೆ ಸಾಲ್ ೧ಕ್ಕೆ ಶೇಕಡ ೩½ ಪ್ರಕಾರವಾಗಿಯೂ ಜಾಸ್ತಿಯಾಗಿರುತ್ತೆ. ಸರ್ವೆ ಸೆಟಲ್‌ಮೆಂಟ್ ಮುಖ್ಯ ಕಾರಣದಿಂದ ಹಿಂದಣ ಸಂವತ್ಸರಗಳಲ್ಲಿ ಕೆಲವು ಮಟ್ಟಿಗೆ ಜಾಸ್ತಿ ಕಾಣುವದಕ್ಕೆ ಅವಕಾಶವಾಗಿತ್ತು. ೧೮೯೨—೯೩ನೇ ಇಸವಿಯಲ್ಲಿ ಮಿಕ್ಕ ಸಂಗತಿಗಳ ಕಾರಣದಿಂದ ಸ್ವಲ್ಪ ಸ್ವಲ್ಪ ಜಾಸ್ತಿ ಕಾಣುವದು ಇಲ್ಲದೆ ಸರಕಾರಕ್ಕೆ ಬಂದ ಹಣವು ಕಡಿಮೆಯಾಗಿ ಕಾಣುವದಕ್ಕೆ ಕಾರಣವಾಯಿತು.

ಆಬ್ಕಾರಿ.—ಆಬ್ಕಾರಿ ಬಾಬಿನಲ್ಲಿ ವಿಶೇಷವಾದ ಜಾಸ್ತಿಯು ಕಂಡಿರುತ್ತೆ. ಸಾರಾಯಿ ಬಾಬಿನಲ್ಲಿ ಮಾತ್ರವೇ ೫೩,೫೩೫,೧೮೩ ರೂಪಾಯಿ ಜಾಸ್ತಿ ಹುಟ್ಟುವಳಿಯಾಗಿರುತ್ತೆ. ಈ ಪೈಕಿ ಹಿಂದಣ ಸಂವತ್ಸರದ ಬಾಕಿಗಾಗಿ ವಸೂಲಾದ ೧,೮೯,೩೪೯ ರೂಪಾಯಿ ಪಡೆದಾದದ್ದಲ್ಲಿ ಸಲ್ಲತಕ್ಕದ್ದಾಗಿ ೩,೪೯,೬೩೭ ರೂಪಾಯಿ ನಿವ್ವಳ ಜಾಸ್ತಿ ಆಗಿರುತ್ತೆ. ೧೮೯೨ನೇ ಇಸವಿ ಏಪ್ರಿಲ್ ೧ನೇ ತಾರೀಖಿನಿಂದ ಜಾರಿಗೆ ಬಂದ ಸರಾಪ್ ಬಾಬಿನ ಹೊಸದು ಲೈಸೆನ್ಸ್ ಪದ್ಧತಿಯಿಂದಲೇ ಮೇಲ್ಕಂಡ ಮೊಬಲಗು ಪೈಕಿ ವಿಶೇಷಾಂಶವು ಜಾಸ್ತಿ ಆಯಿತೆಂದು ಹೇಳಬೇಕಾಗಿದೆ. ಈ ಏರ್ಪಾಟನ್ನನುಸರಿಸಿ, ಸಾರಾಯಿ ವಿಶೇಷ ಲಾಗ್ವಡಿಲ್ಲದೆ ತಯಾರಾಗುತ್ತಾ ಗಿ ೨೦ ಡಿಗ್ರಿ ಪ್ರೂಫ್ ಸಾರಾಯಿ ಮೇಲೆ ಸರ್ಕಾರಿ ಸುಂಕ ಸರ್ವತ್ರ ಗ್ಯಾಲನ್ ೧ಕ್ಕೆ ರೂಪಾಯಿ ೩—೫—೦ ಇದ್ದದ್ದನ್ನು, ಮಲೆನಾಡಿನಲ್ಲಿ ೩—೧೨—೦ ರೂಪಾಯಿಯಂತೆಯೂ ಮೈದಾನದಲ್ಲಿ ೪ ರೂಪಾಯಿಯಂತೆಯೂ ಜಾಸ್ತಿ ಮಾಡಲು ಅನುಕೂಲವಾಯಿತು. ಅಸ್ಸೆಸರ್ ಸಾಸನ್ ಜಾಸ್ತಿ ಮಾಡಿದ್ದರಿಂದ ಮಿತವ್ಯಯ ಮಾಡತಕ್ಕವರಿಗೆ ಬಾಧ ಆಗ್ವನೇ ಇದ್ದು ಜಾಸ್ತಿಯಾಗದೆ ಸರಕಾರಕ್ಕೆ ೨ ಲಕ್ಷ ರೂಪಾಯಿಗಿಂತ ಜಾಸ್ತಿಯಾಗಿ ಹುಟ್ಟುವಳಿ ಆಯಿತು. ಬಿಡಿ ಸಾರಾಯಿ ಅಂಗಡಿಗಳ ರಹದಾರಿ ಸುಂಕದಿಂದ ೧ ಲಕ್ಷ ರೂಪಾಯಿಗಿಂತ ಜಾಸ್ತಿಯಾಗಿ ಉತ್ಪತ್ತಿ ಆಯಿತು. ಈ ಎರಡು ಕಾರಣಗಳಿಂದ ಇದುವರೆಗೆ ಸರಾಪ್ ಬಾಬು ಮತ್ತು ಟಾಡಿ ಮಂಡಿಗಳ ರಾಜ್ಯವಲ್ಲಿದ್ದವರಿಗೆ ಹೋಗುತ್ತಿದ್ದ ನಷ್ಟ ಹಣವು ಸರ್ಕಾರಕ್ಕೆ ಬಂದು, ಒಟ್ಟು ೩,೫೯,೦೦೦ ರೂಪಾಯಿ ಜಾಸ್ತಿಯಾಗಲು ಕಾರಣವಾಯಿತು. ಟಾಡಿ ಉಳಿದ ಜಾಸ್ತಿ ಅಂದರೆ ಸುಮಾರು ೧,೨೫,೦೦೦ ರೂಪಾಯಿಗಳು ಹಿಂದಣ ವರುಷಕ್ಕಿಂತ ಜಾಸ್ತಿಯಾಗಿ ವಿಕ್ರಯವಾದ ೩೭,೫೫೪ ಗ್ಯಾಲನ್‌ಗಳ ಮೇಲಿನ ಸುಂಕದಿಂದ ಆಗಿರುತ್ತೆ. ಈ ವಿಕ್ರಯ ಜಾಸ್ತಿಯು ವಿಶೇಷವಾಗಿ ಕಾರು ಮತ್ತು ಕೋಲಾರ ಡಿಸ್ಟ್ರಿಕ್ಟುಗಳಲ್ಲಿಯೂ, ಬೆಂಗಳೂರು ಮೈಸೂರ್ ಪಟ್ಟಣಗಳಲ್ಲಿಯೂ ಕಂಡುಬಂದಿರುತ್ತೆ. ಕೋಲಾರದ ಡಿಸ್ಟ್ರಿಕ್ಟಿನಲ್ಲಿ ಚಿನ್ನದ ಗಣಿ ಮುಖ್ಯವಾದ ಗಣಿಗಳವರಿಗೆ ಕಮ್ಮಿ ಮಾಡಿಲ್ಪಟ್ಟದ್ದಾಗ್ಯೂ ಭಂಗಾರದ ಗಣಿಗಳಲ್ಲಿಯೂ ಅದರ ಆಸುಪಾಸುಗಳಲ್ಲಿಯೂ ಕೂಲಿ ಜನಗಳ ಸಂಖ್ಯೆಯು ವಿಶೇಷವಾಗಿ ವೃದ್ಧಿಯಾದ್ದರಿಂದ ಹುಟ್ಟುವಳಿ ಜಾಸ್ತಿಯಾಗಲು ಕಾರಣವಾಯಿತು. ಮೈಸೂರು ಬೆಂಗಳೂರು ಪಟ್ಟಣಗಳಲ್ಲಿಯೂ ಕೂಡ ಪಟ್ಟಣ ಅಭಿವೃದ್ಧಿ ಸಂಬಂಧವಾಗಿ ನಡೆಯುತ್ತಿರುವ ಕಾಮಗಾರಿಗಳಿಗೆ ಬರುವ ಎಲ್ಲರು ಮಧ್ಯದ ವ್ಯಾಪಾರಿಗಳು ಮತ್ತು ಜನಗಳ ಸಂಖ್ಯೆಯು ಹೆಚ್ಚಿ ಸ್ವಲ್ಪಮಟ್ಟಿನ ಜಾಸ್ತಿ ಕಂಡಿರುತ್ತೆ. ಕಡೂರು ಡಿಸ್ಟ್ರಿಕ್ಟಿನ ಕಾಫಿ ಎಸ್ಟೇಟುಗಳಲ್ಲಿ ಕೆಲಸ ಮಾಡತಕ್ಕ ಜನರು ಕೃತಕವಾದ ಸಾರಾಯಿ ಮಟ್ಟು ಇಷ್ಟು ತೋರಿದ್ದರೆಂದು ತಿಳಿಯುವ ಸ್ಥಳಗಳಲ್ಲಿ ೧೯ ಮುತ ೯೫ರ ನ್ನು ಹೊಸದಾಗಿ ಇಟ್ಟಿದ್ದಾಯಿತು. ಈ ಡಿಸ್ಟ್ರಿಕ್ಟಿನಲ್ಲಿ ಹೋದ ಸಾಲಿನಲ್ಲಿ ೮,೫೦೮ ಗ್ಯಾಲನ್ ವರೆಗೆ ವಿಕ್ರಯ ಜಾಸ್ತಿಯಾಗಿರುತ್ತೆ.

ಹೆಂಡದ ಬಾಬಿನ ಹುಟ್ಟುವಳಿಯು ಪೈವಸ್ತು ಸಾಲಿನಲ್ಲಿ ೯,೨೪,೬೫೫ ರೂಪಾಯಿ ಆಗಿದ್ದದ್ದು ಹೋದ ಸಾಲಿನಲ್ಲಿ ೧೩,೨೮,೭೮೬ ರೂಪಾಯಿ ಆಗಿ, ೪,೪೯,೫೩೧ ರೂಪಾಯಿನ ಜಾಸ್ತಿಯು ಕಂಡುಬಂದಿರುತ್ತೆ. ಕಳೆದ ಸಂವತ್ಸರದ ಆದಿಭಾಗದಲ್ಲಿ ವಿಧಿಸಿರುವ ಹೊಸ ಏರ್ಪಾಟಿನ ಪ್ರಕಾರ ಸರಕಾರಕ್ಕೂ ಗುತ್ತಿಗೆದಾರರಿಗೂ ಮಧ್ಯೆ ಇದ್ದ ಜನಗಳ ಪ್ರವೇಶವನ್ನು ತಪ್ಪಿಸಿದ್ದರಿಂದಲೂ, ಮೇಲ್ಕಂಡದ್ದೇ ಜಾಸ್ತಿ ಹುಟ್ಟುವ ಯಾಯಿತು. ಆ ಏರ್ಪು ಸಂಪೂರ್ಣವಾಗಿ ತೃಪ್ತಿಕರವಾಗಿರುತ್ತೆ. ಈ ಏರ್ಪಾಟು ಪ್ರಕಾರ ಪೂರ್ವದಲ್ಲಿದ್ದ ೮ ಡಿಸ್ಟ್ರಿಕ್ಟು ಸಾಲ್ ಆಗ ವೇಗ ಬಿಡಿಯಾಗಿ ೧೨೦೦ ಕ್ಕಿಂತ ಜಾಸ್ತಿಯಾದ ಸಂಬಂಧವುಳ್ಳ ಚಿಕ್ಕಚಿಕ್ಕ ಬಾಬುಗಳನ್ನು ಮಾಡಿರುತ್ತೆ. ಆ ದಿಗ್ಯ ಪೈಸ್ಲದ ದುಕಾನ್ ಸುಮಾರು ಹೆಚ್ಚು ಇರುವದು, ಅವರಿಂದ ಕ್ರಯ ಇಲ್ಲವೆ ಏರ್ಪಾಟೂ ಉಪ್ಪಿನ ಮಾಡು ಲಾಭವಿರುವ ಎಲ್ಲದ ಕರಾರುಗಳನ್ನು ವಿಧಾನಸಭದಿಂದ ಆ ಜನರೇ ಭಾರಿ ಲಾಭದಾರರಿಗೆ ಬಿಟ್ಟಿದ್ದ ಗುತ್ತಿಗೆದಾರರನ್ನು ಯಾವದೊಂದು ತೊಂದರೆಯೂ ಇಲ್ಲದೆ ಪ್ರತಿ ಮಾಡುತ್ತಾರೆ. ಈ ರೀತಿಯಾಗಿ ಕೇಂದ್ರ ಹಣದ ಸಹಿತವಾದ ಅಬ್ಕಾರಿ ಬಾಬಿನಲ್ಲಿ ೯,೫೪,೫೫೮ ರೂಪಾಯಿ ಜಾಸ್ತಿಯಾಗಿರುತ್ತೆ.

ಫಾರೆಸ್ಟ್.—ಸಾಗವಾನಿ ಬಾಬಿನಲ್ಲಿ ಸುಮಾರು ೫೫,೦೦೦ ರೂಪಾಯಿವರೆಗೆ ಕಮ್ಮಿಯಾಗಿರುತ್ತೆ. ೧೮೯೦—೯೧ನೇ ಇಸವಿಯಲ್ಲಿ ೨,೩೪೫½ ಟನ್ ಸಾಗವಾನಿ ಹರಾಜಾಯಿತು. ೧೮೯೨—೯೩ನೇ ಇಸವಿಯಲ್ಲಿ ೧,೯೯೨½ ಟನ್‌ಗಳು ಮಾತ್ರ ಹರಾಜಾಯಿತು. ಅದರ ಟನ್ ೧ಕ್ಕೆ ಸರಾಸರಿ ೪೫—೮ ರೂಪಾಯಿ ಮೇರೆ ಅಂದರೆ ೧೮೯೦—೯೧ನೇ ಇಸವಿಗಿಂತ ೪೬,೫೪ ರೂಪಾಯಿ ಜಾಸ್ತಿಯಾಗಿ ಮಾರಾಟ ಬಂತು. ಬಾಳೆಗನೆ ಮತ್ತು ಗಂಧದ ಬಾಬಿನಲ್ಲಿಯೂ ಕೂಡ ಹಿಂದಣ ಸಾಲಿಗಿಂತ ಕಡಿಮೆಯಾಗಿ ಕಲೆಯೂ ಪ್ರದೇಶದಲ್ಲಿ ಕಮ್ಮಿಯಾದ್ದರಿಂದ ಸುಮಾರು ೯೩,೦೦೦ ರೂಪಾಯಿಗಳವರೆಗೆ ಕಮ್ಮಿ ಆಯಿತು. ಆದರೆ "ಇತರ ಫಾರೆಸ್ಟು ಬಾಬುಗಳು" ಎಂಬ ಹೆಡ್ಡಿನಲ್ಲಿ ಬಾಗಲೇ ಟೆಂಡರ್ ಬಾಬುಗಳ ಹರಾಜಿನಲ್ಲಿ ಹೆಚ್ಚು ಹುಟ್ಟುವಳಿಯಾದ್ದರಿಂದ ೩೯,೦೦೦ ರೂಪಾಯಿವರೆಗೆ ಜಾಸ್ತಿ ಬಂದಿರುತ್ತೆ. ಅಂತು ಅನೇಕ ವಿಕ್ರಯದ ಬಾಬು ಶಿವಾಯಿ ಕಳೆದ ಸಂವತ್ಸರದ ಫಾರೆಸ್ಟು ಹುಟ್ಟುವಳಿಯಲ್ಲಿ ೧೩೩,೫೦ ರೂಪಾಯಿ ಕಮ್ಮಿಯಾಗಿರುತ್ತೆ.

ಆನೆ ಬಂಗಡಿ ಬಾಬಿನ ಹುಟ್ಟುವಳಿಯು ಹಿಂದಣ ವರುಷಕ್ಕಿಂತ ೨೨,೦೦೦ ರೂಪಾಯಿ ಜಾಸ್ತಿಯಾಗಿರುತ್ತೆ. ಈ ಬಾಬಿನ ಖರ್ಚು, ಹುಟ್ಟುವಳಿಯನ್ನತಿಕ್ರಮಿಸದ ಇದ್ದದ್ದಕ್ಕೆ ಬಿಟ್ಟಿರಬಹುದೇ ಪ್ರಬಂಧ.

ಸ್ಟ್ಯಾಂಪು.—ಸಾಮಾನ್ಯವಾದ ಕಾರಣಗಳಿಂದ ವರಸೆ ಸ್ಟ್ಯಾಂಪು [illegible] ಮಟ್ಟಿಗೆ ಈ ಬಾಬಿನಲ್ಲಿ ಜಾಸ್ತಿ ಕಂಡುಬಂದಿರುತ್ತೆ.

ಮೊಹತರ್ಫ.—ಹಿಂದಣ ಸಾಲುಗಳ ಕೆಲವು ಬಾಕಿಯು ವಸೂಲಾಗಿದ್ದ ಪರಿಣಾಮ ೩೯,೫೭೦ ರೂಪಾಯಿವರೆಗೂ ಈ ಬಾಬಿನಲ್ಲಿ ಜಾಸ್ತಿಯಾಗಿರುತ್ತೆ.

ಭಂಗಾರದ ಗಣಿಗಳು.—ಭಂಗಾರದ ಗಣಿಗಳ ಉತ್ಪತ್ತಿ ಮೂಲಕ ಸರಕಾರಕ್ಕೆ ಬಂದ ರಾಜಧನದಲ್ಲಿ ೩೧,೬೩೪ ರೂಪಾಯಿಗಳು ಜಾಸ್ತಿ ಕಂಡಿರುತ್ತೆ. ೧೮೯೨ನೇ ಇಸವಿಯಲ್ಲಿ ಹಿಂದಣ ವರುಷಕ್ಕಿಂತ ಜಾಸ್ತಿಯಾಗಿ ೩೨,೮೫೪ ಔನ್ಸ್ ಅಂದರೆ ೮೧,೯೮೦ ತೊಲ ಚಿನ್ನವು ಉತ್ಪತ್ತಿಯಾಯಿತು. ಆಯಾಯ ಗಣಿಗಳ ಉತ್ಪತ್ತಿಯನ್ನು ಈ ಕೆಳಗಣ ಪಟ್ಟಿಯಲ್ಲಿ ಪ್ರಸ್ತಾಪವಾಗಿ ತೋರಿಸಿರುತ್ತೆ:—

		ರೂಪಾಯಿ
೧	ಮೈಸೂರು ಭಂಗಾರದ ಗಣಿ ಕಂಪನಿ	೧೮೯,೩೩೩
೨	ಉರಿಗಾಮು	೧೫೯,೨೮೩
೩	ನಂದಿದುರ್ಗ	೯೨,೯೮೩
೪	ಬಾಲಘಾಟು	೨೧,೮೩೩
೫	ಮೈಸೂರು ರೀಫ್ಸ್	
೬	ಛಾಂಪಿಯನ್ ರೀಫ್ಸ್	೨೦,೩೩೮
	ಜುಮ್ಲಾ	೬,೯೦,೩೯೮

ಕಲ್ಲು ಮೊಬಲಗಿನ ರೇವಣಿಗೆಳು.—ಸರಕಾರಿ ಕಲ್ಲು ಮೊಬಲಗನ್ನು ರೇವಣಿ ಇಟ್ಟಿರುವವರ ಮೇಲಿನ ಬಡ್ಡಿ ಬಾಬತ್ತು ಹುಟ್ಟುವಳಿ ಬಾಬಿನಲ್ಲಿ ೨½ ಲಕ್ಷ ರೂಪಾಯಿಗಿಂತ ಹೆಚ್ಚಾಗಿ ಕಮ್ಮಿ ಕಂಡುಬಂದಿರುತ್ತೆ. ೧೮೯೧—೯೨ನೇ ಇಸವಿಯಲ್ಲಿ ಆಸನ್ನವಾಗಿದ್ದ ಕ್ಷಾಮದನಿವಾರಣ ಖರ್ಚಿಗಾಗಿ ಬೇಕಾದ ದ್ರವ್ಯವನ್ನು ಸಿದ್ಧಪಡಿಸಿಕೊಳ್ಳಬೇಕಾದ ಆವಶ್ಯಕತೆ ಇದ್ದದ್ದರಿಂದಲೂ, ವಿಸ್ತರಿಸಿದ ಬಡಲಾಯಿಸಿದ್ದ ರೈಲ್ವೆಯಿಂದ ಅಪಾಲಿಸಿಬರೆಗೆ ಬೇಕಾದ ಹಣವನ್ನು ಒದಗಿಸಿಕೊಳ್ಳಬೇಕಾದ ಸಂಭವ ವಿದ್ದದ್ದರಿಂದಲೂ, ೨೫½ ಲಕ್ಷ ರೂಪಾಯಿ ಮುಖಬೆಲೆಯ ಕೇಕಡಾ ೪ರ ಪ್ರಕಾರದ ಬಡ್ಡಿ ಬರತಕ್ಕ ಸರಕಾರಿ ಪತ್ರಗಳನ್ನು ವಿಕ್ರಯ ಮಾಡಬೇಕಾಯಿತು. ಈ ಮೊತ್ತ ಮಾಡಿದ್ದರಲ್ಲಿ ೨,೧೦,೦೦೦ ರೂಪಾಯಿ ನಷ್ಟಬಂದಿತ್ತು. ಅದರ ಈ ಪತ್ರಗಳನ್ನು ವಿಕ್ರಯಿಸಿದ್ದರಿಂದ ೧೮೯೨—೯೩ನೇ ಇಸವಿಯಲ್ಲಿ ಬಡ್ಡಿ ದೆಸೆಯಿಂದ ಉತ್ಪತ್ತಿಯಾಗಬೇಕಾದ ಮೊಬಲಗಿನಲ್ಲಿ ಕಮ್ಮಿಯಾಗುವದಕ್ಕೆ ಕಾರಣವಾಯಿತು.

ಹುಟ್ಟುವಳಿ ಬಾಬುಗಳ ಪೈಕಿ ಮುಖ್ಯವಾದವುಗಳನ್ನು ತಪ್ಸೀಲಾಗಿ ಮೇಲೆ ತಿಳಿಸಿರುತ್ತೆ. ಒಟ್ಟು ಆದಾಯವನ್ನು ಸಂಕ್ಷೇಪವಾಗಿ ಹೇಳಿದಲ್ಲಿ, ಜಮೀನ್ ಮತ್ತು ಆಬ್ಕಾರಿ ಬಾಬುಗಳಲ್ಲಿ ೨೬½ ಲಕ್ಷ ರೂಪಾಯಿ ಜಾಸ್ತಿ ಆಯಿತು. ಭಂಗಾರದಗಣಿ ಸ್ಟ್ಯಾಂಪು ಮೊಹತರ್ಫ ಮತ್ತು ಇತರ ಬಾಬುಗಳಲ್ಲಿ ೨½ ಲಕ್ಷ ರೂಪಾಯಿ ಜಾಸ್ತಿ. ಈ ಮೇರೆ ಒಟ್ಟು ೨೮½ ಲಕ್ಷ ರೂಪಾಯಿ ಜಾಸ್ತಿ ಆದ್ದರಲ್ಲಿ ಫಾರೆಸ್ಟು ಬಾಬಿನಲ್ಲಿಯೂ ಕಲ್ಲು ಮೊಬಲಗಿನ ಮೇಲಣ ಬಡ್ಡಿ ಉತ್ಪತ್ತಿ ಬಾಬಿನಲ್ಲಿಯೂ ಸೇರಿ ಕಮ್ಮಿ ಬಂದ ೪½ ಲಕ್ಷರೂಪಾಯಿ ವಜಾ ಮಾಡಲಾಗಿ ನಿವ್ವಳವಾದ ಜಾಸ್ತಿ ೨೪½ ಲಕ್ಷ ರೂಪಾಯಿ ಆಗಿರುತ್ತೆ.

ಖರ್ಚು.—ಕಳೆದ ವರುಷದಲ್ಲಿ ಎಲ್ಲಾ ಬಾಬುಗಳಲ್ಲಿ ಸೂಮಾರು ಒಟ್ಟು ಖರ್ಚು ೧,೩೩,೩೫,೧೬೬ ರೂಪಾಯಿ ಆಯಿತು. ಹಿಂದಣ ವರುಷದಲ್ಲಿ ೧,೩೨,೧೬,೯೦೦ ರೂಪಾಯಿ ಆಗಿತ್ತು. ಮುಖ್ಯವಾಗಿ "ಮಿಲಿಟರಿ" "ಆಬ್ಕಾರಿ" "ಮರಾಮತು" ಈ ಇಲಾಖೆಗಳಲ್ಲಿ ಜಾಸ್ತಿ ಖರ್ಚು ಕಂಡುಬಂದಿರುತ್ತೆ. (ಖರ್ಚಿನ ತಪ್ಸೀಲನ್ನು ಕಳೆದ ವಾರ ತಿಳಿಸಿರುತ್ತೇವೆ.)

ಮಿಲಿಟರಿ, ಆಬ್ಕಾರಿ ಮತ್ತು ಪಬ್ಲಿಕ್ ವರ್ಕ್ಸ್ ಎಂಬ ಮೂರು ಬಾಬುಗಳಲ್ಲಿ ಮುಖ್ಯವಾಗಿ ಖರ್ಚು ಜಾಸ್ತಿಯಾಗಿರುತ್ತೆ.

ಮಿಲಿಟರಿ ಇಲಾಖೆಯಲ್ಲಿ, ಇಂಪೀರಿಯಲ್ ಸರ್ವಿಸ್ ಟ್ರೂಪ್ಸ್ ಗಳಿಂಬ ದಳವನ್ನು ಬೆಳೆಸುವದಕ್ಕೋಸ್ಕರ ಹೊಸತರದ ಬಂದೂಕು ಮತ್ತು ಜೀನು ಸಾಮಾನುಗಳ ಖರೀದಿ, ಟ್ರಾನ್ಸ್‌ಪೋರ್ಟು ಕುದುರೆಗಳ ಖರೀದಿ ಮತ್ತು ದಾಣಾಬಾಬ, ಆಯುಧಗಳ ಮರಾಮತ್ತು ಮತ್ತು ಕಾಲೇಜು ಕ್ಷೇತ್ರವಾಗಿ ತೆಗೆದುಕೊಂಡ ಉಡುಗೆಯವರೆಗಳ ಖರೀದಿ, ಇವುಗಳಗೋಸ್ಕರ ೧ ಲಕ್ಷ ರೂಪಾಯಿಗಿಂತ ಜಾಸ್ತಿಯಾಗಿ ಖರ್ಚಾಗಿರುತ್ತೆ.

ಆಬ್ಕಾರಿ ಬಾಬಿನಲ್ಲಿ, ಹೊಸದಾಗಿ ಏರ್ಪಾಟಿನ ಪ್ರಕಾರ ಷರಾಬನ್ನು ಸಾಗಿಸುವದಕ್ಕೂ ಹೆಚ್ಚು ಸಿಬ್ಬಂದಿಯವರಿಗೂ, ಬೆಂಗಳೂರಿನಲ್ಲಿರುವ ಗವರ್ನಮೆಂಟ್ ಗೋದಾಮಿನಲ್ಲಿ ಪಟ್ಟೀಕೆಲಸವು ನಡೆಯುವದಕ್ಕೆ ಆಗಬೇಕಿದ್ದ ಸಕಲ ಸಾಮಾನು ಮುಂತಾದ್ದನ್ನು ತಂದಿಟ್ಟುಕೊಳ್ಳುವದಕ್ಕೂ, ಸರಾಪು ಹೊಸದಾಗಿ ಬಂದ ಸಬಲ ಈ ಬ್ಯಾಚು ಭಟ್ಟಿಗಳಲ್ಲಿ ದಾಸ್ತಾನು ಮಾಡಿಕೊಳ್ಳುವವರಿಗೆ ಕೆಲವು ತಿಂಗಳ ಮಟ್ಟಿಗೆ ಹೆಚ್ಚಿನ ಖರೀದಿಯನ್ನು ಕೊಡಬೇಕಾಗಿ ಬಂದದ್ದರಿಂದಲೂ, ೮೩,೩೦೩ ರೂಪಾಯಿ ಜಾಸ್ತಿ ಖರ್ಚಿಗೆ ಕಾರಣವಾಯಿತು.

ಪಬ್ಲಿಕ್ ವರ್ಕ್ಸ್‌ನ ಮರಾಮತ್ತು ಇಲಾಖೆಯಲ್ಲಿ ಹಿಂದಣವರ್ಷಕ್ಕಿಂತ ೧ ೮೯,೦೦೦ ರೂಪಾಯಿ ಜಾಸ್ತಿ ಖರ್ಚಾಗಿರುತ್ತೆ. ಇದರ ಕಾರಣವನ್ನು ಮುಂದೆ ವಿವರಿಸುತ್ತೆ.

ರೈಲ್ವೆಬಾಬು ಶಿವಾಯಿ, ಕಳೆದ ಸಂವತ್ಸರದಲ್ಲಿ ೭೨,೯೮೦,೦೬೩ ರೂಪಾಯಿಗಳು ಕಲ್ಲುನಿಂತಿತ್ತೆಂಬುವದು ಮೇಲಿನ ಪಟ್ಟಿಯಿಂದ ಕಂಡುಬರುತ್ತೆ. ೧೮೯೧—೯೨ನೇ ಇಸವಿಯಲ್ಲಿ ಸಂಭವಿಸಿದ್ದ ಅನಾವೃಷ್ಟಿಯ ದೆಸೆಯಿಂದಲೂ, ವಿಸ್ತರಿಸಿದ ಬಡಲಾಯಿಸಿದ ರೈಲ್ವೆಯಿಂದಲೂ, ಆ ಸಂವತ್ಸರದಲ್ಲಿ ೩,೯೦,೦೦೦ ರೂಪಾಯಿಗಳ ಮಟ್ಟಿಗೆ ಕಲ್ಲು ನಿಂತಿತ್ತು. ಇಂಥಾ ವಿಶೇಷ ಸಂಭವವೇನೂ ಇಲ್ಲದೆ ಇದ್ದ ೧೮೯೦—೯೧ನೇ ಇಸವಿಯಲ್ಲಿ ನಿಂತಿದ್ದ ಕಲ್ಲು ೨೨,೦೦೩ ರೂಪಾಯಿಯೊಡನೆ ಕಳೆದ ಸಂವತ್ಸರದ ಕಲ್ಲನ್ನು ಹೋಲಿಸಿ ನೋಡಿದ್ದಲ್ಲಿ ೯೦,೯೦,೬೦೩ ರೂಪಾಯಿಗಳು ಜಾಸ್ತಿ ಕಂಡುಬರುತ್ತೆ. (ಸಶೇಷ)

ಆಕ್ರಮ.

[illegible] ಕೂಡಲೆ ನಮ್ಮ ಪತ್ರಿಕೆಗಳು ಸರಿಯಾಗಿ ತಲುಪುವದಿಲ್ಲವೆಂದು ಆಗಾಗ್ಯೆ ಬರೆಯುತ್ತಾರೆ. ಕೆಲವರಿಗೆ ತಲುಪುವದೇ ಇಲ್ಲವೆಂದು ಬರೆಯುತ್ತಾರೆ. ಇದರಿಂದ ಅಂಥವರ ಮೌಲ್ಯಗಳು ತಪ್ಪಿಹೋಗಬಹುದು. ಇಲ್ಲಿನ ಪೋಸ್ಟ್ ಆಫೀಸಿನಿಂದ ಬಟವಾಡೆ ಆಯಾ ಕಡೆಗಳಲ್ಲಿ ಸರಿಯಾಗಿ ಡಿಲಿವರಿ ಮಾಡದೆ ಇರಬಹುದು ಎಂಬೀ ಎರಡು ಊಹೆಗಳು ಹುಟ್ಟುತ್ತವೆ. ಪತ್ರಿಕೆಗಳು ದಾರ್ತ್ಯರಿಗೆ ಸಕಾಲಕ್ಕೆ ತಲುಪದಿದ್ದಲ್ಲಿ ಅಂಥವರು ತಮ್ಮ ಸರಿಯಾದ ವಿಳಾಸವನ್ನು ಚನ್ನಾಗಿ ಬರೆದು ತಿಳಿಸಬೇಕು. ಮತ್ತು ಪೋಸ್ಟ್ ಆಫೀಸಿನ ಪೋಸ್ಟ್‌ಮಾಸ್ಟರುಗಳು ತಮ್ಮ ತಮ್ಮ ಡಿಲಿವರಿ ಪ್ಯೂನುಗಳಿಗೆ ಸರಿಯಾಗಿ ಬಟವಾಡೆ ಮಾಡುವಂತೆ ಹುಕುಂ ಮಾಡಬೇಕು ಎಂಬದಾಗಿ ಈ ಮೂಲಕ ಅವರವರಿಗೆ ತಿಳಿಯಪಡಿಸಿರುತ್ತೇವೆ.

ಎಡಿಟರ್,
ವೃತ್ತಾಂತ ಪತ್ರಿಕೆ

ಶಾಲಿವಾಹನಶಕ ೧೮೧೫ ನೇ ವಿಜಯನಾಮ ಸಂವತ್ಸರದ ಆಶ್ವೀಜ ಬಹುಳ ನವಮಿ ಗುರುವಾರದಿಂದ ಆಶ್ವೀಜ ಬಹುಳ ಅಮಾವಾಸ್ಯೆ ಬುಧವಾರದ ವರಿಗಿನ ವಾರದ ಪಂಚಾಂಗ

೧೮೯೩ ನೇ ಇಸವಿ, ನವಂಬರ್

ತಾ	ವಾರ.	ತಿಥಿ	ಘಳಿಗೆ	ನಕ್ಷತ್ರ.	ಘಳಿಗೆ.	ತುಲಾ ಮಾಸ ತೇದಿ
2	ಗು	ನ	23-20	ಪು	1-15	19
3	ಶು *	ದ	25-2	ಪು	1-37	20
4	ಶ †	ಏ	22-44	ಮ	0-25	21
5	ರ ‡	ದ್ವಾ	21-32	ಪು	0-20	22
6	ಸೋ §	ತ್ರ	21-35	ಹ	1-36	23
7	ಮಂ	ಚ	22-39	ಚಿ	4-2	24
8	ಬು ¶	ಅ	25-37	ಸ್ವಾ	7-05	25

* ಶ್ರೀರಂಗಪಟ್ಟಣದಲ್ಲಿ ಅಷ್ಟತೀರ್ಥೋತ್ಸವ
† ಸರ್ವತ್ರಪಿಕಾದ. ‡ ಪ್ರದೋಷ
§ ನರಕಚತುರ್ದಶಿ § ನೀರುತುಂಬುವಹಬ್ಬ
¶ ಸರ್ವತ್ರದರ್ಶಾಮಾವಾಸ್ಯೆ ¶ ಕೇದಾರೇಶ್ವರವ್ರತ

ಬೇಟೆ ಧಾರಣೆ.

ದಿನಸಿ.	ಮೈಸೂರು	ಬೆಂಗಳೂರು.
	ರೂ ಆ ಪೈ.	ರೂ ಆ ಪೈ.
ಶಿಷ್ಠೀ ಅಕ್ಕಿ ಪಲ್ಲ ೧ಕ್ಕೆ	೧೨—೮—೦	೧೩—೮—೦
ಕೆಂಬೂತಿ ಅಕ್ಕಿ ಅವ್ವಲ್	೧೨—೩—೦	೧೦—೧೨—೦
ಡಿಟೋ ಅಕ್ಕಿ ದುಯಂ	೧೧—೮—೦	೧೦—೮—೦
ಆಸಂಣಿ ಅಕ್ಕಿ	೧೨—೦—೦	೧೧—೦—೦
ಸಂಣಕ್ಕಿ ಅವ್ವಲ್	೧೭—೦—೦	೧೬—೦—೦
ಡಿಟೋ ಅಕ್ಕಿ ದುಯಂ	೧೪—೮—೦	೧೨—೮—೦
ತೊಗರಿಬೇಳೆ ಪಲ್ಲ ೧ಕ್ಕೆ	೧೪—೮—೦	೧೪—೮—೦
ಡಿಟೋ ದುಯಂ ತರಪ	೧೪—೦—೦	೧೨—೮—೦
ರ್ಯಾಗಿ ಪಲ್ಲ ೧ಕ್ಕೆ	೪—೮—೦	ಗು [illegible]
ಜೋಳ	೩—೩—೦	[illegible]
ಹಲಸಂದೆ ಪಲ್ಲ ೧ಕ್ಕೆ	೧೦—೦—೦	೯—೮—೦
ಬಿಳೀ ಅವರೆ	೧೪—೮—೦	೧೨—೦—೦
ಹೆಸರು	೧೦—೮—೦	೧೦—೧೦—೦
ಉದ್ದು	೧೧—೦—೦	೧೧—೦—೦
ಕಡಲೆ	೧೨—೮—೦	೯—೧೨—೦
ಎಳ್ಳು	೧೪—೮—೦	೧೦—೮—೦
ಹುರುಳಿ	೭—೦—೦	೬—೬—೦
ಸೀಗೇಕಾಯಿ ಮಣ ೧ಕ್ಕೆ	೨—೦—೦	೨—೦—೦
ಮೆಣಸಿನಕಾಯಿ	೪—೮—೦	೪—೧೨—೦
ದುಯಂ ತರಪ	೪—೦—೦	೪—೮—೦
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ	೬—೦—೦	ಮ [illegible]
ಸಣ್ಣ ಅಚ್ಚು ,,	೫—೦—೦	[illegible]
ಒಳ್ಳೆಣ್ಣೆ ಮಣ ೧ಕ್ಕೆ	೩—೦—೦	೪—೧೪—೦
ಹರಳೆಣ್ಣೆ	೪—೧೨—೦	೪—೮—೦
ಕೊತ್ತುಂಬರಿ ಪಲ್ಲ ೧ಕ್ಕೆ	೭—೦—೦	೮—೦—೦
ಉಪ್ಪು	೧೦—೮—೦	೯—೧೨—೦
ಹುಣಸೇಹಣ್ಣು ಮಣ ೧ಕ್ಕೆ	೨—೦—೦	೧—೧೪—೦
ಹಳೇ ಹುಣಸೇಹಣ್ಣು ,,	೧—೧೫—೦	೧—೧೫—೦
ತುಪ್ಪ	೧೪—೦—೦	೧೨—೦—೦
ಸೀಮೆ ಎಣ್ಣೆ ಪೆಟ್ಟಿ ೧ಕ್ಕೆ	೬—೨—೦	೪—೧೫—೦
ತೆಂಗಿನಕಾಯಿ ೧೦೦ಕ್ಕೆ	೫—೦—೦	೪—೪—೦
ಚಿನ್ನ (ತೋಲ)		
ಕೆಂಪು	೧೬—೬—೦	೧೬—೭—೦
ಪಸುಮೆ	೧೬—೮—೦	೧೬—೧೦—೦
ಗಟ್ಟಿ	೨೬—೮—೦	೨೬—೨—೦

Mysore.—Printed and published for the Proprietor at the Wesleyan Mission Press
2/11/93.

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಸಂಪುಟ ೬ ಮೈಸೂರು—ಸನ್ ೧೮೯೯ ನೇ ಇಸವಿ ನವೆಂಬರ್ ತಾರೀಖು ೯ ನೇ ಗುರುವಾರ. ಸಂಖ್ಯೆ ೨೨

ನೋಟಿಸ್.

		ಕ್ರಯ			ಹಾಸಲು ಸಹಿತವಾಗಿ		
Campbell's.	ಕನ್ನಡ ವ್ಯಾಕರಣ ಸಾರ	೦	೨	೦	೦	೨	೬
Object Lessons.	ವಸ್ತು ಪಾಠಗಳು	೦	೧	೦	೦	೧	೬
Picture do	ಚಿತ್ರಗಳು ಸಹಿತವಾಗಿ	೦	೨	೦	೦	೨	೬
School Geography	ಭೂಗೋಳ ಶಾಸ್ತ್ರಸಾರ	೦	೬	೦	೦	೩	೧

ಈ ನಾಲ್ಕು ಪುಸ್ತಕಗಳು ಮೈಸೂರು ಸರ್ಕಾರದವರ ಆಜ್ಞೆ ಪ್ರಕಾರ ಸಕಲ ಪಾಠ ಶಾಲೆಗಳಲ್ಲಿಯೂ ಉಪಯೋಗಿಸತಕ್ಕವುಗಳು.

	ಕ್ರಯ			ಹಾಸಲು ಸಹಿತವಾಗಿ		
ಮಾರ್ಟಿನ್ ಲೂಥರ್ ಎಂಬವರ ಚರಿತ್ರೆ	೧	೧	೬	೦	೨	೦
ಸ್ತ್ರೀಯರು ಓದತಕ್ಕ ಪುಸ್ತಕ	೦	೫	೦	೦	೫	೬
ಗಣಿತ ಮಗ್ಗಿಗಳು ..	೬	೧	೦	೦	೧	೬
ಸಂಸ್ಕೃತ ಕರ್ನಾಟಕ ಭಾಷಾಮಂಜರಿ	೦	೨	೦	೦	೨	೬
ಇಂಗ್ಲೀಷು ಕನ್ನಡವು ಶಬ್ದಾವಳಿ ೧ನೇ ೨ನೇ ಭಾಗಗಳು	೦	೧	೦	೦	೧	೬
ಕಾವ್ಯಮಾಲೆ (Minor Poetical Anthology)	೦	೮	೦	೦	೮	೬
ಬಾಲವ್ಯಾಕರಣ ..	೦	೫	೦	೦	೫	೬
ಹಳಗನ್ನಡ ವ್ಯಾಕರಣ ಸೂತ್ರಗಳು	೦	೬	೦	೦	೬	೭
ಇಂಗ್ಲೀಷು ಕನ್ನಡವು ಸಂಭಾಷಣ ವಾಕ್ಯಗಳು	೦	೧೦	೦	೦	೧೦	೬
ಶಬ್ದಮಣಿ ದರ್ಪಣ ..	೧	೦	೦	೧	೪	೬
Kan. Eng. Pocket Dictionary	೧	೪	೦	೧	೫	೭
Eng. Kan. School Dictionary	೨	೧೦	೦	೨	೧೨	೬
ಬಳ್ಳೀ ತಾಯಿ ..	೦	೪	೪	೦	೪	೬
ಆತ್ಮಿಕ ದಿವ್ಯ ಯುದ್ಧ (Bunyan)	೦	೧೨	೦	೦	೧೩	೬
ಕೈವಲ್ಯ ಪದ್ಧತಿ ೧ ನೇ ಭಾಗ ೨ ಅಣ ೩ನೇ ಭಾಗ	೦	೧	೬	೦	೨	೦
ಭಕ್ತಿಸಾರ ..	೦	೧	೦	೦	೧	೬
ಸತ್ಯ ವಾಗ್ದಾನ	೦	೧	೦	೦	೧	೬

ಈ ಪುಸ್ತಕಗಳೂ ಇನ್ನೂ ಅನೇಕ ಪ್ರಯೋಜನಕರವಾದ ಪುಸ್ತಕಗಳೂ ಕೆಳಗೆ ನಮೂದಿಸಿರುವ ಸ್ಥಳಗಳಲ್ಲಿ ದೊರುಕುತ್ತವೆ.

ಬೆಂಗಳೂರು—ಪೇಟೆಗಾಟಿನ ಹತ್ತಿರವಿರುವ ಪುಸ್ತಕಶಾಲೆ

ಚಿಕ್ಕಬಳ್ಳಾಪುರ—ಲಾರ್ಡ್ ಮಿಷನ್ ರೀಡಿಂಗ್ ರೂಮ್

ತೂಮಕೂರು—ವೆಸ್ಲೆಯನ್ ಮಿಷನ್ ಬಂಗಲೆ. ಮೈಸೂರು—ವೆಸ್ಲೆಯನ್ ಮಿಷನ್ ಪ್ರೆಸ.

ನೋಟಿಸ್

ಪುಸ್ತಕಗಳು.	ಕ್ರಯ.
ಪ್ರಾಶ್ಚಾತ್ಯ ವ್ಯವಮಾಲಿಕೆ	1—8—0
ಕನ್ನಡ ಇಂಗ್ಲೀಷು ನಿಘಂಟು 1 ನೇ ದೊಡ್ಡ ತರಹ	3—0—0
„ „ 2 ನೇ ತರಹ	2—8—0
ಬಾಲಕರು ಓದುವ ಎರಡನೆ ಜ್ಞಾನೋಪದೇಶದ ಪ್ರಶ್ನೋತ್ತರಗಳು	0—1—0
ಸಭೆಯ ನಿಯಮಗಳನ್ನು ಕುರಿತದ್ದು	0—0—6
ಕಥಾ ಸಂಗ್ರಹ 1 ನೇ ಭಾಗದಿಂದ 3 ವರಿಗೆ	1—0—0
ಕಥಾ ಸಂಗ್ರಹ 4 ರಿಂದ 6 ನೇ ಭಾಗ ಹೊಸ ಭಾಷೆ	1—0—0
„ „ ದೊಡ್ಡ ತರಹ	1—8—0
ಬೋಧಕಾಸಕ್ತಿ ಪೋಷಿನಿ	0—4—0
ಸತ್ಯವೇದವನ್ನು ಕುರಿತು 2 ನೇ ಭಾಗ	0—4—0
ಪ್ರಸಂಗಿಯ ದರ್ಪಣ	0—0—6
ಇಂಗ್ಲೀಷುಭಾಷೆಯಲ್ಲಿಯೂ, ಕನ್ನಡ ಭಾಷೆಯಲ್ಲಿಯೂ, ಶಬ್ದಗಳ ವಿಭಾಗಗಳನ್ನು ವಿವರಿಸಿರುವ ನಿಘಂಟು	0—2—0
ಕನ್ನಡ ವ್ಯಾಕರಣ (ಇಂಗ್ಲೀಷಿನಲ್ಲಿ)	2—0—0
ಹಿಂದುಸ್ತಾನಿ ವ್ಯಾಕರಣ	1—0—0
ಬಾಲಬೋಧ ಸೋಪಾನವು	0—12—0
ಬಡ ಕರುಗಳ ಅಂಟುರೋಗವಿಚಾರ	0—0—6
ಕ್ರಿಸ್ತನ ಬೋಧನೆಗಳ ಸಾರಾಂಶವು	0—12—0

ಮೇಲೆ ನಮೂದಿಸಿರುವ ಪುಸ್ತಕಗಳನ್ನು ಅಪೇಕ್ಷಿಸುವವರು ಮೈಸೂರು ವೆಸ್ಲೆಯನ್ ಮಿಷನ್ ಪ್ರೆಸ್ಸಿಗೆ ಬರೆದು ತರಿಸಿಕೊಳ್ಳಬಹುದು ಅಂಚೇ ಹಾಸಲು ಬೇರೆ ಕೊಡಬೇಕು.

ವೆಸ್ಲೆಯನ್ ಮಿಷನ್ ಪ್ರೆಸ್,

ಮೈಸೂರು.

ಪ್ರಸಿದ್ಧಪತ್ರಿಕೆ

ಕಂ॥ ಸಕಲಸುಮನಸರಿಗರುಹಾವೆ | ಸುಕರದಿ ಶ್ರೀಚಾಮರಾಜ ಒಡೆಯರವಸರದಿಂ ॥ ಪ್ರಕಟಿಪವಹಭಾರತವರಕಥೆ | ವಿಕಸಿಪುದೇಪಿರಿದೆ ಕೇಳಲ್ಕನಕಾನಂದಂ ॥

ಕನ್ನಡ ಮಹಾ ಭಾ ರ ತ .

“ಶ್ರೀಕೃಷ್ಣರಾಜ ವಾಣೀವಿಲಾಸ” ಎಂಬ ಕನ್ನಡ ಮಹಾಭಾರತವು ನಮ್ಮ ಸ್ವಕೀಯ ಶ್ರೀಚಾಮುಂಡೇಶ್ವರಿ ಪ್ರೆಸಿನಲ್ಲಿ ಪ್ರಕಟನವಾಗುವದು ಯಲ್ಲರಿಗೂ ವಿಶದವಾಗಿರುವಷ್ಟು ಈಗ ಹದಿನೆಂಟು ಪರ್ವಗಳೂ ಪೂರ್ತಿಯಾಗಿ ಪೂರೈಸಿಧೆ ಅಪೇಕ್ಷಿಸುವವರು ಕೆಳಗೆ ವಿವರಿಸುವ ಕ್ರಯದವರಿಗೆ ಕ್ರಯ ಪಾವತಿಮಾಡಿ ಪಡೆಯಬಹುದು

ಆದಿಪರ್ವ ರೂ ೩, ಸಭಾಪರ್ವ ೧—೪—೦, ಅರಣ್ಯಪರ್ವ . . ವಿರಾಟಪರ್ವ ಪ್ರತಿಯೊಂದಕ್ಕೆ ೧೨ ಅಣೆ, ಡಿಟೊ ಕಿತ್ತಾನಾರಿನ ಪುಟಕ್ಕೊಂದಕ್ಕೆ ೧ ರೂ, ಉದ್ಯೋಗಪರ್ವ . . ಭೀಷ್ಮಪರ್ವ ೨ ದ್ರೋಣಪರ್ವ ೨—೮—೦, ಕರ್ಣಪರ್ವ . ಶಲ್ಯಪರ್ವ ೧—೨—೦ ಸೌಪ್ತಿಕಪರ್ವ ೬ ಅಣೆ, ಸ್ತ್ರೀಪರ್ವ ೬ ಅಣೆ, ಶಾಂತಿಪರ್ವ ರಾಜಧರ್ಮ ೨—೬—೦, ಅಪದ್ಧರ್ಮ ೮ ಅ, ಮೋಕ್ಷಧರ್ಮ ೨—೬—೦, ಅನುಶಾಸನಿಕಪರ್ವ ೩—೧೨—೦ ಅಶ್ವಮೇಧಿಕಪರ್ವ ೧—೧೨—೦, ಆಶ್ರಮವಾಸಿಕಪರ್ವ—ಮೌಸಲಪರ್ವ—ಮಹಾಪ್ರಸ್ಥಾನಪರ್ವ—ಸ್ವರ್ಗಾರೋಹಣಪರ್ವ ೧೬ ಅಣೆ, ಭಗವದ್ಗೀತೆ ೮ ಅಣೆ, ಯಯಾತಿರಾಯನ ಚರಿತ್ರೆ ೪ ಅ, ಹರಿಭಕ್ತಿಸಾರ ೬ ಪೈ, ಲೋವರಸೆಕೆಂಡರಿ ಟೆಕ್ಸ್ಟಿನ ನೋಟ್ಸು ೮ ಅಣೆ.

ಅರಣ್ಯಪರ್ವ, ಉದ್ಯೋಗಪರ್ವ, ಕರ್ಣಪರ್ವ ಈ ಮೂರು ಪರ್ವಗಳು ಗವರ್ನಮೆಂಟ್ ಬುಕಡಿಪೋವಿನಲ್ಲಿ ದೊರೆಯಬಹುದು ಮೇಲೆ ಹೇಳಲ್ಪಟ್ಟಿರುವ ಪುಸ್ತಕಗಳು ನಮ್ಮಲ್ಲಿ ಸ್ವಲ್ಪವೇ ಇರುವದರಿಂದ ಜಾಗ್ರತೆಯಾಗಿ ತರಿಸಿಕೊಳ್ಳಬಹುದು.

ಶ್ರೀಮನ್ಮಹಾರಾಜರವರಿಗೆ ಫಲಪುಷ್ಪ ಸರಬರಾಯಿ ಮಾಡುವದಕ್ಕೆ ಮುಖ್ಯನಾಗಿ ನೇಮಿಸಲ್ಪಟ್ಟ

ಎಂ. ರುದ್ರಪ್ಪ, ಅಂಡ್‌ಸನ್,

ಪ್ರೊಪ್ರೈಟರ್ಸ್, ಶ್ರೀಚಾಮುಂಡೇಶ್ವರಿ ಪ್ರೆಸ್,

ಲಾಲ್—ಬಾಗ್ ರೋಡ್, ಬೆಂಗಳೂರು

ಸನ್ ೧೮೮೯ ರಲ್ಲಿ ಸ್ಥಾಪಿಸಲ್ಪಟ್ಟದ್ದು.

ಕೆನರಾ ಅಂಡ್ ಮೈಸೂರ ಟ್ರೇಡಿಂಗ ಏಜನ್ಸೀ ಆಫೀಸ, ಮುಂಬಯಿ.

ಇವರು ತಯಾರಿಸಿರುವಂಥ—

ನೈಮಧಾತ್ರೀತೈಲ

ಕಳೆದ ಜನವರಿ ತಿಂಗಳೊಂದರಲ್ಲಿ ೪,೧೦೦ ಬಾಟ್ಲಿಗಳು ಖರ್ಚಾದವು. ಈ ತೈಲದ ಮಹತ್ವವನ್ನು ಕುರಿತು, ನಾವೀಗ ಹೆಚ್ಚಿಗೆ ವರ್ಣಿಸಲಾರೆವು—ಯಾಕಂದರೆ, ಯಾರು ಈ ತೈಲವನ್ನು ಉಪಯೋಗಿಸುತ್ತಾರೋ ಅವರಿಗೆ ಒಂದೆರಡು ದಿವಸಗಳಲ್ಲಿಯೇ ಇದರ ಅದ್ಭುತವಾದ ಗುಣವು ಸಹಜವಾಗಿ ಅನುಭವಕ್ಕೆ ಬರುವದು. ಆದಾಗ್ಯೂ ಇದರ ಮುಖ್ಯವಾದ ಉಪಯೋಗವನ್ನು ತಿಳಿಸುವದು ನಮ್ಮ ಕರ್ತವ್ಯವಾಗಿರುತ್ತದೆ.

ಈ ನಮ್ಮ “ನೈಮಧಾತ್ರೀ ತೈಲವನ್ನು” ಪ್ರತಿದಿನ ತಲೆಗೆ ಹಾಕಿಕೊಂಡರೆ ಮಿದುಳಿನಲ್ಲಿರುವ ಉಷ್ಣತೆಯನ್ನು ಪರಿಹರಿಸುವದಲ್ಲದೇ, ಕಣ್ಣಿಗೂ, ಮಿದುಳಿಗೂ ಅನುಸರಿಸಿ, ಚಿತ್ತಕ್ಕೆ ಶಾಂತತೆಯನ್ನುಂಟುಮಾಡುವದು. ಮತ್ತು ಕಣ್ಣುಗಳಿಗುಂಟಾಗುವ ಸಾಮಾನ್ಯವಾದ ವಿಕಾರಗಳನ್ನೆಲ್ಲ ಪರಿಹರಿಸುವದು. ದೃಷ್ಟಿಗೆ ತೀವ್ರತೆಯುಂಟಾಗುವದು.

ಹೆಚ್ಚಾಗಿ ಓದತಕ್ಕವರಿಗೂ, ಒಂದೇ ಸಮನಾಗಿ ಕಣ್ಣಿಟ್ಟು ಕೆಲಸ ಮಾಡತಕ್ಕ ಕಸಬುಗಾರರಿಗೂ, ಕಣ್ಣುಗಳಲ್ಲಿ ನೀರು ಸುರಿಯುವವರಿಗೂ, ಉರಿಗಣ್ಣಿನವರಿಗೂ, ಚಿತ್ತವ್ಯಗ್ರವಾದವರಿಗೂ, ಅತ್ಯಂತ ಗುಣಕಾರಿಯಾಗಿರುವದು. ಈ ತೈಲದಲ್ಲಿರುವ ಇನ್ನೊಂದು ಅಪ್ರತಿಮವಾದ ಶಕ್ತಿಯೇನಂದರೆ—ಕೂದಲುಗಳನ್ನು ನಯವಾಗಿಯೂ, ಹೊಳೆಯುವಂತೆಯೂ, ಮಾಡುವದಲ್ಲದೇ ಬೆಳವಣಿಗೆಯನ್ನು ಹೆಚ್ಚಿಸುವದು. ಕೂದಲುಗಳ ಬೇರುಗಳನ್ನು ಘಟ್ಟಿಮಾಡಿ, ಅವು ಉದುರಿಹೋಗದಂತೆ ಮಾಡುವದು

ಪ್ರತಿಯೊಂದು ಬಾಟ್ಲಿಯೊಳಗೆ ೧೬ ತೊಲೆ ತೈಲವಿರುವದರಿಂದ ಒಬ್ಬವನಿಗೆ ೨ ತಿಂಗಳು ಹಚ್ಚಿಕೊಳ್ಳಲಿಕ್ಕೆ ಸಾಕಾಗುವದು. ಬಡಬಗ್ಗರು ಸಹ ಕೊಂಡುಕೊಳ್ಳಲಿಕ್ಕನುಕೂಲವಾಗಿರಬೇಕೆಂಬದಕ್ಕಾಗಿ ಪ್ರತಿಯೊಂದು ಬಾಟ್ಲಿಗೆ ೧೦ ಅಣೆ ಕ್ರಯವಿಟ್ಟಿರುವೆವು ೧೨ ಬಾಟ್ಲಿಗಳುಳ್ಳ ೧ ಪೆಟ್ಟಿಗೆಗೆ ೬॥ ರೂಪಾಯಿ. ಪ್ರತಿಯೊಬ್ಬ ಕುಟುಂಬಿಗನೂ, ಈ ತೈಲವನ್ನು ಉಪಯೋಗಿಸುವದು ಅವಶ್ಯವಾಗಿರುತ್ತದೆ. ಮಕ್ಕಳುಮರಿಗಳಿಗೆ ಸಹ ಈ ತೈಲವು ಸುಖಾವಹವಾಗಿರುತ್ತದೆ.

ಈ ತೈಲ ಮತ್ತು ಈ ಕೆಳಗೆ ಬರೆಯುವಂಥ ಔಷಧಗಳು, ಡ್ರೆಸ್ಸು, ಮುತ್ತು, ರತ್ನ, ಬಂಗಾರ, ಬೆಳ್ಳಿ ದಮುಂತಾದ ಸಾಮಾನುಗಳನ್ನು ಪಡೆಯಲಿಚ್ಛಿಸುವವರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬೇಕು.

ಮ್ಯಾನೇಜರ್, ಕೆನರಾ ಅಂಡ ಮೈಸೂರು ಟ್ರೇಡಿಂಗ ಏಜನ್ಸಿ ಆಫೀಸ, ಮಾರ್ಕೆಟ ಪೋಸ್ಟ. ಮುಂಬಾಯಿ.

☞ ಈ ತೈಲವನ್ನು ನಮ್ಮ ವಿನಹ ಇನ್ನಾರೂ ಮಾಡಲಾರರು. ನಮ್ಮ ಹೆಸರಿನ ಗುರ್ತನ್ನು ನೋಡಿ ತೆಗೆದುಕೊಳ್ಳಬೇಕು ಬೇರೇತರದ ಎಣ್ಣೆಗಳನ್ನು ಈ ಹೆಸರನ್ನಿಟ್ಟು ಮಾರುತಿದ್ದರೆ ಜಾಗ್ರತೆ ಪಡಿರಿ !

ಔಷಧಗಳು.	ರು ಅ.	ಡ್ರೆಸ್ಸುಗಳು.	ರು. ಅ.
ನಯನಾಮೃತಭಸ್ಮ ಬಾಟ್ಲಿ ೧ ಕ್ಕೆ	೧—೬	ಮಖಮಲ್ಲಿನ ಟೊಪ್ಪಿ	೨—೮
ನಯನಾಮೃತ ಕಾಡಿಗೆ	೧—೬	ಕಾಶ್ಮೀರಿನ ಲಾಂಗಕೋಟು	೫—೦
ಕರ್ಣಸ್ರಾವನಾಶಕ ಅಪ್ರತಿಮತೈಲ	೦—೦	ಡಿಟೋ. ಅರ್ಧಾನರಿ	೪—೮
ಮಹಾನಾರಾಯಣತೈಲ	೧—೦	ಡಿಟೋ. ಷಾರ್ಟಕೋಟು (ಇಂಗ್ಲಿಷಮಾದರಿ)	೪—೬
ಪ್ರವಾಳಭಸ್ಮವು	೨—೧೨	ವಿಷ್ಣುನಾರ ಕಶ್ಮೀರಕೋಟು	೨—೮
ಪಿಪಿತವ್ರಣಹರಪಟ್ಟಿಕೆಯು	೧—೦	ಡಿಟೋ. ಅರ್ಧಾನರಿ	೨—೪
ಬಾಲಸಂಜೀವನಿಗುಟಿಕೆ	೩—೮	ಫ್ಲಾನೆಲ್ ಕಮೀಸ್	೧—೧೨
ಅಜೀರ್ಣವಾತಶ್ಲೇ	೦—೮	ಡಿಟೋ ಬನಿಯನ್	೧—೪
ಸುಗಂಧಶಾರೀರಕದಂತಚೂರ್ಣವು	೦—೪	ಟೋಪಿ (ಇಂಗ್ಲಿಷಮಾದರಿ) ಷರ್ಟ	೦—೧೨
ಕಜ್ಜಿಭಂಜಕಲೇಪವು	೦—೨		

ಅನುಕರಣೀಯ ಚಂದ್ರಕಾಂತ (ಆಯ ಕನ್ನಡಕಗಳ ಕ್ರಯ ರೂ. ೧—೩॥-೫—೩॥. ಉತ್ತಮವಾದ “ವಾಚ್” ಎಂಬ ಹೆಸರಿನ ಗಡಿಯಾರವು (೧ ವರುಷದ ಜವಾಬ್ದಾರಿಯುಳ್ಳದ್ದು) ಕ್ರಯ ರೂ. ೬.

ವೃತ್ತಾಂತ ಪತ್ರಿಕೆ.

ಚಂದಾ ನಿರ್ಣಯ .

	ರೂ ಅ. ಪೈ.
ಸ್ಥಳದವರಿಗೆ ವರ್ಷ ೧ಕ್ಕೆ ...	೧—೦—೦
ಪರಸ್ಥಳದವರಿಗೆ ವರ್ಷ ೧ಕ್ಕೆ ...	೧—೫—೦
ಬಿಡಿ ಪತ್ರಿಕೆ ೧ಕ್ಕೆ	೦—೦—೪

ಈ ಪತ್ರಿಕೆಯು ಮೈಸೂರು ರಾಜಧಾನಿಯಲ್ಲಿ ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ, ಪ್ರಕಟಿಸಲ್ಪಡುವದು. ಬಡವರು ಮೊದಲುಗೊಂಡು ಸಮಸ್ತರಿಗೂ ಸುಲಭಸಾಧ್ಯವಾಗುವಂತೆ ಈ ಪತ್ರಿಕೆಗೆ ಇಷ್ಟು ಅಲ್ಪ ಮೌಲ್ಯವನ್ನು ನಿರ್ಣಯಿಸಿರುತ್ತೇವೆ. ಈ ಪತ್ರಿಕೆಯನ್ನು ಅಪೇಕ್ಷಿಸುವವರು ಚಂದಾಹಣವನ್ನು ಯಾವಾಗ್ಯೂ ಮುಂಗಡವಾಗಿ ಕೊಡಬೇಕು.

ಎಡಿಟರ,

ವೃತ್ತಾಂತ ಪತ್ರಿಕೆ

ಟೋಪಿಗಳು!

ಟೋಪಿಗಳು!! WOOL CAPS ಟೋಪಿಗಳು!

ಹಾಸನದ ಅರ್ಫನೇಜಿನಲ್ಲಿ ತಯಾರಾಗುವಂಥ ಅಚ್ಚ ಕಂಬಳೀನೂಲಿನ ಟೋಪಿಗಳೇ (Wool Caps) ನಮ್ಮ ಆಫೀಸಿನಲ್ಲಿ ಮಾರಿಕೆಗೆ ಸಿದ್ಧನಾಗಿರುತ್ತವೆ. ಖರೀದಿ—೧ ರೂ. ೨ ಅಣೆ ಇಂದ ೧ ರೂ. ೬ ಅಣೆಗಳ ವರೆಗೂ ಬೇರೆ ಬೇರೆ ರಹಂಗಳುಂಟು. ಸ್ಥಳದವರು ಖುದ್ದು ನೋಡಿ ಪಡೆಯಬಹುದು, ಪರಸ್ಥಳದವರು ಮುಂಗಡವಾಗಿಯೇ ಹಣ ಕಳುಹಿಸಿದಲ್ಲಿ ತ್ವರ್‍ಯದಲ್ಲಿ ಭಾಂಗೀ ಮೂಲಕ ಕಳುಹಿಸುತ್ತೇವೆ. ಭಾಂಗೀ ಛಾರ್ಜ ಬೇರೇ ಕೊಡಬೇಕು. ಮೋಯಿಲಾಸದಲ್ಲಿ ಟೋಪಿಗೆ ಸಂಬಂಧವಾದದ್ದು ಎಂದು ಬರೆಯಬೇಕು.

ಮ್ಯಾನೇಜರ್,

ವೆಸ್ಲೆಯನ್ ಮಿಷನ್ ಪ್ರೆಸ್,

ಮೈಸೂರು.

ವೃತ್ತಾಂತ ಪತ್ರಿಕೆ.

೧೮೯೩ನೇ ಇಸವಿ ನವಂಬರ ತಾ|| ೯ನೇ ಗುರುವಾರ.

ಬಾಲ್ಯವಿವಾಹ.

ಕಳೆದ ೧೮೯೧ನೇ ಇಸವಿಯಲ್ಲಿ ನಡೆದ ಪ್ರಜಾಪ್ರತಿನಿಧಿಸಭೆಯಲ್ಲಿ ಸುಮಾರು ೧೩೦ ಮಂದಿ ಪ್ರತಿನಿಧಿಗಳು ಬಾಲ್ಯವಿವಾಹವನ್ನು ಸರ್ಕಾರದವರು ನಿರೋಧಿಸುವಂಥಾ ಒಂದು ಕಾನೂನು ಜಾರಿಯಲ್ಲಿ ತರಬೇಕೆಂಬದಾಗಿ ಒಂದು ಅರ್ಜಿಯನ್ನು ಬರೆದು ದಿವಾನರವರಿಗೆ ಒಪ್ಪಿಸಿದರು. ಅಲ್ಲದೆ ಸಭೆಯಲ್ಲಿಯೂ ಎದ್ದು ಎಲ್ಲರಿಗೂ ತಿಳಿಯುವಂತೆ ಬಾಲ್ಯವಿವಾಹದಿಂದುಂಟಾಗುವ ದೋಷಗಳನ್ನು ಕುರಿತು ಉಪನ್ಯಾಸ ಮಾಡಿದರು. ದಿವಾನ್ ಬಹದ್ದೂರರವರು ಪ್ರತಿನಿಧಿಗಳು ಕೊಟ್ಟ ಅರ್ಜಿಯನ್ನು ತೆಗೆದುಕೊಂಡು ಅವರು ಹೇಳಿದ ಸಂಗತಿಗಳನ್ನು ಕೇಳಿ ಈ ವಿಷಯದಲ್ಲಿ ಗವರ್ನಮೆಂಟಿನವರು ಆಲೋಚನೆ ಮಾಡತಕ್ಕದ್ದಾಗಿದೆ ಎಂದು ಹೇಳಿದರು. ಅದೇ ರೀತಿಯಾಗಿ ಕಳೆದ ೧೮೯೨ನೇ ಇಸವಿಯಲ್ಲಿ ನಡೆದ ಸಭೆಯಲ್ಲಿಯೂ ಶಿವಮೊಗ್ಗಾ ಡಿಸ್ಟ್ರಿಕ್ಟಿನಿಂದ ಬಂದಿದ್ದ ಕೆಲವು ಮಂದಿ ಪ್ರತಿನಿಧಿಗಳು ಗವರ್ನಮೆಂಟಿನವರು ತಾವು ಹಿಂದಿನ ವರ್ಷದಲ್ಲಿ ತಿಳಿಸಿದ ವಿಷಯಕ್ಕೆ ಯಾವ ಯೋಚನೆಯನ್ನೂ ಇನ್ನೂ ಮಾಡದಿರುವದು ಆಶ್ಚರ್ಯವಾಗಿದೆ ಎಂದು ಹೇಳಿದರು. ಆಗ ಗವರ್ನಮೆಂಟಿನವರು ಈ ವಿಷಯದಲ್ಲಿ ತಾವು ಪ್ರವೇಶಮಾಡತಕ್ಕದ್ದು ಸರಿಯೋ, ಸರಿಯಲ್ಲವೋ ಎಂಬದಾಗಿ ಆಲೋಚನೆ ಮಾಡುತ್ತಿರುವದಾಗಿ ಅಪ್ಪಣೆ ಕೊಡಿಸಿದರು. ಅನಂತರ ಪ್ರತಿನಿಧಿಗಳು ಶ್ರೀಶೃಂಗೇರಿಗುರುಗಳನ್ನೂ ಮತ್ತು ಪರಕಾಲಮಠದ ಗುರುಗಳನ್ನೂ ವಿಚಾರಿಸಿ ಅವರ ಮೇಲೆ ಸರ್ಕಾರಕ್ಕೂ, ಪ್ರಜೆಗಳಿಗೂ ಮತ್ತು ಮಠಾಧಿಪತಿಗಳಿಗೂ ವಿರೋಧವಾಗದಂತೆಯೂ, ಶಾಸ್ತ್ರಗಳಿಗೂ ಅನುಸಾರವಾಗಿರುವಂತೆಯೂ ಒಂದು ಕಾನೂನನ್ನು ಜಾರಿಯಲ್ಲಿ ತರುವದು ಆವಶ್ಯಕವಾದ್ದೆಂದು ಕೇಳಿಕೊಂಡರು. ತದನುಸಾರವಾಗಿ ದಿವಾನರವರು ಮಠಾಧಿಪತಿಗಳ ಮತ್ತು ಇತರ ಶಾಸ್ತ್ರಿಗಳ ಅನುಮತಿಯನ್ನು ವಿಚಾರಿಸಿದರು. ಮಠಾಧಿಪತಿಗಳು ಹುಡುಗಿಯರಿಗೆ ೧೦ ವರ್ಷಗಳೊಳಗಾಗಿ ಮತ್ತು ಹುಡುಗರಿಗೆ ೧೬ ವರ್ಷಗಳ ಮೇಲೆ ೫೦ ವರ್ಷಗಳೊಳಗಾಗಿ ವಿವಾಹವನ್ನು ಮಾಡಲು ಶಾಸ್ತ್ರೋಕ್ತವಾಗಿರುತ್ತೆಂಬದಾಗಿ ತಮ್ಮ ಅಭಿಪ್ರಾಯಗಳನ್ನು ತಿಳಿಯಪಡಿಸಿದರು. ದಿವಾನರವರು ಈ ಅಭಿಪ್ರಾಯಗಳನ್ನೇ ಕ್ರೋಢೀಕರಿಸಿ ಕೆಲವು ತಿಂಗಳುಗಳ ಕೆಳಗೆ ಒಂದು ಬಿಲ್ ತಯಾರುಮಾಡಿ ಸರ್ಕಾರಿ ಗೆಜೆಟ್ಟಿನಲ್ಲಿ ಪಬ್ಲಿಷ್ ಮಾಡಿಸಿದರು. ಇದನ್ನು ವಿದ್ವಾಂಸರೂ, ಶಾಸ್ತ್ರಿಗಳೂ, ಇತರ ದೊಡ್ಡ ಮನುಷ್ಯರೂ ಸಂಘಗಳನ್ನು ಮಾಡಿಕೊಂಡು ಚರ್ಚಿಸಿ ನಾನಾವಿಧವಾಗಿ ಬದಲಾವಣೆ ಮಾಡಬೇಕೆಂತಲೂ, ಕೆಲವರು ಇದನ್ನು ಸರ್ಕಾರದವರು ಕಾನೂನು ಮಾಡಲೇಕೂಡದೆಂತಲೂ ರೆಜೊಲ್ಯೂಷನ್‌ಗಳನ್ನು ಮಾಡಿ ಅನೇಕವಾಗಿ ರುಜುಗಳನ್ನು ಹಾಕಿಸಿ ಗವರ್ನಮೆಂಟಿಗೆ ಒಪ್ಪಿಸಿದ್ದಾರೆ. ಈ ವರ್ಷದ ಪ್ರಜಾಪ್ರತಿನಿಧಿಸಭೆಯಲ್ಲಿ ಪ್ರತಿನಿಧಿಗಳೆಲ್ಲಾ ಈ ಮಸೂದಾ ರೆಗ್ಯುಲೇಷನ್ ವಿಷಯವಾಗಿ ಬಹಳ ಚರ್ಚೆಮಾಡಿದರು. ಈ ವಿಷಯವನ್ನು ಸಭೆಯಲ್ಲಿ ಪ್ರಾರಂಭಿಸಿದವರು ಮ|| ಎಂ. ವೆಂಕಟಕೃಷ್ಣಯ್ಯನವರು. ಅವರು ಇಂಥಾ ಕಾನೂನು ಮೈಸೂರು ಸಂಸ್ಥಾನಕ್ಕೆ ಆವಶ್ಯಕವಾಗಿರುತ್ತೆಂದು ಅದಕ್ಕೆ ಸಹಕಾರಿಯಾದ ವಿಷಯಗಳನ್ನೇ ಕುರಿತು ಚರ್ಚೆಮಾಡಿದರು. ಅವರು ಹೇಳಿದ ಸಂಗತಿಗಳ ಮುಖ್ಯ ತಾತ್ಪರ್ಯವೇನೆಂದರೆ—೩೦—೪೦ ವರ್ಷಗಳ ವಯಸ್ಸಿನ ಮುದುಕರು ಚಿಕ್ಕ ಮಕ್ಕಳನ್ನು ಮದುವೆ ಮಾಡಿಕೊಳ್ಳುತ್ತಾರೆ. ಇದರಿಂದ ಅನೇಕ ದುಷ್ಕೃತ್ಯಗಳೂ, ಅನ್ಯಾಯ ಕೃತ್ಯಗಳೂ ದಿನೇ ದಿನೇ ಹೆಚ್ಚುತಲಿವೆ. ಇದನ್ನು ನಿಲ್ಲಿಸುವುದಕ್ಕಾಗಿ ಕಾನೂನು ಮಾಡಬೇಕಾದ್ದು ಅತ್ಯಾವಶ್ಯಕವಾಗಿರುತ್ತೆ. ಆಗ ಸಾಧಾರಣವಾಗಿ ವಿಧವೆಯರ, ಮುಖ್ಯವಾಗಿ ಬಾಲ್ಯ ವಿತಂತುಗಳ ಸಂಖ್ಯೆಯು ಬಹುಮಟ್ಟಿಗೆ ಕಡಮೆಯಾಗುತ್ತೆ. ವ್ಯಭಿಚಾರ, ಶಿಶುಹತ್ಯೆ, ಭ್ರೂಣಹತ್ಯೆ ಮುಂತಾದ ಅನೇಕ ಅನ್ಯಾಯಗಳು ಸಂಪೂರ್ಣವಾಗಿ ನಿಂತುಹೋಗದೆ ಇದ್ದಾಗ್ಯೂ, ತಕ್ಕ ಮಟ್ಟಿಗೆ ಕಡಮೆಯಾಗುವದರಲ್ಲಿ ಯಾವ ಸಂದೇಹವಿರಲಾರದೆಂದು ಇಲ್ಲಿ ನೆರೆದಿರುವ ಪ್ರತಿನಿಧಿಗಳೆಲ್ಲರೂ ಒಪ್ಪಿಕೊಳ್ಳುತ್ತಾರೆ. ಸತಿಗಮನ, ನರಬಲಿ ಮುಂತಾದ ದುಷ್ಟಪದ್ಧತಿಗಳನ್ನು ಇಂಡಿಯಾ ಗವರ್ನಮೆಂಟಿನವರು ನಿಲ್ಲಿಸಲಿಲ್ಲವೆ? ಪ್ರಜೆಗಳಲ್ಲಿ ಯಾವ ಆಚಾರಗಳು ಅವರಿಗೆ ಹಿಂಸೆಯನ್ನುಂಟುಮಾಡುವವುಗಳಾಗಿರುವವೋ ಅಂಥವುಗಳನ್ನು ನಿರೋಧಿಸಿ ನಿಲ್ಲಿಸುವದಕ್ಕೆ ಸರ್ಕಾರದವರಿಗೆ ಸಂಪೂರ್ಣ ಹಕ್ಕುಂಟು. ಹಾಗಿರುವದರಲ್ಲಿ ಬಾಲ್ಯವಿವಾಹವನ್ನು ನಿಲ್ಲಿಸುವದಕ್ಕೆ ಸರ್ಕಾರದವರು ಪ್ರವೇಶ ಮಾಡಕೂಡದೆಂತಲೂ ಇದು ಅವರಿಗೆ ಸರಿಯಲ್ಲವೆಂತಲೂ ಹೇಳುವದು ಯುಕ್ತವಲ್ಲ. ಪ್ರಜೆಗಳು ತಮ್ಮಲ್ಲಿ ಯಾವ ಒಳ್ಳೇ ಏರ್ಪಾಡುಗಳನ್ನೂ ಮಾಡಿಕೊಳ್ಳುವದು ಅಸಾಧ್ಯವೆಂದು ಗವರ್ನಮೆಂಟಿನವರಿಗೆ ತಿಳಿದಕೂಡಲೆ ಅವರು ಪ್ರವೇಶ ಮಾಡಲೇಬೇಕು. ಕೆಟ್ಟ ಪದ್ಧತಿಗಳನ್ನು ನಿಲ್ಲಿಸಲೇಬೇಕು. ಒಂದುವೇಳೆ ಹುಡುಗಿಗೆ ಎಂಟು ವರ್ಷಗಳಲ್ಲಿ ಮದುವೆಯಾದಾಗ್ಯೂ, ಅವಳಿಗೆ ೧೪ ತುಂಬುವದಕ್ಕಿಂತ ಮುಂಚಿತವಾಗಿ ನಿಷೇಕಪ್ರಸ್ತವು ಜರುಗಲೇಕೂಡದು. ಆಗ್ಯೆ ಹುಡುಗರಿಗೆ ಕಡೇಪಕ್ಷ ೧೮ ವರ್ಷಗಳಾಗಿರಬೇಕು. ೫೦ ವರ್ಷದವರು ೧೪ ವರ್ಷಕ್ಕೆ ಮೇಲ್ಪಟ್ಟ ವಯಸ್ಸಿನ ಸ್ತ್ರೀಯನ್ನು ಮದುವೆಮಾಡಿಕೊಳ್ಳಬೇಕೆನ್ನುವ ಕಲಮನ್ನು ತೆಗೆದುಹಾಕಬೇಕು. ಈ ಕಾನೂನಿನಲ್ಲಿ ತಪ್ಪಿತಸ್ಥರಿಗೆ ಸಜಾ ಶಿಕ್ಷೆಯಾಗಬೇಕೆಂದು ಗೊತ್ತಾಗುತ್ತೆ. ಅದನ್ನು ತೆಗೆದು ಬರೀ ಜುಲ್ಮಾನೆಯನ್ನೇ ವಿಧಿಸುವಂತೆ ನಿಬಂಧನೆ ಮಾಡಬೇಕು ಎಂಬುವದೇ. ಮ|| ಸದಾಶಿವರಾಯರು, ರೆವರೆಂಡ್ ಗಲಿಫರ್ಡ್ ಸಾಹೇಬರು, ಮ|| ಶ್ರೀನಿವಾಸರಾಯರು ಮೊದಲಾಗಿ ಸುಮಾರು ೩೦ ಮಂದಿ ಪ್ರತಿನಿಧಿಗಳು ಮ|| ವೆಂಕಟಕೃಷ್ಣಯ್ಯನವರು ತಿಳಿಸಿದ ಅಭಿಪ್ರಾಯಗಳನ್ನೇ ಅನುಮೋದಿಸಿ ಉಪನ್ಯಾಸಮಾಡಿದರು.

ಆಗ ಶಿವಮೊಗ್ಗಾ ಪ್ರಾಂತ್ಯದ ಪ್ರತಿನಿಧಿಗಳಾದ ಮ|| ನರಸಿಂಹಾಚಾರ್ಯರವರು ಈ ಕಾನೂನು ಜಾರಿಯಲ್ಲಿ ಬರಕೂಡದೆಂತಲೂ, ಇದರಿಂದ ಅನೇಕ ಜನರಿಗೆ ವ್ಯಥಾ ಹಿಂಸೆಯಾಗುತ್ತೆಂತಲೂ ಹೇಳಿದರು. ಅಲ್ಲದೆ ವಿದ್ಯಾಭ್ಯಾಸವು ಹೆಚ್ಚುತ ಹೆಚ್ಚುತ ಜನಗಳೇ ಬಾಲ್ಯವಿವಾಹವನ್ನು ಮಾಡುವದು ಬಿಡುತ್ತಾ ಬರುತ್ತಾರೆ. ಮತಸಂಬಂಧವಾದ ವಿಷಯಗಳಲ್ಲಿ ಇಂಡಿಯಾ ಗವರ್ನಮೆಂಟಿನವರೇ ಪ್ರವೇಶ ಮಾಡುತ್ತಿಲ್ಲವಾ. ಮ್ಯಾಗ್ದನ ಕೋರ್ಟ್ಟರುವಾಗ್ಯೆ ಇಂಥಾ ನೇಟಿವ್ ಸಂಸ್ಥಾನದಲ್ಲಿ ಸರ್ಕಾರದವರು ಪ್ರವೇಶಮಾಡುವದು ಸರಿಯಲ್ಲ. ಮತ್ತು ಹಾಗೆ ಪ್ರವೇಶಿಸಲು ಅವರಿಗೆ ಯಾವ ಹಕ್ಕೂ ಇರುವದಿಲ್ಲ. ಈ ಕಾನೂನು ಜಾರಿಯಲ್ಲಿ ಬರುವಾಗ್ಯೆ ವಯಸ್ಸನ್ನು ಗೊತ್ತುಮಾಡುವದೇ ಕಷ್ಟಕ್ಕೆ ಬರುತ್ತೆ. ನಿಜವಾದ ಜಾತಕಗಳನ್ನು ಸುಳ್ಳುಮಾಡುವದಕ್ಕೂ, ಸೃಷ್ಟಿನ ಜಾತಕಗಳನ್ನು ತಯಾರುಮಾಡುವದಕ್ಕೂ, ದುಷ್ಟರಾದವರು ಮಾನಿಷ್ಠರನ್ನು ಕೋರ್ಟಿಗೆ ಎಳೆಯುವದಕ್ಕೂ ನಿರಪರಾಧಿಗಳು ಸಜಾ ಅನುಭವಿಸುವದಕ್ಕೂ, ಇಲ್ಲದ ಜುಲ್ಮಾನೆಯನ್ನು ತೆರುವದಕ್ಕೂ, ಅಪರಾಧಿಗಳು ತಪ್ಪಿಸಿಕೊಳ್ಳುವದಕ್ಕೂ ಸರ್ಕಾರದವರೇ ಬಹುಮಟ್ಟಿಗೆ ಪ್ರೋತ್ಸಾಹಕೊಟ್ಟಹಾಗಾಗುತ್ತೆ. ಅನೇಕರು ಈ ಕಾನೂನಿಗೆ ಹೆದರಿಕೊಂಡು ಬ್ರಿಟಿಷ್ ರಾಜ್ಯಕ್ಕೆ ಹೋಗಿ, ಅಲ್ಲಿ ವಿವಾಹಗಳನ್ನು ನೆರವೇರಿಸಿಕೊಂಡು ಬರುವರು. ಅನೇಕರು ಈ ರಾಜ್ಯವನ್ನೇ ಬಿಟ್ಟು ಹೊರಗೆ ವಾಸಮಾಡಬೇಕಾಗಿಬರುತ್ತೆ. ಹೀಗೆ ಮಾಡಲು ಅವರಿಗೆ ಯಾವ ಅಡ್ಡಿಯೂ ಇರುವದಿಲ್ಲ ಮತ್ತು ತಾಯಿತಂದೆಗಳಿಗೆ ತಮ್ಮ ಮಕ್ಕಳಮೇಲಿನ ಪಕ್ಷೇ ಕಡಮೆಯಾಗಿ ಹೋಗುತ್ತೆ. ತಮ್ಮ ಮಕ್ಕಳನ್ನು ಅಟ್ಟಕದಲ್ಲಿಟ್ಟುಕೊಳ್ಳುವದು ದುರ್ಲಭ. ಈಗಲೇ ಹುಡುಗಿಯರಿಗೆ ತಕ್ಕ ವರಗಳು ದೊರೆಯುವದು ಕಷ್ಟ. ಈ ಕಾನೂನು ಜಾರಿಗೆ ಬಂದಮೇಲೆ ದೊರೆಯುವದು ಇನ್ನೂ ದುರ್ಲಭವಾಗುತ್ತೆ. ಈ ಕಾನೂನಿಗೆ ವಿರೋಧಾಭಿಪ್ರಾಯ ಉಳ್ಳವರು ಅನೇಕರಿರುತ್ತಾರೆ. ಸೆನ್ಸಸ್ ಎಣಿಕೆಯನ್ನು ಯಥಾರ್ಥವಾದದ್ದೆಂದು ಸರ್ಕಾರದವರೇ ಗಣನೆಯಲ್ಲಿಟ್ಟಿಲ್ಲ. ಅಂಥಾದ್ದರಲ್ಲಿ ಅವರಮೇಲೆ ಬಿದ್ದು ಕಾನೂನನ್ನು ಮಾಡಬೇಕೆಂದರೆ ಆಶ್ಚರ್ಯವಾಗಿದೆ. ಮಹಮದೀಯರಿಗೂ, ಗೋಷಾಸ್ತ್ರೀಯರಿಗೂ ಇದರಿಂದ ತೊಂದರೆಗಳೂ, ಹಿಂಸೆಗಳೂ ಬಹಳವಾಗಿ ಉಂಟಾಗಲು ಕಾರಣವಾಗುತ್ತೆ. ಆದ್ದರಿಂದ ಗವರ್ನಮೆಂಟಿನವರು ಈ ಮಸೂದೆಯನ್ನು ಕಾನೂನಾಗಿ ಜಾರಿಯಲ್ಲಿ ತರಕೂಡದು ಎಂಬದಾಗಿ ಹೇಳಿದರು.

ಮ|| ಅಂಬಳೆ ಅಣ್ಣೈಯ್ಯಪಂಡಿತರು ಸರ್ಕಾರದವರು ಇಂಥಾ ಕಾನೂನು ಮಾಡಕೂಡದೆಂತಲೂ, ಮಠಾಧಿಪತಿಗಳಿಗೂ, ಮತ್ತು ಶಾಸ್ತ್ರಿಗಳ ಸಂಘಗಳಿಗೂ ಎಂದಿನಂತೆ ಈ ವಿಷಯವನ್ನು ಒಪ್ಪಿಸಿ, ಸರ್ಕಾರದವರು ತಪ್ಪಿತಸ್ಥರಿಗೆ ಸಜಾ, ಜುಲ್ಮಾನೆಗಳನ್ನು ವಿಧಿಸುವದಕ್ಕಿಂತ, ಮಠಾಧಿಪತಿಗಳು ಅಪರಾಧಿಗಳಿಗೆ ಬಹಿಷ್ಕಾರ ಹಾಕಬೇಕೆಂದು ವಿಧಿಸಿದಲ್ಲಿ ಬಹುಸಮರ್ಪಕವಾಗಿರುತ್ತೆ ಎಂಬದಾಗಿ ಹೇಳಿದರು. ಅನಂತರ ಮತ್ತೊಬ್ಬ ಪ್ರತಿನಿಧಿಗಳು ಹೇಳಿದ್ದೇನಂದರೆ—ವೈಶ್ಯರಲ್ಲಿ ಹೆಣ್ಣನ್ನು ಸೋದರಮಾವನ ಮಗನಿಗೆ ಕೊಡುವಪದ್ಧತಿ ಉಂಟು. ಹುಡುಗಿಗೂ ಹುಡುಗನಿಗೂ ೧—೨ ತಿಂಗಳುಗಳ ವ್ಯತ್ಯಾಸವಿದ್ದರೂ ವಿವಾಹವನ್ನು ಮಾಡುತ್ತಾರೆ. ಹುಡುಗನಿಗೆ ೧೮ ವರ್ಷಗಳಿಗೆ ಮುಂಚೆ ಮದುವೆ ಮಾಡಕೂಡದೆಂದು ಕಾನೂನು ಮಾಡಿದರೆ, ಆಗ್ಗೆ ಹುಡುಗಿಗೆ ೧೭ ವರ್ಷಗಳಾಗಿ ಅವಳು ಋತುಮತಿಯಾಗುವಳು. ಇಂಥಾ ಅಸಂಬದ್ಧ ಬರುವದು. ಆದ್ದರಿಂದ ಈ ಕಾನೂನು ಜಾರಿಯಲ್ಲಿ ಬರಕೂಡದು ಎಂಬುವದೇ.

ಇವುಗಳನ್ನೆಲ್ಲಾ ನೋಡಿದರೆ ಕಾನೂನುಮಾಡಲೇ ಬಾರದೆಂದು ತೋರುತ್ತೆ. ಇದು ಶುದ್ಧ ಅನ್ಯಾಯ. ಪ್ರಜೆಗಳು ತಮ್ಮಲ್ಲಿ ಒಂದು ಒಳ್ಳೇ ಏರ್ಪಾಡನ್ನು ಮಾಡಿಕೊಳ್ಳುವವಷ್ಟು ಶಕ್ತರಾಗಿಲ್ಲ. ಸರ್ಕಾರದವರನ್ನು ಮುಂದಕ್ಕೆ ಬಿಡುವದಿಲ್ಲ. ಹಾಗಾದರೆ ಅವರಲ್ಲಿ ನಡೆಯುವ ಅಕೃತ್ಯಗಳು ಹ್ಯಾಗೆ ಹೋಗುವವು? ಇದಕ್ಕೆ ವಿರೋಧವಾಗಿರುವವರು ವಿದ್ಯೆಯು ಜನರಲ್ಲಿ ಹೆಚ್ಚಾದ ಹಾಗೆಲ್ಲಾ ಬಾಲ್ಯವಿವಾಹವು ಕಡಮೆಯಾಗುತ್ತೆಂದು ವಾದಿಸಬಹುದು. ಈಗ ವಿದ್ಯಾವಂತರಾಗಿಂತಕ್ಕವರೇ ಪ್ರತಿನಿಧಿಸಭೆಯಲ್ಲಿ ಬಂದು ನಿಂತು ಈ ಕಾನೂನು ಆವಶ್ಯಕವಿಲ್ಲವೆಂದು ಹೇಳುತ್ತಿರುವಾಗ ವಿದ್ಯೆ ಹೆಚ್ಚಿದರೆ ಬಾಲ್ಯವಿವಾಹ ಕಡಮೆಯಾಗುತ್ತೆಂದು ಹ್ಯಾಗೆ ಹೇಳುವದಕ್ಕಾದೀತು! ಈಗಿನ ಬಾಲಕರು ತಮಗೆ ಚಿಕ್ಕವಯಸ್ಸಿನಲ್ಲಿ ಮದುವೆಯಾಗುವದನ್ನು ಅಪೇಕ್ಷಿಸುವದಿಲ್ಲ. ಯಾಕೆಂದರೆ ತಮ್ಮ ಚಿಕ್ಕವಯಸ್ಸಿನಲ್ಲೇ ಸಂಸಾರವು ತಲೆಯ ಮೇಲೆ ಬೀಳುತ್ತದಲ್ಲಾ ಎಂದು ಹೆದರುತ್ತಾರೆ. ಆದರೆ ಈ ಹೆದರಿಕೆಯೇ ಅವರನ್ನು ಅಡ್ಡಮಾಡಿದ್ದೇ ಹೊರ್ತು ಬಾಲಕಿಯರ ಈಗಿನ ದುಸ್ಥಿತಿಯನ್ನು ಕುರಿತು ಮರುಗಿ ಅಪೇಕ್ಷಿಸುವದಿಲ್ಲ. ದೊಡ್ಡ ಶಾಸ್ತ್ರಿಗಳೂ, ಬಾರಿಸ್ಟರು ವಕೀಲರೂ, ಇತರ ವಿದ್ಯಾವಂತರಾದ ದೊಡ್ಡಮನುಷ್ಯರೂ ಈ ಕಾನೂನಿಗೆ ವಿರೋಧಿಗಳಾಗಿರುವಲ್ಲಿ ವಿದ್ಯೆಯು ಹೆಚ್ಚಿದ ಹಾಗೆಲ್ಲಾ ವಿರೋಧಿಗಳೂ ಹೆಚ್ಚುವರೇ ವಿನಹಾ ಮತ್ತೇನೂ ಅಲ್ಲವು. ಆದ್ದರಿಂದ ವಿದ್ಯೆ ಹೆಚ್ಚಿದರೂ, ಇದ್ದಸ್ಥಿತಿಯಲ್ಲೇ ಇದ್ದರೂ ದುರಾಚಾರಗಳು ಕಡಮೆಯಾಗದ್ದರಿಂದ ಈ ಕಾನೂನು ಅತ್ಯಾವಶ್ಯಕವೆಂದು ಹೇಳಬೇಕಾಗಿದೆ.

ಮತಸಂಬಂಧವಾದ ವಿಷಯಗಳಿಗೆ ಸರ್ಕಾರದವರು ಪ್ರವೇಶಮಾಡಕೂಡದೆಂದು ಈ ಕಾನೂನಿನ ವಿರೋಧಿಗಳು ವಾದಿಸುತ್ತಾರೆ. ಹಾಗಾದರೆ ಗವರ್ನಮೆಂಟಿನವರು ಪ್ರವೇಶಿಸದಿದ್ದರೆ ಸಹಗಮನಗಳು ನಿಲ್ಲುತ್ತಿದ್ದವೆ? ಕಾಳಿ ಮೊದಲಾದ ದೇವತೆಗಳಿಗೆ ನರಬಲಿಗಳನ್ನು ಕೊಡುತ್ತಿದ್ದದ್ದು ನಿಲ್ಲುತಿತ್ತೆ? ಥಗ್ಗಿಗಳೆಂಬ ಕಳ್ಳರಗುಂಪನ್ನು ಅಡಗಿಸುವದು ಸಾಧ್ಯವಾಗುತಿತ್ತೆ! ಹಾಗೆಯೇ ಅಬಲೆಯರಾದ ಸ್ತ್ರೀಯರನ್ನು ಹಿಂದುಗಳು ಉತ್ತಮಸ್ಥಿತಿಗೆ ತರುವದೂ ಅಸಾಧ್ಯ. ಸರ್ಕಾರದವರು ಪ್ರವೇಶಿಸಲೇಬೇಕು. ಪ್ರತಿವರ್ಷವೂ ಎಷ್ಟುಮಂದಿ ಬಾಲಿಕೆಯರು ವಿತಂತುಗಳಾಗುತ್ತಲಿದ್ದಾರೆ! ಇದನ್ನು ಸಾಕ್ಷಾತ್ತಾಗಿ ನೋಡುತ್ತಿದ್ದರೂ ಅವರ ವಿಷಯದಲ್ಲಿ ಯಾವ ಒಳ್ಳೇ ಏರ್ಪಾಟನ್ನು ಮಾಡದೆ ಇರುವಂಥಾ ಈ ಹಿಂದುಗಳು ಸರ್ಕಾರದವರು ಪ್ರವೇಶಮಾಡಕೂಡದೆನ್ನುವದಕ್ಕೆ ಸಕಾರಣಗಳನ್ನು ತೋರಿಸಲಾರರು.

ಮಠಾಧಿಪತಿಗಳು ತಪ್ಪಿತಸ್ಥರಿಗೆ ಬಹಿಷ್ಕಾರ ಹಾಕಿದಲ್ಲಿ ಸಾಕಾಗಿರುತ್ತೆಂತಲೂ, ಇದರಿಂದಲೇ ಹಿಂದುಗಳು ಹೆದರಿ ಬಾಲ್ಯವಿವಾಹಗಳನ್ನೂ, ವಿಕ್ರಯಗಳನ್ನೂ ಮಾಡದೆ ಹಿಂಜರಿಯುತ್ತಾರೆಂತಲೂ ಹೇಳುವ ಕೆಲವರು ... ಗೆ ಮಠಾಧಿಪತಿಗಳಾದ ಹಿಂದುಗಳು ಹೆದರುವರೆ? ಸರ್ಕಾರದ ಇತರ ... ಕಾನೂನುಗಳು ಎಷ್ಟು ಕಠಿಣತರವಾಗಿದ್ದಾಗ್ಯೂ ಅವುಗಳ ಅರ್ಥವನ್ನು ಅಪಹಾಸ್ಯಮಾಡುವ ಹಿಂದುಗಳು ಬರೀ ಬಹಿಷ್ಕಾರಕ್ಕೆ ಎಂದಿಗೂ ಹಿಂಜರಿಯರು. ಆದ್ದರಿಂದ ಈ ವಿಷಯದಲ್ಲಿ ಕಾನೂನು ಆಗಬೇಕಾದದ್ದು ಅತ್ಯಾವಶ್ಯಕ. ಮಹಮದೀಯರಿಗೂ, ಗೋಷಾಸ್ತ್ರೀಯರಿಗೂ ಇದರಿಂದ ಇಲ್ಲದ ಸಂಕಟಗಳು ಪ್ರಾಪ್ತವಾಗುತ್ತವೆನ್ನುವದಕ್ಕೆ ಕಾರಣವೇನು? ಕ್ರಿಮಿನಲ್ ಸಂಬಂಧವಾದ ತಪ್ಪಿತಗಳಿಗೆ ವಿನಹಾ ಇತರ ವಿಷಯಗಳಲ್ಲಿ ಇದುವರಿಗೂ ಜಾರಿಯಲ್ಲಿರುವ ಯಾವ ಕಾನೂನೂ ಅವರಿಗೆ ಅಸಂತುಷ್ಟಿಯನ್ನುಂಟುಮಾಡದಿರುವಾಗ್ಗೆ ಇದರಿಂದ ಅವರಿಗೆ ಸಹಕಾರಿಯಾಗುವದೇ ಹೊರ್ತು ಮತ್ತೇನೇ ಅಲ್ಲ. ಸುಳ್ಳು ಫಿರ್ಯಾದುಗಳಿಗೂ ಕೃಜಾತಕಗಳಿಗೂ ದಾರಿಯಾಗುತ್ತೆಂದು ಮತ್ತೊಂದುವಾದ ಹೇಳಬಹುದು. ನಿಷ್ಕಾರಣವಾಗಿ ಒಬ್ಬನು ಮತ್ತೊಬ್ಬನಮೇಲೆ ಫಿರ್ಯಾದನ್ನು ಮಾಡಿದರೆ ಮಾಡಿದವನಗತಿ ಏನಾಗುವದೋ ವಾಚಕರಿಗೇ ಗೊತ್ತಿದೆ. ಸೃಷ್ಟಿನೇ ಕಾಗದಪತ್ರಗಳನ್ನು ಹಾಜರುಮಾಡುವವರಿಗೂ ಇದೇ ರೀತಿಯಾಗಿ ಜ್ಞಾನಮಂಟಪವು ಸಿದ್ಧವಾಗಿರುವದಿಲ್ಲವೆ! ನ್ಯಾಯಾಧಿಪತಿಗಳು ನ್ಯಾಯವನ್ನು ಕಂಡುಹಿಡಿಯುವದಕ್ಕಲ್ಲವೆ ನೇಮಿಸಲ್ಪಟ್ಟಿರುವದು? ಶೇಕಡಾ ೯೯ ಸುಳ್ಳು ಫಿರ್ಯಾದುಗಳು ಹಾಳಾಗುತ್ತವೆಂದು ವಾಚಕರಿಗೇ ತಿಳಿದಿದೆ. ಹೀಗಿರುವದರಿಂದ ಈ ಕಾನೂನು ಜಾರಿಯಲ್ಲಿ ಬಂದರೆ ಇಲ್ಲಿನ ಸ್ತ್ರೀಯರ ಸ್ಥಿತಿಯು ಉತ್ತಮವಾಗುವದೆಂತಲೂ ಅನೇಕ ಅನ್ಯಾಯಕೃತ್ಯಗಳು ಅದೃಶ್ಯವಾಗುವವೆಂತಲೂ ನಾವು ಸಂಪೂರ್ಣವಾಗಿ ನಂಬಿ ಇದ್ದೇವೆ. ಮೈಸೂರು ಸರ್ಕಾರದವರು, ಸ್ವಪ್ರಯೋಜನಕ್ಕಾಗಿಯೂ, ಕೆಟ್ಟಪದ್ಧತಿಗಳನ್ನು ಆಚರಣೆಯಲ್ಲಿ ಇನ್ನೂ ತರಬೇಕೆಂದು ಉದ್ದೇಶಿಸಿ ಈ ಕಾನೂನು ಜಾರಿಯಲ್ಲಿ ಬರಕೂಡದೆಂದು ಹೊಡೆದಾಡುವವರಿಗೋಸ್ಕರಲೂ, ಸ್ವಲ್ಪವೂ ಕಿವಿಗೊಡದೆ ತಾವು ಜಾರಿಯಲ್ಲಿ ತರಬೇಕೆಂದು ಉದ್ದೇಶಿಸಿರುವ ಮಸೂದೆಯನ್ನು, ಅವಶ್ಯಕವಾದ ಬದಲಾವಣೆಗಳೊಡನೆ ಕೂಡಿನಮಟ್ಟಿಗೂ ಜಾಗ್ರತೆಯಾಗಿ ಜಾರಿಯಲ್ಲಿ ತರುವದರ ಮೂಲಕ ಆಚಂದ್ರಾರ್ಕವಾದ ಕೀರ್ತಿಯನ್ನು ಪಡೆಯುವರೆಂದು ಹಾರೈಸುವೆವು.

ಮೈಸೂರು
ಸರ್ಕಾರೀಹುಕುಮುಗಳು.

ಮುಂದಿನವರ್ಷದಲ್ಲಿ ಸಂಸ್ಥಾನದ ಮರಾಮತ್ತು ಇಲಾಖೆಯಿಂದ ಮಾಡಿಸಬೇಕಾದ ಹೊಸಕೆಲಸಗಳಿಗಾಗಿ ಹಿಂದೆ ಬೇರೆ ೫೮ ಲಕ್ಷ ರೂಪಾಯಿ ಸ್ಯಾಂಕ್ಷನ್‌ಮಾಡಿದ್ದರು. ಆದರೆ ಮೈಸೂರು ಪಟ್ಟಣಕ್ಕೆ ಕುಡಿಯುವ ನೀರನ್ನು ಸರಬರಾಜುಮಾಡಬೇಕಾದ ಕಾಮಗಾರಿಗೆ ಎರಡುಲಕ್ಷ ಬೇಕಾಗಿರುವದರಿಂದ ಒಟ್ಟು ಹಣವನ್ನು ಅದರಿಂದ ೬೦ಲಕ್ಷಕ್ಕೆ ಜಾಸ್ತಿ ಮಾಡಿದ್ದಾರೆ.

ಚೆನ್ನಪಟ್ಟಣದ ತಾಲ್ಲೋಕನ್ನು ಪುನಹಾ ಸರ್ವೆಸಟಲ್‌ಮೆಂಟ್ ಮಾಡಿಸಿದ್ದೇ ಆದರೆ ಆ ತಾಲ್ಲೋಕಿನಲ್ಲಿ ಕಾಗ್ಗಂತಲೂ ೩,೦೦೦ರೂಪಾಯಿ ಹೆಚ್ಚು ಉತ್ಪತ್ತಿಯಾದೀತೆಂದು ಸರ್ವೇ ಸೂಪರಿಂಟೆಂಡೆಂಟ್‌ರವರು ಗವರ್ನಮೆಂಟಿಗೆ ರಿಪೋರ್ಟು ಮಾಡಿದ್ದರ ಮೇಲೆ ಅದಕ್ಕೆ ಸಂಬಂಧಿಸಿದ ಕಾಗದ ಪತ್ರಗಳನ್ನೆಲ್ಲಾ ಸವಿಸ್ತಾರವಾಗಿ ಸರ್ಕಾರದವರು ಪರಿಶೀಲನೆ ಮಾಡಿ ಅದಕ್ಕೆ ಹುಕುಂ ಕೊಟ್ಟಿರುತ್ತಾರೆ.

ಕಡೂರು ಡೆಪ್ಯುಟಿಕಮೀಷನರವರು ವರ್ಗವಾದ್ದರಿಂದ ಆದ ಎಲ್ಲಾ ಸಂಗತಿಗಳನ್ನೂ ಐವಾಜಿ ಆಫೀಸರಿಗೆ ಒಪ್ಪಿಸಬೇಕೆಂಬದಾಗಿ ಗವರ್ನಮೆಂಟಿನವರನ್ನು ಕೇಳಿದ್ದಕ್ಕೆ ಹೊಸದಾಗಿ ಬಂದಿರುವ ಸಂಗತಿಗಳನ್ನೂ, ಹಳೆ ಬದಲಾಯಿಸುವದನ್ನೂ ಡೆಪ್ಯುಟಿಕಮೀಷನರುಗಳೂ ಮತ್ತು ಐವಾಜಿ ಆಫೀಸರುಗಳೂ ಸ್ಯಾಂಕ್ಷನ್‌ಮಾಡತಕ್ಕದ್ದೇ ಹೊರ್ತು ಮತ್ತ್ಯಾವ ಅಧಿಕಾರಿಗಳಿಗೂ ಅಧಿಕಾರವಿರುವದಿಲ್ಲವೆಂದು ನಿರ್ಧರಿಸಿ ಹುಕುಮಾಡಿರುತ್ತಾರೆ.

ಮೈಸೂರು ಸಂಸ್ಥಾನದಲ್ಲಿ ಸರ್ಕಾರಿ ಹುದ್ದೆದಾರರು ಪಡೆಯುವ ರಜಾ ಮತ್ತು ಫರ್ಲೋಗಳನ್ನು ಗೊತ್ತುಮಾಡುವ ಕಾನೂನು ಜಾರಿಯಲ್ಲಿರುವಷ್ಟೆ. ಅದರಲ್ಲಿ ಕೆಲವು ಪ್ರಕರಣಗಳು ಅಸಂಬದ್ಧವಾಗಿರುವದನ್ನು ಚೀಫ್ ಜಡ್ಜಿಯವರು ಗವರ್ನಮೆಂಟಿನವರ ತಿಳುವಳಿಕೆಗೆ ತಂದರು. ಈಗ ಆ ಕಾನೂನನ್ನೇ ಪುನಹಾ ತಿದ್ದಿ ಬದಲಾಯಿಸಬೇಕೆಂತಲೂ ಈ ಕೆಲಸಕ್ಕೆ ಮ|| ರಿಕೆಟ್ಸ್ ಸಾಹೇಬರು, ಮ|| ಪಿ ಪಿ ಮಾಧವರಾಯರು ಮ|| ಇ ಆರ್ ಸುಬ್ರಾಯರವರು ಮತ್ತು ಮ|| ಟಿ ನರಸಿಂಹಯ್ಯರವರು ಇವರುಗಳನ್ನು ಒಂದು ಕಮಿಟಿಯಾಗಿ ನೇಮಿಸಿರುವಂತೆಯೂ, ಇವರು ಆ ಕಾನೂನನ್ನು ಚೆನ್ನಾಗಿ ಓದಿ, ಮಾಡಬೇಕಾದ ಬದಲಾವಣೆಗಳನ್ನು ಗವರ್ನಮೆಂಟಿಗೆ ತಿಳಿಯಪಡಿಸಬೇಕೆಂತಲೂ ಹುಕುಂ ಮಾಡಿರುತ್ತಾರೆ.

ವ್ಯವಸಾಯದ ಐವಜುಗಳನ್ನು ಅಭಿವೃದ್ಧಿಪಡಿಸುವದಕ್ಕಾಗಿ ಕಳೆದವರ್ಷದಿಂದ ರೈತರುಗಳಿಗೆ ಅಡ್ವಾನ್ಸಾಗಿ ಹಣವನ್ನು ಕೊಡುವಂತೆ ಸರ್ಕಾರದವರು ಹುಕುಂಮಾಡಿರುವದು ಸರಿಯಷ್ಟೆ. ಪ್ರಸ್ತುತವರ್ಷದಲ್ಲಿ ಇದೇ ಉದ್ದೇಶದಿಂದ ಬೆಂಗಳೂರು ಡಿಸ್ಟ್ರಿಕ್ಟಿಗೆ ೧೦ ಸಾವಿರವೂ, ತುಮಕೂರಿಗೆ ೭ ಸಾವಿರವೂ, ಕೋಲಾರಕ್ಕೆ ೪ ಸಾವಿರವೂ, ಚಿತ್ರದುರ್ಗಕ್ಕೆ ೫ ಸಾವಿರವೂ, ಹಾಸನಕ್ಕೆ ೧೨ ಸಾವಿರವೂ ಒಟ್ಟು ೩೮ ಸಾವಿರ ರೂಪಾಯಿಗಳನ್ನು ... ಕಮೀಷನರವರು ಗವರ್ನಮೆಂಟಿನಿಂದ ಪಡೆ... ನ್ನು ಅದಾ ... ಹೊಡೆ... ಈ ಯೋಗ್ಯರಾದವರಿಗೆ ವ್ಯವಸಾಯದ ಹ... ಸುವದಕ್ಕೆ ಅಡ್ವಾನ್ಸುಗಳನ್ನು ಕೊಟ್ಟು ಪ್ರತಿತಿಂಗಳಲ್ಲಿಯೂ

ಆ ಕಾಲದ ಜಮಾಖರ್ಚನ್ನು ಲೆಕ್ಕವನ್ನು ತಿಳಿಸುವಂತೆ ರಿಪೋರ್ಟು ಮಾಡತಕ್ಕದ್ದೆಂಬದಾಗಿ ಹುಕುಂ ಮಾಡಿರುತ್ತಾರೆ.

ಕೆಲವು ಡೆಪ್ಯುಟಿ ಕಮಿಷನರು ಡೆಪ್ಯುಟೇಶನುಗಳಲ್ಲಿ ಬಂದ ಕಾಲದಲ್ಲಿಯೂ ಕೂಡ ಸಕಾಲಕ್ಕೆ ತಮ್ಮ ಆಫೀಸಿಗೆ ಹಾಜರಾಗುವದಿಲ್ಲವೆಂತಲೂ, ಅವರು ಹೀಗೆ ಮಾಡುವದರಿಂದ ಅನೇಕ ರೆವಿನ್ಯೂ ಮತ್ತು ಮಿಸಲೇನಿಯಸ್ ಅರ್ಜಿಗಳನ್ನು ಹಾಜರು ಮಾಡುವವರಿಗೆ ಬಹು ಅನಾನುಕೂಲ ಉಂಟಾಗುತ್ತಿದೆಯೆಂತಲೂ ಗೌರ್ನಮೆಂಟಿನವರು ತಿಳಿದು ಅವರು ಸಕಾಲಕ್ಕೆ ಆಫೀಸಿನಲ್ಲಿ ಹಾಜರಾಗಬೇಕೆಂತಲೂ, ವಾರದಲ್ಲಿ ಯಾವದಾದರೂ ಎರಡು ದಿವಸಗಳನ್ನು ಗೊತ್ತುಮಾಡಿ ಆ ದಿವಸಗಳಲ್ಲಿ ಎಲ್ಲಾ ಅರ್ಜಿದಾರರುಗಳನ್ನೂ ತಮ್ಮ ರೂಬರೂ ಹಾಜರು ಮಾಡಿಸಿಕೊಂಡು ಅವರ ಅಹವಾಲುಗಳನ್ನು ವಿಚಾರಿಸಿ ಅವರಿಗೆ ಪ್ರತ್ಯುತ್ತರಗಳನ್ನು ಹೇಳಬೇಕಲ್ಲದೆ ಅವರು ಒಪ್ಪಿಸಿದ ಅರ್ಜಿಗಳ ಮೇಲೆ ಅದೇ ವಿಧವಾಗಿ ಹಿಂಬರಹ ಬರೆದು ಇತ್ಯರ್ಥಮಾಡಬೇಕೆಂತಲೂ ಸರ್ಕ್ಯುಲರ್ ಬಂದಿರುತ್ತೆ.

ಬೆಂಗಳೂರು ಪಟ್ಟಣವನ್ನು ಕಟ್ಟಡಗಳು, ರಸ್ತೆಗಳು ಮುಂತಾದವುಗಳಿಂದ ಅಭಿವೃದ್ಧಿ ಮಾಡಬೇಕೆಂದು ಸರ್ಕಾರದವರು ಒಂದು ಕಮಿಟಿಯನ್ನು ಏರ್ಪಡಿಸಿದ್ದಾರಷ್ಟೆ. ಅಲ್ಲಿನ ಡಿಪಾರ್ಟ್‌ಮೆಂಟುಗಳನ್ನು ಕಮಿಟಿಯವರಿಗೆ ತಿಳಿಸುವದಕ್ಕೆ ತಕ್ಕ ಒಬ್ಬ ಆಫೀಸರು ಇಲ್ಲವಾದ್ದರಿಂದ ಡಿಟೋ ಕಮಿಟಿಯವರು ಇಂಜನಿಯರ್ ಆಫೀಸಿನ ಬುದ್ಧಿವಂತನಾದ ಮ|| ಮುತ್ತುಸಾಮಿ ಅಯ್ಯರವರನ್ನು ಸ್ಪೆಷಲ್ಲಾಗಿ ನೇಮಿಸಿ ಕೊಡಬೇಕೆಂದು ಕೇಳಿಕೊಂಡಿದ್ದರು. ಅವರಿಗೆ ೩೫ ರೂಪಾಯಿ ಸಂಬಳ ಗೊತ್ತುಮಾಡಿ ಅವರನ್ನು ಡಿಟೋ ಕಮಿಟಿಯವರಲ್ಲಿ ನೇಮಿಸಿ ಈ ಸಂಬಳದ ಖರ್ಚನ್ನು ಇಂಜನಿಯರವರನ್ನು ಕೇಳಿರುವಂತೆಯೂ, ಪಟ್ಟಣದ ಅಭಿವೃದ್ಧಿಗಾಗಿ ಖರ್ಚುಮಾಡುವ ಹಣವನ್ನೂ ಮ್ಯುನಿಸಿಪಲ್ ಖರ್ಚಿನ ಹಣವನ್ನೂ ಒಂದು ಮಾಡದೆ ಬೇರೆಬೇರೆಯಾಗಿ ತಿಂಗಳು ತಿಂಗಳಿಗೆ ಜಮಾಖರ್ಚನ್ನು ಕಮಿಟಿಯವರಿಗೆ ತಿಳಿಸಬೇಕೆಂಬದಾಗಿ ಗೌರ್ನಮೆಂಟಿನವರು ಹುಕುಂ ಮಾಡಿರುತ್ತಾರೆ.

ಸಂಸ್ಥಾನದಲ್ಲಿ ಪೋಲೀಸ್ ಸಿಬ್ಬಂದಿಯನ್ನು ಬಿಡಿಸಿಕೊಂಡಿರುವ ಎಲ್ಲಾ ಮ್ಯುನಿಸಿಪಾಲಿಟಿಗಳಲ್ಲಿಯೂ ಉತ್ಪತ್ತಿಯಾಗುವ ಮನೆ ಮತ್ತು ಮೊಹತರ್ಫಾ ಕಂದಾಯಗಳನ್ನು ಸಂಪೂರ್ಣವಾಗಿ ಮ್ಯುನಿಸಿಪಾಲಿಟಿಗಳೇ ಉಪಯೋಗಿಸಿಕೊಳ್ಳುತ್ತಿರುವದನ್ನೂ, ಆ ಪೈಕಿ ಆರು ತಾಲ್ಲೋಕುಗಳ ಮಾತ್ರ (ಅಂದರೆ ತಿಪಟೂರು, ಹುಣಸೂರು, ತರೀಕೆರೆ, ಬೀರೂರು, ದಾವಣಗೆರೆ, ಹರಿಹರ) ಮ್ಯುನಿಸಿಪಲ್ ವಸೂಲಾತಿಯ ಒಟ್ಟಿನ ಪೈಕಿ ಸ್ವಲ್ಪಭಾಗವನ್ನು ಸರ್ಕಾರಕ್ಕೆ ಒಪ್ಪಿಸಿ ಉಳಿದದ್ದನ್ನು ಖರ್ಚು ಮಾಡಿಕೊಳ್ಳುತ್ತಿರುವದನ್ನೂ ಗೌರ್ನಮೆಂಟಿನವರು ತಿಳಿದು ಇದು ಸರಿಯಲ್ಲವೆಂಬದಾಗಿ ತೀರ್ಮಾನಿಸಿ ಈ ಆರು ಮ್ಯುನಿಸಿಪಾಲಿಟಿಯವರೂ ವಸೂಲ್ ಮಾಡುವ [illegible] ಹಣವನ್ನು ಇತರ ಮ್ಯುನಿಸಿಪಾಲಿಟಿಗಳಂತೆಯೇ ಸ್ವಂತಕ್ಕೆ ವಿನಿಯೋಗಿಸಿಕೊಳ್ಳಬಹುದೆಂಬದಾಗಿಯೂ, ಸರ್ಕಾರಕ್ಕೆ ಯಾವ ಭಾಗವನ್ನೂ ಕೊಡಬೇಕಾದ್ದಿಲ್ಲವೆಂಬದಾಗಿಯೂ ಸರ್ಕ್ಯುಲರ್ ಹೊರಡಿಸಿರುತ್ತಾರೆ.

ಮದರಾಸ್ ಸರ್ಜನ್ ಮೇಜರ್ ಕಿಂಗ್‌ರವರಿಂದ ಮೈಸೂರ್ ಗೌರ್ನಮೆಂಟಿನವರು ಕಳೆದ ೯೧ನೇ ಜುಲೈನಲ್ಲಿ [illegible] ೩೦೦ ಕರುಗಳನ್ನು ತಲೆಗೆ ೫ ರೂಪಾಯಿನಂತೆ ಗೊತ್ತುಮಾಡಿ ಕೊಂಡುಕೊಂಡು ಅವುಗಳ ಮೂಲಕ ಮೈಸೂರು ಮುಂದಿನ ದನಗಳಿಗೆ ಯಾವ ರೋಗವು ಬಾರದಂತೆ ಮಾಡಬೇಕೆಂದು ಒಂದು ಪ್ರಯತ್ನ ಮಾಡಿದರು. ಇದು ಚೆನ್ನಾಗಿ ನಡೆದ್ದರೆ ಆ ಕರುಗಳು ಹುಟ್ಟಿ ಇಲ್ಲಿನ ದನಗಳು ಚೆನ್ನಾದ ಸ್ಥಿತಿಗೆ ಬರಲು ಅವಕಾಶವಾಗುತ್ತಿತ್ತು. ಅವುಗಳನ್ನು ಸಾಕುವದಕ್ಕೂ ಮತ್ತು ಇತರ ಚಿಲ್ಲರೆ ಖರ್ಚುಗಳಿಗೂ ಇದುವರೆಗೆ ಗೌರ್ನಮೆಂಟಿನವರು ೧,೫೬೦—೧೦—೫ ಪೈ ಖರ್ಚುಮಾಡಿದ್ದಾರೆ. ಆದರೆ ಅವುಗಳ ಪೈಕಿ ಕಳೆದ ೯೨ನೇ ನವಂಬರಿನಲ್ಲಿ ೩೭ ಕರುಗಳು ಮಾತ್ರವೇ ಉಳಿದುಕೊಂಡವು. ಉಳಿದ ಕರುಗಳೆಲ್ಲಾ ಕ್ರಮೇಣ ಸತ್ತುಹೋದವು. ಈಗ ಉಳಿದ ೩೭ನ್ನು ಮಾರಿ ೯೯—೬—೧ ಪೈ ವಸೂಲ್ ಮಾಡಿಕೊಂಡರು. ನಿಂತ ಹಣವೆಲ್ಲಾ ನಷ್ಟವಾಯಿತು. ಅದಕ್ಕೋಸ್ಕರ ಏರ್ಪಡಿಸಿದ್ದ ಕೊಟ್ಟಿಗೆಯನ್ನೂ ಸಾಮಾನುಸಹಿತ ಹರಾಜು ಮಾಡಬೇಕೆಂತಲೂ, ಇನ್ನು ಮೇಲೆ ಇಂಥಾ ನಿಷ್ಪ್ರಯೋಜನವಾದ ಪ್ರಯತ್ನಗಳನ್ನು ಮಾಡಕೂಡದೆಂತಲೂ ಸರ್ಕಾರದಿಂದ ಪ್ರೊಸೀಡಿಂಗ್ಸ್ ಆಗಿರುತ್ತದೆ.

ಎಲ್ಲಾ ಡಿಪಾರ್ಟ್‌ಮೆಂಟುಗಳ ಹೆಡ್ಡಾಫೀಸರುಗಳೂ ತಮ್ಮ ಅಧಿಕಾರಕ್ಕೊಳಪಟ್ಟ ಜಾಸ್ತಿ ಸಂಬಳದ ನೌಕರಿಗಳನ್ನು ಖಾಲಿಬಿದ್ದ ವೇಳೆಯಲ್ಲಿ ತಮ್ಮ ಇಷ್ಟಬಂದವರಿಗೆ ಕೊಡುತ್ತಿದ್ದರೆಂತಲೂ, ಹಿಂದೆ ದಿವಾನ್ ಬಹದ್ದೂರವರು ಹೊರಡಿಸಿದ ಪ್ರೊಸೀಡಿಂಗ್ಸನ್ನು ಅನುಸರಿಸಿ ಖಾಲಿಬಿದ್ದ ನೌಕರಿಗಳನ್ನು ಗೆಜೆಟ್ಟಿನಲ್ಲಿ ಪಬ್ಲಿಷ್ ಮಾಡಿ ಕಡೇಪಕ್ಷ ಮೈಸೂರು ಲೋಕಲ್ ಪರೀಕ್ಷೆಯಲ್ಲಿ ಪ್ಯಾಸಾಗಿರುವಂಥವರಿಗಾದರೂ ಸಂಬಳದ ಮೇಲೆ ಕೊಡುವದಿಲ್ಲವೆಂತಲೂ, ಈ ಪರೀಕ್ಷೆಯಲ್ಲಿ ಪ್ಯಾಸ್ ಮಾಡಿರುವವರಿಗೆ ಇದುವರೆಗೆ ವಿದ್ಯಾಭ್ಯಾಸದ ಇಲಾಖೆಗಳಲ್ಲಿ ಮಾತ್ರ ನೌಕರಿಗಳು ದೊರೆಯುತ್ತಲಿವೆ ಎಂತಲೂ, ಇನ್ನು ಮುಂದೆ ಯಾವರೂ ಸರ್ಕಾರದ ಚಿಲ್ಲರೆ ಮಾಸ್ತರು ಅಂದರೆ ೧೦ ರೂ ಮೇಲ್ಪಟ್ಟಿರುವ ನೌಕರಿಗಳನ್ನೂ ಈ ಲೋಕಲ್ ಪರೀಕ್ಷೆಯಲ್ಲಿ ತೇರ್ಗಡೆಯಾದವರಂಥ ವಿದ್ಯಾರ್ಥಿಗಳಿಗೆ ಆಫೀಸರುಗಳು ಕೊಡುವಂತೆ ಮಾಡಬೇಕೆಂತಲೂ ಸಂಸ್ಥಾನದ ವಿದ್ಯಾಭ್ಯಾಸದ ಇಲಾಖಾ ಇನ್ಸ್‌ಪೆಕ್ಟರುಗಳು ಗವರ್ನಮೆಂಟಿಗೆ ಬರೆದು ತಿಳಿಸಿದ್ದರ ಮೇಲೆ ದಿವಾನರವರು ಖಾಲಿಯಾದ ನೌಕರಿಗಳನ್ನು ಭರ್ತಿಮಾಡುವವರ ವಿಷಯವಾಗಿ ಹಿಂದೆ ಪ್ರಕಟಿಸಿದ್ದ ಸರ್ಕ್ಯುಲರನ್ನು ಎಲ್ಲಾ ಆಫೀಸರುಗಳೂ ಖಂಡಿತವಾಗಿ ಜಾರಿಯಲ್ಲಿ ತರಬೇಕೆಂಬದಾಗಿ ಈಗ ಮತ್ತೊಂದು ಹುಕುಂ ಹೊರಡಿಸಿರುತ್ತಾರೆ.

ಕಳೆದ ೧೮೯೦ನೇ ಇಸವಿಯವರೆಗೂ ಸುಮಾರ್ ಸುಂಕವನ್ನು ಬೇರೆಯಾದ ಸ್ಥಳದಲ್ಲಿಯೇ ವಸೂಲ ಮಾಡುತ್ತಿದ್ದರು. ಆ ಇಸವಿಯಲ್ಲಿ ಸುಮಾರು ಬಾಬನ್ನೇ ಗೌರ್ನಮೆಂಟಿನವರು ವಜಾ ಮಾಡಿ ಕೆಲವು ಮುಖ್ಯವಾದ ಮ್ಯುನಿಸಿಪಾಲಿಟಿಯವರು ಮಾತ್ರ ಆಕ್ಟ್ರಾಯಿ ಸುಂಕವೆಂದು ಕೆಲವು ಪದಾರ್ಥಗಳ ಮೇಲೆ ಸುಂಕ ವಸೂಲ್ ಮಾಡುವಂತೆ ನಿಯಮಿಸಿ ಮಾಡಿದರು. ಆದರೆ ಈ ಬಾಬಿನಲ್ಲಿ ವಸೂಲಾಗುವ ಒಟ್ಟು ಹಣದ ಪೈಕಿ ಅರ್ಧವನ್ನು ಮ್ಯುನಿಸಿಪಾಲಿಟಿಯವರು ಉಪಯೋಗಿಸಿಕೊಳ್ಳಬೇಕೆಂತಲೂ, ಉಳಿದ ಅರ್ಧವನ್ನು ಗೌರ್ನಮೆಂಟಿಗೆ ಸೇರಿಸಿಕೊಡಬೇಕೆಂತಲೂ ಆ ಕಾಲದಲ್ಲಿ ಏರ್ಪಡಿಸಿದ್ದರು. ಆ ಪ್ರಕಾರ ಕಳೆದ ೯೦—೯೧ನೇ ಸಾಲಿನಲ್ಲಿ ಈ ಬಾಬಿನಿಂದ ಗೌರ್ನಮೆಂಟಿಗೆ ೧೦,೬೩೪—೧೩—೧೧ ಪೈ ಸೇರಿಬಂತು. ಆದರೆ ಕೆಲವು ಮ್ಯುನಿಸಿಪಾಲಿಟಿಗಳಿಂದ ಗೌರ್ನಮೆಂಟಿನವರು ಪಾಲು ತೆಗೆದುಕೊಳ್ಳುವದು, ಇತರ ಮ್ಯುನಿಸಿಪಾಲಿಟಿಗಳಿಗೆ ಸಾಮಾನ್ಯವೇ ಇಲ್ಲದಿರುವದು ಸಮಂಜಸವಾಗಿರುವಂತೆ ಕಾಣದಿರುವದರಿಂದ ಯಾವ ಮ್ಯುನಿಸಿಪಾಲಿಟಿಗಳು ಆಕ್ಟ್ರಾಯಿ ಸುಂಕವನ್ನು ವಸೂಲಿ ಮಾಡುತ್ತಲಿವೆಯೋ ಅಂಥವು ಈ ಸಾಲಿನ ಆರಂಭದಿಂದ ಅಂದರೆ ೯೩ನೇ ಜುಲೈ ಮೊದಲಾಗಿಯೂ ವಸೂಲ್ ಮಾಡುವ ಆಕ್ಟ್ರಾಯಿ ಸುಂಕದ ಹುಟ್ಟುವಳಿಯನ್ನೆಲ್ಲಾ ಗೌರ್ನಮೆಂಟಿಗೆ ಸ್ವಲ್ಪಭಾಗವೂ ಕೊಡದೆ ಅವರೇ ಉಪಯೋಗ ಮಾಡಿಕೊಳ್ಳಬಹುದೆಂಬದಾಗಿ ಹುಕುಂ ಮಾಡಿರುತ್ತಾರೆ.

ನವರಾತ್ರಿ ವಚನಗಳು.

(ಕಳೆದ ವಾರದ ಶೇಷ)

ಹಿತ್ತಲುಗಳನ್ನು ಪ್ರತಿಯೊಬ್ಬರೂ ಗುಡಿಸತಕ್ಕ ಜನರ ಕೈಯಿಂದ ದೂರದಲ್ಲಿ [illegible] ಅಲ್ಲಿನ ಎರಡು ಊರಿನಲ್ಲಿ ಹಿತ್ತಲಿಗೆ ಹೋಗಲೇ ಕೂಡದು ಎಲ್ಲಿಕೋಡರು ಅವರವರೇ [illegible] ಅನೇಕ ಬಾಧೆಯನ್ನು ಹೀಗೆ ಮಾಡಿದ್ದರೆ ಅದರಿಂದೇನಷ್ಟು ಬಹಳ ಮಕ್ಕಳಿಗೆ ಕಷ್ಟವುಂಟಾಗುತ್ತದೆ ಎಲ್ಲರೂ ಶುಚಿಯಾಗಿರುವದನ್ನು ಕಲಿತುಕೊಂಡು ಅದರಂತೆ ನಡೆದರೆ ಈಗಿನ ಅನೇಕ ವ್ಯಾಧಿಗಳು ಓಡಿಹೋಗುತ್ತವೆ.

೯ ಉದ್ಯೋಗಗಳನ್ನೆಲ್ಲ ಅಭಿವೃದ್ಧಿ ಪಡಿಸಬೇಕು

ನಮ್ಮ ದೇಶದಲ್ಲಿ ಅನೇಕರಿಗಿರುವದು ಆರಂಭದ ಉದ್ಯೋಗ. ಅದ್ದರಿಂದ ನೂರು ಸೇರು ಕಾಳು ಬೆಳೆಯುವಲ್ಲಿ ನೂರೊಂದು ಸೇರು ಬೆಳೆಯುವ ಉಪಾಯವನ್ನು ತಿಳಿದುಕೊಂಡರೆ ಅದರಿಂದಲೇ ಅನೇಕರು ಬದುಕಬಹುದು. ಕೆಲವು ದೊಡ್ಡ ಊರುಗಳ ಸಮೀಪದಲ್ಲಿ ರೈತರು ಗೊಬ್ಬರದ ಪ್ರಯೋಜನವನ್ನು ಚೆನ್ನಾಗಿ ತಿಳಿದುಕೊಂಡು ಒಂದುಹಿಡಿ ಗೊಬ್ಬರವನ್ನೂ ಪೋಲುಮಾಡದೆ ಕೂಡಿಹಾಕಿಕೊಳ್ಳುತ್ತಾರೆ. ಹಳ್ಳಿಗಳವರು ಯಾಕೆ ಹೀಗೆ ಮಾಡಕೂಡದು? ಗ್ರಾಮದೊಳಗೆ ಬಹಳ ಒಳ್ಳೇ ಗೊಬ್ಬರ ಸತ್ತ ಜಾನುವಾರುಗಳ ಎಲುಬುಗಳು. ಬಹಳ ಶ್ರೇಷ್ಠವಾದ ಗೊಬ್ಬರ. ಇದನ್ನು ಕೂಡಿಹಾಕುವರೇ ಇಲ್ಲ. ಗೊಬ್ಬರವನ್ನು ಬಿಸಿಲು ಗಾಳಿಗೆ ಬಿಟ್ಟುಬಿಟ್ಟರೆ ಅದರ ಸಾರವೆಲ್ಲಾ ಹೋಗಿಬಿಡುತ್ತದೆ. ಆದ್ದರಿಂದ ಗುಂಡಿ ತೆಗೆದು ಅದರಲ್ಲಿ ಹಾಕಿ ಮೇಲೆ ಮುಚ್ಚಿಡುವುದರಿಂದ ಪುಷ್ಟಿಯಾಗಿರುವುದು, ಮುಚ್ಚಬೇಕು.

ಅನೇಕರು ಬ್ರಾಹ್ಮಣರೇ ಮುಂತಾದವರು ವ್ಯವಸಾಯದ ಕೆಲಸಕ್ಕೆ ನಾಚುವರು ನಿರುದ್ಯೋಗಿಗಳಾಗಿರುತ್ತಾರೆ. ಇವರು ಮನೆಗಳ [illegible] ಮುಂತಾದವುಗಳನ್ನು ಯಾಕೆ ಅಭ್ಯಾಸ ಮಾಡಬಾರದು? ವ್ಯಾಪಾರದಲ್ಲಿ ಸರಿಯಾಗಿ ನಡೆಸಿಕೊಂಡರೆ ಇನ್ನೂ ಅನೇಕರಿಗೆ ಮಾರ್ಗವಿರುತ್ತದೆ, [illegible] ತಿಳಿದವರಿಗೊಂದು ಬೇರೆಯವರಿಗೊಂದು ಬೆಲೆಯನ್ನು ಹೇಳಿ ಒಂದರಿಂದ ಮೂರು ಕಾಸನ್ನೂ ಹೆಚ್ಚಾಗಿ ಸಂಪಾದಿಸಿಕೊಳ್ಳಬೇಕೆಂಬ ತುಚ್ಛಬುದ್ಧಿಯನ್ನು ಹೇಳಿಸಿಕೊಂಡು ಬಿಟ್ಟುಬಿಡಬೇಕು. ತನ್ನ ಕ್ರಯಕ್ಕೆ ಲಾಭವನ್ನು ಸೇರಿಸಿಕೊಂಡು ಸರಿಯಾಗಿ ಎಷ್ಟು ಬೆಲೆ ಬರಬೇಕೋ ಅದನ್ನು ಮೊದಲೇ ನಿರ್ಧರಿಸಿಕೊಂಡು, ಅದರಂತೆಯೇ ಸರ್ವರಿಗೂ ಮಾರಬೇಕು. ಇದರಿಂದ ವೃಥಾ ಹೋರಾಡುವದರಲ್ಲಿ ಹೋಗುವ ಹೊತ್ತು ಉಳಿಯುವದಲ್ಲದೆ ನಂಬಿಕೆಯೂ ಹೆಚ್ಚಾಗಿ ಉಂಟಾಗುತ್ತದೆ.

೧೦ ಸಾಲದಲ್ಲಿ ಬೀಳಕೂಡದು

ವಿಶೇಷವಾಗಿ ವ್ಯಾಪಾರವಾಡುವವರು ಕೆಲವು ಸಂದರ್ಭಗಳಲ್ಲಿ ಸಾಲವನ್ನು ಮಾಡದಿದ್ದರೆ ತೀರದೇ ಬರುತ್ತದೆ. ಅವರೂ ಕೂಡ ಸಾಧ್ಯವಾದ ಮಟ್ಟಿಗೂ ಸಾಲವಿಲ್ಲದೆ ಇರಬೇಕು. ಇತರರು ಸಾಲಮಾಡುವದು ಬಹಳ ಅವಿವೇಕ. [illegible] ಬರುತ್ತದೆಯೋ ಅವರೆಲ್ಲರಿಗಾಗಿ [illegible] ಸಾಲಮಾಡುವವರಿಗೆ ಬಡ್ಡಿಯನ್ನು [illegible] ಸಾಲಮಾಡುವಾಗ ಮನುಷ್ಯನು ಸಂತೋಷವಾಗಿರುತ್ತಾನೆ. ಆದರೆ ಸಾಲದ ಗುಂಡಿಗೆ ಸಿಕ್ಕಿಬಿದ್ದವರು ಕೆಳಕ್ಕೆ ಕೆಳಕ್ಕೆ ಮುಳುಗಿಹೋಗುತ್ತಾರೆಯೇ ಹೊರತು, ಮೇಲಕ್ಕೆ ಹತ್ತಿಬರುವವರು ಬಹಳ ಕಡಿಮೆ. ಸಾಲಮಾಡಿದ ಮನುಷ್ಯನಿಗಿದ್ದ ಗೌರವವೂ ಧೈರ್ಯವೂ ಎಲ್ಲಾ ಹೋಗಿಬಿಡುತ್ತದೆ. ತನಗೆ ಸಾಲಕೊಟ್ಟವನೆದುರಿಗೆ ತಲೆಯೆತ್ತಿ ನೋಡುವದಕ್ಕೆ ಹಿಂತೆಗೆಯುತ್ತಾನೆ. ಸಾಲಮಾಡಿದವರು ಅನೇಕಾವರ್ತಿ ಸುಳ್ಳಾಡಬೇಕಾಗುತ್ತದೆ. ಸಾಲ ಯಾವವರಿಗೂ ಸಾಲಕೊಟ್ಟಿರುವವನಿಗೆ ಸಾಲಗಾರನು ದಾಸನಾಗಿರುತ್ತಾನೆ. ಬಂದದ್ದೆಲ್ಲಾ ಸಾಲಕ್ಕೇ ಸಾಲವೆ ಹೋಗುವದರಿಂದ ಗೃಹಕೃತ್ಯದಲ್ಲಿ ವಿವೇಕದಿಂದ ಕಾಪಾಡಬೇಕೆಂಬ ಆಸೆಯು ನಾಶವಾಗುತ್ತದೆ. ಹಗಲೂ ರಾತ್ರಿ ಈ ವ್ಯಸನದ ಕೊರಗಿ ಸಾಯುತ್ತಾನೆಯೇ ಹೊರತು, ಇನ್ನು ಯಾವ ಒಳ್ಳೇ ಕಾರ್ಯದಲ್ಲಿಯೂ ಪ್ರವರ್ತಿಸಲಾರನು.

ನಮ್ಮಲ್ಲಿ ಸಾಲಗಳಿಗೆ ಅನೇಕ ಕಾರಣಗಳಿದ್ದಾಗ್ಯೂ ಒಂದೆರಡನ್ನು ಮಾತ್ರ ಯೋಚಿಸಿದರೆ ಸಾಕು. ಮದುವೆಗಳಲ್ಲಿ ಅನ್ಯಾಯವಾಗಿ ಹೆಚ್ಚು ಖರ್ಚನ್ನಿಟ್ಟುಕೊಂಡು ಸಾಲಗಳನ್ನು ಮಾಡುತ್ತಾರೆ. ಜನಗಳ [illegible] ಗತಿಯಿಲ್ಲದ ಸಂಭ್ರಮಕ್ಕೆ ಯಾತಕ್ಕೆ ಹೋಗಬೇಕು? ಇವನು ಸಾಲಗಾರನಾಗಿ ಮನೆಯನ್ನು ಹಾಳುಮಾಡಿಕೊಂಡು ಹೋದಾಗ, ಆ ಜನಗಳೇನಾದರೂ ಇವನಿಗೆ ಸಹಾಯವಾಗುತ್ತಾರೆಯೋ? ಇವನಷ್ಟು [illegible] ಯಾವಾದರೂ ನೋಡಿದ ಜನರು, ಮದುವೆ ನಡೆದ ದಿವಸದಲ್ಲಿಯೇ ಮರೆತುಬಿಡುತ್ತಾರೆ. ಇವನು ಅದಕ್ಕಾಗಿ ಸಾಲ [illegible] ಮಾಡುವವನಾಗಿ ಕತ್ತಿಗೆ ಕಟ್ಟಿಕೊಂಡು ತಿರುಗಬೇಕು. ಇದು ಅವಿವೇಕ. [illegible] ಆದರೆ ತಿಂಗಳಿಗೆ ಎಷ್ಟು ಬರುತ್ತದೆಯೋ ಅದಕ್ಕಿಂತ ಹೆಚ್ಚಾಗಿ ಖರ್ಚು ಮಾಡತಕ್ಕದ್ದಲ್ಲವೆಂದು ಎಲ್ಲರೂ ನಿಶ್ಚಯ ಮಾಡಿಕೊಳ್ಳಬೇಕು. ಇದು ನಡೆಯದಿದ್ದರೆ, [illegible] ಮಾಡುವಷ್ಟು ಸಾಹುಕಾರಕ್ಕೆ ದಂಡವನ್ನು ತೆರಬೇಕೆಂದು ನಿರ್ಬಂಧಪಡಿಸಿದರೆ ಇದು ಕಡಿಮೆಯಾಗಬಹುದು.

೧೧ ಕಷ್ಟಕಾಲಕ್ಕೆ ಒದಗುವಂತೆ ಹಣವನ್ನು ಮಾಡಿಕೊಳ್ಳಬೇಕು

ಒಡವೆಗಳಿಗೆ ಹಣ ಹಾಕುವದು [illegible] ಇಂಡ್ಯಾದೇಶದಲ್ಲಿ ಕಬ್ಬಿಣ ಕೆಲಸದವರಿಗಿಂತ ಚಿನ್ನ ಕೆಲಸದವರು ಹೆಚ್ಚಾಗಿದ್ದಾರೆ. ಕಬ್ಬಿಣವಷ್ಟು ಕೆಲಸಕ್ಕೆ ಬರುತ್ತದೆ? ಚಿನ್ನದಲ್ಲಿ ಮನುಷ್ಯನಿಗೆ ಆವಶ್ಯಕವಾದ ವಸ್ತುವೇನಾದರೂ ಮಾಡುತ್ತಾರೆಯೇ? ಚಿನ್ನದಲ್ಲಿ ಹೊಟ್ಟೆತುಂಬುವದಿಲ್ಲ, ಶರೀರಕ್ಕೆ ಬೆಚ್ಚಗಾಗುವದಿಲ್ಲ. ಶರೀರಕ್ಕೆ ಅದರಿಂದ ಭೂಷಣವೆಂದು [illegible] ಎಷ್ಟು ಒಡವೆ ಇಟ್ಟರೆ ಲಕ್ಷಣವಾಗುತ್ತಾಳೆ? ರೂಪವತಿಯಾದವಳಿಗೆ ಇದರ ಸಹಾಯ ಬೇಕಾಗಿದೆಯೇ? ಕುರೂಪಿಯಾದವಳು ಒಡವೆ ಇಟ್ಟ ಮಾತ್ರಕ್ಕೆ [illegible] ಸೌಂದರ್ಯವು ಬರುತ್ತದೆಯೇ? ಸತಿಗೆ ಪಾತಿವ್ರತ್ಯವೇ ಭೂಷಣವೆಂಬುವದು ಸುಳ್ಳೇ? ಒಡವೆಗಳ ದೆಸೆಯಿಂದ ಎಷ್ಟು ಜನ ಪ್ರಾಣಗಳನ್ನು ಕಳಕೊಂಡಿದ್ದಾರೆ? ಎಷ್ಟು ಜನ ದೊಡ್ಡ [illegible] ಗಿದ್ದಾರೆ? ಎಷ್ಟು ಮಂದಿ [illegible] ಗಳನ್ನು ಹರಿಸಿಕೊಂಡಿದ್ದಾರೆ? ಅದರೂ ಬುದ್ಧಿಬರಬೇಡವೇ? ಪೂರ್ವದಲ್ಲಿ [illegible] ಚೋರರ ಭಯದಿಂದ [illegible] ಹಣವನ್ನು ಒಡವೆಗಳ ರೂಪವಾಗಿ ಕೂಡಿಹಾಕುತ್ತಿದ್ದರು. ಈಗ ಆವಶ್ಯಕವಿಲ್ಲ. ಈ ಕಾಲದಲ್ಲಿ ಹೆಂಗಸರಿಗೆ ಸ್ತ್ರೀಧನವನ್ನು ಒಪ್ಪವಾಗಿಡುವದಕ್ಕೆ ಆಭರಣಗಳನ್ನು [illegible] ಅದಕ್ಕೆ ಬದಲಾಗಿ ಆ ಹಣವನ್ನು ಅವರ ಹೆಸರಿನಲ್ಲಿ ಬ್ಯಾಂಕಿನಲ್ಲಿ ಇಟ್ಟರೆ ಅನುಕೂಲವಾಗುತ್ತದೆ. ನಮ್ಮ [illegible] ವರ್ಷ ಒಂದಕ್ಕೆ [illegible] ಬಡ್ಡಿಯಾಗಿ ೩ [illegible] ಕೊಡುತ್ತಾರೆ. ಈ ಹಣವನ್ನೆಲ್ಲಾ ಇತರ ವಿಧವಾಗಿ ಉಪಯೋಗಿಸಿದರೆ ಎಷ್ಟು ಒಳ್ಳೇದು! ಅದನ್ನೆ ಒಡವೆಗಳಲ್ಲಿ ಹಾಕಿದರೆ ವೃದ್ಧಿಯಾಗುವದಿಲ್ಲ. ಅದರಿಂದ ಬಡ್ಡಿ ಹುಟ್ಟದೆ ನಷ್ಟವಾಗುತ್ತದೆ.

ಕೂಡಿಹಾಕಿದ ಹಣವನ್ನು ನ್ಯಾಯವಾಗಿ ವೃದ್ಧಿಪಡಿಸುವ ಪ್ರಯತ್ನ ಮಾಡಬೇಕು. ಸ್ವಲ್ಪ ಸ್ವಲ್ಪವೇ ಕೂಡಿಹಾಕುವವರಿಗೆ ಇದಕ್ಕೆ ಸರಿಯಾದ ಮಾರ್ಗವು [illegible] ಬ್ಯಾಂಕುಗಳಲ್ಲಿ ಹಾಕುವೆ, ಸ್ವಲ್ಪಕ್ಕೆ ಬಡ್ಡಿ [illegible] ಸರ್ಕಾರದ ಬ್ಯಾಂಕುಗಳನ್ನು [illegible] ಸೇವಿಂಗ್ಸ್ [illegible] ಬ್ಯಾಂಕುಗಳಲ್ಲಿ [illegible] ಅನೇಕ ಸ್ಥಳಗಳಲ್ಲಿ [illegible] ಬ್ಯಾಂಕುಗಳೂ, [illegible] ಅನೇಕ ವಿಚಿತ್ರವಾದ [illegible] ಅನೇಕರು ಪ್ರವರ್ತಿಸಿರುತ್ತಾರೆ. [illegible] ಇರುವದು ಉತ್ತಮ.

೧೨ [illegible] ವಿಜ್ಞಾಪನೆ

ನಮ್ಮ [illegible] ಈ ಪ್ರಮಾಣ [illegible] ಪ್ರಚಾರಪಡಿಸಬೇಕು [illegible] ಈ ಮಹೋತ್ಸವ ಕಾಲದಲ್ಲಿ ಸೇರಿದ್ದಕ್ಕೆ, ಮುಂದಿನ ವರ್ಷದಲ್ಲಿ ಯಾವದಾದರೂ ಒಂದು ಒಳ್ಳೇ ಕೆಲಸವನ್ನು ಮಾಡುವದಾಗಿ ಪ್ರತಿಮನುಷ್ಯನೂ ನಿಶ್ಚಯಮಾಡಿಕೊಂಡರೆ ಅಷ್ಟೇ ಸಾಕಾಗಿರುತ್ತದೆ. ಎಲ್ಲರೂ [illegible] ನಾಲ್ಕನ್ನು [illegible] ದಾಗಲಿ, ದೊಡ್ಡ ಛತ್ರವನ್ನು ಕಟ್ಟಿಸುವದಾಗಲಿ, ದೊಡ್ಡದಾಗಿ ಪಾಠಶಾಲೆಯನ್ನು ಸ್ಥಾಪಿಸುವದಾಗಲಿ, [illegible] ಅನ್ನವನ್ನು ಕೊಡುವದಾಗಲಿ, ಅವರವರ ಯೋಗ್ಯತೆಯೂ ಸಾಮರ್ಥ್ಯಕ್ಕನುಸಾರವಾಗಿ [illegible] ಮಾಡಿದರೆ ಅಷ್ಟಕ್ಕೇ ಸರ್ವೇಶ್ವರನು ಸಂತುಷ್ಟನಾಗುವನು.

೧೮೯೩ನೇ ಇಸವಿ ಅಕ್ಟೋಬರ್ ತಾ|| ೨೩ನೇ ಸೋಮವಾರದಲ್ಲು ಮೈಸೂರಲ್ಲಿ ಸೇರಿದ ಪ್ರಜಾ ಪ್ರತಿನಿಧಿಗಳ ಸಭೆಯಲ್ಲಿ ನಡೆದ ಮೈಸೂರು ಸಂಸ್ಥಾನದ ದಿವಾನರವರ ಉಪನ್ಯಾಸ.

(ಕಳೆದ ವಾರದ ಶೇಷ)

ಕಳೆದ ಸಾಲಿನ ಸಾಧಾರಣವಾದ ಬಾಬುಗಳ ನಿವ್ವಳ ಜಮಾಖರ್ಚು ಸಂಗತಿಯನ್ನು ಮೇಲೆ ವಿವರಿಸಿದ್ದಾಯಿತು. ಈಗ ಸರ್ಕಾರಿ ರೈಲ್ವೆಗಳ ಸಂಬಂಧವಾದ ಜಮಾಖರ್ಚನ್ನು ಇದರ ಕೆಳಗೆ ತೋರಿಸಿರುತ್ತೆ:—

ಮೈಸೂರು—ಹರಿಹರದ ರೈಲ್ವೆ ಲೈನ್ ಸಂಬಂಧವಾಗಿ ವರುಷಂಪ್ರತಿ ನಷ್ಟದಲ್ಲಿಯೂ ಈ ಕೆಳಗೆ ನಮೂದಿಸಿರುವ ಮೇರೆ ನಷ್ಟ ಸಂಭವಿಸಿರುತ್ತೆ.—

	ರೂ||
೧೮೮೭—೮೮ನೇ ಇಸವಿಯಲ್ಲಿ	೬೩,೮೪೦
೧೮೮೮—೮೯	೨,೯೫,೬೦೦
೧೮೮೯—೯೦	೫,೧೮,೮೦೨
೧೮೯೦—೯೧	೭,೮೫,೧೮೯
೧೮೯೧—೯೨	೨,೬೩,೯೦೨
೧೮೯೨—೯೩	೩,೫೫,೯೯೭
ಜಮ್ಲಾ	೧೯,೮೮,೧೫೬

ಒಟ್ಟು ಆದಾಯವೆಲ್ಲದ ಫಲಿತಾರ್ಥ—ಮೇಲೆ ವಿವರಿಸಿರುವ ೬ ಕಳೆದ ಸಂವತ್ಸರಗಳಲ್ಲಿ ೩೦,೯೬,೦೫೬ ರೂಪಾಯಿಗಳ ಪೈಕಿ ಮೈಸೂರು—ಹರಿಹರದ ರೈಲ್ವೆ ಲೈನ್ [illegible] ಗಿಂತ ಹುಟ್ಟುವಳಿಯಲ್ಲಿ ಕಮ್ಮಿ ಬಿದ್ದಬಗ್ಗೆ ೩,೫೫,೯೯೭ ರೂಪಾಯಿಗಳು, ರೈಲ್ವೆ ಸಾಲಗಳನ್ನು ತೀರಿಸತಕ್ಕ ಬಗ್ಗೆ ಮಾಡಿದ ಫಂಡಿಗೆ ೬,೦೦,೦೦೦ ರೂಪಾಯಿಗಳು, ಹೊಸ ರೈಲ್ವೆಗಳ ಬಗ್ಗೆ ೧೪,೯೬,೧೧೯ ರೂಪಾಯಿಗಳು ಈ ಮೇರೆ ಖರ್ಚು [illegible] ಜಾತಾ ೬,೩೭,೯೬ ರೂಪಾಯಿಯಲ್ಲು ನಿಂತಿತು. ೧೮೯೨ನೇ ಇಸವಿ ಜುಲೈ ಗುರು ತಾರೀಖಿನಲ್ಲಿ ಹುಜೂರಿದ್ದ ೮೯,೪೧,೯೬೯ ರೂಪಾಯಿನ ಒಟ್ಟು [illegible] ಮೇಲೆ ಹೇಳಿದ ಮೊಬಲಗನ್ನು [illegible] ೧೮೯೩ನೇ ಇಸವಿ ಜುಲೈ ಆಖೈರಿನಲ್ಲಿ ೯೩,೬೪,೮೬೦ ರೂಪಾಯಿಯು ಹುಜೂರಿತ್ತು. ಈ ಪೈಕಿ ೬೫,೩೩,೬೦೦ ರೂಪಾಯಿಗಳು ಸರಕಾರಿ ಪತ್ರಗಳ ರೂಪವಾಗಿಯೂ ಬಾಕಿ ಮೊಬಲಗು ಮದ್ರಾಸ್ ಬ್ಯಾಂಕಿನಲ್ಲಿ ಠೇವಣಿ ರೂಪವಾಗಿಯೂ ಹುಜೂರಿತ್ತು. ಇಲ್ಲದೆ ರೈಲ್ವೆ ಸಾಲವನ್ನು ತೀರಿಸತಕ್ಕ ಬಗ್ಗೆ ಪ್ರತ್ಯೇಕವಾದ ಫಂಡಿನಲ್ಲಿ ೧೮,೫೪,೦೦೦ ರೂಪಾಯಿ [illegible] ಮೈಸೂರು ಹರಿಹರದ ರೈಲ್ವೆ ಜಾಮೀನ್ [illegible] ಸರಕಾರಿ ರೈಲ್ವೆಗಳಿಗಾಗಿ ೩೨,೫೩,೬೬೯ ರೂಪಾಯಿಗಳು [illegible] ಸಂಸ್ಥಾನದ [illegible] ಈ ಕೆಳಗೆ ಬರುವ [illegible] ತಪ್ಸೀಲಾಗಿ ತೋರಿಸಿರುತ್ತೆ. ಇದರಲ್ಲಿ [illegible] ೧೮೯೧ನೇ ಇಸವಿ [illegible] ಲಕ್ಷ ರೂಪಾಯಿಗಳು [illegible] ಸೇರಿಸುವದಿಲ್ಲ.

1[illegible] ನೇ ಇಸವಿ ಜೂನ್ ೩೦ನೇ ತಾರೀಖಿನಲ್ಲಿ ಸರಕಾರಕ್ಕೆ ಇರತಕ್ಕ ಆಸ್ತಿ ಮತ್ತು ಸಾಲಗಳನ್ನು ತೋರಿಸುವ [illegible] ಕಳೆದ 12 ವರುಷಗಳಲ್ಲಿ ನಡೆದಿರತಕ್ಕ ಅಭಿವೃದ್ಧಿಯನ್ನು ತಿಳಿಯಬೇಕಾದಲ್ಲಿ, ೧೮೮೧ನೇ ಇಸವಿ ಏಪ್ರಿಲ್ ೧ನೇ ತಾರೀಖಿನಲ್ಲಿದ್ದ ಸಂಸ್ಥಾನದ [illegible] ರೂಪಾಯಿಗಳನ್ನು ಮೇಲ್ಕಂಡ ನಿವ್ವಳ ಆಸ್ತಿ ಮೊಬಲಗಿಗೆ ಸೇರಿಸಬೇಕಾಗಿರುತ್ತೆ.

	ರೂ
ಆಸ್ತಿ—	
ನಗದು ಹಣ	21,07,448
ರೈಲ್ವೆ ಮೇಲೆ ಹಾಕಿದ ಬಂಡವಾಳ ..	25,19,198
ಜಮ್ಲಾ ಆಸ್ತಿ	46,26,646
ಸಾಲ—	
ಬ್ರಿಟಿಷ್ ಗೌರ್ನಮೆಂಟಿಗೆ ಕೊಡತಕ್ಕ	
[illegible] ಸಾಲ	80,00,000
ನಿವ್ವಳ ಬಾಕಿ	[illegible]0,73,[illegible]

1893—94ನೇ ಇಸವಿ ಬಜೆಟ್ ಅಂದಾಜು (ಅಪೆಂಡಿಕ್ಸ್ ನ್ನು ನೋಡಿ)—ರೈಲ್ವೆ ಬಾಬನ್ನು ಸಿವಿಲ್ ಮತ್ತು ಮಿಲಿಟರಿ ಸ್ಟೇಟ್ ಹುಟ್ಟುವಳಿಯನ್ನೂ ವಿನಾಯಿಸಿ 1893—94 ನೇ ಇಸವಿ ಸಂಸ್ಥಾನದ ಎಲ್ಲಾ ಬಾಬುಗಳ ಹುಟ್ಟುವಳಿಯು 1,[illegible],63,000 ರೂಪಾಯಿ ಆಗಬಹುದೆಂದು ಅಂದಾಜು ಮಾಡಿರುತ್ತೆ. ಇದು 1892—93ನೇ ಇಸವಿಯ ಕರಾರುವಾಕ್ ಜಮಾ ಮೊಬಲಗಿಂತ ಸ್ವಲ್ಪ ಹೆಚ್ಚು ಕಡಿಮೆಯಾಗಿ 7 ಲಕ್ಷ ರೂಪಾಯಿಗಳು ಕಮ್ಮಿಯಾಗಿರುತ್ತೆ. 1891—92 ನೇ ಇಸವಿ ಜಮಾಬಂದಿ ಮೊಬಲಗು ಪೈಕಿ ವಸೂಲಾಗದೆ ನಿಂತಿದ್ದದರಲ್ಲಿ ವಿಶೇಷವಾದ ಭಾಗವು 1892—93ನೇ ಇಸವಿಯಲ್ಲಿ ವಸೂಲಾಯಿತೆಂಬುದರಿಂದ ಹಾಲಿ ನಡೆಯುವ ಸಂವತ್ಸರದ [illegible] ಹುಟ್ಟುವಳಿ [illegible] ಕಮ್ಮಿಯಾಗಿರುತ್ತೆ.

1893—94ನೇ ಇಸವಿ ಖರ್ಚು 1,85,61,000 ರೂಪಾಯಿಗಳು ಆಗಬಹುದಾಗಿ ಅಂದಾಜು ಮಾಡಿರುತ್ತೆ. 1892—93ನೇ ಇಸವಿಯಲ್ಲಿ ಖರ್ಚಾದ ಜಮಾ 1,84,71,000 ರೂಪಾಯಿ ಆಗಿತ್ತು. ಈ ಮೇರೆ ಬಜೆಟ್ಟಿನಲ್ಲಿ ಹೆಚ್ಚಾಗಿರುವ ಜಾಸ್ತಿ ಖರ್ಚಿನ ಪೈಕಿ [illegible] ಪ್ರಜೆಗಳ ಆರೋಗ್ಯ ಸಂಬಂಧವಾದ ಕಾಮಗಾರಿಗಳಿಗೋಸ್ಕರ ಮೈಸೂರು ಪಟ್ಟಣದಲ್ಲಿ [illegible] ಹೆಚ್ಚಾಗಿ [illegible] ಬಗ್ಗೆ ತಗಲುವ ಖರ್ಚಾಗಿರುತ್ತೆ.

ಡಿಸ್ಟ್ರಿಕ್ಟ್ ಫಂಡ—ಸರ್ಕಾರಿ ಜಮಾಖರ್ಚು ವಿಷಯಗಳನ್ನು ಇದುವರೆಗೂ ಹೇಳಿದ್ದಾಯಿತು. ಸ್ಥಳೀಯ ಅಧಿಕಾರಿಗಳ ಮೂಲಕ ವಸೂಲಾಗುವ ಹಣದ ವಿಷಯವನ್ನು ಈಗ ತಿಳಿಸತಕ್ಕದ್ದೇನಂದರೆ—

8 ಡಿಸ್ಟ್ರಿಕ್ಟ್ ಬೋರ್ಡುಗಳ ಅಧಿಕಾರದಲ್ಲಿರುವ ಡಿಸ್ಟ್ರಿಕ್ಟ್ ಲೋಕಲ್‌ಫಂಡ್ ಬಾಬತು 1892—93ನೇ ಇಸವಿ ಹುಟ್ಟುವಳಿಯು 5,77,000 ರೂಪಾಯಿ ಆಗಿತ್ತು. ಈ ಮೊಬಲಗಿಗೆ ಈ ಫಂಡಿನಲ್ಲಿ ಬಾಕಿ ಇದ್ದದ್ದರ ಪೈಕಿ 17,000 ರೂಪಾಯಿಯನ್ನು ಸೇರಿಸಿ ರಸ್ತೆ, ಆಸ್ಪತ್ರೆ, ಗ್ರಾಮಪಾಠಶಾಲೆ, ಮುಸಾಫರಖಾನೆ ವಗೈರೆ ಸಾರ್ವತ್ರಿಕ ಪ್ರಯೋಜನಕರವಾದ ಕೆಲಸಗಳಿಗೋಸ್ಕರ ಖರ್ಚುಮಾಡಿರುತ್ತೆ. ಈ ಸಾಲಿನ ಈ ಬಾಬತ್ತು ಹುಟ್ಟುವಳಿಯನ್ನು ಜನಸಂಖ್ಯೆಗೆ ಹಂಚಿದಲ್ಲಿ ಆಸಾಮಿ 1ಕ್ಕೆ 1 ಆಣೆ 10 ಪೈ ಮೇರೆ ಬೀಳುತ್ತೆ.

ಲೋಕಲ್ ಫಂಡ್ ಜನರಲ್—ಡಿಸ್ಟ್ರಿಕ್ಟ್ ಲೋಕಲ್‌ಫಂಡಿನ ಜೊತೆಯೇ ವಸೂಲಾಗಿ ಸರ್ಕಾರದ ಅಧಿಕಾರದಲ್ಲಿರುವ ಲೋಕಲ್‌ಫಂಡ್ ಜನರಲ್ ಬಾಬಿನ ಹುಟ್ಟುವಳಿಯು 1,91,000 ರೂಪಾಯಿ ಆಗಿತ್ತು. ಪೈಕಿ 1,11,000 ರೂಪಾಯಿಗಳು ಕುಡಿಯುವ ನೀರಿನ ಭಾವಿಗಳು, ಗ್ರಾಮಚಾವಡಿಗಳು, ಧರ್ಮಛತ್ರಗಳು ವಗೈರೆ ಕಾಮಗಾರಿಗಳಿಗಾಗಿ ಡಿಸ್ಟ್ರಿಕ್ಟ್ ಫಂಡ್ ಬೋರ್ಡುಗಳ ಮೂಲಕವಾಗಿ ಖರ್ಚಾಗಿರುತ್ತೆ.

ಡಿಸ್ಟ್ರಿಕ್ಟ್ ಫಂಡ್ ಬೋರ್ಡುಗಳ ಏರ್ಪಾಟು—ಡಿಸ್ಟ್ರಿಕ್ಟ್ ಫಂಡ್ ಬೋರ್ಡುಗಳಲ್ಲಿ ಸಾಕಷ್ಟು ಖುಷ್‌ಖುಷ್ ಮೆಂಬರುಗಳು ಇಲ್ಲವೆಂದು ಹೋದವರುಷದಲ್ಲಿ ನಿಮ್ಮ ವಿಜ್ಞಾಪಿಸಿದ್ದೇವಷ್ಟೆ. 1874ನೇ ಇಸವಿಯಲ್ಲಿ ಹುಟ್ಟಿದ ನಿಬಂಧನೆಗಳ ಪ್ರಕಾರ 1 ಮಂದಿ ಖುಷ್‌ಖುಷ್ ಮೆಂಬರುಗಳಿಗಿಂತ ಹೆಚ್ಚಾಗಿರುವದಕ್ಕೆ ಅವಕಾಶವಿಲ್ಲದ್ದರಿಂದ ಈ ಲೋಪವನ್ನು ಹೊಸ ಕಾನೂನು ಮೂಲಕವೇ ಸರಿಪಡಿಸಬೇಕಾಗಿದೆ. ಆದಕಾರಣ ಹಾಲಿ ಸರ್ಕಾರದವರ ಆಲೋಚನೆಯಲ್ಲಿರುವ ಹೊಸ ಲೋಕಲ್‌ಫಂಡ್ ಬೋರ್ಡ್ ರೆಗ್ಯುಲೇಷನ್ನಲ್ಲಿ ಪ್ರತಿಯೊಂದು ಲೋಕಲ್‌ಫಂಡ್ ಬೋರ್ಡಿಗೂ 12 ಮಂದಿ ಖುಷ್‌ಖುಷ್ ಮೆಂಬರುಗಳಿಗಿಂತ ಕಮ್ಮಿ ಇರಬಾರದೆಂದು ನಿಬಂಧನೆ ಮಾಡಿರುತ್ತೆ.

ಮ್ಯುನಿಸಿಪಾಲಿಟಿಗಳು—1892—93ನೇ ಇಸವಿಯಲ್ಲಿ 101 ಮ್ಯುನಿಸಿಪಾಲಿಟಿಗಳು ಇದ್ದವು. ಇವುಗಳಲ್ಲಿನ ಪ್ರಜಾಸಂಖ್ಯೆ 576,000. ಮೊಹತರ್ಫ, ಮನೆಕಂದಾಯ ಮತ್ತು ಆಕ್ಟ್ರಾಯಿ ಮಾಸಲ್ ಈ ಬಾಬುಗಳಿಂದ 2,9,000 ರೂಪಾಯಿಯೂ, ಚಿಲ್ಲರೆ ಬಾಬುಗಳಿಂದ 1,11,000 ರೂಪಾಯಿಯೂ ಅಂತು ಕಳೆದಸಾಲಿನ ಮ್ಯುನಿಸಿಪಲ್ ಒಟ್ಟು ಹುಟ್ಟುವಳಿಯು 4,14,000 ರೂಪಾಯಿ ಆಗಿತ್ತು. ಆಸಾಮಿ 1ಕ್ಕೆ 7 ಆಣೆ 11 ಪೈ ಮೇರೆ ಸರಾಸರಿ ಆಗಿರುತ್ತೆ. ಈ ಸಾಲಿನ ಮ್ಯುನಿಸಿಪಲ್ ಬಟ್ಟು ಖರ್ಚು 4,13,000 ರೂಪಾಯಿ. ಪೈಕಿ ಗ್ರಾಮಸ್ವಚ್ಛತೆ ಮತ್ತು ಸಿಬ್ಬಂದಿಬಗ್ಗೆ 1,51,000 ರೂಪಾಯಿಯೂ, ರಸ್ತೆ ಮತ್ತು ಇತರ ಉಪಯೋಗವಾದ ಕೆಲಸಗಳಿಗೆ 1,19,000 ರೂಪಾಯಿಯೂ, ಸ್ಕೂಲುಗಳಬಗ್ಗೆ 38,000 ರೂಪಾಯಿಯೂ, ವೈದ್ಯಶಾಲೆಗಳಬಗ್ಗೆ 31,000 ರೂಪಾಯಿಯೂ, ಗ್ರಾಮಗಳಲ್ಲಿ ದೀಪಗಳಬಗ್ಗೆ 4,000 ರೂಪಾಯಿಯೂ, ಬಾಕಿ ಚಿಲ್ಲರೆ ಬಾಬುಗಳು ಮತ್ತು ಕಾಮಗಾರಿಗಳಬಗ್ಗೆ ಖರ್ಚಾಗಿರುತ್ತೆ.

ಮ್ಯುನಿಸಿಪಲ್ ಸರಹದ್ದಿನೊಳಗೆ ವಸೂಲಾಗುವ ಮೊಹತರ್ಫ ಮತ್ತು ಆಕ್ಟ್ರಾಯಿ ಮಾಸಲ್ಪೈಕಿ ಸರ್ಕಾರಕ್ಕೆ ಸಲ್ಲುವ ಭಾಗವನ್ನು ಈಗ ಕೆಲವು ಮ್ಯುನಿಸಿಪಾಲಿಟಿಗಳಿಗೆ ಕೊಟ್ಟಿರುವಂತೆ ಎಲ್ಲಾ ಮ್ಯುನಿಸಿಪಾಲಿಟಿಗಳಿಗೂ ವರ್ಗಾಯಿಸಬೇಕೆಂದು ಅನೇಕ ಮ್ಯುನಿಸಿಪಾಲಿಟಿಗಳವರು ಕಳೆದ ಸಾಲಿನಲ್ಲಿ ಅರಿಕೆಮಾಡಿಕೊಂಡರು. ಆಕ್ಟ್ರಾಯಿಯೆಂಬ ಮಾಸಲನ್ನು ಮ್ಯುನಿಸಿಪಾಲಿಟಿಗಳಲ್ಲಿ ವಸೂಲ್ಮಾಡುವಂತೆ ಅಪ್ಪಣೆ ಕೊಟ್ಟಿರುವ ವಿಶೇಷ ಸಂದರ್ಭಗಳನ್ನು ಪರಿಗಣನೆಗೆ ತಂದಲ್ಲಿ ಆದರಪೈಕಿ ಸರ್ಕಾರಕ್ಕೆ ಬರುವ ಭಾಗವನ್ನು ತೆಗೆದುಕೊಳ್ಳತಕ್ಕದ್ದು ನ್ಯಾಯವಾಗಿರುತ್ತೆಂಬುವದು ನಿಮಗೆ ಗೋಚರವಿಲ್ಲದೆ ಇಲ್ಲ. ಆಕ್ಟ್ರಾಯಿ ಮಾಸಲ್ ಪೈಕಿ ಬರತಕ್ಕ ಸರ್ಕಾರಕ್ಕೆ ಸಲ್ಲಬೇಕೆಂಬ ಪದ್ಧತಿ ಸಮೀಪದಲ್ಲೇ ಯಾವಾಗಲೂ ಸರ್ಕಾರಕ್ಕೆ ಬರುತ್ತಿದ್ದ ಕೆಲವು ಜಿನಸುಗಳ ಮೇಲಿನ ಸಾಯರ್ ಮಾಸಲನ್ನು ಮಾಫಿಕೊಳ್ಳುವ ಮಾಡಿದ್ದಾಯಿತು. ಈ ಪ್ರಕಾರ ಮಾಡಿದ್ದರಿಂದ ಮ್ಯುನಿಸಿಪಾಲಿಟಿಗಳಿಗೆ ವಿಶೇಷ ಫಾಯಿದೆಯಾಗಿರುತ್ತೆಯೇ ಹೊರ್ತು ಅನ್ಯಥಾ ಇಲ್ಲ. ಆದರೆ ಮ್ಯುನಿಸಿಪಾಲಿಟಿಗಳಲ್ಲಿ ಆರೋಗ್ಯಾಭಿವೃದ್ಧಿ ಕೆಲಸಗಳಬಗ್ಗೆ ಬೇಕಾದ ದ್ರವ್ಯದ ವಿಷಯದಲ್ಲಿ ಮ್ಯುನಿಸಿಪಲ್ ಬೋರ್ಡುಗಳಿಗೆ ಸಹಾಯವನ್ನು ಮಾಡುವ ಭಾಗದಲ್ಲಿ ಯಾವಾಗಲೂ ಧಾರಾಳಮನಸ್ಸುಳ್ಳವರೆಂದು ಸರ್ಕಾರದವರ ಮನೋಗತವಾಗಿರುತ್ತೆ. ಈ ಧರ್ಮವನ್ನನುಸರಿಸಿಯೇ ಸರ್ಕಾರಕ್ಕೆ ಸಲ್ಲುತ್ತಲಿರುವ ಆಕ್ಟ್ರಾಯಿ ಮಾಸಲ್‌ಭಾಗವನ್ನು ಮ್ಯುನಿಸಿಪಾಲಿಟಿಗಳಿಗೆ ವರ್ಗಾಯಿಸತಕ್ಕದ್ದೆಂದು ಈಚೆಗೆ ಹುಕುಂ ಕೊಟ್ಟಿರುತ್ತೆ. ಆ ಪ್ರಕಾರ ಪೋಲೀಸು ಖರ್ಚನ್ನು ವಹಿಸಿರುವ ಮ್ಯುನಿಸಿಪಾಲಿಟಿಗಳಲ್ಲಿ ಸರ್ಕಾರಕ್ಕೆ ಸಲ್ಲುವ ಮೊಹತರ್ಫ ಭಾಗವನ್ನು ಆಯಾ ಮ್ಯುನಿಸಿಪಾಲಿಟಿಗಳಿಗೆ ಕೊಟ್ಟಿರುತ್ತೆ. ಇತರ ಮ್ಯುನಿಸಿಪಾಲಿಟಿಗಳಲ್ಲಿಯೂ ಈ ಮೊಹತರ್ಫ ಮಾಡತಕ್ಕ ಅಂಶವನ್ನು ಕೊಡಬೇಕೆಂದು ಆಲೋಚಿಸುತ್ತೆ. ಮ್ಯುನಿಸಿಪಲ್ ಬೋರ್ಡಿನವರು ಯಾವ ಪರವಾಗಿಯೂ ಯಾವ ದೊಂಬಿ ವಿವಾದವಿಯೂ ಇಲ್ಲದೆ ಏಕರೀತಿಯಾಗಿ ನ್ಯಾಯವಾದ ತೆರಿಗೆಗಳನ್ನು ವಿಧಾಯಿಸಿ ಕ್ರಮಪರತು ವಸೂಲಿ ಈ ರೀತಿಯಾಗಿ ಬರುವ ವರಮಾನವನ್ನು ಸಂಪೂರ್ಣವಾಗಿ ಪ್ರಜೆಗಳ ಸುಖ್ಯಕ್ಕಾಗಿಯೇ ವಿನಿಯೋಗಿಸಬೇಕೆಂಬ ಷರತ್ತಿನ ಮೇಲೆಯೇ ಮೇಲ್ಕಂಡ ರಿಯಾಯಿತಿಗಳನ್ನು ಮ್ಯುನಿಸಿಪಲ್ ಬೋರ್ಡುಗಳಿಗೆ ಕೊಟ್ಟಿರುತ್ತೆಂಬ ಅಂಶವನ್ನು ಈ ಸಂದರ್ಭದಲ್ಲಿ ನಿಮಗೆ ತಿಳಿಸುತ್ತೇವೆ.

ಪಬ್ಲಿಕ್ ವರ್ಕ್ಸ್—ರೈಲ್ವೆ ಹೊರ್ತು ಇತರ ಮರಾಮತ್ತಿನ ಕಾಮಗಾರಿಗಳಿಗಾಗಿ ಕಳೆದ ಸಾಲಿನಲ್ಲಿ ಕೆಳಗೆ ನಮೂದಿಸಿರುವಂತೆ [illegible] ರೂಪಾಯಿಗಳು ಖರ್ಚಾಗಿರುತ್ತೆ.

	ರೂ
ಪ್ರಾವಿನ್ಷಿಯಲ್ ಫಂಡಿನಿಂದ	24,12,611
ಡಿಸ್ಟ್ರಿಕ್ಟ್ ಫಂಡಿನಿಂದ	4,98,758
ಇರಿಗೇಷನ್ ಫಂಡಿನಿಂದ	1,23,612
ಅರವಂಟಿ ಹಣದಿಂದ	19,216
ಜುಮ್ಲಾ	30,53,199

ಅದಲ್ಲದೆ ಇತರ ಇಲಾಖೆಗಳಿಗೆ ಖರ್ಚು ಬೀಳತಕ್ಕ ಕಾಮಗಾರಿಗಳಿಗಾಗಿ 71,962 ರೂ ಖರ್ಚಾಗಿರುತ್ತೆ. ಒಟ್ಟು ಕಾಮಗಾರಿ ಖರ್ಚು 31,5,961 ರೂ ಆದ್ದಕ್ಕೆ ಬಾಬುವಾರು ತಪ್ಸೀಲನ್ನು ಕೆಳಗೆ ತೋರಿಸಿರುತ್ತೆ.

ಮಿಲಿಟರಿ ಇಲಾಖೆ ಕಟ್ಟಡಗಳು	47,467
ಸಿವಿಲ್ ಇಲಾಖೆ ಕಟ್ಟಡಗಳು	33,036
ರಸ್ತೆಗಳು	8,77,014
ಜನೋಪಕಾರವಾದ ಕಾಮಗಾರಿಗಳು	2,01,711
ನೀರಾವರಿ ಕಾಮಗಾರಿಗಳು	9,81,121
ಸಿಬ್ಬಂದಿ	1,2,162
ಆಡಳಿತರಿಂ	23,4,3
ಸರ್ವೇ ಸಿವಿಲ್ ಆಮಾನತ್ತು ಲೆಕ್ಕದ ಬಾಬತು	16,618
ಸ್ಯಾನಿಟರಿ ಯಾನೆ ಆರೋಗ್ಯಸಂಬಂಧವಾದ ಕಾಮಗಾರಿಗಳು	76,724
ಮರಾಮತ್ತು ಇಲಾಖೆ ಲೆಕ್ಕಕ್ಕೆ ಸೇರದ ಪೋಲೀಸು, ವಿದ್ಯಾಭ್ಯಾಸ ವಗೈರೆ ಇಲಾಖೆ ಲೆಕ್ಕಗಳಿಗೆ ಸೇರಿದ ಕಾಮಗಾರಿಗಳು ಮತ್ತು ಸಹಾಯದ್ರವ್ಯದಿಂದ ನಡೆದ ಕಾಮಗಾರಿಗಳು ಸಹ	71,962
	31,5,961

ಮಿಲಿಟರಿ ಇಲಾಖೆಯಲ್ಲಿ ಬೆಂಗಳೂರು, ಮೈಸೂರು, ಶಿವಮೊಗ್ಗ, ಹಾಸನ ಈ ಸ್ಥಳಗಳಲ್ಲಿ ಅತ್ಯವಶ್ಯಕವಾಗಿ ಬೇಕಾಗಿದ್ದ ಹೊಸ ಬ್ಯಾರಕ್ಕುಗಳು ತಯಾರಾಗುತ್ತಲಿವೆ. ಮೈಸೂರಲ್ಲಿ ಶಿಲೇದಾರುಗಳ ವಾಸಕ್ಕೆ ಹೊಸ ಲೈನುಗಳನ್ನು ಕಟ್ಟಿ ಪೂರೈಸಿರುತ್ತೆ. ಇಂಪೀರಿಯಲ್ ಸರ್ವಿಸ್ ರಿಜಿಮೆಂಟನ್ನು ಅದಕ್ಕೆ ಬೇಕಾದ ಬ್ಯಾರಕ್ಸ್ ಸ್ಟೋರ್ ಕಾಮಗಾರಿಗಳನ್ನು ಮೈಸೂರು ಷಹರಿನ ಸಮೀಪದ ಚಂಟಕೊಪ್ಪಲ್ ಗ್ರಾಮಕ್ಕೆ ಮೇಲ್ಭಾಗದಲ್ಲಿ ಶ್ರೀಮನ್ಮಹಾರಾಜರವರು ಈಚೆಗೆ ಆರಾಯಿಸಿರುವ ಸ್ಥಳದಲ್ಲಿ ಇರಬೇಕೆಂದು ತೀರ್ಮಾನವಾಗಿರುತ್ತೆ. ಹಾಲಿ ಇಲ್ಲಿರತಕ್ಕ ಕೆಲ ದಾರ್ರು ತಬೇಲಿಯನ್ನೂ ಮತ್ತು ಅದಕ್ಕೆ ಸಂಬಂಧಪಟ್ಟ ಲೈನುಗಳನ್ನೂ ಈ ಪಟ್ಟಣದಲ್ಲಿ ಈಗ ಅತ್ಯವಶ್ಯಕವಾಗಿ ಬೇಕಾಗಿರುವ ಪರ್ವಪಾಲನಿಗೆ ತಕ್ಕ ಬದಲಾವಣೆಗಳನ್ನು ಮಾಡಿ ಉಪಯೋಗಿಸುತ್ತೆ.

ಸಿವಿಲ್ ಇಲಾಖೆ ಕಟ್ಟಡಗಳಿಗಾಗಿ 3,03,911 ರೂಪಾಯಿಗಳು ಖರ್ಚಾಗಿರುತ್ತೆ. ಕಳೆದವರ್ಷದಲ್ಲಿ ಪೂರೈಸಿದ ಮುಖ್ಯವಾದ ಕಟ್ಟಡಗಳು ಯಾವವೆಂದರೆ—

(1) ಬೆಂಗಳೂರಲ್ಲಿ ಸೆಂಟ್ರಲ್‌ಕಾಲೇಜು ಸಂಬಂಧವಾಗಿ ರಸತಂತ್ರವಿದ್ಯಾಶಾಲೆ ಮತ್ತು ಉಪನ್ಯಾಸಶಾಲೆ.

(2) ಬೆಂಗಳೂರಲ್ಲಿ ಸರಕಾರೀಛಾಪಖಾನೆ ಬಿಡಾಪಟೆ.

(3) ಕೋಲಾರದ ಡಿಸ್ಟ್ರಿಕ್ಟಿನಲ್ಲಿ ಉರಿಗಾಂ ಭಂಗಾರದಗಣಿಯಲ್ಲಿ ಸ್ಪೆಷಲ ಮೇಜಿಸ್ಟ್ರೇಟರಿಗಾಗಿ ಬಂಗಲೆ ಮತ್ತು ಆಫೀಸ.

(4) ಮೈಸೂರಿನಲ್ಲಿ ಗೌರ್ನಮೆಂಟ ಬಂಗಲೆ, ಆಫೀಸ್, ಮಿಲಿಟರಿ ಸೆಕ್ರೆಟರಿಯವರಿಗೂ ಮತ್ತು ಮಹಾರಾಜರವರ ಕಾಲೇಜು ಪ್ರಿನ್ಸಿಪಾಲರವರಿಗೂ ವಾಸಕ್ಕೆ ಬಂಗಲೆ.

ಇದಲ್ಲದೆ ಮೈಸೂರು ಡಿಸ್ಟ್ರಿಕ್ಟ್ ಜಡ್ಜ್ ಸಬ್‌ಜಡ್ಜ್ ಮತ್ತು ಮುನಸಿಫ್ ಕೋರ್ಟುಗಳಬಗ್ಗೆ ತಯಾರಾಗುತ್ತಿರುವ ಬಂಗಲೆಯ ಕಾಮಗಾರಿಯು ತೃಪ್ತಿಕರವಾಗಿ ನಡೆಯುತ್ತಲಿದೆ. ನಾಳೆ, ಮಳೆ ವಗೈರೆ ಅಲಕ್ಷಿಸದೆ ವಿಚಾರಮಾಡತಕ್ಕ ಬಗ್ಗೆ ಬೆಂಗಳೂರಲ್ಲಿ ಒಂದು ಕಟ್ಟಡವನ್ನು ಕಟ್ಟುವದಕ್ಕೆ ಆ ದಿವಾನ ಮಂಜೂರಾಗಿ ಕೆಲಸವು ಪೂರೈಸುತ್ತಬಂದಿದೆ. ಇವುಗಳಲ್ಲದೆ 4 ತಾಲ್ಲೂಕು ಕಛೇರಿಗಳು, 3 ಮುನಸಿಫ್ ಕೋರ್ಟುಗಳು, 10 ಡಿಸ್ಪೆನ್ಸರಿಗಳು, 1 ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಕಟ್ಟಡಗಳು, 1 ಪೋಲೀಸ ಲೈನುಗಳು ಮತ್ತು ಸ್ಟೇಷನುಗಳು ಮತ್ತು ಇತರ ಅನೇಕ ಚಿಲ್ಲರೆ ಕಾಮಗಾರಿಗಳು ನಡೆಯುತ್ತಲಿದ್ದವು.

“ರಸ್ತೆಗಳು” ಎಂಬ ಹೆಸರಿನಲ್ಲಿ ಮುಖ್ಯವಾದ ಕಡೂರು ಡಿಸ್ಟ್ರಿಕ್ಟ್ ಚಿಕ್ಕಮಗಳೂರು ಬಳಿ ಭದ್ರಾನದಿಗೆ ಅಡ್ಡಲಾಗಿ ತಯಾರಾಗುತ್ತಿದ್ದ ಸೇತುವೆಯು ಪೂರೈಸಿತು. ಎತ್ತಿನಹೊಳೆ ಕಾವೇರಿನದಿಗೆ ಅಡ್ಡಲಾಗಿ ಕಟ್ಟಬೇಕಾದ ಹೊಸ ಸೇತುವೆಗೆ ಸಮರ್ಪಕ ಸ್ಥಳವನ್ನು ಆರಾಯಿಸಿ ಕಬ್ಬಿಣಕಂಬಗಳಿಗೆ ಮಾದರಿಯನ್ನು ಹಾಕಿ ಬಲಭಾಗದ ದಿಮ್ಮಿಯನ್ನು ಭರ್ತಿಮಾಡಿದ್ದಾಯಿತು.

“ಜನೋಪಕಾರವಾದ ಕಾಮಗಾರಿಗಳು” ಎಂಬ ಹೆಸರಿನಲ್ಲಿ ಮೈಸೂರು ಷಹರಿನಲ್ಲಿ ಚಾಮರಾಜಕಟ್ಟೆ ಹೊಸದಾಗಿ ಚಾಮರಾಜಪುರದಲ್ಲಿ ರಸ್ತೆ ವಗೈರೆ ಹಾಕತಕ್ಕದ್ದು ಲ್ಯಾನ್ಸ್‌ಡೌನ್ ಬಜಾರದ ಕಟ್ಟಡಗಳು ಈ ಮುಂತಾದ ಹಿಂದಿನ ವರ್ಷಗಳಲ್ಲಿ ಅಸಂಪೂರ್ತಿಯಾಗಿದ್ದ ಕಾಮಗಾರಿಗಳನ್ನು ಕಳೆದ ಸಾಲಿನಲ್ಲಿ ಪೂರೈಸಿರುತ್ತೆ. ಈ ನೀವೆಯಲ್ಲಿ ಚಿರಕಾಲ ಶ್ರೀಮನ್ಮಹಾರಾಜರವರಿಗೆ ಗಾರ್ಡಿಯನರಾಗಿಯೂ ಚೀಫ್ ಕಮಿಷನರಾಗಿಯೂ ಇದ್ದು, ರಾಜ್ಯಭಾರವನ್ನು ಶ್ರೀಮನ್ಮಹಾರಾಜರವರು ವಹಿಸಿದ ಈಚೆಗೆ ಮೊದಲನೆ ಬ್ರಿಟಿಷ್ ರೆಸಿಡೆಂಟಾಗಿದ್ದ ರಾಜತಂತ್ರನಿಪುಣರಾದ ಪ್ರಸಿದ್ಧರಾದ ಸರ್ ಜೇಮ್ಸ್ ಗಾರ್ಡನ್ ಕೆ ಸಿ ಎಸ ಐ ಯವರ ಜ್ಞಾಪಕಾರ್ಥವಾಗಿ ಅವರ ಶಿಲಾಸ್ಥಿರ ಅರ್ಧ ಪ್ರತಿಮೆಯನ್ನು ಲೋಹದಲ್ಲಿ ಮಾಡಿಸಿ ನಿಲ್ಲಿಸಿರುವದರನ್ನು ಈ ಷಹರಿನಲ್ಲಿ ಪಬ್ಲಿಕ್ ಆಫೀಸ ಕಟ್ಟಡದ ಬಳಿಯಲ್ಲಿ ಕಾಣಬಹುದು.

ಕಳೆದ ಸಂವತ್ಸರದಲ್ಲಿ ಬೆಂಗಳೂರು ಪೇಟೆಗೆ ಹಾಲಿ ಇರತಕ್ಕ ನೀರಿನ ಆಧಾರವು ಕಮ್ಮಿಯಾಗಿ ಸಬಿಯ ಹೆಬ್ಬಾಳದ ಕೆರೆಯಿಂದ ನೀರು ತರತಕ್ಕಬಗ್ಗೆ ಮಾಡಿದ ಯೋಗ್ಯತೆ ಹಂಗಾಮಿ ಏರ್ಪಾಟುಬಗ್ಗೆ ತಗಲಿದ ಖರ್ಚಿನಪೈಕಿ ಶ್ರೀಮನ್ಮಹಾರಾಜರವರ ಸರ್ಕಾರದವರ ಭಾಗಕ್ಕೆ ಬಂದ ಮೊಬಲಗು 51,616 ರೂಪಾಯಿಗಳಾಯಿತು.

ಬೆಂಗಳೂರು ಪೇಟೆಗೆ ಕುಡಿಯುವ ನೀರಿನ ಸರಬರಾಯಿ ವಿಷಯವು ವಿಶೇಷ ಚಿಂತೆಗೆ ಕಾರಣವಾಗಿ ಸರ್ಕಾರದ ಜಾಗರೂಕವಾದ ಆಲೋಚನೆಯಲ್ಲಿರುತ್ತೆ. ಹೆಸರಘಟ್ಟದ ಕೆರೆಯನ್ನು ಬಿಡಾಯಿಸಿ ಅಭಿವೃದ್ಧಿಪಡಿಸಿ ಬೆಂಗಳೂರು ಪೇಟೆಯ ನೀರಿನ ಸರಬರಾಯಿ ಬಗ್ಗೆ ಜಮೀನು ಸಾಗುವಳಿ ಬಗ್ಗೆ ಉಪಯೋಗಿಸಬೇಕೆಂದು ಸರ್ಕಾರದವರು ತೀರ್ಮಾನ ಮಾಡಿರುತ್ತಾರೆ. ಸದರೀ ಕೆರೆಯ ಬಿಡಾವಣೆ ಕಾಮಗಾರಿಯು ಅತಿ ಜಾಗ್ರತೆಯಿಂದ ನಡೆಯುತ್ತಲಿದೆ. ನೀರನ್ನು ಎತ್ತಿ ಒಂದು ಸ್ಥಳಕ್ಕೆ ತಂದು ತುಂಬಿಕೊಂಡು ಅಲ್ಲಿಂದ ಪೇಟೆಗೆ ಸರಬರಾಯಿ ಮಾಡತಕ್ಕ ವಗೈರೆ ಏರ್ಪಾಟುಗಳು ಕ್ಷಿಪ್ರವಾಗಿ ನಡೆದು ಸಾಧ್ಯವಾದಷ್ಟು ಜಾಗ್ರತೆಯಾಗಿ ಪೇಟೆಗೆ ನಿರಂತರವಾಗಿ ನೀರಿನ ಸರಬರಾಯಿ ಆಗುವಂತೆ ಮಾಡುತ್ತೆ. ಸಿವಿಲ್ ಮತ್ತು ಮಿಲಿಟರಿ ಸ್ಟೇಷನಿಗೆ ಪ್ರತ್ಯೇಕವಾಗಿ ನೀರಿನ ಸರಬರಾಯಿಬಗ್ಗೆ “ವಾಳಗಾಲಗ ಸ್ಕೀಂ” ಎಂಬ ಕಾಮಗಾರಿಯನ್ನು ಇಂಡಿಯಾ ಗವರ್ನಮೆಂಟಿನವರು ಮಂಜೂರು ಮಾಡಿದ್ದಾರೆಂದು ತಿಳಿಯಬರುತ್ತೆ.

ಮೈಸೂರು ಷಹರಿನಲ್ಲಿ ಅತೋದ್ಯತಿಯಾಗಿ ನೀರಿನ ಸರಬರಾಯಿ ಮಾಡತಕ್ಕ ಎಸ್ಟಿಮೇಟು 3 ಲಕ್ಷ ರೂಪಾಯಿ ಅಂದಾಜು ಮಂಜೂರಾಗಿರುತ್ತೆ. ಈ ಕಾಮಗಾರಿಯಿಂದ ಕಾವೇರಿನದಿ ನೀರನ್ನು ದೇವರಾಯ ನಾಲೆಯಲ್ಲಿ ದೊರಕುವ ಜಲಶಕ್ತಿಯ ಮೂಲಕ 237 ಅಡಿ ಎತ್ತರವಾದ ಸ್ಥಳಕ್ಕೆ ಎತ್ತಿ ಅಲ್ಲಿಂದ ಕಲ್ಲುಕಟ್ಟಿದ ನಾಲೆಮೂಲಕವಾಗಿ ತಂದು ಕ್ರಮವಾಗಿ ಶೋಧಿಸಿ ಹಾಲಿ ಕುಕ್ಕರಹಳ್ಳಿ ಕೆರೆಯ ನೀರಿನಿಂದ ಸರಬರಾಯಿ ಮಾಡಲು ಅಸಾಧ್ಯವಾದ ಪಟ್ಟಣದ ಉನ್ನತ ಪ್ರದೇಶಗಳಿಗೂ ಕೂಡ ಸರಬರಾಯಿ ಮಾಡುವುದಾಗುತ್ತೆ. ಈ ಪ್ರದೇಶಗಳ ಸರಬರಾಯಿಬಗ್ಗೆ ಅನೇಕ ವರ್ಷಗಳಿಂದ ಆಲೋಚನೆಯಲ್ಲಿದ್ದ ಇತರ ಕಾಮಗಾರಿಗಳು ಈ ಏರ್ಪಾಟಿನಿಂದ ಅನವಶ್ಯಕವಾಗುವವು.

ನೀರಾವರಿ ಕಾಮಗಾರಿಗಳು—ಮರಾಮತ್ತು ಪೈಕಿ ಕೇವಲ ಮುಖ್ಯವಾದ ನೀರಾವರಿ ಕಾಮಗಾರಿಗಳ ವಿಷಯವನ್ನು ಈಗ ನಿಮಗೆ ತಿಳಿಸುತ್ತೇವೆ. ಈ ಕಾಮಗಾರಿಗಳು ಎಂದಿನಂತೆ ಚೆನ್ನಾಗಿ ಜರಿಗಿವೆ. 1892—93 ನೇ ಸಾಲಿಗೆ ಈ ಬಾಬಿನಲ್ಲಿ 9,81,121 ರೂಪಾಯಿಗಳು ಖರ್ಚಾಗಿದೆ. ಹೋದವರುಷದ ಉಪನ್ಯಾಸದಲ್ಲಿ ಪ್ರಸ್ತಾಪವಾದ ಮುಖ್ಯವಾದ ಕೆರೆ ಮತ್ತು ನಾಲೆಗಳ ಕಾಮಗಾರಿಗಳು ಚೆನ್ನಾಗಿ ನಡೆದು ಕೆಲವು ಪೂರೈಸಿವೆ. ಈ ಕಾಮಗಾರಿಗಳ ಪೈಕಿ ಬಹುಭಾಗ ಹಿಂದಲ ವರುಷಗಳಲ್ಲಿ ಪ್ರಾರಂಭಿಸಿದ ನಿಂತ ಕಾಮಗಾರಿಗಳಾಗಿರುತ್ತವೆ. ಹೋದಸಾಲಿನಲ್ಲಿ ಪ್ರಾರಂಭಿಸಿದ ಕಾಮಗಾರಿಗಳ ತಖ್ಸೀಲ್,—

(1) ಚಿಕ್ಕನಾಯಕನಹಳ್ಳಿ ತಾಲ್ಲೂಕು ಬೋರನಕಣಿವೆ ಅಣೆ ಇದಕ್ಕಾಗಿ ಸುಮಾರು 2 ಲಕ್ಷ ರೂಪಾಯಿ ಖರ್ಚಾಗಿವೆ. ಈ ಅಣೆ ಏನಾಗಿ ನಾಲೆ ಕೆಲಸವು ಈಗ ನಡೆಯುತ್ತಲಿದೆ.

(2) ನೆಲ್ಯತಾಲ್ಲೂಕು ಪಂಚನಹಳ್ಳಿ ಕೆರೆ ಇದಕ್ಕಾಗಿ ನಾಟ್ಟಿದಲಾಗಿದ್ದು ರೂಪಾಯಿ 60,000.

(3) ಚಳ್ಳಕೆರೆ ತಾಲ್ಲೂಕಿನಲ್ಲಿ ರೇಕಲಗೆರೆ ಕಾಮಗಾರಿ ಲಾಗತಿನ ಮೊಬಲಗು ರೂಪಾಯಿ 1,30,000. ಇದರ ಕೆಳಗೆ ಇರುವ ಕೆರೆಗಳ ಪೈಕಿ ಹಲವು ಕೆರೆಗಳಿಗೆ ಎರಡಾವರ್ತಿ ಈ ನಾಲೆಯಿಂದ ನೀರು ತುಂಬಿಕೊಳ್ಳದು ತಿಳಿಯಬಂದು ಇದೆ.

(4) ಎಡತೊರೆ ತಾಲ್ಲೂಕಿನಲ್ಲಿ ರಾಮಸಮುದ್ರದ ನಾಲೆಯನ್ನು ಅಗಲಮಾಡುವರು. ಶಗ್ಗರೆ ಮತ್ತು ತಿಪ್ಪೂರು ನಾಲೆಗಳನ್ನು ಒದಾಯಿಸುವದು. ಈ ಕಾಮಗಾರಿಗಳು 1889 ನೇ ಡಿಸೆಂಬರ ಅಖೈರಿನಿಂದ ನಡೆಯುತ್ತಲಿವೆ. ಇವುಗಳಿಗಾಗಿ ಖರ್ಚು 83,000.

(5) ನಂಜನಗೂಡು ತಾಲ್ಲೂಕಿನಲ್ಲಿ ರಾಂಪುರದ ನಾಲೆ ಹಾವಳಿ ಲಾಗವು ಸುಮಾರು 1½ ಲಕ್ಷ ರೂಪಾಯಿ.

(6) ಶಿವಮೊಗ್ಗ ತಾಲ್ಲೂಕಿನಲ್ಲಿ ದಾನವಾಡಿ ಕೆರೆ ಕಾಮಗಾರಿ ಖರ್ಚು ರೂಪಾಯಿ 36,000.

(7) ಸೊಗಲ ಅಣೆಕಟ್ಟು ಮತ್ತು ನಾಲೆ ಕಾಮಗಾರಿ ಖರ್ಚು ರೂಪಾಯಿ 15,000.

(8) ಚಿಕ್ಕಮಗಳೂರು ತಾಲ್ಲೂಕಿನಲ್ಲಿ ಅರುಣಕಟ್ಟೆ ನಾಲೆ ಕಾಮಗಾರಿ ಖರ್ಚು ರೂಪಾಯಿ 20,000.

(9) ಕಡೂರು ತಾಲ್ಲೂಕಿನಲ್ಲಿ ಯಗಟಿ ಅಣೆಕಟ್ಟು ಮತ್ತು ನಾಲಾ ಕಾಮಗಾರಿ ಖರ್ಚು ರೂಪಾಯಿ 37,000.

(10) ಮಾಕಲೀ ಅಣೆಕಟ್ಟು ಮತ್ತು ನಾಲಾ ಕಾಮಗಾರಿ ಖರ್ಚು ರೂಪಾಯಿ 20,000.

ಹೋದವರ್ಷದಲ್ಲಿ ನಡೆಯುತ್ತಲಿದ್ದ ಇತರ ಮುಖ್ಯವಾದ ನೀರಾವರಿ ಕಾಮಗಾರಿಗಳನ್ನು ಈ ಕೆಳಗೆ ನಮೂದಿಸಿರುತ್ತೆ. ಇವುಗಳಲ್ಲೆಲ್ಲಾ ಕೆಲಸವು ತೃಪ್ತಿಕರವಾಗಿ ನಡೆದಿದೆ.

ಬೆಂಗಳೂರು ಡಿವಿಜನ—

(1) ತನ್ನೆರಡು ತಾಲ್ಲೂಕು ಬಿಂದೂರು ವಿರೂಪಾಕ್ಷಪುರದ ಕೆರೆ ಕಾಮಗಾರಿ ಅಂದಾಜು ರೂಪಾಯಿ 35,000. ಕಾಮಗಾರಿ ಪೂರೈಸಿದೆಯೆಂಬ ಕಲ್ಪೇ ಹೇಳಬೇಕು.

(2) ಹಿಟ್ಟೂರು ತಾಲ್ಲೂಕು ಮಳೂರು ಕೆರೆ ಕಾಮಗಾರಿ ಅಂದಾಜು ರೂಪಾಯಿ 21,000. ಇದು ಪೂರೈಸಿದಹಾಗೆಯೇ ಇದೆ.

(3) ದೊಡ್ಡಬಳ್ಳಾಪುರ ತಾಲ್ಲೂಕು ಉಜನೀಗಿರಿದಮ್ಮನ ಕೆರೆ ಕಾಮಗಾರಿ ಅಂದಾಜು ರೂಪಾಯಿ 22,000.

(4) ಹೊಸಕೋಟೆ ತಾಲ್ಲೂಕು ಸೂಲಿಬೆಲೆ ದೊಡ್ಡಕೆರೆ ಮತ್ತು ಚಿಕ್ಕಕೆರೆ ಅಂದಾಜು ರೂಪಾಯಿ 30,000 (ಸಶೇಷ).

ಅಕ್ರಮ

ನಮ್ಮ ವೃತ್ತಾಂತ ಪತ್ರಿಕೆಯನ್ನು ಚಂದಾದಾರರುಗಳಲ್ಲಿ ಎಲ್ಲರಿಗೂ ತಪ್ಪದೆ ಪ್ರತಿವಾರವೂ ಕ್ರಮವಾಗಿ ರವಾನಿಸುತ್ತೇವೆ. ಕೆಲವು ಮಂದಿ ಚಂದಾದಾರರು ತಮಗೆ ಪತ್ರಿಕೆಗಳು ಸಕಾಲಕ್ಕೆ ತಲಪುವದಿಲ್ಲವೆಂದು ಆಗಾಗ್ಯೆ ಬರೆಯುತ್ತಾರೆ. ಕೆಲವರಿಗೆ ತಲಪುವದೇ ಇಲ್ಲವೆಂದು ಬರೆಯುತ್ತಾರೆ. ಇದರಿಂದ ಅಂಥವರ ಮೇಲ್ವಿಳಾಸಗಳು ತಪ್ಪಾಗಿರಬಹುದು, ಇಲ್ಲವೆ ಸಬ್ ಆಫೀಸಿನಿಂದ ಜವಾನರು ಆಯಾ ಕಡೆಗಳಲ್ಲಿ ಸರಿಯಾಗಿ ಡಿಲಿವರಿ ಮಾಡದೆ ಇರಬಹುದು. ಎಂಬೀ ಎರಡು ಊಹೆಗಳು ಹುಟ್ಟುತ್ತವೆ. ಪತ್ರಿಕೆಗಳು ಯಾರ್ಯಾರಿಗೆ ಸಕಾಲಕ್ಕೆ ತಲಪುವದಿಲ್ಲವೋ ಅಂಥವರು ತಮ್ಮ ಸರಿಯಾದ ವಿಳಾಸವನ್ನು ಚೆನ್ನಾಗಿ ಬರೆದು ತಿಳಿಸಬೇಕು. ಮತ್ತು ಸಬ್ ಆಫೀಸಿನ ಪೋಸ್ಟುಮ್ಯಾಸ್ಟರುಗಳು ತಮ್ಮ ತಮ್ಮ ಡಿಲಿವರಿ ಪ್ಯೂನುಗಳಿಗೆ ಸರಿಯಾಗಿ ಪಂಪತಿ ಮಾಡುವಂತೆ ಹುಕುಂ ಮಾಡಬೇಕು ಎಂಬದಾಗಿ ಈ ಮೂಲಕ ಅವರವರಿಗೆ ತಿಳಿಯಪಡಿಸಿರುತ್ತೇವೆ.

ಎಡಿಟರ.

ವೃತ್ತಾಂತ ಪತ್ರಿಕೆ

ಶಾಲಿವಾಹನಶಕ ೧೮೧೫ ನೇ ವಿಜಯನಾಮ ಸಂವತ್ಸರದ ಕಾರ್ತಿಕಶುದ್ಧ ಪಾಡ್ಯ ಗುರುವಾರದಿಂದ ಕಾರ್ತಿಕಶುದ್ಧ ಸಪ್ತಮಿ ಬುಧವಾರದ ವರೆಗಿನ ವಾರದ ಪಂಚಾಂಗ

೧೮೯೩ ನೇ ಇಸವಿ, ನವೆಂಬರ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ತುಲಾ ಮಾಸ ತೇದಿ
9	ಗು *	ಪ.	29-21,	ಪಿ	12-23	26
10	ಶು	ಬಿ	14-7	ಮೂ	16-11	27
11	ಶ	ತ	39-12	ಜ್ಯೆ	21-18	28
12	ರ	ಚ	44-12	ಮೂ	30-53	29
13	ಸೋ †	ಪಂ	50-19	ಪೂ	37-42	30
14	ಮಂ	ಷ	54-21	ಉ	45-8	1
15	ಬು	ಸ	57-59	ಶ್ರ	45-1	2

* ದೀಪಾವಳಿಹಬ್ಬ * ರಾಣಿಪಟ್ಟಕ್ಕೆ ಯೋಗ್ಯವಾದ ಬ್ರಿಗೇಡ್ ದೊರೆ ಬಂದ † ಕಾರ್ತಿಕಸೋಮವಾರ

ಪೇಟೆ ಧಾರಣೆ.

ಜಿನಸಿ	ಮೈಸೂರು	ಬೆಂಗಳೂರು.
	ರೂ ಆ ಪೈ	ರೂ ಆ ಪೈ
ಕಡ್ಡೀ ಅಕ್ಕಿ ಪಲ್ಲ ೧ಕ್ಕೆ	೧೨-೮-೦	೧೨-೮-೦
ಶೆಂಬೂತಿ ಅಕ್ಕಿ ಅನ್ವರ್	೧೨-೪-೦	೧೦-೧೨-೦
ಬಟೋ ಅಕ್ಕಿ ದಪ್ಪಂ	೧೨-೦-೦	೧೦-೮-೦
ಜಾದದಾಣಿ ಅಕ್ಕಿ	೧೨-೧೨-೦	೧೧-೦-೦
ಸಂಣಕ್ಕಿ ಅನ್ವರ್	೧೬-೮-೦	೧೪-೦-೦
ಬಟೋ ಅಕ್ಕಿ ದಪ್ಪಂ	೧೬-೦-೦	೧೨-೮-೦
ತೊಗರೀಬೇಳೆ ಪಲ್ಲ ೧ಕ್ಕೆ	೧೬-೦-೦	೧೬-೮-೦
ಬಟೋ ದಪ್ಪಂ ಅರಕ	೧೨-೮-೦	೧೨-೮-೦
ಪೈರಾಗಿ ಪಲ್ಲ ೧ಕ್ಕೆ	೪-೪-೦	[illegible]-೦-೦
ಕಾರಾಗಿ	೪-೨-೦	[illegible]-೦-೦
ಹಲಸಂದೆ ಪಲ್ಲ ೧ಕ್ಕೆ	೧೦-೮-೦	೯-೮-೦
ಬಿಳೀ ಅವರೆ	೧೬-೮-೦	೧೨-೦-೦
ಹೆಸರು	೧೦-೦-೦	೧೦-೧೦-೦
ಉದ್ದು	೧೧-೦-೦	೧೧-೦-೦
ಕಡಲೆ	೧೨-೮-೦	೯-೧೨-೦
ಎಳ್ಳು	೧೪-೦-೦	೧೦-೮-೦
ಹುರಳಿ	೬-೨-೦	೬-೬-೦
ಸೀಗೆಕಾಯಿ ಮಣ ೧ಕ್ಕೆ	೨-೦-೦	೨-೦-೦
ಮೆಣಸಿನಕಾಯಿ	೪-೮-೦	೪-೧೨-೦
ದನಿಯಂ ಅರಕ	೪-೪-೦	೪-೮-೦
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ	೬-೮-೦	ರು ೨-೨-೦
ಸಣ್ಣ ಅಚ್ಚು ,,	೬-೦-೦	[illegible]
ಬೆಳ್ಳುಳ್ಳಿ ಮಣ ೧ಕ್ಕೆ	೪-೧೨-೦	೪-೧೪-೦
ಹರಳೆಣ್ಣೆ	೪-೧೨-೦	೪-೮-೦
ಕೊತ್ತುಂಬರಿ ಪಲ್ಲ ೧ಕ್ಕೆ	೬-೨-೦	೮-೦-೦
ಉಪ್ಪು	೧೦-೮-೦	೯-೧೨-೦
ಹುಣಸೇಹಣ್ಣು ಮಣ ೧ಕ್ಕೆ	೨-೦-೦	೧-೧೪-೦
ಕಳೇ ಹುಣಸೇಹಣ್ಣು ,,	೦-೧೨-೦	೧-೧೨-೦
ತುಪ್ಪ	೧೪-೦-೦	೧೨-೦-೦
ಸೀಮೆ ಎಣ್ಣೆ ಟಿಪ್ಪ ೧ಕ್ಕೆ	೪-೨-೦	೪-೧೫-೦
ತೆಂಗಿನಕಾಯಿ ೧೦೦ಕ್ಕೆ	೫-೮-೦	೪-೪-೦
ಚಿನ್ನ (ಪವನ್)		
ಕೆಂಪು	೧೬-೧೦-೦	೧೬-೪-೦
ಪಸಿಮೆ	೧೬-೬-೦	೧೬-೧೦-೦
ಗಟ್ಟಿ	೨೬-೨-೦	೨೬-೨-೦

Mysore—Printed and published for the Proprietor at the Wesleyan Mission Press
9/11/93.

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು — ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಸಂಪುಟ ೭ — ಮೈಸೂರು—ಸನ್ ೧೮೯೬ ನೇ ಇಸವಿ ನವಂಬರ್ ತಾರೀಖು ೧೬ ನೇ ಗುರುವಾರ. — ಸಂಚಿಕೆ ೨೪

ನೋಟಿಸ್.

		ಕ್ರಯ	ಹಾಸಲು ಸಹಿತವಾಗಿ
Campbell's.	ಕನ್ನಡ ವ್ಯಾಕರಣ ಸಾರ	೧ ೨ ೬	೧ ೨ ೬
Object Lessons.	ವಸ್ತು ಪಾಠಗಳು	೨ ೧ ೦	೪ ೧ ೬
Picture do	ಚಿತ್ರಗಳು ಸಹಿತವಾಗಿ	೦ ೨ ೦	೦ ೨ ೬
School Geography	ಭೂಗೋಳ ಶಾಸ್ತ್ರಸಾರ	೦ ೬ ೦	೦ ೬ ೦

ಈ ನಾಲ್ಕು ಪುಸ್ತಕಗಳು ಮೈಸೂರು ಸರ್ಕಾರದವರ ಅಪ್ಪಣೆ ಪ್ರಕಾರ ಸಕಲ ಮತ ಶಾಲೆಗಳಲ್ಲಿಯೂ ಉಪಯೋಗಿಸತಕ್ಕವುಗಳು.

	ಕ್ರಯ	ಹಾಸಲು ಸಹಿತವಾಗಿ
ಮಾರ್ಟಿನ್ ಲೂಥರ್ ಎಂಬವರ ಚರಿತ್ರೆ	೦ ೧ ೬	೦ ೨ ೦
ಸ್ತ್ರೀಯರು ಓದತಕ್ಕ ಪುಸ್ತಕ	೦ ೫ ೦	೦ ೫ ೬
ಗಣಿತ ಮಗ್ಗಿಗಳು ..	೦ ೧ ೦	೦ ೧ ೬
ಸಂಸ್ಕೃತ ಕರ್ನಾಟಕ ಭಾಷಾಮಂಜರಿ	೦ ೨ ೦	೦ ೨ ೬
ಇಂಗ್ಲೀಷೂ ಕನ್ನಡವೂ ಶಬ್ದಾವಳಿ ೧ನೇ ೨ನೇ ಭಾಗಗಳಕ್ಕೆ	೦ ೧ ೦	೦ ೧ ೬
ಕಾವ್ಯಮಾಲೆ (Minor Poetical Anthology)	೦ ೮ ೦	೦ ೮ ೬
ಬಾಲವ್ಯಾಕರಣ ..	೦ ೫ ೦	೦ ೫ ೬
ಹಳಗನ್ನಡ ವ್ಯಾಕರಣ ಸೂತ್ರಗಳು	೦ ೬ ೦	೦ ೬ ೬
ಇಂಗ್ಲೀಷೂ ಕನ್ನಡವೂ ಸಂಭಾಷಣ ವಾಕ್ಯಗಳು	೦ ೧೦ ೦	೦ ೧೦ ೬
ಶಬ್ದಮಣಿ ದರ್ಪಣ ..	೧ ೦ ೦	೧ ೪ ೬
Kan. Eng. Pocket Dictionary	೧ ೪ ೦	೧ ೫ ೩
Eng. Kan. School Dictionary	೨ ೧೦ ೦	೨ ೧೨ ೬
ಒಳ್ಳೇ ತಾಯಿ ..	೦ ೪ ೭	೦ ೪ ೬
ಆತ್ಮೀಕ ದಿವ್ಯ ಯುದ್ಧ (Bunyan)	೦ ೧೨ ೦	೦ ೧೩ ೬
ಕ್ರೈಸ್ತ ಪದ್ಧತಿ ೧ ನೇ ಭಾಗ ೨ ೞು ೩ನೇ ಭಾಗ	೦ ೧ ೬	೦ ೨ ೦
ಭಕ್ತಿಸಾರ	೦ ೧ ೦	೦ ೧ ೬
ಸತ್ಯ ವಾಕ್ಯಾಸಿ	೦ ೧ ೦	೦ ೧ ೬

ಈ ಪುಸ್ತಕಗಳೂ ಇನ್ನೂ ಅನೇಕ ಪ್ರಯೋಜನಕರವಾದ ಪುಸ್ತಕಗಳೂ ಕೆಳಗೆ ನಮೂದಿಸಿರುವ ಸ್ಥಳಗಳಲ್ಲಿ ದೊರಕುತ್ತವೆ.

ಬೆಂಗಳೂರು—ಪೇಟೆಯ ಹತ್ತಿರವಾದ ಪುಸ್ತಕಶಾಲೆ.

ಚಿಕ್ಕಬಳ್ಳಾಪುರ—ಲಂಡನ್ ಮಿಷನ್ ರೀಡಿಂಗ್ ರೂಮ್

ತುಮಕೂರು—ವೆಸ್ಲಿಯನ್ ಮಿಷನ್ ಬಂಗಳೆ. ಮೈಸೂರು—ವೆಸ್ಲಿಯನ್ ಮಿಷನ್ ಪ್ರೆಸ್.

ಸನ್ ೧೮೯೬ ರಲ್ಲಿ ಸ್ಥಾಪಿಸಲ್ಪಟ್ಟದ್ದು.

ಕೆನರಾ ಅಂಡ್ ಮೈಸೂರ ಟ್ರೇಡಿಂಗ್ ಕಂಪನ್ನೀ ಆಫೀಸ್, ಮುಂಬಯಿ.

ಇವರು ತಯಾರಿಸಿರುವಂಥ—

ರತ್ನೌಷಧಾತೈಲ.

ಕಳೆದ ೨ ವರುಷ ತಿಂಗಳುಗಳಿಂದಲಿಲ್ಲ ೫೦೦೦ ಬಾಟ್ಲಿಗಳು ಖರ್ಚಾದವು. ಈ ತೈಲದ ಮಹತ್ವವನ್ನು ಕುರಿತು, ನಾವೀಗ ಹೆಚ್ಚಾಗಿ ವರ್ಣಿಸಲಾರೆವು—ಯಾಕೆಂದರೆ, ಯಾರು ಈ ತೈಲವನ್ನು ಉಪಯೋಗಿಸುತ್ತಾರೋ ಅವರಿಗೆ ಒಂದೆರಡು ದಿವಸಗಳಲ್ಲಿಯೇ ಇದರ ಅಪ್ರತಿಮವಾದ ಗುಣವು ಸಹಜವಾಗಿ ಅನುಭವಕ್ಕೆ ಬರುವದು. ಆದಾಗ್ಯೂ ಇದರ ಮುಖ್ಯವಾದ ಉಪಯೋಗವನ್ನು ತಿಳಿಸುವದು ನಮ್ಮ ಕರ್ತವ್ಯವಾಗಿರುತ್ತದೆ.

ಈ ನಮ್ಮ "ರತ್ನೌಷಧಾತೈಲವನ್ನು" ಪ್ರತಿದಿನ ತಲೆಗೆ ಹಾಕಿಕೊಂಡರೆ ಮಿದುಳಿನಲ್ಲಿರುವ ಉಷ್ಣವನ್ನು ಪರಿಹರಿಸುವದಲ್ಲದೆ, ಕಣ್ಣಿಗೂ, ಮಿದುಳಿಗೂ ತಂಪುಕೊಡಿಸಿ, ಚಿತ್ತಕ್ಕೆ ಉಂಟಾಗುವ ಸಣ್ಣಂಟುಮಾಡುವ ಮತ್ತು ಕಣ್ಣುಗಳಿಗುಂಟಾಗುವ ಸಾಮಾನ್ಯವಾದ ವಿಕಾರಗಳನ್ನೆಲ್ಲ ಪರಿಹರಿಸುವದು. ದೃಷ್ಟಿಗೆ ತೀಕ್ಷ್ಣತೆಯುಂಟಾಗುವದು.

ಹುಡುಗರಿಗೆ ಓದತಕ್ಕವರಿಗೂ, ಒಂದೇ ಸಮನಾಗಿ ಕುಳಿತು ಬರೆಯುವ ಮಾಡತಕ್ಕ ಕಸಬುಗಾರರಿಗೂ, ರಾತ್ರಿಗಳಲ್ಲಿ ನಿದ್ದೆ ಕೆಡುವವರಿಗೂ, ಉಷ್ಣದೇಹಿಗಳಿಗೂ, ಚಿತ್ತವ್ಯಗ್ರವಾದವರಿಗೂ, ಅತ್ಯಂತ ಗುಣಕಾರಿಯಾಗಿರುವದು. ಈ ತೈಲದಲ್ಲಿರುವ ಇನ್ನೊಂದು ಅಪ್ರತಿಮವಾದ ಶಕ್ತಿಯೇನೆಂದರೆ—ಕೂದಲುಗಳನ್ನು ನಯವಾಗಿಯೂ, ಹೊಳಪುಳ್ಳಂತೆಯೂ, ಮಾಡುವದಲ್ಲದೇ ಬೆಳವಣಿಗೆಯನ್ನು ಹೆಚ್ಚಿಸುವದು. ಕೂದಲುಗಳ ಬೇರುಗಳನ್ನು ಗಟ್ಟಿಮಾಡಿ ಅವು ಉದರಿಹೋಗದಂತೆ ಮಾಡುವದು.

ಪ್ರತಿಯೊಂದು [illegible] ಸೀಸೆಗೆ ೧೬ ತೊಲೆ ತೈಲವಿರುವದರಿಂದ ಒಬ್ಬನಿಗೆ ೨ ತಿಂಗಳು ಹೆಚ್ಚಿಗೆ [illegible] ಉಪಯೋಗಿಸಬೇಕೆಂಬದಕ್ಕಾಗಿ ಪ್ರತಿಯೊಂದು ಬಾಟ್ಲಿಗೆ ೧ ರೂ. [illegible] ೧೨ ಬಾಟ್ಲಿಗಳುಳ್ಳ ೧ ಪೆಟ್ಟಿಗೆಗೆ ೬॥ ರೂ. [illegible] ಪ್ರತಿಯೊಬ್ಬ ಕುಟುಂಬಿಗನೂ, ಈ ತೈಲವನ್ನು ಉಪಯೋಗಿಸುವದು ಅವಶ್ಯವಾಗಿರುತ್ತದೆ. ಮಕ್ಕಳುಮರಿಗಳ [illegible] ಈ ತೈಲವು ಸುವಾಸನೆಯಾಗಿರುತ್ತದೆ.

ಈ ತೈಲ ಮತ್ತು ಈ ಕೆಳಗೆ ಬರೆಯುವಂಥ ಔಷಧಗಳು, ಡ್ರೆಸ್ಸು, ಮುತ್ತು, ರತ್ನ, ಬಂಗಾರ, ಬೆಳ್ಳಿ ಮುಂತಾದ ಸಾಮಾನುಗಳನ್ನು ಪಡೆಯಲಿಚ್ಛಿಸುವವರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬೇಕು.

ಮ್ಯಾನೇಜರ್, ಕೆನರಾ ಅಂಡ್ ಮೈಸೂರು ಟ್ರೇಡಿಂಗ್ ಕಂಪನ್ನಿ ಆಫೀಸ್, ಮಾರ್ಕೆಟ್ ಪೋಸ್ಟ್. ಮುಂಬಯಿ.

ಜೋ: ಈ ತೈಲವನ್ನು ನಮ್ಮ ವಿನಹ ಇನ್ಯಾರೂ ಮಾರುವದಿಲ್ಲ. ನಮ್ಮ ಹೆಸರಿನ ಗುರ್ತನ್ನು ನೋಡಿ ತೆಗೆದುಕೊಳ್ಳಬೇಕು. ಬೇರೇತರದ ಎಣ್ಣೆಗಳನ್ನು ಈ ಹೆಸರಿನಿಂದ ಮಾರುತಿದ್ದರೆ ಜಾಗ್ರತೆ ಪಡಿರಿ!

ವಿವರಗಳು.	ರೂ ಆ.	ಡ್ರೆಸ್ಸುಗಳು.	ರೂ. ಆ.
ನಯನಾಮೃತಭಸ್ಮ ಬಾಟ್ಲಿ ೧ ಕ್ಕೆ	೧—೬	ಮಾಲವ್ಯಾಧಿಗೆ ಮದ್ದು	೨—೮
ನಯನಾಮೃತ ಕಾಡಿಗೆ	೧—೬	ಆರ್ಯಸಮಾಜ ಅಂಗಿಕೋಟು	೫—೦
ಕರ್ಣಸ್ರಾವನಾಶಕ ಅಪ್ರತಿಮತೈಲ	೧—೦	ಡಿಟ್ಟೊ. ಅರ್ಧಸೆರಿ	೩—೮
ಮಾಹಾವಾತಶಾಂತಿತೈಲ	೧—೦	ಡಿಟ್ಟೊ. ಪಾರ್ಸಿಕೋಟು (ಇಂಗ್ಲಿಷತರಹ)	೩—೬
ಪ್ರವಾಳಭಸ್ಮವು	೨—೧೨	ದಪ್ಪನಾದ ಕಮ್ಮಿಸರಕೋಟು	೨—೮
ವಿವಿಧ ಜ್ವರ ಗುಳಿಗೆಯು	೧—೦	ಡಿಟ್ಟೊ. ಅರ್ಧಸೆರಿ	೨—೪
ಬಾಲಸಂಜೀವಿನಿ ಗುಟಿಕೆ	೬—೮	ಫ್ಲಾನಲ್ ಶರ್ಟ್ಸ್	೧—೧೨
ಅಜೀರ್ಣವಾತಪ್ರ	೦—೮	ಡಿಟ್ಟೊ ಬನಿಯನ್	೧—೪
ಸುಗಂಧಕಾರಕಮಂಜನವು	೦—೪	ಚೆಳಿ (ಇಂಗ್ಲಿಷಮಾದರಿ) ಶರ್ಟ್	೧—೧೨
ಶಕ್ತಿದಾಯಕ [illegible]	೦—೨		

ಕೆನರಾ [illegible] ಚಂದ್ರೋದಯ [illegible] ಕನ್ನಡ [illegible] ಕ್ರಯ ರೂ. ೧—೪॥—೫—೪॥. ಉತ್ತಮವಾದ [illegible] ಎಂಬ ಕನ್ನಡ [illegible] (೧ ವರುಷದ [illegible]) ಕ್ರಯ ರೂ. ೬.

ನೋಟಿಸ್

ಪುಸ್ತಕಗಳು.	ಕ್ರಯ.
ಕ್ರಿಯಾವ್ಯ ಮಾಲಿಕೆ	1—8—0
ಕನ್ನಡ ಇಂಗ್ಲೀಷು ನಿಘಂಟು 1 ನೇ ದೊಡ್ಡ ತರಹ	3—0—0
,, ,, 2 ನೇ ತರಹ	2—8—0
ಬಾಲಕರು ಓದುವ ಎರಡನೆ ಜ್ಞಾನೋಪದೇಶದ ಪ್ರಶ್ನೋತ್ತರಗಳು	0—1—0
ಸ್ನಾನದ ನಿಯಮಗಳನ್ನು ಕುರಿತದ್ದು	0—0—6
ಕಥಾ ಸಂಗ್ರಹ 1 ನೇ ಭಾಗದಿಂದ 3 ವರೆಗೆ	1—0—0
ಕಥಾ ಸಂಗ್ರಹ 4 ರಿಂದ 6 ನೇ ಭಾಗ ಹೊಸ ಛಾಪಿ	1—0—0
,, ,, ದೊಡ್ಡ ತರಹ	1—8—0
ಜೋಡಕಾಸಕ್ಕೆ ಪೋಷಿನಿ	0—4—0
ಸತ್ಯವೇದವನ್ನು ಕುರಿತು 2 ನೇ ಭಾಗ	0—1—0
ಪ್ರಸಂಗಿಯ ದರ್ಪಣ	0—0—6
ಇಂಗ್ಲೀಷುಭಾಷೆಯಲ್ಲಿಯೂ, ಕನ್ನಡ ಭಾಷೆಯಲ್ಲಿಯೂ, ಶಬ್ದಗಳ ವಿಭಾಗಗಳನ್ನು ವಿವರಿಸುವ ನಿಘಂಟು	0—2—0
ಕನ್ನಡ ವ್ಯಾಕರಣ (ಇಂಗ್ಲೀಷಿನಲ್ಲಿ)	2—0—0
ಹಿಂದೂಸ್ತಾನಿ ವ್ಯಾಕರಣ	1—0—0
ಬಾಲಬೋಧಿನೀ ಸೋಪಾನವು	0—12—0
ದಶ ಕರಣಗಳ ಅಂಕುರೋಗನಿವಾರ	0—0—6
ಕ್ರೈಸ್ತರ ಶೋಧನೆಗಳ ಸಂಪಾದಿಸು	0—12—0

ಮೇಲೆ ನಮೂದಿಸಿರುವ ಪುಸ್ತಕಗಳನ್ನು ಅಪೇಕ್ಷಿಸುವವರು ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್ಸಿಗೆ ಬರೆದು ತರಿಸಿಕೊಳ್ಳಬಹುದು ಅಂಚೆ ಹಾಸಲು ಬೇರೆ ಕೊಡತಕ್ಕದ್ದು.

ವೆಸ್ಲಿಯನ್ ಮಿಷನ್ ಪ್ರೆಸ್,

ಮೈಸೂರು.

ಪ್ರಸಿದ್ಧಪತ್ರಿಕೆ

ಶ್ಲೋ॥ ಸಕಲಸುಮನಸಾಂಗಳುಮವೆ [illegible] ಬುಧಮನೋಹರದಿಂ [illegible] ಪ್ರಕಟಿಸುವ [illegible] ವಿಕಸಿಸುರೀತಿಯದ ಕೇಳಲ್ಕನಿಕಾನಂದಂ ॥

ಕನ್ನಡ ಮಹಾಭಾರತ.

"ಶ್ರೀಕೃಷ್ಣರಾಜ ವಾಣೀವಿಲಾಸ" ಎಂಬ ಕನ್ನಡ ಮಹಾಭಾರತವು ನಮ್ಮ ಸ್ವಕೀಯ ಶ್ರೀಚಾಮರಾಜೇಶ್ವರಿ ಪ್ರೆಸ್ಸಿನಲ್ಲಿ ಪ್ರಕಟಿಸಲಾಗುವದಾ ಯಲ್ಲರಿಗೂ ವಿದಿತವಾಗಿರುವುದು. ಈಗ ಐದನೇ ಪರ್ವಗಳೂ ಪೂರ್ತಿಯಾಗಿ ಪ್ರತ್ಯೇಕ [illegible] ಕೊಳ್ಳುವವರು ಕೆಳಗೆ ವಿವರಿಸುವ ಕ್ರಯದಮೇಲೆ ಕ್ರಯ ಪಾವತಿಮಾಡಿ ಪಡೆಯಬಹುದು.

ಆದಿಪರ್ವ ರೂ ೩, ಸಭಾಪರ್ವ ೧—೮—೦, ಆರಣ್ಯಪರ್ವ.. ವಿರಾಟಪರ್ವ [illegible] ೧ ಆಣೆ, ಡಿಟ್ಟೊ [illegible] ೧ ರೂ, ಉದ್ಯೋಗಪರ್ವ [illegible] ದ್ರೋಣಪರ್ವ [illegible], ಕರ್ಣಪರ್ವ.. ಶಲ್ಯಪರ್ವ [illegible] ಸೌಪ್ತಿಕಪರ್ವ ೬ ಆಣೆ, ಸ್ತ್ರೀಪರ್ವ ೬ ಆಣೆ, ಶಾಂತಿಪರ್ವ ರಾಜಧರ್ಮ [illegible], ಆಪದ್ಧರ್ಮ [illegible], ಮೋಕ್ಷಧರ್ಮ [illegible], ಅನುಶಾಸನಿಕಪರ್ವ [illegible] ಅಶ್ವಮೇಧಿಕ [illegible], ಆಶ್ರಮವಾಸಿಕಪರ್ವ—ಮೌಸಲಪರ್ವ—ಮಹಾಪ್ರಸ್ಥಾನಿಕಪರ್ವ—ಸ್ವರ್ಗಾರೋಹಣಪರ್ವ ೧೧ ಆಣೆ, ಭಗವದ್ಗೀತೆ ೮ ಆಣೆ, ಯುಧಿಷ್ಠಿರನ ಚರಿತ್ರೆ ೩ ಆಣೆ, ಹರಿಭಕ್ತಿಸಾರ ೬ ಪೈ, ಲೋಕೋಪಕಾರ [illegible] ೮ ಆಣೆ.

ಆರಣ್ಯಪರ್ವ, ಉದ್ಯೋಗಪರ್ವ, ಕರ್ಣಪರ್ವ ಈ ಮೂರು ಪರ್ವಗಳು ಗೌರ್ನಮೆಂಟ್ ಬುಕ್‌ಡಿಪೋವಿನಲ್ಲಿ ದೊರೆಯುವವು. ಮೇಲೆ ಹೇಳಲ್ಪಟ್ಟಿರುವ ಪುಸ್ತಕಗಳು ನಮ್ಮಲ್ಲಿ ಸ್ವಲ್ಪವೇ ಇರುವದರಿಂದ ಜಾಗ್ರತೆಯಾಗಿ ತರಿಸಿಕೊಳ್ಳಬಹುದು. ಶ್ರೀಮನ್ಮಹಾರಾಜರವರಿಗೆ ಫಲಪುಷ್ಪ ಸರಬರಾಯಿ ಮಾಡುವವರಿಗೆ ಮುಖ್ಯವಾಗಿ ನೇಮಿಸಲ್ಪಟ್ಟ.

ಎಂ. ರಾಮಪ್ಪ, ಅಂಡ್ಸನ್,

ಪ್ರೊಪ್ರೈಟರ್ಸ್, ಶ್ರೀಚಾಮರಾಜೇಶ್ವರಿ ಪ್ರೆಸ್.

ಲಾಲ್—ಬಾಗ್ ರೋಡ್, ಬೆಂಗಳೂರು

ವೃತ್ತಾಂತ ಪತ್ರಿಕೆ.

ಚಂದಾ ನಿರ್ಣಯ.

	ರೂ ಆ. ಪೈ.
ಸ್ಥಳದವರಿಗೆ ವರ್ಷ ೧ಕ್ಕೆ	೧—೦—೦
ಪರ್ಸ್ಥಳದವರಿಗೆ ವರ್ಷ ೧ಕ್ಕೆ	೧—೧೨—೦
ಬಿಡಿ ಪ್ರತಿಗೆ ೧ಕ್ಕೆ	೦—೦—೩

ಈ ಪತ್ರಿಕೆಯು ಮೈಸೂರು ಪಟ್ಟಣದಲ್ಲಿ ಪ್ರತಿ ಗುರುವಾರ ಪ್ರಕಟಿಸಲ್ಪಡುವದು, ಪ್ರಕಟಿಸಲ್ಪಡುವದು [illegible] ವರು ಮೊದಲಾಗಿ ನಮ್ಮಲ್ಲಿಗೂ ಸೂಚನೆಗಳನ್ನು ಗುರುತ ಈ ಪತ್ರಿಕೆಗೆ ಇಷ್ಟು ಅಲ್ಪ ಮೌಲ್ಯವನ್ನು ನಿರ್ಣಯಿಸಿರುತ್ತೇವೆ. ಈ ಪತ್ರಿಕೆಯನ್ನು ಅಪೇಕ್ಷಿಸುವವರು ಚಂದಾಹಣವನ್ನು ಮುಂಗಡವಾಗಿ ಕೊಡತಕ್ಕದ್ದು.

ಎಡಿಟರ್,

ವೃತ್ತಾಂತ ಪತ್ರಿಕೆ

ಟೋಪಿಗಳು!

ಟೋಪಿಗಳು!! WOOL CAPS ಟೋಪಿಗಳು!!

ಹಾಸನದ ಅನಾಥಶಾಲೆಯಲ್ಲಿ ತಯಾರಾಗುವಂಥ ಉಣ್ಣೆ ಕಂಫರ್ಟರ್ ಟೋಪಿಗಳೇ (Wool Caps) ನಮ್ಮ ಆಫೀಸಿನಲ್ಲಿ ಮಾರಿಕೆಗೆ ಸಿದ್ಧವಾಗಿರುತ್ತವೆ. ಕ್ರಯ—೧ ರೂ. ೨ ಆಣೆ ಇಂದ ೧ ರೂ. ೬ ಆಣೆಗೆ ವರೆಗೂ ಬೇರೆ ಬೇರೆ ರಂಗುಗಳುಂಟು. ಸ್ಥಳದವರು ಬಂದು ನೋಡಿ ಪಡೆಯಬಹುದು. ಪರಸ್ಥಳದವರು ಮುಂಗಡವಾಗಿಯೋ ಹಣ ಕಳುಹಿಸಿದ್ದ ಪಕ್ಷದಲ್ಲಿ ಛಾಪಿಗೇ ಮೂಲಕ ಕಳುಹಿಸುತ್ತೇವೆ. ಛಾಪಿಗೇ ಛಾರ್ಜ್ ಬೇರೆ ಕೊಡಬೇಕು. ಮೇಲುವಿಳಾಸದಲ್ಲಿ ಟೋಪಿಗೆ ಸಂಬಂಧವಾದದ್ದು ಎಂದು ಬರೆಯಬೇಕು.

ಮ್ಯಾನೇಜರ್,

ವೆಸ್ಲಿಯನ್ ಮಿಷನ್ ಪ್ರೆಸ್,

ಮೈಸೂರು.

MUNICIPAL NOTICE

The following business will be transacted at the Ordinary meeting of the Municipal Commissioners for the CITY OF MYSORE, to be held at the Town Hall, on Saturday, the 25th of November 1893 at 8 o'clock in the Morning.

Subjects

I. Consideration of accounts of Receipts and disbursements for the month of Oct 1893

II. Consideration of the Report of the Sub Committee in connection with the proposal to open a lane to the east of Mr Bank Lingamma's house in the Krishnaraj Mohalla

III. Consideration of the report of the Vice-President on his negociation with the owner of the Durgma's Gunta in Yelwal road in pursuance of the resolution of the board dated 24th June 1893

Municipal Board's Office, Mysore, 11th Nov. 1893

A. COOPOOSAWMY,
For President

ವೃತ್ತಾಂತ ಪತ್ರಿಕೆ.

೧೮೯೩ನೇ ಇಸವಿ ನವೆಂಬರ್ ತಾ|| ೧೬ನೇ ಗುರುವಾರ

ಭಯಂಕರವಾದ ರೈಲಿನ ಅಪಾಯ.

ಕಳೆದ ಬುಧವಾರ ಪ್ರಾತಃಕಾಲ ೩ ಘಂಟೆಗೆ ಸ್ಟೇಷನ್ನನ್ನು ಬಿಟ್ಟ ಮದರಾಸ್ ರೈಲುಗಾಡಿಗಳಿಗೆ ಅಪಾಯವು ಸಂಭವಿಸಿತೆಂತಲೂ, ಅದರಿಂದ ಅನೇಕ ಜನರಿಗೆ ಪ್ರಾಣಹಾನಿಯುಂಟಾಯಿತೆಂತಲೂ ವರ್ತಮಾನ ಬಂತು. ಮದರಾಸಿನಿಂದ ಮೊನ್ನಾರ ಇಪ್ಪತ್ತನೇ ಮೈಲಿಯಲ್ಲಿ ೯ನೇ ಟೆಲಿಗ್ರಾಫ್ ತಂತಿಯ ಕಂಭಕ್ಕೂ ೧೦ನೇ ಟೆಲೀ ಕಂಭಕ್ಕೂ ನಡುವೆ ವಿಪರೀತ ಮಳೆಯಿಂದ ರೈಲ್ ರಸ್ತೆಯ ಉಭಯ ಪಾರ್ಶ್ವಗಳಲ್ಲಿಯೂ ನಿಂತ ನೀರು ರೈಲ್ ಭಾಗಗಳನ್ನು ಕುಸಿದು ಹೋಗುವಂತೆ ಮಾಡಿತ್ತು. ಅದಿನ ವೇಳೆಗಿನ ಜಾಮದಲ್ಲಿ ಸುಮಾರು ೪|| ಘಂಟೆಗೆ ಒಳ್ಳೆ ಯೋಗ್ಯನಂತೆ ವೇಗವಾಗಿ ಬಂದ ಮದರಾಸ್ ರೈಲು ಆ ಸ್ಥಳದಲ್ಲಿ ಕಂಬಿಗಳನ್ನು ಬಿಟ್ಟು ಸಲಿಗೆಮೇಲೆ ಹರಿದ ಕಾರಣ ಸಮೀಪದಲ್ಲಿದ್ದ ಕೆರೆ ಕಟ್ಟೆಗಳ ಒಳಗೆ ಮಗುಚಿಕೊಂಡಿತು. ಇಂಜಿನ್ ಮತ್ತು ಜನಗಳು ಕೂತಿದ್ದ ಗಾಡಿಗಳಲ್ಲಾ ನುಚ್ಚುನೂರಾದವು ಅನೇಕರು ಭಯಂಕರವಾದ ರೀತಿಯಲ್ಲಿ ಕ್ಷಣ ಪ್ರಾಣ ಕಳಕೊಂಡರು. ಅನೇಕರಿಗೆ ಘೋರ ಗಾಯಗಳುಂಟಾದವು. ಜನರು ಅದರಲ್ಲಿ ಕೆಲವರು ಸತ್ತರು. ಇನ್ನು ಉಳಿದವರು ಆಸ್ಪತ್ರೆಗಳಲ್ಲಿ ನರಳುವವರ ನೋಡುತ್ತಿರುವರು ಅವರಿಗೆ ಗುಣವಾಗಬಹುದಾಗಿದೆ. ಆಗ ಬಂದ ತಂತಿ ವರ್ತಮಾನದಲ್ಲಿ ಸತ್ತವರು ೧೬ ಮಂದಿಯೆಂತಲೂ, ಗಾಯಾದವರು ೩೧ ಮಂದಿಯೆಂತಲೂ ಗೊತ್ತಾಯಿತು. ಆ ಬಳಿಕ ಬಂದ ವರ್ತಮಾನಗಳಿಂದ ಇನ್ನೂ ಅನೇಕರು ಸತ್ತರೆಂದು ಹೇಳಬಹುದಾಗಿದೆ. ಇನ್ನೂ ಆ ಸ್ಥಳದಲ್ಲಿ ಸುಮಾರು ೬೦ ಗಜಗಳ ಸುತ್ತಳತೆವರೆಗೂ ಕಟಕಟೆಗಳನ್ನು ಕಟ್ಟಿ ಇನ್ನೂ ಶೋಧನೆ ಮಾಡುತ್ತಲಿದ್ದಾರೆ. ಪೋಲೀಸರು ರಸ್ತೆಯನ್ನು ದುರಸ್ತು ಮಾಡುವ ಕೆಲಸಗಳು ಪ್ರಾರಂಭಿಸಿ ಅಲ್ಲಿ ಹುಡುಕಿದಷ್ಟೂ ಸತ್ತವರ ಶವಗಳು ಸಿಗುತ್ತಲೇ ಇವೆ. ಆ ಸ್ಥಳವೆಲ್ಲಾ ವಿಪರೀತ ಕೊಚ್ಚೆಯಾಗಿರುವದರಿಂದ ಯಾವದೂ ವಶಪಡಿಸುವದಿಲ್ಲ. ಒಟ್ಟು ೧೩ ಗಾಡಿಗಳು ಮುರಿದು ಹೋದವು. ಅದ್ಯಕ್ಕೆ ೧ ಫಸ್ಟ್ ಕ್ಲಾಸಿನದು, ೧ ಸೆಕೆಂಡ್ ಕ್ಲಾಸಿನದು, ೮ ಥರ್ಡ್ ಕ್ಲಾಸಿನ ತರಗತಿಯ ಗಾಡಿಗಳು, ೩ ಸಾಮಾನು ಮತ್ತು ಬ್ರೇಕ್ ಗಾಡಿಗಳು. ಇದುವರಿಗೆ ತೆಗೆದು ಬಿಟ್ಟ ಹೆಣಗಳನ್ನು ನಾಶ್ಯತ್ತಿದರೆಂದು ಹೇಳಿದಾಗ ಇನ್ನೂ ಎಷ್ಟು ಸಿಗಬಹುದೋ ಎಂದು ಎಲ್ಲರೂ ಭಯಸ್ಥರಾಗಿದಾರೆ. ಈ ಅಪಾಯವು ಸಂಭವಿಸಿದ ಉತ್ತರಕ್ಷಣದಲ್ಲಿಯೇ ಸಮೀಪದಲ್ಲಿದ್ದ ಸ್ಟೇಶನಿಗೆ ವರ್ತಮಾನ ಹೋಗಿ ಅಲ್ಲಿಂದ ಡಾಕ್ಟರುಗಳು ಬೇಕಾದ ಸಾಮಾನುಗಳನ್ನು ಹೊರವಡಿಕೊಂಡು ಹೋದರು. ಅನಂತರ ಕೋಯಮುತ್ತೂರಿನಿಂದ ಸಿವಿಲ್ ಸರ್ಜನರೂ ಬೇಗ ಹೊರಡಲ್ಲಿದ್ದ ರೈಲ್ವೆ ಮೆಡಿಕಲ್ ಆಫೀಸರೂ ಹೋಗಿ ಸೇರಿದ್ದಾರೆ. ಮಾರನೇ ದಿನ ಜನರು ಆದವರನ್ನೆಲ್ಲಾ ಕೊಯಮುತ್ತೂರು ಆಸ್ಪತ್ರೆಗೆ ಹೊತ್ತುಕೊಂಡು ಹೋದರು. ಮತ್ತು ರೈಲ್ವೆ ಮುಖ್ಯಾಧಿಕಾರಿಗಳು ಅದಿನ ಅಲ್ಲಿಸೇರಿ ಸ್ಥಳ ಅಮಿನ್ನು ವಿಚಾರಣೆ ಮಾಡುತ್ತಲಿದ್ದಾರೆ. ಇವರ ಡಿಸ್ಟ್ರಿಕ್ಟ್ ಬಂದ ಪೋರ್ಟ್, ಈ ಅಪಾಯವನ್ನು ನಿವಾರಣೆ ಮಾಡಬಹುದಾಗಿದ್ದ ಸಂಗತಿ ಮೊದಲೇ ಯಾಕೆ ತಿಳಿಸುವದಕ್ಕಾಗಲಿಲ್ಲವೋ ಗೊತ್ತಾಗುವುದಿಲ್ಲ. ಕೆಲವು ದಿನಗಳ ಒಳಗೆ ಅದೇ ಲೈನಿನ ಇತರ ಭಾಗಗಳು ಅಪಾಯಕರವಾಗುತ್ತವೆಂದು ಪೂರ್ವಭಾವಿಯಾಗಿಯೇ ಆಯಾ ಸ್ಥಳದ ಕಾವಲುಗಾರರು ರೈಲ್ವೆ ಅಧಿಕಾರಿಗಳಿಗೆ ತಿಳಿಸಿದ್ದರು. ಅದರಂತೆ ರೈಲ್ ಬಿಡುವದಕ್ಕೆ ಮುಂಚೆಯಾಗಿ ಅಧಿಕಾರಿಗಳು ಬೇರೆ ಕಾವಲುಗಾರರನ್ನು ಮೊದಲೇ ನೇಮಿಸಿದ್ದರು. ಇದರಿಂದ ಅಪಾಯಗಳ್ಯಾವದೂ ಪ್ರಾಪ್ತವಾಗಲಿಲ್ಲ. ಈಗಲೂ ಅಂಥಾ ಕಾವಲುಗಾರರು ಯಾಕೆ ತಿಳಿಸಲಿಲ್ಲವೋ ಗೊತ್ತಾಗುವದಿಲ್ಲ. ಈಗ ಪ್ರಾಪ್ತವಾದ ಅನಾಹುತವು ಬಹು ಭಯಂಕರವಾದದ್ದೇ ಸರಿ. ಪ್ರಯಾಣಸ್ಥರಿಗೆ ಮದರಾಸ್ ರೈಲ್ವೆಯಲ್ಲಿ ಇರುವನಂಬಿಕೆಯು ಮತ್ತಾವ ಕಂಪನಿಯವರಲ್ಲಿಯೂ ಇಲ್ಲ. ಅವರಷ್ಟು ಜಾಗರೂಕತೆಯಿಂದ ನಡೆಸಲ್ಪಡುವ ರೈಲ್ವೆಗಳು ಬೇರೆ ಕೊಂಚವೇ ಎಂದು ಎಲ್ಲರೂ ನಂಬಿಕೊಂಡಿಟ್ಟುಕೊಂಡಿದಾರೆ. ಇಂಥಾದ್ದರಲ್ಲೂ ಅವರಿಗೂ ಒಂದು ಕೆಟ್ಟ ಹೆಸರು ಬಂದೇ ಬಂತು. ಇದಕ್ಕಾಗಿ ನಾವು ತುಂಬಾ ವ್ಯಸನಪಡುತ್ತೇವೆ. ಅಲ್ಲಿ ಮರಣವನ್ನು ಹೊಂದಿದವರು ಇಷ್ಟೇ ಮಂದಿಯೆಂದು ಇನ್ನೂ ಗೊತ್ತಾಗದ ಇರುವದು ಇನ್ನೂ ವ್ಯಸನವನ್ನುಂಟುಮಾಡುತ್ತದೆ. ಈ ಅಪಾಯವು ಯಾವನೂ ರೈಲ್ವೆ ಅಧಿಕಾರಿಯ ಅಜಾಗರೂಕತೆಯಿಂದ ಪ್ರಾಪ್ತವಾದಂತೆಯೂ ಇದುವರೆಗೆ ಬಂದಿರುವ ವರ್ತಮಾನದಿಂದ ತಿಳಿದು ಬಂದಿಲ್ಲವೆಂದು ಸಂತೋಷಿಸಬೇಕಾಗಿದೆ. ಆದರ ಈಗ ವ್ಯತಿರಿಕ್ತನರ ಬಂಧುಗಳಿಗೆ ಉಂಟಾಗಿರುವ ಪಾಸಿನಷ್ಟಗಳನ್ನು ಕುರಿತು ಎಷ್ಟು ಸಮಾಧಾನಿಸಿದರೂ ಸ್ವಲ್ಪವೇ. ಬದ

ವೃಕ್ಷಾದಿಗಳನ್ನು ಕಸಿಮಾಡುವದು.

ಈ ದೇಶದ ಅನೇಕ ಭಾಗಗಳಲ್ಲಿ ಹುಳಿಯಾದ ಮಾವಿನ ಸಸಿಗಳನ್ನು ಹಳೇ ಅನಂತರ ಸೀಮಾವಿನ ಮರದ ಕೊಂಬೆಗೆ ಸ್ವಲ್ಪ ಸಿಪ್ಪೆತೆಗಾಗಿ ಕಟ್ಟಿ ಮಾಡುವ ಆ ಸೀಮಾವಿನ ಕೊಂಬೆ ಆ ಹುಳಿಮಾವಿನ ಕೊಂಬೆಯನ್ನು ಇಟ್ಟು ಜೋಡಿಸಿ ಕಟ್ಟಿ ಕೆಲವು ಕಾಲದವರೆಗೂ ಬಿಟ್ಟು ಅನಂತರ ಬೇರೆಯಾಗಿ ಕೂಡಿದನಂತರ ಹುಳಿಮಾವಿನ ಕೊಂಬೆಯನ್ನು ಕೊಯಿದು ಹಾಕುತ್ತಾರೆ. ಈ ಪ್ರಕಾರ ಮಾಡುವದರಿಂದ ಬಹು ಸಣ್ಣದಾಗಿಯೂ ಅತ್ಯಂತ ಹುಳಿಯಾಗಿಯೂ ಇದ್ದ ಆ ಹುಳಿಮಾವಿನ ಮರದ ಹಣ್ಣುಗಳು ಮೊದಲಿಗಿಂತ ದಪ್ಪದಾಗಿಯೂ ಸಿಹಿಯಾಗಿಯೂ ತಳವತ್ತಾ ಸಣ್ಣಗಾಗೂ ಆದ ಓಟೆಯುಳ್ಳದ್ದಾಗಿಯೂ ಆಗುವ ವಿಷಯಕ್ಕೆ ಅವುಗಳನ್ನು ಕಾಪಾಡುವವರೂ, ಅವರ ಫಲಗಳನ್ನು ಭಕ್ಷಿಸುವವರೂ ಸಾಕ್ಷಿಗಳಾಗಿರುತ್ತಾರೆ.

ನಮ್ಮ ಓದುವವರೇ, ನಾವು ಮೇಲೆ ಬರೆದು ಇರುವ ಕಾರ್ಯದಿಂದ ದೇವರು ಆಧಾರವಾಗಿಟ್ಟ ನಮಗೆ ಕಲಿಸಿಕೊಡುವ ಬುದ್ಧಿಮಾತುಗಳನ್ನು ಕೇಳಿರಿ. ಬಹಳ ಆಲೋಚನೆಯಿಂದ ಪರಿಶೀಲನ ಮಾಡುವ

ಹುಳಿಮಾವಿನ ಗಿಡದ ಸಾಧಾರಣ ಸ್ವಭಾವವನ್ನು ಕೊಂಚವಾಗಿ ವಿವರಣೆ ಮಾಡುವ ಆ ವೃಕ್ಷಗಳು ಅತ್ಯುನ್ನತವಾಗಿಯೂ ಧಡ ಕೊಂಬೆಗಳುಳ್ಳದ್ದಾಗಿಯೂ ಮನೋಹರ ಎಲೆಗಳಿಂದಲೂ, ತಕ್ಕ ಕಾಲದಲ್ಲಿ ಹೂವು ಮಿಡಿ, ಕಾಯಿಗಳಿಂದಲೂ ತುಂಬಿಕೊಂಡಿರುವ ಆ ವೃಕ್ಷವು ನೋಡುವವರ ಕಣ್ಣುಗಳನ್ನು ಆಕರ್ಷಿಸುವವುಗಳೆ ಎಂಬುವಂತೆಯೂ, ಅವುಗಳನ್ನು ಆಶ್ರಯಿಸಿಕೊಂಡು ಹೋಗುವ ಪ್ರಯಾಣಿಕರುಗಳನ್ನು ತಿನ್ನುವುದಕ್ಕೆ ಬಲು ಸಿಗಿಸುವಂತಹ ಎಂಬುವಂತೆಯೂ ತನಗೆ ನಂಬುವಷ್ಟು ಸ್ಥಳದಲ್ಲಿ ಉದ ಮರವುದುಪ್ಪ ಸುವ ಆ ಮರದ ಹಣ್ಣನ್ನು ರುಚಿನೋಡುವವರಿಗೆ ಹಣ್ಣುಗಳೂ ರುಚಿಯ ಬಿನ್ನರಾಗಿಯೂ ಬೇರೆ ರೀತಿಯಾಗಿರುವದನ್ನು ಆ ಹುಳಿಮಾವಿನ ಹಣ್ಣುಗಳನ್ನು ರುಚಿನೋಡುವವರೇ ಬಲ್ಲರಾಗಿ ಹೇಳುವರು. ನನ್ನ ಪ್ರಿಯ ಮಿತ್ರರೇ ಈ ಪ್ರಪಂಚದಲ್ಲಿರುವ ಮಾನವ ವರ್ಗದವರೆಲ್ಲರೂ ಆ ಹುಳಿಮಾವಿನ ಗಿಡದಂತೆಯೇ ಇರುತ್ತಾರೆ. ವ್ಯಾಗ್ಲಿನ ಶ್ರೀಮಂತರೂ, ಬಲವಂತರೂ, ವಿದ್ವಾಂಸರೂ, ದೊಡ್ಡ ಉದ್ಯೋಗಸ್ಥರೂ, ಐಶ್ವರ್ಯವಂತರೂ ಸುಗುಣಶೀಲರೂ, ವಸ್ತ್ರಾಭರಣ ಅಲಂಕಾರ ಭೂಷಣಾದಿ ಅಲಂಕಾರಗಳಲ್ಲಿ ಆ ವೃಕ್ಷದಂತೆ ನೋಡುವವರಿಗೂ ಅವರ ಮಾತುಗಳನ್ನು ಕೇಳುವವರಿಗೂ ಅವರ ಬಳಿಗೆ ಹೋಗುವಂಥವರ ಕಣ್ಣುಗಳನ್ನೆಲ್ಲಾ ಕ್ಷಣಮಾತ್ರದಲ್ಲೇ ಹೋಗಲಾಡಿಸುವಂತೆ ಅಂಥವರ ಜನ್ಮಕ್ಕೆ ಕಾರಣರೂ ಅವರ ಗುಣ ವಿಷಯಗಳನ್ನು ಕೊಂಚವಾಗಿ ಪರಿಶೋಧಿಸಿದರೆ ಮಾವಿನ ಹಾಗೆ ಸಮಾನವಾದ ಸುಳ್ಳು, ಮೋಸ, ಕಪಟ, ಮಾನಾಪಹರಣ, ಬಿಚ್ಚಾಟ, ಸೂಳೆಗಾರಿಕೆ, ವಿಗ್ರಹಾರಾಧನೆ, ದಂಡನೆ, ಕೋಪ, ಅಸೂಯೆ ಇನ್ನು ಬೇರೆ ವಿಧವಾದ ಪಾಪಗಳಿಂದ ಭರಿತರಾಗಿರುತ್ತಾರೆ. ಮೇಲೆ ನೋಟಕ್ಕೆ ಮಾತ್ರ ಆ ಹುಳಿಮಾವಿನ ಗಿಡದಂತೆಯೇ ಇರುತ್ತಾರೆ. ಆ ಹುಳಿಮಾವಿನ ಹಣ್ಣುಗಳನ್ನು ಯಾವರೂ ಕ್ರಯ ವಿಕ್ರಯ ಮಾಡದೆ ಅವುಗಳು ಬಿದ್ದ ಸ್ಥಳದಲ್ಲಿಯೇ ಇದ್ದು ಮನುಷ್ಯ ಮೃಗಾದಿಗಳಿಂದ ತುಳಿಯಲ್ಪಟ್ಟು ನಾಶಕ್ಕೆ ಗುರಿಯಾಗುತ್ತವೆ. ಅದರಂತೆಯೇ ಮೇಲೆ ಹೇಳಿದ ಹುಳಿಯಿಂದ ತುಂಬಿರುವ ಹುಳಿಮಾವಿನ ವೃಕ್ಷಗಳಿಗೆ ಸಮಾನರಾದ ಮಾನವರುಗಳೂ ಎಲ್ಲಾ ವಿಧವಾದ ಶಿಕ್ಷೆಗಳಿಗೆ ಗುರಿಯಾಗಿರುವರೆಂದು ನಾವು ಗ್ರಹಿಸಿಕೊಳ್ಳಬೇಕು.

ಹಾಗಾದರೆ ಮಾನುಷ ವರ್ಗದವರಾದ ನಾವು ಹ್ಯಾಗೆ ಈ ಅಸಹ್ಯವಾದ ಹುಳಿಯೆಂಬ ಪಾಪದ ಸ್ವಭಾವವನ್ನು ಬಿಡಬೇಕು ಎಂಬದನ್ನು ಆಲೋಚಿಸಿ ನೋಡುವ.

ಸೀಮಾವಿನ ಗಿಡದ ಜೊತೆಗೆ ಜೋಡಿಕೆಯಾಗುವದರಲ್ಲಿಯೇ, ಹುಳಿಮಾವಿನ ಗಿಡವನ್ನು ಸೀಮಾವಿನ ಗಿಡಕ್ಕೆ ಜೋಡಿಕೆ ಮಾಡುವದರಿಂದ ಹುಳಿಮಾವಿನಲ್ಲಿದ್ದ ಎಲ್ಲಾ ವಿಧವಾದ ಕಲ್ಮಷವು ಹೋಗಿ ಜನರಿಂದ ತುಳಿಯಲ್ಪಡುವದಕ್ಕೆ ಬದಲಾಗಿ ಎಲ್ಲರೂ ತನ್ನನ್ನೇ ಪ್ರೀತಿಸುವಂತೆ ಯಾವ ವಿಶೇಷವಾದ ಗುಣವು ಬೇಕೋ ಅಂಥಾದ್ದನ್ನು ಅದು ಹೊಂದಿಕೊಳ್ಳುವದು. ಅಂದರೆ ಒಳ್ಳೆಯವರ ಸಹವಾಸದಿಂದ ಒಳ್ಳೆಗುಣ ಉಂಟಾಗುವದೆಂಬುವದು ಸತ್ಯವಾಗಿದೆ. ವ್ಯಾಗೆಂದರೆ ದುರ್ಬುದ್ಧಿಯುಂಟು ಮಂದಿಯಲ್ಲಿಂದ ಬಂದು ಹಸುವು ಆ ಮಂದೆಯು ಹಸುವನಂತೆಯೇ ಇದ್ದು ತನ್ನ ಯಜಮಾನನ ಸ್ಥಳವನ್ನು ಬಿಟ್ಟು ಬೇರೊಂದು ಸ್ಥಳವನ್ನು ಬಂದು ಸೇರಿ ಅಲ್ಲ ಮೇಯುತ್ತಾ ಇತ್ತು. ಆ ಸ್ಥಳದಲ್ಲಿ ಮೇಯುತ್ತಾ ಇದ್ದ ಸುಬುದ್ಧಿಯುಳ್ಳ ಮಂದೆಯ ಹಸುಗಳು ಈ ದುರ್ಬುದ್ಧಿ ಮಂದೆಯ ಹಸುವಿನ ಬಳಿಗೆ ಬಂದವು. ಈ ದನಗಳು ನೀನು ಎಲ್ಲಿದ್ದೆ ಎಂದು ಕೇಳುವದಕ್ಕೆ ಪ್ರಾರಂಭಿಸಿದವು. ಆಗ ಅದು ನಾನು ದುರ್ಬುದ್ಧಿಯುಳ್ಳ ಸ್ಥಳದಿಂದ ಬಂದೆನು ಎಂದಿತು. ಅಮ್ಮಾ ನೀನು ಎಷ್ಟು ವಿಶ್ರಾಯುಳ್ಳದ್ದಾಗಿದ್ದೀಯೆ ನಿನ್ನ ಸುಗಡಿಗರನ್ನು ಬಿಟ್ಟು ಈಪ್ರಕಾರ ಬಂದುಬಿಟ್ಟೆಯೋ ಎಂದು ಪ್ರಶ್ನೆಮಾಡಲು ನನ್ನ ಮಂದೆಯ ಹಸುಗಳಲ್ಲ. ಬಾಗಿ ಬೇಸರವಾಗಿ ಕೆಲವು ಕಾಲ ಕೆಲವು ಸ್ಥಳಗಳಲ್ಲಿದ್ದು ಬರುವವು ಬರುವಾಗ ವ್ಯಭಿಚಾರಿಯಾಗಿ ಎಷ್ಟೋ ದನಗಳು ತಿನ್ನುತ್ತಿದ್ದವು. ನಾನು ಸಹ ಇಲ್ಲಿಗೆ ಬರುವಾಗ ಒಂದು ಘೋರವಾದ ವ್ಯಭಿಚಾರ ಬಂದಾಗುವಲ್ಲಿ ಬಾಗಿತ್ತು. ನಾನು ಸದ್ಬುದ್ಧಿಯಾದ ಸೇವೆಯಿಂದ ತಪ್ಪಿಸಿಕೊಂಡು ಬಂದೆನೆಂದು ಹೇಳಿತು. ಆಗ ಆ ಸುಬುದ್ಧಿಯುಳ್ಳ ಮಂದೆಯ ಹಸುಗಳು ಅದರ ಸ್ನೇಹ ಮಾಡಿ ಅದರ ದುರ್ಬುದ್ಧಿಯನ್ನು ಹೋಗಲಾಡಿಸುತ್ತೇವೆ ಎಂದು ಹೇಳಿ ತಮ್ಮ ಜೊತೆಯಲ್ಲಿಯೇ ಇಟ್ಟುಕೊಂಡವು. ಅದರಿಂದ ಅದಕ್ಕಿದ್ದ ದುರ್ಬುದ್ಧಿಯನ್ನು ಬಿಟ್ಟು ಅವುಗಳಂತೆ ಸುಬುದ್ಧಿಯನ್ನು ಹೊಂದಿ ಅವುಗಳ ಸ್ವಭಾವವನ್ನು ಪಡೆದು ತನ್ನ ಪ್ರಾಣವನ್ನು ರಕ್ಷಿಸಿಕೊಂಡಿತು. ಈ ಮೇಲಿನ ದೃಷ್ಟಾಂತದಲ್ಲಿ ಹೇಳಿದ ಪ್ರಕಾರ ಒಳ್ಳೆಯವರ ಸಹವಾಸದಿಂದ ಒಳ್ಳೆಯವುಗಳಾಗುತ್ತವೆ. ಆದ್ದರಿಂದ ಮನುಷ್ಯರು ಕ್ರಿಸ್ತನ ಸಹವಾಸವನ್ನು ಬಿಟ್ಟರೆ ಯಾವನ್ನೂ ಸ್ವಾಮಿಯ ಕೃಪೆಯ ಹತ್ತಿರ ಸೇರಲಾರನು ಎಂದು ಹೇಳುವದು.

ಹಾಗಾದರೆ ಮನುಷ್ಯರಾದ ನಾವು ಸಹವಾಸದಿಂದಲೇ ಉತ್ತಮರಾಗುತ್ತೇವೆ. ಹಾಗಾದರೆ ಆ ಸೀಮಾವಿನ ಆ ಸುಬುದ್ಧಿಯುಳ್ಳ ಮಂದೆಯು ಯಾವುದು? ಕ್ರಿಸ್ತನೇ ಆದ ಕಂಪುಳ್ಳ ಸೀಮಾವೆಂದು ನಂಬುವದು. ಆ ಪ್ರಿಯ ಮಿತ್ರರೇ ನೀವು ಎಲ್ಲಾ ಯಾವುದರಿಂದ ಸುಳ್ಳು ಗುಣಗಳು ಹೊಂದಿರುವಿರಿ? ಅವು ನಿಮ್ಮ ಮಂದಿಗಳಲ್ಲಿ ಕ್ರಿಸ್ತನ ವಾಕ್ಯದಲ್ಲಿ ನಂಬಿಕೆ ಇರುವ ಪ್ರಯಾಣವಾದ ಯೇಸುಸ್ವಾಮಿಯೇ ಆಧಾರನಾಗಿರುತ್ತಾನೆ. ನಾವು ಅವನಲ್ಲಿ ಜೋಡಿಕೆಯಾಗುವಂತೆ ಆ ಗುರುವು ಯೇಸುವು ತನ್ನ ಪ್ರಾಣವನ್ನು ತ್ಯಾಗಮಾಡಿದನು. ಹಾಗಾದರೆ ನಾವು ನಮ್ಮ ಹಿಂದಿನ ಪಾಪಗಳಿಗಾಗಿ ದುಃಖಪಟ್ಟು ಇನ್ನು ಮುಂದೆ ನಾವು ನಿನ್ನ ಸೇವಕರೆಂದು ನಂಬಿ ಮಾಡುವವರಿಗೆ ನಂಬಿಕೆಯಿಂದ ಮನಃಪೂರ್ವಕವಾಗಿ ಒಪ್ಪಿಕೊಂಡು ಆತನ ಕಟ್ಟಳೆಗಳಿಗೆ ಅನುಕೂಲವಾಗಿ ನಡೆದರೆ ನಮ್ಮಲ್ಲಿರುವ ದುರ್ಗುಣಗಳು ಆಗ ಆತನ ಸದ್ಗುಣಗಳು ನಮ್ಮಲ್ಲಿ ಬರುವವು. ಆಗ ನಾವು ಹಚ್ಚಿನ ಪ್ರಯೋಜನಕ್ಕೆ ಹಚ್ಚಿನ ಕೀರ್ತಿಗೂ ಪಾತ್ರರಾದೇವು. ಇದಕ್ಕೆ ಸಂಶಯವಿಲ್ಲ ಮತ್ತು ನೀವು ಆತನ ಸಂಪೂರ್ಣ ದೇವರ ಒಲವಿಗೂ ಪಾತ್ರರಾಗುವಿರಿ. ಆದ್ದರಿಂದ ನೀವು ಜೀವವಿರುವಾಗಲೇ ಪ್ರಯೋಜನಕ್ಕಾಗಿ ಯೇಸುವಿನೊಂದಿಗೆ ಜೋಡಿಸಲ್ಪಟ್ಟವರಾಗಿ ನಿಮ್ಮಲ್ಲಿರುವ ಹುಳಿಮಾವಿನ ಗುಣ ಸ್ವಭಾವವನ್ನು ಹೋಗಲಾಡಿಸಿಕೊಳ್ಳುವಂತೆ ಪ್ರಯತ್ನ ಮಾಡಬೇಕೆಂದು ಕೋರುತ್ತೇವೆ.

ಬಗೆ ಬಗೆ ವೃತ್ತಾಂತಗಳು.

ಹುಬ್ಬಳ್ಳಿ ರೈಲ್ವೆ ಸ್ಟೇಷನ್ ಬಳಿ ಮಾಡಬೇಕಾಗಿ ಸರ್ಕಾರದವರು ೧೦೦೦೦ ರೂಪಾಯಿ ಸ್ಯಾಂಕ್ಷನ್ ಮಾಡಿದ್ದಾರೆ

ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರ ಹೆಡ್ಡಾಫೀಸಿನಲ್ಲಿ ಒಬ್ಬೊಬ್ಬರ ಹುದ್ದೆಗಳನ್ನು ಎಜುಕೇಷನ್ ಡಿಪಾರ್ಟ್‌ಮೆಂಟಿನಿಂದ ತಿಂಗಳಿಗೆ ಒಬ್ಬ ಸ್ಟೆನೋಗ್ರಾಫರ್ ಮಾಡಿದ್ದಾರೆ

ಮೈಸೂರಿನ ಜಿಲ್ಲೆಯ ಅನಾಥಾಲಯಗಳನ್ನು ಇಟ್ಟಿರುವದರಿಂದ ಅವುಗಳನ್ನು ಸರ್ಕಾರದವರು ಕೆಲ್ಲ ಕೊಡಲು ಮೈಸೂರಿನ ಬಳಿ ೨೦೦ ಎಕರೆ ಜಮೀನು ಕೊಡುವದಾಗಿ ಗೌರ್ನ್‌ಮೆಂಟಿನವರು ಮಾಡಿದ್ದಾರೆ.

ಬೆಂಗಳೂರಿನಲ್ಲಿರುವ ಪೋಲೀಸು ಸ್ಕೂಲಿಗೆ ಸೇರಬೇಕೆಂದು ಅಪೇಕ್ಷಿಸುವವರೆಲ್ಲರೂ ಬರುವ ಡಿಸೆಂಬರು ಅಖೈರಿನೊಳಗಾಗಿ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರಿಗೆ ಅರ್ಜಿ ಬರೆದುಕೊಳ್ಳಬಹುದೆಂದು ನೋಟಿಸ್ ಕೊಟ್ಟಿದ್ದಾರೆ

ಕಳೆದ ವಾರದಲ್ಲೆಲ್ಲಾ ಸೂರ್ಯರಶ್ಮಿಯು ಬದರೂಪವಾಗಿತ್ತು. ಸೋನೆ ಮತ್ತು ಚಳಿ ಜನರಿಗೆಲ್ಲಾ ಜಿಗುಪ್ಸೆಯನ್ನು ಹುಟ್ಟಿಸಿತು. ಇಷ್ಟಾದರೂ ಅಕ್ಕಿ, ರಾಗಿ, ಜೋಳಗಳ ಧಾರಣೆ ಕಡಮೆಯಾಗಲಿಲ್ಲದಲ್ಲ ಎಂದು ಜನರೆಲ್ಲಾ ಆಶ್ಚರ್ಯ ಪಡುತ್ತಲಿದ್ದಾರೆ

ಯುವರಾಜರಿಗೆ ವಿದ್ಯಾಭ್ಯಾಸ ಮಾಡಿಸುವದಕ್ಕಾಗಿ ನವದರಾಜಿನಲ್ಲಿ ಇಂಜನಿಯರಾಗಿರುವ ಮೆ|| ವೈಟ್ಲಿ ಸಾಹೇಬರು ನೇಮಿಸಲ್ಪಟ್ಟಿರುತ್ತಾರೆಂದು ನಾವು ಹಿಂದೆಯೇ ತಿಳಿಸಿದ್ದೆವಷ್ಟೆ. ಅವರು ಈ ಮಾಹೆ ಅಖೈರಿನೊಳಗಾಗಿ ರಾಜಧಾನಿಗೆ ಬರುವಂತೆ ನಿರ್ಧರವಾಗಿದೆ

ಈಚೆಗೆ ಚಾಮರಾಜನಗರ ತಾಲ್ಲೂಕಿನಲ್ಲಿ ಹೊಸದಾಗಿ ಹಿಡಿಯಲ್ಪಟ್ಟ ೪೪ ಆನೆಗಳನ್ನು ಕೆಡ್ಡಾ ಸೂಪರಿಂಟೆಂಡೆಂಟಾದ ಮೆ|| ಸ್ಯಾಂಡರ್‌ಸನ್‌ರವರು ಮೊನ್ನೆ ಪೇಟೆಯಲ್ಲಿ ಹರಾಜು ಹಾಕಲು ತಕ್ಷಣ ಬಿಟ್ಟು ೪೬೦೦೦ ರೂಪಾಯಿಗಳ ಹುಟ್ಟುವಳಿಯಾದಂತೆ ಕೇಳುತ್ತೇವೆ

ಈಗ್ಯೆ ಬಂದರೆ ತಿಂಗಳ ಹಿಂದೆ ೬ ತಿಂಗಳ ಫರ್ಲೋ ರಜಾ ತೆಗೆದುಕೊಂಡಿದ್ದ ಚೀಫ್ ಕೋರ್ಟ್ ರಿಜಿಸ್ಟ್ರಾರರವರಾದ ಮೆ|| ಎಲ್ ಅನಂತರಾಮಯ್ಯನವರು ಹಂಗಾಮಿಯಾಗಿ ಅಂಡರ್ ಸೆಕ್ರೆಟರಿಯಾಗಿ ನಿಯಮಿಸಲ್ಪಟ್ಟು ಗತ ಶುಕ್ರವಾರದ ದಿನ ಸದರೀ ಕೆಲಸದ ಚಾರ್ಜನ್ನು ತೆಗೆದುಕೊಂಡಂತೆ ಕೇಳುತ್ತೇವೆ

ಮೈಸೂರು ಸರ್ಕಾರದವರು ಸ್ಥಾಪಿಸಿರುವ ಪ್ರಜಾಪ್ರತಿನಿಧಿಸಭೆಯಂತೆ ಬರೋಡೆಯ ಗಾಯಕವಾಡಿ ಮಹಾರಾಜರವರೂ ತಮ್ಮ ಸ್ಥಾನದಲ್ಲಿ ಸ್ಥಾಪಿಸಬೇಕೆಂಬ ಉದ್ದೇಶದಿಂದ ತಮ್ಮ ಮುಖ್ಯಾಧಿಕಾರಿಗಳೊಬ್ಬರನ್ನು ಇಲ್ಲಿಗೆ ಕಳುಹಿಸಿರುತ್ತಾರೆ. ಇವರು ದಿವಾನ್ ಶೇಷಾದ್ರಿ ಅಯ್ಯರವರ ಮುಖ್ಯ ಸಹಾಯದಲ್ಲಿ ಅದರ ವಿಷಯವಾದ ಎಲ್ಲಾ ಸಂಗತಿಗಳನ್ನೂ ತಿಳಿಯಲು ಪ್ರಯತ್ನಪಡುತ್ತಲಿದ್ದಾರೆ

ಕಳೆದ ೨ನೇ ತಾರೀಖಿನ ನಮ್ಮ ವೃತ್ತಾಂತ ಪತ್ರಿಕೆಯಲ್ಲಿ ಕಾಣಿಸಿದ ಉದ್ಯೋಗದ ಮರಾಮತ್ತಿನಲ್ಲಿಯ ಒಂದು ಪ್ರಕಟಿಸಿದ್ದ ನೋಟೀಸಿನಲ್ಲಿ "ನೋವೆಂಬರು ಮಾಹೆ ೧೬" ಎಂದು ಮಾಡಿದ್ದಕ್ಕೆ ಬದಲಾಗಿ ವಾಚಕರು "ನೋವೆಂಬರು ಮಾಹೆ ೩೦" ಎಂದಾಗಿ ಓದಿಕೊಳ್ಳಬೇಕು. ಹೀಗೆ ಬದಲಾಗಿ ತಪ್ಪಿನಿಂದ ಹಿಂದುಮುಂದಾಗಿ ೧೬ ಎಂದು ಹೋದದ್ದಕ್ಕಾಗಿ ಈ ತಪ್ಪನ್ನು ನಾವು ಈಗ ತಿದ್ದಿಕೊಂಡಿರುತ್ತೇವೆ

ಗ್ರೀನ್ ಮಾನ್ಯರಾದವರು ಇದೇ ಮಾಹೆ ೨೦ನೇ ತಾರೀಖಿನ ಹಿಂದೆಯೇ ಪ್ರಯಾಣಮಾಡುವರೆಂದು ಕೆಲವರೂ ಕೆಲವರು ಬರುವ ತಿಂಗಳ ೧ನೇ ತಾರೀಖು ಪ್ರಯಾಣಮಾಡುವರೆಂತಲೂ ಹೇಳುತ್ತಲಿದ್ದಾರೆ. ಅವರಿಗೆ ಬೆಂಗಳೂರು ಗೊತ್ತು ಹೇಳುವದಾಗಿಲ್ಲ. ಹೊಂಬಾಯಿನಲ್ಲಿ ಒಂದು ಬಂಗಲೆಯನ್ನು ಗೊತ್ತುಮಾಡುವದಲ್ಲದೆ ಇತರ ಅವಶ್ಯಕವಾದ ಯೋಗ್ಯತೆಗಳನ್ನೆಲ್ಲಾ ಮುಂದಾಗಿಯೇ ಮಾಡಿಕೊಂಡಿರುವಂತೆ ಹೋಟೆಲ್‌ನವರು ರಾಯರನ್ನು ಕೆಲವು ದಿನಗಳ ಒಳಗೆ ಅವ್ಯಾಂತ್ಯಕ ಮಾಡಿರುತ್ತಾರೆ

ಕ್ರಿಸ್ತನ ನಿಜ ಮಾರ್ಗವಾದ ಸಮಾಚಾರವನ್ನು ಓದುವಂತ ನನ್ನ ಪ್ರಿಯ ಸಹೋದರರೇ, ನಮ್ಮ ಆತ್ಮದ ಅಭಿವೃದ್ಧಿಗೋಸ್ಕರ ನಮ್ಮ ಪ್ರಭುವಾದ ಕ್ರಿಸ್ತನನ್ನು ಅನೇಕ ರಾಗ ಕೊಂಡಾಡುವದು ಆವಶ್ಯವಾಗಿದೆ. ಅಂದರೆ ಪ್ರಾರ್ಥನೆಯು ಮುಖ್ಯವಾದದ್ದು ಮತ್ತು ಸಂಗೀತ ಪಾಡುಗಳ ಮುಖಾಂತರ ಕೊಂಡಾಡುವದು ಬಹು ವಿಶೇಷವಾದದ್ದು. ಮತ್ತು ಅನೇಕ ಕ್ರೈಸ್ತರು ಸಂಗೀತ ಹಾಡುವದರಲ್ಲಿ ಬಹು ಆನಂದ ಉಳ್ಳವರಾಗಿರುತ್ತಾರೆ. ಆದಾಗ್ಯೂ ಮಾತ್ರವಲ್ಲದೆ ಕನ್ನಡದ ರಾಗಗಳನ್ನು ಈಗಿನ ನಾಟಕರಾಗಗಳಲ್ಲಿ ಹಾಡುವದಕ್ಕೆ ಅಪೇಕ್ಷಿಸುತ್ತಾರೆ. ಆ ಕಾರಣ ಅನೇಕರ ಕೋರಿಕೆಯ ಪ್ರಕಾರ ಬೆಂಗಳೂರು ಕ್ರೈಸ್ತ ಸಂಘದ ಟ್ರ್ಯಾಕ್ಟ್ ಸೊಸೈಟಿಯವರು ಬಹು ಪ್ರಯಾಸದಿಂದ ಬ್ರಾಹ್ಮರೊಡನೆ ನಾಟಕರಾಗಗಳನ್ನು ಮಾಡಿರುತ್ತಾರೆ. ಅದು ಕ್ರೈಸ್ತರಿಗೂ ಮತ್ತು ಹಿಂದೂಸ್ನೇಹಿತರಿಗೂ ಬಹು ಉಪಯೋಗವಾದದ್ದು ಮತ್ತು ಕ್ರೈಸ್ತಬೋಧಕರೂ ಪ್ರಸಂಗಿಗಳೂ ಇದನ್ನು ತೆಗೆದು ನೋಡುವದು ಅವಶ್ಯಕವಾದದ್ದು. ತಮ್ಮ ಪ್ರಸಂಗಗಳಿಗೆ ಬಹಳ ಅನುಕೂಲವಾದದ್ದು. ಆದಾಗ್ಯೂ ಕ್ರೈಸ್ತರ ಮನೆಗಳಲ್ಲಿಯೂ ಹಾಡುವದು ರಾಗಗಳ ಅನುಕೂಲವಾಗಿದೆ. ಆನಂದಪಟ್ಟವರು ಅಂಥಾದ್ದು ನಮ್ಮ ಹೃದಯದಿಂದ ಅದನ್ನು ಪ್ರೀತಿಯಾಗಿ ಅಂಗೀಕರಿಸುವನಾಗಿ ಕರ್ತನು ನಮ್ಮ ಮುಖ್ಯ ಕ್ರೈಸ್ತರಿಗೆ ಸಹಾಯವಾಗಲಿ. ಈ ಪುಸ್ತಕದ ಹೆಸರು ಸಂಗೀತವೃತ್ತನಂ ಇದು ಬೇಕಾದ ಅಪೇಕ್ಷಿಸುವವರು ಬೆಂಗಳೂರು ಟ್ರ್ಯಾಕ್ಟ್ ಬುಕ್ ಡಿಪೋಗೆ ಬರೆದು ತರಿಸಿಕೊಳ್ಳಬಹುದು. ಇದರ ಕ್ರಯ ೨ ಆಣೆ

ದೇವನಹಳ್ಳಿ ಸನಿಹದಲ್ಲಿ ನಾಲ್ಕು ವರುಷಗಳ ಹಿಂದೆ ಹಿಂದುಸ್ಥಾನಿ ಸ್ಕೂಲು ಆಗಿರಲಿಲ್ಲ. ಸನ್ ೧೮೯೧ನೇ ಇಸವಿಯಲ್ಲಿ ಎಜುಕೇಷನ್ ಸೆಕ್ರೆಟರಿಯವರಾದ ಮೆ|| ಬಿ ಎಲ್ ರೈಸ್ ಸಾಹೇಬರವರ ಕಾಲದಲ್ಲಿ ಸ್ಥಾಪಿಸಲಾಯಿತು. ಆ ಕಾಲದಲ್ಲಿ ಮಹಮದೀಯರಲ್ಲಿ ವಿದ್ಯಾಪೇಕ್ಷೆಯು ಅಧಿಕವಾಗಿರಲಿಲ್ಲ. ಮಾದರಿಯಂತೆ ಕೆಲವು ದುಡಿ ವಿದ್ಯಾರ್ಥಿಗಳು ಮಾತ್ರ ಆಗಿನ ಸ್ಕೂಲ್ ಮಾಸ್ಟರ್‌ರಿಂದ ಹಿಂದೂಸ್ಥಾನಿ ಸ್ಕೂಲ್‌ಗಳ ಕಾಲದಲ್ಲಿ ಓದುತ್ತಿದ್ದರು. ಆದರೆ ಈಚೆಗೆ ಆ ಜನರಲ್ಲಿ ನಾಗರೀಕತೆಯು ಹೆಚ್ಚಿದ್ದರಿಂದಲೂ, ಮತ್ತು ಸನ್ ೧೮೯೨ನೇ ಇಸವಿ

ದಲ್ಲಿ ಈ ಸ್ಕೂಲಿಗೆ ಮೇಷ್ಟರಾಗಿ ಬಂದ ಸೈಯದ್ ಅಬ್ದುಲ್ ಖುದೂಸ್ ಸಾಹೇಬರ ಪರಿಶ್ರಮ, ಬುದ್ಧಿ, ಚಟುವಟಿಕೆಗಳಿಂದಲೂ, ಈ ಸ್ಕೂಲು ಬಹಳ ಮಟ್ಟಿಗೂ ಅಭಿವೃದ್ಧಿಗೆ ಬಂದಿದೆ. ಇವರಿಲ್ಲಿಗೆ ಬರುವ ಕಾಲದಲ್ಲಿ ಸದರಿ ಸ್ಕೂಲಿನಲ್ಲಿ ೧೫ ಹುಡುಗರು ಮಾತ್ರ ಓದುತ್ತಿದ್ದರು. ಆದರೆ ಈಗ ೬೦ ಹುಡುಗರೂ ಮತ್ತು ೧೦ ಹುಡುಗಿಯರೂ, ಒಟ್ಟು ೭೦ ಮಕ್ಕಳು ಇಂದೇ ಸ್ಕೂಲಿನಲ್ಲಿ ಓದುತ್ತಿದ್ದಾರೆ. ಈ ಮಹಮ್ಮದೀಯಜನರು ತಮ್ಮ ಗಂಡುಮಕ್ಕಳಿಗೆ ವಿದ್ಯೆ ಕಲಿಸುವದಲ್ಲದೆ, ಹೆಣ್ಣುಮಕ್ಕಳಿಗೂ ಸಹಾ ವಿದ್ಯೆ ಕಲಿಸುವದರಲ್ಲಿ ಆಸಕ್ತರಾಗಿರುವದನ್ನು ನೋಡುವಾಗ ಬಹಳ ಸಂತೋಷವಾಗುವದಿಲ್ಲವೇ. ಕಳೆದ ಆಗಸ್ಟ್ ತಿಂಗಳ ಅಂತ್ಯದಲ್ಲಿ ಹಿಂದುಸ್ಥಾನಿ ಸ್ಕೂಲ್ ಅಸಿಸ್ಟೆಂಟ್ ಇನ್ಸ್‌ಪೆಕ್ಟರವರು ಬಂದು ಸದರೀ ಸ್ಕೂಲನ್ನು ಪರೀಕ್ಷೆ ಮಾಡಿ ಬಹು ಸಂತೋಷಪಟ್ಟು ಕೆಲವು ಮಕ್ಕಳಿಗೆ ಇನಾಂ ಕೊಡುವದಕ್ಕಾಗಿ ಹಲವು ಪುಸ್ತಕಗಳನ್ನು ಕಳುಹಿಸಿಕೊಟ್ಟರು. ಅವುಗಳ ಜೊತೆಗೆ ಅಮಲ್ದಾರರಾದ ಮ|| ರಾ|| ಶ್ರೀನಿವಾಸರಾಯರೂ, ಆಸ್ಪತ್ರೆ ಅಸಿಸ್ಟೆಂಟರಾದ ಮ|| ರಾ|| ಏ. ಎಸ್. ರಾಜಗೋಪಾಲ ಮೊದಲಿಯಾರ್ರವರೂ, ಟಾಜಿ ಅಹಮದ್ ಖಾನ್ ಸಾಹೇಬರವರೂ ಮತ್ತು ಇನ್ನೂ ಊರಿನ ಕೆಲ ದೊಡ್ಡ ಮನುಷ್ಯರೂ ಕೂಡಿ ಸುಮಾರು ೫೦ ಪುಸ್ತಕಗಳನ್ನು ಕೊಟ್ಟಿದ್ದರು. ಕೆಲವು ದಿವಸಗಳಿಗೆ ಮುಂಚೆ ಈ ಸ್ಕೂಲಿನಮಕ್ಕಳಿಗೆ ಇನಾಂ ಕೊಡಲ್ಪಟ್ಟಿತು. ಆ ಸಮಯದಲ್ಲಿ ಊರಿನ ಅನೇಕ ದೊಡ್ಡ ಮನುಷ್ಯರು ನೆರದು ಬಂದಿದ್ದರು. ಆಗ ಅಮಲ್ದಾರರಾದ ಮ|| ರಾ|| ಶ್ರೀನಿವಾಸರಾಯರು ಅಗ್ರಾಸನಾಧಿಪತ್ಯವನ್ನು ಅಂಗೀಕರಿಸಿದ್ದರು. ಹೆಡ್ಡು ಸ್ಕೂಲ್ ಮಾಸ್ಟರಾದ ಸೈಯದ್ ಅಬ್ದುಲ್ ಖುದೂಸ್ ಸಾಹೇಬರು ತಮ್ಮ ಸ್ಕೂಲಿನ ನಾಲ್ಕು ವರುಷಗಳ ಅಭಿವೃದ್ಧಿಯ ರಿಪೋರ್ಟನ್ನು ಸಂಕ್ಷೇಪವಾಗಿ ಓದಿ ಮುಗಿಸಿದನಂತರ ಮ|| ರಾ|| ಶ್ರೀನಿವಾಸರಾಯರು ಅತಿಸಂತೋಷಪಟ್ಟು, ಈಗಿನವರಿಗೂ ಉಪಾಧ್ಯಾಯರಿಗೂ ಅಭಿವೃದ್ಧಿಯ ವಿಷಯ ಪ್ರೋತ್ಸಾಹಪಡಿಸಿ, ಇನ್ನೂ ಅಧಿಕವಾಗಿ ಅಭಿವೃದ್ಧಿಯಾಗುವದಾಗಿ ಬಾಲಕ ಬಾಲಿಕೆಯರನ್ನೂ ಮತ್ತು ಅವರ ತಂದೆಗಳನ್ನೂ ಅನೇಕವಾಕ್ಯಗಳಿಂದ ಧೈರ್ಯಪಡಿಸಿದರು. ಮುಖ್ಯವಾಗಿ ಹೆಣ್ಣುಮಕ್ಕಳು ವಿದ್ಯೆ ಕಲಿಯುವದರಿಂದಾಗುವ ಪ್ರಯೋಜನಗಳನ್ನು ಸಂಕ್ಷೇಪವಾಗಿ ಹೇಳಿದರು. ಈ ಪ್ರಕಾರ ಸರ್ವಜನರೂ ಭೇದವಿಲ್ಲದೆ ವಿದ್ಯೆಯನ್ನು ಕಲಿತು ಸತ್ಯವಂತರಾಗಿ ಜೀವಿಸಿ ಭಗವಂತನ ಪ್ರೀತಿಗೆ ಪಾತ್ರರಾಗಿ ನಡೆದುಕೊಳ್ಳಲು ದೇವರನ್ನು ಪ್ರಾರ್ಥಿಸುವೆವು.

ಮೈಸೂರು ಗೆಜೆಟ್ ಸಂಗ್ರಹ.

ತಾ|| ೧೮ ನೇ ಅಕ್ಟೋಬರ್ ೧೮೯೩—ಕೋಲಾರ ತಾಲ್ಲೂಕು ಅಮಲ್ದಾರ್ ಬಿ ಲಕ್ಷ್ಮಣರಾಯರವರಿಗೆ ೧೮೯೩ ನೇ ಇಸವಿ ಸೆಪ್ಟಂಬರ್ ೯ನೆ ತಾರೀಖು ಆಗಾಯಿತು, ಅದೇ ತಿಂಗಳ ೧೬ ನೆ ಮಕರ್ರಂ ೧೧೨೦ ನೇ ನಂಬರುಳ್ಳ ಇಷ್ಟಿಹಾರ್ನಾಮೆಯ ಮೂಲಕ ಕೊಡಲ್ಪಟ್ಟಿದ್ದ ಕ್ಯಾಜುಯಲ್ ರಜಾ ೬ ದಿನಗಳವರೆಗೆ ಜಾಸ್ತೀ ಮಾಡಲ್ಪಟ್ಟಿತು.

ತಾ|| ೩ ನೇ ನವಂಬರ್ ೧೮೯೩—ಗೋಲ್ಡ್ ಫೀಲ್ಡ್‌ಗಳಲ್ಲಿ ಸ್ಪೆಷಿಯಲ್ ಪೊಲೀಸ್ ಇನ್ಸ್‌ಪೆಕ್ಟರಾಗಿರುವ ಮೆ|| ಡಿ ಎ ಬಾಟಾರ್ಡೊ ಯವರು, ಮೆ|| ಸ್ಟುವರ್ಟ್ ಅವಿನರ್ ಹನ್ಸೇಯವರು ಇತರೆ ಕೆಲಸದಮೇಲಿರುವವರೆಗೆ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವವರೆಗೆ ಚಿತ್ರದುರ್ಗ ಡಿಸ್ಟ್ರಿಕ್ಟ್ ಪೊಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟಾಗಿ ಏರ್ಪಡಿಸಲ್ಪಟ್ಟಿರುತ್ತಾರೆ. ಇವರು ಕೂಡಲೆ ಕೆಲಸದಮೇಲೆ ಹೋಗಿ ಹಾಜರಾಗತಕ್ಕದ್ದು.

ಮೈಸೂರು ಸರ್ವಿಸ್ ರೆಗ್ಯುಲೇಷನ್ನುಗಳ ೧೭೭ ನೇ ಆರ್ಟಿಕಲ್ ಅನುಸರಿಸಿ ಕೋಲಾರ ಡಿಸ್ಟ್ರಿಕ್ಟ್ ಡೆಪ್ಯುಟಿಕಮಿಷನರ್ ಮೆ|| ಸಿ ಮಾದಯ್ಯನವರಿಗೆ ೧೮೯೩ ನೇ ಇಸವಿ ಅಕ್ಟೋಬರ್ ೨೮ ನೇ ಮಕರ್ರಂ ಆಗಾಯಿತು ೧೫ ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತದೆ. ಚಿಕ್ಕಬಳ್ಳಾಪುರದ ಸಬ್‌ಡಿವಿಷನ್ ಆಫೀಸರರು ಮೆ|| ಮಾದಯ್ಯನವರು ರಜಾಮೇಲೆ ಗೈರುಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವವರೆಗೆ ಸದರೀ ಡಿಸ್ಟ್ರಿಕ್ಟಿಗೆ ಸಂಬಂಧಿಸಿದ ಚಾರ್ಜಿ ಕೆಲಸಗಳ ಬಾಬ್ತಿನಲ್ಲಿರತಕ್ಕದ್ದು.

ಚಳ್ಳಕೆರೆ ತಾಲ್ಲೂಕ್ ಅಮಲ್ದಾರ್ ಜಿ ಶ್ರೀನಿವಾಸರಾಯರವರಿಗೆ ೧೮೯೩ ನೇ ಇಸವಿ ಸೆಪ್ಟಂಬರ್ ೨೮ ನೇ ಮಕರ್ರಂ ೬೬೭—೬೩ ನೇ ನಂಬರುಳ್ಳ ಇಷ್ಟಿಹಾರ್ನಾಮೆಯ ಮೂಲಕ ಕೊಡಲ್ಪಟ್ಟಿದ್ದ ೨೦ ದಿನಗಳ ಪ್ರಿವಿಲೇಜ್ ರಜಾ ಇನ್ನೊಂದು ದಿವಸದವರೆಗೆ ಜಾಸ್ತೀ ಮಾಡಲ್ಪಟ್ಟಿರುತ್ತದೆ.

ತಾ|| ೩ ನೇ ನವಂಬರ್ ೧೮೯೩—ಮೈಸೂರು ಡಿಸ್ಟ್ರಿಕ್ಟ್ ಟ್ರೆಜರಿ ಆಫೀಸರ್ ಮೆ|| ಕೃಷ್ಣಯ್ಯಂಗಾರ್ರವರು ೧೮೯೩ ನೇ ಇಸವಿ ಅಕ್ಟೋಬರ್ ೬ ನೇ ತಾರೀಖಿನ ಪೂರ್ವಾಹ್ಣದಲ್ಲಿ ಟ್ರೆಜರಿ ಮ್ಯಾಜಿಸ್ಟ್ರೇಟ್ ಛಾರ್ಜನ್ನು ಅಸಿಸ್ಟೆಂಟ್ ಕಮಿಷನರ್ ಮೆ|| ಪಂಚಾನದೀಯನವರಿಗೊಪ್ಪಿಸಲು ಅವರಿಂದ ತೆಗೆದುಕೊಂಡಿರುತ್ತಾರೆ.

ನಾಗರ ತಾಲ್ಲೂಕು ಅಮಲ್ದಾರ್ ಪಿ ನಂಜುಂಡನಾಯಕರವರಿಗೆ ೧೮೯೩ ನೇ ಇಸವಿ ಜೂನ್ ೧೮ ನೆ ಮಕರ್ರಂ ೩೮೩ನೆ ನಂಬರ್ ಗವರ್ನ್‌ಮೆಂಟ್ ಇಷ್ಟಿಹಾರ್ನಾಮೆಯ ಮೂಲಕ ಕೊಡಲ್ಪಟ್ಟಿದ್ದ ೩ ತಿಂಗಳ ಪ್ರಿವಿಲೇಜ್ ರಜವನ್ನು ಅವರು ೧೮೯೩ ನೇ ಇಸವಿ ೧೬ ಜೈ ೩ ನೆ ತಾರೀಖಿನ ಪೂರ್ವಾಹ್ಣದಾರಭ್ಯ ಉಪಯೋಗಿಸಿಕೊಂಡು ೧೮೯೩ ನೆ ಇಸವಿ ಸೆಪ್ಟಂಬರ್ ೩೦ ನೇ ತಾರೀಖಿನ ಪೂರ್ವಾಹ್ಣದಲ್ಲಿ ತಮ್ಮ ಕೆಲಸಕ್ಕೆ ವಾಪಸು ಬಂದು ತಾಲ್ಲೂಕ ಛಾರ್ಜನ್ನು ತೆಗೆದುಕೊಂಡಿರುವದರಿಂದ ಅವರ ರಜಾ ಪೈಕಿ ಉಪಯೋಗಿಸಿಕೊಳ್ಳಲ್ಪಡದ ಭಾಗವು ಇದರಿಂದ ರದ್ದು ಮಾಡಲ್ಪಟ್ಟಿರುತ್ತದೆ.

ತಾ|| ೪ ನೇ ನವಂಬರ್ ೧೮೯೩—ಮೆ|| ಬಿ ವಿಜಯೀಂದ್ರರಾಯರವರು ೧೮೯೩ ನೇ ಇಸವಿ ಅಕ್ಟೋಬರ್ ೧೭ ನೇ ತಾರೀಖಿನ ಪೂರ್ವಾಹ್ಣದಲ್ಲಿ ಇನ್ಸ್‌ಪೆಕ್ಟರ್ ಜನರಲ್ ಮತ್ತು ಕಂಪೆನಿಗಳ ರಜಿಸ್ಟ್ರಾರ್ ಆಫೀಸ್ ಛಾರ್ಜನ್ನು ಮೆ|| ವಿನಾಯಕಮೂರ್ತಿ ಶಾಸ್ತ್ರಿಗಳಿಗೊಪ್ಪಿಸಿರುತ್ತಾರೆ.

ವಿವಿಧ ವರ್ತಮಾನಗಳು.

ಗುಜರಾತಿನಲ್ಲಿ ಒಬ್ಬ ಜೋಲೆಯರವನು ತಾನು ಮ್ಯಾಜಿಸ್ಟ್ರೇಟ್ ಕಮಿಷನರಾಗಬೇಕೆಂದು ಬಹಳ ಪ್ರಯತ್ನಪಡುತ್ತಲಿದ್ದಾನಂತೆ.

ಬರ್ಮಾದೇಶದಲ್ಲಿ ಕ್ಯಪಾಸಾಗರನೆಂಬವನು ಛಾರ್ಸಾಹುಕಾರನಾಗಿದ್ದಾನೆ. ಅವನು ಪ್ರತಿದಿನವೂ ತನ್ನ ಊಟಕ್ಕೆ ೧ ಕಾಸು ಮಾತ್ರವೇ ಖರ್ಚು ಮಾಡುತ್ತಾನಂತೆ. ಆದ್ದರಿಂದ ಇವನಿಗೆ ಕೃಪಣಾಗ್ರಗಣ್ಯನೆಂದು ಹೆಸರಿಡಬಹುದಲ್ಲವೆ?

ಹೈದರಾಬಾದ್ ನೈಜಾಮರವರು ಕೆಲವು ದಿನಗಳಲ್ಲೇ ಎರಡನೇ ಮದುವೆ ಮಾಡಿಕೊಳ್ಳುತ್ತಾರಾದ್ದರಿಂದ ಈಗಿನಿಂದ ಅದಕ್ಕಾಗಿ ಬಹಳ ಸನ್ನಾಹ ಮಾಡುತ್ತಲಿದ್ದಾರೆ. ಸುಮಾರು ೪ ಕೋಟಿ ದ್ರವ್ಯ ಖರ್ಚಾಗಬಹುದೆಂತಲೂ ಕೇಳುತ್ತೇವೆ.

ಜಾನ್ಸಿ ಎಂಬಲ್ಲಿ ಒಬ್ಬ ಜಡ್ಜಿಯು ತನ್ನ ಕೋರ್ಟಿನ ಆಸನರುಗಳು ಸರಿಯಾದ ಹೊತ್ತಿಗೆ ಹಾಜರಾಗಲಿಲ್ಲವೆಂದು ಅವರನ್ನು ಕೋರ್ಟಿನಲ್ಲಿ ಕೂಡಿಸದೆ ನಿಲ್ಲಿಸಿದ್ದರಂತೆ. ಬಹುಶಃ ಜಡ್ಜಿಯವರು ಕೋರ್ಟನ್ನು ಒಂದು ಸ್ಕೂಲ್ ಎಂದು ಭಾವಿಸಿಕೊಂಡಿದ್ದರೋ ಏನೋ!

ಜಬ್ಬಲಪುರದ ೬/ ಕೆಲವು ಮಂದಿ ಕಳ್ಳರು ಸೇರಿ ಮೇಲ್ ಟ್ರೇನನ್ನು ಅಡ್ಡಹಾಕಬೇಕೆಂದು ಪ್ರಯತ್ನ ಮಾಡಿದ್ದರು. ತಪ್ಪಿಹೋಗಿ ಆ ಪೈಕಿ ಇಬ್ಬರು ಅಧಿಕಾರಿಗಳ ಕೈಗೆ ಸಿಕ್ಕಿಹೋದರು. ವಿಚಾರಣೆ ಅನಂತರ ಇಬ್ಬರಿಗೂ ನ್ಯಾಯಾಧಿಪತಿಗಳು ೭ ವರ್ಷಗಳ ಕಠಿಣ ಸಜಾ ಶಿಕ್ಷೆಯನ್ನು ವಿಧಿಸಿದರು.

ಮದರಾಸ್ ಸಿಟಿ ಸಿವಿಲ್ ಕೋರ್ಟಿನಲ್ಲಿ ಈಗ ೨,೫೦೦ ರೂಪಾಯಿಗಳವರೆಗಿನ ಮೊಕದ್ದಮೆಗಳನ್ನು ಹಿಡಿಯುವದಕ್ಕೆ ಅಧಿಕಾರ ಕೊಟ್ಟಿರುವುದು ಸರಿಯಷ್ಟೆ. ಅದನ್ನು ಈಗ ೫,೦೦೦ ಕ್ಕೆ ಹೆಚ್ಚಿಸಬೇಕೆಂದು ಆಲೋಚಿಸುತ್ತಲಿದ್ದಾರೆ. ಇದರಿಂದ ಅಲ್ಲಿನ ಹೈಕೋರ್ಟಿಗೆ ಸುಲಭವಾಗುವದರಲ್ಲಿ ಸಂಶಯವಿಲ್ಲ.

ಬಂಗಾಳಪ್ರಾಂತ್ಯಕ್ಕೆ ಸೇರಿದ ಸಿವಾಸಾ ಎಂಬಲ್ಲಿ ಒಬ್ಬ ಸ್ತ್ರೀ ಪೈಲ್ವಾನಳು ಬಂದಿದ್ದಳು. ಆವಳಮೇಲೆ ಕುಸ್ತಿ ಮಾಡಿಗೆಲ್ಲುತ್ತೇವೆಂದು ಮೂರು ಮಂದಿ ಬಂಗಾಳಿ ಬಾಬುಗಳು ಹೋದರು. ಮೊದಲನೆಯವನು ಕುಸ್ತಿ ಮಾಡಿ ಸೋತುಹೋದನು. ಆಗ ಉಳಿದ ಇಬ್ಬರೂ ತಾವು ಸೋತೆವೆಂದು ಹೇಗದು ಬರೆದು ಆವಳಿಗೆ ಕೊಟ್ಟರು.

ಮದ್ರಾಸಿನಲ್ಲಿ ಗೋಪಾಲಕೃಷ್ಣಪಿಳ್ಳೆಯೆಂಬಾತನು ನಾಕುತ್ತಿನ್ನಾಯಿ ನೆರೆಹೊರೆಯ ಹೆಂಗಸು ಮಕ್ಕಳನ್ನು ಕದ್ದದ್ದರಿಂದ ಆವನಮೇಲೆ ಛಾರ್ಜಾಗಿ ಆವನು ನಾಯಿಯನ್ನು ಸುಮ್ಮನೆ ಪೋಷಣೆಯಲ್ಲಿಡಲಿಲ್ಲವೆಂಬ ಅಪರಾಧಕ್ಕೆ ಗುರಿಯಾಗಿ ೧೦೦ ರೂಪಾಯಿ ಜುಲ್ಮಾನೆ ಕೊಡಬೇಕೆಂದು ಮ್ಯಾಜಿಸ್ಟ್ರೇಟರು ತೀರ್ಮಾನಿಸಿದರು.

ಪ್ಯಾರಿಸ್ ಮತ್ತು ಲಂಡನ್ ಪಟ್ಟಣಗಳಲ್ಲಿ ಒಬ್ಬ ತ್ರಿನೇತ್ರಧಾರಿ ಸ್ತ್ರೀಯಳನ್ನು ಪ್ರದರ್ಶನದಲ್ಲಿಟ್ಟು ಜನರಿಗೆ ತೋರಿಸುತ್ತಲಿದ್ದಾರೆ. ಈ ಸ್ತ್ರೀಯು ಇನ್ನೂ ಬಾಲ್ಯವಯಸ್ಕಳು. ಬಹು ಸುಂದರಿಯಾಗಿರುತ್ತಾಳೆ. ಇವಳಿಗೆ ಇತರರಿಗಿಂತ ಬುದ್ಧಿಕಣ್ಣು ಹೆಚ್ಚಾಗಿರುತ್ತದೆಂಬುವದು ವಿನಹ, ಇವಳಿಗೂ ಇತರರಿಗೂ ವ್ಯತ್ಯಾಸವೇನೂ ಹೆಚ್ಚು ಕಡಮೆ ಇಲ್ಲ.

ವಿಲಾಯತಿಯಲ್ಲಿ ರೆವರೆಂಡ್ ಜೆ ವಿಲ್ಸನ್ ಎಂಬಾತನು ಸತ್ತನು. ಇವನು ಹುಟ್ಟಿದ್ದು ಅಕ್ಟೋಬರ್ ತಿಂಗಳಲ್ಲಿ. ಓದು ಮೊದಲು ಪ್ರಾರಂಭಿಸಿದ್ದು ಅಕ್ಟೋಬರಿನಲ್ಲಿ. ರೆವರೆಂಡ್ ಆದದ್ದು ಅಕ್ಟೋಬರಿನಲ್ಲಿ. ಮದುವೆ ಮಾಡಿಕೊಂಡದ್ದು ಅಕ್ಟೋಬರಿನಲ್ಲಿ. ಅವನ ಜ್ಯೇಷ್ಠಪುತ್ರನು ಹುಟ್ಟಿದ್ದು ಅಕ್ಟೋಬರಿನಲ್ಲಿ. ಕೊನೆಗೆ ಅವನು ಸತ್ತದ್ದು ಅಕ್ಟೋಬರಿನಲ್ಲಿ. ಇದೆಂಥಾ ಆಶ್ಚರ್ಯ!

ಬರೋಡಾಸಂಸ್ಥಾನದಲ್ಲಿ ಇಬ್ಬಣವನ್ನು ಹಿತ್ತಾಳೆಯ ಸಾಮಾನುಗಳನ್ನೂ, ಚೂರಿ, ಕತ್ತಿ ಮುಂತಾದ ಆಯುಧಗಳನ್ನೂ ತಯಾರುಮಾಡುವದಕ್ಕೆ ಒಂದು ಕಾರ್ಖಾನೆಯನ್ನು ಸರ್ಕಾರದವರು ಸ್ಥಾಪಿಸಿದ್ದಾರಂತೆ. ಇದರಿಂದ ಎಷ್ಟೋ ಮಂದಿ ಬಡವರಾದ ಪ್ರಜೆಗಳು ಜೀವನವನ್ನು ತಳ್ಳಬಹುದು. ಇತ್ತಲಾಗೆ ಇಂಥಾ ಯೋಚನೆಗಳೇ ಸರ್ಕಾರದವರ ಮನಸ್ಸಿಗೆ ಹುಟ್ಟುವದಿಲ್ಲವಲ್ಲಾ!

ಸ್ಕಾಟ್ಲೆಂಡಿನಲ್ಲಿ ಮದ್ದು ಭರ್ತಿಯಾಗಿ ಬಂದಿದ್ದ ಒಂದು ಜಹಜು ಆಕಸ್ಮಾತ್ತಾಗಿ ಸಮುದ್ರತೀರದಲ್ಲೇ ಹತ್ತಿಕೊಂಡಿತು. ಅದರೊಳಗಿದ್ದ ಜನಗಳೆಲ್ಲಾ ಸಮುದ್ರದ ಪಾಲಾದರು. ಸಮೀಪದಲ್ಲಿ ಆಗ ಹೋಗುತ್ತಿದ್ದ ರೈಲಿನಲ್ಲಿದ್ದ ಜನಗಳೊಳಗೂ ಸಹ ತುಂಬ ಹೋದರು. ರೈಲ್‌ಬಂಡಿಗಳೆಲ್ಲಾ ಛಿದ್ರಾ ಛಿದ್ರವಾದವು. ಈ ಅಪಾಯದಲ್ಲಿ ಸುಮಾರು ೩೦೦—೩೫೦ ಮಂದಿವರೆಗೂ ಹತರಾದರೆಂದು ಕೇಳಿ ವಿಷಾದಿಸುವೆವು.

ಬೊಂಬಾಯಿ ಹೈಕೋರ್ಟಿನ ಚೀಫ್‌ಜಡ್ಜಿಗಳಾಗಿದ್ದ ಮೆ|| ಸಾರ್ಜೆಂಟ್ ಟೆಲ್ಲಿಂಗರವರ ಮರಣದ ವೃತ್ತಾಂತವನ್ನು ನಮ್ಮ ವಾಚಕರಿಗೆ ಹಿಂದೆಯೇ ತಿಳಿಸಿದ್ದೆವಷ್ಟೆ. ಅವರಸ್ಥಾನಕ್ಕೆ ಗವರ್ನ್‌ಮೆಂಟಿನವರು ದಿ ಆನರಬಲ್ ರಾವ್ ಬಹದ್ದೂರ್ ಮಹದೇವ ಗೋವಿಂದ ರಾನಡೆಯವರನ್ನು ನೇಮಿಸಿರುತ್ತಾರೆ. ತಮ್ಮ ಕಡೆಯವರನ್ನೇ ಹೈಕೋರ್ಟಿನ ಜಡ್ಜಿಗಳನ್ನಾಗಿ ಸರ್ಕಾರದವರು ನೇಮಿಸಿದರಲ್ಲಾ ಎಂಬ ಸಂತೋಷವನ್ನು ಆ ಪ್ರಾಂತ್ಯದ ಪ್ರಜೆಗಳೆಲ್ಲಾ ಲಿಖಿತಮೂಲಕವಾಗಿ ತಿಳಿಯಪಡಿಸುತ್ತಲಿದ್ದಾರೆ.

ಮಹೋಬಾಲದ ಸಂಸ್ಥಾನದ ವಿಲಾಯತಿಗೆ ಹೋಗಿದ್ದಾಗ ಒಬ್ಬ ಬ್ರಾಹ್ಮಣನು ಸರ್ವಸನಾತನ ಧರ್ಮಕ್ಕೂ ಕೂಡದೆ ಇದನ್ನು ನಾಡುವದಕ್ಕೊಸ್ಕರ ಹೋಗಿ ಬಂದರೆಂತಲೂ, ಅದಕ್ಕಾಗಿ ಅವರಮೇಲೆ ದಂಡ ತಂದಳೆಂತಲೂ ಮತ್ತು ೩೦ ಸಾವಿರ ಬನಗಳನ್ನು ದಂಡ ಕೊಡಬೇಕೆಂದು ನ್ಯಾಯಾಧಿಪತಿಗಳನ್ನು ಕೇಳಿಕೊಂಡಿದ್ದೆಂತಲೂ ಹಿಂದೆ ತಿಳಿಸಿದ್ದೆವು. ಆಚೆಗೆ ಆಪೀಲುಗಳ ಮೊದಲು ವಿಚಾರಣೆಯಾಗುವಾಗ್ಗೆ ಸಹ್ಯನು ಈಗಲೂ ರಾಜ್ಯದಲ್ಲಿನ ಸನಾತನಧರ್ಮಾಧಿಕಾರಿಗಳು ಗಿರಿವರದಿಂದ ಅವರಮೇಲೆ ದಾವೆ ಹೂಡಿಯೂ ಹಿಡಿಯಾಗದೆಂದು ಒಂದು ಫಿರ್ಯಾದು ಕೊಟ್ಟಾಗ ಕೂಡಲೆ ನ್ಯಾಯಾಧಿಪತಿಗಳು ದಾವೆಯನ್ನು ವಜಾ ಮಾಡಿಬಿಟ್ಟರು.

ಮಥುರಾ (ಮಧುರಾ) ಪಟ್ಟಣದಲ್ಲಿ ಒಬ್ಬ ಬ್ರಾಹ್ಮಣನು ಮುಸಲ್ಮಾನರವಳ ಸಹವಾಸಮಾಡಿ ಮುನ್ನದಿನವನ್ನು ಕಳೆದು ಮಾಡಿದ್ದನೆಂದು ಅಲ್ಲಿನ ಎಲ್ಲಾ ಬ್ರಾಹ್ಮಣರಿಗೂ ತಿಳಿದು ಇತ್ತು. ಇವನನ್ನು ಅಲ್ಲಿನ ದೇವಸ್ಥಾನಕ್ಕೆ ಬಿಡುತ್ತಿರಲಿಲ್ಲ. ಆದ್ದರಿಂದ ಅವನು ಬಲಾತ್ಕಾರದಿಂದ ಪ್ರಾಕಾರದೊಳಗೆ ದೇವಾಲಯಕ್ಕೆ ಹೋಗಬೇಕೆಂದು ಪ್ರಯತ್ನಮಾಡಿದನು. ಅದು ನಡೆಯದೇ ಹೋಯಿತು. ಆಗ ದೇವಸ್ಥಾನದವರ ಮೇಲೆ ಅವನು ದಾವಾ ಹಾಕಿದನು. ಜಡ್ಜಿಯು ಮೊಕದ್ದಮೆಯನ್ನು ಚನ್ನಾಗಿ ವಿಚಾರಣೆ ಮಾಡಿದಾಗ ಅವನು ಜಾತಿಭ್ರಷ್ಟನಾದನೆಂತ ಸಾಕ್ಷಿಗಳಿಂದ ರುಜುವಾತಾಗಲು ಅವನು ದೇವಾಲಯವನ್ನು ಪ್ರವೇಶಿಸಕೂಡದೆಂದು ತೀರ್ಮಾನಿಸಿ ದಾವಾ ಡಿಸ್‌ಮಿಸ್ ಮಾಡಿದರೆಂದು ಕೇಳುತ್ತೇವೆ. ಇತ್ತಲಾಗೆ ಅಂಥವರು ಎಷ್ಟುಮಂದಿ ಸಜ್ಜನರೆನ್ನಿಸಿಕೊಂಡಿರುವರೋ!!

ಜರ್ಮನಿಯಲ್ಲಿ ಸರ್ಕಾರದ ಜಮಾಬಂದಿಯನ್ನು ೪ ಜಿಲ್ಲೆಗಳಲ್ಲಿ ಜನರು ತಾವು ನಿಶ್ಚಯಿಸಿ ಅಲ್ಲಿನ ಸ್ವಸ್ಥರ ಖರ್ಚುಗಳಲ್ಲಿ ದಿವಸಕ್ಕೆ ೧ ಕಾಸಿನಷ್ಟು ಹೆಚ್ಚು ಖರ್ಚಾಗುತ್ತಿತ್ತು. ಇದು ಯಾವಯಾವಾಗ ಆಗುತ್ತಿತ್ತೋ ಗೊತ್ತಾಗದೆ ಹುಡುಕಿದಾಗ ಅಲ್ಲಿ ಅನೇಕ ತಿಂಗಳುಗಳವರೆಗೂ ಇದಕ್ಕಾಗಿ ಕಾಗದಪತ್ರಗಳು ನಡೆಯುತ್ತಿತ್ತು. ಕೊನೆಗೆ ಈ ಹೆಚ್ಚು ಖರ್ಚಿಗೆ ದಾರಿ ಸಿಕ್ಕಿತು. ಅದೇನೆಂದರೆ ಅಲ್ಲಿ ಎರಡು ಸೈನ್ಯ ನಿವಾಸಸ್ಥಾನಗಳಿದ್ದವು. ಎರಡರಲ್ಲೂ ಸಿಪಾಯಿಗಳು ಒಂದೊಂದು ಪಕ್ಷಿಯನ್ನು ಸಾಕುತ್ತಿದ್ದರು. ಅದರ ಆಹಾರದ ಖರ್ಚನ್ನು ಸರ್ಕಾರಕ್ಕೇ ಸೇರಿಸುತ್ತಿದ್ದರು. ಒಂದು ಕಡೆಯ ಪಕ್ಷಿ ಅಲ್ಲಿದ್ದ ಇಲಿಗಳನ್ನು ಕೊಂದು ತಿನ್ನುತ್ತಿತ್ತು. ಆ ಪಕ್ಷಿಯ ಮೊಕದ್ದಮೆ ಇದ್ದ ಕಡೆಗೆ ಒಂದು ಇಲಿಯಾದರೂ ಸಿಕ್ಕದೇ ಇದ್ದುದರಿಂದ ಸರ್ಕಾರದವರ ಆಹಾರವನ್ನೇ ತಿಂದು ಜೀವಿಸಿಕೊಂಡಿದ್ದದ್ದರಿಂದ ಮೊದಲನೇದಕ್ಕಿಂತಲೂ ಇದಕ್ಕೆ ೧ ಕಾಸು ಹೆಚ್ಚು ಖರ್ಚಾಗುತ್ತಿತ್ತು. ಈ ಗುಟ್ಟನ್ನು ಒಬ್ಬ ಆಫೀಸರನು ಕಂಡುಹಿಡಿದನು. ಅವನಿಗೆ ಸರ್ಕಾರದವರು ಒಂದು ಬಹುಮಾನವನ್ನು ಕೊಟ್ಟರಂತೆ!

ಉತ್ತರದೇಶದಲ್ಲಿ ಹೋಗ್ಗೆ ಸಿಪಾಯಿ ೨೫ ವರ್ಷಗಳ ಕೆಳಗೆ ಮಾಡಿರುವ ಒಬ್ಬ ಹೆಂಗಸನ್ನು ಅತ್ಯಾಚಾರದಿಂದ ಹಿಡಿದರೆಂದು ಅವಳು ಅವನಮೇಲೆ ಫಿರ್ಯಾದು ಮಾಡಿದ್ದಳು. ಆಗ ಮ್ಯಾಜಿಸ್ಟ್ರೇಟರು ಮೊದಲನೇ ಸಾರಿ ಅಪರಾಧಿಗೂ ಶಿಕ್ಷೆಯನ್ನು ವಿಧಿಸಿ, ಮೂರನೇ ಅಪರಾಧಿಯು ಫರಾರಿಯಾಗಿ ಇದ್ದುದರಿಂದ ಅವನನ್ನು ಹಿಡಿಯುವದಕ್ಕೆ ಒಂದು ವಾರಂಟನ್ನು ಕೊಟ್ಟರು. ಆದರೂ ಅವನು ಸಿಕ್ಕಲಿಲ್ಲ. ಅವನು ಈಗ ಒಬ್ಬ ಜಮೀನ್ದಾರನಬಳಿಯಲ್ಲಿ ಚಾಕರನಾಗಿದ್ದನೆಂಬ ವರ್ತಮಾನವನ್ನು ಒಬ್ಬ ಪೊಲೀಸಿನವನು ಕೇಳಿ ಬಂದಮೇಲೆ ರಾತ್ರಿ ನಾಟಕ ನಾಟ್ಯವಾಗುತ್ತಿದ್ದ ಒಂದು ಸಭೆಯಲ್ಲಿ ಅವನನ್ನು ಹಿಡಿದನು. ಆದರೂ ಅವನು ಅಲ್ಲಿಂದಲೂ ತಪ್ಪಿಸಿಕೊಂಡು ಓಡಿಹೋದನು. ಮರುದಿವಸ ಪ್ರಯತ್ನಪೂರ್ವಕವಾಗಿ ಪೊಲೀಸಿನವರು ಹಿಡಿದು ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸಿದರು. ಅವರು ಅಪರಾಧಿಯು ೨೫ ವರ್ಷಗಳ ಕೆಳಗೆ ಮಾಡಿದ್ದ ಅಪರಾಧಕ್ಕಾಗಿ ಅವನಿಗೆ ೬ ತಿಂಗಳು ಕಠಿಣಸಜಾ ೨೫ ರೂಪಾಯಿ ಜುಲ್ಮಾನೆಯನ್ನು ವಿಧಿಸಿದರು. ಇದು ಬಹಳ ಕಾಲವಾದ ಪ್ರಕಾರವೂ ನಮಗೆ ಏನೇನೂ ಗೊತ್ತಾಗುವದಿಲ್ಲವೆಂಬುದಾಗಿ ಅಲ್ಲಿನ ಒಂದು ಪತ್ರಿಕೆಯು ತಿಳಿಸುತ್ತದೆ.

ಗೋದಾವರೀ ಡಿಸ್ಟ್ರಿಕ್ಟಿಗೆ ಸೇರಿದ ಎಲ್ಲೋರಿಯಲ್ಲಿ ಒಬ್ಬ ನೇಟಿವ್ ಸಾಹುಕಾರನ ಮನೆಯಲ್ಲಿ ಕೆಲವು ದಿವಸಗಳ ಕೆಳಗೆ ಒಂದು ಮದುವೆ ಪ್ರಸ್ತವಾಗಿತ್ತು. ಆಗ್ಗೆ ಅವನಮನೆಗೆ ಅನೇಕ ಮಂದಿ ಬ್ರಾಹ್ಮಣರು ದಕ್ಷಿಣೆಗಳ ಹೋಗಿದ್ದರು. ಊಟ ಮಾಡಿದನಂತರ ಯಜಮಾನನು ತನ್ನ ಕಡೆಯ ಒಬ್ಬನನ್ನು ಕರೆದು ಅವರವರಿಗೆ ಸ್ವಲ್ಪ ಹಣ ಕೊಟ್ಟು ಪಟ್ಟೆಯಲ್ಲಿ ಬರುವ ಪಂಡಿತರಿಗೆಲ್ಲಾ ಆ ಹಣವನ್ನು ಹಂಚಿ ಕೊಡು ಎಂದು ಹೇಳಿದನು. ಅವನು ಅವರವರುಗಳನ್ನೆಲ್ಲಾ ನೋಡಿ ಅವರಲ್ಲಿ ಒಬ್ಬ ಸಿರಿವಂತ ಸ್ವಲ್ಪ ಹಣ ಕೊಟ್ಟು ಪಣವನ್ನು ಒಬ್ಬರಿಗೂ ಕೊಡದೆ ನಿಲ್ಲಿಸಿಕೊಂಡನು. ಆಗ ಸಭೆಯಲ್ಲಿದ್ದ ಇಬ್ಬರು ಪಂಡಿತರು ಅವನಮೇಲೆ ಛಾರ್ಜುಮಾಡಿದರು. ಕೋರ್ಟಿನಲ್ಲಿ ಅವನು ಆ ಉಳಿದ ಹಣವನ್ನು ಅವರಿಗೆ ಕೊಡಬೇಕೆಂದು ತೀರ್ಮಾನವಾಯಿತು. ಆದರೆ ಈ ಮೊಕದ್ದಮೆಯು ಅಪ್ಪೀಲಾದಾಗ ಅಲ್ಲಿಯೂ ಕೆಳಗಿನ ಕೋರ್ಟಿನ ತೀರ್ಮಾನವೇ ಸ್ಥಿರಪಡಿಸಲ್ಪಟ್ಟು ಅದ್ದರಿಂದ ಜನ್ನು ಮೇಲೆ ಹಿಂದೆಯೂ ಮೊದಲುಗಳಲ್ಲಿ ದಕ್ಷಿಣೆ ಕೊಡುವ ಪದ್ಧತಿ ನೇಮಿಸಲ್ಪಟ್ಟು ಜನರು ಅದಕ್ಕಾಗಿ ತೆಗೆಯಬೇಕಾದವನ್ನೆಲ್ಲಾ ವಿಚಾರ ಮಾಡಬೇಕು ಇಲ್ಲವಾದರೆ, ಹಣವನ್ನು ವಿಭಾಗಿಸಿ ಮಾಡಿ ಕೊಡತಕ್ಕದ್ದೆಂದು ಪ್ರಯತ್ನಮಾಡುವವರನ್ನೆಲ್ಲಾ ಈ ಮೊಕದ್ದಮೆಯು ಎಚ್ಚರಿಸತಕ್ಕದ್ದಾಗಿದೆ.

೧೮೯೩ನೇ ಇಸವಿ ಅಕ್ಟೋಬರ್ ತಾ|| ೨೩ನೇ ಸೋಮವಾರದಲ್ಲು ಮೈಸೂರಲ್ಲಿ ಸೇರಿದ ಪ್ರಜಾ ಪ್ರತಿನಿಧಿಗಳ ಸಭೆಯಲ್ಲಿ ನಡೆದ ಮೈಸೂರು ಸಂಸ್ಥಾನದ ದಿವಾನರವರ ಉಪನ್ಯಾಸ.

(ಕಳೆದ ವಾರದ ಶೇಷ)

ಕೋಲಾರದ ಡಿವಿಜನ್—

(1) (2) (3) ಚಿತ್ರಾವತಿ, ಪಿನಾಕಿನಿ, ಉತ್ತರಪಿನಾಕಿನಿ, ಈ ನದಿಗಳಿಗೆ ಅಡ್ಡಲಾಗಿ ತಯಾರಾಗುತ್ತಲಿರುವ ಮೂರು ಭಾರಿ ಕೆರೆಗಳು ಕಾಮಗಾರಿ ಪೂರೈಸುತ್ತ ಬಂದು ಇದೆ.

(4) ಕೋಲಾರದ ತಾಲ್ಲೂಕು ಮುದವಾಡಿ ಕೆರೆ ಕಾಮಗಾರಿ ಅಂದಾಜು 14,000.

(5) ತಿಮ್ಮನಾಯಕನಹಳ್ಳಿ ಅಗ್ರಹಾರದ ಕೆರೆ ಅಂದಾಜು ರೂಪಾಯಿ 42,060.

(6) ದೊಡ್ಡಬಳ್ಳಾಪುರ ತಾಲ್ಲೂಕು ಘಾಟಿ ಅಣೆ ಮತ್ತು ನಾಲೆ ಅಂದಾಜು ರೂಪಾಯಿ 80,000.

ತುಮಕೂರು ಡಿವಿಜನ್:—

(1) ಮಧುಗಿರಿ ತಾಲ್ಲೂಕು ಗುಂಡಲ್ ಕೆರೆ	26,000
(2) ಸಿರಾ ತಾಲ್ಲೂಕು ಕಾರೇಹಳ್ಳಿ ಕೆರೆ	45,000
(3) ತಿಪಟೂರು ತಾಲ್ಲೂಕು ಮಾದಿಹಳ್ಳಿ ಕೆರೆ	85,000
(4) ತಿಪಟೂರು ತಾಲ್ಲೂಕು ಬಿಳಿಯಸಂದ್ರದ ಕೆರೆ	25,000
(5) ಕುಣಿಗಲ್ ತಾಲ್ಲೂಕು ಬೊಮ್ಮನಾಯಕನಹಳ್ಳಿ ಕೆರೆ	24,000
(6) ತಿಪಟೂರು ತಾಲ್ಲೂಕು ಕ್ಯಾತನಕೆರೆ	32,000

ಚಿತ್ರದುರ್ಗದ ಡಿವಿಜನ್:—

(1) ತಿಪ್ಪೆರುದ್ರಯ್ಯನ ಕೊಳ್ಳಕ್ಕೆ ಅಡ್ಡಲಾಗಿ ಹೊಸಕೆರೆ	28,000
(ಕಾಮಗಾರಿ ಪೂರೈಸುತ್ತ ಬಂದಿರುತ್ತೆ)	
(2) ಹಿರಿಯೂರ್ ತಾಲ್ಲೂಕು ವಡವನಹಳ್ಳಿ ಹತ್ತಿರ ವಾಣಿಹಳ್ಳಕ್ಕೆ ಅಡ್ಡಲಾಗಿ ಹೊಸಕೆರೆ	47,000

ಮೈಸೂರು ಡಿವಿಜನ್:—

(1) ನಂಜನಗೂಡು ತಾಲ್ಲೂಕು ಹುಲ್ಲಹಳ್ಳಿ ನಾಲೆ ಅಭಿವೃದ್ಧಿ ಮತ್ತು ಬದಲಾವಣೆ	6,05,000
(ಅರ್ಧ ಪೂರೈಸಿರುತ್ತೆ)	

ಶ್ರೀರಂಗಪಟ್ಟಣ ಡಿವಿಜನ್:—

(1) ಪಾಂಡವಪುರ ತಾಲ್ಲೂಕು ಮಾದಾಪುರ ಅಣೆ ನಾಲೆ ಅಭಿವೃದ್ಧಿ	84,000
(ಕಾಮಗಾರಿಯು ಬಹಳ ಮಟ್ಟಿಗೆ ಪೂರೈಸಿದೆ)	
(2) ಕೃಷ್ಣರಾಜಪೇಟೆ ತಾಲ್ಲೂಕು ಕಲ್ಲಹಳ್ಳಿ ನಾಲೆ ಬದಲಾವಣೆ	50,000
(ಕಾಮಗಾರಿ ಪೂರೈಸಿದೆ ಎಂತಲೇ ಹೇಳಬಹುದು)	
(3) ಮಳವಳ್ಳಿ ತಾಲ್ಲೂಕು ಸೂಳೆಕೆರೆ ಕಾಮಗಾರಿ	1,59,000
(ಇದುವರೆಗೆ 1 ಲಕ್ಷ ರೂಪಾಯಿ ಖರ್ಚಾಗಿರುತ್ತೆ)	

ಹಾಸನದ ಡಿವಿಜನ್:—

(1) ಶ್ರೀರಾಮದೇವರ ಉತ್ತರ ನಾಲೆ ಬದಲಾವಣೆ ಮತ್ತು ಅಭಿವೃದ್ಧಿ	82,000
(ಪೂರೈಸುತ್ತ ಬಂದಿದೆ)	

ಶಿವಮೊಗ್ಗ ಡಿವಿಜನ್:—

(1) ಚೆನ್ನಗಿರಿ ತಾಲ್ಲೂಕು ಸೂಳೆಕೆರೆ ಮತ್ತು ನಾಲೆ ಕಾಮಗಾರಿ	66,000

ಕಡೂರ್ ಡಿವಿಜನ್:—

(1) ಕಡೂರ್ ತಾಲ್ಲೂಕು ಚಿಕ್ಕಪಟ್ಟಣಗೆರೆ ಕೆರೆಗೆ ನೀರು ತರತಕ್ಕದ್ದಕ್ಕೆ ವೇದಾನದಿಗೆ ಅಡ್ಡಲಾಗಿ ಅಣೆ	10,000
(2) ಅಯ್ಯನಕೆರೆ ಅಣೆ ಮತ್ತು ನಾಲೆ ಕಾಮಗಾರಿ	34,000
(ಕಾಮಗಾರಿ ಪೂರೈಸಿರುತ್ತೆ)	

ಈ ಕೆಳಗೆ ನಮೂದಾಗುವ ಮುಖ್ಯವಾದ ನೀರಾವರಿ ಕಾಮಗಾರಿ ಅಂದಾಜುಗಳು ಕಳೆದವರ್ಷದಲ್ಲಿ ಮಂಜೂರಾಯಿತು—

(1) ಚಿತ್ರದುರ್ಗ ಡಿವಿಜನ್ನಲ್ಲಿ ಕಾಮಗಾರಿ ಹಳ್ಳಕ್ಕೆ ಅಡ್ಡಲಾಗಿ ಹೊಸಕೆರೆ

(2) ಕಡೂರು ಡಿವಿಜನ್ನಲ್ಲಿ ಮಡ್ಡೂರ್ ಅಣೆ ಕಾಮಗಾರಿ ನಾಲೆ ಮತ್ತು ಕಾಳಸಂದ್ರದ ಕೆರೆ

(3) ತುಮಕೂರು ಡಿವಿಜನ್ನಲ್ಲಿ ಚಿಕ್ಕಸಂದ್ರದ ಕೆರೆ.

(4) ಹಾಸನಡಿವಿಜನ್ನಲ್ಲಿ ಸಿಂಗಾಪುರದ ಬಳಿ ಹೇಮಾವತಿಗೆ ಅಡ್ಡಲಾಗಿ ಅಣೆ ಮತ್ತು ಬಿಗನಹಳ್ಳಿ ಕೆರೆ

(5) ಬೆಂಗಳೂರ್ ಡಿವಿಜನ್ನಲ್ಲಿ ಹೊಸಕೋಟೆ ತಾಲ್ಲೂಕು ಮಾಕೈಸಂದ್ರದ ಕೆರೆ

ನೀರಾವರಿ ಕಾಮಗಾರಿಗಳ ಸಂಬಂಧವಾಗಿ ಕಾವೇರಿನದಿಗೆ ಅಡ್ಡಲಾಗಿ ಹಾಲಿ ಇರುವ ಅಣೆಗಳ ಮೂಲಕ ಇನ್ನೂ ಹೆಚ್ಚಾಗಿ ನೀರಿನ ಸರಬರಾಯಿ ಆಗುವಂತೆ ಮಾಡುವ ಅಭಿವೃದ್ಧಿಯ ದಿಕ್ಕಿನ ಭಾಗದಲ್ಲಿ ವಿಚಾರ ಮಾಡುತ್ತಲಿದೆ ಎಂದು ಹೋದ ವರುಷದ ಉಪನ್ಯಾಸದಲ್ಲಿ ಹೇಳಿದ್ದೆವಷ್ಟೆ. ಈ ಪೈಕಿ ಕೆಲವು ಅಣೆಗಳನ್ನು ನಾವು ಖುದ್ದು ನೋಡಿದ್ದರಲ್ಲಿ ಹಾಲಿ ಇರತಕ್ಕ ಕಾವೇರಿ ನಾಲೆಗಳನ್ನು ವಿಸ್ತರಿಸಿ ಸಂಪೂರ್ಣ ಮಾಡತಕ್ಕದ್ದಕ್ಕೆ ಸಾಧ್ಯವಾದ ಎಲ್ಲಾ ಕಾಮಗಾರಿಗಳ ಪೈಕಿ ಅಣೆಕಟ್ಟೆ ಅನೆಯು ಕೇವಲ ಉತ್ತಮವಾದ್ದೆಂದು ಅಭಿಪ್ರಾಯಪಡುತ್ತೇವೆ. ಈ ಕಟ್ಟೆ ಕಾಮಗಾರಿಬಗ್ಗೆ ಚೀಫ್ ಎಂಜಿನಿಯರ್ ಇವರು ತಯಾರಿಸಿದ ೪ ಅಂದಾಜುಗಳನ್ನು ತಯಾರು ಮಾಡಿದರು. ಇವುಗಳ ಪೈಕಿ ಕೆಲವು ಕಮ್ಮಿಯಾದ 1½ ಬಿಲಿಯನ್ ಲಕ್ಷ ರೂಪಾಯಿಯ ಅಂದಾಜನ್ನು ಶ್ರೀಮನ್ಮಹಾರಾಜಾಸಾಹೇಬ್ ಬಹದ್ದೂರವರು

ಸೆಂಜಿನಿಯರ ರವರು ಮಾಡಿರುತ್ತಾರೆ ಈ ಅಂದಾಜಿನ ಪ್ರಕಾರ ನಡೆಸುವೇ ಕೆಂದು ಉದ್ದೇಶಿಸಿರುವ ಕೆಲಸಗಳ ತಪಶೀಲ್ ಹ್ಯಾಗೆಂದರೆ:— 2500 ಅಡಿ ಉದ್ದವುಳ್ಳ ಆಗಿರುವ ಈ ಅಣೆಕಟ್ಟೆ ಅಣೆಯು ವಿಶೇಷ ಶೋಭಾಗಿಯೂ ಪುರಾತನದ್ದಾಗಿಯೂ ಸೋರುತ್ತಲೂ ಇರುವದ್ದರಿಂದ ಇದನ್ನು ಜಾಗ್ರತೆಯಾಗಿ ಸಂರಕ್ಷಿಸುವದು ಆಗುವದಿಲ್ಲ ಆದ್ದರಿಂದ ಹಾಲಿ ಇಂತಕ್ಕೂ ಅಣೆಕಟ್ಟೆಗೆ ಬದಲಾಗಿ ಅದೇ ಪ್ರದೇಶದಲ್ಲಿಯೇ ಹೊಸದಾಗಿ 750 ಅಡಿ ಉದ್ದವುಳ್ಳ ಅಣೆಯನ್ನು ಕಟ್ಟಬೇಕೆಂದು ಮಾಡಿದೆ ಈ ಹೊಸ ಅಣೆಕಟ್ಟೆಗೆ ಸುಮಾರು 80,000 ರೂಪಾಯಿಯೂ, ಮತ್ತು ಉಭಯ ಪಾರ್ಶ್ವಗಳಲ್ಲಿಯೂ ಕಟ್ಟಬೇಕಾದ ತೂಬುಗಳಿಗಾಗಿ 30,000 ರೂಪಾಯಿಯೂ, ಬೇಕಾಗುವದು. ಈ ಗಿರುವ ನಾಲೆಗಳು, ವಿರಿಜ, ಹಂಪಾಪುರ ಮತ್ತು ಇತರ ನಾಲೆಗಳಿಗೆ ನೀರನ್ನು ಸರಿಯಾಗಿ ಒದಗಿಸುವದಕ್ಕಾಗಿ ಏತಭಾಗದ ಅಣೆಯು ಅವಶ್ಯವಾಗಿದೆ ಈ ನಾಲೆಗಳ ಅಭಿವೃದ್ಧಿ ಮತ್ತು ಬಲಾಢ್ಯತೆಗೋಸ್ಕರ ಆಗಾಗ್ಗೆ ತಯಾರಾದ ಅಂದಾಜುಗಳು ಕೃತ್ತಿಕರವಾಗಿರಲಿಲ್ಲವಾದ್ದರಿಂದ ಯಾವದೂ ಮಂಜೂರಾಗಲಿಲ್ಲ ಅವುಗಳನ್ನೆಲ್ಲಾ ಬಿಟ್ಟು ಮೇಲ್ಭಾಗದ ಅಣೆಕಟ್ಟೆ ಅಣೆ ಕಾಮಗಾರಿ ಅಂದಾಜುವನ್ನೇ ಬಹಳ ಒಬ್ಬು ಕೊಳ್ಳತಕ್ಕದ್ದೆಂದು ನಿಶ್ಚಯ ಮಾಡಿರುತ್ತೆ ಈ ಅಣೆಯು ಏತಭಾಗದಲ್ಲಿರುವ ಜಮೀನುಗಳ ನೀರಾವರಿಗಾಗಿ ಮೇಲ್ಕಂಡ ಕಾಮಗಾರಿಯು ಅತ್ಯುತ್ತಮವಾದದ್ದು ಎಂಬದಕ್ಕೆ ಸಂದೇಹವಿಲ್ಲ ಆದ್ದರಿಂದ ಈ ಕಾಮಗಾರಿಯನ್ನು ಬೇಗನೆಯೇ ಪ್ರಾರಂಭಮಾಡುವ ಭಾಗದಲ್ಲಿ ಭಿನ್ನಾಭಿಪ್ರಾಯಕ್ಕೆ ಅವಕಾಶವಿಲ್ಲ ಆದರೆ ಈ ಅಣೆಯು ಬಲ ಪಾರ್ಶ್ವದ ನಾಲೆಯನ್ನು ಎಷ್ಟು ದೂರದವರೆಗೆ ತೆಗೆದುಕೊಂಡು ಹೋಗತಕ್ಕದ್ದು ಎಂಬದನ್ನು ಈಗಲೂ ಅಖೈರ್ ತೀರ್ಮಾನವನ್ನು ಈಗ ಮಾಡಲು ಸಾಧ್ಯವಿಲ್ಲ ಆದ್ದರಿಂದ ಕೆಳಭಾಗದಲ್ಲಿರುವ ನಾಗು ವಳ್ಳಿ ಜಮೀನುಗಳಿಗೆ ನೀರಿನ ಕೊರತೆಯಿಲ್ಲದಂತೆ ಈ ಅಣೆಯಿಂದ ಎಷ್ಟು ದೂರಕ್ಕೆ ನೀರನ್ನು ಸರಿಯಾಗಿ ಹರಿಸುವುದಕ್ಕಾಗುವದೋ ಅಲ್ಲಿಯವರೆಗೆ ವಿಸ್ತರಿಸುವದು ಹಾಲಿ ಯೋಗ್ಯವಾದ್ದೆಂದು ಕಂಡುಬಂದಿದೆ ... ಇದೆ ಈ ಕೆಲಸಕ್ಕೆ ಹೊಸ ನಾಲೆಯ ಬಲಪಾರ್ಶ್ವದ ನಾಲೆಯಿಂದ ... ಕಾಮಗಾರಿಯನ್ನು ಅಧಿಕ ಭೂಮಿಗೆ ವಿಸ್ತರಿಸುವದಕ್ಕೆ ... ಪ್ರಸ್ತುತ 69½ ಪ್ಲಾನಿನ ಪ್ರಕಾರ ... ವೈಲುಗಳವರೆಗೆ ನಾಲೆ ತೆಗೆದುಕೊಂಡು ಹೋಗತಕ್ಕದ್ದು ಎಂದು ... ಅನುಕೂಲವಾಗುವದರಿಂದ ಈ ನಾಲೆ ಹೋಗುವ ಪ್ರದೇಶವನ್ನು ... ಗುತ್ತಿಗೆ ಮಾಡಿರುತ್ತೆ ... 10½ ಅಡಿ ಪ್ರವಾಹದವರೆಗೆ ನೀರು ಬರುವಂತೆ ಮಾಡು ... ಈ ಕಾರಣಗಳಿಂದ ಪ್ರಸ್ತುತ ಅಣೆಯನ್ನೂ ತೂಬುಗಳನ್ನೂ ಕಟ್ಟುವದಕ್ಕೆ ... ಈ ಬಗ್ಗೆ ಬಾಕಿ ಇರುವ ... ರೂಪಾಯಿಯಾಗುತ್ತದೆ ... ನಾಲೆ ಅಭಿವೃದ್ಧಿ ಕಾಮಗಾರಿಯನ್ನು ಆರಂಭಿಸುತ್ತ ... ರಿಗೆ ಬಲಭಾಗದ ಹೊಸ ನಾಲೆ ಕಾಮಗಾರಿಯ ... ಅದನ್ನು ಪೂರೈಸಲ್ಪಡುವಲ್ಲಿ ... ಮೈಸೂರು ಪ್ರಾಂತ್ಯದ ಉತ್ತಮ ... ಅನುಕೂಲವನ್ನುಂಟುಮಾಡುವ ... ಈ ಕಾಮಗಾರಿ ವಿಷಯದಲ್ಲಿ ... ನಮೂದಿಸಿರುವ ಪರಿಮಾಣಗಳನ್ನು ಕಾಲಕಾಲಕ್ಕೆ ಮೈಸೂರು ಪ್ರಜೆಗಳು ಯೋಚನೆ ಮಾಡತಕ್ಕದ್ದು.

ಆರೋಗ್ಯ ಸಂಬಂಧವಾದ ಕಾಮಗಾರಿಗಳು.—ಮೈಸೂರು, ಬೆಂಗಳೂರು, ಮತ್ತು ಇತರ ದೊಡ್ಡ ಪಟ್ಟಣಗಳಲ್ಲಿ ಆರೋಗ್ಯಪ್ರದವಾದ ಕ್ರಮಗಳನ್ನು ಜಾರಿಮಾಡುವದು, ಅಶಕ್ತವಿರುವ ಊರುಗಳಲ್ಲಿ ನೀರಿನ ಅನುಕೂಲಗಳನ್ನುಂಟುಮಾಡುವದು ಮತ್ತು ಹೀಗಾದ ಚರಂಡಿಗಳ ಬ್ಬ ಏರ್ಪಾಟುಮಾಡುವದು ಕಾಮಗಾರಿಗಳನ್ನು ನಡೆಸುವದು, ಈ ಕೆಲಸಗಳಿಗೋಸ್ಕರ ಗವರ್ನಮೆಂಟ್ ... ಖಚಿನ ... ಪ್ರತ್ಯೇಕವಾದ ... ಇಂಜಿನಿಯರು ಇಲ್ಲದೆ ಇರುವ ಲೋಪವು ಬಹುಕಾಲದಿಂದ ಇರುತ್ತೆ ಈ ಕೆಲಸಕ್ಕಾಗಿ ಮಿಸ್ಟರ್ ಸ್ಟ್ಯಾಂಡಿಷ್ ಲೀ ಎಂಬವರನ್ನು ಸ್ಯಾನಿಟರಿ ಇಂಜಿನಿಯರಾಗಿ ನೇಮಿಸಿ ... ಈ ದೊಡ್ಡ ಕಾಮಗಾರಿಗಳಿಗಾಗಿ ... ಗವರ್ನಮೆಂಟಿನ ... ಬೆಂಗಳೂರು ... ನೀರಿನ ಸರಬರಾಯಿ ... ಆರೋಗ್ಯಕ್ಕೆ ... 5 ಲಕ್ಷ ರೂಪಾಯಿ ... 1 ಲಕ್ಷ ರೂಪಾಯಿ ... ಸಹಾಯದ್ರವ್ಯವನ್ನು ... ಮ್ಯುನಿಸಿಪಲ್ ಫಂಡಿನಿಂದ ... ಪ್ರತಿ ವರುಷವೂ ... ಮುನಿಸಿಪಾಲಿಟಿಗಳು ಆರೋಗ್ಯದ ... ಕೆಲಸಗಳಿಗೆ ... ಅವುಗಳ ಆರೋಗ್ಯಸ್ಥಿತಿಯು ಸುಧಾರಣೆಯಾಗಿ ಅಭಿವೃದ್ಧಿಯನ್ನು ಹೊಂದುವದಕ್ಕೆ ಸಹಾಯಕವಾಗುವದು.

ರೈಲ್ವೆ.—ಮೈಸೂರು ಸ್ಟೇಟ್ ರೈಲ್ವೆಯು ಈಗ ಎರಡು ಭಾಗವಾಗಿರುತ್ತೆ ಈ ಎರಡು ಭಾಗಗಳ ಆಡಳಿತ ವಿಷಯ ದಲ್ಲಿಯೂ ಮತ್ತು ಪೂರ್ಣವಿವರಗಳ ವಿಷಯದಲ್ಲಿಯೂ ಪ್ರತ್ಯೇಕ ಪ್ರತ್ಯೇಕ ವರದಿಗಳು ಪ್ರಕಟಿಸಲ್ಪಟ್ಟಿರುವ ಪ್ರಯುಕ್ತ ಮೈಸೂರು—ಹರಿಹರ ರೈಲ್ವೆ ತಯಾರಾಗಿ ಹೇಳಿದ ಬಳಿಕ ದಡವನ್ನು ವಿಲಾಯತಿಯಲ್ಲಿ ತೆಗದ ರೈಲ್ವೆ ಸಾಲದ ಹಣದಿಂದ ಮಾಡಿ ... ಈ ರೈಲ್ವೆ ... ಸನ್ನ ೧೮ ... ರೈಲ್ವೆ ... ಪಟ್ಟಣ ... ರೈಲ್ವೆ ... ಬೆಂಗಳೂರು — ಹಿಂದೂಪುರ, ಮತ್ತು ಕೋಲಾರದ ಭಂಗಾರದ ಗಣಿಯ ಈ ರೈಲ್ವೆಗಳು ಸರಕಾರದ ಸ್ವಾಧೀನಕ್ಕೆ ... ಸಂಪಾದಿಸುವದು ... ರೈಲ್ವೆ ಕಂಪೆನಿಯವರ ... 3 ವರುಷಗಳವರೆಗೆ ... ಕೊಡುವ ... ಆದಾಯ ... ಸಂಪೂರ್ಣವಾಗಿ ... ಬೆಂಗಳೂರು ಬ ... ಗಾಯಿತು ಹಿಂದೂಪುರದವರೆಗಿನ ಬ್ರಾಂಚ್ ಲೈನ್ (51¼ ಮೈಲಿ) ಈ ... ಕೆಲಸಗಳು ... 1893 ನೇ ... ಭಾಗವು 1893ನೇ ಇಸವಿ ಏಪ್ರಿಲ್ ... 1893ನೇ ಇಸವಿ ಸೆ ... ಟೆಂಬರ್ 17 ನೇ ತಾರೀಖಿನಲ್ಲಿಯೂ, ಆರಂಭಿಸಿ ... ಉಪಯೋಗಕ್ಕೆ ಬಂತು ಈ ರೈಲ್ವೆ ಮೂಲಕ ಈ ಜಿಲ್ಲೆಯ ... ಪ್ರಾರಂಭವಾಗುವ ... ಮಾಡುವರು.

ಕೋಲಾರದ ಭಂಗಾರದ ಗಣಿಯವರ ಉಪಯೋಗಕ್ಕೆ ಬಿದ್ದುಮಾಡ ಬ್ರಾಂಚ್ ರೈಲ್ವೆ ಲೈನ್ (10 ಮೈಲಿ) ಕಾಮಗಾರಿ ... ಸಂವತ್ಸರ ... ಕೆಲಸವು ... ಸರಕಾರ ... ಕೊಡುವ ... ಸೆಪ್ಟೆಂಬರ್ 1 ನೇ ತಾರೀಖಿನಲ್ಲಿ ಪ್ರಾರಂಭವಾಯಿತು ... ಮುಂದಿನ ... ದಿ ದಾರಿ ಮಾಡಿರುವದು.

ನಂಜನಗೂಡಿನಿಂದ ಗುಂಡ್ಲುಪೇಟೆಗೆ ಸಾಕಬೇಕೆಂದು ... ಲೈನ್ ... ಬಗ್ಗೆ ... ನಂಜನಗೂಡಿನಿಂದ ... ಮೈಸೂರು ... ರೈಲ್ವೆ ... ಮಾಡುವದು ... ಸರಕಾರದವರು ... ಕ್ಕೆ ಸಹ ... ಇರುತ್ತೆ.

ಅಡಿಷನಲ್ ಇಲಾಖೆ ಛಟಾಯಿಗಳು.—ಚಿಕ್ಕ ಮಗಳೂರು ಮತ್ತು ಚಿತ್ರದುರ್ಗದಲ್ಲಿ ... ಅಡಿಷನಲ್ ... ಡಿಸ್ಟ್ರಿಕ್ಟ್ ... ಸಿವಿಲ್ ... ಆರಂಭದ ... ಗವರ್ನಮೆಂಟ್ ... ಚೀಫ್ ಕೋರ್ಟು ... ಮೈಸೂರು ... ಇದರಲ್ಲಿ ...

ಮುನಿಸಿಪ್ ...—ಶೀಘ್ರ ಸಂವತ್ಸರದಲ್ಲಿ ಹೊಸದಾಗಿ ಸ್ಥಾಪಿತ 8 ಜೂನಿ ಇನ್ಸ್‌ಪೆಕ್ಟರು ... ವೈದ್ಯರ ... ಕೆಲ ... ರೋಗಿಗಳಲ್ಲಿ ... 1,6,631 ...

1892ನೇ ಇಸವಿ ... ಮೈಸೂರು ಮುನಿಸಿ ಪಾಲಿಟಿ ... ಮೈಸೂರು ... ಕರ್ನಾಟಕ ಮತ್ತು ಯುರೋಪ ... ಜಿಲ್ಲೆ ... ಚಿಕಿತ್ಸೆ ... 1893ನೇ ಇಸವಿ ಜೂನ್ 30ನೇ ತಾರೀಖಿನವರೆಗೆ 6 ತಿಂಗಳಲ್ಲಿ ... 29,314 ... 279.80 ... ಈ ವೈದ್ಯ ...

ಈ ಸಂವತ್ಸರದಲ್ಲಿ ದೇವಿಯಾಗಿ ಒಟ್ಟು ರೂ. 11,732 ಹಿಂದಿನ ವರುಷದಲ್ಲಿ 71,825 ರೋಗಿಗಳು ... ಕಾಲರಾ ... ವ್ಯಾಕ್ಸಿನೇಷನ್ ... ಇದ್ದುದರಿಂದ ... ಹೆಚ್ಚು ... ಈ ಸಂವತ್ಸರ ಸಂಖ್ಯೆಯು ಶೇಕಡ 10ರಂತೆ ಜಾಸ್ತಿ ಆಗಿರುತ್ತೆ.

ವ್ಯವಸಾಯ.—ಅಮೇರಿಕಾ ದೇಶದ ಉತ್ತಮ ಜಾತಿ ಹತ್ತಿಯ ಬೀಜವನ್ನು ... ಈ ಹತ್ತಿ ಬೀಜವನ್ನು ಚಿತ್ರದುರ್ಗ, ಕೋಲಾರ ಮತ್ತು ... ಡಿಸ್ಟ್ರಿಕ್ಟ್ ಗಳಿಗೆ ಸರಬರಾಯಿ ಮಾಡಿರುತ್ತೆ ಚಿತ್ರದುರ್ಗ ಡಿಸ್ಟ್ರಿಕ್ಟ್ ನಲ್ಲಿ ಹತ್ತಿ ಬೆಳೆಯತಕ್ಕ ... ಕಪ್ಪು ಮಣ್ಣಿನಲ್ಲಿ ... ರೈತರು ... ಇರುತ್ತಾರೆಂದು ತಿಳಿಯಬರುತ್ತೆ.

ವಿಲಾಯತಿಯಿಂದ ತರಿಸಲ್ಪಟ್ಟ ಹೊಸತರಹದ ಬೀಜದ ಉರುಳಿಗಳನ್ನು ... ಬೆಂಗಳೂರು ... ಈ ಗೆಡ್ಡೆಗೆ ಸಾಧಾರಣವಾಗಿ ತಗಲುವ ರೋಗವು ... ಹೊಸತರಹದ ಬೀಜಗಳನ್ನು ... ಗೊತ್ತಾಗುತ್ತೆ.

ಅದಾಯಕರವಾದ ಕಾಫಿ ಸಾಗುವಳಿಯನ್ನು ಮೈಸೂರು ಪ್ರದೇಶದಲ್ಲಿ ... ಬೆಂಗಳೂರು ... ಪ್ರಯತ್ನ ... ಸಫಲವಾಗುತ್ತಾ ಬಂದ ... ನೋಡಿ ... ಕಾಫಿ ... ಸಾಧಾರಣವಾಗಿ ... ಕಾಫಿ ಬೆಳೆಯು ... ಸ್ಥಳದಲ್ಲಿ ... ಕಾಫಿ ... ವಿಶೇಷವಾಗಿ ... ಪ್ರಯತ್ನ ... ಡ ಪಶ್ಚಿಮಭಾಗವನ್ನು ... ನಿರೀಕ್ಷಿಸುತ್ತಾರೆ.

ಮಿಸ್ಟರ್ ... ರೇಷ್ಮೆ ... "ಮೈಸೂರು ಮತ್ತು ಕೊಡಗು ..." ಎಂಬ ಗ್ರಂಥವನ್ನು ... ಬರೆದು ...

ವಿಶೇಷವಾಗಿ ... ಪ್ರದೇಶಗಳ ಪಟ್ಟಣಗಳಲ್ಲಿ ... ರಾಜ್ಯದ ... ಈ ... ಮಾಡುತ್ತಾ ... ಸ್ಥಳಗಳಲ್ಲಿ ... ವ್ಯವಸಾಯ ... ಕ್ರಯದಿಂದ ... ಸರಕಾರದವರು ... ಹೊಸ ... ಪ್ರಯೋಜನಕಾರಿಯಾಗಿರುತ್ತೆ.

ಮುಜರಾಯಿ.—ಈ ಇಲಾಖೆಯು ಮೇಲ್ವಿಚಾರಣೆಗೆ ಪ್ರತ್ಯೇಕವಾಗಿ ... ದೇವಾಲಯಗಳಿಗಾಗಿ ಸರಕಾರದಿಂದ ... ಅಭಿವೃದ್ಧಿ ... ಸಂಸ್ಥಾನದ ... ಸಾಗುವಳಿಯ ... ಜಮೀನು ... ಖರ್ಚು ... ಧರ್ಮಕಾರ್ಯ ... ವರಮಾನ ... 3 ಲಕ್ಷ ರೂಪಾಯಿಗಿಂತ ಜಾಸ್ತಿಯಾಗಿ ... 11 ಲಕ್ಷ ರೂಪಾಯಿಗಳವರೆಗೆ ಆದಾಯವಿರುತ್ತೆ.

ವಿದ್ಯಾಭಿವೃದ್ಧಿಗಾಗಿ ಸಂಸ್ಕೃತ ... ಧರ್ಮ ಸಹಾಯಕ್ಕಾ ... ಕೆಲಸಗಳನ್ನು ... ಶೇಕಡ 3 ರೂಪಾಯಿಗೆ ... ಸರಕಾರ ... ಇರುತ್ತೆ ಈ ಪ್ರಕಾರ ... 2,31,000 ರೂಪಾಯಿ ಆಗಿರುತ್ತೆ:—

1 ರಾಯಚೂರು ... ಮೊದಲಿಯಾರು ...

ಇವರು ಸ್ಥಾಪಿಸಿರುವ ವಿದ್ಯಾಶಾಲೆಗಳ ಪರವು

ಲನಿಗೂ	75,000
ಇತರ ಧರ್ಮಕಾರ್ಯಗಳಿಗಾಗಿ	30,000

(ಸಶೇಷ)

ಅಕ್ರಮ.

ನಮ್ಮ ವೃತ್ತಾಂತ ಪತ್ರಿಕೆ ... ಗಳಿಗೆ ವಿಕ್ಕ ಎಲ್ಲರಿಗೂ ತಪ್ಪದೆ ಪ್ರತಿವಾರವೂ ಕ್ರಮವಾಗಿ ರವಾನಿಸು ತ್ತೇವೆ ಕೆಲವು ಮಂದಿ ಚಂದಾದಾರರು ತಮಗೆ ಪತ್ರಿಕೆಗಳು ಸಕಾಲಕ್ಕೆ ತಲುಪುವದಿಲ್ಲವೆಂದು ಆಗಾಗ್ಗೆ ಬರೆಯುತ್ತಾರೆ ಕೆಲವರಿಗೆ ತಲುಪುವದೇ ಇಲ್ಲವೆಂದು ಬರೆಯುತ್ತಾರೆ ಇದರಿಂದ ಅಂಥವರ ವಿಳಾಸಗಳು ತಪ್ಪಾಗಿರಬಹುದು, ಇಲ್ಲವೆ ಸಬ್ ಆಫೀಸಿನ ಜವಾನರು ಆಯಾ ಕಡೆಗಳಲ್ಲಿ ಸರಿಯಾಗಿ ಡಿಲಿವರಿ ಮಾಡದೆ ಇರಬಹುದು ಎಂಬೀ ಎರಡು ಊಹೆಗಳು ಹುಟ್ಟುತ್ತವೆ ಪತ್ರಿಕೆಗಳು ಯಾರ್ಯಾರಿಗೆ ಸಕಾಲಕ್ಕೆ ತಲುಪುವದಿಲ್ಲವೋ ಅಂಥವರು ತಮ್ಮ ಸರಿಯಾದ ವಿಳಾಸವನ್ನು ಚೆನ್ನಾಗಿ ಬರೆದು ತಿಳಿಸಬೇಕು ಮತ್ತು ಸಬ್ ಆಫೀಸಿನ ಪೋಸ್ಟುಮಾಸ್ಟರುಗಳು ತಮ್ಮ ತಮ್ಮ ಡಿಲಿವರಿ ಪ್ಯೂನುಗಳಿಗೆ ಸರಿಯಾಗಿ ಪಾವತಿ ಮಾಡುವಂತೆ ಹುಕುಂ ಮಾಡಬೇಕು ಎಂಬದಾಗಿ ಈ ಮೂಲಕ ಅವರುಗಳಿಗೆ ತಿಳಿಯಪಡಿಸಿರುತ್ತೇವೆ

ಎಡಿಟರ್,
ವೃತ್ತಾಂತ ಪತ್ರಿಕೆ.

ಶಾಲಿವಾಹನಶಕ ೧೮೧೫ ನೇ ವಿಜಯನಾಮ ಸಂವತ್ಸರದ ಕಾರ್ತೀಕಶುದ್ಧ ಅಷ್ಟಮಿ ಗುರುವಾರದಿಂದ ಕಾರ್ತೀಕಶುದ್ಧ ಚತುರ್ದಶಿ ಬುಧವಾರದ ವರೆಗಿನ ವಾರದ ಪಂಚಾಂಗ

— ೧೮೯೩ ನೇ ಇಸವಿ, ನವಂಬರ್

ತಾ.	ವಾರ.	ತಿಥಿ	ಘಳಿಗೆ.	ನಕ್ಷತ್ರ.	ಘಳಿಗೆ.	ಸೂರ್ಯೋದಯಾದ ತಾಸು
16	ಗು.	ಅ	60-	ಧ	51-59	3
17	ಶು	ನ	60-	ಶ	51-37	4
18	ಶ	ನ	0-45	ಪೂ	55-49	5
19	ರ *	ದ ಉಪರಿ	0-27	ಉ	59-1	6
20	ಸೋ †	ದ್ವಾ	56-52	ರೆ	65-3	7
21	ಮಂ ‡	ತ್ರ	52-53	ಅ	52-18	8
22	ಬು	ಚ	42-29	ಭ	70-1	9

* ಬೋಧಿಸುವ ಏಕಾದಶಿ * ಸ್ಮಾರ್ತರ ಏಕಾದಶಿ

† ವೈಷ್ಣವ ಏಕಾದಶಿ. ಸ್ಮಾರ್ತರ ದ್ವಾದಶಿ ವೈಷ್ಣವರ ದ್ವಾದಶಿ ಕ್ಷೀರಾಬ್ಧಿ ಉತ್ಥಾನೋತ್ಸವ

‡ ನಂಜನಗೂಡಿನಲ್ಲಿ ರಥೋತ್ಸವ

ಪೇಟೆ ಧಾರಣೆ.

ಜಿನಸು	ಮೈಸೂರು	ಬೆಂಗಳೂರು.
	ರೂ. ಅ. ಪೈ.	ರೂ. ಅ. ಪೈ.
ಕಳ್ಳೀ ಅಕ್ಕಿ ಪಲ್ಲ ೧ಕ್ಕೆ	೧೨-೮-೦	೧೨-೮-೦
ಕೆಂಬೂತಿ ಅಕ್ಕಿ ಅಪ್ಪಲ್	೧೧-೮-೦	೧೨-೧೨-೦
ಚಿಟಿಮೋ ಅಕ್ಕಿ ದುಡ್ಡು	೧೨-೦-೦	೧೨-೮-೦
ಜೀರಗೆ ಅಕ್ಕಿ	೧೨-೦-೦	೧೧-೦-೦
ಸಂಣಕ್ಕಿ ಅಪ್ಪಲ್	೧೩-೦-೦	೧೪-೦-೦
ಚಿಟಿಮೋ ಅಕ್ಕಿ ದುಡ್ಡು	೧೩-೮-೦	೧೨-೮-೦
ತೊಗರಿಬೇಳೆ ಪಲ್ಲ ೧ಕ್ಕೆ	೧೩-೮-೦	೧೩-೮-೦
ಚಿಟಿಮೋ ದುಡ್ಡು ತರಹ	೧೩-೦-೦	೧೨-೮-೦
ಹ್ಯೊಗರಾಗಿ ಪಲ್ಲ ೧ಕ್ಕೆ	೮-೮-೦	೧೨-೦-೦
ಕಾರ್ರಾಗಿ	೪-೪-೦	೫-೬-೦
ಹುರುಳಿ ಪಲ್ಲ ೧ಕ್ಕೆ	೧೦-೮-೦	೯-೮-೦
ಬಿಳೀ ಅವರೆ	೧೩-೮-೦	೧೨-೦-೦
ಹೆಸರು	೧೧-೮-೦	೧೦-೧೦-೦
ಉದ್ದು	೧೧-೦-೦	೧೧-೦-೦
ಕಡಲೆ	೧೦-೮-೦	೯-೧೨-೦
ಎಳ್ಳು	೧೩-೦-೦	೧೦-೮-೦
ಹುರಳಿ	೩-೨-೦	೬-೬-೦
ಸೀಗೇಕಾಯಿ ಮಣ ೧ಕ್ಕೆ	೨-೦-೦	೨-೦-೦
ಮೆಣಸಿನಕಾಯಿ	೪-೬-೦	೪-೧೨-೦
ದನಿಯಂ ತರಹ	೪-೨-೦	೪-೮-೦
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ	೬-೪-೦	೩೦-೧೨-೦
ಸಣ್ಣ ಅಚ್ಚು	೫-೧೨-೦	೫-೧೨-೦
ಬೆಳ್ಳುಳ್ಳಿ ಮಣ ೧ಕ್ಕೆ	೩-೦-೦	೪-೧೪-೦
ಅರಿಶಿನ	೪-೧೪-೦	೪-೮-೦
ಕೊಬ್ಬರಿ ಬಿಲ್ಲೆ ಪಲ್ಲ ೧ಕ್ಕೆ	೭-೨-೦	೮-೦-೦
ಉಪ್ಪು	೧೦-೮-೦	೯-೧೨-೦
ಹುಣಸೇಹಣ್ಣು ಮಣ ೧ಕ್ಕೆ	೨-೨-೦	೧-೧೪-೦
ಹಳೀ ಹುಣಸೇಹಣ್ಣು	೨-೨-೦	೧-೧೨-೦
ತುಪ್ಪ	೧೩-೦-೦	೧೨-೬-೦
ಸೀಮೆ ಯಣ್ಣೆ ಡಬ್ಬ ೧ಕ್ಕೆ	೪-೨-೦	೪-೧೩-೦
ತೆಂಗಿನಕಾಯಿ ೧೦೦ಕ್ಕೆ	೫-೦-೦	೩-೩-೦
ಚಿನ್ನ (ತೊಲ)		
ಕೆಂಪು	೧೬-೬-೦	೧೬-೪-೦
ಪವನು	೧೭-೦-೦	೧೬-೧೦-೦
ಗಟ್ಟಿ	೨೬-೮-೦	೨೬-೨-೦

Mysore.—Printed and published for the Proprietor at the Wesleyan Mission Press, 16/11/93.

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು ——— ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಸಂಪುಟ ೩ — ಮೈಸೂರು—ಸನ್ ೧೮೯೩ ನೇ ಇಸವಿ ನವಂಬರ್ ತಾರೀಖು ೨೩ ನೇ ಗುರುವಾರ. — ಸಂಚಿಕೆ ೨೪

ನೋಟಿಸ್.

		ಕ್ರಯ			ಅಂಚೆ ಸಹಿತವಾಗಿ		
Campbell's	ಕನ್ನಡ ವ್ಯಾಕರಣ ಸಾರ	೦	೨	೦	೦	೨	೬
Object Lessons	ವಸ್ತು ಪಾಠಗಳು	೦	೧	೦	೦	೧	೬
Picture do	ಚಿತ್ರಗಳು ಸಹಿತವಾಗಿ	೦	೨	೦	೦	೨	೬
School Geography	ಭೂಗೋಳ ಶಾಸ್ತ್ರಸಾರ	೦	೬	೦	೦	೭	೦

ಈ ನಾಲ್ಕು ಪುಸ್ತಕಗಳು ಮೈಸೂರು ಸರ್ಕಾರದವರ ಅಪ್ಪಣೆ ಪ್ರಕಾರ ಸಕಲ ಪಾಠಶಾಲೆಗಳಲ್ಲಿಯೂ ಉಪಯೋಗಿಸತಕ್ಕವುಗಳು.

	ಕ್ರಯ			ಅಂಚೆ ಸಹಿತವಾಗಿ		
ಮಾರ್ಟಿನ್ ಲೂತರ್ ಎಂಬವರ ಚರಿತ್ರೆ	೦	೧	೬	೦	೨	೦
ಸ್ತ್ರೀಯರು ಓದತಕ್ಕ ಪುಸ್ತಕ	೦	೫	೦	೦	೫	೬
ಗಣಿತ ಮಗ್ಗಿಗಳು ..	೦	೧	೦	೦	೧	೬
ಸಂಸ್ಕೃತ ಕರ್ಣಾಟಕ ಭಾಷಾಮಂಜರಿ	೦	೨	೦	೦	೨	೬
ಇಂಗ್ಲೀಷೂ ಕನ್ನಡವೂ ಶಬ್ದಾವಳಿ ೧ನೇ ೨ನೇ ಭಾಗಂಗಳ್ಗೆ	೦	೧	೦	೦	೧	೬
ಕಾವ್ಯಮಾಲೆ (Minor Poetical Anthology)	೦	೭	೦	೦	೭	೬
ಬಾಲವ್ಯಾಕರಣ ..	೦	೫	೦	೦	೫	೬
ಹಳಗನ್ನಡ ವ್ಯಾಕರಣ ಸೂತ್ರಗಳು	೦	೬	೦	೦	೬	೬
ಇಂಗ್ಲೀಷೂ ಕನ್ನಡವೂ ಸಂಭಾಷಣ ವಾಕ್ಯಗಳು	೦	೧೦	೦	೦	೧೦	೬
ಶಬ್ದಮಣಿ ದರ್ಪಣ ..	೧	೦	೦	೧	೪	೬
Kan. Eng. Pocket Dictionary	೧	೪	೦	೧	೫	೭
Eng. Kan. School Dictionary	೨	೧೦	೦	೨	೧೨	೬
ಒಳ್ಳೇ ತಾಯಿ ..	೦	೪	೪	೦	೪	೬
ಆತ್ಮಿಕ ದಿವ್ಯ ಯುದ್ಧ (Bunyan)	೦	೧೨	೦	೦	೧೩	೬
ಕೈವಲ್ಯ ಪದ್ಧತಿ ೧ನೇ ಭಾಗ ೨ ಅಣೆ ೩ನೇ ಭಾಗ	೦	೧	೬	೦	೨	೦
ಭಕ್ತಿಸಾರ ..	೦	೧	೦	೦	೧	೬
ಪಂಚ ವಾಗ್ದಾನಿ	೦	೧	೦	೦	೧	೬

ಈ ಪುಸ್ತಕಗಳೂ ಇನ್ನೂ ಅನೇಕ ಪ್ರಯೋಜನಕರವಾದ ಪುಸ್ತಕಗಳೂ ಕೆಳಗೆ ನಮೂದಿಸಿರುವ ಸ್ಥಳಗಳಲ್ಲಿ ದೊರಕುತ್ತವೆ.

ಬೆಂಗಳೂರು—ಪೋಸ್ಟಾಫೀಸಿನ ಹತ್ತಿರವಿರುವ ಪುಸ್ತಕಶಾಲೆ.

ಚಿಕ್ಕಬಳ್ಳಾಪುರ—ಲಾರ್ಡ್‌ಮಿಷನ್ ರೀಡಿಂಗ್ ರೂಮ್.

ತುಮಕೂರು—ವೆಸ್ಲೆಯನ್ ಮಿಷನ್ ಬಂಗಳೆ. ಮೈಸೂರು—ವೆಸ್ಲೆಯನ್ ಮಿಷನ್ ಪ್ರೆಸ್.

ನೋಟಿಸ್

ಪುಸ್ತಕಗಳು.	ಕ್ರಯ.
ಪ್ರಾರ್ಥನಾವಳಿ	1—8—0
ಕನ್ನಡ ಇಂಗ್ಲೀಷು ನಿಘಂಟು 1 ನೇ ದೊಡ್ಡ ತರಹ	3—0—0
" " 2 ನೇ ತರಹ	2—8—0
ಬಾಲಕರು ಓದುವ ಎರಡನೆ ಜ್ಞಾನೋಪದೇಶದ ಪ್ರಶ್ನೋತ್ತರಗಳು	0—1—0
ಸ್ವರ್ಗದ ನಿಯಮಗಳನ್ನು ಕುರಿತದ್ದು	0—0—6
ಕೀರ್ತನ ಸಂಗ್ರಹ 1 ನೇ ಭಾಗದಿಂದ 3 ವರೆಗೆ	1—0—0
ಕೀರ್ತನ ಸಂಗ್ರಹ 4 ರಿಂದ 6 ನೇ ಭಾಗ ಹೊಸ ಭಾಗ	1—0—0
" " ದೊಡ್ಡ ತರಹ	1—8—0
ಮೋಕ್ಷಾಭ್ಯಾಸಕ್ಕೆ ಬೋಧಿನಿ	0—4—0
ಸತ್ಯವೇದವನ್ನು ಕುರಿತು 2 ನೇ ಭಾಗ	0—4—0
ಪ್ರಸಂಗಿಯ ದರ್ಪಣ	0—0—6
ಇಂಗ್ಲೀಷುಭಾಷೆಯಲ್ಲಿಯೂ, ಕನ್ನಡ ಭಾಷೆಯಲ್ಲಿಯೂ, ಶಬ್ದಗಳ ವಿಭಾಗಗಳನ್ನು ವಿವರಿಸಿರುವ ನಿಘಂಟು	0—2—0
ಕನ್ನಡ ವ್ಯಾಕರಣ (ಇಂಗ್ಲೀಷಿನಲ್ಲಿ)	2—0—0
ಹಿಂದುಸ್ತಾನಿ ವ್ಯಾಕರಣ	1—0—0
ಬಾಲಬೋಧ ಸೋಪಾನವು	0—12—0
ಮತ ಕರ್ತರ ಅಂಕುರೋದ್ಗಮಿಸುವಿಕೆ	0—0—6
ಕ್ರಿಸ್ತೀಯ ಬೋಧನೆಗಳ ಸಾರಾಂಶವು	0—12—0

ಮೇಲೆ ನಮೂದಿಸಿರುವ ಪುಸ್ತಕಗಳನ್ನು ಅಪೇಕ್ಷಿಸುವವರು ಮೈಸೂರು ವೆಸ್ಲೆಯನ್ ಮಿಷನ್ ಪ್ರೆಸ್ಸಿಗೆ ಬರೆದು ಕಳುಹಿಸಬಹುದು ಅಂಚೆ ಹಾಸಲು ಬೇರೆ ಕೊಡಬೇಕು.

ವೆಸ್ಲೆಯನ್ ಮಿಷನ್ ಪ್ರೆಸ್,
ಮೈಸೂರು.

ಪ್ರಸಿದ್ಧಪತ್ರಿಕೆ

ಕಂ|| ಸಕಲಭುವನಸಗರಂಜನವೆ | ಸಕಲರದ್ಯ್ರಬಾವಪರಿಃಚ ಒಸೆಯರದವಕದಿಂ ೩ ಪ್ರಕಟಿಪವನಭಾರತದಕಥೆ | ವಿಕಸಿಪುದೇಂಬಿರದೆ ಕೇಳಲ್ಕನಿಶಾನಂದಂ ||

ಕನ್ನಡ ಮಹಾಭಾರತ.

"ಶ್ರೀಕೃಷ್ಣರಾಜ ವಾಣೀವಿಲಾಸ" ಎಂಬ ಕನ್ನಡ ಮಹಾಭಾರತವು ನಮ್ಮ ಸ್ವಕೀಯ ಶ್ರೀಚಾಮುಂಡೇಶ್ವರಿ ಪ್ರೆಸ್ಸಿನಲ್ಲಿ ಪ್ರಕಟಿಸಲಾಗುವದು ಎಲ್ಲರಿಗೂ ವಿದಿತವಾಗಿಯಷ್ಟೆ ಈಗ ಹದಿನೆಂಟು ಪರ್ವಗಳೂ ಪೂರ್ತಿಯಾಗಿ ಪ್ರಸಿದ್ಧವಾಗಿವೆ. ಅಪೇಕ್ಷಿಸುವವರು ಕೆಳಗೆ ವಿವರಿಸುವ ಕ್ರಯವನ್ನು ಕಳುಹಿಸಿ ತರಿಸಿಕೊಳ್ಳಬಹುದು

ಆದಿಪರ್ವ ರೂ ೩, ಸಭಾಪರ್ವ ೬-೪-೦, ಅರಣ್ಯಪರ್ವ.. ವಿರಾಟಪರ್ವ ಷ್ಪೆಶಲ್‌ಪೇಪರ್ ೧೨ ಆಣೆ, ಡಿಟೋ ಕಿತ್ತಾನಿನ ಫುಲ್‌ಸ್ಕೇಪ್ ೧ ರೂ, ಉದ್ಯೋಗಪರ್ವ.. ಭೀಷ್ಮಪರ್ವ ೨ ದ್ರೋಣಪರ್ವ ೨-೮-೦, ಕರ್ಣಪರ್ವ.. ಶಲ್ಯಪರ್ವ ೧-೨-೦ ಸೌಪ್ತಿಕಪರ್ವ ೬ ಆಣೆ, ಸ್ತ್ರೀಪರ್ವ ೬ ಆಣೆ, ಶಾಂತಿಪರ್ವ ರಾಜಧರ್ಮ ೨-೬-೦, ಆಪದ್ಧರ್ಮ ೮ ಆ, ಮೋಕ್ಷಧರ್ಮ ೨-೬-೦, ಅನುಶಾಸನಿಕಪರ್ವ ೩-೧೨-೦ ಅಶ್ವಮೇಧಿಕಪರ್ವ ೧-೧೨-೦, ಆಶ್ರಮವಾಸಿಕಪರ್ವ—ಮೌಸಲಪರ್ವ—ಮಹಾಪ್ರಸ್ಥಾನಪರ್ವ—ಸ್ವರ್ಗಾರೋಹಣಪರ್ವ ೧೦ ಆಣೆ, ಭಗವದ್ಗೀತೆ ೮ ಆಣೆ, ರಾಮಾಯಣದ ಚರಿತ್ರೆ ೪ ಆ, ಜ್ಞಾನಭಕ್ತಿಸಾರ ೬ ಪೈ, ಲೋಪರ್‌ಸೆಕೆಂಡರೀ ಪರೀಕ್ಷೆನ ನೋಟ್ಸು ೮ ಆಣೆ.

ಅರಣ್ಯಪರ್ವ, ಉದ್ಯೋಗಪರ್ವ, ಕರ್ಣಪರ್ವ ಈ ಮೂರು ಪರ್ವಗಳು ಗೌರ್ನಮೆಂಟ್ ಬುಕ್‌ಡಿಪೋವಿನಲ್ಲಿ ದೊರೆಯುವುದು. ಮೇಲೆ ಹೇಳಲ್ಪಟ್ಟಿರುವ ಪುಸ್ತಕಗಳು ನಮ್ಮಲ್ಲಿ ಸ್ವಲ್ಪವೇ ಇರುವದರಿಂದ ಜಾಗ್ರತೆಯಾಗಿ ತರಿಸಿಕೊಳ್ಳಬಹುದು.

ಶ್ರೀಮನ್ಮಹಾರಾಜರವರಿಗೆ ಫಲಪುಷ್ಪ ಸರಬರಾಯಿ ಮಾಡುವರಕ್ಕೆ ಮುಖ್ಯವಾಗಿ ನೇಮಿಸಲ್ಪಟ್ಟ,

ಎಂ. ರುದ್ರಪ್ಪ ಅಂಡ್‌ಸನ್,
ಪ್ರೊಪ್ರೈಟರ್ಸ್, ಶ್ರೀಚಾಮುಂಡೇಶ್ವರಿ ಪ್ರೆಸ್,
ಲಾಲ್—ಬಾಗ್ ರೋಡ್, ಬೆಂಗಳೂರು

ಸನ್ ೧೮೪೯ ರಲ್ಲಿ ಸ್ಥಾಪಿಸಲ್ಪಟ್ಟದ್ದು.

ಕೆನರಾ ಅಂಡ್ ಮೈಸೂರ ಟ್ರೇಡಿಂಗ್ ಏಜನ್ಸೀ ಆಫೀಸ್, ಮುಂಬಯಿ.

ಇವರು ತಯಾರಿಸಿರುವಂಥ—

ಧ್ವೈಮಧಾತ್ರೀತೈಲ.

ಕಳೆದ ಜನವರಿ ತಿಂಗಳೊಂದರಲ್ಲಿ ೪,೧೦೦ ಬಾಟ್ಲಿಗಳು ಖರ್ಚಾದವು. ಈ ತೈಲದ ಮಹತ್ವವನ್ನು ಕುರಿತು, ನಾವೀಗ ಹೆಚ್ಚಿಗೆ ವರ್ಣಿಸಲಾರೆವು—ಯಾಕೆಂದರೆ, ಯಾರು ಈ ತೈಲವನ್ನು ಉಪಯೋಗಿಸುತ್ತಾರೋ ಅವರಿಗೆ ಒಂದೆರಡು ದಿವಸಗಳಲ್ಲಿಯೇ ಇದರ ಅಪ್ರತಿಮವಾದ ಗುಣವು ಸಹಜವಾಗಿ ಅನುಭವಕ್ಕೆ ಬರುವದು. ಆದಾಗ್ಯೂ ಇದರ ಮುಖ್ಯವಾದ ಉಪಯೋಗವನ್ನು ತಿಳಿಸುವದು ನಮ್ಮ ಕರ್ತವ್ಯವಾಗಿರುತ್ತದೆ.

ಈ ನಮ್ಮ "ಧೈಮಧಾತ್ರೀ ತೈಲವನ್ನು" ಪ್ರತಿದಿನ ತಲೆಗೆ ಹಾಕಿಕೊಂಡರೆ ಮಿದುಳಿನಲ್ಲಿರುವ ಉಷ್ಣತೆಯನ್ನು ಪರಿಹರಿಸುವದಲ್ಲದೇ, ಕಣ್ಣಿಗೂ, ಮಿದುಳಿಗೂ ತಣುಕರಿಸಿ, ಚಿತ್ತಕ್ಕೆ ಶಾಂತತೆಯನ್ನುಂಟುಮಾಡುವದು. ಮತ್ತು ಕಣ್ಣುಗಳಿಗುಂಟಾಗುವ ಸಾಮಾನ್ಯವಾದ ವಿಕಾರಗಳನ್ನೆಲ್ಲ ಪರಿಹರಿಸುವದು. ದೃಷ್ಟಿಗೆ ತೀವ್ರತೆಯುಂಟಾಗುವದು.

ಹೆಚ್ಚಾಗಿ ಓದತಕ್ಕವರಿಗೂ, ಒಂದೇ ಸಮನಾಗಿ ಕಣ್ಣಿಟ್ಟು ಕೆಲಸ ಮಾಡತಕ್ಕ ಕಸಬುಗಾರರಿಗೂ, ಕಣ್ಣುಗಳಲ್ಲಿ ನೀರು ಸುರಿಯುವವರಿಗೂ, ಉರಿಗಣ್ಣಿನವರಿಗೂ, ಚಿತ್ತವ್ಯಗ್ರವಾದವರಿಗೂ, ಅತ್ಯಂತ ಗುಣಕಾರಿಯಾಗಿರುವದು. ಈ ತೈಲದಲ್ಲಿರುವ ಇನ್ನೊಂದು ಅಪ್ರತಿಮವಾದ ಶಕ್ತಿಯೇನೆಂದರೆ—ಕೂದಲುಗಳನ್ನು ನಯವಾಗಿಯೂ, ಹೊಳೆಯುವಂತೆಯೂ, ಮಾಡುವದಲ್ಲದೇ ಬೆಳವಣಿಗೆಯನ್ನು ಹೆಚ್ಚಿಸುವದು. ಕೂದಲುಗಳ ಬೇರುಗಳನ್ನು ಘಟ್ಟಿಮಾಡಿ, ಅವು ಉದುರಿಹೋಗದಂತೆ ಮಾಡುವದು

ಪ್ರತಿಯೊಂದು ಬಾಟ್ಲಿಯೊಳಗೆ ೧೬ ತೊಲೆ ತೈಲವಿರುವದರಿಂದ ಒಬ್ಬನಿಗೆ ೨ ತಿಂಗಳು ಹಚ್ಚಿಕೊಳ್ಳಲಿಕ್ಕೆ ಸಾಕಾಗುವದು. ಬಡಬಗ್ಗರು ಸಹ ಕೊಂಡುಕೊಳ್ಳಲಿಕ್ಕನುಕೂಲವಾಗಿರಬೇಕೆಂಬದಕ್ಕಾಗಿ ಪ್ರತಿಯೊಂದು ಬಾಟ್ಲಿಗೆ ೧೦ ಆಣೆ ಕ್ರಯವಿಟ್ಟಿರುವೆವು ೧೨ ಬಾಟ್ಲಿಗಳುಳ್ಳ ೧ ಪೆಟ್ಟಿಗೆಗೆ ೬|| ರೂಪಾಯಿ. ಪ್ರತಿಯೊಬ್ಬ ಕುಟುಂಬಿಗನೂ, ಈ ತೈಲವನ್ನು ಉಪಯೋಗಿಸುವದು ಅವಶ್ಯವಾಗಿರುತ್ತದೆ. ಮಕ್ಕಳುಮರಿಗಳಿಗೆ ಸಹ ಈ ತೈಲವು ಸುಖಾವಹವಾಗಿರುತ್ತದೆ.

ಈ ತೈಲ ಮತ್ತು ಈ ಕೆಳಗೆ ಬರೆಯುವಂಥ ಔಷಧಗಳು, ಡ್ರೆಸ್ಸು, ಮುತ್ತು, ರತ್ನ, ಬಂಗಾರ, ಬೆಳ್ಳಿ ಮುಂತಾದ ಸಾಮಾನುಗಳನ್ನು ಪಡೆಯಲಿಚ್ಛಿಸುವವರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬೇಕು.

ಮ್ಯಾನೇಜರ್, ಕೆನರಾ ಅಂಡ್ ಮೈಸೂರು ಟ್ರೇಡಿಂಗ್ ಏಜನ್ಸಿ ಆಫೀಸ್, ಮಾರ್ಕೆಟ್ ಪೋಸ್ಟ್. ಮುಂಬಾಯಿ.

☞ ಈ ತೈಲವನ್ನು ನಮ್ಮ ವಿನಹ ಇನ್ಯಾರೂ ಮಾಡಲಾರರು. ನಮ್ಮ ಹೆಸರಿನ ಗುರ್ತನ್ನು ನೋಡಿ ತೆಗೆದುಕೊಳ್ಳಬೇಕು ಬೇರೇತರದ ಎಣ್ಣೆಗಳನ್ನು ಈ ಹೆಸರನ್ನಿಟ್ಟು ಮಾರುತಿದ್ದರೆ ಜಾಗ್ರತೆ ಪಡಿರಿ!

ಔಷಧಗಳು.	ರು ಆ	ಡ್ರೆಸ್ಸುಗಳು.	ರೂ. ಆ.
ನಯನಾಮೃತಭಸ್ಮ ಬಾಟ್ಲಿ ೧ ಕ್ಕೆ	೧—೬	ಹಾಲುವ್ಯಾಧಿಗೆ ಮದ್ದು	೨—೮
ನಯನಾಮೃತ ಕಾಡಿಗೆ	೧—೬	ಕಾರೇಸರ್ಜಿನ ಲಾಂಗ್‌ಕೋಟ್	೫—೦
ಕರ್ಣಸ್ರಾವನಾಶಕ ಅಮೃತಬಿಂದು	೧—೦	ಡಿಟೋ. ಅಂಗಿ	೬—೮
ಮಧುಮೇಹನಾಶಕ ತೈಲ	೧—೦	ಡಿಟೋ. ಷಾರ್ಟ್‌ಕೋಟ್ (ಇಂಗ್ಲೀಷ ಮಾದರಿ)	೪—೬
ಪ್ರವಾಳಭಸ್ಮವು	೨—೧೨	ಬಿಳಿ ಫಲಾಲಿನ್ ಕೋಟ್	೨—೮
ವಿವಿಧ ವ್ರಣಹರ ಪುಟ್ಟಿಕೆಯು	೧—೦	ಡಿಟೋ. ಅಂಗಿ	೨—೪
ಬಾಲಸಂಜೀವಿನಿಗುಟಿಕೆ	೩—೮	ಫ್ಲಾನೆಲ್ ಕಮೀಸ	೧—೧೨
ಅಜೀರ್ಣನಾಶಕ್ಕೆ	೦—೮	ಡಿಟೋ. ಬನೀಯನ್	೧—೪
ಸುಗಂಧ ಪರಿಮಳದಂತಪುಡಿ	೦—೪	ಟೋಪಿ (ಇಂಗ್ಲೀಷ ಮಾದರಿ) ಸರ್ಜಿ	೦—೧೨
ಕಜ್ಜಿಯ ಮುಲಾಮು	೦—೨		

ಹಸುಕರವಾದ ಚಂದ್ರಕಾಂತ ಶಿಲೆಯ ಕನ್ನಡಕಗಳ ಕ್ರಯ ರೂ. ೧೦—೩||—೫—೩|| "ಉತ್ತಮವಾದ ..." ಎಂಬ ಹೊಸ ಶಿಗದಿಯಾರವು (೧ ವರುಷದ ಜಾಮೀನುಳ್ಳದ್ದು) ಕ್ರಯ ರೂ. ೬.

ವೃತ್ತಾಂತ ಪತ್ರಿಕೆ.

ಚಂದಾ ನಿರ್ಣಯ.

		ರೂ ಆ. ಪೈ.
ಸ್ಥಳದವರಿಗೆ ವರ್ಷ ೧ಕ್ಕೆ	"	೧—೦—೦
ಪರಸ್ಥಳದವರಿಗೆ ವರ್ಷ ೧ಕ್ಕೆ	"	೧—೧೪—೦
ಬಿಡಿ ಪತ್ರಿಕೆ ೧ಕ್ಕೆ	"	೦—೦—೪

ಈ ಪತ್ರಿಕೆಯು ಮೈಸೂರು ರಾಜಧಾನಿಯಲ್ಲಿ ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ, ಪ್ರಕಟಿಸಲ್ಪಡುವದು ಬಡವರು ಮೊದಲುಗೊಂಡು ಸಮಸ್ತರಿಗೂ ಸುಲಭಸಾಧ್ಯವಾಗುವಂತೆ ಈ ಪತ್ರಿಕೆಗೆ ಇಷ್ಟು ಅಲ್ಪ ಮೌಲ್ಯವನ್ನು ನಿರ್ಣಯಿಸಿರುತ್ತೇವೆ ಈ ಪತ್ರಿಕೆಯನ್ನು ಅಪೇಕ್ಷಿಸುವವರು ಚಂದಾಹಣವನ್ನು ಮುಂಗಡವಾಗಿಯೇ ಕಳುಹಿಸಬೇಕು.

ಎಡಿಟರ್,
ವೃತ್ತಾಂತ ಪತ್ರಿಕೆ

ಟೋಪಿಗಳು!

ಟೋಪಿಗಳು!! WOOL CAPS ಟೋಪಿಗಳು!!

ಹಾಸನದ ಅನಾಥನಿಲಯದಲ್ಲಿ ತಯಾರಾಗುವಂಥ ಅಚ್ಚ ಕಂಬಳೀನೂಲಿನ ಟೋಪಿಗಳೀ (Wool Caps) ನಮ್ಮ ಆಫೀಸಿನಲ್ಲಿ ಮಾರಿಕೆಗೆ ಸಿದ್ಧವಾಗಿರುತ್ತವೆ. ಖರೀದಿ—೧ ರೂ. ೨ ಆಣೆ ಇಂದ ೧ ರೂ. ೬ ಆಣೆಗಳ ವರೆಗೂ ಬೇರೆ ಬೇರೆ ರಕಂಗಳುಂಟು. ಸ್ಥಳದವರು ಬಂದು ನೋಡಿ ಪಡೆಯಬಹುದು. ಪರಸ್ಥಳದವರು ಮುಂಗಡವಾಗಿಯೇ ಹಣ ಕಳುಹಿಸಿದಲ್ಲಿ ಪೂರ್ವದಲ್ಲಿ ಭಾಂಗೀ ಮೂಲಕ ಕಳುಹಿಸುತ್ತೇವೆ. ಭಾಂಗೀ ಛಾರ್ಜು ಬೇರೇ ಕೊಡಬೇಕು. ಮೊಬದಲ್ಲಿ ಟೋಪಿಗೆ ಸಂಬಂಧವಾದದ್ದು ಎಂದು ಬರೆಯಬೇಕು.

ಮ್ಯಾನೇಜರ್,
ವೆಸ್ಲೆಯನ್ ಮಿಷನ್ ಪ್ರೆಸ್,
ಮೈಸೂರು.

MUNICIPAL NOTICE

Additional Proposals.

IV. Proposals by Mr. M. Venkata Kristnah, Municipal Commissioner:—

To move the Government to advance to the Board a sum of money sufficient to cover the expenses necessary to open up the over crowded parts of the Town and provide them with satisfactory drainage

To move the Government to direct the Dodlikere feeder channel from its present course in Kristnaraj and Fort Mahalas, inasmuch as it allows the water to percolate into the soil over a great part of Krishnaraj Mohala and makes the floors of the houses in several of the Agrahars too wet for habitation and seriously interferes with the health of the people there.

To issue a notice to the heirs of the donors of Narsappa Charities to show cause why the shops, which enjoy exemption from Mohiturfa, should not be taxed

Municipal Board's Office,
Mysore,
11th Nov. 1893

A. COOPOOSAWMY,
Vice-President.

ತುಮಕೂರು ಮುನ್ಸಿಫ್ ಕೋರ್ಟಿನಲ್ಲಿ.

೧೮೯೩-೯೪ನೇ ಯ ಸವಿ ಸಿವಿಲ ನಂಬರ ೭೮೯.

ವಾದಿ.	ಪ್ರತಿವಾದಿಗಳು.
ಸಂಜೀಂದ	ಗುಬ್ಬಿ ತಾಲ್ಲೋಕು ಕಲ್ಲೂರು ಸಮ್ಮತು ಹಂಪಲಾಪುರದಲ್ಲಿರುವ ಕುರುಬರಜಾತಿ ಕೆಂಪಲಿಂಗ ವಗೈರೆ ೭೭ ಜನಗಳು.

ಅಂದರಿಂದ ಮಂಜನೇಪುರದಲ್ಲಿರುವ ಕುರುಬರಜಾತಿಯವರಿಗೆಲ್ಲಾ ತಿಳಿಸುವದೇನಂದರೆ—

ಮೇಲ್ಕಂಡ ವಾದಿಯು ತಾನು ಹಂಪಲಾಪುರದಲ್ಲಿರುವ ಪುಟ್ಟಕೇರಮ್ಮ ಎಂಬದೇವತೆಗೆ ಪೂಜಾರಿಯೆಂತಲೂ, ದ್ಯಾನದ ವಡವೆಗಳನ್ನು ಇಟ್ಟುಕೊಂಡಿರುವ ಹಕ್ಕುದಾರನೆಂತಲೂ, ಪ್ರತಿವಾದಿಗಳು ತಂನ ಹಕ್ಕನ್ನು ವಪ್ಪಿಸಿರುತ್ತಾರೆಂತಲೂ, ಆ [illegible] ತನಗಿರುವ ಪೂಜಾರಿಹಕ್ಕನ್ನು ಸ್ಥಾಪಿಸಿ, ದೇವರ ಬಾಬತು ಶ್ರೀಂ [illegible] ನನ್ನು, ಒತ್ತಾಯ ಬಾಬತು ೧೧೯ ರೂಪಾಯಿಗಳನ್ನೂ ಕೊಡಿಸಿಕೊಡಬೇಕೆಂದು [illegible]

೧೮೯೩ನೇ ಇಸವಿ [illegible] ತಾರೀಖು ೧೧ ಘಂಟೆಗೆ ಇದರ ಬಗ್ಗೆ ಇಟ್ಟಿರುತ್ತೆ. [illegible] ದಾವಾ ನಡಿಸುವ [illegible] ಪ್ರತ್ಯೇಕವಾಗಿ ಈ ದೇವಸ್ಥಾನದಲ್ಲಿ ಹಕ್ಕು ಇರುವದಿಲ್ಲರೂ ಆ ತಾರೀಖಿಗೆ ಕೋರ್ಟಿಗೆ [illegible] ಗೆ ತಮ್ಮ ಆಕ್ಷೇಪಣೆಗಳನ್ನು ಹೇಳಿಕೊಳ್ಳ ಬಹುದು.

ತಾರೀಖು ೧೬ನೇ ನವಂಬರು ೧೮೯೩ನೆ ಇಸವಿ

[illegible] ಮುನ್ಸಿಫರವರ ಸೈನಾಗಿಫ.

ವೃತ್ತಾಂತ ಪತ್ರಿಕೆ.

೧೮೯೩ನೇ ಇಸವಿ ನವಂಬರ ತಾ|| ೨೩ನೇ ಗುರುವಾರ

ವಿವೇಕನಂದನ ಉಪನ್ಯಾಸ.

ಈ ವರ್ಷದಲ್ಲಿ ಅಮೇರಿಕ ಖಂಡಕ್ಕೆ ಸೇರಿದ ಷಿಕಾಗೊ ಎಂಬ ಪಟ್ಟಣದಲ್ಲಿ ಸರ್ವಮತಸ್ಥರ ಸಭೆಯು ಅರು ತಿಂಗಳಿಗೆ ಮೊದಲು ಕೂಡಿತೆಂದು ನಮ್ಮ ವಾಚಕರಿಗೆ ತಿಳಿದೇ ಇದೆಯಷ್ಟೆ. ಆ ಸಭೆಯಲ್ಲಿ ಲೋಕದಲ್ಲಿರುವ ಸಕಲಮತಗಳ ಪ್ರತಿನಿಧಿಗಳೂ ಕೂಡಿ ಮತಗಳಲ್ಲಿ ಒಂದಕ್ಕೊಂದಕ್ಕೆ ಇರುವ ತಾರತಮ್ಯಗಳನ್ನು ಕುರಿತು ಪರ್ಯಾಲೋಚಿಸಿ, ಕಂಡುಬಂದ ಭೇದಗಳನ್ನು ಸಾಧ್ಯವಾದ ಮಟ್ಟಿಗೂ ಕಡಮೆಮಾಡಬೇಕೆಂದು ಪ್ರಯತ್ನಿಸಿದರು. ಬೇರೆ ಬೇರೆ ಪಂಗಡದ ಕ್ರೈಸ್ತರೂ, ಮಹಮ್ಮದೀಯರೂ ಆ ಸಭೆಯಲ್ಲಿ ಹಾಜರಾಗಿದ್ದರಲ್ಲದೆ ವಿವೇಕನಂದನೆಂಬೊಬ್ಬ ಸನ್ಯಾಸಿಯು ಸಮುದ್ರಯಾನ ಮಾಡಿ ಆ ಸಭೆಯನ್ನು ಸೇರಿ ಕ್ರೈಸ್ತಸದ್ಧರ್ಮದ ವಿಷಯವಾಗಿ ತನಗಿದ್ದ ಅಭಿಪ್ರಾಯವನ್ನು ಸಭಿಕರಿಗೆ ವಿಶದವಾಗಿ ತಿಳಿಯಪಡಿಸಿದನು. ಆತನು ಅಲ್ಲಿ ನೆರೆದಿದ್ದ ಕ್ರೈಸ್ತಮತೀಯರನ್ನು ನೋಡಿ ಹೇಳಿದ್ದೇನಂದರೆ— "ಕ್ರೈಸ್ತರಾದ ನೀವುಗಳು ಬಂದು ದ್ವೀಪಸ್ಥ [illegible] ನನ್ನು, ಮತ್ತೊಂದು [illegible] ನನ್ನು ಹಿಡಿದು ಇಂಡಿಯಾದೇಶ [illegible] ನನ್ನ ತಾನೆ ಪ್ರತಿದಿನ ಒಂದ ಮತವನ್ನ [illegible] ದನವಾದ ನೀವು, ಪುರಾತನವಾದ ಮತವನ್ನು [illegible] ತರುವ ನಮ್ಮ ಮನೆಗಳ ಮುಂದ [illegible] ನಿಂತು, ನಮ್ಮನ್ನು ಹೀಯಾಳಿಸಿ ನಮ್ಮ [illegible] ಕಸದಂತೆ ಕಾಣುತ್ತೀರಲ್ಲಾ! ನೀವು ನಮ್ಮ [illegible] ಉಪದೇಶಕರುಗಳನ್ನು ಕಳಿಸುತ್ತೀರಿ, ನಮ್ಮ [illegible] ಸ್ತ್ರೀಯರಲ್ಲಿ ಅನೇಕರಿಗೆ ಅವಮಾನ ಪಡಿಸುತ್ತೀರಿ! ನಮ್ಮ ಮತವು ಕೆಲವು ವಿಷಯಗಳಲ್ಲಿ ನಿಮ್ಮ ಮತವಂತಿದ್ದಾಗ್ಯೂ ನೀವು ಅದನ್ನು ಬಹಳ ವಾಗಿ ಹೀಯಾಳಿಸಿದ್ದೀರಿ! ಇಷ್ಟೆಲ್ಲಾ ಅವಮೋಲೆ ಇಂಡಿಯಾದೇಶದಲ್ಲಿ ಕ್ರೈಸ್ತಸದ್ಧರ್ಮವು ಇನ್ನೂ ಶೀಘ್ರವಾಗಿ ಅಭಿವೃದ್ಧಿಗೆ ಬರುವದಿಲ್ಲವೆಂದು ಆಶ್ಚರ್ಯಪಟ್ಟು ಕೇಳುತ್ತೀರಲ್ಲಾ! ಕ್ರೀಸ್ತಭಕ್ತರೆನಿಸಿಕೊಂಡಿರುವ ನೀವು ನಿಮ್ಮ ಗುರುವಾದ ಯೇಸುಕ್ರೀಸ್ತನು ಹೇಳಿದ ಹಾಗೆ ನಡೆಯುವದಿಲ್ಲ. ಆ ಯೇಸುಕ್ರೀಸ್ತನನ್ನು ನಾವು ಬಹಳವಾಗಿ ಪೂಜಿಸುತ್ತೇವೆ. ಏಕೆಂದರೆ ನೀವುಗಳು ಕೂಡ ಪ್ರೀತಿಪೂರ್ವಕವಾಗಿ ನಿಮ್ಮ ನಡೆನುಡಿಗಳಲ್ಲಿ ನಮ್ಮ ಹಿತವನ್ನು ಬಯಸಿ ಕಷ್ಟಪಡುತ್ತಲೂ, ಪ್ರಯತ್ನ ಮಾಡುತ್ತಲೂ ಬರುತ್ತಿದ್ದರೆ ನಾವು ಆ ನಿಮ್ಮ ಗುರುವನ್ನು ನಿರಾಕರಿಸುವೆವೋ? ಎಂದಿಗೂ ಇಲ್ಲ. ನಾವು ಆತನಲ್ಲಿ ನಂಬಿಕೆ ಇಟ್ಟು, ಆತನನ್ನು ನಮ್ಮ ಋಷಿಗಳಲ್ಲಿ ಒಬ್ಬನಂತೆ ಎಣಿಸಿಕೊಳ್ಳುವೆವು" ಎಂಬುವದೇ.

ಈ ವಿವೇಕನಂದನು ಹೇಳಿದ ಮೇಲ್ಕಂಡ ಮಾತುಗಳು ನಮಗೆ ಆಶ್ಚರ್ಯವನ್ನುಂಟುಮಾಡುವದಿಲ್ಲ. ಆತನು ಹೇಳಿದಂತೆಯೇ ಈ ದೇಶದಲ್ಲಿ ಸವಿಯರು ನಂದಿ ಅನುಕೂಲ್ಯತ್ತಿರುವರು. ಕ್ರೈಸ್ತರೆನಿಸಿಕೊಂಡಿರುವವರಲ್ಲಿ ಅನೇಕರು ಕ್ರೀಸ್ತನ ಆಜ್ಞೆಗಳನ್ನು ಲಕ್ಷ್ಯದಿಂದ ಕಾಣದೆ, ಸ್ವೇಚ್ಛಾಪ್ರವರ್ತಕರಾಗಿ, ಮದ್ಯಪಾನ ಮಾಡುತ್ತಲೂ ವ್ಯಭಿಚಾರ ಮುಂತಾದ ಅನೇಕ ದುಷ್ಕೃತ್ಯಗಳಿಗೊಳಗಾಗಿಯೂ ಇದ್ದಾರೆಂಬುವದು ಸುಳ್ಳಲ್ಲ. ನಿಜವೇ ಸರಿ. ಮತ್ತು ಇದನ್ನು ಅಲ್ಲವೆಂದು ಯಾರೂ ಹೇಳಲಾರರು. ನಮ್ಮ ಈ ಪತ್ರಿಕೆಯಲ್ಲಿಯೇ ಅನೇಕಾನೇಕವೇಳೆಗಳಲ್ಲಿ ಯೂರೋಪಿಯನ್ ಜನಗಳ ಕೆಟ್ಟನಡತೆಗಳನ್ನು ಕುರಿತು ಬಹು ದುಃಖದಿಂದ ಬರೆದು ಇರುವೆವು. ಆದರೆ ನಮ್ಮ ವಾಚಕರೇ ಸಾಕ್ಷಿಗಳಾಗಿರುವರು. ಆದರೆ ಇಂಥಾ ನೀಚರು ಕ್ರೈಸ್ತರೆನಿಸಿಕೊಂಡಿರುವದು ಕೇವಲ ನಟನೆಗಾಗಿಯೋ ಹೊರತು ಮತ್ತೆ ಬೇರೆ ಅಲ್ಲ. ಕ್ರೀಸ್ತನು ಹೇಳಿ ತೋರಿಸಿರುವ ಮಾರ್ಗಕ್ಕೂ, ಅವನ ಹಿಂಬಾಲಕರು ಹಿಡಿದಿರುವ ಮಾರ್ಗಕ್ಕೂ ಆಜಗಜಾಂತರ ವ್ಯತ್ಯಾಸವೆಂದೇ ನಾವು ಹೇಳಬೇಕು. ಕ್ರೀಸ್ತಸ್ವಾಮಿಯು ಅಂಥವರಲ್ಲಿ ಒಬ್ಬನನ್ನಾದರೂ ತನ್ನ ಶಿಷ್ಯನೆಂದು ಒಪ್ಪಿಕೊಳ್ಳುವದಿಲ್ಲ. ಮತ್ತು ಅಂಥವರ ವಿಷಯದಲ್ಲಿ—ನೀವು ಪಿಶಾಚನ ಮಕ್ಕಳೆಂದು ಬಹು ಪರಿಷ್ಕಾರವಾಗಿ ಹೇಳಿರುತ್ತಾನೆ.

ಆದರೆ ಕ್ರೀಸ್ತನ ನಿಜಭಕ್ತರು ಬೇರೆ ವಿಧವಾದ ನಡೆನುಡಿಗಳುಳ್ಳವರಾಗಿದ್ದಾರೆಂದು ಎಲ್ಲರಿಗೂ ಗೋಚರವಾಗಿರಬಹುದು. ಅನೇಕಾನೇಕಮಂದಿ ಕ್ರೀಸ್ತನು ನಡೆದು ತೋರಿಸಿದ ಮಾರ್ಗವನ್ನೇ ಹಿಡಿದು, ಆತನಲ್ಲಿದ್ದ ಸುಗುಣಗಳು ತಮ್ಮಲ್ಲಿಯೂ ಇರುತ್ತವೆ ಎಂದು ತೋರಿಸಿಕೊಳ್ಳುತ್ತಲಿದ್ದಾರಲ್ಲಾ! ಇಂಥವರ ಪ್ರಯತ್ನಗಳಿಂದಲೇ ಈ ದೇಶದ ದುಷ್ಪದ್ಧತಿಗಳಲ್ಲಿ ಸತಿಸಹಗಮನ, ಶಿಶುಹತ್ಯೆ, ನರಬಲಿ ಮುಂತಾದವುಗಳು ನಿಲ್ಲಿಸಲ್ಪಟ್ಟವಲ್ಲವೆ, ಅವರಿಂದಲೇ ಸ್ತ್ರೀವಿದ್ಯಾಭ್ಯಾಸ ಮೊದಲಾದವುಗಳ ಉತ್ಪತ್ತಿಯಾದವು. ಎಷ್ಟೋ ಮಂದಿ ಕ್ರೈಸ್ತರು ತಮ್ಮ ಅಲ್ಪ ಸಂಬಳವನ್ನು ಲಕ್ಷ್ಯಮಾಡದೆ, ಸುಖವನ್ನಾಗಲಿ ಕೀರ್ತಿಯನ್ನಾಗಲಿ ತಮ್ಮ ಗುರಿಯಲ್ಲಿಡದೆ, ಈ ದೇಶದ ಜನರಿಗೆ ಹಿತವನ್ನುಂಟುಮಾಡಬೇಕೆಂಬ ಒಂದೇ ಅಭಿಲಾಷೆಯುಳ್ಳವರಾಗಿ, ತಮ್ಮ ಆಸ್ತಿ, ಬುದ್ಧಿ, ಶಕ್ತಿ, ಕಾಲಗಳನ್ನು ವಿತರಣೆಯಿಂದಲೂ, ಸಂತೋಷದಿಂದಲೂ ಇವರಿಗಾಗಿಯೇ ವಿನಿಯೋಗಿಸುತ್ತ ಬರುತಲಿರುವರು. ಇಷ್ಟೆಲ್ಲಾ ಅವರು ಮಾಡಬೇಕಾದರೆ ಅವರು ಒಂದು ಕಾರಣವನ್ನು ಮಾತ್ರವೇ ಪಡೆದಿರುವರು. ಅದೇನಂದರೆ— ಮುಕ್ತಿದಾಯಕನಾದ ಯೇಸುಕ್ರೀಸ್ತನಿಗೆ ಜನರ ಮೇಲಿದ್ದ ಪ್ರೀತಿಯು ಅವನ ನಿಜಭಕ್ತರಲ್ಲಿಯೂ ಇರುವದು ಎಂಬುವದನ್ನು ಎಲ್ಲರಿಗೂ ತೋರ್ಪಡಿಸಬೇಕೆಂಬುವದೇ. ಹಾಗಾದರೆ ಜನೋಪಕಾರಿಗಳಾಗಬೇಕೆಂಬ ಕುತೂಹಲವನ್ನು ನಮ್ಮಲ್ಲಿ ಹುಟ್ಟಿಸುವ ಕ್ರೀಸ್ತನು ಹಿಂದುಗಳ ಗಣನೆಗೂ, ಪೂಜೆಗೂ ಯೋಗ್ಯನಲ್ಲವೆ? ಈ ಭಾಗದಲ್ಲಿ ವಿವೇಕನಂದನು ಆತನನ್ನು ಯೋಗ್ಯನೆಂದು ಒಪ್ಪಿಕೊಳ್ಳುತ್ತಾನೆ. ಅವನಂತೆಯೇ ಅನೇಕ ಹಿಂದೂದೊಡ್ಡ ಮನುಷ್ಯರು ಒಪ್ಪಿಕೊಂಡಿದ್ದಾರೆ. ಆದರೆ ಬೇರೆ ಕೆಲವರು ಕ್ರೀಸ್ತನ ವಿಶೇಷ ಗುಣಲಕ್ಷಣಗಳನ್ನು ತಿಳಿಯದೆ, ಸ್ವಮತಾಭಿಮಾನಭರಿತರಾಗಿ ಆತನನ್ನು ತಿರಸ್ಕರಿಸುತ್ತಾ, ಅವಮಾನ ಪಡಿಸುತ್ತಾ, ಹೀಯಾಳಿಸುತ್ತಾ ಬರುತಲಿದ್ದಾರೆ. ಅಂಥವರು ಜ್ಞಾನಶೂನ್ಯರೂ, ನೀಚಗುಣಿಗಳೂ ಆಗಿರುತ್ತಾರೆ. ಕ್ರೀಸ್ತನ ನಡೆನುಡಿಗಳನ್ನು ಸರಿಯಾಗಿಯೂ, ಪರಿಷ್ಕಾರವಾಗಿಯೂ ತಿಳಿದಿರುವವರು ಆತನನ್ನು ಎಷ್ಟು ಮಾತ್ರಕ್ಕೂ ತಿರಸ್ಕರಿಸಲಾರರು. ಆದ್ದರಿಂದ ನಮ್ಮ ವಾಚಕರು ಈ ಮುಕ್ತಿದಾಯಕನ ಚರಿತ್ರೆಯನ್ನು ಚೆನ್ನಾಗಿ ತಿಳಿದುಕೊಳ್ಳುವದಕ್ಕೆ ಪ್ರಯತ್ನ ಮಾಡುವರೆಂದು ನಾವು ನಂಬಿದೇವೆ.

ಅಫೀಮಿನ ಸಾಧಕಬಾಧಕಗಳನ್ನು ಚರ್ಚಿಸುವ ಕಮಿಷನ್.

ಈ ಸಭೆಯವರು ಮೊನ್ನೇ ನೆನಿವಾರ ಬಂಗಾಳಾ ಮುಂತಾದ ಲೋಕನಾಸಭೆಯಲ್ಲಿ ಮೊದಲನೇ ಸಲ ಸಭೆ ಸೇರಿದ್ದರು. ಈ ವಿಷಯದಲ್ಲಿ ಅಫೀಮಿನ ಮಾರಾಟ ದ ಪಕ್ಷವಾಗಿ ಸರ ಡೇವಿಡ್ ಬಾರ್ಬರ್ ಸಾಹೇಬರು ತಿಳಿಸಿದ ಮುಖ್ಯಸಂಗತಿಗಳೇನಂದರೆ—ಈ ಅಫೀಮಿನಿಂದ ಇಂಡಿಯಾ ಸರ್ಕಾರಕ್ಕೆ ಸಾಲಿಯಾನಾ ೯ ಕೋಟಿ ರೂಪಾಯಿ ಹುಟ್ಟುವಳಿಯಾಗುತಲಿತ್ತು. ಈಚೆಗೆ ಚೀನಾ ಮತ್ತು ಪರ್ಷಿಯಾ ರಾಜ್ಯಗಳಲ್ಲಿ ಅಫೀಮಿನ ಬೆಳೆಯು ಹೆಚ್ಚಿದ್ದರಿಂದಲೂ, ಹಿಂದೂಸ್ಥಾನದಲ್ಲಿ ಈ ಬೆಳೆಯು ಕ್ಷೀಣದೆಶೆಗೆ ಬಂದದ್ದರಿಂದಲೂ, ಸರ್ಕಾರಕ್ಕೆ ಈ ಬಾಬಿನಲ್ಲಿ ಹುಟ್ಟುವಳಿ ಬಹಳ ಕಡಮೆಯಾಗಿದೆ. ಈ ಬಾಬನ್ನೇ ಮಹಾವಾಣಿಬಿಟ್ಟು, ಅಫೀಂ ಬೆಳೆಯನ್ನು ನಿಲ್ಲಿಸಿಬಿಟ್ಟರೆ ಅದರಿಂದ ಸರ್ಕಾರಕ್ಕೂ ಪ್ರಜೆಗಳಿಗೂ ನಾನಾವಿಧವಾದ ನಷ್ಟಗಳು ಸಂಭವಿಸುತ್ತವೆ. ಸರ್ಕಾರಕ್ಕೆ ಉತ್ಪತ್ತಿ ಕಡಮೆಯಾಗುತ್ತ ಬಂದು ಹಿಂದೂಸ್ಥಾನದ ಸೈನ್ಯವರ್ತನನ್ನೂ ಹೋಂ ಛಾರ್ಜಿಗಳನ್ನೂ ಕಡಮೆಮಾಡಿದರೆ ಈ ಉತ್ಪತ್ತಿಯು ಅಲ್ಲಿ ಏಳುತ್ತದೆಂದು ಕೆಲವರು ಹೇಳಬಹುದು. ಆದರೆ ಹೋಂ ಛಾರ್ಜನ್ನು ಕಡಮೆಮಾಡಿದರೂ ಮಾಡಬಹುದು. ಸೈನ್ಯವರ್ತನನ್ನು ಎಷ್ಟುಮಾತ್ರಕ್ಕೂ ಕಡಮೆ ಮಾಡುವದಕ್ಕಾಗುವದಿಲ್ಲ. ಯಾಕಂದರೆ ಹಿಂದೂಸ್ಥಾನದ ಉತ್ತರ ಕಟ್ಟೆಗಳಲ್ಲಿ ಪ್ರಸಂಗವಾದ ಯುದ್ಧಗಳು ಹುಟ್ಟಬಹುದು. ಅಲ್ಲದೆ ರಾಜ್ಯದಲ್ಲಿ ಕ್ಷಾಮಡಾಮರಗಳು ಪ್ರಾಪ್ತವಾಗಬಹುದು. ಇವುಗಳೆಲ್ಲಾ ಹಿಂದೂಸ್ಥಾನವು ಹಣವನ್ನು ಹ್ಯಾಗೆ ಉತ್ಪತ್ತಿಮಾಡುತ್ತದೆ? ಹಿಂದೂಸ್ಥಾನದ ರಾಜಭಾಷೆಯು ಬಂದ ವೇಳೆ ಕಡಮೆಯಾದರೆ, ಆಗ್ಯೆ ಅಫೀಮಿನ ಉತ್ಪತ್ತಿಯೂ ಇಲ್ಲದೆ ಹೋದರೆ ಈಗಿರತಕ್ಕ ಚಿಬ್ಬಂದಿಯನ್ನು ಕಡಮೆಮಾಡುವದಕ್ಕಾದೀತೆ? ಚಿಬ್ಬಂದಿ ಕಡಮೆಮಾಡಿದರೆ ಸರ್ಕಾರೀ ಕೆಲಸಗಳು ಸಮರ್ಪಕವಾಗಿ ನಡೆಯುವದಿಲ್ಲವಲ್ಲಾ. ಬ್ರಿಟಿಷ್ ಇಂಡಿಯಾದಲ್ಲಿ ಅಫೀಂ ಬೆಳೆಯನ್ನು ನಿಲ್ಲಿಸಿದರೆ ನೇಟಿವ್ ರಾಜ್ಯಗಳಲ್ಲಿಯೂ ಬೆಳೆಯಕೂಡದೆಂದು ಹೇಳುವದಕ್ಕಾದೀತೇ? ಹೀಗೆ ಹೇಳುವದಕ್ಕೆ ಇಂಡಿಯಾ ಗೌರ್ನಮೆಂಟಿನವರಿಗೆ ಅಧಿಕಾರವೇ ಇಲ್ಲವಲ್ಲಾ! ಇತ್ತಲಾಗಿ ಪ್ರಜೆಗಳಿಗೆ ಅಫೀಂ ಇಲ್ಲದಿದ್ದರೆ ಆಗುವದಿಲ್ಲ. ಪ್ರಜೆಗಳಲ್ಲಿ ಶೇಕಡ ೯೦ ರಷ್ಟು ಇಂಗ್ಲಿಷ್ ಔಷಧಿಗಳನ್ನು ಕಾಣಲೇ ಕಾಣರು, ಮತ್ತು ಶೇಕಡ ೬೦ ರಷ್ಟು ಮಂದಿ ಯಾವವೈದ್ಯರ ಬಳಿಗೂ ಹೋಗುವದೇ ಇಲ್ಲ. ಇದ್ದರಿಂದ ಅವರು ತಮ್ಮ ಸ್ವದೇಶಪಂಡಿತರ ಮತ್ತು ಹಕೀಮರಬಳಿಗೆ ಹೋಗುತ್ತಾರೆ. ಈ ವೈದ್ಯರು ಅಫೀಮಿನ ಉಪಯೋಗವನ್ನು ಚೆನ್ನಾಗಿ ತಿಳಿದಿರುವರು. ಅನೇಕ ರೋಗಿಗಳಿಗೆ ಅದನ್ನೇ ಔಷಧಿಯಾಗಿ ಕೊಡುತ್ತಾರೆ. ಅನೇಕರು ಅದರ ಸೇವನೆಯಿಂದ ಗುಣಪಟ್ಟು ಇರುವರು. ಅನೇಕರಲ್ಲಿ ಒಂದು ಕೆಟ್ಟರೋಗ ಇರುತ್ತದೆ. ಅದನ್ನು ಅಣಗಿಸಿ ರೋಗಿಗೆ ಚೈತನ್ಯವನ್ನು ಕೊಡಬೇಕಾದರೆ ಅವನು ಅಫೀಮನ್ನು ತಿನ್ನಲೇಬೇಕು. ತಿನ್ನದಿದ್ದರೆ ಅಕಾಲಮರಣವನ್ನು ಹೊಂದಿ ತನ್ನ ಹೆಂಡತಿಮಕ್ಕಳಿಗೆ ಜೀವನೋಪಾಯಕ್ಕೆ ಮಾರ್ಗವಿಲ್ಲದಂತಾಗುವದು. ಕೆಲವು ಸಂದರ್ಭಗಳಲ್ಲಿ ಈ ಅಫೀಮಿನಿಂದಲೇ ಜನರು ದೀರ್ಘಾಯುಷ್ಯವನ್ನು ಪಡೆದು ತಮ್ಮ ಸಂಸಾರಕ್ಕೆ ಅನ್ನೋದಕಗಳನ್ನು ಕಾಣಿಸತಕ್ಕವರಾಗಿದ್ದಾರೆ. ಆದರೆ ಕೆಲವರು ವಿನಹಿ ಬೇಕೆಂದು ಅಫೀಮನ್ನು ತಿಂಡಿಯಂತೆ ತಿಂದು ಕಾಲಕಳೆಯುವರು. ಇಂಥವರಿಗೆ ಆಗಲೇ ಅಭ್ಯಾಸವಿದ್ದುದರಿಂದ ಅವರು ನಾನಾವಿಧವಾದ ಕಟ್ಟುಹೋಗಿದ್ದಾರೆ. ಇಂಥವರ ಸಂಖ್ಯೆಯು ಬಹು ಸ್ವಲ್ಪ. ಸ್ವಲ್ಪಜನಗಳನ್ನು ಬಿಡಿಸುವದಕ್ಕೋಸ್ಕರ ಸರ್ಕಾರದವರು ತಮ್ಮ ಆದಾಯವನ್ನು ಪ್ರಜೆಗಳ ಕ್ಷೇಮವನ್ನು ಲಕ್ಷ್ಯಮಾಡದಿರುವದಕ್ಕಾದೀತೆ! ಪೂರ್ವಕಾಲದಿಂದ ಮೊಗಲರ ಕಾಲದಲ್ಲಿಯೂ ಹಿಂದೂಸ್ಥಾನಕ್ಕೆ ಬಂದ ಕೆಲವುಮಂದಿ ಈ ಅಫೀಮನ್ನು ನೋಡಿ, ಗೌರ್ನಮೆಂಟಿನವರು ಇದನ್ನು ಬೆಳೆಸಕೂಡದೆಂದು ಹೇಳುವಮಾತ್ರಕ್ಕೇ ಸರ್ಕಾರದವರು ಅವರ ಮಾತಿನಲ್ಲಿ ಭರವಸೆ ಇಟ್ಟು ಅಫೀಮಿನ ವ್ಯಾಪಾರವನ್ನೇ ನಿಲ್ಲಿಸುವದಕ್ಕೆ ಪ್ರಯತ್ನ ಮಾಡುವದು ಸರಿಯಲ್ಲ. ಅಫೀಮಿನ ಬೆಳೆಯನ್ನು ನಿಲ್ಲಿಸಿ, ಅಫೀಮಿನ ಸೇವನೆಗೆ ಕೊನೆಯನ್ನು ತರುವದಾದರೆ, ಇಂಡಿಯಾ ಸರ್ಕಾರದವರ ಅವಿವೇಕವು ಅಷ್ಟಿಷ್ಟೆಂದು ಹೇಳುವದಕ್ಕಾಗುವದಿಲ್ಲ. ಈ ಮಾತನ್ನು ಚೆನ್ನಾಗಿ ಬರೆದಿಟ್ಟುಕೊಳ್ಳಿ "ಎಂಬುವದೇ. ಇಂಥ ಸಭೆಗಳು ಇನ್ನೂ ಕೆಲವುಕಡೆ ನಡೆಯತಕ್ಕದ್ದಾಗಿಯೂ, ಇನ್ನೂ ಅನೇಕರು ತಮ್ಮ ಅಭಿಪ್ರಾಯವನ್ನು ಹೇಳಬೇಕಾಗಿಯೂ ಇರುವದರಿಂದ ಈ ವಿಷಯದಲ್ಲಿ ನಮ್ಮ ಅಭಿಪ್ರಾಯಗಳನ್ನು ಹಿಂದಿನಿಂದ ತಿಳಿಸುವೆವು.

ನೋಟೀಸ್.

ಮೈಸೂರು ಲಷ್ಕರ್ ಮೊಹಲ್ಲಾದಲ್ಲಿರುವ ಬಾರಕಟ್ಟೇರಿ ಸುಬ್ಬಯ್ಯನವರ ಮಗ ಸುಬ್ಬಯ್ಯನು ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಮೈಸೂರು ಮಂಡಿಮೊಹಲ್ಲಾದಲ್ಲಿರುವ ಕುಂದಣ ಕೆಲಸದ ಶಿವರಾಮೈಯ್ಯನೆಂಬವನು ೧೮೯೩ನೆ ಇಸವಿ ನವಂಬರ ೭ನೆ ತಾರೀಖಿನ "ವೃತ್ತಾಂತ ಪತ್ರಿಕೆಯಲ್ಲಿ" ಒಂದು ನೋಟೀಸು ಪ್ರಕಟಿಸಿ ಮಾಡಿಸಿರುವದು ಸರಿಯಷ್ಟೆ. ಸದರಿ ನೋಟೀಸಿಗೆ ಜವಾಬಾದ ಈ ನೋಟೀಸನ್ನು ಮೇಲ್ಕಂಡ ಸುಬ್ಬೈಯನು ಪ್ರಕಟಿಸಿರುತ್ತಾನೆ.

ಮೇಲ್ಕಂಡ ನೋಟೀಸಿನಲ್ಲಿ ನಮೂದಿಸಿರುವ, ಮೈಸೂರು ಮಂಡಿ ಮೊಹಲ್ಲಾದಲ್ಲಿ ಪೂರ್ವಕ್ಕೆ ವಸ್ತ್ರಲಿಂಗೈಯನ ಮನೆ, ಪಶ್ಚಿಮಕ್ಕೆ ಜನಗಳು ತಿರುಗಾಡುವ ಗಲ್ಲಿ, ಉತ್ತರಕ್ಕೆ ಚಿಕ್ಕಚಲುವಯ್ಯನ ಮನೆ, ದಕ್ಷಿಣಕ್ಕೆ ರಸ್ತೆ—ಈ ಮಧ್ಯೆ ಇರುವ ೩೫—೩೬ ಮ್ಯೂನಿಸಿಪಲ್ ಡೋರು ನಂಬರು ಉಳ್ಳ ಮನೆಯು ಕುಂದಣ ಕೆಲಸದ ಶಿವರಾಮೈಯನಿಗೆ ಸೇರಿದ್ದಲ್ಲ. ಈ ಮನೆಯಮೇಲೆ ಶಿವರಾಮೈಯನಿಗೆ ಯಾವ ವಿಧವಾದ ಹಕ್ಕೂ ಬಾಧ್ಯತೆಯೂ ಇಲ್ಲ. ಇವನ ಮತ್ತು ಇವನ ಹಿರಿಯರ ಸ್ವಾಧೀನಾನುಭವದಲ್ಲಿಯೂ ಯಾವಾಗ್ಯೂ ಇರಲಿಲ್ಲ. ಸದರಿ ಮನೆಯನ್ನು ನಾಗಮ್ಮ, ಚನ್ನಮ್ಮ, ಮತ್ತು ಗಂಗಮ್ಮ ಇವರುಗಳು ಶಿವರಾಮೈಯನು ವಾಸಕ್ಕಾಗಿ ಕೊಟ್ಟನೆಂಬದಾಗಿ ಹೇಳುವ ಅಂಶ ಸಂಪೂರ್ಣ ಸುಳ್ಳು. ಈ ಮನೆಯನ್ನು ಸುಬ್ಬೈಯನ ಹಿರಿಯರು ಸಂಪಾದನೆ ಮಾಡಿದ್ದು. ಇದರಲ್ಲಿ ಸುಬ್ಬೈಯನ ಹಿರಿಯರು

ಮತ್ತು ಇವನ ಸಮೀಪಬಂಧುಗಳಾದ ನಾರಣಮ್ಮ ಗಂಗಮ್ಮ, ಚಂನಮ್ಮ ಸಹ ಸುಬ್ಬೈಯನ ಹಿರಿಯರ ಅಪ್ಪಣೆ ಮೇರೆ ಅಲ್ಲಿ ವಾಸಮಾಡುತ್ತಾ ಇದ್ದರು. ಶಿವರಾಮಯ್ಯನು ಸದರೀ ಮನೆಯನ್ನು ಸುಬ್ಬೈಯನಿಂದ ಕ್ರಯಕ್ಕೆ ಪಡೆಯಬೇಕೆಂದು ಪ್ರಯತ್ನಪಟ್ಟು ಸಾಧ್ಯವಾಗದೆ ಹೋದದ್ದರಿಂದಲೂ, ಸ್ವಲ್ಪ ದಿವಸಗಳ ಕೆಳಗೆ ಸುಬ್ಬೈಯನಿಗೂ ಶಿವರಾಮಯ್ಯನಿಗೂ ಕ್ರಿಮಿನಲ್ ಕೋರ್ಟಿನಲ್ಲಿ ವ್ಯವಹಾರ ನಡೆದದ್ದಿನ ಮೇಲೂ, ಸಹ ಶಿವರಾಮಯ್ಯನು ಬಂದು ಸುಳ್ಳು ನೋಟೀಸನ್ನು "ವೃತ್ತಾಂತ ಪತ್ರಿಕೆಯಲ್ಲಿ" ಪ್ರಕಟಿಸಿರುತ್ತಾನೆ. ಇದರಿಂದ ಇವನಿಗೆ ಯಾವ ಫಾಯಿದೆಯೂ ಆಗಲಾರದು. ಈ ಚರ್ಚಾಸ್ಪದವಾದ ಮನೆಯು ನೆರೆಹೊರೆಯವರು ಅತ್ತ ಸುಬ್ಬೈಯನ ಪಕ್ಷಕ್ಕೆ ಸೇರಿದ್ದೆಂದು ಸಂಪೂರ್ಣವಾಗಿ ಬಲ್ಲವರಾಗಿದ್ದಾರೆ. ಮತ್ತು ಅನೇಕ ಜನಗಳು ಸುಬ್ಬೈಯನೇ ಹಕ್ಕುದಾರನೆಂದು ಸರ್ಟಿಫಿಕೇಟ್ ಮಹಜರೂ ಬರೆದು ಕೊಟ್ಟಿದ್ದಾರೆ. ಶಿವರಾಮಯ್ಯನ ಗೊಡ್ಡು ಬೆದರಿಕೆಗೆ ಅಂಜದೆ ಕ್ರಯಕ್ಕೆ ತೆಗೆದುಕೊಳ್ಳತಕ್ಕವರು ನಿಜತ್ವವನ್ನು ವಿಚಾರಿಸಿ ತೃಪ್ತಿಪಟ್ಟನಂತರ ತೆಗೆದುಕೊಳ್ಳುವರೆಂದು ತಿಳಿಯಪಡಿಸಿರುತ್ತೆ. ಮತ್ತು ಈ ಮನೆಯನ್ನು ಸುಬ್ಬೈಯನು ತನ್ನ ಇಷ್ಟಬಂದಂತೆ ವ್ಯವಹರಿಸಬಹುದೆಂದು ಇವನ ಅಣ್ಣ ನಂಜುಂಡೈಯನು ಸಮ್ಮತಿ ಪಟ್ಟಿರುತ್ತಾನೆ.

ಶ್ರೀ. ಈ ಶ್ರೀಕಾರದ ಗುರ್ತಿನ
ರುಜು ಸುಬ್ಬೈಯ ಹಾಕಿದ್ದು.

ಕಳೆದ ಪ್ರಜಾಪ್ರತಿನಿಧಿ ಸಭೆಯಲ್ಲಿ

ಸಂಸ್ಥಾನದ ದಿವಾನ್ ಬಹದ್ದೂರವರು ಕಳೆದವರ್ಷದಲ್ಲಿ ಸಂಸ್ಥಾನಕ್ಕೆ ಉಂಟಾದ ಆದಾಯ ವ್ಯಯಗಳನ್ನು ತಿಳಿಸಿದ್ದಲ್ಲದೆ ಪ್ರಜಾಪಾಲನೆಯ ವಿಷಯವಾಗಿ ಅಪ್ಪಣೆಕೊಡಿಸಿದ ಸಂಗತಿಗಳ ವೃತ್ತಾಂತವನ್ನು ನಮ್ಮ ಪತ್ರಿಕೆಯ ಮೂಲಕ ವಾಚಕರಿಗೆ ತಿಳಿಯಪಡಿಸುತ್ತೇವೆಂದು ಒಪ್ಪಿಕೊಂಡಷ್ಟೆ ಈ ವಾರದೊಡನೆ ಆ ರಿಪೋರ್ಟು ಪೂರೈಸಿತು. ಆದರೆ ರಿಪೋರ್ಟನ್ನು ದಿವಾನರವರು ಇಂಗ್ಲೀಷಿನಲ್ಲಿ ಓದಿಸಿದಕಾರಣದಿಂದ ಬೆಂಗಳೂರಿಂದ ಪ್ರತಿನಿಧಿಗಳಾಗಿ ಬಂದು ಸಭೆಯಲ್ಲಿ ಹಾಜರಾಗಿದ್ದ ಮ|| ರೆವರೆಂಡ್ ಗರಿಘರ್ಸ್ಟ್‌ ಸಾಹೇಬರವರು ಎಲ್ಲಾ ಪ್ರತಿನಿಧಿಗಳ ಪರವಾಗಿಯೂ ಎದ್ದು ತಿಳಿಯಪಡಿಸಿದ ಕೆಲವು ಮುಖ್ಯಸಂಗತಿಗಳನ್ನೂ ನಮ್ಮ ವಾಚಕರಿಗೆ ವಿವರಿಸಲು ಅಪೇಕ್ಷೆಯುಳ್ಳವರಾಗಿ ಪ್ರಯತ್ನಪಟ್ಟಿರುವೆವು ಅದೇನೆಂದರೆ—

ದಿವಾನರವರ ಅಡ್ರೆಸ್ಸಿಗೆ ಜವಾಬುಕೊಡುವ ಭಾರವನ್ನು ಎಲ್ಲಾ ಪ್ರತಿನಿಧಿಗಳೂ ನಂಬಿಯಿಟ್ಟು ನನಗೆ ಒಪ್ಪಿಸಿರುತ್ತಾರೆ. ಸಂಸ್ಥಾನಾಭಿವೃದ್ಧಿಯ ವಿಷಯವಾದ ರಿಪೋರ್ಟನ್ನು ಪ್ರತಿಸಾಲಿನಲ್ಲಿಯೂ ನಾವು (ಪ್ರತಿನಿಧಿಗಳು) ಕೇಳುವದಕ್ಕೆ ಹರ್ಷವುಳ್ಳವರಾಗಿರುತ್ತೇವೆ. ಆದರೆ ಹಿಂದೆ ಯಾವ ವರ್ಷದಲ್ಲಿಯೂ ಕಳೆದವರ್ಷದಂಥ ಆದಾಯವನ್ನೂ, ಪ್ರಜಾಕ್ಷೇಮವನ್ನೂ ನಾವು ಕೇಳಿ ಇಲ್ಲ. ಈ ವಿಷಯದಲ್ಲಿ ನಮ್ಮ ಸಂತೋಷಕ್ಕೆ ಮೇರೆಯೇ ಇಲ್ಲ. ಈಚೆಗೆ ಹೊಸದಾಗಿ ಪ್ರಕಟಿಸಲ್ಪಟ್ಟಿರುವ ಉತ್ಕೃಷ್ಟವಾದ ಮತ್ತು ವಿಷಯಗರ್ಭಿತವಾದ ಜನೇಷುಮಾರಿ ಲೆಖ್ಖಗಳಿಂದ ರಾಜ್ಯವು ಐಶ್ವರ್ಯದಲ್ಲಿ ಮಾತ್ರವೇ ಅಲ್ಲ. ಅದಕ್ಕೆ ತಕ್ಕಂತೆ ಪ್ರಜಾಭಿವೃದ್ಧಿಯಲ್ಲೂ ವಿಶೇಷವಾಗಿ ಹೆಚ್ಚಿದೆ ಎಂದು ಸ್ಪಷ್ಟವಾಗಿ ಗೊತ್ತಾಗುತ್ತೆ. ಕಳೆದ ನವಂಬರಿನಲ್ಲಿ ಹಿಂದೂಸ್ಥಾನದ ವೈಸ್‌ರಾಯಿ ಗವರ್ನರ್ ಜನರಲ್‌ರವರು ನಮ್ಮ ಸಂಸ್ಥಾನಕ್ಕೆ ದಯಮಾಡಿಸಿದ್ದಾಗ ಇಲ್ಲಿನ ಸಕಲ ಏರ್ಪಾಡುಗಳನ್ನೂ, ಪ್ರಜಾಸೌಖ್ಯವನ್ನೂ, ಮುಖ್ಯವಾಗಿ ಪ್ರಜಾಪ್ರತಿನಿಧಿಸಭೆಯನ್ನೂ ಪರಾಂಬರಿಸಿ ಬಹು ಸಂತೋಷದಿಂದ ಅಪ್ಪಣೆ ಕೊಡಿಸಿದ ಶ್ರೇಷ್ಠವಾಕ್ಯಗಳನ್ನು ನಾವು ಕೇಳಲು ಮಹದಾನಂದಪಡುವೆವು ಮತ್ತು ನಮ್ಮ ವೈಸ್ರಾಯಿಯೂ ಮಹಾರಾಜ್ಞಿಯವರು ತಮ್ಮ ಶ್ರೇಷ್ಠಕೆಳಗಣ ಭಾರಿಭಾರಿ ಹುದ್ದೆದಾರರುಗಳ ಪೈಕಿ ಯಾರು ಸಮರ್ಥರಾಗಿಯೂ, ಪ್ರಜಾಹಿತೈಷಿಗಳಾಗಿಯೂ ಇರುವರೆಂದು ಅವರ ಕಾರ್ಯಗಳಿಂದಲೇ ಲೋಕಕ್ಕೆಲ್ಲಾ ತಿಳಿಯಪಡಿಸಿಕೊಳ್ಳುವರೋ ಅಂಥವರು ಬ್ರಿಟಿಷ್ ಸೀಮೆಗಳಲ್ಲಿರಲಿ, ಅಥವಾ ನೇಟಿವ್ ಸಂಸ್ಥಾನಗಳಲ್ಲಿರಲಿ, ಅವರುಗಳಲ್ಲಾ ತಮ್ಮ ಸಂತೋಷವನ್ನೂ, ಪ್ರೇಮವನ್ನೂ ತಿಳಿಯಪಡಿಸುವಂತೆ ಉತ್ಕೃಷ್ಟವಾದ ಬಿರುದುಗಳನ್ನು ದಯಪಾಲಿಸುತ್ತಾರೆ. ಹೀಗೆಯೇ ನಮ್ಮ ದಿವಾನ್ ಬಹದ್ದೂರವರ ಅಸಾಧಾರಣವಾದ ರಾಜಕಾರ್ಯನಿರ್ವಹಣದಲ್ಲಿ ತನ್ನ ಅಪಾರವಾದ ಶಕ್ತಿಸಾಮರ್ಥ್ಯಗಳನ್ನು ತೋರ್ಪಡಿಸಿರುವದರಿಂದ ಚಕ್ರವರ್ತಿ ವೈಸ್ರಾಯಿಯಾದವರು ಸರಿಸ್ಟಾರ್ ಆಫ್ ಇಂಡಿಯ ನೈಟ್ ಎಂಬ ಬಿರುದನ್ನು ಅವರಿಗೆ ಕಳೆದ ವರ್ಷದಲ್ಲಿ ದಯಪಾಲಿಸಿರುವದನ್ನು ಕೇಳಿ ನಾವು ಅಸಂಖ್ಯಾತರಾಗಿರುವೆವು. ಈ ಸೀಮೆಯ ಪ್ರಜೆಗಳ ಕ್ಷೇಮವನ್ನೂ, ಸಾಂಸರ್ಗಿಕ ಸ್ಥಿತಿಯನ್ನೂ, ಆರೋಗ್ಯಸ್ಥಿತಿಯನ್ನೂ ಮತ್ತು ಎಲ್ಲದರಲ್ಲಿಯೂ ಪ್ರಜಾಕ್ಷೇಮವನ್ನೂ ದಿನಕ್ರಮದಲ್ಲಿ ಹೆಚ್ಚಿಸುತ್ತ ಬರುವದಕ್ಕಾಗಿ ಶ್ರೀಮನ್ಮಹಾರಾಜಾ ಸರ್ಕಾರದವರು ಮುತುವರ್ಜಿಯಿಂದ ಮಾಡುತಬಂದಿರುವ ಏರ್ಪಾಡುಗಳನ್ನು ನಾವು ಅಪಾರಸಂತೋಷದಿಂದ ತಿಳಿದಿರುವೆವು. ಹಿಂದಿನ ಖಾನೇಷುಮಾರಿ ಲೆಖ್ಖಗಳು ಈ ಸೀಮೆಯಲ್ಲಿ ಮಾತ್ರ ಕ್ಷಾಮ ಇನ್ನೂ ಪ್ರಬಲವಾಗಿಲ್ಲದೆ ಎಂದು ವ್ಯಕ್ತಪಡಿಸಿತು. ಅದನ್ನು ಸಾಧ್ಯವಾದಷ್ಟುಮಟ್ಟಿಗೂ ನಿವಾರಣೆಮಾಡಬೇಕೆಂತಲೂ,

ಎಲ್ಲದರಲ್ಲಿಯೂ ವಿದ್ಯಾಭಿವೃದ್ಧಿಯಾಗಬೇಕೆಂತಲೂ ನಮ್ಮ ವಿದ್ಯಾಭ್ಯಾಸದ ಇಲಾಖೆಯವರು ಮಾಡುತ್ತಲಿರುವ ಏರ್ಪಾಡುಗಳು ಬಹು ಸಂತೋಷಕರವಾಗಿವೆ. ಆದರೆ ಇನ್ನೂ ಹೆಚ್ಚಾಗಿ ವಿದ್ಯಾಭಿವೃದ್ಧಿಯಾಗುವದಕ್ಕೆ ಸರ್ಕಾರದವರು ಈಗ ಕೊಡುವ ಖರ್ಚಿಗಿಂತಲೂ ಸ್ವಲ್ಪ ಹೆಚ್ಚು ದ್ರವ್ಯವನ್ನು ವಿನಿಯೋಗಿಸಬೇಕೆಂದು ಕೇಳಿಕೊಳ್ಳುವೆವು. ಬಾಲ್ಯವಿವಾಹಗಳನ್ನು ನಿರೋಧಿಸುವದಕ್ಕೆ ಸಂಧಾನವಾದ ಮಸೂದೆಯು ರೆಗ್ಯುಲೇಷನ್ ಪ್ರಕಟಿಸಿದ್ದರಿಂದ ಮಹಾರಾಜಾ ಸರ್ಕಾರದವರು ಪ್ರಜೆಗಳ ಕ್ಷೇಮಾಭಿವೃದ್ಧಿಯಲ್ಲಿ ನಿರಂತರಾಗಿದ್ದಾರೆಂದು ಸ್ಪಷ್ಟವಾಗಿ ಗೊತ್ತಾಗುತ್ತೆ. ಅದನ್ನು ಕಾನೂನಾಗಿ ವ್ಯಾಸಿಮಾಡಿ ಜಾರಿಯಲ್ಲಿತಂದರೂ ಸರಿಯೇ, ಇಲ್ಲದೆ ವಾಪಸು ತೆಗೆದುಕೊಂಡರೂ ಸರಿಯೇ, ಅದನ್ನು ಈಗ ಘೋಷಿಸಿ ಮಾಡಿರುವದರಿಂದ ಪ್ರಜೆಗಳಲ್ಲಿ ಎಷ್ಟರಮಟ್ಟಿನ ಚರ್ಚೆಯನ್ನು ಹುಟ್ಟಿಸಿ, ಎಷ್ಟು ಆಲೋಚನೆಯನ್ನು ಉಂಟುಮಾಡಿದೆಯೋ ಹೇಳುವದಕ್ಕಾಗುವದಿಲ್ಲ. ಇದರಿಂದಲೇ ಪ್ರಜೆಗಳಲ್ಲಿ ಯಾವದಾದರೊಂದು ಒಳ್ಳೇ ಏರ್ಪಾಡು ಆದರೂ ಆಗಬಹುದೆಂದೂ, ಮತ್ತು ಅನೇಕ ಅನ್ಯಾಯಗಳೂ, ಅಕೃತ್ಯಗಳೂ ತಕ್ಕಮಟ್ಟಿಗೆ ಕಡಿಮೆಯಾಗಬಹುದೆಂದೂ, ಜನರು ಆಲೋಚಿಸುತ್ತಲಿದ್ದಾರೆ. ನಮ್ಮನ್ನು ಇನ್ನು ಮೂರುವರುಷಗಳವರಿಗೂ ಪ್ರತಿನಿಧಿಗಳಾಗಿರುವಂತೆ ಗೌರ್ನಮೆಂಟಿನವರು ಅಪ್ಪಣೆಕೊಡಿಸಿದ ಸಂತೋಷಕರವಾದ ವಾಕ್ಯಗಳನ್ನು ಕೇಳಿ ನಾವುಗಳು ಪೂರ್ಣಾನಂದಪಡುವೆವು. ಇದರ ಪ್ರಯೋಜನವನ್ನು ಅಷ್ಟಿಷ್ಟೆಂದು ವಿವರಿಸಲಾಗುವದಿಲ್ಲ. ಇದರಿಂದ ಪ್ರಜೆಗಳಿಗೂ, ಸರ್ಕಾರದವರಿಗೂ ಇರುವ ಅಂತರವು ಕಡಿಮೆಯಾಗುವದೆಂತಲೂ, ಸರ್ಕಾರದ ಕೆಲಸಗಳನ್ನು ನೆರವೇರಿಸುವದರಲ್ಲಿ ಪ್ರಜೆಗಳಿಗೆ ಹೆಚ್ಚು ಮುತುವರ್ಜಿಯುಂಟಾಗಿ, ಪರಸ್ಪರಸ್ನೇಹವನ್ನು ಹೆಚ್ಚಿಸುವದೆಂತಲೂ ಯಾರುಬೇಕಾದರೂ ಹೇಳಬಹುದು. ಮುಖ್ಯವಾಗಿ ಶ್ರೀಮನ್ಮಹಾರಾಜರವರಲ್ಲಿಯೂ, ಅವರ ಗೌರ್ನಮೆಂಟಿನವರ ವಿಷಯದಲ್ಲಿಯೂ ಪ್ರಜೆಗಳಾದ ನಾವು ನಮ್ಮ ಭಕ್ತಿ ವಾತ್ಸಲ್ಯಗಳನ್ನು ಸಂಪೂರ್ಣವಾಗಿ ಇಟ್ಟುಕೊಂಡಿರುವೆವೆ ಇದು ಅಪೂರ್ವವಾದದ್ದಲ್ಲವೆಂದು ಈಗಲೂ ವಿಜ್ಞಾಪನೆಮಾಡಿಕೊಳ್ಳುತ್ತೇವೆ.

ಬಹುದೇಶ ವೃತ್ತಾಂತಗಳು.

ಸಂಸ್ಥಾನದ ದಿವಾನರವರು ಇಷ್ಟರಲ್ಲೇ ಚಿತ್ರದುರ್ಗದ ಕಡೆ ಸರ್ಕೀಟು ದಯಮಾಡುವವರಾಗಿದ್ದಾರೆಂದು ಅಲ್ಲಿನ ಇಂಗ್ಲೀಷ್ ಪತ್ರಿಕೆಯು ತಿಳಿಸುತ್ತದೆ.

ಹುಣಸೂರು ಪಬ್ಲಿಕ್ ಕ್ಯಾಟಲ್ ಡಿಪೋದಲ್ಲಿ ಈ ಜಾಹೆ ಅಖೈರಿಗೆ ಕೆಲವು ಸರ್ಕಾರಿ ದನಗಳು ಹರಾಜು ಹಾಕಲ್ಪಡುತ್ತವೆಂದು ನೋಟೀಸು ಕೊಟ್ಟಿರುತ್ತಾರೆ.

ಷಹರಿನಲ್ಲಿ ಮಾರ್ಗಸಿಕೆ ಕೆಲಸವನ್ನು ನೋಡುತ್ತಲಿರುವ ಮ|| ಸಿ ಬಿ ಶೇಷಗಿರಿರಾಯರನ್ನು ಯಥಾಪ್ರಕಾರ ಶ್ರೀರಂಗಪಟ್ಟಣಕ್ಕೂ ಮ|| ಎಸ್ ವೆಂಕಟವರದಯ್ಯಂಗಾರ್ರನ್ನೇ ಪುನಹಾ ಇಲ್ಲಿಗೂ ಸರ್ಕಾರದವರು ವರ್ಗಮಾಡಿರುವಂತೆ ಹೆರಲ್ಡ್ ಪತ್ರಿಕೆಯಿಂದ ತಿಳಿದು ಸಂತೋಷ ವಿಷಾದಿಸುವೆವು.

ಸಂಸ್ಥಾನದ ಪ್ರಾವಿನ್ಷಿಯಲ್ ಮತ್ತು ಡಿಸ್ಟ್ರಿಕ್ಟ್ ಬೋರ್ಡುಗಳ ಅಧಿಕಾರಕ್ಕೊಳಪಟ್ಟು ಮ್ಯೂನಿಸಿಪಲ್ ಬೌಂಡರಿ ಯೊಳಗಿರುವ ಎಲ್ಲಾ ರೋಡುಗಳನ್ನೂ ಅವುಗಳ ರಿಪೇರಿ ಖರ್ಚು ೫೦೦ ರೂಪಾಯಿಗಳೊಳಗಾಗಿದ್ದರೆ ಪಬ್ಲಿಕ್ ವರ್ಕ್ಸ್ ಇಲಾಖೆಯವರೇ ಮಾಡಿಸಬೇಕೆಂದು ಸರ್ಕಾರದವರು ಹುಕುಂ ಮಾಡಿರುತ್ತಾರೆ.

ಮೊನ್ನೆ ಸೋಮವಾರದ ಲಾಗಾಯಿತು ಪ್ಯಾರಾಬಾಡ ಸಂಸ್ಥಾನದ ಪ್ರಧಾನಮಂತ್ರಿತ್ವವನ್ನು ಮ|| ವಿಕಾರುಲ್‌ಉಮ್ರಾ ನವಾಬರು ವಹಿಸಿ ಕೆಲಸಗಳನ್ನು ಜರುಗಿಸುತ್ತಲಿದ್ದಾರೆ. ಮೊದಲಿದ್ದ ಸರ್ ಅಸ್ಮಾನ್‌ಜಾರವರನ್ನು ಏಲುತ್ತಾರದಿಂದ ಕೆಲಸಕ್ಕೆ ರಾಜೀನಾಮೆ ಕೊಡುವಂತೆ ಮಾಡಿದರು ಎಂಬದಾಗಿ ಒಂದು ಪ್ರವಾದ ಹುಟ್ಟಿದೆ.

ಮ್ಯುನಿಸಿಪಲ್ ಪ್ರೆಸಿಡೆಂಟು ತಾವು ಮಾಡತಕ್ಕ ಕೆಲಸಗಳ ಪೈಕಿ ಯಾವದನ್ನಾದರೂ ಯಾರಾದರೂ ಮ್ಯುನಿಸಿಪಲ್ ಮೆಂಬರು ಮಾಡಬಹುದೆಂದು ಅವರಿಗೆ ಲಿಖಿತ ಮೂಲಕವಾಗಿ ಹುಕುಂ ವನ್ನು ಜೋರ್ಟಿನವರ ಅನುಮತಿಯಿಂದ ಕೊಟ್ಟು ಅವರಿಂದ ಆ ಕೆಲಸವನ್ನು ಮಾಡಿಸಬಹುದೆಂತಲೂ, ಅದಕ್ಕೆ ಗೌರ್ನಮೆಂಟಿನವರ ಆಕ್ಷೇಪಣೆಯೇನೂ ಇರುವದಿಲ್ಲವೆಂತಲೂ ಹುಕುಂ ಮಾಡಿರುತ್ತಾರೆ.

ಕರಸ್ಥಳಗಳಿಂದ ಬೆಂಗಳೂರಿಗೆ ಹೋಗಿ ಓದತಕ್ಕ ವಿದ್ಯಾರ್ಥಿಗಳ ಅನುಕೂಲ್ಯಕ್ಕಾಗಿ ಅಲ್ಲಿನ ಸೆಂಟ್ರಲ್ ಕಾಲೇಜಿಗೆ ಸೇರಿದಂತೆ ಬೋರ್ಡಿಂಗ್ ಹೌಸ್ ಎಂದರೆ ವಿದ್ಯಾರ್ಥಿಗಳಿಗೆ ಭೋಜನಾಲಯವನ್ನು ಸ್ಥಾಪಿಸಬೇಕೆಂದು ಮ|| ಕೂಕ್‌ಸನ್ ಸಾಹೇಬರವರು ಗೌರ್ನಮೆಂಟಿಗೆ ಶಿಫಾರಸ ಮಾಡಿದ್ದ ಮೇಲೆ ದಿವಾನರವರು ಅದಂ ಮಂಜೂರ್ ಮಾಡಿದರೆಂತಲೂ ಆ ಬಗ್ಗೆ ಒಂದು ಪ್ರತ್ಯೇಕ ಕಟ್ಟಡ ಕಟ್ಟಲಿಕ್ಕೆ ಪ್ರಾರಂಭಿಸಲ್ಪಡುವದೆಂತಲೂ ಕೇಳುತ್ತೇವೆ.

ಷಹರಿನಲ್ಲಿ ಪಬ್ಲಿಕ್ ರಸ್ತೆಯಲ್ಲಿ ಮೆರವಣಿಗೆಗಾಗಿ ಕೊಟ್ಟ ಲೈಸೆನ್ಸ ವಿಷಯದಲ್ಲಿ ಗಾಣಿಗರಿಗೂ ಇತರ ಪಂಗಡದವರಿಗೂ ಕೆಲವು ದಿನಗಳ ಕೆಳಗೆ ಕಲಹ ಉಂಟಾದಂತೆಯೂ, ಅದನ್ನು ಸರ್ಕಾರದವರು ತಪ್ಪಿಸಿದರೆಂತಲೂ, ಆ ಮೊಕದ್ದಮೆಯು ಇನ್ನೂ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ನಡೆಯುತ್ತಲಿದೆಯೆಂತಲೂ ಹಿಂದೆಯೇ ತಿಳಿಸಿದ್ದೆವಷ್ಟೆ. ಈಗ ಈ ಮೊಕದ್ದಮೆಯಲ್ಲಿ ಸರ್ಕಾರದ ಪರವಾಗಿ ಬ್ಯಾರಿಸ್ಟರು ಒಂದು ವಾದಿಸುತ್ತಲಿದ್ದಾರೆ. ಇದು ಇಷ್ಟಕ್ಕೇ ಮುಗಿಯುವಂತಿಲ್ಲ.

ಕಳೆದ ಮೇ ತಿಂಗಳು ೨೦ನೆ ತಾರೀಖಿನಲ್ಲಿ ವಿಕ್ಟೋರಿಯಾ ... [illegible] ... ಉಹಿಸುತ್ತೇವೆ.

ಕಳೆದ ವಾರದಲ್ಲಿ ಹೈದರಾಬಾದಿನಲ್ಲಿ ನಡೆದ ಕುದುರೇ ಶರ್ತಿಗೆ ನಮ್ಮ ಮಹಾರಾಜರವರೂ ತಮ್ಮ ಕುದುರೆಗಳನ್ನು ಕಳುಹಿಸಿಕೊಟ್ಟಿದ್ದರು. ಆ ಪೈಕಿ ಒಂದು ಕುದುರೆಯು ೧,೦೦೦ ರೂಪಾಯಿ ಬಹುಮಾನವುಳ್ಳ ಷರತ್ತನ್ನೂ, ಮತ್ತೊಂದು ಕುದುರೆಯು ೫೦೦ ರೂಪಾಯಿ ಬಹುಮಾನವುಳ್ಳ ಷರತ್ತನ್ನೂ ಗೆದ್ದು ಇರುತ್ತವೆಂದು ವರ್ತಮಾನ ಬಂದಿರುತ್ತದೆ. ಇದುವರಿಗೂ ಈ ಸ್ಥಳವು ಜನಗಳೇ ಇತರ ಸ್ಥಳಗಳಿಗೆ ಹೋಗಿ ಅಲ್ಲಿ ಖ್ಯಾತಿಯನ್ನು ಪಡೆಯುತ್ತಿದ್ದರು. ಈಗ ಮೂಗು ಪ್ರಾಣಿಗಳೂ ಹೆಸರು ಪಡೆಯುವದಕ್ಕೆ ಆರಂಭವಾಗಿದೆ. ಇದರಿಂದ "ಚಿತ್ರಲಾಗದ ಮನೆಯವರಿಗೆ ಮದ್ದಿಲ್ಲ" ಎಂಬ ನಾಣ್ಣುಡಿಯು ಯಥಾರ್ಥವಾಗಿರ ಎಂದು ನಾವು ಊಹಿಸಬೇಕಾಗಿದೆ.

ಸಾಬಕಾ ಚೀಫ್ ಕಮೀಷನರವರಿಂದ ಸಾದರ್ ಮಾಡಲ್ಪಟ್ಟದ್ದು ೧೮೯೧ನೇ ಇಸವಿ ಫೆಬ್ರವರಿ ೧೧ನೇ ದಾಖಲ್ ೧೫೮೬ನೇ ನಂಬರುಳ್ಳ ಇಸ್ತಿಹಾರನಾಮೆ ದೆಸೆಯಿಂದ ಮೈಸೂರು ೩೯ ಮೈಲು ಪೈಕಿ ಮುನಿಸಿಪಲ್ ಭಾಗಗಳಲ್ಲಿರುವ ತಾಲೂಕುಗಳನ್ನು ಕ್ರಮಪಡಿಸಿ ಅವುಗಳಿಗೆ ಲೈಸೆನ್ಸ್ ಕೊಡತಕ್ಕ ವಿಷಯದಲ್ಲಿ ಏರ್ಪಡಿಸಿ ಜಾರಿಯೊಳಗಿಟ್ಟಿರುವ ನಿಬಂಧನೆಗಳನ್ನು ಈಗ ಮಹಾರಾಜಾ ಸರ್ಕಾರದವರು ಮಾರ್ಚ್ ಮಾಹೆ ೩ನೇ ತಾರೀಖಿನ ಒಳಕ್ಕೆ ಜಿ ೩೦ನೇ ನಂಬರ್ ಇಸ್ತಿಹಾರ್ ನಾಮೆಯ ಮೂಲಕ ಮೈಸೂರು ಡಿಸ್ಟ್ರಿಕ್ಟ್ ತಿರುಮಕೂಡ್ಲು ನರಸೀಪುರ ತಾಲ್ಲೂಕು ಸೋಸಲೆ ಮತ್ತು ಬನ್ನೂರು ಗ್ರಾಮಗಳಲ್ಲಿ ಸಹ ಅಮಲಿನೊಳು ತರತಕ್ಕದ್ದೆಂದು ಹುಕುಂ ಮಾಡಿರುತ್ತಾರೆ.

ದಿವಸಹಳ್ಳಿ ತಾಲ್ಲೂಕ್ ಅಡಿಷನಲ್ ಮ್ಯಾಜಿಸ್ಟ್ರೇಟರು ಸರ್ಕಾರದಲ್ಲಿ ಒಬ್ಬ ಮನುಷ್ಯನು ಲೈಸೆನ್ಸ್ ಇಲ್ಲದೆ ಮಾಡಿದ್ದಕ್ಕಾಗಿ ಅವನಿಗೆ ಶಿಕ್ಷೆವಿಧಿಸಿದರು. ಈ ಮೊಕದ್ದಮೆಯು ರಿಕಾರ್ಡು ಹೈಕೋರ್ಟಿಗೆ ಕಳುಹಿಸಲ್ಪಟ್ಟಾಗ್ಯೂ ಅವರು ಈ ಅಪರಾಧ ವಿಧಿಸಿದ ಶಿಕ್ಷೆಯು ನ್ಯಾಯವಾದ್ದಲ್ಲವೆಂಬ ಅಭಿಪ್ರಾಯದಿಂದ ತಮ್ಮ ಅನುಮತಿಯನ್ನು ನೀಡದೆ ದಿನದಮೇಲೆ ನಮೂದುಮಾಡಿ ಈ ಶಿಕ್ಷೆಯು ನ್ಯಾಯವಾದದ್ದೇ ಎಂಬದಾಗಿ ಚೀಫ್‌ಕೋರ್ಟಿನವರನ್ನು ಕೇಳಿದ್ದಕ್ಕೆ ಈ ಮೊಕದ್ದಮೆಯ ಕಾಗದಗಳನ್ನೆಲ್ಲಾ ಪರಾಂಬರಿಸಿ ಅಮಲುದಾರರು ಕೊಟ್ಟ ಶಿಕ್ಷೆಯು ನ್ಯಾಯವಾದದ್ದೇ ಸರಿ ಎಂತಲೂ, ಆದರೆ ಆ ಮೊಕದ್ದಮೆಯು ಅಪೀಲಾಗಿದ್ದಲ್ಲಿ ತಮ್ಮ ತೀರ್ಮಾನವನ್ನು ಹೇಳಬಹುದಾಗಿತ್ತೆಂತಲೂ ಹೇಳಿ ಅಪೀಲಾಗಿದ್ದಲ್ಲಿ ಈ ಮೊಕದ್ದಮೆಯು ನ್ಯಾಯವಾಗುತ್ತಿತ್ತೋ ನೋಡತಕ್ಕದ್ದಾಗಿತ್ತು.

ಕೆಲವು ದಿನಗಳ ಕೆಳಗೆ ಇಬ್ಬರು ಹೆಂಗಸರು ಕಾರಾಗಾರ ತರಗೆಯಿಂದ ಮೈಸೂರು ಜೈಲಿನಲ್ಲಿ ಮಸ ಮಾಡಬೇಕಾಗಿ ಬಂತು. ಅವರಿಬ್ಬರಿಗೂ ಇಬ್ಬರು ಚಿಕ್ಕಮಕ್ಕಳು ಇದ್ದರು. ಒಬ್ಬಳ ಮಗುವಿಗೆ ೪ ವರ್ಷ, ಇನ್ನೊಬ್ಬಳ ಮಗುವಿಗೆ ೩ ವರ್ಷ. ಆ ಮಕ್ಕಳಿಗೆ ತಾಯಿ ಅಲ್ಲದೆ ಇನ್ಯಾವ ಪೋಷಕರೂ ಇರಲಿಲ್ಲವಾದ್ದರಿಂದ ಅವರನ್ನೂ ಅವರ ತಾಯಿಯ ಜೊತೆಯಲ್ಲಿ ಜೈಲಿನೊಳಕ್ಕೆ ಸೇರಿಕೊಂಡರು. ಅವರ ಪೋಷಣೆಯ ಖರ್ಚನ್ನು ಜೈಲ್ ಖರ್ಚಿಗೆ ಸೇರಿಸಬಹುದೋ ಕೂಡದೋ ಎಂಬದಾಗಿ ಇನ್ಸ್‌ಪೆಕ್ಟರ್ ಜನರಲ್‌ರವರು ಗೌರ್ನಮೆಂಟಿನವರನ್ನು ಕೇಳಿದ್ದಕ್ಕೆ ಎರಡು ವರ್ಷಕ್ಕೆ ಮೇಲ್ಪಟ್ಟ ಮಕ್ಕಳನ್ನು ಜೈಲಿನೊಳಕ್ಕೆ ಸೇರಿಸಿಕೊಳ್ಳುವದಕ್ಕೆ ಜೈಲ್ ಅಧಿಕಾರಿಗಳಿಗೆ ರಾಜು ಇಲ್ಲವೆಂದು ಜೈಲ್ ಮ್ಯಾನುಯಲ್‌ನಿಂದ ಸ್ಪಷ್ಟವಾಗಿದೆ. ಆದ್ದರಿಂದ ಆ ಮಕ್ಕಳನ್ನು ಜೈಲಿನ ಒಳಗೆ ಇಟ್ಟುಕೊಳ್ಳಕೂಡದೆಂತಲೂ, ಆ ಮಕ್ಕಳ ತಾಯಿ ಬಿಡುಗಡೆಯಾಗುವವರಿಗೂ ಮಕ್ಕಳನ್ನು ಮೈಸೂರು ತಾಲ್ಲೂಕು ಅಮಲ್ದಾರರ ವಶಕ್ಕೆ ಕೊಡತಕ್ಕದ್ದೆಂತಲೂ, ಅವರು ಆ ಮಕ್ಕಳನ್ನು ಯಾರಿಗಾದರೂ ಒಪ್ಪಿಸಿ, ಅವರಿಗೆ ತಗಲುವ ಖರ್ಚನ್ನು ಬಿಡಿಮಾಡಬಹುದೆಂತಲೂ, ಅನಾಥ ಮಕ್ಕಳನ್ನು ದಿನವಹಿ ೧—೦ ಅಧಿಕ ಅವಕಾಶದ ಮಾಸಸಂಬಳದ ಪ್ರಕಾರ ಬಳಸಬಹುದೆಂತಲೂ ಗೌರ್ನಮೆಂಟಿನವರು ಅಪ್ಪಣೆಕೊಟ್ಟಿರುತ್ತಾರೆ.

ಮೈಸೂರು ಷಹರಿನಲ್ಲಿ ಗೌರ್ನಮೆಂಟಿನವರು ಸ್ಥಾಪಿಸಿರುವ ಹಿಂದೂ ಮತ್ತು ಯುನಾನಿ ವೈದ್ಯಶಾಲೆಗಳಲ್ಲಿ ಹೆಚ್ಚಿನ ವಿಷಯಗಳನ್ನು ಕಲಿಯ ಗಣಪತ್ಯಾಗೆಂಬ ಸಂಗತಿಯನ್ನು ಗೌರ್ನಮೆಂಟಿನವರು ಬಹು ಸಂತೋಷದಿಂದ ತಿಳಿದು ಯುನಾನಿ ವೈದ್ಯರಿಗೂ ಹಿಂದೂ ವೈದ್ಯರಿಗೂ ಒಂದೇ ರೂಪಾಯಿ ತಲಾ ಇನ್ನು ನಿಷ್ಕರ್ಷಿಸಿ ಬಿಷರ್ಗಿ ಖರ್ಚಾಗಿ ಹಿಂದೆ ಮಾಡಬೇಕಾದ ಕೊಡುತ್ತಿದ್ದ ೪೦ ರೂಪಾಯಿಗೆ ಬದಲಾಗಿ ೬೦ ರೂಪಾಯಿ ಕೊಡಲ್ಪಡುವದೆಂದು ಹುಕುಂ ಮಾಡಿರುತ್ತಾರೆ. ಈಚೆಗೆ ಈ ವೈದ್ಯಶಾಲೆಯಿಂದ ಉಪಯೋಗ ಹೊಂದುವ ಜನಗಳ ಸಂಖ್ಯೆಯು ಬಹು ಹೆಚ್ಚಾಗುತ್ತಲಿದೆ. ಇಂಗ್ಲೀಷ್ ಆಸ್ಪತ್ರೆಗಳಿಗೆ ಅಷ್ಟಾಗಿ ಹೋಗುವದಿಲ್ಲ. ಸರ್ಕಾರದವರು ಇಂಗ್ಲೀಷ್ ಆಸ್ಪತ್ರೆಗಳಿಗೆ ಖರ್ಚು ಮಾಡುವದರಲ್ಲಿ ೧೦ರಲ್ಲಿ ಒಂದು ಪಾಲನ್ನು ಈ ಹಿಂದೂ ವೈದ್ಯಶಾಲೆಗೆ ಖರ್ಚು ಮಾಡುವದಿಲ್ಲ. ಈ ಅಧಿಕಾರಿಯು ಈಗೀಗ ಗೌರ್ನಮೆಂಟಿನವರಿಗೆ ಉಂಟಾಗುತ್ತಲಿದೆ ಎಂದು ಅವರ ಹುಕುಮುಗಳಿಂದ ವ್ಯಕ್ತವಾಗುತ್ತದೆ. ಈ ನೇಟಿವ್ ವೈದ್ಯಶಾಲೆಗೆ ಮೊದಲು ೩೦ ಬರುತ್ತಿದ್ದದ್ದು ೧,೫೦೦ ರೂಪಾಯಿಗಳು. ಈಗ ಗೌರ್ನಮೆಂಟಿನವರು ಖರ್ಚುಮಾಡುವದಕ್ಕೆ ಒಪ್ಪಿರುವದು ೨,೫೦೦ ರೂಪಾಯಿಗಳು. ಈ ಮೊಬಲಗಿನ ಪೈಕಿ ಮೂರರಲ್ಲಿ ಒಂದು ಹಿಸ್ಸೆಯ ಖರ್ಚನ್ನು ಮೈಸೂರು ಮ್ಯುನಿಸಿಪಲ್ ಫಂಡಿನಿಂದಲೂ, ಉಳಿದ ಎರಡು ಭಾಗವನ್ನು ಲೋಕಲ್‌ಫಂಡ್ ಜನರಲ್ ಫಂಡಿನಿಂದಲೂ ಕೊಡಲ್ಪಡತಕ್ಕದ್ದೆಂದೂ ವಿಧಿಸಿರುತ್ತಾರೆ.

ಕಳೆದ ಆಗಸ್ಟ ತಿಂಗಳಲ್ಲಿ ಜರುಗಿದ ಮೈಸೂರು ಲೋಕಲ್ ಸರ್ವಿಸ್ ಪರೀಕ್ಷೆಗೆ ೩ ಭಾಗಗಳ ಪೈಕಿ ಫಾರೆಸ್ಟ್, ಅಕೌಂಟ್ ಎಕ್ಸೈಜ್ ಪರೀಕ್ಷೆಗಳಲ್ಲಿ ತೇರ್ಗಡೆಯಾದವರ ಹೆಸರುಗಳು ಇದುವರೆಗೆ ಗೆಜೆಟ್ಟಿನಲ್ಲಿ ಪ್ರಕಟಿಸಲ್ಪಟ್ಟವಷ್ಟೆ. ಈ ವಾರದ ಮೈಸೂರ್ ಗೆಜೆಟ್ಟಿನಲ್ಲಿ ರವಿನ್ಯೂ ಮತ್ತು ಸಿವಿಲ್ ಭಾಗದಲ್ಲಿ ತೇರ್ಗಡೆಯಾಗಿರುವವರ ಹೆಸರುಗಳ ಪಟ್ಟಿಗಳೆರಡು ಪ್ರಾಯಶಃ ಮಾಡಲ್ಪಟ್ಟಿರುತ್ತವೆ. ಸಿವಿಲ್ ಎಗ್ಜಾಮಿನೇಷನಿನಲ್ಲಿ ಮೊದಲನೆಯ ತರಗತಿಯೊಳು ೨೫ ಜನಗಳೂ, ಎರಡನೇ ತರಗತಿಯಲ್ಲಿ ೭ ಮಂದಿಯೂ ತೇರ್ಗಡೆಯಾಗಿದ್ದಾರೆಯಲ್ಲದೆ ಹದಿನಾರುಜನ ಪರೀಕ್ಷಕರ ಹುದ್ದೆಗಳಿಲ್ಲದ್ದು ಆರಿದ ಹದಿನಾಲ್ಕು ಮಂದಿಯಲ್ಲಿ ಕೆಲವರು ಸಿವಿಲ್ ಪ್ರೊಸೀಜ್ಯೂರ್ ಕೋಡ್ ಮತ್ತು ಲಿಮಿಟೇಷನ್ ಆಕ್ಟುಗಳಲ್ಲಿಯೂ, ಮತ್ತು ಕೆಲವರು ಟ್ರಾನ್ಸ್‌ಫರ್ ಆಫ್ ಪ್ರಾಪರ್ಟಿ ಆಕ್ಟ್ ಮತ್ತು ಸ್ಪೆಸಿಫಿಕ್ ರಿಲೀಫ್ ಆಕ್ಟುಗಳಲ್ಲಿಯೂ, ಇನ್ನು ಕೆಲವರು ಎವಿಡೆನ್ಸಿನಲ್ಲಿಯೂ, ಬೇರೆ ಕೆಲವರು ಪೇಪರುಗಳಲ್ಲಿ ಮಾರ್ಕುಗಳು ಕಡಿಮೆಯಾಗಿರುವದರಿಂದಲೂ ತೇರ್ಗಡೆಯಾಗದೆ ಹೋದರು. ಈಗ ತೇರ್ಗಡೆಯಾಗಿರುವವರ ಪೈಕಿ ಗವರ್ನಮೆಂಟ್ ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕಮೀಷನರ್ ಮ|| ಬಿ. ರಾಮಸ್ವಾಮಯ್ಯನವರು ಮೊದಲನೆಯವರಾಗಿರುತ್ತಾರೆ. ರೆವಿನ್ಯೂ ಪರೀಕ್ಷೆಯಲ್ಲಿ ಮೊದಲನೇ ತರಗತಿಯೊಳು ೨೦ ಮಂದಿಯೂ, ಎರಡನೇ ತರಗತಿಯಲ್ಲಿ ೩೩ ಮಂದಿಯೂ ತೇರ್ಗಡೆಯಾಗಿರುತ್ತಾರೆ. ಅವರಲ್ಲಿ ಪ್ರೊಬೇಷನರ್ ಸಬ್‌ಡಿವಿಜನ್ ಆಫೀಸರಾದ ಮ|| ಸಿ. ರಾಘವಾಚಾರ್ಯರವರು ಮೊದಲನೆಯವರಾಗಿರುತ್ತಾರೆ. ಇವರು ಕಳೆದ ವರುಷದಲ್ಲಿ ಕ್ರಿಮಿನಲ್ ಪರೀಕ್ಷೆಯೊಳು ಸಹ ಮೊದಲನೆಯವರಾಗಿದ್ದರು. ಈ ಎರಡು ಭಾಗದಲ್ಲಿ ಹೀಗೆ ಇವರು ಮೊದಲನೆಯವರಾದದ್ದನ್ನು ಕೇಳುವದಕ್ಕೆ ನಾವು ಬಹಳ ಸಂತೋಷಿಸುತ್ತೇವೆ. ಈ ಪರೀಕ್ಷೆಯಲ್ಲಿ ಗ್ರಾಜುಯೇಟುಗಳ್ದ ೨೦ ಮಂದಿ ಜಾತಿ ೪೫ ಜನ ರವಿನ್ಯೂ ರಸಪ್ಪ ವಕೀಲರಿನಲ್ಲಿ ತಪ್ಪದೆ ಬರುವಂತೆ ವ್ಯಕ್ತವಾಗುವ. ಬರುವ ವಾರದಲ್ಲಿ ಸಿವಿಲ್ ಮೊದಲನೆಯಾಗ ಕ್ರಿಮಿನಲ್ ಮತ್ತು ರಿಜಿಸ್ಟ್ರೇಷನ್ ಪರೀಕ್ಷೆಗಳ ಫಲಿತಾಂಶವು ಹೊರಗಾಗುವುದೆಂದು ನಂಬುತ್ತೇವೆ.

೧೮೯೩ನೇ ಇಸವಿ ಅಕ್ಟೋಬರ್ ತಾ|| ೨೩ನೇ ಸೋಮವಾರದಲ್ಲು ಮೈಸೂರಲ್ಲಿ ಸೇರಿದ ಪ್ರಜಾಪ್ರತಿನಿಧಿಗಳ ಸಭೆಯಲ್ಲಿ ನಡೆದ ಮೈಸೂರು ಸಂಸ್ಥಾನದ ದಿವಾನರವರ ಉಪನ್ಯಾಸ.

(ಕಳೆದ ವಾರದ ಶೇಷ)

ವಿದ್ಯಾಭ್ಯಾಸ.—1892ನೇ ಇಸ್ವಿ ಜೂನ್ 30ನೇ ತಾರೀಖಿನಲ್ಲಿ 1,095 ಸರಕಾರಿ ಪಾಠಶಾಲೆಗಳು, ಅವುಗಳಲ್ಲಿ 70,963 ಮಂದಿ ವಿದ್ಯಾರ್ಥಿಗಳು ಇದ್ದರು. ಇದು ಅಲ್ಲದೆ ಖಾಸಗಿ ಪಾಠಶಾಲೆಗಳು, 2,112 ಇದ್ದವು. ಅವುಗಳಲ್ಲಿ 26,556 ಮಂದಿ ವಿದ್ಯಾರ್ಥಿಗಳಿದ್ದರು. ಒಟ್ಟು 91,504 ಹುಡುಗರು, 11,010 ಬಾಲಿಕೆಯರು ವಿದ್ಯಾಮಂದಿರಗಳಲ್ಲಿ ಇದ್ದರು. 1881ನೇ ಇಸವಿ ಲಾಗಾಯಿತು 1891ನೇ ಇಸವಿವರೆಗೂ 10 ಸಂವತ್ಸರಗಳಲ್ಲಿ ವಿದ್ಯಾಭ್ಯಾಸ ಮಾಡತಕ್ಕ ಗಂಡಸರ ಸಂಖ್ಯೆಯು 231,695 ಇದ್ದದ್ದು 261,508 ರವರಿಗೆ ಅಂದರೆ ಶೇಕಡ 11.4 ರ ಪ್ರಮಾಣ, ಹೆಂಗಸರ ಸಂಖ್ಯೆಯು 9,062 ಇದ್ದದ್ದು 17,830 ರ ವರೆಗೆ ಅಂದರೆ ಶೇಕಡ 96.1 ರಂತೆಯೂ ಅಭಿವೃದ್ಧಿಯಾಗಿರುವ ಅಂಶವು ಸಂತೋಷಕರವಾದ್ದಾಗಿರುತ್ತೆ.

ಸರಕಾರಿ ಪಾಠಶಾಲೆಗಳಿಗಾಗಿ ಎಲ್ಲಾ ಬಾಬುಗಳಿಂದಲೂ ಒಟ್ಟು 7,42,1.. ರೂಪಾಯಿಗಳು ಖರ್ಚಾಯಿತು. ಇದರ ಪೈಕಿ ಪ್ರಾವಿನ್ಷಿಯಲ್ ಫಂಡ್ ಎಂದರೆ ಸರಕಾರದಿಂದ 3,11,13. ರೂಪಾಯಿಗಳೂ, ಲೋಕಲ್‌ಫಂಡು ಹಣದಿಂದ 20,031 ರೂಪಾಯಿಗಳೂ, ಫೀಜಿನಿಂದ 72,190 ರೂಪಾಯಿಗಳೂ ಈ ಮೊತ್ತ ಖರ್ಚಾಗಿರುತ್ತೆ. 1893ನೇ ಇಸವಿ ಮಾರ್ಚ್ 31ನೇ ತಾರೀಖಿಗೆ ಅಖೈರಾದ ಸಾಲಿನ ಖರ್ಚಿಗಿಂತ ಕಳೆದ ಸಾಲಿನಲ್ಲಿ 39,226 ರೂಪಾಯಿ ಜಾಸ್ತಿ ಖರ್ಚು ಆಗಿರುತ್ತೆ. ಪ್ರೈಮರಿ ಮತ್ತು ವರ್ನಾಕ್ಯುಲರ್ ಸ್ಕೂಲುಗಳಲ್ಲಿ ಬೋಧಿಸತಕ್ಕ ವಿಷಯದಲ್ಲಿ ಮಾಡಿರುವ ಹೊಸ ಏರ್ಪಾಟು 1893 ನೇ ಇಸವಿ ಜನವರಿ ಗಾಲಾಗಾಯಿತು ಜಾರಿಯಲ್ಲಿ ಬಂದಿರುತ್ತೆ. ಟೆಕ್ಸ್ಟ್‌ಬುಕ್ ಕಮಿಟಿಯವರು ಕನ್ನಡಭಾಷೆಯಲ್ಲಿ ಓದುವದಕ್ಕೋಸ್ಕರ ಮೂರು ಪುಸ್ತಕಗಳನ್ನು ತಯಾರುಮಾಡುವದಕ್ಕೆ ಏರ್ಪಾಟುಮಾಡಿರುತ್ತಾರೆ. ಶಾಲೆಗಳಲ್ಲಿ ಉಪಯೋಗಿಸುವ ಕನ್ನಡ ಪುಸ್ತಕಗಳಲ್ಲಿ ಒಂದೇರೀತಿಯಾಗಿ ವರ್ಣವಿನ್ಯಾಸಕ್ರಮವನ್ನು ಅನುಸರಿಸಬೇಕೆಂಬ ಅಂಶವನ್ನು ಸದರಿ ಕಮಿಟಿಯವರು ಆಲೋಚಿಸುತ್ತಿದ್ದಾರೆ. ಕನ್ನಡ ಪಂಡಿತರನ್ನೂ ಪ್ರೈಮರಿ ಮತ್ತು ವರ್ನಾಕ್ಯುಲರ್ ಸ್ಕೂಲುಗಳ ಉಪಾಧ್ಯಾಯರುಗಳನ್ನೂ ತಯಾರುಮಾಡುವದಕ್ಕಾಗಿ ಎರಡು ನಾರ್ಮಲ್ ಸ್ಕೂಲುಗಳನ್ನು ಇಡಬೇಕೆಂದು ಮಂಜೂರಾಗಿರುತ್ತೆ. ಕನ್ನಡ ಸ್ಕೂಲುಗಳ ಉಪಾಧ್ಯಾಯರುಗಳಿಗೆ ವ್ಯವಸಾಯ ಮತ್ತು ಆರೋಗ್ಯಶಾಸ್ತ್ರ ಇವುಗಳನ್ನು ಬೋಧಿಸುವದಕ್ಕಾಗಿ ಎಲ್ಲಾ ಡಿಸ್ಟ್ರಿಕ್ಟುಗಳ ಹೆಡ್‌ಕ್ವಾರ್ಟರ್ಸ್ ಸ್ಥಳಗಳಲ್ಲಿಯೂ ಕಳೆದ ಏಪ್ರಿಲ್ ಮೇ ತಿಂಗಳುಗಳಲ್ಲಿ ಪಾಠಶಾಲೆಗಳನ್ನು ಏರ್ಪಡಿಸಿತ್ತು.

ಗ್ರಾಮಗಳಲ್ಲಿರುವ ಸ್ಕೂಲುಗಳನ್ನು ಸ್ಥಳೀಯ ಕಮಿಟೀಯವರ ಮೇಲ್ವಿಚಾರಣೆಗೆ ಒಳಪಡಿಸಿರುತ್ತೆ. ಮಾಯಿ ಗ್ರಾಮಾಂತರಗಳಲ್ಲಿ ಸ್ಕೂಲುಗಳನ್ನು ಜಾಸ್ತಿ ಮಾಡಬೇಕೆಂತಲೂ, ಮ್ಯುನಿಸಿಪಾಲಿಟಿಗಳಲ್ಲಿ ಇಂಗ್ಲೀಷು ಮತ್ತು ಕನ್ನಡ ಭಾಷಾಬೋಧನೆಯನ್ನು ಅಭಿವೃದ್ಧಿಪಡಿಸಬೇಕೆಂತಲೂ, ಆಲೋಚನೆಮಾಡಿರುತ್ತೆ.

ಸ್ತ್ರೀವಿದ್ಯಾಭ್ಯಾಸ.—ಸಂಸ್ಥಾನದಲ್ಲಿ ಒಟ್ಟು ೧೪೦ ಬಾಲಿಕಾ ಪಾಠಶಾಲೆಗಳು ಇರುತ್ತವೆ. ಒಟ್ಟು ಖರ್ಚು ೭೩,೮೪೦ ರೂಪಾಯಿಗಳು. ಈ ಪೈಕಿ ಸರಕಾರದಿಂದ ಖರ್ಚಾದದ್ದು ೬೧,೦೭೦ ರೂಪಾಯಿಗಳು. ಶ್ರೀಮನ್ ಮಹಾರಾಣೀಯವರ ಸ್ಕೂಲಿನಿಂದ ೭ ಮಂದಿಯು ಮತ್ತು ತುಮಕೂರಿನಲ್ಲಿ ಇರುವ ವೆಸಲಿಯನ್ ಮಿಷನ್ ಬಾಲಿಕಾ ಪಾಠಶಾಲೆಯಿಂದ ಇಬ್ಬರು ವಿದ್ಯಾರ್ಥಿನೀಯರು ಲೋವರ್ ಸೆಕಂಡರಿ ಪರೀಕ್ಷೆಯಲ್ಲಿ ತೇರ್ಗಡೆಯಾದರು.

ಶ್ರೀಮನ್ ಮಹಾರಾಣೀಯವರ ಬಾಲಿಕಾ ಪಾಠಶಾಲೆಯು ಏರ್ಪಾಟನ್ನೂ ಮತ್ತು ಶಿಕ್ಷಾಕ್ರಮವನ್ನೂ ವಿಶೇಷವಾಗಿ ಅಭಿವೃದ್ಧಿಪಡಿಸಿರುತ್ತೆ. ಕಲಕತ್ತೆಯಲ್ಲಿರುವ ಬೆತ್ಯೂನ್ ಕಾಲೇಜಿನ ಮಿಸ್ ಕಾದಂಬಿನಿ ಬಾಸ್ತಗಿರ್ ಬಿ ಎ ಯೆಂಬವರನ್ನು ಈ ಪಾಠಶಾಲೆಯಲ್ಲಿ ಅಸಿಸ್ಟೆಂಟ್ ಲೇಡಿ ಸೂಪರಿಂಟೆಂಡೆಂಟ್ ಕೆಲಸಕ್ಕೆ ನೇಮಿಸುವದರ ಮೂಲಕ ಉಪಾಧ್ಯಾಯರ ಸಂಖ್ಯೆಯನ್ನು ಜಾಸ್ತಿ ಮಾಡಿರುತ್ತೆ. ಹೈಸ್ಕೂಲ ತರಗತಿಗಳಲ್ಲಿ ೧೪ ಮಂದಿ ವಿದ್ಯಾರ್ಥಿನಿಯರನ್ನು ಉಪಾಧ್ಯಾಯಿನೀಯರ ಕೆಲಸಕ್ಕೆ ತಯಾರುಮಾಡುತ್ತಾ ಇದೆ. ೧೨ ವರುಷಕ್ಕೆ ಮೇಲ್ಪಟ್ಟ ವಯಸ್ಸಿನ ಬಾಲಿಕೆಯರು ೪೪ ಮಂದಿ ಈ ಪಾಠಶಾಲೆಯಲ್ಲಿ ಇರುತ್ತಾರೆ.

ಚೆನ್ನಕಲೆಯೂ ಶಿಲ್ಪ ವಿದ್ಯಾಭ್ಯಾಸ.—೧೮೯೭ ನೇ ಇಸವಿ ಫೆಬ್ರವರಿ ತಿಂಗಳಲ್ಲಿ ಮೈಸೂರಲ್ಲಿ ಪ್ರಾರಂಭವಾದ ಶಿಲ್ಪ ವಿದ್ಯಾಶಾಲೆಯಲ್ಲಿ ಬಡಗಿಕೆಲಸ, ಕಂಬಾರಕೆಲಸ, ಕಲ್ಲುಕೆಲಸ, ಕಾಂಚುಗಾರಕೆಲಸ, ಚಿತ್ರ ಬರೆಯುವದು, ಮತ್ತು ನಕ್ಷೆ ತೆಗೆಯತಕ್ಕದ್ದು ಈ ಕಸಬುದಾರೀ ವಿದ್ಯೆಗಳನ್ನು ಕಲಿಸುತ್ತಿರುವುದಲ್ಲದೆ ಜಾಗ್ರತೆಯಾಗಿ ನೇಯತಕ್ಕ ಹೊಸವಿಧಾನವನ್ನು ಕಲಿಸುವದಕ್ಕೆ ಈಚೆಗೆ ಏರ್ಪಾಟು ಮಾಡಿರುತ್ತೆ. ಕಳೆದ ಜೂನ್ ೩೦ ನೇ ತಾರೀಖಿನಲ್ಲಿ ಈ ಪಾಠಶಾಲೆಯಲ್ಲಿ ೧೦೩ ಮಂದಿ ವಿದ್ಯಾರ್ಥಿಗಳು ಇದ್ದರು, ಆ ಪೈಕಿ ೧೦ ಜನ ಬ್ರಾಹ್ಮಣರು, ೧೭ ಜನ ಮುಸಲ್ಮಾನರು, ೧೪ ಮಂದಿ ನೆಟೀವ್ ಕ್ರಿಶ್ಚಿಯನ್ನರು, ಇಬ್ಬರು ಈಸ್ಟ್ ಇಂಡಿಯನ್ನರು, ೬೦ ಮಂದಿ ನಾನಾಜಾತಿ ಹಿಂದೂಗಳು, ಈ ಮೇರೆ ಇದ್ದರು. ಈ ಪಾಠಶಾಲೆಯು ಪ್ರಾರಂಭವಾಗಿ ಸ್ವಲ್ಪಕಾಲವಾದಾಗ್ಯೂ ಇದರಲ್ಲಿ ನಡೆಯುವ ಕೆಲಸಗಳನ್ನು ನೋಡಲಾಗಿ, ಕ್ರಮೇಣ ವಿಶೇಷ ಉಪಯೋಗವನ್ನುಂಟುಮಾಡಬಹುದಾಗಿರುತ್ತೆ. ಅಲ್ಲದೆ ಇದರ ಅನುಭವದ ಮೇಲೆ ಇತರ ಪ್ರದೇಶದಲ್ಲಿಯೂ ಈ ಮೇರೆ ಕಸುಬುದಾರೀ ವಿದ್ಯಾಭ್ಯಾಸದ ಏರ್ಪಾಟುಗಳನ್ನು ಮಾಡಲು ಅನುಕೂಲಿಸುತ್ತೆ.

ಮರಾಮತ್ತಿನ ಇಲಾಖೆ ತಾಪೇದಾರಿ ನೌಕರಿಗೆ ಕ್ರಮವಾಗಿ ತಯಾರಾದ ಜನಗಳು ಹಾಲಿ ವಿಶೇಷವಾಗಿ ದೊರಕುವದಿಲ್ಲವಾಗಿ ತಾಲ್ಲೂಕು ಮೇಸ್ತ್ರಿ, ಸಬ್ ಓವರಸಿಯರುಗಳನ್ನು ತಯಾರುಮಾಡತಕ್ಕ ಬಗ್ಗೆ ಒಂದು ಇಂಜನೀರಿಂಗ್ ಪಾಠಶಾಲೆಯನ್ನು ಏರ್ಪಡಿಸಬೇಕೆಂದು ಯೋಚನೆಮಾಡಿರುತ್ತೆ.

ಪ್ರಾಚೀನಲಿಪ್ಯನ್ವೇಷಣೆ.—ಹೋದವರುಷದ ಉಪನ್ಯಾಸದಲ್ಲಿ ವಿವರಿಸಿರುವ ಚಿತ್ರದುರ್ಗದ ಡಿಸ್ಟ್ರಿಕ್ಟಿನಲ್ಲಿ ದೊರೆತ ಅಶೋಕಮಹಾರಾಜನಕಾಲದ ಅಮೂಲ್ಯವಾದ ಕೆಲವು ಶಾಸನಗಳ ವಿಷಯದಲ್ಲಿ ಲಂಡನ್, ಪ್ಯಾರಿಸ್, ವಿಯನ್ನಾ ಈ ದೊಡ್ಡ ಪಟ್ಟಣಗಳಲ್ಲಿ ಕೆಲವು ವಿದ್ವಾಂಸರುಗಳು ಲೇಖನವಾದ ಪತ್ರಿಕೆಗಳನ್ನು ಬರೆದು ಪ್ರಚುರಪಡಿಸಿರುತ್ತಾರೆ. ಈ ಶಾಸನಗಳ ಪ್ರತಿರೂಪಗಳ ಕೊನೆಯಲ್ಲಿಯೂ, ಓದುವದಕ್ಕೆ ಆಗದೆಯಿದ್ದ ಕೆಲವು ಅಕ್ಷರಗಳನ್ನು ವಿಯನ್ನಾ ಪಟ್ಟಣದ ವಿದ್ವಾಂಸರಾದ ಪ್ರೊಫೆಸರ ಬ್ಯೂಲರ್‌ರವರು ಪತ್ತೆ ಮಾಡಿರುತ್ತಾರೆ. ಈ ಅಕ್ಷರಗಳು ಬಲಗಡೆಯಿಂದ ಪ್ರಾರಂಭಿಸಿ ಎಡಗಡೆಗೆ ಬರೆಯುವ ಖರೋಷ್ಟ್ರಿ ಎಂಬ ಬ್ಯಾಕ್ಟ್ರಿಯನ್ ಪಾಲಿಭಾಷೆಯ ಅಕ್ಷರದಲ್ಲಿ ಶಾಸನವನ್ನು ಕೆತ್ತಿದ ಶಿಲ್ಪಿಯು ಕಸಬನ್ನು ತೋರಿಸುವ "ಲಿಪಿಕರೇಣ" ಎಂಬ ಶಬ್ದವಾಗಿರುತ್ತೆ.

ಕಳೆದ ಸಾಲಿನಲ್ಲಿ ದೊರೆತ ಇತರ ಮುಖ್ಯವಾದ ಶಾಸನಗಳಿಂದ ತೀರ್ಥದ ಸಂಸ್ಥಾನವನ್ನು ಆಳುತ್ತಿದ್ದ ಪಲ್ಲವ ವಂಶಸ್ಥನಾದ ನೊಳಂಬಾಧಿರಾಜನೆಂಬ ದೊರೆಯು, ತಲಕಾಡು ಸಂಸ್ಥಾನದ ದೊರೆಯಾದ ಗಂಗವಂಶಕ್ಕೆ ಸೇರಿದ ಸೀತವರ್ಗನೆಂಬ ಅರಸನ ಕಿರೀಮಗಳನ್ನು ವಿವಾಹಮಾಡಿಕೊಂಡನೆಂದು ತಿಳಿಯುತ್ತಿರುವುದು; ಪ್ರಸಿದ್ಧನಾದ ಹೊಯಿಸಳರಾಜ್ಯದ ದೊರೆಯಾದ ವಿಷ್ಣುವರ್ಧನರಾಯನಿಂದ ಪರಾಜಿತನಾದ ಇರುಂಗೊಳದೇವನೆಂಬ ಅರಸು ಪಾವಗಡತಾಲ್ಲೂಕು ನಿಡುಗಲ್ಲು ದುರ್ಗವನ್ನು ಸ್ವಾಧೀನಪಡಿಸಿಕೊಂಡಿದ್ದನೆಂತಲೂ, ಈ ಇರುಂಗೊಳದೇವನು ಯಾವ ವಂಶಕ್ಕೆ ಸೇರಿದವನೋ ಆ ವಂಶದ ದೊರೆಗಳು ಹೆಂಜೆರೆಯೆಂಬ ಸ್ಥಳವನ್ನು ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರೆಂತಲೂ, ತಿಳಿಯಬರುತ್ತೆ. ಈ ಹೆಂಜೆರೆಯೆಂಬ ಸ್ಥಳವು ಬಹಳ ಪುರಾತನವಾದ ಅನೇಕ ಶಾಸನಗಳಲ್ಲಿ ನಮೂದಿಸಲ್ಪಟ್ಟಿರುತ್ತೆ. ಇವುಗಳ ಪೈಕಿ ಒಂದು ಶಾಸನವು ಕ್ರಿಸ್ತಶಕಕ್ಕೆ ೩೦೦೦ ವರುಷಗಳಿಗಿಂತ ಹಿಂದೆ ಜನಮೇಜಯರಾಯನು ಸರ್ಪಯಾಗ ಮಾಡಿದಕಾಲದಲ್ಲಿ ಕೊಟ್ಟದ್ದೆಂದು ಹೇಳಿಕೊಳ್ಳುವ ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ದೊರಕಿರುವ ಶಾಸನಗಳಂತೆಯೇ ಬರವಣಿಗೆ ಮತ್ತು ಮಾತಲಟು ಉಳ್ಳದ್ದಾಗಿರುತ್ತೆ.

ಓರಿಯಂಟಲ್ ಲೈಬ್ರರಿ ಯಾನೆ ಪುಸ್ತಕ ಭಂಡಾರ.—ಕಳೆದ ವರುಷದಲ್ಲಿ 609 ಛಾಪೆಯಾದ ಮತ್ತು 712 ಕೈಬರವಣಿಗೆಯ ಗ್ರಂಥಗಳು ಶೇಖರವಾಡಲ್ಪಟ್ಟವು. ಈಗ ಈ ಪುಸ್ತಕಭಂಡಾರದಲ್ಲಿ 1,653 ಛಾಪೆಯಾದ 1,021 ಕೈಬರವಣಿಗೆಯ ಗ್ರಂಥಗಳು ಹಾಜರಿರುತ್ತವೆ. ಭಂಡಾರವನ್ನು ನೋಡುವದಕ್ಕೆ ಬಂದಿದ್ದವರ ಸಂಖ್ಯೆಯೂ, ಭಂಡಾರದಿಂದ ಪುಸ್ತಕಗಳನ್ನು ಎರವು ತೆಗೆದುಕೊಂಡು ಹೋದವರ ಸಂಖ್ಯೆಯೂ, ವಿಶೇಷ ಜಾಸ್ತಿಯಾಗಿದ್ದಾಗಿ ಈ ಭಂಡಾರವು ಜನಸಮ್ಮತವಾಗಿ ಉಪಯೋಗಿಸಲ್ಪಡುತ್ತೆಂಬ ಅಂಶವು ಸ್ಪಷ್ಟವಾಗುತ್ತೆ.

ಶೇಖರಮಾಡಲ್ಪಟ್ಟಿರುವ ಕೈಬರವಣಿಗೆಯ ಗ್ರಂಥಗಳ ಪೈಕಿ ಶುಕ್ಲಯಜುಶ್ಶಾಖಾ ಸಂಬಂಧವಾದ ಕಾಣ್ವಶಾಖೆಯ "ಶತಪಥ ಬ್ರಾಹ್ಮಣ" ವೆಂಬ ಗ್ರಂಥವು ಬಹಳ ಅಪೂರ್ವವಾದದ್ದು. ಈ ಗ್ರಂಥವು ಸ್ವರಚಿಹ್ನೆಗಳೊಡನೆ ಸಂಪೂರ್ಣವಾಗಿ ಬರೆಯಲ್ಪಟ್ಟಿರುತ್ತೆ. ಈ ಗ್ರಂಥವು ಇದುವರೆಗೆ ಛಾಪಾಗಿಲ್ಲ.

ಕೈಬರವಣಿಗೆ ಗ್ರಂಥಗಳ ಪೈಕಿ ದಕ್ಷಿಣಾಪಥದಲ್ಲಿ ವಿಶೇಷವಾಗಿ ಪ್ರಚುರವಾಗಿರುವ ಪ್ರಸಿದ್ಧರಾದ ಅಪ್ಪಯ್ಯದೀಕ್ಷಿತರಿಂದಲೂ, ವೇದಾಂತಾಚಾರ್ಯರಿಂದಲೂ ರಚಿಸಲ್ಪಟ್ಟ ಅದ್ವೈತ, ವಿಶಿಷ್ಟಾದ್ವೈತಮತ ಗ್ರಂಥಗಳೂ, ದ್ವೈತಮತಸ್ಥಾಪನಾಚಾರ್ಯರಾದ ಮಧ್ವಾಚಾರ್ಯರಿಂದ ರಚಿತವಾದ ಆ ಮತದ ಗ್ರಂಥಗಳೂ ವಿಶೇಷವಾಗಿ ದೊರೆತಿರುತ್ತೆ. ಜೈನಮತಕ್ಕೆ ಸಂಬಂಧಪಟ್ಟ ಅನೇಕ ಗ್ರಂಥಗಳು ಶೇಖರವಾಗಿರುತ್ತವೆ. ಪುರಾಣಸಂಬಂಧವಾದ ಗ್ರಂಥಗಳ ಪೈಕಿ "ಪುರಾಣಸಾರ" ವೆಂಬ ಗ್ರಂಥವು ಮುಖ್ಯವಾದದ್ದು. ಕನ್ನಡ ಗ್ರಂಥಗಳ ಪೈಕಿ "ಉದ್ಭಟಕಾವ್ಯ" ವೆಂಬುವದು ಲಿಂಗಾಯತ ಗ್ರಂಥಗಳ ಪೈಕಿ ಬಹಳ ಪುರಾತನವಾದದ್ದು; ಇದುವರೆಗೆ ಪ್ರಚುರಕ್ಕೆ ಬಂದಿರಲಿಲ್ಲವು.

ಸುದರ್ಶನಾಚಾರ್ಯರ ಟೀಕಾಸಹಿತವಾದ ಆಪಸ್ತಂಬ ಗೃಹ್ಯಸೂತ್ರಗಳು ಎಂಬ ಗ್ರಂಥವನ್ನೂ ಛಾಪಾಕಿ ಪೂರೈಸಿರುತ್ತೆ. ರಾಜಮಂತ್ರಪ್ರವೀಣ ಆನರೇಬಲ್ ಚಂಟಲರಾವು ಪಂತಲುಗಾರು ಸಿ. ಐ. ಇ. ಯವರಿಂದ ರಚಿಸಲ್ಪಟ್ಟ ಗೋತ್ರಪ್ರವರಗಳ ವಿಷಯಕವಾದ ಒಂದು ಸ್ವಾರಸ್ಯವಾದ ಗ್ರಂಥವನ್ನು ಛಾಪಿಸುವ ಕೆಲಸವು ನಡೆಯಿತು. ಭಟ್ಟಭಾಸ್ಕರಾಚಾರ್ಯರ ವ್ಯಾಖ್ಯಾನ ಸಹಿತ ಕೃಷ್ಣಯಜುರ್ವೇದದ "ತೈತ್ತಿರೀಯಸಂಹಿತೆಯೂ" ಪ್ರಸಿದ್ಧ ವ್ಯಾಖ್ಯಾನಕಾರರಾದ ಮಾಧವಾಚಾರ್ಯರಿಂದ ರಚಿಸಲ್ಪಟ್ಟ "ಧಾತುವೃತ್ತಿ" ಎಂಬ ವ್ಯಾಕರಣದ ಉದ್ಗ್ರಂಥವೂ, ಅರಮನೆ ಸರಸ್ವತೀ ಭಂಡಾರದಲ್ಲಿರುವ ಪುಸ್ತಕಗಳ ವಿವರಣೆಯ ಪಟ್ಟಿಯೂ, ಮುದ್ರಿತವಾಗುತ್ತಲಿವೆ.

ಪಾಳ್ಯಗಾರರು.—ಈ ಸಂಸ್ಥಾನದಲ್ಲಿ ಪೆನ್ಷನ್ ಸಲ್ಲುತ್ತಲಿರುವ ಪಾಳ್ಯಗಾರರನ್ನು ಉತ್ತಮಸ್ಥಿತಿಗೆ ತರಬೇಕೆಂಬ ಉದ್ದೇಶದಿಂದ ಅವರುಗಳ ಪೆನ್ಷನ್ ಇಜಾಫೆ ಮಾಡತಕ್ಕದ್ದನ್ನು ಶ್ರೀಮನ್ಮಹಾರಾಜಾ ಸರಕಾರದವರು ಮಂಜೂರ್ಮಾಡಿರುತ್ತಾರೆ. ಈ ಪಾಳ್ಯಗಾರರಿಗೆ ಸಲ್ಲುತ್ತಿದ್ದ ಪೆನ್ಷನ್‌ಮೊಬಲಗು ದಿವಾನ್ ಪೂರ್ಣಯ್ಯನವರ ಆಡಳಿತದಲ್ಲಿ ಸಾಲ್ 1 ಕ್ಕೆ 17,132 ರೂಪಾಯಿ ಇದ್ದದ್ದು 1831-35 ನೇ ಇಸವಿಯಲ್ಲಿ 22,207 ರೂಪಾಯಿ ಆಗಿತ್ತು. 1860 ನೇ ಇಸವಿಯಲ್ಲಿ ಸರ್ ಮಾರ್ಕ್ ಕಬ್ಬನ್ ಸಾಹೇಬರು ಈ ಪೆನ್ಷನ್‌ಗಳಿಗೆ ಶೇಕಡ 50 ರ ಮೇರೆ ಇಜಾಫೆ ಮಾಡಿದರು. ಪುನಃ 1861-65 ನೇ ಇಸವಿಯಲ್ಲಿ ಮಿಸ್ಟರ ಬೌರಿಂಗ್ ಸಾಹೇಬರು ಶೇಕಡ 25 ರಂತೆ ಇಜಾಫೆ ಮಾಡಿದರು. ಈ ಕಾಲದಲ್ಲಿ ಜೀವನದ ಲಾಗತು ಬಹಳ ಜಾಸ್ತಿಯಾಗಿರುವದ್ದರಿಂದ 1898ನೇ ಇಸವಿ ಜುಲೈ ಮೊದಲುಗೊಂಡು ಶೇಕಡ 50 ರಂತೆ ಪಾಳ್ಯಗಾರರಿಗೆಲ್ಲಾ ಸರ್ವತ್ರ ಇಜಾಫೆ ಕೊಟ್ಟಿರುತ್ತೆ. ಈಗ ಈ ಪೆನ್ಷನ್‌ಗಳು ಒಟ್ಟು 70,000 ರೂಪಾಯಿ ಆಗಿರುತ್ತೆ.

ಕಾನೂನುಗಳು.—ಹಾಲಿ ಸರಕಾರದವರ ಆಲೋಚನೆಯಲ್ಲಿರುವ ಕಾನೂನುಗಳ ಪೈಕಿ ಬಾಲ್ಯವಿವಾಹನಿರೋಧಕ್ಕೆ ಸಂಬಂಧಪಟ್ಟದ್ದು ಬಹಳ ಮುಖ್ಯವಾದದ್ದು. ಕಳೆದ ಸಂವತ್ಸರದ ಉಪನ್ಯಾಸದಲ್ಲಿ ನಮೂದಿಸಿದ ಪ್ರಕಾರ ಈ ಸಂಗತಿಯಲ್ಲಿ ಒಂದು ಕಾನೂನನ್ನು ರಚಿಸಿ ಸರ್ವರೂ ಚರ್ಚಿಸಿ ಖಂಡನ ಮಾಡುವದಕ್ಕೆ ಸಂಪೂರ್ಣವಾದ ಅವಕಾಶವನ್ನು ಕೊಡುವದಕ್ಕೋಸ್ಕರ ಗೆಜೆಟ್ಟಿನಲ್ಲಿ ಪ್ರಚುರಪಡಿಸಲಾಯಿತು. ಈ ಕಾನೂನಿಂದ ಪ್ರಜೆಗಳ ಸ್ವತಂತ್ರಕ್ಕೆ ಅವಶ್ಯವಾದ ಪ್ರತಿಬಂಧಕ ಉಂಟಾಗುತ್ತೆಂದು ಕೆಲವರು ಅಭಿಪ್ರಾಯಪಡುತ್ತಾರೆ. ಪ್ರಜಾಕ್ಷೇಮಕ್ಕೂ ಹಿಂದೂಶಾಸ್ತ್ರಾಭಿಪ್ರಾಯಕ್ಕೂ ವಿರೋಧವಾಗಿರುವ ಕೆಲವು ಪದ್ಧತಿಗಳನ್ನು ಕಾನೂನುಮೂಲಕ ನಿಷೇಧಿಸಬೇಕೆಂಬ ಸಾರ್ವತ್ರಿಕವಾದ ಅಭಿಪ್ರಾಯವನ್ನನುಸರಿಸಿ ಸರಕಾರದವರು ಪ್ರವೇಶಿಸಿರುತ್ತಾರೆಯೇ ಹೊರತು ಅನ್ಯಥಾ ಇಲ್ಲ. ಸರಕಾರದವರು ಪ್ರವೇಶಮಾಡತಕ್ಕ ಮಟ್ಟಿಗೂ, ಈ ಪದ್ಧತಿಗಳು ಈಗ ಆಚರಣೆಯಲ್ಲಿವೆಯೋ ಎಂಬ ಅಂಶದಲ್ಲಿ ಕಳೆದ ಖಾನೇಷುಮಾರಿ ಲೆಖ್ಖಗಳಲ್ಲಿ ಬಹಳ ಸ್ವಾರಸ್ಯವಾದ ಸಂಗತಿಗಳು ಕಂಡುಬಂದಿರುತ್ತವೆ. ಈ ಲೆಖ್ಖಗಳ ಪ್ರಕಾರ ವಿವಾಹವಾಗಿರತಕ್ಕ 9 ವರುಷದೊಳಗಿನ ಬಾಲಿಕೆಯರ ಸಂಖ್ಯೆಯು 1881ನೇ ಇಸವಿಯಲ್ಲಿ 12,000 ವಾಗಿ ಇದ್ದದ್ದು 1891ನೇ ಇಸವಿಯಲ್ಲಿ 18,000ವಾಗಿ ಹೆಚ್ಚಿರುವದು ತಿಳಿಯಬರುತ್ತೆ. ಈ 10ವರುಷಗಳಲ್ಲಿ ಪ್ರಜಾವೃದ್ಧಿಯು ಶೇಕಡಾ 18 ರ ಮಟ್ಟಿಗೆ ಆಯಿತು. ಆದರೆ ಬಾಲ್ಯವಿವಾಹಿತರ ಸಂಖ್ಯೆಯು ಶೇಕಡಾ 50ರಂತೆ ಹೆಚ್ಚಿರುತ್ತೆ. ತಿವಾಯ 1891ನೇ ಇಸವಿಯಲ್ಲಿ ಒಟ್ಟು 9,71,000 ಮಂದಿ ವಿವಾಹವಾಗಿರತಕ್ಕ ಹೆಂಗಸರ ಪೈಕಿ 4 ವರುಷ ಮತ್ತು ಅದಕ್ಕೂ ಕಮ್ಮಿಯಾದ ವಯಸ್ಸಿನಲ್ಲಿ ವಿವಾಹವಾದವರು (ಅಂದರೆ ಮೊದಲನೇ ವರುಷದಲ್ಲಿಯೇ ಮದುವೆಯಾದವರು 71, ಎರಡನೇ ವರುಷದಲ್ಲಿ ಆದವರು 319, ಮೂರನೇ ವರುಷದಲ್ಲಿ ಆದವರು 2,317, ನಾಲ್ಕನೇ ವರುಷದಲ್ಲಿ ಆದವರು 8,487) 11,157 ಮಂದಿಯೆಂತಲೂ, 5 ರಿಂದ 9 ವರುಷ ವಯಸ್ಸಿನೊಳಗೆ ವಿವಾಹವಾದವರು 1,81,000 ಎಂತಲೂ, ತಿಳಿಯಬರುತ್ತೆ. ಇದಲ್ಲದೆ 9 ವರುಷ ವಯಸ್ಸಿನೊಳಗೆ ಮದುವೆಯಾದ 1,92,000 ಬಾಲಿಕೆಯರ ಪೈಕಿ 3,060 ಮಂದಿಯು ಆ ಚಿಕ್ಕ ವಯಸ್ಸಿನಲ್ಲಿಯೇ ವಿಧವೆಯಾದರು. ಬಾಲಕರಲ್ಲಿ 4 ವರುಷ ವಯಸ್ಸಿಗೆ ಪೂರ್ವವೇ 512 ಮಂದಿಗೂ, 4 ರಿಂದ 9 ವರೆಗಿನ ವಯಸ್ಸಿನೊಳಗೆ 8,173 ಮಂದಿಗೂ 10ರಿಂದ 14ರವಳಗೆ 72,831 ಮಂದಿಗೂ, ಅಂತು 18,516 ಮಂದಿಗೆ 14 ವರುಷ ವಯಸ್ಸಿನೊಳಗಾಗಿ ವಿವಾಹವಾಗಿರುತ್ತೆ.

ಬಾಲಕರು ವಿವಾಹಕ್ಕೆ ಯೋಗ್ಯರಾಗಬೇಕಾದಲ್ಲಿ 14 ವರುಷ ವಯಸ್ಸಿನವರಾಗಬೇಕೆಂದು ನಿರ್ಧರಿಸುತ್ತಾ ಮಾಡುವದರಿಂದ ಬಾಲಿಕೆಯರ ವಿವಾಹಾರ್ಹವಾದ ವಯಸ್ಸಿನ ವಿಷಯವಾಗಿ ಅನುಕೂಲವಾದ ಬದಲಾವಣೆಯಾಗಬೇಕಾಗಿ ಬರುತ್ತೆ. ಈ ದೇಶದಲ್ಲಿ ಆಚರಣೆಯಲ್ಲಿರುವ ದಂಪತಿಗಳ ವಯೋಭೇದಗಳನ್ನು ಆಲೋಚಿಸಿದಲ್ಲಿ 14 ವರುಷಕ್ಕೆ ಕಮ್ಮಿಯಾದ ವಯಸ್ಸಿನ ಹುಡುಗರಿಗೆ ಪ್ರಾಯೇಣ 8 ವರುಷಕ್ಕೆ ಕಮ್ಮಿಯಾದ ಬಾಲಿಕೆಯರೇ ಮದುವೆಯಾಗಿರುತ್ತಾರೆಯೇ ಹೊರತು ಅದಕ್ಕಿಂತ ಹೆಚ್ಚಿಲ್ಲವೆಂದು ಹೇಳಬಹುದು. ಆದಕಾರಣ ಬಾಲಕರಿಗೆ ವಿವಾಹಾರ್ಹವಾದ ವಯಸ್ಸು 14 ಎಂಬದಾಗಿ ನಿರ್ಧರಿಸುತ್ತಾ ಮಾಡುವದರಲ್ಲಿ ಸುಮಾರು 82,000 ಬಾಲಿಕೆಯರ ಮದುವೆಗಳು ಅವರಿಗೆ 9 ವರುಷ ವಯಸ್ಸಾದನಂತರವೇ ವಿವಾಹವಾಗುವದಕ್ಕೆ ಅನುಕೂಲವಾಗುತ್ತೆ.

ಈಗ ನಾವು ತಿದ್ದಬೇಕೆಂದು ಉದ್ದೇಶಿಸಿರುವ ಅಕ್ರಮವು ಅಲ್ಪವಾದ್ದಲ್ಲವೆಂಬ ಅಂಶವನ್ನೂ, ಮತ್ತು ಅದು ಪ್ರಬಲಿಸುವ ಚಿನ್ಹೆಗಳು ಅದಕ್ಕೆ ತ್ವರೆಯೇ ಹೊರತು ಕ್ಷೀಣವನ್ನು ಹೊಂದುವ ರೀತಿಯಲ್ಲವೆಂಬ ಅಂಶವನ್ನೂ ಸಹ ಸ್ಥಾಪಿಸುವದಕ್ಕೆ ಮೇಲೆ ನಮೂದಿಸಿರುವ ಸಂಗತಿಗಳು ಸಾಕಾಗಿವೆ.

ಕಾಡುಮೃಗ ಪಕ್ಷಿ ವಗೈರೆ ಇವುಗಳ ಸಂರಕ್ಷಣೆಬಗ್ಗೆ ನಿಬಂಧನೆ.—ಕಾಡುಮೃಗಗಳು ಪಕ್ಷಿಗಳು ವಗೈರೆಯವುಗಳನ್ನು ಜನರು ಮನಸ್ಸುಬಂದಂತೆ ಕೊಲ್ಲುವದನ್ನು ತಪ್ಪಿಸಿ ಅವುಗಳ ಸಂರಕ್ಷಣೆಬಗ್ಗೆ ಒಂದು ಕಾನೂನು ಅವಶ್ಯಕವಾಗಿ ಆಗಬೇಕೆಂದು ಕಾಫಿ ಪ್ಲಾಂಟರುಗಳು ಮತ್ತು ಶಿಕಾರಿ ಅಭಿಲಾಷೆಯುಳ್ಳ ವರ್ತಕರೂ ಸರ್ಕಾರದವರನ್ನು ಬಹಳವಾಗಿ ಕೇಳಿಕೊಳ್ಳುತ್ತಲಿರುವರು ನಿಮಗೆ ಗೊತ್ತೇ ಇದೆ. ಈ ವಿಷಯ ವಿಶೇಷಕಷ್ಟವಾಗಿದೆ. ಉಪಯುಕ್ತವಾದ ಜಂತುಮೃಗಗಳು ಮತ್ತು ಪಕ್ಷಿಗಳು ವ್ಯರ್ಥವಾಗಿ ನಾಶ ಹೊಂದದಂತೆ ಸಂರಕ್ಷಣೆಮಾಡತಕ್ಕ ಬಗ್ಗೆ ಭೂತದಯಾ ಪಕ್ಷಪಾತಯುಕ್ತವಾದ ಏರ್ಪಾಟನ್ನು ಕಾನೂನಿನಿಂದ ಮಾಡತಕ್ಕದ್ದು ಅವಶ್ಯವಾಗಿರುತ್ತೆ. ಆದರೆ ಆಹಾರಕ್ಕೋಸ್ಕರವೇ ಆಗಲಿ ಅಥವಾ ಶಿಕಾರಿಗಾಗಿಯೇ ಆಗಲಿ ಕಾಡುಮೃಗ ಪಕ್ಷಿ ವಗೈರೆ ಇವುಗಳನ್ನು ಕೊಲ್ಲುವಬಗ್ಗೆ ಜನಗಳಿಗೆ ಬಹುಕಾಲದಿಂದ ಇರುವ ಹಕ್ಕನ್ನು ತಪ್ಪಿಸುವದಕ್ಕೆ ಆಗಲಿ, ಅಥವಾ ಸರ್ಕಾರದವರು ಶಿಕಾರಿದಾರರ ಪ್ರಯೋಜನಕ್ಕಾಗಿ ಸ್ವೇಚ್ಛೆಯಲ್ಲಿರತಕ್ಕ ಜೀವಜಂತುಗಳು ಮತ್ತು ಪಕ್ಷಿಗಳು ಇತರರ ಸ್ವತ್ತಾಗಿ ಇಲ್ಲವೆಂದು ನಿಯಮವನ್ನು ಕಲ್ಪಿಸುವದಕ್ಕೆ ಆಗಲಿ ಸದರಿ ಕಾನೂನಿನಿಂದ ಅವಕಾಶವಾಗಬಾರದು. ಪ್ರಸಕ್ತ ವಿಷಯದಲ್ಲಿ ತಯಾರಾಗಿರುವ ಮುಸೂದಾ ನಿಬಂಧನೆಯನ್ನು ನೀವು ನೋಡಿ ಅದರಲ್ಲಿ ಏನಾದರೂ ಬದಲಾವಣೆಗಳಾಗಬೇಕಾದಲ್ಲಿ ತಿಳಿಸಬೇಕು. ಉಪಯುಕ್ತವಾದ ಜಾತಿ ಮೃಗಗಳು, ಪಕ್ಷಿಗಳು, ಮತ್ತು ಮೀನುಗಳು ಅಭಿವೃದ್ಧಿಯಾಗುವದಕ್ಕೆ ಕಾಲ, ದೇಶ, ಪುಂಸ್ತ್ರೀಭೇದ, ಬೆಳವಣಿಗೆ, ಕೊಲ್ಲುವವಿಧಾನ ಮತ್ತು ಸಾಧನ, ಮುಂತಾದ ಸಂಗತಿಗಳಿಗೆ ದೃಷ್ಟಿಕೊಟ್ಟು ಆಯಾಜಾತಿ ಮೃಗಗಳು ವಗೈರೆ ಇವುಗಳನ್ನು ಕಾಪಾಡುವಬಗ್ಗೆ ಸದರಿ ನಿಬಂಧನೆಯಲ್ಲಿ ನಿಯಮವನ್ನು ಕಲ್ಪಿಸಿ ಇದೆ. ಮಾಯಿ, ಯಾವ ಮೃಗ ಯಾ ಪಕ್ಷಿಯನ್ನು ಕೊಲ್ಲುವದು ಶಿಕಾರಿದಾರರಿಗೆ ಉತ್ಸಾಹವಲ್ಲವೋ, ಅಥವಾ ಅನ್ಯಾಯವೆಂದು ಜನಗಳು ಭಾವಿಸುವರೋ ಅಂಥವುಗಳನ್ನೂ ಮತ್ತು ಕೆಲವು ಕ್ರಿಮಿಭಕ್ಷಕ ಪಕ್ಷಿಜಾತಿಗಳನ್ನೂ ಮುಖ್ಯವಾಗಿ ಸಂರಕ್ಷಣೆ ಮಾಡುವ ಅಧಿಕಾರವು ಈ ನಿಬಂಧನೆ ಮೇರೆ ಸರ್ಕಾರದವರಿಗೆ ಇರುತ್ತೆ. ಗಂಧ ಮತ್ತು ಚರ್ಮವನ್ನು ಮಾರಿ ಲಾಭಪಡೆಯಬೇಕೆಂಬ ಉದ್ದೇಶದಿಂದ ಮೃಗಗಳನ್ನೂ ಮತ್ತು ಪಕ್ಷಿಗಳನ್ನೂ ಕೊಲ್ಲುವದನ್ನು ನಿರೋಧಮಾಡಿ ಲೈಸೆನ್ಸ್ ಪದ್ಧತಿಯನ್ನಿಡಬೇಕೆಂದು ಮಾಡಿದೆ.

ಭೂತದಯಾ ಪಕ್ಷಪಾತ ಮತ್ತು ಉಪಯೋಗ ಇವುಗಳಮೇಲೆ ದೃಷ್ಟಿಯಿಟ್ಟು ಕಾನೂನನ್ನು ನಿರ್ಧರಿಸಬೇಕೆಂದು ಮಾಡಿದೆ. ಇದರಲ್ಲಿ ಶಿಕಾರಿ ಮತ್ತು ಆಹಾರದ ಬಗ್ಗೆ ಪ್ರಜೆಗಳಿಗೆ ಇರುವ ನ್ಯಾಯವಾದ ಹಕ್ಕನ್ನೂ ಕಾಪಾಡಿದೆ. ಇತ್ಯಾದಿ ಕಾರಣಗಳಿಂದ ಈ ಮುಸೂದಾ ರೆಗ್ಯುಲೇಷನನ್ನು ನೀವೆಲ್ಲರೂ ವಿಶೇಷ ವಿಸಿ ಒಪ್ಪುವಿರಿಯೆಂದು ಸರ್ಕಾರದವರು ನಂಬಿರುತ್ತಾರೆ.

ಸಭೆಯ ಯೋಗ್ಯತೆ.—ಶಿವಮೊಗ್ಗ, ಕೋಲಾರ, ತುಮಕೂರು ಈ ಪಟ್ಟಣಗಳ ಪ್ರಜಾಸಂಖ್ಯೆಯನ್ನೂ ಪ್ರಾಮುಖ್ಯತೆಯನ್ನೂ ಆಲೋಚಿಸಿ, ಇತರ ಡಿಸ್ಟ್ರಿಕ್ಟ್ ಹೆಡ್ಕ್ವಾರ್ಟರ್ ಮ್ಯುನಿಸಿಪಾಲಿಟಿಗಳಂತೆಯೇ ಇದುವರೆಗೆ ಈ ಸಭೆಗೆ ಚುನಾಯಿಸುತ್ತಿದ್ದ ಇಬ್ಬರು ಮೆಂಬರುಗಳಿಗೆ ಬದಲಾಗಿ ಮೂರುಜನ ಮೆಂಬರುಗಳನ್ನು ಚುನಾಯಿಸುವ ಅಧಿಕಾರವನ್ನು ಶ್ರೀಮನ್ಮಹಾರಾಜರವರು ಮೇಲ್ಕಂಡ ಪಟ್ಟಣಗಳಿಗೆ ದಯಪಾಲಿಸಿರುತ್ತಾರೆಂಬುವ ಅಂಶವು ಆ ಸ್ಥಳಗಳ ಮೆಂಬರುಗಳಿಗೆ ಹರ್ಷಕರವಾಗಿರುವದು ಇದರಲ್ಲಿ ಸಂದೇಹ ತೋರಲಿಲ್ಲ.

ಈ ಉಪನ್ಯಾಸವನ್ನು ಮುಗಿಸುವದಕ್ಕೆ ಮುಂಚಿತವಾಗಿ ಒಂದು ವಿಷಯವನ್ನು ಸಂತೋಷದೊಡನೆ ತಿಳಿಸುತ್ತೇನೆ. ಅದೇನಂದರೆ:—

ಹಿಂದೆ ಅನೇಕಾವರ್ತಿ ನೀವುಗಳು ಅಪೇಕ್ಷಮಾಡಿಕೊಂಡಿದ್ದ ಪ್ರಕಾರ ಈ ಸಭೆಯ ಮೆಂಬರುಗಳು ಮೂರು ಸಂವತ್ಸರಗಳವರೆಗೆ ಕಾಯಂ ಇರಬೇಕೆಂದು ಶ್ರೀಮನ್ಮಹಾರಾಜರವರು ಅಪ್ಪಣೆ ಕೊಟ್ಟಿರುತ್ತಾರೆ. ಈ ಕಾರಣದಿಂದ ನೀವು ಈ ಸಭೆಯಲ್ಲಿ ವಿಜ್ಞಾಪನೆಮಾಡತಕ್ಕ ನಾನಾಸಂಗತಿಗಳಲ್ಲಿ ಆಸಕ್ತಿಯು ಹೆಚ್ಚಿ, ಆಯಾ ವಿಷಯದಲ್ಲಿ ನೀವುಮಾಡತಕ್ಕ ಪ್ರಯತ್ನವು ಅವಿಚ್ಛಿನ್ನವಾಗಿ ನಡೆಯಲು ಅವಕಾಶ ಉಂಟಾಗಿ ತನ್ಮೂಲಕ ಈ ಸಭೆಯು ಇತೋಪ್ಯತಿಶಯವಾಗಿ ಪ್ರಯೋಜನಕರವಾಗಿರುವದೆಂದು ಶ್ರೀಮನ್ಮಹಾರಾಜರವರು ನಂಬಿರುತ್ತಾರೆ.

೧೮,೧೦,೯೮. } ಕೆ. ಶೇಷಾದ್ರಿಅಯ್ಯರ್,
ಮೈಸೂರು. } ಮೈ. ಸಂ. ದಿವಾನ್.

ಅಕ್ರಮ.

ನಮ್ಮ ವೃತ್ತಾಂತ ಪತ್ರಿಕೆಯನ್ನು ಚಂದಾದಾರರುಗಳಲ್ಲಿ ಎಲ್ಲರಿಗೂ ತಪ್ಪದೆ ಪ್ರತಿವಾರವೂ ಕ್ರಮವಾಗಿ ರವಾನಿಸುತ್ತೇವೆ. ಕೆಲವು ಮಂದಿ ಚಂದಾದಾರರು ತಮಗೆ ಪತ್ರಿಕೆಗಳು ಸಕಾಲಕ್ಕೆ ತಲುಪುತಿಲ್ಲವೆಂದು ಆಗಾಗ್ಯೆ ಬರೆಯುತ್ತಾರೆ. ಕೆಲವರಿಗೆ ತಲುಪುವದೇ ಇಲ್ಲವೆಂದು ಬರೆಯುತ್ತಾರೆ. ಇದರಿಂದ ಅಂಥವರ ಮೇಲ್ವಿಳಾಸಗಳು ತಪ್ಪಾಗಿರಬಹುದು, ಇಲ್ಲವೆ ಸಬ್ ಆಫೀಸಿನವ ಜವಾನರು ಆಯಾ ಕಡೆಗಳಲ್ಲಿ ಸರಿಯಾಗಿ ಬಟವಾಡೆ ಮಾಡದೆ ಇರಬಹುದು ಎಂಬೀ ಎರಡು ಊಹೆಗಳು ಹುಟ್ಟುತ್ತವೆ. ಪತ್ರಿಕೆಗಳು ಯಾರ್ಯಾರಿಗೆ ಸಕಾಲಕ್ಕೆ ತಲುಪುವದಿಲ್ಲವೋ ಅಂಥವರು ತಮ್ಮ ಸರಿಯಾದ ವಿಳಾಸವನ್ನು ಚೆನ್ನಾಗಿ ಬರೆದು ತಿಳಿಸಬೇಕು ಮತ್ತು ಸಬ್ ಆಫೀಸ ಪೋಸ್ಟ್‌ಮಾಸ್ಟರರಿಗೂ ತಮ್ಮ ತಮ್ಮ ಡಿಲಿವರಿ ಪ್ಯೂನುಗಳಿಗೆ ಸರಿಯಾಗಿ ತಾಕೀತು ಮಾಡುವಂತೆ ಹುಕುಂ ಮಾಡಬೇಕು ಎಂಬದಾಗಿ ಈ ಮೂಲಕ ಅವರವರಿಗೆ ತಿಳಿಯಪಡಿಸುತ್ತೇವೆ.

ಎಡಿಟರ,
ವೃತ್ತಾಂತ ಪತ್ರಿಕೆ.

ಶಾಲಿವಾಹನಶಕ ೧೮೨೦ ನೇ ವಿಲಂಬಿನಾಮ ಸಂವತ್ಸರದ ಕಾರ್ತಿಕ ಶುದ್ಧ ಪೌರ್ಣಿಮೆ ಗುರುವಾರದಿಂದ ಕಾರ್ತಿಕ ಬಹುಳ ಷಷ್ಠಿ ಬುಧವಾರದ ವರೆಗಿನ ವಾರದ ಪಂಚಾಂಗ.

೧೮೯೮ ನೇ ಇಸವಿ, ನವೆಂಬರ

ತಾ.	ವಾರ.	ತಿಥಿ	ಘಳಿಗೆ.	ನಕ್ಷತ್ರ.	ಘಳಿಗೆ.	ವೃಶ್ಚಿಕ ಮಾಸ ತೇದಿ.
21	ಗು *	ಪೌ	43-3	ಕೃ	46-23	10
24	ಶು.	ಪಾ	37-25	ರೋ	42-27	11
25	ಶ	ಬಿ	31-29	ಮೃ	38-16	12
26	ರ	ತ	25-30	ಆ	34-0	13
27	ಸೋ. †	ಚ	19-42	ಪು	30-0	14
28	ಮಂ.	ಪಂ	14-17	ಪು	26-22	15
29	ಬು.	ಷ	9-21	ಆ	23-19	16

* ವ್ಯಾಸಪೂರ್ಣಿಮಾ † ಕಾರ್ತೀಕ ಸೋಮವಾರ

ಪೇಟೆ ಧಾರಣೆ.

ದಿನಸಿ.	ಮೈಸೂರು.	ಬೆಂಗಳೂರು.
	ರೂ. ಆ. ಪೈ.	ರೂ. ಆ. ಪೈ.
ಕಡ್ಡೀ ಅಕ್ಕಿ ಪಲ್ಲ ೧ಕ್ಕೆ	೧೨-೧೨-೬	೧೨-೮-೦
ಕೆಂಬೂತಿ ಅಕ್ಕಿ ಅವ್ವಲ್	೧೨-೮-೦	೧೦-೧೨-೦
ದಿಟೋ ಅಕ್ಕಿ ಮೀಡಿಯಂ	೧೧-೮-೦	೧೦-೮-೦
ಜಾಪರಾಣಿ ಅಕ್ಕಿ	೧೧-೮-೦	೧೧-೦-೦
ಸಣ್ಣಕ್ಕಿ ಅವ್ವಲ್	೧೪-೮-೦	೧೪-೦-೦
ದಿಟೋ ಅಕ್ಕಿ ಮೀಡಿಯಂ	೧೪-೦-೦	೧೨-೮-೦
ತೊಗರಿಬೇಳೆ ಪಲ್ಲ ೧ಕ್ಕೆ	೧೪-೮-೦	೧೪-೮-೦
ದಿಟೋ ಮೀಡಿಯಂ ತರಹ	೧೪-೦-೦	೧೨-೮-೦
ಹ್ಯಾರಡಾಗಿ ಪಲ್ಲ ೧ಕ್ಕೆ	೪-೮-೦	[illegible]
ಕಾರ್ರಾಗಿ	೪-೪-೦	[illegible]
ಹಲಸಂದೆ ಪಲ್ಲ ೧ಕ್ಕೆ	೧೦-೮-೦	೭-೮-೦
ಬಿಳೇ ಅವರೆ	೧೪-೮-೦	೧೨-೦-೦
ಹೆಸರು	೭-೮-೦	೧೦-೧೦-೦
ಉದ್ದು	೭-೧೨-೦	೧೧-೦-೦
ಕಡಲೆ	೧೦-೦-೦	೭-೧೨-೦
ಎಳ್ಳು	೧೪-೦-೦	೧೦-೮-೦
ಹುರಳಿ	೪-೨-೦	೩-೪-೦
ಸೀಗೇಕಾಯಿ ಮಣ ೧ಕ್ಕೆ	೨-೦-೦	೨-೦-೦
ಮೆಣಸಿನಕಾಯಿ	೬-೮-೦	೬-೧೨-೦
ನಾಯಂ ತರಹ	೬-೪-೦	೬-೮-೦
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ	೫-೮-೦	[illegible]
ಸಣ್ಣ ಅಚ್ಚು "	೫-೦-೦	[illegible]
ಬೆಳ್ಳುಳ್ಳಿ ಮಣ ೧ಕ್ಕೆ	೯-೦-೦	೬-೫-೦
ಹರಳಕ್ಕೆ	೬-೧೪-೦	೬-೮-೦
ಕೊತ್ತುಂಬರಿ ಪಲ್ಲ ೧ಕ್ಕೆ	೪-೦-೦	೮-೦-೦
ಉಪ್ಪು	೧೦-೮-೦	೭-೧೨-೦
ಹುಣಿಸೇಹಣ್ಣು ಮಣ ೧ಕ್ಕೆ	೨-೪-೦	೧-೧೪-೦
ಹಳೇ ಹುಣಿಸೇಹಣ್ಣು "	೨-೦-೦	೧-೧೨-೦
ತುಪ್ಪ	೧೨-೮-೦	೧೨-೦-೦
[illegible] ೧ಕ್ಕೆ	೪-೦-೬	೬-೧೫-೦
ತೆಂಗಿನಕಾಯಿ ೧೦೦ಕ್ಕೆ	೫-೦-೦	೪-೪-೦
ಚಿನ್ನ ([illegible])		
ಕೆಂಪು	೧೫-೦-೦	೧೫-೪-೦
ಹಸಿರು	೧೫-೧೨-೦	೧೫-೧೧-೦
ಗಟ್ಟಿ	೧೫-೮-೦	೧೫-೨-೦

Mysore.—Printed and published for the Proprietor at the Wesleyan Mission Press.

23/11/98.

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು — ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಸಂಪುಟ ೬ | ಮೈಸೂರು—ಸನ ೧೮೯೩ ನೇ ಇಸವಿ ನವಂಬರ ತಾರೀಖು ೩೦ ನೇ ಗುರುವಾರ. | ಸಂಚಿಕೆ ೨೫

ನೋಟಿಸ್.

		ಕ್ರಯ			ಅಂಚೆ ಹಾಸಲು ಸಹಿತವಾಗಿ		
Campbell's	ಕನ್ನಡ ವ್ಯಾಕರಣ ಸಾರ	೦	೨	೦	೦	೨	೬
Object Lessons,	ವಸ್ತು ಪಾಠಗಳು	೦	೧	೦	೦	೧	೬
Picture do	ಚಿತ್ರಗಳು ಸಹಿತವಾಗಿ	೦	೨	೦	೦	೨	೬
School Geography	ಭೂಗೋಳ ಶಾಸ್ತ್ರಸಾರ	೦	೬	೦	೦	೩	೦

ಈ ನಾಲ್ಕು ಪುಸ್ತಕಗಳು ಮೈಸೂರು ಸರ್ಕಾರದವರ ಆಜ್ಞೆ ಪ್ರಕಾರ ಸಕಲ ಪಾಠ ಶಾಲೆಗಳಲ್ಲಿಯೂ ಉಪಯೋಗಿಸತಕ್ಕವುಗಳು.

	ಕ್ರಯ			ಅಂಚೆ ಹಾಸಲು ಸಹಿತವಾಗಿ		
ಮಾರ್ಟಿನ್‌ಲೂತರ್ ಎಂಬವರ ಚರಿತ್ರೆ	೦	೧	೬	೦	೨	೦
ಸ್ತ್ರೀಯರು ಓದತಕ್ಕ ಪುಸ್ತಕ	೦	೯	೦	೦	೯	೬
ಗಣಿತ ಮಗ್ಗಿಗಳು ..	೦	೧	೦	೦	೧	೬
ಸಂಸ್ಕೃತ ಕರ್ಣಾಟಕ ಭಾಷಾಮಂಜರಿ	೦	೨	೦	೦	೨	೬
ಇಂಗ್ಲೀಷೂ ಕನ್ನಡವೂ ಶಬ್ದಾವಳಿ ೧ನೇ ೨ನೇ ಭಾಗಗಳು	೦	೧	೦	೦	೧	೬
ಕಾವ್ಯಮಾಲೆ (Minor Poetical Anthology)	೦	೭	೦	೦	೭	೬
ಬಾಲವ್ಯಾಕರಣ ..	೦	೯	೦	೦	೯	೬
ಹಳಗನ್ನಡ ವ್ಯಾಕರಣ ಸೂತ್ರಗಳು	೦	೬	೦	೦	೬	೬
ಇಂಗ್ಲೀಷೂ ಕನ್ನಡವೂ ಸಂಭಾಷಣ ವಾಕ್ಯಗಳು	೦	೧೦	೦	೦	೧೦	೬
ಶಬ್ದಮಣಿ ದರ್ಪಣ ..	೧	೦	೦	೧	೮	೬
Kan Eng Pocket Dictionary	೧	೮	೦	೧	೯	೨
Eng Kan School Dictionary	೨	೧೦	೦	೨	೧೨	೬
ಒಳ್ಳೇ ತಾಯಿ ..	೦	೮	೮	೦	೮	೬
ಆತ್ಮಿಕ ದಿವ್ಯ ಯುದ್ಧ (Bunyan)	೦	೧೨	೬	೦	೧೩	೬
ಕೈವಲ್ಯ ಪದ್ಧತಿ ೧ ನೇ ಭಾಗ ೨ ಅಣ ೩ನೇ ಭಾಗ	೦	೧	೬	೦	೨	೦
ಭಕ್ತಿಸಾರ ..	೦	೧	೦	೦	೧	೬
ಸತ್ಯ ವಾಗ್ದಾನಿ	೦	೧	೦	೦	೧	೬

ಈ ಪುಸ್ತಕಗಳೂ ಇನ್ನೂ ಅನೇಕ ಪ್ರಯೋಜನಕರವಾದ ಪುಸ್ತಕಗಳೂ ಕೆಳಗೆ ನಮೂದಿಸಿರುವ ಸ್ಥಳಗಳಲ್ಲಿ ದೊರುಕುತ್ತವೆ.

ಬೆಂಗಳೂರು—ಪೋಸ್ಟಾಫೀಸಿನ ಪಕ್ಕದಲ್ಲಿರುವ ಪುಸ್ತಕಶಾಲೆ.

ಚಿಕ್ಕಬಳ್ಳಾಪುರ—ಲಾರ್ಡ್ ಮಿಷನ್ ರೀಡಿಂಗ್ ರೂಮ್.

ತುಮಕೂರು—ವೆಸ್ಲಿಯನ್ ಮಿಷನ ಬಂಗಳೆ. ಮೈಸೂರು—ವೆಸ್ಲಿಯನ್ ಮಿಷನ ಪ್ರೆಸ.

ನೋಟಿಸ್

ಪುಸ್ತಕಗಳು	ಕ್ರಯ
ಪ್ರಾಚ್ಯ ವ್ಯವಹಾರಿಕೆ	1—8—0
ಕನ್ನಡ ಇಂಗ್ಲೀಷು ನಿಘಂಟು 1 ನೇ ದೊಡ್ಡ ತರಹ	3—0—0
„ „ 2 ನೇ ತರಹ	2—8—0
ಬಾಲಕರು ಓದುವ ಎರಡನೆ ಜ್ಞಾನೋಪದೇಶದ ಪ್ರಶ್ನೋತ್ತರಗಳು	0—1—0
ಸಭೆಯ ನಿಯಮಗಳನ್ನು ಕುರಿತದ್ದು	0—0—6
ಕಥಾ ಸಂಗ್ರಹ 1 ನೇ ಭಾಗದಿಂದ 3 ವರೆಗೆ	1—0—0
ಕಥಾ ಸಂಗ್ರಹ 4 ರಿಂದ 6 ನೇ ಭಾಗ ಹೊಸ ಭಾವೆ	1—0—0
„ „ ದೊಡ್ಡ ತರಹ	1—8—0
ಬೋಧಕಾಸಕ್ತಿ ಬೋಧಿನಿ	0—4—0
ಸತ್ಯವೇದವನ್ನು ಕುರಿತು 2 ನೇ ಭಾಗ	0—4—0
ಪ್ರಸಂಗಿಯ ದರ್ಪಣ	0—0—6
ಇಂಗ್ಲೀಷುಭಾಷೆಯಲ್ಲಿಯೂ, ಕನ್ನಡ ಭಾಷೆಯಲ್ಲಿಯೂ, ಶಬ್ದಗಳ ವಿಭಾಗಗಳನ್ನು ವಿವರಿಸುವ ನಿಘಂಟು	0—2—0
ಕನ್ನಡ ವ್ಯಾಕರಣ (ಇಂಗ್ಲೀಷಿನಲ್ಲಿ)	2—0—0
ಹಿಂದುಸ್ತಾನಿ ವ್ಯಾಕರಣ	1—0—0
ಬಾಲಬೋಧ ಸೋಪಾನವು	0-12—0
ಚಿನ ಕರುಗಳ ಆರೋಗ್ಯವಿಚಾರ	0—0—6
ಕ್ರಿಸ್ತರ ಬೋಧನೆಗಳ ಸಾರಾಂಶವು	0-12—0

ಮೇಲೆ ನಮೂದಿಸಿರುವ ಪುಸ್ತಕಗಳನ್ನು ಅಪೇಕ್ಷಿಸುವವರು ಮೈಸೂರು ವೆಸ್ಲಿಯನ್ ಮಿಷನ ಪ್ರೆಸ್ಸಿಗೆ ಬರೆದು ತರಿಸಿಕೊಳ್ಳಬಹುದು ಅಂಚೇ ಹಾಸಲು ಸಹ ಕೊಡಬೇಕು

ವೆಸ್ಲಿಯನ್ ಮಿಷನ ಪ್ರೆಸ್,

ಮೈಸೂರು.

ಪ್ರಸಿದ್ಧಪತ್ರಿಕೆ

ಕಂ|| ಸಕಲಸುಮನಸರಿಗರಿದಮದೆ |ಸುಕರದಿ ಶ್ರೀಚಾಮರಾಜ ಒಡೆಯರವರಾಜ್ಞಂ | ಪ್ರಕಟಿಸಮಹಭಾರತಕಥೆ | ವಿಕಸಿತ ಹೃದಯರಿದ ಕೇಳ್ವುದು ಸಜ್ಜನರಂ ||

ಕ ನ್ನ ಡ ಮ ಹಾ ಭಾ ರ ತ .

"ಶ್ರೀಕೃಷ್ಣರಾಜ ವಾಣೀವಿಲಾಸ" ಎಂಬ ಕನ್ನಡ ಮಹಾಭಾರತವು ನಮ್ಮ ಸ್ವಕೀಯ ಶ್ರೀಚಾಮುಂಡೇಶ್ವರಿ ಪ್ರೆಸಿನಲ್ಲಿ ಪ್ರಕಟಿಸಲಾಗುವದು ಯಲ್ಲರಿಗೂ ವಿಶದವಾಗಿಯಷ್ಟೆ ಈಗ ಹದಿನೆಂಟು ಪರ್ವಗಳೂ ಪೂರ್ತಿಯಾಗಿ ಪ್ರಕಟಿಸಿಧೆ ಅಪೇಕ್ಷಿಸುವವರು ಕೆಳಗೆ ವಿವರಿಸುವ ಕ್ರಯದಮೇಲೆ ಕ್ರಯ ಮಾನತಿಮಾಡಿ ಪಡೆಯಬಹುದು

ಆದಿಪರ್ವ ರೂ ೩, ಸಭಾಪರ್ವ ೧—೮—೦, ಅರಣ್ಯಪರ್ವ . ವಿರಾಟಪರ್ವ ಸ್ಪೆಷಲ್‌ ಕವರ್‌ನಿಂದ ೨ ಆಣೆ, ಡಿಟೊ ಕಿತ್ತಾನದ ಫುಲ್‌ಪ್ಯಾಂಡ್ ೧ ರೂ, ಉದ್ಯೋಗಪರ್ವ ಭೀಷ್ಮಪರ್ವ ೨ ದ್ರೋಣಪರ್ವ ೨—೭—೦, ಕರ್ಣಪರ್ವ, ಶಲ್ಯಪರ್ವ ೧—೨—೦ ಸೌಪ್ತಿಕಪರ್ವ ೬ ಆಣೆ, ಸ್ತ್ರೀಪರ್ವ ೬ ಆಣೆ, ಶಾಂತಿಪರ್ವ ರಾಜಧರ್ಮ ೨—೬—೦, ಆಪದ್ಧರ್ಮ ೭ ಆ, ಮೋಕ್ಷಧರ್ಮ ೨—೬—೦, ಅನುಶಾಸನಿಕಪರ್ವ ೩—೧—೨—೦ ಅಶ್ವಮೇಧಿಕಪರ್ವ ೧—೧೨—೦, ಆಶ್ರಮವಾಸಿಕಪರ್ವ—ಮೌಸಲಪರ್ವ—ಮಹಾಪ್ರಸ್ಥಾನಪರ್ವ—ಸ್ವರ್ಗಾರೋಹಣಪರ್ವ ೧೧ ಆಣೆ, ಭಗವದ್ಗೀತೆ ೭ ಆಣೆ, ಯಯಾತಿರಾಯನ ಚರಿತ್ರೆ ೪ ಆ, ಹರಿಭಕ್ತಿ ಸಾರ ೬ ಪೈ, ಲೋಯರ್‌ಸೆಕೆಂಡರೀ ಟೆಕ್ಸ್ಟಿನ ನೋಟ್ಸು ೭ ಆಣೆ

ಅರಣ್ಯಪರ್ವ, ಉದ್ಯೋಗಪರ್ವ, ಕರ್ಣಪರ್ವ ಈ ಮೂರು ಪರ್ವಗಳು ಗೌರ್ನಮೆಂಟ್ ಬುಕ್‌ಡಿಪೋವಿನಲ್ಲಿ ದೊರೆಯುವುದು ಮೇಲೆ ಹೇಳಲ್ಪಟ್ಟಿರುವ ಪುಸ್ತಕಗಳು ನಮ್ಮಲ್ಲಿ ಸ್ವಲ್ಪವೇ ಇರುವದರಿಂದ ಜಾಗ್ರತೆಯಾಗಿ ತರಿಸಿಕೊಳ್ಳಬಹುದು.

ಶ್ರೀಮನ್ಮಹಾರಾಜರವರಿಗೆ ಫಲಪುಷ್ಪ ಸರಬರಾಯಿ ಮಾಡುವದಕ್ಕೆ ಮುಖ್ಯವಾಗಿ ನೇಮಿಸಲ್ಪಟ್ಟ,

ಎಂ. ರಾಮಪ್ಪ, ಆಂಡ್‌ಸನ್,

ಪ್ರೊಪ್ರೈಟರ್ಸ್, ಶ್ರೀಚಾಮುಂಡೇಶ್ವರಿ ಪ್ರೆಸ್,

ಲಾಲ್—ಬಾಗ ರೋಡ್, ಬೆಂಗಳೂರು

ಸನ ೧೮೮೮ ರಲ್ಲಿ ಸ್ಥಾಪಿಸಲ್ಪಟ್ಟದ್ದು.

ಕೆನರಾ ಅಂಡ್ ಮೈಸೂರ ಟ್ರೇಡಿಂಗ್ ಏಜನ್ಸೀ ಆಫೀಸ್, ಮುಂಬಯಿ.

ಇವರು ತಯಾರಿಸಿರುವಂಥ—

ಹೈಮಧಾತ್ರೀತೈಲ.

ಕಳೆದ ಜನವರಿ ತಿಂಗಳೊಂದರಲ್ಲಿ ೪,೧೦೦ ಬಾಟ್ಲಿಗಳು ಖರ್ಚಾದವು. ಈ ತೈಲದ ಮಹತ್ವವನ್ನು ಕುರಿತು, ನಾವೀಗ ಹೆಚ್ಚಿಗೆ ವರ್ಣಿಸಲಾರೆವು—ಯಾಕಂದರೆ, ಯಾರು ಈ ತೈಲವನ್ನು ಉಪಯೋಗಿಸುತ್ತಾರೋ ಅವರಿಗೆ ಒಂದೆರಡು ದಿವಸಗಳಲ್ಲಿಯೇ ಇದರ ಅಪ್ರತಿಮವಾದ ಗುಣವು ಸಹಜವಾಗಿ ಅನುಭವಕ್ಕೆ ಬರುವದು. ಆದಾಗ್ಯೂ ಇದರ ಮುಖ್ಯವಾದ ಉಪಯೋಗವನ್ನು ತಿಳಿಸುವದು ನಮ್ಮ ಕರ್ತವ್ಯವಾಗಿರುತ್ತದೆ.

ಈ ನಮ್ಮ "ಹೈಮಧಾತ್ರೀ ತೈಲವನ್ನು" ಪ್ರತಿದಿನ ತಲೆಗೆ ಹಾಕಿಕೊಂಡರೆ ಮಿದುಳಿನಲ್ಲಿರುವ ಉಷ್ಣತೆಯನ್ನು ಪರಿಹರಿಸುವದಲ್ಲದೇ, ಕಣ್ಣಿಗೂ, ಮಿದುಳಿಗೂ ಹಿತಕರಿಸಿ, ಚಿತ್ತಕ್ಕೆ ಶಾಂತತೆಯನ್ನುಂಟುಮಾಡುವದು. ಮತ್ತು ಕಣ್ಣುಗಳಿಗುಂಟಾಗುವ ಸಾಮಾನ್ಯವಾದ ವಿಕಾರಗಳೆಲ್ಲ ಪರಿಹರಿಸುವದು. ದೃಷ್ಟಿಗೆ ತೀವ್ರತೆಯುಂಟಾಗುವದು.

ಹೆಚ್ಚಾಗಿ ಓದತಕ್ಕವರಿಗೂ, ಒಂದೇ ಸಮನಾಗಿ ಕಣ್ಣಿಟ್ಟು ಕೆಲಸ ಮಾಡತಕ್ಕ ಕಸಬಿಗಾರರಿಗೂ, ಕಣ್ಣುಗಳಲ್ಲಿ ನೀರು ಸುರಿಯುವವರಿಗೂ, ಉರಿಗಣ್ಣಿನವರಿಗೂ, ಚಿತ್ತವ್ಯಗ್ರನಾದವರಿಗೂ, ಅತ್ಯಂತ ಗುಣಕಾರಿಯಾಗಿರುವದು. ಈ ತೈಲದಲ್ಲಿರುವ ಇನ್ನೊಂದು ಅಪ್ರತಿಮವಾದ ಶಕ್ತಿಯೇನಂದರೆ—ಕೂದಲುಗಳನ್ನು ನಯವಾಗಿಯೂ, ಹೊಳೆಯುವಂತೆಯೂ, ಮಾಡುವದಲ್ಲದೇ ಬೆಳವಣಿಗೆಯನ್ನು ಹೆಚ್ಚಿಸುವದು. ಕೂದಲುಗಳ ಬೇರುಗಳನ್ನು ಘಟ್ಟಿಮಾಡಿ, ಅವು ಉದರಿಹೋಗದಂತೆ ಮಾಡುವದು

ಪ್ರತಿಯೊಂದು ಬಾಟ್ಲಿಯೊಳಗೆ ೧೬ ತೊಲೆ ತೈಲವಿರುವದರಿಂದ ಒಬ್ಬವನಿಗೆ ೨ ತಿಂಗಳು ಹಚ್ಚಿಕೊಳ್ಳಲಿಕ್ಕೆ ಸಾಕಾಗುವದು. ಬಡವರು ಸಹ ಕೊಂಡುಕೊಳ್ಳಲಿಕ್ಕನುಕೂಲವಾಗಿರಬೇಕೆಂಬದಕ್ಕಾಗಿ ಪ್ರತಿಯೊಂದು ಬಾಟ್ಲಿಗೆ ೧೦ ಆಣೆ ಕ್ರಯವಿಟ್ಟಿರುವೆವು ೧೨ ಬಾಟ್ಲಿಗಳುಳ್ಳ ೧ ಪೆಟ್ಟಿಗೆಗೆ ೬|| ರೂಪಾಯಿ. ಪ್ರತಿಯೊಬ್ಬ ಕುಟುಂಬಿಗನೂ, ಈ ತೈಲವನ್ನು ಉಪಯೋಗಿಸುವದು ಅವಶ್ಯವಾಗಿರುತ್ತದೆ. ಮುಕ್ಕಳುಮರಿಗಳಿಗೆ ಸಹ ಈ ತೈಲವು ಸುಖಾವಹವಾಗಿರುತ್ತದೆ.

ಈ ತೈಲ ಮತ್ತು ಈ ಕೆಳಗೆ ಬರೆಯುವಂಥ ಔಷಧಗಳು, ಡ್ರೆಸ್ಸು, ಮುತ್ತು, ರತ್ನ, ಬಂಗಾರ, ಬೆಳ್ಳಿ ಮುಂತಾದ ಸಾಮಾನುಗಳನ್ನು ಪಡೆಯಲಿಚ್ಛಿಸುವವರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬೇಕು.

ಮ್ಯಾನೇಜರ್, ಕೆನರಾ ಅಂಡ್ ಮೈಸೂರು ಟ್ರೇಡಿಂಗ್ ಏಜನ್ಸಿ ಆಫೀಸ, ಮಾರ್ಕೆಟ ಪೋಸ್ಟ. ಮುಂಬಾಯಿ.

ಈ ತೈಲವನ್ನು ನಮ್ಮ ಹೊರತು ಬೇರೆ ಯಾರೂ ಮಾಡಲಾರರು. ನಮ್ಮ ಹೆಸರಿನ ಗುರ್ತನ್ನು ನೋಡಿ ತೆಗೆದುಕೊಳ್ಳಬೇಕು ಬೇರೇತರದ ಎಣ್ಣೆಗಳನ್ನು ಈ ಹೆಸರನ್ನಿಟ್ಟು ಮಾರುತಿದ್ದರೆ ಜಾಗ್ರತೆ ಪಡಿರಿ!

ಔಷಧಗಳು	ರು. ಆ.	ಡ್ರೆಸ್ಸುಗಳು.	ರು. ಆ.
ನಯನಾಮೃತಭಸ್ಮ ಬಾಟ್ಲಿ ೧ ಕ್ಕೆ	೧—೬	ಮಾಲವ್ಯಾಧಿಗೆ ಮದ್ದು	೨—೮
ನಯನಾಮೃತ ಕಾಡಿಗೆ	೧—೬	ಕಾರೇಸರ್ಜಿನ ಲಾಂಗ್‌ಕೋಟು	೫—೦
ಕರ್ಣಸ್ರಾವನಾಶಕ ಅಪ್ರತಿಮತೈಲ	೧—೦	ಡಿಟೊ ಆರ್ಡಿನರಿ	೪—೮
ಮಹಾಮಾತಕುರಿರತೈಲ	೧—೦	ಡಿಟೊ. ಷಾರ್ಟಕೋಟು (ಇಂಗ್ಲಿಷದಮಾದರಿ)	೪—೬
ಪ್ರವಾಳಭಸ್ಮವು	೨—೧೨	ಪಶ್ಮಿನಾದ ಕಶ್ಮೀರಿಕೋಟು	೨—೮
ಪವಿದವ್ರಣಹರಪಟ್ಟಿಕೆಯು	೧—೦	ಡಿಟೊ. ಆರ್ಡಿನರಿ	೨—೪
ಬಾಲಸಂಜೀವಿನಿಗುಟಿಕೆ	೩—೮	ಫ್ಲಾನೆಲ್ ಕಮೀಸು	೧—೧೨
ಅಜೀರ್ಣಮಾತ್ರೆ	೦—೮	ಡಿಟೊ ಬನಿಯನ್	೧—೪
ಸುಗಂಧಕಾರಕದಂತಚೂರ್ಣವು	೦—೪	ಟೊಪಿ (ಇಂಗ್ಲಿಷಮಾದರಿ) ಹ್ಯಾಟ	೦—೧೨
ಕಜ್ಜಿಮಲಾಮು	೦—೨		

ತನಿಕರಮಾರ ಚಂದ್ರಕಾಂತ ಬೆಲೆಯ ಕನ್ನಡಕಗಳ ಕ್ರಯ ರೂ ೧೨—೬||—೫—೩|| ಉತ್ತಮತರದ ಎಣ್ಣೆ" ಎಂಬ ಹೆಸರಿನ ಔಷಧಿಯಾದದ್ದು (೧ ವರುಷದ ಜಾಮೀನುಳ್ಳದ್ದು) ಕ್ರಯ ರೂ. ೬.

ವೃತ್ತಾಂತ ಪತ್ರಿಕೆ.

ಚ ಂ ದಾ ನಿ ಕ ರ ಯ .

	ರೂ ಆ ಪೈ.
ಸ್ಥಳದವರಿಗೆ ವರ್ಷ ೧ಕ್ಕೆ ..	೧—೦—೦
ಪರಸ್ಥಳದವರಿಗೆ ವರ್ಷ ೧ಕ್ಕೆ	೧—೧೨—೦
ಬಿಡಿ ಪತ್ರಿಕೆ ೧ಕ್ಕೆ	೦—೦—೪

ಈ ಪತ್ರಿಕೆಯು ಮೈಸೂರು ರಾಜಧಾನಿಯಲ್ಲಿ ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ, ಪ್ರಕಟಿಸಲ್ಪಡುವದು ಚಂದಾದಾರರು ಮೊದಲೊಂದು ಸಂವತ್ಸರಕ್ಕೂ ಸುಲಭಸಾಧ್ಯವಾಗುವಂತೆ ಈ ಪತ್ರಿಕೆಗೆ ಇಷ್ಟು ಅಲ್ಪ ಮೌಲ್ಯವನ್ನು ನಿರ್ಣಯಿಸಿರುತ್ತೇವೆ ಈ ಪತ್ರಿಕೆಯನ್ನು ಅಪೇಕ್ಷಿಸುವವರು ಚಂದಾಹಣವನ್ನು ಮುಂಗಡವಾಗಿ ಕಳುಹಿಸಬೇಕು

ಎಡಿಟರ್,

ವೃತ್ತಾಂತ ಪತ್ರಿಕೆ

ಟೊಪಿಗಳು!

ಟೋಪಿಗಳು!! WOOL CAPS ಟೋಪಿಗಳು!!

ಹಾಸನದ ಆಫೀಸಿನಲ್ಲಿ ತಯಾರಾಗುವಂಥ ಅಚ್ಚ ಕಂಬಳಿ ಉಣ್ಣೆಯ ಟೋಪಿಗಳೇ (Wool Caps) ನಮ್ಮ ಆಫೀಸಿನಲ್ಲಿ ಮಾರಿಕೆಗೆ ಸಿದ್ಧವಾಗಿರುತ್ತವೆ. ದರಿವೊಂದಿ—೧ ರೂ. ೨ ಆಣೆ ಇಂದ ೧ ರೂ. ೬ ಆಣೆಗಳ ವರೆಗೂ ಬೇರೆ ಬೇರೆ ರಕಮಂಗಳುಂಟು. ಸ್ಥಳದವರು ಖುದ್ದು ನೋಡಿ ಪಡೆಯಬಹುದು. ಪರಸ್ಥಳದವರು ಮುಂಗಡವಾಗಿಯೇ ಹಣ ಕಳುಹಿಸಿದಲ್ಲಿ ಪಾರ್ಸೆಲ್ಲಿ ಭಾಂಗೀ ಮೂಲಕ ಕಳುಹಿಸುತ್ತೇವೆ. ಭಾಂಗೀ ಛಾರ್ಜು ಬೇರೇ ಕೊಡಬೇಕು. ಮೇಲುವಿಳಾಸದಲ್ಲಿ ಟೋಪಿಗೆ ಸಂಬಂಧವಾದದ್ದು ಎಂದು ಬರೆಯಬೇಕು.

ಮ್ಯಾನೇಜರ್,

ವೆಸ್ಲಿಯನ್ ಮಿಷನ್ ಪ್ರೆಸ್,

ಮೈಸೂರು.

ತುಮಕೂರು ಮುನ್ಸಿಫ್ ಕೋರ್ಟಿನಲ್ಲಿ.

೧೮೯೩—೯೪ನೇ ಇಸವಿ ಸಿವಿಲ್ ನಂಬರ್ ೨೨೯.

ವಾದಿ. ನಂಜುಂಡ	ಪ್ರತಿವಾದಿಗಳು. ಗುಬ್ಬಿತಾಲ್ಲೋಕು ಕಲ್ಲೂರು ಸಮ್ಮತು ಹಂಪಲಾಪುರದಲ್ಲಿರುವ ಕುರುಬರಜಾತಿ ಕೆಂಪಲಿಂಗ ವಗೈರೆ ೨೦ ಜನಗಳು.

ಇದರಿಂದ ಹಂಪಲಾಪುರದಲ್ಲಿರುವ ಕುರುಬಜಾತಿಯವರಿಗೆಲ್ಲಾ ತಿಳಿಸುವದೇನಂದರೆ—

ಮೇಲ್ಕಂಡ ವಾದಿಯು ತಾನು ಹಂಪಲಾಪುರದಲ್ಲಿರುವ ಪ್ಲೋಟೀ ಕೇರಮ್ಮ ಎಂಬದೇವತೆಗೆ ಪೂಜಾರಿಯೆಂತಲೂ, ದೇವರ ಒಡವೆಗಳನ್ನು ಇಟ್ಟುಕೊಡತಕ್ಕ ಹಕ್ಕುದಾರನೆಂತಲೂ, ಪ್ರತಿವಾದಿಗಳು ತಂನ ಹಕ್ಕನ್ನು ತಪ್ಪಿಸಿರುತ್ತಾರೆಂತಲೂ, ಆದ್ದರಿಂದ ತನಗಿರುವ ಪೂಜಾರಿಹಕ್ಕನ್ನು ಸ್ಥಿರಪಡಿಸಿ, ದೇವರ ಬಾಬತು ೩೦ ರೂಪಾಯಿಬಾಳುವ ಪದಾರ್ಥಗಳನ್ನೂ, ಲುಕ್ಸಾನ ಬಾಬತು ೧೫ ರೂಪಾಯಿಗಳನ್ನೂ ಕೊಡಿಸಿ ಕೊಡಬೇಕೆಂತ ನಾಲಿಶ್ಮಾಡಿರುವ ದಾವಾ.

೧೮೯೩ನೇ ಇಸವಿ ಡಿಸಂಬರ್ ತಿಂಗಳು ೬ನೆ ತಾರೀಖು ದಿವಿ ೧೧ ಘಂಟೆಗೆ ಇಷ್ಯೂ ಬಗ್ಗೆ ಇಟ್ಟಿರುತ್ತೆ. ಕ್ವಾವಾದಿ ದಾವಾ ನಡಿಸುವವಿಷಯದಲ್ಲಿ ಆಕ್ಷೇಪಣೆವುಳ್ಳವರು ಈ ದೇವಸ್ಥಾನದಲ್ಲಿ ಹಕ್ಕು ಇರುವರೆಲ್ಲರೂ ಆ ತಾರೀಖಿಗೆ ಕೋರ್ಟು ರೂಬರೂಬು ಹಾಜರಾಗಿ ತಮ್ಮ ಆಕ್ಷೇಪಣೆಗಳನ್ನು ಹೇಳಿಕೊಳ್ಳ ಬಹುದು.

ತಾರೀಖು ೧೪ನೇ ನವಂಬರು ೧೮೯೩ನೆ ಇಸವಿ

ಈ ಬಳಿ ಮುನ್ಸಿಫರವರ ಸೈನಾಗಿದೆ.

ವೃತ್ತಾಂತ ಪತ್ರಿಕೆ.

—o—

೧೮೯೩ನೇ ಇಸವಿ ನವಂಬರ್ ತಾ|| ೩೦ನೇ ಗುರುವಾರ.

ಮೊನ್ನೆ ಮಂಗಳವಾರ ಸಾಯಂಕಾಲ ೪|| ಘಂಟೆಗೆ ಅರಮನೆಯಲ್ಲಿ ಒಂದು ವಿಶೇಷವಾದ ದರ್ಬಾರ್ ನಮ್ಮ ಮಹಾರಾಣಿಯವರಿಗೆ ಬಂದ ಬಿರುದು. ನಡೆಯಿತು. ಸಂದಾಂಗಗಳು, ರಾಜ ಹಿಂಡೆಯವರು, ಮುಖ್ಯಾಧಿಕಾರಿಗಳು ದರ್ಬಾರಿಗೆ ಯೋಗ್ಯವಾದ ತಮ್ಮ ತಮ್ಮ ಉಡವನ್ನು ಹಾಕಿಕೊಂಡಿದ್ದರು. ಅರಮನೆಯ ಕನಡೀ ತೊಟ್ಟಿ ಎಂಬ ಭಾಗದಲ್ಲಿ ಈ ದರ್ಬಾರು ಜರುಗಿತು. ೫ ಘಂಟೆಗೆ ಸ್ವಲ್ಪ ಮುಂಚಿತವಾಗಿ ಸಂಸ್ಥಾನದ ರೆಸಿಡೆಂಟ್ರವರು ಪರಿವಾರಸಮೇತರಾಗಿ ವಾಹನಮರ್ಯಾದೆಗಳೊಡನೆ ರೆಸಿಡೆನ್ಸಿ ಬಂಗ್ಲೆಯಿಂದ ಅರಮನೆಗೆ ದಯಮಾಡಿದರು. ಇದನ್ನು ಬತೇರಿಯಿಂದ ಹಾರಿಸಲ್ಪಟ್ಟ ೧೩ ತೋಪುಗಳು ತಿಳಿಯಪಡಿಸಿದವು. ಅರಮನೆಯ ಅನೇಬಾಗಿಲಲ್ಲಿ ಪ್ರಿನ್ಸ್ ಬಸಪ್ಪಾಜಿ ಅರಸಿನವರೂ, ಒಕ್ಕೀರಿ ಪ್ಪಾಜಿ ಅರಸಿನವರೂ ಕಾದಿದ್ದು ರೆಸಿಡೆಂಟ್ರವರನ್ನು ಎದುರುಗೊಂಡು ಹಸ್ತಲಾಘವದಿಂದ ಒಳಕ್ಕೆ ಕರೆದುಕೊಂಡು ಹೋಗುತ್ತಿರುವಾಗ್ಯೆ ಕನಡೀ ತೊಟ್ಟಿಯ ಬಾಗಲಿನಲ್ಲಿ ಸಂಸ್ಥಾನದ ದಿವಾನಹವ್ದೆಯವರು ರೆಸಿಡೆಂಟ್ರವರನ್ನು ಕಾಣಿಸಿಕೊಂಡು ದರ್ಬಾರ್ ಹಾಲಿಗೆ ಸಂಗಡ ಹೋಗುತ್ತಿರುವಷ್ಟರೊಳಗಾಗಿ ಶ್ರೀಮನ್ಮಹಾರಾಜರವರು ತಮ್ಮ ಶ್ರೇಷ್ಠಾಸನವನ್ನು ಬಿಟ್ಟು ಎದ್ದು ಕೆಲವು ಹೆಜ್ಜೆಗಳು ಮುಂದಕ್ಕೆ ಬಂದು ರೆಸಿಡೆಂಟ್ರವರಿಗೆ ಕೈಕೊಟ್ಟು ಕರೆದುಕೊಂಡು ಹೋಗಿ ತಮ್ಮ ಸ್ಥಾನದ ಬಲಪಾರ್ಶ್ವದಲ್ಲಿ ಏರ್ಪಡಿಸಿದ್ದ ಆಸನದಲ್ಲಿ ಕೂರಿಸಿದರು. ರೆಸಿಡೆಂಟ್ರವರ ತಂಡದವರು ಅವರ ಬಲಗಡೆಯಲ್ಲಿ ಯೋಗ್ಯತಾನುಸಾರವಾಗಿ ಕೂರಿಸಲ್ಪಟ್ಟರು. ದಿವಾನರೇ ಮುಂತಾದ ಅಧಿಕಾರಿಗಳೂ, ರಾಜಹಿಂಡೆಯವರೂ ಶ್ರೀಮನ್ಮಹಾರಾಜರವರ ಎಡಪಾರ್ಶ್ವದಲ್ಲಿ ಕೂತು ಇದ್ದರು. ಮೊದಲು ರೆಸಿಡೆಂಟ್ರವರೂ ಮತ್ತು ಶ್ರೀಮನ್ಮಹಾರಾಜರವರೂ ಪರಸ್ಪರ ಯೋಗಕ್ಷೇಮಗಳನ್ನು ವಿಚಾರಿಸಿ ಉತ್ತರ ಪ್ರತ್ಯುತ್ತರಗಳನ್ನು ಪಡೆದರು. ಇಷ್ಟೆಲ್ಲಾ ಆದನಂತರ ರೆಸಿಡೆಂಟ್ರವರು ಎದ್ದು ಈದಿನದ ದರ್ಬಾರಿನ ಉದ್ದೇಶವನ್ನು ಕುರಿತು ಮಾತನಾಡುತ್ತಾ ಶ್ರೀಮದಿಂಡಿಯಾ ಚಕ್ರವರ್ತಿನಿಯವರಾದ ವಿಕ್ಟೋರಿಯಾ ಮಹಾರಾಣ್ಣಿಯವರು ಶ್ರೀಮನ್ಮಹಾರಾಜರವರ ರಾಜ್ಯಪರಿಪಾಲನೆಯ ವಿವೇಕಗಳನ್ನು ತಿಳದು ಬಹು ತೃಪ್ತಿಹೊಂದಿ ಮಹಾರಾಜರವರ ಪತ್ನೀರಾದ ಮಹಾರಾಣಿಯವರಿಗೆ "ಕ್ರೌನ್ ಆಫ್ ಇಂಡಿಯ" ಎಂಬ ಬಿರುದನ್ನು ದಯಪಾಲಿಸಿರುತ್ತಾರೆಂತಲೂ, ಇದನ್ನು ಶ್ರೀಮನ್ಮಹಾರಾಜರವರು ಪರಿಗ್ರಹಿಸಿ ಮಹಾರಾಣಿಯವರಿಗೆ ಒಪ್ಪಿಸಬೇಕೆಂತಲೂ, ಈ ಶ್ರೇಷ್ಠವಾದ ಮತ್ತು ಸಂತೋಷಸೂಚಕವಾದ ವರ್ತಮಾನವನ್ನು ತಿಳಿಯಪಡಿಸುವಂತೆ ತಾವು ಚಕ್ರವರ್ತಿನಿಯವರಿಂದ ಆಜ್ಞಪ್ತರಾಗಿರುತ್ತಾರೆಂತಲೂ ತಿಳಿಯಪಡಿಸಿದರು. ಆಗ ಆ ಬಿರುದನ್ನು ಶ್ರೀಮನ್ಮಹಾರಾಜರವರು ಅಂಗೀಕರಿಸಿ ಹಿಂದೆ ಪರದೆಯೊಳಗೆ ಕುಳಿತಿದ್ದ ಮಹಾರಾಣಿಯವರಿಗೆ ಒಪ್ಪಿಸಿದರು. ಮತ್ತು ಈ ತಮ್ಮ ಸಂತೋಷಾತಿಶಯವನ್ನು ತಿಳಿಯಪಡಿಸುವಂತೆ ೩೧ ಕುಶಾಲ್ ಫಿರಂಗಿಗಳೂ ಹಾರಿಸಲ್ಪಟ್ಟವು. ಅನಂತರ ರೆಸಿಡೆಂಟ್ರೇ ಮುಂತಾದವರಿಗೆಲ್ಲಾ ಮರ್ಯಾದೆಯನ್ನು ಒಪ್ಪಿಸಿದರು. ರೆಸಿಡೆಂಟ್ರವರು ಬಹಳ ಸಂತೋಷದಿಂದ ದರ್ಬಾರನ್ನು ಕೊನೆಮುಟ್ಟಿಸಿ, ತಾವು ಯಥಾಪ್ರಕಾರ ರೆಸಿಡೆನ್ಸಿ ಬಂಗ್ಲೆಗೆ ದಯಮಾಡಿದರು. ಆಗಲೂ ಅವರಿಗೋಸ್ಕರವಾಗಿಯೇ ೧೩ ತೋಪುಗಳು ಹಾರಿಸಲ್ಪಟ್ಟವು. ಈ ಬಿರುದನ್ನು ಚಕ್ರವರ್ತಿನಿಯವರು ನಮ್ಮ ಮಹಾರಾಣಿಯವರಿಗೆ ದಯಪಾಲಿಸಿರುವದು ನಮಗೂ ಮತ್ತು ಪ್ರಜೆಗಳಿಗೂ ಅಪಾರವಾದ ಸಂತೋಷವನ್ನೂ, ಒಂದು ವಿಧವಾದ ಪ್ರತಿಷ್ಠೆಯನ್ನೂ ಉಂಟುಮಾಡಿರುತ್ತೆ. ಇದರಿಂದ ಚಕ್ರವರ್ತಿನಿಯವರಿಗೆ ನಮ್ಮ ಮಹಾರಾಜರವರಲ್ಲಿ ವಾತ್ಸಲ್ಯವೂ, ಗೌರವವೂ ವಿಶೇಷವಾಗಿದೆ ಎನ್ನುವದಕ್ಕೆ ಸಂದೇಹವೇನು?

ಶ್ರೀಮನ್ಮಹಾರಾಜರವರು ತಮ್ಮ ಕುಮಾರರ ವಿದ್ಯಾಭಿವೃದ್ಧಿಯಲ್ಲಿ ಪೂರ್ಣನಿರತರಾಗಿ, ಯುವರಾಜರವರ ಉಪಾಧ್ಯಾಯರು. ಮದರಾಸ ಪ್ರಾಂತ್ಯದಲ್ಲಿ ಇಂಜಿನಿಯರಾಗಿರುವ ಮೆ|| ವೈಟ್ಲಿ ಸಾಹೇಬರನ್ನು ಅವರ ಉಪಾಧ್ಯಾಯರನ್ನಾಗಿ ನೇಮಿಸಿರುವ ವಿಷಯದಲ್ಲಿ ನಮ್ಮ ಅಭಿಪ್ರಾಯಗಳನ್ನು ನಮ್ಮ ಹಿಂದಿನ ಒಂದಾನೊಂದು ಸಂಚಿಕೆಯಲ್ಲಿ ವಾಚಕರಿಗೆ ತಿಳಿಯಪಡಿಸಿರುತ್ತೇವಷ್ಟೆ. ಈಚೀಚಿಗೆ ಬಳದೇಶದ ವರ್ತಮಾನಪತ್ರಿಕೆಗಳೂ, ಈ ವಿಷಯವನ್ನು ಕುರಿತು ಬಹಳವಾಗಿ ಚರ್ಚಿಸುತ್ತಲೂ, ಇಂಜನಿಯರನ್ನು ಬೋಧಕನಿಂದ ಯಾಕೆ ಕರೆತಂದು ನೇಮಿಸಬೇಕೆಂತಲೂ, ಈ ದೇಶದಲ್ಲೇ ಪೂರ್ಣವಿದ್ಯಾವಂತರಾದ ಹಿಂದೂಗಳೂ ಯೂರೋಪಿಯನ್ನರೂ ಇರಲಿಲ್ಲವೇ ಎಂತಲೂ ತಮ್ಮ ಅಸಮಾಧಾನವನ್ನು ಸಂಪೂರ್ಣವಾಗಿ ವ್ಯಕ್ತಪಡಿಸುತ್ತಲಿರುವವು. ಇದನ್ನು ನೋಡಿ ನಾವು ತುಂಬಾ ಆಶ್ಚರ್ಯಪಡುವೆವು. ಮೆ|| ವೈಟ್ಲಿ ಸಾಹೇಬರವರೇನೋ ಇಂಜನಿಯರೇ ಹೌದು. ಆದರೆ ಅವರಿಗಿಂತಲೂ ವಿಶೇಷ ಸಮರ್ಥರಾದವರನ್ನು ಮಹಾರಾಜರವರು ನೇಮಿಸಬಹುದಾಗಿತ್ತು. ಮತ್ತು ನಮ್ಮ ಮುಖ್ಯ ಉದ್ದೇಶವೇನಂದರೆ ವಿದ್ಯಾವಂತರೂ, ಲೋಕಸಂಚಾರ ಮಾಡಿದಂತಹವರೂ, ಶ್ರೇಷ್ಠಗುಣಿಗಳೂ ಆಗಿರುವಂಥ ಯೂರೋಪಿಯನ್ನರನ್ನೇ ಈ ಕೆಲಸಕ್ಕೆ ನೇಮಿಸಬೇಕೆಂಬುವದು ಹೊರ್ತು ಮತ್ತೇನೆ ಅಲ್ಲ. ಬರೀ ಎಂ. ಎ., ಎಂ. ಎಲ್. ಮೊದಲಾದ ಅಂಕಿತಗಳನ್ನು ಪಡೆದು ಸಾಧಾರಣವಾಗಿ ಇರುವ ನೇಟಿವ್ ಜನರನ್ನು ನೇಮಿಸುವದರಿಂದ ಮಹಾರಾಜರವರ ಉದ್ದೇಶಗಳೆಲ್ಲಾ ನೆರವೇರಲಾರವೆಂದು ನಿಸ್ಸಂದೇಹವಾಗಿ ಹೇಳುತ್ತೇವೆ. ಆದರೆ ನೇಟಿವ್ ಜನರು ವಿದ್ಯೆಯಲ್ಲಿ ಪೂರ್ಣಸಮರ್ಥರಾಗಿದ್ದಾಗ್ಯೂ ಒಬ್ಬ ಯೂರೋಪಿಯನ್ನನು ವಿದ್ಯಾಭ್ಯಾಸ ಮಾಡಿರುವಂತೆ ಪೂರ್ಣವಾಲಂಗತರಾಗಿರಲಾರರು. ಯಾಕಂದರೆ ಸಾಧಾರಣವಾಗಿ ನೇಟಿವ್ ಜನರು ಒಬ್ಬ ಯೂರೋಪಿಯನ್ನನಷ್ಟು ಲೋಕವ್ಯವಹಾರಜ್ಞರಾಗಿರುವದಿಲ್ಲ. ಇತರ ದೇಶಗಳಲ್ಲಿ ಸಂಚಾರ ಮಾಡಿದ ಹೊರ್ತು ಇಂಥಾ ಲೋಕವ್ಯವಹಾರಜ್ಞಾನವು ಯಾರಿಗೂ ಬರುವದಿಲ್ಲ; ಒಳ್ಳೇ ದೊಡ್ಡ ಮನುಷ್ಯರ ಯೋಗ್ಯತೆಗಳೂ ಲಭಿಸುವದಿಲ್ಲ; ಇವೆರಡೂ ಇಲ್ಲದಿದ್ದರೆ ನಡವಳಿಕೆಯಲ್ಲಿ ಸ್ಥಿರವಾದ ಚಿತ್ತವೃತ್ತಿಯು ಹ್ಯಾಗೆತಾನೇ ಬಂದಾವು? ಆದದರಿಂದ ಇಂಥಾ ಗುಣಗಳು ಸಾಧಾರಣವಾಗಿ ಯೂರೋಪಿಯನ್ನರಲ್ಲಿ ವಿಶೇಷವಾಗಿರುವದರಿಂದಲೂ, ರಾಜ್ಯಭಾರವನ್ನು ವಹಿಸುವದಕ್ಕೆ ತಕ್ಕ ಯೋಗ್ಯತೆಯನ್ನು ನಮ್ಮ ಯುವರಾಜರಿಗೆ ಕಲಿಸಬೇಕಾಗಿರುವದರಿಂದಲೂ, ಶ್ರೀಮನ್ಮಹಾರಾಜರವರು ನೇಟಿವ್ ಜನರನ್ನು ಬಿಟ್ಟು ಯೂರೋಪಿಯನ್ನನೊಬ್ಬನನ್ನು ಆರಿಸಿರುವದರಲ್ಲಿ ನಾವು ತುಂಬಾ ಸಂತೋಷಿಸುತ್ತೇವೆ. ಮತ್ತು ಮೆ|| ವೈಟ್ಲಿ ಸಾಹೇಬರು ಈ ಜವಾಬ್ದಾರಿಯಾದ ಕೆಲಸಕ್ಕೆ ತಕ್ಕ ಸಾಮರ್ಥ್ಯಗಳನ್ನು ಪಡೆದಿದ್ದಾರೆಂದು ತಮ್ಮ ಕೆಲಸಗಳಿಂದ ವ್ಯಕ್ತಪಡಿಸಿಕೊಳ್ಳಲು ಪ್ರಯತ್ನ ಮಾಡತಕ್ಕದ್ದೆಂದು ನಾವು ಕೋರುತ್ತೇವೆ.

ಶ್ರೀಮನ್ಮಹಾರಾಜರ ಸರ್ಕಾರದವರು ಸಂಸ್ಥಾನದ ಭಾರಿಭಾರಿ ಹುದ್ದೆಗಳನ್ನು ಸಮರ್ಥರಾದವರಿಗೇ ಕೊಡಬೇಕೆಂಬ ಉದ್ದೇಶದಿಂದ "ಮೈಸೂರು ಸಿವಿಲ್ ಸರ್ವಿಸ್" ಎಂಬ ಒಂದು ಪರೀಕ್ಷೆಯನ್ನು ಏರ್ಪಡಿಸಿ ಅದನ್ನು ವರ್ಷೇ ವರ್ಷೇ ನಡಿಸುವದಕ್ಕಾರಂಭಿಸಿದಾರೆ. ಮೈಸೂರು ಸಿವಿಲ್ ಸರ್ವಿಸ್. ಮತ್ತು ಈ ಪರೀಕ್ಷೆಗೆ ಯೋಗ್ಯತೆಯುಳ್ಳವರು ಯಾವದೇಶದವರಾದರೂ ಬರಬಹುದೆಂಬದಾಗಿ ಪ್ರಸಿದ್ಧಪಡಿಸಿದ್ದಾರೆ. ಆದರೆ ಅಜ್ಞರಾದ ಕೆಲವು ಮಂದಿ ಇಲ್ಲಿನ ಪತ್ರಿಕೆಗಳಲ್ಲಿ ಈ ಪರೀಕ್ಷೆಗೆ ವಿದೇಶೀಯರು ಬಾರದಂತೆ ಅಡ್ಡಿಮಾಡಿ ಮೈಸೂರು ಸೀಮೆಯವರನ್ನು ಮಾತ್ರವೇ ಸೇರಿಸಿಕೊಳ್ಳುವಂತೆ ಸರ್ಕಾರದವರು ತಮ್ಮ ಏರ್ಪಾಡುಗಳನ್ನು ಬದಲಾಯಿಸಬೇಕೆಂಬದಾಗಿ ಚರ್ಚಿಸುತ್ತಲೂ, ಸರ್ಕಾರದವರ ಮೇಲೆ ದೋಷಾರೋಪಣೆ ಮಾಡುತ್ತಲೂ ಇರುವದು ನಾವು ಆಗಿಂದಾಗ್ಯೆ ನೋಡುತ್ತಲೂ, ಕೇಳುತ್ತಲೂ ಇದ್ದೇವೆ. ಇಂಥಾ ಬರವಣಿಗೆಯು ಸರ್ವಥಾ ಅನಾವಶ್ಯಕವಾದ್ದೆಂಬುವದರಲ್ಲಿ ಸಂಶಯವಿಲ್ಲ. ಮತ್ತು ಶ್ರೀಮನ್ಮಹಾರಾಜರವರು ಇಂಥವರ ಕೋರಿಕೆಗಳನ್ನು ಲಾಲಿಸದೆ ಇರುವರೆಂದು ನಾವು ಕೋರುತ್ತೇವೆ. ಶ್ರೀಮನ್ಮಹಾರಾಜರವರ ಪ್ರಜಾಪರಿಪಾಲನೆಯು ನಿರ್ದುಷ್ಟವಾದದ್ದಾಗಬೇಕಾದರೆ ಸಮರ್ಥರಾದ ಅಧಿಕಾರಿಗಳು ಎಲ್ಲಿ ದೊರೆಯುವರೋ ಅಲ್ಲಿಂದ ಕರೆತಂದು ನೇಮಿಸಿಕೊಳ್ಳಬೇಕು. ಸಮರ್ಥರಾದವರು ಯಾವ ದೇಶದವರಾದರೇನು? ಯಾವ ಜಾತಿಯವರಾದರೇನು? ಅವರು ವಿದ್ಯಾವಂತರಾಗಿಯೂ, ಪ್ರಜಾಪಾಲನೆಗೆ ಯೋಗ್ಯರಾಗಿಯೂ ಇದ್ದರೆ ಅವರನ್ನು ಭಾರೀ ಕೆಲಸಗಳಿಗೆ ಯಾಕೆ ನೇಮಿಸಬಾರದು! ದೊಡ್ಡ ದೊಡ್ಡ ಹುದ್ದೆಗಳನ್ನೆಲ್ಲಾ ಮೈಸೂರು ದೇಶದವರೇ ಪಡೆಯಬೇಕೆಂದು ಅಪೇಕ್ಷಿಸುತ್ತಾರೆ. ಯಾಗಾದರೆ ಇಂಥಾ ಹುದ್ದೆಗಳಿಗೆ ಅವರು ಅರ್ಹರಾಗಿರುತ್ತಾರೆಂದು ಸಿವಿಲ್‌ಸರ್ವಿಸ ಪರೀಕ್ಷೆಗಳಲ್ಲಿಯೂ ತೋರ್ಪಡಿಸಿಕೊಳ್ಳಲಿ. ಇನ್ನೂ ಬೇಕಾದರೆ ಅಧಿಕಾರಸ್ಥಾನಗಳ ಪೈಕಿ ಖಾಲಿಯಾಗುವ ಪ್ರತಿಮೂರು ಹುದ್ದೆಗಳಲ್ಲೂ ಒಂದು ಹುದ್ದೆಯನ್ನು ಮೈಸೂರಿನವರಿಗೇ ಕೊಡಲ್ಪಡುತ್ತೆಂದೂ, ಅದಕ್ಕಾಗಿ ಸಿವಿಲ್‌ಸರ್ವಿಸ್ ಪರೀಕ್ಷೆಗಳಲ್ಲಿ ಇಷ್ಟುಪಕ್ಷ ಮೈಸೂರಿನವರು ಪ್ರವೇಶಿಸಿ ತೇರ್ಗಡೆ ಹೊಂದಬೇಕಾದ್ದು ಅವಶ್ಯಕವೆಂದೂ ಒಂದು ಹೊಸ ಏರ್ಪಾಡು ಮಾಡಿಕೊಡುವಂತೆ ಮಹಾರಾಜರವರನ್ನು ಕೇಳಿಕೊಳ್ಳುವದು ಸರಿಯಾಗಿರುವದೇ ಹೊರ್ತು, ಶಕ್ತರಾಗಿರುವಂಥ ಇತರ ದೇಶದವರೂ ಇಲ್ಲಿನ ನೌಕರಿಗಳಿಗೆ ಬರುವದಕ್ಕೆ ಅಪೇಕ್ಷಿಸಲ್ಪಟ್ಟ ಪರೀಕ್ಷೆಗಳಲ್ಲಿ ಚೆನ್ನಾಗಿ ತೇರ್ಗಡೆಹೊಂದಿದರೆ ಅಂಥವರನ್ನು ನೇಮಿಸಿಕೊಳ್ಳಕೂಡದೆಂಬ ಯಾವ ನಿರ್ಬಂಧವನ್ನೂ ಮಾಡುವಂತೆ ಪ್ರಜೆಗಳು ಅಪೇಕ್ಷಿಸುವದು ಸಮರ್ಪಕವಾಗಿರಬಾರದು. ಮತ್ತು ನಿಷ್ಪಕ್ಷಪಾತಿಗಳೆನಿಸಿಕೊಂಡಿರುವ ಪತ್ರಿಕಾಕರ್ತರುಗಳು ಒಂದು ಪಕ್ಷವನ್ನೇ ಹಿಡಿದು ಚರ್ಚಿಸುವದು ಸರಿಯಾದ್ದಲ್ಲ.

ನಮ್ಮ ಇಂಡಿಯಾ ರಾಷ್ಟ್ರದಲ್ಲಿ ಬಹುವರ್ಷದಿಂದ ವೈಸರಾಯಿ ಅಧಿಕಾರವನ್ನು ನಡಿಸುವದಕ್ಕೆ ಹೊಸದಾಗಿ ಚಕ್ರವರ್ತಿನಿಯವರು ನೇಮಿಸಿರುವ ಲಾರ್ಡ್ ಎಲ್ಗಿನ್ ದೊರೆಗಳು ಇನ್ನು ಆರುವಾರಗಳೊಳಗಾಗಿ ಬಿಲಾಯಿತಿಯನ್ನು ಬಿಟ್ಟು ನಮ್ಮರಾಷ್ಟ್ರವನ್ನು ಕುರಿತು ಪ್ರಯಾಣಮಾಡುವರು. ಹೊಸ ವೈಸರಾಯರ ಆಗಮನ. ಇವರಿಗೆ ಈಗ ೪೪ನೇ ವಯಸ್ಸು ನಡೆಯುತ್ತಲಿರುವದರಿಂದ ಇನ್ನೂ ಪೂರ್ಣವಯಸ್ಕರೆಂದು ಹೇಳ ಬಹುದು. ವಿಲಾಯತಿಯಲ್ಲಿ ಈಗ ಅವರಿಗೆ ಮಾಹೆಯಾನಾ ೧,೨೦೦ರೂಪಾಯಿಗಳು ಮಾತ್ರ ಸಂಬಳ ದೊರೆಯುತ್ತೆ. ಆದ್ದರಿಂದ ಅವರು ಅಷ್ಟು ಐಶ್ವರ್ಯವಂತರಲ್ಲವೆಂದು ಹೇಳುತ್ತಾರೆ ಮತ್ತು ಇವರು ದೊಡ್ಡ ಸಂಸಾರಿಗಳು. ಐದುಮಂದಿ ಗಂಡುಮಕ್ಕಳನ್ನೂ, ಐದುಮಂದಿ ಹೆಣ್ಣುಮಕ್ಕಳನ್ನೂ ಪಡೆದಿದ್ದಾರೆ. ಅವರಿಗೆ ಕಾಯಪುಷ್ಟಿಯು ಬಹು ಚೆನ್ನಾಗಿದೆ. ಅವರು ಸ್ವತಃ ಸಾಮರ್ಥ್ಯವಂತರೇ ಸರಿ. ಆದರೆ ಇದುವರಿಗೂ ಯಾವ ರಾಷ್ಟ್ರಾಧಿಕಾರವನ್ನೂ ನಡೆಸಿದ್ದವರಲ್ಲವಾದ್ದರಿಂದ, ಈ ವಿಷಯದಲ್ಲಿ ಅವರಿಗೆ ಅಷ್ಟು ಅನುಭವಸಾಲದು ಎಂಬುವದರಲ್ಲಿ ಸಂಶಯವಿಲ್ಲ. ಮತ್ತು ಅವರು ಈ ಪದವಿಗೆ ಬಂದ ಮೊದಲನೇ ಎರಡು ವರುಷಗಳು ಇಲ್ಲಿನ ವಿಷಯಗಳನ್ನು ಅನುಭವ ಮಾಡಿಕೊಳ್ಳುವದರಲ್ಲೇ ಕಳೆದುಹೋಗಬಹುದು. ಆದರೆ ಇವರು ಬಹುಸಮರ್ಥರೆಂದು ನಾವು ಕೇಳಿದ್ದೇವಾದ್ದರಿಂದ ಇವರು ಕಾಲಕ್ರಮದಲ್ಲಿ ಉಪಕಾರಕರ್ತರಾದ ವೈಸರಾಯಿರೆಂತೆ ಕಾರ್ಯಗಳನ್ನು ನಿರ್ವಹಿಸಲು ತಕ್ಕಸಾಮರ್ಥ್ಯವನ್ನು ಸಂಪಾದಿಸಿಕೊಂಡು, ಕೀರ್ತಿವಂತರಾದಾರೆಂದು ನಾವು ನಂಬಿದ್ದೇವೆ

ಜಾತಿ ವಿವೇಕ.

ನಮ್ಮ ದೇಶವನ್ನು ಪ್ರವೇಶಿಸುತ ಅನ್ಯದೇಶೀಯರಿಗೆ ಔತ್ಕೃಷ್ಟ್ಯವನ್ನುಂಟುಮಾಡುವದ್ಯಾವದು? ನಮ್ಮ ಧನವಲ್ಲ, ವಿದ್ಯವಲ್ಲ, ಮತವಲ್ಲ, ಇವೆಲ್ಲಕ್ಕೂ ಅವರಲ್ಲಿ ಖ್ಯಾತಿಪ್ರಾಗ್ರ್ಯದರೂ ವಿಶೇಷನ್ಯಾಯವಾ ಇರಬಹುದು ಆದರೆ ನಮ್ಮ ಜಾತಿ ಎಂಬುವದು ಆಶ್ಚರ್ಯವನ್ನುಂಟುಮಾಡದೇ ಇರಲಾರದು ಅದನ್ನು ಅವರಿಗೆ ವಿವರಿಸಿ ಹೇಳಲು ಸುಲಭಸಾಧ್ಯವಲ್ಲ. ಜಾತಿ ಎಂದರೆ ಹಿಂದೂ ಜನರಿಗೆ ಪಿತೃಪರಂಪರೆಯಿಂದ ಬಂದಿರುವ ನಡವಳಿಕೆಯೋ ಇದು ಗೊತ್ತಾಗಬೇಕಾದರೆ ನಮ್ಮ ಚರಿತ್ರೆಯಿಂದಲೇ ಈ ಚರಿತ್ರೆಯನ್ನು ಅನುಸ್ಥಾಪ್ಯವಾಗಿ ತಿಳಿಯಬೇಕಾದರೆ ಋಗ್ವೇದದಿಂದಿಲ್ಲದೆ ಮತ್ತ್ಯಾವದೂ ಪುರಾತನವಾಗಿ ತೋರುವದಿಲ್ಲವು ಅದರಿಂದ ಹೀಗೆ ಗೊತ್ತಾಗುತ್ತದೆ—ಆರ್ಯರು ಸರಸ್ವತಿ ದೃಷದ್ವತಿ ನದಿಗಳ ಮಧ್ಯೆ ವಾಸವನ್ನು ಮಾಡಿಕೊಂಡಿದ್ದರು ಇವರು ಪ್ರಬಲವಾಗುತ್ತಾ ಸಿಂಧು ಸರಸ್ವತಿ ನದಿಗಳನ್ನೊಳಗೊಂಡು ವಿಂಧ್ಯ ಹಿಮಾಲಯಗಳ ಸಂಧ್ಯನೊಳಗೆ ಕ್ಷೇತ್ರದಿಂದ ಬಹುಪ್ರಬಲವಾಗಿ ಜಾತಿಭೇದವಿಲ್ಲದಿದ್ದರು ಇವರಿಗೆ ಅನಾರ್ಯರಾದ ದಸ್ಯುಗಳೊಂದಿಗೆ ಹೋರಾಡುವದರಿಂದ ಪೂರ್ವನಿವಾಸಿಗಳು ಮಾತ್ರ ಬೇರೆ ವರ್ಣವಾಗಿದ್ದರು ಇವರನ್ನು ಇವರು ಹಗೆಯವರೆಂತ ಭಾವಿಸುತ್ತಿದ್ದರು ಆದರೆ ಋಗ್ವೇದದ ಪುರುಷಸೂಕ್ತದಲ್ಲಿ (ಇದು ಈಚೆಗೆ ಸೇರಿಸಲ್ಪಟ್ಟಿತೆಂದು ಕೆಲವರು ತತ್ವಜ್ಞರು) ಬ್ರಹ್ಮನ ಮುಖಾದ್ಯವಯವಗಳಿಂ ಬ್ರಹ್ಮಕ್ಷತ್ರಿಯ ವೈಶ್ಯ ಶೂದ್ರರುತ್ಪನ್ನರಾದರೆಂದು ಇದೆ ಶತಪಥ ಬ್ರಾಹ್ಮಣದಲ್ಲಿ ಬ್ರಹ್ಮನು ಬ್ರಹ್ಮ ಕ್ಷತ್ರಿಯ ವೈಶ್ಯನನ್ನು ಸೃಷ್ಟಿಸಿದನೆಂದು ಹೇಳಿದೆ ತೈತ್ತಿರೀಯ ಬ್ರಾಹ್ಮಣದಲ್ಲಿ ಋಗ್ವೇದದಿಂ ವೈಶ್ಯರು ಯಜುರ್ವೇದದಿಂ ಕ್ಷತ್ರಿಯರು ಸಾಮವೇದದಿಂ ಬ್ರಾಹ್ಮಣರು ಎಂದು ಹೇಳಿದೆ ಸ್ಮೃತಿಗಳ ಪೈಕಿ ಪ್ರಸಿದ್ಧವಾದ ಮನುಸ್ಮೃತಿಯಲ್ಲಿ ಪುರುಷಸೂಕ್ತದಂತೆ ಹೇಳಿದೆ ಮಹಾಭಾರತದ ಶಾಂತಿಪರ್ವದಲ್ಲಿ—ಆದಿಯಲ್ಲಿ ಎಲ್ಲರೂ ಒಂದೇ ಜಾತಿಯಾಗಿದ್ದರು ಅದಕ್ಕೆ ಬ್ರಾಹ್ಮಣ ಜಾತಿಯೆಂದು ಹೆಸರು ಇವರು ಸ್ವಧರ್ಮವಂ ಬಿಟ್ಟು ಕ್ಷಾತ್ರಧರ್ಮವನ್ನವಲಂಬಿಸಿ, ಕ್ಷತ್ರಿಯರೆನಿಸಿಕೊಂಡರು ಬಳಿಕ ಗೋರಕ್ಷಣೆಯಿಂ ಜೀವನೋಪಾಯವಂ ಕಲ್ಪಿಸಿಕೊಂಡು ತದನುಸಾರವಾದ ಕೃಷಿಯಂ ಮತ್ತು ವೈಶ್ಯರೆನಿಸಿಕೊಂಡರು ಬಳಿಕ ಅವರೇ ಅನೃತ, ಚೌರ್ಯ, ಕಪಟಾದಿ ನೀಚವೃತ್ತಿಗಳಲ್ಲಿ ಪ್ರವರ್ತಿಸಿ ಶೂದ್ರರಾದರು ಹೀಗೆ ಕರ್ಮದಿಂದ ಬ್ರಾಹ್ಮಣರು ಪ್ರಭೇದವನ್ನು ಹೊಂದಿದರೆ ಭಾಗವತದಲ್ಲಿ ದ್ವಿತೀಯ ಸ್ಕಂದದಲ್ಲಿ ಮುಖಾದ್ಯವಯವಗಳಿಂದ ಬ್ರಹ್ಮ ಕ್ಷತ್ರಿಯರೆಂದು ಹೇಳಿ ನವಮ ಸ್ಕಂಧದಲ್ಲಿ ಆದಿಯಲ್ಲಿ ವೇದವು ಒಂದೇ ಆಗಿತ್ತು ಒಂದೆ ಆದಕ್ಕೆ ಹಂಸ ಎಂದು ಹೆಸರು ಎಂದಿದೆ ವಿಷ್ಣುಪುರಾಣದಲ್ಲಿ ಒಬ್ಬ ರಾಜನು ಒಂದು ಕುದುರೆ ಯಾಗವಂ ಬಿಟ್ಟು ತನ್ನ ಪ್ರಜೆಗಳನ್ನೊಂದು ದಿನದಿಂದ ಮತ್ತೊಂದು ದಿನಕ್ಕೆ ಹೆಸರನ್ನು ಇಟ್ಟುಕೊಂಡು ಹೋಗಿರೆಂದು ಹೇಳಲು ಕೆಲವರು ದಕ್ಷಿಣದಕ್ಕೆ ಹೋದರು ಅಲ್ಲೇ ನಿಂತರು ಮತ್ತೆ ಕೆಲವರು ದೇಶವನ್ನು ಬಿಟ್ಟು ಮಾಡಿಕೊಂಡು ಬಿಟ್ಟು ಕೆಡಿಸಿಕೊಂಡು ದಸ್ಯುಗಳಾದರು ಇನ್ನೂ ಕೆಲ ನಾಗರಿಕರಾದವರು ಒಟ್ಟಿಗೆಯೂ ದೇವಸ್ಥಾನ ಕಟ್ಟಿಸಿದಂತೆ ಮೆಲ್ಲಗೆ ನಡೆದು ತೀರವಂತರಾದರು ಆಗ ರಾಜನು ಇವರ ಯೋಗ್ಯತಾನುಗುಣವಾಗಿ ಜಾತಿಗಳನ್ನೇರ್ಪಾಟು ಮಾಡಿದನೆಂದು ಹೇಳಿದೆ ವಾಯುಪುರಾಣದಲ್ಲಿ ಕೃತಯುಗದಲ್ಲಿ ಜಾತಿಗಳಿಲ್ಲ ಕರ್ಮಾನುಗುಣ್ಯವಾಗಿ ಬ್ರಹ್ಮನು ಮಾಡಿದನೆಂದು ಹೇಳಿದೆ ಪ್ರಜಾಸೃಷ್ಟಿಯು ಬ್ರಹ್ಮನಿಂದ ಆಯ್ತು, ಮನುವಿನಿಂದಲಾಯ್ತು ಎಂದು ಇಂಥ ಪಂಡಿತರೂ ನವದ್ವೀಪದ ಪಂಡಿತರೂ ವಿಚಾರವಂ ನಡಿಸುತ್ತಿದ್ದಾರೆ ಅದು ಹಾಗಿರಲಿ ಋಗ್ವೇದದಲ್ಲಿ ಜಾತಿ ಅಥವಾ ವರ್ಣವೆಂದರೆ ಅನಾರ್ಯರಿಂದ ಆರ್ಯರನ್ನು ಬೇರ್ಪಡಿಸುವ ಹೆಸರು ಕ್ಷತ್ರಿಯ ಎಂದರೆ ಬಲಿಷ್ಠನು ಎಂಬ ಗುಣವಾಚಕವು, ದೇವತೆಗಳಿಗೆ ಅನ್ವಯಿಸುತ್ತದೆ ವಿಪ್ರ ಅಂದರೆ ಬುದ್ಧಿಯುಳ್ಳ ಎಂಬ ಗುಣವಾಚಕವು ಅದು ಸಹಾ ದೇವತೆಗಳಿಗೇ ಆಗುತ್ತೆ ಬ್ರಾಹ್ಮಣ ಎಂದರೆ ವೇದಮಂತ್ರಗಳನ್ನು ರಚಿಸುವವರ ಹೆಸರು ಋಗ್ವೇದದಲ್ಲಿ ಹೇಳಿರುವ ಜನರಿಗೆ ಋಷಿಗಳೆಂದು ಹೆಸರು ಒಬ್ಬ ಋಷಿಯು ಹೇಳುತ್ತಾನೆ ನಾನು ಮಂತ್ರಗಳನ್ನು ರಚಿಸುತ್ತೇನೆ, ನನ್ನ ತಂದೆ

ಯು ವೈದ್ಯನು, ನನ್ನ ತಾಯಿ ಧಾನ್ಯವನ್ನು ಬೀಸುತ್ತಾಳೆ, ನಾವೆಲ್ಲರೂ ನಾನಾ ಕಾರ್ಯಗಳಲ್ಲಿ ... [illegible]

[illegible]

ಬರುತ್ತೆ. ಇಂಥಾ ವೈದ್ಯವನ್ನು ದಕ್ಷಿಣದೇಶದವರಾದ ನಮ್ಮ ವರ್ಣ್ಯರೂ ಮಾಡಲಿಲ್ಲವು ಇನ್ನುಮೇಲೆ ಕೃಪೆಯಿಂದ ... [illegible] ... ಸರ್ವಜ್ಞ॥ ಇತ್ಯಾದಿ

ನೋಟೀಸ್.

ಮೈಸೂರು ಲಷ್ಕರ್ ಮೊಹಲ್ಲಾದಲ್ಲಿರುವ ಬಾರಿಕಛೇರಿ ಸುಬ್ಬಯ್ಯನವರ ಮಗ ಸುಬ್ಬಯ್ಯನು ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ:—ಮೈಸೂರು ಮಂಡಿಮೊಹಲ್ಲಾದಲ್ಲಿರುವ ಕುಂದಣ ಕೆಲಸದ ಶಿವರಾಮೈಯ್ಯನೆಂಬವನು ೧೮೯೬ನೇ ಇಸವಿ ನವಂಬರು ೬ನೇ ತಾರೀಖಿನ "ವೃತ್ತಾಂತ ಪತ್ರಿಕೆಯಲ್ಲಿ" ಒಂದು ನೋಟೀಸ ಪ್ರಕಟಿಸಿರುವದು ಸರಿಯಷ್ಟೆ. ಸದರಿ ನೋಟೀಸಿಗೆ ಜವಾಬಾದ ಈ ನೋಟೀಸನ್ನು ಮೇಲ್ಕಂಡ ಸುಬ್ಬಯ್ಯನು ಪ್ರಕಟಿಸಿರುತ್ತಾನೆ.

ಮೇಲ್ಕಂಡ ನೋಟೀಸಿನಲ್ಲಿ ನಮೂದಿಸುವ ಮೈಸೂರು ಮಂಡಿ ಮೊಹಲ್ಲಾದಲ್ಲಿ ಪೂರ್ವಕ್ಕೆ ಪಟ್ಟಲಿಂಗ್ಯನ ಮನೆ ಪಶ್ಚಿಮಕ್ಕೆ ... ಗಲ್ಲಿ, ಉತ್ತರಕ್ಕೆ ... ಮನೆ, ದಕ್ಷಿಣಕ್ಕೆ ರಸ್ತೆ—ಈ ಮಧ್ಯೆ ಇರುವ ... ಮ್ಯುನಿಸಿಪಲ್ ಡೋರ್ ನಂಬರ್ ಉಳ್ಳ ಮನೆಯು ಕುಂದಣ ಕೆಲಸದ ಶಿವರಾಮೈಯನಿಗೆ ಸೇರಿದ್ದಲ್ಲ. ಈ ಮನೆಯ ಮೇಲೆ ಶಿವರಾಮೈಯನಿಗೆ ಯಾವ ವಿಧವಾದ ಹಕ್ಕು ಬಾಧ್ಯತೆಯೂ ಇಲ್ಲ. ಇವನು ಮತ್ತು ಇವನ ... ಸ್ವಾಧೀನಾನುಭವವೂ ... ಇರಲಿಲ್ಲ. ಸದರಿ ಮನೆಯನ್ನು ನಾರಣಮ್ಮ, ಚನ್ನಮ್ಮ, ಮತ್ತು ಗಂಗಮ್ಮ ಎಂಬುವರಿಗೆ ... [illegible] ... ಈ ಮನೆಯನ್ನು ಸುಬ್ಬಯ್ಯನ ಹೆಸರು ... ಮಾಡಿದ್ದು. ಇದರಲ್ಲಿ ಸುಬ್ಬಯ್ಯನ ಹೆಸರು ಮತ್ತು ಇವನ ಸಂಬಂಧಿಗಳಾದ ನಾರಣಮ್ಮ ಗಂಗಮ್ಮ, ಚನ್ನಮ್ಮ ಸಹ ಸುಬ್ಬಯ್ಯನ ... ಅಷ್ಟರೊಳಗೆ ... ಇದ್ದರು. ಶಿವರಾಮೈಯನು ಸದರೀ ಮನೆಯನ್ನು ಸುಬ್ಬಯ್ಯನಿಂದ ಕ್ರಯಕ್ಕೆ ಪಡೆಯಬೇಕೆಂದು ಪ್ರಯತ್ನಪಟ್ಟು ಸಾಧ್ಯವಾಗದ ಮೇಲೆ ... ಸ್ವಲ್ಪ ದಿವಸಗಳ ಕೆಳಗೆ ಸುಬ್ಬಯ್ಯನಿಗೂ ಶಿವರಾಮೈಯನಿಗೂ ... ಕೋರ್ಟಿನಲ್ಲಿ ವ್ಯವಹಾರ ನಡೆದ ... ಮೇಲೂ, ಸದರಿ ಶಿವರಾಮೈಯನು ಒಂದು ... ನೋಟೀಸನ್ನು "ವೃತ್ತಾಂತ ಪತ್ರಿಕೆಯಲ್ಲಿ" ಪ್ರಕಟಿಸಿರುತ್ತಾನೆ. ಇದರಿಂದ ಇವನಿಗೆ ಯಾವ ... ಆಗಲಾರದು. ... ಮನೆಯು ನೆರೆಹೊರೆಯವರು ಅದು ಸುಬ್ಬಯ್ಯನ ಹಕ್ಕಿಗೆ ಸೇರಿದ್ದೆಂದು ಸಂಪೂರ್ಣವಾಗಿ ಬಲ್ಲವರಾಗಿದ್ದಾರೆ. ಮತ್ತು ಅನೇಕ ಜನಗಳು ಸುಬ್ಬಯ್ಯನೇ ... ಎಂದು ಸರ್ಟಿಫಿಕೇಟ್ ... ಕೊಟ್ಟಿದ್ದಾರೆ. ಶಿವರಾಮೈಯನ ಗೊತ್ತು ಬೆದರಿಕೆಗೆ ... ಕ್ರಯಕ್ಕೆ ತೆಗೆದುಕೊಳ್ಳತಕ್ಕವರು ... ವನ್ನು ವಿಚಾರಿಸಿ ತೃಪ್ತಿಪಟ್ಟನಂತರ ತೆಗೆದುಕೊಳ್ಳಬೇಕೆಂದು ತಿಳಿಯಪಡಿಸಿರುತ್ತೆ. ಮತ್ತು ಈ ಮನೆಯನ್ನು ಸುಬ್ಬಯ್ಯನು ತನ್ನ ಇಷ್ಟಬಂದಂತೆ ವ್ಯವಹರಿಸಬಹುದೆಂದು ಇವನ ಅಣ್ಣ ... ಯನು ಸಮ್ಮತಿ ಪಟ್ಟಿರುತ್ತಾನೆ.

ಶ್ರೀ. ... ಗುರ್ತಿನ
... ಸುಬ್ಬಯ್ಯ ...

ಬಹುದೇಶ ವೃತ್ತಾಂತಗಳು.

—(ಮೈಸೂರು)—

ನಿನ್ನೆದಿನ ... ದಲ್ಲಿ ... ಸಮಾರಾಧನೆಯು ಅತ್ಯಂತ ವಿಜೃಂಭಣೆಯಿಂದ ಜರುಗಿತು. ಸರ್ಕಾರದ ಎಲ್ಲಾ ಕೋರ್ಟು ಕಛೇರಿಗಳಿಗೂ ರಜಾ ಕೊಡಲ್ಪಟ್ಟಿತ್ತು. ಅಧಿಕಾರಿಗಳೂ ಅನೇಕರು ಸಮಾರಾಧನೆಗೆ ದಯಮಾಡಿಸಿದ್ದರು.

ಶ್ರೀಮನ್ ಮಹಾರಾಜರವರು ... ಬರುವ ... ಪ್ರಯಾಣಮಾಡುವರೆಂತಲೂ, ಅವರ ಜೊತೆಯಲ್ಲಿ ... ದಯಮಾಡಿಸುವ ...

[illegible]

ಶಿವಮೊಗ್ಗ ತಾಲೂಕು		೨೦	ಕಡೂರು
೫ ನಲ್ಲಿಕ ...		೨೬ ,,	ಹರಪನಹಳ್ಳಿ
೬ ,,	...	೦೭ ,,	...
೭ ,,	ಹೊಳೆನರಸೀಪುರ	೨೮ ,,	ಮಡಕಶಿರ
೮ ,,	ತಾಂಕೆರೆ	೨೯ ,,	...
೯ ,,	ಅರಸೀಕೆರೆ	೩೦ ,,	...
೧೦ ,,	ಶಿವಮೊಗ್ಗ	೩೧ ,,	...
೧೧ ,,	ಮಾಲೂರು	ಜನವರಿ ೧೮೯೭	
೧೨ ,,	...	೧	...
೧೩ ,,	ಅರಸೀಕೆರೆ	೨ ,,	...
೧೪ ,,	ನಗರ	೩ ,,	ಕಲಸ ಮತ್ತು ...
೧೫ ,,	ತಿಲಗುಪ್ಪ	೪ ,,	...
೧೬ ,,	ಜಗ	೫ ,,	ಅರಸೀ...
೧೭ ,,	...	೬ ,,	...
೧೮ ,,	...	೭ ,,	...
೧೯ ,,	ನಗರ	೮ ,,	...
೨೦ ,,	...	೯ ,,	...
೨೧ ,,	...	೧೦ ,,	...
೨೨ ,,	ನಗರ	೧೧ ,,	...
೨೩ ,,	...	೧೨ ,,	...
೨೪ ,,	...	೧೩ ,,	...

ಗಾಯಕವಾಡಿ ಮಹಾರಾಜರು

[illegible]

ಆಯುರ್ವೇದ ವೈದ್ಯಶಾಲಾ ನಿರ್ಮಾಣ.

[illegible]

ವಿವಿಧ ವರ್ತಮಾನಗಳು.

ಭರತಪುರದ ಮಹಾರಾಜರವರಿಗೆ ಕಳೆದ ವಾರದಲ್ಲಿ ಕೆಟ್ಟ ಕಾಯಿಲೆ ಪ್ರಾಪ್ತವಾಗಿದ್ದು ಈಗ ಗುಣಮುಖವಾಗಿದೆ ಎಂದು ಕೇಳುವದಕ್ಕೆ ಸಂತೋಷಿಸುತ್ತೇವೆ.

ಮುಂಬಯಿಯಲ್ಲಿ ರಘುನಾಥ ರಾಮಚಂದ್ರ ಎಂಬ ಒಬ್ಬ ಮನುಷ್ಯನು ತನ್ನ ಮಾವನು ತನ್ನ ಸಂಪತ್ತನ್ನು ಕೊಡಲಿಲ್ಲವೆಂದು ಆತ್ಮಹತ್ಯ ಮಾಡಿಕೊಂಡು ಸತ್ತನು.

ಅರಬಸ್ಥಾನದಲ್ಲಿಯ ಮಹಮ್ಮದೀಯರ ಗೋರಿಯ ಮೇಲೆ ಹಸರು ನೀಲಿ ಕೆಂಪು ಮುಂತಾದ ವಜ್ರಗಳು ೨೦,೦೦,೦೦೦ ಪೌಂಡ್ ಕಿಮ್ಮತ್ತಿನವು ಕೂಡಿಸಿರುತ್ತವೆ.

ರಾಣೀದ ಕಲೆಕ್ಟರಾದ ಮಿ. ಸಿಂಕ್ಲೆಯರ ಸಾಹೇಬರು ಹಿಂದು ಜನರಂತೆ ತಮ್ಮ ಬಂಗ್ಲೇದಲ್ಲಿ ದೀಪೋತ್ಸವ ಮಾಡಿ ಕೆಲವು ಗೃಹಸ್ಥರನ್ನು ವೀಳೆಯದ ಸಮಾರಂಭಕ್ಕೆ ಕರೆಸಿ ಬಹು ಸನ್ಮಾನ ಮಾಡಿದರು.

ಮಧ್ಯಪ್ರಾಂತ್ಯದಲ್ಲಿಯ ಭಂಡಾರಾ ಜಿಲ್ಲೆಯಲ್ಲಿಯ ಒಬ್ಬ ಸ್ತ್ರೀಯಳು ತನ್ನ ಬಸುರಿನಿಂದ ಐದು ಪುತ್ರರನ್ನು ಒಮ್ಮೆಲೆ ಹೆತ್ತಳು. ಈಗ ಆ ಐದು ಹುಡುಗರೂ ಸುಖವಾಗಿರುತ್ತವೆಂದು ಅಲ್ಲಿನ ವರ್ತಮಾನ ಪತ್ರಗಳಿಂದ ತಿಳಿಯುತ್ತೇವೆ.

ಮುಂಬೈ ಮುನಿಸಿಪಾಲಿಟಿಯ ಕಮಿಷನರ ಮಿ. ಅಕ್ವೊರ್ಥ ಸಾಹೇಬರವರು ಮುಂಬೈಯಲ್ಲಿಯ ಟ್ರಾಮ್ವೇ ಕಂಪನಿಯವರ ಎಲ್ಲದಾರಿಯನ್ನೂ ಖರೀದಿಗೆ ತೆಗೆದುಕೊಳ್ಳಬೇಕೆಂದು ಯೋಚನೆ ಮಾಡಿರುತ್ತಾರೆ. ಇದರ ಕಿಮ್ಮತ್ತು ೮೦ ಲಕ್ಷ ರೂಪಾಯಿ ಅಜಮಾಯಿಸು ಆಗಿದೆ.

ಫಿಲೆಡೆಲ್ಫಿಯದಲ್ಲಿನ ಒಬ್ಬ ನಾವಿಗನು ತನಗೆ ಒಂದು ದಿವಸ ಊಟಕ್ಕೆ ಅನ್ನ ಸಿಗಲಿಲ್ಲವೆಂದು ಕೋಪಿಸಿಕೊಂಡು ಅನ್ನ ಬಿಟ್ಟನು. ಮುಂದೆ ೩೩ ದಿವಸ ಆಹಾರ ಇಲ್ಲದೆ ಬದುಕಿ ಸತ್ತುಹೋದನು. ದಿನಂಪ್ರತಿ ಒಂದು ಗುಟಕು ನೀರುಮಾತ್ರ ಕುಡಿಯುತ್ತಿದ್ದನು. ಅವನಿಗೆ ಊಟದ ಮೇಲೆ ಮನಸ್ಸು ಎಳೆಯುವದೆಂದು ಬೇಕಾದ ಪಕ್ವಾನ್ನ ಮಾಡಿ ಅವನ ಮುಂದೆ ಇಟ್ಟರೂ ಬಿಟ್ಟ ನಿಂದದ್ದು ಬಿಡುತ್ತಿದ್ದನು.

ದಾದಾಭಾಯಿ ನವರೋಜಿಯವರು ವಿಲಾಯತಿಯನ್ನು ಬಿಟ್ಟು ಇಂಡಿಯಾಕ್ಕೆ ಹೊರಡುವದಕ್ಕಿಂತ ಮುಂಚಿತವಾಗಿ ಪಾರ್ಲಿಮೆಂಟಿನ ಇಂಡಿಯಾ ಕಮಿಟಿಯವರು ಅವರಿಗೆ ಒಂದು ಭಾರೀ ಔತಣವನ್ನು ಮಾಡಿಸಿ ಅವರು ಸುಖವಾಗಿ ವಾಪಸು ವಿಲಾಯತಿಗೆ ಬರಬೇಕೆಂದು ಅಪೇಕ್ಷಿಸಿದರು. ಇವರು ಡಿಸೆಂಬರ ಆಖೈರಿನಲ್ಲಿ ಲಾಹೋರಿನಲ್ಲಿ ನ್ಯಾಷನಲ್ ಕಾಂಗ್ರೆಸ್ ಸಮಾಜವನ್ನು ನಡಿಸುವದಕ್ಕಾಗಿಯೇ ಬರುತ್ತಾರೆ.

ಅರಬ್ಬೀ ಸಮುದ್ರದಲ್ಲಿ ವಿಪರೀತ ಭಯಂಕರವಾದ ಸುಂಟರ ಗಾಳಿಯು ಬೀಸುತ್ತಲಿದೆ. ಇದರಿಂದ ಆ ಸಮುದ್ರದಲ್ಲಿ ಪ್ರಯಾಣ ಮಾಡುವ ಜಹಜುಗಳು ಮತ್ತು ಹಡಗುಗಳೆಲ್ಲಾ ಬಹು ಜಾಗರೂಕತೆಯಿಂದ ನಡೆಸಲ್ಪಡುತ್ತಲಿವೆ. ಯಾವ ಕಾಲದಲ್ಲಿ ಯಾವ ಹಡಗಿಗೆ ಎಂಥಾ ಅಪಾಯ ಬರುವದೋ ಎಂದು ಪ್ರಯಾಣಸ್ಥರು ಹೆದರುತ್ತಲಿದ್ದಾರೆ. ಕೊಂಬಯಿ ಮತ್ತು ಪ್ಲುಮು ಫಟ್ಟದ ಬಂದರ ರೇವುಗಳಲ್ಲಿ ಅಧಿಕಾರಿಗಳು ಬಹು ಎಚ್ಚರವಾಗಿದ್ದಾರೆಂದು ವರ್ತಮಾನ ಬಂದಿದೆ.

ವಿಲಾಯತೀ ಸಂಸ್ಥಾನದ ವಿಕ್ಟೋರಿಯಾ ಮಹಾರಾಣಿಯವರ ಹೆಣ್ಣುಮಕ್ಕಳು ಯೂರೋಪಿನ ಮುಖ್ಯ ಮುಖ್ಯ ಸಂಸ್ಥಾನದ ಅರಸರ ಪತ್ನಿಯರಾಗಿದ್ದಾರೆ. ಅವರಿಗೆಲ್ಲಾ ಈಗ ಪುತ್ರರು ಹುಟ್ಟಿರುತ್ತಾರೆ. ಜರ್ಮನಿ, ಪ್ರಿಷ್ಯ, ಗ್ರೀಸ್, ರೋಮೇನಿಯ, ಹೆಸ್ಸಿ, ಸಾಕ್ಸ್ಬರ್ಗ್ ಎಂಬ ಯೂರೋಪಿಯರ ರಾಜ್ಯಗಳಲ್ಲಿ ರಾಜ್ಯವಾಳುವವರೆಲ್ಲಾ ನಮ್ಮ ಮಹಾರಾಣಿಯವರ ಮೊಮ್ಮಕ್ಕಳೇ ಆಗಿರುತ್ತಾರೆ. ಇದರಿಂದ ಅನೇಕ ಕಾಲದವರೆಗೂ ಯೂರೋಪಿನಲ್ಲಿ ಯಾವ ತೀಕ್ಷ್ಣವಾದ ಯುದ್ಧಗಳೂ ಪ್ರಾಪ್ತವಾಗಲಾರವೆಂತಲೂ, ಬ್ರಿಟಿಷ ರಾಜ್ಯಕ್ಕೆ ಎಲ್ಲೆಲ್ಲಿಯೂ ಬಹು ಕಾಲದವರೆಗೂ ಚ್ಯುತಿ ಇಲ್ಲವೆಂತಲೂ ಎಲ್ಲರೂ ಊಹಿಸುತ್ತಲಿದ್ದಾರೆ.

ಐರ್ಲೆಂಡ್ ದ್ವೀಪದಲ್ಲಿ ಪ್ರಸಿದ್ಧರಾದ ಒಬ್ಬ ಬ್ಯಾರಿಷ್ಟರು ಒಂದಾನೊಂದು ಭಾರಿ ಖೂನಿ ಮೊಕದ್ದಮೆಯಲ್ಲಿ ಮ್ಯಾಜಿಸ್ಟ್ರೇಟರ ಕಡೆ ಆರ್ಗ್ಯುಮೆಂಟ್ ಮಾಡುತಲಿದ್ದರು. ಆಗ್ಗೆ ಇವರಿಗೆ ಕೆಮ್ಮು ಉಪದ್ರವವಿದ್ದುದರಿಂದ ಅದಕ್ಕೆ ಔಷಧವಾದ ಮಾತ್ರೆಗಳನ್ನು ಒಂದು ಕೈಯಲ್ಲಿಟ್ಟುಕೊಂಡು ಆಗಾಗ್ಗೆ ಒಂದೊಂದು ಮಾತ್ರೆಯನ್ನು ಬಾಯಿಗೆ ಹಾಕಿಕೊಳ್ಳುತಲಿದ್ದರು. ಮತ್ತೊಂದು ಕೈಯಲ್ಲಿ ಕೊಲೆಮಾಡಿದವನ ಪಿಸ್ತೂಲಿನ ಗೋಲಿಯನ್ನು ಹಿಡಿದುಕೊಂಡಿದ್ದರು. ಎಲ್ಲರೂ ಇವರ ಆರ್ಗ್ಯುಮೆಂಟನ್ನು ಕೇಳಿ ಬೆರಗಾಗುತಲಿರುವಲ್ಲಿ ಸಾಹೇಬರು ಇದ್ದಕ್ಕಿದ್ದಂತೆ ಕೆಮ್ಮು ಗುಳಿಗೆಗಳನ್ನು ತಿರುಗಿಸುತ್ತಾ ಭೀಕರವಾದ ಧ್ವನಿಯನ್ನು ಮಾಡಿಕೊಂಡು ಅಯ್ಯೋ ಅಯ್ಯೋ ಪಿಸ್ತೂಲಿನ ಗುಂಡನ್ನು ನುಂಗಿದೆನಲ್ಲಾ ಎಂದು ಅರಚಿದರು. ಇದು ಆಶ್ಚರ್ಯವಾದದ್ದು.

ಹಿಂದೂಸ್ಥಾನದ ವೈಸರಾಯಿ ಗೌರ್ನರ್ ಜನರಲ್ ರವರು ಕಳೆದ ೧೮ನೆ ತಾರೀಖಿನ ದಿನ ಪತ್ನೀ ಪರಿವಾರ ಸಮೇತರಾಗಿ ಬರ್ಮಾ ರಾಜ್ಯಕ್ಕೆ ದಯಮಾಡಿಸಿದರು. ಅವರು ಇನ್ನೂ ೧ ವಾರದ ವರೆಗೂ ಅಲ್ಲೇ ಇರುವರೆಂದು ಕೇಳುತ್ತೇವೆ. ಅನೇಕ ಹೊಸ ಕಟ್ಟಡಗಳಿಗೆ ಅಸ್ತಿಭಾರವನ್ನು ಹಾಕಿದರು. ಹಾದಿಗೆ ನಡೆದ ಯುದ್ಧದಲ್ಲಿ ಮಡಿದ ಹಿಂದೂ ಮತ್ತು ಯೂರೋಪಿಯನ್ ಸೈನಿಕರ ಹೆಸರಿನಲ್ಲಿ ಕಟ್ಟಿ ತಯಾರಾಗಿದ್ದ ಪ್ರತಿಮೆಯೊಂದನ್ನು ವೈಸರಾಯರು ಪ್ರಕಾಶಮಾಡಿದರು. ಅಲ್ಲಿನ ನಾನಾ ಸಂಘದವರೂ ವಿಜ್ಞಾಪನಾ ಪತ್ರಿಕೆಗಳನ್ನು ತಂದು ಒಪ್ಪಿಸುತ್ತಲಿದ್ದಾರೆ. ಅವರೆಲ್ಲರಿಗೆ ಸದುತ್ತರಗಳನ್ನು ಕೊಟ್ಟು ಸಂತೋಷಪಡಿಸುತ್ತಲಿದ್ದಾರೆ. ಅಲ್ಲಿನ ಅಧಿಕಾರಿಗಳು ತಮಗೆ ಅಲ್ಲೇ ಒಂದು ಹೈಕೋರ್ಟನ್ನು ಏರ್ಪಡಿಸಿ ಕೊಡಬೇಕೆಂತಲೂ, ಒಬ್ಬ ಲೆಫ್ಟಿನೆಂಟ್ ಗೌರ್ನರ್ ಎಂಬ ಅಧಿಕಾರಿಯನ್ನು ನೇಮಿಸಿಕೊಡಬೇಕೆಂತಲೂ ವೈಸರಾಯರಿಗೆ ವಿಜ್ಞಾಪನೆ ಮಾಡಿಕೊಂಡಿದ್ದಾರೆ.

ನಮ್ಮ ಇಂಡಿಯಾ ದೇಶದಲ್ಲಿ ವೈಸರಾಯಿಗಳಾಗಿದ್ದವರಲ್ಲಿ ಸರ್ ಹೆನ್ರಿ ನಾರ್ಥ್ ಎಂಬವರು ಮೊದಲು ನಿಯಮಿಸಲ್ಪಟ್ಟದ್ದು ಅನಂತರ ತಮಗೆ ಆ ಅಧಿಕಾರವಿರಲಿಕ್ಕೆ ಕಾರಣವಿಲ್ಲವೆಂದು ಆ ಪದವಿ ಅಪ್ಪಣೆ ಕೊಡಿಸಿದ್ದು ನಮ್ಮ ವಾಚಕರಿಗೆ ತಿಳಿದಿರುವದಷ್ಟೆ. ಬಂದಾನೊಂದು ವರ್ತಮಾನ ಪತ್ರಿಕೆಯ ಪ್ರತಿನಿಧಿಯು ಈ ಅಧಿಕಾರಿಗಳೊಡನೆ ಸಂಭಾಷಣಾರ್ಥವಾಗಿ ಹೋಗಿ ತಾವು ವೈಸರಾಯರಾಗಿರುವದಕ್ಕೆ ಯಾಕೆ ಒಪ್ಪಲಿಲ್ಲ ಎಂಬದಾಗಿ ಪ್ರಶ್ನೆ ಮಾಡಲು ಅವರದಕ್ಕೆ ಪ್ರತಿಯಾಗಿ ಇಂಡಿಯಾ ದೇಶದಲ್ಲಿ ಪ್ರಕಟಿಸಲ್ಪಡುವ ವರ್ತಮಾನ ಪತ್ರಿಕೆಗಳ ಅಭಿಪ್ರಾಯಗಳನ್ನು ತಾವು ಸಂಗ್ರಹಿಸಿ ಇಟ್ಟುಕೊಂಡಿದ್ದನ್ನು ತೆಗೆದು ತೋರಿಸಿ ಮೊದಲು ತಾವು ವೈಸರಾಯರಾಗಬೇಕೆಂಬ ಇಚ್ಛೆ ಕೊಂಚವೂ ಇರಲಿಲ್ಲವೆಂತಲೂ ಆದರೆ ತಂತೀಮೂಲಕ ತಮ್ಮ ಅಭಿಮತವನ್ನು ತಿಳಿಯುವದಕ್ಕೆ ಸರ್ಕಾರದವರು ಅಪೇಕ್ಷಿಸಿದ ಕಾಲದಲ್ಲಿ ತಾವು ಒಪ್ಪಿಕೊಂಡರೆಂತಲೂ ಅನಂತರ ವರ್ತಮಾನ ಪತ್ರಿಕೆಗಳ ಅಭಿಪ್ರಾಯಗಳನ್ನು ನೋಡಿ ನಿಷ್ಕರ್ಷೆಯನ್ನು ಬದಲಾಯಿಸಬೇಕಾಯಿತೆಂತಲೂ ವ್ಯಕ್ತಪಡಿಸಿದರು. ರಾಜ್ಯಧುರಂಧರರೆಂಬ ಬಿರುದಿಗೆ ಯೋಗ್ಯರಾಗಿರುವವರು ವರ್ತಮಾನ ಪತ್ರಿಕೆಗಳ ಅಭಿಪ್ರಾಯವನ್ನು ಯಾವ ರೀತಿಯಲ್ಲಿ ಪರಿಗಣಿಸುವರೆಂಬುವುದು ಇದರಿಂದ ಕೊಂಚಮಟ್ಟಿಗೆ ತಿಳಿಯುವುದು.

ಸಾಲಿಸ್ಬರ್ಗ್‌ನಲ್ಲಿ ಒಬ್ಬ ಮುದುಕಿಯು ಕೆಲವು ದಿವಸಗಳ ಕೆಳಗೆ ಸತ್ತಳು. ಅವಳು ಮಂತ್ರವಾದಿಯೆಂದು ಅವಳನ್ನು ಕಂಡವರೆಲ್ಲರೂ ಹೆದರುತ್ತಿದ್ದರು. ಅವಳನ್ನು ಹೂಳುವದಕ್ಕೆ ಹೊತ್ತುಕೊಂಡು ಹೋಗುವಾಗ್ಗೆ ಅವಳ ನೆರೆಮನೆಯಲ್ಲಿ ಒಂದು ಹಸು ಆಕಸ್ಮಾತ್ತಾಗಿ ಸತ್ತುಹೋಯಿತೆಂಬ ವರ್ತಮಾನ ಜನರಿಗೆ ತಿಳಿದಕೂಡಲೆ, ಅವರಿಗೆ ಅನ್ಯ ಚೇತರಿಕೆ ಹುಟ್ಟಿತು. ಈ ಮಂತ್ರಗಾತಿಯನ್ನು ಹೊತ್ತುಕೊಂಡು ಹೋಗಿ ಹೂತುಬಿಟ್ಟರು. ಅವರು ವಾಪಸು ಬಂದು ತಮ್ಮ ಪಟ್ಟಣದ ಗ್ರಾಮಾಧಿಕಾರಿಗೆ ಇದೆಲ್ಲಾ ವಿವರಿಸಿ ತಿಳಿಸಿದರು. ಅತನು ಬಂದು ಕುದುರೆಯನ್ನು ತೆಗೆದುಕೊಂಡು ಹೋಗಿ, ಅವಳನ್ನು ಹೂತಿರುವ ಸ್ಥಳದಲ್ಲಿ ಅವಳ ಮೇಲೆ ಒಂದು ಕಡೆಯಿಂದ ಮತ್ತೊಂದು ಕಡೆಗೆ ಹಾರಿಸಿದರೆ ಅವಳಿಂದ ಜನರಿಗೆ ಯಾವ ವಿಧವಾದ ಅಪಾಯವೂ ಉಂಟಾಗಲಾರದು ಎಂಬದಾಗಿ ಶಾಸ್ತ್ರ ವಿಧಿಯನ್ನು ಹೇಳಿದನು. ಆಗ ಜನರು ಬಹು ಸಂತೋಷದಿಂದ ಒಂದು ಗೂಟ್ಟದ ಕುದುರೆಯನ್ನು ಹಿಡಿದುಕೊಂಡು ರುದ್ರಭೂಮಿಗೆ ಹೋದರು. ಅಲ್ಲಿ ಅದನ್ನು ಹಾರಿಸಬೇಕೆಂದು ಎಷ್ಟು ಪ್ರಯತ್ನ ಮಾಡಿದರೂ ಅದು ಹಾರುವದಕ್ಕೆ ಹಿಂತೆಗೆಯಿತು. ಆಗ ಜನಗಳ ಹೆದರಿಕೆಯು ವಿಪರೀತವಾಯಿತು. ಕುದುರೆಯನ್ನು ಬಿಟ್ಟು, ಒಂದು ಗೂಳವನ್ನು ಚೆನ್ನಾಗಿ ಕೆಂಪಗೆ ಕಾಸಿ ಅವಳ ಶವವನ್ನು ಗೋರಿಯಿಂದ ಕಿತ್ತು ಶವದ ಎದೆಗೆ ನುಗ್ಗಿಸಿದರು. ಇದರಿಂದ ತಮ್ಮ ಕೋರಿಕೆಯು ನೆರವೇರಿತೆಂದು ತಿಳಿದು ತಮ್ಮ ಮನೆಗಳನ್ನು ಕುರಿತು ಹೊರಟುಹೋದರು. ಹೂತಿದ್ದ ಶವವನ್ನು ಕಿತ್ತು ಅವಕ್ಕೆ ಅವಮಾನ ಮಾಡಿದರೆಂಬ ವರ್ತಮಾನವು ಸವಿಸದಿದ ಮ್ಯಾಜಿಸ್ಟ್ರೇಟರಿಗೆ ತಿಳಿಯಿತು. ಅದ್ದರಿಂದ ಅವರು ಈ ಕೃತ್ಯವನ್ನು ನಡೆಸಿದ ಸುಮಾರು ೨೦೦ ಜನರನ್ನು ಕೈಗ್ರಾಹದಲ್ಲಿಟ್ಟಿದ್ದಾರೆ. ಅವರ ಅಜ್ಞಾನವು ಈಗಲೀಗ ಅವರಿಗೆ ಸುಜ್ಞಾನವನ್ನು ತರುವದರಲ್ಲಿ ಸಂಶಯವಿಲ್ಲ.

ಗುಂಡ್ಲುಪೇಟೆ ಗೌರ್ನಮೆಂಟ್ ಕನ್ನಡಸ್ಕೂಲ್ ಬ್ರಾಂಚ್ ಗರಲ್ಸ್‌ಸ್ಕೂಲ್ ವಿದ್ಯಾರ್ಥಿನಿಯರ ಬಹುಮಾನಸಭಾ.

ಇಂಗ್ಲಿಷ್‌ಸ್ಕೂಲ್ ಹೆಡ್ಮಾಸ್ಟರ್ ಜಿ. ಶ್ರೀಕಂಠಯ್ಯನವರ ಪ್ರಾರ್ಥನಾನುಗುಣವಾಗಿ ಈದಿವಸ ಸಾಯಂಕಾಲ ೫ ಗಂಟೆಗೆ ಸಭೆಯಾಗಿ ವಿದ್ಯಾಭಿಮಾನಿಗಳಾದ ದೊಡ್ಡ ಮನುಷ್ಯರುಗಳೆಲ್ಲರೂ ಗುಂಡ್ಲುಪೇಟೆಯಲ್ಲಿರುವ ಇಂಗ್ಲಿಷ್‌ಸ್ಕೂಲಿನಲ್ಲಿ ಸಭೆಯನ್ನು ಅಲಂಕರಿಸಿದ್ದರು.

ಈಸಭೆಯಲ್ಲಿ ಸಭಾನಾಯಕ ಪದವಿಯನ್ನು ಭೂಷಿಸಲು ಮ|| ಅಮಲ್ದಾರ ನಾಗಳದ ರಾಮಚಂದ್ರರಾಯರವರೂ ಮತ್ತು ಮ|| ಫಾರೆಸ್ಟ್ ಸಬ್ ಅಸಿಸ್ಟೆಂಟ್ ಕನ್ಸರ್ವೇಟರ ಬಿ. ರಾಮಸ್ವಾಮಯ್ಯಂಗಾರರವರೂ ಸಹ ಪ್ರಾರ್ಥಿಸಲ್ಪಟ್ಟ ನಮ್ಮ ಪ್ರಾರ್ಥನೆಯನ್ನು ಸಫಲಮಾಡಿದರು.

ಅನಂತರದಲ್ಲಿ ಸಭಾನಾಯಕರ ಅನುಮತಿಯಿಂದಲೂ ಹೆಡ್ಮಾಸ್ಟರವರ ಅಸ್ವಸ್ಥತೆಯಿಂದಲೂ ಗ|| ಕನ್ನಡಸ್ಕೂಲ್ ಟೀಚರಾದ ನರಸಪ್ಪನವರಿಂದಲೂ ಸ್ಕೂಲಿನ ವಿದ್ಯಾಭಿವೃದ್ಧಿಯ ವಿವರಣೆ ಮಾಡಲ್ಪಟ್ಟಿತು—ವಿದ್ಯಾಭಿವೃದ್ಧಿಯ ವಿವರಣೆ.

ಈ ದೇಶದಲ್ಲಿ ಹಿಂದೂಸ್ತ್ರೀಯರು ಕೆಲವು ಕಾಲದಿಂದ ವಿದ್ಯಾವಿಹೀನರಾಗಿ ಸ್ತ್ರೀಪರೀಕ್ಷೆಯಿಲ್ಲದೆ ಆಯಾ ವ್ಯವಹಾರಗಳಿಗೆ ಟೋಕ ಉಂಟಾಗುತ್ತಿದ್ದುದರಿಂದ ವೈಸರಾಯಿ ಗೌರ್ನಮೆಂಟಿನವರು ಅತ್ಯುತ್ಸಾಹದೊಡನೆ ಪ್ರೋತ್ಸಾಹಗೊಳಿಸಿ ಸ್ತ್ರೀವಿದ್ಯಾಭ್ಯಾಸವನ್ನು ಅಭಿವೃದ್ಧಿಗೆ ತರುತ್ತಿರುವರೆಂಬ ಕಾರಣ ಇವರಿಗೆ ಸ್ತ್ರೀ ಕೃತಜ್ಞರಾಗಿರುವವು.

ಸನ್ ೧೮೯೩ನೆ ಇಸವಿ ಅಕ್ಟೋಬರು ತಾರೀಖು ೧೩ರಲ್ಲು ಮಿಸ್ಟರ ಜೆ. ವೆಯರ್ ಸಹ ಎಜುಕೇಷನ್ ಡೆಪ್ಯುಟಿ ಇನ್ಸ್ಪೆಕ್ಟರವರು ಈ ತಾಲ್ಲೂಕು ಗೌರ್ನಮೆಂಟ್ ಸ್ಕೂಲುಗಳ ಪರೀಕ್ಷಾರ್ಥವಾಗಿ ದಯಮಾಡಿಸಿದ್ದಾಗ್ಯೆ ಬಾಲಕರ ಸ್ಕೂಲಿನಲ್ಲೇ ವಿದ್ಯಾಭ್ಯಾಸಂಗವನ್ನು ಮಾಡುತ್ತಿದ್ದ ೧೧ ಬಾಲಿಕೆಯರನ್ನು ಪರೀಕ್ಷಿಸಿ ಸಂತೋಷಹೃದಯರಾದ್ದರಿಂದಲೂ ಕೆಲವು ದೊಡ್ಡ ಮನುಷ್ಯರು ಇವರಿಗೆ ಹೇಳಿಕೊಂಡದ್ದರಿಂದಲೂ ತಕ್ಷಣ ಯೋಚನೆಗಳೊಡನೆ ೧೮೯೦ನೆ ಇಸವಿ ನವಂಬರು ೧ನೇ ತಾರೀಖಿನಿಂದ ಪ್ರತ್ಯೇಕವಾಗಿ ಗರಲ್ಸ್ ಸ್ಕೂಲನ್ನು ಸ್ಥಾಪಿಸಿದರು ಮತ್ತು ಈ ಸ್ಕೂಲಿನಲ್ಲಿ ಪಾಠಗಳನ್ನು ಹೇಳುವದಕ್ಕೆ ಸಾಕಾದ ಒಬ್ಬ ಉಪಾಧ್ಯಾಯರನ್ನು ೭ ರೂಪಾಯಿಯ ಸಂಬಳದ ಮೇಲೆ ನಿಯಮಿಸಿದರು. ಇವರು ತುಂಬಾ ಶ್ರಮವನ್ನು ತೆಗೆದುಕೊಂಡು ಇದುವರೆಗೆ ವಿನಿಯೋಗಿಸುತ್ತ ಈ ಸ್ಕೂಲಿನ ಅಭಿವೃದ್ಧಿಗೆ ತಂದಿರುತ್ತಾರೆ.

ವರ್ಷಗಳು.	ಪರೀಕ್ಷಾಂತದಲ್ಲಿದ್ದ ವಿದ್ಯಾರ್ಥಿನಿಯರು.	ರಿಜಿಸ್ಟ್ರ ಸರಾಸರಿ	ದಿನವಹಿ ಸರಾಸರಿ
1890, 91	35	32	21
1891, 92	35	35	22
1892, 93	41	28	40

ಮೇಲೆ ವಿವರಿಸಿದಂತೆ ವಿದ್ಯಾರ್ಥಿನಿಯರು ಹೆಚ್ಚುತ್ತಾ ಬರಲು ಅವರವರ ಯೋಗ್ಯತಾನುಸಾರ ಪಾಠಹೇಳಲು ತರಗತಿಗಳಾಗಿ ವಿಂಗಡಿಸಲ್ಪಟ್ಟವು. ತರಗತಿಗಳೂ ವಿದ್ಯಾರ್ಥಿನಿಯರೂ ಸಹ ಹೆಚ್ಚಿದ್ದರಿಂದಲೂ ಈಗಿನ ರೂಲ್ಸುಗಳ ಪ್ರಕಾರವೇ ಪಾಠಗಳನ್ನು ಹೇಳಬೇಕಾದ್ದು ಅವಶ್ಯಕವಾದ್ದರಿಂದಲೂ ಇನ್ನೊಂದು ಟೀಚರನ್ನು ನಿಯಮಿಸಬೇಕೆಂದು ಎಜುಕೇಷನ್ ಸೆಕ್ರೆಟರಿಯವರಿಗೆ ರಿಪೋರ್ಟು ಮಾಡಿರುತ್ತೆ. ಕೂಡಲೆ ಇನ್ನೊಬ್ಬ ಟೀಚರ್ ಸ್ಯಾಂಕ್ಷನ್ ಆಗುವದಾದರೆ ಈ ಪಾಠಶಾಲೆಯೂ ಅಭಿವೃದ್ಧಿಯಾಗುವದಲ್ಲದೆ ಈಗಿನ ರೂಲ್ಸುಗಳ ಪ್ರಕಾರ ಪಾಠಗಳು ನಡೆಯುವದಕ್ಕೆ ಅನುಕೂಲವಾಗಿರುತ್ತೆ.

ಶ್ರೀಮನ್ಮಹಾರಾಜ ಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಜಿ. ಸಿ. ಎಸ್. ಐ ರವರು ಈ ಸಂವತ್ಸರ ನೀಲಗಿರಿಯಿಂದ ರಾಜಧಾನಿಗೆ ದಯಮಾಡಿಸುವ ಕಾಲದಲ್ಲಿ ಈ ಸ್ಕೂಲ ಮೇಲಿನ ತರಗತಿಯಲ್ಲಿದ್ದ ಕೆಲವು ವಿದ್ಯಾರ್ಥಿನಿಯರು ಮಹಾರಾಜರವರ ಶ್ರೀಯಶಃಪ್ರಾರ್ಥನಾರೂಪವಾದ ಒಂದು ಗೀತವನ್ನು ಗಾನಮಾಡಲು ಸಂತೋಷಹೃದಯರಾಗಿ ಈ ವಿದ್ಯಾರ್ಥಿನಿಯರ ಪ್ರೋತ್ಸಾಹಕರವಾಗಿ ೫ ರೂಪಾಯಿಗಳು ಬಹುಮಾನ ದಯಪಾಲಿಸಿದರು. ಇದು ಈ ವಿದ್ಯಾರ್ಥಿನಿಯರಿಗೆ ಸದುಪಯೋಗವಾಗುವದಕ್ಕಾಗಿ ಅವರವರು ವಿದ್ಯಾಭ್ಯಾಸಮಾಡುತ್ತಿರುವ ತರಗತಿಗಳಲ್ಲಿನ ಪಾಠ ಪುಸ್ತಕಗಳನ್ನು ಬಹುಮಾನ ಮಾಡಬೇಕೆಂದು ಯೋಚಿಸಿ ಅದೇ ಇಂಗ್ಲಿಷ್ ಸ್ಕೂಲಿನಲ್ಲಿರುವ ಸರ್ಕಾರದ ಬ್ರಾಂಚ್ ಬುಕ್ ಡಿಪೋವಿನಲ್ಲಿ ಉಪಯೋಗಕರವಾದ ಪುಸ್ತಕಗಳು ಜಾಸ್ತಿಯಾಗಿಲ್ಲವಾದ್ದರಿಂದ ಇದುವರೆಗೂ ನಿರೀಕ್ಷಿಸಬೇಕಾಯಿತು. ಈಗ ಪುಸ್ತಕಗಳೆಲ್ಲಾ ಬಂದಿದ್ದರಿಂದ ಈ ವಿದ್ಯಾರ್ಥಿನಿಯರ ಪ್ರೋತ್ಸಾಹಕರವಾದ ಬಹುಮಾನವು ಈದಿವಸ ಕೊಡಲು ಏರ್ಪಡಿಸಲ್ಪಟ್ಟಿತು. ಸ್ತ್ರೀವಿದ್ಯಾಭ್ಯಾಸದ ವಿಷಯದಲ್ಲಿ ನಮ್ಮ ಶ್ರೀಮನ್ಮಹಾರಾಜರವರು ವಿಶೇಷವಾಗಿ ಪ್ರೋತ್ಸಾಹಪಡಿಸಿ ನಮ್ಮೆಲ್ಲರಿಗೂ ಆದರ್ಶವಾದ ಉಪಕಾರವನ್ನು ಮಾಡುತ್ತಾ ನಮ್ಮಗಳನ್ನು ಕಾಪಾಡುತ್ತಿರುವದಕ್ಕಾಗಿ ಎಷ್ಟು ಕೃತಜ್ಞರಾಗಿದ್ದರೂ ಸ್ವಲ್ಪವಾಗಿಯೇ ಇದೆ. ಭಗವಂತನು ಪುತ್ರಮಿತ್ರ ಕಳತ್ರಾದಿಗಳೊಡನೆ ನಮ್ಮ ಮಹಾರಾಜರವರಿಗೆ ಆಯುರಾರೋಗ್ಯಸಂಪತ್ತು ಬಹಳ ಕಾಲದವರೆಗೂ ನಮ್ಮನ್ನು ಈ ರೀತಿಯೇ ಕಾಪಾಡಿಕೊಂಡು ಬರುವ ಹಾಗೆ ಅನುಗ್ರಹಿಸಬೇಕೆಂದು ಪ್ರಾರ್ಥಿಸಿ ಬೇಡಿಕೊಳ್ಳುತ್ತೇವೆ.

ನನ್ನ ವಿಜ್ಞಾಪನೆಯ ಪ್ರಕಾರ ದಯಮಾಡಿ ಈ ಸಭೆಯನ್ನು ಅಲಂಕರಿಸಿದ್ದಕ್ಕಾಗಿ ದೊಡ್ಡಮನುಷ್ಯರುಗಳಿಗೆ ಬಹಳ ಕೃತಜ್ಞನಾಗಿದ್ದೇನೆ.

ಅನಂತರದಲ್ಲಿ ಸಭಾನಾಯಕರ ಅಪ್ಪಣೆಯ ಮೇರೆ ಬಾಲೆಯರು ಶ್ರೀಮನ್ಮಹಾರಾಜರವರ ಶ್ರೀಯಶಃಪ್ರಾರ್ಥನಾರೂಪವಾದ ಒಂದು ಗೀತವನ್ನು ಹಾಡಿದರು. ವಿದ್ಯಾರ್ಥಿನಿಯರಿಗೆ ಬಹುಮಾನವು ಸಭಾನಾಯಕರಿಂದ ಕೊಡಲ್ಪಟ್ಟಿತು.

ಅನಂತರದಲ್ಲಿ ಸಭಾನಾಯಕರು ಸ್ತ್ರೀವಿದ್ಯಾಭ್ಯಾಸದ ವಿಷಯದಲ್ಲಿ ಉಪನ್ಯಾಸಿಸಿ—ಇದು ಅವಶ್ಯಕವಾದ್ದರಿಂದ ಇದರ ಅಭಿವೃದ್ಧಿಯ ವಿಷಯದಲ್ಲಿ ಸರ್ವರೂ ಉತ್ಸಾಹವನ್ನುಳ್ಳವರಾಗಿರುವರೊಡನೆ ಸಹಾಯ ಮಾಡಬೇಕೆಂಬುವದನ್ನು ತೋರ್ಪಡಿಸುವದಕ್ಕಾಗಿ ಮ|| ಅಮಲ್ದಾರ ನಾಗಳದ ರಾಮಚಂದ್ರರಾಯರವರು ಎರಡು ಪುಸ್ತಕಗಳನ್ನು ಮ|| ಫಾರೆಸ್ಟ್ ಸಬ್ ಅಸಿಸ್ಟೆಂಟ್ ಕನ್ಸರ್ವೇಟರ ಬಿ. ರಾಮಸ್ವಾಮಿ ಅಯ್ಯಂಗಾರರವರು ಎರಡು ಪುಸ್ತಕಗಳನ್ನೂ ಸಹ ವಿದ್ಯಾರ್ಥಿನಿಯರಿಗೆ ಬಹುಮಾನ ಮಾಡಿದರು. ಸಭಾಸದರು ಗಂಧತಾಂಬೂಲಾದಿಗಳಿಂದ ಗೌರವಿಸಲ್ಪಟ್ಟರು.

ಅನಂತರದಲ್ಲಿ ಸಭೆಯು ಉಪಸಂಹರಿಸಲ್ಪಟ್ಟಿತು. ಇನ್ನು ಮತ್ತೊಂದು ವಿಷಯವನ್ನು ತಿಳಿಸಬೇಕಾದ್ದು ಅವಶ್ಯಕವಾದ್ದರಿಂದ ವಿಜ್ಞಾಪಿಸುತ್ತೇನೆ.

ಮಹಾರಾಜಶ್ರೀ ನಮ್ಮ ಅಮಲ್ದಾರ ನಾಗಳದ ರಾಮಚಂದ್ರರಾಯರವರು ಈ ತಾಲ್ಲೂಕಿಗೆ ದಯಮಾಡಿಸಿ ಸ್ವಲ್ಪ ಕಾಲವೇ ಆದಾಗ್ಯೂ ಪ್ರಜಾಹಿತ ಚಿಂತಕರಾದ್ದರಿಂದ ಇಲ್ಲಿನ ಮುನಿಸಿಪಾಲಿಟಿ ಬೋರ್ಡುಗಳನ್ನೆಲ್ಲಾ ಸರಿಮಾಡಿ ರಸ್ತೆಗಳು ಚರಂಡಿಗಳು ಮುಂತಾದ್ದನ್ನು ದುರಸ್ತು ಮಾಡಿಸಿ ಉಚಿತವಾದ ಸ್ಥಳಗಳಲ್ಲೆಲ್ಲಾ ಲಾಂದ್ರಕಂಬಗಳನ್ನು ಏರ್ಪಡಿಸಿ ಈ ಪಟ್ಟಣವು ರಮ್ಯವಾಗಿ ಕಾಣುವಂತೆ ಮಾಡುತ್ತಿರುವರು ಮತ್ತು ವಿದ್ಯಾಭಿಮಾನಿಗಳಾದ್ದರಿಂದ ಇಲ್ಲಿನ ಸ್ಕೂಲ್ ಗಳಿಗೆ ಆಗಾಗ್ಯೆ ದಯಮಾಡಿಸಿ ಉಪಾಧ್ಯಾಯರನ್ನೂ ಬಾಲಕರನ್ನೂ ಬಾಲಕಿಯರನ್ನೂ ಸಹ ಪ್ರೋತ್ಸಾಹಗೊಳಿಸಿ ವಿದ್ಯಾಭಿವೃದ್ಧಿಯ ಪ್ರತಿಫಲವನ್ನು ತೋರ್ಪಡಿಸುತ್ತಿರುವರು. ಇತ್ಯಾದಿ ಅನೇಕ ಕಾರ್ಯಗಳನ್ನು ಮಾಡಿ ಗೊಳಿಸಿ ಅತ್ಯಾಸಕ್ತಿಯಿಂದ ಪ್ರಜಾಪಾಲನೆ ಮಾಡುತ್ತಿರುವದರಿಂದ ಇವರ ಸದ್ಗುಣ್ಯವಿಷಯಕ್ಕೆ ಕಾರಣವಾಗಿ ಇವರು ಇನ್ನೂ ಬಹುಕಾಲ ಅಧಿಕಾರದಿಂದಲೂ ಪುತ್ರಮಿತ್ರಕಳತ್ರಾದಿಗಳಿಂದಲೂ ಆಯುರಾರೋಗ್ಯದಿಂದಲೂ ನಮ್ಮಗಳನ್ನು ಕಾಪಾಡುತ್ತಿರುವ ಹಾಗೆ ಭಗವಂತನು ಅನುಗ್ರಹಮಾಡಬೇಕೆಂದು ಪ್ರಜೆಗಳೆಲ್ಲಾ ಪ್ರಾರ್ಥಿಸುತ್ತಿರುವರು. ಅದ್ದರಿಂದ ಇಂತಹ ಮಹಾನುಭಾವರ ಕಾರ್ಯಸಾಧಕತೆಯನ್ನು ನಾನು ಇಷ್ಟೆಂದು ಹೇಳುವದಕ್ಕಾಗುವದಿಲ್ಲವಾದ್ದರಿಂದ ನಾನು ಇವರಿಗೆ ಕೃತಜ್ಞನಾಗಿರುವೆನು ಮತ್ತು ಇವರು ಇದೇರೀತಿ ಆಗಾಗ್ಯೆ ಪ್ರೋತ್ಸಾಹಪಡಿಸಿ ಸಂತೋಷವನ್ನುಂಟುಮಾಡಬೇಕೆಂದು ಬೇಡುತ್ತೇನೆ.

ವಿದ್ಯಾಭಿಮಾನಿಗಳ ಸೇವಕ.

ಅಕ್ರಮ.

ನಮ್ಮ ವೃತ್ತಾಂತ ಪತ್ರಿಕೆಯನ್ನು ಬಹಳ ದಿವಸಗಳಲ್ಲಿ ಎಲ್ಲರಿಗೂ ತಪ್ಪದೆ ಪ್ರತಿವಾರವೂ ಕ್ರಮವಾಗಿ ರವಾನಿಸುತ್ತೇವೆ. ಕೆಲವು ಮಂದಿ ಚಂದಾದಾರರು ತಮಗೆ ಪತ್ರಿಕೆಗಳು ಸಕಾಲಕ್ಕೆ ತಲಪುವದಿಲ್ಲವೆಂದು ಆಗಾಗ್ಯೆ ಬರೆಯುತ್ತಾರೆ. ಕೆಲವರಿಗೆ ತಲಪುವದೇ ಇಲ್ಲವೆಂದು ಬರೆಯುತ್ತಾರೆ. ಇದರಿಂದ ಅಂಥವರ ವಿಳಾಸಗಳು ತಪ್ಪಾಗಿರಬಹುದು, ಇಲ್ಲವೆ ಸಬ್ ಆಫೀಸಿನ ಜವಾನರು ಆಯಾ ಕಡೆಗಳಲ್ಲಿ ಸರಿಯಾಗಿ ಡೆಲಿವರ ಮಾಡದೆ ಇರಬಹುದು ಎಂಬೀ ಎರಡು ಊಹೆಗಳು ಹುಟ್ಟುತ್ತವೆ. ಪತ್ರಿಕೆಗಳು ಯಾರ್ಯಾರಿಗೆ ಸಕಾಲಕ್ಕೆ ತಲಪುವದಿಲ್ಲವೋ ಅಂಥವರು ತಮ್ಮ ಸರಿಯಾದ ವಿಳಾಸವನ್ನು ಚೆನ್ನಾಗಿ ಬರೆದು ತಿಳಿಸಬೇಕು ಮತ್ತು ಸಬ್ ಆಫೀಸಿನ ಪೋಸ್ಟುಮಾಸ್ಟರುಗಳು ತಮ್ಮ ತಮ್ಮ ಡೆಲಿವರಿ ಪ್ಯೂನುಗಳಿಗೆ ಸರಿಯಾಗಿ ಬಟವಾಡೆ ಮಾಡುವಂತೆ ಹುಕುಂ ಮಾಡಬೇಕು ಎಂಬದಾಗಿ ಈ ಮೂಲಕ ಅವರವರಿಗೆ ತಿಳಿಯಪಡಿಸುತ್ತೇವೆ.

ಎಡಿಟರ್,
ವೃತ್ತಾಂತ ಪತ್ರಿಕೆ.

ಶಾಲಿವಾಹನಶಕ ೧೮೧೫ ನೇ ವಿಜಯನಾಮ ಸಂವತ್ಸರದ ಕಾರ್ತೀಕ ಬಹುಳ ಸಪ್ತಮಿ ಗುರುವಾರದಿಂದ ಕಾರ್ತೀಕ ಬಹುಳ ಚತುರ್ದಶಿ ಬುಧವಾರದ ವರೆಗಿನ ವಾರದ ಪಂಚಾಂಗ.

೧೮೯೩ ನೇ ಇಸವಿ, ನವಂಬರ್ ಮತ್ತು ಡಿಸೆಂಬರ್

ತಾ.	ವಾರ.	ತಿಥಿ	ಘಳಿಗೆ.	ನಕ್ಷತ್ರ.	ಘಳಿಗೆ.	ಮಹಮ್ಮದೀಯ ಮಾಸ ತೇದಿ.
30	ಗು.	ಸ	5-13	ಮ	20-50	17
1	ಶು.	ಅ ಉಪರಿ.	1-56	ಪು	57-8	18
2	ಶ.	ದ	58-4	ಉ	19-20	19
3	ರ *	ಏ	56-28	ಹ	20-12	20
4	ಸೋ. †	ದ್ವಾ	50-48	ಚಿ	22-19	21
5	ಮಂ.	ತ್ರ	60-0	ಸ್ವಾ	25-15	22
6	ಬು	ಚ	3-11	ವಿ	30-7	23

* ಸ್ಮಾರ್ತಏಕಾದಶಿ

† ವೈಷ್ಣವಏಕಾದಶಿ ಕಾರ್ತೀಕ ಸೋಮವಾರ

ಪೇಟೆ ಧಾರಣೆ.

ದಿನಸಿ.	ಮೈಸೂರು	ಬೆಂಗಳೂರು
	ರೂ. ಆ. ಪೈ.	ರೂ. ಆ. ಪೈ.
ಕಡ್ಡೀ ಅಕ್ಕಿ ಪಲ್ಲಾ ೧ಕ್ಕೆ	೧೨—೮—೦	೧೧—೦—೦
ಕೆಂಬೂತಿ ಅಕ್ಕಿ ಅವ್ವಲ್	೧೨—೮—೦	೯—೮—೦
ದಿಟೋ ಅಕ್ಕಿ ದುಯಂ	೧೨—೦—೦	೮—೦—೦
ಜಾಪರಾಣಿ ಅಕ್ಕಿ	೧೨—೦—೦	೧೪—೮—೦
ಸಂಣಕ್ಕಿ ಅವ್ವಲ್	೧೪—೮—೦	೧೪—೦—೦
ದಿಟೋ ಅಕ್ಕಿ ದುಯಂ	೧೪—೦—೦	೧೨—೦—೦
ತೊಗರೀಬೇಳೆ ಪಲ್ಲಾ ೧ಕ್ಕೆ	೧೪—೪—೦	೧೨—೦—೦
ದಿಟೋ ದುಯಂ ತರಹ	೧೪—೦—೦	೧೦—೮—೦
ಹ್ಯಾರಾಗಿ ಪಲ್ಲಾ ೧ಕ್ಕೆ	೪—೧೦—೦	[illegible]
ಕಾರ್ರಾಗಿ	೪—೬—೦	[illegible]
ಹುಲಸಂದೆ ಪಲ್ಲಾ ೧ಕ್ಕೆ	೧೦—೦—೦	೧೧—೦—೦
ಬಿಳೀ ಅವರೆ	೧೪—೦—೦	೧೨—೦—೦
ಹೆಸರು	೮—೮—೦	೯—೦—೦
ಉದ್ದು	೧೦—೦—೦	೮—೦—೦
ಕಡಲೆ	೯—೦—೦	೮—೮—೦
ಎಳ್ಳು	೧೪—೪—೦	೧೦—೦—೦
ಹುರಳಿ	೬—೦—೦	೬—೮—೦
ಸೀಗೇಕಾಯಿ ಮಣ ೧ಕ್ಕೆ	೨—೦—೦	೨—೦—೦
ಮೆಣಸಿನಕಾಯಿ	೩—೬—೦	[illegible]
ದುಯಂ ತರಹ	೩—೨—೦	೨—೪—೦
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ	೬—೦—೦	ಮ ೩—೦—೦
ಸಣ್ಣ ಅಚ್ಚು	೬—೮—೦	ದಿ|| ೨—೦—೦
ಒಳ್ಳೆಣ್ಣೆ ಮಣ ೧ಕ್ಕೆ	೪—೬—೦	೪—೦—೦
ಹರಳೆಣ್ಣೆ	೩—೧೪—೦	೩—೧೨—೦
ಕೊಬ್ಬರಿ ಪಲ್ಲಾ ೧ಕ್ಕೆ	೬—೦—೦	೬—೧೨—೦
ಉಪ್ಪು	೧೦—೮—೦	೭—೪—೦
ಹುಣಿಸೇಹಣ್ಣು ಮಣ ೧ಕ್ಕೆ	೨—೮—೦	೨—೦—೦
ಹಳೇ ಹುಣಿಸೇಹಣ್ಣು	೨—೪—೦	೧—೧೨—೦
ತುಪ್ಪ	೧೨—೦—೦	೧೦—೦—೦
ಸೀಮೆ ಯಂಣೆ ಪೆಟ್ಟಿ ೧ಕ್ಕೆ	೪—೧—೬	೩—೧೨—೦
ತೆಂಗಿನಕಾಯಿ ೧೦೦ಕ್ಕೆ	೫—೦—೦	೪—೮—೦
ಚಿನ್ನ (ತೋಲ)		
ಕೆಂಪು	೧೬—೧೨—೦	೧೬—೩—೦
ಹೊಸದು	೧೬—೦—೦	೧೬—೯—೦
ಗಟ್ಟಿ	೨೬—೮—೦	೨೬—೨—೦

Mysore—Printed and published for the Proprietor at the Wesleyan Mission Press.

30/11/93.

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು | ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಸಂಪುಟ ೭ — ಮೈಸೂರು—ಸನ್ ೧೮೯೩ ನೇ ಇಸವಿ ಡಿಸೆಂಬರ್ ತಾರೀಖು ೭ ನೇ ಗುರುವಾರ. — ಸಂಚಿಕೆ ೨೬

ನೋಟಿಸ್.

		ಕ್ರಯ	ಹಾಸಲು ಸಹಿತವಾಗಿ
Campbell's	ಕನ್ನಡ ವ್ಯಾಕರಣ ಸಾರ	೦ ೨ ೦	೦ ೨ ೬
Object Lessons.	ವಸ್ತು ಪಾಠಗಳು	೦ ೧ ೦	೦ ೧ ೬
Picture do	ಚಿತ್ರಗಳು ಸಹಿತವಾಗಿ	೦ ೨ ೦	೦ ೨ ೬
School Geography	ಭೂಗೋಳ ಶಾಸ್ತ್ರಸಾರ	೦ ೬ ೦	೦ ೭ ೦

ಈ ನಾಲ್ಕು ಪುಸ್ತಕಗಳು ಮೈಸೂರು ಸರ್ಕಾರದವರ ಅಪ್ಪಣೆ ಪ್ರಕಾರ ಸಕಲ ಮಠ ಶಾಲೆಗಳಲ್ಲಿಯೂ ಉಪಯೋಗಿಸತಕ್ಕವುಗಳು.

	ಕ್ರಯ	ಹಾಸಲು ಸಹಿತವಾಗಿ
ಮಾರ್ಟಿನ್ ಲೂತರ್ ಎಂಬವರ ಚರಿತ್ರೆ	೦ ೧ ೬	೦ ೨ ೦
ಸ್ತ್ರೀಯರು ಓದತಕ್ಕ ಪುಸ್ತಕ	೦ ೫ ೦	೦ ೫ ೬
ಗಣಿತ ಮಗ್ಗಿಗಳು ..	೦ ೧ ೦	೦ ೧ ೬
ಸಂಸ್ಕೃತ ಕರ್ಣಾಟಕ ಭಾಷಾಮಂಜರಿ	೦ ೨ ೦	೦ ೨ ೬
ಇಂಗ್ಲೀಷೂ ಕನ್ನಡವೂ ಶಬ್ದಾವಳಿ ೧ನೇ ೨ನೇ ಭಾಗಂಕ್ಕೆ	೦ ೧ ೦	೦ ೧ ೬
ಕಾವ್ಯಮಾಲೆ (Minor Poetical Anthology)	೦ ೮ ೦	೦ ೮ ೬
ಬಾಲವ್ಯಾಕರಣ ..	೦ ೫ ೦	೦ ೫ ೬
ಹಳಗನ್ನಡ ವ್ಯಾಕರಣ ಸೂತ್ರಗಳು	೦ ೪ ೦	೦ ೪ ೬
ಇಂಗ್ಲೀಷೂ ಕನ್ನಡವೂ ಸಂಭಾಷಣ ವಾಕ್ಯಗಳು	೦ ೧೦ ೦	೦ ೧೦ ೬
ಶಬ್ದಮಣಿ ದರ್ಪಣ ..	೧ ೦ ೦	೧ ೪ ೬
Kan. Eng. Pocket Dictionary	೧ ೩ ೦	೧ ೫ ೭
Eng. Kan. School Dictionary	೨ ೧೦ ೦	೨ ೧೨ ೬
ಬಳ್ಳೇ ತಾಯಿ ..	೦ ೪ ೪	೦ ೪ ೬
ಆತ್ಮಿಕ ದಿವ್ಯ ಯುದ್ಧ (Bunyan)	೦ ೧೨ ೦	೦ ೧೪ ೬
ಕ್ರೈಸ್ತ ಪದ್ಧತಿ ೧ ನೇ ಭಾಗ ೨ ಅಣ ೩ನೇ ಭಾಗ	೦ ೧ ೬	೦ ೨ ೦
ಭಕ್ತಿಸಾರ ..	೦ ೧ ೦	೦ ೧ ೬
ಸತ್ಯ ವಾಗ್ದಾನ	೦ ೧ ೦	೦ ೧ ೬

ಈ ಪುಸ್ತಕಗಳೂ ಇನ್ನೂ ಅನೇಕ ಪ್ರಯೋಜನಕರವಾದ ಪುಸ್ತಕಗಳೂ ಕೆಳಗೆ ನಮೂದಿಸಿರುವ ಸ್ಥಳಗಳಲ್ಲಿ ದೊರಕುತ್ತವೆ.

ಬೆಂಗಳೂರು—ಪೇಟೆಯ ಮಿಷನ್ ಪುಸ್ತಕಶಾಲೆ.

ಚಿಕ್ಕಬಳ್ಳಾಪುರ—ವೆಸ್ಲಿಯನ್ ಮಿಷನ್ ರೀಡಿಂಗ್ ರೂಮ್.

ತುಮಕೂರು—ವೆಸ್ಲಿಯನ್ ಮಿಷನ್ ಬಂಗಳೆ. ಮೈಸೂರು—ವೆಸ್ಲಿಯನ್ ಮಿಷನ್ ಪ್ರೆಸ್.

ನೋಟಿಸ್

ಪುಸ್ತಕಗಳು.	ಕ್ರಯ.
ಪ್ರಶ್ನಾ ವ್ಯವಹಾರಿಕೆ	1—8—0
ಕನ್ನಡ ಇಂಗ್ಲೀಷು ನಿಘಂಟು 1 ನೇ ದೊಡ್ಡ ತರಹ	3—0—0
,, ,, 2 ನೇ ತರಹ	2—8—0
ಬಾಲಕರು ಓದುವ ಎರಡನೆ ಜ್ಞಾನೋಪದೇಶದ ಪ್ರಶ್ನೋತ್ತರಗಳು	0—1—0
ಸಭೆಯ ನಿಯಮಗಳನ್ನು ಕುರಿತದ್ದು	0—0—6
ಕಥಾ ಸಂಗ್ರಹ 1 ನೇ ಭಾಗದಿಂದ 4 ವರೆಗೆ	1—0—0
ಕಥಾ ಸಂಗ್ರಹ 1 ರಿಂದ 6 ನೇ ಭಾಗ ಹೊಸ ಛಾಪೆ	1—0—0
,, ,, ದೊಡ್ಡ ತರಹ	1—8—0
ಜೋಳಿಗೆ ಸ್ತೋತ್ರ ಬೋಧನೆ	0—1—0
ಸತ್ಯವೇದವನ್ನು ಕುರಿತು 2 ನೇ ಭಾಗ	0—4—0
ಪ್ರಸಂಗಿಯ ಗಣನಾ	0—0—6
ಇಂಗ್ಲೀಷಿನಲ್ಲಿಯೂ, ಕನ್ನಡ ಭಾಷೆಯಲ್ಲಿಯೂ, ಶಬ್ದಗಳ ವಿಭಾಗಗಳನ್ನು ತೋರಿಸುವ ನಿಘಂಟು	0—2—0
ಕನ್ನಡ ವ್ಯಾಕರಣ (ಇಂಗ್ಲೀಷಿನಲ್ಲಿ)	2—0—0
ಹಿಂದುಸ್ಥಾನಿ ವ್ಯಾಕರಣ	1—0—0
ಬಾಲಬೋಧ ಸೋಪಾನವು	0—12—0
ದಶ ಕಟ್ಟಳೆಗಳ ಅಂಕುರೋಗವಿಭಾಗ	0—0—6
ಕ್ರಿಸ್ತರ ಬೋಧನೆಗಳ ಸಾರಾಂಶವು	0—12—0

ಮೇಲೆ ನಮೂದಿಸಿರುವ ಪುಸ್ತಕಗಳನ್ನು ಅಪೇಕ್ಷಿಸುವವರು ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್ಸಿಗೆ ಬರೆದು ತರಿಸಿಕೊಳ್ಳಬಹುದು ಅಂಚೇ ಹಾಸಲು ಬೇರೆ ಕೊಡಬೇಕು.

ವೆಸ್ಲಿಯನ್ ಮಿಷನ್ ಪ್ರೆಸ್,
ಮೈಸೂರು.

ಪ್ರಸಿದ್ಧ ಪತ್ರಿಕೆ

ಕಂ|| ಸಕಲಸುಮನಸರಿಗರುಹುವೆ | ಸುಕರಿದ್ರೀಚಾಮರಾಜ ಒಡೆಯರವರಿಂ || ಪ್ರಕಟಿಸಮುದ್ರಿತಭಾರತಕಥೆ |
ವಿಕಸಿತಪ್ರದೀಪಿಕೆವೆ ಕೇಳಲ್ಮಸಕಾನಂದಂ ||

ಕನ್ನಡ ಮಹಾಭಾರತ.

"ಶ್ರೀಕೃಷ್ಣರಾಜ ವಾಣೀವಿಲಾಸ" ಎಂಬ ಕನ್ನಡ ಮಹಾಭಾರತವು ನಮ್ಮ ಸ್ವಕೀಯ ಶ್ರೀಚಾಮುಂಡೇಶ್ವರಿ ಪ್ರೆಸ್ಸಿನಲ್ಲಿ ಪ್ರಕಟನವಾಗುವದು ಯಲ್ಲರಿಗೂ ವಿಶದವಾಗಿರುವಷ್ಟೆ ಈಗ ಹದಿನೆಂಟು ಪರ್ವಗಳೂ ಪೂರ್ತಿಯಾಗಿ ಪೂರೈಸಿಧೆ ಅಪೇಕ್ಷಿಸುವವರು ಕೆಳಗೆ ವಿವರಿಸುವ ಕ್ರಯದಮೇಲೆಗೆ ಕ್ರಯ ಪಾವತಿಮಾಡಿ ಪಡೆಯಬಹುದು

ಆದಿಪರ್ವ ರೂ ೩, ಸಭಾಪರ್ವ ೧—೪—೦, ಅರಣ್ಯಪರ್ವ ವಿರಾಟಪರ್ವ ಪ್ರತ್ಯೇಕವಾಗಿ ಪ್ರತಿ ೧೨ ಆಣೆ, ಡಿಟೋ ಕಿರ್ಮೀರ ವಧ ಫಲಶ್ರುತಿ ೧ ರೂ, ಉದ್ಯೋಗಪರ್ವ, ಭೀಷ್ಮಪರ್ವ ೨ ದ್ರೋಣಪರ್ವ ೨—೮—೦, ಕರ್ಣಪರ್ವ, ಶಲ್ಯಪರ್ವ ೧—೨—೦ ಸೌಪ್ತಿಕಪರ್ವ ೬ ಆಣೆ, ಸ್ತ್ರೀಪರ್ವ ೬ ಆಣೆ, ಶಾಂತಿಪರ್ವ ರಾಜಧರ್ಮ ೨—೬—೦, ಆಪದ್ಧರ್ಮ ೮ ಆ, ಮೋಕ್ಷಧರ್ಮ ೨—೬—೦, ಅನುಶಾಸನೀಕಪರ್ವ ೩—೧—೨—೦ ಅಶ್ವಮೇಧಿಕಪರ್ವ ೧—೧೨—೦, ಆಶ್ರಮವಾಸಿಕಪರ್ವ—ಮೌಸಲಪರ್ವ—ಮಹಾಪ್ರಸ್ಥಾನಪರ್ವ—ಸ್ವರ್ಗಾರೋಹಣಪರ್ವ ೧೦ ಆಣೆ, ಭಗವದ್ಗೀತೆ ೮ ಆಣೆ, ಯಯಾತಿರಾಯನ ಚರಿತ್ರೆ ೬ ಆ, ಹರಿಭಕ್ತಿಸಾರ ೭ ಪ್ರೈ ಲೋಕವಿರಸಿತೇಶರ ಟೀಕಿನ್ನಿನ ನೋಟ್ಸು ೮ ಆಣೆ.

ಅರಣ್ಯಪರ್ವ, ಉದ್ಯೋಗಪರ್ವ, ಕರ್ಣಪರ್ವ ಈ ಮೂರು ಪರ್ವಗಳು ಗವರ್ನಮೆಂಟ್ ಯುನಿವರ್ಸಿಟಿಯಲ್ಲಿ ದೊರೆಯುವುದು ಮೇಲೆ ಹೇಳಲ್ಪಟ್ಟಿರುವ ಪುಸ್ತಕಗಳು ನಮ್ಮಲ್ಲಿ ಸ್ವಲ್ಪವೇ ಇರುವದರಿಂದ ಜಾಗ್ರತೆಯಾಗಿ ತರಿಸಿಕೊಳ್ಳುವುದು.

ಶ್ರೀಮನ್ಮಹಾರಾಜರವರಿಗೆ ಫಲಶ್ರುತಿ ಸರಬರಾಯಿ ಮಾಡುವದಕ್ಕೆ ಮುಖ್ಯವಾಗಿ ನೇಮಿಸಲ್ಪಟ್ಟಿ.

ಎಂ. ರಾಮಪ್ಪ, ಆಲಿಸರ್,
ಪ್ರಾಪ್ರೈಟರ್ಸ್, ಶ್ರೀಚಾಮುಂಡೇಶ್ವರಿ ಪ್ರೆಸ್,
ಲಾಲ್—ಬಾಗ್ ರೋಡ್, ಬೆಂಗಳೂರು

ಸನ್ ೧೮೯೮ ರಲ್ಲಿ ಸ್ಥಾಪಿಸಲ್ಪಟ್ಟದ್ದು.

ಕನರಾ ಅಂಡ್ ಮೈಸೂರ ಟ್ರೇಡಿಂಗ್ ಏಜೆನ್ಸೀ ಆಫೀಸ್, ಮುಂಬಯಿ.

ಇವರು ತಯಾರಿಸಿರುವಂಥ—

ಹ್ಯಾಮ್‌ಧಾತ್ರೀತೈಲ

ಕಳೆದ ಜನವರಿ ತಿಂಗಳೊಂದರಲ್ಲಿ ೩,೧೦೦ ಬಾಟ್ಲಿಗಳು ಖರ್ಚಾದವು. ಈ ತೈಲದ ಮಹತ್ವವನ್ನು ಕುರಿತು, ನಾವೀಗ ಹೆಚ್ಚಿಗೆ ವರ್ಣಿಸಲಾರೆವು—ಯಾಕಂದರೆ, ಯಾರು ಈ ತೈಲವನ್ನು ಉಪಯೋಗಿಸುತ್ತಾರೋ ಅವರಿಗೆ ಒಂದೆರಡು ದಿವಸಗಳಲ್ಲಿಯೇ ಇದರ ಅಪ್ರತಿಮವಾದ ಗುಣವು ಸಹಜವಾಗಿ ಅನುಭವಕ್ಕೆ ಬರುವದು. ಆದಾಗ್ಯೂ ಇದರ ಮುಖ್ಯವಾದ ಉಪಯೋಗವನ್ನು ತಿಳಿಸುವದು ನಮ್ಮ ಕರ್ತವ್ಯವಾಗಿರುತ್ತದೆ.

ಈ ನಮ್ಮ "ಹ್ಯಾಮ್‌ಧಾತ್ರೀ ತೈಲವನ್ನು" ಪ್ರತಿದಿನ ತಲೆಗೆ ಹಾಕಿಕೊಂಡರೆ ಮಿದುಳಿನಲ್ಲಿರುವ ಉಷ್ಣತೆಯನ್ನು ಹೋಗಲಾಡಿಸುವದಲ್ಲದೆ, ಕಣ್ಣಿಗೂ, ಮೆದುಳಿಗೂ, ತಂಪುಕರಿಸಿ, ಚಿತ್ತಕ್ಕೆ ಶಾಂತತೆಯನ್ನುಂಟುಮಾಡುವದು. ಮತ್ತು ಕಣ್ಣುಗಳಿಗುಂಟಾಗುವ ಸಾಮಾನ್ಯವಾದ ವಿಕಾರಗಳನ್ನೆಲ್ಲ ಪರಿಹರಿಸುವದು. ದೃಷ್ಟಿಗೆ ತೀಕ್ಷ್ಣತೆಯುಂಟಾಗುವದು.

ಹೆಚ್ಚಾಗಿ ಓದತಕ್ಕವರಿಗೂ, ಒಂದೇ ಸಮನಾಗಿ ಕಣ್ಣಿಟ್ಟು ಕೆಲಸ ಮಾಡತಕ್ಕ ಕಾರಕೂನರಿಗೂ, ಕಣ್ಣುಗಳಲ್ಲಿ ನೀರು ಸುರಿಯುವವರಿಗೂ, ಉರಿಗಣ್ಣಿನವರಿಗೂ, ಚಿತ್ತವ್ಯಗ್ರವಾದವರಿಗೂ, ಅತ್ಯಂತ ಗುಣಕಾರಿಯಾಗಿರುವದು. ಈ ತೈಲದಲ್ಲಿರುವ ಇನ್ನೊಂದು ಅಪ್ರತಿಮವಾದ ಶಕ್ತಿಯೇನಂದರೆ—ಕೂದಲುಗಳನ್ನು ನಯವಾಗಿಯೂ, ಹೊಳೆಯುವಂತೆಯೂ, ಮಾಡುವದಲ್ಲದೇ ಬೆಳವಣಿಗೆಯನ್ನು ಹೆಚ್ಚಿಸುವದು. ಕೂದಲುಗಳ ಬುಡಗಳನ್ನು ಭದ್ರಮಾಡಿ, ಅವು ಉದರಿಹೋಗದಂತೆ ಮಾಡುವದು

ಪ್ರತಿಯೊಂದು ಬಾಟ್ಲಿಯೊಳಗೆ ೧೭ ತೊಲೆ ತೈಲವಿ ಇರುವದರಿಂದ ಒಬ್ಬನಿಗೆ ೨ ತಿಂಗಳು ಹಚ್ಚಿಕೊಳ್ಳಲಿಕ್ಕೆ ಸಾಕಾಗುವದು. ಬಡಬಗ್ಗರು ಸಹ ಕೊಂಡುಕೊಳ್ಳಲಿಕ್ಕೆ ಸುಲಭವಾಗಬೇಕೆಂಬದಕ್ಕಾಗಿ ಪ್ರತಿಯೊಂದು ಬಾಟ್ಲಿಗೆ ೧೦ ಆಣೆ ಕ್ರಯವಿಟ್ಟಿರುವೆವು ೧೨ ಬಾಟ್ಲಿಗಳುಳ್ಳ ೧ ಪೆಟ್ಟಿಗೆಗೆ ೬|| ರೂಪಾಯಿ. ಪ್ರತಿಯೊಬ್ಬ ಕುಟುಂಬಿಗನೂ, ಈ ತೈಲವನ್ನು ಉಪಯೋಗಿಸುವದು ಅವಶ್ಯವಾಗಿರುತ್ತದೆ. ಮಕ್ಕಳಿಗೂ ಹೆಂಗಸರಿಗೂ ಸಹ ಈ ತೈಲವು ಸುಖಾವಹವಾಗಿರುತ್ತದೆ.

ಈ ತೈಲ ಮತ್ತು ಈ ಕೆಳಗೆ ಬರೆದಂಥ ಔಷಧಗಳು, ಡ್ರೆಸ್ಸು, ಮುತ್ತು, ರತ್ನ,
ಬಂಗಾರ, ಬೆಳ್ಳಿ ಮುಂತಾದ ಸಾಮಾನುಗಳನ್ನು ಪಡೆಯಲಿಚ್ಛಿಸುವವರು
ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬೇಕು.

ಮ್ಯಾನೇಜರ್, ಕನರಾ ಅಂಡ್ ಮೈಸೂರು ಟ್ರೇಡಿಂಗ್ ಏಜೆನ್ಸಿ ಆಫೀಸ್, ಮಾರ್ಕೆಟ್ ಫೋರ್ಟ್. ಮುಂಬಾಯಿ,

☞ ಈ ತೈಲವನ್ನು ನಮ್ಮ ಹೊರತು ಇನ್ಯಾರೂ ಮಾಡಲಾರರು. ನಮ್ಮ ಹೆಸರಿನ ಗುರ್ತನ್ನು ನೋಡಿ ತೆಗದುಕೊಳ್ಳಬೇಕು ಬೇರೇತರದ ಎಣ್ಣೆಗಳನ್ನು ಈ ಹೆಸರನ್ನಿಟ್ಟು ಮಾರುತ್ತಿದ್ದರೆ ಜಾಗ್ರತ ಪಡಿರಿ!

ಔಷಧಗಳು.	ರು ಆ.	ಡ್ರೆಸ್ಸುಗಳು.	ರು. ಆ.
ನಯನಾಮೃತಭಸ್ಮ ಬಾಟ್ಲಿ ೧ ಕ್ಕೆ	೧—೬	ಮಖಮಲ್ಲಿನ ಟೋಪಿ	೨—೮
ನಯನಾಮೃತ ಕಾಡಿಗೆ	೧—೬	ಕಾಶ್ಮೀರಿ ಲಾಂಗ್‌ಕೋಟು	೫—೦
ಕರ್ಣಸ್ರಾವನಾಶಕ ಅಪ್ರತಿಮತೈಲ	೧—೦	ಡಿಟೊ. ಆರ್ಡಿನರಿ	೪—೮
ಮಹಾವಾತಕುಠಾರತೈಲ	೧—೦	ಡಿಟೊ. ಷಾರ್ಟಕೋಟು (ಇಂಗ್ಲೀಷಮಾದರಿ)	೪—೬
ಪ್ರಮೇಹಭಸ್ಮ	೨—೧೨	ಬಿಸ್ಮಾರ್ಕ ಕಾಶ್ಮೀರಿಕೋಟು	೨—೮
ವಿವಿಧವ್ರಣಹರಪಟ್ಟಿಕೆಯು	೧ ೦	ಡಿಟೊ. ಆರ್ಡಿನರಿ	೨—೪
ಬಾಲಸಂಜೀವಿನೀಗುಳಿಗೆ	೩—೮	ಫ್ಲಾನಲ್ ಷರ್ಟ್ಸ್	೧—೧೨
ಅಜೀರ್ಣಹರಪಿತ್ತ	೦—೮	ಡಿಟೊ ಆರ್ಡಿನರಿ	೧—೪
ಸುಗಂಧ—ದಂತಮಂಜನ ಚೂರ್ಣ	೦—೪	ಬಿಳಿ (ಇಂಗ್ಲೀಷಮಾದರಿ) ಷರ್ಟ	೦—೧೨
ಶಕ್ತಿವರ್ಧಕ ಚೂರ್ಣ	೦—೨		

ಬರ್ಮಿಂಗ್‌ಹಾಮ್ ಕಂಪನಿಯವರು ಕನ್ನಡಿಗೆ ಕ್ರಯ ರೂ. ೧೦—೩||—೫—೩||. ಉತ್ತಮವಾದ "ಹುಕ್ಕಾ" ಎಂಬ ಹೆಸರಿನ ಬಗೆಬಗೆಯವು ೧ ಸರಿಯಾದ ಟೋಪಿಯನ್ನು ಕ್ರಯ ರೂ ೬.

ವೃತ್ತಾಂತ ಪತ್ರಿಕೆ.

ಚಂದಾ ಸಿ ನಿ ರ್ ಯ .

	ರೂ ಆ ಪೈ.
ಸ್ಥಳದವರಿಗೆ ವರ್ಷ ೧ಕ್ಕೆ	೦—೧೨—೦
ಪರಸ್ಥಳದವರಿಗೆ ವರ್ಷ ೧ಕ್ಕೆ	೧—೦—೦
ಬಿಡಿ ಪತ್ರಿಕೆ ೧ಕ್ಕೆ	— —

ಈ ಪತ್ರಿಕೆಯು ಮೈಸೂರು ರಾಜಧಾನಿಯಲ್ಲಿ ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ, ಪ್ರಕಟಿಸಲ್ಪಡುವದು ಚಂದಾದಾರರು ಮೊದಲುಗೊಂಡು ಸಮಸ್ತರಿಗೂ ಸುಲಭಸಾಧ್ಯವಾಗುವಂತೆ ಈ ಪತ್ರಿಕೆಗೆ ಇಷ್ಟು ಅಲ್ಪ ಮೌಲ್ಯವನ್ನು ನಿಶ್ಚಯಿಸಿದ್ದೇವೆ ಈ ಪತ್ರಿಕೆಯನ್ನು ಅಪೇಕ್ಷಿಸುವವರು ಚಂದಾಹಣವನ್ನು ಮುಂಗಾಗಿಯೇ ಕೊಡತಕ್ಕದ್ದಾಗಿ ಬರೆಯಬೇಕು.

ಎಡಿಟರ್,
ವೃತ್ತಾಂತ ಪತ್ರಿಕೆ

ಟೋಪಿಗಳು!

ಟೋಪಿಗಳು!! WOOL CAPS ಟೋಪಿಗಳು!!

ಹಾಸನದ ಅನಾಥಾಲಯದಲ್ಲಿ ತಯಾರಾಗುವಂಥ ಅಚ್ಚ ಕಂಬಳಿ ನೂಲಿನ ಟೋಪಿಗಳು (Wool Caps) ನಮ್ಮ ಆಫೀಸಿನಲ್ಲಿ ಮಾರಿಕೆಗೆ ಸಿದ್ಧವಾಗಿರುತ್ತವೆ ಬೆಲೆ—೧ ರೂ. ೨ ಆಣೆ ಇಂದ ೧ ರೂ. ೬ ಆಣೆಗಳ ವರೆಗೂ ಬೇರೆ ಬೇರೆ ರಕಂಗಳುಂಟು. ಸ್ಥಳದವರು ಮುದ್ದು ನೋಡಿ ಪಡೆಯಬಹುದು. ಪರಸ್ಥಳದವರು ಮುಂಗಡವಾಗಿಯೇ ಹಣ ಕಳುಹಿಸಿದಲ್ಲಿ ಪೋಸ್ಟಿನಲ್ಲಿ ಛಾಂಗೀ ಮೂಲಕ ಕಳುಹಿಸುತ್ತೇವೆ. ಛಾಂಗೀ ಛಾರ್ಜ ಬೇರೇ ಕೊಡಬೇಕು. ಮೇಲುವಿಳಾಸದಲ್ಲಿ ಟೋಪಿಗೆ ಸಂಬಂಧವಾದದ್ದು ಎಂದು ಬರೆಯಬೇಕು.

ಮ್ಯಾನೇಜರ್,
ವೆಸ್ಲಿಯನ್ ಮಿಷನ್ ಪ್ರೆಸ್,
ಮೈಸೂರು.

ಏಜೆಂಟ್ರುಗಳಿಗೆ.

ಈ ವಾರದೊಡನೆ ವೃತ್ತಾಂತಪತ್ರಿಕೆಯ ೩ನೇ ಸಂಪುಟವಲ್ಲಿ ಎರಡನೇ ಕ್ವಾರ್ಟರು ಪೂರೈಸುತ್ತಾದ್ದರಿಂದ ಎಲ್ಲಾ ಏಜೆಂಟ್ರುಗಳೂ ದಯಮಾಡಿ ಜಾಗ್ರತೆಯಾಗಿ ಲೆಖ್ಖಗಳನ್ನು ತಯಾರ್ಮಾಡಿ ಕಳುಹಿಸಿಕೊಡುವರೆಂದು ನಂಬಿದ್ದೇವೆ.

೩೧—೧೨—೯೬ } ಎಡಿಟರ
ಮೈಸೂರು. } ವೃತ್ತಾಂತಪತ್ರಿಕೆ

ವೃತ್ತಾಂತ ಪತ್ರಿಕೆ.

೧೮೯೬ನೇ ಇಸವಿ ಡಿಸೆಂಬರ ತಾ|| ೩೧ನೇ ಗುರುವಾರ.

ಈಚೀಚೆಗೆ ಇಟಾಲಿಯ ಮತ್ತು ಯೂರೋಪಿನ ಇತರ ಸಂಸ್ಥಾನಗಳ ಪ್ರಜೆಗಳೂ, ಅಧಿಕಾರಿಗಳೂ ಒಂದು ವಿಧವಾದ ಪರಾಜದ್ರೋಹ. ದರಿಕೆಯಿಂದ ಕಾಡುವವರಾಗಿರುತ್ತಾರೆ. ಅನಾರ್ಕಿಸ್ಟ್ಸ ಎಂದು ಹೆಸರಿಟ್ಟುಕೊಂಡಿರುವ ಗುಂಪಿನವರು ಅನೇಕರು ಇರುತ್ತಾರೆ. ಇವರ ಉದ್ದೇಶವೇನಂದರೆ— ಪ್ರಪಂಚದಲ್ಲಿರುವ ಐಶ್ವರ್ಯವಂತರೆಲ್ಲರೂ ತಮ್ಮ ಸ್ವಂತಜೀವನಕ್ಕೆ ಬೇಕಾದಷ್ಟು ಹಣವನ್ನು ಮಾತ್ರ ಇಟ್ಟುಕೊಂಡು ಉಳಿದ ತಮ್ಮ ಆಸ್ತಿಯನ್ನೆಲ್ಲಾ ಬಡಬಗ್ಗರಿಗೆ ಹಂಚಿಕೊಡಬೇಕು. ಹೀಗೆ ಮಾಡಿದರೆ ಪ್ರಪಂಚದಲ್ಲಿ ಯಾರೂ ಬಡವರೇ ಇರುವದಿಲ್ಲ ಮತ್ತು ಒಬ್ಬ ದೊರೆಯು ರಾಜ್ಯವನ್ನು ಆಳಕೂಡದು. ಎಲ್ಲಾ ದೌಲತ್ತುಗಳೂ ಬಿಡಲಾಗಬೇಕು. ಎಲ್ಲಿನೋಡಿದರೂ ಪ್ರಜೆಗಳೇ ತಮ್ಮನ್ನು ತಾವು ಆಳಿಕೊಳ್ಳುವಂತೆ ಆಗಬೇಕು ಎಂಬವುಗಳೇ. ಈ ಅನಾರ್ಕಿಸ್ಟಗುಂಪಿನವರು ಈ ತಮ್ಮ ಉದ್ದೇಶವನ್ನು ನೆರವೇರಿಸುವದಕ್ಕೆ ಜನರಲ್ಲಿ ಬೋಧನೆಗಳನ್ನು ಮಾಡುವದಿಲ್ಲ. ತಮ್ಮ ಅಭಿಪ್ರಾಯಗಳನ್ನು ಇತರ ವಿದ್ವಾಂಸರಲ್ಲಿ ತಿಳಿಸಿ ಅವುಗಳ ಸಾಧಕ ಬಾಧಕಗಳನ್ನು ಕುರಿತು ಚರ್ಚೆಮಾಡುವದಿಲ್ಲ. ಆದರೆ ಅಂತರಂಗವಾದ ಫಿತೂರಿಗಳಿಂದಲೂ, ಕ್ರೂರಕೃತ್ಯಗಳಿಂದಲೂ ತಮ್ಮ ಉದ್ದೇಶವು ನೆರವೇರುವದೆಂದು ತಮ್ಮವರ ಅಭಿಪ್ರಾಯ ಉಳ್ಳವರಾಗಿದ್ದಾರೆ. ಇವರು ಕೆಲವು ಯಂತ್ರಗಳನ್ನು ಸೃಷ್ಟಿಸಿ ಮಾಡಿದ್ದಾರೆ. ಆ ಯಂತ್ರಗಳಲ್ಲಿ ಸುರಂಗದಮದ್ದನ್ನು ತುಂಬಿ ಕೋರ್ಟು ಕಛೇರಿಗಳಲ್ಲೂ, ದೊಡ್ಡದೊಡ್ಡ ಮನುಷ್ಯರೂ, ಐಶ್ವರ್ಯವಂತರೂ ವಾಸಮಾಡುವ ಬಂಗಲೆ ಅಥವ ಮನೆಗಳಲ್ಲಿಯೂ ಅಂತರಂಗವಾದ ಸ್ಥಳಗಳಲ್ಲಿ ಇಟ್ಟು ಅವುಗಳಿಂದ ಅನೇಕವಾದ ಜನರನ್ನೂ, ಅಧಿಕಾರಿಗಳನ್ನೂ, ದೊರೆಗಳನ್ನೂ ಕೊಲ್ಲಬೇಕೆಂದು ಪ್ರಯತ್ನಮಾಡುತ್ತಲಿದ್ದಾರೆ. ಇವರಿಂದ ಗೌರ್ನಮೆಂಟುಗಳೂ, ದೊರೆಗಳೂ ಈ ಗುಂಪಿನವರನ್ನು ಕಂಡರೆ ಹೆದರುತ್ತಾರೆ. ಅನೇಕ ದೇಶಗಳಲ್ಲಿ ನೂರಾರು ಮಂದಿ ಈ ಸುರಂಗದ ಬಾಯಿಗೆ ತುತ್ತಾದರು. ಇನ್ನು ಅನೇಕರನ್ನು ಕೊಲ್ಲಬೇಕೆಂದು ನಾನಾವಿಧವಾಗಿ ಪ್ರಯತ್ನಮಾಡುತ್ತಲಿದ್ದಾರೆ. ಅನೇಕಪಟ್ಟಣಗಳಲ್ಲಿ ಈ ಗುಂಪಿನವರ ಕೃತ್ರಿಮಗಳೆಲ್ಲಾ ಬಯಲಾಗಿ, ಕೆಲವರು ಶಿಕ್ಷೆಯನ್ನು ಅನುಭವಿಸುತ್ತಲಿದ್ದಾರೆ. ಆದರೆ ಈ ಗುಂಪಿನವರಲ್ಲಿ ಯಾವನಾದರೂ ಗುಟ್ಟನ್ನು ಹೊರಪಡಿಸಿದನೆಂದು ಗೊತ್ತಾದರೆ ಆಗುಂಪಿನವರು ಅವನನ್ನು ಆ ಕ್ಷಣದಲ್ಲೇ ಕೊಂದುಬಿಡುವರು. ಕೆಲವುದಿನಗಳ ಕೆಳಗೆ ಐರ್ಲೆಂಡ್‌ದೇಶದ ಮುಖ್ಯಪಟ್ಟಣವಾದ ಡಬ್ಲಿನ್ನಲ್ಲಿ ಈ ಗುಂಪಿನವರು ಕೆಲವು ದೊಡ್ಡದೊಡ್ಡ ಕಟ್ಟಡಗಳನ್ನು ಸುರಂಗದಿಂದ ಹೊಡೆಯಬೇಕೆಂದು ಉದ್ದೇಶಮಾಡಿ ಅದಕ್ಕೆ ತಕ್ಕ ಸಾಧನಗಳನ್ನೆಲ್ಲಾ ಸಿದ್ಧಪಡಿಸಿಕೊಂಡಿದ್ದರು. ರಂಜಕಕ್ಕೆ ಬೆಂಕಿಹಚ್ಚುವದಕ್ಕೆ ಹಿಂದಿನದಿನ ಈ ವಿಷಯವು ಪೋಲೀಸಿನವರಿಗೆ ಹ್ಯಾಗೋ ತಿಳಿದುಹೋಯಿತು. ಆಗಲವರು ಅದಕ್ಕೆ ಪ್ರತಿಕೂಲವಾದ ಏರ್ಪಾಡುಗಳನ್ನು ಮಾಡಿ ಹಿಂದೆ ಯೋಚಿಸಿದ್ದ ಉಪಾಯವನ್ನು ನಿರಾಶೆಮಾಡಿದರು. ಆದರೆ ಈಗುಂಪಿನವರಲ್ಲೊಬ್ಬ ಕಿರೀಶ ಎಂಬುವನು ಪೋಲೀಸಿಗೆ ತಿಳಿಸಿಬಿಟ್ಟನು ಎಂದು ಆಗುಂಪಿನವರಿಗೆ ತಿಳಿದುಬಂದದ್ದರಿಂದ ಅವರು ಆ ಮನುಷ್ಯನನ್ನು ಆ ಕ್ಷಣದಲ್ಲೇ ಕೊಂದುಬಿಟ್ಟರು. ಇದೇ ರೀತಿಯಾಗಿ ಸುರಂಗದಿಂದ ಘಾತಮಾಡಿದ್ದ ಪೆಟ್ಟಿಗೆಗಳು ಜರ್ಮನೀ ರಾಜರಿಗೂ, ಅವರ ಪ್ರಧಾನಮಂತ್ರಿಗಳಿಗೂ ಕಳುಹಿಸಲ್ಪಟ್ಟದ್ದವು. ಅದಕೆ ಆ ಪ್ರಾಂತ್ಯದ ಅಧಿಕಾರಿಗಳು ಈ ಪೆಟ್ಟಿಗೆಗಳನ್ನು ನೋಡಿ ಸಂಶೋಧನಮಾಡಲಾಗಿ ಅವುಗಳನ್ನು ಬಿಡಿಸಿ ತೆಗೆದುನೋಡಿದರು, ಅದರತುಂಬಾ ಸುರಂಗದಮದ್ದು ತುಂಬಿತ್ತು. ಆ ಪೆಟ್ಟಿಗೆಗಳ ಜೊತೆಯಲ್ಲಿ ಕಳುಹಿಸಲ್ಪಟ್ಟಿದ್ದ ಬೀಗದಕೈಗಳಿಂದಲೇ ಅವುಗಳನ್ನು ತೆರೆಯಿದ್ದರೆ ತೆರೆದವರೂ, ಸಮೀಪದಲ್ಲಿಂತಕ್ಕವರೂ ಏಕಕಾಲದಲ್ಲಿ ಸತ್ತುಹೋಗುತ್ತಿದ್ದರು. ಈ ವಿಷಯಗಳನ್ನು ಚಕ್ರವರ್ತಿಗಳು ತಿಳಿದು ಅಧಿಕಾರಿಗಳು ತಮ್ಮ ಪ್ರಾಣವನ್ನು ಉಳಿಸಿದರಲ್ಲಾ ಎಂದು ಬಹಳವಾಗಿ ಸಂತೋಷಪಟ್ಟರು. ಇಂಥಾ ಕ್ರೂರಕೃತ್ಯಗಳನ್ನು ಮಾಡುತ್ತಲಿರುವ ಜನಗಳ ಉದ್ದೇಶವು ಎಷ್ಟು ಶ್ಲಾಘ್ಯವಾಗಿದ್ದಾಗ್ಯೂ ಎಂದಿಗೂ ಕೈಗೂಡಬಾರದೆನ್ನುವದರಲ್ಲಿ ಸಂಶಯವಿಲ್ಲ. ವಾಗ್ವಾದದಿಂದಲೂ, ಚರ್ಚೆಸೋಣದರಿಂದಲೂ ಜನರು ನಿಜವನ್ನು ನಂಬಿ, ಸುಳ್ಳನ್ನು ತ್ಯಜಿಸುವರು. ಕ್ರೂರಕೃತ್ಯಗಳಿಂದ ತನ್ನ ಉದ್ದೇಶವನ್ನು ನೆರವೇರಿಸಿಕೊಂಡವನು ಇದುವರೆಗೂ ಯಾವನೂ ಇಲ್ಲ. ಇಂಥಾ ಕ್ರಿಶ್ಚಿಯನ್ನರೆಲ್ಲಾ ಕ್ರಿಸ್ತಮತವು ಶಿಕ್ಷರಿಸುತ್ತದೆ ಮತ್ತು ಜನರಿಗೆ ಪರಸ್ಪರ ಪ್ರೀತಿ ವಾತ್ಸಲ್ಯಗಳು ಹೆಚ್ಚುವಂತ ಬುದ್ಧಿ ಕಲಿಸುತ್ತದೆ. ಇಂಥಾ ಅಕೃತ್ಯಗಳನ್ನು ನಡೆಸುತ್ತಲಿರುವವರಲ್ಲಿ ಒಬ್ಬನೂ ಕ್ರಿಸ್ತನಲ್ಲ. ಅವರೂ ಕ್ರಿಸ್ತಮತವನ್ನು ನಿಜವಾಗಿಯೂ ಅನುಸರಿಸಿದರೆ ಇಂಥಾ ದುಷ್ಪದ್ಧತಿಗಳನ್ನೂ, ಕ್ರೂರಕೃತ್ಯಗಳನ್ನೂ ತಾವಾಗಿಯೇ ಬಿಟ್ಟು ಬಿಡುವದರಲ್ಲಿ ಸಂಶಯವಿಲ್ಲ.

ಈ ವಾರದಲ್ಲಿ ಮೈಸೂರು ಸೆಷನ್ಸ್‌ಜಡ್ಜಿ ಯುವರಾಜ ಮೆ|| ಕ್ರಿಸಿಸಾಹೇಬರು ಹಾಸನಕ್ಕೆ ದಯಮಾಡಿಸಿ ಅಲ್ಲಿ ಮೂರು ಖೂನಿಮೊಕದ್ದಮೆಗಳನ್ನು ವಿಚಾರಣೆ ಮಾಡುತ್ತಾ ಅಮಲ್ದಾರ್ರು ಸಹ ಇರುವರು. ಇವುಗಳಲ್ಲಿ ಒಂದಿಗೆ ಸಹಾಯಮಾಡಿ ದ ಜನರಿಂಬಿತವಾಗಿರುವ ದರೆಂಬ ಅಪವಾದ. ಪರಿಂದ ಅದರ ಸಂಗತಿಗಳನ್ನು ಸಂಕ್ಷೇಪವಾಗಿ ಇಲ್ಲಿ ತಿಳಿಸುವದು ಒಳ್ಳೇದೆಂದು ಯೋಚಿಸಿದ್ದೇವೆ. ಕೆಲವು ದಿನಗಳ ಕೆಳಗೆ ಐಶ್ವರ್ಯವಂತನಾಗಿದ್ದ ಒಬ್ಬ ವೃದ್ಧನು ಅರಸೀಕೆರೆಯಲ್ಲಿ ತೀರಿಹೋದನು. ಅವನಿಗೆ ಇಬ್ಬರು ಹೆಂಡರು ಇದ್ದದರಿಂದ ಅವನು ತನ್ನ ಮರಣಕಾಲದಲ್ಲಿ ಒಂದು ವೃಮೀಲನ್ನು ಬರೆಸಿ, ಅದರಲ್ಲಿ ಪ್ರತಿ ಒಬ್ಬಳಿಗೂ ಒಂದುಸಾವಿರ ರೂಪಾಯಿ ಕೊಡುವಂತೆ ತಿಳಿಸಿದ್ದನು. ಹೀಗೆ ತೀರಿಹೋದನಂತರ ಆ ಹೆಂಗಸರಲ್ಲಿ ಒಬ್ಬಳು ಒಬ್ಬ ಹುಡುಗನನ್ನು ದತ್ತು ತೆಗೆದುಕೊಳ್ಳಬೇಕೆಂದು ಯೋಚಿಸಿ, ಅದನ್ನು ತನ್ನ ಸವತಿಯ ಸಂಗಡ ಹೇಳಿದಳು. ಆ ಸವತಿಯು ಇದಕ್ಕೆ ಒಪ್ಪಿಕೊಳ್ಳದೆ ಹೋದ್ದರಿಂದ, ಮೊದಲನೆಯವಳು ತನ್ನ ಪಾಲಿನ ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ತನ್ನ ತವರುಮನೆಗೆ ಹೋಗುತ್ತೇನೆಂದು ಕೇಳಿದಳು. ಸವತಿಯಾದವಳು ಅದಕ್ಕೂ ಒಪ್ಪಲಿಲ್ಲ. ಅನಂತರ ಈ ಸವತಿಯು ತಾನು ಇಟ್ಟುಕೊಂಡಿದ್ದ ಒಬ್ಬ ಜಾಣನ ಸಂಗಡ ಈ ವಿಷಯವನ್ನು ಪ್ರಸ್ತಾಪಮಾಡಿ, ಹಿರೀಹೆಂಡತಿಯಾದ ತನ್ನ ಅಕ್ಕನನ್ನು ಕೊಲ್ಲಿಸಬೇಕೆಂತಲೂ, ಅವಳ ಪಾಲಿನ ಹಣವನ್ನು ತಾನೇ ದಕ್ಕಿಸಿಕೊಳ್ಳಬೇಕೆಂತಲೂ ಅವನಿಗೆ ಸಲಹೆ ಕೊಟ್ಟಳು. ಇದಕ್ಕೆ ಸರಿಯಾಗಿ ಕೆಲವುದಿನಗಳ ಮೇಲೆ ಯಾರೋ ಕೆಲವರು ಆ ಮೊದಲನೇ ಹೆಂಡತಿಯನ್ನು ಅವಳ ಸವತಿಯಮನೆಗೆ ಕರೆದುಕೊಂಡು ಹೋಗಿ, ಅಲ್ಲಿ ಅವಳ ಕುತ್ತಿಗೆಯನ್ನು ಹಿಸುಕಿ ಕೊಂದುಬಿಟ್ಟರು. ಆಮೇಲೆ ಒಬ್ಬ ನೆರೆಮನೆಯವನು ಆ ಶವವನ್ನು ಕಂಡು ಸರ್ಕಾರಕ್ಕೆ ತಿಳಿಸಿದನು. ಪೋಲೀಸ್ ಇಲಾಖೆಯವರು ಅಮಲ್ದಾರ್ರ ಅಪ್ಪಣೆಯನ್ನು ಪಡೆದು, ಆಸ್ಪತ್ರೆಗೆ ಹೋಗಿ, ಮಹಜರು ಮಾಡಿಸಿದಾಗ ಸಾಧಾರಣವಾದ ಒಂದು ಮರಣವೆಂದು ತಮ್ಮ ತೀರ್ಮಾನವನ್ನು ಹೇಳಿ, ಶವವನ್ನು ಹೂಳುವದಕ್ಕೆ ಅಪ್ಪಣೆಕೊಟ್ಟು ಹೋದರು. ಆದರೆ ಅಲ್ಲಿದ್ದ ಕೆಲವರು—ಅಮಲ್ದಾರ್ರು ಲಂಚತಿಂದು ಈ ಖೂನಿಯನ್ನು ಅಡಗಿಸುವಹಾಗೆ ಸೂಚನೆ ಕೊಟ್ಟರೆಂದು ಸಂಶಯಪಟ್ಟು ಡೆಪ್ಯುಟೀಕಮಿಷನರವರಿಗೆ ಅರ್ಜಿ ಬರೆದುಹಾಕಿದರು. ಆಗ ಡೆಪ್ಯುಟೀಕಮಿಷನರು ಅಲ್ಲಿಗೆ ಹೋಗಿ, ವಿಚಾರಣೆಮಾಡಿ ಖೂನಿಯಾದದ್ದು ನಿಜವೆಂದು ಚನ್ನಾಗಿ ತಿಳಿದು, ಆ ಕೃತ್ಯ ನಡೆಸಿದವರನ್ನು ವಿಸ್ತ್ರೇಮಾಡಿ ಹಿಡಿದರು. ಅವರಲ್ಲಿ ಒಬ್ಬನು ಹೆದರಿಕೆ ಪಶ್ಚಾತ್ತಾಪಗಳಿಂದ ಬೀಡಿತನಾಗಿ ನಡೆದ ಸಂಗತಿಗಳನ್ನೆಲ್ಲಾ ಸ್ಪಷ್ಟವಾಗಿ ತಿಳಿಸಿಬಿಟ್ಟು, ಅಮಲ್ದಾರ್ರು ಈ ಕೃತ್ಯವನ್ನು ಅಡಗಿಸುವಂತೆ ಲಂಚ ತೆಗೆದುಕೊಂಡರೆಂದೂ ಹೇಳಿದನು. ಈ ಮೊಕದ್ದಮೆಯು ಫೈಸಲಾಗುವವರೆಗೂ ಈ ಅಮಲ್ದಾರರನ್ನು ಕೆಲಸದಿಂದ ತೆಗೆಯತಕ್ಕದ್ದೆಂದು ದಿವಾನರವರು ಹುಕುಂ ಮಾಡಿರುತ್ತಾರೆ. ಅಮಲ್ದಾರ್ರು ಮಾಡಿದ್ದು ನಿಜ ಪ್ರೋಸಿಕ್ಯೂಷನ್ ಅನ್ನೋಂದು ಮುಂದೆಯಾಗಿ ನಮಗೆ ತಿಳಿದು ಬರುವದು. ನಿಜವಾಗಿದ್ದರೆ ಸರ್ಕಾರದವರು ಅವರಿಗೆ ಕಠಿಣತರವಾದ ಶಿಕ್ಷೆಯನ್ನು ವಿಧಿಸಿ, ಇಂಥಾ ದುಷ್ಕೃತ್ಯಗಳನ್ನು ನಿಲ್ಲಿಸಬೇಕೆಂದು ನಾವು ಕೋರುತ್ತೇವೆ.

ಮುಳಬಾಗಲು ತಾಲ್ಲೋಕಿಗೆ ಸೇರಿದ ಕಪ್ಪಲುಮಡಗೂರಿನಲ್ಲಿ ರಾಮಸ್ವಾಮಿಶೆಟ್ಟಿ ಎಂಬ ವರ್ತಕನೊಬ್ಬನಿದ್ದಾನೆ. ಕೆಲವು ಅಮಲ್ದಾರ್ರು ತಮ್ಮ ದಿನಗಳ ಹಿಂದೆ ಈ ವರ್ತಕ ತಾಲ್ಲೋಕಿನ ಜನರಿಂದ ತನ್ನ ಮಗಳಿಗೆ ಮದುವೆ ಪ್ರಯೋಜನಗಳ ನೆಪ್ರಸ್ತ ಮಾಡಿದಕಾಲದಲ್ಲಿ ನನ್ನುಪಡೆಯಬಹುದೆ? ಆ ತಾಲ್ಲೋಕಿನ ಅಮಲ್ದಾರರನ್ನು ಕರೆಸಿ ಗೌರವಾರ್ಥವಾಗಿ ಅವರಿಗೆ ೧೭ ರೂಪಾಯಿ ಬೆಲೆಯುಳ್ಳ ಒಂದು ಜೊತೆ ಧೋತ್ರವನ್ನು ಉಡುಗೆರೆ ಕೊಟ್ಟನು. ಆ ಅಮಲ್ದಾರರು ಉಡುಗೆರೆಯನ್ನು ಪರಿಗ್ರಹಿಸಿ ಮಾರನೇ ದಿನ ಈ ವಿಷಯವನ್ನು ತಮಗೆ ಮೇಲ್ಪಟ್ಟ ಡೆಪ್ಯುಟೀಕಮಿಷನರವರಿಗೆ ತಿಳಿಸಲು ಆ ಡೆಪ್ಯುಟೀಕಮಿಷನರವರು ಇಂಥಾದ್ದನ್ನು ಪರಿಗ್ರಹಿಸಿದ್ದು ತಪ್ಪಾದದ್ದು, ಆ ಧೋತ್ರಗಳನ್ನು ರಾಮಸ್ವಾಮಿಶೆಟ್ಟಿಗೆ ಹಿಂತಿರುಗಿ ಕೊಟ್ಟುಬಿಡಬೇಕು ಎಂದು ಅಮಲ್ದಾರ್ರಿಗೆ ಹುಕ್ಕುಂ ಕೊಟ್ಟರು. ಆ ವರ್ತಕನು ಆ ಧೋತ್ರಗಳನ್ನು ತಿರಿಗಿ ತಗೆದುಕೊಳ್ಳುವದಕ್ಕೆ ಒಪ್ಪದಿದ್ದದರಿಂದ ಡೆಪ್ಯುಟೀಕಮಿಷನರವರು ಈ ವಿಷಯವನ್ನು ದಿವಾನರವರಿಗೆ ತಿಳಿಸಿದರು. ದಿವಾನರವರು ಡೆಪ್ಯುಟೀಕಮಿಷನರವರ ಅಪ್ಪಣೆಯನ್ನು ಸ್ಥಿರಪಡಿಸಿ ಆ ವರ್ತಕನು ತಾನು ಅಮಲ್ದಾರ್ರಿಗೆ ಉಡುಗೆರೆ ಕೊಟ್ಟ ಧೋತ್ರಗಳನ್ನು ತೆಗೆದುಕೊಳ್ಳದ ಹೋದರೆ ಅವುಗಳನ್ನು ಡೆಪ್ಯುಟೀಕಮಿಷನರವರು ಹರಾಜುಹಾಕಿಸಿ ಬಂದ ಹಣವನ್ನು ಆ ತಾಲ್ಲೋಕಿನ ಧರ್ಮಾರ್ಥದ ಉಪಯೋಗಕ್ಕೆ ಉಪಯೋಗಿಸಬೇಕೆಂದು ಹುಕುಂ ಕೊಟ್ಟಿದ್ದಾರೆ.

ಈ ವಿಷಯದಲ್ಲಿ ನಾವು ಬಹುಸಂತೋಷವುಳ್ಳವರಾಗಿದ್ದೇವೆ. ಅಮಲ್ದಾರ್ರುಗಳು ತಮ್ಮ ಅಧಿಕಾರಕ್ಕೊಳಪಟ್ಟ ತಾಲ್ಲೋಕಿನ ಜನರಿಂದ ಪ್ರಯೋಜನಗಳನ್ನು ಪಡೆಯಬಹುದಾದರೆ, ಆ ತಾಲ್ಲೋಕಿನಲ್ಲಿ ಸರಿಯಾಗಿ ನ್ಯಾಯವು ನಡೆಯಲಾರದು. ಈ ಮುಳಬಾಗಲು ತಾಲ್ಲೋಕಿನ ಅಮಲ್ದಾರ್ರು ಈ ವಿಷಯವನ್ನು ಡೆಪ್ಯುಟೀಕಮಿಷನರವರಿಗೆ ತಿಳಿಯಪಡಿಸಿದ್ದು ಶ್ಲಾಘನೀಯವಾದದ್ದೇ ಸರಿ. ಆದರೆ ಕೆಲವು ಅಮಲ್ದಾರ್ರು ಇಂಥಾ ಪ್ರಯೋಜನಗಳನ್ನು ಪಡೆದು ಆ ವಿಷಯದಲ್ಲಿ ಯಾರಿಗೂ ಏನೂ ಹೇಳದೆ ಇರುವರು. ಸರ್ಕಾರದವರು ಈ ವಿಷಯದಲ್ಲಿ ಉಚಿತವಾದ ಹುಕ್ಕುಂಮನ್ನು ವಿಧಿಸಿರುವದು ಸಂತೋಷಕರವಾದದ್ದಾಗಿದೆ.

ಪ್ರಾರಬ್ಧ ಕರ್ಮವೆಂದರೇನು ?

ಸಾದಸತ್ಕಾರ್ಯಗಳಂಟೆಂದು ಈ ದೇಶದ ಜನರೆಲ್ಲರೂ ಒಪ್ಪಿಕೊಳ್ಳುತ್ತಾರಷ್ಟೆ. ಮತ್ತು ಒಳ್ಳೆಯ ಕೆಲಸಗಳನ್ನು ಮಾಡಿದರ ಫಲವೆಂತಲೂ, ಒಳ್ಳೇ ಕೆಲಸಗಳನ್ನು ಮಾಡಿದವರ ಪುಣ್ಯವೆಂತಲೂ, ದೇವರು ನಮ್ಮ ಪಾಪ ಪುಣ್ಯಗಳನ್ನು ನೋಡಿ ಅವುಗಳಿಗೆ ಸರಿಯಾಗಿ ಶಿಕ್ಷೆಯನ್ನಾಗಲಿ, ಬಹುಮಾನವನ್ನಾಗಲಿ ಕೊಡುವನೆಂತಲೂ ಎಲ್ಲರೂ ಸಾಧಾರಣವಾಗಿ ತಿಳಿದುಕೊಂಡಿರುವರು. ಇಂಥಾ ಬೋಧನೆಯು ನ್ಯಾಯವೆ? ನ್ಯಾಯವಲ್ಲವೆ? ಎಂಬುದ ಗ ವಿಚಾರಿಸುವದು ನಮ್ಮೆಲ್ಲರಿಗೂ ಆವಶ್ಯಕವೂ ಮತ್ತು ಹಿತಕರವೂ ಆಗಿರುತ್ತದೆ.

ಮನುಷ್ಯರಾದ ನಾವೆಲ್ಲರೂ ಮಾಡುವ ಪಾಪಪುಣ್ಯಗಳ ವಿಷಯದಲ್ಲಿ ದೇವರಿಗೆ ನಾವು ಜವಾಬ್ದಾರರಾಗಿದ್ದೇವೆಂದು ಮೊದಲು ತಿಳಿದುಕೊಳ್ಳಬೇಕಾಗಿದೆ. ಪ್ರಾರಬ್ಧದಿಂದಾಗುವ ಫಲವನ್ನು ಈ ಜನ್ಮದಲ್ಲಿ ಅಗತ್ಯವಾಗಿ ಅನುಭವಿಸುತ್ತಾ ಇದ್ದೇವೆಂತಲೂ, ಈ ಪ್ರಾರಬ್ಧಕರ್ಮ ಸ್ಥಿರವೇ ಪಾಪಪುಣ್ಯಗಳನ್ನು ತಪ್ಪಿಸಿಕೊಳ್ಳುವದಕ್ಕೆ ಆಗುವದಿಲ್ಲವೆಂತಲೂ ಹೇಳಲಾಗುವ ಅಂಥಾಮಾತು ಸತ್ಯವಾಗಿದ್ದ ಪಕ್ಷದಲ್ಲಿ ಪಾಪದಿಂದುಂಟಾಗುವ ದಂಡನೆಗೂ, ಪುಣ್ಯದಿಂದುಂಟಾಗುವ ಬಹುಮಾನಗಳಿಗೂ ನಾವು ಗುರಿಯಾಗುವದು ನ್ಯಾಯವಾಗಿ ತೋರುವದಿಲ್ಲ. ಪ್ರಾರಬ್ಧ ಉಂಟೆಂಬ ಬೋಧನೆಯು ಯಥಾರ್ಥವಾಗಿದ್ದಕ ನಮ್ಮ ಯತ್ನವೇನಿರುವದು? ಅದು ನಮ್ಮ ಮೇಲೆ ಆಳುವ ದೊರೆಯೋ ಮಾಡುವಲ್ಲಿರುವದು ನಾವು ಅದಕ್ಕೆ ಗುಲಾಮರಾದವರು. ನಮಗೆ ಸ್ವಾಧೀನವೇ ವಿನಾ ಇಲ್ಲವಲ್ಲ? ನಾವು ಮಾಡುವದೆಲ್ಲವೂ ಪ್ರಾರಬ್ಧದ ಬಲಾತ್ಕಾರದಿಂದಲೇ ಆಗಿದರೇ ಮೋಕ್ಷ ದೇವರು ಏಕಿರುವದು? ಆದರೆ ನಾವು ಬಲಾತ್ಕಾರದಿಂದ ಪಾಪಕೃತ್ಯಗಳನ್ನು ಮಾಡಿದರೆ ಆ ಪಾಪಕೃತ್ಯಗಳು ಬಲಾತ್ಕಾರದಿಂದ ಆದವಾಗಿ ನಮಗೆ ಮೋಕ್ಷ, ಬಲಾತ್ಕಾರಕ್ಕೆ ಒಳಬಿದ್ದ ಮನುಷ್ಯನಾಕೃತದಂತ ನಮಗೆಂದಿಗೂ ನರಕವೂ ಇಲ್ಲ. ಹಾಗೆಯೇ ನಾವು ಪ್ರಾರಬ್ಧ ಬಲಾತ್ಕಾರದಿಂದ ಪುಣ್ಯಕಾರ್ಯಗಳನ್ನು ಮಾಡಿದರೆ ಅದಕ್ಕೆ ದೊರೆಯುವ ಬಹುಮಾನಗಳು ಪ್ರಾರಬ್ಧವೆಂಬ ದೊರೆಗೇ ಸೇರತಕ್ಕವುಗಳಲ್ಲದೆ, ಅದರ ಗುಲಾಮರಾದ ನಮಗೆ ಸೇರತಕ್ಕವುಗಳಲ್ಲ. ಇದು ಉದಾಹರಣೆಯಾಗಿ ನಮ್ಮ ಮಕ್ಕಳು ಬೊಂಬೆ ಆಟವನ್ನು ಪ್ರಾರಂಭಿಸಿ ಕೊಳ್ಳಲಿ. ಅದರಲ್ಲಿ ಇದನು ನೋಡುವಾಗ ನಾಕೈದು ಬೊಂಬೆಗಳು ಬಹು ಚುರುಕಾಗಿ ಕುಣಿಯುತ್ತಲೂ, ನಾನಾವಿಧವಾದ ಅಂಗ ಚೇಷ್ಟೆಗಳನ್ನು ಮಾಡುತ್ತಲೂ, ಕ್ರೂರವಾಗಿ ಗುದ್ದಾಡುತ್ತಲೂ, ಬಹು ಪ್ರೀತಿಯಿಂದ ಒಂದನ್ನೊಂದು ಅಪ್ಪಿಕೊಂಡು ಮುದ್ದಾಡುತ್ತಲೂ ಇರುವಂತೆ ಕಾಣಿಸುವದಿಲ್ಲವೆ? ಆದರೆ ನಿಜವಾಗಿ ಈ ಬೊಂಬೆಗಳಿಗೆ ಇಷ್ಟುಸ್ವಾತಂತ್ರ್ಯ, ಬುದ್ಧಿ, ಚತುರತೆಗಳು ಎಲ್ಲಿಂದ ಬಂದವು? ಒಂದು ಬೊಂಬೆಯು ಇನ್ನೊಂದನ್ನು ಚೆನ್ನಾಗಿ ಹೊಡೆದರೆ ಅದಕ್ಕೆ ಶಿಕ್ಷೆಯಾಗಬೇಕೆನ್ನುವಿರಾ? ಎಂದಿಗೂ ಇಲ್ಲವಲ್ಲಾ! ಆ ಬೊಂಬೆಗಳು ಮಾಡುವ ತಪ್ಪುಗಳ ಕೆಲಸಗಳಿಗೆಲ್ಲಾ ಪರದೆ ಕಣ್ಣಿಗೆ ಕಾಣಿಸಿಕೊಳ್ಳದೆ ಪರದೆಯ ಹಿಂದೆ ಕೂತುಕೊಂಡಿರುವವನೇ ಮೂಲ ಕಾರಣನಾಗಿರುವನಲ್ಲವೆ? ಅಂಥವನನ್ನೇ ಅದೃಷ್ಟವೆಂದಾಗಲಿ, ಪ್ರಾರಬ್ಧವೆಂದಾಗಲಿ ಯಾಕೆ ಕರೆಯಬಾರದು? ಆ ಬೊಂಬೆಯಾಟವು ಚೆನ್ನಾಗಿ ನಡೆದರೆ ಅವನಿಗೇ ಕೀರ್ತಿಯುಂಟಾಗುವದು, ಮತ್ತು ಅವನಿಗೇ ದುಡ್ಡು ಸಿಗುತ್ತದೆ. ಒಂದು ವೇಳೆ ಆಟವು ಚೆನ್ನಾಗಿಲ್ಲದಿದ್ದರೆ ಅವನ ಹೊಟ್ಟೆಗೆ ಇಲ್ಲದೆಹೋಗುವದು ಆ ಬೊಂಬೆಗಳಿಗೇನೇ ಕಷ್ಟ [illegible] ದುಡ್ಡು ಕಾಸನ್ನು ಕೊಡುವದಿಲ್ಲವಲ್ಲ.

ಮೇಲೆ ಹೇಳಿರುವದು ಸರಿಯಾಗಿದ್ದರೆ ಅದರಿಂದ ನಾವು ಏನು ತಿಳಿಯಬೇಕು? ನಾವು ಅನುಭವಿಸುವ ಪ್ರಾರಬ್ಧವೆಂಬುವದು, ಹಿಂದಿನ ಜನ್ಮದಲ್ಲಿ ನಾವು ಮಾಡಿದ ಕರ್ಮಗಳಲ್ಲವೇ ಹೊರತು ಬೇರೆ ಅಲ್ಲವಷ್ಟೆ. ಅಂತು ಆ ಪ್ರಾರಬ್ಧವನ್ನು ಉಂಟುಮಾಡಿದವನು ಅದರ ಫಲವನ್ನು ಅನುಭವಿಸುವವನೇ ಸರಿ ಎಂದು ಹೇಳಿ ಇದೆ. ಆದರೆ ಆ ಪೂರ್ವಜನ್ಮವು ನನಗೆ ಇತ್ತೆಂಬುವದಕ್ಕೆ ಯಾವ ಸಾಕ್ಷಿ ಇರುವದು? ಯಾವ ಪುಸ್ತಕವನ್ನು ತಾನೆ ಯಾವನು ಓದಿದ್ದನು? ನಮ್ಮ ಜ್ಞಾಪಕವೇ ನಮಗೆ ಸಾಕ್ಷಿಯೋ? ಒಬ್ಬರಿಗೂ ಅಂಥಾ ಜ್ಞಾಪಕ ಇಲ್ಲವಲ್ಲಾ. ಪೂರ್ವಜನ್ಮ [illegible] ಹೊರತು ಸಿದ್ಧಾಂತವಾದ್ದರಿಂದ [illegible] ಕಷ್ಟಸುಖಗಳನ್ನು ನೋಡಿ, ಹಿಂದಿನ ಜನ್ಮದ ಫಲವು ಈ ಜನ್ಮಕ್ಕೆ [illegible] ಶಿಕ್ಷೆಯಾಗಿಸಿ ಒಂದುವಿಧದ ಸಂತೋಷಕರವಾದ ಕೆಲಸವನ್ನು, ಇನ್ನೊಂದು ವಿಧದ ಕಷ್ಟತರವಾದ ಕೆಲಸವನ್ನು [illegible] ಇದರಿಂದ ಆ ಹುಡುಗನಿಗೆ ಶಿಕ್ಷೆಯಾಗುತ್ತ, ಮಗನಿಗೆ ಕಷ್ಟವೂ, ವ್ಯಸನವೂ ಎಂದಿಗೂ ಬರುವಂತೆ [illegible] ಕೆಲವರನ್ನೇ ನೇಮಿಸುತ್ತಾ ಬಂದರೆ, ಆ ಹುಡುಗನ ಬುದ್ಧಿಯು, [illegible] ಸುಖದುಃಖಗಳನ್ನು ನೇಮಿಸುವ ಭಗವಂತನು ತನ್ನ ಸೃಷ್ಟಿಗಳ [illegible] ಸುಖದುಃಖಗಳನ್ನು ವಿಧಿಸುವದೋ? ಅಪ್ಪರಿಂದ ಆಗಿರುವ ಕಷ್ಟಸುಖಗಳು ಪ್ರಾರಬ್ಧದಿಂದಲೇ ಉಂಟಾದವೆಂದು ಹೇಳಬೇಕಾದ ಯಾವ ಆವಶ್ಯಕತೆಯೂ ನಮಗೆ ತೋರುವದಿಲ್ಲ.

ಇದಲ್ಲದೆ ನಾವು ಮಾಡುವದೆಲ್ಲವೂ ಪ್ರಾರಬ್ಧದಿಂದಲೇ ಉಂಟಾಗುವದೆಂಬುವದು ನಿಜವಾಗಿದ್ದರೆ, ಅದಕ್ಕೆ ಪಾಪವೆಂದಾಗಲಿ ಪುಣ್ಯವೆಂದಾಗಲಿ ಹೇಳುವದಕ್ಕಾಗುವದಿಲ್ಲ. ನಾವೆಲ್ಲರೂ ಮನುಷ್ಯರಾಗಿರುವದರಿಂದ ಸ್ವಾಭಾವಿಕವಾಗಿ ಊಟಮಾಡಬೇಕು, ನಿದ್ರೆಮಾಡಬೇಕು, ವ್ಯಾಸಂಗಮಾಡಬೇಕು — ಇವುಗಳಲ್ಲಿ ಗುಣದೋಷಗಳೇನೂ ಇಲ್ಲ. ಮನುಷ್ಯನು ಅನ್ನವನ್ನು ತಿಂದರೆ ನಮಗೆ ಪುಣ್ಯ ಬರುವದೂ? ಸುಮ್ಮನಾಗಿ ನಿದ್ರೆಮಾಡಿದ್ದರೆ ನಮಗೆ ಪಾಪಬರುವದೂ? ಎಂದಿಗೂ ಇಲ್ಲವಲ್ಲಾ. ದೇವರು ನಮಗೆ ಕೊಟ್ಟಿರುವ ಸ್ವಭಾವಕ್ಕೆ ನಾವು ಒಳಬಿದ್ದು ಅದನ್ನು ಅನುಸರಿಸಿದರೆ ನಮಗೆ ಅದರಿಂದ ಪಾಪವೂ ಇಲ್ಲ, ಪುಣ್ಯವೂ ಇಲ್ಲ. ಹಾಗೆಯೇ ಪ್ರಾರಬ್ಧವೆಂಬ ಬೋಧನೆ ಸರಿಯಾಗಿದ್ದರೆ ನಾವು ಕಳ್ಳತನ ಮಾಡಿದರೂ, ಮೋಸಮಾಡಿದರೂ, ವ್ಯಭಿಚಾರಮಾಡಿದರೂ, ಕೊಲೆಪಾತಕವನ್ನೇ ನಡೆಸಿದರೂ—ಇವುಗಳಿಂದ ನಮಗೆ ಯಾವ ಪಾಪವೂ ಸಂಭವಿಸಲಾರದು. ಭೂಮಿಯ ಮೇಲೆ ರಾಗಿಯು ಬೀಳದಿದ್ದರೆ ರಾಗಿಯು ಪೈರೇ ಆಗುವದರಲ್ಲಿ ಸಂಶಯವಿಲ್ಲ. ನಮ್ಮ ಪ್ರಾರಬ್ಧವೆಂಬ ಭೂಮಿಯಲ್ಲಿ ಕಳ್ಳತನವೆಂಬ ಬೀಜವಿದ್ದರೆ, ಕಳ್ಳತನವೇ ನಮಗೆ ಫಲವಾಗಬೇಕು. ನಾವು ಅದನ್ನು ಬಿಟ್ಟು ಪರೋಪಕಾರ್ಯಗಳನ್ನು ಮಾಡುವದಕ್ಕೆ ನಮಗೆ ಮಾರ್ಗವೆಲ್ಲಿರುವದು? ಆದರೆ ಬಲಾತ್ಕಾರದಿಂದ ಒಬ್ಬನು ಕದ್ದರೆ, ಕದ್ದ ತಪ್ಪು ಅವನದಲ್ಲ ಮತ್ತು ಒಬ್ಬನು ಬಲಾತ್ಕಾರದಿಂದ ಪರೋಪಕಾರವನ್ನು ಮಾಡಿದರೆ, ಅದರ ಪುಣ್ಯವೂ ಅವನಿಗೆ ಸೇರುವದಿಲ್ಲ. ಹಾಗಾದರೆ ಪ್ರಾರಬ್ಧವು ಸ್ಥಾಪನೆಯಾಗಿದ್ದರೆ ಈ ಲೋಕದಲ್ಲಿ ಎಲ್ಲಿಯೂ ಪುಣ್ಯಪಾಪಗಳೇ ಇಲ್ಲವೆಂಬುವದೂ ಸ್ಥಿರಪಟ್ಟಿತು.

ಮಾತಕಲೇ ಇಂಥಾ ಬೋಧನೆಯು ದುರ್ಬೋಧನೆಯೋ ಇದಕ್ಕೆ ಸಂದೇಹವಿಲ್ಲ. ಪ್ರಾರಬ್ಧವೆಂಬ ಬೋಧನೆಯು ಇಲ್ಲವೇ ಇಲ್ಲ

ಅದೃಷ್ಟವೆಂಬುವದೂ ಬುದ್ಧಿ ಕಲ್ಪನೆಯೋ ದೇವರು ನನಗೆ ಸ್ವತಂತ್ರ್ಯವನ್ನು [illegible] ಕೃತ್ಯಕ್ಕೆ ದೇವರ [illegible] ಫಲವನ್ನು [illegible] ನನ್ನ ಮನಸ್ಸು [illegible] ಭಗವಂತನ [illegible]

ಬಳದೇಶ ವೃತ್ತಾಂತಗಳು.

[illegible]

ವಿವಿಧ ವರ್ತಮಾನಗಳು.

[illegible]

ಮೈಸೂರು ಗೆಜೆಟು ಸಂಗ್ರಹ

[illegible]

...ತೊಳಗಾಗಿ ೧|| ಲಕ್ಷ ರೂಪಾಯಿ ಲುಕ್ಸಾನಾಗಿ ಹೋಯಿತೆಂದು ತಿಳಿದ ಕೂಡಲೆ ಅದನ್ನು ಸಹಿಸಲಾರದೆ ಆತ್ಮಹತ್ಯ ಮಾಡಿಕೊಂಡನೆಂಬದಾಗಿಯೂ, ಈ ವಿಷಯವು ಸರ್ಕಾರದವರಿಗೆ ತಿಳಿದು ಬಂದು ಇದಕ್ಕೆ ಕಾರಣನಾದ ಆಗ್ರಾ ಪಟ್ಟಣದ ಸುಪರಿಂಟೆಂಡೆಂಟಿಗೆ ೬ ತಿಂಗಳು ಕಠಿಣಸಜಾ ವಿಧಿಸಿದರೆಂತಲೂ [illegible] ಪತ್ರಿಕೆಯು ತಿಳಿಸುತ್ತದೆ

ಜರ್ಮನಿಯ ಸೈನ್ಯದಲ್ಲಿ ಮುಖ್ಯಾಧಿಕಾರಿಗಳು [illegible]

[illegible]

ಅಕ್ರಮ.

ನಮ್ಮ ವೃತ್ತಾಂತ ಪತ್ರಿಕೆಯನ್ನು ಚಂದಾದಾರರುಗಳಿಗೆ ಎಲ್ಲರಿಗೂ ತಪ್ಪದೆ ಪ್ರತಿವಾರವೂ ಕ್ರಮವಾಗಿ ರವಾನಿಸುತ್ತೇವೆ. ಕೆಲವು ಮಂದಿ ಚಂದಾದಾರರು ತಮಗೆ ಪತ್ರಿಕೆಗಳು ಸಕಾಲಕ್ಕೆ ತಲಪುವದಿಲ್ಲವೆಂದು ಆಗಾಗ್ಯೆ ಬರೆಯುತ್ತಾರೆ. ಕೆಲವರಿಗೆ ತಲಪುವದೇ ಇಲ್ಲವೆಂದು ಬರೆಯುತ್ತಾರೆ. ಇದರಿಂದ ಅಂಥವರ ಮೇಲ್ವಿಳಾಸಗಳು ತಪ್ಪಾಗಿರಬಹುದು, ಇಲ್ಲವೆ ಸಬ್ ಆಫೀಸಿನಿಂದ ಜವಾನರು ಆಯಾ ಕಡೆಗಳಲ್ಲಿ ಸರಿಯಾಗಿ ತಿಲಿವರಿ ಮಾಡದೆ ಇರಬಹುದು ಎಂಬೀ ಎರಡು ಊಹೆಗಳು ಹುಟ್ಟುತ್ತವೆ. ಪತ್ರಿಕೆಗಳು ಯಾರ್ಯಾರಿಗೆ ಸಕಾಲಕ್ಕೆ ತಲಪುವದಿಲ್ಲವೋ ಅಂಥವರು ತಮ್ಮ ಸರಿಯಾದ ವಿಳಾಸವನ್ನು ಜಾಗ್ರತೆಯಾಗಿ ಬರೆದು ತಿಳಿಸಬೇಕು ಮತ್ತು ಸಬ್ ಆಫೀಸಿನ ಪೋಸ್ಟುಮಾಸ್ಟರುಗಳು ತಮ್ಮ ತಮ್ಮ ತಿಲಿವರಿ ಪ್ಯೂನರುಗಳಿಗೆ ಸರಿಯಾಗಿ ಡಿಲಿವರಿ ಮಾಡುವಂತೆ ಹುಕುಂ ಮಾಡಬೇಕು ಎಂಬದಾಗಿ ಈ ಮೂಲಕ ಅವರವರಿಗೆ ತಿಳಿಯಪಡಿಸಿರುತ್ತೇವೆ.

ಎಡಿಟರ,
ವೃತ್ತಾಂತ ಪತ್ರಿಕೆ.

ಶಾಲಿವಾಹನಶಕ ೧೮೧೫ ನೇ ವಿಜಯನಾಮ ಸಂವತ್ಸರದ ಕಾರ್ತೀಕ ಬಹುಳ ಚತುರ್ದಸಿ ಗುರುವಾರದಿಂದ ಮಾರ್ಗಶಿರ ಶುದ್ಧ ಪಂಚಮಿ ಬುಧವಾರದವರೆಗಿನ ವಾರದ ಪಂಚಾಂಗ.

೧೮೯೩ ನೇ ಇಸವಿ, ಡಿಸೆಂಬರ

ತಾ	ವಾರ.	ತಿಥಿ	ಘಳಿಗೆ.	ನಕ್ಷತ್ರ	ಘಳಿಗೆ.	ವೃಶ್ಚಿಕ ಮಾಸದ ತೇದಿ.
7	ಗು *	ಚ	7-5	ಸ್ವಾ	35-11	24
8	ಶು †	ಅ	11-55	ವಿ	41-47	25
9	ಶ	ಪ್ರ	17-11	ಅನು	48-25	26
10	ಭಾ	ದ್ವಿ	22-31	ಜ್ಯೇ	54-0	27
11	ಸೋ	ತ್ರಿ	27-49	ಮೂ	60-0	28
12	ಮಂ	ಚ	32-13	ಮೂ	0-49	29
13	ಬು	ಪಂ	35-30	ಪೂ	5-55	30

* ಸರ್ವತ್ರ ಅಮಾವಾಸ್ಯೆ

† ಸುಬ್ರಹ್ಮಣ್ಯದಲ್ಲಿ ಲಕ್ಷದೀಪೋತ್ಸವ

ಪೇಟೆ ಧಾರಣೆ.

ವಿವರ.	ಮೈಸೂರು	ಬೆಂಗಳೂರು
	ರೂ. ಆ ಪೈ.	ರೂ ಆ ಪೈ.
ಕಡ್ಡೀ ಅಕ್ಕಿ ಪಲ್ಲ ೧ಕ್ಕೆ	೧೨-೧೨-೦	೧೧-೨-೦
ಕೆಂಬಡಿ ಅಕ್ಕಿ ಅನ್ನಕ್ಕೆ	೧೨-೧೨-೦	೯-೮-೦
ಜೀರಿಗೆ ಅಕ್ಕಿ ಮಾದರಿ	೧೨-೧೧-೦	೮-೦-೦
ಜಾಸವಾಳಿ ಅಕ್ಕಿ	೧೨-೧೧-೦	೧೩-೮-೦
ಸಂಗಕ್ಕಿ ಅನ್ನಕ್ಕೆ	೧೩-೧೩-೦	೧೩-೦-೦
ಜೀರಿಗೆ ಅಕ್ಕಿ ಮಾದರಿ	೧೩-೧೨-೮	೧೨-೦-೦
ತೊಗರಿ ಬೇಳೆ ಪಲ್ಲ ೧ ಕ್ಕೆ	೧೩-೧೩-೦	೧೨-೦-೦
ಜೀರಿಗೆ ಮಾದರಿ ತರಹ	೧೩-೦-೦	೧೦-೮-೦
ಕಬ್ಬರಿ ಪಲ್ಲ ೧ಕ್ಕೆ	೬-೨-೮	೧೩[illegible]
ರಾಗಿ	೭-೯-೦	[illegible]
ಮಲಸಂದೆ ಪಲ್ಲ ೧ಕ್ಕೆ	೧೨-೧೩-೦	೧೧-೨-೦
ಹೆಸರು ಕಾಳು	೧೩-೦-೦	೧೨-೦-೦
ಹೆಸರು	೮-೮-೦	೯-೨-೦
ಉದ್ದು	೧೨-೮-೦	೮-೦-೦
ಕಡಲೆ	೯-೦-೦	೮-೮-೦
ಎಳ್ಳು	೧೩-೮-೦	೯೦-೦-೦
ಹುರುಳಿ	೬-೧೨-೦	೬-೮-೦
ಸಕ್ಕರೆ ಮಣ ೧ಕ್ಕೆ	೨-೦-೦	೨-೦-೦
[illegible]	೩-೮-೦	೨-೮-೦
ಮಾದರಿ ತರಹ	೨-೩-೦	೨-೦-೦
ಹಸು ತುಪ್ಪ ಒಂದು ಮಣಕ್ಕೆ	೬-೮-೦	ಮ ೩-೦-೦
ಎಮ್ಮೆ ತುಪ್ಪ ,,	೫-೮-೦	೫|| ೨-೦-೦
ಬೆಲ್ಲ ಮಣ ೧ಕ್ಕೆ	೮-೮-೦	೯-೨-೦
ಎಣ್ಣೆ	೩-೧೨-೦	೩-೧೨-೦
ಕೊತ್ತುಂಬರಿ ಪಲ್ಲ ೧ಕ್ಕೆ	೬-೮-೦	೬-೧೨-೦
ಉಪ್ಪು	೧೨-೮-೦	೭-೩-೦
ತಂಬಾಕು ಮಣ ೧ಕ್ಕೆ	೨-೩-೦	೨-೦-೦
ಹೊಗೆ ಸೊಪ್ಪು	೨-೦-೦	೧-೧೨-೦
ತುಪ್ಪ	೧೧-೦-೦	೧೦-೦-೦
ಸೀಮೆ ಎಣ್ಣೆ ಪೆಟ್ಟಿ ೧ ಕ್ಕೆ	೬-೨-೦	೩-೧೨-೦
ತೆಂಗಿನಕಾಯಿ ೧೦೦ ಕ್ಕೆ	೫-೦-೦	೬-೮-೦
ಚಿನ್ನ (ತೊಲ)		
ಸೇಂಟು	೧೬-೦-೦	೧೬-೩-೦
ಪವನು	೧೬-೮-೦	೧೬-೯-೦
ಗಟ್ಟಿ	೨೬-೮-೦	೨೬-೨-೦

Mysore —Printed and published for the Proprietor at the Wesleyan Mission Press.

7/12/93.

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು — ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಸಂಪುಟ ೨ | ಮೈಸೂರು—ಸನ್ ೧೮೯೩ ನೇ ಇಸವಿ ಡಿಸೆಂಬರ್ ತಾರೀಖು ೧೪ ನೇ ಗುರುವಾರ. | ಸಂಚಿಕೆ ೨೬

ನೋಟಿಸ್.

		ಕ್ರಯ			ಅಂಚೆ ಹಾಸಲು ಸಹಿತವಾಗಿ		
Campbell's.	ಕನ್ನಡ ವ್ಯಾಕರಣ ಸಾರ	೦	೨	೦	೦	೨	೬
Object Lessons.	ವಸ್ತು ಪಾಠಗಳು	೦	೧	೦	೦	೧	೬
Picture do	ಚಿತ್ರಗಳು ಸಹಿತವಾಗಿ	೦	೨	೦	೦	೨	೬
School Geography	ಭೂಗೋಳ ಶಾಸ್ತ್ರಸಾರ	೦	೬	೦	೦	೭	೦

ಈ ನಾಲ್ಕು ಪುಸ್ತಕಗಳು ಮೈಸೂರು ಸರ್ಕಾರದವರ ಅಪ್ಪಣೆ ಪ್ರಕಾರ ಸಕಲ ಪಾಠ ಶಾಲೆಗಳಲ್ಲಿಯೂ ಉಪಯೋಗಿಸತಕ್ಕವುಗಳು.

	ಕ್ರಯ			ಅಂಚೆ ಹಾಸಲು ಸಹಿತವಾಗಿ		
ಮಾರ್ಟಿನ್ ಲೂತರ್ ಎಂಬವರ ಚರಿತ್ರೆ	೦	೧	೬	೦	೨	೦
ಸ್ತ್ರೀಯರು ಓದತಕ್ಕ ಪುಸ್ತಕ	೦	೫	೦	೦	೫	೬
ಗಣಿತ ಮಗ್ಗಿಗಳು	೦	೧	೦	೦	೧	೬
ಸಂಸ್ಕೃತ ಕರ್ಣಾಟಕ ಭಾಷಾಮಂಜರಿ	೦	೨	೦	೦	೨	೬
ಇಂಗ್ಲೀಷೂ ಕನ್ನಡವೂ ಶಬ್ದಾವಳಿ ೧ನೇ ೨ನೇ ಭಾಗಂಕ್ಕೆ	೦	೧	೦	೦	೧	೬
ಕಾವ್ಯಮಾಲೆ (Minor Poetical Anthology)	೦	೮	೦	೦	೮	೬
ಬಾಲವ್ಯಾಕರಣ	೦	೫	೦	೦	೫	೬
ಹಳಗನ್ನಡ ವ್ಯಾಕರಣ ಸೂತ್ರಗಳು	೦	೬	೦	೦	೬	೬
ಇಂಗ್ಲೀಷೂ ಕನ್ನಡವೂ ಸಂಭಾಷಣ ವಾಕ್ಯಗಳು	೦	೧೦	೦	೦	೧೦	೬
ಶಬ್ದಮಣಿ ದರ್ಪಣ	೧	೦	೦	೧	೪	೬
Kan. Eng. Pocket Dictionary	೧	೪	೦	೧	೫	೩
Eng. Kan. School Dictionary	೨	೧೦	೦	೨	೧೨	೬
ಒಳ್ಳೇ ತಾಯಿ	೦	೪	೯	೦	೪	೬
ಆತ್ಮಿಕ ದಿವ್ಯ ಯುದ್ಧ (Bunyan)	೦	೧೨	೦	೦	೧೪	೬
ಕ್ರೈಸ್ತ ಪದ್ಧತಿ ೧ ನೇ ಭಾಗ ೨ ಅಣೆ ೩ನೇ ಭಾಗ	೦	೧	೬	೦	೨	೦
ಭಕ್ತಿಸಾರಂ	೦	೧	೦	೦	೧	೬
ಸತ್ಯ ವಾಗ್ದಾನಿ	೦	೧	೦	೦	೧	೬

ಈ ಪುಸ್ತಕಗಳೂ ಇನ್ನೂ ಅನೇಕ ಪ್ರಯೋಜನಕರವಾದ ಪುಸ್ತಕಗಳೂ ಕೆಳಗೆ ನೇಮಿಸಿರುವ ಸ್ಥಳಗಳಲ್ಲಿ ದೊರುಕುತ್ತವೆ.

ಬೆಂಗಳೂರು—ಪೇಟೆಯ ಪತ್ರವಿರುವ ಪುಸ್ತಕಶಾಲೆ.

ಚಿಕ್ಕಬಳ್ಳಾಪುರ—ಲಂಡನ್ ಮಿಷನ್ ರೀಡಿಂಗ್ ರೂಮ್

ತುಮಕೂರು—ವೆಸ್ಲಿಯನ್ ಮಿಷನ್ ಬಂಗಳೆ. ಮೈಸೂರು—ವೆಸ್ಲಿಯನ್ ಮಿಷನ್ ಪ್ರೆಸ್.

ನೋಟಿಸ್

ಪುಸ್ತಕಗಳು.	ಕ್ರಯ.
ಪ್ರಾರ್ಥನಾ ಮಾಲಿಕೆ	1—8—0
ಕನ್ನಡ ಇಂಗ್ಲೀಷು ನಿಘಂಟು 1 ನೇ ದೊಡ್ಡ ತರಹ	3—0—0
,, ,, 2 ನೇ ತರಹ	2—8—0
ಬಾಲಕರು ಓದುವ ಎರಡನೆ ಜ್ಞಾನೋಪದೇಶದ ಪ್ರಶ್ನೋತ್ತರಗಳು	0—1—0
ಸಭೆಯು ನಿರುಮಗಳನ್ನು ಕುರಿತದ್ದು	0—0—6
ಕಥಾ ಸಂಗ್ರಹ 1 ನೇ ಭಾಗದಿಂದ 3 ವರೆಗೆ	1—0—0
ಕಥಾ ಸಂಗ್ರಹ 4 ರಿಂದ 6 ನೇ ಭಾಗ ಹೊಸ ಛಾಪೆ	1—0—0
,, ,, ದೊಡ್ಡ ತರಹ	1—8—0
ಬೋಧಕಾಸಕ್ತಿ ಬೋಧಿನಿ	0—1—0
ಸತ್ಯವೇದವನ್ನು ಕುರಿತು 2 ನೇ ಭಾಗ	0—1—0
ಪ್ರಸಂಗಿಯ ದರ್ಪಣ	0—0—6
ಇಂಗ್ಲೀಷುಭಾಷೆಯಲ್ಲಿಯೂ, ಕನ್ನಡ ಭಾಷೆಯಲ್ಲಿಯೂ, ಶಬ್ದಗಳ ವಿಭಾಗಗಳನ್ನು ವಿವರಿಸಿರುವ ನಿಘಂಟು	0—2—0
ಕನ್ನಡ ವ್ಯಾಕರಣ (ಇಂಗ್ಲೀಷಿನಲ್ಲಿ)	2—0—0
ಹಿಂದುಸ್ಥಾನಿ ವ್ಯಾಕರಣ	1—0—0
ಬಾಲರ ಸೋಪಾನವು	0-12—0
ದಿನ ಕರಗಳ ಅಂಟುರೋಗವಿಚಾರ	0—0—6
ಕ್ರೈಸ್ತರ ಬೋಧನೆಗಳ ಸಿದ್ಧಾಂತವು	0—12—0

ಮೇಲೆ ನಮೂದಿಸಿರುವ ಪುಸ್ತಕಗಳನ್ನು ಅಪೇಕ್ಷಿಸುವವರು ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್ಸಿಗೆ ಬರೆದು ತರಿಸಿಕೊಳ್ಳಬಹುದು ಅಂಚೆ ಹಾಸಲು ಬೇರೆ ಕೊಡಬೇಕು

ವೆಸ್ಲಿಯನ್ ಮಿಷನ್ ಪ್ರೆಸ್,

ಮೈಸೂರು.

ಪ್ರಸಿದ್ಧಪತ್ರಿಕೆ

ಶ್ಲೋ|| ಸಕಲಸುಮನಸರಂಗರಾಜಾವ ಮನ | ಸಾಕರದಿ ಶ್ರೀಚಾಮರಾಜ ಒಡೆಯರದಯೆಯಿಂ || ಪ್ರಕಟಪಡುವಭಾರತಗಾಥೆ | ವಿಕಸಿಪುದೇಂ ಪಿರಿದೆ ಕೇಳ್ವ ಜನಕಾನಂದಂ ||

ಕನ್ನಡ ಮಹಾಭಾರತ.

"ಶ್ರೀಕೃಷ್ಣರಾಜ ವಾಣೀವಿಲಾಸ" ಎಂಬ ಕನ್ನಡ ಮಹಾಭಾರತವು ನಮ್ಮ ಸ್ವಕೀಯ ಶ್ರೀಚಾಮರಾಜೇಶ್ವರಿ ಪ್ರೆಸ್ಸಿನಲ್ಲಿ ಪ್ರಕಟವಾಗುತಿರುವದಲ್ಲದೆ ವಿಶದವಾಗಿರುವಷ್ಟು ಈಗ ಹದಿನೆಂಟು ಪರ್ವಗಳೂ ಪೂರ್ತಿಯಾಗಿ ಪ್ರಸಿದ್ಧವಾಗಿವೆ. ಅಪೇಕ್ಷಿಸುವವರು ಕೆಳಗೆ ವಿವರಿಸುವ ಕ್ರಯದಮೇಲೆ ಕ್ರಯ ಕೊಟ್ಟು ತರಿಸಿಕೊಳ್ಳಬಹುದು.

ಆದಿಪರ್ವ ರೂ ೩ ಸಭಾಪರ್ವ ೧-೩-೦, ಅರಣ್ಯಪರ್ವ ... ವಿರಾಟಪರ್ವ ಪ್ರತಿಯೊಂದು ೭ ಅಣೆ, ಹಿಟೊ ಕಿಡ್ಡಿನಾದಿನ ಪುಸ್ತಕದಂತೆ ೧ ರೂ ಉದ್ಯೋಗಪರ್ವ . ಭೀಷ್ಮಪರ್ವ ೨ ದ್ರೋಣಪರ್ವ ೨-೮-೦, ಕರ್ಣಪರ್ವ . . ಶಲ್ಯಪರ್ವ ೧-೨-೦ ಸೌಪ್ತಿಕಪರ್ವ ೬ ಅಣೆ ಸ್ತ್ರೀಪರ್ವ ೬ ಅಣೆ, ಶಾಂತಿಪರ್ವ ರಾಜಧರ್ಮ ೨-೬-೦ ಆಪದ್ಧರ್ಮ ೮ ಆ ಮೋಕ್ಷಧರ್ಮ ೨-೬-೦, ಅನುಶಾಸನಿಕಪರ್ವ ೩-೧೨-೦ ಅಶ್ವಮೇಧಿಕಪರ್ವ ೧-೧೨-೦, ಆಶ್ರಮವಾಸಿಕಪರ್ವ—ಮೌಸಲಪರ್ವ—ಮಹಾಪ್ರಸ್ಥಾನಪರ್ವ—ಸ್ವರ್ಗಾರೋಹಣಪರ್ವ ೧೦ ಅಣೆ ಭಗವದ್ಗೀತೆ ೮ ಅಣೆ ಯುಧಿಷ್ಠಿರನ ಚರಿತ್ರೆ ೪ ಅಣೆ ಶ್ರೀಭಕ್ತಿಸಾರ ೬ ಪೈ. ಪೋಸ್ಟೇಜು ಟಿಕ್ಕೆಟ್ಟಿನ ನೋಟ್ಸು ೮ ಅಣೆ.

ಅರಣ್ಯಪರ್ವ, ಉದ್ಯೋಗಪರ್ವ, ಕರ್ಣಪರ್ವ ಈ ಮೂರು ಪರ್ವಗಳು ಗೌರ್ನಮೆಂಟು ಬುಕ್ ಡಿಪೋವಿನಲ್ಲಿ ದೊರೆಯುವವು ಮೇಲೆ ಹೇಳಲ್ಪಟ್ಟಿರುವ ಪುಸ್ತಕಗಳು ನಮ್ಮಲ್ಲಿ ಸ್ವಲ್ಪವೇ ಇರುವದರಿಂದ ಜಾಗ್ರತೆಯಾಗಿ ತರಿಸಿಕೊಳ್ಳಬಹುದು, ಶ್ರೀಮನ್ಮಹಾರಾಜರವರಿಗೆ ಫಲಪುಷ್ಪ ಸಲಬಾರಿಯ ಮಹಾದಾನಕ್ಕೆ ಮುಖ್ಯವಾಗಿ ನೇಮಿಸಲ್ಪಟ್ಟ

ಎ. ರುದ್ರಪ್ಪ ಆಫೀಸರ್

ಶ್ರೀ ಪ್ರೈವೇಟ್ ಶ್ರೀಚಾಮರಾಜೇಶ್ವರಿ ಪ್ರೆಸ್,

ಲಾಲ್—ಬಾಗ್ ರೋಡ್ ಬೆಂಗಳೂರು

ಸನ್ ೧೮೮೯ ರಲ್ಲಿ ಸ್ಥಾಪಿಸಲ್ಪಟ್ಟದ್ದು.

ಕೆನರಾ ಆಂಡ್ ಮೈಸೂರು ಟ್ರೇಡಿಂಗ್ ಏಜನ್ಸೀ ಆಫೀಸ್, ಮುಂಬಯಿ.

ಇವರು ತಯಾರಿಸಿರುವಂಥ—

ಹೈಮಧಾತ್ರೀತೈಲ

ಕಳೆದ ಜನವರಿ ತಿಂಗಳೊಂದರಲ್ಲಿ ೪,೧೦೦ ಬಾಟ್ಲಿಗಳು ಖರ್ಚಾದವು. ಈ ತೈಲದ ಮಹತ್ವವನ್ನು ಕುರಿತು, ನಾವೀಗ ಹೆಚ್ಚಾಗಿ ವರ್ಣಿಸಲಾರೆವು—ಯಾಕೆಂದರೆ, ಯಾರು ಈ ತೈಲವನ್ನು ಉಪಯೋಗಿಸುತ್ತಿದ್ದಾರೋ ಅವರಿಗೆ ಒಂದೆರಡು ದಿವಸಗಳಲ್ಲಿಯೇ ಇದರ ಅಪ್ರತಿಮವಾದ ಗುಣವು ಸಹಜವಾಗಿ ಅನುಭವಕ್ಕೆ ಬರುವದು. ಆದಾಗ್ಯೂ ಇದರ ಮುಖ್ಯವಾದ ಉಪಯೋಗವನ್ನು ತಿಳಿಸುವದು ನಮ್ಮ ಕರ್ತವ್ಯವಾಗಿರುತ್ತದೆ.

ಈ ನಮ್ಮ "ಹೈಮಧಾತ್ರೀ ತೈಲವನ್ನು" ಪ್ರತಿದಿನ ತಲೆಗೆ ಹಾಕಿಕೊಂಡರೆ ಮಿದುಳಿನಲ್ಲಿರುವ ಉಷ್ಣತೆಯನ್ನು ಪರಿಹರಿಸುವದಲ್ಲದೇ, ಕಣ್ಣಿಗೂ, ಮಿದುಳಿಗೂ ತಂಪುಕೊಟ್ಟು, ಚಿತ್ತಕ್ಕೆ ಶಾಂತತೆಯನ್ನುಂಟುಮಾಡುವದು. ಮತ್ತು ಕಣ್ಣಿಗಾಗುಂಟಾಗುವ ಸಾಮಾನ್ಯವಾದ ವಿಕಾರಗಳನ್ನೆಲ್ಲ ಪರಿಹರಿಸುವದು. ದೃಷ್ಟಿಗೆ ತೀಕ್ಷ್ಣತೆಯುಂಟಾಗುವದು.

ಹೆಚ್ಚಾಗಿ ಓದತಕ್ಕವರಿಗೂ, ಒಂದೇ ಸಮನಾಗಿ ಕಣ್ಣಿಟ್ಟು ಕೆಲಸ ಮಾಡತಕ್ಕ ಕಸಬುಗಾರರಿಗೂ, ಕಣ್ಣುಗಳಲ್ಲಿ ನೀರು ಸುರಿಯುವವರಿಗೂ, ಉರಿಗಣ್ಣಿನವರಿಗೂ, ಚಿತ್ತವ್ಯಗ್ರವಾದವರಿಗೂ, ಅತ್ಯಂತ ಗುಣಕಾರಿಯಾಗಿರುವದು. ಈ ತೈಲದಲ್ಲಿರುವ ಇನ್ನೊಂದು ಅಪ್ರತಿಮವಾದ ಶಕ್ತಿಯೇನೆಂದರೆ—ಕೂದಲುಗಳನ್ನು ನಯವಾಗಿಯೂ, ಹೊಳಪುಳ್ಳವುಗಳನ್ನಾಗಿಯೂ, ಮಾಡುವದಲ್ಲದೇ ಬೆಳವಣಿಗೆಯನ್ನು ಹೆಚ್ಚಿಸುವದು. ಕೂದಲುಗಳು ಬೆಳ್ಳಗಾಗುವದನ್ನು ತಪ್ಪಿಸುವದು, ಅವು ಉದುರಿಹೋಗದಂತೆ ಮಾಡುವದು

ಪ್ರತಿಯೊಂದು ಬಾಟ್ಲಿಯೊಳಗೆ ೧೬ ತೊಲೆ ತೈಲವಿ ಎವವರಿಂದರ ಒಬ್ಬನಿಗೆ ೨ ತಿಂಗಳು ಹಚ್ಚಿಕೊಳ್ಳಲಿಕ್ಕೆ ಸಾಕಾಗುವದು. ಬಡಬಗ್ಗರು ಸಹ ಕೊಂಡುಕೊಳ್ಳಲಿಕ್ಕೆ ಅನುಕೂಲವಾಗಿರಬೇಕೆಂಬುದಕ್ಕಾಗಿ ಪ್ರತಿಯೊಂದು ಬಾಟ್ಲಿಗೆ ೧೦ ಅಣೆ ಕ್ರಯವಿಟ್ಟಿರುವೆವು ೧೨ ಬಾಟ್ಲಿಗಳುಳ್ಳ ೧ ಪೆಟ್ಟಿಗೆಗೆ ೬|| ರೂಪಾಯಿ. ಪ್ರತಿಯೊಬ್ಬ ಕುಟುಂಬಿಗನೂ, ಈ ತೈಲವನ್ನು ಉಪಯೋಗಿಸುವದು ಅವಶ್ಯವಾಗಿರುತ್ತದೆ. ಮಕ್ಕಳು ಮರಿಗಳಿಗೆ ಸಹ ಈ ತೈಲವು ಹಿತವಾಗಿರುತ್ತದೆ.

ಈ ತೈಲ ಮತ್ತು ಈ ಕೆಳಗೆ ಬರೆಯುವಂಥ ವಿಷಧಗಳು, ಪ್ರೆಸ್ಸು, ಮುತ್ತು, ರತ್ನ, ಬಂಗಾರ, ಬೆಳ್ಳಿ ಮುಂತಾದ ಸಾಮಾನುಗಳನ್ನು ಪಡೆಯಲಿಚ್ಛಿಸುವವರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬೇಕು.

ಮ್ಯಾನೇಜರ್, ಕನರಾ ಆಂಡ್ ಮೈಸೂರು ಟ್ರೇಡಿಂಗ್ ಏಜನ್ಸಿ ಆಫೀಸ್, ಮಾರ್ಕೆಟ್ ಪೋಸ್ಟ್. ಮುಂಬಾಯಿ.

ಈ ತೈಲವನ್ನು ನಮ್ಮ ಹೆಸರು ಇನ್ಯಾರೂ ಮಾಡಲಾರರು. ನಮ್ಮ ಹೆಸರಿನ ಗುರ್ತನ್ನು ನೋಡಿ ತೆಗೆದುಕೊಳ್ಳಬೇಕು ಬೇರೇತರದ ಎಣ್ಣೆಗಳನ್ನು ಈ ಹೆಸರಿನ್ನಿಟ್ಟು ಮಾರುತಿದ್ದರೆ ಜಾಗ್ರತೆ ಪಡಿರಿ!

ವಿಷಧಗಳು.	ರು ಅ.	ಪ್ರೆಸ್ಸುಗಳು.	ರು. ಅ.
ನಯನಾಮೃತಭಸ್ಮ ಬಾಟ್ಲಿ ೧ ಕ್ಕೆ	೧—೬	ನಮೂನೆವ್ಯಾಳಿಗೆ ಮದ್ದು	೨—೮
ನಯನಾಮೃತ ಕಾಡಿಗೆ	೧—೬	ಅರೇಸರ್ಜನ ಲಾಂಗ್‌ಕೋಟು	೫—೦
ಕರ್ಣಸ್ರಾವನಾಶಕ ಅಪ್ರತಿಮತೈಲ	೧—೮	ಡಿಟೊ. ಆರ್ಡಿನರಿ	೪—೮
ಮಹಾಮಂತ್ರಕಾಮದತೈಲ	೧—೦	ಡಿಟೊ. ಷರ್ಟ್‌ಕೋಟು (ಇಂಗ್ಲೀಷಮಾದರಿ)	೪—೬
ಪ್ರಮಾಳಭಸ್ಮವು	೨—೧೨	ದಪ್ಪನಾದ ಕಶ್ಮೀರಿಕೋಟು	೨—೮
ವಿವಿಧವ್ರಣಹರವಟ್ಟಿಕೆಯು	೧—೦	ಡಿಟೊ. ಆರ್ಡಿನರಿ	೨—೪
ಬಾಲಸಂಜೀವನಿಗುಟಿಕೆ	೩—೮	ಫ್ಲಾನಲ್ ಕಮಿಜು	೧—೧೨
ಅಜೀರ್ಣಮಾತ್ರೆ	೦—೮	ಡಿಟೊ ಬನೀಯನ್	೧—೪
ಸುಗಂಧದಂತಮಂಜನವು	೦ ೪	ಬಿಳಿ (ಇಂಗ್ಲೀಷಮಾದರಿ) ಷರ್ಟ್	೦—೧೨
ಕಜ್ಜಿಯಮಲಾಮು	೦—೨		

ತನುಶರದಾದ ಚಂದ್ರಕಾಂತ ಲೆಯು ಕನ್ನಡದಾಗ ಕ್ರಯ ರೂ. ೧—೩||—೫—೩||. ಉತ್ತಮಾತರದ "ಮಾಷ್ಟ" ಎಂಬ ಹೆಸರಿನ ರೇಷಿಮೆಯು (೧ ವರಂಪದ ಬಾಷೆಯನ್ನುಳ್ಳದ್ದು) ಕ್ರಯ ರೂ. ೬.

ವೃತ್ತಾಂತ ಪತ್ರಿಕೆ.

ಚಂದಾ ನಿರ್ಣಯ.

	ರು. ಅ. ಪೈ.
ಸ್ಥಳದವರಿಗೆ ವರ್ಷ ೧ಕ್ಕೆ	೧—೦—೦
ಪರಸ್ಥಳದವರಿಗೆ ವರ್ಷ ೧ಕ್ಕೆ	೧—೧೦—೦
ಬಿಡಿ ಪತ್ರಿಕೆ ೧ಕ್ಕೆ	೦—೦—೩

ಈ ಪತ್ರಿಕೆಯು ಮೈಸೂರು ರಾಜಧಾನಿಯಲ್ಲಿ ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ, ಪ್ರಕಟಿಸಲ್ಪಡುವದು. ಜನರು ಹೆಚ್ಚಾಗಿಯೂ ಸಮಸ್ತರಿಗೂ ಸುಲಭಸಾಧ್ಯವಾಗುವಂತೆ ಈ ಪತ್ರಿಕೆಗೆ ಇಷ್ಟು ಅಲ್ಪ ಮೌಲ್ಯವನ್ನು ನಿಶ್ಚಯಿಸಿರುತ್ತೇವೆ. ಈ ಪತ್ರಿಕೆಯನ್ನು ಅಪೇಕ್ಷಿಸುವವರು ಚಂದಾಹಣವನ್ನು ಮುಂಗಡವಾಗಿ ಕಳುಹಿಸಬೇಕು.

ಎಡಿಟರ್,

ವೃತ್ತಾಂತ ಪತ್ರಿಕೆ

ಟೋಪಿಗಳು!

ಟೋಪಿಗಳು!! WOOL CAPS ಟೋಪಿಗಳು!!

ಹಾಸನದ ಅರ್ಫನೇಜಿನಲ್ಲಿ ತಯಾರಾಗುವಂಥ ಉಣ್ಣೆ ದಾರದಿಂದ ಹೆಣೆದ ಟೋಪಿಗಳು (Wool Caps) ನಮ್ಮ ಆಫೀಸಿನಲ್ಲಿ ಮಾರಾಟಕ್ಕೆ ಸಿದ್ಧವಾಗಿರುತ್ತವೆ ಪ್ರತಿಯೊಂದು—೧ ರೂ. ೨ ಅಣೆ ಇಂದ ೧ ರೂ. ೬ ಅಣೆಗಳ ವರೆಗೂ ಬೇರೆ ಬೇರೆ ರಕಂಗಳುಂಟು. ಸ್ಥಳದವರು ನೇರವಾಗಿ ನೋಡಿ ಕೊಳ್ಳಬಹುದು. ಪರಸ್ಥಳದವರು ಮುಂಗಡವಾಗಿಯೇ ಹಣ ಕಳುಹಿಸಿದಲ್ಲಿ ತ್ವರಿತವಾಗಿ ಭಾಂಗೀ ಮೂಲಕ ಕಳುಹಿಸುತ್ತೇವೆ. ಭಾಂಗೀ ಛಾರ್ಜ್ ಬೇರೇ ಕೊಡಬೇಕು. ಹೇಳುವ ಕಾಗದದಲ್ಲಿ ಟೋಪಿಗೆ ಸಂಬಂಧವಾದದ್ದು ಎಂದು ಬರೆಯಬೇಕು.

ಮ್ಯಾನೆಜರ್,

ವೆಸ್ಲಿಯನ್ ಮಿಷನ್ ಪ್ರೆಸ್,

ಮೈಸೂರು.

ಏಜಂಟ್ರುಗಳಿಗೆ.

ಈ ಸಾರಿಗೋಸ್ಕರ ವೃತ್ತಾಂತಪತ್ರಿಕೆಯ ೩ನೇ ಸಂಪುಟದಲ್ಲಿ ಎರಡನೇ ಕ್ವಾರ್ಟರು ಪೂರೈಸುತ್ತಾ ಬಂದದ್ದರಿಂದ ಎಲ್ಲಾ ಏಜಂಟ್ರುಗಳೂ ದಯವಿಟ್ಟು ಜಾಗ್ರತೆಯಾಗಿ ಲೆಕ್ಕಗಳನ್ನು ತಯಾರುಮಾಡಿ ಕಳುಹಿಸಿಕೊಟ್ಟಾರೆಂದು ನಂಬಿದ್ದೇವೆ.

೬–೧೨–೯೭ } ಮೈಸೂರು. }

ಎಡಿಟರ್ ವೃತ್ತಾಂತಪತ್ರಿಕೆ

ವೃತ್ತಾಂತ ಪತ್ರಿಕೆ.

—o—

೧೮೯೭ನೇ ಇಸವಿ ದಿಸೆಂಬರ ತಾ|| ೧೫ನೇ ಗುರುವಾರ.

ಮೈಸೂರು ಸಿವಿಲ್ ಸರ್ವಿಸ್.

ಎರಡು ವಾರಗಳ ಕೆಳಗೆ ನಮ್ಮ ಪತ್ರಿಕೆಯಲ್ಲಿ „ಮೈಸೂರು ಸಿವಿಲ್ ಸರ್ವಿಸನ್ನು” ಕುರಿತು ಈ ಮುಂದಿನ ತಾತ್ಪರ್ಯವನ್ನು ಸೂಚಿಸಿದೆವು. ಏನೆಂದರೆ —„ಶ್ರೀಮನ್ಮಹಾರಾಜರವರ ಪ್ರಜಾಪಾಲನೆಯು ನಿರ್ದುಷ್ಟವಾದದ್ದಾಗಬೇಕಾದರೆ ಸಮರ್ಥರಾದ ಅಧಿಕಾರಿಗಳು ಎಲ್ಲಿ ದೊರೆಯುವರೋ ಅಲ್ಲಿಂದ ಕರೆದುತಂದು ನೇಮಿಸಿಕೊಳ್ಳಬೇಕು. ಸಮರ್ಥರಾದವರು ಯಾವ ದೇಶದವರಾದರೇನು ! ಯಾವ ಜಾತಿಯವರಾದರೇನು ! ಅವರು ವಿದ್ಯಾವಂತರಾಗಿಯೂ, ಪ್ರಜಾಪಾಲನೆಗೆ ಯೋಗ್ಯರಾಗಿಯೂ ಇದ್ದರೆ ಅವರನ್ನು ಭಾರೀ ಕೆಲಸಗಳಿಗೆ ಯಾಕೆ ನೇಮಿಸಬಾರದು ! ದೊಡ್ಡದೊಡ್ಡ ಹುದ್ದೆಗಳನ್ನೆಲ್ಲಾ ಮೈಸೂರು ದೇಶದವರೇ ಪಡೆಯಬೇಕೆಂದು ಕೆಲವರು ಅಪೇಕ್ಷಿಸುತ್ತಾರೆ. ಹಾಗಾದರೆ ಅಂಥಾ ಹುದ್ದೆಗಳಿಗೆ ಅವರು ಅರ್ಹರಾಗಿರುತ್ತಾರೆಂದು ಸಿವಿಲ್‌ಸರ್ವಿಸ್ ಪರೀಕ್ಷೆಗಳಲ್ಲಿಯೂ ತೋರ್ಪಡಿಸಿಕೊಳ್ಳಲಿ”ಎಂದು ಬರೆದೆವು. ಈ ವಿಷಯದಲ್ಲಿ ಇಲ್ಲಿನ ಪತ್ರಿಕಾಕರ್ತರು ಆಶ್ಚರ್ಯಭರಿತರಾಗಿ ಕನ್ನಡದಲ್ಲಿಯೂ, ಇಂಗ್ಲಿಷಿನಲ್ಲಿಯೂ, ಕೋಪೋದ್ರೇಕದಿಂದಲೂ, ಸ್ವಲ್ಪ ಕೋಪದಿಂದಲೂ ಈ ನಮ್ಮ ಅಭಿಪ್ರಾಯವನ್ನು ವಿರೋಧಿಸಿರುವರು. ಅವರು ಇಂಗ್ಲಿಷಿನಲ್ಲಿ ಬರೆದಿರುವುದು ನಮಗೆ ಅಷ್ಟು ಚೆನ್ನಾಗಿ ತಿಳಿಯುವದಿಲ್ಲ. ಕನ್ನಡದಲ್ಲಿ ಸೂಚನೆಯಾಗಿರುವ ವಿಶೇಷವಾದ ಆಕ್ಷೇಪಣೆ ಯಾವದೆಂದರೆ— „ಇಂಗ್ಲೆಂಡಿನಲ್ಲಿ ಸಿವಿಲ್ ಸರ್ವಿಸ್ ಪರೀಕ್ಷೆಯನ್ನು ಕೊಟ್ಟು ಸರ್ಕಾರದ ಹುದ್ದೆಗಳನ್ನು ಪಡೆಯುವವರು ಇಂಗ್ಲಿಷ ಜನರೇ. ಹಾಗಾದರೆ ಮೈಸೂರು ದೇಶದಲ್ಲಿ ಸರ್ಕಾರದವರು ಮೈಸೂರಿನವರಿಗೆ ಮಾತ್ರ ಸಂಸ್ಥಾನದ ಭಾರೀ ಹುದ್ದೆಗಳನ್ನು ಯಾಕೆ ಕೊಡಬಾರದು !” ಎಂಬುವದೇ. ಈ ಆಕ್ಷೇಪಣೆಯನ್ನು ಸರಿಯಾಗಿ ಪರ್ಯಾಲೋಚಿಸಿದರೆ, ಅದರಲ್ಲಿ ಯಾವ ಬಲವೂ ಇಲ್ಲವೆಂದು ನಮಗೆ ತೋರುತ್ತದೆ. ಇಂಗ್ಲೆಂಡಿನಲ್ಲಿ ಅನ್ಯದೇಶದವರು ಸಿವಿಲ್‌ಸರ್ವಿಸ್ ಪರೀಕ್ಷೆಯನ್ನು ಕೊಟ್ಟು, ಅಧಿಕಾರವನ್ನು ಪಡೆಯಬಾರದೆಂಬ ನಿಬಂಧನೆಯು ಎಲ್ಲಿಯೇ ಇಲ್ಲ. ಯಾವ ದೇಶದವರಾದರೂ ವಿಲಾಯಿತಿಯಲ್ಲಿ ಸೇರಿ ಪರೀಕ್ಷೆಯಿಂದಾಗಲಿ, ಬೇರೇ ರೀತಿಯಿಂದಾಗಲಿ, ತಮ್ಮನ್ನು ಇತರರಿಗಿಂತ ಸಮರ್ಥರನ್ನಾಗಿ ತೋರ್ಪಡಿಸಿಕೊಂಡರೆ, ಅವರು ಅಧಿಕಾರವನ್ನು ಪಡೆಯುವದಕ್ಕೆ ಏನೂ ಅಡ್ಡಿ ಇರುವದಿಲ್ಲ. ವಾಸ್ತವಿಕ ವಿಲಾಯಿತಿಯಲ್ಲಿರುವ ಹುದ್ದೆಗಳೆಲ್ಲಾ ಇಂಗ್ಲಿಷರವರಿಗೇ ದೊರೆಯುತ್ತದೆಂಬುವದು ವಾಸ್ತವ್ಯವಾಗಿದೆ. ಆದರೆ ಶ್ರೀಮಹಾರಾಣಿಯವರ ಅಧೀನರಾಗಿರುವವರಲ್ಲಿ ಹಿಂದುಗಳಾಗಲಿ, ಮುಸಲ್ಮಾನರಾಗಲಿ, ಆಸ್ಟ್ರೇಲಿಯ ದ್ವೀಪದವರಾಗಲಿ, ಆಫ್ರಿಕ ಖಂಡದವರಾಗಲಿ, ವೆಸ್ಟ್ ಇಂಡಿಯ ದ್ವೀಪದವರಾಗಲಿ ನೇಮಕವಾದ ನಿಬಂಧನೆಗಳನ್ನು ಅನುಸರಿಸಿ, ಪರೀಕ್ಷೆಯಲ್ಲಿ ತೇರ್ಗಡೆಯನ್ನು ಹೊಂದಿದರೆ, ಅವರು ಹುದ್ದೆಗಳನ್ನು ಪಡೆಯುವವರಲ್ಲಿ ಯಾರೂ ಯಾವ ಆಕ್ಷೇಪಣೆ ಮಾಡುವದಕ್ಕೂ ಆಸ್ಪದವಿಲ್ಲ. „ಮೈಸೂರು ಹೆರಾಲ್ಡ್” ಪತ್ರಿಕಾಕರ್ತರು ಮ|| ದಾದಾಭಾಯಿ ನವರೋಜಿಯವರನ್ನು ದೃಷ್ಟಾಂತವಾಗಿ ಇಟ್ಟುಕೊಂಡಿದ್ದಾರೆ. ಈ ದೊಡ್ಡ ಮನುಷ್ಯರು ಹತ್ತು ವರ್ಷಗಳ ಕೆಳಗೆ ಮೊದಲು ಅಥವಾ ನಾಲ್ಕಾರು ಬ್ರಿಟಿಷ ಪಾರ್ಲಿಮೆಂಟಿಗೆ ಹೋಗುವದಕ್ಕಾಗಿ ಪ್ರಯತ್ನಪಟ್ಟರು. ಮೊದಲನೆ ಸಾರಿಯೇನೋ ಅವರ ಪ್ರಯತ್ನವು ನಿರರ್ಥಕವಾಯಿತು. ಎರಡನೇ ಪ್ರಯತ್ನವು ಸಫಲವಾದದ್ದರಿಂದ, ಅವರು ಈಗ ಪಾರ್ಲಿಮೆಂಟಿಗೆ ಸೇರಿರುವ ಮೆಂಬರಾಗಿರುತ್ತಾರೆ. ನಾವು ಹಿಂದೆ ಹೇಳಿದ್ದಕ್ಕೆಲ್ಲ ಅವರು ಮೆಂಬರಾಗಿರುವದೇ ಉದಾಹರಣೆಯಾಗಿದೆ. ಪಾರ್ಲಿಮೆಂಟಿನಲ್ಲಿ ಮೆಂಬರಾಗುವದಕ್ಕೆ ಯಾವ ಪರೀಕ್ಷೆಯನ್ನೂ ಕೊಡಬೇಕಾದ ಅವಶ್ಯವಿಲ್ಲ. ಒಂದು ಊರಿನಲ್ಲಿರುವ ಚುನಾಯಿಸತಕ್ಕವರು ಒಬ್ಬನ ವಿಷಯವಾಗಿ ಸಮ್ಮತಿಸಿಟ್ಟು, ವೋಟುಗಳನ್ನು ಹೆಚ್ಚಾಗಿ ಕೊಟ್ಟರೆ, ಆ ಮನುಷ್ಯನು ಯಾವನಾಗಿದ್ದರೂ ಸರಿ, ಪಾರ್ಲಿಮೆಂಟ್ ಸಮಾಜಕ್ಕೆ ಸೇರುವನು. ಇದೂ ಅಲ್ಲದೆ ಇಂಡಿಯನ್ ಸಿವಿಲ್ ಸರ್ವಿಸಿಗೆ ಯಾವ ದೇಶದವನಾಗಲಿ, ಯಾವ ಮತಸ್ಥನಾಗಲಿ, ನೇಮಕವಾದ ನಿಬಂಧನೆಗಳನ್ನು ಅನುಸರಿಸಿ, ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದರೆ, ಅಂಥವನು ಆ ಸರ್ವಿಸಿಗೆ ಸೇರುವದಕ್ಕೆ ಯಾವ ಅಡ್ಡಿಯೂ ಇಲ್ಲ. ಆದರೆ ಇಲ್ಲಿಯವರಲ್ಲಿ ಕೆಲವರು ಈ ದೃಷ್ಟಾಂತವನ್ನೇ ತೆಗೆದುಕೊಂಡು ಆಕ್ಷೇಪಣೆ ಮಾಡುತ್ತಾರೆ. ಹ್ಯಾಗೆಂದರೆ—„ಯಾವ ದೇಶದವರಾದರೂ ಇಂಡಿಯನ್ ಸಿವಿಲ್ ಸರ್ವಿಸಿಗೆ ಸೇರಬಹುದಾದರೆ, ಇಂಡಿಯ ದೇಶದವರು ಯಾಕೆ ವಿಲಾಯಿತಿಗೆ ಹೋಗಿ ಪರೀಕ್ಷೆಯನ್ನು ಕೊಡಬೇಕು ? ಈ ದೇಶದಲ್ಲಿಯೇ ಅದೇ ಪರೀಕ್ಷೆಯನ್ನು ಕೊಟ್ಟು ಯಾಕೆ ತೇರ್ಗಡೆ ಹೊಂದಬಾರದು !” ಎಂಬುವದೇ. ಈ ಆಕ್ಷೇಪಣೆಯನ್ನು ಮಾಡುವವರು ಇಂಡಿಯ ದೇಶದವರು ವಿಲಾಯಿತಿಗೆ ಹೋಗಬೇಕಾದದ್ದಕ್ಕೆ ಕಾರಣವನ್ನು ತಿಳಿಯದೆ ಇರುವರೋ ಏನೋ. ಇಂಡಿಯ ಸರ್ಕಾರದವರು ಈ ದೇಶದವರನ್ನು ಸಿವಿಲ್ ಸರ್ವಿಸಿಗೆ ಸೇರಿಸಬಾರದೆಂಬ ಉದ್ದೇಶದಿಂದ ಈ ನಿರ್ಬಂಧವನ್ನು ಏರ್ಪಡಿಸಿರುವರೆಂದು ನೆನಸುವದು ಶುದ್ಧಾಂಗವಾಗಿ ತಪ್ಪಾಗಿದೆ. ವಿಲಾಯಿತಿಯಲ್ಲಿ ಪಡೆಯತಕ್ಕ ವಿದ್ಯಾಭ್ಯಾಸವು ಈ ದೇಶದಲ್ಲಿ ಉಂಟಾಗುವ ವಿದ್ಯಾಭ್ಯಾಸಕ್ಕಿಂತ ಬಹು ಶ್ರೇಷ್ಠವಾದದ್ದೆಂತಲೂ, ಪ್ರಯಾಣ ಮಾಡುವದು ಸಿವಿಲ್ ಸರ್ವಿಸ್ ಹುದ್ದೆಗಳನ್ನು ಪಡೆಯುವವರಿಗೆ ವಿಶೇಷ ಉಪಯುಕ್ತವಾದದ್ದೆಂತಲೂ ಈ ನಿಬಂಧನೆಯು ಸ್ಥಾಪಿತವಾಯಿತೇ ಹೊರತು, ಮತ್ಯಾವದರಿಂದಲೂ ಅಲ್ಲವು. ಅಂತು ದೇಶವನ್ನಾಗಲಿ, ಜಾತಿಯನ್ನಾಗಲಿ, ಮತವನ್ನಾಗಲಿ ಲಕ್ಷ್ಯಮಾಡದೆ, ಸಮರ್ಥರಾದವರಿಗೇ ಇಂಡಿಯನ್ ಸಿವಿಲ್‌ಸರ್ವಿಸ್ ಹುದ್ದೆಗಳು ಕೊಡಲ್ಪಡುವುವೆನ್ನುವದಕ್ಕೆ ಸಂಶಯವಿಲ್ಲ.

ಇಲ್ಲಿನ ಪತ್ರಿಕಾಕರ್ತರು—„ಮೈಸೂರು ಸಿವಿಲ್‌ಸರ್ವಿಸ್ ಹುದ್ದೆಗಳು ಮೈಸೂರು ದೇಶದವರಿಗೆ ಮಾತ್ರ ಕೊಡಲ್ಪಡಬೇಕೆಂಬ ನಮ್ಮ ಅಪೇಕ್ಷೆಗೆ ಸ್ವದೇಶಾಭಿಮಾನವೇ ಕಾರಣವೇ ಹೊರ್ತು ಬೇರೆ ಅಲ್ಲವು” ಎಂದು ಹೇಳುವರೆ. ಈ ಮಾತು ಒಳ್ಳೇದೇ ಸರಿ. ಆದರೆ ದೇಶಾಭಿಮಾನವು ಎರಡು ವಿಧವಾಗಿದೆ. ದೇಶವು ಯಾವ ಸ್ಥಿತಿಯಲ್ಲಾದರೂ ಇರಲಿ, ಸರ್ಕಾರದ ಅಧಿಕಾರಗಳೆಲ್ಲಾ ಸ್ವದೇಶೀಯರಿಗೇ ಲಭಿಸಬೇಕೆನ್ನುವದು ಒಂದು ವಿಧವಾದ ದೇಶಾಭಿಮಾನ. ನಮ್ಮ ದೇಶವನ್ನು ಯಾರು ಬೇಕಾದರೂ ಆಳಲಿ, ಅದು ಕ್ರಮೇಣ ಉತ್ತಮಸ್ಥಿತಿಗೆ ಬಂದರೆ ಸರಿ ಎನ್ನುವದು ಎರಡನೇ ವಿಧವಾದ ದೇಶಾಭಿಮಾನ. ಈ ಎರಡು ವಿಧಗಳಲ್ಲಿ ವಿದ್ಯಾವಂತರು ಯಾವದನ್ನು ಮೆಚ್ಚಿ ಅಪೇಕ್ಷಿಸುವರು ! ಕೆಲವು ಸಂದರ್ಭಗಳಲ್ಲಿ ಸ್ವದೇಶೀಯರು ಅಧಿಕಾರವನ್ನು ನಡಿಸುವದಕ್ಕೆ ಇತರರಿಗಿಂತ ಸಮರ್ಥರಾಗಿರುವರು. ಹಾಗಿರುವ ಪಕ್ಷದಲ್ಲಿ ಸ್ವದೇಶೀಯರೇ ಆಳಲಿ ಎಂದು ಮನಃಪೂರ್ವಕವಾಗಿ ಒಪ್ಪಿಕೊಳ್ಳುತ್ತೇವೆ. ಮೊದಲು ನಾವು ಸೂಚಿಸಿದ್ದು ಈ ಅಭಿಪ್ರಾಯಕ್ಕೆ ಸರಿಯಾಗಿದೆ. „ಸಮರ್ಥರು ಬೇಕು, ಹ್ಯಾಗಾದರೂ ಸ್ವದೇಶೀಯರೇ ನಮಗೆ ಬೇಕು” ಎನ್ನುವದು ದೇಶಾಭಿಮಾನಕ್ಕೆ ವಿರುದ್ಧವಾದದ್ದಾಗಿದೆಯಲ್ಲವೆ !

ಬರೋಡಾ ಸಂಸ್ಥಾನ ಮತ್ತು ಬಾಲ್ಯವಿವಾಹ.

ಮೈಸೂರು ಸಂಸ್ಥಾನದ ಶ್ರೀಮನ್ಮಹಾರಾಜರವರು ತಮ್ಮ ರಾಜ್ಯದಲ್ಲಿ ಬಾಲ್ಯವಿವಾಹವನ್ನು ತಕ್ಕಮಟ್ಟಿಗೆ ತಡೆಯಮಾಡಬೇಕೆಂಬ ಉದ್ದೇಶದಿಂದ ಕೆಲವು ತಿಂಗಳುಗಳ ಕೆಳಗೆ ಒಂದು ಹೊಸದಾದ ರೆಗ್ಯುಲೇಷನ್ನನ್ನು ಸರ್ಕಾರೀ ಗೆಜೆಟ್ಟಿನಲ್ಲಿ ಪ್ರಾಸಿದ್ಧ ಮಾಡಿ, ಆದರ ವಿಷಯದಲ್ಲಿ ಪ್ರಜೆಗಳು ಯಾವ ವಿಧವಾದ ಅಭಿಪ್ರಾಯವುಳ್ಳವರಾಗಿದ್ದಾರೆಂಬದನ್ನು ತಿಳಿಯಬೇಕು ಎಂಬ ಸಂಗತಿ ನಮ್ಮ ವಾಚಕರಿಗೆ ತಿಳಿದೇ ಇದೆಯಷ್ಟೆ. ಈಗ ಬರೋಡೆಯ ಮಹಾರಾಜರವರೂ ಈ ಪೋಲಿಸಿಯನ್ನು ಇಟ್ಟುಕೊಂಡು ತಮ್ಮ ಸಂಸ್ಥಾನದಲ್ಲಿಯೂ ಪ್ರಜೆಗಳು ಬಾಲ್ಯವಿವಾಹವನ್ನು ಮಾಡುವಂತೆ ಸಾಧ್ಯವಾದ ಮಟ್ಟಿಗೆ ಪ್ರತಿಬಂಧಿಸಬೇಕೆಂಬ ಉದ್ದೇಶಪೂರ್ವಕವಾಗಿ ಒಂದು ಹೊಸದಾ ರೆಗ್ಯುಲೇಷನ್ನನ್ನು ರಚಿಸಿ, ತಮ್ಮ ಪ್ರಜೆಗಳ ಅಭಿಪ್ರಾಯಗಳನ್ನು ತಿಳಿಯುವದಕ್ಕಾಗಿ ಅಲ್ಲಿನ ಸರ್ಕಾರೀ ಗೆಜೆಟ್ಟಿನಲ್ಲಿ ಪ್ರಸಿದ್ಧ ಮಾಡಿಸಿರುತ್ತಾರೆ. ಆದರೆ ಮೈಸೂರು ಸಂಸ್ಥಾನದ ರೆಗ್ಯುಲೇಷನ್ನಿಗೂ ಬರೋಡಾ ಸಂಸ್ಥಾನದ ರೆಗ್ಯುಲೇಷನ್ನಿಗೂ ಅರ್ಥಾರ್ಥ ಸಂಬಂಧವಿಲ್ಲದಂತಿದೆ. ಬಾಲ್ಯವಿವಾಹವನ್ನು ಮಾಡಿದವರನ್ನೂ, ಮಾಡಿಸಿದವರನ್ನೂ ಸಜಾ ಮತ್ತು ಜುಲ್ಮಾನೆಗಳ ಮೂಲಕ ಶಿಕ್ಷಿಸುತ್ತೇವೆಂದು ಮೈಸೂರು ಗವರ್ನ್ಮೆಂಟಿನವರು ಹೇಳುತ್ತಾರೆ. ಆದರೆ ಅಂಥವರಿಗೆ ಇಂಥಾ ಕಠಿಣವಾದ ಯಾವ ಶಿಕ್ಷೆಯನ್ನೂ ಕೊಡುವದಿಲ್ಲವೆಂತಲೂ, ಪಂಚಾಯತರಿಂದ ವಿಧಿಸಲ್ಪಡುವ ಜುಲ್ಮಾನೆಯನ್ನು ಮಾತ್ರ ಅವರಿಂದ ವಸೂಲ್ಮಾಡುತ್ತೇವೆಂತಲೂ ಬರೋಡೆಯ ಸರ್ಕಾರದವರು ಹೇಳುತ್ತಾರೆ. ಯಾವ ಜನರು ಬಾಲ್ಯವಿವಾಹವನ್ನು ಮಾಡುವದಿಲ್ಲವೆಂದು ಹಿರಿಯರ ಸಮಾಜದಲ್ಲಿ ಒಪ್ಪಿಕೊಳ್ಳುತ್ತಾರೋ ಅಂಥವರು ತಮ್ಮ ವಾಗ್ದಾನವನ್ನು ಮೀರಿ ಬಾಲ್ಯವಿವಾಹವನ್ನು ಮಾಡಿದ್ದೇ ಆದರೆ ಮೇಲ್ಕಂಡ ಜುಲ್ಮಾನೆಯನ್ನು ತೆರಬೇಕು. ಯಾರು ಬಾಲ್ಯವಿವಾಹವನ್ನು ನಾವು ಎಂದಿನಂತೆ ಮಾಡುತ್ತಿರುವೆವೆಂದು ಹೇಳುವರೋ ಅಂಥವರನ್ನು ನಿರ್ಬಂಧಪಡಿಸುವದಕ್ಕೆ ಕಾನೂನು ಮಾಡುವದು ಸರಿಯಲ್ಲವೆಂದು ಬರೋಡೆಯ ಸರ್ಕಾರದವರು ಹೇಳುತ್ತಾರೆ. ಬಾಲ್ಯವಿವಾಹವನ್ನು ಮಾಡುವದಿಲ್ಲವೆಂದು ಸಮ್ಮತಿ ಕೊಟ್ಟಿರುವ ಪ್ರಜೆಗಳ ಪೈಕಿ ಯಾರಾದರೂ ಹತ್ತು ವರ್ಷಕ್ಕಿಂತ ಚಿಕ್ಕವಯಸ್ಸಿನ ಬಾಲಕಬಾಲಿಕೆಯರಿಗೂ, ಎಂಟು ವರ್ಷಗಳ ಹುಡುಗಿಗೂ ಹನ್ನೆರಡು ವರ್ಷದ ಹುಡುಗನಿಗೂ, ಹನ್ನೆರಡು ವರುಷದ ಹುಡುಗಿಗೂ ಐವತ್ತು ವರುಷ ವಯಸ್ಸಿನ ಗಂಡಸಿಗೂ ಮತ್ತು ಐವತ್ತು ವಯಸ್ಸಿನ ಪ್ರಾಯಸ್ಥನಿಗೂ ಇಪ್ಪತ್ತೊಂಭತ್ತು ವಯಸ್ಸಿನ ಯುವತಿಗೂ (!) ವಿವಾಹವನ್ನು ಮಾಡಿದ್ದೇ ಆದರೆ ಆ ಕುಲದವರೆಲ್ಲ ಒಂದು ಪಂಚಾಯತಿಯನ್ನು ಏರ್ಪಡಿಸಿ ಅಂಥವನಿಗೆ ಸ್ವಲ್ಪ ಜುಲ್ಮಾನೆಯನ್ನು ವಿಧಿಸಬೇಕು. ಅದನ್ನು ಸರ್ಕಾರದ ಅಧಿಕಾರಿಗಳು ಕಂದಾಯಗಳನ್ನು ವಸೂಲಮಾಡುವ ರೀತಿಯಾಗಿ ವಸೂಲು ಮಾಡಬೇಕು ಎಂಬುವದೇ. ವಾಚಕರೆ, ಇಂಥಾ ಕಾನೂನಿನಿಂದ ಬರೋಡೆಯ ರಾಜ್ಯದಲ್ಲಿ ಪ್ರಜೆಗಳಿಗೆ ಯಾವವಿಧವಾದ ಉಪಯೋಗವಾದೀತು ! ಅದಂತಿರಲಿ, ಈ ಕಾನೂನಿಗೆ ವಿರೋಧಿಸತಕ್ಕವರು ಎಂದಿನಂತೆ ಬಾಲ್ಯವಿವಾಹಗಳನ್ನು ಮಾಡುತ್ತಲೇ ಇರಲಿ ಹುಡುಗಿ ಎಂದಾಗಲಿ ನೀವು ಕೇಳಬಹುದು. ಆದರೆ ಹೀಗೆ ನೋಡಿದ ರಾಜರುಗಳಲ್ಲಿ ಮುಂದಾಳಾಗಿರುವವರು ಇಂಥಾ ಕಾನೂನುಗಳನ್ನು ಜಾರಿಯಲ್ಲಿ ತರುವದವಶ್ಯಕವೆಂತಲೂ. ಬಾಲ್ಯವಿವಾಹವು ನಿಂದ್ಯವೂ, ದೂಷ್ಯವೂ ಮತ್ತು ಅನರ್ಥಕಾರಿಯೂ ಆದದ್ದೆಂತಲೂ, ಪ್ರಜೆಗಳು ಅದನ್ನು ನಡಿಸದಂತೆ ಸರ್ಕಾರದವರು ಪ್ರವೇಶಮಾಡಬಹುದಂತಲೂ ತಿಳಿದು ಹೀಗೆ ತಮ್ಮ ತಮ್ಮ ಶೀಮೆಯ ಜನರಿಗೂ ಉತ್ತಮಸ್ಥಿತಿಗೆ ಬರಲಿ ಎಂಬ ಅಭಿಲಾಷೆಯನ್ನು, ಪ್ರಜಾ ಕ್ಷೇಮಚಿಂತನೆಯನ್ನೂ ಇಂಥಾ ಶಾಸನಗಳ ಮೂಲಕ ಪ್ರಜೆಗಳಿಗೂ ಪ್ರಪಂಚಕ್ಕೂ ವ್ಯಕ್ತಪಡಿಸುತ್ತ ಬಂದಿರುವದು ಸರ್ವಶ್ಲಾಘ್ಯವಲ್ಲವೆ! ಇದರಿಂದ ಕಾಲಾನುಕಾಲದಲ್ಲಿ ಪ್ರಜೆಗಳಿಗೆ ಕ್ಷೇಮವೂ, ಆರೋಗ್ಯವೂ, ದೃಢಾಂಗವೂ, ಸತ್ವವೂ ಲಭಿಸುವದೆಂಬವಕ್ಕೆ ಸಂದೇಹವೇನು!

ಪ್ರಾಣಘಾತುಕರು.

ಎಲ್ಲಾ ಸರ್ಕಾರಗಳ ಅಧಿಕಾರಗಳನ್ನೂ ಕೆಡಿಸಬೇಕೆಂಬ ತಾತ್ಪರ್ಯವುಳ್ಳ ಅನಾರ್ಕಿಸ್ಟಸ ಎಂಬವರ ವಿಷಯದಲ್ಲಿ ಕೆಲವು ಅಂಶಗಳನ್ನು ಹೋದವಾರದಲ್ಲಿ ನಮ್ಮ ವಾಚಕರಿಗೆ ತಿಳಿಸಿದ್ದೇವಷ್ಟೆ. ಆಗ ನಾವು ಬರೆದದ್ದಕ್ಕೆ ನೆನ್ನೆ ದಿವಸ ತಂತಿಯ ಮೂಲಕವಾಗಿ ಒಂದು ಸಂಗತಿಯು ದೃಷ್ಟಾಂತವಾಗಿ ಬಂತು. ಕಳೆದ ೯ನೇ ತಾರೀಖಿನಲ್ಲಿ ಫ್ರಾನ್ಸ್‌ದೇಶಕ್ಕೆ ರಾಜಧಾನಿಯಾಗಿರುವ ಪ್ಯಾರಿಸ ಪಟ್ಟಣದಲ್ಲಿ ಪಾರ್ಲಿಮೆಂಟಿನಸಭೆ ನಡೆಸಲ್ಪಡುತ್ತಿರುವಾಗ ಅಕಸ್ಮಾತ್ತಾಗಿ ಹೊದ್ದು ತುಂಬಿದ ಒಂದು ಗುಂಡು ಮೇಲಿನಿಂದ ಬಿದ್ದು ಢಪ ! ಎಂಬ ಶಬ್ದದಿಂದ ಹಾರಿತು. ಅದು ಬಿದ್ದದ್ದರಿಂದ ಸಭೆ ಮನೆಯಲ್ಲಿದ್ದ ಎಂಭತ್ತು ಮಂದಿ ಮೆಂಬರುಗಳಿಗೆ ಗಾಯಗಳಾದರೂ, ಪ್ರಾಣಹಾನಿಯೇನೂ ಆಗಲಿಲ್ಲ. ಪೋಲೀಸ ಜವಾನರು ಆಕ್ಷಣವೇ ಆ ಸಭೆಮನೆಯ ಬಾಗಿಲುಗಳನ್ನೆಲ್ಲಾ ಮುಚ್ಚಿ ಒಳಗಿದ್ದ ಪ್ರತಿ ಮನುಷ್ಯನನ್ನೂ ಪರೀಕ್ಷಿಸಿದರು. ಕಡೆಗೆ ವೇಲೋಂಗ್ ಎಂಬವನೊಬ್ಬನನ್ನು ಹಿಡಿದು ಸೈದಿನಲ್ಲಿ ಇಟ್ಟಿದ್ದಾರೆ. ಈ ಮನುಷ್ಯನು ಅಮೇರಿಕ ಖಂಡದಿಂದ ಬಂದು ಫ್ರಾನ್ಸ್‌ದೇಶದ ಪಾರ್ಲಿಮೆಂಟ ಸಮಾಜದಲ್ಲಿ ಮುಖ್ಯಾಧಿಕಾರವನ್ನು ವಹಿಸಿರುವ ಪ್ರಧಾನ ಮಂತ್ರಿಯನ್ನು ಕೊಲ್ಲಬೇಕೆಂಬ ಉದ್ದೇಶದಿಂದ ಈ ಕೃತ್ಯವನ್ನು ನಡೆಸಿದನು. ಇವನು ತಾನು ಮಾಡಿದ್ದಕ್ಕೆ ಸ್ವಲ್ಪವೂ ನಾಚಿಕೆಪಡದೆ, ಸರ್ಕಾರದ ಅಧಿಕಾರವು ಇಲ್ಲದೆ ಹೋಗಬೇಕೆಂಬ ತನ್ನ ಅಭಿಪ್ರಾಯವನ್ನು ಎಲ್ಲರ ಮುಂದೆ ಬಹು ಡಾಂಭಿಕವಾಗಿ ತಿಳಿಸುತ್ತಿದ್ದಾನೆ. ಇವನಿಗೂ ಅದರಿಂದ ಗಾಯಗಳುಂಟಾದುವು. ಆ ಗುಂಡು ಬಿದ್ದಾಗ ಸಭೆಯಲ್ಲಿ ಬಹಳ ಗಲಿಬಿಲಿಯುಂಟಾದಾಗ್ಯೂ, ಪ್ರಧಾನಮಂತ್ರಿಗಳು ಸ್ವಲ್ಪವೂ ಹೆದರದೆ, ಎಲ್ಲರಿಗೂ ಧೈರ್ಯಹೇಳಿ ಆ ಅಪರಾಧಿಯನ್ನು ಹಿಡಿಸಿದಮೇಲೆ, ಯಥಾಪ್ರಕಾರ ಸಭೆಯ ಕೆಲಸಗಳನ್ನು ನಡೆಸಿದರು.

ಕೊರತೆ.

--

ಒಂದು ಜಾತ್ರೆಗೆ ಬಂದಿದ್ದ ಜನರಲ್ಲಿ ಯೇಸುಕ್ರಿಸ್ತನೆಂಬುವವನು ನಿಂತುಕೊಂಡು—„ನಿಮ್ಮಲ್ಲಿ ದಾಹಗೊಳ್ಳುವವನು ನನ್ನಿಂದ ನೀರನ್ನು ಪಡೆದು ತನ್ನ ದಾಹವನ್ನು ಪರಿಹರಿಸಿಕೊಳ್ಳಲಿ” ಎಂದು ಕೂಗಿದರು. ನಾವು ಈ ಮಾತನ್ನು ಚೆನ್ನಾಗಿ ಆಲೋಚಿಸಿದರೆ ಅದರಲ್ಲಿರುವ ಅರ್ಥವು ಎಲ್ಲರಿಗೂ ಬಹು ಅನುಕೂಲವಾಗಿರುವಂತೆ ತೋರುತ್ತದೆ. ದಾಹವೆಂಬುವದು ಸಾಧಾರಣವಾದ ಒಂದು ಕೊರತೆಯಾಗಿದೆಯಷ್ಟೆ. ಅದನ್ನು ನಿವಾರಣೆಮಾಡುವದಕ್ಕೆ ನೀರು ಸಿದ್ಧವಾಗಿಲ್ಲದಿದ್ದರೆ, ಜನರು ಅದರಿಂದ ಪೀಡಿತರಾಗಿ ಕೆಲವು ಸಮಯಗಳಲ್ಲಿ ಸತ್ತುಹೋಗುವರು. ದಾಹಕ್ಕೆ ತಕ್ಕ ಪಾನವು ಕೊರತೆಯಾದವರೂ ಮನುಷ್ಯರಿಗೆ ಅಷ್ಟು ತೊಂದರೆಯನ್ನುಂಟು ಮಾಡುವದೆಂದು ನಾವು ನೆನಸಿದ್ದೇವೆ. ಬೇಸಿಗೇ ಕಾಲದಲ್ಲಿ ಪ್ರಯಾಣಿಕರು ಮಧ್ಯಾಹ್ನ ನಾಲ್ಕು ಘಂಟೆಗೆ ಎದ್ದು ಮಧ್ಯಾಹ್ನ ಹನ್ನೆರಡು ಘಂಟೆಯವರೆಗೂ ನಡೆಯುತ್ತಾ ಹೋಗಬೇಕಾದರೆ ಅವರು ಕೆರೆಯನ್ನಾಗಲಿ ಕೊಳವನ್ನಾಗಲಿ ನೋಡಿದರೆ ಬಹು ಸಂತೋಷಪಟ್ಟು ಗುಡಾರದಲ್ಲಿ ಕೂತುಕೊಂಡು ಧಾರ್ಮಿಕವಾಗಿ ನೀರನ್ನು ಕೊಡುವ ಯಾವನೊಬ್ಬನನ್ನು ನೋಡಿ ಎಷ್ಟೋ ಸಂತೋಷಪಡುತ್ತಾರೆ. ದಾಹವು ಪರಿಹಾರವಾಗದಿದ್ದರೆ ಮೊದಲು ದಣಿದು ಆ ಮೇಲೆ ಬ್ಯಾರಿನಲ್ಲಿ ಬಿದ್ದು ಕಷ್ಟದಿಂದ ಹೊರಳಾಡಿ ಪ್ರಜ್ಞೆತಪ್ಪಿ ಕಡೆಗೆ ಪ್ರಾಣ ಬಿಡಬೇಕಾಗುವದು ಕಂಡಿದೆ. ದಾಹದಿಂದಿರುವ ಕಾಲದಲ್ಲಿ ಯಾರೊಬ್ಬರು ಒಂದು ತಂಬಿಗೆ ನೀರನ್ನು ಕೊಟ್ಟರೆ ಅವರು ಮಹೋಪಕಾರಿಗಳೆನ್ನಿಸಿಕೊಳ್ಳುವದಿಲ್ಲವೆ ?

ದಾಹವು ಮನುಷ್ಯರಿಗಿರುವ ನಾನಾವಿಧವಾದ ಕೊರತೆಗಳನ್ನು ಸೂಚಿಸುವಂಥಾದ್ದಾಗಿದೆ ಅಂಥಾ ಕೊರತೆಗಳು ಇಷ್ಟೆಂದು ಹೇಳುವದು ಅಸಾಧ್ಯವಾಗಿದೆ. ಅವುಗಳಲ್ಲಿ ನಾವು ಸದ್ಯಕ್ಕೆ ಮೂರು ನಾಲ್ಕು ವಿಶೇಷವಾದವುಗಳನ್ನು ತಿಳಿಸುವದು ನಮಗೆ ಸಾಕಾಗಿರಬಹುದು

(೧) ಅನೇಕ ದೊಡ್ಡ ವಿಷಯಗಳನ್ನು ಕುರಿತು ಜನರಿಗೆ ತಿಳುವಳಿಕೆ ಇಲ್ಲದಿರುವದೇ ಒಂದು ಕೊರತೆಯಾಗಿದೆ ಬೌದ್ಧ, ಹಿಂದು ಕ್ರೈಸ್ತ—ಈ ಮೂರು ಮತಗಳುಂಟೆಂದು ಸಾಧಾರಣವಾಗಿ ಎಲ್ಲರಿಗೂ ತಿಳಿದೇ ಇದೆಯಷ್ಟೆ ಬೌದ್ಧಮತಸ್ಥರಾಲೋಕದಲ್ಲೆಲ್ಲಾ ಪ್ರಬಲವಾಗಿರುವ ಕಷ್ಟದುಃಖಗಳನ್ನು ಯೋಚಿಸಿ ಇವುಗಳಿಗೆ ಕಾರಣವೇನೆಂತಲೂ ಇವುಗಳನ್ನು ತಪ್ಪಿಸಿಕೊಳ್ಳುವ ರೀತಿ ಯೇನೆಂತಲೂ ಕೇಳುವವರಾಗಿದ್ದಾರೆ ಆ ಮತವನ್ನು ಸ್ಥಾಪಿಸಿದ ಗೌತಮ ಬುದ್ಧನು ಕೆಲವರಲ್ಲಿ ರೋಗವನ್ನೂ, ಕೆಲವರಲ್ಲಿ ವೃದ್ಧಾಪ್ಯವನ್ನೂ, ಕೆಲವರಲ್ಲಿ ಶೋಕವನ್ನೂ ನೋಡಿ ಇವೆಲ್ಲವನ್ನೂ ತಾಳಲಾರದ ಹೊರೆಯಂತೆ ಭಾವಿಸಿ, ಇವುಗಳನ್ನು ತಪ್ಪಿಸಿಕೊಳ್ಳುವದಕ್ಕೆ ಮಾರ್ಗವಿಲ್ಲವೆಂದು ತಿಳಿದು ನಿರ್ವಾಣವೆಂಬ ನಿದ್ರೆಯನ್ನು ನಿರಂತರವಾಗಿ ಸ್ವೀಕರಿಸುವದೇ ಮೋಕ್ಷವೆಂದು ಬೋಧಿಸುವನು ಆದರೆ ನಿರ್ವಾಣವೆಂಬ ಸ್ಥಿತಿಯಾಗಲಿ, ಸ್ಥಳವಾಗಲಿ ಉಂಟೆಂಬುವದಕ್ಕೆ ಯಾವ ಸಿದ್ಧಾಂತವೂ ತೋರುವದಿಲ್ಲವಾದ್ದರಿಂದ ಬೌದ್ಧನ ಅಭಿಪ್ರಾಯವನ್ನು ಅಂಗೀಕರಿಸುವದು ಕಷ್ಟ

ಹಿಂದೂಮತಸ್ಥರು—ಜೀವದಿಂದಿರುವದೇ ಮುಖ್ಯ ಕಷ್ಟವೆಂತಲೂ, ಅದನ್ನು ತಪ್ಪಿಸಿಕೊಳ್ಳುವದೇ ಮೋಕ್ಷವೆಂತಲೂ ಹೇಳುವವರಾಗಿದ್ದಾರೆ ಕ್ರೈಸ್ತಮತಸ್ಥರು ಜೀವಕ್ಕಿಂತಲೂ ಕಷ್ಟಕ್ಕಿಂತಲೂ ಪಾಪವನ್ನೇ ದೊಡ್ಡ ಹೊರೆಯೆಂದು ಭಾವಿಸಿ ಅದರಿಂದ ಬಿಡುಗಡೆಯನ್ನು ಹೊಂದುವದಕ್ಕೆ ಬಹು ಕುತೂಹಲವುಳ್ಳವರಾಗಿದ್ದಾರೆ ಹಾಗಾದರೆ ಜೀವ, ದುಃಖ, ಪಾಪ—ಈ ಮೂರು ವಿಷಯಗಳನ್ನು ಕುರಿತು ನಮಗೆ ತಕ್ಕಷ್ಟು ತಿಳು

ವೆಳೆಕಯು ಹ್ಯಾಗೆ ಉಟಿಗಬಹುದು? ನಿಶ್ಚಯವಾಗಿ ನಮ್ಮ ಕಷ್ಟಗಳನ್ನು ಪರಿಹರಿಸುವದು ಧೈರ್ಯವಿಲ್ಲದವರಿಗೆ ತಕ್ಕ ಉಪಾಯವೇ ಹೊರತು ಶಸ್ತ್ರವಂತರಿಗೆ ಎಂದಿಗೂ ತಕ್ಕದ್ದಲ್ಲ. ಜೀವವನ್ನು ತಪ್ಪಿಸಿಕೊಳ್ಳುವದರಿಂತ ಕಷ್ಟವನ್ನು ಅನುಭವಿಸುವದೇ ಉತ್ತಮ. ಎಷ್ಟು ಜನ ಧನಹೀನರಾಗಿಯೂ ಜೀವವನ್ನು ತಪ್ಪಿಸಿಕೊಳ್ಳುವ ಕಾರ್ಯ ಮಾಡಲಿಲ್ಲ? ಹಾಗೆ ಮಾಡುವವರು ಈ ಮನುಷ್ಯರ ಕಷ್ಟಗಳನ್ನು ನೋಡಿ ಜನರು ಅವುಗಳನ್ನು ತಪ್ಪಿಸಿಕೊಳ್ಳುವದು ಒಳ್ಳೆಯದಲ್ಲವೆಂದು ನಿಶ್ಚಯವಾಗಿ ಹೇಳಬಹುದು. ಹಾಗೆ ಅವರು ತೊಂದರೆಪಡುತ್ತಿದ್ದರೆ, ಅವರಿಂದ ಸ್ವಂತ ಬಂಧುಗಳಿಗೆ ಉಂಟಾಗುವ ಕಷ್ಟವನ್ನು ಪರಿಹರಿಸುವದು ಯಾರು? ತಂದೆತಾಯಿಗಳು ತಮ್ಮ ಮಕ್ಕಳನ್ನು ಬಿಟ್ಟುಬಿಟ್ಟರೆ, ಆ ಮಕ್ಕಳು ಅನಾಥವಾಗಿ ಕಷ್ಟಪಡುತ್ತಾರಲ್ಲ! ಜನರಿಗೆ ಕಷ್ಟ ಸಂಭವಿಸುವದು ದೇವರಿಂದಲೇ. ಆದ್ದರಿಂದ ಆತನು ಕೊಟ್ಟ ಕಷ್ಟವನ್ನು ಸಹಿಸಿಕೊಳ್ಳಬೇಕು.

ಕಷ್ಟಗಳನ್ನು ತಪ್ಪಿಸಿಕೊಳ್ಳಬೇಕಾದ ಅವಶ್ಯವಿದ್ದರೂ ಜೀವವನ್ನು ತಪ್ಪಿಸಿಕೊಳ್ಳಬೇಕಾದ ಅವಶ್ಯವೇನಿದೆ? ನಮ್ಮ ಜೀವವು ದೇವರಿಂದ ಬಂದ ಫಲವಲ್ಲವೆ? ಅದು ಭಗವಂತನು ಪ್ರಸಾದವಾಗಿ ಕೊಟ್ಟದ್ದಲ್ಲವೆ? ... [illegible]

ಮನುಷ್ಯನ ಜನ್ಮವು ... [illegible]

(೩) ... [illegible]

... [illegible]

ಬಹಿರ್ದೇಶ ವೃತ್ತಾಂತಗಳು

ಶ್ರೀಮನ್ಮಹಾರಾಜರವರು ಸಂಸ್ಥಾನ ಸಮೇತರಾಗಿ ನೆನ್ನೆ ... ರೈಲ್ವೇ ... ಪ್ರಯಾಣ ... [illegible]

ಶ್ರೀಮನ್ಮಹಾರಾಜರವರು ... [illegible]

ಬೆಂಗಳೂರು ... "ಹೆರಲ್ಡ್" ಎಂಬ ಪತ್ರಿಕೆಯು ... [illegible]

... [illegible]

ಮಡಿಕೇರಿ ... [illegible]

ಬೆಂಗಳೂರು ... [illegible]

ಕರ್ನಾಟಕ ... [illegible]

ಕೊಡಗು ... [illegible]

ಮೈಸೂರು ಗವರ್ನಮೆಂಟ ... [illegible]

... ಗವರ್ನಮೆಂಟಿನವರು ಕೊಟ್ಟು ... [illegible]

ಮದ್ರಾಸ ... [illegible]

ಈ ವೃತ್ತಾಂತಪತ್ರಿಕಾ ಸಂಪಾದಕರ ... ಈ ವಿಷಯವನ್ನು ತಮ್ಮ ... ಪತ್ರಿಕೆಯಲ್ಲಿ ಪ್ರಕಟಿಸ ... [illegible]

ಮುಂಬಯಿ ವೃತ್ತಾಂತ.

... [illegible]

... [illegible]

ಬರುವ ... ಅವರೊಂದಿಗೆ ಕೆಲವು ... ಪ್ರತ್ಯೇಕ ... [illegible]

ನವಂಬರು ೩೦ನೇ ತಾರೀಖಿನಲ್ಲಿ ... [illegible]

ಇಲ್ಲಿನ ಮುನಿಸಿಪಾಲಿಟಿಗೆ ... ಅದರ ... ಉಂಟಾಗಿದೆ ... [illegible]

ಮೈಸೂರು ಗೆಜೆಟ ಸಂಗ್ರಹ.

ಇಂಡಿಯಾ ಗವರ್ನಮೆಂಟ ಹೋಂ ಇಲಾಖೆ

ಪಬ್ಲಿಕ್.

ಫೋರ್ಟ ವಿಲಿಯಂ, ತಾ|| ೧೧ನೇ ಜುಲೈ ೧೮೯೬ನೇ ಇಸವಿ

ಶ್ರೀಮನ್ಮಹಾರಾಜ್ಞೀಯವರ ಪ್ರಧಾನಮಂತ್ರಿಯವರಿಂದ ... [illegible]

ಶ್ರೀಮನ್ಮಹಾರಾಜ್ಞೀಯವರಿಗೆ ಸಂಭವಿಸಿದ ... [illegible]

ಶ್ರೀಮನ್ಮಹಾರಾಜ್ಞೀಯವರ ... [illegible]

ತಮ್ಮ ... [illegible]

VICTORIA R I

ವಿವಿಧ ವರ್ತಮಾನಗಳು.

... ಮಹಾರಾಜರವರು ... [illegible]

... [illegible]

ಕಲ್ಕತ್ತೆ ... [illegible]

ಕಲ್ಕತ್ತೆಯಿಂದ ... [illegible]

... [illegible]

ಹೋಲ್ಕಾರ್ ಮಹಾರಾಜರವರು ತಮ್ಮ ಸಂಸ್ಥಾನದಲ್ಲಿ ರೆವಿನ್ಯೂ ಮೊಕದ್ದಮೆಗಳು ಈಚೆಗೆ ಹೆಚ್ಚುತ್ತಿದ್ದರಿಂದ ಒಂದು ಕಮಿಟಿಯನ್ನು ಏರ್ಪಡಿಸಿ ತಮ್ಮ ಅಧಿಕಾರಗಳನ್ನೆಲ್ಲಾ ಆ ಕಮಿಟಿಯವರಿಗೆ ಒಪ್ಪಿಸಿ ಆ ಮೊಕದ್ದಮೆಗಳನ್ನೂ ಅವರೇ ತೀರ್ಮಾನಮಾಡುವವರೆಂತಲೂ ಸೂಚಿಸಿರುತ್ತಾರೆ. ಇದೆಂಥಾ ಪ್ರಜಾರಂಜಕವಾದ ಏರ್ಪಾಡು!

ವಿಲಾಯತಿ ರಾಜ್ಯಕ್ಕೆ ಪ್ರತಿವರ್ಷದಲ್ಲೂ ೩ ಕೋಟಿ ಕ್ವಾರ್ಟರುಗಳಷ್ಟು ಗೋಧಿಯು ಬೇಕಾಗುತ್ತದೆ. ಆದರೆ ಈ ವೃತ್ತ ಈ ವರ್ಷದಲ್ಲಿ ಆ ದೇಶದಲ್ಲಿ ೧೫೫ ಲಕ್ಷ ಕ್ವಾರ್ಟರುಗಳಷ್ಟು ಗೋಧಿ ಮಾತ್ರವೇ ಬೆಳೆಯಾಗಿರುತ್ತದಂತೆ. ಹಾಗಾದರೆ ಇತರ ದೇಶಗಳಿಂದ ಈ ಧಾನ್ಯವು ಎಷ್ಟು ರಫ್ತಾಗಬೇಕೋ ವಾಚಕರೇ ತಿಳಿದುಕೊಳ್ಳಬಹುದಾಗಿದೆ.

ಕಳೆದ ೧೮೯೦-೯೧ ನೆ ವರ್ಷದಲ್ಲಿ ಯೂರೋಪಿನಿಂದ ದೊಂಬಾಯಿ ಪಟ್ಟಣಕ್ಕೆ ಬಂದ ಮದದ್ರಾವಕಗಳು ೧,೭೮,೬೪,೦೦೦ ಗ್ಯಾಲನ್‌ಗಳೆಂತಲೂ, ಅಂದರೆ ೧೮೯೨-೯೩ ನೆ ವರ್ಷದಲ್ಲಿ ೨,೯೬,೩೫,೦೦೦ ಗ್ಯಾಲನ್‌ಗಳೆಂತಲೂ ತಿಳಿಯಲಾಗಿದೆ. ದಿನ ಕ್ರಮದಲ್ಲಿ ಹಿಂದೂಸ್ಥಾನವು ಮದ್ಯಪಾನ ಮಾಡುವವರಲ್ಲಿ ಹೆಚ್ಚುತ್ತಲೇ ಬರುತ್ತಿದೆಯಲ್ಲಾ ಎಂದು ದುಃಖಿಸಬೇಕಾಗಿದೆ.

ಮದರಾಸ್ ಎಕ್ಸಿಕ್ಯೂಟಿವ್ ಕೌನ್ಸಿಲ್ಲಿಗೆ ಮೆಂಬರಾಗಿ ಮೆ|| ಗ್ರೋಸ್ ಸಾಹೇಬರವರನ್ನು ಇಂಡಿಯಾ ಗೌರ್ನಮೆಂಟಿನವರು ಹೊಸದಾಗಿ ನೇಮಿಸಿರುತ್ತಾರೆ. ಆದರೆ ಇವರಿಗೆ ಸ್ವಲ್ಪ ಕಿವಿ ಮಂದವಾಗಿದೆಯೆಂದು ಕೇಳುತ್ತೇವಾದ್ದರಿಂದ ಇವರು ಸಭೆಯಲ್ಲಿ ನಡೆಯುವ ಸಂಗತಿಗಳಿಗೆಲ್ಲಾ ಹ್ಯಾಗೆ ಕಿವಿಗೊಟ್ಟು ಸಮಾಲೋಚನೆಗಳನ್ನು ಮಾಡುವರೋ ಎಂಬದಾಗಿ ಅಲ್ಲಿನ ಪತ್ರಿಕೆಯು ತಿಳಿಸಿದೆ.

ದೋಂಡಿಗಾವಿ ಡಿಸ್ಟ್ರಿಕ್ಟಿಗೆ ಡೆಪ್ಯುಟಿ ಕಮಿಷನರಾಗಿದ್ದ ಮೆ|| ಹ್ಯಾರಿಸನ್‌ರವರು ಕೋಪಿಸಿಕೊಂಡು ತಮ್ಮ ಬಂಗ್ಲೆ ಸಮೀಪ ನಾಟಕದ ಗದ್ದಲ ವಿನೋದಗಳನ್ನು ಕತ್ತರಿಸಿ ಹಾಕಿದರು. ಇದು ಮೇಲಣ ಅಧಿಕಾರಿಗಳಿಗೆ ತಿಳಿದುಬಂದ ಕೂಡಲೆ ಹಿಂದೂ ಜನರನ್ನು ಹೀಗೆ ಅವಮಾನಪಡಿಸಿದ್ದು ಸರಿಯಲ್ಲವೆಂದು ನಿಂದಿಸಿ ಅವರನ್ನು ಕೆಲಸದಿಂದಲೇ ತೆಗೆದುಹಾಕಬೇಕು ಎಂದು ಇಂಡಿಯಾ ಗೌರ್ನಮೆಂಟಿನವರು ಹುಕುಂ ಕೊಟ್ಟಿರುತ್ತಾರೆ.

ಕೃಷ್ಣಾ ನದಿಯಮೇಲೆ ರೈಲ್ವೆ ಇಲಾಖೆಯವರು ಹೊಸದಾಗಿ ಕಟ್ಟಿಸಿರುವ ಸೇತುವೆಯಮೇಲೆ ರೈಲುಗಾಡಿಯನ್ನಲ್ಲದೆ ಮತ್ತ್ಯಾವ ಗಾಡಿಯನ್ನಾದರೂ ಅಥವ ಜನರನ್ನಾದರೂ ಗೋವುಗಳನ್ನಾದರೂ ಹೋಗಿ ಬರುವದಕ್ಕೆ ಬಿಡಲಾಗದೆಂದು ರೈಲ್ವೆ ಕಂಪೆನಿಯವರು ಏರ್ಪಡಿಸಿರುವ ಪಾಡು ನ್ಯಾಯವಾದದ್ದೇ ಎಂಬದಾಗಿಯೂ, ಅದಕ್ಕೆ ಬದಲಾಗಿ ಅದರಮೇಲೆ ತಿರುಗಾಡತಕ್ಕವರಿಗೆ ತಲೇ ತೆರಿಗೆಯನ್ನು ವಿಧಿಸಬಹುದಾಗಿತ್ತಲ್ಲವೇ ಎಂಬದಾಗಿಯೂ ಅನೇಕರು ಆಕ್ಷೇಪಣೆ ಮಾಡುತ್ತಲಿದ್ದಾರೆ.

ಇಂಡಿಯಾ ದೇಶದಲ್ಲಿ ಅಫೀಮಿನಿಂದ ಪ್ರಜೆಗಳಿಗೆ ಉಂಟಾಗಿರುವ ಸಾಧಕ ಬಾಧಕಗಳನ್ನು ಕಂಡುಹಿಡಿಯುತ್ತಲಿರುವ ಕಮಿಟಿಯವರು ಇಲ್ಲಿನ ನಾನಾ ಮುಖ್ಯ ಪಟ್ಟಣಗಳಲ್ಲಿ ಸಾಕ್ಷ್ಯವನ್ನು ತೆಗೆದುಕೊಳ್ಳುತ್ತಲಿದ್ದಾರಷ್ಟೆ. ಅದರಿಂದ ಮತ್ತ್ಯಾವ ಪ್ರಯೋಜನವಿಲ್ಲದಿದ್ದಾಗ್ಯೂ ಒಂದು ಉಂಟು. ಗಡಿದ್ದರೂ ಇದುವರೆಗೂ ಅಫೀಮಿನ ಗುಣಗಳನ್ನು ತಿಳಿಯದೇ ಇದ್ದವರು ಇನ್ನುಮೇಲೆ ಅದನ್ನು ಸೇವಿಸುವದಕ್ಕೆ ಪ್ರಾರಂಭಿಸುತ್ತಾರೆ. ಡಾಕ್ಟರುಗಳೇ ಅದನ್ನು ಬಹಳವಾಗಿ ಶಿಫಾರಸುಮಾಡುವಾಗ್ಯೆ ಜನರು ಅದನ್ನು ಬಹಳ ವಿಶೇಷವಾಗಿ ಉಪಯೋಗಿಸಲು ಪ್ರಾರಂಭಿಸಿ ಅನೇಕಾಂಶ ಕೆಟ್ಟುಹೋಗುತ್ತಾರಲ್ಲಾ ಎಂದು ಒಂದು ಇಂಗ್ಲಿಷ್ ಪತ್ರಿಕೆಯು ಬರೆಯುತ್ತದೆ.

ಜೆರೂಸಲೆಂನಲ್ಲಿ ಅವಾವಿ ಎಂಬ ಮಸೀದಿಯು ಅತ್ಯಂತ ಪುರಾತನವಾದದ್ದು. ಅದರಲ್ಲಿ ಸೋರುತ್ತಿದ್ದ ಕೆಲವು ಭಾಗಗಳಿಗೆ ಸೀಸವನ್ನು ಕಾಯಿಸಿ ಹೊಯ್ಯುತ್ತಿದ್ದರು. ಹ್ಯಾಗೋ ಆ ಬೆಂಕಿಯು ಕಟ್ಟಡದ ಒಳಗಿನ ಭಾಗವನ್ನು ಹತ್ತಿಸಿಕೊಂಡು ಸುಮಾರು ೭-೮ ಘಂಟೆಗಳ ಕಾಲದೊಳಗಾಗಿ ಅಷ್ಟು ದೊಡ್ಡ ಮಸೀದಿಯು ಬೂದಿಯಾಯಿತು. ಕಲೀಫ ಅಬ್ದುಲ್ ಮಲಿಕ್ ಎಂಬವರ ಸತ್ತುಹೋದರು ಇದು ಹಿಜರಿಯಾ ೭೯ ನೆ ಇಸವಿಯಲ್ಲಿ ಕಟ್ಟಲ್ಪಟ್ಟಿತು. ಪ್ರಪಂಚದ ಮಹಮ್ಮದೀಯರೆಲ್ಲರೂ ಅದನ್ನು ಬಹು ಭಕ್ತಿಯಿಂದ ಕಾಪಾಡಿಕೊಂಡು ಬಂದಿದ್ದರು. ಈಗ ಸುಲ್ತಾನರು ತಮ್ಮ ಸ್ವಂತ ಖರ್ಚಿನಿಂದ ಅದೇ ಕಟ್ಟಡವನ್ನು ಕಟ್ಟಿಸಿಕೊಡುತ್ತೇನೆಂದು ನಿರ್ಧರಮಾಡಿಕೊಂಡು ಪ್ರಯತ್ನಮಾಡಲಾಗಿದೆ.

ಕ್ರೈಸ್ತ ಕ್ಯಾಥೊಲಿಕ್ ಪ್ರಪಂಚಕ್ಕೆಲ್ಲಾ ಗುರುವೆನ್ನಿಸಿಕೊಂಡಿರುವವನು ರೋಂ ಪಟ್ಟಣವಾಸಿಯಾದ ಪೋಪ್ ಎಂಬಾತನಷ್ಟೆ. ಆತನು ನ್ಯಾಯವಾಗಿ ತನ್ನ ಸ್ಥಾನಕ್ಕೆ ಬರಬೇಕಾಗಿದ್ದ ಲಿಯೋ ಎಂಬೊಬ್ಬನನ್ನು ಬಂದೀಖಾನೆಯಲ್ಲಿ ಇರಿಸಿದ್ದಾನೆಂತಲೂ, ಅಕ್ರಮವಾಗಿ ಅವನ ಸ್ಥಾನವನ್ನು ಆಕ್ರಮಿಸಿಕೊಂಡಿದ್ದಾನೆಂತಲೂ, ಒಬ್ಬ ಹೆಂಗಸೂ ಮತ್ತೂ ಒಬ್ಬ ಗಂಡಸೂ ಜನರಿಗೆಲ್ಲಾ ಹೇಳುತ್ತಲೂ, ರಾಪು ಬಂದೀಖಾನೆಯಲ್ಲಿರುವವನನ್ನು ಬಿಡಿಸಿ ಪೋಪನ ಸ್ಥಾನಕ್ಕೆ ತಂದಿರುವವರೆಂದು ಸಾರುತ್ತ ಆ ಪೋಪನ ಹೆಸರಿನಲ್ಲಿ ಸುಮಾರು ೨೦ ಲಕ್ಷ ರೂಪಾಯಿಗೂ ದ್ರವ್ಯವನ್ನು ಜನರಿಂದ ಎತ್ತಿದರು. ಸ್ವಲ್ಪ ಕಾಲದಮೇಲೆ ಇವರ ಕೃತ್ಯಗಳೆಲ್ಲಾ ಸುಳ್ಳೆಂದು ಸರ್ಕಾರದವರಿಗೆ ತಿಳಿದು ಬಂದು ಆಗ ಇವರಿಬ್ಬರನ್ನು ಹಿಡಿಸಿ ಸೆರೆಮನೆಗೆ ಕಳುಹಿಸಿದರು.

ಬೇಲಂಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ ಒಂದಾನೊಂದು ಮೊಕದ್ದಮೆ ವಿಚಾರಣೆಯಾಗುತ್ತಿರುವಾಗ್ಯೆ, ಮುಚ್ಚು ಹಿಡಿದ ಒಬ್ಬ ಬ್ರಾಹ್ಮಣನು ಕೋರ್ಟಿನೊಳಕ್ಕೆ ನುಗ್ಗಿ ಒಂದು ದೊಣ್ಣೆ ಎತ್ತಿ ಜಡ್ಜಿಯವರನ್ನು ಹೊಡೆದನು. ಅದೃಷ್ಟವಶಾತ್ತು ಜಡ್ಜಿಯವರ ಮೈಗೆ ತಗಲದೆ ಮೇಜಿನ ಮೇಲೆ ಬಿತ್ತು. ಸ್ವಲ್ಪ ಹೆಚ್ಚು ಕಡಮೆಯಾಗಿದ್ದರೆ ಜಡ್ಜಿಯವರು ದೊಡ್ಡ ಆಪತ್ತಿಗೆ ಗುರಿಯಾಗುತ್ತಿದ್ದರು. ತಕ್ಷಣವೇ ಅಲ್ಲಿದ್ದವರು ಬಲಾತ್ಕಾರದಿಂದ ಈ ಬ್ರಾಹ್ಮಣನನ್ನು ಹಿಡಿದರು. ಆಗ ಅವನು "ಸ್ವಾಮಿ ಧೊರೆ, ಈ ಜಡ್ಜಿಯನ್ನು ಕೈಕೆಳಗಿಟ್ಟುಕೊಂಡು ಮೊಕದ್ದಮೆಯನ್ನು ನ್ಯಾಯವಾಗಿ ಫೈಸಲ್ ಮಾಡುವದಿಲ್ಲ. ನಾನು ಕಾಯಿಲೆಯಿಂದ ಬಂದಿದ್ದೇನೆ. ಅಲ್ಲಿನ ಸಿವಿಲ್ ಸರ್ಜನರು ಪರೀಕ್ಷೆ ಮಾಡುವದಕ್ಕೋಸ್ಕರ ನನ್ನನ್ನು ಇಲ್ಲಿಗೆ ಕಳುಹಿಸಿದ್ದಾರೆ" ಎಂಬದಾಗಿ ಹೇಳಿದನು. ಆಗ ಅವನನ್ನು ಖೈದಿನಲ್ಲಿಟ್ಟರು.

ಹಿಂದೂಸ್ಥಾನದ ಕೆಲವುಮಂದಿ ಸರದಾರರು ಇಲ್ಲಿ ಅಫೀಮಿನ ಸೇವನೆಯನ್ನು ನಿಲ್ಲಿಸಿ, ಅದರ ಉತ್ಪತ್ತಿಯನ್ನು ಹೊಗೆಸೊಪ್ಪಿನಮೇಲೆ ಸುಂಕ ಹಚ್ಚಿ ಸರ್ಕಾರದವರಿಂದ ಸಂಪಾದಿಸಬಹುದೆಂದು ವಾದಿಸುತ್ತಾರೆ. ಆದರೆ ಈ ವಿಷಯದಲ್ಲಿ ಹಿಂದೆ ಮೈಸೂರಿನಲ್ಲಿದ್ದ ಲಾರ್ಡ್ ಮೇಯೋ ಸಾಹೇಬರು ಹೇಳಿರುವದೇನೆಂದರೆ—ಈ ರಾಷ್ಟ್ರದಲ್ಲಿ ಪ್ರಜೆಗಳಿಗೆ ಅತ್ಯಂತ ಆವಶ್ಯಕವಾಗಿರುವ ಪದಾರ್ಥಗಳು ಹೊಗೆಸೊಪ್ಪು ಮತ್ತು ಉಪ್ಪು ಇವೆರಡೇ. ಇವುಗಳಮೇಲೆಯೂ ಸರ್ಕಾರದವರು ಸುಂಕವನ್ನು ವಸೂಲ್‌ಮಾಡಿದರೆ ಬಹು ಅನ್ಯಾಯವಾಗಿರುತ್ತೆ. ಆದ್ದರಿಂದ ಎಷ್ಟುಮಾತ್ರಕ್ಕೂ ಹೊಗೆಸೊಪ್ಪಿನಮೇಲೆ ಸುಂಕ ಹಾಕುವದರಲ್ಲಿ ಗೌರ್ನಮೆಂಟಿನವರಿಗೆ ತಾತ್ಪರ್ಯವಿಲ್ಲ ಎಂಬುವದೇ. ಹಿಂದೆ ನಮ್ಮ ರಾಷ್ಟ್ರವನ್ನು ಚನ್ನಾಗಿ ಆಳಿರುವ ದೊರೆಗಳೇ ಈ ರೀತಿಯಾಗಿ ಹೇಳಿರುವಾಗ ಈಗಿನವರು ಹೊಗೆಸೊಪ್ಪಿನಮೇಲೆ ಸುಂಕವನ್ನು ಎಂದಿಗೂ ಹಾಕಲಾರರೆಂದು ನಂಬಿರುವೆವು.

ಬಂಗಾಳಕ್ಕೆ ಸೇರಿದ ಛಪ್‌ಮೋಹರ್ ಎಂಬ ಊರಿನಲ್ಲಿ ಒಬ್ಬ ಹೆಂಗಸು ಒಂದು ಮರದ ಕೆಳಗೆ ತನ್ನ ಮಗುವಿಗೆ ಹಾಲು ಕೊಡುತ್ತಾ ಮಲಗಿದ್ದು ಹಾಗೇ ನಿದ್ರೆಮಾಡಿದಳು. ಅಷ್ಟರಲ್ಲಿ ಒಂದು ದೊಡ್ಡ ಹಾವು ಬಂದು ಮಗುವಿನ ಎದೆಯನ್ನು ಸುತ್ತಿ ಎಳೆದುಕೊಂಡು ಸ್ವಲ್ಪ ದೂರದಲ್ಲಿದ್ದ ತನ್ನ ಬಿಲದ ಬಳಿಗೆ ಹೋಯಿತು. ಅಷ್ಟರಲ್ಲೇ ಆ ಹೆಂಗಸು ಎಚ್ಚರವಾಗಿ ತನ್ನ ಮಗು ಇಲ್ಲದಿದ್ದದನ್ನು ತಿಳಿದು ಅರಚ್ಯಾಡುತ್ತಲೂ ಹುಡುಕುತ್ತಲೂ ಅಲ್ಲೆಲ್ಲಾ ಹುಡುಕಿದಳು. ಸ್ವಲ್ಪದೂರದಲ್ಲಿ ಹುಡುಕೋತ್ತ ಒಂದು ದೊಡ್ಡ ಹಾವನ್ನು ನೋಡಿ ಘಟ್ಟಿಯಾಗಿ ಅರಚಿಕೊಂಡಳು. ಸಮೀಪದಲ್ಲಿದ್ದ ಕೆಲವುಮಂದಿ ಒಂದು ಥರ್ಜಿಯಿಂದ ಆ ಹಾವನ್ನು ಕಡಿದು ಕೊಂದರು. ಮಗುವನ್ನು ಬಿಡಿಸಿದರು. ಆ ಜಾತಿಯ ಹಾವು ಮನುಷ್ಯರ ಮಾಂಸ ಖಂಡಗಳನ್ನು ಬಿಟ್ಟರೆ ಮತ್ತ್ಯಾವ ಪದಾರ್ಥವನ್ನು ತಿನ್ನುವದೇ ಇಲ್ಲವಂತೆ. ಆ ಹಾವು ಉದ್ದದಲ್ಲಿ ೧೫ ಅಡಿ ಯೂ ಸುತ್ತಳತೆಯಲ್ಲಿ ೨ ಅಡಿಯೂ ಇತ್ತು ಎಂದು ತಿಳಿಯಬರುತ್ತೆ.

ಕ್ಲೈವ್ ಎಂಬ ಹಡಗು ಸ್ಕಾಟ್ಲೆಂಡಿನಿಂದ ಮದದ್ರಾವಕಗಳನ್ನು ಭರ್ತಿಮಾಡಿಕೊಂಡು ಕಲ್ಕತ್ತೆಯ ರೇವಿಗೆ ಬಂದು ತಲುಪಿತು. ಅದರಿಂದ ೨೬ ಪೆಟ್ಟಿಗೆಗಳನ್ನು ಈಚೆಗೆ ಇಳಿಸಿ ಗಾಡಿಗಳಿಗೆ ಭರ್ತಿಮಾಡಿದರು. ಇದನ್ನು ನೋಡಿದ ಒಬ್ಬ ಬಾತ್ಮಿದಾರನು ಇಂಗ್ಲಿಷ್ ಪತ್ರಿಕೆಗೆ ಬರೆದಿರುವದೇನೆಂದರೆ—ಗ್ಲಾಸ್‌ಗೋ ಪಟ್ಟಣವು ಮನ್ಯವಾನ್ನ? ಮತ್ತೇರಿದ್ದ್ವಲ್ಲವೆ, ಕಲ್ಕತ್ತೆಯು ನಿಷ್ಕೆಡಿಸಲೇಕೆಂದು ದ್ರಾವಕಗಳನ್ನು ಕಳುಹಿಸಿ ಕೊಟ್ಟಿದೆಯಲ್ಲಾ! ಹಿಂದೂಸ್ಥಾನದಲ್ಲಿ ಪ್ರಜೆಗಳಿಗೆ ಉಪಯೋಗಕರವಾಗಿರುವ ಅಫೀಮನ್ನು ಜನರು ತಿನ್ನದಂತೆ ಮಾಡಿ ಅದರ ಬೆಳೆ ಮತ್ತು ವ್ಯಾಪಾರಗಳನ್ನೇ ನಿಲ್ಲಿಸಬೇಕೆಂದು ಪ್ರಯತ್ನಮಾಡುತ್ತಲಿರುವ ಯೂರೋಪಿಯನ್ ಸರದಾರರು ತಮ್ಮ ಕೆಲಸಗಳೆಲ್ಲ ಪೂರೈಸಿದ ತರುವಾಯ ಇಂಗ್ಲಿಷ್ ಮದದ್ರಾವಕಗಳು ಹಿಂದೂಸ್ಥಾನದ ಪ್ರಜೆಗಳನ್ನು ಎಷ್ಟರಮಟ್ಟಿಗೆ ಕೆಡಿಸಿವೆ ಎಂಬ ವಿಷಯವನ್ನು ವಿಚಾರಮಾಡಬೇಕು. ಇವರೀವ ಪ್ರಜೆಗಳಿಗೆ ನಿಜವಾದ ಕ್ಷೇಮ ಪ್ರಾಪ್ತವಾಗಿದೆಯೋ ಹೊರತು ಅಫೀಮಿನಿಂದಲ್ಲ ಎಂಬುವದೇ.

ಪೂರ್ವಕಾಲದ ಈಜಿಪ್ಟ್ ದೇಶಸ್ಥರು ಪೂರ್ಣನಾಗರಿಕರಾಗಿದ್ದರು. ಅವರ ನಾಗರೀಕ ಕೆಲಸಗಳನ್ನೇ ಈಗಿನ ಜನರು ನೋಡಿ ಅಭ್ಯಾಸಮಾಡಿಯೂ ಇನ್ನೂ ಅಭ್ಯಾಸ ಮಾಡುತ್ತಲೂ ಇದ್ದಾರೆ. ವೃತ್ತಾಂತವಾಗಿ ಅವರ ದೇವಸ್ಥಾನಗಳಲ್ಲಿ ಒಂದು ವಿಧವಾದ ಯಂತ್ರಗಳನ್ನು ತಯಾರುಮಾಡಿ ಇಟ್ಟುಕೊಂಡಿದ್ದರು. ಆ ಯಂತ್ರಗಳನ್ನು ಹೊಂಡಗಳ ಹೊಟ್ಟೆಯಲ್ಲಿ ಅಣಗಿಸಿದ್ದರು. ಭಕ್ತಾದಿಗಳು ಹೋಗಿ ಆ ಹೊಂಡಗಳ ಎದುರಿನಲ್ಲಿ ಕಾಣಿಕೆಯನ್ನು ಇಟ್ಟರೆ ಹೊಂಡಗಳು ಆ ಕಾಣಿಕೆಯನ್ನು ತಮ್ಮ ಮಡಿಲಿಗೆ ಹಾಕಿಕೊಂಡು ಬಲಗೈನಿಂದ ಪ್ರಸಾದವಾದ ಬೂದಿಯನ್ನು ಭಕ್ತಾದಿಗಳಿಗೆ ಕೊಡುತ್ತಿದ್ದವು. ಇದರಿಂದ ಆ ಜನರು ಆ ಹೊಂಡಗಳೇ ದೇವರುಗಳೆಂತಲೂ ಸ್ವಾಮಿಯೇ ತಮ್ಮ ಕಾಣಿಕೆಗಳನ್ನು ಸ್ವೀಕರಿಸಿದನೆಂತಲೂ ಅದಕ್ಕೆ ಪ್ರತಿಯಾಗಿ ಬಹು ಸಂತೋಷದಿಂದ ಭಕ್ತಾದಿಗಳಿಗೆ ಪ್ರಸಾದಗಳನ್ನು ಕೊಡುತ್ತಾನೆಂತಲೂ ತಿಳಿದು ಇದ್ದರು. ಇಂಥಾ ಯಂತ್ರಗಳ ಪೈಕಿ ಒಂದು ಈಗ ಅಲ್ಲಿನ ಒಂದಾನೊಂದು ಮಾಳು ದೇವಸ್ಥಾನದಲ್ಲಿ ಸಿಕ್ಕಿರುತ್ತದೆಂದು ಕೇಳುತ್ತೇವೆ.

ಉತ್ತರ ದೇಶಗಳಲ್ಲಿ ಅಂಬಾಲ ಎಂಬುವದು ಇಂಗ್ಲೀಷರ ಸೈನ್ಯವಿರುವ ಪ್ರಸಿದ್ಧವಾದ ಸ್ಥಳವಾಗಿದೆ. ಅಲ್ಲಿಗೆ ಕೆಲವುದಿನಗಳ ಕೆಳಗೆ ಒಬ್ಬ ಯೋಗಿಯು ತನ್ನ ಶಿಷ್ಯರ ಜೊತೆಯಲ್ಲಿ ಹೋದನು. ಆ ಯೋಗಿಯು ನಡೆಸಿದ ಕೆಲವು ಆಶ್ಚರ್ಯಕೃತ್ಯಗಳನ್ನು ನೋಡಿದ ಯೂರೋಪಿಯನ್ ಅಧಿಕಾರಿಗಳೂ ಆಶ್ಚರ್ಯದಿಂದ ದಂಗಾದರು. ಯೋಗಿಯು ಪರಕಾಯಪ್ರವೇಶವನ್ನು ಮಾಡಿದವನಂತೆ ಬಿದ್ದುಕೊಂಡನು. ಆಗ ಅವನ ಅಂಗಾಂಗಗಳನ್ನೂ, ನಾಡಿಗಳನ್ನೂ ಒಬ್ಬ ಡಾಕ್ಟರು ಹಿಡಿದು ಪರೀಕ್ಷೆ ಮಾಡಿದನು. ಎಲ್ಲಾ ಸಂಪೂರ್ಣವಾಗಿ ನಿಂತುಹೋಗಿದ್ದವು. ಶರೀರವೆಲ್ಲಾ ತಣ್ಣಗೆ ಶವದೋಪಾದಿಯಲ್ಲಿ ನಿರ್ಜೀವವಾಗಿತ್ತು. ಸ್ವಲ್ಪಹೊತ್ತಿನ ನಂತರ ಅವನ ಶಿಷ್ಯರು ಗುರುವಿನ ಬೆನ್ನಿನ ಮೂಳೆಗಳನ್ನು ಉಜ್ಜಿ ಉಜ್ಜಿ ಗುರುವನ್ನು ಜೀವಕ್ಕೆ ತಂದರು. ಇದಕ್ಕೆ ಆರ ಕಾರಣವಾಗಿರಬಹುದೆಂದು ಯಾರಿಗೂ ತಿಳಿಯದೆ ಎಲ್ಲರಲ್ಲಿಯೂ ಆಶ್ಚರ್ಯವನ್ನುಂಟುಮಾಡಿದೆ. ಮುಂದಾಗಿ ಒಬ್ಬ ಬಾತ್ಮಿದಾರನು ಬರೆಯುತ್ತಾನೆ. ಇದು ಒಂದು ವಿಧವಾದ ಸಂಧಿವಾತದ ರೋಗವೆಂಬುವದಕ್ಕೆ ಸಂದೇಹವೇನು?

ಇದೇತಿಂಗಳು ಕಡೇ ಭಾಗದಲ್ಲಿ ಲ್ಯಾಹೋರ್ ಪಟ್ಟಣದಲ್ಲಿ ನಡೆಯುವ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಸಭೆಯಲ್ಲಿ ಅಗ್ರಾಸನವನ್ನು ಅಲಂಕರಿಸುವ ಮೆ|| ದಾದಾಭಾಯಿ ನವರೋಜಿಯವರು ಕಳೆದ ೪ ನೇ ತಾರೀಖಿನ ದಿನ ವಿಲಾಯತಿಯಿಂದ ಬಂದ ಹಡಗಿನಲ್ಲಿ ಬೊಂಬಾಯಿ ಪಟ್ಟಣವನ್ನು ತಲುಪಿರುತ್ತಾರೆ. ಇವರು ಹಿಂದೂಸ್ಥಾನದಲ್ಲಿ ಹುಟ್ಟಿ ಬೆಳೆದು ಇಂಗ್ಲಿಷ್ ವಿದ್ಯಾಭ್ಯಾಸಮಾಡಿ ವಿಲಾಯತಿಗೆ ಹೋಗಿ ಅಲ್ಲಿ ನಾನಾವಿಧವಾಗಿ ಕಷ್ಟಪಟ್ಟು ಪಾರ್ಲಿಮೆಂಟಿಗೆ ಮೆಂಬರಾಗಿ ಚುನಾಯಿಸಲ್ಪಟ್ಟು ಹಿಂದೂಸ್ಥಾನದ ವಿಷಯಗಳನ್ನೆಲ್ಲಾ ಪಾರ್ಲಿಮೆಂಟಿನಲ್ಲಿ ಚರ್ಚೆಗೆ ತರುತ್ತಲೂ ಇಲ್ಲಿನ ಅಧಿಕಾರಿಗಳಿಗೆ ಹೆದರಿಕೆಯನ್ನುಂಟುಮಾಡುತ್ತಲೂ ಇದ್ದಾರೆ. ಇಂಥಾ ಪ್ರಜಾರಂಜನೆಯುಳ್ಳವರು ಬೊಂಬಾಯಿಗೆ ಬಂದು ಇಳಿದಕೂಡಲೆ ಅಲ್ಲಿನ ನಾನಾ ಮಂಗಳ ಜನರೂ ಸೇರಿ ವಿಜ್ಞಾಪನಾ ಪತ್ರಿಕೆಗಳನ್ನು ರಚಿಸಿ ತಮ್ಮ ಗೃಹಗಳನ್ನು ಅಲಂಕರಿಸಿ ಅವರಿಗೆ ಬಹು ಸಂಭ್ರಮದಿಂದ ಒಪ್ಪಿಸಿದರು. ಆ ದಿವಸವೆಲ್ಲಾ ಅಲ್ಲಿನ ಜನರು ಪೂರ್ಣಾನಂದಭರಿತರಾಗಿ ಸಂತೋಷ ಸೂಚಕವಾದ ಘೋಷಣೆಗಳನ್ನು ಮಾಡುತಲಿದ್ದರೆಂದು ವರ್ತಮಾನ ಬಂದಿದೆ.

ಮೈಸೂರಿನ ಲಾರ್ಡ್ ಹ್ಯಾರಿಸ್‌ರವರು ಸಾಹೇಬರವರು ಈಗ ಬರ್ಮಾದೇಶದಲ್ಲಿ ಸಂಚಾರ ಮಾಡುತ್ತಲೂ, ಅಲ್ಲಿನ ಪ್ರಜೆಗಳಿಂದಲೂ, ಅಧಿಕಾರಿಗಳಿಂದಲೂ ನಾನಾವಿಧವಾದ ಸನ್ಮಾನಗಳನ್ನು ಹೊಂದುತ್ತಲೂ, ವಿಜ್ಞಾಪನಾ ಪತ್ರಿಕೆಗಳನ್ನು ಅಂಗೀಕರಿಸುತ್ತಲೂ ಇದ್ದಾರಷ್ಟೆ. ಬರ್ಮಾದೇಶದವರು ತಮ್ಮ ಪಟ್ಟಣಗಳನ್ನು ನಾನಾವಿಧವಾಗಿ ಅಲಂಕಾರಮಾಡುತ್ತಾರೆ. ಅದರಲ್ಲಿ ಒಂದು ಚಪ್ಪರವು ಮೈಸೂರಿನ ಮತ್ತು ನೀಲಗಿರಿಯ ಕಣ್ಮನಗಳನ್ನು ಸೆಳೆಯುವಂಥದ್ದಾಗಿದೆ. ಆ ಚಪ್ಪರವನ್ನು ತವರಿನ ಚಿನ್ನದ ರೇಖುಗಳಿಂದ ತಯಾರುಮಾಡಿ ಇದರ ಆ ಪದಕಗಳ ಮಧ್ಯೆ ಭಂಗಾರದ ಪಿಸುಗಳನ್ನೂ, ಸರಿಗೆಗಳನ್ನೂ ಜೋಡಿಸಿದ್ದು ಗಾಜಿನಿಂದ ಅಂಟಿಸಿದ್ದಾರೆ. ಆ ನಾಣ್ಯಗಳೇ ೨೫ ಸಾವಿರ ರೂಪಾಯಿಗಳಾಗಬಹುದು. ಹಾಗಾದರೆ ಈ ವಿಚಿತ್ರವಾದ ಚಪ್ಪರವನ್ನು ತಯಾರುಮಾಡಿದ್ದಕ್ಕೆ ಲಕ್ಷರೂಪಾಯಿಗಳು ಖರ್ಚಾಗಿದ್ದರೂ ಆಗಿರಬಹುದು. ಸಂಶಯವಿಲ್ಲ. ಅವರ ಜನರು ಈ ಚಿನ್ನದ ನಾಣ್ಯಗಳು ಚನ್ನಾಗಿ ಅಂಟಿಕೊಂಡಿವೆಯೋ ಇಲ್ಲವೋ ಎಂಬದಾಗಿ ಎಷ್ಟು ಪ್ರಯತ್ನ ಮಾಡಿರಬಹುದು! ಎಷ್ಟುದಿನ ಜ್ಞಾನವುಂಟಾದವನ್ನು ಸೇರಿರಬಹುದು!

ಉದಯಪುರದಲ್ಲಿ ಪ್ರತಾಪಶಾಹೀ ಎಂಬ ಅರಸ ನಾಕವ್ವೂರ ಎಂಬ ಹಿಂದುಗಳ ಶ್ರೇಷ್ಠವಾದ ದೇವಾಲಯವಿರುತ್ತದೆ. ಅದಕ್ಕೆ ಪೂಜಾರಿಯಾದ ಮಹಾತ್ಮನೊಬ್ಬನು ವರ್ಷಂ ಪ್ರತಿವರ್ಷವೂ ಶಿಷ್ಯರು ಇರುವ ಪ್ರದೇಶಗಳಲ್ಲಿ ಸಂಚಾರಮಾಡಿ ಶಿಷ್ಯ ಕಾಣಿಕೆಗಳನ್ನು ಸಂಪಾದನೆಮಾಡಿಕೊಂಡು ಬರುತ್ತಿದ್ದನು. ಕಳೆದ ೧೮೮೬ನೆ ಇಸವಿಯಲ್ಲಿ ಆ ಮಹಾತ್ಮನ ಮಗನು ಉತ್ತರ ದೇಶಗಳಲ್ಲಿ ಸಂಚಾರಮಾಡಿದನು. ಆವಸಿಗ ಶಿಷ್ಯರು ಸುಮಾರಾಗಿ ೬೦,೦೦೦ ರೂಪಾಯಿಗಳ ವರೆಗೂ ಶಿಷ್ಯಕಾಣಿಕೆಗಳನ್ನು ಕೊಟ್ಟರು. ಅದೇವರ್ಷ ತಂದೆಯೂ ಸಂಚಾರ ಹೊರಟನು. ಅವಸಿಗ ಸ್ವಲ್ಪವೂ ದ್ರವ್ಯ ದೊರೆಯಲಿಲ್ಲ. ಆಗ ತನ್ನ ಮಗನಮೇಲೆ ದಾವಾಮಾಡಿದನು. ತನ್ನ ಮಗನಿಗೆ ಯಾವ ಹಕ್ಕೂ ಇಲ್ಲದೆ ಇರುವದರಿಂದ ಅವನು ಸಂಪಾದಿಸಿದ ಹಣವನ್ನೆಲ್ಲಾ ತನಗೆ ಕೊಡಿಸಬೇಕೆಂತಲೂ, ಮಗನನ್ನು ಮುಂದೆ ಸಂಚಾರ ಹೋಗದಂತೆ ನಿರ್ಬಂಧ ಪಡಿಸಬೇಕೆಂತಲೂ ಫಿರ್ಯಾದಿ ಮಾಡಿದನು. ಬೊಂಬಾಯಿ ಹೈಕೋರ್ಟಿನವರು ಕಾಣಿಕೆಯನ್ನು ತಂದೆಯುತ್ತಾದಕ್ಕೆ ಯಾವ ಅಧಿಕಾರವುಂಟೋ ಮಗನಿಗೂ ಅದೇ ಅಧಿಕಾರವಿದೆ ಎಂದು ತೀರ್ಮಾನಿಸಿ ಮೊಕದ್ದಮೆಯನ್ನು ವಜಾಮಾಡಿದರು. ಈಗ ಈ ಮೊಕದ್ದಮೆಯು ವಿಲಾಯತಿಯಲ್ಲಿ ಪ್ರಿವಿ ಕೌನ್ಸಿಲ್‌ನಲ್ಲಿ ಅಪೀಲಾಗಿದೆ. ಇನ್ನೂ ಫೈಸಲಾಗಲಿಲ್ಲ. ಹಾಗಿದ್ದರೂ ಆ ಮಹಾತ್ಮನಿಗೆ ಹಣವು ಹೆಚ್ಚೋ ಮತ್ತೆ ಹೊರತು ಮಗನು ಹೆಚ್ಚಾಗಲಿಲ್ಲವಲ್ಲಾ!

ಮದರಾಸ್ ಗೌರ್ನಮೆಂಟಿನವರು ಹೊಲೆಯರ ಮತ್ತು ಮಾದಿಗರ ಹೀನಸ್ಥಿತಿಯನ್ನು ನೋಡಿ ಅವರಿಗೆ ಸಹಾಯ ಮಾಡುವದಕ್ಕೆ ಪ್ರಯತ್ನ ಪಟ್ಟಿರುವದನ್ನು ನೋಡಿ ನಾವು ಬಹಳ ಸಂತೋಷಿಸುತ್ತೇವೆ. ಯಾವ ಡಿಸ್ಟ್ರಿಕ್ಟಿನಲ್ಲಿ ಯಾವ ಜಮೀನು ಖಾಲಿಬಿದ್ದಾಗ್ಯೂ ಅದಕ್ಕೆ ಎಷ್ಟುಮಂದಿ ಉತ್ತಮಜಾತಿಯವರು ದರಖಾಸ್ತು ಕೊಟ್ಟಾಗ್ಯೂ ಅವರಿಗೆ ಆ ಜಮೀನು ಕೊಡದೆ ಬಡವರಾದ ಹೊಲೆಯರು ಮಾದಿಗರೇ ಮುಂತಾದ ಹೀನಜಾತಿಯವರಿಗೇ ಕಂದಾಯಕ್ಕೆ ಕೊಡಬೇಕೆಂತಲೂ ಇಂಥಾ ಹೀನಜಾತಿಯವರು ನಾಲ್ಕೇ ಕೆಳಗಿನ ಜಮೀನು ನಾಗುವರಿಗೆ ಹದಿನರು ಅವರು ಮೊದಲು ೫ ವರುಷಗಳವರೆಗೂ ಜಮೀನಿನ ಕಂದಾಯವನ್ನು ಎಕರೆ ೧ಕ್ಕೆ ೨ ರೂಪಾಯಿಯಂತೆ ಕೊಡತಕ್ಕದ್ದೆಂತಲೂ ಅನಂತರ ೫ ವರುಷಗಳವರೆಗೆ ನಿರಂದಂಕಾರಾಯವನ್ನು ೨ ರೂಪಾಯಿಯಂತೆ ಹೆಚ್ಚು ಕೊಡಬೇಕೆಂತಲೂ ಅಂಥಾ ನಾಲ್ಕೇ ಕೆಳಗಿನ ಜಮೀನುಗಳು ಈಗ ಚಂಗಲ್‌ಪಟ್ ಕಡಪ ಕರ್ನೂಲ್ ಪ್ರಾಂತ್ಯಗಳಲ್ಲಿ ೨,೫೦೦ ಎಕರೆಗಳಷ್ಟು ಇರುತ್ತದೆಂತಲೂ ಬೇಕಾದವರು ಅಂದರೆ ಹೀನಜಾತಿಯವರಷ್ಟೇ ಬೇಕಾದವರು ಆಯಾ ಡಿಸ್ಟ್ರಿಕ್ಟಿನ ಕಲೆಕ್ಟರವರಿಗೆ ದರಖಾಸ್ತು ಕೊಡಬಹುದೆಂತಲೂ ಆಯಾ ಪ್ರಾಂತ್ಯಗಳಲ್ಲಿ ಸೂಚಿಸಿರುತ್ತಾರೆ. ಹೀಗೆ ಸರ್ಕಾರದವರು ಹೀನಜಾತಿಯವರನ್ನು ಉತ್ತಮಸ್ಥಿತಿಗೆ ತರಬೇಕೆಂದು ಮಾಡಿರುವ ಏರ್ಪಾಡುಗಳು ಬಹುಜನ ಸಮ್ಮತವಾದದ್ದೆನ್ನುವದರಲ್ಲಿ ಸಂಶಯವಿಲ್ಲ.

ಆಕ್ಷೇಪ.

ನಮ್ಮ ವೃತ್ತಾಂತ ಪತ್ರಿಕೆಯನ್ನು ಕೆಲವು ದಿವಸಗಳಲ್ಲಿ ಎಲ್ಲರಿಗೂ ತಪ್ಪದೆ ಪ್ರತಿವಾರವೂ ಕ್ರಮವಾಗಿ ರವಾನಿಸುತ್ತೇವೆ. ಕೆಲವುಮಂದಿ ಚಂದಾದಾರರು ತಮಗೆ ಪತ್ರಿಕೆಗಳು ಸಕಾಲಕ್ಕೆ ತಲುಪುವದಿಲ್ಲವೆಂದು ಆಗಾಗ್ಯೆ ಬರೆಯುತ್ತಾರೆ. ಕೆಲವರಿಗೆ ತಲುಪುವದೇ ಇಲ್ಲವೆಂದು ಬರೆಯುತ್ತಾರೆ. ಇದರಿಂದ ಅಂಥವರ ಮೇಲ್ವಿಳಾಸಗಳು ತಪ್ಪಾಗಿರಬಹುದು, ಇಲ್ಲವೆ ಸಬ್ ಆಫೀಸಿನಿಂದ ಜವಾನರು ಆಯಾ ಕಡೆಗಳಲ್ಲಿ ಸರಿಯಾಗಿ ಡಿಲಿವರಿ ಮಾಡದೆ ಇರಬಹುದು ಎಂಬೀ ಎರಡು ಊಹೆಗಳು ಹುಟ್ಟುತ್ತವೆ. ಪತ್ರಿಕೆಗಳು ಯಾರ್ಯಾರಿಗೆ ಸಕಾಲಕ್ಕೆ ತಲುಪುವದಿಲ್ಲವೋ ಅಂಥವರು ತಮ್ಮ ಸರಿಯಾದ ವಿಳಾಸವನ್ನು ಚೆನ್ನಾಗಿ ಬರೆದು ತಿಳಿಸಬೇಕು. ಮತ್ತು ಸಬ್ ಆಫೀಸಿನ ಪೋಸ್ಟುಮಾಸ್ಟರುಗಳು ತಮ್ಮ ತಮ್ಮ ಡಿಲಿವರಿ ಪ್ಯೂನುಗಳಿಗೆ ಸರಿಯಾಗಿ ಬಟವಾಡೆ ಮಾಡುವಂತೆ ಹುಕುಂ ಮಾಡಬೇಕು ಎಂಬದಾಗಿ ಈ ಮೂಲಕ ಅವರವರಿಗೆ ತಿಳಿಯಪಡಿಸುತ್ತೇವೆ.

ಎಡಿಟರ್,
ವೃತ್ತಾಂತ ಪತ್ರಿಕೆ.

ಶಾಲಿವಾಹನಶಕ ೧೮೧೫ ನೇ ವಿಜಯನಾಮ ಸಂವತ್ಸರದ ಮಾರ್ಗಶಿರ ಶುದ್ಧ ಷಷ್ಠಿ ಗುರುವಾರದಿಂದ ಮಾರ್ಗಶಿರ ಶುದ್ಧ ದ್ವಾದಶಿ ಬುಧವಾರದವರೆಗಿನ ವಾರದ ಪಂಚಾಂಗ.

೧೮೯೩ ನೇ ಇಸವಿ, ಡಿಸೆಂಬರ್

ತಾ	ವಾರ.	ತಿಥಿ	ಘಳಿಗೆ.	ನಕ್ಷತ್ರ	ಘಳಿಗೆ.	ಧನುರ್ಮಾಸ ತೇದಿ.
14	ಗು *	ಷ	37-57	ಧ	9-57	1
15	ಶು	ಸ	39-3	ಶ	12-41	2
16	ಶ	ಅ	38-31	ಪೂ	14-42	3
17	ರ	ನ	36-51	ಉ	14-43	4
18	ಸೋ	ದ	34-[illegible]	ರೇ	13-59	5
19	ಮಂ †	ಏ	30-27	ಅ	12-14	6
20	ಬು ‡	ದ್ವಾ	25-43	ಭ	9-33	7

* ಸುಬ್ರಹ್ಮಣ್ಯಷಷ್ಠಿ ಧನುಸ್ಸಂಕ್ರಮಣ
† ಸರ್ವತ್ರ ಏಕಾದಶಿ ‡ ಮುಕ್ಕೋಟಿ ದ್ವಾದಶಿ

ಪೇಟೆ ಧಾರಣೆ.

ದಿನಸಿ.	ಮೈಸೂರು. ರೂ. ಆ. ಪೈ.	ಬೆಂಗಳೂರು. ರೂ. ಆ. ಪೈ.
ಕಡ್ಡೀ ಅಕ್ಕಿ ಪಲ್ಲ [illegible]	೧೨-೮-೦	೧೧-೦-೦
ಕೆಂಬೂತಿ ಅಕ್ಕಿ ಅವ್ವಲ್	೧೨-೮-೦	೯-೮-೦
ಡಿಟೋ ಅಕ್ಕಿ ದುಯಂ	೧೨-೦-೦	೯-೦-೦
ಜಾಪರ[illegible]	೧೨-೦-೦	೧೩-೮-೦
ಸಂಣಕ್ಕಿ ಅವ್ವಲ	೧೪-೦-೦	೧೪-೦-೦
ಡಿಟೋ ಅಕ್ಕಿ ದುಯಂ	೧೩-೮-೦	೧೨-೦-೦
ತೊಗರೀಬೇಳೆ ಪಲ್ಲ ೧ಕ್ಕೆ	೧೩-೮-೦	೧೩-೮-೦
ಡಿಟೋ ದುಯಂ ತರಹ	೧೩-೦-೦	೧೧-೧೨-೦
ಹ್ಯಾರಾಗಿ ಪಲ್ಲ ೧ಕ್ಕೆ	೪-೮-೦	ಗು| ೨-೮-೦
ಕಾರ್ರಾಗಿ	೪-೪-೦	ಡ| ೨-೪-೦
ಹಲಸಂದೆ ಪಲ್ಲ ೧ಕ್ಕೆ	೯-೦-೦	೧೦-೧೨-೦
ಬೇಳೇ ಅವರೆ	೧೩-೮-೦	೧೨-೦-೦
ಹೆಸರು	೮-೪-೦	೮-೧೨-೦
ಉದ್ದು	೯-೪-೦	೧೧-೦-೦
ಕಡಲೆ	೯-೦-೦	೮-೮-೦
ಎಳ್ಳು	೧೨-೧೨-೦	೧೩-೦-೦
ಹುರಳಿ	೬-೦-೦	೬-೮-೦
ಸೀಗೇಕಾಯಿ ಮಣ ೧ಕ್ಕೆ	೨-೪-೦	೨-೮-೦
ಮೆಣಸಿನಕಾಯಿ	೩-೮-೦	೨-೮-೦
ದುಯಂ ತರಹ	೩-೪-೦	೨-೦-೦
ಬೆಲ್ಲ ದೊಡ್ಡ ಅಚ್ಚು ೧೦೦ ಕ್ಕೆ	೫-೮-೦	ಮ ೨-೮-೦
ಸಣ್ಣಚ್ಚು	೫-೪-೦	ಡ|| ೨-೦-೦
ಬೆಳ್ಳುಳ್ಳಿ ಮಣ ೧ಕ್ಕೆ	೭-೧೨-೦	೩-೮-೦
ಹರಳೆಣ್ಣೆ	೪-೧೨-೦	೩-೧೨-೦
ಕೊತ್ತುಂಬರಿ ಪಲ್ಲ ೧ಕ್ಕೆ	೬-೪-೦	೬-೪-೦
ಉಪ್ಪು	೯-೧೨-೦	೭-೪-೦
ಹುಣಸೇಹಣ್ಣು ಮಣ ೧ಕ್ಕೆ	೨-೮-೦	೨-೦-೦
ಹಳೇ ಹುಣಸೇಹಣ್ಣು	೨-೬-೦	೧-೧೨-೦
ತುಪ್ಪ	೧೧-೦-೦	೮-೮-೦
ಸೀಮೆ ಎಣ್ಣೆ ಪೆಟ್ಟಿ ೧ಕ್ಕೆ	೩-೧೪-೦	೩-೯-೦
ತೆಂಗಿನಕಾಯಿ ೧೦೦ ಕ್ಕೆ	೫-೪-೦	೪-೮-೦
ಚಿನ್ನ (ತೊಲ)		
ಕೆಂಪು	೧೬-೧೩-೦	೧೬-೨-೬
ಹಸಿರು	೧೬-೩-೦	೧೬-೬-೬
ಗಟ್ಟಿ	೨೬-೮-೦	೨೫-೧೨-೦

Mysore.—Printed and published for the Proprietor at the Wesleyan Mission Press.

14/12/93.

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು — ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಸಂಪುಟ ೭ | ಮೈಸೂರು—ಸನ್ ೧೮೯೪ ನೇ ಇಸವಿ ಡಿಸೆಂಬರ್ ತಾರೀಖು ೨೦ ನೇ ಗುರುವಾರ. | ಸಂಚಿಕೆ ೨೮

ನೋಟೀಸ್.

		ಕ್ರಯ	ಟಪಾಲು ಸಹಿತವಾಗಿ
Campbell's.	ಕನ್ನಡ ವ್ಯಾಕರಣ ಸಾರ	೦ ೨ ೦	೦ ೨ ೬
Object Lessons.	ವಸ್ತು ಪಾಠಗಳು	೦ ೧ ೦	೦ ೧ ೬
Picture do	ಚಿತ್ರಗಳು ಸಹಿತವಾಗಿ	೦ ೨ ೦	೦ ೨ ೬
School Geography	ಭೂಗೋಳ ಶಾಸ್ತ್ರಸಾರ	೦ ೬ ೦	೦ ೭ ೦

ಈ ನಾಲ್ಕು ಪುಸ್ತಕಗಳು ಮೈಸೂರು ಸರ್ಕಾರದವರ ಅಪ್ಪಣೆ ಪ್ರಕಾರ ಸಕಲ ಪಾಠಶಾಲೆಗಳಲ್ಲಿಯೂ ಉಪಯೋಗಿಸತಕ್ಕವುಗಳು.

	ಕ್ರಯ	ಟಪಾಲು ಸಹಿತವಾಗಿ
ಮಾರ್ಟಿನ್ ಲೂತರ ಎಂಬವರ ಚರಿತ್ರೆ	೦ ೧ ೬	೦ ೨ ೦
ಸ್ತ್ರೀಯರು ಓದತಕ್ಕ ಪುಸ್ತಕ	೦ ೫ ೦	೦ ೫ ೬
ಗಣಿತ ಮಗ್ಗಿಗಳು ..	೦ ೧ ೦	೦ ೧ ೬
ಸಂಸ್ಕೃತ ಕರ್ನಾಟಕ ಭಾಷಾಮಂಜರಿ	೦ ೨ ೦	೦ ೨ ೬
ಇಂಗ್ಲೀಷೂ ಕನ್ನಡವೂ ಶಬ್ದಾವಳಿ ೧ನೇ ೨ನೇ ಭಾಗಂಕ್ಕೆ	೦ ೧ ೦	೦ ೧ ೬
ಕಾವ್ಯಮಾಲೆ (Minor Poetical Anthology)	೦ ೮ ೦	೦ ೮ ೬
ಕಾಲಿಯವ್ಯಾಕರಣ ..	೦ ೫ ೦	೦ ೫ ೬
ಹಳಗನ್ನಡ ವ್ಯಾಕರಣ ಸೂತ್ರಗಳು	೦ ೬ ೦	೦ ೬ ೬
ಇಂಗ್ಲೀಷೂ ಕನ್ನಡವೂ ಸಂಭಾಷಣ ವಾಕ್ಯಗಳು	೦ ೧೦ ೦	೦ ೧೦ ೬
ಶಬ್ದಮಣಿ ದರ್ಪಣ ..	೧ ೦ ೦	೧ ೪ ೭
Kan. Eng. Pocket Dictionary	೧ ೪ ೦	೧ ೫ ೭
Eng. Kan. School Dictionary	೨ ೧೦ ೦	೨ ೧೨ ೬
ಒಳ್ಳೇ ತಾಯಿ ..	೦ ೪ ೪	೦ ೪ ೬
ಆತ್ಮಿಕ ದಿವ್ಯ ಯುದ್ಧ (Bunyan)	೦ ೧೨ ೦	೦ ೧೩ ೬
ಕ್ರೈಸ್ತ ಪದ್ಧತಿ ೧ನೇ ಭಾಗ ೨ ೩ ೪ನೇ ಭಾಗ	೦ ೧ ೬	೦ ೨ ೦
ಭಕ್ತಿಸಾರ ..	೦ ೧ ೦	೦ ೧ ೬
ಸತ್ಯ ವಾಕ್ಯಾನಿ	೦ ೧ ೦	೦ ೧ ೬

ಈ ಪುಸ್ತಕಗಳೂ ಇನ್ನೂ ಅನೇಕ ಪ್ರಯೋಜನಕರವಾದ ಪುಸ್ತಕಗಳೂ ಕೆಳಗೆ ನಮೂದಿಸಿರುವ ಸ್ಥಳಗಳಲ್ಲಿ ದೊರೆಯುತ್ತವೆ

ಬೆಂಗಳೂರು—ಪೋರ್ಗಾಟಿನ ಹತ್ತಿರವಿರುವ ಪುಸ್ತಕಶಾಲೆ

ಚಿಕ್ಕಬಳ್ಳಾಪುರ—ವೆಸ್ಲೇಯನ್ ಮಿಷನ್ ರೀಡಿಂಗ್ ರೂಮ್

ತುಮಕೂರು—ವೆಸ್ಲೇಯನ್ ಮಿಷನ್ ಬಂಗಳೆ. ಮೈಸೂರು—ವೆಸ್ಲೇಯನ್ ಮಿಷನ್ ಪ್ರೆಸ್.

ನೋಟೀಸ್

ಪುಸ್ತಕಗಳು.	ಕ್ರಯ.
ಪ್ರಾಕ್ಷಾವ್ಯವಹಾರಿಕೆ	1—8—0
ಕನ್ನಡ ಇಂಗ್ಲೀಷು ನಿಘಂಟು ೧ ನೇ ದೊಡ್ಡ ತರಹ	3—0—0
„ „ 2 ನೇ ತರಹ	2—8—0
ಬಾಲಕರು ಓದುವ ಎರಡನೆ ಜ್ಞಾನೋಪದೇಶದ ಪ್ರಶ್ನೋತ್ತರಗಳು	0—1—0
ಸಭೆಯ ನಿಯಮಗಳನ್ನು ಕುರಿತದ್ದು	0—0—6
ಕಥಾ ಸಂಗ್ರಹ ೧ ನೇ ಭಾಗದಿಂದ 3 ವರೆಗೆ	1—0—0
ಕಥಾ ಸಂಗ್ರಹ 4 ರಿಂದ 6 ನೇ ಭಾಗ ಹೊಸ ಛಾಪೆ	1—0—0
„ „ ದೊಡ್ಡ ತರಹ	1—8—0
ಬೋಧಕಶಕ್ತಿ ಬೋಧಿನಿ	0—1—0
ಸತ್ಯವೇದವನ್ನು ಕುರಿತು 2 ನೇ ಭಾಗ	0—4—0
ಪ್ರಸಂಗಿಯ ದರ್ಪಣ	0—0—6
ಇಂಗ್ಲೀಷು ಭಾಷೆಯಲ್ಲಿಯೂ, ಕನ್ನಡ ಭಾಷೆಯಲ್ಲಿಯೂ, ಶಬ್ದಗಳ ವಿಭಾಗಗಳನ್ನು ವಿವರಿಸಿರುವ ನಿಘಂಟು	0—2—0
ಕನ್ನಡ ವ್ಯಾಕರಣ (ಇಂಗ್ಲೀಷಿನಲ್ಲಿ)	2—0—0
ಹಿಂದುಸ್ತಾನಿ ವ್ಯಾಕರಣ	1—0—0
ಬಾಲಬೋಧ ಸೋಪಾನವು	0—12—0
ದಿನ ಕರಣಗಳ ಅಂಕಿತಯೋಗವಿಚಾರ	0—0—6
ಕ್ರೈಸ್ತರ ಶೋಧನೆಗಳ ಸಂಗ್ರಹವು	0—12—0

ಮೇಲೆ ನಮೂದಿಸಿರುವ ಪುಸ್ತಕಗಳನ್ನು ಅಪೇಕ್ಷಿಸುವವರು ಮೈಸೂರು ವೆಸ್ಲೇಯನ್ ಮಿಷನ್ ಪ್ರೆಸ್ಸಿಗೆ ಬರೆದು ತರಿಸಿಕೊಳ್ಳಬಹುದು ಅಂಚೇ ಹಾಸಲು ಬೇರೆ ಕೊಡಬೇಕು

ವೆಸ್ಲೇಯನ್ ಮಿಷನ್ ಪ್ರೆಸ್.

ಮೈಸೂರು.

ಪ್ರಸಿದ್ಧಪತ್ರಿಕೆ

ಕಂ|| ಸಕಲಸುಮನಸಂಗರಂಜನೆ |ಸುಕವಿಶ್ರೀಚಾಮರಾಜ ಒಡೆಯರವರಿಂ || ಪ್ರಕಟಿತಮಹಭಾರತದಕಥೆ | ವಿಕಸಿತಪ್ರದೇಶಿಯರ್ ಕೇಳ್ವುದಾನಂದಂ ||

ಕನ್ನಡ ಮಹಾ ಭಾರತ.

"ಶ್ರೀಕೃಷ್ಣರಾಜ ವಾಣೀವಿಲಾಸ" ಎಂಬ ಕನ್ನಡ ಮಹಾಭಾರತವು ನಮ್ಮ ಸ್ವಕೀಯ ಶ್ರೀಚಾಮರಾಜೇಶ್ವರಿ ಪ್ರೆಸಿನಲ್ಲಿ ಪ್ರಕಟಿಸಲಾಗುವದು ಯಲ್ಲರಿಗೂ ವಿಶದವಾಗಿಯಷ್ಟೆ ಈಗ ಹದಿನೆಂಟು ಪರ್ವಗಳೂ ಪೂರ್ತಿಯಾಗಿ ಪ್ರಕಟಿಸಿಯದೆ ಅಪೇಕ್ಷಿಸುವವರು ಕೆಳಗೆ ವಿವರಿಸುವ ಕ್ರಯದಮೇಲೆ ಕ್ರಯ ವಿ.ಪಿ.ಮೂಲಕ ಪಡೆಯಬಹುದು

ಆದಿಪರ್ವ ರೂ ೩ ಸಭಾಪರ್ವ ೧-೪-೦, ಅರಣ್ಯಪರ್ವ ವಿರಾಟಪರ್ವ ಷಿಪ್ಪೆಕಪರ್ವಂದ ೧೨ ಆಣೆ, ಡಿಟೊ ಕಿತ್ತಾನಿನ ಪುಲ್ಟ್ರಂಪ್ ೧ ರೂ ಉದ್ಯೋಗಪರ್ವ, ಭೀಷ್ಮಪರ್ವ ೨ ದ್ರೋಣಪರ್ವ ೨-೮-೦, ಕರ್ಣಪರ್ವ .. ಶಲ್ಯಪರ್ವ ೧-೨-೦ ಸೌಪ್ತಿಕಪರ್ವ ೬ ಆಣೆ ಸ್ತ್ರೀಪರ್ವ ೬ ಆಣೆ, ಶಾಂತಿಪರ್ವ ರಾಜಧರ್ಮ ೨-೬-೦ ಆಪದ್ಧರ್ಮ ೮ ಆ ಮೋಕ್ಷಧರ್ಮ ೨-೬-೦, ಅನುಶಾಸನೀಕಪರ್ವ ೩-೧೨-೦ ಅಶ್ವಮೇಧಿಕಪರ್ವ ೧-೧೨-೦, ಆಶ್ರಮವಾಸಿಕಪರ್ವ—ಮೌಸಲಪರ್ವ—ಮಹಾಪ್ರಸ್ಥಾನಪರ್ವ—ಸ್ವರ್ಗಾರೋಹಣಪರ್ವ ೧೦ ಆಣೆ ಭಗವದ್ಗೀತೆ ೮ ಆಣೆ ಯಯಾತಿರಾಯನ ಚರಿತ್ರೆ ೬ ಆ ಹರಿಭಕ್ತಿಸಾರ ೬ ಪೈ. ಲೋಪವರಿಸಿಕೊಳ್ಳುವ ಟಿಕೆಟ್ಟಿನ ನೋಟ್ಸು ೮ ಆಣೆ

ಅರಣ್ಯಪರ್ವ, ಉದ್ಯೋಗಪರ್ವ, ಕರ್ಣಪರ್ವ ಈ ಮೂರು ಪರ್ವಗಳು ಗೌರ್ನಮೆಂಟ ಬುಕಡಿಪೋದಿನಲ್ಲಿ ದೊರೆಯಬಹುದು ಮೇಲೆ ಹೇಳಲ್ಪಟ್ಟಿರುವ ಪುಸ್ತಕಗಳು ನಮ್ಮಲ್ಲಿ ಸ್ವಲ್ಪವೇ ಇರುವದರಿಂದ ಜಾಗ್ರತೆಯಾಗಿ ತರಿಸಿಕೊಳ್ಳಬಹುದು.

ಶ್ರೀಮನ್ಮಹಾರಾಜರವರಿಗೆ ಫಲಪುಷ್ಪ ಸಹಬರಾಯ ಮಾಡುವದಕ್ಕೆ ಮುಖ್ಯವಾಗಿ ನೇಮಿಸಲ್ಪಟ್ಟ

ಎಂ. ರಾಚಪ್ಪ ಅಂಡ್ ಸನ್ಸ್

ಪ್ರೊಪ್ರೈಟರ್ಸ್ ಶ್ರೀಚಾಮರಾಜೇಶ್ವರಿ ಪ್ರೆಸ್,

ಬಳೆ—ಪೇಟೆ ರೋಡ ಬೆಂಗಳೂರು

ಸನ್ ೧೮೮೯ ರಲ್ಲಿ ಸ್ಥಾಪಿಸಲ್ಪಟ್ಟದ್ದು.

ಕೆನರಾ ಅಂಡ್ ಮೈಸೂರ ಟ್ರೇಡಿಂಗ ಏಜನ್ಸೀ ಆಫೀಸ, ಮುಂಬಯಿ.

ಇವರು ತಯಾರಿಸಿರುವಂಥ—

ವೈದ್ಯಧಾತ್ರೀ ತೈಲ

ಕಳೆದ ಜನವರಿ ತಿಂಗಳೊಂದರಲ್ಲಿ ೪,೧೦೦ ಬಾಟ್ಲಿಗಳು ಖರ್ಚಾದವು. ಈ ತೈಲದ ಮಹತ್ವವನ್ನು ಕುರಿತು, ನಾವೀಗ ಹೆಚ್ಚಿಗೆ ವರ್ಣಿಸಲಾರೆವು—ಯಾಕಂದರೆ, ಯಾರು ಈ ತೈಲವನ್ನು ಉಪಯೋಗಿಸುತ್ತಾರೋ ಅವರಿಗೆ ಒಂದೆರಡು ದಿವಸಗಳಲ್ಲಿಯೇ ಇದರ ಅಪ್ರತಿಮವಾದ ಗುಣವು ಸಹಜವಾಗಿ ಅನುಭವಕ್ಕೆ ಬರುವದು. ಆದಾಗ್ಯೂ ಇದರ ಮುಖ್ಯವಾದ ಉಪಯೋಗವನ್ನು ತಿಳಿಸುವದು ನಮ್ಮ ಕರ್ತವ್ಯವಾಗಿರುತ್ತದೆ.

ಈ ನಮ್ಮ "ವೈದ್ಯಧಾತ್ರೀ ತೈಲವನ್ನು" ಪ್ರತಿದಿನ ತಲೆಗೆ ಹಾಕಿಕೊಂಡರೆ ಮಿದುಳಿನಲ್ಲಿರುವ ಉಷ್ಣತೆಯನ್ನು ಪರಿಹರಿಸುವದಲ್ಲದೇ, ಕಣ್ಣಿಗೂ, ಮಿದುಳಿಗೂ ತಣುಕರಿಸಿ, ಚಿತ್ತಕ್ಕೆ ಶಾಂತತೆಯನ್ನುಂಟುಮಾಡುವದು. ಮತ್ತು ಕಣ್ಣುಗಳಿಗುಂಟಾಗುವ ಸಾಮಾನ್ಯವಾದ ವಿಕಾರಗಳನ್ನೆಲ್ಲ ಪರಿಹರಿಸುವದು. ದೃಷ್ಟಿಗೆ ತೀವ್ರತೆಯುಂಟಾಗುವದು.

ಹೆಚ್ಚಾಗಿ ಓದತಕ್ಕವರಿಗೂ, ಒಂದೇ ಸಮನಾಗಿ ಕಣ್ಣಿಟ್ಟು ಕೆಲಸ ಮಾಡತಕ್ಕ ಕಸಬುಗಾರರಿಗೂ, ಕಣ್ಣುಗಳಲ್ಲಿ ನೀರು ಸುರಿಯುವವರಿಗೂ, ಉರಿಗಣ್ಣಿನವರಿಗೂ, ಚಿತ್ತವ್ಯಗ್ರವಾದವರಿಗೂ, ಅತ್ಯಂತ ಗುಣಕಾರಿಯಾಗಿರುವದು. ಈ ತೈಲದಲ್ಲಿರುವ ಇನ್ನೊಂದು ಅಪ್ರತಿಮವಾದ ಶಕ್ತಿಯೇನಂದರೆ—ಕೂದಲುಗಳನ್ನು ನಯವಾಗಿಯೂ, ಹೊಳೆಯುವಂತೆಯೂ, ಮಾಡುವದಲ್ಲದೇ ಬೆಳವಣಿಗೆಯನ್ನು ಹೆಚ್ಚಿಸುವದು. ಕೂದಲುಗಳ ಬೇರುಗಳನ್ನು ಘಟ್ಟಿಮಾಡಿ, ಅವು ಉದುರಿಹೋಗದಂತೆ ಮಾಡುವದು

ಪ್ರತಿಯೊಂದು ಬಾಟ್ಲಿಯೊಳಗೆ ೬ ತೊಲೆ ತೈಲವು ಇರುವದರಿಂದ ಒಬ್ಬನಿಗೆ ೨ ತಿಂಗಳು ಹಚ್ಚಿಕೊಳ್ಳಲಿಕ್ಕೆ ಸಾಕಾಗುವದು. ಬಡಬಗ್ಗರು ಸಹ ಕೊಂಡುಕೊಳ್ಳಲಿಕ್ಕನುಕೂಲವಾಗಿರಬೇಕೆಂಬುದಕ್ಕಾಗಿ ಪ್ರತಿಯೊಂದು ಬಾಟ್ಲಿಗೆ ೧೦ ಆಣೆ ಕ್ರಯವಿಟ್ಟಿರುವೆವು ೧೨ ಬಾಟ್ಲಿಗಳುಳ್ಳ ೧ ಪೆಟ್ಟಿಗೆಗೆ ೬|| ರೂಪಾಯಿ. ಪ್ರತಿಯೊಬ್ಬ ಕುಟುಂಬಿಗನೂ, ಈ ತೈಲವನ್ನು ಉಪಯೋಗಿಸುವದು ಅವಶ್ಯವಾಗಿರುತ್ತದೆ. ಮಕ್ಕಳುಮರಿಗಳಿಗೆ ಸಹ ಈ ತೈಲವು ಸುಖಾವಹವಾಗಿರುತ್ತದೆ.

ಈ ತೈಲ ಮತ್ತು ಈ ಕೆಳಗೆ ಬರೆಯುವಂಥ ಔಷಧಗಳು, ಡ್ರೆಸ್ಸು ಮುತ್ತು, ರತ್ನ, ಬಂಗಾರ, ಬೆಳ್ಳಿ ಮುಂತಾದ ಸಾಮಾನುಗಳನ್ನು ಪಡೆಯಬಿಚ್ಚಿಸುವವರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬೇಕು.

ಮ್ಯಾನೇಜರ್, ಕೆನರಾ ಅಂಡ ಮೈಸೂರು ಟ್ರೇಡಿಂಗ ಏಜನ್ಸಿ ಆಫೀಸ, ಮಾರ್ಕೆಟ ಪೋಸ್ಟ. ಮುಂಬಾಯಿ.

☞ ಈ ತೈಲವನ್ನು ನಮ್ಮ ಹಿನಮ ಅನ್ಯರೂ ಮಾಡಲಾರರು. ನಮ್ಮ ಹೆಸರಿನ ಗುರ್ತನ್ನು ನೋಡಿ ತೆಗೆದುಕೊಳ್ಳಬೇಕು ಬೇರೇತರದ ಎಣ್ಣೆಗಳನ್ನು ಈ ಹೆಸರನ್ನಿಟ್ಟು ಮಾರುತಿದ್ದರೆ ಜಾಗ್ರತೆ ಪಡಿರಿ!

ಔಷಧಗಳು.	ರು ಆ.	ಡ್ರೆಸ್ಸುಗಳು.	ರು. ಆ.
ನಯನಾಮೃತಭಸ್ಮ ಬಾಟ್ಲಿ ೧ ಕ್ಕೆ	೧—೬	ಮಾಲ್ವಾಖಣಿ ಮಧ್ಯ	೨—೮
ನಯನಾಮೃತ ಕಾಡಿಗೆ	೧—೬	ಕಲೇಕರ್ಜನ ಲಾಂಗಕೋಟು	೫—೦
ಕರ್ಣಸಾಪಿನಾಶಕ ಅಪ್ರತಿಮತೈಲ	೧—೦	ಡಿಟೊ. ಅಂಗರಖಾ	೪—೮
ಮಧುಮಾತಕಸ್ಥಾರತೈಲ	೧—೦	ಡಿಟೊ ಷಾರ್ಟಕೋಟು (ಇಂಗ್ಲೀಷಮಾದರಿ)	೪—೬
ಪ್ರಮಾಳಭಸ್ಮವು	೨—೧೨	ದಪ್ಪನಾದ ಕಷ್ಮೀರಕೋಟು	೨—೮
ವಿವಿಧ ಜ್ವರದ ಪಟ್ಟಿಕೆಯು	೧—೦	ಡಿಟೊ ಅಂಗರಖಾ	೨—೪
ಬಾಲಸಂಜೀವಿನಿಗುಟಿಕೆ	೩—೮	ಡ್ರಿಲ್ ಕವಿನ್	೧—೧೨
ಅಜೀರ್ಣಮಾತ್ರೆ	೦—೮	ಡಿಟೊ ಚಡ್ಡಿ	೧—೪
ಸುಗಂಧಶರೀರದಂತಚೂರ್ಣವು	೦—೪	ಟೋಪಿ (ಇಂಗ್ಲೀಷಮಾದರಿ) ಡಿಟೊ	೦—೧೨
ಕಜ್ಜಿಮುಲಾಮು	೦ ೨		

ತಮಾಷೆಯಾದ ಚಂದ್ರಕಾಂತ ಕಲೆಯ ಕನ್ನಡಕಗಳ ಕ್ರಯ ರೂ. ೧೦—೬||—೫—೬||. ಉತ್ತಮರದ "ಸುಖ" ಎಂಬ ಹೆಸರಿನ ಕಿರಿಗಡಿಯಾರವು (೧ ವರುಷದ ಜವಾಬುದಾರಿ) ಕ್ರಯ ರೂ. ೬.

ವೃತ್ತಾಂತ ಪತ್ರಿಕೆ.

ಚಂದಾ ನಿರ್ಣಯ.

	ರೂ ಆ. ಪೈ.
ಸ್ಥಳದವರಿಗೆ ವರ್ಷ ೧ ಕ್ಕೆ ...	೧—೦—೦
ಪರಸ್ಥಳದವರಿಗೆ ವರ್ಷ ೧ ಕ್ಕೆ ...	೧—೧೨—೦
ಬಿಡಿ ಪತ್ರಿಕೆ ೧ ಕ್ಕೆ ...	೦—೦—೪

ಈ ಪತ್ರಿಕೆಯು ಮೈಸೂರು ರಾಜಧಾನಿಯಲ್ಲಿ ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ, ಪ್ರಕಟಿಸಲ್ಪಡುವದು. ಓದುವರು ಮೊದಲುಗೊಂಡು ಸಮಸ್ತರಿಗೂ ಸುಲಭಸಾಧ್ಯವಾಗುವಂತೆ ಈ ಪತ್ರಿಕೆಗೆ ಇಷ್ಟು ಅಲ್ಪ ಮೌಲ್ಯವನ್ನು ನಿರ್ಣಯಿಸಿರುತ್ತೇವೆ ಈ ಪತ್ರಿಕೆಯನ್ನು ಅಪೇಕ್ಷಿಸುವವರು ಚಂದಾ ಹಣವನ್ನು ಯಾವಾಗ್ಯೂ ಮುಂಗಡವಾಗಿ ಕೊಡಬೇಕು

ಎಡಿಟರ್,

ವೃತ್ತಾಂತ ಪತ್ರಿಕೆ

ಟೋಪಿಗಳು!

ಟೋಪಿಗಳು!! WOOL CAPS ಟೋಪಿಗಳು!!

ಬಾಸೆಲ ಮಿಷನ ಆರ್ಫನೇಜಿನಲ್ಲಿ ತಯಾರಾಗುವಂಥ ಅಚ್ಚ ಕಂಬಳಿ ಉಣ್ಣೆಯ ಟೋಪಿಗಳೇ (Wool Caps) ನಮ್ಮ ಆಫೀಸಿನಲ್ಲಿ ಮಾರಲಿಕ್ಕೆ ಸಿದ್ಧವಾಗಿರುತ್ತವೆ ಕ್ರಯವು—೧ ರೂ. ೨ ಆಣೆ ಇಂದ ೧ ರೂ. ೬ ಆಣೆಗಳ ವರೆಗೂ ಬೇರೆ ಬೇರೆ ರಕಂಗಳುಂಟು. ಸ್ಥಳದವರು ಬಂದು ನೋಡಿ ಪಡೆಯಬಹುದು. ಪರಸ್ಥಳದವರು ಮುಂಗಡವಾಗಿಯೇ ಹಣ ಕಳುಹಿಸಿದಲ್ಲಿ ತ್ವರಿತದಲ್ಲಿ ಛಾಂಗಿ ಮೂಲಕ ಕಳುಹಿಸುತ್ತೇವೆ. ಛಾಂಗಿ ಛಾರ್ಜ ಬೇರೇ ಕೊಡಬೇಕು. ಮೇಲುವಿಳಾಸದಲ್ಲಿ ಟೋಪಿಗೆ ಸಂಬಂಧವಾದದ್ದು ಎಂದು ಬರೆಯಬೇಕು.

ಮ್ಯಾನೇಜರ್,

ವೆಸ್ಲೇಯನ್ ಮಿಷನ್ ಪ್ರೆಸ್,

ಮೈಸೂರು.

ಅಕ್ರಮ.

ನಮ್ಮ ವೃತ್ತಾಂತ ಪತ್ರಿಕೆಯನ್ನು ಚಂದಾದಾರರುಗಳಲ್ಲಿ ಎಲ್ಲರಿಗೂ ತಪ್ಪದೆ ಪ್ರತಿವಾರವೂ ಕ್ರಮವಾಗಿ ರವಾನಿಸುತ್ತೇವೆ. ಕೆಲವು ಮಂದಿ ಚಂದಾದಾರರು ತಮಗೆ ಪತ್ರಿಕೆಗಳು ಸಕಾಲಕ್ಕೆ ತಲಪತಕ್ಕದ್ದಿಲ್ಲವೆಂದು ಆಗಾಗ್ಯೆ ಬರೆಯುತ್ತಾರೆ. ಕೆಲವರಿಗೆ ತಲಪುವದೇ ಇಲ್ಲವೆಂದು ಬರೆಯುತ್ತಾರೆ. ಇದರಿಂದ ಅಂಥವರ ಪೋಸ್ಟಾಫೀಸುಗಳು ತಪ್ಪಾಗಿರಬಹುದು, ಇಲ್ಲವೆ ಸಬ್ ಆಫೀಸಿನ ಜವಾನರು ಆಯಾ ಕಡೆಗಳಲ್ಲಿ ಸರಿಯಾಗಿ ಹಂಚಿಕೆ ಮಾಡದೆ ಇರಬಹುದು ಎಂಬೀ ಎರಡು ಊಹೆಗಳು ಹುಟ್ಟುತ್ತವೆ. ಪತ್ರಿಕೆಗಳು ಯಾರ್‍ಯಾರಿಗೆ ಸಕಾಲಕ್ಕೆ ತಲಪುವದಿಲ್ಲವೋ ಅಂಥವರು ತಮ್ಮ ಸರಿಯಾದ ವಿಳಾಸವನ್ನು ಚೆನ್ನಾಗಿ ಬರೆದು ತಿಳಿಸಬೇಕು ಮತ್ತು ಸಬ್ ಆಫೀಸಿನ ಪೋಸ್ಟುಮಾಸ್ಟರುಗಳು ತಮ್ಮ ತಮ್ಮ ಡಿಲಿವರಿ ಪ್ಯೂನುಗಳಿಗೆ ಸರಿಯಾಗಿ ಹಂಚಿಕೆ ಮಾಡುವಂತೆ ತಾಕೀತು ಮಾಡಬೇಕು ಎಂಬದಾಗಿ ಈ ಮೂಲಕ ಅವರವರಿಗೆ ತಿಳಿಯಪಡಿಸಿರುತ್ತೇವೆ.

ಎಡಿಟರ,
ವೃತ್ತಾಂತ ಪತ್ರಿಕೆ.

ವೃತ್ತಾಂತ ಪತ್ರಿಕೆ.

೧೮೯೩ನೇ ಇಸವಿ ಡಿಸಂಬರ ತಾ|| ೨೧ನೇ ಗುರುವಾರ.

ಕೆಲವು ಹಿಂದುಗಳ ವರ್ತನ.

ಉತ್ತರದೇಶದಲ್ಲಿ ಬಂಗಾಲಿನೊಬ್ಬ ಹಿಂದೂ ದೊಡ್ಡ ಮನುಷ್ಯನು ತನ್ನ ಸ್ವದೇಶೀಯರ ವಿಷಯದಲ್ಲಿ ತನ್ನ ಅಭಿಪ್ರಾಯವನ್ನು ಧಾರಾಳವಾಗಿ ತಿಳಿಸಿದ್ದರಿಂದ ನಾವು ಅವರಲ್ಲಿ ಕೆಲವಂಶಗಳನ್ನು ಇಲ್ಲಿ ಸೂಚಿಸುವದು ಜನರಿಂಜಿತವಾಗಿರಬಹುದೆಂದು ನೆನಸಿದ್ದೇವೆ. ಮಿ|| ಘೋಷ್ ಎಂಬ ಈ ದೊಡ್ಡ ಮನುಷ್ಯನು ಕಲ್ಕತ್ತೆ ಪಟ್ಟಣದಲ್ಲಿ ಬ್ಯಾರಿಷ್ಟರಾಗಿರುವದರಿಂದ ಆತನು ತಿಳಿಯದೆ ಮಾತನಾಡತಕ್ಕವನಲ್ಲವೆಂದು ಗೊತ್ತಾಗಬಹುದು. ಆತನು ಯೂರೋಪಿಯನರನ್ನೂ ಹಿಂದುಗಳನ್ನೂ ಹೋಲಿಸಿ—ಹಿಂದುಗಳು ತಮ್ಮ ಸ್ವಂತ ಜನರ ಕೈಕೆಳಗೆ ಇರುವದಕ್ಕೆ ಇಷ್ಟವಿಲ್ಲದೆ ಯಾವಾಗಲೂ ಯೂರೋಪಿಯನ್ನರ ಅಧಿಕಾರಕ್ಕೆ ಒಳಗಾಗಿರಬೇಕೆಂದು ಅಪೇಕ್ಷಿಸುತ್ತಾರೆ ಎಂದು ಹೇಳುತ್ತಾನೆ. ಇದು ಸಕಲಜನರಿಗೂ ಅನುಭವಸಿದ್ಧವಾಗಿದೆಯೋ ಏನೋ ತಿಳಿಯದು ಅಲ್ಲವು. ಇಂಡಿಯಾ ರಾಷ್ಟ್ರದ ಯಾವಭಾಗದಲ್ಲಿ ಸಂಚಾರ ಮಾಡಿದಾಗ್ಯೂ ಪ್ರಜೆಗಳು ದಾಕ್ಷಿಣ ಹಿಂದುಜನರ ಅಧಿಕಾರವನ್ನು ಅಪೇಕ್ಷಿಸದೆ, ಯೂರೋಪಿಯರ್ನರೇ ತಮ್ಮ ಮೇಲೆ ಅಧಿಕಾರಮಾಡಬೇಕೆಂದು ಕೋರುತ್ತಾರೆ. "ಹಿಡಿ ಎಂಬ ನಮ್ಮ ತಿದಿಯನ್ನು ಕೊಡುತ್ತೇವೆಂದು ಯೂರೋಪಿಯನ್ನರು ಯಾವಾಗಾದರೂ ಮಾತುಕೊಟ್ಟರೆ, ಅವರು ಸಾಧಾರಣವಾಗಿ ಆ ಮಾತಿಗೆ ತಪ್ಪುವದಿಲ್ಲ. ಹಿಂದುಜನರು ಹಿಡಿಯನ್ನು ಕೊಡುವದಾಗಿ ವಾಗ್ದಾನಮಾಡಿದರೂ, ಅವರನ್ನೇ ನಚ್ಚಿಕೊಂಡಿರುವದು ಬಹುಕಷ್ಟವಾಗಿರುವದು. ಯೂರೋಪಿಯರ್‍ನ [illegible] ಸ [illegible] ಗಿದ್ದು [illegible] ಅವನ್ನು ಸಂಕೋಲೆಯಿಂ [illegible] ಆದರಿಂದ ಶೀಘ್ರವಾಗಿ ಬಿಡುಗಡೆಯು [illegible] ಮಾಡುತ್ತಾರೆ. ಹಿಂದುಗಳ [illegible] ಸಾಲವನ್ನಾದರು, ಸಾಲಗಾರರಾಗಿರುವವನು ಎಂದೆ ಬಂದು ಗತಿರವವದವಿಯೆಂದು ಭಾವಿಸುವದಲ್ಲದೆ ಆತನನ್ನು ತೀರಿಸುವದರಲ್ಲಿ ಆಷ್ಟು ಕಾತರುಪಟುತ್ವವನ್ನು ತೋರಿಸುವದಿಲ್ಲ. ಯೂರೋಪಿಯನ್ನರು ಮಾತಾಡುವದೇ ಸ್ವಲ್ಪ ಕಡಮೆ. ಒಂದಾವರ್ತಿ ಹಿಡಿದ ಕಾರ್ಯಗಳನ್ನು ಸಾಧಿಸುವದು ಬಹುಮೆಚ್ಚು. ಹಿಂದುಗಳು ಮಾತ್ರ ಮಾತ್ಯೆಮಾತರೀ ವಿನಹ, ಕಾರ್ಯಸಾಧಕರೆನ್ನಿಸಿಕೊಳ್ಳುವದಕ್ಕೆ ಅಷ್ಟುಚಿತವುನಸ್ಕರಿಲ್ಲ" ಈ ಮಾತು ನಿಜವೆಂದು ನಾನಾದೃಷ್ಟಾಂತಗಳಿಂದ ತೋರುತ್ತದಲ್ಲವೆ? ಹ್ಯಾಗೆಂದರೆ ವಿದ್ಯಾವಂತರಲ್ಲಿ ಅನೇಕರು ಬೇರೆಬೇರೆ ಸಭೆಗಳಲ್ಲಿ ಬಾಲ್ಯವಿವಾಹವನ್ನು ಕಟ್ಟದೆಂದು ವಾದಿಸಿದಾಗ್ಯೂ, ಕಳೆದ ದಸರಾ ಹಬ್ಬದ ಕಾಲದಲ್ಲಿ ನಡೆದ ಪ್ರತಿನಿಧಿಗಳ ಸಭೆಯಲ್ಲಿ ಯಾರೋ ಧಿರ್ಮಾರವರು ಸೂಚಿಸಿದ ತಿದ್ದುಪಾಟನ್ನು ತಪ್ಪುತ್ತಿರುವ ಮಸ್ಟೆಗೂ ನಿರಾಕರಿಸಿ ನಿಲ್ಲಿಸುವದಕ್ಕೆ ಪ್ರಯತ್ನಿಸಿದರು. ವಾಕ್ಪ್ರವ್ಯವನ್ನು ಬಹುವಿಶರಣೆಯಿಂದ ಖರ್ಚುಮಾಡಿದಾಗ್ಯೂ ಹಿಂದುಗಳು ತಮ್ಮ ರೂಪಾಯಿಗಳನ್ನು ವೆಚ್ಚಮಾಡುವದೆಂದರೆ ಬಹುಜಾಗ್ರತೆಯಾಗಿ ಹಿಮ್ಮೆಟ್ಟುವರು. ವಿದ್ಯಾವಂತರು ತಾವು ಕೆಲ ವಯಸ್ಸಿನವರಾದನಂತರ, ಪ್ರಜಾ ಹಿತಚಿಂತೆಯನ್ನು ಬಿಟ್ಟು, ಸ್ವಪ್ರಯೋಜನಚಿಂತೆಯಲ್ಲಿ ಮಗ್ನರಾಗಿರುವದು ಸಾಧಾರಣವಾಗಿದೆಯಲ್ಲವೆ? ಸರ್ಕಾರದ ಉದ್ಯೋಗಸ್ಥರನ್ನು ನೋಡಿದರೆ ಅವರು ತಮ್ಮ ತಮ್ಮ ಕೆಲಸವನ್ನು ನೆರವೇರಿಸಿ, ಭಾರಿ ಸಂಬಳಗಳನ್ನು ತಿನ್ನುವದರಲ್ಲಿಯೂ, ಶೀಘ್ರವಾಗಿ ಬಡತಿಯನ್ನು ಹೊಂದುವದಕ್ಕೆ ಪ್ರಯತ್ನಮಾಡುವದರಲ್ಲಿಯೂ ಕಾಲಕ್ಷೇಪಣ ಮಾಡುವರೇ ಹೊರತು, ಜನೋಪಕಾರ ಕಾರ್ಯಗಳನ್ನು ಕುರಿತು ಚಿಂತಿಸುವದರಲ್ಲಿಯೂ, ನಡಿಸುವದರಲ್ಲಿಯೂ, ಸಾಂಸರ್ಗಿಕವಾದ ತಿದ್ದುಪಾಟುಗಳಲ್ಲಿ ಬೆರತು ಪ್ರೋತ್ಸಾಹಪಡಿಸುವದರಲ್ಲಿಯೂ ತಮ್ಮ ಕುತೂಹಲವನ್ನು ತೋರಿಸುವದು ಅಪರೂಪ. ಸರ್ಕಾರದ ಉದ್ಯೋಗವನ್ನು ಪಡೆಯದೆ ಇರುವಂತವರು ತಮ್ಮ ಯೋಗ್ಯತಾನುಸಾರವಾಗಿ ಸರ್ಕಾರದ ಕೆಲಸವನ್ನು ಪಡೆಯಬೇಕೆಂದು ಯಾವಾಗಲೂ ಎದುರುನೋಡುತ್ತಾ ಇದ್ದುಕೊಂಡು ಜನೋಪಕಾರವೃತ್ತಿಯನ್ನು ಮುದ್ದಾಂಗವಾಗಿ ಆಚರಿಸದೆ ಮರೆತು ಇರುತ್ತಾರಲ್ಲ! ವಿಲಾಯತಿಯಲ್ಲಿ ಸ್ವಪ್ರಯೋಜನವನ್ನು ಸ್ವಲ್ಪವಾದರೂ ದೃಷ್ಟಿಯಿಟ್ಟು ನೋಡದೆ, ತಿನ್ನುವದಕ್ಕೆ ಸಾಕಾದಷ್ಟು ದೊರೆತರೆ, ಮತ್ತೇನೂ ಬೇಕ್ಕಬೇಡವೆಂದುಕೊಂಡು, ತಮ್ಮ ದೇಶದಲ್ಲಿರುವ ಎಲ್ಲಾ ಅಕ್ರಮಗಳನ್ನೂ, ದುಷ್ಪ್ರವೃತ್ತಿಗಳನ್ನೂ, ದುರಾಚಾರಗಳನ್ನೂ ನಿಲ್ಲಿಸುವದರಲ್ಲೇ ಕಾಲಹರಣ ಮಾಡುವವರು ಪ್ರತಿಪಟ್ಟಣದಲ್ಲಿಯೂ ನೂರಾರು ಮಂದಿ ಇರುವರು. ಸಾಧಾರಣವಾಗಿ ಒಬ್ಬೊಬ್ಬ ಮನುಷ್ಯನು ತನ್ನ ಜೀವನವನ್ನು ನಡಿಸುವದಲ್ಲದೆ ಜನೋಪಕಾರಕ್ಕಾಗಿ ಯಾವದಾದರೊಂದು ವಿಶೇಷವಾದ ಕೆಲಸವನ್ನು ಹಿಡಿದು ಮಾಡುವದಕ್ಕೆ ಪ್ರಯತ್ನಿಸುತ್ತಾ ಇರುವನು. ಕುಡಿಯುವ ದುರಭ್ಯಾಸವನ್ನು ನಿಲ್ಲಿಸುವದಕ್ಕೂ, ಬಡಸ್ಥಿತಿಯಲ್ಲಿರುವವರಿಗೆ ವಿದ್ಯೆಯನ್ನು ಕಲಿಸಿ ಅವರನ್ನು ಮುಂದಕ್ಕೆ ತರುವದಕ್ಕೂ, ಬೇರೆಬೇರೆ ಕಸಬುದಾರರಿಗೆ ನ್ಯಾಯವಾದ ಕೂಲಿಯನ್ನು ಗೊತ್ತುಮಾಡಿಸಿಕೊಡುವದಕ್ಕೂ, ರೋಗಾದಿಗಳಿಂದ ಪೀಡಿತರಾಗಿ ನರಳುತ್ತಿರುವವರಿಗೆ ಅನುಕೂಲ್ಯಗಳನ್ನು ಏರ್ಪಡಿಸಿ ಕೊಡುವದಕ್ಕೂ, ಕಠಿಣತರವಾದ ಕೆಲಸಗಳನ್ನು ಮಾಡುವಂತವರಿಗೆ, ಕೆಲಸನಡಿಸುವಕಾಲವನ್ನು ಕಡಮೆಮಾಡುವದಕ್ಕೂ ಬೇರೆಬೇರೆ ಸಂಘಗಳು ವಿಲಾಯತಿಯಲ್ಲಿ ಏರ್ಪಾಟಾಗಿವೆ. ಈ ಸಂಘಗಳ ಉದ್ದೇಶವನ್ನು ಸಿದ್ಧಿಗೆತರುವದಕ್ಕಾಗಿ ಇಂಗ್ಲಿಷ್ ಜನಗಳಲ್ಲಿ ಸ್ವಲ್ಪ ಹೆಚ್ಚು ಕಡಮೆ ಒಬ್ಬೊಬ್ಬರು ತಮ್ಮ ಆಸ್ತಿಯನ್ನೂ, ತಮ್ಮ ಕಾಲವನ್ನೂ, ತಮ್ಮ ಬುದ್ಧಿಯನ್ನೂ, ತಮ್ಮ ದೇಹದ ಬಲವನ್ನೂ ಸಂತೋಷದಿಂದ ವೆಚ್ಚಮಾಡಿ, ಜನೋಪಕಾರವೃತ್ತಿಯನ್ನು ನಡಿಸುವದರಲ್ಲಿ ಅಭ್ಯಾಸವುಳ್ಳವರಾಗಿರುತ್ತಾರೆ. ಚಿಕ್ಕ ಪ್ರಾಯದವರೂ ದೊಡ್ಡ ದೊಡ್ಡ ಉದ್ಯೋಗಸ್ಥರೂ ಅಲ್ಲದೆ ಹೆಂಗಸ [illegible] ಇಂಥಾ ಕೆಲಸಗಳಲ್ಲಿ ಆಸಕ್ತಿಪೂರ್ವಕವಾಗಿ [illegible] ವರಾಗಿದ್ದಾರೆ. ಹೀಗಿರಲಾಗಿ ಯೂರೋಪಿ [illegible] ಹಿಂದುಗಳಿಗೂ ಇಷ್ಟು ವ್ಯತ್ಯಾಸವಿ [illegible] ಕಾರಣಗಳುಂಟಲ್ಲವೆ? [illegible] ಸ್ವಪ್ರಯೋಜನ [illegible] ವ್ಯ [illegible] ಮೂರ್ಖಮತಾಸಿಗಳೂ ಇರುವದೇನ [illegible] ಅಂಥವರಲ್ಲಿ ಜನೋಪಕಾರ [illegible] ನ್ನು [illegible] ಹೇಳಬಹುದು. ಅವರ ಒಟ್ಟಾಗಿ [illegible] ಮತಿನ ಜನರನ್ನು ನೋಡಿದರೆ, ಆ ಜನರಲ್ಲಿ ಸ್ವಪ್ರವೃತ್ತಿಯೇ? ಒಳ್ಳೆತನವು ಮತ್ತು ಜನೋಪಕಾರಾಸಕ್ತಿಯು ಬಹುಮೆಚ್ಚು ಎಂದು ಹೇಳುವುದು ನ್ಯಾಯವಾಗಿದೆ. ಆ ಜನರು ಹೀಗೆ ಪರೋಪಕಾರಿಗಳಾಗಿರುವದಕ್ಕೆ ಮುಖ್ಯಕಾರಣವೇನೆಂದು ವಿಚಾರಿಸಿ ನೋಡಿದರೆ ನಮ್ಮ ಮಹಾರಾಣಿಯವರೇ ಅದಕ್ಕೆ ಸಮಾಧಾನವನ್ನು ಹೇಳಬಹುದು. ಒಂದಾನೊಂದು ಕಾಲದಲ್ಲಿ ಆವರು ಅನ್ಯದೇಶೀಯರು ಬಂದಿರುವದನ್ನು ನೋಡಿ, ಅವರಿಗೆ ಬೈಬಲ್ ಎಂಬ ವೇದವನ್ನು ಕೊಟ್ಟು—"ನಮ್ಮ ರಾಜ್ಯದ ವಿಶೇಷತ್ವಕ್ಕೆ ಈ ವೇದವೇ ಮೂಲಕಾರಣವಾಗಿದೆ. ಇದರಲ್ಲಿರುವ ಉಪದೇಶವನ್ನು ಅಂಗೀಕರಿಸಿ ಅನುಸರಿಸುವದರಿಂದಲೂ, ಕ್ರೈಸ್ತಸ್ವಾಮಿಯವರು ತೋರಿಸಿದ ಮಾರ್ಗವನ್ನು ಹಿಡಿದು ನಡೆಯುವದರಿಂದಲೂ ನಮ್ಮ ಇಂಗ್ಲಿಷ್ ಜನರು ಈ ಶ್ರೇಷ್ಠಪದವಿಗೆ ಬಂದಿರುತ್ತಾರೆ" ಎಂಬದಾಗಿ ಸಷ್ಟವಾಗಿಯೂ, ಖಂಡಿತವಾಗಿಯೂ ಅಪ್ಪಣೆ ಕೊಟ್ಟರು. ವಾಚಕರು ಈ ಮಾತನ್ನು ಕುರಿತು ಯೋಚಿಸಿ, ಈ ವೇದವನ್ನು ಗಮನದಿಂದ ಪರಾಂಬರಿಸಿ, ಅದರಿಂದ ಸತ್ಯಮಾರ್ಗವನ್ನು ತಿಳಿದುಕೊಳ್ಳಬೇಕೆಂದು ನಾವು ಕೋರುವವರಾಗಿದ್ದೇವೆ.

ಕ್ರಿಸ್ಮಸ ಹಬ್ಬ.

ಬರುವ ಸೋಮವಾರ ಕ್ರಿಸ್ತಭಕ್ತರು ಲೋಕದಲ್ಲೆಲ್ಲಾ ಕ್ರಿಸ್ಮಸ ಹಬ್ಬವನ್ನು ಆಚರಿಸುತ್ತಾರೆಂಬುವದು ನಮ್ಮ ವಾಚಕರಿಗೆ ವೇದ್ಯವಾಗಿದೆಯಷ್ಟೆ. ಕ್ರಿಸ್ತಸ್ವಾಮಿಯವರು ಈ ಲೋಕದಲ್ಲಿ ಅವತಾರವೆತ್ತಿದರೆಂಬುವದನ್ನು ಸೂಚಿಸುವದಕ್ಕೆ ಈ ಹಬ್ಬವು ಸ್ಥಾಪನೆಯಾಯಿತು. ಕ್ರೈಸ್ತರೆಲ್ಲರೂ ಅದನ್ನು ಜ್ಞಾಪಕಕ್ಕೆ ತಂದುಕೊಂಡು, ತಮ್ಮ ತಮ್ಮ ಗುಡಿಗಳಲ್ಲಿ ಗುಂಪು ಗುಂಪಾಗಿ ಕೂಡಿ ಕ್ರಿಸ್ತನ ಚರಿತ್ರ ಪಾರಾಯಣವನ್ನು ಕೇಳಿ ಆತನನ್ನು ಧ್ಯಾನಿಸುತ್ತಾ, ಭಜಿಸುತ್ತಾ ಇರುವದಲ್ಲದೆ ತಮ್ಮ ತಮ್ಮ ಕಳ್ಯಾಣಾನುಸಾರವಾಗಿ ಆತನ ಹೆಸರನ್ನು ಹೇಳಿಕೊಂಡು ಧರ್ಮಾರ್ಥದಿಂದ ಬಡಬಗ್ಗರಿಗೆ ಅನ್ನವಸ್ತ್ರಗಳನ್ನೂ ಚಿಕ್ಕಮಕ್ಕಳಿಗೆ ಆಟದಸಾಮಾನುಗಳನ್ನೂ ವಿಶೇಷವಾಗಿ ಕೊಟ್ಟು ಆನಂದಯುಕ್ತರಾಗಿರುವರು.

ಕ್ರಿಸ್ತನು ಎತ್ತಿದ ಅವತಾರವನ್ನೂ ಹಿಂದುಗಳ ದಶಾವತಾರಗಳನ್ನೂ ಹೋಲಿಸಿನೋಡಿದರೆ ಬಂದಕ್ಕೊಂದಕ್ಕೆ ಬಹಳ ಹೆಚ್ಚು ಕಡಮೆ ಇರುವದೆಂದು ತೋರಿಬರುವದು. ಆ ಬೇರೆ ಬೇರೆ ಅವತಾರಗಳ ವಿಧಾನವನ್ನಾಗಲಿ ಗುಣಯನ್ನಾಗಲಿ ಪರೀಕ್ಷಿಸಿದರೆ ಆದಾಗ್ಯೂ ಅಂತರ ವ್ಯತ್ಯಾಸವುಂಟೆಂಬುವದರಲ್ಲಿ ಯಾವ ಸಂದೇಹವೂ ಇಲ್ಲ. ಹ್ಯಾಗೆಂದರೆ—ದಶಾವತಾರಗಳಲ್ಲಿ ದೇವರುಗಳು ಮಾನುಷ ಆಕೃತಿಯನ್ನಲ್ಲದೆ ಮತ್ಸ್ಯ ಕೂರ್ಮ ವರಾಹ ನಾರಸಿಂಹ ವಾಮನ ಮುಂತಾದ ಬೇರೆಬೇರೆ ರೂಪಗಳನ್ನು ತಾಳಿಕೊಂಡು ಮನುಷ್ಯರಲ್ಲಿ ವಿಶ್ವಾಸವನ್ನಾಗಲಿ ಪ್ರೀತಿಯನ್ನಾಗಲಿ ಉಂಟುಮಾಡಿದರು. ದೇವರುಗಳು ಇಂಥಾ ರೂಪಗಳನ್ನು ಧರಿಸುವದಕ್ಕೆ ವಿದ್ವಾಂಸರಿಗೆ ತಕ್ಕ ಕಾರಣವು ಇನ್ನೂ ಕಾಣಿಸಲಿಲ್ಲ. ಮನುಷ್ಯರ ಹಿತಕ್ಕೋಸ್ಕರವಾಗಿ ದೇವರುಗಳು ಅವತಾರವನ್ನೆತ್ತಿದರೆಂದಾದರೆ ಮನುಷ್ಯರ ಸ್ಥಿತಿಗಿಂತ ಹೀನವಾದಸ್ಥಿತಿಯನ್ನು ಸೇರುವದುಂಟೆ? ಭಗವಂತನು ನರಾವತಾರವನ್ನು ಎತ್ತುವದಕ್ಕೆ ಅನೇಕ ಕಾರಣಗಳುಂಟು. ಎಲ್ಲಸೃಷ್ಟಿಗಳಿಗಿಂತ ಮನುಷ್ಯನು ಹೆಚ್ಚಾಗಿ ಭಗವಂತನ ಸುಲಕ್ಷಣಗಳನ್ನು ತೋರಿಸುವ ಶಕ್ತನಾಗಿದ್ದಾನೆ. ಬೇರೆ ಸೃಷ್ಟಿಗಳಲ್ಲಿ ಬುದ್ಧಿಕುಶಲತೆಯು, ಮನಸ್ಸಾಕ್ಷಿಯು, ಜ್ಞಾನವು ಕಡಮೆಯಾಗಿರುವದರಿಂದ ಭಗವಂತನು ಅವುಗಳ ರೂಪವನ್ನು ಧರಿಸಿಕೊಂಡರೂ ಆತನ ಮಹಿಮೆಯು ಅವುಗಳ ಮೂಲಕ ಯಾರಿಗೂ ಅಷ್ಟು ಪರಿಷ್ಕಾರವಾಗಿ ತೋರ್‍ಪಡಿಸಿಕೊಳ್ಳುವದಿಲ್ಲ. ಆದರೆ ಭಗವಂತನು ನರರೂಪವನ್ನು ತಾಳಿಕೊಂಡು ಯೇಸುಕ್ರಿಸ್ತನೆಂಬ ಹೆಸರನ್ನು ಪಡೆದು ಸಾಕ್ಷಾದ್ದೇವರು ಇಂಥವನೆಂತಲೂ ಮನುಷ್ಯರು ಇಂತಿಂಥವರಾಗಬೇಕೆಂತಲೂ ಕ್ರಿಸ್ತನ ನಡೆಯುಡಿಗಳಿಂದ ಸ್ಪಷ್ಟವಾಗಿ ತೋರಿಸಿದನು.

ಯೇಸುಕ್ರಿಸ್ತನು ಮನುಷ್ಯನಾಗಿ ಕಾಣಿಸಿಕೊಂಡನಷ್ಟಲ್ಲದೆ ಬಡಮನುಷ್ಯನಾಗಿ ಕಾಣಿಸಿಕೊಂಡದ್ದು ಬಹು ಆಶ್ಚರ್ಯವಾಗಿದೆ. ಆತನ ಮನೆಯವರು ಜೀವನಕ್ಕಾಗಿ ಬಹುಪ್ರಯಾಸಪಡಬೇಕಾದವರಾಗಿದ್ದರು. ಆತನು ಒಂದು ಅರಮನೆಯಲ್ಲಿಕೂ ಸೇಕಸವೃದ್ಧ ಕೊಟ್ಟಿಗೆಯಲ್ಲಿಯೇ ಹುಟ್ಟಿದನು. ಜನರು ಆತನ ತಾಯಿತಂದೆಗಳನ್ನು ನೋಡಿ ಯಾರೋ ಬಡ ಜನರೆಂದು ತಿಳುಕೊಂಡರು. ಆತನ ಜನನಕ್ಕಾಗಿ ಸಿದ್ಧತೆಯಾಗಲಿ ತೋಪುಗಳನ್ನು ಹಾರಿಸಲಿಲ್ಲ. ಆದಾಗ್ಯೂ ಬಹುಮಂದಿ ದೇವದೂತರು ಅಂತರಿಕ್ಷದಲ್ಲಿ ಕಾಣಿಸಿಕೊಂಡು ಈಗ ಹುಟ್ಟಿರುವವನು ಅರಸುಗಳಿಗಿಂತಲೂ ಪರಾಕ್ರಮಶಾಲಿಗಳಿಗಿಂತಲೂ ಮಹಾಪ್ರಭುವೂ ಆತನು ಮೋಕ್ಷಾಧಿಪತಿಯೂ ಮುಕ್ತಿದಾಯಕನೂ ಪಾತಕಾಧಿಪತಿಗಳನ್ನು ಜಯಿಸುವವನೂ ಆಗಿರುತ್ತಾನೆಂದು ಗಾನರೂಪವಾಗಿಯೂ ಕೀರ್ತನಂದಕರವಾಗಿಯೂ ತಿಳಿಸಿದರು. ಇದು ಮಾತ್ರವಲ್ಲದೆ ಪೂರ್ವದಿಕ್ಕಿನಿಂದ ವಿದ್ವಾಂಸರೂ ಜ್ಞಾನಿಗಳೂ ಆದ ಕೆಲವರು ಆಕಾಶದ ಒಂದು ನಕ್ಷತ್ರವನ್ನು ಕಂಡು ಮೋಕ್ಷಾಧಿಪತಿಯು ಇವತ್ತು ನರರೂಪವಾಗಿ ಲೋಕದಲ್ಲಿ ಕಾಣಿಸಿಕೊಂಡಿರಬೇಕೆಂದು ತಿಳಿದು ಯೇಸುಕ್ರಿಸ್ತನನ್ನು ಹುಡುಕುವದಕ್ಕೆ ಹೊರಟು ದೂರಪ್ರಯಾಣಮಾಡಿಕೊಂಡು ಶ್ರಮಯೋಗವಾಗಿ ಆತನ ವಸತಿಸ್ಥಳವನ್ನು ಹುಡುಕಿ ಆತನನ್ನು ಮುಟ್ಟಿದರು. ಯಾಕನೆಂದು ಭಜಿಸಿ ಆತನವುಂದೆ ಅಡ್ಡಬಿದ್ದು ತಾವು ಮುಡುಪಾಗಿ ತಂದಿದ್ದ ಹೊಡ ಚಿನ್ನ ಪೊರಳುವುಗಳನ್ನು ಕಾಣಿಕೆಯಾಗಿ ಅರ್ಪಿಸಿದರು. ಹಾಗಾದರೆ ಕ್ರಿಸ್ತನು ಬಡವನಾಗಿ ಈ ಲೋಕದಲ್ಲಿ ಕಾಣಿಸಿಕೊಂಡರೂ ಆಕಾಲದಲ್ಲಿ ನಡೆದ ಸಂಗತಿಗಳಿಂದ ಆತನ ಶ್ರೇಷ್ಠತ್ವವೂ ದೈವತ್ವವೂ ಜನರಿಗೆ ಪರಿಷ್ಕಾರವಾಗಿ ತಿಳಿದು ಬರುತ್ತದೆ. ಆತನು ಲೋಕದಲ್ಲಿ ಕೀರ್ತಿಯನ್ನಾಗಲಿ ಐಶ್ವರ್ಯವನ್ನಾಗಲಿ ಸಂಪಾದಿಸುವದಕ್ಕೆ ಪ್ರಯತ್ನಿಸದೆ ಮಹಾಪದವಿಗಿಂತ ಸುಲಕ್ಷಣವೂ ಸದ್ವೃತ್ತಿಯೂ ಅತ್ಯಮೌಲ್ಯವಾದದ್ದೆಂದು ಸಿದ್ಧಾಂತಪಡಿಸಿದರು.

ಕ್ರಿಸ್ತಸ್ವಾಮಿಯವರ ಗುಣಯನ್ನು ನಾವು ನೋಡಿದರೆ ದಶಾವತಾರಗಳ ಗುಣಗಿಂತಲೂ ವಿಶೇಷವಾದದ್ದೆಂದು ನಮಗೆ ತೋರುವದಿಲ್ಲವೆ? ಸಾಧಾರಣವಾಗಿ ರಾಕ್ಷಸರನ್ನಾಗಲಿ ಮನುಷ್ಯರನ್ನಾಗಲಿ ಕೊಲ್ಲುವದಕ್ಕೆ ಹಿಂದೂ ದೇವರುಗಳು ಅವತಾರವನ್ನೆತ್ತಿದರು. ಆದರೆ ಯೇಸು ಕ್ರಿಸ್ತಸ್ವಾಮಿಯವರು ಯಾರನ್ನಾಗಲಿ ಕೊಲ್ಲಬೇಕೆಂದು ಬರಲಿಲ್ಲ. ಮನುಷ್ಯರನ್ನು ಕೆಡಿಸುವ ದುಷ್ಕೃತ್ಯಗಳಿಂದಲೂ ದುರಭ್ಯಾಸದಿಂದಲೂ ಅವರನ್ನು ಬಿಡುಗಡೆ ಮಾಡುವದಕ್ಕಾಗಿಯೇ ಬಂದರು. ದುಷ್ಟರನ್ನು ನಿಗ್ರಹಿಸಿ ಶಿಷ್ಟರನ್ನು ಪರಿಪಾಲಿಸುವದು ಹಿಂದೂ ದೇವರುಗಳ ಉದ್ದೇಶವಾಗಿತ್ತು. ಆದರೆ ಕ್ರಿಸ್ತಸ್ವಾಮಿಯವರು ಅದಕ್ಕಿಂತಲೂ ವಿಶೇಷವಾದ ಗುಣಯನ್ನಿಟ್ಟುಕೊಂಡು ದುಷ್ಟರನ್ನು ಶಿಷ್ಟರನ್ನಾಗಿ ಮಾಡಬೇಕೆಂದು ಭೂಲೋಕದಲ್ಲಿ ಹುಟ್ಟಿದರು.

ಹೀಗಿರಲಾಗಿ ನಮ್ಮ ವಾಚಕರೆಲ್ಲರೂ ಕ್ರಿಸ್ತನ ಜನನಕ್ಕಾಗಿ ಸಂತೋಷಿಸಿ ಆತನು ಮಾಡಿದ ಎಲ್ಲಾ ಉಪಕಾರಗಳನ್ನು ತಿಳಿದು ಆತನು ಒಂದು ಜಾತಿಗೆಮಾತ್ರ ಗುರುವಾಗಿರದೆ ಎಲ್ಲಾ ದೇಶದವರಿಗೂ ಎಲ್ಲಾ ಭಾಷೆಯವರಿಗೂ ಎಲ್ಲಾ ಯುಗಗಳಿಗೂ ದಿವ್ಯ ಸದ್ಗುರುವಾಗಿದ್ದನೆಂದು ಭಾವಿಸಿ ಆತನನ್ನು ವಿಶೇಷವಾಗಿ ಈ ಕಾಲದಲ್ಲಿ ಧ್ಯಾನಿಸಿ ಆತನಿಂದ ದೈವಜ್ಞಾನವನ್ನು ಹೊಂದಬೇಕೆಂದು ನಾವು ಅಪೇಕ್ಷಿಸಿ ಅವರೆಲ್ಲರಿಗೂ ಸಂತೋಷಪೂರ್ವಕವಾಗಿ ವಂದನೆಮಾಡುತ್ತೇವೆ.

ಮಿ|| ಭಾಷ್ಯಾಚಾರ್ಯಸಾಹೇಬರವರ ಉಪನ್ಯಾಸ.

ಕಳೆದ ಶುಕ್ರವಾರ ಎಸ್ಸ್ಯೆ ಪಿ ಜಿ ಮಿಷನ್ ಹೈಸ್ಕೂಲಿನ ಉಪಾಧ್ಯಾಯರುಗಳೂ, ವಿದ್ಯಾರ್ಥಿಗಳೂ ತಮಗೆ ಹೊರಟುಹೋದ ತಮ್ಮ ಹೆಡ್‌ಮಾಸ್ಟರ ರವರೆಂಡ್ ಹೋಲ್ಡ್ಸ್‌ವರ್ತ್ ಎಂ ಎ ಸಾಹೇಬರವರಿಗೆ ವಿಜ್ಞಾಪನಾ ಪತ್ರಿಕೆಯನ್ನು ಒಪ್ಪಿಸಿದರು. ಆ ಕಾಲದಲ್ಲಿ ಅಗ್ರಾಸನವನ್ನಲಂಕರಿಸಿದ್ದ ಮಿ|| ಭಾಷ್ಯಾಚಾರ್ಯಸಾಹೇಬರವರು ಅಪ್ಪಣೆ ಕೊಡಿಸಿದ ಕೆಲವು ಸಂಗತಿಗಳನ್ನು ನಮ್ಮ ವಾಚಕರಿಗೆ ತಿಳಿಸಬೇಕೆಂದು ಪ್ರಕಟಿಸಲ್ಪಟ್ಟಿರುವೆವು.

ಆಪ್ತರ್‍ಯ ಸಭಾಸದರೇ, ಮಿ|| ಹೋಲ್ಡ್ಸ್‌ವರ್ತ್ ಸಾಹೇಬರವರು ಈ ಹೈಸ್ಕೂಲಿನಲ್ಲಿ ಕಳೆದ ೭ ವರ್ಷಗಳಿಂದಲೂ ಬಹು ಪರಿಶ್ರಮದಿಂದ ಕೆಲಸಗಳನ್ನು ಮಾಡಿ ಈಗ ವಿಶ್ರಾಂತಿಯನ್ನು ಪಡೆಯಲು ಸೀಮೆಗೆ ಪ್ರಯಾಣ ಮಾಡುವಳುದರಲ್ಲಿ ಅವರಿಗೆ ಸನ್ಮಾನಮಾಡಲು ಈ ದಿನ ನಾವುಗಳೆಲ್ಲರೂ ಇಲ್ಲಿ ಸೇರಿ ಇರುವೆವು. ಆದರೆ ಇಂಥಾ ಕಾಲದಲ್ಲಿ ನಾನು ಈ ಸ್ಥಾನದಲ್ಲಿ ಇರುವ ವಿಷಯದಲ್ಲಿ ನನಗುಂಟಾಗಿರುವ ವಿಶೇಷ ಸಂತೋಷಕ್ಕೆ ಈ ಸ್ಕೂಲಿನ ಉಪಾಧ್ಯಾಯರೂ ಮತ್ತು ವಿದ್ಯಾರ್ಥಿಗಳೂ ಕಾರಣರಾಗಿರುವರು. ಮಿ|| ಹೋಲ್ಡ್ಸ್‌ವರ್ತ್ ಸಾಹೇಬರವರು ಈ ಸ್ಕೂಲಿನ ಭಾರವನ್ನು ವಹಿಸಿದಕಾಲದಲ್ಲಿ ನಾನು ಇಲ್ಲಿನ ಒಂದು ದೊಡ್ಡ ವಿದ್ಯಾಶಾಲೆಯಲ್ಲಿ ಮುಖಂಡನಾಗಿದ್ದೆನು. ಆ ಕಾಲದಲ್ಲಿ ನಮ್ಮಿಬ್ಬರಿಗೂ ನೆಲಸಿದ್ದ ಸ್ನೇಹಭಾವವನ್ನು ಈಗ ಪ್ರಕಟಪಡಿಸಲು ಬಹಳವಾಗಿ ಸಂತೋಷಿಸುತ್ತೇನೆ. ಈ ಹೈಸ್ಕೂಲು ಈ ಸೀಮೆಯ ಎಲ್ಲಾ ಹೈಸ್ಕೂಲುಗಳಲ್ಲಿಯೂ ಗೌರವಸ್ಥಾನವನ್ನೇ ಪಡೆದು ಇರುತ್ತ ಹಿಂದೆ ಮಿ|| ಗಲ್ಲಿಸನ್ನ ಸಾಹೇಬರವರ ಕೈಕೆಳಗಿದ್ದ ಕಾಲದಲ್ಲಿ ಬಹು ಉತ್ಕೃಷ್ಟಸ್ಥಿತಿಗೆ ಬಂದಿತ್ತು. ಮಿ|| ಹೋಲ್ಡ್ಸ್‌ವರ್ತ್ ಸಾಹೇಬರವರ ಕೈಕೆಳಗೆ ಬಂದ ಕಾಲದಿಂದಲೂ ಆ ಉತ್ಕೃಷ್ಟಸ್ಥಿತಿಯು ದಿನಕ್ರಮದಲ್ಲಿ ಬಹಳವಾಗಿ ಅಭಿವೃದ್ಧಿಗೆ ಬಂದಿದೆ. ಯೋ ಹೋತೂರ ಮತ್ತೆ ಬೇರೆ ಇಲ್ಲ ವಿದ್ಯಾರ್ಥಿಗಳ ಸಂಖ್ಯೆಯು ಆದಿಗೆ ಹೆಚ್ಚಿ ಕಡೆ. ಈ ಸ್ಕೂಲಿನಲ್ಲಿ ಓದುವಷ್ಟು ಬಾಲಕರು ಈ ಸೀಮೆಯ ಮತ್ತ್ಯಾವ ಹೈಸ್ಕೂಲಿನಲ್ಲಿ ಕೂಡಾ ಇಲ್ಲ. ಅದ್ದರಿಂದ ಹಿಂದಿದ್ದ ಕಟ್ಟಡವು ಸಾಕಾಗದೆ ಹೋಯಿತೆಂದು ತಿಳಿದು ಅದಕ್ಕೆ ಸೇರಿದಂತೆ ಹೊಸ ಕೊಠಡಿಗಳನ್ನು ಕಟ್ಟಿಸಬೇಕಾಗಿ ಬಂತು. ಮಿ|| ಹೋಲ್ಡ್ಸ್‌ವರ್ತ್ ಸಾಹೇಬರವರು ಕಳೆದ ೧೮೮೬ ನೇ ಇಸವಿಯಲ್ಲಿ ಈ ಸ್ಕೂಲಿನ ಭಾರವನ್ನು ವಹಿಸಿದ ಕಾಲದಲ್ಲಿ ೩೫೫ ಮಂದಿ ವಿದ್ಯಾರ್ಥಿಗಳು ಮಾತ್ರ ಇದ್ದರು. ಈಗ ೭೬೪ ಮಂದಿ ವಿದ್ಯಾರ್ಥಿಗಳು ಓದುತ್ತಲಿದ್ದಾರೆಂತಲೂ, ೧೮೮೬ ರಲ್ಲಿ ಸ್ಕೂಲಿನ ಫೀಜು ೩೧೦೦ ರೂಪಾಯಿ ಇದ್ದದ್ದು ೧೮೯೩ ರಲ್ಲಿ ೫೮೩೩ ರೂಪಾಯಿಗಳಾಗಿದೆ ಎಂತಲೂ ನಿಮ್ಮಗಳಿಗೆ ತಿಳಿಸಲು ಬಹಳವಾಗಿ ಸಂತೋಷಿಸುತ್ತೇನೆ. ಈ ಸ್ಕೂಲಿನಲ್ಲಿ ಉತ್ಪತ್ತಿಯಾಗುವಷ್ಟು ಫೀಜು ಸಂಸ್ಥಾನದ ಮತ್ತ್ಯಾವ ಸ್ಕೂಲಿನಲ್ಲೂ ಆಗುವದಿಲ್ಲ. ಮೆಟ್ರಿಕ್ಯುಲೇಷನ್ ಮತ್ತು ಲೋಯರಸೆಕಂಡರಿ ಪರೀಕ್ಷೆಗಳಲ್ಲಿ ಈ ಸ್ಕೂಲಿನಿಂದ ತೇರ್ಗಡೆಯಾಗುವವಷ್ಟು ಮಂದಿ ಮತ್ತ್ಯಾವ ಹೈಸ್ಕೂಲಿನಲ್ಲೂ ಆಗಿ ಇಲ್ಲದಿದ್ದರಿಂದ ಸಂಸ್ಥಾನದ ಹೈಸ್ಕೂಲುಗಳಲ್ಲೆಲ್ಲಾ ಇದೇ ಮೊದಲನೇ ರ್‍ಯಾಂಕಿಯನ್ನು ಪಡೆದಿರುತ್ತ. ಕಳೆದ ೭ ವರ್ಷಗಳಲ್ಲಿ ಈ ಸ್ಕೂಲಿನಲ್ಲಿ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ೧೧೭ ಮಂದಿ ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ. ಈ ಪೈಕಿ ೧೨ ಮಂದಿ ಮೊದಲನೇ ತರಗತಿಯಲ್ಲಿ ಪ್ಯಾಸಾದರು. ಕಳೆದ ವರ್ಷದ ಮೆಟ್ರಿಕ್ಯುಲೇಷನ್ ಪರೀಕ್ಷೆಯ ಪ್ರಶ್ನೆಗಳು ಬಹು ಕಠಿಣವಾಗಿದ್ದವು. ಆದುದರಿಂದ ಈ ಸಂಸ್ಥಾನದಲ್ಲಿ ಯಾವಯಾವ ಸ್ಕೂಲಿನಲ್ಲಿ ಬೋಧನಾಕ್ರಮಗಳು ಚೆನ್ನಾಗಿವೆ ಎಂದು ಆ ವರ್ಷದ ಪರೀಕ್ಷೆಯ ಫಲಿತಾಂಶದಿಂದ ಚೆನ್ನಾಗಿ ಗೊತ್ತಾಯಿತು. ಅಗಲೂ ಈ ಸ್ಕೂಲಿನಿಂದ ೧೧ ಮಂದಿ ವಿದ್ಯಾರ್ಥಿಗಳು ತೇರ್ಗಡೆ ಹೊಂದಿರುತ್ತಾರೆ. ಇಷ್ಟು ಚೆನ್ನಾಗಿ ಮತ್ತ್ಯಾವ ಸ್ಕೂಲಿನಿಂದಲೂ ವಿದ್ಯಾರ್ಥಿಗಳು ಪ್ಯಾಸಾಗಲಿಲ್ಲ. ಅದ್ದರಿಂದ ಈ ಸ್ಕೂಲಿನ ಬೋಧನಾಕ್ರಮಗಳೂ ವ್ಯವಸ್ಥೆಯೂ ಅತ್ಯಂತ ಸ್ತೋತ್ರಾರ್ಹವಾದವುಗಳೇ ಸರಿ. ಈ ಸ್ಕೂಲನ್ನು ಇಷ್ಟು ಉತ್ತಮಸ್ಥಿತಿಗೆ ತಂದು ಇರುವದಕ್ಕಾಗಿ ಮಿ|| ಹೋಲ್ಡ್ಸ್‌ವರ್ತ್ ಸಾಹೇಬರನ್ನು ಎಷ್ಟು ಸ್ತುತಿಸಿದರೂ ಸಾಲದ್ದಾಗಿದೆ. ಕೆಲವು ವರ್ಷಗಳಲ್ಲಿ ಈ ಸ್ಕೂಲಿನಿಂದ ಪ್ಯಾಸಾದ ವಿದ್ಯಾರ್ಥಿಗಳ ಸಂಖ್ಯೆಯನ್ನು ನೋಡಿ ಇತರ ಹೆಡ್‌ಮಾಸ್ಟರುಗಳು ಬಹು ಹೊಟ್ಟೆಕಿಚ್ಚುಪಡುತ್ತಿದ್ದದನ್ನು ನಾನು ಬಲ್ಲೆನು. ಆದರೆ ಇಷ್ಟಕ್ಕೆಲ್ಲಾ ಕಾರಣರಾದ ಮಿ|| ಹೋಲ್ಡ್ಸ್‌ವರ್ತ್ ಸಾಹೇಬರವರು ಆಟಪಾಟಗಳಲ್ಲಿಯೂ, ವಿದ್ಯಾವ್ಯಾಸಂಗದಲ್ಲಿಯೂ ತಮ್ಮ ವಿದ್ಯಾರ್ಥಿಗಳ ಜೊತೆಯಲ್ಲಿ ತಾವೂ ಬೆರತು, ಅವರವರ ಶಕ್ತಿಸಾಮರ್ಥ್ಯಗಳನ್ನು ತಿಳಿದು ಅವರವರಿಗೆ ತಕ್ಕ ಬುದ್ಧಿವಾದಗಳನ್ನು ಹೇಳುತ್ತಲೂ ಅವರನ್ನು ವಿದ್ಯಾವಂತರನ್ನಾಗಿ ಮಾಡುವದರಲ್ಲೇ ಅಲ್ಲದೆ ಸನ್ಮಾರ್ಗಪ್ರವರ್ತಕರನ್ನಾಗಿಯೂ ಮಾಡಿಧೀರರನ್ನಾಗಿಯೂ ಮಾಡಬೇಕೆಂದು ಅವರು ತೋರ್ಪಡಿಸುತ್ತಿದ್ದ ಕುಶಲವನ್ನೂ ಅದಕ್ಕೆ ತಕ್ಕ ಸಾಧನಗಳನ್ನೂ ಮಾಡುತ್ತಿದ್ದದ್ದು ನಮ್ಮೆಲ್ಲರಿಗೂ ಬಹುಮಾನಂದವನ್ನುಂಟುಮಾಡಿ ಇದೆ. ಇದರಿಂದ ವಿದ್ಯಾರ್ಥಿಗಳು ತಮ್ಮ ಪ್ರಾಪಂಚಿಕ ಧರ್ಮಗಳನ್ನು ಮುಂದೆ ವ್ಯವಹರಿಸುವದರಲ್ಲೂ ವಿವೇಕಜ್ಞರಾದ ಪ್ರಜೆಗಳೆನ್ನಿಸಿಕೊಳ್ಳುವದರಲ್ಲೂ ಅವರಿಗೆ ಹುಂಬಾ ಸಹಾಯವಾಗುವದರಲ್ಲಿ ಸಂಶಯವಿಲ್ಲ. ಇದಕ್ಕೆ ಸಹಕಾರಿಯಾಗಿರುವ ವಿದ್ಯೆಯೇ ವಿದ್ಯೆ. ಇಂಥಾ ವಿದ್ಯೆಯನ್ನು ಬಾಲಕರಿಗೆ ಕಲಿಸುವದರಲ್ಲಿ

ನಿರತರೂ ಶಾಂತಶೀಲನಂತರೂ ಉಪಾಧ್ಯಾಯರೆನಿಸಿಕೊಳ್ಳುವರೇ ವಿನಹಾ ಬಾಲಕರಿಗೆ ಬರೀ ಪುಸ್ತಕದ ವಿದ್ಯೆಯನ್ನು ಕಲಿಸಬೇಕೆಂದು ಪ್ರಯತ್ನಪಡುವ ಉಪಾಧ್ಯಾಯರು ಉಪಾಧ್ಯಾಯರಲ್ಲವೆಂದು ನಾನು ನಿಮಗೆ ಹೇಳಬೇಕಾಗಿಲ್ಲ ಬಾಲಕರು ತಮ್ಮ ಬುದ್ಧಿಯನ್ನು ನಾನಾ ಪುಸ್ತಕಗಳನ್ನು ಓದಿ ಸೂಕ್ಷ್ಮ ಮಾಡಿಕೊಳ್ಳುವರಲ್ಲದೆ ಶ್ರೇಷ್ಠ ಗುಣಗಳನ್ನು ಪಡೆದು ಅವುಗಳನ್ನು ಅಭ್ಯಾಸಮಾಡಿ ತಮ್ಮ ಮನೋವಾಕ್ಕಾಯಗಳಲ್ಲಿ ಪರಿಶುದ್ಧರಾಗಿ ಆಗುವದಕ್ಕೆ ಸಹಕಾರಿಯಾದ ವಿದ್ಯೆಯನ್ನು ಅತ್ಯವಶ್ಯಕವಾಗಿ ಪಡೆಯಬೇಕು ಇವೆರಡು ವಿದ್ಯೆಗಳನ್ನೂ ಬಹು ಚೆನ್ನಾಗಿ ಕಲಿಸುವ ಶಕ್ತಿಯು ಪ್ರಾಕ್ತನಾತ್ಯ ಉಪಾಧ್ಯಾಯರುಗಳಲ್ಲಿ ವಿಶೇಷವಾಗಿರುವದೇ ವಿನಹಾ ನಮ್ಮ ಹಿಂದೂಸ್ಥಾನದಲ್ಲಿ ಅಂಥಾ ಉಪಾಧ್ಯಾಯರು ಸಿಕ್ಕುವದು ಬಹು ವಿರಳವಾಗಿದೆ ನಮ್ಮ ಹಿಂದೂಸ್ಥಾನದಲ್ಲಿ ಬಾಲಕರು ಓದೋಣದಿಂದ ತಮ್ಮ ಬುದ್ಧಿಯನ್ನು ಬಹು ಚುರುಕಾಗಿಸುವಂತೆ ಮಾಡಿಕೊಂಡಿದ್ದಾರಾದ್ದರಿಂದ ಅವರು ಪೂರ್ಣ ವಿದ್ಯಾವಂತರೆನಿಸಿಕೊಳ್ಳದೆ ಗುರುಹಿರಿಯಲ್ಲಿ ಭಕ್ತಿಯಿಲ್ಲದೆ ಸಕ್ಷಪಾತದೃಷ್ಟಿಗಳನ್ನು ದೋಟಿಸದೆ ಶೀಘ್ರವಾಗಿ ನಿರ್ಣಯಿಸುವ ಹೇಳತಕ್ಕ ಪರಮ ಗಾಂಭೀರ್ಯಹೀನರೂ ಧೈರ್ಯರಹಿತರೂ ಆಗಿರುತ್ತಾರೆ ಇದಕ್ಕೆ ಅನೇಕ ದೃಷ್ಟಾಂತಗಳುಂಟು ಅಂಥಾ ಘನದೋಷಗಳನ್ನೆಲ್ಲಾ ಹೋಗಲಾಡಿಸುವಂತೆ ಉಪಾಧ್ಯಾಯನು ತನ್ನ ಶಿಷ್ಯನಿಗೆ ವಿದ್ಯೆಯನ್ನೂ ವಿವೇಕಜ್ಞಾನವನ್ನೂ ಸುಗುಣವನ್ನೂ ನಮ್ರತೆಯನ್ನೂ ದೃಢಭಕ್ತಿಯನ್ನೂ ಉಂಟುಮಾಡುವಂತೆ ಸ್ಕೂಲಿನಲ್ಲಿ ಪಾಠ ಹೇಳುವಾಗಲ್ಲದೆ ಅವನು ಆಡುವಾಗಲೂ ಓದುವಾಗಲೂ ಇತರರ ಜೊತೆಯಲ್ಲಿ ಸೇರಿ ಸಂಭಾಷಿಸುವಾಗಲೂ ಎಲ್ಲ ಕಾಲಗಳಲ್ಲೂ ಅವನ ಜೊತೆಯಲ್ಲಿದ್ದು ಅವನಿಗೆ ಸಂಪೂರ್ಣ ವಿದ್ಯೆಯನ್ನು ಕಲಿಸಿ ಕೊಡಬೇಕು ಹೀಗೆ ಕಲಿಸತಕ್ಕವನೇ ಉಪಾಧ್ಯಾಯ ಗುರುವೂ ಆಗಿರುತ್ತಾನೆ ಪೂರ್ವಕಾಲದಲ್ಲಿ ಗ್ರೀಕರಲ್ಲಿ ಪ್ರಾಗೋಲ ಆಗಿದೆ ಹಿಂದೂಸ್ಥಾನದಲ್ಲಿಯೂ ಗುರುವು ಶಿಷ್ಯನಿಗೆ ವಿದ್ಯೆ ಕಲಿಸುವದಲ್ಲದೆ ಅವನನ್ನು ತನ್ನ ಮನೆಯಲ್ಲೇ ಇಟ್ಟುಕೊಂಡು ಅವನಿಗೆ ಅನ್ನವಸ್ತ್ರಗಳನ್ನೂ ಕೊಟ್ಟು ಹೆತ್ತ ತಂದೆಯಂತೆಯೇ ಸಾಕುತಿದ್ದನು ಮತ್ತು ಶಿಷ್ಯನನ್ನು ಸ್ವಲ್ಪ ಹೊತ್ತಾದರೂ ಬಿಡದೆ ಅವನ ಜೊತೆಯಲ್ಲೇ ಇರುತ್ತಿದ್ದನು ಈ ಪದ್ಧತಿಯಲ್ಲಿ ಅಲ್ಪಸ್ವಲ್ಪವನ್ನು ಈಗಿನ ಅನೇಕ ಸಂಸ್ಕೃತ ಪಾಠಶಾಲೆಗಳಲ್ಲಿ ನಾವು ನೋಡುತ್ತಲಿದ್ದೇವೆ ಈ ಪಾಠಶಾಲೆಗಳಲ್ಲಿ ಗುರುಗಳು ಶಿಷ್ಯರಿಗೆ ಪಾಠ ಹೇಳುವದಲ್ಲದೆ ಈ ಕಾಲವನ್ನು ಬಿಟ್ಟರೂ ಗುರುವು ಶಿಷ್ಯನ ಜೊತೆಯಲ್ಲಿ ಬಹು ಧಾರಾಳವಾಗಿ ಬೆರೆತು ಅವನ ಸಮಾನಸ್ನೇಹಿತನಂತೆಯೇ ಇದ್ದುಕೊಂಡು ಅವನನ್ನು ತಯಾರುಮಾಡುತ್ತಾನೆ ಇಂಥಾ ಶ್ರೇಷ್ಠ ಗುಣಗಳು ಮಾಡಿಗಳೆನಿಸಿಕೊಂಡಿರುವ ಪಾಶ್ಚಾತ್ಯರಲ್ಲಿ ಅಪೂರ್ವವಾಗಿರುವವೇ ವಿನಹಾ ಇತರರಲ್ಲಿರುವದು ದುರ್ಲಭ ಈ ಪಾದ್ರಿಗಳು ತಮ್ಮ ಶಿಷ್ಯರನ್ನು ವಿದ್ಯೆಯಲ್ಲೂ ವಿವೇಕದಲ್ಲೂ ಪಾಂಡಿತ್ಯದಲ್ಲೂ ಗಾಂಭೀರ್ಯದಲ್ಲೂ ಸದಾಚಾರಕರ್ತವ್ಯಗಳಲ್ಲೂ ಮುಖ್ಯವಾಗಿ ಎಲ್ಲಾ ಶ್ರೇಷ್ಠ ಗುಣಗಳಲ್ಲೂ ತಯಾರುಮಾಡುತ್ತ ಬಂದಿರುವದನ್ನು ನೋಡಲು ಅನೇಕ ದೃಷ್ಟಾಂತಗಳುಂಟು ಸ್ವಲ್ಪ ಕಾಲದಲ್ಲಿ ಮೆ|| ಹೋಲ್ಡ್ಸವರ್ಥ ಸಾಹೇಬರವರು ತಮ್ಮ ವಿದ್ಯಾರ್ಥಿಗಳ ವಿಷಯದಲ್ಲಿ ಇಂಥಾ ಶ್ರೇಷ್ಠ ಗುರುವೆನಿಸಿಕೊಳ್ಳುವದಕ್ಕೆ ಮಾಡಿರುವ ಕಾರ್ಯಗಳನ್ನು ನೋಡಿ ನಾವು ಬಹಳ ಸಂತೋಷಿಸಿ ಅವರಿಗಾಗಿ ಅವರಿಗೆ ಕೃತಜ್ಞರಾಗಿರುವವು ಅವರ ಜಾಣ್ಮೆಗೆ ಈ ವರ್ಷಣದಲ್ಲಿ ಕೆಲವು ಮಾತು ಬಯ್ಯುವದಕ್ಕೆ ತಮ್ಮ ಶಿಷ್ಯರಿಂದ ವಿವೇಕಶೂನ್ಯತೆಯನ್ನು ಅಗೌರವವನ್ನೂ ಕೆಟ್ಟ ಸ್ವಭಾವವನ್ನೂ ತೋರ್ಪಡಿಸಿಕೊಳ್ಳುತ್ತಲಿದ್ದರೆ ಅವರಿಗೆ ಪ್ರಜಾಸೌಖ್ಯಗಳೆಲ್ಲಾ ಉಂಟಾಗಿವೆಯೆಂತಲೂ ತಮ್ಮ ಮನಸ್ಸಿಗೆ ತೋರಿದ್ದನ್ನು ಧಾರಾಳವಾಗಿ ಹೇಳಬಹುದಾಗಿ ಶಕ್ತಿ ದೊರೆಯಿತೆಂತಲೂ ತಿಳಿದವರಾಗಿ ನ್ಯಾಯಕ್ಕೂ ಗೌರವಕ್ಕೂ ತಕ್ಕುದಲ್ಲವಾಗಿರುವಂಥ ಕಾರ್ಯಗಳನ್ನು ಮಾಡತೊಡಗಿದಂತಲವರು ತಮ್ಮ ನ್ಯಾಯವಾದ ಹಕ್ಕನ್ನು ಬಿಡದೆ ಪ್ರತಿಪಕ್ಷದವನ್ನು ಅಲ್ಲಗಳೆಯುತ್ತಲೂ ತಪ್ಪು ಸಹಾಯಭೂತರಾಗಿ ಪ್ರೋತ್ಸಾಹಮಾಡಬೇಕಾದ ವಿಷಯಗಳನ್ನೇ ಮುಂದಿಡುವದಕ್ಕೆ ಆತುರರಾಗುತ್ತಲೂ ಇರುವರು ಈ ಪಟ್ಟಣದಲ್ಲಿರುವ ಕೆಲವು ಪ್ರಜೆಗಳು ವಿವೇಕಶೂನ್ಯರಾಗಿಯೂ ಗೌರವರಹಿತರಾಗಿಯೂ ಒಳ್ಳೇ ಮನಸ್ಸಿಲ್ಲದವರಾಗಿಯೂ ಇದ್ದರೆಂದು ತಮ್ಮ ಬರವಣಿಗೆಗಳಿಂದಲೂ ವಾಗ್ಝರಿಯಿಂದಲೂ ತೋರ್ಪಡಿಸಿಕೊಳ್ಳುತ್ತಲಿದ್ದರೆ ಸಾಧಾರಣವಾಗಿ ಈಗಿನ ವಿವೇಕಜ್ಞಾನವು ಬಹು ದುರ್ಲಭವಾಗಿದೆಯೆಂತಲೂ ವಿಚಕ್ಷಣಾದಿದ್ದಾಗಿದೆಯೆಂತಲೂ ಅದರ ಸ್ವಲ್ಪ ಕಾಲಕ್ಕೆ ಪೂರ್ವದ ಒಳ್ಳೇ ಮನಸ್ಸೂ ದಯಾಳುತ್ವವೂ ಗಾಂಭೀರ್ಯಗೌರವಗಳೂ ಪ್ರಸಕ್ತ ಜನರಲ್ಲಿ ಉಂಟಾಗುವದೆಂತಲೂ ನಮಗೆ ತಿಳಿಬರುವಂತೆಯೇ ಸಭಾಸರಾದ ನಿಮಗೂ ತಿಳಿದೇ ಇರಬಹುದು ಇಂಥಾ ಒಳ್ಳೇ ಸ್ಥಿತಿಯು ಪ್ರಜೆಗಳಲ್ಲಿ ಉಂಟಾಗುವದಕ್ಕಾಗೂ ಈಗ ಬಾಲಕರನ್ನು ತಯಾರುಮಾಡುವ ಅಧಿಕಾರವನ್ನು ಪಡೆದಿರುವ ಗುರುಗಳೂ ಉಪಾಧ್ಯಾಯರೂ ಬಹು ಮುತುವರ್ಜಿಯಿಂದ ತಮ್ಮ ಶಿಷ್ಯರಲ್ಲಿ ಸಕಲ ಶ್ರೇಷ್ಠಗುಣಗಳೂ ನೆಲೆಯಾಗುವಂತೆ ಅವರಿಗೆ ನಾನಾ ಮಾರ್ಗಗಳಲ್ಲೂ ಬುದ್ಧಿವಾದಗಳನ್ನೇ ಹೇಳಿಕೊಡುತ್ತ ತಮ್ಮ ನಡತೆಗಳನ್ನೂ ಮಾದರಿಗೆ ಮೇಲುಪಂಕ್ತಿಯಾಗಿರುವಂತೆ ತಿದ್ದಿಕೊಂಡು ಅವರನ್ನು ತಯಾರುಮಾಡುವದರಿಂದ ತಾವು ಅವರ ಬುದ್ಧಿಶಕ್ತಿಯನ್ನು ಸಂಪಾದಿಸಿಕೊಳ್ಳುವರಲ್ಲದೆ ತಯಾರಾದ ಬಾಲಕರೂ ಮುಂದೆ ಒಳ್ಳೇ ಪ್ರಜೆಗಳಾಗಿ ಪ್ರಜಾಧರ್ಮಗಳನ್ನು ಬಹು ಚೆನ್ನಾಗಿ ನಡಿಸಲು ಯೋಗ್ಯತೆಯನ್ನು ಹೊಂದಿ ತಮ್ಮ ದೇಶವನ್ನು ಉತ್ತಮಸ್ಥಿತಿಗೆ ತರಲು ಕಾರಣವಾಗುವರೆಂಬುವದರಲ್ಲಿ ಸಂಶಯವಿಲ್ಲ

ಬಹುದೇಶ ವೃತ್ತಾಂತಗಳು.

ಯಾದತೋರೇಪ್ರಾಂತ್ಯ ಛಾಫೆ ಜಿಲ್ಲೆಯವರು ಹೋಗಿದ್ದಾಗ ಅಲ್ಲಿನ ಪ್ರಜೆಗಳು ರಸ್ತೆಯಲ್ಲಿ ಒಂದು ಮಾನಪತ್ರಕೊಟ್ಟುದನ್ನು ಪರ್ಪಡಿಸಿಕೊಡಬೇಕೆಂದು ಅವರನ್ನು ಅರ್ಜಿಯಮೂಲಕ ಕೇಳಿಕೊಂಡರೆಂದು ಕೇಳುತ್ತೇವೆ

ಸಂಸ್ಥಾನದ ದಿವಾನ್ ಬಹದ್ದೂರವರು ಶ್ರೀಮನ್ ಮಹಾರಾಜರವರ ಜೊತೆಯಲ್ಲಿ ಹರಿಹರದವರಿಗೆ ಪ್ರಯಾಣಮಾಡಿದರೆಂತಲೂ ಅಲ್ಲಿಂದ ವಾಪಸು ಬೆಂಗಳೂರಿಗೆ ದಯಮಾಡಿದರೆಂತಲೂ ಈಗ ಸರ್ಕ್ಯೂಟು ಹೊರಡುವ ಏರ್ಪಾಡು ಮಾಡುತ್ತಿದ್ದಾರೆಂತಲೂ ಕೇಳುತ್ತೇವೆ

ಬೆಂಗಳೂರು ಪೇಟೆಯಲ್ಲಿ ಕಳೆದ ಶುಕ್ರವಾರ ಒಬ್ಬ ಮನುಷ್ಯನು ಕಾಯಿಲೆಯಿಂದ ಸತ್ತುಹೋದನು. ವಾರಸುದಾರರು ಸಾಕ್ಷರದ ಅಪ್ಪಣೆ ಪಡೆಯದೆ ಶವವನ್ನು ದಹನಮಾಡಿದ್ದರಿಂದ ಪೊಲೀಸಿನವರು ಅವರಮೇಲೆ ಈಗ ಛಾರ್ಜ ಮಾಡಿರುವಂತೆ ಕೇಳುತ್ತೇವೆ

ಕಳೆದ ವಾರದಲ್ಲಿ ಸರ್ಕಸ್ ಆಟದವರು ರಾಜಧಾನಿಯಲ್ಲಿ ಆಟಗಳನ್ನು ಆಡಿದರು ಮೊನ್ನೆ ಮಂಗಳವಾರ ಬೆಳಗ್ಗೆ ನಂಜನಗೂಡಿನಲ್ಲಿ ಆಟವಾಡಿ ಸಂಪಾದನೆಮಾಡಬೇಕೆಂದು ಪ್ರಯಾಣ ಮಾಡಿರುತ್ತಾರೆ ಅವರ ಉದ್ದೇಶವು ಎಷ್ಟರಮಟ್ಟಿಗೆ ಸಫಲವಾಗುವದೋ ತಿಳಿಯತಕ್ಕದ್ದಾಗಿದೆ

ಮದರಾಸ್ ಗವರ್ನರವರ ಭಾರ್ಯೆಯಾದ ಲೇಡಿ ವೆನ್ಲಾಕ್ ಯವರಿಗೆ ದೇಹದಲ್ಲಿ ಅಲಸ್ಯವಾಗಿದ್ದದನ್ನು ಹವಾ ಬದಲಾಯಿಸೋಣದರಿಂದ ನಿವೃತ್ತಿಮಾಡಿಕೊಂಡು ಆರೋಗ್ಯವನ್ನು ಪಡೆಯಬೇಕೆಂಬ ಅಭಿಲಾಷೆಯಿಂದ ಅವರು ಕಳೆದ ಬುಧವಾರ ಬೆಂಗಳೂರಿಗೆ ದಯಮಾಡಿದ್ದಾರೆಂದು ಅಲ್ಲಿನ ಪತ್ರಿಕೆಗಳಿಂದ ತಿಳಿಯಬರುತ್ತದೆ

ಮಹಾರಾಣಿಯವರ ಬಾಲಿಕಾ ಪಾಠಶಾಲೆಯಲ್ಲಿ ಉಪಾಧ್ಯಾಯರಾಗಿರುವ ಡಾಕ್ಟರ್ ರಾಮಸ್ವಾಮಯ್ಯಂಗಾರ್ಯನನ್ನೂ ಫಾರೆಸ್ಟ್ ಪ್ರೊಫೆಸರ್ ಕೆ. ಟಿ. ವೆಂಕಟಯ್ಯಂಗಾರ್ಯನನ್ನೂ, ಫಾರೆಸ್ಟ್ ಸ. ಅ. ಕ. ಎ. ವೆಂಕಟರಮಣಪ್ಪನವರನ್ನೂ ಮೈಸೂರು ವಿದ್ಯಾಭ್ಯಾಸದ ಇಲಾಖೆಯ ಟೆಕ್ಸ್ಟ್‌ಬುಕ್ಕು ಕಮಿಟಿಗೆ ಮೆಂಬರುಗಳಾಗಿರುವಂತೆ ಗವರ್ನಮೆಂಟಿನವರು ನೇಮಕ ಮಾಡಿರುತ್ತಾರೆ

ಮಂಡ್ಯ ಮತ್ತು ಇಲಾಖೆಗೆ ಶಿರಸ್ತೆಗಳನ್ನು ತಯಾರುಮಾಡುವದಕ್ಕೆ ಬೆಂಗಳೂರಿನಲ್ಲಿ ಒಂದು ಸ್ಕೂಲನ್ನು ಸ್ಥಾಪಿಸಬೇಕೆಂದು ಮೈಸೂರು ಸರ್ಕಾರದವರು ಆಲೋಚನೆಮಾಡುತ್ತಿದ್ದರು ಅದರ ಆದಕ್ಕೆ ಹಣ ಖರ್ಚು ಹೇಳುತ್ತಿದ್ದರಿಂದ ಅಂಥಾ ಸ್ಕೂಲನ್ನು ಸ್ಥಾಪಿಸುವದಕ್ಕೆ ಗವರ್ನಮೆಂಟಿನವರಿಗೆ ತಾತ್ಪರ್ಯವಿಲ್ಲವೆಂತಲೂ ಅಂಥಾ ಆಲೋಚನೆಯನ್ನೇ ಬಿಟ್ಟುಬಿಟ್ಟರೆಂತಲೂ ಬೆಂಗಳೂರು ಪತ್ರಿಕೆಯಿಂದ ತಿಳಿಸುತ್ತದೆ

ಬೆಂಗಳೂರಿನಲ್ಲಿ ಸ್ಥಾಪಿಸಲ್ಪಟ್ಟಿರುವ ಮೈಸೂರು ಗವರ್ನಮೆಂಟು ಸೆಂಟ್ರಲ್ ಪ್ರೆಸ್ಸಿನಲ್ಲಿ ಕೆಲಸಗಳು ತೃಪ್ತಿಕರವಾಗಿ ನಡೆಯುವದಿಲ್ಲವೆಂತಲೂ ನಷ್ಟಕರವಾಗುತ್ತಿದೆಯೆಂತಲೂ ಅಲ್ಲಿನ ಸೂಪರಿಂಟೆಂಡೆಂಟರು ಗವರ್ನಮೆಂಟಿಗೆ ತಿಳಿಸಿದ್ದರಿಂದ ಗವರ್ನಮೆಂಟಿನವರು ೨೦,೦೦೦ ರೂಪಾಯಿಗಳನ್ನು ಮಂಜೂರ್ ಮಾಡಿ ಅದರಿಂದ ಹೊಸದಾದ ಯಂತ್ರಗಳನ್ನು ಸೀಮೆಯಿಂದ ತರಿಸಿಕೊಳ್ಳಬಹುದೆಂದು ಅವರಿಗೆ ಅಪ್ಪಣೆ ಮಾಡಿರುತ್ತಾರೆಂದು ಪ್ರಜಾಬಂಧು ಪತ್ರಿಕೆಯವರು ಬರೆಯುತ್ತಾರೆ

ಕಳೆದ ಭಾನುವಾರ ಮಧ್ಯ ರಾತ್ರಿಯ ೧೨ ಘಂಟೆಯಲ್ಲಿ ಇಲ್ಲಿ ದೊಡ್ಡಗಡಿಯಾರದ ಎದುರಿಗೆ ರಾಯಲ್ ಪೋಲೀಸ್ ಆಫೀಸು ಮುಚ್ಚಿಕೊಂಡಿದ್ದ ಒಂದು ಅಂಗಡಿಗೆ ಕಳ್ಳನು ನುಗ್ಗಿ ಪಾತ್ರೆ ಬಣ್ಣಗಳನ್ನು ತೆಗೆಯುತ್ತಿದ್ದನು ಆಗ ಒಬ್ಬ ಪೋಲೀಸ್ ನವನು ನೋಡುತ್ತಿದ್ದ ಒಂದು ಕೈಯಲ್ಲಿ ಸಿಕ್ಕಿದವನನ್ನು ಹಿಡಿದು ಇದ್ದನು ಅದು ಅಷ್ಟು ಒಡವೆಗಳಿಲ್ಲದ್ದರಿಂದ ಮುಂದಿರುವಾಗ ಅವನು ಕೆಳಗೆ ಬಿದ್ದುಬಿಟ್ಟನು ಅವನ ಮೈಗೆಲ್ಲಾ ಏಟು ಮತ್ತು ತಲೆ ಒಡೆದು ರಕ್ತ ಸುರಿಯುತ್ತಿದ್ದ ಅವನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋದರೂ ಅಲ್ಲೇ ಪ್ರಾಣ ಬಿಟ್ಟನು ಎಂದು ಕೇಳುತ್ತೇವೆ

ಶ್ರೀಮನ್ ಮಹಾರಾಜರವರು ದಿವಾನರವರೊಡನೆ ಹರಿಹರದ ಜಾತ್ರೆ ಸಮಯದಲ್ಲಿ ೧೨ ಘಂಟೆಗೆ ಪೂಜಾ ದೇವಸ್ಥಾನವನ್ನು ನೋಡಿದರು ಅಲ್ಲಿ ಅವರಿಗೆ ತಕ್ಕ ಮಾನ ಮರ್ಯಾದೆಗಳನ್ನು ಇಲ್ಲಿ ಪ್ರಕಟಿಸಿ ಪಡೆದು ಬಂದರು ಮೈಸೂರು ಕಾಲೇಜಿನಲ್ಲಿ ಓದುವ ಮೈಸೂರು ವಿದ್ಯಾರ್ಥಿಗಳು ಮಹಾರಾಜರವರಿಗೆ ಮಾನಪತ್ರಗಳನ್ನು ಒಪ್ಪಿಸಿ ಸ್ವೀಕರಿಸಿದ ಬಳಿಕ ಒಂದು ಸಣ್ಣ ಔತಣವನ್ನು ಮಾಡಿದರು ಅಲ್ಲಿ ಒಂದು ಪದ್ಯ ಸೇರಿದ್ದು ಅಲ್ಲಿದ್ದ ವಿದ್ಯಾರ್ಥಿಗಳ ಪ್ರಯತ್ನವನ್ನು ಮಹಾರಾಜರವರು ಮೆಚ್ಚಿಕೊಂಡು ಹೋದರೆಂದು ಕೇಳುತ್ತೇವೆ

ಬರ್ಕಲಿ ಪತ್ರಿಕೆಯವರು ರಾಮಸ್ವಾಮಿ ಎಸ್ ಎಂ. ಸಿಸ್ಟರ್ ಮುದ್ರಣಾಲಯದ ಮೇಲಿನ ಕೋಟೆಯಲ್ಲಿ ಸ್ಥಾಪಿಸಲ್ಪಟ್ಟಿರುವ ಬಾಲಿಕಾ ಪಾಠಶಾಲೆಗೆ ಯೋಗ್ಯರಾದ ಉಪಾಧ್ಯಾಯಿನಿಯರನ್ನು ನೇಮಿಸಿಕೊಳ್ಳುವಂತೆ ಮೈಸೂರು ಗವರ್ನಮೆಂಟಿನವರು ಮಾಹೆಯಾನ ೫೦ ರೂಪಾಯಿ ಗ್ರಾಂಟು ಕೊಡುವದಾಗಿ ಮಂಜೂರ್ ಮಾಡಿರುತ್ತಾರೆ ಆ ಪಾಠಶಾಲೆಯಲ್ಲಿ ವೃದ್ಧಿಪ್ರಯೋಜನ ವಿಧವೆಯರು ವಿಶೇಷವಾಗಿ ವಿದ್ಯಾಭ್ಯಾಸ ಮಾಡುತ್ತಾರೆಂತಲೂ ಆ ಶಾಲೆಯನ್ನು ಅಭಿವೃದ್ಧಿಗೆ ತರಬೇಕೆಂದು ಮಹಾಪ್ರಭುಗಳವರು ವಿಶೇಷವಾಗಿ ದ್ರವ್ಯಸಹಾಯ ಮಾಡುತ್ತಿದ್ದಾರೆಂತಲೂ ಗವರ್ನಮೆಂಟಿನವರು ತಿಳಿದು ಈಗ ಗ್ರಾಂಟನ್ನು ಮಂಜೂರ್ ಮಾಡಿರುತ್ತಾರೆ

ಇಲ್ಲಿನ ವೆಸ್ಲೀಯನ್ ಮಿಷನ್ ಹೈಸ್ಕೂಲ್ ಹೆಡ್‌ಮಾಸ್ಟರಾದ ರೆವರೆಂಡ್ ಹೋಲ್ಡ್‌ಸವರ್ಥ ಸಾಹೇಬರವರು ಸೀಮೆಗೆ ದಯಮಾಡುತ್ತಾರಾದ್ದರಿಂದ ಅವರಿಗೆ ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳು ಕಳೆದ ವಾರದಲ್ಲಿ ಸಭೆ ಸೇರಿಸಿ ಅಡ್ರೆಸ್ಸನ್ನು ಒಪ್ಪಿಸಿದರು ಅವರಿಗೆ ಒಂದು ಚಿತ್ರವಾದ ಬಂದು ಗಡಿಯಾರ ಬೆಳ್ಳಿ ಸ್ಟ್ಯಾಂಡನ್ನೂ ಮತ್ತು ಕೆಲವು ಫೋಟೋಗಳನ್ನೂ ಕೊಟ್ಟರು ಮತ್ತು ಅವರ ಹೆಸರಿನಲ್ಲಿ ಒಂದು ಫಂಡನ್ನು ಮಾಡಿದೆ ಈ ಹಣವನ್ನು ಮೈಸೂರ್ ಗವರ್ನಮೆಂಟ್ ಸೇವಿಂಗ್ಸ್ ಬ್ಯಾಂಕಿನಲ್ಲಿಟ್ಟಿದ್ದಾರೆ ಅದರಿಂದ ಬರುವ ಬಡ್ಡಿಯಲ್ಲಿ ಪ್ರತಿವರ್ಷವೂ ಲೋವರ್ ಸೆಕಂಡರಿ ಪರೀಕ್ಷೆಯಲ್ಲಿ ಆ ಸ್ಕೂಲಿನಿಂದ ಮೊದಲನೇ ತರಗತಿಯಲ್ಲಿ ಪ್ಯಾಸಾದ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ಕೊಡಬೇಕೆಂದು ತೀರ್ಮಾನ ಮಾಡಿದ್ದಾರೆ

ಬೆಂಗಳೂರು ಅಮಲ್ದಾರರನ್ನು ಪೊಲೀಸಿನವರು ಮೈಸೂರು ಸಿಲ್ವರ್ ಟ್ರೇಡಿಂಗ್ ಲೈನಿನಲ್ಲಿ ಒಂದು ವಿಷಯ ವಿಚಾರಣೆ ಮಾಡುವದಕ್ಕಾಗಿ ಕರೆದುಕೊಂಡು ಹೋದರು. ಅವರೆ ಅಮಲ್ದಾರು ಪಿಲ್ಲರ ಬೀಗವನ್ನು ತೆಗೆದ ಕಾಯಿದೆಯ ಮೇಲೆ ಕಾಪಾಡಿಕೊಂಡು ಒಳಕ್ಕೆ ನುಗ್ಗಿಬಿಟ್ಟರು. ಒಳಕ್ಕೆ ಯಾರು ಹೋಗಬೇಕಾದರೂ ಮೊದಲು ಇಲಾಖೆಯವರ ಅಪ್ಪಣೆ ಇಲ್ಲದೆ ಹೋಗಕೂಡದು. ಇವರು ನೋಡಬೇಕಾಗಿ ಅಲ್ಲಿನ ಅಧಿಕಾರಿಗಳು ಅಮಲ್ದಾರರನ್ನು ಬಹಳ ತೊಂದರೆ ಮಾಡಿ ಯಾಕೆ ಬಂದೆವೆನ್ನು ಎನ್ನಿಸಿಬಿಟ್ಟರು. ಇವರು ಪೂರ್ಣವಾಗಿ ದಾರು. ಪಟ್ಟಣಗಳಲ್ಲಿ ಯಾವ ರೀತಿಯಲ್ಲಿರಬೇಕೆಂಬುವದು ಇವರಿಗೆ ತಿಳಿಯದು ಇವರಿಗೆ ಇಂಗ್ಲಿಷಿನ ಕಾನೂನುಗಳು ಚೆನ್ನಾಗಿ ಗೊತ್ತಿಲ್ಲ. ಆದರೂ ವಿಚಾರಿಸುವವರು ಅವರನ್ನು ಅಮಲ್ದಾರರೆಂದು ತಿಳಿದೂ ಅವರಿಗೆ ಸ್ವಲ್ಪವಾದರೂ ಗೌರವ ತೋರಿಸಬೇಕಾಗಿತ್ತು. ಅವರನ್ನು ಈಗ ತೆಗೆದರೆ ಮಹಾಪರಾಧವಾಗಿತ್ತು ಎಂಬುದೇ ಮುಂತಾದ ಸಂಗತಿಗಳನ್ನು ಒಬ್ಬ ಬಾತ್ಮೀದಾರನು ಬೆಂಗಳೂರು ಡೈಲಿಪೋಸ್ಟ್ ಪತ್ರಿಕೆಯಲ್ಲಿ ಪ್ರಕಟಿಸಿರುತ್ತಾನೆ

ಬೆಂಗಳೂರು ಶಿವಾಜಿರಾವ್ ಎ ಬಿ ಪಾರ್ಕ ಎಂಬ ನಾನು ಇದೇ ವೃತ್ತಾಂತ ಪತ್ರಿಕೆಯಲ್ಲಿ ಕಾಫಿ ಎಂಬ ಮೈಸೂರು ಟ್ರೇಡಿಂಗ್ ಕಂಪೆನಿಯವರು ಪ್ರಕಟಿಸುವ ಅನೇಕ ಸಾಮಾನುಗಳ ಪೈಕಿ ಒಂದು ಕೈಗಡಿಯಾರ ಒಂದು ಕೈಚೀಲವನ್ನು ತರಿಸಲಿಕ್ಕಾಗಿ ಎರಡು ಬಿಲ್ಲೆಗಳ ಕ್ರಮವಾಗಿ ೧—೨—೦ ಯನ್ನು ಕಳೆದ ಸೆಪ್ಟಂಬರ್ ೧೯ನೇ ತಾರೀಖಿನ ದಿನ ಮನಿಆರ್ಡರ್ ಮೂಲಕ ಸದರಿ ಕಂಪೆನಿಯ ಮೇನೇಜರವರಿಗೆ ರವಾನಿಸಿದ್ದೆನು ಆದರೆ ಈವರೆಗೆ ಕೊಟ್ಟ ಹಣವೂ ಬರಲಿಲ್ಲ ಸದರಿ ಸಾಮಾನುಗಳು ಬರಲಿಲ್ಲ. ಸದರಿ ಕಂಪೆನಿಯವರು ನನಗೆ ಸಾಮಾನು ಕಳುಹಿಸಲಿಲ್ಲವಾದ್ದರಿಂದ ನನ್ನ ಹಣವು ಸಹ ಬರಲಿಲ್ಲ ಮತ್ತು ನಾನು ಬರೆದ ಕಾಗದಗಳಿಗೆ ಜವಾಬು ಸಹ ಕಳುಹಿಸಲಿಲ್ಲ ಆದ್ದರಿಂದ ಸದರಿ ಕಂಪೆನಿಯವರ ನಡವಳಿಕೆಯನ್ನು ಸಾರ್ವಜನಿಕರಿಗೆ ತಿಳುಹಿಸಬೇಕೆಂದು ಇದನ್ನು ಬರೆದಿರುವೆನು ಇಂಥಾ ಸಂಗತಿಗಳಿಗೆ ಸದರಿ ಕಂಪೆನಿಯವರು ತಕ್ಕ ಉತ್ತರವನ್ನು ಕೊಡುವರೆಂದು ನಿರೀಕ್ಷಿಸುತ್ತೇನೆ

ಕಳೆದ ಶುಕ್ರವಾರ ಸಾಯಂಕಾಲ ಬೆಂಗಳೂರಿನಲ್ಲಿ ಅನ ರೆಜಿಮೆಂಟಿನವರು ಬ್ಯಾಂಡುವಾದ್ಯ ಸಮೇತ ಬರುತ್ತಿರುವಾಗ ವಿಶೇಷ ಜನರು ಕೂಡಿದ್ದರು. ಪ್ರಸಿದ್ಧ ಸರ್ಕಾರಿ ನೌಕರನೊಬ್ಬನು ಸಾಲ್ಟ್ ಸೀ ಮಾರ್ಕೆಟಿನ ಬಳಿ ಬೆಂಗಳೂರಿನ ಪ್ರಸಿದ್ಧರಾದ ಕೆಲವರೊಡನೆ ಅಲ್ಲಿ ನಿಂತಿದ್ದರು ಆ ಸಮಯದಲ್ಲಿ ಬೆಂಗಳೂರಿನ ಕೆಲವು ದೊಡ್ಡ ಮನುಷ್ಯರು ಅಲ್ಲಿಗೆ ಬಂದು ಅಲ್ಲೇ ಇದ್ದರು ಮತ್ತು ಅವರ ಪೈಕಿ ಸ್ವಲ್ಪ ಮಂದಿ ಕೈಯಲ್ಲಿ ದೊಣ್ಣೆ ಹಿಡಿದುಕೊಂಡು ಬಂದು ಸಾರ್ವಜನಿಕ ಸಭೆಯಲ್ಲಿ ಕೆಲವು ಮಾತುಗಳನ್ನು ಆಡಿದರು ಕೆಲವು ಜನರು ಅವರನ್ನು ಹೊಡೆಯುವುದಕ್ಕೆ ಸಿದ್ಧರಾದರು ಕೆಲವರು ಅವರನ್ನು ಸುತ್ತಿಕೊಂಡರು ಬ್ಯಾಂಡಿನವರು ಮುಂದಕ್ಕೆ ಹೋಗುತ್ತಿದ್ದರು ಇದನ್ನು ಕಂಡು ಪೊಲೀಸಿನವರು ಬಂದು ಕೂಡಿದ್ದವರನ್ನು ಚದುರಿಸಿದರು ಇವರು ಯಾರು ಏತಕ್ಕೆ ಹೀಗೆ ಮಾಡಿದರೆಂದು ತಿಳಿಯಬೇಕೆಂದು ನಮ್ಮ ಬಾತ್ಮೀದಾರರು ಬರೆಯುತ್ತಾರೆ ಇವರು ಯಾರೆಂಬುದನ್ನು ನಮಗೆ ತಿಳಿಸಬೇಕೆಂದು ಕೇಳುತ್ತೇವೆ ಇಂಥಾ ಸಂಗತಿಗಳು ಇನ್ನು ಮುಂದೆ ನಡೆಯದಂತೆ ಪೊಲೀಸಿನವರು ಜಾಗ್ರತೆಯಾಗಿರಬೇಕು

ವರ್ತಮಾನಗಳು.

ಈ ವಾರದಿಂದಲೇ ವೃತ್ತಾಂತಪತ್ರಿಕೆಯು ತನ್ನ ಸಂಪುಟದಲ್ಲಿ ಎರಡನೇ ಕ್ವಾರ್ಟರು ಪೂರೈಸುತ್ತಿದ್ದರಿಂದ ಎಲ್ಲಾ ಚಂದಾದಾರರೂ ದಯವಿಟ್ಟು ಜಾಗ್ರತೆಯಾಗಿ ಚಂದಾಗಳನ್ನು ತಮಗಾಗಿ ಕಳುಹಿಸಿಕೊಟ್ಟಾರೆಂದು ನಂಬಿದ್ದೇವೆ.

೭—೧೨—೯೩ | ಎಡಿಟರ್
ಮೈಸೂರು. | ವೃತ್ತಾಂತಪತ್ರಿಕೆ.

ವಿವಿಧ ವರ್ತಮಾನಗಳು.

ಗಾಯಕವಾಡೀ ಮಹಾರಾಜರವರು ದೇಹಾರೋಗ್ಯವನ್ನು ಪಡೆಯುವ ಉದ್ದೇಶ್ಯ ಕಳೆದ ಬುಧವಾರ ತಮ್ಮ ರಾಜಧಾನಿಯನ್ನು ಬಿಟ್ಟು ಬೊಂಬಾಯಿಗೆ ಬಂದು ಅಲ್ಲಿಂದ ಪೂನಾ ಮಾರ್ಗವನ್ನು ಹಿಡಿದು ಮಹಾಬಲೇಶ್ವರ ಪರ್ವತ ಪ್ರಾಂತ್ಯಕ್ಕೆ ದಯಮಾಡಿದರು

ಬರೋಡೆ ಸಂಸ್ಥಾನದಲ್ಲಿ ವಾಟರ್‌ಪ್ರೂಫ್ ಅಂದರೆ ನೀರು ತಗಲದೆ ಇರುವಂಥ ಛತ್ರಿಗಳನ್ನು ಹೊಸದಾಗಿ ತಯಾರುಮಾಡುವ ಒಂದು ಕಾರ್ಖಾನೆಯು ಸ್ಥಾಪಿಸಲ್ಪಟ್ಟಿದೆ ಎಂಬದಾಗಿ ಕೇಳಿದೆವು ರಾಜ್ಯದಲ್ಲಿ ಪ್ರಜಾಕ್ಷೇಮವಿರುವದೆನ್ನುವದಕ್ಕೆ ಇಂಥವುಗಳಲ್ಲವೇ ದೃಷ್ಟಾಂತಗಳು!

ಈಗ ಫ್ರೆಂಚರೂ ಮತ್ತು ರಷ್ಯ್ಯದವರೂ ಯುದ್ಧದ ಹಡಗುಗಳನ್ನು ಬಹಳವಾಗಿ ಕಟ್ಟಿಸುತ್ತ ಬಂದಿರುವದನ್ನು ತಿಳಿದು ಇಂಗ್ಲೆಂಡಿನ ಪಾರ್ಲಿಮೆಂಟಿನವರೂ ತಮ್ಮ ಹಡಗುಗಳನ್ನು ಹೆಚ್ಚಿಸುವಂತೆ ೧ ಕೋಟಿಯೂ, ೫೦ ಲಕ್ಷ ಪೌನುಗಳನ್ನು ಬಜೆಟ್ಟಿನಲ್ಲಿ ಮಂಜೂರ್ ಮಾಡಿರುತ್ತಾರೆ

ಜರ್ಮನಿಯಲ್ಲಿ ಎಮ್ಸ್ ಎಂಬ ಪಟ್ಟಣದಲ್ಲಿ ಸ್ನಾನಕ್ಕೆ ಯೋಗ್ಯವಾದ ಒಂದು ಭಾವಿಯನ್ನು ತೆಗೆಯುತ್ತಿದ್ದಾಗ ಭಯಂಕರವಾದ ಒಂದು ಭೂಕಂಪನ ಹುಟ್ಟಿ ಕಾಲುಭಾಗ ಪಟ್ಟಣವನ್ನೆಲ್ಲಾ ನುಂಗಿಬಿಟ್ಟಿತು ಇದರಿಂದ ಉಂಟಾದ ಪ್ರಾಣಹಾನಿಯೂ, ಅರ್ಥಹಾನಿಯೂ ಏನಾಗಿರಬಹುದೆಂದು ವಾಚಕರೇ ಊಹಿಸಿಕೊಳ್ಳಬಹುದು

ಬೊಂಬಾಯಿ ಪ್ರಾಂತ್ಯದಲ್ಲಿ ಒಟ್ಟು ೩೭ ಮೈಲಿನ ಘಾಟು ನಾಲೆಗಳು ಇರುತ್ತವೆಂತಲೂ, ಈ ನಾಲೆ ನೀರಿನಿಂದ ಒಳ್ಳೆಯಾದ ಜಮೀನುಗಳ ಕಂದಾಯವು ಕಳೆದ ವರ್ಷದಲ್ಲಿ ೩೫,೦೦೦ ರೂಪಾಯಿಗಳೆಂತಲೂ, ಈ ಪ್ರಕಾರ ಆದೇ ವರ್ಷದಲ್ಲಿ ಇದ್ದಂತಲೂ ೧|| ಲಕ್ಷ ರೂಪಾಯಿ ಇದರಿಂದ ಉತ್ಪತ್ತಿಯಾಗುತ್ತದೆಂತಲೂ ತಿಳಿಯಬರುತ್ತೆ

ನಿಜಾಮರ ಸಂಸ್ಥಾನದ ಪ್ರಧಾನಮಂತ್ರಿಗಳಾದ ಮೆ|| ಗ್ಲ್ಯಾಡ್‌ಸ್ಟನ್ ಸಾಹೇಬರವರು ಹಣ್ಣು ಹಣ್ಣು ಮುದುಕರಾಗಿದ್ದಾಗ್ಯೂ, ಯೌವನಪುರುಷನಂತೆ ರಾಜ್ಯ ಕಾರ್ಯಗಳನ್ನು ನಡೆಸುತ್ತಲಿರುವದು ನಮ್ಮ ವಾಚಕರಿಗೆ ತಿಳಿದೇ ಇದೆಯಷ್ಟೆ ಅವರು ಕಳೆದವಾರದಲ್ಲಿ ಅಜೀರ್ಣದ ದೆಸೆಯಿಂದ ಸ್ವಲ್ಪ ಬಾಧೆಯನ್ನನುಭವಿಸಿ, ಈಗ ಪುನಃ ಚೇತರಿಸಿಕೊಂಡಿದ್ದಾರೆಂದು ಕೇಳಿ ಸಂತೋಷಿಸುತ್ತೇವೆ

ವಿಲಾಯತಿಯಲ್ಲಿ ಪ್ರೊಫೆಸರ್ ಟಿಂಡೆಲ್ ಎಂಬಾತನ ಹೆಂಡತಿಯು ಅವನಿಗೆ ಔಷಧಿ ಕೊಡುವಾಗ್ಯೆ ಮರೆತು ಬೇರೇ ಸೀಸೆಯ ವಿಷದೌಷಧಿಯನ್ನು ಕೊಟ್ಟುಬಿಟ್ಟಳು ವಿಷದ ಎಂದು ಕುಡಿದವನು ಉತ್ತರಕ್ಷಣದಲ್ಲೇ ಸತ್ತುಹೋದನು ವಾಚಕರೇ ರೋಗಿಗಳಿಗೆ ಔಷಧಿಕೊಡುವಾಗ್ಯೆ ಜನರು ಬಹು ಜಾಗರೂಕರಾಗಿರಬೇಕು ಇಲ್ಲದಿದ್ದರೆ ಒಂದಕ್ಕೆ ಒಂದು ಕೊಟ್ಟು ಪ್ರಾಣವನ್ನು ನಾಶಕೊಳ್ಳುವ ಹಾಗಾಗುತ್ತೆ

ಇಂಗ್ಲೀಷರು ಹಿಂದೂಸ್ಥಾನಕ್ಕೆ ಕಾಲಿಡುವ ಮುಂದೆ ಪ್ರಾಂತಗಳನ್ನು ಸ್ವಾಧೀನಪಡಿಸಿಕೊಳ್ಳುತ್ತಿದ್ದರಲ್ಲ ಅದಕ್ಕೆ ಬದಲಾಗಿ ಅಫೀಮನ್ನು ವಿಲಾಯತಿಯಲ್ಲಿ ಜನರು ಉಪಯೋಗಿಸುವಂತೆ ಮಾಡಬೇಕು ಆಗಲಾದರೂ ಅವರಿಗೆ ಬುದ್ಧಿ ಬಂದು ಇಂಡಿಯಾಕ್ಕೆ ಮಾದಕದ್ರವ್ಯಗಳನ್ನು ಕಳಿಸುವದು ಬಿಟ್ಟುಬಿಡುತ್ತಾರೆಯೋ ಏನೋ ನೋಡಬೇಕು ಎಂಬದಾಗಿ ಬಂಗಾಳೆಯ ಒಬ್ಬ ವಿದ್ವಾಂಸನು ಪಾರ್ಲಿಮೆಂಟಿಗೆ ಬರೆದು ಪ್ರಕಟಿಸಿರುತ್ತಾನೆ

ಫ್ರಾನ್ಸ್ ದೇಶದಲ್ಲಿ ಯಾವನೊಬ್ಬ ನಾಗರಿಕನೋ ಸಿಟಿ ಒಂದು ದಿವಸದ ಪತ್ರಿಕೆಯನ್ನು ಮಾರಲೂ ಕೂಡದೆಂತಲೂ, ಉಪಯೋಗಿಸಲೂ ಕೂಡದೆಂತಲೂ, ಔಷಧದಂತೆ ಕೂಡ ಪ್ರಜೆಗಳು ಉಪಯೋಗಿಸಕೂಡದೆಂತಲೂ, ಹಾಗೆ ಉಪಯೋಗಿಸಿದವನನ್ನೂ, ಮಾರಿದವನನ್ನೂ ಎಲ್ಲರನ್ನೂ ಸರ್ಕಾರದವರು ಖಂಡಿತವಾಗಿ ಶಿಕ್ಷಿಸುತ್ತಾರೆಂಬುವದರಲ್ಲಿ ಸಂಶಯವಿಲ್ಲವೆಂಬ ಒಂದು ಹೊಸ ಕಾನೂನನ್ನು ಜೇಮ್ಸ್ ಸರ್ಕಾರದವರು ಪ್ರಕಟಿಸಿರುತ್ತಾರೆ ಇದರ ಅರ್ಥವೇನೋ ನಮಗೆ ಚೆನ್ನಾಗಿ ಗೊತ್ತಾಗಿಲ್ಲ

ಹಿಂದೂಸ್ಥಾನದ ಅನೇಕ ಪಟ್ಟಣಗಳಲ್ಲಿ ಇಂಗ್ಲೀಷರು ತಮ್ಮ ಸೈನ್ಯವನ್ನು ಇಟ್ಟು ಇರಬೇಕಷ್ಟೆ ಕೆಲವು ಪಟ್ಟಣಗಳಲ್ಲಿನ ದಂಡುಗಳಿಗೆ ಜಲವಸತಿಯು ಸರಿಯಾಗಿಲ್ಲವೆಂದು ತಿಳಿದು ಆಯಾಸ್ಥಳಗಳಿಗೆ ನೀರನ್ನು ಒದಗಿಸುವಂತೆ ಹಣವನ್ನು ಮಂಜೂರ್ ಮಾಡಿರುತ್ತಾರೆ ಬೆಂಗಳೂರಿಗೆ ೭ ಲಕ್ಷ, ಲಕ್ನೋಗೆ ೧|| ಲಕ್ಷ, ಮದ್ರಾಸಿಗೆ ೧,೩೦,೦೦೦, ಡಂಡಿಗೆ ೩೬,೦೦೦, ಶಿಕಂದರಾಬಾದಿಗೆ ೨೦,೦೦೦, ದೆಹಲಿಗೆ ೯,೦೦೦, ಆಗ್ರಾಕ್ಕೆ ೩,೦೦೦, ಜಾನ್ಸಿಗೆ ೬|| ಲಕ್ಷ ರೂಪಾಯಿಗಳನ್ನು ಮಂಜೂರ್ ಮಾಡಿದ್ದಾರೆ

ಮದರಾಸ್ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಗಣಿತಶಾಸ್ತ್ರ ಬೋಧಕರಾಗಿದ್ದ ರಾಯ್ ಬಹದ್ದೂರ್ ಪಿ. ರಂಗನಾಥ ಮೊದಲಿಯಾರ್ ಎಂ. ಎ ಯವರು ಮಹಾಜನಗಳವರಿಗೆ ಪ್ರೀತಿಯ ಮಿತ್ರರಾಗಿ ಕಳೆದ ಭಾನುವಾರ ಮರಣವನ್ನೈದಿದರೆಂದು ತಿಳಿಸಲು ವಿಷಾದಿಸುತ್ತೇವೆ ಇವರು ಇಂಗ್ಲೀಷು ಸರ್ಕಾರದವರ ಗೌರವ ಪ್ರೀತಿಗಳನ್ನು ಪೂರ್ಣವಾಗಿ ಸಂಪಾದಿಸಿದ್ದರಲ್ಲದೆ. ಅಲ್ಲಿ ಸ್ಥಾಪಿಸಲ್ಪಟ್ಟಿರುವ ಜ್ಞಾನಸಂಘಗಳಲ್ಲಿಯೂ ಮುಖಂಡರಾಗಿದ್ದರು ಇಂಥವರನ್ನು ಕಳೆದುಕೊಂಡದ್ದಕ್ಕಾಗಿ ವಿದ್ಯಾವಂತರೆಲ್ಲರೂ ವ್ಯಸನಪಡುವರು

ಉತ್ತರದೇಶದಲ್ಲಿ ಗಂಗಾನದಿಗೆ ಜಲಪ್ರವಾಹದಲ್ಲಿ ಬಂದುಸೇರುವ ಒಂದು ಸಣ್ಣನದಿಯು ಮಳೆಯಿಂದ ಪ್ರವಾಹವುಳ್ಳದ್ದಾಗಿ ಒಬ್ಬನಿಗೆ ಹಠಾತ್ತಾಗಿ ಬಂದಿದ್ದರಿಂದ ಸಮೀಪದಲ್ಲಿದ್ದ ಒಂದು ಸಣ್ಣ ಪಟ್ಟಣದ ಕ್ಷೇತ್ರಕ್ಕೆ ೩೦ ಅಡಿಗಳಷ್ಟು ಎತ್ತರವಾಗಿ ಏರಿತು

ಅಕ್ರಮ.

ನಮ್ಮ ವೃತ್ತಾಂತ ಪತ್ರಿಕೆಯನ್ನು ಚಂದಾದಾರರುಗಳಲ್ಲಿ ಎಲ್ಲರಿಗೂ ತಪ್ಪದೆ ಪ್ರತಿವಾರವೂ ಕ್ರಮವಾಗಿ ರವಾನಿಸುತ್ತೇವೆ. ಕೆಲವು ಮಂದಿ ಚಂದಾದಾರರು ತಮಗೆ ಪತ್ರಿಕೆಗಳು ಸಕಾಲಕ್ಕೆ ತಲಪುವದಿಲ್ಲವೆಂದು ಆಗಾಗ್ಯೆ ಬರೆಯುತ್ತಾರೆ. ಕೆಲವರಿಗೆ ತಲಪುವದೇ ಇಲ್ಲವೆಂದು ಬರೆಯುತ್ತಾರೆ. ಇದರಿಂದ ಅಂಥವರ ವಿಳಾಸಗಳು ತಪ್ಪಾಗಿರಬಹುದು, ಇಲ್ಲವೆ ಸಬ್ ಆಫೀಸಿನ ಜವಾನರು ಆಯಾ ಕಡೆಗಳಲ್ಲಿ ಸರಿಯಾಗಿ ಹಂಚಿ ಕೊಡದೆ ಇರಬಹುದು ಎಂಬೀ ಎರಡು ಊಹೆಗಳು ಹುಟ್ಟುತ್ತವೆ. ಪತ್ರಿಕೆಗಳು ಯಾರ್ಯಾರಿಗೆ ಸಕಾಲಕ್ಕೆ ತಲಪುವದಿಲ್ಲವೋ ಅಂಥವರು ತಮ್ಮ ಸರಿಯಾದ ವಿಳಾಸವನ್ನು ಚೆನ್ನಾಗಿ ಬರೆದು ತಿಳಿಸಬೇಕು ಮತ್ತು ಸಬ್ ಆಫೀಸಿನ ಪೋಸ್ಟುಮಾಸ್ತರರುಗಳು ತಮ್ಮ ತಮ್ಮ ಡಿಲಿವರಿ ಪ್ಯೂನಾಗಳಿಗೆ ಸರಿಯಾಗಿ ಬಟವಡೆ ಮಾಡುವಂತೆ ಹುಕುಂ ಮಾಡಬೇಕು ಎಂಬದಾಗಿ ಈ ಮೂಲಕ ಅವರವರಿಗೆ ತಿಳಿಯಪಡಿಸಿರುತ್ತೇವೆ.

ಎಡಿಟರ,

ವೃತ್ತಾಂತ ಪತ್ರಿಕೆ.

ವೃತ್ತಾಂತ ಪತ್ರಿಕೆ.

೧೮೯೩ನೇ ಇಸವಿ ಡಿಶಂಬರ ತಾ|| ೨೧ನೇ ಗುರುವಾರ.

ಕೆಲವು ಹಿಂದುಗಳ ವರ್ಣನ.

ಉತ್ತರದೇಶದಲ್ಲಿ ಒಬ್ಬಾನೊಬ್ಬ ಹಿಂದೂ ದೊಡ್ಡಮನುಷ್ಯನು ತನ್ನ ಸ್ವದೇಶೀಯರ ವಿಷಯದಲ್ಲಿ ತನ್ನ ಅಭಿಪ್ರಾಯವನ್ನು ಧಾರಾಳವಾಗಿ ತಿಳಿಸಿದ್ದರಿಂದ ನಾವು ಅದರಲ್ಲಿ ಕೆಲವಂಶಗಳನ್ನು ಇಲ್ಲಿ ಸೂಚಿಸುವದು ಜನರಂಜಿತವಾಗಿಂಬಹುದೆಂದು ನೆನಸಿದ್ದೇವೆ. ಮಿ|| ಘೋಷ್ ಎಂಬ ಈ ದೊಡ್ಡಮನುಷ್ಯನು ಕಲ್ಕತಾ ಪಟ್ಟಣದಲ್ಲಿ ಬ್ಯಾಲೇಷ್ಟರಾಗಿರುವದರಿಂದ ಆತನು ತಿಳಿಯದೆ ಮಾತನಾಡತಕ್ಕವನಲ್ಲವೆಂದು ಗೊತ್ತಾಗಬಹುದು. ಆವನು ಯೂರೋಪಿಯರನ್ನೂ ಹಿಂದುಗಳನ್ನೂ ಹೋಲಿಸಿ—ಹಿಂದುಗಳು ತಮ್ಮ ಸ್ವಂತ ಜನರ ಕೈಕೆಳಗೆ ಇರುವದಕ್ಕೆ ಇಷ್ಟವಿಲ್ಲದೆ ಯಾವಾಗಲೂ ಯೂರೋಪಿಯನ್ನರ ಅಧಿಕಾರಕ್ಕೆ ಒಳಗಾಗಿರಬೇಕೆಂದು ಅಪೇಕ್ಷಿಸುತ್ತಾರೆ ಎಂದು ಹೇಳುತ್ತಾನೆ. ಇದು ಸಕಲಜನರಿಗೂ ಅನುಭವಸಿದ್ಧವಾಗಿದೆಯೋಹೊರತು ಬೇರೆ ಅಲ್ಲವು. ಇಂಡಿಯಾದೇಶದ ಯಾವಭಾಗದಲ್ಲಿ ಸಂಚಾರಮಾಡಿದಾಗ್ಯೂ ಪ್ರಜೆಗಳು ಯಾಕೋ ಹಿಂದೂಜನರ ಅಧಿಕಾರವನ್ನು ಅಪೇಕ್ಷಿಸದೆ, ಯೂರೋಪಿಯನ್ನರೇ ತಮ್ಮಮೇಲೆ ಅಧಿಕಾರಮಾಡಬೇಕೆಂದು ಕೋರುತ್ತಾರೆ. " ಓಟ ಎಂಬ ಸಮ್ಮತಿಯನ್ನು ಕೊಡುತ್ತೇವೆಂದು ಯೂರೋಪಿಯನ್ನರು ಯಾವಾಗಾದರೂ ಮಾತುಕೊಟ್ಟರೆ, ಅವರು ಸಾಧಾರಣವಾಗಿ ಆ ಮಾತಿಗೆ ತಪ್ಪುವದಿಲ್ಲ. ಹಿಂದೂಜನರು ಓಟನ್ನು ಕೊಡುವದಾಗಿ ವಾಗ್ದಾನಮಾಡಿದರೂ, ಆವಾಗ್ದಾನ ನೆಚ್ಚಿಕೊಂಡಿರುವದು ಬಹುಕಷ್ಟವಾಗಿರುವದು. ಯೂರೋಪಿಯರ [illegible] ಹೊಂದಿದರೆ, ಅದನ್ನು ಸಂಕೋಲೆಯಂತೆ [illegible], ಅದರಿಂದ ಶೀಘ್ರವಾಗಿ ಬಿಡುಗಡೆಯಾಗುವರೀತಿಯನ್ನು ಹುಡುಕಿ ಹೋಗುತ್ತಾರೆ. ಹಿಂದುಗಳು [illegible] ಸುಲಭವಾದುದು, ಸುಲಭಸಾಧ್ಯವಾಗಿರುವದು ಎಂದರೆ ಹಿಂದೂ ಗೌರವಪದವಿಯೆಂದು ಭಾವಿಸುವರಲ್ಲದೆ ಅದನ್ನು ತೀರಿಸುವದರಲ್ಲಿ ಅಷ್ಟು ಕುತೂಹಲತ್ವವನ್ನು ತೋರಿಸುವದಿಲ್ಲ. ಯೂರೋಪಿಯನ್ನರು ಮಾತಾಡುವದೇ ಸ್ವಲ್ಪಕಡಿಮೆ. ಬಂದಾವರ್ತಿ ಆದರ ಕಾರ್ಯಗಳನ್ನು ಸಾಧಿಸುವದು ಬಹುಹೆಚ್ಚು. ಹಿಂದುಗಳು ವಾಕ್ಚತುರ್ಯವಂತರೇ ವಿನಹ, ಕಾರ್ಯಸಾಧಕರೆನ್ನಿಸಿಕೊಳ್ಳುವದಕ್ಕೆ ಅಷ್ಟುಜೆಕವುಳ್ಳವರಲ್ಲ " ಈಮಾತು ನಿಜವೆಂದು ನಾನಾವೃತ್ತಾಂತಗಳಿಂದ ತೋರುತ್ತದಲ್ಲವೆ ? ಹ್ಯಾಗೆಂದರೆ ವಿದ್ಯಾವಂತರಲ್ಲಿ ಅನೇಕರು ಬೇರೆಬೇರೆ ಸಭೆಗಳಲ್ಲಿ ಬಾಲ್ಯವಿವಾಹವನ್ನು ಕೆಟ್ಟದೆಂದು ವಾದಿಸಿದಾಗ್ಯೂ, ಕಳೆದ ದಸರಾ ಹಬ್ಬದ ಕಾಲದಲ್ಲಿ ನಡೆದ ಪ್ರತಿನಿಧಿಗಳ ಸಭೆಯಲ್ಲಿ ಯಾರೋ ದಿವಾನರವರು ಸೂಚಿಸಿದ ತಿದ್ದುಪಾಟನ್ನು ತಮ್ಮಿಂದಾದ ಮಟ್ಟಿಗೂ ನಿರಾಕರಿಸಿ ನಿಲ್ಲಿಸುವದಕ್ಕೆ ಪ್ರಯತ್ನಿಸಿದರು. ವಾಕ್ದ್ರವ್ಯವನ್ನು ಬಹುವಿತರಣೆಯಿಂದ ಖರ್ಚುಮಾಡಿದಾಗ್ಯೂ ಹಿಂದುಗಳು ತಮ್ಮ ರೂಪಾಯಿಗಳನ್ನು ವೆಚ್ಚಮಾಡುವದೆಂದರೆ ಬಹುಜಾಗ್ರತೆಯಾಗಿ ಹಿಮ್ಮೆಟ್ಟುವರು. ವಿದ್ಯಾವಂತರು ತಾವು ೩೫ ವರುಷ ವಯಸ್ಸಿನವರಾದನಂತರ, ಪ್ರಜಾ ಹಿತಚಿಂತೆಯನ್ನು ಬಿಟ್ಟು, ಸ್ವಪ್ರಯೋಜನಚಿಂತೆಯಲ್ಲಿ ಮಗ್ನರಾಗಿರುವದು ಸಾಧಾರಣವಾಗಿದೆಯಲ್ಲವೆ ? ಸರ್ಕಾರದ ಉದ್ಯೋಗಸ್ಥರನ್ನು ನೋಡಿದರೆ ಅವರು ತಮ್ಮ ತಮ್ಮ ಕೆಲಸವನ್ನು ನೆರವೇರಿಸಿ, ಭಾರಿ ಸಂಬಳಗಳನ್ನು ತಿನ್ನುವದರಲ್ಲಿಯೂ, ಶೀಘ್ರವಾಗಿ ಬಡತಿಯನ್ನು ಹೊಂದುವದಕ್ಕೆ ಪ್ರಯತ್ನಮಾಡುವದರಲ್ಲಿಯೂ ಕಾಲಹರಣ ಮಾಡುವರೇಹೊರತು, ಜನೋಪಕಾರ ಕಾರ್ಯಗಳನ್ನು ಕುರಿತು ಚಿಂತಿಸುವದರಲ್ಲಿಯೂ, ನಡಿಸುವದರಲ್ಲಿಯೂ, ಸಾಂಸರ್ಗಿಕವಾದ ತಿದ್ದುಪಾಟುಗಳಲ್ಲಿ ಬೆರತು ಪ್ರೋತ್ಸಾಹಪಡಿಸುವದರಲ್ಲಿಯೂ ತಮ್ಮ ಕುತೂಹಲವನ್ನು ತೋರಿಸುವದು ಅಪರೂಪ. ಸರ್ಕಾರದ ಉದ್ಯೋಗವನ್ನು ಪಡೆಯದೆ ಇರುವಂತವರು ತಮ್ಮ ಯೋಗ್ಯತಾನುಸಾರವಾಗಿ ಸರ್ಕಾರದ ಕೆಲಸವನ್ನು ಪಡೆಯಬೇಕೆಂದು ಯಾವಾಗಲೂ ಎದುರುನೋಡುತ್ತಾ ಇದ್ದುಕೊಂಡು ಜನೋಪಕಾರವೃತ್ತಿಯನ್ನು ಸಿದ್ಧಾಂಗವಾಗಿ ಆಚರಿಸದೆ ಮರೆತು ಇರುತ್ತಾರಲ್ಲ! ವಿಲಾಯತಿಯಲ್ಲಿ ಸ್ವಪ್ರಯೋಜನವನ್ನು ಸ್ವಲ್ಪವಾದರೂ ದೃಷ್ಟಿಯಿಟ್ಟು ನೋಡದೆ, ತಿನ್ನುವದಕ್ಕೆ ಸಾಕಾದಷ್ಟು ದೊರೆತರೆ, ಮತ್ತೇನೂ ಬೇಕಾದ್ದು ಬೇಡವೆಂದುಕೊಂಡು, ತಮ್ಮ ದೇಶದಲ್ಲಿರುವ ಎಲ್ಲಾ ಅಕ್ರಮಗಳನ್ನೂ, ದುಷ್ಪ್ರವೃತ್ತಿಗಳನ್ನೂ, ದುರಾಚಾರಗಳನ್ನೂ ನಿಲ್ಲಿಸುವದರಲ್ಲೇ ಕಾಲಹರಣ ಮಾಡುವವರು ಪ್ರತಿಪಟ್ಟಣದಲ್ಲಿಯೂ ನೂರಾರು ಮಂದಿ ಇರುವರು. ಸಾಧಾರಣವಾಗಿ ಒಬ್ಬೊಬ್ಬ ಮನುಷ್ಯನು ತನ್ನ ಜೀವನವನ್ನು ನಡಿಸುವದಲ್ಲದೆ ಜನೋಪಕಾರಕ್ಕಾಗಿ ಯಾವದಾದರೊಂದು ವಿಶೇಷವಾದ ಕೆಲಸವನ್ನು ಹಿಡಿದು ಮಾಡುವದಕ್ಕೆ ಪ್ರಯತ್ನಿಸುತ್ತಾ ಇರುವನು. ಕುಡಿಯುವ ದುರಭ್ಯಾಸವನ್ನು ನಿಲ್ಲಿಸುವದಕ್ಕೂ, ಬಡಸ್ಥಿತಿಯಲ್ಲಿರುವವರಿಗೆ ವಿದ್ಯೆಯನ್ನು ಕಲಿಸಿ ಅವರನ್ನು ಮುಂದಕ್ಕೆ ತರುವದಕ್ಕೂ, ಬೇರೆಬೇರೆ ಕಸಬುದಾರರಿಗೆ ನ್ಯಾಯವಾದ ಕೂಲಿಯನ್ನು ಗೊತ್ತುಮಾಡಿಸಿಕೊಡುವದಕ್ಕೂ, ರೋಗಾದಿಗಳಿಂದ ಪೀಡಿತರಾಗಿ ನರಳುತ್ತಿರುವವರಿಗೆ ಅನುಕೂಲ್ಯಗಳನ್ನು ಏರ್ಪಡಿಸಿ ಕೊಡುವದಕ್ಕೂ, ಕಠಿಣತರವಾದ ಕೆಲಸಗಳನ್ನು ಮಾಡುವಂತವರಿಗೆ, ಕೆಲಸನಡಿಸುವಕಾಲವನ್ನು ಕಡಮೆಮಾಡುವದಕ್ಕೂ ಬೇರೆಬೇರೆ ಸಂಘಗಳು ವಿಲಾಯತಿಯಲ್ಲಿ ಏರ್ಪಾಟಾಗಿವೆ. ಈ ಸಂಘಗಳ ಉದ್ದೇಶವನ್ನು ಸಿದ್ಧಿಗೆತರುವದಕ್ಕಾಗಿ ಇಂಗ್ಲಿಷ್ ಜನಗಳಲ್ಲಿ ಸ್ವಲ್ಪ ಹೆಚ್ಚುಕಡಮೆ ಒಬ್ಬೊಬ್ಬರು ತಮ್ಮ ಆಸ್ತಿಯನ್ನೂ, ತಮ್ಮ ಕಾಲವನ್ನೂ, ತಮ್ಮ ಬುದ್ಧಿಯನ್ನೂ, ತಮ್ಮದೇಹದ ಬಲವನ್ನೂ ಸಂತೋಷದಿಂದ ವೆಚ್ಚಮಾಡಿ, ಜನೋಪಕಾರವೃತ್ತಿಯನ್ನು ನಡಿಸುವದರಲ್ಲಿ ಅಭ್ಯಾಸವುಳ್ಳವರಾಗಿರುತ್ತಾರೆ. ಚಿಕ್ಕ ಪ್ರಾಯದವರೂ ದೊಡ್ಡ ದೊಡ್ಡ ಉದ್ಯೋಗಸ್ಥರೂ ಅಲ್ಲದೆ ಹೆಂಗಸರು ಕೂಡ ಇಂಥಾ ಕೆಲಸಗಳಿಗೆ ಆಸಕ್ತಿಪೂರ್ವಕವಾಗಿ [illegible] ನಾಗಿರುತ್ತಾರೆ. ಹೀಗಿರಲಾಗಿ ಯೂರೋಪಿಯರಿಗೂ ಹಿಂದುಗಳಿಗೂ ಇಷ್ಟು ವ್ಯತ್ಯಾಸವಿ[illegible] ತಕ್ಕ ಕಾರಣಗಳುಂಟಲ್ಲವೆ ? [illegible] [illegible] ವ್ಯತ್ಯಾಸ [illegible], ದುರಭಿಮಾನಗಳೂ ಇರುವದೇ [illegible] ಇಂಥವರಲ್ಲಿ ಒಬ್ಬೊಬ್ಬ ಸೇಕು ಹೆಸರು [illegible] ಹೇಳಬಹುದು. ಆದರೆ ಒಟ್ಟಾಗಿ [illegible] ಜನರನ್ನು ನೋಡಿದರೆ, [illegible] ವೃತ್ತಿಯೆ? ಉಪಕಾರವೂ ಮತ್ತು ಜನೋಪಕಾರಸಕ್ತಿಯು ಬಹುಹೆಚ್ಚು ಎಂದು ಹೇಳುವುದು ನ್ಯಾಯವಾಗಿದೆ. ಆಜನರು ಹೀಗೆ ಪರೋಪಕಾರಿಗಳಾಗಿರುವದಕ್ಕೆ ಮುಖ್ಯಕಾರಣವೇನೆಂದು ವಿಚಾರಿಸಿ ನೋಡಿದರೆ ನಮ್ಮ ಮಹಾರಾಜ್ಞಿಯವರೇ ಅದಕ್ಕೆ ಸಮಾಧಾನವನ್ನು ಹೇಳುತ್ತಾರೆ. ಒಂದಾನೊಂದು ಕಾಲದಲ್ಲಿ ಅವರು ಅನ್ಯದೇಶೀಯರು ಬಂದಿರುವದನ್ನು ನೋಡಿ, ಅವರಿಗೆ ಬೈಬಿಲ ಎಂಬ ವೇದವನ್ನು ಕೊಟ್ಟು—" ನಮ್ಮ ರಾಜ್ಯದ ವಿಶೇಷತ್ವಕ್ಕೆ ಈ ವೇದವೇ ಮೂಲಕಾರಣವಾಗಿದೆ. ಇದರಲ್ಲಿರುವ ಉಪದೇಶವನ್ನು ಅಂಗೀಕರಿಸಿ ಅನುಸರಿಸುವದರಿಂದಲೂ, ಕ್ರೀಸ್ತಸ್ವಾಮಿಯವರು ತೋರಿಸಿದ ಮಾರ್ಗವನ್ನು ಹಿಡಿದು ನಡೆಯುವದರಿಂದಲೂ ನಮ್ಮ ಇಂಗ್ಲಿಷ್ ಜನರು ಈ ಶ್ರೇಷ್ಠತೆಗೆ ಬಂದಿರುತ್ತಾರೆ " ಎಂಬದಾಗಿ ಸಷ್ಟವಾಗಿಯೂ, ಖಂಡಿತವಾಗಿಯೂ ಅಪ್ಪಣೆ ಕೊಟ್ಟರು. ವಾಚಕರು ಈ ಮಾತನ್ನು ಕುರಿತು ಯೋಚಿಸಿ, ಈ ವೇದವನ್ನು ಗಮನದಿಂದ ಪರಾಂಬರಿಸಿ, ಅದರಿಂದ ಸತ್ಯಮಾರ್ಗವನ್ನು ತಿಳಿದುಕೊಳ್ಳಬೇಕೆಂದು ನಾವು ಕೋರುವವರಾಗಿದ್ದೇವೆ.

ಕ್ರಿಸ್ಮಸ ಹಬ್ಬ.

ಬರುವಸೋಮವಾರ ಕ್ರೀಸ್ತಭಕ್ತರು ಲೋಕದಲ್ಲೆಲ್ಲಾ ಕ್ರಿಸ್ಮಸಹಬ್ಬವನ್ನು ಆಚರಿಸುತ್ತಾರೆಂಬುವದು ನಮ್ಮ ವಾಚಕರಿಗೆ ವೇದ್ಯವಾಗಿದೆಯಷ್ಟೆ. ಕ್ರೀಸ್ತಸ್ವಾಮಿಯವರು ಈ ಲೋಕದಲ್ಲಿ ಅವತಾರವೆತ್ತಿದರೆಂಬುವದನ್ನು ಸೂಚಿಸುವದಕ್ಕೆ ಈ ಹಬ್ಬವು ಸ್ಥಾಪನೆಯಾಯಿತು. ಕ್ರೈಸ್ತರೆಲ್ಲರೂ ಅದನ್ನು ಜ್ಞಾಪಕಕ್ಕೆ ತಂದುಕೊಂಡು, ತಮ್ಮ ತಮ್ಮ ಗುಡಿಗಳಲ್ಲಿ ಗುಂಪುಗುಂಪಾಗಿಕೂಡಿ ಕ್ರಿಸ್ತನ ಚರಿತ್ರೆ ಪಾರಾಯಣವನ್ನು ಕೇಳಿ ಆತನನ್ನು ಧ್ಯಾನಿಸುತ್ತಾ ಭಜಿಸುತ್ತಾ ಇರುವದಲ್ಲದೆ ತಮ್ಮ ತಮ್ಮ ಶಕ್ತ್ಯಾನುಸಾರವಾಗಿ ಆತನ ಹೆಸರನ್ನು ಹೇಳಿಕೊಂಡು ಧರ್ಮಾರ್ಥದಿಂದ ಬಡಬಗ್ಗರಿಗೆ ಅನ್ನವಸ್ತ್ರಗಳನ್ನು ಚಿಕ್ಕ ಮಕ್ಕಳಿಗೆ ಆಟದಸಾಮಾನುಗಳನ್ನು ವಿಶೇಷವಾಗಿ ಕೊಟ್ಟು ಆನಂದಯುಕ್ತರಾಗಿರುವರು

ಕ್ರೀಸ್ತನು ಎತ್ತಿದ ಅವತಾರವನ್ನು ಹಿಂದುಗಳ ದಶಾವತಾರಗಳನ್ನೂ ಹೋಲಿಸಿನೋಡಿದರೆ ಒಂದಕ್ಕೊಂದಕ್ಕೆ ಬಹಳ ಹೆಚ್ಚುಕಡಮೆ ಇರುವದೆಂದು ತೋರಿಬರುವದು ಈ ಬೇರೆ ಬೇರೆ ಅವತಾರಗಳ ವಿಧಾನವನ್ನಾಗಲಿ ಗುರಿಯನ್ನಾಗಲಿ ಪರೀಕ್ಷಿಸಿದರೆ ಅವುಗಳಾಂತರ ವ್ಯತ್ಯಾಸವುಂಟೆಂಬುವದರಲ್ಲಿ ಯಾವ ಸಂದೇಹವೂ ಇಲ್ಲ. ಹ್ಯಾಗೆಂದರೆ—ದಶಾವತಾರಗಳಲ್ಲಿ ದೇವರುಗಳು ಮಾನುಷ ಆಕೃತಿಯನ್ನಲ್ಲದೆ ಮತ್ಸ್ಯ ಕೂರ್ಮ ವರಾಹ ನಾರಸಿಂಹ ವಾಮನ ಮುಂತಾದ ಬೇರೆಬೇರೆ ರೂಪಗಳನ್ನು ತಾಳಿಕೊಂಡು ಮನುಷ್ಯರಲ್ಲಿ ವಿಸ್ಮಯವನ್ನಾಗಲಿ ಭಯವನ್ನಾಗಲಿ ಉಂಟುಮಾಡಿದರು. ದೇವರುಗಳು ಇಂಥಾ ರೂಪಗಳನ್ನು ಧರಿಸುವದಕ್ಕೆ ವಿದ್ವಾಂಸರಿಗೆ ತಕ್ಕ ಕಾರಣವು ಇನ್ನೂ ಕಾಣಿಸಲಿಲ್ಲ. ಮನುಷ್ಯರ ಹಿತಕ್ಕೋಸ್ಕರವಾಗಿ ದೇವರುಗಳು ಅವತಾರವನ್ನೆತ್ತಿರಬೇಕಾದರೆ ಮನುಷ್ಯರ ಸ್ಥಿತಿಗಿಂತ ಹೀನವಾದಸ್ಥಿತಿಯನ್ನು ಸೇರುವದುಂಟೆ? ಭಗವಂತನು ನರಾವತಾರವನ್ನು ಎತ್ತುವದಕ್ಕೆ ಅನೇಕ ಕಾರಣಗಳುಂಟು. ಎಲ್ಲಸೃಷ್ಟಿಗಳಿಗಿಂತ ಮನುಷ್ಯನು ಹೆಚ್ಚಾಗಿ ಭಗವಂತನ ಸುಲಕ್ಷಣಗಳನ್ನು ತೋರಿಸುವ ಶಕ್ತನಾಗಿದ್ದಾನೆ. ಬೇರೆ ಸೃಷ್ಟಿಗಳಲ್ಲಿ ಬುದ್ಧಿ ಕುಶಲತೆಯಾಗಲಿ, ಚಮತ್ಕಾರವಾಗಲಿ, ಜ್ಞಾನವಾಗಲಿ ಕಡಿಮೆಯಾಗಿರುವದರಿಂದ ಭಗವಂತನು ಅವುಗಳ ರೂಪವನ್ನು ಧರಿಸಿಕೊಂಡರೂ ಆತನ ಮಹಿಮೆಯು ಅವುಗಳ ಮೂಲಕ ಯಾರಿಗೂ ಅಷ್ಟು ಸ್ಪಷ್ಟವಾಗಿ ತೋರ್ಪಡಿಸಿಕೊಳ್ಳುವದಿಲ್ಲ. ಆದರೆ ಭಗವಂತನು ನರರೂಪವನ್ನು ತಾಳಿಕೊಂಡು ಯೇಸುಕ್ರೀಸ್ತನೆಂಬ ಹೆಸರನ್ನು ಪಡೆದು ಸುಸ್ಪಷ್ಟವಾಗಿ ಇಂಥವನೆ ತಮ್ಮ ಮನುಷ್ಯರು ಇಂಥವರಾಗಬೇಕೆಂತಲೂ ಕ್ರೀಸ್ತನ ನಡೆನುಡಿಗಳಿಂದ ಸ್ಪಷ್ಟವಾಗಿ ತೋರಿಸಿದನು

ಯೇಸುಕ್ರೀಸ್ತನು ಮನುಷ್ಯನಾಗಿ ಕಾಣಿಸಿಕೊಂಡದ್ದಲ್ಲದೆ ಬಡಮನುಷ್ಯನಾಗಿ ಕಾಣಿಸಿಕೊಂಡದ್ದು ಬಹು ಆಶ್ಚರ್ಯವಾಗಿದೆ ಆತನ ಮನೆಯವರು ಜೀವನಕ್ಕಾಗಿ ಬಡುಗ್ಯತನಾದ ಹಣಹೀನರಾಗಿದ್ದರು ಆತನು ಒಂದು ಅರಮನೆಯಲ್ಲಿ ಕಾಣಿಸಿಕೊಳ್ಳದೆ ಕೊಟ್ಟಿಗೆಯಲ್ಲಿಯೇ ಹುಟ್ಟಿದನು ಜನರು ಆತನ ತಾಯಿಯವರನ್ನು ನೋಡಿ ಯಾರೋ ಒಬ್ಬ ಬಡಹೆಂಗಸೆಂದು ತಿಳುಕೊಂಡರು ಆತನ ಜನನಕ್ಕಾಗಿ ಛತ್ರಗಳು ತೋಪುಗಳನ್ನು ಹಾಕಲಿಲ್ಲ ಆದಾಗ್ಯೂ ಬಹುಮಂದಿ ದೇವದೂತರು ಅಂತರಿಕ್ಷದಲ್ಲಿ ಕಾಣಿಸಿಕೊಂಡು ಈಗ ಹುಟ್ಟಿರುವವನು ಅರಸುಗಳಿಗಿಂತಲೂ ಮಹಾಜ್ಞಾನಿಗಳಿಗಿಂತಲೂ ಶ್ರೇಷ್ಠನೂ ಆತನು ಮೋಕ್ಷಪ್ರದನೆಯೂ ಮುಕ್ತಿದಾಯಕನೂ ಪಾಪಿಗಳನ್ನು ರಕ್ಷಿಸುವವನೂ ಆಗಿರುತ್ತಾನೆಂದು ಗಾನರೂಪವಾಗಿಯೂ ಕರ್ಣಾನಂದಕರವಾಗಿಯೂ ತಿಳಿಸಿದರು ಇದು ಮಾತ್ರವಲ್ಲದೆ ಪೂರ್ವದಿಕ್ಕಿನಿಂದ ವಿದ್ಯಾವಂತರೂ ಜ್ಞಾನವಂತರೂ ಹೊಸದಾದ ಒಂದು ನಕ್ಷತ್ರವನ್ನು ಕಂಡು ಜೋಯಿಸನರೀತಿಯು ಇವತ್ತು ನರರೂಪವಾಗಿ ಲೋಕದಲ್ಲಿ ಕಾಣಿಸಿಕೊಂಡು ಬಂದ ಯೇಸುಕ್ರೀಸ್ತನನ್ನು ಹುಡುಕುವದಕ್ಕೆ ಹೊರಟು ದೂರಪ್ರಯಾಣ ಮಾಡಿಕೊಂಡು ಕ್ರಮೇಣವಾಗಿ ಆ ಕೂಸು ಇದ್ದ ಸ್ಥಿತಿಯನ್ನು ಹುಡುಕಿ ಈತನನ್ನು ಮುಕ್ತಿದಾಯಕನೆಂದು ಭಜಿಸಿ ಕಾಣಿಕೆಯಾಗಿ ತಂದಿದ್ದ ತಮ್ಮ ಚಿನ್ನ ಧೂಪ ಪರಿಮಳದ್ರವ್ಯಗಳನ್ನು ಕಾಣಿಕೆಯಾಗಿ ಅರ್ಪಿಸಿದರು ಹೀಗಾದರೆ ಕ್ರೀಸ್ತನು ಬಡವನಾಗಿ ಈ ಲೋಕದಲ್ಲಿ ಕಾಣಿಸಿಕೊಂಡರೂ ಆತನಲ್ಲಿ ಸಹಿತ ಸಂಗತಿಗಳಿಂದ ಆತನ ಶ್ರೇಷ್ಠತ್ವವೂ ದೈವತ್ವವೂ ನಮಗೆ ಸ್ಪಷ್ಟವಾಗಿ ತಿಳಿದು ಬರುತ್ತದೆ ಆತನು ಲೋಕದಲ್ಲಿ ಕೀರ್ತಿಯನ್ನಾಗಲಿ ಐಶ್ವರ್ಯವನ್ನಾಗಲಿ ಸಂಪಾದಿಸುವದಕ್ಕೆ ಪ್ರಯತ್ನಿಸದೆ ಮಹಾ ಪರಮಾತ್ಮನಂತೆ ಸುಲಕ್ಷಣವೂ ಸದ್ವೃತ್ತಿಯೂ ಅತ್ಯಮೂಲ್ಯವಾದದ್ದೆಂದು ಸಿದ್ಧಾಂತಪಡಿಸಿದರು

ಕ್ರೀಸ್ತಸ್ವಾಮಿಯವರ ಗುರಿಯನ್ನು ನಾವು ನೋಡಿದರೆ ದಶಾವತಾರಗಳ ಗುರಿಗಿಂತಲೂ ವಿಶೇಷವಾದದ್ದೆಂದು ನಮಗೆ ತೋರುವದಿಲ್ಲವೆ? ಸಾಧಾರಣವಾಗಿ ರಾಕ್ಷಸರನ್ನಾಗಲಿ ದುರ್ಮನುಷ್ಯರನ್ನಾಗಲಿ ಕೊಲ್ಲುವದಕ್ಕೆ ಹಿಂದೂ ದೇವರುಗಳು ಅವತಾರವನ್ನೆತ್ತಿದರು ಆದರೆ ಯೇಸು ಕ್ರೀಸ್ತಸ್ವಾಮಿಯವರು ಯಾರನ್ನಾಗಲಿ ಕೊಲ್ಲಬೇಕೆಂದು ಬರಲಿಲ್ಲ ಮನುಷ್ಯರನ್ನು ಕೆಡಿಸುವ ಪಾಪಕೃತ್ಯಗಳಿಂದಲೂ ಪಾಪಸ್ವಭಾವದಿಂದಲೂ ಅವರನ್ನು ಬಿಡುಗಡೆ ಮಾಡುವದಕ್ಕಾಗಿಯೇ ಬಂದರು ದುಷ್ಟರನ್ನು ನಿಗ್ರಹಿಸಿ ಶಿಷ್ಟರನ್ನು ಪರಿಪಾಲಿಸುವದು ಹಿಂದೂದೇವರುಗಳ ಉದ್ದೇಶವಾಗಿತ್ತು ಆದರೆ ಕ್ರೀಸ್ತಸ್ವಾಮಿಯವರು ಅದಕ್ಕಿಂತಲೂ ವಿಶೇಷವಾದ ಗುರಿಯನ್ನಿಟ್ಟುಕೊಂಡು ದುಷ್ಟರನ್ನು ಶಿಷ್ಟರನ್ನಾಗಿ ಮಾಡಬೇಕೆಂದು ಭೂಲೋಕದಲ್ಲಿ ಹುಟ್ಟಿದರು

ಹೀಗಿರಲಾಗಿ ನಮ್ಮ ವಾಚಕರೆಲ್ಲರೂ ಕ್ರೀಸ್ತನ ಜನನಕ್ಕಾಗಿ ಸಂತೋಷಿಸಿ ಆತನು ಮಾಡಿದ ಎಲ್ಲಾ ಉಪಕಾರಗಳನ್ನೂ ತಿಳಿದು ಆತನು ಒಂದು ಜಾತಿಗೆಮಾತ್ರ ಗುರುವಾಗಿರದೆ ಎಲ್ಲಾ ದೇಶದವರಿಗೂ ಎಲ್ಲಾ ಭಾಷೆಯವರಿಗೂ ಎಲ್ಲಾ ಯುಗಗಳಿಗೂ ದಿವ್ಯ ಸದ್ಗುರುವಾಗಿದ್ದಾನೆಂದು ಭಾವಿಸಿ ಆತನನ್ನು ವಿಶೇಷವಾಗಿ ಈ ಕಾಲದಲ್ಲಿ ಧ್ಯಾನಿಸಿ ಆತನಿಂದ ದೈವಜ್ಞಾನವನ್ನು ಹೊಂದಬೇಕೆಂದು ನಾವು ಅಪೇಕ್ಷಿಸಿ ಅವರೆಲ್ಲರಿಗೂ ಸಂತೋಷಪೂರ್ವಕವಾಗಿ ವಂದನೆಮಾಡುತ್ತೇವೆ

ಮಿ|| ಭಾಭಾಸಾಹೇಬರವರ ಉಪನ್ಯಾಸ.

ಕಳೆದ ಶುಕ್ರವಾರ ಸಾಯಂಕಾಲ ಇಲ್ಲಿನ ವಿಂಡ್ಸರ್ ಹೈಸ್ಕೂಲಿನ ಉಪಾಧ್ಯಾಯರುಗಳೂ, ವಿದ್ಯಾರ್ಥಿಗಳೂ ತಮಗೆ ಹೊರಟಿರುವ ತಮ್ಮ ಹೆಡ್‌ಮಾಸ್ಟರ ರವರೆಂಡ್ ಹೋಲ್ಡ್‌ಸ್ವರ್ಥ ಎಂ ಎ ಸಾಹೇಬರವರಿಗೆ ವಿಜ್ಞಾಪನಾ ಪತ್ರಿಕೆಯನ್ನು ಒಪ್ಪಿಸಿದರು. ಆ ಕಾಲದಲ್ಲಿ ಅಗ್ರಾಸನವನ್ನಲಂಕರಿಸಿದ್ದ ಮಿ|| ಭಾಭಾ ಸಾಹೇಬರವರು ಅದ್ಯಾಗ ಕೊಡಿಸಿದ ಕೆಲವು ಸಂಗತಿಗಳನ್ನು ನಮ್ಮ ವಾಚಕರಿಗೆ ತಿಳಿಸಬೇಕೆಂದು ಪ್ರಯತ್ನಪಟ್ಟಿರುವೆವು

ಅಯ್ಯಾ ಸಭಾಸದರೇ, ಮಿ|| ಹೋಲ್ಡ್‌ಸ್ವರ್ಥ ಸಾಹೇಬರವರು ಈ ಹೈಸ್ಕೂಲಿನಲ್ಲಿ ಕಳೆದ ೭ ವರ್ಷಗಳಿಂದಲೂ ಬಹು ಮಾತುವರ್ಜಿಯಿಂದ ಕೆಲಸಗಳನ್ನು ಮಾಡಿ ಈಗ ವಿಶ್ರಾಂತಿಯನ್ನು ಪಡೆಯಲು ಸೀಮೆಗೆ ಪ್ರಯಾಣ ಮಾಡುವರು. ಅದಲ್ಲಿ ಅವರಿಗೆ ಸನ್ಮಾನಮಾಡಲು ಈ ದಿನ ನಾವುಗಳೆಲ್ಲರೂ ಇಲ್ಲಿ ಸೇರಿ ಇರುವೆವು. ಇಂಥಾ ಕಾಲದಲ್ಲಿ ನಾನು ಈ ಸ್ಥಾನದಲ್ಲಿ ಇರುವ ವಿಷಯದಲ್ಲಿ ನನಗುಂಟಾಗಿರುವ ವಿಶೇಷ ಸಂತೋಷಕ್ಕೆ ಈ ಸ್ಕೂಲಿನ ಉಪಾಧ್ಯಾಯರೂ ಮತ್ತು ವಿದ್ಯಾರ್ಥಿಗಳೂ ಕಾರಣರಾಗಿರುವರು. ಮಿ|| ಹೋಲ್ಡ್‌ಸ್ವರ್ಥ ಸಾಹೇಬರವರು ಈ ಸ್ಕೂಲಿನ ಭಾರವನ್ನು ವಹಿಸಿದಕಾಲದಲ್ಲಿ ನಾನು ಇಲ್ಲಿನ ಒಂದು ಮುಖ್ಯ ವಿದ್ಯಾಶಾಲೆಯಲ್ಲಿ ಮುಖಂಡನಾಗಿದ್ದೆನು. ಆ ಕಾಲದಲ್ಲಿ ನಮ್ಮಿಬ್ಬರಿಗೂ ನೆಲಸಿದ್ದ ಸ್ನೇಹಭಾವವನ್ನು ಈಗ ಪ್ರಕಾಶಪಡಿಸಲು ಬಹಳವಾಗಿ ಸಂತೋಷಿಸುತ್ತೇನೆ. ಈ ಹೈಸ್ಕೂಲು ಈ ಸೀಮೆಯ ಎಲ್ಲಾ ಹೈಸ್ಕೂಲುಗಳಲ್ಲಿಯೂ ಗೌರವಸ್ಥಾನವನ್ನೇ ಪಡೆದು ಇರುತ್ತ ಹಿಂದೆ ಮಿ|| ಗಲ್ಲಿಫರ್ಡ್ ಸಾಹೇಬರವರ ಕೈಕೆಳಗಿದ್ದ ಕಾಲದಲ್ಲಿ ಬಹು ಉತ್ಕೃಷ್ಟಸ್ಥಿತಿಗೆ ಬಂದಿತ್ತು. ಮಿ|| ಹೋಲ್ಡ್‌ಸ್ವರ್ಥ ಸಾಹೇಬರವರ ಕೈಕೆಳಗೆ ಬಂದ ಕಾಲದಿಂದಲೂ ಆ ಉತ್ಕೃಷ್ಟಸ್ಥಿತಿಯು ದಿನಕ್ರಮದಲ್ಲಿ ಬಹಳವಾಗಿ ಅಭಿವೃದ್ಧಿಗೆ ಬಂದಿದೆ. ಯೇ ಹೊರತು ಮತ್ತೆ ಇಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ಈಚೆಗೆ ಹೆಚ್ಚಿ ಇದೆ. ಈ ಸ್ಕೂಲಿನಲ್ಲಿ ಓದುವಷ್ಟು ಬಾಲಕರು ಈ ಸೀಮೆಯ ಮತ್ತಾವ ಹೈಸ್ಕೂಲಿನಲ್ಲಿ ಕೂಡ ಇಲ್ಲ. ಅದ್ದರಿಂದ ಮೊದಲಿದ್ದ ಕಟ್ಟಡವು ಸಾಕಾಗದೆ ಹೋಯಿತೆಂದು ತಿಳಿದು ಅದಕ್ಕೆ ಸೇರಿದಂತೆ ಹೊಸ ಕೊಠಡಿಗಳನ್ನು ಕಟ್ಟಿಸಬೇಕಾಗಿ ಬಂತು. ಮಿ|| ಹೋಲ್ಡ್‌ಸ್ವರ್ಥ ಸಾಹೇಬರವರು ಕಳೆದ ೧೮೮೬ ನೇ ಇಸವಿಯಲ್ಲಿ ಈ ಸ್ಕೂಲಿನ ಭಾರವನ್ನು ವಹಿಸಿದ ಕಾಲದಲ್ಲಿ ೩೬೫ ಮಂದಿ ವಿದ್ಯಾರ್ಥಿಗಳು ಮಾತ್ರ ಇದ್ದರು. ಈಗ ೭೩೩ ಮಂದಿ ವಿದ್ಯಾರ್ಥಿಗಳು ಓದುತ್ತಲಿದ್ದಾರೆಂತಲೂ, ೧೮೮೬ ರಲ್ಲಿ ಸ್ಕೂಲಿನ ಫೀಜು ೩೫೦ ರೂಪಾಯಿ ಇದ್ದದ್ದು ೧೮೯೩ ರಲ್ಲಿ ೧೬೦೭ ರೂಪಾಯಿಗಳಾಗಿವೆ ಎಂತಲೂ ನಿಮ್ಮಗಳಿಗೆ ತಿಳಿಸಲು ಬಹಳವಾಗಿ ಸಂತೋಷಿಸುತ್ತೇನೆ. ಈ ಸ್ಕೂಲಿನಲ್ಲಿ ಉತ್ಪತ್ತಿಯಾಗುವಷ್ಟು ಫೀಜು ಸಂಸ್ಥಾನದ ಮತ್ತಾವ ಸ್ಕೂಲಿನಲ್ಲೂ ಆಗುವದಿಲ್ಲ. ಮೆಟ್ರಿಕ್ಯುಲೇಷನ್ ಮತ್ತು ಲೋವರಸೆಕಂಡರಿ ಪರೀಕ್ಷೆಗಳಲ್ಲಿ ಈ ಸ್ಕೂಲಿನಿಂದ ತೇರ್ಗಡೆಯಾಗುವಷ್ಟು ಮಂದಿ ಮತ್ತಾವ ಹೈಸ್ಕೂಲಿನಲ್ಲೂ ಆಗಿ ಇಲ್ಲವಾದ್ದರಿಂದ ಸಂಸ್ಥಾನದ ಹೈಸ್ಕೂಲುಗಳಲ್ಲೆಲ್ಲಾ ಇದೇ ಮೊದಲನೇ ದರ್ಜೆಯನ್ನು ಪಡೆದಿರುತ್ತದೆ. ಕಳೆದ ೭ ವರ್ಷಗಳಲ್ಲಿ ಈ ಸ್ಕೂಲಿನಲ್ಲಿ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ೧೧೬ ಮಂದಿ ವಿದ್ಯಾರ್ಥಿಗಳು ತೇರ್ಗಡೆ ಹೊಂದಿದರು. ಈ ಪೈಕಿ ೧೦ ಮಂದಿ ಮೊದಲನೇ ತರಗತಿಯಲ್ಲಿ ಪ್ಯಾಸಾದರು. ಕಳೆದ ವರ್ಷದ ಮೆಟ್ರಿಕ್ಯುಲೇಷನ್ ಪರೀಕ್ಷೆಯ ಪ್ರಶ್ನೆಗಳು ಬಹು ಕಠಿಣವಾಗಿದ್ದವು. ಅದರಿಂದ ಈ ಸಂಸ್ಥಾನದಲ್ಲಿ ಯಾವಯಾವ ಸ್ಕೂಲಿನಲ್ಲಿ ಬೋಧನಾಕ್ರಮಗಳು ಚನ್ನಾಗಿವೆ ಎಂದು ಆ ವರ್ಷದ ಪರೀಕ್ಷೆಯ ಫಲಿತಾಂಶದಿಂದ ಚನ್ನಾಗಿ ಗೊತ್ತಾಯಿತು. ಆಗಲೂ ಈ ಸ್ಕೂಲಿನಿಂದ ೧೧ ಮಂದಿ ವಿದ್ಯಾರ್ಥಿಗಳು ತೇರ್ಗಡೆ ಹೊಂದಿರುತ್ತಾರೆ. ಇಷ್ಟು ಚನ್ನಾಗಿ ಮತ್ತಾವ ಸ್ಕೂಲಿನಿಂದಲೂ ವಿದ್ಯಾರ್ಥಿಗಳು ಪ್ಯಾಸಾಗಲಿಲ್ಲ. ಅದ್ದರಿಂದ ಈ ಸ್ಕೂಲಿನ ಬೋಧನಾಕ್ರಮಗಳೂ ಕಟ್ಟುನಿಟ್ಟುಗಳೂ ಅತ್ಯಂತ ಸ್ತೋತ್ರಾರ್ಹವಾದವುಗಳೇ ಸರಿ. ಈ ಸ್ಕೂಲನ್ನು ಇಷ್ಟು ಉತ್ತಮಸ್ಥಿತಿಗೆ ತಂದು ಇರುವದಕ್ಕಾಗಿ ಮಿ|| ಹೋಲ್ಡ್‌ಸ್ವರ್ಥ ಸಾಹೇಬರನ್ನು ಎಷ್ಟು ಸ್ತುತಿಸಿದರೂ ಸಾಲದ್ದಾಗಿದೆ. ಕೆಲವು ವರ್ಷಗಳಲ್ಲಿ ಈ ಸ್ಕೂಲಿನಿಂದ ಪ್ಯಾಸಾದ ವಿದ್ಯಾರ್ಥಿಗಳ ಸಂಖ್ಯೆಯನ್ನು ನೋಡಿ ಇತರ ಹೆಡ್‌ಮಾಸ್ತರುಗಳು ಬಹು ಹೊಟ್ಟೆಕಿಚ್ಚುಪಡುತ್ತಿದ್ದದನ್ನು ನಾನು ಬಲ್ಲೆನು. ಆದರೆ ಇಷ್ಟಕ್ಕೆಲ್ಲಾ ಕಾರಣರಾದ ಮಿ|| ಹೋಲ್ಡ್‌ಸ್ವರ್ಥ ಸಾಹೇಬರವರು ಆಟಗಳಲ್ಲಿಯೂ, ವಿದ್ಯಾವ್ಯಾಸಂಗದಲ್ಲಿಯೂ ತಮ್ಮ ವಿದ್ಯಾರ್ಥಿಗಳ ಜೊತೆಯಲ್ಲಿ ತಾವೂ ಬೆರತು, ಅವರವರ ಕಷ್ಟಸುಖಗಳನ್ನು ತಿಳಿದು ಅವರವರಿಗೆ ತಕ್ಕ ಬುದ್ಧಿಮಾರ್ಗಗಳನ್ನು ಹೇಳುತ್ತಲೂ ಅವರನ್ನು ವಿದ್ಯಾವಂತರನ್ನಾಗಿ ಮಾಡುವದರಲ್ಲೇ ಅಲ್ಲದೆ ಸನ್ಮಾರ್ಗಪ್ರವರ್ತಕರನ್ನಾಗಿಯೂ ಮಹಾಭೀತರನ್ನಾಗಿಯೂ ಮಾಡಬೇಕೆಂದು ಅವರು ತೋರ್ಪಡಿಸುತಲಿದ್ದ ಕುತೂಹಲವನ್ನು ಅದಕ್ಕೆ ತಕ್ಕ ಸಾಧನಗಳನ್ನೂ ಮಾಡುತಲಿದ್ದದ್ದು ನಮ್ಮೆಲ್ಲಾ ಮಹದಾನಂದವನ್ನುಂಟುಮಾಡಿ ಇದೆ. ಇದರಿಂದ ವಿದ್ಯಾರ್ಥಿಗಳು ತಮ್ಮ ಪ್ರಾಪಂಚಿಕ ಧರ್ಮಗಳನ್ನು ಮುಂದೆ ವ್ಯವಹರಿಸುವದರಲ್ಲೂ ವಿವೇಕಜ್ಞರಾದ ಪ್ರಜೆಗಳೆನ್ನಿಸಿಕೊಳ್ಳುವದರಲ್ಲೂ ಅವರಿಗೆ ತುಂಬಾ ಸಹಾಯವಾಗುವದರಲ್ಲಿ ಸಂಶಯವಿಲ್ಲ. ಇದಕ್ಕೆ ಸಹಕಾರಿಯಾಗಿರುವ ವಿದ್ಯವೇ ವಿದ್ಯ. ಅಂಥಾ ವಿದ್ಯೆಯನ್ನು ಬಾಲಕರಿಗೆ ಕಲಿಸುವದರಲ್ಲಿ

ನಿರತರೂ ಶಾಂತರೂ ಸಮಾನಚಿತ್ತರೂ ಉಪಾಧ್ಯಾಯರೆನಿಸಿಕೊಳ್ಳುವರೇ ವಿನಾ ಬಾಲಕರಿಗೆ ಬರೇ ಪುಸ್ತಕದ ವಿದ್ಯೆಯನ್ನು ಕಲಿಸಬೇಕೆಂದು ಪ್ರಯತ್ನಪಡುವ ಉಪಾಧ್ಯಾಯರು ಉಪಾಧ್ಯಾಯರಲ್ಲವೆಂದು ನಾವು ನಿಮಗೆ ಹೇಳಬೇಕಾಗಿಲ್ಲ. ಬಾಲಕನು ತನ್ನ ಬುದ್ಧಿಯನ್ನು ನಾನಾ ಪುಸ್ತಕಗಳನ್ನು ಓದಿ ಸೂಕ್ಷ್ಮ ಮಾಡಿಕೊಳ್ಳುವದಲ್ಲದೆ ಶ್ರೇಷ್ಠಗುಣಗಳನ್ನು ಪಡೆದು ಅವುಗಳನ್ನು ಅಭ್ಯಾಸಮಾಡಿ ತನ್ನ ಮನೋಮಾಲಿನ್ಯಗಳಲ್ಲಿ ಪರಿಶುದ್ಧನಾಗಿ ಆಗುವದಕ್ಕೆ ಸಹಕಾರಿಯಾದ ವಿದ್ಯೆಯನ್ನು ಅತ್ಯವಶ್ಯಕವಾಗಿ ಪಡೆಯಬೇಕು. ಇವೆರಡು ವಿದ್ಯೆಗಳನ್ನು ಬಹು ಚೆನ್ನಾಗಿ ಕಲಿಸುವ ಶಕ್ತಿಯು ಪಾಶ್ಚಿಮಾತ್ಯ ಉಪಾಧ್ಯಾಯರುಗಳಲ್ಲಿ ವಿಶೇಷವಾಗಿರುವದೇ ವಿನಹ ನಮ್ಮ ಹಿಂದೂಸ್ಥಾನದಲ್ಲಿ ಅಂಥಾ ಉಪಾಧ್ಯಾಯರು ಸಿಕ್ಕುವದು ಬಹು ವಿರಳವಾಗಿದೆ. ನಮ್ಮ ಹಿಂದೂಸ್ಥಾನದಲ್ಲಿ ಬಾಲಕರು ಓದೋಣದಿಂದ ತಮ್ಮ ಬುದ್ಧಿಯನ್ನು ಬಹು ಚುರುಕಾಗಿ ಸ್ವತಂತ್ರ ಮಾಡಿಕೊಂಡಿದ್ದಾಗ್ಯೂ ಅವರು ಪೂರ್ಣ ವಿದ್ಯಾವಂತರೆನಿಸಿಕೊಳ್ಳದೆ ಗುರುಹಿರಿಯಲ್ಲಿ ಭಕ್ತಿಯಿಲ್ಲದೆ ಪಕ್ಷಪಾತದೃಷ್ಟಿಗಳನ್ನು ಯೋಚಿಸದೆ ಕೇವಲವಾದವನ್ನು ಹೇಳತಕ್ಕವರೂ ಗಾಂಭೀರ್ಯಬಾಹಿರರೂ ದೈನ್ಯರಹಿತರೂ ಆಗಿರುತ್ತಾರೆ. ಇದಕ್ಕೆ ಅನೇಕ ದೃಷ್ಟಾಂತಗಳುಂಟು. ಇಂಥಾ ದೋಷಗಳನ್ನೆಲ್ಲಾ ಹೋಗಲಾಡಿಸುವಂತೆ ಉಪಾಧ್ಯಾಯನು ತನ್ನ ಶಿಷ್ಯನಿಗೆ ವಿದ್ಯೆಯನ್ನೂ ವಿಶೇಷಜ್ಞಾನವನ್ನೂ ಸುಗುಣವನ್ನೂ ನಮ್ರತೆಯನ್ನೂ ಮಾತಾಪಿತೃಭಕ್ತಿಯನ್ನೂ ಉಂಟುಮಾಡುವಂತೆ ...

...ಏರ್ಪಡಿಸಿಕೊಡಬೇಕೆಂದು ಅವರನ್ನು ಅರ್ಜಿಮೂಲಕ ಕೇಳಿಕೊಂಡರೆಂದು ಕೇಳುತ್ತೇವೆ.

ಸಂಸ್ಥಾನದ ದಿವಾನ್ ಬಹದ್ದೂರರು ಶ್ರೀಶೇಷಾದ್ರಿ ಅಯ್ಯರವರು ಮಹಾರಾಜರವರ ಜೊತೆಯಲ್ಲಿ ಹಂಪೆಗೆ ಪ್ರಯಾಣವಾಗಿದ್ದರಂತಲೂ ಅಲ್ಲಿಂದ ವಾಪಸು ಬೆಂಗಳೂರಿಗೆ ದಯಮಾಡಿದರೆಂತಲೂ ಈಗ ಸರ್ಕೀಟು ಹೊರಡುವ ಏರ್ಪಾಡು ಮಾಡುತ್ತಿದ್ದಾರೆಂತಲೂ ಕೇಳುತ್ತೇವೆ.

ಬೆಂಗಳೂರು ಪೇಟೆಯಲ್ಲಿ ಕಳೆದ ಶುಕ್ರವಾರ ಒಬ್ಬ ಮನುಷ್ಯನು ಕಾಲರಾದಿಂದ ಸತ್ತುಹೋದನು. ವಾರಸುದಾರರು ಸರ್ಕಾರದ ಅಪ್ಪಣೆ ಇಲ್ಲದೆ ಶವವನ್ನು ದಹನಮಾಡಿದ್ದರಿಂದ ಪೋಲೀಸಿನವರು ಅವರಮೇಲೆ ಚಾರ್ಜ್ ಮಾಡಿರುವಂತೆ ಕೇಳುತ್ತೇವೆ.

ಕಳೆದ ವಾರದಲ್ಲಿ ಸರ್ಕಸ್ ಆಟದವರು ರಾಜಧಾನಿಯಲ್ಲಿ ಆಟಗಳನ್ನು ಆಡಿದರು. ಮೊನ್ನೆ ಮಂಗಳವಾರ ಮೈಸೂರು ನಗರದಲ್ಲಿ ಆಟವಾಡಿ ಸಂಪಾದನೆಮಾಡಬೇಕೆಂದು ಪ್ರಯಾಣ ಮಾಡಿರುತ್ತಾರೆ. ಅವರ ಉದ್ದೇಶವು ಎಷ್ಟರಮಟ್ಟಿಗೆ ಸಫಲವಾಗುವದೋ ತಿಳಿಯತಕ್ಕದ್ದಾಗಿದೆ.

ಮದರಾಸ್ ಗವರ್ನರವರ ಧರ್ಮಪತ್ನಿ ಲೇಡಿ ವೆನ್‌ಲಾಕ್ ರವರಿಗೆ ದೇಹದಲ್ಲಿ ಅಸ್ವಸ್ಥವಾಗಿದ್ದದನ್ನು ಬಹು ಬಲ... ನಿವೃತ್ತಿಮಾಡಿಕೊಂಡು ಆರೋಗ್ಯವನ್ನು ...

ವಿವಿಧ ವರ್ತಮಾನಗಳು.

ಗಾಯಕವಾಡ್ ಮಹಾರಾಜರವರು ದೇಹಾರೋಗ್ಯವನ್ನು ಪಡೆಯುವ ಉದ್ದೇಶ್ಯ ಕಳೆದ ಬುಧವಾರ ತಮ್ಮ ರಾಜಧಾನಿಯನ್ನು ಬಿಟ್ಟು ಬೊಂಬಾಯಿಗೆ ಬಂದು ಅಲ್ಲಿಂದ ಪುನಹ ಮಾರ್ಗವನ್ನುಹಿಡಿದು ಮಹಾಬಲೇಶ್ವರ ಪರ್ವತ ಪ್ರಾಂತ್ಯಕ್ಕೆ ದಯಮಾಡಿಸಿದರು.

ಬರೋಡ ಸಂಸ್ಥಾನದಲ್ಲಿ ನಾಟರ್‌ಪ್ರೂಫ್ ಅಂದರೆ ನೀರು ಕಳಲದೆ ಇರುವಂಥ ಛತ್ರಿಗಳನ್ನು ಹೊಸದಾಗಿ ತಯಾರುಮಾಡುವ ಒಂದು ಕಾರ್ಖಾನೆಯು ಸ್ಥಾಪಿಸಲ್ಪಟ್ಟಿದೆ ಎಂಬದಾಗಿ ಕೇಳಿದೆವು. ರಾಜ್ಯದಲ್ಲಿ ಪ್ರಜಾಕ್ಷೇಮವಿರುವದನ್ನು ಅರಿಕೆ ಅಂಥಾ ಪ್ರಯತ್ನಗಳೇ ದೃಷ್ಟಾಂತಗಳು!

ಈಗ ಫ್ರೆಂಚರೂ ಮತ್ತು ಇಸ್ಪೇನಿಯರೂ ಯುದ್ಧಹಡಗುಗಳನ್ನು ಬಹಳವಾಗಿ ಕಟ್ಟಿಸುತ್ತ ಬಂದಿರುವದನ್ನು ತಿಳಿದು ಇಂಗ್ಲೀಷ್ ಪಾರ್ಲಿಮೆಂಟಿನವರೂ ತಮ್ಮ ಹಡಗುಗಳನ್ನು ಕಟ್ಟಿಸುವಂತೆ ೧ ಕೋಟಿಯೂ ೨೦ ಲಕ್ಷ ಪೌನುಗಳನ್ನು ಬಜೆಟ್ಟಿನಲ್ಲಿ ಮಂಜೂರ್ ಮಾಡಿರುತ್ತಾರೆ.

ಜಪಾನಿನಲ್ಲಿ ಎಮ್ಮಾತೆ ಎಂಬ ಪಟ್ಟಣದಲ್ಲಿ ಸ್ನಾನಕ್ಕೆ ಯೋಗ್ಯವಾದ ಒಂದು ಬಾವಿಯನ್ನು ತೆಗೆಯುತ್ತಿದ್ದಾಗ ಭಯಂಕರವಾದ ಒಂದು ಭೂಕಂಪನ ಹುಟ್ಟಿ ಕೂಲಿಗಾರರನ್ನೆಲ್ಲಾ ನುಂಗಿಬಿಟ್ಟಿತು. ಇದರಿಂದ ಉಂಟಾದ ಪ್ರಾಣಹಾನಿಯೂ, ಅರ್ಥಹಾನಿಯೂ ಅಪಾರವಾದುದೆಂದು ವಾಚಕರೇ ಊಹಿಸಿಕೊಳ್ಳಬಹುದು.

ಬಂಗಾಳ ಪ್ರಾಂತ್ಯದಲ್ಲಿ ಒಟ್ಟು ... ವೈದ್ಯರುಗಳ ಪಾಠಶಾಲೆಗಳು ಇರುತ್ತವೆಂತಲೂ, ಈ ಶಾಲೆಗಳಿಂದ ...

ನೀರನ್ನು ಕಟ್ಟಿಹಾಕಿದಂತೆ ನಡೆದುಬಿಟ್ಟಿದೆ ಸುಮಾರು ೨೦೦ ಅಡಿ ಪ್ರಮಾಣ ನೀರು ನಿಂತು ಇದೆ ಇನ್ನು ದಿನೇದಿನೇ ನೀರು ಹೆಚ್ಚುತ್ತಲೇ ಇದೆ ನೀರು ಬೆಟ್ಟವನ್ನು ಮುಳುಗಿಸಿಕೊಂಡು ಮೇಲೆ ಹರಿಯುವ ಹಾಗಿದೆಯೆಂದೂ, ಅದರಿಂದ ಸಮೀಪದ ಗ್ರಾಮಗಳು ಮುಳುಗಿ ಹೋಗುವ ಹಾಗಿದೆಯೆಂದೂ ವರ್ತಮಾನ ಬಂದಿದೆ

ನಮ್ಮ ಹೊಸವೈಸರಾಯರವರು ತಮ್ಮ ಜತೆಯಲ್ಲಿ ತಮ್ಮ ಮೂರುಮಂದಿ ಹೆಣ್ಣುಮಕ್ಕಳನ್ನು ಮಾತ್ರ ಕರೆದುಕೊಂಡು ಬರುವರೆಂತಲೂ, ಉಳಿದ ಮಕ್ಕಳನ್ನೆಲ್ಲಾ ವಿಲಾಯಿತಿಯಲ್ಲೇ ಬಿಟ್ಟು ಬರುವರೆಂತಲೂ ಕೇಳುತ್ತೇವೆ ಮತ್ತು ಅವರು ಹಿಂದೂಸ್ಥಾನಕ್ಕೆ ಬಂದಮೇಲೆ ತಮ್ಮ ತಂದೆಗಳಂತೆಯೇ ಹೆಸರುವಾಸಿಗೆ ಬರುವರೆಂತಲೂ, ಇಲ್ಲಿನ ನಾನಾ ಜಾತಿ ಕುಲದವರನ್ನೂ ಸಮದೃಷ್ಟಿಯಿಂದ ನೋಡುವರೆಂತಲೂ, ಎಲ್ಲಾ ವಿಷಯಗಳನ್ನೂ ಪ್ರಜೆಗಳಿಗೆ ಹಿತಕರವಾಗಿರುವಂತೆಯೂ, ಸರ್ಕಾರಕ್ಕೆ ನಷ್ಟವಾಗದಂತೆಯೂ, ನ್ಯಾಯವೇ ಎಲ್ಲೆಲ್ಲಿಯೂ ಆಳುವಂತೆಯೂ ರಾಜ್ಯಭಾರ ಮಾಡುವರೆಂಬದಾಗಿ ಅಲ್ಲಿನ ಒಂದು ಸಂಘದವರಿಗೆ ಭರವಸೆ ಕೊಟ್ಟಿರುತ್ತಾರೆ

ಆಫ್ರಿಕಖಂಡದಲ್ಲಿ ಒಂದು ಹಳ್ಳಿಯಲ್ಲಿ ಒಬ್ಬ ಕುರುಬನು ಮೇಕೆಗಳನ್ನು ಕಾಯುತ್ತಿರುವಾಗ್ಯೆ ಹೊಳೆಯುವ ಒಂದು ಕಲ್ಲನ್ನು ನೆಲದಲ್ಲಿ ನೋಡಿ ಅದನ್ನು ಅಗೆದು ತೆಗೆದುಕೊಂಡನು ಅದು ಸೂರ್ಯರಶ್ಮಿಯಂತೆ ಪ್ರಕಾಶಿಸುತ್ತಿತ್ತು ಅದನ್ನು ತನ್ನ ಒಡೆಯನಿಗೆ ತೋರಿಸಿದನು ಅವನು ಅದು ಶ್ರೇಷ್ಠವಾದ ವಜ್ರವೆಂದು ತಿಳಿದು ಸರ್ಕಾರಕ್ಕೆ ಒಪ್ಪಿಸಿದನು ಅದರ ಬೆಲೆಯು ಈಗ ಕೆಲವು ಲಕ್ಷರೂಪಾಯಿಗಳಾಗಬಹುದೆಂದು ಊಹಿಸಿರುತ್ತಾರೆ ಆಕೂಡಲೇ ಸರ್ಕಾರದವರು ಆ ಪ್ರದೇಶವನ್ನೆಲ್ಲಾ ಖೈದುಮಾಡಿ ಅದರೊಳಕ್ಕೆ ಯಾರೂ ಹೋಗಿ ಅಗೆಯಕೂಡದೆಂದು ನಿರ್ಬಂಧ ಮಾಡಿರುತ್ತಾರೆ ಪೂರ್ವಕಾಲದಲ್ಲಿ ಆ ಪ್ರದೇಶದಿಂದ ಅನೇಕ ಕೋಟಿ ರೂಪಾಯಿಗಳ ವಜ್ರಗಳನ್ನು ತೆಗೆದಿದ್ದರೆಂದು ಈಚೀಚೆಗೆ ಗೊತ್ತಾಯಿತು

ಚೀನಾದಲ್ಲಿ ಒಂದು ವಿಚಿತ್ರತರವಾದ ಸರ್ಪವಿದೆ ಅದು ತನ್ನ ಬಾಯಿನಿಂದ ಒಂದು ರತ್ನವನ್ನು ಹೊರಕ್ಕೆ ತೆಗೆಯುತ್ತದೆ ಅನಂತರ ತನ್ನ ಆಹಾರದ ಜೀವಜಂತುಗಳನ್ನು ಹಿಡಿದು ತಿನ್ನುತ್ತದೆ ಆಮೇಲೆ ಪುನಹ ಆ ರತ್ನವನ್ನು ಬಾಯಿಗೆ ಹಾಕಿಕೊಳ್ಳುತ್ತದೆ ಇಂಥಾ ಸರ್ಪದ ಕೆಲಸಗಳನ್ನು ನೋಡಿದವರಿಲ್ಲ ಅದು ಎದುರಿಗೆ ಕಾಣಿಸಿಕೊಳ್ಳುವದಕ್ಕೆ ಹೆದರುತ್ತದೆ ಮೊದಲು ಇಂಥಾ ಒಂದು ಹಾವು ಜನರ ಕಣ್ಣಿಗೆ ಕಾಣಿಸಿಕೊಂಡಿತ್ತು ಅದು ಬಾರೀ ಭಂಡೆಗಳಲ್ಲಿ ಇದ್ದು ಅದನ್ನು ಹುಡುಕಿಕೊಂಡು ಈಚೆಗೆ ಬಂದಿತ್ತು ಆ ಭಂಡೆಯು ಒಡೆಯಲ್ಪಟ್ಟಾಗ ಕೆಳಗೆ ಸುಮಾರು ೨೦ ಜನರು ಸಿಕ್ಕಿ ಸತ್ತುಹೋದರು ಈಗ ಕಾಣಿಸಿಕೊಂಡಿರುವ ಸರ್ಪವು ಬಹು ದೊಡ್ಡದಲ್ಲ ಅದು ಅರಡಿ ಉದ್ದವೂ, ಒಂದು ಅಂಗುಲ ಘಾತ್ರವೂ ಇದೆ ಎಂಬದಾಗಿ ಒಂದು ಪತ್ರಿಕೆಯು ಬರೆಯುತ್ತದೆ ಇಂಥಾ ಸರ್ಪವುಂಟೇ ಎಂಬದಾಗಿ ನಾವು ಸಂಶಯಪಡುತ್ತೇವೆ

ಹಿಂದೂಸ್ಥಾನದ ಸಂಸ್ಥಾನಿಕ ಸಭೆಯು ಈ ವರ್ಷ ಅಲಹಾಬಾದ್ ಪಟ್ಟಣದಲ್ಲಿ ನಡೆಯುವದೆಂತಲೂ, ಅದನ್ನು ನಡೆಸುವದಕ್ಕಾಗಿ ವಿಲಾಯಿತಿಯಿಂದ ಅನೇಕ ಯೂರೋಪಿಯನ್ ಸಭಾಸದರು ಬರುತ್ತಲಿದ್ದಾರೆಂತಲೂ, ಆ ಸ್ಥಳಕ್ಕೆ ಮಿ|| ಕ್ಯಾಂಪ್‌ಬೆಲ್ ಬರುವರು, ಮಿ|| ದಾದಾಭಾಯಿನವರೋಜಿಯವರು ಇಲ್ಲಿಗೆ ಬರುವದು ಸಂಶಯವೆಂತಲೂ ಹಿಂದೆಯೇ ವಾಚಕರಿಗೆ ತಿಳಿಸಿದೇವಷ್ಟೆ ಮಿ|| ಹ್ಯೂಂಸಾಹೇಬರವರ ವಿಷಯದಲ್ಲಿ ಇಲ್ಲಿನ ಒಂದು ಪತ್ರಿಕೆಯು ಹೇಳುವದೇನಂದರೆ—ಮಿ|| ಹ್ಯೂಂ ಸಾಹೇಬರು ಮಾಂಸಾಹಾರಿಗಳಲ್ಲ ಮದ್ಯಪಾನಿಗಳಲ್ಲ ಅವರು ಹಿಂದೂಗಳಂತೆಯೇ ಶಾಕಪಾಕಗಳನ್ನು ಸೇವಿಸತಕ್ಕವರಾಗಿದ್ದಾರೆ ಆದ್ದರಿಂದ ಇಲ್ಲಿನ ಬ್ರಾಹ್ಮಣರೂ, ರುಷಿಗಳೂ ಮತ್ತು ಉತ್ತಮ ಜಾತಿಯವರಂತೆಯೇ ಇರುವರು ಇಂತವರನ್ನು ಹಿಂದೂಗಳು ತಮ್ಮ ಜೊತೆಗೆ ಸೇರಿಸಿಕೊಂಡು, ಅವರಜೊತೆಯಲ್ಲಿ ಸಹಭೋಜನಾದಿಗಳನ್ನು ಯಾಕೆ ಮಾಡಬಾರದು? ಎಲ್ಲವಿಷಯಗಳಲ್ಲೂ ಅವರು ಹಿಂದೂಗಳಂತೆಯೇ ಇರುವಲ್ಲಿ, ಅದಾಗ್ಯೂ ಹಿಂದೂಗಳು ಇಂತವರ ಜೊತೆಯಲ್ಲೂ ಭೋಜನ ಮಾಡದಿರುವದಕ್ಕೆ ಅವರು ಯಾವ ಕಾರಣವನ್ನು ತಾನೆ ಕೊಟ್ಟಾರು?

ಭರತಪುರದ ಮಹಾರಾಜರವರು ಕಳೆದ ವಾರ ಮರಣವನ್ನೈದಿದರೆಂದು ತಿಳಿಸಲು ವಿಷಾದಿಸುತ್ತೇವೆ ಇವರು ಒಂದು ತಿಂಗಳ ಕೆಳಗೆ ದೇಹದಲ್ಲಿ ಆರೋಗ್ಯ ತಪ್ಪಿತ್ತು ಅವರ ಕೈಬೆರಳಿನಲ್ಲಿ ಉಗುರುಸುತ್ತು ಆಗಿ ಅದರಿಂದ ಬಹಳ ಬಾಧೆ ಪಡುತ್ತಿದ್ದರು ಡಾಕ್ಟರು ಅದನ್ನು ಪರೀಕ್ಷಿಸಿ, ಬೆರಳನ್ನೇ ಕತ್ತರಿಸಿ ಹಾಕದಿದ್ದರೆ ಅವರ ಪ್ರಾಣಕ್ಕೆ ಅಪಾಯವುಂಟೆಂದು ಹೇಳಿ ಇದ್ದರು ಆದರೆ ಮಹಾರಾಜರವರು ಬೆರಳನ್ನು ಕತ್ತರಿಸಿಕೊಳ್ಳುವದಕ್ಕೆ ಇಷ್ಟಪಡಲಿಲ್ಲ ಅದು ಮಿತಿಮೀರಿ ಕೊಳೆತು ಹೋದದ್ದರಿಂದ ಅವರಲ್ಲೇ ಸತ್ತುಹೋದರು ಇವರಿಗೆ ಈಗ ೪೨ ನೇ ವರ್ಷ ನಡೆಯುತ್ತಿದ್ದಾಗ್ಯೂ, ರಾಜ್ಯಭಾರ ಮಾಡುವದಕ್ಕೆ ಆರಂಭಿಸಿ ೪೦ ವರ್ಷಗಳಾಗಿದ್ದವು ಚಿಕ್ಕ ಮಗುವಾಗಿದ್ದಾಗಲೇ ಸಿಂಹಾಸನವನ್ನು ಅಲಂಕರಿಸಿದ್ದರು ಕಳೆದ ೧೮೭೧ರಲ್ಲಿ ಪಟ್ಟ ೧೮೭೩ ರಲ್ಲಿ ರಾಜ್ಯಾಧಿಕಾರಗಳನ್ನು ಪಡೆದು ೧೮೮೦ ನೇ ಮಾರ್ಚಿ ೪ ರಲ್ಲಿ ರಾಜ ಅಧಿಕಾರಗಳನ್ನು ಪಡೆದರು ಇವರು ಜಾಟ್ ಸಂತತಿಯ ದೊರೆಗಳು ೧೮ ನೇ ಶತಮಾನದ ಆದಿಭಾಗದಲ್ಲಿ ಭರತಪುರದ ರಾಜ್ಯವನ್ನು ಸ್ಥಾಪಿಸಿದ್ದ ಬಾಲಚಂದ್ರನೆಂಬುವನ ವಂಶಸ್ಥರಾಗಿದ್ದರು ಆ ಭರತಪುರದ ವಿಸ್ತೀರ್ಣವು ೨೦೦೦ ಚದರಮೈಲುಗಳು ಮಾತ್ರವೇ ಆದಾಗ್ಯೂ ಸೈನ್ಯವೇನೊ ೧೦ ಸಾವಿರದಮೇಲೆ ಇದೆ ಆ ಸಂಸ್ಥಾನದ ಪ್ರಜೆಗಳೆಲ್ಲಾ ಮುಖ್ಯವಾಗಿ ಹಿಂದೂಗಳೇ ಇವರಿಗೆ ಒಬ್ಬ ಕುಮಾರರು ಇರುತ್ತಾರೆ ಅವರ ಹೆಸರು ಕಿಷನ್ ರಾಮ್ ಸಿಂಗ್ ಬಹದ್ದೂರ್

ಉತ್ತರದೇಶದಲ್ಲಿ ಒಬ್ಬ ಯೂರೋಪಿಯನ್ ಅಧಿಕಾರಸ್ಥನು ಜಂಗಲಿನಲ್ಲಿ ಪ್ರಯಾಣಮಾಡುತ್ತಿರುವಾಗ್ಯೆ ನಡೆದ ಒಂದು ಸಂಗತಿಯನ್ನು ಸ್ಟೋನಿ ಬರೆದಿರುವದೇನಂದರೆ ಒಬ್ಬ ಮಾಹುತನು ಆನೆಯಮೇಲೆ ಕುಳಿತುಕೊಂಡು ಬಹು ಕೆಸರು ಇರುವ ಸ್ಥಳದಲ್ಲಿ ಹೋಗುತ್ತಿದ್ದನು ಈ ಆನೆಯನ್ನು ಎಲ್ಲಿಗೆ ತೆಗೆದುಕೊಂಡು ಹೋಗುತ್ತೀ ಎಂದು ಸಾಹೇಬರು ಕೇಳಿದಾಗ ಅವನು ಈ ಆನೆಯು ಸಹಾಯದಿಂದ ಈ ಭಾರೀ ಕೆರೆಯಲ್ಲಿರುವ ಮೀನುಗಳನ್ನು ಹಿಡಿಯುತ್ತೇನೆ ನೀವು ಸ್ವಲ್ಪದೂರ ಬಂದು ಪರೀಕ್ಷೆಮಾಡಿ ನೋಡಿ ಎಂಬದಾಗಿ ಉತ್ತರಕೊಟ್ಟನು ಸಾಹೇಬರನ್ನು ತನ್ನ ಜೊತೆಯಲ್ಲಿ ಕೂಡಿಸಿಕೊಂಡು ನೀರಿನೊಳಕ್ಕೆ ಹೋಗಿ ಒಂದು ಉದ್ದವಾದ ಕಡ್ಡಿಯ ಕೊನೆಗೆ ಗಾಣವನ್ನು ಹಾಕಿ ಆ ಕಡ್ಡಿಯನ್ನು ಆನೆಯ ಸೊಂಡಲಿಗೆ ಕೊಟ್ಟನು ಆನೆ ಆ ಕಡ್ಡಿಯನ್ನು ಹಿಡುಕೊಂಡು ನೀರಿನೊಳಕ್ಕೆ ಹಾಕಿ ಸ್ವಲ್ಪಹೊತ್ತು ನಿಂತಿತ್ತು ಅಷ್ಟರಲ್ಲೇ ಒಂದು ಮೀನು ಆ ಗಾಣಕ್ಕೆ ಸಿಕ್ಕಿತು ಆಗ ಆನೆ ಕಡ್ಡಿಯನ್ನು ಎತ್ತಿ ತನ್ನ ಮಾಹುತನ ವಶಕ್ಕೆ ಕೊಟ್ಟಿತು ಮಾಹುತನು ಆ ಮೀನನ್ನು ಗಾಣದಿಂದ ಬಿಡಿಸಿಕೊಂಡು ಪುನಹ ಆವೇಗಾಣದಕಡ್ಡಿಯನ್ನು ಆನೆಯ ಸೊಂಡಲಿಗೆ ಕೊಟ್ಟನು ಅದು ಮೊದಲಿನಂತೆಯೇ ನೀರಿನಲ್ಲಿ ಹಿಡಿದು ಪುನಹ ಮೀನು ಹಿಡಿದು ಅವನವಶಕ್ಕೆ ಕೊಟ್ಟಿತು ಆಗ ಇದನ್ನೆಲ್ಲಾ ನೋಡಿದ ಸಾಹೇಬರು ತಾವು ಆಶ್ಚರ್ಯಪಟ್ಟು ಆನೆಯು ಇಂಥಾ ಕೆಲಸವನ್ನು ಕೂಡ ಮಾಡುವದೆಂದು ಹೊಸದಾಗಿ ತಿಳಿದು ಆ ಮಾಹುತನಿಗೆ ಇನಾಮು ಕೊಟ್ಟು ಹೋದರು

ಇಂಗ್ಲೆಂಡಿನ ಕಡೆಯ ರಾಜ್ಯಭಾರದಲ್ಲಿ ಕಾಬೂಲ್ ಸಂಸ್ಥಾನಕ್ಕೆ ಹೋಗಿದ್ದ ಮಿ|| ಮಾರ್ಟಿನ್ ಸಾಹೇಬರವರು ಪರಿವಾರ ಸಮೇತರಾಗಿ ತಮ್ಮ ಕೆಲಸಗಳನ್ನು ತೀರಿಸಿಕೊಂಡು ವಾಪಸು ಬರುವದಕ್ಕಿಂತ ಮುಂಚಿತವಾಗಿ ಇವರೆಲ್ಲಾ ನನ್ನನ್ನು ನೋಡಬೇಕೆಂದು ಕಾಬೂಲಿನ ಅಮೀರರು ಚಿನ್ನದ ಪದಕಗಳನ್ನು ಹೊಸದಾಗಿ ಟಂಕಸಾಲೆಯಲ್ಲಿ ಅಚ್ಚುಮಾಡಿಸಿ ಎಲ್ಲರಿಗೂ ಒಂದೊಂದನ್ನು ಕೊಟ್ಟು ಕಳುಹಿಸಿದರು ಅಮೀರರು ಪೂರ್ವದಲ್ಲಿ ಒಂದು ದಿನ ಸ್ವಪ್ನದಲ್ಲಿ ತಮ್ಮ ಮರಣವು ಸಮೀಪಿಸಿದೆಯೆಂದೂ ಪ್ರಾಯಶ್ಚಿತ್ತವಾಗಿ ತಾವು ಮಕ್ಕಾಕ್ಕೆ ಹೋಗುವ ಮಾರ್ಗವನ್ನು ಶುದ್ಧಮಾಡಬೇಕೆಂದೂ ಸ್ವಪ್ನ ನಮ್ಮಾದದ್ದರಿಂದ ಆದರೆ ಅದರಂತೆ ನಡೆಸಲಿಲ್ಲ ಪುನಃ ಮತ್ತೊಂದು ಸ್ವಪ್ನದಲ್ಲಿ ಪ್ರವಾದಿಯು ಕಾಣಿಸಿಕೊಂಡು ಅಮೀರ ಆಗ ನೀನು ಮಾಗ್ಣನವನ್ನು ನೆರವೇರಿಸಲಿಲ್ಲ ಅದ್ದರಿಂದ ನಿನಗೆ ಪತ್ನಿ ಕನಸೆ ನಿನ್ನನ್ನು ಸ್ವರ್ಗಲೋಕಕ್ಕೆ ಬಿಡುವದಿಲ್ಲ ಎಂದು ಹೇಳಿದಂತೆ ಆಗ ಅಮೀರರು ಪ್ರಾಯಶ್ಚಿತ್ತ ತಾವು ಅದರ ತಪ್ಪಿತಕ್ಕಾಗಿ ತಾವು ವ್ಯಸನಪಡುತ್ತಿರೆಂತಲೂ ಜಾಗ್ರತೆಯಲ್ಲೇ ಅದರ ಪ್ರಾಯಶ್ಚಿತ್ತವಾಗಿ ತಮ್ಮ ಸಂಸ್ಥಾನದಲ್ಲಿ ಚಿನ್ನದ ನಾಣ್ಯಗಳನ್ನು ಅಚ್ಚುಹಾಕಿಸಿ ದಾನಮಾಡುವರೆಂತಲೂ ಆ ಪ್ರಕಾರ ಎಲ್ಲಾ ಪ್ರಾಂತ್ಯಗಳ ..... ಕಾಣಿಕೆಯಾಗಿ ಕಳುಹಿಸಿ ಅವರ ಪಾಪವನ್ನು ಹೋಗಲಾಡಿಸಬೇಕೆಂತಲೂ ಪ್ರಯತ್ನಗಳನ್ನು ಮಾಡಿಕೊಂಡು ..... ಅಮೀರರು ತಮ್ಮ ರಾಜ್ಯದಲ್ಲಿ ಚಿನ್ನದ ನಾಣ್ಯಗಳನ್ನು ಟಂಕಸಾಲೆಯಲ್ಲಿ ..... ಇಂಗ್ಲಿಷ್ ಜನರಿಗೆ ಬಹುಮಾನಕೊಡುತ್ತಾರೆ ..... ಹೇಳುತ್ತಾರೆ

ಒಬ್ಬ ಬ್ರಾಹ್ಮಣನು ತನ್ನ ಮನೆಯಲ್ಲಿ ಎಲ್ಲಾ ..... ತನಗೆ ಜೀವನೋಪಾಯ ..... ದಾರಿಯಿಲ್ಲದೆಂದು ತನ್ನ ಸಂಸಾರವನ್ನೆಲ್ಲಾ ಅಲ್ಲೇ ಬಿಟ್ಟು ತನ್ನ ಇಬ್ಬರು ದೊಡ್ಡ ದೊಡ್ಡ ಹೆಣ್ಣುಮಕ್ಕಳನ್ನು ಕರೆದುಕೊಂಡು ನಾಡಿಗೆ ಬಂದು ಅಲ್ಲಿ ಒಬ್ಬ ದಣಿಯ ಮನೆಯಲ್ಲಿ ಇಬ್ಬರು ಸರದಾರರ ಮನೆಗಳಲ್ಲಿ ಒಂದೊಂದಾಗಿ ಇಟ್ಟು ತಾನು ಯಾವುದಾದರೂ ಕೆಲಸವನ್ನು ಮಾಡಬೇಕೆಂದು ಪ್ರಯತ್ನ ಮಾಡುತ್ತಿದ್ದನು ಆದರೆ ಅವನಿಗೆ ಎಲ್ಲೂ ಕೆಲಸದೊರೆಯಲಿಲ್ಲ ಆಗ ಅವನು ತನ್ನ ಇಬ್ಬರು ಹೆಣ್ಣುಮಕ್ಕಳನ್ನೂ ನೋಡಿ ಅವರೊಡನೆ ಬಹುಸಂತೋಷವಾಗಿ ಮಾತನಾಡಿಕೊಂಡು ಬಂದು ಒಂದು ಮನೆಯಲ್ಲಿ ಇಳುಕೊಂಡು ಇದ್ದು ಆ ದಿನರಾತ್ರಿ ಒಂದು ಮನೆಯಲ್ಲಿ ಹುತ್ತಿನಲ್ಲಿ ಗುಂಡನ್ನು ಹಾರಿಸಿ ಎರಡು ಮಕ್ಕಳನ್ನೂ ಕೊಂದುಬಿಟ್ಟನು ಗುಂಡಿನಶಬ್ದವು ಹೊರಟಕೂಡಲೇ ಕೆಲವರು ಹೊರಗಿನಿಂದ ಬಂದವರು ಹೋಗಿ ನೋಡುವಷ್ಟರಲ್ಲಿ ಬಾಗಿಲು ಬೀಗ ಹಾಕಿತ್ತು ಅವನು ಬಿದ್ದಿರುವದನ್ನು ನೋಡಿ ..... ಬಾಗಿಲನ್ನು ಒಡೆದು ಅವನನ್ನು ಪರೀಕ್ಷಿಸಿ ..... ಹೆಣ್ಣುಮಕ್ಕಳ ..... ಕೇಳಿ ..... ತಾನು ಒಬ್ಬ ..... ದರಿದ್ರನ್ನು ನೋಡಲಾರದೆ ..... ಆಗ ಈ ಸಂಗತಿಯನ್ನು ತಿಳಿದು ಕೆಲವುಮಂದಿ ಧರ್ಮಿಷ್ಠರು ಸ್ವಲ್ಪ ಹಣವನ್ನು ಕೊಟ್ಟರು ಮತ್ತು ಮೊನ್ನೆ ವಿಜಯನಗರದ ಮಹಾರಾಜರವರು ೨೦೦ ರೂಪಾಯಿಗಳನ್ನು ಕೊಟ್ಟರೆಂಬದಾಗಿ ಕೇಳಿ ಅವರಧರ್ಮಬುದ್ಧಿಯನ್ನು ಕೊಂಡಾಡುತ್ತೇವೆ

ನಮ್ಮ ವೈಸರಾಯರವರ ಅಮೇರಿಕಾಸ್ಫಿಸ್ ಪ್ರಶ್ನೆ ಪ್ರತಿಭಾಗಗಳು

ಕೆಲವು ದಿವಸಗಳ ಹಿಂದೆ ಗೋವಧ ಸಂಬಂಧವಾದ ಆ ಗ್ರಾಮಸ್ಥಾನದಲ್ಲಿ ನಡೆದಿದ್ದ ಸಂಘಸಭೆಯು ಬಹು ಮಹತ್ವವುಳ್ಳದ್ದಾಗಿರುವದರಿಂದ ಅದರೊಳಗಿನ ಮುಖ್ಯಮುಖ್ಯ ಭಾಗಗಳನ್ನು ಸಂಗ್ರಹವಾಗಿ ಕೆಳಗೆ ಸಂಗ್ರಹಿಸಿದ್ದೇವೆ ಆ ಗ್ರಾಮಸ್ಥರಿಗೆ ನಾವು ನಿಮಗೆ ಸ್ಪಷ್ಟವಾಗಿ ತಿಳಿಸುವದೇನಂದರೆ ನಮ್ಮ ಸರ್ಕಾರ ಇತ್ಯಾದಿ ತಟಸ್ಥವೃತ್ತಿಯವರೂ ದ್ವೇಷರಹಿತರೂ ಆಗಿದ್ದರೂ, ನಾವು ದೇಶದಲ್ಲಿ ಅನ್ಯಾಯಕ್ಕೆ ತಲೆಯನ್ನೂ ಕ್ಷಮಾಪಣೆಯನ್ನು ಆಗಗೊಡಲಿಕ್ಕಿಲ್ಲ ಬರುವೇಳೆ ಆದರೆ ಅವುಗಳನ್ನು ಅಂಜದೇ ಮುರಿದುಬಿಡುವೆವು ರಾಣೀ ಸಾಹೇಬರ ಬ್ರಿಟಿಷ್ ಮತ್ತು ಪರದೇಶೀ ಪ್ರಜೆಗಳ ಕರ್ತವ್ಯ ಗಳನ್ನು ಸಂರಕ್ಷಿಸುವದು ನಮ್ಮ ಕರ್ತವ್ಯವಾಗಿದೆ ಹಿಂದೂ ಮುಸಲ್ಮಾನರೆಂಬ ಈ ಎರಡು ಮತಗಳವರ ಧರ್ಮಾಚರಣೆಗೆ ಸಂಭವಿಸುವ ತೊಂದರೆಗಳು ಆದಾಗ್ಯೂ ಇಲ್ಲಿ ನ್ಯಾಯವಾಗಿ ಸಹ ನಮ್ಮ ಕರ್ತವ್ಯವು ಮಹಮ್ಮದೀಯರು ಬಹುಕಾಲದಿಂದ ನಡೆಸುಬಂದ ತಮ್ಮ ಧರ್ಮಪದ್ಧತಿಯಂತೆ ಆಚರಿಸಬಹುದೆಂತಲೂ ನಿಮಿತ್ತವಿಲ್ಲದೆಯೂ ಬಹಿರಂಗವಾಗಿಯೂ ತೊಂದರೆಗೊಳಿಸುವಂತೆಯೂ ಗೋವಧಮಾಡಿ ಹಿಂದೂಜನರ ಮನಸ್ಸು ನೋಯಿಸಬಾರದೆಂತಲೂ ನಿಬಂಧನೆಗಳು ವಿಧಿಸಲ್ಪಟ್ಟಿವೆ ಈ ಎರಡೂ ಮತದ ಜನರು ಈ ಕಟ್ಟಳೆಗಳನ್ನು ವಿರೋಧದ ರಾಧಗಳನ್ನು ಮಾಡಿದರೆ ನಾವು ನ್ಯಾಯಪಥದಿಂದ ಒಂದು ಹೆಜ್ಜೆಯನ್ನಾದರೂ ಹೊರಗಿಡದೆ ಅಪರಾಧಿಗಳಿಗೆ ತಕ್ಕ ಶಿಕ್ಷೆಗಳನ್ನು ವಿಧಿಸದೆ ಮಾಡುವೆವೆಂಬ ಸಂಗತಿಯನ್ನು ಎರಡೂ ಮತಸ್ಥರು ಸ್ಪಷ್ಟವಾಗಿ ತಿಳುಕೊಳ್ಳತಕ್ಕದ್ದು

ಮೊನ್ನೆಮೊನ್ನೆ ನಂಥ ಸಣ್ಣ ದೊಡ್ಡ ದಂಗೆಗಳು ಪ್ರಕಾಶವಿಷ್ಟು ಆದಾಗ್ಯೂ ನಾವು ಯಾವ ಹಕ್ಕುಗಳನ್ನಾದರೂ ಮುಳುಗಿಸಲಿಕ್ಕಿಲ್ಲ ಅಥವಾ ಅಧಿಕ ಸಂಖ್ಯಾಕರಿಂದ ಯಾವದೊಂದು ಮತಸ್ಥರು ಕಡಿಮೆ ಸಂಖ್ಯೆಯ ಬೇರೆ ಮತದವರ ಮೇಲೆ ಬಿದ್ದು ಅವರಿಗೆ ಉಪದ್ರವಗಳನ್ನು ಮಾಡಹೋದರೆ ನಾವು ಹಾಗೆ ಮಾಡಗೊಡಲಿಕ್ಕಿಲ್ಲ ಒಂದು ಸ್ಥಳದಲ್ಲಿ ಒಂದು ಮತದವರು ಹೆಚ್ಚಿದ್ದಂತೆ ಎಲ್ಲ ಸ್ಥಳಗಳಲ್ಲಿಯೂ ಇರುವದಿಲ್ಲ ಅದ್ದರಿಂದ ಒಂದು ಸ್ಥಳದಲ್ಲಿಯ ಬಹು ಸಂಖ್ಯಾಕರಾದ ದಂಗೆಗಾರರು ಬೇರೆ ಸ್ಥಳಗಳಲ್ಲಿರುವ ಅಲ್ಪಸಂಖ್ಯಾಕರಾದ ಸ್ವಧರ್ಮದವರ ಸಂರಕ್ಷಣೆಯನ್ನು ಕುರಿತು ತಾವು ಜಾಗರೂಕರಾಗಿರಬೇಕೆಂಬದನ್ನು ಮರೆಯಲಾಗದು ನಮ್ಮ ತಟಸ್ಥವೃತ್ತಿಯನ್ನು ಬಿಡಿಸಿದ್ದವೆಂದು ಗ್ರಹಿಸಲಾಗದು ಈ ದೇಶದ ಜನರ ಧರ್ಮಬುದ್ಧಿಯು ಬಲವಾದದ್ದೂ ಅನಾದಿಕಾಲದಿಂದ ನೆಲೆಗೊಂಡದ್ದೂ ಎಂಬ ಸಂಗತಿಯನ್ನು ನಾವು ಚನ್ನಾಗಿ ಬಲ್ಲೆವು ಈ ದೇಶದಲ್ಲಿ ಬಹಳ ಮಂದಿ ಎಲ್ಲ ಜನರು ಆಕಳು ಪವಿತ್ರವಾದದ್ದೆಂತಲೂ ಪೂಜ್ಯವಾದದ್ದೆಂತಲೂ ಗ್ರಹಿಸಿ ಅವರು ಅದನ್ನು ಪೂಜಿಸುತ್ತಿರುವದರಿಂದ ಅವರ ಪ್ರೇಮಾತಿಶಯವು ಅದರಲ್ಲಿ ಎಷ್ಟಿರುತ್ತದೆಂಬವನ್ನು ತಿಳಿಯುವದು ಅವಶ್ಯಕ ಆಕಳು ಪವಿತ್ರವಾದದ್ದೆಂಬ ಧರ್ಮಸಂಬಂಧದ ತಿಳುವಳಿಕೆ ಇರುವವರಿಂದಲೂ ಆ ಪ್ರಾಣಿಯಿಂದ ದೇಶಕ್ಕೆ ಬಹಳ ಪ್ರಯೋಜನವಾಗುವದರಿಂದಲೂ ಅವರು ಅದನ್ನು ಪೂಜಿಸುತ್ತಾರೆಂಬದನ್ನು ನಾವು ಚನ್ನಾಗಿ ಬಲ್ಲೆವು ಹಿಂದುಧರ್ಮದಲ್ಲಿರುವ ಪೂರ್ವಕಾಲದ ಕಥೆಗಳನ್ನು ಲಕ್ಷ್ಯಕ್ಕೆ ತಾರದೆ ಆ ಕಾಲದ ಎಷ್ಟೋ ಯುಗಗಳ ೨೦ ಕೋಟಿ ಹಿಂದೂಜನರ ತಿಳುವಳಿಕೆಯು ಮೇಲೆ ಕಾಣಿಸುವ ಪ್ರಕಾರವಾಗಿರುವದರಿಂದ ಆ ತಿಳುವಳಿಕೆಗೆ ಬಾಧಕ ಬರುವ ಯಾವ ಸಂಗತಿಯನ್ನಾದರೂ ಯಾರಾದರೂ ದೇಶದಲ್ಲಿ ಮಾಡಹೋದರೆ ನಾವು ಹಾಗೆ ಮಾಡಗೊಡಲಿಕ್ಕಿಲ್ಲ ಆದೇ ಮೇರೆಗೆ ಆ ತಿಳುವಳಿಕೆಯು ಸಮೂಹಕ ಹಿಂದೂಜನರು ಮುಸಲ್ಮಾನರಿಗೆ ಬಾಧಕವಾಗಿ ಲಕ್ಷ ತಪ್ಪದು

ಹಿಂದೂಸ್ಥಾನದಲ್ಲಿ ಹಿಂದು ಮುಸಲ್ಮಾನರೆಂಬ ಉಭಯ ಜಾತಿಯ ಸದ್ಗೃಹಸ್ಥರು ಈಗಿನ ಸ್ಥಿತಿಯನ್ನರಿತು ಜನರ ಸ್ವಾಸ್ಥ್ಯದ ಮನಸ್ಸನ್ನು ಕಾಪಾಡುವ ಮಾಡುತ್ತಿರುವ ಪ್ರಯತ್ನಗಳನ್ನು ನೋಡಿ ನಾವು ಆನಂದಪಡುತ್ತೇವೆ ಈ ದೇಶದಲ್ಲಿ ನಡೆಯುವ ಇಂಗ್ಲಿಷ್ ಮತ್ತು ಪರದೇಶೀಯ ವರ್ತಮಾನ ಪತ್ರಕರ್ತರಿಗೂ ಅವುಗಳ ಬರೆಹಗಾರರಿಗೂ ನಾವು ಮುಖ್ಯಪೂರ್ವಕವಾಗಿ ಸೂಚಿಸುವದೇನಂದರೆ:—ಅವರು ದಂಗೆಗಳ ಸಂಗತಿಗಳನ್ನು ಕುರಿತು ಬರೆಯುವಾಗಲಿ ಅವುಗಳ ಸಂಬಂಧದಿಂದ ತಮ್ಮ ಅಭಿಪ್ರಾಯಗಳನ್ನು ಪ್ರಕಟಿಸುವಾಗಲಿ ಬಹಳ ಎಚ್ಚರಿಕೆಯಿಂದಲೂ ವಿಚಾರಪೂರ್ವಕವಾಗಿಯೂ ಅವುಗಳನ್ನು ಕುರಿತು ಬರೆಯಬೇಕಲ್ಲದೆ ಅಜ್ಞಾನಿಗಳಾದ ಬಾಹ್ಯದೊಂಬರ ಮತಸ್ಥರ ಮನಸ್ಸಿನಲ್ಲಿ ಅಭಿಮಾನಗಳು ಹುಟ್ಟಿ ಅವರು ದಂಗೆ ಮುಂತಾದ ಅನ್ಯಾಯ ಕಾರ್ಯಗಳಲ್ಲಿ ಪ್ರವರ್ತಕರಾಗುವಂಥ ಬರಹಗಳನ್ನು ಸರ್ವಥಾ ಬರೆಯಕೂಡದು ಯಾಕೆಂದರೆ ವರ್ತಮಾನಪತ್ರವೆಂಬ ಆಯುಧವು ಒಳ್ಳೇದಕ್ಕೆ ಹೇಗೋ ಅಷ್ಟೇ ಕೇಡಿಗೂ ಅನುಕೂಲಿಸುವ ಸಾಧನವಾಗುತ್ತದೆ ಬ್ರಿಟಿಷ್ ಹಿಂದೂಸ್ಥಾನದೊಳಗಿರುವ ವರ್ತಮಾನಪತ್ರಗಳು ಅನುಭವಿಸುವ ಸ್ವಾತಂತ್ರ್ಯವು ಬೇರೆ ಎಲ್ಲಿಯೂ ಇರುವದಿಲ್ಲ ಅದರಿಂದ ಈ ಹಕ್ಕುಗಳನ್ನು ಕಾಯ್ದುಕೊಳ್ಳುವಂತೆ ಅವುಗಳ ಬಳಕೆಯು ನಡೆಯತಕ್ಕದ್ದು ಅವರು ಜನರಲ್ಲಿ ತಾಳ್ಮೆ ಹುಟ್ಟುವಂತೆಯೂ ಅತಿಮೋಹದ ಅಭ್ಯಾಸಗಳು ಬಯಲಿಗೆ ಬೀಳುವಂತೆಯೂ ದಾಳಿಗಳು ನಿಂತು ಹೋಗುವಂತೆಯೂ ಹಿಂದುಮುಸಲ್ಮಾನರಲ್ಲಿ ಅನ್ಯೋನ್ಯ ಪ್ರೀತಿಯು ಇಲ್ಲದಿರುವಲ್ಲಿ ಅದು ಪುನಃ ಕಲಿಯೋರುವಂತೆಯೂ ಬರಹಗಳನ್ನು ಬರೆಯತಕ್ಕದ್ದು ಈ ಮೇರೆಗೆ ವರ್ತಿಸುವ ವರ್ತಮಾನಪತ್ರಕಾರರನ್ನು ನೋಡಿ ಸರ್ಕಾರಕ್ಕೆ ಸಂತೋಷವಾಗುವದು ಯಾಕೆಂದರೆ ದೇಶದಲ್ಲಿ ಶಾಂತತೆ ಇಲ್ಲದೆ ಹೋದರೆ ದೇಶದ ಏಳ್ಗೆಯು ಆಗದು

ಭಿನ್ನ ಭಿನ್ನ ಮತಸ್ಥರ ಮಧ್ಯದಲ್ಲಿ ಜಗಳ ಹುಟ್ಟಿಸುವದಕ್ಕಾಗಿ ಹಿಂದೂಸ್ಥಾನ ಸರಕಾರವು ದಂಗೆಗಳಿಗೆ ಉತ್ತೇಜನ ಕೊಡುತ್ತದೆಂದು ಕೆಲವು ಜನರು ಹೇಳುವ ವಿಷಯ ನಿಜವಲ್ಲ ಈ ಸುಳ್ಳನ್ನು ಹುಟ್ಟಿಸುವ ದುಷ್ಟಜನರ ಕುಬುದ್ಧಿಯನ್ನು ಎಷ್ಟು ಕಾರಣೋಗೆ..ದ ಜರಿದರೂ ಸಾಲದು ಈ ದುಷ್ಟ ಜನರು ತಮ್ಮ ಸಂಬಂಧ ಸುಳ್ಳುಸುದ್ದಿಗಳನ್ನು ದೇಶದಲ್ಲಿ ಹಬ್ಬಿಸುತ್ತಾರೆ ಮತ್ತು ಈ ದೇಶದಲ್ಲಿ ಇಂಥಾ ನಿಜವಾದ ಸಂಗತಿಗಳೆಂದು ಯಾರೂ ನಂಬುವದಿಲ್ಲವೆಂಬ ಮಾತಿನಬಗ್ಗೆ ಸರಕಾರದವರು ತಮ್ಮ ಮನವರಿಕೆಯನ್ನು ಮಾಡಿಕೊಂಡಿದ್ದಾರೆ ನಾವು ಮಹಮ್ಮದೀಯ ಮತಸ್ಥರಿಗೆ ಹೇಳುವದೇನಂದರೆ ನೀವು ನಿಮ್ಮ ಧರ್ಮಕೃತ್ಯಗಳನ್ನು ನೆರವೇರಿಸುವಾಗ ಹಿಂದುಜನರ ಧರ್ಮಶ್ರದ್ಧೆಯನ್ನರಿತು ನಿಮ್ಮ ಧರ್ಮಾಚರಣೆಯನ್ನು ಪೂಜ್ಯಭಾವದಿಂದಲೂ ಪರರಿಗೊಡವೆಗೆ ಹೋಗದೆಯೂ ನಿಮ್ಮ ನೆರೆಯುವರಾದ ಹಿಂದೂಜನರ ಮನಸ್ಸನ್ನು ನೋಯಿಸದೆಯೂ ಮಾಡುತ್ತ ಹೋಗಿರಿ ಅದರಂತೆಯೇ ಹಿಂದುಜನರಿಗೆ ಹೇಳುವದೇನಂದರೆ —ನೀವು ಗೋಸಂರಕ್ಷಕ ಸಭೆಗಳನ್ನು ಸ್ಥಾಪಿಸಿ ನಿರಾಧಾರವಾದ ಗೋವುಗಳ ಕಾಪಾಡುವಿಕೆ ..... ಬೇಕೆಂಬದಾಗಿಯೂ ಅವು ಮುದುಕತನ ಆಗಿ, ಇಲ್ಲವೆ ರೋಗದಿಂದ ನೊಂದಿ, ಮರಣಕಾಲವನ್ನು ಹಿಡಿದಾಗ, ಅವುಗಳನ್ನು ಅನ್ಯರು ಕ್ರೂರತನದಿಂದ ನಡಿಸಿಕೊಳ್ಳುವದನ್ನು, ನಿಲ್ಲಿಸಬಿಡುವದಕ್ಕಾಗಿಯೂ ನೀವು ಯಾವತರದ ಕ್ರಮದಲ್ಲಿ ಎಳೆದಾಡಿದರೂ ಕಡಿಮೆ ಮಾಡಲಿ; ಆದರೆ ನಿಮ್ಮ ಗೋರಕ್ಷಕ ಸಭೆಗಳಿಂದ ನಿಮ್ಮ ನೆರೆಯವರಿಗೆ ತೊಂದರೆ ಉಂಟಾಗದಂತೆಯೂ ಶಾಂತತೆಗೆ ಕಡದಂತೆಯೂ ಅವುಗಳಲ್ಲಿರುವ ನಿಯಮಗಳಲ್ಲಿ ಜಾತಿದ್ವೇಷವೆಂಬ ವಿಷವನ್ನು ಬೀರದಂತೆಯೂ ಅವುಗಳನ್ನು ನೀವು ನಡಿಸತಕ್ಕದ್ದು ಕೊನೆಯಲ್ಲಿ ನಾವು ಹಿಂದೂ ಮುಸಲ್ಮಾನರಿಗೂ ಕೂಡಾ ಹೇಳುವದೇನಂದರೆ—ನಮ್ಮ ಕೈಕೆಳಗಿನ ಉದ್ಯೋಗಸ್ಥರು ತಮ್ಮ ಕೆಲಸ ನಡಿಸುವಾಗ ಪಕ್ಷಪಾತವನ್ನು ಮಾಡಿದರೆ ಇಲ್ಲವೆ ಅವರು ಶಾಸನಗಳನ್ನು ಅತಿಕ್ರಮಿಸಿ ನಡೆದರೆ ಅವುಗಳ ಸಂಬಂಧವಾಗಿ ನೀವು ಸರಕಾರಕ್ಕೆ ತಿಳಿಸಬೇಕು ನ್ಯಾಯಕೋರ್ಟುಗಳು ನಿಮಗೆ ಯಥಾನ್ಯಾಯ ನಿರ್ಣಯಗಳನ್ನು ಕೊಡುವವು ಮತ್ತು ರಾಜ್ಯದಾಡಳಿತೆಯ ಪ್ರವರ್ತಕ ಅಧಿಕಾರಿಗಳು ನಿಮಗೆ ತಕ್ಕ ಸಹಾಯ ಮಾಡುವರು

ಶಾಲಿವಾಹನಶಕ ೧೮೧೪ ನೇ ವಿಜಯನಾಮ ಸಂವತ್ಸರದ ಮಾರ್ಗಶಿರ ಶುದ್ಧ ತ್ರಯೋದಶಿ ಗುರುವಾರದಿಂದ ಮಾರ್ಗಶಿರ ಬಹುಳ ಪಂಚಮಿ ಬುಧವಾರದವರೆಗಿನ ವಾರದ ಪಂಚಾಂಗ.

೧೮೯೨ ನೇ ಇಸವಿ, ಡಿಸೆಂಬರ್.

ತಾ	ವಾರ.	ತಿಥಿ	ಘಳಿಗೆ.	ನಕ್ಷತ್ರ	ಘಳಿಗೆ.	ಧನುರ್ಮಾಸ ತೇದಿ.
21	ಗು	ತ್ರ	20 39	ಕೃ	6 15	8
22	ಶು *	ಚ	15-1	ರೋ	2-27	9
23	ಶ †	ಪೌ	9-15	ಆರ್ದ್ರ	54-10	10
24	ರ	ಬ ಉಪಾಡ	3-41	ಪುನ	51 9	11
25	ಸೋ	ತ	51-56	ಪುಷ್ಯ	16-43	12
26	ಮಂ	ಚ	47-7	ಶ್ಲೇ	43 1	13
27	ಬು	ಪಂ	43 0	ಮ	40 29	14

* ಅರ್ಧೋದಯಸಂಕ್ರಾಂತಿ † ಆರ್ದ್ರೋತ್ಸವ

ಪೇಟೆ ಧಾರಣೆ.

ದಿನಸು.	ಮೈಸೂರು	ಬೆಂಗಳೂರು.
	ರೂ ಆ ಪೈ.	ರೂ ಆ ಪೈ.
ಕಡ್ಡೀ ಅಕ್ಕಿ ಪಲ್ಲ ೧ಕ್ಕೆ	೧೨-೮-೦	೧೨-೦-೦
ಕೆಂಬೂತಿ ಅಕ್ಕಿ ಅಸ್ಕರ್	೧೨-೮-೦	೯-೮-೦
ದಿಬೋ ಅಕ್ಕಿ ದಾಯಂ	೧೧-೦-೦	೯-೦-೦
ಜಾಬರಾಣಿ ಅಕ್ಕಿ	೧೧-೦-೦	೧೪-೮-೦
ಸಂಣಕ್ಕಿ ಅಸ್ಕರ್	೧೪-೦-೦	೧೫-೦-೦
ದಿಬೋ ಅಕ್ಕಿ ದಾಯಂ	೧೨-೮-೦	೧೨-೦-೦
ತೊಗರೀಬೇಳೆ ಪಲ್ಲ ೧ ಕ್ಕೆ	೧೪-೦-೦	೧೪-೮-೦
ದಿಬೋ ದಾಯಂ ತರಹ	೧೨-೮-೦	೧೦-೧೨-೦
ಹೈಗಾರಿ ಪಲ್ಲ ೧ಕ್ಕೆ	೩-೮-೦	೧೩॥ ೮-೦-೦
ಕಾರ್ಬ್ಯಾಗಿ ..	೩-೮-೦	೫॥೨೩-೦-೦
ಹುಲಸಂದೆ ಪಲ್ಲ ೧ಕ್ಕೆ	೯-೦-೦	೧೦-೧೨-೦
ಬೇಳೆ ಅವರೆ ..	೧೧-೦-೦	೧೨-೦-೦
ಹೆಸರು	೬-೮-೦	೮-೧೨-೦
ಉದ್ದು	೯-೩-೦	೧೧-೦-೦
ಕಡಲೆ	೯-೦-೦	೮-೮-೦
ಎಳ್ಳು	೧೨-೮-೦	೧೦-೦-೦
ಹುರಳಿ	೬-೨-೦	೬-೮-೦
ಸೀಗೇಕಾಯಿ ಮಣ ೧ಕ್ಕೆ	೨-೨-೦	೨-೮-೦
ಮೆಣಸಿನಕಾಯಿ	೪-೮-೦	೨-೮-೦
ದಾಯಂ ತರಹ	೪-೬-೦	೨-೦-೦
ಬೆಲ್ಲ ದೊಡ್ಡ ಅಚ್ಚು ೧೦೦ ಕ್ಕೆ	೫-೮-೦	ಮ ೨-೮-೦
ಸಣ್ಣ ಅಚ್ಚು ..	೫-೦-೦	ಮ॥ ೨-೦-೦
ಒಳ್ಳೆಣ್ಣೆ ಮಣ ೧ಕ್ಕೆ	೪-೧೨-೦	೪-೮-೦
ಹರಳೆಣ್ಣೆ	೪-೧೦-೦	೪-೧೨-೦
ಕೊತ್ತುಂಬರಿ ಪಲ್ಲ ೧ಕ್ಕೆ	೬-೪-೦	೬-೪-೦
ಉಪ್ಪು	೯-೮-೦	೬-೪-೦
ಮಾಗೀಹಣ್ಣು ಮಣ ೧ಕ್ಕೆ	೨-೬-೦	೨-೦-೦
ಹಳೇ ಹುಣಿಸೇಹಣ್ಣು ..	೨-೦-೦	೧-೧೨-೦
ತುಪ್ಪ	೧೧-೦-೦	೮-೮-೦
ಸೀಮೆ ಯಂಣೆ ಪೆಟ್ಟಿ ೧ ಕ್ಕೆ	೪-೧೨-೦	೪-೯-೦
ತೆಂಗಿನಕಾಯಿ ೧೦೦ ಕ್ಕೆ	೫-೦-೦	೩-೮-೦
ಟಿನ್ನ (ಪೌಂ)		
ಕೆಂಪು ..	೧೬-೦-೦	೧೬-೨-೬
ಹಸುರು ..	೧೬-೧೨-೦	೧೬-೬-೬
ಗಟ್ಟಿ ..	೨೬-೮-೦	೨೫-೧೨-೦

Mysore.—Printed and published for the Proprietor at the Wesleyan Mission Press.
21/12/92.

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು — ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಸಂಪುಟ ೨ — ಮೈಸೂರು—೧೮೯೩ ನೇ ಇಸವಿ ಡಿಸೆಂಬರ್ ತಾರೀಖು ೨೮ ನೇ ಗುರುವಾರ. — ಸಂಚಿಕೆ ೨೯

ನೋಟಿಸ್.

		ಕ್ರಯ			ಹಾಸಲು ಸಹಿತವಾಗಿ		
Campbell's	ಕನ್ನಡ ವ್ಯಾಕರಣ ಸಾರ	೦	೨	೦	೦	೨	೬
Object Lessons.	ವಸ್ತು ಪಾಠಗಳು	೦	೧	೦	೦	೧	೬
Picture do	ಚಿತ್ರಗಳು ಸಹಿತವಾಗಿ	೦	೨	೦	೦	೨	೬
School Geography	ಭೂಗೋಳ ಶಾಸ್ತ್ರಸಾರ	೦	೬	೦	೦	೭	೦

ಈ ನಾಲ್ಕು ಪುಸ್ತಕಗಳು ಮೈಸೂರು ಸರ್ಕಾರದವರ ಅಪ್ಪಣೆ ಪ್ರಕಾರ ಸಕಲ ಸ್ಕೂಲ ಕಾಲೆಜುಗಳಲ್ಲಿಯೂ ಉಪಯೋಗಿಸತಕ್ಕವುಗಳು.

ಮಾರ್ಟಿನ್ ಲೂತರ್ ಎಂಬುವನ ಚರಿತ್ರ	೦	೧	೬	೦	೨	೦
ಸ್ತ್ರೀಯರು ಓದತಕ್ಕ ಪುಸ್ತಕ	೦	೩	೦	೦	೩	೬
ಗಣಿತ ಪಾಠಗಳು	೦	೧	೦	೦	೧	೬
ಸಂಸ್ಕೃತ ಕಾರಿಕ ಟೀಕ ಭಾಷಾಮಂಜರಿ	೦	೨	೦	೦	೨	೬
ಇಂಗ್ಲೀಷು ಕನ್ನಡವುಳ್ಳ ಶಬ್ದಾವಳಿ ೧ನೇ ೨ನೇ ಭಾಗಕ್ಕೆ	೦	೧	೦	೦	೧	೬
ಕಾವ್ಯಮಾಲೆ (Minor Poetical Anthology)	೦	೮	೦	೦	೮	೬
ಬಾಲವ್ಯಾಕರಣ	೦	೩	೦	೦	೩	೬
ಹಳಗನ್ನಡ ವ್ಯಾಕರಣ ಸೂತ್ರಗಳು	೦	೬	೦	೦	೬	೬
ಇಂಗ್ಲೀಷು ಕನ್ನಡವುಳ್ಳ ಸಂಭಾಷಣ ವಾಕ್ಯಗಳು	೦	೧೦	೦	೦	೧೦	೬
ಶಬ್ದಮಣಿ ದರ್ಪಣ	೧	೦	೦	೧	೪	೬
Kan Eng Pocket Dictionary	೧	೪	೦	೧	೫	೨
Eng Kan School Dictionary	೨	೧೦	೦	೨	೧೨	೬
ಬಳ್ಳೀ ತಾಯಿ	೦	೪	೪	೦	೪	೬
ಆತ್ಮಿಕ ದಿವ್ಯ ಯುದ್ಧ (Bunyan)	೦	೧೨	೦	೦	೧೩	೬
ಕೃಷಿ ಪದ್ಧತಿ ೧ನೇ ಭಾಗ ೨ ಅಣೆ ೩ನೇ ಭಾಗ	೦	೧	೬	೦	೨	೦
ಭಕ್ತಿಸಾರಂ	೦	೧	೦	೦	೧	೬
ಸತ್ಯ ವಾಗ್ದಾನಿ	೦	೧	೦	೦	೧	೬

ಈ ಪುಸ್ತಕಗಳೂ ಇನ್ನೂ ಅನೇಕ ಪ್ರಯೋಜನಕರವಾದ ಪುಸ್ತಕಗಳೂ ಕೆಳಗೆ ನಮೂದಿಸಿರುವ ಸ್ಥಳಗಳಲ್ಲಿ ದೊರೆಯುತ್ತವೆ

ಬೆಂಗಳೂರು—ಪೇಟೆ ಮಿಷನ ಪತ್ರ ಪುಸ್ತಕಶಾಲೆ.

ಚಿಕ್ಕಬಳ್ಳಾಪುರ—ಲಾರ್ಡ ಮಿಷನ ರೀಡಿಂಗ್ ರೂಮ್

ತುಮಕೂರು—ವೆಸ್ಲೆಯನ್ ಮಿಷನ ಬಂಗಳೆ. ಮೈಸೂರು—ವೆಸ್ಲೆಯನ್ ಮಿಷನ ಪ್ರೆಸ.

ಸ ೧೮೮೯ ರಲ್ಲಿ ಸ್ಥಾಪಿಸಲ್ಪಟ್ಟದ್ದು.

ಕನರಾ ಅಂಡ್ ಮೈಸೂರ ಟ್ರೇಡಿಂಗ ಏಜನ್ಸೀ ಆಫೀಸ, ಮುಂಬಯಿ.

ಇವರು ತಯಾರಿಸಿರುವಂಥ—

ದ್ಯೈನಂದಿನ ತೈಲ

ಕಳೆದ ಜನವರಿ ತಿಂಗಳೊಂದರಲ್ಲಿ ೩,೦೦೦ ಬಾಟ್ಲಿಗಳು ಖರ್ಚಾದವು. ಈ ತೈಲದ ಮಹತ್ವವನ್ನು ಕುರಿತು, ನಾವೀಗ ಹೆಚ್ಚಾಗಿ ವರ್ಣಿಸಲಾರೆವು—ಯಾಕಂದರೆ, ಯಾರು ಈ ತೈಲವನ್ನು ಉಪಯೋಗಿಸುತ್ತಾರೋ ಅವರಿಗೆ ಒಂದೆರಡು ದಿವಸಗಳಲ್ಲಿಯೇ ಇದರ ಅಪ್ರತಿಮವಾದ ಗುಣವು ಸಹಜವಾಗಿ ಅನುಭವಕ್ಕೆ ಬರುವದು. ಆದಾಗ್ಯೂ ಇದರ ಮುಖ್ಯವಾದ ಉಪಯೋಗವನ್ನು ತಿಳಿಸುವದು ನಮ್ಮ ಕರ್ತವ್ಯವಾಗಿರುತ್ತದ.

ಈ ನಮ್ಮ "ದೈನಂದಿನ ತೈಲವನ್ನು" ಪ್ರತಿದಿನ ತಲೆಗೆ ಹಾಕಿಕೊಂಡರೆ, ಮಿದುಳಿನಲ್ಲಿರುವ ಉಷ್ಣತೆಯನ್ನು ಹೊರಡಿಸುವದಲ್ಲದೆ, ಕಣ್ಣಿಗೂ, ಮಿದುಳಿಗೂ ತಂಪುಕೊಟ್ಟು, ಚಿತ್ತಕ್ಕೆ ಶಾಂತತೆಯನ್ನುಂಟುಮಾಡುವದು. ಮತ್ತು ಕಣ್ಣುಗಳಿಗುಂಟಾಗುವ ಸಾಮಾನ್ಯವಾದ ವಿಕಾರಗಳನ್ನೆಲ್ಲ ಪರಿಹರಿಸುವದು; ದೃಷ್ಟಿಗೆ ತೀಕ್ಷ್ಣತೆಯುಂಟುಮಾಡುವದು.

ಹೆಚ್ಚಾಗಿ ಓದತಕ್ಕವರಿಗೂ, ಒಂದೇ ಸಮನಾಗಿ ಕಣ್ಣಿಟ್ಟು ಕೆಲಸ ಮಾಡತಕ್ಕ ಕಸಬುಗಾರರಿಗೂ, ಕಣ್ಣುಗಳಲ್ಲಿ ನೀರು ಸುರಿಯುವವರಿಗೂ, ಉರಿಗಣ್ಣಿನವರಿಗೂ, ಚಿತ್ತವ್ಯಗ್ರವಾದವರಿಗೂ, ಅತ್ಯಂತ ಗುಣಕಾರಿಯಾಗಿರುವದು. ಈ ತೈಲದಲ್ಲಿರುವ ಇನ್ನೊಂದು ಅಪ್ರತಿಮವಾದ ಶಕ್ತಿಯೇನಂದರೆ—ಕೂದಲುಗಳನ್ನು ನಯವಾಗಿಯೂ, ಹೊಳೆಯುವಂತೆಯೂ, ಮಾಡುವದಲ್ಲದೇ ಬೆಳವಣಿಗೆಯನ್ನು ಹೆಚ್ಚಿಸುವದು. ಕೂದಲುಗಳ ಬೇರುಗಳನ್ನು ಭದ್ರಮಾಡಿ, ಅವು ಉದುರಿಹೋಗದಂತೆ ಮಾಡುವದು.

ಪ್ರತಿಯೊಂದು ಬಾಟ್ಲಿಯೊಳಗೆ ೧೨ ರೂಳಿ ತೈಲವಿ—ಇದರಿಂದರ ಒಬ್ಬನಿಗೆ ೨ ತಿಂಗಳು ಬೇಕಾಗುವದು. [illegible] ಪ್ರತಿಯೊಂದು ಬಾಟ್ಲಿಗೆ ೧೦ ಆಣೆ ಕ್ರಯವಿದ್ದು, ೧೨ ಬಾಟ್ಲಿಗಳ ೧ ಪೆಟ್ಟಿಗೆಗೆ ೬॥ ರೂಪಾಯಿ. ಪ್ರತಿಯೊಬ್ಬ ಕುಟುಂಬಿಗನೂ, ಈ ತೈಲವನ್ನು ಉಪಯೋಗಿಸುವದು ಅವಶ್ಯವಾಗಿರುತ್ತದೆ. ಮಕ್ಕಳು ಮರಿಗಳಿಗೆ ಸಹ ಈ ತೈಲವು ಸುಖಾವಹವಾಗಿರುತ್ತದೆ.

ಈ ತೈಲ ಮತ್ತು ಈ ಕೆಳಗೆ ಬರೆಯುವಂಥ ದಿನಸುಗಳು, ಪ್ರೆಸ್ಸು, ಮುತ್ತು, ರತ್ನ, ಬಂಗಾರ, ಬೆಳ್ಳಿ ಮುಂತಾದ ಸಾಮಾನುಗಳನ್ನು ಪಡೆಯಬೇಕೆನ್ನುವವರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬೇಕು.

ಮ್ಯಾನೇಜರ್, ಕನರಾ ಅಂಡ್ ಮೈಸೂರ ಟ್ರೇಡಿಂಗ ಏಜನ್ಸಿ ಆಫೀಸ, ಮಾರ್ಕೆಟ ಸ್ಟ್ರೀಟ್. ಮುಂಬಾಯಿ.

ಈ ತೈಲವನ್ನು ನಮ್ಮ ಹೊರತು ಯಾರೂ ಮಾಡಲಾರರು. ನಮ್ಮ ಹೆಸರಿನ ಗುರ್ತನ್ನು ನೋಡಿ ತೆಗೆದುಕೊಳ್ಳಬೇಕು. ಬೇರೇವರ ಬಾಟ್ಲಿಗಳನ್ನು ಈ ಹೆಸರಿಟ್ಟು ಮಾರುತ್ತಿದ್ದರೆ ಜಾಗ್ರತ ವಹಿರಿ!

ದಿನಸುಗಳು	ರೂ. ಆ.	ಪ್ರೆಸ್ಸುಗಳು.	ರೂ. ಆ.
ಸಮಾಸಪತ್ರಿಕೆಗಳ ಬಾಟ್ಲಿ ೧ಕ್ಕೆ	೧ ೬	ಮೂಲೆಯ್ಯಾಗೆ ಮತ್ತು	೨—೮
ಸುವಾಸನೆಪತ್ರ ಕಾಡಿಗೆ	೧—೦	ಕಾನ್ಸರ್ವೇನ ಲಂಗ್‌ಕೋಟ್	೫—೦
ಕರ್ಪೂರ ಸುವಾಸನಾ ಅಪ್ರತಿಮತೈಲ	೧ ೦	ಡಿಟೊ ಅರ್ಕಸೆರಿ	೩—೮
ಮಾಸಾಮಾತಕ ಧಾತೃತೈಲ	೧—೦	ಡಿಟೊ ಪ ಟರ್ಕೋಪಿ (ಇಂಗ್ಲಿಷಮಾದರಿ)	೪—೬
ಪ್ರವಾಳಭಸ್ಮ	೨—೧೨	ಪಿಸ್ತಾಸಾದ ಕಪ್ಪ್ರೇನ್‌ಕೋಟ್	೨—೮
ಮಹಿಮಾ ಜೀರ್ಣಪ್ರಿಯೆಯು	೧ -	ಡಿಟೊ. ಅರ್ಕಸೆರಿ	೨—೪
ಬಂಗಾರದಮಿಸಿಗಾಟಗೆ	೩ -	ಪ್ಲಾನಲ್ ಕಮೀಸ್	೧—೧೨
ಅಜೀರ್ಣ ಮಾತ್ರೆ	೦	ಡಿಟೊ ಬನಿಯನ್	೧—೪
ಸುಗಂಧರಾಜವರ ಪಾಡರು	೦ ೪	ಶಾಲ (ಇಂಗ್ಲಿಷಮಾದರಿ) ಪಟೋ	೦—೧೨
ಕಜ್ಜಿ ಮುಲಾಮು	೦ ೨		

ತನಸ್ಕರಿ ಮಾಡ ಟೋಪಿ ಕಂತ ಟೋಪಿಯ ಪ್ರತಿಕ ೮ ಕ್ರಯ ರೂ. ೧೦—೩॥—೫—೩॥ ಉತ್ತಮವಾದ "ಸಬ್ಬು" ಎಂಬ ಕಸರ (ಒಂದು ಪೆಟ್ಟಿಗೆ ೧೨ ಬಿಲ್ಲೆ ಇರುವ) ಕ್ರಯ ರೂ. ೬

ನೋಟಿಸ್

ಪುಸ್ತಕಗಳು	ಕ್ರಯ
ಪ್ರಾಥಮಿಕ ವ್ಯಾವಹಾರಿಕೆ	1- 8 0
ಕನ್ನಡ ಇಂಗ್ಲೀಷು ನಿಘಂಟು 1 ನೇ ದೊಡ್ಡ ತರಹ	3 0 0
" " 2 ನೇ ತರಹ	2 8 0
ಬಾಲಕರು ಓದುವ ಎರಡನೆ ಜ್ಞಾನೋಪದೇಶದ ಪ್ರಶ್ನೋತ್ತರಗಳು	0 1 0
ಹತ್ತು ನಿಯಮಗಳನ್ನು ಕುರಿತದ್ದು	0-0 6
ಕಥಾ ಸಂಗ್ರಹ ನೇ ಭಾಗದಿಂದ 3 ವರೆಗೆ	1-0 0
ಕಥಾ ಸಂಗ್ರಹ 1 ರಿಂದ 3 ನೇ ಭಾಗ ಹೊಸ ಛಾಪೆ	1-0-0
" " ದೊಡ್ಡ ತರಹ	1-8-0
ಬೋಧಕ ಸಂಕ್ಷೇಪ ಧ್ವನಿ	0-1 0
ಸತ್ಯವೇದವನ್ನು ಕುರಿತು 2 ನೇ ಭಾಗ	0-1-0
ಪ್ರಸಂಗಿಯ ದರ್ಪಣ	0 0 6
ಇಂಗ್ಲೀಷು ಭಾಷೆಯಲ್ಲಿಯೂ, ಕನ್ನಡ ಭಾಷೆಯಲ್ಲಿಯೂ, ಶಬ್ದಗಳ ವಿಭಾಗಗಳನ್ನು ವಿವರಿಸಿರುವ ನಿಘಂಟು	0-2-0
ಕನ್ನಡ ವ್ಯಾಕರಣ (ಇಂಗ್ಲೀಷಿನಲ್ಲಿ)	2 0 0
ಹಿಂದುಸ್ಥಾನಿ ವ್ಯಾಕರಣ	1 0-0
ಬಾಲರ ಸೋಪಾನವು	0-12-
ದಶ ಕರಣಗಳ ಅಭ್ಯಾಸಕೋಷ್ಟಕ	0 0-6
ಕ್ರೈಸ್ತರ ಪ್ರಾರ್ಥನೆಗಳ ಸಂಗ್ರಹವು	0 12 0

ಮೇಲೆ ನಮೂದಿಸಿರುವ ಪುಸ್ತಕಗಳನ್ನು ಅಪೇಕ್ಷಿಸುವವರು ಮೈಸೂರು ವೆಸ್ಲೆಯನ್ ಮಿಷನ ಪ್ರೆಸ್ಸಿಗೆ ಬರೆದು ತರಿಸಿಕೊಳ್ಳಬಹುದು ಅಂಚೇ ಹಾಸಲು ಬೇರೆ ಕೊಡಬೇಕು

ವೆಸ್ಲೆಯನ್ ಮಿಷನ ಪ್ರೆಸ್,

ಮೈಸೂರು.

ಪ್ರಸಿದ್ಧಪತ್ರಿಕೆ

ಕಂ॥ ಸಕಲಸಾಮಾನಸರಿಗಧಿಕಾಮೆ । ಸುಕರದಿ ಶ್ರೀಚಾಮರಾಜ ಒಡೆಯ ಮಹೇಶಂ । ಪ್ರಕಟಿಪನಾಯಭೂಸುರತೆ । ವಿಕಸಿತವೇಹಿದ ಕೇಳ್ವನಾರಾದಂ ॥

ಕನ್ನಡ ಮಹಾಭಾರತ.

"ಶ್ರೀಕೃಷ್ಣರಾಜ ವಾಣೀವಿಲಾಸ" ಎಂಬ ಕನ್ನಡ ಮಹಾಭಾರತವು ನಮ್ಮ ಸ್ವಕೀಯ ಶ್ರೀಚಾಮುಂಡೇಶ್ವರಿ ಪ್ರೆಸ್ಸಿನಲ್ಲಿ ಪ್ರಕಟಿಸಲಾಗುವದು ಯಲ್ಲರಿಗೂ ವಿದಿತವಾಗಿರುವಷ್ಟು ಈಗ ಅದನೇಕ ಪರ್ವಗಳೂ ಪೂರ್ತಿಯಾಗಿ ಪ್ರತ್ಯೇಕ ಅಪೇಕ್ಷಿಸುವವರು ಕೆಳಗೆ ವಿವರಿಸುವ ಪ್ರಮಾಣದೊಳಗೆ ಕ್ರಯ ಪಾವತಿಮಾಡಿ ಪಡೆಯಬಹುದು

ಆದಿಪರ್ವ ರೂ ೩ ಸಭಾಪರ್ವ ೧—೮—೦, ಅರಣ್ಯಪರ್ವ ವಿರಾಟಪರ್ವ ಪ್ರತ್ಯೇಕವಾಗಿ ೧೨ ಆಣೆ, ಟಿಪೊ ಕಿತ್ತಾನಿನ ಪುಲಿಸ್ಕೆಂಪು ೧ ರೂ ಉದ್ಯೋಗಪರ್ವ ಭೀಷ್ಮಪರ್ವ ೨ ದ್ರೋಣಪರ್ವ ೨—೮—೦, ಕರ್ಣಪರ್ವ ಶಲ್ಯಪರ್ವ ೧—೬—೦ ಸೌಪ್ತಿಕಪರ್ವ ೬ ಆಣೆ ಸ್ತ್ರೀಪರ್ವ ೬ ಆಣೆ, ಶಾಂತಿಪರ್ವ, ರಾಜಧರ್ಮ ೨—೬—೦ ಆಪದ್ಧರ್ಮ ೮ ಆ ಮೋಕ್ಷಧರ್ಮ ೨—೬—೦ ಅನುಶಾಸನಿಕಪರ್ವ ೩—೧೨—೦ ಅಶ್ವಮೇಧಿಕಪರ್ವ ೧—೧೨—೦. ಆಶ್ರಮವಾಸಿಕಪರ್ವ—ಮೌಸಲಪರ್ವ—ಮಹಾಪ್ರಸ್ಥಾನಪರ್ವ—ಸ್ವರ್ಗಾರೋಹಣಪರ್ವ ೧೧ ಆಣೆ ಭಗವದ್ಗೀತೆ ೮ ಆಣೆ ಯಾಯಾತಿ ರಾಮ ಚರಿತ್ರೆ ೩ ಆಣೆ ಪರಿಭಾಷಾಸಾರ ೬ ಪೈ ಅಪೇಕ್ಷಿಸುವವರು ಟಿಕೆಟ್ಟಿನ ನೋಟ್ಸು ೮ ಆಣೆ.

ಅರಣ್ಯಪರ್ವ, ಉದ್ಯೋಗಪರ್ವ, ಕರ್ಣಪರ್ವ ಈ ಮೂರು ಪರ್ವಗಳು ಗೌರ್ನಮೆಂಟು ಬುಕ್‌ಡಿಪೋವಿನಲ್ಲಿ ದೊರೆಯುವದು ಮೇಲೆ ಹೇಳಲ್ಪಟ್ಟಿರುವ ಪುಸ್ತಕಗಳು ನಮ್ಮಲ್ಲಿ ಸ್ವಲ್ಪವೇ ಇರುವದರಿಂದ ಜಾಗ್ರತೆಯಾಗಿ ತರಿಸಿಕೊಳ್ಳಬೇಕಾದದು.

ಶ್ರೀಮನ್ಮಹಾರಾಜರವರಿಗೆ ಫಲಪ್ರದ ಸರಸ್ವತಿಯ ದಾಸವರಕ್ಕೆ ಮುಖ್ಯವಾಗಿ ಸೇವಿಸಲ್ಪಟ್ಟ

ಎಂ. ರುದ್ರಪ್ಪ ಆಫೀಸರ್

ಪ್ರೊಪ್ರೈಟರ್ ಶ್ರೀಚಾಮುಂಡೇಶ್ವರಿ ಪ್ರೆಸ್.

೨.೮— ಟಾಗ್ ರೋಡ್ ಬೆಂಗಳೂರು

ವೃತ್ತಾಂತ ಪತ್ರಿಕೆ.

ಚಂದಾ ಸಿಗರ ಯ.

	ರೂ ಆ ಪೈ
ಸ್ಥಳದವರಿಗೆ ವರ್ಷ ೧ಕ್ಕೆ	೧ - ೨ - ೦
ಪರಸ್ಥಳದವರಿಗೆ ವರ್ಷ ೧ಕ್ಕೆ	೧ - ೧೨ - ೦
ಬಿಡಿ ಪತ್ರಿಕೆ ೧ಕ್ಕೆ	೦ - ೦ - ೩

ಈ ಪತ್ರಿಕೆಯು ಮೈಸೂರು ಛಾಪಖಾನೆಯಲ್ಲಿ ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ, ಪ್ರಕಟಿಸಲ್ಪಡುವದು ಇದರ ಮೊದಲುಗೊಂಡು ಸಮಸ್ತರಿಗೂ ಸುಲಭವಾಗುವಂತೆ ಈ ಪತ್ರಿಕೆಗೆ ಇಷ್ಟು ಅಲ್ಪ ದಾಮವನ್ನು ನಿರ್ಣಯಿಸಿರುತ್ತೇವೆ ಈ ಪತ್ರಿಕೆಯನ್ನು ಅಪೇಕ್ಷಿಸುವವರು ಚಂದಾಹಣವನ್ನು ಮುಂಗಡವಾಗಿ ಕೊಡಬೇಕು

ಎಡಿಟರ್,

ವೃತ್ತಾಂತ ಪತ್ರಿಕೆ

ಟೋಪಿಗಳು!

ಟೋಪಿಗಳು!! WOOL CAPS ಟೋಪಿಗಳು!!

ಹಾಸನದ ಅರ್ಫನೇಜಿನಲ್ಲಿ ತಯಾರಾಗುವಂಥ ಅಚ್ಚ ಉಣ್ಣೆಯಿಂದ ನೆಯ್ದ ಟೋಪಿಗಳು (Wool Caps) ನಮ್ಮ ಆಫೀಸಿನಲ್ಲಿ ಮಾರಿಕೆಗೆ ಸಿದ್ಧವಾಗಿರುತ್ತವೆ ದರವಿ—೧ ರೂ. ೨ ಆಣೆ ಇಂದ ೧ ರೂ. ೬ ಆಣೆಗಳ ವರೆಗೂ ಬೇರೆ ಬೇರೆ ರಂಗುಗಳುಂಟು. ಸ್ಥಳದವರು ಬಂದು ನೋಡಿ ಪಡೆಯಬಹುದು. ಪರಸ್ಥಳದವರು ಮುಂಗಡವಾಗಿಯೇ ಹಣ ಕಳುಹಿಸಿದಲ್ಲಿ ತ್ವರಿತದಲ್ಲಿ ಥಾಂಗೀ ಮೂಲಕ ಕಳುಹಿಸುತ್ತೇವೆ. ಥಾಂಗೀ ಛಾರ್ಜ ಬೇರೇ ಕೊಡಬೇಕು. ಮೇಲುವಿಳಾಸದಲ್ಲಿ ಟೋಪಿಗೆ ಸಂಬಂಧವಾದದ್ದು ಎಂದು ಬರೆಯಬೇಕು

ಮ್ಯಾನೇಜರ್,

ವೆಸ್ಲೆಯನ್ ಮಿಷನ ಪ್ರೆಸ್,

ಮೈಸೂರು.

ಚಂದಾದಾರರಿಗೆ.

ಪದ್ಧತಿಯನ್ನನುಸರಿಸಿ, ಕ್ರಿಸ್ತುಮಸ್ ಪಬ್ಲಿಕ್ ಹಾಲಿಡೇಸ್ಗಳಲ್ಲಿ ನಮ್ಮ ಆಫೀಸಿಗೆ ರಜಾ ಕೊಡುವದಾದುದರಿಂದ, ಬರುವ ಜನವರಿ ನಾಲ್ಕನೇ ತಾರೀಖು ಗುರುವಾರದ ದಿನದಲ್ಲಿ ಪ್ರಕಟಿಸಬೇಕಾದ ನಮ್ಮ ವೃತ್ತಾಂತ ಪತ್ರಿಕೆಯನ್ನು ನಿಲ್ಲಿಸಿದ್ದೇವೆಂದು ನಮ್ಮ ಚಂದಾದಾರರಿಗೆ ವಿಜ್ಞಾಪಿಸುತ್ತೇವೆ.

ಮೈಸೂರು } ಎಡಿಟರ್,
೨೮ನೇ ಡಿಸೆಂಬರ್ ೧೮೯೩ } ವೃತ್ತಾಂತಪತ್ರಿಕೆ.

ಪ್ರಕಟನ.

ದಕ್ಷಿಣ ಮಹಾರಾಷ್ಟ್ರ ರೈಲ್ವೆ.
ಮೈಸೂರು-ಕೋಲಾರ ಫೀಲ್ಡ್ ಸ್ಟೇಟ್ ರೈಲ್ವೆಸಹ.

ದಕ್ಷಿಣ ಮಹಾರಾಷ್ಟ್ರ ರೈಲ್ವೆ ಲೈನಿನಲ್ಲಿ ಗಾಡಿಗಳನ್ನು ಬಿಡುವದಕ್ಕೆ ಗೊತ್ತು ಮಾಡಲ್ಪಟ್ಟಿರುವ ಕಾಲಗಳನ್ನು ಬದಲಾಯಿಸಿ, ೧೮೯೪ನೇ ಇಸವಿ ಜನವರೀ ೧ನೇ ತಾರೀಖು ಮೊದಲ್ಗೊಂಡು ಜಾರಿಯಲ್ಲಿ ಬರುವಂತೆ ಬದಲಾವಣೆಗಳನ್ನು ಏರ್ಪಡಿಸಿರುತ್ತಾರೆ. ಈಗ ಹೊಸದಾಗಿ ಬದಲಾಯಿಸಲ್ಪಟ್ಟ ಕಾಲಗಳನ್ನು ತಿಳಿಯಬೇಕಾದವರು ಸ್ಟೇಷನ್‌ಗಳಲ್ಲಿ ಅಂಟಿಸಿರುವ ಹೊಸ ಕಾಲನಿರ್ಣಯದ ಪಟ್ಟಿಗಳನ್ನು ನೋಡಬಹುದು; ಇಲ್ಲವೆ ಆಯಾ ಸ್ಟೇಷನ್ ಮಾಸ್ಟರುಗಳಿಗೆ ಬರೆದು ತಿಳಿಯಬಹುದು ಎಂಬದಾಗಿ ಈ ಮೂಲಕ ಪ್ರಕಟಿಸಲಾಗಿರುತ್ತೆ.

ಧಾರ್ವಾರ್, } ಎ. ಸ್ಮಾಲಿ,
೨೨ನೇ ಡಿಸೆಂಬರ್ ೧೮೯೩ } ಟ್ರಾಫಿಕ್ ಮ್ಯಾನೇಜರ್.

ವೃತ್ತಾಂತ ಪತ್ರಿಕೆ.

೧೮೯೩ನೇ ಇಸವಿ ಡಿಸೆಂಬರ್ ತಾ|| ೨೮ನೇ ಗುರುವಾರ.

ಶ್ರೀಮನ್ಮಹಾರಾಜರವರ ಧರ್ಮಸತ್ರವು

ಮೈಸೂರು ಷಹರಿನಲ್ಲಿ ಸ್ಥಾಪಿಸಲ್ಪಟ್ಟು ಬಹುಕಾಲದಿಂದ ನಡೆದು ಬರುತ್ತಲಿರುವ ಶ್ರೀಮನ್ಮಹಾರಾಜರವರ ಧರ್ಮಸತ್ರದ ವಿಷಯದಲ್ಲಿ ಸಂಸ್ಥಾನದ ಮುಜರಾಯಿ ಇಲಾಖೆಯಲ್ಲಿ ಸೂಪರಿಂಟೆಂಡೆಂಟ್ರಾದ ಮ|| ಎ. ಶ್ರೀನಿವಾಸಾಚಾರ್ಲುರವರು ಕೆಲವು ಹೊಸದಾದ ಮತ್ತು ಜನೋಪಕಾರವಾದ ಪ್ರಸ್ತಾಪಗಳನ್ನು ಮಾಡಿ ಆ ಪ್ರಸ್ತಾಪಗಳಂತೆಯೇ ಆ ಧರ್ಮಸತ್ರವು ನಡೆಯಬೇಕೆಂದು ಘೋಷಿಸಿರುತ್ತಾರೆ. ಇದುವರಿಗೆ ಇಂಥಾ ಕಾನೂನುಗಳು ಸರಸ್ವತೀಪ್ರಸನ್ನವಾಗಿದ್ದೇ ಹೊರತು ಕಾರ್ಯತಃ ಆಕ್ಷಣ ಕಲಸಗಳು ಆ ಪ್ರಕಾರ ನಡೆಯುತ್ತಿರಲಿಲ್ಲವೆಂಬುದನ್ನು ಈಗ ಮಾಡಿರುವ ಹೊಸ ಪ್ರಸ್ತಾಪವೇ ಸೂಚಿಸುತ್ತಿರುವಾಗ್ಯೆ ನಾವು ಬೇರೆ ಆ ವಿಷಯದಲ್ಲಿ ಹೆಚ್ಚಾಗಿ ಚರ್ಚಿಸಲು ಅನಾವಶ್ಯಕವಾಗಿದೆ. ಕೆಲವು ಸರ್ಕಾರದ ನೌಕರರು ಸೇರಿಕೊಂಡು ಬಡಬಗ್ಗರಿಗೆ ಅನ್ನ ಹಾಕುವದರಲ್ಲಿಯೂ, ಕಂಗಳರಿಗೆ ಅಕ್ಕಿ ಬಟವಾಡೆ ಮಾಡುವದರಲ್ಲಿಯೂ ನಾನಾ ವಿಧವಾಗಿ ಅನ್ಯಾಯಗಳನ್ನು ಮಾಡುತ್ತಲಿದ್ದಾರೆಂದು ನಾವು ಆಗಾಗ್ಗೆ ಕೇಳುತ್ತಿದ್ದೆವು. ಇಂಥಾ ಅನ್ಯಾಯಗಳಿಗೆಲ್ಲಾ ಅವಕಾಶವಿಲ್ಲದಂತೆ ಈಗ ಮಾಡಿರುವ ಏರ್ಪಾಡುಗಳನ್ನು ತಿಳಿದು ಸಂತೋಷಿಸುವೆವು. ಆದರೂ ಇನ್ನೂ ಅಲ್ಪಸ್ವಲ್ಪ ಜಾಗ್ರತೆ ಬೇಕೆಂಬದಾಗಿ ತೋರುತ್ತೆ. ಇದನ್ನು ಮುಂದೆ ನಾವು ತಿಳಿಸಲು ಕಾಲವನ್ನು ನಿರೀಕ್ಷಿಸುತ್ತಿರುವೆವು. ಈಗ ಮಾಡಿರುವ ಪ್ರಸ್ತಾಪಗಳಲ್ಲಿನ ಮುಖ್ಯಸಂಗತಿಗಳನ್ನು ವಾಚಕರಿಗೆ ತಿಳಿಸಬೇಕೆಂದು ಪ್ರಯತ್ನಪಟ್ಟಿರುವೆವು.

ಕಂಗಳರಿಗೂ ಅನಾಥರಿಗೂ ಕೊಡಲ್ಪಡುವ ಅಕ್ಕಿ.

ಗಂಡಸರಾಗಲಿ, ಹೆಂಗಸರಾಗಲಿ ಮುದುಕರಾಗಿಯೂ, ದೇಹದಾರ್ಢ್ಯರಹಿತರಾಗಿಯೂ, ಕುಂಟರಾಗಿಯೂ, ಕುರುಡರಾಗಿಯೂ, ಅನಾಥರಿಂದಾಗಲಿ, ಜನನಕಾಲದಿಂದಾಗಲಿ ಅಂಗಹೀನರಾಗಿಯೂ, ಗುಣಪಡದರೋಗಪೀಡಿತರಾಗಿಯೂ, ದಿಕ್ಕಿಲ್ಲದ ಮಕ್ಕಳಾಗಿಯೂ ಇದ್ದು ಭಿಕ್ಷಕ್ಕೆ ಬಂತವರಿಗೂ ಮತ್ತು ಗೋಷಾ ಸ್ತ್ರೀಯರಾಗಿದ್ದಾಗ್ಯೂ ಬಡವರುಗಳಿಗೆಲ್ಲಾ ಮೇಲ್ಕಂಡ ಸತ್ರದಲ್ಲಿ ತಿಂಗಳಿಗೊಂದಾವರ್ತಿ ಅಕ್ಕಿಯು ಕೊಡಲ್ಪಡತಕ್ಕದ್ದು. ಅಕ್ಕಿಯನ್ನು ಕೊಡುವಾಗ್ಗೆ ಸ್ವಾಯವಾಗಿ ಯಾವನಾದರೂ ಒಬ್ಬ ಜವಾಬ್ದಾರನಾಗಿರುವಂಥ ಅಧಿಕಾರಿಯು ರೂಬರೂ ಹಾಜರಿದ್ದು ರಿಜಿಸ್ಟರಿನಲ್ಲಿ ರುವಹಾಗೆ ಪ್ರಕಾರವೇ ಯಾವಾಗಲೂ ಬಟವಾಡೆ ಮಾಡಿಸಬೇಕು. ಇಂಥಾ ಧರ್ಮವನ್ನು ಈಗ ತೆಗೆದುಕೊಳ್ಳುತ್ತಲಿರುವವರನ್ನೆಲ್ಲಾ ನ್ಯಾಯವಾಗಿಯೂ ಅರ್ಹರಾಗಿರುವರೆಂತಲೂ, ಅನರ್ಹರೆಂತಲೂ ವಿಂಗಡಿಸಿ ಆಯಾ ಪಟ್ಟಿಗಳನ್ನು ಗವರ್ನಮೆಂಟಿಗೆ ಕಳುಹಿಸಿಕೊಡಬೇಕು. ಆದರಿಂದ ಗವರ್ನಮೆಂಟಿನವರು ಇಷ್ಟಬಂದವರನ್ನು ವಜಾಮಾಡಿ, ಕೊಡುವ ಹುಕುಂ ಪ್ರಕಾರ ನಡೆಯತಕ್ಕದ್ದು. ಈ ರೆಜಿಸ್ಟರಿಗೆ ಹೊಸ ಹೆಸರುಗಳನ್ನು ಸೇರಿಸಬೇಕಾಗಿದ್ದಲ್ಲಿ ಅರಮನೆಯ ಕಂಟ್ರೋಲರವರು ಮತ್ತು ಧರ್ಮದರ್ಶಿಗಳು ಅಂತ ಹೊಸಬರ ಸ್ಥಿತಿಗತಿಗಳನ್ನು ವಿಚಾರಿಸಿ, ನಿಜವಾಗಿಯೂ ಅರ್ಹರಾಗಿದ್ದರೇನೇ ಅವರನ್ನು, ಈ ಅಧಿಕಾರಿಗಳ ಶಿಫಾರಸಿನಮೇಲೆ ಸೇರಿಸಿಕೊಳ್ಳತಕ್ಕದ್ದು. ಹೊಸದಾಗಿ ಸೇರಿಸಲ್ಪಟ್ಟವರ ಸಂಖ್ಯೆಯನ್ನು ತೋರಿಸುವ ಪಟ್ಟಿಯೊಂದನ್ನು ದಿವಾನರವರ ಆಫೀಸಿಗೆ ಪ್ರತಿ ತಿಂಗಳಲ್ಲೂ ರವಾನಿಸಬೇಕು. ಈ ಅಕ್ಕಿಯನ್ನು ಸಡೆಯುತಲಿರತಕ್ಕವರ ಮರಣಾನಂತರ ಅದು ನಿಲ್ಲಿಸಲ್ಪಡತಕ್ಕದ್ದು. ಆದರೆ ಹಾಗೆ ಸಡೆಯುತ್ತಿರುವವರು ಇತರರ ಸಹಾಯದಿಂದ ಕೂಡಾ ಜೀವನವನ್ನು ಸಂಪಾದಿಸಿಕೊಳ್ಳುವದಕ್ಕೆ ಶಕ್ತರಾಗಿದ್ದಾರೆಂದು ತಿಳಿದು ಬಂದ ಪಕ್ಷದಲ್ಲೂ ಈ ಧರ್ಮವು ಅವರಿಗೆ ನಿಲ್ಲಿಸಬೇಕು. ಮತ್ತು ಒಂದು ವೇಳೆ ಅಕ್ಕಿಯನ್ನು ಪಡೆಯತಕ್ಕವರಲ್ಲಿ ಯಾರಾದರೂ ಅಕ್ಕಿಗೆ ಬದಲಾಗಿ ದುಡ್ಡನ್ನೇ ಅಪೇಕ್ಷಿಸಿದರೆ ಅಂತವರಿಗೆ ಪಲ್ಲಾ ೧ಕ್ಕೆ ೪ ರೂಪಾಯಿನಂತೆ ಹಣವನ್ನೇ ಕೊಡಬಹುದು.

ಅನ್ನಸತ್ರ.

ಅನ್ನಸತ್ರವು ಪ್ರಯಾಣಿಕರಿಗೆ ಉಪಯೋಗವಾಗಬೇಕು. ಯಾವ ಪ್ರಯಾಣಿಕನಿಗಾಗಲಿ ಅವನು ರೋಗಾಧಿಕರಿಗಳಿಂದ ಪ್ರಯಾಣವಾದ ಬಳಿಕ ಅಶಕ್ತನಾದನೆಂದು ಕಂಡುಬಂದ ಹೊರ್ತು, ಅವನಿಗೆ ಅನುಕ್ರಮವಾಗಿ ಮೂರುದಿನಗಳಿಗಿಂತ ಹೆಚ್ಚಾಗಿ ಅನ್ನವು ಕೊಡೋದು. ಅಕ್ಕಿಯನ್ನು ಪಡೆಯುತಲಿರುವವರ ಪೈಕಿ ಯಾರಾದರೂ ಬ್ರಾಹ್ಮಣರಾಗಿರುವವರು ಅಕ್ಕಿಗೆ ಬದಲು ಅನ್ನವಾಕಿದರೆ ಸಾಕೆಂದು ಅಪೇಕ್ಷಿಸಿದರೆ ಒಂದೊಂದು ದಿನಕ್ಕೆ ಅವರಿಗೆ ಅನ್ನ ಹಾಕತಕ್ಕದ್ದು. ವೈದಿಕರುಗಳಿಗೆ ಕೊಡಲ್ಪಡುವ ಸವಾವತ್ತಾಗಿ ಮಾಡೋದು ರೂಪಾಯಿಗಳನ್ನು ಸತ್ರದ ಫಂಡಿನಿಂದ ವಿನಿಯೋಗಿಸಕೂಡದ್ದು. ಧಾಟಿನಲ್ಲಿ ಹಣವಿಲ್ಲದ ಕಾರಣವನ್ನು ಹೇಳಿ ಯಾವ ಪ್ರಯಾಣಿಕನನ್ನೂ ಅನ್ನ ಹಾಕದೆ ಹಾಗೆ ಕಳುಹಿಸಕೂಡದು. ಯಾವ ಸಂದರ್ಭದಲ್ಲಾದರೂ ಹೊರಗಿನ ಸ್ವಯಂಪಾಕ ಮಾಡುವ ಪ್ರಯಾಣಿಕರಿಗೆ ಅಕ್ಕಿಯನ್ನು ಕಂಟ್ರೋಲರವರು ಈ ವಿಷಯವನ್ನು ಗವರ್ನಮೆಂಟಿನವರಿಗೆ ಬರೆದು ತಿಳಿಸಿ ಅವರ ಅಪ್ಪಣೆಯಿಂದ ಹೆಚ್ಚು ಹಣವನ್ನು ತರಿಸಿಕೊಳ್ಳಬಹುದಾಗಿರುತ್ತೆ. ಬಟವಾಡೆಗೂ ಮತ್ತು ಸತ್ರಕ್ಕೂ ಬೇಕಾಗಿರುವ ಎಲ್ಲಾ ಸಾಮಗ್ರಿಯುಗಳನ್ನು ಪರ್ಚೇಸ್ ಕಮಿಟಿಯು ಮಾಡುವಂತೆ ಕಂಟ್ರೋಲರವರಿಗೆ ಟ್ರಿಬ್ಯೂಟ್ ಫಂಡಿನಿಂದ ಕೊಡಬೇಕು. ಮತ್ತು ಸುಗ್ಗೀ ಕಾಲದಲ್ಲೇ ಈ ಪ್ರೊವಿಷನ್‌ಗಳನ್ನು ಗೊತ್ತುಮಾಡಬೇಕು. ಹೀಗೆ ಮಾಡೋ ಅವರು ಮುಖ್ಯ ದಿನಸಿಗಳ ಧಾರಣೆಯು ಹೆಚ್ಚಾಗುವ ತಕ್ಕಮಟ್ಟಿಗೆ ಸತ್ರಕ್ಕೆ ಅದಾಯವಾಗುವದರಲ್ಲಿ ಸಂಶಯವಿಲ್ಲ.

ಹಿಂದೂಲಾ

ಮೈಸೂರು ಸಂಸ್ಥಾನದ ಛೀಫ್‌ಕೋರ್ಟಿನ ಅಡ್ವೊಕೇಟರಾದ ಮ|| ಎಂ. ಬಿ. ನಾರಣಯ್ಯಂಗಾರ್ಯರವರು "ಹಿಂದೂಧರ್ಮಶಾಸ್ತ್ರ (ಲಾ) ಸಂಗ್ರಹ" ವೆಂಬ ಪುಸ್ತಕವನ್ನು ಕನ್ನಡದಲ್ಲಿ ರಚಿಸಿ, ಮೈಸೂರು ಗ್ರಾಜುಯೇಟ್ಸ್ ಟ್ರೇಡಿಂಗ್ ಅಸೋಸಿಯೇಷನ್ ಪ್ರೆಸ್ಸಿನಲ್ಲಿ ಅಚ್ಚು ಹಾಕಿಸಿರುತ್ತಾರೆ. ಈ ಪುಸ್ತಕವು ೧೮೪ ಪುಟಗಳುಳ್ಳದ್ದು. ಪ್ರತಿ ೧ಕ್ಕೆ ಎರಡು ರೂಪಾಯಿಗಳೆಂದು ಆ ಪುಸ್ತಕವನ್ನು ನೋಡಿದವರಿಗೆಲ್ಲಾ ತಿಳಿದು ಬರುತ್ತೆ. ಅವನ್ನು ಅಚ್ಚು ಹಾಕಿರುವರು ಇನ್ನೂ ಚನ್ನಾಗಿ ಆಗಬಹುದಾಗಿದ್ದಾಗ್ಯೂ ತಕ್ಕಮಟ್ಟಿಗೆ ಇದೆ ಎಂದು ಹೇಳಬಹುದು. ಮ|| ನಾರಣಯ್ಯಂಗಾರ್ಯರವರು ಈ ಪುಸ್ತಕದ ಪೀಠಿಕೆಯಲ್ಲಿ ತಿಳಿಸಿರುವಂತೆ ನಮ್ಮ ಕರ್ನಾಟಕಜನರಿಗೆ ಹಿಂದೂಲಾ ಈಗ ಯಾವಸ್ಥಿತಿಯಲ್ಲಿದೆಯೋ ಅದನ್ನು ಸರಿಯಾಗಿ ತಿಳಿಸುವ ಪುಸ್ತಕವು ಯಾವದೊಂದೂ ಕನ್ನಡದಲ್ಲಿ ಇಲ್ಲದೆ ಇರುವದರಿಂದ ಉಂಟಾಗಿರುವ ಕೊರತೆಯನ್ನು ತಪ್ಪಿಸಬೇಕೆಂದು ಪ್ರಯತ್ನಪಟ್ಟಿರುತ್ತಾರೆ. ಈ ಶಾಸ್ತ್ರಕ್ಕೆ ಸಂಬಂಧಪಟ್ಟ ಪುಸ್ತಕಗಳು ಕನ್ನಡದಲ್ಲಿ ಬಂದರೂ ಇದ್ದಾಗ್ಯೂ ಅವು ವಿಷಯಗಳನ್ನು ಸ್ಪಷ್ಟವಾಗಿಯೂ, ಖಂಡಿತವಾಗಿಯೂ ವಿವರಿಸುವದಿಲ್ಲವಾದ್ದರಿಂದಲೂ, ಈಚೆಗೆ ಹಿಂದೂಲಾನಲ್ಲಿ ಅನೇಕ ಹೊಸವಿಷಯಗಳೂ, ವ್ಯತ್ಯಾಸಗಳೂ ಆಗಿರುವದರಿಂದಲೂ ಮತ್ತು ಹೈಕೋರ್ಟುಗಳು ಕೆಲವು ಸಂದರ್ಭಗಳಲ್ಲಿ ಬೇರೇ ವಿಧವಾಗಿ ತೀರ್ಮಾನವಾಗಿರುವದರಿಂದಲೂ, ಆ ಹಳೇ ಪುಸ್ತಕಗಳು ಈಗ್ಯೆ ಅಷ್ಟು ಉಪಯೋಗವಾಗಲ್ಲ. ಇಂಥಾ ಹೊಸ ಸಂಗತಿಗಳನ್ನು ತಿಳಿಸುವ ಪುಸ್ತಕವು ಜನರಿಗೆ ಬಹು ಆವಶ್ಯಕವಾಗಿತ್ತು.

ಹಿಂದೂಧರ್ಮಶಾಸ್ತ್ರಕ್ಕೆ ಆಧಾರವಾದ ಕೆಲವು ಸಂಸ್ಕೃತ ಗ್ರಂಥಗಳ ವಿಷಯಗಳು ಈ ಪುಸ್ತಕದ ಮೊದಲು ೧೨ ಪುಟಗಳಲ್ಲಿ ವಿವರಿಸಲ್ಪಟ್ಟಿವೆ. ತದನಂತರ ವಿವಾಹ, ಪುತ್ರಸ್ವೀಕಾರ, ದಾಯ, ವಿಭಾಗ ಮೊದಲಾದ ಅಂಶಗಳನ್ನು ಪ್ರಕರಣಗಳಾಗಿಯೂ, ಮತ್ತು ಸಕ್ಷನ್‌ಗಳಾಗಿಯೂ ವಿಂಗಡಿಸಿ, ೨೦ ಪ್ರಕರಣಗಳನ್ನು, ೩೩೪ ಸೆಕ್ಷನ್‌ಗಳನ್ನೂ ಬರೆದು ಇರುತ್ತಾರೆ. ಕೊನೆಯಲ್ಲಿ ಬಂಗಾಳದೇಶದಲ್ಲಿ ಜಾರಿಯಲ್ಲಿರುವ ಹಿಂದೂಲಾವಿಗೂ, ಈ ದೇಶಗಳಲ್ಲಿ ಜಾರಿಯಲ್ಲಿರುವ ಹಿಂದೂಲಾವಿಗೂ ಇರತಕ್ಕ ಮುಖ್ಯಭೇದಗಳನ್ನು ನಾಲ್ಕು ಪುಟಗಳಿಂದ ತಿಳಿಸಿರುತ್ತಾರೆ. ಈ ಸೆಕ್ಷನ್‌ಗಳೆಲ್ಲಾ ಯಾವಯಾವ ಆಧಾರಗಳ ಮೇಲೆ ಬರೆಯಲ್ಪಟ್ಟವೋ, ಆಯಾಯ ಆಧಾರಗಳನ್ನು, ಒಂದು ಸ್ತಂಭದ ಕೊನೆಯಲ್ಲಿ ನಮೂದಿಸಿ ಇರುತ್ತಾರೆ. ಮೇನ್, ಸ್ಟ್ರೇಂಜ್, ಕಿಪ್ಲಿನ್ಗ್ ಮುಂತಾದ ಗ್ರಂಥಕರ್ತರುಗಳ ಹಿಂದೂಲಾ ಪುಸ್ತಕಗಳು, ಹಿಂದೂಸ್ಥಾನದ ನಾನಾ ಹೈಕೋರ್ಟುಗಳ ಮತ್ತು ಮೈಸೂರು ಛೀಫ್‌ಕೋರ್ಟಿನ ತೀರ್ಪುಗಳನ್ನೂ, ಸಂಸ್ಕೃತದ ಮೂಲಗ್ರಂಥಗಳ ವಿಷಯಗಳನ್ನೂ ಪರಿಶೋಧಿಸಿ ಇದೇ ಶಾಸ್ತ್ರವೆಂದು ವ್ಯಾಖ್ಯಾನಿಸಲ್ಪಟ್ಟಿರುವ ಸಿದ್ಧಾಂತಗಳನ್ನು ಭಾಷಾಂತರ ಮಾಡಿದ್ದಾರೆ. ಈ ಪುಸ್ತಕವು ಇಂಗ್ಲಿಷ್ ಭಾಷೆಯನ್ನು ತಿಳಿಯದ ಸಾಧಾರಣಜನರ ಉಪಯೋಗಕ್ಕಾಗಿಯೇ ರಚಿಸಲ್ಪಟ್ಟಿದ ಯೆಂಬುವದಲ್ಲದೆ, ಈ ಉದ್ದೇಶವನ್ನು ಈ ಪುಸ್ತಕವು ನೆರವೇರಿಸುತ್ತದೆನ್ನುವದರಲ್ಲಿಯೂ ಸಂದೇಹವಿಲ್ಲ. ಆದರೆ ಈ ಪುಸ್ತಕವನ್ನು ಸಕ್ಷನ್‌ವಾರಾಗಿ ವಿಂಗಡಿಸಿ ಬರೆದಿರುವದಕ್ಕಿಂತಲೂ, ಚರಿತ್ರೆಯಂತೆ ಬರೆದು ಇದ್ದರೆ ಆಗ ಈ ಪುಸ್ತಕವು ಜನರ ದೃಷ್ಟಿಯನ್ನು ಈಗ್ಗಿಂತಲೂ ಹೆಚ್ಚಾಗಿ ಆಕರ್ಷಿಸುತ್ತಿತ್ತೆಂದು ನಾವು ಊಹಿಸುತ್ತೇವೆ.

ಈ ಪುಸ್ತಕವನ್ನು ರಚಿಸುವದಕ್ಕಾಗಿ ಅವರು ಬಹಳ ಪ್ರಯಾಸಪಟ್ಟಿರುತ್ತಾರೆನ್ನುವದಕ್ಕೆ ಸಂದೇಹವಿಲ್ಲ. ಇದರಲ್ಲಿ ಅಡಗಿಸಲ್ಪಟ್ಟಿರುವ ವಿಷಯಗಳೂ ಅನೇಕ ಪುಸ್ತಕಗಳಿಂದ ಸಂಗ್ರಹಿಸಲ್ಪಟ್ಟಿರುವದರಿಂದ, ಇಂಗ್ಲಿಷ್ ತಿಳಿದಿರುವವರಲ್ಲಿಯೂ ಕೂಡ ಅನೇಕರಿಗೆ ಇದು ಬಹು ಪ್ರಯೋಜನವಾಗಿರುವದೆಂದು ನಂಬಿದ್ದೇವೆ. ಇಷ್ಟು ಚಿಕ್ಕಪುಸ್ತಕದಲ್ಲಿ ಹಿಂದೂಲಾವಿಗೆ ಸಂಬಂಧಪಟ್ಟ ಮುಖ್ಯವಿಷಯಗಳನ್ನು ಕುರಿತು ನೂತನವಾದ ಮತ್ತು ನಿಷ್ಕೃಷ್ಟವಾದ ತೀರ್ಮಾನಗಳನ್ನೆಲ್ಲಾ, ಹೆಚ್ಚು ವಿಷಯಗಳನ್ನು ಧಾರಾಳವಾಗಿ ಚರ್ಚಿಸಲು ಸಾಧ್ಯವಿಲ್ಲ. ಆಕಾರದಲ್ಲಿ ಪುಸ್ತಕವು ಚಿಕ್ಕದಾಗಿದ್ದಾಗ್ಯೂ ಮುಖ್ಯವಾದ ವಿಷಯಗಳನ್ನು ಬಹು ಸ್ಪಷ್ಟವಾಗಿ ತಿಳಿಸಿರುವದಕ್ಕಾಗಿ ನಾವು ಸಂತೋಷಿಸುತ್ತೇವೆ.

ಅಂಕಗಣಿತ,
ಬಾಲಶಿಕ್ಷೆ

ಮೈಸೂರು ಮಹಾರಾಜರ ಕಾಲೇಜಿನಲ್ಲಿ ಸಹಾಯೋಪಾಧ್ಯಾಯರಾದ ಮ|| ಕೋ. ಕಂ. ವೆಂಕಟರಾಮಯ್ಯ ಬಿ. ಎ. ಯವರು ಕರ್ನಾಟಕದೇಶೀಯ ಉಪಾಧ್ಯಾಯರುಗಳ ಉಪಯೋಗಕ್ಕಾಗಿ "ಅಂಕಗಣಿತ—ಬಾಲಶಿಕ್ಷೆ" ಎಂಬೀ ಪುಸ್ತಕವನ್ನು ರಚಿಸಿ, ಅದನ್ನು ಬೆಂಗಳೂರಿನಲ್ಲಿ ಸ್ಥಾಪಿಸಲ್ಪಟ್ಟಿರುವ ಮೈಸೂರು ಗೌರ್ನಮೆಂಟ್ ಸೆಂಟ್ರಲ್ ಪ್ರೆಸ್ಸಿನಲ್ಲಿ ಸರ್ಕಾರಿಯಾಗಿ ಪ್ರಿಂಟುಮಾಡಿಸಿ ಪ್ರಕಟಿಸಿರುತ್ತಾರೆ. ಈ ಪುಸ್ತಕವು ಅತ್ಯಾವಶ್ಯಕವಾಗಿದ್ದದರಿಂದ ಇಲ್ಲಿನ ವಿದ್ಯಾಭ್ಯಾಸದ ಇಲಾಖೆಯವರು ಅದನ್ನು ವಹಿಸಿಕೊಂಡಿರುತ್ತಾರೆ. ಈ ಪುಸ್ತಕವು ೧೭೦ ಪುಟಗಳುಳ್ಳದ್ದು. ಬಾಲಶಿಕ್ಷೆಗೆ ಎಷ್ಟು ಆವಶ್ಯಕವೋ, ಯಾವ ಯಾವ ವಿಷಯಗಳು ಬೇಕಾಗುವವೋ ಅಂಥಾ ವಿಷಯಗಳೇ ಈ ಪುಸ್ತಕದಲ್ಲಿ ಅಡಗಿವೆ. ಈ ಪುಸ್ತಕವು ಮುಖ್ಯವಾಗಿ ಹೊಸದಾಗಿ ಸೇರುವ ಬಾಲಕರಿಗೆ ಆ ತ್ಯಂತ ಉಪಯೋಗವಾದದ್ದು. ಆದುದರಿಂದ ಗಣಿತವನ್ನು ಹೇಳುವ ತರಗತಿಗಳ ಉಪಾಧ್ಯಾಯರುಗಳೆಲ್ಲರೂ ಈ ಪುಸ್ತಕದಲ್ಲಿ ವಿವರಿಸಿರುವದನ್ನೆಲ್ಲಾ ಶ್ರದ್ಧೆಯಿಂದಲೂ, ಸೂಕ್ಷ್ಮವಾಗಿಯೂ ಓದಿ ತಿಳಿದು, ತಮ್ಮ ಕೈಕೆಳಗೆ ಕೊಡಲ್ಪಟ್ಟಿರುವ ವಿದ್ಯಾರ್ಥಿಗಳಿಗೆ ಅದೇ ಪ್ರಕಾರ ಬೋಧನೆ ಮಾಡಬೇಕು. ಈ ರೀತಿಯಲ್ಲಿ ಬಾಲಕರನ್ನು ಗಣಿತಶಾಸ್ತ್ರದಲ್ಲಿ ತಯಾರ್ಮಾಡಿ, ಅವರಿಗೆ ಒಳ್ಳೇ ಅಸ್ತಿವಾರವನ್ನು ಹಾಕಿಕೊಟ್ಟರೆ, ಆ ವಿದ್ಯಾರ್ಥಿಗಳು ಗಣಿತದಲ್ಲಿ ಪೂರ್ಣಘಟಿತರಾಗುವದರಲ್ಲಿ ಸಂಶಯವಿಲ್ಲ. ಈಗ ಪಬ್ಲಿಕ್ ಪರೀಕ್ಷೆಗಳಲ್ಲಿ ಅನೇಕ ವಿದ್ಯಾರ್ಥಿಗಳು ಲೆಖ್ಖದಲ್ಲೇ ತಪ್ಪಿಹೋಗುತ್ತಾರೆ. ಇದಕ್ಕೆ ಅವರಿಗೆ ಒಳ್ಳೇ ಅಸ್ತಿವಾರವಿಲ್ಲವೆಂಬುವದೇ ಮುಖ್ಯಕಾರಣವಾಗಿದೆ. ಇಂಥಾ ಅಸ್ತಿವಾರವಿಲ್ಲದಿರೋಣದರಿಂದ ವಿದ್ಯಾರ್ಥಿಗಳು ಗಣಿತವೆಂದರೆ ಹಿಂತೆಗೆಯುತ್ತಾರೆ. ಆದರೆ ಇದು ಅವರ ತಪ್ಪಲ್ಲ. ಗಣಿತದ ವಿಷಯದಲ್ಲಿ ವಿದ್ಯಾರ್ಥಿಗಳಿಗೆ ಇಷ್ಟು ಜಿಗುಪ್ಸೆಯುಂಟಾಗಿರುವದಕ್ಕೆ ಈಗ ಗಣಿತವನ್ನು ಕಲಿಸುತ್ತಿರುವ ಕ್ರಮವೇ ಕಾರಣವಾಗಿದೆ. ಈ ಕ್ರಮವು ಎಷ್ಟು ಮಾತ್ರವೂ ಚನ್ನಾಗಿಲ್ಲ. ಈ ಪುಸ್ತಕದಲ್ಲಿ ವಿವರಿಸಿರುವಂತೆ ಕ್ರಮವಾಗಿ ಬಾಲಕರಿಗೆ ಬೋಧನೆ ಮಾಡಿದ್ದೇ ಆದರೆ ಇಂಥಾ ದೋಷಗಳೆಲ್ಲಾ ನಿವೃತ್ತಿಯಾಗುವದರಲ್ಲಿ ಸಂದೇಹವಿಲ್ಲ. ಮಕ್ಕಳನ್ನು ಪ್ರಾರಂಭದಲ್ಲಿ ತಯಾರ್ಮಾಡಬೇಕಾದ ವಿಷಯದಲ್ಲಿ ಗ್ರಂಥಕರ್ತರು ತಮ್ಮ ಪುಸ್ತಕದ ಪೀಠಿಕೆಯ ಅಂತ್ಯಭಾಗದಲ್ಲಿ ವಿವರಿಸಿರುವದಕ್ಕಿಂತಲೂ ಉತ್ಕೃಷ್ಟವಾದ ರೀತಿಯು ಮತ್ತೆಲ್ಲಿಯೂ ಇಲ್ಲ. 'ಯಾವ ವಿಷಯವನ್ನು ಮಕ್ಕಳಿಗೆ ಕಲಿಸಬೇಕಾದರೂ ಅದನ್ನು ಅವರಿಗೆ ಪ್ರತ್ಯಕ್ಷವಾಗಿ ತೋರಿಸಿ ಕಲಿಸಬೇಕು. ಕಂಠಪಾಠವನ್ನು ಎಂದಿಗೂ ಮಾಡಿಸಕೂಡದು. ಹೇಳಿಕೊಡುವುದೆಲ್ಲವೂ ಸಕಾರಣವಾಗಿಯೂ, ಸ್ಪಷ್ಟವಾಗಿಯೂ, ಸುಲಭಗ್ರಾಹ್ಯವಾಗಿಯೂ ಇರಬೇಕು. ಇದಕ್ಕಾಗಿ ಉಪಾಧ್ಯಾಯನು ಪಾಠಹೇಳಬೇಕಾಗಿರುವ ಭಾಗವನ್ನು ಮನೆಯಲ್ಲಿ ಚನ್ನಾಗಿ ನೋಡಿಕೊಂಡು, ಯಾವ ರೀತಿಯಲ್ಲಿ ಯಾವ ದೃಷ್ಟಾಂತಗಳಿಂದ ಆ ಪಾಠವನ್ನು ಹುಡುಗರಿಗೆ ಸುಲಭವಾಗಿ ತಿಳಿಸಬಹುದು; ಆ ಪಾಠದಿಂದ ಆಗತಕ್ಕ ಪ್ರಯೋಜನವೆಲ್ಲವೂ ಅವರಿಗೆ ಆಗುವಂತೆ ಮಾಡುವುದು ಹ್ಯಾಗೆ, ಎಂಬೀ ವಿಷಯಗಳನ್ನೆಲ್ಲ ಆಲೋಚಿಸಿ, ಗುರುತು ಹಾಕಿಕೊಂಡು ಬಂದು, ಪಾಠಹೇಳಲುಪಕ್ರಮಿಸಬೇಕು. ಗುಂಡುಗಳ ಚೌಕಟ್ಟು, ಕಪ್ಪುಹಲಗೆ, ಚಿತ್ರಪಟಗಳು, ಇವೇ ಮೊದಲಾದ ಉಪಕರಣಗಳನ್ನು ಬಾರಿಬಾರಿಗೂ ಉಪಯೋಗಿಸಬೇಕು. ಹೀಗೆಂದು ವಿದ್ಯಾವಿಷಯಗಳಲ್ಲಿ ಬಹಳ ಅನುಭವಶಾಲಿಗಳಾದವರು ಉಪಾಧ್ಯಾಯರಿಗೆ ಮಾಡಿರುವ ಹಿತೋಪದೇಶವನ್ನು ನಮ್ಮ ಉಪಾಧ್ಯಾಯರೂ ಅನುಸರಿಸುವುದು ಅತ್ಯಂತ ಪ್ರಯೋಜನಕಾರಿಯಾಗದಿರಲಾರದು' ಎಂಬುವದೇ.

ಪರೋಪಕಾರ.

ವೃ|| ಸ್ವಾರ್ಥವಬಿಟ್ಟು ಲೋಕದೆ ಪದಾರ್ಥದ ಮಾಳ್ಪರ
[illegible] ಸ್ವಾರ್ಥಕೆ ಹಾನಿಗೈಯದೆ ಪದಾರ್ಥಕೆ
ಯತ್ನಿಪರಲ್ತೆ ಮಧ್ಯಮರ್|ಸ್ವಾರ್ಥಕೆ ತಾಂ ಪದಾರ್ಥವ
ನ ಪೀಡಿಸುವರ್ [illegible] ಸ್ವಾರ್ಥವು ಇಲ್ಲ
ದಕ್ಕೆ ಕೆಡಿಸಿ [illegible]|

ಈ ಭೂಮಂಡಲದೊಳಿರುವ ಮನುಷ್ಯರ ಸ್ವಭಾವಗುಣಗಳು ಬೇರೆಬೇರೆ ವಿಧವಾಗಿವೆ ಆ ಸ್ವಭಾವಗುಣಗಳಿಂದಲೇ ಅವರವರ ಯೋಗ್ಯತೆಗಳನ್ನು ಪರಿಷ್ಕಾರವಾಗಿ ತಿಳುಕೊಳ್ಳಬಹುದು. ಹ್ಯಾಗೆಂದರೆ ಪರೋಪಕಾರಕ್ಕಾಗಿ ತಮ್ಮ ಸರ್ವಸ್ವವು ಸಂಪೂರ್ಣ ವ್ಯಯವಾದಾಗ್ಯೂ, ಪರಿಹಿತದಿಂದ ತಮ್ಮ ದ್ರವ್ಯ ವೆಚ್ಚವಾದಾಗ್ಯೂ, ಅದರ ವಿಷಯ ಯತ್ಕಿಂಚಿತ್ತೂ ಲಕ್ಷ್ಯಕೊಡದೆ, ಪರೋಪಕಾರವನ್ನು ಬಯಸುವ ಕಾರ್ಯಗಳಲ್ಲಿ ಸರ್ವದಾ ನಿರತರಾಗಿರುವರು ಇವರೇ ಪುರುಷೋತ್ತಮರು ಇವರಿಗೆ ಸತ್ಪುರುಷರೆಂಬ ಹೆಸರುವರ್ತಿಸುತ್ತದೆ ಇನ್ನು ಕೆಲವರು ತಮ್ಮ ಐಶ್ವರ್ಯಕ್ಕೆ ಯತ್ಕಿಂಚಿತ್ತು ಲೋಪಬಾರದೆ, ತಾವು ಮಾಡುವ ಉದ್ಯೋಗದಿಂದ ಪರರಿಗೆ ಮೇಲಾಗುವ ಹಾಗಿದ್ದರೆ ಆ ಕೆಲಸಕ್ಕೆ ತಮ್ಮ ಕೈಹಚ್ಚುತ್ತಾರೆ ಇಲ್ಲವೆ ಆ ಕೆಲಸದಿಂದ ತಮಗೆ ಆದಾಯವೇನಾದರೂ ದೊರೆಯುವಹಾಗಿದ್ದರೆ ಆ ಕಾರ್ಯವನ್ನು ಮಾಡಲುದ್ಯುಕ್ತರಾಗುತ್ತಾರೆ ಇವರು ಮಧ್ಯಮರು ಇವರಿಗೆ ಸಾಧಾರಣ ಮನುಷ್ಯರೆಂದು ಹೇಳಬಹುದು ಇನ್ನು ಕೆಲವರು ಪರರ ಅರ್ಥವ್ಯಯವಾದಾಗ್ಯೂ, ತಮ್ಮ ಅರ್ಥಸಾಧನೆಯಲ್ಲಿ

ನಿರತರಾಗಿರುವರೆಂತ್ತಾರೆ ಇಲ್ಲನೇ ಅನ್ಯರ ಐಶ್ವರ್ಯಕ್ಕೆ ಬೇಕೆಂದು ಆಸೆಪಡುವುದಿಲ್ಲ ತಮ್ಮ ಸ್ವಂತ ಸ್ವಾರ್ಥವನ್ನು ಉಂಟುಮಾಡಿಕೊಳ್ಳುತ್ತಾರೆ ಇಂದೇ ಪ್ರಸಿದ್ಧರು ಇವರಿಗೆ ಮನುಷ್ಯರನ್ನು ಹಿಂಸುಕೊಳಿಸುವ ಸ್ವಭಾವವು ಹೆಸರು ಕೊಳ್ಳುತ್ತದೆ ಈ ತ್ರಿಗುಣಗಳಿಂದಲೂ ಪುರುಷರು ಮಾತ್ರವಲ್ಲದೆ ಬಗೆಯುವರೆಂತ್ತಾರೆ ಅವರಿಗೆ ಲಾಭವೇ ಸ್ವಾರ್ಥವಾದ ಇಲ್ಲದೆ ಅಂದರೆ ಬೇರೆಯವನ್ನು ಕೊಡದೇ ಕೊಳ್ಳನವರಿಗೆ ತಿಳಿಯದು ಅವರು ಯಾರೆಂದರೆ ಅವರಿಗೆ ಏನೂ ಅದಾಯವು ಇಲ್ಲದೆ ಅನ್ಯರನ್ನು ನಷ್ಟಪಡಿಸತಕ್ಕವರು ಇಲ್ಲದೆ ಬೇಕೆಂದು ತಮಗೆ ಕೇಡುಮಾಡಿಕೊಂಡು ಇತರರನ್ನು ನಾಶ ಮಾಡತಕ್ಕವರಾಗಿ ತಾಮಸರು ಇಲ್ಲದೆ ಸದರಿನೇ ಉಂಟಾಗುವ ಪಕ್ಷದೇ ತಮ್ಮ ಅದಾಯವೆಂದು ಭಾವಿಸುವವರು ಇವರು ಬ್ರಹ್ಮ ಪಿಶಾಚಗಳಾದ ಅಧಮರಿಗಳೇ ಗೊತ್ತಿಲ್ಲ

ಪುಟ್ಟಿದರೇಂ ಪರೋಪಕಾರತ್ಯಾಗಿಯಾದೆ ಸುಮ್ಮನೆ ಪುಟ್ಟಿ
ಸತ್ತವರ್ ಪುಟ್ಟವೆ ಸಾಯವೇ ಜಗದೊಳಗೆತ್ತಿಯು ಪಂ
ತೊಳಸಿತ್ತ್ಯ ಜಂತುಗಳ್|

ನಮ್ಮ ಮಿತ್ರವರ್ಯರೆ! ಈ ನಾಲ್ಕು ಪ್ರಕಾರದ ಸ್ವಭಾವಗಳೊಳಗೆ ನಾಗರೀಕತೆಯನ್ನು ಹೊಂದಿರುವ ಈ ಕಾಲದಲ್ಲಿ ಮನುಷ್ಯರಾದನಾವು ಪರೋಪಕಾರವನ್ನು ಮೊದಲನೇಭಾಗದಲ್ಲಿ ಸೂಚಿಸಿರುವ ವಿಷಯವು ಅತ್ಯಂತ ಅವಶ್ಯಕವಾದದ್ದೆಂದು ತಿಳಿದು ಪರೋಪಕಾರದಿಂದ ಪ್ರಸಿದ್ಧವಾಗುವ ಕೀರ್ತಿಯು ಇಹಪರಗಳಲ್ಲಿಯೂ ಕೂಡಾ ಪಟ್ಟಿದಂದು ಅನುಸರಿಸತಕ್ಕದ್ದು ಒಬ್ಬೊಬ್ಬರ ಮಾತ್ರ ಕರ್ತವ್ಯವಾಗಿದೆ ತಮ್ಮಲ್ಲಿರುವ ಸ್ವಭಾವವು ಜ್ಞಾನೋದಯದಿಂದ ಅಭ್ಯಾಸ ಭಾವವು ತ್ಯಾಗ ಬದಲಾಗುತ್ತದೆ ಎಂದು ಕಾಣುವವರಿಗೆ ಉತ್ತರವೇನೆಂದರೆ ಅಭ್ಯಾಸದಿಂದ ಸ್ವಭಾವವು ಸಾಧನೆಯಿಂದ ಕಠಿಣ ಪ್ರಕೃತಿಯೂ ವ್ಯತ್ಯಾಸವಾಗುತ್ತದಲ್ಲದೆ ತನ್ನಿಂದಕಾಸೇ ಆಗಬಹುದು ತ್ಯಾಗಂದವರ ಅಭ್ಯಾಸದಿಂದ ಒಳ್ಳೆಯತನವು ಕೆಟ್ಟದಾಗುತ್ತದೆ ಕೆಟ್ಟವನು ತೆಮು ಒಳ್ಳೆಯವನಾಗುತ್ತಾನೆ ಸಿದ್ಧಾಂತನ ಸ್ನೇಹವನ್ನು ಮಾಡಿಕೊಂಡ ಬಳ್ಳಿ ಮಾಮರವನು ಸಿದ್ಧವಂತನಾಗುತ್ತಾನೆ ಅಸ್ಥಿಸಿರು ಸಹವಾಸದಿಂದ ಬುದ್ಧಿವಂತ ಮೂರ್ಖನಾಗುತ್ತಾನೆ ಸಹವಾಸದಿಂದ ಮೋಕ್ಷ. ಸಹವಾಸದಿಂದ ನರಕ ಪ್ರಾಪ್ತಿ ವಾಗುತ್ತದೆಂಬ ಸಿದ್ಧಿಯುಂಟು ಎಂಗಿನವು ಮಾಡಿದರೂ ನಗೆ ಬಗ್ಗುತ್ತದೆ ಒಂದುವಿಧ ಮಾಡಿದರೂ ಸಂಯೋಗದಿಂದ ಗಿಡಗಳು ನಾನಾವಿಧವಾದ ಪುಷ್ಪಗಳನ್ನು ಬಿಡುತ್ತವೆ ಜನರು ಪಿತಗಿಣವನ್ನು ಅನುಸರಿಸಿ ವ್ಯಕ್ತರೆಂದಾಗಿ ಇರುವುದರಿಂದ ಅಗಿದರ ಹುಳಿಸ್ವಭಾವವು ಸಂಪೂರ್ಣ ಹೋಗಿ ಎಲ್ಲರ ಅಂಗೀಕಾರಕ್ಕೆ ಯೋಗ್ಯವಾಗಿರುವ ಮಧುರವಾದ ಫಲವನ್ನು ಬಿಡುತ್ತದೆ ಹೀಗಿರುವಲ್ಲಿ ಸತ್ಪುರುಷರ ಸಹವಾಸದಿಂದ ಉತ್ತಮಸ್ವಭಾವವು ಪ್ರಾಪ್ತಿಯಾಗುವವರಲ್ಲಿ ಯಾವಸಂದೇಹವೂ ಇಲ್ಲವೆಂದು ತಿಳಿಯತಕ್ಕದ್ದು ಅನ್ಯರಿಗೆ ಉಪಕಾರವನ್ನು ಯಾಕೆ ಮಾಡಬೇಕು ಕಷ್ಟವನ್ನು ಯಾಕೆ ಪಡಬೇಕು ಎಂದು ಎಷ್ಟೋ ಜನರು ಕೇಳಲು ಧೈರ್ಯಪಡಬಹುದು ಅದಕ್ಕಿದನ್ನು ನಾನು ಕೇಳುವ ಒಂದು ಪ್ರಶ್ನೆಯುಂಟು ಹೇನಿದರೆ ಒಬ್ಬನು ನಿಮ್ಮಲ್ಲಿರುವ ವಸ್ತುಗಳನ್ನು ಅಪಹರಿಸಿಕೊಂಡು ಇಲ್ಲವೆ ಸಾರಹಾಡಿದರೆ ಅಂಥವನ ವಿಷಯದಲ್ಲಿ ನೀವು ಮನಃತೃಪ್ತಿಯಿಂದಲೂ ಸಂತೋಷವಾಗಿ ಮನಸ್ಸಿನಿಂದಲೂ ಇರುವಿರೋ? ಅವನು ಮಾಡಿದ ಕೆಲಸವು ನ್ಯಾಯವಾದದ್ದೆಂದು ಒಪ್ಪಿಕೊಳ್ಳುವಿರೋ? ಇಲ್ಲವಲ್ಲ ನೀವು ಅವನನ್ನು ಬಯಸುವುದು ಮಾತ್ರವಲ್ಲದೆ, ನಿಮ್ಮ ಮನೆಯವರು ನೆಂಟರಿಷ್ಟರು ಕೂಡಾ ಕಷ್ಟವಾದ ಮಾತುಗಳನ್ನಾಡುವದಿಲ್ಲವೆ? ಅದು ಯಾಕೆ? ಅವನು ನಿಮಗೆ ಮಾಡಿದ ದ್ರೋಹ ಕೇಡಿನಿಂದಲೇ? ಆ ಕೇಡಿನಿಂದ ನೀವು ನಿಮ್ಮ ಮನೆಯವರು ಕೂಡ ಈ ನಾಶತ್ವದಿಂದ ವುಸಿಗುವ ಪರಿಣಾಮಕ್ಕೂ ದಾರಿದ್ರ್ಯಕ್ಕೆ ಸೇರಿದ ಜೀವದ ದುಃಖಕ್ಕೂ ಒಳಗಾಗುವದಿಲ್ಲವೆ? ನೀವು ದೇಹೋಪಕಾರ ವಿಷ್ಣು ಪಾದರ ಮಾಡುವಾಗ್ಯೆ ಅವರುಸಮ ಅಂಥ ಸಂತೋಷಕ್ಕೆ ಗುರಿಯಾಗುವರೆಂದು ಮನಃಪೂರ್ವಕವಾಗಿ ತಿಳಿದು ಬೇರೊಬ್ಬರಿಂದ ನೀವು ಒಳ್ಳೆಯದನ್ನು ಕೋರುವಪ್ರಕಾರ ನೀವೂ ಮತ್ತೊಬ್ಬರಿಗೆ ಒಳ್ಳೆಯದನ್ನೇ ಮಾಡಬೇಕು ಅನ್ನಂತೆಯೇ ತನ್ನ ನೆರೆಯವರನ್ನು ಕಾಣಬೇಕೆಂಬ ನೀತಿಯುಂಟು ಇದರಿಂದ ಜನರಲ್ಲಿ ಪರಸ್ಪರ ಸ್ನೇಹವೂ ಐಕಮತ್ಯವೂ ವೃದ್ಧಿಯಾಗಿ ದೇಶವು ಉನ್ನತಸ್ಥಿತಿಗೆ ಬರುತ್ತದೆ ವಿದ್ಯೆಯಿಂದ ಪರೋಪಕಾರ ಈ ಸರ್ವೋತ್ತಮ ಬುದ್ಧಿಯಿಂದಲೇ ಏಕಚಕ್ರಾಧಿಪತ್ಯವನ್ನು ಮಾಡುವವನು ಮನಗಂಡ ಸಂಕ್ಷೇಪವಾಗಿದೆ

ವಿರೋಧದೊಳಂ ಉಪಕಾರಗಳ್| ಸರಸಿಜ ಕುಮುದಂಗಳಂ
ವಿಕಾಸಿಸಿಂಪೋದರವುಂನಲಿವುದುದಿನ್ನೆದು| ಪರಿಪು
ಹವುಂ ತಾವ ವಿಸ್ಸ್ವರುತ್ತಮ ಪುರುಷರ್|

ಒಬ್ಬ ತಂದೆಗೆ ಹುಟ್ಟಿದ ಅನೇಕಮಂದಿ ಅಣ್ಣತಮ್ಮಂದಿರು ಹಿತವಾಗಿಯೂ ಪರಸ್ಪರಸ್ನೇಹಿತರಾಗಿಯೂ ತಮ್ಮ ಕೆಲಸ ಕಾರ್ಯಗಳನ್ನು ನೆರವೇರಿಸುತ್ತ ಬರುವದಾದರೆ ಆವಿಷಯದಲ್ಲಿ ತಂದೆಯು ಬಹಳ ತೃಪ್ತನಾಗಿಯೂ ಸಂತೋಷಿಸುವದಲ್ಲಿ ಒಳ್ಳೇ ತಾತ್ಪರ್ಯ ಉಳ್ಳವನಾಗಿಯೂ ಇರುವನು ಅವರ ಅವರಿಗಳು ಒಬ್ಬರೊಬ್ಬರು ದ್ವೇಷಸಾಧಿಸುವವರಾಗಿಯೂ ಕಲಹ ಮಾಡುವವರಾಗಿಯೂ ಇರುವದಾದರೆ ಆವಿಷಯದಲ್ಲಿ ಬಹಳ ದುಃಖವನ್ನೂ ಮನೋವ್ಯಾಕುಲವನ್ನೂ ಹೊಂದುವದಿಲ್ಲವೇ? ಹಾಗೆಯೆ ಈ ಭೂಮಂಡಲದೊಳಗಿರುವ ಎಲ್ಲಾ ಮನುಷ್ಯರು ದೇವಕುಮಾರರೆನ್ನದೆ ಒಬ್ಬರಿಗೊಬ್ಬರು ಸಹೋದರರಾಗಿದ್ದಾರೆ ಪರಮೇಶನು ಎಲ್ಲರ ತಂದೆಯಾಗಿದ್ದಾನೆ ನಾವೆಲ್ಲರೂ ಆತನ ಮಕ್ಕಳಾಗಿದ್ದೇವೆ ನಮ್ಮಲ್ಲಿ ಒಬ್ಬರಿಗೊಬ್ಬರು ದ್ವೇಷ, ಮನೆ ಮುರಿಕತನ, ಕಳವು, ಹಟಸಾಧನೆ, ಈ ಮುಂತಾದ ದುಷ್ಕೃತ್ಯಗಳನ್ನು ಮಾಡಬಾರದಾದ್ದರಿಂದ ನಮ್ಮ ವಿಷಯದಲ್ಲಿ ಆತನು ದುಃಖ ಪಡುವದು ಮಾತ್ರವಲ್ಲದೆ ಕೋಪ ಕ್ರಾಂತನಾಗುತ್ತಾನೆ ಅವರ ನಾವು ಕಷ್ಟಕಾರ್ಯಕ್ಕೆ ಭಯ ಪಟ್ಟು ಪರಹಿಂಸೆಯನ್ನು ಮಾಡಿದ ಪರೋಪಕಾರದಲ್ಲಿ ಆಸಕ್ತರಾಗುವರೆ ಭಗವಂತನು ಮೆಚ್ಚುತ್ತಾನೆ

ಪರಧನ ಹರಿಸಿಕ್ಕೈದ್ಯವಿರಿಸಿಂ ಪರಹಿಂಸೆಯು ಮಾಡದ
ಸ್ವಸುಂ| ಧಂಯುತ ಸುದ್ದಿಯಸಾಡದೆ ನುರ ಕಿ ಮು ಹಾವದ
ತನ್ನೊಳಿರ್ದ್ಯರದಂ ಎಂಬದಗಿಲ್ಲ ಮೆನ್ನುತನ್ಯತೋಕ್ತಿ
ಯು ನುತನ ಪೂಜ್ಯರೆಂದಿದ್ದಂಕಿದ್ದ ಸರ್ವಭೂತದ
ದಯಾಪರನಪ್ಪರೇ ಸಾಧುವರ್ತನಂ|

ನಾವು ಯಾವಸಹವಾಸದಿಂದ ಈ ಪರಹಿತತ್ವವನ್ನು ಅಭ್ಯಾಸಿಸಬೇಕೆಂದು ಕೇಳಬಹುದೋ ಅಂಥ. ಪರನು ಪರೋಪಕಾರಿಯಾದ ಒಬ್ಬನನ್ನು ತೋರಿಸಿಕೊಡುತ್ತೇನೆ ಅತನ್ಯಾರೆಂದರೆ ಜಗದ್ಗುರುವಾದ ಶ್ರೀ ಯೇಸುಕ್ರಿಸ್ತನೇ ಈ ಭೂಮಂಡಲದ ಮನುಷ್ಯರಾದ ನಾವೆಲ್ಲರೂ ನಮ್ಮ ಕರ್ಮದೋಷದಿಂದ ಯಮನಪುರಿಗೆ ಪಾತ್ರರಾಗಿರುವಾಗ್ಯೆ ಅದರಿಂದ ಸಂಪೂರ್ಣವಾಗಿ ನಮ್ಮನ್ನು ಬಿಡಿಸಿ ಭಗವಂತನಪ್ರೀತಿಗೂ ಸದ್ಗತಿಯ ಸಾಧನೆಗೂ ಯೋಗ್ಯರನ್ನಾಗ ಮಾಡುವದಕ್ಕೆ ತಾನು ಅನುಭವಿಸುತಿದ್ದ ಸ್ವರ್ಗದ ಪಕ್ಷವನ್ನೂ ಅದರ ಸಮಸ್ತ ವೈಭವಗಳನ್ನೂ ಬಿಟ್ಟು ನರನಾಗಿ ಜನಿಸಿ ತನ್ನ ಇಚ್ಛೆಯನ್ನು ಮಾಡಿ ತನ್ನ ಸುಬೋಧನೆಯಿಂತ ನಡೆನು ಹಾನುವಾಡಿದ ವ್ಯವಹಾರದಲ್ಲಿ ಪೂರ್ಣ ಭರವಸವುಳ್ಳವರಿಗೆ ಕೈವಲ್ಯವನ್ನೂ ಅದರಲ್ಲಿರುವ ಅಳವಲ್ಲದ ನಾಶರಹಿತವಾದ ಐಶ್ವರ್ಯದಿಂದ ಅವರನ್ನು ಧನ್ಯರನ್ನಾಗ ಮಾಡುತ್ತೇನೆಂದು ವಾಗ್ದಾನಮಾಡಿದ್ದಾನೆ ಆ ವಾಗ್ದಾನವನ್ನು ನಂಬಿ ಆ ಮಹಾ ಪರಮೋಪಕಾರಿಯಾದ ಗುರುವಿನಲ್ಲಿ ನಿಜಶ್ರದ್ಧೆಯುಳ್ಳಭಕ್ತರು ತಮ್ಮ ಮನೋವಾಞ್ಛೆಯು ಕರ್ಮಗಳಿಂದಲೂ ಕೂಡ ಪರೋಪಕಾರಗಳನ್ನು ಮಾಡುವದರಲ್ಲಿ ದೃಢಸಂಕಲ್ಪಿಗಳಾಗಿದ್ದರೆ ಇಂಥಾ ಸಂಕಲ್ಪವು ಶ್ರೀ ಯೇಸುವಿನಿಂದಲೇ ಉಂಟಾಯಿತು ಅದ್ದರಿಂದ ಪ್ರಿಯ ವಾಚಕರೇ! ನೀವೆಲ್ಲರೂ ಆ ಪರಮಗುರುವನ್ನು ಸೇರಿ ಪರೋಪಕಾರವನ್ನು ಕಲಿತು ಇತರರಿಗೆ ಸುಖಕ್ಕೆ ಪಾತ್ರರಾಗುವಂತೆ ನಾವು ಕೇಳಿಕೊಳ್ಳುತ್ತೇವೆ

ಒಳದೇಶ ವೃತ್ತಾಂತಗಳು.

ನಾಡಿದ್ದು ಟೌನ್ ಹಾಲಿನಲ್ಲಿ ತಿಂಗಳುಕಟ್ಟಿಯ ಮ್ಯೂನಿಸಿಪಲ್ ಮೀಟಿಂಗ್ ನಡೆಯುತ್ತೆ

ಹೊಳೇ ನರಸೀಪುರದಲ್ಲಿಯೂ ಅದರ ಸುತ್ತು ಮುತ್ತ ಊರುಗಳಿಗೂ ಉಪದ್ರವು ತಕ್ಕಮಟ್ಟಿಗೆ ಪ್ರಬಲವಾಗಿದೆಯೆಂದು ಒಬ್ಬ ಬಾತ್ಮಿದಾರರು ಬರೆದಿರುತ್ತಾರೆ

ದಿವಾನರವರ ಅ ಜಸ್ ಸೆಕ್ರಟೆರಿಗಳಾದ ಮ|| ಯಾಂ ಸಾ ರಾಯರಾಯರು ಜನವರೀ ೮ ನೇ ತಾರೀಖಿನಿಂದ ಮೂರು ತಿಂಗಳ ಪ್ರಿವಿಲೇಜ್ ರಜಾ ಪಡೆಯುತ್ತಾರೆ

ನಾಳೆ ಜನವರಿ ಗುರುವಾರವಾದಬಳಿಕ ಸರ್ಕಾರದ ಕಛೇರಿಗಳು ಪೈಕಿ ಯಲ್ಲಿ ಗಾಡಿಗಳನ್ನು ಬಿಡುವ ಕಾಲಗಳನ್ನು ಬದಲಿಯಿಸಲ್ಪಟ್ಟ ರೀತಿಯಿಂದ ಬಿಡುವರೆಂದು ತಿಳಿದುಬಂದಿದೆ

ಸಂಸ್ಥಾನದ ಛೀಫ್‌ಕೋರ್ಟ್ ಜಡ್ಜರಾದ ಮ|| ಎ ರಾಮಚಂದ್ರಯ್ಯರ್ ಬಿ ಎಲ್ ರವರಿಗೆ ಬರುವ ಜನವರೀ ತಾರೀಖು ಮೊದಲು ೨೫ ದಿನಗಳವರೆಗೆ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ

ಸಂಸ್ಥಾನದ ರೆಸಿಡೆಂಟರವರು ಕ್ರಿಸ್ಮಸ್ ಹಬ್ಬವನ್ನು ಬೆಂಗಳೂರಿನಲ್ಲಿ ತೀರಿಸಿಕೊಂಡು ತಮ್ಮ ಅಸಿಸ್ಟೆಂಟರ ಜೊತೆಯಲ್ಲಿ ನೀಲಗಿರಿ ಪ್ರಾಂತ್ಯ ಸರ್ಕ್ಯುಟು ದಯಮಾಡುತ್ತಾರೆಂದು ಕೇಳುತ್ತೇವೆ

ಕಳೆದ ನವಂಬರಿ ತಿಂಗಳಿಗೆ ಸರಿದ ಮ್ಯೂನಿಸಿಪಲ್ ಪೋಲೀಸ್ ಎಲ್ಲಾ ಬಾಬುಗಳಿಂದಲೂ ೧೫ ಲಕ್ಷ ... ಜಮಾ ಬಾಕಿಯೆಂತಲೂ ... ಖರ್ಚಾಗಿದೆಯೆಂತಲೂ ತಿಳಿಯಬರುವು

ಕಳೆದ ಮಂಗಳವಾರ ಮದ್ರಾಸಿನ ಜಿಲ್ಲೆಯ ಹೈಸ್ಕೂಲ್ ಹೆಡ್ ಮಾಸ್ಟರಾದ ಮ|| ರೆವರೆಂಡ್ ಹೋಲ್ಡ್ ಸ್ವರ್ತ್ ಸಾಹೇಬರವರು ವಿಲಾಯಿತಿಗೆ ಹೋಗುವ ಉದ್ದೇಶದಿಂದ ರೈಲನ್ನು ಹತ್ತಿ ಪ್ರಯಾಣ ಮಾಡಿದರು

ಕೋಲಾರ ಡಿವಿಜನ್‌ನಲ್ಲಿ ಕೆಲಸ ನೋಡುತಲಿದ್ದ ಅಸಿಸ್ಟೆಂಟ್ ಕಮಿಷನರ್ ಮೆ|| ಪ್ಲಾಟರವರನ್ನು ಕೋಲಾರದಿಂದ ಚಿತ್ರದುರ್ಗದ ಡಿವಿಜನ್‌ಗೆ ವರ್ಗಮಾಡಿ ಅವರು ರಜಾ ಬಳಿಕ ನಿಮಿಷದಲ್ಲಿ ಅಲ್ಲಿಗೆ ಹೋಗಬೇಕೆಂದು ಹುಕುಂ ಮಾಡಿರುತ್ತಾರೆ

ಮ|| ಹೆಚ್. ಕೃಷ್ಣರಾಯರಿಂದ ರಚಿಸಲ್ಪಟ್ಟಿರುವ "ಗಣಿತ ಕಲಾನಿಧಿ" ಎಂಬ ಲೆಖ್ಖದ ಪುಸ್ತಕವನ್ನು ಸಂಸ್ಥಾನದ ಎಲ್ಲಾ ಕನ್ನಡ ಪಾಠಶಾಲೆಗಳಲ್ಲಿ ಮೊದಲನೇ, ಎರಡನೇ ಮತ್ತು ಮೂರನೇ ತರಗತಿಗಳಲ್ಲಿ ಉಪಯೋಗಿಸಲ್ಪಡಬೇಕೆಂದು ಗೌರ್ನಮೆಂಟಿನವರು ಪ್ರೊಸೀಡಿಂಗ್ಸ್ ಮಾಡಿರುತ್ತಾರೆ

ರಾಜಧಾನಿಯಲ್ಲಿರುವ ಪ್ರಿನ್ಸ್ ದೇವಭೂಪನಾಥ ಬಹದ್ದೂರರವರ ಕುಮಾರರು ತಮ್ಮ ಹಿರಿಯರ ಆಸ್ತಿಯು ಸುಮಾರು ೨ ಲಕ್ಷ ರೂಪಾಯಿಗಳೆಂತಲೂ ಅದನ್ನು ಈಗ ವಿಭಾಗಮಾಡಿಕೊಡಬೇಕೆಂತಲೂ ಇಲ್ಲಿನ ಸರ್ವ ಕೋರ್ಟಿನಲ್ಲಿ ದಾವಾ ತಂದಿರುತ್ತಾರೆಂದು ಕೇಳುತ್ತೇವೆ

ರಾಜಧಾನಿಯಲ್ಲಿರುವ ಕರ್ನಾಟಕ ಭಾಷೋಜ್ಜೀವಿನೀ ಪಾಠಶಾಲೆಯನ್ನು ನಾರ್ಮಲ್ ಸ್ಕೂಲಾಗಿ ತಿರುಗಿಸಿ ಅದರ ಪೋಷಣೆಗಾಗಿ ಮ್ಯೂನಿಸಿಪಲ್ ಫಂಡಿನಿಂದ ಸಹಾಯವೂ ಸಹ ಬಾಬುಗಳನ್ನು ಗ್ರ್ಯಾಂಟು ಕೊಡಬೇಕೆಂದು ಗೌರ್ನಮೆಂಟಿನವರು ಗೊತ್ತುಮಾಡಿರುತ್ತಾರೆ ಅದರ ಈ ವಿಷಯವನ್ನು ಮ್ಯೂನಿಸಿಪಲ್ ಮೀಟಿಂಗಿನಲ್ಲಿ ಮೆಂಬರುಗಳು ಚರ್ಚಿಸಿ ಶೀಘ್ರದಲ್ಲಿ ತೀರ್ಮಾನವಾಗಬಹುದೆಂದು ಇದರ ವಿಷಯದಲ್ಲಿ ಈಗಲೇ ನಾವು ನಮ್ಮ ಅಭಿಪ್ರಾಯಗಳನ್ನು ತಿಳಿಸದೆ ಇರುವೆವು

ಸಂಸ್ಥಾನದ ಕಂಟ್ರೋಲರವರ ಆಫೀಸಿಗೆ ಕೆಲವು ನೌಕರರು ಬೇಕಾಗಿರುವದರಿಂದ ಬಿ ಎ ಪ್ಯಾಸ್ ಮಾಡಿರುವವರಾಗಲಿ ಲೋಕಲ್ ಸರ್ವಿಸ್ ಅಕೌಂಟ್ಸ್ ಪರೀಕ್ಷೆಯನ್ನು ಕೊಟ್ಟಿರುವವರಾಗಲಿ ಅಥವಾ ಅಡ್ವಾನ್ಸ್ ಮೆಟ್ರಿಕ್ಯುಲೇಷನ್ ಪರೀಕ್ಷೆಯನ್ನು ಪಾಸು ಮಾಡಿರುವವರಾಗಲಿ ಕಂಟ್ರೋಲರವರಿಗೆ ನಾಳೆ ಜನವರಿ ೮ ನೇ ತಾರೀಖಿನೊಳಗಾಗಿ ಅರ್ಜಿಗಳನ್ನು ಬರೆದುಕೊಳ್ಳಬಹುದೆಂತಲೂ ಹೊಸಬರ್ಗೆ ಡಿಪಾರ್ಟ್‌ಮೆಂಟಿನಲ್ಲಿ ರೂಪಾಯಿ ೧೫ ರಿಂದ ೨೫ ರೂಪಾಯಿವರೆಗೆ ಸಂಬಳ ದೊರೆಯುತ್ತೆಂತಲೂ ಘೋಷಿಸಿ ಮಾಡಿರುತ್ತಾರೆ

ಮದರಾಸಿನ್ನಲ್ಲಿ ಗವರ್ನಮೆಂಟ್ ಪ್ರೆಸ್ಸಿನಲ್ಲಿ ಕೆಲಸ ನೋಡುತಲಿದ್ದ ಮ|| ಜೆ ಜೆ ಪ್ಲೆಚ್ಲೆ ಸಾಹೇಬರವರನ್ನು ಇಂಡಿಯಾ ಗೌರ್ನಮೆಂಟಿನವರ ಅನುಮತಿಯಿಂದವರು ನಮ್ಮ ಮಹಾರಾಜರವರು ಈ ಸಂಸ್ಥಾನದಲ್ಲಿ ನೇಮಿಸಿಕೊಂಡು ಅವರನ್ನು ಯುವರಾಜರವರ ಟ್ಯೂಟರನ್ನಾಗಿ ನೇಮಕ ಮಾಡಿಕೊಂಡಿರುತ್ತಾರೆ ಮ|| ಪ್ಲೆಚ್ಲೆ ಸಾಹೇಬರು ಇದೇ ಡಿಶಂಬರು ಗುರುವಾರದಿಂದ ತಮ್ಮ ಹೊಸಕೆಲಸದಮೇಲೆ ಹಾಜರಾಗಿರುತ್ತಾರೆ ಈಗ ಪ್ರತಿಯೊಬ್ಬ ಯುವರಾಜರವರ ಜೊತೆಯಲ್ಲಿ ಬೆಂಗಳೂರಿನಲ್ಲಿರುವರು

ನಮ್ಮ ಮಹಾರಾಜರವರು ಕಳೆದ ೧೮ ನೇ ತಾರೀಖು ಸಾಯಂಕಾಲ ೫|| ಘಂಟೆಗೆ ದರ್ಬಾರ ಸವಾರಿ ಸ್ವಾರಿಯೊಡನೆ ಬೆಂಗಳೂರಿನ ವಡಿವಾಸ ಕಟಿತದಲ್ಲಿರುವ ಬಾಯಿನಲ್ಲಿ ಮಹಾಲಕ್ಷ್ಮಿ ಎಂಬ ಭಾಗದಲ್ಲಿರುವ ಆವನ್ನಾಲಾ ಎಂಬ ಬಂಗಲೆಯನ್ನು ಸುಟ್ಟಕೊಂಡರು ಆಲ್ಲೀ ಇನ್ನು ಎರಡು ವಾರಗಳವರೆಗೂ ಇದ್ದು ಅನಂತರ ಮಹಾರಾಣಿಯವರ ಜೊತೆಯಲ್ಲಿ ಮೈಸೂರಿಗೆ ದಯಮಾಡಿ ಆ ಕೈ ಎಲ್ಲಾ ಪ್ರದೇಶಗಳನ್ನು ಕಂಡು ಅವರ ಸಂಗಡಲೇ ಕಲ್ಕತ್ತಾಗೆ ದಯಮಾಡಿ ಹಿಂದುಸ್ಥಾನವನ್ನು ಬಿಟ್ಟು ಹೋಗುವ ಈಗಿನ ವೈಸ್‌ರಾಯಿರಾದ ಲಾರ್ಡ್ ಲ್ಯಾನ್ಸ್‌ಡೌನ್ ಧೊರೆಗಳನ್ನು ನೋಡಿ ವಾಪಸು ದಯಮಾಡುವರೆಂದು ಕೇಳುತ್ತೇವೆ

ವಿದ್ಯಾಭ್ಯಾಸದ ಇಲಾಖೆ.

ಸನ್ ೧೮೯೪ನೇ ಇಸವಿ ಜುಲೈ ತಾರೀಖು ೩.
ನೇ ೧೮೦.ನ ಇನಿಷಿಯಲ್‌ ಪಾಲಿಕ್ರ್ರ್ಯ ಭಾಷಾ

ಗ್ರಂಥಗಳು.

ಮೈಸೂರು ಲೋವರು ಸೆಕಂಡರಿ ಪರೀಕ್ಷೆ.

ಕನ್ನಡ—ಧರ್ಮ್ಯಾಮ—ಸೋಡಿಸಿ ಬಸವಪ್ಪ ಶಾಸ್ತ್ರಿಗಳಿಂದ ರಚಿಸಲ್ಪಟ್ಟದ್ದು
  ಸದ್ಯಾಸಾರ—ಪದ್ಯಗಳು ೨೭ ೧೨೯
  ವಿಂಚಿಟನ್ ಎವರಲಿನ ೨೭ ಅಧ್ಯಾಯಗಳು ಮೈಸೂರು ಗವರ್ನಮೆಂಟ್ ಬ್ರಾಂಚ್ ಮುದ್ರಾಕ್ಷರ ಶಾಲೆಯಲ್ಲಿ ಮುದ್ರಿಸಲ್ಪಟ್ಟ ಭಾಗ
  ಕಾವ್ಯದ ಧರ್ಮ್ಯಾರು —ಸೀತಾಕಳ ಪದ್ಯಗಳು ೧ ...

ತೆಲುಗು ನವತಂತ್ರಮು
  ಪಂಚತಂತ್ರಮು—ವಿಗ್ರಹಮು (ಪರವಸ್ತು ಚಿನ್ನಯಸೂರಿ ಗಾರಿಚೇ ರಚಿಸಲ್ಪಟ್ಟದ್ದು) ಪುಟಗಳು ೧—೧೦.
  ಕಾಂದಮಾದ ನವತಂತ್ರಮು ಪುಟಗಳು೧೯— ೦.

ಅರವ —ಪಂಚತಂತ್ರಂ—ಪ್ರಸ್ತಾವನೆ ಮತ್ತು ಮೊದಲನೇ ಭಾಗ.
  ಎರಡನೇ ನಂಬರ್ ನೀತಿಮಂಜರಿ
  ಕಂದವು ... ನಂಬರ್ ನೀತಿಮಂಜರಿ ಪದ್ಯಗಳು ...

ಹಿಂದುಸ್ಥಾನಿ ಮುಸದ್ದಸಿ ಹಾಲಿ, ಪುಟಗಳು ೧ ೫೦.
  ಬ್ಯಾಟಲ್—ಸಾಕರಾಬ್—ಪ್ರಸ್ತಾವನೆ ಮತ್ತು ಮೊದಲಿನ ೬ ಸಂಧಿಗಳು
  ಕಾದಂಬರಿ-ಮುಸದ್ದಸಿ ಹಾಲೀ ಗ್ರಂಥದಿಂದ ಆರಿಸಲ್ಪಟ್ಟ ಭಾಗಗಳು

ಸಂಸ್ಕೃತ— ಮೊದಲನೇ ಭಾಷೆ
  ಕುಮಾರಸಂಭವಮು. ಕಾಂಡಗಳು I—V.
  ಭಾರವಿ -ಸರ್ಗಗಳು ೧ ೪.

ಸಂಸ್ಕೃತ— ಎರಡನೇ ಭಾಷೆ
  ರಘುವಂಶ—ಸರ್ಗಗಳು ೯ ಮತ್ತು ೧೦.
  ಹಿತೋಪದೇಶ—ಪ್ರಸ್ತಾವನೆ ಮತ್ತು ಮೊದಲಿನ ಎರಡು ಕಥೆಗಳು (ಮೊದಲನೇ ಭಾಗ)

ಫಾರಸಿ - ಮೊದಲನೇ ಭಾಷೆ
  ಗುಲ್ಬಸ್ತ—ಇ—ದಾನಿಷ್ (ಗುಜರಾತ ಪ್ರತಿ)
  ಸವಾನಿಯಾ—ಇ—ನಿಜಾಮ್ (ಪಂಜಾಬ್ ಪ್ರತಿ) ಪುಟಗಳು ೧ ೧೧೨

ಫಾರಸಿ— ಎರಡನೇ ಭಾಷೆ
  ಎರಡನೇ ಫಾರಸಿ ಪುಸ್ತಕ (ಪಂಜಾಬ್ ಪ್ರತಿ)
  ಗುಲಿಸ್ತಾನಿನ ಮೊದಲಿನ ಎರಡು ಸಂಧಿಗಳಿಂದ ಆರಿಸಲ್ಪಟ್ಟ ಭಾಗಗಳು

ಲ್ಯಾಟಿನ್— ಎರಡನೇ ಭಾಷೆ
  ಸೀಸರ್ ಡಿಬೆಲೋಗ್ಯಾಲಿಕೋ ಎರಡನೇ ಪುಸ್ತಕ

ಉಪಾಧ್ಯಾಯರ ಪರೀಕ್ಷೆ.

ಕನ್ನಡ—ಪಂಪರಾಮಾಯಣ ಆಶ್ವಾಸಗಳು ೧ ಮತ್ತು ೨
  ಕನ್ನಡ ಕಾದಂಬರಿ (ಬಿ. ವೆಂಕಪ್ಪನವರಿಂದ ರಚಿಸಲ್ಪಟ್ಟದ್ದು—ಮೈಸೂರು ಗವರ್ನಮೆಂಟ್ ಬ್ರಾಂಚ್ ಮುದ್ರಾಕ್ಷರಶಾಲೆಯ ಭಾಗ) ಪದ್ಯಗಳು ೧—೧೮೭.
  ಕನ್ನಡ ಪಂಚತಂತ್ರ—ಬಸವಪ್ಪ ಶಾಸ್ತ್ರಿಗಳಿಂದ ರಚಿಸಲ್ಪಟ್ಟದ್ದು (ಎರಡನೇ ಭಾಗ)
  ಮುದ್ರಾಮಂಜೂಷ—ಸೆಕ್ಷನ್ ಅಂದರೆ ಅಧ್ಯಾಯಗಳು ೧೧—೧೫.

ಫಾರಸಿ—ಬೋಸ್ತಾನ್—ಸಂಧಿಗಳು ೪—೧೦.
  ಅನ್ವಾರ್—ಇ—ಸೊಹಲಿ—ಸಂಧಿಗಳು೮—೧೪.
  ಹಿಂದುಸ್ಥಾನಿ—ದಿವಾನ್—ಜೌಕ್—ಖಾಸಿದಾಸ ವಿನಹ, ಪೂರಾ
  ಸ್ಟೇರಂಗೀ ಖಿಯಾಲ್—ಮೌಲ್ವಿ—ಮಹಮ್ಮದ್ ಹುಸೇನ್ ಅಜಾದ್ ಯವರಿಂದ ರಚಿಸಲ್ಪಟ್ಟದ್ದು ಪೂರಾ.

ತೆಲುಗು—ಭಾರತಮು—ವಿರಾಟಪರ್ವಮು
  ಪಂಚತಂತ್ರಮು

ಅರವ—ಭಾರತ ವೆಣ್ಬಾ—ಆರಣ್ಯಪರ್ವಂ
  ಪಂಚತಂತ್ರಂ

ಎಚ್ ಜೆ. ಭಾಭಾ,
ಎಡ್ಯುಕೇಷನ್ ಸೆಕ್ರೆಟರಿ.

ಇಂಡಿಯನ್ ನ್ಯಾಷನಲ್ ಕಾಂಗ್ರೆಸ್.

ಬರುವ ವಾರದಲ್ಲಿ ಲಾಹೋರ್ ಪಟ್ಟಣದೊಳು ಜರಗತಕ್ಕ ಇಂಡಿಯನ್ ನ್ಯಾಷನಲ್ ಕಾಂಗ್ರೆಸ ಸಭೆಯು ಗತ ಸಂವತ್ಸರಕ್ಕಿಂತಲೂ ಪ್ರಬಲವಾದದಾಗಿಯೂ, ತದಧಿಪತಿಗಳಾದ ಮ|| ಸಭ್ಯ ಜನರಲ್ ಮ|| ದಾದಾಭಾಯಿ ನೌರೋಜಿ ಪಕ್ಕರೆ ಕೆಲವರು ದೊಡ್ಡ ಮನುಷ್ಯರು ವಿಶದವರ್ಗಬಂದಿರುವದರಿಂದ ವಿಶೇಷ ಪರಿಗಣನೀಯವಾದುದಾಗಿಯೂ ಇರುವುದು ಸದರೀ ಸಭೆಯಲ್ಲಿ ವಿಚಾರಣೆಗೆಂದು ನಿರ್ಧರಿಸಲ್ಪಟ್ಟಿರುವ ಇಪ್ಪತ್ತೊಂದು ಬಾಬುಗಳನ್ನು ರಿಸೆಪ್ಷನ್ ಕಮಿಟಿಯವರು ಆಯಾ ಸ್ಟ್ಯಾಂಡಿಂಗ್ ಕಮಿಟಿಯವರಿಗೆ ತಿಳಿಯಪಡಿಸಿರುತ್ತಾರೆ ಅವು ಯಾವವೆಂದರೆ: —

೧ ಇಂಡಿಯನ್ ಸಿವಿಲ್ ಸರ್ವಿಸ್ ನೌಕರಿಯ ಬಗ್ಗೆ ಯೋಜಿಸಲ್ಪಟ್ಟಿರುವ ಪರೀಕ್ಷೆಯನ್ನು ಯೋಕಕಾಲದೊಳು ಇಂಡ್ಯ ಮತ್ತು ಇಂಗ್ಲೆಂಡ್ ರಾಜ್ಯಗಳಲ್ಲಿ ಜರುಗಿಸತಕ್ಕ ವಿಷಯದಲ್ಲಿ ಹೌಸ್ ಆಫ್ ಕಾಮನ್ಸ ಸಭಾಜನರು ಮಾಡಿದ ತೀರ್ಮಾನವು

೨ ೧೮೯೨ನೇ ಇಸವಿಯ ಇಂಡಿಯನ್ ಕೌನ್ಸಿಲ್ಸ್ ಆಕ್ಟನ್ನನುಸರಿಸಿದ ನಿಬಂಧನೆಗಳು

೩ ಸುಪ್ರೀಂ ಲೆಜಿಸ್ಲೆಟಿವ್ ಕೌನ್ಸಿಲ್ ಅಂದರೆ ವೈಸ್‌ರಾಯಿಯವರ ನ್ಯಾಯನಿರ್ಧಾರಕ ಸಭೆಗೆ ತಮ್ಮ ಕಡೆ ಪ್ರತಿನಿಧಿಯೊಬ್ಬರನ್ನು ಚುನಾಯಿಸಿ ಕಳುಹಿಸುವದಕ್ಕೆ ಪಂಜಾಬ್ ದೇಶಕ್ಕಿರುವ ಸ್ವಾತಂತ್ರ್ಯವು

೪ ಬ್ಯಾರಿಗಳ ವಿಚಾರವನ್ನು ಪರಾ ಮಾಡಬೇಕೆಂದು ಬಂಗಾಳ ಗವರ್ನಮೆಂಟಿನವರು ಕೊಟ್ಟಿದ್ದ ಇಸ್ತಿಹಾರನಾಮೆಯನ್ನು ರದ್ದು ಮಾಡಿದ ಬಗ್ಗೆ ಕೃತಜ್ಞತಾ ಪ್ರದರ್ಶನ ಪೂರ್ವಕ ಸದರೀ ಜ್ಯೂರಿ ಪದ್ಧತಿಯನ್ನು ಸರ್ವತ್ರ ಪ್ರಚಾರದೊಳು ತರಬೇಕೆಂದು ಪ್ರಾರ್ಥಿಸುವದು

೫ ಕಾರ್ಯಾಂಗ ವ ಜ್ಯುಡಿಷಿಯಲ್ ಅಧಿಕಾರಗಳನ್ನು ಪ್ರತ್ಯೇಕಿಸುವದು

೬ ಮಿಲಿಟರಿ ಇಲಾಖಾ ಖರ್ಚನ್ನು ವೃದ್ಧಿ ಪಡಿಸುವಿಕೆ

೭ ಪಬ್ಲಿಕ್ ಸರ್ವಿಸ್ ಕಮಿಷನ್ ಸಭೆಯವರು ತಿಳಿಸಿದ ಕೆಲವು ಅಭಿಪ್ರಾಯಗಳಮೇಲೆ ಇಂಡ್ಯಾ ಗೌರ್ನಮೆಂಟಿನವರು ಮಾಡಿದ ತೀರ್ಮಾನವು

೮ ನಾಣ್ಯ ಚಲಾವಣೆ ವಿಚಾರ ಮತ್ತು ಇಂಡ್ಯಾ ಗೌರ್ನಮೆಂಟಿನವರು ಅದರ ವಿಷಯದಲ್ಲಿ ಆತುರದೊಡನೆ ಮಾಡಿದ ನ್ಯಾಯವಿಧಾನ

೯ ನಾಣ್ಯ ಪರಿವರ್ತನೆಯ ದೆಸೆಯಿಂದ ಯುರೋಪಿಯನ್ ಮತ್ತು ಯುರೋಷಿಯನ್ ಉದ್ಯೋಗಸ್ಥರಿಗೆ ಬಾಬಾರ ದ್ರವ್ಯ ಕೊಡತಕ್ಕ ವಿಚಾರ

೧೦ ಉನ್ನತ ವಿದ್ಯಾಭ್ಯಾಸ

೧೧ ೮ನೇ ಕಾಂಗ್ರೆಸ ಸಭೆಯಲ್ಲಿ ಮಾಡಲ್ಪಟ್ಟ ೫ ನೆಯ ತೀರ್ಮಾನಕ್ಕೆ ಸಮಾನ ತೀರ್ಮಾನ

೧೨—೧೬ ೮ನೇ ಕಾಂಗ್ರೆಸ ಸಭೆಯಲ್ಲಿ ಮಾಡಲ್ಪಟ್ಟ ೯ನೆಯ ಮತ್ತು ೧೦ ನೇ ತೀರ್ಮಾನಗಳನ್ನು ಪುನರ್ ಸ್ಥಿರೀಕರಿಸುವದು

೧೪ ಪಂಜಾಬ್ ದೇಶದಲ್ಲಿ ನ್ಯಾಯವಿಧಾಯಕ ಸಭೆಯ ವ್ಯವಸ್ಥಾಪನೆ

೧೫ ಪಂಜಾಬ್ ದೇಶಕ್ಕೆ ಪ್ರತ್ಯೇಕವಾಗಿ ಒಂದು ಚಾರ್ಟರ್ಡ್ ಹೈಕೋರ್ಟನ್ನು ನೆಲಗೊಳಿಸಬೇಕಾದ್ದು

೧೬ ಪೈನಾನ್ಸ ಸಂಬಂಧವಾದ ಸೋಲವು ಸದರೀ ಅಂಶವನ್ನು ಕುರಿತು ವಿಚಾರಣೆ ಮಾಡಿದ ಕಮಿಷನ್ ರಿಪೋರ್ಟ್

೧೭ ನಿಯಾಮಕವಾಗಿ ಅಪರಾಧಗಳನ್ನು ಮಾಡತಕ್ಕದಕ್ಕೆ ಕುರಿತ ಮುಸೋದಾ ಆಕ್ಟ್

೧೮ ಹಿಂದೂ ಮತ್ತು ಮಹಮ್ಮದೀಯರಲ್ಲುಂಟಾದ ಕಲಹಗಳು

೧೯ ಕಂಟೋನ್ಮೆಂಟ್ ಕಮಿಟಿಯವರ ವಿಚಾರಣೆ ಮತ್ತು ಲಾರ್ಡ್ ರಾಬರ್ಟ್ಸ ಯವರ ಅನಾದರ ಪ್ರಶ್ನೆ